# ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯಮಾಲೆ - ೧೧

## ಶುಭ ಸಂದೇಶ

**ಬಿ.ಎಸ್. ಯಡಿಯೂರಪ್ಪ**

ಮುಖ್ಯಮಂತ್ರಿ

ವಿಧಾನ ಸೌಧ

ಬೆಂಗಳೂರು - ೫೬೦ ೦೦೧

ದಿನಾಂಕ : ೧೬-೦೯-೨೦೦೯

**ಶುಭ ಸಂದೇಶ**

ಸಾವಿರಾರು ವರ್ಷಗಳ ಇತಿಹಾಸವಿರುವ, ಎಲ್ಲ ವಿದ್ಯೆಗಳ ತೊಟ್ಟಿಲಾಗಿರುವ, ಕನ್ನಡ ಸಂಸ್ಕೃತಿಯ ಖಜಾನೆಯಾಗಿರುವ ಜಾನಪದ ಸಾಹಿತ್ಯ ಹಾಗೂ ಕಲಾ ಪ್ರಕಾರಗಳ ಎಲ್ಲಾ ಆಯಾಮಗಳನ್ನು ಪ್ರತಿಬಿಂಬಿಸುವ **"ಸಮಗ್ರ ಕನ್ನಡ ಜಾನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ**"ಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಜಾನಪದ ಅಕಾಡೆಮಿಯವರು ಹೊರತರುತ್ತಿರುವುದು ಸಂತಸದ ಸಂಗತಿ.

**"ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್**" ಎಂಬ ವ್ಯಾಖ್ಯಾನ ನಮ್ಮ ಜಾನಪದ ಸಾಹಿತ್ಯದ ಸಾರವಾಗಿದೆ. ಕನ್ನಡ ನೆಲ-ಜಲ-ಸಂಸ್ಕೃತಿಯ ವಿರಾಟ್ ದರ್ಶನವನ್ನು ನೀಡುವ ಈ ಸಂಪುಟಗಳು, ನಿಜಕ್ಕೂ ನಾಡಿನ ಸಾಹಿತ್ಯಕ ಹಾಗೂ ಜಾನಪದ ಲೋಕಕ್ಕೆ ಒಂದು ಕೊಡುಗೆಯಾಗಲಿವೆ.

ಈ ಯೋಜನೆಗೆ ಶ್ರಮಿಸಿರುವ ಎಲ್ಲರಿಗೂ ಅಭಿನಂದನೆಗಳು. "ಸಮಗ್ರ ಕನ್ನಡ ಜಾನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ" ಯೋಜನೆಗೆ ಶುಭ ಹಾರೈಕೆಗಳು.

**(ಬಿ.ಎಸ್. ಯಡಿಯೂರಪ್ಪ)**

# ಪ್ರಕಾಶಕರ ನುಡಿ

ಮನುಷ್ಯನ ಮೂಲ ಸಂಸ್ಕೃತಿಯ ಭಂಡಾರವಾದ ಜಾನಪದವು ಬದುಕಿನ ವಿವಿಧ ಮುಖಗಳನ್ನು ಅದರ ಸಹಜ ಸ್ವರೂಪದಲ್ಲಿ ದರ್ಶನ ಮಾಡಿಸುವ ವ್ಯಾಪಕ ಕ್ಷೇತ್ರ. ಆಧುನಕ ಸಂದರ್ಭದಲ್ಲಿ ಆವಿಷ್ಕಾರಗೊಂಡಿರುವ ಎಲ್ಲಾ ವೈಜ್ಞಾನಿಕ ಸೃಷ್ಟಿಗಳ, ವಿವಿಧ ದೃಷ್ಟಿಕೋನದ ವಿಚಾರಗಳ ಮೂಲ ಹೊಳಹು ಜಾನಪದದಿಂದಲೇ ಬಂದದ್ದು. ಮನುಷ್ಯನ ಹುಟ್ಟಿನಿಂದ ಮೊದಲುಗೊಂಡು ಸಾವಿನವರೆಗೂ ತಬ್ಬಿ ಹಿಡಿದಿರುವ ಜನಪೊದ ಸಾಹಿತ್ಯವು ಅತ್ಯಂತ ಶ್ರೀಮಂತವಾದುದು ಮತ್ತು ವ್ಯಾಪಕವಾದುದು. ಕರ್ನಾಟಕವು ಇಂತಹ ಅಮೂಲ್ಯವಾದ ಜಾನಪದ ಸಂಪತ್ತಿನ ಆಗರವಾಗಿದೆ.

ಜಾಗತೀಕರಣದ ಪರಿಣಾಮಗಳು ಎಂದಿಗಿಂತಲೂ ತ್ವರಿತವಾಗಿ ಇಂದು ಮೂಲ ಸಂಸ್ಕೃತಿಯ ಮೇಲೆ ದಾಳಿ ಮಾಡುತ್ತಿದ್ದು, ಗ್ರಾಮೀಣ ಸಾಹಿತ್ಯ, ಸಂಸ್ಕೃತಿ, ಕಲೆಗಳಂತಹ ಸೃಜನಶೀಲತೆಗೆ ಧಕ್ಕೆ ಉಂಟಾಗುತ್ತಿದೆ. ಈ ಸಂದಿಗ್ಧ ಕಾಲಘಟ್ಟದಲ್ಲಿ ಸಮುದಾಯಕ್ಕೆ ಸ್ಥಳೀಯ ಜ್ಞಾನ ಸಂಪತ್ತಿನ ಮಹತ್ವವನ್ನು ಮನವರಿಕೆ ಮಾಡಿಕೊಡಲು ಜಾನಪದ ಅಧ್ಯಯನ ಅಗತ್ಯವಾಗಿದೆ.

ಸಮೃದ್ಧ-ಸಮಗ್ರ ಜಾನಪದ ಸಾಹಿತ್ಯವನ್ನು ಕ್ರೂಢೀಕರಿಸಿ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಜಾನಪದ ವಿದ್ವಾಂಸರಾದ ಪ್ರೊ. ಹಿ.ಶಿ. ರಾಮಚಂದ್ರೇಗೌಡರವರ ಅಧ್ಯಕ್ಷತೆಯಲ್ಲಿ ಡಾ. ಸೋಮಶೇಖರ ಇಮ್ರಾಪುರ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಬಿ.ವಿ. ವಿವೇಕ ರೈ, ಡಾ. ತೀ.ನಂ. ಶಂಕರನಾರಾಯಣ, ಡಾ|| ಸಿದ್ಧಲಿಂಗಯ್ಯ, ಡಾ. ಕೆ. ಚೆನ್ನಪ್ಪಗೌಡ, ಶ್ರೀಮತಿ ಶಾಂತಿನಾಯಕ, ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರು ಮತ್ತು ಡಾ. ಎಂ.ಎಸ್. ಲಠ್ಠೆ (ದಿವಂಗತ) ಹಾಗೂ ಶ್ರೀ ಕೆರೆಮನೆ ಶಂಭು ಹೆಗಡೆ (ದಿವಂಗತ) ಅವರನ್ನೊಳಗೊಂಡ ಸಂಪಾದಕ ಸಮಿತಿಯನ್ನು ರಚಿಸಲಾಗಿರುತ್ತದೆ. ಈ ಸಮಿತಿಯ ನೇತೃತ್ವದಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಸಹಯೋಗದೊಂದಿಗೆ **'ಸಮಗ್ರ ಕನ್ನಡ ಜಾನಪದ ಮತ್ತು ಯಕ್ಷಗಾನ ಸಾಹಿತ್ಯ'** ಪ್ರಕಟಣಾ ಯೋಜನೆಯನ್ನು ಹಂತ ಹಂತವಾಗಿ ಕಾರ್ಯರೂಪಕ್ಕೆ ತರಲಾಗುತ್ತಿದೆ.

ಈ ಯೋಜನೆಯ ಕಾರ್ಯನಿರ್ವಹಣೆಯ ಮೇಲ್ವಿಚಾರಣೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರು ಹಾಗೂ ಇಲಾಖೆಯ ಅಧಿಕಾರಿಗಳನ್ನೊಳಗೊಂಡಂತೆ ಸಮಿತಿಯನ್ನು ರಚಿಸಲಾಗಿತ್ತು. ಇವರೆಲ್ಲರ ಶ್ರಮ ಮತ್ತು ಸಹಕಾರ ಹೆಚ್ಚಿನದು, ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಈ ಯೋಜನೆಯ ಮುದ್ರಣಕ್ಕೆ ಸಹಕರಿಸಿದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಕಾರ್ಯದರ್ಶಿಗಳೂ ಈ ಯೋಜನೆಯ ಮೇಲ್ವಿಚಾರಣಾ ಸಮಿತಿ ಅಧ್ಯಕ್ಷರೂ ಆದ ಶ್ರೀ ಬಿ.ಆರ್. ಜಯರಾಮರಾಜೇ ಅರಸ್ ಅವರಿಗೆ, ಆಯಾ ಸಂಪುಟಗಳ ಸಂಪಾದಕರು, ಪರಿಶೀಲಕರು ಮತ್ತು ಸಂಪುಟಗಳನ್ನು ಮುದ್ರಣಕ್ಕೆ ಸಿದ್ಧಪಡಿಸಿದ ಯೋಜನೆಯ ಸಂಯೋಜಕರಾದ ಡಾ. ಚಕ್ಕರೆ ಶಿವಶಂಕರ್ ಹಾಗೂ

ಡಾ. ಜಿ.ಎಸ್. ಭಟ್ ಅವರ ಸಲಹೆ-ಸಹಕಾರ ಅಮೂಲ್ಯವಾದುವುದು. ಹಾಗೆಯೇ ಈ ಸಂಪುಟಗಳು ಹೊರಬರಲು ನೆರವಾದ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಗೊ.ರು. ಚನ್ನಬಸಪ್ಪ ಮತ್ತು ರಿಜಿಸ್ಟ್ರಾರ್ ಡಾ. ಎಸ್. ಪ್ರಸಾದಸ್ವಾಮಿ ಹಾಗೂ ಸಿಬ್ಬಂದಿಗೆ ಮತ್ತು ಮುಖಪುಟ ವಿನ್ಯಾಸ ರೂಪಿಸಿಕೊಟ್ಟ ಕಲಾವಿದರಾದ ಶ್ರೀ ಪ.ಸ. ಕುಮಾರ್ ಅವರಿಗೆ ನನ್ನ ನೆನಕೆಗಳು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಜಾನಪದ ಅಕಾಡೆಮಿಯ ಸಹಕಾರದೊಂದಿಗೆ ಹೊರತರುತ್ತಿರುವ **'ಸಮಗ್ರ ಕನ್ನಡ ಜಾನಪದ ಮತ್ತು ಯಕ್ಷಗಾನ ಸಾಹಿತ್ಯ'** ಸಂಪುಟಗಳನ್ನು ಕನ್ನಡ ಜನತೆ ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಾನು ನಂಬಿದ್ದೇನೆ.

**(ಮನು ಬಳಿಗಾರ್)**

ನಿರ್ದೇಶಕರು

# ಅಕಾಡೆಮಿ ಅಧ್ಯಕ್ಷರ ನುಡಿ

ಜಾನಪದ ಅಧ್ಯಯನವೆಂದರೆ ನಮ್ಮ ಸಂಸ್ಕೃತಿಯ ವಿಶ್ಲೇಷಣೆಯೇ ಆಗಿದೆ. ಜನವಾಣಿಯ ಬಹುಮುಖತೆಯ ದಾಖಲು ಕ್ರಮ ಎಷ್ಟು ಮಹತ್ವದ್ದೋ, ಅಷ್ಟೇ ಶ್ರಮದ್ದು ಕೂಡ. ಶಿಷ್ಟ ಸಾಹಿತ್ಯದ ಏಕತಾನತೆಗೆ ದನಿ ಮತ್ತು ಸಂವೇದನೆ ಜೋಡಿಸಿದ್ದು ಜಾನಪದ ಸಾಹಿತ್ಯ. ಹಾಗಾಗಿಯೇ **‘ಜನವಾಣಿ ಬೇರು; ಕವಿವಾಣಿ ಹೂ’** ಎಂಬ ಮಾತಿದೆ.

ಇಷ್ಟು ಮಹತ್ವವುಳ್ಳ ಈ ಸಾಹಿತ್ಯದ ಸಂಗ್ರಹ, ದಾಖಲು, ಪ್ರಕಟಣೆಗೆ ಅಗತ್ಯವಾದ ಜನರ ಸಹಕಾರದಂತೆಯೇ ಪ್ರಭುತ್ವದ ಆಸರೆ ಬೇಕು. ಆ ದಿಸೆಯಲ್ಲಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ **‘ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ’** ಸಂಪುಟದ ಪ್ರಕಟಣೆಯಂತಹ ಮಹತ್ವದ ಕಾರ್ಯ ಕೈಗೊಂಡಿದೆ. ಈ ಯೋಜನೆ ಅಡಿಯಲ್ಲಿ ೬೦ ಸಂಪುಟ ಹೊರತರಲು ತೀರ್ಮಾನಿಸಲಾಗಿದೆ.

ಕರ್ನಾಟಕ ಜಾನಪದ ಅಕಾಡೆಮಿಯು ಈ ಗುರುತರ ಜವಾಬ್ದಾರಿಯ ಮುಖ್ಯ ಪಾಲನ್ನು ಹೊತ್ತು ಈ ಕಾರ್ಯವನ್ನು ನಿರ್ವಹಿಸಿದೆ. ಸಮೃದ್ಧ ಜಾನಪದ ಸಾಹಿತ್ಯದ ಪರಂಪರೆ-ಇತಿಹಾಸವನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಸಂಪುಟಗಳು ರೂಪುಗೊಳ್ಳುವಂತೆ ನೋಡಿಕೊಳ್ಳಲಾಗಿದೆ.

ನಾಡಿನ ಉದ್ದಾಮ ಜಾನಪದ ತಜ್ಞರು ಈ ಸಂಪುಟಗಳನ್ನು ಸಿದ್ಧಗೊಳಿಸಿದ್ದಾರೆ. ಸಂಪಾದಕರು ಅತ್ಯಂತ ಶ್ರಮವಹಿಸಿ ಈ ಸಂಪುಟಗಳನ್ನು ರೂಪುಗೊಳಿಸಿರುತ್ತಾರೆ. ಹೀಗೆ ಈ ಬೃಹತ್ ಯೋಜನೆಗೆ ಸಹಕರಿಸಿದ, ಕೈ ಜೋಡಿಸಿದ ಎಲ್ಲ ಮಹನೀಯರನ್ನೂ ನೆನೆಯುವುದು ಸಂತಸದ ಸಂಗತಿಯಾಗಿದೆ.

ಈ ಕಾರ್ಯದಲ್ಲಿ ತೊಡಗಿಕೊಂಡ ಸಂಪಾದಕ ಸಮಿತಿ ಅಧ್ಯಕ್ಷರಾದ ಡಾ. ಹಿ.ಶಿ. ರಾಮಚಂದ್ರೇಗೌಡ ಮತ್ತು ಸಂಪಾದಕ ಮಂಡಳಿ ಸದಸ್ಯರಿಗೆ ವಿಶೇಷ ವಂದನೆಗಳು.

ತಮ್ಮ ವಿದ್ವತ್ ನುಡಿಗಳೊಂದಿಗೆ ಕೃತಿಯ ಮೌಲ್ಯ ಹೆಚ್ಚಿಸಿದ ಮಾನ್ಯ ಮುಖ್ಯಮಂತ್ರಿಗಳಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿಗಳಾದ ಶ್ರೀ ಬಿ.ಆರ್. ಜಯರಾಮರಾಜೇ ಅರಸು, ನಿರ್ದೇಶಕರಾದ ಶ್ರೀ ಮನು ಬಳಿಗಾರ್, ಸಂಚಾಲಕರಾದ ಶ್ರೀ ಕಾ.ತ. ಚಿಕ್ಕಣ್ಣ, ಶ್ರೀ ಎಚ್. ಶಂಕರಪ್ಪನವರು ಈ ಯೋಜನೆಯ ನಿರ್ವಹಣೆಯಲ್ಲಿ ಅಪಾರ ಸಹಕಾರ ತೋರಿದ್ದಾರೆ, ಅವರಿಗೆ ಹಾಗೂ ಈ ಮಹತ್ವದ ಯೋಜನೆಯನ್ನು ತಮ್ಮದೆಂದು ಭಾವಿಸಿ, ನಿರ್ವಹಿಸಿದ ಕರ್ನಾಟಕ ಜಾನಪದ ಅಕಾಡೆಮಿಯ ಸಿಬ್ಬಂದಿಗೆ ವಂದನೆಗಳು.

**(ಗೊ.ರು. ಚನ್ನಬಸಪ್ಪ)**
ಅಧ್ಯಕ್ಷ
ಕರ್ನಾಟಕ ಜಾನಪದ ಅಕಾಡೆಮಿ
ಬೆಂಗಳೂರು

# ಅಧ್ಯಕ್ಷರ ಮಾತು

**ಪೂರ್ವಾಪರ**

ಹದಿನೆಂಟನೆಯ ಶತಮಾನದ ಆಧುನಿಕ ವಿಜ್ಞಾನ ನಮ್ಮ ದೇಶಕ್ಕೆ ಒಂದು ಮಹಾಪಲ್ಲಟವಾಗಿ ಪ್ರವೇಶಿಸಿತು. ಅದು ವಸಾಹತುಶಾಹಿಯ ಒಂದು ಪ್ರಭುತ್ವವೂ, ಹೊಸಜ್ಞಾನ ಮತ್ತು ಹೊಸ ವಸ್ತು ವಿನ್ಯಾಸದ ಒಂದು ಆವಿಷ್ಕಾರವೂ ಆಗಿತ್ತು. ನಮ್ಮೊಳಗೆ ನಾವು, ಕಟ್ಟಿಹಾಕಿಕೊಂಡಿದ್ದ ನಮಗೆ ಈ ಕಂಪನ ಕೆಲವರಲ್ಲಿ ಭಾರಿ ತಲ್ಲಣವನ್ನೂ, ಹಲವರಲ್ಲಿ ಬಿಡುಗಡೆಯ ತರಂಗಗಳನ್ನೂ ತಂದಿತು. ಅದನ್ನು ಮಿಸುಕುವ, ಮೀರುವ ಅಥವಾ ಸುಧಾರಿಸಿ ಸ್ವೀಕರಿಸುವ ಯಾವ ಶಕ್ತಿಯೂ ಆಗಿನ ಭಾರತೀಯ ಸಂದರ್ಭಕ್ಕೆ ಇರಲಿಲ್ಲ. 'ಒಪ್ಪಿಕೊ ಇಲ್ಲವೆ ಹಿಂದೆಸರಿ' ಎಂಬ ಕೊನೆಯ ಆದೇಶವದು. ಇದು ಕಾರಣವಾಗಿ ಪ್ರಭುತ್ವವನ್ನು ಮೀರಿದರೆ ಹೊಸಜ್ಞಾನ  ತಪ್ಪಿಹೋಗುವ, ಹೊಸಜ್ಞಾನವನ್ನೇ ವಿರೋಧಿಸಿದರೆ ಜೀವನ ಹಿಂದೆ ಸರಿಯುವ ಅಪಾಯದ ಇಕ್ಕಟ್ಟಿನಲ್ಲಿ ಭಾರತದ ಶ್ರೀಮಂತ ಮತ್ತು ಬಡವ ಇಬ್ಬರೂ ಸಿಕ್ಕಿಕೊಂಡರು. ಅಂಥ ವಿಜ್ಞಾನ ನಮ್ಮ ಹತ್ತಿರ ಬಂತು.

ಆ ವಿಜ್ಞಾನ ಕೇವಲ ಜ್ಞಾನವಾಗಿ ಬಂದಿದ್ದರೆ ಭಾರತೀಯ ಪಂಡಿತರು ಅದರೊಂದಿಗೆ ತರ್ಕಕ್ಕೆ ಬಿದ್ದು ಅದನ್ನು ಹೇಗೋ ಸೋಲಿಸಿ ಓಡಿಸಿಬಿಡುತ್ತಿದ್ದರು. ಅದು ಆಯುಧವಾಗಿಯೂ, ಆಸೆಯಾಗಿಯೂ ಮೂಡಿಬಂದಿತ್ತು. ಬ್ರಿಟಿಷರನ್ನು ಸೋಲಿಸಬಹುದಿತ್ತು. ಬಡತನವನ್ನು ಸೋಲಿಸುಬಹುದಿತ್ತೆ ! ನಮ್ಮ ಆ ಕಾಲದ, ದೇಶದ ಬಡತನ ಅಂಥ ವಸ್ತುಜ್ಞಾನದ ಆದೇಶಕ್ಕೆ ತಲೆಬಾಗಿತು. ಜೊತೆಯಲ್ಲಿಯೇ ಸಂಸ್ಕೃತಿಯ ಬಡತನವನ್ನೂ  ಘೋಷಿಸಿಕೊಂಡಿತಲ್ಲ ! ಅಲ್ಲಿ ನಮ್ಮ ಪತನದ ಹಾದಿ ತೆರೆಯಿತು. ಈ ಸೋಲೇ ಮತ್ತೊಂದು ಕಡೆಯಿಂದ ರಾಷ್ಟ್ರೀಯ ಚಳವಳಿಗೆ ಸ್ವರಸಂಯೋಜನೆ ಮಾಡಿತು. 'ಸಾಮಗ್ರಿ ಆಧುನಿಕತೆ'ಯನ್ನು ಎತ್ತಕಡೆಯಿಂದ ಬೇಕಾದರೂ ತರಬಹುದು 'ಸಂಸ್ಕೃತಿ ಆಧುನಿಕತೆ' ಎಂಬುದು ಹಾಗೆ ಬೇರೆ ಬೇರೆ ಕಡೆಯಿಂದ ತುಂಬಿಕೊಳ್ಳುವಂಥದಲ್ಲ. ಅದನ್ನು ನೆಲದೊಡಲ ಫಲವತ್ತತೆಯಿಂದಲೇ ಪುನರ್‌ನಿರ್ಮಿಸಿ ಕೊಳ್ಳುತ್ತ, ಅನ್ಯಸಂಸ್ಕೃತಿಗಳೊಂದಿಗೆ ಅನುಸಂಧಾನ ನಡೆಸತಕ್ಕದ್ದು ಎಂಬುದನ್ನು ರಾಷ್ಟ್ರೀಯವಾದಿಗಳೂ, ಕನ್ನಡ ಸಾಹಿತ್ಯ,  ಸಂಸ್ಕೃತಿ ಪುನರ್ ನಿರ್ಮಾತೃಗಳೂ ಆದ ಕನ್ನಡ ಕವಿ ಚಿಂತಕರು ಕಂಡುಕೊಂಡರು. ಅಲ್ಲಿ ಹುಟ್ಟಿತು ನೋಡಿ ನಮ್ಮ ಜನಪದ ಸಾಹಿತ್ಯದ ಕಾಂಕ್ಷೆ.

ಈ ಮೊದಲೆ ಬ್ರಿಟಿಷರು ಜನಪದ ಸಾಹಿತ್ಯ, ಸಂಸ್ಕೃತಿ ಸಂಗ್ರಹದಲ್ಲಿ ತೊಡಗಿದ್ದರು. ಅದು ಅವರ ಸಾಮ್ರಾಜ್ಯ ವಿಸ್ತರಣೆಯ ಎರಡನೆ ಚಲನೆಯ ಹುನ್ನಾರು. ಮತ್ತೊಂದು ಬಗೆಯಲ್ಲಿ ಭಾರತದ ಜಾನಪದ ಕಚ್ಚಾಸಂಪತ್ತನ್ನು ಕೊಂಡೊಯ್ಯುವ ವಿಕ್ರಮದ ಮುಂದುವರಿದ ಕಥಾನಕ. ಈ ನಮ್ಮ ಸಂಸ್ಕೃತಿ, ಅವರು ನಮಗೆ ತಂದುಕೊಟ್ಟ ವಿಜ್ಞಾನದಂಥ ಶ್ರೇಷ್ಠತೆ ಎಂದು ಅವರು ತಿಳಿದಿರಲಿಲ್ಲ, ಮಂತ್ರ ಮಾಯಾ ಲೋಕದ ಭಾರತೀಯ ಪುರಾತನರು ಹೇಗಿರಬಹುದು ಎಂಬ ಕುತೂಹಲ ಹಾಗೂ ಅದನ್ನು ಕಂಡು ಅನುಭವಿಸುವ ಪ್ರಭುವಿನ ಖುಷಿ ಅವರದಾಗಿತ್ತು. ತಪ್ಪೇನಿಲ್ಲ; ಪ್ರಭುಗಳೆ ಹಾಗೆ ! ಆಳಿಸಿಕೊಳ್ಳುವವನ ಸಂಪತ್ತು, ಸಂಸ್ಕೃತಿ, ಸಾಹಿತ್ಯ – ಇವೆಲ್ಲ ಅಕಾಲಿಕ ಮತ್ತು ಹಳೆಯವು ಎಂದು ಅವರು ಹೇಳಲೇಬೇಕಿತ್ತು. ಅದು ಅವರ ಅಭಿವೃದ್ಧಿ ತತ್ವದ ಮುಂದುವರಿಕೆ ಮತ್ತು ಆಳಿಸಿಕೊಳ್ಳುವವನ  ಅನಭಿವೃದ್ಧಿ ಮನೋಧರ್ಮದ ಸಮರ್ಥನೆ. ಅದು ಆಗಿನ ಭಾರತದಲ್ಲೂ ಕರ್ನಾಟಕದಲ್ಲೂ ಚನ್ನಾಗಿಯೇ ನಡೆಯಿತು.

ಆ ಕಾಲದ ಪರಿಸ್ಥಿತಿ ಹೊರಗಿನಿಂದ ಬಂದ ಜ್ಞಾನ 'ಆಧುನಿಕ', ನಮ್ಮದೆಂಬುದು 'ಪುರಾತನ' ಎಂದು ಮನಸೋತು ಒಪ್ಪಿಕೊಂಡುಬಿಟ್ಟಿತ್ತು. ಭಾರತೀಯ ಉತ್ಪಾದನೆಯಲ್ಲಿ ಹೊಸತು ಮತ್ತು ಹಳತು ಎಂಬ ವಿಭಜಿತ ಧೋರಣೆ ಎಲ್ಲರ ಮನದೊಳಗೆ ದಾಖಲಾಗಿತ್ತು. ಆ ಕಾರಣದ ಮೇಲಿಂದ ನಮ್ಮ ಸಂಸ್ಕೃತಿ ಮತ್ತು ಜನಪದ ಸಾಹಿತ್ಯ ನಮ್ಮ ಹಳ್ಳಿಗಳಂತೆ ಹಳೆಯದು ಎಂದು ಹೇಳುವುದನ್ನು ಮರೆಯುತ್ತಿರಲಿಲ್ಲ. ಅದೇ ಸಂದರ್ಭದಲ್ಲಿ ಈ ಎಲ್ಲವೂ ನಮ್ಮ ಹೃದಯಕ್ಕೆ ಸಂಬಂಧಪಟ್ಟ ಅತ್ಯಂತ ಆಪ್ತವಾದ ಸ್ಪಂದನ ಎಂಬುದನ್ನು ನಿರಾಕರಿಸುವಂತಿರಲಿಲ್ಲ.  ಇಂತಹ ಒಂದು ಸಮಕಾಲೀನ ಸಂಘರ್ಷವನ್ನು ಎದುರು ಹಾಕಿಕೊಂಡ ಸಂದರ್ಭದಲ್ಲಿ ನಮ್ಮ ಹಿರಿಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಕಂಡು ಕಾಣಿಸಿ ವಿವರಿಸಿದರು. ಅಂತಹ ಜನಪದ ಸಾಹಿತ್ಯದ ಆಪ್ತತೆಗಾಗಿ ಅದರ ಕಡೆಗೆ ಕೈ ಚಾಚಿದರು, ಅದಕ್ಕಾಗಿ ಹಂಬಲಿಸಿ ಆಸೆಪಟ್ಟರು, ಅದನ್ನು ಕೊಡುವ  ಜನತೆಯ ಮುಂದೆ ಬೇಡಿದರು, ಅವರ ಸೃಷ್ಟಿಸಂಸ್ಕೃತಿಗೆ

ಉಪಕಾರ ಸ್ಮರಣೆ ಸಲ್ಲಿಸಿದರು. ಶಿಷ್ಟತೆಯ ಸ್ಥಾನ – ಮಾನ, ಅಹಂಕಾರವನ್ನು ತೊರೆದು ಜನಪದರೊಂದಿಗೆ ಒಂದಾಗುವ, ಒಡನಾಡುವ ತಾಯ್ತನವನ್ನು ಮೆರೆದರು.

ಜನಪದ ಸಾಹಿತ್ಯ ಮತ್ತು ಅದರ ಸಂಗ್ರಹದ ಪ್ರಶ್ನೆ ಕೇವಲ ಒಂದು ಸಾಹಿತ್ಯ ಪ್ರಕಾರದ ಬಗೆಗಿನ ವ್ಯಾಮೋಹ ಆಗಿರಲಿಲ್ಲ. ಅದು ಪ್ರಸ್ತುತದಲ್ಲಿದ್ದ 'ಆಧುನಿಕ'ವೆಂಬ ಜಾಗತಿಕ ಸಂಸ್ಕೃತಿಯ ಸಂದರ್ಭದಲ್ಲಿ ಸ್ಥಳೀಯ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಘಟಿಸುವ ಜವಾಬ್ದಾರಿಯೂ ಆಗಿತ್ತು. ಇದರೊಳಗೆ ಗ್ರಾಮೀಣ ಸಮುದಾಯಗಳನ್ನು ಚೇತರಿಸುವ ಮೂಲಕ ಅಖಂಡ ಭಾರತವನ್ನು ಪುನರ್‌ಸಂಘಟಿಸುವ ಪರೋಕ್ಷ ಪ್ರಯತ್ನವೂ ಇತ್ತು. ಹೀಗೆ ಒಂದು 'ಸಮಗ್ರ ಸಾಹಿತ್ಯ ಕರ್ನಾಟಕ' ಮತ್ತು 'ಸಂಸ್ಕೃತಿ ಭಾರತ'ವನ್ನು ನಿರ್ಮಿಸುವ ಹೊಣೆಗಾರಿಕೆಯನ್ನು ನಮ್ಮ ಹಿರಿಯರು ಹೊತ್ತರು. ಇದನ್ನು ಸಾಹಿತಿಗಳ ಮೂಲಕ ನಡೆದ ರಾಷ್ಟ್ರೀಯ ಚಳವಳಿ ಎನ್ನಬಹುದು. ಇವರಿಗೆ ಜನಪದಸಾಹಿತ್ಯ ಮುಖ್ಯ ಸಂಪನ್ಮೂಲವೂ, ಸ್ಫೂರ್ತಿಯೂ, ಸಾಂಸ್ಕೃತಿಕ ಅಸ್ತ್ರವೂ ಆಯಿತು. ಶಿಷ್ಟ ಸಾಹಿತ್ಯ, ಕವಿ ಮುದ್ದಣನ ಸಂದರ್ಭದಲ್ಲಿ ನಿಲುಗಡೆಗೆ ತಲುಪಿದ್ದು, ನವೋದಯ ಸಾಹಿತ್ಯ ಚಳವಳಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಕಟ್ಟುವ ಹೊಸ ನಾಯಕತ್ವವನ್ನು ವಹಿಸಿತ್ತು. ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದ ಕೆಲವು ಪಾಶ್ಚಾತ್ಯ ದೇಶಗಳು ಜನಪದ ಸಾಹಿತ್ಯದ ಮೂಲಕ ತಮ್ಮ ದೇಶವನ್ನು ಪುನರ್‌ಸಂಘಟಿಸುವ ಮಾರ್ಗದರ್ಶನವನ್ನು ನೀಡಿದ್ದವು. ಅದು ನಮ್ಮ ಸಾಹಿತಿ-ಚಿಂತಕರಿಗೆ ಒಂದು ಹೆದ್ದಾರಿಯಾಯಿತು.

ಇಂಗ್ಲೆಂಡ್ ಕೈಗಾರಿಕೀಕರಣದಿಂದ ಕಳೆದುಕೊಳ್ಳುತ್ತಿರುವ ತಾಯ್ತನವನ್ನು ಮತ್ತೆ ಪಡೆಯಲು ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯ ಕಡೆಗೆ ಧಾವಿಸಿತು. ಫಿನ್ಲೆಂಡ್ ತನ್ನ ಪಕ್ಕದ ಸಾಮ್ರಾಜ್ಯಶಾಹಿಯನ್ನು ಎದುರಿಸಲು ಮತ್ತು ಸ್ವದೇಶವೆಂಬ ಸಂಸ್ಕೃತಿ ರಾಷ್ಟ್ರವನ್ನು ಸ್ಥಾಪಿಸಲು ಜನಪದ ಮಹಾಕಾವ್ಯ ಮತ್ತು ನಾಯಕರನ್ನು ಸಾಂಸ್ಕೃತಿಕ ವೀರರನ್ನಾಗಿ ಸ್ಥಾಪನೆಮಾಡಿತು. ಜರ್ಮನಿ ತಮ್ಮ ಮೂಲವನ್ನು ಪರೀಕ್ಷೆ ಮಾಡಿಕೊಳ್ಳಲು ಹಾಗೂ ಭದ್ರಮಾಡಿಕೊಳ್ಳಲು ಜನಪದ ಸಾಹಿತ್ಯ, ಭಾಷೆ ಮತ್ತು ಸಂಸ್ಕೃತಿಗಳ ಮೇಲೆ ಭಾರಿ ಹೊರೆಯನ್ನು ಹೊರಿಸಿತು. ರಷ್ಯಾ ಕಾರ್ಮಿಕ ರಾಜ್ಯ ಸ್ಥಾಪನೆಯ ಘೋಷಣೆಯ ಮೂಲಕ, ದುಡಿಯುವ ಜನರ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಮೂಲಕ ಜನರ ದನಿಗೆ ಮಾನ್ಯತೆ ನೀಡಿತು. ಭಾರತದಲ್ಲಿ ಇಂಥದೊಂದು ಚಟುವಟಿಕೆ ಗಾಂಧೀಜಿ ಅವರ ಸ್ವದೇಶಿ ಮತ್ತು ಗ್ರಾಮ ಸ್ವರಾಜ್ಯ ಚಿಂತನೆಯಿಂದ ಆರಂಭವಾಯಿತು.

ನಮ್ಮ ನವೋದಯ ಹಿರಿಯ ಸಾಹಿತಿಗಳು ಪಾಶ್ಚಾತ್ಯವನ್ನು ಪೌರ್ವಾತ್ಯದಿಂದ ಸರಿಗಟ್ಟಲು ಪ್ರಯತ್ನಶೀಲರಾದರೂ ಪಾಶ್ಚಾತ್ಯವೆಂಬುದು ಅವರಿಗೆ ನಿರಾಕರಣೆಯ ಜ್ಞಾನವಾಗಿರಲಿಲ್ಲ. ಈ ಎರಡರಲ್ಲಿಯ ಒಳ್ಳೆಯದರ ಆಯ್ಕೆ ಅವರ ಆದ್ಯತೆಯಾಗಿತ್ತು. ಪಾಶ್ಚಾತ್ಯ ಸಾಹಿತ್ಯದಲ್ಲಿಯ ಒಳ್ಳೆಯದನ್ನು ಹೆಸರಿಸುತ್ತಲೇ ಆ ಮಟ್ಟಿನ ಸಾಮರ್ಥ್ಯ ಪಡೆಯಲು ಜನಪದ ಸಾಹಿತ್ಯವೇ ಸರಿಯಾದ ಸಂಪನ್ಮೂಲ ಎಂಬುದನ್ನು ಮನಗಂಡರು. ಆ ಮೂಲಕ ಜನಪದ ಸಾಹಿತ್ಯ ಒಂದು ಸಾಹಿತ್ಯಕ ಅನನ್ಯತೆ ಮತ್ತು ಸ್ವೋಪಜ್ಞತೆ ಎಂದು ಗುರುತಿಸಿದರು. ಜನಪದ ಸಾಹಿತ್ಯವೆಂಬುದು: 'ಗೊರವರ ಡುಂಡುಚಿ ಬೀದಿವರೆಯ ಬೀರನಕತೆ' ಎಂಬ ಹಿಂದಿನ ಅವಹೇಳನಕಾರಿ ಧೋರಣೆಯನ್ನು ತಿರಸ್ಕರಿಸಿದರು. ೧೯೧೧ರ ಸುಮಾರಿನಿಂದಲೆ ನಮ್ಮ ಕನ್ನಡ ಸಾಹಿತಿಗಳು ಜನಪದಗೀತ ಸಂಗ್ರಹಗಳನ್ನು ಪ್ರಕಟಿಸತೊಡಗಿದರು, ನಮ್ಮ ಅಸ್ತಿತ್ವಕ್ಕಾಗಿ ಪಡಿ ನುಡಿದರು. ಹಾಗೆ ನೋಡಿದರೆ ಈ ಬದ್ಧತೆ ಅವರು ಸಮಕಾಲೀನವಾಗಿ ತಮ್ಮನ್ನು ಸೂಕ್ತ ಮಾಡಿಕೊಳ್ಳುವ ಸಂಗತಿಯೂ ಹೌದು. ಇಂಥ ಮುಕ್ತ ಮನಸ್ಸು ಮತ್ತು ವ್ಯಕ್ತ ವ್ಯಕ್ತಿತ್ವದ ಮೂಲಕ ಜನಪದ ಸಾಹಿತ್ಯ ಸಂಗ್ರಹಕ್ಕೆ ರಾಜಮಾರ್ಗವನ್ನು ಸೃಷ್ಟಿಸಿದರು. ಈಗ ಅವರ ಮಾರ್ಗದರ್ಶಕ ಮಾತುಗಳನ್ನು ಅನುಸರಿಸಿಯೇ ನಾವು ಮುಂದೆ ಹೋಗಬೇಕಿದೆ.

**ಮಾತಿನ ಸರಣಿ : ಮುತ್ತಿನ ಬೆಲೆ**

**ಬಿ. ಎಂ. ಶ್ರೀಕಂಠಯ್ಯ**

'ಕನ್ನಡದಲ್ಲಿ ಇಂತಹ ಕಾಲ ಒದಗಿರುವಾಗ, ಕನ್ನಡ ಕವಿತೆ ತನ್ನ ಅಳತೆಯನ್ನೆ ಅಲ್ಲ, ಆಳವನ್ನೂ ಕೂಡಾ ಕಂಡುಕೊಳ್ಳುತ್ತಿರುವಾಗ, ಸಂಸ್ಕೃತ-ಇಂಗ್ಲಿಷ್ ಸಾಹಿತ್ಯಗಳ, ಇತರ ಸಾಹಿತ್ಯಗಳ, ಸರಿಯಾದ ಸಂಸ್ಕಾರದ ಜೊತೆಗೆ ಕನ್ನಡದ ಪ್ರೌಢಸಾಹಿತ್ಯದ ವ್ಯಾಸಂಗದ ಜೊತೆಗೆ, ಕನ್ನಡದ ಮತ್ತು ಇತರ ಸಾಹಿತ್ಯದ ಜನಪದ ಸಾಹಿತ್ಯವನ್ನೂ ಪರಾಮರ್ಶಿಸುವುದು ಅತ್ಯಾವಶ್ಯಕವಾದ ಕರ್ತವ್ಯ. ನವನಾಗರಿಕತೆಯ ಹೊಡೆತದಲ್ಲಿ, ಪ್ರೌಢಸಾಹಿತ್ಯದ ತಿರಸ್ಕಾರದಲ್ಲಿ ಈ ಜನಪದ ಸಾಹಿತ್ಯ ಉಳಿಯುವುದೇ ಕಷ್ಟವಾಗಿದೆ. ನಾಶವಾಗುವುದಕ್ಕೆ ಮೊದಲೇ ಇದನ್ನು ಕಾಪಾಡಿಕೊಳ್ಳುವುದು ಕನ್ನಡಿಗರ ಕರ್ತವ್ಯ. ಸಾಹಿತ್ಯಾಭಿಮಾನಿಗಳೂ, ದೇಶವತ್ಸಲರೂ ಶ್ರದ್ಧೆಯಿಂದ ಮೂಲೆ ಮೂಲೆಗಳಿಂದಲೂ ತಮ್ಮ ತಮ್ಮ ಕಡೆಯಲ್ಲಿರುವ ಹಾಡುಗಳನ್ನು ಸಂಗ್ರಹಿಸುತ್ತಾ ಬಂದರೆ ಶೀಘ್ರದಲ್ಲಿಯೇ ಕನ್ನಡ ನಾಡಿನ ಹಾಡುಗಳೆಲ್ಲಾ ಒಂದುಗೂಡಿ ಒಂದು ದೊಡ್ಡ ಜನಪದ ಸಾಹಿತ್ಯಕೋಶವಾಗುವುದು'. **(ಗರತಿಯ ಹಾಡು ೧೯೩೧)**

**ದ. ರಾ. ಬೇಂದ್ರೆ**

'.........ತಾಯಿ, ಅಕ್ಕಗಳಿರಾ ! ಈ ಹಳ್ಳಿಯ ಹಾಡುಗಳ, ಹಳೆಯ ಹಾಡುಗಳ ಹೊಳೆಯನ್ನು ಇಂಗಗೊಡಬೇಡಿ. ಮತ್ತೆ ಹನಿಹನಿಯಾಗಿ ಹಳ್ಳವಾಗಲಿ, ಹಳ್ಳ ಹಳ್ಳ ಕೂಡಿ ಹೊಳೆಯಾಗಲಿ. ಈ ಅಪೇಕ್ಷೆಯನ್ನು ಕನ್ನಡತಿಯರು ಕೈಗೂಡಿಸಿಕೊಡರೆ?

'ಕರ್ನಾಟಕದೊಳಗಿನ ಬೇರೆ ಬೇರೆ ಭಾಗದವರು ಹೀಗೆ ಪದ್ಯಗಳನ್ನು ಸಂಗ್ರಹಿಸಿ ಚೆನ್ನಾಗಿ ಬರೆದು ಕಳುಹಿಸಿದರೆ ಕನ್ನಡದ ಅಭ್ಯಾಸಕ್ಕೆ ದೊಡ್ಡದೊಂದು ಉಪಕಾರ ಮಾಡಿದಂತಾಗುವುದು. ಇದನ್ನು ಎಷ್ಟು ಒತ್ತಿಹೇಳಿದರೂ ಸಾಲದು !. **(ಗರತಿಯ ಹಾಡು ೧೯೩೧)**

**ಮಾಸ್ತಿ ವೆಂಕಟೇಶ ಅಯ್ಯಂಗಾರ್**

'ಜನದ ಕ್ಷೇಮವನ್ನು ಬಯಸುವವರೆಲ್ಲ ಈ ಕವಿತೆಯನ್ನು ದೃಷ್ಟಿಯಿಟ್ಟು ನೋಡಬೇಕು, ಮನಸ್ಸು ಕೊಟ್ಟು ತಿಳಿಯಬೇಕು. ಇನ್ನು ಯಾವ ರೀತಿಯಿಂದಲಾದರೂ ತಿಳಿಯಲಾಗದ ಕೆಲವು ವಿಷಯಗಳು ನಮಗೆ ಈ ಕವಿತೆಯಿಂದ ತಿಳಿಯುತ್ತವೆ'. **(ಕರ್ನಾಟಕ ಜನಪದ ಸಾಹಿತ್ಯ ೧೯೫೮)**

**ಬೆಟಗೇರಿ ಕೃಷ್ಣಶರ್ಮ**

'ಹೊಸಕಾಲದ ಕ್ರಾಂತಿಯಲ್ಲಿ ಮಾನವನ ಮನಸ್ಸು ಬುದ್ಧಿ ಹೃದಯಗಳು ಮಾಯವಾಗಿ ಹೋಗುವವೇನು?.. ಇದ್ದೇ ಇರುವವು. ಇವು ಇದ್ದೇ ಇರುವುದಾದರೆ ನಮ್ಮ ಹಳೆಯ ಜನಪದ ಸಾಹಿತ್ಯ ಉಳಿಯಲೇಬೇಕು, ಉಳಿದೇ ಉಳಿಯುವುದು. ನಾವೀಗ ಅದನ್ನು ಅಳಿಯದಂತೆ ಉಳಿಸಿ, ಹೊಸ ಕಾಲಕ್ಕೆ ನಮ್ಮ ಕಾಣಿಕೆ ಸಲ್ಲಿಸಲೇಬೇಕಾಗಿದೆ'.

**(ಅಧ್ಯಕ್ಷ ಭಾಷಣ. ಮೂರನೆಯ ಕರ್ನಾಟಕ ಜಾನಪದ ಸಮ್ಮೇಳನ ೧೯೭೧)**

**ಬಿ. ಎಸ್. ಗದ್ದಿಗೀಮಠ**

'ಕರ್ನಾಟಕದ ಒಂದೊಂದು ಭಾಗದ ಜನಪದ ಸಾಹಿತ್ಯವನ್ನು ಕಲೆಹಾಕಿ ಬೆಳಕಿಗೆ ತಂದರೆ ಕನ್ನಡ ಜನತೆಯ ನಿಜವಾದ ಸಂಸ್ಕೃತಿಯ ಒಂದು ಅಮೂಲ್ಯವಾದ 'ವಿಶ್ವಕೋಶ'ವೇ ಆಗಬಹುದೆಂದು ಹೇಳಬಹುದು'. **(ಕನ್ನಡ ಜನಪದ ಗೀತೆಗಳು ೧೯೬೩)**

**ದೇ. ಜವರೇಗೌಡ**

‘ಈ ತನಕ ವೈಯಕ್ತಿಕ ಮಟ್ಟದಲ್ಲಿ ತಕ್ಕಮಟ್ಟಿಗೆ ಸಂಗ್ರಹಕಾರ್ಯ ನಡೆದಿದೆ; ಆದರೆ ಆಗಬೇಕಾದ ಕಾರ್ಯ ಬೆಟ್ಟದಷ್ಟಿದೆ. ಅದನ್ನೆಲ್ಲ ಒಬ್ಬಿಬ್ಬರು ವ್ಯಕ್ತಿಗಳಿಂದ ನಿರೀಕ್ಷಿಸುವುದು ಕಷ್ಟ. ಸರ್ಕಾರವೂ, ಸರ್ಕಾರದ ನೆರವು ಪಡೆದ ಸಂಸ್ಥೆಗಳೂ ಈ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗಿದೆ’. **(ಜನಪದ ಸಾಹಿತ್ಯ ಸಮೀಕ್ಷೆ – ಜೀಶಂಪ ೧೯೬೭).**

**ಎಚ್. ಎಲ್. ನಾಗೇಗೌಡ**

‘ಹಣಕೊಟ್ಟರೆ ಮುಂದೆ ಏನಾದರೂ ಸಿಕ್ಕಬಹುದು. ಆದರೆ ಜನಪದ ಸಾಹಿತ್ಯ ಸಿಕ್ಕುವುದಿಲ್ಲ. ಶರಾವತಿಯನ್ನು ಈಗ ಉಪಯೋಗಿಸಿಕೊಳ್ಳದಿದ್ದರೆ ಮುಂದೆ ಉಪಯೋಗಿಸಿಕೊಳ್ಳಬಹುದು. ಆದರೆ ಜನಪದ ಸಾಹಿತ್ಯ ಶರಾವತಿ ಒಮ್ಮೆ ಬತ್ತಿದರೆ ಮತ್ತೊಮ್ಮೆ ಹರಿಯಲಾರಳು’. **(ಹೊನ್ನ ಬಿತ್ತೇವು ಹೊಲಕೆಲ್ಲ ೧೯೬೩)**

**ಜೀ.ಶಂ.ಪರಮಶಿವಯ್ಯ**

‘ಸಮೃದ್ಧವಾದ ಜನಪದ ಸಾಹಿತ್ಯ ದೇಶದ ಸೌಭಾಗ್ಯಗಳಲ್ಲೊಂದು, ಅದನ್ನು ಪ್ರಮುಖವಾದ ರಾಷ್ಟ್ರೀಯ ಸಂಪತ್ತು ಎಂಬಂತೆ ಕಾಪಾಡಿಕೊಳ್ಳಬೇಕು’. **(ಜನಪದ ಸಾಹಿತ್ಯ ಸಮೀಕ್ಷೆ ೧೯೬೭)**

**– ೩ –**

**ಕಟ್ಟುವ ಕನಸು ; ನೆಟ್ಟ ಸಸಿ**

ಜನಪದ ಸಾಹಿತ್ಯದ ಸಂಗ್ರಹದ ಮಾತು ಆ ಸಾಹಿತ್ಯ ಸಂಗ್ರಹಕ್ಕೆ ಮಾತ್ರ ಮುಗಿಯದು. ಆ ಸಂಗ್ರಹದ ಮೂಲ ಉದ್ದೇಶ ಜನಪದ ಸಂಸ್ಕೃತಿಯ ಕಾಂಕ್ಷೆ. ಎಂದರೆ ಜೀವನ ಸಂಸ್ಕೃತಿಯ ಹುಡುಕಾಟ, ಬದುಕುವ ಸಂಸತಿಯ ಬಯಕೆ. ಸಹಜ ಸಂಸ್ಕೃತಿ ಮತ್ತು ಭೋಗ ಸಂಸ್ಕೃತಿಯ ನಡುವಿನ ಈ ಸಂಘರ್ಷ ಬ್ರಿಟಿಷ್ ವಸಾಹತುಶಾಹಿ ಆಗಮನ ಕಾಲದಿಂದ ಮಾತ್ರವಲ್ಲ ; ಶಿಷ್ಟ ಜನಪದವೆಂಬ ಸಹಜ ಸಂಸ್ಕೃತಿಗಳ ನಿರಂತರ ಅನುಸಂಧಾನದ ಪ್ರಕ್ರಿಯೆ. ಅದು ಕಾರಣವಾಗಿ ಜನಪದ ಸಾಹಿತ್ಯ ಸಂಗ್ರಹದ ಕಾರ್ಯ ಮತ್ತು ಅಧ್ಯಯನ ಯಾವ ಕಾಲಕ್ಕೂ ಮುಗಿಯುವುದಿಲ್ಲ. ಹಾಗೆ ಮುಗಿದರೆ ಸಂಸ್ಕೃತಿಗಳೆಲ್ಲವೂ ಸತ್ತಿರುತ್ತವೆ. ಕರ್ನಾಟಕದ ಸಂದರ್ಭದಲ್ಲಿ ಶಿಷ್ಟ – ಜನಪದ – ವಸಾಹತು ಸಂಸ್ಕೃತಿಗಳ ಸಂಘರ್ಷ ಮತ್ತು ಅನುಸಂಧಾನ ಬೇರೆ ಬೇರೆ ದಾರಿಗಳಲ್ಲಿ ನಡೆಯುತ್ತಲೇ ಇದೆ. ಅಂತಹ ನಾಲ್ಕು ದಾರಿಗಳು ನಮಗೆ ಕಂಡಿವೆ :

೧ ಕನ್ನಡ ಭಾಷಾ ಅಭಿವೃದ್ಧಿಗಾಗಿ

೨ ಜನತಾ ಸಂಸ್ಕೃತಿಯ ಶೋಧಕ್ಕಾಗಿ

೩ ಜಾನಪದ ಅಧ್ಯಯನಕ್ಕಾಗಿ

೪ ಪರ್ಯಾಯ ಜ್ಞಾನ ಚಿಂತನೆಯಾಗಿ

ಕನ್ನಡ ಭಾಷಾಭಿವೃದ್ಧಿಗಾಗಿ ಜನಪದ ಸಾಹಿತ್ಯವನ್ನು ಯಾಕೆ ಮತ್ತು ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ನಮ್ಮ ಹಿರಿಯ ಸಾಹಿತಿಗಳು ಹೇಳಿರುವುದನ್ನು ಈ ಮೊದಲು ಕಂಡಿದ್ದೇವೆ. ಜನತಾ ಸಂಸ್ಕೃತಿಯ ಪುನರುತ್ಥಾನದ ವಿಷಯದಲ್ಲಿ ಕೂಡ ಇದೇ ಹಿರಿಯರು ಅತ್ಯಂತ ಸಂವೇದನಾಶೀಲ ನಡೆಯನ್ನು ದಾಖಲಿಸಿದ್ದಾರೆ. ದೇವುಡು ಅವರ ಈ ಮಾತುಗಳನ್ನು ಗಮನಿಸಿ: ‘ಈ ಸಂಸ್ಕೃತಿ ವಿಮರ್ಶೆಯ

ದೃಷ್ಟಿಯಿಂದ ನಮಗೆ ನಮ್ಮ ನಾಡಿನ ಕುಲಕುಲಗಳೆಲ್ಲವೂ ಒಂದೇ ಸಮನಾಗಿ ಮಾನ್ಯವಾದುವು: ಹಾರುವರೆಂದು ಹೆಚ್ಚಲ್ಲ, ಹೊಲೆಯರೆಂದು ಕಡೆಯಿಲ್ಲ; ಕನ್ನಡ ನಾಡಿನಲ್ಲಿ ನೆಲಸಿ, ಕನ್ನಡಿಗರು ನಾವು ಎಂದು ಅಭಿಮಾನಪಡುವ ಪ್ರತಿಯೊಂದು ಕುಲವೂ ನಮಗೆ ಮಾನ್ಯವು. ಈ ಕನ್ನಡ ಕುಲಕುಲಗಳ ವ್ಯಷ್ಟಿಸಮಷ್ಟಿ ವ್ಯವಹಾರ ಪ್ರಪಂಚವನ್ನು ಸಂಸ್ಕೃತಿಯ ದೃಷ್ಟಿಯಿಂದ ಹುಡುಕಾಡುವುದು ಈ ಲೇಖನಗಳಲ್ಲಿ ಮಾಡುವ ಕೆಲಸ (ಕರ್ನಾಟಕ ಸಂಸ್ಕೃತಿ ೧೯೩೫). ಸಿಂಪಿ ಲಿಂಗಣ್ಣ ಅವರೂ ಇದೇ ಮಾರ್ಗದಲ್ಲಿ ಮುನ್ನಡೆದಿದ್ದಾರೆ: "ಇದು ದಲಿತರು ಉದ್ಧಾರವಾಗುವ ಕಾಲ; ದುಡಿಮೆಗಾರರು ರಾಜ್ಯ ಶಾಸಕರಾಗುವ ಕಾಲ; ಒಕ್ಕಲಿಗನು ನೇಗಿಲಯೋಗಿಯೆನಿಸುವ ಕಾಲ, ನಿರಕ್ಷರರು ಸಾಕ್ಷರರಾಗುವ ಕಾಲ; ಸಾಮಾನ್ಯ ಜನರೂ ಸುಖ ಬಯಸುವ ಕಾಲ; (ಜನಾಂಗದ ಜೀವಾಳ ೧೯೩೪).

ಕರ್ನಾಟಕದ ಹೆಚ್ಚಿನ ಜಾನಪದ ಅಧ್ಯಯನ ಎಂಬುದು ಜನಪದ ಸಾಹಿತ್ಯದ ಅಧ್ಯಯನವೆ ಆಗಿದೆ. ಕರ್ನಾಟಕದಲ್ಲಿ 'ಜಾನಪದವನ್ನು ಹುಟ್ಟಿಸಿ ಬೆಳಸಿದವರೆ ಸಾಹಿತಿಗಳು. ಜನಪದ ಸಾಹಿತ್ಯ ಸಂಗ್ರಹ ಬ್ರಿಟಿಷ್ ವಿದ್ವಾಂಸ ಜಾನ್ ಲೇಡನ್ (೧೮೦೩) ಕಾಲದಿಂದ ನಡೆಯುತ್ತ ಬಂದಿದೆ. ಅದರ ಸಾಹಿತ್ಯ ಅಧ್ಯಯನ ಕೂಡ ತುಂಬ ಹಿಂದಿನದು. ಜನಪದ ಸಾಹಿತ್ಯ ಸೇರಿದಂತೆ ಜನಪದರ ಏನೆಲ್ಲ ಹುಟ್ಟುವಳಿಗಳನ್ನು ಜಾನಪದವೆಂಬ ಸಮಗ್ರ ವಿಷಯದೊಳಗೆ ತಂದು ಅಧ್ಯಯನ ಮಾಡಿದ್ದು ೧೯೬೬ ರಿಂದ ಈಚೆಗೆ. ಕರ್ನಾಟಕ ಜಾನಪದ ಅಧ್ಯಯನದ ಪ್ರೇರಕರೆಂದರೆ ದೇ. ಜವರೇಗೌಡ. ಇವರನ್ನು ಅನುಸರಿಸಿದವರೆಂದರೆ, ಹಾ. ಮಾ. ನಾಯಕ ಮತ್ತು ಜೀ.ಶಂ. ಪರಮಶಿವಯ್ಯ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೊದಲಾಗಿ ಕನ್ನಡ ಎಂ.ಎ ತರಗತಿಗೆ ಐಚ್ಛಿಕವಾಗಿ ಎರಡು ಜಾನಪದ ಸಂಬಂಧಿ ಪತ್ರಿಕೆಗಳನ್ನು ಅಧ್ಯಯನಕ್ಕಾಗಿ ಅಳವಡಿಸಲಾಯಿತು (೧೯೬೬). ಆನಂತರ ೧೯೭೪ರಲ್ಲಿ ಪೂರ್ಣಪ್ರಮಾಣದಲ್ಲಿ ಜಾನಪದ ಎಂ.ಎ ತರಗತಿಗಳನ್ನು ಆರಂಭಿಸಲಾಯಿತು. ಈ ವಿಭಾಗಕ್ಕೆ ಕರ್ನಾಟಕದ, ಏಕೆ ಭಾರತದಲ್ಲಿಯೇ ಮೊದಲಾಗಿ ಜಾನಪದ ಪ್ರಾಧ್ಯಾಪಕರಾಗಿ ಜೀ.ಶಂ.ಪರಮಶಿವಯ್ಯ ನೇಮಕಗೊಂಡರು. ಇದೇ ಸಂದರ್ಭದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ಹಾ. ಮಾ. ನಾಯಕ ಅವರು 'ಜಾನಪದ ಸ್ವರೂಪ' (೧೯೬೬) ಕುರಿತು ಒಂದು ಸಮಗ್ರ ದೃಷ್ಟಿಯ ಲೇಖನವನ್ನು ಬರೆದು ಜಾನಪದ ಅಧ್ಯಯನಕ್ಕೆ ರಾಜಮಾರ್ಗವನ್ನು ತೋರಿಸಿದರು. ಇಷ್ಟೆಲ್ಲದರ ಪ್ರೇರಣಾಶಕ್ತಿಯಾದ ದೇ.ಜವರೇಗೌಡರ ನುಡಿ ಇದು: 'ಜಾನಪದ ಸಂಪ್ರದಾಯ ಒಂದು ಜನಸಮುದಾಯದ ಸಮಷ್ಟಿ ಸೃಷ್ಟಿ, ಸಾಮಾಜಿಕ ಜೀವನದ ಸಂಕೇತ, ರಾಷ್ಟ್ರೀಯ ಸಂಸ್ಕೃತಿಯ ತಾಯಿ ಬೇರು; ಅದು ಜನಸಾಮಾನ್ಯರ ಶ್ರುತಿಯೂ ಅಹುದು, ಸ್ಮೃತಿಯೂ ಅಹುದು.... ಭಾರತೀಯತ್ವದ ಅಥವಾ ದೇಶೀಯತೆಯ ರಕ್ಷಣೆಗಾಗಿ ಜಾನಪದ ಸಂಪ್ರದಾಯದ ಜೀರ್ಣೋದ್ಧಾರ ಕಾರ್ಯ ನಡೆಯಬೇಕಾಗಿದೆ.....ಜಾನಪದ ಸಂಪ್ರದಾಯದ ಪುನಶ್ಚೇತನದಿಂದ ದಾಸ್ಯ ಮನೋಭಾವ ತೊಲಗಿ ಜನಜೀವನದಲ್ಲಿ ಹುರುಪು ಹುಮ್ಮಸ್ಸುಗಳು ಚಿಗುರಿ, ಆತ್ಮಪ್ರಜ್ಞೆ ಕೊನರಿ, ಕೆಚ್ಚುನೆಚ್ಚುಗಳು ಮೂಡಿ, ಹೊಸ ಚೇತನ ಮುಕ್ಕಳಿಸುತ್ತದೆ (ಜನಪದ ಸಾಹಿತ್ಯ ಸಮೀಕ್ಷೆ – ಜೀಶಂಪ; ಮುನ್ನುಡಿಯಲ್ಲಿ ೧೯೬೭).

ಮೈಸೂರು ವಿಶ್ವವಿದ್ಯಾನಿಲಯ ಆರಂಭಿಸಿದ ಈ ಜಾನಪದ ಪ್ರಸ್ಥಾನ, ಇದೊಂದು ರಾಷ್ಟ್ರೀಯ ಅವಶ್ಯಕತೆ ಎನ್ನುವಂತೆ ಬಹುಬೇಗನೆ ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳಿಗೆ ವ್ಯಾಪಿಸಿತು. ದೇಜಗೌ, ಹಾಮಾನಾ, ಜೀಶಂಪ ಅವರು ಈ ಪ್ರಸ್ಥಾನದ ಮಾರ್ಗದರ್ಶಿ ಮಾದರಿಗಳಾದರು. ಈ ಹಿಂದೆ ಜನಪದ ಸಾಹಿತ್ಯ ಸಂಗ್ರಹಕ್ಕೆ ಅಗ್ರಮಾನ್ಯತೆ ಇತ್ತು. ಈಗದು ಅಧ್ಯಯನದ ನೆರವನ್ನು ಪಡೆಯಬೇಕಾಗಿ ಬಂತು. ಜನಪದ ಸಾಹಿತ್ಯವನ್ನು ಕೇಳುವ – ಓದುವ ಪ್ರಕ್ರಿಯೆ ಅದನ್ನು ಸಾಂಸ್ಕೃತಿಕವಾಗಿ ಅರ್ಥೈಸುವತ್ತ ಮುನ್ನಡೆಯಿತು. ಅದು ಕಾರಣವಾಗಿ ಹಲವರು ಜನಪದ ಸಾಹಿತ್ಯವನ್ನು ಸಂಗ್ರಹಿಸುತ್ತಲೂ, ಅದರ ವಿಚಾರವನ್ನು ಹೇಳುತ್ತಲೂ ಹೋದರು. ಈ ನಿಟ್ಟಿನಲ್ಲಿ ಕರ್ನಾಟಕದ ವಿಶ್ವವಿದ್ಯಾನಿಲಯಗಳು ಮಾರ್ಗದರ್ಶಕನ ಸ್ಥಾನದಲ್ಲಿ ನಿಂತರೆ, ಹೊರಗಿನಿಂದ ಅನೇಕರು ಈ ಮಾರ್ಗವನ್ನು ದೃಢೀಕರಿಸಿದ್ದಾರೆ.

ವಿಶ್ವವಿದ್ಯಾಲಯಗಳಿಗೆ ಜನಪದ ಸಾಹಿತ್ಯವೊಂದು ಅಧ್ಯಯನ ವಿಷಯವಾಗಬಲ್ಲದು ಎಂಬ ಸೂಚನೆಯನ್ನೂ ವಾತಾವರಣವನ್ನೂ ಸೃಷ್ಟಿಸಿಕೊಟ್ಟವರು ರಾಷ್ಟ್ರೀಯವಾದಿಗಳಾದ ಹಿರಿಯ ಕನ್ನಡ ಸಾಹಿತಿಗಳು. ಜನಪದ ಸಾಹಿತ್ಯ – ಜಾನಪದವನ್ನು ಅಧ್ಯಯನ ಶಿಸ್ತನ್ನಾಗಿ ಮಾಡಿಯೆ ತೀರುವ ಹಠವನ್ನು ಹೊತ್ತವರು ದೇ.ಜವರೇಗೌಡರು. ಜಾನಪದ ಡಿಪ್ಲೊಮಾ, ಜಾನಪದ ಎಂ.ಎ ತೆರೆಯುವುದರ ಜೊತೆಗೆ ಜನಪದ ಸಾಹಿತ್ಯವನ್ನು ಸಂಗ್ರಹಿಸಲು ಒಂದು ವಿಭಾಗವನ್ನೇ ಆರಂಭಿಸಿದರು. ಕರ್ನಾಟಕದಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ತರಲು ಕ್ಯಾತನಹಳ್ಳಿ ರಾಮಣ್ಣ, ಟಿ.ಎಸ್.ರಾಜಪ್ಪ, ಅಂಬಳಿಕೆ ಹಿರಿಯಣ್ಣ ನೇಮಕಗೊಂಡರು. ಇವರ ನಂತರ ಮೈಲಹಳ್ಳಿ ರೇವಣ್ಣ ಮತ್ತು

ಜಯಲಕ್ಷ್ಮಿ ಸೀತಾಪುರ ಜನಪದ ಸಾಹಿತ್ಯ ಸಂಗ್ರಹದಲ್ಲಿ ತೊಡಗಿದರು. ಇದೇ ಸಂದರ್ಭದಲ್ಲಿ ಜಾನಪದ ವಸ್ತುಸಂಗ್ರಹಾಲಯವನ್ನೂ ದೇ.ಜ.ಗೌ. ಶುರುಮಾಡಿದರು. ಅವರ ಈ ಸಾಹಸ ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾನಿಲಯಗಳನ್ನು ಪ್ರೇರೇಪಿಸಿತು. ಈ ಮೂರು ಹಂತದ; ಜಾನಪದ ಅಧ್ಯಯನ, ಸಂಗ್ರಹ ಹಾಗೂ ವಸ್ತುಸಂಗ್ರಹಾಲಯ ಸ್ಥಾಪನೆ ಕಾರ್ಯಯೋಜನೆಯನ್ನು ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳು ಕೈಗೆತ್ತಿಕೊಂಡವು.

ಮೈಸೂರು ವಿಶ್ವವಿದ್ಯಾಲಯ ವಲಯವು ಈಗಾಗಲೇ ಎಸ್. ಕೆ. ಕರೀಂಖಾನ್, ಕೆ. ಆರ್. ಲಿಂಗಪ್ಪ ಹಾಗೂ ಮತ್ತಿತರರ ಜನಪದ ಸಾಹಿತ್ಯ ಹಾಡುಗಾರಿಕೆ ಪ್ರಚಾರದಿಂದ, ಮತಿಘಟ್ಟ ಕೃಷ್ಣಮೂರ್ತಿಯವರ ಸಮೃದ್ಧ ಜನಪದ ಸಾಹಿತ್ಯ ಸಂಗ್ರಹದ ದಾಖಲೆ ಮತ್ತು ತರೀಕೆರೆಯ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನದಿಂದ ಮೈನೆರೆದು ನಿಂತಿತ್ತು. ಈ ಸಂದರ್ಭವನ್ನು ಬಳಸಿಕೊಂಡು ಈ ವಲಯದಿಂದ ಕೆಳಗಿನ ಜಾನಪದ ವಿದ್ವಾಂಸರು ಸಂಗ್ರಹ, ಅಧ್ಯಯನ ಮತ್ತು ಪ್ರಸರಣಕಾರ್ಯವನ್ನು ಮುಂದುವರಿಸಿದರು. ಅವರೆಂದರೆ: ಮತಿಘಟ್ಟ ಕೃಷ್ಣಮೂರ್ತಿ, ಪಿ.ಆರ್. ತಿಪ್ಪೇಸ್ವಾಮಿ, ಸಿ. ಪಿ. ಕೆ., ರಾಗೌ, ಸುಧಾಕರ, ನಂ.ತಪಸ್ವೀ ಕುಮಾರ್, ಹ. ಕ. ರಾಜೇಗೌಡ, ಡಿ.ಕೆ.ರಾಜೇಂದ್ರ ಹಿ.ಶಿ. ರಾಮಚಂದ್ರೇಗೌಡ, ಜಿ. ವಿ. ದಾಸೇಗೌಡ, ವೈ.ಸಿ. ಭಾನುಮತಿ, ನಲ್ಲೂರು ಪ್ರಸಾದ್, ಮೇಟಿಕೆರೆ ಹಿರಿಯಣ್ಣ, ಚಂದ್ರು ಕಾಳೇನಹಳ್ಳಿ, ವಿ. ಎನ್. ಶಿವರಾಮು ಮುಂತಾದವರು.

ತಾವು ಬೇರೆಯಾಗುವುದಕ್ಕೆ ಮೊದಲು ಕುವೆಂಪು ಹಾಗೂ ಮಂಗಳೂರು ವಿಶ್ವವಿದ್ಯಾಲಯಗಳು ಮೈಸೂರು ವಿಶ್ವವಿದ್ಯಾಲಯದ ವಿಸ್ತರಿತ ಕೇಂದ್ರಸ್ಥಾನಗಳಾಗಿದ್ದವು. ಜನಪದ ಸಾಹಿತ್ಯ ಕಾರ್ಯಯೋಜನೆಯಲ್ಲಿ ಅವು ಮೈಸೂರು ವಿಶ್ವವಿದ್ಯಾಲಯವನ್ನು ಅನುಸರಿಸಿದವು. ಪ್ರತ್ಯೇಕ ವಿಶ್ವವಿದ್ಯಾಲಯಗಳಾದ ಮೇಲೂ ಅಲ್ಲಿನ ಕನ್ನಡ ಸಾಹಿತಿ-ಅಧ್ಯಾಪಕರು ಜನಪದ ಸಾಹಿತ್ಯದ ಮೇಲೆ ತೋರಿದ ಆಸಕ್ತಿ ಅನನ್ಯವಾಗಿದೆ. ಪ್ರತಿಯೊಬ್ಬರೂ ತಮ್ಮ ನೆಲೆಯಲ್ಲಿ ಗಣನೀಯವಾದ ಕೆಲಸ ಮಾಡಿದ್ದಾರೆ. ಕುವೆಂಪು ವಿಶ್ವವಿದ್ಯಾಲಯದ ಕಡೆಯಿಂದ ಎಚ್.ಜೆ.ಲಕ್ಕಪ್ಪಗೌಡ, ತೀ.ನಂ. ಶಂಕರನಾರಾಯಣ, ಶ್ರೀಕಂಠ ಕೂಡಿಗೆ, ಬಸವರಾಜ ನೆಲ್ಲೀಸರ, ಎಂ. ಜಿ. ಈಶ್ವರಪ್ಪ, ಮೀರಾಸಾಬಿಹಳ್ಳಿ ಶಿವಣ್ಣ, ಮುಂತಾದವರು ಹಾಗೂ ಮಂಗಳೂರು ವಿಶ್ವವಿದ್ಯಾಲಯ ವಲಯದಿಂದ ಗುಂಡ್ಮಿ ಚಂದ್ರಶೇಖರ ಐತಾಳ, ಅಮೃತ ಸೋಮೇಶ್ವರ, ಬಿ.ಎ.ವಿವೇಕ ರೈ, ಕೆ. ಚಿನ್ನಪ್ಪಗೌಡ, ಶಿವರಾಮಶೆಟ್ಟಿ, ಅಭಯಕುಮಾರ್, ಎಸ್.ಎ. ಕೃಷ್ಣಯ್ಯ, ಅರವಿಂದ ಮಾಲಗತ್ತಿ, ಪ್ರಭಾಕರ ಜೋಷಿ, ಪಾಲ್ತಾಡಿ ರಾಮಕೃಷ್ಣ ಆಚಾರ್, ರಾಘವ ನಂಬಿಯಾರ್ ಈ ಮಂತಾದವರು ಜನಪದ ಸಾಹಿತ್ಯವಲ್ಲದೆ ಯಕ್ಷಗಾನ ಸಾಹಿತ್ಯದಲ್ಲೂ ಪ್ರಬುದ್ಧ ಸೇವೆ ಸಲ್ಲಿಸಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳಾಗಿದ್ದ ಆರ್. ಸಿ. ಹಿರೇಮಠರು, ದೇ. ಜವರೇಗೌಡರು ತಮ್ಮ ವಿಶ್ವವಿದ್ಯಾಲಯದಲ್ಲಿ ಸೃಷ್ಟಿಸಿದ್ದ ಮೂರು ಹಂತದ ಜನಪದ ಸಾಹಿತ್ಯ- ಜಾನಪದ ಕ್ರಿಯಾಯೋಜನೆಯನ್ನು ಅನುಸರಿಸಿದರು. ಇವರ ನಾಯಕತ್ವದ ಮುಂದುವರಿಕೆಯಾಗಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬಹುದೊಡ್ಡ ಮೊತ್ತದ ಜನಪದ ಸಾಹಿತ್ಯ ಹಾಗೂ ಜಾನಪದ ಅಧ್ಯಯನದ ಫಲಶ್ರುತಿಯಾಗಿ ಅನೇಕ "ಜಾನಪದ ಸಾಹಿತ್ಯದರ್ಶನ" ಸಂಪುಟಗಳು ಹೊರಬಂದವು. ಕರ್ನಾಟಕ ವಿಶ್ವವಿದ್ಯಾಲಯ ವಲಯದಲ್ಲಿ ಎಂ.ಎಸ್. ಸುಂಕಾಪುರ, ಎಂ ಟಿ. ಧೂಪದ, ಸೋಮಶೇಖರ ಇಮ್ರಾಪುರ, ಎಂ. ಎಸ್. ವೃಷಭೇಂದ್ರಸ್ವಾಮಿ, ಎಂ. ಎಂ. ಕಲಬುರ್ಗಿ, ದೇವೇಂದ್ರಕುಮಾರ ಹಕಾರಿ, ಎಂ. ಬಿ. ನೇಗಿನಹಾಳ, ಎಂ. ಬಿ. ಕೊಟ್ರಶೆಟ್ಟಿ, ಸಿ. ಸಿ. ಎ. ಪೈ, ಎಲ್. ಆರ್. ಹೆಗಡೆ, ಎನ್. ಆರ್. ನಾಯಕ, ಶ್ರೀಮತಿ ಶಾಂತಿನಾಯಕ, ಎಂ.ಎಂ.ಪಡಶೆಟ್ಟಿ, ಜ್ಯೋತಿ ಹೊಸೂರ, ನಿಂಗಣ್ಣ ಸಣ್ಣಕ್ಕಿ, ಶ್ರೀರಾಮ ಇಟ್ಟಣ್ಣನವರ, ವಿಲಿಯಂಮಾಡ್ತ, ಎಂ. ಎನ್. ವಾಲಿ, ಬಿ. ವಿ. ಮಲ್ಲಾಪುರ, ಎಚ್. ಎಂ. ಮಹೇಶ್ವರಯ್ಯ, ಕೆ. ಆರ್. ದುರ್ಗಾದಾಸ್, ಸೈಯದ್ ಜಮೀರುಲ್ಲಾ ಷರೀಫ್, ಶಾಲಿನಿ ರಘುನಾಥ, ಸಿ. ಕೆ. ನಾವಲಗಿ ಮುಂತಾದವರು ಕೆಲಸ ಮಾಡುತ್ತಾ ಬರುತ್ತಿದ್ದಾರೆ. ಇವರೆಲ್ಲರ ಹಿಂದೆ ಹಿರಿಯ ಶಕ್ತಿಯಾದ ಬಿ. ಎಸ್. ಗದ್ದಗೀಮಠರು ಜನಪದ ಸಾಹಿತ್ಯದಲ್ಲಿ ಮಾಡಿದ ಅಪಾರ ಸೇವೆ ಬೆಂಬಲವಾಗಿ ನಿಂತಿದೆ. ಬಹುದೊಡ್ಡ ವಿಶ್ವವಿದ್ಯಾನಿಲಯಗಳಲ್ಲಿ ಒಂದಾದ ಗುಲಬರ್ಗಾ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಹಿರಿಯ – ಕಿರಿಯ ಅನೇಕ ಸಾಹಿತಿಗಳು ಜನಪದ ಸಾಹಿತ್ಯ ಸಂಗ್ರಹ ಮತ್ತು ಅಧ್ಯಯನದಲ್ಲಿ ತಮ್ಮ ಪ್ರಾದೇಶಿಕ ವೈಶಿಷ್ಟ್ಯವನ್ನು ಸರಿಯಾಗಿಯೆ ದಾಖಲಿಸಿದ್ದಾರೆ. ಅವರುಗಳಲ್ಲಿ ಬಿ. ಬಿ. ಹೆಂಡಿ, ಎಂ. ಎಸ್. ಲಠ್ಠೆ, ಮ. ಗು. ಬಿರಾದಾರ, ವೀರಣ್ಣ ದಂಡೆ, ಪಿ.ಕೆ. ಖಂಡೋಬಾ, ಡಿ. ಬಿ. ನಾಯಕ ಮುಖ್ಯರು.

ಕನ್ನಡ ವಿಶ್ವವಿದ್ಯಾಲಯ ತನ್ನ ಕಡಿಮೆ ವಯಸ್ಸಿನಲ್ಲೆ ಗಣನೀಯ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸಿದೆ. ಈ ನೆಲೆಯಲ್ಲಿ ಹಿ. ಚಿ. ಬೋರಲಿಂಗಯ್ಯ, ಎ. ವಿ. ನಾವಡ, ಗಾಯತ್ರಿ ನಾವಡ ದಾಖಲೆಯ ಕೆಲಸ ಮಾಡಿದ್ದಾರೆ. ಮಂಜುನಾಥ ಬೇವಿನಕಟ್ಟಿ, ಎಸ್. ಸಿ. ರಮೇಶ, ಮೊಗಳ್ಳಿ ಗಣೇಶ, ವೆಂಕಟೇಶ ಇಂದುವಾಡಿ, ವೀರೇಶ ಬಡಿಗೇರ ಇವರು ಗಮನ ಸೆಳೆಯುವ ಕೆಲಸ ಮಾಡಿದ್ದಾರೆ.. ಹೊಸಪೇಟೆಯಲ್ಲಿದ್ದು ಬಸವರಾಜ ಮಲಶೆಟ್ಟರು ಜನಪದ ಸಾಹಿತ್ಯ – ಬಯಲಾಟ ಕ್ಷೇತ್ರದಲ್ಲಿ ಅಪೂರ್ವವಾದ ಸಾಧನೆ ಮಾಡಿದ್ದಾರೆ. ಪುರುಷೋತ್ತಮ ಬಿಳಿಮಲೆಯವರು ಬಹುದೊಡ್ಡ ಪ್ರೇರಣೆಯಾಗಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ವಿಭಾಗವನ್ನು ಕಟ್ಟಿದವರು.

ರಾಜಧಾನಿ ವಿಶ್ವವಿದ್ಯಾಲಯವಾದ ಬೆಂಗಳೂರು ವಲಯದಲ್ಲಿ ಚಂದ್ರಶೇಖರ ಕಂಬಾರ, ಕಾಳೇಗೌಡ ನಾಗವಾರ, ಸಿದ್ಧಗಂಗಯ್ಯ ಕಂಬಾಳು, ಡಿ.ಲಿಂಗಯ್ಯ, ಜಿ.ಆರ್.ತಿಪ್ಪೇಸ್ವಾಮಿ, ರಂಗಾರೆಡ್ಡಿ ಕೋಡಿರಾಂಪುರ, ಕೆ. ಆರ್. ಸಂಧ್ಯಾರೆಡ್ಡಿ , ಧವಳಶ್ರೀ, ಸಿ.ವೀರಣ್ಣ, ಬಿಎಸ್.ಸ್ವಾಮಿ, ಎಸ್.ಪಿ. ಪದ್ಮಪ್ರಸಾದ್, ಟಿ.ಗೋವಿಂದರಾಜು, ರಾಜೇಗೌಡ ಹೊಸಹಳ್ಳಿ, ಎಂ.ಬೈರೇಗೌಡ, ಚಕ್ಕೆರೆ ಶಿವಶಂಕರ್, ಬೈರಮಂಗಲ ರಾಮೇಗೌಡ, ಕೃಷ್ಣಮೂರ್ತಿ ಹನೂರು, ಟಿ.ಎಸ್.ಸತ್ಯನಾಥ್, ಅಂದನೂರು ಶೋಭ, ಕುರುವ ಬಸವರಾಜ ಅವರಂಥ ಅನೇಕ ಜನಪದ ಸಾಹಿತ್ಯ ಕ್ಷೇತ್ರದ ಸಾಧಕರಿದ್ದಾರೆ. ಈ ವಲಯದ ಮಹಾ ಪ್ರೇರಣೆಗಳೆಂದರೆ ಚಂದ್ರಶೇಖರ ಕಂಬಾರ ಮತ್ತು ಎಚ್.ಎಲ್.ನಾಗೇಗೌಡರು. ನಾಗೇಗೌಡರಲ್ಲಿ ಅಪಾರವಾದ ಜನಪದ ಸಾಹಿತ್ಯ ಸಂಗ್ರಹವಿದೆ.

ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ, ಪ್ರಕಟಣೆ, ಪ್ರಚಾರ, ಪ್ರಸಾರ, ವಿವರಣೆ, ವಿಶ್ಲೇಷಣೆ, ಸಮರ್ಥನೆ ಮತ್ತು ತಮ್ಮನ್ನು ತಾವೇ ಜನಪದ ಸಾಹಿತ್ಯಕ್ಕೆ ಸಮರ್ಪಿಸಿಕೊಳ್ಳುವ ಚಟುವಟಿಕೆ ಎಲ್ಲಿಗೆ ತಲುಪಿತು ಎಂದರೆ ಜನಪದ ಸಾಹಿತ್ಯವನ್ನು ಶಿಷ್ಟಸಾಹಿತ್ಯ ಚಟುವಟಿಕೆಗೆ ಸರಿಸಮವಾಗಿಸುವ ಪರ್ಯಾಯ ಚಿಂತನೆ ಹುಟ್ಟಿಕೊಂಡಿತು. ಇನ್ನೊಂದು ರೀತಿಯಲ್ಲಿ ಈ ಚಟುವಟಿಕೆ ಶಿಷ್ಟಸಾಹಿತ್ಯಕ್ಕೆ ತೋರಿದ ಸೃಜನಾತ್ಮಕ ಪ್ರತಿಭಟನೆಯಂತೆಯೂ ಕಾಣುತ್ತದೆ. ಆರಂಭಕಾಲದಲ್ಲಿ ಶಿಷ್ಟಸಾಹಿತ್ಯಕ್ಕೆ ಸೌಷ್ಟವವನ್ನು ಭರ್ತಿ ಮಾಡಿಕೊಳ್ಳಲು ಹುಟ್ಟಿದ ಜನಪದ ಸಾಹಿತ್ಯ ಸಂಗ್ರಹಪ್ರೇಮ ಇಪ್ಪತ್ತನೆಯ ಶತಮಾನದ ಏಳನೆಯ ದಶಕದ ಹೊತ್ತಿಗೆ ಶಿಷ್ಟಸಾಹಿತ್ಯಕ್ಕೆ ಸಮಸಾಹಿತ್ಯವೆಂಬಂತೆ ಎದ್ದುನಿಂತಿತು. ಇದಕ್ಕೆ ಸಮರ್ಥನೆ ಎನ್ನುವಂತೆ ೧೯೭೭ರಲ್ಲಿ ತರೀಕೆರೆಯಲ್ಲಿ, ೧೯೭೯ರಲ್ಲಿ ಮಂಗಳೂರಿನಲ್ಲಿ ಹಾಗೂ ೧೯೮೧ ರಲ್ಲಿ ನಾಗಮಂಗಲದಲ್ಲಿ ನಡೆದ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನಗಳೆ ಸಾಕ್ಷಿ. ಮೊದಲ ಸಮ್ಮೇಳನದ ಜವಾಬ್ದಾರಿಯನ್ನು ಜನಪದ ಸಾಹಿತ್ಯ ಕ್ಷೇತ್ರದ ನವಕೋಗಿಲೆ ಎಂದು ಹೆಸರು ಪಡೆದಿದ್ದ ಕೆ.ಆರ್.ಲಿಂಗಪ್ಪನವರು ವಹಿಸಿದ್ದರು. ಉಳಿದೆರಡು ಸಮ್ಮೇಳನಗಳ ಜವಾಬ್ದಾರಿಯನ್ನು ಐ.ಎ.ಎಸ್. ಅಧಿಕಾರಿಯೂ ಜಾನಪದ ಲೋಕದ ಸೃಷ್ಟಿಕರ್ತರೂ ಆದ ಎಚ್.ಎಲ್.ನಾಗೇಗೌಡರು ನಿರ್ವಹಿಸಿದರು. ದೊಡ್ಡಪ್ರಮಾಣದ ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳನ್ನು ಅನುಸರಿಸಿ ಕರ್ನಾಟಕದ ಜಿಲ್ಲೆ ಜಿಲ್ಲೆಗಳಲ್ಲಿ ಅನೇಕ ಜನಪದ ಸಾಹಿತ್ಯ ಸಮ್ಮೇಳನಗಳು ನಡೆದವು.

ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳ ಹಿಂದೆ ನಾಡಿನ ಹೆಸರಾಂತ ಸಾಹಿತ್ಯ ವಿಮರ್ಶಕರು ನಿಂತು ತಮ್ಮ ತಮ್ಮ ನೆಲೆಯಲ್ಲಿ ಜನಪದ ಸಾಹಿತ್ಯದ ಮಹತ್ವವನ್ನು ಶೈಕ್ಷಣಿಕವಾಗಿ ಎತ್ತಿ ಹಿಡಿಯುವ ಪ್ರಯತ್ನ ನಡೆಸಿದ್ದರು. ತೀ. ನಂ. ಶ್ರೀಕಂಠಯ್ಯನವರಂಥ ಹಿರಿಯ ಕಾವ್ಯಮೀಮಾಂಸಕರು ತಮ್ಮ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಕಾವ್ಯಲಕ್ಷಣಕ್ಕೆ ಜನಪದ ಸಾಹಿತ್ಯದಿಂದ ಉದಾಹರಣೆಗಳನ್ನು ಎತ್ತಿಕೊಂಡು ಅದರ ಘನತೆಯನ್ನು ಹೆಚ್ಚಿಸಿದರು. ಈ ನಿಟ್ಟಿನಲ್ಲಿ ಹಿರಿಯ ಕವಿ ಕಾವ್ಯಮೀಮಾಂಸಕರಾದ ಜಿ. ಎಸ್. ಶಿವರುದ್ರಪ್ಪ ಮತ್ತು ಸಿ. ಪಿ. ಕೃಷ್ಣಕುಮಾರ್ ಅವರ ಕೊಡುಗೆ ಸ್ಮರಣೀಯವಾದುದು. ಸಿ. ಪಿ. ಕೆ. ಯವರು ಜನಪದ ಸಾಹಿತ್ಯದ ಸಾಮರ್ಥ್ಯವನ್ನು ಯಾಹೊತ್ತೂ ಶಿಷ್ಟಸಾಹಿತ್ಯಕ್ಕೆ ಕಡಿಮೆ ಇಲ್ಲವೆಂಬಂತೆ ಹಟಹಿಡಿದು ಬರೆದಿದ್ದಾರೆ. ಜನಪದ ಸಾಹಿತ್ಯವನ್ನೂ ಶಿಷ್ಟಸಾಹಿತ್ಯದ ಕ್ರಮದಂತೆ ಕಾವ್ಯಮೀಮಾಂಸಾ ಪರಿಧಿಗೆ ತರಬಹುದು ಎಂಬುದನ್ನು ಶ್ರಮವಹಿಸಿ ವೀರಣ್ಣ ದಂಡೆಯವರು ಸಾಧಿಸಿ ತೋರಿಸಿದ್ದಾರೆ.

ಜನಪದ ಸಾಹಿತ್ಯದ ಮೌಲ್ಯಮಾಪನ ದೃಷ್ಟಿಯಿಂದ ಗಿರಡ್ಡಿ ಗೋವಿಂದರಾಜು ಅವರ 'ಜನಪದ ಗೀತೆ' ಕೃತಿ ಜನಪದ ಸಾಹಿತ್ಯ ಪ್ರೇಮಿಗಳಲ್ಲಿ ಸಾಕಷ್ಟು ಪ್ರತಿಕ್ರಿಯೆಯನ್ನು ಸೃಷ್ಟಿಮಾಡಿತು. ಈ ಬರಹಕ್ಕೆ ಸಿಪಿಕೆಯವರು ತೀವ್ರವಾಗಿ ಪ್ರತಿನುಡಿದಿದ್ದಾರೆ. ಜನಪದ ಸಾಹಿತ್ಯದ ಸಾಹಿತ್ಯಕ ಮೌಲ್ಯಮಾಪನದ ದೃಷ್ಟಿಯಿಂದ ಚಂದ್ರಶೇಖರ ಕಂಬಾರ, ರಾಗೌ ಮತ್ತು ಹಿ. ಶಿ. ರಾಮಚಂದ್ರೇಗೌಡ ಅವರ ನಿಲುವು 'ಪ್ರಕಾರನ್ಯಾಯ'ದ ನೆಲೆಯಿಂದ ವ್ಯಕ್ತವಾಗಿದೆ. ಜನಪದ ಸಾಹಿತ್ಯ ಅಖಂಡ ಜಾನಪದದ 'ಉಪ ಉತ್ಪನ್ನ' ಎಂದು ಕಂಬಾರರು

ಹೇಳಿದರೆ; ಜನಪದ ಸಾಹಿತ್ಯದ ಅನನ್ಯತೆಯೆ ಬೇರೆ ಎಂದು ರಾಗೌ ಪ್ರತಿಪಾದಿಸಿರುತ್ತಾರೆ. ಈ ವಿಷಯ ಕುರಿತು ಹಿ. ಶಿ. ರಾಮಚಂದ್ರೇಗೌಡ ಅವರ 'ಪ್ರಕಾರನ್ಯಾಯ' ಮತ್ತು 'ಪ್ರಕಾರ ಅಸ್ತಿತ್ವ' ದೃಷ್ಟಿಯಿಂದ ಜನಪದ ಸಾಹಿತ್ಯವನ್ನು ಒಂದು ವಿಶಿಷ್ಟ ಸಾಹಿತ್ಯ ಪ್ರಕಾರ ಮತ್ತು ಅಸ್ತಿತ್ವ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಜನಪದ ಸಾಹಿತ್ಯವನ್ನು ಬೇರೆ ಬೇರೆ ಮಗ್ಗಲುಗಳಲ್ಲಿ ವಿವರಿಸುವ ಮತ್ತು ವಿಮರ್ಶಿಸುವ ಪ್ರಯತ್ನಗಳನ್ನು ಕರ್ನಾಟಕದ ಅನೇಕ ಸಾಹಿತ್ಯ ಚಿಂತಕರು ಮಾಡಿದ್ದಾರೆ.

**ಪರ್ಯಾಯದ ಬೆಲೆ : ಗೊತ್ತಿಲ್ಲದ ನೆಲೆ**

ಈಗ ಜಗತ್ತಿನಾದ್ಯಂತ ಪರ್ಯಾಯ ಜ್ಞಾನದ ಹುಡುಕಾಟ ತುಂಬ ತುರ್ತಿನ ಕೆಲಸವೆಂಬಂತೆ ನಡೆಯುತ್ತಿದೆ. ಅಭಿವೃದ್ಧಿಶೀಲ ದೇಶಗಳು ಇರುವ ಸೌಕರ್ಯಗಳನ್ನು ಇನ್ನೂ ಹೆಚ್ಚಿಸಿಕೊಳ್ಳುವ ಕಾರಣಕ್ಕೆ ಪರ್ಯಾಯ ಜ್ಞಾನದ ಹುಡುಕಾಟದಲ್ಲಿ ತೊಡಗಿವೆ.
ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು 'ಪ್ರಭುರಾಷ್ಟ್ರಗಳ ಪ್ರಭುತ್ವ ವಿಜ್ಞಾನ'ಕ್ಕೆ ಪರ್ಯಾಯವಾಗಿ ತಮ್ಮ ತಮ್ಮ ದೇಶದ 'ಪಾರಂಪರಿಕ ಜ್ಞಾನ ಮಾದರಿ'ಗಳನ್ನು ಸಮಕಾಲೀನಗೊಳಿಸಿಕೊಳ್ಳುವ ಹವಣಿಕೆಯಲ್ಲಿವೆ. ಕರ್ನಾಟಕದಲ್ಲಿ ಜನಪದ ಸಾಹಿತ್ಯವನ್ನು ದೇಸಿಸಾಹಿತ್ಯವೆಂದೂ, ಜಾನಪದವನ್ನು ದೇಶಿಜ್ಞಾನವೆಂದೂ ಹೆಸರಿಸಿ ಅವುಗಳ ಪ್ರತ್ಯೇಕತೆ ಮತ್ತು ವಿಶಿಷ್ಟತೆಯನ್ನು ಬಹಳ ಕಾಲದಿಂದಲೂ ಗುರುತಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಹೊಸ ತಲೆಮಾರಿನ ಜಾನಪದ ಚಿಂತಕರು ಜಾನಪದವನ್ನು ಸಮಕಾಲೀನ ಜ್ಞಾನ – ವಿಜ್ಞಾನವನ್ನಾಗಿ ನಿರ್ವಚಿಸಿ ಮಂಡಿಸುತ್ತಿದ್ದಾರೆ. ಉದಾಹರಣೆಗಾಗಿ ಹಿ. ಶಿ. ರಾಮಚಂದ್ರೇಗೌಡರ ಕೆಳಗಿನ ನುಡಿಗಳನ್ನು ಗಮನಿಸಿ;

'ಪುರದಪುಣ್ಯಂ ಪುರುಷರೂಪಿಂದೆ ಪೋಗುತಿದೆ
ಪರಿಜನದ ಭಾಗ್ಯವಡವಿಗೆ ನಡೆಯುತಿದೆ.'
**– ರಾಘವಾಂಕ**

"ವಿಜ್ಞಾನವೆಂಬ ಯಜಮಾನನಿಗೆ ಜನತೆಯ ಜ್ಞಾನ ಸೊರಗಿ ಸೋತುಹೋಯಿತು. ಇಲ್ಲಿಂದಲೆ ಬಡವರ ಸೋಲು ಆರಂಭವಾಯಿತು. ಎಲ್ಲ ಸ್ಥಳೀಯ ಕುಶಲಕರ್ಮಿಗಳು ಕೈಚೆಲ್ಲಿದರು. ಆ ಮೂಲಕ ಬಹುಜನರ ಸೃಜನಶೀಲತೆ ತಟಸ್ಥವಾಯಿತು. ಅನೇಕ ಶತಮಾನಗಳ ಜ್ಞಾನ ಅವನತಿಯ ಹಾದಿಹಿಡಿಯಿತು. ಇದೆ ಜಾನಪದ ; ಜನರ ಜ್ಞಾನ-ವಿಜ್ಞಾನ. ಒಂದು ದೇಶ ಸಮಗ್ರವಾಗಿ ಅಭಿವೃದ್ಧಿ ಹೊಂದಬೇಕಾದರೆ, ಬಹುಜನರು ಕ್ರಿಯಾಶೀಲರಾಗಬೇಕಾದರೆ, ಯುಗಶೀಲವಾದ ಜಾನಪದ ಮರುಹುಟ್ಟು ಪಡೆಯಬೇಕು ಮತ್ತು ಸಮಕಾಲೀನವಾಗಬೇಕು. ಧುತ್ತನೆ ಎದ್ದು ನಿಂತು ಬಡವರ ಹಾಗೂ ಬಹುಜನರ ಮನಸ್ಸು ಮತ್ತು ಶ್ರಮವನ್ನು ನಿಷ್ಕ್ರಿಯಗೊಳಿಸಿದ ಆಧುನಿಕತೆ ನಿಶ್ಶಸ್ತ್ರೀಕರಣಗೊಳ್ಳಬೇಕು. ಇಲ್ಲದಿದ್ದಲ್ಲಿ ನಮ್ಮನ್ನು ಅಮೆರಿಕ ಕಾಡಿದಂತೆ, ಅಮೆರಿಕವನ್ನು ಬಿನ್ ಲಾಡೆನ್ ಕಾಡಿದಂತೆ ನವ ಆಧುನಿಕತೆ ನಮ್ಮನ್ನೆಲ್ಲ ನಿರಂತರ ಭಯದಲ್ಲಿ ಇಟ್ಟಿರುತ್ತದೆ" (ಪುರದ ಪುಣ್ಯ ೬೧.೧೯೦೪).

ನಮ್ಮ ಜನಪದ ಸಾಹಿತ್ಯದ ಸಂಗ್ರಹ, ಅಧ್ಯಯನ ತಲುಪಬೇಕಾದ ಗುರಿ ಇದು. ಇಲ್ಲದಿದ್ದಲ್ಲಿ ಎಂದಿನಂತೆ ಜನಪದ ಸಾಹಿತ್ಯ ನಶಿಸಿಹೋಗುತ್ತಿದೆ, ನಾವು ಕಳೆದು ಹೋಗುತ್ತಿದ್ದೇವೆ ಎಂದು ಪರಿತಪಿಸುತ್ತಲೇ ಇರಬೇಕಾಗುತ್ತದೆ. ಈ ಪರ್ಯಾಯದ ಪ್ರಶ್ನೆ ಸರಳವಾದುದಲ್ಲ. ಅದು ನಮ್ಮ ಜೀವನ ಭದ್ರತೆಯ ಹುಡುಕಾಟ. ಜಾಗತೀಕರಣವೆಂಬ ವಸ್ತುರಾಕ್ಷಸನಿಂದ ಇಡೀ ಭಾರತೀಯ ಸಂಸ್ಕೃತಿ ವಸ್ತುಸಂಸ್ಕೃತಿಯಾಗಿ ಪರಿವರ್ತಿತವಾಗುತ್ತಿದೆ. ತಮ್ಮಲ್ಲೆ ವಸ್ತುವನ್ನು ಸೃಷ್ಟಿ ಮಾಡುವ ಜೀವನ ಸಂಸ್ಕೃತಿಯ ಆಶಯಗಳಾದ ಭೂಮಿ, ನೀರು, ಗಾಳಿ, ಆಹಾರ ಕಲುಷಿತಗೊಳ್ಳುತ್ತಿವೆ. ಜೀವನ ಸಂಸ್ಕೃತಿಯ ಅಭಿವ್ಯಕ್ತಿಗಳಾದ ಹೆಣ್ಣು, ಕಲಾವಿದರು, ಮಕ್ಕಳು ಮತ್ತು ಸಮುದಾಯಗಳು ಶಕ್ತಿಗುಂದುತ್ತಿವೆ. ಜೀವನ ಸಮತೋಲನಕ್ಕೆ ಒಡನಾಡಬೇಕಾದ ಅಂಚಿಗೆ ಸರಿದವರು, ರಾಜಕೀಯವನ್ನು ಎಟುಕಿಸಿಕೊಳ್ಳಲಾಗದ ಕಿರುಸಮುದಾಯಗಳು, ತಳ – ಕೆಳವರ್ಗದವರು ಸಾಂಸ್ಕೃತಿಕ ಅನನ್ಯತೆಯನ್ನು ಪಡೆಯದೆ ಹೋಗುತ್ತಾರೆ. ಅವರಿಗೊಂದು ಇತಿಹಾಸ ಮತ್ತೂ ದಕ್ಕದೆ ಹೋಗುತ್ತದೆ. ಇದರ ಅರ್ಥ ಭಾರತವನ್ನು ಇರುವ ಹಾಗೆಯೇ ಉಳಿಸಿಕೊಳ್ಳುವುದಲ್ಲ. ಜಾನಪದ ಜೀವನ ಚಿಂತನೆ ಹೇಳುವ; 'ಎಲ್ಲರಿಗೂ ಬದುಕು ಮತ್ತು ಎಲ್ಲರಿಗೂ ಅವಕಾಶ' ಎಂಬುದನ್ನು ಸಮಕಾಲೀನವಾಗಿ

ಸಾಧ್ಯಮಾಡಿಕೊಡುವುದು. ಅರ್ಥಾತ್, ಜ್ಞಾನ ಮತ್ತು ಅವಕಾಶ ಎಲ್ಲರ ಸೊತ್ತು ಮತ್ತು ಬಳಕೆಯಾಗುವಂತೆ ನೊಡಿಕೊಳ್ಳುವುದು. ಜಾನಪದ ಅಧ್ಯಯನ ಅಂಥ ಹೊಸದಾರಿಯಲ್ಲಿ ನಡೆಯುತ್ತಿರುವುದನ್ನು ನಾವು ಮನ್ನಿಸಬೇಕು. ಜನಪದ ಸಾಹಿತ್ಯವನ್ನು  ಕಿರಿದಾಗಿ ನಿರ್ವಚಿಸಿ ಅದರ ಸ್ಥಾನಮಾನವನ್ನು ಶಿಷ್ಟ ಸಾಹಿತ್ಯದ ಕೆಳಗೆ ಇಟ್ಟು ನೋಡುವ ಮನೋಧರ್ಮ ಹುಟ್ಟಿರುವುದೇ ವರ್ಗಶಾಹಿ ಮತ್ತು  ವಸಾಹತುಶಾಹಿ ಜ್ಞಾನ ಮಾದರಿಗಳು ನಮ್ಮ ಮೇಲೆ ಸವಾರಿ ನಡೆಸುತ್ತಿರುವುದರಿಂದಾಗಿದೆ.  ಆ ಕಾರಣದ ಮೇಲೆ ಜನಪದ ಸಂಸ್ಕೃತಿ ಮತ್ತು ಜನಪದ ಸಾಹಿತ್ಯದ ಮೌಲ್ಯಮಾಪನ ಸಮಸಂಸ್ಕೃತಿ ಸ್ಥಾನಮಾನದ ಮೇಲೆ ನಡೆಯಬೇಕಿದೆ.

ಕನ್ನಡ ಜನಪದ ಸಾಹಿತ್ಯ ಸಂಗ್ರಹ ಎರಡು ನೆಲೆಯಲ್ಲಿ ನಡೆಯಿತು. ರಾಷ್ಟ್ರೀಯ ಪುನರುತ್ಥಾನದ ಕಾರಣದಿಂದ ಮತ್ತು ರಾಷ್ಟ್ರದ ಮೂಲ ಸಂಪತ್ತಾದ ಎಲ್ಲವನ್ನೂ ಪುನಶ್ಚೇತನಗೊಳಿಸುವ ಸಂದರ್ಭದಲ್ಲಿ, ರಾಷ್ಟ್ರೀಯ ಸಂಪತ್ತುಗಳಲ್ಲಿ ಒಂದಾದ ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಗ್ರಹಿಸುವ ಪ್ರಯತ್ನ ಮೊದಲನೆಯದು. ಈ ಪ್ರವೃತ್ತಿ ಸಂಪೂರ್ಣವಾಗಿಯೂ ಭಾವನಾತ್ಮಕವಾದುದು. ರಾಷ್ಟ್ರೀಯ ಪುನರುತ್ಥಾನದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಭಾಗವಹಿಸಿದ ನವೋದಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಈ ಹಿನ್ನೆಲೆಯಲ್ಲಿ ಸಂಗ್ರಹಿಸಿದರು. ಆದಕಾರಣ 'ಸಾಹಿತ್ಯವೆಂಬ ಸಾಮಗ್ರಿಗೆ' ಅವರು ಒತ್ತುಕೊಟ್ಟರು. ಅದರ ಉತ್ಪಾದಕರು, ಅವರ ಅಸ್ತಿತ್ವ, ನೆಲೆ-ಬೆಲೆ ಮತ್ತು ಜನಪದ ಸಾಹಿತ್ಯದ ಸಾಮಾಜಿಕ ಸಾಂಸ್ಕೃತಿಕ ಸಂದರ್ಭದ ಕಡೆಗೆ ಗಮನ ಹರಿಸಲಿಲ್ಲ. ರಾಷ್ಟ್ರದ ಆರಾಧನೆಯಂತೆ ಜನಪದ ಸಾಹಿತ್ಯವೂ ಒಂದು ರೀತಿಯ ಆರಾಧನೆಯ ಸಾಮಗ್ರಿಯೆ ಆಯಿತು. ಆ ಸಾಹಿತ್ಯವನ್ನು ಸಂಗ್ರಹಿಸುವ, ಪ್ರೇಮಿಸುವ ಮತ್ತು ಕೊಂಡಾಡುವ ಪ್ರವೃತ್ತಿ ತುಂಬು ಹೊಳೆಯಂತೆ ಹರಿಯಿತು. ಜನಪದ ಸಾಹಿತ್ಯವೂ ದೇಶವನ್ನು ಕಟ್ಟುವ ಒಂದು ಉಪಕರಣವಾಗಿ ಬಳಕೆಯಾಯಿತು. ಅಷ್ಟೇ ಪ್ರಮಾಣದಲ್ಲಿ ಸಾಹಿತ್ಯವೂ ಸಂಗ್ರಹವಾಯಿತು. ಜನಪದ ಸಾಹಿತ್ಯ ಸಂಗ್ರಹ ಜಂಗಮರು ತಾವಿರುವ ಕಡೆಯಲ್ಲಿ ಮಾತ್ರವಲ್ಲದೆ, ಜನಪದ ಸಾಹಿತ್ಯ ಸಂಗ್ರಹಯಾತ್ರೆಯನ್ನು ಕೈಕೊಂಡರು. ಈ ಸಂಗ್ರಹಯಾತ್ರೆ, ಅದನ್ನು ಕುರಿತ ಪ್ರಚಾರವೂ ಪ್ರಶಂಸೆಯೂ ಆಗಿತ್ತು. ಅದು ಅಗತ್ಯ ಭೂಮಿಕೆಯೂ ಆಯಿತು.

ಯಾವಾಗ ಜಾನಪದ ಎಂಬುದು ಅಧ್ಯಯನದ ವಿಷಯವೂ ಆಯಿತೊ ಆಗ ಅದಕ್ಕೊಂದು ಶಾಸ್ತ್ರೀಯ ಶಿಸ್ತು ಸೇರಿಕೊಂಡಿತು. ಅಲ್ಲಿಂದ ಜನಪದ ಸಾಹಿತ್ಯ ಸಂಗ್ರಹದ ಭರಾಟೆ ಕಡಿಮೆಯಾಯಿತು. ಯಾವಾಗ ಇದು ವೈಜ್ಞಾನಿಕವೆಂಬ ಹೆಸರಿನ ಪ್ರಜ್ಞಾಪೂರ್ವಕ ಚಟುವಟಿಕೆ ಆಯಿತೊ ಅಲ್ಲಿಂದ ಪ್ರೇಮದ ವಿವಾಹ ಕೌಟುಂಬಿಕ ಜವಾಬ್ದಾರಿ ಆದಂತಾಯಿತು. ಒಂದು ರೀತಿಯಲ್ಲಿ ಇದು ಜನಪದ ಸಾಹಿತ್ಯ ಸಂಗ್ರಹಕ್ಕೆ ತಗುಲಿದ ಪೆಟ್ಟು ಎನಿಸಿದರೂ ಮತ್ತೊಂದು ಬಗೆಯಲ್ಲಿ ಆ ಸಾಹಿತ್ಯದ ಅಂತರಂಗ ಪ್ರಕಾಶಿಸಲು ಅನುಕೂಲವಾಯಿತು.

ಅಭಿಮಾನದ ದೃಷ್ಟಿಯಿಂದ ಸಂಗ್ರಹಿಸಲಿ ಅಥವಾ ಅಧ್ಯಯನ ದೃಷ್ಟಿಯಿಂದ ಸಂಗ್ರಹಿಸಲಿ ಈ ಸಂಗ್ರಹ ಕಾರ್ಯ ಮಾತ್ರ ಸುಲಭದ್ದಲ್ಲ. ಮೂಲತ: ಅದು ಸಂಗ್ರಾಹಕನ ಅನುಭವ, ಬದ್ಧತೆ, ಶ್ರಮ ಮತ್ತು ಆರ್ಥಿಕ ಅನುಕೂಲತೆಯನ್ನು  ಅಪೇಕ್ಷಿಸುತ್ತದೆ. ಆರಂಭಿಕ ಕಾಲದಲ್ಲಿ ಸಂಗ್ರಾಹಕರಲ್ಲಿ ಅರ್ಥಿಕ ಬಡತನವಿದ್ದರೂ, ಅವರ ಸಾಂಸ್ಕೃತಿಕ ಸ್ವಾಭಿಮಾನವೆಂಬುದು ಕಷ್ಟನಷ್ಟಗಳ ಪರಿವೆಯನ್ನು ಮರೆತು ಜನಪದ ಸಾಹಿತ್ಯವನ್ನು ಹಾಡಿ, ಸಂಗ್ರಹಿಸಿ ಜನತೆಯ ಮುಂದೆ ಮಂಡಿಸಿತು. ಇದೊಂದು ಅಧ್ಯಯನದ ವಿಷಯವಾದ ತಕ್ಷಣದಿಂದ ಅದಕ್ಕೊಂದು ಉದ್ಯಮದ ಸ್ವರೂಪ ಉಂಟಾಯಿತು. ಲಾಭ-ನಷ್ಟಗಳ ಪರಿವೆ ಸಂಗ್ರಾಹಕನನ್ನು ಕಾಡಹತ್ತಿತು. ಈ ಹೊತ್ತಿಗೆ ಜನಪದ ಸಾಹಿತ್ಯವನ್ನು ಜನಪ್ರಿಯ ಸಾಹಿತ್ಯದಂತೆ ಪ್ರಕಟಿಸಿ ಬೀದಿಬದಿಯಲ್ಲಿ ಮಾರಿ ಕಾಸು ಮಾಡುವ ಪರಿಸ್ಥಿತಿ ನಿಂತುಹೋಯಿತು. ವ್ಯಾಪಾರಿಗಳು ಈ ಸಾಹಿತ್ಯವನ್ನು ಪ್ರಕಟಿಸುವುದನ್ನು ನಿಲ್ಲಿಸಿದರು, ಪ್ರಕಾಶಕರೆಂಬುವವರು ಹುಟ್ಟಿಕೊಂಡರು. ಅಕೆಡೆಮಿಷಿಯನ್ ಮತ್ತು ಪ್ರಕಾಶಕರೆಂಬ ಉದ್ಯಮ ಆಧಾರಿತ ದಣಿಗಳಿಂದಾಗಿ ಹೊಸ ಸಂಗ್ರಹಕಾರರು ಮುಂದೆ ಬರುವುದಾಗಲಿಲ್ಲ. ಜನಪದಸಾಹಿತ್ಯ ಸಂಗ್ರಹಕಾರ್ಯ ಬಹಳ ಶಿಸ್ತಿನ ವಿಷಯವಾಯಿತು. ಸಂಗ್ರಹಕಾರ್ಯಕ್ಕೂ ಹೆಚ್ಚು ಓದು ಮತ್ತು ವಿದ್ವತ್ತು ಬೇಕೆನಿಸಿತು. ಸಹಜವಾಗಿ ಹವ್ಯಾಸಿ, ಭಾಷಾಪ್ರೇಮಿ ಮತ್ತು ಅಲೆಮಾರಿ ಸಂಗ್ರಹಕಾರರು ಹಿಂದೆ ಸರಿದರು. ಜನಪದ ಸಾಹಿತ್ಯವನ್ನು, ಸಂಗ್ರಹಿಸುವುದಕ್ಕಿಂತ ಅದರ ಸತ್ವ ಮತ್ತು ಸಾರ್ಥಕತೆಯ  ಪ್ರಶ್ನೆ ಮುಂದೆ ಬಂದು ವಿದ್ವಾಂಸರು ಮಾತ್ರವೇ ಈ ಕೆಲಸವನ್ನು ಮಾಡಬೇಕು ಎಂಬ ಮನೋಧರ್ಮ ಉಂಟಾಯಿತು. ಜನಪದ ಸಾಹಿತ್ಯ ಸಂಗ್ರಹ ಹಿಂದೆ ಸರಿದುದಕ್ಕೆ ಅದು ಒಂದು ಅಧ್ಯಯನ ಶಿಸ್ತಿಗೆ ಒಳಪಟ್ಟುದಷ್ಟೆ ಕಾರಣವಲ್ಲ. ಆಧುನಿಕವೆಂಬ ವಸ್ತುಪ್ರಧಾನ ಚಿಂತನೆ ಮತ್ತು ಬಳಕೆಯ ಜೀವನ ವಿಧಾನ ಪಾರಂಪರಿಕ ಮತ್ತು ಸ್ಥಳೀಯವೆಂಬ ಎಲ್ಲ ಸಾಂಸ್ಕೃತಿಕ ಉತ್ಪನ್ನಗಳನ್ನು ಜನಬಳಕೆಯಿಂದ ದೂರಮಾಡಲು ತೊಡಗಿದ್ದು  ಮುಖ್ಯಕಾರಣವಾಗಿದೆ. ಸೀಮಿತ ವರ್ಗದ ವಿಶಿಷ್ಟ ಚಟುವಟಿಕೆಯಾಗಿದ್ದ ಬರಹದ ಸಾಹಿತ್ಯ

ಆಧುನಿಕತೆಯ ಜೊತೆಗೆ ಸ್ಪರ್ಧಿಸಿ ಮತ್ತು ಹೊಂದಿಕೊಂಡು ಮರುಹುಟ್ಟು ಪಡೆದ ಕಾರಣದಿಂದ ಅದು ವರ್ಗಾತೀತವಾದ ಸಾಹಿತ್ಯಕ ಚಟುವಟಿಕೆಯಾಯಿತು. ಎಲ್ಲಾ ಜಾತಿ, ಪಂಗಡದ ವ್ಯಕ್ತಿಗಳೂ ಈ ಸಾಹಿತ್ಯದೊಂದಿಗೆ ಸ್ಪಂದಿಸುವುದು ಸಾಧ್ಯವಾಯಿತು. ಇದರಿಂದ ಸಾಹಿತ್ಯವೆಂದರೆ ಬರಹಗಾರರು ಬರೆದದ್ದು ಎಂಬ ಪ್ರತೀತಿ ದೃಢವಾಯಿತು. ಹೆಚ್ಚು ವ್ಯಕ್ತಿಗಳು ತಮ್ಮ ವ್ಯಕ್ತಿನಿಷ್ಠೆ ಮತ್ತು ವ್ಯಕ್ತಿವೃತ್ತಿ ಸಾಮರ್ಥ್ಯದೊಡನೆ ಈ ಸಾಹಿತ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡರು. ಜೊತೆ ಜೊತೆಯಲ್ಲೆ ಓದು ಮಾತ್ರ ಅರ್ಹತೆ, 'ಓದಿಲ್ಲದ್ದು' ಅನರ್ಹತೆ ಎಂಬ ಜೀವನ ತತ್ವ ಬಳಕೆಗೆ ಬಂತು. ಸಹಜವಾಗಿಯೆ ಅವಿದ್ಯಾವಂತರ ಜನಪದ ಸಾಹಿತ್ಯ ಸತ್ವದಲ್ಲಿ ಸಂಪುಷ್ಪವಾಗಿದ್ದರೂ ಗುರುತುಪಡೆಯುವಲ್ಲಿ ಹಿಂದೆ ಬಿದ್ದಕಾರಣ ವಿಸ್ಮೃತಿಗೆ ತುತ್ತಾಯಿತು. ಶಿಷ್ಟ ಸಾಹಿತ್ಯದ ನಿರಂತರ ಪ್ರಯೋಗಶೀಲತೆ ಜನಪದಸಾಹಿತ್ಯದ ನಿಧಾನ ಹಾಗೂ ನಿಶ್ಚಿತಚಲನೆಯನ್ನು ಹಿಂದೆ ಹಾಕಿತು. ಇದು ನಿಶ್ಚಿತ ಅಭಿರುಚಿಗೆ ನಿರಂತರ ಅಭಿರುಚಿ ಒಡ್ಡಿದ ಸವಾಲುಕೂಡ ಹೌದು. ಜನಪದ ಸಾಹಿತ್ಯ ಶಿಷ್ಟಸಾಹಿತ್ಯದಂತೆ 'ಅಧಿಕೃತ ಸಾಹಿತ್ಯ'ವಾಗಲಿಲ್ಲ ಎಂಬ ಸತ್ಯಸ್ಯಸತ್ಯವೂ ಜನಪದ ಸಾಹಿತ್ಯ ಇನ್ನಿತರ ಆಧುನಿಕ ಸಾಹಿತ್ಯ ಪದ್ಧತಿಗಳೊಡನೆ ಸ್ಪರ್ಧಿಸದೆ ಹಿಂದೆ ಬೀಳಲು ಕಾರಣವಾಗಿದೆ. ಉದ್ಯಮ, ಉದ್ಯೋಗ, ವ್ಯತ್ತಿಯಿಲ್ಲದ ಈ ಸಾಹಿತ್ಯ ಆಧುನಿಕ ತತ್ತ್ವವಾದ 'ಸ್ಪರ್ಧೆ ಮತ್ತು ಗೆಲ್ಲು' ಸಮರದಲ್ಲಿ ಸೋಲೊಪ್ಪಿಕೊಳ್ಳುವುದು ಅನಿವಾರ್ಯವಾಯಿತು.

ಆದರೆ ಜನಪದ ಸಾಹಿತ್ಯದ ಸತ್ವ ಮತ್ತು ಸಾತತ್ಯ ಎಲ್ಲಿದೆ ಎಂಬುದನ್ನು ಗುರುತಿಸಿಕೊಳ್ಳಲಾಗದ ಹೆಳವತನ ನಮ್ಮನ್ನು ಕಾಡಬೇಕಿತ್ತೆ? ನವೋದಯ ಸಾಹಿತಿಗಳಾದ ಬಿ. ಎಂ. ಶ್ರೀ, ದ. ರಾ. ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬೆಟಗೇರಿ ಕೃಷ್ಣಶರ್ಮ, ಮಧುರಚೆನ್ನ- ಈ ಮೊದಲಾದ ಹಿರಿಯರು ಜನಪದ ಸಾಹಿತ್ಯದಿಂದ ಒಂದು ಸತ್ವವನ್ನು ಕಂಡುಕೊಂಡು ಅದನ್ನು ಹೆಕ್ಕಿ ತೆಗೆದು, ತಮ್ಮ ಸಾಹಿತ್ಯವನ್ನು ಮೈದುಂಬಿಸಿಕೊಂಡರು. ಅವರಿಂದ ಮುಂದೆ ನಮ್ಮ ಸಾಹಿತ್ಯ ಚಿಂತಕರಾಗಲೀ, ಸಂಸ್ಕೃತಿ ಚಿಂತಕರಾಗಲಿ ಜನಪದ ಸಾಹಿತ್ಯದ ಹೊಸ ಸಾಧ್ಯತೆಗಳನ್ನು ಹುಡುಕಲೇ ಇಲ್ಲ ಎಂಬುದು ದುರ್ದೈವದ ಸಂಗತಿ. ಅಲ್ಲಲ್ಲಿ ಕೆಲವು ಸಾಹಿತಿಗಳು ಜನಪದ ಸಾಹಿತ್ಯದ ಸೆಲೆಗಳನ್ನು ಹಿಡಿದು ಬರೆಯುತ್ತಿದ್ದಾರೆ ನಿಜ. ಆದರೆ ಅದು ಅವರ ಬರಹದ ಪ್ರವೃತ್ತಿಗಳಲ್ಲಿ ಒಂದಾಗಿದೆಯೆ ಹೊರತು ಅವರ ಸೃಜನಶೀಲತೆಯ ಪ್ರಕೃತಿಯಾಗಿಲ್ಲ. ಈ ಕಾರಣದಿಂದ ಆಧುನಿಕ ಸಂದರ್ಭದಲ್ಲಿ ಜನಪದ ಜೀವನ ಮತ್ತು ಸಂಸ್ಕೃತಿ ಹೊರಗಿನ ಸರಕು, ಕನಸು, ಅಪೇಕ್ಷೆ, ತುಡಿತ, ಆಕರ್ಷಣೆ ಆಗಿದೆಯೆ ಹೊರತು ಜೀವನ ಬಂಧ, ಸಂಬಂಧ ಅಥವಾ ಬದುಕೇ ಆಗಬೇಕಿತ್ತಲ್ಲ, ಅದು ಆಗಲಿಲ್ಲ; ಹಾಗೆ ಆಗುವ ಸಾಧ್ಯತೆಯೂ ಹತ್ತಿರದಲ್ಲಿ ಇಲ್ಲ.

ಯಾವಾಗ ಆಧುನಿಕ ವ್ಯಕ್ತಿಗಳು ವ್ಯಕ್ತಿತ್ವ ಪ್ರತ್ಯೇಕತೆಯನ್ನು ಅನುಭವಿಸುವ ಅಪೇಕ್ಷೆಯನ್ನು ಅನಿವಾರ್ಯ ಅಂತ ಮಾಡಿಕೊಂಡರೊ ಅಂದಿನಿಂದ ಜನಪದ ಸಾಹಿತ್ಯ ಮತ್ತು ಜನಪದ ಸಂಸ್ಕೃತಿಯನ್ನು ಅನುಭವಿಸುವ ಮತ್ತು ಅನುಸರಿಸುವ ಅವಕಾಶಗಳನ್ನು ಕಳಕೊಂಡರು. ಪ್ರಭುಕೇಂದ್ರಿತ ಮತ್ತು ಧರ್ಮಕೇಂದ್ರಿತ ರಾಜಸತ್ತೆ ಇದ್ದಾಗ ಜನಪದಜೀವನ ಸತ್ವವನ್ನು ಆಗಾಗ ಪಡೆಯುತ್ತ ತಮ್ಮನ್ನು ಹಿಗ್ಗಲಿಸಿಕೊಳ್ಳುತ್ತಿದ್ದವು. ಪ್ರಭುವ್ಯವಸ್ಥೆಯ ಅಧೀನದಲ್ಲಿದ್ದೂ ಮಹಾಕವಿ ಪಂಪ ತನ್ನ ಮೂಲ ನೆಲೆಯಾದ ಬನವಾಸಿ ದೇಶವನ್ನು ನೆನೆದು ತನ್ನನ್ನು ಹಿಗ್ಗಲಿಸಿಕೊಂಡನು. ಪ್ರಭು ಕೇಂದ್ರಿತ ಹಿರಿಯ ಪ್ರಜೆಗಳು ತಮ್ಮ ಬಾಲ್ಯಜೀವನದಲ್ಲಿ ಜನಪದ ಬದುಕನ್ನು ಅನುಭವಿಸಿದರೆ ಮತ್ತೆ ಅದಕ್ಕೆ ಹಿಂದಿರುಗುತ್ತಿದ್ದುದು ವಾನಪ್ರಸ್ಥ ಸಮಯದಲ್ಲಿಯೆ. ಆದರೆ ನಾವು ಪ್ರಜಾಪ್ರಭುತ್ವವೆಂಬ ಜನಪದ ಜೀವನ ತತ್ತ್ವದೊಳಗೆ ಇದ್ದರೂ ಬದುಕುತ್ತಿರುವುದು ಮಾತ್ರ 'ಆಧುನಿಕ ವಾನಪ್ರಸ್ಥ' ದಲ್ಲಿ. ಸತ್ತಲ್ಲದೆ ಬದುಕಲಾರೆವು ಎಂಬ ಈ ಸ್ಥಿತಿಗೆ ನಮ್ಮನ್ನು ನಾವು ಶಪಿಸಿಕೊಂಡಿರುವುದೆ ಕಾರಣವಾಗಿದೆ. ಅಂತಹ ಒಂದು ದುರವಸ್ಥೆಯಿಂದ ಬಿಡುಗಡೆಗೊಳ್ಳುವ ಕಾರಣಕ್ಕಾಗಿಯೇ ನಾವಿಂದು ಜನಪದ ಸಾಹಿತ್ಯವನ್ನು ಓದಬೇಕಾಗಿದೆ ಮತ್ತು ಜನಪದ ಸಂಸ್ಕೃತಿಯನ್ನು ಕಲಿಯಬೇಕಾಗಿದೆ. ಇದರಿಂದ ಆಧುನಿಕತೆಯನ್ನು ಕಳೆದುಕೊಳ್ಳುತ್ತೇವೆ ಎಂದು ನಾವ್ಯಾರು ಭಯಪಡಬೇಕಾಗಿಲ್ಲ. ಆಧುನಿಕತೆಯನ್ನು ಜನಪದ ಬದುಕಾಗಿ ಹಂಚಿಕೊಳ್ಳುವ ಸಾಧ್ಯತೆಗಳನ್ನಷ್ಟೆ ನಾವು ನಮ್ಮಲ್ಲಿ ಕಂಡುಕೊಳ್ಳಬೇಕಾಗಿದೆ.

**ಕರ್ನಾಟಕ ಸರ್ಕಾರ; ಚಿಗುರಿದ ಸಂಸ್ಕೃತಿಯ ಸಾರ**

**ಸರ್ಕಾರ ನಿಂತಕಡೆ ಜನಪದಗಳು ಚಲಿಸಬೇಕು**

ಜನಪದಗಳು ತಾಟಸ್ಥ್ಯಕ್ಕೆ ಬರುತ್ತಿವೆ ಎಂದ ಕಡೆ ಸರ್ಕಾರ ಚಲಿಸಬೇಕು. ಜಗತ್ತಿನ ಎಲ್ಲ ಕಡೆಯೂ ಇಂತಹ ಚಲನೆಗಳು ಸಂಭವಿಸಿವೆ. ಕರ್ನಾಟಕದ ತಳ-ಕೆಳವರ್ಗಗಳು ಎಲ್ಲ ಅನುಕೂಲಗಳಿಂದ ವಂಚಿತವಾಗಿ ಸ್ತಬ್ಧತೆಯ ಕಡೆಗೆ ಹೊರಟಿವೆ ಎಂಬುದನ್ನು ಕಂಡ ಶ್ರೀ ಡಿ. ದೇವರಾಜ ಅರಸು ಅವರ ಸರ್ಕಾರ ಬೇರೆ ಬೇರೆ ರೀತಿಯಲ್ಲಿ ಅವುಗಳನ್ನು ಪ್ರೋತ್ಸಾಹಿಸಿ, ಪೋಷಿಸಿ ಮುಖ್ಯಧಾರೆಗೆ ಅಭಿಮುಖೀಕರಿಸಿದರು. ಭಾಷೆಯ ದೃಷ್ಟಿಯಿಂದ ಕರ್ನಾಟಕ ಸರ್ಕಾರ ಅನ್ಯತೆಗೆ ಸೋಲುತ್ತದೆ ಎಂದು ತಿಳಿದಾಗ ಕರ್ನಾಟಕ ಜನತೆ ಗೋಕಾಕ್ ಚಳವಳಿಯನ್ನು ಆರಂಭಿಸಿ ಕನ್ನಡ ಭಾಷೆ ಮತ್ತು ಕನ್ನಡ ಸಂಸ್ಕೃತಿಯನ್ನು ಸಮನೆಲೆಗೆ ತಂದರು. ಜನಪದಸಾಹಿತ್ಯ ಮತ್ತು ಸಂಸ್ಕೃತಿಯ ಪುನರುತ್ಥಾನದ ಸಂದರ್ಭಕ್ಕೆ ಇಂಥದೊಂದು ಚಲನೆ ಜನರ ಮಧ್ಯೆ ಉಂಟಾಗಬೇಕಿದೆ. ಆದರೆ ಅಂತಹ ಸೂಚನೆಗಳು ಕಾಣುತ್ತಿಲ್ಲ. ಇಂತಹ ಸ್ಥಿತಿಯನ್ನು ಅಲುಗಾಡಿಸಲು ಜನತೆಯ ಸಂಸ್ಕೃತಿಯ ಪ್ರತಿನಿಧಿಯಾಗಿರುವ ಸರ್ಕಾರ ಹೊಸಹೆಜ್ಜೆಯನ್ನು ಹಸನಾದ ಗೆಜ್ಜೆ ಸದ್ದಿನೊಂದಿಗೆ ಇಡಬೇಕಾಗಿದೆ. 'ಕನ್ನಡ ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ' ಗಳನ್ನು ಹೊರತರಲು ಹೊರಟಿರುವ ಕರ್ನಾಟಕ ಸರ್ಕಾರ ಮತ್ತು ಅದರ ಸಂಸ್ಕೃತಿ ಚಾಲಕ ಸಂಸ್ಥೆಯಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಂತಹ ಒಂದು ಮಹತ್ವದ ಕೆಲಸಕ್ಕೆ ಕೈಹಾಕಿದೆ.

ಭಾರತದ ಅನೇಕ ಸಂಸ್ಥಾನಗಳಲ್ಲಿ ಜನಪದ ಸಾಹಿತ್ಯ ಸಂಗ್ರಹ ಹಾಗೂ ಜಾನಪದ ಅಧ್ಯಯನ ನಡೆದಿದೆ. ಆದರೆ ಕರ್ನಾಟಕದ ಈ ದಿಸೆಯ ಕೆಲಸ ಆ ಎಲ್ಲವನ್ನೂ ಮೀರಿಸಿ ಮುಂದೆ ನಿಂತಿದೆ. ಈ ಸಾಧನೆಯ ಮೊದಲ ಗೌರವಕ್ಕೆ ಪಾತ್ರರಾದವರೆಂದರೆ ಕನ್ನಡ ನಿಜ ನೆಲದಿಂದ ಬಂದ ನಮ್ಮ ನಾಡಿನ ಸಾಹಿತಿಗಳು. ನೆಲ ಸಂಸ್ಕೃತಿಯ ನೆಲೆಯಲ್ಲಿ ನಿಂತು ನಾಡಿನ ಭವಿಷ್ಯದ ಬಗ್ಗೆ ತಲೆಬಿಸಿ ಮಾಡಿಕೊಂಡ ಸಂಸ್ಕೃತಿ ಚಿಂತಕರ ಪಾತ್ರ ಈ ಸಾಧನೆಯನ್ನು ಸತ್ವಯುತಗೊಳಿಸಿದೆ. ಪ್ರತ್ಯಕ್ಷವಾಗಿ ನಮ್ಮ ನಾಡಿನ ಎಲ್ಲ ವಿಶ್ವವಿದ್ಯಾನಿಲಯಗಳು ಜನಪದ ಸಾಹಿತ್ಯ ಮತ್ತು ಜಾನಪದ ಅಧ್ಯಯನವನ್ನು ತಮ್ಮ ಒಂದು ಬದ್ಧತೆಯನ್ನಾಗಿ ಸ್ವೀಕರಿಸಬೇಕು. ಕರ್ನಾಟಕ ಜಾನಪದ ಪರಿಷತ್ತಿನಂತಹ ಕೆಲವು ಖಾಸಗಿ ಸಂಸ್ಥೆಗಳು ಜಾನಪದ ಪುನರುದ್ಧಾರ ಕೆಲಸದಲ್ಲಿ ತೊಡಗಿವೆ. ಕರ್ನಾಟಕದ ರಾಜಕಾರಣ ಮತ್ತು ರಾಜ್ಯ ಪ್ರತಿನಿಧಿಗಳನ್ನು ದೂರವಿಟ್ಟು ಮಾತನಾಡುವಂತಿಲ್ಲ. ಗ್ರಾಮೀಣ ಪ್ರದೇಶದಿಂದ ಬಂದ ಎಲ್ಲ ಜನಪ್ರತಿನಿಧಿಗಳು ಜಾನಪದ ನಮ್ಮದೆಂದು ಪ್ರೀತಿಸಿ ಪ್ರೋತ್ಸಾಹ ಕೊಡುತ್ತಾ ಬರುತ್ತಿದ್ದಾರೆ. ಕರ್ನಾಟಕದಲ್ಲಿ ಜನಪದ ಕಲೆ ಮತ್ತು ಕಲಾವಿದರಿಗೆ ಸಿಗುತ್ತಿರುವ ಪ್ರೋತ್ಸಾಹ ಭಾರತದ ಬೇರಾವ ಸಂಸ್ಥಾನದಲ್ಲಿಯೂ ಸಿಗುತ್ತಿಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು. ಇಂತಹ ಜನಪದ ಸಾಹಿತ್ಯ, ಕಲೆ, ಸಂಸ್ಕೃತಿ ಬದ್ಧ ರಾಜ್ಯಶಕ್ತಿಯ ಪ್ರತ್ಯುತ್ಪನ್ನವಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಾನಪದಕ್ಕೆ ಕೊಟ್ಟಿರುವ ಪ್ರೇರಣೆ, ಪ್ರೋತ್ಸಾಹ ಅಪಾರವಾದುದು. ತಾನೇ ನೇರವಾಗಿ ಹಾಗೂ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಮೂಲಕ ಜನಪದ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆಯ ಪುಸ್ತಕಗಳಿಗೆ ಅರ್ಥಿಕ ನೆರವು ನೀಡುತ್ತಿದೆ. ಜನಪದ ಸಾಹಿತ್ಯದ ಪ್ರಾಮಾಣ್ಯ ಸಂಗ್ರಹಗಳನ್ನು ಪುನರ್ ಮುದ್ರಿಸಿದೆ. ಜನಪದ ಕಲಾವಿದರಿಗೆ ಮಾಸಾಶನ, ಕಲಾವಿದ ಪ್ರಶಸ್ತಿ ಮತ್ತು ಅತ್ಯುನ್ನತ 'ಜಾನಪದ ಶ್ರೀ' ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ. ಕಲಾವಿದರ ಪುನಶ್ಚೇತನ, ಗುರು-ಶಿಷ್ಯ ಪರಂಪರೆಯ ಮೂಲಕ ಜನಪದ ಕಲೆಗಳ ಪುನರುಜ್ಜೀವನ, ಜನಪದ ಕಲಾವಿದರಿಗೆ ವಾದ್ಯೋಪಕರಣಗಳ ಸಹಾಯ, ಶ್ರೇಷ್ಠ ಕಲಾವಿದರಿಗೆ ರಾಜ್ಯೋತ್ಸವದ ಪ್ರಶಸ್ತಿ ನೀಡಿ ರಾಜ್ಯದ ಇನ್ನಾವುದೇ ಕಲೆ, ಸಂಸ್ಕೃತಿಯ ಸಮಸಮಕ್ಕೆ ತಂದು ಅವರ ಸ್ವಾಭಿಮಾನವನ್ನು, ಸ್ವಾಯತ್ತತೆಯನ್ನು ಮಾನ್ಯ ಮಾಡಿದೆ.

ಇದೀಗ ಇದೇ ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇದರಿಂದ ಸುಮಾರು ಐದುನೂರು ಪುಟಗಳ ನೂರು ಜನಪದ ಸಾಹಿತ್ಯ ಸಂಪುಟಗಳು ಹೊರಬರುತ್ತಿವೆ. ಇದನ್ನು ಕನ್ನಡ ಜನಪದ ಸಾಹಿತ್ಯ ಪುನರುತ್ಥಾನದ ಪರ್ವ ಎಂದು ಕರೆಯಬಹುದು. ಈ ಬಗೆಯ ಕೆಲಸ ಭಾರತದ ಮತ್ತಾವುದೇ ರಾಜ್ಯದಲ್ಲಿ ಆರಂಭಗೊಂಡಿಲ್ಲ. ವಚನ ಸಾಹಿತ್ಯ ಹಾಗೂ ದಾಸಸಾಹಿತ್ಯವನ್ನು ಕುರಿತ ಸಂಪುಟಗಳನ್ನು ಪ್ರಕಟಿಸಿದ ನಂತರದ ಮೂರನೆಯ ಬೃಹತ್ ಕಾರ್ಯಯೋಜನೆ ಇದು. ಕನ್ನಡಿಗರನ್ನು ಇಷ್ಟೊಂದು ಸಂತಸಪಡಿಸಿದ ಸಂದರ್ಭ ಇನ್ನೊಂದಿಲ್ಲ. ಇದೊಂದು ನಿರಂತರವಾದ ನಾಡ ಚಳವಳಿ ಇದ್ದಂತೆ. ಈ ಕಾರಣಕ್ಕೆ ಕರ್ನಾಟಕ ಸಮಸ್ತ 'ಜನಶ್ರೀ' ಕರ್ನಾಟಕ ಸರ್ಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಋಣಿಯಾಗಿದೆ. ಈ ಋಣ ಯಾಕೆಂದರೆ ಕೆರೆಯ ನೀರನು ಕೆರೆಗೆ ಬಿಡಿ ಎಂಬಂತೆ ಜನತೆಯ ಸಾಹಿತ್ಯವನ್ನು ಜನರ ಮಧ್ಯೆ ಜನಪ್ರಿಯಗೊಳಿಸುವ ಕೆಲಸ, ನಿಮ್ಮ ಸಂಪತ್ತು ನಿಮ್ಮ ಪ್ರೇಮ, ನಿಮ್ಮ ಅಭಿಮಾನ ಮತ್ತು ನಿಮ್ಮ ಅಂತರಂಗದ ಅಭಿವೃದ್ಧಿಯನ್ನಾಗಿ

ಮಾಡಿಕೊಳ್ಳಿ ಎಂಬ ಸಂದೇಶವನ್ನು ಕೊಟ್ಟಂತಾಗಿದೆ. ಜನರಿಂದ ಜನರಿಗಾಗಿ ಜನರಿಗೋಸ್ಕರ ಇರುವ ರಾಜಕೀಯ ಶಕ್ತಿ ಮಾತ್ರ ಇಂಥ ಕೆಲಸವನ್ನು ಮಾಡಬಲ್ಲದು. ಇಂತಹ ಮಹತ್ವದ ಯೋಜನೆಯನ್ನು ಕೊಟ್ಟ ಕರ್ನಾಟಕ ಸರ್ಕಾರಕ್ಕೆ ಸಮಗ್ರ ಕನ್ನಡ ಜನಪದ ಸಾಹಿತ್ಯ ಸಮಿತಿ ಗೌರವ ವಂದನೆಗಳನ್ನು ಸಲ್ಲಿಸುತ್ತದೆ.

ಜನಪದ ಸಾಹಿತ್ಯ ಮುಗಿಯದ ಸಾಹಿತ್ಯ. ಜನರ ಜೀವನದ ಜೊತೆಗೇ ಅದು ಬೆಳೆಯುತ್ತಿರುತ್ತದೆ. ಈ ಕಾರ್ಯಯೋಜನೆ ಕೂಡ ಹಾಗೆಯೇ ಮುಂದುವರಿಯಬೇಕಾದ ಅವಶ್ಯಕತೆ ಇದೆ. ಕರ್ನಾಟಕದಲ್ಲಿ ಇರುವ ಜಾನಪದ ವಾತಾವರಣ ಇದನ್ನು ಆಗು ಮಾಡಿಕೊಡುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ ಸಂಪುಟ ಸಮಿತಿ ಇಂತಹ ಪ್ರತಿಯೊಂದು ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕಿದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡೆ ಸಂಪುಟ ಸಮಿತಿ ತುಂಬು ಜವಾಬ್ದಾರಿಯಿಂದ ತನ್ನ ಕೆಲಸದಲ್ಲಿ ತೊಡಗಿದೆ. ಕರ್ನಾಟಕದಲ್ಲಿ ಈಗಾಗಲೆ ಹಲವು ವ್ಯಕ್ತಿಗಳು ಮತ್ತು ಕೆಲವು ಸಂಸ್ಥೆಗಳು ನಿರಂತರವಾಗಿ ಜನಪದ ಸಾಹಿತ್ಯ ಸಂಗ್ರಹಗಳನ್ನು ಪ್ರಕಟಿಸುತ್ತಾ ಬಂದಿವೆ. ಇವುಗಳಲ್ಲಿ ಕೆಲವು ಮಾತ್ರ ಶಾಸ್ತ್ರೀಯವಾಗಿದ್ದು ಹೆಚ್ಚಿನವು ಸಾಂದರ್ಭಿಕ ಒತ್ತಡ ಮತ್ತು ಅಗತ್ಯತೆಗೆ ಹೊಂದಿಕೊಂಡು ಪ್ರಕಟವಾಗಿವೆ. ಅನೇಕ ವೇಳೆ ಅದೆ ಅಂಶಗಳು ಪದೇಪದೇ ಬೇರೆಬೇರೆ ಸಂಗ್ರಹಗಳಲ್ಲಿ ಪುನರುಕ್ತಿಗೊಂಡಿವೆ. ಇದನ್ನು ಗಮನಕ್ಕೆ ತೆಗೆದುಕೊಂಡಿರುವ ಪ್ರಕಟಣ ಸಮಿತಿಯು ಇರುವುದನ್ನೆಲ್ಲ ಇದ್ದ ಹಾಗೇ ಪ್ರಕಟಿಸುತ್ತಿಲ್ಲ, ಒಂದು ಪ್ರಕಾರದ ಒಂದು ಪ್ರಧಾನ ಆಶಯದ ಮೇಲೆ ನೆಲೆ ನಿಂತಿರುವ ಒಂದು ಹಾಡು, ಕಥೆ, ಕಥನಗೀತೆ, ಗಾದೆ, ಒಗಟು, ಒಡಪು, ನುಡಿಗಟ್ಟು..... ಹೀಗೆ ಒಂದು ಪಾಠವನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಕರ್ನಾಟಕವನ್ನು ಸಾಂಸ್ಕೃತಿಕವಾಗಿ ಅಥವಾ ಭಾಷಿಕವಾಗಿ ವಿಶೇಷವಾಗಿ ಪ್ರತಿನಿಧಿಸುವ ಮತ್ತೊಂದು ಪಾಠವಿದ್ದಲ್ಲಿ ಅದನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಯಾವುದೇ ಪಾಠವನ್ನು ಶಿಷ್ಟ ಸಂಪಾದನೆಯ ಕ್ರಮಕ್ಕೆ ಒಳಪಡಿಸಿರುವುದಿಲ್ಲ. ಆ ಕ್ರಮ ಬಹುಜನರಿಂದ, ಬಹುಪಾಠಗಳಲ್ಲಿ ಮತ್ತು ಬಹುಕಾಲಗಳಲ್ಲಿ ಸೃಷ್ಟಿಯಾಗುವ ಜನಪದ ಸಾಹಿತ್ಯಕ್ಕೆ ಸಲ್ಲತಕ್ಕುದಲ್ಲ. ಭಾಷಿಕ ದೋಷಗಳನ್ನು ಸರಿಪಡಿಸಲು ಮಾತ್ರ ಮುಂದಾಗಿದ್ದೇವೆ. ಆಗತ್ಯವಿದ್ದಷ್ಟು ಸಾಂಸ್ಕೃತಿಕ ಪದಕೋಶವನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಶಿಷ್ಟ ಮತ್ತು ಜನಪ್ರಿಯ ಸಾಹಿತ್ಯ ಪ್ರವೃತ್ತಿಗಳು ಜನಪದ ಸಾಹಿತ್ಯದ ಮೇಲೆ ಯಾವ ಕಾಲದಿಂದಲೂ ಪ್ರಭಾವಬೀರುತ್ತ ಬಂದಿವೆ. ಸಮೂಹ ಮಾಧ್ಯಮಗಳು ಈ ಹೊತ್ತು ಭಾರಿ ಪರಿಣಾಮವನ್ನು ಜನಜೀವನದ ಎಲ್ಲ ಕ್ಷೇತ್ರಗಳ ಮೇಲೆ ಬೀರುತ್ತಾ ಇವೆ. ಇಂತಹ ಸಂದರ್ಭಗಳಲ್ಲಿ ಶಿಷ್ಟ ಮತ್ತು ಜನಪದ ಸಾಹಿತ್ಯದ ನಡುವೆ 'ಮಧ್ಯಮ ಸಾಹಿತ್ಯ' ಸೃಷ್ಟಿಯಾಗಿದೆ. ಈ ಸಾಹಿತ್ಯ ಬಾಯಿ ಮಾತಿನಲ್ಲೂ ಇದೆ, ಬರಹದಲ್ಲೂ ಇದೆ. ಇದು ಜನಪದದ ಮಧ್ಯೆಯೇ ಪ್ರಚುರಪ್ರಚಾರದಲ್ಲಿದೆ. ಜನ ಈ ಸಾಹಿತ್ಯವನ್ನು ಜನಪದ ಸಾಹಿತ್ಯದ ಒಂದು ಭಾಗ ಎಂದು ಒಪ್ಪಿ ಸ್ವೀಕರಿಸಿ ಹಾಡುತ್ತಿದ್ದಾರೆ. ತತ್ವಪದಗಳು ಮತ್ತು ಭಜನೆಯ ಪದಗಳು ಈ ಪ್ರವೃತ್ತಿಗೆ ಮುಖ್ಯ ಸಾಕ್ಷಿಗಳಾಗಿವೆ. ಮೌಖಿಕ ಪರಂಪರೆಯೊಳಕ್ಕೆ ಬಂದು ಅನ್ಯೋನ್ಯವಾಗಿ ಸೇರಿಕೊಂಡ ಎಲ್ಲವೂ ಹಾಗೂ ಜಾನಪದೀಯವಾಗಿ ಪರಿಗಣಿತವಾದುದೆಲ್ಲವೂ ಜಾನಪದ ಎಂದು ನಮ್ಮ ವಿಶ್ವ ಪರಂಪರೆಯ ಜಾನಪದ ವಿದ್ವಾಂಸರು ಅನುಮೋದನೆ ನೀಡಿದ್ದಾರೆ. ಉತ್ತರ ಕರ್ನಾಟಕದಂಥ ಸಮೃದ್ಧ ಜಾನಪದ ಜೀವನವನ್ನು ಬದುಕುತ್ತಿರುವ ಜನ ತಮ್ಮ ಅಂತಃಸತ್ವದಲ್ಲಿ ಕೆಲವು ಶಿಷ್ಟ ಹಾಡುಗಳನ್ನು ಜಾನಪದೀಯಗೊಳಿಸಿಬಿಟ್ಟಿದ್ದಾರೆ. ದಾಸಸಾಹಿತ್ಯದ ಅನೇಕ ಹಾಡುಗಳು, ಶಿಶುನಾಳ ಷರೀಫರಂಥ ಜನಸಾಮಾನ್ಯರ ನಡುವಿನ ತತ್ವಚಿಂತಕರ ಹಾಡುಗಳು ಜನರ ಬಾಯಲ್ಲಿ ಜಾನಪದೀಯವಾಗಿವೆ. ವಚನ ಚಳವಳಿಯ ಮುಖ್ಯ ಧಾರೆಯ ಹಿಂದಿನಿಂದ ಬಂದ ಶರಣ ಕವಿಗಳ ಹಾಡುಗಳು ಭಜನೆಯ ಪದಗಳಾಗಿ ಹಾಡಲ್ಪಡುತ್ತಿವೆ. ಜನಪದ ಸಾಹಿತ್ಯದ ಒಂದು ಪ್ರಕಾರವನ್ನು ಮತ್ತೊಂದು ಉದ್ದೇಶಕ್ಕೆ ಬಳಸಿಕೊಳ್ಳುವ ಪರಿಪಾಠ ಎಲ್ಲ ಜನಪದಗಳಲ್ಲೂ ಇದೆ. ಪ್ರಕಾರದೊಳಗಿನ ಉಪಪ್ರಕಾರಗಳಲ್ಲಿ ಕಾರ್ಯಾಂತರವಾಗುವ ರೂಢಿಯೂ ಇದೆ, ಇದನ್ನು ಅಡ್ಡ ಪ್ರಕಾರ ಸ್ವಭಾವ ಎಂದು ಕರೆಯಬಹುದು. ವ್ಯಕ್ತಿ ಯೊಬ್ಬ ಮರಣ ಹೊಂದಿದಾಗ ಆ ದಿನ ರಾತ್ರಿ ಇಡೀ ದಾಸರ ಪದಗಳನ್ನು ಕರುಣಾಕೃತಿಯಾಗಿ ಬಳಸಲಾಗುತ್ತದೆ. ಜನಪದದಲ್ಲಿ ಈ ಸಂದರ್ಭಕ್ಕೆಂದು ಮರಣಗೀತೆಗಳಿದ್ದಾಗ್ಯೂ ಹಾಡುಗಾರರು ದಾಸರ ಪದಗಳನ್ನು ಬಳಸುತ್ತಿರುವುದು ಸಾಂದರ್ಭಿಕ ಔಚಿತ್ಯವೇ ಆಗಿದೆ. ಇತ್ತೀಚಿನ ದಿನಗಳಲ್ಲಿ ಪ್ರತಿ ಜಾನಪದ ಪ್ರಕಾರ ವಿಸ್ತೃತಗೊಂಡು ಆಧುನಿಕ ಅವಶ್ಯಕತೆಗಳಿಗಾಗಿ ಬಳಕೆಯಾಗುತ್ತಿದೆ. ಈ ಚಟುವಟಿಕೆಯನ್ನು ಪಾಶ್ಚಾತ್ಯ ಜಾನಪದ ವಿದ್ವಾಂಸರು 'ಸಾರ್ವಜನಿಕ ಜಾನಪದ' ಎಂದು ಕರೆದಿದ್ದಾರೆ. ಈಗ ಬರುತ್ತಿರುವ ಟಿ.ವಿ, ಧಾರಾವಾಹಿಗಳನ್ನು ಗಮನಿಸಿದರೆ ಮುಂದೊಂದು ದಿನ 'ಸಾರ್ವಜನಿಕ ಸಾಹಿತ್ಯ' ಎಂಬ ನಡುಮಧ್ಯದ ಸಾಹಿತ್ಯವೂ ಹುಟ್ಟಿಕೊಳ್ಳಬಹುದು. ಇಂತಹ ಸನ್ನಿವೇಶದಲ್ಲಿ ಜನಪದ ಸಾಹಿತ್ಯ ತಾಳುವ ಭಿನ್ನ ಉಪಪ್ರಕಾರಗಳ ಚಲನೆಯನ್ನು ಜಾನಪದ ವಿದ್ವಾಂಸರು ತೆರೆದ ಮನಸ್ಸಿನಿಂದ ನೋಡಬೇಕಾಗಿದೆ.

ಈ ಯೋಜನೆಯನ್ನು 'ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಪ್ರಕಟಣ ಯೋಜನೆ' ಎಂದು ಕರೆಯಲಾಗಿದೆ. ಇದರೊಳಗೆ ಬಯಲಾಟ ಮತ್ತು ಯಕ್ಷಗಾನ ಪ್ರಸಂಗಗಳನ್ನು ವಿಶೇಷ ಗಮನಕ್ಕೆ ಅರ್ಹವೆಂದು ಪರಿಗಣಿಸಲಾಗಿದೆ. ಜನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯದ ಮಧ್ಯೆ ಜನಪರವಾಗಿ ಬೆಳೆದುನಿಂತಿರುವ ಈ ಸಾಹಿತ್ಯ ಒಂದು ವಿಶೇಷ ಸಾಹಿತ್ಯ ಪ್ರಕಾರವಾಗಿದೆ. ಶಿಷ್ಟ ಸಾಹಿತ್ಯ ಮೀಮಾಂಸೆ ಜನಪದ ಸಾಹಿತ್ಯವನ್ನು ಅವಗಣಿಸಿರುವಂತೆ ವಿವಿಧ ಬಯಲಾಟ ಪ್ರಕಾರಗಳ ಪ್ರಸಂಗ ಸಾಹಿತ್ಯವನ್ನು ತನ್ನಿಂದ ದೂರವಿರಿಸಿದೆ. ಶಿಷ್ಟ ಸಾಹಿತ್ಯವನ್ನು ಮೀರಿ ಬೆಳೆದ ಯಾವ ಸಾಹಿತ್ಯ ಪ್ರಕಾರವಿದ್ದರೂ ಅದನ್ನು ಗಮನಿಸುವುದು ಬೆಳೆಯುವ ಪ್ರತಿಭಾ ಚಟುವಟಿಕೆಯ ಪುರಸ್ಕಾರವಾಗುತ್ತದೆ. ಜನಪದ ಸಾಹಿತ್ಯ ಸಂಪುಟ ಸಮಿತಿ ತುಂಬ ಜವಾಬ್ದಾರಿಯಿಂದಲೆ ಈ ಬೆಳೆದ ಸಾಹಿತ್ಯ ಪ್ರಕಾರವನ್ನು ಗುರುತಿಸಿ ಗೌರವಿಸಿದೆ.

ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಯ ಈ ಯೋಜನೆಯಲ್ಲಿ ಮೊದಲಾಗಿ ಪ್ರಕಟಿತ ಸಾಹಿತ್ಯವನ್ನು ಆರಿಸಿ ವಿದ್ವಾಂಸರು ಹಾಗೂ ಕನ್ನಡ ಸಾಹಿತ್ಯಾಭಿರುಚಿಯುಳ್ಳ ಎಲ್ಲರಿಗೂ ಒಪ್ಪುವಂತೆ ಸಂಪುಟಗಳಲ್ಲಿ ಪ್ರಕಟಿಸಲಾಗುತ್ತದೆ. ಎರಡನೆಯ ಹಂತದಲ್ಲಿ ಕರ್ನಾಟಕ ನಾಡಿನಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ, ಪ್ರಕಟಿಸಲು ಸಾಧ್ಯಾವಾಗದೆ ಇಟ್ಟುಕೊಂಡಿರುವ ವ್ಯಕ್ತಿ ಹಾಗೂ ಸಂಸ್ಥೆಗಳ ಜನಪದ ಸಾಹಿತ್ಯವನ್ನು ಪ್ರಕಟಿಸಲು ಯೋಜಿಸಲಾಗಿದೆ. ಇಲ್ಲಿ ಕೂಡ ಈಗಾಗಲೆ ಬೇರೆ ಬೇರೆ ಕೃತಿಗಳಲ್ಲಿ ಕಾಣಿಸಿಕೊಂಡಿರುವ ಸಾಹಿತ್ಯ ಭಾಗವನ್ನು ಬಿಟ್ಟು ಹೊಸದೆನಿಸಿದುದನ್ನು ಕೈಗೆತ್ತಿಕೊಳ್ಳಲಾಗುವುದು. ಮೂರನೆಯ ಹಂತದಲ್ಲಿ ನಾಡಿನಾದ್ಯಂತ ಕೆಡೆದು ಬಿದ್ದಿರುವ ಅಪೂರ್ವವೂ, ಅಮೂಲ್ಯವೂ ಆದ ಜನಪದ ಸಾಹಿತ್ಯವನ್ನು ಕ್ಷೇತ್ರ ಕಾರ್ಯ ಮಾಡಿಸಿ, ಸಂಗ್ರಹಿಸಿ ಪ್ರಕಟಿಸುವ ಬಹುದೊಡ್ಡ ಯೋಜನೆ ಇದೆ. ನಮ್ಮ ಸಾಹಿತ್ಯ – ಸಂಸ್ಕೃತಿ ಚಿಂತಕರು 'ಕರ್ನಾಟಕದ ಮುರಿದ ಭಾಗವನ್ನು ಸರಿಪಡಿಸಿ ಕಟ್ಟಿರಿ, (ಅರ್ಚಕ ಬಿ. ರಂಗಸ್ವಾಮಿ: ಹುಟ್ಟಿದ ಹಳ್ಳಿ; ಹಳ್ಳಿಯ ಹಾಡು ೧೯೩೩) ಎಂಬ ಕಳಕಳಿಯ ಆದೇಶವನ್ನು ಕೊಟ್ಟಿದ್ದಾರೆ, ಅದನ್ನು ಪಾಲಿಸುವುದು ನಮ್ಮ ಕರ್ತವ್ಯ ಹಾಗೂ ಧರ್ಮವಾಗಿದೆ.

ಕರ್ನಾಟಕ ಸರ್ಕಾರವು ದಿನಾಂಕ ೧೦-೦೨-೨೦೦೪ರಂದು ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಯೋಜನೆಯ ನಿರ್ವಹಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇಲ್ಲಿ ನಾಡಿನ ಹಿರಿಯ ಹಾಗೂ ಶ್ರೇಷ್ಠ ಜಾನಪದ ತಜ್ಞರಿದ್ದಾರೆ. ಅವರ ಪ್ರತಿಭೆ ಮತ್ತು ಪರಿಶ್ರಮ ಇಲ್ಲಿ ಕೆಲಸ ಮಾಡಿದೆ. ಬಹಳ ಕಾಲದ ಕನಸೊಂದು ನನಸಾಗುತ್ತಿರುವ ಬಗ್ಗೆ ಅವರು ಸಂತಸಗೊಂಡಿದ್ದಾರೆ. ಇದೊಂದು ನಾಡಿಗೆ ಸಲ್ಲಿಸುವ ಸೇವೆಯ ಕೆಲಸವೆಂಬಂತೆ ದುಡಿಯುತ್ತಿದ್ದಾರೆ. ಅವರು ಕರ್ನಾಟಕ ಸರ್ಕಾರ ಹಾಗೂ ಕನ್ನಡಿಗರ ಗೌರವಕ್ಕೆ ಪಾತ್ರರಾಗಿದ್ದಾರೆ. ಕರ್ನಾಟಕದ ನಾನಾ ಕಡೆ ಬಹಳಕಾಲದಿಂದ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿ ನುರಿತಿರುವ ನೂರೈವತ್ತಕ್ಕೂ ಹೆಚ್ಚು ಜಾನಪದ ವಿದ್ವಾಂಸರು ಸಂಪುಟಗಳ ಸಂಪಾದಕರಾಗಲು ಒಪ್ಪಿಕೊಂಡಿದ್ದಾರೆ. ನಾಡ ಮೇಲಿನ ಅವರ ಪ್ರೀತಿ ಅಪಾರವಾದುದು. ಅವರನ್ನು ಕರ್ನಾಟಕ ಸಾಹಿತ್ಯ ಸಂಸ್ಕೃತಿ ಪ್ರೇಮಿಗಳು ಸ್ಮರಿಸುತ್ತಾರೆ. ಸಂಪುಟ ಸಮಿತಿ ಅವರನ್ನು ತುಂಬುಮನಸ್ಸಿನಿಂದ ವಂದಿಸುತ್ತದೆ.

ಈ ಸಂಪುಟಗಳು ಹೊರಬರುವಲ್ಲಿ ಕರ್ನಾಟಕ ಸರ್ಕಾರದ ಪ್ರಯತ್ನ ಶ್ಲಾಘನೀಯ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಹಾಗೂ ನಿರ್ದೇಶಕರು ಈ ನಿಟ್ಟಿನಲ್ಲಿ ಮುಕ್ತ ಸಹಕಾರವನ್ನು ನೀಡಿದ್ದಾರೆ. ಈ ಇಲಾಖೆಯ ಜಂಟಿ ನಿರ್ದೇಶಕರೂ, ಸಾಹಿತಿಗಳೂ ಆದ ಶ್ರೀ ಕಾ.ತ. ಚಿಕ್ಕಣ್ಣನವರು ಪ್ರತಿಯೊಂದು ಹಂತದಲ್ಲೂ ಸಂಪುಟ ಸಮಿತಿಯ ಜೊತೆಗಿದ್ದು ಅವರ ಅಪಾರ ಶ್ರಮ ಮತ್ತು ಸಹಕಾರವನ್ನು ಧಾರೆ ಎರೆದಿದ್ದಾರೆ. ಕರ್ನಾಟಕ ಜಾನಪದ ಅಕಾಡೆಮಿಯು ಪ್ರಕಟಣೆಯ ಕೆಲಸಕಾರ್ಯಗಳನ್ನು ನಿರ್ವಹಿಸಿ ತುಂಬು ಬೆಂಬಲ ನೀಡಿದೆ. ಈ ಸಮಸ್ತರಿಗೂ ನನ್ನ ಗೌರವಪೂರ್ವಕ ವಂದನೆಗಳು ಸಲ್ಲುತ್ತವೆ.

**ಪ್ರೊ. ಹಿ. ಶಿ. ರಾಮಚಂದ್ರೇಗೌಡ**
ಅಧ್ಯಕ್ಷರು
ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ ಸಮಿತಿ

# ಹಿರಣ್ಯಾಕ್ಷನ ವಧೆ

## ಪಾತ್ರಗಳು

| | |
|---|---|
| ಜಯ | ದೇವೇಂದ್ರ |
| ವಿಜಯ | ಧೂತರು |
| ಸನಕನನಂದನಾದಿಗಳು | ಯಮ |
| ವಿಷ್ಣು | ಅಗ್ನಿ |
| ಕಶ್ಯಪ | ಕುಬೇರ |
| ದಿತಿ | ಈಶ್ವರ |
| ಹಿರಣ್ಯಕಶ್ಯಪು | ಭೂದೇವಿ |
| ಹಿರಣ್ಯಾಕ್ಷ | ವರುಣ |
| ಬ್ರಹ್ಮ | ವರಾಹ |

## ಯಕ್ಷಗಾನ ಹಿರಣ್ಯಾಕ್ಷನವಧೆ

**ಸ್ರಗ್ಧರಾ ವೃತ್ತ**

ದ್ವಾರೇ ವೈಕುಂಠಲೋಕೇ ವಿರಚಿತಃದಯೋ
ಭೂರಿಗರ್ವಾಂಧಯೋ; ಪ್ರಾಕ್ |
ಸಂರೋಧಂ ಕುರ್ವತೋರ್ಹಾ ಜಯಸುವಿಜಯಯೋ;
ಘೋರಶಾಪೇ ಮುನೀಂದ್ರೈಃ ||
ಸಂರೋಷಾತ್ ಪಾತಿತೇ ವೈ ಕಮಲಜನಿಪಿತಾ
ವೀರವಾರಾಹರೂಪೋ |
ಧೀರೋ ಭೂತ್ವಾ ನೃಸಿಂಹೋ ನಿಜಹಿತಮಕರೋತ್
ಯೋ ರಮೇಶಃ ಸ ಪಾಯಾತ್ ||

**ಭಾಮಿನಿ**

ಗಣಪತಿಯ ಪೂಜಿಸುತನಂತರ |
ಮಣಿದು ಗುರುಹಿರಿಯರನು ಪ್ರಾರ್ಥಿಸಿ |
ಮನದಿ ಹರಿಹರರನ್ನು ಸ್ತುತಿಸುತ ಮುನಿಜನಕೆ ಯೆರಗೀ ||
ಫಣಿವಶಯನನ ಚರಿತೆಯನು ನಾ |
ಗುಣಿಸಿ ಪೇಳಿದೆ ಯಕ್ಷಗಾನದಿ |
ಕಣ್ ದಣಿಯೆ ಬರದೋದಿ ಮೆರಸುವದೆಲ್ಲ ಸುಜನರಿದೂ ‖ ೧ ‖

**ರಾಗ ನಾಟಿ, ಝಂಪೆತಾಳ**

ಜಯತೂ ಜಯ ಗಣನಾಥಾ | ಜಯತೂ ಸದ್ಗುಣದಾತಾ ||
ಜಯತೂ ಗೌರಿಯ ಜಾತಾ | ಕೀರ್ತಿ ವಿಖ್ಯಾತಾ || ಜಯತೂ ಜಯ ಜಯತೂ || ೧ ||

ಸಕಲ ಲೋಕಾಧೀಶಾ | ಸುಖದಿ ಸರ್ವರ ಪೋಷಾ ||
ಯುಕುತಿದಾಯಕಧೀಶಾ | ಶಕುತಿ ಮಹೇಶಾ || ಜಯಜಯತೂ ಜಯತೂ || ೨ ||

ಶೃಂಗಪುರುದೊಳು ವಾಸಾ | ತುಂಗವಿಕ್ರಮ ಭಾಸಾ ||
ಮಂಗಳಾಂಗನಿವಾಸಾ | ಸಂಗಸುಖದಾಸಾ || ಜಯಜಯತೂ ಜಯತೂ || ೩ ||

**ದ್ವಿಪದಿ**

ಸಕಲ ದೇವರ್ಕಳಿಗೆ ಮಣಿದು ನಾನಿಂದೂ |
ಮುಕುತಿದಾಯಕ ಚರಿತೆಯನುತ ಬಲ ಬಂದೂ || || ೧ ||

ತಪ್ಪಿರಲು ತಿದ್ದು ವದು ಬಲ್ಲವರು ಮುದದೀ |
ವಪ್ಪಿ ಮೆರಸಲು ನಿಮ್ಮ ರಕ್ಷಿಪನು ಮುದದೀ || || ೨ ||

ವರಮಹಾ ಭಾಗವತ ಪುರಾಣ ಕಥನದಲೀ |
ಅರುಹಿದಂದದಿ ಪೇಳ್ವೆ ವೈಕುಂಠಪುರದೀ || ೩ ||

ಆದಿನಾರಾಯಣನು ವೋಲಗದೊಳಿರಲೂ |
ಪಾದಭೇಟಿಗೆ ಸನಕಸನಂದರೈತರಲೂ || || ೪ ||

ದ್ವಾರದಲಿ ಜಯವಿಜಯರಡ್ಡಗಟ್ಟಿದರೂ |
ಕಾರುಣೀಕರು ಶಾಪ ಕೊಡಲು ಮತ್ತವರೂ || || ೫ ||

ಕೆಟ್ಟ ಲೋಭಿಗಳಾಗಿ ಜನಿಸಿ ಭೂಮಿಯೊಳೂ |
ಕಷ್ಟಬಡಿಸಿದರೆಲ್ಲ ಜನಕೆ ವೇಗದೊಳೂ || || ೬ ||

ತಿಳಿದು ಆಕ್ಷಣದೊಳಗೆ ವರಹರೂಪಿನೊಳೂ |
ಅಳಿದು ದೇವರ್ಕಳನು ಸಲಹಿ ವೇಗದೊಳೂ || || ೭ ||

ಹ್ಯಾಗೆಂಬಪರಿಗಳನು ಪೇಳಬೇಕೆನುತಾ |
ಬಾಗಿ ಶಿರವನು ಎದುರ ಕೇಳೆ ಬಳಿಕಿತ್ತಾ || || ೮ ||

ಮೈತ್ರೇಯ ಮುನಿವರನು ಪೇಳೀರ್ದ ಪರಿಯಾ |
ಧಾತ್ರಿಜನರರಿವಂತೆ ಪೇಳುವೆನು ಕಥೆಯಾ || || ೯ ||

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಒಂದು ದಿನ ಮುನಿಪನೊಳು ವಿದರನು | ಬಂದು ಕೇಳಿದ ಭಾಗವತದೊಳೂ ||
ಮಂದರಧರ ವರಹವತಾರವ | ಹಿಂದೆ ತಾನೂ || ೧ ||

ಯಾತಕೋಸುಗ ಗೈದನೆಂಬುದ | ಯೇ ತಪೋನಿಧಿ ಪೇಳಬೇಕನೆ ||
ಭೀತಿ ಬಡಿಸಿದವರ ಹಿರಣ್ಯಕ | ನಾಥನನ್ನೂ || ೨ ||

ಮಡುಹಲೋಸುಗ ವರಹತಾರವ | ಬಿಡದೆ ರಚಿಸಿದನೆಂಬ ಮುನಿಪಗೆ ||
ಪೊಡಮಡುತ ಕೇಳಿದನು ಪುನರಪಿ | ವಡನೆ ಪೇಳೂ || ೩ ||

ಯೆಂದು ಪಾದಕೆ ವಿದುರ ವಂದಿಸ | ಲಂದು ಪೇಳಿದ ಕೇಳು ಶ್ರೀಹರಿ ||
ಹಿಂದೆ ಗೈದಿಹ ಚರಿತೆಯೆಲ್ಲವ | ನಿಂದು ಕೇಳೂ || ೪ ||

**ಭಾಮಿನಿ**

ಒಂದು ದಿನ ವೈಕುಂಠ ಪುರದಲಿ |
ಮಂದರಾಧರ ಲಕ್ಷ್ಮೀ ಸಹಿತಲೆ |
ಚಂದದಿಂದೋಲದೊಳೊಪ್ಪಿರಲಾಗ ಜಯವಿಜಯರೂ ||

ಅಂದದಲಿ ದ್ವಾರವನು ಕ್ವಾದಿರೆ |
ಬಂದರಲ್ಲಿಗೆ ಬಾಲನಾ೯ಲ್ವರು |
ಸಂದ ಮುನಿವರರೆಂಬುದರಿಯದೆ ಮಂದಹಾಸದಲೀ ||

**ಕಂದ ಪದ್ಯ**

ಜಯವಿಜಯರು ಕಾಣುತ ಮುನಿಗಳ |
ಭಯ ಭಕ್ತಿಯೊಳೆರಗದೆ ಕ್ರೋಧದೊಳಾಗಂ ||
ಭಯದೋರುತ ಗರ್ವದಿ ನುಡಿದರ್ |
ನಯನೀತಿಗಳಿಲ್ಲದೆ ಬಹುಪರಿ ಗರ್ಜಿಸುತಂ || ೧ ||

**ರಾಗ-ಮಾರವಿ, ಏಕತಾಳ**

ಯಾರ್ರ್ಯಾ ನೀವು ನಮ್ಮನು ನುಡಿಸದೆ |
ಪಾರುವದೆಲ್ಲಿಗೆ ಮುಂದೆ ||
ತೋರ್ರ್ಯಾ ನಿಮ್ಮಯ ಹೆಮ್ಮೆಯ ನಿಲಿಪೆವು |
ಸಾರ್ರ್ಯಾ ಹಿಂದಕೆಯಿಂದೇ || ೧ ||

**ರಾಗ-ಕೇದಾರಗೌಳ, ಝಂಪೆತಾಳ**

ಆದಿ ನಾರಾಯಣನನೂ | ನೋಡುವಡೆ | ಹಾದಿ ಹಿಡದೈದು ವರನೂ ||
ಯೇ ದುರಾತ್ಮಕರೆ ನೀವೂ | ದ್ವಾರ ತಡ | ಹಾದುವರೆ ಯಾರು ನೀವೂ ॥ ೧ ॥

**ರಾಗ ಮಾರವಿ, ಏಕತಾಳ**

ಪುಟ್ಟಾ ಪ್ರಾಯದ ಹಾರುವರೆ ನಿಂ | ಮಪ್ಪನ ಮನೆಯೊ ಪೇಳಿ |
ಪಟ್ಟಾ ಆಳುವ ದೇವರ ಬಾಗಿಲ | ದಿಟ್ಟ ದೂತರು ನಾವು ಕೇಳಿ ॥ ೧ ॥

**ರಾಗ ಕೇದಾರಗೌಳ, ಝಂಪೆತಾಳ**

ಆ ದೇವದೂತರಾದಡೆ ಯೀಪರಿಯ |
ಕ್ರೋಧ ನಿಮಗ್ಯಾಕೆ ಬಲರೇ ||
ಮಾಧವನ ಪಾದದೆಡೆಗೆ | ಪೋಗುವರ |
ಬೈದು ತಡೆವದು ನೀತಿಯೇ ॥ ೧ ॥

**ರಾಗ ಮಾರವಿ, ಏಕತಾಳ**

ಬಾಗಿಲ ಕ್ಯಾವರ ಅಪ್ಪಣೆಯಿಲ್ಲದೆ |
ಪೋಗಲು ತೀರದು ಮುಂದೇ ||
ಬೇಗದಿ ಹಿಂದಕೆ ಸಾಗದೆಯಿರ್ದರೆ |
ನೀಗಿಸಿಬಿಡುವೆವು ಹಿಂದೇ ॥ ೧ ॥

**ರಾಗ ಕೇದಾರಗೌಳ, ಝಂಪೆತಾಳ**

ಮೂಢಮತಿಗಳು ಕೇಳಿರಿ | ದೇವರನು |
ನೋಡಿ ಪೋಪೆವು ತಿಳಿದಿರೀ ||
ಗಾಢದಲಿ ದ್ವಾರ ಬಿಡಿರಿ | ಅಲ್ಲದಡೆ |
ಕೇಡು ಬರ್ಪುದು ಕೇಳಿರೀ ॥ ೧ ॥

**ರಾಗ ಮಾರವಿ, ಏಕತಾಳ**

ಕೇಡನು ಮಾಡುವ ಹೇಡಿಗಳ್ಯಾರ್ ನೀವು |
ಜೋಡಿಸುವೆವು ಸಂಕಲೆಯಾ ||
ಆಡದೆ ಮಾತನು ಬೇಗದಿ ನಡೆಯಿರಿ |
ದೂಡಿಸಿ ಬಿಡುವೆವು ಯೀ ಪರಿಯಾ ॥ ೧ ॥

**ರಾಗ ಕೇದಾರಗೌಳ, ಝಂಪೆತಾಳ**

ದುರುಳತನದಲಿ ವ್ಯರ್ಥದಿ | ಕೆಡಬ್ಯಾಡಿ |
ಅರಿಯದೆಮ್ಮನು ಗರ್ವದೀ ||
ಸರಿದಪೆವು ಮುಂದೆ ನಾಮಾ | ಯೆನುತಾಗ |
ವರದು ಮುಂದಕೆ ಬೇಗದೀ || ೧ ||

**ರಾಗ ಮಾರವಿ, ಏಕತಾಳ**

ಕಂಡಾಕ್ಷಣದೊಳು ಕೆಂಡದಂತೇಳುತ |
ದಂಡವ ಧರೆಗಿಡುತಾ ||
ಖಂಡಿತ ಮುಂದಕೆ ತೆರಳ್ದರೆ ನಿಮ್ಮನು |
ದಂಡಿಸುವೆವು ಮತ್ತಾ || ೧ ||

**ರಾಗ ಕೇದಾರಗೌಳ, ಝುಂಪೆತಾಳ**

ದ್ವಾರಪಾಲಕರೆಂದುದಾ | ಕೇಳ್ದಾಗ | ಭೂರಿ ಕೋಪದಿ ಪೇಳಿದಾ ||
ಕ್ರೂರ ಕರ್ಮಿಗಳಾಗುತಾ | ಧರೆಯೊಳಗೆ | ಘೋರಪಾಪಗಳೆಸಗುತಾ || ೧ ||

ಪುಟ್ಟುವಿರಿ ಮುಂದೆನುತಲೀ | ಶಾಪವನು | ಕೊಟ್ಟರಾ ಕ್ಷಣಮನದಲೀ ||
ದಿಟ್ಟ ಚಾರರು ಭಯದಲೀ | ಮರುಗುತಿರೆ | ತಟ್ಟನೈದಲು ಪದದಲೀ || ೨ ||

ಚರಣಕೆರಗಿನ ಚರರನೂ | ಶ್ರೀಹರಿಯು | ಕರುಣದಿಂ ಮನ್ನಿಸಿದನೂ ||
ವರ ಮುನೀಂದ್ರರಿಗೆಂದನೂ | ಕೋಪಬಿಡಿ | ತೆರಳಿ ಬರ್ಪುದುಯೆಂದನೂ || ೩ ||

**ಭಾಮಿನಿ**

ಸಾಧು ಮುನಿಗಳ ಕರದು ಪೀಠದಿ |
ಪಾದ ಪೂಜೆಯನೆಸಗುತಿರೆ ಕಂ |
ಡಾದಿ ಮೂರುತಿ ಪದಕೆ ಮಣಿದಿಂತೆಂದರಾದುದನೂ ||
ಯೇ ದಯಾನಿಧೆ ನಿಮ್ಮ ದರುಶನ |
ಪಾದದೆಡೆಗೆಂದೆನುತ ಬರುತಿರೆ |
ಆ ದುರಾತ್ಮಕರೆಮ್ಮ ತಡದರು ಹಾದಿ ಬಿಡದಿಂದೂ ||

**ಕಂದಪದ್ಯ**

ಮುನಿವರರೆಂದುದ ಕೇಳುತ |
ಚಿನುಮಯನುಸುರಿದನವರೊಳ್ ನಸುನಗುತಂ ||
ಮನಸಿನ ಕೋಪವ ಬಿಡಿರೆಂ |
ದೆನುತಲೆ ಉಪಚರಿಸದನನುನಯದಿಂದಾ || ೧ ||

**ರಾಗ ಮಧುಮಾಧವಿ, ಏಕತಾಳ**

ಅಪರೂಪದಲಿ ನೀವು ಯೆನ್ನಯಾ ಬಳಿಗೆ |
ಕೃಪೆಯಿಂದ ಬಂದುದು ಲೇಸಾತು ನಿಮಗೆ ||
ಅಪರಾಧಗಳನೆಸಗಿದರ್ನಿಮಗಿಂದೂ |
ವಿಪರೀತವಾತೀಗ ಚಾರರನಿಂದೂ || ೧ ||

ಆಲಿಸು ದೇವರದೇವ ನೀ ದಯದಿ |
ನೀಲಮೇಘಶ್ಯಾಮ ಕೇಳು ಈ ದಿನದೀ ||
ಮೂಲವರಿಯಾದೆಮ್ಮಾ ಬಾಳೂವೆಗಳನೂ |
ಪೇಳಬಾರದ ಮಾತಕೇಳಿ ಕ್ರೋಧವನೂ || ೨ ||

ಸ್ವೈರಿಸಲಾರದೆ ದ್ವಾರಪಾಲರಿಗೆ |
ವೈರಮಾಡಿದೆವೀಗ ತವಪಾದ ಬಳಿಗೆ ||
ಬರೆಬಿಡದುದರಿಂದೀಪರಿಯಾಯ್ತು ಅವರ್ಗೆ |
ಶರಣರಕ್ಷಕ ದೇವಜಯಜಯೆಂದೆರಗೇ || ೩ ||

ಯೆರಗೀದ ಮುನಿಗಳಾ ಕಾಣುತ್ತಲಾಗಾ |
ಶಿರವನ್ನು ಪಿಡಿದೆತ್ತಿ ನುಡಿದಾನು ಬೇಗಾ ||
ಅರುಹಬೇಕೆನ್ನೊಳು ಬಂದಿಹ ಪರಿಯನು |
ಮರೆಯದೆಲ್ಲವಾ ಪೇಳಿಪೋಗುವದಯ್ಯಾ

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಆದಿನಾರಾಯಣ ನುಡಿಯನು | ಸಾಧು ಸನಕಸನಂದ ಮುನಿವರ |
ರಾದಿಯರಿದೆಲ್ಲವನು ಪೇಳ್ದರು | ಸಾದರದೊಳೂ || ೧ ||

ಮುಂದಿನ ಪರಿಯಲ್ಲಿ ಸೂಚಿಸಿ | ವಂದಿಸುತ ಕೈ ಮುಗಿದು ತೆರಳಲು |
ಬಂದರಾ ಜಯವಿಜಯರಲ್ಲಿಗೆ | ಕಂದಿಕೊಳುತಾ ||೨||

ಬಂದು ಪಾದದಿ ವಂದಿಸಲ್ಕಾ | ನಂದದಿಂ ನುಡಿಸಿದನು ಶ್ರೀಹರಿ |
ಬಂದ ಕಾರಣ ಅರುಹಿರೆಂದನು | ಚಂದದಿಂದಾ || ೩ ||

**ರಾಗ ಯರಕಲಕಾಂಬೋಧಿ, ತ್ರಿವುಡೆತಾಳ**

ಪಾಹಿ ಶ್ರೀವರ ಕೇಶವಾ | ನಾರಾಯಣ | ಪಾಹಿ ಶ್ರೀವರ ಮಾಧವಾ |
ಪಾಹಿ ಶ್ರೀಹರಿ ರಕ್ಷಿಸೆಮ್ಮನು | ಪಾಹಿ ಮುನಿವರರಿತ್ತ ಶಾಪವ |
ಪಾಹಿ ದೇವರದೇವ ನಿರತವೂ || ಪಾಹಿ ಶ್ರೀವರ ಕೇಶವಾ || ೧ ||

ನಿನ್ನಾಜ್ಞೆಯೊಳು ಬಾಗಿಲಾ | ಈವರೆಗೆ ನಾವು | ಚೆನ್ನಾಗಿ ಕಾದಿರಲೂ |
ಸಣ್ಣಮುನಿವರರ್ ಬರಲು ದ್ವಾರವ | ನಿನ್ನ ಅಪ್ಪಣೆ ವಿನಹ ಬಿಡದಿರೆ | ಮುನ್ನ
ವಳಪೊಗುವಾಗ ಕೋಲಿಲಿ | ಇನ್ನವರ ತಡೆಯಲ್ಕೆ ನುಡಿದರೂ || ಪಾಹಿ ಶ್ರೀವರಕೇಶವಾ || ೧ ||

ದುರಿತಾ ಹೊದ್ದಲಿ ಯೆನುತಾ | ಭೂಮಿಯೊಳೀಗಾ | ದುರುಳತನದೊಳಿರುತಾ | ತರತರದಿ
ದೂಷಿಸುತ ಶಾಪವ | ನುರುತದಿ ಕೊಟ್ಟಹರು ನಮ್ಮನು | ತರಿದು ಶಾಪವ ನಮ್ಮ ಜನ್ಮವ |
ನಿರತ ಸುಖಿಸುವ ತೆರನ ಮಾಳ್ಪುದೂ || ಪಾಹಿ ಶ್ರೀವರ ಕೇಶವಾ || ೩ ||

**ರಾಗ ಕಾಂಬೋಧಿ, ಝಂಪೆತಾಳ**

ಇಂದು ಬಹುಪರಿಯಿಂದ ವಂದಿಸುತ ಜಯವಿಜಯ |
ರಂದವನು ಕಂಡು ಮಿಗೆ ಯೆಂದನವರೊಡನೆ ||
ಇಂದು ಮುನಿವರರಿತ್ತ ಶಾಪ ಪುಸಿಯಾಗದೈ |
ಹೊಂದುವಿರಿ ಭೂಮಿಯೊಳುನಿಂದೆಗೊಳಗಾಗೀ || ೧ ||

ಯೆನ್ನನೆ ಸ್ತುತಿಸುತಲಿ ಯೇಳ್ಜನ್ಮದೊಳು ಸುತ್ತಿ |
ಮುನ್ನ ಪಾದದ ಬಳಿಗೆ ಸನ್ನುತದಿ ಬಹದೂ ||
ಯೆನ್ನುವದ ಕೇಳಿ ಮನಮರುಗಿ ಘೋಳಿಡುತ್ತೆಂದರ್ |
ಚಿನ್ಮಯನೆ ಕೇಳೆಮ್ಮಬಿನ್ನಪವನಿಂದೂ || ೨ ||

ದೇವ ನಿಮ್ಮಡಿ ಬಿಟ್ಟು ಆವಪರಿಯಂತರವು |
ಜೀವಿಸುವದೇತಕೀ ಭೂವಲಯದೊಳಗೇ ||
ಪಾವನಾಂಘ್ರಿಯ ತ್ಯಜಿಸಿ ಸೇವೆಗಯ್ಯದೆ ಬಾಳ್ವ |
ಜೀವಿಗಳು ನಾವಲ್ಲ ದೇವ ನೀನೆಮಗೇ || ೩ ||

ಅಲ್ಲದಡೆ ಯೆನ್ನೊಡನೆ ನಿಲ್ಲಾದೆ ಮೂರ್ಜನ್ಮ |
ದಲ್ಲಿ ಪಗೆತನದಿಂದ ಮಲ್ಲಯುದ್ಧವನೂ ||
ಬುಲ್ಲವಣೆಯಿಂದೆಸಗೀ ಸಲ್ಲಲಿತ ಪಾದಬಳಿ |
ಯಲ್ಲಿ ಬಂದಪುದೆಂದು ಬಲ್ಲಿದನು ಪೇಳೇ || ४ ||

**ಕಂದ ಪದ್ಯ**

ನುಡಿಯ ಲಾಲಿಸಿ ಜಯವಿಜಯ |
ರೊಡೆಯನೆ ನೀನೆಮ್ಮ ನನುದಿನ ರಕ್ಷಿಪುದೆನುತಲಿ ||
ನಡತಂದರು ಭೂಲೋಕಕೆ |
ಬಿಡದಲೆ ಘೋಳಿಡುತಾಕ್ಷಣದೊಳಗವರಾಗಳ್ || ೧ ||

**ವಾರ್ಧಿಕ್ಯ**

ವಿದುರ ಕೇಳ್ಪೂರ್ವದಲಿ ದಿತಿಯಕಶ್ಯಪಮುನಿಯು |
ವಿಧಿವಶದಿ ಲಗ್ನಗಯ್ದಿರುತಿರಲು ಆ ದೆಸೆಗೆ |
ಮುದದಿ ಜಯವಿಜಯ ರೈತಂದು ದಿತಿಗರ್ಭವನು ಪದುಳದಿಂ ಪೊಕ್ಕರಂದೂ ||
ವಿಧ ವಿಧದಿ ಬೆಳದು ನವಮಾಸ ತುಂಬಲ್ಕಾಗ |
ಉದುಭವಿಸೆ ಸುತರೀರ್ವರಾಕ್ಷಣವೆ ನಾಲ್ದೆಸೆಯು |
ಬೆದರಿತೇನೆಂಬೆ ಆ ಮದಮುಖರ ಕಾಣುತ್ತ ಸುದತಿ ಅಚ್ಚರಿಗೊಂಡಳೂ ॥ ೧ ॥

**ಕಂದ ಪದ್ಯ**

ಘೋರಕಾರದಿ ಬೆಳದೀ |
ರ್ವರು ಭೋರೆನುತಾರ್ಭಟಿಸುತಾಗಳು ನಿಂದಿರೆ ||
ಕ್ರೂರತ್ವ ಕಂಡು ದಿತಿ ಬಂ |
ದೋರನೆ ಮುನಿಪತಿಗೊರದಳ್ ವಾರತೆಯಂ ॥ ೧ ॥

**ರಾಗ ನೀಲಾಂಬರಿ, ರೂಪಕತಾಳ**

ಯೇನಾನೆಂಬೆನು ಪತಿಯೆ | ಸೂನುಗಳಾಕೃತಿ ಬೇರೆ |
ಊನಾ ಬಂದುದು ವಿಧಿ | ತಾನೆಂತೂ ಬರದಾ ॥ ೧ ॥

ಪುಟ್ಟಿದಾಕ್ಷಣದೊಳು | ದುಷ್ಟರಾಗುವರೆ ಈ |
ಕಷ್ಟಾವಾನೇನೆಂಬೆ | ಕೆಟ್ಟಿತಿನ್ನೇನೂ ॥ ೨ ॥

ತಿಂಬಾರೊ ಇವರೆನ್ನಾ | ಹಂಬಾಲು ತೀರಿತು |
ಮುಂಬರಿದೂ ಬರುತೀರ್ಪಾ | ರೆಂಬುದಿನ್ನೇನೂ ॥ ೩ ॥

**ರಾಗ ಭೈರವಿ, ಝಂಪೆತಾಳ**

ನೋಡಿ ಮುನಿವರ ಸುತರಾ ಮಾಡದಿರು ದುಃಖವನು |
ಆದಿ ಫಲವೇನಿನ್ನೂ ಕೂಡಿಸಲಹುವದೂ ||
ವೋಡಿಬರುತಿಹಸುತರಾ ಗಾಢದಿಂ ಸಂತೈಸಿ |
ಆಡುತಿಹ ನುಡಿ ಕೇಳಿ ಪಾಡನರಿತವನೂ ॥ ೧ ॥

ಹಿರಣ್ಯಕಶ್ಯಪನೆಂದೂ ಹಿರಿಯನಿಗೆ ಹೆಸರಿಟ್ಟೂ |
ಹಿರಣ್ಯಾಕ್ಷನೆಂದೂ ತಾ ಕಿರಿಯನನು ಕರೆದೂ ||
ಆರುಹಿದನು ಮಂತ್ರೋಪದೇಶ ಸಹ ಬಾಲರಿಗೆ |
ಪರಿಪರಿಯ ವಿದ್ಯೆಗಳ ತರಳರಿಗೆ ಪೇಳೀ ॥ ೨ ॥

ಹರುಷದೊಳು ಮಾತೆಯೊಡಗೂಡಿ ನೀವಿರಬೇಕು |
ತೆರಳುವೆನು ವನಕೆ ನಾ ತಪವನಾಚರಿಸೆ ||

ಅರುಹುತಿಹ ಮುನಿಪದಕೆ ಶಿರಬಾಗಿ ಬಾಲಕರು |
ಥರವೆನಮ್ಮನ್ನು ಬಿಟ್ಟು ಪೊರಡುವದು ಪಿತನೇ || ೩ ||

ಮಕ್ಕಳೆಂದುದಕೇಳಿ ಮುನಿಪಾ ಯೋಚಿಸುತಾಗ |
ತಕ್ಕುಪಾಯವ ಮಾಳ್ಪೆನೆಂದೂ ಆ ಕ್ಷಣದಿ ||
ಘಕ್ಕನೆ ಮನದೊಳಗೆ ಮಯನ ನೆನೆಯಲು ಆಗ |
ತಕ್ಕಸಮಯದಿ ಬಂದು ಯೆರಗಿದನು ಪದಕೇ || ೪ ||

**ಭಾಮಿನಿ**

ಯೆರಗಿದಸುರನ ಶಿರವನೆತ್ತುತ |
ಪರಸಿ ನುಡಿದನು ಪುರವನೀಕ್ಷಣ |
ತ್ವರಿತದಿಂ ರಚಿಸೆನಲು ಆಗಲೆ ರಚಿಸಿದನಂದೂ |
ತರದ ಮನೆಗಳಿಗೆ ಮೇಲು |
ಪ್ಪರಿಗೆ ಮೇಲ್ಗಟ್ಟುಗಳು ಸಹಿತಲೆ |
ಮೆರದಿರಲು ಮುನಿ ನೋಡಿ ಸುತರಿಗೆ ಅರುಹಿದನುಬಳಿಕಾ || ೧ ||

**ರಾಗ ಯರಕಲಕಾಂಬೋಧಿ, ಅಷ್ಟತಾಳ**

ಬಾಲಕರೀಗ ಕೇಳುವದೂ | ಪುರ | ಪಾಲಕರಾಗಿ ಬಾಳುವದೂ ||
ಶೀಲಗುಣಗಳಿಂದ ಆಳುವದೀ | ಪರಿ | ಪಾಲಿಸಿ ಶೋಣಿತಪಟ್ಟಣಪುರವಿದೂ || ೧ ||

ಯೆನುತಾ ಪಟ್ಟವಗಟ್ಟಿ ಪೊರಟೂ | ಪೋಗೆ | ದನುಜೇಂದ್ರ ವೋಲಗಗೊಟ್ಟೂ ||
ಅನುಜಾನಕರದೆಂದ | ಮುನಿಯಾ ಕಟಾಕ್ಷದಿ |
ಇನಿತೂ ಕೈಗೂಡಿತು | ಮನದೊಳು ಯೋಚಿಸೇ || ೨ ||

ಧುರಪರಾಕ್ರಮಿಯಾಗಿ ಪುರದೀ | ಸುಮ್ಮ |
ನಿರುವಾದು ಥರವಲ್ಲ ಧುರದೀ ||
ನರಲೋಕಾಧಿಪರನ್ನು ಗೆಲಿದು ನಂತರ ಸುರ |
ಪುರದಾಧಿಪತ್ಯವಾ ಕೈಕೊಂಡೂ ಮರೆಯಾದೇ || ೩ ||

ಸುಮ್ಮಾನೆ ಕುಳಿತರೆ ಮುಂದೆ | ಪರ |
ಬ್ರಹ್ಮನ ತಪದಿಂದ ಇಂದೇ ||
ವಮ್ಮನದಿಂದಲಿ ವಲಿಸಿಬೇಕಾದಿಷ್ಟ |
ಗಮ್ಮಾನೆ ಪಡಕೊಂಡು | ದಿಮ್ಮಾನೆ ನಾವು ಮುಂದೇ || ೪ ||

ನೆನಸಿದಂತೆಸಗಬೇಕೆನು ತಾ | ಪೇಳಿ |
ಅನುಜಾ ಸಹಿತ ಪೊರಮಡುತಾ ||

ಘನವಾದ ಕಾಂತಾರವನದಾ ಮಧ್ಯದಿ ಬಂದೂ |
ಹನನಾಗೈದರು ಹಶುತೃಷೆ ನಿದ್ರೆಸಹಿತಾಲೀ || ೫ ||

ಬಿಟ್ಟು ತಪವಾ ಗೈವುತಂದೂ | ಕಣ್ಣ |
ದೃಷ್ಟಿಸಿ ನೋಡದೆನಿಂದೂ ||
ನಿಟ್ಟುಸುರಡಗಿಸಿ | ಸೃಷ್ಟಿಕರ್ತನ ಕಾಂಬಾ |
ಅಟ್ಟಹಾಸದಿ ಮನ | ಮುಟ್ಟಿ ಭಜಿಸುತಿರೇ || ೬ ||

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಇಂತು ಕೆಲದಿನ ಗೈದು ನಂತರ | ನಿಂತು ಮೊಳಕಾಲೂರಿ ಬಳಿಕಿ ||
ನ್ನೆಂತು ಧರಣಿಯೊಳೊಂದೆ ಪಾದವ | ನಿಂತು ತಪದೀ || || ೧ ||

ಇರುವ ಸಮಯದಿ ಸುರರ ಪುರಕಾ | ವರಿಸಿದುದು ಭೋರ್ಗುಡಿಸಿ ಜ್ವಾಲೆಯ ||
ಅರಿತು ಅಜನೈತಂದು ದಿತಿಜರೋ | ಳೊರದನಾಗಾ || ೨ ||

ಘೋರತಪವಾಚರಿಪುದ್ಯಾತಕೆ | ಸೂರೆಯಾದೆನು ನಿಮ್ಮ ಮನದಾ ||
ಪಾರಮಾರ್ಥಿಕ ಸಾಕು ಬಿಡಿಬಿಡಿ | ಕಾರಣಿಕರೇ || ೩ ||

ಸೃಷ್ಟಿಕರ್ತನ ನುಡಿಯ ಕೇಳುತ | ದಿಟ್ಟ ದೈತ್ಯರು ತೆರದು ಕಣ್ಗಳ ||
ದೃಷ್ಟಿಯಿಂ ನೋಡುತ್ತ ಯೆರಗಲು | ಶ್ರೇಷ್ಠತನದೀ || ೪ ||

ಪಾದಕೊಂದಿಸುತಿರುವ ದನುಜರು | ಮೋದದಿಂ ಪಿಡಿದೆತ್ತಿ ಶಿರವನು ||
ಆದುದೆನ್ನಯ ಮನಕೆ ಸಂತಸ | ಗೈದ ಪರಿಯಾ || ೫ ||

ಪೇಳಿದರೆ ನಿಮ್ಮಿಷ್ಟವನು ನಾ | ಪಾಲಿಸುವೆನೆನಲಜನ ವಚನವ ||
ಕೇಳಿ ದನುಜರು ಹರುಷವೆತ್ತುತ | ಪೇಳಿದರಾಗ || ೬ ||

**ರಾಗ ಕೇದಾರಗೌಳ, ಅಷ್ಟತಾಳ**

ದೇವ ನಿಮ್ಮಡಿಯನ್ನು ಈವರೆಗಿಂದಲ್ಲಿ | ಸಾವಿಗಂಜದೆ ಧ್ಯಾನಿಸಿ ||
ಪಾವನಾಂಘ್ರಿಯ ಕಂಡೆವಿನ್ನು ನಮ್ಮಿಷ್ಟವಾ | ನೀವುದು ದಯದಿಂದಲೀ || ೧ ||

ಈರೇಳು ಲೋಕಾದಿ ನಮ್ಮಂಥ ಧುರಧೀರ | ರ್ಯಾರುಯಿಲ್ಲದ ತೆರೆದಾ ||
ಭೂರಿಪರಾಕ್ರಮದಿಂದಲಿ ಧಾರುಣೀ | ಸೂರೆಗೈವಂತೊರವಾ || ೨ ||

ಸುರರು ಮಾನವರೊಳು ಸರಿಯಾಗಿ ಕಾದಲು | ಧುರವನ್ನು ಜೈಸುವಂಥಾ ||
ಧುರ ಸಮರ್ಥರು ನಮಗಿದಿರಿಲ್ಲದಂದಾದಿ | ವರವನ್ನು ಕೊಡುವದಿತ್ತಾ || ೩ ||

ಯೆಂದ ಮಾತನು ಕೇಳುತಂದು ಅಜನು ಮನ | ನೊಂದು ತನ್ನೊಳು ಯೋಚಿಸಿ ||
ಇಂದಿವರಿಷ್ಟಾರ್ಥ ಕೊಡದಿರೆಯೆನ್ನಾನು | ಕೊಂದು ಕಳವರೆನುತಾ || ೪ ||

ದನುಜಾಧಿಪತಿಗಳು ವಿನಯದಿ ಕೇಳಿರಿ | ಮನದೊಳಗಿರ್ದುದನೂ ||
ಅನುಮಾನ ಮಾಡದೆ ಕೊಟ್ಟಿಹೆ ಬೇಗದಿ | ಮನೆಗೆ ಪೋಗಿರಿ ಮುಂದಿನ್ನು || ೫ ||

ಕೊಡುವೆನೀ ಗದೆಯಾನು | ಪಿಡಿದು ಯುದ್ಧದೊಳ್ಯಾರ ||
ವಡಲೀಗೆ ತಗಲುವದೋ | ಬಿಡದೆ ಆಹುತಿಗೊಂಬುದಿದರಾ ನೀ ಕೊಳ್ಳೆಂದೂ |
ಕೊಡಲದ ಹಿರಣ್ಯಾಕ್ಷನೂ || ೬ ||

ಪಡೆಯಲಾಕ್ಷಣ ಅಜ ಹಂಸೆಯ ನಡರಿ ತಾ | ನಡದಾನು ಪುರವರಕೆ ||
ದಡಿಗದಾನವರಾಗ | ನಡೆತಂದು ಪೊಕ್ಕಾರೂ | ಕಡುತವಕದಿ ಪುರಕೇ || ೭ ||

**ಭಾಮಿನಿ**

ಕಿರಿದನುಜನೊಂದಿನದೊಳಣ್ಣನೊ | ಳರುಹಿದನು ಭೂಲೋಕಪಾಲರ |
ತರಿದು ಧಾರುಣಿಯನ್ನು ನಮ್ಮೊಶಗೈವೆ ಧುರದೊಳಗೆ ||
ಸುರಪುರಕೆ ತೆರಳುತ್ತ ನಂತರ | ಸುರನರೋರಗ ಯಕ್ಷಕಿನ್ನರ |
ಗರುಡಗಂಧರ್ವರನು ಗೆಲಿದಾ ಪುರವನಾಳುವೆನೂ || ೧ ||

**ಕಂದ ಪದ್ಯ**

ಇಂತಗ್ರಜನೊಳು ಪೇಳುತ |
ಪಂಥದಿ ಹಿರಣ್ಯಾಕ್ಷನು ಗದೆಗೊಂಡಾಗಳೆ ||
ನಿಂತಾರ್ಭಟಿಸುತ ಪೊರಟಾ |
ತಾಂ ತವಕದಿ ನಡೆತಂದಂ ರೌದ್ರದೊಳಾಗಳ್ || ೧ ||

**ರಾಗ ಭೈರವಿ, ತ್ರಿವುಡೆತಾಳ**

ಬಂದನಾಗಾ | ಹಿರಣ್ಯಕ | ಬಂದನಾಗಾ || ಪಲ್ಲ ||
ಬಂದಭರಕಾನಂದು ಧರಣಿಯು | ನೊಂದು ಬಾಬಿಡುತಿರಲು ದೈತ್ಯನು |
ಅಂದುಗದೆಗೊಂಡಾರಭಟಿಸುತ | ನಿಂದು ಭೋರ್ಗರವುತ್ತ ರೌದ್ರದಿ |
ಸಿಂಧು ಕುದಿದುಕ್ಕಿದುದು ನಾಲ್ದೆಸೆ | ಬೆಂದುದೊ ಎಂಬಂತೆ ಜನರುಗ |
ಳಂದು ಹಾಹಾಕಾರ ಗೈಯ್ಯಲು | ನಿಂದನಾಗ || ೧ ||

ಬರಬರುತ ಕಾಶ್ಮೀರದರಸನು | ಧುರವ ಗೈಯಲು ದಾನವೇಂದ್ರನು |
ತರುಬುತಾತನ ಪುರವ ವಶಗೈ | ತರುತ ಮುಂದಕೆ ತೆರಳಿ ಮಗಧನ |
ಮುರಿದು ಸೌರಾಷ್ಟ್ರವನು ಗೆಲ್ಲುತ | ಭರದಿ ಕುಂತಳ ಆಂಧ್ರದೇಶದ |

ಧರಣಿಪಾಲರನೆಲ್ಲ ವೋಡಿಸಿ | ಪುರವ ತನ್ನೊಶಗೈವುತಾಗಳೆ |
ನಿರದೆ ಭಂಗಿಸುತಾಗ ದಾನವ | ಬಂದನಾಗಾ || ೨ ||

ಸಿಕ್ಕಿದವನಿಪರನ್ನು ಸೆರೆಯೊಳಗ | ಗಿಕ್ಕಿಸುತ ಮಿಕ್ಕವರ ಬಡಿದುರು |
ಳಿಕ್ಕಿ ಪುರವಶಗೊಂಡು ತಾ ಮೇ | ಲುಕ್ಕಿನಿಂದಲೆ ವಿಪ್ರರೆಜ್ಞವ |
ಸೊಕ್ಕಿನಲಿ ಕೆಡಿಸುತ್ತ ವಧಿಸಲು | ಲೆಖ್ಖವಿಲ್ಲದೆ ಸೈನಿಕರ ತಾ |
ಮುಕ್ಕುತಿರ್ದನು ಮಡದಿಯರ ಘೋ | ಳಿಕ್ಕಿಸುತ ಧರಣೀಶನಾದನು |
ಯಕ್ಕಸೊಕ್ಕಿನ ದಾನವೇಂದ್ರನು | ಬಂದನಾಗಾ || ೩ ||

ಧರಣಿಲೈವತ್ತಾರು ದೇಶಕೆ | ಧೊರೆಯು ತಾನೆಂತೆಂದು ಗರ್ವಲಿ |
ತರತರದ ದುರ್ನೀತಿಗಳನಾ ಚರಿಸಬೇಕೆಂದೆಲ್ಲ ಡಂಗುರ ||
ವೆರೆಸಿ ಸ್ತ್ರೀಗೋವಧೆಯಚರಿಸುತ | ಭರದಿ ವಿಪ್ರರ ಗಡಣವೆಲ್ಲವ |
ಮುರಿದು ನೀತಿಯ ತೊರೆದು ಮತ್ತಲ್ಲಿರುವ ಭೂಮಿವಿನಾಶಕಾಲವು |
ದೊರಕಿತೆಂದೆನುತೆಲ್ಲರಾಗಳೆ ಮರುಗುತಿರಲೂ | ಬಂದನಾಗಾ || ೪ ||

**ಭಾಮಿನಿ**

ಧರಣಿಪತಿ ತಾನೆನಿಸುತೊಯ್ಯನೆ |
ಹರುಷದಿಂದಿರುತಿರಲು ಮತ್ತಾ |
ಭರದಿ ಗದೆಗೊಂಡೆದ್ದು ನಡದನು ಸುರರ ತತ್ಪುರಕೇ ||
ಬರುತಯಕ್ಷರ ನೆರವಿಯನು ಧರೆಗೆ |
ಗೊರಸಿಗಂಧರ್ವರನು ಸೋಲಿಸಿ |
ಗರುಡ ಕಿನ್ನರರುಗಳ ಧುರದಲಿ ಸದೆದು ಸುರಪತಿಯಾ || ೧ ||

**ಕಂದ ಪದ್ಯ**

ದ್ವಾರದಿ ಬರಲಾಸಮಯದಿ |
ಚಾರರು ತಡೆಯಲ್ಕಾಣುತ ಘೋರನು ಗರ್ವದಿ ||
ಭೋರನೆ ವುಸುರಿದನವರೊಳ್ |
ಧೀರತ್ವದಿ ಬಹುಪರಿಯಿಂದಂ ದೈತ್ಯೇಂದ್ರಂ || ೧ ||

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಚರರು ಕೇಳಿರಿ ನಿಮ್ಮ ಧೊರೆಯೊಳು | ಅರುಹಬೇಹುದು ಪುರದದ್ವಾರಕೆ ||
ಧರೆಯನಾಳುವ ವರಹಿರಣ್ಯಕ | ಧುರಕೆ ಬಂದೂ || ೧ ||

ಕರವ ನಿನ್ನನು ಬಾರದೀರ್ದಡೆ | ಪುರವ ಪೊರಟೈದುವದು ಬೇಗದಿ ||
ಅರುಹಿ ಕರತಾರೆಂದು ಉಸುರಲು | ಚರನು ನುಡಿದಾ || ೨ ||

ಕಳ್ಳದಾನವ  ಕೇಳು ನಮ್ಮೊಳು | ಪಳ್ಳು ಮಾತುಗಳಾಡಬೇಡವೊ ||
ತಳ್ಳಿ ಬೇಡೆಂದೆನಿಸಿಬಿಡುವೆವು | ವಳ್ಳೆತನದೀ  || ೩ ||

ತೆರಳಿಪೋಗದೆ ಉಳಿದೆಯಾದರೆ | ಮರುಳು ಗಣಗಳಿಗೀಗ ನಿನ್ನಯ ||
ಕರುಳ ಮಾಂಸವ ಉಣಿಸಿಬಿಡುವೆವು | ದುರುಳ ಕೇಳೂ || ೪ ||

**ರಾಗ ಮಾರವಿ, ಮಟ್ಟೆತಾಳ**

ಚರರು ಪೇಳ್ದ ನುಡಿಯ ಕೇಳಿ ದುರುಳದೈತ್ಯನೂ |
ಕರುಳ ತೆಗವ ಪರಿಯ ಕೇಳು ನಿನ್ನ ವಡಲನೂ || ೧ ||

ಸೀಳಿ ಬಿಸುಟುಪುರವ ಪೊಕ್ಕು ಕೋಳುಗೊಂಬೆನೂ |
ಕೀಳುಚರನೆ ನಿಲ್ಲು ಸಮರಗೈದು ಬದುಕಿನ್ನೂ || ೨ ||

ಯೆನುತ ಮುಷ್ಟಿಯಿಂದ ತಿವಿದು ಹನನಗೈಯದೆ |
ಕನಲುತಾಗ ಪಿಡಿಯೆ ಚರನು ಮನದಿ ಘೋಳಿಡೇ || ೩ ||

ಕರವ ಬಿಗಿದು ಪಣೆಗೆ ಮಶಿಯ ನಾಮವಿಕ್ಕುತಾ |
ಸುರಪನೊಡನೆ ಅರುಹಿ ಬೇಗ ಕರದುಕೊಳ್ಳುತಾ || ೪ ||

ಬರುವದೆಂದು ಕಳುಹಲಾಗ ಚರನು ಭಯದಲಿ |
ದುರುಳಗೈದ ಪರಿಯ ಮನದಿ ಮರುಗಿಕೊಳುತಲೀ || ೫ ||

**ಭಾಮಿನಿ**

ಸುರಪನೋಲಗಕಾಗಿ ಚಾರನು |
ಭರದಿ ದುಃಖದಿ ಬಂದು ಪಾದಕೆ |
ಶಿರವೆರಗಿ ನಡುನಡುಗಿ ನಿಂದಿಹ ಪರಿಯ ಕಾಣುತಲೀ ||
ಉರಿಮಸಗಿ ದಿಗುಪಾಲರೆಲ್ಲರು |
ತರತರದ ಗರ್ಜನೆಯ ಗೈಯಲು |
ಸುರಪತಿಯು ಚರನೊಡನೆ ಕೇಳಲು ಪರಿಯನುಸುರಿದನೂ || ೧ ||

**ರಾಗ ಮುಖಾರಿ, ಏಕತಾಳ**

ಸುರರಾಜಾ ಲಾಲಿಸೆಮ್ಮೊಡೆಯಾ | ನಾನೆಂಬ ನುಡಿಯಾ |
ಸುರರಾಜಾ ಲಾಲಿಸೆಮ್ಮ ನುಡಿಯಾ || ಪಲ್ಲ ||

ನಿನ್ನಾ ಅಪ್ಪಣೆಯಾ ಶಿರದೊಳಾಂತೂ | ದ್ವಾರದೊಳಿಂತೂ |
ಮುನ್ನೀನಂದಾದಿ ಕಾಯುತ ನಿಂತೂ ||

ಇನ್ನು ನಾನಿರುತಿರೆ ನಿನ್ನನು ಕರೆಯೆಂ |
ದೆನ್ನೊಳು ಪೇಳಿದ ಕುನ್ನಿಯು ಬಹುಪರಿ |
ಯೆನ್ನಲು ಬೆದರಿಕೆ ಬಹುಪರಿ ಮನಸಿಗೆ |
ಇನ್ನೇನಾದುದ ಕಣ್ಣಿಗೆ ತೋರ್ಪುದು |
ಯೆನ್ನುವದೇನ್ ನಾನ್ ಮನ್ನಿಸು ಒಡೆಯಾ || ಸುರರಾಜಾ || ೧ |

ಕರದೂ ತಾರೆಂದ ನಿಮ್ಮನಿಂದೂ | ದ್ವಾರದಿ ಬಂದೂ |
ಅರುಹಲು ಕೇಳಿ ನಾನವನೊಳಂದೂ ||
ಧೊರೆಗಳ ಕರಸುವ ಪರಿಯನುಯೆನ್ನೊಡ |
ನರುಹದೆ ನಡೆಯೆಂದರುಹಲು ಕೇಳದೆ |
ಧುರವೆಸಗುತ ಆ ದುರುಳನು ಈಪರಿ |
ಕರಗಳ ಬಂಧಿಸಿ ಹೊರಳಿಸಿ ಹೊದನು |
ಅರುಹಲಿನ್ನೇನಾಂ ಧೊರೆಯೆ ಪರಾಕೂ || ಸುರರಾಜಾ || ೨ ||

ನರಲೋಕಾ ಪಾಲಕರನೆಲ್ಲಾ | ಗೆದ್ದಿಹನಂತೇ |
ಅರಸಾನು ಭೂಲೋಕದೊಳಗೆಲ್ಲಾ ||
ನರಕಾರಿಯ ತೆರ ಕಾಣುವನಲ್ಲದೆ |
ದುರುಳ ಹಿರಣ್ಯಕನೆನ್ನುವನಾತನು |
ಧುರಕನುವಾಗುತ ಬರದಿರೆ ಈ ಪುರ |
ಹೊರಡಲು ಬೇಕೆಂದರುಹಿದ ಮತ್ತಿ |
ನ್ನಿರುವದು ಕಷ್ಟವು ಸರಿವೆವು ಜೀಯಾ || ಸುರರಾಜಾ || ೩ ||

**ರಾಗ ಕೇದಾರಗೌಳ, ಝಂಪೆತಾಳ**

ಚಾರರೆಂದುದ ಕೇಳುತಾ | ಸುರಪಾಲ |
ಭೂರಿ ಕೋಪವ ತಾಳುತಾ ||
ಚೋರ ದನುಜನು ಈಪರೀ | ನಮ್ಮ ಪುರ |
ದ್ವಾರಪಾಲರ ಬಹುಪರೀ || ೧ ||

ಭಂಗಿಸುತ ಕರಗಳನ್ನೂ | ಬಂಧಿಸಿದ | ಇಂಗಿತವ ಅರಿಯರಿನ್ನೂ |
ಭಂಗಬಡಿಸುತ ಆತನಾ | ಹಿಡಿತಹುದು | ಹಿಂಗದೆಲ್ಲರು ಈದಿನಾ || ೨ ||

ದಿಗುಪಾಲರೆಲ್ಲ ಕೂಡೀ | ಪೋಗಿ ಆ | ಪಗೆಮಾಳ್ಪ ದೈತ್ಯಖೋಡೀ ||
ಗೆಯ | ರಿತು ನಡಿಯಿರೆನುತಾ | ಸುರನಾಥ | ವಗುಮಿಗೆಯೊಳ್ವೇಳ್ದ ಮಾತಾ || ೩ ||

ಕೇಳಿ ದಿಕ್ಪಾಲರೆಲ್ಲಾ | ಬಲಕೂಡಿ | ಕಾಳಗಕೆ ಪೊರಟುಯೆಲ್ಲಾ ||
ಪಾಳೆಯವ ಕೂಡಿಕೊಂಡೂ | ಯಮ ಮುಖ್ಯ | ರಾಳುಗಳು ಬರಲು ಕಂಡೂ || ೪ ||

ಕಂಡು ಸುರಸೇನೆಗಳನೂ | ದಿತಿಸುತನು | ಕೆಂಡವಾಗುತ ನುಡಿದನೂ ||
ಹಿಂಡುವೆನು ನಿಮ್ಮರುಧಿರಾ ಬಲುಬೇಗ | ಖಂಡಿಸದೆ ಬಿಡೆನು ಬವರಾ || ೫ ||

**ಕಂದ ಪದ್ಯ**

ನುಡಿಯನು ಕೇಳ್ದಾಯಮನಾ | ರ್ಭಟಿಸುತ ಸಮ್ಮುಖಕಾಗಳೆ ನಡೆತಂದುಸುರಿದ ||
ಬಡದೈತ್ಯನ ಬಂದಿಹೆನೆಮ್ಮೊಡನೇತಕೆ ಯೆಂಬುದೆ ನುಡಿ ಬೇಗದೊಳೆನುತಂ || ೧ ||

**ರಾಗ ಪಂಚಾಗತಿ, ಮಟ್ಟೆತಾಳ**

ಯೆನಲು ದೈತ್ಯನೂ | ರೋಷದಿಂದಲೀ |
ಕನಲಿ ಗರ್ಜಿಸುತ್ತ ನುಡಿದ | ದಿನಪಸುತನಿಗೇ || ೧ ||

ಮನುಜರೆಲ್ಲ ರಾ | ವೊದು ನಿನ್ನಯಾ |
ಮನೆಯೊಳಿಡುವ ಕೆಲಸ ಬಿಟ್ಟು | ರಣಕೆ ಬಂದೆಯಾ || ೨ ||

ನಿನಗೆ ಪಾಶವಾ | ಸರಿದು ಬೇಗದೀ |
ಘನದಿವೊವ ಕೆಲಸಕಾಗಿ | ಯಿನಿತು ಬಂದಿಹೇ || ೩ ||

ಮುಂದೆ ಪ್ರಾಣಿಗೆ | ಮರಣವಿಲ್ಲದಾ |
ದಂದ ಮಾಳ್ಪ ಪರಿಗೆ ನಿನ್ನ | ಕೊಂದು ಕಳವೆನೂ || ೪ ||

ದುಷ್ಟ ಪಾಪಿಯೇ | ಯೆನ್ನ ಪಾಶದೀ |
ಕಟ್ಟಿ ವೊವೆನೆಂಬ ಸಮಯ | ಕಿಟ್ಟ ಗದೆಯಲೀ || ೫ ||

ಗದೆಯ ಹೊಲನೂ | ತಾಳಲಾರದೇ |
ಬದಿಯ ಸಾರಲಾಗ ಅಗ್ನಿ | ವದಗಿ ಬರುತಿರೇ || ೬ ||

ಬರುವ ಅನಲಗೇ | ಯೆರಗೆ ದನುಜನೂ |
ಶಿರಕೆ ನಾಟಲಾಗ ಬಿದ್ದ | ಪರಿಯ ಕಾಣುತಾ || ೭ ||

**ಭಾಮಿನಿ**

ಕಾಲನನು ಮೈಮರಸಿ ಅಗ್ನಿಯ |
ಮೂಲವಡಗಿಸಲಾಗ ನೈರುತಿ |
ಬೀಳುಗೊಂಡೋಡಿದುದ | ಕಾಣುತ ಪಾಳೆಯವಗೊಂಡೂ ||
ಮೂಲಬಲ ಕೂಡುತ್ತಲಾ ಕೌ |
ಬೇರ ನಡೆತರೆ ಕಂಡು ದಿತಿಸುತ |
ಕಾಲರುದ್ರನ ತೆರದಿ ಗರ್ಜಿಸಿ ಸಮರಕಿದಿರಾದಾ || ೧ ||

**ರಾಗ ಭೈರವಿ, ಅಷ್ಟತಾಳ**

ಭಳಿರೆ ಮೆಚ್ಚಿದೆ ದಾನವಾ | ನಿನ್ನಯ ಶೌರ್ಯ | ಗಳ ನಿಲಿಸುವೆ ಮೌನವಾ ||
ತಳದರು ಯಮ ಅಗ್ನಿ | ಯೆಂಬಹಂಕೃತಿಬೇಡ | ಗಳಿಗೆಯೊಳ್ನಿಲಿಸುವೆನೂ || ೧ ||

ಅವರಾ ಜತೆಯೊಳ್ನಿನ್ನನೂ | ಕೂಡಿಸುವಡೆ | ತವಕಾದಿ ಬಂದಿಹೆನೂ ||
ಬವರಾವ ಸಾಕೆಂದು ನಿನ್ನ | ಬಾಯೊಳು ನಾನು | ವಿವರಿಸುವೆನು ಈ ಕ್ಷಣಾ || ೨ ||

ಮುಚ್ಚು ಮುಚ್ಚೆಲೆ ಬಾಯನೂ | ಪೌರುಷ ಬೇಡ | ಕೊಚ್ಚಿ ಕಳವೆ ನಿನ್ನನೂ ||
ಹೆಚ್ಚು ಮಾತುಗಳ್ಯಾಕೆ | ತಾಳಿಕೊಳ್ಳೆನುತಾಲಿ | ಚುಚ್ಚಿದಾ ಶರಗಳನ್ನೂ || ೩ ||

ಬರುವಸ್ತ್ರಗಳ ಖಂಡಿಸಿ | ಗದೆಯ ಗೊಂಡು | ಶಿರಕೆರಗಲು ಗರ್ಜಿಸಿ ||
ಹರಹರ ಯೆನುತಾಲಿ | ಧರೆಗೆ ಬಿದ್ದುರುಳಾಲು | ಸುರಪನೆಡೆಗೆಚರರೂ || ೪ ||

**ಭಾಮಿನಿ**

ಚಾರರಾಕ್ಷಣ ಬಂದು ಸುರಪಗೆ |
ಭೂರಿ ಶೋಕಾತುರದಿಪೇಳ್ದರು |
ಸೂರೆಗೊಂಡನು ದೈತ್ಯ ಸಮರದಿ ಸುರರನೆಲ್ಲರನೂ ||
ಕ್ರೂರ ತಾನಿನ್ನೇನು ಗೈವನೊ |
ಸಾರಿ ಸಮರವೆ ಗೈದು ಖಳನೆಮ |
ನೂರ ಪೊಗಿಸೆಂದೆರಗಿ ಪಾದದಿ ಮರುಗುತಿರಲಂದೂ || ೧ ||

**ರಾಗ ಭೈರವಿ, ಏಕತಾಳ**

ಚರರೆಂದುದ ಕೇಳ್ದಾಗಾ | ಪ | ಟ್ಮೊರವುತ ಕರಿಯಿರೊ ಬೇಗಾ ||
ತೆರಳಲಿ ಈಶಾನನನೂ | ಆ | ದುರುಳನ ಸದೆಬಡಿದವನೂ || ೧ ||

ಬರಲೆನ್ನುವದನು ಕೇಳೀ | ಅತಿ | ಭರದಲಿ ಚಾರರು ತೆರಳೀ ||
ಅರುಹಲು ಮೃತ್ಯುಂಜಯನೂ | ತಾ | ತೆರಳಿದ ಧುರಕೆನುತವನೂ || ೨ ||

ಪ್ರಳಯ ಕಾಲಾಗ್ನಿಯ ತೆರದೀ | ಬಂ | ದಳುಕಿಸಿದನು ಆ ಶರಧೀ ||
ಗುಳಗುಳ ಧ್ವನಿಗೈವುತಿರೇ | ಖಡುಗಲಿ | ಖಳ ಬಳಿಬಳಿರೇ || ೩ ||

ಯೆನುತೀಪರಿ ಬರುವದನೂ | ಕಂ | ಡನುಪಮ ಖಳ ನೋಡಿದನೂ ||
ಮನದೊಳು ಧೈರ್ಯವನಾಂತೂ | ಅತಿ | ಘನತರದಲಿ ಧುರಕಾಂತೂ || ೪ ||

ಬರುವದು ಕಾಣುತ ಈಶಾ | ಕಡು | ದುರುಳನೆ ಕೇಳೀರೋಷಾ ||
ತುರನಾಗದಿರೆನ್ನೊಡನೇ | ಸು | ಟ್ಟುರುಹುವೆ ಲೋಕವ ಖಳನೇ || ೫ ||

ಬರಿಮಾತುಗಳು ಆಡೀ | ಆ | ಕುರಿಗಳ ತೆರದಲಿ ವೋಡೀ ||
ತಿರುಗದಿರೆಲೊ ನಾ ನಿನ್ನಾ | ಈ | ಶಿರ ಚೆಂಡಾಡುವೆ ಮುನ್ನಾ || ೬ ||

**ರಾಗ ಭೈರವಿ, ಅಷ್ಟತಾಳ**

ಖಳಕುಲಾಧಮನೆ ಕೇಳೂ | ನಿನ್ನಾಯಾ ಶಿರ | ವುಳಿಸಿಕೊ ಬೇಗದೊಳೂ ||
ಖಳಕುಲಾವಳಿಗೆಲ್ಲಾ ದೇವ ನಾನಾಗಿರೆ | ಕಲಹಕೆ ಬಂದೆಯಲ್ಲಾ || ೧ ||

ದಿಗುಪಾಲರಲ್ಲಿ ನೀನೂ ವೋರ್ವನುಯೆಂದು | ಜಗವೆಲ್ಲ ತಿಳಿವುದಿನ್ನೂ ||
ಅಗಜೆಯರಸ ಜಗದೀಶನೆಂದರೆ ನಿನ್ನ | ಬಗೆವವನಲ್ಲ ನಾನೂ || ೨ ||

ಮರುಳಾರಂದದಿ ನುಡಿವೇ | ದಾನವ ನಿನ್ನಾ | ದುರುಳತನವು ಥರವೇ ||
ಬರಿದ್ಯಾಕೆ ಮೂಢತ್ವ ಜಗದೀಶ ನಾನೆಂದು ಅರಿತವರುಸುರುವರೂ || ೩ ||

ಮರುಳ ನಾನಲ್ಲ ಕೇಳೂ | ಈಶಾನನೆ | ಹರಣದಾಸೆಗೆ ಯೆನ್ನೊಳೂ ||
ಹರನೆಂದು ವರದರೆ ಬಿಡುವರ್‍ಯಾರ್‍ನಿನ್ನನು | ಶಿರವಾ | ನೀ ಯೆನಗಿತ್ತೆಯಾ || ೪ ||

ಕೇಳಿ ರೋಷವ ತಾಳ್ದಾಗಾ | ತ್ರಿಶೂಲವಾ | ಖೂಳನಾ ಶಿರಕೆ ಬೇಗಾ ||
ತಾಳದೆ ಬಿಡಲಾಗ ಕಂಡು ದಾನವ ತನ್ನ | ತೋಳಿಲಿ ತಡದೆಂದನೂ || ೫ ||

ಜಗದೀಶ ನಿನ್ನಾ ಶೂಲಾ | ನೋಡೀಗ ಈ | ಜಗವೆಲ್ಲ ಸುತ್ತಿದೆಲಾ ||
ಬಗೆಯಾದೆ ವುಸುರೀದೆ | ಜಗಕೆಲ್ಲ ನಾನಿನ್ನೂ | ಜಗದೇಕ ವೀರ ಕೇಳೂ || ೬ ||

ನುಡಿಯಾ ಕೇಳುತ ರೋಷದೀ | ಈಶಾನನಾ | ಘುಡುಘುಡಿಸುತ ಬೇಗದೀ ||
ವಡನೆ ಮುಷ್ಟಿಯಗ್ಗೈದು ಪೊಯಲು ದಾನವ | ಬಡಿದಾನು ಗದೆಯಿಂದಲೀ || ೭ ||

**ಭಾಮಿನಿ**

ದಾನವೇಂದ್ರನ ಗದೆಯ ಘಾತವ |
ಆನಲಾರದೆ ಪಿಂತಿರುಗೆಹರ |
ತಾನೆ ಸಮರಕೆ ಪೊರಟು ಬಂದನು ಆನೆಯೇರುತಲೀ ||
ಸೇನೆ ಸಹಿತಲಿ ಬರುವ ಇಂದ್ರನ |
ಶೋಣಿತಾಧಿಪ ಕಂಡು ನುಡಿದನು |
ನೀನೆ ಸುರಪುರಧೀಶ ಆದಿತಿಯ ಸುತನೆ ಹೇಳೆಂದಾ || ೧ ||

**ರಾಗ ಮಾರವಿ, ಮಟ್ಟೆತಾಳ**

ದುರುಳ ಕೇಳು ದೇವಪುರಕೆ ಅರಸನಾಗಿಹೆ |
ಸುರರು ಯಕ್ಷ ಗುಹ್ಯಕಾದಿರಿರುವರಿಲ್ಲಿಯೆ || ೧ ||

ಅರಿತು ಬಂದೆ ದೇವಪುರದ ಧೊರೆಯತನವನೂ |
ಧರಿಸಿಕೊಂಬೆ ಯಕ್ಷರ್ಗಿಕ್ಷ ಸರಿದ ಪರಿಯನೂ || ೨ ||

ಗರುಡ ಗಂಧರ್ವ ಕಿನ್ನರರು ಸಹಿತಲಿ |
ಧುರಸಮರ್ಥರೆಲ್ಲರಿಂಗೆ ಧೊರೆಯು ನಾನಿಲ್ಲಿ || ೩ ||

ಮರುಳಕೇಳು ಗರುಡ ಕಿನ್ನರರನೆಲ್ಲರಾ |
ಪುರವ ಪೊರಡಿಸೀದೆ ಧುರದೊಳೆಲ್ಲರಾ || ೪ ||

ಅಷ್ಟು ಪಂಥ ಇರಲು ನಿನಗೆ ತಟ್ಟನೆನ್ನಲೀ |
ದಿಟ್ಟ ಬಾರೊ ನೋಳ್ಪೆ ನಿನ್ನ ಕುಟ್ಟಿ ಜವದಲೀ || ೫ ||

ಕೇಳಿರೋಷಗೊಂಡು ದೈತ್ಯ ನುಡಿದನೂ |
ಬಾಳಗೊಡೆನು ನಿನ್ನ ನಿಲ್ಲಿ ಸೀಳಿಬಿಡುವೆನೂ || ೬ ||

ಬಾಯ ಪೌರುಷವನು ನುಡಿದು ಸಾಯಬೇಡಲಾ |
ತಾಯ ಬಸುರೊಳಡೆಗೆ ನಿನ್ನ ಕಾಯ್ದರಾರೆಲಾ || ೭ ||

ಭೂಮಿಯೊಳಗೆ ಇರುವ ನೃಪರ ಹೋಮಿಸೀದೆನೂ |
ಭೂಮಿಪಾಲನಾಗಿ ಬಂದೆ ಕ್ಷೇಮದೊಳಗಿನ್ನೂ || ೮ ||

ಅವನಿಪಾಲರೆಲ್ಲ ನರರು ಅವರ ಗಲಿದಿಹಾ |
ಭವರದಲ್ಲಿ ಸುರರು ನಮ್ಮಾಹವವ ಬಲ್ಲೆಯಾ || ೯ ||

ಸುರರ ಯುದ್ಧವನ್ನು ನಾನೀವರೆಗೆ ನೋಡಿದೇ |
ಸರಕು ತೆಗದು ವೋಡಿದವರ ಪರಿಯ ತಿಳಿಯದೇ || ೧೦ ||

ಹಿಂದೆ ಬಂದ ಸುರಪನಲ್ಲ ಇಂದು ನೋಡಿಕೋ |
ಮಂದಮತಿಯೆ ಇಂದ್ರನೆಂದು ತಿಳಿಯದ್ಯಾತಕೋ || ೧೧ ||

ಇಂದ್ರ ಕೇಳು ನಿನ್ನನೀ ಗಜೇಂದ್ರ ಸಹಿತಲೀ |
ಒಂದೆ ಮುಷ್ಟಿಯಿಂದ ಬಡಿದು ಕೊಂದು ಭರದಲೀ || ೧೨ ||

ಮುಂದೆ ದೇವಪದವಿಯನಗೆ ಸಂದಿತೆನುತಲೀ |
ಯೆಂದು ತಿಳಿದುಕೊಳ್ಳೆ ಬೇಗ ಹಿಂದೆ ಸಾರಿಲ್ಲೀ || ೧೩ ||

**ರಾಗ ಮಾರವಿ, ಏಕತಾಳ**

ದನುಜನ ವಚನವ ಕೇಳುತ ಇಂದ್ರನು | ಘನರೋಷವ ತಾಳೀ ||
ಜನುಮವತೀರ್ಚುವೆನೆನ್ನುತ ಕುಲಿಶವ | ಪಣೆಗಿಟ್ಟನು ಜವದೀ || ೧ ||

ಬರುವ ವಜ್ರವ ಕಂಡುರುತರ ರೋಷದಿ | ಕರದಿಂದಲಿ ತಡದೂ ||
ತಿರುಹುತ ಗದೆಯನು ಸುರಪನ ಅಂಗಕೆ | ಯರಗಿದ ತತ್ಕ್ಷಣದೀ || ೨ ||

ಅನಿಮಿಷಧೀಶನವುದರಕೆ ಬಡಿಯಲು | ಘನತರ ಹತಿಗಾಗಾ ||
ತನು ನಡನಡುಗುತ ಮೂರ್ಛೆಯನಾಂತನು | ತನುಗುಂದುತಲಾಗಾ || ೩ ||

**ರಾಗ ಸಾಂಗತ್ಯ**

ತಿಳಿದೆದ್ದು ಮೂರ್ಛೆಯ ಸುರಪನಾಕ್ಷಣದೊಳು |
ಕಳವಳಗೊಳುತಾ ಪೇಳಿದನೂ ||
ಉಳಿನ್ಯಾನು ದುರುಳಾನು ಪುರದೊಳಗೀರ್ದರೆ |
ಹಳುವನಕಾಗಿ ಪೋಗುವೆನೂ || ೧ ||

ಯೆನುತಾ ನಿಶ್ಚೈಸಿ ತಾ ಪುರಕಾಗಿ ನಡೆತಂದೂ |
ಅನಿಮಿಷರನು ಕರದೆಂದಾ ||
ದನುಜಾನಟ್ಟುಳಿಯನ್ನು ತಾಳಲಸಾಧ್ಯವು |
ವನಕಾಗಿ ಪೋಗುವದಿಂದೂ || ೨ ||

ಗರುಡ ಗಂಧರ್ವ ಗುಹ್ಯಕ ಯಕ್ಷ ಮೊದಲಾಗಿ |
ಬರುತಾ ತಮ್ಮಯ ಸತಿಸುತರಾ ||
ಸುರಪತಿ ಸಹಿತಾಲೇ ಸಕಲ ದೇವಾದ್ಯರು |
ಪೊರಟಾರು ಮರುಗುತ್ತ ವನಕೇ || ೩ ||

**ಭಾಮಿನಿ**

ಸುರರು ಪುರವನು ಬಿಟ್ಟು ತೆರಳಿದ |
ಪರಿಯ ಕಾಣುತ ದೈತ್ಯ ತೋಷದಿ |
ಸುರಪಗದ್ದುಗೆಯೇರಿ ಸುರಪುರದರಸ ತಾನಿಂದೂ ||
ಪರಿಪರಿಯ ಡಂಗುರವ ಸಾರುತ |
ಧುರಪರಾಕ್ರಮಿಯಾಗ ಯೋಚಿಸಿ |
ಧರಣಿಯನು ತಾನೊದು ಪಾತಾಳದಲಿ ಇರಿಸುವೆನೂ || ೧ ||

**ಕಂದ ಪದ್ಯ**

ಯೆನುತಾಕ್ಷಣದೊಳು ದೈತ್ಯನು |
ತನ್ನಯ ಘನರೋಷವ ನಾಂ ತುರೆ ಗದೆಯಿಂದಂ ||
ಘನಗರ್ವದಿ ಜಾಡಿಸಲಾಗ |
ವನಿತಾಕಾರದಿ ಬಂದೆಂದಳು ಶೋಕಿಸುತಂ || ೧ ||

**ರಾಗ ಕಾಂಬೋಧಿ, ಅಷ್ಟತಾಳ**

ಯೇನಿದೇನಿದು ಕೋಪ ಮಾನಿನಿಯೊಳು ಈಗ | ದೈತ್ಯ ಕೇಳೂ ||
ಕೆಟ್ಟ | ಹೀನಕಾರ್ಯಗಳನ್ನು ನೀನು ಮಾಡುವರೇನೊ | ದೈತ್ಯ ಕೇಳೂ || ೧ ||

ಅಬಲೆಯಾದೆನ್ನೊಳು ಅಭಯಾವಾ ದೋರಯ್ಯಾ | ದೈತ್ಯ ಕೇಳೂ ||
ನಿನ್ನ | ಭ್ಯುದಯಾವ ನೋಡಲು ಅದುಭುತವಾಗಿದೆ | ದೈತ್ಯ ಕೇಳೂ || ೨ ||

ಯೇನಪರಾಧವ ನಾನೆಸಗಿದೆಯಿಂದು | ದೈತ್ಯ ಕೇಳೂ ||
ನಿನ | ಗೇನುಯೆನ್ನೊಳು ವೈರವೇನೆಂಬುದರಿಯೇನು | ದೈತ್ಯ ಕೇಳೂ || ೩ ||

ಮಾನಹಾನಿಯ ಗೈದು ನೀನು ಕೊಂಡೊವಾರೆ | ದೈತ್ಯ ಕೇಳೂ ||
ಇಂಥಾ | ಹಾನಿಮಾಡಲುಬೇಡ ಮಾನವ ಕಾಯಯ್ಯಾ | ದೈತ್ಯ ಕೇಳೂ || ೪ ||

ಧುರಪರಾಕ್ರಮಿಯಾಗಿ ತರಳೇಯೋನೊವಾರೆ | ದೈತ್ಯ ಕೇಳೂ ||
ಇದು | ಥರವಲ್ಲ ನೀನಿಂದು ಪರಿಹಾಸ್ಯಗೊಳಗಾದೆ | ದೈತ್ಯ ಕೇಳೂ || ೫ ||

**ರಾಗ ಯರಕಲಕಾಂಬೋಧಿ, ಏಕತಾಳ**

ಯಾರೆಲೆ ನಾರಿ ನೀನೊಯ್ಯಾರೀ | ಬಹು |
ಭಾರಿ ಯೆನ್ನೊಳು ಕೇಳ್ವದೇನ್ ಪೋರೀ || ಪಲ್ಲವಿ ||

ಭೂಮಿಯ ನಾನೊವದನು ಕಂಡೂ | ಯೆನ್ನ |
ನಾಮಾ ವುಚ್ಚರಿಸುವಾದ್ಯಾಕಿಂದೂ ||
ಭಾಮಿನಿ ನೀನ್ಯಾರು ಪೇಳು ಬಂದೂ | ಬಹು |
ಪ್ರೇಮವೊ ನಿನಗೆ ಭೂಮಿಯೊಳಿಂದೂ || ಯಾರೆಲೆ || || ೧ ||

ಪೆಸರೇನು ಪೇಳು ನಿನ್ನ ಪುರವೆಲ್ಲಿ | ಯೆನ್ನೂ |
ಉುಸುರು ನಿನ್ನಯ ಮಾತೆ ಪಿತರೆಲ್ಲಿ ||
ಬಿಸಜಾಲೋಚನೆ ನಿನ್ನ ಪತಿಯೆಲ್ಲಿ |
ಬಹು | ವ್ಯಸನಾವ ಬಿಟ್ಟು ನೀನುಸುರಿಲ್ಲಿ || ಯಾರೆಲೆ || || ೨ ||

ಧರಣಿಯೊಳೆಲ್ಲಿಯು ನೋಡಲಿಲ್ಲಾ | ಸುರ |
ಪುರದೊಳೆಲ್ಲಿಯು ನಿನ್ನಯ ಕಂಡುದಿಲ್ಲಾ ||
ಅರುಹು ನಿನ್ನಿರವನ್ನು ಯೆನ್ನೊಳೆಲ್ಲಾ |
ನಿನ್ನ ಹರುಷದಿ ಪುರಕೊವೆ ಸುಳ್ಳಲ್ಲಾ || ಯಾರೆಲೇ || || ೩ ||

ಸುರನರ ವಧುವಳೊ ಪೇಳು ಯಿಂದೂ | ಅಲ್ಲ |
ವರ ಕ್ಷಾತ್ರಿ ಕುಲದಲಿ ನೀನಿಂದೂ ||

ಪುಟ್ಟ | ವರನನ್ನು ಪುಡುಕುತ್ತಯಿಲ್ಲಿ ಬಂದೂ ಯೆನ್ನೊ |
ಳರುವರೆ ನಾಚಿಸಿ ತನು ಬೆಂದೂ || ಯಾರೆಲೆ ||        || ೪ ||

ಗುಟ್ಟಿ ನೀ ಮಾಡದೆ ಪೇಳು ಬೇಗಾ | ನಿನ್ನ |
ವಟ್ಟಿಗೆ ಕರಕೊಂಡು ನಾನೀಗಾ ||
ಇಷ್ಟವನರುಹಲು ಯೆನ್ನೊಳೀಗಾ | ಯೆನ್ನ |
ಪಟ್ಟದರಸೀ ನೀ ಯೆನ್ನುತೀಗಾ | ಯಾರೆಲೆ ನಾರಿ        || ೫ ||

**ಕಂದ ಪದ್ಯ**

ಎನುತಾದಾನವ ಪೇಳಿದ |
ವಿನಯದ ವಚನವ ಕೇಳುತಲಾಗಳೆ ಭೂಮಿಯು ||
ಮನವಿರಿಸಿದನಿವನಿಗೆಂಬೆ |
ವಿನಯೋಕ್ತಿಯ ನುಡಿ ಲಾಲಿಸು ನೀನೆನುತಾಗಳ್      || ೧ ||

**ರಾಗ ಆನಂದಭೈರವಿ, ಅಷ್ಟತಾಳ**
ಪೊರೆಯಬೇಹುದು ಯೆನ್ನನೂ | ದಾನವರಾಯ |
ಅರುಹುವೆ ನಿಜವ ನಾನೂ || ಪೊರೆಯಬೇಹುದು ಯೆನ್ನನೂ || ಪಲ್ಲ ||

ದಾನವ ಕೇಳೀಗ | ನಾನೆಂಬ ನುಡಿ ಬೇಗ ||
ಮಾನವಳಲ್ಲೀಗ | ಪ್ರಾಣವ ನೀನೀಗ ||
ಪೊರೆಯಬೇಹುದು        || ೧ ||

ಭೂದೇವಿ ಕೇಳು ನಾ | ಆದರಿಸುತ ಯೆನ್ನಾ ||
ಬಾಧಿಸದಿರು ಮುನ್ನಾ | ಸೋದರಿಯಂತೆನ್ನಾ ||
ಪೊರೆಯಬೇಹುದು        || ೨ ||

ನಿನ್ನ ಭೀತಿಗೆ ನಾನೂ | ಮುನ್ನ ಸ್ತ್ರೀರೂಪವನೂ ||
ಇನ್ನು ಧರಿಸಿಬಂದೆನೂ | ಎನ್ನಮಾನವ ನೀನೂ ||
ಪೊರೆಯಬೇಹುದು        || ೩ ||

ಈ ಪರಿಯೊಳುನೀನೂ | ರೂಪ ನೋಡುತ ಯಿನ್ನೂ ||
ತಾಪಿಸಿಕೊಂಡಿನ್ನೂ | ಪೋಪಳಾ ನೀನಿನ್ನೂ ||
ಪೊರೆಯಬೇಹುದು        || ೪ ||

ಧರಣೀಶರನು ನೀನೂ | ಧುರದೊಳು ತರಿದಿನ್ನೂ ||
ಅರಸ ನೀನೆಂದಿನ್ನೂ | ಇರುವೆ ನೀ ಹ್ಯಾಗಿನ್ನೂ ||
ಪೊರೆಯಬೇಹುದು        || ೫ ||

**ರಾಗ ಕೇದಾರಗೌಳ, ಝಂಪೆತಾಳ**

ನುಡಿದ ಮಾತನು ಕೇಳುತಾ | ದಾನವನು | ರೆಡಿಯೇರಿ ಗರ್ಜಿಸುತಾ ||
ಹುಡುಗಿಯಾಗುತ ಮೋಸದೀ | ಬಂದೀಗ | ನುಡಿಸುವೆಯ ಬಹು ಮೋಹದೀ || ೧ ||

ಬಿಡೆನು ಬಿಡೆ ನಿನ್ನನೀಗಾ | ದಿತಿಸುತನು | ಹಿಡಿದ ಶಪಥವನು ಈಗಾ ||
ನಡಿಸದೆಯು ಬಿಡುವನೆನುತಾ | ಮನದಾಸೆ | ಬಿಡು ನೀನು ಕೇಳು ವ್ಯರ್ಥಾ || ೨ ||

ಎನುತ ಕ್ರೋಧದಿ ಬೆರಸಲು | ಭೂ ದೇವಿ | ಮನದ ಭಯದೊಳಗೋಡಲೂ ||
ಕನಲುತಾರ್ಭಟಿಸುತಂದೂ | ಬಿಡೆನೆನುತ | ವನಿತೆಯನು ಬೆರಸಿ ಬಂದೂ || ೩ ||

ಓಡುತೋಡುತಲೊಯನೇ | ಬೆರಸುತಿರೆ | ಬಾಡಿ ಬಳಕುತ ಸುಮ್ಮನೇ ||
ಓಡಿದರೆ ಬಿಡೆನು ನಿನ್ನಾ | ಎಂದೆನಲು | ಕೂಡೆ ಮರುಗಿದಳು ತನ್ನಾ || ೪ ||

**ರಾಗ ನೀಲಾಂಬರಿ, ಏಕತಾಳ**

ಪೊರವಾರಾರಿಲ್ಲಿ ಯೆನ್ನಾನೂ | ದಾನವನೆನ್ನಾ | ಬೆರಸಿ ಪಿಡಿವಾರೆ ಬರುವಾನೂ ||
ದುರುಳಾನಾ ಬಾಧೆಯನೂ | ಯಾರಿಗೆ ನಾನೂ | ಒರೆಯಲಿನ್ನೆಂತು ಇನ್ನೂ || ೧ ||

ಕ್ರೂರಾ ಸ್ವಭಾವದೊಳೂ | ಬರಿದೆ ಬಂದೂ | ಗಾರುಗೆಡಿಸೂತೀಗಳೂ ||
ಮಾರಿಸ್ವರೂಪದೊಳೂ ಬೆನ್ನಟ್ಟಿ ಬರುವಾ | ದಾರಿಯೇನಿದಕೆಂದಳೂ || ೨ ||

ಧೊರೆಗಳಿಗೀದೂರನೂ | ಪೇಳ್ವರೆ ಮೊದಲೆ | ತರಿದು | ಬಂದಿಹನೀತನೂ ||
ಸುರಪಾ ದಿಕ್ಪಾಲರಿಗೆ | ಅರುಹಾಲೀಗ | ಪುರಹೊರಡಿಸಿ ಅವರ್ಗೇ || ೩ ||

ಸೃಷ್ಟಿಕರ್ತನಿಗೆಂಬೆನೇ ಈ ದುಷ್ಟನೀಗೇ | ಇಷ್ಟಾರ್ಥ ವರಗಳನೇ ||
ಕೊಟ್ಟಿರುವಾತನಿಗೆ | ಪೇಳ್ದರೆ ಯೆನ್ನಾ | ಕಷ್ಟಾವಾ ಬಿಡಿಸೂವಾನೇ || || ೪ ||

ಯಾರಿಗೆ ಪೇಳಲಿನ್ನೂ | ಯೆನ್ನಾನು ಬಂದೂ | ಯಾರು ಕಾಯುವರು ಇನ್ನೂ ||
ದಾರಿಯೇನಿದಕೇ ಮುಂದೇ | ಹರಹರಾ ಇಂಥಾ | ಕ್ರೂರ ಕಷ್ಟಾದಿ ನಾನಿಂದೇ || ೫ ||

ದುಷ್ಟಾ ಪಾಪಿಯ ಕೈಯೊಳೂ | ಸಿಕ್ಕಿರುವಾಳ | ದೃಷ್ಟಿಸಿ ನೋಡುತೀಗಳೂ ||
ಕಷ್ಟಾವಾಪರಿಹರಿಸೂ | ಶ್ರೀಹರಿ ಬಂದೂ | ತಟ್ಟನೆ ನೀ ಬಿಡಿಸೂ || ೬ ||

ಆದಿನಾರಾಯಣನೇ | ದೇವರ ದೇವ | ಯೇ ದಯಾಂಬುಧಿಯೆ ನೀನೇ ||
ಬಾಧಿಸುತಿಹ ದೈತ್ಯನಾ | ಕೈಯಿಂದ ಬಿಡಿಸಿ | ಕಾದು ರಕ್ಷಿಸು ನೀ ಯೆನ್ನಾ || ೭ ||

**ಭಾಮಿನಿ**

ಧರಣಿಯೀಪರಿಯಿಂದ ಬಾಬಿಡು |
ತೊರಳಿ ಗೋಳಿಡುತಿರಲು ದಾನವ |
ಉರುತರದ ರೋಷದಲಿ ಗರ್ಜಿಸಿ ಬೆರಸಿ ಪಿಡಿಯುತಲೀ ||
ಭರದಿ ತನ್ನೊಶಗ್ಯೆದು ಮುಂದಕೆ |
ತೆರಳಿ ಸಿದ್ಧಾವತಿಯ ಪುರಕಾ |
ತೆರಳಿ ಹೊಂಕರಿಸುತ್ತ ವರುಣನ ನೋಡುತಿಂತೆಂದಾ || ೧ ||

**ರಾಗ ಮಾರವಿ, ಏಕತಾಳ**

ಉಳಿದ ದಿಕ್ಪಾಲರ ತೆರದೊಳು ಪೋಪೆಯೊ | ಕಲಹಕೆನ್ನೊಳಗಿಂದೂ ||
ಘಳಿಲನೆ ಬರುವೆಯೊ | ಪೇಳು ನೀನೀಕ್ಷಣ | ಉಳಿಸೆನು ಕೇಳಿಂದೂ || ೧ ||

ನರ ಸುರರೆಲ್ಲರ ಧುರದಲಿ ಗೆಲಿದೀ | ಧರಣಿಯ ತಂದಿರುವೇ ||
ಧುರಸಮರ್ಥನು ಹಿರಣ್ಯಾಕ್ಷನು ನಾ | ಧುರಕನುವಾಗಿರುವೇ || ೨ ||

ಸರಿಸರಿಯೆನ್ನೊಳು ಧುರವೆಸಗುವರ್‍ಯಾ | ರಿರುವರುಯೆಂದೆನುತಾ ||
ತಿರುತಿರುಗಾಡುತ ನಿಲುವವರಿಲ್ಲದೀ | ಪುರಕೈದಿದೆ ಯಿತ್ತಾ || ೩ ||

ತೋರೆಲೊ ಯುದ್ಧವನೀಕ್ಷಣ ಯೆನ್ನಲಿ | ಧೀರತ್ವಗಳಿರಲೂ ||
ಭೋರನೆ ಬಂದಿಹೆ ನಿಲು ನೀ ಬೇಗದಿ | ವೀರನು ನೀನೆನುತಾ || ೪ ||

ನುಡಿಯನು ಕೇಳುತ ಗಡಗಡ ನಡುಗುತ | ವಡನೆಂದನು ವರುಣಾ ||
ತಡೆಯದೆ ಸುಮ್ಮನೆ ದುಡುಕನು ಮಾಡದಿ | ನುಡಿವೆನು ನಿನ್ನೊಡನೇ || ೫ ||

**ರಾಗ ಮಾರವಿ, ಮಟ್ಟೆತಾಳ**

ಕೋಪ ಬೇಡ ಸೈರಿಸಿನ್ನು ಮಾಪು ಮಾಡು ನಾ |
ವ್ಯಾಪಿಸೀದೆ ಮುದುಕತನವು ಪಾಪ ಕಾಣೊ ನಾ || ೧ ||

ದ್ವೀಪದ್ವೀಪಜಯಿಸಿ ಬಂದೆ ಭೂಪನಹುದು ನೀ |
ಸ್ಥಾಪಿಸೀತು ನಿನ್ನ ಪೆಸರು ಯೀ ಪುರಕೆ ನೀ || ೨ ||

ಬಂದುದೇಕೆ ನಿನ್ನ ಕೂಡೆ ಧುರವ ಗೈವರೇ |
ಎಂದು ನಿಲುವುದುಂಟೆ ಯೆನ್ನ ಯಿಂದು ಕರದರೇ || ೩ ||

ಕಂದ ನಿನ್ನ ಕೂಡೆ ಸಮರ ನಿಂದು ಮಾಳ್ಪರೇ |
ಮುಂದುವರಿದುದೆನಗೆ ಮುಪ್ಪು ಹೊಂದುತಿರುವರೇ || ೪ ||

ಬೇಡ ಯೆನಗೆ ಧೊರೆತನವು ಗಾಢದಿಂದಲೀ |
ರೂಢಿಪತಿಯೆ ನೀನೆ ಆಳಿ ಕೂಡಿಯೆನ್ನಲೀ || ೫ ||

ಮಾಡಿ ಮಮತೆಯಿಂದಲೆನ್ನ ನೋಡಿ ಸಲಹಲೀ |
ಬೇಡಿಕೊಂಬೆ ಯೆನ್ನ ನೀನು ನೋಡುಮನದಲೀ || ೬ ||

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಯೆನುತ ದೈನ್ಯದಿ ವರುಣ ಪೇಳಲು | ಕನಿಕರದಿ ದೈತ್ಯೇಂದ್ರನಾತನ ||
ವಿನಯದಿಂದಲ್ಲಿರಿಸಿ ಮುಂದಕೆ | ಘನದಿಪೊರಟೂ || ೧ ||

ಬಂದು ಪಾತಾಳದಲಿ ದಿತಿಜನು | ನಿಂದು ನೋಡಿದನ್ಯಾರ ಕಾಣದೆ ||
ಯೆಂದ ತನ್ನೊಳು ತಾನೆ ಪೌರುಷ | ದಿಂದ ಲಾಗಾ || ೨ ||

ಧುರಪರಾಕ್ರಮಿಯಾಗಿಯೆನ್ನೊಳು | ಸರಿಸದೊಳು ಧುರಗೈವ ವೀರರ ||
ತಿರುಗಿ ಕಾಣಲು ಮೂರು ಲೋಕದಿ | ದೊರಕಲಿಲ್ಲಾ || ೩ ||

ಯೆನುತ ಚಿಂತಿಸುತಿರುವ ಸಮಯಕೆ | ಘನಮುನಿಪ ನಾರದನು ವೀಣೆಯ ||
ಮನದಿ ನಾರಾಯಣನ ಸ್ತುತಿಸುತ | ವಿನಯದಿಂದಾ || ೪ ||

**ರಾಗ ಯರಕಲಕಾಂಬೋಧಿ, ಅಷ್ಟತಾಳ**

ನಾರಾಯಣ ಹರಿ ಮುಕುಂದಾ ಮುರಾರೀ | ದಯ |
ದೋರಿ ರಕ್ಷಿಸು ನಮ್ಮ ನಿರತಾ ಈಸಾರೀ || ಪಲ್ಲ ||

ದುರಿತ ಭಂಜನ ನೀನೆ ಕಲುಷಸಂಹಾರಾ |
ಚರಣ ನಂಬಿದ ಭಕ್ತಜನರ ಸಂಸಾರಾ | ನಾರಾಯಣ ಹರಿ || ೧ ||

ದೋಷರಹಿತ ನೀನೆ ಪಾಪ ಸಂಹರಣಾ |
ಶೇಷಶಯನನಾಗಿ ಲೋಕಪಾಲಿಸುವೇ || ನಾರಾಯಣ ಹರಿ || ೨ ||

ಮತ್ಸ್ಯವತಾರವ ತಾಳಿ ಲೋಕವನೂ |
ಪ್ರತ್ಯಕ್ಷ ವಿರಚಿಸಿ ಸಕಲ ಜೀವರನೂ || ನಾರಾಯಣ ಹರಿ || ೩ ||

ಕೂರ್ಮವತಾರದಿ ಭೂಮಿಯ ನೀನೇ |
ಮಾರ್ಮಲದೆಲ್ಲರ ಸಲಹಿದಾತನೂ || ನಾರಾಯಣ ಹರಿ || ೪ ||

ದುಷ್ಟನಾಶನ ನೀನೆ ದೃಷ್ಟಿಸಿ ನೋಡೂ |
ಕಷ್ಟವಾ ಬಡಿಸುವ ದುಷ್ಟಾತ್ಮನನ್ನೂ || ನಾರಾಯಣ ಹರಿ || ೫ ||

ನಾಶವಗೈದೀಗ ತೋಷವ ಬಡಿಸೊ |
ವಾಸುದೇವನೆ ನೀನೆ ಕ್ಲೇಶವ ಬಿಡಿಸೂ || ನಾರಾಯಣ ಹರಿ ಮುಕುಂದ ಮುರಾರೀ || ೬ ||

**ರಾಗ ಕೇದಾರಗೌಳ, ಅಷ್ಟತಾಳ**

ಇನಿತು ಸಂಸ್ತುತಿಸುತ್ತ ಬರುತಿಹ ನಾರದ | ಮುನಿಪನಾ ಕಂಡು ದೈತ್ಯಾ ||
ಘನತರ ಭಕ್ತಿಯಿಂ ವಂದಿಸಿ ಕೈಮುಗಿದನುವಿಂದ ಕುಳ್ಳಿರಿಸೀ || ೧ ||

ಪಾದಪೂಜೆಯ ಗೈದು ಸಾಧುವರೇಣ್ಯನೆ | ಪಾದತೀರ್ಥವನೆ ಗೊಂಡೂ ||
ಯೇದಿವ್ಯ ಮುನಿನಿನ್ನ ಪಾದಭೇಟಿಗಳಿಂದ | ಆದುದೆನ್ನಯ ಸಂಕಲ್ಪಾ || ೨ ||

ದನುಜೇಶ ಲಾಲಿಸೂ ನಿನ್ನಯಾ ಭಕ್ತಿಗೆ | ಮನಸೋತೆನಿಂದಿನಲೀ ||
ಅನುಮಾನ ಮಾಡದೆ ಮಸುರುಯೆನ್ನೊಡನೀಗ | ವಿನಯಾದಿ ನೀನಿಲ್ಲಿಗೇ || ೩ ||

ಬಂದ ಕಾರಣವನ್ನು ಚಂದದಿಂದರುಹಾಲು | ಮುಂದೆ ನಿನ್ನಯ ಮನದಾ ||
ದಂದುಗವನು ಪೇಳು ಹೇಳೂವೆನೆಲ್ಲಾವಾ | ಸಂದೇಹ ಮಾಡದಿರೂ || ೪ ||

ಮುನಿರಾಯಾ ನಿಮ್ಮಯಾ ಕರುಣದಿಂದಲಿ ನಾನೂ | ಜನಪಾಲರೆಲ್ಲರನೂ ||
ಅನುವರದಲಿ ಗೆಲ್ದು ಭೂಲೋಕ ವಶಗೈದು | ಅನಿಮಿಷಾಧಿಪರಾ ಇನ್ನೂ || ೫ ||

ಧುರದೊಳು ವೋಡಿಸಿ ದೇವಲೋಕಕೆ ನಾನು | ಧೊರೆಯಾಗಿ ಭೂಮಿಯನೂ ||
ಇರದೆ ಕಂಕುಳೊಲೌಕಿ ತಂದಿಹೆನಿಲ್ಲಿಗೆ | ಧುರಸಮರ್ಥರು ಯಾರಿನ್ನೂ || ೬ ||

**ಭಾಮಿನಿ**

ಯೆನ್ನ ಸಮರಾಂಗಣದಿ ಗೆಲುವರು |
ಮುನ್ನ ಯಾರಿಹರೆಂದು ಪುಡುಕಲು |
ಯೆನ್ನಿದಿರು ಧುರಗೈವ ಭಟರ್ಯಾರಿನ್ನು ದೊರಕದಿರೇ ||
ಸನ್ನುತಾಂಘ್ರಿಯೊಳರಿಕೆ ಗೈದೆನು |
ಇನ್ನಿರುವ ರ್ಯಾರೆಂದು ತೋರಿಸು |
ಇನ್ನವರ ಧುರದೊಳಗೆ ಈಕ್ಷಣ ಮಣ್ಣಕೂಡಿಸುವೇ || ೧ ||

**ರಾಗ ಬೇಗಡೆ, ಏಕತಾಳ**
ಕೇಳು ದಾನವರಾಯ ನೀನಿಂದೂ | ನಾ ಪೇಳ್ವೆ ನುಡಿಯಾ |
ಜಾಲವಲ್ಲಿದು ನಿಜವು ಕೇಳಿಂದೂ || ಕೋಳುಗೊಂಡಿಹೆ ಮೂರು ಲೋಕವ |
ಬಾಳಿದವರ್ಯಾರುಂಟು ಯುದ್ಧದಿ | ಸೋಲಿಸಿದೆ ತ್ರೈಭುವನದಧಿಪರ |
ಮೇಲೆ ಯಾರೆಲ್ಲಿಹರು ಸುಮ್ಮನೇ || ೧ ||

ಸೃಷ್ಟಿಸುವ ಅಜನೊಬ್ಬನಿಹನಾತಾ | ಯುದ್ಧಾವಾ ಗೈಯೆ |
ಕೊಟ್ಟಿರುವ ವರ ನಿನಗೆ ಕೇಳಿತ್ತಾ ||
ಸೃಷ್ಟಿಲಯ ಪರಮೇಷ್ಠಿಯನು ನೀ | ನಟ್ಟಿ ಬಂದಿಹೆ ಧುರಸಮರ್ಥರು |
ಯೆಷ್ಟು ಹೇಳಿದರಿಲ್ಲ ಯೆಂಬುದು | ದಿಟ್ಟ ಬಿಡು ಬಿಡು ಸಾಕು ಸುಮ್ಮನೇ || ೨ ||

ಆದಿಮೂರುತಿಯೋರ್ವನಿಹನೂ | ವೈಕುಂಠಪುರಲಿ |
ಸಾಧಿಸುತ ನೀ ಪೋಗಿ ಅವನನ್ನೂ ||
ಕಾದಿ ಗೆಲಿದರೆ ನಿನಗೆ ಸರಿಸಮ | ರಾದವರ ನಾ ಕಾಣೆ ಲೋಕದಿ |
ಹಾದಿ ಹಿಡಿದೈದಿದರೆ ನಿನಗವ | ಮೋದದೊಳು ದೊರಕುವನು ಬೇಗದೀ || ೪ ||

ನಿನ್ನ ವಾರ್ತೆಯ ಕೇಳಿಯೂ | ಮೊದಲೇ ತನ್ನಯ ರೂಪಾ |
ಮುನ್ನ ಅಡಗಿಸಿಕೊಂಡು ಇರುವನಲೇ ||
ಸಣ್ಣ ವರಹದ ತೆರನ ರೂಪವ | ಇನ್ನು ಧರಿಸಿಯೆ ಇರುವನಲ್ಲಿಯೆ |
ನನ್ನಿಯಿಂ ಸಂಹರಿಸಿದರೆ ನಿನ | ಗಿನ್ನು ಸರಿಸಮರ್‍ಯಾರು ಲೋಕದೀ || ४ ||

**ಭಾಮಿನಿ**

ನಾರದನ ನುಡಿ ಕೇಳಿದಾಕ್ಷಣ |
ಘೋರ ದೈತ್ಯನು ಮುನಿಗೆ ವಂದಿಸಿ |
ದಾರಿಹಿಡಿದೈತರುತ ಬಂದನು ನಾರಾಯಣಪುರಿಗೇ ||
ಕ್ಷೀರಸಾಗರವಾಸ ಮೊದಲೇ |
ಕಾರಣವನರಿತಾಗ ಮನದಲಿ |
ವೀರ ದನುಜಗೆ ವರಹರೂಪವ ತೋರುತಿರಲಂದೂ || ೧ ||

**ರಾಗ ಘಂಟಾರವ, ಅಷ್ಟತಾಳ**

ಕಂಡು ದಾನವ ವರಹಮೂರುತಿಯನ್ನು |
ದ್ದಂಡ ಕೋಪವನಾಂತು ನುಡಿದನು | ಚಂಡವಿಕ್ರಮನಾರೆಲೋ || ೧ ||

ಮೂರು ಲೋಕವ ಸೂರೆಗೊಳ್ಳುತ ನಾನೂ |
ಪಾರುಪತ್ಯವ ಮಾಳ್ಪೆಯೆನ್ನಲಿ | ಧೀರತನಗಳ ತೋರಿಸೋ || ೨ ||

ಧರಣಿಪಾಲಕರೆಲ್ಲರಾ ಬಡಿದಿಂದೂ |
ಹರಣಗೊಳ್ಳುತ ಸೆರೆಯೊಳಿಟ್ಟಹೆ | ಪುರದ ಪಟ್ಟವನಾಳುವೆ || ೩ ||

ದೇವಲೋಕಕೆ ಪೋಗಿ ದಿಕ್ಪಾಲರಾ |
ದೇವಪುರದಿಂದೋಡಿಸಿದೆ ನಾ | ದೇವಪದವಿಯೊಳಿರ್ಪೆನೂ || ४ ||

ಇಳಿದೆನಲ್ಲಿಂದ ಪಾತಾಳಲೋಕಕ್ಕೆ |
ನಿಳೆಯವನು ವಶಗೈದು ಪುರವನು | ಸೆಳೆದುಕೊಂಬಡೆ ಬಂದಿಹೇ || ೫ ||

ಧೀರನಾದರೆ ಶೂರತ್ವ ತೋರಿಸೂ |
ಭೂರಿ ಯುದ್ಧವ ಗೈವೆ ನಿನ್ನಲಿ | ಬಾರೊ ಬಾರೆನ್ನೆದುರಿಗೆ || ೬ ||

ಶಂಡನಂದಾದಿ ಹಂದಿರೂಪಿನೊಳ್ಯಾಕೆ |
ಭಂಡತನ ತೋರಿಸದೆ ನಿನ್ನು | ದ್ದಂಡ ರೂಪದಿ ಬಾರೆಲೊ || ೭ ||

**ರಾಗ ಮಾರವಿ, ಏಕತಾಳ**

ಕೇಳುತ ನುಡಿಯನು ಬಾಳುವೆ ತೀರಿತು | ಖೂಳ ಖಳಾಧಮನೇ ||
ಕಾಳಗಕೆನ್ನೊಳಗಿದಿರಾದೀಕ್ಷಣ | ಸೀಳುವೆ ನಿನ್ನಸುವಾ || ೧ ||

ಇದಕೋಸುಗ ನಾ ವಿಧದಲಿ ಬಂದಿಹೆ | ಅದುಭುತ ತೋರ್ನಿನ್ನಾ ||
ಮದಮುಖತನಗಳ ನಿಲಿಸುವೆನೀಕ್ಷಣ | ಕದನವ ಗೈದೆನ್ನಾ || ೨ ||

ನುಡಿಯನು ಕೇಳುತ ಖಿಡಿಖಿಡಿಯಾಗುತ | ಬಡಸೂಕರ ನಿನ್ನಾ ||
ಬಡಿವಾರವ ಬಿಡು ಪುಡಿಪುಡಿಯೆಸಗುವೆ | ಪಿಡಿದೀ ಗದೆಯಿಂದಾ || ೩ ||

ಇದಿರಿಗೆ ಬಾರೆಲೊ ಮದಮುಖ ದೈತ್ಯನೆ | ಬದಿಯೆಲುಗಳ ತರಿವೆ ||
ಅದುಭುತಯೆನ್ನೊಳುನಡೆಯದು ಈ ಕ್ಷಣ | ತುದಿಗಾಲವ ತೋರ್ಪೇ || ೪ ||

**ರಾಗ ಮಾರವಿ, ಮಟ್ಟೆತಾಳ**

ಯೆನಲು ದೈತ್ಯ ರೋಷದಿಂದ ಕನಲಿ ಗದೆಯನೂ |
ಅನುವಿನಿಂದ ಬೀಸಿ ಬಿಡಲು ಘನದಿ ವರಹನೂ || ೧ ||

ತಡೆದುಕರದಿ ದಾಡೆಯಿಂದ ದಡಿಗನುರವನೂ |
ಖಿಡಿಯ ಸೂಸುತಾಗ ಸೀಳೆ ಬಡಿದು ಗದೆಯೊಳೂ || ೨ ||

ಮರಳಿ ವರಹ ಘೋರುಗುಡಿಸಿ ಬೆರಸಿ ಹಾಯಲೂ |
ಹಿರಿದು ರೋಷದಿಂದ ಖಳನು ಮುಷ್ಟಿಯೆರಗಲೂ || ೩ ||

ಹತಿಯ ತಾಳಿ ಖತಿಯನಾಂತು ಮತಿಸಿ ಬರುತಿರೇ |
ಗತಿಯು ತೀರಿತೆನುತಲಾಗ ಅತುಳ ಮಾಯೆಯಾ || ೪ ||

ಮನದಿ ಯೋಚಿಸುತ್ತ ದೈತ್ಯ ನೆನೆಯೆ ವ್ಯಾಘ್ರನಾ |
ರಣಕೆ ಕಳುಹಲಾಗ ಬಂದು ಘನದಿ ವರದನಾ || ೫ ||

ಕೆಣಕಿ ಗರ್ಜಿಸುತ್ತ ಬಂದು ಘೋರುಗುಡಿಸಲೂ |
ಕ್ಷಣದಿ ವರಹ ದಾಡೆಯಿಂದ ಸೀಳಿ ಬಿಸುಡಲೂ || ೬ ||

**ಭಾಮಿನಿ**

ವ್ಯಾಘ್ರ ಮಡಿದುದ ಕಂಡು ದಾನವ |
ಉಗ್ರ ಕೋಪವನಾಂತು ಸಿಂಹನ |
ಶೀಘ್ರದಲಿ ನೆನೆಯಲ್ಕೆ ಸಿಂಹನು ಘೋರ್ಗುಡಿಸುತಂದೂ ||
ದೀರ್ಘ ಸ್ವರದಿಂದೊರವುತೈತಹ |
ಮಾರ್ಗವನು ಕಾಣುತ್ತ ವರಹನು |
ಅರ್ಗಳದಿ ಇದಿರಾಗಿ ನುಡಿದನು ಭರ್ಗನಂದದಲೀ || ೧ ||

**ರಾಗ ಮಾರವಿ, ಏಕತಾಳ**

ಇದಿರಿಗೆ ಬಂದ ವರಹನ ಕಾಣುತ | ಮುದಮುಖತನದಿಂದಾ ||
ವಧಿಸುವೆ ನಿನ್ನನೆನುತ್ತಲಿ ಸಿಂಹನು | ಅದುಭುತಸ್ವರದಿಂದಾ || ೧ ||

ಗರ್ಜಿಸಿ ನುಡಿದುದ ಕೇಳುತ ವರಹನು | ಮೂರ್ಜಗ ನಡುಗುತಿರೇ ||
ಗರ್ಜನೆಯೊಳಗೇನೆಂಬೆನು ಸಿಂಹನ | ಜಜ್ಜರಿ ಮಾಡುತಿರೇ || ೨ ||

ಉಬ್ಬಿದ ಕೋಪಾಟೋಪದಿ ಸಿಂಹನು | ಅಬ್ಬರಿಸುತಲೆಂದಾ ||
ಬೊಬ್ಬೆಗೆ ಬೆದರುವನಲ್ಲವು ನಿನ್ನಯ | ಅಬ್ಬರ ಸಾಕೆಂದಾ || ೩ ||

ಯಾತಕೆ ಬಂದಿಹೆ ಸೋತಿಹ ದೈತ್ಯನ | ಮಾತನು ಕೇಳುತಲೀ ||
ಖಾತಿಯ ಬಿಡು ನೀ ಪೋಗದೆ ಉಳಿದರೆ | ಖ್ಯಾತಿಯು ಕಳೆದಿಲ್ಲೀ || ೪ ||

ಬಡಸೂಕರ ನೀ ನಡೆ ನಡೆ ಸುಮ್ಮನೆ | ಒಡೆಯನು ನಾ ನಿನಗೇ ||
ನಡೆಯದೆ ನೀ ಮುಂದಡಿಯಿಡೆ ನಿನ್ನನು | ಇಡಿ ನುಂಗುವೆ ಕಡೆಗೇ || ೫ ||

ಮೃಗರಾಜನು ನೀನೆಂಬುವಹಂಕೃತಿ | ಬಗೆಯದೆ ಮನಸಿನಲೀ ||
ತೆಗೆದಿಡು ನಿನ್ನಯ ವಡಲನು ಕೇಳೆಲೊ | ಬಗಿವೆನು ನಿಮಿಷದಲೀ || ೬ ||

ಮಾಯದ ಸಿಂಹನು ಬಾಯನು ಕಳವುತ | ಘೋಯೆನ್ನುತ ಬರಲೂ ||
ಭಾವಜಪಿತ ತಾ ಕಾಣುತ ಚಕ್ರದಿ | ಕಾಯವ ಕೆಡದಿರಲೂ || ೭ ||

**ವಾರ್ಧಿಕ್ಯ**

ವಿದುರ ಕೇಳೇನೆಂಬೆ ಅದುಭುತದ ಮಾಯೆಯಂ |
ಕದನಕಿದಿರಾಗಿ ಪುಲಿ ಕರಡಿ ಶಾರ್ದೂಲಾದಿ |

ವಿಧವಿಧದ ಮೃಗ ಪಕ್ಷಿ ಹಾವುಗಳು ಬರುತಿರಲು ಇದನರಿತು ಕಂಡು ಬೇಗಾ ||
ತುದಿಗಾಲಮಂ ತೋರ್ಪೆನೆಂದು ನಿಶ್ವೈಸುತ್ತ |
ಮದಮುಖನ ಮಾಯೆಯಂ ಮುದದಿ ಪರಿಹರಿಸೆಂದು |
ವದಗಿನಿಂ ಚಕ್ರಕಪ್ಪಣೆಯಿತ್ತು ಕಳುಹಿದಂ ಪದುಳದಿಂ ಸಂಹರಿಸಿದಾ || ೧ ||

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ದಾನವನ ಮಾಯೆಗಳ ಚಕ್ರವು | ಹಾನಿಗೈದುದ ಕಂಡು ತಾನಿ ||
ನ್ನೇನು ಗೈವುದೆನುತ್ತ ಮನದನು | ಮಾನದಿಂದಾ || ೧ ||

ಭೂಮಿಪಾಲರನೆಲ್ಲ ನಿಮಿಷದಿ | ಹೋಮಿಸಿದೆ ಸುರಲೋಕಪಾಲರ ||
ಸೀಮೆಯಿಂದೋಡಿಸುತ ಭೂಮಿನಿ | ರ್ನಾಗೈದೇ || ೨ ||

ಹಂದಿರೂಪಿನ ವೈರಿಯೊಳು ನಾ | ನಿಂದು ಸೋತರೆಯೆನ್ನ ಬಾಳ್ವೆಯು |
ಹೊಂದಿತಪಕೀರ್ತಿಯೊಳು ನಾ | ನೊಂದುಭಾರೀ || ೩ ||

ಧುರವೆಸಗಿ ಸೂಕರನನಿಲ್ಲಿಯೆ | ಹರಣಗೊಂಬೆನೆನುತ್ತ ರೌದ್ರದೊ |
ಳುರ ತರದ ಗದೆಗೊಂಡು ಪೊರಟನು | ದುರುಳ ದೈತ್ಯಾ || ೪ ||

**ರಾಗ ಪಂಚಾಗತಿ, ಮಟ್ಟೆತಾಳ**

ಬರುವ ದೈತ್ಯನಾ | ಕಂಡು ವರಹನೂ ||
ಉರುತರ ಖತಿಯನಾಂತು | ಬರುತಲೆಂದನೂ || ೧ ||

ಬಣಗು ದೈತ್ಯನೇ ಗಣನೆಯಿಲ್ಲದೇ ||
ರಣಕೆ ಬಂದುದ್ಯಾಕೆ ಬಿದ್ದ | ಹೆಣನ ತಿನ್ನದೇ || || ೨ ||

ನರನೃಪಾಲರಾ | ಸುರಪ ಮುಖ್ಯರಾ ||
ಧುರದಿ ಗೆಲ್ದ ಗರ್ವವನ್ನು | ಬರಿಸು ಈಕ್ಷಣಾ || ೩ ||

ಉರವ ಬಗಿವೆನೂ | ಕರುಳ ತೆಗಿವೆನೂ ||
ಪುರಕೆ ನಿನ್ನ | ತೆರಳಿಸೂವೆನೂ || ೪ ||

**ರಾಗ ಶಂಕರಾಭರಣ, ಮಟ್ಟೆತಾಳ**

ಎಂದ ನುಡಿಯ ಕೇಳಿ ದೈತ್ಯ | ನೊಂದು ಕೋಪತಾಳಿ ಪೇಳ್ದ ||
ಹಂದಿ ನಿನ್ನ ದೇಹವನ್ನು | ವಂದೆ ಕ್ಷಣದಲೀ || ೧ ||

ಕೊಂದು ಕಳೆದು ನಿನ್ನ ಪುರಕೆ | ಇಂದು ನಾನು ಅರಸ ನೋಡು ||
ಯೆಂದೆನುತ್ತ ಮುಷ್ಟಿಯೊಳಗೆ | ವಂದು ಬಡಿಯಲೂ || ೨ ||

ಹತಿಯ ತಾಳಿಕೊಂಡು ವರಹ | ಖತಿಯ ಗೊಂಡು ದೈತ್ಯನುರವ |
ಅತುಳಸತ್ವದಿಂದ ದಾಡೆ | ಮಸದು ಸೀಳಲೂ || ೩ ||

ಘಾಯ ವಡದು ದೈತ್ಯನಾಗ | ಬಾಯ ಬಿಟ್ಟುವದರಿ ಕೊಳುತ ||
ಸಾಯೆನುತ್ತ ಗದೆಯೊಳಾಗ | ನೋಯಿಸಿದನು || ೪ ||

**ಭಾಮಿನಿ**

ಇನಿತು ನಾನಾ ತೆರದಿ ಯುದ್ಧವ |
ನನುಕರಿಸುತಿರಲೋರ್ವನೋರ್ವರು |
ಘನತರದ ಕಡುಕೋಪದಿಂದಲಿ ಕನಲುತಾರ್ಭಟಿಸೀ ||
ಅನಿಮಿಷರು ಸಹಿತಾಗಿ ಅಜಿತಾ |
ಮನದಿ ತೋಷವ ತಾಳುತೊಯ್ಯನೆ |
ಘನ ವಿಮಾನದಿ ಕುಳಿತು ಜಯ ಜಯವೆನುತ ಪೊಗಳಿದರೂ || ೧ ||

**ರಾಗ ಮಾರವಿ, ಏಕತಾಳ**

ಇತ್ತಲು ಸರಿಸರಿ ಯುದ್ಧವ ಗೈವುತ | ಚಿತ್ತದಿ ಚಿನುಮಯನು ||
ಮತ್ತೀ ದೈತ್ಯನ ಸಮರದಿ ಗೆಲುವರೆ | ಯಿತ್ತಿಹ ಅಜವರವಾ || ೧ ||

ಅದರಿಂದೀತನು ಅದುಭುತ ದೋರುವ | ಕದನಕೆ ಚಕ್ರವನೂ ||
ಮುದದಿಂ ಕಳುಹುವೆನೆನುತಾಕ್ಷಣದಲಿ | ವದಗಿಲಿ ಕಳುಹಿದನು || ೨ ||

ಬಾಯನು ಕಳೆವುತ ಭೋಯನುತಭ್ರದಿ | ಮಾಯಕದಿಂ ಬರುವ ||
ಆಯವ ನೋಡುತದಾನವನಾಕ್ಷಣ | ಘೇಯೆನುತಿಂತೆಂದಾ || ೩ ||

ಸೂಕರನೊಳು ನಾ ಕಾದುವ ಸಮಯಕೆ | ಭೀಕರಿಸುತಯಿಂದೂ ||
ಬಾಕಳವುತ್ತೀಚಕ್ರವು ಬರುವದಿ | ದ್ಯಾಕೆನುವದನರಿಯೆ || ೪ ||

ಮನದೊಳು ಯೋಚಿಸಿ ತಿಳಿದನು ಹಿಂದಿನ | ಜನುಮದ ಪರಿಯನ್ನೂ ||
ಘನರೌದ್ರವ ತಾ ಬಿಟ್ಟಿಂತೆಂದನು | ಚಿನುಮಯನನು ನೆನದು || ೫ ||

**ರಾಗ ಮಧುಮಾಧವಿ, ಏಕತಾಳ**

ಏನಿದಚ್ಚರಿಯಿದು ಸೂಕರನೊಡನೆ |
ನಾನು ಯುದ್ಧವ ಗೈವ ಸಮಯದಿ ನೀನೆ ||
ಪ್ರಾಣಗೊಂಬುವೆನೆಂದು ಈ ಪರಿಯೊಳಗೆ |
ನೀನೆ ಬಂದೆಯ ಬಾಯಿ ಕಳೆದು ಈವರೆಗೆ || ೧ ||

ಸೂಕರನೊಳು ಧುರಗೈದರೆ ನೀನೂ |
ವ್ಯಾಕುಲಗೊಳುತಲಿ ಬಂದೆಯಾ ನೀನೂ ||
ಸಾಕಿನ್ನು ಕೊಲಬೇಡ ನೀನಿಂದುಯನ್ನ |
ಸೋಕದಿರೈ ಮುಂದೆ | ವೈರಿಯಾದಿವನಾ || ೧ ||

ನಾಶವ ಗೈದು ನೀ ತೆರಳಬೇಕಿನ್ನು |
ವಾಸುದೇವನ ಕರಚಕ್ರವೆ ನೀನೂ ||
ದ್ವೇಷ ಸಾಧಿಸದಿರು ಯನ್ನಲಿಯಿಂದೂ |
ದೋಷಿಯು ನಾನಲ್ಲ ಕೇಳ್ದಯಾಸಿಂಧೂ || ೨ ||

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಇಂತು ನುತಿ ಗೈಯಲ್ಕೆ ಚಕ್ರವು | ನಿಂತುದಲ್ಲಿಯೆ ಕಂಡು ದೈತ್ಯನು ||
ಮುಂತೆಸವ ವರಹನನು ಕಾಣುತ | ಚಿಂತಿಸುತಲೀ || ೧ ||

ಆದಿನಾರಾಯಣನೆ ಈತನು | ಸಾಧಿಸಿದೆ ವೈರತ್ವದಿಂದಲಿ ||
ಕಾದಿದಡೆ ಜಯವಹುದೆ ಇವನಲಿ | ಕ್ರೋಧಗೊಂಡೂ || ೨ ||

ಇನಿತನೆಲ್ಲವ ತಂದು ಮನದೊಳು | ದನುಜ ಗರ್ವವ ಬಿಟ್ಟು ಮುಂದಿಹ ||
ಚಿನುಮಯಗೆ ಸಾಷ್ಟಾಂಗವೆರಗಿದ | ವಿನಯದಿಂದಾ || ೩ ||

ಆದಿಮೂರುತಿಯನ್ನು ಕಾಣುತ | ಸಾದರದಿ ಮಗುಳೆರಗಿ ಯೆನ್ನಲಿ ||
ಖೇದಗೊಳ್ಳದೆ ರಕ್ಷಿಸೆಂದನು | ಮೋದದಿಂದಾ || ೪ ||

ಮೂಢ ಬುದ್ಧಿಗಳಿಂದ ನಾವೈ | ಮಾಡಿದಪರಾಧಗಳ ಕ್ಷಮಿಸುತ ||
ಬೇಡಿದಿಂದದಿ ಪಾದಸೇವೆಗೆ | ಕೂಡಿಸೆನ್ನಾ || ೫ ||

**ರಾಗ ಕಾಂಬೋಧಿ, ಅಷ್ಟತಾಳ**

ದನುಜ ನೀನೆಂಬುದೇನು | ನೀಯನ್ನನೂ |
ಮನ ಒಂದ ತೆರದಿ ಇನ್ನು ||
ಘನ ಮದೋನ್ಮತ್ತದಿ | ಹನನ ಮಾಡುವೆನೆಂದು |
ಅನುವಿಂದ ನುಡಿದೆಯಲ್ಲಾ || ಮತ್ತಿದನೆಲ್ಲಾ || ೧ ||

ಹಂದಿಯೆನುತ ಪೇಳಿದೆ | ಬಹು ಪರಿಯಿಂದ |
ನಿಂದಿಸಿ ಮಾತಾಡಿದೆ ||
ಇಂದು ನೀ ಯೆನ್ನೊಳು | ಧುರವನ್ನು ಗೈಯ್ಯದೆ |
ಬಂದು ಈ ಪರಿಯೊಳು ನಿಂದಿಹೆ ಯಾಕಿಲ್ಲಿ || ನೀಮತ್ತಿಲ್ಲಿ || ೨ ||

ಮದಗರ್ವದಿಂದ ನೀನೂ | ಭೂಲೋಕದಿ |
ಕದನ ಗೈದರಸರನ್ನು ಮದಮುಖತನದಿಂದ | ವಧಿಸುತ್ತ ಲೋಕವಾ |
ವಿಧದಿಂದ ಕೆಡಿಸಿದೆಯಾ || ನೀನೆಲ್ಲವಾ || ೩ ||

ಸುರದಿಕ್ಪಾಲರನೂ | ಮತ್ತಲ್ಲಿಹ | ಗರುಡಗಂಧರ್ವರನ್ನು ||
ಪೊರಡಿಸಿ ಧರಣಿಯು ಕೈಸೆರೆ | ಪಿಡಿದಿಲ್ಲಿ ತಂದಂತ |
ಧುರಪರಾಕ್ರಮಿ ನೀನೂ || ಈ ಪರಿಯನ್ನು || ೪ ||

ಇಷ್ಟು ಸಾಹಸದಿಂದಲಿ || ತ್ರೈಭುವನಾವಾ | ಪಟ್ಟದರಸನೆಂದೆಲ್ಲಿ ||
ಅಟ್ಟಹಾಸದಿ ಎನಗಿದಿರಾಗಿಧುರಗೈವ | ದಿಟ್ಟರ್ಯಾರೆನುತಲಿ |
ಪುಡುಕುತ್ತ ಬಂದಿಲ್ಲಿ || ಸಮ್ಮುಖದಲ್ಲಿ || ೫ ||

ಧುರವ ಗೈದೀವರೆಗೆ | ಸುಮ್ಮನೆಯಾಕೆ | ಮರುಗುವೆ ಪೇಳೆನಗೆ ||
ಧುರಪರಾಕ್ರಮವೆತ್ತ | ಅಡಗಿ ಪೋದುದು ಈಗ |
ಸರಿಯಾಗಿಕಾದು ನೀ ಹರಣದಾಸೆಗಳ್ಯಾಕೆ || ಎರಗುವದ್ಯಾಕೆ || ೬ ||

**ಭಾಮಿನಿ**

ಜೀಯ ತಪ್ಪನು ಪಾಲಿಸುತ ನೀ |
ನೋಯದೆನ್ನನು ಚಕ್ರಕಾಹುತಿ |
ಕಾವರಿಸು ಈ ದೇಹ ಬೇಗದಿ ಸಾಯಗೊಳಿಸೆಂದಾ ||
ದೇವ ದೇವರ ದೇವ ಚಕ್ರದಿ |
ಹೇಯವನು ಕತ್ತರಿಸಿ ಕಂಠವ |
ಘೇಯೆನುತ ದಾನವನ ದೇಹವು ಬಿದ್ದುದಾಕ್ಷಣಕೇ || ೧ ||

**ಕಂದ ಪದ್ಯ**

ಇಂತೀಪರಿಯೊಳು ದೈತ್ಯನ |
ನಿಂತು ಗಲವನಂತಾತ್ಮನ ಚಕ್ರವರಿಯಲೂ ||
ಚಿಂತೆಯ ಬಿಟ್ಟಾಗಮರರು |
ಇಂತೆಂದರುಹಿದರು ನಾರಾಯಣನೊಡನಾಗಾ || ೧ ||

**ರಾಗ ಮಾಧುಮಾಧವಿ, ಏಕತಾಳ**

ದೇವರ ದೇವನೆ | ನಮ್ಮಯ ದುಃಖ |
ಕಾವವರಿಲ್ಲದೆ ದನುಜನ ಸೊಕ್ಕ ||
ನೀವಡಗಿಸಿದ ಮೇಲಿನ್ನೇನು ನಮಗೆ |
ನೋವೆಲ್ಲ ಪೋದುದೆಂದನುತಲಿಯೆರಗೆ || ೧ ||

ವಂದಿಸಿ ನುತಿಸಿದ ಸುರರನ್ನು ಬೇಗ |
ಚಂದದೊಳೆತ್ತಿದ ಶಿರವನು ಆಗಾ ||
ಹೊಂದಿ ಹೋದನು ನಿಮ್ಮ ದಣಿಸಿದ ದುರುಳಾ |
ಸಂದೇಹ ಮಾಡದೆ ಪುರಕಾಗಿ ತೆರಳಾ || ೧ ||

ಮೊದಲಿನಂದದಿ ನಿಮ್ಮ ಪುರವಾಧಿಪತ್ಯಾ |
ವಿಧದಿಂದ ಗೈವುದಲ್ಲದೆ ನಿಮ್ಮ ಸತ್ಯಾ ||
ವದಗಿ ಕೈಗೂಡಿತು ಪೋಗಿರಿ ನಿತ್ಯಾ |
ಮುದವನ್ನೆ ತಾಳಿಯೆ ಸುಖಿಸುದಗತ್ಯಾ || ೨ ||

ಆದಿಮೂರುತಿಯೆಂದ ನುಡಿ ಕೇಳಿ ಸುರಪಾ |
ಏ ದಯಾಂಬುಧಿ ನಿನ್ನ ಸೇವೆಯೊಳಿರ್ಪಾ ||
ಸಾಧು ಸಜ್ಜನರನ್ನು ದುರುಳನಂತಿರ್ಪಾ |
ಬಾಧಿಸುವರೆ ದಿನದಿನಯೊಳು ಬರ್ಪಾ || ೪ ||

ದೇವ ನೀನೋರ್ವನಲ್ಲದೆ ನಮಗಿನ್ನೂ |
ಕಾವ ಕರ್ತನು ಬೇರೆ ಯಾರೆಂಬುದನ್ನೂ ||
ನಾವರಿತಿಹೆವಲ್ಲಧನ್ಯರ್‍ಯಾರಿದನೂ |
ಭಾಸವಿದಿರರು ಯೆನ್ನುತ ಯೆರಗಿದನೂ || ೫ ||

ಧರಣೀಯಾ ಸಂತೈಸಿ ಮೊದಲಿನಂದದಲಿ |
ಇರುವಂತೆಸಗಬೇಕೆನುತಾ ಪಾದದಲಿ ||
ಅರುಹೀದನು ಸುರಪಾಗೆ ತೆರಳು ಶೀಘ್ರದಲಿ |
ಸರಿಯಾಗಿ ಇರುವಂತೆ ಗೈದೆ ಬೇಗದಲೀ || ೬ ||

ಪಾದಕೊಂದಿಸುತೆಲ್ಲ ಪೊರಟಾರೂ ತಮ್ಮಾ |
ಹಾದಿಯ ಹಿಡಿದೆಲ್ಲಾ ಪೋಗಲು ಬ್ರಹ್ಮಾ ||
ಆದಿಮಾರುತಿಗೆ ವಂದಿಸುತೆಂದ ನಿಮ್ಮಾ |
ಪಾದದ ಆಜ್ಞೆಯಂತೆಸಗೂವಾದೆಮ್ಮಾ || ೭ ||

ಯೆನಗೀದೆಲ್ಲವ ನೀನು ಪೇಳುವಾದೇನೂ |
ಜನನಾಗೈಯುವಾ ಕಾರ್ಯದಲ್ಲಿರು ನೀನೂ ||
ಮನೆಗೆ ತೆರಳು ಬೇಗ ವಿನಯಾದಿ ಇನ್ನೂ |
ಯೆನಲೂ ಕೇಳುತ ಅಜಪೊರಟು ಪೋದುದನೂ || ೮ ||

**ಭಾಮಿನಿ**

ನೋಡಿ ಧರಣಿಯ ಮೊದಲಿನಂದದಿ |
ಮಾಡಿ ಸರ್ವರ ಸುಖದೊಳಿಹುದೆನು |
ತಾಡಿ ನಾರಾಯಣನು ಮಡದಿಯ ಗೂಡಿಸಂತಸದೀ ||
ಆಡಿ ವೈಕುಂಠದಲಿ ವಾಸವ |
ಮಾಡಿರುವ ಕಥೆಯನ್ನು ವಿದುರನು |
ಬೇಡೆ ಮೈತ್ರೇಯನೊಳು ಪೇಳಿದ | ಪಾಡನೆಲ್ಲವನೂ ‖ ೧ ‖

ಬರೆದೆ ನಾನಿದ ಯಕ್ಷಗಾನದಿ | ಪರಿಪರಿಯಲಯ | ತಾಳಭೇದವ |
ಅರಿಯೆ ನಾನೊಂದರನು ಜರೆಯದೆ ಕರುಣದಿಂದಿದರಾ ||
ಮೆರಸುವದು ಬಲ್ಲವರು ಮುದದಲಿ | ಪರಿಪರಿಯ ವಿಧದಿಂದ ನಿಮ್ಮನು |
ಪೊರೆವ ಲಕ್ಷ್ಮೀರಮಣನೆನುತಲಿವರದೆ ನಾನಿಂದೂ ‖ ೨ ‖

ಮಂಗಲಪದ
ಮತ್ಸ್ಯವತಾರವ ತಾಳ್ದ ದೇವನೀಗೆ | ಪೃಥ್ವಿ ಪಾಲಿಸಿದಾತಗೆ ||
ನಿತ್ಯ ನಿರುಪಮ ನಿರ್ವಿಕಾರಗೆ | ವತ್ಸನನು ಕ್ಷಾದೀರ್ದಗೆ ||
ಮಂಗಲಂ ಜಯ ಜಯತು ಜಯ ಜಯ ಮಂಗಲಂ ಹರಿಮೂರ್ತಿಗೇ ‖ ೧ ‖

ಕೂರ್ಮವತಾರವ ತಾಳ್ದ ಮಹಾತ್ಮಗೆ | ಸಾರ್ವಪದವಿಯನಿತ್ತಗೆ ||
ಮಾರ್ಮಲತು ಸುರಪಾಲ ಭೂಮಿಗೆ | ನೀರ್ಯರಿಯೆ ಗಿರಿ ಬೆನ್ನೊಳಾಂತಗೆ |
ಮಂಗಲಂ ಜಯ ಜಯತು ಜಯ ಜಯ ಮಂಗಲಂ ಹರಿಮೂರ್ತಿಗೇ ‖ ೨ ‖

ವರಹವತಾರವ ತಾಳ್ದ ಪುರಷಗೆ | ಧರಣಿ ತಂದಿಹ ವರಹಗೆ ||
ವರದಹಮ್ಮಿನ ದಾನವೇಂದ್ರಗೆ | ಭರದಿ ಸೀಳಿದ ದೇವಗೆ ||
ಮಂಗಲಂ ಜಯ ಜಯತು ಜಯ ಜಯ ಮಂಗಲಂ ರಾಮಕೃಷ್ಣಗೇ ‖ ೩ ‖

*ಕುಂಜಾಲು ರಾಮಕೃಷ್ಣಯ್ಯನವರಿಂದ ವಿರಚಿತವಾದ ಯಕ್ಷಗಾನ ಹಿರಣ್ಯಾಕ್ಷನ ವಧೆಯು ಸಂಪೂರ್ಣವು.*

## ಕಾರ್ತವೀರ್ಯಾರ್ಜುನ ಕಾಳಗ

### ಪಾತ್ರಗಳು

| | |
|---|---|
| ಕೃತವೀರ್ಯ | ಕುಲವತಿ |
| ರಾಕಾವತಿ | ಋಚೀತ |
| ದತ್ತಾತ್ರೇಯ | ವರುಣ |
| ಕಾರ್ತವೀರ್ಯ | ಬ್ರಾಹ್ಮಣರು |
| ಮಂತ್ರಿ | ಜಮದಗ್ನಿ |
| ರಾವಣ | ರೇಣುಕ |

| | |
|---|---|
| ಶೂರ್ಪನಖಿ | ರೇಣುಕೆ |
| ಮಾರೀಚ | ಶೂರಸೇನ |
| ವಿದ್ಯುಜ್ಜಿಹ್ವ | ಕೋಪ |
| ಪ್ರಹಸ್ತ | ಜಮದಗ್ನಿಯ ಮಕ್ಕಳು |
| ರಾಣಿಯರು | ಪರಶುರಾಮ |
| ದೂತರು | ಶಬರರು |
| ಗಾಧಿರಾಜ | ಕಾಲಜ್ಞ |
| ಸತ್ಯವತಿ | ಹೈಹಯರು |

## ಕಾರ್ತವೀರ್ಯಾರ್ಜುನ ಕಾಳಗ

**ರಾಗ ಕೇದಾರಗೌಳ ಝಂಪೆತಾಳ**

ಅಸುರೇಂದ್ರ ಕೇಳು ನುಡಿಯ | ಸಂಗರ | ಕ್ಕಸುರಹರನೇಕೆ ಜೀಯ ||
ಅಸಮ ಸಾಹಸಿಕರಿಹರು | ನಾ ತೋರ್ಪೆ | ವಸುಧೀಶರೊಳು ಕೆಲಬರು || ೧ ||

ಸಹಜ ಕೇಳಾಹವದೊಳು | ಮೀಟಾದ | ಮಹಿಪರೆಲ್ಲರ ಜವದೊಳು ||
ವಿಹಿತದಿಂ ದಿವಿಜತತಿಯ | ಗೆಲಿದೆನ್ನ | ಸಹಸಗಳ ಕೇಳಿದರಿಯ || ೨ ||

ತವ ಪರಾಕ್ರಮವ ನಾನು | ತಿಳಿದಿರ್ಪೆ | ವಿವರಿಸುವದೇನದರನು ||
ಭುವನದೊಳು ವೀರರಿಂದೆ | ಮೇಲಿನಿಸಿ | ದವರಿಹರು ಕೇಳು ಹಿಂದೆ || ೩ ||

ತಮ್ಮ ಕೇಳೀಗ ಧರೆಯ | ಮಧ್ಯದೊಳು | ನಮ್ಮ ಸರಿಯಾದ ಧೊರೆಯ ||
ಒಮ್ಮೆ ನೀ ತೋರವನನು | ಮಡುಹದಿರೆ | ಬೊಮ್ಮಕುಲದವನೆ ತಾನು || ೪ ||

ಎನಲೆಂದನಣ್ಣ ಕೇಳು | ಕೃತವೀರ್ಯ | ತನುಜ ಭೂಪಾಲಕರೊಳು ||
ಘನ ಬಲಾನ್ವಿತನಾತಗೆ | ಸರಿಯಿಲ್ಲ | ಮನುಜಸುರಭುಜಗರೊಳಗೆ || ೫ ||

**ಭಾಮಿನಿ**

ಅನುಜನಾಡಿದ ಮಾತ ಕೇಳ್ದಾ |
ದನುಜಪತಿ ಸತ್ತ್ವರದಿ ಹೈಹಯ |
ಜನಪತಿಯ ಸದೆಬಡಿವೆನೆನುತುಬ್ಬಣನುರೆ ಝಡಿದು |
ಅನಕ ಸೇನಾಧೀಶರಿಗೆ ಬರ |
ಲನುವರಕ್ಕಪ್ಪಣೆಯನಿತ್ತಾ |
ಮನುಮಥಾರಿಯ ನೆನೆದು ಗಮನೋದ್ಯೋಗಪರನಾದ || ೧ ||

**ಕಂದ**

ಸಾಸಿರ ಭುಜಗಳ ಪಡೆದವ | ನೀಶಂ ವೈಭವದೊಳೊಂದು ದಿವಸದೊಳಿತ್ತಂ ||
ತೋಷದಿ ಸಭೆಗಯ್ದುತೆ ಸಿಂ | ಹಾಸನದಲಿ ಕುಳ್ತು ಮಂತ್ರಿ ಕಾಲಜ್ಞಗೆಂದಂ || ೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅವಧರಿಸು ಮಂತ್ರೀಶ ಪೂರ್ವದೊ | ಳೆವಗೆ ದತ್ತಾತ್ರೇಯಮುನಿನೃಪ ||
ನಿವಹವನು ಗೆಲಲಿತ್ತಿರುವ ಸಹ | ಸವನು ದಯದಿ || ೧ ||

ಭುಜ ಸಹಸ್ರವ ಕೊಟ್ಟುದಲ್ಲದೆ | ನಿಜದಿ ತನ್ನಾಳ್ವಿಕೆಯೊಳಿರುತಿಹ ||
ಪ್ರಜೆಗಳಿಗೆ ಬಂದೊದಗಲಾರದು | ರುಜೆಗಳಂತೆ || ೨ ||

ಆದಕಾರಣ ಸೈನ್ಯ ಸಹಿತಲಿ | ಮೇದಿನಿಪರನು ತಡೆದು ಯುದ್ಧದಿ ||
ಕಾದಿ ಕಪ್ಪವ ತರಲು ನೆರಹಿಸು | ನೀ ದಳವನು || ೩ ||

ಹೊಡೆಸು ರಣಭೇರಿಯನು ನೆರೆಯಲಿ | ತಡೆಯದೆಮ್ಮಯ ಬಲವೆನುತ ಭೋ ||
ರ್ಗುಡಿಸಿ ನೇಮವನಿತತ ಸಚಿವಗೆ | ಪೊಡವಿಪಾಲ || ೪ ||

**ವಾರ್ಧಿಕ**

ಧರಣಿಪತಿ ತಾನಿಂತು ನುಡಿದುದಕ ನಲವಾಂತು |
ಭರದಿ ಮದ್ದಾನೆಯಂ ಕಾಲಾಳ ಸೇನೆಯಂ |
ವರರಥಾರೋಹಕರ ಕುದುರೆಗಳ ವಾಹಕರ ನೆರಹಿದಂ ಮಂತ್ರಿ ಜವದಿ |
ಧುರದೊಳಗೆ ವೈರಿಗಳ ಜೈಸಿ ಬಹ ಭೇರಿಗಳ |
ಭರಿತ ಶಬ್ದವ ಕೇಳಿ ನೃಪತಿ ಹರುಷವ ತಾಳಿ |
ತ್ವರಿತದಲಿ ಶೃಂಗರಿಸಿ ಬಹುಶಸ್ತ್ರಗಳ ಧರಿಸಿ ಪೊರಟನದನೇನೆಂಬೆನು || ೧ ||

**ರಾಗ ಕಾಂಭೋಜ ಮಟ್ಟೆತಾಳ**

ಪೊರಟನಂದು ವಿಜಯಯಾತ್ರೆಗೆ | ಕೃತವೀರ್ಯನಣುಗ | ಬರುತ ವಿಕ್ರಮದಲಿ ಧಾತ್ರಿಗೆ ||
ಧೊರೆಗಳಾದ ಜೈನ ಗ್ಯೆಟಿ | ತುರುಕ ತುಳುವ ಶೂರಸೇನ ||
ಕುರು ತ್ರಿಗರ್ತ ಹೂಣ ಯವನ | ಧರಣಿಪರನು ಗೆಲಿದ ಧುರದಿ || ಪೊರಟು || ೧ ||

ಅಂಗ ಕೋಸಲೇಂದ್ರ ಸಿಂಹಳ | ಮಹರಾಷ್ಟ್ರ ವರಕ | ಳಿಂಗ ಲಾಟ ವತ್ಸ ಕೇರಳ ||
ಕೊಂಗ ಮ್ಲೇಂಛ ಸೈಂಧವಾ ತೆ | ಲುಂಗ ಶಂಕರೋಢ್ರ ಬರ್ಮ ||
ವಂಗರಾಜ್ಯದರಸುಗಳನು | ಭಂಗಿಸಿದನು ಕಲಹಮುಖದಿ || ಪೊರಟು || ೨ ||

ಚೋಳ ಪಾಂಡ್ಯ ಮತ್ಸ್ಯ ಬರ್ಬರ | ಪಾಂಚಾಲ ಮಲೆ | ಯಾಳ ನಿಷದ ಮಗಧ ಘೂರ್ಜರ ||
ಗೌಳ ಮಧ್ಯ ಚೈನ ವರಬಂ | ಗಾಳ ಮುಖ್ಯ ನೃಪರ ಪುರಕೆ ||
ಧಾಳಿಯಿಟ್ಟು ಶೌರ್ಯದಿಂದ | ಕಾಳಗದಲಿ ಸೋಲಿಸಿದನು || ಪೊರಟ || ೩ ||

**ಭಾಮಿನಿ**

ಅರಸರನು ಗೋಳ್ಗುಟ್ಟಿಸುತ ಸಂ |
ಗರಪರಾಕ್ರಮಿ ಬರಲು ಮಿಕ್ಕಿನ |
ಧರೆಯಧಿಪರು ಸಹಸ್ರಭುಜದವನೀಶನನು ಕಂಡು |
ಶರಣು ಹೊಗುತಲಿ ಕಪ್ಪ ಕಾಣಿಕೆ |
ಸುರಿಯುತಿರೆ ಮನ್ನಿಸುತ ಮುಂದೈ ||
ತರುತ ನರ್ಮದೆತೀರದಲಿ ಪೊಯ್ಸಿದ ಗುಡಾರವನು ‖ ೧ ‖

**ಕಂದ**

ದೃಢಮನರಾಲಿಸಿರಾ ದಿನ |
ಜಡಕೇಳಿಯನಾಡಲೆಳಸಿ ಭೂಪತಿ ಪುರಕಂ ||
ತಡೆಯದೆ ಚಾರರ ಕಳುಹಿಸಿ |
ಮಡದಿಯರನು ಬೇಗ ಕರೆಸಿದನು ನದಿತಟಕಂ ‖ ೧ ‖

**ವಾರ್ಧಿಕ**

ಬರುತಿರಲು ಕಾಂತೆಯರ್ ಭ್ರಮರಾಲಕಾಂತೆಯರ್ |
ಕರಿಕಳಭ ಗಮನೆಯರ್ ಕುಂದೇಭರದನೆಯರ್ |
ಮಿರುಗುತಿಹ ಪಾಣಿಯರ್ ವರ್ಮ್ಮಾರು ವೇಣಿಯರ್ ತರತರದ ಪಲ್ಲಕಿಯೊಳು |
ತೆರಳುತಿಹ ರಭಸದಿಂ ನಿಂದಿರಲು ಹರುಷದಿಂ |
ಧರಣಿಪತಿ ಕಂಡಾಗ ನುಡಿದ ನಗುತಲಿ ಬೇಗ |
ತರುಣಿಯರು ಜನಕೇಳಿಗಿಳಿರೆಂಬ ನುಡಿ ಕೇಳಿ ಭರದೊಳನುವಾದರಾಗ ‖ ೧ ‖

**ರಾಗ ರೇಗುಪ್ತಿ ಏಕತಾಳ**

ಜಲಕೇಳಿಯಾಡಿದನಾಗ | ಬಲುಭುಜನರ್ಜುನ ಬೇಗ ‖ ಜಲ ‖ಪ‖

ನದಿಯ ಪ್ರವಾಹದಿ | ಚದುರಲು ಕಾಣುತ್ತ ||
ಒದಗಿ ಪಿಡಿದು ನಿಜ | ಸುದತಿಯರೊಡನೆ ‖ ಜಲ ‖ ೧ ‖

ಸಾಸಿರ ಭುಜದಿ ಸು | ವಾಸಿನಿಯರನು ತ ||
ಕ್ಕೈಸುತಲಾ ಧರ | ಣೀಶನು ಮುದದಿ ‖ ಜಲ ‖ ೨ ‖

ತರುಣಿಯರಿಟ್ಟಿಹ | ಚರಣನೂಪುರದಾ ||
ಭರಣಗಳ್ ಝಣರೆನೆ | ಧರಣಿಪನೊಡನೆ ‖ ಜಲ || ೩ ‖

**ವಾರ್ಧಿಕ**

ಕಂಕಣದ ರವದಿಂದ ಕಂಕಣವ ಚದರುತಿಹ |
ಪಂಕಜಾಕ್ಷಿಯರೊಡನೆ ಭೂಪಾಲನಾಡಲ್ಕತ್ತ |
ಲಂಕಾಧಿನಾಥ ನಿಜಬಲವ ನೆರಹುತ ಚಂದ್ರ ಹಾಸಮಂ ಝಳಪಿಸುತಲಿ |
ಶಂಕೆಯಿಲ್ಲದ ರಕ್ಕಸರ ಸಮೂಹದೊಳು ಬಲು |
ಬಿಂಕದಿಂ ಪೊಂದೇರನಡರಿ ಮಾಹಿಷ್ಮತಿಗೆ |
ಶಂಕರರೋಪಾಸಕಂ ನಡೆತಂದು ಬಾಗಿಲವರೊಡನೆಂದನೀ ತೆರದೊಳು || ೧ ||

**ರಾಗ ಕಾಂಭೋಜ ಝಂಪೆತಾಳ**

ಸಂದೇಶಚರನೆ ಕೇಳರುಹು ನಿಮ್ಮೊಡೆಯಗಾಂ | ಬಂದಿಹುದ ಧುರಕೆ ಶೀಘ್ರದಲಿ ||
ಮಂದಿಮಾರ್ಬಲವನೊಡಗೊಂಡು ಬರಹೇಳೆನ | ಲ್ಕೆಂದನಾ ದೂತನೊಲವಿನಲಿ || ೧ ||

ಯಾತುಧಾನೇಂದ್ರ ಕೇಳಿಲ್ಲೆಮ್ಮ ನಗರದಲಿ | ಭೂತಳೇಶ್ವರನು ನಾರಿಯರ ||
ವ್ರಾತಸಹ ವನಕಯ್ದಿಹನು ಬರುವನರೆಘಳಿಗೆ | ನೀ ತಡೆವುದೆನಲೆಂದನಸುರ || ೨ ||

ಅನುಚರನೆ ಕೇಳು ನಿಮ್ಮರಸನಾವೆಡೆಗಯ್ದ | ನೆನುವುದನು ಪೇಳು ತನಗಿಂದು ||
ಘನ ಬೇಗದಿಂದ ನಾನಲ್ಲಿ ಗಯ್ದುವೆನೆನಲು | ದನುಜಗಿಂತೆಂದ ಚರನಂದು || ೩ ||

ಇಂದುವಿಂದೊಗೆದ ನರ್ಮದೆಯೆಂಬ ನದಿಗೆ ಸಖಿ | ವೃಂದ ಸಹ ಪೋಗಿಹನು ನೃಪನು ||
ಬಂದವನು ಮನೆಗೆ ನೀ ಪೋಪುದೇಕೆನೆ ಪೊರಟ | ನಂದು ತವಕದೊಳು ದಶಶಿರನು || ೪ ||

**ರಾಗ ಮಾರವಿ ಏಕತಾಳ**

ದನುಜನು ಬೇಗದಿ | ಧನದವಿಮಾನದಿ | ಘನರಭಸದಿ ಬರೆ ||
ದಿನಪ ಮಧ್ಯಾಹ್ನ | ಕ್ಕನುಸರಿಸಲು ಬಂ | ದನು ನರ್ಮದನದಿ ||
ವನದೊಳಗಿಳಿದೆಂ | ದನು ದೂತರಿಗೆ || ಗಾಢದಿಂದ || ೧ ||

ಚರ ಕೇಳೀವನ | ತರುಗಳೊಳಿರುತಿಹ | ಪರಿಪರಿ ಪುಷ್ಪವ ||
ಪುರಹರಪೂಜೆಗೆ | ತರುವುದು ಬೇಗಂ | ದರುಹುತಲಾ ನದಿ ||
ಶರದೊಳು ಸ್ನಾನವ | ವಿರಚಿಸುತಾಗ | ಭಕ್ತಿಯಿಂದ || ೨ ||

ಅಂದು ವಿಭೂತಿಯ | ನುಂ ಧರಿಸುತ ದಶ | ಕಂಧರನರ್ಚಿಸಿ ||
ಕಂದುಗೊರಳನನು | ಇಂದುಶೇಖರ ಶಿವ | ನೆಂದತಿ ಶ್ರದ್ಧೆಯೊ ||
ಳೊಂದಿಸಿ ಪೂಜಿಸು | ತಂದಿರುತಿರ್ದ | ಏನನೆಂಬೆ || ೩ ||

**ಕಂದ**

ಈ ಪರಿ ದನುಜನು ಭಕ್ತಿಯೊ | ಳಾ ಪಾರ್ವತಿನಾಥನರ್ಚಿಸುತ್ತಿರಲಾಗಂ ||
ಆಪಜವದನೆಯರಿದ ಕಂ | ದೋಪನೊಳಿಂತೆಂದರೊಡನೆ ನಾಚುತ ಬೇಗಂ || ೧ ||

**ರಾಗ ಸಾರಂಗ ಏಕತಾಳ**

ನೀರ ಲಾಲಿಸಿ ಕೇಳು | ನೀರಿಲ್ಲವಲ್ಲ ||
ನೀರಿಲ್ಲದಾದರೆ | ನೀರಾಟಸಲ್ಲ || ನೀರ || ೧ ||

ತೋಚುತಲಿದೆ ಕುಚ | ನಾಚಿಕೆ ನೋಡು ||
ಹೇ ಚದುರನೆ ನೀನಾ | ಲೋಚನೆ ಮಾಡು ನೀರ || || ೨ ||

ಸೇನೆ ಬಂದಂತಿಹು | ದೀ ನದೀತಟದಿ ||
ನೀನಿದನಿದರ ನಿ | ಧಾನಿಸು ದಯದಿ || ನೀರ || ೩ ||

**ವಾರ್ಧಿಕ**

ನಾರಿಯರ ಹುಯ್ಯಲನು ಕೇಳುತ್ತಲವನಿಪಂ |
ಸಾರಸಾಕ್ಷಿಯರಿಂಗೆ ನಾಚದಿರೆನುತ್ತ ಸತಿ |
ವಾರದೊಡನಾಡುತಲಿ ಕರಸಹಸ್ರದಿ ನದಿಯ ಸಲಿಲವಂ ತಡೆಯಲಾಗ |
ಭೋರೆಂದು ನದಿಯುಕ್ಕಿ ಜಲವು ಮೇಲ್ವರಿವುತ್ತ |
ತೀರದುಪವನದೊಳಿಹ ದಶಗಳನ ತೇಲಿಸಲು |
ಭೂರಿ ಕೋಪದೋಲಾರ್ಭಟಿಸುತಾಗ ಕರೆದೆಂದ ಚಾರಕರಿಗತಿ ರಭಸದಿ || ೧ ||

**ಕಂದ**

ದೂತರೆ ಜವದೊಳು ಪೋಗಿದ |
ನೀ ತಿಳಿರೆನಲಯ್ದಿ ಕಾರ್ತವೀರ್ಯನ ಬಲುಹಂ ||
ತಾ ತವಕದಿ ತಿಳಿವುತ ಬಂ |
ದಾತುರದಲಿ ದೈತ್ಯಗೊರೆದರೊಂದಿಸುತಲುಹಂ || ೧ ||

**ರಾಗ ಸಾರಂಗ ಅಷ್ಟತಾಳ**

ದನುಜೇಶ ಲಾಲಿಸಯ್ಯ | ನಾವೆಂಬುದ | ಮನದೊಳು ಗ್ರಹಿಸು ಜೀಯ ||
ಘನವಿಭವದೊಳರ್ಜು | ನನು ತನ್ನ ಸುದತಿಯ |
ರನು ಕೂಡಿ ನದಿಯಾಡ | ಲನಿತಾಯ್ತು ತಿಳಿದುಕೊ || ೧ ||

ಸಾಸಿರ ಭುಜಗಳನು | ನದಿಗೆ ತಾನ | ಡ್ಡೈಸುತ ಪಿಡಿದಿಹನು ||
ಏಸು ಬಲಾಢ್ಯನೊ | ನಿಂತಿರೆ ನದಿಯೊಳು |
ಸೂಸಿತು ನೀರೇರಿ | ದಡದ ಮೇಲಿ ಪರಿ || ೨ ||

ಆತನ ಜೈಸಲಿಕೆ | ತೀರದು ಭೂತ | ನಾಥಗೆ ಕೇಳ್ ಪರಾಕೆ |
ಸೋತಪಹಾಸ್ಯದಿ | ಮರಳಿ ಪೋಪುದರಿಂದ |
ನೀತಿಯೊಳಿಲ್ಲಿಂದ | ತಿರುಗುವುದತಿ ಚಂದ || ೩ ||

**ಭಾಮಿನಿ**

ಹೇಡಿಯಿವನನು ತನ್ನಿದಿರಿನಿಂ |
ದೂಡಿರೋಯೆನುತಾರ್ಭಟಿಸಿ ಖಳ |
ನೋಡೆ ಸಚಿವನ ಮೊಗವ ತತ್‌ಕ್ಷಣದೊಳಗೆ ಸೈನ್ಯವನು |
ಕೂಡಿಸುತ ಪೊರಮಡೆ ಪ್ರಹಸ್ತನು |
ರೂಢಿಯದುರವ ತೆರದಿ ಶರಗಳ |
ಜೋಡಿಸುತ ದಶಗಳನು ಕರೆದಿಂತೆಂದರ್ಜುನನ || ೧ ||

**ರಾಗ ಪಂಚಾಗತಿ ಮಟ್ಟೆತಾಳ**

ಫಡಫಢೆಲವೊ ಕಾರ್ತವೀರ್ಯಾ | ನೊಡನೆ ತಿಳಿದೆ ನಿನ್ನ ಶೌರ್ಯ
ಮಡದಿಯನ್ನು ಕೂಡಿಕೊಂಡು | ಜಡದೊಳಾಡ್ವುದು ||
ಪೊಡವಿಪಾಲಗುಚಿತವೇನೊ | ತಡೆಯದೀಗ ವಾರಿಯಿಂದ |
ತಡಿಗಡರ್ದು ಸಮರಕಾತು | ದೃಢದಿ ನಿಲ್ಲೆಲ || ೧ ||

ಎನುವ ಗರ್ಜನೆಯನು ಕೇಳಿ | ವನಿತೆನಿವಹ ನಾಚನಾಗ |
ಜನಪ ಕಾರ್ತವೀರ್ಯ ನೋಡಿ | ಕನಲುತಾಕ್ಷಣ ||
ಅನಕ ವಾರಿಕೇಳಿ ಬಿಟ್ಟು | ದನುಜನಿದಿರು ನಿಲ್ಲತೆಂದ |
ಘನ ಮದಾಂಧ ನಿನ್ನ ನಾಮ | ವೆನಗೆ ಪೇಳೆಲ || ೨ ||

ಕ್ರೂರನಾಗಿ ತೋರ್ಪೆ ನಿನ್ನ | ಊರದೆಲ್ಲಿ ತಂದೆ ತಾಯಿ |
ಯಾರು ಏತಕಿಲ್ಲಿ ಬಂದ | ಕಾರ್ಯವೇನೆಲ ||
ಧಾರಿಣಿಯಲಿ ತನಗೆ ಮಲೆವ | ವೀರರಿಲ್ಲ ನಿನ್ನ ಭರವು |
ಭೂರಿ ಚೋದ್ಯವೆನಲು ನುಡಿದ | ನಾರುಭಟಿಸುತ || ೩ ||

ಮನುಜರರಸ ಕೇಳು ನನ್ನ | ಜನಕ ವಿಶ್ರವಸುಮುನೀಂದ್ರ |
ಜನನಿ ಕೈಕಸಾಂಬೆ ನಗರ | ವಿನುತ ಲಂಕೆಯು ||
ಕನಕಗರ್ಭನನ್ನು ಭಜಿಸಿ | ಮನದಭೀಷ್ಟವನ್ನು ಪಡೆದು |
ಜನಪರನ್ನು ಧುರದಿ ಗೆಲುವ | ಮನದಿ ಬಂದಿಹೆ || ೪ ||

ಬಳಿಕ ಧಾರಿಣೀಶನೆಂದ | ನೆಲವೊ ಮುನಿಯ ತರಳ ನೆನಿಸು |
ತಿಳಿಯೆ ಜನಕುಪದ್ರ ಗೆಯ್ವು | ಕೆಲಸವೇನೆಲ ||

ತಳುವದೀಗ ಧುರದಿ ನಿನ್ನ | ತಲೆಯ ಹತ್ತ ಕುಟ್ಟಿ ಭೂತ |
ಬಳಗಕೀವೆನೆನುತ ಬಾಣ | ಮಳೆಯ ಕರೆದನು || ೫ ||

**ಭಾಮಿನಿ**

ಭೂಪನೆಚ್ಚಂಬುಗಳ ಕಡಿವುತ |
ಕೋಪದಿಂದ ದಶಾನನನು ದಶ |
ಚಾಪವನು ಝೇಗೆಯ್ದು ತನ್ನಯ ಬಲವನೀಕ್ಷಿಸಲು |
ತಾಪಸೇಶ್ವರ ಕೇಳು ಸಪ್ತ |
ದ್ವೀಪಪಾಲನ ಮೇಲೆ ಕವಿದುದು |
ಟೋಪದಲಿ ರಾವಣನ ಮಾರ್ಬಲವೆಂಟು ದಿಕ್ಕಿನಲಿ || ೧ ||

**ವಾರ್ಧಿಕ**

ಧರಣಿಪಂ ಪರಿಕಿಸುತಲಾ ದೈತ್ಯಸುಭಟರಂ |
ತ್ವರಿತದಿಂದೈನೂರು ಚಾಪಮಂ ಝೇಗೆಯ್ದು |
ಕರಗಳೈನೂರರಲಿ ಬಾಣಪ್ರಯೋಗಮಂ ವಿರಚಿಸಲ್ ಕಲ್ಪಾಂತ್ಯದಿ ||
ಸುರಿವ ಮಳೆಯೋ ಮೇಣದೇನೆನಲು ದನುಜ ಬಲ |
ಧರೆಗುರುಳಲಾ ಪ್ರಹಸ್ತಾದಿ ಮಂತ್ರಿಗಳೆಲ್ಲ |
ಥರಥರಸಿ ಬಸವಳಿದರೇನೆಂಬೆನರ್ಜುನನ ಸಂಗರದ ಕೌತುಕವನು || ೧ ||

**ಕಂದ**

ಸೇನೆಯು ಮಡಿದುದ ಕಂಡಾ |
ದಾನವರಧಿನಾಥನೊಡನೆ ಭೋರ್ಗುಡಿಸುತ್ತಂ ||
ಮೀನಾಂಕಾರಿಯ ತೆರದೊಳು |
ಮಾನವಪತಿಗಾಗ ನುಡಿದ ಭೀಕರಿಸುತ್ತಂ || ೧ ||

**ರಾಗ ಭೈರವಿ ಅಷ್ಟತಾಳ**

ಎಲವೊ ಭೂಪಾಲ ಕೇಳು | ನಮ್ಮಯ ದೈತ್ಯ | ಬಲವ ನೀ ಸಮರದೊಳು ||
ಗೆಲಿದೆನೆನುತ ಹಿಗ್ಗಬೇಡ ಪರಿಕಿಸೆನ್ನ | ಬಲುಹ ಸಂಗ್ರಾಮದೊಳು || ೧ ||

ವರವಿರೋಚನಪುತ್ರನು | ಸೆರೆಯೊಳಿಡೆ | ತರಳಾಕ್ಷಿಯರು ನಿನ್ನನು ||
ಭರದಿಂದಲೊಂದೊಂದು ತುತ್ತಿಗೆ ಕುಣಿಸಿದ | ಪರಿಯ ನಾನರಿತಿಹೆನು || ೨ ||

ಅವನಿಪರೊಳಗೆ ನೀನು | ಕೆಟ್ಟವರೊಳು | ಧ್ವವಿಸಿದವನು ನಿನ್ನನ್ನು ||
ಭುವನೇಶರರಿಯದೆ ಮನ್ನಿಸುವರು ರಾಜ | ನಿವಹ ಬಾಹಿರಗೆಂದನು || ೩ ||

ಭೂಲೋಕಾಮರಕುಲದಿ | ಪುಟ್ಟಿದೆ ನೀನು | ಶೀಲನಹುದು ಜಗದಿ ||
ನಾಲಿಗೆಯುಂಟೆಂದು ಗಳಹುವುದೇತಕೊ | ಬಾಲರಂತಬ್ಬರದಿ || ೪ ||

ಗಾಡಿಗಾತಿಯರ ಕೂಡಿ | ಮಧ್ಯಾಹ್ನದೊ | ಳಾಡುವೆ ನೀರ ಝೋಡಿ ||
ರೂಢಿಪಾಲರೊಳು ನೀ ಪ್ರತಿಭಟನಲ್ಲಿತ್ತ | ನೋಡದೆ ತೊಲಗು ಹೇಡಿ || ೫ ||

ವರವೇದಾವತಿಯ ನೀನು | ಕೈದುಡುಕುತ್ತ | ಧರಿಸಿದೆ ಶಾಪವನು ||
ಧರೆಯಲ್ಲಿ ಬಹುಮಾನಯುತನೆಂಬುದನು ಸರ್ವ | ರರಿತಿರುವರು ನಿನ್ನನ್ನು || ೬ ||

ಭೂಮಿಶರೆಲ್ಲರನು | ಗಲಿದು ಸಾರ್ವ | ಭೌಮನೆಂದೆನಿಸಿ ತಾನು ||
ಈ ಮಹಿಯೊಳು ಶ್ರೇಷ್ಠನೆಂದೆಂಬ ಗರ್ವವ | ಯಾಮಾರ್ಧಕಿಳಿಸುವೆನು || ೭ ||

ಈಶನಿರುವ ಗಿರಿಯ | ನೆಗಹಿ ತ್ರಿದಿ | ವೇಶರತ್ಯುಬ್ಬಟೆಯ ||
ನಾಶಗೊಳಿಸಿದಂತ ಕೊಬ್ಬ ಮುರಿವೆ ನೋಡೆ | ನ್ನೀ ಶೌರ್ಯಗಳ ಪರಿಯ || ೮ ||

ಬರಿಯ ಮಾತಾಡಿ ನೀನು | ಕಾಲವ ಕಳೆ | ದರೆ ವೀರರೆಂಬರೇನು ||
ಕರದೊಳಗಾಯುಧವಿರೆ ತೋರಿಸಸ್ತ್ರದ | ಬಿರುಸ ನೆನ್ನೊಡನೆಂದನು || ೯ ||

ದುರುಳ ದಾನವನೆ ಕೇಳು | ತೋರ್ಪೆನು ಶಸ್ತ್ರ | ದಿರವನು ನಿಮಿಷ ತಾಳು ||
ಕರೆಸಿಕೋ ಬೇಕಾದ ಭಟರನೆಂದೆಚ್ಚನು | ಶರಗಳ ತವಕದೊಳು || ೧೦ ||

**ಭಾಮಿನಿ**

ಎಚ್ಚ ಶರಗಳು ಬಂದು ಮೈಯಲಿ |
ಚುಚ್ಚಲಾ ಖಳ ನೋಡುತೌಡನು |
ಕಚ್ಚಿ ಕೋಪದೊಳೆಸೆದ ಶರವದು ಭೂಪತಿಗೆ ತಗಲೆ |
ಬೆಚ್ಚಲುಭಯ ಭಟರ್ಗೆ ಟೋಪವು |
ಹೆಚ್ಚುತಿರೆ ದಶಕಂಠ ಹೂಡಿದ |
ಕಿಚ್ಚಿನಂತವು ಮುಸುಕಲುರಿ ದಶದೆಸೆಯನಾವರಿಸೆ || ೧ ||

**ರಾಗ ಭೈರವಿ ಏಕತಾಳ**

ಭೋರಿಡುತುರಿ ಬರೆ ಬೇಗ | ನೃಪ | ಶೌರ್ಯದಿ ಪೇಳಿದನಾಗ |
ವಾರುಣಬಾಣದಿ ನಿನ್ನ | ಶರ | ತೂರಿಸಿದೆನು ಕೇಳ್ ಮುನ್ನ || ೧ ||

ಉರಗಾಸ್ತ್ರವ ನೋಡಿದಕೊ | ಈ | ಸರಳನು ನೀ ಸೈರಿಸಿಕೊ |
ತ್ವರಿತದಿ ಕೊಳ್ಳೆನುತೆಸೆದ | ದಶ | ಶಿರನದ ಕಾಣುತಲೊರೆದ || ೨ ||

ಗರುಡಕಳಂಬದಿ ನಿನ್ನ | ಶರ | ತರಿದಿಹೆ ಕೇಳಲೊ ತನ್ನ ||
ಪರುವತಶರ ಕೊಳ್ಳೆಂದು | ಗಿರಿ | ಗರಿಯನು ಬಿಡಲವನಂದು || ೩ ||

ಬಿದುರಾಸ್ತ್ರದೊಳದ ತರಿದು | ನೃಪ | ನೊದಗಿನೊಳುರೆ ಬೊಬ್ಬಿರುದು ||
ಚದುರನೆ ಮುದಿರಾಸ್ತ್ರವನು | ನೀ | ನಿದ ತಾಲೆನುತೆಸಲದನು || ೪ ||

ವಾತಕಳಂಬದೊಳಾನು | ಘನ | ವ್ರಾತದ ನಿನ್ನಸ್ತ್ರವನು ||
ಘಾತಿಸಿ ಬ್ರಹ್ಮಾಸ್ತ್ರವನು | ಘಡ | ನಾ ತೆಗೆದೆಸೆದಿಹೆನಿದನು || ೫ ||

ತಡಕೊಳ್ಳೆನಲದ ನೋಡಿ | ನೃಪ | ನೊಡನೆ ಬ್ರಹ್ಮಾಸ್ತ್ರವ ಪೂಡಿ ||
ಪೊಡವಿಪನೆಂದ ನಿರರ್ಥ | ತ | ನ್ನೊಡನೆ ಕಲಹವಿದು ಧೂರ್ತ || ೬ ||

**ವಾರ್ಧಿಕ**

ಹರ ಕೊಟ್ಟ ಶಕ್ತಿಯಂ ದಾನವಂ ತಿರುಹಿಡಲ್ |
ಧರಣಿಪಂ ಬಹು ಶರದೊಳೆಸಲದಂ ಕೈಗೊಳ್ಳ ||
ದುರವ ಕೀಲಸಲರ್ಧನಿಮಿಷ ಮೈ ಮರೆದಿರ್ದು ಘಳಿಲನೆಚ್ಚತ್ತು ಬಳಿಕ |
ಉರಿಯೊಗುವ ಕಂಗಳಿಂದಾಗ ದತ್ತಾತ್ರೇಯ ||
ಕರುಣಿಸಿದ ದಿವ್ಯಾಸ್ತ್ರಮಂ ದೈತ್ಯನುರಕಿಡಲ್ |
ಧರೆಗುರುಳಿದಂ ದನುಜನುರೆ ಕಷ್ಟದೊಳ್ ಮಗುಳೆ ಚೇತರಿಸಿಕೊಂಡೆಂದನು || ೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಮಹಿಪ ಕೇಳ್ ಸಂಗರದಿ ನೀನತಿ | ಸಹಸಿಯಹುದೀರೇಳು ಲೋಕದೊ ||
ಳಹಿವಿಭೂಷಣನಾಣೆ ಮೆಚ್ಚಿದೆ | ನಹಹ ನಿನಗೆ || ೧ ||

ಪರಿಕಿಸಾದರೆನುತ್ತ ರಾವಣ | ಧರಣಿಪಾಲನ ಕರದ ಚಾಪವ ||
ತರಿದು ಕೆಡಹಿದನಿಳೆಗೆ ತಾನತಿ | ತ್ವರಿತದಿಂದ || ೨ ||

ಘಡ ಎನುತ ಪೊಸ ಧನುವನವನಿಪ | ತುಡುಕಿ ದೈತ್ಯನ ಹತ್ತು ಕರದೊಳು ||
ಪಿಡಿದ ಧನುವನು ಕಡಿಯಲಾಕ್ಷಣ | ಘುಡುಘುಡಿಸುತ || ೩ ||

ಒಲಿದು ಕುಂಭಿನಿ ಕೊಟ್ಟ ಶೂಲವ | ನುಲಿವುತೆತ್ತಿ ನರೇಂದ್ರಗೆಂದನು ||
ಗೆಲಿದೆನೆಂದನುತುಬ್ಬಬೇಡರೆ | ಘಳಿಗೆಯೊಳಗೆ || ೪ ||

ಕಾಲ ಪುರವನು ತೋರ್ಪನೆತ್ತಿದ | ಶೂಲವನು ನೋಡಿದರೊಳಗೆ ನೀ ||
ಕಾಲ ಗಾಣದೆ ಬದುಕಿದರೆ ಭೂ | ಪಾಲರೊಳಗೆ || ೫ ||

ಘನಪರಾಕ್ರಮಿ ನೀನೆನುತಲಿಡೆ | ಜನಪನತ್ರಿಜನಿತ್ತ ಶಸ್ತ್ರದಿ ||
ಕನಲಿ ತವಕದಿ ಕಡಿಯೆ ಸುರತತಿ | ಮನದೊಳುಲಿಯೆ || ೬ ||

ಬಾಹುಸಾವಿರಧರ ಧನುವಿನಲಿ | ಮೋಹನಾಸ್ತ್ರವ ಪೂಡಿ ಪೇಳಿದ ||
ನಾಹವಪ್ರಿಯ ಕೇಳು ಶರವಿದ | ಸಾಹಸದೊಳು || ೭ ||

ಗೆಲಿದರಗ್ಗಳ ನೀನೆನುತಲಿಡೆ | ಮಲಗಿದನು ರಥದೊಳಗೆ ದಾನವ ||
ಕುಲ ಶಿರೋಮಣಿ ನಿದ್ರೆಯೊಳು ಖಳ | ಬಲ ಬೆದರಲು || ೮ ||

**ವಾರ್ಧಿಕ**

ಧೊರೆ ರಥದಿ ಮಲಗೆ ಕಂಡಸುರಬಲ ಖಾತಿಯಿಂ |
ಭರದಿ ಭೂಪನ ಮುಸುಕಲವದಿರಂ ತರಿದು ಖಳ |
ನಿರುವ ಠಾವಿಗೆ ಬಂದು ಪಾಶದಿಂ ದಶಶಿರನ ಕರಗಳಿಪ್ಪತ್ತ ಬಿಗಿದು |
ಮರಳಿ ಕವಿವಸುರರಂ ಬರಿಗೆಯ್ದು ದಾನವನ |
ಕರಿರಥಹಯಾಳಿಗಳ ಸೆರೆವಿಡಿದು ತನ್ನೆಡದ |
ಚರಣದಿಂ ರಕ್ಕಸನನೊದೆದು ಜಡಿದಾರ್ಭಟಿಸಿ ಮೂದಲಿಸುತಿಂತೆಂದನು || ೧ ||

**ರಾಗ ಕಾಂಭೋಜ ಅಷ್ಟತಾಳ**

ಸಿಕ್ಕಿದೆಯ ದೈತ್ಯರಾಯ | ನೀ | ಢಕ್ಕನೆ ಬಂದೆನ್ನ ಕೈಯ ||
ರಕ್ಕಸರೊಳು ಶ್ರೇಷ್ಠನೆನಗಾರು ಸರಿಯೆಂಬ |
ಸೊಕ್ಕಿಂದ ನೀ ಬಂದು ಧುರವ ನೆಗಳಿಯಿಂದು || ಸಿಕ್ಕಿದೆಯ || ೧ ||

ಸುರಪಾಲಜಿತು ಘಟಶ್ರವರು | ನಿನ್ನ | ಕಿರಿಯನುಜಾದಿ ದಾನವರು ||
ಧುರದೊಳು ನಿನ್ನನೊರ್ವನ ಬಿಟ್ಟುಬಿಟ್ಟೀಗ |
ತೆರಳಿದರೆಲ್ಲಿಗೆ ಕರೆಸವದಿರ ಬೇಗ || ಸಿಕ್ಕಿದೆಯ || ೨ ||

ವ್ಯಾಜಯುದ್ಧದಿ ಗೆಲ್ಲಲಾನು | ದೇವ | ರಾಜನಂತಲ್ಲ ಕೇಳ್ ನೀನು ||
ಆಜಿಯೊಳಗೆ ಮಾನವನ್ನೀಗುತಲಿ ತವ |
ರಾಜಮುಖಿಗೆ ತೋರ್ಪುದಿನ್ನೆಂತು ವಕ್ತ್ರವ || ಸಿಕ್ಕಿದೆಯ || ೩ ||

ಹರನಿರುವದ್ರಿಯನೆತ್ತಿ | ದೇವ | ವರನನು ಬಿಡದೆ ಬೆಂಬತ್ತಿ ||
ಪರಿಭವಿಸುತ ಬಿಡದಟ್ಟಿ ಸುರರ್ಕಳ |
ಸಿರಿಯ ಸೆಳೆದ ಗರ್ವವಿಂದೆಲ್ಲಿ ಪೋದುದು || ಸಿಕ್ಕಿದೆಯ || ೪ ||

ಭೂತಳಾಮರವಂಶದೊಳಗೆ | ಪುಟ್ಟಿ | ದಾತನೆಂದೆನುತ ನಾ ನಿನಗೆ ||
ಘಾತಿಸುವುದಕಂಜಿದೆನು ನೃಪನಾಗಿರ್ದ |
ಡೀ ತತೂಕ್ಷಣದೊಳು ಕೊಲುತಿದ್ದೆ ನಿನ್ನನು || ಸಿಕ್ಕಿದೆಯ || ೫ ||

**ವಾರ್ಧಿಕ**

ದುರುಳ ಖಳನನ್ನಿಂತು ಜರೆದಾ ನೃಪಾಲಕಂ |
ಕರಗಳಂ ಬಂಧಿಸುತ ಕೊಂಡೊಯ್ದು ಸೆರೆಮನೆಯೊ ||
ಳಿರಿಸಲದ ಕಂಡು ಚಿಂತಿಸಿ ಪ್ರಹಸ್ತಾದಿ ಸಚಿವರು ಸೇನೆಸಹ ತೆರಳುತ ||

ಭರದಿ ಲಂಕೆಗೆ ಬಂದು ಕೈಕಸೆಗೆ ಕೈಮುಗಿದು ||
ಒರೆದರೆಲೆ ತಾಯೆ ನಿಮ್ಮಣುಗನಂ ಕೋಳ್ವಿಡಿದು |
ಸೆರೆಯೊಳಿಟ್ಟಿಹ ಕಾರ್ತವೀರ್ಯನೆನೆ ಕೇಳ್ದಾಗ ಮನಮರುಗುತಿಂತೆಂದಳು || ೧ ||

**ರಾಗ ಸಾಂಗತ್ಯ ರೂಪಕತಾಳ**

ಏನ ಮಾಡುವೆನಯ್ಯೊ ತನ್ನಣುಗನು ಬಹು | ಮಾನವಂತನು ಕೀರ್ತಿಯುತನು ||
ತಾನೆನಿಸುತಲಿಂಥ ಹಾನಿ ಸಂಭವಿಸಿತಿ | ನ್ನೇನುಪಾಯವ ಗೆಯ್ವೆನಿದಕೆ || ೧ ||

ಎನುತ ದುಃಖದೊಳಯ್ದಿ ಮುನಿ ಪೌಲಸ್ತ್ಯನ ಪಾದ | ವನಜ ಕೆರಗಿ ಬಿನ್ನಯ್ಸಿದಳು ||
ತನುಜನ ಕಾರ್ತವೀರ್ಯನು ಬಂಧಿಸಿದನಂತೆ | ಘನಮಹಿಮನೆ ರಕ್ಷಿಸಯ್ಯೊ || ೨ ||

ಎನಲೆಂದ ಹರುಷದಿ ವನಿತೆ ಚಿಂತಿಸದಿರು | ಜನಪನಲ್ಲಿಗೆ ಪೋಗಿ ನಿನ್ನ ||
ತನಯನ ಬಿಡಿಸುವೆನೆನುತ ಮಾಹಿಷ್ಮತಿ | ಜನಪದಕಯ್ತರಲಾಗ || ೩ ||

ಚರರಿಂದ ವಾರ್ತೆಯನರಿತಿದಿರ್ಗೊಳ್ಳುತ್ತ | ಕರೆದೊಯ್ದಾಸನದಿ ಕುಳ್ಳಿರಿಸಿ ||
ಭರದೊಳರ್ಚಿಸಿ ಪಾದಕೆರಗಿ ಮತ್ತೆಂದನು | ಧರಣಿಪ ಕಾರ್ತವೀರ್ಯಾಖ್ಯ || ೪ ||

ಪರಮಪಾವನ ನಿಮ್ಮ ದರುಶನದಿಂದೆನ್ನ | ದುರಿತನಾಶನ ಜನ್ಮಸಫಲ ||
ಒರೆವುದಿನ್ನೇನಿತ್ತ ಬಂದ ಕಾರಣವೇನು | ಕರುಣದೊಳರುಹೆನಲೆಂದ || ೫ ||

**ರಾಗ ನವರೋಜು ಏಕತಾಳ**

ಮೆಚ್ಚಿದೆ ಕೇಳ್ ಭೂರಮಣ | ನಿನ್ನ | ಹೆಚ್ಚಿನ ಭಕ್ತಿಗೆ ಸುಗುಣ ||
ಅಚ್ಯುತ ಕಮಲಜ | ಕಿಚ್ಚುಗಣ್ಣವರಿಗೆ |
ನಚ್ಚಿನ ಭಕ್ತನು | ನಿಶ್ಚಯ ನೀನಹೆ || ಮೆಚ್ಚಿದೆ || ೧ ||

ಧಾರಿಣಿಪಾಲಕರೊಳಗೆ | ಬಲು | ಧೀರನು ನೀ ಜಗದೊಳಗೆ ||
ವೈರದಿ ನಿನ್ನೊಳು | ಹೋರುತ ಬದುಕುವ |
ವೀರರಾರಿಹರು | ಮೂರು ಲೋಕದೊಳು || ಮೆಚ್ಚಿದೆ || ೨ ||

ಅರಸ ಕೇಳ್ ನೀನಿಂದು | ತನ | ಗುರುವ ಶಿಷ್ಯನು ಎಂದು ||
ಹರುಷದಿ ಬಂದಿಹೆ | ಗುರುದಕ್ಷಿಣೆಯನು |
ತ್ವರಿತದಿ ಕೊಡು ಎನ | ಲೊರೆದನು ಭೂಮಿಪ || ಮೆಚ್ಚಿದೆ || ೩ ||

**ಭಾಮಿನಿ**

ಇನಿತು ಪೊಗಳುವಿರೇಕೆ ತನ್ನನು |
ಧನ ಕನಕ ಧರೆಸಹಿತ ನಿಮ್ಮದು |
ಮನಕೆ ಬಂದುದ ಕೇಳಲೀವೆನೆನುತ್ತ ಕೈಮುಗಿದು |
ಮುನಿಪನೆಂದನು ಸಕಲ ವೈಭವ |
ನಿನಗಿರಲಿ ತಾನೊಲ್ಲೆ ಭೂಪನೆ |
ತನಯನಣುಗನ ಕೊಡು ತನಗೆ ಗುರುದಕ್ಷಿಣೆಯೆನೆಂದ || ೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕೇಳಿ ಭೂಪತಿ ಹರುಷದಲಿ ದೂ | ತಾಳಿಯನು ಕರೆದೆಂದ ತನ್ನಿರಿ ||
ಕಾಲ ಸಂಕಲೆ ಕಡಿದು ವರ ದಶ | ಮೌಳಿಯನ್ನು || ೧ ||

ಎನಲು ಕರೆತರಲಾ ಕ್ಷಣದೊಳಾ | ದನುಜಪತಿ ಬಂದೆರಗೆ ನಿರುಕಿಸಿ ||
ಮುನಿಪನೆಂದನು ಕಾರ್ತವೀರ್ಯಗೆ | ವಿನತನಾಗಿ || ೨ ||

ನಾಚುತಲೆ ನೃಪಗೆರಗಿ ಕೈಗಳ | ಚಾಚಿ ತೆಗೆದಪ್ಪುತ್ತಲಾತಗೆ ||
ವಾಚಿಸಿದ ನಿನ್ನೊಡನೆ ಸಖ್ಯವ | ನಾಚರಿಸುವೆ || ೩ ||

ಮುನಿವರನು ನುಡಿ ಕೇಳ್ದು ಹರುಷದಿ | ಜನಪದಶಕಂಠರಿಗೆ ಸಖ್ಯವ ||
ನನಲಸಾಕ್ಷಿಯೊಳೆಸಗಿ ತೆರಳಿದ | ವಿನಯದಿಂದ || ೪ ||

**ಭಾಮಿನಿ**

ದುರುಳ ದಶಕಂಧರನ ಲಂಕಾ |
ಪುರಕೆ ಕಳುಹಿಸಿ ಕಾರ್ತವೀರ್ಯನು |
ನಿರತ ಸೌಖ್ಯದಿ ಧರ್ಮವನು ರಾಜ್ಯದಲಿ ನೆಲೆಗೊಳಿಸಿ |
ಸುರಪತಿಗೆ ಮಿಗಿಲಾಗಿ ಸಂತತ |
ಪುರಜನರ ಪರಿಜನರ ಕೂಡುತ |
ಧರೆಯನಾಳುತ್ತಿರ್ದನನುಪಮ ರಾಜತೇಜದಲಿ || ೧ ||

**ವಾರ್ಧಿಕ**

ಒರೆವೆ ಕೇಳ್ ಮುಂಗಥೆಯ ಚಂದ್ರಂಗೆ ಬುಧ ಬುಧಗೆ |
ತರುಣ ನಾದಂ ಪುರೂರವನವಗೆ ವಿಜಯನೆಂ |
ಬುರುಪರಾಕ್ರಮಿ ಜನಿಸಲಾತನಿಗೆ ಕಾಂಚನನು ಕಾಂಚನನ ಸುತ ಹೋತ್ರಗೆ |
ವರಸುಯಜ್ಞಾಖ್ಯ ಮಗನಾದನವನುದರದೊಳು |
ಧರಣಿಪಾಲಕನಶ್ವಯೋಜಕಂ ಕುಶನವನ |
ತರಳಕುಶನೆಂಬವನ ಸುತಗಾಧಿ ಗಾಧಿಗಾ ಸತ್ಯವತಿಯೆಂಬ ಮಗಳು || ೧ ||

**ಭಾಮಿನಿ**

ನಿರತ ಹರುಷದಿ ಗಾಧಿರಾಜನು |
ಭರತ ವಿಭವದಿ ವಿಜಯವಿರಚಿತ |
ಪುರದಿ ಕುಲವತಿಯೆನಿಪ ಸತಿಸಹಿತಖಿಳ ಸಂಪದದಿ |
ಧರೆಯ ಸದ್ಧರ್ಮದಲಿ ಪಾಲಿಸು |
ತಿರುತಲೊಂದಿನದೋಲಗದಿ ತ |
ನ್ನರಸಿಯಳ ಮೊಗ ನೋಡಿ ಚಿಂತಿಸುತೆಂದನವನೀಶ || ೧ ||

**ರಾಗ ಕಾಂಭೋಜ ಏಕತಾಳ**

ಇತ್ತ ಕೇಳೆ ಕಮಲದಳ | ನೇತ್ರೆ ತನ್ನ ನುಡಿಯ ||
ಚಿತ್ತದೊಳಗೆ ಬಹಳ ಚಿಂತೆ | ಹತ್ತಿದೆ ಕೇಳಿದೆಯ || ೧ ||

ಏನು ಚಿಂತೆ ಬಂತಿದೆನ್ನ | ಪ್ರಾಣಕಾಂತ ನಿನಗೆ ||
ನಾನು ಕೇಳಬಾರದೆಯನು | ಮಾನಿಸದೆ ಪೇಳೆನಗೆ || ೨ ||

ವಲ್ಲಭೆ ಕೇಳ್ ಕುಲದ ಬಾಳ್ವೆ | ಗಿಲ್ಲ ಮಕ್ಕಳೆಂದು ||
ಸಲ್ಲಲಿತ ಭೋಗದೊಳು ಮನ | ವಿಲ್ಲದಾಯಿತಿಂದು || ೩ ||

ನಲ್ಲ ಕೇಳು ಗಂಡು ಮಕ್ಕ | ಳಿಲ್ಲದಾದರೇನು ||
ಚೆಲ್ವ ಸುತೆಗೆ ಪತಿಯ ಗೆಯ್ದು | ಸಲ್ಲಿಸೀ ರಾಜ್ಯವನು || ೪ ||

ಹೆಣ್ಣು ಕೊಟ್ಟರಳಿಯನಾದ | ರೆನ್ನ ಕುಲದೇಳಿಗೆಗೆ ||
ಇನ್ನೆಂತು ಪತಿಯ ಮಾಳ್ಪೆ | ಕನ್ಯೆ ತಿಳುಹು ತನಗೆ || ೫ ||

**ಕಂದ**

ಪೆತ್ತರ್ಭಕನಿಲ್ಲದವಗೆ | ದತ್ತ ಸ್ವೀಕರದಿಂದೆ ಪುತ್ರನಹನಲ್ಲದೊಡಂ ||
ಪುತ್ರಿಯ ಮಗನಿಂದಲಿ ಕುಲ | ವಿಸ್ತರವಾಗದೆನೆ ಕೇಳಿ ಭಯದೊಳಗೆಂದಳ್ ||

**ಭಾಮಿನಿ**

ಅರಿಯದುಸಿರಿದ ತಪ್ಪ ಕ್ಷಮಿಸೆಂ |
ದೆರಗಲೆತ್ತುತ್ತಾಗ ಭೂಪನು |
ಹರುಷಗೊಂಡಿರೆ ಬಂದನಾ ಕ್ಷಣ ಭಾರ್ಗವವ್ರತಿಪ |
ನೆರೆದ ಸಭೆ ಸಹಿತಿದಿರುಗೊಂಡಾ |
ದರಿಸಿ ಕರೆತಂದಾಸನಾದ್ಯುಪ |
ಚರವ ಗೆಯ್ಯುತ್ತೆರಗಿ ನುಡಿದನು ನೃಪತಿ ವಿನಯದಲಿ  || ೧ ||

**ರಾಗ ಕೇದಾರಗೌಳ ಅಷ್ಟತಾಳ**

ಮುನಿಪತಿ ಬಿನ್ನಹ ಜನಪತಿ ತಾನಾಗಿ | ಘನ ತಾಪತ್ರಯದೊಳಗೆ |
ಮನಬಿದ್ದಜ್ಞಾನನ ಮನೆಗೆ ಬಂದಿರಿ ನೀವು | ತನಗನುಗ್ರಹ ಮಾಳ್ಪರೆ ||   || ೧ ||

ಎಲ್ಲಿಂದ ಬಂದುದಾವಲ್ಲಿಗೆ ಗಮನ ನೀ | ವಿಲ್ಲಿಗೆ ಬಂದ ಕಾರ್ಯ |
ಒಳ್ಳಿತೆನ್ನಯ ಜನ್ಮವೆಲ್ಲ ಸಫಲವಾಯ್ತು | ಸೊಲ್ಲಿಸಿ ಮೌನಿವರ್ಯ ||   || ೨ ||

ಎನಲೆಂದ ಭೃಗುಜನು ವನಜಾಕ್ಷಧ್ಯಾನವ | ವನದೊಳು ಗೆಯ್ಯುತಿರೆ |
ತನಗೊಬ್ಬ ಪುತ್ರನು ಜನಿಸುವಾಪೇಕ್ಷೆಯು | ಮನದೊಳಗಾಯ್ತರರೆ ||   || ೩ ||

ಅದರಿಂದ ನಾನಿಲ್ಲಿ ಒದಗಿ ಕನ್ಯಾರ್ಥಿಯಂ | ದದೊಳು ಬಂದಿರುವೆ ಕೇಳು |
ಬುಧರಿಗೆ ಭೂಪರು ಮುದದಿ ಮಗಳ ಕೊಡು | ವುದು ನೀತಿ ಗ್ರಹಿಸೆನಲು ||   || ೪ ||

**ಭಾಮಿನಿ**

ಎಂದ ನುಡಿಯರ್ಥವನು ತಿಳಿಯುತ |
ಲಂದು ತನ್ನೊಳುಗಾಧಿರಾಯನು |
ಸಂದ ಮುನಿಯಿವನಾದರೆಯು ಮತ್ಸುತೆಗೆ ಜತೆಯಿಲ್ಲ |
ಇಂದುಮುಖಿ ಜವ್ವನಳು ಮುದಿ ಮುನಿ |
ಗಿಂದು ಕೊಡುವೆನದೆಂತೆನುತ ನೃಪ |
ನೊಂದುಪಾಯವ ತಿಳಿದು ಪೇಳಿದ ಭೃಗುಜಗುತ್ತರವ  || ೧ ||

**ವಾರ್ಧಿಕ**

ಎಲೆ ಮುನಿಪ ನಿಮಗೆನ್ನ ಮಗಳ ಕೊಡುವುದಕೆನಗೆ |
ಬಿಳಿದು ಮೈ ಕಪ್ಪೊಂದು ಕಿವಿ ಮಾತ್ರವಾಗಿರುವ |
ಲಲಿತ ಸಾವಿರ ಕುದುರೆ ತಂದು ಕೊಟ್ಟರೆ ಸುತೆಯ ಧಾರೆಯೆರೆದೀವೆ ನಿಮಗೆ |
ತಿಳಿರೆನಲು ನೃಪನ ಬೀಳ್ಕೊಂಡು ಬೇಗದಿ ಯೋಗಿ |
ಜಲಧೀಶನಲ್ಲಿಗಯ್ತರೆ ಕಂಡು ವರುಣನತಿ |
ಪುಳಕದಿಂದರ್ಚಿಸುತ ನಮಿಸಿ ಬೆಸನೇನೆನಲು ನಲವಿನಿಂ ಪೇಳ್ದ ವ್ರತಿಪ  || ೧ ||

**ರಾಗ ಶಂಕರಾಭರಣ ಏಕತಾಳ**

ವರುಣದೇವ ಲಾಲಿಸಯ್ಯ | ತರಳರಿಚ್ಛೆಯಿಂದ ನಾನು ||
ಅರಸ ಗಾಧಿರಾಯನೆಡೆಗೆ | ತೆರಳಿದೆನಿಂದು || ೧ ||

ಭರದೊಳೆನಗಾತಿಥ್ಯವನ್ನು | ವಿರಚಿಸೇಕೆ ಬಂದಿರೆನಲು ||
ಧೊರೆಯು ಕನ್ಯಾರ್ಥಿಯೆನೆ ಕೇಳಿ | ಧರಣೀಶ ಪೇಳ್ದ || ೨ ||

ತರಳೆ ಬೇಕೆಂಬಾಸೆ ನಿಮಗೆ | ಇರಲೊಂದು ಕರ್ಣವು ಕಪ್ಪಾ ||
ಗಿರುವ ಬಿಳಿದು ಕುದುರೆಯ ಸಾ | ಸಿರವನು ಕೊಡಲು || ೩ ||

ಅರಸು ಮಗಳ ಕೊಡುವೆನೆನಲು | ಭರದೊಳವನ ಬೀಳುಗೊಂಡು ||
ತ್ವರಿತ ದಿಂದಿಲ್ಲಿಗೆ ನಾ ಬಂ | ದಿರುವೆನು ಕೇಳ್ಕೈ || ೪ ||

ಅದರಿಂದವನು ಪೇಳ್ದ ತೆರದ | ಕುದುರೆಯೊಂದು ಸಾವಿರವನು ||
ಒದಗಿಸಿ ನೀ ಕೊಟ್ಟರೆನಗೆ | ಮದುವೆಯಹುದಯ್ಯ || ೫ ||

**ರಾಗ ಕೇದಾರಗೌಳ ಝಂಪೆತಾಳ**

ಎನೆ ಕೇಳ್ದು ಗಹಗಹಿಸುತಾ | ವರಣನಾ | ಮುನಿಗೆಂದನಾಗ ನಗುತ ||
ಇನಿತು ದೀನತ್ವವೇಕೆ | ಸರ್ವಸ್ವ | ವನು ಕೊಡುವೆ ನಿಮಗೆ ಬೇಕೆ || ೧ ||

ಸಾಕು ಮೆಚ್ಚಿದೆನು ವರುಣ | ಬಹು ವಸ್ತು | ವೇಕಯ್ಯ ತನಗೆ ಸುಗುಣ ||
ಆ ಕನ್ಯೆ ಪ್ರತಿಗ್ರಾಹಕೆ | ಕುದುರೆ ಕೊಡು | ಸಾಕು ಬೇರೆನಗೆ ಬೇಕೆ || ೨ ||

ನಿಮ್ಮದೈ ಸಕಲ ಒಡವೆ | ನೀವ್ ಕೊಟ್ಟ | ರೆಮ್ಮ ದಾಯ್ತೆಂದು ತಿಳಿವೆ ||
ಘಮ್ಮನೊಯ್ಯುದು ಕುದುರೆಯ | ಸಾವಿರವ | ಸುಮ್ಮಾನದೊಳಗೆ ಜೇಯ || ೩ ||

ಕೊಟ್ಟೆ ಬಿಳಿದಾದಶ್ವವ | ಒಂದು ಕಿವಿ | ಯಷ್ಟಕ್ಕೆ ಕಪ್ಪಗಿರುವ |
ಕೊಟ್ಟದನು ಗಾಧಿನೃಪಗೆ | ತತ್ಸುತೆಯ | ಇಷ್ಟವಹಯ್ಯ ಮದುವೆ ನಿಮಗೆ || ೪ ||

ಎನೆ ಕೇಳ್ದು ಭೃಗುಜ ನಗುತ | ವರುಣನೊಳು | ನಿನಗೆ ದೀರ್ಘಾಯುವೆನುತ ||
ವಿನಯದಿಂ ತುರಗಸಹಿತ | ಬೀಳ್ಗೊಂಡು | ಘನವೇಗದಿಂದ ಬರುತ || ೫ ||

**ಕಂದ**

ತ್ವರಿತದಿ ಬಂದಾ ಮುನಿಪಂ |
ಧರಣಿಪನಿಗೆ ಶ್ವೇತಕುದುರೆಗಳ ಕೊಡಲಾಗಂ ||
ಪರಮೋತ್ಸಹದಲಿ ತನ್ನಯ |
ನೆರೆದಿಹ ಸಭೆಯಲ್ಲಿ ನುಡಿದ ತೋಷದಿ ಮುನಿಗಂ || ೧ ||

**ರಾಜ ಜಂಜೋಟಿ ಏಕತಾಳ**

ಭಳಿರೆ ನಾ ಮೆಚ್ಚಿದೆ ಮುನಿಯೆ | ನಿಮ್ಮ ಸಾಹಸಕೆ | ಇಳೆಯ ಮೇಲಿನ್ನಾರು ಸರಿಯೆ ||
ಛಲದೊಳು ನಿಮ್ಮೊಳವನು ತಿಳಿಯದೆ ನಾ |

ಒಲಿದದನೆಂದರೆ ಘಳಿನಯ್ತುಂದಿರಿ || ಭಳಿರೆ || ೧ ||
ಧರಣೀಶರಾದರೀಪರಿಯ | ಒಂದೇ ರೀತಿಯ | ತುರಗವ ತರುವುದಾಶ್ಚರಿಯ ||

ವರಮುನಿಗಳೊಳೀ ತೆರದೊಳು ಸಾಹಸ |
ವಿರುವರ ಕಾಣೆನು ಮರೆಯ ಮಾತೇನೈ || ಭಳಿರೆ || ೨ ||

ತನುಜೆಯ ಕೊಡುವೆನೈ ನಿಮಗೆ | ಸಂಶಯವಿಲ್ಲ |
ಮುನಿಯೆ ನಾ ನಿಮಗೆಂದ ನುಡಿಗೆ ||

ದನುಜಾರಿಯ ಕೃಪೆ ತನಗಿಹ ಕಾರಣ |
ಘನಮಹಿಮರನಿತ್ತನು ಸುತೆಗಿಂದಿಲಿ || ಭಳಿರೆ || ೩ ||

**ವಾರ್ಧಿಕ**

ಇಂತೆನುತ ಭೂವರಂ ಬಳಿಕ ತನ್ನಗರವಾ |
ದ್ಯೆತಮಂ ಶೃಂಗರಿಸಿ ಬಂಧುಬಾಂಧವರುಗಳ |
ತಿಂತಿಣಿಯ ಬರಿಸುತ್ತ ಸಕಲ ಸಾಹಿತ್ಯಗಳನಣಿಗೊಳಿಸಿ ಶುಭಲಗ್ನದಿ ||
ಸಂತಸದಿ ಮಗಳ ಮುನಿಪಗೆ ಧಾರೆಯನ್ನೆರೆದ |
ನಂತರದಿ ಚಾತುರ್ಥಿಯಂ ಕಳೆದು ಬಳುವಳಿಯ |
ನುಂ ತನುಜೆಗಿತ್ತು ವಧು ವರರುಗಳ ಮನ್ನಿಸುತ ಗಾಧಿನೃಪ ಬೀಳ್ಕೊಟ್ಟನು || ೧ ||

**ಕಂದ**

ಈ ತೆರದಿಂದಾ ಭಾರ್ಗವ |
ಪ್ರೀತೆಯನೊಡಗೊಂಡು ತನ್ನುಟಜ ಕಯ್ತುಂದು ||
ಸಾತಿಶಯದೊಳಿರಲೊಂದಿನ |
ಕಾತರದಲಿ ಸತ್ಯವತಿಯು ಪತಿಗಿಂತೆಂದಳ್ || ೧ ||

**ರಾಗ ಕೇದಾರಗೌಳ ಅಷ್ಟತಾಳ**

ಹರಣದೊಲ್ಲಭ ಕೇಳೆನ್ನರಿಕೆಯ ಕೃಪೆಯೊಳು | ನರಜನ್ಮದೊಳಗೆ ಬಂದು ||
ತರಳರು ಜನಿಸದೆ ಬರಿಯ ಭ್ರಾಂತಿಯೊಳಾನು | ಮರುಗುವುದಾಯಿತಿಂದು || || ೧ ||

ಫುಲ್ಲಾಕ್ಷಿ ಕೇಳ್ ಸುತರಿಲ್ಲೆಂದು ಚಿಂತಿಸು | ವಲ್ಲಿ ಕಾರಣವಿಹುದು ||
ಒಳ್ಳಿತು ಬುದ್ಧಿ ನಿನ್ನಲ್ಲಿ ಹುಟ್ಟುವನು ಮಾ | ವಲ್ಲಭಾಶ್ರಿತನೊಲಿದು || ೨ ||

ಪ್ರೀತ ಕೇಳೆನ್ನಯ ಮಾತೆಗರ್ಭದಿ ತನು | ಜಾತರು ಜನಿಸಲಿಲ್ಲ ||
ನೂತನ ಸುತನೊಬ್ಬನಾತಳಿಗುದಿಸುವ | ರೀತಿಯ ನಡೆಸುನಲ್ಲ || ౩ ||

ವನಿತೆ ಕೇಳ್ ನಿನ್ನಯ ಜನನಿಯ ಗರ್ಭದಿ | ಜನಿಸದೆಯಲ್ಲ ನೀನು ||
ತನಯರಿಲ್ಲೆನ್ನುವ ಘನಕಾರ್ಯ ಪೇಳ್ದೆ ನಾ | ನೆನಿತು ಗೆಯ್ಯುವೆನಿದನು || ೪ ||

ಪರಮ ಶಾಶ್ವತ ಮುನಿವರ ನಿಮ್ಮ ಮಹಿಮೆಯ | ನರಿವರಾರ್ ತ್ರೈಲೋಕ್ಯದಿ ||
ತರಳೆ ತಾನಾಗಿಹೆ ಕರುಣಿಸು ಮಾತೆಗೆ | ತರಳನ ಸಂತೋಷದಿ || ೫ ||

**ವಾರ್ಧಿಕ**

ಕಾಂತೆ ಮರುಗದಿರಿನ್ನು ನಿನ್ನ ಜನನಿಗೆ ಗಂಡು |
ಸಂತತಿಯು ನಿನಗೆ ಸಹ ಜನಿಪಂತೆ ಚರುವಿಂದ |
ಮಂತ್ರಿಸುವೆ ಪಿಂಡವೆರಡೆಂದೆನುತ ಮಂತ್ರದಿಂದೆರಡು ಪಿಂಡವನು ಜಪಿಸಿ ||
ತಾಂ ತಳುವದಯ್ದೆ ನದಿಸ್ನಾನಕೆಂದಾ ಮುನಿಪ |
ನುಂ ತೆರಳೆ ಸಂತಸದಿ ಸತ್ಯವತಿ ಕುಲವತಿಯೊ |
ಳಿಂತಿದನು ಪೇಳಲಾನಂದಶರಧಿಯೊಳಾಗ ತಾಯಿ ಮಗಳೊಡನೆಂದಳು || ೧ ||

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಮಗಳೆ ಮೋಹದ ರನ್ನೆ ಪ್ರೀತಿಲಿ | ನೆಗಳಿದೀ ಸತ್ಕಾರ್ಯವು ||
ಬಗೆಗೆ ಬಲು ಸಂತೋಷವಾಯಿತು | ಪೊಗಳ್ವೆನೆಂತು ನಿನ್ನನು || ಸಾರಸಾಕ್ಷಿ || ೧ ||

ತರಳರಿಲ್ಲದೆ ದುಃಖದಲಿ ತಾ | ನಿರಲು ಸುತರಹ ಪಿಂಡವ ||
ವರನೊಡನೆ ನೀ ಕೇಳಿ ಪಡೆದು | ದ್ಧರಿಸಿದೆಯ ಮತ್ಕುಲವನು || ಪ್ರೀತಿಯಿಂದ || ೨ ||

ಎನಲು ನುಡಿದಳು ಸತ್ಯವತಿ ಕೇಳ್ | ಜನನಿ ಮಂತ್ರಿತ ಪಿಂಡವ ||
ನಿನಗಿದುವೆ ನೀ ಕೊಳ್ಳೆನುತ್ತಿರೆ | ಮನದಿ ಶಂಕಿಸುತೆಂದಳು || ಕುವರಿಯೊಡನೆ || ౩ ||

ನಿನ್ನ ಮಂತ್ರಿತಚರುವು ಒಳ್ಳಿತ | ದನ್ನು ನೀನು ಕೊಟ್ಟರೆ ||
ತನ್ನ ಜಠರದಿ ಜನಿಪ ಗುಣಸಂ | ಪನ್ನನೆನಿಸುವ ಪುತ್ರನು || ಎನಲೊರೆದು || ೪ ||

ಈ ಪರಿಯ ನುಡಿಯದಿರು ಮುನಿಪತಿ | ಕೋಪಿಸುವ ಕೇಳ್ ಮಾತೆಯೆ ||
ಭೂಪನರಸಿಯು ನೀನು ನಿನ್ನದ | ನಾಪಡೆದು ಕೊಳ್ಳೆಂದಳು || ಖಿನ್ನಳಾಗಿ || ೫ ||

**ಭಾಮಿನಿ**

ನಿನ್ನದನು ಕೊಡು ಎನುತ ಕಾಡಲು |
ಕನ್ನಿಕಾಮಣಿ ತಾಯ ಮೋಹದಿ |
ತನ್ನದನು ಕೊಟ್ಟದನು ಕಳುಹುತಳ್ಗೆ ಮಂತ್ರಿಸಿದ |
ಸನ್ನುತದ ಪಿಂಡವನು ತಾ ತಿನ |
ಲನ್ನೆಗಲ್ಲಿಗೆ ಬಂದು ಭಾರ್ಗವ |
ನುನ್ನತದ ಕೋಪದಲಿ ನುಡಿದನು ಸತ್ಯವತಿಯೊಡನೆ || ೧ ||

**ರಾಗ ಕೇದಾರತಾಳ ಝಂಪೆತಾಳ**

ಮಡದಿ ನೀ ಗೆಯ್ದುದೇನು | ನಿನ್ನಂಥ | ಜಡಮತಿಗಳುಂಟೆ ಇನ್ನು ||
ಪಡೆದೆರಡು ಪಿಂಡಗಳನು | ಏನ್ ಗೆಯ್ದೆ | ನುಡಿ ಮಾಜದೆನಗೆ ನೀನು || ೧ ||

**ರಾಗ ಕಾಪಿ ರೂಪಕತಾಳ**

ಮಾತ ಕೇಳು ಪ್ರಾಣಕಾಂತ | ಈ ತೆರದೊಳು ಕೋಪವೇಕೆ ||
ಮಾತೆಗೊಂದು ಪಿಂಡವಿತ್ತು | ನಾ ತಿಂದೆನೊಂದೆ ಪರಾಕೆ || ಮಾತ || ೧ ||

**ರಾಗ ಕೇದಾರಗೌಳ ಝಂಪೆತಾಳ**

ಇತ್ತ ಕೇಳೆನಗೆ ನಾರಿ | ಚರು ಬದಲಿ | ಸುತ್ತವ್ವೆಗಿತ್ತೆ ಪೋರಿ ||
ಮೃತ್ಯುವಂತಿಹ ಪುತ್ರನು | ಜನಿಸುವನು | ಧೂರ್ತೆ ತವ ಬಸಿರೊಳಿನ್ನು ||

**ರಾಗ ಕಾಪಿ ರೂಪಕತಾಳ**

ಭೂರಿ ತಪ್ಪ ಕ್ಷಮಿಸು ತನಗೆ | ಕ್ರೂರಸುತನು ಜನಿಸುವಂಥ ||
ಕಾರಣವೇನದರ ಪರಿ | ಹಾರಗೆಯ್ದು ಸಲಹೊ ಕಾಂತ || ಮಾತ || ೧ ||

**ರಾಗ ಕೇದಾರಗೌಳ ಝಂಪೆತಾಳ**

ರಾಜರಿಗೆ ರಜದ ಗುಣದಿ | ಚರು ನಿನಗೆ | ರಾಜಿಸುವ ಸತ್ತ್ವಗುಣದಿ ||
ನಾ ಜಪಿಸಿದೆನು ಬದಲಿಸಿ | ಕೆಡಿಸಿದೆ ವಿ | ರಾಜಿಸುವ ಕುಲವನರಸಿ || ೧ ||

**ರಾಗ ಕಾಪಿ ರೂಪಕತಾಳ**

ದಾರಿ ತಪ್ಪಿದೆನು ನಾನೀಗ | ಸಾರಿದೆ ನಿಮ್ಮಡಿಯ ತನಗೆ ||
ಕ್ರೂರಸುತನು ಜನಿಸೆ ಕುಲವು | ದ್ಧಾರವಪ್ಪುದಿನ್ನು ಹೇಗೆ || ಮಾತ || ೧ ||

**ಭಾಮಿನಿ**

ಮರುಗದಿರು ಕೇಳರಸಿ ಸದ್ಗುಣ |
ಭರಿತ ಜನಿಸುವ ನಿನಗೆ ನಿನ್ನಯ |
ತರಳಗುದಿಸುವ ಕುವರ ಕ್ರೂರನುದಾರ ವಿಕ್ರಮನು ||
ನಿರುತವಿದು ಕೇಳೆನಲು ಮುನಿಪನ |
ಚರಣಕೆರಗುತ ಮುದದೊಳಿರಲಾ |
ತರಳೆ ಗರ್ಭವ ಧರಿಸೆ ಮುನಿ ಸಂತೋಷಮನನಾದ ‖ ೧ ‖

**ಕಂದ**

ಏಳನೆ ತಿಂಗಳೊಳಾ ಮುನಿ | ಪಾಲನು ಋಷಿವ್ರಾತವನ್ನು ಕರೆಸುತ ಮುದದಿಂ ||
ತಾ ಲಲನೆಗೆ ಸೀಮಂತವ | ಲೀಲೆಯೊಳೆಸಗುತ್ತೆ ಸುಖದೊಳಿರ್ದಂ ನಿರತಂ || ೧ ‖

**ವಾರ್ಧಿಕ**

ಘನವಿಭವದಿಂದ ಋಷಿಗಳ ಕಳುಹಿ ಭಾರ್ಗವಂ |
ವನಿತೆಬಯಕೆಯ ಸಲಿಸಿ ಸಂತಸದೊಳಿರಲೊಂದು |
ದಿನ ಶುಭಮುಹೂರ್ತದೊಳ್ ಪಡೆದಳು ಸುಲಕ್ಷಣದ ಕುವರನಂ ಸತ್ಯವತಿಯು ||
ಮುನಿ ಜಾತಕರ್ಮಮಂ ರಚಿಸಿ ವೇದೋಕ್ತದಿಂ |
ಜನಿಸಿದರ್ಭಕಗೆ ಜಮದಗ್ನಿಯೆನ್ನುವ ಪೆಸರ |
ವಿನಯದಿಂದಿಡಲಿತ್ತ ಶುಭಲಗ್ನದೊಳು ಪೆತ್ತಳಾ ಕುಲವತೀ ಸುತನನು ‖ ೧ ||

**ಭಾಮಿನಿ**

ಈ ತೆರದಿ ಜನಿಸಿರ್ದ ಶಿಶುವಿಗೆ |
ತಾ ತತೂಕ್ಷಣ ಗಾಧಿರಾಯನು |
ಜಾತಕರ್ಮವ ರಚಿಸಿ ಹರುಷದಿ ವೀಳ್ಯದಕ್ಷಿಣೆಯ |
ಭೂಲಲಾಮರರಿಂಗೆ ಕೊಟ್ಟತಿ |
ಪ್ರೀತಿಯಲಿ ಸುತಜನನಲಗ್ನವ |
ಜಾತಕದ ಫಲ ಕೇಳಲೊರೆದರು ಜೋಯಿಸರು ಮುದದಿ ‖ ೧ ||

**ರಾಗ ತೋಡಿ ಅಷ್ಟತಾಳ**

ಕೇಳಯ್ಯ | ಭೂಪ | ಕೇಳಯ್ಯ ‖ ಪ ‖

ಕೇಳಯ್ಯ ಗಾಧಿನೃಪತಿಯೆನ್ನ ಮಾತ | ಬಾಲನ ಜನನದ ಸ್ಥಿತಿಯ ಪ್ರಖ್ಯಾತ ||
ಆಲೋಚಿಸುತ ಲಗ್ನ ಗುಣಿಸಿದೆವಯ್ಯ | ಭೂಲೋಕದಲಿ ಬಲು ಚೋದ್ಯ ಕೇಳಯ್ಯ ‖ ೧ ‖

ಭೂಪರೊಳಿನ್ನೆಗ ಜನಿಸಿದವರಿಗೆ | ಈ ಪರಿ ಗುಣಗಳು ಕಾಣಲಿಲ್ಲೆಮಗೆ ||
ತಾಪಸಕುಲಕೀತ ಪ್ರಖ್ಯಾತ ಧರೆಗೆ | ಶ್ರೀಪತಿಭಜಕನೆಂದೆನಿಸುವ ಕಡೆಗೆ ‖ ೨ ‖

ವಿಶ್ವಸಮೂಹಕೆ ಪ್ರೀತಿಯೊಳಿರುವ | ವಿಶ್ವವ ತನ್ನ ಸಾಮರ್ಥ್ಯದೊಳಿಡುವ ||
ವಿಶ್ವಕರ್ತನ ತಪಸಿನೊಳು ಮೆಚ್ಚಿಸುವ | ವಿಶ್ವಾಮಿತ್ರನು ಎಂಬ ನಾಮವ ಪಡೆವ || ೩ ||

**ರಾಗ ಝಂಪೆತಾಳ**

ಭೂತಳಾಧಿಪನೆಂದ | ಜ್ಯೋತಿಷಜ್ಞರೆ ನಿಮ್ಮ ||
ಮಾತಿನರ್ಥವು ಬಹಳ | ಕೌತುಕವಿದ್ದೈಸೆ || ೧ ||

ಸತ್ಯವೋ ಪೇಳ್ದ ನುಡಿ | ನಿತ್ಯ ಧನದಾಸೆಯಲಿ ||
ಮಿಥ್ಯ ನುಡಿವಿರೆ ನಿಮ್ಮ | ಕೃತ್ಯವೇನೆನಲು || ೨ ||

ಸುಳ್ಳಲ್ಲ ಕೇಳು ಭೂ | ವಲ್ಲಭನೆ ಶಾಸ್ತ್ರದೊಳ ||
ಗಿಲ್ಲದುದು ಪೇಳಲೆಮ | ಗಿಲ್ಲವೇ ದೋಷ || || ೩ ||

ಎನೆ ಕೇಳ್ದು ನಸುನಗುತ | ಗಣಿತಜ್ಞಗುಡುಗರೆಯ ||
ವಿನಯದಿಂದಿತ್ತು ದಿನ | ಹನ್ನೊಂದನೆಯೊಳು || ೪ ||

ನಾಮಕರಣವ ಗೆಯ್ದು | ಭೂಮಿಸುರರೊಡನುಣುತ ||
ತಾ ಮುದದಿ ಕಳುಹಿ ಸು | ಪ್ರೇಮದಿಂದಿರ್ದ || ೫ ||

**ಕಂದ**

ತಪಸಿನ ಬಲದಿಂದಾ ಸುತ | ನೃಪತನುವನು ನೀಗಿ ಯೋಗಿವೃಂದದಿ ಸೇರ್ದಂ ||
ಜಪತಪದಿಂ ಜಮದಗ್ನಿಯು | ವಿಪಿನದಿ ಪೆತ್ತವನ ಸೇವೆಯೊಳಗಿರುತಿರ್ದಂ || ೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅರುಹುವೆನು ಮುಂಗಥೆಯ ರೇಣುಕ | ನುರುತರೈಶ್ವರ್ಯದೊಳಯೋಧ್ಯಾ ||
ಪುರವನಾಳುತ್ತಿರ್ದ ಶಕ್ರಗೆ | ಸರಿಸನೆನಿಸಿ || ೧ ||

ಮಿತ್ರ ವಂಶಜನೊಂದು ದಿನ ವರ | ಪುತ್ರಕಾಮೇಷ್ಟಿಯನು ರಚಿಸಲು ||
ಪುತ್ರಿ ರೇಣುಕ ಜನಿಸಿದಳು ಧಾ | ರಿತ್ರಿಪತಿಗೆ || ೨ ||

ಸುತೆ ಸಹಿತ ಭೂನಾಥನತಿ ಮುದ | ಯುತನೆನಿಸಿ ರಾಜಿಸುತಲಿರಲಾ ||
ಕ್ಷಿತಿಯೊಳಿಹ ತೀರ್ಥಗಳ ಮೀವುತ | ಪಿತನು ಸಹಿತ || ೩ ||

ಸತ್ಯವಿತಿಯಾತ್ಮಜನು ನೃಪಕುಲ | ಸತ್ತಮನ ಪುರವರವ ನೋಳ್ಪೆನೆ |
ನುತ್ತ ನಡೆತರಲರಸನದ ಕಾ | ಣುತ್ತ ಮುದದಿ || ೪ ||

**ರಾಗ ಕೇದಾರಗೌಳ ಝಂಪೆತಾಳ**

ಧಾರಿಣಿಪತಿ ದ್ವಿಜವರ್ಯರ | ಕರೆತಂದು | ಭೂರಿ ತೋಷದೊಳವದಿರಾ ||
ಚಾರು ವಿಷ್ಟರವೇರಿಸಿ | ಬೆಸಗೊಂಡ | ಬೋರನವರಿಂಗೆ ನಮಿಸಿ || ೧ ||

ಬ್ರಹ್ಮಚಾರಿಶ್ರೇಷ್ಠನು | ನೀನಿಗ | ನಮ್ಮ ಪುರಕಯ್ದುದೇನು ||
ನಿಮ್ಮ ಪೆಸರೇನೀತನು | ನಿಮಗೇನು | ಸಂಬಂಧವೆನಲೆಂದನು || ೨ ||

ಜನಪ ಕೇಳೆನ್ನ ಪೆಸರು | ಜಮದಗ್ನಿ | ಯೆನುವರಿಳೆಯೊಳು ಸರ್ವರು ||
ಘನ ತಪೋಧನನೀತನು | ಮಜ್ಜನಕ | ನೆನೆ ಭೂಪ ಮಗುಳೆಂದನು || ೩ ||

ಎಲ್ಲಿಂದ ಬಂದಿರಿನ್ನು | ನೀವ್ ಮುಂದೆ | ಕೆಲ್ಲಿಗಯ್ಯದುವಿರದನು ||
ಸೊಲ್ಲಿಪುದು ನಿಮ್ಮ ಪಾದ | ದರುಶನವಿ | ದೆಲ್ಲವರ ಮನಕೆ ಮೋದ || ೪ ||

ಧರೆಯೊಳಿಹ ತೀರ್ಥಗಳನು | ಸೇವಿಸುತ | ಮರಳಿ ಮನೆಗಯ್ದುವವನು ||
ಅರಸ ತವ ದರುಶನವನು | ವಿರಚಿಸಲು | ಭರದಿಂದ ಬಂದೆ ನಾನು || ೫ ||

ಸುತೆಯೊರ್ವಳಿಹಳವಳನು | ನಾನಾವ | ಕ್ಷಿತಿಪರಿಗೆ ಕೊಡಲದರನು ||
ಯತಿಯೆ ನೀ ಪೇಳ್ವುದೆನಲು | ಸತ್ಯವತಿ | ಪತಿ ಪೇಳ್ದನಾ ನೃಪರೊಳು || ೬ ||

ಕರೆಸೆಲ್ಲ ಭೂಮಿಪರನು | ನೀ ಬೇಗ | ವಿರಚಿಸು ಸ್ವಯಂವರವನು ||
ತರುಣಿ ಬೇಕಾದವನನು | ವರಿಸಿಕೊಳ | ಲರಸ ಕೇಳೆನಲೆಂದನು || ೭ ||

**ಭಾಮಿನಿ**

ಕರುಣನಿಧಿ ಕೇಳ್ ಸುತೆಯ ಮದುವೆಗೆ |
ಹರುಷದಲಿ ತವ ಜನಕ ಸಹ ನೀ |
ಭರದಿ ನಮ್ಮಾಲಯದಿ ನೆಲಸಿರಬೇಕೆನುತ್ತವರ |
ಪುರದೊಳಗೆ ನಿಲಿಸುತ್ತ ಬಳಿಕಾ |
ಧರಣಿಪಾಲನು ಮುದದಿ ತನ್ನಯ |
ತರಳನೆನಿಸುವ ಶೂರಸೇನನ ಕರೆವುತಿಂತೆಂದ || ೧ ||

**ರಾಗ ಕಾಂಭೋಜ ಝಂಪೆತಾಳ**

ತರಳ ನಿನ್ನನುಜೆಗಿನ್ನೆರಡು ದಿನದಲಿ ಸ್ವಯಂ | ವರವ ವಿರಚಿಸುವೆ ಪಟ್ಟಣವ ||
ಭರದಿ ಶೃಂಗರಗೆಯ್ಸುವಂತೆ ಮಂತ್ರಿಗೆ ಪೇಳಿ | ಬರೆಸು ಭೂಪರಿಗೆ ಲೇಖನವ || ೧ ||

ಮುನಿಗಳಾಶ್ರಮಕೆ ದೂತರ ಕಳುಹು ಬೇಗೆನಲು | ಜನಕನುಕ್ತಿಯ ಕೇಳಿ ನಗುತ ||
ಘನ ತವಕದಿಂದ ಮಂತ್ರಿಯನು ಕರೆಸು ತಿಂತೆಂದ | ಜನಪ ತನ್ನೊಡನೆಂದ ಮಾತ || ೨ ||

ವರ ಸಚಿವ ಕೇಳ್ ಪುರವ ಶೃಂಗರಿಸಿ ಪತ್ರಿಕೆಯ | ಬರೆಸು ಭೂಮೀಶ್ವರರ ಪುರಕೆ ||
ಚರರ ಕಳುಹಿಸಿ ಬೇಗ ಕರೆಸು ಭೂಸುರಕುಲವ | ತರಿಸು ಸಾಹಿತ್ಯಗಳ ಕ್ಷಣಕೆ || ೩ ||

ಎನೆ ಮಂತ್ರಿ ಕೇಳುದರಂತೆ ವಿರಚಿಸಲೊಡನೆ | ಜನಪರೆಲ್ಲರು ಸಂತಸದೊಳು ||
ವಿನಯದಿಂ ಸಾಕೇತಪುರಕೆ ಬಂದರದೇನ | ನೆನುವೆ ಬರುತಿಹ ಸಂಭ್ರಮಗಳು || ೪ ||

ಚ್ಯವನಸುಕುಮಾರನುತ್ಸವದಿಂದ ಋಷಿನಿವಹ | ಕುವರಸಹ ಬರಲದನು ಕಂಡು ||
ಅವನೀಶರೆಲ್ಲರನು ಕರೆತಂದು ಮನ್ನಿಸಿದ | ವಿವಿಧೋಪಚರದಿ ಮುದಗೊಂಡು || ೫ ||

**ಭಾಮಿನಿ**

ಮರುದಿನದೊಳಾ ಸಭೆಯೊಳೆಲ್ಲರು |
ಮೆರೆವ ವಿಷ್ಟರದಲ್ಲಿ ಕುಳ್ಳಿರೆ |
ಸ್ಮರಹರಾದ್ಯನಿಮಿಷರು ಬರಲವದಿರನು ಮನ್ನಿಸುತ |
ಧರಣಿಪತಿ ಯುವತಿಯರ ಕರೆದಾ |
ತರಳೆಯನು ಶೃಂಗರಿಸಿ ತಹುದೆನ |
ಲಿರದೆ ಸತಿಯರು ರೇಣುಕೆಯ ಕರೆತಂದರಾ ಸಭೆಗೆ || ೧ ||

**ವಾರ್ಧಿಕ**

ವನಿತೆಯರು ನೃಪರೆಡೆಗೆ ರೇಣುಕೆಯ ಕರೆತರಲ್ |
ಜನಕನಡಿಗಾಬಾಲೆ ಮಣಿಯಲೆತ್ತುಲೆಂದ |
ತನುಜೆ ಕೇಳೀ ಭೂಪವ್ರಾತದೊಳು ನಿನಗಾರು ಪತಿಗಳಹರವರನಿಂದು ||
ವಿನಯದಿಂ ವರಿಸೆಂದೆನುತ ಪುಷ್ಪಮಾಲೆಯಂ |
ವನಧಿವಸನಾಧೀಶನಿತ್ತಣುಗಗೆಂದನೀ ||
ಮನುಜೇಶರಂ ಸುತೆಗೆ ವಿವರದಿಂ ತೋರೆನಲ್ಕವ ಮುದದಲನುಜೆಸಹಿತ || ೧ ||

**ಕಂದ**

ಭರದಿಂ ನಡೆತಂದಾ ನೃಪ | ವರಗಡಣದ ಮಧ್ಯ ದಂಡಿಗೆಯೊಳು ಭಗಿನಿಯಂ ||
ಕರೆತಂದಾಕೆಗೆ ವಿನಯದಿ | ಧರಣಿಪಸುತನೆಂದ ನಿಂತು ಮೃದು ನುಡಿಯಿಂದಂ || ೧ ||

**ರಾಗ ಕೇದಾರಗೌಳ ಝಂಪೆತಾಳ**

ತರಳಾಕ್ಷಿ ಕೇಳೆ ನಿನಗೆ | ತೋರಿಸುವೆ | ಧರಣೀಶರವದಿರೊಳಗೆ ||
ಅರಸರಪ್ಪಂತವರನು | ನೀನೀಗ | ಹರುಷದಿಂ ವರಿಸೆಂದನು || ೧ ||

ಭೂಮೀಶ್ವರರ ಪುರವನು | ಮೇಣವರ | ನಾಮವೇನೆಂಬುದರನು ||
ನೇಮದಿಂ ಪೇಳು ನೀನು | ವರಿಸಿದಪೆ | ನಾ ಮನಕೆ ಬಂದವರನು || ೨ ||

ಪರಮೇಶ ನಿವ ಜಗತಿಗೆ | ಧಾತಾರ | ತರಳೆ ನೋಡೀತ ನಿನಗೆ ||
ವರನಹನೆ ಪೇಳ್ವುದೆನಲು | ಸಹಭವನಿ | ಗೊರೆದಳತಿ ಸಂಭ್ರಮದೊಳು || ೩ ||

ತನುವಿನರ್ಧಾಂಶವನ್ನು | ಸೆಳೆದಿಹಳು | ವನಿತೆ ಕೇಳ್ ಮೂರ್ಧವನ್ನು ||
ದನುಜಹರಪುತ್ರಿಗಿತ್ತ | ಇವಗೇಕೆ | ವನಿತೆಯರು ಪೋಪುದತ್ತ || ೪ ||

ಇತ್ತ ನೋಡಬಲೆ ನೀನು | ನಿರ್ಜರರ | ಮೊತ್ತಕಿವನಧಿರಾಜನು ||
ಉತ್ತಮನು ನಿನಗೀತನು | ಪತಿಯಹನೆ | ಚಿತ್ತದಲಿ ಗ್ರಹಿಸೆಂದನು || ೫ ||

ಜಾರತನದಿಂದೀತನು | ತಾಳಿದನು | ಭೂರಿನಯನವನು ಮೇಣು ||
ಭೂರಿ ದೈತ್ಯರ ನೋಡಲು | ಗಿರಿಗುಹೆಯ | ಸೇರುವವನೀತ ಕೇಳು || ೬ ||

ಬಳಿಕುಳಿದ ಸುಮನಸರನು | ತೋರಿಸಲು | ನಳಿನಲೋಚನೆಯವರನು ||
ಎಳಸದಿರೆಲದ ಕಾಣುತ | ತೋರಿಸಿದ | ನಿಳೆಯಧಿಪರನ್ನು ನಗುತ || ೭ ||

ಕೃತವೀರ್ಯಪುತ್ರನಿವನು | ಮೂರ್ಲೋಕ | ಪತಿಯಖಿಳ ಸಿರಿವಂತನು ||
ಅತಿಬಲಾನ್ವಿತನಿಳೆಯೊಳು | ನಿನಗೀತ | ಪತಿಯಹನೆ ಗ್ರಹಿಸಿ ಪೇಳು || ೮ ||

ಕರಗಳೀತಗೆ ಸಾವಿರ | ಪರಿಕಿಸಲು | ಶಿರವೊಂದು ಧರೆಯಧಿಪರ ||
ನೆರವಿಬಾಹಿರನೀತನು | ಎನಗೀತ | ನರಸನೆಂತೆನಲೆಂದನು || ೯ ||

ಧರಣಿವಲಯದ ಭೂಪರು | ನೆರೆದಿಹರು | ಪರಿಕಿಸೆಲ್ಲವನಿವದಿರು ||
ಅರಸರ್ ಯಾರೊಪ್ಪುವವರ | ತೋರೆನಲು | ಒರೆದಳಣ್ಣನಿಗುತ್ತರ ||೧೦||

ಅರಸರೆಲ್ಲರನು ನಾನು | ನೋಡಿದೆನು | ಹರಿಸು ದಂಡಿಗೆಯ ನೀನು ||
ಭರದಿಂದ ಮುಂದಕೆನಲು | ನಗುತನುಜೆ | ಗೊರೆದನತಿ ಸಂಭ್ರಮದೊಳು ||೧೧||

ಪರಿಕಿಸಾದರೆ ಋಷಿಗಳ | ಸಭೆಯ ಮುಂ | ದಿರುವನಿವನತ್ರಿತರಳ ||
ವರವ್ಯಾಸಋಷಿಯೀತನು | ಭೃಗುಪುತ್ರ | ತರುಣ ಜಮದಗ್ನಿಯಿವನು ||೧೨||

**ಭಾಮಿನಿ**

ಪರಿಕಿಸುತ ಜಮದಗ್ನಿಮುನಿಪನ |
ತರುಣಿ ತನ್ನಯ ಮನದೊಳೆಂದಳು |
ಸ್ಮರನಿಭವನು ಎನಗೀತ ರಮಣನೆ ಹೊರತು ಬೇರುಳಿದ |
ಸುರನರೋರಗರೆಲ್ಲರೆನ್ನಯ |
ಹಿರಿಯ ಕಿರಿಯರ ತೆರದಿ ತೋರ್ಪರು |
ಪರಮ ವಿಸ್ಮಯವೆನುತಲಿಳಿದಳು ಭರದಿ ದಂಡಿಗೆಯ || ೧ ||

**ವಾರ್ಧಿಕ**

ಸುಮದ ಮಾಲೆಯನಾಗ ರೇಣುಕೆಯು ತೋಷದಿಂ |
ಜಮದಗ್ನಿಗಿಕ್ಕಲದ ಕಾಣುತ್ತ ತವಕದಿಂ |
ದಮರತತಿ ಪುಷ್ಪವೃಷ್ಟಿಯ ಸುರಿದರೇನೆಂಬೆ ನಂಗರಕ್ಷಣೆಗೆ ಚರರು |
ಕ್ಷಮೆಯರಸನಾಜ್ಞೆಯಿಂದ ಬಳಸಿದರ್ ಮುನಿಪನಂ |
ಉಮೆಯರಸ ಮುಖ್ಯ ಸುರರೆಲ್ಲ ತೆರಳಲು ಧರಾ |
ರಮಣಂ ಕರೆವುತ್ತ ಕೋಪದಿಂ ಕಿಡಿಮಸಗಿ ಕೃತವೀರ್ಯಸುತನೆಂದನು || ೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ನೋಡಿದರೆ ಭೂಮಿಪರು ರೇಣುಕ | ಮಾಡಿದವಮಾನವನು ಮಹಿಪರ ||
ದೂಡಿ ಕೊಟ್ಟನು ತನ್ನ ಸುತೆಯನು | ಕಾಡ ಬುಧಗೆ || ೧ ||

ಮಾನ ನಿಮಗಿರೆ ನೃಪನ ನಿರ್ಜರ | ಮಾನಿನಿಯರೊಳು ಕೂಡಿಸುವುದಭಿ ||
ಮಾನ ನಿಮಗಿಲ್ಲದಿರೆ ರೇಣುಕ | ಸೂನುವಿಂಗೆ || ೨ ||

ತರುಣಿಯರ ಬಳುವಳಿಯ ಕೊಡಿರೆನ | ಲರಸರಾಲಿಸುತಾಗ ಕೋಪದೊ ||
ಳೊರೆದರಾ ಮಾಹಿಷ್ಮತೀಪುರ | ದೆರೆಯನೊಡನೆ || ೩ ||

ಖಾತಿಯೇಕೆಲೆ ಜೀಯ ತ್ರಿದಶ | ವ್ರಾತದೊಳು ರೇಣುಕನ ಕೂಡಿಸಿ ||
ಈ ತರುಣಿಯನು ತವ ವಿಲಾಸಿನಿ | ಜಾತದೊಳಗೆ || ೪ ||

ಸೇರಿಸುವೆವೆಂದೆನುತ ಭೂಮಿಪ | ವಾರವಾ ಸಾಕೇತಪುರವನು ||
ಸೂರೆಗಾರಂಭಿಸಲು ಕಾಣುತ | ಚಾರನೋರ್ವ || ೫ ||

ಭರದಿ ನಡೆತಂದಾ ಮಹೀಶನ | ಚರಣದೊಳು ಮಣಿಯುತ್ತಲೆಂದನು ||
ಧುರಕೆ ನಿಂದಿಹ ವಾರ್ತೆಯನು ಭೂ | ವರನ ಕೂಡೆ || ೬ ||

**ರಾಗ ಸಾವೇರಿ ಅಷ್ಟತಾಳ**

ಕೇಳು ರೇಣುಕೆಯ ತಾತ | ನಾನೆಂಬ ಮಾತ | ಪೇಳಲಂಜುವೆನು ಖ್ಯಾತ ||
ತಾಳಿ ಖಾತಿಯ ಸರ್ವ ಭೂಮಿಪರೆಲ್ಲರು | ಕಾಳಗಕೆಂದೆನುತ | ನಿಂದಿಹರು ಧಾತ || ೧ ||

ಕ್ಷಿತಿಪಾಲರೆಲ್ಲರನು | ಕೂಡಿಸಿ ಮುದ್ದು | ಸುತೆಯ ನಿಂದಿನಲಿ ನೀನು ||
ಯತಿವಂಶಜನಿಗಿತ್ತೆಯೆಂದೆಂಬ ಕೋಪದಿ | ಕೃತವೀರ್ಯಜಾದಿಗಳು | ತ್ವತ್ಪುರದೊಳು || ೨ ||

ವಿರಚಿಸುವರು ಸೂರೆಯ | ಸುಮ್ಮನೆ ಕುಳಿ | ತಿರುವೆ ನೀನೇಕೆ ಜೀಯ ||
ಕರೆಸಿ ಮಾರ್ಬಲವನ್ನು ಧುರಕೆ ಸನ್ನಹನಾಗು | ತರಿಗಳನೆಲ್ಲ ಸೀಳು | ಬೇಗದೊಳು || ೩ ||

**ಭಾಮಿನಿ**

ಚರರ ನುಡಿಯನು ಕೇಳಿ ಭೂಪತಿ |
ಕರೆಸಿ ನಿಜಸೈನ್ಯವನು ಯುದ್ಧಕೆ |
ಪೊರಟು ಪುರವನು ಸೂರೆಗೆಯ್ದುವದಿರನು ಹೊರವಡಿಸಿ |
ಬೆರಸಿದುದು ಬಲವೆರಡು ತುರಗಕೆ |
ತುರಗ ಪತ್ತಿಗೆ ಪತ್ತಿ ದಂತಿಗೆ |
ಕರಿ ಭಟಾಳಿಗೆ ಭಟರು ಹೊಯ್ದಾಡಿದರು ಸಮತಳಿಸಿ ‖ ೧ ‖

**ರಾಗ ಶಂಕರಾಭರಣ ಮಟ್ಟೆತಾಳ**

ಇಂತು ತಮ್ಮೊಳುಭಯ ಭಟರು ಮುಳಿದು ಹಳಚಲು |
ದಂತಿಹಯ ವರೂಥಸಹಿತ ಧರಣಿಗುರುಳಲು ||
ಪಿಂತಿರುಗುವ ಭಟರ ಕಂಡು ರೇಣುಕೆಯ ಪಿತ |
ಕಂತುಪಿತನ ನೆನೆದು ರಥವ ಮುಂದೆ ಹರಿಸುತ ‖ ೧ ‖

ಅರಸನವರ ವಾಹನಾದಿಗಳನು ಖಂಡಿಸಿ |
ವಿರಥರನ್ನು ಮಾಡೆ ಕಾರ್ತವೀರ್ಯಪರಿಕಿಸಿ ||
ಹರಿಸಿ ತನ್ನ ರಥವ ಕೋಪದಿಂದಲವನನು |
ಕರೆದು ಪೇಳ್ದನೆಲವೊನೃಪರ ಕರೆಸಿ ಸುತೆಯನು ‖ ೨ ‖

ಧರಣಿಸುರಗೆ ಕೊಟ್ಟ ನೀಚ ಕೇಳು ನಿನ್ನನು |
ಧರಣಿಯಲ್ಲಿ ಬಾಳಗೊಡೆನು ಸತ್ತ್ವದಿರವನು ||
ಪರಿಕಿಸೆನುತ ರೋಷವೆತ್ತು ಸರಳವೃಷ್ಟಿಯ |
ಸುರಿದನಾಗ ಕಂಡು ನೃಪತಿ ಧರಿಸಿ ಖಾತಿಯ ‖ ‖ ೩ ‖

ಸರಳ ಸರಳಿನಿಂದ ತರಿದು ನುಡಿದ ಸಮರವ |
ಅರಿತ ಪ್ರೌಢ ನೀನು ನಿನಗೆ ಕ್ಷಾತ್ರಧರ್ಮವ ||
ಒರೆವುದೇನು ತರಳೆ ತನ್ನ ಮನೆ ಬಂದನ |
ವರಿಸಿಕೊಂಡಳೆನುತಲೆಚ್ಚನವನಿಪಾಲನ ‖ ೪ ‖

**ಭಾಮಿನಿ**

ಕ್ಷಿತಿಪರಾ ಸಮಯದಲಿ ರಾಕಾ | ವತಿಯ |
ಪುತ್ರನ ತೇರ ತೊಲಗಿಸು |
ತತಿಮುನಿದು ಬಾಣಗಳ ಸುರಿದರು ರೇಣುಕನ ಮೇಲೆ |
ಯತಿಪ ಕೇಳೀಚೆಯಲಿ ರೇಣುಕ |

ಪಿತನಿಗಪಜಯ ಬಪ್ಪುದೆನುತಲಿ |
ಪತಿಯ ವದನವ ಕಂಡಳಾಕ್ಷಣ ಮನದ ದುಗುಡದಲಿ ‖ ೧ ‖

**ರಾಗ ಕೇದಾರಗೌಳ ಅಷ್ಟತಾಳ**

ತರುಣಿಯ ತಾತನ ಮುಸುಕಿದ ಭೂಪರ | ನೆರವಿಯನೀಕ್ಷಿಸುತ ||
ತಿರುಹಿ ದರ್ಭಾಗ್ರದೊಳಿಟ್ಟನು ಕೋಪದಿ | ವರಸತ್ಯವತಿಯ ಜಾತ ‖ ೧ ‖

ಹರನ ಶೂಲದ ಹತಿಗೊರಗಿದ ಗಜದೈತ್ಯ | ನುರು ಪರಿವಾರದಂತೆ ||
ಧರಣೀಶರೀತನ ಕುಶಹತಿಯಿಂ ಧರೆ | ಗುರುಳಿದರಾಗ ಮುಂತೆ ‖ ೨ ‖

ಪರಿಕಿಸಿ ಕೃತವೀರ್ಯಸುತನು ಬ್ರಹ್ಮದ್ವೇಷ | ಬರುವುದು ತಾನಿಂದಿಲಿ ||
ಧುರವ ನೆಸಗಬಾರದೆಂದು ತಿರುಗಿದನು | ಪುರಕೆ ದುಮ್ಮಾನದಲಿ ‖ ೩ ‖

ಬಳಿಕಲಾ ರೇಣುಕನೃಪತಿ ಕಾಣುತ್ತ ತ | ನ್ನಳಿಯನ ಸಹಸವನು ||
ಇಳೆಯೊಳಗ್ಗದ ವೀರ ಬುಧನಾದರೇನೆಂದು | ತಳೆದನು ಹರುಷವನು ‖ ೪ ‖

**ಭಾಮಿನಿ**

ಒರೆವೆ ನಾ ಮುಂಗಥೆಯ ಶೌನಕ |
ಧರಣಿಸುರ ಕೇಳ್ ಮುದದಿ ರೇಣುಕ |
ವಿರಚಿಸಿದನುದ್ವಾಹವನು ನಂದನೆಗೆ ತೋಷದಲಿ |
ಕರ ತುರಗಗಳ ಬಳುವಳಿಯ ಕೊ |
ಟ್ಟುರುತರ ಪ್ರೇಮದಲಿ ಯಾನವ |
ಭರದೊಳೇರಿಸುತಳಿಯನನು ಕಳುಹಿದನು ಸುತೆಸಹಿತ ‖ ೧ ‖

**ವಾರ್ಧಿಕ**

ತರುಣಿಸಹ ಬಂದು ಜಮದಗ್ನಿ ಪುಣ್ಯಾಶ್ರಮದಿ |
ನಿರತ ಸೌಖ್ಯದೊಳಿರಲು ಕೆಲವು ಕಾಲಾಂತರಕೆ ||
ಸರಸಿಜಾಕ್ಷಿ ಸುತಾಪ ಸುಮ ವಸು ಬೃಹದ್ಭಾಣರೆಂಬ ನಾಲ್ವರು ಸುತರನು |
ಹರುಷದಿಂ ಪಡೆದಳಾ ಬಳಿಕ ಶ್ರೀಕಾಂತನವ |
ತರಿಪ ತವಕದಿ ಬಂದು ರೇಣುಕೆಯ ಜಠರದೊಳ್ |
ಸ್ಥಿರವಾಗಿ ನೆಲೆಗೊಂಡ ಸ್ವಪ್ನ ಕಾಣಿಸಲಂದು ನಿಜಕಾಂತನೊಡನೆಂದಳು ‖ ೧ ‖

**ರಾಗ ಕೇದಾರಗೌಳ ಅಷ್ಟತಾಳ**

ನಿತಿಯೊಳು ಕಂಡ ಕನಸಿನೊಂದು ಚೋದ್ಯವ | ನುಸುರಲೇನದರ ನಾನು ||
ಪುಸಿನುಡಿಯಲ್ಲ ಸಂತಸದಿ ಪೇಳುವೆನೆನ | ಲುಸಿರೆಂದ ಮುನಿವರ್ಯನು ‖ ೧ ‖

ಕರಚತುಷ್ಟಯ ಶಂಖಾಬುರುಹ ಗದೆಯು ಚಕ್ರ | ಧರಿಸಿ ನೀಲಾಭ್ರದಂತೆ ||
ಮಿರುಪ ಪೀತಾಂಬರಧಾರಿಯು ಬಂದೆನ | ಗರುಹಿದ ತಾನೋರಂತೆ || ೨ ||

ಸತಿಯೆ ನಿನ್ನಯ ಭಕ್ತಿಗತಿ ಮೆಚ್ಚಿದೆನು ತವ | ಸುತನಾಗಿ ಜನಿಸುವೆನು ||
ಕೃತಕವಲ್ಲಿದು ನೀನರಿತುಕೊ ಎಂದದೃಶ್ಯ | ಸ್ಥಿತಿಗಯ್ದುದನು ಕಂಡೆನು || ೩ ||

ಎನಲು ತೋಷದೊಳೆಂದ ವನಿತೆ ಪೇಳಿನ್ನೊಮ್ಮೆ | ಘನಭಾಗ್ಯವಹ ಕನಸು ||
ಚಿನುಮಯಮೂರ್ತಿ ಸಂಜನಿಸುವ ನಿನಗಿದ | ಕನುಮಾನ ಬೇಡಿನಿಸು || ೪ ||

ಬಾಲೆ ಕೇಳ್ ಭೃಗುವಂಶದೇಳಿಗೆಯಾಗುವ | ಕಾಲ ಬಂದಿಹುದು ಕಾಣೆ ||
ಶ್ರೀಲೋಲ ನಿನ್ನಿಷ್ಟ ಪಾಲಿಪ ಭಜಿಸು ನೀ | ನಾಲಸ್ಯಗೊಳದೆ ಜಾಣೆ || ೫ ||

**ಭಾಮಿನಿ**

ವರನ ಮಾತನು ಕೇಳಿ ಸಂತಸ |
ಧರಿಸಿ ರೇಣುಕಯನವರತ ಶ್ರೀ |
ಹರಿಯಡಿಯ ಧ್ಯಾನಿಸುತಲಿರಲಯ್ದನೆಯ ಗರ್ಭದಲಿ |
ಚರಣದಲಿ ಧ್ವಜವಜ್ರರೇಖೆಯು |
ಮಿರುಪ ಕೆಂಜೆಡೆ ಕೊಡಲಿ ಭಸಿತವ |
ಕರದಿ ಪಿಡಿವುತಲುದಿಸಲಮರರು ಪೂಮಳೆಯ ಸುರಿಯೆ || ೧ ||

**ರಾಗ ಶಂಕರಾಭರಣ ಏಕತಾಳ**

ಈ ತೆರದಿ ಶಿಶುವ ಮುನಿ | ನಾಥ ಕಾಣುತಧಿಕತರ ಸಂ ||
ಪ್ರೀತಿಯಿಂದ ಕರೆಸಿ ಋಷಿ | ವ್ರಾತಗಳನ್ನು || ೧ ||

ಜಾತಕರ್ಮ ಗೆಯ್ದು ಬಳಿಕ | ಸೂತಿಕಾಂತ ದಿನದಿ ಭೃಗು ||
ಜಾತ ರಾಮನೆಂದು ಪೆಸರ | ನಾತಗಿಟ್ಟನು || || ೨ ||

ಇಂತು ನಾಮಕರಣ ಗೆಯ್ದಿ | ನಂತರದೊಳಾಗ ವ್ರತಿ ||
ಕಾಂತೆಯರ ಕೂಡಿಕೊಂಡ | ತ್ಯಂತ ಹರುಷದಿ || ೩ ||

ಕಾಂತೆ ರೇಣುಕೆಯು ಕನಕ | ವಾಂತ ತೊಟ್ಟಿಲೊಳಗಿಟ್ಟು ||
ಕಂತುಪಿತನ ತೂಗಿದಳು | ಸಂತೋಷದಿಂದ || ೪ ||

**ರಾಗ ಮಧುಮಾಧವಿ ಅಷ್ಟತಾಳ**

ಜೋ ಜೋ ಭೃಗುವಂಶಾವಾರಿಧಿಚಂದ್ರ |
ಜೋ ಜೋ ಕಾರುಣ್ಯನಿಧಿ ಗುಣಸಾಂದ್ರ ||

ಜೋ ಜೋ ಕೋಟಿಭಾಸ್ಕರರುಚಿರುಂದ್ರ |
ಜೋ ಜೋ ಸಜ್ಜನಪಾಲ ಉಪೇಂದ್ರ || ಜೋ ಜೋ || ೧ ||

ಅನುಪಮ ಪರಶುಧಾರಣತ್ರುವಿ |
ತ್ರುವಿ ತ್ರುವಿ ಮಿನಿಗುವ ಕೆಂಜೆಡೆಧರ ತ್ರುವ್ವಿ |
ವನಧಿ ಶಯನ ನಾರಾಯಣ ತ್ರುವ್ವಿ ತ್ರುವ್ವಿ |
ಘನಮಹಿಮನೆ ಶುಭಕರ ತ್ರುವ್ವಿ ತ್ರುವ್ವಿ || ಜೋ ಜೋ || ೨ ||

ದುಷ್ಟಮರ್ದನ ಶಿಷ್ಟಪಾಲನೆ ಲಾಲಿ | ಇಷ್ಟವನತರಿಗೆ ಕೊಟ್ಟವ ಲಾಲಿ ||
ಕಷ್ಟಸಂಸಾರವಿನಷ್ಟನೆ ಲಾಲಿ | ವಿಷ್ಟಪಾಧೀಶರ ಶ್ರೇಷ್ಠನೆ ಲಾಲಿ || ಜೋ ಜೋ || ೩ ||

**ವಾರ್ಧಿಕ**

ರಾಗದಿಂ ತೂಗಿದಬಲೆಯರ ಮನ್ನಿಸುತಲನು |
ರಾಗದಿಂ ಪುಷ್ಪ ತಾಂಬೂಲಮಂ ಕೊಡೆ ಪೋದ ||
ರಾಗ ಸಿತಪಕ್ಷಚಂದ್ರಮನಂತೆ ಬೆಳೆದನಾ ಬಾಲಕಂ ದಿನದಿನದೊಳು ||
ಆಗಲೆಂಟನೆ ವರುಷ ಚೌಲೋಪನಯನ ಗೆಯ್ಯು |
ತಾಗ ವೇದಾಧ್ಯಯನ ಶಾಸ್ತ್ರಪಾಠದಿ ನಿಪುಣ |
ನಾಗಿ ತರುಣತ್ವದಿದಿಂದಾಶ್ರಮದೊಳಿರುತಿರ್ದ ಧರೆಗೆ ಮಂದಾರದಂತೆ || ೧ ||

**ಭಾಮಿನಿ**

ಕರುಣಾವಾರಿಧಿ ಬೆಳೆದು ಷೋಡಶ |
ವರುಷದಲಿ ಪಿತನಪ್ಪಣೆಯ ಕೊಂ |
ಡಿರದೆ ಶಿವನಲಿ ಚಾಪವಿದ್ಯೆಯ ಕಲಿಯುತಾ ಬಳಿಕ |
ಪರಶುವಿದ್ಯೆಗೆ ಬಯಸಿ ಲಂಬೋ |
ದರನೆಡೆಯೊಳದ ಪರಿಸಲಿತ್ತಲು |
ತರುಣಿ ರೇಣುಕೆಗಾದ ಪರಿಭವವೇನ ಪೇಳುವೆನು || ೧ ||

**ರಾಗ ಬೇಗಡೆ ಏಕತಾಳ**

ಇಂದುವಂಶೋದ್ಭವನೆ ಕೇಳಿದನು | ಜಮದಗ್ನಿ ಭಕ್ತಿಗ | ಳಿಂದ ಪೂಜಿಸುತಿರತಲಗ್ನಿಯನು ||
ಅಂದು ರೇಣುಕೆಯನ್ನು ತಾ ಕರೆ | ದಿಂದು ಜಲವನು ತಾರೆನಲು ನಲ ||
ವಿಂದ ಕಲಶವ ಕೊಂಡು ನದಿಗ | ಯ್ತಂದು ಜಲವನು ತುಂಬಿಸುತ್ತಿರೆ || ೧ ||

ಅತ್ತಲನ್ನೆಗ ನದಿಗೆ ಬಂದಿರ್ವ | ಅಬಲೆಯರ ಕೂಡುತ | ಚಿತ್ರರಥನೆಂದೆಂಬ ಗಂಧರ್ವ ||
ಮೊತ್ತ ಸತಿಯರ ಕೂಡಿ ತಾನಾ | ಡುತ್ತಿರಲು ರೇಣುಕೆಯು ಕೌತುಕ ||
ವೆತ್ತು ವಿಸ್ಮಿತಳಾಗಿ ಕಾಣುತ | ನಿತ್ತು ನೋಡಿದಳೊಂದು ಘಟಿಯನು || ೨ ||

**ಭಾಮಿನಿ**

ಕೋಪಿಸುವ ಮುನಿಯೆಂದು ಬೆದರು |
ತ್ತಾ ಪತಿವ್ರತೆ ತಿಳಿದು ಬೇಗದಿ |
ತಾ ಪಿಡಿದು ಕಲಶೋದಕವ ಬರಲಾಗ ವಹಿಲದಲಿ |
ಭೂಪ ಕೇಳ್ ಕಾಮಾದಿಗಳ ತೊರೆ |
ದಾ ಪರಮ ಶಾಂತನಿಗೆ ಬಂದುದು |
ಕೋಪವಿಧಿಕೃತದಿಂದಲೆಂದನು ಭೋರ್ಗುಡಿಸಿ ಸತಿಗೆ || ೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ನಾರಿ ಕೇಳಂಬುವನು ತರುವರೆ | ಸಾರಿ ನದಿಬಳಿಗೀತ ನೀನ ||
ಲ್ಲಾರ ಮೋಹಿಸಿ ಕಂಡು ತಡೆದೆ ಬ | ಜಾರಿ ಪೇಳು || ೧ ||

ಕೆಟ್ಟ ನಡತೆಯೊಳಿರುವೆ ನಿನ್ನಯ | ಗುಟ್ಟ ತಿಳಿದೆನು ವಿಟರ ಬಯಸುವ ||
ದಿಟ್ಟೆ ಏತಕೆ ಖಚರನೊಳು ಮನ | ವಿಟ್ಟು ಬಂದೆ || ೨ ||

ತೊಲಗು ಮಮ ಗೃಹದಿಂದಲಿರ್ದಡೆ | ತಲೆಯ ಹೊಯ್ಸುವೆನೆನಲು ಕೇಳುತ ||
ಲಲನೆ ಪತಿಯಡಿಗೆರಗಿ ಪೇಳ್ದಳು | ಬಲು ಭಯದಲಿ || ೩ ||

**ರಾಗ ಕಾಂಭೋಜ ಏಕತಾಳ**

ರಮಣ ನಿನಗೀ ಕೋಪವೇಕೆ | ಕ್ಷಮಿಸಪರಾಧವನು ||
ನಮಿಸಿ ಪೇಳ್ವೆ ನಿಜವ ಕೇಳು | ವಿಮಲಚರಿತ ನೀನು || ೧ ||

ಸ್ಮರನ ಬಾಧೆಗಳುಕಿ ನಾ ಖೇ | ಚರನ ಕಂಡುದಲ್ಲ ||
ಮರವೆಯಾಯ್ತು ವಿಧಿವಶದೊ | ಳರಿವಿರಿ ನೀವೆಲ್ಲ || ೨ ||

ಕರುಣಾಬ್ಧಿ ನಾನು ನಿನ್ನ | ಚರಣಕೆ ಬಲವಂದು ||
ಕರವ ಮುಗಿದು ಬೇಡಿಕೊಂಬೆ | ಕರುಣದಿ ಸಲಹಿಂದು || ೩ ||

**ರಾಗ ಮಾರವಿ ಏಕತಾಳ**

ಬಲ್ಲೆನು ನಿನ್ನಯ ಖುಲ್ಲತನವ ನೀ | ಸೊಲ್ಲಿಸದಿರು ತನಗೆ ||
ಕೊಲ್ಲುವೆನೀ ಕ್ಷಣದಲ್ಲೆನೆ ಪೇಳ್ದಳು | ತಲ್ಲಣಿಸುತ ಪತಿಗೆ || ೧ ||

ಕೊಂದರೆ ಕೊಲಿ ನೀವಿಂದೆನ್ನಯ ತ | ಪ್ಪೊಂದನು ಕ್ಷಮಿಸುತ್ತ ||
ಮಂದಮತಿಯ ಸಲಹೆಂದೆನಲುಸಿರಿದ | ಕಂದರ ಕರೆವುತ್ತ || ೨ ||

ಎಲವೊ ಸುತಾಪನೆ ಸುಮನನೆ ವಸುವೇ | ಎಲೆ ಬೃಹದ್ಭಾಣರಿರ ||
ತಳುವದೆ ದುಷ್ಟೆಯನೀ ಖಡುಗವ ಕೊಳು | ತಲಿ ಚೆಂಡಾಡಿ ಶಿರ || ೩ ||

ಪೇಳದಿರ್ಕೈ ಕರುಣಾಳುವೆ ನಮಗೆ ಕ | ರಾಳದ ಕೆಲಸವನು ||
ಬಾಲರು ಮಾತೆಯ ಕೊಂದರೆ ನರಕವ | ನಾಳರೆ ಗ್ರಹಿಸದನು || ೪ ||

**ಭಾಮಿನಿ**

ಎನ್ನನುಜ್ಞೆಯ ಮೀರಿದಿರಿ ನೀ |
ವಿನ್ನು ಪುತ್ರರೆ ತನಗೆ ಛೀ ಛೀ |
ಕುನ್ನಿಗಳೆ ಫಡ ಎನುತ ಗರ್ಜಿಸುತೆಡಬಲವ ನೋಡಿ |
ಇನ್ನೆಂಗಂ ನೋಡಿದೆ ನಿವರ ಗುಣ |
ವನ್ನು ರಾಮಗೆ ಬೆಸಸಿ ನೋಡುವೆ |
ನೆನ್ನುತಲಿ ಭಾರ್ಗವನ ಕರೆದನು ದೀರ್ಘಸ್ವರದೊಳಗೆ || ೧ ||

**ವಾರ್ಧಿಕ**

ಹರಪುತ್ರನಾಜ್ಞೆಯೊಳು ಪರಶುವಂ ಕೊಂಡದಂ |
ತಿರುಹುತಿಹ ವೇಳೆಯೊಳ್ ಪಿತ ಕರೆದ ಶಬ್ದಮಂ |
ಹರಿ ಕೇಳುತಾ ವಿಘ್ನರಾಜನಂ ಬೀಳ್ಕೊಂಡು ಜನಕನಿದ್ದೆಡೆಗೆ ಬಂದು |
ಉರುತರದ ಭಯವ ತಾಳ್ದಗ್ರಜರ ದುಃಖದಿಂ |
ದಿರುವ ಮಾತೆಯನು ಕಂಡೇನಿದೇನೆಂದೆನುತ |
ಚರಣದಡಿಯಲಿ ಬಿದ್ದ ತರಳನಂ ಪಿಡಿದೆತ್ತಿ ಜಮದಗ್ನಿ ಬಳಿಕೆಂದನು || ೧ ||

**ರಾಗ ಕೇದಾರಗೌಳ ಝಂಪೆತಾಳ**

ಬಾ ಮಗನೆ ಪರಶುರಾಮ | ಭೃಗುವಂಶ | ದಾ ಮಹಾರ್ಣವದ ಸೋಮ ||
ನೀ ಮನದಿ ತತ್ತಳಿಸದೆ | ಕೊಲುವುದೀ | ಕಾಮಿನಿಯನೆರಡೆಣಿಸದೆ || ೧ ||

ನುಡಿಗೆರಡನಾಡಬೇಡ | ಖಡ್ಗದಲಿ | ಕಡಿ ಪಾಪಿಯನ್ನು ಗಾಢ ||
ತಡೆಯದಿರು ಮಗನೆ ನಿನಗೆ | ವಿವರವನು | ನುಡಿವೆ ನಾನೆಲ್ಲ ಕಡೆಗೆ || ೨ ||

ನಿಮ್ಮನುಜ್ಞೆಯ ನಡೆಸಲು | ಜನಿಸಿದೆನು | ನಿಮ್ಮಿಂದಲೀ ಜಗದೊಳು ||
ಜನ್ಮ ಸಫಲವಿದಾಯಿತು | ನೀವೆಂದು | ದಮ್ಮಾಳ್ಪೆ ನಿಜದ ಮಾತು || ೩ ||

ಎನುತಸಿಯ ಕರದೊಳಾಂತು | ತಾತನೊಡ | ನನುನಯದಿ ಪೇಳ್ದನಿಂತು ||
ಜನಕ ಕೊಲ್ಲುವುದಾರನು | ಎಂದು ನೀ | ನೆನಗೀವುದಪ್ಪಣೆಯನು || ೪ ||

ಬಾಲಕನೆ ತನ್ನ ಮಾತ | ಮೀರಿರ್ದ | ಖೂಳರಗ್ರಜರ ಸಹಿತ ||
ನೀ ಲಕ್ಷ್ಯವಿಡದೆ ಕೆಡಹು | ಬಳಿಕ ದು | ಶ್ಶೀಲೆ ರೇಣುಕೆಯ ಮಡುಹು ‖ ೫ ‖

ಎನಲಿರಿತವನ್ನು ಪಿಡಿದು | ಅಣ್ಣಂದಿ | ರನು ನಾಲ್ವರುಗಳ ಕಡಿದು ||
ಮನದಿ ಶಂಕಿಸದೆ ಬಂದ | ತಾಯ್ಬಳಿಗೆ | ಮುನಿ ಪೇಳ್ದ ತೆರದಿ ಕೊಂದ ‖ ೬ ‖

**ಕಂದ**

ಈ ತೆರದಿಂದಗ್ರಜರನು | ಮಾತೆಯ ಸಹ ಕೊಂದು ಬಳಿಕ ದುಮ್ಮಾನದೊಳುಂ ||
ತಾತನ ಪದಕೆರಗಲು ಸಂ | ಪ್ರೀತಿಯೊಳೆತ್ತಲಿಕೆ ರಾಮಪಿತಗಿಂತೆಂದಂ ‖ ೧ ‖

**ರಾಗ ಗೌಳತೋಡಿ ಅಷ್ಟತಾಳ**

ಕೇಳಯ್ಯ ತಾತ ಬಿನ್ನಹವ | ಕರು | ಣಾಳು ಚಿತ್ತವಿಸು ದುಮ್ಮಾನವ ||
ಪೇಳಿದಂದದೊಳು ದು | ಶ್ಶೀಲರ ಕೊಂದೆನು |
ಮೇಲೇನಪ್ಪಣೆಯೆಂದು ಕಾಲಿಗೆರಗಲಂದು || ೧ ‖

ಮೆಚ್ಚಿದೆ ನಾ ಬಾಲಕನೆ ನಿನ್ನ | ಬಲ್ಲು ಹೆಚ್ಚಿನ ದೃಢಮನಸ್ಸಿಗೆ ಮುನ್ನ ||
ಬೆಚ್ಚದಗ್ರಜರನ್ನು | ಹೆಚ್ಚಿನ ತಾಯನು |
ಕೊಚ್ಚಿದೆ ಬೇಡು ನಿ | ನ್ನಿಚ್ಛೆಯ ಸಲಿಸುವೆ ‖ ೨ ‖

ನುಡಿವುದಿನ್ನೇನು ಮಹಾತ್ಮನೆ | ಈ | ಪೊಡವಿಯು ನಗುವುದು ತಾತನೆ ||
ನುಡಿಗೆ ತಾಯನು ಕೆಡೆದೆ | ಕಡು ಪಾಪವನು ಪಡೆದೆ |
ಬಿಡದೆ ಬದುಕಿಪುದೆಂದು | ಅಡಿಗೆರಗಿದನಂದು ‖ ೩ ‖

ಚಂಡವಿಕ್ರಮ ನೀನು ಕಂದನೆ | ಮಹೋ | ದ್ದಂಡಮತಿಯು ಕೇಳಿನ್ನೊಂದನೆ ||
ಮುಂಡ ತಾನವರವರ | ರುಂಡ ಜೋಡಿಸುತ ಕ |
ಮಂಡಲೋದಕ ತಾಳಿ | ಕೊಂಡರಿಂದೇಳ್ವರು ‖ ೪ ‖

**ಭಾಮಿನಿ**

ಮುನಿಪನೆಂದುದ ಕೇಳ್ದು ರಾಮನು |
ಮನದಿ ಸಂತಸಗೊಳುತ ಬಂದಾ |
ಜನನಿಯಗ್ರಜರುಗಳು ರುಂಡವ ದೇಹದಲಿ ಬೆಸೆದು |
ಮನದಿ ತಂದೆಯ ಚರಣಯುಗಳವ |
ನೆನೆದು ತಳಿಯೆ ಕಮಂಡಲೋದಕ |
ತನತನಗೆ ಚೇತರಿಸುತೆದ್ದರು ಸರ್ವರಾಕ್ಷಣದಿ ‖ ೧ ‖

**ರಾಗ ಸಾಂಗತ್ಯ ರೂಪಕತಾಳ**

ಏಳುತೊಬ್ಬೊಬ್ಬರನಪ್ಪಿ ತೋಷಾಬ್ಧಿಯೊ | ಳಾಳುತ್ತ ರಾಮನ ನೋಡಿ ||
ಪೇಳಿದಳವಗೆ ಸುಶೀಲೆ ರೇಣುಕೆಯು ಶ್ರೀ | ಲೋಲನು ನೀ ದಿಟವಹುದು || ೧ ||

ಪುತ್ರನೀನುದಿಸಿ ಪವಿತ್ರವಾಯ್ತಿಂದೆಮ್ಮ | ಗೋತ್ರವುಭಯವಂಶ ಸಹಿತ ||
ಧಾತ್ರಿಯೊಳಖಿಳ ವಿಪತ್ತನು ಕಳೆದಿಂದು | ಸತ್ತು ಬದುಕಿದೆ ನಿನ್ನಿಂದ || ೨ ||

ರಾಮನೆ ಭೃಗುವಂಶಸೋಮನೆ ಮನ್ಮನ | ಕಾಮಿತಫಲನೆ ಬಾರೆನುತ ||
ಪ್ರೇಮದಿ ತೆಗೆದಪ್ಪಿ ಸೌಮನಸ್ಕದಿ ಪೋದ | ರಾ ಮಹಾ ಜಮದಗ್ನಿಯೆಡೆಗೆ || ೩ ||

ಪರಶುರಾಮನು ಮುನಿಚರಣಕ್ಕೆ ನಮಿಸಲು | ತರಳ ಬಾ ಬಾರೋ ಎಂದೆನುತ ||
ಹರುಷದಿ ಪಿಡಿದಪ್ಪುತೆಂದನು ನಿನ್ನಿಂದ | ಭರಿತವಾಯಿತು ನಮ್ಮ ಕೀರ್ತಿ || ೪ ||

ಎನ್ನನುಜ್ಞೆಯನು ನೀ ಮನ್ನಿಸಿ ನಡೆಸಿದೆ | ನಿನ್ನಣ್ಣರವ್ವೆಯ ಕಡಿದು ||
ಉನ್ನತ ಶಕ್ತಿಯೊಳೆಬ್ಬಿಸಿದೈ ಕೇಳು | ನಿನ್ನ ಪೋಲುವರುಂಟೆ ಜಗದಿ || ೫ ||

**ವಾರ್ಧಿಕ**

ಧರಣಿಯಮರಶ್ರೇಷ್ಠ ಬಳಿಕ ಯೋಚಿಸುತೆಂದ |
ತರುಣಿಯಂ ಕೊಲಿಸಿದವ ಕ್ರೋಧನದರಿಂದವನ |
ಹೊರವಡಿಪೆನೀಗೆನ್ನ ದೇಹದಿಂದೆನುತಾಗ ಖತಿಗೆ ಜರೆದೆಂದನೊಡನೆ |
ಇರದಿರೆನ್ನೊಳು ನೀಚ ಬೇಗ ಪೊರಡೆಂದೆನಲು |
ತ್ವರಿತದಿಂ ಪೊರಟು ಘೋರಾಕಾರದಿಂದ ಖುಷಿ |
ವರನಿದಿರಿನೊಳು ನಿಂತು ಕೈಮುಗಿದು ಭಯದಿಂದ ಯತಿವರನೊಳಿಂತೆಂದನು || ೧ ||

**ರಾಗ ತೋಡಿ ಅಷ್ಟತಾಳ**

ಬಿಡಬೇಡ | ಎನ್ನ | ಬಿಡಬೇಡ ||ಪ||
ಬಿಡಬೇಡವೆನ್ನನು ಕೆಡುವ ಕಾರ್ಯವನು |
ತಡೆದು ನಿಲಿಸುವಂಥ ಕಡುಪರಾಕ್ರಮನು || ಬಿಡಬೇಡ || ಅ ||
ಎನ್ನಿಂದ ಮನದಿಷ್ಟ ಕೈಗೊಡುತಿಹುದು |
ಎನ್ನಿಂದ ಸರ್ವ ಸಂಪದವೊದಗುವುದು ||
ಎನ್ನಿಂದ ಪಗೆಗಳ ನಿಗ್ರಹಿಸುವುದು |
ಎನ್ನಿಂದಲೊರ್ವರೊರ್ವರಿಗಂಜುತಿಹುದು || ಬಿಡಬೇಡ || ೧ ||

ದುರುಳ ಕೇಳ್ ನಿನ್ನಿಂದಲಿಷ್ಟಸಿದ್ಧಿಗಳು |
ದೊರೆವುದೆಂಬುದ ನಾನು ಕಂಡೆನಿಂದಿನೊಳು ||
ತರುಣಿಯ ಕೊಲಿಸಿದ ದುಷ್ಟಾತ್ಮ ನೀನು |
ತೆರಳೆನ್ನ ಮುಂದಿರಬೇಡೆಂದನವನು || ಬಿಡಬೇಡ || ೨ ||

ಕ್ರತು ಜಪ ತಪ ಮುಖ್ಯ ಕಾರ್ಯಗಳೆಲ್ಲ |
ಯತಿಯೆ ಕೇಳೆನ್ನ ಬಿಟ್ಟರೆ ಸಾಗದಲ್ಲ ||
ಶಿತಿಕಂಠ ವಿಷ್ಣು ಮುಖ್ಯರಿಗೆನ್ನನುಳಿದು |
ಕ್ಷಿತಿಯೊಳಾವೊಂದು ಕಾರ್ಯವ ಮಾಡಲರಿದು || ಬಿಡಬೇಡ || ೩ ||

ಯಾಗಾದಿ ಷಟ್ಕರ್ಮವೆಲ್ಲವು ಕೆಟ್ಟು |
ಹೋಗುವುದಾಕ್ಷಣ ಬಂದರೆ ಸಿಟ್ಟು ||
ಬೇಗ ನಿನ್ನನು ಕಾಮಿಸುವರೆಡೆಗೀಗ |
ಸಾಗು ನೀನೆಂದು ಜರೆದ ಮುನಿಯಾಗ || ಬಿಡಬೇಡ || ೪ ||

ಸುರಪಾಲಕನ ಮೇಲೆ ಬಲಿಯು ಕೋಪದೊಳು |
ವಿರಚಿಸಲಿಲ್ಲವೆ ಕಾರ್ಯವ ಹೇಳು ||
ಹರನನು ಮೆಚ್ಚಿಸಿ ಸುರರ ವೈರದೊಳು |
ಸಿರಿಯನು ಪಡೆಯರೆ ರಾವಣಾದಿಗಳು || ಬಿಡಬೇಡ || ೫ ||

ಮರುಳೆ ಕೇಳೆನ್ನೊಳು ಸಲುಗೆಯಿಂ ನೀನು |
ಸರಿಯಾಗಿ ವಾದಿಸಬೇಡ ನಿನ್ನುವನು ||
ಉರುಹುವೆ ಗಳಹದಿರ್ ಮನಕೆ ಬಂದಂತೆ |
ತೆರಳು ಬೇಕಾದಲ್ಲಿಗೀ ಕ್ಷಣಭ್ರಾಂತೆ || ಬಿಡಬೇಡ || ೬ ||

ಮುನಿನಾಥ ಕೇಳೀಗ ಪೇಳುವ ನುಡಿಯ |
ದಿನನಿತ್ಯದೊಳಗೆನ್ನ ಬಿಟ್ಟರು ಜೀಯ ||
ಮನಕೆ ಬೇಕಾದಾಗಲಾದರು ತನ್ನ |
ನೆನಸಿಕೊ ಮುನಿನಾಥ ಸುಗುಣ ಸಂಪನ್ನ || ಬಿಡಬೇಡ || ೭ ||

ಮನಕೆ ಬೇಕಾದಾಗಲಾದರು ನಿನ್ನ |
ನೆನೆಸುವುದಾನುಂಟೆ ನೀ ತೆರಳೆನ್ನ ||
ತನುವಿನಿಂದೆನುತ ಮುಖವ ತಿರುಗಿಸಲು |
ಮುನಿನಾಥಗಿಂತೆಂದ ಖತಿಯು ಶೀಘ್ರದೊಳು || ಬಿಡಬೇಡ || ೮ ||

ತೆರಳುವೆ ನಾನಾದರಾಜ್ಞೆಯ ನೀಡು |
ಬರುವುದು ಸದ್ಯದಿ ನಿನಗಿನ್ನು ಕೇಡು ||
ಸೆರಗಿಲಿ ಗಂಟಿಕ್ಕಿಕೊಂಡಿರು ಎಂದು |
ಸರಿದನು ಕೋಪನಂತರ್ಧಾನಕಂದು || ಬಿಡಬೇಡ || ೯ ||

**ಭಾಮಿನಿ**

ಖತಿಯ ಬಿಡೆ ಜಮದಗ್ನಿ ಕಾಣುತ |
ಯತಿಗಳೆಲ್ಲರು ತೋಷಗೊಂಡರು |
ಶತದಳಾಂಬಕನಯ್ದಿದನು ವಿಘ್ನೇಶ್ವರನ ಹೊರಗೆ |
ಯತಿಪ ಕೇಳಿ ಚೆಯಲಿ ಮಾಹಿ |
ಷ್ಮತಿಪುರಾಧಿಪನೆಡೆಗೆ ಶಬರ |
ಪ್ರತತಿ ಬಂದೊಡೆಯಂಗೆ ಬಿನ್ನಹ ಮಾಡಿದರು ನಮಿಸಿ ‖ ೧ ‖

**ರಾಗ ದಿವಾಳಿ ಏಕತಾಳ**

ಸಲಾಮು ಮಾಡ್ತೆವೆ ಸಾಮ್ಯಪರ್ಾದಕೆ | ವಿಲಾಸದಿಂದವಧಾನಿಸಿ ||
ಫಲಾಗಿಲಾ ಬಿಟ್ಟು ಬಂದೆಯ್ದೇವೆ | ಕಳುಹಿಸಿರಿ ನಮ್ಕೊಟ್ವಾಸಿ ‖ ೧ ‖

ಧೊರೆಯೆ ನಮ್ಮುದ್ಯಾವನದೊಳಗಾ | ಸುರಗೀ ಮಲ್ಲಿಗೆ ಬಕುಳ ||
ಅರಳ್ಳೈದಾವೆ ಸಂಪಗೆ ಜಾಜಿ | ಇರುವಂತಿಗೆಗಳು ಬಹಳ ‖ ೨ ‖

ಮತ್ತೆ ಪರಾಕು ಕದಳಿ ಖರ್ಜೂರ | ಕಿತ್ತಳೆ ಮಾವ್ ದಾಳಿಂಬೆ ||
ಅತ್ಯಾಶ್ಚರ್ಯದ ನಾನಾ ಫಲಗಳಿ | ರುತ್ತವೆ ವನದೊಳು ತುಂಬ ‖ ೩ ‖

ಕರುಣದಿ ಲಾಲಿಸು ನರಿ ಮೊಲ ಸಿಂಗ | ಕರಡಿ ಹಂದಿ ಕಾಡಾನೆ ||
ತರತರ ಮೃಗಗಳು ಸೊಕ್ಕಿಲಿ ವನವನು | ಮುರಿಮುರಿದಿಟ್ಟವು ಶ್ಯಾನೆ ‖ ೪ ‖

**ಭಾಮಿನಿ**

ತರಿದು ಮೃಗಗಳ ನಿರ್ಭಯದೊಳೆಮ |
ಗಿರುವುವೋಲೆಸಗದಿರೆ ಬಿಡುವೆವು |
ಧೊರೆಯ ನಮ್ಮೀ ಚಾಕರಿಯನೆನೆ ನಗುತಲಾ ನೃಪನು |
ತೆರಳಿ ನಿಮ್ಮೆಡೆಗೀಗ ತಾನ |
ಯ್ತರುವೆನೆನುತಲೆ ಕಳುಹುತರ್ಜುನ |
ಕರೆದು ಮಂತ್ರಿಯೊಳೆಂದ ಸನ್ನಹ ವಿರಚಿಸೆಂದನುತ ‖ ೧ ‖

**ವಾರ್ಧಿಕ**

ಕಾಲಜ್ಞ ಮಂತ್ರಿ ಕೇಳ್ ಬೇಟೆಗಯ್ದುವರೆ ಬಲ |
ಜಾಲಮಂ ಕೂಡಿ ಸುತ ಕೈರಾತರಂ ಕರೆಸಿ ||
ಲೀಲೆಯಿಂ ಸಕಲ ಸನ್ನಾಹ ಮಾಡೆಂದೆನಲು ಕೇಳ್ದವ ಹಸಾದವೆಂದು ||
ಮೇಳವಿಪ ಸಕಲ ದಳಮಂ ಕರೆಸಿ ಕೈರಾತ |
ರಾಳಿಯಂ ಕೂಡಿಸುತ ಬಂದು ಬಿನ್ನಯಿಸಲ್ಕೆ ||
ಭೂಲಲನೆಯಧಿಪ ಸಂತಸದಿ ಪೊರಮಟ್ಟ ನಿಸ್ಸಾಳ ವಾದ್ಯದ ಘೋಷದಿ ‖ ೧ ‖

**ರಾಗ ಮುಖಾರಿ ಏಕತಾಳ**

ಬೇಟೆಯಾಡುತ ಬಂದ ಭೂಪ | ಕೀರ್ತಿಕಲಾಪ | ಬೇಟೆಯಾಡುತ ಬಂದ ಭೂಪ || ಪ||
ಕಟ್ಟಿದರೊಂದು ಕಡೆಯೊಳ್‌ಬಲೆಯ ಮತ್ತೊಂದು ದೆಸೆಯೊಳ್ |
ತಟ್ಟಿದರ್ ಬೊಬ್ಬಿಡುತಲೆ ಕೈಯ | ಗುರಿಯ ನೋಡಿ ||
ಬಿಟ್ಟರೆ ಮೃಗಕೆ ಬಾಣಾವಳಿಯ || ತಟ್ಟನಯ್ದಿ ಶರ |
ದಟ್ಟುಳಿಯಲಿ ಕಂ | ಗೆಟ್ಟು ಮೃಗಂಗಳು | ಬಿಟ್ಟವು ಪ್ರಾಣ || ಬೇಟೆ || ೧ ||

ಮೊಲ ಹುಲಿ ಕರಡಿ ಹಂದಿ ತೋಳ | ಕಾಡ್ಗೋಣ ಸಿಂಗ ||
ಕಳಭ ಶರಭ ಶಿವ ಶಾರ್ದೂಲ | ಭುವಿಯೊಳು ಬೀಳು | ತಳಿಯೆ ಕಾಣುತ ಬೇಡರ್ಜಾಲ ||
ಬಲು ಬೇಗದಿ ಬಲೆ | ಗಳ ಹಾಕುತ ಖಗ ||
ಬಳಗವ ಪಿಡಿದನು | ಬಲು ಬೊಬ್ಬೆಯಲಿ || ಬೇಟೆ || ೨ ||

**ಭಾಮಿನಿ**

ಸೊಕ್ಕಿರುವ ವಿಧವಿಧದ ಮೃಗಗಳ |
ಹಕ್ಕಿಗಳ ಸಹಿತೆಸೆಯುತಾಡಿದ |
ನಕ್ಕಜದ ಬೇಟೆಯನು ರವಿ ಮಧ್ಯಾಹ್ನಗತನಾಗೆ |
ಸಿಕ್ಕಿ ಬಲು ಡಗೆಯೊಳಗೆ ನೃಪ ನೀ |
ರಿಕ್ಕೆಯನ್ನರಸುತ್ತಲಯ್ದಿದ |
ಲೆಕ್ಕವಿಲ್ಲದ ಸೇನೆಸಹ ಜಮದಗ್ನಿಯಾಶ್ರಮಕೆ || ೧ ||

**ರಾಗ ಸಾಂಗತ್ಯ ರೂಪಕತಾಳ**

ಅರಸನಯ್ತಂದುದ ಕಾಣುತ ಋಷಿವರ್ಯ | ಹರುಷದಿಂದಿದಿರಾಗಿ ಬಂದು ||
ಕರೆದೊಯ್ದು ದರ್ಭಾಸನವನಿತ್ತು ಮನ್ನಿಸಿ | ಬರವಿದೇನೆನಲೆಂದನಂದು || ೧ ||

ಮುನಿನಾಥ ಕೇಳಯ್ಯ ಬೇಟೆಗೆಂದೆನುತಿಂದು | ವನಕೆ ಬಂದವ ನಿಮ್ಮ ಪಾದ ||
ವನಜ ದರ್ಶನದರ್ತಿಯಲಿ ಬಂದೆನೆನಲೆಂದ | ಜನಪಗೆ ಮುನಿವರ್ಯನಾಗ || ೨ ||

ಧರಣೀಶ ಮಧ್ಯಾಹ್ನವಾಯ್ತೆನ್ನ ಗೃಹದೊಳು | ವಿರಚಿಸುತಲಿ ಭೋಜನವನು ||
ತೆರಳು ನಿನ್ನರಮನೆಗೆನಲೆಂದ ಮುನಿಪಗೆ | ವರಕಾರ್ತವೀರ್ಯಭೂಮಿಪನು || ೩ ||

ಇಹುದೆನ್ನ ಸಂಗಡ ಮುನಿವೃಂದಾಧಿಪ ಕೇಳು | ಬಹು ಪರಿವಾರಗಳೀಗ ||
ಗೃಹಕೆ ಪೋಗುವೆನೆಂದು ಪದಕೆರಗಲು ಪೇಳ್ದ | ಮಹಿಪಗೆ ಜಮದಗ್ನಿಯಾಗ || ೪ ||

ಎನಿತು ನಿನ್ನಯ ಕೂಡೆ ಪರಿವಾರವಿರ್ದೊಡೆ | ಜನಪ ಕೇಳೇನಾಯ್ತೀ ಕ್ಷಣದಿ ||
ಘನಬೇಗ ಸ್ನಾನವನೆಸಗುತ್ತ ಬರುವುದೆಂ | ದೆನುತಪ್ಪಣೆಯಿತ್ತ ಮುದದಿ || ೫ ||

**ವಾರ್ಧಿಕ**

ಎನುತರ್ಜುನಗೆ ಪೇಳ್ದು ಮುನಿನಾಥ ನೃಪನ ಪರಿ |
ಜನವನುಪಚರಿಸಲ್ಕೆ ಬರಿಸಿದ ಹವಿರ್ಧಾನಿ ||
ಯನು ಬಳಿಕ ಷಡ್ರಸಾನ್ನವ ಭಕ್ಷ್ಯ ಭೋಜ್ಯಗಳ ಘೃತ ದುಗ್ಧ ದಧಿ ತಕ್ರವ ||
ಜನಪಗವನೊಡನೆ ಬಂದಿರ್ದೆಲ್ಲ ಸೇನೆಗಂ |

ವಿನಯದಿಂ ಬೇಕಾದುದೆಲ್ಲ ಮಿತ್ತುದು ಸುರಭಿ ||
ಮುನಿಪಗುತ್ಸಾಹಿಸುತಲಿಕ್ಕಿ ಮನ್ನಿಸಲಾಗ ಸಂತುಷ್ಟಿಯಮ ತಳೆದರು || ೧ ||

**ಭಾಮಿನಿ**

ಭೂತಳಾಧಿಪ ಹರುಷದೊಳು ಮುನಿ |
ನಾಥಗೆರಗುತ ಬೀಳು ಗೊಂಡತಿ |
ಕೌತುಕವ ಕೊಳುತಾಗ ಮನದೊಳು ಚಿಂತೆಯನು ತಳೆದು |
ಭೂತಳದೊಳೆನಗಿರ್ಪ ವೈಭವ |
ಖ್ಯಾತದಷ್ಟೈಶ್ವರ್ಯ ಸುರಭಿಯ |
ಜಾತ ವಿಭವಾಂಶಕ್ಕೆ ಸರಿಯಿಲ್ಲೆಂದನಾ ಮಹಿಪ || ೧ ||

**ರಾಗ ತೋಡಿ ಅಷ್ಟತಾಳ**

ಏನಯ್ಯ | ಮಂತ್ರಿ | ಏನಯ್ಯ || ಪ ||

ಏನಯ್ಯ ಜಮದಗ್ನಿಯೆಸಗಿದ ಕಾರ್ಯ | ಮೌನಿಗಳಿಂತೆಸಗಿದುದತ್ಯಾಶ್ಚರ್ಯ ||
ಮಾನವ ಶ್ರೇಷ್ಠರಿಗುಂಟೆ ಈ ವಿಭವ | ನೀನಾಲೋಚಿಸಿ ತನಗರುಹಯ್ಯ ಸಚಿವ || ಏನಯ್ಯ || ೧ ||

ಕಾಮಧೇನುವನೊಂದು ಬರಿಸುತೆಲ್ಲರಿಗೆ | ತಾ ಮುದಗೊಳಿಸಿದನತಿ ತೃಪ್ತಿಯೊಳಗೆ ||
ಭೂಮಿಪಾಲಕರಾದರೀ ವಿಧಾನದೊಳು | ಪ್ರೇಮದೊಳುಪಚರಿಸುವರೆ ಯೋಗ್ಯದೊಳು || ಏನಯ್ಯ || ೨ ||

ನೃಪರೊಳಧಿಕ ಭಾಗ್ಯವಂತ ತಾನೆಂದು | ಚಪಳತನದಿ ಕೀರ್ತಿ ಪಡೆದುದಕಿಂದು ||
ವಿಪರೀತವಾಗಿಹ ಕಾಮಧೇನುವನು || ಅಪಹರಿಸುವ ಮನವಾಯ್ತುದಕೇನು || ಏನಯ್ಯ || ೩ ||

ಎನ್ನ ಸರ್ವಸ್ವವು ಪೋದರು ಬಿಡೆನು | ಉನ್ನತವಾಗಿಹ ಕಾಮಧೇನುವನು ||
ಇನ್ನೆಗ ರಾಜ್ಯವನಾಳಿದೆನಯ್ಯ | ತನ್ನೀ ದೇಹವು ಸ್ಥಿರಂಜೀವಿಯೇನಯ್ಯ || ಏನಯ್ಯ || ೪ ||

**ರಾಗ ಮಧುಮಾಧವಿ ಏಕತಾಳ**

ಆಗದಾಗದು ಭೂಮಿಪಾಲಚಂದಿರನೆ |
ಯೋಗಿಗೀಗೆರಡೆಣಿಸದಿರು ಭೂವರನೆ || ಆಗ || ಪ ||

ಚಕ್ರವರ್ತಿಯು ಸೇನೆಸಹ ಬಂದನೆನುತಲಿ |
ವಿಕ್ರಮದಲಿ ತರಸಿದ ಸುರಭಿಯನು ||
ಶುಕ್ರನಿಗಧಿಕನೆಂದುಪಚರಿಸಿದನಾತ |
ಗಕ್ರಮ ಯೋಚನೆ ಗೆಯ್ಯದಿರ್ ನೀನು || ಆಗ || ೧ ||

**ವಾರ್ಧಿಕ**

ಏನಾದರಾಗಲೆಲೆ ಮಂತ್ರಿ ಕೇಳೀ ಕಾಮ |
ಧೇನುಮಂ ತರಿಸದುಳಿಯೆ ನೆನುತ್ತ ಚಾರರಿಗೆ |
ತಾನೆಂದ ಪಿಂದಯ್ದಿ ಸುರಭಿಯಂ ತಹುದೆಂದು ಬೆಸಸೆ ಪೋಗಲು ದೂತರು ||
ಮೌನಿಯಾಶ್ರಮಕಯ್ದಿ ಭರದಿಂದಲಾ ಹವಿ |
ರ್ಧಾನಿಯಂ ಪಿಡಿದೆಳೆಯೆ ಬೇಡ ಬೇಡೆಂದೊರೆಯ |
ಲಾನಿರೋಧವನಲಕ್ಷಿಸಿ ಗರ್ಜಿಸುತ್ತೊಯ್ದರೇನೆಂಬೆನದ್ಭುತವನು || ೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಮುನಿಪ ಕೇಳೀ ತೆರದಿ ಸುರಭಿಯ | ನನುಚರರು ಪಿಡಿದಾಗ ನೃಪ ನರ ||
ಮನೆಗೆ ತೆರಳುತ್ತಿರುವ ಸಮಯದೊ | ಳನುವನರಿತು || ೧ ||

ನಡೆದು ಬಂದಾ ಕೋಪ ಮುನಿಪಗೆ | ನುಡಿದುದೆನ್ನನು ಸ್ವೀಕರಿಸಿ ನೀ ||
ಕೊಡುಭರದಿ ಶಾಪವನು ನೃಪಬಲ | ಸುಡುವೆ ನೋಡು || ೨ ||

ಹಿಡಿದೆಯಾದರೆ ಛಲವನೆನ್ನಲಿ | ಕೆಡುವುದಿದಕೋ ಕಾರ್ಯ ಗ್ರಹಿಸೆನೆ ||
ನುಡಿದನಾ ಮುನಿನಾಥ ಕ್ರೋಧಗೆ | ಕಡುಹಿನಿಂದ || ೩ ||

ತುರುವನೊಯ್ಯಲಿ ಭೂಪ ಮೇಣಾ | ತರಣಿ ಪಶ್ಚಿಮದಲ್ಲಿ ಮೂಡಲಿ ||
ಶರಧಿ ಸಪ್ತವು ಬೆರತುಹೋಗಲಿ | ತೆರಳು ನಿನ್ನ || ೪ ||

ಸರುವಥಾ ನಾ ವರಿಸೆನೆನೆ ಖತಿ | ಸರಿದನತ್ತಲು ಕಾಮಧೇನುವ ||
ಚರರು ತಾ ಕೊಂಡೊಯ್ದರಿತ್ತಲು | ಪುರಕೆ ಜವದಿ || ೫ ||

**ಭಾಮಿನಿ**

ದೂತರೊಯ್ದಾ ಸುರಭಿಯನು ತರೆ |
ಪ್ರೀತಿಯಲಿ ಮನ್ನಿಸುತಲಾ ಭೂ |
ನಾಥ ಮೃತ್ಯುವ ಕರೆದ ವೋಲ್ ಬಂಧಿಸಲು ಬಳಿಕಿತ್ತ |
ಭೀತ ಹರುಷದಿ ಚಿಂತಿಸುವ ನಿಜ |
ತಾತನೆಡೆಗಾಕ್ಷಣದಿ ಬಂದು ವಿ |
ಧೂತಕಿಲ್ಬಿಷ ರಾಮಪದಕೆರಗುತ್ತಲಿಂತೆಂದ || ೧ ||

**ರಾಗ ಮಾರವಿ ಏಕತಾಳ**

ತಾತನೆ ಸುಮ್ಮನೆ | ಯೇತಕೆ ಚಿಂತಿಪೆ | ಪೇತುಗರಂದದಲಿ ||
ನೀ ತಿಳುಹಿಸು ತನ | ಗೀ ತೆರ ದುಃಖದ | ರೀತಿಯ ತವಕದಲಿ || ೧ ||

**ರಾಗ ಬಿಲಹರಿ ರೂಪಕತಾಳ**

ಮಗನೆ ಲಾಲಿಸು | ಕಾರ್ತವೀರ್ಯನು | ವಿಗಡ ಸೇನೆಯ | ಕೂಡಿ ವನದೊಳು ||
ಮೃಗವಿಹಾರಕೆ | ಬಂದು ಬಿಸಿಲೊಳು | ಡಗೆಯ ಕೊಳ್ಳುತ | ಬಂದನಿಲ್ಲಿಗೆ || ೧ ||

**ರಾಗ ಮಾರವಿ ಏಕತಾಳ**

ಮಾನವರರಸನು | ತಾನಯ್ತುರಲವ | ನೇನಸಗಿದ ಜೀಯ ||
ಮಾನಸ ದುಃಖವಿ | ಧಾನವನೆನಗನು | ಮಾನಿಸದುಸಿರಯ್ಯ || ೧ ||

**ರಾಗ ಬಿಲಹರಿ ರೂಪಕತಾಳ**

ಭೂಮಿಪತಿಯುಪ | ಚರಣೆಗೋಸುಗ | ಕಾಮಧೇನುವ | ತರಿಸಿಮುದದೊಳು ||
ಪ್ರೇಮದಿಂದುಪ | ಚರಿಸೆ ಸುರಭಿಯ | ಕಾಮಿಸುತ್ತಲಿ | ಕೊಂಡು ಪೋದನು || ೧ ||

**ರಾಗ ಮಾರವಿ ಏಕತಾಳ**

ಪುಂಡುನೃಪಾಲನು | ಚಂಡತನದಿ ಕಸು | ಕೊಂಡನೆ ಸುರಭಿಯನು ||
ಲಂಡನ ತಲೆಯನು | ಖಂಡಿಸುತಲಿ ಭೂ | ಮಂಡಲಕಿಳುಹುವೆನು || ೧ ||

**ರಾಗ ಬಿಲಹರಿ ರೂಪಕತಾಳ**

ತರಳ ಲಾಲಿಸು | ನೀನು ಮೊದಲಿಗೆ | ಧರಣಿಪತಿಯೊಳು | ಕೇಳು ಸಾಮದಿ ||
ತುರುವ ಕೊಡಿದಿರೆ | ನೆಗಳಿ ರಣವನು | ಭರದಿ ಸುರಭಿಯ | ಬಿಡಿಸಿ ತಾರಯ್ಯ || ೧ ||

**ರಾಗ ಮಾರವಿ ಏಕತಾಳ**

ಮರುಗದೆ ಮನದೊಳ | ಗಿರಿ ನೀವೆನುತಲೆ | ಶರ ಧನು ಪರಶುವನು ||
ಧರಿಸುತ ನಮಿಸಲು | ಪರಸುತ ಕಳುಹಿದ | ತರಳನ ಋಷಿವರನು || ೧ ||

**ಭಾಮಿನಿ**

ಶಿರದ ಕೆಂಜೆಡೆ ಫಣೆಯ ಭಸಿತದ |
ಮೆರೆವ ರುದ್ರಾಕ್ಷಿಗಳ ಮಾಲೆಯ |
ಮಿರುಪ ತೇಜದ ಬೊಮ್ಮಮೂರುತಿ ಪೊರಟು ವಹಿಲದಲಿ |

ಉರಿನಯನವಿಲ್ಲದ ಮಹೇಶನೊ |
ಧರೆಯ ನುಂಗುವ ಭೈರವನೊ ಎಂ |
ಬುರುತರದ ಕೋಪದಿ ನಡೆದ ಮಾಹಿಷ್ಮತೀಪುರಕೆ || ೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಬಂದು ಪುರಬಾಹ್ಯದೊಳು ತಾ ನಿಲು | ತೆಂದನೆಲವೋ ದೂತರಿರ ನೀ |
ವಿಂದಿನಲಿ ನಿಮ್ಮರಸನಿಗೆ ನಾ | ಬಂದ ಹದನ || ೧ ||

ಒರೆಯ ಬೇಹುದು ಸೇನೆಸಹ ನಡೆ | ತರಲಿ ಸಂಗರಕಲ್ಲದಿರ್ದಡೆ ||
ಸುರಭಿಯನು ತನಗಿತ್ತು ಬದುಕಲಿ | ಮರೆಯ ಪೊಕ್ಕು || ೨ ||

ಭೂಮಿಪತಿ ತಾನಾಗಿ ನಮ್ಮಯ | ಕಾಮಧೇನುವ ಕದ್ದು ತಂದಿಹ ||
ಸಾಮದಲಿ ಕೊಡದಿರಲು ತಾ ನಿ | ರ್ನಾಮನಹನು || ೩ ||

ಈ ತೆರದಿ ಪೇಳೆಂದು ಗರ್ಜಿಸೆ | ದೂತನೊರ್ವನು ಭಯದೊಳೋಡುತ ||
ಭೂತಳಾಧಿಪಗೆರಗಿ ಪೇಳ್ದನು | ಭೀತಿಯಿಂದ || ೪ ||

**ರಾಗ ಮುಖಾರಿ ಏಕತಾಳ**

ಲಾಲಿಸು ಕಾರ್ತವೀರ್ಯ ಧೊರೆಯೆ |
ಸೌಭಾಗ್ಯದ ಸಿರಿಯೆ | ಲಾಲಿಸು ಕಾರ್ತವೀರ್ಯ ಧೊರೆಯೆ ||ಪ||
ಪುರದ ಹೊರವಳೆಯದೊಳೆರ್ವ |
ಯಾರೆಂದರಿಯೆ | ಭರದಿಂದ ಬಂದಿರ್ಪ ಪಾರ್ವ ||
ಶರ ಧನು ಪರಶುವ ಧರಿಸಿಕೊಂಡಿರುವ |
ಪುರಹರನಂದದಿ ಮೆರೆದುಕೊಂಡಿರುವ || ಲಾಲಿಸು || ೧ ||

ಸುರಭಿಯ ಬಿಟ್ಟುಕೊಡಬೇಕಂತೆ | ಅಲ್ಲದಡೀಗ |
ಧುರಕೆ ಬೇಗಯ್ದಬೇಕು ಮುಂತೆ ||
ಭರದೊಳು ಸಮರಕೆ ನಿಂತರೆ ತಲೆಯ |
ತರಿದಿಳುಹುವೆ ತಾನೆಂದನು ಜೀಯ || ಲಾಲಿಸು || ೨ ||

ಕಣ್ಣಿನೊಳ್ ಕಿಡಿಯನುದುರಿಸುವ | ನೋಡಲ್ಕೆ ಬಹು |
ಸಣ್ಣವನಾಗಿ ರಂಜಿಸುವ || ಉನ್ನತದ ಭೀಕರ ತೋರಿಸುವ |
ಸನ್ನುತರಂದದಿ ತಾ ಶೋಭಿಸುವ || ಲಾಲಿಸು || ೩ ||

**ಭಾಮಿನಿ**

ಹೇಡಿ ವಿಪ್ರನ ಗರಹೊಡೆದುದೀ |
ನಾಡನಾಯನು ತನ್ನಿದಿರಿನಿಂ |
ದೂಡಿರೆಂಬ್ಬರಿಸಿ ಸಚಿವರ ನೋಡಲಾ ಕ್ಷಣದಿ |
ಗಾಢದಿಂದೆದ್ದಾಗ ಮಂತ್ರಿಯು |
ಜೋಡಿಸುತ ಭಯದಿಂದ ಜೀಯೆನು |
ತಾಡಿದನು ಹಿತ ವಚನಗಳನಾ ರೂಢಿಪತಿಗಾಗ || ೧ ||

**ರಾಗ ಸೌರಾಷ್ಟ್ರ ಅಷ್ಟತಾಳ**

ಬಿನ್ನಪವನು ಕಿವಿಗೊಟ್ಟು ಲಾಲಿಪುದೀಗ | ರಾಯ ಕೇಳು | ಬಾಯ |
ಬನ್ನಣೆ ಮಾತುಗಳೆಂಬವ ನಾನಲ್ಲ | ರಾಯ ಕೇಳು ||
ಅನ್ಯಾಯವಿದು ನಾವು ಸುರಭಿಯ ತಂದುದು | ರಾಯ ಕೇಳು | ನೀ |
ನಿನ್ನಾದರದರನ್ನು ಬಿಡುವುದೊಳ್ಳಿತು ಬೇಗ | ರಾಯ ಕೇಳು || || ೧ ||

ದ್ವಿಜರಗ್ನಿಹೋತ್ರಕಂಟಕರಾದ ದುಷ್ಟರ | ರಾಯ ಕೇಳು | ಭೂ |
ಭುಜರು ಸಂಹರಿಸುತ್ತ ಸಲಹುವರವರನ್ನು | ರಾಯ ಕೇಳು ||
ಕುಜನರ ನಡತೆಯಿದಾಯಿತು ನಿನ್ನದು | ರಾಯ ಕೇಳು | ರಾಜ |
ವ್ರಜದೊಳು ನಿನಗಪಹಾಸ್ಯವಿದಲ್ಲವೆ | ರಾಯ ಕೇಳು || ೨ ||

ವಿಪ್ರಕುವರನೀಗ ಸಮರಕಯ್ತಂದಿಹ | ರಾಯ ಕೇಳು | ನೀ |
ಕ್ಷಿಪ್ರದೊಳಾತನ ಕೊಲಲಪಕೀರ್ತಿಯು | ರಾಯ ಕೇಳು ||
ಸುಪ್ರತಾಪದಿ ಕಾದಿ ಸೋಲ್ವುದು ನಾಚಿಕೆ | ರಾಯ ಕೇಳು | ನಿ |
ನ್ನಪ್ರಬುದ್ಧಿಯ ಕಾರ್ಯವೆಲ್ಲವ ಬಿಡು ಬಿಡು | ರಾಯ ಕೇಳು || ೩ ||

**ರಾಗ ಮಾರವಿ ಏಕತಾಳ**

ಈ ತೆರನೆಂದುದ ಕೇಳ್ದತಿ ರೋಷದಿ | ಭೂತಳನಾಯಕನು ||
ಮಾತಿನ ಜಾಣನೆನುತ್ತತಿ ಗರ್ಜಿಸು | ತಾತನಿಗುಸಿರಿದನು || ೧ ||

ದ್ವಿಜನಾಗಲಿ ಭೂಭುಜನಾಗಲಿ ತಾ | ನಿಜಶಸ್ತ್ರವ ಪಿಡಿದು ||
ಭುಜಸತ್ತ್ವದಿ ನಿಲೆ ವಿಜಯಿಸಲಾತನ | ವೃಜಿನವದೆಲ್ಲಿಹುದು || ೨ ||

ವರಸಿಂಗಕೆ ನರಿ ಕರಿಗಾ ಶ್ವಾನವು | ಇರುವೆಯು ಹೆಬ್ಬುಲಿಗೆ ||
ಸರಿಯಾಗಿರುವುದೆ ಧುರದೊಳು ವಿಪ್ರನ | ತರಳನಿದಿರೆ ತನಗೆ || ೩ ||

ಧನಮದವೋ ಯೌವನಮದವೋ ಪೇಳ್ | ಘನ ಸಲುಗೆಯೊ ಸಚಿವ ||
ತನಗುತ್ತರ ಕೊಡದನುವರಿಕೀ ಕ್ಷಣ | ಕನುಗೊಳಿಸೈ ದಳವ || ೪ ||

ಕರಿತುರಗವಪ ದಚರ ರಥ ರಥಿಕರು | ಪೊರಡಲಿ ಸನ್ನಹದಿ ||
ಭರದೊಳು ಧುರ ಡಂಗುರವನು ಹೊಯ್ಸೆಂದರುಹಿದನಾಗ್ರಹದಿ || ೫ ||

**ವಾರ್ಧಿಕ**

ಹರಿಶರಣ ಕೇಳು ರುಂಹರಿಪನೀ ತೆರದಿ ನರ |
ಹರಿಯಂತೆ ಗರ್ಜಿಸಲ್ ಹರಿಜನ್ಮದಾ ದ್ವಿಜನ |
ಹರಿಬಕೆನುತಾ ಸಚಿವ ಹರಿ ಕರಿ ಪದಾತಿ ವರಹರಿಗಳಂ ಪೊರಡಿಸಲ್ಕೆ ||
ಹರಿಯಂತೆ ವಟುಭಟರು ಹರಿನಾದಮಂ ಮಾಡಿ |
ಹರಿಯೆ ಪದಹತಿಧೂಳಿ ಹರಿಪದವ ತುಂಬಿರೆ |
ಹರಿದು ಬಂದಾ ಸಚಿವ ಹರಿಸಿ ನಿಜಮೋಹರವ ಹರಿವಂದ್ಯಗಿದಿರಾದನು || ೧ ||

**ರಾಗ ನಾದನಾಕ್ರಿಯೆ ಅಷ್ಟತಾಳ**

ಎಲೆ ದ್ವಿಜಕುವರನೆ ಲಾಲಿಸು | ನೀನು | ಕಲಹಕೆ ಬಂದಿಹೆ ಶಾಭಾಸು ||
ಕುಲದೊಳಧಿಕನಹೆ ನಿಜವೈಸೆ | ಯುದ್ಧ | ಕೆಲಸವು ನಿನ್ನಂಥವಗೆ ಲೇಸೆ || ೧ ||

ಎನಲೆಂದ ನಸುನಗುತಲೆ ರಾಮ | ನಿನ್ನ | ಜನನ ನಾಮನ ಪೇಳು ನಿಸ್ಸೀಮ ||
ಅನುವರದಾಪೇಕ್ಷೆಯಿಲ್ಲಯ್ಯ| ನಿನ್ನ | ಜನಪ ತಂದಿಹ ಧೇನು ಕೊಡಿಸಯ್ಯ || ೨ ||

ಕಾಲಜ್ಞನೆಂದು ಕರೆವರೆನ್ನ | ಭೂಮಿ | ಪಾಲನ ಸಚಿವ ತಾನಹೆ ನಿನ್ನ ||
ಕಾಳಗಕಂಜುತಸುರಭಿಯ | ಸುರ | ಪಾಲ ಬಂದರು ನೃಪ ಬಿಡನಯ್ಯ || ೩ ||

ಮಾನವರೊಡಯನೆನಿಸಿ ತಾನು | ಕಾಮ | ಧೇನುವ ಜಲುಮೆಯೊಳೊಯ್ದನು ||
ತಾನದ ಬಿಡದಿರೆ ಭೂಪನು | ಬೇಗ ಕೀನಾಶಲ್ಲಿಗೆ ಪೋಪನು || ೪ ||

ದ್ವಿಜರ ಕೊಂದರೆ ಪಾಪ ಬಹುದೆಂದು | ದೋಷ | ವ್ರಜಕಂಜಿ ಬಿಟ್ಟಹೆತಾನಿಂದು ||
ಕುಜನರಂದದಿ ಮಾತನಾಡುವೆ | ಬೇಗ | ನಿಜವಾಗಿ ನೀ ಮೃತಿಹೊಂದುವೆ || ೫ ||

ಚಿತ್ತದಿ ರಾಮನು ಖತಿಗೊಂಡು | ಬಿಲ್ಲಿ | ಗೊತ್ತಿ ಸರಳ್ಗಳ ಮುಂಕೊಂಡು ||
ಧೂರ್ತ ಸಚಿವ ತಡಕೊಳ್ಳೆಂದು | ಬಿಡೆ | ಮುತ್ತಿತು ಸೇನಾಜಾಲಕೆ ಬಂದು || ೬ ||

**ವಾರ್ಧಿಕ**

ಪರಶುಧರನೆಚ್ಚ ಮಾರ್ಗಣನಿಕರದೊಳಗೊಂದು |
ಬರುತ ಮಂತ್ರಿಗೆ ಚುಚ್ಚಲಾ ಕ್ಷಣದಿ ಮೂರ್ಛೆಗ |
ಯ್ದಿರಲುಳಿದ ಬಾಣಗಳು ಕರಿ ತುರಗ ರಥ ಪದಾತಿಗಳನ್ನು ಕೊಚ್ಚಿ ಕೆಡಹೆ |
ಧುರಕೆ ಬಂದತಿರಥ ಮಹಾರಥರು ತಮ್ಮ ತ |

ಮ್ಮರಸಿಯರ ಬಿಟ್ಟು ಸುರಸತಿಯರಂ ಕೂಡಲ್ಕೆ |
ಭರದೊಳಯ್ತಂದೊರ್ವ ಚರನು ಬಿನ್ನವಿಸಿದಂ ಕಾರ್ತವೀರ್ಯನ ಸಭೆಯೊಳು || ೧ ||

**ರಾಗ ಸಾರಂಗ ಅಷ್ಟತಾಳ**

ಸ್ವಾಮಿ ಪರಾಕು ಜೀಯ | ತನ್ನಯ ಮಾತ | ಪ್ರೇಮದಿ ಲಾಲಿಸಯ್ಯ ||
ಆ ಮಹಾದಳ ಯುದ್ಧ | ಕಾಮುಕತ್ವದಿ ಪೋಗಿ | ಭೂಮಿಪರೆಲ್ಲ ಸಂ |
ಗ್ರಾಮವ ಗೆಯ್ದರು || ಸ್ವಾಮಿ || ೧ ||

ಒದಗಿ ಯುದ್ಧಕೆ ನಿಲ್ಲಲು | ಮಂತ್ರೀಶನ | ಸದೆದನೊಂದಸ್ತ್ರದೊಳು ||
ಬೆದರದೆ ಶರಗಳ | ನುದುರಿಸಿ ವಿಪ್ರನು ||
ಸದೆದು ಸೇನೆಯನೆಲ್ಲ | ಮೆದೆಗೆಡಿಸಿದನಯ್ಯ || ಸ್ವಾಮಿ || ೨ ||

ದಿಂಡುದರಿದ ಸೇನೆಯ | ಕಾಣುತ ಭಯ | ಗೊಂಡಿತ್ತ ಬಂದೆನಯ್ಯ ||
ಪುಂಡು ವಿಪ್ರನನಿಂದು | ದಂಡಿಸುವರ ಕಾಣೆ ||
ಭಂಡಾಟವಾಯಿತು | ದಂಡಿಗೆ ತೆರಳಯ್ಯ || ಸ್ವಾಮಿ || ೩ ||

**ಭಾಮಿನಿ**

ಚರನೆ ಸುಮ್ಮನೆ ಬಗುಳುತಿಗಹೆ ಏ |
ಕಿರುವೆ ಕಣ್ಣಿಗೆ ಸಾಸಿವೆಯು ಬಲು |
ಗಿರಿಯವೋಲ್ ಕಾಣುವುದು ಖರೆ ದ್ವಿಜ ನಿಮಗೆ ಬಲ್ಲಿದನು |
ಕರುಳನುರ್ಚುವೆ ತೊಲಗೆನುತ ಬೊ |
ಬ್ಬಿರಿದು ನೃಪತಿ ಸಹಸ್ರ ಕರದೊಳು |
ಧರಿಸಿ ಶಸ್ತ್ರವ ಸಕಲ ಸನ್ನಹದೊಳಗೆ ಹೊರವಂಟ || ೧ ||

**ಕಂದ**

ಗಣನೆಗೆ ಹದಿನಾರಕ್ಷೋ |
ಹಿಣಿ ಸೇನೆಯ ಕೂಡುತಯ್ದಿ ವಾದ್ಯದ ರವದಿಂ ||
ತ್ರಿಣಯನ ತೆರದೊಳು ರೌದ್ರದಿ |
ಮುನಿಸುತಗಿದಿರಾಗುತೆಂದ ದೀರ್ಘಸ್ವರದಿಂ || ೧ ||

**ರಾಗ ಶಂಕರಾಭರಣ ಏಕತಾಳ**

ಅರರೆ ಮುನಿಕುಮಾರನಾಗಿ | ಧುರಕೆ ಬಂದು ನಮ್ಮ ಕೆಣಕಿ |
ಬರಿದೆ ಸೆಣಸಿ ಸಾವುದೀಗ | ಸರಿಯೇನೊ ವಿಪ್ರ ||
ಧಿರುರೆ ಬಾಲನೆಸುವ ಕ್ರೂರ | ಶರಕೆ ಹುಡುಗತನಗಳಿಲ್ಲ |
ತರಳತನವ ತೋರ್ಪೆನೀಗ | ಪರಿಕಿಸು ಭೂಪ || ೧ ||

ಎಲವೊ ಘನಮದಾಂಧತೆಯೊಳು | ಕಲಹವನ್ನು ಬಯಸಿ ತನ್ನ |
ಗೆಲುವ ಸತ್ತ್ವವಿಹುದೊ ನಿನಗೆ | ತಿಳುಹಿಸು ವಿಪ್ರ ||
ಕೊಳುಗುಳದಲಿ ಸೆಣಸಿ ನಿನ್ನ | ಗೆಲುವ ಸತ್ತ್ವವೆನ್ನೊಳಿಲ್ಲ |
ನಲವಿನಿಂದ ಸುರಭಿ ಕೊಡಿಸು | ತಳುವದೆ ಭೂಪ || ೨ ||

ಕರದಿ ಶಸ್ತ್ರಗಳನು ಧರಿಸಿ | ಧುರಕೆ ಬಂದು ನಿಂತು ನೀನು |
ತುರುವ ನೀಡೆಂದೆನುವೆ ಲಜ್ಜೆ | ತೊರೆದೀಗ ವಿಪ್ರ ||
ಅರಸನಾಗಿ ಲಜ್ಜೆ ಬಿಟ್ಟು | ಸುರಭಿಯನ್ನು ತಂದುದಕ್ಕೆ |
ಕರೆದು ಸಾಮದಿಂದ ಕೇಳ್ವ | ಪರಿಯಿದು ಭೂಪ || ೩ ||

ವಿಪಿನದೊಳಗೆ ಸ್ನಾನಗೆಯ್ದು | ಜಪತಪಾದಿಗಳನು ಮಾಳ್ಪ |
ಗುಪಿತವಾಸವಲ್ಲ ಹವದಿ | ಕೃಪೆಯಿಲ್ಲ ವಿಪ್ರ ||
ಜಪವ ಗೆಯ್ವುದೆಮ್ಮ ಧರ್ಮ | ಗುಪಿತವಿಹರೆ ಕಳ್ಳರಲ್ಲ |
ಕಪಟದಿಂದ ಕದ್ದುತಹುದು | ಶಪಥವೇ ಭೂಪ || ೪ ||

ಧರೆಯ ಶ್ರೇಷ್ಠವಸ್ತು ನೋಡ | ಲರಸಗಲ್ಲದನ್ಯರಿಂಗೆ |
ದೊರಕದೆಂಬ ರಾಜನೀತಿ | ಯರಿಯೆಯ ವಿಪ್ರ ||
ಧರಣಿಸುರರ ಒಡವೆಯನಪ | ಹರಿಸುವಂಥ ರಾಜನೀತಿ |
ಇರುವುದೆಲ್ಲಿ ತೋರು ಶೌರ್ಯ | ದಿರವನು ಭೂಪ || ೫ ||

**ರಾಗ ಭೈರವಿ ಅಷ್ಟತಾಳ**

ಮತಿಹೀನ ವಿಪ್ರ ನೀನು | ಸಂಗ್ರಾಮದೊ | ಳತಿರಥರೆಲ್ಲರನು ||
ಹತ ಗೆಯ್ವಂದದೊಳೆನ | ಗತಿಕೃಪೆಯಿಂದತ್ರಿ | ಸುತ ವರವಿತ್ತಹನು || ೧ ||

ಧರೆಯಮರರ ಗೆಲ್ಲಲು | ದತ್ತಾತ್ರೇಯ | ವರವಿತ್ತುದುಂಟೆ ಹೇಳು ||
ಪರಿಹಾಸ್ಯಗಳನಾಡ | ದಿರು ಸಾಮರ್ಥ್ಯವ ನೋಳ್ಪೆ | ನರೆಘಳಿಗೆಯೊಳು ತಾಳು || ೨ ||

ಕರಟವನಿರಿಯಲಿಕೆ | ಮಹತ್ತಾದ | ಸುರಪನ ವಜ್ರ ಬೇಕೆ ||
ತರಳ ನಿನ್ನುವನು ಸಂ | ಹರಿಸಲಿಕಾ ಮುನಿ | ವರನನುಗ್ರಹವೇತಕೆ || ೩ ||

ಬಲ್ಬುಳ್ಳ ಮನುಜನಿಗೆ | ದೊರೆವುದಳಿ | ಯಲ್ಪಿನಿಂದಲಿ ಕಡೆಗೆ ||
ಜಲ್ಪಿಸದಿರು ಫಡ | ಸ್ವಲ್ಪ ಕಾಲದಿ ನಿನ್ನ | ತಲ್ಪಿಸುವೆನು ಯಮಗೆ || ೪ ||

ಹುಡುಗ ನೀನಾಗಿರುವೆ | ಚಾತುರ್ಯದ | ನುಡಿಗಳನೇಕೊರೆವೆ ||
ಕಡು ವೀರನಾದರೆ | ತುಡುಕು ಧನುವ ವೃಥಾ | ಬಡಿವಾರವಿದು ತರವೆ || ೫ ||

ಮಾನವೇಂದ್ರನೆ ಭರದಿ | ನಮ್ಮಯ ಕಾಮ | ಧೇನುವನತಿ ಸಾಮದಿ ||
ನೀನಿತ್ತರಯ್ದುವೆ | ತಾನೆಂದೆಸೆದನಸ್ತ್ರ | ಸೋನೆಯನುರುತರದಿ || ೬ ||

**ವಾರ್ಧಿಕ**

ಪರಶುಧರನೆಸೆದಾ ಮಹಾಸ್ತ್ರಗಳ್ ಶಸ್ತ್ರಗಳ್ |
ಧರಣಿಪನ ಮುಂದಯ್ದಿ ಮಸಗಿದವು ಮುಸುಕಿದವು ||
ಭರದಿ ಮುಂದ್ವರಿದು ಮದದಾನೆಯಂ ಸೇನೆಯಂ ರಥ ತುರಗ ಕಾಲಾಳ್ಗಳಂ ||
ಕೊರೆಕೊರೆದು ರಿಪು ಬಲವ ಕೆಡಹಿದವು | ಮಡುಹಿದವು
ಸರಳಿರಿತದಲಿ ರಕ್ತ ಕಾರಿದವು ಬೀರಿದವು |
ಧರಣಿಗಮರುತ ಬಿದ್ದ ರುಂಡದಿಂ ಮುಂಡದಿಂ ರಣ ಭಯಂಕರಮಾದುದು ||

**ರಾಗ ಶಂಕರಾಭರಣ ಮಟ್ಟೆತಾಳ**

ಹರಿಯ ಬಾಣಹತಿಗೆ ನೊಂದು ಕಾರ್ತವೀರ್ಯನು |
ಉರಿವ ಕೋಪದಿಂದ ಪರಶುಧರನೊಳೆಂದನು ||
ಧರಣಿಯಮರತರಳನೆನುತ ತಡೆದರೆಮ್ಮೊಳು |
ಭರಿತ ಕಡುಹ ತೋರ್ದೆ ಛಲರೆ ನಿನ್ನ ಕ್ಷಣದೊಳು || ೧ ||

ತರಿವೆನೆನುತಲದ್ರಿಶರವನೆಸೆಯಲದರನು |
ಧರಣಿಧರನು ತರಿವುತಗ್ನಿಶರದೊಳೆಚ್ಚನು ||
ಅರಸನದನು ವರುಣಬಾಣದಿಂದ ಛೇದಿಸಿ ||
ಹರಿಯನುರಗ ಶರದೊಳೆಚ್ಚ ಜರೆದು ಗರ್ಜಿಸಿ || ೨ ||

ಗರುಡಬಾಣದಿಂದ ರಾಮನದರ ಕಡಿಯಲು |
ಧರಣಿಪಾಲ ಕನಲುತೆಚ್ಚ ವಿವಿಧ ಶರದೊಳು ||
ಪರಮಪುರುಷನದನು ಕಡಿಯೆ ಮುಳಿದು ಭೂಪನು |
ಸರಸಿಜೋದ್ಭವಾಸ್ತ್ರದಿಂದಲೆಸೆದ ಹರಿಯನು || ೩ ||

ಪ್ರತಿಪಿತಾಮಹಾಸ್ತ್ರದಿಂದ ಶ್ರೀಶ ತರಿಯಲು |
ಯತಿ ಕುಲೇಂದ್ರನಿತ್ತ ರೌದ್ರಶರವ ಖತಿಯೊಳು ||
ಶತಮಖಾದಿ ಸುರರು ಬೆದರುವಂತೆ ತೀವ್ರದಿ |
ಕ್ಷಿತಿಪನೆಸೆಯಲಾಗ ಭಾರ್ಗವೇಶ ಸತ್ತ್ವದಿ || ೪ ||

ತರಿದು ದಿವ್ಯಬಾಣದಿಂದ ನೃಪನ ಕರವನು |
ಧರಣಿಗುರುಗಳಲೆಚ್ಚನೇನನೆಂಬೆನಧಟನು ||
ಮರಳಿ ನಿಮಿಷಮಾತ್ರದಲಿ ಕರಗಳುದಿಸಲು |
ಪರಶುರಾಮ ಮಗುಳೆ ಕಡಿದನೊಡನೆ ಭರದೊಳು || ೫ ||

**ಭಾಮಿನಿ**

ತರಿವುತಿರ್ದನು ಪರಶುಧರನಾ |
ಧರಣಿಪಾಲನ ಕರವ ಸುರರ |
ಚ್ಚರಿಪಡಲು ಚಿಗುರುತ್ತಲಿರ್ದುದದೇನನುಸಿರುವೆನು |
ಪರಿಕಿಸುತ ಹರಿ ದಿವ್ಯದೃಷ್ಟಿಯೊ |
ಳರಿದಿನುರದಿ ಸುಧಾಕಲಶ ಹುದು |
ಗಿರುವುದೆನ್ನುತ ಬಳಿಕ ನುಡಿದನು ನೃಪಗೆ ರೋಷದಲಿ  ‖ ೧ ‖

**ರಾಗ ಕೇದಾರಗೌಳ ಅಷ್ಟತಾಳ**

ಅರರೆ ಭೂಪಾಧಮ ಕರ ಚಿಗುರುವುದೆಂದು | ಸ್ಥಿರಗರ್ವ ತಾಳ ಬೇಡ ||
ಅರೆನಿಮಿಷದಿ ತೋರ್ಪೆ ನೋಡೀಗ ವೈಷ್ಣವ | ಶರದ ಬಲ್ಮೆಯನು ಗಾಢ  ‖ ೧ ‖

ಎನಲೆಂದನೆಲವೊ ಭಾರ್ಗವ ಕೇಳು ಶೌರ್ಯದಿ | ಮನಕೆ ಬಂದಂತೆ ನೀನು ||
ತೊನದರೆ ಫಲವೇನು ನೋಡೆನುತಸ್ತ್ರೌಘ | ವನು ಭೂಪ ತೆಗೆದೆಚ್ಚನು    ‖ ೨ ‖

ತರಿವುತ್ತಲಾ ಬಾಣನಿಕರವ ವೈಕುಂಠ | ಶರದಿಂದ ನೃಪನುರದಿ ||
ಇರುವ ಸುಧಾಕಲಶವ ತೆಗೆಯುತ ಕೊಂಡು | ಪರಶುವನತಿ ಕೋಪದಿ    ‖ ೩ ‖

ತಿರುಹುತ್ತ ಬಿಡೆ ಭರದಿಂದ ಭೂಮೀಶನ | ಕರ ಸಾವಿರಂಗಳನು ||
ತರಿವುತ ರಾಮನಾಜ್ಞೆಯೊಳು ಕತ್ತರಿಸಿದು | ದರಸನ ಮೂರ್ಧವನು       ‖ ೪ ‖

**ವಾರ್ಧಿಕ**

ಪರಶುಹತಿಯಿಂದವನಿಪಾಲಕನ ಶಿರ ಗಗನ |
ಕಿರದೆ ಚಿಗಿದಿಳಿಗೆ ಬೀಳುತಿರಲಾತ್ಮಜ್ಯೋತಿ |
ಪರಮತೇಜದೊಳಯ್ದಿ ಪರಶುಧರನಂ ಸೇರೆ ಸುರರರಳ ಮಳೆಗರೆದರು |
ಧುರದೊಳೊಡೆಯನ ಮರಣಮಂ ಕಂಡು ನೃಪಸೇನೆ |
ತರಹರಿಸಿ ಭಯದಿಂದಲೋಡಿದರು ದೆಸೆದೆಸೆಗೆ |
ಮರುಗಿ ಭೀತಿಯೊಳಸುರರೆಲ್ಲ ವನಮಂ ಪೊಕ್ಕಾರಾ ಪುರದ ಜನ ನಡುಗಿತು       ‖ ೧ ‖

**ಭಾಮಿನಿ**

ಭೀತರಿಂಗಭಯವನು ಕೊಡುತಾ |
ಭೂತನಾಥ ಪ್ರಿಯನು ಪಶು ಸಹ |
ತಾತನಲ್ಲಿಗೆ ಬಂದು ಚರಣದೊಳೆರಗೆ ಕೈಮುಗಿದು |
ಪ್ರೀತಿಯಿಂದೆತ್ತುತ್ತ ಮನ್ನಿಸ |
ಲಾತನೆಂದನು ಪಿತನೊಡನೆ ಪುರು |
ಹೂತಧೇನುವ ತಂದೆನೆನಲಿತೆಂದ ಜಮದಗ್ನಿ ‖ ೧ ‖

**ರಾಗ ಮಧುಮಾಧವಿ ತ್ರಿವುಡೆತಾಳ**

ಮಗನೆ ತಂದೆಯ ಸುರಭಿಯನು ನಿನ | ಗಗಜೆಪತಿಯಾಯುಷ್ಯವಾಗಲಿ ||
ಸುಗುಣ ನೃಪ ತಾನಾಗಿ ಕೊಟ್ಟನೆ | ಮಗುಳೆ ನಿನಗೀಧೇನುವ || ಎಲುಸಿರ್ದ || ೧ ||

ಭರದೊಳಲ್ಲಿಗೆ ತೆರಳಿ ಚರರಿಂ | ಸುರಭಿ ಕೊಡಿಸೆನೆ ಕೇಳಿ ಗರ್ವದಿ ||
ತೆರಳಿ ಬರೆ ಮಡುಹಿದೆನು ಬಲುಸಂ | ಗರದೊಳಾ ನೃಪವರ್ಯನ | ಜನಕ ಕೇಳು || ೨ ||

ತಪಸು ಮಾಡುವ ಯತಿಕುಲಜರಾವ್ | ಜಪನಿಯಮವಧ್ಯಯನ ಹೋಮಗ ||
ಳಪರಿಮಿತ ಶಮೆದಮೆಯ ವೃತ್ತಿಯ | ನಿಪುಣ ಧರ್ಮವು ನಮ್ಮದು | ಕೇಳು ಕುವರ || ೩ ||

ಇಳೆಯ ದಿವಿಜರು ನಾವು ರಣದಲಿ | ಕೊಲಬಹುದೆ ಮೂರ್ಧಾಭಿಷಿಕ್ತರ ||
ತಿಳಿಯಲೆಮಗಪ ಕೀರ್ತಿ ನಿಂದೆಯು | ತಳುವದಿಂದೀ ಲೋಕದಿ | ಬಹುದು ಮಗನೆ || ೪ ||

ಚಕ್ರವರ್ತಿಗಳೊಳಗೆ ಬಹು ಗುಣ | ವಿಕ್ರಮನ ಸದ್ಧಾರ್ಮಿಕನ ಕೊಂ ||
ದಕ್ರಮವನಾಚರಿಸಿದೆಯ ಭೂ | ಚಕ್ರದೊಳು ಋಷಿವಂಶಕೆ | ಎನಲು ನುಡಿದ || ೫ ||

**ಭಾಮಿನಿ**

ಸುರಭಿಯನು ಕೊಡದಿರ್ದ ರೋಷದಿ |
ಧರಣಿಪನ ತಾ ಕೊಂದೆನಿದಕೇನ್ |
ಹರಚಿತವು ತನಗೆಂದು ಬೆಸಸಿದಡನು ಮಾಳ್ಪೆನೆನೆ |
ವರುಷವೊಂದರ ತನಕ ಧರಣಿಯೊ |
ಳಿರುವ ತೀರ್ಥಗಳಲ್ಲಿ ಮಿಂದರೆ |
ಹರಿವುದೀ ಪಾಪವೆನೆ ಪದಕೆರಗುತ್ತ ಬೀಳ್ಗೊಂಡ || ೧ ||

**ವಾರ್ಧಿಕ**

ಪರಶುರಾಮನು ತೆರಳಲಿತ್ತ ಜಮದಗ್ನಿಮುನಿ |
ಹರುಷದಿಂದಾಶ್ರಮದೊಳಿರಲತ್ತ ಭಯಗೊಂಡು |
ಧುರದೊಳೋಡಿದ ಕಾರ್ತವೀರ್ಯಾರ್ಜುನನ ಸುತರು ಬಹುದೇಶ ತೊಳಲಿ ಬಳಲಿ |
ಕರಗಿ ಚಿತ್ತದಿ ತಮ್ಮ ತಂದೆಮರಣಕ್ಕೆ ಪೆರ |
ತರುಹ ಕಾಣದೆ ಬಳಲಿ ಪುರಕೆ ನಡೆತರಲಂಜಿ |
ಭರಿತ ಶೋಕದೊಳಯ್ವರೊಂದು ಠಾಣದಿ ನಿಂತು ಪೇಳ್ದ ಹೈಹಯನನುಜಗೆ || ೧ ||

**ರಾಗ ನೀಲಾಂಬರಿ ರೂಪಕತಾಳ**

ಏನೆಂಬೆನು ನಮಗಾಗಿಹ | ಹಾನಿಯ ಪರಿಭವವಕಟ ||
ಮೀನಾಂಕಾಂತಕನಲ್ಲದೆ | ಕಾಣೆನು ರಕ್ಷಕರ ||ಪ||

ಕಂದರ ಮರಣವ ಕಾಣುತ | ಲಂದತಿ ಭಯಗೊಳುತ |
ಹಿಂದೆಗೆದೋಡುತ ಜೀವಿಸಿ | ಸಂದೆವು ದೇಶಾಂತರಗಳ ||
ನಿಂದಿಗು ಕ್ಷೇಮವಿದಿಲ್ಲೆನ | ಲೆಂದನು ಸೋದರರನು ‖ ೧ ‖

ವಿನಯದೊಳಣ್ಣನೆ ಲಾಲಿಸು | ಜನಕನ ರಣದೊಳು ತರಿದಿಹ |
ಮುನಿಸುತನದರಿಂದಾತನ | ಜನಕನ ಶಿರ ಕಡಿದು |
ಘನ ಬೇಗದಿ ಧರೆಗಿಳುಹುವ | ದನುನಯವೆಮಗಿರೆ ನೀನಿದ |
ನನುಚಿತವೆನದಿರು ಕೇಳೆಂ | ದೆನೆ ಹೈಹಯ ನುಡಿದ ‖ ೨ ‖

ಪೂತುರೆ ತಮ್ಮನೆ ಮೆಚ್ಚಿದೆ | ನೀತಿಯ ಮಾತಿದು ನಮ್ಮಯ |
ತಾತನ ಕೊಂದಾತನ ನಿಜ | ತಾತನ ಕೊಲ್ಲುವುದು |
ಭೂತಳದೊಳಗಿದರಿಂದಪ | ಖ್ಯಾತಿಯು ನಮಗಾಗದು ಬಿಡು |
ಸೋತವರಾವಯ್ಸಲೆ ಎನು | ತಾತನು ಹೊರವಂಟ ‖ ೩ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಈ ತೆರದಿ ಹೈಹಯರು ಧೈರ್ಯಮ | ಹಾತಿಶಯದಿಂದೊಂದು ಬುದ್ಧಿಯೊ ||
ಳಾ ತಪಸ್ವಿಯ ವನವನರಸುತ | ಲಯ್ತೆರಲ್ಕೆ ‖ ೧ ‖

ಇತ್ತ ರಾಮಾನುಜರು ಸಹ ಮುನಿ | ಪೋತ್ತಮನ ನೇಮದಿ ಪಲಾಶದ ||
ಪತ್ರಗಳ ತರಲಯ್ದಿದರು ವನ | ದತ್ತಲಾಗಿ ‖ ೨ ‖

ಬಂದು ಹೈಹಯರಾ ಯತೀಂದ್ರನ | ಮಂದಿರವ ಸಾರುತಿರಲತಿಭಯ ||
ದಿಂದಲೆಡಬಲ ತಿರುಗಿ ಕಂಡರು | ಮುಂದೆ ಋಷಿಯ ‖ ೩ ‖

**ಭಾಮಿನಿ**

ಎಸೆವ ಕೆಂಜೆಡೆ ಮಿನುಗಿ ಫಣೆಯೊಳು |
ಭಸಿತ ರೇಖೆಯ ಮುಚ್ಚು ಕಂಗಳ |
ಬಿಸರುಹಾಸನದೊಳಗೆ ಕುಳ್ಳಿರ್ದೆಸೆವ ಮಾರುತನ |
ಮುಸುಕದಿಂದ್ರಿಯ ವಿಷಯಗಳನಂ |
ಜಿಸುತ ಪರಶಿವಧ್ಯಾನದೊಳು ಶೋ |
ಭಿಸುವ ಕೃಶಗಾತ್ರನನು ಕಾಣುತಲೆಂದರವರಂದು ‖ ೧ ‖

**ರಾಗ ಮಾರವಿ ಏಕತಾಳ**

ಈತನೆ ನಮ್ಮಯ | ತಾತನ ಧುರದಿ ಕೊಂ | ದಾತನ ಪಿತ ನೋಡ ||
ಭೀತಿಯಗೊಳ್ಳದೆ | ಘಾತಿಸಿರೆನಲತಿ | ಕೌತುಕಗೊಳುತಾಗ ‖ ೧ ‖

ರೇಣುಕೆ ಕಂಡು ಭ | ಯಾತುರಳಾಗುತ | ತಾನಡಹಾಯುತಲಿ ||
ಹೀನಮತಿಗಳಿಂ | ದೇನನು ನೆನೆದಿರಿ | ಮೌನಿಯ ಕೊಲ್ಲುವಿರೆ || ೨ ||

ಗಂಡನ ಕೊಲದಿರಿ | ಭಂಡ ನೃಫಾಲರೆ | ಪುಂಡರ ತೆರದೊಳೆನೆ ||
ದಿಂಡೆಯೆ ಕೆಳಸಾ | ರೆಂದುರೆ ಗರ್ಜಿಸಿ | ಚಂಡಪರಾಕ್ರಮರು || ೩ ||

ಖಡುಗವ ಕೊಂಡಾ | ಧಡಿಗರು ಮುನಿಪನ | ಕಡಿದರು ತವಕದಲಿ ||
ಘಡ ಸಾರೆಂದಾ | ಮಡದಿಯ ಝೇಂಕಿಸಿ | ನಡೆದರು ಹೈಹರು || ೪ ||

**ಭಾಮಿನಿ**

ಆ ಮಹಾಮುನಿಶಿರವ ಕೊಂಡಾ |
ಭೂಮಿಪಾತ್ಮಜರೊಯ್ಯಲಾ ಕ್ಷಣ |
ತಾಮರಸಲತೆ ಕಾಡುಗಿಚ್ಚಿಲಿ ಬಾಡಿ ಬೀಳ್ವಂತೆ |
ಕೋಮಲಾಂಗಿಯು ಬಿದ್ದು ಧರೆಯೊಳು |
ರಾಮ ಹಾ ಭೃಗುವಂಶವಾರಿಧಿ |
ಸೋಮ ಬಾರೆಂದಳಲಿದಳು ಬಾಯ್ಬಿಡುತ ಕಮಲಾಕ್ಷಿ || ೧ ||

**ರಾಗ ನೀಲಾಂಬರಿ ಏಕತಾಳ**

ಶಿವನೆ ನಾನ್ಯಾರಿಗೆಂಬೆನು | ತನಗೆ ಬಂದ | ಬವಣೆಯ ದುಃಖವನು |
ಅವನಿಯ ಸತಿಯರಲ್ಲಿ | ತನ್ನಂಥ ಪಾಪಿ | ಯುವತಿಯರಿರ್ಪರೆಲ್ಲಿ || ೧ ||

ಕಾಂತನ ಮರಣವನು | ಕಣ್ಣಾರೆನೋಡಿ | ದಂತಾಯಿತಿಂದು ನಾನು ||
ಚಿಂತಿಸಿ ಫಲಗಳಿಲ್ಲ | ಮರೆತನೆ ಲಕ್ಷ್ಮೀ | ಕಾಂತನು ನಮ್ಮೆನೆಲ್ಲ || ೨ ||

ತರಳರಿಲ್ಲದ ವೇಳ್ಯದಿ | ದುಷ್ಟರು ಪತಿಯ | ಕೊರಳ ಕೊಯ್ದರು ಜವದಿ ||
ಪರಿ ಯಾರೊಳಿದನೆಂಬೆನು | ಹಾ ಪತಿಯೆ ರಾಮ | ಬರಲಿಲ್ಲವೇನ್ ಗೆಯ್ವೆನು || ೩ ||

**ಭಾಮಿನಿ**

ತರುಣಿ ಮರಗುವ ಧ್ವನಿಯ ಕೇಳುತ |
ನೆರೆದ ಋಷಿಗಳು ಪರಿಕಿಸುತಲಾ |
ತರಳೆಯನು ಪಿಡಿದೆತ್ತಿ ಹಾ ಹಾ ರಾಮ ಹಾಯೆನುತ |
ಮೊರೆಯಿಡಲ್ಕಾ ರವವ ಕೇಳುತ |
ಪರಶುಧರ ಬಂದವ್ವೆಯಳ ಪದ |
ಕರೆಗುತಲಿ ಬೆಸಗೊಂಡ ತವಕದೊಳೇನಿದೇನೆಂದು || ೧ ||

**ರಾಗ ಕಾಂಭೋಜ ಝಂಪೆತಾಳ**

ಧಾರಿಣಿಯ ಮೇಲೆ ಕ | ಣ್ಣೀರ ಸುರಿಸುತಳಲ್ವ | ಕಾರಣವಿದೇನ್ ಪೇಳಿರಮ್ಮ ||
ಯಾರು ಮಾಡಿದರಿಂಥ | ಘೋರಕೃತ್ಯವ ದುಃಖ | ಸೈರಿಸುತಲದ ಪೇಳಿರಮ್ಮ ॥ ೧ ॥

**ಕಂದ**

ಶ್ರೀಕೃಷ್ಣಾಚ್ಚುನಿಶಾಂದದೊ |
ಳೀ ಕೃತಿ ಮುದ್ರಾಪಿಸುತ್ತೆ ಪ್ರಕಟಿಸಿ ದಿದನುಂ ||
ಪ್ರಾಕೃತ ಭಾಷಾಭಿಜ್ಞರ್ |
ಸ್ವೀಕೃತವನು ಗೆಯ್ದು ಮುದದಿ ವಾಚಿಸಲನಿಶಂ ॥ ೧ ||

**ಶಾರ್ದೂಲವಿಕ್ರೀಡಿತ ವೃತ್ತಂ**

ಶ್ರೀಪಾಲಂ ಸುರವೃಂದವಂದಿತಪದಂ ಲೋಕಾಸ್ಪದಂ ಕೇಶವಂ
ಭೂಪಾಲೌಘವಿನಾಶಪುಣ್ಯಚರಿತಂ ಸರ್ವಾತ್ಮಕಂ ಭಾರ್ಗವಮ್ |
ಪಾಪಾಂಭೋನಿಧಿಕುಂಭಜಂ ಶುಭಕರಂ ವಿಪ್ರಪ್ರಿಯಂ ಶಾಶ್ವತಂ
ಗೋಪಾಲಂ ಜಮದಗ್ನಿ ಮೌನಿತನುಜಂ ಶ್ರೀರೇಣುಕೇಯಂ ಭಜೇ ||

**ರಾಗ ನಾಟಿ ಝಂಪೆತಾಳ**

ಜಯ ಭವಾನೀಪುತ್ರ ದಿವಿಜಗಣನುತಿಪಾತ್ರ |
ಜಯ ಮೂಷಿಕವರೂಥ ಸ್ವಾಮಿ ಗಣನಾಥ ||
ಜಯ ಜಯತು ಜಯತು ॥ ಪ ॥

ಗಿರಿಜೆ ಮೈಮಲದಿಂದ ಮಾಡುತದ ಪ್ರಾಣಿಸಲು |
ಹರನು ಕೋಪದಿ ಕಡಿಯೆ ಮರುಗುತಿರಲುಮೆಯು ||
ಕರಿಶಿರವನಿಟ್ಟೆಬ್ಬಿಸುತ ವರವ ಕೊಡಲು ಶಿವ |
ತರಳನೆನಿಸಿದ ಗಣಪ ಕರುಣಿಸೈಮತಿಯ ॥ ಜಯ ಜಯತು ಜಯತು ॥ ೧ ॥

**ಭಾಮಿನಿ**

ಪುರಮಥನ ಸರ್ವೇಶ ಶಂಕರ |
ಹರ ತ್ರಿಯಂಬಕ ಭಕ್ತವತ್ಸಲ ||
ಗರುಡವಾಹಮಿತ್ರ ಗೌರೀನಾಥ ದೇವೇಶ |
ಪರಮಕರುಣಾಸಿಂಧು ನಿನ್ನಯ ||
ಚರಣವನು ನಂಬಿದೆನು ಪ್ರೇಮದಿ |
ಪೊರೆವುದೆನ್ನನು ಕಾಮ ಮರ್ದನ ದೇವ ಪರಮೇಶ ॥ ೧ ॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಸ್ಕಂದಪರ್ವತದೊಳಗೆ ಪರಮಾ | ನಂದದಿಂ ಹರತನುಜ ಮುನಿಜನ ||
ವೃಂದದೊಡನೆಸೆದಿರಲು ಋಷಿಗಳು | ಸ್ಕಂದಗೆರಗಿ || ೧ ||

ಒಂದು ದಿನ ಕೈಮುಗಿದು ಕೇಳಿದ | ರಿಂದಿರಾಧವ ಭೃಗುಜನುದರದೊ ||
ಳಂದು ಜನಿಸುತಪೆತ್ತ ತಾಯಿಯ | ಕೊಂದನೇಕೆ || ೨ ||

ಹೆತ್ತವಳನೆಂತೆಬ್ಬಿಸಿದನಿವ | ಪೃಥ್ವಿಪರೊಳತಿ ಶ್ರೇಷ್ಠನಾಗಿಹ ||
ಕಾರ್ತವೀರ್ಯನ ಗೆಲಿದನೇತಕೆ | ಮತ್ತೆ ಧುರದಿ || ೩ ||

ತಂದೆ ಜಮದಗ್ನಿಯನು ಹೇಹಯ | ರಂದು ತರಿದರೆನುತ್ತಲಿಪ್ಪ ||
ತ್ತೊಂದು ಬಾರಿಯು ಕ್ಷತ್ರಿಕುಲಜರ | ಕೊಂದನೆಂತು || ೪ ||

ಕಾರ್ತವೀರ್ಯಾರ್ಜುನನು ಗೆಯ್ದಿಹ | ಧೂರ್ತಕೃತ್ಯವದೇನು ಕೊಲುವಡೆ ||
ಸ್ವಾರ್ಥದಿಂದುಸಿರೆನಲೊರೆದ ಗುಹ | ನರ್ತಿಯಿಂದ || ೫ ||

**ವಾರ್ಧಿಕ**

ಹರಸುತನು ಶೌನಕರಿಗೊರೆಯಲಾರಂಭಮಂ |
ವಿರಚಸಿದ ಮುನಿಗಳಿರ ಕೇಳಿ ವಿಧಿಮಾನಸದಿ |
ತರಳನುದುಸಿದನತ್ರಿಯೆಂಬವಂ ಬಳಿಕವನ ನೇತ್ರದಿಂದೊಗೆದನಿಂದು |
ಗುರುಪತ್ನಿಯಂ ಬೆರೆಯೆ ಜನಿಸಿದಂ ಬುಧನವಗೆ |
ತರಳನಾದಂ ಪುರೂವರನು ಸುರತರುಣಿಯಂ |
ನೆರೆಯಲುದಿಸಿದನವಂಗಾಯುಃ ಕುವರನವಗೆ ಪುಟ್ಟಿದಂ ನಹುಷನೃಪನು || ೧ ||

ಜನಿಸಿದನವಂಗಾ ಯಯಾತಿಯೆಂಬಾತ್ಮಜಂ |
ದನುಜಗುರುಪುತ್ರಿಯಿಂದುದಿಸಿದಂ ಯದುವೆಂಬ |
ತನುಜನಾ ಯದುನೃಪಗುದಿಸಿದಂ ಹೇಹಯಂ ವೀರನೆಂಬಾತನವನ |
ತನಯನಾದಂ ಕುಕ್ಷಿಯವನ ಮಗನೆನಿಸಿದಂ |
ಮುನಿಪ ಕೇಳ್ ಭದ್ರಸೇನಕನಾತನಾತ್ಮಜಂ |
ಸನಕನೆಂಬವನಾಗಲವನ ಜಠರಾಲಯದಿ ಜನಿಸಿದಂ ಕೃತವೀರ್ಯನು || ೨ ||

**ಭಾಮಿನಿ**

ಕ್ಷಿತಿಪ ಕೃತವೀರ್ಯಾಖ್ಯ ಮಾಹಿ |
ಷ್ಮತಿಪುರಾಧಿಪನೆನಿಸಿ ರಾಜ್ಯವ ||
ನತಿಶಯದಿ ಪಾಲಿಸುತಲಿರಲೊಂದಿನದೊಳಾ ನೃಪನ ||
ಸತಿಯು ಸಂಧ್ಯಾಕಾಲದೊಳು ಭೂ |

ಪತಿಯ ಪೊರೆಗಯ್ತಂದು ತನ್ನೊಳು |
ಸುತನ ಕಾಮಿಸಿ ನುಡಿದಳರಸಗೆ ನಿಜಮನೋಗತವ || ೧ ||

**ರಾಗ ಕೇದಾರಗೌಳ ಅಷ್ಟತಾಳ**

ಕಾಂತ ನೀ ಲಾಲಿಸಿ ಕೇಳೆನ್ನ ಮನದೊಳು | ಚಿಂತೆಯೊಂದಿಹುದದನು ||
ಸಂತೋಷದಿಂದುಸಿರೆನಲರುಹುವೆನೆಂಬೆ | ಕಾಂತೆಯೊಳಿಂತೆಂದನು || ೧ ||

ತರುಣಿ ನಿನ್ನಯ ಚಿಂತೆಯೇನದನೆನ್ನೊಡ | ನೊರೆ ಶೀಘ್ರದಿಂದನು ||
ಪರಿಹರಿಸುವ ಸತ್ತ್ವವೆನಗಿರಲಾ ಪರಿ | ವಿರಚಿಪೆನೆನಲೆಂದಳು || ೨ ||

ಬಾಲಕರಿಲ್ಲೆಂದು ನಿಂದಿಸುತಿಹರೆನ್ನ | ಬಾಲೆಯರೀ ಜಗದಿ ||
ಭೂಲೋಲ ಕೇಳ್ ಸುತರಿಲ್ಲದಾತಗೆ ತ್ರಿದ | ಶಾಲಯ ದೊರೆವುದೇನೈ || ೩ ||

ಕಾಮಿನಿರನ್ನೆ ನೀ ಸತತ ಮನಸಿನೊಳು | ಕಾಮಜನಕನ ನೀನು ||
ನೇಮದಿ ಭಜಿಸುತ್ತಲಿರು ಸುತನಹನು ಸು | ತ್ರಾಮಸನ್ನಿಭನೆಂದನು || ೪ ||

ರಮಣ ಕೇಳಾತ್ಮಜನಹನು ಮುಂದೆಂದೆಂಬ | ಭ್ರಮೆಗೊಳಿಸುದೇತಕೆ ||
ಸುಮಶರ ಮನವ ಸೂರೆಯ ಕೊಂಡ ನೆರೆಯೆನ್ನ | ಮಮತೆಯಿಂದೀ ಕ್ಷಣಕ || ೫ ||

**ರಾಗ ಮಧುಮಾಧವಿ ಏಕತಾಳ**

ತರುಣಿ ಕೇಳ್ ನಿನ್ನಯ ಮನದಿಂಗಿತವನು | ಅರಿತೆನು ಸೈರಿಸಿನ್ನರೆ ತಾಸು ನೀನು ||
ಶರಜಬಾಂಧವನಸ್ತಮಯವಾಗುವಾಗ | ದುರುಳ ದೈತ್ಯರು ಚರಿಸುವ ಕಾಲವೀಗ || ೧ ||

ಎನಲೆಂದಳೆಲೆ ಕಾಂತ ಹಸಿದ ವೇಳೆಯಲಿ | ಮನುಜನಿಗನ್ನ ದೊರಕದೆ ಕಡೆಯಲಿ ||
ಘನವಾದ ಮೃಷ್ಟಾನ್ನ ದೊರೆದರೇನ್ ಫಲವು | ತನುವ ಭೇದಿಪುದೀಗ ಮನ್ಮಥಶರವು || ೨ ||

ಅರಸಿ ಕೇಳ್ ನಾವೀಗನೊಡಗೂಡೆ ಮಗನು | ಧರಣಿಯೊಳಧಿಕ ದುರುಳ ಜನಿಸುವನು ||
ಅರೆಕ್ಷಣ ತಡೆ ನಿನ್ನ ಮನಸಿನಭೀಷ್ಟ | ದೊರೆವುದು ನಿನಗೆ ಜನಿಸುವನು ಶ್ರೇಷ್ಠ || ೩ ||

**ಕಂದ**

ಪತಿಯಿಂತೆನಲಾ ನುಡಿಯಂ | ಸತಿ ಲಾಲಿಸಿ ಕಾಮಶರದೊಳತಿ ಬಳುಕುತ್ತಂ ||
ಕೃತವೀರ್ಯನನಾಲಂಗಿಸು | ತತಿಬೇಗದಿ ಬಂದು ಪಿಡಿದಳಪ್ಪುತಮತ್ತಂ || ೧ ||

**ವಾರ್ಧಿಕ**

ಸುರಕಲ್ಪಭೂಜವನ್ನಾಶ್ರಯ್ಸಿ ಹಬ್ಬಿರ್ದ |
ವರಕನಕಲತೆಯೊ ಮೇಣ್ ಘನಚಂದನದ್ರುಮದ |

ಪರಿಮಳಕೆ ಮರುಳಾಗಿ ಸುತ್ತಿಕೊಂಡಿರ್ದಹಿಯೊ ಧರೆಯ ಯೋಗೀಶ್ವರರನು |
ನೆರೆ ಬಂಧಿಸುವ ಸ್ಮರನ ಪಾಶವೋ ನೃಪವರ್ಯ |

ನುರವ ಬಿಗಿದಪ್ಪಿರ್ದ ರಾಕಾವತಿಯ ಭುಜವೊ |
ಒರೆಯಲರಿದೆನಲೆಸೆದವಂಗನೆಯ ನಳಿದೋಳ್ಗಳೇನೆಂಬೆನಾಶ್ಚರ್ಯವ || ೧ ||

**ಭಾಮಿನಿ**

ಇಂತು ತನ್ನನು ತಳ್ಕಿಸಿದ ನಿಜ |
ಕಾಂತೆಯನು ಸಂತವಿಸಲಾರದೆ |
ಕಂತುಪಿತನೇ ಗತಿಯೆನುತ ಕೂಡಿದನು ವಲ್ಲಭೆಯ |
ನಿಂತುದಬಲೆಗೆ ಗರ್ಭನವಮಾ |
ಸಾಂತರದಿ ಜನಿಸಿದನು ಪೃಥ್ವೀ |
ಕಾಂತನಿಗೆ ಭುಜಹೀನ ಮಗನೇನೆಂಬೆ ವಿಸ್ಮಯವ || ೧ ||

**ರಾಗ ಸಾಂಗತ್ಯ ರೂಪಕತಾಳ**

ಕರವಿಲ್ಲದಿಹ ಪುತ್ರನನು ಕಂಡು ಸರ್ವರು | ಮರುಗುತ್ತ ತಮ್ಮಯ ಮನದಿ ||
ಧರಣಿಪಗರುಹಲಯ್ತಂದು ಭೂಪತಿ ತನ್ನ | ತರುಣಿಗಿಂತೆಂದ ಪೂರ್ವದಲಿ || ೧ ||

ಪೇಳಿದರೆನ್ನಯ ಮಾತನಂದಿನಲಿ ನೀ | ಕೇಳದೆ ಕೆಡಿಸಿದೆ ಮಗನ ||
ತೋಳಿಲ್ಲದವ ಪುಟ್ಟಿ ಫಲವಿಲ್ಲದಾಯ್ತೆನೆ | ಹೇಳಿದಳರಸನಿಗಬಲೆ || ೨ ||

ಹರಣದೊಲ್ಲಭ ಕೇಳಾದರೆ ನಮ್ಮ ವಂಶಕ್ಕೆ | ಗುರುವಾಗಿರುವನತ್ರಿಸುತನು ||
ಕರುಣಾಳುವಿನ ಬಳಿಗಯ್ದಿದರೀತನು | ಕರವ ನಂದನನಿಗೆ ಮುನಿಯು || ೩ ||

ಕರುಣಿಸು ನೇಮವ ಪೋಪೆನೆಂದರೆ ಭೂಪ | ತೆರಳೆಂದಾಜ್ಞೆಯ ಕೊಡಲು ||
ತರಳನನನಡಗೊಂಡು ಬಂದಳಾಕ್ಷಣ ಮುನಿ | ವರನ ಸನ್ನಿಧಿಗೆ ಹರ್ಷದಲಿ || ೪ ||

**ಭಾಮಿನಿ**

ತರುಣಿ ತಾನೀ ತೆರದಿ ಸುತಸಹ |
ಭರದಿ ದತ್ತಾತ್ರೇಯ ಮುನಿಪನ |
ಸರಿಸಕಯ್ದುತ್ತಲಿ ಸಚೇಲಸ್ನಾನವನು ಗೆಯ್ದು |
ಹರುಷದಿಂ ಫಲ ಪತ್ರ ಸುಮಗಳ |
ಚರಣಕರ್ಪಿಸುತೊಡನೆ ಷೋಡಶ |
ತರದ ಪೂಜೆಯನೆಸಗುತಾರತಿ ಬೆಳಗಿದಳು ಮುನಿಗೆ || ೧ ||

**ರಾಗ ಸುರುಟಿ ಆದಿತಾಳ**

ಆರತಿ ಬೆಳಗಿದಳು | ಮುನಿಪಗೆ | ನಾರಿಯು ಭಕ್ತಿಯೊಳು || ಆರತಿ || ಪ||

ಚಿನ್ನದ ಬಟ್ಟಲಲಿ | ತುಂಬುತ | ರನ್ನಫಲಂಗಳಲಿ ||
ಎಣ್ಣೆ ಕರ್ಪೂರದಲಿ | ಗುಣಸಂ | ಪನ್ನಗೆ ಹರುಷದಲಿ || ಆರತಿ || ೧ ||

ಮೂರು ಶಿರಗಳಿಹಗೆ | ತಿಳಿಯಲು | ಮೂರು ಜಗಕೆ ಹಿತಗೆ ||
ಮೂರು ಗುಣದ ಪತಿಗೆ | ಜನಿಸಿದ | ಮೂರಾಧಿಕಾರನಿಗೆ || ಆರತಿ || ೨ ||

ಅತ್ರಿಯ ಕುವರನಿಗೆ | ವರಲೋ | ಕತ್ರಯವಂದಿತಗೆ ||
ಧಾತ್ರಿಯೊಳಧಿಕನಿಗೆ | ಶ್ರೀದ | ತ್ತಾತ್ರೇಯ ಋಷಿವರಗೆ || ಆರತಿ || ೩ ||

**ಭಾಮಿನಿ**

ದಿನದಿನದಿ ಸೇವೆಯನು ವಿರಚಿಪ |
ವನಿತೆಗೊಂದಿವಸದೊಳು ಯತಿಕುಲ |
ವನಜಭಾಸ್ಕರನೆಂದ ನಿನ್ನಯ ಮನದ ಬಯಕೆಯನು |
ವಿನಯದಿಂದೊರೆ ಕೊಡುವೆನೆನಲಾ |
ತನುಜನಿಗೆ ಬಾಹುಗಳನೀವುತ |
ಘನತರೈಶ್ವರ್ಯವನು ಕೃಪೆಮಾಡೆಂದಳಂಬುಜಾಕ್ಷಿ || ೧ ||

**ರಾಗ ನಾದನಾಮಕ್ರಿಯೆ ಅಷ್ಟತಾಳ**

ವನಿತೆಯಾಡಿದ ಮಾತ ಮುನಿ ಕೇಳಿ | ನೃಪ | ತನುಜಗೆಂದನು ತೋಷನು ತಾಳಿ ||
ನಿನಗೆ ಸಾವಿರ ಭುಜವಾಗಲಿ | ಸರ್ವ | ಜನಪರು ನಿನಗಂಜಿ ನಡೆಯಲಿ || ೧ ||

ಸಿರವಂತನಾಗಿ ನೀ ಧರೆಯನು | ಬಹು | ವರುಷ ಪಾಲಿಸುತಿರು ನಿನ್ನನು ||
ಸ್ಮರಿಸಿದ ಜನರಿಗೆ ಭಯಗಳು | ತೋರ | ದಿರಲೀಸು ಮತ್ತೆನ್ನ ಕೃಪೆಯೊಳು || ೨ ||

ಎನಲೆಂದನೆಲೆ ಮುನಿಪತಿ ಕೇಳು | ಎನ್ನ | ಮನದೊಳಗಿರುವುದ ಕರಣಾಳು ||
ಅನಿಮಿಷ ನರ ನಾಗಲೋಕದಿ | ಧೊರೆ | ತನವನು ಕರುಣಿಸು ಬೇಗದಿ || ೩ ||

ಚಕ್ರವರ್ತಿತ್ವದಲಿಳೆಯನು | ಘನ | ವಿಕ್ರಮದಿಂದಾಳು ಮೇಣ್ ನೀನು ||
ಶಕ್ರನಾಗೇಂದ್ರಾದ್ಯರಧಟನು | ಮುರಿ | ದಾಕ್ರಮಿಸುತ ಸರ್ವ ಧರೆಯನು || ೪ ||

ಹರಗೆ ಮುಂತಾಗಿ ಸಂಗರದೊಳು | ನಿನ್ನ | ತರಿಯಲರಿದು ಪರಬಲದೊಳು ||
ಧರಣಿಯಮರರ ವೈರವ ನೀನು | ಮಾತ್ರ | ವಿರಚಿಸೆ ಕೆಡುವೆ ಕೇಳೆಂದನು || ೫ ||

**ಕಂದ**

ಕರುಣದೊಳೀ ಪರಿ ವರಮಂ | ಧರಣಿಪತರಳಂಗೆ ಕೊಟ್ಟು ಮುನಿಪತಿ ಮುದದಿಂ ||
ತೆರಳಿನ್ನಾಲಯಕೆಂದೀ | ಪರಿಯಿಂದಪ್ಪಣೆಯನ್ನಿತ್ತು ಕಳುಹಿದನವರಂ ॥ ೧ ॥

**ವಾರ್ಧಿಕ**

ತಾಪಸೇಶ್ವರನೊಳಪ್ಪಣೆಗೊಂಡು ವೇಗದಿಂ |
ದಾ ಪತಿವ್ರತೆ ಪುತ್ರ ಸಹಿತಂದು ಕೃತವೀರ್ಯ ||
ಭೂಪನಿರ್ದೆಡೆಗೆ ನಡೆತಂದು ವೃತ್ತಾಂತಮಂ ಪೇಳಲ್ಕೆ ಕೇಳಿ ನೃಪನು
ತಾ ಪರಮ ಸಂತೋಷದಿಂ ಕೆಲವು ದಿನದ ಮೇ |
ಲಾ ಪುರಪತಿತ್ವಮಂ ಮಗಗಿತ್ತು ತಪದಿಂದ ||
ಗೋಪಾಲನಂ ವರಿಸಿ ಸುರನಿಕರ ಭಾಪೆನಲು ಕೈವಲ್ಯಮಂ ಪಡೆದನು ॥ ೧ ॥

**ಭಾಮಿನಿ**

ಮುನಿಪ ಕೇಳೈ ಕಾರ್ತವೀರ್ಯಾ |
ರ್ಜುನನು ರಾಜ್ಯದಿ ಧರ್ಮವನು ಸ್ಥಾ |
ಪನೆಗೊಳಿಸಿ ಬುಧವಾರವನು ಪೂಜಿಸುತ ಭಕ್ತಿಯಲಿ ||
ಘನತರೈಶ್ವರ್ಯದೊಳು ಕುಂದುಗ ||
ಳಿನಿತು ಕಾಣದೆ ಸುರಪತಿಗೆ ಮಿಗಿ |
ಲೆನಿಸಿ ಧರಣಿಯನಾಳುತಿರ್ದನು ಭರಿತ ವೈಭವದಿ ॥ ೧ ॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇತ್ತಲವನಿಪನೀ ಪರಿಯೊಳಿರ | ಲತ್ತ ಲಂಕಾಪುರದಿ ದಾನವ ||
ಮೊತ್ತದೊಡ್ಡೋಲಗದೊಳೊಂದಿನ | ಹತ್ತು ಮೊಗದ ॥ ೧ ॥

ಖಳಕುಲೇಶ್ವರ ನಗುತ ತನ್ನಯ | ಬಳಿಯೊಳಿರ್ಪ ಪ್ರಹಸ್ತಗುಸಿರಿದ ||
ನಳವಿಗೊಟ್ಟೆನ್ನೊಡನೆ ಗೆಲುವವ | ರಿಳೆಯೊಳಿಲ್ಲ ॥ ೨ ॥

ಸುರಪ ಮುಖ್ಯರ ಗೆಲದಿಹೆನು ಸರ | ಸಿರುಹ ಭವ ಪ್ರಪಿತಾಮಹನು ಸ್ಮರ ||
ಹರನು ಮೆಚ್ಚಿದನೆನ್ನ ಸತ್ತ್ವಕೆ | ಒರೆಯಲೇನು ॥ ೩ ॥

ಸುರನರೋರಗಲೋಕದೊಡೆತನ | ದೊರಕಿತೆನಗೆದೆಂಬ ಸಮಯದೊ |
ಳೊರೆದಳಣ್ಣಗೆ | ಶೂರ್ಪಣಖಿ ಮನ | ದಿರವನಿಂತು ॥ ೪ ॥

**ರಾಗ ಸಾರಂಗ ಅಷ್ಟತಾಳ**

ಅಣ್ಣ ನೀ ಮದುವೆ ಮಾಡು | ಪ್ರಾಯದೊಳೆನ್ನ | ಬಣ್ಣ ಹೇಗಿಹುದು ನೋಡು ||
ಸಣ್ಣವಳಿಗೆ ತಕ್ಕ ಜತೆಯಾದ ಪುರುಷರ | ಕಣ್ಣಾರೆ ಕಂಡರೆ ಕುಣಿದಾಡುತಿದೆ ಮೋಹ ॥ ಅಣ್ಣ ॥ ೧ ॥

ಚಿತ್ತಜನಾಟದಲ್ಲಿ | ಈ ಕುಚವೆದೆ | ಗೊತ್ತಿ ವಿಲಾಸದಲಿ ||
ಮತ್ತೀ ದಂತಗಳೂರಿ ಮುತ್ತಿಡುತ್ತಾ ಕ್ಷಣ |
ಹೊತ್ತ ಗಲದೆ ಗಂಡನರ್ತಿಯೊಳ್ ಕುಣಿಸುವೆ || ಅಣ್ಣ || ೨ ||

ಅಹಹ ನಾನೆಂಥ ಠೀಕು | ಮತ್ಕಾಂತಗೆ | ಬಹುಜನ್ಮ ಸುಕೃತ ಬೇಕು ||
ಮಹಿಯಲ್ಲಿ ಹೆಣ್ಣು ತುಂಬಿಹುದಾದರೆನ್ನಯ |
ಸಹಸಕಿನ್ನಣೆಯುಂಟೆ ಗ್ರಹಿಸು ನೀ ಶೀಘ್ರದಿ || ಅಣ್ಣ || || ೩ ||

ಎನ್ನಯ ಚೆಲುವಿಕೆಗೆ | ತಕ್ಕವನಾಗಿ | ಮನ್ನಿಸಬೇಕು ಹೇಗೆ ||
ಚೆನ್ನಗಿ ರತಿಸುಖವನ್ನೀಯದಿರ್ದಡೆ |
ನಿನ್ನಾಣೆ ನಿಮಿಷದಿ ತಿನ್ನವೆನವನನು || ಅಣ್ಣ || ೪ ||

**ವೃತ್ತ**

ತಂಗೀಭಾವವ ಕೇಳ್ದು ತತ್ಫಳವರಂ ಬಿಡು ಚಿಂತೆಯಂ ಮನದೊಳೂ ||
ಶೃಂಗಾರಂಗಳ ತೋರ್ಪ ತಕ್ಕ ಪತಿಯಂ ಜತೆಗೊಳಿಪೆ ಸನ್ಮುದದೊಳೊ ||
ಅಂಗೀಕಾರದಿ ಬೇಗ ಪೋಗಿ ಮಿಗೆ ನೀ ಮಂದಿರದೊಳಿಹುದೆನ್ನತಾ ||
ಮಾಂಗಲ್ಯಾತುರದಿಂದಲೆಂದನಸುರಂ ಮಾರೀಚನನಂ ಕರೆವುತಾ || ೧ ||

**ಭಾಮಿನಿ**

ಮಾವ ಕೇಳ್ ಮದ್ಭಗಿನಿಗೀ ಕ್ಷಣ |
ನೀ ವರನ ತರಬೇಕು ನಿನಗಾ ||
ಭಾವವನು ನಾನೊರೆವೆ ವಿದ್ಯುಜ್ಜಿಹ್ವನೆಂಬವನು ||
ಪಾವನದ ಕೌಳಿಕದ ಮನೆಯವ |
ಗೀ ವಿಗಡ ದುರ್ಗುಣಗಳುಸಿರದೆ ||
ಕೋವಿದಂಗನೆಯೆನುತ ವಂಚಿಸಿ ಘಟಿಸು ಕಾರ್ಯವನು || ೧ ||

**ಕಂದ**

ಮೊದಲವನೇ ಮಾರೀಚಂ | ತದನಂತರ ಕಾರ್ಯದೆತ್ನವೆಣಿಸುತ ಭರದೊಳ್ ||
ಮುದದಿಂ ವಿದ್ಯುಜ್ಜಿಹ್ವನ | ಸದನಕೆ ಬಂದವನ ಕೂಡೆ ಮೆಲ್ಲನೆ ಪೇಳ್ದಂ || ೧ ||

**ರಾಗ ಕೇದಾರಗೌಳ ಝಂಪೆತಾಳ**

ಬಾ ಮಗನೆ ಏಳು ಬೇಗ | ನಿನಗೊಂದು | ಕಾಮಿನಿಯ ತೋರ್ಪೆನೀಗ ||
ತಾಮಸವಿದೇಕೆ ನೋಡು | ನೀನವಳ | ಕಾಮನಾಟದಲಿ ಕೂಡು || ೧ ||

ನಿನಗೆ ತಕ್ಕವಳು ನಾರಿ | ರೂಪಿನಲಿ | ಮನುಮಥನ ಕೈಕಠಾರಿ ||
ಅನುದಿನವು ನಿನ್ನ ಗುಣವ | ಕೇಳುತ್ತ | ಮನದಿ ಚಿಂತಿಪಳು ಚೆಲುವ || ೨ ||

ಹೆಣ್ಣುಗಳು ಸೋಲಬೇಕು | ಅವಳ ಮೈ | ಬಣ್ಣ ವೀ ಜಗಕೆ ಸಾಕು ||
ತಿಣ್ಣ ಬಲ್ಮೊಲೆಯ ಬಗೆಯ | ಒರೆಯೆ ಮು | ಕ್ಕಣ್ಣಗಸದಳ ನಿರ್ಣಯ || ೩ ||

ಈರೇಳು ಭುವನಂಗಳ | ನಡುಗಿಸುವ | ಧೀರನಾಗಿಹ ದಶಗಳ ||
ಘೋರತರ ಕುಂಭಕರ್ಣ | ಭಾವಗಳು | ದಾರಿದಿರು ಸುಗುಣಪೂರ್ಣ || ೪ ||

ಕೈಕಸಾದೇವಿಯತ್ತೆ | ಕಿರಿಯಯ್ಯ | ನಾ ಕಾಣೊ ನಿನಗೆ ಮತ್ತೆ ||
ಆ ಕಮಲಭವಪೌತ್ರನು | ವಿಶ್ರವಸು | ಲೋಕವರಿಯಲು ಮಾವನು || ೫ ||

ಆ ಹರೆಯತರದ ಹೆಣ್ಣ | ಭೋಗಿಸದ | ದೇಹವಿನ್ನೇತಕಣ್ಣ ||
ನಾ ಪೇಳ್ವೆ ಬಗೆಯನಿಂದು | ಎನಲು ಉ | ತ್ಸಾಹದಿಂ ಪೇಳ್ದನಂದು || ೬ ||

**ಭಾಮಿನಿ**

ಹೆಣ್ಣು ಹೊನ್ಮಣ್ಣುಗಳನಿತ್ತರೆ |
ಎಣಿಸದೆ ಸಂಗ್ರಹಿಪುದುತ್ತಮ |
ಪುಣ್ಯಹೀನರಿಗೀಪರಿಯ ಸಂಯೋಗ ಘಟಿಸುವದೆ |
ಮಿಣ್ಣನಯ್ದುವೆ ನಿನ್ನ ಸಂಗಡ |
ಕಣ್ಣಿನಲಿ ನಾನವಳ ಮುಖ ಮೈ |
ಬಣ್ಣದೊಲವ ನಿರೀಕ್ಷಿಸಿದ ಮೇಲ್ ಮದುವೆಯಾಗುವೆನು || ೧ ||

**ರಾಗ ಕೇದಾರಗೌಳ ಅಷ್ಟತಾಳ**

ಇಂತೆಂದ ಮಾತ ಲಾಲಿಸುತಾಗ ಮಾರೀಚ | ಕಾಂತೆಯ ತೋರ್ಪೆನೆಂದು ||
ನಿಂತು ದೂರದಿ ನೋಡಬೇಕು ಪೇಳಿರುವೆ ಕೇ | ಳಂತರಂಗದೊಳಿಹಳು || ೧ ||

ಎನುತ ಸಂತಯ್ಸಿ ಮತ್ತವನೊಡಗೊಂಡು ಪ | ಟ್ಟಣಕೆ ಮುಂದಯ್ತುರುತ ||
ಅನಿತರೊಳ್ ಸನ್ನೆ ಗೆಯ್ಯಲು ಶೂರ್ಪಣಖಿ ಸನ್ಮೋ | ಹಿನಿಯಂತೆ ಬಂದಳಲ್ಲಿ || ೨ ||

ಇಂದೀವರಾಕ್ಷಿ ಶಿಖಾಮಣಿಯೋ ಚೆಲ್ವ | ಕಂದರ್ಪನರಗಿಣಿಯೊ ||
ಚಂದದ ಕಣಿಯೊ ತಾನೆನಲಾಕೆ ಕಾರ್ಮಿಂಚಿ | ನಂದದಿ ತೋರ್ದಳಾಗ || ೩ ||

ದೂರದೊಳಾ ವಿದ್ಯುಜ್ಜಿಹ್ವನವಳ ನೋಡಿ | ಮಾರನ ಕಣೆಗಳುಕಿ ||
ಮಾರೀಚನೊಡನೆ ನೀ ಮದುವೆಯ ಮಾಡಿ ಶ | ರೀರವನುಳುಹೆಂದನು || ೪ ||

ನಿನ್ನಿಂದಾದುಪಕಾರವೆಂದಿಗು ಮರೆಯೆನು | ಬನ್ನಣೆಮಾತಲ್ಲಿದು ||
ಚೆನ್ನಾರಚೆಲುವೆಯ ತೋರ್ದೆ ಹೆಣ್ಣಿದು ಸರಿ | ಯಿನ್ನೆಂದು ಲಗ್ನವಯ್ಯ || ೫ ||

**ವಾರ್ಧಿಕ**

ಇಂತೆಂದು ಪೇಳ್ದ ವಿದ್ಯುಜ್ಜಿಹ್ವಗೊಡಬಡಿಸಿ |
ಸಂತಸದಿ ಪಟ್ಟಣವ ಶೃಂಗರಿಸಿ ವಿಧಿಯಿಂದ ||
ಮಂತ್ರ ವಾದ್ಯಗಳ ಸುಘೋಷದಿಂ ತೆರೆವಿಡಿದು ವರನಿರೀಕ್ಷಣೆಸಮಯದಿ ||
ತಾಂ ತವಕದಿಂದಲಂತರಪಟವ ತೆಗೆಯೆ ಮ |
ತ್ತಂತಕನ ಮೃತ್ಯುರೂಪಿನೊಳೆಸೆವ ತರುಣಿಯಂ ||
ನಿಂತು ನೋಡುತ್ತ ಮೂರ್ಛಿತನಾಗಿ ಖೋಯೆಂದು ನಡನಡುಗುತಿಂತೆಂದನು || ೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಮಾರಿಯೇ ಹೊರತಿವಳು ಲೋಕದ | ನಾರಿಯಂದವಿದಲ್ಲ ಮೊದಲೆ ವಿ ||
ಚಾರಿಸದೆ ನಾ ಕಟ್ಟೆ ಮುಂದೇನ್ | ದಾರಿಯೆನಗೆ || ೧ ||

ದೈವಯೋಗದೊಳೀ ಮಹಾ ದು | ರ್ದೈವದೊಡಲೊಳು ಪೊಗದೆ ಸೌಖ್ಯದಿ ||
ಜೀವಿಸಿದ ಮೇಲಿವಳ ಕೂಡಿದ | ಭಾವವಹುದು || ೨ ||

ಒಡನೆ ಬಾಯ್ಬಿಟ್ಟೋಡುತಿರೆ ಬೆಂ | ಬಿಡದೆ ಬಳಿಕಾ ಶೂರ್ಪಣಖೆ ಕೈ ||
ಪಿಡಿದು ನಾ ನಿನ್ನರಸಿ ನೀ ಕಂ | ಗೆಡುವುದೇಕೆ || ೩ ||

ಅನುದಿನವು ನಾನಾ ವಿನೋದದಿ | ತನುವ ಸುಖಿಸುವೆ ನೋಡೆನುತ ಬ ||
ಲ್ಪಿನಲಿ ಕುಚಗಳನೊತ್ತಿ ತಂದಳು | ಕುಣಿವುತಾಗ || ೪ ||

**ಭಾಮಿನಿ**

ಅತಿ ಭಯದಿ ಗೋಳ್ಗುಟ್ಟುತಿಹ ನಿಜ |
ಪತಿಯ ಮಂಟಪದಲ್ಲಿಳುಹಿ ಸ |
ನ್ಮತದೊಳಿರೆ ಬಳಿಕವನ ಸಂತಸಗೊಳಿಸಿ ದಾನವರು |
ವಿತತ ವೈಭವ ದಿಂದಲಾ ದಂ |
ಪತಿಗಳಿಗೆ ಶುಭವೆನಿಸಿ ಭೀಕರ |
ಸತಿರಾಯರತಿಯೆತ್ತಿ ಪೂರೈಸಿದರು ಲಗ್ನವನು || ೧ ||

**ಕಂದ**

ಈ ವಿಧದಿಂ ವೈವಾಹವ | ರಾವಣನೆಸಗುತ್ತೆ ಸುಖದೊಳಿರಲೊಂದು ||
ಠೀವಿಯೊಳೊಡ್ಡೋಲಗವ | ನ್ನೀವುತೆ ಬಳಿಕಾ ಪ್ರಹಸ್ತಗುಸಿರಿದ ಹದನಂ || ೧ ||

**ರಾಗ ಭೈರವಿ ಝಂಪೆತಾಳ**

ಸಚಿವ ಲಾಲಿಪುದೀಗ | ವಚಿಸುವೆನು ನಿನ್ನೊಡನೆ ||
ಪ್ರಚುರರಾಗಿಹ ದಿವಿಜ | ನಿಚಯವನು ಗೆಲಿದೆ || ೧ ||

ಹರಿಯೊಡನೆ ಕಾದಾಡಿ | ಧುರದಿ ಜೈಸಿದರೆ ಮುಂ ||
ದಿರಗಳಿಲ್ಲೆ ಮಗ ನಾ | ನರುಹಲಿನ್ನೇನು || ೨ ||

ಅದರಿಂದ ಸೈನಿಕವ | ನೊದಗಿನಲಿ ನೆರಹೆನಲು ||
ಹದನ ಕೇಳೆಂದು ತಿಳು | ಹಿದ ವಿಭೀಷಣನು || ೩ ||

**ರಾಗ ಆನಂದಭೈರವಿ ಏಕತಾಳ**

ಮಗನೆ ಕೇಳಾರೆಂಬುದರಿಯೆ | ವಿಗಡರಯ್ವರಿಲ್ಲಿ ಬಂದು |
ನಿಂತರು | ಬುದ್ಧಿ | ಭ್ರಾಂತರು || ೧ ||

**ರಾಗ ಕಾಂಭೋಜ ಏಕತಾಳ**

ಕಾಣಲವದಿರ ಕುರುಹು | ಮಾನವಾಸುರ ದಿವಿಜ | ರಾ ನಾಗರೋ ಪೇಳಿರಮ್ಮ ||
ಏನ ಮಾತಾಡಿದರು | ಮೌನಿಯನು ಕಡದಿಹ ನಿ | ಧಾನ ವೇನೆನಗರುಹಿರಮ್ಮ || ೧ ||

**ರಾಗ ಆನಂದಭೈರವಿ ಏಕತಾಳ**

ಆತಗಳ್ ಬಂದೆಮ್ಮ ಪಿತನ | ಘಾತಿಸಿದನ ಜನಕನೆಂದು |
ನುಡಿದರು | ಕೊರಳ | ಕಡಿದರು || ೧ ||

**ರಾಗ ಕಾಂಭೋಜ ಝಂಪೆತಾಳ**

ಓಹೋ ತಿಳಿದೆನು ಕಾರ್ತ | ವೀರ್ಯನ ಕುಮಾರಕರು ||
ಹೈಯಯಾದ್ಯರು ನಿಜವಿದಮ್ಮ | ಸಾಹಸವ ತೋರ್ದವರ |
ರೂಹುಗೆಡಿಸುವೆ ನೀಗ | ನೀ ಹದುಳದೊಳಗಿರ್ಪುದಮ್ಮ || ೧ ||

**ಭಾಮಿನಿ**

ಹಿಂದೆ ಸಮರದಿ ಜುಣುಗುತೋಡಲು |
ಹಂದೆಗಳ ಸುಡಲೆನುತ ಬಿಟ್ಟಿಹೆ |
ನಿಂದು ಕೆಣಕಿದರೆಮ್ಮೊಳಿಲ್ಲಪರಾಧ ಮರುಗದಿರಿ |
ತಂದೆತನುವನು ಕಾದಿಹುದು ನೀ |
ವಿಂದು ಶಿರ ತಹೆನೆನುತ ರಭಸದಿ |
ಬಂದು ಮಾಹಿಷ್ಮತಿಗೆ ಕರೆದನು ನೃಪಕುಮಾರಕರ || ೧ ||

**ರಾಗ ಪಂಚಾಗತಿ ಮಟ್ಟೆತಾಳ**

ಯಾರೊ ಹೈಹಯಾಖ್ಯ ನೃಪಕು | ಮಾರ ರಾಜಕುಲದಿ ಕುನ್ನಿ |
ತೋರೊ ನಿನ್ನ ಮುಖವನಿದಿರು | ಬಾರೊ ಶೀಘ್ರದಿ |
ಮಾರಿಯನ್ನು ಕೆಣಕಿ ತಾ | ನೂರು ಹೊಕ್ಕರುಳಿವುದುಂಟೆ |
ಚೋರರಿಲ್ಲಿ ಬಹುದೆನುತ್ತ | ಭೋರು ಗುಡಿಸಿದ || ೧ ||

ಫಡ ಫಡೆಲೆ ಮದಾಂಧರುಗಳೆ | ಧಡಿಗತನದೊಳೆನ್ನ ಪಿತನ |
ಕಡಿದುದಕ್ಕೆ ನಿಮ್ಮ ತಲೆಯ | ಹೊಡೆವೆನೆಂದೆನೆ |
ನುಡಿಯ ಕೇಳ್ದು ಬಂದು ಭೋರು | ಗುಡಿಸಿ ಪೇಳ್ದರೆಮ್ಮ ಪಿತನ |
ಕಡಿದ ಮಯ್ಯಿಗಾಗಿ ಶಿರವ | ಕಡಿದೆ ಕೇಳೆಲ || ೨ ||

ದುರುಳ ನೃಪರೆ ನಿಮ್ಮ ಪಿತನು | ಸುರಭಿಯನ್ನು ಕದ್ದು ತಂದ |
ದುರಿತ ತಟ್ಟೆ ಮಡಿದವನು | ಧುರದ ಮಧ್ಯದಿ |
ಕುರುಬತನದೊಳೆನ್ನ ಪಿತನ | ಶಿರವನಿಂದು ತರಿದರಿಂದ |
ಬರಿದೆ ತಾತನಿರುವ ಯಮನ | ಪುರಕೆ ಪೋಪಿರಿ || ૩ ||

ಕುನ್ನಿ ದ್ವಿಜನೆ ಕೇಳು ಭರದೊ | ಳೆನ್ನ ಪಿತನ ಕೊಂದ ದುರಿತ |
ನಿನ್ನ ಬಿಡುವುದೇನೊ ನಿರುಕಿ | ಸಿನ್ನು ನಿಮಿಷದಿ |
ಸ್ವರ್ಣಪುಂಖದಸ್ತ್ರತತಿಗ | ಳನ್ನು ಬಿಟ್ಟು ಶಿರವ ತರಿವೆ |
ನೆನ್ನುತೆಸೆಯೆ ಕಡಿದು ಪೇಳ್ದ | ನನ್ನಿಮಾತನು || ೪ ||

ಪಿತನ ತಲೆಯ ಕೊಡುತಲೆನ್ನ | ನತರು ಎನಿಸಿ ಬಾಳುತಿನ್ನು |
ಕ್ಷಿತಿಯನಾಳಿ ವ್ಯರ್ಥ ನಿಮ್ಮ | ಹತಿಸೆ ಕೇಳಿರಿ |
ಅತುಳ ಕ್ಷಾತ್ರತಾಮಸವನು | ಜತನದಿಂದ ಬಿಡಿರೆನ್ನುತ್ತ |
ಹಿತದಿ ಭೃಗುಜ ಪೇಳೆ ಕೋಪಿ | ಸುತಲೆ ನುಡಿದರು || ೫ ||

**ಭಾಮಿನಿ**

ಎಲವೊ ಹಾರುವ ಗರುವದೊಳು ನೀ |
ಗಳಹಿದರೆ ನಾವ್ ನಿನ್ನ ತಂದೆಯ |
ತಲೆಯ ಕೊಡುವವರಲ್ಲೆನುತ ಶರಗಳನು ಸುರಿಯಲ್ಕೆ |
ಪ್ರಳಯಭೈರವನಂತೆ ಗರ್ಜಿಸಿ |
ಪೊಳೆವ ಕೊಡಲಿಯ ತೆಗೆದಿಡಲು ನೃಪ |
ಕುಲಜರನು ತರಿವುತ್ತ ಸೈನ್ಯವ ಸವರಿ ನಿಮಿಷದಲಿ || ೧ ||

**ವಾರ್ಧಿಕ**

ಅಪ್ರತಿಮಪರಾಕ್ರಮನು ತೆಗೆದಿಟ್ಟ ಪರಶು ವೈ |
ರಿಪ್ರಕರಮಂ ಗೆಲಿದು ನಿಜಹಸ್ತಕಯ್ದುಲತಿ |
ಕ್ಷಿಪ್ರದಿಂ ತಂದೆತಲೆಯಂ ಕೊಂಡು ತನ್ನಾಶ್ರಮಕೆ ಬಂದು ಪಿತೃದೇಹಕೆ |
ವಿಪ್ರವರ್ಯನು ಜೋಡಿಸುತಲೆತ್ತುತವನ ಚರ |
ಣಪ್ರದೇಶಕೆ ಮಣಿಯೆ ಪರಸಿದಂ ಕಂಡು ಸುರ |
ರಪ್ರಮೇಯನ ಕೃತ್ಯಕತಿ ಸಂತಸಂ ಬಡುತ ಕರೆದರೈ ಪೂಮಳೆಯನು || ೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇಂದುಕುಲಜನೆ ಕೇಳು ತನ್ನಯ | ತಂದೆಯನು ಮಡುಹಿದುದಕಿಪ್ಪ ||
ತ್ತೊಂದು ಬಾರಿಯು ಕ್ಷತ್ರಿಕುಲಜರ | ಕೊಂದು ರಾಮ || ೧ ||

ಧರೆಯ ನಿಕ್ಷತ್ರವನು ಗೆಯ್ಯಲು | ಮರುಗಿ ಋಷಿ ಜಮದಗ್ನಿ ಕಾಣುತ ||
ತರಳ ಭಾರ್ಗವಗೆಂದ ತಾನತಿ | ಕರುಣದಿಂದ || ೨ ||

ಒಬ್ಬನೆನ್ನಯ ಶಿರವ ಕಡಿದದ | ಕೂರ್ಬಿಯೊಳಗಿಹ ಪಾರ್ಥಿವರ ಕುಲ ||
ಸರ್ಬವನು ನೀ ಕೊಂದು ಕೀರ್ತಿಯ | ಪರ್ಬಿಸಿದೆಯ್ಯೆ || ೩ ||

ಈ ಪರಿಯ ಕೊಲೆಯಿಂದ ಬಂದಿಹ | ಪಾಪವನು ನೀ ಕಳೆಯಲೋಸುಗ ||
ಶ್ರೀಪತಿಯ ಭಜಿಸೆಂಬ ಪಿತನ ನಿ | ರೂಪಣೆಯನು || ೪ ||

ನೋಡಿ ಹರುಷದಿ ಋತ್ವಿಜರುಗಳ | ಕೂಡಿಸುತ ಪಿತನಾಜ್ಞೆಯಲಿ ಕ್ರತು ||
ಮಾಡಿದನು ಪಾತಕವ ಕಳೆಯಲು | ರೂಢಿಯೊಳಗೆ || ೫ ||

**ವಾರ್ಧಿಕ**

ಲೋಕಹಿತವಿಗ್ರಹಂ ಭೃಗುಜನೆಂದೆನಿಸಿ ನರ |
ಲೋಕದರಸರ ಸದೆದು ಭೂಭಾರ ಕಳೆದಮರ |
ಲೋಕಜರ ದಣಿಸಿದಂ ಕ್ರತುಮುಖದಿ ನರರಂತೆ ಲೋಕಸಂಗ್ರಹಕೋಸುಗ |
ಪಾಕಶಾಸನದೆಸೆಯ ಹೋತೃವಿಗೆ ದಕ್ಷಿಣವ |
ಸ್ವೀಕರಿಸಿ ಬ್ರಹ್ಮಗೆ ಪ್ರಚೇತಸಾಧ್ವರ್ಯುವಿಂ |
ಗಾ ಕುಬೇರಾಸೆಯುದ್ಗಾತೃವಿಗೆ ಮಧ್ಯದೆಸೆಯಂ ಕಾಶ್ಯಪರಿಗೆ ಕೊಟ್ಟು || ೧ ||

**ಭಾಮಿನಿ**

ಉಳಿದ ಧರಣಿಯ ಮಿಕ್ಕ ವಿಪ್ರರ |
ಕುಲಕೆ ಕೊಟ್ಟು ಸರಸ್ವತೀನದಿ |
ಜಲದೊಳವಭೃಥ ಮಂಗಳ ಸ್ನಾನವನು ವಿರಚಿಸುತ |
ಕಳೆದು ಪಾಪವ ವರಮಹೇಂದ್ರಾ |

ಚಲದಿ ತಪವೆನ್ನಸಗುತಿರ್ದನು |
ಜಲಜಲೋಚನನೆಂದು ಶೌನಕಮುನಿಗೆ ಗುಹ ನುಡಿದ ‖ ೧ ‖

**ವಾರ್ಧಿಕ**

ಶ್ರೀರಮಣ ಪರಶುರಾಮಾಹ್ವಯದಿ ಭೂಭುಜರ |
ವಾರಮಂ ತರಿದ ಚಾರಿತ್ರವಿದರ ಪುರಾಣ |
ಸೂರಿಗಳು ಬರೆದಿರ್ಪರೊಂದೊಂದು ವಿಧದಿಂದಲದರ ಪದ್ಯಗಳನಾಯ್ದು |
ಬೇರೆ ಕೆಲಮಂ ಕೂಡಿಸುತ್ತಲೀ ಕೃತಿಯಂ ತ |
ಯಾರಿಸಿದ ಪಾವಂಜೆ ಗುರುರಾಯರಾಜ್ಞೆಯಂ |
ತೀ ರಸೆಯ ಜನರಿಂಗೆ ನವ್ಯವೆಂಬಂದದಿ ಕಡಂದಲೆಯ ರಾಮಾಖ್ಯನು ‖ ೧ ‖

**ಮಂಗಲಂ**

**ರಾಗ ರೇಗುಪ್ತಿ ಅಷ್ಟತಾಳ**

ಪರಮಪುರುಷ ರಂಗಧಾಮನಿಗೆ | ಗರುಡಗಮನ ಶ್ರೀನಿವಾಸನಿಗೆ ||
ಕರುಣಾಸಮುದ್ರಗೆ ವರದವೆಂಕಟನಿಗೆ | ಪರಶುರಾಮಗೆ ರೇಣುಕಾತ್ಮಜಗೆ ‖ ಮಂಗಲಂ ‖ ೧ ‖

ತಮನೆಂಬ ದೈತ್ಯನ ಸೀಳಿದಗೆ | ಅಮರಿಗಮೃತವನೆರೆದವಗೆ ||
ಸುಮನಸರಸು ಕರೆದಭಯವನಿತ್ತಗೆ | ಜಮದಗ್ನಿತರಳಗೆ ಶುಭಕರಗೆ ‖ ಮಂಗಲಂ ‖ ೨ ‖

ಧಾತ್ರಿಯನೊಯ್ದನ ಸೀಳಿದಗೆ | ನೇತ್ರಭಯಂಕರ ನರಸಿಂಹಗೆ ||
ಗೋತ್ರವನಳಿದ ಶ್ರೀವಾಮನಮೂರ್ತಿಗೆ | ಕ್ಷತ್ರಿಕುಲಾಂತಕ ಭಾರ್ಗವಗೆ ‖ ಮಂಗಲಂ ‖ ೩ ‖

***ಕಾರ್ತವೀರ್ಯಾರ್ಜುನ ಕಾಳಗ ಸಂಪೂರ್ಣ***

***|| ಶ್ರೀಕೃಷ್ಣಾರ್ಪಣಮಸ್ತು ||***

# ಶ್ರೀಕೃಷ್ಣ ಬಾಲಲೀಲೆ

## ಪಾತ್ರಗಳು

| | |
|---|---|
| ಭೂದೇವಿ | ಬಾಲಕೃಷ್ಣ |
| ಬ್ರಹ್ಮ | ಚಂಡಿಕೆ |
| ಶ್ರೀಹರಿ | ಪೂತನೆ |
| ಕಂಸ | ಯಶೋಧೆ |
| ವಸುದೇವ | ನಂದ |
| ದೇವಕಿ | ಗಾರ್ಗ್ಯ |
| ನಾರದ | ಗೋಪಿಯರು |

# ಶ್ರೀಕೃಷ್ಣ ಬಾಲಲೀಲೆ

**ಶಾರ್ದೂಲವಿಕ್ರೀಡಿತಂ**

ಶ್ರೀಗೋಪೀಜನಜಾಲಮೋಹನಮಹಾಮಂತ್ರೌಷಧಂ ಸೌಖ್ಯದಂ
ವಾಗೀಶಾದಿಸುರೌಘವಂದಿತಪದಂ ವಾತಾಸಿಗೇಹಂ ಹರಿಮ್ |
ಯೋಗೀಂದ್ರಾರ್ಚಿತಪಾದಪದ್ಮಯುಗಳಂ ಯೋಗೇಶ್ವರಂ ಈಶ್ವರಂ
ಗೋಗೋಪಾಲಕಪಾಲನೀವುದೆಮಗಂ ಸುಜ್ಞಾನಸೌಭಾಗ್ಯಮಮ್ ||

**ವಾರ್ಧಿಕ**

ಶಿವನಂ ಶಿವಾಕಾಂತನಂ ಸದಾಶಾಂತಂ |
ಭವದೂರನಂ ಭರ್ಗನಂ ಭೂತವರ್ಗನಂ |
ರವಿಕೋಟಿಸಂಕಾಶನಂ ಸರ್ಪಭೂಷನಂ ಭೀಮನಂ ಜಿತಕಾಮನಂ ||
ಭುವನಪಾವನಚರಿತನಂ ಜಗದ್ಭರಿತನಂ |
ದಿವಿಜೇಶನುತಿ ಪಾತ್ರನಂ ಫಾಲನೇತ್ರನಂ |
ಶವಭಸ್ಮಲಿಪ್ತಾಂಗನಂ ಮಹಾಲಿಂಗನಂ ನುತಿಸಿ ಸನ್ಮತಿ ಪಡೆವೆನು ‖ ೧ ‖

**ಭಾಮಿನಿ**

ಕರಿವದನ ಕರುಣಾಳು ಕಲ್ಮಷ |
ಹರ ಕಲಾಸಂಪೂರ್ಣ ಕಾಮಿತ |
ವರದ ಕಂಜದಳಾಕ್ಷಮಿತ್ರ ಪವಿತ್ರತರಗಾತ್ರ ||
ಪರಮಮಂಗಳಮೂರ್ತಿ ಪಾವನ |

ಚರಿತ ಪದ್ಮಜವಂದ್ಯ ಪರಮೇ |
ಶ್ವರಕುಮಾರಕ ಮಾಳ್ಪೆಮಗೆ ನಿರ್ವಿಘ್ನತೆಯನೊಲಿದು ‖ ೧ ‖

**ಕಂದ**

ಕಮಲಜಗೆರಗಿದು ಪಾರ್ವತಿ |
ರಮೆಶಾರದೆಯರಿಗೆ ಮಣಿವುತ್ತತಿಭಕ್ತಿಯೊಳಂ ||
ಸುಮನಸರಿಗೆ ತಲೆವಾಗಿಯೆ |
ನಮಿಸುವೆ ಸದ್ಗುರುವಿನಂಘ್ರಿಕಮಲದ್ವಯಕಂ || ೧ ||

**ದ್ವಿಪದಿ**

ಮುನಿಪ ವೇದವ್ಯಾಸನನು ಮನದಿ ನೆನೆದು |
ಘನಮಹಿಮ ಶುಕಯೋಗಿಯಂಘ್ರಿಗಾಂ ಮಣಿದು || ೧ ||

ವರ ಭಾಗವತಕಥನದೊಳಗೆ ಮಾಧವನು |
ಧರೆಗೆ ಕೃಷ್ಣಾಭಿಧಾನದೊಳುದಿಸಿದುದನು || ೨ ||

ಎಲ್ಲರಿಂಗರಿವಂತೆ ಯಕ್ಷಗಾನದಲಿ |
ಸೊಲ್ಲಿಸುವೆನಜಪುರೇಶ್ವರನ ಕರುಣದಲಿ || ೩ ||

ಲಾಲಿಸುತ ಸಂತಸದಿ ಸುಜನರೀಕಥೆಯ |
ಕೇಳಿ ತಪ್ಪಿರೆ ತಿದ್ದಿ ಮೆರೆಸುವುದು ಕೃತಿಯ || ೪ ||

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಧರಣಿಪಾಲಪರೀಕ್ಷಿತಗೆ ಶುಕ | ವರಮುನೀಂದ್ರನು ಹರಿಯ ಲೀಲಾ |
ಚರಿತವಹ ಭಾಗವತಕಥನವ | ನೊರೆವುತಿರಲು || ೧ ||

ಎಲೆ ಮುನೀಶ್ವರ ಕೇಳು ಹರಿಯದು | ಕುಲದೊಳುದಿಸಿದು ಬಾಲಕತ್ವವ |
ತಳೆದು ಲೀಲೆಯನೆಸಗಿದಂದವ | ತಿಳಿಯಪೇಳ್ಕೈ || ೨ ||

ಎಂದು ತನ್ಮುನಿಯಂಘ್ರಿಗೆರಗಿದ | ಇಂದು ಕುಲಜನನೆತ್ತಿ ಮನ್ನಿಸು |
ತೆಂದನಾ ಗೋವಿಂದಚರಿತವ | ನಂದು ಮುದದಿ || ೩ ||

**ಭಾಮಿನಿ**

ಕೇಳು ಪಾಂಡವಪೌತ್ರ ಕೃಷ್ಣನ |
ಬಾಲಲೀಲೆಯ ವರ್ಣಿಸುವಡಾ |
ಭಾಳಲೋಚನಗರಿದು ಮತ್ತುಳಿದವರ ಪಾಡೇನು ||
ಆಲಿಸಾದರೆ ಹರಿಯ ಕರುಣದಿ |

ಪೇಳುವೆನು ತಿಳಿದಂತೆ ದುರಿತ |
ವ್ಯಾಳವಿಷಗಾರುಡವಿದೆಂದರಿತಿಹುದು ನೀವೆಂದ || ೧ ||

**ರಾಗ ಭೈರವಿ ಝಂಪೆತಾಳ**

ಎಲೆ ಧರಾಧಿಪ ಕೇಳು | ಖಳರ ಭಾರವನವನಿ |
ತಳೆಯಲಾರದೆ ಬಾಡಿ | ಬಳಲಿ ಬೆಂಡಾಗಿ || ೧ ||

ಹಸುವಿನಾಕಾರದಲಿ | ಬಸಿವ ಕಂಬನಿಯಿಂದ |
ಬಸವಳಿವುತುಸಿರಿಡುತ | ಕುಸಿದ ಕೊರಳಿಂದ || ೨ ||

ಅಳಲುತ್ತ ಮನದೊಳಗೆ | ಹಲವನೆಣಿಸುತ ಧರಾ |
ಲಲನೆ ನಡೆತಂದಳಾ | ನಳಿನಭವನೆಡೆಗೆ || ೩ ||

ಶ್ರುತಿಗಳುಗ್ಘಡಣೆಯಲಿ | ಶತಮಖಾದ್ಯಮರಸಂ |
ತತಿಯ ಸಂಸ್ತುತಿಯಿಂದ | ಅತುಳವಿಭವದಲಿ || ೪ ||

ಸುರುಚಿರದ ರತ್ನಭಾ | ಸುರಸಿಂಹಪೀಠದಲಿ |
ಸರಸಿಜೋದ್ಭವನಿರ್ದ | ಹರಿಯ ಧ್ಯಾನದಲಿ || ೫ ||

**ಕಂದ**

ಇಂತಬ್ಜಭವಂ ತನ್ನಯ | ಕಾಂತೆಯ ಸಮ್ಮೇಳದಿಂದೊಪ್ಪಿರಲಿತ್ತಂ ||
ಸಂತಾಪಂ ವೆತ್ತವನೀ | ಕಾಂತೆಯು ನಡೆತಂದು ಮಣಿದಳು ದುಃಖಿಸುತಂ || ೧ ||

**ರಾಗ ಕೇದಾರಗೌಳ ಅಷ್ಟತಾಳ**

ಸುರಿವ ಕಂಬನಿಯಿಂದ ಚರಣದೊಳಗೆ ಬಿದ್ದು | ಪೊರಳುತಿರಲು ಕಾಣುತ ||
ಧರಣಿಯ ಶಿರವಿಡಿದೆತ್ತಿ ಮೆಯ್ದಡವಿ ಮ | ತ್ತರವಿಂದಾಸನನೆಂದನು || ೧ ||

ತಾಯೆ ಕೇಳೌ ನಿನ್ನ ನೋಯಿಸಿದವರಾರು | ಬಾಯಾರ ಬೇಡವಿನ್ನು ||
ಆಯಸಗೊಳಲೇಕೇನಾಯಿತೆಂದೆಮ್ಮೊಳು | ಪ್ರಿಯದೊಳುಸಿರೆಂದನು || ೨ ||

ಜೀಯ ಲಾಲಿಪುದು ದಾನವರು ಕ್ಷತ್ರಿಯ ಸಮು | ದಾಯವಾಗಿಯೆ ಜನಿಸಿ ||
ನೋಯಿಸುವರು ಭಾರ ಘನವಾಯಿತದರಿಂದ | ಲೀಯವಸ್ಥೆಗೆ ಸಂದೆನು || ೩ ||

ಧರ್ಮನಾಶನವಾಯ್ತು ದಾಕ್ಷಿಣ್ಯವಡಗಿ ಸ | ತ್ಕರ್ಮವಡಗಿಪೋಯಿತು ||
ದುರ್ಮತಿಗಳ ದೆಸೆಯಿಂದ ಲೋಕದಲಿ ದು | ಷ್ಕರ್ಮವೆಗ್ಗಳವಾಯಿತು || ೪ ||

ಸತ್ಯ ಶೌಚಾಚಾರ ಯಮನಿಯಮಗಳೆಂಬ | ನಿತ್ಯ ವಡಗಿಹೋಯಿತು ||
ಅತ್ಯಂತ ಕಪಟಕಲ್ಮಷವಾಯ್ತು ಜಗದೊಳೌ | ಚಿತ್ಯವಧಿಕವಾಯಿತು || ೫ ||

**ಭಾಮಿನಿ**

ವಾರಿಜಾಸನ ಕೇಳು ಕೊರಳಿಗೆ |
ಭಾರವತಿಶಯವಾಯ್ತು ಧರಿಸಲು |
ತೀರದದರಿಂ ಬಂದೆ ನೀ ಜಗದೊಡೆಯನೆಂದೆನುತ ||
ನಾರಿ ನಾನೇಂ ಗೆಯ್ವೆಕಾಲದಿ |
ದೂರಿದೆನು ದೇವರಿಗೆ ನೀವೆ ವಿ |
ಚಾರಿಸಲು ಬೇಕೆನುತ ಮಗುಳೆರಗಿದಳು ತತ್ಪದಕೆ || ೧ ||

**ವಾರ್ಧಿಕ**

ಧರಣಿಯಿಂತೆಂದಜನ ಚರಣದೊಳ್ ಮಣಿದಿರಲ್ |
ಕರುಣದಿಂದಾಧರೆಯ ಶಿರವನುಂ ನೆಗಪಿ ನೀ |
ಮರುಗದಿರ್ ನೋಳ್ಪೆನೆಂದರವಿಂದಭವನಭವ ಸುರಪಮುಖ್ಯಾಮರರನು ||
ಕರೆನೆಂದ ನಮ್ಮೊಳಗೆ ಹರಿವುದಲ್ಲಿದು ಜಗ |
ದ್ಭರಿತನಹ ವಿಷ್ಣುವಿಂಗರುಹವೇಳ್ಕೆಂದು ದಿ |
ಗ್ವರರನೊಡಗೊಂಡತುಳ ಹರುಷದಿಂದಯ್ದಿದಂ ಭರದೊಳಿಂಗಡಲತಡಿಗೆ || ೧ ||

ತರತರದಿ ನೆರೆದು ಬಹು ತೆರೆಗಳಿಂನೊರೆಗಳಿಂ |
ದುರುತರದಿ ಭೋರ್ಗರೆವ ಘೋಷದಿಂ ಭಾಸದಿಂ |
ಧರೆಗುರುಳ್ದೊಡನೆ ಸೀರ್ವನಿಗಳಿಂ ಧ್ವನಿಗಳಿಂದಧಿಕತರ ರಭಸದಿಂದ
ಸುರುಚಿರದ ವಿದ್ರುಮಲತಾಳಿಯಿಂ ಗಾಳಿಯಿಂ |
ದಿರದಭ್ರಕೇಳ್ವ ಗಂಭೀರದಿಂ ಪೂರದಿಂ |
ಹರಿಯಳಿಯನೆನಗೆಂಬ ಕೊಬ್ಬಿನಿಂದುಬ್ಬಿನಿಂದಿಂಗಡಲ್ ಕಣ್ಗೆಸೆದುದು || ೨ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇಂತು ಮೆರೆವಮೃತಾಬ್ಧಿಯನು ಸುರ | ಸಂತತಿಯು ಸಹಿತಜನುಕಾಣುತ |
ಲಂತರಂಗದಿ ಹರಿಯ ನೆನೆವುತ | ಸಂತಸದಲಿ || ೧ ||

ಸುರರಿಗೆಂದನು ಶರನಿಧಿಯನು | ತ್ತರಿಸಲಳವಲ್ಲೀ ದಡದಲಾ |
ಪರಮಪುರುಷನ ಭಜಿಸುವೆನ್ನುತ | ಲೊರೆದು ಮುದದಿ || ೨ ||

ಆಸನವ ಬಲಿದೇಕಚಿತ್ತದಿ | ನಾಸಿಕಾಗ್ರದ ದೃಷ್ಟಿಯಲಿ ಕಮ |
ಲಾಸನನು ಕುಳ್ಳಿರ್ದನಧಿಕ | ವಿ | ಲಾಸದಿಂದ || ೩ ||

ವರಸಮಾಧಿಯೊಳಯ್ದೆ ಮೇಲ್ಮೊಗ | ವಿರಿಸಿ ಸುರಪಾದ್ಯಮರ ಸಂಕುಲ |
ವೆರಸಿ ಭಕ್ತಿಯೊಳಬ್ಜನಾಭನ | ಸ್ಮರಿಸುತಿರ್ದ ‌ ‌ || ೪ ||

**ಭಾಮಿನಿ**

ಪರಮಪುರುಷ ಪರೇಶ ಪಾವನ |
ಚರಿತ ಪಂಕಜನಾಭ ಪರಮೇ |
ಶ್ವರನ ಮಿತ್ರ ಪವಿತ್ರಗಾತ್ರ ವಿಚಿತ್ರತರಸ್ತೋತ್ರ ||
ಸರಸಿಜಾಕ್ಷ ಸದಾವಿನೋದಾ |
ದ್ಯುರುತರಾನಂದೈಕವಿಗ್ರಹ |
ಸರಸಯುತ ಸರ್ವೇಶ ಶರಣಾಗೆಂದನಬುಜಭವ ||

**ರಾಗ ಯರಕಲಕಾಂಭೋಜ ಝಂಪೆತಾಳ**

ಮತ್ತೆ ಕೇಳರಸ ಶರಧಿಗೆ ಪ್ರತಿ ಸಮುದ್ರವೆನೆ | ತತ್ತೀರದಲ್ಲಿ ಸುಮನಸರ ||
ಮೊತ್ತ ಜಯಜಯವೆನುತ ಪೊತ್ತು ಕರಸಂಪುಟವ | ನುತ್ತಮಾಂಗದಿ ಹರಿಯ ಗುಣವ || ೧ ||

ಶರಧಿಘೋಷದಿ ಪೊಗಳುತಿರೆ ಮೆಚ್ಚಿ ಶ್ರೀವರನು | ಕರುಣದಿಂದಭ್ರಮಂಡಲದಿ |
ಗರುಡವಾಹನನಾಗಿಯರಿಶಂಖಗದೆಪದ್ಮ | ಧರನಾಗಿಪೊಳೆಪೊಳೆವುತಾಗ || ೨ ||

ತರಣಿಶತಕೋಟಿದೀಧಿತಿಯಿಂದ ವಾಮದಲಿ | ಮೆರೆವ ಶ್ರೀ ರಮಣಿಸಹಿತೊಲಿದು ||
ಸರಸಿಜೋದ್ಭವಗೆ ಕಾಣಿಸಿಕೊಂಡನೇನೆಂಬೆ | ನುರು ಕೃಪಾನಿಧಿಯ ಮಹಿಮೆಯನ್ನು || ೩ ||

ಕಂಡು ಹರುಷಿತನಾಗಿ ಪುಂಡರೀಕಾಸನನು | ಕಂಡಚಿನ್ಮಯನ ಮೂರ್ತಿಯನು ||
ಕೊಂಡಾಡುತಲೆ ಶಿರವ ಮಂಡೆಯಲಿ ಸೂಡಿ ಮಿಗೆ | ದಂಡದಂತೆರಗಿ ನುತಿಸಿದನು || ೪ ||

**ವಾರ್ಧಿಕ**

ಜಯ ಜಯ ಜಗನ್ನಾಥ ವೈನತೇಯವರೂಥ |
ಜಯ ಜಯ ಸದಾಮೋದ ಸಾಮಗಾನವಿನೋದ |
ಜಯ ಜಯ ಚಿದಾನಂದ ದನುಜಾರಿ ಗೋವಿಂದ ಸುಂದರಾನನ ಮುಕುಂದ ||
ಜಯಜಯ ರಮಾಲೋಲ ಮುನಿ ಜಾಲಪರಿಪಾಲ |
ಜಯ ಜಯ ಸುರಾಧೀಶ ಖಳನಾಶ ರವಿಭಾಸ |
ಜಯ ಜಯ ನಿರಾಕಾರ ಭವದೂರ ಸುವಿಚಾರ ಜಯ ಜಯೆಂದೆರಗಿದನು || ೧ ||

**ಕಂದ**

ಕಮಲಜನೀಪರಿಯಿಂದಂ | ನಮಿಸಿದು
ನುತಿಗೆಯ್ಯುತಿರ್ಪುದಂ ಕಾಣುತ್ತಂ ||

ರಮೆಯಾಳ್ದಂ ತನುಜನೊಳತಿ |
ಮಮತೆಯೊಳಿಂತೆಂದನಯ್ದೆ ನಮ್ರತೆಯಿಂದಂ || ೧ ||

**ರಾಗ ಮಧುಮಾಧವಿ ಏಕತಾಳ**

ಸಾರಸಾಸನ ಪೇಳಭಿಮತವ || ಭೂರಿಸನ್ನುತಿ ಗೆಯ್ದು |
ಕಾರಣವೇನೆಂದು || ಸಾರಸಾಸನ ಪೇಳಿಭಿಮತವ || ಪ ||

ಮನದ ದುಗುಡವೇನು ಮಾಜದೆ ಪೇಳಿನ್ನು | ದನುಜರಟ್ಟುಳಿಯುಂಟೆ ಧರಣಿಯಲ್ಲಿ ||
ಅನಿಮಿಷರೀಪರಿಯಳುತಿರ್ಪ ಬಗೆಯೇನೆಂ | ದೆನೆ ಲಾಲಿಸುತ್ತೆಂದನಜನತಿ ಮುದದಿಂದ || ೧ ||

ಜೀಯ ಲಾಲಿಸು ದುಷ್ಟರಾಗಿಹ ದೈತ್ಯನಿ | ಕಾಯವು ಕ್ಷಾತ್ರಕುಲದೊಳುದಿಸಿ ||
ಮಾಯಾ ಮೋಹಿತರಾಗಿ ಮದದಿಂದ ಸೊಕ್ಕಿ ಧರ್ಮ | ದಾಯತವನು ಮೀರಿ ನಡೆವುತಿಪ್ಪರುಬ್ಬೇರಿ || ೨||

ಧರಣಿದೇವಿಯು ಬಂದು ಧರಿಸಲಾರೆನು ಎಂದು | ದೂರಿದಳೆನಗತಿ ದುಗುಡದಿಂದ ||
ಕಾರಣಕರ್ತು ನಿನ್ನ ಸಾರಿ ಬಿನ್ನಯಿಸಿದೆನು | ಭೋರನಯ್ತಂದು ವಿಚಾರಿಸು ದಯಾಸಿಂಧು || ೩ ||

ದೇವ ನಿನ್ನಾಜ್ಞೆಯೊಳಾವಿರ್ಪುದಲ್ಲದೆ | ಭಾವಿಸಲೆಮಗೆ ಸ್ವಾತಂತ್ರ್ಯವುಂಟೆ ||
ಸಾವಿರ ಮಾತೇನು ಸಲಹುತ ಕರ್ತು ನೀ | ಕಾವೆನೆಂದಭಯವನೀಯೊ ಮಹಾನುಭಾವ || ೪ ||

**ಭಾಮಿನಿ**

ಎನಲು ಲಾಲಿಸುತಯ್ದೆ ತ್ರಿಜಗ |
ಜ್ಜನಕನೆಂದನು ಯದುಕುಲದಿ ತಾ |
ಜನಿಸುವೆನು ವಸುದೇವನಲಿ ದೇವಕಿಯ ಗರ್ಭದಲಿ ||
ಘನ ಮದಾಂಧರನೊರಸಿಯಚಲ |
ಸ್ತನೆಯ ಭಾರವ ಕಳೆವೆ ಭಯಬೇ |
ಡೆನುತಲಸುರಾರಾತಿಯಡಗಿದನಭ್ರಮಾರ್ಗದಲಿ || ೧ ||

**ರಾಗ ಭೈರವಿ ಝಂಪೆತಾಳ**

ಇಂತಭಯಗೊಟ್ಟು ಶ್ರೀ | ಕಾಂತ ತೆರಳಲ್ಕಿತ್ತ |
ಸಂತಸದೊಳಜನು ಸುರ | ಕಾಂತನನು ನೋಡಿ || ೧ ||

ನಗುತೆಂದನಿಂದ್ರ ಕೇ | ಳಗಧರನು ದಯವಾದ |
ಬಗೆಯನಿನ್ನೇನೆಂಬೆ | ಜಗದೊಡೆಯನಯ್ಸೆ || ೨ ||

ವಸುದೇವನೆಂಬವಗೆ | ಶಿಶುವಾಗಿ ತಾನುದಿಸಿ |
ಯಸುರರನು ಗೆಲುವಗಡ | ವಸುಧೆಯೊಳಗಿರ್ದು || ೩ ||

ಉರಗೇಂದ್ರಸಹಿತ ತಾ | ನರನಾಗಿ ಜನಿಸುವನು |
ಸುರರೆಲ್ಲ ಯದುಕುಲದಿ ಧರೆಯೊಳುದಿಸುವುದು || ೪ ||

ಎಂದಮರರನು ಕಳುಹಿ | ಮಂದಹಾಸದಲವನಿ |
ಗೆಂದ ನಮೃತೆಯೊಳರ | ವಿಂದಭವನೊಲಿದು || ೫ ||

ಧರಣಿ ಕೇಳಮ್ಮ ನಿ | ನ್ನರಸ ದಯವಾದ ನೀ |
ಮರುಗಬೇಡೆಂದು ಮಿಗೆ | ಪರಸಿ ಕಳುಹಿದನು || ೫ ||

**ಕಂದ**

ವಾರಿಜಭವನೀಪರಿಯಿಂ | ಧಾರಿಣಿಯಂ ಸಂತವಿಟ್ಟು ನಿಜಮಂದಿರ ಕಿತ್ತಂ ||
ಭೋರನೆ ತಾನಯ್ತುಂದಸು | ರಾರಿಯನುಂ ನೆನೆವುತಿರ್ದನತಿ ಭಕ್ತಿಯೊಳಂ || ೧ ||

**ಭಾಮಿನಿ**

ಧರಣಿಪತಿ ಕೇಳಿತ್ತ ಮಧುರಾ |
ಪುರದೊಳಗೆ ನೃಪನುಗ್ರಸೇನನ |
ತರುಣ ಕಂಸನೆನಿಪ್ಪನೊರ್ವನುದಾರ ಗರ್ವದಲಿ ||
ದುರುಳರಿಗೆ ಗುರುವಾದ ದುಷ್ಟರ |
ನೆರವಿಯಲಿ ಧರೆಗರಸೆನಿಸಿ ತಾ |
ಮೆರೆವುತಿರ್ದನು ಭುಜಬಲೋನ್ನತಮದದ ಮೋಡಿಯಲಿ || ೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಈತೆರದೊಳಿಹ ಕಂಸನೆಂಬನ | ತಾತನಗ್ರಜ ದೇವಕನ ಸಂ |
ಜಾತೆ ದೇವಕಿಯೆಂಬವಳು ರೂ | ಪಾತಿಶಯದಿ || ೧ ||

ಮೆರೆವುತಿರ್ದಲು ಮಾತೆ ಪಿತರಿಗೆ | ಹರುಷವನು ಬೀರುತ್ತ ಸದ್ಗುಣ |
ಭರಿತೆಯಾಗಿ ಸುಶೀಲದಲಿ ಹೊಸ | ಹರೆಯದಿಂದ || ೨ ||

ನೋಡಿ ಕಂಸನು ಪಿತನನುಜ್ಞೆಯ | ಬೇಡಿ ತಂಗಿಗೆ ಪರಿಣಯವ ತಾ |
ಮಾಡಬೇಕೆಂದೆನುತ ಸಂತಸ | ಗೂಡಿ ಮನದಿ || ೩ ||

ವರನನರಸುತ್ತಿರಲು ತತ್ಪುರ | ವರದಿ ಶೂರನೃಪಾಲನಣುಗನು |
ಸ್ಮರನ ಲಾವಣ್ಯದಲಿ ಸದ್ಗುಣ | ಭರಿತನಾಗಿ || ೪ ||

ಇರಲು ವಸುದೇವಾಭಿಧಾನದ | ಲರಿತು ಕಂಸನು ತಂಗಿಗೀತನೆ |
ವರನೆನುತ ನಿಶ್ಚಯಿಸಿ ತವಗೆ | ಚ್ಚರಿಸಿಭರದಿ || ೫ ||

**ಭಾಮಿನಿ**

ಕರೆಸಿ ಪೌರೋಹಿತರ ಲಗ್ನವ |
ನಿರಿಸಿ ಪೃಥ್ವೀಶ್ವರರಿಗೋಲೆಯ |
ಬರೆಸಿ ಯುಡುಗೊರೆವೆರಸಿ ದೂತರ ಹರಿಸಿ ಭೂಭುಜರ ||
ಬರಿಸಿ ಬಂಧುನಿಕಾಯವನು ಸ |
ತ್ಕರಿಸಿ ವಿಪ್ರೌಘವನು ಬಹಳಾ |
ದರಿಸಿ ಮಿಗೆ ಕುಳ್ಳಿರಿಸಿ ತಾನುಪಚರಿಸಿದನು ಕಂಸ || ೧ ||

**ರಾಗ ಕಾಂಬೋಧಿ ಝಂಪೆತಾಳ**

ಅತ್ತಲಾ ವಸುದೇವನತಿಮುದದಿ ಬಂಧುಗಳ | ಮೊತ್ತ ಸಹಿತುರು ವಾದ್ಯರವದಿ ||
ವೃತ್ತನೆಯರಿಂಚರಧ್ವನಿಯೊಳಯ್ದೆ ಪಾ | ಡುತ್ತಿರಲು ಬಂದನುತ್ಸವದಿ || ೧ ||

ಮದಗಜವನೇರಿ ಸರ್ವಾಭರಣದಿಂದ ಮೃಗ | ಮದತಿಲಕದಿಂದ ರಂಜಿಸುತ ||
ಮದನನೆಂಬಂತೆ ದಿಬ್ಬಣಿಗರೊಡನಾ ಶೌರಿ | ಮದುವಣಿಗನಾಗಿ ನಡೆತಂದ || ೨ ||

ಬಂದ ದಿಬ್ಬಣಿಗರನಿದಿರ್ಗೊಂಡು ಕಂಸನಾ | ನಂದಮಿಗೆ ಶಾಸ್ತ್ರವಿಧಿಯಿಂದ ||
ಒಂದುಳಿಯದೆಲ್ಲವನು ರಚಿಸಿ ತಂಗಿಯನು ಪಿತ | ನಿಂದ ಧಾರೆಯನೆರೆಯಿಸಿದನು || ೩ ||

ಚೆಂದದಲಿ ನೃಪರಿಗುಡುಗೊರೆ ವೀಳ್ಯಪರಿಮಳದ | ಗಂಧಮಾಲ್ಯಾನುಲೇಪನದಿ ||
ನಿಂದು ತಾನುಪಚರಿಸಿ ವಿಪ್ರರನು ದಕ್ಷಿಣೆಗ | ಳಿಂದ ಸಂತೃಪ್ತಿಪಡಿಸಿದನು || ೪ ||

ಭೂರಿಯುಡುಗೊರೆಯಾಯ್ತು ದಂಪತಿಗಳಿಂಗೆ ದ್ವಿಜ | ರೋರಣದಲಕ್ಷತೆಯ ತಳಿದು ||
ಚಾರುತರ ಮಂತ್ರರವ ಮೆರೆಯೆ ಪಾಡುತ ರತುನ | ದಾರತಿಯ ತಂದರಬಲೆಯರು || ೫ ||

**ಹಾಡು**

ಕೋಮಲಕಾಯದ ನಳಿದೋಳಿನ | ಸಾಮಜಗಮನದ ಸುಳಿಗುರುಳಿನ |
ಕಾಮನ ಕನ್ನಡಿಯ ಕದಪಿನ ||
ಕದಪಿನ ನುಣ್ಮೊಗದುರು ಬೆಡಗಿನ | ಕಾಮಿನಿಯರಂದು ನೆರೆದರು ||
ಶೋಭಾನೆ || ೧ ||

ಮುಘಮಘಿಸುವ ಮಲ್ಲಿಗೆದುರುಬಿನ |
ಝಗಝಗಿಸುವ ರತ್ನಾಭರಣದ | ನಗುಮೊಗದ ಬೆಳಕು ತುಳುಕುವ ||
ತುಳುಕುವ ಪೊಂಬಣ್ಣದ ಸೊಬಗಿನ | ಮುಗುದೆಯರಕ್ಷತೆಯ ತಳಿದರು ||
ಶೋಭಾನೆ || || ೨ ||

ಕಂಕಣ ಝುಣಕರಿಸಲು ಕಾಂಚಿಯ | ಕಿಂಕಿಣಿರವ ಮೆರೆಯಲು ಪೂರ್ಣ ಶ |
ಶಾಂಕವಕ್ತ್ರೆಯರು ಸ್ವರವೆತ್ತಿ || ಸ್ವರವೆತ್ತಿ ಶೋಭನವ  ಪಾಡುತ್ತ |
ಕುಂಕುಮದಾರತಿಯ ಬೆಳಗಿರೆ || ಶೋಭಾನೆ || ೩ ||

ರವಕೆಗೆ ಮಣಿಯಧ ಮರಿಯಾದೆಯ | ಅವಕಲು ಕಯ್ಗಳವಡುವಳುಕಿನ |
ಕವಕವಿಸಿ ಪೊಳೆವ ಸ್ತನವುಳ್ಳ || ಸ್ತನವುಳ್ಳತಿನೂತನ ಯವ್ವನ |
ಯುವತಿಯುರಾರತಿಯ ಬೆಳಗಿರೆ || ಶೋಭಾನೆ || ೪ ||

ಕುಸುಮಾಸ್ತ್ರನನೇಡಿಸುವಂದದಿ | ನಸುನಗುಮೊಗದುರು ಬೆಡಗು ಲಾವಣ್ಯದಿ |
ಎಸೆದು ರಂಜಿಸುವ ವಸುದೇವ | ವಸುದೇವ ದೇವಕಿದೇವಿಗೆ |
ಕುಶಲದಾರತಿಯ ಬೆಳಗಿರೆ | | ಶೋಭಾನೆ || ೫ ||

**ಭಾಮಿನಿ**

ಇಂತು ವಿಭವದಿ ನಾಲ್ಕು ದಿನವೋ |
ರಂತೆ ಮಹದುತ್ಸವವನೆಸಗಿದು |
ಸಂತಸದಿ ಬಂದವರಿಗವರವರುಚಿತಗಳನರಿತು ||
ಸಂತವಿಸಿಯವಭೃಥವೆಸಗಿತದ |
ನಂತರದಿ ಬಹುವಿಧದಿ ಬಾಂಧವ |
ಸಂತತಿಯನುಪಚರಿಸಿದನು ಕಂಸಾಖ್ಯನೊಲವಿನಲಿ || ೧ ||

**ವಾರ್ಧಿಕ**

ಅರಸ ಕೇಳಿಂತನುಜೆಯಂ ಮಹೋತ್ಸವದೊಳಂ |
ಪರಿಣಯಂ ಗೆಯ್ದು ವಸುದೇವಂಗೆ ಬಳುವಳಿಯ |
ನುರುತರ ಮದೇಭ ಹಯ ರಥಪದಾತಿಗಳನಿತ್ತ ಖಿಳತರ ವಸ್ತುಗಳನು ||
ಹರುಷದಿಂ ನಿಜಸಹೋದರಿಗಿತ್ತನೊಡನೆ ಭೋರ್ |
ಮೆರೆವ ವಾದ್ಯದಿನವರನಡರಿಸಿ ವರೂಥದೊಳ್ |
ತುರಗಮಂ ತಾನೆ ನಡೆಸುತೆ ಕಳುಪುತಯ್ತರಲ್ಕಭ್ರದೊಳ್ ನುಡಿಯಾದುದು || ೧ ||

**ಭಾಮಿನಿ**

ಕೇಳೆಲವೊ ಖಳ ಕಂಸ ತಂಗಿಯ |
ಮೇಲೆ ಮೋಹವ ಮಾಳ್ಪೆ ನೀನೀ |
ಲೋಲಲೋಚನೆಯುದರದೊಳಗೆಂಟನೆಯ ಗರ್ಭದಲಿ ||
ಶ್ರೀಲಲಾಮನು ಜನಿಸಿ ಬಹು ದೈ |
ತ್ಯಾಳಿಯನು ಸಂಹರಿಸಿ ನಿನ್ನನು |
ಸೀಳುವನು ಪುಸಿಯಲ್ಲೆನುತ್ತಡಗಿತು ನಭೋವಚನ || ೧ ||

**ಕಂದ**

ಎಂದೊದರಿದಭ್ರವಾಣಿಯ | ನಂದಾ ಖಳನಾಲಿಸುತ್ತಲುರು ಭೀತಿಯೊಳಂ ||
ನಿಂದಾಲೋಚಿಸುತಂ ತಾಂ | ನೊಂದನುಜೆಯನೀಕ್ಷಿಸುತ್ತಲತಿಖತಿಗೊಂಡಂ || ೧ ||

**ರಾಗ ಭೈರವಿ ಆದಿತಾಳ**

ಖಳನತಿಕೋಪವ ತಾಳ್ದು | ಕಂಗಳೊಳುರಿಗಿಡಿಗಳನುಗುಳ್ದು ||
ಝುಳಪಿಸಿ ಖಡ್ಗವನುಗಿದು | ಖತಿ | ಯೊಳು ತಾನಧರವನಗಿದು || ೧ ||

ಫಡ ತಂಗಿಯೆತನಗಿವಳು | ತ | ನ್ನೊಡಲಿಗೆ ವಿಷವಾದವಳು ||
ನುಡಿದರೆ ಫಲವೇನಿನ್ನು | ತಲೆ | ಗಡಿದೀಗಳೆ ತೀರ್ಚುವೆನು || ೨ ||

ಕೆಡೆಯೆನುತಲಿ ಬಾಲಿಕೆಯ | ಕೊರ | ಳೆಡೆಗಾನಿಸೆ ಕೂರಸಿಯ ||
ಮಿಡುಕುತಬಲೆ ಬಾಯ್ಬಿಡಲು | ಕಂ | ಡೊಡನೆಲ್ಲವರಳುತಿರಲು || ೩ ||

**ಕಂದ**

ಈ ವಿಧಮಂ ಕಂಡಾ ವಸು |
ದೇವಂ ನಡನಡುಗುತಿಳಿವ ಕಂಬನಿಯಿಂದಂ ||
ಹಾ ವಿಧಿಯೆಯೆಂದು ಸುಯ್ದು |
ತ್ತಾ ವೀರನ ಕರೆದು ಖಡ್ಗಮಂ ಪಿಡಿದೆಂದಂ ||

**ರಾಗ ನೀಲಾಂಬರಿ ರೂಪಕತಾಳ**

ತಾಳು ತಾಳ್ಕೆ ಕಂಸ | ಸುಮ್ಮನೇತಕೆ ನೀನೀ | ಬಾಲೆಯನಿರಿವೆ ಕೋಪದಲಿ ||
ಗಾಳಿಗೊಡ್ಡಿದ ದೀಪ | ದಂತಿರ್ಪುದೀದೇಹ | ಬಾಳ್ವಿಕೆ ನಿಜವಲ್ಲ ನರರ || ೧ ||

ಎಂದಿಗಾದರು ಸಾವು | ಬಂದಲ್ಲದಿಹುದೆ ನೀ | ನಿಂದು ಸ್ತ್ರೀ ಹತ್ಯೆಯನೆಸಗಿ ||
ಕೊಂದನೀ ಪಾಪಿ ತಂ | ಗಿಯನೆಂಬ ಮಾತನ್ನು | ತಂದು ಕೊಳ್ಳಲು ಬೇಡ ವ್ಯರ್ಥ || ೨ ||

ಅಂಗವಲ್ಲಿದು ಹಿಂಸೆ | ಯೆಂಬುದೆ ಬಹುಪಾಪ | ಹೆಂಗೊಲೆಯದರಿಂದಲಧಿಕ ||
ತಂಗಿಯನಿರಿದ ಪಾ | ತಕಕೇನು ಪ್ರಾಯಶ್ಚಿ | ತ್ತಂಗಳಿಲ್ಲಿದು ಸಿದ್ಧ ಜಗದಿ || ೩ ||

ಹುಟ್ಟಿದಾಗಲೆ ಸಾವ | ದಿನವನೆಣಿಸಿ ಬರೆ | ದಿಟ್ಟಿಪ್ಪನಜನು ಭಾಳದಲಿ ||
ಎಷ್ಟು ಪ್ರಯತ್ನವ | ಗೆಯ್ದುರು ವಿಧಿಗೆಯ್ದ | ಕಟ್ಟಳೆಯನು ಮೀರಲರಿದು || ೪ ||

ಇವಳ ಕೊಂದರೆ ಮುಂದೆ | ನಿನಗಿನ್ನು ಮರಣವಿ | ಲ್ಲವೆ ಪೇಳು ಮನದ ನಿಶ್ಚಯವ ||
ಅವಿವೇಕದಲಿ ಪಾಪ | ಕೆಳಸಿ ನರಕದಲ್ಲಿ | ಭವಣೆಬಡುವುದೇಕೆ ವ್ಯರ್ಥ || ೫ ||

**ರಾಗ ಮಾರವಿ ಏಕತಾಳ**

ಎನಲಾ ಕಂಸನು | ಕನಲುತಲೆಂದನು | ನಿನಗೀ ಧರ್ಮವನು ||
ವಿನಯದಿ ಕಲಿಸಿದ | ನಾವನದಾರಿಗೆ | ಯೆನೆತಿಹೆ ನೀನದನು || ೧ ||

ಆರು ಕೊಲುವರಾ | ರಿಂದಾರಳಿವರು | ಬೇರ ಬಲ್ಲರಿಗೆಲೆಯ ||
ತೋರುವುದುಚಿತವೆ | ಸಾರತ್ತಲು ನಾ | ತೀರಚುವೆನು ಸತಿಯ || ೨ ||

ಮರೆಯದೆ ಲಾಲಿಸು | ವರಗುಸಿರುವುದೀ | ಪರಮ ರಹಸ್ಯವನು ||
ಒರೆಯದಿರ್ದೈ ಸಾ | ಕರಿತಿಹೆ ನಾನೀ | ಪರಿ ಯತ್ನಗಳನ್ನು || ೩ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಎನಲು ಮರುಗುತಲೆಂದನಕಟಾ | ವನಿತೆಯನು ಕೊಲ್ಲದಿರು ತನ್ನಯ |
ತನುವಿಗಂತಕನಾಗು ಬಿಡು ಸಾ | ಕೆನಲು ಕೇಳಿ || ೧ ||

ಕಿಡಿಗರೆವ ಕಂಗಳಲಿ ಕಂಸನು | ನುಡಿದನೆಲವೋ ಕಾಲಗಾಯಕೆ |
ಸುಡುವರೇ ದಂತವನು ಜಾಣುವೆ | ನುಡಿಯದೇಕೈ || ೨ ||

ಬಲ್ಲೆನೆಲ್ಲವ ಸಾಕು ನಿನ್ನಯ | ಬಲ್ಲವಿಕೆಯನು ಸೊರಹದಿರು ತ |
ನ್ನಲ್ಲಿ ಬಿಡೆನೀ ಸತಿಯನೆನುತ | ಖುಲ್ಲನಂದು || ೩ ||

ಜಡಿವುತಿರೆ ಖಂಡೆಯವ ಕಾಣುತ | ನಡುಗುತಾ ವಸುದೇವನಬಲೆಯ |
ಬಿಡಿಸುವೆನು ಎಂತೆನುತ ದುಗುಡವ | ಪಿಡಿದು ಮನದಿ || ೪ ||

ನೆನೆದನೊಂದಾಲೋಚನೆಯನೀ | ಘನವಿನಾಶಿಗೆ ತನ್ನಲುದಿಸಿದ |
ತನುಜರನು ಕೊಟ್ಟಾದರುಳುಹುವೆ | ವನಿತೆಯನ್ನು || ೫ ||

**ಭಾಮಿನಿ**

ಸತಿಯನಿಂದಿಂಗುಳುಹೆವನು ನಿಜ |
ಸುತರನೀವೆನೆನುತ್ತಲಲ್ಲದೆ |
ಮತವಿಹೀನನು ಪಾಪಕಂಜುವನಲ್ಲ ಬಿಡನಿವಳ |
ಯತುನ ಬೇರಿನ್ನಿಲ್ಲ ವಿಧಿಕ |
ಲ್ಪಿತವೆನಗೆನುತ್ತೊಯ್ಯನಳಲು |
ತ್ತತುಳಗುಣಯುತನೆಂದನಾ ಕಂಸಂಗೆವಿನಯದಲಿ || ೧ ||

**ರಾಗ ಭೈರವಿ ಝಂಪೆತಾಳ**

ಎಲೆ ಕಂಸ ಕೇಳು ನೀ | ಕೊಲದಿರನುಜೆಯ ನಿನ್ನ |
ಕೊಲುವಳಿವಳಲ್ಲಸುತ | ರಲಿ ಮರಣವೈಸೆ   || ೧ ||

ಪಡೆದ ಮಕ್ಕಳನೆಲ್ಲ | ಕೊಡುವೆನೈ ನಾ ನಿನಗೆ |
ನುಡಿಯಿದಕೆ ಹುಸಿಹೊಗದು | ದೃಢವಚನವೆನಲು      || ೨ ||

ತರುಣಿಯನು ಕೊಲ್ವೆನೆನೆ | ಒರಲುತಿಹೆ ನೀ ನಾಳೆ |
ತರಳರನು ತಂದೀವ | ಭರವಸಿಗನಹುದು    || ೩ ||

ಮರುಳು ಮಾತೇಕಿವಳ | ನಿರಿದು ಕಳೆಯದೆ ಬಿಡೆನು |
ಬರೆಯಾಸೆಯೇಕೆನುತ | ದುರುಳ ಕೋಪಿಸಲು         || ೪ ||

ಹುಸಿಯೆಂದು ಬಗೆಯದಿರು | ನುಸುಳಗಂಡಿಯ ಮಾತ |
ನುಸಿರಿ ಜಾರುವನಲ್ಲ | ಪಶುಪತಿಯಸಾಕ್ಷಿ     || ೫ ||

ನುಡಿದಾನು ತಪ್ಪಿದಡೆ | ಕಡಿದು ಕೆಡೆ ನಿನ್ನ ಕಯ್ |
ತಡೆವರಿಲ್ಲಿಂದೆನ್ನ | ಬಿಡು ಮಹೋತ್ಸವದಿ     ||೬||

**ಭಾಮಿನಿ**

ನಂಬು ನಿಶ್ಚಯವಿನ್ನು ಹಲವನು |
ಹಂಬಲಿಸಬೇಡೆಂದು ಕಂಸಗೆ |
ನಂಬುಗೆಯ ನೀಡಿದರೆ ಬಿಟ್ಟನು ಸತಿಯ ಮುಂದಲೆಯ ||
ತುಂಬನುಗಿದಂತಿಳಿವ ಕಂಗಳ |
ಕಂಬನಿಯಲಾ ಖಳನ ಬೀಳ್ಗೊಂ |
ಡಂಬುಜಾನನೆ ದೇವಕಿಗೆ ವಸುದೇವನಿಂತೆಂದ         || ೧ ||

**ರಾಗ ಮಾಧುಮಾದವಿ ತ್ರಿವುಡೆತಾಳ**

ತರುಣಿಯಳಲುವೆಯೇಕೆ ಸುಮ್ಮನೆ | ಹರಿಯ ಕೃಪೆಯೆಂತಿರ್ಪುದೆಂಬುದ |
ನರಿವರಾರುಂಟಂಜಬೇಡೆನು | ತೊರಸಿದನು ಕಂಬನಿಯನು     || ೧ ||

ನೆರೆದ ಬಂಧುಗಳೆಲ್ಲ ಗೋಳಿಡು | ತಿರಲು ಕಂಡನಿದೇನು ಫಣೆಯಲಿ |
ಬರೆದ ಬರೆಹವಿದೆಮಗೆ ನೀವ್ ಮಂ | ದಿರಕೆ ತೆರಳುವುದೆಂದನು || ೨ ||

ಎನುತಲೊಡಬಡಿಸುತ್ತಲವರನು | ಮನೆಗೆ ಕಳುಹಿದು ತನ್ನ ನಿಳೆಯಕೆ |
ವನಿತೆ ಸಹಿತಯ್ತಂದು ಮನದಲಿ | ನೆನೆವುತಿರ್ದನು ಹರಿಯನು  || ೩ ||

**ವಾರ್ಧಿಕ**

ಅರಸ ಕೇಳಿಂತಿರುತಿರಲ್ ಕೆಲವು ಕಾಲಕಾ |
ತರುಣಿ ಪಡೆದಳ್ ಕುವರನೊರ್ವನಂ ಕಂಡು ಸ |
ಚ್ಚರಿತನಹ ವಸುದೇವನುರೆ ಸತ್ಯಭಾಷೆಯಂ ಮೀರಲರಿಯದೆ ಮರುಗುತ ||
ತರಳನಂ ತೆಗೆದೆತ್ತಿಕೊಂಡು ಬಂದಾ ಕಂಸ |
ನರಮನೆಗೆಯಣುಗನಂ ಕೊಳ್ಳೆನಲ್ ಕಾಣುತಾ |
ದುರುಳನಚ್ಚರಿಯಿಂದಲಧಿಕ ವಿಸ್ಮಿತನಾಗಿ ತಲೆದೂಗುತಿಂತೆಂದನು || ೧ ||

**ರಾಗ ಶಂಕರಾಭರಣ ತ್ರಿವುಡೆತಾಳ**

ಲಾಲಿಸೈ ವಸುದೇವ ನಿನ್ನ ವಿ | ಶಾಲ ಸತ್ಯಕೆ ಮೆಚ್ಚಿದೆನು ನಿ |
ನ್ನಾಲಯಕೆ ನಡೆ ತೆಗೆದುಕೊಂಡೀ | ಬಾಲಕನನು || ೧ ||

ಅಳಲಿಸುವುದೇಕನುಜೆಯನು ತಾ | ನುಳಿದ ಮಕ್ಕಳ ಕೊಂದು ಫಲವೇ ||
ನಳಿವು ತನಗೆಂಟನೆಯ ಮಗನಲಿ | ತಿಳಿದೆವೈಸೆ || ೨ ||

ಆ ಶಿಶುವ ತಾ ಹೋಗು ಬರಿದೇ | ಬೇಸರಿಕೆಗೊಳ್ಳದಿರು ಮಕ್ಕಳ |
ನೀ ಸಲಹಿಕೊಂಡಿಹುದು ಘನ ಸಂ | ತೋಷದಿಂದ || ೩ ||

ಎನುತ ಬೀಳ್ಗೊಡಲತುಳ ಹರುಷದಿ | ಮನೆಗೆ ಬಂದಾ ಶೌರಿ ನಿಜನಂ |
ದನರ ಸಲಹುತ್ತಿರ್ದ ತನ್ನಯ | ವನಿತೆಸಹಿತ || ೪ ||

**ಭಾಮಿನಿ**

ಎಲೆ ಪರೀಕ್ಷಿತ ಕೇಳು ಮತ್ತಾ |
ಲಲನೆ ಕೆಲವುದಿನಕ್ಕೆ ದಂಡಕೆ |
ಗಳಿಸಿದರ್ಥದ ವೋಲು ಪಡೆದಳು ಕುವರರೈವರನು
ಸಲಹಿಕೊಂಡಿರಲಿತ್ತ ನಾರದ |
ನಿಳಿದನಂಬರದಿಂದ ಕಂಸನ |
ನಿಳೆಯಕಮಲಪ್ರಭೆಯ ಚಂದ್ರಮನಂತೆ ಥಳಥಳಿಸಿ || ೧ ||

**ಕಂದ**

ಸುರಮುನಿಯಂ ದೂರದೊಳಂ |
ಪರಿಕಿಸುತಿದಿರೆದ್ದು ಮಣಿವುತಾ ಋಷಿಯಡಿಗಂ ||
ಕರವಿಡಿದಾಸನದೊಳ್ ಕು |
ಳ್ಳಿರಿಸಿದು ತತ್ಪದವನರ್ಚಿಸಿದನಾಕಂಸಂ || ೧ ||

**ರಾಗ ಸಾಂಗತ್ಯ ರೂಪಕತಾಳ**

ಚರಣಪೂಜೆಯ ಮಾಡಿ ಮಣಿದಿರ್ಪ ಕಂಸನ | ಶಿರವಿಡಿದೆತ್ತಿ ನಾರದನು ||
ಹರುಷದಿ ಕುಶಲವ ಬೆಸಗೊಂಡಾತನನು ಕು | ಳ್ಳಿರಿಸಿಕೊಂಡಿಂತೆಂದನಾಗ || ೧ ||

ಎಂಟನೆ ಗರ್ಭದಳಿಯನಿಂದ ಬಹುದೈಸೆ | ಕಂಟಕವೆಂದು ನಿಶ್ಚಯಿಸಿ ||
ನೆಂಟನ ಮರಳಿ ಬೀಳ್ಗೊಟ್ಟೆ ಬಲ್ಲವರಾ | ರುಂಟಚ್ಯುತನ ಮಹಿಮೆಯನು || ೨ ||

ಎಂದು ಪುಟ್ಟುವನೆಂಬ ನಿಜವಾರಿಗಿಹುದೆ ಗೋ | ವಿಂದನತ್ಯಧಿಕ ಮಾಯಾವಿ ||
ಕಂದನನಿತ್ತು ಶೌರಿಯ ಬೀಳುಗೊಟ್ಟುದು | ಚಂದವಾಗಿರದಯ್ಯ ನೋಡು || ೩ ||

ಭುವನದಲ್ಲಣ ಕಾಲನೇಮಿಯೆಂಬಸುರ ಮುಂ | ಭವದಲ್ಲಿ ನೀನಿದು ಸಹಜ ||
ಅವನಿಯೊಳಿದನರಿತವರಿಲ್ಲ ಬಲ್ಲೆನೀ | ಹವಣವನದರಿಂದ ನುಡಿದೆ || ೪ ||

ಹಿತವಂತರೆನಗೆ ಯಾದವರೆಂದು ನಂಬಿ ನೀ | ಮತಿಗೆಟ್ಟಿರುವೆಯವರೆಲ್ಲ ||
ಹಿತಶತ್ರುಗಳು ನಿನಗಮರರು ನಿನ್ನೊಳ | ಗತಿ ವೈಭವದಿಂದ ಸೇರಿಹರು || || ೫ ||

ಹರಿಯ ನೇಮದಿ ಬಂದೀ ಧರೆಯೊಳುದಿಸಿ ನಿನ್ನ | ಮರಣವ ಹಾರಯಿಸುತಿಹರು ||
ಒರೆದಿರ್ಪೆನಂತರಂಗವನೆಂದು ಬೀಳ್ಕೊಂಡು | ಸುರಮುನಿಯಂದು ಸಾರಿದನು ||೬||

**ರಾಗ ಭೈರವಿ ಆದಿತಾಳ**

ಸುರಮುನಿಯಿಂತೆನುತತ್ತ | ತಾ | ತೆರಳಲು ಖಳ ಗಜರುತ್ತ ||
ಪೊರೆಯುರ್ಚಿದ ಭುಜಗನನು | ಪೋ | ಲ್ದರೆ ಕೋಪವ ತಾಳಿದನು || ೧ ||

ಕರೆಸಿದು ವಸುದೇವನನು | ತಾ | ತರಿಸಿದು ತತ್ಪುತ್ರರನು ||
ತರುಣಿ ಮರುಗಲಾರ್ವರನು | ಬಡಿ | ದುರುಳಿಸಿದನು ಖಳವರನು || ೨ ||

ಸೆರೆ ಸಂಕಲೆಯೊಳಗವರ | ತಾ | ನಿರಿಸಿಯುಳಿದ ಯಾದವರ ||
ಪರಿಪರಿ ವಿಧದಾಜ್ಞೆಯಲಿ | ಬಲು | ಮರುಗಿಸಿದನು ಖಾತಿಯಲಿ || ೩ ||

**ಭಾಮಿನಿ**

ಅರಸ ಕೇಳಿಂತುಗ್ರಸೇನಾ |
ದ್ಯರನು ಸಂಕಲೆಯಿಂದ ಸೆರೆಯೊಳ |
ಗಿರಿಸಿದನು ಬರಿಸಿದನು ಬೆಂಬಲಕಖಿಳ ದಾನವರ ||
ದುರುಳ ಬಕ ಚಾಣೂರ ಶಕಟಾ |
ಸುರನಘಾಸುರ ಕೇಶಿ ಮೊದಲಾ |
ದರನು ನೆರಹಿದು ಕಂಸನಿರ್ದನುಗಾಢ ಗರ್ವದಲಿ || ೧ ||

**ವಾರ್ಧಿಕ**

ಇಂತಾ ಖಳಂ ಬಾಣ ನರಕ ಮಾಗಧ ಸಾಲ್ವ |
ರಂ ತನಗೆ ಸಖ್ಯರಂ ಮಾಡಿಕೊಂಡಯ್ದೆ ಯದು |
ಸಂತತಿಯನಳಲಿಸುತ್ತಿರೆ ಭಯಂ ಕೊಂಡಯ್ದಿದರ್ ಕಂಡಕಡೆಗೆ ಹಾಯ್ದು ||
ಕಾಂತೆಯೊಂದೆಸೆ ರಮಣರೊಂದೆಸೆಯಲಾದುದೋ |
ರಂತೆ ಯಾದವರತ್ತಲಿತ್ತಲುಂ ಸೆರೆಯೊಳತಿ |
ಚಿಂತೆಯಿಂದಿರುತಿಪ್ಪ ದೇವಕಿಗೆ ಸಪ್ತಮದ ಗರ್ಭವೀಕ್ಷಿಸಲಾದುದು || ೧ ||

ತರುಣಿ ದೇವಕಿಯ ಜಠರದೊಳಾಳ್ದನಾಜ್ಞೆಯಿಂ |
ದುರಗೇಂದ್ರನಂಶವಿರಲತ್ತಲಾ ಮಾಧವಂ |
ಕರೆದು ನಿಜಮಾಯೆಯೊಡಗಾ ಗರ್ಭಪಿಂಡಮಂ ಕೊಂಡಾಕೆಯರಿಯದಂತೆ ||
ಹಿರಿಯರಸಿ ರೋಹಿಣಿಯೆನಿಪ್ಪಳಾ ವಸುದೇವ |
ಗಿರುವಳಾ ಗೋಕುಲದೊಳಡಗಿಯವಳುದರದೊಳ |
ಗಿರಿಸದಂ ನೀನಾ ಯಶೋದೆಯುದರದೊಳುದಿಸಿ ಯನುಜೆಯಾಗೆನಗೆಂದನು || ೨ ||

ನೀನಿಂತು ದುರ್ಗೆಯೆಂಬಭಿದಾನದೊಳ್ ಪುಟ್ಟಿ |
ಕಾನನನಗಂಗಳೊಳ್ ನೆಲಸಿರ್ದು ಪೂಜಿಸುವ |
ಮಾನವರಭೀಷ್ಟಮಂ ಕೊಡುತಲಿರು ದೇವಕಿಯ ಗರ್ಭದಿಂದವನಿಯೊಳಗೆ ||
ತಾನುದಿಸುವೆಂ ಕೃಷ್ಣನೆಂಬ ಪೆಸರಿಂದೆ ನಿ |
ದಾನಮಿದು ಪುಸಿಯಲ್ಲೆನಲ್ಕೊಡೆಯನಾಜ್ಞೆಯಂ |
ತಾನಾಂತು ಮಸ್ತಕದೊಳೆಂದಂತೆ ಮಾಡಿದಳ್ ಭೂಪ ಕೇಳ್ ಕೌತುಕವನು || ೩ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇತ್ತ ಕಂಸನು ಗರ್ಭವಡೆದಾ | ವೃತ್ತವನು ಕೇಳುತ್ತ ತನ್ನಯ |
ಚಿತ್ತದಲಿ ಭಯವೆತ್ತು ಚಿಂತೆಗೆ | ತೆತ್ತು ಮನವ || ೧ ||

ಹರಿಯು ಬಲು ಕಪಟಿಗನು ಮೆರ್ಯರೆ | ದಿರಲು ಬಾರದೆನುತ್ತ ತಾನೇ |
ಸೆರೆಮನೆಯೊಳಿರ್ದಂತೆ ತಾ ಕಾ | ದಿರುಳು ಹಗಲು || ೨ ||

ಹಸಿವು ತೃಷೆಗಳನುಳಿದು ನಿದ್ರೆಯ | ಘಸಣಿಯನು ಬಿಟ್ಟವನು ಚಿಂತೆಯ |
ಮುಸುಕಿನಿಂದಿರುತಿರ್ದನಾ ರ | ಕ್ಕಸರುಸಹಿತ || ೩ ||

ಅತ್ತಲಾ ಮಾಧವನು ತನ್ನಯ | ಚಿತ್ತದಲಿ ಕಮಲಜಭವಾದ್ಯರಿ |
ಗಿತ್ತ ಭಾಷೆಯ ಸಲಿಸಬೇಹುದೆ | ನುತ್ತಲಾಗ || ೪ ||

ತರುಣಿ ದೇವಕಿಯುದರದಲಿ ತಾ | ನಿರದೆ ನೆಲಸಿದನೇನೆಂಬೆನು ||
ಪರಮಪುರುಷನ ಮಹಿಮೆಯನು ಕೇಳ್ | ಧರಣಿಪಾಲ || ೫ ||

**ದ್ವಿಪದಿ**

ದೇವಕೀದೇವಿಯುದರದೊಳಗಚ್ಯುತನು |
ಆವಾಸವಾದನೆಂದರಿತು ಕಮಲಜನು || ೧ ||

ಶತಮಖಾದ್ಯಮರಸಂದೋಹಸಹಿತಂದು |
ನುತಿಗೆಯ್ಯುತಿರ್ದರಾ ಗಗನದಲಿ ನಿಂದು || ೨ ||

ಸ್ಫಟಿಕಕಲಶದ ದೀಪದಂತೆ ದೇವಕಿಯ |
ಜಠರದಲಿ ಹೊಳೆವುತಿರ್ದುದು ಬಿಂಬ ಹರಿಯ || ೩ ||

ಖಳ ಕಂಸನನುಜೆಯಂಗಚ್ಛವಿಯ ನೋಡಿ |
ತಿಳಿದನೀತನೆ ವೈರಿಯೆಂದು ಭಯಗೂಡಿ || ೪ ||

ಅರೆನಿಮಿಷವೆಡೆಬಿಡದೆ ದುಷ್ಟಬಲಸಹಿತ |
ಸೆರೆಮನೆಯ ಕಾದಿರ್ದದಿನವ ಲೆಕ್ಕಿಸುತ || ೫ ||

**ವಾರ್ಧಿಕ**

ಅರಸ ಕೇಳಿಂತಿರಲ್ ದೇವಕಿಯ ಬಸಿರಿಂಗೆ |
ತೆರಳಿದುದು ನವಮಾಸವನಿತರೊಳ್ ಶ್ರಾವಣಾ |
ಪರಪಕ್ಷದಷ್ಟಮಿಯೊಳಿಂದು ರೋಹಿಣಿಯೊಳಿದ್ದಿ ರುಳುದಯಿಸುವ ಸಮಯದಿ ||
ಧರಣಿಗವತರಿಸಿದಂ ಪುರುಷೋತ್ತಮಂಸುರರ್ |
ನೆರೆದಭ್ರದೊಳಗೆ ಜಯವೆಂದು ಸುಮವೃಷ್ಟಿಯಂ |
ಕರೆದಂಬುಜಭವಾದಿಗಳೆರಗಿ ನುತಿಸಿದರ್ ಜಗಕೆ ಮಂಗಲಮಾದುದು || ೧ ||

**ಭಾಮಿನಿ**

ಹರಿಯ ಮಾಯಾಮಹಿಮೆಗಳನಾ |
ರರಿವರೈ ಕಂಸಾದಿ ಖಳರು |
ಬ್ಬರದ ನಿದ್ರೆಯಲಿರ್ದರಿತ್ತಲು ಜನಿಸಿದಾಕ್ಷಣವೆ ||
ಕರಚತುಷ್ಟಯದಿಂದ ಪೀತಾಂ |
ಬರನು ರವಿಶತಕೋಟಿತೇಜದಿ |
ಮೆರೆದಿರಲು ವಸುದೇವ ಕಂಡಡಗೆಡೆದನಂಘ್ರಿಯಲಿ || ೧ ||

**ಕಂದ**

ಭಾವಜಪಿತನಂಘ್ರಿಗೆ ವಸು | ದೇವಂ ಪೊಡಮಟ್ಟು ಹರುಷಪುಳಕದಿನಾಗಳ್ ||
ಪಾವನಚರಿತನ ಗುಣನಾ | ಮಾವಳಿಯಂ ನುತಿಸುತಿರ್ದನತಿಭಕ್ತಿಯೊಳಂ || ೧ ||

**ವಾರ್ಧಿಕ**

ಜಯ ಜಯ ಮುಕುಂದ ನಿತ್ಯಾನಂದ ಗೋವಿಂದ
ಜಯ ಜಯ ಮುರಾರಿ ಭುವನೋದ್ಧಾರಿ ಭವದೂರಿ
ಜಯ ಜಯ ರಮೇಶ ರವಿಸಂಕಾಶ ಖಲನಾಶ ಜಯ ಕಾಮಜನಕ ರಾಮ
ಜಯ ಜಯ ಸುರೇಶಸನ್ನುತಿತೋಷ ಜಗದೀಶ
ಜಯ ಜಯ ಸುವೇದನಾದವಿನೋದ ನಿರ್ವಾದ
ಜಯ ಜಯ ವಿಹಂಗಪುಂಗವತುರಂಗ ಶುಭಾಂಗ ಜಯ ಜಯೆಂದೆರಗಿರ್ದನು || ೧ ||

**ರಾಗ ಮಾಧ್ಯಮಾವತಿ ತ್ರಿವುಡೆತಾಳ**

ಇಂತು ಮಣಿದಿಹ ಶೌರಿಯನು ನೆಗೆ | ದಂತರಾತ್ಮಕನೆತ್ತಿ ತೋಷದಿ |
ದಂತಕಾಂತಿಯ ಬೆಳಕು ಥಳಥಳಿ | ಪಂತೆ ನಗುತಿಂತೆಂದನು || ೧ ||

ಶೌರಿ ಕೇಳ್ ನೀ ಕಾಶ್ಯಪನು ವೃಂ | ದಾರಕರ ತಾಯ್ ಇವಳು ಪೂರ್ವದಿ |
ಭೂರಿತಪದಿಂದೆನ್ನ ಪೋಲ್ವ ಕು | ಮಾರನನು ಯಾಚಿಸಿದಿರಿ || ೨ ||

ಆರಿಹರು ತನ್ನಂತೆ ತಾನೆ ಕು | ಮಾರನಹೆನೆಂದೆನುತ ನಿಮ್ಮಲಿ |
ಮೂರು ಬಾರಿಯು ಜನಿಸಿ ತೋರಿದೆ | ತೀರಿತಿನ್ನಾವಚನವು || ೩ ||

**ಕಂದ**

ಎಂದಚ್ಯುತನಾಡಿದ ನುಡಿ | ಗಂದಾ ವಸುದೇವನಮಿತಸಂತಸದಿಂದಂ ||
ವಂದಿಸುತತಿಭಕ್ತಿಯೊಳಿಂ | ತೆಂದಂ ಖಳಕಂಸನುಪಟಳಮಂ ಭಯದಿಂ || ೧ ||

**ರಾಗ ಕೇದಾರಗೌಳ ಅಷ್ಟತಾಳ**

ಎನ್ನುದರದಿ ದೇವ ನೀನುದಿಸುವೆಯೆಂಬು | ದನ್ನು ಕೇಳಿದು ಕಂಸನು ||
ಮುನ್ನ ಪುಟ್ಟಿದರನ್ನು ಕೊಂದು ನಿನ್ನುದಯವ | ನಿನ್ನು ಕಾದಿರ್ಪನಿಲ್ಲಿ || ೧ ||

ಕೇಳಿದರೀಗಲೆ ಕೊಲುವನಾ ಖಳ ನಿನ್ನ | ಬಾಳಿಸುವಂದವನು ||
ಪೇಳಿ ರಕ್ಷಿಸಬೇಕು ತನ್ನನೆಂದೆರಗಿದು | ಗೋಳಿಡುತಳಲಿದನು || ೨ ||

ಅಳಲದಿರೇಳೇಳು ಕೊಲುವರಾರೆನ್ನನು | ತಿಳಿಯದಿರ್ದವನೆ ನೀನು ||
ಕೆಲವು ವತ್ಸರಕಾತನುಳಿ ಯಲಿಕ್ರಮದಿಂದ | ಲಳಿವೆನಾ ಖೂಳನನು || ೩ ||

ಇಲ್ಲಿರಿಸದಿರೆನ್ನ ಕೊಂಡೊಯ್ದು ಗೋಕುಲ | ದಲ್ಲಿಗೆ ಗಮಿಸಿ ನೀನು ||
ಅಲ್ಲಿ ತನ್ನಾಜ್ಞೆಯೊಳಿಂದು ನಂದನ ರಾಣಿ | ಯಲ್ಲಿ ಪುಟ್ಟಿಹಳು ಮಾಯೆ || ೪ ||

ಆರೊಬ್ಬರರಿಯದ ಹಾಗೆನ್ನನಲ್ಲಿಟ್ಟು | ಘೋರನಾ ಶಿಶುವ ಕೊಂದು ||
ಸಾರಿಲ್ಲಿಗದಕೆ ನಿರ್ವಿಘ್ನವ ನಾ ಮಾಳ್ಪೆ | ಬೇರೇನು ಭೀತಿ ಬೇಡ ‖ ೫ ‖

**ಭಾಮಿನಿ**

ಬಿಸಜನಾಭನು ಶೌರಿಯೊಡನಿಂ |
ತುಸಿರಿ ತದ್ರೂಪನ್ನುಳಿದು ನರ |
ಶಿಶುಗಳಂದದಿ ಮಿಡುಕುತಿರ್ದನು ಮಹಿಮೆಯಿನ್ನೆಂತೊ ||
ವಸನವನು ಮರೆಮಾಡಿ ಮತ್ತಾ |
ಶಿಶುವನುರದೊಳಗವುಕಿ ನಿಗಳದ |
ಬೆಸುಗೆ ಸಡಲಿತು ಬಾಗಿಲುಗಳರೆದೆಗೆದವಾ ಕ್ಷಣಕೆ || ೧ ‖

**ವಾರ್ಧಿಕ**

ಪೊಡವೀಶನಾಲಿಸಾ ಶೂರಜಂ ಬಾಲನಂ |
ಪಿಡಿದೆತ್ತಿ ಕೊಂಡಯ್ದೆ ಪೊರಡಲ್ಕೆ ಕಣ್ಗೆ ಕ |
ಪ್ಪಿಡದ ಕತ್ತಲೆಗಳಂ ಸುರಿವ ಮಳೆಯಿಂದಡಿಯಿಡಲ್ ತೀರದೆಂಬಂತಿರೆ ||
ಒಡೆಯನಾಜ್ಞೆಯೊಳಹಿಪನವನಿಗಂ ಚಾಚಿ ತ |
ನ್ನೊಡಲ ನಭ್ರಕೆ ಪೆಡೆಯನೆತ್ತಿ ಕೊಡೆವಿಡಿಯಲಾ |
ಪೆಡೆವಣಿಯವೆಳಕಿಂದಲಯ್ತಂದು ಕಂಡನುರುಭರಿತ ಯಮುನಾನದಿಯನು ‖ ೧ ‖

ವರಯಮುನೆಯಂಜುತಿಬ್ಬಗೆಯಾಗಿ ಮಾರ್ಗಮಂ |
ತೆರವುಗೊಡಲುತ್ತರಿಸಿ ನಡೆದನಾ ಗೋಕುಲದೊ |
ಳಿರುವವರ್ ತಿಳಿಯದಂದದೊಳಿರಿಸುತೀ ಶಿಶುವನಾ ಮಗುವನೆತ್ತಿಕೊಂಡು ‖

ತಿರುಗಿದಂ ಪೋದ ಬಟ್ಟೆಯೊಳಯ್ದಿ ವೇಗದಿಂ |
ಸೆರೆಮನೆಗೆ ಬರೆ ಬಾಗಿಲವಚಿದುವು ಶೃಂಖಲಾ |
ಚರಣಮಂ ಬಂಧಿಸಿತು ಮುನ್ನಿನಂತೇನೆಂಬೆನಚ್ಯುತನ ಮಹಿಮೆಗಳನು ‖ ೨ ‖

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕೇಳು ಭೂವರ ಮತ್ತೆ ಮಾಯಾ | ಬಾಲಿಕೆಯು ಬಲುರವದಿ ಚೀರಿದ |
ಳಾಲಯದೊಳೊರಗಿರ್ದ ಖಳನದ | ಕೇಳಿ ಭರದಿ ‖ ೧ ‖

ಪುಟ್ಟಿದನು ಪಗೆಯೆಂದು ನಿಶಿಯಲಿ | ಬಿಟ್ಟ ಮಂಡೆಯೊಳಿರದೆ ಬಲು ಬುಸು |
ಗುಟ್ಟುತೇಳುತ ಬೀಳುತವೆ ಕಂ | ಗೆಟ್ಟು ಭಯದಿ ‖ ೨ ‖

ತಡಹುತೆಡಹುತ ಬಂದು ಬಾಗಿಲ | ನೊಡೆದು ಹುಂಕರಿಸುತ್ತ ಶಿಶುವನು |
ಕೊಡು ಕೊಡೆನುತಾರ್ಭಟಿಸಿ ನಿಂದನು | ಘುಡುಘುಡಿಸುತ ‖ ೩ ‖

ಕಂಡು ದೇವಕಿ ಮನದೊಳಗೆ ಭಯ | ಗೊಂಡಳುಕಿ ಬಾಲಿಕೆಯನವುಕಿದು |
ದಂಡದಂತಡಿಗೆರಗಿ ಪೇಳಿದ | ಳಂಡಲೆವುತ || ೪ ||

**ರಾಗ ಘಂಟಾರವ ಅಷ್ಟತಾಳ**

ಅಣ್ಣಯ್ಯ ಕೊಲ್ಲಬೇಡ | ಕಡೆಯಲೊಂದು | ಹೆಣ್ಣು ಹುಟ್ಟಿಹುದು ನೋಡಾ ||
ಪುಣ್ಯವಂತನೆ ನಿನ್ನ | ಸೊಸೆಯೆಂದೆನಿಸುತೆನ್ನ | ಕಣ್ಣಮುಂದಿರೆಲೊರ್ವಳು | ದಯಾಳು || ೧ ||

ಪಡೆದ ಮಕ್ಕಳನೆಲ್ಲ | ಬರಿದೆ ಕೊಂದೆ | ಕಡೆಗೆ ಹೆಣ್ಣಿದಿಸಿತಲ್ಲ | ಕಡು ಪಾಪಿಯಾನಯ್ಸೆ |
ನುಡಿದೀಗ ಫಲವೇನೀ | ಹುಡುಗಿಯ ಪಾಲಿಸಯ್ಯ | ದಮ್ಮಯ್ಯ || ೨ ||

ಅಶರೀರವಾಣಿಯಂದು | ಎನ್ನೆಂಟನೆ | ಬಸಿರಿನ ಮಗನು ಬಂದು ||
ಕುಸುರಿ ತರಿವ ನಿನ್ನ | ನೆಂದುಸಿರಿದ ಮಾತು | ಪುಸಿಯಾಯಿತಯ್ಯ ನೋಡು | ದಯೆಮಾಡು || ೩ ||

**ಭಾಮಿನಿ**

ಫಡೆಯೆನುತ ಖಳ ಕಂಸನನುಜೆಯ |
ನುಡಿಯ ಮನ್ನಿಸದಾ ಶಿಶುವ ಸೆಳೆ |
ದೊಡನೆ ಬಡೆವೆನೆನುತ್ತ ಕಾಲ್ವಿಡಿದೆತ್ತಲಾ ಕ್ಷಣಕೆ ||
ನಡುದಲೆಯ ತುಳಿದಿರದೆ ಚಿಗಿದಳು |
ತಡೆಯದಂಬರಕಷ್ಟಭುಜದಲಿ |
ಮಡದಿ ನಿಂದಿಂತೆಂದಳಾ ನಭಮಧ್ಯಮಾರ್ಗದಲಿ || ೧ ||

ಖಳನೆ ಲಾಲಿಸು ನಿನ್ನ ಗಂಟಲ |
ಬಳೆಯ ಬಿಡಿಸುವ ವೀರನಿಳೆಯಲಿ |
ಬಳೆವುತಯ್ದನೆ ತನ್ನ ಕೊಲಲೇಸರವ ನೀನೆನುತ ||
ಲಲನೆಯಡಗಿದಳತ್ತ ಖೂಳರ |
ಕುಲಶಿರೋಮಣಿ ಶಿರಕೆ ಸಿಡಿಲ |
ಪ್ಪಳಿಸಿದಂತಳವಳಿವುತಿರ್ದನು ಬಿಗಿದ ಬೆರಗಿನಲಿ || ೨ ||

**ರಾಗ ಭೈರವಿ ಝಂಪೆತಾಳ**

ಚಂಡಿಕೆಯ ನುಡಿಗೆ ಭ್ರಮೆ | ಗೊಂಡು ಮರುಗುತ ಮನದೊ |
ಳಂಡಲೆವ ಚಿಂತೆಯಲಿ | ಬೆಂಡಾಗಿ ಖಳನು || ೧ ||

ಅಂಬರದ ನುಡಿಯು ಪುಸಿ | ಯೆಂಬುದಾಯಿತು ಮುನಿಪ |
ನೆಂಬವನ ಮಾತನಾ | ನಂಬಿ ಮರುಳಾದೆ || ೨ ||

ಅಳಲಿಸಿದೆ ತಂಗಿಯನು | ಬಳಲಿಸಿದೆ ಭಾವನನು |
ಕೊಲೆಗೆಡುಕನೆನಿಸಿ ಮ | ಕ್ಕಳ ಕೊಂದೆ ವ್ಯರ್ಥ || ೩ ||

ಎಂದಳುತ ಖಳನವರ | ಬಂಧನವ ಪರಿಹರಿಸಿ |
ಕಂದುಮೊಗದಿಂದ ಮಣಿ | ದಂದು ಪೇಳಿದನು || ೪ ||

**ರಾಗ ಕಾಂಭೋಜ ಝಂಪೆತಾಳ**

ಲಾಲಿಸೈ ವಸುದೇವ ನಿನ್ನ ನಾನಿನಿತು ದಿನ | ಖೂಳತನದಲಿ ಬಾಧಿಸಿದೆನು ||
ತಾಳದಿರು ದುಗುಡವನ್ನು ಮನದೊಳಗೆ ಬಹಳಿತ ಕೃ | ಪಾಳು ನೀನೆನುತ ಮರುಗಿದನು || ೧ ||

ಮರುಗದಿರು ಕಂಸ ನಿನ್ನಿಂದಾದುದೇನು ವಿಧಿ | ಬರೆದ ಬರೆಹವಿದಯ್ಸೆ ನಮಗೆ ||
ತೆರಳು ನೀ  ಮನಕೆ ನೋವಿಲ್ಲೆನುತ ಶೌರಿಯುಪ | ಚರಿಸಿ ಬೀಳ್ಕೊಟ್ಟನಾತನನು || ೨ ||

ಬಂದು ಮನೆಗವನುದಯದಲಿ ದುಷ್ಟ ಮಂತ್ರಿಗಳೊ | ಳೆಂದನಿರುಳಾದ ಸಂಗತಿಯ ||
ಮುಂದೇನುಪಾಯವನು ಕಂಡಿರೆನೆ ಖಳರು ಜಡಿ | ದೆಂದರುಬ್ಬಣವನುಬ್ಬಿರಿದು || ೩ ||

ರಾಯಚಿಂತೆಯಿದೇಕೆ ಸಿಕ್ಕನಾ ವಿಷ್ಣು ಬಲು | ಮಾಯಾವಿಯಾಗಲದಕೇನು ||
ನೋಯಿಸಲು ನಿಜವ ತೋರಿಸದವನ ಕೊಲ್ಲುವ ಉ | ಪಾಯ ಬೇರುಂಟು ನಮ್ಮೊಳಗೆ || ೪ ||

ಪೊಡವಿಯೊಳು ಗೋದ್ವಿಜರ ಬಡೆದು ಶಿಶುಗಳನಿರಿದು | ತಡೆಯದ್ಯಜ್ಞಾದಿಕರ್ಮವನು ||
ಕೆಡಿಸಿದರೆ ತಾಳಲಾರದೆ ಬರ್ಪನಾಗವನ | ಕಡಿದು ಹರಹುವೆವೆಂದರವರು || ೫ ||

**ವಾರ್ಧಿಕ**

ಅಹುದು ತಪ್ಪಲ್ಲಮೀ ನುಡಿಯೆಂದೊಡಂಬಟ್ಟು |
ಅಹಿತನಂ ಕೊಲ್ವುದೀ ತೆರದಿಂದಲೆಂದವರ |
ಸಹಿತ ಸಂತೋಷದಿಂ ಬೀಳ್ಕೊಟ್ಟು ಕಂಸನಿರಲಿತ್ತಲಾ ಗೋಕುಲದೊಳು ||
ಮಹಿಳೆಯರ್ ಕಂಡಳುವ ಬಾಲನಂ ಕೊಂಡಾಡು |
ತಹಹ ಸಿರಿವಂತೆಯೊಮ್ಮೊಡತಿಯೆಂದೊಸಗೆಯಂ |
ಬಹಳಿತಾನಂದದಿಂ ನಂದಗುಸಿರಲ್ ಕೇಳುತತಿ ಸಂತಸಂ ಪಟ್ಟನು || ೧ ||

**ಕಂದ**

ಹರುಷದಿನಾ ನಂದಂ ದ್ವಿಜ | ವರರಂ ನಿಶಿಯೊಳಗೆ ಕರೆಸುತತುಲಿತ ಧನಮಂ ||
ಕರೆಕರೆದಿತ್ತಾನಂದದಿ | ಭರದಿಂದೋಲಾಡುತಿರ್ದನುತ್ಸಹದಿಂ || ೧ ||

**ದ್ವಿಪದಿ**

ಇಂತು ಮಹದುತ್ಸವದಿ ದಾನಗಳನಿತ್ತು |
ಅಂತರಂಗದಿ ಗೋಪ ಮನದಿ ಮುದವೆತ್ತು || ೧ ||

ಪುರಜನವ ಪರಿಜನವ ಮನ್ನಿಸುತಲಾಗ |
ಹರುಷದಲಿ ಜೋಯಿಸರ ಕರೆಸಿದನು ಬೇಗ || ೨ ||

ಅಣುಗನುದಿಸಿದ ವೇಳೆಯೆಂತೆನಲಿ ಕವರು |
ಗುಣಿಸಿ ನೋಡುತಲೆಂದರಧಿಕ ಕೋವಿದರು || ೩ ||

ನಂದ ಲಾಲಿಸು ನಿನ್ನ ಮಗನು ಲೋಕದಲಿ |
ಇಂದಿರಾಧವನಂತೆ ಮೆರೆವ ಗುಣಗಳಲಿ || ೪ ||

ಎನಲು ಕಳುಹಿದನವರಿಗುಡುಗೊರೆಯನಿತ್ತು |
ಮನದೊಳುಬ್ಬುತಲಿರ್ದ ಘನ ಹರುಷವೆತ್ತು || ೫ ||

ಸುದತಿಯರು ಕಮ್ಮೆಣ್ಣೆಯೊತ್ತಿ ಬಾಲಕಗೆ |
ಹದವೆಚ್ಚನುದಕದಲಿ ಮಜ್ಜನವನೆಸಗೆ | | ೬||

ರೋಹಿಣಿಯು ಮೃದು ವಸನವನು ಹಾಸಿ ಮಗುವ |
ಮೋಹದಲಿ ಮಲಗಿಸಿದು ನೋಡುತಾನನವ || ೭ ||

ತನುಜ ತನ್ನವನಿಂಗೆ ತಕ್ಕನುಜನಿವನು |
ಎನುತ ಮುದ್ದಿಸುತಿರ್ದಳಾ ಬಾಲಕನನು || ೮ ||

**ಭಾಮಿನಿ**

ನಂದಗೋಪನು ಜಾತಕರ್ಮವ |
ನಂದನಗೆ ರಚಿಸಿದು ಮಹೋತ್ಸವ |
ದಿಂದ ಮಧುರಾಪುರಕೆ ನಡೆದನು ವರ್ಷವರ್ಷದಲಿ ||
ಸಂದು ಬರುತಿಹ ಕಷ್ಟವನು ನಲ |
ವಿಂದ ಕಂಸಂಗಿತ್ತು ಬೀಳ್ಗೊಂ |
ಡಂದು ಶೌರಿಯ ನುಡಿಸಿ ಕಳುಹಿಸಿಕೊಂಡನುಚಿತದಲಿ || ೧ ||

**ರಾಗ ಮಾಧ್ಯಮಾವತಿ ತ್ರಿವುಡೆತಾಳ**

ಇತ್ತ ಕಂಸನ ನೇಮದಲಿ ಮದ | ವೆತ್ತು ಪೂತನೆಯೆಂಬ ದಾನವಿ |
ಕೃತ್ರಿಮದಿ ಊರೂರ ಶಿಶುಗಳ | ಮೊತ್ತವನು ಸಂಹರಿಸುತ || ೧ ||

ಘೋರರೂಪವನುಳಿದು ಸುಂದರ | ನಾರಿಯಾಗಿ ಮನೋಜನುರುವ ಕ |
ಠಾರಿಯೆನೆ ಗೋಕುಲಕೆ ಬಂದಳು | ಭೂರಿಜನ ಬೆರಗಾಗಲು || ೨ ||

ಬರುತ ನೋಡಿದಳೆವೆಯನೊಯ್ಯನೆ | ಕುರುಹಿದೆನುತೊಳಪೊಕ್ಕು ನಂದನ |
ತರುಣಿಯಾಕಾರದಲಿ ಕಾವವ | ರರಿಯದಂದದಿ ಸಾರ್ದಳು || ೩ ||

ನಿಳೆಯದೊಳಗೆ ಯಶೋದೆಯಿಲ್ಲದ | ನೆಲೆಯರಿತು ಬಂದೆತ್ತಿಕೊಂಡಳು |
ಖಳರ ಕುಲಕಿವ ಮೃತ್ಯುವೆಂಬುದ | ತಿಳಿಯದಿದು ಮಗುವೆನ್ನುತ || ೪ ||

ತಿಂಬೆನೋ ಮೊಲೆಗೊಟ್ಟು ಜೀವವನ | ಕೊಂಬೆನೋಯೆನುತವಳು ಯೋಚಿಸು |
ತಂಬುಜಾಕ್ಷಗೆ ಘೋರತರ ವಿಷ | ದುಂಬಿರಿವ ಮೊಲೆಗೊಟ್ಟಳು || ೫ ||

**ವಾರ್ಧಿಕ**

ಅರಸ ಕೇಳಚ್ಯುತಂ ನೋಡುತವಳಾನನವ |
ನರಿಯದವನಂತೆ ಮೊಲೆಯುಣುತಿಳಾಭಾರಾಪ |
ಹರಣಕಾದಿಯಿದಾಗಲೂರರ್ಭಕರನಳಿವಳೆಂದುರು ಕಠೋರಮಾದ ||
ಗರಳಮಂ ಕಟವಾಯೊಳೊಸರಿಸುತ್ತವಳಸುವ |
ನಿರದೆ ಹೀರಿದರೊಡನೆ ಕಣ್ತಿರುಗಿ ಕಾಲ್ನಿಗುಚು |
ತೊರಲಿದಳ್ ದೂಡಿದಳ್ ನೋಡಿದಳ್ ಬೇಡಿದಳ್ ಬಾಡಿದಳ್ ಬಿದ್ದಳಿಳೆಗೆ || ೧ ||

**ಕಂದ**

ಘೋರಾರ್ಭಟೆಯಿಂದೊರಲು | ತ್ತಾ ರಕ್ಕಸಿಯಯ್ದೆ ಸಾರ್ದಳಚ್ಯುತ ನಡಿಯಂ ||
ನಾರಿಯರೆಲ್ಲರ್ ಬಂದು ಕು | ಮಾರನನೀಕ್ಷಿಸಿದರಸುರೆಯುರದೊಳ್ ಭಯದಿಂ || ೧ ||

ದಾನವಿ ದಾನವಿ ಹೋ ಹೋ | ಮಾನವಿಯಲ್ಲಿದೆ ಕೋ ಬಿದ್ದಳರೆ ಗಾವುದಕೈ ||
ಯೇನದ್ಭುತಮೆಂದೆತ್ತಿದ | ಳಾ ನಂದನ ರಾಣಿಯಣುಗನಂ ಮುದ್ದಿಸುತಂ || ೨ ||

**ರಾಗ ತೋಡಿ ಅಷ್ಟತಾಳ**

ಎತ್ತಿಕೊಂಡುರದೊಳಂಜಿತು ಮಗುವೆಂದಳ | ಲುತ್ತ ಯಶೋದೆಯಂದು ||
ಉತ್ತಮ ಮಂತ್ರಾವಾದಿಗಳಿಂದ ರಕ್ಷೆಗೆ | ಯ್ಯುತ್ತಿರ್ದಳಚ್ಯುತಗೆ || ೧ ||

ಗೋರೋಜನವ ತೇದು ತೊಡೆದು ಗೋಮೂತ್ರದೊ | ಳೋರಂತೆಮೆಯ್ತೊಳೆಸಿ ||
ನಾರಿಯರರಿತೌಷಧಿಯ ಮಾಡುತಿರ್ದರ | ಪಾರಮಹಿಮಗೊಲಿದು || ೨ ||

ನಾವೊಬ್ಬರಿಲ್ಲದ ವೇಳೆಯೊಳಸುರೆ ಬಂ | ದೀ ವಿಘಾತವನೆಸಗಿ ||
ಸಾವುದಾಶ್ಚರ್ಯವಲ್ಲವೆ ಕಂದನುಳಿದನು | ದೇವರ ದಯೆಯಿಂದಲಿ || ೩ ||

ಎನುತ ದೇವರಿಗೆ ವಿಶೇಷ ಪೂಜೆಗಳನಾ | ದಿನವೆ ಮಾಡಿಸುತೊಲಿದು ||
ತನಯಗೆ ಮೊಲೆಗೊಟ್ಟು ಮುದ್ದಿಸುತಿರುತಿರ್ದ | ಳೆನಿತು ಜನ್ಮದ ಫಲವೊ || ೪ ||

**ಭಾಮಿನಿ**

ನಂದನಿತ್ತಲು ಮಧುರೆಯಿಂದೆ |
ಯ್ತಂದು ಕಂಡತಿ ವಿಸ್ಮಯಂ ಪಡು |
ತೆಂದನಾ ವಸುದೇವನುತ್ಪಾತಗಳು ಗೋಕುಲದಿ ||
ಮುಂದೆ ಭರದಿಂದೆಚ್ಚರಿತು ನೀ |
ನಂದನನ ಸಲಹೆಂದನೆನ್ನೊಡ |
ನಿಂದು ನಿಜಮಾಯ್ತೊಮ್ಮೆಗುಳಿದನು ನಮ್ಮ ಪುಣ್ಯದಲಿ || ೧ ||

**ಕಂದ**

ಎನುತಾರಕ್ಕಸಿಯೊಡಲಂ | ಘನವೇಗದಿನಾಳ್ಗಳಿಂದೆ ತೆಗೆಸಿದು ನಂದಂ ||
ತನಯಗೆ ಶುಭಕರಮಾಗ | ಲ್ಕನುಪಮ ದಾನಗಳನಿತ್ತನತಿಮುದದಿಂದಂ || ೧ ||

**ವಾರ್ಧಿಕ**

ಮತ್ತೆ ಕೇಳ್ಕೈ ಭೂಪನಾ ನಂದನಾನಂದ |
ವೆತ್ತಣುಗನಂ ಕೊಂಡು ಮುಂಡಾಡಿ ಮುದ್ದಾಡಿ |
ನೆತ್ತಿಯಂ ವಾಸನಿಸುತಪ್ಪಿದಂ ತಪ್ಪಿದಂ ರಕ್ಕಸಿಯ ಕಯ್ಯೊಳೆನುತ ||
ಪತ್ತುದಿನಮಾಗೆ ಶಾಸ್ತ್ರೋಕ್ತದಿಂ ಯುಕ್ತದಿಂ |
ಸ್ವಸ್ತಿವಾಚನವಗೆಯ್ದಂದದಿಂ ಚಂದದಿಂ |
ದುತ್ತಮಬುಧರ್ಗನ್ನಪಾನದಿಂ ದಾನದಿಂಸಾಕೆನಿಸಿ ಮನ್ನಿಸಿದನು || ೧ ||

**ಕಂದ**

ಆದಿನದಿರುಳಂಗನೆಯರ್ | ಮಾಧವನಂ ರನ್ನದೊಟ್ಟಿಲೊಳ್ ಮಲಗಿಸುತಂ ||
ಮೋದದೊಳಂ ಮಗುವೆಂದು ವಿ | ನೋದದೊಳಂ ತೂಗಿ ಪಾಡಿದರ್ ಮುದದಿಂದಂ || ೧ ||

**ಜೋಗುಳಪದ**

ಚಿನ್ನದ ಸರಣಿಪಣಿಗಳನು ತೂಗಿಕ್ಕಿ |
ರನ್ನ ಕೆತ್ತಿಸಿದ ತೊಟ್ಟಿಲ ತಂದು ಸಿಕ್ಕಿ ||
ಪನ್ನಗಶಯನನ ಮೆಲ್ಲಾಸಿಗೊರಗಿಸಿ |
ಕನ್ನೆಯರೆಲ್ಲ ತೂಗಿದರೋಲಯಿಸಿ || ಜೋ ಜೋ || ೧ ||

ಜೋ ಜೋ ಕೋಮಲತರಂಕಾಯ ಜೋ ಜೋ |
ಜೋ ಜೋ ಸೋಮಸನಿಭವಕ್ತ್ರ ಜೋ ಜೋ ||
ಜೋ ಜೋ ರಾಮಣೀಯಕತೇಜ ಜೋ ಜೋ |
ಜೋ ಜೋ ರಾಮನನುಜ ಕೃಷ್ಣ ಜೋ ಜೋ || ಜೋ ಜೋ || ೨ ||

ಜೋ ಜೋ ನಂದಗೋಪನ ಮುದ್ದು ಕಂದ |
ಜೋ ಜೋ ತರುಣಿಯಶೋದೆಯಾನಂದ ||
ಜೋ ಜೋ ಸುಲಲಿತವದನಾರವಿಂದ |
ಜೋ ಜೋಯೆನುತ ತೂಗಿದರೊಲವಿಂದ || ಜೋ ಜೋ || ೩ ||

ನೀಲವರ್ಣದ ಮೋಹನಾಂಗನೆ ಜೋ ಜೋ |
ಲೋಲಲೋಚನದ ಸುಂದರರೂಪ ಜೋ ಜೋ ||
ಬಾಲಕತನದ ಪುಗೋಲನೆ ಜೋ ಜೋ |
ಶೀಲಸಂಪನ್ನ ಲಕ್ಷಣವಂತ ಜೋ ಜೋ || ಜೋ ಜೋ || ೪ ||

ಈ ರೀತಿಯಲಿ ನಾರಿಯರೆಲ್ಲ ಕೂಡಿ |
ನಾರಾಯಣನನು ಮಗುವೆಂದು ಮಾಡಿ ||
ಭೂರಿ ಸಂತಸದಿಂದ ದೇವರ ಬೇಡಿ |
ಓರಂತೆ ಪರಸಿದರುಲಿವುತ್ತ ಪಾಡಿ || ೫ ||

**ಹರಕೆ ಹಾಡು**

ಬಾಲ ಬಲ್ಲಿದನಾಗಿ ಶೀಲಸದ್ಗುಣನಾಗಿ |
ಬಾಲಕರಿಗೆ ಶಿರೋಮಣಿಯಾಗಿ ||
ಬಾಲಕರಿಗೆ ಶೀರೋಮಣಿಯಾಗಿ ನಲವಿಂದ |
ಶ್ರೀಲಕ್ಷ್ಮಿಯರಸನ ಕೃಪೆಯಿಂದ | ಸುಖಿಯಾಗು || ೧ ||

ಊರಿಗಧಿಕನಾಗಿ ಕೇರಿಗೆ ಹಿತವಾಗಿ |
ಸಾರಿ ಬಾಳುವರಿಗೊಡೆಯನಾಗಿ ||
ಸಾರಿ ಬಾಳುವರಿಗೊಡೆಯನಾಗಿ ಬಹುಗಾಲ |
ನಾರಾಯಣನ ಕರುಣದಿಂದ | ಸುಖಿಯಾಗು || ೨ ||

ತಾತನನೊಲಿಸುತ್ತ ಮಾತೆಯ ಸಲಹುತ್ತ |
ಭೂತಳಕೆಲ್ಲ ನೀ ದೊರೆಯಾಗು ||
ಭೂತಳಕೆಲ್ಲ ನೀ ದೊರೆಯಾಗಿ ಬಹುಗಾಲ |
ಸೀತಾರಾಮನ ದಯದಿಂದ ನೀ | ಸುಖಿಯಾಗು || ೩ ||

ವೇದಪಾಲಕನಾಗಿ ವಾದರಹಿತವಾಗಿ |
ಸಾಧುಸಜ್ಜನರಿಗೊಳ್ಳಿದೆನಾಗಿ ||
ಸಾಧುಸಜ್ಜನರಿಗೊಳ್ಳಿದನಾಗಿ ನಲವಿಂದ |
ಕೋದಂಡರಾಮನ ಕೃಪೆಯಿಂದ | ಸುಖಿಯಾಗು || ೪ ||

ದುಷ್ಟಮರ್ದನನಾಗಿ ಶಿಷ್ಟಪಾಲಕನಾಗಿ |
ಅಷ್ಟ ಐಶ್ವರ್ಯಭಾಗ್ಯವನುಂಡು ||
ಅಷ್ಟ ಐಶ್ವರ್ಯಭಾಗ್ಯವನುಂಡು ಬಹುಗಾಲ |
ಪಟ್ಟಾಭಿರಾಮನ ದಯದಿಂದ | ಸುಖಿಯಾಗು || ೫ ||

**ಕಂದ**

ಇಂತೆಂದು ಪಾಡಿ ಪರಸಿದ | ಕಾಂತೆಯರಂ ಮನ್ನಿಸುತಲತಿ ವೈಭವದಿಂ ||
ಅಂತರಿಸದೆ ರೋಹಿಣಿಯುರೆ | ಸಂತಸದಿಂ ವೀಳ್ಯಗೊಟ್ಟು ಬೀಳ್ಗೊಳಲುಂ || ೧ ||

**ಭಾಮಿನಿ**

ನಿರತ ಮಹದುತ್ಸವವಿನೋದದ |
ಲಿರುತಲಿಂತು ಯಶೋದೆ ತನ್ನಯ |
ತರುಣನನು ಮಲಗಿಸಿದು ಮನೆಗೆಲಸದೊಳಗೊಂದು ದಿನ ||
ವಿರಲು ಹರಿಯೆಚ್ಚರಿತವೋಲ್ ಮೆಯ್ |
ಮುರಿದು ನಿಗುಚುತ ಕೆಡಹಿದನು ಕಾ |
ಲ್ಬೆರಳುದಾಗಿಲಿ ಭಂಡಿಯಂತಿಹ ಘೋರದಾನವನ || ೧ ||

**ವಾರ್ಧಿಕ**

ಸಿಡಿಲ ಗರ್ಜನೆಯಂತೆ ಪೊಡಿರ್ದ ಭಂಡಿಯಡಿ |
ರಡಿ ಮಗುಚುತಿಳೆಗೊರಗೆ ಕೇಳ್ದು ಬಂದಬಲೆಯರ್ |
ನಡನಡುಗುತೇನಿದಚ್ಚರಿಯೆನಲ್ ಮಗುವಂ ಯಶೋದೆಯಂದೆತ್ತಿಕೊಂಡು ||
ಕಡುಭಯಂ ಕೊಂಡಿದೇತಕೆ ಬಿದ್ದುದಣುಗನಿದ |
ರಡಿಯಾಗದುಳಿದನೆಮ್ಮಯ ಪುಣ್ಯದಿಂದೆನು |
ತ್ತೊಡನಿರಲ್ ನಂದಾದಿಗಳ್ ಬೆರಗುದಾಳಿದರ್ ದೇವರುಳಿಸಿದನೆನ್ನುತ || ೧ ||

ಮಗುಳೊಂದು ದಿನಮರ್ಭಕಂಗೆ ಮೊಲೆಯೂಡುತ |
ಮುಗುದೆಯಿರೆ ಬೆಳೆದನಂಕದಲಿದಾಕಸ್ಮಿಕದ |
ಮಗುವೆನ್ನು ತಿಳುಹಿ ಪೋದಳು ಕೆಲಸಕಿತ್ತಂ ತೃಣಾವರ್ತನೆಂಬಸುರನು ||
ನಗವನಲ್ಲಾಡಿಸುತ್ತನಿಲನಾಕಾರದಿಂ |

ದಗಣಿತೋಪವನನಂಬರಕ್ಕೊಯಿದನಿತ್ತಲೆವೆ |
ದೆಗೆಯದಂತೂರ್ಗೆ ಧೂಳ್ಗವಿದುದುರೆ ಬೀಸಿದುದು ಬಿರುಗಾಳಿಯೆಣ್ದೆಸೆಯೊಳು || ೧ ||

ಏನಿದುತ್ಪಾತಮೆಂದೆಲ್ಲವರ್ ಭೀತಿಯಿಂ |
ಮೌನದಿಂದಿರಲತ್ತಲಂಬರದೊಳಚ್ಯುತಂ |
ದಾನವನ ಗೋಣನಂಜಿದವೋಲ್ ಬಗೊತ್ತಲಾ ಗಾಳಿಯ ಜವಂ ತಣಿಯಲು ||
ಮಾನಿನಿ ನಿಜಾರ್ಭಕನನಿರಿಸಿದೆಡೆಯಲಿ ಕಾಣ |
ದೇನಾದನಣುಗನೆಂದಳುತಿರಲತ್ತಲವ |
ಸಾನಮಾಯ್ತುಸುರಂಗೆ ಹರಿಯನುರದೊಳಗಾಂತು ಧರೆಗೆ ಧೊಪ್ಪನೆ ಕೆಡೆದನು || ೨ ||

**ಕಂದ**

ಕೆಡೆದಸುರನನಾತನ ಕೊರ | ಳೆಡೆಯಂ ಬಿಗಿದುರದೊಳಿರ್ಪ ನಿಜನಂದನನಂ ||
ಕಡುಭಯದಿಂ ನಂದಂ ಕಂ | ಡೊಡನೆತ್ತಿ ಮುದ್ದುಗೆಯ್ಯುತಿರ್ದಂ ಮಗನಂ || ೧ ||

ನೆತ್ತಿಯನಾಘ್ರಾಣಿಸುತ್ತೆನಿ | ತತ್ತು ಬೆದರ್ದನೊ ಕುಮಾರನವನುಪಟಳಕಂ ||
ಸತ್ತುಳಿದನೆಮ್ಮಯ ಭಾಗ್ಯದ | ಬಿತ್ತಿದೆ ಮೊಲೆ ಯೂಡೆನುತಲರಸಿಯೊಳಿತ್ತಂ || ೨ ||

**ಭಾಮಿನಿ**

ನಂದಗೋಪಿ ನಿಜಾರ್ಭಕಗೆ ಸಾ |
ನಂದದಲಿ ಮೊಲೆಯೂಡಿ ಮುದ್ದಿಸು |
ತಂದದಿಂದಿರಲತ್ತಲಾ ವಸುದೇವ ಮಧುರೆಯಲಿ ||
ಒಂದುದಿನ ಗಾರ್ಗ್ಯನನು ಕರೆದಾ |
ನಂದವೆಲ್ಲವನರುಹಿ ಗೋಪ್ಯದ |
ಲಂದು ಬೀಳ್ಕೊಡೆ ಗೋಕುಲಕೆನಡೆತಂದನಾ ಮುನಿಪ || ೧ ||

**ರಾಗ ಶಂಕರಾಭರಣ ತ್ರಿವುಡೆತಾಳ**

ಮುನಿಯ ಬರವನು ಕಂಡು ದೂರದೊ | ಳನುಪಮೋತ್ಸವದಿಂದ ತತ್ಪದ |
ವನಜಕಿದಿರೆದ್ದೆರಗಿ ನಂದನು | ವಿನಯದಿಂದ || ೧ ||

ಕರವಿಡಿದು ತಂದಾಸನದಿ ಕು | ಳ್ಳಿರಿಸಿ ಚರಣವ ತೊಳೆದು ತೀರ್ಥವ |
ಶಿರದೊಳಾಂತನು ಪೂಜಿಸಿದನತಿ | ಹರುಷದಿಂ || ೨ ||

ಮತ್ತೆ ಮಣಿವುತ ಪರಮಋಷಿ ನೀ | ನಿತ್ತ ಬಂದುದು ನಮ್ಮ ಪುಣ್ಯವೆ |
ನುತ್ತಲಾ ಬಾಲಕರನಡಗೆಡೆ | ವುತ್ತಲಾಗ || ೩ ||

**ಭಾಮಿನಿ**

ನೀವೇ ತನಯರಿಗಪ್ಪ ಕರ್ಮವ |
ನಾವುದುಂಟದ ಮಾಳ್ಪುದೆನೆ ವಸು |
ದೇವನೆಂದ ರಹಸ್ಯವನು ನಂದಂಗೆ ತಾ ತಿಳುಪಿ ||
ಭಾವದಲಿ ಹರಿಗೆರಗಿ ಮತ್ತಾ |
ಪಾವನರಿಗುರೆ ನಾಮಕರಣವ |
ನಾ ವಿಮಲಮತಿ ರಚಿಸಿದನು ವಿಧಿವಿಹಿತ ಮಾರ್ಗದಲಿ || ೧ ||

**ಕಂದ**

ಬಲರಾಮಂ ಹಿರಿಯವನೀ | ಚೆಲುವನಿವಂ ಕೃಷ್ಣನೆನುತ್ತಲಾಕುವರಗಂ ||
ತಳುವದೆ ಪೆಸರಿಟ್ಟು ಮುನಿ | ತಿಲಕಂ ತೆರಳಲ್ಕೆ ಸಲಹುತಿರ್ದಂನಂದಂ || ೧ ||

**ರಾಗ ತೋಡಿ ಅಷ್ಟತಾಳ**

ನಂದನೀಪರಿಯಲೀರ್ವರು ಬಾಲಕರ ಸಾ | ನಂದದಿ ಸಲಹುತಲಿ ||
ಚಂದದಿ ಬಾಲತೊಡುಗೆಯಾಭರಣವಿ | ಟ್ಟಂದವ ನೋಡುತಲಿ || ೧ ||

ಇರಲಂಬೆಗಾಲಿಕ್ಕಿ ಸರಿವುತ್ತಲೊಡಲನ್ನು | ಧರೆಯೊಳಿಟ್ಟೊಲೆವುತ್ತಲಿ ||
ಎರಡುಕಯ್ ವಿಡಿಯಲೇಳುತ ಬಳುಕುತ ಮೃದು | ಚರಣದಿ ನಡೆವುತಲಿ || ೨ ||

ಹಸಿದರಳುತ ಮೊಲೆಗೊಡೆ ತಾಯ ಮೊಗವ ನೀ | ಕ್ಷಿಸುತೋರೆಗಂಗಳಲಿ ||
ಪಸುಳೆಯಂದದಿ ಮೊಲೆಯುಣುತ ಕಲ್ಬೆರಳನಾ | ಡಿಸುತ ಗುಬ್ಬಿಯನಾಡುತ || ೩ ||

ತಾರಮ್ಮಯ್ಯಯೆನಲಂಗಯ್ಯನಾಡಿಸಿ | ತೋರುತ್ತ ತೋಳನಾಡಿ ||
ದೂರಕೋಡುತ ಬೇಗ ಬರುತ ಮೆಯ್ಯಲಿ ಬಿದ್ದು | ಭೂರಿಮೋಹಗಳ ಮಾಡಿ || ೪ ||

ಮುತ್ತನಿಡುತ ಕೊರಳನು ತಬ್ಬಿ ಮುಂಡಾಡು | ತತ್ತಿತ್ತಲೋಲಾಡುತ ||
ಎತ್ತಲು ನಗುತಿಳುಹಿದರಳುತೀಪರಿ | ಉತ್ತಮೋತ್ತಮರೀರ್ವರು || ೫ ||

**ಭಾಮಿನಿ**

ನೋಡಿ ದಣಿಯರು ಮಕ್ಕಳಿಗೆ ಮೊಲೆ |
ಯೂಡಿ ದಣಿಯರು ಮುದ್ದಿಸುತ ಮುಂ |
ಡಾಡಿ ದಣಿಯುರ ರನ್ನ ತೊಟ್ಟಿಲೊಳಿಟ್ಟು ತೂಗುತಲಿ ||
ಪಾಡಿದಣಿಯರು ಮರುಗೆ ಮೇಲುದ | ನೀಡಿ ದಣಿಯರು ಸತಿಯರೀರ್ವರು |
ಮಾಡಿರುವ ಪುಣ್ಯಕ್ಕೆ ಸರಿಯಿಲ್ಲರಸ ಕೇಳೆಂದ || ೧ ||

**ರಾಗ ಕೇದಾರಗೌಳ ತ್ರಿವುಡೆತಾಳ**

ರಾಮಕೃಷ್ಣರಾಡುತಿರ್ದರೊಲಿದು ‖ ಪಲ್ಲವಿ ||
ನೇಮದಿಂ ನೋಳ್ಪ ತಾಯದಿರಿಗೆ ಲೀಲೆಯ ತೋರಿ ‖ ಅನು ಪಲ್ಲವಿ ||
ಪುಟ್ಟ ಪುಟ್ಟಂಘ್ರಿಯನಿಡುತವನಿಯ ಮೇಲೆ |
ದಟ್ಟಡಿಯಿಂದೋಡುತೆಡವಿ ಬೀಳುತ ಮತ್ತೆ
ತಟ್ಟನೆದ್ದಿರ ನೋಡುತ್ತ | ತಮ್ಮೊಳಗೊಬ್ಬ |
ರಟ್ಟುತ್ತ ಬೆರಸ್ಯಾಡುತ್ತ | ತಮ್ಮೊಳಗೊಮ್ಮೆ |
ಸಿಟ್ಟಿಂದಗಲು ತೊಮ್ಮೆಯೊಟ್ಟಾಗಿಯಾಡುತ್ತ ‖ ೧ ‖

ಗಿಲಿಗೆಜ್ಜೆಯನು ಪಿಡಿದಲುಗಿ ತಥೈಯೆಂದು |
ನಲಿವುತ್ತ ಮಾತೆಯರನು ನೋಡಿ ಹಿಗ್ಗುತ್ತ |
ಲಳುಕಿ ಬಳುಕಿ ನಿಲ್ಲುತ್ತ | ಕೊರಳೊಳಿರ್ಪ |
ಹುಲಿಯುಗುರನು ಕಚ್ಚುತ್ತ | ಮಾಡುತಲಿರ್ಪ |
ಕೆಲಸವ ಮಾಣಮ್ಮ ಮೊಲೆಯೂಡೆನ್ನುತ್ತ ‖ ೨ ‖

ಹರಿವ ಹಾವನು ಪಿಡಿವುತ ಚೇಳ ತುಡುಕುತ್ತ |
ಉರಿಗೆ ಕಯ್ಯಿಕ್ಕುತಂಗಳದ ಧೂಳಲಿ ಬಿದ್ದು |
ಹೊರಳುತಲೊಡನೇಳುತ | ಕಟ್ಟಿದ ಬಾಲ |
ಕರುಗಳ ಮೇಲೇರುತ | ಬೇಡುವರಲ್ಲಿ |
ಬರೆ ಕಂಡದಕೊ ಗುಮ್ಮ ಬರುವನೆಂದೋಡುತ್ತ || ೩ ‖

ಎರೆವೆನೆಂದರೆ ಸಿಕ್ಕದೋಡುತ್ತ ಸೆಳೆಕೊಂಡು |
ಬೆರಸಿ ಯಶೋದೆಯೆಯ್ತರೆ ನಂದನೆಡೆಗಾಗಿ |
ಭರದಿಂದ ಪೋಗಿ ನಿಂದು | ಅಯ್ಯೊ ನೋಡಮ್ಮ |
ನರಿದೆ ತಾ ಕೊಲುವಳೆಂದು | ದೂರುತಲಿಂದು |
ಪರಿಪರಿವಿಧದ ಲೀಲಾವಿನೋದಗಳಿಂದ ‖ ೪ ||

**ಭಾಮಿನಿ**

ಕೆಲವು ದಿನಗಳೆಯಲ್ಕೆ ಮತ್ತಾ |
ಚೆಲುವರಿಂತಾಡುತ್ತ ಬೀದಿಗ |
ಳೊಳಗೆ ಹರಿ ಹರಿದಾಡುತಿದ್ದರು ಕೆಳೆಯರೊಡಗೂಡಿ ||
ಲಲಿತ ರತ್ನಾಭರಣದಲಿ ಹೊಳೆ |
ಹೊಳೆವ ತನು ಕಾಂತಿಗಳಲಾ ಮಂ |
ಗಳ ಮನೋಹರರೆಸೆದ ರಿಂದುದಿನೇಶರಂದದಲಿ ‖ ೧ ||

**ವಾರ್ಧಿಕ**

ನೆರೆಮನೆಯ ಮುಮ್ಮನೆಯನಿರದಯ್ದಿಯಾಡುವರ್ |
ತರುಣಿಯರ್ ಮೋದದಿಂ ಮೆಲ್ವುದಂ ನೀಡುವರ್ |
ಹರುಷದಿಂ ಕೊಂಡು ಮೆಲುತೊಡನೆ ಕುಣಿದಾಡುವರ್ ಬಾಲಕರ್ ಸೊಬಗಿನಿಂದ ||
ನೆರೆನೆರೆವುತೂರನಾರಿಯರೊಟ್ಟುಗೂಡುವರ್ |
ಮರೆದು ಮನೆಗೆಲಸಮಂ ಮರುಳಾಗಿ ನೋಡುವರ್ |
ಕರೆಕರೆವುತಪ್ಪಿ ಚುಂಬಿಸಿ ಮುದ್ದು ಮಾಡುವರ್ ಸತಿಯರೇಂ ಪುಣ್ಯಾತ್ಮರೋ || ೧ ||

ಒಂದು ದಿನವಣುಗನಾಡುತಲಯ್ದೆ ಮಣ್ದೆಗೆದು |
ತಿಂದನೆನೆ ಕೇಳ್ದಾ ಯಶೋದೆ ಸೆಳೆಕೊಂಡೆಯ್ದಿ |
ಕಂದನಂ ಬಾಯ್ದೆರೆದು ಕಂಡಳಾ ಬ್ರಹ್ಮಾಂಡ ಮಂಡಲದ ವಿಸ್ತರವನು ||
ನಂದಗೋಕುಲವನುಂ ಪಶುಗಳಂ ಗೋಪರಂ |
ನಂದನನನೊಡನೆ ಸೆಳೆಗೊಂಡಿರ್ಪ ತನ್ನ ಕ್ಷಿತಿ |
ಯಂದಮಂ ಕಂಡಂಜಿಕಣ್ಮುಚ್ಚಿ ಶಿವಯೆನಲ್ ಮುನ್ನಿನಂತೆಸೆದಿರ್ದನು || ೨ ||

**ರಾಗ ಭೈರವಿ ಝಂಪೆತಾಳ**

ನಗುತಂಜಿದಂತಿರುವ | ಮಗುವನೀಕ್ಷಿಸುತೆನ್ನ |
ಮಗುವೆ ಬಾರೆನುತಲಾ | ಮುಗುದೆ ಮುದ್ದಿಸುತ || ೧ ||

ಪಿರಿದಾದ ಚಿತ್ರವನು | ಮರೆದು ಮೊಲೆಯೂಡಿದಳು |
ಹರಿಯ ಮಾಯೆಗಳನಾ | ರರಿವರೈ ನೃಪತಿ || ೨ ||

ಮತ್ತೆ ಬಲರಾಮಸಹಿ | ತುತ್ತಮಚರಿತ್ರನಾ |
ಡುತ್ತಿರ್ದನರ್ಭಕರ | ಮೊತ್ತದೊಡಗೂಡಿ || ೩ ||

**ರಾಗ ಪಂತುವರಾಳಿ ಪಂಚಾಗತಿ ಮಟ್ಟೆತಾಳ**

ಬಾಲಕೃಷ್ಣನಾಡುತಿರ್ದನು ||
ಲೀಲೆಯಿಂದ ಊರ ಗೋ | ಪಾಲರಣುಗರೊಡನೆ ಕೂಡಿ || ಪ ||

ವೇದವೆಲ್ಲೊಂದುಗೂಡಿ | ವಾದವಿಲ್ಲದರಸಿಯರಸಿ |
ಶೋಧಿಸಲ್ಕೆ ತೀರದಯ್ದೆ ನಾಚುತಿರ್ಪವು ||

ಆದಿಪುರುಷನಾ ಮಹತ್ತ | ನುಳಿದು ಮಕ್ಕಳೊಡನೆ ಕೂಡಿ |
ಹಾದಿಬೀದಿಯಲಿ ಬಲು ವಿ | ನೋದದಿಂದಲೋಡಿಯಾಡಿ || ೧ ||

ಕರುಗಳನ್ನು ಬಾಲವಿಡಿವು | ತಿರದೆ ಜೋಲುತೆಳಸಿಕೊಳುತ |
ಉರುಬಿಯಾಡಲುರುಳಿ ನೆಲಕೆ ಬೀಳುತೇಳುತ ||

ತರಳರನ್ನು ಹಗಲನೇರಿ | ಕುದುರೆಯಹಹ ನೋಡೆನುತ್ತ |
ಮರಳಿಯವರ ಪೊತ್ತು ಧೊಪ್ಪ | ನುರುಳುಗೆಡಹಿಯಳಲಿಸುತ್ತ || ೨ ||

ಕಣ್ಣುಮುಚ್ಚಾಲೆಯಾಟ | ಚೆಂಡಿನಾಟ ಚೇನಿಕೋಲು |
ಮಿಣ್ಣನಡಗಿ ಹುಗುವ ಆಟ | ಗಜಿಗ ಸುಡುಗುಡಿ ||

ಬಣ್ಣ ಬುಗುರಿ ಬೋರುಬುಗುರಿ | ಯಾಟಗಳಲಿ ನಲಿವುತಿಪ್ಪ |
ಚಿಣ್ಣರೊಡನೆಯಾಡಿಯಾಡು | ತಣ್ಣಸಹಿತ ನಲವಿನಿಂದ || ೩ ||

**ಭಾಮಿನಿ**

ತರಳರೊಡನಿಂತಾಡುತಾಡುತ |
ನೆರೆಮನೆಯ ಮುಮ್ಮನೆಯ ಪೊಕ್ಕವ |
ರಿರದ ವೇಳೆಯನರಿದು ಪಾಲ್ ಮೊಸರುಗಳ ಸವಿಸವಿದು ||
ಮರಳಿ ಮಿಣ್ಣನೆ ಮುದ್ದೆ ಬೆಣ್ಣೆಯ |
ನಿರದೆ ಕೊಂಡಾರರಿಯದವೊಲಾ |
ತರಳರಿಂಗೀವುತ್ತ ತಾ ಮೆಲುತಿರ್ದನಡಿಗಡಿಗೆ || ೧ ||

**ವಾರ್ಧಿಕ**

ಎಂದಿನಂದದೊಳಿತ್ತಲಾ ಗೋಪನಾರಿಯರ್ |
ಮಿಂದುಮಡಿಗಳ ನುಟ್ಟು ತಂತಮ್ಮ ಬಾಲಕರಿ |
ಗಂದದಿಂದುಣಲಿಕ್ಕುತೀಕ್ಷಿಸಲ್ ಪಾಲ್ ಮೊಸರ ಪಾತ್ರೆಗಳ್ ಬರಿದಾಗಿರೆ ||
ನಿಂದು ನೋಡಿದರಿದೇನಾಶ್ಚರ್ಯಮೆಂದೆಲ್ಲ |
ರೊಂದುಗೂಡಿದರೊಡನೆ ತಂತಮ್ಮ ಮನೆಯಲಾ |
ದಂದಮಂ ಬಣ್ಣಿಸುತಲೇನೆಂಬೆನಚ್ಯುತನ ಲೀಲಾವಿನೋದಗಳನು || ೧ ||

**ರಾಗ ಘಂಟಾರವ ಆದಿತಾಳ**

ಅಕ್ಕ ನೋಡಿದೇನು ಚೋದ್ಯವೆ | ಮನೆಯನಾರೊ | ಪೊಕ್ಕನಾತಗೆಷ್ಟು ವಿದ್ಯವೆ ||
ಸಿಕ್ಕದೊಳಿಟ್ಟಿಪ್ಪ ಹಾಲು | ನೆಕ್ಕಿದಂತಾಗಿರ್ಪುದಲ್ಲೆ | ಮಕ್ಕಳಿಗೆಂದಿಟ್ಟೆನಾದ |
ರಿಕ್ಕಲೇನುಯಿಲ್ಲವಲ್ಲೆ || ೧ ||

ಬೆಣ್ಣೆಯಿಲ್ಲ ಭಾಂಡದೊಳಗೆ | ಮೊಸರಪಾತ್ರ | ನುಣ್ಣನಾಗಿಟ್ಟಿದ್ದ ಕೆಳಗೆ ||
ಹೆಣ್ಣುಗಳ ಚೇಷ್ಟೆಯಲ್ಲ | ಸಣ್ಣ ಮಕ್ಕಳಾಟವಲ್ಲ | ಬಣ್ಣಗಾರನಾರೊ ಬಂದು |
ಮಿಣ್ಣನಿಂತಾ ಕಜ್ಜಗೆಯ್ದು || || ೨ ||

ಸಜ್ಜಿನೂಟವೆನ್ನ ಗಂಡಗೆ | ಕೋಪದಿ ನಿತ್ಯ | ಘರ್ಜಿಸುವರುಂಬ ವೇಳೆಗೆ ||
ಕಜ್ಜವಿಂತು ಮೀರಿತಲ್ಲ | ಹೆಜ್ಜೆಯಿಡಲಾರೆನಲ್ಲೆ | ಲಜ್ಜೆಯಿಲ್ಲದಂತೆ ನೀರು |
ಮಜ್ಜಿಗೆಯೆಂತಿಕ್ಕಲಿಂದು || ೩ ||

ಹುಚ್ಚುಮಾತಿದಿಂತು ಪೇಳ್ವರೆ | ಕಾಣದ ಹಾಗೆ | ಮುಚ್ಚೆಯಿಟ್ಟಿದ್ದಾರು ಮೆಲ್ವರೆ ||
ಹೆಚ್ಚಿದ್ದಾವೆ ಮಾಳಬೆಕ್ಕು | ನಚ್ಚಿಕೊಂಡುಹಾಲು ಮೊಸರ | ನಿಚ್ಚ ನಿಚ್ಚ ಬಾಹವಿಲ್ಲಿ |
ವೆಚ್ಚಗೆಯ್ದು ಹೋಹುದಲ್ಲೆ || ೪ ||

ಮಾಳನಾಗೆ ಭಾಂಡವೊಡೆಯದೆ | ನಮ್ಮಿಷ್ಟು ಮನೆಯ | ಹಾಲು ಮೊಸರನೆಲ್ಲ ಕುಡಿವುದೆ ||
ಜಾಲಮಾತಿದಲ್ಲ ಬಂದ | ಖೂಳನಾರೊ ಮಾಯದಿಂದ | ನಾಳೆ ನೋಡಿಕೊಂಬ ಸಾಕೆ |
ಹೋಲದಂಥ ಮಾತಿದೇಕೆ || ೫ ||

**ಭಾಮಿನಿ**

ವನಿತೆಯರು ನಾಳಿನಲಿ ನೋಡುವೆ |
ವೆನುತಲಿರೆ ಮರುದಿವಸ ಮತ್ತಾ |
ಚೆನುಮಯನು ಮೊದಲಿಂದಲತಿಶಯವಾದ ಚೇಷ್ಟೆಯಲಿ ||
ಮನೆಮನೆಗಳನು ಪೊಕ್ಕು ತಾ ಮಿ |
ಣ್ಣನೆ ವಿನೋದದಿ ಚೋರವೃತ್ತಿಯ |
ನನುಕರಿಸಿ ಪೋಗಿರಲು ಮಗುಳಿಂತೆಂದರಬಲೆಯರು || ೧ ||

**ರಾಗ ಘಂಟಾರವ ಅಷ್ಟತಾಳ**

ಮತ್ತಿಂದು ಬಂದನಲ್ಲೆ | ನಾಳೆಗೆ ಕಾಂಬು | ದುತ್ತಮವೆಂದೆವಲ್ಲೆ ||
ಅತ್ತಿತ್ತಲವ ತಿರು | ಗುತ್ತಿರ್ಪ ಸೋವದು | ದೆತ್ತಿರ್ಪನೆಂಬಂತೆ |
ಗೊತ್ತ ಕಾಣಿಸನಲ್ಲೆ || ೧ ||

ಮೊಸರ ಭಾಂಡವ ಜರಿದು | ನುಣ್ಣೆಲವೆಲ್ಲ | ಕೆಸರಾಗಿದೆ ಹರಿದು ||
ಹಸುವಿನ ಹಾಲಿಲ್ಲ | ಶಿಶುವೆದ್ದಳುವುದಲ್ಲ | ಹಸಗೆಡಿಸಿದನಲ್ಲ |
ಹೊಸ ನೂತನದ ಕಳ್ಳ || ೨ ||

ಕುಳಿತಾವು ಕಾದಿದ್ದೆವೆ | ಗೆಜ್ಜೆಯ ಧ್ವನಿ | ಘಲಿರೆಂಬುದನು ಕೇಳ್ದೆವೆ ||
ನೆಲೆಯನೆಮಗೆ ತೋರ | ಕಳವಿಲಿ ಬಹುಧೀರ | ಸುಲಭನಲ್ಲವೆಚೋರ |
ಬಲು ಮಾಯಕಗಾರ || ೩ ||

ಸಣ್ಣವನಾತ ಕಾಣೆ | ನಾ ಕಂಡೆನು | ಮಿಣ್ಣನೆ ಬಂದ ಜಾಣೆ ||
ಬಣ್ಣಗಾರಿಕೆಯಿಂದ | ಬೆಣ್ಣೆಯೆಲ್ಲವ ತಿಂದ | ಹೆಣ್ಣೆಹೇಳದಿರೆಂದ |
ನುಣ್ಣನಾಚೆಗೆ ಸಂದ || ೪ ||

ಕಂಡು ನೀ ಬಿಡುವರೇನೆ | ಕೂರಿಗಿದರೆ ಬೆಂ | ಗೊಂಡಾವು ಬಾರೆವೇನೆ ||
ಪುಂಡನನೀರೀತಿ | ಯಂಡಿಸಲೇಂ ನೀತಿ | ಗಂಡೆ ಬರಿದೆ ಭೀತಿ |
ಗೊಂಡೆ ನೂತನಗಾರ್ತಿ ‖ ೫ ‖

**ರಾಗ ಸಾರಂಗ ತ್ರಿವುಡೆತಾಳ**

ಅಕ್ಕ ನೀ ಮುನಿವರೇನೆ | ಎನ್ನಲಿ ತಪ್ಪ | ನಿಕ್ಕಿ ಹೀಗೆಂಬರೇನೆ ||
ಚಿಕ್ಕವಳಾನೊರ್ವಳ್ | ಇಕ್ಕಟ್ಟಿನೆಡೆಯಲ್ಲಿ | ಮಿಕ್ಕೋಡುವವನ ಕ |
ಯ್ಯಿಕ್ಕಿ ಹಿಡಿವವಳೇನೆ ‖ ೧ ‖

ಸಣ್ಣವನೆಂದೆಯಲ್ಲೆ | ಪಿಡಿಯೆ ನಿನ್ನ | ಬಣ್ಣಗುಂದುವುದೆಬಾಲೆ ||
ಕಣ್ಣಲಿ ಕಂಡು ಕ | ಳ್ಳನ ಬಿಟ್ಟೋಡಿಸಿ ಮತ್ತೆ | ಬಣ್ಣಗಾರಿಕೆ ಮಾತ |
ನುಣ್ಣನಾಡುವೆಯಲ್ಲೆ ‖ ೨ ‖

ಹೆಣ್ಣೆ ನೀ ಚದುರೆ ಕಾಣೆ | ಕಳ್ಳನ ಬಿಟ್ಟು | ಮಿಣ್ಣನೋಡಿಸಿದೆ ಜಾಣೆ ||
ಎಣ್ಣೆಗೆ ಸೀಗೆಯನಿಕ್ಕಿದ ತೆರದಲ್ಲಿ | ಬಣ್ಣಗಾರಿಕೆ ಮಾತ |
ನುಣ್ಣನಾಡುವೆಯಲ್ಲೆ ‖ ೩ ‖

ಇಂದಿಗೆ ಹೋದರೇನೆ | ನಾಳೆಗೆ ಕಳ್ಳ | ಬಂದಲ್ಲದಿರುವನೇನೆ ||
ಸಂದಿಗೊಂದಿಯಲಂಡಿ | ನಿಂದು ಚೋರನ ಪಿಡಿ | ದೊಂದ ಕರೆವೆನೆಲ್ಲ |
ಬಂದು ಪಿಡಿಯಿರವ್ವ ‖ ೪ ‖

**ಕಂದ**

ಈದಿನ ಹೋಗಲಿ ನಾಳೆಗೆ | ಭೇದಿಸುತಂ ಪಿಡಿವೆನೊರ್ವಳಾತನ ನೆನುತಂ ||
ಸಾಧಿಸುತಾದಿನವಿರೆ ದಾ | ಮೋದರನರಿತು ಪೊಕ್ಕನವಳಾಲಯಮಂ ‖

**ವಾರ್ಧಿಕ**

ಇಲ್ಲಿ ಕಾದಿರ್ಪಳೆನ್ನಂ ಪಿಡಿವೆನೆಂದಿವಳ |
ನೆಲ್ಲರೊಳ್ ಮೊಗವೆತ್ತದಂತೆ ಮಾಡುವೆನಿದಕೆ |
ಬಲ್ಲೆನಾಟವನೆಂದು ಮಿಣ್ಣನರಿಯದವೊಲಾಡುತ್ತೆಯ್ದಿಪಾಲ್ ಮೊಸರನು ||
ಚೆಲ್ಲಿ ಭಾಂಡವನೊಡೆದು ಬೆಣ್ಣೆಗೊಂಡೋಡುತಿರೆ |
ನಿಲ್ಲು ಸಿಕ್ಕಿದೆ ಚೋರಯೆಂದವಳ್ ಪಿಡಿಯೆ ನಗು |
ತಿಲ್ಲದಿಹೆ ಚೇಷ್ಟೆಯನ್ನೆಸಗಿ ಮೊಲೆ ವಿಡಿದಪ್ಪಿ ಜುಣುಗಿ ಮೆಲ್ಲನೆ ನಡೆದನು ‖ ೧ ‖

**ರಾಗ ತೋಡಿ ಅಷ್ಟತಾಳ**

ಈ ರೀತಿಯಲಿ ಮಾನಗೆಡಿಸಿ ಪೋಗಲು ಮೊಗ | ದೋರಲಾಕೆಯು ನಾಚುತ್ತ ||
ನಾರಿಯೆರೆಲ್ಲರ ಕರೆದೆಂದಳೆನ್ನ ಕಯ್ ಮೀರಿಯೋಡಿದನೆನ್ನುತ || ೧ ||

ಕರೆವೆನೆಂದೆಲ್ಲರೊಳೊರೆದಿರ್ಪೆ ನೀನೊಮ್ಮೆ | ಸ್ವರಗೆಯ್ಯಲಿಲ್ಲವಲ್ಲೆ ||
ಬರಿದೆ ಬನ್ನಣೆಯ ಮಾತುಗಳ ನೀನಾಡುವೆ | ತರಳೆ ನೀ ಜಾಣೆಯಲ್ಲೆ || ೨ ||

ಮರುಳಾದೆಯೇನಕ್ಕ ಬರಿದೆ ಜರೆದೆಯೆನ್ನ | ನರಿಯೆ ನೀನವನಾಟವ ||
ಅರುಹುವರೆನಗೆ ನಾಚಿಗೆಯಪ್ಪುದೇನೆಂಬೆ | ತರಳ ಮಾಡಿದ ಮಾಟವ || ೩ ||

ಬರುತ ಚಿಕ್ಕವನಾಗಿ ತೋರ್ಪ ಪಿಡಿಯೆ ಹೊಸ | ಹರೆಯದಲಿರ್ದ ಕಾಣೆ ||
ಕರೆವೆನೆಂದರೆ ಬಾಯನವಚಿ ಪಿಡಿವುತ್ತೆನ್ನ | ಮರಿಯಾದೆಯಳಿದ ಜಾಣೆ || ೪ ||

ಥಳಥಳಿಸುವ ನವರತ್ನಭೂಷಣದಿಂದ | ಹೊಳೆವುತ್ತಲಿರ್ಪನಲ್ಲೆ ||
ಒಳಗಾತ ಬರಲು ಕತ್ತಲೆಯ ಮನೆಯೊಳೆಲ್ಲ | ಬೆಳಕಾಗಿ ತೋರ್ಪುದಲ್ಲೆ || ೫ ||

ನೀಲವರ್ಣದಲಿಹ ಬಾಲಹರೆಯನು ಪೂ | ಗೋಲಿದೆ ಕಯ್ಯೊಳಗೆ ||
ಹೋಲಿಕೆಯೊಳಗೆ ಯಶೋದೆಯ ಮಗನನ್ನು | ಹೋಲಿಸಬಹುದಾತಗೆ ||೬||

**ಭಾಮಿನಿ**

ಎನಲು ಕೇಳುತ ಬೆರಗುವಟ್ಟಾ |
ವನಿತೆಯರು ಸಂಶಯದೆಲೇಳೆ ಜ |
ವ್ವನದವರು ಬೇಡೆಂದು ಮುಪ್ಪಿನ ಸತಿಯನೊರ್ವಳನು ||
ಮನೆಯ ಕಾದಿರುಮಿಂದು ಬಹವಾ |
ವೆನುತಿರಿಸಿ ನೆರೆದೆಯ್ದಲಿತ್ತಲು |
ವನಜಲೋಚನನರಿತು ಪೊಕ್ಕನು ಕಾವಲಿಹ ಮನೆಯ || ೧ ||

ಮುಗುಳುನಗೆಯಲಿ ಬೆಣ್ಣೆಗೊಂಡಿವ |
ಳಗಡುತನವನು ಮಾಣಿಸುವೆನೆಂ |
ದಘಹರನು ಬಿಸಿ ಬಿಸಿಯ ಬೂದಿಯಕೊಂಡು ಮರೆಯಿಂದ ||
ಮೊಗಕೆ ಚೆಲ್ಲಿದಡವಳೊದರಿ ಕ |
ಣ್ಣೆಗೆಯಲಾರದೆ ಬಾಯ ಬಿಡುತಿರೆ |
ನಗುತಲೋಡಿದನಿರದೆ ಕೆಳೆಯರ ಬಳಿಗೆ ವೇಗದಲಿ || ೨ ||

**ರಾಗ ಶಂಕರಾಭರಣ ತ್ರಿವುಡೆತಾಳ**

ಇತ್ತ ಗೋಪಾಂಗನೆಯರೆಯ್ತಂ | ದತ್ತು ಕಂಗಳನೆರಡು ಕಯ್ಯಿಂ |
ದೊತ್ತಿ ಕೊಂಡೊರಲುವಳ ಮಿಗೆ ಕಾ | ಣುತ್ತಲಂದು || ೧ ||

ಏನಿದೇನೇನವ್ವ ಮರುಗುವೆ | ನೀನದೇತಕೆ ನಿನ್ನ ಕಂಗಳಿ |
ಗೇನು ತಾಗಿತು ನಮ್ಮೊಳುಸಿರು ನಿ | ಧಾನಮಾಗಿ || ೨ ||

ಎನಲು ಮರುಗುತ ನೋಡಿಕೋ ಕ | ಣ್ಣಿನಲಿ ಬೂದಿಯ ಹಾಕುತೋಡಿದ |
ಎನಗೆ ನೇತ್ರಗಳಡಗಿತೇ ನೀ | ಮ್ಮಿನಿಬರಿಂದ || ೩ ||

ಎಂದೆನುತಲಳುತಿಪ್ಪವಳ ನಲ | ವಿಂದಲೊಡಬಡಿಸುತ್ತ ತಮ್ಮೊಳ |
ಗೆಂದರಾ ಗೋಪಾಲನಾರಿಯ | ರೊಂದುಗೂಡಿ || ೪ ||

**ರಾಗ ಸೌರಾಷ್ಟ್ರ ಗೌಳ ಪಂತುವರಾಳಿ ಆದಿತಾಳ**

ನೋಡಿರವ್ವ ಕಳ್ಳನಿಂದು ಮಾಡಿದಾಟವ | ಜೋಡಿಸಿದನು ಮಾಡಬಾರದಂಥ ಮಾಟವ || ಪ ||

ಒಮ್ಮೆ ಹಾಲು ಮೊಸರ ಕುಡಿವ | ನೊಮ್ಮೆ ಭಾಂಡಗಳನೊಡೆವ |
ನೊಮ್ಮೆ ಕರುಗಳನ್ನು ಬಿಡುವ | ಮಗುವನಳಿಸುವ | |
ಒಮ್ಮೆಸದ್ದಿಲ್ಲದೆ ಬರುವ | ಒಮ್ಮೆ ಧ್ವನಿಯ ತೋರುತಿರುವ |
ಹೆಮ್ಮಕ್ಕಳೆಂದರಿದು ನಮ್ಮ | ಸೊಮ್ಮನೆಲ್ಲ ಮುರಿದನಮ್ಮ || ೧ ||

ಹುಡುಗಿಯನ್ನು ತುಡುಕಿ ಪಿಡಿದ | ಮುದುಕಿಯನ್ನು ಕಣ್ಣ ತೆಗೆದ |
ತಡೆವೆವಾನಿನ್ನೆಂತು ಇಂಥಾ | ದುಡುಕುತನವನು ||
ಕುಡಿವ ಹಾಲು ಮೊಸರನೆಲ್ಲ | ಗಡಿಗೆ ಮಡಕೆಯೊಡೆವನಲ್ಲ |
ಕಡೆಗು ಕಷ್ಟಪಡುವದಲ್ಲದೆ | ಪಿಡಿಯಲರಿಯದಾದೆವಲ್ಲ || ೨ ||

ಚೋರನನ್ನು ತುಬ್ಬುಗೆಯ್ದು | ದಾರಿಂದಲಾಗದೆ ಹೋಯ್ತು |
ತೀರದಿದ್ದ ಕೆಲಸವನಿ | ನ್ನಾರಿಗೆಂಬೆವೆ ||
ಊರೊಳು ಕಾದಿರ್ಪತಳ | ವಾರರಿಂಗಾದರು ನಾವು |
ದೂರಿದಲ್ಲದಾಗದಿನ್ನು | ಬೇರೊಂದ್ಯತ್ನ ಕಾಣೆವಮ್ಮ || ೩ ||

**ಕಂದ**

ಇಂತಳುಲುವ ಸತಿಯರನೇ | ಕಾಂತಾಶ್ರಿತಭಕ್ತರೆಂಬ ಕಾರುಣ್ಯದೊಳಂ ||
ಕಂತುಪಿತಂ ಸಿಲುಕುವೆ ನೀ | ನಿಂತುರಿಸಲ್ ಬಾರದೆಂದು ಕೃಪೆಯಂ ತಳೆದಂ || ೧ ||

**ವಾರ್ಧಿಕ**

ಇತ್ತಲಾ ಗೋಪಾಲನಾರಿಯರ್ ಬಲು ದುಗುಡ |
ವೆತ್ತಿರದೆ ಮನೆಗೆಲಸ ಕೆಯ್ದುತಿರೆ ಕಾಣುವಂ |
ತತ್ತಲಚ್ಯುತನಯ್ದೆ ಬೆಣ್ಣೆಯಂ ಗೆಳೆಯರಿಂಗೀವು ತೊಯ್ಯನೆ ಮೆಲ್ಲುತ ||
ಮೊತ್ತದಿಂದ ಕಪಿಗಳಂ ಕರೆದು ಕೊಡುತಲಾ |

ಡುತ್ತಲಿರೆ  ನೋಡಿದರ್  ಕಯ್ಬಾಯ್ಗೆ ಲೇಪಿಸಿದು |
ಮೆತ್ತಿರುವ ಬೆಣ್ಣೆಗಳ್ಳನನಿದಕೊ ಸಿಕ್ಕಿದನೆನುತ್ತಬಲೆಯರ್ ಮುದದೊಳು    || ೧ ||

**ರಾಗ ಸೌರಾಷ್ಟ್ರ ಅಷ್ಟತಾಳ**

ಇಕ್ಕೊ ಳ್ಳಿರೌ ಕಣ್ಗೆ ಸಿಕ್ಕಿದ ಬಲು ಕಳ್ಳ | ನೀತ ಕಾಣೆ || ತನ್ನ  |
ಠಕ್ಕ ನಡೆಸಿ ನಮ್ಮ ಮಿಕ್ಕೋಡಿ ಪೋದವ | ನೀತ ಕಾಣೆ || ೧ ||

ಸಕ್ಕರೆಯನು ಕದ್ದು | ಮುಕ್ಕಿ ನಡೆದ ಪುಂಡ | ನೀತ ಕಾಣೆ || ಮಾಳ  |
ಬೆಕ್ಕಿನಂದದಿ ಹಾಲ | ನೆಕ್ಕಿ ಕುಡಿವ ಲಂಡ | ನೀತ ಕಾಣೆ         || ೨ ||

ಒಡೆದು ಭಾಂಡಗಳನ್ನು | ಪುಡಿಗೆಯ್ದು ಪೋದವ | ನೀತ ಕಾಣೆ || ಎವೆ  |
ಮಿಡುಕದಂದದಿ ಬಂದು | ಹುಡುಕುವ ಬಗೆಗಾರ || ನೀತ ಕಾಣೆ   || ೩ ||

ಕಡೆವ ನೇಣ ಕೊಯ್ದು | ಕಡೆಗೋಲ ಕೊಂಡೊಯ್ದ | ನೀತ ಕಾಣೆ || ದಾರಿ  |
ಯೆಡೆಯಲಾ ಹುಡುಗಿಯ | ಮಿಡಿಮೊಲೆವಿಡಿದವ | ನೀತ ಕಾಣೇ || ೪ ||

ಮೊಸರ ಚೆಲ್ಲಿದು ನೆಲ | ಕೆಸರೆಬ್ಬಿಸಿದ ಖೂಳ | ನೀತ ಕಾಣೆ || ಮಲ  |
ಗಿಸಿದ ಮಕ್ಕಳ ಬೆವುರಿ | ಹೆಸಗೆಡಿಸಿದ ಪೋಕ | ನೀತ ಕಾಣೆ     || ೫ ||

ಪುಸಿಯಲ್ಲವಿನ್ನೇನ | ನುಸಿರುವೆನತಿಜಾಣ | ನೀತ ಕಾಣೆ || ಇವ  |
ನೊಸಗೆಯ ಗೋಪ್ಯಮ್ಮ | ಗುಸಿರಿದಲ್ಲದೆ ಮಾಣ | ನೀತ ಕಾಣೆ  ||೬||

**ಭಾಮಿನಿ**

ಶಶಿಮುಖಿಯರಿಂತೆಂದು ಕೃಷ್ಣನ  |
ಹೊಸ ಪರಿಯ ಲೀಲೆಯ ಯಶೋದೆಯೊ  |
ಳುಸಿರಲೆಂದೆಯ್ತರಲು ಕಾಣುತಲವರನುಪಚರಿಸಿ ||
ಬಿಸಜಲೋಚನೆ ಕುಳ್ಳಿರಿಸಿ ಮ  |
ನ್ನಿಸುತಲೇನೆಯ್ತಂದಿರೆಂದೆನೆ  |
ನಸುನಗುತಲುಸಿರಿದರು ತಮ್ಮಯ ಮನೆಯ ದುಸ್ಥಿತಿಯ        || ೧ ||

**ರಾಗ ಯರಕಲಕಾಂಭೋಜ ತ್ರಿವುಡೆತಾಳ**

ಅಮ್ಮ ಕೇಳಿಂದೇನನುಸಿರುವೆವಾವಿಂದು | ನಿಮ್ಮ ನಂದನನಾಟವ ||
ನಮ್ಮ ಮನೆಯ ಸೂರೆಗೊಂಡ ಪೇಳಲು ತೀರ | ದೊಮ್ಮೆಗೀತನ ಕಾಟವ || ೧ ||

ಕಾಣದಂದು ಬಂದು ಹಾಲುಮೊಸರನೆತ್ತಿ | ಜಾಣತನದಿ ಕುಡಿವ ||
ಮಾಣದೆ ಮತ್ತೂ ಬೆಣ್ಣೆಯ ಕದ್ದು ಮೆಲುವ ನೀ | ನ್ನಾಣೆ ಸುಳ್ಳಲ್ಲೋಡುವ   || ೨ ||

ನಿಲುಕದಂದಿ ಕಯ್ಗೆ ಮೇಲಕೇರಿಸಿ ಕಟ್ಟಿ | ನೆಲುವಿಲಿಟ್ಟರೆಯಾಡುವ ||
ಕೆಳೆಯರ ಹೆಗಲೇರಿ ತೆಗೆದು ಮೊಸ | ರಳಗೆಯನೀಡಾಡುವ || ೩ ||

ಮತ್ತೂ ಮೇಲಿಡೆ ಕಂಡು ನಿತ್ತು ಕೋಲಿನಲಿ ತಾ | ಕುತ್ತಿ ಬಾಯೊಡ್ಡುವನೆ ||
ಸುತ್ತಣ ಮಕ್ಕಳು ಸಹಿತ ಕಲ್ಲಿನಲಿಡು | ತತ್ತಿತ್ತ ಚೆಲ್ಲುವನೆ || ೪ ||

ಕುಡಿದರಲ್ಲೆಂಬುದಿಲ್ಲೊಡೆದು ಭಾಂಡವನೆಲ್ಲ | ಪುಡಿಗೆಯ್ದು ಚೆಲ್ಲುವನೆ ||
ಪಿಡಿಯಲರಿದು ನೆಲ್ಲಕುಡಿದೆಲ್ಲ ಕೆಸರಾಗಿ | ಕೆಡುವುದಿನ್ನೇನೆಂಬೆವೆ || ೫ ||

**ಕಂದ**

ಎಂದಾಡಿದ ಸತಿಯರ ಮಾತುಗ | ಳಂದವನಾಲಿಸುತಲಣುಗನಂ ಮುದ್ದಿಸುತಂ ||
ನಂದನ ಸತಿಯಂದವದಿರೊ | ಳೆಂದಳ್ ಮುದದಿಂದನೊಯ್ಯ ನೊಂದುತ್ತರಮಂ || ೧ ||

**ರಾಗ ಯರಕಲಕಾಂಭೋಜ ಅಷ್ಟತಾಳ**

ಯಾಕಮ್ಮ ದೂರುವಿರಿ | ರಂಗಯ್ಯನ | ಯಾಕಮ್ಮ ದೂರುವಿರಿ ||
ಶ್ರೀಕರಶೀಲಸಂಪನ್ನ ಮೂರ್ತಿಯನಿಂತು | ಪೋಕನೆಂದೆಂಬಿರಲ್ಲ | ನೀವೆಲ್ಲ || ೧ ||

ಸಣ್ಣವನಲ್ಲವೇನೆ | ನಿಮ್ಮಲ್ಲಿ ಬಂದು | ಬೆಣ್ಣೆಯ ಮೆಲುವನೇನೆ ||
ಕಣ್ಣ ಮರೆಯಲೀತ | ಮಿಣ್ಣನೆ ಬರುವಂತ | ಬಣ್ಣವನರಿವನೇನೆ | ಇದೇನೆ || ೨ ||

ಇಂದಿಗೆ ಹೋಗಿರಿನ್ನು | ನಾಳೆಗೆ ಬಾರ | ದಂದದಿ ಪೇಳ್ವೆ ನಾನು ||
ಬಂದವನಾರೆಂಬ ನಿಜವನರಿದುಕೊಳ್ಳಿ | ಹೊಂದದೀ ಮಾತುಗಳು | ಬಾಲನೊಳು || ೩ ||

ಹಾಲನೆರೆದರುಣ್ಣನು | ಮೊಸರನಿಕ್ಕೆ | ಬೀಳುತ್ತಳುವ ಚಿಣ್ಣನು ||
ಹಾಲುಮೊಸರ ಕದ್ದು ಮೆಲುವನೆಂಬೀ ಮಾತು | ಪೋಲಿಕೆ ಸಮನಪ್ಪುದೆ | ನೀವ್ ಬರಿದೆ || ೪ ||

**ಭಾಮಿನಿ**

ಲಲನೆಯರು ಕೇಳುತ ಯಶೋದೆಯ |
ಲಲಿತ ವಚನವನಂದು ಕೃಷ್ಣನ |
ಚೆಲುವ ಮೂರ್ತಿಯಕಂಡು ಕಂಗಳಲಪ್ಪಿ ಮೆಯ್ಮರೆದು ||
ನಿಳೆಯ ಕೆಯ್ದಲು ತೀರದೊಯ್ಯನೆ |
ಮುಳಿದು ದೂರುವ ನೆಪದಿ ಮತ್ತವ |
ರಳುಕದೆಂದರು ಗೋಪಿಯೊಡನಚ್ಯುತನ ಲೀಲೆಗಳ || ೧ ||

**ರಾಗ ಘಂಟಾರವ ಅಷ್ಟತಾಳ**

ಕೇಳಮ್ಮ ನಿನ್ನ ಬಾಲನಟ್ಟುಳಿಯನ್ನು |
ಪೇಳರಿಯೆವು ಬಾಳಲರಿಯೆವು | ತಾಳಲರಿಯೆವು ಲಾಲಿಸಿ || ೧ ||

ಚೆಣ್ಣನೆಂದೆಮ್ಮೊಳಾಡುವೆ ಇವನೆಂಥ | ಚೆಣ್ಣನೌ ಬಲು ಮಿಣ್ಣನೆಯ್ದುತ |
ಬೆಣ್ಣೆಯನು ಕದ್ದೋಡುವ || ೨ ||

ಸಣ್ಣ ಮಕ್ಕಳಿಗಿತ್ತು ತಾ ಮೆಲುತಿರ್ಪ | ಬಣ್ಣಗಾರಿಕೆಯಣ್ಣನೀತನು |
ಕಣ್ಣಿನಲಿ ನಾವ್ ಕಂಡೆವೆ || ೩ ||

ತಡೆವುದಿಲ್ಲವು ಮೆದ್ದರೆ ಮೆಲಲೀತ | ಹುಡುಗರಿಗೆ ತಾ ಕೊಡುವ ಕಪಿಗಳ |
ಗಡಣಕೀವುತ ಕೆಡಿಸುವ || ೪ ||

ಅಡಗಿಸಿಟ್ಟರೆ ಸುಡಲೀಮನೆಯವನೆಂದು | ಗಡಿಗೆ ಮಡಕೆಯನೊಡನೆ ಬಡೆಬಡೆ |
ದೊಡೆದು ಪುಡಿಪುಡಿಗೆಯ್ವನೆ || ೫ ||

ದೊರಕಲಿಲ್ಲೆಂಬ ಮುಳಿಸಿಂದ ತೊಟ್ಟಿಲ | ನುರುಳಿಚುತ ಮಲಗಿರುವ ಮಕ್ಕಳ |
ಧರೆಗೆ ಕೆಡಹಿದು ಮರುಗಿಸಿ ||೬||

ಕರುಗಳೆಲ್ಲವ ಮೊಲೆಯುಣುವರೆ ಬಿಟ್ಟು | ಒರಳೊಳುಚ್ಚೆಯನಿರದೆ ಹೊಯ್ವನು |
ತರಳರಿಂತವರಿರುವರೆ || ೭ ||

**ಕಂದ**

ತನಯನನೀಪರಿ ದೂರುವ | ವನಿತೆಯರಂ ನೋಡುತಾ ಯಶೋದೆಯು ಮತ್ತಾ ||
ಕನಕಾಂಗಿಯರೊಡನೆ ನಸು | ಮುನಿಸಿಂದಂ ನುಡಿದಳಣುಗನಂ ಮುದ್ದಿಸುತಂ || ೧ ||

**ರಾಗ ಗೌಳ ಪಂತು ಆದಿತಾಳ**

ಸಾಕು ಹರಟೆಗುಟ್ಟಬೇಡಿರೆ ಸುಮ್ಮನೆಲ್ಲರು || ಪಲ್ಲವಿ ||
ಸಾಕು ಹರಟೆಗುಟ್ಟ ಬೇಡಿ | ಕಾಕುತನದ ಮಾತನು ವಿ |
ವೇಕವಿಲ್ಲದಾಡುತಿರುವಿ | ರೇಕೆ ಪೋಗಿ ಮನೆಗೆ ಬರಿದೆ || || ಅ.ಪ ||

ವರ್ಷ ಮೂರು ತುಂಬಲಿಲ್ಲ | ತರಳ ಮಾತನಾಡಲರಿಯ |
ಬರಿದೆಯಿಲ್ಲದಿರುವ ಕಳವ ಹೊರಿಸಿ ಪೇಳ್ವಿರಿ ||
ಹೆರಲಿಲ್ಲ ನೀವಿನ್ನು ನಿಮಗೆ | ಕರುಣವೆಂತಕ್ಕು ಬಾಲರಲ್ಲಿ |
ತೆರಳಿ ಸುಮ್ಮನೆನಲು ಕೇಳಿ | ತರುಣಿಯರಿಂತೆಂದರಾಗ || ೧ ||

ನುಡಿವೆಯಮ್ಮ ನಿನ್ನ ಕಂದ | ಬೆಡಗನೇನರಿಯನೆಂದು |
ಕಡೆಗೆ ಕೇಳು ತಿಳಿಯದವನ ದುಡುಕಿನಾಟವ ||

ಹುಡುನಿಯೊಮ್ಮೆ ತಡೆಯಲವಳ | ತುಡುಕಿ ಮೊಲೆಯ ಪಿಡಿದು ಮುತ್ತ
ಕೊಡುಯೆಂದಪ್ಪಿ ತೊಡರಿಯುರುಳೆ | ಗೆಡಹಿ ಲಜ್ಜೆಗೆಡಿಸುವಾಗ ||
ಬಾಲನೇನೆ ನಿನ್ನ ಕಂದನು || ೨ ||

**ರಾಗ ಭೈರವಿ ಆದಿತಾಳ**

ಬುದ್ಧಿಯ ಹೇಳಮ್ಮ ಗೋಪಮ್ಮ ||
ಕಡೆಗು ನೀ ಮಗನ | ಮುದ್ದು ಮಾಡಿ ಕೆಡಿಸುವೆಯಮ್ಮ || ಪ ||

ಮನೆಮನೆಯ ಪೊಕ್ಕು | ಕದ್ದು ಮೆಲುವುದಾವಗುಣವಮ್ಮ ||
ಬೇಕಾದರೆಮ್ಮ | ಲಿದ್ದುದೆಲ್ಲ ತರಿಸಿಕೊಳ್ಳಮ್ಮ || ಇಂಥಾದ್ದೇ ನಮ್ಮ || ೧ ||

ನೀರಿಗೆಯ್ದುವೆಳೆಯ ಹೆಂಗಳ | ನಿಂತು ತಾನಿತ್ತ |
ಬಾರೆ ಬಾರೆಯೆಂಬ ಬಗೆಗಳ ||

ಮಾಡುತ ಸನ್ನೆ | ದೋರಿ ನಗುತ ಸರಸವಾಡುವ ||
ಮುಂದೆಯ್ದಗೊಡದೆ | ದಾರಿಯಡ್ಡಗಟ್ಟಿ ಕಾಡುವ || ಇಂಥಾದ್ದೇನಮ್ಮ || ೨ ||

ಮುಗುಳು ಮೊಲೆಗೆ ಕಯ್ಯನಿಕ್ಕುವ ||
ಕೊಡಹಲ್ಕೆ ಬಿಡದೆ | ಬಿಗಿಯಪ್ಪುತ ಬದಿಯ ಕುಕ್ಕುವ ||
ಬಲ್ಪಿಂದ ಮೊಗಕೆ | ಮೊಗವಿಟ್ಟು ಚೆಂದುಟಿಯ ಹೀರುವ ||
ಅಹಹ ನೋಡೆಂತಾ | ಸೊಗಸಾಯ್ತೆಂದು ಬೆಡಗ ಬೀರುವ || ಇಂಥಾದ್ದೇ ನಮ್ಮ || ૩ ||

ಅರಿಯದ ಕನ್ನೆವೆಣ್ಗಳನು | ಈ ರೀತಿ ಮಂಕು |
ಮರುಳು ಮಾಡಿ ಕೆಡಿಸಿ ಮನವನು ||
ಅಕೊಳ್ಳೆ ಕೃಷ್ಣ | ಬರುವನಾಡಪೋಪವೇಳೆಂದು |
ಮಲಗಿರ್ದು ನಡು | ವಿರುಳು ಕನಸಿಲೆಂಬರಿಂತೆಂದು || ಇಂಥಾದ್ದೇನಮ್ಮಾ || ೪ ||

**ಭಾಮಿನಿ**

ನಕ್ಕಳಂದಚು ಯಶೋದೆಯಾ ಹೆ |
ಮ್ಮಕ್ಕಳಾಡಿದ ನುಡಿಗಿದೇನೌ |
ಮಕ್ಕಳಾಟಿಕೆಯೊರ್ವಳಿವಳೆಂದೊರ್ವ ಹಿರಿಯಳನು ||
ಮಕ್ಕಳನು ಪಡೆದವಳು ನೀ ಬಾ |
ರಕ್ಕಯೆನುತಲಿ ಕರೆದು ಪೇಳೌ |
ತಕ್ಕ ಮಾತನೆನಲ್ಕೆ ನಗುತಿಂತೆಂದ ಳಾ ವನಿತೆ ||

**ರಾಗ ಕೇದಾರಗೌಳ ಅಷ್ಟತಾಳ**

ಕೇಳಮ್ಮ ಗೋಪಮ್ಮ ಬಾಲಕೃಷ್ಣನು ಮಾಳ್ಪ | ಲೀಲೆ ಸುಳ್ಳಲ್ಲವಮ್ಮ ||
ಭೂಲೋಕದೊಳಗುಳ್ಳ ಬಾಲಕರಂತಲ್ಲ | ಗೋಳು ಗುಟ್ಟಿಸುವನಮ್ಮ || ೧ ||

ಒಮ್ಮೆ ಸಣ್ಣವನಾಗಿ ಬರುವ ನೋಡಲಿಕೆ ಮ | ತ್ತೊಮ್ಮೆ ದೊಡ್ಡವನಾಗುವ ||
ಒಮ್ಮೆ ದಿವ್ಯಾಂಗದಿ ಮೆರೆವ ನೋಡುತಲಿ ತಾ | ನೊಮ್ಮೆ ಇದ್ದಂತಿಹನೆ || ೨ ||

ಇಲ್ಲಿ ನಿನ್ನಯ ತೊಡೆಯಲಿರ್ಪ ಬೀದಿಗ | ಳಲ್ಲಿ ಮಕ್ಕಳೊಳಾಡುವ ||
ಎಲ್ಲರ ಮನೆಯಲ್ಲಿ ಮೆಲ್ಲನ್ನೈದುವನು ಊ | ರೆಲ್ಲ ಕಾಣಿಸಿಕೊಂಬನೆ || ೩ ||

ಪೆಣ್ಮಕ್ಕಳನು ಪಿಂದಣಿಂದ ಬಂದೊಯ್ಯನೆ | ಕಣ್ಮುಚ್ಚಿ ಚುಂಬಿಪೆನೆ ||
ನುಣ್ಮೊಲೆವಿಡಿದಪ್ಪಿ ಜಾಣ್ಮೆಯ ವಿಟರಂತೆ | ಗೊಣ್ಮೊಳಗಿಸುವನಲ್ಲೆ || ೪ ||

**ಕಂದ**

ಎನುತವಳಾಡಿದ ನುಡಿಗಂ | ಮನದೊಳ್ ನಸುನಗುತ ಯಶೋದೆಯುರೆ ಸಂಶಯದಿಂ ||
ವನಿತೆಯರಿಗೆ ಹಿತಮಾಗಿಯೆ | ತನಯನ ಮೇಲ್ ಮುನಿದ ತೆರದೊಳೊಯ್ಯನೆ ನುಡಿದಳ್ || ೧ ||

**ರಾಗ ನಾದನಾಮಕ್ರಿಯೆ ಏಕತಾಳ**

ಯಾಕೊ ರಂಗಯ್ಯ ನೀ ವ್ಯಾಕುಲಪಡಿಸುವು | ದೀ ಕಾಂತೆಯರನವಿವೇಕದಲಿ ||
ಸಾಕಪ್ಪ ಬೇಡಿಂಥ ಕಾಕುತನವ ಮಾಡಿ | ಪೋಕನೆನಿಸಿಕೊಂಬುದೇಕೆಂದಳು || ೧ ||

ಪಾಲುಂಟು ಮೊಸರುಂಟು ಬಾಲ ಬೆಣ್ಣೆಗಳುಂಟು | ಪೇಳು ಬೇಕಾದರೆ ನಾನೀವೆನು ||
ಲೀಲೆಯಿಂದಲಿ ಪರರಾಲಯವನು ಪೊಕ್ಕು | ಪೋಲಿಮಾಡದಿರಿನ್ನುಮೇಲೆಂದಳು || ೨ ||

ಮಡದಿಯರನು ಮೊಲೆವಿಡಿಯೆ ಕೇಳುವರೇನೊ | ಹುಡುಗನೆಂದೊಮ್ಮೆಗೆ ತಡೆದಿರ್ಪರು ||
ಕಡೆಗೂ ನೀನಿಂತು ಮಾಡೆ ಹಿಡಿದು ತರಿಸಿ ಪೆಟ್ಟ | ಕೊಡುವೆ ನಿನ್ನನು ಹೀಗೇ ಬಿಡೆನೆಂದಳು || ೩ ||

**ವಚನ**

ಇಂತೆಂದಾ ತಾಯ ಮಾತಿಗೆ ರಂಗನುತ್ತರಂ ಕೊಟ್ಟ ಬಗೆಯದೆಂತೆನೆ :

**ರಾಗ ಪಂತುವರಾಳಿ ಪಂಚಾಗತಿ ಮಟ್ಟೆತಾಳ**

ಅಮ್ಮ ಮುನಿವೆಯೇಕೆ ತನ್ನಲಿ | ಸುಮ್ಮನಿವರು ಪೇಳ್ವ ಮಾತ |
ನೊಮ್ಮೆಯಹುದೆನುತ್ತ ಬರಿದೆ || ಯಮ್ಮ ಮುನಿವೆಯೇಕೆ ತನ್ನಲಿ || ಪಲ್ಲವಿ ||

ಹರವಿಹರವಿಯಲ್ಲಿ ತುಂಬಿ | ಸಿರುವ ಹಾಲು ಮೊಸರನೆಲ್ಲ |
ಬರಿದು ಮಾಡಿ ಕುಡಿಯಲೇನು | ಕೆರೆಯೆ ತನ್ನ ಹೊಟ್ಟೆ ನೋಡು ||
ಹುರುಡಿಗೆಂಬ ತರಳೆ ಮಾತಿದು | ಈ ನಿಜದ ನೆಲೆಯ | ನರಿವರಣ್ಣನೊಡನೆ ಕೇಳ್ವದು ||

ಇವರ ಮಾತು | ಸರಿಯೆನುತ್ತ ನುಡಿದನಾದ | ಡಿರದೆ ಕೊಲ್ಲು ಮರುಗೆ ನಾನು ||
ಅಮ್ಮ ಮುನಿವೆಯೇಕೆ ತನ್ನಲಿ || ೧ ||

ಮಗಳಿಗೀತ ಗಂಡನಕ್ಕು | ಸೊಗಸುಗಾರನೆಂದು ತನ್ನ |
ಮಗಳ ಕೂಡೆಯೆನ್ನನೆಳೆಸಿ | ಬಿಗಿವುತಪ್ಪೆನುತ್ತ ಬಿಡದೆ ||
ಮುಗುದೆಯೊಡನೆ ಪಿಡಿದು ಮಲಗಿಸಿ | ಮೂಡಿ ಬರ್ಪ |
ಮುಗುಳು ಮೊಲೆಯನೆದೆಗೆ ಮರ್ದಿಸಿ | ಯೊಲ್ಲೆನೆಂದ |
ಡಗಲಗೊಡದೆ ದಣಿಸುತೆನ್ನ | ನಗುತ ಸೊಗಸ ನೋಳ್ಪಳೀಕೆ || ಅಮ್ಮ || ೨ ||

ಪುಟ್ಟ ರನ್ನಸರವ ಮಗಳಿ | ಗಿಟ್ಟು ನೋಳ್ಪೆ ಕೊಡು ಕೊಡೆಂದು | ಗಟ್ಟಿ ಮಾಡುತಿನ್ನ ಹರಟೆ | ಗುಟ್ಟುಲಾನು ಕೊಡದೆ ಮನೆಗೆ | ತಟ್ಟನೆದ್ದು ಬರಲು ಕಂಡಳು ||
ಹಿರಿಯಳಯ್ದಿ | ಹೊಟ್ಟೆಗಿಚ್ಚಿಗಿಲ್ಲಿ ಬಂದಳು | ಇಲ್ಲದಿರುವ |
ಚೇಷ್ಟೆಗಳನು ನಿನ್ನೊಳುಸಿರಿ ಪೆಟ್ಟ ನನಗೆ ಕೊಡಿಸಬಗೆವ | ಳಮ್ಮ ಮುನಿವೆಯೇಕೆ ತನ್ನಲಿ || ೩ ||

**ಕಂದ**

ತನಯನ ಜಾಣುವೆನುಡಿಯಂ | ವನಜಾಂಬಕಿಯಾಲಿಸುತ್ತಲು ಮೋಹದೊಳಂ ||
ವಿನಯದಿ ಚುಂಬಿಸುತಪ್ಪಿದು | ವನಿತೆಯರಂ ನೋಡಿನಗು ತೊಯ್ಯನೆ ನುಡಿದಳ್

**ರಾಗ ಭೈರವಿ ಝಂಪೆತಾಳ**

ಬಾಲೆಯರು ಕೇಳಿರೌ | ಪೇಳುವಿರಿ ನೀವೆನ್ನ |
ಬಾಲಕನ ಮೇಲೆ ಪೊಸ | ಲೀಲೆಗಳನಿನಿತು || ೧ ||

ಇನ್ನು ಬಂದರೆ ಪಿಡಿದು | ತನ್ನಿ ನೀವೀತನನು |
ತನ್ನೆಡೆಗೆಯೆನುತವರ | ಮನ್ನಿಸುತಲಂದು || ೨ ||

ಮನೆಗೆ ಬೀಳ್ಗೊಡಲಾಗ | ವಿನಯದಿಂದೊಡಬಟ್ಟು |
ವನಿತೆಯರು ನಡೆಯಲಾ | ವನಜಲೋಚನನು || ೩ ||

ಅವರಿಂದ ಮುನ್ನವರ | ಭವನವನು ತಾ ಪೊಕ್ಕು |
ನವನೀತವನು ಕದ್ದು | ಸವಿವುತಿರೆ ಕಂಡು || ೪ ||

ಯುವತಿಯರು ಸಿಕ್ಕಿದನು | ತನಗೆ ಮಗುಳೆನುತ ಪಿಡಿ |
ದವಕಿದರು ತಮತಮ್ಮ | ಭವನದೊಳಗಾಗ || ೫ ||

**ವಾರ್ಧಿಕ**

ಅವನೀಶ ಕೇಳ್ ಕೌತುಕವನಿಂತು ನಾರಿಯರ್ |
ತವತವಗೆ ಕಯ್ ಬಾಯ್ಗೆಲಿಪ್ತಮಾಗಿರುವಂತ |
ನವನೀತಗೂಡಿ ಪಿಡಿದಾ ಯಶೋದೆಗೆ ತೋರ್ಪೆವೆಂದು ಪೊರಟಾಲಯವನು ||
ಅವಳಲಿಹುದಿವಳರಿಯದಿವಳಲಿಹುದವಳರಿಯ |
ಳವರೆಲ್ಲರಿಂತೆತ್ತಿಕೊಂಡು ಬರೆ ಮಾತೆಯಂ |
ಕವನೇರಿ ಕುಳ್ಳಿರ್ಪನಂ ಕಂಡು ಬರಿಗಯ್ಯೊಳಬಲೆಯರ್ ಬೆರಗಾದರು ‖ ೧ ‖

**ಭಾಮಿನಿ**

ಬಾಲತನದಚ್ಯುತನ ಮಾಯದ |
ಲೀಲೆಗುರೆ ಬೆರಗಾಗಿ ಲಜ್ಜಿಸು |
ತಾಲಯಕೆ ಗಮಿಸಿದರು ಮೌನದೊಳಿರದೆ ಗೋಪಿಯರು ||
ಲೋಲನೇತ್ರೆ ಯಶೋದೆ ತನ್ನಯ |
ಬಾಲಕಗೆ ಮೊಲೆಯೂಡಿ ಸಂತಸ |
ದಾಳುತಪ್ಪುತ ಚುಂಬಿಸುತ ಮುದ್ದಿಸಿದಳಡಿಗಡಿಗೆ || ೧ ‖

**ವಾರ್ಧಿಕ**

ಮತ್ತೊಂದು ದಿನವಣುಗನೊರಗಿರಲ್ ಕಾಣುತ್ತ |
ಮತ್ತಗಾಮಿನಿ ಮೊಸರ ಕಡೆದಳೊಯ್ಯನೆ ಕುವರ |
ನುತ್ತಮಗುಣಂಗಳಂ ಪಾಡುತಾನಂದ ರಸವೆತ್ತತಿ ವಿಲಾಸದಿಂದ ||
ಇತ್ತಲಚ್ಯುತನೆದ್ದು ಮೆಯ್ಮುರಿದು ಕಣ್ದೆರೆದು |
ನಿತ್ತಾಲಿಸುತಲವ್ವೆಯಿಪ್ಪೆಡೆಗೆ ಬಂದೊಡನ |
ಳುತ್ತಯ್ದೆ ಕಡೆವ ಕಡೆಗೋಲ್ ಪಿಡಿದು ಚಾಲುವರಿದಮ್ಮ ಮೊಲೆಯೂಡೆಂದನು ‖ ೧ ‖

**ರಾಗ ಗೌಳಪಂತು ಆದಿತಾಳ**

ಅಮ್ಮಿಯ ಕೊಡೆ | ಅಮ್ಮ | ಅಮ್ಮಿಯ ಕೊಡೆ ||
ಅಮ್ಮಯ್ಯ ನೀ ಮೊಸರಕಡೆವದಮ್ಮಯ್ಯ ಬಿಡೆ ‖ ಪ ‖

ಎತ್ತಿಕೊಳ್ಳೆ ಮೊದಲು ತನ್ನ | ಮತ್ತೆ ಕಡೆಯಬಹುದು ಮೊಸರ |
ಅತ್ತು ನಾ ಚಾಲ್ವರಿದೆನಲ್ಲೆ | ಹೆತ್ತ ಹೊಟ್ಟೆ ಮರುಗದಲ್ಲೆ ‖ ೧ ‖

ಮಕ್ಕಳನಳಿಸುವುದು ಹೆ | ಮ್ಮಕ್ಕಳಿಗೆ ನಡತೆಯೇನೆ |
ರಕ್ಕಸಿಯಂತೇಕೆ ಮನಸು | ಕಕ್ಕಸವಾಯ್ತಮ್ಮ ನಿನಗೆ ‖ ೨ ‖

ತುಡುವೆದ್ದಿದೆ ನಿಮಿಷವನ್ನು | ತಡೆವನಲ್ಲ ಕಡೆಗು ಮೊಲೆಯ |
ಕೊಡದಿರಯ್ಯಗುಸಿರಿ ಪೆಟ್ಟ | ಕೊಡಿಸುವೆ ನಾನೊಡನೆ ಮತ್ತೆ ‖ ೩ ‖

**ಭಾಮಿನಿ**

ಎಂದಳುವ ಕುವರನ ತೊದಲ್ನುಡಿ |
ಯಂದವನು ಕೇಳುತ್ತ ನಗುತಾ |
ನಂದಗೋಪಿ ನಿಜಾರ್ಭಕನನೊಲಿದೆತ್ತಿ ಮುದ್ದಿಸುತ ||
ಚಂದದಲಿ ಮೊಲೆಯೂಡಲೊಲೆಯಲಿ |
ಕಂದಲದ ಹಾಲುಕ್ಕಿ ಸೂಸಲು |
ನಂದನನನಿಳೆಗಿಕ್ಕಿ ತೋಡಿದಳಬಲೆ ವೇಗದಲಿ ‖ ೧ ‖

**ವಾರ್ಧಿಕ**

ಇತ್ತಲುಂ ಹರಿ ಕನಲ್ದಳುತೌಡುಗಚ್ಚಿ ಮೊಲೆ |
ಯಿತ್ತು ತೃಪ್ತಿಯ ನಯ್ದಿಸದೆ ಪೋದಳೆಂದು ಖತಿ |
ವೆತ್ತೆಡಬಲನನೀಕ್ಷಿಸುತಲಿರ್ದುದೊಂದೆಸೆವ ಕಲ್ಲದಂ ಸತ್ತ್ವದಿಂದ ||
ಪೊತ್ತು ತಂದಾಮರನ ಭಾಜನದಮೇಲ್ ಭರದೊ |
ಳೊತ್ತಿಹಾಕಿದರೊಡೆದು ಹೊಳೆಯಾದುದೊಳಗೆ ಜಾ |
ರುತ್ತೇಳುತೋಡಿದಂ ಬೆಣ್ಣೆಗೊಂಡಯ್ದೆ ನೆರೆಮನೆಗಾಗಿ ವಹಿಲದಿಂದ ‖ ೧ ‖

**ರಾಗ ಮಾರವಿ ಆದಿತಾಳ**

ಇತ್ತ ಯಶೋದೆಯಣುಗ ಮುಳಿದಳುವನೆ | ನುತ್ತಲಿ ನಡೆತಂದು ||
ನಿತ್ತೀಕ್ಷಿಸಿದಳು ಮಗನಾಟವ ಖತಿ | ವೆತ್ತಿ ಬೆರಗಿಲಂದು ‖ ೧ ‖

ಎಲ್ಲಿಗೆ ಪೋದನು ಕಳ್ಳನೆನುತ ತಾ | ನಿಲ್ಲದೆ  ನಡೆತಂದು ||
ಮೆಲ್ಲನೆ ಪಚ್ಚೆವಿಡಿದು ಬಂದಳು ಸ | ದ್ದಿಲ್ಲದೆ ಮರೆಗೊಂಡು ‖ ೨ ‖

ದೂರದಲಿರೆ ಮಾತೆಯ ಜಾಣುವೆಗಳ | ನೋರೆಯಲೀಕ್ಷಿಸುತ ||
ಏರಿದು ಮರದೊರಳನು ಕುಳಿತೋಡಲು | ದಾರಿಯ ಗುತ್ತಿಡುತ ‖ ೩ ‖

ಕೋಡಗಗಳ ಕರೆದೊಯ್ಯನೆ ಬೆಣ್ಣೆಯ | ನೀಡುತ ತಾ ಮೆಲುತ ||
ಆಡುವ ಮಕ್ಕಳಿಗೀವುತ ಹಿಂದಕೆ | ನೋಡುತ ನಸುನಗುತ ‖ ೪ ‖

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಹತ್ತಿರಕೆ ಸೆಳೆವಿಡಿದು ಬಂದಳೆ | ನುತ್ತರಿದು ಮರದೊರಳಿನಿಂದಿಳಿ |
ವುತ್ತಲೋಡುವ ನಂದನನ ಬೆಂ | ಬತ್ತುತಾಗ ||
ಬೆರಸಿದಳು ಸೆಳೆವಿಡಿದು ನಿಲು ನಿಲು | ದುರುಳಯೆನುತಲನಂತವೇದಗ |
ಳರಸಿ ಕಾಣದಪಾರಮಹಿಮನ | ಸರಸಿಜಾಕ್ಷಿ  ‖ ೨ ‖

ಚಲಕುಚದ್ವಯಭಾರದಲಿ ನಡು | ವಳುಕುತುಸಿರಿಡುತಟ್ಟುವವ್ವೆಯ |
ಬಳಲಿಕೆಯ ಕಂಡೋಡುವುದನುಳಿ | ದಳುತನಿಂದ || ೩ ||

ಒಡನೆ ಮೊಗವನು ಮುಚ್ಚಿ ಕಯ್ವೆರ | ಳೆಡೆಯಲೀಕ್ಷಿಸುತಂಜಿದೋಲಿರೆ |
ಬೆಡಗಬೀರುವ ಮಗನ ಕಂಡಾ | ಮಡದಿ ನಗುತ || ೪ ||

**ಭಾಮಿನಿ**

ಬೆದರುವನು ಮಗನೆಂದು ಕೊಲಲರಿ |
ಯದೆ ಯಶೋದೆ ಕುಚೇಷ್ಟನಿಗೆತ |
ಕ್ಕುದನು ಮಾಳ್ಪೆನು ಕಟ್ಟಿಹಾಕುವೆನೆಂದು ನೇಣೊಂದ ||
ಸದನದಿಂತರಿಸಿದು ನಿಜಾತ್ಮಜ |
ನುದರವನು ಬಂಧಿಸಲಿಕಿಬ್ಬೆರ |
ಳೊದಗದಿರೆ ಮೇಣೊಂದ ಸಂದಿಸಿದಳು ಸರೋಜಾಕ್ಷಿ || ೧ ||

**ವಾರ್ಧಿಕ**

ಅದು ಸಾಲದಿರೆ ಜೋಡಿಸಿದಳೊಂದು ನೇಣನಂ |
ತದು ನೆರೆಯದಿರೆ ಬಂಧಿಸಿದಳೊಂದು ನೇಣನಂ |
ತದುವೆ ಮೊದಲಂದದೊಳಿರಲ್ಕೊಂದು ಮತ್ತೊಂದು ಮಗುಳೊಂದು ಮೇಣೊಂದನು ||
ಸುದತಿಯಿಂತಾಲಯದೊಳಿರ್ಪನೇಣೆಲ್ಲಮಂ |
ಒದಗಿನಿಂತರಿಸಿ ಕಟ್ಟೆದರಯ್ದದದಿರಲೂರ |
ಸದನಂಗಳೊಳಗುಳ್ಳ ನೇಣ್ಗಳಡಗಿದವಜಾಂಡೋದರನ ಕಟಿತಟದೊಳು || ೧ ||

ತೊಟ್ಟಿಲಿಳಿದವು ನೆಲಕೆ ವಸನಂಗಳಂ ಬಿಗಿದು |
ಕಟ್ಟಿರ್ದ ದಿಂಡನುಂ ಬಿಡಿಸಿದರ್ ಪಶುಗಳಂ |
ಬಿಟ್ಟರಾನೇಣ್ಗಳೆಲ್ಲವು ಬಂದದಯ್ದಡಿನ್ನೇನೆಂಬೆನಚ್ಚರಿಯನು ||
ನಿಟ್ಟಿಸಿ ಯಶೋದೆ ಬೆರಗಾಗುತಿರೆ ಬಳಲಿ ಬುಸು |
ಗುಟ್ಟುತಿರೆ ತಾಯ್ ದಣಿದಳೆಂಬ ಕಾರುಣ್ಯದಿಂ |
ಕಟ್ಟುವಡೆದಂ ದಯಾನಿಧಿಯೊಂದೆ ನೇಣಿಂದಲರಸ ಕೇಳ್ ಕೌತುಕವನು || ೨ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅರಸ ಕೇಳೇನೆಂಬೆ ನೇಣಿನ | ಗಿರಿಗಳೆಂಬಂದದಲಿ ರಾಶಿಗ |
ಳಿರಲು ಕಂಡಾಶ್ಚರ್ಯವಡುತಾ | ತರುಣಿಯಂದು || ೧ ||

ತೆಗೆಸಿ ನೇಣ್ಗಳನೆಲ್ಲವನು ಕೇಳ್ | ಮಗನೆ ಚೇಷ್ಟೆಯನಿನ್ನು ಮಾಡುವ |
ಬಗೆಯ ನೋಳ್ಪೆನು ತಾನೆನುತ ನಸು | ನಗುತಲಾಗ || ೨ ||

ಹರಿಯ ಮರದೊರಳಿಂಗೆ ಕಟ್ಟಿದು | ಹರುಷದಲಿ ಮನೆಗೆಲಸಕಾ ಸತಿ |
ಭರದಿ ಪೋಗಲು ನೆನೆದನೊಂದ | ಚ್ಚರಿಯ ಬಗೆಯ || ೩ ||

**ಭಾಮಿನಿ**

ನಾರದನ ಶಾಪದಲಿ ಮುನ್ನ ಕು |
ಬೇರನಾತ್ಮಜರೀರ್ವರರ್ಜುನ |
ಭೂರುಹಗಳಾಗಿರ್ದರಭ್ರವ ತುಡುಕಿ ಜೋಡಿನಲಿ ||
ಶ್ರೀರಮಣನದನರಿದು ಶಾಪನಿ |
ವಾರಣವ ನಾ ಮಾಳ್ಪೆ ಧನದಕು |
ಮಾರರಿಂಗೆನುತೊರಳ ಸೆಳೆವುತ ಬಂದನಾಯೆಡೆಗೆ || ೧ ||

ಅವಳಿ ಮತ್ತಿಗಳೆಡೆಯಲಾ ಮಾ |
ಧವನು ಪೊಕ್ಕಡೆ ಸಿಕ್ಕಿದೊರಳನು |
ತವಕ ಮಿಗುತೆಳೆಯಲ್ಕೆ ನಿರಿ ನಿಳಿ ನಿಟಿಲು ನಿಟಿಲೆನುತ ||
ಭುವನದಂತ್ಯದ ಸಿಡಿಲ ರವದಂ |
ತವನಿಗೊರಗಲು ಮರಗಳಾ ವೈ |
ಶ್ರವಣ ತನುಜರು ಕಂಡರಚ್ಯುತನಮಲಮೂರ್ತಿಯನು || ೨ ||

**ವಾರ್ಧಿಕ**

ಇಂದಿರಾನಾಥನಂ ಈಶಸಂಪ್ರೀತನಂ |
ಸುಂದರಾಕಾರನಂ ಸುಮನಸೋದ್ಧಾರನಂ |
ಚಂದನವಿಲೇಪನಂ ಚಾರುಚಿದ್ರೂಪನಂ ಬಾಲನಂ ಗೋಪಾಲನಂ ||
ನಂದಸುಕುಮಾರನಂ ನವನೀತಚೋರನಂ |
ಕುಂದಸಮರದನನಂ ಕುಮುದಾಪ್ತವದನನಂ |
ಕಂಧರಾಭಾಂಗನಂ ಕಸ್ತೂರಿರಂಗನಂ ಕಂಡವರ್ ಪೊಡಮಟ್ಟರು || ೧ ||

**ರಾಗ ಕಾಂಭೋಜ ಝಂಪೆತಾಳ**

ಎರಗಿ ನುತಿಗೆಯ್ದು ನಳಕೂಬರಮಣಿಗ್ರೀವ | ರಿರವ ಕಂಡಚ್ಯುತನು ಮುದದಿ ||
ಚಿರಕಾಲ ಬಳಲಿದಿರಿ ಸುಖದೊಳಿಹುದಿನ್ನೆನುತ | ಪರಸಿ ಕಳುಹಿದನು ಕೃಪೆಯಿಂದ || ೧ ||

ಇತ್ತ ನಂದಾದಿಗೋಪರು ಕೇಳ್ದು ಭೀತಿ ತಾ | ಳುತ್ತಿದೇನುತ್ಪಾತಮೆನುತ ||
ಹತ್ತಿರಕೆ ಬಂದು ನೋಡಿದರಿಳೆಗೆ ಕೆಡೆದವಳಿ | ಮತ್ತಿಯ ಮರಂಗಳನು ಭರದಿ || ೨ ||

ತರಳನದರೆಡೆಯೊಳಾಮರದೊರಳನೆಳೆವುತ್ತ | ಲಿರೆ ಕಂಡು ನಂದನುರು ಭಯದಿ ||
ಮುರಿದುವೇಕೀ ತರುಗಳಣುಗನಿದರಡಿಯಾಗ | ದಿರುವುದಿದು ಪುಣ್ಯವೆನುತಿರ್ದ || ೩ ||

ಒರಳ ಸಳೆವುತ ಕೃಷ್ಣ ಬರೆಸಿಲುಕಿತದರೆಡೆಯೊ | ಳಿರದೆ ಮತ್ತೆಳೆಯೆ ಬುಡಸಹಿತ ||
ಮುರಿದವೀ ಮರಗಳಾವ್ ಕಂಡೆವೆನುತಾಡುತಿಹ | ತರಳರುಸಿರಲು ಕೇಳ್ದನಾಗ || ೪ ||

ಲಲನೆಯನು ಕರೆದೆಲೆಗೆ ಪಾಪಿ ನೀ ನಂದನನ | ಕೊಲಲೆಳಸಿ ಬಂಧಿಸಿದೆಯೆನುತ ||
ಮುಳಿವುತುರೆ ಬಯ್ದು ಬಾಲನನೆತ್ತಿ ಮುದ್ದಿಸುತ | ಉಳಿಸಿದನು ದೇವರೆನುತಿರ್ದ || ೫ ||

**ವಾರ್ಧಿಕ**

ನಂದನಿಂತೆನುತತುಳ ಮೋಹದಿಂದ್ಯೆದೆ ನಿಜ |
ನಂದನನಪ್ಪಿ ಮುದ್ದಿಸಿ ಚುಂಬಿಸುತ್ತಲಾ |
ನಂದಪಡುತೆಂದನುತ್ಪಾತಂಗಳಹವೀರಬೃಹದ್ವನದೊಳಿನ್ನಿರ್ದೊಡೆ ||
ಕಂದನಿಗೆ ಲೇಸಾಗದದರಿಂದಲೆಮಗಿರ |
ಲ್ಕಂದಮಲ್ಲೀ ಸ್ಥಳಂ ನಡೆವ ವೃಂದಾವನ |
ಕ್ಕೆಂದನುಜರಟ್ಟುಳಿಗಳಾಗದಲ್ಲಿಗೆ ಪೋಪೆವೆಂದೂರ್ಗೆ ಸಾರಿಸಿದನು || ೧ ||

ಕೇಳುತವೆ ಗೋಪಾಲಕರ್ ತಮ್ಮ ತಮ್ಮ ಪಶು |
ಜಾಲದೊಡನಯ್ದಿದರ್ ಸರಕಿಗುರು ಭಂಡಿಗಳ್ |
ಸಾಲಾಗಿ ನಡೆವುತಿರೆ ನಂದಗೋಪಂ ಕುಮಾರರ್ವೆರಸುತರವ ಕೂಡೆ ||
ಲೀಲೆಯಿಂದಯ್ದಿದಂ ವೃಂದಾವನಕ್ಕೆ ನ |
ವ್ಯಾಲಯಗಳಾದವೆಲ್ಲರಿಗಲ್ಲಿಯನುದಿನಂ |
ಬಾಲರಂ ಸಲಹುತ್ತ ನಂದನಾನಂದದಿಂದಿರುತಿರ್ದನುತ್ಸಹದೊಳು || ೨ ||

ತರವಿಡಿದ ತರುಗಳಿಂ ಕಳಪಿಕಸ್ವರಗಳಿಂ |
ಸುರುಚಿರದ ಶಿಲೆಗಳಿಂ ಪೊಳೆವ ತಳಿರೆಲೆಗಳಿಂ |
ಪರಿವುತಿಹ ಜಲಗಳಿಂ ತನುವೆತ್ತ ನೆಲಗಳಿಂ ಕೋಮಲಿತ ಲತೆಗಳಿಂದ ||
ಪರಿಮಳಿಪೆಲರ್ಗಳಿಂ ಕಂಪೆಸೆವಲರ್ಗಳಿಂ |
ದರಗಿಳಿಯ ಸೊಲ್ಗಳಿಂ ಪಸುರೆಲೆಯ ಪುಲ್ಗಳಿಂ |
ಸರಸಿಜಸುಮಾಳಿಯಿಂ ನೆರೆದಿಹ ಮದಾಳಿಯಿಂ ಬೃಂದಾವನಂ ಮೆರೆದುದು || ೩ ||

ಅರಸ ಕೇಳ್ ಗೋವರ್ಧನಾಚಲದ ಪಾರ್ಶ್ವದೊಳ್ |
ಪರಿವ ಯಮುನಾಕೂಲದೊಳ್ ರಾಮಕೃಷ್ಣರುರು |
ತರವಿನೋದಂಗಳಿಂ ತುರುಗಾಯಿತನದೊಳಾ ಗೋಪಾಲಬಾಲರೊಡನೆ ||
ಪರಿಪರಿಯ ಲೀಲೆಯಿಂದಾಡುತನವರತ ಮಿಂ |
ತಿರೆ ಕಂಸನಾಜ್ಞೆಯಿಂದಯ್ತಂದ ವತ್ಸನಂ |
ಮುರಿದು ಬಕನಂ ಕೊಂದಘಾಸುರನ ಮುರಿದಚ್ಯುತಂ ಮುದದೊಳಿರುತಿರ್ದನು || ೪ ||

ವನಜಭವನೊಮ್ಮೆ ನೋಡುವೆನಿವನ ನರಲೀಲೆ |
ಯನುವನೆಂದಾ ಗೋಪಬಾಲರಂ ಗೋವುಗಳ |

ನನಿತುವನಡಂಗಿಸಲದಂ ತಿಳಿವುತಚ್ಯುತಂ ಕಪಟದಿಂ ಮುನ್ನಿನಂತೆ ||
ಎನಿತುಗೋವಳರು ಗೋವುಗಳಿರ್ದವೆಂದಿನವೊ |
ಲನಿತುಮಂ ನಿರ್ಮಿಸಿದು ವರ್ಷಪರಿಯಂತಿರಲ್ |
ಮನದೊಳಜನಂಜುತಡಗಿಸಿದುದಂ ತಂದೀಯಲರಿಯದಡಿಗೆರಗಿರ್ದನು || ೫ ||

ದಂಡದಂತೆರಗಿರ್ಪ ಕಮಲಜನ ಭಾವಮಂ |
ಕಂಡು ಕರುಣದೊಳಯ್ದೆ ನಿರ್ಮಿಸಿದ ಗೋವುಗಳ |
ತಂಡಮಂ ಗೋಪರಂ ತನ್ನ ತೇಜದೊಳಡಗಿಸುತ್ತಡಗೆಡದ ಮಗನನು ||
ಮಂಡೆವಿಡಿದೆತ್ತುತಂಜದಿರೆಂದು ಸಂತಯಿಸಿ |
ಪುಂಡರೀಕಾಕ್ಷನವನಂ ಕಳುಹಿ ಮೊದಲ ತುರು |
ವಿಂಡನುಂ ಗೋಪಾಲ ಬಾಲಕರನೊಡಗೊಂಡು ಗೋಕುಲಕೆ ನಡೆತಂದನು ||೬||

ತಾಳವನಮಂ ಮುರಿದು ಗಾರ್ದಭಾಕೃತಿಯೊಳಿಹ |
ಖೂಳಧೇನುಕ ಮಡುಹಿ ವಿಷದ ಮಡುವಂ ಕಲಕಿ |
ಕಾಳಿಯನ ಪೆಡೆಮೆಟ್ಟಿ ಕುಣಿದಂಬುನಿಧಿಗಟ್ಟಿ ಕಾಳಿಂದಿಯಿಂದಲಾಗ ||
ಕಾಳಗಿಚ್ಚನು ನುಂಗಿ ಗೋಗೋಪಜಾಲಮಂ |
ಪಾಲನಂಗೆಯ್ದಣ್ಣನಿಂದಾ ಪ್ರಲಂಬನಂ |
ಕಾಲಗಾಣಿಸಿದು ನರಲೀಲೆಯಿಂದಚ್ಯುತಂ ಗೋಕುಲದೊಳೆಸೆದಿರ್ದನು || ೭ ||

ಇಂತಾಡುತಿರುತಿರಲ್ ಗೋಪರೆಳೆವೆಣ್ಗಳುಂ |
ಕಂತುಜನಕನ ಚೆಲ್ವ ಮೂರ್ತಿಯಂ ಕಂಡು ತ |
ಮ್ಮಂತರಂಗದಿ ಮರುಳ್ಗೊಂಡಂಗಸಂಗಮಂ ನಿಚ್ಚಮಂ ಬಯಸಿ ಬಯಸಿ ||
ಸಂತಾಪದಿಂ ಕುದಿವುತನವರತಮೆಲ್ಲರುಂ |
ಭ್ರಾಂತಿಯೋಗದೊಳಚ್ಯುತನ ಗುಣಗಣಂಗಳಂ |
ತಂತಮ್ಮ ಗೃಹಕೃತ್ಯಮಂ ಮರೆತು ಪಾಡುತುರೆ ಸಂತಸಂಪಡುತಿರ್ದರು || ೮ ||

ಕೆಳೆಯರೊಡನಾಡುವಂ ಕರೆದೊಟ್ಟುಗೂಡುವಂ |
ಕೊಳಲೊಳುರೆ ಪಾಡುವಂ ಕುಣಿದು ನಲಿದಾಡುವಂ |
ಸಲೆ ಸೊಗಸುಮಾಡುವಂ ಸತಿಯರಂ ನೋಡುವಂ ರಂಗನರೆಗಂಗಳಿಂದ ||
ಲಲನೆಯರ್ ಬಾಡುವರ್ ಬಳಲಿ ನಲಿದಾಡುವರ್ |
ನಿಲುನಿಲುಕಿ ನೋಡುವರ್ ನೆರೆದೊಡನೆ ಪಾಡುವರ್ |
ಚೆಲುವಿಕೆಯನಾಡುವರ್ ದೇವರೊಳ್ ಬೇಡುವರ್ ಕೃಷ್ಣನಾಲಿಂಗನವನು || ೯ ||

**ಭಾಮಿನಿ**

ಲಲನೆಯರು ತಾವಿಂತು ಕೃಷ್ಣನ |
ಚೆಲುವ ಮೂರ್ತಿಯ ಸಂಗಸುಖವೆಮ |
ಗಳವಡುವುದೆಂತೆನುತ ನಿಚ್ಚವು ಬಯಸಿ ಮನದೊಳಗೆ ||

ಮಳಲ ಗೌರಿಯ ಮಾಡಿ ಯಮುನಾ |
ಪುಳಿನದಲಿ ಪೂಜಿಸಿ ಮಹಾವ್ರತ |
ಫಲವಪಡೆವೆವೆನುತ್ತ ನಿಶ್ಚಯಿಸಿದರು ತಮ್ಮೊಳಗೆ ‖ ೧ ||

**ಕಂದ**

ಎಂದಾ ಸತಿಯರ್ ತಮ್ಮೊಳ | ಗೊಂದೇ ಮತದಿಂದಮೆಲ್ಲರೊಡಬಟ್ಟಾಗಳ್ ||
ಚಂದದಿ ಗೌರಿಯನರ್ಚಿಸ | ಲೆಂದಯ್ದಿದರೊಬ್ಬರೊಬ್ಬರಂ ಕರೆವುತ್ತಂ ‖ ೧ ‖

**ರಾಗ ಘಂಟಾರವ ಆದಿತಾಳ**

ಬಾರಮ್ಮ ಸುಪ್ರವೀಣೆ | ಕಾಳಿಂದಿಯ | ತೀರಕಯ್ದುವ ಕಾಣೆ ‖ ಪ ‖

ಜಲಜಾತನೇತ್ರೆ ಬಾರೆ | ಸುಂದರಿ ಬಾರೆ | ಸುಲಲಿತಗಾತ್ರೆ ಬಾರೆ ||
ಕಳೆವೆತ್ತ ಕನ್ನೆ ಬಾ ಕಾಂತೆ ಸಂಪನ್ನೆ ಬಾ | ಚೆಲುವಿನ ಚೆನ್ನೆ ಬಾರೆ ವಯ್ಯಾರೆ ‖ ೧ ‖

ಅರಸಿನೆಣ್ಣೆಯನು ಕೊಂಡು | ನೋಹಿಗೆಬಲ್ಲ | ಹಿರಿಯ ಬ್ರಾಹ್ಮಣನ ಕಂಡು ||
ತರುಣಿಯನೊಡಗೊಂಡು ಬರಹೇಳಿ ಕರಕೊಂಡು | ನೆರೆದೆಲ್ಲ ಪೋಪೆವೇನೆ ತಡವೇನೆ ‖ ೨ ‖

ಮುಪ್ಪಿನ ಮುತ್ತಯ್ದೆಗೆ | ಬಾಯನ ಕೊಟ್ಟು | ವಪ್ಪಪಡಿಸಿದ ಮೆಯ್ಗೆ |
ಅಪ್ಪ ಮಂಡಿಗೆ ಹಾಲು ತುಪ್ಪಸಕ್ಕರೆಯಿಕ್ಕಿ | ಕುಪ್ಪಸವನು ಕೊಡುವ ಪೊಡಮಡುವ ‖ ೩ ‖

**ವಾರ್ಧಿಕ**

ಎನುತಲಾ ನೀರೆಯರ್ ನೆರೆದು ಶೃಂಗಾರೆಯರ್ |
ಕನಕನಿಭಗಾತ್ರೆಯರ್ ಕಾಮಶರನೇತ್ರೆಯರ್ |
ಘನತರನಿತಂಬೆಯರ್ ಗಮನದಿ ವಿಳಂಬೆಯರ್ ಭೃಂಗನಿಭಕುಂತಳೆಯರು ‖

ವನಜನಿಭವದನೆಯರ್ ಕುಂದೇಭರದನೆಯರ್ |
ಜಯಮನೋಲ್ಲಾಸೆಯರ್ ಚಂಪಕಸುನಾಸೆಯರ್ |
ವಿನಯಗುಣ ಶೀಲೆಯರ್ ಗೋಪಾಲಬಾಲೆಯರ್ ಮುದದೊಳಂದಯ್ತಂದರು ‖ ೧ ‖

**ರಾಗ ಮಾರವಿ ಏಕತಾಳ**

ತರುಣಿಯರಿಂದೀಪರಿಯಲಿ ಗೌರಿಯ | ಚರಣವನರ್ಚಿಪ ಭರವಸದಲಿ ಪರಿ |
ಪರಿಯ ವಸ್ತುಚಯವೆರಸುತ್ತೆಲ್ಲರು | ನೆರೆದು ಪಾಡುತ ಘನ ಹರುಷದೊಳೊಲಿದು | ವೇಗದಿಂದ ‖ ೧ ‖

ಬಂದೆಲ್ಲರು ಕಾಳಿಂದಿಯ ತೀರದಿ | ನಿಂದವನೀಸುರರೆಂದ ವಿಧಿಗಳಲಿ |
ಮಿಂದು ಮಡಿಯನುಟ್ಟಂದದ ಭೂಷಣ | ದಿಂದ ರಚಿಸುತಾನಂದದೊಳಾಗ | ವೇಗದಿಂದ ‖ ೨ ‖

ಹಲವು ವಿಚಿತ್ರದ ಚೆಲುವಿನ ಪುಷ್ಪಾ | ವಳಿಯಲಿ ಮಂಟಪಗಳನು ರಚಿಸಿ ನು |
ಣ್ಮಳಲಲಿ ಗೌರಿಯನೊಲಿದರ್ಚಿಸಿ ದ್ವಿಜ | ಲಲನೆಯರಂದತಿವೇಗದಿಂದ | ವೇಗದಿಂದ || ೩ ||

**ಭಾಮಿನಿ**

ಲಲನೆಯರು ವಿಪ್ರೋಕ್ತದಲಿ ಪರಿ |
ಮಳ ಸುಗಂಧಾಕ್ಷತೆ ಸುಪುಷ್ಪಾಂ |
ಜಲಿಗಳಿಂದರ್ಚಿಸಿದು ದೇವಿಯನಧಿಕಭಕ್ತಿಯಲಿ ||
ಬಳಸುತೆಲ್ಲರು ಧೂಪದೀಪವ |
ಸಲಿಸೆ ನೈವೇದ್ಯವ ಸಮರ್ಪಿಸಿ |
ಬೆಳಗಿದರು ನೀರಾಜನವ ತಾಂಬೂಲದೊತ್ತಿನಲಿ || ೧ ||

**ರಾಗ ನಾದನಾಮಕ್ರಿಯೆ ತ್ರಿವುಡೆತಾಳ**

ಮಂಗಳ ಶ್ರೀಗೌರೀದೇವಿಗೆ ಮಹಾ | ಲಿಂಗನರ್ಧಾಂಗಿಗಾರತಿಯೆತ್ತಿರೆ || ಪಲ್ಲವಿ ||

ಮದಗಜಗಮನೆಗೆ ಮೌಕ್ತಿಕರದನೆಗೆ | ಮಧುಕೈಟಭಾಂತಕಿ ಮಂಗಲೆಗೆ ||
ಮದನನ ಪೋಷೆಗೆ ಮೃಗಮದಭೂಷೆಗೆ | ಮಧುರವಾಣಿಯರಾರತಿಯೆತ್ತಿರೆ || ೨ ||

ಅಂಬುಜನೇತ್ರೆಗೆ ಅಮರೇಂದ್ರಸ್ತೋತ್ರೆಗೆ | ಶುಂಭಸಂಹಾರೆ ಸುಂದರರೂಪೆಗೆ ||
ಕುಂಭಕುಚೆಗೆ ಕಂಬುಕಂಠೆಗೆ ತ್ರೈಜಗ | ದಾಂಬೆಮುಕಾಂಬೆಗಾರತಿಯೆತ್ತಿರೆ || ೩ ||

ಸುರನುತಚರಣೆಗೆ ಸುರುಚಿರಾಭರಣೆಗೆ | ಕರುಣಾಕರೆಕಾಮಿತದಾತೆಗೆ ||
ಗಿರಿರಾಜಜಾತೆಗೆ ಗಾನಸಂಪ್ರೀತೆಗೆ | ಪರಮೇಶ್ವರಿಗಾರತಿಯೆತ್ತಿರೆ || ४ ||

**ಭಾಮಿನಿ**

ತರುಣಿಯರು ಪಾಡುತಲಿ ವರಕ |
ರ್ಪೂರದ ಆರತಿಯೊಳಗೆ ಪುಷ್ಪವ |
ಚರಣಕರ್ಪಿಸಿ ನಮಿಸಿ ದೇವಿಗೆ ಭಕ್ತಿಭಾವದಲಿ ||
ಕರೆದು ವಿಪ್ರರ ಮಿಥುನಗಳನಾ |
ದರಿಸಿ ವಾಯನವಿತ್ತು ವಸ್ತ್ರಾ |
ಭರಣದಕ್ಷಿಣೆಗಳಲಿ ಮನ್ನಿಸಿದರು ವಿನೋದದಲಿ || ೧ ||

**ಕಂದ**

ಲಲನೆಯಂದಂಬಿಕೆಗಂ | ಬಲವಂದಡಿಗೆರಗಿ ಮಗುಳೆ ಮುಕುಳಿತ ಕರದಿಂ ||
ನಲವಿಂ ತಂತಮ್ಮ ಮನೋರಥ | ದೊಲವಂ ಮಿಗೆ ಬೇಡುತಿರ್ದರತಿ ಭಕ್ತಿಯೊಳಂ || ೧ ||

**ರಾಗ ಭೈರವಿ ಝಂಪೆತಾಳ**

ಲಾಲಿಸೌ ಭೂಲೋಕ | ಪಾಲೆ ಮೌಕ್ತಿಕಮಾಲೆ ||
ಲೋಲಲೋಚನೆ ಚಾರು | ಶೀಲೆ ಸುಕಪೋಲೆ || ೧ ||

ನಂದನಂದನನೊಳಾ | ನಂದದಿಂದೊಡಗೂಡು ||
ವಂದವನು ಪಾಲಿಸೌ | ಇಂದೀವರಾಕ್ಷಿ || ೨ ||

ಪೊಂಗೊಳಲ ಮೊಳಗಿಸುವ | ರಂಗನೊಲಿದರೆ ನಮಗೆ ||
ಮಂಗಳದಿ ಮಾಳ್ಪೆವೌ | ರಂಗ ಪೂಜೆಯನು || ೩ ||

ಸುಲಭದಲಿ ಕೃಷ್ಣ ನಮ | ಗೊಲಿದನಾದರೆ ಕೂಡಿ |
ಯಲೆಯ ಪೂಜೆಯ ಮಾಳ್ಪೆ | ಯಲಸದೊಂದಾಗಿ || ೪ ||

ರಾಮನನುಜನು ನಮ್ಮ | ಕಾಮಿತಕೆ ದೊರಕಿದರೆ |
ಸೋಮವಾರದ ವ್ರತದ | ನೇಮದಿಂದಹೆವು || ೫ ||

ವಾರಿಜಾಕ್ಷನ ಸಂಗ | ಸೇರಿತಾದರೆ ನಮಗೆ ||
ವಾರವಾರಕೆ ಕಪ್ಪು | ರಾರತಿಯ ಬೆಳಗಿ ||೬||

ಧಾರಿಣೀಸುರಸತಿಯ | ವಾರವನು ಬರಹೇಳಿ |
ಸೀರೆಗುಪ್ಪಸವಿತ್ತು | ಭೂರಿ ಹರುಷದಲಿ || ೭ ||

**ಭಾಮಿನಿ**

ಭೂಪ ಕೇಳಾ ಮಳಲಗೌರಿಯ |
ನೀಪರಿಯ ಪ್ರಾರ್ಥಿಸುತಲಂದಾ |
ಗೋಪಿಯರು ದಿನದಿನದೊಳಿಂತರ್ಚಿಸುತಲಚ್ಯುತನ ||
ರೂಪಲಾವಣ್ಯಗಳ ನೆನೆದುರು |
ತಾಪದಲಿ ಬೆದೆಬೆಂದು ವಿರಹಕ |
ಲಾಪದಲಿ ಪಾಡುತ್ತಲಿರ್ದರು ಹರಿಯ ಗುಣಗಳನು
ಕೆಲವು ದಿನವೀತೆರದಿ ಕೃಷ್ಣನ |
ಚೆಲುವಿಕೆಗೆಮಿಗೆ ಸೋತು ನೋಹಿಯ |
ನೊಲಿದು ಮಾಡುತಲೊಂದು ದಿನವಾ ಸತಿಯರೊಗ್ಗಿನಲಿ ||
ತಳುವದೆಲ್ಲರು ಬಂದು ಯಮುನಾ |
ಪುಳಿನದಲಿ ನಿಂದುಟ್ಟವಸನವ |
ನುಳಿದಿರಿಸಿ ಜಲಕೇಳಿಗಿಳಿದು ವಿರಹತಪ್ತೆಯರು || ೨ ||

**ರಾಗ ಸಾರಂಗ ಆದಿತಾಳ**

ಬಾಲೆಯರೆಲ್ಲರು ನಲಿದು | ವಾರಿ | ಕೇಳಿಗೆನುತ ಮನವೊಲಿದು ||
ಕಾಳಿಂದಿಯುದಕವನಿಳಿದು ನಿರ್ವಾಣದಿ | ಲೀಲೆಯೊಳಾಡುತಿರ್ದರು ತೋಷದಳೆದು || ೧ ||

ಕೊರಳುದ್ದ ನೀರಿಲಿ ನಿಂದು | ರಸ | ಭರಿತ ಯೌವನವೆಣ್ಣಳಂದು ||
ಸ್ಮರನ ಮದ್ದಾನೆಗಳೆಂಬಂತೆ ಕದಡುತ | ಭರದೊಳೀಸಾಡುತ ಸರಸವನಾಡುತ || ೨ ||

ಒಬ್ಬರೊಬ್ಬರ ಮೊಗ ನೋಡಿ | ಮನ | ವುಬ್ಬಿ ವಾರಿಯನು ಚೆಲ್ಲಾಡಿ ||
ಒಬ್ಬರಟ್ಟುತಲೊಬ್ಬರೋಡುತಲಡಗುತ | ತಬ್ಬಿ ಹಿಡಿವುತ ತಪ್ಪಿಸಿಸಿಕ್ಕದೋಡುತ || ೩ ||

ಹರಿಯ ಪಾಡುತ ಮುದದಿಂದ | ಪೂ | ಶರನ ಭಾಧೆಗೆ ಭ್ರಮೆಯಿಂದ ||
ತರುಣಿಯೊರ್ವಳ ಕೃಷ್ಣನೆಂದು ಬಲ್ಮೊಲೆಯಿಂದ | ಲಿರಿದಪ್ಪಿ ಚುಂಬಿಸಿ ಮುದ್ದುಗೆಯ್ಯುತ್ತ || ೪ ||

**ವಾರ್ಧಿಕ**

ಸ್ತನಮುಖಾಕ್ಷಿಗಳನೀಕ್ಷಿಸುತೋರ್ವಳೊಳ್ |
ವನಜಕುಟ್ಮಳವನಾ ಸುಮವನಾ ದಳವನೊಯ್ |
ಯನೆಯಡಗಿಸಿರ್ಪೆಯಂಗಳದೊಳೇಕೆ ಗೌರಿಯರ್ಚನೆಗೀಯದೆನೆ ಕೇಳುತ ||
ವನಿತೆ ನೀನರಿಯೆ ಕೃಷ್ಣಾರ್ಪಣಮಿದೆಂದೆನ್ನ |
ಮನದಿ ಸಂಕಲ್ಪಿಸಿದೆನದರಿನಿದು ನಿರ್ಮಾಲ್ಯ |
ವೆನುತೀಯದಾದೆ ವಂಚನೆಯಿಂದಲ್ಲೆಂದುಸಿರಲಂದವಳ್ ಜಾಣ್ಮೆಯಿಂದ || ೧ ||

ಅಂಬುಜಾನನೆಯೊರ್ವಳೆಂದಳೆಲೆ ನಾರಿ ನೀಂ |
ಕುಂಭೇಂದ್ರ ಕುಂಭನಿಭಕುಚೆ ಸಿಂಹಮಧ್ಯೆ ನಾ |
ನಿಂಬುಗೊಂಡುದು ವೈರಮೆನಗೆ ನಿನಗಾವೀರ್ವರೆಂತೊರ್ವನೊಳಗಿರ್ಪುದು |
ಎಂಬ ನುಡಿಗವಳೆಂದಳೆಲಗೆ ಹರಿಯಹಿತಲ್ಪ |
ನೆಂಬವಂ ಗರುಡ ವಾಹನ ಮಗುಳೆ ವೈರಂಗ |
ಳೆಂಬವೇಗುವವಾತನೊಳಗಿರಲ್ ಕೆನಲೊಡಂಬಟ್ಟುಸಿರದಿರುತಿರ್ದಳು || ೨ ||

**ಭಾಮಿನಿ**

ಎಂದು ನಾನಾ ವಿಧದ ಚೇಷ್ಟೆಗೆ |
ಳಿಂದಲಂಬುಕ್ರೀಡೆಯಲಿ ಸೊಬ |
ಗಿಂದ ಸತಿಯರಿರಲ್ಕೆ ಹರಿಯದನರಿತು ಮನದೊಳಗೆ ||
ಇಂದಿವರ ವಾಂಛಿತವ ಸಲಿಸುವೆ |
ನೆಂದು ಬಂದವರುಡುವ ವಸನವ |
ನಂದು ಕೊಂಡೇರಿದನು ಕಡಹದ ಮರನ ವಹಿಲದಲಿ || ೧ ||

**ರಾಗ ಭೈರವಿ ತ್ರಿವುಡೆತಾಳ**

ಅರಸ ಕೇಳೀಪರಿಯ ಮೆಲ್ಲನೆ | ಬರುತ ದಡದಲಿ ತರುಣಿಯರು ತೆಗೆ |
ದಿರಿಸಿರುವ ಪರಿಪರಿಯ ವಸನವ | ಹರಿಯು ತಾನಪಹರಿಸಿ ಕಡಹದ |
ಮರನ ನೇರಿದು ತರತರದೊಳದ | ನಿರಿಸಿ ನೋಡುತ ನೆರೆದು ಬತ್ತಲೆ |
ಯಿರುವ ಸತಿಯರ ನೆರವಿಯನು ಮುದ | ವೆರಸಿ ಕುಳಿತನು ಕಿರುನಗೆಯೊಳಿ |
ನ್ನೇನನೆಂಬೆ | ಲೀಲೆಯ | ನೇನನೆಂಬೆ || ೧ ||

**ಕಂದ**

ಕಂಡಾ ಸತಿಯರ್ ಕೃಷ್ಣನ | ಪುಂಡಾಟವನಯ್ದೆ ಲಜ್ಜೆಯಿಂ ಮಾನಗಳಂ ||
ಅಂಡಿಸುತುದಕದೊಳೆಲ್ಲರ್ | ಭಂಡಾದೆವೆನುತಲೊಯ್ಯನಾಲೋಚಿಸಿದರ್ || ೧ ||

**ರಾಗ ಆನಂದಭೈರವಿ ಆದಿತಾಳ**

ಏನಮ್ಮ | ಮುಂದಿ | ನ್ನೇನಮ್ಮ || ಪಲ್ಲವಿ ||

ಹೀನಬುದ್ಧಿಯಿಂದ ಕೃಷ್ಣ | ತಾನಿಂತು ಚೇಷ್ಟೆಯನೆಸಗಿ |
ಮಾನಗೊಂಡನೇನಮಾಳ್ಪೆ || ೧ ||

ಸೀರೆಗಳೆಲ್ಲವ ಕೊಂಡು | ವಾರಿಜಾಕ್ಷನದಕೊ ಮರವ |
ನೇರಿ ಕುಳಿತನಾರಿಗೆಂಬೆವಾವಿನ್ನೇ ನಮ್ಮ || ೨ ||

ಗೌರಿಯಾರ್ಚನೆಗೆ ಹೊತ್ತು | ಮೀರಿಹೋಯಿತಲ್ಲೆ ಮತ್ತು |
ನೀರೊಳಿರ್ದರಾರು ಕೇಳ್ವರಿದನಿನ್ನೇನಮ್ಮ || ೩ ||

ತಡಿಗೆ ಪೋಪರಿಲ್ಲವೆಮಗೆ | ನಡುಕ ಪುಟ್ಟಿತೀ ನೀರಿನೊಳಗೆ |
ತಡೆವೆವೆಂತು ಲಜ್ಜೆಯ ನುಡಿವೆವೆಯೇ ನಮ್ಮ || ೪ ||

ನೋಡುವರೇನಿವನ ಮಾತ | ನಾಡಿಸಿ ನಮ್ಮ ವಸ್ತ್ರಗಳ |
ನೀಡೆನುತ ಬೇಡಿಕೊಂಬ ಯತ್ನವದೇನಮ್ಮ || ೫ ||

**ರಾಗ ಮಾರವಿ ಏಕತಾಳ**

ತರುಣಿಯರಂದೀ | ಪರಿಯಲಿ ನಾಚುತ | ಶಿರವನು ನಸುಬಾಗಿ ||
ಕರೆದೆಂದರು ಶ್ರೀ | ಹರಿಯೆನುತೆಲ್ಲರು | ವರ ಲಜ್ಜೆಯ ನೀಗಿ || ೧ ||

ಅಕುಲಿತ ಗುಣಗಣ | ಮತಿಯುತ ನೀನಿಂ | ತತಿಶಯ ಚೇಷ್ಟೆಯಲಿ ||
ವ್ರತನಿಷ್ಠೆಯಲಿಹ | ಸತಿಯರನೀಪರಿ | ಗತಿಗೆಡಿಸುವರೇನೈ || ೨ ||

ಆರೊಡನೆಂಬೆವು | ನಾರಿಯರೆಮ್ಮಯ | ಸೀರೆಗಳೆಲ್ಲವನು ||
ಭೋರನೊಯ್ದು ಮರ | ನೇರಿದ ನೀ ಸುವಿ | ಚಾರವ ಬಲ್ಲವನು || ೩ ||

ಪೊಡಮಡುವೆವು ಚಳಿ | ವಿಡಿದೆಲ್ಲರು ನಡ | ನಡುಗುತಲಿಹೆವಿನ್ನು ||
ತಡೆಯದೆ ವಸನವ | ಕೊಡಿಸೈ ನಾಚಿಕೆ | ಗೆಡಿಸದಿರೆಮ್ಮುವನು || ೪ ||

**ಕಂದ**

ಬಾಲೆಯರಿಂತುಸಿರಲದಂ | ಲಾಲಿಸುತಾ ನಂದನಂದನನು ಮುದದಿಂದಂ ||
ಲೀಲೆಯೊಳಾಮರದೊಳ್ ಕುಳಿ | ತಲ್ಲಾಡುತಲಂಬುಜಾಕ್ಷಿಯರೊಳಿಂತೆಂದಂ || ೧ ||

**ರಾಗ ಶಂಕರಾಭರಣ ಆದಿತಾಳ**

ನಾರಿಯರೇಕೆ ನೀವೆನ್ನ | ದೂರುವಿರಿ ಚಳಿಗೆ ನಡುಗಿ |
ನೀರೊಳಿರ್ಪುದೇಕೆ ಬರಿದೆ | ಸಾರಿರೆ ತಡಿಗೆ || ೧ ||

ಸಾರುವೆವೆಂತು ನಾವುಡುವ | ಸೀರೆಯನೆಲ್ಲವ ನೀ ಕೊಂ |
ಡೇರಿರುವೆ ವೃಕ್ಷವನ್ನು | ವಾರಿಜನೇತ್ರ || ೨ ||

ಮರವನೇರಿದರೇನು ನಿಮಗೆ | ಕೊರತೆಯಾಕೆ ನೀವ್ ನಿಮ್ಮಂತೆ |
ತೆರಳಿ ಮನೆಗೆತನ್ನೊಳಿಂಥಾ | ಸರಸವಿನ್ನೇಕೆ || ೩ ||

ಸರಸವಿನ್ನು ವಿರಸವಕ್ಕು | ತರವಲ್ಲ ನಮ್ಮನೀರೀತಿ |
ಹುರುಳುಗೆಡಿಸಬೇಡವಯ್ಯ | ಕರುಣಿಸು ಕೃಷ್ಣ || ೪ ||

ಕರುಣಿಸುವೆನೇನ ನಾನು | ಪುರದೊಳಿರ್ಪೆ ನಿಮ್ಮ ತಗಲು |
ಬರುವದಿಲ್ಲದಿದ್ದರೆನ್ನ | ಕರುಬುವಿರೇಕೆ || ೫ ||

ಮರದ ಮೇಲಿರ್ದ ಜಟ್ಟಿಗ | ನಿರುವನೇರ್ದ ಮನುಜರನ್ನು |
ಮುರಿದು ಮೆಲುವ ಇಳಿಯೊ ಸಾಯ | ದಿರು ಕಂಡ್ಯ ಕೃಷ್ಣ ||೬||

ನೀರೊಳು ಬತ್ತಲೆ ನಿತ್ತ | ನಾರಿಯ ಕಾಣುತ್ತ ಬಂದ |
ನೂರೊಂದುಂಟಲ್ಲಿ | ಘೋರ ಪಿಶಾಚಿ || ೭ ||

ವಾರಿಜಾಕ್ಷ ಕಡೆಗು ನಮ್ಮ | ಸೀರೆಯ ನೀನೀಯದಿರಲು |
ದೂರುವೆವೆಲ್ಲರು ತಳ | ವಾರರಿಗೆ ಕಂಡ್ಯ || ೮ ||

ಈಗಲೆ ತಳವಾರರಿಗೆ | ಪೋಗಿ ಪೇಳಿಯವರನಿಲ್ಲಿ |
ಗಾಗಿಕೊಂಡು ಬನ್ನಿರೀಗ | ಬೇಗನೀವೆಲ್ಲ || ೯ ||

ಪೋಗುವೆವೆಂತು ಬತ್ತಲೆ | ಯಾಗಿರ್ಪೆವು ನಾವೆಲ್ಲರ್ ನಮ್ಮ |
ಮೇಗೆ ದಯವ ಮಾಡೋ ಕರುಣಾ | ಸಾಗರ ಕೃಷ್ಣ ||೧೦||

ಭಾಷೆಯ ಪೇಳುವಿರಿ ತನ್ನೊ | ಳೀಸು ಪಂಥವಾದ ಮೇಲೆ |
ನಾ ಸೀರೆಯನೀವೆನೆಂಬೀ | ಆಸೆಯಿನ್ನೇಕೆ ||೧೧||

ಭಾಷೆಯಾಡೆವಯ್ಯಾ ನಿನ್ನ | ದಾಸಿಯರಾವು ದಮ್ಮಯ್ಯ |
ಮೀಸಲಳಿದೆವ್ ನಮ್ಮೊಳಿಂಥಾ | ವಾಸಿಯೆ ಕೃಷ್ಣ ||೧೨||

**ಭಾಮಿನಿ**

ಇಂತು ದೈನ್ಯದಿ ನುಡಿದ ತನ್ನೇ |
ಕಾಂತಭಕ್ತರನೀಕ್ಷಿಸುತ ಮನ |
ದಂತರಂಗದಿ ನಗುತ ಬಳಲಿಸಬಾರದೆಂದೆನುತ ||
ಕಾಂತೆಯರು ನೀವ್ ತಡಿಗೆ ಬಂದೋ |
ರಂತೆ ಬೇಡಿದಡೀವೆ ವಸನವ |
ನೆಂತೆನಲು ಲಜ್ಜಿಸುತ ತಮ್ಮೊಳಗೆಂದರಬಲೆಯರು || ೧ ||

**ರಾಗ ನೀಲಾಂಬರಿ ರೂಪಕತಾಳ**

ಏನ ಮಾಡುವೆಮ್ಮ | ಈ ವಿಧ ವಿಧದಲಿ ನಮ್ಮ |
ಮಾನವ ಕೊಂಡನು ರಂಗ | ಮಾಡುವುದಾವಂಗ || ಪಲ್ಲವಿ ||

ಮಾನಿನಿಯರು ಬತ್ತಲೆ ಮೀ | ವೀನಡತೆಯು ಸಾಕೆಂದಿಗು |
ತಾನೆಂದನು ಮೇಲಕೆ ಬರ | ಲಾನೀವೆನೆನುತ್ತ || ೧ ||

ನಾನಾ ಬಗೆಯಲಿ ಮೊದಲೆ ನಿ | ಧಾನಿಸಿಕೊಳ್ಳದೆ ಬುದ್ಧಿವಿ |
ಹೀನೆಯರಾದೆವು ಮುಂದಿ | ನ್ನೇನೌ ಗತಿ ನಮಗೆ || ೨ ||

ತಡಿಗಡರದೆ ಶಾಲೆಗಳನು | ಕೊಡುವವನಲ್ಲಿದು ನಿಜಮಿಗೆ |
ಕಡೆಗೂ ನಾವೀನೀರಲಿ | ನಡುಗುವುದೇಕಿನ್ನು || ೩ ||

ಒಡೆಯನು ನಮಗೆಂದೆನುತಲಿ | ದೃಢದಲಿ ನಂಬಿಹೆವೆಮ್ಮನು |
ಕೆಡಿಸನು ಸಂಶಯ ಮತ್ತೇ | ಕಡರುವ ತೀರವನು || ೪ ||

**ಭಾಮಿನಿ**

ಎಂದು ಯೋಚಿಸುತಬಲೆಯರು ಕರ |
ವೊಂದರಲಿ ನಾಣ್ಪೆಡೆಯನಡಗಿಸು |
ತೊಂದರಲಿ ಪೊಂಬುಗರಿ ಮೊಲೆಗಳನುವುಕಿ ತಲೆವಾಗಿ ||
ಬಂದು ದಡದಲಿ ಮದನನುರುದೊರೆ |

ಯಿಂದುಗಿದ ಕೂರಸಿಗಳಂದದಿ |
ನಿಂದಿರಲು ಕಾಣುತ್ತ ನಗುತಿಂತೆಂದನಸುರಾರಿ || ೧ ||

**ರಾಗ ಕೇದಾರಗೌಳ ಅಷ್ಟತಾಳ**

ಲಲನೆಯರಿರ ನೀವು ನಿರ್ವಸನೆಯರಾಗಿ | ಇಳಿವಿರಿ ಯಮುನೆಯಲಿ ||
ಫಲವಿಲ್ಲದಾಯ್ತು ನೀವ್ ಮಾಡಿದ ವ್ರತಕೆ ನಿ | ಷ್ಫಲವಾಯಿತದರಿಂದಲಿ || ೧ ||

ಅರಿಯದಾದೆವು ನಾವು ಕ್ಷಮಿಸಬೇಕೆಂದು ದೇ | ವರಿಗತಿ ಭಕ್ತಿಯಲಿ ||
ಕರವೆತ್ತಿ ಕಯ್ ಮುಗಿದಲ್ಲದೆ ನಿಮ್ಮಿಷ್ಟ | ದೊರಕದೆಂದೆನೆ ಕೇಳುತ್ತ || ೨ ||

ರಮಣಿಯರಹುದೆಂದು ನಂಬಿ ನಾಚುತಲೊಂದು | ಕರದಿಂದ ನಮಿಸೆ ಕಂಡು ||
ಸುರರಿಗೆರಡು ಕಯ್ಯೊಳೆರಗಬೇಕೆಂಬುದ | ನರಿಯಿರೆ ನೀವೆಂದನು || ೩ ||

ದನುಜಾರಿಗಾಯ್ತೊಂದು ಕರದಲಿ ಮಣಿದರೆಂ | ದೆನೆ ಕೇಳಿ ಲಜ್ಜಿಸುತ ||
ವನಜಾಕ್ಷಿಯರ್ ತಮ್ಮೊಳೊರ್ವಳ ಮೊಗ | ವನು ಕಾಣುತೊಯ್ಯನಂದು || ೪ ||

ತೊಡೆಯೊಳಗವಚಿ ನಾಣಿನ ತಾಣವನ್ನು ಕಯ್ | ಯೆರಡೆತ್ತಿ ಮುಗಿದುನಿಂದು ||
ಕೊಡಿಸಿನ್ನಾದರೂ ಸೀರೆಗಳನು ದಮ್ಮಯ್ಯ ನಿ | ನ್ನಡಿಗೆರಗುವೆವೆಂದರು || ೫ ||

**ಕಂದ**

ಎಂದಾ ಸತಿಯರ್ ನಿಂದಿರು | ವಂದವನೀಕ್ಷಿಸುತಲಚ್ಯುತಂ ನಸುನಗುತಂ |
ಒಂದೊಂದಾಗಿಯೆ ಸೀರೆಗ | ಳಂದವನೀಕ್ಷಿಸಿದುಸಿರ್ದಡೀವೆನೆನಲಿಂತೆಂದರ್ || ೧ ||

**ರಾಗ ಸೌರಾಷ್ಟ್ರ ಆದಿತಾಳ**

ಕರುಣಾಳು ಕೃಷ್ಣ ತನ್ನದು ಕಾಗಿನ ಸೀರೆ | ಹರುಷದೊಳೀಯೆನೆ ಕೇಳಿ ||
ಸರಸಿಜಗಂಧಿನಿ ನಗುತಲಾ | ತರುಣಿಗಿತ್ತನು ನಲವಿಂದ || ೧ ||

ಕೆಂಗಾವಿಯ ಶಾಲೆ ತನ್ನದು ನೀ ಕೊಡು | ರಂಗಯ್ಯ ಎಂದೊರ್ವಳೆನೆ ||
ಅಂಗನೆಮಣಿಯೆ ಕೊಳ್ಳೆಂದು ವೇಗದಿ ಕೋಮ | ಲಾಂಗಿಗಿತ್ತನು ನಲವಿಂದ || ೨ ||

ಹಳದಿ ಪಟ್ಟೆಯ ಸೀರೆ ತನ್ನದೆಂದೊರ್ವಳು | ಗಳಿಲನೀಯೆನಲು ಕೇಳಿ ||
ಅಳಿಗುರುಳಬಲೆ ಕೊಳ್ಳೆಂದು ಗೋಪಾಲನು | ತಳುವದಿತ್ತನು ಕೃಪೆಯಿಂದ || ೩ ||

ಹೂವಿನ ಸೀರೆ ತನ್ನ ಪಾಲಿಸೆಂದೊರ್ವ | ಭಾವೆಯುಸಿರೆ ಕೇಳುತಂದು ||
ಭಾವಜಜನಕ ತಾ ಸತಿಗದನಿತ್ತನು | ಠೀವಿಯೊಳತಿ ವೇಗದಿಂದ || ೪ ||

ಪಟ್ಟೆಯಂಚಿನ ಸೀರೆ ತನ್ನದೆಂದೊರ್ವಳು | ದುಷ್ಟಮರ್ದನ ಪಾಲಿಸೆನಲು ||
ಬಟ್ಟಕುಚದ ಬಾಲೆಕೊಳ್ಳೆಂದು ವೇಗದಿ | ಕೊಟ್ಟನು ಬಾಲಗೋಪಾಲ || ೫ ||

ಗಿಣಿಯ ಬಣ್ಣದ ಸೀರೆ ತನ್ನದೆಂದೊರ್ವಳು | ಮಣಿದು ಲಜ್ಜೆಯೊಳಿರೆ ಕಂಡು ||
ಗುಣವಂತ ನಾಚುವೆಯೇತಕ್ಕೆ ಕೊಳ್ಳೆಂದು | ಕ್ಷಣದೊಳಿತ್ತನು ರಂಗನಾಥ ||೬||

ಜಲತಾರಸೀರೆ ತನ್ನದು ಪಾಲಿಸೆಂದೊರ್ವ | ಲಲನೆಯುಸಿರೆ ಕೇಳುತ ||
ಚೆಲುವೆಯರರಸಿ ಕೊಳ್ಳೆಂದು ವೇಗದೊಳಾ | ಲಲನೆಗಿತ್ತನು ನಲವಿಂದ || ೭ ||

ಈ ಪರಿಯಲಿ ತಮ್ಮ ತಮ್ಮ ವಸ್ತ್ರವತೋರಿ | ಶ್ರೀಪತಿ ಕರುಣದೋರೆಂಬಾ ||
ಗೋಪಿಯರನು ಕಾಣುತೊಬ್ಬೊಬ್ಬರ್‌ಗಿತ್ತನ್ | ಗೋಪಾಲಕೃಷ್ಣನಿಂತೆಲ್ಲ || ೮ ||

**ಭಾಮಿನಿ**

ಅರಸ ಕೇಳಚ್ಯುತನು ಕೊಟ್ಟಂ |
ಬರಗಳನು ಕೊಂಡುಟ್ಟು ಸರ್ವಾ |
ಭರಣದಲಿ ರಂಜಿಸಿದರಂಗಜನಾಳ್ಗಳೆಂಬಂತೆ ||
ಸರಸವಾಡುತ ಮರನೊಳಿಹಮುರ |
ಹರನ ಕಂಡುಭ್ರಮಿಸಿ ಮೇಲ್ಮೊಗ |
ವೆರಸಿ ಮೌನಿಗಳಂತೆ ಮೆಯ್ಮರೆದಿರ್ದರಬಲೆಯರು || ೧ ||

**ವಾರ್ಧಿಕ**

ಇಂತಯ್ದೆ ನಾರಿಯರ್ ನಿಂತಿರಲು ಕಾಣುತೇ |
ಕಾಂತಭಕ್ತರ ಮನದ ಚಿಂತಿತಾರ್ಥವನೊಮ್ಮೆ |
ಯಂತರಂಗದಿ ಸಲಿಸುವೆಂ ತಳುವದೆಂದೊಯ್ಯದಂತರಿಸದವನಿಗಿಳಿದು ||
ಕಂತುಪಿತನಾ ವಿರಹಸಂತಾಪದಿಂ ಕುದಿವ |
ಕಾಂತೆಯರ ಹೃದ್ಭಾವಮಂ ತಿಳಿದು ಕರುಣರಸ |
ವಾಂತಿರಲ್ ಸತಿಯರತ್ಯಂತ ಮದದಿಂದಪ್ಪುವಂತರಂಗದೊಳಿರ್ದನು || ೧ ||

**ರಾಗ ಭೈರವಿ ಝಂಪೆತಾಳ**

ತರುಣಿಯರ ಮನದಿರವ | ನರಿತು ವೇಗದಿ ನಗುತ |
ಕರವಿಡಿವುತೆಂದನಾ | ಸರಸಿಜಾಂಬಕನು || ೧ ||

ವನಿತೆಯರು ಬಳಲಿದಿರಿ | ತನಗಾಗಿ ಬಹುವ್ರತಗ |
ಳನು ಮಾಡಿದಿರಿ ಮೆಚ್ಚಿ | ದೆನು ಮನದೊಳಿನ್ನು || ೨ ||

ಆವಪರಿಯಿಂದ ನೀ | ವೋವಿ ತನ್ನನು ಭಜಿಸ |
ಲೀವೆನಿಹಪರಗಳಲಿ | ಭಾವಿಸಿದ ವರವ || ೩ ||

ಬಲ್ಲೆ ನಿಮ್ಮಯ ಬಯಕೆ | ಯೆಲ್ಲ ನಾ ಸಲಿಸುವೆನು |
ವಲ್ಲಭನು ತಾನಾದೆ | ಇಲ್ಲ ಸಂಶಯವು || ೪ ||

ನಾರಿಯರು ನೀವ್ ಮನವ | ಸೂರೆಗೊಂಡಿರಿ ಎನ್ನೊ |
ಳೀರಾತ್ರಿಯಿಹುದೆನುತ | ಭೂರಿಹರುಷದಲಿ || ೫ ||

**ಭಾಮಿನಿ**

ಲಲನೆಯರು ಕೇಳುತ್ತ ಕೃಷ್ಣನ |
ಲಲಿತವಾಕ್ಯವನಂದು ಲಜ್ಜೆಯ |
ನುಳಿದು ಬಂದಪ್ಪಿದರು ಬಿಂಬಾಧರವ ಚುಂಬಿಸುತ ||
ಗಳರವದಿ ಮೊಗವೀಕ್ಷಿಸುತ ಬಲ್ |
ಮೊಲೆಗಳಿಂದೆದೆಗೊತ್ತಿ ವಾಂಛಿತ |
ಫಲವ ಪಡೆದೆವೆನುತ್ತ ಮೆಯ್ ಮರೆದಿರ್ದರೈಕ್ಯದಲಿ || ೧ ||

**ವಾರ್ಧಿಕ**

ತಕ್ಕೆ ಚುಂಬನ ಲಲ್ಲೆ ಸವಿನೋಟವರೆಗೋಪ |
ಸಿಕ್ಕು ಸಡಲತಿ ಜಾಣ್ಮೆ ಬಿಗುಬಂಧ ಬಗೆಯಿಂದ |
ಠಕ್ಕುಠೌಳಿವಿನೋದ ಮುದ ಮೋಡಿ ಮದಗಾಡಿ ಮುಂತಾದ ಚೇಷ್ಟೆಗಳನು ||
ಸೊಕ್ಕು ಜವ್ವನೆಯರಚ್ಯುತನಂತರಂದನು |
ದಕ್ಕರಿಂದಂಗಜನ ಕಲೆದೋರಿ ನಲವೇರಿ |
ತಕ್ಕಯಿಸಿ ಮೆಯ್ಮರೆವುತಪ್ಪಿರ್ದ ರೊಪ್ಪಿರ್ದರೆರಡಿಲ್ಲದೊಂದುಗೂಡಿ || ೧ ||

ಕಣ್ಮುಚ್ಚಿ ಕಾತರದಿ ಮದವೇರಿ ಮೆಯ್ ಮರೆದು |
ಬಣ್ಮೊಲೆಗಳಿಂದೆದೆಗಮದ್ದೊತ್ತಿ ಬಿಗಿಯಪ್ಪಿ |
ನುಣ್ಮೊಗದಿ ಮೊಗಕೆ ಚುಂಬನಗೊಟ್ಟು ಚೆಂದುಟಿಯ ಸವಿಯನುಂ ಪೀರ್ದು ಪೀರ್ದು ||
ಜಾಣ್ಮೆಯಿಂದಂಗಜನ ಕಲೆನೆಲೆಗಳಿಂ ತುಡುಕಿ |

ನೊಣ್ಮೊಳಗಿಸುತ್ತಲೊಪ್ಪಿರ್ದರಾಗೋಪಾಲ |
ಪೆಣ್ಮಕ್ಕಳಚ್ಯುತನ ತನುಭೂಜಕುರೆ ತೊಡರ್ದನುಪಮಲತೆಗಳೆಂಬೊಲು || ೨ ||

**ರಾಗ ಮಧುಮಾಧವಿ ತ್ರಿವುಡೆತಾಳ**

ಇಂತು ಸತಿಯರೊಳತಿ ವಿನೋದದಿ |
ಕಂತುಪಿತನಾ ರಾತ್ರಿಗಳೆದುರು |
ಸಂತಸದೊಳಾ ನಾರಿಯರನೋ | ರಂತೆ ಕರೆದಿಂತೆಂದನು || ೧ ||

ತರುಣಿಯರು ನೀವಿನ್ನು ನಿಜಮಂ |
ದಿರಕೆ ತೆರಳುವುದನಿತರೆನ್ನನು |
ಮರೆಯದಿರಿ ನಿಮ್ಮಿಷ್ಟವನು ನಾ | ನಿರದೆ ಸಲಿಸುವೆ ನಿಚ್ಚವು || ೨ ||

ಎನುತ ಬೀಳ್ಗೊಟ್ಟಂದು ಗೋಕುಲ |
ಕನುಪಮನು ನಡೆತಂದನೀಪರಿ |
ದಿನದಿನದ ಲೀಲಾವಿನೋದದಿ | ವನಜಲೋಚನನಿರ್ದನು || ೩ ||

**ಭಾಮಿನಿ**

ಎಲೆ ಧರಾಧಿಪ ಕೇಳು ಹರಿಯದು |
ಕುಲದೊಳಿಂತುದ್ಭವಿಸಿವರಗೋ |
ಕುಲದೊಳಗೆ ತಾ ಬೆಳೆವುತಿರ್ದನು ಬಾಲಕೇಳಿಯಲಿ ||
ಕಲುಷಹರವಹ ಕಥನವಿದನಾ |
ರೊಲಿದು ಪೇಳ್ವರು ಕೇಳ್ವವರವರಿಗೆ |
ಸುಲಭದಲಿ ತಾನೊಲಿವನಚ್ಯುತನೆಂದನಾ ಮುನಿಪ || ೧ ||

**ರಾಗ ಮಾರವಿ ಝಂಪೆತಾಳ**

ನೀಲಮೇಘಾಂಗನಿಗೆ ನಿಜಶರಣಸಾಂಗನಿಗೆ |
ಕಾಲಭಯಶಿಕ್ಷನಿಗೆ ಕಮಲಾಕ್ಷಗೆ |
ಬಾಲಾರ್ಕಚಂದ್ರಾಗ್ನಿ ಬಲುಕೋಟತೇಜನಿಗೆ |
ಮೂಲೋಕದೊಡೆಯನಿಗೆ ಮುರವೈರಿಗೆ ||
ಜಯ ಮಂಗಲಂ | ನಿತ್ಯ | ಶುಭ ಮಂಗಲಂ || ೧ ||

ಕಾಮಪಿತನಾದವಗೆ ಕಡುಜಟ್ಟಿ ಮಾಧವಗೆ |
ಸಾಮಗಾನವಿಲೋಲ ಸರ್ವೇಶಗೆ |
ವಾಮದೇವನ ಮಿತ್ರ ವಸುದೇವಪುತ್ರನಿಗೆ |
ಶ್ರೀಮಹಾಗೋವಿಂದ ಗೋಪಾಲಗೆ ||
ಜಯ ಮಂಗಲಂ | ನಿತ್ಯ | ಶುಭ ಮಂಗಲಂ || ೨ ||

ವರಹಾವತಾರನಿಗೆ ದುರಿತಸಂಹಾರನಿಗೆ |
ಪರಮಪಾವನನಿಗೆ ಪಾಪನಾಶನಿಗೆ |
ಧರೆಯೊಳತ್ಯಧಿಕವೆನಿಸುವ ಕಣ್ವಪುರದೊಡೆಯ |

ವರಮಹಾಗೋಪಾಲ ಶ್ರೀಕೃಷ್ಣಗೆ |
ಜಯ ಮಂಗಲಂ | ನಿತ್ಯ | ಶುಭ ಮಂಗಲಂ || ೩ ||

*ಯಕ್ಷಗಾನ ಶ್ರೀಕೃಷ್ಣಲೀಲೆ ಮುಗಿದುದು*

# ಯಕ್ಷಗಾನ ಬಿಲ್ಲ ಹಬ್ಬ ಮತ್ತು ಕಂಸವಧೆ

## ಪಾತ್ರಗಳು

| | |
|---|---|
| ಕಂಸ | ಗುಹ |
| ನಾರದ | ರಜಕ |
| ವಸುದೇವ | ಚಿಪ್ಪಿಗ |
| ದೇವಕಿ | ಸುದಾಮ |
| ಕೇಶಿ | ಕುಬ್ಜೆ |
| ಅಕ್ರೂರ | ಮಧುರೆಯ ಸ್ತ್ರೀಯರು |
| ಜರಾಸಂಧ | ಕಾಪಿನ ಭಟರು |
| ಚಾಣೂರ | ಬಲದವರು |
| ಮುಷ್ಟಿಕ | ಮಾವಟಿಗ (ಆನೆ) |
| ಕೃಷ್ಣ | ಹಸ್ತಿಪ್ರಹಸ್ತಿಯರು |
| ನಂದ | ಉಗ್ರಸೇನ |
| ಯಶೋದೆ | ಕಂಸನ ತಮ್ಮಂದಿರು |
| ಗೋಪಿಯರು | ಮೊದಲಾದವರು |
| ಬಲರಾಮ | ನಂದಗೋಪ |

# ಯಕ್ಷಗಾನ ಬಿಲ್ಲ ಹಬ್ಬ ಮತ್ತು ಕಂಸವಧೆ

**ಕಥಾನುಸಾರ**

ಪರೀಕ್ಷಿನ್ಮಹಾರಾಜನಿಗೆ ಶುಕಮಹಾಮುನಿಯು ಹೇಳುವನು : ಶ್ರೀಕೃಷ್ಣನು ಗೋಕುಲದಲ್ಲಿ ಬೆಳೆಯುತ್ತಿರಲು ಇತ್ತ ಮಧುರೆಯಲ್ಲಿ ಒಂದು ದಿನ ಕಂಸನು ತನ್ನ ವೈರಿಯನ್ನು ತಿಳಿದು ಬರಲು ಕಳುಹಿಸಿದ್ದ ತನ್ನ ಆಪ್ತರು ಹಿಂದೆ ಬರಲಿಲ್ಲವೆಂದು ಚಿಂತಿಸುವನು. ಅಲ್ಲಿಗೆ ನಾರದನು ಬಂದು ಕಂಸನ ಪೂರ್ವ ವೃತ್ತಾಂತವನ್ನು ತಿಳಿಸಿ ಬಿಲ್ಲಹಬ್ಬದ ನೆವದಿಂದ ಬಲರಾಮಕೃಷ್ಣರನ್ನು ಮಧುರೆಗೆ ಕರೆಸಿ ಕೊಲ್ಲುವಂತೆ ಪ್ರೇರೇಪಿಸುವನು. ಕೋಪಗೊಂಡ ಕಂಸನು ವಸುದೇವ ದೇವಕಿಯರನ್ನು ಸೆರೆಯಲ್ಲಿಟ್ಟು, ಬಿಲ್ಲಹಬ್ಬಕ್ಕೆ ರಾಮಕೃಷ್ಣರನ್ನು ಕರೆತರಲು ಅಕ್ರೂರನನ್ನು ನಂದಗೋಕುಲಕ್ಕೆ ಕಳುಹುವನು.

ಅಕ್ರೂರನು ಶ್ರೀಕೃಷ್ಣನ ದರ್ಶನಾಕಾಂಕ್ಷಿಯಾಗಿ ಬಂದು ಕಂಸನ ನಿರೂಪಣೆಯನ್ನು ತಿಳಿಸುವನು. ಕೃಷ್ಣನು ಬಲರಾಮ ಗೆಳೆಯರು ಸಹಿತ ಹೊರಡಲು ಗೋಪಿಯರು ಕೃಷ್ಣನ ವಿಯೋಗಕ್ಕಾಗಿ ಮರುಗುವರು. ಕೃಷ್ಣನು ಅವರನ್ನು ಸಂತವಿಸಿ ಮಧುರೆಗೆ ತೆರಳುವನು. ದಾರಿಯಲ್ಲಿ ಯಮುನಾ ನದಿಯಲ್ಲಿ ಅಕ್ರೂರನು ಸ್ನಾನಕ್ಕಿಳಿದು ನೀರೊಳಗೆ ಶ್ರೀಹರಿಯ ವಿಶ್ವರೂಪವನ್ನು ಕಂಡು ಸ್ತುತಿಸುವನು.

ಮಧುರೆಗೆ ಬಂದು ಶ್ರೀಕೃಷ್ಣನು ಅಕ್ರೂರನನ್ನು ಅವನ ಮನೆಗೆ ಕಳುಹುವನು. ರಾಜಬೀದಿಯಲ್ಲಿ ಬರುವಾಗ ರಜಕನೊಬ್ಬನು ಮಡಿವಸ್ತ್ರಗಳನ್ನು ಕೇಳಿದರೂ ಕೊಡದಿದ್ದುದಕ್ಕಾಗಿ ಕೃಷ್ಣನು ಅವನನ್ನು ಕೊಂದು, ಭಕ್ತಿಯಿಂದ ಎರಡು ಅಂಗಿಗಳನ್ನಿತ್ತ ಚಿಪ್ಪಿಗನೊಬ್ಬನಿಗೆ ಸಾಯುಜ್ಯವನ್ನಿತ್ತು, ತನ್ನನ್ನು ಸತ್ಕರಿಸಿದ ಸುದಾಮನನ್ನು ಅನುಗ್ರಹಿಸಿ, ಕುಬ್ಜೆಯ ಡೊಂಕನ್ನು ತಿದ್ದಿದನು. ಅವನನ್ನು ಕಂಡು ಆಬಾಲವೃದ್ಧರೂ ಅನಂದತುಂದಿಲರಾಗುವರು. ನಾರಿಯರು ಆರತಿಯೆತ್ತುವರು, ಶ್ರೀಕೃಷ್ಣನು ಮಧುರೆಯಲ್ಲಿ ಧನುರ್ಯಾಗಕ್ಕಾಗಿ ಪೂಜಿಸಿಟ್ಟ ಮಹಾಧನುಸ್ಸನ್ನು ಮುರಿದು, ತಡೆದವರನ್ನು ಗೆದ್ದು, ಇದಿರಿಸಿದ ಸೇನೆಯನ್ನು ಸಂಹರಿಸುವನು. ದೂತರಿಂದ ಇದನ್ನು ತಿಳಿದ ಕಂಸನು ಮಹಾಸೇನೆಯನ್ನು ಕಳುಹಲು ರಾಮಕೃಷ್ಣರು ಅದನ್ನು ನಾಶಗೊಳಿಸುವರು. ಅಂದಿನಿರುಳಲ್ಲಿ ಕಂಸನಿಗೆ ದುಃಸ್ವಪ್ನ ಬೀಳುವುದು. ಮರುದಿನ ಕೃಷ್ಣನು ರಂಗಸ್ಥಲದ ದ್ವಾರದಲ್ಲಿ ತನ್ನನ್ನು ತಡೆದ ಕುವಲಯಾಪೀಡವೆಂಬ ಆನೆಯನ್ನು ಕೊಂದುಹಾಕುವನು. ಚಾಣೂರನೆಂಬ ಮಲ್ಲನನ್ನು ಕೃಷ್ಣನೂ, ಮುಷ್ಟಿಕನೆಂಬುವನನ್ನು ಬಲರಾಮನೂ ಕೊಲ್ಲುವರು. ಇತರ ಮಲ್ಲರನ್ನೂ ಕೊಂದಮೇಲೆ ಕೃಷ್ಣನು ಕಂಸನನ್ನು ಮಡುಹುವನು. ಅವನ ತಮ್ಮಂದಿರು ಬಲರಾಮನಿಂದ ಸಾಯುವರು. ಆ ಮೇಲೆ ಶೋಕಿಸುವ ಕಂಸನ ಮಡದಿಯರಾದ ಹಸ್ತಿಪ್ರಹಸ್ತಿಯರನ್ನು ಸಮಾಧಾನಗೊಳಿಸಿದ ಬಳಿಕ ಕೃಷ್ಣನು ಸೆರೆಯಲ್ಲಿದ್ದವರನ್ನು ಬಿಡಿಸಿ ಉಗ್ರಸೇನನಿಗೆ ಮಧುರೆಯ ಪಟ್ಟಗಟ್ಟುವನು. ಮಾನಿನಿಯರು ಮಂಗಲಾರತಿಯೆತ್ತವರು.

**ಯಕ್ಷಗಾನ ಬಿಲ್ಲಹಬ್ಬ ಮತ್ತೂ ಕಂಸವಧೆ**
**ಮೊದಲನೆ ಸಂಧಿ : ಬಿಲ್ಲಹಬ್ಬ**

**ಶಾರ್ದೂಲವಿಕ್ರೀಡಿತಂ**

ಶ್ರೀರಾಧಾಮನಲೋಲಮೋಹಿತಕರಂ ಗೋಪಾಂಗನಾವಲ್ಲಭಂ
ಮಾರಾರೂಪಸಹಸ್ರಕೋಟಿಸದೃಶಂ ದೇವಾದಿದೇವಂ ಹರಿಮ್ |
ಕಾಮಾರಾತಿಸಖಂ ಕರೀಂದ್ರವರದಂ ಕಾರುಣ್ಯಕಲ್ಪದ್ರುಮಂ
ಕ್ಷೀರಾಂಭೋನಿಧಿವಾಸಶೇಷಶಯನಂ ಶ್ರೀಕೃಷ್ಣದೇವಂ ಭಜೆ ||

**ಭಾಮಿನಿ**

ನಿಗಮಕೋಟಿಗಳರಸಿಯರಸು |
ತ್ತಗಲಿದವು ನಾಚುತಲಿ ನಿನ್ನಯ |
ಅಗಣಿತದ ಮಹಿಮೆಯನು ಬಲ್ಲವರಾರು ತ್ರಿಜಗದಲಿ ||
ಮುಗಿದು ಕರಪುಟಿಯುಗದಿ ನಾ ಮರೆ |
ಹುಗುವೆ ಸೌಭಾಗ್ಯದಿ ಸಂಪದ |
ಯುಗವ ಪಾಲಿಸು ಲಕ್ಷ್ಮಿಯೆನ್ನಯ ಮತಿಗೆ ಮಂಗಲವ ‖ ೧ ‖

**ರಾಗ ನಾಟಿ ಝಂಪೆತಾಳ**

ಶರಣು ಶ್ರೀಗಣನಾಥ ಶರಣು ಕೀರ್ತಿಖ್ಯಾತ |
ಶರಣು ತ್ರಿಭುವನದಾತ | ಶರಣು ಶಿವಜಾತ || ಪ ||
ಬಿಜಸಜಾಪ್ತನದೃಶವೊಂ | ದಶನಾದರಿತ ದೇವ |
ಋಷಿಜನೋದ್ಧಾರ ವರ | ಶಶಿಧರಕುಮಾರ ||

ಅಸು ರಕ್ತವರ್ಣ ದ್ವಯ | ವೆಸೆವ ಶೂರ್ಪವು ಕರ್ಣ |
ಅಸಮಗುಣಗಂಭೀರ | ನಿಶಿಚರಕುಠಾರ || ೧ ||

ಮೂಷಕ ವರೂಥ ಫಣಿ | ಭೂಷ ಲಂಬೋದರ ಗ |
ಣೇಶ ಕರಧೃತಪರಶು | ಪಾಶಾಂಕುಶೇಶ ||
ದೋಷವಿಘ್ನವಿನಾಶ | ದಾಸಜನಪೋಷ ಜಗ |
ದೀಶ ಪಾಲಿಸುಯೆನಗೆ | ಲೇಸ ವಿಘ್ನೇಶ || ೨ ||

ಅಪ್ಪ ಮೋದಕ ಕಜ್ಜ | ತುಪ್ಪ ಸಕ್ಕರೆಯು ಸಹ |
ಚಪ್ಪರಿಸಿ ಮೆಲುತಲಿರು | ತಿಪ್ಪ ಕರಿವದನ | ತಪ್ಪುಗಳ ಕ್ಷಮಿಸುಯೆ |
ನ್ನೊಪ್ಪುಗಳ ಮೂಲಿಕೆಯ | ಬಪ್ಪಪುರಧೀಶನ | ಮ್ಮಪ್ಪ ವಿಘ್ನೇಶ || ಶರಣು || ೩ ||

**ರಾಗ ಶಂಕರಾಭರಣ ಮಟ್ಟೆತಾಳ**

ಜಯ ನಮೋ ಜಗನ್ನಿವಾಸ ಜಯತು ಮರುತಜ |
ಭಯವಿದೂರ ನುತಿಪ ಜನರಿಗಮಲಸುರಕುಜ || ಪ ||

ನಿಶಿಚರಾನ್ವಯಾದಿ ಖಲಕುಠಾರ ಸುಚರಿತ |
ವ್ಯಸನಭಯವಿದೂರಪ್ರಸರಪೂಜಿತ || ೧ ||

ಧರಣಿಧರ ಸರಿತ್ಸುಪೇಂದ್ರ ವರ ಸುಖಪ್ರದ |
ದುರಿತತಿಮಿರದಿನಪ ನಿರತ ಸ್ಮರಿಪೆ ತವ ಪದ || ೨ ||

ಕವಿತೆಯೊಳಗನಂತ ದೋಷವಿರಲುಯೆನ್ನನು |
ಕ್ಷಮಿಸಿ ಸಲಹೊ ಸತತ ಹನುಮ ನಮಿಪೆ ನಿನ್ನನು || ೩ ||

**ರಾಗ ಸೌರಾಷ್ಟ್ರ ಅಷ್ಟತಾಳ**

ಅಖಿಲಬ್ರಹ್ಮಾಂಡನಾಯಕನ ಪಟ್ಟದ ರಾಣಿ | ತ್ರಾಹಿ ತಾಯೆ | ನಿನ್ನ |
ಭಕುತಿಯಿತ್ತೆನಗೆ ರಕ್ಷಿಸು ದಾತೆ ಭಾರತಿ | ತ್ರಾಹಿ ತಾಯೆ || ೧ ||

ನಿಗಮಾಭಿಮಾನಿ ದೇವತೆಯೆ ರಕ್ಷಿಸುಯೆನ್ನ | ಶ್ರೀಮೂಕಾಂಬಾ | ತಾಯೆ |
ಸೊಗಸಿಲಿ ಕವಿತೆಯನುಸಿರ್ವಂತೆ ಮಾಡವ್ವ | ಶ್ರೀಮೂಕಾಂಬಾ || ೨ ||

ಭಜಕವತ್ಸಲ ಗಂಗಾಧರನೆ ತ್ರಿಯಂಬಕ | ಪಾಹಿ ದೇವ |
ದಿವ್ಯ | ರಜತಾದ್ರಿವಾಸ ಪಾಲಿಸುಯೆನ್ನ ಗೌರೀಶ | ಪಾಹಿ ದೇವ || ೩ ||

**ರಾಗ ಸಾಂಗತ್ಯ ರೂಪಕತಾಳ**

ಅಜಗೆ ಶಾರದೆಗೆ ನಾ ನಮಿಪೆ ಭೂಧರನಿಗೆ | ತ್ರಿಜಗವಂದಿತ ಖಗೇಶ್ವರಗೆ ||
ಸುಜನ ಸನಕಸನಂದನನಾರದಾದ್ಯರ | ಭಜಿಸುತೀ ಕೃತಿಯ ವಿಸ್ತರಿಪೆ || ೧ ||

ಅಷ್ಟದಿಕ್ಪಾಲರಿಗೆರಗಿಯಸ್ಮದ್ಗುರು | ಇಷ್ಟದೇವತೆಗಳ ಭಜಿಸಿ ||
ಶ್ರೇಷ್ಠ ಶ್ರೀಕುಲದೇವತೆಯೆ ಪಾಲಿಸೆನುತ ಸಂ | ತುಷ್ಟನಾಗುವ ವಿರಚಿಸುವೆ || ೨ ||

ಬಲಿ ಪ್ರಹ್ಲಾದಾಂಬರೀಷ ರುಕ್ಮಾಂಗದ | ಕಲಿಪಾರ್ಥವಿದುರನಕ್ರೂರ ||
ಕಲುಷ ವರ್ಜಿತ ಭೀಷ್ಮ ಗುರು ಕೃಪಾದ್ಯರಿಗೆ ನಾ | ಬಲವಂದು ಕವಿತೆ ವಿಸ್ತರಿಪೆ || ೩ ||

ಬುದ್ಧಿಶೂನ್ಯನು ನಾನಿನ್ನೇನನರಿಯೆ ತಪ್ಪು | ಇದ್ದಡೀ ಕೃತಿಯ ನೋಡುತಲಿ ||
ತಿದ್ದಿಕೊಳ್ಳುವುದು ಬಲ್ಲವರು ಈ ಕವಿತೆಯ | ಚಿದ್ರೂಪ ಹರಿಯು ರಕ್ಷಿಪನು || ೪ ||

**ವಾರ್ಧಿಕ**

ಸೃಷ್ಟಿಸ್ಥಿತಿಲಯದ ಕಾರಣಕೆ ನಾಭಿಯೊಳು ಪರ |
ಮೇಷ್ಠಿಯನು ಪೆತ್ತಿಕ್ಕು ತವನ ಮುಖದೊಳು ಜಗವ |
ದೃಷ್ಟಿಗೋಚರಕೆ ತಂದಖಿಳಜನಜನಿತ ಸ್ಥಾವರ ಜಂಗಮಾದಿಗಳನು ||
ಇಷ್ಟದಿಂದವರವರ ತಾರತಮ್ಯದಿ ಬಲುಹ |
ಕೊಟ್ಟು ನಡೆಸುವ ದೇವ ನೀನೆಯೇಕೋವಿಷ್ಣು |
ಶ್ರೇಷ್ಠ ಶ್ರೀಮೂಲಿಕೆಯ ನರಸಿಂಹ ದೇವ ಮಾರಮಣನೆನ್ನನು ಪಾಲಿಸು || ೧ ||

**ವಚನ**

ಇಂತೀ ಗುರುದೇವಕವಿಪ್ರಾರ್ಥನೆಯಂ ಮಾಡಿ ತತ್ಕಥಾಪ್ರಸಂಗಮಂ ಪೇಳ್ವೆನದೆಂತೆನೆ –

**ದ್ವಿಪದಿ**

ಹಿಮಕರಕುಲಾನ್ವಯ ಪರೀಕ್ಷಿತನು ನಯದಿ |
ವಿಮಲ ಶುಕಯೋಗೀಂದ್ರ ನಡಿಗೆರಗಿ ಮುದದಿ || ೧ ||

ನಮಿಸಿ ಕೇಳಿದ ಭಾಗವತಕಥಾಮೃತದಿ |
ಕಮಲಲೋಚನನು ಅವತರಿಸಿ ಗೋಕುಲದಿ || ೨ ||

ಬಾಲಲೀಲೆಯ ತೋರಿದನಿತು ಸತ್ಕಥೆಯ |
ಪೇಳುತಲಿ ಉದ್ಧರಿಸಿದೆಯೊ ಮುನಿಕುಲಾರ್ಯ || ೩ ||

ಮತ್ತೆ ಶ್ರೀವರನು ಮಧುರೆಗೆ ಪೋಗಿ ಪಥದಿ |
ಒತ್ತಿ ಗಂಟಲ ರಜಕನನು ಸದೆದು ಮುದದಿ || ೪ ||

ಸಾಲೋಕ್ಯಪದವಿಯನು ಚಿಪ್ಪಿಗನಿಗಿತ್ತು
ಮಾಲೆಗಾರಗೆ ಭಾಗ್ಯ ಕರುಣದಿಂದಿತ್ತು || ೫ ||

ಮುರುಟಿರುವ ಕುಬುಜೆಡೊಂಕನೆ ತಿದ್ದಿ ನಡೆದು |
ಮೆರೆವ ಧನು ಮುರಿದು ಗಜವನು ಕೊಂದು ಬಡೆದು || ೬ ||

ಮಲ್ಲ ಚಾಣೂರಮುಷ್ಟಿಕರ ಮರ್ದಿಸುತ |
ಖುಲ್ಲ ಕಂಸಾಸುರನ ಹಿಡಿದೆಳೆದು ಕೊಲುತ || ೭ ||

ಸಕಲ ಜಗದಾಧಾರನುಗ್ರಸೇನನಿಗೆ |
ಪ್ರಕಟದಿಂ ಮಧುರೆಯೊಲಿದಿತ್ತ ಕಥೆಯೆನಗೆ || ೮ ||

ಕೃಪೆಯಿಂದಲರುಹಬೇಕೆನುತಲಡಿಗೆರಗಿ |
ಉಪಚಾರದಿಂದೊಪ್ಪುತೆಂದ ಭೂವರಗೆ || ೯ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಭೂಲಲಾಮನೆ ಕೇಳು ರಾಧಾ | ಲೋಲನಮಲ ಕಥಾಮೃತದ ರಸ |
ಲೀಲೆಯನು ನಿನ್ನಂತೆ ಸೇವಿಪ | ಶೀಲರುಂಟೆ || ೧ ||

ಖತಿಯೊಳಶ್ವತ್ಥಾಮ ಬಿಟ್ಟ | ಸ್ರಾವ ನಿವಾರಿಸಿ ನೀ ಪರೀಕ್ಷಿತ |
ಪತಿಯೆನುತ ಪೆಸರಿಟ್ಟು ಕಾಯ್ದ ಶ್ರೀ | ಪತಿಯು ನಿನಗೆ || ೨ ||

ಅರಿಯದಜ್ಞನೆ ನೀನು ಲಕ್ಷ್ಮೀ | ವರನ ಭಕುತನು ಲೋಕದವರುಪ |
ಕರಕೆ ಕೇಳುವೆ ಪೇಳ್ವೆ ಶ್ರೀನರ | ಹರಿಯ ಕಥೆಯ || ೩ ||

ಶ್ರೀರಮಣ ಗೋಕುಲದೊಳಿರಲಿ | ತ್ತಾ ಮಹಾಕಂಸಾಖ್ಯ ಮಧುರೆಯ |
ಧಾರಿಣಿಯ ಪಾಲಿಸುತಲಿರ್ದನು | ದಾರತನದಿ || ೪ ||

**ಭಾಮಿನಿ**

ರಣದಿಶಾಪಟಮಲ್ಲ ಕಂಸನು |
ಗಣನೆಯಿಲ್ಲದ ಕರಿ ತುರಗ ಭಟ |
ಗಣರಥಾರೋಹರ ಚತುರ್ಬಲವೆರಸಿ ವಿಭವದಲಿ ||
ಮಣಿಖಚಿತ ಪೀಠದಲಿ ಗಗನಾ |
ಮಣಿಯ ಸೋಲಿಪ ತೆರದಿ ಮಂಡಿಸಿ |
ಗಣದಿ ಮಧುರೆಯನಾಳುತಿರ್ದನುದಾರ ತೇಜದಲಿ || ೧ ||

**ರಾಗ ಭೈರವಿ ಝಂಪೆತಾಳ**

ಇಂತು ವೈಭವದೊಳಿರ | ಲಂತಸ್ಥಮನದಿ ಬಹು |
ಚಿಂತೆಯನು ತಾಳಿತನ | ಗಂತಕನು ಜಗದಿ  ‖ ೧ ‖

ಪುಟ್ಟಿ ಬೆಳೆವುತಲೆನ್ನ | ಕುಟ್ಟುವನೆನುತಲೆ ತಲೆ |
ಮೆಟ್ಟ್ಯು ಸಿರಿಯಡರಿದಳು | ದಿಟ್ಟೆ ಚಂಡಿಕೆಯು  ‖ ೨ ‖

ಎನ್ನ ವೈರಿಯ ತಿಳಿದು | ಬನ್ನಿರೆನುತಸುರಾಪ್ತ |
ರನ್ನು ಕಳುಹಿದೆನವರು | ಇನ್ನು ಬರಲಿಲ್ಲ      ‖ ೩ ‖

ಏನ ಮಾಡಲಿಯೆಂದು | ಮೌನದೊಳಗಿರಲು ಅಜ |
ಸೂನು ನಾರದ ನಿವನ | ಸ್ಥಾನಕಯ್ತಂದ      ‖ ೪ ‖

**ರಾಗ ಕೇದಾರಗೌಳ ಅಷ್ಟತಾಳ**

ಹರಿ ಸರ್ವೋತ್ತಮ ಲಕ್ಷ್ಮೀ | ವರ ಸಚ್ಚರಿತ ದಾಮೋ | ದರ ಮುರಹರ ಪಾಹಿ ಮಾಮ್ ||
ಶರಣವತ್ಸಲ ದೀನೋದ್ಧರಣ ಕೌಸ್ತುಭರತ್ನಾ | ಭರಣ ಭೂಷಿತ ಪಾಹಿ ಮಾಮ್     ‖ ೧ ‖

ಮೃಡಸರೋಜಜಸುರ ಗಡಣವಂದಿತ ಕ್ಷೀರ | ಕಡಲಶಯನ ಗೋವಿಂದ ||
ಬಿಡದೆ ರಕ್ಷಿಪುದೆಂದುನುಡಿಸಿ ವೀಣೆಯ ಹಂಸೆ | ಯಡರಿ ಕೀರ್ತಿಸುತ ಬಂದ         ‖ ೨ ‖

ಒಡನೆದ್ದು ಕಂಸ ಮುಂ | ದಡಿ ಯಿಟ್ಟು ನಮಿಸಿ ಕಯ್ | ವಿಡಿದು ಪೀಠವನೇರಿಸಿ ||
ಪಡಿಗದೊಳಡಿಗಳ | ನಿಡುತುದಕದಿ ತೊಳೆ | ದಡಗೆಡೆದರ್ಚಿಸಿದ ‖ ೩ ‖

**ಕಂದ**

ಅಮರಾರಿಯು ಈ ಪರಿಯೊಳು |
ಕಮಲಾಸನಕುವರಂಗಭಿವಂದಿಸಿ ಭಕ್ತಿಯೊಳ್ ||
ನಮಿಸುತ ನಿಂದಿರುತಿರಲಾ |
ಸುಮನಸ ಋಷಿಯವನಂಗವ ತಡವರಿಸುತ್ತೆಂದು      ‖ ೧ ‖

**ರಾಗ ಸಾಂಗತ್ಯ ರೂಪಕತಾಳ**

ಮಗನೆ ಕೇಳ್ ನಿನ್ನಂಥ | ಅಗಣಿತ ಸೌಭಾಗ್ಯ | ಜಗದೊಳಗಾರಿಗುಂಟಿನ್ನು ||
ಸುಗುಣ ಕಾಂತಿಯು ತಗ್ಗಿ | ಮೊಗವು ಕಪ್ಪೆಸಗಿದ | ಬಗೆಯ ಪೇಳೆನಗೆ ನೀನರಸ    ‖ ೧ ‖

ಪರಮಪ್ರೀತಿಯ ಶಿಷ್ಯ | ರಿಹರೆ ಕೇಳ್ ನಿನ್ನಂತೆ | ಧರಣಿಯೊಳೆನಗೆ ಭೂವರನೆ ||
ಕರಗದೆ ಮನದಲ್ಲಿ | ಕೊರತೆಯನೊರೆಯಲು | ಅರುಹುವೆ ಕೇಳುಪಾಯುವನು     ‖ ೨ ‖

**ರಾಗ ಕಾಂಭೋಜಿ ಝಂಪೆತಾಳ**

ಪೇಳನರಿಯೆನುಯೆನ್ನ | ಬಾಳುವೆಗೆ ಬಂದೆಡರ | ಕೇಳಲಿಲ್ಲವೆಯಮರ ಮುನಿಪ ||
ಶೀಲೆ ದೇವಕಿಯುದರ | ದಾಲಯದೊಳುದಿಸೆ ಶಿಶು | ಬಾಲೆ ಚಂಡಿಕೆಯೆಂದೆನಿಪ್ಪ || ೧ ||

ಪುಟ್ಟಿದವಳಸು ಕಳಚಿ | ಕುಟ್ಟುವೆನುಯೆನುತ ಸೆಳೆ | ದಿಟ್ಟೆ ಗಗನಾಂತರದೊಳವಳು ||
ಮೆಟ್ಟುತೆನ್ನಯ ತಲೆಯ | ದಿಟ್ಟೆ ಚಿಗಿದಳು ಅಮರ | ಬಟ್ಟೆವಿಡಿದೆನಗೆ ಅರುಹಿದಳು || ೨ ||

ಮುದದಿ ನಿನ್ನನ್ನು ಕಳಚಿ | ಸದೆವನೊಬ್ಬನು ಜಗದೊ | ಳುದುಭವಿಸಿ ಬಳೆವನೆಂದೆನುತ ||
ಚದುರೆ ಯವಳೆನಗರುಹಿ | ಬೆದರಿಕೆಯ ಮನಸಿನಲಿ | ಹುದುಗಿಸುತ್ತಡರಿದಳು ನಭಕೆ || ೩ ||

ಚಿಗಿದವಳು ಗಮಿಸಲಾ | ಬಗೆಯರಿಯಲೆನುತ ಸಹ | ಸಿಗ ಶಕಟ ಪೂತನಿ ಪ್ರಲಂಬ ||
ವಿಗಡ ವತ್ಸಾಸುರನ | ಮಿಗೆ ಧೇನುಕರ | ಜಗವ ಶೋಧಿಸಲೆನುತ್ತವರ || ೪ ||

ಪರಿಯನರಿವರೆ ಪೋದ | ವರನು ಕಾಣದೆ ಮನದಿ | ಕರಗುವೆನು ತಾಪಸೋತ್ತಮನೆ ||
ಧರಣಿಯನು ಸಂಚರಿಪ | ಕರುಣಿ ನೀ ತಿಳಿದರೆನ | ಗುರುಹು ಬೇಗದೊಳು ಮುನಿವರನೆ || ೫ ||

**ರಾಗ ಕೇದಾರಗೌಳ ಅಷ್ಟತಾಳ**

ಕೇಳು ಸುಶೀಲ ನೃಪಾಲ ಸತ್ಕಥೆಯ |
ಪೇಳುವೆ ನಿನ್ನಯ ಮೂಲ ಸಂಗತಿಯ || ಕೇಳು ಸುಶೀಲ || ಪ ||

ಪಿತನುಗ್ರಸೇನನೆಂದೆನುತ ನೀ ಮನದಿ ಸ |
ನ್ಮತ ಗೊಂಡಿರುವೆಯವನಲ್ಲ ಮುನ್ನೋರ್ವನು | ನ್ನುತ ದ್ರವಿಳನೆಂಬ ತಾನು ||
ಗಂಧರ್ವ ಕೂ | ಡುತ ನಿನ್ನ ಮಾತೆಯನು | ಪುಟ್ಟಿದೆ ನಿನ್ನ |
ಸ್ಥಿತಿಯುಸಿರುವೆನು ನಾನು | ಪೂರ್ವದೊಳು ನೀ |
ನತಿ ಬಲಾನ್ವಿತ ಕಾಲನೇಮಿಯೆಂಬಾತನು || ಕೇಳು ಸುಶೀಲ || ೧ ||

ಯಾದವರೆಲ್ಲ ನಿನ್ನವರೆಯೇ ಮರುಳೆ ಮು |
ನ್ನಾದಿಯೊಳಜ ಮುಖ್ಯ ಸುರರೆಲ್ಲ ದೂರೆ ಶ್ರೀ | ಮಾಧವ ದೇವಕಿಗೆ ||
ಬಾಲಕನಾಗಿ | ಮೋದದಿ ಪುಟ್ಟಲಾಗೆ | ಈ ಶೌರಿ ವಿ |
ನೋದದಿ ಗೋಕುಲಕೆ | ಒಯ್ದಿರಿಸಿ ಕೊಂ |
ಡಾದಿಮಾಯೆಯನು ತಂದಿತ್ತನು ನಿನಗೆ | ಕೇಳು ಸುಶೀಲ || ೨ ||

ಸುರರು ಯಾದವರು ಎಂದರಿತುಕೊ ಮನದಿ ನೀ |
ನರಿಯಲಟ್ಟಿದ ವತ್ಸ ಬಕ ಪ್ರಲಂಬಾದ್ಯರ | ತರಿದ ಶ್ರೀಹರಿಯು ತಾನು ||
ಬಿಲ್ಲ ಬ್ಬವೆಂ | ದರುಹಿ ನಿನ್ನಾಪ್ತರನು | ಅಟ್ಟುತ ಕರೆ |
ತರಿಸು ಇಲ್ಲಾತನನ್ನು | ಕೊಲುತಲೀ |
ಧರಣಿಯಾಳುತ ಸುಖದಿರು ಎಂದರುಹಿದನು || ಕೇಳು ಸುಶೀಲ || ೩ ||

**ಭಾಮಿನಿ**

ನುಡಿಯ ಕೇಳುತ ಕಂಸ ಕಂಗಳು |
ಕಿಡಿಗೆದರಿ ಝುಡಿದಾರ್ಭಟಿಸಿಯಡಿ |
ಗಡಿಗೆಯೌಡೊತ್ತುತ್ತ ಶೌರಿಯ ಕಡಿವೆನೆಂದೆನುತ ||
ಮಿಡುಕಿ ಲಂಘಿಸಿ ತುರುಬ ಹಿಡಿದೆಡ |
ಗೆಡಹಿ ಖಡ್ಗವ ಚಿಮ್ಮಿ ಕೊರಳಿಂ |
ಗಿಡಲು ಮುನಿ ನಾರದನು ಕಂಠವ ಬಿಡಿಸುತಿಂತೆಂದ || ೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಭಳಿರೆ ಭೋಜನೃಪಾಲ ಮೂರ್ಖರ | ತಿಲಕ ವಿಷ ತುಂಬಿರುವ ಉರಗನ |
ಗಳವ ಕತ್ತರಿಸದೆಯೆ ಬಾಲವ | ಕಳಚಲೇಕೆ || ೧ ||

ನಂದಗೋಕುಲದೊಳಗಿರುವನಾ | ನಂದಮೂರುತಿ ವಿಷ್ಣುವಿನ ಬಿ |
ಟ್ಟೆಂದು ವಸುದೇವನನು ಕೊಲುವುದು | ಚಂದವೇನೈ || ೨ ||

ಇವನ ಕೊಲಲೋಸುವೆ ನಾ ಬಂ | ದವನೆನುತು ಜನರೆನ್ನ ದೂರರೆ |
ಜವಗೆ ತುತ್ತಾಗದಿರು ಬಿಡು ನೀ | ನವನಿಯಧಿಪ || ೩ ||

**ವಾರ್ಧಿಕ**

ಋಷಿವರ್ಯನೀ ತೆರದೊಳರುಹಿಸುತ ಬಿಡಿಸಲಾ |
ಗಸಮಬಲ ಕಂಸನಾಕ್ಷಣ ಶೌರಿದೇವಕಿಗೆ |
ವಿಷಮಸಂಕಲೆ ಕಾಲಿಗವಚಿಸುತ ಬಂಧನವನೆಸಗುತಿರಲಾಗ ಮುನಿಪ ||
ಝುಷ ಕೂರ್ಮ ಕ್ರೋಡ ಕನಕಸುರಹರ ಬಲಿಬಂಧ |
ಪಶುಪಾಲಕ ಸಮದಶಮುಖನಾಸ ನರಪೋಷ |
ಭಸತಾಂಗ ಕಲ್ಕಿಯೆಂದೆನುತುಸರಿ ನುತಿಸ್ಯಮರ ಋಷಿ ನಭಕ್ಕಡರೆ ಬಳಿಕ || ೧ ||

**ಭಾಮಿನಿ**

ಕರುಣನಿಧಿಯನು ಸ್ಮರಿಸಿ ನಾರದ |
ತೆರಳಲಿತ್ತಲು ಕಂಸ ಕೇಶಿಯ |
ಕರೆದು ನಂದನ ಮನೆಗೆ ಹೋಗುರುತರದಿ ಹರಿಬಲರ ||
ತರಿದು ಬಾರೆಂದಟ್ಟಿಯಿತ್ತಲು |
ಭರದಿ ಸಚಿವರಿಗಾಪ್ತ ಮಾವಂ |
ತುರು ಪ್ರಬಲ ಚಾಣೂರ ಮುಷ್ಟಿಕರೊಡನೆಯಿಂತೆಂದ || ೧ ||

**ರಾಗ ಮಧುಮಾಧವಿ ಆದಿತಾಳ**

ಕೇಳಿ ಸುಭಟ ಮಲ್ಲಾಳಿ ಮಂತ್ರಿಗಳು | ಪೇಳುವೆ ನಿಮಗೆಯೆನ್ನಾಲೋಚನೆಗಳು || ಕೇಳಿ || ಪ ||

ಬಂದು ನಾರದನೆನಗಿಂದರುಹಿದ ಮಹಾ | ಸಿಂಧುಶಯನನೆನ್ನಜುಜೆಗೆ ಪುಟ್ಟಿ ||
ಮಂದಭಾಗ್ಯ ಶೌರಿಯು ನಂದಸದನದೊ | ಳಂದು ಬಾಲನ ಬಿಟ್ಟು ಬಂದನೆನುತ್ತ || ಕೇಳಿ || ೧ ||

ಬಗೆಯರಿದು ಶೂರಾತ್ಮಜಗೆ ದೇವಕಿಯಳಿಂಗೆ | ನಿಗಳನಿಕ್ಕ್ಯವರ ಬಂಧನದೊಳಿಟ್ಟೆ ||
ವಿಗಡ ಶ್ರೀಹರಿಬಲರುಗಳ ಬರಿಸುವೆನು | ಜಗದೊಳವರ ನೀವು ಮಗುಚಿ ಕೊಲ್ಲಲು ಬೇಕು || ಕೇಳಿ || ೨ ||

**ರಾಗ ಭೈರವಿ ಅಷ್ಟತಾಳ**

ಕೇಳಯ್ಯ ಕಂಸರಾಯ | ನಾವೆಲ್ಲರು | ಪೇಳುವ ಮಾತ ಜೀಯ ||
ಫಾಲಾಕ್ಷ ಪ್ರಮುಖ ಮುಖ್ಯರ ನಾವು ಗಣಿಸೆವೀ | ಬಾಲಕರಿದಿರಹರೆ || ಕೇಳಯ್ಯ || ೧ ||

ಅಳಿಯಂದಿರು ನಿಮಗೆ | ಕೊಂದರೆ ನಮ್ಮ | ಇಳೆಯೊಳ್ ದೂರರೆ ಕಡೆಗೆ ||
ತಿಳಿದುಕದಕ್ಕಂಜಿ ಪೇಳಿದೆವು ನಿಮ್ಮಯ ಮನ | ದೊಳು ನೋಡಿ ಪೇಳಮಗೆ || ಕೇಳಯ್ಯ || ೨ ||

ಈಸು ನಿನ್ನಯ ಮನದಿ | ಇದ್ದರೆ ಕರೆ | ಸಾ ಶಿಶುಗಳ ಜವದಿ ||
ಗಾಸಿಮಾಡುವೆವು ನಿನ್ನಾಸೆ ತೀರಿಸುತಲಾ | ದೋಷವ ನಿನಗರ್ಪಿಸಿ || ಕೇಳಯ್ಯ || ೩ ||

**ರಾಗ ಶಂಕರಾಭರಣ ಮಟ್ಟೆತಾಳ**

ಧೀರಮಲ್ಲರುಗಳು ಕೇಳಿ | ನಾರದಾಂಕನೆನಗೆ ಪೇಳ್ದ |
ವಾರಿತೆಯನುಸಿರ್ವೆ ಜಗದಾ | ಧಾರ ದೇವನು ||
ಧಾರಿಣಿಯೊಳು ಜನಿಸಿ ಇಳೆಯ | ಭಾರವಿಳಿಸಲೆಂದು ಕುಲ ಸಂ |
ಹಾರ ಗೆಯ್ವನೆಂದು ಅಜಕು | ಮಾರನುಸಿರಿದ || ೧ ||

ಮುನ್ನ ದ್ರವಿಳನೆಂಬ ಖಚರ | ನೆನ್ನ ಜನನಿ ನೆರೆಯಲಾ ಸಂ |
ಪನ್ನ ಪುಟ್ಟಿದೆನು ಜಗದೊ | ಳೆನ್ನ ಬೀಜವು ||
ಇನ್ನು ಕೇಳಿ ಕಾಲನೇಮಿ | ಯೆನ್ನುತೆನಗೆ ಪೆಸರನಾದ |
ಯಾರ್ಣವನು ಪೇಳಿಯನಗೆ | ಮನ್ನಿಸಿದನು || ೨ ||

ಕುಹುಕಿ ಯಾದವರು ಎನಗೆ | ಅಹಿತರವರು ಕೃಷ್ಣಬಲರು |
ಬಹು ಕುತಂತ್ರದಿಂದ ಬರಿಸಿ | ಜವನಿಗೊಪ್ಪಿಸಿ ||
ಸಹಸದಿಂದ ರಾಜ್ಯವಾಳೆಂ | ದ್ವಿಹಿತವಚನ ತಿಳುಹುಮರ |
ನಿವಹದೆಡೆಗೆ ಹಂಸೆಯಡರಿ | ಯಮಿಯು ಪೋದನು || ೩ ||

ಬರುವ ಚತುರ್ದಶಿಯೊಳವರ | ಕರೆಸಿ ಕೊಡುವೆ ಹಸ್ತಿಮಲ್ಲ |
ರುರುಬಲಾನ್ವಿತರು ಕೂಡ್ಯವರ | ಶಿರವ ತರಿವುದು ||
ದುರಿತ ನಿಮಗೆ ಹೊದ್ದದೆನ್ನು | ತರುಹುತಕ್ರೂರನ್ನ ಕರೆದು |
ಕರದಿ ಪಿಡಿದು ವಿಷ್ಟರದಿ ಕು | ಳ್ಳಿರಿಸುತೆಂದನು || ೪ ||

**ರಾಗ ಸುರಟಿ ಏಕತಾಳ**

ಕೇಳು ಸುಗುಣನಿಧಿಯೆ | ಯದುಕುಲ | ಮಾಲಶಿಖಾಮಣಿಯೆ ||
ಬಾಲೆ ಗಾಂಧಿನಿಯುದ ರಾಲಯಕುಮುದ ವಿ |
ಲೋಲಶಶಾಂಕ ಸು | ಶೀಲ ನೆನ್ನಯ ನುಡಿ || ಕೇಳು || ೧ ||

ಮೃಡಸರಸಿಜಮರರು | ದೂರಲು | ಕಡಲ ಶಯನನಿದಿರು ||
ಕೊಡುತಭಯವನವ | ಪೊಡವಿಗವತರಿಸಿ |
ಕೆಡುಹುತೆಮ್ಮನು ಯದು | ಪಡೆಯ ರಕ್ಷಿಪನಂತೆ || ೨ ||

ನಂದಸದನದೊಳಗೆ | ಬಲ ಗೋ | ವಿಂದಿಹರೆಂದೆನಗೆ ||
ಚಂದದಿ ಸುರಮುನಿ | ಯಿಂದೆನಗರುಹಿದ ||
ನಂದದಿ ಗಮಿಸಿ ನೀ | ತಂದು ನಿಲಿಸವರ || ಕೇಳು || ೩ ||

ಬಿಲ್ಲಹಬ್ಬದ ನೆವದಿ | ಚತುರ್ದಶಿ | ಯಲ್ಲವರನು ಜವದಿ ||
ನಿಲ್ಲದೆ ಕರೆತಂ | ದಿಲ್ಲಿಗೊಪ್ಪಿಸೆ ಗುದ್ದಿ |
ಕೊಲ್ಲುವೆ ನಾ ಮನಸಲ್ಲೆರಡೆಣಿಸದೆ || ಕೇಳು || ೪ ||

ನಿನ್ನ ತೆರದೊಳೆನಗೆ | ಆಪ್ತರು | ಇನ್ನಿಲ್ಲ ಜಗದೊಳಗೆ ||
ಎನ್ನಭ್ಯುದಯದ ಸಂ | ಪನ್ನ ನೀ ಪೋಗಲೆ |
ಪನ್ನಗಾರಿಧ್ವಜ | ನನ್ನು ಬರಿಸು ಬೇಗ || ಕೇಳು || ೫ ||

**ಕಂದ**

ಎಂದಾ ಮಾತಂ ಕೇಳುತ | ಗಾಂಧಿಜನೊಪ್ಪುತ ಸಂತಸ ತಾಳ್ದಾ ಕ್ಷಣದೊಳ್ ||
ಬಂದಾತನ್ಮನೆಗನಿತರೊ | ಳಂದದಿ ರವಿ ಪಶ್ಚಿಮಾಬ್ಧಿಗಿಳಿಯಲ್ ಹಂಬಲಿಸಿದಂ ||

**ರಾಗ ಕೇದಾರಗೌಳ ಅಷ್ಟತಾಳ**

ಧರಣೀಶ ಕೇಳ್ ಮುರಹರನ ಕಾಂಬರ್ತಿಯೊ | ಳೊರಗದೆಯಿರುಳಿನಲ್ಲಿ ||
ಮರುಗಿ ಎದ್ದೆದ್ದು ಬಂದ್ಹೊರಗೆ ಯಾದವ ಪೂರ್ವ | ಗಿರಿಯತ್ತ ನೋಡುತ್ತಲಿ || ೧ ||

ಉದಯಾದ್ರಿಗಡರಿ ಬಂದುದಿಪ ಭಾಸ್ಕರನೇಕೆ | ನ್ನಿದಿರಿಗೆ ಬರಲೊಲ್ಲನು ||
ಮಧುದ್ವೇಷಿ ಹರಿಯ ಶ್ರೀಪದವ ಕಾಣುವ ಯೋಗ | ವಿಧಿಯು ತಪ್ಪಿಸುವನೇನೋ || ೨ ||

ತ್ರಿದಶಮೌನಿಗಳ ಸದ್ಹೃದಯದಿ ನೆಲಸಿಹ | ಪದುಮನಾಭನ ಪಾದವ ||
ಮುದದಿ ಕಾಂಬೆನೊ ಕಾಣದಾಪೆನೊ ಬಲ್ಲರಾ | ರಿದನು ಪುಣ್ಯೋದಯವ || ೩ ||

ಶ್ರುತಿಗಳಾಶ್ರಯಿಸಿ ಸಂಸ್ತುತಿಸಿ ಕಾಣಿಸದ ಶ್ರೀ | ಪತಿ ಕೃಷ್ಣ ಮೂರುತಿಯು ||
ಮತಿಗೆ ಪ್ರತ್ಯಕ್ಷ ಗೋಚರಿಸಲು ಎನ್ನಂತೆ | ಕ್ಷಿತಿಯೊಳಿನ್ನಾರಿಹರು || ೪ ||

**ಭಾಮಿನಿ**

ಶರಣಜನಸುರಧೇನು ಕರುಣಾ |
ಕರ ಸುಧಾರ್ಮಿಕ ವಿಷ್ಣು ಶ್ರೀ ನರ |
ಹರಿಯೆ ನಿನ್ನನು ಕಂಡೆನಾದಡೆ ತಾನೆಂದ ||
ದರಣಿಪತಿ ಕೇಳ್ ಮೊದಲು ನಿನಗಾ |
ನರುಹಿದಾ ಖಳ ಕೇಶಿಯೆಂಬನ |
ತರಿದು ಹರಿಯಿರಲಿತ್ತ ಪೂರ್ವಾ ಚಲದಿ ರವಿ ಮೆರೆದ || ೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅತ್ತ ರವಿಯುದಯಾಚಲಕೆ ಬರ | ಲಿತ್ತಲಕ್ರೂರನು ಭವಾಬ್ಧಿಯ |
ನುತ್ತರಿಪೆನೆಂದೆನುತ ರಥಕಡ | ರುತ್ತ ಬಂದ || ೧ ||

ಏಸು ಜನ್ಮಾಂತರದಿ ತಪವ ವಿ | ಶೇಷ ಪ್ರಕೃತಿಯೊಳೆಸೆಗಿದನೊ ನಾ |
ಕೇಶವನ ದರುಶನವು ದೊರಕುವು | ದೀ ಸಮಯದಿ || ೨ ||

ಎಂದು ಜಿಹ್ವಾಗ್ರಹದಿ ಮುಕುಂದ ಗೋ | ವಿಂದಯೆನುತಡಿಗಡಿಗೆ ನುತಿಸುತಾ |
ನಂದಬಾಷ್ಪವನಿಳುಹಿ ರಥದಲಿ | ಬಂದ ಜವದಿ || ೩ ||

ಬರಬರಲು ವೃಂದಾವನದಿ ಶ್ರೀ | ಹರಿಯ ಹೆಜ್ಜೆಯ ಕಂಡು ರಥದಿಂ |
ಧರೆಗೆ ಧೊಪ್ಪನೆ ಕೆಡೆದು ಹುಡಿಯೊಳು | ಹೊರಳುತಿರ್ದ || ೪ ||

ಚರಣಧ್ವಜ ವಜ್ರಾಂಕುಶದ ಮಹಾ | ಬಿರುದ ರೇಖಾನ್ವಿತವು ಕ್ಷಿತಿಯೊಳು |
ಮೆರೆದುವೊತ್ತಿಹ ಕುರುಹ ಕಾಣುತ | ಪೊರಳ್ದ ರಜದಿ || ೫ ||

**ರಾಗ ಕೇದಾರಗೌಳ ಝಂಪೆತಾಳ**

ತ್ರಾಹಿ ಶ್ರೀವರನೆ ದೇವ | ಜಯತು ಜಯ | ತ್ರಾಹಿ ಸುಜನರ ಸಂಜೀವ ||
ತ್ರಾಹಿ ನಿನ್ನಂಘ್ರಿಯುಗವ | ನಿದ ಕಂಡೆ | ತ್ರಾಹಿ ಜಯಿಸಿದೆನು ಭವವ || ೧ ||

ಅಡಿಯೆರಡಳೆದು ಪೂರ್ವದಿ | ಖರ್ಪರವ | ನೊಡೆದಮರನದಿಯ ನಖದಿ ||
ಪಡೆದು ಬಲಿಯ ಪಾತಾಳದಿ | ನಿಲ್ಲಿಸಿದೆ | ನಡೆಯದೇನಿದೆ ಚರಣದಿ || ೨ ||

ಪದನಖಾಗ್ರದೊಳಹಲ್ಯೆಯ | ನುದ್ಧರಿಸಿ | ಮುದದಿ ಋಷಿಗಿತ್ತೆ ಸತಿಯ ||
ಒದೆದು ದುಂದುಭಿಯಟ್ಟೆಯ | ಹಾರಿಸಿದ | ಮಧಿಕವಿದೆ ಚರಣಜೀಯ || ೩ ||

ಖೂಳ ಶಕಟಾಖ್ಯಸುರನ | ಒದೆದು ಗೋ | ನಾಳಿಯೊತ್ತುತಲಹಿತನ ||
ಸೋಲಿಸುತಲಬುಧಿಗಾಗ | ಮುಟ್ಟಿಸಿದ | ಕಾಲ ಹೆಜ್ಜೆಗಳಿದೀಗ || ೪ ||

ವಿಧಿಭವಾದ್ಯರು ಮೌನದಿ | ಧ್ಯಾನಿಸಿದ | ರಿದನು ಕಾಣರು ಠಾಣದಿ ||
ಇದು ಎನ್ನ ಮಾಂಸಾಕ್ಷಿಗೆ | ಗೋಚರಿಸಿ | ತಿದಿರಾರು ಜಗದೊಳೆನಗೆ || ೫ ||

ಎನುತ ಮೆಯ್ಮರೆದು ಕರದಿ | ಹಾರಿಸುತ | ತನುವ ಹೂಳಿದನು ರಜದಿ ||
ಮನಕರಗಿ ಹೊರಳುತೆದ್ದ | ರಥಕಡರಿ | ಘನ ಬೇಗದಿಂದ ನಡೆದ || ೬ ||

**ರಾಗ ಭೈರವಿ ತ್ರಿವುಡೆತಾಳ**

ಬಂದನಾಗ | ರಥದಲಿ | ಬಂದನಾಗ || ಪ ||

ಬಂದನಾ ಗೋಕುಲದೊಳಿರುತಿಹ | ಸಿಂಧುಶಯನನ ಕಾಂಬ ತವಕದಿ || ಬಂದನಾಗ || ಅ ||

ಬರುತ ಮನದಲಿ ಹರಿಯ ನೆನೆಸಿದ | ದುರುಳ ಕಂಸನ ಚರನೆನುತ ಶ್ರೀ |
ಹರಿಯು ಎನ್ನನು ಕರೆಯನೋ ಮೇಣ್ | ಕರವಿಡಿದು ಮನ್ನಿಪನೊ ನಾನದ |
ನರಿಯೆನೀ ಬ್ರಹ್ಮಾಂಡಮುದರದೊ | ಳಿರಿಸಿಕೊಂಡಿಹನೆಂದು ಶ್ರುತಿಗಳು |
ಒರಲುತಿವೆಯೆನ್ನೊಬ್ಬನನು | ತಾ | ಕರುಣಿಸದೆ ಬಿಡನೆನುತ ತ್ವರಿತದಿ || ಬಂದನಾಗ || ೧ ||

ನಳಿನಭವಭವವಂದ್ಯ ನಿಗಮಾ | ವಳಿಗಗೋಚರನೆಂಬ ಬಿರುದನು |
ತಳೆದು ಮೆರೆದಿಹುದೆನುತ ನಂದನ | ನಿಳೆಯದೊಳಗವತರಿಸಿ ಕೆಳೆಯರ |
ತಲೆಗೆ ಡೊಣವದಿದೆತ್ತ ಗೋಕುಲ | ವಲಯದೊಳು ನರನಾಟಕವನನು |
ಗೊಳಿಸಿರುವ ಪರವಸ್ತುವಿನ ಪದ | ನಳಿನಕೆರಗದೆ ಬಿಡೆನೆನುತ್ತಲೆ || ಬಂದನಾಗ || ೨ ||

ಬರಲು ಶತಸಾವಿರ ದಿವಾಕರ | ತೆರೆದ ಪ್ರಭೆಯೊಳಗಿರುವ ಅರಮನೆ |
ಗಿರಿಸಿರುವ ಕಲಶವನು ಕಾಣುತ | ಶಿರವ ಬಾಗಿಸುತಿಳಿದು ರಥವನು |
ಧರೆಗೆ ದೊಪ್ಪನೆ ಕೆಡೆದು ದಂಡದೊ | ಲೆರಗಿ ಮುಂದುರುತರದಿ ಬರುತಿರೆ |
ಭರದಿ ದ್ವಾರವ ದಾಂಟಿ ವೊಳಮಂ | ದಿರವ ಪೊಗಲನಿತರೊಳು ಹರಿಯನು || ಕಂಡಾಗ || ೩ ||

**ರಾಗ ಶಂಕರಾಭರಣ ಅಷ್ಟತಾಳ**

ಕಂಡನು | ಶ್ರೀಲೋಲನ ಕಂಡನು || ಪ ||

ಕಂಡನು ರತ್ನವಿಷ್ಟರದಿ ಶ್ರೀಹರಿಯನು |
ದ್ದಂಡ ಮೂರುತಿಯ ಬ್ರಹ್ಮಾಂಡನಾಯಕನನ್ನು || ಕಂಡನು || ಅ ||

ಚರಣನೂಪುರ ಗೆಜ್ಜೆ ಪರಿಯ | ಸೊಂಪಿ | ಕ್ಕೆರಕ ನೇವಳ ಸರಪಣಿಯ |
ಇಪ್ಪ | ಕೊರಳ ಕೌಸ್ತುಭಹಾರ ಮಣಿಯ | ರತ್ನ | ಹರಳಿಟ್ಟ ಭುಜಕೀರುತಿಯ ||

ದಿವ್ಯ | ಕರದೊಳೊಪ್ಪುವ ಶಂಖ ಚಕ್ರವ ಪಿಡಿದ ಸುಂ |
ದರಲಲಾಟದಿ ಮೆರದಿರುವ ಶ್ರೀನಾಮವ || ಕಂಡನು || ೧ ||

ನಲಿದು ತೂಗುವ ಕುಂಡಲಗಳ | ಚೆಲ್ವ | ತಲೆಗಿಟ್ಟ ಮುಕುಟ ಹೀಲಿಗಳ |
ಉಟ್ಟು | ಹೊಳೆವ ಪೀತಾಂಬರಾದ್ಯಖಿಳ | ಕಂಡು | ಮುಳುಗುತ್ತಾನಂದಬಾಷ್ಪಗಳ ||
ಕಣ್ಣೊ | ಳಿಳುಹಿಸಿ ದಂಡದಂತಿಳೆಯೊಳೊರಗುತಲೆ |
ತಳುವದೆದ್ದೆದ್ದು ತಾ ನಲಿದು ಕೀರ್ತಿಸುತಲೆ || ಕಂಡನು || ೨ ||

ಬಲದೊಳು ನಂದ ಯಶೋದಾ | ಮುಂದೆ ಹಲಧರ ಕುಳಿತ ವಿನೋದ |
ಕೃಷ್ಣ | ಕರದೊಳೂದುವ ವೇಣುನಾದ | ರುದ್ರ | ಬಲವೈರಿನುತಿಪ ಶ್ರೀಪಾದ ||
ಕಂಡು | ನಳಿನನಾಭನೆಯೆನ್ನನುಳುಹಿಸೊ ದೇವಯೆಂ |
ದಿಳುಹಿದ ತನ್ನಯ ತಲೆಯ ಶ್ರೀಚರಣದಿ || ಕಂಡನು || ೩ ||

**ವಚನ**

ಇಂತಕ್ರೂರನು ಶ್ರೀಕೃಷ್ಣನ ದಿವ್ಯ ಮೂರ್ತಿಯಂ ಕಂಡು ಏನೆಂದು ಸ್ತುತಿಸುತಿರ್ದನೆನೆ –

**(ಗದ್ಯ) ಚೂರ್ಣಿಕೆ**

ಶ್ರೀಮದಖಿಲಾಂಡಕೋಟಿ ಬ್ರಹ್ಮಾಂಡನಾಯಕಂ ಅಜಭವೇಂದ್ರಾದಿವೃಂದಾರಕನಿಕರಶರಣಜನ ಸಹಾಯಕಂ ಕಪಟನಾಟಕಸೂತ್ರಧಾರಿ ಲೀಲಾವಿನೋದಾನಂತಾವತಾರಂ ದುರ್ಜನ ಪ್ರಾಣಾಪಹಾರಂ ಶ್ವೇತದ್ವೀಪಾನಂತಾಸನ ವೈಕುಂಠಾಧಿವಾಸಂ ಶ್ರೀಲಕ್ಷ್ಮೀಮನೋವಿಲಾಸಂ ಮಾರ್ಕಂಡೇಯಮೃಕಂಡು ಪರಾಶರಾಗಸ್ತ್ಯ ಗೌತಮಾತ್ರಿ ವಿಶ್ವಾಮಿತ್ತ ಗಾರ್ಗ್ಯ ಭರದ್ವಾಜ ಸನಕಸನಂದನ ನಾರದಾದಿ ಋಷಿ ಜನಸಮುದಾಯಾರ್ಚಿತ ಧ್ವಜವಜ್ರಾಂಕುಶರೇಖಾನ್ವಿತದಿವ್ಯಚರಣಾರವಿಂದಂ ಶ್ರೀಗೋವಿದಂ ಸೌಂದರ್ಯಮಯದೇವಕ್ಯುದರಾಬ್ಧಿ ಪೂರ್ಣಚಂದ್ರಂ ಸರಸ ಸದ್ಗುಣಸಾಂದ್ರಂ ವೃಂದಾವನ ಸಂಚಾರಿತ ನಂದಕಂದ ಮುಕುಂದ ಗೋಪೀಜನ ಮನಮೋಹಿತಮುದಾರಂ ಗೋಕುಲೋದ್ಧಾರಂ ಶಕಟ ಪ್ರಲಂಬ ಪೂತನಿ ಧೇನುಕ ವತ್ಸ ವಾತಾಸುರ ಬಕಾಶ್ವ ಕೇಶಿ ವೃಷಭಾಸುರಾದ್ಯಖಿಳಕುಜನಕುಠಾರಂ ಸಕಲ ಜಗದಾಧರಂ ಮುರಲೀಗಾನವಿನೋದಿ ವಜ್ರ ವೈಡೂರ್ಯ ಗೋಮೇಧಿಕ ಪುಷ್ಯರಾಗ ಪ್ರವಾಳ ಮೌಕ್ತಿಕರತ್ನಮಾಲಾಲಂಕೃತ ಶ್ರೀತರುಣತುಲಸೀಮಾಲಾಶೋಭಿತಂಧ್ರುವಪ್ರಹ್ಲಾದಾಂಬರೀಷ ಸುದಾಮೋದ್ಧವ ರುಕ್ಮಾಂಗದ ಧರ್ಮಾಂಗದ ವಿದುರ ಭೀಷ್ಮ ದ್ರೋಣ ಯುಧಿಷ್ಠಿರ ವಿಜಯ ಬಲಿ ವಿಭೀಷಣಾದಿ ಭಾಗತವತಜನನಿಕರಾರ್ಚಿತದಿವ್ಯ ಶ್ರೀಚರಣಂ ಗೋವರ್ಧನೋದ್ಧರಣಂ ಮಮ ರಕ್ಷಕ ಜಗನ್ನಿ ವಾಸಮಾದಿನಾರಾಯಣಂ ರಮಾರಮಣದೇವಂ ಶ್ರೀಕೃಷ್ಣಂ ಭಜೇಽಹಂ ಭಜೇಽಹಂ ಭಜಾಮಿ ||

**ಭಾಮಿನಿ**

ಅರಸ ಕೇಳೈ ವಿಮಲ ವಿಶ್ವಂ |
ಭರನ ನುತಿಸಿಯಕ್ರೂರನೊಡಲನು |
ಚರಣ ಕಮಲದೊಳಿಳುಹಿ ಮತ್ತೆದ್ದೆರಗಿದನು ಪದಕೆ ||
ಭರದಿ ಸುಖಬಾಷ್ಪವನು ಚರಣದಿ |

ಸುರಿದು ಮತ್ತೆರಗುತಿರೆ ಕರುಣಾ |
ಕರನು ಭಕುತನ ಶಿರವ ನೆಗಹುತ ಲಪ್ಪಿದನು ಬಿಡದೆ || ೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಜಲಧಿಸುತೆಯಳನಪ್ಪುವಾ ಮೃದು | ಚೆಲುವ ತೋಳಿನೊಳೆಳೆದು ಭಕುತನ |
ತೊಲಗಿಸದೆ ಬಿಗಿದಪ್ಪಿದನು ಬರ | ಸೆಳೆದು ಬಿಡದೆ || ೧ ||

ಕಡು ದಯದೊಳಾಸನವನಡರಿಸು | ತಡಿಗಳನು ತೊಳೆದರ್ಘ್ಯಪೂಜೆಯ |
ಬಿಡದೆ ರಚಿಸ್ಯುಣಿಸುತ ಸುಭಾಷಿತ | ನುಡಿಯುಸಿರಿದ || ೨ ||

ಬಾಂಧವನು ನೀನೆಮಗೆ ನಮ್ಮಯ | ಮಂದಿರಕೆ ಬರಲಿಂದು ಸುದಿನವು |
ಸಂದುದೆಮ್ಮಯ ಕುಲ ಪವಿತ್ರತೆ | ಗೆಂದು ನುಡಿದ || ೩ ||

ದೇವಕನು ದೇವಕಿಯು ಶೌರಿಯು | ಮಾವನುಗ್ರಸೇನಾಖ್ಯ ಯದುಕುಲ |
ಠೀವಿಯೊಳಗಿರುತಿಹರೆ ಮಧುರೆಯ | ಭೂವಲಯದಿ || ೪ ||

ಮಾನನಿಧಿ ನೀ ಬಂದ ಕಾರಣ | ವೇನದರುಹೆನಲೆದ್ದು ದೈನ್ಯದಿ |
ದಾನವಾಂತಕಗೆರುಗುತೆಂದ ನಿ | ಧಾನದಿಂದ || ೫ ||

**ರಾಗ ಕಾಂಭೋಜಿ ಝಂಪೆತಾಳ**

ಜಯತು ಜಗದೀಶ ಮಹಾ | ಭಯನಿವಾರಣ ನೀನೇನ | ರಿಯಲೊಲು ಕೇಳುವೆಯ ದೇವ ||
ದಯದಿ ಕೇಳಾದರೆ | ಮ್ಮಯ ಕುಲಕೆ ಬಂದ ಅಪ | ಜಯವ ಪೇಳುವೆ ಪರಾಭವವ || ೧ ||

ಸುರಮುನಿಯು ಬಂದರುಹಿ | ದನು ಖಳಾಧಮಗೆ ಶ್ರೀ | ಹರಿಯೆ ನೀ ಜನಿಸಿದಾಕ್ಷಣದಿ ||
ಭರದಿ ತಂದಿಲ್ಲಿ | ನ್ನಿಟ್ಟು ಶೌರಿಯ | ಮಾಯಾ | ತರುಣಿಯನು ತಂದಿತ್ತನೆನುತ || ೨ ||

ಶಕಟ ವಾತಾಸುರನ | ಬಕ ಧೇನುಕನ ಪ್ರಲಂ | ಬಕಶ್ವಾಸುರ ವೃಷಭಾಸುರರ ||
ಸಕಲರನು ತರಿದು ಯದು | ನಿಕರ ಪಾಲಿಪನೆಂದು | ಯುಕುತದೊಳಗರುಹಿದನು ಮುನಿಪ || ೩ ||

ಕೇಳಿದಾಕ್ಷಣದಿ ಖಳ | ಬಾಳಗೊಡೆನೆನುತ ಯದು | ಜಾಲವನು ಹಿಡಿತರಿಸುತವರ ||
ಕಾಲಿಗಳಿಗವಚಿ ನಿಗ | ಳವ ಬಂಧಿಸಿದನು ಶ್ರೀ | ಲೋಲ ಕೇಳೆನ್ನ ಬಿನ್ನಪವ || ೪ ||

ಮಿಕ್ಕ ಯಾದವರು ಬಹು | ದಿಕ್ಕಿಗೋಡಿದರೆನ್ನ | ಠಕ್ಕಿಸುತ್ತಿಲ್ಲ ಕಳುಹಿದನು ||
ಒಕ್ಕಣಿಸಲಿನ್ನೇನು | ದುಃಖಿಯಾಗಿಹೆನೆನಲು ನಕ್ಕನಸುರಾರಿ ಹರುಷದಲಿ || ೫ ||

**ರಾಗ ಶಂಕರಾಭರಣ ತ್ರಿವುಡೆತಾಳ**

ಕೇಳು ಕೃತವರ್ಮಕಸಹೋದರ | ಪೇಳ್ವೆ ನಾ ನಿನಗೀಗ ಯದುಕುಲ |
ಜಾಲವೆಲ್ಲವ ದಣಿಸಿದನೆ ಮಹ | ಖೂಳನವನು || ೧ ||

ತಾಳಿ ದಿನವು ಸಮೀಪವಿದೆ ನಿ | ರ್ಮ್ಮಾಳಿದನಿಗೇನಿನ್ನು ಕೃ |
ಪಾಳು ಶಿವ | ತಾ ಕರುಣಿಸದೆ ಬಿಡ | ಕೇಳಿ ನಿಮಗೆ || ೨ ||

ಈ ತೆರದೊಳರುಹುತ ಕೃಪಾನಿಧಿ | ಮಾತೆಗೆರಗಿದ ಪಿತಗೆ ಸಹ ಸಹ |
ಜಾತರೊಡನಿಂತೆಂದ ಲಕ್ಷ್ಮೀ | ನಾಥನೊಲಿದು || ೩ ||

ಬಿಲ್ಲಹಬ್ಬವ ನಡೆಸುವನು ಗಡ | ಮಲ್ಲ ಕಂಸನು ದಯದಿ ತಾ ನ |
ಮ್ಮೆಲರನು ಬರಲೆನುತಲಟ್ಟಿದ | ನಿಲ್ಲಿಗಿವನ || ೪ ||

ದಧಿಮೊಸರ ಭಾಂಡಗಳ ಶಕಟದಿ | ಉದಯದೊಳ ಗತಿ ಬೇಗ ತುಂಬಿಸಿ |
ಮುದದಿ ಕೆಳೆಯರು ಸಹಿತ ಪೊರಡಲಿ | ಮಧುರೆಗಿನ್ನು || ೫ ||

**ಭಾಮಿನಿ**

ಇಂದುವಂಶಾಧಿಪನೆ ಕೇಳರ |
ವಿಂದನಾಭನು ಕೆಳೆಯರೊಡನಾ |
ನಂದದಿಂ ಮಧುರೆಗೆ ವಿನೋದದಿ ಪೊರಟನಾಲಯವ ||
ಇಂದುವದನೆಯರರಿತು ಧೈರ್ಯವ |
ಕುಂದಿ ಮರುಗುತಲೊಂದು ಠಾಣದಿ |
ಬಂದು ನೆರೆವುತ ತಮ್ಮತಮ್ಮೊಳಗೆಂದ ರಬಲೆಯರು || ೧ ||

**ರಾಗ ಘಂಟಾರವ ಏಕತಾಳ**

ಸಖಿಯರು ಕೇಳಿರೀಗ | ಪಯಣವ ಗೆಯ್ಸು | ಬಕವೈರಿ ಮಧುರೆಗೀಗ ||
ಭಕುತವತ್ಸಲನ ಭೋಗ | ತಪ್ಪಿತಮ್ಮಮ್ಮ | ವಿಕಳಿಸಿತೆಮ್ಮ ಯೋಗ || ೧ ||

ದುರುಳ ಕಂಸನ ನೆವದಿ | ಬಂದಿಹನೊರ್ವ | ಮರುಳಕ್ರೂರನು ಜವದಿ ||
ಹರಿಯ ಕೊಂಡೊಯ್ವನಂತೆ | ಗೋಕುಲದಿ ನಾ | ವಿರಲುಚಿವೇನೆ ಮುಂತೆ || ೨ ||

ಕ್ರೂರ ಪಾಪಿಗೆ ಜನರು | ದಿವ್ಯ ನಾಮವ | ಕ್ರೂರನೆಂದಿಟ್ಟರಾರು ||
ತೀರಿತಿಂದೆಮ್ಮಾಸೆಯು | ವಿಧಾತನಿಂದು | ಬೇರು ತರಿದ ಪಾಪಿಯು || ೩ ||

ಮಧುರೆಯೊಳಿಹ ಸ್ತ್ರೀಯರು | ಮಂತ್ರಮಾಯದಿ | ಚದುರೆಯರಾಗಿಹರು ||
ಮಧುದ್ವೇಷಿ ಹರಿಯ ನೋಡಿ | ಮೆಚ್ಚಿ ಮತ್ತಿಲ್ಲಿ | ಗೊದಗಲು ಬಿಡರು ಕೂಡಿ || ೪ ||

ಎಷ್ಟು ತಪವ ಗೆಯ್ದರೊ | ಆ ಸತಿಯರಿ | ನ್ನೆಷ್ಟು ಭಾಗ್ಯಾಧಿಕರೊ ||
ಕೃಷ್ಣಮೂರುತಿಯ ನೋಡಿ | ಕೂಡುವರು ತ | ಮ್ಮಿಷ್ಟಾರ್ಥಗಳನು ಬೇಡಿ || ೫ ||

ಕೆಟ್ಟೆವಲ್ಲಯ್ಯೊ ಹರಿಯೆ | ನಮ್ಮೆಲ್ಲರನ್ನು | ಬಿಟ್ಟು ಪೋಪೆಯೊ ಧೊರೆಯೆ ||
ಇಷ್ಟಾರ್ಥವೆಮಗೀವರು | ನಿನ್ನಂತೆ ದೇವ | ಸೃಷ್ಟಿಯೊಳಾರಿಹರು || ೬ ||

**ಭಾಮಿನಿ**

ಆರು ಗತಿ ಹೇಳೆಮಗೆ ನಿನ್ನವೊ |
ಲಾರು ಕಾಯ್ವವರಕಟ ಕರುಣಾ |
ವಾರಿಧಿಯೆ ಹಾ ಕೃಷ್ಣ ಹಾಯೆಮ್ಮಗಲುವೆಯ ಹರಿಯೆ ||
ದಾರಿಗಾಣದೆ ಘೋರ ಅಡವಿಯ |
ಸೇರಿದಂತಾಯ್ತೆಮಗೆ ಕರುಣೆಯ |
ಬೀರಿ ಸಲಹೊ ಕೃಪಾಕರನೆಯೆಂದಳಲಿ ಹೊರಳಿದರು || ೧ ||

**ರಾಗ ನೀಲಾಂಬರಿ ಆದಿತಾಳ**

ಏನಮ್ಮಾ | ಮುಂದಿ | ನ್ನೇನಮ್ಮ || ಏನಮ್ಮ ಶ್ರೀರಂಗ | ಧಾಮನೀ ಊರಗಲುವನಂತೆ || ಪ ||

ಚಿದ್ರೂಪ ಹರಿಯು ಬಲ | ಭದ್ರ ಕೂಡಕ್ರೂರನೊಡನೆ ನ |
ಮ್ಮಿದಿರಿಗೆ | ಪೋಪ | ಮಧುರೆಗೆ || ೧ ||

ಸಕಲಂತರ್ಯಾಮಿಗಿನ್ನಾವ | ಶಕುನವಡ್ಡವಿಸದೆತ್ತ |
ಪೋದವೆ | ಕಾಣ | ದಾದವೆ || ೨ ||

ಮಾರನ ಬಾಧೆಗೆ ಜೀವ | ಸೂರೆಬಿಟ್ಟೆಮ್ಮಗಲಿ ಪೋಪ |
ನೇನಕ್ಕ | ನಮಗಿ | ನ್ನವ ಸಿಕ್ಕ || ೩ ||

ಜಗದಾಧಾರನನಾದರೆಮ್ಮ | ಬಗೆಯರಿಯನೇನೆ ದಿಟ್ಟ ಶ್ರೀ |
ವರನೇನೇ | ಈತ | ನರನೇನೇ || ೪ ||

ಬಾಳುವೆನೆಂತಯ್ಯೊ ಗೋಕುಲ | ಹಾಳಾಯಿತು ವ್ಯರ್ಥ ನಾವಿ |
ಲ್ಲಿರುವುದು | ಊರ | ತೊರೆವುದು || ೫ ||

ಈ ತೆರದೊಳೆಲ್ಲರು ಶ್ರೀ | ನಾಥ ರಕ್ಷಿಸೆನುತ ಬಾಯ |
ಬಿಟ್ಟರು | ಬಹುಗೋ | ಳಿಟ್ಟರು || ೬ ||

**ಕಂದ**

ಭೂಪಾಲಕ ಲಾಲಿಸಿ ಕೇಳ್ |
ಶ್ರೀಪತಿಯನೆ ನೆನೆನೆನೆದಳುತಿರೆ ಮನದೊಳಗಂ ||
ಗೋಪಾಂಗನೆಯರ್ ದುಗುಡದೊ |
ಳೀ ಪರಿ ಪ್ರೌಢೆಯೊರ್ವಳಿಂತೆಂದಳು ಧೈರ್ಯದೊಳಂ || ೧ ||

**ರಾಗ ಸೌರಾಷ್ಟ್ರ ಅಷ್ಟತಾಳ**

ಏತಕೆಲ್ಲರು ಸುಮ್ಮನೊರಲಿ ಬಾಯ್ ಬಿಡುವಿರಿ | ನ್ನೇಳಿರವ್ವ |
ಪ್ರಾಣ | ನಾಥ ಶ್ರೀಹರಿಯ ದಾರಿಯೊಳಡ್ಡಗಟ್ಟುವ | ಏಳಿರವ್ವ || ೧ ||

ನೀತಿಕೋವಿದನೆಂದು ಸೋತೆವು ಮುನ್ನ ನಾವ್ | ನೋಡೆ ತಂಗಿ ||
ಇಂಥ | ಪಾತಕಿ ನಮಗೊಂದು ಮಾತರುಹದೆ ಪೋಪ | ನೋಡೆ ತಂಗಿ || ೨ ||

ಎರೆಯರ ಬಿಟ್ಟು ಶ್ರೀಹರಿಯ ನಂಬಿದ್ದೆವು | ಅಮ್ಮ ಕೇಳಿ ||
ಇಂಥ | ಕೊರಳುಗೊಯಿಕನ ನಂಬಿ ಮರುಳಾಟವಾಯಿತು | ಅಮ್ಮ ಕೇಳಿ || ೩ ||

ಎಮಗೆ ನಾಚಿಕೆಯಿನ್ನೆಲ್ಲಿಹುದು ಮುಂಬರಿಯಬೇ | ಕೇಳಿರಮ್ಮ ||
ತೇರು | ಗಮಿಸದಂದದೊಳಡ್ಡ ಗಟ್ಟಿ ನಿಲ್ಲಿಸುವಾ ನಾ | ವೇಳಿರಮ್ಮ || ೪ ||

**ಭಾಮಿನಿ**

ಅರಸ ಕೇಳಿತ್ತುದಯದಲಿ ಶ್ರೀ |
ಹರಿಯು ಹಲಧರನೊಡನೆ ಗಾಂಧಿನಿ |

ತರಳನೇರಿದ ರಥದೊಳಡರುತ ನಂದನಂದಣದಿ ||
ಭರದಿ ಗೆಳೆಯರು ಸಹಿತ ಮಧುರಾ |

ಪುರಕೆ ಪಯಣವ ಗೆಯ್ಯೆ ಮಾರ್ಗದಿ |
ಬರಲು ಗೋಪಿಯರರಿತು ಬಂದಡ್ಡಯಿಸಿದರು ಬಿಡದೆ || ೧ ||

**ರಾಗ ನೀಲಾಂಬರಿ ರೂಪಕತಾಳ**

ಎಲ್ಲಿಗೆ ಪೋಗುವೆ ಭಾಗ್ಯ ಸಂ | ಪನ್ನನೆಯೆಮ್ಮಗಲುವೆ ತರ |
ವಲ್ಲವೊ ನಿಲ್ಲಲೊ ಲಕ್ಷ್ಮೀ | ವಲ್ಲಭ ನುಡಿ ದಯದಿ || ಎಲ್ಲಿಗೆ || ಪ ||

ಪತಿಯರ ತೊರೆದಗಲುತ ಮುರ | ಮಥನನೆ ನಿನ್ನೊಳು ಮಾರನ |
ರತಿಗೊದಗುತ ಬಿಡಲಾರದೆ | ಜತೆಗೊಡುತಲಿಹೆವು ||

ಗತಿ ನೀನಲ್ಲದೆ ಬೇರಿ | ನ್ನಿತರರ ಕಾಣೆವು ಎಮಗೆ |
ಗತಿಯನು ತೋರಿಸಿ ಮುಂದಕೆ | ಜತನದಿ ನಡೆ ನೀನು || ೧ ||

ತರುವಿಂಡೆಬ್ಬುತ ಕೆಳೆಯರ | ನೆರಹಿಸಿ ವೃಂದಾವನದೊಳು |
ತೆರಳಲು ಬರುವನಕ | ಸರಿದೆವು ಯುಗವಾಗಿ ||

ಮುರಲಿಯ ಧ್ವನಿ ಕೇಳುತ ಮನ | ಮರುಳಾಗುವ ನಾಚಿಕೆಯನು |
ತೊರೆದಿದಿರೆಗೆ ಬಂದಪ್ಪುತ | ಮರೆವೆವು ವಿರಹವನು || ೨ ||

ದಧಿಘೃತಭಾಂಡಗಳೊಡೆವುತ ಕುದುಕುತ ಕುಚಗಳ ಪಿಡುವುತ |
ವಿಧವಿಧದಾಟಗಳಾಡುತ | ಬದಿಗೆ ನೀ ಬದಿಗೊಡುತ ||

ಎದೆಗಡರುತಲೆಮ್ಮನು ಬಲು | ಹದದಲಿ ರಮಿಸುತ ಸೌಖ್ಯವ |
ಮುದದಲಿ ತೋರಿಪರಿರುವರೆ (ಧರೆಯೊಳು) | ಚದುರನೆ ನಿನ್ನಂತೆ || ೩ ||

ಬೇಸರವಾದರೆಯಮುಗೆ ಯ | ಶೋದೆಗೆ ದೂರುವ ನೆಪದಿ ವಿ |
ಲಾಸದಿ ನಿನ್ನಯ ಮನೆಗೆ ನಾವ್ | ವಾಸಿಯೊಳಯ್ತಹೆವು ||

ಶ್ರೀಶನೆ ನಿನ್ನನು ನೋಡಿ ಸಂ | ತೋಷದಿ ದಿನಗಳೆದೆವು ಜಗ |
ದೀಶನೆ ನೀ ಪೋದರೆ ಪರ | ದೇಶಿಗರಾವ್ಯೆಸೆ || ೪ ||

ಬೆಡಗಿನ ಮಧುರೆಯ ಸ್ತ್ರೀಯರು | ಬಿಡುವರೆ ನಿನ್ನನು ಹಿಂದಕೆ |
ಬಡವೆಯರಾವಲ್ಲವೆ ಜಗ ದೊಡೆಯ ನಮ್ಮಗಲುವೆಯ ||

ಬಿಡಲಾರೆವು ನಿನ್ನನು ಎಂ | ದಡಿಗಡಿಗೆರಗುತ ದೈನ್ಯದಿ |
ಒಡಲುಗಳನು ಕೆಡಹುತ ರಥ | ದಡಿಯೊಳು ಚಾಚಿದರು || ೫ ||

**ವಾರ್ಧಿಕ**

ಕ್ಷಿತಿನಾಥ ಕೇಳ್ ಗೋಪಸತಿಯ ನಿಕುರಬ ಮುರ |
ಮಥನರಥದಡಿಯೊಳಗೆ ಮತಿಮರೆದು ಬಿದ್ದು ಪೊರ |

ಳುತಲಿ ಬಾಯ್ಬಿಡುತ ಹರಿ ಗತಿ ನೀನೆನುತ್ತ ಬಲು ಸ್ತುತಿಸುತೇಳದೆಯೆರಗುತ ||
ಜತೆಯಗಲುವನು ಪ್ರಾಣಪತಿಯೆನುತ ಮರುಗಲಾ |

ರತಿಪತಿಯ ಪಿತನುವುನ್ನತ ಕರಗಳೆತ್ತಿ ತೋ |
ರುತಲಭಯವಿತ್ತವತರೊಳತಿದಯದಿ ನುಡಿದ ಸನುಮತದಿ ಮೃದುವಚನದಿಂದ || ೧ ||

**ರಾಗ ಸಾರಂಗ ಅಷ್ಟತಾಳ**

ಬಾಲೆಯರುಗಳು ಕೇಳಿ | ದುಃಖಿಸದಿರಿಯೆ | ದ್ದೇಳಿ ಧೈರ್ಯವನು ತಾಳಿ ||
ಪಾಲಿಪೆ ನಿಮ್ಮನಂಜದಿರಿನ್ನು ಗೋಕುಲ | ದಾಲಯದಲಿ ತೋಷವ | ತಾಳಿರಿ ನೀವು || ೧ ||

ಮಧುರೆಯಧಿಪ ತನ್ನಲ್ಲಿ | ಬಿಲ್ಲಹಬ್ಬವೆಂ | ದಧಿಕ ಸಂತೋಷದಲ್ಲಿ ||
ಚದುರಕ್ರೂರನ ತಾನಿಲ್ಲಟ್ಟಿದನೆನ್ನ | ಸದನಕೆ ಒಯ್ಯಲೆಂದು | ಪೋಪೆವಾವಿಂದು || ೨ ||

ಬರಿದೆ ದುಃಖಿಸಲು ಬೇಡಿ | ನಾಡ್ಡಿಲ್ಲಿಗೆ | ಬರುವೆನು ನಿಜವು ನೋಡಿ ||
ಕರಗದೆಲ್ಲರು ನಿಮ್ಮವರೊಳು ಬೆರಸುತ್ತ | ಲಿರಿ ನಿಮ್ಮ ಗೃಹದಿ ಬೇಗ | ಪೋಗಿ ನೀವೀಗ || ೩ ||

**ರಾಗ ಮಾರವಿ ಏಕತಾಳ**

ಈ ತೆರದಲಿ ಸತಿ | ಯರಿಗಭಯವನು ಶ್ರೀ | ನಾತ ಪಾಲಿಸಿ ದಯದಿ ||
ತಾ ತಡೆಯದೆ ಸಹ | ಜಾತಸಹಿತಲಿ ಸ | ಮೇತಕ್ರೂರನು ರಥದಿ || ೧ ||

ಏರಿ ಹಾರಿಸಲು ಆ | ನಾರಿಯ ನಿವಹ ಮು | ರಾರಿಯನೀಕ್ಷಿಸುತ ||
ಭಾರಿ ಪಿರಿದು ಬಾ | ಯಾರಿ ಬಿದ್ದುರುಳಿ ಶ | ರೀರವ ಮರೆದಳುತ || ೨ ||

ನೀರೆಯರೆದ್ದು ಆ | ತೇರು ಮುಂಬರಿಯಲು | ದೂರದಿಂದೀಕ್ಷಿಸುತ ||
ತೇರಿನ ಕುದುರೆ | ಸಾರಥಿ ಧ್ವಜ ಕಲಶವ | ಮೀರಿ ಹಾರುವ ರಜವು || ೩ ||

ತೋರುವನಕ ಶಿರ | ವೇರಿ ಮೇಲೆತ್ತಿ ಕಾ | ಲೂರಿ ನೆಗೆದು ನೋಡಿ ||
ತೀರಿತು ಋಣವೆನು | ತೂರಿಗೆ ಮರಳಿ ಬಾ | ಯಾರಿ ಬಂದರು ಕೂಡಿ || ೪ ||

**ವಾರ್ಧಿಕ**

ಪೃಥ್ವೀಶ ಕೇಳಿತ್ತ ಹರಿಯು ರಾಮರು ಗೋಪ |
ಮೊತ್ತ ಸಹಿತಲಿ ಸುತ್ತು ಮುತ್ತು ಭಂಡಿಗಳೆಸೆಯೆ |
ಉತ್ತಮದ ಕಾಳಿಂದಿಹತ್ತಿರಕೆ ಬಂದಾಗ ಚಿತ್ತಜನ ಪಿತನು ನದಿಯ ||
ನುತ್ತರಿಸಲೆನುತ ಗುಹನಿಗೆ ನೇಮ |
ವಿತ್ತು ಸರ್ವರು ಜಲವ ದಾಂಟುತಾಚೆಗಡರಿರ |
ಲಿತ್ತ ಗಾಂಧಿಜ ನದಿಯ ಹತ್ತಿರಕೆ ಬಂದಾಗ ಬಿತ್ತರಿಸುತಿರುತಿರ್ದನು || ೧ ||

**ರಾಗ ಯರಕಲಕಾಂಭೋಜಿ ಅಷ್ಟತಾಳ**

ಲಾಲಿಸಿ ದಯದಿ ಕೇಳು | ಬಿನ್ನಪವ ಶ್ರೀ | ಲೋಲ ಕರುಣಕೃಪಾಳು ||
ಬಾಲಕ ಧ್ರುವ ಪ್ರಹ್ಲಾದರ ಮುನ್ನ | ಪಾಲಿಸಿದಂತೆಯೆನ್ನ | ಕಾಯೊ ಪ್ರಸನ್ನ || ೧ ||

ನಿನ್ನಯ ಶ್ರೀಮೂರ್ತಿಯ | ಕಂಡಮೇಲೆನ | ಗಿನ್ನು ಬೇರೇನಾಸೆಯು ||
ಜನ್ಮದಿ ಜನಿಸಿ ಬಂದಾಮೇಲೆ ಸತ್ಕೀರ್ತಿ | ಯನ್ನು ರಚಿಸಬೇಕೆಂದು | ಮನಸಿಗಿಂದು || ೨ ||

ಇಂದು ಕಾಳಿಂದಿಯೊಳು | ಸ್ನಾನವ ಗೆಯ್ವ | ನೆಂದಾಸೆಯೆನಗೆ ಕೇಳು ||
ತಂದೆಯಪ್ಪಣೆಯ ಪಾಲಿಸು ದೇವ ಜವದಿ ನಾ | ಮಿಂದು ಬರುವೆನಿಲ್ಲಿಗೆ | ಈ ಗಳಿಗೆಗೆ || || ೩ ||

ಶರಣನ ನುಡಿಯ ಕೇಳಿ | ಪೇಳಿದನು ಶ್ರೀ | ಹರಿಯು ಸಂತಸವ ತಾಳಿ ||
ತೆರಳಿ ಸ್ನಾನವ ಗೆಯ್ದು ಬರುವನಕಿಲ್ಲಿ ನಾ | ನಿರುವೆ ರಥದಲಿ ಈಗ | ಪೋಗಿ ಬಾ ಬೇಗ || ೪ ||

**ಭಾಮಿನಿ**

ಇಂತು ಯಾದವಕುಲಶಿಖಾಮಣಿ |
ಯಂತರಾತ್ಮಕನೊಡನೆ ನೇಮವ ||
ಸಂತಸದಿ ಕೊಂಡಾಗ ನದಿಯೆಡೆಗಾಗಿ ನಡೆತಂದ |
ಮುಂತೆ ಸಂಕಲ್ಪಾದಿ ಸ್ನಾನವ |
ನಿಂತು ವಿರಚಸಿ ಮುಳುಗೆ ನೀರೊಳು |
ಕಂತುಜನಕನ ದಿವ್ಯಮೂರ್ತಿಯ ಕಂಡನಕ್ರೂರ || ೧ ||

**ರಾಗ ಯರಕಲಕಾಂಭೋಜಿ ಝಂಪೆತಾಳ**

ಕಂಡನಕ್ರೂರ ನೀರೊಳಗೆ ಶ್ರೀಹರಿಯು |
ಕಂಡು ಭ್ರಮೆಯಡರಿ ಭಯ ಗೊಂಡೆದ್ದು ಕಳವಳಿಸಿ || ಕಂಡನಕ್ರೂರ || ಪ ||

ಶಿರವ ಮೇಲೆತ್ತಿ ಹಿಂತಿರುಗಿ ನೋಡಿದ ರಥದಿ |
ಹರಿಬಲರ ಕಾಣುತ್ತ ಸ್ಮರಿಸಿದನು ಮನದಿ ||
ಎರಡನೆಯ ಮುಳುಗಲಾ ಸ್ಮರಪಿತನ ಕಂಡು ತನು |
ಮರೆದೆದ್ದು ಮರಳಿ ಮುರಹನನೀಕ್ಷಿಸಿ ರಥದಿ || ಕಂಡನಕ್ರೂರ || ೧ ||

ಭ್ರಮೆಗೊಂಡೆನೆನುತ ಬಹು ಶ್ರಮದಿ ಮೂರನೆ ಮುಳುಗೆ |
ಕ್ರಮದಿ ನೋಡಿದ ನಿಗಮಾಗಮ ಶಿರೋಮಣಿಯ ||
ಅಮಿತ ವೈಕುಂಠದೊಳು ವಿಮಲ ಶೇಷಾಸನದಿ |
ಕಮಲನಾಭನು ರಾಜಿಸುವ ಕ್ರಮದೊಳಿರುವವನ || ಕಂಡನಕ್ರೂರ || ೨ ||

ಶತಕೋಟಿಯಜಭವರಮಿತ ಶಶಿದಿವಾಕರರ |
ಜತೆಗೊಂಡಿರುವ ರಮಾಪತಿಯನಂತನನು ||
ಪೃಥಿವಿ ಜಲ ಮರುತ ಪಾವಕ ಚತುರ್ದಶಭುವನ |
ರತಿಪತಿಯ ಪಿತನ ರೋಮದ ಕುಳಿಯ ಮಧ್ಯದಲಿ || ಕಂಡನಕ್ರೂರ || ೩ ||

ಭಜಕಪ್ರಹ್ಲಾದಾಂಬರೀಷ ವಿದುರ ಸುದಾಮ |
ಭುಜಗ ಬಲಿ ಗರುಡ ಕಲಿ ಪಾರ್ಥ ಭೀಷ್ಮರನು ||
ಸುಜನ ರುಕ್ಮಾಂಗದ ವಿಭೀಷಣರ ಸಮುದಾಯ |
ಭಜಿಸಿ ಕಯ್ ಮುಗಿದು ಮನ ನಿಜದಿ ನಿಂತಿಹ ಜನರ || ಕಂಡನಕ್ರೂರ || ೪ ||

ಸುರಗಂಗೆ ಗಂಡಕಿ ಗೌತಮಿ ವಿಮಲೆ ಮಲಹರೀ |
ಹರಿದ್ವತೀ ವಾರಾಹಿ ವೈಷ್ಣವಿ ಯಮುನೆಯು ||
ವರಸರಸ್ವತಿ ಭೋಗವತಿ ವಾರಣಾಸಿಮಿಗೆ |
ಪರಿಪರಿಯ ತೀರ್ಥಗಳ ಹರಿಯ ರೋಮಾಗ್ರದಲಿ || ಕಂಡನಕ್ರೂರ || ೫ ||

**ಪರಿವರ್ಧಿನೀ**

ಅತ್ರಿ ಮೃಕಂಡು ಪರಾಶರ ವಿಶ್ವಾ |
ಮಿತ್ರ ಕವಷ ಮುದ್ಗಲ ವೈಭಾಂಡಕ |
ಪುತ್ರಾಂಗೀರಸ ಗೌತಮ ಕಾಶ್ಯಪ ಗಾರ್ಗ್ಯ ಭರದ್ವಾಜ ||
ಉತ್ತಮ ಭೃಗು ಬಕದಾಲ್ಭ್ಯ ವಸಿಷ್ಠ ಅ |
ಗಸ್ತ್ಯ ಚ್ಯವನ ಜೈಮಿನಿ ನಾರದ ಮು |
ಖ್ಯಸ್ಥರ ಸಮುದಾಯವ ಕಂಡಕ್ರೂರಂ ನುತಿಗೆಯ್ದಂ ಮುದದೊಳ್ || ೧ ||

**ರಾಗ ನೀಲಾಂಬರಿ ತ್ರಿವುಡೆತಾಳ**

ತ್ರಾಹಿ ಕೇಶವ ತ್ರಾಹಿ ಮಾಧವ | ತ್ರಾಹಿ ಸಚರಾಚರಭರಿತ ಹರಿ || ಅ ||

ಕ್ಷೀರಸಾಗರಶಯನ | ವೈಕುಂಠವ | ತೋರಿ ರಕ್ಷಿಸಿದೆಯೆನ್ನ ||
ಮಾರಜನಕ ಅಪಾರಮಹಿಮನೆ | ಘೋರದುರಿತಸಂಹಾರ ಕುಜನಕು |
ಠಾರ ಭುವನಾಧಾರನಂತವ | ತಾರ ಸುಜನೋದ್ಧಾರ ಜಯ ಜಯ || ತ್ರಾಹಿ || ೧ ||

ನಿನ್ನ ವಿಶ್ವ ಮೂರುತಿಯ ಪ್ರತ್ಯಕ್ಷ | ನಾ ಕಣ್ಣಿಲಿ ಕಂಡೆನಯ್ಯ ||
ಧನ್ಯರಾರೆನ್ನಂತೆ ಜಗದಲಿ | ಮಾನ್ಯರಾರೆಲೆ ದೇವ ಜಯತು ಕೃ |
ಪಾರ್ಣವನೆ ಜಯ ಜಯ ಜಗನ್ಮಯ | ಎನ್ನ ಸಲಹೊ ಗೋವಿಂದ ಜಯ ಜಯ || ತ್ರಾಹಿ || ೨ ||

ಇಂತು ಅಕ್ರೂರ ಭಕ್ತಿಯೊಳು ಸ್ತುತಿಸಿರಲು ಶ್ರೀ | ಕಾಂತ ಕಾಳಿಂದಿಯೊಳು ||
ಅಂತರ್ಧಾನವಾಗುತಲಿ ನಡೆಯಲ | ನಂತಶಾಯಿಯ ಕಾನದಿರಲು ಮ ||
ಹಾಂತ ಭ್ರಮೆಯಲಿ ನೀರಿನೊಳು ತಾ | ನಿಂತು ಹುಡುಕುತ ಹುಡುಕಿ ಮುರುಗಿದ || ತ್ರಾಹಿ || ೩ ||

**ರಾಗ ಆನಂದಭೈರವಿ ಆದಿತಾಳ**

ಹರಿ ನಿನ್ನ ಮೂರುತಿಯ | ಭರದೊಳೆನಗೆ ತೋರಿ ||
ಮರಳಿ ಸರಿವುದಿದುವೆ ನಿನಗೆ ಸರಿಯೆ ಕೇಳ್ ಮುರಾರಿ || ೧ ||

ಶ್ರುತಿಗಳಿಗಗಮ್ಯವಾದಾ | ಕೃತಿಯ ತೋರಿ ಪೋದೆ ||
ಗತಿಯಿನ್ನಾರು ದೇವ ಲಕ್ಷ್ಮೀ | ಪತಿಯೆನ್ನಗಲಬಹುದೆ || ೨ ||

ಕರ್ಮಿಯು ನಾನೆಂದು ಪರ | ಬ್ರಹ್ಮಯೆನ್ನಗಲಿದೆಯ ||
ದಮ್ಮಯ್ಯ ತೋರೆನ್ನಕ್ಷಿಗಿ | ನ್ನೊಮ್ಮೆ ವಿಶ್ವಾಕೃತಿಯ || ೩ ||

ಶರಣರ ಬಂಧುವೆಂದೆಂಬ | ಬಿರುದುಂಟಾದರೆನ್ನ ||
ಪೊರೆಯೊ ಲಕ್ಷ್ಮೀವರನೆ ಹಾಯೆಂ | ದೊರಲ್ದ ನೀರೊಳ್ ಮುನ್ನ || ೪ ||

**ಭಾಮಿನಿ**

ಅರಸ ಕೇಳಕ್ರೂರನಚ್ಯುತ |
ನಿರವನಾ ಜಲದೊಳಗೆ ಕಾಣದೆ |
ಹೊರಳುತಿದ್ದನು ಕೃಷ್ಣ ಕೃಷ್ಣ ಕೃಪಾಕರನೆಯೆನುತ ||
ತಿರುಗಿ ಹರಿಬಲರುಗಳು ರಥದೊಳ |
ಗಿರಲು ಕಾಣುತ ಪರಮ ಹರುಷಾಂ |
ಕುರಿತಪುಳಕಿತನಾಗುತವರೆಡೆಗಾಗಿ ನಡೆತಂದ ||

**ರಾಗ ಕೇದಾರಗೌಳ ಅಷ್ಟತಾಳ**

ಧರಣೀಶ ಕೇಳು ಶ್ರೀವರನ ಕಂಡಕ್ರೂರ | ಶಿರವ ಬಾಗುತ್ತ ಬಂದು ||
ಮರುಗುತ್ತ ಭ್ರಮೆಯೊಳತ್ತಿತ್ತ ನೋಡಿದನು ಶ್ರೀ | ಹರಿಯ ದೂರದಲಿ ನಿಂದು || ೧ ||

ಬೆದರಿ ನಾಲ್ದೆಸೆಯ ನೋಡಲು ಕೃಷ್ಣ ತನ್ನಯ | ಇದಿರಿಗೆ ಕರೆದೆಂದನು ||
ಚದುರನೆ ಹೊಲಬುದಪ್ಪಿದವನಂತೇಕೆನ್ನ | ಮುದದಿ ನೋಡುವೆಯ ನೀನು || ೨ ||

ಕರುಣಾಬ್ಧಿ ಕೇಳು ನೀನಿರುವ ವೈಕುಂಠದ | ಸಿರಿಯ ನೀರೊಳು ತೋರಿದೆ ||
ಮರಳಿ ಶೋಧಿಸಲು ಕಾಣಿಸದಾದೆ ಭ್ರಮೆಯೊಳ್ ನಾ | ಕರಗಿ ನಿನ್ನನ್ನು ನೋಡಿದೆ || ೩ ||

ಬ್ರಹ್ಮರುದ್ರಾದಿ ದೇವತೆಯರ ನಯನಕ | ಗಮ್ಯಮಾದಾಕೃತಿಯ ||
ನೊಮ್ಮೆ ನೀನೆನಗೆ ಕಾಣುಸುತಗಲಿದೆ ಪರ | ಬ್ರಹ್ಮ ನೀ ದಿಟವು ಜೀಯ || ೪ ||

ಎಣಿಸಲೇನರುಹು ಬ್ರಹ್ಮಾಂಡವೇ ರೋಮದ | ಕುಣಿಯೊಳು ತೋರಿಸುತ
ಜಣುಗಲುಚಿತವೆ ಗೋವಿಂದ ನೀನೆನ್ನುವ | ಗುಣವ ನೋಡುವರೆ ದಾತ || ೫ ||

ಅಖಿಳ ಬ್ರಹ್ಮಾಂಡನಾಯಕ ನಿನ್ನ ನೀಕ್ಷೇಪ | ಶಕುತನೆ ಜಗದಿ ನಾನು ||
ಸಕಲಾಂತರ್ಯಾಮಿ ರಕ್ಷಿಸು ಕೃಷ್ಣ ನಿನ್ನಯ | ಭಕುತಿಯಿತ್ತೆನಗೆ ನೀನು || ೬ ||

**ಭಾಮಿನಿ**

ಎನಲು ನಗುತಪ್ಪಿದನು ಕರುಣಾ |
ವನಧಿ ರಥದೊಳು ಕುಳ್ಳಿರಿಸಿಕೊಂ |

ಡನುಪಮಾನಂದಾಬ್ಧಿಯೊಳಗೋಲಾಡುತಿರೆ ನೋಡಿ ||
ಅನುಪಮನೆ ನಡೆ ರಥದಿ ನಿನಗೇ |
ಕಿನಿತು ಕೌತುಕಬುದ್ಧಿ ಬಿಡುಯೆಂ |
ದೆನುತ ಬೋಳಯಿಸಿದನು ನಿಜಭಕುತನನು ಮೆಯ್ದಡವಿ || ೧ ||

**ರಾಗ ಶಂಕರಾಭರನ ಮಟ್ಟೆತಾಳ**

ಧರಣಿಪತಿಯೆ ಲಾಲಿಸಯ್ಯ | ಹರಿಯು ದಯದೊಳಭಯವನ್ನು |
ಶರಣಗಿತ್ತು ನಡೆದ ಮುಂದೆ | ಭರದಿ ಮಧುರೆಗೆ ||
ಪುರದ ಬಾಗಿಲೊಳಗೆ ನಿಂದು | ಕರವ ಮುಗಿದು ಭಕುತನೊಡನೆ |
ಸರಸದಿಂದ ನುಡಿದ ಜಗದೋ | ದ್ಧರನು ಕರುಣದಿ || ೧ ||

ರವಿಯು ಪಶ್ಚಿಮಾಬ್ಧಿಗಿಳಿದ | ಕವಿವ ಕತ್ತಲೆಯೊಳು ನಡೆಯೆ |
ತವ ಗೃಹಕ್ಕೆ ಪೋಗು ನೀನು | ಜವದಿ ರಥದೊಳು ||
ನಿವಹಸಹಿತಲೆದ್ದು ನಾಳೆ | ದಿವದಿ ಬರುವೆ ನಾನು ರಾಜ |
ಭವನಕೆಂದು ನುಡಿದ ಯಾ | ದವಗೆ ಕೃಷ್ಣನು || ೨ ||

ಒಡನೆ ಕೃಷ್ಣ ನುಡಿಯಲಾಗ | ಬಿಡದೆಯವನ ಚರಣವೆರಡ |
ಹಿಡಿದು ಬೇಡಿಕೊಂಡ ದೈನ್ಯ | ವಡುತ ಭಕುತನು ||
ಒಡೆಯ ನಿನ್ನ ಬಿಡೆನು ಮನೆಗೆ | ನ್ನೊಡನೆ ಕೂಡಿ ಬರಲುಯೆನ್ನ |
ಮಡದಿ ಮಕ್ಕಳನ್ನು ಸಹಿತ | ಅಡಿಗೆ ನಮಿಪೆನು || ೩ ||

ತಡೆಯದೆರಡು ಅಂಘ್ರಿಗಳನು | ತೊಳೆದು ಕುಡುತೆ ತೀರ್ಥವನ್ನು |
ಕುಡಿದು ಮುಕ್ತಿ ಪಡೆವೆನೆಂದ | ನುಡಿಯ ಕೇಳುತ ||
ತಡೆಯದೆದ್ದಪ್ಪುತ್ತ ಮೆಯ್ಯ | ತಡವರಿಸುತ ಹರಿಯು ದಯದಿ |
ಒಡಬಡಿಸುತ ಕಳುಹಿದನು | ಬಿಡದೆ ಶರಣನ || ೪ ||

**ಭಾಮಿನಿ**

ಪೊಡೊವಿಪತಿ ಕೇಳೈ ಮುರಾಂತಕ |
ನೊಡನೆ ನೇಮವ ಕೊಳುತ ಶರಣನು |
ನಡೆಯಲಿತ್ತುದಯಾಚಲಕ್ಕಡರುತಲಿ ರವಿ ಮೆರೆದ ||
ಒಡನೆ ಕೆಳೆಯರು ಸಹಿತ ಮಧುರೆಗೆ |
ನಡೆದು ಪುರಬೀದಿಯೊಳು ಬರುತಿರೆ |
ಕಡು ಕಠಿನ ರಜಕನನು ಕಾಣುತ ನುಡಿಸಿದನು ಹರಿಯು || ೧ ||

**ರಾಗ ಮಧುಮಾಧವಿ ಏಕತಾಳ**

ಅರೆಲೊ ರಜಕ ನೀ ಕೇಳೆನ್ನ ಮಾತ | ಕಾರಿಯವೊಂದುಂಟು ಪೇಳ್ವೆ ನೋಡಿತ್ತ ||
ಚಾರು ವಸ್ತ್ರಗಳೆಲ್ಲ ತಂದೀವುದೆಮಗೆ | ಭೋರನೆ ಗಮಿಸುವೆ ಮತ್ತಾವ ಕಡೆಗೆ || ೧ ||

**ರಾಗ ಭೈರವಿ ಅಷ್ಟತಾಳ**

ನುಡಿಯ ಕೇಳ್ದಿಂದ ನೀನುಡುವ ವಸ್ತ್ರಗಳೆನ್ನ | ಕಡೆಯೊಳಿಲ್ಲವೊ ಮಾರ್ಗದಿ ||
ಹುಡುಕಿ ನೀ ಸಂದುಗೊಂದಿಲಿ ಕಂಡುದನುಟ್ಟು | ಬೆಡಗಿನೊಳ್ ನಡೆ ಮುದದಿ ||
ಅಡವಿಯರಣ್ಯವ ಬಿಡದೆ ಸಂಚರಿಸುವ | ಬಡವರು ಬಯಸಿ ನೀವು |
ತೊಡಲುಚಿತವೆಯೆಮ್ಮ ಒಡೆಯ ಕಂಸನದು | ಈ ಮಡಿಯ ಕೊಡೆವು ನಾವು || ೧ ||

**ರಾಗ ಮಧುಮಾಧವಿ ಏಕತಾಳ**

ಖಳರಾಜ ರಜಕ ಕೇಳ್ ತಿಳಿಯದು ನಿನಗೆ | ಅಳಿಯಂದಿರರು ನಾವ ನಿನ್ನಿಳೆಯಪಾಲಕಗೆ ||
ತಳುವದೆ ಮಡಿಯ ವಸ್ತ್ರವನೀಯದಿರಲು | ಸೆಳೆದು ಕೊಂಬೆವು ನಾವು ಉಳಿಸೆವೆಂದೆನಲು || ೧ ||

**ರಾಗ ಭೈರವಿ ಅಷ್ಟತಾಳ**

ತಡೆದು ಕೇಳುವೆಯ ನೀ ಮಡಿವಸನಗಳ ಇ | ದಡಿಯಲ್ಲವೊ ಬೀದಿಯು ||
ತಡೆಯದೆ ರಾಜದ್ವಾರವ ಕಾಣಿಸುವೆ ನಿನ್ನ | ಹುಡುಗಾಟ ಬಿಡು ಬುದ್ಧಿಯು ||
ಪೊಡವಿಪಾಲಕ ನಿಮ್ಮ ಪಿಡಿದೊಯ್ದು ಅಳಿಯರಿಂ | ಗಡುಗೊರೆಯೀವ ನಿಮ್ಮ ||
ಅಡಿಗಳಿಗವಚಿ ಸಂಕಲೆಯಿಕ್ಕಸದೆ ಬಿಡ | ಕೆಡಬೇಡ ಕೆಣಕಿಯೆಮ್ಮ || ೧ ||

**ರಾಗ ಮಧುಮಾಧವಿ ಏಕತಾಳ**

ಲೇಸನಾಡಿದೆ ರಾಜರಜಕ ವಸ್ತ್ರವನು | ಲೇಸಿನೊಳೆಮಗೀಯೆ ಲೇಸ ಪಾಲಿಪೆನು ||
ಗಾಸಿಯಾಗುವೆಯಲ್ಲದಿರೆ ನೀ ಕೇಳೆನುತ | ಕೇಶಿದ್ವೇಷಿಯು ಪೇಳ್ದ ದೋಷಿಗೆ ನಗುತ || ೧ ||

**ರಾಗ ಭೈರವಿ ಅಷ್ಟತಾಳ**

ಬರಿದೆ ಬಾಯಿಬಡಿಕತನದಲಿ ಸಾಯ್ವಿರಿ ವ್ಯರ್ಥ | ತೆರಳಿ ಮಾರ್ಗದೊಳೆನುತ್ತ ||
ಮುರುಹಿ ಮೀಸೆಯ ಕಣ್ಣ ತಿರುಹಿ ಘೋಂಕರಿಸಿ ಮುಂ | ಬರಿದನು ಜವದೊಳಾತ ||
ತರಣಿಜನಿರುವ ಮಂದಿರಕೆ ಪೋಪಂದದಿ | ತ್ವರಿತದಿ ನಡೆಯಲಾತ ||
ಹರಿ ತನ್ನ ಕೆಳೆಯರೊಳರುಹುತಣ್ಣನ ಮೊಗ | ವಿರದೆ ನೋಡಿದನು ಬೇಗ ||

**ರಾಗ ಭೈರವಿ ಏಕತಾಳ**

ಎನುತ ರಜಕ ಗರ್ವದಲಿ | ಮುಂ | ಬರಿಯಲು ಹರಿಯು ಬೇಗದಲಿ ||
ಘನತರ ವಸನ ಮೇಲೆತ್ತಿ | ಕೊಂ | ಡನುಪಮ ನಡೆದ ಬೆಂಬತ್ತಿ || ೧ ||

ಅಟ್ಟುತ ಶ್ರೀಹರಿ ರಜಕನ | ತಾ | ಮುಟ್ಟವಿಸುತ ಹಿಡಿದವನ ||
ಸೃಷ್ಟಿಯೊಳಡಗೆಡೆವುತ್ತ | ಎದೆ | ಮೆಟ್ಟುತದರಿ ನಲಿವುತ್ತ || ೨ ||

ಜಗದಾಧಾರನುಗುರೊಳು | ಶಿರ | ಚಿಗುಟಲು ರಜಕ ಭೂಮಿಯೊಳು ||
ನಿಗುರುತಟ್ಟೆಯು ಸಹ ಬೀಳೆ | ಜನ | ನಗುತ ಸಂತೋಷವ ತಾಳೆ || ೩ ||

ಸಂಗಡಿಗರು ಬಿಟ್ಟೋಡೆ | ಬಲ | ರಂಗನು ಸಹಿತಲಿ ನೋಡೆ ||
ಹಿಂಗದೆ ವಸನ ಗಂಟೊಡೆದ | ಗೋಪ | ರಿಂಗೀವುತ ಮುಂದೆ ನಡೆದ || ೪ ||

ಒಪ್ಪಿ ಮುಂಬರಿಯಲು ಹರಿಯು | ಒಬ್ಬ | ಚಿಪ್ಪಿಗನೆರಡಂಗಿಕೆಯ ||
ಒಪ್ಪಿಸಿ ಪದಕೆರಗುತ್ತ | ನ | ಮ್ಮಪ್ಪನೆ ತೆಗೆದುಕೊಳ್ಳೆನುತ || ೫ ||

ನುತಿಸಲು ಸಾಯುಜ್ಯವನು | ಇ | ತ್ತತಿಸಂಪದ ಭಾಗ್ಯವನು ||
ಸತಿಸುತರಿಗೆ ಸಹವಿತ್ತು | ಮುರ | ಮಥನ ಮುಂದರಿದನು ಮತ್ತು || ೬ ||

**ದ್ವಿಪದಿ**

ಎಲೆ ಪರೀಕ್ಷಿತ ಕೇಳು ಚೆಲುವ ಹರಿ ದಯದಿ |
ಒಲಿದು ಸಾಯುಜ್ಯ ಚಿಂಪಿಗಗಿತ್ತು ಪಥದಿ || ೧ ||

ಗೆಲುವಿನಲಿ ಬರೆ ಪುರದ ನಿಳೆಯಲಕ್ಷ್ಮಿಯನು |
ತಳುವದೀಕ್ಷಿಸಿದ ಪರಿಯೇನನುಸಿರುವೆನು || ೨ ||

ಕೇರಿಕೇರಿಯನು ಹಲಧರನು ಗೋವಳಗೆ |
ತೋರಿಸುತ ಮುಂದೆ ಬಂದನು ಬೀದಿಯೊಳಗೆ || ೩ ||

ಮಾವುತರ ಸದುರೆ ರಾವುತರ ಕೇರಿಗಳ |
ಸಾವಂತರರಮನೆಯ ಬೇವಿನವರುಗಳ || ೪ ||

ಪಾಠಕರ ಮಲ್ಲರರಮನೆಯ ಕೇರಿಯನು |
ಈಟುಗಾರ್ತಿಯರ ದೇಶಿಯರ ಕೇರಿಯನು || ೫ ||

ದಾಟಿ ಬರೆ ಮನೆಮನೆ ಕವಾಟದಲಿ ಜನರು |
ನೋಟದಲಿ ಈಕ್ಷಿಸುತ ತನುವ ಮರೆದವರು || ೬ ||

ಲೀಲೆಯಲಿ ಮಾಧವನು ಮುಂದೆ ಬರಲಿತ್ತ |
ಮಾಲೆಗಾರ ಸುದಾಮ ಬರವ ಕಾಣುತ್ತ || ೭ ||

ಆದಿಮಧ್ಯಾಂತರಹಿತನನು ದೂರದಲಿ |
ಮೋದದಲಿ ಕಂಡಿದಿರು ಬಂದ ಬೀದಿಯಲಿ || ೮ ||

**ಭಾಮಿನಿ**

ಅರಸ ಕೇಳೈ ರಾಮಕೃಷ್ಣರ |
ಬರವ ಕಾಣುತ ಪರಮ ಹರುಷಾಂ |
ಕುರಿತ ಪುಳಕಿಗಾತ್ರನಂಘ್ರಿಸರೋಜಯುಗಳದಲಿ ||
ಶಿರವೆರಗಿ ಕರ್ಯೆಗೊಟ್ಟು ನಿಜಮಂ |
ದಿರಕೆ ಬಿಜಯಂ ಗೆಯ್ಸಿ ತಂದಾ ||
ದರದಲಾರಾಧಿಸಿದನಂದು ಸುದಾಮನೊಲವಿನಲಿ    ‖ ೧ ‖

**ರಾಗ ಕಲ್ಯಾಣಿ ಆದಿತಾಳ**

ನೋಡಿ ಹರಿಯ ಕೊಂಡಾಡಿ ಒಡಲನೀ | ದಾಡಿ ಸ್ತುತಿಯ ಮಾಡಿ ||
ನೋಡಿ ಪಾಡಿ ಕರ ಜೋಡಿಸಿ ದೈನ್ಯದಿ ಬೇಡಿ ಗೃಹಗೆ ತಂದಾಡುತರ್ಚಿಸುತಲಿ    ‖ ಪ ‖

ತಡೆಯದೆ ಸುದಾಮ ಮೂರ್ಜಗ | ದೊಡೆಯಗೆ ರತ್ನಾಸನವಡರಿಸಿ ||
ಬಿಡದೆ ಪಿಡಿದೆರಡಡಿಗಳ ತಾ ಪಡಿಗದಿಯಿಡುತಾಗ ||
ಕಡು ಬೆಡಗಿಲಿ ಜಲವ ತಂದೊಡ | ನೊಡನೆ ತೊಳೆದು ಪಾದತೀರ್ಥವ ||
ಕುಡುತೆಕುಡುತೆಯಲಿ ಕುಡಿವುತ ಬಾಂಧವ |
ಮಡದಿ ಮಕ್ಕಳಿಗೆ ತಾ ಕೊಡುಕೊಡುತಾಡುತ್ತ ‖ ನೋಡಿ ‖    ‖ ೧ ‖

ತರಿಸುತ ಮುಲ್ಲೆ ಮಲ್ಲಿಗೆಯರಳುತಲಿಹ ಜಾಜಿ |
ಸುರಗಿ ಬೆರೆಸುತ ಶ್ರೀತುಳಸಿಯ ಮಾಲೆ ಕಟ್ಟೆರಿಸುತ ಮುಂದಿಟ್ಟು ||
ಪರಿಪರಿಯಲಿ ಬೇಡಿಕೊಳುತರ್ಪಿಸಿ ನೋಡಿ ಶರಣ ಸುದಾಮನು |
ತರುಣಿತರುಣಜನವೆರಸಿ ಬಂದಂಘ್ರಿಯೊಳೆರಗುತ್ತೆರಗುತಲಿ ‖ ನೋಡಿ    ‖ ೨ ‖

ನುತಿಸುತ ನಿಂದಿಹ ಶರಣನ ಪಿಡಿದಚ್ಯುತ |
ಮತಿಯುತನವಗೆಂದನು ನಿನ್ನಯ ಅತಿಹಿತವನು ಬೇಡು ಪ್ರತಿಯಿಲ್ಲದೆ ಕೊಡುವೆ ||
ನುತಿಸುತ್ತಾ ಸ್ತುತಿಯ ಕಾಣುತ ನುಡಿವೆನು ನಿನ್ನಯ |
ಖತಿಯ ಬಿಡಿಸಿ ಪರಗತಿಯ ತೋರಿಪೆನೆನೆ ರತಿಪತಿಪಿತಗೆರಗುತ ಶರಣ ನುಡಿದ ‖ ನೋಡಿ ‖ ೩ ‖

**ರಾಗ ಕಾಂಭೋಜಿ ಏಕತಾಳ**

ಪಾಹಿ ಪಾಹಿ ಕೇಶವ ಶ್ರೀ | ಕೃಷ್ಣ ಕೃಷ್ಣ | ದೇವ |
ತ್ರಾಹಿ ತ್ರಾಹಿ ಮಾಧವ ಶ್ರೀ | ಕೃಷ್ಣ | ಕೃಷ್ಣ    ‖ ಪ ‖

ಅನ್ಯ ಬಯಕೆಯಿಲ್ಲವಯ್ಯ | ಕೃಷ್ಣ ಕೃಷ್ಣ | ದೇವ |
ನಿನ್ನ ಭಕುತಿಯನ್ನು ಈಯೊ | ಕೃಷ್ಣ ಕೃಷ್ಣ ||

ಬನ್ನಬಟ್ಟೆ ಭವದೊಳಾನು | ಕೃಷ್ಣ ಕೃಷ್ಣ | ದೇವ |
ಮನ್ನಿಸುತೆನ್ನನು ಸಲಹು | ಕೃಷ್ಣ ಕೃಷ್ಣ ॥ ೧ ॥

ಕರುಣಾಬ್ಧಿಯಲ್ಲವೆ ನೀನು | ಕೃಷ್ಣ ಕೃಷ್ಣ | ನಿನ್ನ |
ಶರಣರ ಸಂಗವನೀಯೊ ಕೃಷ್ಣ ಕೃಷ್ಣ |
ಭರದಿಯೆನ್ನುದ್ಧರಿಸು ದೇವ | ಕೃಷ್ಣ ಕೃಷ್ಣ | ಎಂದು |
ಚರಣಕೆರಗಿದವ ಸುದಾಮ | ಕೃಷ್ಣ ಕೃಷ್ಣ ॥ ೨ ॥

**ಭಾಮಿನಿ**

ಆಯಿತೇಳಿತ್ತೆನು ಮನೋಭಿ |
ಪ್ರಾಯಸಿದ್ಧಿ ಯನಧಿಕವಹ ಪರ |
ಮಾಯುವನು ನಿನ್ನನ್ವಯಾನುಕ್ರಮವಿವರ್ಧನವ |
ಶ್ರೀಯನುತ್ತಮ ಕೀರ್ತಿಯನು ಸ |
ಶ್ರೇಯಸವನೈಶ್ವರ್ಯಗತಿಗಳ |
ನಾಯುವಂತನೆ ಕೊಟ್ಟೆನೆಂದನು ವರವನಾತಂಗೆ ॥

**ರಾಗ ಸಾಂಗತ್ಯ ರೂಪಕತಾಳ**

ಇಂತು ಸೌಭಾಗ್ಯಸಂಪದವ ಸುದಾಮನಿ | ಗಂತಕಾಂತಕನಿತ್ತು ದಯದಿ ||
ಚಿಂತೆವಿರಹಿನಂತಾದ್ಯರನೊಡಗೂಡಿ | ಮುಂತೆಯಲ್ಲಿಂದ ತಾ ನಡೆದ ॥ ೧ ॥

ಬರಲು ಮುಮ್ಮಾರ್ಗದಿ ತರುಣಿಯೊರ್ವಳು ಹೊನ್ನ | ಹರಿವಾಣ ತುಂಬಿ ಗಂಧವನು |
ಧರಿಸಿ ಬೀದಿಯೊಳು ತಾ ಬರಲು ಶ್ರೀಹರಿ ಕಂಡು | ಬೆರಗಾಗುತಲಿ ನೋಡಿದನು ॥ ೨ ॥

ಶಿರವ ತಗ್ಗೊತ್ತಿ ಮೆಯ್ ಮುರುಟಿ ಡೊಂಕಾಗಿ ಜೋ | ಲಿರುವ ಚರ್ಮವು ಶ್ವೇತಕೇಶ ||
ಮೆರೆದು ಮುಪ್ಪಡರಿದಾಕೃತಿಯು ವಿಕೃತಿಯಾದ | ತರುಣಿಯ ಕಂಡನಚ್ಯುತನು ॥ ೩ ॥

ಸರ್ವಲೋಕೇಶನಣ್ಣನ ಮೊಗವ ನೋಡುತ್ತ ಲೊರ್ವರೊರ್ವರು ತಮ್ಮೊಳ್ ನಗುತ ||
ಊರ್ವಿಗಿಂತವಳು ಇಲ್ಲೆಂದು ಗೋವರ್ಧನ | ಪರ್ವತಧರನು ಕಂಡೆಂದ ॥ ೪ ॥

ಮತ್ತಕಾಶಿನಿಯ ಶ್ರೀಹರಿಯು ಕಂಡಾಕೆಯ | ಹತ್ತಿರ ನಿಂದು ನೋಡುತಲಿ ||
ಅತ್ಯಂತ ದಯದಿ ಮಂದಾಸ್ಯದೊಳ್ ಮೃದುವಾಕ್ಯ ಬಿತ್ತರಿಸಿದನಾಕೆಯೊಡನೆ ॥ ೫ ॥

**ರಾಗ ಸೌರಾಷ್ಟ್ರ ಏಕತಾಳ**

ನಾರೀ ನಿನ್ನನು ಪೋಲ್ವ | ರಾರೀ ತ್ರೈಜಗದೊಳಿ | ನ್ನಾರ ಕಾಣೆನು ಪೇಳ್ ನೀನಾರೆ ||
ವಾರಿಜಾಕ್ಷಿಯೆ ಚೆಲ್ವಾಕಾರಗುಂದಿರುತಿಹ ಕಾರಣವೇನೆನ್ನೊಳುಸಿರೆ ॥ ೧ ॥

ಎನ್ನ ಕೇಳುವೆಯ ಸಂಪನ್ನ ಪೇಳುವೆ ಚೆಲ್ವ | ಕನ್ನೆಯಲ್ಲವೆ ಮುನ್ನಾನು ||
ಬಣ್ಣಗುಂದೀಗ ತ್ರಿವಕ್ರೆಯೆಂಬಭಿಧಾನ | ವನ್ನು ಪಡೆದೆ ವಿಧಿ ಕೃತದಿ || ೨ ||

ನಾರಿ ಕೇಳ್ ಗಂಧವಿದಾರು ಲೇಪಿಸುವರಿ | ನ್ನಾರಿಗೊಯ್ದಪೆಯೆ ಪೇಳೆನಗೆ ||
ಚಾರು ಗಂಧವನು ನೀನೆಮಗೆ ಕೊಟ್ಟರೆ ಕ | ಯ್ಯಾರೆ ತೋರುವೆ ಶುಭೋದಯವ || ૩ ||

ಚದುರ ಕೇಳಿದನು ಭುವ್ಯಧಿಪ ಕಂಸಾಖ್ಯಗೀ | ವಿಧದಿ ತೇಯುವೆ ನಿರಂತರದಿ ||
ಅಧಿಕ ಮೋಹದಿ ದಾಸಿಯಳಿಗೆ ನೀನೀ ಲೇಸ | ಮುದದಿ ಈಯಲು ಬ್ರಹ್ಮನೇನೈ || ೪ ||

ಇಳೆಯಪಾಲಕಗೆ ನಾವಳಿಯಂದಿರು ಕಾಣೆ | ನಳಿನಾಕ್ಷಿ ಗಂಧ ತಾರೆನಲು ||
ಚೆಲುವ ನೀನಿರಲನ್ಯರಿಗೆ ಯೋಗ್ಯವಲ್ಲೆಂದು | ಒಲಿದು ಪಾತ್ರವೆಯಿತ್ತಳಾಗ || ೫ ||

**ಭಾಮಿನಿ**

ಧರಣಿಪತಿ ಕೇಳ್ ವಿಮಲ ವಿಶ್ವಂ |
ಭರನು ಹರಿಯಿವನೆಂದು ತಿಳಿಯದೆ |
ತರುಣಿಯೀತನ ಚೆಲುವಿಕೆಗೆ ತಾ ಮೆಚ್ಚಿ ಗಂಧವನು |
ಪರಮ ಹರುಷದಿ ಕೊಡಲು ಕೆಳೆಯರ |
ನೆರವಿಯಲಿಯೋಕುಳಿಯನಾಡುತ ಕರುಣನಿಧಿ |
ಕುಬುಜೆಯನು ಹತ್ತಿರ ಕರೆದು ಇಂತೆಂದ || ೧ ||

**ರಾಗ ಸುರುಟಿ ಏಕತಾಳ**

ಮಾನಿನಿಮಣಿ ಕೇಳೆ | ನಿನ್ನನು | ಮಾನವೇನಿದು ಪೇಳೆ ||
ನ್ಯೂನಾಕೃತಿಗೆ ನಾ | ಕಾಣಿಪೆ ಶುಭವ ನೀ ಮೌನವ ಬಿಡುಯೆ ನ್ನಾಣೆಯೆಂದರುಹಿದ || ೧ ||

ನಿನ್ನ ತೆರದೊಳಿರುವ | ಜನರಿಗೆ | ಮನ್ನಿಸಿ ರಚಿಸಿರುವ
ಎನ್ನ ಪೂರ್ವಜರರಿ | ತಿರುವರು ವೈದ್ಯವ | ದನ್ನು ನಾ ಬಲ್ಲೆ ನೋ | ಡೆನ್ನ ಕರ್ಯ್‌ಗುಣಗಳ || ೨ ||

ದಿಟ್ಟೆ ಬಾರೆನುತವಳ | ಕರೆವುತ | ಮೆಟ್ಟುತ ಪದಯುಗಳ ||
ನೆಟ್ಟನೆ ಕರಯುಗ | ಗೊಟ್ಟು ಗಲ್ಲದೊಳ್ ಮೇ | ಲಷ್ಟಾಂಗುಲವನೆ | ತ್ತಿಟ್ಟ ಶ್ರೀಕೃಷ್ಣನು || ૩ ||

ನಿಟಿನಿಟಿನಿಟಿಲೆನುತ | ಸಡಲಿತು | ಕಟಿ ಎಲು ನರ ಸಹಿತ || ನಟನೆ ಗಾರ್ತಿಯ ತನು |
ಸ್ಫಟಿಕದಂತಾಗಲು | ವಿಟರು ಕಾಣುತ ಮನ ದಿಟದಿ ಮೆಚ್ಚುತಲಿರೆ || ೪ ||

**ಭಾಮಿನಿ**

ಅರಸ ಕೇಳಾ ಸತಿಯನಚ್ಯುತ |
ಹರುಷದಲಿ ಮೇಲೆತ್ತುತಿರಲಾ |

ತರುಣಿ ದಿವ್ಯಾಕೃತಿಯೊಳೆಸೆದಳು ಏನನುಸಿರುವೆನು ||
ಧರೆಗೆ ರಂಭೆಯೊ ಊರ್ವಶಿಯೊ ಕಿ |
ನ್ನರವಧುವೊಯೆನೆ ಮರೆದು ಶಿರವನು |
ಧರೆಗೆ ಬಾಗುತ ನಾಚಿ ಹರಿಯೊಡನೆಂದಳಿಂದುಮುಖಿ || ೧ ||

**ರಾಗ ಆನಂದ ಏಕತಾಳ**

ಜಯತು ನಮೋ | ಕರುಣನಿಧಿ | ಜಯತು ಭಾ | ಗ್ಯವಿನೋದಿ
ಜಯವೆನಗಿ | ತ್ತೆಯೊ ದಯದಿ | ಜಯಿಸಿದೆ ನಾ | ಭವಶರಧಿ || ೧ ||

ಇಂದೆನ್ನ ಉ | ದ್ಧರಿಸಿದಕೆ | ಚಂದದಿಯೆ | ನ್ನಯ ಗೃಹಕೆ |
ಬಂದೆನ್ನಿಷ್ಟಾರ್ಥವನು | ಕುಂದದೆ ಪಾ | ಲಿಸುವ ನೀನು || ೨ ||

ಹರಣವು ಮ | ನ್ಮಥಶರಕೆ | ಕರಗುತಿದೆ | ನ್ನದು ದಿಟಕೆ ||
ನಡೆ ಗೃಹಕೆ | ನ್ನುತ ಸೆರಗ | ಹಿಡಿದಳು ನಾ | ಚುತ ಬೇಗ || ೩ ||

ತರುಣಿಮಣೀ | ಬಾರೆನುತ | ಕರುಣಿ ಬಂದ | ಪ್ಪಿದ ನಗುತ ||
ಮರುಗದಿರು | ಮನದೊಳಗೆ | ಬರುವೆನು ನಿ | ನ್ನಯ ಗೃಹಕೆ || ೪ ||

ಕಾರಿಯವುಂ | ಟೆಮಗಿಂದು | ತೀರಿಸು | ತಿಲ್ಲಿಗೆ ಬಂದು ||
ತೋರುವೆನು | ರತಿಸುಖವ | ನಾರಿಮಣಿ | ಕೇಳ್ ದಿಟವ || ೫ ||

**ದ್ವಿಪದಿ**

ಕೇಳು ಭೂವರನೆ ಗೋಕುಲವಾಸಿ ಹರಿಯು |
ಬಾಲೆ ಕುಬುಜೆಯ ಪಾಲಿಸಿಯೆ ಮುಂದೆ ಬರಲು || ೧ ||

ಲೋಲನೇತ್ರನ ಬರವ ಕೇಳುತಲಿ ಸತಿಯ |
ರ್ಜಾಲವೆದ್ದುದು ಮರೆದು ತಮ್ತಮ್ಮ ಮತಿಯ || ೨ ||

**ರಾಗ ಕಾಂಭೋಜಿ ಅಷ್ಟತಾಳ**

ಲಾಲಿಸು | ಭೂಪ | ಲಾಲಿಸು || ಪ ||

ಲಾಲಿಸಿ ಕೇಳು ಪರೀಕ್ಷಿತ | ಮಧು | ರಾಲಯದೊಳಗಜಬಜಿಪ ಆಶ್ಚರ್ಯವ || ಅ ||

ಕರುಣನಿಧಿಯು ಕೃಷ್ಣ | ಬರುವನೆನುತ ಕೇಳಿ | ತರುಣಿಯರೆಲ್ಲ ಕೂಡುತ ಬೇಗ | ತನು |
ಮರೆದು ಅತ್ತಿತ್ತ ಓಡಿದರಾಗ | ತಮ್ಮ | ತರಳರ ಬಿಸುಡುತಾಕ್ಷಣ ಬೇಗ | ಕಣ್ಣಿ |
ಗಿರಿಸಿದರವರು ಕುಂಕುಮವಾಗ ಕಾಡಿಗೆಯ ಬೇಗ | ಮೂಗಿನೊಳಗಾಗ | ತುಂಬಿ |
ಸಿರುವ ವೀಳ್ಯವ ಕಿವಿಯೊಳಗಾಗ | ಇಟ್ಟು | ಕೊರಳೊಳು ಪೂಮಾಲೆ ತೊಟ್ಟರು ಬೇಗ || ೧ ||

ಕರಗಳಿಗಿಟ್ಟು ಗೆಜ್ಜೆಯ ರತ್ನ | ಸೊಂಟಕೆ ಸುತ್ತಿ | ತಮ್ಮ |
ಶಿರಕೆ ಶ್ರೀಗಂಧ ತೇಯುತ ಮೆತ್ತಿ | ಕೊಂಡು | ಚರಣಕೆ ಬಳೆಯನಿಟ್ಟರು ಮತ್ತೆ |
ಗೋಡೆಗಳ ಹತ್ತಿ | ನೋಡುವರು ಅರ್ತಿ | ಕೆಲರ್ ಕರುವಿಗೆ ಮೊಲೆಯ ಕೊಟ್ಟರು ಎತ್ತಿ |
ತಮ್ಮ | ಎರೆಯರ ಬಿಟ್ಟು ಪೋದರು ಮುತ್ತಿ || ೨ ||

ಹರಿಯ ನೋಳ್ಪರ್ತಿಯೊಳಿರದೆ | ಎಣ್ಣೆಯನಿಟ್ಟು |
ತರುಣಿಯರ್ ಸ್ನಾನ ಮಾಡದೆ ಬಂದು ಉಣು |
ತಿರುವ ಬಟ್ಟಲ ಬೀಸಾಡಿದರಂದು ತಾವು | ಮರುಳರಂತೆ ಬೀದಿಯೊಳ್ ನಿಂದು |
ಕೆಲ | ರಿರದೆ ಹತ್ತಿದರು ಮಾಳಿಗೆಯಂದು | ನೋಡಿದರು ಬಂದು |
ಕೃಷ್ಣನ ನಿಂದು | ಕಂಡು | ಮರುಳಾದ ಪರಿಯ ನಾನೇನೆಂದು |
ಪೇಳ್ವ | ಹರಿಯ ನಾಟಕವ ನೀ ಕೇಳಿಂದು || ೩ ||

**ಕಂದ**

ಇಂತಾ ಸತಿಯರು ನೋಡುತ |
ಕಂತುವಿಗಂಗನೊಪ್ಪಿಸಿ ತತ್‌ಕ್ಷಣದೊಳಗಂ ||
ನಿಂತುಪ್ಪರಿಗೆಯೊಳ್ ಕೃಷ್ಣನ |
ತಂತಮ್ಮೊಳಗೊರ್ವರೊರ್ವರ್ ಬೆಸಗೊಳುತಿರ್ದರ್ || ೧ ||

**ರಾಗ ತುಜಾವಂತು ಏಕತಾಳ**

ಚಂದ್ರಾನನೆ ಬಾ ನೋಡಲೆ ನೀರೆ | ಗೋಪ |
ವೃಂದ ನೆರಹಿ ಬಂದನಿವ ನಾರೆ || ಚಂದ್ರನನೆ || ಪ ||

ತರಣಿಶತಕೋಟಿಪ್ರಭೆಯ ಪೋಲುವ |
ಮೆರೆ | ದಿರುವ ದಿವ್ಯಾಕೃತಿಯಾನನವ ||
ಪರಿಯ ಕಾಣಲು ಭ್ರಮೆಯ ತೋರುವ |
ನಿವ | ನಿರವನೀಕ್ಷಿಸುತೆನ್ನೊಳರುಹೆಯವ್ವ || ೧ ||

ನಾರಿ ಕೇಳಜಭವಾದ್ಯರು ಪೂರ್ವದಿ | ಪೇಳ್ |
ಕ್ಷೀರಸಾಗರಶಯನ ವಿನೋದದಿ ||
ತೋರೆ ನಾಟಕ ಉದ್ಭವಿಸೆ ಮುದದಿ |
ಆದಿ | ನಾರಾಯಣನಂತಿವನು ಜಗದಿ || ೨ ||

ಕರುಣಾಬ್ಧಿಯಿವನೆಂದಾಡಿದೆಯೆನ್ನೊಳು | ಈತ |
ನಿರುವನೆಲ್ಲೆಂದು ಕೇಳುವೆ ನಿನ್ನೊಳು ||
ಅರಿವೆ ಪೇಳಿವನ ನಿಶ್ಚಯವಮ್ಮ | ಕಾಮ |
ಶರಕೆ ಸೋತೆನು ದಮ್ಮಯ್ಯ ಕಾಣಮ್ಮ || ೩ ||

ಮಂದಗಮನೆ ಕೇಳಾದರೆ ಈತನು | ಪೋಗೆ | ನಂದನ ಸದನದಿ ಗೋಪ್ಗಳನು ||
ಚಂದದಿ ಕಾಯ್ದ ಶ್ರೀಹರಿಯು ತಾನೆ | ಆ | ನಂದದಿ ನೆರೆದ ಗೋವಿಂದ ಕಾಣೆ ॥ ೪ ॥

ಅಧಿಕ ಕೋಟ್ಯಾನುಕೋಟಿಯಜಾಂಡವ ತ | ನ್ನುದರದಿಯಡಗಿಸಿಟ್ಟು ಈ ಮಾಧವ ||
ಮುದದಿ ನಮ್ಮನು ಈತ ರಮಿಸಲಮ್ಮ | ನಮ | ಗಿದಿರ್‍ಯಾರು ಭಾಗ್ಯಸಂಪದದೊಳಮ್ಮ ॥ ೫ ॥

**ಭಾಮಿನಿ**

ಜನಪ ಕೇಳ್ಳೈ ಮಧುರೆಯೊಳಗಿಹ |
ಜನರ ಭಾಗ್ಯವನೇನನೆಂಬೆನು |
ಜನುಮ ಸಾರ್ಥಕಗೆಯ್ದಿರಲ್ಲೇ ಹರಿಯ ದರುಶನದಿ ||
ಇನಿತು ಪುಣ್ಯೋದಯವು ಸನಕಾ |
ದ್ಯರಿಗಸಾಧ್ಯವು ಭೂಪ ಕೇಳ್ಳೈ |
ವನಿತೆಯರು ಆರತಿಯ ಬೆಳಗುತಲಾಡಿ ಪಾಡಿದರು ॥ ೧ ॥

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಮಂಗಲಂ ಶ್ರೀಕೃಷ್ಣರಾಯನಿಗೆ |
ಜಯ ಮಂಗಲಂ ಜಯತು ಶ್ರೀಮಾಧವಗೆ | ಮಂಗಲಂ ॥ ಪ ॥

ಸರಸಿಜಭವ ಮುಖ್ಯ ಸುರರು ಕ್ಷೀರಾಬ್ಧಿಗೆ | ತೆರಳಿ ದೈತ್ಯರ ಉಪಟಳವೆಲ್ಲವ ||
ಅರಿಕೆ ಗೆಯ್ಯೆ ದೇವಕಿಯುದರದೊಳವ |
ತರಿಸಿದ ಮಹಿಮಗಾರತಿಯೆತ್ತಿರೆ ॥ ಮಂಗಲಂ ॥ ೧ ॥

ಶಕಟ ಪೂತನಿ ವಾತಾಸುರ ಮುಖ್ಯ ಧೇನುಕ | ಬಕ ಕೇಶಿ ವೃಷಭಾದ್ಯರ ದ್ವೇಷದಿ ||
ಸಕಲರ ತರಿದು ಗೋಕುಲದ ಗೋವಿಂದನು |
ಯುಕುತದಿ ಕಾದ ನಾಟಕಧಾರಿಗೆ ಮಂಗಲಂ ॥ ೨ ॥

ಶ್ರುತಿಯ ಕಾಯ್ದದ್ರಿಯೆತ್ತವನಿ ತಂದರ್ಭಕ | ಗತಿಯಿತ್ತು ಬಲಿಯ ಮೆಟ್ಟುತ ಕ್ಷತ್ರರ |
ಮಥಿಸಿ ವಾಲಿಯ ಕೊಂದು ಬೆಣ್ಣೆ ಕದ್ದು ಸ್ತ್ರೀಯರ
ವ್ರತ ಗೆಲ್ದ ಕಲ್ದ ಮಹಾನುಭಾವಗೆ ॥ ಮಂಗಲಂ ॥ ೩ ॥

*ಮೊದಲನೆ ಸಂಧಿ ಬಿಲ್ಲಹಬ್ಬ ಮುಗಿದುದು*

# ಯಕ್ಷಗಾನ ಸಂಪೂರ್ಣ ರಾಮಾಯಣ

## ಪಾತ್ರಗಳು

| | |
|---|---|
| ದಶರಥ | ಹನುಮಂತ |
| ಸುಮಿತ್ರ | ಸುಗ್ರೀವ |
| ರಾಮ | ವಾಲಿ |
| ಮಂಥರೆ | ತಾರೆ |
| ಕೈಕೇಯೀ | ಸಂಪಾತಿ |
| ಲಕ್ಷ್ಮಣ | ಲಂಕಿಣಿ |
| ಕೌಸಲೆ | ವಿಭೀಷಣ |
| ಸೀತೆ | ಅಂಗದ |
| ಭರತ | ಪ್ರಹಸ್ತ |
| ಶತ್ರುಘ್ನ | ಇಂದ್ರಜಿತು |
| ವಸಿಷ್ಠ | ಅತಿಕಾಯ |
| ಶೂರ್ಪನಖಿ | ಕುಂಭಕರ್ಣ |
| ರಾವಣ | ಇಂದ್ರಜಿತ |
| ಮಾರೀಚ | ಮಂಡೋದರಿ |

## ಸಂಪೂರ್ಣ ರಾಮಾಯಣ

**ಶಾರ್ದೂಲವಿಕ್ರೀಡಿತ ವೃತ್ತ**

ಶ್ರೀಮದ್ ಭಾನುಕುಲಪ್ರದೀಪ ವಿನುತಪ್ರೇಮಂ ಜಗದ್ವಂದಿತಂ |
ರಾಮಂ ಸಜ್ಜನರಿಷ್ಟದಾತೃ ಖಲಹೃದ್ ಭೀಮಂ ಸುರೇಶಾರ್ಚಿತಂ ||
ಶಾಮಂ ಲೋಕ ಸಮಸ್ತ ಶಾಂತಿನಿಲಯಂ ಭೌಮೀ ಮನೋವಲ್ಲಭಂ |
ಸೋಮಾರ್ಕಾಮಿತತೇಜಸಂ ಕವಿಗಣಕ್ಷೇಮಂ ಪರೇಶಂ ಭಜೇ || ೧ ||

**ರಾಗ ನಾಟಿ ಝುಂಪೆತಾಳ**

ಜಯತು ಜಯ ಗಜವದನ | ಜಯತು ನಗಜಾ ತರುಣ |
ಜಯತು ದೀನೋದ್ಧರಣ | ಜಯ ವಿಘ್ನಹರಣ ||
ಜಯತು ಜಯ ಖಳಹನನ | ಜಯತು ಸರ್ಪಾಭರಣ |
ಜಯತು ಪಾವನಚರಣ | ಜಯ ಸಿದ್ಧಿರಮಣ |
ಜಯತು ಜಯ ಜಯತು || ೧ ||

ಜಯತು ಜಯ ಸರ್ವೇಶ | ಜಯತು ರವಿಸಂಕಾಶ |
ಜಯತು  ಭವಭಯನಾಶ | ಜಯ ಭಕ್ತಪೋಷ ||
ಜಯತು ಜಯ ಶೃತಿಘೋಷ ಜಯತು ಗಾನವಿಲಾಸ |
ಜಯತು ಕವಿಕುಲತೋಷ ರಕ್ಷಿಸನಿಶ || ಜಯತು ||     || ೨ ||

ಜಯತು ಜಯ ಚಿದ್ರೂಪ | ಜಯತು ಚಂದನಲೇಪ |
ಜಯತು ಕೀರ್ತಿಕಲಾಪ | ಜಯ ಸುಪ್ರತಾಪ ||
ಜಯತು ನುತವಿಧಿಸುರಪ | ಜಯತು ಜಗನಿಷ್ಪಾಪ |
ಜಯತು ಕಪಿಲಾವನಿಪ | ಜಯವೀಯೋ ಗಣಪ ||
ಜಯತು ಜಯ ಜಯತು   || ೩ ||

**ರಾಗ ನಾಟಿ ಬೇಹಾಗ್ ರೂಪಕತಾಳ**

ವಾಣಿ ಭುಜಗವೇಣಿ ಅಜನ | ರಾಣಿ ಶಾರದೆ ||
ನೀನೆ ದಯದಿ ಗಾನಗೈಸ | ಲೇನು ಬಾರದೆ  || ಪಲ್ಲ ||

ಪ್ರಾಕೃತರೆನಿಪಾ ಕವಿಗಳ | ನೇಕ ಜನರನ ||
ಪ್ರಾಕೃತರ ಗೈದಾ ಕರುಣದೊ | ಳೀ ಕುಮಾರನ || ವಾಣಿ        || ೧ ||

ವಾಕು ಮತಿಯೋಳೈಕ್ಯಳೆನಿಸಿ | ಲೋಕ ಸತ್ಕೃತಿ ||
ನೀ ಕರುಣಿಪುದೀಕೃತಿಗೆ ವಿ | ವೇಕಿ ಭಾರತಿ || ವಾಣಿ    || ೨ ||

ಮಾತೆಯೆ ಪ್ರಣಿಪಾತ ನಾಂ ಪ್ರ | ಪೂತ ಪಾದದ ||
ಖ್ಯಾತೆ ಖಗವರೂಥೆ ಸಲಹು | ಜಾತನಂ ಸದಾ || ವಾಣಿ         || ೩ ||

**ವಾರ್ಧಿಕ್ಯ**

ಶೇಷಾದ್ರಿಪತಿ ವೆಂಕಟೇಶನಂ ನುತಿಸಿ ಸ |
ರ್ವೇಶ ಹರಿಹರ ಸರಸಿ ಜಾಸನರ್ಗೆರಗಿ ಕೈ |
ಲಾಸನರ್ಧಾಂಗಿ ಸಿರಿ ವಾಗ್ದೇವಿಯರ ಭಜಿಸಿ ವಾಸವಾದ್ಯಮರ ತತಿಯ |
ತೋಷದಲಿ ಪೊಡಮಡುತ್ತಾ ಸುಕವಿ ವಾಲ್ಮೀಕಿ |
ವ್ಯಾಸಭಾಸಾದ್ಯಖಿಲ ಭೂಸುರೋತ್ತಮರ ಮಣಿ |
ದಾ ಸಕಲ ಗುರುಹಿರಿಯರಂ ಸ್ಮರಿಸಿ ಭಕ್ತಿಯಿಂದೀ ಸುಕಾವ್ಯವ ಗೈವೆನು   || ೧ ||

**ಭಾಮಿನಿ**

ಆದಿಯಲಿ ಶಿವನುಮೆಗೆ ಬೋಧಿಸಿ |
ದಾದಿ ಕಥೆಯನನಂತ ರೀತಿಯ |
ಲಾದಿಕವಿ ವಾಲ್ಮೀಕಿ ಮುನಿವರ್ಯಾದಿಗಳು ಬರೆದ ||

ಆದಿಪುರುಷನ ಚರಿತೆಯಿದರನ |
ನಾದಿ ಮಾರುತಿ ನುಡಿಸೆ ನವ್ಯತೆ |
ಗಾದಿಯೆ ನಲಾನೊರೆವೆ ಕನ್ನಡದೆಕ್ಷಗಾನದಲಿ || ೧ ||

**ರಾಗ ಸೌರಾಷ್ಟ್ರ ತ್ರಿವುಡೆ ತಾಳ**

ತ್ರಿಣಯ ಕರುಣದೊಳನಘ ರಾಮಾ | ಯಣವನಭಿವರ್ಣಿಸುತಲಿರೆ ಮಣಿ |
ದಿನಿಯನನು ಬೆಸಗೊಂಡಳುಮೆಯತಿ | ವಿನಯದಿಂದ || ೧ ||

ಕೇಳಿದಣಿಯವು ಕಿವಿಗಳಿವು ಮುದ | ತಾಳಿ ತಣಿಯದು ಮನವು ಶ್ರೀಹರಿ |
ಲೀಲೆಗಳ ಕೊಂಡಾಡಿ ಜಿಹ್ವೆಯು | ಸೋಲದ್ಯೆಸೆ || ೨ ||

ನಾರಿಯವರಜರೊಡನಯೋಧ್ಯಾ | ಧಾರಿಣಿಯನುಳಿದಾರಘೂತ್ತಮ |
ಸೇರಿದನದೆಂತಮಮ ದುರ್ಗಮ | ಘೋರಟವಿಯ || ೩ ||

ಇರೆ ಜನಸ್ಥಾನದಲಿ ಸೀತಾ | ತರುಣಿಯನು ಕೊಂಡೊಯ್ದು ರಾಮನ |
ಧುರದಿ ಪಡೆದನದೆಂತು ದಶಶಿರ | ಪರಮ ಪದವ || ೪ ||

ಅರುಹು ರಾಘವನಿಳೆಯ ಭಾರವ | ತರಿದು ಜಾನಕಿ ಸಹಿತ ರಾಜ್ಯವ |
ಪೊರೆದನೆನೆ ತಕ್ಕೈಸಿಪೇಳಿದ ಹರನು ಮುದದಿ || ೫ ||

**ವಾರ್ಧಿಕ್ಯ**

ರವಿಕುಲೋತ್ತುಂಗ ನೃಪ ಕೀರ್ತಿಕುಜ ಫಲರೂಪ |
ದಿವಿಜಸಖನಹಿತ ಗಜ ಪಂಚಾಸ್ಯನೆನಿಸುವಜ |
ಕುವರ ದಶರಥನಾಳುತಿಳೆಯ ಮೂವೆಂಡಿರೊಳು ವಿವಿಧದತಿ ವೈಭವದೊಳು ||
ಸವೆದುದರುವತ್ತು ಸಾವಿರ ವರುಷ ಸುತರುದಿಸ |
ದವ ಪುತ್ರ ಕಾಮೇಷ್ಟಿ ಗೈದು ಲೋಕ ಸಮಷ್ಟಿ
ಧವನ ಶಿಶು ತುಲ್ಯೆಯಿಂ ಪಡೆಯೆ ಕೌಸಲ್ಯೆಯಿಂ |
ಭುವನ ನುತ ರಾಮಾಖ್ಯೆಯಿಂ || ೧ ||

**ಭಾಮಿನಿ**

ಅರಸನಚ್ಚಿನ ಕೈಕೆಯೆಂಬವ |
ಳೆರಡನೆಯ ಸತಿಗುದಿಸೆ ಭರತನು |
ಕಿರಿಸುಮಿತ್ರಯೊಳವಳಿ ಲಕ್ಷ್ಮಣ ಶತ್ರುಹರರೆನುವ ||
ತರಳರೊಡನತ್ಯಧಿಕ ಹರುಷದೊ |
ಳಿರುತ ನೃಪ ಕಾಲೋಚಿತದ ಸಂ |
ಸ್ಕರಣಗಳ ವಿರಚಿಸಿದನಿರದೆ ವಸಿಷ್ಠರಭಿಮತದಿ || ೧ ||

**ವಾರ್ಧಿಕ್ಯ**

ದಕ್ಷಸುತೆ ಕೇಳು ಶ್ರೀವಕ್ಷ ದಿನದಿನದಿ ಸಿತ |
ಪಕ್ಷ ಶಶಿಯಂತೆ ಬೆಳೆ ದುಕ್ಕಿಬಹ ಜವ್ವನದಿ |
ಲಕ್ಷ್ಮಣನ ಜತೆಯೊಳೈದಕ್ಕರದಿ ರಕ್ಕಸರನಿಕ್ಕಿ ಕೌಶಿಕನ ಮಖವ ||
ರಕ್ಷಿಸುತಹಲ್ಯೆಯಂ ಸತ್ಕರಿಸಿ ಮಿಥಿಲೆಗೈ | ದಕ್ಕಜದಿ ಧನುವೆತ್ತು ತಕ್ಷರಂ ಜಾನಕಿಗೆ |
ತಕ್ಕ ಪತಿಯೆಂದೆನಿಸಿ ವಿಕ್ರಮದಿ ಭಾರ್ಗವನ ಮಿಕ್ಕಯೋಧ್ಯೆಗೆ ಬಂದನು ॥ ೧ ॥

**ಶಾರ್ದೂಲ ವಿಕ್ರೀಡಿತ ವೃತ್ತ**

ಸೀತಾವಕ್ತ್ರ ಸರೋರುಹಾಪ್ತ ಸವಿತಾಮಾತಾಪಿತಾಸ್ಸರ್ವದಾ |
ಪ್ರಿತ್ಯಾಗಾರ ಸುದೀಪ್ತ ದೀಪ ವರಖದ್ಯೋತಾನ್ವಯಾಖ್ಯಾರ್ಣವ ||
ಶೀತಾಂಶೂಪಮ ರಾಮಚಂದ್ರನಿರೆ ಭೂಜಾತಾಸಹಾನಂದದೊಳ್ |
ಏತತ್ಕಾಲದಿ ತೋರ್ದುದಲ್ಲಿ ಮಹದು | ತ್ಪಾತಂ ಮನೋಭೀಕರಂ ॥ ೧ ॥

**ಭಾಮಿನಿ**

ವನಿತೆ ಕೇಳದ ಕೋಸಲೇಶ್ವರ |
ನೆಣಿಸುತಿನಿತುತ್ಪಾತವಿದು ಮತ್ |
ಪಣೆಯ ಲಿಪಿಯ ವಿಧಾತ ಚಿತ್ರಿಸಿ ತೋರ್ದ ಬಾನ್ ಪಟದಿ ||
ತನುವನಿಶ್ಚಿತವವನಿ ಪಟ್ಟವ |
ನಣುಗ ರಾಘವಗೀವೆನೆನೆನುತಲಿ |
ಮನದೊಳರಿತೋಲಗಕೆ ನಡೆತಂದೆಂದನುತ್ಸವದಿ ॥ ೧ ॥

**ರಾಗ ಕಾಂಬೋಧಿ ಝಂಪೆತಾಳ**

ಆಲಿಸೈ ಮಂತ್ರಿ ಬಹು | ಕಾಲ ಭಾಗ್ಯದೊಳಿಳೆಯ |
ನಾಳಿದೆ ಸಮಸ್ತ ಸಿರಿ | ಯಾಲಯವಿದೆನಿಸಿ ||
ಹಾಳು ಜರೆಯಡಸಿತೀ | ವೇಳೆ ಸುತರಭ್ಯುದಯ |
ದಾಲೋಚನೆಯದೊಂದೆ | ಮೇಲೆ ಮೇಲುದಿಸಿ ॥ ೧ ॥

ಕೆಟ್ಟ ವಿಧಿಯೆಂತಿಹುದೊ | ಪಟ್ಟವನು ರಾಘವಗೆ |
ಕಟ್ಟುವೆನು ನಾಳೆಯೆ ವ | ಸಿಷ್ಠ ಮೊದಲಾಗಿ ||
ಇಷ್ಟ ಭೂಸುರರಖಿಲ | ಸೃಷ್ಟಿಪರ ಬರಿಸುತ ವಿ |
ಶಿಷ್ಟ ಸಂಗ್ರಹವ ಸಂ | ಘಟ್ಟಿಸನುವಾಗಿ ॥ ೨ ॥

ಭರತ ಶತ್ರುಹರಿಲ್ಲ | ಕರೆವಡೀಗಳವಲ್ಲ
ಮರುಗಿ ಫಲವಿಲ್ಲ ಸಿಂ | ಗರಿಸು ಪುರವೆಲ್ಲ ||

ಅರಸನುಕ್ತಿಗೆ ಹರುಷ | ಭರದಿಸಭೆಯೋಲಾಡೆ |
ತರಳ ರಾಮನ ಬರಿಸು | ತೋರೆದನೀ ಸೊಲ್ಲ || ೩ ||

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಮಗನೆ ಬಾ ಬಾ ಸುಗುಣ ವಾರಿಧಿ | ಖಗ ಕುಲಾನ್ವಯ ದೀಪ ನೀನೀ |
ಜಗತಿಯನು ಪಾಲಿಪುದು ಪೂರ್ವಜ | ರುಗಳ ಮಿಗಿಸಿ || ೧ ||

ತಾತ ಬಿನ್ನಹ ಖ್ಯಾತರಿಂಗಹ | ಜೈತ್ರ ಯಾತ್ರೆಯ ಗೈದು ಕ್ಷಾತ್ರಿಯ |
ನೀತಿಯಲಿ ಕೈಕೊಂಬೆನವಸರ | ವೇತಕೀಗ || ೨ ||

ಲೇಸು ಮನುಜ ಸುರಾ ಸುರರು ಮಣಿ | ದಾ ಸದಾಶಿವ ಧನುವ ಮುರಿದವ |
ಗೇಸರದು ಭೂತಳವ ಜೈಸುವು | ದೇ ಸುನೀತ || ೩ ||

ಲೋಕ ಕಂಟಕರಿಹರನೇಕರ | ನೀಕವನು ಮರ್ದಿಸದೆ ರಾಜ್ಯವ |
ಸ್ವೀಕರಿಸೆ ಬಳಿಕಹುದೆ ಮತ್ವಿತ | ವ್ಯಾಕುಲವಿದು || ೪ ||

ಶೀಲವಹುದೆಲೆ ಬಾಲ ತನ್ನಯ | ಬಾಳದಕೆ ಪ್ರತಿಕೂಲವವನಿಯ |
ಪಾಲನೆಯ ಕೈಕೊಂಬುದೀಗಳೆ | ನಾಳೆಯೆನದೆ || ೫ ||

**ಭಾಮಿನಿ**

ಎನೆ ಪ್ರಸಾದವೆನುತ್ತ ರಾಘವ |
ಜನಕನಡಿಗಭಿನಮಿಸಿ ತೆರಳಲು |
ಜನಪನಪ್ಪಣೆಯಲಿ ಸುಮಂತ್ರನು ಬರೆಸಿ ಲೇಖನವ ||
ಮುನಿ ವಸಿಷ್ಠಾದ್ಯಖಿಲ ಭೂಸುರ |
ಗಣವ ನೃಪರಾಪ್ತೇಷ್ಟ ಬಂಧುಗ |
ಳನು ಕರೆಸಿ ಶೃಂಗರಿಸಿ ಸಂಭಾರಗಳ ನೆರಹಿದನು || ೧ ||

**ವಾರ್ಧಿಕ್ಯ**

ಮೊದಲೆ ಸಿರಿಸುಖನಿಕರದಾಗಾರಮಾ ನಗರ |
ವದರೊಳು ರಘೂದ್ವಹನ ಪಟ್ಟ ಸಂಘಟ್ಟ ಸಂ |
ಪದವ ಬಣ್ಣಿಸಲಹಿಪಗಳವಲ್ಲ ಕಳವಲ್ಲ ವಿಧಿವಿಷ್ಣು ಸುರಪುರಗಳ ||
ಬದಿಗಿಕ್ಕುತತುಲ ರಂಜನಗಳಿಂ ಜನಗಳಿಂ |
ದಧಿಕತರ ಶಿಲ್ಪ ವೈಚಿತ್ರ್ಯದಿಂ |
ಸದನಂಗಳಖಿಲ ಸೌರಂಭದಿಂ ರಂಭದಿಂ ಕೆದರಿ ಶೋಭಿಸಿತುದಯದಿ || ೧ ||

**ಭಾಮಿನಿ**

ನೆರದರಖಿಲಾಪ್ತರುಗಳವನೀ |
ಶ್ವರರು ಭೂಸುರ ಪರಮ ಹಂಸರ |
ನೆರವಿಯಲಿ ಕಿಕ್ಕಿರಿದುದಾಪುರ ಪರಿಜನಾದಿಗಳ ||
ಮೊರೆವ ಮಂಗಲ ವಾದ್ಯರವಕೆ |
ಚ್ಚರಿತು ಮಂಥರೆ ಕಂಡಿದೇನ |
ಚ್ಚರಿಯೆನುತ ಕಾತರದಿ ಪೊರಟಳು ರಾಜಬೀದಿಯಲಿ ‖ ೧ ‖

**ರಾಗ ಘಂಟಾರವ ಅಷ್ಟತಾಳ**

ಏನಿದೇನೆಂದು | ಕೇಳುತ್ತೈತರೆ ಸರ್ವ ||
ರಾನನವ ತಿರು | ಹಿದರಮಂಗಳ | ತಾನಿದೆನುತಲಸಹ್ಯದಿ ‖ ೧ ‖

ಬಳಿಕ ಸೀತೆಯ | ದಾಸಿಯ ಕಂಡಿದ ||
ರೊಳವನರಿವುತ | ಕುಬ್ಜೆ ಬಾಂದಳ | ಕಳಚಿತೆನೆ ಕಳವಳಿಸುತ ‖ ೨ ‖

ಉದಯವಾಯ್ತೆನ | ಗಾಗಿಯೆ ಭರತನ ||
ಸಡಗರಕ್ಕೆಡೆಯೆನಿಸಿ ರವಿ ಶಶಿ | ಪೊಡವಿ ಸಚರಾಚರಗಳು || ೩ ‖

ರಾಮಗೀಯಲು | ಬಿಡೆನೀಗ ಜಗದಭಿ ||
ರಾಮ ಭರತನ | ಸಿರಿಯನಿದ ಸು | ತ್ರಾಮ ತಡೆದಡೆನುತ್ತಲಿ ‖ ೪ ‖

**ವಾರ್ಧಿಕ್ಯ**

ಬಿಲ್ಲುಬಾಗಿನ ತೊನ್ನು ಚುಕ್ಕಿಗಳ ಕಾಳ್ಮೈಯ್ಯ |
ಪಲ್ಲುದುರಿ ಜೊಲ್ಲಿಳಿವ ಬಚ್ಚು ಬಾಯಿಯ ಸ್ಥವಿರ |
ಟೊಳ್ಳು ಕಾಯದ ಗೂಳಿಹಿಣಿಲಂತೆಸವ ಗೂನ ಕುಳ್ ನಿಲುವ ಮರಡು ಮೊಗದ ||
ಬೆಳ್ವಕ್ಕಿ ತುಪ್ಪುಳೆನೆ ನೆರೆತು ಕೆದರಿದ ನವಿರ |
ಜೊಳ್ಳುಗೆನ್ನೆಯ ಮೆಳ್ಳು ದೃಷ್ಟಿಯ ತ್ರಿವಕ್ರೆ ತಾ |
ನೆಲ್ಲ ವೈರೂಪ್ಯ ಮೈವೆತ್ತು ಬಹುದೆನೆ ತೆರಳಿ ಚೆಲ್ವೆ ಕೈಕೆಯ ಕಂಡಳು ‖ ೧ ‖

**ಭಾಮಿನಿ**

ಕೆಟ್ಟೆ ಹಾ ಹಾ ಕೈಕೆ ಕಂದೆರೆ |
ಸೃಷ್ಟಿಗುರುಳಿದುದಿಷ್ಟ ಗೋಪುರ |
ಪಟ್ಟವದ ಕೌಸಲ್ಯೆಯಣುಗಂಗೀವರಿಂದಕಟ ||
ಕಷ್ಟವೆನೆ ಭರತಾಂಬೆಯತಿ ಸಂ |
ತುಷ್ಟಿಯಲಿ ಶುಭವಾರ್ತೆಯೆನುತ ವಿ |
ಶಿಷ್ಟ ಮೌಕ್ತಿಕ ಹಾರವಿತ್ತಳು ಪಾರಿತೋಷಕವ ‖ ೧ ‖

**ರಾಗ ತೋಡಿ ಮಟ್ಟೆತಾಳ**

ಸಿಡುಕಿ ಸರವನಿಡುಕಿ ಗೂನಿ | ನುಡಿದಳೆಲೆಗೆ ಜಡಮತಿಯಲಿ ||
ಪಡೆದ ಸುತನ ಮಡುಹಿದೆಯಲ | ದಡಿಗ ರಕ್ಕಸಿ || ೧ ||

ಕಡುಗಿ ಕೈಕೆ ನುಡಿದಳರಿಯೆ | ಬಡಿದು ಕಳೆವರಸುರೆ ನಿನ್ನ ||
ಮುದುವಿ ಮುಚ್ಚು ಬಾಯ ಭೇದ | ಹುಡುಗರೊಳುಂಟೆ || ೨ ||

ಧರಣಿ ರಾಮಗಾಗಲವನ | ಚರಣಸೇವೆ | ಭರತಗಹುದು ||
ಮರುಳೆ ನೀ ಕೌಸಲ್ಯೆ ತೊತ್ತೆಂ | ದರಿಯೆ ಯಾ ಕೈಕೆ || ೩ ||

ಆಗಲೊಳ್ಳಿತಾ ಗರುವನು | ತ್ಯಾಗಶೀಲ ಪಿರಿಯನಿಳೆಯ ||
ಭೋಗವಡೆಯ ಕುಂದೇನೆಮಗೆ | ಗೂಗೆ ತೊಲಗೆಲೆ || ೪ ||

**ಭಾಮಿನಿ**

ನೀನರಿಯೆ ಬೇನೆಯಲಿ ಭರತನು |
ತಾನೆ ಮೊದಲುದಿಸಿದನು ಪಟ್ಟದ |
ರಾಣಿಯಲಿ ಸಂಜನಿಸಿ ರಾಘವ ಜ್ಯೇಷ್ಠನಾದನಲ ||
ಆ ನರಾಧಿಪ ಗುರುಸುಮಂತ್ರರ |
ಹೀನ ತಂತ್ರಗಳಿಂದು ನಿನ್ನಯ |
ಸೂನುವನು ಹೊರತಳ್ಳಿರಾಮಂಗೀವರೊಡೆತನವ || ೧ ||

**ರಾಗ ಶಂಕರಾಭರಣ ಏಕತಾಳ**

ಆಳಿಯ ದುರ್ನುಡಿಯೊ ವಿಧಿಯ | ಲೀಲೆಯೋ ಲಂಕೇಶಾದಿಗಳ ||
ಭಾಳಲಿಪಿಯೊ ನೃಪತಿಗಿರ್ದ | ಹಾಳು ಶಾಪವೊ || ೧ ||

ಆಲಿಸಿದಳಾ | ನುಡಿಯ ಕೈಕೆ | ಆಲಿಗಳ್ ಕೆಂಪಡರೆ ತನ್ನ ||
ಆಳಿದನಲಿ ಮುಳಿದು ಮುಂದಿ | ನಾಲೋಚನೆಗಳ || ೨ ||

ಅರುಹು ತನಗೆ ಹಿತವರನ್ಯ | ರಿರರು ಮತ್ತೀ ಧರೆಯೊಳೆಂದು ||
ಭರದಿ ಬಿಗಿದಪ್ಪಿದಳು ಕೈಕೆ | ಜರಠೆಯಂಗವ || ೩ ||

ಮರೆತೆಯ ಭೂವರನು ನಿನಗೆ | ಮರುಳುಗೊಂಡು ವರಗಳೆರಡ ||
ಕರುಣಿಸಿಹನು ಪರಿಣಯದ | ವರ ಮುಹೂರ್ತದಿ || ೪ ||

ಭರತಗೊಂದು ವರದಿ ರಾಜ್ಯ | ಸ್ಥಿರತೆಗಿಳೆಯನಗಲಿ ರಘುಜ ||
ತೆರಳಲೀರೇಳ್ ವರುಷ ವಚನ | ವೆರಡಕಡವಿಗೆ || ೫ ||

**ಕಂದ ಪದ್ಯ**

ಈ ಪರಿಯುಸುರಲ್ ಮಂಥರೆ | ಭಾಪೆನುತಲಿ ಕೈಕಾರಾಣಿ ತಾನತಿ ಮುದದಿಂ ||
ಓಪನ ಕರೆಸುವೆನೆನುತಲೆ | ಕೋಪಗೃಹವ ನೆರೆ ಪೊಕ್ಕಳ್ ಕಡುಜವದಿಂದಂ || ೧ ||

**ರಾಗ ಸಾಂಗತ್ಯ, ರೂಪಕ ತಾಳ**

ಇತ್ತರಾಮನ ಪಟ್ಟ | ದುತ್ಸವಾಂಗಣದಿ ವಿ | ಪ್ರೋತ್ತಮರಖಿಲ ನಾಡಿಗರು ||
ಮತ್ತೆ ಸಾಮಂತ ಸ | ಮಸ್ತಾಪ್ತ ಪರಿಜನ | ಮತ್ತಕಾಶಿನಿಯರೊಪ್ಪಿದರು || ೧ ||

ನೆರೆದ ಸರ್ವರನುಪ | ಚರಿಸುತರಸ ಮೋಹ | ದರಸಿ ಕೈಕೆಯ ಕಾಣದಲ್ಲಿ ||
ಕರಗಿ ಚಿತ್ತದೊಳೇನೋ | ಸ್ಮರಿಸಿ ಬಂದವಳಂತಃ | ಪುರವ ಕಂಡಡೆ ಶೂನ್ಯವಲ್ಲಿ || ೨ ||

ತಿರುಗಿ ಕಂಡನು ಕ್ರೋಧಾ | ಗೃಹವ ಪೊಕ್ಕಲ್ಲಲ್ಲಿ ಹರಿದು ಚಲ್ಲಿಹ ತೊಡವುಗಳ ||
ಬರಿ ನೆಲನೊಳು ಮುಸು | ಕಿರಿಸಿ ಕಟ್ಟುಗ್ರದಿಂ | ದರೆ ಬಂಡೆಯೆನೆ ಮಲಗಿಹಳ || ೩ ||

**ಭಾಮಿನಿ**

ಪೃಥ್ವಿಪತಿ ಕಾತರಿಸಿ ಕಾಂತೆಯ |
ನೆತ್ತಿ ತನ್ನಂಕದಲಿ ಕುಳ್ಳಿರಿ |
ಸುತ್ತವಳ ತಳ್ಕಿಸುತ ಕಂಬನಿಯೊರಸಿ ಮುದ್ದಿಸುತ ||
ಮತ್ತಧಿಕ ಸಂತೈಸು ತಿರೆಕೆಲ |
ಕೊತ್ತಿ ಮೊಗದಿರುಹಿದಳು ರವಿಕುಲ |
ಸತ್ತಮನು ಮಗುಳೆಂದನುರು ಮೃದು ಮಧುರ ವಚನದಲಿ || ೧ ||

**ರಾಗ ಸಾವೇರಿ ರೂಪಕ ತಾಳ**

ಈ ಶೋಕವೇನೆ | ಕೋಕ ನಯನೆ | ಶ್ರೀಕರಾನನೆ ||
ನಾಕರುಣಿಪೆನೇಕೆ ತಿಳುಪೆ | ಲೋಕ ಮೂರನೆ || ಈ ಶೋಕ || ೧ ||

ಶ್ರೀರಾಮನೆಂತೊ | ಪುರುಷರೊಳು ನೀ | ಕಾಮಿನಿಯರಲಿ ||
ಪ್ರೇಮ ಮೂರ್ತಿ | ಯೈಸೆ ತನಗೀ | ರೇಳ್ಮಹಿಗಳಲಿ || ಈ || ೨ ||

ಆ ಕಂದ ರಾಮು | ಚಂದ್ರನಾಣೆ | ಸಂದುದೆಂದರಿ ||
ಬಂದ ಬವಣೆ | ಯಂದವರುಹಿ | ಸಿಂದು ಸುಂದರಿ || ಈ || ೩ ||

**ರಾಗ ಶಂಕರಾಭರಣ ತ್ರಿವುಡೆತಾಳ**

ಎಂದ ನುಡಿಗಾ ಕೈಕೆಯಿನಿಯನ | ಕಂಧವರನೂ | ತಳ್ಕಸಿ ||
ಹಿಂದಣದ ಸ್ಮರಿಸೆಮ್ಮ ಪ್ರಣಯ ಪ್ರ | ಬಂಧದನುವ || ೧ ||

ಮರೆತೆಯಾ ವರವೆರಡನಿತ್ತುದ | ಕರುಣಿಸುವೆ ನೀ | ನಾದರೆ ||
ಧರೆಯ ಭರತನಿಗೀವುದಾರ್ಜಿತ | ಪರಿಕರದಲಿ ॥ ೨ ॥

ಅಟ್ಟು ವರ ಮತ್ತೊಂದಕೀರೇಳ್ | ವತ್ಸರಾಮುನಿವೇಷದಿ ||
ಪಟ್ಟದರಸಿಯ ಸುತನ ಗಹನಕೆ | ಮೊಟ್ಟ ಮೊದಲು ॥ ೩ ॥

**ಭಾಮಿನಿ**

ಆ ಲತಾಂಗಿಯ ಕಠಿಣ ವಚನ ಕ |
ರಾಳ ವಿಷವಾವರಿಸುತವನೀ |
ಪಾಲನಖಿಲೇಂದ್ರಿಯದೊಳುರಿಡಾವರಿಸಿ ಕಾತರಿಸಿ ||
ಮೇಲೆ ವಶವಳಿದಶನಿ ಹೊಯ್ಲಿಗೆ |
ಬೀಳ್ವ ಹೆಮ್ಮರನಂತೆ ಮೂರ್ಛೆಯ |
ತಾಳಿ ದೊಪ್ಪನೆ ಕೆಡೆವುತೊಯ್ಯನೆ ತಿಳಿದು ಹಾಯೆನುತ ॥ ೧ ॥

**ಕಂದ ಪದ್ಯ**

ಆಳಿಗಾಲದೊಳಮೃತ ಹಲಾಹಲ |
ಸಲೆ ಪಥ್ಯಮಪಥ್ಯಮಾಪ್ತರಹಿತರ್ ಜಗದೊಳ್ ||
ಚಲುವದು ವಿಕೃತ ಕುರೂಪಂ |
ತಿಳಿಯಲ್ ನಾರಿ ಮಾರಿಯಾದಳಿಂದೆನಗಕಟ ॥ ೨ ॥

**ರಾಗ ನೀಲಾಂಬರಿ ಆದಿತಾಳ**

ಚೆಂಣರಿಲ್ಲ | ದನ್ವಯಾ ವಿ | ವರ್ಣವಾಗೆ ಮಖದಿ ||
ಸ್ವರ್ಣತೇಜ | ರುದಿಸೆ ನಾಲ್ವ | ರನ್ನು ಕೂಡಿ ಸುಖದಿ ॥ ೧ ॥

ಬಾಳಲೆನ್ನ | ಹಾಳು ಪುಣ್ಯ | ಕೋಳುಹೋಯ್ತು ಮುನ್ನ ||
ಖೂಳನೆಂತಾ | ನಗಲಿ ಸುತನ | ತಾಳಲಿ ದುರ್ವ್ಯಸನ ॥ ೨ ॥

ಮಲಿನವಾಯ್ತೀ | ಕುಲದ ಖ್ಯಾತಿ | ಖಲನಾ ಜನ್ಮವೆತ್ತಿ ||
ಇಳೆಗೆ ಭಾರ | ನೆಂದು ಹಲುಬೆ | ಲಲನೆಗಾಯ್ತು ಭೀತಿ ॥ ೩ ॥

**ರಾಗ ಕಮಾಚ್ ರೂಪಕತಾಳ**

ತರಹರಿಸುತಲೆರಗಿ ನುಡಿದ | ಳರಸ ನಿನ್ನಯ ||
ಕರುಣವೊಂದೆ ಸಾಕು ವರವ | ದಿರಲಿ ನಿರ್ಣಯ ॥ ೧ ॥

ಮರುಕಬೇಡವೆನುತ ಕರವ | ಪಿಡಿಯೆ ಸ್ನೇಹದಿ ||
ಅರಸಗಾಯ್ತು ಮೂದಲಿಕೆಯ | ತೆರದೊಳಾನುಡಿ || ೨ ||

ನಿಲ್ಲದಿದಿರು ತೊಲಗು ಪಾಪಿ | ಖುಲ್ಲೆ ನಿನ್ನಯ ||
ಚಲ್ವಿಗೊಲಿದು ಕೆಟ್ಟೆನಲ್ಲ | ದಿಲ್ಲ ದುರ್ಣಯ || ೩ ||

ಮಿರುಪ ಹಾರವೆನುತ ಕೊರಳೊ | ಳುರುಳುಗಣ್ಣಿಯ ||
ಧರಿಸಿದಂತೆ ಸುಮದ ಬೆಮೆಯೊಳ್ | ಶಿರದೊಳಹಿಣಿಯ || ೪ ||

ಮುಡಿವವೋಲು ಮಂಚವೆನುತ | ಮಡುವ ದುಮುಕುವ ||
ಜಡರ ಗತಿಗೆ ನಡೆದೆ ಕೈವಿಡಿದು ಕುವಪುವ || ೫ ||

**ಭಾಮಿನಿ**

ಖೋಡಿ ರಕ್ಕಸಿ ಮೊದಲು ವರಗಳ |
ಬೇಡಿ ಬೇಡೆಂದುಸುರಿ ಕೀರ್ತಿಯ |
ನೀಡಿರಿದು ವೋಡಿಸುವೆಯಾ ರೌರವಕೆ ಪಿತೃಗಳನು ||
ಕಾಡಿಗಟ್ಟುವ ನೆವದಿ ರಘುಜನ |
ದೂಡುತಿಹೆ ಮಾಂಗಲ್ಯವನು ಕುಲ |
ಗೇಡಿ ನಿನ್ನಿಂದಾಯ್ತು ಹರಿದರಿಯೆನಗೆ ಕೆಲ ಬಲದಿ || ೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ನುಡಿಗೆ ಕುದಿದಳು ಕೈಕೆ ಬಾಲವ | ನೊದೆದ ನಾಗಿಣಿಯೆನೆ ಮಹೋಗ್ರದ |
ಹೆಡೆಯರಳಿ ವಾಗ್ವಿಷವನುಗುಳಿದ | ಳದುಭುತದಲಿ || ೧ ||

ಬೇಡು ನೀನೆಂದಿತ್ತೆ ಭಾಷೆಯ | ಬೇಡಲದಕೆದೆಗರಗಿ ಮರುಗಿದೆ |
ಬೇಡವೆನೆ ಮತಿಗೆಟ್ಟು ಜರೆವೆಯ ಮೂಢರಂತೆ || ೨ ||

ಭಾಷೆಗಳುಕುವರುಂಟೆ ಸೂನೃತ ಭಾಷಿಗಳು ರವಿಕುಲಜರವದಿರ |
ವಾಸಿಗೆಡಿಸದೆ ಸಲಿಸು ನುಡಿದಭಿ | ಲಾಷೆಗಳನು || ೩ ||

**ಭಾಮಿನಿ**

ವರ್ಮವಿಡಿದಿಂತೆಂದಡಾ ಸಹ |
ಧರ್ಮಿಣಿಯ ನುಡಿಯಲಗು ರಾಯನ |
ಮರ್ಮದಲಿ ಥಟ್ಟುಗಿಯೆ ನೊಂದತಿ ಧರ್ಮ ಸಂಕಟದಿ ||
ಉಮ್ಮಳಿಸಿ ಮೈಮರೆಯೆ ಮಂಥರೆ |

ಬೊಮ್ಮಪಿತಗಿದನರುಹಲೇನಿದು |
ಕರ್ಮಗತಿಯೆನುತ್ತೈದಿ ರಾಘವನೆತ್ತಿದನು ಪಿತನ || ೧ ||

**ರಾಗ ಹಿಂದುಸ್ಥಾನಿ ರೂಪಕತಾಳ**

ತಾತ ಚಿಂತೆ ಯೇ ತಕಿದುವೆ | ಜಾತನಿರಲು ಸನಿಹದಿ ||
ಮಾತೆ ಕುಪಿತಳಾಗಿ ಕುಳಿತ ರೀತಿಯರುಹು ಕರುಣದಿ || ೧ ||

ವಾಸುಕೀಯ ಶಿರದ ಮಣಿಯೊ | ಳಾಸೆಯಾಯ್ತೆ ಜನಕನೆ ||
ಆ ಸುರೇಂದ್ರ ಗಜವ ತರುವೆ | ನೀ ಸಮಯದಿ ಬೇಕೆನೆ || ೨ ||

ಸೀತೆ ಮನ್ಮನ ಪ್ರೀತೆ ಸರುವ | ಪೂತೆ ದ್ವಿಕುಲ ಪಾವನೆ ||
ಪ್ರೀತಿಯಹುದೆ ನಾ ತೊರೆವೆ ಮ | ಹಾತಿಶಯದ ತನುವನೆ || ೩ ||

**ಕಂದ ಪದ್ಯ**

ರಾಘವನಿಂತೆನೆ ದ್ವಿಗುಣಿತ | ಮಾಗೆ ಶೋಕ ನೃಪ ಮೂಗನಾಗಿ ಕಂಬನಿಯಿಳುಹಲ್ ||
ಆಗಮವರಿದಪುದೆಂತೆನು | ತಾ ಗರುವಂ ಮಾತೆಯನೀಕ್ಷಿಸೆ ನಗುತೆಂದಳ್ || ೧ ||

**ರಾಗ ಸುರಟಿ ಏಕತಾಳ**

ಕೇಳು ಸುಗುಣ ಶೀಲ | ವಿವರವ | ಪೇಳುವೆ ಭೂಪಾಲ ||
ತಾಳಿದ ದುಗುಡದ | ಮೂಲವ ನಿನಗದ | ಪೇಳಲಭೀಷ್ಟವ | ಪಾಲನೆ ಗೈವೆಯ || ೧ ||

ಜನುಮದಾತನ ನುಡಿಯ | ಮೀರುವ | ನಣುಗನೆ ಕೇಳ್ ಸ್ಥಿತಿಯ ||
ಎಣಿಸಲವನ ಮಲ | ಕೆಣೆಯಹ ಸತ್ಸುಹ | ಮನವರಿದೆಸಗುವ | ನೆನಗೊಲಿದುಸುರೌ || ೨ ||

ವರವೆರಡೆನಗಿತ್ತ ಒಂದಕೆ | ಭರತಗವನಿ ಪಟ್ಟ ||
ಕರುಣಿಸಿದನು ವನ | ವರುಷ ಚತುರ್ದಶ | ತರಳ ನಿನಗೆ ಪರಿ | ಯರುಹಲು ಮರುಗುವ || ೩ ||

**ರಾಗ ಮಧುಮಾಧವಿ ತ್ರಿವುಡೆತಾಳ**

ಧನ್ಯನಾದೆನು ತಾತ ಮರುಗದಿ | ರನ್ಯನೇ ಭರತಾಂಕನಾಳಲಿ ||
ಕನ್ನೆ ಚಿಕ್ಕವಳವ್ವೆ ನಿರ್ಬಲ | ಳಿನ್ನು ಸಲಹಿಕೊ ಜತನದಿ || ೧ ||

ಒಡಲು ಸತಿಸುತ ಪೊಡವಿ ಸಿರಿ ಸುಖ | ವಡಗುವವು ರುಣದೊಡನೆ ದಿಟ ಮಿಗಿ ||
ಲೊಡೆತನದ ಬದಲೆಮಗೆ ಬಡತನ | ದಡವಿ ಸಾವಿರ ಗುಣದಲಿ || ೨ ||

ಎನುತ ಬಲ ಬಂದೆರಗಿ ಭಕ್ತಿಯೊ | ಳನುಪಮನು ನಡೆತಂದು ಜನನಿಗೆ ||
ಮಣಿಯೆ ಬಿಗಿವಡೆದೆತ್ತಿ ರಿಕ್ತಗ | ಮನವಿದೇನೆನಲೆಂದನು || ೩ ||

**ಭಾಮಿನಿ**

ಮಾತೆ ಕೈಕೆಯ ಮಾತಿನಲಿ ಸಹ |
ಜಾತ ಭರತಂಗವನಿಪಟ್ಟವ |
ತಾತನೊಲಿದೆನಗಿತ್ತ ದಂಡಕ ಧಾತ್ರಿಯೊಡೆತನವ ||
ಜಾತನನು ಹರಸೆನಲು ವಜ್ರಾ |
ಘಾತದಲಿ ಹಾಯೆನುತುರುಳೆ ರಘು |
ನಾಥನುಪಚರಿಸುತಿರಲೂ ರ್ಮಿಳೆಯಾಣ್ಮ ಖಾತಿಯಲಿ || ೧ ||

**ರಾಗ ಭೈರವಿ ಅಷ್ಟತಾಳ**

ಏನಗ್ರಭವ ಪಿತನು | ಕಾಮುಕನಾಗಿ | ಮಾನಿನಿಯೊಳಗಾದನು ||
ಮಾನ್ಯನಲ್ಲವ ಮತಿ | ಗೆಡುಕ ಲಂಪಟ ಧರ್ಮ | ಹೀನ ಶಿಕ್ಷಾರ್ಹನಯ್ಯ || ೧ ||

ಪೂಜ್ಯರೆಂಮನ್ವಯದಿ | ಜ್ಯೇಷ್ಠನ ಬಿಟ್ಟು | ರಾಜ್ಯವ ದುರ್ಣಯದಿ ||
ತ್ಯಾಜ್ಯ ಕಿರಿಯಗಿತ್ತ | ಕಜ್ಜವಿಪ್ಪುದೆ ಪಿರಿ | ಪ್ರಾಜ್ಞ ನಂದನನಿರಲು || ೨ ||

ಮುಡಿಯ ತುಡುಕಿ ವಿಧಿಯ | ಭಾಳದ ಲಿಪಿ | ತೊಡೆವೆನಾಹವದಿ ಕೈಯ್ಯ ||
ತಡೆವವದಿರ ನೆಲ | ಕಿಡುವೆ ಕೈಕೆಗೆ ಸರ್ವ | ಪೊಡವಿ ಮಾರಿತೆ ರಾಘವ || ೩ ||

**ರಾಗ ಬೇಗಡೆ ತ್ರಿವುಡೆತಾಳ**

ಏತಕೀಪರಿ ಮುನಿಸು | ಸೈರಿಸು ಸಹ | ಜಾತ ಸುಗುಣನೆನಿಸು || ಪಲ್ಲ ||

ಏತಕೀಪರಿ ಮುನಿಸು ಶಸ್ತ್ರ | ವ್ರಾತ ಪಂಡಿತನಹುದು ಮಗುಳಭಿ | ಘಾತದಲಿ ನಾ ಭೀತನೆ ಗುಹ | ತಾತ ವಿಧಿ ಪುರುಹೂತರಳುಕುವ ||
ರೇತಕೀಪರಿ || ಅ.ಪ ||

ಆದರೋರ್ವನ ಸೌಖ್ಯಕೆ | ಕಾದಲು ನಿಜ | ಸೋದರರರೊಳು ಮರ್ತ್ಯಕೆ ||
ಹಾದಿಯ | ತಪ್ಪಿಸಿದನಹೆ ದಾಯಾದಿಯ | ಮಾತ್ಸರ್ಯ ಶಿಖಿ ಜಗ |
ದಾದಿಯ | ಸುಟ್ಟುರುಹುವುದು ನಿ | ವ್ಯಾಧಿಯ || ಕಾನನವ ಪೊಗಲು ||
ಮೇದಿನಿಗೆ ಹಿತಮಾದಪುದು ನಾ | ಪೋದರೊಂಟಿಗ ಖೇದವೇ ಮಹ |
ದಾದ ಸಿದ್ಧಿಗಳಾದಿ ಕಷ್ಟವ | ದಾದಡಲ್ಪವು ಸಾಧುವಿದು ಮಗು || ಏತಕೀಪರಿ || ೧ ||

ಸದರ ಲಂಪಟ ಕಾಮುಕ | ನಿಂದ್ಯನೆ ಪಿತ | ವಿದಿತ ಸುವ್ರತ ಧಾರ್ಮಿಕ ||
ಬಿದಿಯೊಳು | ಬೆರೆತರೆಯೆ ಕಲಿ ಹಲ | ವಿಧಿಯೊಳು ಮಾರ್ಮಲೆಯೆ ಬಲಿ ನಿರ |
ವಧಿಯೊಳು | ಬಿಗುಹಿಹುದೆನುತ ಶಿರ | ದುದಿಯೊಳು || ಹಾಯ್ದುಪರೆ ಶಿಲೆಯ ||
ಪಡೆದವರ ರುಣವಧಿಕ ವಚನವ | ನಡೆಸದಣುಗನ ಪೊಡವಿ ಹೊರುವಳೆ |
ದುಡುಕದಿರು ತೆಗೆ ಹುಡುಗ ತನವೆಂ | ದೊಡನೆ ಕರುಣದಿ ಮುಡಿಯ ಸವರಿದ || ಏತಕೀಪರಿ || ೨ ||

**ಕಂದ ಪದ್ಯ**

ರಾಘವನಿಂತೆನೆ ವಿನಯದಿ | ನಾಗಸರವ ಕೇಳ್ದಹಿಯೆನೆ ಲಕ್ಷ್ಮಣ ಶಿರವಂ ||
ಬಾಗಲ್ ಕೌಸಲೆ ಚಿಂತಾ | ಸಾಗರದೋಳ್ ತೇಲಾಡುತ ಗೋಳಿಡುತೆಂದಳ್ || ೧ ||

**ರಾಗ ನೀಲಾಂಬರಿ ರೂಪಕತಾಳ**

ಪುತ್ರರ ಕಾಣದೆ ಮೊದಲಲಿ | ಹೊತ್ತಿದೆ ವ್ಯಥೆಯಲಿ ಹರಿಯೊಲಿ |
ದಿತ್ತನು ಸುಗುಣನ ಕಡೆಯಲಿ | ದೆತ್ತಣ ವಿಧಿಯಗಲಿ ||
ಹೆತ್ತ ಕರುಳ ಕಾಂತಾರದ | ಮೃತ್ಯುವಿಗಿತ್ತಪುದೆಂತಿದ |
ಮತ್ತಾರ್ಗೆಂಬೆನು ಪತಿ ಪದ | ತೊತ್ತು ಸವತಿಗಾದ || ೧ ||

ಧರೆಯನು ಪ್ರಿಯ ಸುತಗೀಯಲಿ | ಇರಲೇನ್ | ಕೊರೆ ನೀನೂರಲಿ |
ಬರುವೆನು ತೆರಳಲು ಜತೆಯಲಿ | ಇರಲೆಂತಾನಗಲಿ ||
ಹರಣವನುಳಿದೀ ತನು ಬಾ | ಳಿರುವುದೆ ಕರೆದೊಯ್ಯೆನುತಲಿ |
ಮರುಗುವ ಜನನಿಯ ಕಂಬನಿ | ಯೊರೆಸುತ ಚಿನ್ಮಯನು || ೨ ||

**ರಾಗ ನವರೋಜು ಆದಿತಾಳ**

ಸೈರಿಸು ಶೋಕವ ತಾಯೆ | ಮಮ | ಕಾರವು ಲೋಕದ ಮಾಯೆ ||
ಸಾರಸಭವ ಲಿಪಿ | ಮೀರಲು ಪುನರಪಿ | ಅರಿಗಳವು ಸಂ | ಸಾರವಸಾರ || ಸೈರಿಸು || ೧ ||

ಧರ್ಮವೆ ಶಾಶ್ವತವಮ್ಮ | ಸ | ತ್ಕರ್ಮವೆ ಪಾಲಿಪುದೆಮ್ಮ ||
ನೆಮ್ಮುವುದರಮನೆ | ಗಿಮ್ಮಡಿ ವಿಪಿನದಿ ನೆಮ್ಮದಿಯದು ತಾ | ಯ್ನಿಮ್ಮುಡಿಲಹುದೌ || ಸೈರಿಸು || ೨ ||

ತಾತನ ನೇಮವು ತನಗೆ | ಮ | ತ್ತಾತನ ಸೇವೆಯು ನಿನಗೆ ||
ನೀತಿಗಳಿದು ವಿಪ | ರೀತವ ನೆನೆವರೆ | ಮಾತೆ ಹರಸು ಬಹೆ | ನಾತಿ ವಿಲಂಬದಿ || ಸೈರಿಸು || ೩ ||

**ಭಾಮಿನಿ**

ಇಂತೆನುತ ಬಲಬಂದು ಪಣೆಯನು |
ಕಂತುಪಿತ ಪದಕೊತ್ತಿ ತದ್ರಜ |
ವಂತಳೆದು ಕೈ ಮುಗಿದು ನಿಂತನು ತಾಯೆ ಕಳುಹೆನುತ ||
ಚಿಂತೆಯನು ತೊರೆದಾಗ ಬಾಲನ |
ಕಾಂತೆ ಗಲ್ಲವನಲುಗಿ ಮುದ್ದಿಸಿ |
ನಿಂತು ಶಿರವಾಸನಿಸಿ ಕಂಬನಿದುಂಬಿ ತಲೆವಾಗಿ || ೧ ||

**ವಾರ್ಧಿಕ್ಯ**

ಎಲೆ ತಾಯೆ ಭೂದೇವಿ ಗಿರಿವನ ಸ್ಥಳಗಳಿರ |
ಎಲೆ ದೇವ ಹರಿ ಹರ ವಿರಿಂಚಿ ದಿಕ್ಪತಿಗಳಿರ |
ಎಲೆ ಭುಜಗ ಸುರದನುಜ ಮನುಜ ಖಗ ಮೃಗಗಳಿರ ಎಲೆ ನದಿ ನದಾದಿಗಳಿರ ||
ತಲೆ ಬಾಗಿ ಬೇಡುವೆನು ಸಲೆ ಧರ್ಮ ಪಥವಿಡಿದು |
ಹಳುವಕೈತರುವೆನ್ನ ಮೊಲೆಹಾಲ ಮೂರ್ತಿಯಂ |
ಒಲಿದು ರಕ್ಷಿಪುದಳುಪೆ ತಾಯಾಣೆ ನಿಮಗೆಂದು ತಿಳುಪಿ ಹರಸಿದಳಣುಗನ || ೧ ||

**ಕಂದ ಪದ್ಯ**

ಮಾತೆಯೊಳಪ್ಪಣೆ ಗೊಂಡಾ |
ಪೀತಾಂಬರನೈದಿದ ತಾನಿನಿಯಳ ಗೃಹಕಂ ||
ಪ್ರೀತನ ರಿಕ್ತಾಗಮವಂ |
ಕಾಂತಾಮಣಿ ಕಂಡಚ್ಚರಿ ಯೇನೆನಲೆಂದಂ || ೧ ||

**ಭಾಮಿನಿ**

ಧಾರಿಣಿಯು ಭರತಾಂಕಗೆನಗೆಂ |
ಟಾರು ವತ್ಸರ ವನವು ತಂದೆಯ |
ಚಾರುಮತ ಪೂರೈಸಿ ಬಹೆ ನೀನಿರು ನಿಜಾಲಯದಿ ||
ನಾರಿ ಬೆದರದಿರೆನಲು ಕೋಸಲ |
ಕಾರು ವಲಿದರು ರಘುಜಗಲ್ಲದೆ |
ನೀರ ನಿನ್ನಗಲಿಹೆನೆ ಬಹೆತಾನೆಂದಳಿಂದುಮುಖಿ || ೧ ||

**ರಾಗ ಬೇಹಾಗ್ ರೂಪಕತಾಳ**

ವನವದೋರ್ವ | ಗೆನಗೆ ಮಿಕ್ಕ | ಜನಕೆ ಸಲ್ಲದಂಗನೆ ||
ಇನಿಯ ನಿನ್ನ | ವನಿತೆಗನ್ಯ | ತನುವಿಹುದೆ ಶುಭಾಂಗನೆ || ೧ ||

ಸಾವ ಪೂಜ್ಯ | ಹಿರಿಯರಡಿಯ | ಸೇವೆಗೈವುದನುಪಮ ||
ದೇವ ಸತಿಗೆ | ಪತಿಯ ಚರಣ | ಕಾವುದಿಹುದು ಸರಿಸಮ || ೨ ||

ವನಿತೆಯೊಡನೆ | ವನವು ಕಠಿಣ | ಮನೆಯೊಳಿರುವುದೇ ಘನ ||
ತನಗೆ ರಮಣ | ನೆದೆಯ ಹೊರತು | ಮನೆಯದೆಲ್ಲಿ ಮೋಹನ || ३ ||

**ರಾಗ ಕೇದಾರಗೌಳ ಝಂಪೆತಾಳ**

ತರುಣಿ ಬಿಡು ಛಲವಿದೇನೆ | ವನದೊಳುಣಿ | ಸಿರದು ಫಲ ಜಲವು ಕಾಣೆ ||
ಒರಗಲರೆ ದರಗಿನೆಲೆಯು | ಬಿಡು ವ್ಯಥೆಯ | ದುರುಳ ಮೃಗ ಖಳರ ನೆಲೆಯು || ೧ ||

ನಿನ್ನ ನೋವಿಂಗಲ್ಲದೆ | ಮರುಕವೆನ | ಗಿನ್ನುಂಟೆ ನೀನಿರ್ದೊಡೆ ||
ಬಣ್ಣನೆಯ ವನ ತ್ರಿದಿವವು | ನೀನಿರದ | ರಣ್ಯಕಿಮ್ಮಡಿ ಭವನವು ‖ ೨ ‖

ತರೆನು ತವ ವ್ರತಕೆ ಭಂಗ | ಸತಿಧರ್ಮ | ವರಿಯೆಯಾ ಮಂಗಳಾಂಗ ||
ತೊರೆಯಲಾಗದು ಸರ್ವಥಾ | ಕೈ ಬಿಡದೆ ಕರೆದೊಯ್ಯೊ ಪ್ರಾಣನಾಥ ‖ ೩ ‖

**ಭಾಮಿನಿ**

ಉಸುರುತಿಂತಳುತೆರಗಿದಬಲೆಯ |
ಬಿಸಜಲೋಚನನೆತ್ತಿ ನೀನೆ |
ನ್ನುಸಿರು ಬಾಳ್ವನೆ ತೊರೆದಡಸುವನೆನುತ್ತವಳ ವೆರಸಿ ||
ವಸುಧೆ ಸುರರಿಗೆ ತಮ್ಮ ಭೂಷಣ |
ವಸವನಖಿಲವನಿತ್ತು ಪೊರಮಡ |
ಲಸುರ ಹರನಂಘ್ರಿಯಲಿ ಮುಡಿಯಿಕ್ಕಿದನು ಸೌಮಿತ್ರಿ ‖ ೧ ||

**ಕಂದ ಪದ್ಯ**

ಅಡಿಗೆರಗಿದ ಸಹಭವನಂ | ಜಡಜಾಂಬಕ ನೆಗಹಲ್ಕೇಳದೆಯಿಹನಂ ||
ಒಡಗೊಂಬೆನು ಬಹುದೆನುತಿವ | ರೊಡನೈದಿದ ಪಿತನಾಜ್ಞೆಯ ಪಡೆಯಲ್ ಜವದೋಳ್ ‖ ೧ ‖

**ರಾಗ ಕಾಂಬೋಧಿ ಝಂಪೆತಾಳ**

ಈ ತೆರದಿ ಮೂವರಿವ | ರೈತಂದು ನಮಿಸೆ ಭೂ | ನಾಥ ಕೊರಳಪ್ಪಿ ಹಾಯೆನುತ ||
ಧಾತ್ರಿಗೊರಗಲು ನೆಗಹಿ | ಸಂತೈಸುತೊಡನೆ ರಘು | ನಾಥ ಕಿರಿ ಜನನಿಗೊಂದಿಸುತ ‖ ೧ ‖

ವನಿತೆಯವರಜರೆನ್ನ | ನನುಸರಿಸಿದರೆ ನಿನ್ನ | ಮನಕೆ ಹರುಷವೆ ನೀಡಪ್ಪಣೆಯ ||
ಎನೆ ರೋದಿಸುತ ಸಮಂತ್ರನ ಕರೆದು ರಥದಿ ಸುತ | ರನು ಕಳುಹಿ ಬಾರೆಂದ ರಾಯ ‖ ೨ ‖

ತಂದು ಕೊಟ್ಟಳು ಕೈಕೆ | ನಾರುಡೆಯ ಮೂವರದ | ಕೊಂಡು ತಾಯ್ಯಮಗೆ ದಿಟವೆನುತ
ವಂದಿಸುತ ಪಿತಗೆ ಬಲ | ಬಂದು ರಘುವರ ಪೊರಡೆ | ಕಂಡು ನೃಪ ಮೂರ್ಛಿಸಿದನಳುತ ‖ ೩ ‖

**ವಾರ್ಧಿಕ್ಯ**

ಮಂಗಲಂ ಮನೆಯನುಳಿವಂದದಿಂ ರಥದಿ ರಘು |
ಪುಂಗವಂ ಪೊರಡೆ ಕಂಡಖಿಲ ಪುರಜನರಳುತ |
ಸಂಗಡಿಸಿ ತೆರಳೆ ತಮಸಾನದಿಯ ದಂಡೆಯೋಳ್ ತಂಗಿರಲ್ಕಂದಿನಿರುಳು ||
ತಿಂಗಳೇಳಲು ಪೌರರನ್ನಗಲಿ ಜವದಿ ಹೊಳೆ |
ಯಂಗಳೆದು ಮಂತ್ರಿಯೊಡನೈದಿ ಗಂಗಾ ತಟದಿ |
ತುಂಗ ವಿಕ್ರಮ ತೇರನಿಳಿದು ಗುಹನಾತಿಥ್ಯಮಂಗೊಂಡು ಮರುವುದಯದಿ ‖ ೧ ‖

**ಭಾಮಿನಿ**

ತರಲು ನಾವೆಯ ಗುಹ ಸುಮಂತ್ರನ |
ಕರೆದು ನೀತಿಯನರುಹಿ ರಾಘವ |
ಪುರಕೆ ತೆರಳಿಸುತೇರ್ದನೊತ್ತಿಗರೊಡನೆ ಹರಿಗೋಲ ||
ಸರಿದು ಗಂಗೆಯ ದಾಂಟಿ ಗಿರಿ ಗೌ |
ಹರವ ಕಳೆವುತ ವಲ್ಮಿಕಾದ್ಯರ |
ದರುಶನಾಂತದಿ ಮೂವರಿರ್ದರು ಚಿತ್ರಕೂಟದಲಿ ‖ ೧ ‖

**ಕಂದ ಪದ್ಯ**

ಬಿಸಜಾಂಬಕ ನಗಲಿಕೆಯಿಂ |
ಮಸಣವ ಪುಗುವೊಲಯೋಧ್ಯೆಯ ಪೊಕ್ಕಾಸಚಿವಂ ||
ದಶರಥನೆಡೆಗೈತರೆ ಸುತ |
ರೊಸಗೆಯದೇನೆಂದಳಲುವ ನೃಪಗಳುತೆಂದಂ ‖ ೧ ‖

**ರಾಗ ಕಾಂಬೋಧಿ ಝಂಪೆತಾಳ**

ಮರುಕ ಬೇಡೆಮಗಾಗಿ | ಭರತ ಸೇವಿಪ ಮುದದಿ | ಬರುವೆ ವಾಙ್ಞೆಯ ನಡೆಸೆ ತಿರುಗಿ ||
ಅರುಹು ತೆರಳೆನುತೆನ್ನ | ತಿರುಹಿ ಗಂಗೆಯ ದಾಂಟಿ | ಸರಿದರೆನೆ ಭೂಪನಿಳೆಗೊರಗಿ ‖ ೧ ‖

ಹಾ ರಾಮ ಮಮ ಪಂಚ | ಪ್ರಾಣ ದುಷ್ಟವಿರಾಮ | ಹೇ ರಾಮ ಲೋಕಾಭಿರಾಮ ||
ಓ ರಾಮ ಸರ್ವಜನ | ಪ್ರೇಮ ಸುಂದರ ಶ್ಯಾಮ | ಶ್ರೀರಾಮ ರವಿಕುಲ ಲಲಾಮ ‖ ೨ ‖

ಮರುಗುತೀಪರಿ ಚಿತ್ತ | ಜ್ವರ ವಿರಹ ಸನ್ನಿಯಲಿ | ಕರೆದು ಕಂಡವರ ರಾಮೆನುತ ||
ಭರದೊಳಪ್ಪುತ ಮರಳಿ | ಕೆರಳಿ ಥೂಯೆಂದುಗುಳಿ | ದುರುಳೆ ರಕ್ಕಸಿ ಕೈಕೆಯೆನುತ ‖ ೩ ‖

**ವಾರ್ಧಿಕ್ಯ**

ಸೃಷ್ಟಿಪತಿಯಿಂತು ಮತಿವೈಕಲ್ಯವಾಂತು ದೆಸೆ |
ಗೆಟ್ಟೋಡುತಿರಲಾ ಸುಮಿತ್ರೆ ಕೌಸಲೆ ಮುನಿ ವ |
ಶಿಷ್ಠಾದಿಗಳು ಪಿಡಿದು ಪರ್ಯಂಕಕೊಯ್ಯೆ ಕೈಗೊಟ್ಟ ಕೈಕೆಯ ಕಾಣುತ ||
ಮುಟ್ಟದಿರು ತೊಲಗು ತಂನಿದಿರು ನಿಲದಿರು ಪಾಪಿ |
ದುಷ್ಟೆ ನಿನ್ನನು ಕಂಡನರ್ಥಕೆಡೆ ಗೈದವೀ |
ದೃಷ್ಟಿ ತನಗೇಕೆನುತ ಕಿತ್ತೆಸೆದು ಋಷಿಹತ್ಯ | ಕೃತ್ಯಕಿದೆ ಶಾಪವೆನುತ ‖ ೧ ‖

**ಕಂದ ಪದ್ಯ**

ಎತ್ತಣ ಶಾಂತಿಯಿದೋ ಕಾಂತಿಯಿ |
ದೆತ್ತಣ ದಿವ್ಯ ಮೂರ್ತಿ ಸಂದರ್ಶನವಮಮ ||
ಪುತ್ರನು ನೀನೆಂದೆನಿಸಿದ |
ಕಿತ್ತೆನಿದೋ ಮಸ್ತಕವ ದೇವ ನಿನ್ನಡಿಗೆನುತಂ || ೧ ||

**ಭಾಮಿನಿ**

ಮಂಚದಿಂದಿಳೆಗುರುಳಿ ದಶರಥ |
ಪಂಚತುವವೈದಿದನು ಕಂಡರ |
ಸಂಚೆಗಮನೆಯರಳಲ ಗುರು ಸಂತೈಸಲಾ ರಾತ್ರಿ ||
ಮಿಂಚಿತತಿ ದುಸ್ವಪ್ನ ತಿಳಿದಾ |
ಕುಂಚ ಮಾನಸನಾಗುತುದಯದ |
ಮುಂಚೆ ಪೊರಟನು ಭರತನನುಜ ಸಮೇತ ನಿಜಪುರಕೆ || ೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ತ್ವರಿತ ಗಮನದಿ ಬರುತಯೋಧ್ಯಾ | ಪುರದಶೋಭೆಗೆ ಕರಗಿ ಜನನಿಯ |
ಚರಣಕೆರಗಿದಡೆತ್ತಿ ಪೇಳ್ದಳು | ಸರುವವನ್ನು || ೧ ||

ಕೇಳಿ ಹಾಯೆಂದುರುಳಲಾ ನಿಜ | ಬಾಲಕನ ತೆಗೆದಪ್ಪಿ ಮುದ್ದಿಸಿ ||
ಹಾಳು ವ್ಯಸನವ ತ್ಯಜಿಸುತವನಿಯ | ಪಾಲಿಸೆನಲು || ೨ ||

ನುಡಿಗೆ ಕಿಡಿ ಕಿಡಿಯಾಗಿ ತೊಲಗೆ | ನ್ನಿದಿರು ನಿಲದಿರು ಪಾಪಿ ಹಾಲಿ |
ತ್ತೆದೆಯೊಳುಗುಳಿದೆ ವಿಷವ ನಿರಿಕಿಸೆ | ವದನವನ್ನು || ೩ ||

ಅಂಣನನು ವನಕಟ್ಟಿ ತಾತನ | ಮಣ್ಣುಗೂಡಿಸಿದಸುರೆ ಪಾಪಿಗ |
ಳಿನ್ನು ನಿನಗೆಣೆಯಾರು ಕೆಟ್ಟೆನು | ನಿನ್ನೊಳುದಿಸಿ || ೪ ||

ತೊರೆವೆನಸುವಿದ ತರಳ ಪತಿಹತ | ದುರಿತವೊದಗಲಿ ನಿನಗೆನುತ ಕೈ |
ಯಿರಿಸೆ ಖಡುಗಕೆ ತಡೆದ ಶತ್ರುಹ | ನೊರೆದು ನಯವ || ೫ ||

**ಭಾಮಿನಿ**

ಗುರುವಿನಪ್ಪಣೆಯಂತೆ ಪಿತಗು |
ತ್ತರ ವಿಧಿಯ ಪೂರೈಸಿ ಭರತನು |
ಪೊರಡೆ ರಘುವರನೆಡೆಗೆ ಪದಡಿದಪ್ಪಿ ಕೈಕೇಯಿ ||
ತರಳ ಹಾ ಕೈಬಿಡದಿರೊರೆದಂ |
ತಿರುವೆನೆನೆ ಜತೆಗೊಂಡು ಕೌಸಲೆ |
ವರ ಸುಮಿತ್ರೆ ಸಮಸ್ತ ಪರಿಜನವೆರೆದು ಹೊರವಂಟ || ೧ ||

**ವಾರ್ಧಿಕ್ಯ**

ಭರದಿ ತಮಸಾನದಿಯನುತ್ತರಿಸುತಮರ ನಿ |
ರ್ಝರಿಣಿಯಂ ದಾಂಟಿ ನಡೆದಾ ಚಿತ್ರಕೂಟದೋಳ್ |
ಹರಿಯ ಪದ ಚಿನ್ಹಮಂ ಕಂಡು ಭಕ್ತಿಯಲಿದಿಂಡುರುಳಿ ಪಣೆಗಾರೇಣುವ ||
ಧರಿಸಿ ಮುಂದೆಸೆ ನೋಡಿ ರವಿಕೋಟ ಭಾಸದಿಂ |
ವರ ಜಟಾಮಂಡಲದಿ ಮೆರೆವ ರಾಘವನಡಿಗೆ |
ಶರಜಮಂ ಕಂಡೆರಗುವಾರಡಿಯೆನಲ್ ಭರತ ನೆರಗಿದಂ ಸಾಷ್ಟಾಂಗದಿ || ೧ ||

**ಭಾಮಿನಿ**

ಕರುಣದಿಂ ತೆಗೆದಪ್ಪಿ ರಾಘವ |
ಶಿರದಿ ಜಟೆ ವಲ್ಕಲವಿದೇನೈ |
ಅರುಹು ಕುಶಲವೆ ಯೆನಲು ಸಕಲವನೊರೆದ ಭರತಾಂಕ ||
ಧರಣಿಜಾಪತಿ ಪಿತನ ಮರಣಕೆ |
ಮರುಗಿ ಜನಕಂಗೌರ್ಧ್ವದೈಹಿಕ |
ವಿರಚಿಸುತ ಮಾತೆಯರ ಮನ್ನಿಸುತಿರಲು ಗುರು ನುಡಿದ || ೧ ||

**ರಾಗ ಬೇಗಡೆ ಅಷ್ಟತಾಳ**

ಏನು ರಾಘವ ರಾಜ್ಯ ಪಾಲನವೊ | ನಿತ್ಯಾತ್ಮ ಜನ್ಮವಿ |
ಧಾನ ವಿಸ್ತ್ರುತ ವಿಶ್ವಚಿಂತನವೋ ||
ಕಾನನದಿ ಬರಿ ಕಾಲ ಹರಣವೋ | ಆನತರ ರಕ್ಷಣವೋ ತಿಳುಹೆನ |
ಲಾ ನರಾಧಿಪನರಿತು ಗುರುಪದ | ಕಾನಿಸುತ ಸಿರಿ ಮುಡಿಯನೆಂದನು || ೧ ||

ಆಲಿಸೆನ್ನಭಿಮತವ ಗುರುವರ್ಯ | ಪಿತೃವಾಕ್ಯ ವನಸಂ |
ಚಾಲನವು ಮೇಣಾದ್ಯಕರ್ತವ್ಯ ||
ಮೇಲು ಮೇಲೀ ಜನನಿಯರ ಕಂ | ಗಾಲು ಭರತನ ಸಹಜ ಸ್ನೇಹ |
ವ್ಯಾಳ ಕಾಲ್ಪಿಡಿದರೆಯು ಮನ್ಮನ | ದೇಳಿಗೆಗೆ ಪ್ರತಿಕೂಲವಿಲ್ಲೈ || ೨ ||

**ಕಂದ ಪದ್ಯ**

ಇಂತೆನೆ ಭರತಾಂಬಿಕೆ ಘನ |
ಚಿಂತೆಯೊಳೆರಗುತ ಕ್ಷಮಿಸೇಳ್ ಪುರಕೆನೆ ರಘುಜಂ ||
ಸಂತೈಸುತಲಾಕೆಯ ತಾ |
ನೆಂತಾದರು ಬರೆನವಧಿಯೊಳೆನೆ ಮಾಂಡವಿಯಾಳ್ದಂ || ೧ ||

**ರಾಗ ಸಾರಂಗಿ ತ್ರಿವುಡೆತಾಳ**

ಏನಿದೇನಣ್ಣ ದೇವ | ಮಾತ್ಸರ್ಯವಿ | ದೇನು ಮಹಾನುಭಾವ || ಪಲ್ಲವಿ ||

ಏನಿದಸಮ ಜ್ಞಾನಿ ಸೂನೃತ | ವಾಣಿ ಸಮರ ತ್ರಾಣಿ ಘನ ಸ |
ನ್ಮಾನಿ ನಿರ್ಭಯ ಪಾಣಿ ವಾಂಛಿತ | ದಾನಿ ತನ್ನೊಡನೀ ನಿರಾಕೃತಿ || ಏನಿ || ಅ. ಪ ||

ವಿಕಟ ಕಾಮುಕ ಸ್ತ್ರೀಜಿತ | ಮುಪ್ಪಿನ ಮತಿ | ವಿಕಲ ಮತ್ತಿತ ದೂಷಿತ ||
ಆತನ ನುಡಿ | ಗಖಿಲ ಶಾಸ್ತ್ರವನರಿತ | ನೀನೊಪ್ಪಿಕೊಳುತ ||
ಅಕಟ ಕೈ ಬಿಟ್ಟೆಮ್ಮ ಗಿರಿವನ | ನಿಕರವನು ಪೊಗಲಿಳೆಯ ನಾಳುವ |
ಶಕುತರಾರ್ರೈತರದಿರಲು ತವ | ನಿಕಟವಿದ ಬಿಡೆ ಪ್ರಕಟವೀ ನುಡಿ || ಏನಿ || ೧ ||

ಈ ಮಾತಾಡುವರೆ ತಮ್ಮ | ಪೆತ್ತವ ಸತ್ಯ | ಕಾಮ ಸಚ್ಚರಿತನಮ್ಮ |
ಕೈಕಾದೇವಿ | ತಾ ಮಾರ್ಗದರ್ಶಿಯಮ್ಮ || ಮೇಣ್ ಪ್ರಕೃತಕರ್ಮ ||
ನೀ ಮನದಿ ಕವಲೆಣಿಸದಿರು ಪಿತ | ನೇಮ ಪಿರಿದುಭಯರಿಗಯೋಧ್ಯಾ |
ಸೀಮೆಯಾಳುವುದನಕ ನಾ ವನ | ವಾ ಮುಗಿಸಿ ಮರಳುವೆನು ಮರುಗದಿ || ರೀಮಾ || ೨ ||

ಅಂಣನೀನವಧರಿಸು | ಬಿನ್ನಪವ ಸಂ | ಪನ್ನ ದಯದಿ ಮನ್ನಿಸು |
ಪಿತನಾಜ್ಞೆಗ | ರಣ್ಯ ವೆನಗೆ ನೇಮಿಸು || ಧಾರಿಣಿಯ ವಹಿಸು ||
ಭಿನ್ನವಿರೆ ಮತ ನಿರಶನ ವ್ರತ | ವನ್ನೆಸಗಿ ಅಸುಗಳಿವೆ ತಾನೆನೆ |
ಚಿನ್ಮಯನು ಗುರುವನ್ನಿರೀಕ್ಷಿಸ | ಲನ್ನೆಗವ ಕರೆದೆಂದ ಗುಪಿತದಿ || ಅಂಣ || ೩ ||

**ಭಾಮಿನಿ**

ತಿಳಿಯೆ ನಿನಗಗ್ರಜನೆ ದುಷ್ಟರ |
ತಲೆಯರಿದು ಭೂಭಾರವಿಳುಹಲ್ |
ಕೆಳಸಿ ಬಂದಚ್ಯುತನ ಕಾರ್ಯಕೆ ವಿಘ್ನವೇಕೆನಲು ||

ತಿಳಿದು ಭಯಭಕ್ತಿಯಲಿ ಹರಿಯಡಿ |
ಗಳ ಪಿಡಿದು ದೈನ್ಯದಲಿ ಸಿರಿಪದ |
ಜಲರುಹೋಪಮ ಪಾದುಕೆಯ ನೀಡೆನುತ ಭರತಾಂಕ || ೧ ||

**ವಾರ್ಧಿಕ್ಯ**

ಇತ್ತಡವುಗಳ ಸೇವಿಸುತೀರ್ಪೆನೀರೇಳು |
ವತ್ಸರವನುತ್ತರಿಸಿ ದರುಶನವ ನೀಯದಿರ |
ಲಿತ್ತು ವನ್ಹಿಗೆ ತನುವ ತವ ಪದವ ಕಾಂಬೆನೆನಲೆತ್ತಿ ನಿಜ ಸೋದರನನು ||
ಮತ್ತಪ್ಪಿ ರಘುಜ ಸಂತೈಸಿ ಪಾದುಕೆಯೀಯು |
ತುತ್ಸವದಿ ಕಳುಹಲವ ಪತ್ತನವ ಪೊಗದೆಯದ |
ರೊತ್ತಿಗಿಹ ನಂದಿಗ್ರಾಮದೊಳಿರ್ದು ಧರೆಯಾಧಿ ಪತ್ಯಮಂ ನಡೆಸುತಿರ್ದ || ೧ ||

**ಭಾಮಿನಿ**

ವರ ರಘೂದ್ವಹ ಚಿತ್ರಕೂಟವ |
ತೊರೆದಗಸ್ತ್ಯಾತ್ರ್ಯಾದಿ ಮುನಿಗಳ |
ದರುಶನವಗೊಳುತೈದಿ ಮಡುಹಿ ವಿರಾಧ ಮುಖ್ಯರನು ||
ಹರುಷದಿಂದಿರೆ ಪಂಚವಟ್ಯದಿ |
ಧರಿಸಿ ದಿವ್ಯಾಕೃತಿಯ ನಭದಲಿ |
ಚರಿಪ ದಶಶಿರನನುಜೆ ಕಂಡಳು ರಾಘವೇಶ್ವರನ || ೧ ||

**ರಾಗ ಹಿಂದೂಸ್ತಾನಿ ಕಾಪಿ, ರೂಪಕತಾಳ**

ಅರೆರೆ ಎನಿತು ಚಲುವು ಭಲ | ದೊರೆಕಿತೆನಗೆ ಸುಕೃತ ಫಲ || ಪಲ್ಲ ||
ಧರೆಯ ಲಾವಣ್ಯವೆಲ್ಲ | ಎರಕಗೈದಿಹನು ಕಬ್ಬಿಲ್ಲ || ಅರರೆ || ಅನು ಪಲ್ಲ ||

ದೊರೆತನೆನಗೆ ಸಾರ್ಥ ವಿಟ | ಹರನೆ ಕರುಣಿಸಿದನು ದಿಟ ||
ಸುರತಕಿಂಥ ವರನ ಹೊಂದ | ದಿರುವ ಹೆಣ್ಣು ಜನುಮ ದಂಡ || ಅರರೆ ||
ಮದನ ಕದನಕೊದಗಲಹ | ಮುದದೊಳಪ್ಪಿಕೊಳುತ ಮಹ ||
ಮಧುರ ಬಂಧ ಚುಂಬನಾದಿ | ವಿಧಿಯೊಳ್ನಲಿವೆ ನಿವನ ಕೂಡಿ || ಅರರೆ || ೨ ||

**ಕಂದ ಪದ್ಯ**

ಗುರು ಕುಚಭಾರದಿ ಹರಿ ನಡು | ಮುರಿದಪುದೆನೆ ಬಲು ಬಳಕುತ ಲಂದುಗೆ ರವದೊಳ್ ||
ಕರೆವುತ ವಿಟನಂ ಕಿರು ನಗೆ | ವೆರೆದೈದುತ ರಘುವರನೊಡ ನತಿ ಬೆಡಗಿನೊಳಂ || ೧ ||

**ರಾಗ ಮೋಹನ ಏಕತಾಳ**

ಸ್ವಾಗತ | ಪಿರಿಯಭಾಗ್ಯತಹನಹೆ ಸು | ಸ್ವಾಗತ ರಘು ನಾಥ || ಪಲ್ಲ ||
ಸ್ವಾಗತ ಸಿರಿಸುಖ | ದಾಗರ ಲಂಕಾ | ನಾಗರಿಕಳು ಶಿರ | ಬಾಗುವೆನಿದಕೊ || ಸ್ವಾಗತ || ಅ.ಪ ||

ಮೋಹನ | ಸುರತಾಹವಕೆನಗೆಣೆ | ಯಾಹ ಸುಗುಣವಿಟನ ||
ಈ ಹರೆಯದಿ ನೆರೆ | ವಾ ಹವಣದಿ ಬರೆ | ಆ ಹಸಿವೆಯ ದಣಿ |
ವಾ ಹರಿಸಿದೆ ಧಣಿ || ಸ್ವಾಗತ || ೧ ||

ಮತ್ಪ್ರಿಯ | ಕಂದರ್ಪ ಕೇಳಿಗೊಲಿದೈ | ತರ್ಪೆಯ ಸುಮಕಾಯ ||
ಚಪ್ಪರಿಸುತ ಬಿಗಿ | ದಪ್ಪುತ ಕುಚವೆದೆ | ಗಪ್ಪಳಿಸುತ ಮಿಗಿ |
ಲಪ್ಪ ವಿಲಾಸಕೆ || ಸ್ವಾಗತ || ೨ ||

**ರಾಗ ಕೇದಾರಗೌಳ ಅಷ್ಟತಾಳ**

ಉಪಚಾರವಿದು ನಮ | ಗಪರೂಪವರಿಯೆ ಕೌ | ಣಪ ವಧು ವಿಧವೆಯೈಸೆ ||
ವಿಪರೀತ ವಿಧಿ ಮಗು | ಳೇಕ ಪತ್ನೀವ್ರತ | ಸಫಲವಾಗದು ನಿನ್ನಾಸೆ ‖ ೧ ‖

ಒಲ್ಲೆನೆಂದರೆ ಪೋಪ | ಳಲ್ಲವೆಂದನುತೈದಿ | ಗಲ್ಲವನಲುಗಿದಳು ||
ತಳ್ಳಿ ರಾಘವ ತಮ್ಮ | ಚಲ್ವ ನನ್ನಿಂದಾತ | ನಲ್ಲಿ ನೀ ಬೆರೆಯೆನಲು ‖ ೨ ‖

ಗುರುತೀಯಬೇಹುದೆಂ | ದೆರಗೆ ರಘೂದ್ವಹ | ಬರೆದನಾಕೆಯ ಬೆನ್ನಿಲಿ ||
ಪರಿಕಿಸಿದೊಡನೆ ತಾ | ನರಿವ ಪೋಗೆನಲವ | ಳಿರದೆ ತೋಷದಿ ಮರಳಿ ‖ ೩ ‖

**ಭಾಮಿನಿ**

ತೆರಳಿ ಲಕ್ಷ್ಮಣಗೆರಗಿ ನಿಶ್ಚಯ |
ಹಿರಿಯ ಕಳುಹಿದನೆನಲು ಬರೆಹವ |
ಪರಿಕಿಸುತ ಗಹಗಹಿಸುತೊಯ್ಯನೆ ಪಿಡಿದು ಚಂಡಿಕೆಯ ||
ಕರದ ಖಡುಗದಿ ನಾಸಿಕವ ಚರ |
ಚರನೆ ಕೆತ್ತಿದನುರಿಗೆ ದಾನವಿ |
ಧರಿಸಿ ಘೋರಾಕೃತಿಯೊಳೊದರಿದಳದುರೆ ಸುರನಿಕರ ‖ ೧ ‖

**ರಾಗ ಕಾಂಬೋಧಿ ಝುಂಪೆತಾಳ**

ಅನುಜೆ ಕೂಗಿದ ಭರಕೆ | ದನುಜ ಖರ ಕನಲಿ ದೂ | ಷಣನೊಡನೆ ಮೂಲಬಲ ಸಹಿತ ||
ಅನುವರಕ್ಕೊದಗಿ ಕರೆ | ದಿನ ಕುಲಾಧಿಪನ ತಡೆ | ದಣಕಿಸುತ ಗಜರಿ ಬೊಬ್ಬಿಡುತ ‖ ೧ ‖

ಎಲವೋ ನರಗುರಿಯೆಮ್ಮ | ಹೊಳಲನಿದ ಪೊಕ್ಕಸುವ | ಕಳೆದೆ ಮೇಣ್ ಸತಿಯ ಭಂಗಿಸುತ ||
ತಲೆಯರಿದು ಮಿದುಮಾಂಸ | ರುಧಿರ ಸಹಿತುಂಬೆ ತವ | ಲಲನೆಗಿದ ತಿಳುಹಿ ಬಾರೆನುತ ‖ ೨ ‖

ಎಚ್ಚು ಶರವರ್ಷದಲಿ | ಮುಚ್ಚಿದನು ರಘುಪತಿಯ | ಬೆಚ್ಚುತನಿಮಿಷರು ಹಾಯೆನಲು ||
ಕೊಚ್ಚುತಚ್ಯುನೆಚ್ಚ | ನಿಚ್ಚಾಟಾಸ್ತ್ರದಲಿ ಶಿರ | ಉಚ್ಚಿ ಖಳನುರುಳಲವನಿಯೊಳು ‖ ೩ ‖

**ಭಾಮಿನಿ**

ಬಳಿಕ ಖಳ ಕಾನನ ಕುಠಾರನ |
ಕೊಳುಗುಳದಿ ಹದಿನಾಲ್ಕು ಸಾವಿರ |
ದಳದೊಡನೆ ಮೃತನಾಗೆ ದೂಷಣನಾಗ ಶೂರ್ಪನಖಿ ||
ಎಲೆ ನರಾಧಮಗೈದ ಕೃತ್ಯಕೆ |
ಫಳಿಗೆಯಲಿ ಮದ್ದರೆಯದಿರ್ದರೆ |
ಲಲನೆ ತಾನಲ್ಲೆನುತಲೋಡಿದಳಗ್ರಭವನಡೆಗೆ ‖ ೧ ‖

**ವಾರ್ಧಿಕ್ಯ**

ವನಿತೆ ಕೇಳ್ ಕನಕ ಲಂಕೆಯೊಳತ್ತ ಸುರ ಭುಜಗ |
ಮನುಜದಲ್ಲಣ ದಶಗ್ರೀವನೋಲಗದಿ ಸಾ |
ರಣ ಶುಕ ಮಹೋದರ ಪ್ರಹಸ್ತಾಕ್ಷನತಿಕಾಯ ರಣವಿಜಿತ ಮೇಘನಾದ ||
ಘನ ಮದೋನ್ಮತ್ತ ರಾಕ್ಷಸ ಖೇಚರಾದಿಗಳ್ |
ದನುಜೇಂದ್ರನಿತ್ತಟದಿ ಮೆರೆದಿರಲ್ ಬೆಸಕೈವು |
ತನಿಮಿಷಾಧಿಪ ಮುಖ್ಯ ದಿಕ್ಪತಿಗಳಿರುತಿರ್ದರೆನಿತೆಂಬೆನಾ ವಿಭವವ ॥ ೧ ॥

**ರಾಗ ಸಾಂಗತ್ಯ ರೂಪಕತಾಳ**

ಅನಿತರೊಳೊರಲುತ | ಲ್ಲಿಗೆ ಮೃತ್ಯುವೆನೆ ಬಂದು | ಮಣಿವುತಂಣಗೆ ಶೂರ್ಪನಖಿಯು ||
ಮನುಜ ಪಾಲಕ ರಾಮ ಅನುಜ ಲಕ್ಷ್ಮಣ ಸೀತೆ | ವನಿತೆ ವಸತಿ ಪಂಚವಟಿಯು ॥ ೧ ॥

ಸುಂದರಿ ನಿನಗಾಹ | ಳೆಂದು ಕೈಗೊಡೆ ಮೂಗ | ಖಂಡಿಸಿದನು ರಾಮನನುಜ ||
ಬಂದು ಕಾದಲು ಖರ | ದೂಷಣಾದ್ಯರನೆಲ್ಲ | ಕೊಂದನು ದಶರಥ ತನುಜ ॥ ೨ ॥

ನಕ್ಕಳಾ ಸೀತೆಯ | ನ್ನಭಿಮಾನವಿದು ನಿನ್ನ | ದೊಕ್ಕಣಿಸುವ ದೇನಾ ಸತಿಗೆ ||
ತಕ್ಕವಳಿಕ್ಕೆ ತಂ | ದಿಕ್ಕದಿರಲು ಗೆಲ | ವಕ್ಕೆ ಭಾವಿಸು ನಮ್ಮ ಕ್ಷಿತಿಗೆ ॥ ೩ ॥

**ಭಾಮಿನಿ**

ಕೇಳಿ ದಶಶಿರ ಕನಲಿ ವಿಲಯದ |
ಕಾಲನೋ ಕಲ್ಪಾಂತ ರುದ್ರನೊ |
ಪೇಳಲರಿದೆನಲೆದ್ದ ರೌದ್ರದಿ ಗದ್ದುಗೆಯನೊದ್ದು ||
ಕೀಳು ಮಾನವನೆಮ್ಮನೀ ಪರಿ |
ಕೋಳುಗೊಂಡರೆ ತನಗೆ ಬಲುಗೈ |
ಯ್ಯಾಳುತನವೇಕೆನುತ ಘರ್ಜಿಸಿ ಮೀಸೆಗೈಯ್ಯಾಗಿ ॥ ೧ ॥

**ರಾಗ ಭೈರವಿ ಏಕತಾಳ**

ಬೆದರುವರೆನಗಜಭವರು | ಪದ | ದಡಿಯೊಳಿಹರು ನಿರ್ಜರರು ||
ವಿದಿತವು ಲೋಕತ್ರಯದಿ | ಹರಿ | ಯಡಗಿಹ ಜಡದೊಳು ಭಯದಿ ॥ ೧ ॥

ಹರಿಗಿದಿರಹ ಮದ ಕರಿಯ | ಖಗ | ವರನನು ತಡೆವಹಿ ಪರಿಯ ||
ನರಗುರಿ ಕೆಣಕಿದ ವಹವ | ತಾ ನರಿತರಿತೆನ್ನಾಳ್ತನವ ॥ ೨ ॥

ಧಾರ್ಮಿಕರೆಂಬರು ಜಗದಿ | ದು | ಷ್ಕರ್ಮವನಾರ್ಯರ ತೆರದಿ ||
ದುರ್ಮದ ವಿಳಿಸುವೆನವಗೆ | ಕಡು | ದುರ್ಮ್ಮಾನವ ಸತಿಗೆಸಗೆ ॥ ೩ ॥

**ಭಾಮಿನಿ**

ಕರೆದು ಮಾರೀಚನನು ದಶಗಳ |
ತೆರಳು ಪೊಂಮಿಗವಾಗಿ ಜಾನಕಿ |
ಇರುವ ಬಳಿಗೆನೆ ಹರಿಯ ಹಗೆ ಕುಲಲಯವು ತೆಗೆಯೆಂದ ||
ಮರುನುಡಿಯೆ ಶಿರವರಿವೆ ನೋಡೆಂ |
ದಿರದೆ ಸುರಗಿಯನುಗಿಯಲಾ ರಘು |
ವರನೊಳಳಿದರೆ ಮುಕ್ತಿ ಕೊಲದಿರು ಪೋಪೆ ತಾನೆನುತ || ೧ ||

**ರಾಗ ಮಾರವಿ ಏಕತಾಳ**

ಉಸುರುತಲೀಪರಿ | ನಿಶಿಚರ ನೆಗೆದಾ | ಗಸಕಡರುತಲಾಗ ||
ಬಿಸಜ ಸಖಾನ್ವಯ | ನೊಸತಿಯ ಕಾನನ | ದೆಸೆಗೆಳಿಯುತ ಬೇಗ || ೧ ||

ಮಾಯದಿ ಕಾಂಚನ | ಛಾಯೆ ಮಿನುಗೆ ಮಿಗ | ದಾಯತಿಕೆಯೊಳಂದು ||
ತೋಯಜ ನೇತ್ರೆಗ | ಪಾಯವನೆಸಗುವು | ಪಾಯದೊಳೈತಂದು || ೨ ||

ಬೊಗರಿಯ ತೆರದೊಳು | ಜಿಗಿದು ಸುಗಿದು ಯಳೆ | ಚಿಗುರನು ಹರಿಯುತ್ತ ||
ಸೊಗಸಿನೊಳೈತಹ | ಚಿಗರೆಯ ಕಾಣುತ | ಮಿಗೆ ಜಾನಕಿ ನಗುತ || ೩ ||

**ವಾರ್ಧಿಕ್ಯ**

ದಾನವನ ಕಪಟವದ ನೋಡಿದಳು ಓಡಿದಳು |
ಮಾನಸದ ಹರುಷ ಮುದ್ವೇಗದೊಳು ವೇಗದೊಳು |
ತಾನಿನಿಯನಪ್ಪಿ ಕೊಂಡಾಡಿದಳು ಆಡಿದಳು ಏಣವದ ಪಿಡಿದೀಗಳು ||
ನೀನೀವುದೆನುತ ಮೈತೀಡಿದಳು ತೀಡಿದಳು |
ಮೇಣೆದ್ದು ಮಿಗದ ಬಳಿ ಸಾರಿದಳು ಸಾರಿದಳು |
ಕಾಣಿದರನುಳಿದು ಬದುಕುವಳಲ್ಲೆನುತ ಲಲ್ಲೆ ಜಾನಕಿಯು ಬಿಸುಸುಯ್ದಳು || ೧ ||

**ರಾಗ : ಕೇದಾರಗೌಳ, ಅಷ್ಟತಾಳ**

ಓಡಿ ಲಕ್ಷ್ಮಣನೆಂದ | ಖೋಡಿಗೊಂಬುವರುಂಟೆ | ಮೂಢ ರಕ್ಕಸರ ಮಾಯೆ ||
ಓಡುವವದ ಕಂಡು | ಕಾಡಿನ ಮೃಗವೆಲ್ಲ | ಬೇಡಿತ್ತ ಬನ್ನಿ ತಾಯೆ || ೧ ||

ಒಲ್ಲೆ ನಾನಿದರ ಕೊಂ | ಡಲ್ಲದೆ ತಿರುಗುವ | ಳಲ್ಲ ನಿಲ್ಲದು ಹರಣ ||
ಬಲ್ಲೆ ನಿನ್ನಯ ನುಡಿ | ಎಲ್ಲ ಚಮತ್ಕೃತಿ | ಸಲ್ಲದೆನ್ನೊಳು ಮೈದುನ || ೨ ||

ಎಂಣಿಸಬೇಡಿ ಸು | ವರ್ಣ ಕಾಯವಿದು ಹಿ | ರಣ್ಯ ಗರ್ಭನ ಸೃಷ್ಟಿಯೆ ||
ಬಂಣನೆಯೇಕೆ ಕೈ | ಗನ್ನಡಿಯಿರೆ ಮುಖ | ಬಂಣವೇನೆಂದರಿಯೆ || ೩ ||

ಅನಕ ರಾಘವನೆಂದ | ಅನುಜ ತನ್ನಿನಿಯಳ | ಎಣಿಕೆಯಾಗಲಿ ಕಡೆಗೆ ||
ದನುಜ ಮಾಯಕವಾದ | ರೆಯು ಪರಿಹರಿಸುವು | ದನಿವಾರ್ಯವೈ ನಮಗೆ || ೪ ||

ಪಿಡಿವೆನಲ್ಲದಡದ | ವಧಿಸಿ ಬೇಗದಿ ಬಹೆ | ನೊದಗಿ ಕಾಯ್ದಿಹುದಿವಳ ||
ತುದಿ ಬಯಕೆಯ ಬದಿ | ಗಿಡಲೇಕೆಂದುಸುರುತ್ತ | ಲೊಡನೆದ್ದ ನಾಕೆವಾಳ || ೫ ||

**ವಾರ್ಧಿಕ್ಯ**

ಇಂತಿರಲ್ ಪುಷ್ಪಕದಿ ಲಂಕಾಧಿನಾಥ ನಡೆ |
ದಂತರಿಕ್ಷದೊಳಡಗಿ ನೋಡುತಿರೆ ಕೈದುಗಳ |
ನಾಂತು ರಘುಪುಂಗವಂ ಬೆನ್ನಟ್ಟೆ ಕಿತವ ಮಿಗವಂತರಿಸಿ ಗಿರಿವನಗಳ ||
ಮುಂತಳೆಯೆ ಬಳಲಿ ರಾಘವನೆಚ್ಚ ಶರದಿ ಹರ |
ಣಾಂತದಲಿ ಖಳ ಲಕ್ಷ್ಮಣಾ ಲಕ್ಷ್ಮಣಾಯೆನು |
ತ್ತಂತಕನ ಬಳಿಗೈದಲದ ಕೇಳಿ ವೈದೇಹಿ ಚಿಂತಿಸುತ ಮೈದುನಂಗೆ || ೧ ||

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಓಡು ನೀ ತಡಮಾಡದಿರು ಕೇ | ಡಾದುದಕಟಾ ಕರೆವನಿನಿಯನು ||
ಖೋಡಿ ದೈತ್ಯರು ಕೊಲುತಿಹರು ತ್ವರೆ | ಮಾಡು ದಯದಿ || ೧ ||

ಮರುಳುಗೊಂಬರೆ ತಾಯೆ ದನುಜರು | ಹರಿಯ ಕೊಲ್ಲುವುದುಂಟೆ ರಘುಪತಿ |
ಕರೆದುದಿಲ್ಲದು ಕಪಟ ಪೋಗೆನು | ತೊರೆದು ನಿಮ್ಮ || ೨ ||

ಜಡಜಲೋಚನನಳಿಯೆ ನಾನಿನ | ಗೊದಗುತಿಹೆನೆಂದರಿತೆಯಲ ತಾ |
ಬೆದೆಯ ಬಯಸುವ ಬಸವ ದಿಟನೀ | ನಧಮ ತೊಲಗೈ || ೩ ||

**ವಾರ್ಧಿಕ್ಯ**

ಅತ್ತಿಗೆಯ ನುಡಿಗೆ ಕಿವಿಯೊತ್ತಿ ಸೌಮಿತ್ರಿ ಮಾ |
ರುತ್ತರಂಗೊಡದೆ ಕಂಬನಿದುಂಬಿ ಕಾಲ್ಗೆರಗಿ |
ಚಿತ್ತದೋಳ್ ರಾಮಚಂದ್ರನ ನೆನವುತ್ತೈದೆ ದಶಮಸ್ತಕಂ ಯತಿವೇಷದಿ ||
ಪೃಥ್ವಿಗಿಳಿಯುವ ವೇದಘೋಷದಿಂದೆಲೆ ಮನೆಯ |
ಹತ್ತಿರಕೆ ನಡೆತಂದು ಭವತಿ ಭಿಕ್ಷಾಂದೇಹಿ |
ತೃಪ್ತಿಗಾಣದೆ ಜಗವ ಸುತ್ತಿ ಬಳಲಿದೆನಿಷ್ಟವಿತ್ತನುಗ್ರಹಿಸೆಂದನು || ೨ ||

**ರಾಗ ಕೇತಾರಗೌಳ ಅಷ್ಟತಾಳ**

ಬೆದರಿದಂತಿದೆ ವಿಧು | ವದನೆ ರಕ್ಷೆಗಳಿಲ್ಲ | ದಡವಿಯೊಳಿಹರೆ ಹೀಗೆ ||
ಪಡೆದವರ್ಯಾರು ಕೈ | ವಿಡಿದಾತನೆಲ್ಲಿಹ | ನದನುಸುರೀಗೆನಗೆ || ೧ ||

ಜನಕರಾಯ ಮಗ | ಳೆನಗೆ ಸೀತಾಂಕಿತ | ಇನಿಯ ರಾಘವ ಪಿತನ ||
ಮನದಂತೀರೇಳ್ ವರ್ಷ | ವನವನುತ್ತರಿಸೆ ಲ | ಕ್ಷ್ಮಣಸಹಿತಿರಲೀ ದಿನ || ೨ ||

ತಹೆನೊಂದು ಮಿಗವೆಂದು | ಮಹಿಮ ರಾಘವ ಪೋದ | ಸಹಯಕನುಜ ಪೊರಟ ||
ಬಹರೀಗ ಮನವ ನಿ | ರ್ವಹಿಸಲಪ್ಪಣೆಯಿಲ್ಲ | ಸಹಿಸಿ ನೀವರೆ ನಿಮಿಷ || ೩ ||

**ಭಾಮಿನಿ**

ಇಂತು ನೆವನವೆ ದೇವಿ ಖಳರ ದು |
ರಂತ ದುಷ್ಕೃತಿಗಾಜ್ಞೆಯದು ನಾ |
ವಂತರಿಸಲರಿದಿದಕೊ ಶಾಪವನೆಂದನಾಗ್ರಹದಿ ||
ಚಿಂತಿಸುತ ಮುಂಗಾಣದವನಿಜೆ |
ಯಾಂತುಭಿಕ್ಷೆಯ ಪೊರಡೆ ದಶಶಿರ |
ದಂತಿಗಮನೆಯ ನೆಗಹಿಗಮನೋದ್ಯೋಗಪರನಾಗೆ || ೧ ||

**ರಾಗ ಬಿಲಹರಿ ರೂಪಕ ತಾಳ**

ಅಯ್ಯೋ ಕೆಟ್ಟೆನು ದುಷ್ಟ | ದಾನವ ಕಪಟದಿ |
ಒಯ್ವನು ಬಿಡಿಸೆನ್ನ | ದಯದಿ | ಶ್ರೀರಾಮ || ೧ ||

ಹಟವ ಹಿಡಿದು ಕೆಟ್ಟೆ | ಕಟು ನುಡಿಗಳ ಬಿಟ್ಟೆ |
ಕಟುಕನ ಕೈಯ್ಯಿಂದ | ಬಿಡಿಸೋ | ಶ್ರೀರಾಮ || ೨ ||

ತೊರೆದು ಸರ್ವವ ನಿನ್ನ | ಚರಣವ ನಂಬಿ ನಾ |
ಪೊರಟೆ ಕೈಬಿಡದೆನ್ನ | ಪೊರೆಯೋ | ಶ್ರೀರಾಮ || ೩ ||

**ವಾರ್ಧಿಕ್ಯ**

ಈ ತೆರದಿ ವನಿತೆ ಕಂಗೆಟ್ಟೊರಲೆ ಗಿರಿವನ |
ವ್ರಾತಬಾಯ್ ಬಿಟ್ಟಳಲಿತೆನೆ ಪ್ರತಿಧ್ವನಿಸೆ ಸಂ |
ಪಾತಿಯವರಜ ಕೇಳುತಡಹಾಯ್ದು ಪುಷ್ಪಕವ ಘಾತಿಸಿದ ಮಸ್ತಕವನು ||
ಯಾತುಧಾನನಿದೆಲ್ಲಿಯದು ಹಾಳುಹದ್ದೆನುತ |
ಖಾತಿಯಿಂಝುಡಿದು ಪಕ್ಕಗಳ ಕಡಿದುರುಳಿಸುತ |
ತಾ ತಾಳುವದೈದಿ ಸೀತೆಯ ಶಿಂಶುಪಾವನದಿ ಬೈತಿಟ್ಟು ನಡೆದ ಪುರಕೆ || ೧ ||

**ರಾಗ ಸಾಂಗತ್ಯ ರೂಪಕತಾಳ**

ಇತ್ತಲಣ್ಣನ ನರ | ಸುತ್ತಲೈತರುವ ಸೌ | ಮಿತ್ರಿಯ ಕಂಡು ರಾಘವನು ||
ಚಿತ್ತದಿ ಕಳವಳಿ | ಸುತ್ತ ಕೇಳಿದ ವಾರ್ತೆ | ಮತ್ತೇನು ಬರಲಿಲ್ಲಿ ನೀನು || ೧ ||

ಕರೆದೆ ನೀನೆನೆನುತೆನ್ನ | ನಿರಗೊಡದತ್ತಿಗೆ | ಜರೆದು ನೂಕಲು ಬಂದೆನಂಣ ||
ಒರೆದ ಕಟೂಕ್ತಿಯ | ನರುಹಲಾರೆನು ಜೀಯ | ಪರಸೇವೆಯರಿಯೆ ಬಲ್ ಕಠಿಣ || ೨ ||

ಘಾತವಾಯಿತು ದುಷ್ಟ | ದೈತ್ಯನುಲಿಯು ಕಷ್ಟ | ಹೇತುವೆಂದೆನುತೋಡಿ ಬರುತ ||
ಸೀತೆಯನರಸಿ ಸೋ | ದರರು ಕಾತರಿಸಿ ಭೂ | ಜಾತೆ ಕಾಣದೆ ರಾಮನಳುತ || ೩ ||

**ರಾಗ ಮಧು ಮಾಧವಿ ತ್ರಿವುಡೆತಾಳ**

ಮಡದಿಯೆಲ್ಲಿಹೆ ದಗೆಯನಾಂತಿಹೆ | ತಡೆಯಲಾರೆನು ವಿರಹದುರಿಯನು ||
ಜಡಜಲೋಚನೆ ಮೃಗಧರಾನನೆ | ಸಿಡುಕದೆನ್ನಲಿ ಬೇಗನೆ || ಬಾರೆ ಸುಗುಣೆ || ೧ ||

ದಡಿಗ ದಾನವರೊಯ್ದರೊ ಕೊಂ | ದಡಗನಗಿದರೊ ದುಷ್ಟಶ್ವಾಪದ |
ಗಡಣ ತಿಂದವೊ ಕಾಣೆನೆನ್ನುಸಿ | ರಡಗಿತಿನ್ನೇಂಗೈವೆನು || ಬದುಕಿ ನಾನು || ೨ ||

ತೊರೆದು ತಾನರಘಳಿಗೆ ಬಾಳಿರ | ಲರಿದೆನುತ ನಡೆ ತಂದೆಯಾದಡೆ ||
ಪರಿಯು ಬೇರಾಯ್ತೀಗ ಸತಿಯರ | ಇರವರಿಯೆ ಕಡುದುಸ್ತರ || ಪೇಳು ವಿವರ || ೩ ||

**ವಾರ್ಧಿಕ್ಯ**

ವ್ಯಾಕುಲವ ಬಿಡು ಲೋಕ ಮೂರರೊಳಗೆಲ್ಲಿರ್ದ |
ಡಾಕಮಲ ಮುಖಿಯ ತಂದೀಯದಾದರೆ ಪಿಡಿಯೆ |
ನೀಕರಾಗ್ರದಿ ಧನುವನೆನುತಂಣ ನಡಿಗೆರಗಿ ಬೀಳ್ಕೊಂಡ ಸೌಮಿತ್ರಿಯ ||
ತಾ ಕಂಡು ತಿಳುಹಿ ಸಂತೈಸಿ ಜತೆಯಲಿ ಜನಕ |
ಜಾಕಾಂತ ದೆಸೆ ದೆಸೆಯ ಹುಡುಕುತ್ತೈದಿ ಜಟಾಯು |
ವಂಕಂಡಿದೇನೆಂದಡವ ನಡೆದುದರುಹಿ ಪರ ಲೋಕಮಂ ಸಾರಲಾಗ || ೧ ||

**ರಾಗ ಕಾಂಬೋಧಿ ಝಂಪೆತಾಳ**

ಶರಣಗುತ್ತಮ ಗತಿಯ | ಕರುಣಿಸಿ ಕಬಂಧನನು | ತರಿದಿಡುಕಿ ಗಿರಿ ಗೌಹರಗಳ ||
ಚರಿಸುತರಸುತ ಶಬರಿ | ಯಾಶ್ರಮಕೆ ಬರಲವಳು | ಅರಿತು ಬಂದಪ್ಪಿ ಚರಣಗಳ || ೧ ||

ಬರವ ನೋಡುತ ಹತ್ತು | ವರುಷವಾಯ್ತೀ ಹೊತ್ತು | ದರುಶನವಿದಾಯ್ತುವನಿಸುತೆಯ ||
ಇರವೆಲ್ಲಿ ಶರಣಜನ | ಸುರಧೇನು ಶೂದ್ರಳೆಂ | ದರಿಯದುದ್ಧರಿಸಿದೆಯ ಸತಿಯ || ೨ ||

ಎಂದು ಮಿಗಿಲಾದರಿಸ | ಲೆಂದು ವಾರ್ತೆಗಳನವ | ಳಿಂದರಿತು ಸುಗ್ರೀವನಿರವ ||
ಚಂದದಿಂ ಕೈವಲ್ಯ | ಪದವ ಕರುಣಿಸಿ ರಘುಜ | ಬಂದು ಕಂಡನು ಪಂಪಸರವ || ೩ ||

**ಭಾಮಿನಿ**

ಹೊಳೆವ ನೀಲೋತ್ಪಲವ ಕಾಣುತ |

ಲಲನೆಯೆಂದರಿತಾಗ ಮನದು |
ಮ್ಮಳದಿ ಹಾ ಹಾ ಸೀತೆ ಹಾಯೆನುತಪ್ಪಿಕೊಳಲೆನುತ |
ಕೊಳವ ದುಮುಕಲ್ಕೆಳಸೆ ಲಕ್ಷ್ಮಣ |
ತಿಳುಹುತಿರಲಾ ಋಷ್ಯಮೂಕದಿ |
ಚಲುವರಿವದಿರ ಕಾಣುತಿನಸುತನೆಂದ ಹನುಮಂಗೆ ‖ ೧ ‖

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ನೋಡಿ ಬಾರೈ ಪಂಪೆಯೆಡೆಯಲಿ | ರೂಢಿಪಾಲರದಾರು ಹಿತವರೊ ||
ಖೋಡಿ ವಾಲಿಯ ಸಖರೊ ನೀನತಿ | ಗೂಢವಾಗಿ ‖ ೧ ‖

ಎನೆ ಹಸಾದವೆನುತ್ತಲಂಜನೆ | ಯಣುಗ ವಟು ರೂಪದಲಿ ನಡೆತಂ |
ದಿನ ಕುಲಾಧಿಪನಡಿಗೆ ಮಣಿವುತ | ವಿನಯದಿಂದ ‖ ೨ ‖

ವೀರರಾಗಮವೇನು ಪೆತ್ತವ | ರಾರು ನಿಜಪುರವೆಲ್ಲಿ ವನಸಂ ||
ಚಾರವೇಕಿದು ಪೇಳಿ ಪೆಸರೇನ್ | ಭೂರಿದಯದಿ ‖ ೩ ‖

**ವಾರ್ಧಿಕ್ಯ**

ತರಣಿ ಕುಲ ಸಾಕೇತದರಸ ದಶರಥ ಜನಕ |
ಹಿರಿಯ ಸುತ ನಾ ರಾಮ ಭರತ ಶತ್ರುಹರೂರೊ |
ಳಿರುವನುಜರಿವ ಲಕ್ಷ್ಮಣಂ ವನಿತೆಯಹ ಸೀತೆಯರ ವೆರೆದು ಪಿತನಾಜ್ಞೆಗೆ ||
ವರುಷ ಹದಿನಾಲ್ಕುನುತ್ತರಿಸೆ ವನಕೈ ತಂದು |
ಇರೆ ಪಂಚವಟಿಯೊಳಾವಿರದ ಸಮಯದಿ ಕದ್ದು |
ದುರುಳ ದಶಶಿರನೊಯ್ದ ತರುಣಿಯನ್ನರಸುತ್ತ ಸರಿದೆವೀಯಡೆಗೆಂದನು ‖ ೧ ‖

**ಭಾಮಿನಿ**

ಕೇಳಿ ಭಯ ಭಕ್ತಿಯಲಿ ಮರುತಜ |
ನೀಲಗಾತ್ರನ ಪದದಿ ಪಣೆಯಿ |
ಟ್ಟೇಳುತೊಡನೀಕ್ಷಿಸುತ ಕುಲಿಶೋಪಮ ನಿಜಾಂಗವನು ||
ಬಾಲನೆನಗೊಲಿದವ್ವೆಯರುಹಿದ |
ಶೀಲಮೂರ್ತಿಯ ಕಂಡೆನಿಂದಿಗೆ |
ಶೀಳಿದುದು ಭವ ಬಂಧವೆನುತಡಿಗೆಡೆದು ನುತಿಸಿದನು ‖ ೧ ‖

**ವಾರ್ಧಿಕ್ಯ**

ಜಯ ಜಯ ಜಗದ್ಭರಿತ ಸಚ್ಚರಿತ ಮುನಿ ವಿನುತ |
ಜಯ ಜಯ ಮಹಾನಂದ ಸ್ವಚ್ಛಂದ ನಿರ್ದ್ವಂದ್ವ |

ಜಯ ಜಯ ಘನ ಶ್ಯಾಮ ರಿಪು ಭೀಮ ಶುಭನಾಮ | ಜಯ ಜಯಾ ಭಕ್ತಪ್ರೇಮ ||
ಜಯ ಜನಕಜಾಲೋಲ ಜನಪಾಲ ವನಮಾಲ |
ಜಯ ಸಿತಾಂಬುಜ ನೇತ್ರ ಸರ್ವತ್ರ ನುತಿಪಾತ್ರ |
ಜಯ ದೈತ್ಯ ನಿರ್ನಾಮ ನಿಸ್ಸೀಮ ಗುಣಧಾಮ ಜಯ ಸತ್ಯಕಾಮ ರಾಮ || ೧ ||

**ರಾಗ ಪಂತುವರಾಳಿ ರೂಪಕತಾಳ**

ದೇವ ಲಾಲಿಸಬುಜಲೋಚನ | ಬಿನ್ನಪಗಳ | ನೀವಲಿದು ಭಯ ವಿಮೋಚನ || ಪಲ್ಲ ||
ವಾಯು ಜನಕ ಜನನಿಯಂಜನ | ದೇವಿ ನಾಮ | ಧೇಯ ಹನುಮನೆಂಬರೈ ಜನ ||

ತೋಯಜಾಕ್ಷ ಕೇಳು ಪ್ಲವಗ | ರಾಯ ಸಚಿವನೆನಗೆ ಮಿಕ್ಕ ||
ಮಾಯೆಯರಿಯದೈ ನಿಜಾಂಗವ | ನೋಡು ದಯದೊ |
ಳೀಯೊ ದಿವ್ಯ ಚರಣ ಸೇವೆಯ | ಇಷ್ಟಾರ್ಥವಿತ್ತು |
ಕಾಯೊ ಶರಣನನು ದಯಾಮಯ || ದೇವ || ೧ ||

ಭಾನುಸುತ ವನೌಕಸಾಧಿಪ | ಋಷ್ಯಮೂಕ | ತಾಣವದರೊಳಡಗಿ ಶೋಕಿಪ ||
ಜಾಣ ವಾಲಿಯಣ್ಣನವನ | ರಾಣಿಯ ತಾ ನಿರಿಸಿಕೊಂಡು ||
ಗೋಣ ಮುರಿವೆನೆನುತ ಬೆರಸಿದ | ಮಾತಂಗ ಶಾಪ | ವಾಣಿಗಿಲ್ಲಿ ಬರಲು ಬೆದರಿದ | ಏನೆಂಬೆನಸಮ | ತ್ರಾಣಿಯವನು
ಬವರ ಬಲ್ಲಿದ || ದೇವ || ೨ ||

ದೇವರಾಜನಣುಗನಿದಿರಿಗೆ | ಕಾದಿ ಗೆಲುವ | ನಾವನಿಳೆಯೊಳಿಹನು ಕೇಳ್ ಮಿಗೆ ||
ದೇವ ದಾನವರಲಿ ಕಾಣೆ ರಾವಣನನು ಗೆಲಿದು ಗೆಳೆತ ||
ನಾವಗೈದನೆನಗೆ ಮಿಕ್ಕಿಹ | ಮಾತೇಕೆ ಸು | ಗ್ರೀವ ನಿನ್ನ ಮರೆಯ ಹೊಕ್ಕಿಹ |
ಕರೆಯಲೆನ್ನ | ದೇವ ನಿನ್ನ ಸರಿಸಕಟ್ಟಿಹ || ದೇವ || ೩ ||

ಬಪ್ಪುದೆನುತ ಪೆಗಲನೇರಿಸಿ | ಜವದೊಳೊಡೆಯ |
ನಿಪ್ಪ ಗಿರಿಗೆ ವೈದು ಕಾಣಿಸಿ ಮುಪ್ಪುರಾರಿ ಮಿತ್ರನಿರವ | ತಪ್ಪದೊಂದನುಸುರಲಿನಜ ||
ಸರ್ಪಶಯನನಡಿಯೊಳೆರಗುತ | ದೈನ್ಯದಿಂದ | ಲಪ್ರಮೇಯ ರಕ್ಷಿಸೆನ್ನುತ |
ಮರುಗಿ ಮನದೊ | ಳಿಪ್ಪ ಬವಣೆಯಲ್ಲ ತಿಳುಹುತ || ದೇವ || ೪ ||

**ರಾಗ ಕಾಂಬೋಧಿ ಝಂಪೆತಾಳ**

ಭಕ್ತವತ್ಸಲ ಕೇಳು | ಮತ್ತನಗ್ರಜನೆನ್ನ | ಮಿತ್ರೆಯನು ತಾನಿರಿಸಿ ಕೊಂಡು ||
ಕತ್ತ ಮುರಿವನು ದೇವ | ಧೂರ್ತನನು ತರಿದು ತನ | ಗಿತ್ತೆ ಯಾದರೆ ರುಮೆಯನೆಂದೂ || ೧ ||

ಮರೆಯೆನುಪಕಾರವನ | ವರತ ಕಪಿಬಲ ಸಹಿತ | ಚರಣ ಸೇವೆಯೊಳಿರ್ಪೆನೀಗ ||
ಅರಿಯೆ ಜೋಡೆಮಗೆ ನಿ | ಷ್ಠುರ ವಾಲಿ ದುರುಳ ದಶ | ಶಿರರಕೃತದಿಂದೆನಲಿಕಾಗ || ೨ ||

ಕಂಡೆನಾದರೆ ಜೀವ | ದಿಂದ ಮರಳುವದುಂಟೆ | ಹಂದೆ ಖಳನೆನುತ ರಾಘವನು ||
ಚಂಡರಿವೆ ರಣಕೆ ದೋ | ರ್ದಂಡ ವಾಲಿಯ ಕರೆವು | ದೆಂದನಲ ಮುಖದಿ ಸಖ್ಯವನು || ೩ ||

**ಭಾಮಿನಿ**

ಹೊಂದುತೊಡನೈತಂದು ಸಂಗರ |
ಕಿಂದ್ರಜನ ಕೂಗಿದನು ರವಿಸುತ |
ಕೊಂದು ಕಳೆವೆನು ಪುರವ ಹೊರವಡು ಭಂಡ ನೀನೆನುತ ||
ಎಂದಡಾ ನುಡಿ ಕೇಳಿ ಗಜಘಟೆ |
ತಂಡದುಲಿ ಗುರಿದೇಳ್ವ ಸುಪ್ತ ಮೃ |
ಗೇಂದ್ರನೆನೆ ಕಿಡಿಗೆದರಿ ಬಂದಿದಿರಾದನಾ ವಾಲಿ || ೧ ||

**ರಾಗ ಶಂಕರಾಭರಣ ಮಟ್ಟೆತಾಳ**

ಎಲವೋ ಹೇಡಿ ನಿಲ್ಲುವೋಡಿ | ತಲೆಯ ಮರೆಸಿ ಬದುಕಿದೆಯಲ |
ಕೊಲುವೆನೀಗ ನಿನ್ನ ಕಾಯ್ವ | ಕಲಿಯದಾವನು || ೧ ||

ಕಲಿಯ ತೋರ್ಪನೆಲವೊ ಕ್ಷಣದೊ | ಳಿಳೆಯ ರುಣವು ಸಂತು ನಿನ್ನ |
ತಲೆಯ ಕಾಯ್ವನೀವುದೆನ್ನ | ಚಲುವ ತರುಣಿಯ || ೨ ||

ತರುಣಿಗಾಗಿ ಬಂದೆ ಭಳಿರೆ | ಅರೆಯ ನಡಚಿ ಗವಿಯೊಳೆನ್ನ |
ತರಿಯ ಬಗೆದ ಪಾಪಿ ಬಿಡೆನು | ಹರಣ ಮಾತ್ರದಿ || ೩ ||

ಹರಣಗೊಂಬ ಭಟನ ಪರಿಯ | ನರಿವೆ ನಿಮಿಷತಾಳೆನುತ್ತ |
ಶಿರಕೆ ಘೋರ ಶಿಲೆಯೊಳಿಡಲು | ತರಣಿ ನಂದನ || ೪ ||

ಕಡುಗಿ ವಾಲಿ ನುಡಿದ ನಿನ್ನ | ಮಡದಿಯೈದೆತನಕೆ ಧಕ್ಕೆ |
ವಡೆವುದೆನುತ ತಡೆದಡಿನಿತು | ಕಡುಹ ತೋರ್ದೆಯ || ೫ ||

**ಭಾಮಿನಿ**

ಎಂದು ಬಂಡೆಯೊಳೆರಗೆ ರವಿಸುತ |
ನೊಂದು ಓಡಿದ ರುಷ್ಯಮೂಕಕೆ |
ಕಂಡು ರಾಘವನಹಿತನ್ಯಾರೆಂದರಿಯದಸ್ತ್ರವನು ||
ಹಿಂದೆಗೆಯೆ ಬೆಂಬೊತ್ತುತಿಂದ್ರಜ |
ಹಂದೆ ತೊಲಗೆಂದನುತಲಾ ಕಿ |
ಷ್ಕಿಂಧೆಗೈದುತ ಮುದದಿ ಹೊಕ್ಕನು ತಾರೆಯಾಲಯವ || ೧ ||

**ವಾರ್ಧಿಕ್ಯ**

ಇತ್ತಲಿವರರಸುತೈತರಲಚ್ಚುತಂಗಿನಜ |
ಮಿತ್ರ ಕುಲಜರು ಕೊಟ್ಟ ಭಾಷೆಗಳುಕುವರಲ್ಲೆ |
ನುತ್ತ ನಂಬಿದು ಶಿರವ ತೆತ್ತೆನೆನೆ ದಾಶರಥಿ ಮಿತ್ರನಂ ಸಂತೈಸುತ ||
ಇತ್ತ ಕೇಳೈ ನಿಮ್ಮೊಳಾಳು ಭೇದವ ಕಾಣ |
ದೆತ್ತಿದಸ್ತ್ರವ ನಿಳುಹಿದೆನು ಸಟೆಯ ಮಾತಲ್ಲೆ |
ನುತ್ತವನ ಗಳಕೆ ನಿಜ ಕೊರಳ ಮಾಲೆಯ ತೊಡಿಸಿ ಮತ್ತೆ ಕರೆಯೆನೆ ಧೈರ್ಯವ || ೧ ||

**ಭಾಮಿನಿ**

ತಾಳಿ ಪುರಬಾಹ್ಯದೊಳು ನಿಲುತತಿ |
ಖೂಳ ಬಾರೆಂದುರವಣಿಸೆ ಬಲ |
ಶಾಲಿ ಸತಿಯೊಳು ಸರಸ ಕೇಳಿಯೊಳಿರ್ಪನಾ ವಾಲಿ ||
ಕೇಳಿ ಕಿಡಿ ಕಿಡಿಯಾಗಿ ಕಲ್ಪದ |
ಕಾಲಭೈರವನಂತೆ ಭೋರ್ಗರೆ |
ದೇಳಲಾತನ ತಡೆದು ನುಡಿದಳು ತಾರೆ ಕಾಲ್ಪಿಡಿದು || ೧ ||

**ರಾಗ ಕಾಂಬೋಧಿ ಏಕತಾಳ**

ಲಾಲಿಸೆನ್ನ ನುಡಿಯ ದಯದಿ | ಪ್ರಾಣಕಾಂತ ||
ಸಮರ | ಶೀಲವಲ್ಲ ಸೋದರನಲಿ | ಪ್ರಾಣಕಾಂತ || ಪಲ್ಲ ||

ತಪ್ಪೆನುತ್ತ ಕೊಲುವರುಂಟೆ | ಪ್ರಾಣಕಾಂತ ||
ಪ್ರಾಜ್ಞ | ರಪ್ಪ ಹಿರಿಯರಣುಗರಹರ | ಪ್ರಾಣಕಾಂತ || ೧ ||

ಹಿಂದಣ ಸ್ನೇಹವನೆಣಿಸು | ಪ್ರಾಣಕಾಂತ ||
ಗೈದು | ದೊಂದಪರಾಧವ ಕ್ಷಮಿಸು | ಪ್ರಾಣಕಾಂತ || ೨ ||

ಸರುವಥಾ ಬೇಡಿಂದು ಸಮರ | ಪ್ರಾಣಕಾಂತ ||
ಹರಿಯ | ನೆರವ ಪಡೆದನಂತೆ ರವಿಜ | ಪ್ರಾಣಕಾಂತ || ೩ ||

**ರಾಗ ಭೈರವಿ ಏಕತಾಳ**

ತಿಳುಹಿಸಲೇಕದನೆಲೆಗೆ | ಮನ | ವಳುಕುವದೆನಗೊಳಗೊಳಗೆ ||
ತಿಳಿಯದದರ ಮತಿ ಮೂಢ | ಘನ | ಮುಳಿಸನೆ ಕೆಣಕುವ ನೋಡ || ೧ ||

ಮಂದ ಮತಿಯ ತಹೆನೆಳೆದು | ಕೊಲೆ | ನೆಂದೆಂದಿಗು ದಿಟ ಮುಳಿದು ||
ಇಂದು ರುಮೆಯ ಸಿಂಗರಿಸು | ಬಲು | ಚಂದದೊಳೌತಣ ಬಡಿಸು || ೨ ||

ಜಡಜಾಸನ ಹರಿ ಹರರು | ಮೇಣ್ ತ್ರಿದಶ ಭುಜಗ ನರ ಖಳರು ||
ಇದಿರಾಂತರೆ ನಾ ಗೆಲುವೆ | ನೀ | ಬೆದರದಿರದಕೆಲೆ ಚಲುವೆ || ೩ ||

**ಭಾಮಿನಿ**

ಎಂದವಳ ಸಂತೈಸಿ ಪುಟನೆಗೆ |
ದಿಂದ್ರಸುತ ಪ್ರೋಲ್ಲಾಸದಿಂ ಬರೆ |
ಕಂಡಿನಜ ಗಿರಿ ತರುನಿಕಾಯಗಳಿಂದಲತಿಜವದಿ ||
ಮಂಡೆಗೆರಗಲು ವಾಲಿಯದ ಸೆಡೆ |
ಚಂಡನಾಡುತ ಪಿಡಿದು ಸಹಜನ |
ಕೊಂಡು ಮರಳಲು ಪುರಕೆ ಕೆಲದಿಂದೆಚ್ಚನಾ ರಾಮ || ೧ ||

**ವಾರ್ಧಿಕ್ಯ**

ಬಿದ್ದನಾಹತಿಗೆ ಕಲ್ಪದ್ರುಮಂ ಕೆಡೆದುದೆನ |
ಲುದ್ಧತ ಪರಾಕ್ರಮಂ ಗದ್ಗದಿಸಿ ಸುಗ್ರೀವ |
ಮುದ್ದಿಸಿದ ಕೈಗಳಂ ಛಿದ್ರಿಸಿದೆಯೆನುತ ಕೆಲಕಿದ್ದ ರಘುಜನ ಕಾಣುತ ||
ಶುದ್ಧ ಮನದಿಂದ ತಮ್ಮನ ಕೊಂಡು ತಾನೆಲ |
ಕ್ಕೆದ್ದವನ ಕದ್ದೆಚ್ಚ ಕೊಳೆಮಾಳ್ಕೆ ಹೊಲೆಬಾಳ್ಕೆ |
ವಿದ್ಯೆ ಕಲಿತೆಯದೆಲ್ಲಿ ರವಿಕುಲಜ ಸುಡುನಿನ್ನ ಬುದ್ಧಿ ಬಲ ಶೌರ್ಯಗಳನು || ೧ ||

**ಭಾಮಿನಿ**

ರೂಢಿ ಪಟ್ಟಕೆ ಸಲ್ಲದಲೆ ಹೋ |
ಗಾಡಿದಬಲೆಯ ಬಯಕೆಗೀ ಹೊಲೆ |
ಹೇಡಿ ಕೊಲೆಯೇ ನಿನಗಿವನು ದಶಮುಖನ ನಿಗ್ರಹಕೆ ||
ಜೋಡಿಯೇ ನಾ ಲೀಲೆಯಲಿ ಕೈ |
ಗೂಡಿಸುವ ಹುಲುಗೆಲಸ ಮೂರ್ಖರಿ |
ಗಾಡಿ ಫಲವೇನಿದು ಭಗೀರಥ ಯತ್ನನಿಮಗೆಂದ || ೧ ||

**ರಾಗ ಭೈರವಿ ಝಂಪೆತಾಳ**

ಈಶಸಖ ನಗುತೆಂದ | ಕೀಶವರ ಕೇಳ್ವಿಧಿ ವಿ |
ನ್ಯಾಸವಿದು ಜರೆಯೆಬರು | ವಾ ಸಫಲವೇನು || ೧ ||

ಅರರೆ ನಿನ್ನಯ ಸತಿಯ | ದುರುಳ ದಾನವನೊಯ್ದು |
ದರಿಯೆ ವಿಧಿ ವಿನ್ಯಾಸ | ಮರುಗಲೇಕದಕೆ || ೨ ||

ನಿನ್ನ ವಿಧಿಯಾಯ್ತು ರುಮೆ | ಯನ್ನಳುಪಿ ಖಳನ ವಿಧಿ |
ಮಣ್ಣ ಮುಕ್ಕಿಪುದು ಪರ | ಹೆಣ್ಣಿನೊಡಲುರಿಯು || ೩ ||

ನಡೆಸಿದಪರಾಧಗಳ | ನಡಗಿಸುವಡೀ ಪಳಿವೆ |
ಪಡೆದ ಸುತೆ ರುಮೆ ಸಾಕ್ಷಿ | ಜಡಜಮುಖಿ ತಾರೆ || ೪ ||

ಅರಿಯದಾದೆನೆನುತ್ತ | ಮರುಗಲಿನಸುತ ವಿಧಿಯ |
ತರಳ ವಾಲಿಯೊಳನೃತ | ಬರದು ದಿಟವೆಂದ || ೫ ||

**ಭಾಮಿನಿ**

ನೊಂದು ರಘುವರನೆಂದ ವಿಧಿ ನಿನ |
ಗೆಂದ ವರವೇ ಶಾಪವಾಯ್ತದ |
ರಿಂದ ಮರೆಗೊಂಡೆಚ್ಚೆ ಕ್ಷಮಿಸೆಲೆ ವೀರ ಮತ್ಶರವ ||
ಹಿಂದೆ ಕರೆವೆನು ಸಹಜನೊಡನಾ |
ನಂದದಿಂ ಬಾಳೆನಲು ಚಿತ್ತದಿ |
ಮಂದರಾಧರನಸಮ ರೂಪವ ಕಾಣುತಾ ವಾಲಿ || ೧ ||

**ರಾಗ ಮಧು ಮಾಧವಿ ಆದಿತಾಳ**

ರಾಘವೇಶ್ವರ | ಪಾಹಿ ಗೋವಿಂದ | ನಾಗಶಯನ ಮುಕ್ತಿ | ದೇಹಿ ಮುಕುಂದ || ಪಲ್ಲ ||

ಅರಿತೆ ನೀನ್ಯಾರೆಂಬ | ಪರಿಯ ಲೋಕೇಶ | ಹರಿದುದಸ್ತ್ರದಲಿ ದು | ರ್ಧರ ಭವಪಾಶ ||
ಧರೆಯೊಳಾನಿರಲಾರೆ | ಕರುಣಿಸು ಮೋಕ್ಷ | ದುರಿತ ಭಂಜನ ದೇವ | ದುರ್ಜನ ಶಿಕ್ಷ || ೧ ||
ನೀ ಸತ್ಯವ್ರತನಹು | ದೆನ್ನಹಂಕೃತಿಯು | ಘಾಸಿ ಮಾಡಿದುದಜ್ಞಾ | ನದ ನಿಂದ್ಯ ಸ್ತುತಿಯು ||
ದೋಷ ಶತವ ಮರೆ | ದಿತ್ತು ಸಾಯುಜ್ಯ | ಓ ಸರ್ವಾತ್ಮಕ ಪಾಲಿ | ಸಾದ್ಯಂತ ವರ್ಜ್ಯ || ೨ ||
ಬಾ ತಮ್ಮ ಸುಗ್ರೀವ | ಜಾತನಂಗದನ | ಪ್ರೀತಿಯಿಂ ಪೊರೆ ಮರೆ | ನಾಗೈದ ಹದನ ||
ಆ ತಾರೆ ಹದಿಬದೆ | ತನವ ಕಾಯೆಂದು | ಸೀತಾರಾಮನ ಪದ | ವನು ಸೇರ್ದನಂದು || ೩ ||

**ಭಾಮಿನಿ**

ಮರುಗಿ ಮುಡಿಯಡಿಗಿಟ್ಟ ತಾರೆಯ |
ಧರಣಿಪತಿ ಸಂತೈಸಿ ನಿನ್ನನು |
ಸ್ಮರಿಪ ಮನುಜರ ದುರಿತ ಹರಿದಪುದೆನುತ ವರವಿತ್ತು ||
ತಿರೆಯನಿನ ಸುತಗಿತ್ತು ವರ್ಷೋ |
ತ್ತರಣ ಗೈದನು ಶ್ರವಣಗಿರಿಯಲಿ |
ಹರಿಗಳೆಪ್ಪತ್ತೇಳು ಕೋಟಿಯ ನೆರಹಿ ಖಗಜಾತ || ೧ ||

**ವಾರ್ಧಿಕ್ಯ**

ಸಂಗಡಿಸಿ ಬಂದು ಕಾಣಿಸಿ ರಾಘವಗೆ ಪರಿಚ |
ಯಂಗೊಳಿಸಿ ನೇಮವಾಂತಂಗದಗೆ ಮೂಲಬಲ |
ಮಂ ಗೊಂಡು ನಳ ನೀಲ ಮೈಂದ ಮಾರುತಿ ಜಾಂಬವಂ ಗವಯ ಮುಖ್ಯರೊಡನೆ ||
ಹಿಂಗದರಸೈತೆಂಕನುಳಿದವರು ಮಿಕ್ಕಿಹ ದಿ |
ಶಂಗಳೋಳ್ ಜಾನಕಿಯ ಹುಡುಕಿ ವಾರ್ತೆಯನವಧಿ |
ತಿಂಗಳದಿ ತಾರದಿರೆ ಕೊಂದು ಬಿಸುಡುವೆನೆನಲ ವಂಗೆರಗಿಬೀಳ್ಕೊಳ್ಳುತ || ೧ ||

**ಭಾಮಿನಿ**

ಬಂದು ಭೂಪತಿಗೆರಗಲವದಿರ | ಚಂದದಿಂ ಬೀಳ್ಕೊಟ್ಟು ಹನುಮಂ |
ಗೆಂದನೇಕಾಂತದಲಿ ರಘುವರ ಜಾನಕಿಯ ಕುರುಹ ||
ತಂದೆಯಾದರೆ ನೀನೆ ವಾರ್ತೆಯ | ನೆಂದು ಮುದ್ರಿಕೆಯೀಯೆ ಪೊಡಮಡು |
ತಂದು ತೆರಳಿದರವರವರು ನಿರ್ದಿಷ್ಟ ದೆಸೆಗಾಗಿ || ೧ ||

**ರಾಗ ಪಂತುವರಾಳಿ ಮಟ್ಟೆತಾಳ**

ಪೊರಟರಾ ವನೌಕಸೇಂದ್ರರು | ಹರುಷ ಮಿಗಿಲು | ಪೊರಟರಾವನೌಕಸೇಂದ್ರರು || ಪಲ್ಲ ||
ಪೊರಟರಾ ವನೌಕಸೇಂದ್ರ | ರಿರದೆ ಮಾತೆ ಸೀತೆಯರಸಿ |
ಸರಸದಿಂ ಚತುರ್ದೆಸೆಯಲಿ | ಹರಿದು ತ್ವರಿತ ಗಮನದಿಂದ || ಅ.ಪ ||

ಧರೆಯ ಚರಿಸಿ ದಣಿದು ರಜತ | ಗಿರಿಯ ಸತ್ಯ ಸ್ವರ್ಗಲೋಕ |
ವರಸಿ ಮರಳಿ ಭೂಮಿಗಿಳಿದು | ಭರದೊಳೊಂದು ಗೌಹರವನು ||
ಪರಿಕಿಸುತ್ತಲೆಲ್ಲರಿಳಿದರು | ಸ್ವಯಂ ಪ್ರಭೆಯೋ | ಳರಿವುತಾಗಲಿಳೆಗೆ ಬಂದರು |
ಸಂಪಾತಿಯಿರ್ಪ | ವರ ಮಹೇಂದ್ರಾಚಲದಿ ಸೇರ್ದರು || ಪೊರಟ || ೧ ||

**ರಾಗ ತುಜಾವಂತು ಝಂಪೆತಾಳ**

ಮರುಗುತಂಗದನೆಂದ | ಬರಿದೆ ಕಪಿವರರು | ಧರಣಿಜೆಯನರಸಿ ಬಳ | ಲಿದಿರೆ ಬಲ್ಲಿದರು ||
ದುರುಳ ರಾವಣನಿರವ | ನೊರೆವರಾರಿಲ್ಲ | ವರರಾಮಕಾರ್ಯಕಂ | ತರವೊದಗಿತಲ್ಲ || ೧ ||

ಪೇಳಿದವಧಿಗೆ ದಿವಸ | ಮೇಲೆ ಮೂರಿಹುದು | ಪೇಳದಿರೆ ಕುರುಹ ಕಡೆ | ಗಾಲವೆಮಗಹುದು ||
ಮಾಲೋಲ ಸತಿದೊರಕೆ | ಳಾಲಸ್ಯವೇಕೆ | ತಾಳಿ ನಿರಶನ ವ್ರತವ | ಬಾಳನೀಗಲಿಕೆ || ೨ ||

ಪರರೊಳಳಿವುದಕಿಂತ | ಹರಿಯ ಧ್ಯಾನದಲಿ | ತೊರೆವುದೊಳ್ಳಿತು ನಾವೆ | ಹರಣವೆನೆ ಕೇಳಿ ||
ಕರುಣದಿಂ ಸಂಪಾತಿ | ಕರೆದವರೊಳೆಂದ | ಅರುಹಿ ದೇಹತ್ಯಾಗ | ದಿರವ ಜವದಿಂದ || ૩ ||

**ಭಾಮಿನಿ**

ಎನಲು ಜಾಂಬವನೆಂದ ಪಿತನ |
ಪ್ಪಣೆಗೆ ರಘುವರ ಪಂಚವಟ್ಯದ |
ವನದೊಳಿರೆ ತತ್ಸತಿಯ ದಶಗಳನೊಯ್ಯಲಾತನಲಿ ||
ಸೆಣಸಿ ಮಡಿವ ಜಟಾಯು ಪೇಳಿದ |
ಡಿನಜನಲ್ಲಿಗೆ ಬರಲು ಸಖ್ಯದಿ |
ಜನಕಜಾನ್ವೇಷಣಕೆ ನೃಪನೆಮಗಿತ್ತನಾಣತಿಯ || ೧ ||

**ರಾಗ ಕೇತಾರಗೌಳ ಅಷ್ಟತಾಳ**

ಪಂಕಜಾಕ್ಷಿಯ ಬಲು | ಬಿಂಕದೊಳರಸುತ್ತ | ಲಂಕೆಯ ನೆಲೆಗಾಣದೆ ||
ಮಂಕುವಡೆದು ದೇಹಾ | ತಂಕ ಯೋಚನೆಯುತ | ವಾಂಕಿತ ವೆನಬಾರದೆ || ೧ ||

ಜನಕ ನರುಣಶ್ಯೇನಿ | ಜನನಿ ಸಂಪಾತಿ ಯ | ನ್ನನುಜನಾತನೆ ಜಟಾಯು ||
ದನುಜ ಯೋಜನ ಶತ | ವನಧಿಯಾಚೆಯೊಳಿಹ | ಕನಕ ಲಂಕೆಯೆ ಮನೆಯು || ೨ ||

ಎಂದ ಮಾತ್ರದಿ ಬೆಂದ | ಗರಿಗಳುದ್ಭವಿಸಲು | ಬಂದು ಶೈಲಾಗ್ರದಲಿ ||
ನಿಂದು ತೋರಿದನಿವ | ರಿಗೆ ಲಂಕಾದ್ವೀಪವ | ನಂದು ಸರಾಗದಲಿ || ೩ ||

ಕಂಡು ಮಹಾಂಬುಧಿ | ಯನು ಮಿಕ್ಕವರು ಹತ್ತ | ರಿಂದ ಯೋಜನ ತೊಂಭತ್ತ ||
ಚಂದದಿಂ ಜಿಗಿವೆವೆಂ | ದೆನೆ ವಾಲಿಸುತ ಶತ | ವಿಂದು ಲಂಘಿಸುವೆ ಮಾತ್ರ || ೪ ||

ತಿರುಗುವದನುಮಾನ | ವೆನೆ ಜಾಂಬವನು ವಾಯು | ತರಳನನೀಕ್ಷಿಸುತ ||
ಸರಿ ವೀರ ನೀನಲ್ಲ | ದಿಲ್ಲ ನಿಶ್ಚಯವೆನೆ | ಮರುತಾತ್ಮಭವನುಬ್ಬುತ

**ವಾರ್ಧಿಕ್ಯ**

ಅರ್ಗಳದ ಹನುಮನುಬ್ಬೇರಿದಂ ಸಾರಿದಂ |
ಪೆರ್ಗಡಲ ದಾಂಟಿ ಕಂಡಾರ್ತೆಯಂ ವಾರ್ತೆಯಂ |
ನುಗ್ಗಿಡಿಪೆ ನಿಮಗೆ ಮಗುಳೆನ್ನುತಂ ಸನ್ನುತಂ ಭರ್ಗಾಪ್ತನಂ ನೆನೆವುತಂ ||
ಧಿಗ್ಗನುತ್ತರಿಸಿ ಮುಂಬಟ್ಟೆಯಂ ಹೊಟ್ಟೆಯಂ |
ನುಗ್ಗಿ ಸಿಂಹಿಕೆಯ ತರಿದೊಟ್ಟುತಂ ಮೆಟ್ಟಿತಂ |
ಒಗ್ಗಿ ಬೀಳ್ಕೊಂಡು ಮೈನಾಕವಂ ಮೇಕವಂ ನಿರ್ಗಮಿಸಿದಂ ಲಂಕೆಗೆ || ೧ ||

**ಭಾಮಿನಿ**

ಇಳಿದು ಭೇದಿಸಿ ದ್ವಾರ ಯಂತ್ರವ |
ಒಳ ಪೋಗಲು ಮಾರುತಿಯ ಕಾಣುತ |
ಮುಳಿದು ಲಂಕಾಲಕ್ಷ್ಮಿ ತಡೆದಳು ಘೋರ ರೂಪಿನಲಿ ||
ಎಲವೊ ಕೋಡಗ ಜೀವದಾಸೆಯ |

ನುಳಿದು ಕಳವಿಂದೆಮ್ಮ ನಗರದಿ |
ಚಲಿಸುತಿಹೆ ಸರಿನಿಶಿಯೊಳಟ್ಟಿದರಾರು ಪೆಸರೇನು || ೧ ||

**ರಾಗ ಘಂಟಾರವ ಅಷ್ಟತಾಳ**

ಕಳ್ಳನಲ್ಲಂಜನಾ ಸುತ ಹನುಮ ನಾ |
ಫುಲ್ಲನಾಭನ ಚರಣ ಸೇವಕ | ಖುಲ್ಲೆ ನೀನ್ಯಾರರುಹಿಸು || ೧ ||

ಲಂಕೆಯನ್ನಂಗೋಪಾಂಗ ಲಂಕಿನಿಯೆಂಬ ||
ರ್ಮಂಕು ಮರ್ಕಟ ಸಾಯದಿರು ನಡೆ | ಬಿಂಕ ನಡೆಯದು ನಮ್ಮಲ್ಲಿ || ೨ ||

ಒಳ್ಳೆ ಮಾತಿಲಿ ಬಿಡು ದ್ವಾರ ತಡೆಯೆ ಹೆಂ ||
ಗಳ್ಳನಿಂ ಮೊದಲಲ್ಲಿ ನಾಯಮ | ನಲ್ಲಿಗಟ್ಟುವೆ ನಿನ್ನನು || ೩ ||

ಕರುಳ ಬೆನ್ನಿನೊಳುಗಿವೆ ನೋಡೆನುತವ |
ಳೆರಗಲಸಿಯನು ಕಸಿದು ಮುಷ್ಟಿಯೊ | ಳೆರಗಿದನು ನಡು ಶಿರದೊಳು || ೪ ||

ಫಡ ವನೌಕಸ ಕಡೆಗಾಲ ಸನಿಹವೆಂ ||
ದಿಡಲು ಶೂಲವ ಮುರಿದದರ ಮು | ಕ್ಕಡಿಯ ಗೈದನು ಮರುತಜ || ೫ ||

**ಭಾಮಿನಿ**

ವೇದ್ಯವಿದು ಕಡೆಗಾಲವೀ ದು |
ರ್ಭೇದ್ಯ ಶೂಲವು ಮುರಿದುದಿನ್ನಿ |
ಲ್ಲಿರ್ದು ಫಲವಿಲ್ಲೆನುತ ಲಂಕಾ ಭಾಗ್ಯಸಿರಿಯಡೆಗೆ ||
ಸೇರ್ದು ಸೂಕ್ಷ್ಮಾ ಕೃತಿಯ ಗೃಹ ಸ |
ಮ್ಮರ್ದದಲಿ ಶೋಧಿಸುತ ಸತಿ ಸಹಿ |
ತಿರ್ದು ನಿದ್ರಿಪ ರಾವಣೇಂದ್ರನ ಕಂಡನಾ ಹನುಮ || ೧ ||

**ಕಂದ ಪದ್ಯ**

ಚಲುವೆಯ ಕಂಡಚ್ಚರಿಯಿಂ | ಖಳನಿವನಂ ಮಾಸತಿಯೊಲಿದಳೆ ಹಾ ಹಾಯೆನುತಂ ||
ಕೊಲುವೆನು ತಾನೆನಲಿವನಂ | ಜಲಜಾಕ್ಷನದೇಂ ಪೇಳ್ವನೊ ಮುಳಿದೆನ್ನೊಡೆಯಂ || ೧ ||

**ವಾರ್ಧಿಕ್ಯ**

ಎಚ್ಚರದಿ ಸ್ಮರಿಸಿ ಮಗುಳೀಕ್ಷಿಸುತ ಬಲತೊಡೆಯ |
ಮಚ್ಚಲಾಂಚನವಿಲ್ಲ ಪದುಮ ರೇಖೆಯ ಪದದಿ |
ಸ್ವಚ್ಛಾಂಗಿಯಲಿ ಕಾಣೆ ಶಿವಶಿವಾ ಕೆಡು ನುಡಿದೆನಚ್ಚುತನ ಸತಿಗೆನ್ನುತ ||

ಬೆಚ್ಚಿ ಭಕ್ತಿಯಲಿ ಬಾಹೊಯ್ದುಕೊಳುತಲ್ಲಿಂದ |
ಚಚ್ಚರದಿ ಪೊರಟಶೋಕಾವನಕ್ಕೈತಂದು |
ಸಚ್ಚರಿತ್ರೆಯ ಕಂಡು ಮರನೊಳಡಗಿರೆ ಸೀತೆಗುಚ್ಚರಿಸಿದರ್ ಖಳೆಯರು ||

**ರಾಗ ಯರಕಲ ಕಾಂಬೋಧಿ, ಅಷ್ಟತಾಳ**

ಏನು ಸಂದೇಹವೆ | ಜಾನಕಿ ಮಗು | ಳೇನು ಸಂಶಯವೆ || ಪಲ್ಲ ||

ಏನು ಸಂಶಯ ನೋಡೆ | ದಾನವೇಂದ್ರನ ಕೂಡೆ |
ಕ್ಷೋಣಿಯೊಳೆಗಾಣೆವು || ನಿಶ್ಚಯವು || ಏನು || ಅ.ಪ ||

ರಾವಣೇಂದ್ರನಂಥ | ವೈಭವಗಳು | ಮಾವರಗಿಲ್ಲ ನಿತ್ಯ ||
ದೇವ ದಾನವ ಭುಜ | ಗಾವಳಿ ಬೆಸಕೈವು | ದಾವವನೆಣೆ ಜಗದಿ ||
ಐಶ್ವರ್ಯದಿ || ಏನು || ೧ ||

ವೃತ್ರ ವೈರಿಯನು | ಗೆದ್ದವಸುತ | ಶತ್ರು ಭೈರವನು ||
ಒತ್ತಿನನುಜ ದಿನ | ನಿತ್ಯಯ ದೇವಾಂಗನ | ಮೊತ್ತ ಸೇವಿಪುದು ನಿನ್ನ ||
ಮಾಳ್ಪುದು ಮನ || ಏನು || ೨ ||

ಏಕೆ ಬಗುಳುವಿರೆ | ಕುನ್ನಿಯನೆನ್ನೊ | ಳ್ಯಾಕೆ ಪೊಗಳುವಿರೆ ||
ಆ ಕಮಲಾಂಬಕ | ನಾ ಕಡೆಗೂದಲಿ | ಗೀಖಳನಿದಿರೆ ಮುಂತೆ ||
ಎಂದಾ ಸೀತೆ || ಏಕೆ || ೩ ||

**ಭಾಮಿನಿ**

ಪ್ರೀತನೈತಂದೀದುರಾತ್ಮನ |
ಘಾತಿಸದೆ ಬಿಡನಾದರೀಯಮ |
ಯಾತನೆಗೆ ಬದಲಳಿದು ಕಾಂಬುದೆ ಲೇಸು ಪತಿ ಪದವ ||
ನಾಥನೆಂದಿಗೆ ಬಹನೊತಾನೆಂ |
ದಾತಳೊದರಿ ಹಲುಬುತಿರೆ ನೀ |
ದ್ರಾತಿಶಯದಿಂ ಖಳೆಯರೊರಗಲು ವಾತಸುತ ಮನದಿ || ೧ ||

**ಕಂದ ಪದ್ಯ**

ಇವಳೇ ಮಾಸತಿ ತ್ರಿಜಗ |
ಕ್ಕಿವಳೇ ಮಾತೆ ಸೀತೆ ಪೂತೆ ರಾಘವದಯಿತೆ ||
ಇವಳಂ ಪಡೆದವರೇಂ ಪು |
ಣ್ಯವ ಗೈದರೊ ನಾಂ ಕಂಡು ಧನ್ಯನೆನುತ್ತಡಿ ಗೆಡೆದಂ || ೧ ||

**ರಾಗ ತೋಡಿ ಆದಿತಾಳ**

ಜಯ ಜಯ ಜನಕ ಜಾತೆ | ಓ ಮಾತೆ ಸೀತೆ | ಜಯತು ಶ್ರೀ ಹರಿ ವನಿತೆ  || ಪಲ್ಲ ||

ಜಯ ಕ್ಷೀರನಿಧಿ ವಾಸೆ | ಜಯತು ಸಜ್ಜನ ಪೋಷೆ || ಜಯ ಪದ್ಮಾಕರೆ |
ಜಯ ಸಿದ್ಧಿಪ್ರದೆ | ಜಯ ಸುಖದಾತೆ | ಜಯ ಜಗವಿನುತೆ || ಜಯ ಜಯ  || ಅ.ಪ. ||

ಪ್ರಾಣ ಸನ್ನಿಭ ಮಾರುತ | ಪೆತ್ತಾತ ಮುಖ್ಯ | ಪ್ರಾಣ ನಾ ಚರಣಾನತ ||
ಕೌಣಪಾಧಮ ನಿನ್ನ | ತಾನೊಯ್ದುದನು ಖಿನ್ನ ಪ್ರಾಣದೊಳಿಹ ಖಗ |
ಶ್ಯೇನಿಜನರುಹಲು | ಪ್ರಾಣದೊಡೆಯ ನೆಲೆ | ಗಾಣಲ್ಕಟ್ಟಿದ ||
ಜಯ ಜಯ       || ೧ ||

ಹುಡುಕಿ ನಾವ್ ಬಹು ಪರಿಯ ಸೇರ್ದೆವು ತೆಂಕ | ಜಡಧಿಯಂಚಿನ ಗಿರಿಯ ||
ನುಡಿಯೆ ಸಂಪಾತಿಯೀ | ಕಡಲ ಲಂಘಿಸಿ ತಾಯಿ ||
ಯಡಿಗಳನೀಕ್ಷಿಸಿ | ಕಡುಧನ್ಯನುಹುಸಿ | ನುಡಿಯೆನು ಮುದ್ರಿಕೆ |
ಯೊಡೆಯನದಿದೆಕೊ ||     || ೨ ||

**ಭಾಮಿನಿ**

ಕಂದೆರದು ಕಮಲಾಕ್ಷಿಕೊಂಡದ |
ಕುಂದಿದಾತ್ಮವ ಹೊಂದುತತುಲಾ |
ನಂದದಿಂ ಪಣೆಗೊತ್ತಿ ಮುದ್ದಿಸುತಂಗುಳೀಯಕವ ||
ಚಂದವೇನ್ಯೆ ಹನುಮಸರುವರಿ |
ಗೆಂದಿಗಿನಿಯನ ಕಾಂಬೆ ದಿನ ದಿನ |
ಬಂದು ದಾನವನೀವ ನಿರ್ಬಂಧವದನೆಂತೆನಲಿ        || ೧ ||

**ರಾಗ ಕಾಂಬೋಧಿ  ಝಂಪೆತಾಳ**

ಅನಲಾರೆನು ವ್ಯಥೆಯ | ಕೌಣಪನ ವಧಿಸಿ ಪ್ರಿಯ | ತಾನೆನ್ನ ಬಿಡಿಸದಿರೆ ಸೆರೆಯ ||
ಪ್ರಾಣಗಳೆವೆನು ಮರೆಯ | ದಾನರಾಧಿಪಗುಸುರು | ನೀನೆನುತ ಕೊಡೆ ಶಿಖಾಮಣಿಯ       || ೧ ||

ಕೊಂಡು ಬಲಬಂದೆರಗಿ | ಮುಂದೆ ದಿನವೆಂಟರಲಿ | ತಂದೆ ರಾಘವನ ಕರೆತಂದು ||
ಹಂದೆಗಳ ಮಡುಹಿ ತವ | ಬಂಧನವ ಬಿಡಿಸದಿರೆ | ಸಿಂಧುಶಯ ಭಜಕನಲ್ಲೆಂದು    || ೨ ||

ನಂದನವ ಪುಡಿಗೈದ | ಬಂದು ರಣಕಡಹಾಯ್ದ | ಕಂದನಕ್ಷಾದಿಗಳ ತರಿದ ||
ಇಂದ್ರಜಿತು ಕೆರಳಿ ನಡೆ | ತಂದು ಬ್ರಹ್ಮಾಸ್ತ್ರದಿಂ | ಬಂಧಿಸುತ ಪಿತನೆಡೆಗೆ ಸರಿದ   || ೩ ||

**ಭಾಮಿನಿ**

ಅಂದಿನೋಲಗದಿದಿರು ಹನುಮನ |
ತಂದು ನಿಲ್ಲಿಸಿ ಶಕ್ರಜಿತ ಪಿತ |
ಗೆಂದ ನೆಮ್ಮುಪವನವ ಕೆಡಿಸಿದ ಕೋತಿಯಿದೆಯೆನುತ ||
ಕಂಡು ದಶಶಿರ ಹಿರಿದು ಖಡುಗವ |
ಮಂದಮತಿ ಬಗುಳೆಮ್ಮ ತೋಟವ |
ಕುಂದಿಸಿದುದೇಕ್ಯಾವನನುಚರ ನಾಮವೇನೆಂದ || ೧ ||

**ಕಂದ ಪದ್ಯ**

ಅಬ್ಬರಿಸಲ್ ಖಳ ಮರುತಜ |
ನುಬ್ಬುತ ಬಂಧನಮಂ ಬಿಸುಟತ್ಯುಮ್ಮಹದೋಳ್ ||
ಕರ್ಬುರ ಸರಿಗದ್ದುಗೆಯಂ |
ಹೆರ್ಬಾಲದಿ ಗೈದೇರ್ದು ಗಾಂಭೀರ್ಯದೊಳಂ || ೧ ||

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಮಾತೆ ಸೀತೆಯ ಕದ್ದು ದಶಮುಖ | ದಾತನೊಯ್ದನೆನುತ್ತೊಡೆಯ ರಘು ||
ನಾಥನಟ್ಟಿದನರಸುತಿಲ್ಲಿಗೆ | ದೂತ ವಾತಜ ಬಂದೆನು || ೧ ||

ಆವವನು ನೀ ರಜತ ಗಿರಿಯ ಕ | ರಾಮಲಂಬದಿ ನೆಗಹಿದರಿವಿ |
ದ್ರಾವಣನೊ ಹೆಂಗಳ್ಳ ಕಾಮುಕ | ರಾವಣನೊ ಪೇಳೆಂದನು || ೨ ||

ನಾವು ನೀತಿಯನರಿಯೆವಪ್ರತಿ | ಕೋವಿದರು ಪರಚಕ್ರದೂತನ |
ನೀವಿಧದ ಬಂಧಿಸಲು ನ್ಯಾಯವ | ದಾವುದೆಂಬುದ ಕಾಣೆವು || ೩ ||

**ಭಾಮಿನಿ**

ಮಾತ ಕೇಳದೆ ವನವ ಚೂರ್ಣಿಸಿ |
ಯಾತುಧಾನರ ಬಡಿದುದೀ ನಿ |
ರ್ಭೀತವಹ ಲಾಂಗೂಲ ತಾನಪರಾಧಿಯಲ್ಲೆಂದ ||
ಖಾತಿಯಲಿ ದನುಜೇಂದ್ರ ದೋಷಿತ |
ಕೋತಿಯಲ್ಲಹುದಹುದು ಬಾಲಕೆ |
ಸಾತಿಶಯ ತೈಲಾರ್ದ್ರವಸನವ ತೊಡಿಸಿ ಸುಡಿರೆಂದ || ೧ ||

**ವಾರ್ಧಿಕ್ಯ**

ಮತ್ತ ದಾನವ ಸುಭಟರಿಕ್ಕೆಲದಿ ಮರುತಜನ |
ಮುತ್ತಿ ಬಾಲಕೆ ತೈಲ ವಸ್ತ್ರಮಂ ತೊಡಿಸುತುರಿ |
ಹೊತ್ತಿಸಿದ ಮಾತ್ರದೊಳಗೆತ್ತಿ ಬೀಸುತ ಹನುಮಸುತ್ತಣವರಂ ಹೋಮಿಸಿ ||

ಸತ್ವದಿಂ ಜಿಗಿದು ರಾವಣನರ್ಥಭವನಮಂ |
ವಿತ್ತೇಶನಖಿಲ ಸಂಪತ್ತಿನಿಂ ತುಂಬಿ ತುಳು |
ಕುತ್ತಿರುವ ಪುರವ ಸಂಪೂರ್ತಿ ಶಿಖಿಗಾಹುತಿಯ ನಿತ್ತು ಪೃಥ್ವಿಜೆಗೊಂದಿಸಿ ॥ ೧ ॥

**ಭಾಮಿನಿ**

ಹರಿದು ವಾಲದ ಹರಿಯ ನಂದಿಸಿ |
ಹರಿಪದದೊಳಾಗಮಿಸಿ ವಿವರಿಸಿ |
ಹರಿಬಲನೊಡವೆರಸಿ ಹರಿಕುಲ ದೀಪಗಭಿನಮಿಸಿ ||
ಹರಿಯಣುಗ ಚೂಡಾಮಣಿಯ ಶ್ರೀ |
ಹರಿಯ ಪದಕರ್ಪಿಸಲು ಕೊಂಡದ |
ಹರಿಶಯನ ಹರಿದೊಗುವ ಹರಿಸಸ್ಫುರಿತ ಬಾಷ್ಪದಲಿ ॥ ೧ ॥

**ರಾಗ ಸುರಟಿ ಏಕತಾಳ**

ಬಂದಿರೆ ಕಪಿ ವರರು | ಬಹುಪರಿ | ನೊಂದಿರೆ ಬಲ್ಲಿದರು ||
ಮಂದಗಮನೆಯನು | ಸಂಧಿಸಿ ವಾರ್ತೆಯ | ತಂದಿರೆ ರುಣಿಗಳೆಂ | ದೆಂದಿಗು ನಿಮಗಾವ್ ॥ ೧ ॥

ಆಲಿಪುದಿನ ಜಾತ | ಹೃದಯವು | ಸೀಳುವುದೈ ಸೀತಾ ||
ಬಾಲಿಕೆ ದಿನದಿನ | ಖೂಳ ನಿರ್ಬಂಧವ | ತಾಳುವಳೆಂತೈ | ಕಾಲಗಳೆವರೆ ॥ ೨ ॥

ದಾನವನನು ವಧಿಸಿ | ಮತ್ಪ್ರಿಯ | ಮಾನಿನಿಯನು ಬಿಡಿಸಿ ||
ಕ್ಷೋಣಿ ಹೊರೆಯ ಕಡೆ | ಗಾಣಿಪೆನೆನುತ ಮ | ಹಾರ್ಣವಡೆದೆಯೊಳು | ಸೇನೆಯ ನಿಲಿಸಿದ ॥ ೩ ॥

**ಕಂದ ಪದ್ಯ**

ಕಡಲಾಣ್ಮನ ಗರ್ವವನುಂ |
ಅಡಗಿಸಿ ಸೇತುವೆಯನು ಗೈಸುತ್ತಿರಲಾಗಳ್ ||
ಒಡನದನರಿತು ದಶಾನನ |
ನೆಡೆಗೈದೆರಗುತ ಬೇಹಿನ ಚರರತಿಭಯದೊಳ್ ॥ ೧ ॥

**ರಾಗ ಮುಖಾರಿ ಏಕತಾಳ**

ಜೀಯ ಬಿನ್ನಹ ರಾವಣೇಂದ್ರ | ನರ ನಾಗ ಸುರನಿ | ಕಾಯ ಸಂಸ್ತೂಯ ಗುಣಸಾಂದ್ರ ॥ ಪ ||
ರಾಯರಮಲ ಪದ | ತೋಯಜ ಷಟ್ಚರ | ಣಾಯತ ಬೇಹಿನ |
ಸೇವಕರಿದಕೊ ॥ ಜೀಯ ॥ ಅ.ಪ ॥

ಹರಿಗಳೆಪ್ಪತ್ತೇಳು ಕೋಟಿ | ಒಟ್ಟಾಗಿ ತೆಂಕ | ಶರಧಿಯುದ್ಧಕೆ ಸೇತುವೆಗಟ್ಟಿ ||
ತರಣಿಜ ಪಡೆಯಂತುರವಣಿಸುತಲತಿ | ತ್ವರಿತದಿ ಲಂಕೆಗೆ | ಪೊರಟಿಹ ರಘುಜನ |
ತರುಣಿಯನಿತ್ತೆಂ | ಮ್ಮರಣವ ಕಾಯ್ವುದು || ಜೀಯ || ೧ ||

**ಭಾಮಿನಿ**

ಸೀಳಿ ಬೆನ್ನಿಲಿ ತೆಗೆವ ಕರುಳನು |
ಖೂಳರಿರ ಭಯವೇಕೆ ತಾನಿರೆ |
ಕೀಳು ನರ ವಾನರರೊಳೇನಹುದೆನುತ ದಶಗಳನು ||

ಮೂಲಬಲ ಮೇಳವಿಸಿ ಯುದ್ಧಕೆ |
ನಾಳೆ ಪೊರಡುವುದೆನೆ ಪ್ರಹಸ್ತಗೆ |
ಕೇಳುತಂಣನ ಕಾಲಿಗೊಂದಿಸುತಲಿ ವಿಭೀಷಣನು || ೧ ||

**ರಾಗ ಪಂತುವರಾಳಿ ಝಂಪೆತಾಳ**

ಸರುವಥಾ ಬೇಡ ರಘು | ವರನ ವೈರ || ಪಲ್ಲ ||
ತರವಲ್ಲ ಪರನಾರಿ | ಸುರತ ನರಕದ ದಾರಿ || ಸರುವಥಾ || ಅ.ಪ ||

ಧರೆಯ ದೂರನು ಕೇಳಿ | ಹೊರೆಯನಿಳುಹುವ ಮನದಿ |
ನರರೊಳುದಿಸಿದನಿಳೆಗೆ | ಪುರುಷೋತ್ತಮ ||
ಸಿರಿಸತಿಯ ನೆವಮಾಡಿ | ಹರಿಗಳಿಂದೊಡಗೂಡಿ |
ಹರಣಗೊಂಬನು ದನುಜ | ಪರಿವಾರವ || ಸರುವಥಾ || ೧ ||

ಭೂಧರವ ನೆಗಹಿ ಗಿರಿ | ಜಾಧವನ ಮನವಲಸಿ |
ವೇದಭಾಷ್ಯವ ಪ್ರಕಟ | ಗೈದಪ್ರಾಜ್ಞ ||
ಆದಿಲಕ್ಷ್ಮಿಯನಿತ್ತು | ಮಾಧವನ ಪದಕೆರಗ |
ದಾದರಾನಿರೆನಿಲ್ಲಿ | ನೀಡಿಸಾಜ್ಞ || ಸರುವಥಾ || ೩ ||

ಮುಂದೆ ನಿಲದಿರು ತೊಲಗು | ಹಂದೆ ಪರಮಂಡಲವ |
ಕೊಂಡಾಡಿ ಮದ್ಬಲವ | ನಿಂದಿಸುವೆಯ ||
ಎಂದು ರಾವಣ ಕೈದು | ಗೊಂಡಡವ ಕಾಲ್ದೆಗೆದು |
ಬಂದು ರಘುವರಗೆರಗು | ತೆಂದ ಪರಿಯ || ಸರುವಥಾ || ೪ ||

**ರಾಗ ಯಮುನಾ ಕಲ್ಯಾಣಿ ಆದಿತಾಳ**

ಶರಣು ಶರಣು ರಾಘವ | ಜನಾರ್ದನ | ದುರಿತ ಭಂಜನ ಕೇಶವ || ಪಲ್ಲ ||
ಶರಣು ಸುರಾಸುರ | ನರಭುಜಗಾರ್ಚಿತ || ಸಿರಿವರ ವಾರಣ |
ವರದ ವಿಶ್ವೇಶ್ವರ | ಕರುಣದಿ ರಕ್ಷಿಸು | ಶರಣ ಮಂದಾರ || ಶರಣು || ಅ.ಪ. ||

ಚರಣ ನಂಬಿದ ಭಕ್ತರ | ಪೊರೆವುದೆ ನಿನ್ನ | ಬಿರಿದು ಪಾಪಾಸಕ್ತರ ||
ತರಿದು ಭೂಭಾರವ | ಪರಿಹರಿಸಲ್ಕವ ||
ತರಿಸಿದ ಮಾಯಾ | ನರ ಹರಿ ನಿನ್ನನು | ಮರೆಹೊಕ್ಕೆನು ಶಿರ |
ವರಿಯುವನಗ್ರಜ | ಕರುಣದಿ ರಕ್ಷಿಸು | ಹರಣವನುಳುಹಿ || ಶರಣು || ೧ ||

**ಭಾಮಿನಿ**

ಎಂದು ವಂದಿಸಿ ಕರಪುಟಾಂಜಲಿ |
ಯಿಂದ ನಿಂದಿರಲೆರಗಿ ರಘುಪತಿ |
ಗೆಂದನನಿಲಜ ಸಹಜ ವೈಷ್ಣವನಿವನ ಸಲಹೆನುತ ||
ಚಂದದಿಂ ಪಿಡಿದೆತ್ತಿ ರವಿಕುಲ |
ಚಂದ್ರನಭಯವನಿತ್ತು ಶರಣಗೆ |
ಸಿಂಧು ಬಂಧವ ನೋಡಿ ಲಂಕೆಗೆ ಪೊರಟ ಶುಭ ದಿನದಿ || ೧ ||

**ವಾರ್ಧಿಕ್ಯ**

ಚಂದದಿಂ ಕಪಿಸುಭಟವೃಂದ ನೆಗೆದಾರ್ಭಟಿಸಿ |
ದಂಡು ನಡೆವಬ್ಬರಕೆ ಡೆಂಡೆಣಿಸೆ ದಿಗ್ದಂತಿ |
ಕುಂದಿದಂ ಕಮಠ ಗಿರಿ ಕಂದರಗಳಲ್ಲಾಡೆ ಸಿಂಧು ಕುದಿದುಕ್ಕಿತೇಳು ||
ತಂಡ ತಂಡದ ತೆರೆಗಳಂದದಿಂದಾಕಡಲ |
ಬಂಧವಂ ದಾಟಿ ನಡೆತಂದು ತ್ರಿಕುಟಾಚಲವ |
ಹೊಂದಿ ಹೊರವಲಯದೊಳ್ ಗುಂಡಾರ ಹೊಯ್ಸಿ ರಘು ನಂದನಂ ವಾಲಿಸುತಗೆ || ೧ ||

**ಭಾಮಿನಿ**

ತೆರಳಿ ದಶಶಿರನೆಡೆಗೆ ಸಾಮದಿ |
ಧರಣಿಜೆಯನಿತ್ತೆರಗಿ ಸೋದರ |
ಗರಸುಪಟ್ಟವ ಗೈದು ಬಾಳ್ವುದು ಮಿಕ್ಕರಾಹವಕೆ ||
ಪರಿಜನರ ಮೇಳೈಸಿಯಮ್ಮಯ |
ಹೊರೆಗೆ ಬಹುದೆಂದರುಹಿ ಬಾರೆನ |
ಲೆರಗಿ ಬೀಳ್ಕೊಂಡೈದಿ ಕಂಡನು ಪುರದ ವೈಭವವ || ೧ ||

**ಕಂದ ಪದ್ಯ**

ಅರರೇ ಖಳಸಂಸ್ಕೃತಿಯ |
ಚ್ಚರಿಯಂ ಪರ್ಚಿಸುತಿಹುದೈ ಸಿರಿಗೆಣೆಯಿಲ್ಲಿಳೆಯೊಳ್ ||
ವರ ರತ್ನಾಳಿ ಸುವರ್ಣಂ |
ಪೆರತಿರದೀಪುರಗೋಪುರ ನೆಲ ಸೌಧಂಗಳ್ || ೧ ||

**ರಾಗ ಪಂತುವರಾಳಿ ಅಷ್ಟತಾಳ**

ಸಿರಿಯಿದು | ಬಾಳ | ಲರಿದು ನಾಗರಿಕ ವೈ | ಖರಿಯಿದು || ಪಲ್ಲ ||
ಮನ | ಕರಗುವದಿದ ಕಂಡು | ಬರಿದೆ ಯೋಚನೆಯೆಂದು ||
ತೆರಳಿ ಪೊಕ್ಕಾ ರಾವಣೇಂದ್ರನ | ಸರಿಸದಲಿ ನಿಲುತಾಕ್ಷಣ || ಸಿರಿ || ಅ.ಪ ||

ವಾಲದಿ | ಖಳ | ಲೋಲ ಗದ್ದುಗೆಯ ವಿ | ಶಾಲದಿ | ಗೈದು |
ಮೇಲೇರ್ದಾಸನವ ಸ | ಮ್ಮೇಳದಿ | ಸುರ | ಪಾಲನ ಮೊಮ್ಮ ವಾ |
ಚಾಲದಿ | ಪೇಳ್ದ | ಮೇಲುವರಿವ ದೈತ್ಯ | ಜಾಲದಿ || ಅಹ |
ಕೇಳಿ ಬಲ್ಲಿರೆ ಧರ್ಮ | ಶೀಲ ಶ್ರೀರಘುರಾಮ ||
ಪಾಳಯದ ಕಟ್ವಾಳ್ಗಳೊಳು ಬಲ ||
ಶಾಲಿ ವಾಲಿಯ ಬಾಲ ನಾನಹೆ || ಸಿರಿ || ೧ ||

ಬಲ್ಲೆವು | ಕಡು | ಖುಲ್ಲ ಮರ್ತ್ಯನ ಕೃತ್ಯ | ವೆಲ್ಲವು | ಹೆಂಣಿ |
ನಲ್ಲಿ ದುರಾಚಾರವಲ್ಲವು | ಇದಿ | ರಲ್ಲಿ ವಾಲಿಯ ಗೆಲಲಿಲ್ಲವು |
ಜೀವ | ಗಳ್ಳನಿಗೆಣೆ ಯಾವ | ನಿಲ್ಲವು ||
ಬರಿ | ಜಳ್ಳು ಮಾನವನನೆ | ಮ್ಮಲ್ಲಿ ಬಂಣಿಸದಿರು ||
ಹಲ್ಲ ಮುರಿವನು ರಾವಣೇಶ್ವರ | ನಿಲ್ಲಿಸೆಂದ ಪ್ರಹಸ್ತನು || ಸಿರಿ || ೨ ||

ಯಾರಯ್ಯ | ಖಳ ರಾವಣನೆಂಬ ಮಹಾರಾಯ | ಪರ |
ನಾರಿಯ ಕದ್ದ ವಿ | ಚಾರಿಯ | ಜಗ | ಮೂರಕುಬ್ಬಸ ದುಃಖ |
ಕಾರಿಯ | ಕೇಳ್ವ | ಪಾರುಪತ್ಯವನಿತ್ತ | ನಾರಾಯ ||
ರಘು | ವೀರ | ವೀರನಂಗನೆಯಿತ್ತು | ಪೌರುಷಗಳ ಬಿಟ್ಟು ||
ಸೇರಿ ಬಾಳ್ವನೊ ಮೀರಿದರೆ ಘನ | ಘೋರ ಯುದ್ಧವದೋರಿ ಸಾಯ್ವನೊ || ಸಿರಿ || ೩ ||

**ಭಾಮಿನಿ**

ಇಂತೆನಲು ದನುಜೇಂದ್ರ ಬೊಬ್ಬಿರಿ |
ದಂತಕನ ಹೆತ್ತಯ್ಯನೊ ಕ |
ಲ್ಪಾಂತ ವಡಬನೊ ತಿಳಿಯೆನೆನೆ ಖತಿಮಸಗಿ ಕಿಡಿಯಿಡುತ ||
ತುಂಟನನು ಬಂಧಿಸುವುದೆನೆ ಖಳ |
ತಿಂತಿಣಿಯು ಮುಸುಕಲ್ಕೆ ನುಗ್ಗರೆ |
ದಂತರಿಕ್ಷಕೆ ಜಿಗಿದು ಸೇರ್ದನು ಪಡೆಯನಂಗದನು || ೧ ||

**ರಾಗ ಕೇತಾರಗೌಳ ಝಂಪೆತಾಳ**

ಸಂಧಿ ಮುರಿದಿಹ ವಾರ್ತೆಯ | ಕೇಳಿ ರಘು | ನಂದನನು ತಾಳಿ ಖತಿಯ ||
ಕಂಡು ಕಪಿಬಲಕಾಜ್ಞೆಯ | ನಿತ್ತ ಪುರ | ಕಿಂದೆ ಮುತ್ತಿರಿ ಲಗ್ಗೆಯ || ೧ ||

ಅಪ್ಪಣೆಯ ಕೊಂಡೆರಗುತ | ಇನಜ ಮುಂ | ತಪ್ಪ ಭಟರುರಿದೇಳುತ ||
ಅಪ್ಪಳಿಸಿ ಪುರದುರ್ಗವ | ಕೆಡಹಿ ಕಾ | ದಿಪ್ಪ ಸಮ ಖಳ ವರ್ಗವ || ೨ ||

ಮಡುಹಿ ಮುಂದ್ಯೆದುತಿರಲು | ಚಾರರದ | ನುಡಿಯೆ ಹರಿಜಿತನಾಗಳು ||
ಸಿಡಿಲಿನಂತಾರ್ಭಟಿಸುತ | ಕ್ರವ್ಯಾದ | ಪಡೆವೆರೆದು ಪರುಠವಿಸುತ || ೩ ||

**ರಾಗ ಮುಖಾರಿ ಏಕತಾಳ**

ಬಂದನಾ ಶಕ್ರಜಿತನು ರಣಕೆ | ವೈರಿ ಮಾರಣಕೆ | ಬಂದ ನಾ ಶಕ್ರಜಿತನು ರಣಕೆ || ಪಲ್ಲ ||
ತಂಡ ತಂಡದ ಖಳ ಮಂದಿ | ಗಜ ರಥ ಹಯ | ವೃಂದ ಪಾಠಕ ಶಸ್ತ್ರ ಬಂಡಿ ||
ಸಂದಣಿಸುತ ರಣ | ದುಂದುಭಿರವಕೆ ವ | ಸುಂಧರೆಯದುರ | ಲ್ಕಂದು ದಶಾನನ |
ನಂದನನಾಹವ | ಖಂಡಪರಶುವೆನೆ || ಬಂದ || ೧ ||

ಪುರವ ಮುತ್ತಿದ ರಿಪು ಭಟರ | ಚಂಡಾಡುತಸುರ | ತರಳ ಹೊಕ್ಕನು ಕಪಿನಿಕರ ||
ಕರಿ ಕದಳಿಯ ಹಿಂ | ಡರೆವಂದದಿ ಬಡಿ | ದುರುಳಿಸುತಿರಲದ | ನರಿತು ಮಹೋಗ್ರದಿ |
ತರಣಿಜ ತಡೆದ || ಬಂದ || ೨ ||

**ರಾಗ ಶಂಕರಾಭರಣ ಮಟ್ಟೆತಾಳ**

ಹೆಣ್ಣಿನಾಸೆಗಾಗಿ ಮರೆಯೊ | ಳಣ್ಣನಸುವ ಹೀರಿದಧಮ |
ಮಣ್ಣಗೂಡಿಸುವೆನು ವಿಶಿಖ | ಗಂಣ ತಡೆದರು ||
ವನ್ಹಿ ನಯನನೇಕೆ ಪರರ | ಹೆಣ್ಣಿಗಳುಹಿದಸುರನಣುಗ |
ನಿನ್ನ ಕೊಲಲು ರವಿಜಗಗ್ರ | ಗಂಣ್ಯವೆನದಿರು || ೧ ||

ಎನುತ ಭಾರಿ ಶಿಲೆಯೊಳಿಡಲು | ಜುಣುಗುತಸುರ ದಿವ್ಯ ಶರವ |
ನಿನಜನಗಂಗ ಕೆಸೆಯೆ ಮರೆದು | ತನುವ ಮಲಗಿದ ||
ಜನಕನಿರವ ಕಂಡು ವಾಲಿ || ಯಣುಗನುರಿಯನುಗುಳುತಾಗ |
ದನುಜನಂಗಕೆತ್ತಿ ಗಿರಿಯ | ನಿನಿತು ಪೇಳಿದ || ೨ ||

ಎಲವೊ ದನುಜ ಹರಿಯ ಹಗೆಯ | ಬಳಸಿ ಬದುಕಲುಂಟೆ ಸರಿದು |
ವಿಳೆಯ ರುಣವೆನುತ್ತಲೆರಗೆ | ಖಳನು ಸವರುತ ||
ಮುಳಿದು ಘೋರ ಶಕ್ತಿಯಿಂದ | ಘಳಿಲನಂಗಕಿಡಲು ಮೂರ್ಛೆ |
ದಳೆಯಲರಿತು ಮರನ ಮುರಿದು | ಕಲಿ ಮರುತ್ಸತ || ೩ ||

ಕಡುಹಿನಿಂದ ಬಡಿಯಲದರ ಕಡಿದು ದನುಜನುರುತರಾಸ್ತ್ರ |
ಗಡಣದಿಂದ ಮುಸುಕೆ ಹನುಮ | ಪುಡಿಯಗೈದನು ||
ಕಿಡಿಯ ಸೂಸುತಾಗಳಸುರ | ನಡರಿ ನಭವನಂಧಕಾರ |
ವಡಸಿಮಾಯದಿಂದ ಪ್ಲವಗ | ಪಡೆಯ ತರಿದನು || ೪ ||

**ಭಾಮಿನಿ**

ಸಿಡಿಲು ಮಿಂಚುಗಳಿಂದ ಕಲ್ಪದ |
ಕಡೆಯ ಮೇಘದ ತೆರದೊಳವನಿಗೆ |
ರುಧಿರ ಮಾಂಸಗಳುದುರಲದ್ಭುತ ಬಾಣವೃಷ್ಟಿಯಲಿ ||
ಕೆಡಹುತಿರೆ ರಿಪು ಬಲವ ಕಂಪಿಸು |
ತಡಿಗಡಿಗೆ ಸುರನಿಕರ ಹಾಯೆನ |
ಲೊಡೆಯನಡಿಗೊಂದಿಸಿ ವಿಭೀಷಣ ನುಡಿದ ವಿನಯದಲಿ || ೧ ||

**ರಾಗ ಸೌರಾಷ್ಟ್ರ ಅಷ್ಟತಾಳ**

ದೇವ ಕಂಡೆಯ ರಣ | ಕಿಂದ್ರಾರಿಯೈತಂದ | ರಾಘವೇಂದ್ರ |
ದೈತ್ಯ | ರಾವಣ ಸುಕುಮಾರ | ನತುಲ ಪರಾಕ್ರಮ | ರಾಘವೇಂದ್ರ || ೧ ||

ಅಂಧಕಾರವ ಗೈದ | ನಡಗಿ ಬಾಂದಳದೊಳು | ರಾಘವೇಂದ್ರ || ಕಪಿ |
ವೃಂದವ ಕೊಂದುದ | ಕೆಣೆಯುಂಟೆ ಮಾಯಾವಿ | ರಾಘವೇಂದ್ರ || ೨ ||

ವಾಯು ಸಂಭವ ಮುಖ್ಯ | ರಾಯತಿಗೆಡಿಸಿದ | ರಾಘವೇಂದ್ರ || ಖಳ |
ಕಾಯಕವನು ಪರಿ | ಹರಿಸಿ ಭೃತ್ಯರ ಕಾಯೊ | ರಾಘವೇಂದ್ರ || ೩ ||

**ಕಂದ ಪದ್ಯ**

ಇಂತೆನೆ ಲಕ್ಷ್ಮಣನುರಿದೆ | ದ್ದಂತಕನೆನೆ ಪಲ್ಗಡಿವುತ ಕೊಂಡಸ್ತ್ರಗಳಂ ||
ಕಂತುಪಿತನ ಪದಕೆರಗು | ತ್ತಂ ತಳುವದೆ ಪೊರಟಾಗ್ರಹದಿಂ ಖಳಗೆಂದಂ || ೧ ||

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಎಲವೊ ಖಳಾಧಮ ಮರೆಯೊಳು | ಹೇಡಿ | ಗೊಳದಿದಿರಾಗೆಮ್ಮ ಧುರದೊಳು ||
ಛಲವ ನೀ ಮೆರೆಸಬೇಕಲ್ಲದೆ | ಇಂಥ | ಕಳವಿನಳವಿ ನೀತಿಯಪ್ಪುದೆ || ೧ ||

ಎನುತ ರಾಮನ ಸಿರಿ ಚರಣವ | ನೆನೆ | ದನುಗೊಳಿಸುತ ವೈಷ್ಣವಾಸ್ತ್ರವ ||
ಕನಲಿ ಕರ್ಣಾಂತಕೆ ಸೆಳೆಯುತ್ತ | ಬಿಡೆ | ಕ್ಷಣದಿ ಮಾಯವ ಪರಿಹರಿಸುತ್ತ || ೨ ||

ಖಳನ ತೇರ್‌ಹಯಗಳ ಖಂಡಿಸೆ | ಧರೆ | ಗಿಳಿದನ್ಯ ರಥದಿ ಪ್ರಕಾಶಿಸೆ ||
ಬಲು ಶರದೊಳು ರಾಮನನುಜನು | ಮೂರ್ಛೆ | ಗೊಳಿಸಿ ಕೊಂದನು ಮಿಕ್ಕಸುರರನ್ನು || ೩ ||

**ರಾಗ ಮಾರವಿ ಏಕತಾಳ**

ಕಿಡಿಯುಗುಳುತ ಖಳ | ನೋಡನೇಳುತ ನರ | ರಧಮ ಸತಿಯ ತುಡುಕಿ ||
ವಿಧಿಸಿದಳಲ ತವ | ರುಧಿರದಿ ತಣಿಸುವೆ | ಖಡುಗಕೆ ಬಲಿಯಿಕ್ಕಿ || ೧ ||

ಬಲ್ಲೆನೆಲವೊ ಹೆಂ | ಗಳ್ಳನಣುಗ ಛಲ | ಸಲ್ಲದು ನಿನಗೆನುತ ||
ಬಿಲ್ಲಿಗೆ ಬಲುಶರ | ನಿಲ್ಲಸಿ ಬಿಡಲದ | ನೆಲ್ಲವ ಖಂಡಿಸುತ || ೧ ||

ಉರಿವ ಮಹಾ ಫಣಿ | ಶರವನುಗಿಯೆ ಸಾ | ವಿರವಾಯ್ತದ ಬಿಡಲು ||
ಪರಿಗಣನೆಯ ಮಿ | ಕ್ಕರಿಗಳ ಬಂಧಿಸು | ತುರುಳಿಸೆ ಶೀಘ್ರದೊಳು || ೨ ||

**ಭಾಮಿನಿ**

ಶರದ ಬಲುಹೆಂತುಟೊ ಮಹೀಧರ |
ತರಳೆ ಕೇಳ್ ಬಿಗಿವಡೆದು ರಾಘವ |
ವರ ವಿಭೀಷಣ ಸಹಿತಲುರುಳಿದರಖಿಲ ನಾಯಕರು ||
ತಿರುಗೆದಾನವ ಪುರಿಗೆ ನಿಶಿಯೊಳು |
ಗರುಡದೇವನು ಬರಲು ಬಂಧನ |
ಹರಿದು ನೃಪನೀಕ್ಷಿಸಿದನುಳಿದವರೊಡನೆ ನಿಜ ಬಲವ || ೧ ||

**ವಾರ್ಧಿಕ್ಯ**

ಕಂಡ ಕಡೆಯಲಿ ಕಪಿಗಳಟ್ಟಮಯ ಬೆಟ್ಟಮಯ |
ದಿಂಡುರುಳುವಮಿತ ಗಾಯಾಳಮಯ ಸೀಳಮಯ |
ಸಂದಣಿಸಿ ನೆಲಸಿದರುಣಾಂಬುಮಯ ವಂಬುಮಯ ತುಂಡಿಸಿದ ವೃಕ್ಷ ಮಯವು ||
ತಂಡ ತಂಡದ ಖಳರ ಮುಂಡಮಯ ರುಂಡಮಯ |
ಖಂಡಿಸಿದ ಕರಿತುರಗ ದಿಂಡಮಯ ಖಂಡಮಯ |
ಸಂದುಡಿದು ಕೆಡೆದ ಕರಚರಣಮಯ ಕರುಣಮಯದಿಂದೆಸೆವೆ ರಣಕಣವನು || ೧ ||

**ಭಾಮಿನಿ**

ಕಾಣುತವನಿಪ ಮರುಗಲೌಷಧ |
ದ್ರೋಣಗಿರಿಯೊಳಗಿಹುದದರ ಪವ |
ಮಾನಿ ತರಲಿ ಸುಷೇಣ ಬದುಕಿಪನೆಂದ ಜಾಂಬವನು ||
ಭಾನುಮಾರ್ಗದಿ ತೆರಳಿ ಮುಖ್ಯ |
ಪ್ರಾಣ ತರೆ ಮೂಲಿಕೆಯ ಕೊಂಡಾ |
ಶ್ವೇನಿಮೃತಸಂಜೀವಿನಿಯೊಳೆಬ್ಬೆಸಿದನೆಲ್ಲರನು || ೧ ||

**ಕಂದ ಪದ್ಯ**

ಉದಯದಿ ಕೈಗಲಸುತ ಖಳ |
ಗಡಣದೊಡನೆ ದೇವ ನರಾಂತಕರಳಿಯಲ್ಕಾಗಲ್ ||

ಒಡೆಯಗೆ ಪರಿಚರ ರುರಹ |
ಲ್ಕದನಾಲಿಸುತತ್ಯುಗ್ರದಿ ಕಿಡಿಯಿಡುತಸುರಂ ||೧||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕಂಡರೋಡುವ ಮನುಜ ಮರ್ಕಟ | ತಂಡವೆಮ್ಮನು ಕೆಣಕಿ ಜೀವಿಸೆ |
ಗಂಡುಗಲಿ ತಾನೆನಿಸಿ ಫಲವೇ | ನಿಂದು ರಣದಿ ||೧||

ಬಡಿದು ಕೋತಿಗಳಡಗ ಶಾಕಿನಿ | ಗಡನಕೌತಣ ಬಡಿಸಿ ರಘುಜನ |
ಕೆಡಹಿ ಸುಲಿಸುವೆ ಪಿಡಿ ದನುಜ ಕುಲ | ಗೆಡುಕನನ್ನು ||೨||

ಬರಲಿ ಭೈರವ ಚಾಪವಾಹಿಮ | ಕಿರಣಹಾಸವಿಧಾತ ರಥವೆಂ |
ದುರವಣಿಸಲತಿಕಾಯನಯ್ಯನ | ಚರಣಕೆರಗಿ ||೩||

**ಭಾಮಿನಿ**

ಮಂಡೆ ಬಲಿತಿಹುದೆಂದೆನುತ ಹೆ |
ಬ್ಬಂಡೆಯನು ಹಾಯ್ದಪರೆ ಪಿತ ಕೈ |
ಗುಂಡಿನಲಿ ಬ್ರಹ್ಮಾಂಡ ಭಾಂಡವ ನೊಡೆಯಲೆಳಸುವರೆ ||
ಚಂಡ ವೈಶ್ವಾನರನ ಕರ್ಪುರ |
ಖಂಡವಿದಿರಿಪುದೆಂಟೆ ಸಮರೋ |
ದ್ದಂಡ ರಘುಪತಿಯಸ್ತ್ರಕಿದಿರಿಲ್ಲಹಿತ ಬೇಡೆಂದ ||೧||

**ರಾಗ ಜಂಜೋಟಿ ಅಷ್ಟತಾಳ**

ತಾತಯೇನಿದು ಮರುಳಾಟ | ವೇದ ವೇತ್ತ ವಿಖ್ಯಾತ ಸಾಮ್ರಾಟ ||
ಖಾತಿಯೇನಿದು ರಘು ನಾಥನ | ಹಗೆ ಸರ್ವ ||
ಘಾತವಲ್ಲದೆ | ರೀತಿಯಪ್ಪುದೆ | ನೀ ತಿಳಿಯೆಯಾ | ನೀತಿ ಕೋವಿದ || ತಾತ ||೧||

ಅಖಿಲ ಬ್ರಹ್ಮಾಂಡವ ರಚಿಸಿ | ಜೀವ ನಿಖಿಲದಂತರ್ಯಾಮಿಯೆನಿಸಿ ||
ಸಕಲ ತನ್ನೊಳಗೈಕ್ಯೆ | ಗೊಳಿಸಿ | ಮೇಣ್ ಸೃಜಿಸುವ ||
ಶಕುತ ಸಾಕ್ಷಾ | ದ್ವಿಷ್ಣು ರಘುಪತಿ | ಪ್ರಕೃತಕೀ ಹಗೆ | ಯಕುತವೇ ತೆಗೆ || ತಾತ ||೨||

ಖರ ವಿರಾಧರ ತಲೆಗಳೆದ | ಮಹ | ಶರಧಿಯುದ್ಧಕೆ ಸೇತು ಬಲಿದ ||
ತರಿದನೆಮ್ಮವರನೆ | ಲ್ಲರ ಧುರದೊಳು ರಘು ||
ವರೆಗೆ ಸೀತೆಯ | ನಿತ್ತು ಸಹಜಗೆ | ಧರೆಯ ಪಟ್ಟವ | ಗೈವುದುಚಿತವು || ತಾತ ||೩||

**ಭಾಮಿನಿ**

ಇದಿರು ನಿಲದಿರು ಹೇಡಿ ಫಡ ಹೆ |
ತ್ತೊಡಲ ಭಾರಕ ತೊಲಗು ತನ್ನಯ |
ದೃಢವ ನೀನೇನ್ ಬಲ್ಲೆ  ಬಿಡುವೆನೆ ತೊಟ್ಟ ಛಲಗಳನು ||
ಮೃಡನೆ ತಡೆದರು ಬಿಡೆನೆನುತ ದಶ |
ವದನನೇಳಲ್ಕರಿತು ಹೆರವರ |
ಹೃದಯವಾರ್ಗಳವರಿಯಲೆನುತತಿಕಾಯನುತ್ಸಹದಿ    || ೧ ||

**ರಾಗ ಕೇತಾರಗೌಳ ಝಂಪೆತಾಳ**

ಜೀಯ ತಾ ವೀಳಯವನು | ಬರಿದೆ ಮನ | ನೋಯದಿರು ರಿಪು ಬಲವನು ||
ಸಾಯ ಬಡಿವೆನು ಸಹಸವ | ನೋಡೆನಲು | ರಾಯನಿತ್ತನು ನೇಮವ     || ೧ ||

ತಂದೆಯನು ಬೀಳ್ಕೊಳ್ಳುತ | ತಾಯ್ಗೆರಗಿ | ಚಂದದಿಂ ನೇಮಗೊಳುತ ||
ದಂಡೆ ತುಳಸಿಯ ಕೊರಳೊಳು | ಧರಿಸುತ ತ್ರಿ | ಪುಂಡ್ರ ರೇಖೆಯ ಪಣೆಯೊಳು    || ೨ ||

ಭರದಿ ಮಣಿರಥವೇರುತ | ಕರದಿ | ಧನು | ಶರವಾಂತು ಬಲವೆರಸುತ ||
ಭರಿತ ಹರುಷದೊಳುಬ್ಬುತ | ತನ್ನವರ | ಕರೆ ಕರೆದು ನುಡಿದ ನಗುತ     || ೩ ||

**ವಾರ್ಧಿಕ್ಯ**

ಬನ್ನಿ ಪ್ರಾಕ್ತನಪುಣ್ಯ ಕರ್ಮಫಲ ಸೇರ್ದುದದೊ  |
ಬನ್ನಿರೆಲ್ಲರ ಭಾಗ್ಯ ರವಿಯುದಯಮಾದುದದೊ  |
ಬನ್ನಿರಖಿಲೇಷ್ಟಾರ್ಥ ಸುರಧೇನು ಕರೆವುದದೊ ಬನ್ನಿರೈ ಬನ್ನಿರೆಲ್ಲ ||
ಬನ್ನಿ ಸಂಸಾರ ಕಡಲುತ್ತರಿಪನಾವೆಯದೊ  |
ಬನ್ನಿ ಭವಬಂಧನಗಳನ್ನರಿವ ಪರಶುವದೊ  |
ಬನ್ನಿರೆಮ್ಮುದ್ಧಾರ ಕರ್ತೃಭಗವಂತನದೊ ಬನ್ನಿರೀಪ್ಸಿತ ಪೊಂದಲು        || ೧ ||

**ರಾಗ ಕಾಂಬೋಧಿ ಝಂಪೆತಾಳ**

ಉಚ್ಚರಿಸುತಿಂತು ನಡೆ | ದಚ್ಚುತನ ಸೈನ್ಯವನು | ನುಚ್ಚುನೂರಾಗೆ ಖಂಡಿಸಿದ ||
ಎಚ್ಚರಿಸಲದ ವಿಭೀ | ಷಣ ರಘುಜಗೆರಗಿ ಖತಿ | ಪೆರ್ಚೆ ಸೌಮಿತ್ರನಿದಿರಾಗ || ೧ ||

ಕಾಣುತತಿಕಾಯ ಖಳ | ಸೇವೆಗಳ ನಿಲಿಸಿ ರಾ | ಮಾನುಜನೊಳೆಂದ ತವನಾಮ ||
ಏನಿಹುದು ರವಿಕುಲ ಲ | ಲಾಮನೋ ಲಕ್ಷ್ಮಣನೊ | ನೀನರುಹಿಸೆನಲು ನಿಸ್ಸೀಮ   || ೨ ||

ದನುಜ ಕೇಳೈ ನಿನ್ನ | ಮನಕೆ ತೋರಿದ ತೆರದೊ | ಳೆಣಿಸ ಬಹುದೆಂದ ಲಕ್ಷ್ಮಣನು ||
ರಣಕದಾವವನಾದ | ರೆಣಿಕೆಯೇನೆಮ್ಮಾತ್ಮ | ಚಿನುಮಯಾರ್ಪಣವೆನುತ್ತವನು      || ೩ ||

**ಭಾಮಿನಿ**

ಪಾವನಾತ್ಮಕ ನೀನೆ ಜಗದಧಿ |
ದೈವವೆಂಬುದ ಬಲ್ಲೆನಿದೊ ಸ |
ದ್ಭಾವದಿಂದರ್ಚಿಸುವೆ ಶಸ್ತ್ರದೊಳೆನುತ ತೆಗೆದೆಚ್ಚ ||
ಭಾವಶುದ್ಧದಿ ಗೈವ ಷೋಡಶ |
ದಾ ವಿಧಾನದ ಪೂಜೆಗಳ ಹ |
ರ್ಷಾವಹದಿ ಕೈಕೊಂಡು ಲಕ್ಷ್ಮಣನೆಂದ ಪೊಗಳುತ್ತ ‖ ೧ ‖

**ರಾಗ ಪಂಚಾಗತಿ ಮಟ್ಟೆತಾಳ**

ಭಳಿರೆ ವೈಷ್ಣವಾಗ್ರಗಣ್ಯ | ಧರೆಯೊಳುಂಟೆ ನಿನ್ನ ಪೋಲು |
ವಲಘು ಭಕ್ತರದರೊಳಸುರ | ಕುಲದೊಳೆಂದನು ‖ ೧ ‖

ಭಕ್ತಿಯಿಂದಲಧಿಕ ರಣದಿ | ಶಕ್ತಿ ಮೆರೆಸಿ ಚಿತ್ತವಲಿಸಿ |
ಮುಕ್ತಿ ಪದವ ಪಡೆವೆನೆನುತ | ರಕ್ಕಸಾತ್ಮಜ ‖ ೨ ‖

ಥಟ್ಟನುಲಿವುತಕ್ಷಯಾಸ್ತ್ರ | ವೃಷ್ಟಿಗರೆಯಲಷ್ಟ ದೆಸೆಯೊ |
ಳಟ್ಟಿ ಹೊಯ್ದುದರಿಯದಾಯ್ತು | ಸೃಷ್ಟಿನಭಗಳು ‖ ೩ ‖

ಅಕ್ಷಯಾತ್ಮನನುಜನದರ | ತಕ್ಷಣದಲಿ ಸವರುತವನ |
ವಕ್ಷಕಿಡಲು ದಿವ್ಯ ಶರದಿ | ಲಕ್ಷ್ಯಗೆಟ್ಟನು ‖ ೪ ‖

**ಭಾಮಿನಿ**

ಸಾಯಕದಿ ಸೌಮಿತ್ರಿ ದೈತ್ಯ ನಿ |
ಕಾಯವನು ಮರ್ದಿಸಿದನೆದ್ದತಿ |
ಕಾಯ ಕೊನೆಯಾಯ್ತು ಕಟ ಪಿತನಾಯುಷ್ಯಕೆಂದೆನುತ ||
ಕಾಯ ಶಾಶ್ವತವಲ್ಲ ಮಿಕ್ಕಿನ |
ಮಾಯೆ ನಮಗೇಕೆನುತ ಕಮಲದ |
ಳಾಯತಾಕ್ಷನ ಹೃದಯ ಪೀಠದಿ ನಿಲಿಸಿ ನುತಿಸಿದನು ‖ ೧ ‖

**ಕಂದ ಪದ್ಯ**

ಜಯ ವೇದೋದ್ಧಾರ ಮಹೀಧರ |
ಜಯತು ಹಿರಣ್ಯಕ ಹರ ನರಹರಿ ಮಾರಮಣಂ |
ಜಯ ಬಲಿಬಂಧನ ಭಾರ್ಗವ |
ಜಯ ರಘುವರ ಸುರವಂದಿತ ವಾಸುಕಿ ಶಯನಂ ‖ ೧ ‖

**ರಾಗ ಪಂತುವರಾಳಿ ಮಟ್ಟೆತಾಳ**

ತಡವದೇಕೆ ವೀರ ತೊಡು ನೀ | ನೊಡನೆ ಜಡಜಭವ ಶರ ||
ಒಡಯ ರಾಮನಡಿಯ ಕೂಡಿ | ನಡೆವೆ ದೃಢದಿ ಕಿಂಕರ || ೧ ||

ಎನುತ ಭಾರಿ ಧನುವ ಗೊಂಡು | ಕಣೆಯ ಸುರಿಸಲು ||
ಕ್ಷಣದಿ ವನಜಜಾಂಡ ನಡುಗಿ | ತನಿತು ಭಯದೊಳು || ೨ ||

ಕಡಿವುತಂಣನಡಿಯ ನೆನೆವು | ತೊಡನೆ ಲಕ್ಷ್ಮಣ ||
ಬಿಡಲಜಾಸ್ತ್ರ ಝುಡಿದು ಶಿರವ | ಕಡಿದುದಾಕ್ಷಣ || ೩ ||

**ಭಾಮಿನಿ**

ಭಾನುಪಥದಲಿ ನೆಗೆದು ಶಿರಹರಿ |
ವಾಣದಾರತಿಯೆನೆ ಸುಳಿದು ಗೀ |
ರ್ವಾಣ ವಂದಿತಂಘ್ರಿಗುರುಳಿತು ರಾಮ ರಾಮೆನುತ ||
ದಾನವಾಧಿಪನರಿತು ಲಯದ ಕೃ |
ಶಾನುವೆನೆ ಖತಿ ಮಸಗಿ ಸಮರಕೆ |
ತಾನೆ ಸನ್ನಹವಾಗಿ ಪೊರಟನು ಸೇನೆ ಸಹಿತಾಗಿ || ೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ರಣಕೆ ಬಹ ದಶಶಿರನ ರಘುಪತಿ | ಯನುಜ ಕಂಡಡಹಾಯ್ದು ರೋಷದಿ |
ಜನನಿಗಳುಪಿದ ಪಾಪಿ ಕೊಲುವೆನು | ಕ್ಷಣದಿ ನಿನ್ನ || ೧ ||

ಗಳಹದಿರು ನರರಧಮ ನೀತಿಯ | ನುಳಿದು ಭಗಿನಿಯ ನಾಸಿಕವನರಿ |
ದಳಲ ಖಳತವ ರುಧಿರ ಜಲದಲಿ ಕಳೆವೆನೆಂದ || ೨ ||

ಎನುತಲೀರ್ವರು ಸೆಣಸುತಿರೆ ವಿಭೀ | ಷಣನೆಣೆಸುತೆಂತಹುದೊ ಲಕ್ಷ್ಮಣ |
ಗೆನುತ ಗದೆಗೊಂಡಿದಿರು ಬರೆ ರಾ | ವಣನರಿವುತ || ೩ ||

ನೋಡುತೊಡನುರಿದುರಿದು ರೋಷದೊ | ಳೌಡುಗಡಿಯುತ ಸಾಯದಹಿತನ |
ಕೂಡಿ ಬಂದೆಯ ತನ್ನಿದಿರು ಕುಲ | ಗೇಡಿಯೆನುತ || ೪ ||

ತನಗೆ ಮಯನೊಲಿದಿತ್ತ ಶಕ್ತಿಯ | ದನುಜನಿಡೆ ಕಂಡನಿಮಿಷರು ಹಾ |
ಯೆನಲು ರಾಘವನನುಜ ಮನದೊಳಗೆಣಿಸುತಾಗ || ೫ ||

**ಭಾಮಿನಿ**

ಅಳಿವ ನಿಶ್ಚಯ ಶರಣನೆಮ್ಮ |
ಗ್ಗಳಿಕೆ ಫಲಿಸದೆನುತ್ತ ಮನದು |

ಮ್ಮಳದಿ ಶರಕಡಹಾಯ್ದು ಮಲಗಿದನಚಲ ನಿದ್ದೆಯಲಿ ||
ಘಳಿಲನೀತನ ನೊಯ್ವೆನೆಂದೆನು |
ತಿಳಿಯೆ ರಥದಿಂದಿಳೆಗೆ ದಾನವ |
ಬಲಿದು ಮುಷ್ಟಿಯ ಮರುತ ಸುತನಡಹಾಯ್ದು ಖಳಪತಿಯ || ೧ ||

**ರಾಗ ದೇಶಿ ಅಷ್ಟತಾಳ**

ಭಳಿರೆ ರಾವಣ | ಲಲನೆಯ ಕದ್ದೊಯ್ದ ||
ಒಲವಿನಿಂ ಮೈ | ತಿಳಿ | ಯದವನನು | ಕೊಲಲು ಬಗೆದೆಯ | ಕಳವಿಲಿ || ೧ ||

ಕರೆಸು ಬ್ರಹ್ಮನ | ಬರಿಸು ಶುಕ್ರನ ನಿನ್ನ ||
ಹರಣವುಳುಹಲು | ಹರನ ಸ್ಮರಿಸೆನು | ತೆರಗಿದನು ನಡು | ಶಿರದೊಳು || ೨ ||

ಹತ್ತು ಬಾಯೊಳ | ಗೋಕರಿಸಿದು ಬಿಸಿ ||
ನೆತ್ತರವ ಕಾ | ರುತ್ತ ರಾವಣ | ಪೃಥ್ವಿಗೊರಗೆ ಮ | ರುತ್ಸುತೆ || ೩ ||

**ಭಾಮಿನಿ**

ತಪ್ಪಿದೆನು ರಾಮಾಯಣದ ಬದ |
ಲಪ್ಪುದ್ದನುಮಾಯಣವೆನುತ ಜಲ |
ದುಪ್ಪಟೆಯನೆದೆಗೊತ್ತಿ ದಾನವನೆದ್ದನಂತರಿಸಿ ||
ತಪ್ಪುವವರಾವಲ್ಲ ಘಾಯದೊ |
ಳಿರ್ಪೆ ನಡೆಯೆನುತಟ್ಟಿ ಭವನಕೆ |
ಸರ್ಪಶಯನನ ಹೊರೆಗೆ ತಂದಿಳುಹಿದನು ಲಕ್ಷ್ಮಣನ || ೧ ||

**ರಾಗ ನೀಲಾಂಬರಿ ಆದಿತಾಳ**

ಆಗಮವೇನೆಂದೆನುತ | ರಾಘವನೀಕ್ಷಿಸುತಳುತ ||
ಏಗುಣ ಸುಂದರಧೀರ | ಸಾಗರ ಸಾಂತ್ವ ಗಭೀರ || ೧ ||

ಬೇಡವೆಂದರೆ ಮಗನೆ | ಕಾಡಿಗೈದೆನ್ನೊಡನೆ ||
ಕೇಡಾಯ್ತೆ ನಿನಗಕಟ | ನಾದಿನಿಗೇನೊರೆವೆ ದಿಟ || ೨ ||

ತಾಯಿಗೀಮುಖವಿಂತು | ಸಾಯದೆ ತೋರುವದೆಂತು ||
ಮಾಯಾವಾಯ್ತಿನ ವಂಶ | ಶ್ರೇಯ ಮತ್ತೇನಾಶ || ೩ ||

**ಭಾಮಿನಿ**

ನೋಯಲೇಕರೆಘಳಿಗೆ ಸೈರಿಸು |
ಜೀಯ ತಹೆನೌಷಧಿಯ ಲಕ್ಷ್ಮಣ |
ರಾಯಗಳಿವಿಲ್ಲೆನುತ ವಾಯುಜ ತೆರಳುತಭ್ರದಲಿ ||
ಕಾಯಕದ ಖಳ ಕಾಲನೇಮಿಯ |
ಕಾಯವನು ನಿಗ್ರಹಿಸುತಚಲವ |
ಪ್ರೀಯದಿಂ ತರಲೆಬ್ಬಿಸಿದನು ಸುಷೇಣನಖಿಲರನು || ೧ ||

**ವಾರ್ಧಿಕ್ಯ**

ಮಿತ್ರನುದಯದಿ ಕೈಕಸಾತ್ಮಜಂ ರಿಪುಸುಭಟ |
ಮೊತ್ತ ಬದುಕಿದುದರಿತು ಕುಂಭಕರ್ಣನನೆಬ್ಬಿ |
ಸುತ್ತ ಜನಮುಖದಿ ಮಗುಳಿತ್ತು ನೇಮವ ಸಮರಕಟ್ಟಿದಂ ಸೇನೆ ಸಹಿತ ||
ಪೃಥ್ವಿಯದುರಲು ಘಟಶ್ರೋತ್ರ ಬಲ ಸಹಿತ ಮುಂ |
ದೊತ್ತಿ ಕಪಿಮೋಹರವ ತುತ್ತು ಗೈವುತ ಕಾಲ |
ಮೃತ್ಯುವಂತುರವಣಿಸುತೆತ್ತಲೋಡಿದರು ಬೆಂಬೊತ್ತಿ ಬರಿಗೈವುತಿರ್ದ ||೧|

**ಭಾಮಿನಿ**

ತಿಂದು ತೇಗಿದನಸುರ ಖಳರಂ |
ನ್ನೊಂದು ಕಡೆಯಲಿ ಮಡುಹುತಿರೆ ಕಪಿ |
ವೃಂದ ಬರಿದಾದುದ ವಿಭೀಷಣ ಕಂಡು ರಘುಪತಿಗೆ ||
ಎಂದನೇಳ್ಕೈ ದೇವ ಕದನಕೆ |
ಬಂದನತಿಬಲ ಕುಂಭಕರ್ಣನ |
ಮುಂದೆ ನಿಲುವವರಿಲ್ಲ ನೀಹೊರತೆನಲು ಭೂವರನು || ೧ ||

**ರಾಗ ಭೈರವಿ ಮಟ್ಟೆತಾಳ**

ಶರಧಿ ಘೋಷದಿ | ಧುರಕೆ ರೋಷದಿ ||
ಮರುತಸುತನ ಹೆಗಲನೇರಿ | ತೆರಳುತುಗ್ರದಿ || ೧ ||

ಸತ್ತ ಹೆಣಗಳ | ನೆತ್ತಿ ಕೈಗಳ ||
ತುತ್ತುಗೈವ ಧೂರ್ತ ಸತ್ವ | ವಿತ್ತ ತೋರೆಲ || ೨ ||

ತ್ಯಾಗಿ ಸತಿಯಳ | ಮೂಗನರಿದೆಲ ||
ಜೋಗಿಯೆನಿಸಿ ಭೋಗಕೆಳಸಿ | ಸಾಗಿದೆಯ ಭಲ || ೩ ||

ಭೋಗಿ ನಾ ಖರೆ | ತ್ಯಾಗಕೇನ್ ಕೊರೆ ||
ಯೋಗದರ್ಥ ಲೋಗದೈತ್ಯ | ರೇಗಳರಿವರೆ || ೪ ||

ಸುಡು ಸುನೀತಿಯ | ಅಡಗಿ ಕೋತಿಯ ||
ಮಡುಹಿದಧಮನೆನುತ ಶಸ್ತ್ರ | ಗಡಣ ವೃಷ್ಟಿಯ || ೫ ||

**ಭಾಮಿನಿ**

ಕೆಡಹಿ ರಘುವರ ತರಿದನೀಪರಿ |
ಝುಡಿದು ಹೆಣಗಿದರುರು ಮಹಾಸ್ತ್ರದಿ |
ಕುದಿದವಬುಧಿಗಳುರಿಗೆ ತ್ರೈಜಗ ಕಮರೆ ಸುಮನಸರು ||
ಮಡುಹು ಬೇಗದೊಳೆನುತ ಮೊರೆಯಿಡ |
ಲೊಡನೆ ಖಂಡಿಸೆ ಕರಯುಗವ ಖಳ |
ನೊದೆದು ಕಪಿಗಳ ಸದೆಯೆ ಪದಗಳ ಕಡಿದನವನೀಶ || ೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಉರುಳುತಿಳೆಗೆ ಮಹಾದ್ರಿಯೆನೆ ಬೊ | ಬ್ಬಿರಿದು ಹೊರಳುತಸಂಖ್ಯ ಬಲಗಳ |
ನರೆಯಲಚ್ಚುತ ನಚ್ಚಟಾಸ್ತ್ರದಿ | ಶಿರವ ಕಡಿದ || ೧ ||

ಭೀಮ ಬಲ | ಮಕರಾಕ್ಷ ಸಾರಣ | ಧೂಮ್ರಲೋಚನ ಖಡ್ಗ ವೃಶ್ಚಿಕ |
ರೋಮಮುಖ್ಯಸುರೌಘವಳಿದುದು | ರಾಮ ಶರದಿ || ೨ ||

ಅರಿವುತಿದ ಶಕ್ರಾರಿ ಪಿತನಡಿ | ಗೆರಗಿ ಪೇಳಿದ ಕರುಣಿಸಪ್ಪಣೆ |
ಮರುಗಲೇಕೆ ನಿಕುಂಭಿಳೆಯೊಳ | ಧ್ವರವ ಗೈದು || ೩ ||

ಹುತವಹನನಿಂ ಪಡೆದು ಸಾಯಕ | ರಥ ಧನುವ ಮೇಳೈಸಿ ರಿಪುಗಳ |
ಮಥಿಸದಿರೆ ತವ ಸುತನೆ ತೆಗೆ | ವ್ಯಥೆಯನೆಂದು || ೪ ||

ತೆರಳಿ ಹೋಮವನೆಸಗೆ ಧೂಮವ | ಪರಿಕಿಸುತ ಸರಮೇಶನಿರದೆ |
ಚ್ಚರಿಸಿ ಕೆಡಿಸಿದನೆಂದು ರಘುಪತಿ | ಗೆರಗುತಾಗ || ೫ ||

**ಭಾಮಿನಿ**

ಓ ರಘೋತ್ತಮನವಧರಿಪುದೀ |
ರಾರು ವತ್ಸರ ಸುರತ ನಿದ್ರಾ |
ಹಾರ ವರ್ಜಿತಗಲ್ಲದಳುಕುವನಲ್ಲವವನೆಂದ ||
ಊರ್ಮಿಳಾಪತಿ ಕೇಳಿ ನಸುನಗು |
ತಾರಮೇಶನಿಗೆರಗಿ ಮನದಲಿ |
ಬೇರೆ ಯೋಚನೆಯೇಕೆ ಕಳುಹಿಸು ತಾನೆ ಸಮನೆಂದು || ೧ ||

**ರಾಗ ತುಝಾವಂತು ಮಟ್ಟೆತಾಳ**

ಲಕ್ಷ್ಮಣಾಂಕ ನಡೆದ ಸಮರಕೆ | ತರುಬುತಯುತ | ಲಕ್ಷ ಪ್ಲವಗ ತತಿಯ ಸಹಯಕೆ || ಪಲ್ಲ ||
ಲಕ್ಷ್ಮಣಾಂಕ ಪೊರಡೆ ಸಮರ | ಕಕ್ಷಿಗಿಡಿಯನುಗುಳಿ ರೋಷ |
ವುಕ್ಕಿ ಹರಿಗಳೈದಿ ಭರದಿ | ರಕ್ಕಸೇಂದ್ರರೊಡೆಯನಣುಗ ||
ನಿಕ್ಕೆಲದಲಿ ಹೊಕ್ಕುಹೊಯ್ದರು | ಉಗುಳು ಮೂತ್ರ | ವಿಕ್ಕಿ ಮಖವ ಕೆಡಿಸಿ ನಲಿದರು |
ದಿವಿಜರರಲ | ತಕ್ಷಣದಲಿ ವೃಷ್ಟಿಗರೆದರು || ಲಕ್ಷ್ಮಣಾಂಕ || ೧ ||

ಕಾಣುತಸುರ ಕೆರಳಿ ಲಯದ | ಸ್ಥಾಣುವೆನೆ ಮಹಾಂತ ಕಿಡಿಯ |
ಸೋನೆಗರೆವುತೊಡನೆ ಸಿಂಹ | ಧ್ವಾನದಿಂದ ಕರದಿ ಬಿಲ್ ||
ಬಾಣವಾಂತು ರಥವನಡರುತ | ಮುತ್ತಿದಹಿತ | ವಾನರೇಂದ್ರ ಬಲವ ಕೆಡಹುತ |
ಬರಲು ತಡೆದು | ಭಾನುಕುಲಜನೆಂದ ಗಜರುತ || ಲಕ್ಷ್ಮಣಾಂಕ || ೨ ||

**ರಾಗ ಭೈರವಿ ಏಕತಾಳ**

ಎಲವೊ ಖಳಾಧಮ ನಿನ್ನ | ಶಿರ | ವಿಳುಹಿ ತೆಗೆವೆ ನೀ ಮುನ್ನ ||
ಕಳವಿನೊಳೆಮ್ಮಯ ಪಡೆಯ | ಗೆಲಿ | ದಳವಿಯನೆನೆ ಪಲ್ಮೊರೆದ || ೧ ||

ಗೆಲುವ ಪರಾಕ್ರಮ ಸರಿಯೆ | ಹೆಂ | ಗಳ ನಾಸಿಕವಲ್ಲರಿಯೆ ||
ಕೊಳುಗುಳಕೆಮ್ಮೊಳು ಸುರರು | ಮೇ | ಣಳುಕುವರಜ ಹರಿ ಹರರು || ೨ ||

ಎನುತ ಮಹಾಸ್ತ್ರವನುಗಿದು | ರಘು | ಜನಿಗೆಸೆಯಲ್ಕದ ಮುರಿದು ||
ದನುಜಗಿಡಲು ಬಿರು ಶರದಿ | ಕಡಿ | ದನು ಖಳನತ್ಯಬ್ಬರದಿ || ೩ ||

**ಭಾಮಿನಿ**

ಮುಂತೆ ಬಂಣಿಸಲವರ ಧುರವನ |
ನಂತಗರಿದತಿ ಬಲರು ಸರಿಸಮ |
ಪಂಥದಿಂದೆಚ್ಚಾಡಲುರು ದಿವ್ಯಾಸ್ತ್ರ ಸಂಘದಲಿ ||
ಎಂತಹುದೊ ಲಕ್ಷ್ಮಣಗೆನುತ ಸುರ |
ತಿಂಥಿಣಿಯು ತರಹರಿಸುತಿರೆ ಕಡಿ |
ದಂತರಿಕ್ಷಕೆ ಜಿಗಿದು ಖಳಶಿರವುರುಳಲವನಿಯಲಿ || ೧ ||

**ಕಂದ ಪದ್ಯ**

ಅರಿತು ದಶಾನನನೆಡೆಗೈ |
ತರುತನುಚರರತಿ ಭಯದಿಂ ಮರುಗುತ ಬೆಸಸಲ್ ||
ಒರಗಿದನಿಳೆಯೋಳ್ ಬರಶಿಡಿ |
ಲೆರಗೆ ಮಹಾ ತರುವುರುಳ್ವೋಲ್ ದಾನವರೆರೆಯಂ || ೧ ||

**ರಾಗ ಸಾಂಗತ್ಯ ರೂಪಕತಾಳ**

ಹಾ ಕುಮಾರಕ ವಂಶ | ರಾಕಾಸುಧಾಂಶು ಹಾ | ನಾಕೇಶ ಜಿತ ಕೀರ್ತಿಹಾರ ||
ಲೋಕ ದುರ್ಜಯ ರಿಪು | ಭೀಕರ ಸುಗುಣ ಹಾ | ಹಾ ಕಂದ ಶರಧಿ ಗಭೀರ || ೧ ||

ಅಡಗಿದೇನೈ ಚಿತ್ತ | ಜಡಜ ಭಾಸ್ಕರ ಪೆತ್ತ | ಒಡಲಿದರಾಸೆ ಮತ್ತೇನು ||
ಕಡಿದು ಸೀತೆಯ ವೈರಿ | ಪಡೆಯ ಭಸ್ಮವಗೈದು | ಇಡುವೆನಗ್ನಿಗೆ ಕಾಯವಿದನು || ೨ ||

ಒಡನೆದು ಖಡುಗವ | ಝುಡಿಯೆ ಕಾಣುತಮಾತ್ಯ | ತಡೆದು ಹೆಂಗೊಲೆ ಹೇಯವಯ್ಯ ||
ಕದನದಿ ಖ್ಯಾತಿಯ | ಪಡೆವುದೆಂದೆನೆ ಶುಕ್ರ | ನೊಡನೆ ಹೊಕ್ಕನು ನಿಕುಂಭಿಳೆಯ || ೩ ||

**ಭಾಮಿನಿ**

ಮಾರಣಾಧ್ವರ ಗೈವುತಿರಲದ |
ನಾ ರಘೂದ್ವಹನಿಗೆ ವಿಭೀಷಣ |
ಸಾರಿ ಕಪಿಬಲ ಸಹಿತಲೈದಿದ ಮಖವ ಭಂಗಿಸಲು ||
ಸಾರೆ ಸನಿಹದೊಳಿಹ ಪರಿವ್ರತೆ |
ನಾರಿ ಮಂಡೋದರಿ ಮಹಾಸಿಯ |
ಘೋರನುಗಿದಡಹಾಯ್ದು ತಡೆದಳು ಕಾರ್ಯವೇನೆನುತ || ೧ ||

**ರಾಗ ಮಾರವಿ ಮಟ್ಟೆತಾಳ**

ಕಾರ್ಯವುಂಟನಾರ್ಯನ | ದುಷ್ಕಾರ್ಯ ಭಂಗವರಿಯೆ ಪುಣ್ಯ |
ಕಾರ್ಯಪದಕೆ ಬಂದೆ ಸ್ವಾಮಿ | ಕಾರ್ಯವತ್ತಿಗೆ || ೧ ||

ನಾಯಿ ಬಗುಳಲೇಕೆ ಹೆತ್ತ | ತಾಯಿಗಳುಪಿದಧಮ ಪೊರೆದ |
ರಾಯಗಧಿಕ ಸ್ವಾಮಿಯಾವ | ನೈ ವಿಭೀಷಣ || ೨ ||

ಅರಸನಾದರೇನು ಧರ್ಮ | ವರಿಯದಾತ ವಧ್ಯ ಪರರ |
ತರುಣಿಗಳುಪಿದವನ ಸೇವೆ | ಸರಿಯೇನತ್ತಿಗೆ || ೩ ||

ತಪ್ಪದೊಂದಕಸಮ ಪ್ರಾಜ್ಞ | ನಪ್ಪವನ ಕೊಲ್ಲುವರೆ ಪ್ರಿಯನೊ |
ಳಿಪ್ಪ ಗುಣವ ಮರೆಯೆ ದೋಷಿ | ಯಹೆ ವಿಭೀಷಣ || ೧ ||

ಅರಿತ ಪ್ರಾಜ್ಞೆಯಿಂತು ದುಷ್ಟಾ | ಚರಣೆಗೊಪ್ಪುಗೊಟ್ಟಮೇಲೆ |
ಇರದು ಧರ್ಮಕಡೆಯು ಮತ್ತೇ | ನೊರೆವುದತ್ತಿಗೆ || ೫ ||

**ಕಂದ ಪದ್ಯ**

ನೀತಿಯಿದಲ್ಲೆಂದಖಿಲರ್ |
ನಾಥನ ತಿಳಿಹಿದರಾಂ ಬೇಡಿದೆ ಕಾಲ್ವಿಡಿದನಿಶಂ ||

ಮಾತದ ಮೀರ್ದನೆನುತ್ತ ಭಿ |
ಘಾತಕ್ಕಿಂತಿದಿರಿಪರೇಂ ಭ್ರಾತೃಘಾತಕಿ ತೊಲಗೈ ‖ ೧ ||

**ಭಾಮಿನಿ**

ವಾಲಿಸುತನದನಾಲಿಸುತ ಹೆಣ್ |
ಮೂಳಿಗೆನಿತಧಟೆನುತಲಾ ನೀ |
ಲಾಳಕಿಯನಡಹಾಯ್ದು ಕೈಗೊಡಲುಡೆಯ ಸೆರಗಿಂಗೆ ‖

ಬಾಲೆಯದನೀಕ್ಷಿಸುತ ರೋಷಾ |
ಭೀಳ ನಯನದಿ ಕಿಡಿಯಿಡುತ ಫಡ |
ಖೂಳ ತೊಲಗೆಂದುಲಿದು ಝಳಪಿಸಲಸಿಯನಾಕ್ಷಣದಿ ‖ ೧ ‖

**ವಾರ್ಧಿಕ್ಯ**

ನಾರಿಯೆಂ ಶತಕೋಟಿ ಸೂರ್ಯ ಕಿರಣಗಳೊ ಮದ |
ನಾರಿಯದ್ಭುತಲಯದ ನಿಟಿಲ ವಹ್ನಿಯೊ ತಿಳಿವ |
ನಾರಿಲ್ಲವೆನೆ ಜ್ವಲಿಸುತಾ ಹರಿ ಸುದರ್ಶನಂ ನಾರಿಯಂ ಬೆಂಬಲಿಸಿತು ||
ನಾರಿಗಳ ಶಿರವ ದಿಗ್ಬಲಿ ಹೊಡೆದು ತ್ರೈ ಜಗದಿ |
ನಾರಿಯೆನಿಸುವೆ ಪತಿಗೆನಲು ಪರಿಕಿಸುತ ಧೈರ್ಯ |
ನಾರಿ ಕಡಿದೆಣ್ ದೆಸೆಗೆ ಕಾಲ್ದೆಗೆದರಹಿತರಿನ್ನಾರಿಗಳ ಮೀರೆ ವಿಧಿಯ ‖ ೧ ‖

**ಭಾಮಿನಿ**

ಹೊಳೆವ ಸೂರ್ಯ ಸಹಸ್ರ ದೀಪ್ತಿಯ |
ಝಳಕೆ ದೆಸೆಗೆಟ್ಟಾದಶಾನನ |
ಘಳಿಲನೆದ್ದಡಿಗೆರಗಿ ನಿಂದನು ತಾಯೆ ಸಲಹೆನುತ ||
ಕೆಲಕೆ ಸರಿದಭಿನಮಿಸಿ ದುಃಖದೊ |
ಳಿಳಿವ ಕಂಬನಿಯಿಂದ ಕಾಂತನ |
ಗಳವ ಬಿಗಿವಡೆದಪ್ಪಿ ನುಡಿದಳು ಮಯನ ಸುತೆಯಳುತ ‖ ೧ ‖

**ರಾಗ ಶಂಕರಾಭರಣ ಏಕತಾಳ**

ಹವನವಳಿದು ಶಕ್ತಿಯೊಲುಮೆ | ಸವೆದುದಯ್ಯೋ ವಿಧಿಯ ದುಷ್ಟ ||
ಹವಣವೆಂತೊ ನಿಲಿಸೀ ಸಮರ | ಸವನವ ಕಾಂತ ‖ ೧ ‖

ನಿಲಿಸಲುಂಟೆ ಧುರವ ಜಗದಿ | ಹಳಿವದೊಂದೆ ಸಾಕು ಕಳವಿ ||
ನಳವಿಗಂಜಿದಪಯಶಂಗ | ಳೊಳಿತೇನೆ ಕಾಂತೆ ‖ ೨ ‖

ಕದ್ದ ಫಲಕನರ್ಘ ಬಲವಿ ದಗ್ಧವಾಯ್ತಿನ್ನಾದರವಳ ||
ಬದ್ಧ ವೀರಗಿತ್ತು ಕುಲವ | ನುದ್ಧರಿಸು ಕಾಂತ || ೩ ||

ಬದ್ಧವೀರನೊಬ್ಬನೇ ಪ್ರ | ಸಿದ್ಧವೆನ್ನಾತ್ಮಜರ ತರಿದ ||
ಕ್ಷುದ್ರರಸುವ ಗೊಳದೆ ಫಲವೇ | ನಿರ್ದು ನಾ ಕಾಂತೆ || ೪ ||

ಸಂದ ಸುತರೈತಹರೇ ನಿನ್ನ | ಕಂಡು ಬದುಕಬಹುದೆಂಬಾಸೆ ||
ಕೊಂದು ಕೊಲಿಸಿ ಕೊಂಬುದೀಗ ಚಂದವೇಕಾಂತ || ೫ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕೊಲುವನಾವವನೆಲೆಗೆ ಲೋಕವ | ಗೆಲಿದು ಬೊಮ್ಮನ ವರದಿ ರಜತಾ |
ಚಲವ ಬೆರಳಿಂದೆತ್ತಿದಗೆ ನರ | ಹುಳುಗಳಿದಿರೆ || ೧ ||

ನರನೆ ರಾಘವನಿಳೆಯ ಭಾರವ | ತರಿಯಲವತರಿಸಿರುವ ಶ್ರೀಹರಿ |
ಕರವ ಮುಗಿವೆನು ಕಾಂತ ಬಿಡು ಹಗೆ | ಸರಸವಲ್ಲ || ೨ ||

ಲೋಕ ಮಾತೆಯನಿತ್ತು ರಾಮನ | ಶ್ರೀಕರಾಂಘ್ರಿಯ ಸೇರಲಿಹ ಪರ |
ಸೌಖ್ಯವಹುದೆಂದೊಂದಿಸಿದಳ | ತ್ಯಾಕುಲದಲಿ || ೩ ||

**ಭಾಮಿನಿ**

ಬಲ್ಲೆ ರಘುವರನಿರವ ಸಾಮವ |
ನೊಲ್ಲೆನೆಂದಿಗು ಮಣಿದು ಬದುಕುವ |
ನಲ್ಲೆ ಸೆಣಸಿದು ಹಿಂಗುವವನಲ್ಲಿಂದಿನಾಹವದಿ ||
ಮಲ್ಲ ಸಹಸದಿ ಸೆರೆವಿಡಿದು ರಘು |
ವಲ್ಲಭನನವನರಸಿಗೊಪ್ಪಿಸಿ |
ಸಲ್ಲಲಿತ ವೈಭವದಿ ಬೀಳ್ಕೊಡುವೆನು ವಿಮಾನದಲಿ || ೧ ||

**ಕಂದ ಪದ್ಯ**

ಛಲವಂ ಸಾಧಿಪೆ ನಳಿಯಲ್ |
ತಳೆವೆಂ ಶಾಶ್ವತ ದೈವ ಸಾಮಿಪ್ಯ ವನುಂ |
ಉಳಿದವರಾರ್ ಮಿತ್ತುವ ನೀ |
ತಿಳಿದಿಂತಳುವರೆ ವೀರರಮಣಿ ಸೈರಿಪುದಳಲಂ || ೧ ||

**ವಾರ್ಧಿಕ್ಯ**

ಕುರುಳ ನೇವರಿಸಿ ಕಂಬನಿಯೊರಸಿ ಕಾಮಿನಿಯ |
ತೆರಳಿಸಿ ನಿಜಾಲಯಕೆ ಹರಿಯ ಧುರಕೆನುತ ಕಾ |
ದಿರಿಸಿದುರು ಬಲ ಶಸ್ತ್ರವೆರೆದು ಘನ ಸಾಹಸವ ಮೆರೆದು ಸಿರಿವರನ ರಣದಿ ||
ಸೆರೆವಿಡಿವೆನೆನುತಲುರವಣಿಸಿ ರಥವೇರ್ದಸುರ |
ರರಸ ಪೊರಮಡಲವನಿ ಕಂಪಿಸಿತು ಕಪಿಕಟಕ |
ಮರಣ ಭಯದಿಂದೋಡುತಿರೆ ರಘೂದ್ವಹ ಚಾಪ ಶರವಾಂತು ರಿಪುದಹನಕೆ || ೧ ||

**ಭಾಮಿನಿ**

ತೆರಳುತಿರಲರಿತನಿಮಿಷಾಧಿಪ |
ಕರೆದು ಮಾತಲಿಯೊಡನೆ ಯಮ್ಮಯ |
ವರರಥವ ಮೇಳವಿಸಿ ಸಹಕರಿಸೆನೆ ರಘೂತ್ತಮನ ||
ಹೊರೆಗೆ ನಡೆತಂದೆರಗಿ ಸೂಚಿಸೆ |
ಕರವ ಪಿಡಿದಸುರಾರಿ ಸ್ಯಂದನ |
ವರವನೇರ್ದೊಡನಸುರಗೆಂದನು ಗಜರಿ ಘರ್ಜಿಸುತ || ೧ ||

**ರಾಗ ಶಂಕರಾಭರಣ ಮಟ್ಟೆತಾಳ**

ಖುಲ್ಲ ದನುಜ ನಿಲ್ಲು ಕಳವಿ | ನಲ್ಲಿ ಸತಿಯ ತಂದ ದುರುಳ |
ಚಲ್ಲ ಬಡಿವೆ ಕ್ಷಣದೊಳೆಂದ | ಫುಲ್ಲಲೋಚನ || ೧ ||

ಕಳವಿನಲ್ಲಿ ಪ್ಲವಗ ಪತಿಯ | ಗೆಲಿದನ್ಯಾರು ಸತಿಯ ಮೂಗ |
ನಿಳುಹಿದಧಮ ನಿಲು ನಿಲೆಂದ | ಕಲಿ ದಶಾನನ || ೨ ||

ಓಡಿ ಬಲಿಯ ಚರನ ನೋಡಿ | ವೇದವತಿಯ ಶಾಪಗೊಂಡ |
ಹೇಡಿ ಕಾರ್ತವೀರ್ಯ ಸೆರೆಗೆ | ದೂಡಿಸಿದನಲ || ೩ ||

ದಂಡ ನಡೆಸುತಖಿಲ ಬ್ರ | ಹ್ಮಾಂಡವನ್ನು ಗೆಲಿದ ಸತ್ವ |
ದಂದವರಿಯದಾದೆ ಮನುಜ | ಮಂದ ಮತಿಯಲ || ೪ ||

ಬಲ್ಲೆ ಮಿಥಿಲೆಗೈದಿ ಹರನ | ಬಿಲ್ಲಿನಡಿಯೊಳುರುಳಿದುದ ಸಾ |
ಸಲ್ಲಲಿತದಿ ಮುರಿದು ಗೆಲಿದೆ | ಫುಲ್ಲನೇತ್ರೆಯ || ೫ ||

**ರಾಗ ಭೈರವಿ ಅಷ್ಟತಾಳ**

ಮೃಡನಾವಾಸದ ಗಿರಿಯ | ನೆಗಹಿ ತೋಷ | ಪಡಿಸಿ ತ್ರಿಪುರ ವೈರಿಯ ||
ಪಡೆದೆ ಬೇಕಾದ ಸಂ | ಪದವ ಕಾರ್ಮುಕ ತನ | ಗಿದಿರೆ ನೀನರಿಯೆಯಯ್ಯ || ೧ ||

ಅರಿತಿಹೆವೈ ಸದ್ಯಕೆ | ಪರನಾರಿ ತ | ಸ್ಕರನೆಂಬ ಪರಿಯ ಜೋಕೆ ||
ತರುಣಿಯನಿತ್ತೆನ್ನ | ಚರಣಕೆರಗು ನಿನ್ನ | ಹರಣವನುಳುಹಲಿಕೆ || ೨ ||

ಮಾನಿನಿ ಮಣಿಗಳನು | ಭಂಗಿಸಲಪ್ಪ | ಹಾನಿಯೇನೆಂಬುದನು ||
ನೀನರಿವಡೆ ತಂದೆ | ನಾ ನಾರಿ ನಿನಗೇಕೆ | ಕಾನನ ತಿರುಗಲಿಕೆ || ೩ ||

**ರಾಗ ಮಾರವಿ ಏಕತಾಳ**

ಅರರೆ ಖಳಾಧಮ | ಪರಿಕಿಸು ವನಸಂ | ಚರರೆಮ್ಮಯ ಬಲುಹ ||
ಶಿರವರಿದವನಿಯ | ಹೊರೆಯ ಕಳೆವೆ ಫಥ | ದುರುಳನೆನುತ ಶರವ || ೧ ||

ತೂರಲದರ ಪುಡಿ | ಹಾರಿಸಿ ದಶಗಳ | ಭೋರಿಡುತಾಗ್ರಹದಿ ||
ಧಾರಿಣಿ ಕಂಪಿಸೆ | ಹೇರಿದನುರು ಶರ | ವಾರವ ವಿಗ್ರಹದಿ || ೨ ||

ಖಂಡಿಸಿ ಸಮರೋ | ದ್ದಂಡ ರಘೂದ್ವಹ | ತುಂಡಿಸೆ ಚಾಪವನು ||
ಕೊಂಡನ್ಯವ ಮುಂ | ಕೊಂಡು ದನುಜ ಶರ | ವೃಂದದಿ ಮುಸುಕಿದನು || ೩ ||

**ವಾರ್ಧಿಕ್ಯ**

ದಾನವಾಧಿಪನಸಮ ಬಾಣಕಿತಿ ಮಿತಿಯಲ್ಲ |
ಚೂರ್ಣಿಸುವ ರಘು ಪತಿಯ ತ್ರಾಣಕೆಣೆ ತೋಣೆಯಿಲ್ಲ |
ಚಾಣರವರುರು ಶಕ್ತಿ ಸೋನೆಯಿಂದೆಚ್ಚಾಡ ಲೇನೆಂಬೆನದ್ಭುತವನು ||
ಕಾಣದಾಯ್ತುವನಿ ನಭ ವೇಣ್ದೆಸೆಯೊಳುರಿ ಗೆದರಿ |
ಭಾನು ಪಥಕೆಡರಾಯ್ತು ಕ್ಷೋಣಿಯೀರೇಳ್ಕಮರಿ |
ಪ್ರಾಣಕುಬ್ಬಸವಾದುದೇನು ಸತ್ವಾಧಿಕನೊ ಕೌಣಪೇಂದ್ರ ಧರೆಯೊಳು || ೧ ||

**ಭಾಮಿನಿ**

ಧರೆಯ ಮರುಕವ ಕಂಡು ಜಾನಕಿ |
ಯರಸನುರೆ ದಿವ್ಯಾಸ್ತ್ರದಿಂದಶ |
ಶಿರವನೊಮ್ಮೆಗೆ ಕಡಿದನರಿತನಿಮಿಷರು ಫೇಯೆನಲು ||
ಮರಳಿ ಚಿಗಿಯುತ್ತಿರ್ದವದನರಿ |
ದರಿದು ಮೈಸಿರಿಗುಂದಿ ಮನದೊಳು |
ಮರುಗಿದನು ರಘುನಾಥನಚ್ಚರಿಯೇನಿದೆಂದೆನುತ || ೧ ||

**ವಾರ್ಧಿಕ್ಯ**

ಏನಿದದ್ಭುತವರಿದಡಾನಿವನ ಶಿರವರಿದ |
ಡಾನುವನಹಾ ಚಿಗುರಿ ದಾನವನ ಕೊಲುವ ಗುರಿ |

ಕ್ಷೀಣವಾಯ್ತುಮಮ ನುಡಿದೇನು ತಾನಿತ್ತ ನುಡಿ ಹಾನಿಯಾಯ್ತು ಕಟ ಜಗದಿ ||
ಭಾನು ಕುಲಜರ ಕೀರ್ತಿ ಮ್ಲಾನವಾದುದು ಪೂರ್ತಿ |
ತಾನುದಿಸಿ ದಿಟವಲಾ ಮಾನಿನಿಯ ಬಿಡಿಸೆ ಬಲ |
ಹೀನನಾದೆನೆನುತ್ತಲಾ ನರೇಂದ್ರಂ ಪೊತ್ತ ಮೌನದಿಂದಿರೆ ಕಾಣುತ || ೧ ||

**ರಾಗ ವಸಂತ ತೋಡಿ ಅಷ್ಟತಾಳ**

ಏನೋ ರಾಘವ | ದೀನ ಮುದ್ರೆಗಳು | ತ್ರಾಣಿಯರರೆ ಮಗು | ಳೇನು ಮೌನಗಳು || ಪಲ್ಲ ||
ದೇವನೆನುತ ನಂಬಿ | ದಾ ವಿಭೀಷಣಗಿಂಬಿ | ನ್ನಾವ ಕಡೆಯೊಳುಂಟು |
ಸಾವು ಸನಿಹ ಬಂತು || ಏನೊ || ೧ ||

ರಣದೊಳೆನ್ನನುಜೈಸಿ | ವನಿತೆಯ | ಮೇಳೈಸಿ | ಮನೆಯ ಸೇರುವ ಭ್ರಾಂತು |
ಕನಸಾಗಿ ಹೋಯ್ತು || ಏನೊ || ೨ ||

ಹರನ ಧನುವನೆತ್ತಿ | ಮುರಿದ ಮಹಾಶಕ್ತಿ | ಮೆರೆಸಬಾರದೆ ಮಿಗೆ |
ಮರುಕವೇನಿದು ತೆಗೆ || ಏನೊ || ೩ ||

**ಭಾಮಿನಿ**

ಭರಿತ ಗರ್ವದೊಳಿಂತು ರಾವಣ |
ಜರೆಯೆ ಕೆಂಗಿಡಿಗೆದರಿ ರಾಘವ |
ಕೆರಳಿ ತುಡುಕಲು ಧನುವ ಪರಿಕಿಸುತಲಿ ವಿಭೀಷಣನು ||
ದುರುಳನೆದೆಯೊಳಗಿದೆ ಸುಧಾರಸ ಭರದಿ |
ತೆಗೆಯೆನೆ ವಿಲಯ ವನ್ಹಿಯ |
ಶರವನುರಕಿಡಲಸುರ ಮೈಮರೆತಾಗ ಚಿನ್ಮಯನ || ೧ ||

**ವಾರ್ಧಿಕ**

ಕಂಡನಸುರೇಂದ್ರನಖಿಲಾಂಡ ನಾಯಕನ ವಪು |
ಮಂಡಲದಿ ಭೂವ್ಯೋಮ ಪಾತಾಳ ಲೋಕ ಮಾ |
ಖಂಡಲಾದಿತ್ಯ ವಸು ರುದ್ರ ಮರುದಮರ ಗಣ ಸಿಂಧು ನಭ ದಶದಿಶಗಳ ||
ಸಂದ ಖಳ ನರ ಭುಜಗ ಸಂದಣಿಗಳಮಿತ ಋಷಿ |
ಮಂಡಳಿಯ ಗ್ರಹ ತಾರ ನಿವಹ ತಿರ್ಯಗ್ಜಂತು |
ವೃಂದನದಕಾಂತಾರ ಗಿರಿ ನಿಕರ ಸಹಿತನ್ಯಮೊಂದಿಲ್ಲದಾ ವಿಶ್ವವ || ೧ ||

**ರಾಗ ಮಧು ಮಾಧವಿ ತ್ರಿವುಡೆತಾಳ**

ಕಂಡು ಪುಳಕೋತ್ಸವದಿ ರಘುವರ | ಗೆಂದನೊಲಿದೆಯ ದೇವ ತನ್ನಯ ||
ಗಂಡುತನಕಿದೆ ಸಾಕು ಫಲಿಸಿತು | ಕೊಂಡ ಕಾರ್ಯ ಸರಾಗದಿ || ಕಂಡ ತೆರದಿ || ೧ ||

ಮಹಿಮ ತವ ಚರಣಾಗ್ರಹಾನು | ಗೃಹವಭಿನ್ನಗಳದರೊಳಾ ಸಂ ||
ನ್ನಿಹಿತ ಪಥವೆನಿಪತಿ ವಿರೋಧವ | ಗ್ರಹಿಸಿ ಹಗಲಿರುಳೆನ್ನದೆ || ಅರಸುತಿರ್ದೆ || ೨ ||

ವಂಚಿಸಿದೆ ಬಲುತೆರದೊಳರಸಿ ಪ | ಳಂಚಿಸಿದೆ ನಡಿಗಡಿಗೆ ತಿಳಿದರ ||
ಸಂಚೆಗಮನೆಯ ನೆವದಿ ದರುಶನ | ಸಂಚಿತವಿದಾಯ್ತಿಂದಿಗೆ | ಪುಣ್ಯವೊದಗೆ || ೩ ||

ಸಿರಿ ಪದಾಬ್ಜಕೆ ಹರಣಗಾಣಿಕೆ | ಇರಿಸಿಹೆನು ಕೈಕೊಂಡು ಬಿಡದು ||
ದ್ಧರಿಸಿ ಮುನ್ನಿನ ಚರಣ ಸೇವೆಯ | ಹರಿಯೆ ನೀ ಕೃಪೆಗೈವುದು || ಶರಣಗೊಲಿದು || ೪ ||

ತನುವಿನಾಶೆಗಳಿಲ್ಲ ಮಾತೆಯ | ಮಣಿದು ಬಿಡವವನಲ್ಲ ನಿಶ್ಚಯ ||
ರಣಕೆ ಬೆದರುವುದಿಲ್ಲೆನುತ್ತುರು | ಕಣೆಯ ವೃಷ್ಟಿಯಗರೆದನು || ದನುಜ ವರನು || ೫ ||

**ರಾಗ ಕಾಂಬೋಧಿ ಝುಂಪೆತಾಳ**

ಕಡಿವುತದ ನೃಪತಿ ಕುಂ | ಭಜದತ್ತ ವಿಧಿ ವಿಷ್ಣು | ಮೃಡ ಶಕ್ತಿ ಶರವ ಸಿಂಜಿನಿಗೆ ||
ಇಡಲು ತ್ರೈಜಗ ನಡುಗಿ | ತಡಿಗಡಿಗೆ ಬಲವೆರಡು | ಬೆದರಿ ಕಣ್ಮುಚ್ಚಿತರೆ ಘಳಿಗೆ || ೧ ||

ಪರಿಕಿಸುತಲಸುರ ಪ್ರತಿ | ಶರವಿಡದೆ ದೃಢಮನದಿ | ಹರಿಯ ಧ್ಯಾನಿಸುತ ನಿಂದಿರಲು ||
ಭರದಿ ಕಡಿವಡೆದು ಗರ | ಗರನೆ ಬಾಂದಳ ಶಿರ | ತಿರುಗಿ ರಘುಪತಿಯ ಚರಣದೊಳು || ೨ ||

ಮಾಲೋಲ ಶರಣೆಂದು | ಬೀಳಲದ ನೆಗಹಿ ಕರು | ಣಾಳು ತಕ್ಕೈಸಿ ಧರೆಗಿಡಲು ||
ಪೇಳಲೇನಾತ್ಮ ಸಿರಿ | ಯಾಳಿದನೊಳೈಕ್ಯತೆಯ | ತಾಳಿತನಿಮಿಷರು ಜಯವೆನಲು || ೩ ||

ಕಂಡು ಮೇಲ್ವಾಯ್ದು ಖಳ | ಸಂದಣಿಯನಮಿತ ಶರ | ವೃಂದದಿಂ ತರಿದ ಭೂಪತಿಯು ||
ಸಂದರಾಹವದಿ ತೊಂ | ಬತ್ತು ಕೋಟಿ ನಿಶಾಟ | ರಿಂದಿಗೊಳಿತಾಯ್ತು ವಸುಮತಿಯು || ೪ ||

ಮರುಗುತಿದ ತೆರಳಿ ಚರ | ರರುಹೆ ಹಾಯೆಂದು ಮಯ | ತರಳೆ ಹಂಮ್ಮೈಸಿ ಚೇತರಿಸಿ ||
ತರಹರಿಸು ತೈದಿ ನಿಜ | ಹರಣದೊಲ್ಲಭನ ಶವ | ಕೆರಗಿ ತೆಗೆದಪ್ಪಿ ಕಾತರಿಸಿ || ೫ ||

**ರಾಗ ಸಾವೇರಿ ಆದಿತಾಳ**

ಏನಿದು ಮುನಿಸು ಕಾಂತ | ಮಾತಾಡು ಪ್ರಿಯ | ಮಾನಿನಿಯೊಳು ವಿಕ್ರಾಂತ ||
ನೀನಾಗಿ ಸಮರದೊಳು | ರಘುಪತಿಗಿತ್ತೆ | ಪ್ರಾಣವನಿಂದಿನೊಳು || ೧ ||

ವರ ಭುಜ ಬಲ ವೀರ್ಯದಿ | ನಿನ್ನನು ಪೋಲು | ವರಕಾಣೆ ಮೂರ್ಲೋಕದಿ ||
ಸುರನರನುತ ಧೀಮಂತ | ತವ ಕಾಂತೆಗಿಂತ | ಪರದೇಶಿತನವೆ ಕಾಂತ || ೨ ||

ಪರನಾರಿಗಳುಪಿದಡೆ ಇಂತಪ್ಪುದೆಂದು | ಧರಣಿಗಾದರ್ಶನಾದೆ ||
ಅರಿತು ಸೌಖ್ಯದಿ ಬಾಳಲಿ | ಜಗವೆಂದು ಲಕ್ಷ್ಮೀ | ವರನ ಪಾದದೊಳುರುಳಿ || ೩ ||

**ಭಾಮಿನಿ**

ದೇವ ನೀನೀಜಗಕೆ ಭಕ್ತರ |
ಭಾವವರಿತೊಲಿದುದ್ಧರಿಪ ಕರು |
ಣಾವನಧಿ ಸತಿಗೀಯೊ ಕಾದಲನೊಡನೆ ಸದ್ಗತಿಯ ||
ಜೀವ ತಾನೈದಿಹನು ಮಿಗೆ ನೀ |
ರ್ಜೀವವೀಜಡ ತನುವ ಜತೆಯಲಿ |
ಪಾವಕಂಗರ್ಪಿಸುವೆನಪ್ಪಣೆಯೀವುದೆನೆ ಕೇಳಿ || ೪ ||

**ರಾಗ ಸವ್ವಾ ಏಕತಾಳ**

ಭಲಾ ಭಲಾ ನಿ | ಶ್ಚಲ ಸುವ್ರತೆ ನಿನ | ಗೊಲಿದುದು ಮನ್ಮನ ದಿಟವಮ್ಮ ||
ಇಳೆಯ ಮನುಜರಘ | ಗಳೆವುದು ಭಕ್ತಿಗ | ಳಲಿ ಭಜಿಸಲು ಪತಿವ್ರತೆ ನಿನ್ನ || ೧ ||

ಶ್ರುತಿಸಮ್ಮತವತಿ | ಹಿತವವನಿಗೆ ಪತಿ | ಜತೆಯಲಿ ಸತಿಪೊಂದಲು ಚಿತೆಯ ||
ಚ್ಯುತಿಯಿಲ್ಲದ ಸ | ದ್ಗತಿಯಿತ್ತಿಹೆ ಮಹಾ | ಸತಿ ಬಿಡು ಬಿಡು ಮನಸಿನ ವ್ಯಥೆಯ || ೨ ||

ಕಾದಲನೊಡನೆ ವಿ | ನೋದದಿ ನಡೆಮನ | ವಾದ ತೆರದಿ ಸದ್ಗುಣ ಶೀಲೆ ||
ಬೇಡು ವರವ ದಯ | ಮಾಡುವೆನೆನಲುರ | ಮಾಧವನಡಿಗೆಡೆದಾ ಬಾಲೆ || ೩ ||

**ಭಾಮಿನಿ**

ಏ ಸುಮಂಗಲ ಚರಿತ ಮಗುಳಿ |
ನ್ನೇಸು ದೋಷಿಗಳುದಿಸಿದರೆಯು ವಿ |
ಭೀಷಣನ ತೆರ ಸ್ವಜನದ್ರೋಹಿಗಳೊಗೆಯದಿರಲಿಳೆಗೆ ||
ಆಸೆ ಬೇರೊಂದಿಲ್ಲ ತನ್ನ ವಿ |
ಲಾಸದಖಿಲ ಸುವಸ್ತು ನಿಚಯವು |
ಮೀಸಲವನಿಜೆಗದನು ಸ್ವೀಕರಿಸುವುದು ಮಮತೆಯಲಿ || ೧ ||

**ವಾರ್ಧಿಕ್ಯ**

ಎನುತ ಭಕ್ತಿಯೊಳೆರಗಲಸ್ತೆನುತಲಾ ಸತಿಯ |
ಚಿನುಮಯಂ ಬೀಳ್ಕೊಟ್ಟೊಡೈದಿ ಪತಿಯೊಡನೆ ಚಿತಿ |
ಯನು ಪೊಕ್ಕು ಹರುಷ ಮಿಗಿಲಮಲ ಸಿರಿ ಸಾಯುಜ್ಯವನು ಪೊಂದಲವಳಿತ್ತಲು ||
ಜನಕಜೆಯ ಬಂಧನವ ಬಿಡಿಸಿ ಕರೆತರೆ ವಿಭೀ |
ಷಣ ರಾಮಚಂದ್ರನಪ್ಪಣೆಯಾಂತು ಭೂಸುತೆಗೆ |
ಮಣಿದು ವಾರ್ತೆಯ ಬೆಸಸಲತಿ ಹರುಷ ಭಾರದಿಂದಿನಿಯನೆಡೆಗೈತಂದಳು || ೧ ||

**ಭಾಮಿನಿ**

ಪತಿಯ ಕಂಡತ್ಯಧಿಕ ಹರ್ಷಾ |
ತ್ವತಿತ ಬಾಷ್ಪದಿ ತೊಳೆವುತಂಗವ |
ಪತಿಕರಿಸಿ ಪೊರೆಯೆಂದಳಂಗನೆಯಡಿಗೆ ಮುಡಿಯಿರಿಸಿ ||
ಪತಿತ ಪಾವನ ಸರಿದು ಸತಿ ಖಳ |
ಪತಿಯ ಬಂದಿಯೊಳಿರ್ದು ಸದ್ಯಕೆ |
ಪತಿತಳಹೆ ಚಿತಿಗಿಳಿಯದಾಂ ಪರಿಗ್ರಹಿಸಲರಿದೆಂದ ‖ ೧ ‖

**ರಾಗ ಕೊರವಿ ಆದಿತಾಳ**

ಪೇರ್ಮೆಯಿದುವೆ ಸ | ದ್ಧರ್ಮಕೆ ಜಗದೊಳು | ಕೂರ್ಮೆಯೆಂಬುದಿನಿತಿಲ್ಲ ||
ಧರ್ಮಶಾಸ್ತ್ರಿ ಕೃತ | ಕರ್ಮಕೆನುತ ಮಿಗೆ | ನಿರ್ಮಿಸೆ ಚಿತೆಯ ರಮಾನಲ್ಲ ‖ ೧ ‖

ಕಾಣುತಲಾ ವನ | ಜಾನನೆ ಪತಿಪದ | ಕಾನಿಸಿ ಮುಡಿಯ ಮುಗಿದು ಕೈಯ್ಯ ||
ಪ್ರಾಣದೊಡೆಯ ತವ | ಮಾನಿನಿಯೊಳವ ನಿ | ಧಾನಿಸಲನಲ ಸೋಂಕಲು ಮೈಯ್ಯ ‖ ೨ ‖

ಧಾರ್ಮಿಕ ತವ ಸಹ | ಧರ್ಮಿಣಿಯೇ ದೃಢ | ಕರ್ಮಯೋಗಿ ಜನಕಾತ್ಮಜೆಯೆ ||
ನಿರ್ಮಲತೆಯ ಜಗ | ಸಮ್ಮೀಕ್ಷಿಪುದೆನು | ತೊಮ್ಮೆಯೆ ಜಿಗಿದಳು ಸುರರುಲಿಯೆ ‖ ೩ ‖

**ಭಾಮಿನಿ**

ಪರಮ ಪಾತಿವ್ರತ್ಯದುರಿಗುರಿ |
ಸರಿದು ನಿಲಲಭ್ರದಲಿ  ಸುಮನಸ |
ರೊರೆದರವನಿಜೆಯೆಡೆಗೆ ಕಲ್ಮಷ ಸೋಂಕದೆಂದೆನುತ ||
ತರಣಿ ಕುಲದೇಳಿಗೆಗೆ ತಕ್ಕವ |
ಳರಸಿಯನು ಸ್ವೀಕರಿಸು ಸಂಶಯ |
ವಿರಿಸಬೇಡೆಮ್ಮಾಜ್ಞೆಯೆಂದನು ನಭದಿ ದಶರಥನು ‖ ೧ ‖

**ವಾರ್ಧಿಕ್ಯ**

ಸುರರ ಮೊರೆ ಪಿತನಾಜ್ಞೆಯುರಿಗಿಳಿದು ಕೊಂಕದಿಹ |
ಸಿರಿಮುಡಿಯ ಸುಮದ ಪರಿಯರಿತು ನಿಶ್ಯಂಕೆಯಿಂ |
ಧರಣಿಜೆಯ ಕರೆದಪ್ಪಿ ಕರುಣದಿಂ ಕೋಸಲೇಶ್ವರ ಪರಿಗ್ರಹಿಸುತವಳ ||
ಧುರದಿ ಮಡಿದಿಹ ಕಪಿಗಳಂ ಬದುಕಿಸುತ ಲಂಕೆ |
ಯರಸು ಪಟ್ಟವ ವಿಭೀಷಣಗಿತ್ತು ಪುಷ್ಪಕದಿ |
ತರುಣಿ ಯವರಜ ನಿಖಿಲ ಪರಿವಾರದೊಡನೆ ಸತ್ವರದಿ ಪುರಕೈತಂದನು ‖ ೧ ‖

**ಭಾಮಿನಿ**

ಮುರುಗುತಿತ್ತಲು ಭರತನಗ್ರಜ |
ನೊರೆದವಧಿಯಯ್ತೆನುತ ವೈಶ್ವಾ |
ನರನ ಕುಂಡದಿ ಸ್ಥಾಪಿಸುತ ಬಲವಂದು ಭಕ್ತಿಯಲಿ ||
ಕರವ ಮುಗಿದಾ ಹರಿಯ ಚರಣವ |
ಸ್ಮರಿಸಿ ವನ್ಹಿಯ ಪೊಗುವೆನೆಂಬನಿ |
ತರಲಿ ರಾಘವನಿಳಿದು ತೆಗೆದಪ್ಪಿದನು ಸೋದರನ ‖ ೧ ‖

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅನುಜನನು ತಕ್ಕೈಸಿ ಭವನವ | ಚಿನುಮಯಾತ್ಮಕ ಪೊಕ್ಕು ಮರುಗುವ |
ಜನನಿಯರ ಸಂತೈಸಿದನು ದರು | ಶನವನಿತ್ತು ‖ ೧ ‖

ಪರಿಜನರ ಮನ್ನಿಸುತ ಗುರುವರ | ನೊರೆದ ಸುಮುಹೂರ್ದಿ ರಘೂದ್ವಹ |
ಮೆರೆವ ಸಿಂಹಾಸನವನೇರ್ದನು | ತರುಣಿ ಸಹಿತ ‖ ೨ ‖

ಪುಣ್ಯ ಪುರುಷನ ಶಿರದಿ ಋಷಿಗಳು | ಪುಣ್ಯ ಜನದಭಿಷೇಕವೆಸಗೆ ಸು |
ವರ್ಣದಾರತಿಯೆತ್ತಿದರು ಸುರ | ಕನ್ನಿಕೆಯರು ‖ ೩ ‖

**ವಾರ್ಧಿಕ್ಯ**

ಹರನು ಪರಶಿವೆಗೊರೆದ ವರ ಪುಣ್ಯ ಚರಿತೆಯಿದ |
ಹರಿಯು ಪ್ರೇರಿಸಿದಂತೆ ಬರೆದು ಪ್ರಕಟಿಸಿದೆ ನು |
ತ್ತರ ಕನ್ನಡದಿ ಸಿದ್ಧಪುರದ ಬೆಳಸಲಿಗೆಯ |
ಮ್ಮಿರವು ಬುಧ ವಿಠಲಾಖ್ಯನ ||
ತರಳ ಗಣಪತಿಯೆಂದು ಕರೆವರೆನ ಗೀ ಧರೆಯೊ |
ಳಿರುವ ವಿದ್ವನ್ಮಣಿಗಳೆನ್ನೆರಡನೆಯ ಕೃತಿಯೊ |
ಳಿರುವ ದೋಷವ ತಿದ್ದಿ ಮೆರೆಸಲಿಷ್ಟಾರ್ಥಮಂ ಸ್ಮರಪಿತಂ ಕರುಣಿಸುವನು ‖ ೧ ||

**ಮಂಗಲ ಪದ**

**ರಾಗ ಢವಳಾರ ಏಕತಾಳ**

ಮಂಗಲಂ ಜಯ ಮಂಗಲಂ ||
ಮಂಗಲ ಮತ್ಸ್ಯಗೆ ಕೂರ್ಮನಿಗೆ | ಮಂಗಲ ವರಹಗೆ ನರಹರಿಗೆ ||
ಮಂಗಲ ವಟು ವಾಮನ ಮೂರ್ತಿಗೆ ಜಯ | ಮಂಗಲ ಭಾರ್ಗವ ರಾಮನಿಗೆ ||
ಜಯ ಮಂಗಲಂ ‖ ೧ ‖

ಕುಶಿಕಸವನ ಸಂರಕ್ಷಣಗೆ | ಶಶಿಧರ ಕಾರ್ಮುಕ ಭಂಜನಗೆ ||
ವಸುಧಿಜೆ ನೆವದಿಂಸುರರ ಮರ್ದಿಸಿ | ರಸೆಯ ಪೊರೆದ ರಘು ರಾಮನಿಗೆ ||
ಜಯ ಮಂಗಲ || ೨ ||

ಮಂಗಲ ಬೌದ್ಧಗೆ ಕಲ್ಕ್ಯನಿಗೆ |
ಮಂಗಲ ಸುಜನೋದ್ಧಾರಕಗೆ ಮಂಗಲ ಶೇಷಾಚಲದೊಳು ನೆಲೆಸಿಹ
ರಂಗನಾಯಕ ಶ್ರೀನಿವಾಸನಿಗೆ ಜಯ ಮಂಗಲಂ || ೩ ||

|| *ಶ್ರೀ ವೆಂಕಟೇಶಾರ್ಪಣವಸ್ತು* ||

*ಅಂತು ಪದ ೪೫೫೫ಕ್ಕೆ ಯಕ್ಷಗಾನ ಸಂಪೂರ್ಣ ರಾಮಾಯಣ ಸಂಪೂರ್ಣವು* || *ಶ್ರೀ* ||

## ದಶಾವತಾರ ಪ್ರಸಂಗ

## ಪಾತ್ರಗಳು

| | |
|---|---|
| ದೇವೇಂದ್ರ | ಬಲಿಚಕ್ರವರ್ತಿ |
| ಮಹಾವಿಷ್ಣು | ವಾಮನ |
| ತಮಾಸುರ | ವಿಂಧ್ಯಾವಳಿ |
| ಮತ್ಸ್ಯ | ಭಾರ್ಗವ |
| ಕೂರ್ಮ | ಕಾರ್ತವೀರ್ಯ |
| ಹಿರಣ್ಯಾಕ್ಷ | ಶ್ರೀರಾಮ |
| ವರಾಹ | ರಾವಣ |
| ಹಿರಣ್ಯಕಶಿಪು | ಮಂಡೋದರಿ |
| ಪ್ರಹಲ್ಲಾದ | ಶ್ರೀಕೃಷ್ಣ |
| ನರಸಿಂಹ | ಶಿಶುಪಾಲ |

## ದಶಾವತಾರ ಪ್ರಸಂಗ

|| ಶ್ರೀ ಶಾರದಾಂಬಾಯೈ ನಮಃ ||
ಯಕ್ಷಗಾನ ದಶಾವತಾರವೆಂಬ ಪ್ರಸಂಗವು

ರಾಗ ಶ್ರೀ || ಯೇಕ
ನಮೋ ವಿದ್ಯಮಾತೆ | ಹೇ ಮಾತೆ | ನಮೋ ಭಾಗ್ಯದಾತೆ ||
ಶಕ್ತಿ ಕಲಾನ್ವಿತೆ | ಮುಕ್ತಿಯನೀಯುತೆ | ಭಕ್ತರ ಪಾಲಿತೆ | ಪೃಥ್ವಿಗೆ ಲಲಿತೆ || ನಮೋ || ೧ ||

ಮಾಯಾವಿನೋದಿತೆ | ತೋಯಜ ಭವ ಹಿತೆ |
ಗಾಯನ ಶೋಭಿತೆ | ಪ್ರೀಯದ ಮಾತೆ || ನಮೋ || ೨ ||

ಧ್ಯಾನವನೀಯುತ | ಜ್ಞಾನದೊಳೊಲಿಯುತ | ಕಾಣಿಸು ಕವಿತಾ
ಶ್ರೇಣಿಯ ಸಂತತಾ || ನಮೋ || ೩ ||

**ಭಾಮಿನಿ**

ಗೌರಿ ಭಾರತಿ ಲಕ್ಷ್ಮಿ ಶಿವ ವಿಧಿ |
ಮಾರಪಿತ ದಿಕ್ಪಾಲ ಗಜ ಮುಖ |
ನಾರದಾದಿ ಮುನೀಂದ್ರ ಮುಖ್ಯರಿಗೆರಗಿ ಪ್ರಾರ್ಥಿಸುತಾ ||
ವಾರಣಾರಿ ವರೂಥೆ ಖಳ ಸಂ |
ಹಾರೆ ಮಹದುರ್ಗಾಂಬಿಕೆಯ
ಪಾದಾರವಿಂದಕೆ ಮಣಿದು ವರ್ಣಿಪೆನೀ ಮಹಾಚರಿತಾ || ೧ ||

**ಸೌರಾಷ್ಟ್ರ | ತ್ರಿವುಡೆ**

ಸೂತಮುನಿ ನೈಮಿಷವನದಿ ಸಂ | ಪ್ರೀತಿಯಲಿ ಶೌನಕರಿಗನುಪಮ |
ನೂತನದಿ ಭಾಗವತ ಕಥೆಯ | ನ್ನೋತು ತಿಳುಹೆ || ೧ ||

ಎಲೆ ಮಹೋತ್ತಮ ಲಾಲಿಸಾ ಮಹ | ಜಲಜನಾಭನ ಪೂರ್ಣ ಚರಿತೆಯ |
ಜಲಧಿ ಸ್ನಾನದಿ ಧನ್ಯರಾದೆವು | ತಿಳುಹಲೇನು || ೨ ||

ಮಾಧವನು ಮನವಲಿದು ವರ ಮ | ತ್ಸ್ಯಾದಿ ಪತ್ತವತಾರದಿಂದಲಿ ||
ಮೇದಿನಿಯೊಳುದ್ಭವಿಸಿ ಗೈದ ವಿನೋದ ಕಥೆಯಾ || ೩ ||

ವಿಸ್ತರಿಪುದಿನ್ನೊಮ್ಮೆ ನಮಗೆನು | ತರ್ಥಿಯಲಿ ಬಿನ್ನವಿಸೆ ಸೂತನು |
ಚಿತ್ತಜಯ್ಯನ ನೆನೆದುಸೂರ್ದ ಪ | ವಿಪ್ರ ಕಥೆಯಾ || ೪ ||

## ದೇವೇಂದ್ರ - ಮಹಾವಿಷ್ಣು

**ವಾರ್ಧಿಕ್ಯ**

ಚಿತ್ತವಿಸಿ ಮುನಿವರರು ವಿಸ್ತರಿಪೆ ಸತ್ಕಥೆಯ |
ವೃತ್ರಾರಿ ನಾಕದೊಳು ಮಿತ್ತನುದಯದೊಳಮಲ |
ನಿತ್ಯನಿಯಮವನೆಸಗಿ ರತ್ನಮಯ ವಿಷ್ಟರದೊಳಿತ್ತ ತಾನೋಲಗವನು ||
ಸಪ್ತದಿಕ್ಪಾಲರು ಸಮಸ್ತರಿಹ ಮಧ್ಯದೊಳ್ |
ವೃತ್ತಕುಚೆಯರ ಚೆಲ್ವ ನರ್ತನವ ನೀಕ್ಷಿಸುತ |
ಪೊತ್ತು ತೋಷವನು ಸುಪವಿತ್ರ ಸಭೆಯಿದಿರಿನೊಳ್ ಬಿತ್ತರಿಸಿದಂ ಸುರಪನು || ೧ ||

**ಕಾಂಬೋದಿ || ಝಂಪೆ**

ಕೇಳಿರೈ ದಿಗಧಿಪರು ಪೇಳುವೀ ನುಡಿಯ ನ | ಮ್ಮಾಳಿಕೆಯ ನಾಕನಗರಿಯಲಿ ||
ನೀಲಕಂಠನ ದಯವ ನೋಲೈಸುತೀವರೆಗೆ | ಬಾಳಿದೆವು ಸುಖದ ಸೊಭಗಿನಲಿ || ೧ ||

ಭೂತಳದೊಳೋರ್ವ ವಿಖ್ಯಾತನಹ ತಮನೆಂಬ | ಯಾತುಧಾನನು ಹಿರಿಯ ಕುಲದಿ ||
ಭೀತಿಯಿಲ್ಲದೆ ನಮ್ಮನೋತು ಕಂಗೆಡಿಸುವನು | ಪಾತಕಿಯು ಮದದಿ ಹಗೆತನದಿ || ೨ ||

ಮೇಧಿನಿಯೊಳಿಹ ಸಕಲ | ಕಾಧಾರಬಿಂಬವಹ | ವೇದಗಳನೈದಡಗಿಸಿಹನು ||
ಭೂದಿವಿಜರಿಂಗೆ ಕ | ರ್ಮೋದಯಕೆ ಬಲುಭಂಗ |
ಸಾಧಿಸಿದನಾ ತಮಾಸುರನು || ೩ ||

ಆದ ಕಾರಣದಿಂದ | ಛೇದಿಸಲು ಬೇಕವನ | ಮಾಧವನ ಬಳಿಗೈದಿ ಬಹೆನು ||
ಭಾದೆಯಿಲ್ಲದ ತೆರದಿ | ಕಾದಿಹುದು ನೀವೆನುತ | ಲೋದಿ ತೆರಳಿದ ಸುರಾಧಿಪನು || ೪ ||

**ಭಾಮಿನಿ**

ಸುರಪತಿಯು ವೈಕುಂಠ ಮಹ ಮಂ |
ದಿರದೆಡೆಗೆ ನಡೆತರಲು ಶ್ರೀಹರಿ |
ಮೆರೆದಿರಲು ಕಂಡೆರಗಿದನು ಕೈಮುಗಿದು ಭಕ್ತಿಯಲಿ ||
ಪರಮ ಕರುಣಾ ಶರಧಿ ಮುರಹರ |
ದುರಿತಹರ ಸಲಹೆಂದು ನುತಿಸಲು |
ಶಿರವನೆರೆಪಿಡಿದೆತ್ತಿ ಚಿನ್ಮಯನೆಂದ ವಿನಯದಲಿ || ೧ ||

**ಕೇತಾರಗೌಳ || ಅಷ್ಟತಾಳ**

ಸುರಪಾಲ ಕೇಳ್ನಿನ್ನ | ಸಿರಿಯ ಸಾಮ್ರಾಜ್ಯದ | ಶರಧಿಯೆಂತಿಹುದೀಗಲು |
ಸುರರು ದಿಕ್ಪತಿಗಳೆಲ್ಲರು ಕ್ಷೇಮದಿಂದಲಿ | ಮರೆದುಕೊಂಡಿಹರೆ ಪೇಳು || ೧ ||

ಹಿರಿಯ ಭಾಗಿಗಳೆಂದು ದುರುಳ ದೈತ್ಯರು ನಿಮ್ಮ | ಸುರಗದ್ದುಗೆಯನೇರಲು |
ಭರಿತ ವಿಕ್ರಮದಿಂದ ತೆರಳಿ ಬಂದರಿಗೆಲ್ಲ | ದೊರಕಿತು ಹಾನಿಗಳು || ೨ ||

ಇಂದಿನೊಳೋರ್ವನೀ ಬಂದ ಕಾರ್ಯಗಳೇನು | ಕುಂದಿದೆ ವದನವಿನ್ನು |
ಬಂದುದೆ ಭಯವು ಪೇಳೆಂದೆನಲೆರಗಿ ಪು | ರಂದರ ನಿಂತೆಂದನು || ೩ ||

**ಭೈರವಿ || ಝಂಪೆತಾಳ**

ಪರಮಪಾವನಮೂರ್ತಿ | ಹರಿಯೆ ನೀನೆನ್ನೊಡನೆ |
ಅರಿಯದವರೋಲೆಂದ | ದೊರೆಯಲೇನಿನ್ನು || ೧ ||

ಸೃಷ್ಟಿಯೊಳು ತಮ ದನುಜ | ಪುಟ್ಟಿ ಬೆಳೆದಿಹನೆಮ್ಮ |
ಪಟ್ಟಕೈತರೆ ಮುಂದೆ | ಬಟ್ಟೆಯೇನೆಮಗೆ || ೨ ||

ಆದಕಾರಣದಿಂದ | ಛೇದಿಸುತ ಮುಂದೆಮಗೆ |
ಬಾಧೆಯಿಲ್ಲದ ತೆರದಿ | ಮಾಧವನೆ ಸಲಹು || ೩ ||

**ಶಂಕರಾಭರಣ || ತ್ರಿವುಡೆ**

ಬೆದರದಿರು ಸುರರಧಿಪ ನಿಮ್ಮಯ | ಸದನ ಕೈತಹ ದುರುಳ ನಾ ||
ನಿಧನವೆಸಗುತಲೀವೆ ಸುಖಸಂ | ಪದವ ನಿಮಗೆ || ೧ ||

ವೇದಗಳನೈದಬ್ಧಿಮಧ್ಯದೊ | ಳಾ ದುರುಳನಡಗಿರ್ಪನು ||
ಮೇದಿನಿಯೊಳಹ ಕಾರ್ಯಭಾಗಕೆ | ಬಾಧೆಯಹುದು || ೨ ||

ವೇದ ಮಂತ್ರಳಡಗಿದರೆ ಕ | ರ್ಮೋದಯಕ್ಕತಿ ವಿಘ್ನವು ||
ಸಾಧಿಪುದು ಯಾಗಗಳನೆಸಗುವ | ಹಾದಿಯಿಲ್ಲ || ೩ ||

ಕೆಲದಿನದೊಳೀ ಕಾರ್ಯವೆಸಗುತ | ನೆಲೆಯೊಳಿರಿಸುವೆನೆಲ್ಲವಾ ||
ಖಳನ ಭಯಬಿಡಿರೆಂದು ಸುರಪನ | ಕಳುಹೆ ಹರಿಯು || ೪ ||

## ತಮಾಸುರ-ಮತ್ಸ್ಯ

**ಭೈರವಿ || ಝಂಪೆತಾಳ**

ಶರಧಿ ಮಧ್ಯದೊಳೆಸೆವ | ಪುರದಿ ತಮನೆಂದೆನುವ |
ದುರುಳ ತಾನೋಲಗವ | ಮೆರೆದೆಂದ ವಿಭವ || ೧ ||

ಶತ್ರುಗಳು ಹಗೆತನದಿ | ಯಿತ್ತ ಬಾರದ ತೆರದಿ |
ವತ್ತಿಕ್ಷೇತ್ರವೆ ಶರಧಿ | ನಿತ್ತುದತಿ ಸುಖದಿ || ೨ ||

ದಿತಿಯದಿತಿ ಸುತರು ಸಂ | ತತಿಯೊಂದೆ ಭಾವಿಸಲು |
ಗತಿಗೆಡಿಸಿದರು ನಮ್ಮ | ನತಿ ಮತ್ಸರದೊಳು || ೩ ||

ಬ್ರಂಹ್ಮ ಕ್ಷತ್ರಿಯರ ಶುಭ | ಕರ್ಮಕಾರ್ಯಾದಿಗಳು |
ನಿರ್ಮೂಲಗತಿಗಿಳಿದು | ದೊಮ್ಮೆ ಧಾತ್ರಿಯೊಳು || ೪ ||

ವೇದಮಂತ್ರಾದಿಗಳ | ನೋದಿ ಭೂಸುರರಖಿಳ |
ರೀ ಧರೆಗೆ ಭೇದಗಳ | ಸಾಧಿಪರು ಬಹಳಾ || ೫ ||

ಯಾಗ ಹೋಮಾದಿಗಳ | ಸಾಗಿಸಿದರದರ ಫಲ |
ಭೋಗಿಪರು ದಿಕ್ಪಾಲ | ರೀಗ ನಮಗಿಲ್ಲ || ೬ ||

ನಿದ್ರಿಸುವ ಕಮಲಜನು | ಕದ್ದು ವೇದಗಳನ್ನು |
ಅಬ್ಧಿಯೊಳಗಿಟ್ಟಿಹೆನು | ಗೆದ್ದನೆಲ್ಲರನು || ೭ ||

**ಕಂದಪದ್ಯ**

ಇನಿತು ತಮಾಸುರ ತನ್ನಯ | ಮನದೊಳು ಧೈರ್ಯವನೆಣಿಸಿದ ವೈರಿಗಳಿನ್ನೀ |
ವನಧಿಗೆ ಬರಲಾರಿಲ್ಲೆಂ | ದೆನುತಲೆ ಘನ ಗರ್ವದಿ ನಿಶಿಚರ ತಾ ಮೆರದಂ || ೧ ||

**ಭಾಮಿನಿ**

ಧರೆಯ ಭಾರವನಿಳಿಸಲೆಂದಾ |
ಹರಿಯು ಮತ್ಸ್ಯಾಕೃತಿಯ ಧರಿಸುತ |
ಶರಧಿಗಿಳಿದೈತಂದನಾ ಮಹದುರುಳನಿದ್ದೆಡೆಗೆ ||
ಪರಿಕಿಸುತ ಮತ್ಸ್ಯವ ತಮಾಸುರ ನರರೆ |
ಚೋದ್ಯವಿದೇನಿದೀ ಭೀ |
ಕರ ಮಹೋನ್ನತ ಪ್ರಾಣಿ ಬಂದುದ ಕಾಣೆನೀವರೆಗೆ || ೧ ||

**ಕೇತಾರಗೌಳ ಅಷ್ಟತಾಳ**

ಹಿಡಿವೆನೀ ಮತ್ಸ್ಯವ ಬಿಡೆನೆಂದು ಮುಂದಡಿ | ಯಿಡಲು ಕಂಡಾಕ್ಷಣದಿ |
ಅಡಗುತ್ತ ಜಲದಡಿಗೊಡನೆ ಮೇಲಕೆ ಬಂದು ಹುಡುಕಲು ಜಲಮಧ್ಯದಿ || ೧ ||

ದನುಜನೀಕ್ಷಿಸಿ ಬಂತೆಂದನುತ ಹತ್ತಿರಕೈದಿ | ಮನದೊಳಾಲೋಚಿಸುತಾ |
ವನಧಿಯೊಳಿಹ ಮತ್ಸ್ಯ ಗಣಗಳೀ ತೆರನಾಗಿ | ದಣಿಯುವದಿಲ್ಲೆನುತ || ೨ ||

ಎಲೆ ಮತ್ಸ್ಯಾಧಿಪನೆನೀ ಜಲನಿಧಿಯೊಳಗಿಂತು | ಚಲಿಸುತ್ತ ಹುಡುಕಲೇನು |
ಯಿಳೆಯಿಂದಲೇನಾದರಿಳಿದು ಬಂದಿತ್ತಲು | ಮುಳುಗಿತೆ ಪೇಳೆಂದನು || ೩ ||

ಆರು ನೀನೆಲೆ ಬಂದು ತೋರುವೆನೆನ್ನ ವಿಚಾರವೇನಿಂದಿನೊಳು |
ವಾರಿಧಿಯೊಳಗೆ ಸಂಚಾರಕೆ ಬೇರೊಂದು | ಕಾರಣವಿಹುದು ಕೇಳು || ೪ ||

**ಮಾರವಿ || ಯೇಕ**

ವೇದಗಳನು ಕದ್ದೊ ದಿಹ ದುರುಳ ಖ | ಳಾಧಮನ್ಯಾರೆನುತಾ |
ಈ ದುರ್ಧರ ಶರದಾದ್ಯಂತ್ಯವ ನೆರೆ | ಶೋಧಿಸುವೆನು ನಿರತಾ || ೧ ||

ಜಲದೊಳಗನುದಿನ ಚಲಿಸುವ ಪ್ರಾಣಿಗೆ | ಸಲಲೇಕೀ ವೇದಾ |
ಯಿಳೆಯಮರರ ಸಂಕುಲಕಲ್ಲದೆ ಬೇ | ರುಳಿದರಿಗೇನ್ವಾದ || ೨ ||

ಆದಿಪ್ರಪಂಚದೊಳಾಧಾರವು ಚತು | ರ್ವೇದವೆಧಾತ್ರಿಯಲಿ |
ಸಾಧನವಿದ ಸಂಪಾದಿಸಬೇಕೆಂ | ದೈದಿದೆ ನಾನಿಲ್ಲಿ || ೩ ||

ಶತಧೃತಿಯೆಂಬನ ಶ್ರುತಿತತಿಗಳ ತಂ | ದತಿಬಲ ನಾನಹೆನು |
ಮತಿಯುತ ನೀನ್ಯಾರತಿಶಯವಾಡಲು | ಮಥಿಸುವೆ ನಿನ್ನುವನು || ೪ ||

ಕಡು ಪಾತಕಿ ನಿನ್ನಡೆಯಿಹ ನಿಗಮವ | ಕೊಡುವೆಯ ಪೇಳ್ ಭರದಿ |
ಕೊಡದಿರೆ ನಿನ್ನನು ಮಡುಹುವೆನೀ ಮಹ | ಕಡಲೊಳಗೀ ಕ್ಷಣದಿ || ೫ ||

ಹರಿವಿಧಿ ಮುಖ್ಯರಿದರಿದೆನ್ನನು ಸಂ | ಹರಿಸಲು ಸತ್ವದಲಿ |
ಚರಜಂತುವೆನಿನ್ನುರವ ಬಗಿವೆ ನೋ | ಡರೆ ಕ್ಷಣಮಾತ್ರದಲಿ || ೬ ||

**ಭಾಮಿನಿ**

ಮೂರು ಮೂರ್ತಿಗಳೈದು ತೀ ಮಹ |
ಘೋರ ಶರಧಿಯ ನಡಿ ಮುಗುಚಿಮಿಗೆ |
ಚಾರು ಪಾದಕ್ಕೆರಗಿ ಬೇಡಿದರೀವನಲ್ಲಿನ್ನು ||
ಚೋರತನದಿಂದೈದಿನೀನಿ |
ವಾರಿಧಿಯ ಮಧ್ಯದಲಿ ವಿಕ್ರಮ |
ದೋರುವೆಯ ನಿಲ್ಲೆನುತ ಉಗ್ರದೊಳೊದದ ಮತ್ಸ್ಯವನು || ೧ ||

ಸಾಕು ಸಾಕೀ ದುರುಳನೊಡನೆ ವಿ |
ವೇಕ ನೀತಿಯೊಳೆಂಬ ಮತಿ ||
ನ್ನೇಕೆನುತ ಸೀಳ್ದನು ತಮಾಸುರನೊಡಲ ನಿಮಿಷದಲಿ ||
ಆ ಕಮಲ ಲೋಚನನು ಶ್ರುತಿಗಳ |
ತಾಕರದೊಳಾಂತೈದುತಲಿ ಮಿಗೆ |
ಲೋಕ ರಕ್ಷಣೆಗಿರಿಸಿ ಮೆರೆದನು ಬಹಳ ಕೀರ್ತಿಯಲಿ || ೨ ||

## ಕೂರ್ಮ

**ವಾರ್ಧಿಕ್ಯ**

ವರ ಋಷಿಗಳಾಲಿಸಿರಿ ಸುರರಸುರರೊಂದಾಗಿ |
ಶರಧಿಯಂ | ಮಥಿಸೆ ಮಂದರಗಿರಿಯ ನೆಳ ತಂದು
ಶರನಿಧಿಯೊಳಿಳುಹಲ್ಕೆ ಜರಿದುದದು ಪಾತಾಳಕಿರದಾತು ಮಹಜಲದೊಳು ||
ಸರುವರೊಂದಾಗಿ ಮನ ಮರುಗಿ ಬೆಂಡಾಗಿ ಶ್ರೀ |

ಹರಿಯನಂ ಸಂನ್ನುತಿಸಲ ರಿತು ಕೂರ್ಮಾಕೃತಿಯ |
ಧರಿಸಿ ವಾರಿಧಿಯ ಬಳಿ ತೆರಳಿ ವದಗಿಹ ಕಾರ್ಯವರಿತೆಂದನಚ್ಚರಿಯೊಳು || ೧ ||

**ಸಾಂಗತ್ಯ || ರೂಪಕ**

ಸುರರೊಂದು ಭಾಗ ದೈತ್ಯರು ವಂದು ಭಾಗ ವಿಂ | ತೆರಡ ಭಾಗಗಳೊಂದುಗೂಡಿ ||
ಶರಧಿಯ ಮಥಿಸೆ ಮಂದರಗಿರಿಯನು ತಂದು | ಯಿರಿಸಿದರಬ್ಧಿಯ ನೋಡಿ || ೧ ||

ಶರಧಿಯೊಳ್ ಮುಳುಗಿತದ್ಗಿರಿಯು ಕಾಣಿಸದಾಗೆ | ಬರಿದಾತು ಸುಧೆಯಬ್ಧಿ ಮಥನಾ ||
ಸರುವರಿಂಗಿಹ ಗರ್ವ ಮುರಿದುದಿಂದಿಗೆ ಯೆನ್ನ | ಸ್ಮರಿಸುವರಿದು ಚೋದ್ಯ ಹದನಾ || ೨ ||

ತಾಮಸೀ ಚರರ ನಿರ್ನಾಮವನೆಸಗಿ ಸು | ತ್ರಾಮ ಮುಖ್ಯರನೆಲ್ಲ ಪೊರೆದು ||
ಕಾಮಿತವೀಯಲೀ ನೇಮಕಿತ್ತಂಡದ | ಸ್ತೋಮ ವಂದಾಗಿರಲರಿದು || ೩ ||

ವನಧಿಯೊಳಮೃತ ಸಂಜನಿಸಿದ ಮೇಲೆ ನಾ | ನುಣಿಸುವೆ ಮನ ಬಂದ ತೆರದಿ ||
ಘನ ಕಾರ್ಯದೊಳಗಿಂದು ದಣಿಸಲಾಗದುಯೆಂದು | ಚಿನುಮಯ ನುಡಿದ ಸಂತಸದಿ || ೪ ||

ಮಂದರಾದ್ರಿಯನೆತ್ತಿ ಮುಂದೆ ಕಾಣಿಸದಿರೆ | ಸಿಂಧುಶಯನನೆಂಬ ಬಿರಿದು ||
ಕುಂದಿ ಪೋದಪುದು ತನ್ನಿಂದಾಹ ಕಾರ್ಯವ | ನಿಂದೆಸಗುವೆನು ತಾನೊಲಿದು || ೫ ||

ಬೇರೊಬ್ಬರಿಂದಲೀ ಘೋರ ಕಾರ್ಯವಗ್ಗೈಯ | ಲಾರದೆಂದೆನ್ನ ನಂಬಿಹರು ||
ಸಾರಿ ಪಾತಾಳದಿಂದೇರಿಸುವೆನು ಮತ್ತೆ | ತೋರಿದಂತೆಸಗಲೆಲ್ಲವರೂ || ೬ ||

**ಭಾಮಿನಿ**

ಮುರಹರನು ಮುಳುಗಿರ್ಪ ಮಂದರ |
ಗಿರಿಯ ಬೆನ್ನಿನೊಳೆತ್ತಿ ಕಾಣಿಸೆ |
ಪರುವತೋದಯವಾಯ್ತೆನುತಲೆಲ್ಲವರು ಸಂತ ಸದಿ ||
ಶರಧಿಮಥನವ ಗೈದರಾ ಮಧು |
ಹರನು ಭಕ್ತರ ಪೊರೆದು ದುಷ್ಟರ |
ತರಿದು ಕೀರ್ತಿಯ ನಾಂತು ಮೆರೆದನು ನಿರತ ವೈಭವದಿ || ೧ ||

## ಹಿರಣ್ಯಾಕ್ಷ-ವರಾಹ

**ಸೌರಾಷ್ಟ್ರ || ತ್ರಿವುಡೆ**

ಇತ್ತ ಶೋಣಿತ ಪುರದೊಳೊಂದಿನ | ದೈತ್ಯನಹ ಕನಕಾಂಬಕನು ನವ |
ರತ್ನಪೀಠದೊಳೋಲಗವ ತಾ | ನಿತ್ತು ನುಡಿದಾ || ೧ ||

ಕೇಳಿದಿರೆ ಸಚಿವಾದಿ ಮುಖ್ಯರು | ಪೇಳುವೀನುಡಿ ನಮ್ಮ ಹಿರಿಯರ ||
ಪೀಳಿಗೆಯ ಮಧುಕೈಟಭರ ನೆರೆ | ಸೀಲು ಮಾಡಿ || ೨ ||

ಮಾಧವನು ಮತ್ಸರದೊಳೀ ಮಹ | ಮೇಧಿನಿಯ ಗೈದೀರ್ಪನಂತೆ ವಿ ||
ರೋಧವೇನೆಮ್ಮವರು ಗೈದಪ | ರಾಧವೇನು || ೩ ||

ಹರದೃಹಿಣಸುರಪಾದ್ಯರೊಳಗತಿ | ಪರಮಘಾತಕಿ ಕಪಟನಿಶಿಚರ ||
ನೆರವಿಗಂತಕನಾದ ಹರಿಯೀ | ನೊರೆಯಲಿನ್ನು || ೪ ||

ಕುಲವಿರೋಧಿಯನುಳಿಸಿದರೆ ಮುಂ | ದಳಿವು ನಮ್ಮಯ ನೆರವಿಗಲ್ಲದೆ ||
ಬೆಳಗದೆಮ್ಮಯ ಕೀರ್ತಿಯ ದರಿಂ | ಕೊಲುವೆ ಹರಿಯ || ೫ ||

**ಕಾಂಬೋಧಿ ಝಂಪೆತಾಳ**

ಎಲ್ಲಿ ನೋಡಲು ಹರಿಯ ಸೊಲ್ಲಕಾಣೆನು ಬಹಳ | ಬಲ್ಲಿದನು ಕಪಟಸೂತ್ರದಲಿ ||
ಯೆಳ್ಳಿನಿತುದಾಕ್ಷಿಣ್ಯವಿಲ್ಲದವ ಸುರರಿಂಗೆ | ಸಲ್ಲುವನು ಪ್ರೀತಿಭಾವದಲಿ || ೧ ||

ಧರೆಯ ಸ್ಥಾವರ ಚರಾ | ಚರ ಭರಿತನಾಗಿ ಸಂ | ಚರಿಸುವನ ಮುರಿವದೆಂತಿನ್ನು ||
ಅರಿಯದಾದೆನು ಸೂತ್ರ | ವಿರಚಿಸುವೆ ಪೊಸತೊಂದ | ದೊರಕದಿರಲಾರಧಿಟವವನು || ೨ ||

ಭೂತಳವನೊವೆನು ರ | ಸಾತಳಕೆ ಮತ್ತದರೊ | ಳ್ಯಾತಕಿರನೆಂದು ಪರಿಕಿಪೆನು ||
ಯಾತುಧಾನರವಂಶ ಘಾತಕಿಯ ನೀಕ್ಷಿಸಿ ನಿ | ಪಾತವೆಸಗುವೆ ಹಗೆಯ ಬಿಡೆನು || ೩ ||

ವಿಧಿಭವಾದಿಗಳೆ ಬಂದಿದಿರಡ್ಡಗಟ್ಟಿದರು ಬೆದರುವವನಲ್ಲ ತ್ರೈಜಗದಿ |
ಬದಲು ಮಾತಿಲ್ಲೆನುತಲೊದರಿ ಧಾತ್ರಿಯನೆತ್ತಿ | ಮದದೊಳ್ಳೈದಿದ ನಿಶಾಚರನು || ೪ ||

**ಭಾಮಿನಿ**

ದುರುಳನವನಿಯನೊದನೆಂಬುದ |
ನರಿತು ಹರಿಯು ವರಾಹರೂಪವ |
ಧರಿಸಿ ಧರೆಯಿಂದಿಳಿದನತ್ತ ರಸಾತಳಾಗ್ರದಲಿ ||
ಭರದೊಳ್ಳೈತರುವಸುರ ನುರುಪಥ |
ವರಿತು ಮುಂದೈತರೆ ಮಹಾದು ||
ರ್ಧರ ಭಯಂಕರ ರೂಪಿಯನು ಕಂಡೆಂದನುಗ್ರದಲಿ || ೧ ||

**ಸೌರಾಷ್ಟ್ರ ತ್ರಿವುಡೆತಾಳ**

ಆರೆಲವೊ ಬಡವರಹ ಗಿರಿ ಕಾಂ | ತಾರ ಮಧ್ಯವನುಳಿದು ತನ್ನಯ |
ದಾರಿಗಡ್ಡವಗಟ್ಟಿ ನಿಂದೆಯ | ಸಾರು ಕೆಲಕೆ || ೧ ||

ಪ್ರಾಣಿವರ್ಗದ ಪಥದೊಳಸುರ | ಶ್ರೇಣಿ ನಡೆತಹುದಿದುವೆ ಚೋದ್ಯವಿ |
ದೇನು ನಿನ್ನಯ ಶಿರದೊಳೀರ್ಪನ | ವೀನ ಹೊರೆಯು || ೨ ||

ಧಾರುಣಿಯ ಪೊತ್ತೈದುತಿಹೆನು ವಿ | ಚಾರವೇನಿದರೊಳು ವರಾಹನೆ |
ದಾರಿ ಬಿಡದಿರೆ ಕೊಲುವೆನೆಂದೆನ | ಲಾರು ಭಟಿಸಿ || ೩ ||

ಕಾನನವು ಸಹಿ ತುದಿಸಿ ಬೆಳದಿಹ | ಕ್ಷೋಣಿಯನು ನೀನೊದರೆಮ್ಮಯ |
ಪ್ರಾಣಿಗಳಿಗಿಹ ನೆಲೆಗಳೆಲ್ಲಿದೆ | ಕಾಣಿಸೆನಗೆ || ೪ ||

**ಭೈರವಿ ಮಟ್ಟೆತಾಳ**

ನಿಶಿಚರಾಗ್ರಘಂಣ್ಯ ನೀನು | ವಸುಮತಿಯನು ಕೊಂಡು ಬರಲು |
ಪೊಸತು ಹಗೆಗಳೇನು ಧರೆಯೊ | ಳುಸುರುಯೆನ್ನೊಳು || ೧ ||

ಮಧು ಮಹಾತ್ಮ ಕೈಭಟರನು | ವಧಿಸಿ ಹರಿಯು ಧರೆಯ ಗೈದ |
ನದುವೆ ಕುಲವಿರೋಧವೆನ್ನೊ | ಳುದಯವಿಂದಿಗೆ || ೨ ||

ಕೊಂದ ಹರಿಯ ಕೊಲದೆ ನೀ ವ | ಸುಂಧರೆಯನು ತಂದರಿದರೊ |
ಳೆಂದಿಗಹುದು ಹಗೆಯ ಕಾರ್ಯ | ದಂದ ನಿನಗೆಲಾ || ೩ ||

ಕಡುದುರಾತ್ಮನೆನಿಪ ಹರಿಯ ಪೊಡವಿಯಲ್ಲಿ ಕಾಣೆನೀಗ |
ಪಿಡಿದೆನವನ ದೃಢವಿದೈಸೆ | ಕಡಿವೆ ತಲೆಯನು || ೪ | |

ಮರುಳೆ ನಿನ್ನ ಕರಕೆ ಹರಿಯು | ದೊರಕಲಾರ ಧಿಟವುದನುಜ |
ನೆರವಿಗಹಿತನಾನೆಯೆನ್ನ | ಪರಿಕಿಸೆಂದನು || ೫ ||

**ಭಾಮಿನಿ**

ಧರಣಿಯನು ಧರಿಸಿರ್ಪೆನೆನ್ನಯ |
ತ್ವರಿತ ಗಮನಕ್ಕೆಡರನಿತ್ತಪೆ |
ತೆರಳೆನುತ ಖತಿಯಿಂದಲೊದದನು ವರಹನಂಗದಲಿ ||
ಉರಿಮಸಗುತಾರ್ಭಟಿಸಿ ವಿಲಯದ |
ಪುರಹರನ ವೋಲೆದ್ದು ದೈತ್ಯನ |
ಮೆರವ ವಕ್ಷಸ್ಥಳಕೆ ತಿವಿದನು ಘೋರ ದಾಡೆಯಲಿ || ೧ ||

ವರಹನೆರಗಿದಹತಿಗೆ ಖಳನಸು |
ಜರಿದು ಬಿದ್ದುದನರಿತು ಹರಿರುಂ |
ಹರಿಯನೇತ್ತುತಲೈದಿ ಮುನ್ನಿನ ತೆರದಿ ಸ್ಥಿರವೆಸಗಿ ||
ಧರೆಯ ಭಾರವನಿಳುಹಿ ಶಕ್ರಾ |

ದ್ಯರಿಗೆ ಸಹಿ ತಂದಭಯವೀಯುತ |
ಮುರಹರನು ಮೆರೆದೀರ್ದ ನಿತ್ಯಾನಂದಮಯನಾಗಿ || ೨ ||

## ಹಿರಣ್ಯಕಶಿಪು - ಪ್ರಹಲ್ಲಾದ - ನರಸಿಂಹ

**ಭಾಮಿನಿ**

ಮುನಿವರರು ಚಿತ್ತವಿಸಿ ಮುಂಗಥೆ |
ಯೆನುವೆ ಶೋಣಿತ ಪುರದೊಳತ್ತಲು |
ಕನಕಕಚ್ಚಪು ರತ್ನಪೀಠದೊಳೀರ್ದನೋಲಗದಿ ||
ಘನ ಪರಾಕ್ರಮಿಯೆನಿಸುತಿಹ ತ |
ನ್ನನುಜನಳಿದಿಹ ವಾರ್ತೆಯನು ತಿಳಿ |
ದಿನಿತು ಕಷ್ಟಗಳಾಯ್ತೆ ಹಾಯೆಂದಳಲಿದನು ಮನದಿ || ೧ ||

**ನಾದನಾಮಕ್ರಿಯೆ ಅಷ್ಟತಾಳ**

ಶಿವನೆ ತ್ರೈಲೋಕಪಾಲಕನೆ | ಗೌರೀ | ಧವನೆ ರಾಕೇಂದು ಶೇಖರನೆ |
ಭವರಹಿತನೆ ತ್ರಿಯಂಬಕನೆ | ಯಿಂತಾ | ಭವಣೆ ಬಂದುದೆ ಮಹೇಶ್ವರನೇ || ೧ ||

ಸೋದರನಹಕನಕಾಕ್ಷನಾ | ಮಧು | ಸೂಧನನಿಂದಾಯ್ತೆ ನಿಧನಾ |
ಆದುದೇತಕೆ ಹಗೆ ದರ್ಶನಾ | ಯಿನಿ | ತಾದುದೆ ಬಹುಚೋದ್ಯ ಕಥನಾ || ೨ ||

ಸುರರ ಸಂಕುಲಕತಿ ಮಿತ್ರನು | ನಿಶಿ | ಚರರ ಭಾಗಕೆ ಹಗೆಯೆನಿಪನು |
ದೊರಕಿಹುದಿಲ್ಲೇನು ಕಾರಣ | ಸಂ | ಹರಿಸಬಹುದೆ ವ್ಯರ್ಥ ಸಹಜನಾ || ೩ ||

**ಸೌರಾಷ್ಟ್ರ ತ್ರಿವುಡೆ**

ಖೇದವೇಕೆನಗಿನ್ನು ಮೋಹದ | ಸೋದರನ ಕೊಂದಾದ ಮೇಲ್ ಹಗೆ |
ಯಾದ ಹರಿಯನು ಕೊಲ್ಲುವುದೆ ಮೇಲಾದ ಕಾರ್ಯ || ೧ ||

ಖಂಡ ಪರಶು ವಿರಿಂಚಿ ಮೇಣಾ | ಖಂಡಲಾದ್ಯರ ಬಗೆಯದಸುರರ |
ತಂಡಕಿವ ಹಗೆತನವ ತೋರ್ದನೆ | ಗಂಡು ತನದಿ || ೨ ||

ಹುಡುಕುವೆನು ಬ್ರಂಹ್ಮಾಂಡಭಾಂಡದೊ | ಳಡಗಿರುವನೆಲ್ಲೈ ನುತ ಮಿಗೆ ಕಂ |
ದೊಡನೆ ಹರಿಯನು ಬಿಡೆನು ತಕ್ಷಣ | ಕಡಿವೆ ತಲೆಯಾ || ೩ ||

ಪಂಥವನು ಬಿಡಲೊಲ್ಲೆನಸುರರ | ತಿಂಥಿಣಿಯ ಕುಲಕೀರ್ತಿಯೆತ್ತದೆ |
ಮುಂತೆ ನಿಲುವವನಲ್ಲೆನುತ ಖತಿ | ಯಾಂತು ಪೊರಟ || ೪ ||

**ವಾರ್ಧಿಕ್ಯ**

ಧಾರುಣಿಯ ಬಿಡದೆ ಸಂಚಾರಗೈದರಸಿ ಕಾಂ |
ತಾರ ಮುಂತಾದೆಡೆಯನೋರಂತೆ ಹುಡುಕುತಂ |
ಮೇರುಮಂದರಗಿರಿಯನೇರಿ ತಾನಿಳಿದೈದಿ ವಾರಿಧಿಯ ನೆರೆ ಹುಡುಕಿದಾ ||
ಶ್ರೀ ರಮಾಧವನಿರುವ ವಾರತೆಯನರಿಯದಿರೆ |
ದಾರಿಯೇನೆಂದೆನುತ ಸಾರಿ ಚಿಂತೆಯೊಳಿರಲು |
ಚಾರುಸನ್ಮೋಹದ ಕುಮಾರನಹ ಪ್ರಹಲ್ಲಾದ ಭೋರನೈ ತಂದೆರಗಿದ || ೧ ||

**ಕೇತಾರಗೌಳ ಅಷ್ಟತಾಳ**

ಮಗು ಪ್ರಹಲ್ಲಾದನೇ ಸುಗುಣ ಬಂದೆಯಯೆಂದು | ತೆಗೆದೆತ್ತಿ ಕುಳ್ಳಿರಿಸಿ |
ಮೃಗಧರನೊಲುಮೆಯು ತಗಲಿತೆ ನಿನಗೆಂದು | ಬಿಗಿದಪ್ಪಿದನು ಮುದ್ದಿಸಿ || ೧ ||

ತರಳ ನಿನ್ನನು ಮೋಹವೆರಸಿನಾ ಕಳುಹಿದೆ | ಗುರುಮಠಕಾಗಿ ಮುನ್ನಾ |
ಅರುಹಿಸಿದನೆ ವಿದ್ಯ ಬರಹವ ಕಲಿತೆಯೊ | ಮರೆಮಾಜದುಸುರೆಂದನು || ೨ ||

ಬೊಪ್ಪ ಲಾಲಿಸು ಗುರುವಿಪ್ರಠಾಂವಿಗೆ ನಿ | ನ್ನಪ್ಪಣೆಯೊಳು ಪೋದೆನು |
ಸರ್ಪಶಯನನಿಗೆ ಒಪ್ಪುವಕ್ಷರವೆರ | ಡೊಪ್ಪಿತು ಯೆನಗೆಂದನು || ೩ ||

ಹಾಗೆಂದಡರಿಯೆನು ಪೋಗಿನೀ ಕಲಿತುದ | ಬೇಗದಿ ಪೇಳೆನಲು |
ನಾಗಶಯನಮಹ ಯೋಗಿವಂದ್ಯನನೆನ | ದಾಗಲೆ ಹರಿಯೆಂದನು || ೪ ||

**ಕಂದ ಪದ್ಯ**

ವರದಿಹನುಡಿಯಾಲಿಸಿ ನಿಶಿ | ಚರನತಿ ಬೆರಗಾಗಿಯೆ ಮನದೊಳ್ ತಾ ಬಳಿಕಂ |
ತರಳನ ಮುದ್ದಿಸಿ ಮೋಹದೊ | ಳರುಹಿದ ಬುದ್ಧಿಯ ನೀತಿಯನವನಿಂಗಾಗಂ || ೧ ||

**ಶಂಕರಾಭರಣ ತ್ರಿವುಡೆತಾಳ**

ಆಗದಾಗದು ಮಗನೆ ನಮಗಾ | ನಾಗಶಯನನ ನಾಮವು |
ಈಗ ನುಡಿದಕ್ಷರಗಳಹಿತದ | ಭಾಗವಹುದು || ೧ ||

ಎನ್ನರಸನೆಯೊಳುದಯವಹುದೆ ಸು | ಪರ್ಣಗಮನನ ಕೀರ್ತಿಯಾ |
ರನ್ನನಾಮವೆ ಹೊರತು ಬಳಿಕೇ | ನನ್ನೆಲಾರೆ || ೨ ||

ಪರಮಪಾವನಮೂರ್ತಿ ಗಂಗಾ | ಧರನ ನೀ ಹರನೆನ್ನುತಾ |
ವರೆಯೆನಲು ಹರಿಯೆಂದು ಪೇಳಿದ | ಭರದೊಳಾತಾ || ೩ ||

**ಭಾಮಿನಿ**

ತರಳನೆಂದುದ ಕೇಳ್ದು ಖಳ ಹೂಂ |
ಕರಿಸಿ ಖಡ್ಗವನೆತ್ತಿ ಝಳಪಿಸು |
ತಿರದೆ ಬಳಿಕೆದ್ದಣುಗನಂಗಕ್ಕೊದೆದ ಖಾತಿಯಲಿ ||
ಧರೆಗುರುಳಿ ಪ್ರಹಲ್ಲಾದ ಹಾಶ್ರೀ |
ಹರಿಯೆ ನೀನೆ ಸಲಹೆನುತ್ತಲೆ |
ಮರುಗಿ ಮನದಲಿ ಬಳಿಕ ಸ್ಮರಿಸುತ್ತೀರ್ದ ಭಕ್ತಿಯಲಿ    || ೧ ||

**ವಾರ್ಧಿಕ್ಯ**

ಮುನಿಗಳಿರ ಕೇಳಿರೈ ಕನಕಕಚ್ಚಪು ಘೋರ |
ದನುಜರೊಡನಿತ್ತ ತನ್ನಣುಗನಂ ವಧಿಸಲ್ಕೆ |
ಫಣಿಗಜಾದಿಗಳಿಂದ ಹನನವಾಗದಿರಲ್ಕೆ ವನಧಿಗಿಕ್ಕಲು ಬಾಲನೂ ||
ವನಜಾಕ್ಷ ಸಲಹೆಂದು ಮನ ಮರುಗಿ ನುತಿಸಲ್ಕೆ |
ಚಿನುಮಯನು ದಯದೋರೆ ದನುಜಸುತ ತಡಿಗಡರಿ |
ಕುಣಿಕುಣಿದು ನಡೆ ತಂದು ಜನಕನಂಘ್ರಿಯೊಳೆರಗಿ ಘನತೋಷದೊಳಗೆಂದನು     || ೧ ||

**ಸೌರಾಷ್ಟ್ರ ಅಷ್ಟತಾಳ**

ತಾತ ನೀನಾದೆ ಸಂಪ್ರೀತಿಯೊಳ್ ಸಲಹಿದೆ | ತಾತ ಕೇಳು |
ಈಗ | ಖಾತಿ ಬಂದೇರಿತೆ ಘಾತಿಸೆ ಮನವಾತೆ | ತಾತ ಕೇಳು   || ೧ ||

ಕುಲದ ಕೀರ್ತಿಗೆ ಮುಂದೆ ಬೆಳೆವ ವೃಕ್ಷವ ನಿಂದೆ | ತಾತ ಕೇಳ |
ನೀನು | ಕೊಲಿಸುವೆತ್ನವಗೈದೆ ನಳಿವಿಲ್ಲದೈತಂದೆ | ತಾತ ಕೇಳು || ೨ ||

ಏಸುಯೆತ್ನದಿ ನಿನ್ನ ನಾಶವಾದೆನೆ ಪೂರ್ಣ | ತಾತ ಕೇಳು |
ಮುಂದೆ | ವಾಸುದೇವನೆಯನ್ನ ಪೋಶಿಸದಿರ ಮುನ್ನ | ತಾತ ಕೇಳು      || ೩ ||

**ಕೇತಾರಗೌಳ ಝಂಪೆತಾಳ**

ಇನ್ನು ಬಿಡು ನಿನ್ನ ಹರಿಯಾ | ಪ್ರಹಲ್ಲಾದ | ಮನ್ನಿಪುದು ಹರನ ಕೃಪೆಯಾ |
ಯೆನ್ನ ಮಾತೊಂದ ಕೇಳು | ಮುಂದೆ ಗುಣ | ರನ್ನ ನೀನಾಗಿ ಬಾಳು       || ೧ ||

ಬಿಡೆನು ಬಿಡೆ ಹರಿಯನಾಮ | ಯೆನ್ನನೆಡೆ | ಬಿಡದಿಹನು ಶ್ರೀಲಲಾಮ |
ಪೊಡವಿಯೊಳು ಖಳರಸ್ತೋಮ | ಹತಿಸುವುದೆ | ದೃಢವ್ಯೆಸೆ ಹರಿಯ ಪ್ರೇಮ       || ೨ ||

ಎಲ್ಲಿಹನು ನಿನ್ನ ಪೊರೆವಾ | ಹರಿಯು ನಿ | ನ್ನಲ್ಲಿಹನೆ ಪೇಳು ನಿಜವಾ |
ನಿಲ್ಲದೀಕ್ಷಣ ತೋರ್ಪೆಯಾ | ತೋರಿದರೆ | ಕೊಲ್ಲುವೆನು ದೃಢ ನಿಶ್ಚಯಾ   || ೩ ||

ಅಲ್ಲಿಯಿಲ್ಲ್ಯೆಂಬುದೇನು | ಹರಿ ಸರ್ವ | ರಲ್ಲಿ ತಾ ನೆಲಸಿರ್ಪನು |
ಯಿಲ್ಲ ಸಂಶಯವಾತನು | ಸ್ತಾವರದೊ | ಳೆಲ್ಲ ವ್ಯಾಪಿಸುತಿರ್ಪನು || ೪ ||

**ಭೈರವಿ ಏಕತಾಳ**

ಭಳಿರೆ ಭಳಿರೆಲೆ ಸುಕುಮಾರಾ | ಶಿರ | ವುಳಿಸುವ ಹರಿಯನುತೋರಾ |
ಯಿಳಿಸುವೆನಾತನ ಶೌರ್ಯ | ಮ | ತ್ತಿಳಿಸುವೆ ನಿನ್ನಯ ತಲೆಯಾ || ೧ ||

ತಾತನೆ ನಿನಗೀ ಮರುಳು | ಬರಿದ್ಯಾತಕೆ ಬಂತಿಂದಿನೊಳು |
ಆತನ ನೀನೀಕ್ಷಿಸಲು | ಪು | ಣ್ಯಾತುಮನಾಹೆಯೊಪೇಳು || ೨ ||

ನಂಬಿದ ಭಕ್ತರ ಪೊರೆವಾ | ವಿ | ಶ್ವಂಭರ ನೀ ಮುಂದಿರುವಾ |
ಕಂಭದೊಳಿಹನೇ ಪೇಳು | ನೀ | ನಂಬಿರೆ ತೋರಿದಿರಿನೊಳು || ೩ ||

**ಭಾಮಿನಿ**

ತೋರು ತೋರೀ ಕಂಭದೊಳು ನೀ |
ವೀರ ನಾರಾಯಣನ ನೆನಲು ಕು |
ಹರಿ ನೆಲಸೀರ್ಪನೆಂದನು ಭಕ್ತಿಭಾವದಲಿ ||
ಕ್ರೂರ ನಿಶಿಚರ ನಾಗಕಲ್ಪದ |
ಮಾರಹರನಂತೆದ್ದು ಘನ ಗಂ |
ಭೀರ ಧ್ವನಿಯಿಂದೊದದ ಕಂಭವನುಗ್ರಖಾತಿಯಲಿ || ೧ ||

**ವಾರ್ಧಿಕ್ಯ**

ದುರುಳ ನಿಂತೊದೆಯಲಾ ಚರಣ ಹತಿಗಂ ಸ್ತಂಭ |
ಭರದಿಂದಲೊಡೆದು ದುರ್ಧರ ಭಯಂಕರರೂಪ |
ವೆರದು ಶ್ರೀಹರಿಯು ನರಹರಿಯಾಗಿ ಮೈದೋರ್ದವರೆಯಲೇನದ್ಭುತವನು ||
ತ್ವರಿತದಿಂ ಪೊರಟು ಮುಂದಿರುವ ದೈತ್ಯನ ಸೀಳ್ದು |
ಕರುಳಮಾಲೆಯ ತನ್ನ ಕೊರಳೊಳಂ ಧರಿಸಿ ಮಿಗೆ |
ತರಳ ಪ್ರಹ್ಲಾದನಂ ಕರದಿಂದಲೆತ್ತಿಕುಳ್ಳಿರಿಸಲ್ಕೆ ಪ್ರಾರ್ಥಿಸಿದನೂ || ೧ ||

**ಸರಾಗ || ಅಷ್ಟತಾಳ**

ಸರಸಿಜಾಕ್ಷನೆ ನಿನ್ನ | ಚರಣ ಸೇವಕನೆನ್ನ | ನಿರತ ಉದ್ಧರಿಸೊ ಮುನ್ನಾ ||
ಶರಣಜನ ಸುರಧೇನು ಸಚರಾ | ಚರಭರಿತ ವಿಶ್ವಾತ್ಮ ಮುರಹರ |
ಗರುಡಗಮನ ಸುರೋರಗಾರ್ಚಿತ | ಹರಿಯೆ ರಕ್ಷಿಸು ದುರಿತನಾಶನ || ಸರಸಿ || ೧ ||

ಆದಿಮಧ್ಯಾಂತ್ಯದ | ಬೇಧವೇನೊದಗದ | ವೇದವಂದಿತ ವಿನೋದಾ ||
ಮೇಧಿನಿಗೆ ಸರ್ವಾಧಿಕಾರಣ | ನಾದ ನಿರತ ವಿನೋದ ಮಹಿಮನೆ |
ನೀ ದಯದೊಳೆನಗಾದೆ ದರ್ಶನ | ಹೇ ದಯಾಂಬುಧಿ ಪಾದಕೊಂದಿಪೆ || ಸರಸಿ || ೧ ||

ತಂದೆ ತಾಯಿಗಳಿಂದ | ಹೊಂದಿದೆ ನಿರ್ಬಂಧ | ಮಂದರಧರ ಗೋವಿಂದಾ |
ಸಿಂಧುಶಯನ ಮುಕುಂದ ನೀನೇ | ಬಂದು ಕಂಭದಿನಿಂದುಯನ್ನಯ |
ಬಂಧನವ ತೊಲಗಿಸಿದೆ ಪರಮಾ | ನಂದ ಮೂರುತಿಯಿಂದಿರಾಧವ || ಸರಸಿ || ೨ ||

**ನೀಲಾಂಬರಿ || ಯೇಕ**

ತರಳ ನೀನಂಜದಿರು | ನಿನ್ನೊಳು ಮೋಹ | ವೆರಸಿ ಬಂದಿಹೆನಿದಿರು |
ನಿರತ ಧ್ಯಾನಿಸುತಲಿರು | ಮುಂದಕೆ ಮುಕ್ತಿ | ದೊರಕಿಪೆನೆನ್ನಸೇರು || ೧ ||

ಶೋಣಿತ ಪುರವರದಿ | ಪಟ್ಟವನಾಳಿ | ನೀನಿರು ಸೌಭಾಗ್ಯದಿ |
ದಾನವರನು ಧರ್ಮದಿ | ಪಾಲಿಸು ಮುದ್ದು | ನಾನಿಹೆ ನಿನ್ನಾತ್ಮದಿ || ೨ ||

**ವಾರ್ಧಿಕ್ಯ**

ನರಹರಿಯು ಸಂತೋಷ ಶರಧಿಯೊಳ್ ಭಕ್ತನಹ |
ತರಳ ಪ್ರಹಲ್ಲಾದನಂ ಕರದಿಂದಲೆತ್ತಿ ಕು |
ಳ್ಳಿರಿಸಿ ಶೋಣಿತ ಪುರದ ಮೆರವ ಪಟ್ಟವನಾಗ ವಿರಚಿಸಿದನುತ್ಸವದೊಳು ||

ಮರುಗುತಿಹ ನಾರಿಯರ ನೆರವಿಯಂ ಸಂತೈಸಿ |
ಧರಣಿಯೊಳ್ ಸತ್ಕೀರ್ತಿಧರಿಸಿ ನೀನಾಳೆಂದು |
ಹರಸಿ ಮಿಗೆ ಹರುಷದಿಂ ತೆರಳಿ ರಂಜಿಸಿದನಾ ನರಹರಿಯು ವೈಭವದೊಳು || ೧ ||

## ಬಲಿಚಕ್ರವರ್ತಿ - ವಿಂದ್ಯಾವಳಿ - ವಾಮನ

**ಭಾಮಿನಿ**

ಮಿತ್ರನುದಯದೊಳೊಂದಿವಸ ಹರಿ |
ಭಕ್ತನಹ ಪ್ರಹಲ್ಲಾದನೆಂಬನ |
ಪೌತ್ರನಾ ಬಲಿಚಕ್ರವರ್ತಿಯು ಪರಮ ವೈಭವದಿ ||

ನಿತ್ಯನಿಯಮವನೆಸಗಿಮನದೊಳು |
ಚಿತ್ತಜಯ್ಯನ ಪದವ ಧ್ಯಾನಿಸು |
ತುತ್ತಮಾಸನವೇರಿ ಬಳಿಕಿಂತೆಂದನತಿಮುದದಿ || ೧ ||

**ಕಾಂಬೋಧಿ ಝಂಪೆತಾಳ**

ಆದಿತಿಯಾತ್ಮಜರು ಹುಲು ತ್ರಿದಶಾದಿ ವರ್ಗದಿತಿ |
ಸುದತಿಯಣುಗರು ನಾವು ಜಗದಿ ||
ಉದಧಿ ಮಥನದ ಕಾರಣದಿ ಹಗೆಯು ಸಹಿತುದಿಸಿ |
ಮುದವೆ ಸುರತತಿಗಾಯ್ತು ದಿವದಿ || ೧ ||

ಹಿರಿಭಾಗ ನಮ್ಮಸುರ ನೆರವಿ ಮತ್ತನಿಮಿಷರ |
ಶರಧಿಕಿರಿ ವರ್ಗವಿದು ವಿವರಾ ||
ಸುರಗದ್ದುಗೆಯನೇರಿ ಮೆರೆಯುವಧಿಕಾರ ಹರಿ |
ಮರಸುತ್ತಲಿಹನು ಮೈದೋರಿ || ೨ ||

ಸೊಕ್ಕಿದನಿಮಿಷರ ಮುರಿ |
ದಿಕ್ಕಬೇಕೆಂದು ಕೈಯಿಕ್ಕಿದೆನು ಪೋಗಿ ಸಂಗರದಿ ||
ರಕ್ಕಸಾರಿಯ ಸೂತ್ರ ಮಿಕ್ಕಿ ಪೋದುದು ಮುಂದೆ |
ತಕ್ಕು ಪಾಯವ ಕಾಣೆ ಮನದಿ || ೩ ||

ಧರೆಯಮರನಾಗಿ ಸುರ | ರೆರೆಯನ್ನೈ ತಂದೆನಗೆ |
ಕರವ ಮುಗಿದೆಂದ ವಾಂಛಿತಕೆ ||
ಹರಿಯ ಕಾರುಣ್ಯದಲಿ ದೊರೆತಧರ್ಮದ ಗುಣವ |
ನೆರೆದಿತ್ತೆ ಧಾರೆ ಬೇಡಿದಕೆ || ೪ ||

ಸ್ವರ್ಗದಧಿಕಾರ ನ ಮ್ಮಗ್ರಭಾಗಕೆ ಬರಲು |
ಶೀಘ್ರದಲಿ ವಿಶ್ವಜಿತು ಮಖವ ||
ಭಾರ್ಗವನ ಮತವನು ಪರಿಗ್ರಹಿಸಿ ಗೈದಮರ |
ವರ್ಗಗೆಲಿದೆಳದೆ ಸುರಪುರವಾ || ೫ ||

ಸುರಪತಿಯ ಸೌಭಾಗ್ಯ | ಸ್ಥಿರಗೊಳಿಸಬೇಕೆಂದು |
ಗುರುಮತದೊಳೆಸವ ನರ್ಮದೆಯಾ ||
ಸರಿಸದೊಳು ಶತಕೃತುವ | ವಿರಚಿಸುವ ನಿರ್ಧರದಿ |
ಧರಿಸುವೆನು ಧೀಕ್ಷೆಯಿದು ಕಾರ್ಯ || ೬ ||

**ಮಧುಮಾಧವಿ ತ್ರಿವುಡೆತಾಳ**

ಇತ್ತ ಚಿನ್ಮಯನದಿತಿಗವತರಿ | ಸುತ್ತ ವಾಮನನೆಂದೆನುವ ಪೆಸ |
ರೆತ್ತಿ ದ್ವಿಜವಟುರೂಪದಲಿ ಮೆರ | ವುತ್ತ ಯೋಚಿಸುತೆಂದನು | ಯುಕ್ತಕಾರ್ಯ || ೧ ||

ಭಕ್ತರಲಿ ಮೆರದೀರ್ಪ ಪರಮ ಪ | ವಿತ್ರಗುಣ ಪ್ರಹಲ್ಲಾದನೆಂಬನ |
ಪೌತ್ರನಹ ಬಲಿಯೆನುವ ಖಳ ಮೆರ | ವುತ್ತಲಿಹ ಸೌಭಾಗ್ಯದ | ಮತ್ತನಾಗಿ || ೨ ||

ಭೇದಿಸಲು ಬೇಕವನ ಗರ್ವವ | ನಾದರಾತನ ಕೊಲ್ಲದುಳಿಸುವ |
ಹಾದಿಯಿದಕೇನೆಂದು ಪೊರಟು ವಿ | ನೋದದಲಿ ನಡೆತಂದನು | ವೇದಮಯನು || ೩ ||

**ಭಾಮಿನಿ**

ಸರಿಸಿಜೋಪಮವದನ ವಿಸ್ಮಯ |
ಕಿರುನಗೆಯ ರಂಜಿಸುವ ತುಳಸೀ |
ಸರದಿ ರಾಜಿಪ ಕಂಠದೇಶದೊಳೆಸವ ಮಂಗಲದಿ ||
ಮೆರವ ದ್ವಾದಶನಾಮ ವಾಮದ |
ಕರದಿ ಪಿಡಿದಿಹ ಛತ್ರದಕ್ಷಿಣ |
ಕರದೊಳಗೆ ದಂಡವನು ಧರಿಸುತ ಬಂದನತಿ ಭರದಿ || ೧ ||

ನೆರೆವಿರಾಜಿಪ ವಾಮನನ ಬರ |
ವರಿತು ವೈರೋಚನಿಯು ಹರುಷದಿ |
ತ್ವರಿತದಿಂದಿದಿರ್ಬೈದಿ ಕರತಂದಧಿಕ ಭಕ್ತಿಯಲಿ ||
ಸುರಚಿರಾಸನವಿತ್ತುವಟುವಿನ |
ಚರಣ ಪೂಜಾದಿಗಳ ನೆಸಗುತ ಶಿರದಿ |
ತೀರ್ಥವ ಧರಿಸಿ ಮಗುಳಿಂತೆಂದನೊಲವಿನಲಿ || ೨ ||

**ಸಾಂಗತ್ಯ ರೂಪಕತಾಳ**

ಎಲೆ ಮಹೋತ್ತಮನೆ ನೀ | ನಿಳಿದುದೆಲ್ಲಿಂದಲೀ | ಸ್ಥಳದೆಡೆಗಾಗಿ ತೇಜದಲಿ ||
ನೆಲೆಯಲ್ಲಿ ನಿನಗೀರ್ಪ || ಲಲಿತ ನಾಮವದೇನು | ತಿಳುಹಿಸೆನ್ನೊಡನೆ ಪ್ರೀತಿಯಲಿ || ೧ ||

**ಕಾಂಬೋಧಿ ಝಂಪೆತಾಳ**

ಸ್ಥಿರವಿಲ್ಲ ನೆಲೆಯೆನಗೆ | ಚರಿಸುವೆನು ಕಂಡೆಡೆಗೆ | ಕಿರಿಯವಾಮನನೆಂಬರೆನಗೆ ||
ತುರಗಮೇಧವ ನೀನು || ವಿರಚಿಸುವೆನೆಂಬುದನು | ಅರಿತು ಬಂದವನ್ನೈಸೆ ನಾನು || ೧ ||

**ಸಾಂಗತ್ಯ ರೂಪಕತಾಳ**

ತುರಗಮೇಧಕೆ ನಿನ್ನ | ದೊರಕಿದ ದರ್ಶನ | ಪರಮ ಭಾಗ್ಯೋದಯವೆನ್ನಾ ||
ವಿರಚಿಸಿದೆಯ ಸ್ನಾನ | ತ್ವರಿತವು ಭೋಜನ | ದಿರವೈಸೆಯೆನಲೆಂದ ಹದನಾ || ೧ ||

**ಕಾಂಬೋಧಿ ಝಂಪೆತಾಳ**

ಧರೆಯಪಾವನೆ ಗಂಗೆ | ದುರಿತನಾಶಿನಿ ಯಮುನೆ | ವರನರ್ಮದಾದಿ ನದಿಗಳನು ||
ನಿರತ ಸಂಚರಿಸುತಿಹೆ | ಸ್ಥಿರದ ಜವೆನಗಿಲ್ಲ | ವಿರಚಿಸದೆ ಸ್ನಾನ ತೊರದಿಹೆನೂ || ೧ ||

**ಸಾಂಗತ್ಯ ರೂಪಕತಾಳ**

ಉದಯ ಕಾಲದಿ ನಿತ್ಯ | ವಿಧಿ ಜಪಾದಿಗಳನ್ನು | ಬುಧರೆಸಗಲು ಬೇಕೀ ವಿಷಯ ||
ವದಗಿಸಿದೆಯ ನೀನಿ | ನ್ನದು ಲೋಪವಿರಲು ಬೇ | ಗದಲಿ ಮಾಳ್ಪುದು ಮಹಕಾರ್ಯ || ೧ ||

**ಕಾಂಬೋಧಿ ಝಂಪೆತಾಳ**

ಶರಧಿ ಮೇರು ಹಿಮಾದ್ರಿ | ಹರನಗಿರಿ ಶೇಷಾದ್ರಿ | ಚರಿಸಿ ಬಳಲುವೆನು ದಿನದಿನದಿ ||
ವರಜಪಾನ್ಹಿಕದ ವಿಧಿ | ವಿರಚಿಸೆ ನಿರಾಶ್ರಯದಿ | ತೊರದೆನೀತನಕ ಬೇಸರದಿ || ೧ ||

**ಕಂದ ಪದ್ಯ**

ಇನಿತೆಂದುದನಾಲೋಚಿಸಿ |
ದನುಜಾಧಿಪ ವೈರೋಚನಿ ತಾನಾಗಂ ವಾ |
ಮನ ನೀನೇಕೈದಿಹೆ ಮನ |
ದೆಣಿಕೆಯೊಳಿದ್ದುದಪೇಳೆನಲಾ ವಟು ನುಡಿದಂ || ೧ ||

**ಕೇತಾರಗೌಳ ಅಷ್ಟತಾಳ**

ಚಿತ್ತವಿಸೆಲೆ ಚಕ್ರವರ್ತಿ ನೀ ನುಡಿಯಾ | ಚಿತ್ತಜಯ್ಯನ ಪಾದಭಕ್ತ ನೀನಹೆಯಾ ||
ಧಾತ್ರಿಯೊಳ್ನಿನ್ನ ಪ್ರಶಸ್ತಕೀರ್ತಿಯ ಶ್ವೇತ | ಛತ್ರವೆಂದೆನುತ ವಿಚಿತ್ರದ ರವಿಯು ಮೇ |
ಲೆತ್ತಿ ಬಂದಿಹ ಕಾಂತಿಯಾ | ನೋಡಿದೆನು ನೀ | ವರ್ತಿಸುವಶ್ವಸೂಯಾ ||
ಪೂರ್ಣಾಹುತಿ | ಯೊತ್ತುವ ವಾರತೆಯ | ನಾನರಿತು ಮೇ |
ಣಿತ್ತ  ಬಂದೆನು ಭಿಕ್ಷೆಯಿತ್ತೆನ್ನ ಕಳುಹಯ್ಯ || ೧ ||

ವರ ವಿಪ್ರವಟು ನಿನ್ನ ಚರಣ ಸಂದರ್ಶನ | ದೊರಕಿಹುದದರಿಂದ ದುರಿತವೆ ಹರಿದಂದ ||
ಹರುಷಾಬ್ಧಿಯೊಳು ಸ್ನಾನವೇ | ಗೈದಂತಾಯ್ತು | ಭರಿತ ದಾನಗಳ ನೀವೆ | ಧನ ಧಾನ್ಯಾದಿ |
ಗಿರಿಯ ನಾ ನೆರಹಿರುವೆ | ಸ್ವೀಕರಿಸುವ ನಿ | ನ್ನಿರವ ಬೇಗೆನೆ ವಟು ವರನೆಂದನಾಗಲೇ || ೨ ||

**ಕೇತಾರಗೌಳ ಅಷ್ಟತಾಳ**

ಲೇಸನಾಡಿದೆ ದನುಜೇಶ ನಿನ್ನಯ ಧನ | ರಾಶಿಯ ದಾನವಿನ್ನು |
ದೇಶ ಸಂಚರಣೆಯ ಭೂಸುರನಹೆ ದ್ರವ್ಯ | ದಾಶೆಯಿಲ್ಲೆನಗೆಂದನು || ೧ ||

ಧಾರುಣೀಸುರ ನಿನ್ನ ವಾರತೆಯಿದು ಚೋದ್ಯ | ತೋರುವುದಾದರಿನ್ನು |
ಚಾರು ಮಕುಟರತ್ನಹಾರಾದಿ ವಸ್ತುವ | ಧಾರೆಯ ನೆರದೀವೆನು || ೨ ||

ಸತ್ಯವಾಗಿಹುದು ನೀನೆತ್ತುತೀಯುವ ಸುಪ | ವೀತ್ರ ಭೂಷಣಗಳೆಲ್ಲ |
ಪೃಥ್ವಿಪ ನಾನಲ್ಲ ಪತ್ನಿಯಳೆನಗಿಲ್ಲ | ವ್ಯರ್ಥವಿದಾಹುದಲ್ಲ || ೩ ||

ಯೇನು ಚೋದ್ಯವಿದೈಸೆ ನೀನೇನ ಬಯಸಿದೆ | ನಾನೇನು ಕೊಡಲಿಂದಲಿ |
ಶ್ರೀನಿವಾಸನಭಕ್ತನಾನಹೆ ನಿನಗಹು | ದೇನದನುಸುರೆನ್ನಲಿ || ೪ ||

**ಭಾಮಿನಿ**

ಜನಜನೇತ್ರವ ತೆರದೊಳಿಹೆ ನೀ |
ಚೆಲುವ ವಾಮನಮೂರ್ತಿ ಬಂದೆಯ |
ತಿಳಿಯಲೆನ್ನಯ ಪುಣ್ಯವಿಂದಿನೊಳತಿಥಿ ಭಾವಿಸಲು ||
ಯೆಲೆ ಮಹಾವಟು ನಿನ್ನ ನುಡಿಯಲಿ |
ಸಲೆ ಚಮತ್ಕೃತಿಯಿಹುದು ವಾಂಛಿತ |
ತಿಳುಹಿದಡೆ ನಾನೀವೆನೆನೆಸತಿಯೆಂದಳೆರೆಯನೊಳು || ೧ ||

**ಆನಂದಭೈರವಿ ಏಕತಾಳ**

ಪ್ರಾಣಕಾಂತೆಯೇನೀದಿಂತ | ನ್ಯೂನ ಪಂಥದಾನವೆಂತ |
ಕ್ಷೋಣಿಯಲ್ಲಿ ಕಾಣೆನಿಂತ | ಮಾನವಂತನಿವನೆ ಭ್ರಾಂತ || ೧ ||

ಕನಕ ರತ್ನಾಭರಣಗಳನು | ತನಗೆ ಬೇಡೆಂದೆನುತಲಿಹನು |
ಯಿನಿತು ಪೇಳ್ವರುಂಟೆ ನೀನು | ಮನದಿ ಗ್ರಹಿಸುಚೋದ್ಯವಿದನು || ೨ ||

ಗುರುವು ಪೇಳ್ದುದರಿತೆ ನಿಂದು | ಹರಿಯೆ ನಮ್ಮನರಿಯಲೆಂದು |
ತಿರುಕನಾಗಿ ದೊರವನೆಂದು | ಅರಿಯೆನಿವನ ಸ್ಥಿರವಾರೆಂದು || ೩ ||

ಸುರಪಗಿತ್ತೆ ಭರಿತಗುಣವ | ಬರಿದೆ ಕಳದೆ ನಿರತ ಸುಖವ ||
ತೆರುವದೆಲ್ಲ ತೊರೆಯುತ್ತಿರುವ | ಕಿರಿಯ ಕೀರ್ತಿತಿರುಕನೆನುವ || ೪ ||

**ಕೇತಾರಗೌಳ ಝಂಪೆತಾಳ**

ಸರಸಿಜಾಂಬಕಿಯೆ ಚದುರೆ | ನೀನೆನ್ನೊ | ಳೊರದ ನುಡಿಧಿಟವಾದರೆ |
ಹರಿ ನಮ್ಮ ಪರಿಕಿಸಿದರೆ | ನಿನಗೆನಗೆ | ಹರುಷವೇನಿಹುದು ಬೇರೆ || ೧ ||

ಧಿಟವೈಸೆ ನಿನ್ನ ಮಾತು | ಪಿಂತೆ ಸುರ | ಕಟಕಾಧಿಪನೊಳು ಸೋತು |
ಘಟಿಸಿರುವ ಭಾವಮರತು | ಯಿಂದಿವನ | ವಟುವೆಂದು ನಂಬಲೆಂತು || ೨ ||

ಗಜಗಮನೆ ನಮ್ಮೊಳೇನು | ಹಗೆಯಿಹುದು | ಭುಜಗಶಯನನಿಗರಿಯೆನು |
ಭಜಕರಲ್ಲವೆ ನಮ್ಮನು | ಮೋಸದಿಂ | ದಜಪಿತನು ಕೆಡಿಸನಿನ್ನು || ೩ ||

ಯೇನೀಯಲೊಲ್ಲದಿರಲು | ಮತ್ತಿವನಿ | ಗೇನೆಮ್ಮೊಳಿಹುದು ಕೊಡಲು |
ನೀನರಿತು ನೋಡೀತನು | ದ್ವಿಜರ ವಟು | ತಾನಲ್ಲಧಿಟವೆಂಬೆನು || ೪ ||

ಇಚ್ಛೆಯಾದುದ ನೀಯದೆ | ನಾವೀರ್ದ | ಡಚ್ಚುತನ ಭಕ್ತರಹುದೆ |
ಸಚ್ಚಿದಾನಂದನಹುದೆ | ಯಾರಾದ | ಡುಚ್ಚರಿಸಲೆಮಗೇನಿದೆ || ೫ ||

ಪತಿಪರಾಯಣೆ ನಿನ್ನೊಳು | ನುಡಿದುದಕೆ | ಖತಿಯ ತಾಳದಿರೆನ್ನೊಳು |
ಅತಿಥಿಯಿಚ್ಛೆಯ ನೀಡಲು | ನೀನೆಮನ | ಧೃತಿಯರಿತು ನಡಸೆಂದಳು || ೬ ||

**ಕಂದಪದ್ಯ**

ಬಲಿವಿಂಧ್ಯಾವಳಿಯರ ಮನ |
ವಳುಕಿನ ನುಡಿಯಂ ಕೇಳುತ ವಾಮನನಾಗಂ |
ಮುಳಿದವರಂತುಸುರಿದ ನಿಂ |
ನೊಳಗೇನನು ಕೇಳೆನು ಪೋಗುವೆನೆನಲೆಂದಂ || ೧ ||

**ಕೇತಾರಗೌಳ ಅಷ್ಟತಾಳ**

ಪೋಗದಿರಲೆವಟುಯಾಗಮಂದಿರದಿಂದ | ಈಗ ನಿನ್ನಭಿಮತವಾ |
ಸಾಗಿಸುವೆನು ಧಿಟ ನಾಗಶಯನನಾಣೆ | ಬಾಗುವೆ ನೀ ಶಿರವಾ || ೧ ||

ಪರಿಕಿಸಿದರೆ ನಿನ್ನ ತಿರುಕನಲ್ಲೆಂಬುದ | ನರಿತೆ ನಾನಾದರಿನ್ನು |
ಸರಸಿಜಭವನಾಗು ಗಿರಿಜೆಯಧವನಾಗು | ಹರಿಯಾಗುಬೇಡೆಂದನು || ೨ ||

**ಭಾಮಿನಿ**

ಪಾರಮಾರ್ಥಿಕವಿರಲು ನಿನ್ನಲಿ |
ಬೇರೆ ಮತವೇನಿಲ್ಲವೆನ್ನಲಿ |
ಮೂರಡಿಯಧಾರುಣಿಯ ಕೊಡುಯೆನಲಧಿಕ ಹರುಷದಲಿ ||
ವಾರಿಜಾಕ್ಷನನೆನೆದು ಮನದಲಿ |
ನಾರಿವಿಂಧ್ಯಾವಳಿಸಹಿತಬಲಿ |
ಧಾರೆಯೆರದನು ಹರಿಯೆ | ನಿನಗರ್ಪಿತವಿದೆನ್ನುತಲಿ || ೧ ||

**ಸೌರಾಷ್ಟ್ರ ತ್ರಿವುಡೆತಾಳ**

ಭರದಿವಟು ವರವಿಶ್ವರೂಪವ | ಧರಿಸಿ ವೈರೋಚನಿಯ ಸರಿಸದಿ |
ಸ್ಥಿರವೆನಿಸಿ ರಂಜಿಸಿದ ನಿನ್ನೇ | ನೊರೆಯಲಿಹುದು || ೧ ||

ಧಾರುಣಿಯೊಳಿಡುತೊಂದಡಿಯ ಮೇ | ಲೂರಿ ವ್ಯೂಮದೊಳೊಂದು ಪಾದವ |
ತೋರು ತೋರಿನ್ನೊಂದಡಿಯ ಸ್ಥಳ | ಭೋರನೆನಲು || ೨ ||

ಅರಿತೆ ನೀನ್ಯಾರೆಂದು ಮನದಲಿ | ಪರಮಪಾವನ ಮೂರ್ತಿಯೆನ್ನಯ |
ಶಿರದೊಳಿಡು ಪದವೆಂದು ಮಣಿದನು | ಕರವ ಮುಗಿದು || ೩ ||

**ಭಾಮಿನಿ**

ಸಿರಿಯರಸನುರು ಚರಣ ಸೋಂಕಿದ |
ಭರಕೆ ಬಲಿಯು ರಸಾತಳಾಗ್ರಕೆ |
ಸರಿದು ಮೆರದನನಂತತೇಜದ ಭಕ್ತಿಭಾವದಲಿ ||
ಮೆರವ ಸೌಭಾಗ್ಯಗಳ ಬಲಿಗನ |
ವರತ ಸ್ಥಿರಗೊಳಿಸುತ್ತ ಮುರಹರ |
ಧರೆಗೆ ಲೀಲೆಯ ತೋರಿನಿಂದನು ಬಲಿಯ ಬಾಗಿಲಲಿ || ೧ ||

## ಕಾರ್ತಿವೀರ್ಯ - ಭಾರ್ಗವ

**ಭಾಮಿನಿ**

ತಾಪಸರು ಚಿತ್ತವಿಸಿ ಕಥೆಯ ಕ |
ಲಾಪವನು ವಿಸ್ತರಿಪೆನುಬ್ಬಿದ |
ಭೂಪರನು ಸದೆಬಡಿಯ ಬೇಕೆಂದೆನುತ ಹರುಷದಲಿ ||
ತಾಪಸಾನ್ವಯ ಕುಲದೊಳುದಿಸಿ ಪ್ರ |
ತಾಪ ಸನ್ನಿಭ ಭಾರ್ಗವಾಖ್ಯೆಯ |
ತಾ ಪಡದು ಮೆರದೀರ್ದ ಶ್ರೀಹರಿ ಪರಮತೇಜದಲಿ || ೧ ||

**ಭಾಮಿನಿ**

ಇತ್ತ ಮಾಹೀಷ್ಮತಿಪುರಾಧಿಪ |
ಕಾರ್ತಿವೀರ್ಯ ನೃಪಾಲ ನಾ ಮುನಿ |
ಪೋತ್ತಮನು ಜಮದಗ್ನಿಗಿಹ ಸುರಧೇನುವನು ಪುರಕೆ ||
ಸತ್ವದಿಂದೊದುದನರಿತು ಮುನಿ |
ಪುತ್ರನಹ ಭಾರ್ಗವನು ತಾಖತಿ |
ವೆತ್ತು ನೃಪನಿದ್ದೆಡೆಗೆ ಬಂದಿದಿರಾದನಾಹವಕೆ || ೧ ||

**ಸೌರಾಷ್ಟ್ರ ತ್ರಿವುಡೆತಾಳ**

ನೀನೆಲಾ ಜಮದಗ್ನಿ ಮುನಿಪನ | ಧೇನುವನ್ನಪಹರಿಸಿ ತಂದಿಹ |
ಮಾನನಿಧಿ ನೃಪನಹುದೆ ಪೇಳನು | ಮಾನವಿಡದೆ || ೧ ||

ಮೌನಿಗಳಿಗಿಹುದಲ್ಲ ಮಹಸುರ | ಧೇನು ಭೂಮಿಪರಿಂಗೆ ಮೆರವಭಿ |
ಮಾನವೆಂದೊದಿಹೆನು ಕೇಳ್ವರೆ | ನೀನಾದಾರ್ಯೆ ‖ ೨ ‖

ಮೌನಿಪತಿ ಜಮದಗ್ನಿ ಮುನಿಪನ | ಸೂನು ಭಾರ್ಗವನೆಂಬರೆನ್ನನು |
ಮಾನವಾಧಿಪ ನಿನಗೆ ಮೆರವಭಿ | ಧಾನವೇನು ‖ ೩ ‖

ಘನಪರಾಕ್ರಮಿ ಕಾರ್ತಿವೀರ್‍ಯಾ | ರ್ಜುನನೆನುತ್ತಲಿ ಕರವರೆನ್ನನು |
ಮುನಿಕುಮಾರಕನಹೆಯ ನಿನಗೀ | ಕಿನಿತು ಶೌರ್ಯ ‖ ೪ ‖

ನಿತ್ಯ ಮುನಿಗಳಿಗಾಶ್ರಯದಮಹ | ವಸ್ತು ಮಹಿಪರಿಗಿಹುದೆ ಧರ್ಮದ |
ಹೊತ್ತ ನೆಲೆಯೆಂದೆಂಬ ಮಾತಿನೊ | ಳರ್ಥವಿಹುದೆ ‖ ೫ ‖

ಮೃತ್ಯುಹರನಭಿಧಾನವನು ಜಪಿ | ಸುತ್ತ ಗಿರಿಕಾಂತಾರದೊಳಗಿಹ |
ಋತ್ವಿಜರಿಗಿದು ಸಲ್ಲದೆಂಬಯ | ಥಾರ್ಥವಿದುವೆ ‖ ೬ ‖

**ಭೈರವಿ ಮಟ್ಟೆತಾಳ**

ಸುರಪನೆಮಗೆ ದತ್ತಗೈದ | ಸುರಭಿಯಿಂದಲೊದಗಿದಂತ |
ಪರಮಭೋಜನವನು ಗೈದು | ತುರುವನೊದೆಯಾ ‖ ೧ ‖

ನೀತಿಯಿಂದ ಕೇಳ್ದೆ ನಿನ್ನ | ತಾತನೀಯದಿರಲು ಪಶುವ |
ಖಾತಿಯಿಂದಲೊದೆನದುದು | ನೀತಿಯಾಯಿತೆ ‖ ೨ ‖

ಎಲೆ ನೃಪಾಲವರ್ಯ ನಮ್ಮ | ನೆಲೆಯ ಸುರಭಿಯನ್ನು ಮರಳಿ |
ನಲವಿನಿಂದಲಿತ್ತುಯನ್ನ | ಕಳುಹು ಬೇಗದಿ ‖ ೩ ‖

ಜಲಜಭವಭವಾದಿ ಮುಖ್ಯ | ರೊಲಿದು ಕೇಳ್ದರೀವನಲ್ಲ |
ಬಲುಹ ತೋರ್ದರೀಗನಿನ್ನ | ತಲೆಯನುಳಿಸೆನು ‖ ೪ ‖

ಪೃಥ್ವಿಸುರರ ನಿರತ ಪೊರೆವ | ಹೊತ್ತ ಕೀರ್ತಿ ಕ್ಷತ್ರಿಯರಿಗೆ |
ವ್ಯರ್ಥಹಗೆಯನೆಸಗಿ ಬ್ರಹ್ಮಹತ್ಯ | ಗೈವೆಯ ‖ ೫ ‖

ಪತ್ತು ಮಾಸ ಪೊತ್ತು ನಿನ್ನ | ಪೆತ್ತವಳನು ಹತ್ಯಗೈದ |
ಧೂರ್ತ ನಿನ್ನ ಕೊಲಲು ದುರಿತ | ವೆತ್ತಲಿಹುದೆಲ ‖ ೬ ‖

ತಾತನಾಜ್ಞೆಯಿಂದತರಿದ | ಮಾತೆಯಳನು ಜೀವಗೈದೆ |
ಪಾತಕಂಗಳಿಹುದೆ ತಿಳಿಯ | ದ್ಯಾತಕುಸುರುವೆ ‖ ೭ ‖

ಅತ್ರಿಸುತನವಲುಮೆಯಿಂದ | ಪತ್ತುಶಿರನ ಸೆರೆಯೊಳಿಟ್ಟ |
ಸತ್ವಶಾಲಿಯೈಸೆಯೆನ್ನ | ವಾರ್ತೆಯರಿಯೆಯಾ ‖ ೮ ‖

ಪೃಥ್ವಿಸುರರ ಕೊಲ್ಲಬಲುಹು | ನಿತ್ತುದುಂಟೆಯತಿಪನಿನಗೆ |
ಸತ್ವವಿರಲುಶರವಕೊಳ್ಳೆ | ನುತ್ತಲೆಸದನು || ೯ ||

**ಭಾಮಿನಿ**

ಇಳೆಯಮರನೆಸದೀರ್ಘ ಶಸ್ತ್ರಾ |
ವಳಿಯ ಖಂಡಿಸುತೊಡನೆ ಶರಮಯ |
ಜಲಧಿಯನು ಕವಿಸಲ್ಕೆ ತರಿದನು ನಿಮಿಷಮಾತ್ರದಲಿ |
ಅಳುಕುವನೆ ಭಾರ್ಗವನು ಪುನರಪಿ |
ಮುಳಿದು ತೆಗದೆಚ್ಚಂಬು ನೃಪತಿಯ |
ಚೆಲುವ ಹಸ್ತಾವಳಿಯ ತರಿದಿಳುಹಿದುದು ಧಾತ್ರಿಯಲಿ || ೧ ||

**ಭೈರವಿ ಏಕತಾಳ**

ಎತ್ತಿತು ನೃಪಬಾಹುಗಳು | ಹರಿ | ಕತ್ತರಿಸಿದ ನಿಮಿಷದೊಳು |
ಮತ್ತುದ್ಭವಿಸುತ್ತಿರಲು | ಮೇ | ಣೋತ್ತರಿಸಲ್ಕುದಯಿಸಲು || ೧ ||

ಬೆರಗಾಗಿಯೆ ಭಾರ್ಗವನು | ನೃಪ | ನುರದ ಸುಧಾ ಕಲಶವನು |
ವರ ವೈಷ್ಣವ ಶರಮುಖದಿ | ಪರಿ | ಹರಿಸುತಲರಿಯದ ತೆರದಿ || ೨ ||

ಪರಶುವಕೊಂಡಾ ಕ್ಷಣದಿ | ತಾ | ತಿರುಹುತ ನೃಪನೆಡೆಗೈದಿ |
ಕರಗಳ ಖಂಡಿಸುತೊಡನೆ | ರಿಪು | ಶಿರವಿಳುಹಿದಹರಿತಾನೆ || ೩ ||

**ಭಾಮಿನಿ**

ಧರೆಯಧಿಪನನು ಗೆಲಿದು ಪಶು ಸಹ |
ತೆರಳಿ ಪಿತನಿಂಗೊಪ್ಪಿಸುತಲಾ |
ಪರಶುಧರ ತಾನೆನೆದ ತನ್ನಯ ಚಿತ್ತದೆಣಿಕೆಯಲಿ ||
ಧರೆಯೊಳಿಹ ಕ್ಷತ್ರಿಯರ ಕುಲ ಸಂ |
ಹರಿಸಬೇಕೆಂದೆನುತ ಭಾರ್ಗವ |
ಪೊರಟು ಸವರಿದ ನೃಪರನಿಪ್ಪತ್ತೊಂದು ಸೂಳಿನಲಿ || ೧ ||

**ಸಾಂಗತ್ಯ ರೂಪಕತಾಳ**

ಬಳಿಕ ಭಾರ್ಗವ ಕ್ಷತ್ರಿಕುಲ ನಿಪಾತವಗೈದ | ಬಲು ದೋಷ ಕಳೆಯಲೆಂದೆನುತಾ |
ಯಿಳೆಯ ನಿರ್ಮಿಸಿ ವಿಪ್ರ | ಕುಲಕೆ ದತ್ತವಗೈದು | ಕಳೆದೀರ್ದ ಹತ್ಯ ತೀರಿಸುತಾ || ೧ ||

ದಿನನಾಥ ಶಶಿಗಳೀರ್ಪನಕ ಜೀವಿತನಾಗಿ | ಘನ ಕೀರ್ತಿಯುತನೆಂದು ಮೆರವಾ |
ಮನದಿ ತೋಷವಗೊಂಡ ಜನನಿ ಜನಕರಿಂದ | ವಿನಯದಿ ಪಡೆದೀರ್ದವರವಾ || ೨ ||

# ರಾವಣ - ಮಂಡೋದರಿ - ಶ್ರೀರಾಮ

**ವಾರ್ಧಿಕ್ಯ**

ದುರುಳ ರಾವಣ ಕುಂಭಕರ್ಣರಂ ಮಥಿಸೆ ಶ್ರೀ |
ಹರಿಯು ರಾಮಾವತಾರದೊಳುದಿಸಿ ಸೀತೆಯಂ |
ನೆರಹಿ ಕಾನನಕೈದಿ ತರುಣಿಯಂ ಖಳನೊದುದರಿತು ಕಪಿಗಳ ಮುಖದಲೀ ||
ಶರಧಿಯಂ ಬಲಿದು ಮುಂದ್ವರಿದು ಸಂಗರದೊಳಾ |
ವರಕುಂಭಕರ್ಣಾದಿ ದೈತ್ಯರಂ ಸವೆದು ದಶ |
ಶಿರನ ವಧೆಗಂ ಪಥವನರಸುತ್ತ ಮನದಿ ರಘುವರನೀರ್ದನುತ್ಸವದಲಿ || ೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇತ್ತ ದಶಶಿರ ನೋಲಗವನುಳಿ | ದೊತ್ತಿ ಮಂಡೋದರಿಯ ಭವನದಿ |
ಪೊತ್ತುದುಗುಡದೊಳೀರ್ದ ಮನದೊಳ | ಗತ್ತು ಕೊಳುತಾ || ೧ ||

ರಾಮನೊಡನಾಹವದಿ ಸೋತಿಹ | ಪ್ರೇಮದರಸನ ಕಂಡು ಮಯಸುತೆ |
ತಾ ಮರುಗಿ ಬಿಗಿದಪ್ಪಿ ಕೇಳ್ದಳು | ಕಾಮಿತವನು || ೨ ||

**ರಾಗ ಕೇತಾರಗೌಳ ಝಂಪೆತಾಳ**

ದುಗುಡವಿಂತೇನು ಪ್ರೀಯ | ನಿನ್ನ ದಶ | ಮೊಗವಿಹುದು ಕುಂದಿಕಲೆಯ | ನಗೆಯೊಗುವ
ಖಗಕಾಂತಿಯ | ಬಿಂಬವೇ | ನಗಲಿಹುದು ಮುಗಿಲಿನೆಡೆಯಾ || ೧ ||

ಮಂಗಲೆ ಶುಭಾಂಗ ನಗೆಯು | ಸರಿದುದಾ | ಮಂಗಗಳ ಸಂಗದೆಡೆಯು | ಸಂಗರದಿ
ಭಂಗಕಲೆಯು | ಯೆನಗಾತು | ಹಂಗಿಗಳೆ ಸೀತಾಂಗಿಯು || ೨ ||

ನಲ್ಲನಾನಿನಗೆ ಮೊದಲು ನುಡಿದಿಹುದ | ನಲ್ಲಗಳೆದಹುದೆ ಪೇಳು |
ಯೆಲ್ಲರಾಡಿದ ನುಡಿಯೊಳು | ನಿನಗೆ ಹಿತ | ವಿಲ್ಲದಂದಾಯ್ತು ಮರುಳು || ೩ ||

ಸುತ ಮೇಘನಾದ ರಣದಿ | ಮಡಿದುದಕೆ | ವ್ಯಥೆಯ ಹೊರತಿಲ್ಲ ಮಡದಿ |
ಖತಿಯೇರಿತಿದಕೊ ಮನದಿ | ಪೋಗುವೆನು | ಧೃತಿಯಿಹುದು ಗೆಲುವೆಹವದಿ || ೪ ||

**ಭಾಮಿನಿ**

ಎನ್ನ ಮಂಗಲಸೂತ್ರ ಬಿಂಬವು |
ನಿನ್ನ ದೇಹದೊಳೀರ್ಪುದದರನು |
ಕನ್ನೆಗಾಗಿಯೆ ರಾಘವನಿಗೊಪ್ಪಿಸಲು ಬೇಡಿಂದು ||
ಯಿನ್ನುಳಿದ ಸುತನೋರ್ವನಿಹ ಸಾ |

ಕಿನ್ನು ಸಂಗರ ಬೇಡ ಸೀತೆಯ |
ನೆನ್ನ ಮಾತಿನೊಳೊದು ರಾಮನಿಗೀಯಬೇಕಿಂದು || ೧ ||

**ರಾಗ ಭೈರವಿ ಝಂಪೆತಾಳ**

ಮಡದಿಯೆನಿಸಲು ತಂದ | ಪೊಡವಿಜೆಯ ನೆವೆದಿಂದ |
ಲಡಗಿತಾದರು ವೃಂದ | ಕೊಡುವನಲ್ಲೆಂದಾ || ೧ ||

ಧರಣಿಜೆಯ ಕೊಡೆದಿರಲು | ಗರಳವೀಯುತ ತೆರಳು |
ಭರದಿಮದಲೆನಗೆನಲು | ವರದ ಮೋಹದೊಳು || ೨ ||

**ಭಾಮಿನಿ**

ಸುಂದರಾಂಗಿಯೆ ನಿನ್ನ ಮೃದು ನುಡಿ |
ಬಂಧನದಿ ಸಿಲುಕಿದೆನು ಪೂರ್ವದ |

ಬಂಧನವೆ ಬೇರಿಹುದು ನಿನ್ನೊಳಗೊರೆಯಲೆಂತದನು ||
ಚಂದಿರಾನನೆ ನಿನ್ನ ಮೋಹದ |

ಮಂದಿರವ ತೊಲಗುವೆನು ಪ್ರಿಯೆ ಬಾ |
ರೆಂದು ಮಂಡೋದರಿಯ ಮುದ್ದಿಸಿ ನುಡಿದೆ ದಶಮುಖನು || ೧ ||

**ರಾಗ ಬೇಗಡೆ ಯೇಕತಾಳ**

ಇತ್ತ ಕೇಳ್ ಮಯಪುತ್ರಿ ಸುಚರಿತ್ರೆ | ನಿನ್ನಾತ್ಮ ಶುದ್ಧದ | ಸತ್ಯನುಡಿಯ ವಿಚಿತ್ರ ಮೃಗನೇತ್ರೆ ||
ಉತ್ತಮದ ಹರಿಪತ್ತನದೊಳಿಹ | ಭೃತ್ಯರೊಳು ಸುಖವೆತ್ತಿರಲು ಮುನಿ |
ಪೋತ್ತಮರು ಮುಳಿದಿತ್ತ ಶಾಪದೊ | ಳೆತ್ತಲಾಯ್ತಿ ದೈತ್ಯ ಜನ್ಮವು || ಯಿತ್ತ || ೧ ||

ಸತ್ತ ಸಹಜನೆನ್ನೊತ್ತಿನವ ವಿಜಯ | ಜಯನೆಂಬುವನು ನಾ | ವೆತ್ತ ಜನ್ಮವಿದಿತ್ತಲೆರಡನೆಯ ||
ಮತ್ತ ಕಾಶಿನಿಯಿತ್ತು ತನುಸುಖ | ಪತ್ನಿಯೆಂದೆನಿಸುತ್ತಲಿಹುದೀ |
ಹೊತ್ತಿನಲಿ ತೊರದತ್ತಲೈದುವೆ | ಪೃಥ್ವಿಯಲಿ ಸುಖವೆತ್ತಿ ಬಾಳಿರು || ಯಿತ್ತ || ೨ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಮಾನಿನಿಯ ಮನ್ನಿಸುತಲುನ್ನತ ದಾನ ಧರ್ಮಾದಿಗಳನೆಸಗುತ |
ತಾನಿಳಿಯೆ ಪತಿಯಂಘ್ರಿಗೆರಗಿದ | ಳಾನಿತಂಬೆ || ೧ ||

ಬರಸೆಳದು ಬಿಗಿದಪ್ಪಿ ಮುದ್ದಿಸಿ | ಸ್ಥಿರದೊಳಿರು ನೀನೆಂದು ಬೋಧಿಸಿ |
ಹರುಷದಿಂ ಪೊರಮಟ್ಟನಾ ದಶ | ಶಿರನುಧುರಕೆ || ೨ ||

**ಕಂದಪದ್ಯ**

ಇತ್ತಲು ಸುರಪತಿ ರಥಮಂ | ಚಿತ್ತಜ ಪಿತನೆಡೆಗಂ ಕಳುಹಲ್ ಪರಿಕಿಸುತಂ |
ಹತ್ತದೆ ತಾನಿರಲನಿಬರ | ಚಿತ್ತವನನುಕರಿ ಸುತ್ತಡರಲು ಖಳ ನುಡಿದಂ ॥ ೧ ॥

**ರಾಗ ಭೈರವಿ ಯೇಕತಾಳ**

ಸುರಪತಿ ನಿನಗೀರಥವಾ | ಸಂ | ಗರಕೆನುತಲಿ ಕಳುಹಿರುವಾ |
ಧುರದೊಳಗೆನ್ನನು ಗೆಲುವಾ | ಬಲು | ಗರುವಗಳಿರೆ ಪರಿಕಿಸುವಾ ॥ ೧ ॥

ವಿಧಿಭವತ್ರಿದಶಾಧಿಪರು | ನಿ | ನ್ನದುಭುತಭಯಕಂಜುವರು |
ಕದನವನೀಕ್ಷಿಸುತಿಹರು | ನಿನ್ನ | ವಧಿಸಲು ರಥವಿತ್ತಿಹರು ॥ ೨ ॥

ಬಲುಭಟ ನೀನಾಗಿರಲು | ನಿನ್ನ | ಲಲನೆಯ ನಾರಣ್ಯದೊಳು |
ತೊಲಗುತಲೈದಿಹುದೆಲ್ಲಿ | ಬಂ | ದಿಳಿದೆಯ ಸತಿಯಾಸೆಯಲಿ ॥ ೩ ॥

ಯಿನನನ್ವಯದೊಳು ಮುನ್ನಾ | ನೀ | ನನರಣ್ಯಕ ನೆಂಬವನಾ |
ಹನನವಗೈದಿಹೆ ಮೇಣಾ | ಹಗೆ | ತಣಿಸಲುಧುರಕೈದಿಹೆನಾ ॥ ೪ ॥

**ರಾಗ ಕಾಂಬೋದಿ ಝಂಪೆತಾಳ**

ಎನ್ನ ಸೋದರಿಯಳನು | ಮನ್ನಿಸದೆ ದೇಹವನು | ಬಂಣಗೆಡಿಸಿಹುದರಿತು ನಾನು |
ನಿನ್ನವಳನೊದಿಹೆನು ಉನ್ನತ ವಿರೋಧವನು | ಮುನ್ನ ಒದಗಿಸಿದಾತ ನೀನು ॥ ೧ ॥

ನಿನ್ನ ಭಗಿನಿಯನೊಲಿದು | ಮುನ್ನಕಿವಿಗಳ ತರಿದು | ಉನ್ನತದ ಮೂಗನೆರೆ ಕೊದು ||
ಬಂಣ ತಾ ಕುಂದಿಹುದು | ಯೆನ್ನ ಸತಿಯಳನೊದು | ರನ್ನೆಗುದಿಸಿಹುದೆ ಪೇಳೊಲಿದು ॥ ೨ ॥

ದುರುಳೆಯೋರ್ವಳ ತರಿದು | ಧರೆಯಪಟ್ಟವ ನುಳಿದು | ಹರಿಣವನು ವಿಪಿನದಲಿಸದೆದು | |
ಮರುಳು ಕಪಿಗಳ ನೆರೆದು | ಶರಧಿಯನು ನೆರೆಬಲಿದು | ಮೆರೆದ ವಿಕ್ರಮಿಯು ನೀನಹುದು ॥ ೩ ॥

ಧರಣಿಪನ ಸೆರೆಬಿದ್ದು | ಹರಧನುವಿನಡಿಗೆಡದು | ಕಿರಿಯ ಕಪಿ ತೊಟ್ಟಿಲನು ಕಾದು |
ಹರನಗಿರಿಯೆತ್ತಿಹುದು | ತರುಣಿಯೋರ್ವಳನೆಳೆದು | ಧರಿಸಿ ಶಾಪವ ಮೆರದುದಹುದು ॥ ೪ ॥

**ಭಾಮಿನಿ**

ಮೂರು ಮೂರ್ತಿಗಳಿಂದ ಸಾಯದ |
ಘೋರ ವರಬಲ ವಿಹುದೆನಗೆ ನೀ |
ವೀರನಾದಡೆ ತೋರು ನಿನ್ನಯ ಸತ್ವವಿಂದಿನಲಿ ||
ಚಾರು ಮಾಯಾತೀತನರಿತದ | ಕೂರಲಗನೊಂದೆಸೆಯಲಾಶರ |
ಸಾರುತಸುರನ ಶಿರಕರಂಗಳನಿಳುಹಿತವನಿಯಲಿ ॥ ೧ ॥

**ರಾಗ ಭೈರವಿ ಯೇಕತಾಳ**

ಶಿರಗಳು ಭುಜಗಳು ಸಹಿತಾ | ಮ | ತ್ತಿರದುದಯಿಸಲೀಕ್ಷಿಸುತಾ |
ತರಿದಿಳುಹಲುಧಾತ್ರಿಯಲಿ | ತಾ | ನಿರದುದಿಸಿತು ಚೋದ್ಯದಲಿ || ೧ ||

ಕತ್ತರಿಸಿದ ಭುಜಗಳನು | ಮೇ | ಣೊತ್ತರಿಸಿದ ಶಿರಗಳನು |
ಮತ್ತುದ್ಭವಿಸಲು ಭರದಿ | ನೋ | ಡುತ್ತಲಿ ಯೋಚಿಸಿ ಮನದಿ || ೨ ||

**ಭಾಮಿನಿ**

ಮೆರವಶಾಂರ್ಗಮಹಾಧನುವ ತಾ |
ಕರದಿಪಿಡಿದಬ್ಬರಿಸೆ ಬೇಗದಿ |
ಶರವತೊಡಲನಿತರೊಳು ವಿಶ್ವಾಕಾರತಾನಾದ ||
ಹರಪಿತಾಮಹ ಸುರಪಮನು ಮುನಿ |
ವರರುಗಳು ಬ್ರಂಹ್ಮಾಂಡ ತಂಡವ |
ಧರಿಸಿರುವ ಶ್ರೀ ವಿಮಲ ಮೂರ್ತಿಯ ಕಂಡನಸುರೇಂದ್ರ || ೧ ||

**ರಾಗ ಭೈರವಿ ಝುಂಪೆತಾಳ**

ಆದಿ ಮಾಯಾತೀತ | ವೇದವಂದಿತ ನಿರತ |
ಸಾಧುಗಳ ಕುಲಕಮೃತ | ಮಾಧವನೆ ಜಯತು || ೧ ||

ಎಲ್ಲಿ ಸತಿಸುತರುಗಳು | ಎಲ್ಲಿ ಸುಖದುಃಖಗಳು |
ಯೆಲ್ಲಿ ಸೌಭಾಗ್ಯಗಳು | ಯಿಲ್ಲವವನಿಯೊಳು || ೨ ||

ಮೂರು ದಿನದಧಿಕಾರ | ಧಾರುಣಿಯ ಸುವಿಚಾರ |
ಚಾರುತರ ಸಂಸಾರ | ವಾರಿಗಿದು ಪೂರಾ || ೩ ||

**ಭಾಮಿನಿ**

ಎನುತ ಮಾಯಾತೀತನನುಪಮ |
ಘನಮಹೋನ್ನತ ಮೂರ್ತಿಯನು ತಾ |
ಮನದಣಿಯಲೀಕ್ಷಿಸುತಲೆರಗಿದ ಭಕ್ತಿಭಾವದಲಿ ||
ದನುಜನಾತ್ಮೋದಯವ ತಿಳಿಯುತ |
ಚಿನುಮಯನು ನಗುತೆಂದ ಖಳನೀ |
ನೆನಗೆ ಶೃಣಾಗುವೆಯೊ ಪೇಳೆನಲೆಂದನುಗ್ರದಲಿ || ೧ ||

ಧಾರುಣಿಯೆ ತಲೆಕೆಳಗೆ ಮಗುಚಲಿ |
ವಾರಿಧಿಗಳುರೆ ಬೆರತು ಹೋಗಲಿ |

ಮೂರು ಮೂರ್ತಿಗಳೈದಿ ಬೇಡಲಿ ಶರಣು ಪೊಗೆ ನಿನ್ನಾ ||
ಧಾರುಣೀಸುತೆಗಾಗಿಯೆನ್ನೊಳು |
ಹೋರಿ ನಿನ್ನೊಳು ಸೋತೆನಾದರೆ |
ಗೌರಿಧವನಡಿಭಜಕ ತಾನಲ್ಲೆಂದದಶವದನಾ || ೨ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಹೊತ್ತಕೀರ್ತಿಯ ಸತ್ವಯುತನೀ | ವ್ಯರ್ಥಕದನಾಗ್ರಹದ ಗರ್ವದಿ |
ನಿತ್ತು ಕಾದಲು ಬೇಡ ಮಡಿವೆ ನಿ | ರರ್ಥವಾಗಿ || ೧ ||

ಧುರಕೆ ಬೆದರುವನಲ್ಲವೀದಿನ | ದುರಿತಕಂಜುವನಲ್ಲ ನಿನ್ನೊಳು |
ಮರಣ ಭಯವೆನಗಿಲ್ಲವಿದುವೇ | ಸ್ಥಿರದ ನುಡಿಯು || ೨ ||

ಇನಿತು ನಿರ್ಧರವಿಹುದೆ ನಿನ್ನಲಿ | ಯೆನಗೆ ಮುಂದಪವಾದನುಡಿಯರು |
ಹನನ ಕಾಲವನರಿತು ನಿಲ್ಲೆಂ | ದೆನುತ ನುಡಿದ || ೩ ||

ತಿಳಿದಿಹೆನು ನಾ ನಿನ್ನ ನೆಲೆಯನು | ಪ್ರಳಯದೊಳು ವಟಪತ್ರದೊಳು ನೀ |
ಮಲಗಿ ಕೊಂಡೆಸದೀರ್ಪ ಮಾಯಾ | ಲಲಿತನೆಂದು || ೪ ||

ದಣಿಸುವೆಯದ್ಯಾಕಿನ್ನು ಬೇಗದೊ | ಳನುಕರಿಸು ನಿನ್ನಡಿಯ ಸೇವೆಯ |
ನೆನಗೆ ಶ್ರೀ ರಘುರಾಮ ರಾಮೆಂ | ದೆ | ನುತ ಮಣಿದಾ || ೫ ||

ಶರಣನನು ಮತಿಯಿಂದಲಾದಶ | ಶಿರ ನುರಸ್ಥಳಕಂಬನೆಸೆಯಲು |
ಸುರಪತಿಯ ರಂಗದಲಿದಶಶಿರ | ಮೆರದನಾಗ || ೬ ||

**ಭಾಮಿನಿ**

ದುರುಳನವಸಾನದಲಿ ರಘುಪತಿ |
ಶರಣನನು ಸಂತೈಸಿ ಪಟ್ಟವ |
ವಿರಚಿಸುತ ಕಪಿವರರನುಚಿತ್ತೋಕ್ತಿಯಲಿ ಮನ್ನಿಸುತಾ |
ಅರಸಿ ಜನಕಜೆ ಸಹಿತ ನಿಜಪುರ |
ವರಕೆ ನಡೆತಂದವನಿಪಟ್ಟವ |
ಧರಿಸಿ ಕೀರ್ತಿಯನಾಂತು ರಂಜಿಸುತೀರ್ದ ರಘುನಾಥ || ೧ ||

# ಶಿಶುಪಾಲ - ಶ್ರೀಕೃಷ್ಣ

**ವಾರ್ಧಿಕ**

ಹರಿಯು ಕೃಷ್ಣಾವತಾರದೊಳುದಿಸಿ ಕಂಸಾದಿ |
ದುರುಳರಂ ಸದೆಬಡಿದು ಪಾಂಡವರ ನುರೆಬೆರೆತು |
ಮೆರವರಾಜಾಧ್ವರದೊಳಗ್ರಪೀಠವನೇರಿ ವಿಭವದೊಳ್ ರಂಜಿಸಿದನು ||
ಧರೆಯಧಿಪ ಶಿಶುಪಾಲ ಹರುಷದಿಂ ಸಭೆಗೈದಿ |
ಪರಿಕಿಸುತಲಗ್ರ ಪೀಠವನೇರಿ ಕುಳಿತಿರುವ |
ಪರಮಪುರುಷನ ನೋಡಿ ಭರಿತ ವೈರಾಗ್ಯದಿಂ ಜರದೆಂದ ಶ್ರೀ ಹರಿಯನು || ೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಏನೆಲವೊ ಗೋವಳನೆ ರಾಜ | ಸ್ಥಾನ ಮಧ್ಯದೊಳಗ್ರಪೂಜೆಯ |
ಮಾನ ಪೀಠವನೇರಿ ಕುಳಿತೆಯ | ಹೀನಮತಿಯೆ || ೧ ||

ಸಾಗರಾಂತ್ಯದ ನೃಪರ ಮಧ್ಯದಿ | ಯಾಗ ಪೂಜಾಸನವನೇರಲು |
ಯೋಗ ನಿನಗೆಲ್ಲಿಹುದು ಕೀರ್ತಿಯ | ಭಾಗಿಯಹುದೆ || ೨ ||

ಮೇಧಿನಿಪರನ್ವಯಕೆ ಪೂಜಾ | ರಾಧನೆಗಳಹುದಲ್ಲದೆಂದಿಗು |
ಯಾದವನು ನೀನಿದಕೆ ಬಾಧ್ಯನೆ | ವಾದಿಸಿದರೆ || ೩ ||

ಕ್ಷೋಣಿಯೊಳು ನೃಪಸೂಯವೆಂಬ ಪ್ರ | ಧಾನ ಕಾರ್ಯಾದ್ರಿಯೊಳು ಗರ್ವದಿ |
ಭಾನು ನೀನಾಗುದಿಸಿದೆಯ ಸ್ವ | ರ್ಭಾನುವಿದಿರು || ೪ ||

ಇಳೆಯೊಳುತ್ತಮನ್ಯೆಸೆ ನಿನ್ನನು | ಮೊಲೆಯುಣಿಸೆ ಬಂದವಳ ತರಿದಿಹೆ |
ನಳಿನ ಮುಖಿಯರ ವಸನವೆಳದಿಹೆ | ಕಳವಿನಿಂದಾ || ೫ ||

ಚೆಲುವ ಸತಿಯರನೆಳದು ಮಾವನ | ತಲೆಯ ಕಡಿದಿಹೆ ಕಾಳಿಯನ ಹೆಡೆ |
ತುಳಿದು ಕೊಂದವನ್ಯೆಸೆ ಕೀರ್ತಿಯ | ತಿಲಕನಹುದೆ || ೬ ||

ಕನಕ ಪೀಠವನಿಳಿಯದಿರಲೀ | ಕ್ಷಣದಿ ಕರಪಿಡಿದೆಳದು ನಿನ್ನಯ |
ತನಿರಕುತ ತೆಗೆದುಣಿಸುವೆನು ಯೋ | ಗಿನಿಯರಿಂಗೆ || ೭ ||

**ಭಾಮಿನಿ**

ಹರಿಯ ನೀ ಪರಿ ಜರದು ಖಳ ಮುಂ |
ದ್ವರಿಯಲಾಕ್ಷಣ ತಿಳಿದು ಮುರಹರ |
ದುರುಳನೊರದ ಶತಾಪರಾಧವ ಮನ್ನಿಸಿದ ಮನಕೆ ||

ಭರದಿ ಪೀಠವನಿಳಿದು ಚೈದ್ಯನ |
ಗುರುವವಿಳಿಸುವೆನೆಂದು ವಿಲಯದ |
ಪುರಹರನ ವೋಲುಗ್ರದಿಂದಿದಿರಾದನಾಹವಕೆ || ೧ ||

**ರಾಗ ಭೈರವಿ ಯೇಕತಾಳ**

ಭಳಿ ಭಳಿರೆಲೆ ಶಿಶುಪಾಲ | ಹಗೆ | ಬೆಳೆದುದೆಯೊನ್ನೊಳು ಬಹಳ |
ಮುಳಿದೀಪರಿಜರದಿಹುದು | ಮನ | ದೊಳು ಹಿತವೆನಗಾಗಿಹುದು || ೧ ||

ಹಾರದಿರೆಲೋ ಗೋಪಾಲ | ನೀ | ಚೋರರೊಳಧಿಕ ವಿಶಾಲ |
ಧಾರುಣಿಪರಮಧ್ಯದಲಿ | ಕಲೆ | ಯೇರಿತೆ ನಿನಗಿಂದಿನಲಿ || ೨ ||

ನಿನ್ನನು ಪೂಜಿಸದುದಕೆ | ನಿನ | ಗೆನ್ನೊಳು ಮನ ಮುನಿಸೇಕೆ |
ಬಂಣದ ಪೂಜಾಸನಕೆ | ನೀ | ಗಣ್ಯನೆ ಜರೆಯುವದೇಕೆ || ೩ ||

ವೋರ್ವಳ ಬಸುರಲಿ ಜನಿಸಿ | ಮ | ತ್ತೋರ್ವಳ ಮಗನೆಂದೆನಿಸಿ |
ವೋರ್ವನೆ ತಂದೆಯೊ ನಿನಗೆ | ಮ | ತ್ತೀರ್ವರೊಧಿಟ ಪೇಳೆನಗೆ || ೪ ||

ಪಿತನೋರ್ವನೆ ವಸುದೇವ | ಮ | ತ್ತಿತರರು ಸಲಹುತ್ತಿರುವ |
ಶ್ರುತಿ ಮತ ಪಿತರೈದೆನುವಾ | ಬಹು | ಮತವಿದೆ ನೀನರಿಯದವ || ೫ ||

ಧರೆಯಾಲಯದೊಳಗಿರದೆ | ಮಹ | ಶರಧಿಯನ್ಯಾತಕೆಸರಿದೆ |
ಅರಿಗಳ ಭಯ ನಿನಗಿಹುದೆ | ಬರಿ || ಮರುಳುತನವು ದೊರಕಿದುದೆ || ೬ ||

ಮಗಧನ ಭಯಕಂಜುತಲಿ | ಪೊಸ | ನಗರದೊಳಿಹೆ ನಬ್ಧಿಯಲಿ |
ಹಗರಣದೊಳಗಾತನನು | ಭಯ ಮುಗಿಸುತಲೈ ತಂದಿಹೆನು || ೭ ||

ಸತ್ಯಾತ್ಮಕ ಧರ್ಮಜನು | ಕೈ | ವರ್ತಿಪ ನೃಪಸೂಯವನು |
ಸತ್ವದಿ ನಿನ್ನಯ ತಲೆಯ | ಕಡಿ | ದೊತ್ತುವೆ ಪೂರ್ಣಾಹುತಿಯ || ೮ ||

**ಭಾಮಿನಿ**

ಮಾತು ಸಾಕೆಲವೆಲವೊ ಬಲ್ಲೆನು |
ಭೂತಳಾಧಿಪರಧಮ ರೈಸೆ ನಿ |
ಪಾತವೆಸಗಲು ಬಂದಿಹೆನು ನೀ ಪರಿಕಿಸೆಂದೆನುತಾ ||
ಯಾತುದಾನ ವಿರೋಧಿಯೊರದಿಹ |
ಮಾತ ಮನದೊಳಗರಿತು ಮಾಯಾ |
ತೀತನೆನ್ನೊಳುಧುರಕೆ ಬಂದಿಹುದೈಸೆ ಧಿಟವೆನುತಾ || ೧ ||

**ರಾಗ ಮಾರವಿ ಯೇಕತಾಳ**

ತಿಳಿದಿಹೆ ನಿನ್ನಯ ನೆಲೆಯ ದುರಾತ್ಮಕ | ಕೊಲುವವನೆಂದೆನು ತಾ |
ಯಿಳೆ ಭಾರವ ಮುಂದಿಳಿಸುತ ಧರ್ಮವ | ಸಲಹುವನಹೆಯೆನುತಾ || ೧ ||

ದಣಿಸುವದೇಕೆನ್ನನು ನಿನ್ನಯ ಪದ | ವನಜವ ಕಾಣಿಸುತಾ |
ಚಿನುಮಯ ಸಲಹೆಂದೆನುತಲಿ ದೈನ್ಯದಿ | ಮಣಿದನು ಪ್ರಾರ್ಥಿಸುತಾ || ೨ ||

**ಭಾಮಿನಿ**

ವರ ಸುದರ್ಶನದಿಂದ ಚೈದ್ಯನ |
ಕೊರಳ ಕತ್ತರಿಸುತ್ತಮಿಗೆ ಮುಂ |
ದ್ವರಿವುತೈತಹ ದಂತವಕ್ತ್ರನ ಕೆಡಹಿ ಧಾತ್ರಿಯಲಿ ||
ಮೆರವ ರಾಜಾಧ್ವರವ ತೀರಿಸು |
ತುರುತರಾನಂದದಲಿ ಶ್ರೀಹರಿ |
ಮೆರವ ಕೀರ್ತಿಯ ಧರಿಸುತೀರ್ದನು ದಿವ್ಯತೇಜದಲಿ || ೧ ||

## ಬೌದ್ಧ-ಕಲ್ಕ್ಯ

**ರಾಗ ಸಾಂಗತ್ಯ ರೂಪಕತಾಳ**

ಹರಿ ಬೌದ್ಧನಾಗಿ ಶ್ರೀ ಧರೆಯ ಮಾನವರಿಂಗೆ | ವರತತ್ವ ಬೋಧೆಯನೊರದು ||
ಮೆರವ ಸದ್ಧರ್ಮವ ಸ್ಥಿರಗೈದು ಧಾತ್ರಿಯ | ಹೊರೆಯ ತಾನಿಳುಹಿದ ನಲಿದು || ೧ ||

**ಶ್ರೀ**

ಸರುವ ಶಕ್ತಿಯೊಳು ಮುಂದಿರದೆ ಕಲ್ಕ್ಯಂಕಿತ | ಧರಿಸಿ ದುಷ್ಟರನೆಲ್ಲ ತರಿದು ||
ಪರಮ ಸಜ್ಜನರಿಂಗೆ ಹರುಷವಗೊಳಿಸುತ್ತ | ಧರೆಯ ಪಾಲಿಸುತೀರ್ಪನೊಲಿದು || ೨ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಶ್ರೀನಿವಾಸ ದಶಾವತಾರವ | ತಾನಿಳುಹಿಗೈದೀರ್ಪ ಚರಿತೆಯ |
ಮೌನಿ ಸೂತನುಸೂರ್ದನಾ ಮಹ | ಶೌನಕರಿಗೆ || ೧ ||

ಭಕ್ತಿಯಲಿ ಕೈಮುಗಿದು ಶೌನಕ | ಮೊತ್ತ ಸೂತ ಮುನೀಂದ್ರಗೊಂದಿಸಿ |
ಚಿತ್ತ ಹರುಷಿತರಾಗಿ ವಿಷ್ಣುವ ಪ್ರಾರ್ಥಿಸಿದರು || ೨ ||

**ರಾಗ ಡವಳಾರ ಯೇಕತಾಳ**

ವರಮತ್ಸ್ಯಗೆ ಕೂರ್ಮನಿಗೆ | ಮೆರವ ವರಾಹಗೆ ನರಸಿಂಹನಿಗೆ |
ಕಿರಿವಾಮನನಿಗೆ ಭಾರ್ಗವನೆನಿಪಗೆ | ಸುರಚಿರದಾರತಿಯಾ ಬೆಳಗಿದರು || ಶೋಭಾನೆ || ೧ ||

ವರ ಶ್ರೀರಾಮಗೆ ಕೃಷ್ಣನಿಗೆ | ಮೆರೆಯುವ ಬೌದ್ಧಗೆ ಕಲ್ಕ್ಯನಿಗೆ | ಧರೆಯನು ಪೊರೆದಗೆ |
ಸ್ಥಿರದ ಮಹಾತ್ಮಗೆ | ಹರುಷದೊಳಾರತಿಯ ಬೆಳಗಿದರು || ಶೋಭಾನೆ || ೨ ||

**ಭಾಮಿನಿ**

ಕ್ಷಿತಿಯೊಳುರುಡೂರೆನುವ ಕ್ಷೇತ್ರದಿ |
ಸತತಭಕ್ತರ ಪೊರೆವ ಶಿವನಿಗೆ |
ಹಿತನೆನಿಪ ಮಹವಿಷ್ಣುವಿನ ಪದಕರ್ಪಿಸಿದೆನಿದರಾ ||
ಕ್ಷಿತಿಯಮರ ಸುಬ್ರಾಯರನುಪಮ |
ಪ್ರಥಮಸುತನಹ | ವಿಷ್ಣು ನಾನೀ |
ಕೃತಿಯನೆಸಗಿದೆ ತಪ್ಪಿರಲು ತಿದ್ದುವದು ಬಲ್ಲವರೂ || ೧ ||

|| *ಶ್ರೀ ಶಾರದಾಂಬಾಯೈ ನಮಃ* ||

|| *ಶ್ರೀ* ||

*ತಾ. ೨೨-೧೧-೧೯೫೮ಕ್ಕೆ ಕೃತಿ ಸಮೊಕಪ್ತವು ಈ ಪ್ರಸಂಗದಲ್ಲಿ ಜುಮುಲ ಪದ್ಯಗಳು ೨೪೯*

# ಶ್ರೀ ವಿಷ್ಣುಲೀಲೆ

## ಪಾತ್ರಗಳು

| | |
|---|---|
| ಬ್ರಹ್ಮ, ವಿಷ್ಣು | ಮಧು, ಕೈಟಭ |
| ಸತ್ಯವ್ರತ | ತಮಾಸುರ |
| ಇಂದ್ರ, ನಾರದ, ಶಿವ, ಮೋಹಿನಿ, | ಕಾಲನೇಮಿ |
| ಸನಕಾದಿ ಋಷಿಗಳು, | ಜಯ, ವಿಜಯ |
| ಭೂದೇವಿ, | ಹಿರಣ್ಯಾಕ್ಷ, |
| ಪ್ರಹ್ಲಾದ, ಚಂಡಾಮರ್ಕರು, | ಹಿರಣ್ಯಕಶ್ಯಪ, ಕಯಾಧು |
| ವಾಮನ | ಬಲಿ, ಶುಕ್ರಾಚಾರ್ಯ |
| ಜಮದಗ್ನಿ, ಪರಶುರಾಮ, | ಕಾರ್ತವೀರ್ಯ |
| ರಾಮ, ಸೀತೆ, | ರಾವಣ |
| ಲಕ್ಷ್ಮಣ, ಹನುಮಂತ | ಕುಂಭಕರ್ಣ |
| ಕೃಷ್ಣ, | ಕಂಸ |

| | |
|---|---|
| ಅಕ್ರೂರ, ಭೀಷ್ಮ, | ಚಾಣೂರ-ಮುಷ್ಟಿಕರು |
| ಧರ್ಮರಾಯ ; ಸಹದೇವ, | ಶಿಶುಪಾಲ,<br>ದಂತವಕ್ರರು, |
| ಬುದ್ಧ | ತಾರಾಕಾಕ್ಷ, ತ್ರಿಪುರರು |
| ಕಲ್ಕಿ | ಕಲಿಪುರುಷ |
| ಮತ್ಸ್ಯ, ಕೂರ್ಮ, ವರಾಹ, ನರಸಿಂಹ ಇತ್ಯಾದಿ. | |

# ವಿಷ್ಣುಲೀಲೆ

**ಸ್ರುಗ್ಧರಾ ವೃತ್ತ**

ಶ್ರೀಕಾಂತಂ ಲೋಕನಾಥಂ ಪ್ರಕಟಿತನಿಗಮೋದ್ಧಾರನುದ್ದಾಮ ಭಕ್ತಾ |
ನೇಕಾಭೀಷ್ಟ ಪ್ರದಾತಂ ಬಲಿಭುಜ ಮಥನಂ ನಾರಸಿಂಹಂ ಮಹಾಕೂ |
ರ್ಮಾಕಾರಂ ಜಾಮದಗ್ನ್ಯಂ ದಶಶಿರಕುಲ ವಿಧ್ವಂಸನರ್ಹತ್ಸ್ವರೂಪಂ |
ಶ್ರೀಕೃಷ್ಣಂ ರಕ್ಷಿಸೆಮ್ಮಂ ಕಲಿಕಲುಷಹರಂ ಜ್ಞಾನ ವಿಜ್ಞಾನಗಮ್ಯಂ ||

**ಭಾಮಿನಿ**

ಶ್ರೀ ಗಜಾನನ ವಿಘ್ನನಾಶನ |
ಭೋಗಿಭೂಷನ ಸುತನೆ ವಿದ್ಯಾ |
ಸಾಗರನೆ ಪರಿಪೂರ್ಣ ಜಗದಾನಂದ ಕಾರಣನೆ |
ನಾಗಸುರನರ ಮುನಿಜನಸ್ತುತ |
ಭೋಗ ಭಾಗ್ಯಪ್ರದನೆ ಭವಭಯ |
ರೋಗವೈದ್ಯನೆ ಪಾಲಿಸೈ ಶುಭಮತಿಯನೆಮಗಿತ್ತು || ೧ ||

**ಕಂದಪದ್ಯ**

ವೀಣಾಪುಸ್ತಕಪಾಣಿಯೆ | ಗಾನ ವಿನೋದಿನಿಯೆ | ಕಮಲಯೋನಿಯ ಸತಿಯೇ |
ಜ್ಞಾನನಂದಪ್ರದೆ ಗೀ | ರ್ವಾಣಿಯೆ ಸುಡಿಸೆನ್ನ ರಸನೆಯೊಳ್ ಮಂಗಲಮಂ || ೧ ||

**ದ್ವಿಪದಿ**

ಆದಿಕವಿ ವಾಲ್ಮೀಕಿ ವ್ಯಾಸರನುಸ್ತುತಿಸಿ ||
ವೇದಶಾಸ್ತ್ರ ಪುರಾಣ ಕೋವಿದರ ಸ್ಮರಿಸಿ || ೧ ||

ಗುರುಹಿರಿಯರಂಘ್ರಿಗಳನೆನೆದು ಬರೆದಪೆನು ||
ಹರಿಯುಹತ್ತವತಾರಗೆಯ್ದ ಚರಿತೆಯನು || ೨ ||

ಮತ್ಸ್ಯರೂಪದಿ ತೊಡಗಿ ಹರಿಕಲ್ಕಿಯಾಗಿ ||
ಪೃಥ್ವಿಯನು ಕಾಯ್ದನಾನಂದಮಯನಾಗಿ || ೩ ||

ಸೂತವೈಶಂಪಾಯನರು ಪೇಳಿದುದನು ||
ನಾ ತಿಳಿದ ಯಕ್ಷಗಾನದಿ ವಿವರಿಸುವೆನು || ೪ ||

ಕಿರಿದಾಗಿ ಹಿರಿದಾಗಿ ಮೆರೆವ ಹರಿಲೀಲೆ ||
ಒರೆಯಲಳವಲ್ಲವಾದರು ಬರೆವೆನಿಲ್ಲೇ || ೫ ||

ದೋಷವಿರೆಬಲ್ಲವರು ತಿದ್ದಿ ಶರಣೆಂಬೆ ||
ದೋಷವಿಲ್ಲದ ಮನುಜ ಕೃತಿಯಾವುದೆಂಬೆ || ೬ ||

**ರಾಗ ಕಾಂಬೋದಿ ಝಂಪೆತಾಳ**

ಸುರಮುನಿಗಳಿರ ಕೇಳಿ | ಸರಸಿಜಾಕ್ಷನು ಸಿರಿಯ | ಸರಿಸದಲಿ ಯೋಗನಿದ್ರೆಯನು ||
ಮರೆತು ಸೃಷ್ಟಿಸಿದನಾ | ಪರಮೇಷ್ಠಿಯನು ತನ್ನ | ವರನಾಭಿಕಮಲ ಮಧ್ಯದಲಿ || ೧ ||

ಕರೆದಿತ್ತನಾತನಿಗೆ | ವರಸೃಷ್ಟಿಯಧಿಕಾರ | ಹರಗೆ ಪ್ರಳಯದ ಪಾರುಪತ್ಯ ||
ಇರಲಿ ತನಗೆಲ್ಲವನು | ಹೊರೆವ ಭಾರವೆನುತ್ತ | ಹರಿನಿರೂಪಿಸಿ ನಿದ್ರೆಗೈದ || ೨ ||

ಏನೆ ಹಸಾದವೆನುತ್ತ | ವನಜಪೀಠನು ರಜೋ | ಗುಣದಿಂದ ಸೃಷ್ಟಿಸಲ್ಕಾಗ ||
ಜನಿಸಿದರು ಘೋರರೂ | ಪಿನ ದನುಜರಿರ್ವರಾ | ವನಜಾಂಬಕನ ಕಿವಿಗಳಿಂದ || ೩ ||

**ರಾಗ ಮಾರವಿ ಏಕತಾಳ**

ಏನಾಶ್ಚರ್ಯವು ಜಲವಲ್ಲದೆ ಮ | ತ್ತೇನನು ಕಾಣೆವಲಾ ||
ಈ ನೀರಿನೊಳೆಮ್ಮನು ಹೆತ್ತವರಾರ್ ? | ಕಾಣಲು ಬೇಕೀಗ || ೧ ||

ಕಳವಳವೇಕೆಲೆ ಅಗ್ರಜ ನೋಡಾ | ಮಲಗಿಹನೋರ್ವಾತ ||
ಜಲಜಾಗ್ರದೊಳಿಹ ಮತ್ತೋರ್ವನು ಬಿಡು | ಹಳಚಲು ಬೇಕೀಗ || ೨ ||

ತಡೆಯೇತಕೆ ನಡೆ ಹೊಡೆದೆಚ್ಚರಿಸುವ | ಜಡಧಿಯೊಳಡಗಿದರು |
ಬಡಕುರಿಯನು ತಿಂದಡಗಿಸಬೇಕೈ | ಒಡಲಿನ ಹಸುವೆಯನು || ೩ ||

ಎಂದಾ ರಾಕ್ಷಸರೊಂದಾಗಿಯೆ ಘೋ | ಯೆಂದು ಬೆರಸಿ ಬರಲು ||
ನೊಂದಾ ಬ್ರಹ್ಮನು ಮಾಯೆಯನೆಬ್ಬಿಸಿ | ವಂದಿಸಿದನು ಹರಿಗೆ || ೪ ||

**ರಾಗ ಸುರುಟಿ ಏಕತಾಳ**

ರಕ್ಷಿಸೆನ್ನ ದೊರೆಯೇ ಸರ್ವಾ | ಧ್ಯಕ್ಷ ನಿನ್ನ ಮರೆಯೆ |
ಭಕ್ಷಿಸಲೈತಹ ದನುಜಾಧಮರನು | ಶಿಕ್ಷಿಸಬೇಕೈ ಲಕ್ಷ್ಮೀಪತಿಯೆ || ೧ ||

ಬಳಲದಿರೈ ಮನದಿ ಸ್ವೈರಣೆ | ಗೊಳುತಿರು ನಿರ್ಭಯದಿ |
ಖಳರಿರ್ವರ ಸಂಹರಿಸದೆ ಬಿಡೆನೈ | ಕಳವಳಿಸದೆ ನಿನ್ನೊಳಿಗನಡೆಸೈ || ೨ ||

**ಭಾಮಿನಿ**

ಎನುತ ಮಾಯಾಮಹಿಮನಾಗಳೆ |
ಘನಪರಾಶಕ್ತಿಯನು ಧ್ಯಾನಿಸೆ |
ಕ್ಷಣದೊಳಾಕೆಯನೊಲಿಸಿ ದಿವ್ಯವರ ಪ್ರಸಾದದಲಿ ||
ಗಣಿಸಲರಿಯದ ಶಕ್ತಿಸಾಹಸ |
ಗುಣದಿ ಹೂಂಕರಿಸಿದನು ಸಮರಾಂ |
ಗಣಜಲಧಿಯೇ ಬತ್ತುವಂದದಿ ರಾಕ್ಷಸರ ನೋಡಿ || ೧ ||

**ರಾಗ ಭೈರವಿ ಏಕತಾಳ**

ದಡಿಗರೆ ಗಜರುವಿರೇಕೆ | ನಮ್ಮೊಡನೆ ಕಾದುವಿರೆ ಜೋಕೆ |
ಕೆಡುಕನು ತಂದೊಡ್ಡುವಿರೆ | ತಲೆ ಕಡಿದಿಕ್ಕುವೆ ನಾ ಭಳಿರೆ || ೧ ||

ಹೋಗಾಚೆಗೆ ನಿನ್ನುವನು | ತಿಂದು ತೇಗುವ ಮೊದಲಾತನನು |
ವೇಗದಿ ನುಂಗದೆ ಬಿಡೆವು | ಮಾ ಸಾಗರವನೆ ಕುಡಿದಪೆವು || ೨ ||

ಎನುತಾ ದೈತ್ಯರು ನೆಗೆದು | ಬ್ರ ಹ್ಮನಿಗಿಟ್ಟರು ಗದೆಜಡಿದು ||
ವನಜಾಕ್ಷನು ಚಕ್ರವನು | ಭೋಂಕನೆ ತೆಗೆದೆಚ್ಚನು ತಾನು || ೩ ||

ಸರಿಸಮ ಕಾದುತ್ತಿರಲು | ಹರಿ ಕರೆದೆಂದನು ದೈತ್ಯರೊಳು |
ವರಗಳ ನೀವೆನು ನಿಮಗೆ | ಮನದಿರವನು ಪೇಳಿರಿ ಎನಗೆ || ೪ ||

ಬೇಡಲು ಬಂದಿಹೆವೇನೋ | ನೀ ಬೇಡಿಕೊ ಕೊಡುವೆವು ಕಾಣೋ |
ನೀಡಿರಿ ಚಕ್ರಕೆ ಶಿರವ | ಎಂದು ಬೇಡಿದನಾ ಹರಿ ವರವ || ೫ ||

**ಭಾಮಿನಿ**

ಬಳಿಕ ಮಧುಕೈಟಭರು ಮಾಯಾ |
ಬಲವನರಿಯದೆ ನುಡಿದರವನೀ |
ತಳದೊಳಲ್ಲದೆ ಜಲದಿ ವಧಿಸಲು ಬಾರದೆನೆ ಖಳರು ||

ನಳಿನ ನೇತ್ರನು ಘೋರ ರೂಪವ |
ತಳೆದು ತೊಡೆಯೊಳಗಿಟ್ಟು ದೈತ್ಯರ |
ತಲೆಯನರಿದಾ ಮೇಲೆ ಮೇದಿನಿಯಾಯ್ತು ಜಲಧಿಯಲಿ || ೧ ||

## ಮತ್ಸ್ಯಾವತಾರ

**ರಾಗ ಮಾರವಿ ಏಕತಾಳ**

ಬಳಿಕ ವಿಧಾತ್ರನ ಮುಖದಿಂದೊಗೆದುವು | ಬಲುವೇದಾದಿಗಳು ||
ಖಳ ಸೋಮಕನಾ ಬ್ರಹ್ಮನ ಬಳಿಯಿಂ | ಮುಳಿದೆದ್ದನು ಭರದಿ || ೧ ||

ಜನಿಸಿದವೇಕೋ ನಾಲ್ಮೊಗದಿಂದಲಿ | ಘನತರ ಮೂರ್ತಿಗಳು ||
ಅಡಗಿಸಬೇಕೀ ವೇದಗಳಿದ್ದರೆ | ದನುಜರಿಗೆಡೆಯುಂಟೆ || ೨ ||

ನಿದ್ರೆಯೊಳಿರುವಾ ಬ್ರಹ್ಮನ ಬಳಿಯಿಂ | ದೊಯ್ದಾವೇದಗಳ |
ಮಧ್ಯಸಮುದ್ರದೊಳದ್ದಲು ಬೇಕೆಂ | ದೊಯ್ದನು ಬಲು ಖೂಳ || ೩ ||

ನಾರಾಯಣನದ ಕಾಣುತ ಮತ್ಸ್ಯಾ | ಕಾರವ ಕೈಕೊಂಡು |
ಸಾರಿದನಾ ಸತ್ಯವ್ರತನಾಶ್ರಯ | ಕಾರುಣ್ಯವ ಬೇಡಿ || ೪ ||

**ರಾಗ ಕೇತಾರಗೌಳ ಝಂಪೆತಾಳ**

ಭಳಿರೇ ಏನಾಶ್ಚರ್ಯವು | ಜಲಪಾತ್ರೆ | ಯೊಳ ಹೊಕ್ಕ ಕಿರುಮತ್ಸ್ಯವು ||
ಬೆಳೆ ಬೆಳೆದು ನದಿನದಗಳ | ಆಕ್ರಮಿಸಿ ಜಲಧಿಯಿಂ ಮೇಲಾಯ್ತಲಾ || ೧ ||

ಏನು ಮಾಯಾ ವಿದ್ಯೆಯೋ | ರಾಕ್ಷಸರು | ತಾನೆ ಗೈದ ಕುತಂತ್ರವೊ |
ಮೀನಾಗಿ ಬಂದೆನ್ನನು | ಪರಿಕಿಸಲು | ಶ್ರೀನಿವಾಸನೆ ಬಲ್ಲನು || ೨ ||

ಎಂದು ಕಳವಳಿಸುತಿರಲು | ಹರಿನುಡಿದ | ನಿಂದಿಗೇಳನೆ ದಿನದೊಳು |
ಬಂದಪುದು ಪ್ರಳಯಕಾಲ | ಹಡಗೇರಿ | ನಿಂದು ರಕ್ಷಿಸುವುದೆಲ್ಲ || ೩ ||

ಮಾಧವನ ಮತಿನಂತೆ | ಪ್ರಳಯ | ಬರ ಲೈದಿತಾ ನೌಕೆ ಮತ್ತೆ |
ಸಾಧನಗಳನು ತುಂಬಿದ | ನೃಪನದರೊ | ಳಾ ದಿನಂಗಳ ನೂಕಿದ || ೪ ||

**ರಾಗ ಶಂಕರಾಭರಣ ಮಟ್ಟೆತಾಳ**

ಇತ್ತ ಕೇಳಿರೀ ಮಹಾತ್ಮೆ | ಮತ್ಸ್ಯ ರೂಪದಿಂದ ಹರಿಯು |
ಸಪ್ತಸಾಗರಗಳ ತುಂಬಿ | ಸುತ್ತ ನೋಡಿದ ||

ಗೊತ್ತು ಕಾಣದಿರಲು ಜಲವ | ನೊತ್ತಿ ಪಾತಾಳಕಿಳಿದ |
ದೈತ್ಯನ್ನು ಹಿಡಿದು ಮುಖದೊ | ಳೆತ್ತಿಕೊಂಡನು ‖ ೧ ‖

ಏನಿದೇನು ಜಲವ ಮಿಕ್ಕ | ಮೀನಿದಾಶ್ಚರ್ಯವೈಸೆ |
ತ್ರಾಣವೆನಿತೊ ಕಾದಲಿರುವ ಸ್ಥಾನವೆಲ್ಲಿದೆ ||
ಕಾಣಬೇಕೆನುತ್ತ ಕೆಲಕೆ | ದಾನವೇಂದ್ರ ಸಾರುತಿರಲು |
ಶ್ರೀನಿವಾಸನವನ ಕಡಿದು | ಬೇನೆಗೊಳಿಸಿದ ‖ ೨ ‖

ದುಷ್ಟತಮನೆ ವೇದಕುಲವ | ನಷ್ಟಗೊಳಿಸಲಿದೆಯಲ್ಲೊ |
ಸೃಷ್ಟಿಕರ್ತನಿಂಗೆ ಮೋಸಕೊಟ್ಟು ನಡೆದೆಲೋ ||
ಇಷ್ಟು ಸಹಸಬಂತೆ | ಕಾಲ | ಕಷ್ಟವಾಯ್ತೆನುತ್ತ ಖಳನ |
ಗಟ್ಟಿ ಹಿಡಿದು ಶಿರವನೊಡೆದು | ಹೊಟ್ಟೆ ಸೀಳಿದ ‖ ೩ ||

ತ್ರಿದಶರೆಲ್ಲ ಕೂಡಿ ನೋಡಿ | ಮುದದಿ ಸ್ತೋತ್ರ ಹಾಡುತಿರಲು |
ಪದುಮ ನೇತ್ರನಮಲವೇದ | ಗಳನುತೋರಿದ ||
ಹದುಳದಿಂದ ಸತ್ಯವ್ರತಗೆ | ಅಧಿಕ ಪದವನಿತ್ತು ತನ್ನ |
ಸದನಕೈದಲಾಯ್ತು ಜಗಕೆ | ವಿವಿಧ ಭಾಗ್ಯವು ‖ ೪ ‖

## ಕೂರ್ಮಾವತಾರ

**ಭಾಮಿನಿ**

ಬಳಿಕ ಮಧು ಸೂದನನು ತ್ರಿದಶರ |
ಬಳಗವನು ಸಂತೈಸಿ ಭುವನಂ |
ಗಳನು ಪಾಲಿಸುತಿರಲು ಕಾಲಾಂತರಕೆ ವಿಧಿವಶದಿ ||
ಮುಳುಗಿತೈ ವಾರಿಧಿಯೊಳಮರರ |
ನಿಳಯದೈಸಿರಿ ಮುನಿಯ ಶಾಪದ |
ಬಲವದೆನಿತೋ ಎಂದು ಮರುಗುತ್ತಿರ್ದನಾಶಕ್ರ ‖ ೧ ‖

**ರಾಗ ನೀಲಾಂಬರಿ, ರೂಪಕತಾಳ**
**(ಅಕಟಕಟೀ ನಾಡಲಿ ಸುರನಿಕರಕೆ)**

ಹರ ಹರ ಇನ್ನೇನ್ಮಾಡಲಿ | ಮರೆಯಾಯ್ತೆಮ್ಮಯ ಸಂಪದ |
ಬರುವಾ ಭಾಗ್ಯವ ಕಾಲಿಂ | ದೊರಸುತ ಕೆಟ್ಟನಲಾ ||
ವರಮುನಿಗಳ ಗಣಿಸದೆ ನಾ | ಗರುವ ದೊಳಾಂತೆನು ಶಾಪವ |
ಮುರಿಯಿತು ಮಾನವು ಸ್ವರ್ಗದ | ದೊರೆತನವೆನಗೇಕೆ ‖ ೧ ‖

ಯಾರಿಗೆ ಪೇಳಲಿ ಕಷ್ಟದ | ಭಾರವ ಹೊರುವವರಿಹರೇ |
ನಾರಾಯಣನಿದ ಕೇಳ್ದರು | ದೂರದೆ ಬಿಡನೆನುತ ||
ಭಾರಿ ಮನೋ ವ್ಯಥೆಯಲಿ ಜಂ | ಭಾರಾತಿಯು ಕರಗುತ್ತಿರೆ |
ನಾರದನೈತಂದನು ದನು | ಜಾರಿಯಸ್ಮರಿಸುತ್ತ || ೧ ||

ಏನಿದು ಪುರುಹೂತನೆ ಬಗೆ | ಬೇನೆಯದಾರಿಂದಾಯಿತು |
ದಾನವರೇಂಗೈದರೋ ನುಡಿ | ನಾನರಿದಪೆನೆನುತ ||
ಜ್ಞಾನದೊಳೀಕ್ಷಿಸಿದನುಮತಿ | ಹೀನತೆಯಲಿ ಘನ ಮೌನಿಯ |
ಹೀನಯಿಸುತ ಪಡೆದಾ ಬಲು | ಹಾನಿಯೆನೆಲ್ಲವನು || ೩ ||

ನಡೆದುದನೇ ಚಿಂತಿಸಿ ಮನ | ಮಿಡುಕಿದರೇಂ ಫಲವಿಹುದೈ |
ಕಡಲನು ಮಥಿಸುತ ಬೇಗನೆ | ಪಡೆಯೈಶ್ವರ್ಯಗಳ ||
ಕಡುಹಗೆಗಳ ಜತೆಗೂಡುತ | ಕಡೆಯಲು ಬೇಕದರಿಂದಲೆ |
ನುಡಿಯೈ ಹರಿಹರಂಫ್ರಿಗೆ | ಕೊಡುವರು ಸಮ್ಮತಿಯ || ೪ ||

**ವಾರ್ಧಿಕ**

ಎಂದಾಗ ಮುನಿನಾರದೇಂದ್ರನಂ ಬೀಳ್ಕೊಟ್ಟು |
ಸಂದೇಹವಿರದೆ ಸುರ ಸಂದೋಹವಂ ಕೂಡಿ |
ಬಂದು ನುಡಿದಾ ಮುಕುಂದನನೇಮವಂ ಪಡೆದು ಅಂಧಕಾಂತಕಗೆ ತಿಳಿಹಿ ||
ಮುಂದೆ ನಡೆದಾ ದೈತ್ಯ ವೃಂದವಂ ನೋಡಿ ಬಗೆ |
ದಂದವಂ ಸೂಚಿಸಲು ವೃಂದಾರಕರ ಬಳಿಯೊ |
ಳೊಂದಾದರೈ ಕಾಲನೇಮಿವೃಷಪರ್ವ ಜಂಭಾದಿ ರಾಕ್ಷಸ ವೀರರು || ೧ ||

**ರಾಗ ದೇಶಿ ಅಷ್ಟತಾಳ**
**(ಏನಯ್ಯಾ ! ಇಂಥಾದೇನಯ್ಯ)**

ಬಂದರು ನಡೆತಂದರು || ಪಲ್ಲವಿ ||

ಬಂದರು ದೇವ ದಾನವರೊಂದುಗೂಡಿ |
ನಿಂದರು ಕ್ಷೀರ ಸಮುದ್ರದ ನೋಡಿ || ಅನುಪಲ್ಲವಿ ||

ಎಳೆದು ತಂದಿಟ್ಟರು ಮಂದರಗಿರಿಯ | ಬಲದಲಿ ತಂದು ಸುತ್ತಿದರು ವಾಸುಕಿಯ |
ಬಲುಬಗೆ ದಿವ್ಯೌಷಧಿಗಳ ತಂದಿಕ್ಕಿ | ನಲಿದಾಡಿದರು ಮಹಾನಂದದೊಳುಕ್ಕಿ || ೧ ||

ಏನೆಂಬೆನತಿಶಯ ಮಂದರಶೈಲ | ಆನೀರೊಳಿಳಿದು ಹೊಕ್ಕಿತು ಪಾತಾಳ |
ದಾನವಾಂತಕನೆದ್ದು ಕೂರ್ಮಾಕೃತಿಯನು | ತಾನೆತ್ತಿ ಹಿಡಿದನು ಪೊಗಳಲೇನದನು || ೨ ||

ಹಿಡಿದರು ಫಣಿಯ ಮಸ್ತಕವನ್ನು ಸುರರು | ಹಿಡಿಯದಾದರು ಬಾಲವನ್ನು ರಾಕ್ಷಸರು |
ದಡಿಗರೆ ನಾವೇನು | ಬಲವಂತರಿರಲು | ಕಡುಹೀನರಾದೆವೆಂದಾರ್ಭಟ ಕೊಡಲು || ೩ ||

ಶ್ರೀಲೋಲನಪ್ಪಣೆಯಾಗೆ ನಿರ್ಜರರು | ಬಾಲದ ಬಳಿಯೊಳೊಟ್ಟಾಗೆ ರಾಕ್ಷಸರು |
ತಾಳದೆ ಭೀತಿಯ ಹಿಡಿದರು ತಲೆಯ | ಕೀಳು ದುರ್ಜನರಲ್ಲಿ ನುಡಿವುದೆ ನ್ಯಾಯ || ೪ ||

ಎಳೆದರು ಬಾಲವ ಸುರರೊಂದು ಕಡೆಗೆ | ಸೆಳೆದರು ದೈತ್ಯರು ತಲೆಯೊಂದು ಕಡೆಗೆ |
ಗಳಿಲನೆ ಸಾಹಸ್ರ ಫಣಿಗಳ ಜ್ವಾಲೆ | ಸುಳಿದು ಹಾಲಾಹಲವುಕ್ಕಿತು ಮೇಲೆ || ೫ ||

**ರಾಗ ಮಾರವಿ ಏಕತಾಳ**

ಮೊರೆ ಮೊರೆದ್ಯೆತಹ ಗರಳವ | ಕಂಡಾ | ಭರದಿ ಸುರಾಸುರರು ||
ತರಹರಿಸದೆ ಹಿಂ | ಜರಿದೋಡಿದರಾ | ಪುರಹರನಿದ್ದೆಡೆಗೆ || ೧ ||

ಹರ ಹರ ಗಂಗಾ | ಧರ ಮಾಹೇಶ್ವರ | ಗಿರಿಜಾವಲ್ಲಭನೆ |
ಉರಗಾಭರಣನೆ ಪರಿಪಾಲಿಸು ಎಂ | ದೆರಗಿದರಾತನಿಗೆ || ೨ ||

ಕಂಡಾ ರುದ್ರನು | ಸುರದೈತೇಯರ | ತಂಡದೊಡನೆಬಂದು |
ಚಂಡಕರಾಗ್ರದಿ | ತೆಗೆದಾಪೋಶನ | ಗೊಂಡನು ದುರ್ವಿಷವ || ೩ ||

ಕಡೆಯಲು ಮತ್ತಾ | ಕಡಲನು ಧಿರ್ರನೆ | ನಡುಗಲು ಮೂಲೋಕ |
ಜಡಜಾಕ್ಷನು ಕೈ | ಕೊಡಲಾ ಕೌಸ್ತುಭ | ಒಡನುದಿಸಿತು ಜಲದಿ || ೪ ||

ಜನಿಸಿತು ಬಳಿ ಕಾ | ಘನ ಸುರಧೇನುವು | ವಿನುತ ಮಹಾಹಯವು |
ಕ್ಷಣದಿಂದೈರಾವತ | ಕಲ್ಪದ್ರುಮ | ವೆನಿತೋ ಸಂಭ್ರಮದಿ || ೫ ||

ಪರಿ ಪರಿ ದಿವ್ಯಾ | ಭರಣದಿ ಶೋಭಿಪ | ತರುಣಿಯರುದಿಸಲ್ಕೆ ||
ಕರೆದಿತ್ತನು ಶ್ರೀ | ಹರಿಯೀಯೆಲ್ಲವ | ಸುರನಾಥನ ವಶಕೆ || ೬ ||

**ಕಂದ**

ಗರಗರನೆ ಮಂದರಾಚಲ | ತಿರುಗುತ್ತಿರೆ ಚಂದ್ರನುದಿಸಿದಾ ಬಳಿಯಿಂದಂ ||
ಸಿರಿದೇವಿಯು ಮೈದೋರುತ | ಹರುಷದಿ ವರಿಸಿದಳು ಹರಿಯ ವೃಕ್ಷಸ್ಥಳವಂ || ೧ ||

**ರಾಗ ಶಂಕರಾಭರಣ ಮಟ್ಟೆತಾಳ**

ಜನಪ ಕೇಳು ಮತ್ತೆ ಮಹಾ | ವನಧಿ ಮಥನಗೈಯುತಿರಲು |
ಜನಿಸಿತೈ ವಾರುಣಿಯು ಸುರಾಂ | ಗನೆಯ ರೂಪದಿ ||
ದನುಜರಾಗ ಸುತ್ತ ನಿಂದು | ಜುಣುಗಲೇಕೆ ಹಿಡಿರೆನುತ್ತ |
ಬಣಗುತನದಿ ಸೆಳೆದುಕೊಂಡ | ರೆನುವುದೇನದ || ೧ ||

ಬಳಿಕ ತೋರಿತೈ ಸುಧಾಬ್ಧಿ | ಕಲಶವಾಂತು ದೇವ ವೈದ್ಯ
ಜಲಧಿಯಿಂದಲೆದ್ದು ಬಂದ | ಬಲು ವಿನೋದದಿ ||
ಭಳಿರೆ ಭಾಪು ಮಝುರೆ ಬಿಡಿರಿ | ಕಲಶವನ್ನು ಮುಟ್ಟದಾಚೆ |
ತೊಲಗಿರೆಂದು ದನುಜರಿದಿರು | ಬಳಸಿ ಬಂದರು ‖ ೨ ‖

**ಕಂದ**

ಅನಿತರೊಳಾ ಸುಮನಸರೋ | ಯೆನೆ ಜಯಜಯವೆಂದು ಪ್ರಾರ್ಥಿಸುತ್ತಿರೆ ವನಜೇ ||
ಕ್ಷಣನೊಯ್ಯನೆ ಬಂದಂ ಸುರ | ಗಣಿಕೆಯ ತೆರನಾಟ್ಯವಾಡುತಾ ಖಳರಿದಿರೊಳ್ ‖ ೧ ‖

**ರಾಗ ಸಾರಂಗ ಅಷ್ಟತಾಳ**
**(ದೊರೆರಾಯ ಲಾಲಿಸಯ್ಯಾ)**

ಇವಳಾವಳಯ್ಯ ನೋಡಿ | ಈ ಕಡೆ ಬಹ | ಯುವತಿ ಮನ್ಮಥನ ಜೋಡಿ ||
ಕುವಲಯ ನೇತ್ರೆ ವೈಯಾರಿ ಶೃಂಗಾರಿ ನ | ಮ್ಮವರೆಡೆಗೋಡಿ ಬರುವ ಚೆಂದನೋಡಿ ‖ ೧ ‖

ದುಡುಕುವುದೇಕೆ ಮುಂದೆ | ಕೇಳುವ ಮುದ್ದು | ಕೊಡುವ ಮೆಲ್ನುಡಿಗಳಿಂದೆ |
ಕಡಲಗರ್ಭದಿ ಬಂದ ನೀರೆಯಾದರೆ ಲೇಸು | ಹಿಡಿದು ಸೇವಿಸಬೇಕು ಸುಧೆಯ ನಾವೀಗ ‖ ೨ ‖

ದನುಜರ ನುಡಿಯ ಕೇಳಿ | ಬಂದಳು ಮುಂದೆ ಕುಣಿಕುಣಿದಾಡುತಲಿ ||
ಮನಸಿಜನಾನೆಯಂದದಿ ಮೋಹಿನಿದೇವಿ | ಯನಿಬರೊಳೆಂದಳು ಬಲು ಮೋಜು ಮಾಡಿ || ೩ ‖

ಬರಿದೆ ಹೋರಾಡದಿರಿ | ನೀವೊಟ್ಟಾಗಿ ಶರಧಿಯ ಮಥಿಸಿದಿರಿ |
ಸರಿಸಮನಾಗಿ ಸೇವಿಸಲು ಭಾಗಿಗಳಾಗೆ | ಪರಮ ಪೀಯೂಷ ಪಾತ್ರೆಯ ಮುತ್ತಲಹುದೊ ‖ ೪ ‖

ಬಿಡು ಬಿಡಾಮಾತು ಬೇರೆ | ಸರ್ವವು ಸುರರೆಡೆಗಾಯಿತಲ್ಲೊ ನೀರೆ |
ಕಡೆಗೆ ಬಂದಮೃತವ ಬಿಡುವುದುಂಟೆ ಬಾಲೆ | ನಡುವೆ ನೀನಿಂತು ನಮ್ಮೆಡೆಗೆ ಬಡಿಸಬೇಕು ‖ ೫ ‖

**ರಾಗ ಪಂತುವರಾಳಿ ಮಟ್ಟೆತಾಳ**

ಎನಲು ದೇವ ದೈತ್ಯರೆಲ್ಲ | ರೊಂದೆ ಮತದೊಳು ||
ಹೆಣಗದೆರಡು ಪಂಕ್ತಿಯಾಗಿ | ಕುಳ್ಳಿರೆಂದಳು ||
ದನುಜರಾಗ ಮೋಹದೃಷ್ಟಿ ಬಿಡದೆ ಕುಳಿತರು |
ಅನಿಮಿಷರ್ಕಳೆರೆದ ಸುಧೆಯನುಣುತಲಿರ್ದರು ‖ ೧ ‖

ನೋಡಿ ಮೆಲ್ಲನೆದ್ದು ಸುರರ | ಕೂಡಿಸವಿದನು |
ಖೋಡಿ ಸ್ವರ್ಭಾನುವೆಂಬ | ಹೇಡಿ ದೈತ್ಯನು ||
ಗೂಢವರಿತು ಹರಿಯು ಚಕ್ರ | ಹೂಡಲಿದಿರಿಗೆ ||
ರೂಢಿಯಾಯ್ತು ರಾಹುಕೇತು ನಾಮವವನಿಗೆ ‖ ೨ ‖

**ಭಾಮಿನಿ**

ಈ ಪರಿಯೊಳಸುರಾಂತಕನು ಸ್ತ್ರೀ |
ರೂಪವನು ಮರೆಗೈದು ತನ್ನಸ್ವ |
ರೂಪವನು ತೋರಲ್ಕೆ ಕಣ್ತೆರೆಯಿತ್ತು ರಾಕ್ಷಸರ ||
ತಾಪವೇರಿತು ತಮ್ಮ ಮನದನು |
ತಾಪದುರಿಯಿಂದುಕ್ಕಿ ಬರುವಾ |
ಕೋಪದಲಿ ಕಲಿ ಕಾಲ ನೇಮಿಯು ನುಡಿದನಿಬರೊಳು || || ೧ ||

**ರಾಗ ಕೇತಾರ ಅಷ್ಟತಾಳ**

ಅರರೆ ಕೆಟ್ಟಿತು ಕಾರ್ಯವೆಲ್ಲವೂ | ಜ್ಞಾನ ಮರೆತು ಮೋಹದಿ ಬಿದ್ದು ಸೋತೆವು |
ಗರುಡಾರೂಢನ ಮಾಯೆಯಿದು ನೋಡಿ | ತ್ರಿದಶರ ಕೂಟ ಕೂಡಿ ಗೈದಾ ಮೋಡಿ || ೧ ||

ಎಂದು ಭೋಂಕನೆ ಎದ್ದು ಬಂದನು | ದೇ | ವೇಂದ್ರಗಿದಿರು ನಿಂದು ಜರೆದನು |
ಮಂದ ಮತಿಗಳೊಂದು ಗೂಡುತ್ತ | ಸುರ | ವೃಂದವ ಕವಿದರು ಕನಲುತ್ತ || ೨ ||

ದಡಿಗನಾದೈ ಇಂದ್ರ ನಿಲು ನಿನ್ನ ತಲೆ | ಹೊಡೆದು ಬುದ್ಧಿಯ ಕಲಿಸುವೆ ಮುನ್ನ |
ಒಡಗೂಡಿ ನಾವೆಲ್ಲ ಮಥಿಸಿರೆ ನೀವೆ | ಪಡೆದು ಪೀಯೂಷವನುಂಡಿರೆ | || ೩ ||

ಹೋಗು ಹೋಗಾಚೆಗೆ ಯೆಲೊ ಖೂಳ ಭಾಗ್ಯ | ಸಾಗಿ ಬಹುದೆ ದುಷ್ಟ ಜನಕೆಲ್ಲ |
ಯೋಗವಿಲ್ಲದೆ ಕಳಕೊಂಡಿರಿ | ಸುಧಾ ಭಾಗವ ಪಡೆಯದೆ ಜರೆವಿರಿ || ೪ ||

ಹಿರಿಯರೆಮಗೆ ಮಾನವೀಯದೆ | ಸುಧೆ ಯೆರೆದು ಕೊಂಡಿರಿ ಧರ್ಮನೋಡದೆ |
ಮರೆವುದುಂಟೇ ನಿಮ್ಮ ಮೋಸವ | ಎಂದು ಸುರಿದನಿಂದ್ರಗೆ ದೈತ್ಯನಸ್ತ್ರವ || ೫ ||

ಹೋರಾಡಿದರು ಸಮ ಸತ್ವದಿ | ಓರ್ವ ರೋರುವರೊಂದೊಂದು ರೂಪದಿ |
ಕ್ರೂರ ಶಂಬರ ಜಂಭ ಮುಖ್ಯರು | ವಹ್ನಿ ಮಾರುತ ಮುಖ್ಯ ದಿಕ್ಪಾಲರು || ೬ ||

ದೇವಕುಲದ ಸತ್ವ ಕುಂದಲೂ | ಲ | ಕ್ಷ್ಮೀ ವರನಂಘ್ರಿಯ ಜಪಿಸಲೂ |
ಕಾವನಯ್ಯನು ಚಕ್ರತಿರುಹಿಸಿ | ಬಿಟ್ಟ ನಾವಿರೋಧಿಗಳೆಡೆ ಹಾರಿಸಿ || ೭ ||

**ಭಾಮಿನಿ**

ತಿರು ತಿರುಗಿ ಬಹ ಚಕ್ರದುರುಬೆಯ |
ತರಹರಿಸದಾ ದುಷ್ಟ ದನುಜರು |
ತೆರಳಿದರು ಕೆಲರಸುವ ಮರೆದರು ಕೆಲರು ಕಳಕಳಿಸಿ ||
ಹೊರಳಿದರು ಬಳಿ ಕಾಯ್ದು ಮಂಗಲ |

ಹರುಷದಿಂದಾಡುತ್ತ ಸ್ವರ್ಗವ |
ನಿರದೆ ಹೊಕ್ಕರು ದೇವತೆಗಳಚ್ಚುತನ ಕೊಂಡಾಡಿ || ೧ ||

## ಜಯ ವಿಜಯರ ವೃತ್ತಾಂತ

**ಕಂದ**

ಇತ್ತಲ್ ಸನಕಾದ್ಯರ್ ಪುರು |
ಷೋತ್ತಮನಡಿಯಂ ನಿರೀಕ್ಷಿಪಾಭರದಿಂದಂ ||
ಅತ್ಯಾನಂದದೊಳೈದುವ |
ಹೊತ್ತಿನೊಳಿದಿರಾಗಿ ಕಂಡರಾನಾರದನಂ || ೧ ||

**ರಾಗ ಕೇತಾರಗೌಳ ಅಷ್ಟತಾಳ**

ನಾರದ ಮುನಿ ನಿನ್ನ | ಸ್ವಾರಿಯೆಲ್ಲಿಗೆ ಹೊಸ | ವಾರತೆಯುಂಟೆ ಪೇಳು ||
ಈರೇಳು ಭುವನ ಸಂ | ಚಾರದೊಳಿಹ ನಿನ್ನ | ಮೋರೆ ಕಾಂಬುದೆ ಕಷ್ಟವು || ೧ ||

ಸನಕಾದಿಗಳೆ ನಿಮ್ಮ | ಗುಣವ ಬಣ್ಣಿಸುವರೆ | ದನುಜಾಂತಕನೆ ಬಲ್ಲನು |
ಅಣುಗರ ಹಾಗಿದ್ದು | ಘನ ಸುಜ್ಞಾನಿಗಳಾಗಿ | ದಣಿದು ಹೋಗುವುದೆಲ್ಲಿಗೆ || ೨ ||

ಪೋದಪೆವೈ ಮಧು | ಸೂದನನೆಡಗೆ ಈ | ಹಾದಿಯೊಳ್ ವೈಕುಂಠಕೆ ||
ಬೋಧರೂಪನ ದರ್ಶ | ನಾದಿಗಳಿಂ ಸುಖ | ಸಾಧಿಸಲಾಗದೇನೈ || ೩ ||

ಮೌನಿವರ್ಯರೆ ನಿಮ | ಗೇನೆಂಬೆ ಹರಿಯನು | ಕಾಣಬಿಟ್ಟಪಳೆ ಲಕ್ಷ್ಮೀ ||
ಮೀನಾಗಿ ಸುತ್ತಾಡಿ ಮಂದರಾದ್ರಿಯನೆತ್ತಿ | ಕ್ಷೀಣಗೊಂಡಿಹನೈಸೆಲೆ || ೪ ||

ಸನಕ ಮುಖ್ಯರೆ ತಡೆಯಿರೈ | ನಾ | ವಿನಯದಲಿ ಮುಂದೈದಿ ನಾರಾ |
ಯಣನ ದರ್ಶನಪಡೆದು | ಸಕಲವ ತಿಳಿದು ಬಹೆನೆನುತಾ ||

ಕ್ಷಣದಿ ನಾರದನೈದಿ ನುಡಿದನು | ಜಿನುಗದಿರಿ ಹಿಂದಾಗಿ ಬಹುಮುನಿ |
ಜನಕೆ ದಾರಿಯ ಬಿಡದಿರೆಂದಾ | ಜಯವಿಜಯರಿಂಗೆ || ೫ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ನಾರದನ ನುಡಿಕೇಳಿ ಬಳಿಕಾ | ದ್ವಾರಪಾಲರು ಗರುವದಿಂದು |
ಬ್ಬೇರಿನಿಂದರು ಸನಕ ಮುಖ್ಯರ | ದಾರಿಗಿದಿರು || ೧ ||

ತಡೆಯಿರ್ಪೈ ಮಾಧವನ ದರ್ಶನ | ಪಡೆವ ಕಾಲವಿದಲ್ಲ ಹಿಂದಕೆ |
ನಡೆಯಿರ್ಪೈ ಬಲು | ಹುಡುಗರಾಟವು ನಡೆಯದಿಲ್ಲಿ || ೨ ||

ದುರುಳರಾದಿರೆ ಲೇಸು | ನಮ್ಮಯ | ಭರವನರಿಯದೆ ಹೋದಿರೇ ಹರಿ |
ದರುಶನಕೆ ತಡೆಯಾದಿರೇ | ಬಿಡಿ ಮರುಳತನವ || ೩ ||

ದುಷ್ಟತನಕಿದೆ ಹಿಡಿರಿ ಶಾಪವ | ಕೊಟ್ಟೆಪೆವು ಶಿಕ್ಷೆಯನು ಧರೆಯಲಿ |
ಹುಟ್ಟಿರ್ಪೈ ರಾಕ್ಷಸರ ಗುಣದಲಿ | ಭ್ರಷ್ಟರಾಗಿ || ೪ ||

ಎಂದೆನಲು ಜಯವಿಜಯರಾಗ ಸ | ನಂದನಾದ್ಯರ ಶಾಪದುರಿಯೊಳು |
ನೊಂದು ನುಡಿಯಲು ಸಂತವಿಸಿದನು | ಇಂದಿರೇಶ || ೫ ||

**ರಾಗ ಸುರುಟಿ ಏಕತಾಳ**

ಚಿಂತೆಯದೇಕಿನ್ನು | ಗರ್ವದೊ | ಳಾಂತಿರೆ ಶಾಪವನು |
ಭ್ರಾಂತಿಯೊಳೀತೆರ ಮುನಿಗಳ ಘನತೆಯ | ಅಂತರವರಿಯದೆ ಕೆಣಕುವುದೇನೈ || ೧ ||

ಮುನಿಗಳೆಂದ ಮಾತು | ಸತ್ಯವು | ಅನುಭವಿಸುವುದಿಂತು |
ವಿನಯದೊಳೆನ್ನಡಿ ಭಕುತಿಯೊಳೇಳನೆ | ಜನುಮಾಂತರದಲಿ ಬರುವುದು ಹೀಗೆ || ೨ ||

ಭಕ್ತಿಯೊಳಾಗದಿರೆ | ಶಾಪನಿ | ವೃತ್ತಿಯ ಹೊಂದುವರೆ |
ದೈತ್ಯರೆನಿಸಿ ಜನ್ಮತ್ರಯದಲಿ ಸಾ | ಮರ್ಥ್ಯವ ತೋರಿಸಿ ಮುಕ್ತಿ ಪಡೆಯಿರ್ಪೈ || ೩ ||

ಎನಲವರಾನುಡಿಗೆ | ಮರುಗುತ | ಮಣಿದೆಂದರು ಕಡೆಗೆ |
ದನುಜರಾಗಿ ಮೂರ್ಜನುಮವ ತಳೆದು | ಘನತೆಯ ತೋರಿಸಿ ಬರಲಿಹೆವೆಂದು || ೪ ||

## ವರಾಹಾವತಾರ

**ಕಂದ**

ಸನಕಾದ್ಯರ ಶಾಪದೊಳಂ | ವನಜಾಕ್ಷನ ದ್ವಾರಪಾಲರಾಕಶ್ಯಪನಾ ||
ತನುಜಾತರಾದರಿಳೆಯೊಳ್ | ಎನಲೇನೊಂದಿವಸ ನುಡಿದನಾ ಹಿರಣ್ಯಾಕ್ಷಂ || ೧ ||

**ರಾಗ ಭೈರವಿ ಝಂಪೆತಾಳ**

ದೈತ್ಯರೆಲ್ಲರು ಕೇಳಿ | ಮೃತ್ಯುಂಜಯನದಯದಿ |
ಪೃಥ್ವಿಯಗಲದ ಪಾರು ಪತ್ಯವೆಮಗಾಯ್ತು || ೧ ||

ಪರಮೇಷ್ಠಿಯೆನಗಿತ್ತ | ವರಬಲದೊಳಿಂದ್ರಾದಿ |
ಸುರನರರ ಪಟ್ಟವನು | ಮುರಿದು ವಶಗೈದೆ || ೨ ||

ಆದರೇನೊಂದುಂಟು | ಮಾಧವನ ಗೆಲಿದು ಹಗೆ |
ಸಾಧಿಸಿದರೆಮಗೆ ಸರಿ | ಯಾದವರ ಕಾಣೆ || ೩ ||

ಎಂದಾ ಹಿರಣ್ಯಾಕ್ಷ | ಹಂದೆತನದಿಂದೊರೆಯೆ |

ಬಂದನಲ್ಲಿಗೆ ನಾರ | ದೇಂದ್ರನತಿಜವದಿ || ೪ ||

ಘನತರಾಸನವಿತ್ತು | ಮಣಿದು ಕೈ ಮುಗಿದೆಂದ |
ನೆನಗೆ ಸರಿಯುಂಟೆ ಪೇ | ಳನಿಮಿಷಾದ್ಯರಲಿ || ೫ ||

ಮಾರಪಿತನಲ್ಲದೆಯೆ | ಬೇರಿಲ್ಲ ಹಗೆಯೆಮಗೆ |
ತೋರಿ ಕೊಟ್ಟರೆ ಸಾಕು | ತೀರಿಸುವೆನವನಾ || ೬ ||

**ರಾಗ ಕಾಫಿ ಅಷ್ಟತಾಳ**

ಮನಮೆಚ್ಚಿದೆನು ನಿನ್ನ ಮನದಭಾವನೆಗೆ |
ವನಜನಾಭನೆ ಬಂದು ತೋರ್ಪನೆ ಹೀಗೆ ||
ವನಧಿಯೊಳಿರ್ದರು ಮಾಲಕ್ಷ್ಮಿಯೊಡನೆ |
ವಿನಯದಿ ಪೊರೆವನ್ನೆ ಭೂದೇವಿಯನ್ನೇ || ೧ ||

ಭೂಮಿದೇವಿಗೆ ಕಷ್ಟವಾದರೆ ಬಹನು |
ನಾನಾರೂಪಾವನಾಂತು ಮೈದೋರಲಿಹನು ||
ತಾಮಸವಿರದೆ ಗೋಗರ್ಭದೊಳಿರುವ |
ಭೂಮಿಯ ಹಿಡಿದು ಸಾಧಿಸು ಹಗೆತನವ || ೨ ||

**ರಾಗ ಭೈರವಿ ಏಕತಾಳ**

ಸುರ ಮುನಿಪನ ಬೀಳ್ಕೊಟ್ಟು | ಪುರ ಹರನೆನೆ ರೋಷವ ತೊಟ್ಟು |
ಶರಧಿಯೊಳಡಗಲಿ ಹರಿಯ | ಸಂ ಹರಿಸದೆ ಬಿಡೆನಾ ಹಗೆಯ || ೧ ||

ಮೇಲಣ ಲೋಕದೊಳಿರಲಿ | ಪಾತಾಳವನೇ ಹೊಕ್ಕಿರಲಿ |
ಏಳು ಸಮುದ್ರವ ಕಡೆದು | ನಾ ಸೀಳುವೆನಾತನ ಹಿಡಿದು || ೨ ||

ನಡೆಯಲಿ ಸೇನೆಯು ಮುಂದೆ | ಸುರ ಗಡಣವೆ ತಡೆಯಲಿ ಹಿಂದೆ |
ಕೆಡಿಸಲಿ ಯಜ್ಞಾದಿಗಳ | ಹುಡಿ ಹುಡಿ ಗೈಯಲಿ ಲೋಕಗಳ || ೩ ||

ಗದೆಗೊಂಡೆದ್ದಾ ಭರಕೆ | ನೆಲ ನದುರಲು ಹೊಡೆದಾರ್ಭಟಕೆ |
ತ್ರಿದಶರು ಮರುಗಿದರಾಗ | ಧರೆ ಯೆದೆಗೆಟ್ಟೋಡಿತು ಬೇಗ || ೪ ||

ಬೆರಸುತ ಬಂದನು ಖಳನು | ಕಟುಕರ ತೆರದಲಿ ಭೂಮಿಯನು |
ಸಿರಿಯರಸನೆ ಪೊರೆಯನುತ | ಸಾಗರ ಸೇರಲು ಬಿಡದಾತ || ೫ ||

**ರಾಗ ಸೌರಾಷ್ಟ್ರ, ತ್ರಿವುಡೆ ತಾಳ**

ಸಿಕ್ಕಿದೆಯೆಲಾ ದ್ರೋಹಿ ನಿನ್ನಾ | ಸೊಕ್ಕ ಮುರಿಯುವೆನೀ ಸಮುದ್ರದೊ |
ಳಿಕ್ಕಿಕೆಡಹುವೆ ನೋಡು ಭುಜಗಳ | ಶಕ್ತಿಯನ್ನು || ೧ ||

ಎನುತ ಬೊಬ್ಬಿರಿದೆತ್ತಿ ಹಿಡಿದಾ | ವನಧಿಯಲಿ ಹಾಯ್ಕಿದರೆ ಧಾತ್ರೀ ||
ವನಿತೆ ಮರುಗಿದಳಂಬುಜಾಕ್ಷನ | ಗುಣವ ನೆನೆದು || || ೨ ||

ಅರರೆ ಏನದ್ಭುತವು ಭೂಮಿಯ | ಶರಧಿ ಮಧ್ಯದೊಳಿಕ್ಕಿದನೆ ಖಳ |
ಬರಲಿ ಸಾಹಸ ನೋಳ್ಪೆನೆಂದಾ | ಹರಿಯು ಭರದಿ || ೩ ||

ಘೋರರೌದ್ರಾಕಾರವಾಂತಾ | ನೀರೊಳಗೆ ವಾರಾಹಾ ರೂಪವ |
ತೋರುತೆದ್ದನು ದೈತ್ಯ ಕುಲಗಿರಿ | ಜಾರುವಂತೆ || ೪ ||

ಫಡ ಫಡೆಲವೋ ದುಷ್ಟ ನಿನ್ನೆದೆ | ಯೊಡೆದು ಶೈಮಿನಿಗಟ್ಟಲಿಹೆನ್ನೈ |
ಪೊಡವಿಯನು ಸೆಳೆದೊಯ್ದ ದುಷ್ಫಲ | ವಡಸಿತಿದಕೊ || ೫ ||

ಯಾರು ನೀನೆಲೆ ಹಂದಿ ನಿನ್ನವ | ತಾರವತಿಲೇಸಾಯ್ತು ಹಗೆತನ |
ತೀರಿಸಲ್ಕೆಡೆಯಾಯ್ತು ಸತ್ವ | ತೋರಿಸೀಗ || ೬ ||

ಎಂದೆನೆಲು ವಾರಾಹ ಮೂರ್ತಿಯು | ಒಂದೆ ಕ್ಷಣದಲಿ ಸೀಳಿ ಬಿಸುಟನು |
ಮುಂದರಿವ ಶತಕೋಟಿ ರುದ್ರರ | ಅಂದದಿಂದ || ೬ ||

## ನೃಸಿಂಹಾವತಾರ

**ಕಂದ**

ಸುಮನಸರೆಲ್ಲರು ಜಯವೆನೆ | ರಮೆಯರಸಂ ಭೂಮಿ ದೇವಿಯಂ ತಂದಿರಿಸಲ್||
ಭ್ರಮಿಸುತ ಹಿರಣ್ಯ ಕಶ್ಯಪ | ನಮರರ ಧ್ವನಿ ಕೇಳಿ ನುಡಿದ ನಿಂತಾ ಸಭೆಯೊಳ್ || ೧ ||

**ರಾಗ ಕಾಂಬೋಧಿ ಝಂಪೆತಾಳ**

ದನುಜರಿರ ಕೇಳಿರೆ | ಮ್ಮನುಜನಳಿದನು ಮಹಾ | ವನಧಿಯಲಿ ಹರಿಗೈದ ಮೋಸ ||
ಬಣಗು ಹಂದಿಯ ರೂಪ | ವನು ಧರಿಸಿ ಕೊಂದನೈ | ಗಣಿಸದೆಮ್ಮೀ ದೈತ್ಯಬಲವ || ೧ ||

ಸುರರ ಮಾತಿನಲಿ ಸಂ | ಹರಿಸುತಿರೆ ನಮ್ಮವರ | ಬರಿದೆ ಕುಳಿತರೆ ಸೌಖ್ಯವುಂಟೆ ||
ಸರುವರೊಟ್ಟಾಗಿ ನಿ ರ್ಜರರ ಕುಲವನು ಸದೆದು | ಪುರುಷತನವನು ಮೆರೆಸಬೇಕು || ೨ ||

ಹೋಮ ನೇಮಗಳು ನಿ | ರ್ನಾಮವಾಗಲಿ ಬುಧ | ಸ್ತೋಮವಳಿಯಲಿ ಧರ್ಮಸಭೆಯು |
ಆ ಮಹಾ ಜಗವೆನ್ನ | ನಾಮದಿಂದಿರಲಿ ಸು | ಕ್ಷೇಮವಾಗಲಿ ದೈತ್ಯಕುಲಕೆ || ೩ ||

ಅರಸನಪ್ಪಣೆಯಂತೆ | ಹೊರಟರೈ ನಾಲ್ದೆಸೆಗೆ | ದುರುಳರಾರ್ಭಟಿಸಿ ಬಹುವಿಧದ ||
ಧರಣಿಯನು ಸುತ್ತಿದರು | ಧರ್ಮ ಕರ್ಮಾದಿಗಳ | ಮುರಿದಿಕ್ಕಿದರು ಸಾಧು ಜನರ || ೪ ||

**ಭಾಮಿನಿ**

ಕೇಳಿರೈ ಮುಂಗತೆಯ ಲಕ್ಷ್ಮೀ |
ಲೋಲನಂಘ್ರಿಯ ಭಕ್ತಿ ಬಿಡದಾ |
ಬಾಲನುದಿಸಿದನಾಖಳಗೆ ಪ್ರಹ್ಲಾದನಾಮದಲಿ ||
ಪಾಲಿಸಿದನಾ ಬಳಿಕ ವಿದ್ಯೆಯ |
ಲೀಲೆಯಿಂದೋದಿಪರೆ ಗುರುಕುಲ |
ಪಾಲಕರ ಕರೆದಿತ್ತನಾ ದಿತಿಜಾತನತ್ಮಜನ || ೧ ||

**ರಾಗ ಕೇತಾರಗೌಳ, ಅಷ್ಟತಾಳ**

ಕರೆದು ಕೈಯೆತ್ತಿ ಕು | ಳ್ಳಿರಿಸಿ ಬರೆಸಿದರು | ಭರದಿಚಂಡಾಮರ್ಕರು ||
ಹರನಮೋ ಶಿವಯೆಂದು | ಬರೆಯೆನೆ ಬರೆದನು | ಹರಿನಮೋ ಹರಿಯೆನುತ || ೧ ||

ಶ್ರೀ ಮಹಾಪಾರ್ವತೀ | ವರನೆನೆ ಬರೆದನು | ಮಾಮನೋಹರನೆನ್ನುತ ||
ಶ್ರೀ ಮಹಾವಿಷ್ಣುವ | ನಾಮ ಹೊರತು ಪೇಳ | ನಾಮಹೇಶ್ವರನೆಂಬುದ || ೨ ||

ಹರ ಹರ ಮಹಾದೇವ | ಏನೇನೆಂದರು ಕೇಳ | ಹರಿಯ ನಾಮಾವಳಿಯ ||
ಬರೆವನಲ್ಲದೆ ತಿದ್ದಿ | ಬರೆಸಲು ಬಾರನು | ಪರಮಾರ್ಥವನೆ ಪೇಳ್ವನು || ೩ ||

ಮಗುವೆ ನೀನೇತಕೆ | ಜಗದೀಶ್ವರನ ಬಿಟ್ಟು | ಹಗೆಯ ಕೊಂಡಾಡುವೆಯಾ ||
ಜಗವನುಂಗುವ ನಿನ್ನ | ಪಿತನು ಕೇಳ್ದರೆ ನಮ್ಮ | ತೆಗೆವನು ಕೋಪದಲಿ || ೪ ||

ಗುರುಗಳಾದರು ನಿಮ | ಗೊರೆಯಲುಂಟೈ ಕೇಳಿ | ವರಸಚರಾಚರವ ||
ಪೊರೆವಚ್ಯುತನ ಪಾದ | ಸ್ಮರಣೆಯಿಂದಲಿ ಮೋಕ್ಷ | ದೊರೆಯದೆ ಹೋಹುದೇನೈ || ೫ ||

**ವಾರ್ಧಕ**

ಏನಗೈದರು ಸಾನುರಾಗದಿಂ ವೇಗದಿಂ |
ತಾನೆ ತಿದ್ದಲು ಬಾರದಾ ಪ್ರಹ್ಲಾದನಂ |
ದಾನವೇಶ್ವರನೆಡೆಗೆ ಕರೆತಂದು ಬಿಟ್ಟರಾ ಗುರುಗಳಿರ್ವರು ಭಯದಲಿ |
ಹೀನರಾದೆವು ನಿನ್ನ ಮಗನ ದುರ್ಬುದ್ಧಿಗಳ |
ನೀನೆ ತಿದ್ದಲುಬೇಕು ತೀರದಾಯ್ತೆಮಗೆ ನಾ |
ವೇನೆಂದರಂಬುಜಾಕ್ಷನ ಬಿಟ್ಟು ಶಿವನಾಮಗಳ ಸರ್ವಥಾ ನುಡಿಯನು || ೧ ||

**ಕಂದ**

ಖೂಳರು ನೀವೇ ನಮ್ಮಯ |
ಬಾಲಕನೇಂಬಲ್ಲ ಹರಿಯ ನಾಮಾವಳಿಯಂ ||
ಶಾಲೆಯೊಳೋದಿಸಿ ಹರಿಕಥೆ |
ಹೇಳ್ವಿರೆ ಸಾಕೆಂದು ಗಜರಿದಂ ದನುಜೇಂದ್ರಂ ||

**ರಾಗ ಶಂಕರಾಭರಣ ತ್ರಿವುಡೆತಾಳ**

ಒಡನೆ ಪ್ರೀತಿಯೊಳೆತ್ತಿ ಬಾಲನ | ತಡವರಿಸುತಾ ದೈತ್ಯನು |
ನುಡಿದನೀಪರಿ ಚೇಷ್ಟೆಗಳ ಬಿಡು | ತಡೆಯದೆಮಗೆ || ೧ ||

ಪರಶಿವನ ಬಿಟ್ಟನ್ಯ ದೇವವ | ಸ್ಮರಿಸಲೇಕೊ ದಿತಿಜರ |
ತರಿದು ತ್ರಿದಶರ ಪೊರೆವ ಮೂರ್ಖನೊ | ಳೆರಕವಹುದೇ || ೨ ||

ತಾತ ಕೇಳಚ್ಯುತನು ಜಗದಧಿ | ನಾಥನೈಸೇ ಸುಜನರ |
ಪ್ರೀತಿಯಲಿ ರಕ್ಷಿಸುವನಧಮರ | ಘಾತಿಸುತ್ತ || ೩ ||

ತರಳ ನೀ ತಿಳಿದಿಲ್ಲವಾತನ | ಹಿರಿದು ಮಾಯಾ ಮಂತ್ರವ |
ಕಿರಿಯ ತಂದೆಯ ಕ್ರೋಧರೂಪಿನೊ | ಳಿರಿದನಲ್ತೆ || ೪ ||

ಮಡುಹಿದವರಾರಿಲ್ಲ ತಾನೆ | ಮಡಿದನಯ್ಯೊ ಪಾಪದೊ |
ಳೆಡಹಿ ಬೀಳುವುದೇಕೊ ಶ್ರೀಶನ | ಅಡಿಯ ಮರೆತು || ೫ ||

**ರಾಗ ಭೈರವಿ ಅಷ್ಟತಾಳ**

ಏನೆಂದೆಯೆಲೊ ಘೋರನೆ | ಸರ್ವವಬಲ್ಲ | ಜ್ಞಾನಿಯಾದ್ಯೆ ಧಿಮ್ಮನೆ |
ಶ್ರೀನಿವಾಸನ ಗುಣಗಾನವ | ಮಾಡುತ್ತ | ಹೀನೈಸುವೆಯ ಮರುಳೆ || ೧ ||

ಕೋಪಿಸಬೇಡ ತಾತ | ದ್ವೇಷವ ಕಟ್ಟ | ಲಾವುದೇನೈ ಸುಕೃತ |
ಶ್ರೀಪತಿಯನು ಬಿಟ್ಟು ಬಾಳಲುಂಟೇ | ದುಷ್ಟ | ಪಾಪಿಯಾಗೆನು ಲೋಕದಿ || ೨ ||

ಎನಲು ಹೂಂಕರಿಸಿದನು | ಸಭೆಯೊಳೆದ್ದು – ಕನಲುತೆಂದನು ಖಳನು ||
ತನಯನಲ್ಲಾ ಮಾರಿಮುಖನೆಮ್ಮ | ವಂಶಕೆ | ಹನನಗೈವಾ ಮೃತ್ಯುವೆ || ೩ ||

ದಡಗಿರ್ವರ ಕರೆದ | ಶೂಲದ ಮೊನೆ | ಗಿಡುವರೆ ನೇಮಿಸಿದ ||
ನಡೆಯದಾಯಿತು ಕಾರ್ಯ ಕಡಲಿನೊಳಿಟ್ಟರು | ಒಡನೆದ್ದು ಬರುತಿರ್ದನು || ೪ ||

ಘೋರ ರಾಕ್ಷಸರೊಮ್ಮೆಗೆ | ಪರ್ವತದಿಂದ | ಹಾರಿಸಿದರು ಕೆಳಗೆ ||
ಕ್ರೂರ ಪರ್ವತಗಳ ತಂದೇರಿಸಿದರು | ಪ್ರಾಣ | ಜಾರದಾಯಿತು ಬಾಲನ || ೫ ||

**ಭಾಮಿನಿ**

ಖಳಹಿರಣ್ಯಕನಧಿಕ ಕೋಪೋ |
ತ್ಕರ ದೊಳಾರ್ಭಟಿಸುತ್ತ ಮಡದಿಯ ||
ಕರೆದು ಗರಳವನೆರೆದು ಕೊಡು ಹೋಗೆಂದು ನೇಮಿಸಿದ ||
ಹರ ಹರಾ ಮಾದೇವ ಎಂದಾ |
ದರದಿ ತರಳನ ಕರೆದು ವಿಷವನು ||
ಕರದೊಳೇರಿಸಿ ಮರುಗಿದಳು ಹರಿಕೃಷ್ಣ ಹಾಯೆನುತ || ೧ ||

**ರಾಗ ಘಂಟಾರವ ಆದಿತಾಳ**
**(ಏನಯ್ಯ ಪವನಜನೆ)**

ಏನ ಮಾಡಲಿ ಶಿವನೆ ಬಾಲಗೆ ಮೃತ್ಯು | ನಾನಾದೆನಲ್ಲೊ ಹರನೆ ||
ಪ್ರಾಣನಾಥನ ಮಾತನು | ಪೂರೈಸುವರೆ | ಏನುಪಾಯವೊ ಕಾಣೆನು || ೧ ||

ಹುಟ್ಟಿದ ಮಕ್ಕಳನ್ನೇ | ಬಲಿಕೊಡುವ ಪಾಪಿ | ದುಷ್ಟರುಂಟೇ ಶಿವನೆ ||
ಸೃಷ್ಟಿಯೊಳೆನ್ನ ಹಾಗೆ | ದುಃಖಾತ್ಮರಾಗಿ | ಹುಟ್ಟಿ ಬಾಳುವರೆ ಹೀಗೆ || ೨ ||

ಎಳೆಮಕ್ಕಳೊಡನಾಡುವ | ಮೋಹದಿ ಮುದ್ದು | ಕಲಿಸುತ್ತಲಿಹ ಶಿಶುವ |
ಕೊಲೆಗೈದು ಬಾಳುವುದು | ಹೊಲ್ಲೆಹವೈಸೆ | ಕಳೆವೆನೀತನುವನಿಂದು || ೩ ||

ಮರುಗುವುದೇತಕಮ್ಮ | ಪಾನವ ಮಾಳ್ಪೆ | ಗರಳವೆಲ್ಲಿದೆ ತೋರಮ್ಮ |
ತರಳ ಧ್ರುವನಿಗೊಲಿದಾ | ಶ್ರೀಹರಿಯೆಮ್ಮ | ಪರಿಪಾಲಿಪನು ಸರ್ವದಾ || ೪ ||

**ಕಂದ**

ಇಂತಾ ಪ್ರಹ್ಲಾದನು ವಿಷ |
ವಾಂತಾಗಳೆ ಶ್ರೀಶನಂಘ್ರಿಯಂ ಸ್ಮರಿಸುತ್ತಾ |
ಸಂತೋಷದೊಳೀಂಟಲು ಸುರ |
ಸಂತತಿ ಭೋಯೆಂದು ಸುರಿದರಮೃತದ ಮಳೆಯಂ || ೧ ||

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಇನಿತು ನಾನಾ ಮಾಯೆ ಮಾಟಗ | ಳಣುಗ ನಾ ಮೈಸೋಕದಿರೆ ಖಳ |
ಕನಲಿದನು ಹರಿಮಹಿಮೆಯೆಂತುಟೊ | ಎನುತ ಮನದಿ || ೧ ||

ಎಲೆಲೆ ದುಷ್ಟ ಕುಮಾರ ನಿನ್ನಾ | ತಲೆಯ ಕಾಯ್ವಾದೈವವಾವುದೊ |
ಕಳಕೆ ತೋರಲ್ಲದಿರೆ ನಾನಿ | ನ್ನುಳಿಯಗೊಡೆನು || ೨ ||

ತೋರಲೇಕೆ ಸಮಸ್ತ ಭುವನವ | ಮೀರುವಾ ಪರಮಾತ್ಮನಿಲ್ಲದ |
ಬಾರಿವಸ್ತುಗಳುಂಟೆ ಜ್ಞಾನಕೆ | ತೋರುತಿಹನು || ೩ ||

ಸುಡು ಸುಡಾ ನುಡಿ ಸತ್ಯವಾದರೆ | ತಡೆಯದೀಕ್ಷಣನೊಳ್ಪೆನೆಂದಾ |
ದಡಿಗನೊದೆದನು ಸ್ತಂಭವೇ ನಡ | ನಡುಗುವಂತೇ | | ೪ ||

ಮೂರುಜಗವಲ್ಲಾಡೆ ದಿಕ್ತಟ | ಚೀರಿತಾಗಳೆ ಸ್ತಂಭ ಮಧ್ಯದಿ |
ತೋರಿತದ್ಭುತ ನಾರಸಿಂಹಾ | ಕಾರವೊಡನೆ || ೫ ||

ಏನಿದಚ್ಚರಿ ಯೀಮಹಾಮೃಗ | ಮಾನವಾಕಾರದಲಿ ಕಾಂಬುದು |
ಏನಮಾಳ್ಪೆನೆನುತ್ತ ಚದರಿದ | ಸ್ಥಾನದಿಂದ || ೬ ||

ಫಡ ದುರಾತ್ಮನೆ  ನಿಲ್ಲು ತಡೆ ತಡೆ | ಒಡಲ ಬಗಿದಪೆ ನೋಡು ವೈರದಿ |
ನಡೆಸಿದಾ ಪಾತಕಕೆ ಶಿಕ್ಷೆಯ | ಕೊಡುವೆನೆನನುತ || ೭ ||

ಬೆರಸಿ ಬೆನ್ನಟ್ಟಿದನು ನರಹರಿ | ಯರರೆ ಚೋದ್ಯವಿದೆನುತ ರಾಕ್ಷಸ |
ಕರದಿ ಖಡ್ಗವನೆತ್ತಿ ಹೊಯ್ದನು | ಸರಭಸದಲಿ || ೮ ||

**ಭಾಮಿನಿ**

ಏನೆನೆಂಬೆನು ನಾರಸಿಂಹನ |
ತ್ರಾಣವೆನಿತೋ ದೈತ್ಯನನು ಹಿಡಿ ||
ದಾನಖಾಗ್ರದಿ ಸೀಳಿ ಬಿಸುಟನು | ಸಂಜೆ ಹೊತ್ತಿನಲಿ ||
ಕಾಣುತಲೆ ವಿಧಿಭವ ಸಮಸ್ತರು |
ದೀನಭಾವದೊಳಿರಲು ರೋಷವ |
ಮಾಣಿಸಲು ಪ್ರಾರ್ಥಿಸಿದನಾ ಪ್ರಹ್ಲಾದನಚ್ಯುತನ || ೧ ||

**ರಾಗ ತುಜಾವಂತು ಝಂಪೆತಾಳ**

ಜಯತು ಜಯಮಾಂಪಾಹಿ | ಜಯತು ಶ್ರೀಲೋಲ |
ಭಯನಿವಾರಕ ತ್ರಾಹಿ | ಜಯತು  ಗುಣಮಾಲಾ || ಪಲ್ಲವಿ ||

ಧನ್ಯನಾದೆನು ದೇವ | ನಿನ್ನ ದರುಶನದಿಂದ | ಇನ್ನೇನು ದೈತ್ಯನಸು | ನಿರ್ನಾಮವಾಯ್ತು ||
ಕಣ್ಣಾರೆ ಕಾಣುವರೆ | ನಿನ್ನ ಸೌಮ್ಯಾಕಾರ | ಮುನ್ನಿನಂದದಿ ತೋರಿ | ಮನ್ನಿಸೆನ್ನುವನು || ೧ ||

ಎಂದುದಾಲಿಸಿ ದಯಾ | ಸಿಂಧು ಶಾಂತಾಕಾರ | ದಿಂದ ತೋರಿದನು ಹಾ | ಕಂದ ನಿನ್ನಿಂದ ||
ಚಂದವಾಯಿತು ಜಗಕೆ | ಮುಂದೆ ನೀನರಸಾಗಿ | ನಿಂದು ಸೌಖ್ಯದಿ ಬಾಳ್ವುದೆಂದು ಹರಸಿದನು || ೨ ||

# ವಾಮನಾವತಾರ

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಇತ್ತ ಶೋಣಿತ ಪತ್ತನದಿ ಬಲಿ | ವಿಸ್ತರಿಸಿದನು ನೂರುಯಾಗವ |
ದೈತ್ಯಗುರುಭಾರ್ಗವನ ಪೌರೋ | ಹಿತ್ಯದಿಂದ || ೧ ||

ಬಂಧು ಬಾಂಧವವೃಂದದೊಡನಾ | ನಂದದಲಿ ಗುರುಬುಧ ಸಮಸ್ತರು |
ಬಂದು ಕೇಳ್ದುದನೀಯುತಿರ್ದನು | ಸಾಂದ್ರವಾಗಿ || ೨ ||

ಇನಿತು ಬಲಿ ಬಹುದಾನಿಯೂಗಿಹ | ಘನ ಚರಿತ್ರೆಯ ಕೇಳುತಲ್ಲಿಗೆ |
ವನಜನೇತ್ರನು ಬಂದನಾಮುನಿ | ತನಯನಾಗಿ || ೩ ||

ನೋಡಿದನು ದಿವ್ಯಪ್ರಕಾಶದಿ | ಮೂಡಿಬಹ ಬಾಲಾರ್ಕನನು ತೆಗೆ |
ದಾಡಿ ಪೀಠವನೇರಿಸುತ ಕೊಂ | ಡಾಡುತೆಂದ || ೪ ||

ಕುಶಲವೇ ಮಗು ನಿನ್ನ ಸ್ವಾರಿಯೊ | ಳಸುರಕುಲವೇ ಪುಣ್ಯಪಡೆಯಿತು |
ಹೊಸತು ಯಾಚನೆಯುಂಟೆ ಕೊಡುವೆನು | ಮಿಸುಕದೀಗ || ೫ ||

ಕೊಡುವೆಯಾದರೆ ಮೂರುಪಾದದೊ | ಳಡಗುವಾ ಭೂಮಿಯನು ಕೊಡುನಾ |
ನಡೆಸುವೆನು ತಪವಲ್ಲಿ ಶಾಶ್ವತ | ಪಡೆದು ಸುಖವ || ೬ ||

ಮರುಳೆಲಾ ಬಾಲಕನೆ ತಿಳಿಯೆಯ | ದೊರೆಗಳಿಗೆ ದೊರೆಯಲ್ಲವೇನಾ |
ಹಿರಿದು ಯಾಚನೆ ಗೈಯದೀತೆರ | ಪೊರೆವುದೇನ್ಯೆ || ೭ ||

**ರಾಗ ಸಾಂಗತ್ಯ ರೂಪಕತಾಳ**

ಅಷ್ಟರೊಳಗೆ ಗುರು | ಪಟ್ಟವಿಳಿದು ಶುಕ್ರ | ತಟ್ಟನೆಂದನು ಬಲಿಯೊಡನೆ || ೧ ||

ಪುಟ್ಟ ಬಾಲಕನೆಂದು | ಕೊಟ್ಟೆಯಾದರೆ ಭೂಮಿ | ಕೆಟ್ಟುಹೋಹುದು ಕಾರ್ಯವೆಲ್ಲ ||
ಆ ಮಹಾ ವಿಷ್ಣುವೆ | ವಾಮನಾಕೃತಿಯಿಂದ | ಭೂಮಿಯ ಕೇಳಬಂದಿಹನು ||
ಸಾಮದಿ ಕೊಡದೆ ನೀನ್ರಾಮವಾಗದೆ ಸುಖ | ಕ್ಷೇಮದೊಳಿಹ ದಾರಿನೋಡು || ೨ ||

ಗುರುವೆ ನಿಮ್ಮಯ ಮಾತಿ | ಗೆರಡಿಲ್ಲವಾದರು | ಕರೆದಿತ್ತ ಭಾಷೆ ತಪ್ಪಿದರೆ ||
ಜರಿವುದು ಕೀರ್ತಿಯೀ | ತರಳನು ಹರಿಯಾಗಿ | ಬರಲಿ ಬಿಡೆನು ಸತ್ಯಪಥವ || ೩ ||

ಎಂದು ಧಾರೆಯ ನೆರೆ | ವಂದಿಗೆ ಜಲಪಾತ್ರೆ | ಬಂದು ಹೊಕ್ಕನು ಕಪ್ಪೆಯಾಗಿ ||
ಮಂದರಧರನಾಗ | ನಿಂದು ತಿವಿಯೆ ಬೇಗ | ಒಂದು ಕಣ್ಣಾಯ್ತು ಶುಕ್ರನಿಗೆ || ೪ ||

**ರಾಗ ಆಹೇರಿ ಝಂಪೆತಾಳ**

ಏನೆಂಬೆನಾಶ್ಚರ್ಯವ | ವಾಮನಗೆ ದಾನವೀಯಲು ದಾನವ || ಪ ||

ಆ ಮಹಾಮಹಿಮನೊಂದೇ | ಮುಹೂರ್ತದಿ ಬೆಳೆದು | ವಾಮನಾಕಾರವನು |
ಭೂಮಿಯಿಂದಾಕಾಶ | ಸೀಮೆವರೆಗಾವರಿಸಿದಾ |
ವಿಶ್ವದಾರಾಮದಿಂ ಹೊರಗೆ ತೋರ್ದ | ಏನೆಂಬೆ || ೧ ||

ಎರಡು ಪಾದಗಳಿಡಲು | ಧರಣಿ ಸಾಕಾಗದಿರೆ | ಪರಮ ವಿಶ್ವಾಕಾರ |
ನರಿತೊಂದು ಪಾದವನು | ವರಮಹಾಧರೆ ಗಿರಿಸಿದಾ |
ಮತ್ತೊಂದು ಚರಣವನು ನಭಕಿರಿಸಿದ | ಏನೆಂಬೆ || ೨ ||

ಮೂರನೆಯ ಚರಣಕಾ | ಧಾರವಿಲ್ಲದೆ ಹೋಗೆ | ನಾರಾಯಣನು ದಯಾ |
ಭಾರದಲಿ ಕರೆದೆಂದ | ತೋರಿಸೈ ಸ್ಥಳವೆನೆಂದು |
ಬಲಿಯು ತಾ ತೋರಿದನು ಶಿರವನಂದು | ಏನೆಂಬೆ || ೩ ||

**ರಾಗ ಮಾರವಿ ಏಕತಾಳ**

ಮತ್ತೆ ಬಲಿಯು ಶಿರವೆತ್ತಿ ಹಿಡಿಯೆ ಪರ | ಮಾತ್ಮನು ಕಾಲೆತ್ತಿ ||
ಒತ್ತಿದನಾತನ | ಮಸ್ತಕವನು ತ | ನ್ನಾತ್ಮದಿ ಭಲೆಯೆನುತ || ೨ ||

ಭಕ್ತರೊಳಗೆ ಸ | ರ್ವೋತ್ತಮನೇ ತವ | ಭಕ್ತಿಗೆ ಮೆಚ್ಚಿದೆನು ||
ಚಿತ್ತದ ಬಯಕೆಯ | ವಿಸ್ತರಿಸೆನಲಾ | ದೈತ್ಯನು ಮಣಿದೆಂದ || ೩ ||

ಶ್ರೀರಮಣನು ಮೈ | ದೋರಿದ ಮೇಲೆ ವಿ | ಚಾರವು ಬೇರುಂಟೆ ? ||
ದ್ವಾರದೊಳನುದಿನ | ತೋರುತ ಪೂರೆಯ್ಯೆ | ಕೀರುತಿ ಮೆರೆವಂತೆ || ೪ ||

ಅಂತಾಗಲಿ ನಾ | ನಿಂತಿಹೆ ನಿಲ್ಲಿಯೆ | ಚಿಂತಿಸ ಬೇಡೆನುತ ||
ಕಂತುಪಿತನು ಮೈ | ಯಾಂತಿಹನಾತನ | ಪಂಥಕೆ ಮನಸೋತು || ೫ ||

# ಪರಶುರಾಮಾವತಾರ

**ರಾಗ ಕೇತಾರಗೌಳ, ಅಷ್ಟತಾಳ**

ಧರಣಿಪ ಕೇಳಿನ್ನಾ | ದರೆ ಕಾರ್ತವೀರ್ಯನ | ಚರಿತೆಯನೊರೆವೆನಯ್ಯ ||
ವರಮಾಹಿಷ್ಮತಿಪುರ | ದರಸಾಗಿ ಮೆರೆವನು | ಪರಿಪರಿ ವೈಭವದಿ ‖ ೧ ‖

ಗುರುಗಳಾಶೀರ್ವಾದ | ಬಲದಿ ರಾಜರ ಗೆದ್ದು | ವರಚಕ್ರವರ್ತಿಯಾಗಿ ||
ಇರಲು ತಾನೊಂದಿನ | ಹರುಷದೊಳಿಳಿತಂದ | ಪರಮ ನಾರದಲ್ಲಿಗೆ ‖ ೨ ‖

ಇದಿರೆದ್ದು ಸಿಂಹಪೀ | ಠರದಲಿ ಕುಳ್ಳಿರಿಸುತ್ತ | ಮುದದಿ ಭೂಮೀಶ್ವರನು ||
ಅಧಿಕ ಭಾಗ್ಯದೊಳಿದ್ದ | ಪದವಿಗೆ ಕೊರತೆಯಾ | ವುದಕಂಡೆ ಹೇಳೆಂದನು ‖ ೩ ‖

ಮಾನವೇಶ್ವರ ನಿನ್ನಾ | ಸ್ಥಾನವ ಬಣ್ಣಿಸ | ಲಾನು ತಿಳಿಯೆನಾದರು |
ಏನೇನ ಕೇಳ್ದರು | ತಾನೆ ಕೊಡುವ ಕಾಮ | ಧೇನು ವಿದ್ದರೆ ಚೆಂದವು ‖ ೪ ‖

ವನವ ಸೇರಿದ ಮೌನಿ | ವರರದರಿಂದಲಿ | ಘನಭಾಗ್ಯ ಪಡೆಯುತಿರೆ ||
ಜನಪ ನೀನಂಥ ಸಾ | ಧನವ ಸಾಧಿಸಿಡರೆ | ನಿನಗಾರು ಸರಿ ಜಗದಿ ‖ ೫ ‖

ಎಂದು ನಾರದನು ಸಾ | ನಂದದಿ ನಡೆಯಲು | ಬಂದರು ವನಚರರು ||
ಇಂದು ವನಕೆ ನಡೆ | ತಂದು ಕಾಳ್ಮೃಗಗಳ | ಕೊಂದಿಕ್ಕಬೇಕೆಂದರು ‖ ೬ ‖

**ರಾಗ ಮುಖಾರಿ ಏಕತಾಳ**
**(ಆಡುತ್ತಾಡುತ್ತ ಬಂದ ರಾಮು)**

ಬೇಟೆಗೆನ್ನುತ ಪೊರಟನೃಪನು ‖ ಕೃತವೀರ್ಯಸುತನು ‖ ಪಲ್ಲವಿ ‖

ಕೂಟದ ಮೃಗಗಳ ಕಾಟವ ನಿಲಿಸಲು | ಬೇಟೆಗಾರರೊಡ ನಾಟವನಾಡುತ ‖ ಅ.ಪ ‖

ಹಂದಿ ಕರಡಿ ಕಾಡಾನೆಗಳ | ಕಾಡ್ಕೋಣಗಳ ಸಂದು ಗೊಂದಿನೊಳಿಕ್ಕಿ ಬಹಳ |
ನಿಂದು ಮಹಾ ಮೃಗ ವೃಂದವ ಕೆಡಹುತ | ಮುಂದರಿದನು ತನ್ನೆಡಬಲ ನೋಡಿ ‖ ೧ ‖

ಇಂತು ಬೇಟೆಯನಾಡುತಾಗ | ನೋಡಲು ಮುಂಭಾಗಬಂತೊಂದು ಮೃಗದ ಭಾರಿ ಬೇಗ |
ಹೊಂತಕಾರರೊಳು ಪಂಥವನಾಡುತ | ಮುಂತೈದಿತು ಜಮದಗ್ನಿಯ ಬಳಿಗೆ ‖ ೨ ‖

**ಭಾಮಿನಿ**

ದೂರದಲಿ ಕಂಡಾ ಮಹೀಶನ |
ವೀರ ಪರಿವಾರವನು ಕರೆಸುತ |
ಭೂರಿ ಭೋಜನದಿಂದ ತೃಪ್ತಿಯ ಗೈಯಲಾ ಮುನಿಪ ||

ಭಾರಣೆಯು ಹಿರಿದಾಯ್ತು ಮನದವಿ |
ಕಾರದಲಿ ಸುರಧೇನುವನು ತ |
ನ್ನೂರಿಗೊಯ್ಯಲು ಬಗೆದನಾ ನೃಪಕೃಪಣ ವೃತ್ತಿಯಲಿ || ೧ ||

**ಕಂದ ಪದ್ಯ**

ವನವಾಸಿಗಳಿಂಗೇತಕೆ | ಘನವಸ್ತುಗಳೆಂದು ಸುರಭಿಯಂ ಹಿಡಿದಾಂತಾ ||
ಜನಪಾಲಕ ಸೆಳದೊಯ್ದಂ | ಮನಮರುಕದೊಳಿರ್ದನಂದು ಮುನಿಯಾಶ್ರಮದೊಳ್ || ೧ ||

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಹೋಮಧೇನುವನೊಯ್ದ ಬಗೆಯಾ | ಭೀಮ ವಿಕ್ರಮಿ ಪರಶುರಾಮನು |
ತಾಮನದಿ ತಿಳಿದೈದಿದನು ಲಯ | ಭೀಮನಂತೆ || ೧ ||

ತಾತ ನೀ ಬಿಡು ಶೋಕವನು ಭಯ | ಭೀತನಾಗದಿರಿನ್ನು ಸುರಭಿಯ |
ಪಾತಕಿಯು ಕೊಂಡೊಯ್ದನೇ ನೃಪ | ನೀತಿ ಮರೆತು || ೨ ||

ಕೊಡು ತನಗೆ ನೇಮವನು ಪಾರ್ಥಿವ | ಗಡಣವೇ ಬರಲಿದಿರು ಧೂರ್ತರ |
ಕೆಡಹಿ ತಹೆನಾ ಧೇನುವನು ಮನ | ಮಿಡುಕಲೇಕೆ || ೩ ||

ನಡೆ ಮಗನೆ ನೀತಿಯೊಳು ಕ್ಷತ್ರಿಯ | ರೆಡೆಯೊಳಪಕೀರ್ತಿಯನು ತಾರದೆ |
ಪಡೆಯೊ ಸುರಭಿಯನೆಂದು ಕಳುಹಿದ | ಮೃಡ ಮುನೀಂದ್ರ || ೪ ||

ತಿರುಹಿ ಹೆಗಲಿನೊಳನಾಂತು ಪರಶುವ | ಉರಿಮಸಗುತಾ ಪರಶುರಾಮನು |
ತೆರಳಿದನು ಮಾಹೀಷ್ಮತಿಗೆ ಪುರ | ಹರನ ತೆರದಿ || ೫ ||

ದೂರದಿಂದಲಿ ತೋರಿ ಬರುವವಿ | ಕಾರ ಕಂಡಾ ದ್ವಾರಪಾಲರು |
ಸಾರಿ ಪೇಳ್ದರು ಕಾರ್ತವೀರ್ಯಗೆ | ದೂರಿಕೊಂಡೂ || ೬ ||

**ರಾಗ ಭೈರವಿ ಏಕತಾಳ**

ಯಾರೆಲ ನಮ್ಮೀಪುರಕೆ | ಬಂದ | ಕಾರಿಯವೇನುದ್ಧತಿಕೆ |
ತೋರುವೆ ರೌದ್ರಾಕಾರ | ನಾ ವಾರೆಂದರಿತೆಯ ಪೋರ || ೧ ||

ಅರಿತಿಹೆ ನಿನ್ನಯ ಕಥೆಯ | ನೀ | ನರಿಯೈ ನಮ್ಮಾ ಸ್ಥಿತಿಯ |
ವರ ಜಮದಗ್ನಿಯ ಸುತನು | ನಿ | ಷ್ಠುರ ಕ್ಷತ್ರಿಯರಂತಕನು || ೨ ||

ಸಾಕೆಲೊ ಹೆಮ್ಮೆಯ ಮಾತು | ಹೋ | ಗಾಕಡೆ ತೋರೆಲೊ ಭ್ರಾಂತು |
ಲೋಕದ ನೃಪರಲಿ ಕದನ | ನಿನ | ಗೇಕೆ ಜಗಳವತಿ ಕಠಿನ || ೩ ||

ಸಾಧುಜನರ ಮುಖ ಹೊಡೆದು | ನ | ಮ್ಮಾ ಧೇನುವ ಸೆಳೆದೊಯ್ದು |
ಬಾಧಕನಾಗಿರೆ ಜಗಕೆ | ನಾ | ಛೇದಿಸದಿರೆನ್ನೈ ಕ್ಷಣಕೆ || ೪ ||

ಜನಪಾಲಕ ನಾನೆನುತ | ಆ | ದನವನು ತಂದಿಹೆನಿತ್ತ |
ಘನರತ್ನಾದಿಗಳೆಲ್ಲ | ಕಾ | ನನ ವಾಸಿಗೆ ಲೇಸಲ್ಲ || ೫ ||

ಏನಂದೆಯೊ ಹುಲು ನೃಪನೆ | ನೃಪ | ರಾನೀತಿಯ ತಿಳಿದಿರೆನೆ |
ಹೀನೈಸುತ ನಿಜಪಿತನ | ಸುರ | ಧೇನುವನೊಯ್ದುದೆ ಹೀನ || ೬ ||

ಬಿರುಸಾಯ್ತಲ ಮಾತುಗಳು | ನಾ | ತರಳನೆನುತ ಸೈರಿಸಲು |
ಉರಿಯುತ್ತಿದೆ ಕಿಚ್ಚೆನುತ | ಕೋಲ್ | ತಿರುಹಿಸುತೆಚ್ಚನು ಮತ್ತಾ || ೭ ||

ಖಂಡಿಸುತಲೆ ಭಾರ್ಗವನು | ದೋ | ರ್ದಂಡಂಗಳನೆಲ್ಲವನು |
ತುಂಡುಗೈವೆನೆಂದೆನುತ | ಪ್ರ | ಚಂಡಾಸ್ತ್ರಂಗಳನೆಸೆದ || ೮ ||

ಅನಿಮಿಷರೆಲ್ಲರು ಕೂಡಿ | ಜಯ | ದನಿ ಮಾಡುತ್ತಿರೆ ನೋಡಿ |
ಹೆಣಗಿದರತಿ ಸತ್ವದಲಿ | ಕೂ | ರ್ಗಣೆಗಳ ಮಳೆ ಹೊಸುತಲಿ || ೯ ||

**ಭಾಮಿನಿ**

ಪೇಳಲೇನಾ ಭುಜ ಸಹಸ್ರನ |
ತೋಳುಗಳ ಕತ್ತರಿಸಿ ಧಿಮ್ಮನೆ |
ಬೀಳಲೆಚ್ಚೊಡೆ ಜೀವ ಹಾರಿತು ಚಕ್ರರೂಪದಲಿ ||
ಮೇಲೆ ಭಾರ್ಗವ ಹೋಮ ಧೇನುವ |
ಲೀಲೆಯಿಂದೊಡಗೊಂಡು ತಾತನ |
ಕಾಲಿಗೊಪ್ಪಿಸಿ ಕೊಟ್ಟನಮರರ ವಿಜಯ ಘೋಷದಲಿ || ೧೦ ||

**ಕಂದ ಪದ್ಯ**

ಮತ್ತೆತರಿದು ಜಮದಗ್ನಿಯ | ಕಿತ್ತೊಯ್ಯಲು ಧೇನುವಾ ನೃಪಾತ್ಮಜರದರಿಂ ||
ಕ್ಷತ್ರಿಯರಳಿದರ್ ತಾವಿ | ಪ್ಪತ್ತೊಂದಾವರ್ತಿ ಪರಶುರಾಮನ ಕೈಯೊಳ್ || ೧ ||

## ರಾಮಾವತಾರ

**ವಾರ್ಧಿಕ**

ದಶಕಂಠ ಮೊದಲಾದ ರಾಕ್ಷಸರ ವಧೆಗಾಗಿ |
ಬಿಸಜಾಕ್ಷನುದಿಸಿದಂ ರಾಮನಾಮದಿ ತನ್ನ |

ವಸುಧೆಯಂ ತೊರೆದನಯ್ಯನ ಸತ್ಯಕಾಗಿ ಹದಿನಾಲ್ಕಬ್ಧ ವನವಾಸಕೆ ||
ಬಿಸಜಾಯತಾಕ್ಷ ಸೀತಾಲಕ್ಷ್ಮಣರ ಕೂಡಿ |
ಕುಶಲದಿಂ ಬಂದಿರ್ದನಾ ಪಂಚವಟಿಯೊಳಗೆ |
ಅಸುರ ರಾವಣನ ಮತದಂತೆ ಮಾರೀಚ ಮೃಗವಾಗಿ ಕುಣಿದೈತಂದನು || ೧ ||

**ರಾಗ ಜುಂಜೋಟಿ ಆದಿತಾಳ**

**(ಅಂಜ ಬೇಡಲೆ ಸೀತೆ)**

ನೋಡ ಬಾರೆಲೆ ರಾಮ | ನಲಿದಾಡುತಿದೆ ಪ್ರೇಮ |
ಕಾಡಿನೊಳಗೋಡಿ ಕುಣಿದಾಡುವ ಮೃಗವ || ೧ ||

ಹೊನ್ನ ಬಣ್ಣದ ಮೈಯು | ಪಂಚ ವರ್ಣದ ಗೆರೆಯು |
ಕಣ್ಣಾರೆ ಕಾಣದಂಥ ಚೆನ್ನದ ಮರಿಯು || ೨ ||

ಸಣ್ಣ ಹೆಜ್ಜೆಯ ನಾಟ್ಯ | ಏನು ಸುಂದರ ನೋಟ |
ಮಿಣ್ಣನೆ ನೀಹಿಡಿದು ತಾರೋ | ಕುಣಿಸಿ ಕೊಂಡಪೆನು || ೩ ||

**ರಾಗ ಸುರುಟಿ, ಏಕತಾಳ**

ಕೇಳಬಲಾಮಣಿಯೇ | ಸ್ವೈರಣಿ | ತಾಳು ಸುಗುಣ ಮಣಿಯೆ |
ಖೂಳರಮಾಯಕ ಮಾಟವಿದೆಮ್ಮನು | ಗೋಳುಗುಡಿಸುವಾ ಕಾರ್ಯವು ನೋಡ || ೧ ||

ಎರೆಯನೆ ನಿನಗೇನ | ಪೇಳಲಿ | ಮರುನುಡಿಯೇಕಿನ್ನು |
ದುರುಳರ ಮಾಯೆಗಳೆಂತಾದರು ನೀ | ಕರೆದೀಯೈಕ್ಷಣ ಸ್ವೈರಿಸದೆನಗೆ || ೨ ||

ಛಲವೇಕೆಲೆ ಬಾಲೆ | ದುರುಳರು | ಸುಳಿಯುತ್ತಿಹರಿಲ್ಲೆ |
ಬಲು ಕಷ್ಟವು ಬರಲಿರುವುದು ನೋಡಾ | ಬಳಿಕೇನಾದರು ದೂರಲು ಬೇಡ || ೩ ||

ಎನುತಾ ರಾಘವನು | ಕರೆದಂ | ದನು ಲಕ್ಷ್ಮಣನನ್ನು |
ದನುಜರ ಬಾಧೆಗೆ ಬೆದರದೆ ಇಲ್ಲಿಯೆ | ಜನಕಾತ್ಮಜೆಯನು ಕಾದಿಹುದೆಂದು || ೪ ||

ಹಿಡಿದನು ಬಿಲುಬಾಣಾ | ಮೃಗದಾ | ಯೆಡೆಗೋಡಲು ಜತನ |
ಬಿಡದಾ ಕಾಡಿನೊಳಾಡುತ ದೂರಕೆ | ನಡೆದೈದಲು ಧೃತಿಗುಂದಿದ ರಾಮ || ೫ ||

**ಕಂದಪದ್ಯ**

ಬಿಡೆಬಾಣವ ಮಾರೀಚಂ |
ತಡೆಯದೆ ಹಾ ರಾಮ ಲಕ್ಷ್ಮಣಾ ಹಾ ಎನುತಂ ||

ನುಡಿಯಲ್ಕಾನುಡಿ ಕೇಳ್ದಾ |
ಪೊಡವಿಯ ಸುತೆಯೆಂದಳಾ ಸುಮಿತ್ರಾತ್ಮಜನೊಳ್ || ೧ ||

**ರಾಗ ಕಾಂಬೋಧಿ ಝಂಪೆತಾಳ**

ಕೇಳ್ದೆಯಾ ಸೌಮಿತ್ರಿ | ಯಾಳ್ದನಾ ನುಡಿಯನ್ನು |
ತಾಳ್ದು ಕೊಂಡಿಹನೆಂತೊ ವ್ಯಥೆಯ ||
ಖೂಳರೆಡೆಯಲಿ ಸಿಲುಕಿ | ಗೋಳಿಡುವನ್ಯೆ ಬೇಗ |
ಏಳು ನಡೆಹೋಗಿ ಬಾರಯ್ಯ || ೧ ||

ತಾಯೇ ಭ್ರಮೆಯಾಯ್ತೆ ರಘುರಾಯನಾ ನುಡಿಯಲ್ಲ |
ನೋಯಲುಂಟೇ ದೈತ್ಯರಿಂದ ||
ರಾಯರಳಿದಾ ಮೇಲೆ | ಮೇಯುವಾಮನಸಾಯ್ತೆ |
ಬಾಯ ಡಂಭವ ಬಲ್ಲೆ ನಾನು || ೨ ||

ಅನಿತರಲಿ ರಾಮ ಹಾ | ಎನುತ ಚಂದ್ರಾರ್ಕರನು |
ನೆನೆದು ಮುನ್ನೋಡಿ ಲಕ್ಷ್ಮಣನು ||
ಜನನಿ ಈ ಸ್ಥಳ ಮೀರಿ | ಮಿನುಗ ಬೇಡೆಂದೆನುತ |
ಮಣಿದು ಹೊರಟನು ರಾಮನಡೆಗೆ || ೩ ||

ಅಷ್ಟರಲಿ ಯತಿವೇಷ | ತೊಟ್ಟು ಸೀತೆಯ ಬಳಿಗೆ
ಥಟ್ಟನೈದಿದನು ದಶಕಂಠ ||
ಸೃಷ್ಟಿಯನು ಸುತ್ತಿಬಹ | ಶ್ರೇಷ್ಠ ಸಾಧುಗೆ ಭಿಕ್ಷೆ |
ಕೊಟ್ಟು ಬೀಳ್ಕೊಡಲು ಬೇಕೆಂದ || ೪ ||

ಚಂದವಾಯಿತು ಸ್ವಾಮಿ | ಬಂದುದೊಳಿತಾಯ್ತು ನಾ |
ನಿಂದು ಕೊಡಲೇನು ಆಶ್ರಮದಿ ||
ಮುಂದರಿಯಲಾರೆನಾ | ಕಂದ ಲಕ್ಷ್ಮಣನಾಜ್ಞೆ |
ಯೊಂದಿಹುದು ಕೊಡಲಾಗದಯ್ಯ || ೫ ||

ಏತಕಾ ಮಾತು ದನು | ಜಾತರಿಗೆ ಕೊಡಬೇಡ |
ಈ ತರದ ಯೋಗಿಗಳ ಕರೆದು ||
ಪ್ರೀತಿಯಿಂದೀಯದಿರೆ | ಪಾತಕವೆ ಹೊರತು ನೃಪ |
ನೀತಿಯೇ ಕುಲನಾಶವಹುದು || ೬ ||

**ಭಾಮಿನಿ**

ಸೀತೆಯಾನುಡಿ ಸತ್ಯವೆಂದೇ |
ಯಾತು ದಾನವಗೀಯೆ ಭಿಕ್ಷೆಯ |
ಭೀತಿಯಲಿ ನೆಲಸಹಿತ ಪುಷ್ಪಕದೊಳಗೆ ಕುಳ್ಳಿರಿಸಿ ||
ವಾತಮಾರ್ಗದೊಳೇರಿ ಲಂಕಾ |
ನಾಥ ನಡರಿದನತ್ತಲಾ ರಘು |
ನಾಥನನು ಕಂಡೊರೆದನಾ ಸೌಮಿತ್ರಿಯಿಂತೆಂದು || ೧ ||

**ರಾಗ ಕೇತರಗೌಳ, ಅಷ್ಟತಾಳ**

ಅಣ್ಣಯ್ಯ ಕ್ಷಮಿಸಬೇ | ಕೆನ್ನಪರಾಧವ | ನಿನ್ನಾಜ್ಞೆಗೆರಡಿಲ್ಲವು ||
ಚೆನ್ನಾದ ನುಡಿಗಳ | ಮನ್ನಿಸದಾ ಸೀತೆ | ಯೆನ್ನನಟ್ಟಿದಳು ದೇವ || ೧ ||

ಕಂದ ಸೈರಿಸು ಎನ್ನ | ಮುಂದೆ ನೂಕಿದಮೇಲೆ | ಹಿಂದಟ್ಟಿದಳೆ ನಿನ್ನನು ||
ಬಂದುದಾಯ್ತಿನ್ನೇನು | ನೊಂದುಕೊಳ್ಳದೆ ಸೀತೆ | ಯಂದವ ನೀಕ್ಷಿಸುವ || ೨ ||

ಎನುತ ಬಂದರು ಹಿಂದೆ | ವನಮೃಗವನು ಕೊಂಡು | ಜನಕಜೆಯಿದ್ದೆಡೆಗೆ ||
ವನಿತೆಯ ಕಾಣದೆ | ಕಣು ಕಾಣದವರಂತೆ | ಘನಚಿಂತೆಯೊಳಗಾದರು || ೩ ||

ಹುಡುಕಿದರಲ್ಲಲ್ಲಿ | ಕಡೆಗೆ ಸುಗ್ರೀವಗೆ | ಕೂಡಿಸುತ ಪಟ್ಟವನು ||
ಮಡುಹಲು ವಾಲಿಯ | ಪಡೆಗೂಡಿ ಕಪಿಗಳು | ನಡೆದರು ದೆಸೆದೆಸೆಗೆ || ೪ ||

ಧರಣಿಜೆಯನು ಕಂಡು | ಗುರುತಿಗೀಯುಂಗುರ | ಕರೆದು ಕೊಟ್ಟಾಬಳಿಕ ||
ಸರುವವ ತಿಳಿದು ಬಂ | ದೊರೆವುದೆಂದಾ ರಾಮ | ಮರುತಜನೊಡನೆಂದನು || ೫ ||

ವೀರ ಸಂಪಾತಿಯು | ತೋರಿದ ಮಾರ್ಗದಿ | ಸಾರಿದ ಹನುಮಂತನು ||
ಹಾರಿದನಬುಧಿಯ | ಮಾರುತ ವೇಗದಿ | ಭಾರಿ ಲಂಕಾಪುರಕೆ || ೬ ||

ಕಂಡನು ರಕ್ಕಸ | ಹಿಂಡನು ದೈತ್ಯರ | ಹೆಂಡಿರ | ಮನೆಗಳನು ||
ಭಂಡ ರಕ್ಕಸಿಯರ | ಮಂಡಲದೊಳಗಿಹ | ಅಂಡಜಾಸನ ಸತಿಯ || ೭ ||

**ರಾಗ ದೇಶಿ ಏಕತಾಳ**
**(ಹಸ್ತಿನಾಪುರದಿಂದ ಬಂದೆವಮ್ಮ)**

ಪಾದಭಕುತನೆಂಬ ಮಾತ – ಲಾಲಿಸಮ್ಮ |
ರಾಮ – ಪಾದ ಭಕುತ ಹನುಮಂತ ನಾ-ನೋಡೆಯಮ್ಮ |
ಶೋಧಿಸುತ್ತಲಿಲ್ಲಿ ಬಂದೆ – ಲಾಲಿಸಮ್ಮ |
ನಿಮ್ಮ ಪಾದನೋಡಿ ಧನ್ಯನಾದೆ – ಲಾಲಿಸಮ್ಮ || ೧ ||

ನಿಮ್ಮ ನೋಡಲೆನ್ನ ಕಳುಹಿಕೊಟ್ಟರಮ್ಮ |
ಸತ್ಯ – ವಮ್ಮನಂಘ್ರಿಗಿದುವೆ ಗುರುತು ಕೇಳೆಯಮ್ಮ |
ನಿಮ್ಮ ಬರವ ಕಾಯುತಿಹರು – ಲಾಲಿಸಮ್ಮ |
ಕಪಿಗಳೆಮ್ಮ ಸುಗ್ರೀವನು ಸಹ ಕೇಳ್ವರಮ್ಮ || ೨ ||

ಹನುಮನೆಂದ | ಸತ್ಯ ವಚನ – ಕೇಳುತಾಗ |
ಸೀತೆ – ಮನಸ್ಸಿನ ಸಂದೇಹವಿಟ್ಟು ಪೇಳ್ದಳಾಗ |
ಇನಿಯನೆಂದು ತೋರಲಿಹನೊ ಪೇಳು ಈಗ |
ಸರ್ವ-ರನಿತು ಸುಖದೊಳಿರುವರೇನೊ ಪೇಳು ಬೇಗ || ೩ ||

ದೂರವಿಲ್ಲ ಎಂಟೆ ದಿನಕೆ ಬರುವರಮ್ಮ |
ಸೈನ್ಯ – ಸೇರಿಸಿ ಸೇತುವೆಕಟ್ಟಿ ಬರುವರಮ್ಮ |
ಕ್ರೂರ ರಾಕ್ಷಸರನು ಕೊಂದು ಹೋಹರಮ್ಮ |
ನಿಮ್ಮ – ಸೇರಿಸಿ ತೇರಿನಮೇಲೆ ಹೋಹರಮ್ಮ || ೪ ||

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಎನುತ ಧೈರ್ಯವ ಹೇರಿ ಚೂಡಾ | ಮಣಿಯನಾಂತಾ ಹನುಮನೊಯ್ಯನೆ |
ವನವ ಹೊಕ್ಕನು ಭರಿತ ಫಲಗಳ | ತಿನಲು ಬೇಗ || ೧ ||

ವೀರ ರಾವಣನರಿತು ಕೆಂಗಿಡಿ | ಕಾರಿದನು ವನವನವಲಂಘಿಸಿ |
ಘೋರರಕ್ಕಸಪಡೆಯನಿಕ್ಕಿದ | ವಾರತೆಯನು || ೨ ||

ಘಳಿಲನಪ್ಪಣೆಯಿತ್ತನಾಕಪಿ | ಬಲವ ಮುರಿಯಲು ಸೆಳೆದು ಬಾಲಕೆ |
ಜ್ವಲನ ಸಂಸ್ಕೃತಿಗೆಯ್ದು ಹಿಂದಕೆ | ಕಳುಹಿರೆನುತ || ೩ ||

ಬಾಲ ಸುಟ್ಟಾಕ್ಷಣಕೆ ಮಾರುತಿ | ಮೇಲೆ ಹಾಯ್ದನು ಲಂಕೆ ಸುತ್ತಲು |
ಧಾಳಿಗೊಟ್ಟಾ ಬಳಿಕ ಶರಧಿಯ | ತೇಲಿ ಬಂದ || ೪ ||

**ಭಾಮಿನಿ**

ಮಾರುತಿಯ ಮುಖದಿಂದ ಲಂಕೆಯ |
ದಾರಿ ತಿಳಿದಾ ಕಪಿಗಳೆಲ್ಲರು |
ಸೇರಿ ಸಾಗರ ಬಲಿದು ಸೇತುವ ದಾಟಿದರು ಮುಂದೆ ||
ಘೋರ ದಶಕಂಧರನ ಲಂಕೆಯ |
ನೇರಿ ಧಾಳಾಧೂಳಿಯೆಬ್ಬಿಸಿ |
ಕ್ರೂರ ರಾಕ್ಷಸ ಕುಲವ ಸವರಿದರೆನಿತೊ ಸಾಹಸದಿ || ೧ ||

**ರಾಗ ಕೇದಾರಗೌಳ, ಝಂಪೆತಾಳ**

ಬನ್ನಿರೊ ಭಟರು ಬೇಗ | ಕಲಿ ಕುಂಭ – ಕರ್ಣನನು ಕರೆಯಿರೀಗ
ಇನ್ನು ಸಾಕಾ ನಿದ್ರೆಯೂ | ಎಬ್ಬಿಸಿರೊ – ಪೂರ್ಣಾವಾಯ್ತಾ ಅವಧಿಯು || ೧ ||

ಎಂದು ರಾವಣನುಸುರಲು | ರಾಕ್ಷಸರ – ವೃಂದವೇ ನಡೆದಾಗಲು |
ಬಂದು ಹಿಡಿದೆಬ್ಬಿಸಲ್ಕೆ | ತೀರದಿರೆ – ತಂದರಾನೆಗಳ ಕಳಕೆ || ೨ ||

ಎದ್ದು ಕುಳಿತಾರ್ಭಟಿಸಿದ | ತಿಂಬೆ ನಾ – ನಿದ್ದ ಲೋಕಗಳನೆಂದ |
ಬಿದ್ದವಾತನ ಕೆಲದಲಿ | ತಿನಿಸುಣಿಸು – ಇದ್ದಷ್ಟು ಭುವನಗಳಲಿ || ೩ ||

ಬಂದನಾ ಕುಂಭಕರ್ಣ | ರಾವಣನೊ – ಳೆಂದನೀಕರೆದುದೇನಾ |
ಮುಂದೆ ನುಡಿಯೇನಪ್ಪಣೆ | ಯಾರನೆಳೆ – ತಂದು ಕೊಡಬೇಕು ತಾನೆ || ೪ ||

ಹೋಗು ನಡೆಯುದ್ಧಕೀಗ | ರಾಮಬಲ – ಸಾಗಿ ಬಂತೈ ಸರಾಗ |
ಬೀಗುತಿಹ ನರವಾನರ | ಪಡೆಯ ಮುರಿ – ದೀಗ ತಾ ಜಯದ ಭಾರ || ೫ ||

**ಕಂದ ಪದ್ಯ**

ರಾವಣನಪ್ಪಣೆಯಂ ಪಡೆ | ದಾ ವಾನರ ಸೈನ್ಯದೆಡೆಗೆ ನಡೆದಾವೀರಂ ||
ಮಾ ವೈರದಿ ಕಾದುತ್ತಿರ | ಲಾವೇಗದಿತಡೆದು ನುಡಿದನಾ ರಘುರಾಮಂ || ೧ ||

**ರಾಗ ಶಂಕರಾಭರಣ ಮಟ್ಟೆತಾಳ**
**(ಭಾನುತನುಜ ಭಳಿರೆಯನುಜ)**

ಭಳಿರೆ ಯಾರೆಲಾ ಮದಾಂಧ | ತಿಳಿಯದಾದೆಲಾ ? |
ತಲೆಯ ಕೊಟ್ಟು ಮೃತ್ಯುಲೋಕ | ಕಿಳಿದು ಹೋಹೆಲಾ ||
ಎಲವೊ ಮನುಜ ! ಸಾಕು ನಮ್ಮ ಕಲಹ ಸುಲಭವೇ ? |
ಇಳೆಯ ಮೂರನಾಳ್ವನನುಜ | ನೊಳು ವಿನೋದವೇ ? || ೧ ||

ಖೂಳ ! ನಿಮಗದೇನು ಯುದ್ಧ | ತಾಳಲರಿವಿರೇ ? ||
ಬಾಲೆ ಸೀತೆಯನ್ನು ಕದ್ದು ಬಾಳಲರಿವಿರೇ ? ||
ಬಾಳಲುಂಟೆ ? ಶೂರ್ಪನಖಿಯ | ಗೋಳು ಹೊಯ್ಸಿರೇ ? || ೨ ||

ತಾಳಲಹುದೆ ನಮ್ಮ ಭಟರ | ಸೀಳುಗೈದಿರೇ ? ||
ಧೂರ್ತೆ ಶೂರ್ಪನಖಿಯ ಹಾಗೆ | ಮತ್ತನಾದೆಯಾ ? ||
ಸತ್ತಬಳಗದಂತೆ ಸಾಯ | ಲೆತ್ತಿ ಬಂದೆಯಾ ? ||
ಮರ್ತ್ಯರನ್ನು ತುತ್ತುಗೊಳುವ | ರಕ್ತ ತಿಳಿಯೆಯಾ ? ||
ಕಿತ್ತು ಹಗೆಯ ಸೀಳೆತೆಗೆವ | ಶಕ್ತಿಯಿದೆ ಭಲಾ || ೩ ||

ಮಡಿವ ಕಾಲಕಿದುವೆ ಮದ್ದು | ಕೊಡುವೆನೆನ್ನುತ ||
ಬಿಡಲು ರಾಮನಸ್ತ್ರಜಾಲ | ಕಡುಹ ತೋರುತ ||
ಕಡಿದು ಮತ್ತೆ ಘೋರ ಬಾಣ | ದಡಿಗನೆಸೆದನು ||
ಹೊಡೆದು ತೃಪ್ತಿಗೈವೆ ಭೂತ | ಗಡಣಕೆಂದನು || ೪ ||

**ಭಾಮಿನಿ**

ವೀರ ವೈಷ್ಣವ ಬಾಣವನು ಬಿಡ |
ಲಾರಘುಜನಾಕ್ಷಣಕೆ ಯಮಪುರ |
ಸೇರಿದನು ಕಲಿಕುಂಭಕರ್ಣನು ದನುಜರಾಯೆನಲು ||
ಘೋರವಾಯ್ತಾ ಸಮರ ಸರ್ವ ಸು |
ರಾರಿಗಳ ಸಂಹಾರದಲಿ ಕಿಡಿ |
ಕಾರುತಾ ದಶಕಂಠನೊಬ್ಬನೆ ನಿಂದನಿದಿರಾಗಿ || ೧ ||

**ರಾಗ ಭೈರವಿ ಅಷ್ಟತಾಳ**

ವೀರ ರಾವಣನ ಕಂಡು | ರಾಘವ ರಥ – ವೇರಿ ಚಾಪವನೆ ಕೊಂಡು |
ಕ್ರೂರ ರಾಕ್ಷಸರ ಸಂಹಾರವಾದರು ಗರ್ವ | ಜಾರದೆ ಹೋಗೆಂದನು || ೧ ||

ಬಿಡುವೆನು ಪೌರುಷವ | ನಮ್ಮವರೆಲ್ಲ – ಮಡಿದರು ಬಿಡೆದ್ವೇಷವ |
ಹೊಡೆದು ಭೂತಾಹುತಿ ಕೊಡುವೆ ನಿಮ್ಮೆಲ್ಲರ | ತಡೆಯೆಂದನಾ ರಾವಣ || ೨ ||

ಸಾರಿ ಹೇಳುವೆನಿದಕೋ | ಮೃತ್ಯುವ ಮುಖ – ಸೇರುವ ಪಂಥವೇಕೋ ? |
ನಾರಿಸೀರೆಯನಿತ್ತು ತಮ್ಮನೊಳೊಡಗೂಡಿ | ಪಾರುಪತ್ಯವ ನಡೆಸೊ || ೩ ||

ಸೀತೆಯ ಬಿಡುವುದುಂಟೆ ? | ರಾಕ್ಷಸ ಕುಲ – ಕೇತುವ ಕರೆವುದುಂಟೇ |
ನೀತಿಯ ಬಿಟ್ಟನುಜಾತೆಯ ಭಂಗಿಸಿ | ದಾತಪ್ಪಿಗೇನು ಶಾಂತಿ || ೪ ||

ಮಾನ ಬಿಟ್ಟರೆ ಹಾನಿಯ | ಹೊಂದುವರ್‍ಯ್ಸೆ – ನೀನೆಲ್ಲ ತಿಳಿದೆಮ್ಮಯ |
ಮಾನಿನಿಯನು ಸೆಳೆದೊಯ್ದೆಯದಕೆ ಶಿಕ್ಷೆ | ನಾನೀಯದಿರೆ ನೋಡೆಲಾ || ೫ ||

ಶಿಕ್ಷಿಸಲರಿವೆಯೇನೋ | ವಾಲಿಯ ನ್ಯಾಯ – ಪಕ್ಷದಿ ಮುರಿದೆಯೇನೋ |
ಶಿಕ್ಷಣವಿಲ್ಲದ ಕಪಿ ಸೈನ್ಯದೊಡಗೂಡಿ | ರಕ್ಷೆಗೈಯಲು ಬಲ್ಲೆಯ || ೬ ||

ಸಾಕೆಲಾ ಹೀನಜ್ಞಾನ | ತನ್ನಣ್ಣನ – ನೂಕಿ ಬಿಟ್ಟೈ ತಮ್ಮನ |
ನಾಕದವರ ಗೆದ್ದು ಬಳಲಿಸಿದ್ಯೆ ಬಲು | ಲೋಕ ಪಾಲರ ರಾಯರ || ೭ ||

ಹೆಚ್ಚು ಮಾತಾಡದಿರೋ | ರಾಜ್ಯವ ಬಿಟ್ಟು – ದುಶ್ಚೇಷ್ಟೆಯಾಡದಿರೋ |
ಕಿಚ್ಚಿನಂತಾ ಬಾಣವರ್ಷವ ಕೊಳ್ಳೆಂದು | ಎಚ್ಚನಸ್ತ್ರಂಗಳನು || ೮ ||

ಕಡಿದು ಶ್ರೀರಾಘವನು | ರಾವಣನ ಬೆ – ಳ್ಗೊಡೆಯ ಸಾಲ್ದಲೆಗಳನು ||
ಕಡಿಯಲು ಚಿಗುರಿತು ಹೃದಯದ ಸುಧೆಯಿಂದ | ಪೊಡವಿಯೆ ಬೆರಗಾಯಿತು || ೬ ||

**ಭಾಮಿನಿ**

ವರವಿಭೀಷಣನೆಂದ ಮಾತಿನೊ |
ಳರಿತು ರಾವಣನೆದೆಯೊಳಿಹ ಸುಧೆ |
ಸುರಿದು ದಶಶಿರವುರುಳುವಂದದೊಳೆಚ್ಚನಾ ರಾಮ ||
ಭರದೊಳಾ ರಾವಣನು ವಿಶ್ವಂ |
ಭರನ ರೂಪವ ನೋಡಿ ವೈಷ್ಣವ |
ಶರಕೆ ದೇಹವ ತೆತ್ತನನಿಮಿಷನಿಕರ ನಲಿದಾಡೆ || ೧ ||

## ಕೃಷ್ಣಾವತಾರ

**ರಾಗ ಕಾಂಬೋಧಿ ಝಂಪೆತಾಳ**

ಭೂಮಿಪತಿ ಕೇಳ್ಬಳಿಕ | ದಾಮೋದರನು ಕೃಷ್ಣ | ನಾಮದಿಂ ಜನಿಸಲೀ ಜಗದಿ ||
ಆ ಮಹಾ ಕಂಸನೃಪ | ನಾಮಧುರೆಯಲಿ ದುಷ್ಟ | ನೇಮದಿಂದರ್ದನರಸಾಗಿ || ೧ ||

ನಗಧರನು ದೇವಕಿಯ | ಮಗನಾಗಿ ಹುಟ್ಟಿತಲೆ | ತೆಗೆವನೆಂಬಾ ಮಾತ ಕೇಳಿ ||
ಅಗಣಿತ ಕುಮಾರಕರ | ಬಗಿದು ನೋಡಿದರು ಹಗೆ | ಸಿಗದಾಯಿತಲ್ಲ ಧರೆಯೊಳಗೆ || ೨ ||

ನಂದಗೋಕುಲದೊಳಿಹ | ನೆಂದು ತಿಳಿದಾ ಕಂಸ | ನೆಂದನಕ್ರೂರನನು ಕರೆದು ||
ನಂದಗೋಕುಲಕೈದಿ | ಚಂದದಲಿ ಕರೆದು ತಾ | ಕಂದರಹ ರಾಮಲಕ್ಷ್ಮಣರ || ೩ ||

ಬರುವಾ ಚತುದರ್ಶಿಗೆ | ವರಬಿಲ್ಲ ಹಬ್ಬವನು | ಮೆರೆಸಬೇಕೈ ಮಹೋತ್ಸವದಿ ||
ಹರುಷದಿಂದೊರೆದು ಕರ | ತರುವಾಪ್ತರಲಿ ಶಿರೋ | ಭರಣ ನೀನಹೆ ನಮ್ಮ ಕುಲದಿ || ೪ ||

ಒಡೆಯ ! ನಿನ್ನಪ್ಪಣೆಯ | ನಡೆಸದಿರೆ ದ್ರೋಹಬಂ | ದಡಸುವುದೆನುತ್ತ ನೇಮವನು ||
ಪಡೆದನಕ್ರೂರ ತಾ | ಜಡಜಾಂಬಕನ ಸ್ಮರಿಸಿ | ನಡೆದನೈ ಕೃಷ್ಣನೋಲಗಕೆ || ೫ ||

**ರಾಗ ಮಾಧ್ಯಮಾವತಿ ತ್ರಿವುಡೆತಾಳ**
**(ವೀರ ದಶರಥ ನೃಪತಿ ಇನಕುಲ)**

ಬಂದು ಮಣಿದಕ್ರೂರನನು ಗೋ | ವಿಂದ ತಾಬಿಗಿಯಪ್ಪಿಕೊಂಡಾ |
ನಂದದಲಿ ಕೇಳಿದನು ಗುರು ಬುಧ | ಬಂಧು ಬಾಂಧವರೆಲ್ಲರೂ | ಸುಖವೆ | ಎನುತ || ೧ ||

ದೇವ ! ನೀ ಸರ್ವೇಶನಾಗಿರೆ | ಭೂ ವಿಚಾರವನೆಲ್ಲ ತಿಳಿದಿರೆ |
ಈ ವಿನೋದಗಳೇಕೆ ನಿನ್ನೊಡ | ನಾವುದನು ವಿಸ್ತರಿಸಲೀ | ತಿಳಿಯದೆನಗೆ || ೧ ||

ಆದರೊರೆದಪೆನ್ನೈ ! ಚತುರ್ದಶಿ | ಯಾದಿನದೊಳಿದೆ ಬಿಲ್ಲಹಬ್ಬವು |
ಭೇದವಿಲ್ಲದೆ ಕರೆಯಲಟ್ಟಿದ | ನಾದುರಾತ್ಮನು ಕಂಸನು | ಎನ್ನನೀಗ || ೩ ||

ಲೇಸು ಲೇಸಾಯ್ತಯ್ಯ ! ಬಹಳವಿ | ಲಾಸ ವೈತಹೆವೈಸೆ ಭಕ್ತರೊ |
ಳೇಸುಧನ್ಯನೊ ! ನೀನು ದುಷ್ಟನಿ | ವಾಸದಲಿ ಶ್ರೀಗಂಧದ | ಗುಣದೊಳೆನುತ || ೪ ||

ಭಕ್ತರೊಳಗುತ್ತಮನು ಶುದ್ಧಚ | ರಿತ್ರ ನಿನ್ನಾದರ್ಶನದಿ ಸುಖ | ವಾಯ್ತು ನಡೆ
ಹೋಗುವರೆ ಸಿದ್ಧವೆ | ನುತ್ತ ಹೊರಟನು ರಾಮನ | ಕೂಡಿಕೊಂಡು || ೫ ||

**ರಾಗ ಕೇದಾರಗೌಳ ಅಷ್ಟತಾಳ**

ಮರುಗಿ ಕೊಂಡೈತಹ | ತರುಣಿಯರಿಗೆ ಧೈರ್ಯ | ವೊರೆದು ವಿನೋದದಿಂದ ||
ಸರಿಯುತಿರಲು ಕೃಷ್ಣ ತೋರ್ದನಕ್ರೂರಗೆ | ವರ ವಿಶ್ವರೂಪವನು || ೧ ||

ಬಂದನು ಮಧುರೆಗಾ | ನಂದದಿ ರಜಕನ | ಸಂಧಿಸಿ ಕುಂಬುಜೆಯನು ||
ಚಂದದಿ ತಿದ್ದುತ | ಮುಂದರಿದನು ರಾಜ | ಮಂದಿರವಿದ್ದೆಡೆಗೆ || ೨ ||

ಬಾಗಿಲೊಳಿದಿರಾಗಿ | ಕುವಲಯಾಪೀಡವೆಂ | ಬಾಗಜ ಮದವುಕ್ಕುತ ||
ಬೀಗುತ್ತ ಬರುತಿ | ರುವಾಗ ಮುಕುಂದನೆ | ಸಾಗಿ ಕೊಂದಿಕ್ಕಿದನು || ೩ ||

**ರಾಗ ಪಂತುವರಾಳಿ ಮಟ್ಟೆತಾಳ**

ದುಷ್ಟ ಬಾಲರೇ ! ವಿರೋಧ | ಕಟ್ಟಿ ಪೋಪಿರೇ ||
ತಟ್ಟೆ ನೆಮ್ಮ ಮುಟ್ಟಿಯುದ್ಧ ಕೊಟ್ಟು ನಡೆಯಿರೇ ||
ಶ್ರೇಷ್ಠರಾದಿರೇನು | ಬಹಳ | ಇಷ್ಟವೆನ್ನುತ ||
ಮುಷ್ಟಿಕಾದ್ಯರಿದರು ನಿಂದ | ರೊಟ್ಟುಗಜರುತ || ೧ ||

ಎನಲು ರಾಮಕೃಷ್ಣರವರ | ಘನತೆ ಕಂಡರು ||
ಕುಣಿದು ಹಾರಿ ಕಟ್ಟಿ ಸೆರಗ | ಕಣಕೆ ಬಂದರು ?
ಎನುವುದೇನಗಾಧ ಸತ್ವ | ಗುಣದಿ ಹೊಯ್ದರು ||
ದಣಿದು ಜಟ್ಟಿ ಜನರು ಪ್ರಾಣ | ಹೆಣಗಿಕೊಟ್ಟರು || ೨ ||

ಬಳಿಕ ಕೃಷ್ಣ ಕಂಸನೇರಿ | ಕುಳಿತ ಪೀಠದ ||
ಬಳಿಗೆ ಬಂದುನಿಂದು ಕೈಯ | ಚಳಕ ತೋರಿದ ||
ಗಳಿಲನಾರ್ದು ಕಂಸ ಮಹಾ | ಬಲರೆ ! ಬಂದಿರೇ ? ||
ಕೊಲದೆ ಬಿಡೆನು ಕರುಳಮಾಲೆ | ಸೆಳೆವೆ ನೋಡಿರೆ || ೩ ||

ಭಾರಿ ಸದರವೇನೊ ನಮ್ಮೊ | ಳೇರಿ ಬರುವುದೇ ||
ತೇರು ಗೂಳಿಯನ್ನು ಮುರಿದ | ದಾರಿ ಬೇರಿದೆ ||
ದಾರಿಯಿದುವೆ ಮಾರಿಮಸಣ | ಸೇರಿ ಹೋಹುದೇ ? |
ತೋರು ಸತ್ವವೆಂದನಾ ಮು | ರಾರಿ ವೇಗದೇ || ೪ ||

**ಭಾಮಿನಿ**

ದುರುಳ ಕಂಸನ ಕೊಂದಮೇಲ್ ಯದು |
ವರರಿಗಭಯವನಿತ್ತು ಕೃಷ್ಣನು |
ಶರಧಿಯಲಿ ಪಟ್ಟಣವ ನಿರ್ಮಿಸಿ ಸುಖದೊಳಿರುತಿರಲು ||
ಪರಮ ಧಾರ್ಮಿಕನಾ ಯುಧಿಷ್ಠಿರ |
ವಿರಚಿಸಿದನಾ ರಾಜಸೂಯಾ |
ಧ್ವರ ಸಮಾಪ್ತಿಯ ಕಾಲದೊಳು ಗಾಂಗೇಯಗಿಂತೆಂದ || ೫ ||

**ರಾಗ ಸಾಂಗತ್ಯ ರೂಪಕತಾಳ**

ಅಜ್ಜಯ್ಯ ! ಕೇಳಗ್ರಪೂಜೆಗೆ ತಕ್ಕಂಥ | ಪ್ರಾಜ್ಞರಾರಿ ಸಭೆಯೊಳಗೆ ||
ದುರ್ಜಯರಾಗಿಹ ರಾಜರ ಮಧ್ಯದಿ | ಪೂಜ್ಯರೆನ್ನಿಸೆ ಕಷ್ಟವಲ್ತೇ || ೧ ||

ಸರ್ವಶಾಸ್ತ್ರವ ಬಲ್ಲ | ಸರ್ವಜ್ಞ ನೀನಿರೆ | ಪೂರ್ವಜನೆಂದು ಕೇಳುವೆಯಾ ? ||
ಸರ್ವ ಶಕ್ತನು ಕೃಷ್ಣ | ನೋರ್ವನಿರಲುಮತ್ತೆ | ಇರ್ವರುಂಟೆ ? ಸಭೆಯೊಳಗೆ || ೨ ||

ದೇವವೃಂದದಿ ಮಹಾ | ದೇವನು ಆದ್ಯಂತ | ವಾವುದಿಲ್ಲದ ಪರದೈವ ||
ಕಾವಕರ್ತನು ಭಕ್ತಿ | ಗೀವನಂತರ್ಯದಿ | ತಿವಿಕೊಂಡಿಹನು ಸರ್ವತ್ರ || ೩ ||

ಎನಲೆದ್ದು ಸಹದೇವ | ಘನಪೀಠಾಗ್ರಕೆ ತಂದು | ವಿನಯದೊಳೆತ್ತಿ ಕುಳ್ಳಿರಿಸಿ ||
ವನಧಿ ಶಾಯಿಯ ಪೂಜೆ | ಯನುಗೊಳಿಸಲ್ಕೆ ತಾ | ಕನಲುತೆಂದನು ಶಿಶುಪಾಲ || ೪ ||

**ರಾಗ ಭೈರವಿ ಏಕತಾಳ**

ಮರುಳಾದೆಯ ಸಹದೇವ ? ನೀ-ಮುರಿದೈ ನೃಪರಾಳ್ತವನ ||
ದೊರೆಗಿರಲು ಸನ್ಮಾನ | ಆ – ದುರುಳಗೆ ಕೊಡಬಹುದೇನು ? || ೧ ||

ನೀರಲಿ ಜನಿಸಿದನೀತ | ನೀ – ರ್ನೆರವಿನೊಳಿರುವನು ಆತ |
ಓರೋರ್ವರಿಗಿದೆ ಜೋಡಿ | ನೀ-ಕೋರೈಸಿದೆಯೆಲಾ ಖೋಡಿ || ೨ ||

ನಗೆಗೆಡೆ ಮಾಡಿದೆಯಲ್ಲಾ | ಈ – ಬಗೆಯಿಂ ಸದ್ಗತಿ ಸಲ್ಲ |
ಸುಗುಣರು ಪಾಂಡವರೆನುತ | ಈ – ಜಗವೆಂಬಾ ನುಡಿ ವ್ಯರ್ಥ || ೩ ||

ಕಾಗೆಯು ಹಂಸಕೆ ಸರಿಯೆ ? ಮೇಣ್ – ಗೂಗೆಯ ಖಗಪತಿಗೆಣೆಯೇ ?
ಈ ಗೊಲ್ಲನು ಪೀಠವನು | ಏ – ರ್ದಾಗಳೆ ನಮಗೆಣೆಯೆನು ?    || ೪ ||

ಗುರುಹಿರಿಯರೊ ಕ್ಷತ್ರಿಯರೋ | ಮುನಿ-ವರರೋ ಸುಜ್ಞಾನಿಗಳೋ |
ಇರುತಿರೆ ಕಳ್ಳನಿಗಿಂತು | ಕೊಡು – ವರೆ ಪೂಜೆಯ ಹುಲು ಭ್ರಾಂತು       || ೬ ||

ಎನುತ ಕರೂಶಾಧಿಪನು | ಭೋಂ-ಕನೆ ಎದ್ದಾ ಕೃಷ್ಣನನು |
ಥೊಣೆಯಲು ಮುಂದರಿಯಲ್ಕೆ | ಶಂ-ತನಸುತನೆಂದನು ಕ್ಷಣಕೆ  || ೬ ||

**ಭಾಮಿನಿ**

ಮರುಳೆ ಕ್ಷತ್ರಿಯರಾಯರಿರ ಮುಂ |
ದರಿದು ಜರೆಯುವಿರೇಕೆ ಕೃಷ್ಣನ |
ಚರಿತೆಯನು ಬಣ್ಣಿಸಲು ಫಣಿಪತಿಗಾದರಸದಳವು ||
ತರಳತನದಲಿ ಶಕಟ ಮುಖ್ಯರ |
ತರಿದು ಕಂಸನ ಮುರಿದು ಸುಜನರ |
ಪೊರೆವ ಶ್ರೀ ಪರಮಾತ್ಮನಲಿ ನಿಮಗಹಿತವೇ ಎಂದ    || ೧ ||

**ರಾಗ ಮಾರವಿ ಅಷ್ಟತಾಳ**
**(ಜಾಣನಹುದಹುದೋ ರಾಘವ)**

ವೀರನ್ನೈ ಭಳಿರೆ ! ಕಳ್ಳರೊಳತಿ – ಧೀರನ್ನೈ ಭಳಿರೆ |
ವೀರನಹುದು ಗೊಲ್ಲ | ಕೇರಿಯ ಮನೆ ಮನೆ | ಯಾರಿಲ್ಲದಾಗ ಹೊಕ್ಕು |
ಬೆಣ್ಣೆಯ ಮೆದ್ದ -ಚೋರನಿಂಗೇನು ಸೊಕ್ಕು | ಹೆಂಗಳ ಮುಂದೆ –
ತೋರಲು ಬಲ್ಲೆ ಠಕ್ಕು | ವೀರನ್ನೈ    || ೧ ||

ಮಡಿಕೆ ಕುಡಿಕೆ ಯೊಡೆವುದಕೆ | ಹೆಂಗ-ಳೊಡನೆ ಹೋರಾಡಿಗೆಲ್ವುದಕೆ |
ಮಡದಿಯರಪಹಾಸ್ಯ | ವುಡುವ ಸೀರೆಯ ಕದ್ದು | ಹೊಡೆತವನುಂಬುದಕೆ |
ಜಾರೆಯರೊಡ-ನಡಗಿ ಕೊಂಡಾಡಲಿಕೆ |
ಕಲ್ತುದು ಎಲ್ಲ-ನಡೆಯದೆಮ್ಮೊಡನೆ ಜೋಕೆ | ವೀರ      || ೨ ||

ನೀತಿನ್ಯಾಯಗಳುಂಟೆ ನಿನಗೆ | ಕುಲಜಾತಿ ಧರ್ಮವ ಬಿಟ್ಟನಗೆ |
ಪಾತಕ ಕೃತ್ಯದಿ ಮಾಯೆ ಮಾಟಗಳಿಂದ | ಸ್ವಾತಿಶಯವ ಪಡೆದೈ |
ನೀರೊಳು ಮನೆ – ಭೀತಿಯಿಲ್ಲದೆ ಕಟ್ಟಿದೈ | ವೀರ      || ೩ ||

**ಭಾಮಿನಿ**

ಸಾಕ ಮಾಡೆಲೆ ಚೈದ್ಯ ಮಾತಿನೊ |
ಳೇಕೆ ತಪ್ಪನು ಗೈವೆ ಸುಡುಸುಡು |

ಈ ಕುಬುದ್ಧಿಗೆ ಸೈರಿಸಿದೆ ನಾನಿತ್ತ ನುಡಿಯಂತೆ ||
ಸಾಕೆನಿಸಿದರೆ ಮತ್ಸ್ಯ ಮೊದಲಾ |
ದಾಕೃತಿಯೊಳಸುರಾವಳಿಯ ತರಿ |
ದಾ ಕಥೆಯ ನಾ ಮೆರಸದಿರೆನೆಂದನು ಮುರಧ್ವಂಸಿ || ೧ ||

**ರಾಗ ಸೌರಾಷ್ಟ್ರ ತ್ರಿವುಡೆ ತಾಳ**

ಅಷ್ಟರೊಳಗಾ ದಂತವಕ್ರನು | ವಿಷ್ಟರನೇರಿದೊಡೆ ಶಾಶ್ವತ |
ಪಟ್ಟಬಂತೇ ಮರಣವಾರಿಗೆ | ತಟ್ಟಿತೆಂದ || ೧ ||

ಮಾನಬಿಟ್ಟ ನೃಪಾಲರಿಂಧರೆ | ಗೇನು ಚಂದವೊ ? ನ್ಯಾಯಪಾಲನೆ |
ಗಾನು ಹೋರದೆ ಬಿಡೆನು ಕೃಷ್ಣನ | ತ್ರಾಣ ನೋಳ್ಪೆ || ೨ ||

ಚೈದ್ಯನೆಂದನು ಕ್ರೋಧದಲಿ ಹರಿ | ಯಿದ್ದ ತಾಣಕೆ ನೆಗೆದು ಸಭೆಯಲಿ |
ಬುದ್ಧಿ ಕೆಟ್ಟವರಾರು ? ಕೊಲುವಾ | ರುದ್ರನಹೆಯಾ ? || ೩ ||

ನೀರೊಳಗೆ ಮೀನಾಗಿ ಬಹೆಯಾ ? | ಕೂರುಮನೊ ? ವಾರಾಹನೊ ? ತೆಗೆ |
ನಾರಸಿಂಹನೆ ಬಂದರರಿವೆನು | ಬಾರಿಸಲ್ಕೆ || ೪ ||

ಸುಡು ಸುಡೆಲೊ ವಟುವಾಗಿ ಬಲಿಯನು | ಕೆಡಹಿದೆಯೆಲಾ ? ತಾಯತಲೆಯನು
ಕಡಿದ ಪಾಪಿಯೆ ! ಕ್ಷತ್ರಿಯರಿಗೇ | ಕೊಡಲಿಯಾದೈ || ೫ ||

ನಾಡನುಳಿದಾ ಹೇಡಿ | ಕಪಿಗಳ | ಕೂಡಿಕೊಂಡಾಖೋಡಿ ! ವಾಲಿಯ |
ಮೋಡಿಯಲಿ ಗೆಲಿದಂಥ ಮೋರೆಯ | ನೋಡಲಹುದೇ ? || ೬ ||

ಇಂತೆನಲು ತಾನಿತ್ತ ಭಾಷೆಯು | ಸಂತೆನುತ್ತಾ ಕೃಷ್ಣನನಿಬರ |
ಸಂತಯಿಸುತಿದಿರೆದ್ದನಾಗ ಕೃ | ತಾಂತನಂತೆ || ೭ ||

ಛಡ ದುರುಳ ದುಷ್ಟಾತ್ಮರಿರ ! ಬಾ | ಯ್ಬಡಿದು ಏನೇನೊದರುವಿರೆಲಾ |
ಮಡಿವ ಕಾಲವಿದೆಂದು ತಳಿಗೆಯ | ಹಿಡಿದು ನಿಂದ || ೮ ||

ಎತ್ತಿ ಬಿಸುಟಾಭರಕೆ ಪೂಜಾ | ಪಾತ್ರೆಯೇ ಹರಿಚಕ್ರವಾಗಿಯೆ |
ಕತ್ತರಿಸಿ ಹಾರಿತ್ತು ಚೈದ್ಯನ | ಮಸ್ತಕವನು || ೯ ||

**ಭಾಮಿನಿ**

ದೇವ ವಾದ್ಯಗಳೆಲ್ಲ ಮೊಳಗಲು |
ದೇವ ಮುನಿಗಳು ಸಹಿತ ಕೃಷ್ಣನ |
ಪಾವನಂಘ್ರಿಯ ಸ್ಮರಿಸಲಾಯ್ತಾ ಯಾಗ ಸಂಪೂರ್ಣ ||

ಭೂವಲಯದಲಿ ಶಾಂತಿಯೊದಗ |
ಲ್ಕಾ ವಿರೋಧಿಗಳನ್ನು ಮುರಿದಾ |
ದೇವ ದೇವನು ಕೃಷ್ಣಲೀಲೆಯ ತೋರಿ ಮರೆಯಾದ ‖ ೧ ‖

## ಬೌದ್ಧಾವತಾರ

**ರಾಗ ಕೇತಾರಗೌಳ ಅಷ್ಟತಾಳ**

ಧಾರಿಣೀಶ್ವರನೆ ಕೇ | ಳಾರಮಾಧವನು ಸಂ | ಹಾರಗೈಯಲು ಖಳರ ||
ತೋರಿದನ್ಯೆ ಬೌದ್ಧಾ | ಕಾರವ ತನ್ನ ಶ | ರೀರದಿಂದಳವಡಿಸಿ ‖ ೧ ‖

ಕರೆದು ಪೇಳಿದನು ತ್ರಿ | ಪುರರ ಪಟ್ಟಣಕಾಗಿ | ತೆರಳಿ ವೇದಾದಿಗಳ ||
ಜರೆದು ನಾಸ್ತಿಕ ತತ್ವ | ವರುಹಲು ಬೇಕಯ್ಯ | ದುರುಳರ ವಧೆಗೋಸುಗ ‖ ೨ ‖

ಎಂದು ಮಾಯಾವಿದ್ಯೆ | ಯಂದವ ಬೋಧಿಸ | ಲಂದು ಶಿಷ್ಯರ ಕೂಡುತ ||
ಬಂದಿಳಿದನು ತ್ರಿಪು | ರೇಂದ್ರನ ಪಟ್ಟಣ | ದೊಂದು ನಿವೇಶದಲಿ ‖ ೩ ‖

**ಭಾಮಿನಿ**

ಹರಿದ ಬಟ್ಟೆಯ ಕರದ ಪಾತ್ರೆಯ |
ಧರಿಸಿದತಿಶಯ ಮುನಿಯ ರೂಪದಿ |
ಕರೆ ಕರೆದು ಬೋಧಿಸಿದನಾ ಪಾಷಂಡ ಧರ್ಮವನು ||
ಮೆರೆಯದಿರಲಾ ವಿದ್ಯೆ ಮಾಯಾ |
ದರುಶನವು ಹರಭಕ್ತರೆಡೆಯಲಿ |
ಹರಿಯ ನೇಮದಿ ಬಂದನಾ ನಾರದನು ತತ್ಪುರಕೆ ‖ ೧ ‖

**ರಾಗ ಕಾಂಬೋಧಿ ಝಂಪೆತಾಳ**

ನಾರದನ ನೋಡಿ ಮುದ | ವೇರಿ ತ್ರಿಪುರೇಶ್ವರನು | ವೀರಾಸನದಲಿ ಕುಳ್ಳಿರಿಸಿ ||
ಸ್ವಾರಿಯೆತ್ತಣದು ನ | ಮ್ಮೂರಿಗೈತಂದ ಹೊಸ | ವಾರತೆಯನರುಹಬೇಕಂದ ‖ ೧ ‖

ಅರಿಯದಾಯಿತೆ ? ಮಹಾ | ಪುರುಷರಹ ಯೋಗಿಗಳು | ಭರದೊಳಿಲ್ಲಿಗೆ ಬಂದ ಸ್ಥಿತಿಯೆ ||
ದರುಶನವಗೈದು ಸ | ಚ್ಚರಿತನಾಗಲು ಪುಣ್ಯ | ದೊರೆವುದೆಂದನು ದೇವಋಷಿಯು ‖ ೨ ‖

ಎನಲು ದೈತ್ಯೇಂದ್ರನಾ | ಮುನಿಯ ಹತ್ತಿರಕೈದಿ | ಮಣಿದೆಂದನರುಹನಾ ಪದಕೆ ||
ಘನ ನೀತಿ ತತ್ವ ಬೋ | ಧನೆಯಿಂದಲೆಮ್ಮವರ | ಜನುಮ ಸಾರ್ಥಕಗೈವುದೆಂದ ‖ ೩ ‖

ದನುಜರಿರ ಕೇಳಿರೈಕ್ಷಣಿಕವಾಗಿರೆ ಲೋಕ | ಬಣಗು ದೈವವ ನಂಬಲೇಕೆ ? ||
ಎನುವೆನಷ್ಟಾಂಗ ಜೀ | ವನ ಮಾರ್ಗದಲಿ ಸೌಖ್ಯ | ವನುಭಸಿರೆಂದನಾ ಯತಿಯೂ || ೪ ||

**ಭಾಮಿನಿ**

ಮತ್ತೆ ದಾನವರೆಲ್ಲ ಮಾಯಾ |
ಶಾಸ್ತ್ರಗಳ ಪಠಿಸುತ್ತ ದೈವದ |
ಭಕ್ತಿವಿರಹಿತರಾಗಿ ನಾಸ್ತಿಕವಾದವನೆ ಹಿಡಿದು ||
ಮತ್ತರಾಗಿರಲಿತ್ತ ಪರಶಿವ |

ನಿತ್ತನಾಜ್ಞೆಯ ಸುರಸಮೂಹಕೆ |
ಮುತ್ತಿ ತ್ರಿಪುರರ ಪಟ್ಟಣವ ಹುಡಿ ಮಾಳ್ಪುದೆಂದನುತ || ೫ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕೇಳಿ ತಾಪಸರಿತ್ತಲಾ ಖಳ | ಜಾಲದೊಡನಾ ತಾರಕಾಕ್ಷನು |
ಕಾಳ ರಾತ್ರಿಯೊಳೆದ್ದು ನುಡಿದನು | ಓಲಗದಲಿ || ೧ ||

ಸೋಲದಲಿ ಬೆಂಡಾಗಿ ಸ್ವರ್ಗದ | ಬಾಳುವೆಯ ನೀಡಾಡಿ ತ್ರಿದಶರ |
ಜಾಲವೇ ಮೊರೆಯಿಟ್ಟುದೈ ಕಂ | ಕಾಳ ಧರಗೆ || ೨ ||

ಬಂದ ಬಹುಭಂಗಗಳ ತಾಬಗೆ | ದಂದು ಸುರರ ಸಮೂಹದೊಡನೈ |
ತಂದನಿಲ್ಲಿಗೆ ಸಮರಕೆನುತಾ | ಇಂದುಧರನು || ೩ ||

ಬರಲಿ ಸಮರಕೆ ಮೃತ್ಯುಹರನೇ | ಮೆರೆಸಬಲ್ಲನೆ ? ವಿಜಯವೆಮ್ಮಾ |
ಕರತಳದೊಳಿರೆ ಮೃತ್ಯು ಬ್ರಹ್ಮನ | ವರಬಲದಲಿ || ೪ ||

ಎನುತ ಕೊನೆಮೀಸೆಯನು ತಿರುಹುತ | ದನುಜನೈದಿದನಸ್ತ್ರಶಸ್ತ್ರದ |
ದೊಣೆಯನೇರಿಸಿಕೊಂಡು ರಾಕ್ಷಸ | ಗಣವನೆರಹಿ || ೫ ||

**ರಾಗ ಮಾರವಿ ಏಕತಾಳ**

ಹರನಾಗಳೆ ಸುರ | ಗಿರಿ ಚಾಪವ ಝೇಂ | ಕರಿಸಲು ಮೂಲೋಕ ||
ತಿರುಗಿತು ತಿರ್ರನೆ | ದುರುಳರ ತ್ರಿಪುರವು | ಭರದಿಂದೊಡಗೂಡೆ || ೧ ||

ಮತ್ತಾ ಹೂಂಕೃತಿ | ವೆತ್ತು ಬಲಿದಕೈ | ಯೆತ್ತಲು ಗಗನದಲಿ ||
ಮುತ್ತಿತು ಹೊಗೆ ಕಾ | ರ್ಗತ್ತಲೆ ಸಾಗರ | ವತ್ತಿತು ನೀರಸದಿ || ೨ ||

ತಾರಕ ಸುತನಿಂ | ತಾರೌದ್ರವ ಕಂ | ಡೇರಿದ ಕ್ರೋಧದಲಿ ||
ಕಾರುತ ಕೆಂಗಿಡೆ | ಘೋರಾಕಾರದೊ | ಳಾರುಭಟಿಸುತೆಂದ || ೩ ||

ಸ್ಮರಹರನಿತ್ತಲು | ಬರುವಸುರರ ಕಂ | ಡುರಿಯುಗುಳುತ ಬೇಗ ||
ಮುರಹರನನು ತಾ | ಪರಿಕಿಸಿ ಬ್ರಹ್ಮನ | ಕರೆದೆಚ್ಚರಿಸಿದನು || ೪ ||

ಕ್ರೂರದನುಜರೇಂ | ಕಾರುವಿರೇ ಛಲ | ಬಾರದು ಜಯ ನಿಮಗೆ ||
ಘೋರನೆ ಹಿಂದಕೆ | ಸಾರಿರಿ ಎನಲಾ | ತಾರಕ ಸುತನೆಂದ || ೫ ||

**ರಾಗ ಕೇತಾರಗೌಳ ಝಂಪೆತಾಳ**

ಹರ ಹರಾ ! ಇದು ಚೋದ್ಯವು | ನಮ್ಮೊಡನೆ – ದುರಕೆ ನೀವ್ ಬಂದ ಪರಿಯೂ ||
ಸರುವೇಶನಾಗಿ ಜಗಕೆ | ಸುರಪಕ್ಷ – ವೆರಸಿನಡೆತಹುದೆ ಹೀಗೆ || ೧ ||

ನೀತಿ ನ್ಯಾಯವ ಶೋಧಿಸೆ | ನಿಷ್ಪಕ್ಷ-ಪಾತವೇ ನಮ್ಮದೈಸೆ |
ಪಾತಕಿಗಳಾಗೆ ನೀವು | ಬಲ ಸಹಿತ – ವೈತಂದೆವಿಲ್ಲಿಗಾವು || ೨ ||

ಹಿರೆಭಾಗದೊಡೆತನವನು | ತ್ರಿದಶರಿಗೆ – ಕರೆದಿತ್ತ ನ್ಯಾಯವೇನು ?
ಮರಣವಿರದಂತೆ ಗೈದು | ನಮ್ಮವರ – ತರಿಯುವಿರೆ ನೀತಿಯುಳಿದು || ೩ ||

ಪಾಪ ಕೃತ್ಯಖಳರಿಗೆ | ಮೃತ್ಯುವಿನ – ರೂಪಾಗಿ ಬಹುದು ಮೇಗೆ |
ಆಪತ್ತಿನಲಿ ಕರಗುತ | ಸೊಕ್ಕುಬರೆ – ಕಾಪಥದಿ ಸಾಯ್ವಿರತ್ತ || ೪ ||

ಎನಿತು ನ್ಯಾಯವ ಪೇಳ್ದರು | ಉದ್ದುರುಟು – ತನ ವಿರಲು ಕೇಳ್ವರಾರು |
ಕಣೆಯೌಷಧಿಯೆ ತಾಗಲು | ತಿಳಿವುದೆಂ – ದಣಿದನಾ ಕಣೆಯ ಸಾಲು || ೫ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇತ್ತ ತ್ರಿಪುರದ ಅಮೃತ ಕೂಪವು | ಬತ್ತಿಹೋಗಲು ರಾಕ್ಷಸರಪಡೆ |
ಮೃತ್ಯು ವಶವಾಯಿತ್ತು ಶಿವನೆ | ಚ್ಚ ಸ್ತ್ರದಿಂದ || ೧ ||

ಸಾಲು ಸಂದಣಿಗೊಂಡು ಕೆಡೆದಾ | ಖೂಳ ದೈತ್ಯರ ನೋಡಿ ತ್ರಿಪುರರು |
ಭಾಳನೇತ್ರನ ಮುತ್ತಿದರು ಕ | ಟ್ಟಾಳುತನದಿ || ೨ ||

ಮರುಳು ದೇವನೆ | ನಿಲ್ಲು ಭಕ್ತರಿ | ಗೆರಡೆಣಿಸಿದಾ ಬಿರುದು ಮೋಸವ |
ಮುರಿವೆವೀಕ್ಷಣವೆಂದು ಹಾಯ್ದರು | ಸರಭಸದಲಿ || ೩ ||

ಹರನದಾಗಳೆ ರೌದ್ರರೂಪವ | ಧರಿಸಿ ನಾರಾಯಣನ ಬಾಣವ |
ಭರದೊಳೆಚ್ಚನು ಮೇರು ಚಾಪವ | ಕರದೊಳೆತ್ತಿ || ೪ ||

ಮೂರು ಜಗವಲ್ಲಾಡಿತೊಂದೇ | ಭಾರಿಯೊಳು ತ್ರಿಪುರಂಗಳುರಿಯಲು |
ಧಾರಿಣಿಯೊಳೊರಗಿದರು ಮೂವರು | ಕ್ರೂರ ಖಳರು || ೫ ||

ಸುರರು ಜಯಜಯವೆನುತ ಹೂಮಳೆ | ಗರೆಯೆ ದುಂದುಭಿ ಘೋಷದಲಿ ವಿ ||
ಸ್ತರಿಸಿತಂದಿಗೆ ತ್ರಿಪುರ ಮಥನದ | ಚರಿತೆಯಿಳೆಗೆ || ೬ ||

## ಕಲ್ಕ್ಯವತಾರ

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇತ್ತಲಾ ಕಲಿಪುರುಷ ರಾಕ್ಷಸ | ಧೂರ್ತಕಾಮ ಕ್ರೋಧ ಮುಖ್ಯರ |
ಮೊತ್ತ ಕೂಡಿಸಿ ತನ್ನ ಮಹಿಮೆಯ | ಬಿತ್ತುತಿರ್ದ || ೧ ||

ನಡೆವುದೇ ತನ್ನಾಜ್ಞೆ ಜಗದಲಿ | ಪಡೆವರೇ ಶಕ್ತಿಯಲಿ ಭಾಗ್ಯವ |
ತಡೆದು ದೈವವ ಪೌರುಷದ ಮೇ | ಲಡರು ತಿಹರೇ ? || ೨ ||

ಪಂಚ ಭೂತಗಳಾಟವನು ತ | ನ್ನಂಚಿನಲಿ ಹಿಡಿದಾಡಿಸುವರೇ ? |
ಸಂಚರಿಪಗ್ರಹತಾರೆಗಳ ಮೇ | ಲ್ಮಿಂಚುತಿಹರೇ ? || ೩ ||

ಸತ್ವಸರಿಸಮ ಯುಕ್ತಿ ಸಾಹಸ | ವೃತ್ತಿ ಧರ್ಮಾಚರಣೆಯಲಿ ಜನ |
ರೆತ್ತಿಹರೆ ? ಕಾದಾಟದಲಿ ಜಯ | ಸ್ವಾರ್ಥ ಬಿಡದೆ || ೪ ||

ಇಂತು ಕಲಿಯಪ್ಪಣೆಯೊಳಾ ಭುವ | ನಾಂತರವೆ ಕಂಗೆಡಲು ನಾರದ |
ಕಂತು ಪಿತನಿಂಗರುಹಿದನು ವಿ | ಭ್ರಾಂತನಾಗಿ || ೫ ||

**ರಾಗ ದೇಶಿ ಅಷ್ಟತಾಳ**

ಏನಿದು ಸ್ವಾರಿ ಏನಿದು || ಪಲ್ಲವಿ ||

ಏನಿದು ನಾರದ ಬಲು ವ್ಯಸನದಲೀ | ಕ್ಷೀಣನಾದ್ಯೆ ಏನೇನಾಯ್ತು ಲೋಕದಲಿ || ಅ.ಪ ||

ಲಾಲಿಸೊ ದೇವರದೇವ ಶ್ರೀಲೋಲ | ಹಾಳಾಯ್ತು ಲೋಕದ ನಡೆನುಡಿಯೆಲ್ಲ
ತಾಳಲರಿದು ಕಷ್ಟ ಭೂದೇವಿಗಿನ್ನು | ಕೇಳುವರಾರಿಲ್ಲ ನೀಹೊರತಿನ್ನು || ೧ ||

ಘನ ಶಾಸ್ತ್ರಾದಿಗಳೆಲ್ಲ ಕೇಳದೆ ಹೋಯ್ತು | ಮನೆಮನೆ ಜೂಜು ಸುರೆಯ ಸೂರೆಗಾಯ್ತು ||
ಜನ ಜನರಲ್ಲಿ ಬಂಧು ಬಾಂಧವರಲ್ಲಿ | ಸೆಣಸಾಟವಲ್ಲದಿಲ್ಲವು ಸ್ನೇಹಕೇಳಿ || ೨ ||

ಸುರಮುನಿಪನೆ ! ನಿನ್ನೊಳೊರೆಯಲೇನುಂಟು | ಧರೆಯಪಾಲನೆಗಿನ್ನೊಂದವತಾರ ಉಂಟು ||
ದುರುಳ ಕಲಿಯ ಮಹಾತ್ಮ್ಯೆಯ ನೋಡುತಿಹೆನು | ಧರಿಸಿ ಬರುವೆನಿದೊ ಕಲ್ಕಿ ರೂಪವನು || ೩ ||

**ರಾಗ ಮಾರವಿ ಅಷ್ಟತಾಳ**

ಬಂದನಾ ಹರಿಯು | ಕಲ್ಕಿಯ ರೂಪ – ದಿಂದ ನರಹರಿಯು || ಪಲ್ಲವಿ ||

ಬಂದನಾ ಮಾಧವನು ಭಾರ್ಗವ | ನಿಂದ ವಿದ್ಯೆಯನೋದಿ ಪುರಹರ |
ನಂದು ಕೊಟ್ಟಾಶಸ್ತ್ರ ಧರಿಸುತ | ಮಂದಮತಿಗಳನಟ್ಟಿ ಬೆರಸುತ || ಅನು ಪಲ್ಲವಿ ||

ಘನಕುದುರೆಯನೇರಿ ಬಂದ | ಖಡ್ಗ – ವನು ಝಳಪಿಸುತಲೈತಂದ |

ತ್ರಿಣಯನಂತಾ ರೌದ್ರರೂಪದಿ | ಕನಲುತೈತರಲಾಗ ಧಿಮ್ಮನೆ |
ಘನಮದಾಂಧರು ದುಷ್ಟ ಚೇಷ್ಟೆಯ | ಮನೆಮುರುಕರಲ್ಲಲ್ಲಿ ಹಾಯೆನೆ || ೧ ||

ಓಡಿದನತ್ತಿತ್ತ ಬೇಗ | ಕಲಿ ನೋಡಿದ ಕಲ್ಕಿಯ ವೇಗ |
ಹೇಡಿಯಂದದಿ ತಿರುತಿರುಗಿ ಖಯ | ಖೋಡಿ ಮಾಯಾ ಮಂತ್ರ ಶಕ್ತಿಯೊ |
ಳೋಡಿದನು ಕಾಮಾದಿಸಚಿವರ | ಕೂಡಿ ಕಲಹಾದಿಗಳ ಕೆರಳಿಸಿ || ೨ ||

ಮೋಸ ವಂಚನೆ ದ್ರೋಹಾದಿಗಳು | ಪರ-ದೂಷಣೆ ದ್ವೇಷಾಸೂಯೆಗಳು |
ಲೇಸುಗಾಣದೆ ನಾಶವಾಗಲು | ಆಶೆ ಪಾಶಗಳಡಗಿ ಹೋಗಲು |
ಆಸುರಾಳಿಯ ದೂಷ್ಯಕುಲಗಳ | ನಾಶಗೈದಾವೇಶದಿಂದಲಿ || ೩ ||

**ಕಂದ ಪದ್ಯ**

ದುಷ್ಟಾತ್ಮರು ಮರೆಯಾಗಲು |
ಸೃಷ್ಟಿಯು ಮೆರೆವಂತೆ ಸತ್ಯಧರ್ಮಾದಿಗಳಂ |
ಸೃಷ್ಟಿಸಿ ನಾರಾಯಣ ತ |
ನ್ನಿಷ್ಟದೊಳಿರ್ದಂ ದಶಾವತಾರವಂ ತೋರಿಸುತಾ || ೧ ||

**ಸೃಗ್ಧರಾ ವೃತ್ತ**

ಇಂತೀ ಲೋಕ ಹಿತಾರ್ಥಮಾಗಿ ಹರಿ ತಾನೀರೈದು ರೂಪಂಗಳ
ತ್ಯಂತೋತ್ಸಾಹದೊಳಾಂತು ದಿವ್ಯ ವಿಭವಂ ತೋರ್ದಾ ಕಥಾ ಚಿತ್ರಮಂ
ಸಂತೋಷಂ ಪಡೆವಂತು ವರ್ಣಿಸಿದೆನೀಕಾವ್ಯಂ ಕಲಾ ಪ್ರೇಮದಿಂ
ದೆಂತೆಂತೋ ನೆರೆದೋದಲೀವನಭವಂ ಸೌಖ್ಯಂ ಸದಾ ಮಂಗಲಂ || ೧ | |

**– ಮಂಗಲ ಪದ** –

ಮಂಗಲಂ ಜಯ ಮಂಗಲಂ | ಶ್ರೀ ರಂಗಗೆ – ನೀಲಾಂಗಗೆ |
ಮಂಗಲಂ ವೇದಾಂಗ ವೇದ್ಯ ಶು | ಭಾಂಗಗೆ ನರ – ಸಿಂಗಗೆ || ೧ ||

ಸೋಮಧರ ಪ್ರಿಯ ಬಲಿಯದರ್ಪ ವಿ | ರಾಮಗೆ – ಸುಖಧಾಮಗೆ |
ಕಾಮಜನಕ ಸುನಾಮ ಭಾರ್ಗವ | ರಾಮಗೆ – ಶ್ರೀರಾಮಗೆ || ೨ ||

ಭೂರಿಭುವನಾಧಾರ ಧರ್ಮೊ | ದ್ಧಾರಿಗೆ – ಕಂಸಾರಿಗೆ
ಭಾರತಾಹವ ಗೆಲಿಸಿದಾ ಶ್ರೀ | ಶೌರಿಗೆ – ಗಿರಿಧಾರಿಗೆ || ೩ ||

ಶೀಲಜನ ಪರಿಪಾಲ ಗೋಪೀ | ಬಾಲಗೆ – ಗೋಪಾಲಗೆ
ವ್ಯಾಳ ಶಯನ ವಿಶಾಲ ಲಕ್ಷ್ಮೀ | ಲೋಲಗೆ – ವನಮಾಲಿಗೆ || ೪ ||

ಧನುಜ ಕುಲ – ಸಂಹನನ ಮಾಯಾ | ಮನುಜಗೆ – ಯದು ತನುಜಗೆ
ಕಣಿಪುರಾಧಿಪ ಕೃಷ್ಣ ಕರುಣಾ | ವನಧಿಗೆ – ಗುಣವನಧಿಗೆ || ೫ ||

**ಕಂದ ಪದ್ಯ**

ಕೃತಿಪತಿಯುಡುಪತಿ ಕೃಷ್ಣಂ |
ಕೃತಿ ವಿಷಯಂ ವಿಷ್ಣುಲೀಲೆ ಭಗವತ್ ಚರಿತಾ
ಮೃತಮಿಂತು ಯಕ್ಷಗಾನದ
ಕೃತಿಪೇಳ್ದಂ ವಿಷ್ಣು ಶರ್ಮಕವಿ ಕನ್ನಡದೊಳ್ || ೧ ||

*ಅಂತೂ ಪದ್ಯಗಳು ೩೪೧ ಕ್ಕೆ ಶ್ರೀ ಮನ್ಮಹಾ ವಿಷ್ಣುಲೀಲೆ*

*ದಶಾವತಾರ ಯಕ್ಷಗಾನ ಪ್ರಬಂಧಂ ಪರಿಸಮಾಪ್ತವಾದುದು*

*ಮಂಗಳ ಮಹಾ ಶ್ರೀ | ಶ್ರೀ | ಶ್ರೀ* |

# ತ್ರಿಜನ್ಮ ಕಂಸಕೈವಲ್ಯ

## ಪಾತ್ರಗಳು

| | |
|---|---|
| ವಸುಸೇನ | ಪ್ರತಿಷ್ಠಾನಗರದ ಸಾಮ್ರಾಟ |
| ಸುನಂದಾದೇವಿ | ಸಾಮ್ರಾಜ್ಞಿ |
| ರುದ್ರಸೇನ | ಪುತ್ರ |
| ಸುಧೀರ | ಮಂತ್ರಿ |
| ಸಿಂಹಾಸ್ಯ | ಬೇಡರೊಡೆಯ |
| ಚಂಡಸೇನ | ಮದನಪುರದರಸು |
| ಸುದರ್ಶನ | ಅವನ ಮಿತ್ರ |
| ಮಹೋಗ್ರದಂಷ್ಟ | ಮಾಯಾಪುರ (ದಾನವ) |
| ಭದ್ರಸೇನ | ಚಂಡಸೇನನ ಪುತ್ರ |
| ಉಗ್ರಸೇನ | ಮಧುರಾಪುರದರಸು |

| | |
|---|---|
| ಗಾರ್ಗ್ಯ | ಪುರೋಹಿತ |
| ನಂದಿನಿ | ಉಗ್ರಸೇನನ ಪತ್ನಿ |
| ದ್ರುಮಿಲ | ದಾನವ |
| ಕಂಸ | ಉಗ್ರಸೇನನ ಪುತ್ರ |

ನಾರದ, ನಂದಗೋಪ, ಯಶೋಧೆ, ಬಲರಾಮ, ಕೃಷ್ಣ, ಅಕ್ರೂರ, ರಜಕ, ಕುಬ್ಜೆ, ಚಾಣೂರ, ಮುಷ್ಟಿಕ, ಸಖಿಯರು, ಗೋಪಿಕೆಯರು, ಬ್ರಾಹ್ಮಣರು, ಬೋವಿಗಳು, ಚಾರಕರು, ಇತ್ಯಾದಿ…..

## ತ್ರಿಜನ್ಮ ಕಂಸಕೈವಲ್ಯ

**ಕಥಾಸಾರ**

ಕಾಲನೇಮಿಯು ಮದನಪುರದಲ್ಲಿ ಚಂಡಸೇನನೆಂಬ ಹೆಸರಿನಲ್ಲಿ ಹುಟ್ಟಿಕೊಂಡಿದ್ದಾನೆ. ಅವನ ಸ್ನೇಹಿತ ಪ್ರತಿಷ್ಠಾನಗರದ ವಸುಸೇನ. ಪ್ರತಿಷ್ಠಾನಗರದಲ್ಲಿ ವಸುಸೇನನು ಓಲಗಗೊಟ್ಟಿರುವಾಗ ಮಿತ್ರನಾದ ಚಂಡಸೇನನು ಅಲ್ಲಿಗೆ ಆಗಮಿಸುತ್ತಾನೆ. ಅವನನ್ನು ಮಿತ್ರನಾದ ವಸುಸೇನನು ಆಧರಿಸಿ ಊಟಕ್ಕೆ ಕರೆದೊಯ್ಯಲು ಊಟವನ್ನು ಬಡಿಸುವ ಸುನಂದೆಯ ರೂಪಕ್ಕೆ ಚಂಡಸೇನ ಮರುಳಾಗುತ್ತಾನೆ. ತನ್ನ ಮಿತ್ರನಾದ ಸುದರ್ಶನನಲ್ಲಿ ಅವಳ ರೂಪವನ್ನು ವರ್ಣಿಸಿದಾಗ ಅವನು ಇವನನ್ನು ಪ್ರೋತ್ಸಾಹಿಸುತ್ತಾನೆ. ಮಾರನೆಯ ದಿವಸ ವಸುಸೇನ – ಚಂಡಸೇನರು ವನಸಂಚರಣೆಗೆ ತೆರಳುವಾಗ ಸುನಂದೆಗೆ ಊಟ ತರುವಂತೆ ವಸುಸೇನ ಹೇಳುತ್ತಾನೆ. ಅವಳು ಊಟವನ್ನು ತರುವಾಗ ದಾರಿಯಲ್ಲಿ ಚಂಡಸೇನನು ಅವಳನ್ನು ಅಪಹರಿಸಿಕೊಂಡು ಹೋಗುತ್ತಾನೆ. ಅವಳ ಮೊರೆಯನ್ನು ಕೇಳಿ ಸುರಮ್ಯಾಟವಿಯ ಒಡೆಯ ಸಿಂಹಾಸ್ಯನು ತಡೆದು ಯುದ್ಧದಲ್ಲಿ ಸಾಯುತ್ತಾನೆ. ಇತ್ತ ಸುನಂದೆಯ ಸಖಿಯರು ವಸುಸೇನನಿಗೆ ಈ ಸುದ್ಧಿಯನ್ನು ತಿಳಿಸುತ್ತಾರೆ. ಅವನು ಸೇನಾ ಸಮೇತನಾಗಿ ಯುದ್ಧಕ್ಕೆ ಹೊರಡುತ್ತಾನೆ. ಈ ಸುದ್ಧಿಯನ್ನು ತಿಳಿದ ಚಂಡನು ನಾಳೆ ಯುದ್ಧದಲ್ಲಿ ಏನಾದೀತೋ ಏನೋ ಇಂದೇ ಈ ಸುಂದರಿಯನ್ನು ಭೋಗಿಸುವೆನೆಂದು ನಿಶ್ಚಯಿಸಿ ಅವಳಲ್ಲಿ ಕಾಮಯಾಚನೆ ಮಾಡುತ್ತಾನೆ. ಅವಳು ಒಪ್ಪದಿರಲು ತಂತ್ರದಿಂದ ಕೂಡಬೇಕೆಂದು ನಿಶ್ಚಯಿಸಿ ರಕ್ತ ಒಸರುವ ವಸುಸೇನನ ರುಂಡವನ್ನು ನಿರ್ಮಿಸಿ ಅವಳ ಎದುರಿಗೆ ತಂದು ಹಾಕುತ್ತಾನೆ. ಅದನ್ನು ಕಂಡೊಡನೆ ಸುನಂದೆಯು ಸಾಯುತ್ತಾಳೆ. ಚಂಡಸೇನನು ಅವಳೊಂದಿಗೆ ತಾನು ಚಿತೆಯನ್ನೇರುವ ವಿಚಾರವನ್ನು ಮಾಡಿದಾಗ ಸಚಿವನು ತಡೆದು ಅವಳ ಶವವನ್ನು ಗಂಡನೆದುರಿಗೆ ಎಸೆಯಲು ಸೂಚಿಸುತ್ತಾನೆ. ವಸುಸೇನನು ದುಃಖಿಸುತ್ತಿರುವಾಗ ಅಶರೀರವಾಣಿಯು ನಡೆದ ಸಂಗತಿಯನ್ನು ತಿಳಿಸುತ್ತದೆ. ವಸುಸೇನ ಕೆರಳಿ ಯುದ್ಧಕ್ಕಣಿಯಾಗುತ್ತಾನೆ. ಅವನ ಮಗನಾದ ರುದ್ರಸೇನ ಯುದ್ಧಕ್ಕೆ ಮುನ್ನುಗುತ್ತಾನೆ. ಚಂಡಸೇನನ ಮಗನಾದ ಭದ್ರಸೇನ ಎದುರಾಗುತ್ತಾನೆ. ಭದ್ರಸೇನ ಯುದ್ಧದಲ್ಲಿ ಮಡಿಯುತ್ತಾನೆ. ವಸುಸೇನ – ಚಂಡಸೇನರ ನಡುವೆ ಯುದ್ಧ ನಡೆದು ಚಂಡಸೇನ ಸೆರೆ ಸಿಗುತ್ತಾನೆ. ಅವರ ಶಿಶ್ನವನ್ನು ಕತ್ತರಿಸಿ ಬೆತ್ತಲೆಯಾಗಿ ಮೆರವಣಿಗೆ ಮಾಡಿ ಗಲ್ಲಿಗೇರಿಸಲಾಗುತ್ತದೆ. ಈ ಜನ್ಮದಲ್ಲಿ ಆಗದಿದ್ದರೂ ಮುಂದಿನ ಜನ್ಮದಲ್ಲಿಯಾದರೂ ಸುನಂದೆಯನ್ನು ಭೋಗಿಸದೆ ಬಿಡೆನೆಂದು ಪ್ರತಿಜ್ಞೆ ಮಾಡಿ ಸಾಯುತ್ತಾನೆ. ವಸುಸೇನನು ಸುನಂದೆಗೆ ಸಂಸ್ಕಾರವನ್ನು ಮಾಡಿ ಮಗನನ್ನು ಪಟ್ಟಕ್ಕೇರಿಸಿ ಸತಿಯೊಡನೆ ಚಿತೆಯನ್ನೇರುತ್ತಾನೆ.

ಚಂಡಸೇನ ಮುಂದಿನ ಭವದಲ್ಲಿ ಧ್ರುಮಿಲ ದಾನವನಾಗಿ ಹುಟ್ಟುತ್ತಾನೆ. ವಸುಸೇನನು ಉಗ್ರಸೇನನಾಗಿ ಸುನಂದೆಯು ನಂದಿನಿಯಾಗಿ ಜನ್ಮತಾಳಿ ಸತಿಪತಿಯರಾಗಿರುತ್ತಾರೆ. ಒಂದು ದಿನ ನಂದಿನಿಯು ವನವಿಹಾರಕ್ಕೆ ಹೋಗೋಣವೆಂದು ಪತಿಯನ್ನು ಕೇಳುತ್ತಾಳೆ. ಉಗ್ರಸೇನನು 'ರಾಜಕಾರ್ಯದ ಭರದಿಂದ ಇಂದು ಬರಲಾರೆ, ನೀನು ಹೋಗಿ ಬಾ' ಎಂದು ಕಳಿಸುತ್ತಾನೆ. ನಂದಿನಿಯು ವನಸಂಚಾರ ಗಯ್ಯುತಿರುವುದನ್ನು ದ್ರುಮಿಲ ನೋಡುತ್ತಾನೆ. ಇವಳು ಸುನಂದೆಯೆಂಬುದು ಅರಿವಾಗುತ್ತದೆ. ಸಖಿಯರು ದೂರ ಹೋದ ಸಮಯದಲ್ಲಿ ಉಗ್ರಸೇನನ ರೂಪವನ್ನು ಧರಿಸಿ ಬಂದು ಅವಳನ್ನು ಕೂಡುತ್ತಾನೆ. ಅಷ್ಟುಹೊತ್ತಿಗೆ ಉಗ್ರಸೇನನು ಅಲ್ಲಿಗೆ ಬಂದನೆಂಬುದನ್ನು ಸಖಿಯರು ಕೂಗುತ್ತಿರಲು ತಕ್ಷಣದಲ್ಲಿ ಕಾಡುಹಂದಿಯ ರೂಪು ತಳೆದು ಓಡುತ್ತಾನೆ. ಉಗ್ರಸೇನನ ಶರದಘಾತದಿಂದ ಮಡಿಯುತ್ತಾನೆ. ಅವನ ಪ್ರಾಣ ಸತಿಯ ಒಡಲನ್ನು ಸೇರುತ್ತದೆ. ಅದು ಮೂರನೆಯದಾದ ಕಂಸರೂಪಕ್ಕೆ ನಾಂದಿ. ಉಗ್ರಸೇನನಿಗೆ ಇದೊಂದು ಗೊತ್ತಿಲ್ಲ. ಕಾಡುಹಂದಿಯ ದಾಳಿಯಿಂದ ಸತಿಯು ಕಂಗೆಟ್ಟಿದ್ದಾಳೆಂದು ತಿಳಿಯುತ್ತಾನೆ. ನಂದಿನಿ ತಾಪದಿಂದ ಬೆಂದು ತನ್ನೊಳಗಿನ ಪಿಂಡವು ತನ್ನವರಿಂದಲೇ

ಮಡಿಯಲೆಂದು ಶಪಿಸುತ್ತಾಳೆ. ಅವಳು ಅನ್ನಾಹಾರಗಳನ್ನು ತೊರೆದು ಪ್ರಾಣವನ್ನು ತೊರೆಯಲು ನಿಶ್ಚಯಿಸುತ್ತಾಳೆ. ಉಪಾಯದಿಂದ ಔಷಧಿಗಳನ್ನು ಕುಡಿಸುತ್ತಾರೆ. ಅವಳು ಮಗುವಿಗೆ ಜನ್ಮಕೊಟ್ಟು ಮಡಿಯುತ್ತಾಳೆ. ರಾಜ ಶೋಕಿಸುತ್ತಾನೆ. ಕಂಸ ಬೆಳೆಯುತ್ತಾನೆ. ದುಷ್ಟಕೂಟವನ್ನು ಬೆಳೆಸುತ್ತಾನೆ. ತಂದೆಯು ಅದನ್ನು ಕೇಳಿ ಅವನನ್ನು ವಿಚಾರಿಸಲು ಹೊರಟಾಗ ತಂದೆಯನ್ನೇ ಸೆರೆಯಲ್ಲಿಟ್ಟು ತಾನೇ ರಾಜನಾಗಿ ಮೆರೆಯುತ್ತಾನೆ. ಅವನ ದೌರ್ಜನ್ಯ ಹೆಚ್ಚುತ್ತದೆ.

ಒಂದು ದಿನ ಕಂಸನು ಅಕ್ರೂರನನ್ನು ಕರೆದು ಅಳಿಯಂದಿರಾದ ಬಲರಾಮ-ಕೃಷ್ಣರನ್ನು ಬಿಲ್ಲಹಬ್ಬಕ್ಕಾಗಿ ಕರೆತರಲು ಹೇಳುತ್ತಾನೆ. ಅಕ್ರೂರ ನಂದಗೋಕುಲಕ್ಕೆ ಹೋಗಿ ಈ ವಿಷಯವನ್ನು ತಿಳಿಸಿ ಅವರನ್ನು ಕರೆತರುತ್ತಾನೆ. ದಾರಿಯನ್ನು ಅವನಿಗೆ ಕೃಷ್ಣನ ಮೂಲಸ್ವರೂಪದರ್ಶನವಾಗುತ್ತದೆ. ಮಥುರೆಯಲ್ಲಿ ರಜಕನು ಬಲರಾಮ-ಕೃಷ್ಣರಿಂದ ಹತನಾಗುತ್ತಾನೆ. ಕುಬ್ಜೆಯ ಕುರೂಪ ತೊಲಗುತ್ತದೆ. ಕುವಲಯಾಪೀಡವು ಸಾಯುತ್ತದೆ. ಚಾಣೂರ-ಮುಷ್ಟಿಕರು ಕುಸ್ತಿಯಲ್ಲಿ ಸಾಯುತ್ತಾರೆ. ಕಂಸನು ಸ್ವಪ್ನದಿಂದ ಕಂಗೆಡುತ್ತಾನೆ. ಕಂಸ-ಕೃಷ್ಣರಲ್ಲಿ ಯುದ್ಧ ನಡೆದು ಕಂಸನ ವಧೆಯಾಗುತ್ತದೆ. ಉಗ್ರಸೇನ ಪುನಃ ಪಟ್ಟವನ್ನೇರುತ್ತಾನೆ.

**ಯಕ್ಷಗಾನ**
**ತ್ರಿಜನ್ಮ ಕಂಸ ಕೈವಲ್ಯ**

**ಶಾರ್ದೂಲವಿಕ್ರೀಡಿತವೃತ್ತ**

ಶ್ರೀಶಂ ಶ್ರೀಕರಮಬ್ಜಜಾತಜನಕಂ ಈಶಾಪ್ತದುಗ್ಧಾರ್ಣವಾ |
ವಾಸಂ ಸಜ್ಜನಭೀಷ್ಟದಾತ ದುರಿತಾದ್ರಿಚ್ಛೇದ ವಜ್ರೋಪಮಂ ||
ಭಾಸಂ ಭಾಸ್ಕರಕೋಟಿ ವೇದಲತಿಕಾಮೂಲಂ ಮಹಾದುಷ್ಟನಿ
ಶ್ಯೇಷಂ ಮೂಜಗವಂದ್ಯಪಾದಕಮಲಂ ಶೇಷಾಚಲೇಶಂಭಜೇ || ೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಉತ್ತರಾಸುತಗೊಲದುಶುಕಮುನಿ | ಸತ್ತಮನು ಭಾಗವತ ಚರಿತವ |
ಬಿತ್ತರಿಸುತಿರಲೆರಿಗಿ ಯತಿಪಗೆ | ಪೃಥ್ವಿಪತಿಯು || ೧ ||

ಕೇಳಿಕೊಂಡನು ಕಾಲನೇಮಿಯು | ಖೂಳಚಂಡಕನಾಗಿ ಮೂಭವ |
ತಾಳಿಕಡೆಯಲಿ ಮುಕ್ತನಾದುದ | ಪೇಳಿ ಮರಳಿ || ೨ ||

ಸತ್ತುಮರುಜನುಮದಿ ಸುನಂದೆಯು | ಮತ್ತೆ ಸಿಲುಕಿದಳೆಂತು ದುರುಳಗೆ |
ಬಿತ್ತರದಿ ಮಗುಳೆನಲುಮುನಿ ಮುದ | ವೆತ್ತು ನುಡಿದ || ೩ ||

**ವಾರ್ಧಿಕ**

ಆ ಮಹಾತ್ರೇತೆಯಲಿ ರಾಮನಿಂದಳಿಯದಿಹ |
ಯಾಮಿನೀಚರನಿವಹ ತಾ ಮರಳಿದ್ವಾಪರದಿ |
ಭೂಮಿಗಿಳಿಯುತ ಕೆಟ್ಟ ತಾಮಸಿಕರಿರೆ ಕಾಲನೇಮಿ ಪೂರ್ವಗ್ರಹದಲಿ ||
ಹೋಮಿಸುವೆ ಹರಿಯನೆಂಬಾ ಮನದಿ ಪ್ರಥಮದೋಳ್ |

ಕಾಮನಗರೇಶ್ವರಗೆ ತಾ ಮೊದಲ ಸುತಚಂಡ |
ನಾಮದಿಂದುದಿಸಿ ವಸುಗೋಮಿನಿಪಗತ್ಯಂತ ಪೇಮಿಯೆನಿಸಿರಲಿಕಿತ್ತ || ೧ ||

**ಭಾಮಿನಿ**

ಓನರಾಧಿಪಕೇಳ್ ಪ್ರತಿಷ್ಠಾ |
ಮಾನಗರದೊಳಗೊಂದು ದಿನ ವಸು |
ಸೇನ ಚಕ್ರೇಶ್ವರನು ಘನ ಪಂಚಾನನಾಸನದಿ ||
ತಾನಲಂಕರಿಸುತ್ತ ಸಭಿಕರ |
ಮಾನಿಸುತ ನೃಪಭಾನುವಿಧುಕುಲ |
ಸೂನು ಕುಜನ ಕೃಶಾನು ಸಜ್ಜನಧೇನು ಸಚಿವರನು || ೧ ||

**ರಾಗ ಕಾಂಬೋಧಿ ಝಂಪೆತಾಳ**

ತಾ ಕೇಳ್ದನಾಲ್ಶರಧಿ | ಮೇಖಲೆಯರಾಷ್ಟ್ರವೆ | ಮ್ಮೈಕಾತಪತ್ರದಡಿಯಲ್ಲಿ ||
ಕಾಕಪೋಕರ ಬಾಧೆ | ವ್ಯಾಕುಲವನುಳಿದೆಲ್ಲ | ತಾಕುಶಲದಿಂದಿಹುದೆ ಪೇಳಿ || ೧ ||

**ರಾಗ ಕೇದಾರಗೌಳ ಅಷ್ಟತಾಳ**

ಒಕ್ಕಣಿಸೆನೆ ಮಂತ್ರಿ | ಮುಖ್ಯ ಸುಧೀರ ಭೂ | ಚಕ್ರದಾದ್ಯಂತವಾಗಿ ||
ಸಕ್ರಿಯ ಧರ್ಮವ | ತಿಕ್ರಮಿಸದ ಕರ್ಮ | ದೊಕ್ಕಲು ಸತ್ಯವಾಗಿ || ೧ ||

ಜಗದೊಳೆಲ್ಲರಿಗವ | ರಿಗೆ ತಕ್ಕಸಂಪದ | ಸೊಗವಿದೆ ನಿತ್ಯವಾಗಿ ||
ಸುಗುಣ ನಿನ್ನಾಡಳಿ | ತೆಗೆ ಸಾಟಿಯಿಲ್ಲೆಂದ | ನಗುತರಸನಿಗೆ ಬಾಗಿ || ೨ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಬಿತ್ತರಿಸಲಿದ ಕೇಳಿ ನೃಪಕುಲ | ಸತ್ತವನು ಸಂತೋಷದಿಂದಿರ |
ಲತ್ತ ಮದನಪುರೇಂದ್ರ ಚಂಡಕ | ನುತ್ಸಹದೊಳು || ೧ ||

ಒಂದು ದಿನ ಸಂಭ್ರಮದಿ ಸಭೆಯೊಳ | ಗೆಂದ ಮಂತ್ರಿ ಸುದರ್ಶನಾಖ್ಯಗೆ |
ಸ್ಯಂದನವನಣಿಗೊಳಿಸು ಕಾಪಿನ | ಮಂದಿ ಸಹಿತ || ೨ ||

ಬರಲಿ ಸಖ ವಸುಸೇನ ನೃಪಸಂ | ದರುಶನಕ್ಕೆ ಪೊರಡೆನುತಲಖಿಲರ |
ವೆರೆದು ತಾನೈದಿದ ಪ್ರತಿಷ್ಠಾ | ಪುರಕೆ ಮುದದಿ || ೩ ||

**ಭಾಮಿನಿ**

ಬಂದು ಪುರಬಾಹ್ಯದೊಳು ತನ್ನಯ |
ಮಂದಿಗಳ ಸಹಿತಿಳಿಯುತೊಸಗೆಯ |

ನಂದು ವಸುಸೇನಕಗೆ ಕಳುಹಿದ ಚಂಡಸೇನಾಖ್ಯ ||
ಬಂದ ಸಂದರ್ಶನಕೆ ಸ್ನೇಹಿತ |
ನೆಂದ ವಾರ್ತೆಯ ಕೇಳುತತುಲಾ |
ನಂದದಿಂದ ಸ್ವಾಗತಿಸಿ ನೃಪಕರೆತಂದನರಮನೆಗೆ ‖ ೧ ‖

**ರಾಗ ಸುರುಟಿ ಏಕತಾಳ**

ಬಂದೆಯ ಸನ್ಮಿತ್ರ | ಸ್ನೇಹದ | ಸಂದರ್ಶನಕಿತ್ತ ||
ಚಂದವೆ ಬಳಗಕೆ | ಎಂದೆನುತಪ್ಪುತ | ಹೊಂದಿಸಿ ಪೀಠವ | ನಂದ ಮಿಗಿಲು ತಾ ‖ ೧ ‖

ಹಾಲ್ಜೇನನು ಕುಡಿಸಿ | ಸೊಗಸಿನ | ವೀಳಯವನ್ನಿಡಿಸಿ ||
ಮೇಲುಪಚರಿಸುತ | ಲೋಲಗವನು ಬಿ | ಟ್ಟಾಲಯಕೈದ ನೃ | ಪಾಲ ಸಂಗಡಿಸಿ ‖ ೨ ‖

**ಕಂದ**

ಪಯಣಿಸಿ ನೃಪ ಭೋಜನ ಶಾ | ಲೆಯ ಸಖಸಹ ಪೊಗುತಲಿ ದೂತಿಯ ತಾಕರೆಯುತ್ತಂ ||
ಪ್ರಿಯ ಸಖಗುಣಬಡಿಸಲು ಸುನಂದೆಯ ಕರೆಯನಲದನೊರೆಯಲ್ಕವಳರಿಯುತ್ತಂ ‖ ೧ ‖

**ರಾಗ ಆನಂದಭೈರವಿ ತ್ರಿವುಡೆತಾಳ**

ಮಡದಿಬಂದಳು ಕಾಂತ | ನೆಡೆಗೆ ಬಾಗುತಲಿ | ಹಿಡಿದು ಸಟ್ಟುಗವನು ನಡುಬಳುಕುತಲಿ ||
ಪಿಡಿಟೊಂಕಕಳೆದು ಮೇ | ಲುಡೆಯ ಸುತ್ತುತಲಿ | ಕಡುನೀಳಕಾಳಹಿ | ಜಡೆಯದೂಡುತಲಿ ||
ಜಡಜಮುಖಿಯಾ | ರಡಿ ಗುರುಳ ಮೇ | ಗಡೆಗೆ ಸುರಿಸುತ | ಗಡಬಡಿಸಿ ಬರೆ ||
ನಡೆಗೆ ಹಂಸೆಗಳ್ | ನುಡಿಗೆ ಶುಕಗಳ | ಗಡಣನಾಚಿದು | ದೊಡನೆ ಪಂಗ್ತಿಗೆ | ಬಡಿಸೆ ನಿಂದಳು |
ಸಡಗರದಲಿ ‖ ಮಡದಿ ‖ ೧ ‖

**ಭಾಮಿನಿ**

ಇಂತು ಜಗದಾದರ್ಶಸತಿಯಾ |
ಗಂತುಕಗೆ ಪ್ರಿಯಪತಿಗೆ ಮಿಗೆ ಜನ |
ತಿಂಥಿಣಿಗೆ ಬಡಿಸುತಿತೆ ನಗುತತ್ಯಂತ ಹರುಷದೊಳು |
ಕಂಡಿತಾಕೆಯ ರೂಪು ಹೃದಯಕೆ |
ಕಂತುಹತಿಯಲಿ ಚಂಡಸೇನನು |
ಸಂತಪಿಸಿ ಮಿಡುಕಿದನು ಖಳ ತನ್ನಂತರಂಗದೊಳು ‖

**ಕಂದ**

ಮಡದಿಯೊಮಿವಳೆಂ ಮದನನು | ಕಡೆದಿಹ ಶಿಲ್ಪವೊಮಾತನ ದೃಢನಿಡುಸರಳೊ ||
ಸುಡುವಳು ಹೃದಯವ ನಮಮಾ | ತಡೆದಪೆನೆಂತೆನುತುಣುತಂ ಚಡಪಡಿಸುತ್ತಂ ‖

**ವಾರ್ಧಿಕ**

ಒಮ್ಮೆಯಾಕೆಯ ಕಾಂಬ ನಿಮ್ಮ ಮಾನಸನು ಮ |
ತ್ತೊಮ್ಮೆರಾಯನ ಕಂಡು ಸುಮ್ಮಾನದಿಂ ನಗುವ |
ನೊಮ್ಮೆ ಸತಿಯಳ ನೋಡಿ ತನ್ಮಯದಿ ಕರಗಿ ಮಗುಳೊಮ್ಮೆ ನೃಪತಿಯನೀಕ್ಷಿಸಿ ||
ಹೆಮ್ಮೆಯಲಿ ಹರಟುವಂ ದುರ್ಮತಿಯು ತಿರುಗಿ ಮಗು |
ದೊಮ್ಮೆಯುವತಿಯವ ಕಾಣುತುಮ್ಮಳಿಸಿ ಹೊರಳಿ ಮೇ |
ಣೊಮ್ಮೆ ಮಿತ್ರನ ಜೋಡಿಗುಮ್ಮಹವ ಮೆರೆದೂಟವಂಮುಗಿಸುತಾ ದುರುಳನು ||

**ರಾಗ ಕಾಪಿ ತ್ರಿವುಡೆತಾಳ**

ಮಿತ್ರ ಸುದರ್ಶನ ಕೇಳು | ನಾನು | ಸತ್ತೆನಾ ಸತಿಯಳ ನೋಡಿ ಸತ್ಯದೊಳು || ಪ ||

ಮಿತ್ರೆಗ ಜೋಡಿಲ್ಲಿಳೆಯೊಳು || ಉರಿ | ಹೊತ್ತಿಸಿತುರದೊಳು ಕಾಮನ ಸರಳು ||
ಎತ್ತಣ ನೋಡ ಮಾಟಗಳು || ಲೋ | ಕೋತ್ತರ ಸೌಂದರ್ಯಕೂಟದಾಟಗಳು || ಮಿತ್ರ || ೧ ||

ಚೆಂದುಟಿ ಕಾಳಹಿವೇಣಿ | ಪೂರ್ಣ | ಚಂದಿರಮುಖಿ ಹರಿಕಟಿ ಶುಕವಾಣಿ ||
ಕಂದರ್ಪಧನುಭ್ರೂಯುಗಾನಿ | ಕುಚ | ದ್ವಂದ್ವ ಸ್ವರ್ಣದ ಕುಂಭ ಕಲಹಂಸ ಯಾನಿ || ಮಿತ್ರ || ೨ ||

ಸುರಸತಿಯರ ರೂಪು ಸುಳ್ಳು | ರತಿ | ಸರಸತಿ ರಮೆಯುಮೆಯರ ಸೊಂಪು ಟೊಳ್ಳು ||
ತರುಣಿಗೆ ಸರಿಯಿಲ್ಲವೆಲ್ಲು | ಎಂತೊ | ಬೆರೆಯದುಳಿಯೆ ನೀನು ಸಹಯಕೆ ನಿಲ್ಲು | ಮಿತ್ರ || ೩ ||

**ರಾಗ ಕೇದಾರಗೌಳ ಅಷ್ಟತಾಳ**

ಸಹಯವೆಂದರೆಯೇನೀ | ಇಹವನ್ನೆ ನಿನಗಾನು | ವಹಿಸಿಹೆ ಪೇಳ್ವುದೇನು ||
ಅಹಿವೇಣಿ ನಿನ್ನವ | ಳಹಳು ಸಂಶಯವಿಲ್ಲ | ಗ್ರಹಿಸಿಹೆ ಮೊದಲೆ ನಾನು || ೧ ||

ಭಳಿರೆಶಭಾಸು ಹೆಂ | ಗಳನರಿಯಲು ನೀನು ಬಲುಚತುರನು ಬಲ್ಲೆನು ||
ಹಲವರನೆನಗಣಿ | ಗೊಳಿಸಿಹೆಯೀಕೆಯು | ಸುಲಭಳೆ ಒಳವದೇನು || ೨ ||

ಬಡಿಸುವಾಗಾಚೀಚೆ | ನಡೆಯುವಾಗಲು ಕದ್ದು | ಮಡದಿಯೀಕ್ಷಿಪುದ ಕಂಡೆ ||
ಕಡುಹ ನಿನ್ನನು ಒಡ ಬಡುವಳಳುಹದಿರು | ನಡೆಪಯತ್ನಗಳ ಮುಂದೆ || ೩ ||

**ಕಂದ**

ಕಿಚ್ಚಿಗೆ ಘೃತವಾಯ್ತೀ ನುಡಿ | ಹುಚ್ಚೆದ್ದಪ್ಪಿದನಿವನನ್ನೆಚ್ಚರಿಸುತ್ತಂ ||
ಮುಚ್ಚಂಜೆಗೆ ಮನೆಗೈದುತ | ಮುಚ್ಚಿಡುತಿದ ನಿಶೆಗಳೆದಂ ಕೊಚ್ಚುವ ಮದದಿಂ || ೧ ||

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಮರುದಿವಸದುದಯದಿ ಸುನಂದೆಯ | ಕರೆದು ಭೂವರನೆಂದ ಮಿತ್ರನ ||
ಬೆರೆದು ತೆರಳುವೆ ನಾನು ವನಸಂ | ಚರಣೆಗೀತ || ೧ ||

ತರುಣಿಮಣಿ ಮಧ್ಯಾಹ್ನ ಕಲ್ಲಿಯೆ | ತರುವದುಣಿಸ ವಿಹಾರ ಭವನಕೆ ||
ಮೆರೆವಗಾಯಕಿ ವಾದ್ಯ ನರ್ತಕಿ | ಯರು ಸಮೇತ || ೨ ||

ಪ್ರಾಣವಲ್ಲಭ ಲಾಲಿಸೂಟವ | ಬಾಣಸಿಗ ತರಬಹುದು ಜೊತೆಯಲೆ ||
ತಾನು ಬಹೆನೆಂದಳು ಸುನಂದಾ | ರಾಣಿನಗುತ || ೩ ||

**ಭಾಮಿನಿ**

ಸರಿಬರದು ಸನ್ಮಿತ್ರಗೂಟವ |
ವಿರಚಿಸಿಯೆ ನೀ ತರಲು ಬೇಕೆಂ |
ದರಸ ನುಡಿದನು ರಾಣಿಯೊಪ್ಪಿದಳರಿತನಿದ ಖಳನು ||
ಭರಿತ ಹರುಷದೊಳೈದಿ ಸಖನಿಂ |
ಗೊರೆದಗುಪಿತದಿ ಸತಿಯ ತಹೆ ನೀ |
ಪುರಪಥದಿ ರಥದೊಳಗೆ ಸಜ್ಜಾಗಿರುದೆನುತತ್ತ ||

**ರಾಗ ಮಿಶ್ರತೋಡಿ ಏಕತಾಳ**

ಅರಸಿಗಿಂತೆಂದು ಹೊರಗೆ ಬರುತ | ಮಿತಪರಿವಾರ | ವರೆದು ಉತ್ಸಾಹದೊಳುಬ್ಬುತ ||
ಕರೆಸಿ ಮಿತ್ರನನ್ನು ನಗುತ | ಒರೆದ ನಿಂತು ಪೃಥ್ವಿನಾಥ || ೧ ||

ಮಿತ್ರ ಬಾಬಾರೊಚಂಡಸೇನ | ನಿನ್ನಯ ಸಖ | ನೆತ್ತಲೀರ್ಪನು ಬರಹೇಳವನ ||
ಅರ್ತಿಯಿಂದ ವನವ ಸ್ತುತಿ | ವೆತ್ತು ಮುದವ ನಾವ್ ಬರೋಣ || ೨ ||

ಕೇಳಿಚಂಡನು ಭೂಪನಡಿಗೆ | ವಂದಿಸಿ ಮಿತ್ರ | ಗಾಲಸ್ಯವಂತೆ ಇರಲೀಯೆಡೆಗೆ ||
ಏಳು ಪೋಪೆವೆನಲು ಭೂಮಿ | ಪಾಲ ಸತ್ಯವೆಂದು ಕಡೆಗೆ || ೩ ||

**ರಾಗ ಕಾಂಬೋಧಿ ಝಂಪೆತಾಳ**

ಹಿತವಮಿತಬಲದೊಡನೆ | ಪೃಥಿವಿಪತಿ ಹಯವೇರು | ತತಿಹರುಷದಿಂ ತಲುಪಿವನಕೆ ||
ಗತಿಸುತಲ್ಲಿಹ ವೃಕ್ಷ | ಲತೆ ಸಾಕುಮಿಗ ಪಕ್ಷಿ | ವಿತತಿಗಳ ತೋರಿ ಸಂತಸಕೆ || ೧ ||

ಕುಳಿತಿರಲು ಸರಸದಿಂ | ಖಳನೆಂದನರೆಗಳಿಗೆ | ಯೊಳು ಬಹೆನೆನುತ ಪೊರಟುಬೇಗ ||
ಲಲನೆಯೈತಹ ಮಾರ್ಗ | ದೊಳಗವಿತುಕುಳ್ಳಿರ್ದು | ಇಳೆಯರಸನರ್ಧಾಂಗಿಯಾಗ || ೨ ||

**ರಾಗ ಶಂಕರಾಭರಣ ತ್ರಿವುಡೆತಾಳ**

ಮಾಡಿಸಿದ ಷಡ್ರಸದ ಭೋಜ್ಯದ | ಕೊಡೆ ನಾನಾಭಕ್ಷ್ಯವ ||
ಜೋಡಿಸುತ ಪರಮಾನ್ನಗಳ | ಯಾಡುತಿಹುದ || ೧ ||

ಗಂಧಕಸ್ತೂರಿ ತಂಬುಲಂಗಳ | ಹೊಂದಿಸುತಲಿ | ಮೋದದಿ ||
ವೃಂದ ನೃತ್ಯಕಿಯರನು ಕೂಡಿ ಸು | ನಂದೆಯಂದು || ೨ ||

ಕಾಂತನಾಯೆಡೆ ಕಾಯ್ವ ಸಮಯವು | ಸಂತು ಸನಿಹ | ಎನ್ನುತ ||
ತಾಂತನುವ ಸಿಂಗರಿಸಿ ಪೊರಟಳು | ಸಂತಸದೊಳು || ೩ ||

**ವಾರ್ಧಿಕ**

ತರುಣಿಮಣಿಯೀತೆರದೊಳುರು ಭಕ್ಷ್ಯ ಭೋಜ್ಯಗಳ |
ಹೊರಿಸಿಕೊಂಡಾ ಪಥದಿ ಬರುತಿರಲ್ ಶಿಬಿಕೆಯಲಿ |
ಉರಗಗೆರಗುವ ವಿಹಗನಿರದಿ ಪಿಡಿದಾ ಸತಿಯ ತುರುಬ ಹಿಡಿದಿಳೆಗೆ ಕೆಡಹಿ ||
ತರುಬಿದರ ಶಿರವರಿದು ಕರಚರಣಗಳ ಬಿಗಿದು |
ದುರುಳಹೊತ್ತೋಡಿದಂ ಪುರಕನಿಲವೇಗದಿಂ |
ತೆರಳುತಿರಲಾ ತರಳೆ ಯೊರಲಿದಳು ಭೀಕರದೊಳು ||

**ರಾಗ ನೀಲಾಂಬರಿ ಏಕತಾಳ**

ಸತ್ತೆನಯ್ಯಯ್ಯೋ ನಾನು | ದುಷ್ಟನು ಕದ್ದು | ಹೊತ್ತೆನ್ನನೊಯ್ಯುವನು ||
ಚಿತ್ತದೊಲ್ಲಭನೆ ನೀನು | ಕೊಂದೆನ್ನ ಬಿಡಿಸು | ಮಿತ್ರದ್ರೋಹದ ನಾಯನು || ೧ ||

ಅರಿಯೆ ನೀನೀ ಮೋಸವ | ನಾ ಬರುವೆನೆಂ | ದಿರುವೆ ಹೊಂದುತ ತೋಷವ ||
ದುರುಳನಾತ್ಮದ ವಿಷವ | ತಿಳಿದರಲ್ಲೆ | ಹರಿಸುತಲಿರ್ದೆದೋಷವ || ೨ ||

ಧರೆಚರಾಚರಗಳಿರ | ಸುರಸಿದ್ಧದಿ | ಗ್ವರ ನವಗ್ರಹಗಳಿರ ||
ಹರಿಹರ ವಿಧಿಗಳಿರ | ಸುತೆಯ ಬಂಧ | ಹರಸಿ ತಾಯ್ತೆಂದೆಗಳಿರ || ೩ ||

**ಕಂದ**

ಧರ್ಮಿನಿಯೊರಲಿಕೆಯಿದನು ಸು | ರಮ್ಯಾಟವಿಪತಿ ಸಿಂಹಾಸ್ಯಂ ಆಲಿಸುತಂ ||
ಘೂಮಿಸು ತಡ್ಡೈಸುತಲಿ ಕು | ಕರ್ಮಿಯ ಕೊಲದಿರೆನೆನುತಲಿ ಶರ್ಮದೊಳೆಂದಂ || ೧ ||

**ರಾಗ ಭೈರವಿ ಅಷ್ಟತಾಳ**

ಯಾರ್ಮ್ಯಾಂ ನರಾಧಮನು | ಯಣ್ಣನು ಕದ್ದು | ಅರುವೆಯೆಲ್ಲಿ ನೀನು ||
ತೋರ್ಮ್ಯಾಕಯ್ಯನುಕಾಳ | ನೂರಿಗೆ ಪೋಗತಿ | ಚೋರ ನೀ ಬಿಡು ತಾಯನು || ೧ ||

ಯಾರೆಲೊ ಕ್ರೂರ ನೀನು | ಸುಮ್ಮನೆ ಬಿಟ್ಟು | ಸಾರತ್ತ ದಾರಿಯನು ||
ಪಾರುಪತ್ಯವ ನಿನಗ್ಯಾರು ಕೊಟ್ಟರು ಮುಂದೆ | ಸಾರೆಂದ ಚಂಡಾಖ್ಯನು || ೨ ||

ನೀತಿತೆಪ್ಪಿದ ಮೂಳನೆ | ಕೇಳುವುದೋಟು | ಜಾತಿಯ ಅಕ್ಕ ನಿನ್ನ ||
ಯಾತಕು ಗಣಿಸೆ ನಾ | ಲ್ಯೂತಿಯಗಂಜೆನು | ಕ್ಯಾತ ಸಿಮ್ಮಾಸ್ಯ ಕನಾ || ೩ ||

ಸತಿಯಾರು ನಿನಗೆ ಮೂಢ | ತಂಗಿಯೊ ತಾಯೊ | ಮತಿಹೀನ ತೊಲಗು ಗಾಢ ||
ಪೃಥಿವಿಯೊಳತಿ ಬಲ | ಯುತ ಚಂಡಸೇನನ | ಖತಿಯ ನೀನರಿಯೆ ವ್ಯಾಧ || ೪ ||

ಎಣ್ಣೆನ್ನ ವಡತಿ ಕಣಾ | ಯನ್ನಲಿಯಿದ್ದ | ಯೆಣ್ಣಲಿ ಬಿಡು ಮುಕ್ಕಣ್ಣ ||
ಯನ್ನವ್ವನನು ಕದ್ದ | ಕುನ್ನಿಯನ್ನಯ ನಾಯಿ | ಗುಣಿಪೆ ನಿನ್ನನೆಣ || ೫ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ನುಡಿಗೆ ರೌದ್ರದಿ ಚಂಡಸೇನನು |
ಕಡುದುರುಳ ತಡೆಯೆನುತಲಸ್ತ್ರವ |
ಬಿಡಲದರ ಪುಡಿಗೈದ ಶಬರನು ಗುಡುಗುಡಿಸುತ || ೧ ||

ತೂರಿದನು ಶರಂಲೆಯನದ ಪುಡಿ |
ದೋರಿಸುತ ಚಂಡಾಖ್ಯ ಠಣ್ಣನೆ |
ಏರಿ ಖಡುಗದೊಳವನ ಶಿರವನು | ಹಾರಿಸುತಲಿ || ೨ ||

ಕ್ರೂರ ಖಳ ಮುಂದರಿದ ನಿತ್ತಲು |
ಚೀರಿಡುತಲಿ ಸುನಂದೆ ಸಖಿಯರು |
ಸಾರಿ ಭೂವರ ಗರುಹಿಗರು ಕಣ್ಣೀರಿನಿಂದ || ೩ ||

**ರಾಗ ನೀಲಾಂಬರಿ ಅಷ್ಟತಾಳ**

ಬಿತ್ತರಿಸುವೆವೇನ | ಸತ್ತೆವು ನಾವೆಲ್ಲ | ರಾಯಕೇಳು ||
ನಿನ್ನ | ಮಿತ್ರನೆಂಬಾಖಳ | ಹೊತ್ತೊಯ್ದನೊಡತಿಯ | ರಾಯ || ೧ ||

ಬರುವ ಮಾರ್ಗದೊಳೆಮ್ಮ | ತರುಬಿ ಮೇಣೆಯ ಚಲ್ಲಿ | ರಾಯ ಕೇಳು ||
ವ್ಯಾಘ್ರ | ಎರಳೆಗೆರಗುವಂತೆ | ತುರುಬಹಿಡಿದು ಖೂಳ | ರಯ ಕೇಳು || ೨ ||

ತರಿದು ಬೋಯಿಗಳನು | ಕರಚರಣವಕಟ್ಟಿ | ರಾಯ ಕೇಳು ||
ಹೊತ್ತು | ತೆರಳಿದ ಬವಣೆಯ | ಭರಿಪಳೆಂತಾದೇವಿ | ರಾಯ ಕೇಳು || ೩ ||

**ಭಾಮಿನಿ**

ಕೇಳಿ ದೊಪ್ಪನೆ ಕೆಡೆದು ಕಡುಗಿದ |
ಕಾಲನೊ ಕಲಾಂತ ರುದ್ರನೊ |
ಪೇಳಲರಿದೆನಲೆದ್ದು ರೌದ್ರದಿ ಮೂಲ ಬಲಸಹಿತ ||
ಖೂಳನಾಯುವ ತೊಡೆವೆ ನರೆ ಮು ||
ಕ್ಕಾಲು ಯಾಮದೊಳೆನುತ ಜವದಿ ನೃ |
ಪಾಲ ಮಣಿರಥವಡಿ ಪೊರಟನು ಗಾಳಿ ವೇಗದಲಿ || ೧ ||

ಭರಿತ ಸೇನಾಜಾಲದೊಂದಿಗೆ |
ತರಣಿಯಸ್ತಕೆ ತಲುಪಿ ಶಿಬಿರವ |
ವಿರಚಿಸುತ ತಂಗಿದನು ಮುತ್ತಿಗೆ ಮರುವುದಯಕೆಂದು ||
ಮರುಗುತಿರ್ದನು ಚಾರನೋರ್ವನು |
ಪರಕಿಸುತ ಗುಪಿತದೊಳಗೆಲ್ಲ |
ಅರಿತು ಭರದಿಂದೋಡಿ ಬಂದನು ದುರುಳನಿದ್ದೆಡೆಗೆ || ೨ ||

**ರಾಗ ಕೊರವಿ ಏಕತಾಳ**

ಸಲಾಮು ವಡೆಯ | ಗುಲಾಮನಯ್ಯ | ತಲಾಸು ನುಡಿಯ ಕೇಳಯ್ಯ ||
ಅಮ್ಯಾಗೆ ಒಸಿ | ಇಲಾಮು ಪುಡಿಯ ನೀಡಯ್ಯ || ಸಲಾಮು || ಪಲ್ಲ ||

ಪತಿತಾಪುರದವುಸೇನನಂತೆ | ಸತಿಯ ನೀವು ಕದ್ದೀರಂತೆ | ಅತಿಸಿ ನಿಮ್ಮ ಮೈಯ್ಯೋದ್ಯೆತಂದೆ ||
ಅದಕಾಗಿಯವಳ | ಪತೀಯುಕೂಟ ಶೈನ್ಯಾ ಬಂದ್ಯೆತೆ | ಸಲಾಮು || ೧ ||

ಕಾಳನ ಪಾಳೇವಿದ್ದಂಗ್ಯೆತ | ನಾಳಿಗೆಯಿದ್ದಾಯೆಮ್ತಾಐತೆ | ಬಾಳೇವ್ ಕಸ್ಟಯೆಂದೇ ಕಾಣ್ತೆತೆ ||
ಆಯೆಣ್ಣೆಕೊಟ್ಟು | ಬಾಳಾದ್ವಾಶಿಯೆಂದೇ ತೋರ್ತ್ಯೆತೆ || ಸಲಾಮು || ೨ ||

**ರಾಗ ಕೇದಾರಗೌಳ ಅಷ್ಟತಾಳ**

ನುಡಿಗೆ ಚಂಡನು ನಡ | ನಡುಗಿ ದೂತನ ಹೊರ | ಗಡೆಗಟ್ಟಿಯೋಚಿಸುತ ||
ಕಡುಬಲಾನ್ವಿತ ಭೂಪ | ನೊಡನೆ ಯುದ್ಧದಿ ನಾಳೆ | ನಡೆವುದೇನೋಯೆನುತ || ೧ ||

ಲಲನೆಯ ಮೈಮಾಟ | ಚೆಲುವಿಗೆ ಸೋತು ನಾ | ಕಳವಿಲಾದರು ತಂದಿಹೆ ||
ಹೊಳಲ ಸೇರುವೆನೆಂತೆಂ | ಬೊಳಮನ ಭೀತಿಯ | ಕಳೆದು ಗೃಹಕೆ ಬಂದಿಹೆ || ೨ ||

ಕೈಗೆ ಬಂದೀತುತ್ತ | ಬಾಯ್ಗಿಕ್ಕದೆಂದಿಗು | ಹಾಗೆಯೆ ಬಿಡಲರಿಯೆ ||
ನಾಗವೇಣಿಯನೊಮ್ಮೆ | ಭೋಗಿಪೆ ರಣದೊಳೆಂ | ತಾಗಲೆನಗೆ ಸರಿಯೆ || ೩ ||

**ರಾಗ ಕಾಂಬೋಧಿ ಝಂಪೆತಾಳ**

ಎಂದೆನುತ ನಿಶ್ಚಯಿಸು | ತಂದು ತನುಸಿಂಗರಿಸಿ | ಗಂಧಕಸ್ತೂರಿ ವೀಳ್ಯವಗಿದು ||
ಬಂದಾಸುನಂದೆಯೆಡೆ | ನಿಂದು ನಸುನಗೆಯಿಂದ | ಲೆಂದನಾಕೆಗೆ ಕಯ್ಯ ಮುಗಿದು || ೧ ||

ಏಸುಮಂಗಲೆ ರೂಪ | ರಾಶಿಗಳುಕಿದೆ ನಾನು | ಮೋಸ ಮಾಡಿದೆ ನಿನಗೆ ಪತಿಗೆ ||
ಓ ಸುಗುಣೆ ಕ್ಷಮಿಸಿ ಮನ | ದಾಸೆಯನನುಗ್ರಹಿಸಿ | ನೀಸಲಹಬೇಕೆಂದ ಸತಿಗೆ || ೨ ||

**ರಾಗ ಬೇಹಾಗ್ ಏಕತಾಳ**

ಅಣ್ಣನೆಂದೇ ಬಗೆದು ಹಾಲು | ಹಣ್ಣನುಣಿಸಿತ್ತೆ ||
ನಿನ್ನ ಮನದೊಳನಿತೆ ನೆನೆವು | ತೆನ್ನಕಳುಹೀ ಹೊತ್ತೆ || ೧ ||

ಅಣ್ಣನಲ್ಲ ಇನಿಯನೆಂದು | ನಿನ್ನ ಮನವ ತಿದ್ದು ||
ಎನ್ನ ಬದುಕಿದೆಲ್ಲ ನಿನಗೆ | ನನ್ನಿಯಿಂದ ಹೋಯ್ತು || ೨ ||

ಕೆನ್ನೆಗೊಂದು ಭವಕೆ ಗಂಡ | ನೆನ್ನುವಾತನೊಬ್ಬ ||
ಅನ್ಯಯರಪ್ಪರಣ್ಣ ತಮ್ಮ | ಚೆಣ್ಣರ್‌ತ್ಯಜಿಸೀಮಬ್ಬ || ೩ ||

**ರಾಗ ಸುರಟಿ ಏಕತಾಳ**

ಏನೆಂತಿರಲಿ ಬಿಡು | ಒಮ್ಮೆಗೆ | ನೀನೆನ್ನನು ಕೂಡು ||
ನಾನು ಕಡೆಗೆ ನಿನ್ನಾಣತಿಯಂತಿಹೆ | ಪ್ರಾಣಗಳೆವಸ್ಮರ | ಜಾಣೆಯೆ ದಯವಿಡು || ೧ ||

ಖೂಳನಿನಗೆ ಹುಚ್ಚು | ನಾನೇನ್ | ಸೂಳೆಯೆ ಬಾಯ್ಮುಚ್ಚು ||
ಕೇಳಿದೊಡನೆ ಬಂ | ದಾಳಿದನುರವನು | ಸೀಳುತಲಿಡುವ ನಿ | ವಾಳಿಗೆ ಕಿಚ್ಚು || ೨ ||

**ಭಾಮಿನಿ**

ಖೂಳ ಚಿಂತಿಸಿ ಮನದಿ ಪತಿಯಿರೆ |
ಬಾಲೆಯೊಲಿಯಳು ಕಾದಲಸದಳ |
ಮೇಲೆನಿಪ ಕೈತವದಿ ಹೊಂದುವೆ ಲೋಲೆಯಳನೆನುತ ||
ಕಾಲುದೆಗೆದನು ಸದನಕಿತ್ತಲು |
ಶೀಲೆಹಮ್ಮೈಸುತ್ತಲಿಳೆಯೊಳು |
ಮೇಲೆಮೇಲಾವರಿಪದುಃಖ ಜ್ವಾಲೆಯಲಿ ಬೆಂದು ||

**ರಾಗ ಸೋಹನಿ ರೂಪಕತಾಳ**

ವಹಿಸಿಹುದೆಂತೀ ಬವಣೆಯ | ಸಹಿಪೆನೆ ಖಳನಂಗವಣೆಯ ||
ವಹಿಲದಿ ಬಂದೆನ್ನಿನಿಯ | ದಹಿಸನೆ ಯಾತನೆಯ || ೧ ||

ಹಿಂದಿನ ಜನುಮದೊಳಾರನು | ಸಂದಗಳಚಿ ಸಾಧ್ವಿಯರನು ||
ತಂದೀ ಪರಿ ಸೆರೆಮನೆಯನು | ಹೊಂದಿಸಿದೆನೊ ನಾನು || ೧ ||

ಪಾತಕಿ ಜನಿಸಿದೆನೇತಕೆ | ಘಾತಕಿಯಾದೆನು ದ್ವಿಕುಲಕೆ ||
ನಾಥನ ಕಾಂಬೆನೆ ಮುಂದಕೆ | ಪ್ರೀತಿಯ ಮೆರೆಯಲಿಕೆ || ೨ ||

**ಭಾಮಿನಿ**

ಅಸುರಮಾಯದಿಗೈದು ಶೋಣಿತ |
ಒಸರುವ ಸುಸೇನಕನ ರುಂಡವ |
ಬಿಸುಡುತೀಕೆಯ ಎದುರು ಇನ್ನೋಲೈಸು ನೀನೆಂದ ||
ಮಿಸುಪರದನದ ಬಸಿವ ರುಧಿರದ |
ಮಸುಳಿದಾಸ್ಯವ ಕಂಡು ಹಾಯೆಂ |
ದಸುವ ತೊರೆದುರುಳಿದಳು ಮಾಸತಿ ವಸುಧೆಯೊಡಲೊಳಗೆ ||

**ರಾಗ ಶೋಕವರಾಳಿ ಅಷ್ಟತಾಳ**

ನೋಡಿ ಕೈಹೊಯ್ದು ನಗಾಡಿದ | ಮಿಸು | ಕಾಡದಿರಲು ಬಳಿಗೋಡಿದ ||
ಗಾಢದಿ ನೆಗೆದೆದೆ ತೀಡಿದ | ತುಟಿ | ಜೋಡಿಸುತುಸುರ ತಾ ನೀಡಿದ || ೧ ||

ಆಡದುಸುರ ಕಂಡು ತೀಡಿದ | ಬಿದ್ದು | ರೂಢಿಯೊಳ್ ತನುವ ನೀಡಾಡಿದ ||
ಕೇಡಾಯಿತೆಂದು ಗೋಳಾಡಿದ | ಮಾ | ತಾಡು ಪ್ರೀತಿಯೊಳೆಂದು ಬೇಡಿದ || ೨ ||

ನಿನಗಾಗಿ ಏನೆಲ್ಲ ಮಾಡಿದೆ || ದ್ರೋಹ | ವನು ಗೈದು ಸಖ್ಯ ಹೋಗಾಡಿದೆ ||
ತನುವಿನಾಸೆಯನು ಈಡಾಡಿದೆ | ಸತಿ | ಯೆನಗಾದೆಯೆಂದರ್ತಿಗೂಡಿದೆ || ೩ ||

**ರಾಗ ಸೋಹನಿ ಆದಿತಾಳ**

ಸುಂದರಿ ನೀನಸು ತೊರೆದೆಯ | ನಿನ್ನನು ಕೂಡಿ | ಮುಂದೆ ಬಾಳಿರುವಾಸೆ ಹುರಿದೆಯ ||
ತಂದ ಸ್ನೇಹದ ಬಸುರಿರಿದೆಯ | ಕೊಂದೆನ್ನಸು | ನಂದೆ ನಿನ್ನಯ ಛಲಮೆರೆದೆಯ || ೧ ||

ನೀದಯದೋರ್ವೆಯೆನುತ ತಂದೆ | ಬಿಟ್ಟೆನ್ನ ನೀ | ಹೋದರು ನಾ ಬೆನ್ನ ಬಿಡೆ ಬಂದೆ ||
ಕಾದಿ ನಾಳೆಗೆ ಸಾಯುವುದರಿಂದೆ | ನಿನ್ನೊಡಗೂಡಿ ಬೂದಿಯಾಗಿಯೆ ಬೆರೆವೆನುಯಿಂದೆ || ೨ ||

**ಭಾಮಿನಿ**

ಕರೆದು ಸಚಿವಂಗೆಂದನೆನಗೀ |
ಧರೆಯ ಋಣ ತೀರಿದುದು ಎನ್ನಯ |
ಕರುಳ ಕುಡಿಯನು ಸಲಹಿಕೊಳ್ಳೈ ತರಳ ನಿನಗೆಂದು ||

ತರುಣಿಯೆನ್ನಿಂದಳಿದಳಾನೊಡ |
ನುಡಿಯ ಪೊಕ್ಕೈದುವೆನು ಜೊತೆಯಲಿ |
ಬೆರೆಯದಿರೆ ಮರು ಜನುಮಕಾದರು ತರಿಸು ಚಿತೆಯೆಂದ ||

**ರಾಗ ಪಂತುವರಾಳಿ ಅಷ್ಟತಾಳ**

ಏನಿದು ನಿನಗವಿವೇಕವು | ಕಂಡು | ತಾನಗದುಳಿವುದೆ ಲೋಕವು ||
ಮಾನಿನಿರತುನವನೇಕವು | ಇರ | ಲೇನಿದನರ್ಥದ ಶೋಕವು || ೧ ||

ತೆತ್ತಳಾಣ್ಮನ ಸಾವಿಗಸುವನು | ಸತಿ | ಸತ್ತುದರಿಯೆ ಪತಿಯಳಿವನು ||
ಮತ್ತಿರೆ ನಿಸ್ಸತ್ವಗೊಳುವನು | ಗೆಲ | ವಿತ್ತಲಹುದು ತೋರು ಶವವನು || ೨ ||

ಕೂಡಲೆ ಶವವೆತ್ತಿ ಓಡಿದ | ವೈರಿ | ಬೀಡಿಯ ಬಿಸಾಡಿದ ||
ಕೂಡೆ ಸೇನೆಯ ಸಜ್ಜು ಮಾಡಿದ | ರವಿ | ನೋಡಲೆಂತಿದನೆಂದು ಮೂಡಿದ || ೩ ||

**ಭಾಮಿನಿ**

ಚರರು ಗುರುತಿಸಿ ಶವವ ರಾಯನ |
ಹೊರೆಗೆ ತಂದಿಳುಹಿದರು ಮರುಗುತ |
ಬರಸಿಡಿಲು ಹೊಡೆದಂತೆ ನೃಪ ತತ್ತರಿಸುತುರುಳಿದನು |
ಭರಿತ ಚಿಂತಾತುರದೊಳಿಖಿಲರು |
ಗರಹೊಡೆದ ಮೌನದಲಿ ಕುಳಿತರೆ |
ಧರಣಿಪತಿ ಚೇತರಿಸಿ ಹೊರಳುತಲೆರೆಯಳಂಗದಲಿ ||

**ರಾಗ ನೀಲಾಂಬರಿ ರೂಪಕತಾಳ**

ಯಾತಕೆ ಮೌನವನಾಂತಿಹೆ | ಪ್ರೀತೆ ಮುನಿದು ಕಣ್ಮುಚ್ಚಿಹೆ ||
ಪ್ರೀತಿಗೆ ನಾಕಾತರಿಸಿಹೆ | ಮಾತಾಡೊಲಿದು ಪ್ರಿಯೆ || ೧ ||

ದುರುಳನ ಕಪಟವನರಿಯದೆ | ಉರುತರ ಸ್ನೇಹದಿ ಮೆರೆಸಿದೆ ||
ಉರಗಗೆ ಕೆನೆಹಾಲುಣಿಸಿದ | ಗರಳದಿ ನೀನುರಿದೆ || ೨ ||

ಇನ್ನೇತಕೆ ತನು ಸಿರಿಸುಖ | ಇನ್ನೇಕಾಳ್ತನ ಸಾಯಕ ||
ಇನ್ನೇತಕೆ ಧುರಕಾಯಕ | ನಿನ್ನಗಲಿದ ಬಳಿಕ || ೩ ||

**ಭಾಮಿನಿ**

ಹಲವರಿದ್ದರದೇನು ಲೋಕದಿ |
ಲಲನೆ ನಿನಗೆಣೆಯಿಲ್ಲವೆನಗಾ |

ಗಳಿದೆ ನೀನದಕಾಗಿ ನಾನಸು ಸಲಿಪೆನೆನುತಿರಲು ||
ಉಲಿದುದಂಬರ ವಾಣಿ ಕಿತವದಿ |
ಖಳನು ನಿನ್ನಯ ಶಿರವ ತೋರಿದ |
ಚಲುವೆಯದನೀಕ್ಷಿಸಿದೊಡನೆ ತಾನುಳಿದಳಸುವೆನುತ ||

**ರಾಗ ಭೈರವಿ ಅಷ್ಟತಾಳ**

ಅಶರೀರ ನುಡಿಯ ಕೇಳಿ ಕೇಳಿ | ಕಾರ್ಬೊಗೆ ಕಣ್ಣೊ | ಳೊಸರೆ ಕೆಂಗಿಡಿಯುಗುಳಿ ||
ವಸುಧೀಶ ಗರ್ಜಿಸು | ತಸುರನ ಮರ್ದಿಸಿ | ಬಿಸಿರಕುತದ ಓಕುಳಿ ‖ ೧ ‖

ಆಡಿತಣಿಪೆನಿವಳ | ಮರುಳ್ಗಳ | ಕೂಡಿಪೆ ತನಿಗರುಳ | ಕೂಡೆ ದುರ್ಗಮುತ್ತಿ |
ಗಾಢ ಲಗ್ಗೆಯನಿಕ್ಕಿ | ಓಡದಂದದಿ ದುರುಳ ‖ ೨ ‖

ಎಂದಾಜ್ಞಾಪಿಸಿ ಪಡೆಗೆ | ಪ್ರೇತವಕಾಪಾ | ಡೆಂದು ನೇಮಿಸಿ ವೈದ್ಯಗೆ ||
ಮುಂದುವರಿಯೆ ಪಾದ | ದ್ವಂದ್ವದಿ ಪಣೆಯಿಟ್ಟು | ಕಂದನೆಂದನು ಪಿತಗೆ ‖ ೩ ‖

**ರಾಗ ಭೈರವಿ ಏಕತಾಳ**

ತಾತನೆ ಕೊಡು ವೀಳಯವ | ನಾ | ಘಾತಿಪೆನರಿ ಪಾಳಯವ ||
ಮಾತೆಯ ಕೊಂದನಗಳವ | ಕಡಿ | ದಾಂತರಿವೆನು ಖಲಕುಲವ ‖ ೧ ‖

ಜಾತನು ನಾನಿದ್ದೇನು | ಫಲ | ತಾತನ ಬಿಡೆ ರಣಕಿನ್ನು ||
ಭೀತಿಯ ತ್ಯಜಿಸೆನೆ ನೃಪನು | ಮುದ | ವಾಂತಪ್ಪಣೆ ನೀಡಿದನು ‖ ೨ ‖

**ವಾರ್ಧಿಕ**

ಹಡೆವನ ಬೀಳ್ಕೊಂಡು ಕಡುತರಾವೇಶದಿಂ |
ಗುಡುಗುಡಿಸಿ ಬಲಿದೊಡನೆ ನಡೆದು ಕೋಟೆಯ ಕೆಡಹಿ |
ಕಡಿದು ಕಾಲ್ಬಲವ ಮೇಣ್ ಮಡುಹಿ ಗಜ ಹಯದಳವ ಕಡುಗಿ ಕಲಿರುದ್ರಸೇನಂ ||
ಕಡೆದಿನದ ಮೃಡನಂತೆ ಕಿಡಿಗರೆವುತರಿನೃಪನ |
ಹುಡುಕುತಿರಲಡಹಾಯ್ದುನಿಡುಸರಳ ಮಳೆಗರೆದು |
ಹುಡುಗ ತಾನುರವಣಿಸಿ ದಡಿಗ ಚಂಡಾತ್ಮಭವ | ತಡೆದೆಂದ ಭದ್ರಸೇನ ||

**ರಾಗ ಮಾರವಿ ಏಕತಾಳ**

ಮೂಢನದಾರು ದ | ರೋಡೆಗೆ ಬಂದವ | ರೂಢಿಪ ನೀತಿಯಿದೇ ||
ಆಡದೆ ಸಂಧಿಯ ಗೋಡೆಯ ಕೆಡವಿಸ | ಗಾಢದಿ ಮುಂದರಿದೆ ||

**ರಾಗ ಭೈರವಿ ಅಷ್ಟತಾಳ**

ಉಂಡೆಡೆ ಮರೆತ ಘನ | ಕೃತಘ್ನಗೆ | ದಂಡನೆಯಿದುವೆ ಕಣಾ ||
ಭಂಡ ನೀನಾರು ಭೂ | ಮಂಡಲೇಶಾತ್ಮಜ | ಚಂಡನಾ ರುದ್ರಸೇನ ||

**ರಾಗ ಮಾರವಿ ಏಕತಾಳ**

ಚೋರನಿರಲಿ ಮಿಗೆ | ಜಾರನೆ ಇರಲಿ ವಿ | ಚಾರಿಸಿ ಶಿಕ್ಷಿಪರು ||
ಪೋರನೆ ಚಂಡಕು | ಮಾರಕ ಭದ್ರನು | ಸಾರಿದೆ ಸಾಯದಿರು ||

**ರಾಗ ಭೈರವಿ ಅಷ್ಟತಾಳ**

ಚೋರ ನಿನ್ನಯ ಪಿತನು | ಎನ್ನವ್ವೆಯ | ಹಾರಿಸಿಕೊಂಡಿಹನು |
ಭಾರಿ ದುರಾತ್ಮನ ತೋರಿಸು ರುಧಿರವ | ಹೀರಿ ನಾನಲಿಯುವೆನು ||

**ರಾಗ ಮಾರವಿ ಏಕತಾಳ**

ಕಂದನ ನೀ ಗೆಲಿ | ದಿಂದಿಗೆ ಎನ್ನಯ | ತಂದೆಯ ಮಾತೆಲವೊ |
ಕುಂದುಗೊರಳ ಬರ | ಲಿಂದಿಗೆ ಗಣಿಸೆನು | ಹಂದೆಗೆ ಗೆಲಲಳವೊ ||

**ರಾಗ ಭೈರವಿ ಅಷ್ಟತಾಳ**

ತ್ರಿಣಯನ ಗಣಿಸದವ | ಬಡುಯ್ನಗು | ವನು ಬರಿಪುದು ವಹವ ||
ರಣಗೈವುದಿರಲೊಮ್ಮೆ | ಕನಸಿಲಿ ಕಂಡರೆ | ತನುವ ನೀ ನೀಗುವವ ||

**ಭಾಮಿನಿ**

ಇನಿತು ಬಹುಪರಿಯಣಕವಾಡುತ |
ಕಣೆಯ ಹರಹಿನೊಳುಭಯವೀರರು |
ಸೆಣಸಿ ಕಡೆಯಲಿ ಭದ್ರ ಮಡಿದನು ಘನನಿಯುದ್ಧದಲಿ ||
ಕಣುಗಳಲಿ ಕಿಡಿಯುಗುಳಿ ಚಂಡಕ |
ರಣಕೆ ಬಂದಿದಿರಾಗೆ ಕಾಣುತ |
ಫಣಿಯನೆರಗುವ ತಾರ್ಕ್ಷ್ಯನೆನೆ ವಸು ಜನಪನಡಹಾಯ್ದು ||

**ರಾಗ ದೇಶಿ ಅಷ್ಟತಾಳ**

ಬಳಸಿ ಮೈತ್ರಿಯ | ಕಳವಿನೊಳೆನ್ನೆಯ ||
ಲಲನೆಯನು ಕದ್ದಳಿಸಿದೆಯ ಥೂ | ಹೊಲೆಯ ಮಿತ್ರ ದ್ರೋಹಿಂಯ || ೧ ||

ಕಳವು ಹಾದರಕಳುಕುವ ಭೀರುತ್ವ ||
ಸಲವುದದು ನಿ | ರ್ಬಲರಿಗಲ್ಲದೆ | ಕಲಿಗಳಿಂಗಲ್ಲೆಂದನು || ೨ ||

ಅರಿತೆನಾದರೆ | ಮೊದಲೀ ಕುತಂತ್ರವ ||
ಹಿರಿದು ಚರ್ಮವ | ನುರುಹುತಿರ್ದನು | ದುರುಳ ಜೀವದಿ ನಿನ್ನನು || ೩ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕಂಡುದಿಲ್ಲವು ಮೊದಲು ನಿನ್ನಯ |
ಹೆಂಡತಿಯ ಕಂಡೊಡನೆ ತಂದೆನು |
ಗಂಡುಗಲಿ ತಾನಾದೆನೆಂದನು || ಭಂಡ ನಗುತ || ೧ ||

ಬೊಗುಳದಿರು ಕಲಿಯುಗದ ಕರ್ಮವ |
ಹೊಗಲರಿಯದದು ವರ್ತಮಾನದಿ |
ಉಗಿದಿ ನಾಯ್ ಪರರೆಡೆಯ ಜಿಹ್ವೆಯ | ಸಿಗಿವೆನೆಂದು || ೨ ||

ಹೊಡೆದನುರುಶರದಿಂದಲಾಖಳ |
ಪೊಡವಿಗುರುಳುತಲೆದ್ದು ರೌದ್ರದಿ |
ಕಿಡಿಗೆದರುತೆಚ್ಚನು ಮಹಾಸ್ತ್ರವ | ನುಡಿಯಲೇನು || ೩ ||

**ಭಾಮಿನಿ**

ಶರವ ಮಧ್ಯದಿ ಕಡಿದ ನರಸನು |
ಮುರಿದ ತುದಿ ನಾಂಟಿದುದು ಮರ್ಮಕೆ |
ಧರಣಿಗೊರಗಿದ ನೃಪತಿ ಸುರತರು ಹರಿದು ಬೀಳ್ವಂತೆ ||
ಪರಿಕಿಸುತ್ತದ ಚಂಡಸೇನನು |
ಭರಿತ ಹರುಷದೊಳುಬ್ಬಿ ಕುಣಿಯುತ |
ಉರುತರೋನ್ಮಾದದಲಿರಾಯನ ಜರೆಯುತಿಂತೆಂದ ||

**ರಾಗ ನವರೋಜು ಏಕತಾಳ**

ಭಳಿರೇ ಭೂಪ ಸಮರ್ಥ | ಕಡು | ಗಲಿ ನೀನೆಂಬುದು ಸಾರ್ಥ ||
ಕಲಹದಿ ನಿನ್ನನು | ಗೆಲುವವರಿಲ್ಲೆಂ | ಬೊಳಮನದಂದದಿ | ಫಲಿಸಿತು ಸ್ವಾರ್ಥ || ಭಳಿ || ೧ ||

ಮದದಿಗೋಸುಗ ಬಂದು | ಛಲ | ವಿಡಿದು ಯುದ್ಧಕ್ಕೆ ನಿಂದು ||
ಮಡುಹಿದೆಯನ್ನನು | ಬಿಡಿಸಿದೆ ಸತಿಯನು | ಪೊಡುವೀಶಾಗ್ರಣಿ | ನುಡಿಯಹುದೆಂದು || ಭಳಿ || ೨ ||

ಜೋಡಿಲ್ಲ ದೇಶದೊಳು | ಹ | ದ್ದಾಡುವಲ್ಲೈ ನಿಮಿಷದೊಳು ||
ಕೂಡಲೆ ಸತಿಯೊಡಗೂಡಿಪೆ ನೋಡೆಂ | ದಾಡುತ ಖಡುಗವ | ನಾಡಿಸಿ ಕರದೊಳು || ೩ ||

**ಭಾಮಿನಿ**

ಬಗೆವೆನುದರವನೆನುತಲಸಿಯನು |
ನಗೆಹಲಾನಿಮಿಷದಲಿ ಕೋಲ್ಮಿಂ |
ಜೊಗೆದ ತೆರನಡಹಾಯ್ದು ರುದ್ರಕನುಗಿದು ಖುಡುಗವನು ||
ಜಗತಿಗಿಳಿಸುತ ಖಳನ ಕರಗಳ |
ಬಿಗಿದು ಕಾಲ್ಗಳ ಭಟರಿಗೊಪ್ಪಿಸು |
ತೂಗುಮಿಗುವ ಶೋಕದಲಿ ತಂದೆಯ ಬಗೆಯನಾರೈದ ||

**ರಾಗ ಕಾಂಬೋಧಿ ಝಂಪೆತಾಳ**

ಸೃಷ್ಟಿಪತಿ ಸಿಡಿದೆದ್ದು | ದುಷ್ಟನ್ಯಾವೆಡೆಯೆಂದು | ಭ್ರಷ್ಟರವೆಲ್ಲವನು ನೋಡಿ ||
ಕುಟ್ಟಿ ಮುಸುಡಿಂಗೊದೆದು | ಹೃಷ್ಟಮಾನಸನಾಗಿ | ತುಷ್ಟಿಯಿಂ ಮಗನ ಮುದ್ದಾಡಿ ‖ ೧ ‖

ಪಡೆಯೊಡನೆ ಚಕ್ರಪತಿ | ದಡಿಗನಾಲಯಕೈದಿ | ತಡೆದವರ ಬಡಿದು ಸೆರೆಗಿಡಿಸಿ ||
ಒಡನೆ ಸಿಂಹಾಸನವ | ನಡರಿ ದ್ರೋಹಿಯ ತರಿಸಿ | ನುಡಿದ ಕಟುಕರನೆಡೆಗೆ ಕರೆಸಿ ‖ ೨ ‖

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಬತ್ತಲೆಯ ಗೈದಿವನ ಶಿಶ್ನವ |
ಕತ್ತರಿಸಿ ನಾಸಿಕವ ಖಂಡಿಸಿ |
ಕತ್ತೆಯಲಿ ಮೆರಣಿಸಿ ಶೂಲಕೆ ಎತ್ತಿ ಬಿಸುಡಿ ‖ ೧ ‖

ಎನಲು ಕಿಡಿಕಿಡಿಯಾಗಿ ಮುಂದಿನ |
ಜನುಮಕಾದರು ನಿನ್ನ ಸತಿಯನು |
ಅನುಭವಿಸಿದರೆ ಶಪಥವೆಂದನು | ಕನಲಿ ಚಂಡ ‖ ೨ ‖

ಬಡಿದು ಮುಸುಡಿಗೆ ಕೆಡುಕರೊಯ್ಯುತ |
ನಡೆಸಿದರು ರಾಜಾಜ್ಞೆಯೆಲ್ಲವ |
ಮಡಿದನೊಂದನೆ ಭವವು ಕಳೆಯಿತು | ದಡಿಗನಿಂಗೆ ‖ ೩ ‖

**ಭಾಮಿನಿ**

ಆಡಳಿತಕೊಳ್ಳಿದರ ನೇಮಿಸಿ |
ರೂಢಿಪತಿ ಹೆಣದೊಡನೆ ನಗರಕೆ |
ಗಾಢದಿಂದೈತಂದು ವಿಧಿಯಲಿ ಮಾಡಿಸುತೆ ಚಿತೆಯ ||
ಮಾಡಿದನು ನಿಶ್ಚಯವ ಸತಿಯೇ |
ದಾಡಿದಳು ಎನಗಾಗಿ ತನುವನು |
ಕೂಡಿ ತೆರಳುವೆನೆನುತ ಮನದೊಳಗಾಡಿ ಸಚಿವಂಗೆ ||

**ರಾಗ ಸೋಹನಿ ಝಂಪೆತಾಳ**

ತಂದೆ ತಾಯಿಯು ನೀನೆ | ಬಂಧು ಬಳಗವು ನೀನೆ | ಮುಂದೆ ಸನ್ಮಂತ್ರಿ ಸಖ ನೀನೆ ||
ಕಂದನಾಳುವ ತಾನೆ | ಒಂದಾದರರಿತವನೆ | ಸಂದವಂಶಾಚಾರಗಳನೆ || ೧ ||

ಒರೆದು ಸಲಹಿಕೊ ಮುಂದೆ | ಪೊರೆದೆ ಪ್ರಜೆಗಳ ಹಿಂದೆ | ತರಳೆರೆನಗೆಂದೇ ನಾ ಕಂಡೆ ||
ಅರಸುತನವನು ಅಂದೇ | ತೊರೆದು ಕಳಿದಿಹೆನಿಂದೆ | ತೆರಳುತಿಹನ್ಯೆ ಮುಂದೆ ಮುಂದೆ || ೨ ||

ತರುಣಿ ಹೋದಳು ಎನ್ನ | ಹರಣವೈದಿತು ಮುನ್ನ | ಇರಲಾರೆ ಹೆಣವಾಗಿ ನಿನ್ನ ||
ಕರದೊಳಿತ್ತಿಹೆ ಮಗನ | ಕರುಣದಿಂ ನೀನವನ | ಪೊರೆಯೋ ಮಂತ್ರಿ ಸುಧೀರನ್ನ || ೩ ||

**ಭಾಮಿನಿ**

ಎಂದಡಿದರೊಳವರಿಯದಾತನು |
ನಿಂತ ಮರುಗುತ ಬಂದು ನೃಪಜನ |
ಸಂದಣಿಯ ಮಧ್ಯದಲಿ ಕಂಡ ಮಹಾಂತದಳ್ಳುರಿಯ ||
ಹೊಂದಿ ಧಗಿಸುವ ಚಿತೆಯ ಹೊಕ್ಕ ಸು |
ನಂದೆಯೊಡಗೂಡಿದನು ಜನ ಹೋ |
ಯೆಂದು ಮೊರೆಯಿತು ಧರಣಿಗಿದು ಪೊಸತೆಂದನಾಮುನಿಪ ||

**ಇತಿ ಪ್ರಥಮ ಪರ್ಯಾಯಃ**

## ಅಥ ದ್ವಿತೀಯ ಪರ್ಯಾಯಃ

**ವಾರ್ಧಕ**

ಭೂಮಿಪತಿ ಕೇಳ್ಕಾಲನೇಮಿಯಾದಿಗೆ ಚಂಡ |
ತಾ ಮುಡಿದು ಮುಂಭವದಿ ದ್ರುಮಿಲ ದಾನವನಾದ |
ಈ ಮಹಾದಂಪತಿಗಳುದಿಸಿ ಮರುಜನುಮದಲಿ ಗೋಮಿನಿಪನಾಹುಕಂತೆ ||
ತಾ ಮೊದಲ ಮಗನುಗ್ರಸೇನಕಂ ಶೃಂಗಾರ |
ರೋಮಸುತೆ ನಂದಿನಿಯರಾಗಿ ಸಮ್ಮಿಳಿಸಿ ಮಧು |
ರಾಮಹಿಯನಾಳುತಿಹ ಪ್ರೇಮದೊಲ್ಲಭನಡಿಗೆ ಶ್ರೀ ಮಡಿಯನಿರಿಸುತಬಲೆ ||

**ರಾಗ ಸುರಟಿ ಏಕತಾಳ**

ಲಾಲಿಸೆನ್ನ ರಾಜ | ಬಿನ್ನಹ | ಪಾಲಿಸು ರವಿತೇಜ || ಲೀಲೆಯೊಳ್ವನಸಿರಿ |
ಯಾಲೋಕಿಸಿ ಮುದ | ತಾಳುತ ಬಹೆವೆದ್ದೇಳೆದುರಾಜ || ೧||

ಇಂದೇ ಹೋಗುತ್ತ | ಸಖಿಯರ | ವೃಂದವ ಕೂಡುತ್ತ ||
ಸುಂದರಕೊಳದೊಳ | ಗೊಂದಾಗೀಜುತ | ನಂದದಿ ಮೆರೆಯುವ | ಬಂದ ವಸಂತ || ೧ ||

ಆಂತಿದೆ ಬೇಸರವು | ಪೊರಡ | ಭೃತ್ಯಂತರವೇಂತರವು | ಕಾಂತನೆ ತತ್ವಿಯ |
ಕಾಂತೆಯ ಸಂತಸ | ಕೆಂತೆನುತರೆದಿನ | ವಾಂತಿರು ತೆರವು || ೩ ||

**ರಾಗ ಸಾರಂಗ ಅಷ್ಟತಾಳ**

ಆಗದಾಗದು ಕೋಮಲೆ | ಈ ದಿನ ಬರ | ಲಾಗದೆನಗೆ ವಿಮಲೆ ||
ಸಾಗಿಪ ಕಾರ್ಯಗಳೀಗ ಬಹಳವಿದೆ | ಪೋಗುವ ಕೂಡಿ ನಾಳೆ || ಸುಶೀಲೆ || ೧ ||

ಕೂಡದೀಗಳೆ ಪೋಗುವ | ನಾನೆಲ್ಲವ | ಮಾಡಿಹೆ ಸನ್ನಹವ ||
ಆಡಲೇಕಡ್ಡಿಯ | ಜೋಡಿಗಾರ್ತಿಯರೆಲ್ಲ | ಛೇಡಿಪರೆನ್ನಿರವ | ಓ ದೇವ || ೨ ||

ತರತಹವನಿತಿರಲು | ನೀ ಹೋಗಿ ಬಾ | ವಹಿಲದಿ ನಾ ಬರಲು ||
ಇಹುದು ಕಾಲವು ಮತ್ತೆ | ಬಹೆ ಕೂಡಿ ಪೋಗುವ | ಗ್ರಹಿಸಬೇಡವೆ ಬದಲು | ಮನದೊಳು || ೩ ||

**ರಾಗ ಮಧುಮಾಧವಿ ತ್ರಿವುಡೆತಾಳ**

ಪ್ರಿಯ ಮನೋಹರನಗಲಿ ಪೋಗಲು | ಭಯವು ಜತೆಯಲೆ | ಬಯಕೆಯೆಳತವು ||
ಪ್ರಿಯೆಯ ಬಯಕೆಯ ಸಲಿಸು ಬಾಬಾ | ದಯದಿ ನೀನು || ಬೇಡ್ವೆವು || ೧ ||

ಭೀತಿಗೆಡೆಯೇನಿದೆ ಪರಸ್ಪರ | ಪ್ರೀತಿಯೇ ಕಾರಣವು ಜತನದಿ ||
ಪ್ರೀತೆ ನೀತಿರುಗಾಡಿ ಬರುವುದು | ಕಾತರಿಸದೆ || ತ್ವರತದೆ || ೨ ||

ಎನಲು ಗೆಲುವಾಂತಬಲೆ ಇನಿಯಗೆ | ಮಣಿದು ಪೊರಟಳು ವನವಿಹಾರಕೆ ||
ವನಿತೆಯರ ಸಮ್ಮೇಳದೊಂದಿಗೆ | ವನಜನಯನೆ || ಬೇಗನೆ || ೩ ||

**ಭಾಮಿನಿ**

ಘನತರಾನಂದದಲಿ ಬಂದುಪ |
ವನದ ಚೈತ್ರಾಗಮದ ಸೊಬಗನು |
ಕಣುದಣಿಯಲೀಕ್ಷಿಸುತ ನಂದಿನಿ ಮನದೊಳುಬ್ಬುತಲಿ ||
ವನಿತೆಯರ ಕಂಡೆಂದಳೇನಿದು |
ಮನಸಿಜನಗೇಹವೊ ವಸಂತನ |
ಜನುಮ ಭೂಮಿಯೊ ಸುರಪುರದ ನಂದನದ ವೈಭವವೊ ||

**ವಾರ್ಧಿಕ**

ಸಖಿಯರಿರ ನೋಡಿ ಮಾಮರಕಂಟಿ ಮಲ್ಲಿಗೆಯು |
ಸುಖದಿ ಬೀಗುತ್ತಿಹುದು ತತ್ಕಾಖೆಯಾಸರದಿ |
ಶುಕಪಿಕಾದಿ ಸಮಸ್ತ ಖಗಮಿಥುನಕೋಟಿಗಳ ನಿಕರ ಮಿಗಪಸುದ್ವಂದ್ವವು ||
ಪ್ರಕಟಿತನುರಾಗದಿಂ ಕಕುಲತೆಯೊಳಾಡುವವ |
ದಕೆ ಪೇಳ್ವುದಿನ್ನೊಂದನಾದರಿಸದಾವುದೊಂ |
ದಕು ಬದುಕಲರಿದೆಂದು ಪತಿಯಗಲಿ ಬಂದು ನಿಶ್ಕಕುತೆ ತಾ ನೀಗೆಂದಳು ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಎಂದು ವಿರಹದಿ ಬಂದು ಮಾನಿನಿ | ನಿಂದಿರಲು ಖಳ ದ್ರುಮಿಲನಲ್ಲಿಗೆ |
ಬಂದು ದೂರದಿ ನಿಂದು ಕಂಡೀ | ಸುಂದರಿಯರ || ೧ ||

ದಡಿಗನಂಗವ ತೆತ್ತುಕಾಮಗೆ | ನುಡಿದಸತಿಯರ ನಡುವೆ ತಾರಾ |
ಗಡಣ ಮಧ್ಯದ ಚಂದ್ರನಂದದ ಹುಡುಗಿಯಿವಳು || ೨ ||

ಯಾರೊ ತಿಳಿಯೆನು ಸೇರದುಳಿಯೆನು | ಮಾರನುರುಹುವನಕಟ ತನುವನು |
ನಾರಿಗೆಣೆ ಯಾರಿಲ್ಲವಹಹಾ | ಮೂರು ಜಗದಿ || ೩ ||

ಕೂಡಬೇಕೆಂತಾದರೆಯು ಮಾ | ತಾಡಿಸಿದಡೇನಹುದೊ ಪೂರ್ವದಿ ||
ನೋಡಿದಂತಿಹುದೆಂದು ಮನದಲಿ | ಖೋಡಿಯೆಣಿಸಿ || ೪ ||

ಎಂದ ಜಾತಿಸ್ಮರನು ಇವಳೆ ಸು | ನಂದೆಯಹಹಾದೊರೆತಳೆನ್ನುತ |
ನಿಂದ ಸಮಯವಿದೆಂದು ಮಾಯಕ | ದಿಂದಲಡಗಿ || ೫ ||

**ರಾಗ ಬಿಲಹರಿ ಏಕತಾಳ**

ಸುಂದರಾಂಗಿಯ ಕಾಣುತೆಂದಳೋರ್ವಳು ನೀನು | ನೊಂದು ಕೊಂಬುದೇನು |
ಇಂದೇ ಕಾಂತನನು || ಹೊಂದುವೆ ನಡೆಯಿನ್ನು | ಚಂದದಿ ಕೊಳವನ್ನು |
ಹೊಂದಿಯಾಡುವೆವನು | ವಿಂದ ಕೇಳಿಯನು || ೧ ||

ಸಾಕು ನಿಮ್ಮಯ ನುಡಿ | ಕಾಕಜುತನವ ಬಿಡಿ | ವ್ಯಾಕುಲವಿಕದೆ ನೋಡಿ |
ನಾ ಕೊಡೆ ಜೋಡಿ | ತಾಕಾಂತನಿರದಾಡಿ | ಯೂ ಕಾಣೆ ಫಲ ಸುಡಿ ||
ಯಾಕೆ ಗೈವಿರಿ ಮೋಡಿ | ಬೇಕಾದರೋಡಿ || ೨ ||

ಅಂತಿರಲೀಲತಾ | ಮಂಟಪಕ್ಕೈದುತ | ಕಾಂತನ ನೆನೆಯುತ |
ಸಂತಸಗೊಳುತ || ಕುಂತಿರುಯೆನ್ನುತ | ತಾಂ ತೆರಳಿದರಿತ್ತ | ಭ್ರಾಂತನು ನಗುತ || ೩ ||

**ರಾಗ ಮಾರವಿ ತ್ರಿವುಡೆತಾಳ**

ಹರನೊಲಿದ ವಹ | ಶಪಥ ಫಲಿಸಿತು | ಎರಡನೆಯ ಭವ | ಕಾದರೆಯು ಸತಿ ||
ದೊರೆತಳೆದಾ ದ್ರುಮಿಲ ಘನತರ | ಹರುಷದಲಿ ಕೈ ಹೊಯ್ಯುತ || ೧ ||

ನೋಡಿಹೆನು ಮೊದ | ಲೊಮ್ಮೆಯೆನ್ನನು | ಕೂಡದಲೆ ಕಾ | ಡಿದಳು ತನುವೀ ||
ಡಾಡಿ ಕೇಡನು | ಗೈದಳೀದಿನ | ಮೋಡಿಯನು ನಾ | ಮಾಡಿ ವಹಿಲದಿ || ೨ ||

ಬೆರೆವೆನೆಂದೆನು | ತುಗ್ರಸೇನನ | ಭರಿತರೂಪದೊ | ಳಾಲತಾಮಂ ||
ದಿರವ ಹೊಕ್ಕನು ಸತಿಯನೊಳಯಕೆ | ಕರೆಯುತಲಿ ಕಡು | ಹರುಷದಿಂದಲಿ || ೩ ||

**ರಾಗ ಮೋಹನ ಅಷ್ಟತಾಳ**

ಬಾ | ಭಾಮಿನಿ | ಪ್ರಿಯ | ಕಾಮಿನಿ | ಹಂಸ | ಗಾಮಿನಿ | ಮನ ಸ್ವಾಮಿನಿ || ಬಾ || ಪಲ್ಲ ||

ಬಾ ಮೋಹದರಸಿ ಬಾ ರಮಣಿ | ಪ್ರೇಮ | ಧಾಮಿನಿ ಮುದ್ದಿನ ಗಿಣಿ | ಸುಮ | ಕೋಮಲಗಾತ್ರ
ಗುಣಮಣಿ || ಇದೊ | ನಾಮೋದ ವಡುತಲಿ | ನೇಮದಿ ಬಂದಿಹೆ || ಸೋಮನಿಭಾನನೆ |
ತಾಮರಸೇಕ್ಷಣೆ || ಕಾಮನ ಕೂರ್ಗಣೆ | ನೀ ಮನವಿಡುತಿಲ್ಲಿ ಬಾ || ಭಾಮಿನಿ || ೧ ||

ಓ ಓ ಪ್ರಿಯ | ಹೃದಯಪ್ರಿಯ | ಸುಜ | ನ ಪ್ರಿಯ | ಇದೇ | ನ ಪ್ರಿಯ || ಓ | ಓ || ಪಲ್ಲ ||
ಏನಿದು ಪ್ರಿಯನೆ ಆಶ್ಚರ್ಯ | ಬರೆ | ನಾನೆಂದಾಗಾಡಿದ ಚರ್ಯ | ನೋಡೆ | ತಾನಿದೆಂಬೆನೆ
ಗೂಢಚರ್ಯ | ಅಭಿ | ಮಾನಿ ಮೇಣ್ಮಾನಸ | ತ್ರಾಣಿಯಮಾಯಕ || ಕ್ಷೋಣಿಕಾರ್ಯನೊತ್ತಿ |
ಮೇಣೆನ್ನಬೆಂಬತ್ತಿ || ನೀನಿಲ್ಲಿ ಬಹುದನು | ಮಾನವೆನಗೆ ಜೀಯ || ೨ ||

ಈಗಳರಿತ ಖಳನೆಲ್ಲ | ಬರ | ಲಾಗದೆಂದೊರೆದೆ ಸುಳ್ಳಲ್ಲ | ಬೇಗ ಸಾಗಿಸಿ ಬಂದಿಹೆನೆಲ್ಲ ||
ಮಧು | ವಾಗಮನವು ಜೊತೆ || ಯಾಗಿ ಭೋಗಿಸಬಂದೆ || ನಾಗವೇಣಿಯೆ ತಡ |
ವಾಗಬಾರದು ಬಾರೆ || ಬೇಗದಿ ಮುತ್ತಿತ್ತು | ಈಗೆನ್ನನೆದೆಗೊತ್ತು || ಬಾ | ಭಾಮಿನಿ || ೩ ||

**ರಾಗ ಹಿಂದೂಸ್ತಾನಿ ರೂಪಕತಾಳ**

ಬಾಲೆಯಪ್ಪಿಚುಂಬಿಸುತ್ತ | ಲೇಳು ಪುರಕೆಯೆಂದಳು |
ಖೂಳನಂದನೇಳಲಾರೆ ಸೀಳ್ವಮದನನೀಗಳು || ೧ ||

ಆಗದಿಲ್ಲಿವನವು ಸಖಿಯ | ರೀಗ ಬರುವರೆಂದಳು |
ಸಾಗದಿಲ್ಲೆ ಬೆರೆವೆವೆಂದ | ತಾಗಿ ಖಳವಿರಹದೊಳು || ೨ ||

ತರಣಿ ಮುಳುಗುತಿರುವ ಸಮಯ | ಸರಿಯಿದಲ್ಲವೆಂದಳು |
ಬರಲಿ ಬಂದುದೆನುತಪಿಡಿತ | ದುರುಳನಮುಕಿ ಜವದೊಳು || ೩ ||

**ಭಾಮಿನಿ**

ಖೂಳಮಾಯಕವರಿಯದೊಪ್ಪಿದ |
ಬಾಲೆಯನು ಕೆಡಿಸಿದನು ದಾನವ |
ಪೇಳಲೇನಾ ಸಮಯಕಲ್ಲಿ ನೃಪಾಲನುಗ್ರಾಖ್ಯ ||
ಲೀಲೆಯಿಂದೈತಂದ ಬರವನು |
ಬಾಲಕಿಯರೊದರಿದರು ತಮ್ಮೊಳು |
ಕೇಳಿ ಖಳನೋಡಿದನು ವ್ಯಾಜದಿ ಕಾಳಕಿಟಿಯಾಗಿ ||

**ವಾರ್ಧಿಕ**

ಕಾಣುತದರನ್ನುಗ್ರಸೇನ ಬಾಣದಿ ಕೆಡೆದ |
ಪ್ರಾಣ ಸತಿಯೊಡಲ ಬೀಜಾಣುವಂ ಸೇರಿದುದು |
ದಾನವನ ತ್ರೈಭವಕೆ ತಾನಾಯ್ತು ನಾಂದಿಯಿದು | ಜಾಣೆಯತಿ ಸಂಶಯದೊಳು ||
ತಾನುಟ್ಟು ವಸನವಂ ಕ್ಷೀಣ ಮಾನಸದಿ ನೀ |
ತ್ರಾಣದಿಂ ಬಳಿಗೈದು ತಾನರೇಶ್ವರಗೆರಗಿ |
ನೀನಿಲ್ಲಿ ಬಂದಿಹೆ ನಿದಾನವೇನೆನೆ ಭೂಪ | ಮ್ಲಾನ ಮುಖಿಗಿಂತೆಂದನು ||

**ರಾಗ ಕೇದಾರಗೌಳ ಅಷ್ಟತಾಳ**

ಮಡಿದಿರನ್ನಳೆ ಕೇಳು ತಡವಾಯ್ತು ಬಹುದೆಂದು | ಹುಡುಕಿ ನಾನೈತಂದೆನು ||
ಜಡಜಾಪ್ತ ಪಡುವಣ ಕಡಲಿಗಿಳಿದ ಪೊರ | ಮಡಿರೆಲ್ಲ ಸದನಕಿನ್ನ || ೧ ||

ತಿಂದುತೇಗುತಲಿತ್ತು | ಹಂದಿ ಸುಂದರಿ ನಿನ್ನ | ಬಂದೆನಷ್ಟಕ್ಕೆ ಚದುರೆ |
ಕೊಂದು ಹಾಕಿದೆ ಪೀಡೆ | ಹೊಂದಿಹೋಯಿತು ನಡೆ | ಎಂದೆನೆ ಮಯ್ಯದುರೆ || ೨ ||

ಎಂದಾದರೊಂದಿನ | ಹೊಂದಿಹೋಗುವ ಜೀವ | ವಿಂದೆ ಹೋಗಿರೆಯೆನಗೆ ||
ಚಂದವಿತ್ತೆಂದೆಲ್ಲ | ರೊಂದಿಗೆ ಮುಂದಾಗಿ | ಬಂದು ಪೊಕ್ಕಳು ಮನೆಗೆ || ೩ ||

**ಭಾಮಿನಿ**

ಸಿಡುಕಿದೆಂದೆನುಗ್ರಸೈರಣೆ |
ವಡೆದ ಸತಿಯುಣತಿನದೆ ತಾಪದಿ |
ಹೊಡಕಿದಳು ಮಿಡುಕಿದಳು ವನದಲಿ ನಡೆದ ದುಷ್ಕೃತಿಗೆ ||
ಒಡಲೊಳಿಹಕೆಡು ಪಿಂಡವಿದು ಕಡು |
ದಡಿಗನಾಗಿ ಸ್ವಕೀಯನಿಂದಲಿ |
ಮಡಿಯೆಲೆನ್ನುತ ಶಪಿಸಿದಳು ಮೇಣ್ ಕುಡಿಯಳಿಯಲೆಂದು ||

**ರಾಗ ನಾದನಾಮಕ್ರಿಯೆ ಅಷ್ಟತಾಳ**

ನಿದ್ದೆಯಿಲ್ಲದೆ ಬೆಳತನಕರ | ಸತಿ ಒದ್ದಾಡಿದಳು ಮದ್ದಿಲ್ಲದ ತೆರ ||
ಎದ್ದುದಿಲ್ಲದಕೇಳಿ ಭೂವರ | ಬಂದು | ಮುದ್ದಿಸುತೆಂದನಿದೇಂತರ || ೧ ||

ಅನ್ನಪಾನವ ಬಿಟ್ಟು ಮಲಗಿದೆ | ಪ್ರಿಯೆ | ನಿನ್ನ ಮಯ್ಯಲಿ ಕಷ್ಟವೇನಿದೆ ||
ಎನ್ನುತೊಡಲ ಮುಟ್ಟಲೀಯದೆ | ಸತಿ | ಸನ್ನಿಯೊಳೇನೊಂದನರಿಯದೆ || ೨ ||

ಸತ್ತಿಹೆನೆಲವೊ ನಾ ನಿನ್ನೆಯೆ | ಮುಟ್ಟ | ದತ್ತ ಸಾಯ್ಯೆ ಗಂಡು ಕುನ್ನಿಯೆ ||
ಮಿತ್ತು ನಿನಗೆ ತಂಗಿ ತಾಯಿಯೆ | ಹುಡು | ಕುತ್ತ ಕೆಡಿಸು ಬಡಪಾಯಿಯೆ || ೩ ||

**ವಾರ್ಧಿಕ**

ಒರೆದಿಂತು ಚೀರಿಡುತ ಧರೆಗುರುಳೆ ಭೂನಾಥ |
ತರುಣಿಗೇನಾಯ್ತೆನುತ ಕರಗಿಕಣ್ಣೀರಿಡುತ |
ಕರೆಸೆ ವೈದ್ಯರನಾತ ಕರಿಸುತಿರೆ ಭೇಷಜವ | ಗರಳವೆಂದುಗುಳುತಿರಲು ||
ಅರಿತು ಚಾತುರ್ಯದಿಂ ಸತಿಯರಿಂದೌಷಧವ |
ತರಳೆಗೂಡಿಸುತಿರ್ದನುರುಳಿದುದು ನವಮಾಸ |
ವಿರದಾವ ಸಂಸ್ಕಾರ ತರಳನಂ ಹೆತ್ತವಳು ಮರಳಿನಲೆ ತೊರೆದಳಸುವ ||

**ಭಾಮಿನಿ**

ಕ್ರೂರನಳುವಿನ ರವಕೆ ಮಧುರೆಯ |
ಸೂರು ನಡುಗಿತು ಪೌರಜನ ಹೌ |
ಹಾರಿದರು ಉತ್ಪಾತ ಶತ ಮೈದೋರಿತಾಕ್ಷಣದಿ ||
ಭೂರಮಣನೈತಂದು ಜನಿತ ಕು |
ಮಾರಕನನೀಕ್ಷಿಸುತ ಮಡಿದಿಹ |
ನಾರಿಯನು ಕಂಡುರುಳಿ ನುಡಿದನಪಾರ ಶೋಕದಲಿ ||

**ರಾಗ ಸೋಹನಿ ರೂಪಕತಾಳ**

ತರುಣಿರನ್ನಳೆಯೆನ್ನ | ತೊರೆದು ಪೋದೆಯ ನಿನ್ನ | ಮರೆದೆಂತು ಬಾಳ್ವೆ ನಾಚೆನ್ನ |
ನೆರಳಿನಂದದಿ ಮುನ್ನ | ಮೆರೆದೆ ಸ್ನೇಹಗಳನ್ನ | ಮರಣವಾಗನೆಯೆಳೆ ಚೆಣ್ಣ || ೧ ||

ಹೊಂದಿದಂದಿನ ಮುನ್ನ | ಒಂದು ಕ್ಷಣವು ನಿನ್ನ | ನೆಂದಾದರಗಲಿಲ್ಲ ರನ್ನ ||
ಇಂದು ತೊರೆದೆಯೆನ್ನ | ಮುಂದೆ ಬಾಳಿಹೆನೆನಾ | ಚಂದದಿ ಬಿಡು ಒಮ್ಮೆ ಕಣ್ಣ || ೨ ||

ಒಂದರೆದಿನ ಜೊತೆ | ಬಂದಿಲ್ಲಕಿನಿಸಾಂತೆ | ಬಂದೆ ನಾನೋಡೋಡಿ ಮತ್ತೆ ||
ಮುಂದೆ ಭ್ರಾಂತಿಯನಾಂತೆ | ನೊಂದೆ ನಿಷ್ಟನು ಗೊತ್ತೆ | ಒಂದೇ ಲೋಪಕೆ ಜೀವ ತೆತ್ತೆ || ೩ ||

**ಕಂದ**

ವನಿತೆಯ ಗುಣಗಳ ನೆನೆ | ದಳುತಿಹ ನೃಪನಲ್ಲಿಗೆ ಮುನಿಪತಿ ಗರ್ಗ್ಯಂ ||
ಘನತವಕದಿ ಬಂದೆತ್ತುತ | ಜನಪನಕಣುನೀರೊರೆಸುತ ಕನಿಕರದಿಂದ || ೧ ||

**ರಾಗ ಕೇದಾರಗೌಳ ಅಷ್ಟತಾಳ**

ಜನನದೊಡನೆ ಮೃತ್ಯು | ವನು ಹೊತ್ತು ಬರುವವ | ವನಿಯ ಜೀವಿಗಳಾಲಿಸು ||
ಜನಪಾಲಾಗ್ರಣಿ ಶೋಕ | ಅನು ತ್ಯಜಿಸಾಕೆಯ | ಋಣವಿಷ್ಟೆಂಬುದ ಗ್ರಹಿಸು || ೧ ||

ನಾರಿಯೀದಿನ ನಾಳೆ | ಗುರು ಹೋಪರೊ ಜೀವ | ನೀರ ಮೇಲಿನ ಗುಳ್ಳೆಯು ||
ಧೀರ ನೀನರಿವೆ ವಿ | ಚಾರಿಸೆಮ್ಮದು ಬರಿ | ಮೂರು ದಿನದ ಬಾಳ್ವೆಯು || ೨ ||

ಮೃತಗೌರ್ಧ್ವದೈಹಿಕ ಕೃತಿಗಯ್ಯೆಂದೊಡಬಡಿ | ಸುತ ಕರ್ಮಂಗಳ ಮುಗಿಸಿ ||
ಸತಿಶೋಕನವ್ವ ಯು | ವತಿವರೆಗನ್ಯಳ | ಪತಿಕರಿಸೆನೆಚಿಂತಿಸಿ || ೩ ||

**ಭಾಮಿನಿ**

ಸುದತಿಯೆನ್ನಯ ಹೃದಯ ಗುರುಮರು |
ಮದುವೆಬೇಡೆಂದುಳಿದ ಬಾಲನು |
ಹದಿಹರಯಕೇರಿದನು ಕಂಸಾಖ್ಯೆಯಲಿ ಮದಮುಖನು ||
ಒದಗಿ ಪೂರ್ವಸ್ಮೃತಿಸ್ವಧರ್ಮವ |
ನೊದೆದು ದನುಚಾಚಾರವಾಂತಿರ |
ಲದ ತಿಳಿದು ಸನ್ನಿಧಿಗೆ ಕರೆಸಿದ ಕುದಿಯುತುಗ್ರೇಂದ್ರ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಬಂದನಾಗಳು ಕಂಸ ತನ್ನಯ | ಮಂದಿಗಳ ಕೂಡುತ್ತ ದಿಮ್ಮನೆ ||
ನಿಂದುಕೇಳಿದ ಕರೆದುದೇನೈ || ತಂದೆಯೆನುತ || ೧ ||

ದನುಜರೆಮಗೆಂದೇನು ಮನುಜರ | ಜನುಮಹಗೆಗಳನಾಗರೀಕರು ||
ನಿನಗವರ ಸಹವಾಸಬೇಡೈ | ತನಯಕೇಳು || ೨ ||

ಮನುಜ ತನುವಿದು ಕೋಟಿ ಕೋಟಿಯ | ಜನಮಕೊದಗುವುದಾಗ ಭವ ಬಂ ||
ಧನವ ಹರಿವುದು ಧರ್ಮದಿಂದೆನ | ಲಣುಗನೆಂದ || ೩ ||

**ರಾಗ ಕೇದಾರಗೌಳ ಝಂಪೆತಾಳ**

ಸುಡುಸುಡೆಲೊ ನಿನ್ನ ಧರ್ಮ | ಮನದಂತೆ | ನಡೆಯುವುದೆ ಎನ್ನ ಕಾರ್ಯ ||
ಹಿಡಿಯಲ್ಯಾಕಿನಿತು ವರ್ಮ | ತನುಜನಲಿ | ಕೆಡುವೆ ನೋಡಿದುವೆ ಮರ್ಮ || ೧ ||

ಕೆಡಲಿಕೇನಿಹುದು ಮರುಳ | ನಿನಗಾಗಿ | ಮಿಡಿಯುತಿದೆ ತನುವು ತರಳ ||
ಕಡಿಯಬೇಡೆನ್ನ ಕೊರಳ | ಮನುಕುಲದ | ನಡತೆಯನ್ನು ಕೆಡಿಸಿ ದುರುಳ || ೨ ||

ದುರುಳ ನಾ ನೀನಪ್ಪನು | ಇರಲಿ ನಾಂ | ಕರಿಸಿರುವೆನೇನ್‌ತಪ್ಪನು ||
ಬರಿದೆ ಪೇಳಿದರೊಪ್ಪೆನು | ಮೇಣೆಲ್ಲ | ರಿರುವ ತೆರದೆಲೆ ಇಪ್ಪೆನು || ೩ ||

**ರಾಗ ಕಾಂಭೋದಿ ಝಂಪೆತಾಳ**

ಪಿಸುಣ ದನುಜರ ಕೂಟ | ಹಸಿಪಿಶಿಹೆಣನೂಟ | ನಿಶಿಚರಣೆ ಪರಸತಿಯರ್ಬೇಟ ||
ಅಸುರವರ್ಗದ ಮಾಟ | ನಿಶೆಯಡರಿಬಡಿದಾಟ | ವಸುಧೆಸುರರಿಗೆ ಕೊಡುವೆ ಕಾಟ || ೧ ||

**ರಾಗ ಭೈರವಿ ಅಷ್ಟತಾಳ**

ಯಾರವ ಕಂಡವನು | ಪೇಳಲಿ ಕರೆ | ಹಾರಿಪೆ ರುಂಡವನು ||
ಧೀರನೆನ್ನಿದಿರೊಳು | ಹೋರಾಡಿ ಗೆಲುವವ | ರಾರು ತ್ರೈಜಗದೊಳಿನ್ನು || ೧ ||

ಉಸುರದಿರಿದನು ಮತ್ತೆ | ಸುಜ್ಞಾನಾಂಧ | ಪಶುಗಳಿಗಿದು ನಡತೆ ||
ವಿಶದ ಬುದ್ಧಿಯ ಮನು | ವಿಸರದಿ ಜನಿಸಿ ನೀ | ನಸುರನೆಂತಾದಿ ಕತ್ತೆ || ೨ ||

ಎಂತಾದರೇನದಕೆ | ಬಂಧಿಪೆ ನಿನ್ನ | ನಿಂತ ಕಾಲಲ್ಲೆ ಜೋಕೆ ||
ಸಂತಸದಲಿಖಳ | ತಿಂಥಿಣಿಯೊಡನೆ ಭೂ | ಕಾಂತೆಯನಾಳಲಿಕೆ || ೩ ||

**ರಾಗ ಮಾರವಿ ಏಕತಾಳ**

ಎಲವೊ ಬಾಹಿರ ಕೊಲಿಸುವೆ ನಿಂತರೆ | ಸಲುಗೆಯ ನಿನಗಿನಿತು ||
ಕುಲ ಮಾರಿಯೆ ನೀ | ತೊಲಗೆಂದಾನೃಪ | ನಳಲುತ ಖತಿಯಾಂತು || ೧ ||

ಸೃಷ್ಟಿಪ ಗರ್ಜಿಸು | ತಿಷ್ಟಭಟರಿಗೆ | ಕಟ್ಟಾಜ್ಞೆಯ ಗೈದ ||
ಕಟ್ಟುತಿವನ ಹೊರ || ಗಟ್ಟರಿ ವದನವ ದಿಟ್ಟಿಸೆ ತಾನೆಂದ || ೨ ||

ಕೇಳುತ ಖಳ ತ | ನ್ನಾಳುಗಳೊಂದಿಗೆ | ಆಳಿದನನು ಪಿಡಿದು ||
ಬೀಳಿಸುತಲಿ ಕೈ | ಕಾಲ್ಗಳ ಬಂಧಿಸಿ | ಕೋಳಗಳನು ಝಡಿದು || ೩ ||

**ಭಾಮಿನಿ**

ಏರಿದನು ವಿಷ್ಟರವ ತಡೆದರ |
ಸೇರಿಸುತ ಸೆರೆಗಿಟ್ಟು ತಂದೆಯ |
ಭೂರಿ ಮದದಿಂ ಮೆರೆದ ಕಂಸನು ಧಾರಿಣಿಯೊಳಂದು ||
ಭಾರಿ ಭಯದಿಂದುಳಿದ ಯದುಗಳು |

ಪಾರುಪತ್ಯವನೊಪ್ಪಿದರು ಯಿದು |
ತೋರಿತೆರಡನೆ ಚೋದ್ಯವೆಂದನು ಆ ಋಷೀಶ್ವರನು ||

**ಇತಿ ದ್ವಿತೀಯ ಪರ್ಯಾಯಃ**

## ಅಥ ತೃತೀಯ ಪರ್ಯಾಯಃ

**ಭಾಮಿನಿ**

ಮುಂದೆಕಂಸನ ನಾಡೊಳಸುರರ |
ವೃಂದ ಬೆಳೆಯಿತು ಸಪ್ತ ಋಷಿಗಳೆ |
ಸ್ಯಂದನದ ಹಯವಾದರಳಿದರು ಸಂದ ಸಜ್ಜನರು ||
ನಿಂದವೆಜ್ಞಾದಿಗಳು ಜಪತಪ |
ಕುಂದಿತಬಲಾಶೀಲ ಮನಗ |
ಳೊಂದುಳಿಯದಂತಾಯ್ತು ಕೊಲೆಕಳವೆಂದು ದಿನಬಿಡದೆ |||

**ವಾರ್ಧಿಕ**

ಮುಂದುವರಿಯಿತು ಭುವಿಯ ಮೊರೆಕೇಳಿ ಮಾರಮಣ |
ಬಂದು ದೇವಕಿಗುದಿಸಿ ನಂದಸುತ ನೆಂದೆನಿಸಿ |
ಬಂದ ಖಳರಂ ವಧಿಸಿ ಶ್ರೀಕೃಷ್ಣನಾಮದಿಂ ನಿಂದಿರ್ದನಾಕಂಸನು ||
ನಂದನಂದನನನ್ನು ಮಧುರೆಯೆಡೆಗೆಳೆತಂದು |
ಕೊಂದುಕಳೆಯುವೆಕುತ್ತನೆಂದಣೆಣಿಸಿದ ಮನದೊಳಗೆ |
ಗಾಂಧಿನಿಯ ಕುಂದನನು ಕರೆಸುತತಿ ಸ್ನೇಹದಿಂ ನುಡಿದನಕ್ರೂರಗಂದು ||

**ರಾಗ ಶಂಕರಾಭರಣ ತ್ರಿವುಡೆತಾಳ**

ಮಿತ್ರನೆಂದರೆ ನೀನೆ ಯಾದವ | ವೃತ್ತದೊಳಗೆ ಲಾಲಿಸು ||
ಬಿತ್ತರಿಪೆ ನಾನೊಂದನದಮನ | ವಿತ್ತು ನಡೆಸು || ೧ ||

ಅಳಿಯ ಬಲಕೃಷ್ಣರನು ಕಾಣುತ | ನಲಿವೆನೆಂಬ | ಆಸೆಯು ||
ಬಲಿತುದೆನ್ನಲಿ ನಂದಗೋಪನ | ನಿಲಯಕೈದಿ || ೨ ||

ನಾಳಿನೆಮ್ಮಯ ಬಿಲ್ಲಹಬ್ಬಕೆ | ಪೇಳುತವರ ರಥದಲಿ ||
ಮೇಳವಿಸಿ ಬಾರೆಲ್ಲಬಾಂಧವ | ಜಾಲಬಹುದು || ೩ ||

ಇಂದು ಸಂಜೆಗೆ ತಪ್ಪದಿಲ್ಲಿಗೆ | ಬಂದು ಸೇರ್ವುದೆಂದನು ||
ಸ್ಯಂದನವ ನಡರುತ್ತ ಗಾಂಧಿನಿ | ಕಂದ ಪೊರಟು || ೪ ||

ದುರುಳ ಭೇದವನೆಣ್ಣಿ ಸ್ನೇಹವ | ಹೊರಗೆ ನಟಿಪನಾದರು ||
ಹರಿಯಮೊದಲಿಗೆ ಕಾಂಬ ಭಾಗ್ಯವು | ದೊರಕಿತೆನಗೆ || ೫ ||

**ವಾರ್ಧಿಕ**

ಎನತ್ಯೆದಿ ದಾಂಟುತ ಯಮುನೆಯ ವನಪಥದಿ ಸ್ಯಂ |
ದನ ಚಕ್ರಗದೆಶಂಖವನಜಧನುಷಾಂಕಿತದ |
ಚಿನುಮಯನ ಪದಚಿಹ್ನೆಯನು ಕಂಡು ಭಕ್ತಿಯಂ ಮಣಿದು ಪಣೆಗಾರೇಣುವ ||
ಘನಹರುಷದಿಂಧರಿಸಿ ಜನನ ಮರಣವಗೆಲ್ದ |
ತನು ಧನ್ಯಭಾವದಿಂ ಮನವುಬ್ಬುತಕ್ರೂರ |
ಮಣಿರಥದಿ ಬಂದು ನಂದನ ಗೃಹದ ಹಿಂದಿಳಿದು ಜನುಮಸಾರ್ಥಕವೆನ್ನುತ ||

**ಭಾಮಿನಿ**

ಎಂದು ಪುಲಕೋತ್ಸಹದಿ ಗಾಂದಿನಿ |
ಕಂದ ನಡೆದ್ಯೆತಂದು ಪೀಠದಿ |
ನಂದನೊಡನಾಡುತಿಹ ಬಲ ಗೋವಿಂದರರನು ನೋಡಿ ||
ಹೊಂದಿದತುಲಾನಂದಬಾಷ್ಪದಿ |
ಮಿಂದುರುಳಿದನು ಕಂಡು ಗೋವ್ರಜ |
ವಂದ್ಯನೆದ್ದುಪಚರಿಸುತಚ್ಚರಿಯಿಂದವನೊಳೆಂದ ||

**ರಾಗ ಕೇದಾರಗೌಳ ಅಷ್ಟತಾಳ**

ಬಂದೆಯ ಕಂಸನ | ದಂದುಗದಲಿ ಜೀವ | ದಿಂದ ಯಾದವರಿಹರೊ ||
ಬಂಧಿತವಸುದೇವ | ತಂದೆ ತಂಗಿಯರನು | ಕೊಂದನೊ ಬದುಕಿಹರೊ || ೧ ||

ರಾಯನ ಸೆರಯೆಸಿ | ದ್ಯಾಯಕೆ ಕೊನೆಯಾಯ್ತು | ಈತಲಿಲ್ಲಾವು ಮತ್ತೆ ||
ಪ್ರೀಯ ಸಚಿವ ನೀನಮಾಯನಿಲ್ಲಿಗೆ ಬಂದ | ಆಯವೇನೊರೆಯೀ ಹೊತ್ತೆ || ೨ ||

ಪಾವನಾಂಘ್ರಿಯು ದಯೆ | ಗೈವುದೆಂದರೆ ಬಡ | ಗೋವಾಳರೆಮ್ಮಲಿಗೆ ||
ಜೀವನಪಾವನ ಭಾವವೆಂದೆನಲೆಂದ | ಸಾವಧಾನದೊಳವಗೆ || ೩ ||

**ರಾಗ ಮಧುಮಾಧವಿ ತ್ರಿವುಡೆತಾಳ**

ನುಡಿದನಾ ಶ್ವಾಫಲ್ಕ ನಿನ್ನಯ | ಹುಡುಗರಿವರನು ಬಿಲ್ಲಹಬ್ಬಕೆ ||
ಒಡನೆಕರೆತರಲೆನ್ನನಟ್ಟಿಹ | ನೊಡೆಯ ಕಂಸ || ತಾಮಸ || ೧ ||

ಬಹುದು ನೀವೆಲ್ಲವರು ಜೊತೆಯಲಿ | ಅಹುದು ನಾಳೆ ಧನುಷ್ಯಯಾಗವು ||
ಇಹರು ಜೀವದೊಳೆಲ್ಲ ಮುಂದೆಂ | ತಹರೊ ಕಾಣೆ | ಪರಿಯನೆ || ೨ ||

ಸ್ನೇಹಕೆಂದಳಿಯದಿರ ಕರೆದಿಹ | ದ್ರೋಹಿಯುದರದೊಳೇನಿಹುದೊನಿ |
ರ್ವಾಹವಿಲ್ಲದೆ ಬಂದೆನೇಳಿರಿ || ಹೋಹಡೆಂದ | ನಲುಗಿದ || ೩ ||

**ರಾಗ ಕಾಂಬೋಧಿ ಝಂಪೆತಾಳ**

ಉಸುರಲಿಂತಕ್ರೂರ | ಬಿಸುಸುಯ್ದು ನಂದ ತಾ | ನೊಸರುಶತ್ರುಗಳ ಕಂಗಳಲಿ ||
ವಸುದೇವ ಸುತರಿವರ | ಅಸುವಿಡಿಯುತಿಂದಿನಲಿ | ಅಸುರನೆಡೆಗೆಂತಟ್ಟಿಕೊಲಲಿ || ೧ ||

ಕಳುಹದಿರಲಾ ಖಳನು | ಉಲಿಯಗೊಡನೆಮ್ಮವನು | ಕೊಲುವ ನಿಮ್ಮೆಲ್ಲ ಯದುಗಳನು ||

ತಲೆಗಳೆವ ತಂದೆಯನು | ಬಳಿಕನುಮ್ಮೈದರನು | ತುಳಿದುಯಮಸದನಕಟ್ಟುವನು || ೨ ||

ಸುತರ ಕಳುಹಿಸಲಾರೆ | ವ್ಯಥೆಯ ಸೈರಿಸಲಾರೆ | ವಿತತ ಮೃತಿಯನು ತಾಳಲಾರೆ ||
ಖತಿಯನೆದುರಿಸಲಾರೆ | ಹಿತಶತ್ರುತನವಾರೆ | ಪೃಥಿವಿಯಲಿ ನಾ ಬದುಕಲಾರೆ || ೩ ||

**ಭಾಮಿನಿ**

ಎಂದು ಚಿಂತಿಸುತಿರೆ ಯಶೋದೆಯು |
ಬಂದಳಳುತಣುಗರನು ಮುದ್ದಿಸು |
ತೆಂದಳೆಂದಿಗು ಕಳುಹೆ ಮೋಹದ ಕಂದರಿವರುಗಳ ||
ಬಂದರವನೆ ಬರಲಿ ವಿಧಿ ಬರೆ |
ದಂದವಪ್ಪುದೆನಲ್ಕೆ ನಗುತಲಿ |
ತಂದೆ ತಾಯ್ಗಳ ಸಂತವಿಡುತ ಮುಕುಂದನಿಂತೆಂದ ||

**ರಾಗ ಮಾರವಿ ಏಕತಾಳ**

ತರಳರು ನಾವಹು | ದರಿಯೆ ನಿಮಿತ್ತವು | ದುರುಳನ ಕೊಲ್ಲುವುದು ||
ಚರಿಸಿದ ಕರ್ಮವು | ಮರುಗದೆಯಮ್ಮನು | ಹರಸುತ ಕಳುಹುವುದು || ೧ ||

ಹುಲುಖಳನಿವನಿರ | ಲಳುಕೆವು ಕೋಟಿಯ | ಕಲಿಗಳು ತಡೆದರೆಯು ||
ಕಲಹದೊಳೊಂದರೆ | ಕಲೆಯೊಳಗೆಲ್ಲರ | ತಲೆಗಳಚುವೆ ಖರೆಯು || ೨ ||

ಹೆತ್ತವರಿರೆ ಕಾರ್ಗತ್ತಲ ಸೆರೆಯಲಿ | ಪುತ್ರರು ನಾವಿಲ್ಲಿ ||
ನಿತ್ತರೆ ಬದುಕಿಯು | ಮತ್ತೇನ್ ಸಂಶಯ | ಸತ್ತವರೆಂಬಲ್ಲಿ || ೩ ||

**ಭಾಮಿನಿ**

ಬರುವುದೆಲ್ಲರು ನೀವು ಶಕಟದಿ |
ಭರಿತ ಹಾಲ್ಮೊಸರುಗಳ ತುಂಬಿಸಿ |
ತೆರಳುವೆವು ನಾವೆನುತ ಬಲನೊಡವೆರೆದು ರಥವೇರಿ ||
ಪೊರಟ ಸುದ್ದಿಯ ಕೇಳಿ ಗೋಪಿಕ |
ತರಳೆಯರು ಹರಿಯಗಲಿಕೆಗೆ ಮೈ |
ವೆರೆದು ಚೀರಿಡುತ್ಯೈದಿ ತಡೆದರು ಹರಿವ ಸ್ಯಂದನವ ||

**ರಾಗ ಕಲ್ಯಾಣಿ ಏಕತಾಳ**

ಎಲ್ಲಿ ಪೋಪುದೆಮ್ಮ ಬಿಟ್ಟು || ಕೃಷ್ಣ ಕೃಷ್ಣ ||
ದಯದಿ ಸೊಲ್ಲಿಸಿಂದಿದೇನು ಸಿಟ್ಟು || ಕೃಷ್ಣ ಕೃಷ್ಣ ||
ಬಿಲ್ಲ ಹಬ್ಬಗೈವ ಕಂಸ | ಪೋಪೆನೀಗ ||
ನಾಳೆ | ಇಲ್ಲೇಹೆನು ಸಿಟ್ಟಿಗಲ್ಲ | ಪೋಪೆನೀಗ || ೧ ||

ಕೊಂದು ಕಳೆವನಯ್ಯೋ ದುಷ್ಟ || ಕೃಷ್ಣ ಕೃಷ್ಣ ||
ಎಮ್ಮ | ಕೊಂದೇ ಪೋಗು ಅದುವೆಯಿಷ್ಟ || ಕೃಷ್ಣ ಕೃಷ್ಣ ||
ಕಂದರಲ್ಲ ಕತ್ತಚಿವುಟೆ | ಪೋಪೆನೀಗ ||
ಖಳನ ಒಂದೇ ಹಿಡಿತದಲ್ಲೇ ಜಿಗುಟಿ || ಪೋಪೆನೀಗ || ೧ ||

ಪೋಪುದಾದರಾವೊ ಬಹೆವು || ಕೃಷ್ಣ ಕೃಷ್ಣ ||
ನಿನ್ನ ಕಾಪನುಳಿದು ಬದುಕಲರಿದು || ಕೃಷ್ಣ ಕೃಷ್ಣ ||
ಗೋಪರೊಡನೆಲ್ಲವರು ಕೂಡಿ | ಬಹುದು ನೀವು ||
ಮುಂದೆ | ಪೋಪೆವಾವು ಬಹುದು ಗಾಡಿ || ಬಹುದು ನೀವು || ೩ ||

**ಭಾಮಿನಿ**

ಎಂದೊಡೊಪ್ಪದೆಕೆಡೆದುದೊಪ್ಪನೆ |
ಸ್ಕಂದನವನಡ್ಕೈಸಿ ಮುಗಿದ |
ರಂದವರತೆಗೆದೆತ್ತಿ ಭರವಸೆಯಿಂದ ಸಂತೈಸಿ ||
ಮುಂದುವರಿದ್ಯಮುನೆಯಲಿ ಮೀಯುವೆ |
ವೆಂದಿಳಿಯುತ ಕ್ರೂರಗೆ ವಿರಾಟ್ ಘನ |
ಸಂದರುಶನವನಿತ್ತ ಕರುಣಾಸಿಂಧು ತಾನೊಲಿದು ||

**ರಾಗ ಸಾವೇರಿ ಆದಿತಾಳ**

ಕಂಡು ಪಾದದಿ ಕೆಡೆದ | ರೋಮಾಂಚನ | ಗೊಂಡು ಸನ್ನುತ ಮಾಡಿದ || ಪಲ್ಲ ||
ಪುಂಡರಿಕಾಕ್ಷ ಬ್ರಹ್ಮಾಂಡ ನಾಯಕನೆ ಮಾ | ರ್ತಾಂಡ ಕೋಟಿ ಪ್ರಭೆ |
ರುಂಡಮಾಲ ಪ್ರಿಯ || ಅ.ಪ. ||

ಅಣುರೇಣುತೃಣಕಾಷ್ಠವು | ಸುರಾಸುರ | ಮನುಜಾದಿ ಸರ್ವಸ್ವವ | | ಎನುವ ಚರಾಚರಾ |
ವನಿತಯಾಗಿ ತೋರುವೆ | ಯನಿತೆಲ್ಲ ವೊಡಲೊಳ | ಗಡಗಿ ಮುಗುವೆ || ಕಂಡು || ೧ ||

ನೋಡಿ ನಿನ್ನಯ ಪಾದವ | ಓ ದೇವ | ಹೋಗಾಡಿದೆ ಭವಬಂಧವ || ನೋಡ ಸಿಕ್ಕದಕ್ಕಯ್ಯೋ |
ಛೋಡಿಪೆ ಜಗತಿಯ ಮೂಢರರಿಯದಂತೆ | ಮಾಡಿಹೆ ಮಾಧವ || ಕಂಡು || ೨ ||

**ವಾರ್ಧಿಕ**

ಎದ್ದು ನೋಡಿದರೆ ಬಲಭದ್ರಕೃಷ್ಣರು ರಥದೊಳಿ
ದ್ದುದಂ ಪರಕಿಸುತ ನಿಜ ತಿಳಿದಂತವರ |
ಹೊದ್ದಿ ಗೃಹಕೈದಿ ತಾನಿದ್ದು ಜಾಗೃತದಿ ಕಾ | ದಿದ್ದನವರನ್ನು ದಯದಿ |
ಕ್ರುದ್ಧಕಂಸಾಸುರಂ ಬದ್ಧವೈರಿಯ ಕೊಲೆಗೆ |
ಸಿದ್ಧನಾಗಿರುತಿರಲ್ ತಿದ್ದಿತಿಲಕವ ಪಣೆಗೆ |
ಶುದ್ಧಪೀತಾಂಬರಂ ಮೆದ್ದಗ್ರಜನ ಕೂಡಿ ಗರ್ದಿನಿಂದೈತರುತಿರೇ ||

**ರಾಗ ಮಾರವಿ ಏಕತಾಳ**

ಅಗಸನು ಕಂಸನ | ಒಗೆದೊಸನಂಗಳ | ಬಿಗಿದಿಹ ಮೂಟೆಯನು ||
ಹೆಗಲಿಂಗೇರಿಸಿ ಲಗುಬಗೆಯಿಂದೆದು | ರಿಗೆ ಬರೆ ಕಂಡದನು || ೧ ||

ಥಟ್ಟನವನ ನಡಗಟ್ಟುತ ಕೃಷ್ಣನು | ಮೂಟೆಯಿದೇನೆಲವೊ ||
ಉಟ್ಟ ಜರದ ಮಡಿ | ಕೊಟ್ಟುದೊ ಬಿಟ್ಟುದೊ | ಸಟ್ಟನುಸುರ ಕಳವೊ || ೨ ||

ಯಾರೆಲೆ ಪೋರ ಯಿ | ಚಾರಿಸಲೆನ್ನನು | ಮಾರಾಯರ ರಜಕ ||
ಆರಿಪೆನಲ್ಗಳ ದಾರಿಯ ಬಿಡದಿರೆ | ಸಾರೆಲೆ ಮತಿಪೋಕ || ૩ ||

ರಾಜಂಗಳಿಯರು | ರಾಜಿಯೊಳಿದಕೂಡು | ಸಾಜದೊಳೆಮ್ಮಾಳು ||
ಗೋಜಿಗೆ ಬಂದರೆ | ಆಜಿಯೆನುತ ಬಲ | ಭಾಜಿಸಿದನು ಹಲ್ಲು || ೪ ||

ಅಳಿವರು ನೀವಿಂದುಳಿದರೆ ನಾಳೆಗೆ | ಸಲಿಸುವೆ ನಿಮಗೆಂದ ||
ಮುಳಿದೊಂದೇಟನು | ಇಳಿಸುತ ಕೃಷ್ಣನು ಘಳಿಲನವನ ಕೊಂದ || ೫ ||

**ಭಾಮಿನಿ**

ವಾಸವದ ತಗೆದುಟ್ಟು ತರಳರು |
ಸೂಸಿ ನಡೆದರು ರಾಜತೇಜದಿ |
ಪೂಸುಗಂಧವ ಹಿಡಿದು ಬಂದಳು ದಾಸಿ ಮೂವಕ್ರಿ ||
ವಾಸುದೇವನು ತಡೆದುಕೊಡು ತನ |

ಗಾಸೆಯೆಂದನು ನುಡಿದಳಾಕೆಯು |
ಮೀಸಲಿದು ಕಂಸಂಗೆ ತಪ್ಪೆಗತಾಸು ತಾನೆಂದು ||

**ರಾಗ ಸುರುಟಿ ಏಕತಾಳ**

ಕಂಸನು ಇನ್ನಿಲ್ಲ | ಸಜ್ಜನ | ಹಿಂಸೆಯುಳಿಯವುದಿಲ್ಲ ||
ಸಂಶಯ ಬಿಡು ಬಕ | ನ್ಯಾಸ ಗಮನೆ ಕೊಡು | ಧ್ವಂಸಿಪೆ ನಾ ಸತ್ಯಾಂಶವಿದೆಲ್ಲ || ೧ ||

ಎಳಚೆಣ್ಣನು ನೀನು | ದಡಿಗನ | ಕೊಲುವೆಯೆಂದರೇನು ||
ಕೊಲಿಸೆನು ನಾನೇ | ಅಳಿದಪೆ ಕೊಂಡಿದ | ಫಳಿಲನೆ ಹಿನ್ನಡೆ | ನಿಲಯಕೆ ಸೂನು || ೨ ||

ಕೊಡೆ ಗಂಧವಕೊಂಡು | ಪದಗಳ | ದೃಢದಿ ಮೆಟ್ಟಿಕೊಂಡು ||
ಹಿಡಿಯುತ ಗಲ್ಲವ | ಬಿಡದೆತ್ತಿದಡವ | ಳ್ಡುಡಗಿಯೆ ಆಗುತ | ಲೊಡನದ ಕಂಡು || ೩ ||

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಗಾಢಭಯ ಭಕ್ತಿಯಲಿ ತನುವೀ | ಡಾಡಿ ದೇವರ ದೇವ ಕುಬ್ಜೆಯ |
ಮಾಡಿದೆಯ ಸುರ ಸುಂದರಿಯನೆಂ | ದಾಡಿ ಪೊಗಳಿ || ೧ ||

ಮಗುಳೆರಗುತಪ್ಪೆಣೆಯನಾಂತಾ | ಮುಗುದೆ ತೆರಳಿದಳಿತ್ತ ಬಲಸಹ |
ನಗಧರನು ಮುಂದರಿದ ಖಳಚರ | ರುಗಳು ಬಂದು || ೨ ||

ಕೇಡಿ ಕಂಸಂಗರುಹೆ ಕುವಲಯ | ಪೀಡವೆಂಬ ಮಹಾಗಜಕೆ ಮ |
ತ್ತೂಡಿಸುತಲೋಡಿಸಿದ ಹಗೆಯ ವಿ | ಭಾಡಿಸಲಿಕೆ || ೩ ||

**ಭಾಮಿನಿ**

ಘೀಳಿಡುತ ಸಾಹಸ್ರಗಜದಾ |
ಭೀಳಶಕ್ತಿಯ ಮತ್ತಕರೆಇ ಮೈ |
ಮೇರೆ ಬರೆ ಹರಿಯದರ ಸೊಂಡಿಲ ಲೀಲೆಯಲಿ ಪಿಡಿದು ||
ಏಳು ಸುತ್ತನು ತಿರುಹಿ ಬಡಿದನು |
ಕಾಲವಶವಾಗುರುಳಿತದು ಖಳ |
ಕೇಳಿ ಚಾಣುರ ಮುಷ್ಟಿಕಾಖ್ಯರ ಕಾಳಗಕೆ ಬಿಟ್ಟ ||

**ರಾಗ ಪಂತುವರಾಳಿ ಮಟ್ಟೆತಾಳ**

ದಿಂಡರೊಂದೊಂದು ದೊಡ್ಡ | ಬಂಡೆಯಂದದಿ | ಭಂಡ ಧೈರ್ಯದಿಂದಲಿವರ |
ಕಂಡು ಮೋದದಿ || ಕಂಡರಿವರು ತೋರ್ಪರೆಳೆಯ | ಪಿಂಡದಂದದಿ |
ದಂಡಿಯೆಂದು ಬಂದುದಿಲ್ಲಿ | ದಂಡಸಹಜದಿ || ೧ ||

ಸಾರಿ ಸನಿಹ ಕರೆದು ಜಾ | ಣೂರ ಕೃಷ್ಣಗೆ || ಪೋರ ಸಾಯಲೇಕೆ
ಮರೆಯ ಸೇರಿ ಕಂಸಗೆ || ಸೇರ್ವುದಲ್ಲ ಖಗಜನೂರ |
ಸೇರಿಸುವೆಮಿಗೆ | ಸಾರು ಸಾರ್ದನೆದುರು ಬರಲಿ | ಕ್ರೂರನಾಡಗೆ || ೧ ||

ಚೋಟುಗಾತ್ರ ಹೀಚು ಬಾಯ | ಘೋಟಿದೇನಲ | ಚೂಟಿ ತೆಗೆವೆನೆನುತಲಿಟ್ಟ |
ನೇಟನಾಖಳ || ಕೋಟಲೆಯನು ಹರಿವೆನೆನುತ |
ದೇಟ ಮುರಿದು ಕಳೆದನಾನಿ | ಶಾಟಿರಸುಗಳ || ೩ ||

**ರಾಗ ಭೈರವಿ ಅಷ್ಟತಾಳ**

ದಡಿಗನಳಿವ ಕಾಣುತ | ಮುಷ್ಟಿಕ ನೌಡು | ಗಡಿದು ಸಂಗರಕಾನುತ ||
ತುಡುಕ ಬರಲು ಬಲ | ನಡಹಾಯ್ದು ರೋಷದಿ | ನುಡಿದನು ಗರ್ಜಿಸುತ || ೧ ||

ಎಲವೊ ಖಳಾಧಮನೆ | ಎಮ್ಮೊಡನಸು | ಗಳೆಯಲ್ಯಾತಕೊ ಸುಮ್ಮನೆ
ಕಳುಹು ದುರಾತ್ಮಕ | ನಳಿಯಲಿ ತಿಂದುಂಡು | ಬೆಳೆದಿಹ ಕಾಳ್ಕೋಣನೆ || ೨ ||

ಕೋಣನೆಂಬೆಯ ದುರುಳ | ಮುರಿವೆ ನಿನ್ನ | ಗೋಣನೆಲವೊ ತರಳ ||
ತ್ರಾಣವನೋಡೆಂದ | ದಾನವನನು ಹೊಯ್ದು | ಪ್ರಾಣವಗೊಂಡ ಬಲ || ೩ ||

**ಭಾಮಿನಿ**

ಪೇಳಿದರು ಚರರೈದಿ ಕಂಸನು |
ಕೇಳಿ ಕುದಿದು ಮಹಾಂತ ರೌದ್ರದಿ |
ಖೂಳರಾಯುವ ತೊಡೆವೆ ನಾಳೆಗೆನುತ ಶಯನಿಸಲು ||
ಸಾಲುಗಟ್ಟಿದ ಸ್ವಪ್ನಸೂಡಿಯ |
ದಾಳಿಯಲಿ ಕಂಗೆಟ್ಟು ಕೂಗುತ |
ತಾಳಿದನು ದುಡುಡವನು ನೆನೆವುತ ಕಂಡ ಕನಸುಗಳ ||

**ರಾಗ ಸೋಹನಿ ರೂಪಕತಾಳ**

ಏನಿದು ಭೀಕರ ಸ್ವಪ್ನವು | ತಾನೆದ್ದೊಡೆಯುವುದಾತ್ಮವು ||
ಹಾನಿಗಳಖಿಲವ ತೋರುವು | ದೇನೆನ್ನಯ ಇರವು || ೧ ||

ನೆತ್ತಿಗೆ ತೈಲವ ಪೂಸಿದೆ | ರಕ್ತಾಂಬರಗಳ ಧರಿಸಿದೆ ||
ಕತ್ತೆಯ ನಾನೆಗದೇರಿದೆ | ಮೃತ್ಯುದೆಸೆಗೆ ಪೋದೆ || ೨ ||

ಕಡುಹಗೆಯೆನ್ನನು ತಡೆದನು | ಕಡುಹ ಚತುರ್ಭುಜನಾತನು ||
ಪಿಡಿದಿಹ ಚಕ್ರಾದಿಗಳನು ತುಡುಕಿದದೆನ್ನುವನು || ೩ ||

ಕೊಳುಗುಳಕವನೊಡನಾಂತೆನು | ಗಳವನು ಹಿಸುಕಿದನಾತನು ||
ಬಳಿಕೇನೊಂದುವರಿಯೆನು | ನೆಲನೊಳಗುರುಳಿದೆನು || ೪ ||

ನಡುಗುವುದೊಡಲೆದೆ ಯಾರಿತು | ದಡಿಗನ ಕೊಲೆ ಕೈ ಮೀರಿತು ||
ಪೊಡವಿಯೊಳಿಹ ಋಣ ತೀರಿತು || ಕಡೆಗಾಲವು ಬಂತು || ೫ ||

**ಭಾಮಿನಿ**

ಖಳನಿನಿತು ಹಂಬಲಿಸುತಿರುಳನು |
ಕಳೆದು ಸಾವರಿಸುತ್ತ ಹಗೆಯನು |
ಕೊಲುವ ಖತಿಯಲಿ ಮುಂದರಿದು ತಾ ಪೊರಡೆ ಶೀಘ್ರದಲಿ ||
ಅಳಿಯನಾನೇ ಬಂದೆ ಮಾವನ |
ಬಳಿಗೆ ನೀನೋಡೆನುತ ನಗೆಯಲಿ |
ನಳಿನನಾಭನು ಮುಂದೆ ನಿಲ್ಲಲು ಕೆರಳಿ ಗರ್ಜಿಸುತ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ನೀನಳಿಯನೆನಗಾಗಿಯುಭಯರ | ಸ್ಥಾನಮಾನವನರಿಯದೆನ್ನಯ |
ಸೈನಿಕರ ಕೊಲಲ್ಯಾಕೆ ಬಗುಳೆಲೊ | ಶ್ವಾನಜವದಿ || ೧ ||

ಆತೃಣಾವರ್ತಕ ಬಕಾಸುರ | ಪೂತನಿಯ ವೃಕಶಕಟಧೇನುಕ
ಖ್ಯಾತನಘನ ಪ್ರಲಂಬ ಮುಖ್ಯರ | ಘಾತಿಸಿದೆಲಾ || ೨ ||

ಗುಂಡಿಗೆಯ ಹಿರಿದೆನ್ನಮಿತ್ರರ | ಹಿಂಡ ತಣಿಸುವೆನೆದೆಯ ರುಧಿರವ |
ನುಂಡು ಕೋಪಾನಲನ ತಣಿಸುವೆ ಭಂಡ ನಿನ್ನ || ೩ ||

**ರಾಗ ಸಾರಂಗ ಅಷ್ಟತಾಳ**

ಬರಿ ಹುಡುಗಾಡಿಕೆಯು | ಮಾವಯ್ಯ ನಿ | ಷ್ಠುರವೇತಕಾಟಿಕೆಯು |
ದುರುಳರಾದರು ಯಮ ಗರಿಯದಾವುದು ಕೋಪ | ವಿರಿಸಲೇಕೀ ಪಾಟಿಯು || ೧ ||

**ರಾಗ ದೇಶಿ ಅಷ್ಟತಾಳ**

ನುಡಿಯೆ ಜಿಹ್ವೆಯನು | ಕಡಿವೆ ಚಾಣೂರಕ | ಕಡುಹ ಮುಷ್ಟಿಕ |
ನಿಡುಮಹಾಗಜ | ಹುಡುಗರಾಟಿಕೆಯಾದವೆ || ೧ ||

ಅಗಸನಾಯುವ ಮುಗಿಸಿದೈನಂದಿನ || ಸಿಗುವ ಮಡಿವಸನಗಳ
ಕಸಿದುದು | ಮಗುವಿನಾಟವೆ ಬಗುಳೆಲೊ || ೨ ||

ಚರಣದಾಸಿಯ ಮರುಳುಗೊಳಿಸಿ ನಿತ್ಯ ||
ಬರುವ ಗಂಧವ ದುರುಳಕೊಂಡೆಯು ಶಿರವ ಚೂರ್ಣಿಪೆನೆಂದನು || ೩ ||

**ರಾಗ ಭೈರವಿ ಅಷ್ಟತಾಳ**

ದಡಿಗ ಖಳಾಧಮನೆ | ತೀರಿತು ಬಿಡು | ಒಡಲಾಸೆಯನು ಘಮ್ಮನೆ ||
ಹಡೆದ ತಂದೆಯ ಮೇಣು | ಒಡಹುಟ್ಟಿದಳ ಸೆರೆ | ಗಿಡಿಸಿದ ಪಾಪಾತ್ಮನೆ || ೧ ||

ಕುಲಧರ್ಮಗಳ ನೀಗಿಹೆ | ಹೆಣದಿನಿಗಳ | ಗ್ಗಳ ದುಷ್ಟ ನೀನಾಗಿಹೆ ||
ಬಳಗದ ಯದುಗಳ ಗಳಕುರುಳಾಗಿಹೆ | ಖಳ ಕೊಲ ಬಂದಿಹೆ || ೨ ||

ಇಳಿಯಲಿ ಪೀಠವನು | ಎನ್ನುತಜಿಗಿ | ದೆಳೆದಿಳೆಗಿಡುಕಿ ತಾನು ||
ಘಳಿಲನೆದೆಯ ಮೆಟ್ಟಿ | ತುಳಿದು ಚೂರ್ಣಿಸಿ ಹರಿ | ಖಳನಸುವನು ಕೊಂಡನು || ೩ ||

**ಭಾಮಿನಿ**

ಅನಿಮಿಷರು ಜಯವೆಂದರಜ್ಜನ |
ಜನನಿ ಜನಕರನಖಿಲ ಬಂಧುಗ |
ಳನು ಬಿಡಿಸಿ ಸೆರೆಯಿಂದ ಯಾದವ ಜನವ ಸಮ್ಮಿಳಿಸಿ ||
ಜನಪತಿತ್ವವನುಗ್ರಸೇನೆಗೆ |
ಘನವಿಭವದಿಂದಿತ್ತನಿಲ್ಲಿಗೆ |
ಜನುಮವಸರಂಗಾಯ್ತು ಮೂರೆಂದನು ಮುನೀಶ್ವರನು ||

**ರಾಗ ಕೇದಾರಗೌಳ ಅಷ್ಟತಾಳ**

ಶುಕಮುನಿ ಧರಣಿ ಪಾಲಕ ಪರೀಕ್ಷಿತನಿಂಗೆ | ಕಕುಲತೆಯಲಿ ಪೇಳಿದ ||
ಲಕುಮೀಶಚರಿತೆಯ ಪ್ರಕಟಿತದೆಕ್ಷಗಾ | ಬದಲಿಸಿದೆನಿದ || ೧ ||

ಶಾ. ಶಕ ಸಾವಿರದೊಂಬೈನೂರೈದರ | ವರ್ಷದುಂದುಭಿಗಿದನು |
ಮಾಸಶ್ರಾವಣ ಬಹು | ಳಾಷ್ಟಮಿ ಗುರುವಾರ | ನಾ ಸಂಪೂರ್ಣವ ಗೈದೆನು || ೨ ||

ಭೂಸುರ ವಿಠಲ ಲಕ್ಷ್ಮೀಸುತ ಗಣಪತಿ | ವಾಸುದೂರ್ಬೆಳಸಲಿಗೆ ||
ಈ ಸುಮ ಹನ್ನೊಂದೋ | ಲೈಸುವ ರಿಷ್ಟವ | ವಾಸುದೇವನು ಕೊಡುಗೆ || ೩ ||

ಮಂಗಲಪದ

**ರಾಗ ಢವಳಾರ ಏಕತಾಳ**

ಮಂಗಲಂ | ಜಯ ಮಂಗಲಂ | ನಿತ್ಯ ಮಂಗಲಂ || ಪಲ್ಲ ||
ಮಂಗಲ ಬಾಲ ಸಿರೀಶನಿಗೆ | ಮಂಗಲ ಕಂಸವಿನಾಶನಿಗೆ ||
ಮಂಗಲ ಶೇಷಗಿರೀಶನಿಗೆ ಜಯ | ಮಂಗಲಕಪಿಲ ಪುರೇಶನಿಗೆ ಮಂಗಲಂ || ೧ ||

**|| ಸಂಪೂರ್ಣಂ ||**

## ಕೈಲಾಸದ ಹಾಡಿಕೆಗಳು

## ಶಿವನೇ ನಮ್ಮಯಿ ದ್ಯಾವರು ಬಂದಾರ ಬನ್ನೀರೆ

ಶಿವನೇ ನಮ್ಮಯಿ ದ್ಯಾವರು ಬಂದಾರ ಬನ್ನೀರೆ
ಸ್ವಾಮಿ ನಮ್ಮಯಿ ದ್ಯಾವರು ಬಂದಾರ ಬನ್ನೀರೆ
ಹಾಡ ಕಲಿಸಿದ ಹರ ನಿನ್ನ ಹಾಡೇನ ಓದ ಕಲಸಿದ ಗುರುವಿನ
ಓದ ಕಲಿಸಿದ ಗುರುವಿನ ಧರ್ಮುರ ಸಂಧಿಗೊಮ್ಮಿ ನೆನದೇವ
ನಮಗೊಂದು ಹಾಡಿನ ವರವ ಕೊಟ್ಟಾರ ನಿಮಗೊಂದು ಮಲ್ಲಿಗಿ ಸರವಯ್ಯ
ನಿಮಗೊಂದು ಮಲ್ಲಿಗಿ ಸರವೋ ಸಾಯಿಬಣ್ಣಾ ಸಭಾದೊಳಗೆ ಕೊಂಡಾಡೇವ
ದೇವಿಧರ್ಮುರ ಹಾಡೇನೆ ಎಲ್ಲಿಗಿ ಬರುತಾವೇನಯ್ಯ
ಸತ್ಯಧರ್ಮುರ ಹಾಡೇನೆ ಎಲ್ಲಿಗಿ ಬರುತಾವೇನಯ್ಯ
ಯಾವ ಠಾಣೆದ ಮ್ಯಾಲೇನೆ ಜತ್ತುನಾರಾಯಣಪುರುದಾಗ
ಜತ್ತುನಾರ್ಯಾಣಪುರದಾಗೆ ಗ್ರಾಮನೇಳು ಹುಲಿಜಂತ್ಯಾಗ
ಖೆಂಡದಂತೆ ದೇವರಿಗೆ ದಿಂಡಗದ್ದುಗಿ ಹಾಕ್ಯಾನ
ದಿಂಡಗದ್ದುಗಿ ಹಾಕ್ಯಾನ ಮಾಳಪ್ಪ ಮಂಡಿಲಿ ಶಾಯವ ಮಾಡ್ಯಾನ
ಊಟಕ ಹುಲಿಗಿಣ್ಣವ ಕೊಟ್ಟಾನ ಆಡಕ ಹುಲಿಮರಿಯೇನ
ನಂದನ ಬನದಾನ ಲಿಂಗ ಬಾ ನನ್ನ ರುದ್ದರ ಮಾಯವ್ವನ ತಮ್ಮನ
ಹಾಡಿಗ ಹಾಡ ಜೋಡಾಗಿ ಬಾ ನನ್ನ ಭವುಳೆ ನಾಗಠಾಣಿ ಸಿದ್ದನ
ಭವುಳೆನಾಗಠಾಣಿ ಸಿದ್ಧ ಬಾ ನನ್ನ ಅಕ್ಕ ಮಾಯವ್ವನ ತಮ್ಮನ
ನೀ ನನ ಸದರಿನ ಮ್ಯಾಲೇನ ನಾ ನಿನ ನೆದರಿನ ಮ್ಯಾಲೇನ
ಸದರಿಗ ಒಪ್ಪುತ ಸಲಾಮ ಕೊಟ್ಟೇನ ಹುಜುರದ ಇಳಿಯಾ ಕಳವಯ್ಯ
ಹುಜುರದ ಇಳಿಯಾ ಕಳವಲ್ಯೋ ನನ್ನ ಮದ್ದಲಿ ಹುಲಿಮನಿ ಸಿದ್ದನ
ಮದ್ದಲಿ ಹುಲಿಮನಿ ಸಿದ್ಧ ಬಾ ನನ್ನ ರುದ್ಧರ ಮಾಯವ್ವನ ತಮ್ಮನ
ನಡುವಟ್ಟ ನಾಗರಕೆರಿಯೇನ ಜಂಬುದ್ವೀಪದ ಗಡ್ಡೇನ
ಕಲ್ಲ ಕಾಯವ ಎಲ್ಲೆಲ್ಲಿ ನೋಡಿಲ್ಲ ಅಲ್ಲೆ ಶಾಹಾಪೂರ ಗರಡ್ಯಾಗ
ಗರಡಿ ನಾಗರಕೆರಿಯಾಗ ಧರ್ಮುರ ಕಲ್ಲ ಕಾಯದಾವೇಯ್ಯ
ನಡುವಟ್ಟಿ ನಾಗರಕೆರೆಯೇನ ಜಂಬುದ್ವೀಪದ ಗರಡ್ಯಾಗ
ನೀರೆ ನಿರಂಕಾರನಪ್ಪ ಅಲ್ಲಿ ಹನ್ನೆರಡು ಅಮಾಸಿ ವಳಗೇನ

ಕಾಲ ಕೆದರುತಾನೇನ ಬಸವ ಡುರುಕಿ ಹೊಡಿಯುತಾನೇನ
ನಡುವಟ್ಟಿ ನಾಗರಕೆರಿಯ ವಳಗ ಜಂಬುದ್ವೀಪದ ಗಡ್ಡೇನ
ಕೆಂಪು ಮಡ್ಡಿ ಕೆಳಗೇನ ಸೈದಾಪೂರ ಊರೇನ
ಸೈದಾಪೂರ ಊರಾಗೆ ಮಾಳಿಂಗರಾಯನಿದ್ದಾರ
ಸಿದ್ದಪ್ಪ ಶಿವಗೇನಿ ಅಲ್ಲಪ್ಪ ಹೊಸದಾಗಿ ಹಾಡುವ ಕವಿಗೋಳ
ಮಹಾದೇವ ಮಾಳಪ್ಪ ಇವರ ಹಿಂದ ಸಂಗಡಿಗರೇನ

## ನೀರೇ ನಿರಂಕಾರದೊಳಗೆ ಭೂಮಿನಾರ ಇಲ್ಲಯ್ಯಾ

ನೀರೆ ನೀರಂಕಾರದೊಳಗೆ ಭೂಮಿನಾರ ಇಲ್ಲಯ್ಯ
ಆಕಾಶನಿಲ್ಲೇಳಂದಾರ ಭೂಮಿನಿಲ್ಲೇಳಂದಾರ
ನೀರೆ ನೀರಂಕಾರದೊಳಗೆ ಗಾಳಿ ಮೊದಲ ಇಲ್ಲೇನ
ನೀರೆ ನೀರಂಕಾರದೊಳಗೆ ತೆರಿಗೋಳು ಮೊದಲ ಇಲ್ಲೇನ
ತೆರಿಗೋಳು ಮೊದಲ ಇಲ್ಲೇನಪ್ಪಲಿ ನೀರ ಮ್ಯಾಲೊಂದು ಗುಳ್ಳೇನ
ನೀರ ಮ್ಯಾಲೆ ಗುಳ್ಳೆನಪ್ಪಲ್ಲಿ ಚಂಡ ಮೊದಲು ಆದವ
ಚಂಡ ಮೊದಲ ಆದವಪ್ಪಲ್ಲಿ ದಂಡ ಹಿಂದ ಆದವ
ಚಂಡಿಗ ಕೂಡ್ಯಾವ ಮುನ್ನೂರದ ಅರವತತು ನರಗೋಳು
ಚಂಡ ಮೊದಲ ದೇಹ ತಯ್ಯಾರ ಕಾಲ ತಯ್ಯಾರ ಆದವ
ಹರನೇ ತಯ್ಯಾರಾದವಪ್ಪಲಿ ಗುರುನೇ ತಯ್ಯಾರಾದವ
ನಾದ ಶೋಧ ತಯ್ಯಾರಾದವಪ್ಪಲಿ ಶೋಧ ತಯ್ಯಾರಾದವ
ನಾದ ಶೋಧ ತಯ್ಯಾರಾದವು ಹರನೇ ಗುರುವ ತಯ್ಯಾರ
ಅಷ್ಟವರ್ಣದ ಜ್ಯೋತಿರ್ಲಿಂಗ ಭೂಮಿ ತಯ್ಯಾರಾದವ
ಜ್ಯೋತಿರ್ಲಿಂಗ ತಯ್ಯಾರಾದರ ಧ್ಯೇಯ ಬೆಳೆಯುತಾವೇನ
ಗುರುವ ಶೋಧ ಮಾಡ್ಯಾನಪ್ಪಲ್ಲಿ ಹರನೇ ನೋಡುತಾನೇನ
ಹರನೇ ನೋಡುತಾನೇನಪ್ಪಲ್ಲಿ ನಾದ ಕೇಳುತಾನೇನ
ನಾದ ಕೇಳುತಾನೇನಪ್ಪಲ್ಲಿ ಶೋದ ನೋಡುತಾನೇನ
ಮಾತ ಸುರವನಾದವಪ್ಪಲ್ಲಿ ಮಂತರ ಸುರುವನಾದವ
ಮಂತರ ಸುರುವನಾದವಪ್ಪಲ್ಲಿ ಬಾವನ್ನ ತಯ್ಯಾರಾದವ
ಗುರುವ ತಯ್ಯಾರಾದವಪ್ಪಲ್ಲಿ ಐವತ್ತೆರಡು ಅಕ್ಷರ
ಐವತ್ತೆರಡು ಅಕ್ಷರದಿಂದ ಮಾತು ಮಂತರ ನಡದಾವ
ಮಾತು ಮಂತರ ನಡದಾವಪ್ಪಲ್ಲಿ ವಿದ್ಯಾಬುದ್ಧಿ ನಡದಾವ
ಅನಂತ ಯುಗದ ಒಳಗೇನಪ್ಪಲಿ ಅಖಂಡೇಶ್ವರನಿದ್ದಾನ
ಅಖಂಡೇಶ್ವರ ತಯ್ಯಾರಾದರ ಮಾತು ಮಂತರ ತಯ್ಯಾರ
ಅನಂತ ಯುಗದ ಒಳಗೇನಪ್ಪಲ್ಲಿ ಅಖಂಡೇಶ್ವರನಿದ್ದಾನ
ಅಖಂಡೇಶ್ವರನಿದ್ದಾನಪ್ಪಲ್ಲಿ ಪಿಂಡಾಂಡ ತಯ್ಯಾರಾದವ
ನೀರ ಒಳಗ ಇರುವ ಬೀಜ ಇದ್ದು ಇಲ್ಲದಂಗ ಎದ್ದಾವ

ಇದ್ದು ಇಲ್ಲದಂಗ ಎದ್ದಾವಪ್ಪಲ್ಲಿ ಅಖಂಡೇಶ್ವರ ಬಂದಾನ
ಅನಂತ ಯುಗದ ಒಳಗೇನಪ್ಪಲ್ಲಿ ಅಖಂಡೇಶ್ವರನಿದ್ದಾರ
ನೀರೇ ನಿರಂಕಾರದೊಳಗೇನ ನಿರ್ಭಯ ವಸ್ತುನಾದವ
ನಿರ್ಭಯ ವಸ್ತುನಾದವಪ್ಪಲ್ಲಿ ಮಾತು ಮಂತರ ಬಂದಾವ
ಎರಡು ಯುಗದ ಒಳಗೇನಪ್ಪಲ್ಲಿ ಯಾರು ಇಲ್ಲೇಳಂದಾರ
ಎರಡು ಯುಗದ ಒಳಗೇನಪ್ಪಲ್ಲಿ ನೀರೆ ನೀರಂಕಾರೇನ
ನಿರ್ಭಯ ವಸ್ತುವಿನ ಒಳಗೇನಪ್ಪಲ್ಲಿ ಅಖಂಡೇಶ್ವರನಾದನ
ಅಖಂಡೇಶ್ವರ ಹಿಂದಕ ಆದನ ನಿರ್ಬೈಲ ವಸ್ತು ಬಂದಾವ
ಬಾವನ್ನ ವಿದ್ಯಾ ಬಂದಾವಪ್ಪಲ್ಲಿ ಅಕ್ಷರ ಪುಟ್ಯಾವೇನಯ್ಯ
ಐವತ್ತೆರಡು ಅಕ್ಷರದಿಂದ ಕೋಟ್ಯಾನುಕೋಟಿ ಬೆಳೆದಾವ
ನಾಮ ಸುರವನಾದವಪ್ಪಲ್ಲಿ ನೇಮ ಸುರುವನಾದವ
ಮಾತು ಮಂತರ ಸುರುವನಾದವ ಖಾನ ಖೂನ ನಡದಾವ
ಖಾನ ಕೂನ ನಡದಾವಪ್ಪಲಿ ಓಂ ಎಂಬ ಅಕ್ಷರ ನಡದಾವ
ಓಂ ಎಂಬ ಅಕ್ಷರ ನಡದಾವಪ್ಪಲ್ಲಿ ಬಿಜಾಂಕುರ ನಡದಾವ
ನಿರ್ಬೈಲ ವಸ್ತು ನಡದಾವಪ್ಪಲಿ ಮನಸಿಗ ತಿಳಿಯತಾದೇನ
ಎರಡು ಯುಗವ ದಾಟೀವಪ್ಪಲ್ಲಿ ಇಲ್ಲಿಗಿ ನಿಂತಿವಿ ಅಂದಾರ
ಎಡಕಿನ ಫಕಡಿ ಒಳಗೇನಪ್ಪಲ್ಲಿ ಎಲವ ತೆಗಿಯುತಾನೇನ
ಎಡಕಿನ ಫಕಡಿ ಒಳಗೇನಪ್ಪಲ್ಲಿ ಮೂರ ಗಣಕಿ ಎಲವೇನ
ಮೂರ ಗಣಕಿ ಎಲವೇನಪ್ಪಲ್ಲಿ ಕಡಿಯಾಕ ತಗದು ಇಟ್ಟಾರ
ಕಡಿಯಾಕ ತಗದು ಇಟ್ಟಾನಪ್ಪಲ್ಲಿ ನೀರೆ ನಿರಂಕಾರದೊಳಗ
ನಿರ್ಬೈಲ ವಸ್ತುನಲ್ಲೇಳಪ್ಪ ಮಾತು ಮಂತರ ನಡದಾವ
ಮಾತು ಮಂತರ ನಡದಾವಪ್ಪಲ್ಲಿ ಮಂತರ ಶಕ್ತಿ ನಡದಾವ
ಮಂತರ ಶಕ್ತಿ ನಡುದಾವಪ್ಪಲ್ಲಿ ಆದಿಯ ಶಕ್ತಿ ಪಡದಾವ
ಮಂತರ ಶಕ್ತಿ ನಡದಾವಪ್ಪಲ್ಲಿ ಆದಿಯ ಶಕ್ತಿ ಪುಟದಾಳ
ಆದಿಯ ಶಕ್ತಿ ಪುಟದಾಳಪ್ಪಲ್ಲಿ ನಾರಿನಾಗಿ ನಿಂತಾಳ
ನಾರಿನಾಗಿ ನಿಂತಾಳಪ್ಪಲ್ಲಿ ಹೆಣ್ಣ ಗೊಂಬಿನಾದಳ
ಹೆಣ್ಣ ಮಗಳ ಮವ್ವದ ಗೊಂಬಿ ನಾರಿನಾಗಿ ನಿಂತಾಳ
ನಾರಿನಾಗಿ ನಿಂತಾಳಪ್ಪಲ್ಲಿ ಖಾನ ಖೂನ ನಡದಾವ
ಕಾಮ ಕ್ರೋಧ ನಡದಾವಪ್ಪಲ್ಲಿ ಮೋಹ ಮಶ್ಚರ ನಡದಾವ
ನಾರಿನಾಗಿ ನಿಂತಾಳಪ್ಪಲ್ಲಿ ಮಡದೀಯನಾಗಿ ಬಂದಾಳ
ಮಡದಿಯನಾಗಿ ಕುಂದ್ರತಾಳೇನ ಎಡಕ ಕುಂದುತಾಳೇನ
ಖಾನ ಖೂನ ನಡದಾವಪ್ಪಲ್ಲಿ ಮೋಹ ಮಶ್ವರ ನಡದಾವ
ಮೋಹ ಮಶ್ವರ ನಡದಾವಪ್ಪಲ್ಲಿ ಬೀಜನಾಗಿ ನಿಂದ್ರತಾವೇನ
ಬೀಜದ ಮ್ಯಾಲೆ ಅಂಕುರ ಪುಟದ ಬೀಳುತಾವೇನ
ಪುಟದ ಬೀಳುತಾವೇನಪ್ಪಲ್ಲಿ ಆದಿಯ ಶಕ್ತಿ ಒಳಗೇನ
ಆದಿಯ ಶಕ್ತಿ ಅಲ್ಲೇನಪ್ಪಲ್ಲಿ ಗರ್ಭಿಣಿ ಆಗುತಾಳೇನ

ಗರ್ಭಿಣಿ ಆಗುತಾಳೇನಪ್ಪಲ್ಲಿ ಒಂದಕ ಎರಡು ನಡದಾವ
ಒಂದಕ್ಕ ಎರಡು ನಡದಾವಪ್ಪ ರಕ್ಕಸರು ಹುಟ್ಟುತಾರೇನ
ರಕ್ಕಸರು ಹುಟ್ಟುವ ಯಾಳೇನಪ್ಪಲ್ಲಿ ಮೂರ ಯುಗಗೋಳು ಆದವ
ನೀರೆ ನಿರಂಕಾರದೊಳಗ ನಿರ್ಭಯ ವಸ್ತುನಿದ್ದಾವ
ಅನಂತ ಯುಗದ ವಳಗೇನಪಲ್ಲಿ ಅಖಂಡೇಶ್ವರನಿದ್ದಾನ
ನಿರ್ಭೈಲ ವಸ್ತುದೊಳಗೇನಪ್ಪಲ್ಲಿ ಆದಿಯ ಶಕ್ತಿ ಪುಟದಾಳ
ಆದಿಯ ಶಕ್ತಿ ಪುಟದಾಳಪ್ಪಲ್ಲಿ ರಕ್ಕಸರು ಹುಟ್ಟತಾರೇನ
ಮಡಿದಯಾಗಿ ಕುಂತಾಳಪ್ಪಲ್ಲಿ ಎಡಕ ಕುಂದ್ರುತಾಳೇನ
ಅನಂತ ಯುಗದೊಳಗು ಕುಂತಾಳಪ್ಪಲ್ಲಿ ಎರಡು ಯುಗಗೊಳು ನಡದಾವ
ಎರಡು ಯುಗದ ಒಳಗೇನಪ್ಪಲ್ಲಿ ಮಡದಿ ಎಡಕೆ ಬಂದಾಳ
ರಕ್ಕಸರು ಹುಟ್ಟುವ ಯಾಳೇನಪ್ಪಲ್ಲಿ ಮೂರ ಯುಗಗೋಳುನಾದವ
ಅಂಧಃಕಾರದೊಳಗೇನಪ್ಪಲ್ಲಿ ರಕ್ಕಸರು ಹುಟ್ಟುತಾರೇನ
ಭೂಮಿಯ ಇಲ್ಲೇಳಂದಾನೋ ಅಲ್ಲಿ ಆಕಾಶ ಇಲ್ಲೇಳಂದಾನ
ಆಕಾಶದೊಳಗೇನಪ್ಪಲ್ಲಿ ಧುಂದಕಾರ ಬಂದಾವ
ಧುಂದಕಾರದೊಳಗೇನಪ್ಪಲ್ಲಿ ಭೂಮ್ಯಾಗ ಇಳಿಯುತಾವೇನ
ನೀರಿನೊಳಗೆ ನಿರ್ಮಲ ಬೀಜ ಇದ್ದು ಇಲ್ಲದ್ಹಂಗ ಇದ್ದಾವ
ಅಂಧಃಕಾರದೊಳಗೇನಪ್ಪಲ್ಲಿ ಗಾಳಿ ಬರುವುತಾವೇನ
ಗಾಳಿದೇವ ಹುಟ್ಯಾನಪ್ಪಲ್ಲಿ ಥೆರಿಗೋಳು ಸುರುವನಾದವ
ನೀರಿನ ಥೆರಿಗೋಳು ಆದವಪ್ಪಲ್ಲಿ ಗಾಳಿ ಮೊದಲ ಬಂದಾವ
ಗಾಳಿ ಬಂದ ಮ್ಯಾಲೇನಪ್ಪಲ್ಲಿ ನಿರ್ಮೂಲ ಬೀಜನಾದವ
ಅಂಡಾಂಡ ಪಿಂಡಾಂಡಲ್ಲೇನಪ್ಪಲಿ ಅಂಡ ಇಪ್ಪತೊಂದೇನ
ಪಿಂಡಾಂಡ ಇಪ್ಪತ್ತೊಂದು ಲಕ್ಷೇನಪ್ಪ ಅಂಡ ಇಪ್ಪತ್ತೊಂದೇನ
ನೀರವಳಗೆ ಇರುವದಪ್ಪಲ್ಲಿ ನೀರಿನೊಳಗನಿದ್ದಾವ
ನೀರಿನೊಳಗೆನಲ್ಲೇಳ ನಿರ್ಮೂಲ ಬೀಜನಿದ್ದಾವ
ಮುಂದಿನ ಇಪ್ಪತ್ತೊಂದು ಲಕ್ಷ ವರ್ಷ ತಯ್ಯಾರಾಗುತಾವೇನ
ಜಲಜ ಇಪ್ಪತ್ತೊಂದು ಲಕ್ಷ ವರ್ಷ ತಯ್ಯಾರಾಗುತಾವೇನ
ನೀರಿನೊಳಗೆ ನಿರ್ಮೂಲ ಬೀಜ ಇದ್ದು ಇಲ್ಲದಂಗ ಇದ್ದಾವ
ಸಂಖದೊಳನಲ್ಲಪ್ಪ ಬಸವಣ್ಣ ಹುಟ್ಟುತಾನೇನ
ಬಸವಣ್ಣ ಹುಟ್ಟುತಾನೇನ ಹೆಪ್ಪ ಕೊಡುವುತಾನೇನ
ಜೀವನಕ ಮರಣ ಇಲ್ಲೇನ ಸಂಕದವಳಗ ನಡದಾನ
ಸಂಕದವಳಗ ಹೋಗಿ ಕುಂತಪ್ಪ ಬಸವಣ್ಣನಾಗಿ ಕುಂತಾನ
ಕೌಡಿವಳಗನೆಲ್ಲಪ್ಪ ಎಲ್ಲಮ್ಮ ಬರುವುತಾಳೇನ
ಎಲ್ಲಮ್ಮ ತಾಯಿ ಇಲ್ಲೇನ ದಂಡಿ ಇಲ್ಲೇನಂದಾರ
ತಾಯಿ ಎಲ್ಲಮ್ಮ ಕೊಳ್ಳಗ ಕೌಡಿ ಹಾಕುತಾರೇನ
ಧುಂದಕಾರದೊಳಗೇನ ಧುನಿಯಾ ಹಿಡಿಯುತಾಳೇನ
ಸೂರ್ಯ ಬರುವುತಾನೇನ ಚಂದರ ಬರುವುತಾನೇನ

ಸೂರ್ಯ ಹುಟ್ಟುತಾನೇನ ಹಗಲೆ ಆಗುತಾವೇನ
ಸೂರ್ಯ ಹುಟ್ಟುತಾನೇನ ಹಗಲೇ ಆಗುತಾವೇನ
ಚಂದರ ಬರುವುತಾವೇನ ರಾತರಿ ಆಗುತಾವೇನ
ಮೂರ ಯುಗದ ಒಳಗೇನ ಕತ್ತಲ ಹೋಗುತಾವೇನ
ನಾಲ್ಕ-ಯುಗದ ಒಳಗೇನ ಸೂರ್ಯ ಚಂದರ ಬಂದರ
ಹಗಲ ಹುಟ್ಟುತಾವೇನ ರಾತರಿ ಹುಟ್ಟುತಾವೇನ
ಎಲ್ಲಮ್ಮ ಹುಟ್ಟುತಾಳೇನ ಕೌಡಿವಳಗೆ ಬಂದಾಳ
ಏಳ ಗೆರಿಯಾನಿದ್ದಾವ ಏಳು ಮಾರನಾದವ
ಮಂಗಳವಾರನಾದವ ಬುದುವಾರ ಹುಟ್ಟುತಾವೇನ
ಬೆಸ್ತವಾರನಾದವ ಶುಕ್ಕರವಾರನಾದವ
ಶನಿವಾರ ಆಗುತಾವೇನ ಐತಾರ ಆಗುತಾವೇನ
ಸೋಮವಾರ ಹುಟ್ಟುತಾವೇನ ಏಳವಾರನಾದವ
ಏಳವಾರನಾದವ ಶಾಸ ಫಳಗಿನಾದವ
ಶಾಸ ಫಳಗಿನಾದವ ವಾರ ತಿಥಿ ಹುಟ್ಟುತಾವೇನ
ಹುಣ್ಣಿ ಆಗುತಾವೇನ ಅಮಾಸಿ ಆಗುತಾವೇನ
ಐದ ಯುಗದ ವಳಗೇನ ವಾರ ತಿಥಿಯ ಮಥಿಯೇನ
ವಾರ ತಿಥಿಮಥಿಯೇನ ಅಮಾಸಿ ಹುಣ್ಣಿ ಹುಟ್ಯಾವ
ನೀರಿನೊಳಗೆ ನಿರ್ಮೂಲ ಬೀಜ ಯಾರಿಗೆ ಗೊತ್ತು ಇಲ್ಲೇನ
ಜಲಜ ಇಪ್ಪತ್ತೊಂದೇನ ಲಕ್ಷ ಹುಟ್ಟುತಾವೇನ
ಇಪ್ಪತ್ತೊಂದು ಲಕ್ಷಕ ಹೊಟ್ಟೆನರ ಆದಾವ
ಹೊಟ್ಟೆನರನಲ್ಲೇಳ ನೀರೆ ನಿರ್ಮೂಲ ಆದಾವ
ಹೊಟ್ಟೆವಳಗನಲ್ಲಪ್ಪ ಇಪ್ಪತ್ತೊಂದು ಲಕ್ಷೇನ
ಇಪ್ಪತ್ತೊಂದು ಲಕ್ಷಕ ಆರ ಯುಗನೆ ಆದಾವ
ಇಪ್ಪತ್ತೊಂದು ಲಕ್ಷಕ ಹುಟ್ಟಿದ ಇಪ್ಪತ್ತೊಂದು ಲಕ್ಷೇನ
ಹುಟ್ಟಿದ ಇಪ್ಪತ್ತೊಂದು ಲಕ್ಷ ಅಂಡ ಮೈಯುತಾದೇನ
ಮೂರ ಇಪ್ಪತ್ತಮೂರ ಲಕ್ಷೇನ ಅರವತ್ತಮೂರು ಲಕ್ಷೇನ
ಅರವತ್ತಮೂರ ಲಕ್ಷೇನ ತಯ್ಯಾರಾಗುತಾವೇನ
ಹಾಲ ಕುಡಿವ ಪಿಂಡಿಂದ ಇಪ್ಪತ್ತೊಂದು ಲಕ್ಷೇನ
ಇಪ್ಪತ್ತೊಂದು ಪಿಂಡಪ್ಪ ಏನೇನು ಆಹಾರನಾದವ
ಇಪ್ಪತ್ತೊಂದು ಲಕ್ಷಕ ಏನೇನು ಆಹಾರ ಬೇಕಯ್ಯ
ಅರವತ್ತುಮೂರ ಲಕ್ಷೇನ ಪಿಂಡಿನ ಜನ್ಮ ಹೊಂದ್ಯಾದ
ಪಿಂಡ ಜಲ್ಮಕಲ್ಲೇಳ ಇರುವುದು ಮೂರ ಆಹಾರೇನ
ಎಂಬತ್ತನಾಲ್ಕು ವರ್ಷೇನ ಚೌದ ತಯ್ಯಾರಾದವ
ಬ್ರಹ್ಮ ಹುಟ್ಟುತಾನೇನೆ ವಿಷ್ಣು ಬರುವುತಾನೇನ
ರುದ್ದರ ಬರುವುತಾನೇನ ಮಹೇಶ್ವರ ಬರುವುತಾನೇನ
ದಕ್ಷ ಬ್ರಹ್ಮ ಬಂದಾನೆ ಮಹಾದೇವ ಬರುವುತಾನೇ

ಐದು ಮಂದಿನಲ್ಲೇಳ ತಯ್ಯಾರಾಗುತಾರೇನ
ಧುಂದಕಾರನದೊಳಗೇನ ಧುನಿಯಾ ಹಿಡಿಯುತಾರೇನ
ಶಾಂತಮತ್ಯಾನಲ್ಲೇಳ ತಯ್ಯಾರಾಗುತಾರೇನ
ಐದು ಮಂದಿ ರಕ್ಕಸಗೇರಿಗ ಮುರಿಯಾ ಮಾಡುತಾನೇನ
ಐದು ಮಂದಿಗಲ್ಲೇಳ ಐದು ಕುರಿಯಾ ಮಾಡ್ಯಾನ
ಐದು ಕುರಿಗೋಳು ಮಾಡ್ಯಾನೆ ಒಬ್ಬ ರಕ್ಕಸರಿಗ ಮುರದಾನ
ಒಬ್ಬ ರಕ್ಕಸ ಮುರದಾನ ಠಗರ ಮಾಡುತಾನೇನ
ಐದ ಕುರಿಯಾ ಒಂದ ಠಗರ ತಯ್ಯಾರ ಮಾಡುತಾನೇನ
ಕುರಿಯಾ ಕಾಯುತಾನೇನ ಮರಿಯಾ ಕಾಯುತಾನೇನ
ಉಣ್ಣಿ ತಗಿಯುತಾನೇನ ಕಂಬಳಿ ಮಾಡುತಾನೇನ
ಕಂಬಳಿ ಮಾಡುವದಕೇನೇನ ಸಾಮನ ಬೇಕನಾದವ
ಡುಳ್ಳಸೂರ ದೈತ್ಯನ ಶಿರವ ಹೊಡಿಯುತಾನೇನ
ಶಿರವ ಕಡಿಯಾಕ ಮಾಡಿದ ದುಂಡು ಕಡಿಯಾಕ ಮಾಡಿದ
ಕಾಲ ಕಡಿಯಾಕ ಮಾಡಿದ್ದ ತೋಳ ಕಡಿಯಾಕ ಮಾಡಿದ್ದ
ಚಂಡು ಕಡಿಯಾಕ ಮಾಡಿದ ಮಾಯಿ ಮುರ್ತುಪ ಆದಾನ
ಡುಳ್ಳಸೂರನ ಚಂಡೇನೆ ಮಾಯಿ ಮರ್ತುಪ ಆದಾವ
ಎರಡು ಕೈ ತಗದಿದ್ದ ಸಾಮನ ಮಾಡುತಾನೇನ
ಹೊಟ್ಟಿಯ ಸೀಳುತಾನೇನ ಡೊಕ್ಕಿಯ ಮಾಡುತಾನೇನ
ಕಾಳಜ ತಗಿಯುತಾನೇನ ತಾಳ ಮಾಡುತಾನೇನ
ಗುಂಡಗಿ ತಗಿಯುತಾನೇನ ಊದ ಶಂಕ ಮಾಡ್ಯಾನ
ಕಂಬಳಿ ನೈಯುವದಕಲ್ಲೇಳ ಕತ್ತರಿ ತಯ್ಯಾರ ಮಾಡ್ಯಾನ
ಕತ್ತರಿ ತಯ್ಯಾರ ಮಾಡಿದ್ದ ಉಣ್ಣೆ ಕತ್ತರಿಸುತಾನೇನ
ಭೆಂವ್ ತಯ್ಯಾರ ಮಾಡಿದ್ದ ಬೆಸಗಿ ತಯ್ಯಾರ ಮಾಡಿದ್ದ
ಸುಖದ ಕೊಳವಲ ಮಾಡಿದ್ದ ದುಃಖದ ಕೊಳವಲ ಮಾಡಿದ್ದ
ವಡ್ಡಿವಾಲಗಲ್ಲೇಳ ತಯ್ಯಾರ ಮಾಡುತಾನೇನ
ಕಾಲ ತಗಿಯುತಾನೇನ ಹುಂಕಿ ಮಾಡುತಾನೇನ
ನಾಕ ನಗಮೂರಿ ಮಾಡ್ಯಾನೆ ಐದ ನಗಮೂರಿ ಮಾಡ್ಯಾನ
ನಾಕ ಗುಂಜಿ ಹೊಡದಾನ ಐದ ಗುಂಜಿ ಹೊಡದಾನ
ಎಂಟ ಗುಂಜಿ ಹೊಡದಾನ ಹನ್ನೆರಡು ಗುಂಜಿ ಹೊಡದಾನ
ಹದನಾರ ಗುಂಜಿ ಹೊಡದಾನೆ ಹಗ್ಗ ತಯ್ಯಾರ ಮಾಡ್ಯಾನ
ಹಗ್ಗ ತಯ್ಯಾರ ಮಾಡ್ಯಾನ ಹುಂಕಿ ತಯ್ಯಾರ ಮಾಡ್ಯಾನ
ಡುಳ್ಳಸೂರ ಧೈತನೆ ತಯ್ಯಾರ ಮಾಡುತಾನೇನ
ಸರಿಯಾ ಮಾಡುತಾನೇನ ಕಂಬಳಿಗ ಹಚ್ಚುತಾನೇನ
ಕಂಬಳೆಪ್ಪ ಕಂಬಳ್ಯೋ ಏಸು ಶೀಲಿನ ಕಂಬಳ್ಯೋ
ಡುಳ್ಳಸೂರನ ಶೀಲೇನ ಎಲ್ಲಿಗ ಬರುವುತಾನೇನ
ಜೀವಕ ಮರಣ ಇಲ್ಲೇನ ಜೀವನ ಕಡಿಯಾಕಾದವ

ಜೀವನ ಕಡಿಯಾಕಾದವ ಮರ್ತ್ಯಲೋಕದೊಳಗೇನ
ಮರ್ತ್ಯಲೋಕದೊಳಗೇನೆ ಏಡಿಯ ವಳಗ ಸೇರ್‍ಯಾವ
ಏಡಿಯ ವಳಗ ಸೇರ್‍ಯಾನ ಚಂಡ ಅದಕ ಇಲ್ಲೇನ
ರುಂಡ ಅದಕ ಇಲ್ಲೇನ ಅಡ್ಡ ಹೋಗುತಾವೇನ
ಕಂಬಳೆಪ್ಪ ಕಂಬಳ್ಯೋ ಕಂಬಳಿ ನೈಯ್ಯುತಾನೇನ
ಏಸು ಸೀಳಿನ ಕಂಬಳೇ ತಾನೆ ನೈಯುತಾನೇನ
ಕಂಬಲೆಪ್ಪ ಕಂಬಳೇ ಏಳು ಸೀಳಿನ ಕಂಬಳ್ಯೋ
ಏಳು ಸೀಳಿನ ಕಂಬಳ್ಯೋ ಕಂಬಳೆಪ್ಪ ಕಂಬಳ್ಯೋ
ಕಂಬಳಪ್ಪ ಕಂಬಳ್ಯೊ ಭೆಂಕಿ ವರ್ಣದ ಕಂಬಳ್ಯೊ
ಒಂದ ಎಳಿಯಾ ಇಟ್ವಾನ ಶಾಂತಮುತ್ಯಾನಾದನ
ಶಾಂತಮುತಾನ ಕಂಬಳೇ ಮುತ್ತಿನ ಎಳಿಯಾ ಇಟ್ವಾನ
ಮುತ್ತಿಯ ಎಳಿಯಾನಲ್ಲಪ್ಪ ಕಂಬಳವಳಗ ಇಟ್ವಾನ
ಮುತ್ತಿನ ಎಳಿಯಾನಲ್ಲಪ್ಪ ಕಂಬಳಿವಳಗ ಇಟ್ವಾನ
ಕಂಬಳಿವಳಗ ಇಟ್ವಾನೆ ಬಿಳಿಯಾ ಎಳಿಯಾ ಇಟ್ವಾನ
ಬಿಳಿಯಾ ಎಳಿಯಾನಲ್ಲೇಳ ಹೆಸರ ಇಡುವುತಾನೇನ
ಕಂಬಳಿ ನೈದನಲ್ಲಪ್ಪ ಶಾಂತಮುತ್ಯಾನಂದಾರ
ಶಾಂತಮುತ್ಯಾನ ಹೆಸರೇನ ಕಂಬಳಿ ವಳಗ ಇಟ್ವಾನ
ಹಾಂವಾಗಿ ಹರಿಯುವದು ಕಂಬಳೆ ಉರಿಯಾಗಿ ಮೆರಿಯುವ ಕಂಬಳೆ
ಉರಿಯಾಗಿ ಮೆರೆಯುವ ಕಂಬಳೆ ತೇಳಾಗಿ ಚೆಂಬುಬ ಕಂಬಳೆ
ಉರಿಯಾಗಿ ಮೆರೆಯುವ ಕಂಬಳೆ ತೇಳಾಗಿ ಚೆಂಬುವ ಕಂಬಳೆ
ಕಂಬಳೆಪ್ಪ ಕಂಬಳೆ ಯಾರಿಗ ವಸಿಯಾನಿಲ್ಲಯ್ಯಾ
ಏಳು ಸೀಳಿನ ಕಂಬಳೆ ಗಳಗಿ ಹಾಕುತಾನೇನ
ಗಳಗಿ ಹಾಕುತಾನೇನ ವಡ್ಡಿವಾಲಗ ತಂದಾನ
ವಡ್ಡಿವಾಲಗ ತಂದಾನೆ ಕಂಚಿನ ಕೈತಾಳಾದವ
ಕಂಚಿನ ಕೈತಾಳಾದವ ಸಾಲ ಸತ್ತಿಗಿ ಆದಾವ
ಸಾಲಸತ್ತಿಗಿ ಆದಾವೆ ಹೊರುವ ಪಲ್ಲಕಿ ಆದಾವ
ಮುಕ್ಕಣ್ಣ ಶಿವರಾಯಗೆ ಪಾರ್ವತಿನ ಕೊಡುವುತಾನೇನ
ದಕ್ಷಬ್ರಹ್ಮನ ಮಗಳೇನ ಪಾರ್ವತಿನ ಕೊಡುವುತಾನೇನ
ಶಾಂತಮುತ್ಯಾನಲ್ಲಪ್ಪ ವಡ್ಡಿವಾಲಗ ತಂದಾನ
ಮೂರ ಲೋಕದ ವಡಿಯಾನೆ ಮುಕ್ಕಣ್ಣ ಶಿವರಾಯಗ
ಮುಕ್ಕಣ್ಣ ಶಿವರಾಯಗ ಕಂಬಳಿ ಆಯ್ಯಾರ ಮಾಡ್ಯಾನ
ಕಂಬಳಿ ಆಯ್ಯಾರಿ ಮಾಡ್ಯಾನ ಹವಳ ಮುತ್ತಿನ ಪಲ್ಲಕೆ
ಸಡಗರ ಆಳಿನ ಸಂಗಟ ವಡ್ಡಿವಾಲಗ ತಂದಾನ
ಇಲ್ಲಿಗೆ ಇದು ಒಂದು ಸಂದೇನ ಹಾಡಿದರ ಪದ ಮುಂದೇನ
ಕಳಸವಿಟ್ಟರ ಕವಿತ ಕಟ್ಟ್ಯಾರ ಹೊನ್ನ ಜಗ್ಗೂನಿ ಗೌಡರೋ
ದೇವರ ಬಂದಾರ ಬನ್ನೀರೆ

## ಹಾಲುಮತವನಂತಪ್ಪ ಹೆಸರ ಕರಿಯುತಾರೇನ

ಶಿವನೆ ನಮ್ಮಯಿ ದ್ಯಾವರು ಬಂದಾರ ಬನ್ನೀರೆ
ಸ್ವಾಮಿ ನಮ್ಮಯಿ ದ್ಯಾವರು ಬಂದಾರ ಬನ್ನೀರೆ
ಸಗರ ಗಡ್ಡ ಬಾ ಸಣ್ಣಳ್ಳಿ ಮುತ್ತು ನನ್ನ ವಾರಿದುರುಬಿನ ಹೈಯಾಳ
ಮೂಡಲ ನಡು ಬಾ ಮುತ್ತಿನ ಚಂಡು ನನ್ನ ಮುತ್ಯಾ ಮೈಲಾರಿಲಿಂಗನೆ
ದೇವಿ ಧರ್ಮುರ ಹಾಡೇನೆ ಎಲ್ಲಿಗೆ ಬರುತಾವೇನಯ್ಯ
ದೇವಿ ಧರ್ಮುರ ಹಾಡೇನ ಕೈಯಲಾಸದ ಒಳಗೇನೆ
ಕೈಯಲಾಸದ ಒಳಗೇನೆ ಮುಕ್ಕಣ್ಣ ಶಿವರಾಯನೆ
ಮುಕ್ಕಣ್ಣ ಶಿವರಾಯನೆ ಪಾರ್ವತಿ ಸಾಂಬನ ಲಗ್ಗನ
ಪಾರ್ವತಿ ಸಾಂಬನ ಲಗ್ಗನದಾಗ ಶಾಂತಮುತ್ಯಾ ಬಂದಾರ
ಕಂಬಳಿ ತೆಲಿಮ್ಯಾಲ ಹೊತ್ತಾನೆ ವಡ್ಡಿವಾಲಗ ತಂದಾನ
ವಡ್ಡಿವಾಲಗ ತಂದಾನೆ ಮುಕ್ಕಣ್ಣ ಶಿವರಾಯನ
ಮುಕ್ಕಣ್ಣ ಶಿವರಾಯನ ಲಗ್ಗನದೊಳಗ ಐಯ್ಯಾರ
ಲಗ್ಗನದೊಳಗ ಆಯ್ಯಾರೆ ಕಂಬಳಿ ಮಾಡುತಾನೇನ
ವಡ್ಡಿವಾಲಗ ಮಾಡ್ಯಾನೆ ಕಂಚಿನ ಕೈತಾಳ ಮಾಡ್ಯಾನ
ಹಗಲ ದೀವಟಗಿ ಮಾಡ್ಯಾನೆ ಸಾಲಸತ್ತಿಗಿ ಮಾಡ್ಯಾನೆ
ಸಾಲಸತ್ತಿಗಿ ಮಾಡ್ಯಾನೆ ನೂರೊಂದು ಕಳಸ ಮಾಡ್ಯಾನ
ಸಿದ್ಧರಿಗ ಶಿವನುಡಿ ಮಾಡ್ಯಾನೆ ಮಳಿಯಾ ಬೆಳಿಯಾ ಇಟ್ಟಾನ
ಸರ್ವ ಸಾಹಿತಿ ಮಾಡ್ಯಾನೆ ಕಂಬಳಿ ಆಯಾರಿ ಮಾಡ್ಯಾನ
ಕಂಬಳಿ ಆಯಾರಿ ಮಾಡ್ಯಾನ ಶಾಂತ ಮುತ್ಯಾನಿದ್ದಾನ
ಶಾಂತ ಮುತ್ಯಾನಲ್ಲೇಳ ಕುರಿಯಾ ಕಾಯಲಿ ಹೋಗ್ಯಾನ
ಮುಕ್ಕಣ್ಣ ಶಿವರಾಯನೆ ಅಡ್ಡಗಂಬಳಿ ಹೊತ್ತಾನ
ಹಾಂವಾಗಿ ಹರದಾಡುತ್ತಿದ್ದಾನೆ ಕಿಡಿಯಾಗಿ ಕಾರುತ್ತಿದ್ದಾನ
ಬೆಂಕ್ಯಾಗಿ ಉರಿಯುತ್ತಿದ್ದಾನೆ ಕಿಡಿಯಾಗಿ ಕಾರುತ್ತಿದ್ದಾನೆ
ದೇವಲೋಕದವರಿಗೆ ವಶಿಯಾನಿಲ್ಲದ ಕಂಬಳೆ
ಕಂಬಳಿ ಗಳಗಿ ಮಾಡ್ಯಾನೆ ಕಾಜಿನ ಕಂಬಿನೊಳಗೇನ
ಕಾಜಿನ ಕಂಬಿನೊಳಗೇನೆ ಗಳಿ ಮಾಡಿ ಇಟ್ಟಾನ
ಘಳಗಿ ಮಾಡಿ ಇಟ್ಟಾನೆ ವಡ್ಡಿವಾಲಗ ಇಟ್ಟಾನ
ವಡ್ಡಿ ವಾಲಗ ಇಟ್ಟಾನೆ ಶಾಂತ ಮುತ್ಯಾನಲ್ಲೇಳ
ಶಾಂತ ಮುತ್ಯಾನಲ್ಲೇಳ ಕುರಿಯಾ ಕಾಯಿತ್ತಿದ್ದಾನ
ಒಂದು ಕಲ್ಲನಾದವೆ ಎರಡು ಕಲ್ಲನಾದವ
ದುಂಧಕಾರದೊಳಗೇನ ಶಾಂತ ಮುತ್ಯಾನಿದ್ದಾನ
ವೈಯ್ಯಾ ನನ್ನ ತಮ್ಮದೇರಾ ನನಗ ಬ್ಯಾಸರ ಆದಾವ
ನನಗೆ ಬ್ಯಾಸರಾದವೆ ಭಾಗ್ಯ ಕಾಯಲಿಬೇಕಯ್ಯ
ಬ್ರಹ್ಮಗ ಹೇಳುತಾನೇನ ಕುರಿಯಾ ಕಾಯುತಾನೇನ

ಬ್ರಹ್ಮ ಬಿಟ್ಟ ಕುರಿಯೇನ ವಿಷ್ಣು ಕಾಯುತಾನೇನ
ವಿಷ್ಣು ಬಿಟ್ಟ ಕುರಿಯೇನ ರುದ್ದರ ಕಾಯುತಾನೇನ
ರುದ್ದರ ಕಾಯ್ದ ಕುರಿಗೋಳು ಮಹೇಶ ಕಾಯಿತಾನೇನ
ಮಹೇಶ ಬೆಟ್ಟಕುರಿಗೋಳು ಮಹದೇವ ಕಾಯುತಾನೇನ
ಐದು ಮಂದಿನಲ್ಲೇಳ ಬ್ಯಾಸರ ಬಂದು ಕುಂತಾರ
ಹ್ಯಾಂಗ ಮಾಡಬೇಕಂದಾನ ಮಹಾದೇವ ಎಲ್ಲಿಗ ಹೋಗಬೇಕಂದಾನ
ಪಾರ್ವತಿಗ ಹೇಳುತಾನೇನ ನನ್ನಿಂದ ಆಗಲದು ಅಂದಾನ
ಪಾರ್ವತಿ ಹೇಳಿದರಲ್ಲೇಲೆ ಭಾಗ್ಯ ಕಾಯ್ದೆನಂದಾಳ
ಭಾಗ್ಯ ಕಾಯಿದೇನಂದಾಳೆ ಬದುಕ ಕಾಯಿದೇನಂದಾಳ
ಮರಿಯಾ ಉಣಸೇನಂದಾಳೆ ಕುರಿಯಾ ನೋಡೇನಂದಾಳ
ಟೊಂಕಿಗ ಸೆರಗ ಸುತ್ತ್ಯಾಳೆ ಏರಿಸಿ ಕಚ್ಚೆ ಹಾಕ್ಯಾಳ
ಲ್ಯಾವಿ ದಂಡಕೋಲ ಹಿಡದಾಳೆ ಭಾಗ್ಯ ಎಬಸುತಾಳೇನ
ಗಣಪತಿ ಎಂಬ ಮಗನಿಗೆ ಮನಿಯಾಗ ಬಿಡುವುತಾರೇನ
ಷಣ್ಮುಖನೆಂಬ ಮಗನಿಗೆ ಮಗ್ಗಲದೊಳಗೆ ಎತ್ಯಾಳ
ಈಡ ಬಾಗಲ ತೆರದಾಳೆ ಭಾಗ್ಯ ಬಯಲಿಗ ಬಿಟ್ಟಾಳ
ಭಾಗ್ಯ ಬಯಲಿಗ ಬಿಟ್ಟಾಳ ಸೀಮಿಗ ಹೋಗುತಾವೇನ
ಭೂಮಿ ತಿರುಗುತಾಳೇನ ಕಾಡ ತಿರಗೂತಾಳೇನ
ಷಣ್ಮುಖನೆಂಬ ಮಗನಿಗೆ ಮಗ್ಗಲದೊಳಗೆ ಎತ್ಯಾಳ
ಏಳು ಸೀಮಿ ತಿರುಗ್ಯಾಳೆ ಬ್ಯಾಸರಾಗುತಾಳೇನ
ಐದು ಮಂದಿ ಕಾಯಿದಾರೆ ಬ್ಯಾಸರಾಗಿ ಬಿಟ್ಟಾರ
ನಾನೇ ಕುರಿಯಾ ಕಾಯಿದೇನೆ ನಾನು ಯಾರಿಗ ಹಚ್ಚಲೆ
ನನ್ನ ಕುರಿಗೋಳು ಅಲ್ಲೇಳ ಯಾರು ಕಾಯಿದಾರಂದಾಳ
ಯಾರ ಕಾಯಿದಾರಂದಾಳೆ ಎಲ್ಲಿಗ ಹೋಗಲಿ ಅಂದಾಳ
ಯಾರ ಬರಲಿಲ್ಲ ಅಂದಾಳೆ ಕುರಿಯಾ ಕಾಯಲಿಕೆ ಹೋಗ್ಯಾಳೆ
ಸ್ವರ್ಗದ ಬಾಗಲ ತಗದಾಳೆ ಮತ್ರ್ಯಾಕ ಇಳಸುತಾಳೇನ
ಮತ್ರ್ಯಕ ಇಳಸೂತಾಳೇನೆ ಬಂಕಾಪುರದ ಭೂಮ್ಯಾಗ
ಬಂಕಾಪುರದ ಭೂಮ್ಯಾಗ ಕುರಿಯಾ ಇಳಸೂತಾಳೇನೆ
ಷಣ್ಮುಖನೆಂಬ ಮಗನಿಗೆ ಮಗ್ಗಲದೊಳಗೆ ಎತ್ಯಾಳೆ
ಎಷ್ಟು ಆದಾವಂದಾಳ ಎಲ್ಲಿಗ ಹೋಗಲಿ ಅಂದಾಳ
ಎಲ್ಲಿಗ ಹೋಗಲಿ ಅಂದಾಳೆ ಮೂರ ಕಣ್ಣಿನ ಹುತ್ತೇನ
ಮೂರ ಕಣ್ಣಿನ ಹುತ್ತೇನ ಬಿಚ್ಚಿ ನೋಡುತಾಳೇನ
ಮೂರ ಕಣ್ಣಿನ ಹುತ್ತಿನೊಳಗೆ ಕುರಿಯಾ ಹೊಗಸುತಾಳೇನ
ಕುರಿಯಾ ಹೊಸೂತಾಳೇನ ಹುತ್ತ ಮುಚ್ಚುತಾಳೇನ
ಎರಡು ಘಂಡಕನಲ್ಲೇಳ ಕೂಡಿಸಿ ಬಿಡುವುತಾಳೇನ
ಮುತ್ತಲ ಮರವಂದು ಮಾಡ್ಯಾಳೆ ಹುತ್ತಿನ ಗಡ್ಡಿಗ ಊರ್ಯಾಳ
ಮುತ್ತಿನಂತ ಮರವೇನ ಹುತ್ತಿಗ ಬೆಳೆಯುತಾವೇನ

ಷಣ್ಮುಖನೆಂಬ ಮಗನಿಗೆ ಕೆಳಗ ಇಳಿಸೂತಾಳೇನ
ಕೈಕಾಲ ಮಾರಿ ತೊಳದಾಳೆ ಸೀತಾಳೆ ಶಿವಮಜ್ಜಲ
ಸೀತಾಳೆ ಶಿವಮಜ್ಜನೆ ನೀರಿಲೆ ಮಕಮಜ್ಜನ
ಹಾಕಿದ ಕಚ್ಚಿ ಬಿಚ್ಚಾಳೆ ಟೊಂಕಿನ ಸೆರಗ ಬಿಚ್ಯಾಳೆ
ಮುತ್ತಿನ ಸೆರಗ ಹೊಚ್ಯಾಲೆ ಭೂಮಿಯ ಮ್ಯಾಲೆ ಕುಂತಾಳ
ಎದಿಮ್ಯಾಲ ಕೈಯ ವಗದಾಳೆ ಮಲಿಯಾ ತೊಳಿಯುತಾಳೇನ
ಎಡಿಕಿನ ಮಲಿ ಮ್ಯಾಲೆನ ಬಲಗೈ ತಿರುವುತಾಳೇನ
ಎಡಗೈಯಲ್ಲಿನಲ್ಲೇಳ ಮಣ್ಣ ಹಿಡಿಯುತಾಳೇನ
ಬಲಗೈಲಿ ಹಾಲ ಹಿಂಡ್ಯಾಳೆ ಎಡಗೈವಳ ಮಣ್ಣೇನ
ಎಡಗೈ ವಳಗ ಮಣ್ಣೀನ ಮುದ್ದಿ ಮಾಡುತಾಳೇನ
ಎಡಗೈ ವೈಯುತಾಳೇನ ಬಲಕಿನ ಮಲಿಯಾ ತಿರುವ್ಯಾಳ
ಬಲಗೈಯ ಮಣ್ಣ ಹಿಡದಾಳೆ ಬಲಕಿನ ಹಾಲ ಹಿಂಡ್ಯಾಳ
ಎಡಗೈಯ್ಲಿ ಮಲಿಯಾ ಹಿಡದಾಳೆ ಮಣ್ಣಿನ ಮ್ಯಾಲ ಹಿಂಡ್ಯಾಳ
ಎಡಕೊಂದು ಗೊಂಬಿ ಮಾಡ್ಯಾಳೆ ಬಲಕೊಂದು ಗೊಂಬಿ ಮಾಡ್ಯಾಳ
ಹಾಲಿನಿಂದನಲ್ಲೇಳೆ ಎರಡು ಗೊಂಬಿನಾದವ
ಎರಡು ಗೊಂಬಿ ಮಾಡ್ಯಾಳೆ ಷಣ್ಮುಖನೆಂಬ ಮಗನಿಗೆ
ಷಣ್ಮುಖನೆಂಬ ಮಗನಿಗೆ ಹಾಲ ಕುಡುಸೂತಾಳೇನ
ಅಲ್ಲಿಗ ಬಂದ ಮಾತೇನ ಇಲ್ಲಿಗ ನಡಿದಾವೇನಯ್ಯಾ
ಅಲ್ಲಿಗ ನಡೆದ ಮಾತೇನ ಇಲ್ಲಿಗ ನಡದಾವೇನಯ್ಯಾ
ಷಣ್ಮುಖ ಕುಡದ ಹಾಲೇನೆ ಮುಕ್ಕಣ್ಣ ಶಿವರಾಯನ
ಮುಕ್ಕಣ್ಣ ಶಿವರಾಯನೆ ಕೈಯಲಾಸದಿಂದೇನ
ಕೈಯಲಾಸ ಬಿಟ್ಟಾನೆ ಪಾರ್ವತಿಗೆ ಹುಡಕುತ ಹೊಂಟಾನ
ಸ್ವರ್ಗದ ಬಾಕಲ ತೆರದಾನೆ ಬಂಕಾಪೂರದ ಭೂಮ್ಯಾಗ
ಬಂಕಾಪೂರದ ಭೂಮ್ಯಾಗ ಮಹಾದೇವ ಇಳಿಯುತಾನೇನ
ಹೆಂತ ಹುಚ್ಚ ಇದ್ದಿಗೆ ನಾಡ ತಿರುಗಿ ಬಂದೇನ
ನಾಡ ತಿರುಗಿ ಬಂದೇನೆ ಕಡ ತಿರುಗಿ ಬಂದೇನ
ಮಾರಿಯ ಸಣ್ಣಗಾದವೇ ಮಕವ ಸಣ್ಣಗಾದವ
ಕಾಲಧೂಳನಾದವೆ ಕೈಯಧೂಳನಾದವ
ದಣಕಿ ಬಹಳನಾದವೆ ಬ್ಯಾಸರ ಬಹಳನಾದವೆ
ಪಾರ್ವತಿ ಹೇಳುತಾಳೇನ ಮಹಾದೇವ ಕೇಳುತಾನೇನ
ಮಹಾದೇವ ಹೇಳುತಾನೇನ ಪಾರ್ವತಿ ಕೇಳುತಾನೇನ
ಬಾರೋ ಬಾರೋ ಮಹಾದೇವ ನಂದೊಂದು ಮಾತ ಕೇಳಯ್ಯ
ಉಪ್ಪ ಉಂಡಿದ ಖಾಯದ ಹಾಲ ಮಣ್ಣಿಗ ಸುರುವಲಿಬಾರದ
ಮಣ್ಣ ಮುಟಗಿ ಮಾಡೀನೆ ಗೊಂಬಿ ಮಾಡೀನಿ ಅಂದಾಳ
ಎಡಕಿನ ಮಲಿಯ ಹಾಲಿಗ ಒಂದು ಗೊಂಬಿ ಮಾಡೀನೆ
ಬಲಕಿನ ಮಲಿಯ ಹಾಲಿಗ ಎರಡು ಗೊಂಬಿಮಾಡೀನೆ

ಮಣ್ಣಿಗ ಹಾಲ ಹಿಂಡಿನೆ ಎರಡು ಗೊಂಬಿಮಾಡೀನೆ
ಎರಡು ಗೊಂಬಿ ಮಾಡೀನೆ ಮುಕ್ಕಣ್ಣ ಶಿವರಾಯನ
ಮುಕ್ಕಣ ಶಿವರಾಯಗ ಮಂತರ ಮಾಡಬೇಕಂದಾಳೆ
ಮಂತರ ಮಾಡಬೇಕಂದಾಳೆ ಜೀವನ ಕೊಡಬೇಕಂದಾಳ
ಹುಚ್ಚ ಪಾರ್ವತಿ - ಅಂದಾನೆ ಇಲ್ಲದೊಂದು ಮಾಡೀದೆ
ಇಲ್ಲದೊಂದು ಮಾಡೀದೆ ಇಲ್ಲದ ಹಠಗೋಳು ಮಾಡೀದೆ
ಒಳ್ಳೆದು ಒಳ್ಳೆದು ಅಂದಾನೆ ಮಣ್ಣಿನ ಖಾಯ ಅಂದಾನ
ಮಣ್ಣಿನ ಖಾಯನಲ್ಲೇಳೆ ತಯ್ಯಾರ ಮಾಡಬೇಕಂದಾಳೆ
ಜೀವನ ತುಂಬುತಾನೇನ ಮಂತರ ಮಾಡುತಾನೇನ
ಎರಡುಗೊಂಬಿನಲ್ಲೇಳೆ ಜೀವನ ತುಂಬುತ್ತಾನೇನ
ಪಾರ್ವತಿ ಕೇಳುತಾಳೇನೆ ಮಹಾದೇವ ಹೇಳುತಾನೇನ
ಬಾರೋ ಬಾರೋ ಮಹಾದೇವ ಹೆಸರ ಏನಂತ ಕರದಾನ
ಏನಂತ ಇಡುವಲಿ ಬೇಕಯ್ಯ ಏನೇನು ಕರಿಯಲಿ ಬೇಕಯ್ಯ
ಹಾಲುಮತವನಂತಪ್ಪ ಹೆಸರ ಕರಿಯುತಾರೇನ
ಹಾಲ ತಾಯಿಗಂದಾನೆ ಮತವ ಶಿವರಾಯಿಗಂದಾನ
ಮತವನಂದರ ಮಂತರ ಹಾಲನಂದರ ಮಣ್ಣೀನ
ತಾಯಿ ಮಲಿಯ ಹಾಲೇನೆ ತಂದಿಯ ಮಂತರಾದವ
ಹಾಲುಮತವನಲ್ಲೇಳ ಹೆಸರ ಇಡುವುತಾರೇನ
ಬಾರೋ ಬಾರೋ ಶಿವರಾಯ ನಂದೊಂದು ಮಾತ ಕೇಳಯ್ಯ
ಇವರ ಹೆಸರಲ್ಲೇಳ ಏನೇನು ಇಡಬೇಕಂದಾಳ
ಮುದ್ದವ್ವ ಮುದಗೊಂಡನೆ ಹೆಸರ ಕರಿಬೇಕಂದಾಳ
ಬಲಕಿನ ಗೊಂಬಿನಲ್ಲೇಳ ಮುದ್ದಗೊಂಡನಾದನ
ಎಡಕಿನ ಗೊಂಬಿನಲ್ಲೇಳ ಮುದ್ದವ್ವಳಾಗಿ ಹುಟ್ಯಾಳ
ಜೋಡೆರಡು ಗೊಂಬೇನ ಮುದ್ದವ್ವ ಮುದ್ದಗೊಂಡನ
ಮುದ್ದವ್ವ ಮುದಗೊಂಡನೆ ಜೋಡಿಲಿ ನಿಂದ್ರುಸುತಾರೇನ
ಜೋಡಿಲಿ ನಿಂದ್ರುಸುತಾರೇನ ಏನಂದಾಡುತಾರೇನ
ಮುದ್ದವ್ವ ಮುದ್ದಗೊಂಡನೆಂದು ಹೆಸರ ಕೂಗೂತಾರೇನ
ಮುದ್ದಗೊಂಡಗಲ್ಲೇಳ ಏನಂದೇಳುತಾರೇನ
ಗಂಡ ಅನ್ನಲ್ಲಿ ಬೇಕಪ್ಪ ಹೆಣ್ಣು ಅನ್ನಲಿ ಬೇಕಪ್ಪ
ಹೆಣ್ಣು ಗೊಂಬಿನಲ್ಲೇಳ ಹೆಣ್ಣುನಂತ ಕೂಗ್ಯಾನ
ಗಂಡು ಗೊಂಬಿನಲ್ಲೇಳ ಗಂಡುನಂತ ಕೂಗ್ಯಾನ
ಹೆಣ್ಣು ಗಂಡುನಾದವ ಗಂಡ ಹೆಂಡತಿ ಆದಾವ
ಗಂಡ ಹೆಂಡತಿ ಆದಾರ ಮರ್ತ್ಯಲೋಕದೊಳಗೇನ
ಮರ್ತ್ಯಲೋಕದೊಳಗೇನ ಕೀರ್ತಿ ಮಾಡುತಾರೇನ
ಮುಕ್ಕಣ್ಣ ಶಿವರಾಯನ ಏನಂದಾಡುತಾನೇನ
ಏನಂದಾಡುತಾರೇನ ಮುದ್ದವ್ವ ಮುದ್ದಗೊಂಡಗ

ಮುದ್ದವ್ವ ಮುದಗೊಂಡಗ ನಾಲ್ಕು ಮಂದಿ ಮಕ್ಕಳ
ನಾಲ್ಕು ಮಂದಿ ಮಕ್ಕಳೆ ಆದಿಯಗೊಂಡ ಹುಟ್ಯಾನ
ಆದಿಯಗೊಂಡ ಹುಟ್ಯಾನೆ ಅನಂತಗೊಂಡ ಹುಟ್ಯಾನ
ಸಿದ್ದಗೊಂಡ ಹುಟ್ಯಾನೆ ಪದಮಗೊಂಡ ಹುಟ್ಯಾನ
ಇವರು ನಾಲ್ಕು ಮುಂದೇನೆ ಪದುಮಗೊಂಡನಂದಾರ
ಮುದ್ದವ್ವ ಮುದಗೊಂಡನೆ ಹೊಟ್ಟಿಲಿ ನಾಲ್ಕು ಮಂದಿ ಮಕ್ಕಳ
ಇಲ್ಲಿಗಿ ಇದುವಂದು ಸಂದೇನ ಹಾಡಿದರ ಪದ ಮುಂದೇನ
ಕಳವಿಟ್ಟರ ಕವಿತ ಕಟ್ಯಾರ ಹೊನ್ನ ಜಗ್ಗುನಿ ಗೌಡರೋ
ದೇವರ ಬಂದಾರ ಬನ್ನೀರೆ !

## ಹುತ್ತಿನಗಡ್ಡಿ ಸೀಳ್ಯಾವೆ ಕುರಿಯ ಬಯಲಿಗ ಬಂದಾವ

ಶಿವನೆ ನಮ್ಮಯ್ಯ ದ್ಯಾವರು ಬಂದಾರ ಬನ್ನೀರೆ
ಸ್ವಾಮಿ ನಮ್ಮಯ ದ್ಯಾವರು ಬಂದಾರ ಬನ್ನೀರೆ
ದೇವಿ ಧರ್ಮುರ ಹಾಡೇನ ಸತ್ಯಧರ್ಮುರ ಹಾಡೇನ
ಸತ್ಯ ಧರ್ಮುರ ಹಾಡೇನ ಬಂಕಾಪೂರ ಮ್ಯಾಲೇನ
ದೇವಿ ಧರ್ಮುರ ಹಾಡೇನೆ ಬಂಕಾಪೂರದ ಮ್ಯಾಲೇನೆ
ಬಂಕಾಪುರದ ಒಳಗೇನೆ ಮುದ್ದವ್ವ ಮುದಗೊಂಡನ
ಮುದ್ದವ್ವ ಮುದಗೊಂಡನೆ ಹೊಸ್ತಲ ಮ್ಯಾಲಕೆ ಬಂದಾನ
ಆದಿಯಗೊಂಡನಿದ್ದಾನೆ ಅನಂತಗೊಂಡನಿದ್ದಾನ
ಸಿದ್ದಗೊಂಡನಿದ್ದಾನ ಪದಮಗೊಂಡನಿದ್ದಾನ
ನಾಲ್ಕು ಮಂದಿನಲ್ಲಪ್ಪ ಲಗ್ಗನ ಮಾಡುತಾರೇನ
ಲಗ್ಗನ ಮಾಡುತಾರೇನ ಮೂರುತ ಮಾಡುತಾರೇನ
ಆದಿಗೊಂಡಗಲ್ಲೇಳೆ ಅರವತ್ತು ಮಂದಿ ಮಕ್ಕಳು
ಅನಂತಗೊಂಡಗಲ್ಲೇಳೆ ಮೂವತ್ತು ಮಂದಿ ಮಕ್ಕಳು
ಸಿದ್ದಗೊಂಡಗಲ್ಲೇಳೆ ಇಪ್ಪತ್ತು ಮಂದಿ ಮಕ್ಕಳು
ಪದಮಗೊಂಡಗಲ್ಲಪ್ಪ ನಾಲ್ಕು ಮಂದಿ ಮಕ್ಕಳು
ನಾಲ್ಕು ಮಂದಿ ಮಕ್ಕಳು ಏನಂದಾಡುತ್ತಿದ್ದಾರ
ಆದಿಯಗೊಂಡ ಅನಂತಗೊಂಡ ಸಿದ್ದಗೊಂಡ ಮೂವರ
ಸಿದ್ದಗೊಂಡ ಮೂವರೆ ಹೆಂಡರ ಮಾತ ಕೇಳ್ಯಾರ
ನಾಲ್ಕು ಮಂದಿನಲ್ಲೇಳೆ ಲಗ್ಗನಾಗ್ಯಾವಂದಾರ
ಲಗ್ಗನಾಗ್ಯಾವಂದಾರೆ ಪಾಲಾ ಕೊಡಬೇಕಂದಾರ
ಯಾರದವರಿಗಲ್ಲಪ್ಪ ಪಾಲು ಕೊಡಬೇಕಂದಾರ
ಆದಿಯಗೊಂಡ ಮಡದೇನ ಅನಂತಗೊಂಡಗ ಹೇಳ್ಯಾಳ
ಅನಂತಗೊಂಡನ ಮಡದೇನ ಸಿದ್ದಗೊಂಡಗ ಹೇಳ್ಯಾಳ
ಪದಮಾಗೊಂಡನಲ್ಲೇಳೆ ತಿರುಗ್ಯಾಡಿ ಬರತಾನಂದಾಳ

ಮೇವ ತರದಿಲ್ಲಂದಾಳೆ ನೀರ ತರದಿಲ್ಲಂದಾಳ
ಊರಗ ಹೋದನಂದಾಳೆ ಮನಿಗಿ ಬರತನಂದಾಳ
ತಾಯೇಳೆ ಮುದ್ದವ್ವನ ಅಡಗಿ ಮಾಡುತಾಳೇನ
ಅಡಗಿ ಮಾಡುತಾಳೇನ ಬೇಡಿದ ಉಣಸುತಾನಂದಾರ
ಬೇಡಿದ ಉಣತಾನಲ್ಲಪ್ಪ ತೊಲಿಯಾ ತುಂಡನಾದನ
ತೊಲಿಯಾ ತುಂಡನಿದ್ದಾನೆ ಸುಮ್ಮನೆ ತಿರುಗೂತಾನೇನ
ಹ್ಯಾಂಗ ಮಾಡಬೇಕಂದಾನೆ ಎಂತು ಮಾಡಬೇಕಂದಾನ
ಮೂರು ಮಂದಿ ಮಕ್ಕಳೆ ಏನಂದಾಡುತಾರೇನ
ಮುದ್ದಪ್ಪ ಮುದ್ದಗೊಂಡನ ಏನೆಂದು ಹೇಳುತಾರೇನ
ಬಾರೋ ಬಾರೋ ಏಯವ್ವ ಪದಮಗೊಂಡಗಲ್ಲೇಳ
ಪದಮಗೊಂಡಗಲ್ಲೇಳ ಬ್ಯಾರಿ ಕೊಡತೀವಿ ಅಂದಾರ
ಬ್ಯಾರಿ ಕೊಡತೀವಿ ಅಂದಾರ ಪಾಲ ಕೊಡತೀವಿ ಅಂದಾರ
ಪಾಲ ಇಡತೀವಿ ಅಂದಾರೆ ಕಡಿಯಾಕ ಆಕೀವಿ ಅಂದಾರ
ತಾಯೇಳ ಮುದ್ದವ್ವನ ಒಳ್ಳೆದು ಒಳ್ಳೇದಂದಾಳ
ಬಾರೋ ಬಾರೋ ಏಯಪ್ಪ ಸಣ್ಣತಮ್ಮನಿದ್ದಾನ
ಒಂದು ತಿಳಿದಿಲ್ಲ ಅಂದಾಳ ಒಂದು ಬರುದಿಲ್ಲಂದಾಳ
ಹಿಂದು ಗೊತ್ತಿಲ್ಲಂದಾಳೆ ಮುಂದು ಗೊತ್ತಿಲ್ಲಂದಾಳ
ಬಾರೋ ಬಾರೋ ನನ್ನಪ್ಪ ಸಣ್ಣವನಿದ್ದಿ ಅಂದಾಳ
ಸಂಜಿಯ ಮಾಡಿ ಕರದೇನ ಪದುಮಗೊಂಡಗ ಹೇಳ್ಯಾಳ
ಸಂಜಿಯ ಮಾಡಿ ಬಂದಾನ ಮಗನಿಗ ಹೇಳುತಾಳೇನ
ಮೂರು ಮಂದಿ ಮಕ್ಕಳೆ ಒಕ್ಕಲುತನ ಮಾಡ್ಯಾರ
ಅಡವಿಯ ಮಾಡ್ಯಾರಂದಾಳೆ ಗಳಿಯಾ ಹೊಡದಾರಂದಾಳ
ಮೇವ ತಂದಿಲ್ಲಂದಾಳೆ ನೀರ ತಂದಿಲ್ಲಂದಾಳೆ
ತಾಯಿ ಮಾತನಲ್ಲೇಳೆ ಪದುಮಗೊಂಡ ಕೇಳ್ಯಾನ
ಒಳ್ಳೆದು ಒಳ್ಳೆದು ಅಂದಾನೆ ನಾಳಿಗ ಮುಂಜಾನಿ ಹೋದೇವ
ನಾಳಿಗ ಮುಂಜಾನಿ ತಾಯೆವ್ವ ಮೇವಿಗ ಹೋಗತೀನಿ ಅಂದಾನ
ಒಳ್ಳೆದು ಒಳ್ಳೆದು ಅಂದಾನೆ ನಾಳಿಗ ಮುಂಜಾನಿ ಹೋದೇವ
ನಾಳಿಗ ಮುಂಜಾನಿ ತಾಯೆವ್ವ ಮೇವಿಗ ಹೋಗತೀನಿ ಅಂದಾನ
ಒಳ್ಳೆದು ಒಳ್ಳೆದು ಅಂದಾರ ಸಂಜಿಯಮಾಡಿ ಕುಂತಾರ
ಉಂಡಾರ ಬಾಳುಟ್ಟಾರೆ ಬಾಯಲಿ ಸೀತಾಳ ಉಗಳ್ಯಾರ
ಬಾಯಲಿ ಸೀತಾಳ ಉಗಳ್ಯಾರೆ ಮಲ್ಲನ ಮನಗೂತಾರೇನ
ಹೊತ್ತರೆ ಮುಂಜಾನಿ ಎದ್ದಾರೆ ಅನಂತಗೊಂಡ ಕುಂತಾರ
ಅನಂತಗೊಂಡನಿದ್ದಾನ ಸಿದ್ದಗೊಂಡನಿದ್ದಾನ
ಪದಮಗೊಂಡ ಎದ್ದಾನೆ ಜಾಮ ಜಳಕವ ಮಾಡ್ಯಾನ
ಜಾಮ ಜಳಕವ ಮಾಡ್ಯಾನೆ ಸಣ್ಣನೆ ಸರದುಟ್ಟಾನ
ಸಣ್ಣನೆ ಸರದುಟ್ಟಾನೆ ಬಣ್ಣನೆ ಬಿಗದುಟ್ಟಾನ

ಉಂಡಾನೆ ಬಾಳುಟ್ಟಾನೆ ಬಾಯಿಲಿ ಸೀತಾಳ ಉಗಳ್ಯಾನ
ಬಾಯಿಲಿ ಸೀತಾಳ ಉಗಳ್ಯಾನೆ ಕುರುಪಿ ಕೈಯಲಿ ಹಿಡಿದಾನ
ಕುರುಪಿ ಕೈಯಾಗ ಹಿಡದಾನೆ ಐದ ಹಗ್ಗ ಹಿಡದಾನ
ಐದಾರು ಹಗ್ಗ ಹಿಡಿದಾನೆ ಎಲ್ಲಿಗ ಹೋಗುತಾನೇನ
ತಳದ ಮಾನ್ಯದ ಹೊಲದಾಗ ಎರಡು ಕೂರಿಗಿ ಹೊಲದಾಗ
ಎರಡು ಕೂರಿಗಿ ಹೊಲ್ದಾಗ ನಡುವ ಕುಂದ್ರುತಾನೇನ
ಹಗ್ಗ ಇಡುವುತಾನೇನ ಕುರುಪಿ ಇಡುವುತಾನೇನ
ಕುರುಪಿ ಇಡುವುತಾನೇನ ಪದಮಾಗೊಂಡ ಕುಂತಾನ
ಯಾತಳ ಶಕ್ತಿ ಇದ್ದಾವೆ ಭೂತಾಳ ಶಕ್ತಿ ಇದ್ದಾವ
ಯಾತಳ ಕರಿಯುತಾನೇನ ಭೂತಳಿ ಕರಿಯುತಾನೇನ
ಯಾತಳಿ ಭೂತಾಳಿ  ವಶಗೋಳು ಪದುಮಗೊಂಡಗ ಇದ್ದಾವ
ಮದಮಗೊಂಡನಲ್ಲೇಳ ಸುಮ್ಮನೆ ಕುಂದ್ರುತಾನೇನ
ಮೇವ ಮಾಡುತಾನೇನ ಕುಂಪಿ ಹಾಕುತಾನೇನ
ಹಗ್ಗ ಹಾಕುತಾನೇನ ಹೊರಿಯಾ ಕಟ್ಟುತಾನೇನ
ಹೊರಿಯಾ ಕಟ್ಟರಿ ಅಂದಾನ ಮೇವ ತಯ್ಯಾರಿ ಅಂದಾನ
ಮೇವಿನ ಹೊರಿಯಾ ಕಟ್ಯಾರೆ ಎಲ್ಲಿಗೆ ಬರುತಾರೇನಯ್ಯ
ಪದುಮಗೊಂಡನಲ್ಲೇಳ ನಡುವ ತೆಲಿಯ ಕೊಟ್ಟಾನ
ಯಾತಾಳ ಭೂತಾಳಲ್ಲೇಳೆ ಮೆವ್ವ ಹೊತಗೊಂಡು ಬಂದಾವ
ಮನಿಗಿ ಬರುವುತಾನೇನೆ ಬಾಗಲ ಹಿಡಿಯಲ್ಲಂದಾನ
ಬಾಗಲ ಹಿಡಿಯವಲ್ಲದೆ ಹೊರಿಯ ಕೆಡವುತಾವೇನ
ಹೊರಿಯಾ ಬಿಚ್ಚುತಾರೇನೆ ಮೇವ ಹಾಕುತಾರೇನ
ಅಟ್ಟ ತುಂಬುತಾರೇನ ಪಡಸಾಲಿಗಿ ತುಂಬುತಾರೇನ
ಬಾಗಲ ತುಂಬುತಾವೇನೆ ಝುಳಜೀಯ ತುಂಬುತಾವೇನ
ಆದಿಯಗೊಂಡನಲ್ಲೇಳೆ ಅನಂತಗೊಂಡನಲ್ಲೇಳ
ಸಿದ್ಧಗೊಂಡ ಮೂವರೆ ಆವಾಗ ಎತ್ತ ಹೊಡಕೊಂಡ
ಆರು ಎತ್ತು ಹೊಡಕೊಂಡ ಮನಿಗಿ ಬರುವುತಾರೇನ
ಎಟ್ಟು ಮೇವ ಮೈದಾರೆ ಮೇವ ಸರಿಯವಲ್ಲವೆ
ತಂದೇಳ ಮುದ್ದಗೌಡನೆ ತಾಯೇಳೆ ಮುದ್ದವ್ವನ
ತಾಯೇಳೆ ಮುದ್ದವನೆ ಏನಂದಾಡುತಾಳೇನೆ
ತಮ್ಮ ಮೇವ ತಂದಾನೆ ಎಷ್ಟು ಐಶ್ವರಿ ಮಾಡ್ಯಾನ
ಆದಿಗೊಂಡನ ಮಡದೇನೆ ಸಿದ್ಧಗೊಂಡನ ಮಡದೇನ
ಅನಂತಗೊಂಡನ ಮಡದೇನೆ ಸಿದ್ಧಗೊಂಡನ ಮಡದೇನ
ಅನಂತಗೊಂಡನ ಮಡದೇನೆ ಏನಂದಾಡುತಾಳೇನೆ
ಕುಂತ ಮಾಡುತಾರೇನೆ ಬೇಡಿದು ಮಾಡೇವಂದಾರ
ಬೇಡಿದು ಉಂಡರಲ್ಲೇಳ ಕುತ್ತ ಬಡಸೇವಂದಾರ
ಒಂದಿನ ತಂದರಲ್ಲೇಳ ನಾವೇ ದುಡದೇವಂದಾರ

ನಾವೇ ದುಡಿದೇವಂದಾರೆ ಬ್ಯಾರಿ ಕುಡಬೇಕಂದಾರ
ಬ್ಯಾರಿ ಕುಡಬೇಕಂದಾರೆ ಮನದಾನ ಮಾತನಾಡ್ಯಾರ
ಸಿದ್ಧಗೊಂಡ ಪದುಮಗೊಂಡ ಒಳ್ಳೆದು ಒಳ್ಳೆದು ಅಂದಾರ
ಎಷ್ಟು ದಿವಸನಿದ್ದರೆ ಸಾಲ ಕೊಡತೀನಿ ಅಂದಾರ
ಮುದ್ದವ್ವ ಹೇಳುತಾಳೇನೆ ಪಾಲ ಕೊಡಬೇಕಂದಾರ
ನಾಲ್ಕು ಮಂದಿ ಕೂಡ್ಯಾರೆ ಏನೇನು ಮಾತನಾಡ್ಯಾರ
ಹನ್ನೆರಡು ಕೂರಗಿ ಹೊಲವೇನೆ ಆದಿಯಗೊಂಡಗಲ್ಲೇಳ
ಹನ್ನೆರಡು ಕೂರಗಿ ಹೊಲವೇನೆ ಅನಂತಗೊಂಡಗಲ್ಲೇಳ
ಆದಿಗೊಂಡಗ ಎರಡೆತ್ತ ಅನಂತಗೊಂಡ ಎರಡೆತ್ತ
ಸಿದ್ಧಗೊಂಡನಲ್ಲೇಳ ಒಳ್ಳೆ ನಂಬಾರ ಹಿಡದಾನ
ಪದುಮಗೊಂಡನಲ್ಲೇಳ ನೀಯೇನ ಮಾಡಿಲ್ಲಂದಾರೆ
ಹನ್ನೆರಡು ಕೂರಿಗಿ ಬೀಳೇನ ಪಾಳಬಿದ್ದಾವಂದಾರ
ಬೀಳಿನ ಹೊಲಗೊಳು ನಿಮಗೇನ ಚೊಲುವ ಹೊಲಗೋಳು ನಮಗೇನ
ಹರಕ ಸೋಲ ಕೊಟ್ಟಾರೆ ಮುರಕ ಜತ್ತಿಗಿ ಕೊಟ್ಟಾರ
ಕುಂಟ ಎತ್ತ ಕೊಟ್ಟಾರೆ ಕುರುಡ ಎತ್ತ ಕೊಟ್ಟಾರ
ಹನ್ನೆರಡು ಕೂರಿಗಿ ಬೀಳೇನ ನಿನಗೆ ಇರಬೇಕಂದಾರ
ಒಳ್ಳೆಯ ಎತಗೋಳು ಆರ ಎತ್ತ ಮೂರೇ ಮಂದಿ ಹಿಡದಾರ
ಮೂರು ನಂಬರ ಹಿಡದಾರೆ ಸಂಸಾರ ಮಾಡತ್ತಿದ್ದಾರ
ಹೊತ್ತಾರೆ ಮುಂಜಾನಿ ಎದ್ದಾರ ಪದುಮಾಗೊಂಡ ಕೇಳ್ಯಾನ
ತಾಯೇಳ ಮುದ್ದವ್ವನೆ ಜಳಕ ಮಾಡಲಿಬೇಕಯ್ಯ
ಜಳಕ ಮಡಲಿಬೇಕಪ್ಪ ಊಟ ಮಾಡಲಿಬೇಕಯ್ಯ
ಕುಂಟ ಎತ್ತ ಕುರುಡ ಎತ್ತ ಮುಂದ ಮಾಡಲಿಬೇಕಯ್ಯ
ಹರಕ ಸೋಲ ಮುರುಕ ಜತ್ತಿಗಿ ಹೆಗಲಿಗ ಹಾಕಲಿಬೇಕಯ್ಯ
ಗಳಿಯ ಹೊಡಲಿಬೇಕಪ್ಪ ನಿನ್ನ ಪಾಲಿಗಿ ಬಂದಾವ
ಮುಂದ ನಡಿಯಲಿಬೇಕಪ್ಪ ಬುತ್ತಿ ತರತೀನಿ ಅಂದಾಳ
ಒಳ್ಳೆದು ಒಳ್ಳೆದು ಅಂದಾನೆ ಚಾಮಜಳಕವ ಮಾಡ್ಯಾನ
ಸಣ್ಣನ ಸರದುಟ್ಟಾನೆ ಬಣ್ಣನೆ ಬಿಗಿದುಟ್ಟಾನ
ಉಂಡಾನೆ ಬಾಳುಟ್ಟಾನೆ ಬಾಯಿಲಿ ಸೀತಾಳ ಉಗಳ್ಯಾನ
ಕುಂಟ ಎತ್ತ ಕುರುಡ ಎತ್ತ ಮುಂದ ಮಾಡಲಿಬೇಕಯ್ಯ
ಹರಕ ಸೋಲ ಮುರುಕ ಜತ್ತಿಗಿ  ಹೆಗಲಿಗ ಹಾಕಲಿಬೇಕಯ್ಯ
ಗಳಿಯ ಹೊಡಲಿಬೇಕಪ್ಪ ನಿನ್ನ ಪಾಲಿಗಿ ಬಂದಾವ
ಮುಂದ ನಡೆಯಲಿಬೇಕಪ್ಪ ಬುತ್ತಿ ತರತೀನಿ ಅಂದಾಳ
ಒಳ್ಳೆದು ಒಳ್ಳೆದು ಅಂದಾನೆ ಚಾಮಜಳಕವ ಮಾಡ್ಯಾನ
ಸಣ್ಣನ ಸರದುಟ್ಟಾನೆ ಬಣ್ಣನೆ ಬಿಗಿದುಟ್ಟಾನ
ಉಂಡಾನೆ ಬಾಳುಟ್ಟಾನೆ ಬಾಯಿಲಿ ಸೀತಾಳ ಉಗಳ್ಯಾನ
ಕುಂಟ ಎತ್ತ ಕುರುಡ ಎತ್ತ ಕುಣಕಿ ಬಿಚ್ಚುತಾನೇನ

ಹರಕ ಸೋಲ ಮುರಕ ಜಂತಿಗಿ ಹೆಗಲಿಗೆ ಹಾಕುತಾನೇನ
ಹೊನ್ನಹೊಸ್ತುಲ ದಾಟ್ಯಾನೆ ರಾಯಿ ಮಾರಗ ಹಿಡಿದಾನ
ಹೊಲಕ ಹೋಗುತಾನೇನ ಗಳಿಯಾ ಹೊಡುತಾನೇನ
ಗಳಿಯಾ ಹೊಡುತಾನೇನ ಮೇಳಿ ಕೈಯಾಗ ಹಿಡದಾನ
ಯಾತಾಳಿ ಕರಿಯುತಾನೇನ ಭೂತಾಳಿ ಕರಿಯುತಾನೇನ
ಮೇಳಗಿ ಗಂಟಿಬಿದ್ದಾವೆ ನರಕ ಗಂಟಬಿದ್ದಾವ
ಗಿಡಿಗೋಳು ಕಿತ್ತಿ ಬಿದ್ದಾವೆ ಎಳ್ಳಿ ಕಿತ್ತಿ ಬಿದ್ದಾವ
ಎಳ್ಳಿ ಕಿತ್ತಿ ಬಿದ್ದಾವೆ ನೇಗಲ ಎಳಿಯುತಾವೇನ
ನೇಗಲ ಎಳಿಯುತಾನೇನ ಎಳ್ಳಿ ಹೊಳ್ಳಿ ಬಿದ್ದಾವ
ಊಟದ ಯಾಳಿ ಆದವೆ ತಾಯೇಳೆ ಮುದ್ದವ್ವನ
ತಾಯೇಳ ಮುದ್ದವನೆ ಹುರದ ಹೂರಣ ಗಡಬೇನ
ಕರದ ಕರಚಿ ಕಾಯೇನೆ ಬಿದರ ಬುಟ್ಟಿ ತುಂಬ್ಯಾಳ
ಬಿಂದಿಗಿ ನೀರ ತಂದಾಳ ಬಿದರ ಬುಟ್ಟಿ ಹೊತ್ತಾಳ
ಬಿದರ ಬುಟ್ಟಿ ಹೊತ್ತಾಳೆ ಬಿಂದಗಿ ನೀರ ತಂದಾಳ
ಬಿಂದಿಗಿ ನೀರ ತಂದಾಳೆ ಹೊಲಕ ಬರುವುತಾಳೇನ
ಬುತ್ತಿ ಇಳುವುದರೊಳಗೇನ ಪದುಮಾ ಮುಂದಕ ಆಗುತಾನೇನ
ಹೊಳ್ಳಿ ಬರತೀನಿ ಅಂದಾನೆ ತಾಯಿಗ ಧನಿಯಾ ಕೊಟ್ಟಾನ
ಒಳ್ಳೆದು ಒಳ್ಳೆದು ಅಂದಾಳೆ ಸುಮ್ಮನೆ ಕುಂದ್ರುತಾರೇನ
ಬಿದರ ಬುಟ್ಟಿ ಇಳುವ್ಯಾಳೆ ಬಿಂದಗಿ ನೀರ ಇಳುವ್ಯಾಳೆ
ಆದಿಯಗೊಂಡ ನೋಡ್ಯಾನೆ ಅನಂತಗೊಂಡ ನೋಡ್ಯಾನ
ಸಿದ್ಧಗೊಂಡ ನೋಡ್ಯಾನೆ ಮೂರು ಮಂದಿ ಕೂಡ್ಯಾರ
ಪದುಮಾ ಗಳಿಯಾ ಬಿಡುವುದುರೊಳಗೆ ಊಟಮಾಡತೀವಿ ಅಂದಾರ
ಊಟ ಮಾಡತೀವಿ ಅಂದಾರೆ ಮೂರು ಮಂದಿ ಬಂದಾರ
ತಾಯಿನಲ್ಲಿ ಇದ್ದಾಳೆ ಬಿಂದಿಗಿ ನೀರ ಹಿಡದಾರ
ಕೈಕಾಲ ಮಾರಿ ತೊಳೆದಾರೆ ಬಿದರ ಪುಟ್ಟಿಗ ಕುಂತರ
ಮೂರು ಮಂದಿ ಮಕ್ಕಳೆ ಊಟ ಮಾಡುತಾರೇನ
ತಾಯೇಳ ಮುದ್ದವನೆ ಏನಂದಾಡಲಿಲ್ಲೇನ
ಪದಮಗೊಂಡ ಮಗನೇನ ಮೂರು ಮಂದಿ ಮಕ್ಕಳ
ಯಾರಿಗೆ ಅನಬೇಕೆಂದಾಳೆ ಯಾರಿಗ ಆಡಬೇಕೆಂದಾಳ
ಯಾರಿಗ ಅನುವಲಿಲ್ಲೇನ ಸುಮ್ಮನ ಕುಂದ್ರುತಾಳೇನ
ಉಂಡಾರೆ ಬಾಳುಟ್ಟಾರೆ ಬಾಯಿಲಿ ಸೀತಾಳ ಮುಗದಾರ
ಹೆಗಲಿಗ ಬಾರಕೋಲ ಹಾಕ್ಯಾರ ತಮತಮ ಗಳಿಯಾಕ ಹೊಂಟಾರ
ತಮತಮ ಗಳಿಯಾಕ ಹೋದಾರೆ ಗಳಿಯ ಹೊಡಿಯುತಿದ್ದಾರ
ಪದಮಾಗೊಂಡನಲ್ಲೇಳ ತಿರುಗಿ ಬರುವುತಾನೇನ
ಘೋಣುಕ ಬರುವುತಾನೇನ ಹಿಂದಕ ತಿರುಗೂತಾನೇನಕ
ಬುತ್ತಿ ಸವನಿಗ ಬಂದಿದ ಹೆಗಲಿಗ ಬಾರಕೋಲ ಹಾಕಿದ್ದ

ಬುತ್ತಿಯ ಬಲ್ಲಿ ನಿಂತಾನೆ ಆದಿಯಗೊಂಡನ ಕರದಾಯ
ಅನಂತಗೊಂಡನ ಕರದಾನೆ ಸಿದ್ಧಗೊಂಡನ ಕರದಾನ
ಬರಿಯಾ ನನ್ನ ಅನ್ನದೇರೆ ಊಟ ಮಾಡಲಿ ಅಂದಾನ
ಹಡದ ತಾಯಿನಲ್ಲೇಳ ಸುಮ್ಮನೆ ಕುಂದ್ರುತಾಳೇನ
ಮೂರ ಮಂದಿ ಅಣ್ಣದೇರ ಹೆಗಲಿಗ ಬಾರಕೋಲ ಹಾಕ್ಯಾರ
ಹೆಗಲಿಗ ಬಾರಕೋಲ ಹಕ್ಯಾರೆ ಪದುಮಾಗೊಂಡನ ಬಲ್ಲಿಗ
ಪದುಮಾಗೊಂಡಾನ ಬಲ್ಲ್ಯಾಕ ಊಟಕ ಬರುವುತಾರೇನ
ಬಿಂದಗಿ ತುಂಬಿದಂಗಿದ್ದಾವ ಬುಟ್ಟಿ ತುಂಬಿದಂಗಿದ್ದಾವ
ಮರಿ ತೊಳಿಯುತಾರೇನೆ ಮಕವ ತೊಳಿಯುತಾರೇನ
ಪದುಮಾಗೊಂಡನಂದರ ಮಾರಿ ತೊಳಕೊಂಡು ನಿಂತಾರ
ಮಾರಿ ತೊಳಿಯುತಾರೇನ ಬುಟ್ಟಿ ಬಲ್ಲಿಗ ಬಂದಾರ
ಮ್ಯಾಲಿನ ಪಾವಡ ತಗದಾರೆ ತುಂಬಿದ ಪುಟ್ಟನಿದ್ದಾವ
ಹುರದ ಹೂರಣಗಡಬೇನ ಕರದ ಕರಚಿಕಾಯೇನ
ತುಂಬಿದ ಪುಟ್ಟ ಬುತ್ತೇನ ಹಂಗೆ ಇರುವುತಾವೇನ
ಮೂರು ಮಂದಿ ಅಣ್ಣ ತಮ್ಮರು ತಾಯಿ ಮ್ಯಾಲೆ ಅಂದಾರ
ನಮ್ಮ ತಾಯಿನಂದಾರೆ ಎಲ್ಲಿ ಬಿಚ್ಚಿ ಇಟ್ಟಾಳ
ಮನದಾಗ ಮಾತನಾಡ್ಯಾರೆ ಉಂಡ ಹೋಗುತಾರೇನ
ಉಂಡ ಹೋಗುತಾರೇನ ನಾಲ್ಕು ಮಂದಿ ಊಟೇನ
ನಾಲ್ಕು ಮಂದಿ ಊಟೇನ ತಮ ತಮ ಗಳಿಯಾಕ ಹೋದಾರ
ತಮತಮ ಗಳಿಯಾಕ ನಡದಾರೆ ತಮತಮ ಹೊಲದಾಗ ನಡದಾರ
ಪದುಮಗೊಂಡನಲ್ಲೇಳ ಹೊರಳಿ ಗಳಿಯಾ ತಿರುವ್ಯಾನ
ಹೊರಳಿ ಗಳಿಯಾ ತಿರುವ್ಯಾನೆ ಬುತ್ತಿಯ ಬಲ್ಲಿ ಬಂದಾನ
ಬರಿಯೊ ನನ್ನ ಅಣ್ಣದೇರಾ ಊಟ ಮಾಡಮಿ ಅಂದಾನ
ನಿನ್ನೆ  ಹಂಗೆ ಆದಾವ ಇಂದೆ ನೋಡಬೇಕಂದಾರ
ತಾಯಿ ಮನಸ ನೋಡೇವ ತಮ್ಮನ ಮನಸ ನೋಡೇವ
ನಮ್ಮ ತಾಯಿನಲ್ಲೇಳ ಎಲ್ಲಿ ತಗದ ಇಟ್ಟಾಳ
ಕುಂತ ತಾಯಿನಲ್ಲೇ ಎದ್ದ ಹೋಗಿಲ್ಲಂದಾರ
ಮೂರು ಮಂದಿ ಅಣ್ಣ ತಮ್ಮರ ಓಡಿ ಬರುವುತಾರೇನ
ಬರಿಯಾ ನನ್ನ ಅಣ್ಣದೇರಾ ಸೀತಾಳ ಶಿವಮಜ್ಜನ
ಸೀತಾಳ ಶಿವಮಜ್ಜನ ನೀರಿಲೆ ಮಕ ಮಜ್ಜನ
ಪದಮಗೊಂಡನಂದಾರೆ ಕೈಕಾಲ ಮಾರಿ ತೊಳದಾರ
ಕೈಕಲ ಮಾರಿ ತೊಳದಾರ ಬಿದರ ಬುಟ್ಟಿಗೆ ಕುಂತಾರ
ನಾಲ್ಕು ಮಂದಿ ಅಣ್ಣ ತಮ್ಮದರು ಉಂಡಾರೆ ಬಾಳುಟ್ಟಾರ
ಉಂಡಾರೆ ಬಾಳುಟ್ಟಾರೆ ಬಾಯಿಲಿ ಸೀತಾಳ ಉಗಳ್ಯಾರ
ಬಾರೋ ಬಾರೋ ತಮ್ಮಯ್ಯಾ ನಮನಮ್ಮ ಹೊಲಕ ಹೋದೇವ
ಹೆಂತ ನೇಗಲಂದಾರ ಎಂಟು ಎತ್ತಿನ ನೇಗಲ

ಎಂಟ ಎತ್ತಿನ ನೇಗಲೆ ಕುರುಡ ಕುಂಟ ಎಳದಾವ
ಹಿಂತ ಮಾತನಾಡ್ಯಾರ ತಮ್ಮ ತಮ್ಮ ಹೊಲಕ ಹೋಗ್ಯಾರ
ಮೂರ ದಿನಮಾನಲ್ಲೇಳ ಹಿಂಗೆ ಆದಾವೇನಯ್ಯ
ಬ್ಯಾಡೋ ಬ್ಯಾಡೋ ಏ ತಮ್ಮ ತಮ್ಮನ ಭಕ್ತಿ ಅಂದಾರ
ತಮ್ಮನ ಭಕ್ತಿ ಹೆಂತದ ತಾಯಿ ಭಕ್ತಿ ಹೆಂತದ
ತುಂಬಿದ ಬಿಂದಗಿ ಇದ್ದಾವ ತುಂಬಿದ ಪುಟ್ಟನಿದ್ದಾವ
ನಾವೇ ಹೋಗಬಾರದಂದಾರ ತಮ್ಮ ಮನಸಿಗ ತಿಳದಾರ
ತಮ್ಮ ಮನಸಿಗ ತಿಳದಾರ ಊಟ ಮಾಡೀವಿ ಅಂದಾರ
ನಾವೇ ಊಟ ಮಾಡೇವ ಪದುಮಗೊಂಡಾನ ಹೇಳ್ಯಾರ
ಪದುಮಾಗೊಂಡಗಲ್ಲಪ್ಪ ನೀನೆ ಊಟ ಮಾಡಯ್ಯ
ನೀನೇ ಊಟ ಮಾಡಪ್ಪ ಅಣ್ಣದೇರು ಹೇಳುತಾರೇನ
ಒಳ್ಳೆದು ಒಳ್ಳೆದು ಅಂದಾನ ಪದುಮಗೊಂಡನಿದ್ದಾನ
ಕೈಕಾಲುಮಾರಿ ತೊಳದಾರ ಬಿದರ ಪುಟ್ಟಿಗೆ ಕುಂತಾರ
ಹುರದ ಊರಣಗಡಬೇನ ಕರದ ಕರಚಿಕಾಯೇನ
ಉಂಡಾರೆ ಬಾಳುಟ್ವಾರೆ ಬಾಯಿಲಿ ಸೀತಾಳ ಉಗಳ್ಯಾರ
ಹೆಗಲಿಗ ಬಾರಕೋಲ ಹಾಕ್ಯಾನ ಗಳಿಯದ ಬಲ್ಲೇಕ ಬಂದಾನ
ತಾಯೇಳ ಮುದ್ದವ್ವನೆ ಏನಂದು ಮಾತನಾಡ್ಯಾಳ
ಬಾರೋ ಬಾರೋ ಏಯಪ್ಪ ನನ್ನೊಂದು ಮಾತ ಕೇಳಯ್ಯಾ
ಪದುಮಾಗೊಂಡನಂದಾರೆ ಒಳ್ಳೆದು ಒಳ್ಳೇದಂದಾರ
ಹುತ್ತಿನಗಡ್ಡಿಗಲ್ಲಪ್ಪ ನೇಗಲ ಹಾಕಲಿ  ಬ್ಯಾಡಯ್ಯ
ಇದುವಂದು ಹುತ್ತಿನ ಗಡ್ಡೇನೆ ಹಂಗೆ ಉಳಿಯಲಿ ಅಂದಾಳ
ಒಳ್ಳೆದು ಒಳ್ಳೆದು ಅಂದಾನೆ ಸುಮ್ಮನಾಗುತಾನೇನ
ಒಳ್ಳೆದು ಒಳ್ಳೆದು ಅಂದಾನ ನೇಗಲ ಹೊಡಿಯುತಾನೇನ
ಒಂದು ಸಾರಿನಲ್ಲಪ್ಪ ಒಂದೇ ದಂಡಿಗ ಬಿದ್ದಾವ
ಹೋಗಿ ಹೊರಳಿ ಬಂದಾನ ತಿರುಗಿ ನೇಗಲ ಹಚ್ಯಾನ
ತಿರುಗಿ ನೇಗಲ ಹಚ್ಯಾನ ಹುತ್ತಿನ ನಡುವ ಬಿದ್ದಾವ
ನಟ್ಟ ನಡುವ ಬಿದ್ದಾವ ಎರಡು ಹೋಳನಾದವ
ಸೀಳಿ ಬೀಳುತಾವೇನೆ ಹುತ್ತಿನ ಗಡ್ಡಿ ಎರಡೇನ
ಹುತ್ತಿನ ಗಡ್ಡಿ ಸೀಳೆಯ್ಯ ಎರಡ ಹೋಲನಾದವ
ಎರಡ ಹೋಳನಾದವೆ ಕುರಿಯ ಬಯಲಿಗ ಬಂದಾವ
ಕುರಿಯ ಬಯಲಿಗ ಬಂದಾವ ಪದಮಣ್ಣ ನೋಡತಾನೇನ
ಹ್ಯಾಂಗ ಮಾಡಬೇಕೆಂದಾನೆ ಏನು ಆವೇಳು ಅಂದಾನ
ಚಗಳ ತರುವುತಾನೇನ ಸದಿಯಾ ತರುವುತಾನೇನ
ಸದಿಯಾ ಹಾಕುತಾನೇನ ಬೆಂಕಿ ಹಾಕುತಾನೇನ
ಸುಟ್ಟ ಕುರಿಗೋಳು ಅಲ್ಲೇಳ ಕರಿಯಾನಾಗುತಾವೇನ
ಸುಡಲಾರದ ಕುರಿಗೋಳು ಅಲ್ಲಪ್ಪ ಬಿಳಿಯನಾಗುತಾವೇನ

ಹೊಗಿಯ ಹತ್ತುತಾವೇನ ಕಂದನಾಗುತಾವೇನ
ಕೆಂಪ ಹುತ್ತಿನ ಗಡ್ಡಿಗೆ ಕೆಂಪ ಕುರಿಗೋಳು ಆದಾವ
ಹನ್ನೆರಡು ಕೂರಿಗಿ ಹೊಲದಾಗ ತುಂಬಿ ತುಳುಕುತಾವೇನ
ಇಲ್ಲಿಗಿ ಇದು ಒಂದು ಸಂದೇನ ಹಾಡಿದರ ಪದ ಮುಂದೇನ
ಕಳಸವಿಟ್ಟಾರ ಕವಿತ ಕಟ್ಯಾರ ಹೊನ್ನ ಜಗ್ಗುನಿ ಗೌಡರೊ
ದೇವರ ಬಂದಾರ ಬನ್ನೀರೆ !

## ಬೆಂಕಿ ಶೋಧ ಆದಾವ ಕೊಬ್ಬರಿ ಶೋಧ ಆದಾವ

ಶಿವನೆ ನಮ್ಮಯ್ಯ ದ್ಯಾವರು ಬಂದಾರ ಬನ್ನೀರೆ
ಸ್ವಾಮಿ ನಮ್ಮಯ ದ್ಯಾವರು ಬಂದಾರ ಬನ್ನೀರೆ
ಸತ್ಯ ಧರ್ಮುರ ಹಾಡೇನೆ ಯಾವಲಿ ಇರುವುತಾವೇನ
ಬಂಕಾಪುರದ ಭೂಮ್ಯಾಗೆ ಹನ್ನೆರಡು ಕೂರಿಗಿ ಹೊಲದಾಗ
ಹನ್ನೆರಡು ಕೂರಿಗಿ ಹೊಲದಾಗೆ ಪದುಮಾಗೊಂಡನಿದ್ದಾನ
ಕರಿಯಾ ಕುರಿಗೋಳು ಆದಾವೆ ಸುಟ್ಟ ಕರಿಯಾನಾದವ
ಸುಡಲಾರದ ಜಾಗನಲ್ಲೇಳ ಹಂಡಚೆಕ್ಕಿ ಹಂಡನಾದವ
ಕರಗ ಬಳಿಯಾನಾದಾವೆ ಹಂಡ ಬಿಳಿಯನಾದವ
ಹುತ್ತಿನಗಡ್ಡಿ ಬಲ್ಲೇನೆ ಪದುಮಗೊಂಡ ನೋಡ್ಯಾನ
ಬುರುವ ಕುರಿಗೋಳು ಬರುತಾವೆ ಹೋಗುವ ಕುರಿಗೋಳು ಹೋತವ
ಬಂಗಾರ ಖೋಡಿನ ಠಗರೇನ ಬಯಲಿಗ ಬರುವ ಯಾಳ್ಯಾಕ
ಸಿಂಬಿಗೋಡಿನ ಠಗರೇನ ತಳದಾಗ ಇರುವ ಯಾಳೇನ
ಹುತ್ತ ತಿರುವಿ ವಗದಾವೆ ಕುರಿಯ ವಳಗೆ ಹೋದವ
ಕುರಿಯ ವಳಗನಾದಾವೆ ಠಗರ ತಳದಾಗ ಉಳದಾವ
ತಳದಾನ ಕುರಿಗೋಳು ಅಲ್ಲಪ್ಪ ಎಲ್ಲಿಗ ಬರುತಾವೇನಯ್ಯ
ತಳದಾನ ಕುರಿಗೋಳು ಅಲ್ಲಪ್ಪ ಬೀಜನಿಲ್ಲಪ್ಪ ಬೆಳಿಯೇನ
ಬೀಜನಿಲ್ಲದ ಬೆಳಿಯೇನೆ ಒಳಗ ಒಳಗ ಬಂದಾವ
ಒಳಗ ಒಳಗ ಬಂದಾವೆ ಹಾಲಮ್ಮಿ ಆಗಿ ಹುಟ್ಯಾವ
ತಳದಾಗ ಹೆಚ್ಚುತಾವೇನೆ ಮ್ಯಾಲ ಹೆಚ್ಚುತಾವೇನ
ಪದಮಾಗೊಂಡನಲ್ಲಪ್ಪ ಕುರಿಯಾ ಬೆನ್ನ ಹಿಡದಾನ
ಕುರಿಯ ಈಯುತಾವೇನ ಮರಿಯಾ ಕುಡಿಯುತಾವೇನ
ಬದುಕಿನ ಹಿಂದ ನಡದಾನೆ ಬಾಳುವಿ ಹಿಂದ ನಡದಾನ
ಊರ ಬಿಡುವುತಾನೇನ ಕೇರಿ ಬಿಡುವುತಾನೇನ
ಹೊತ್ತ ಮುಣಗುತಾವೇನ ಕುರಿಯಾ ಹೋಗುತಾವೇನ
ಕುರಿಯ ಮುಂದನಿದ್ದಾವೆ ಪದಮಗೊಂಡ ಹಿಂದೇನ
ಹೊತ್ತ ಮುಣಗುತಾವೇನೆ ಕುರಿಯಾ ಚಪ್ಪ ಹೊಡದಾವ
ಕುರಿಯಾ ಚಪ್ಪ ಹೊಡದಾವೆ ಮರಿಯಾ ಚಪ್ಪ ಹೊಡದಾವ

ಹೊತ್ತ ಮುಣಗುತಾವೇನ ಕತ್ತಲಾಗುತಾವೇನ
ಸುಳ್ಳಿ ಹೊಡದ ನಿಂತಾವೆ ಚಪ್ಪ ಹೊಡದ ನಿಂತಾವ
ಕುರಿಯ ಮುಂದ ಮಾಡಿದ್ದ ಪದಮಾಗೊಂಡ ಮನಗಿದ್ದ
ಮಲ್ಲನಮನಗುತಾನೇನೆ ಹೊತ್ತಾರೆ ಮುಂಜಾವಿ ಎದ್ದಾನ
ಹೊತ್ತಾರೆ ಮುಂಜಾನಿ ಎದ್ದಾನ ಕುರಿಯ ಚಾಗುತಾವೇನ
ಕುರಿಯ ಮುಂದ ನಡದಾವೆ ಪದುಮಣ್ಣ ಹಿಂದ ನಡದಾನ
ಹೊಟ್ಟೆಗನ್ನ ಇಲ್ಲೇ ಬಾಯಿಗ ನೀರ ಇಲ್ಲೇಳ
ಮೂರ ದಿನಮಾನ ಅಲ್ಲೇಳ ಕುರಿಯಾಗ ಇರುವುತಾನೇನ
ಕುರಿಯಾಗ ಇರುವುತಾನೇನ ಹ್ಯಾಂಗ ಮಾಡಬೇಕಂದಾನ
ಅನ್ನ ಮರ್ತ ಬಿಟ್ಟಾನ ನೀರ ಮರ್ತ ಬಿಟ್ಟಾನ
ತಾಯಿನ ಮರ್ತ ಬಿಟ್ಟಾನೆ ತಂದಿನ ಮರ್ತ ಬಿಟ್ಟಾನ
ಹೆಂಡರ ಮರ್ತಬಿಟ್ಟಾನೆ ಮಕ್ಕಳ ಮರ್ತಬಿಟ್ಟಾನ
ಬದುಕು ನೆನವುತಾನೇನ ಬಾಳುವಿ ನೆನವುತಾನೇನ
ಮೂರು ದಿವಸ ದಿನಮಾನ ಕುರಿಯ ಹಿಂದ ತಿರಗ್ಯಾನ
ಮುಕ್ಕಣ್ಣ ಶಿವರಾಯನೆ ಅರುವ ಸದ್ಯಾಣಾದವ
ಮೂರ ದಿವಸನಾದರ ಬಾಯಿಗ ನೀರ ಇಲ್ಲೇನ
ಬಾಯಿಗ ನೀರ ಇಲ್ಲೇಳ ಹೊಟ್ಟೆಗ ಅನ್ನ ಇಲ್ಲೇಳ
ಕುರಿಯಾ ಹಿಂದ ನಡದಾನ ಬಾಳುವೆ ಮುಂದ ನಡದಾನ
ಮುಕ್ಕಣ್ಣ ಶಿವರಾಯನ ಕೈಲಾಸ ಇಟ್ಟು ಇಳದಾನ
ಕೈಲಾಸ ಬಿಟ್ಟು ಇಳದಾನ ಪದುಮಾಗೊಂಡನ ಮುಂದೇನ
ಪದುಮಾಗೊಂಡನ ಮುಂದೇನ ಶಂಕರ ಬರುವುತಾರೇನ
ಪದುಮಾಗೊಂಡನಂದರ ಕಣ್ಣಿಲಿ ನೋಡುತಾನೇನ
ಗಟ್ಟಿ ಪಾದ ಹಿಡದಾನೆ ಮಂಡಿಲಿ ಹಸ್ತ ಇಟ್ಟಾನ
ಪದುಮಾಗೊಂಡನಲ್ಲಪ್ಪ ಎದ್ದನಿಂದ್ರುತಾನೇನ
ಬಾರೋ ಬಾರೋ ನನ್ನಪ್ಪ ಹೊಟ್ಟಿ ಹಸುವನಾದವ
ಮೂರ ದಿವಸನಾದವ ಬಾಯಿಗ ನೀರ ಇಲ್ಲಪ್ಪ
ಮುಕ್ಕಣ್ಣ ಶಿವರಾಯನ ಪದುಮಾಗೊಂಡಗ ಹೇಳ್ಯಾನ
ಅನ್ನ ಯಾವಲಿ ಅಂದಾನೆ ನೀರ ಯಾವಲಿ ಅಂದಾನ
ಬುತ್ತಿ ಯಾವಲಿ ಅಂದಾನೆ ಮಕ್ಕಳು ಯಾವಲಿ ಅಂದಾನ
ಅಂಗಳ ಯಾವಲಿ ಅಂದಾನೆ ಮನಿಯಾ ಯಾವಲಿ ಅಂದಾನ
ಇಲ್ಲದ ಬುತ್ತಿ ಮಾರಾಯ ಎಲ್ಲಿಂದ ತರಬೇಕಂದಾನ
ಹಗಲು ನಡದಾವಂದಾನೆ ರಾತರಿ ನಡದಾವಂದಾನ
ಇಂದಿಗ ಮೂರ ದಿನಮನೆ ಮನಿಯಾ ಮುಗಿಸಿ ಬಂದೇನ
ಎಲ್ಲಿಗ ಹೋಗಬೇಕಂದಾರ ಯಾವಕಡಿ ಹೋಗಬೇಕಂದಾರ
ಹೊಟ್ಟಿ ಹೊಟ್ಟಿ ಬಡಕೊಂಡ ಬಾಯಿ ಬಾಯಿ ಬಡಕೊಂಡ
ಹೊಟ್ಟಿ ಹೊಸನಾದವೆ ಬಾಯಿಗ ನೀರ ಇಲ್ಲೇಳ

ಮದುಮಾಗೊಂಡನಲ್ಲಪ್ಪ ಊರಿಗೆ ಹೋಗತಿನಿ ಅಂದಾನ
ಯಾವ ದಿಕ್ಕಿಗ ಹೊಂಟಿದೆ ಯಾವ ಊರಿಗೆ ಹೋಗುತಿದೆ
ಊರ ಯಾವಲಿ ಅಂದಾನೆ ಮನಿಯಾ ಯಾವಲಿ ಅಂದಾನ
ಪದುಮಾಗೊಂಡನಲ್ಲೇಳ ಹುಚ್ಚ ಹಿಡಿದ ನಿಂತಾನ
ಮುಕ್ಕಣ್ಣ ಶಿವರಾಯನ ಏನಂದಾಡುತಿದ್ದಾನ
ಮುಕ್ಕಣ್ಣ ಶಿವರಾಯನ ಗುಡಿಯ ವಳಗೆ ಅಂದಾನ
ಹುಸಿಯ ಹಾಲನಿದ್ದಾವೆ ಬಿಸಿಯಾ ಗಿಣ್ಣ ಮಾಡಾರೆ
ಬೆಂಕಿ ಬೇಕೇಳಂದಾನ ಖೊಬ್ಬರಿ ಬೇಕೇಳಂದಾನ
ಖೊಬ್ಬರಿ ಎಲ್ಲಿಂದ ತರಬೇಕ ಬೆಂಕಿ ಎಲ್ಲಿಂದ ತರಬೇಕ
ಪದುಮಾಗೊಂಡನಲ್ಲೇಳ ಮಾದೇವನ ಕೇಳುತಾನೇನ
ಮಾದೇವ ಹೇಳತಿದ್ದನೆ ಪದುಮಗೊಂಡ ಕೇಳ್ಯಾನ
ಗುಡ್ಡಕ ಹೋಗಲಿ ಬೇಕಪ್ಪ ಗುಂಡಿನ ಮ್ಯಾಲ ಕೊಡಯ್ಯ
ಗುಂಡಿನ ಮ್ಯಾಲ ಕುಂತರ ಬೆಂಕಿ ಶೋಧ ತಿಳದಾವೆ
ಬೆಂಕಿ ಶೋಧ ತಿಳಿದಾವ ಖೊಬ್ಬರಿ ಶೋಧ ತಿಳಿದಾವ
ಬೆಂಕಿ ಶೋಧ ತಿಳಿದಾವ ಖೊಬ್ಬರಿ ಶೋಧ ತಿಳದಾವ
ಒಳ್ಳೆದು ಒಳ್ಳೆದು ಅಂದಾನೆ ನಾನು ಬರುವರಿಗ ಅಂದಾನ
ನಾನು ಬರುವರಿಗಲ್ಲೇಳ ಬದುಕ ಯಾರ ಕಾಯಿದಾರ
ಬದುಕ ಯಾರು ಕಾಯಿದಾರೆ ಬಾಳುವೆ ಯಾರು ಕಾಯಿದಾರ
ನೀನು ಬರುವರಿಗಲ್ಲಪ್ಪ ನಾನೇ ಕಾಯಿತೀನಿ ಅಂದಾನ
ನಾನೇ ಕಾಯತೀನಿ ಅಂದಾನೆ ನಾನೆ ಇರತೀನಿ ಅಂದಾನ
ಕೈಯ್ಯಾಗ ಬಡಗಿ ಹಿಡದಾನ ಮಾಹಾದೇವ ಕಡಿಗಿ ನಿಂತಾನ
ಮಹಾದೇವ ಕಡಿಗಿ ನಿಂತಾನ ಕುರಿಯ ಕಾಯತಿದ್ದಾನ
ಗುಡ್ಡಕ ಹೋಗುತಾನೇನ ಗುಂಡಿನ ಮ್ಯಾಲೆ ಕುಂತಾನ
ದೊಡ್ಡ ಬಂಡಿ ವಳಗೇನ ಡಬ್ಬುಣ ಪಿಂಡ ಹೊಗಿಯೇನ
ಡಬ್ಬುಣ ಪಿಂಡ ಹೊಗಿಯೇನ ಹೊಗಿಯಾ ಕಾಣುತಾವೇನ
ಹೊಗಿಯ ಕಾಣುತಾವೇನ ಗುಂಡ ಇಳಿಯುತಾನೇನ
ಗುಂಡ ಇಳಿಯುತಾನೇನ ಮ್ಯಾಲನಾಸಿ ಬಂದಾನ
ಏಳ ಗಜದ ಕಲ್ಲೇನ ಈಡ ಬಾಗಲ ಇದ್ದಾವ
ಈಡ ಬಾಗಲಿದ್ದಾರ ಬಟ್ಟಲಿ ಹೋಳಮಾಡ್ಯಾನ
ಬಟ್ಟಲಿ ಹೋಳ ಮಾಡ್ಯಾನೆ ಒಳಗ ಹೆಣ್ಣಮಗಳೇನ
ಹೆಣ್ಣುಮಗಳ ಮೌವ್ವದಗೊಂಬಿ ಬಯಲಿಗ ಬರುವುತಾಳೇನ
ಯಾವ ದೇಶದ ಅರಸರ ಎಲ್ಲಿಂದ ಬಂದಿದಿ ಅಂದಾಳ
ನಮ್ಮ ತಆಯಿ ಬಂದಾರ ನಿನ್ನಗ ನುಂಗ್ಯಾಳಂದಾಳ
ಹೊತ್ತನಾಗ್ಯಾವಂದಾಳೆ ಯಾಳ್ಯಾನಾದವಂದಾಳ
ಯಾರ ಬರಲೇಳು ಅಂದಿದ್ದ ತಾಯಿ ಬರಲೇಳು ಅಂದಿದ್ದ
ನನಗೆ ಬೆಂಕಿ ಕೊಡಬೇಕ ಕೊಬ್ಬರಿ ಕೊಡಬೇಕಂದಾನ

ಬೆಂಕಿ ಕೊಬ್ಬರಿ ಕೊಟ್ಟರ ನಿನಗೂ ಪುಣ್ಯಬಂದಾವ
ಒಳ್ಳೆದು ಒಳ್ಳೇದಂದಾಳೆ ಹೊರಳಿ ಓಡಿ ಹೋದಾಳ
ಹೊರಳಿ ಗವಿಯಕ ಹೋದಾ ಬೆಂಕಿ ತರುವುತಾಳೇನ
ವಜ್ರ ವೈಡೂರ ಹಾಕೇನೆ ಮುತ್ತು ಮಾಣಿಕ ಹಾಕ್ಯಾರ
ಮುತ್ತು ಮಾಣಿಕ ಹಾಕ್ಯಾರ ಮಾಲಿಗ ಮುತ್ತ ಸುರವ್ಯಾರ
ಮಾಲಿಗಿ ಮುತ್ತ ಸುರುವ್ಯಾರ ತೊಂಟೆಂಬುದು ರಾಕ್ಷಸ
ರಾಕ್ಷಸ ಬರುವ ಯಾಳ್ಯಾಕೆ ಬೆಂಕಿ ಅಡ್ಡ ತಂದಾಳ
ಬೆಂಕಿ ಕೊಡುವುತಾಳೇನ ಕೊಬ್ಬರಿ ಕೊಡುವುತಾಳೇನ
ಕೊಬ್ಬರಿ ಕೊಟ್ಟ ಯಾಳ್ಯಾಕೆ ಏನಂದಾಡತಾರೇನ
ಬೆಂಕಿ ಕೊಟ್ಟ ಯಾಳ್ಯಾಕ ಏನಂದಾಡತಾರೇನ
ಬೆಂಕಿ ವೈತೀನಿ ಅಂದಾನೆ ಖೊಬ್ಬರಿ ವೈತೀನಿ ಅಂದಾನೆ
ಬಾರೋ ಬಾರೋ ಮಾರಾಯ ನೀಯೇನ ಮಾಡತೀದಿ ಅಂದಾಳ
ನಮ್ಮ ಕುರಿಯ ವಳಗೇನ ಹಸಿಯ ಹಾಲನಿದ್ದಾವ
ಹಸಿಯ ಹಾಲ ಇದ್ದಾವ ಬಿಸಿಯ ಗಿಣ್ಣ ಮಾಡೇವ
ಬಿಸಿಯ ಗಿಣ್ಣ ಮಾಡೇವ ಊಟ ನಾವು ಮಾಡೇವ
ಹೆಣಮಗಳ ಮೌವದ ಗೊಂಬಿ ನುಡದಾಳೆ ಮಾತಾಡ್ಯಾಳ
ನೀವ ಊಟ ಮಾಡಿದರ ಖೊಬ್ಬರಿ ವಳಗ ಅಂದಾಳ
ಖೊಬ್ಬರಿ ವಳಗನಲ್ಲಪ್ಪ ನೀರ ಹಾಕಲಿ ಬಾರದ
ನೀರ ಹಾಕಲಿ ಬಾರದ ಉಳದ ಪರಸದಲ್ಲೇಳ
ಉಳದ ಪರಸದಲ್ಲಪ್ಪ ನನ್ನಗ ತರಬೇಕಂದಾಳ
ಒಳ್ಳೆದು ಒಳ್ಳೆದು ಅಂದಾನೆ ಪದುಮಗೊಂಡ ಹಿಡದಾನ
ಬೆಂಕಿ ಕೈಯಾಗ ಹಿಡದಾನೆ ಖೊಬ್ಬರಿ ಕೈಯಾಗ ಹಿಡದಾನ
ಗುಂಡ ಹಿಡಿಯುತಾನೇನ ಗುಡ್ಡ ಇಳಿಯುತಾನೇನ
ಬಯಲಿಗ ಬರುವುತಾನೇನ ಕುರಿಯ ಬಲ್ಲಿಗ ಬಂದಾನ
ಕುರಿಯ ಬಲ್ಲಿಗ ಬಂದಾನೆ ಬೆಂಕಿ ಇಳಿಯುತಾನೇನ
ಬೆಂಕಿ ತರುವುತಾನೇನ ಖೊಬ್ಬರಿ ಕೈಯಾಗ ತಂದಾನ
ಮೂರ ಕಣ್ಣಿನ ಮುಕ್ಕಣ್ಣ ಏನಂದಾಡುತಾನೇನ
ಏನಂದಾಡುತಾನೇನ ಏನಂದೇಳುತ್ತಿದ್ದನೆ
ಮುಕ್ಕಣ್ಣ ಶಿವರಾಯನ ಚಂದರಗಿಂಡಿಯ ಹಿಡಿಯಪ್ಪ
ಚಂದರಗಿಂಡಿಯ ಹಿಡಿಯಪ್ಪ ಪದುಮಾಗೊಂಡ ಹಿಡದಾನ
ಕೈಯಾಗ ಖೊಬ್ಬರಿ ಹಿಡದಾನ ತೆಳಗೆ ಕೊಡುತಾನೇನ
ಎರಡು ತೊಡಿಯ ನಡುವೇನ ಕೊಬ್ಬರಿ ಇಡುವುತಾನೇನ
ಖೊಬ್ಬರಿ ಇಡುವುತಾನೇನ ಬಲಗೈಲಿ ಕಾಲ ಹಿಡಿದಾನ
ಎಡಗೈ ಕೆಚ್ಚಲದೊಳಗೇನ ಕೈಯ ಹಾಕುತಾನೇನ
ಎರಡು ಕೈಯಲಿಂದೇನ ಹಾಲ ಹಿಂಡುತಾನೇನ
ಹಾಲ ಹಿಂಡುತಾನೇನ ಮೂರ ಕುರಿಗೋಳು ಹಿಂಡ್ಯಾನ

ಮೂರು ಕುರಿಗೋಳು ಅಲ್ಲಪ್ಪ ಮುಕ್ಕಣ್ಣ ಶಿವರಾಯ ಹಿಂಡ್ಯಾನ
ತಾನೇ ಕಾಯಿದ ಕುರಿಗೋಳು ಖುನಾಹಿಡದ ಹಿಂಡ್ಯಾನ
ಬಾರೋ ಬಾರೋ ಪದಮಣ್ಣ ನೀನು ಹಿಂಡಲಿ ಬೇಕಯ್ಯ
ಪದುಮಗೊಂಡನ ಕೈಯಾಗೆ ಖೊಬ್ಬರಿ ಕೊಡುವುತಾನೇನ
ಖೊಬ್ಬರಿ ಕೊಡುವುತಾನೇನ ಮುಕ್ಕಣ್ಣ ಶಿವರಾಯನ
ಮುಕ್ಕಣ್ಣ ಶಿವರಾಯನ ಪದುಮಗ ಹೇಳುತಾನೇನ
ಹಂಡಬಂಡ ಕುರಿಯೇನ ಯಾವಲಿ ಆದ ನೋಡಪ್ಪ
ಯಾವಲಿ ಆದ ನೋಡಪ್ಪ ಕಣ್ಣ ಮುಸುಕ ಕುರಿಯೇನ
ಪದುಮಗೊಂಡನಲ್ಲೇಳ ನಾಯೇನ ಬಲ್ಲೇನಂದಾನ
ಕಡಿಗಿ ನಿಂತಾದಂದಾನ ಮಹಾದೇವ ಓಡಿ ಹೋದನ
ಮಹಾದೇವ ಹೋಗಿ ಹಿಡಿದಾನ ಕಳ್ಳ ಬಂದ ಕುರಿಯೇನ
ಕಳ್ಳ ಬಂದ ಕುರಿಯೇನ ತೆಕ್ಕಿಲಿ ಹೋಗಿ ಹಿಡದಾನ
ಪದುಮಾಗೊಂಡನಲ್ಲೇಳ ಬಲಗೈ ಖೊಬ್ಬರಿ ಹಿಡದಾನ
ಎಡಗೈ ಕಾಲಹಿಡಿದಾನೆ ತೆಳಗ ಕುಂದ್ರತಾನೇನ
ಮಳಕಾಲಗೊಳಗನಲ್ಲಪ್ಪ ಖೊಬ್ಬರಿ ಹಿಡಿಯುತಾನೇನ
ಬಲಗೈ ಕಾಲ ಹಿಡಿದಿದ್ದ ಎಡಗೈ ಕಾಲ ಹಿಡಿದಿದ್ದ
ಎಡಗೈ ಕಾಲ ಬಿಟ್ಟಿದ್ದ ಕೆಚ್ಚಲದೊಳಗೆ ಕೈಯ ಹಾಕಿದ್ದ
ಕೆಚ್ಚಲದೊಳಗೆ ಕೈಯ ಹಾಕಿ ಎರಡು ಕೈಲಿ ಹಿಂಡ್ಯಾನ
ಐದ ಕುರಿಗೋಳು ಅಲ್ಲಪ್ಪ ಇಬ್ಬರು ಹಿಂಡುತಾರೇನ
ಮುಕ್ಕಣ್ಣ ಶಿವರಾಯನ ಪದುಮಾಗ ಹೇಳುತಾನೇನ
ಕುರಿಯಾ ಖೂನ ಮಾಡ್ಯಾನೆ ಮರಿಯಾ ಖೂನ ಮಾಡ್ಯಾನ
ಹಾಲ ಹಿಂಡದು ಹೇಳ್ಯಾನ ಹರವಿ ತುಂಬದು ಹೇಳ್ಯಾನ
ಮುಕ್ಕಣ್ಣ ಶಿವರಾಯನ ಬಯಲಿಗ ಬರುವುತಾನೇನ
ಬಾರೋ ಬಾರೋ ಪದುಮಣ್ಣ ಬೆಂಕಿಯ ಮ್ಯಾಲ ಇಡಬೇಕ
ಖೊಬ್ಬರಿ ತರುವುತಾನೇನ ಬೆಂಕಿಯ ಮ್ಯಾಲೆ ಇಟ್ಟಾರ
ಬೆಂಕಿಯ ಮ್ಯಾಲೆ ಇಟ್ಟಾನ ಹಸಿಯ ಹಾಲ ಹೋದವ
ಹಸಿಯ ಹಾಲ ಹೋದಾವೆ ಬಿಸಿಯ ಗಿಣ್ಣನಾದವೆ
ಬಿಸಿಯ ಗಿಣ್ಣನಾದವ ಮುಕ್ಕಣ್ಣ ಶಿವರಾಯನ
ಬಾರೋ ಬಾರೋ ಶಿವರಾಯ ಊಟ ಮಾಡೇಳು ಅಂದಾನ
ಮುಕ್ಕಣ್ಣ ಶಿವರಾಯನೆ ನುಡದಾನೆ ಮಾತಾಡ್ಯಾನ
ಬಾರೋ ಬಾರೋ ಏಯಪ್ಪ ನನ್ನಗ ಹಸುವನಿಲ್ಲಯ್ಯ
ಬಾರೋ ಬಾರೋ ಪದುಮಣ್ಣ ನನಗೆ ಹಸುವನಾಗಿಲ್ಲ
ಪದುಮಾಗೊಂಡನಲ್ಲಪ್ಪ ಏನಂದಾಡುತಾನೇನ
ನನಗ ಯಾಕಬೇಕಪ್ಪ ನನಗ ಹಸುವನಿಲ್ಲಯ್ಯ
ನನಗೆ ಹಸುವನಿಲ್ಲಪ್ಪ ಹ್ಯಾಂಗ ಮಾಡಲಿ ನೋಡಯ್ಯ
ಮಾದೇವ ಒಲ್ಲೇನಂದಾರೆ ಮುಂದಕ ಹೋಗತೀನಿ ಅಂದಾನ

ನೀನು ಉಂಡರಲ್ಲಪ್ಪ ನಾನು ಉಣತಿನಿ ಅಂದಾನ
ಇಬ್ಬರು ಕೂಡಿ ಕುಂತಾರೆ ಖೊಬ್ಬರಿ ಮುಂದ ಇಟ್ಟಾರ
ಖೊಬ್ಬರಿ ಮುಂದ ಕುಂತಾರೆ ಕೈಯಾಗ ಹಿಡಿಯತಾರೇನ
ಕೈಯಾಗ ಹಿಡಿಯುತಾರೇನ ಊಟ ಮಾಡುತಾರೇನ
ಪದುಮಗೊಂಡ ಮಾದೇವ ಊಟ ಮಾಡುತಾರೇನ
ಖೊಬ್ಬರಿ ವಳಗ ಮಾರಾಯ ಒಂದೇ ತುತ್ತ ಉಳದಾವ
ಒಂದೇ ತುತ್ತ ಉಳದಾವೆ ನೀರ ಕುಡಿಯುತಾರೇನ
ಸೀತಾಳ ಶಿವಮಜ್ಜಲ ನೀರ ಕುಡಿಯುತಾರೇನ
ಬೆಂಕಿ ನೋಡತಾರೇನ ಖೊಬ್ಬರಿ ಕೈಯಾಗ ಹಿಡದಾರ
ಕೊಟ್ಟು ಬರತೀನಿ ಅಂದಾನೆ ಕುರಿಯಾ ಕಾಯಬೇಕಂದಾನ
ಮಹಾದೇವ ಹೇಳುತಾನೇನ ನಾನು ಕಾಯಿತೀನಿ ಅಂದಾನ
ನೀನು ಹೋಗಿ ಬರುತನಕ ಕುರಿಯ ಕಾಯಿತೀನಿ ಅಂದಾನ
ಕೈಯಾಗ ಖೊಬ್ಬರಿ ಹಿಡದಾನ ಗುಡ್ಡಕ ಹೋಗುತಾನೇನ
ಗುಡ್ಡಕ ಹೋಗುತಾನೇನ ಗವಿಯ ಮುಂದ ನಿಂತಾನ
ಗವಿಯ ಮುಂದ ನಿಂತಾನ ನಾರಿಗ ಕರಿಯುತಾನೇನ
ಹೆಣ್ಣು ಮಗಳ ಮೌವ್ವದ ಗೊಂಬಿ ಓಡಿ ಬರುವುತಾಳೇನ
ಓಡಿ ಬಂದ ಯಾಳ್ಯಾಕ ಖೊಬ್ಬರಿ ಕೊಡುವುತಾನೇನ
ಖೊಬ್ಬರಿ ಕೈಯಾಗ ಹಿಡಿದಾಳ ಕೈಯಾಗ ಹಿಡಿಯುತಾಳೇನ
ಒಂದೇ ತುತ್ತ ಪರಸಾದ ತಾನೆ ಊಟ ಮಾಡ್ಯಾಳೆ
ಊಟ ಮಾಡುತಾಳೇನ ಹ್ಯಾಂಗ ಮಾಡಬೇಕಂದಾಳ
ಹಿಂತ ಪಾಂಚಾಮೃತೇನ ಎಲ್ಲಿ ಸಿಗಬೇಕಂದಾಳ
ಎಲ್ಲಿ ಸಿಗಬೇಕಂದಾಳೆ ನಮ್ಮಗೆಲ್ಲಿ ದೊರತಾವಂದಾಳ
ಹಿಂತ ಪಾಂಚಾಮೃತೇನ ಎಲ್ಲಿ ಸಿಗಬೇಕಂದಾಳ
ಎಲ್ಲಿ ಸಿಗಬೇಕಂದಾಳೆ ನಮ್ಮಗೆಲ್ಲಿ ದೊರತಾವಂದಾಳ
ಹಿಂತ ಪಂಚಾಮೃತ ಇವನಿಗೆ ಬಿಡಬಾರದಂದಾಳ
ಇವನಿಗೆ ಬಿಡಬಾರದಂದಾಳೆ ಬೆನ್ನು ಹತ್ತುತಾಳೇನ
ಪದುಮಾಗೊಂಡ ಮುಂದೇನ ಶಿವಲಿಂಗಮ್ಮ ಹಿಂದೇನ
ಶಿವಲಿಂಗಮ್ಮ ಹಿಂದೇನ ಪದುಮಗೊಂಡ ಮುಂದೇನ
ಗುಡ್ಡ ಇಳಿಯುತಾರೇನ ಕೊಳ್ಳ ಇಳಿಯುತಾರೇನ
ಕೊಳ್ಳ ಇಳಿಯುತಾರೇನ ಗುಡ್ಡ ಇಳಿಯುತಾರೇನ
ಬಯಲಿಗೆ ಹೋಗುವ ಯಾಳ್ಯಾದಾಗ ರಕ್ಕಸ ಬರುವುತಾವೇನ
ರಾಕ್ಷೇಸ ಬಂದಾದ ಗುಡ್ಡ ಏರಿ ನಿಂತಾದ
ಗುಡ್ಡ ಏರಿ ನಿಂತಾದ ಬಾಯಿ ತೆರಿಯುತಾದೇನ
ಏಳುಕೊಳ್ಳ ದಾಟ್ಯಾರ ಏಳ ನೆಲಿಯ ದಾಟ್ಯಾರ
ಕೊಳ್ಳ ಕೆದರುತಾದೇನ ಬಂಡಿ ಒಗಿಯುತಾದೇನ
ಬಾಯಿ ತೆರದಾದಲ್ಲಪ್ಪ ಕೈಯ ಎತ್ತಿ ಹಿಡದಾದ

ಕೈಯ ಎತ್ತಿ ಹಿಡದಾದ ಓಡಿ ಹೋಗುತಾದೇನ
ಮೂರ ನಂಬರ ಬಟ್ಟೇನ ಎತ್ತಿ ಹಾಕುತಾದೇನ
ಪದುಮಗೊಂಡ ಮುಂದೇನ ಶಿವಲಿಂಗಮ್ಮ ಹಿಂದೇನ
ಹಿಂದ ಮುಂದನಾಗ್ಯಾರ ಕುರಿಯ ಬಲ್ಲಿ ಓಡ್ಯಾರ
ಕುರಿಯ ಬಲ್ಲಿನಲ್ಲಪ್ಪ ರಾಕ್ಷಸ ಓಡಿ ಬಂದಾದ
ಕಣ್ಣು ಮುಚ್ಚುತಾದೇನ ಬಾಯಿ ಕಿರಿಯತಾದೇನ
ನಡುವ ಕುರಿಯಾಗ ಹೋಗ್ಯಾನ ಮರಿಯಾ ಹಿಂಗಾಲ ಹಿಡದಾನ
ಮರಿಯ ಹಿಂಗಾಲ ಹಿಡದಾನೆ ಜಾಡಿಸಿ ವಗಿಯುತಾನೇನ
ಜಾಡಿಸಿ ವಗಿಯುತಾನೇನ ರಾಕ್ಷಸ ಬಾಯಿ ಮ್ಯಾಲೇನ
ರಾಕ್ಷಸ ಬಾಯಿ ಮ್ಯಾಲೇನ ಮರಿಯ ಬೀಳುತಾದೇನ
ನನಗ ದೊರತಾರಂದಾದೆ ನನ್ನಗ ಸಿಕ್ಕಾರಂದಾದ
ನನ್ನಗ ಸಿಕ್ಕಾರಂದಾದೆ ಮರಿಯಾ ನುಂಗುತಾದೇನ
ಬಾಯಿ ತೆರದ ಬಂದಾನೆ ಕಣ್ಣ ಮುಚ್ಚಿ ಬಂದಾನ
ಮರಿಯಾ ತಿನ್ನುತಾದೇನ ಪದುಮಾಗೊಂಡ ನೋಡ್ಯಾನ
ನನಗ ಹೆಣ್ಣ ಕೊಟ್ಟೇನ ನಿನಗ ಮರಿಯ ಬಿಟ್ಟೇನ
ಮಾನ ಕೊಟ್ಟೇನಂದಾನ ಮರಿಯಾದಿ ಕೊಟ್ಟೇನಂದಾನ
ನಿನ್ನ ಹೊಟ್ಟೆ ವಳಗೇನ ಹಸಿದು ತಿಂದ ಮ್ಯಾಲೇನ
ಹಸಿದ ತಿಂದರಲ್ಲೇಳ ಬಿಸಿದಾಗಲಿ ಅಂದಾನ
ಆಶೀರ್ವಾದ ಮಾಡ್ಯಾನ ತ್ವಾಳನಾಗಿ ಕುಂತಾನ
ಹಗಲು ಬರಬೇಕಂದಾನ ರಾತುರಿ ಬರಬೇಕಂದಾನ
ವಚನ ಕೊಡುವುತಾನೇನ ತ್ವಾಲನಾಗಿ ಹೋದವೆ
ತ್ವಾಳನಾಗಿ ಹೋದಾಗ ಪದುಮಾಗೊಂಡ ಹೇಳ್ಯಾನ
ಮುಕ್ಕಣ್ಣ ಶಿವರಾಯನ ಏನಂದಾಡುತಿದ್ದಾನ
ಹೆಣ್ಣ ಮಗಳು ವೌವ್ವದ ಗೊಂಬಿಗ ಕರಕೊಂಡು ಬಂದಿದಿ ಅಂದಾನ
ಕರಕೊಂಡು ಬಂದಿದಿ ಅಲ್ಲಪ್ಪ ಹ್ಯಾಂಗ ಮಾಡಬೇಕಂದಾನ
ಶಿವಲಿಂಗಮ್ಮನಲ್ಲೇಳ ಪದುಮಾಗೊಂಡಗಂದರ
ಪದುಮಾಗೊಂಡಗಲ್ಲೇಳ ಲಗ್ಗನ ಮಾಡಬೇಕಂದಾರ
ಹಿಂತ ಮಾತನಲ್ಲಪ್ಪ ಮಾಹಾದೇವ ಹೇಳುತಾನೇನ
ಮಹಾದೇವಗ ಹುಡುಕುತಲ್ಲೇಳ ಪಾರ್ವತಿ ಬರುವುತಾಳೇನ
ವಿಷ್ಣು ಬರುವುತಾನೇನ ಬ್ರಹ್ಮ ಬರುವುತಾನೇನ
ರುದ್ದರ ಬರುವುತಾನೇನ ಮಹೇಶ್ವರ ಬಂದಾನ
ಐದ ಮಂದಿನಾದರ ಪಾರ್ವತಿ ಬರುವುತಾಳೇನ
ಪಾರ್ವತಿ ಬರುವುತಾಳೇನ ಕಳಸ ಹಿಡಿಯುತಾಳೇನ
ನಾಲ್ಕು ಮೂಲಿಗಳಲ್ಲೇಳ ನಾಲ್ಕು ಮಗಿಯ ಇಟ್ಟಾರ
ನಾಲ್ಕು ಮಗಿಯ ಇದ್ದರ ಸುರಗಿ ಸುತ್ತಬೇಕಂದಾರ
ಸುರಗಿ ಸುತ್ತ ಬೇಕಂದಾರ ನೂಲ ಸಿಗಲು ಇಲ್ಲೇನ

ನೂಲ ಸಿಗಲಿಲ್ಲೇಳ ಅಳ್ಳಿ ದೊರಕಲಿಲ್ಲೇನ
ಅಳ್ಳಿ ದೊರಕಲಿಲ್ಲೇನ ಕುರಿಯ ಉಣ್ಣೆ ತಂದಾರ
ಕುರಿಯ ಉಣ್ಣೆ ತಂದಾರೆ ಮರಿಯ ಉಣ್ಣೆತಂದಾರ
ಬಿರಕಿ ಮಾಡುತಾರೇನ ನೂಲ ಮಾಡುತಾರೇನ
ನೂಲ ಮಾಡುತಾರೇನ ಸುರಗಿ ಸುತ್ತುತಾರೇನ
ಶಿವಲಿಂಗಮ್ಮನ ಲಗ್ಗನಕ ಉಣ್ಣೆ ಕಂಕಣಾದವ
ಉಣ್ಣೆ ಕಂಕಣಾದವೆ ಸುರಗಿ ಸುತ್ತುತಾರೇನ
ಕೈಯಾಗ ಉಣ್ಣೆ ಕಟ್ಯಾನೆ ಮುಂಗೈಗೆ ಸುರಗಿ ಕಟ್ಯಾನ
ಸುರಗಿ ಉಣ್ಣೆ ಕಟ್ಯಾನೆ ಮುಂಗೈಗ ಸುರಗಿ ಕಟ್ಯಾನ
ಸುರಗಿ ಸುತ್ತುತಾರೇನ ಕೈಗೆ ಕಟ್ಟುತಾರೇನ
ಕೈಗಕಟ್ಟುತಾರೇನ ತಾಯಿ ಮಕ್ಕಳು ಮಿನದಾರ
ಐದು ಮಂದಿ ಕೂಡ್ಯಾರ ಲಗ್ಗನ ಮಾಡುತಾರೇನ
ಲಗ್ಗನ ಮಾಡುತಾರೇನ ಉಣ್ಣೆ ಕಂಕಣದಾರ
ಪದುಮಾವತಿಯನಲ್ಲೇಳ ಪದುಮಗೊಂಡನಂದರ
ಶಿವಲಿಂಗಮ್ಮಗಲ್ಲೇಳ ಕಾಲುಂಗರ ಇಡುವುತಾರೇನ
ಕಾಲ ಪಿಲ್ಯಾನಿಟ್ಟಾರೆ ಕೈಗಿ ಬಳಿಯಾನಿಟ್ಟಾರ
ತಾಳಿ ಕಟ್ಟುತಾರೇನ ಮುತ್ತ ಇಡುವುತಾರೇನ
ಮದುಮಗಳ ಆಗುತಾಳೆನ ಪದುಮಾಗೊಂಡನ ಸಂಗಟ
ಲಗ್ಗನಾಗುತಾಳೇನ ಮುಕ್ಕಣ್ಣ ಶಿವರಾಯನ
ಜತಿಯಾನಾದಿರಿ ಅಂದಾನ ಜೋಡನಾದಿಸಿ ಅಂದಾನ
ಹೋಗಿ ಬರತೀವಿ ಅಂದಾರೆ ಬೇಗ ಬರತೀವಿ ಅಂದಾರ
ಶಿವಲಿಂಗಮ್ಮನಂದರ ಪದುಮಾಗೊಂಡನಂದಾರ
ಹಿಂದ ಮುಂದನಾಗ್ಯಾರೆ ಕುರಿಯಾ ಕಾಯುತಿದ್ದರ
ಹೊತ್ತು ಮುಣಗಿದಲ್ಲಿಗ ವಸ್ತಿ ಮಾಡುತಾರೇನ
ಯಾಳ್ಯಾ ಗಳಿಯುತಾರೇನ ಹೊತ್ತು ಗಳಿಯುತಾರೇನ
ಇಲ್ಲಿಗ ಇದು ಒಂದು ಸಂದೇನ ಹಾಡಿದರ ಪದ ಮುಂದೇನ
ಕಳಸವಿಟ್ಟರ ಕವಿತ ಕಟ್ಯಾರ ಹೊನ್ನಜಗ್ಗುನಿ ಗೌಡರೊ
ದೇವರ ಬಂದಾರ ಬನ್ನೀರೆ !

## ಮಡ್ಡ್ಯಾ ಗುಟ್ಟ್ಯಾನಂದಾನೆ ಮಡ್ಡಪ್ಪನಂತ ಕರದಾನ

ಶಿವನೆ ನಮ್ಮಯ್ಯ ದೇವರು ಬಂದಾರ ಬನ್ನೀರೆ
ಸ್ವಾಮಿ ನಮ್ಮಯ್ಯ ದ್ಯಾವರು ಬಂದಾರ ಬನ್ನೀರೆ
ದೇವಿ ಧರ್ಮರ ಹಾಡೇನೆ ಯಾವ ಠಾಣೆದ ಮ್ಯಾಲೇನ
ಯಾವ ಜಾಗದ ಒಳಗೇನ ಬಂಕಾಪುರದ ಭೂಮ್ಯಾಗ
ಬಂಕಾಪುರದ ಭೂಮ್ಯಾಗೆ ಮುದ್ದಪ್ಪ ಮುದ್ದಗೊಂಡನ

ಮುದ್ದವ್ವ ಮುದ್ದಗೊಂಡನೆ ಅವರ ಹೊಟ್ಟಿಲಿ ಮಕ್ಕಳ
ಆದಿಯಗೊಂಡ ಅನಂತಗೊಂಡ ಸಿದ್ದಗೊಂಡನಿದ್ದಾರ
ಪದುಮಾಗೊಂಡನ ಮಡದೇನ ಸಿದ್ಧಮ್ಮ ಮನಿಯಾಗ ಉಳದಾಳ
ಆದಿಯಗೊಂಡನ ಮಡದೇನ ಸಿದ್ಧಗೊಂಡನ ಮಕ್ಕಳ
ಮೂರ ಮಂದಿ ಮಕ್ಕಳೆ ಇವರ ಹೊಟ್ಟಿಲಿ ಹುಟ್ಟಿದವರ
ಇವರ ಹೊಟ್ಟಿಲಿ ಹುಟ್ಟಿದವರ ಕಂದನ ಕುಲಗೋಳು ಆದಾವ
ಕಂದನ ಕುಲಗೋಳು ಆದಾವೆ ಪದುಮಾಗೊಂಡನ ಹೊಟ್ಟೇಲೆ
ಪದುಮಾಗೊಂಡನ ಹೊಟ್ಟಿಲಿ ಹುಟ್ಟಿದ ಮಕ್ಕಳ ನೊಡಯ್ಯ
ಅಡವ್ಯಾಗೆ ಕುರಿಯಾ ಸಿಕ್ಕವೆ ಪದುಮಾಗೊಂಡಗಂತಾರ
ಕುರಿಯಾ ಸಿಕ್ಕವಲ್ಲಪ್ಪ ಕುರುಬರಾದೇವೇಳಂದಾರ
ಮೂರು ಲೋಕದ ವಡಿಯನೆ ಮುಕ್ಕಣ್ಣ ಶಿವರಾಯನ
ಮುಕ್ಕಣ್ಣ ಶಿವರಾಯನೆ ಪದುಮಾಗೊಂಡಗಲ್ಲೇಳ
ಜಕ್ಕಪೂರದ ರಾಜನ ಮಗಳು ಪದುಮಾಗೊಂಡಗ ಕೊಟ್ಟಾರ
ಪದುಮಾಗೊಂಡಗ ಕೊಟ್ಟಾರೆ ಶಿವನೆ ನಮ್ಮನ್ನ ಇಟ್ಟಾರ
ಎರಡು ತಿಂಗಳ ಕೂಸೀನೆ ರಾಕ್ಷಸಿ ಬಂದು ಒಯ್ತಾರ
ಜಕ್ಕಪೂರದ ಅರಸನ ಮಗಳು ಶಿವಲಿಂಗಮ್ಮನಿದ್ದಾಳ
ರಕ್ಕಸಿ ಕಣ್ಣಬಿಟ್ಟಾದೆ ಜೋಪಾನ ಮಾಡ್ಯಾಳೇನಯ್ಯ
ಲಗ್ಗನ ಮಾಡಿ ಹೋಗರೆ ಪದುಮಾಗೊಂಡಗಲ್ಲೇಳ
ಶಿವಲಿಂಗಮ್ಮನಿದ್ದಾಳೆ ಪದುಮಾಗೊಂಡನಿದ್ದಾನ
ಹೊನ್ನಿನ ಸಾವಿರ ಭಾಗ್ಯೆನೆ ಭಾಗ್ಯದ ಕಾವಲು ಮಾಡ್ಯಾರ
ಭಾಗ್ಯದ ಕಾವಲು ಮಾಡ್ಯಾರೆ ಹೊತ್ತ ಮುಣಗಿದಲ್ಲಿಗೆ
ಹೊತ್ತಮುಣಗಿದಲ್ಲಿಗೆ ವಸ್ತಿ ಮಾಡುತಾರೇನ
ಸಂಬ ಕೊಟ್ಟು ಮರತಾನೇ ದೇವರು ಕೊಟ್ಟು ಮರತಾನ
ದೇವರ ಕೊಟ್ಟು ಮರತಾನೆ ಶಿವಲಿಂಗಮ್ಮ ಗರ್ಭಿಣಿ
ಒಂದು ತಿಂಗಳಾದವೆ ಎರಡ ತಿಂಗಳಾದವ
ಮೂರು ತಿಂಗಳಾದವೆ ನಾಲ್ಕು ತಿಂಗಳಾದವ
ಐದು ತಿಂಗಳಾದವೆ ಆರ ತಿಂಗಳಾದವ
ಅಡವಿ ಗಿಡದ ವಳಗೇನೆ ಪದುಮಾಗೊಂಡನಿದ್ದಾರ
ಪದುಮಾಗೊಂಡನಿದ್ದಾರೆ ದಿನಮಾನ ಆಗುತಾವೇನ
ಒಂಬತ್ತು ತಿಂಗಳಾದವೆ ಒಂಬತ್ತ ದಿನಮಾನಾದಾವ
ಕಾಡಿನೊಳಗೆ ಇದ್ದಾರೆ ಬಾಳುವಿ ಮಾಡುತ್ತಿದ್ದಾರ
ತಾಯಿತಂದಿ ಇಲ್ಲೇನೆ ಬಂದುಬಳಗ ಇಲ್ಲೇಳ
ಬಂಗು ಬಳಗ ಇಲ್ಲೇನ ಏನೇನ ಮಾಡಬೇಕಂದಾರ
ಶಿವಲಿಂಗಮ್ಮನಲ್ಲೇಳ ಆಡುವ್ಯಾಗ ಬಾಣುತಿ ಆದಾಳ
ಅಡವ್ಯಾಗ ಬಾಣುತಿ ಆದಾಳೆ ಗಂಡಸಮಗನ ಹಡದಾಳ
ಗಂಡಸಮಗನ ಹಡದಾಳೆ ದೊಡ್ಡವನಾಗುತಾನೇನ

ಎರಡು ದಿನಮಾನ ಆದಾವೆ ಮೂರದಿನಮಾನಾದವ
ನಾಲ್ಕುದಿನಮಾನಾದವೆ ಐದು ದಿನಮಾನಾದವ
ಆರು ತಿಂಗಳಾದಾವೆ ಏಳು ತಿಂಗಳಾದವ
ಹನ್ನೆರಡು ದಿನದ ವಳಗೇನೆ ತೊಟ್ಟಿಲದೊಳಗೆ ಹಾಕ್ಯಾರ
ಶಿವಲಿಂಗಮ್ಮನಲ್ಲೇಳ ಹುಟ್ಟುಗಂಬಳಿ ಮಾಡ್ಯಾಳ
ಮೂರ ಮಳದ ಕಂಬಳಿ ಹುಟ್ಟಗಂಬಳಿ ಮಾಡ್ಯಾಳ
ಹುಟ್ಟಗಂಬಳಿ ಮಾಡ್ಯಾಳೆ ಮಡ್ಡಪ್ಪನಂತ ಹೆಸರೇನ
ಮಡ್ಡಪ್ಪನಂತ ಹೆಸರೇನ ಮಗನಿಗ ಇಡುವುತಾರೇನ
ಆಡುವ್ಯಾಗ ಹುಟ್ಯಾನಂದಾರೆ ಗಿಡದಾಗ ಹುಟ್ಯಾನಂದಾರ
ಮಡ್ಯಾಗ ಹುಟ್ಯಾನಂದಾರೆ ಗಿಡದಾಗ ಹುಟ್ಯಾನಂದಾರ
ಏಸುಬಗಿ ಮಾಡಿ ಕರದಾರೆ ಕಡಿಗಿ ಮಡ್ಡಪ್ಪನಂದಾರ
ಹುಟ್ಟುಗಂಬಳಿ ಮ್ಯಾಗೇನೆ ಮಡ್ಡಪ್ಪನಾಡುತಾನೇನ
ಅಡವಿ ವಳಗ ಯಾಳೇನ ಯಾಳ್ಯಗಳಿಯುತಾರೇನ
ಯಾಳ್ಯಾಗಳಿಯುತಾರೇನ ಹೊತ್ತುಗಳಿಯುತಾರೇನ
ಗಿಡದ ನೆಳ್ಳಿಗಲ್ಲಪ್ಪ ಮಡ್ಡಪ್ಪನ ಹಾಕುತಾರೇನ
ಹುಟ್ಟುಗಂಬಳಿ ಮ್ಯಾಲೇನ ಒಂದ ವರ್ಷಿನ ಕೂಸೀನ
ಒಂದು ವರ್ಷಿನ ಕೂಸೀನ ಮಲ್ಲನ ಮಲಗುಸುತಾರೇನ
ಮಲ್ಲನ ಮಲಗುಸುತಾರೇನ ಪದುಮಾಗೊಂಡನಂದಾರ
ಪದುಮಾಗೊಂಡನಲ್ಲೇಳ ಮುಂದಿನ ಕುರಿಯ ಹೋದಾನ
ಭೂಮಿ ತಾಯಿನಲ್ಲಪ್ಪ ಹಿಂದಿನ ಕುರಿಯಾಗ ನಡದಾಳ
ಹಿಂದಿನ ಕುರಿಯಾಗ ನಡದಾಳೆ ಯಾವ ದಿಕ್ಕಿಗಿ ಹೋಗ್ಯಾರ
ಹೊತ್ತಾನೆ ಗಮನಾದವೆ ಹೊತ್ತ ಹೋಗುತಾವೇನ
ಹಿಂದಿನ ಗಮನಾದವೆ ಹೊತ್ತ ಹೋಗುತಾವೇನ
ಹಿಂದಿನ ಮುಂದಿನ ಕುರಿಗೋಳು ಸಮಮಾಡಿ ಮುಂದಕ ಬಿಟ್ಟಾರ
ತಾಯೇಳೆ ಶಿವಲಿಂಗಮ್ಮ ಏನಂದಾಡುತಾಳೇನ
ಪುರುಷನ ಬಲ್ಲೇನಲ್ಲೇಳ ಕಂದನಾದಂತೆ ತಿಳಿದಾಳ
ಕಂದನಾದಂತ ತಿಳಿದಾಳೆ ಸುಮ್ಮನೆ ಹೋಗುತಾಳೇನ
ಪದುಮಾಗೊಂಡನಲ್ಲೇಳ ಸತಿಯಾಳ ಬಲ್ಲಿ ಅಂದಾನ
ಸತಿಯಾಳ ಬಲ್ಲಿ ಅಂದಾನೆ ಕಂದನಿರಬೇಕಂದಾನ
ಒಬ್ಬರ ಮಾತ ಒಬ್ಬರಿಗೆ ಇಬ್ಬರಿಗೆ ತಿಳಿದಿಲ್ಲಂದಾರ
ಒಬ್ಬರ ಮಾತ ಒಬ್ಬರಿಗೆ ಯಾರಿಗೆ ಗೊತ್ತನಾಗಿಲ್ಲ
ಯಾಳ್ಯಾಗೋಳು ಬಹಳಾದಾವೆ ಹೊತ್ತನೆ ಗಮನಾದವ
ಹೊತ್ತಮುಣಗುತಾವೇನೆ ಕತ್ತಲಾಗುತಾವೇನೆ
ಚಬ್ಬ ಹೊಡದು ನಿಂತಾವೆ ಇಚಿಯಾ ಕಡಿಗಿ ಮಡದೇನ
ಈಚೀಯ ಕಡಿಗಿ ಮಡದೇನೆ ಆಚಿಯ ಕಡಿಗಿ ಪುರುಷನ
ಪುರುಷನ ಬಲ್ಲಿ ನೋಡಯ್ಯ ನನ್ನ ಮಗನ ಇದ್ದಾನೆ

ಸತಿಯಾ ಬಲ್ಲಿ ಹಾನೇನ ನನ್ನ ಮಗನೆ ಇದ್ದಾನ
ರಾತರಿ ಹೊತ್ತನಾದಾವೆ ಗೊತ್ತು ಆಗಲಿಲ್ಲೇನ
ಗೊತ್ತು ಆಗಲಿಲ್ಲೇನ ಊಟಕ ಬರುವುತಾರೇನ
ಊಟಕ ಕುಂದ್ರುತಾರೇನೆ ಏನಂದಾಡುತಾರೇನ
ಪದುಮಾಗೊಂಡಗಲ್ಲೇಳ ಶಿವಲಿಂಗಮ್ಮ ಕೇಳ್ಯಾಳ
ನನ್ನ ಮಗನ ಮಡ್ಡಪ್ಪ ಎಲ್ಲಿ ಮನಗ್ಯಾನಂದಾರ
ಎಲ್ಲಿ ಮನಗ್ಯಾನಂದಾರ ಎಲ್ಲಿ ಹೋಗ್ಯಾನಂದಾರ
ಪದುಮಾಗೊಂಡನಲ್ಲಪ್ಪ ಮಡದಿನ ಕೇಳುತಾನೇನ
ಮಡದೀನ ಕೇಳುತಾನೇನ ಮಡ್ಡಪ್ಪ ಎಲ್ಲಿ ಮಲಗ್ಯಾನ
ಮಡ್ಡಪ್ಪ ಎಲ್ಲಿ ಮನಗ್ಯಾನಂತ ಪದುಮಣ್ಣ ಕೇಳುತಾನೇನ
ನಾನು ನೋಡಿಲ್ಲಂದಾರೆ ಎಲ್ಲಿ ಉಳದಾನಂದಾರ
ಎಲ್ಲಿ ಹಾರ ಅಂದಾರೆ ನಾನೇ ನೋಡಿಲ್ಲಂದಾಳ
ನೆಳ್ಳಗ ಮನಗ್ಯಾನಂದಾರೆ ಕಂಬಳಿ ಹಾಕಿನಿ ಅಂದಾರ
ಕಂಬಳಿ ಮ್ಯಾಲ ಮನಗ್ಯಾನೆ ನಾನೇ ನೋಡಿನಿ ಅಂದಾರ
ಪದ್ಮಗೊಂಡನಲ್ಲೇಳ ನಾನು ನೋಡಿನಿ ಅಂದಾನ
ಯಾಳ್ಯಾಗೋಳು ಬಹಳಾದಾವೆ ಹೊತ್ತನೆ ಗಮನಾದವ
ಹಂತಯಾಳ್ಯಾದೊಳಗೇನೆ ಎಲ್ಲಿಗ ಹೋಗಬೇಕಂದಾರ
ಮಡದಿನ ಬಿಟ್ಟುಹೋದರ ಯಾವಾಗ ಸಿಗಬೇಕಂದಾರ
ಕುರಿಯಾ ಬಿಟ್ಟು ಹೋದರೆ ಎಲ್ಲಿಗ ಬರುತಾವಂದಾರ
ಅಂತುಹಿಂತೂನಲ್ಲೇಳ ಬೆಳಗಾನಾಗುತಾವೇನ
ಮಡ್ಡಪ್ಪ ನೋಡು ಶಿವಗೇನಿ ಎಲ್ಲಿಗ ಹೋಗುತಾನೇನ
ಒಂದು ಹರದಾರಿ ಮ್ಯಾಲೇನ ಗೌರಿ ಆಕಳ ಜಾಗೇನ
ಗೌರಿ ಆಕಳ ಜಾಗಕ ಮಡ್ಡಪ್ಪ ಹೋಗುತಾನೇನ
ಕಾಡಾಕಳ ಜಾಗಕ ಮಡ್ಡಪ್ಪ ಹೋಗುತಾನೇನ
ಕೈಯಾಗ ಕಂಬಳಿ ಹಿಡದಿದ್ದ ಹೆಗಲಿಗ ಹಾಕುತಾನೇನ
ಐದು ಆರು ವರ್ಷಿನವ ಗಿಡದಾಗ ಏರುತಾನೇನ
ಗಿಡದಾಗ ಏರುತಾನೇನ ಮ್ಯಾಲೆ ಕುಂದ್ರುತಾನೇನ
ಮೂರ ಆಕಳಲ್ಲಪ್ಪ ವಸ್ತಿ ಮಾಡುತಾವೇನ
ವಸ್ತಿ ಮಾಡುತಾವೇನ ರಾತರಿ ಮಲಗುತಾವೇನ
ಬಂಡಿಯಾ ಮ್ಯಾಲನಲ್ಲಪ್ಪ ಆಕಳ ನಿಂದ್ರುತಾವೇನ
ಬಂಡಿಯಾ ಮ್ಯಾಲನಲ್ಲಪ್ಪ ಆಕಳ ನಿಂದ್ರತಾವೇನ
ಬಂಡಿಯಾ ಮ್ಯಾಲನಲ್ಲಪ್ಪ ಡೋಣಿಯ ಇರುವುತಾವೇನ
ಡೋಣಿಯಾ ಮ್ಯಾಲನಲ್ಲಪ್ಪ ಆಕಳ ನಿಂದ್ರತಾವೇನ
ಆಕಳ ನಿಂದ್ರುತಾವೇನ ಹಾಲ ಸೋರುತಾವೇನ
ಒಂದೊಂದು ಡೋಣಿ ವಳಗೇನೆ ಒಂದು ಎರಡು ಕೊಡಗೋಳು
ಅಟ್ಟು ಡೋಣಿಗಲ್ಲಪ್ಪ ಹಾಲ ತುಂಬುತಾವೇನ

ಹಾಲ ತುಂಬುತಾವೇನ ಕಾಲ ಸೈಲನಾದವ
ಕೆಚ್ಚಲ ಸೈಲನಾದಾವೆ ಅಡವಿಗ ಹೋಗುತಾವೇನ
ಅಡವಿಗ ಹೋಗುತಾವೇನೆ ಗಿಡದಾಗ ಮಡ್ಡಪ್ಪನಿದ್ದಾರ
ಗಿಡದಾಗ ಮಡ್ಡಪ್ಪ ಇದ್ದಾರೆ ಕೆಳಗ ಇಳಿಯುತಾರೇನ
ಕೆಳಗ ಇಳಿಯುತಾರೇನ ಡೋಣಿ ನೋಡುತಾರೇನ
ಸುತ್ತ ತಿರುಗುತಾರೇನ ಡೋಣಿ ಕೂಡುತಾನೇನ
ಹಾಲ ಕುಡಿಯುತಾರೇನೆ ತಾನೆ ಗಿಡ ಏರ್ಯಾರ
ಗಿಡದ ಮ್ಯಾಲ ಅಲ್ಲಪ್ಪ ತಾನೇ ಕುಂದ್ರುತಾನೇನ
ಮಡ್ಡಪ್ಪ ಹಾಲ ಕುಡದಾನೆ ಗಿಡದ ಮ್ಯಾಲ ಏರ್ಯಾನ
ಗಿಡದ ಮ್ಯಾಲ ಏರ್ಯಾನೆ ಹಾಲ ಕೆಳಗ ಇದ್ದಾವ
ಸಂಜಿರಂಗದೊಳಗೇನೆ ಹೊತ್ತನೆ ಗಮುನಾದವ
ಹೊತ್ತನೆ ಗಮನಾದವೆ ಆಕಳ ಹೊರಳಿ ಬಂದಾವ
ಆಕಳ ಹೊರಳಿ ಬಂದಾವೆ ಬಂಡಿಯ ಮ್ಯಾಲ ನಿಂತಾನೆ
ಬಂಡಿಯಾ ಮ್ಯಾಲೆ ನಿಂತಾವ ಕೆಚ್ಚಲ ಬಿಗದು ಸೋರ್ಯಾವ
ಹಾಲ ಸೋರುತಾವೇನ ಕರಗೋಳು ಕುಡಿಯುತಾವೇನ
ಗಿಡದಾಗ ಮಡ್ಡಪ್ಪ ಇದ್ದಾನೆ ಮಡ್ಡಪ್ಪ ಮ್ಯಾಲೆ ಇದ್ದಾನ
ಮುಡ್ಡಪ್ಪಗ ನೋಡುತಾವೇನ ನಾತ ಬಿದ್ದಾವ
ಗಿಡದ ಸುತ್ತ ಹರದಾವೆ ಹಾಲ ನೋಡುತಾವೇನ
ಹಾಲ ನೋಡುತಾವೇನ ಹೆಜ್ಜೆ ನೋಡುತಾವೇನ
ಹಾಲ ಕುಡುದಾನಂದಾವೆ ಮ್ಯಾಕ ಹೋಗ್ಯಾನಂದಾವ
ಮಾನುವ ಖೂನ ಸಿಕ್ಕಾದೆ ಮನುಷ್ಯನ ಖೂನ ಸಿಕ್ಕಾದ
ನಾತ ಹಿಡಿಯುತಾವೇನ ಎದ್ದು ನೋಡುತಾವೇನ
ಸುತ್ತ ಮಾಡಿ ನೋಡ್ಯಾವೆ ನಡವ ಬಾಲ ವಗದಾವ
ನಡುವ ಬಾಲ ವಗದಾವೆ ಕತ್ತಲ ಬೀಳುತಾವೇನ
ಕತ್ತಲ ಬಹಳ ಬಿದ್ದಾವೆ ಪದುಮಾಗೊಂಡನಂದಾನ
ತಾವೇ ಮಾತನಾಡ್ಯಾರೆ ನಿದ್ದಿಯ ಮಾಡುತಾರೇನ
ಹೊತ್ತರೆ ಮುಂಜಾನಿ ಎದ್ದಾರ ಸುತ್ತಮುತ್ತನೋಡ್ಯಾವ
ಸುತ್ತ ಮುತ್ತ ನೋಡ್ಯಾವ ಗಿಡದಾಗ ಮೋತಿ ಎತ್ಯಾವ
ಗಿಡದಾಗ ಮೋತಿ ಎತ್ಯಾವೆ ಮಡ್ಡಪ್ಪ ಕಣ್ಣಿಲಿ ಕಂಡಾನ
ಮಡ್ಡಪ್ಪ ಕಣ್ಣಿಲಿ ಕಂಡಾನೆ ತಾಯಿ ನನ್ನಗ ಇಲ್ಲೇನ
ತಾಯಿ ನನ್ನಗ ಇಲ್ಲವ್ವ ತಂದಿ ನನ್ನಗ ಇಲವ್ವ
ನೀವೇ ತಾಯಿನಂದಾರ ನೀವೇ ತಂದಿನಂದಾರ
ಮೂಕ ಪ್ರಾಣಿ ಅಲ್ಲೇಳ ಕಿವಿಯ ಕೊಟ್ಟು ಕೇಳ್ಯಾವ
ಕಿವಿಯ ಕೊಟ್ಟು ಕೇಳ್ಯಾವೆ ತಲಿಯ ಹಾಕುತಾವೇನ
ನಮ್ಮ ಬಲ್ಲಿನಿದ್ದಾರೆ ನಮ್ಮನ್ನ ಕಾಯಿದಾನಂದಾವ
ನಾವೇ ಕೆಳಗ ಮನಗೇವ ಗಿಡದಾಗ ಅವನ ಇದ್ದಾನ

ಗಿಡದಾಗ ತಾನೇ ಇದ್ದಾನ ಕೆಳಗ ನಾವೇ ಇದ್ದೇವ
ಒಳ್ಳೆದು ಒಳ್ಳೆದು ಅಂದಾನೆ ಯಾಳೆನ ಗಮನಾದವ
ಒಂದು ದಿನಮಾನ ಹೋದವೆ ಎರಡು ದಿನಮಾನ ಹೋದಾವ
ಎರಡು ದಿನಮಾನ ಹೋದವೆ ಐದ ದಿನಮಾನ ಹೋದವೆ
ಐದು ದಿನಮಾನ ಹೋದವ ಎಂಟ ದಿನಮಾನ ಹೋದವೆ
ಒಂದು ವರ್ಷನಾದವೆ ಎರಡ ವರ್ಷನಾದವ
ತೆಳಿಯಾಕ ಇಳಿಯುತಿದ್ದನೆ ಹಾಲ ಕುಡಿಯುತಿದ್ದಾನ
ಕಾಡಿನ ಆಕಳಲ್ಲಪ್ಪ ಮಡ್ಡಪ್ಪಗ ನೋಡುತಾವೇನ
ಮಡ್ಡಪ್ಪಗ ನೋಡುತಾವೇನ ಮಗನ ಮಾಡಿ ಸಲುವ್ಯಾವ
ಮಗನ ಮಾಡಿ ಸಲುವ್ಯಾವ ತಂದಿನ ಮಾಡಿ ಸಲುವ್ಯಾವ
ಮಾನುವ ಸುಳುವ ಇಲ್ಲೇನ ಮನುಷ್ಯನ ಸುಳುವ ಇಲ್ಲೇನ
ತಾಯಿ ಬರಲಿಲ್ಲಂದಾರ ತಂದು ನಮ್ಮಗಿಲ್ಲವ್ವ
ಮಡ್ಡಪ್ಪ ಬರುವುತಾನೇನ ಹಾಲ ಕುಡಿಯುತಾನೇನ
ಹಾಲ ಕುಡಿಯುತಾನೇನ ಡೋಣಿ ಕಟ್ಟುತಾನೇನ
ಇಪ್ಪತ್ತು ಕೊಡಗೋಳು ಅಲ್ಲಪ್ಪ ಹಾಲಿ ಡೋಣಿ ಕಟ್ಯಾವ
ಹತ್ತ ಕೊಡದನಲ್ಲಪ್ಪ ಹಾಲಿನ ಡೋಣಿ ಇಟ್ಟಾರ
ಐದು ವರ್ಷನಾದಾವ ಆರವರ್ಷನಾದವ
ಏಳ ವರ್ಷನಾದವ ಹತ್ತ ವರ್ಷನಾದವ
ಗಿಡದ ಮ್ಯಾಲ ಮಡ್ಡಪ್ಪ ಮಂಚ ಹಾಕುತಾನೇನ
ಮಂಚ ಹಾಕುತಾನೇನ ಮೂರ ಮಳದ ಕಂಬಳಿ
ಮೂರ ಮಳದ ಕಂಬಳಿ ಮಡ್ಡಪ್ಪನ ಬಲ್ಲಿ ಇತ್ತಯ್ಯ
ಮಡ್ಡಪ್ಪನ ಬಲ್ಲೇನ ಕಂಬಳಿ ಇರುವುತಾವೇನಯ್ಯ
ಕೆಳಗ ಬಂದ ಯಾಳ್ಯಾಕ ಹಾಲಿನ ಜಳಕ ಮಾಡ್ಯಾನ
ಹಾಲಿನ ಜಳಕ ಮಾಡ್ಯಾನ ಹಾಲ ಕುಡಿಯುತ್ತಿದ್ದನ
ಉಂಡೇನಂದರಿಲ್ಲಪ್ಪ ತೊಟ್ಟೇನಂದರಿಲ್ಲಯ್ಯ
ತೊಟ್ಟೇನಂದರ ಇಲ್ಲಪ್ಪ ಮುಟ್ಟೇನಂದರ ಇಲ್ಲಯ್ಯ
ತಾಯಿ ತಂದಿ ಕಟ್ಟೇದ ಟೊಂಕಿಗೊಂದೆ ಉಡದಾರ
ತಾಯಿ ಕೊಟ್ಟಿದಲ್ಲಪ್ಪ ಮೂರೆ ಮಳದ ಕಂಬಳಿ
ಮೂರೇ ಮಳದ ಕಂಬಳಿ ಮಡ್ಡಪ್ಪನ ಬಲ್ಲಿ ಉಳದಾದ
ಜೀವಾಳಕಡ್ಡಿ ತಂದಾನ ಊದ ಕೊಳವಲ ಮಾಡ್ಯಾನ
ಊದ ಕೊಳವಲ ಮಾಡ್ಯಾನೆ ಗಿಡದ ಮ್ಯಾಲ ಕುಂತಾನ
ಗಿಡದ ಮ್ಯಾಲೆ ಕುಂತಾನ ಎರಡ ಕೊಳವಲ ಮಾಡ್ಯಾನ
ಒಂದ ಕೊಳವಲ ಊದಿದರ ಆರ ಹರದಾರಿ ಮ್ಯಾಲೇನ
ಆರು ಹರದಾರಿ ಮ್ಯಾಲೆನ ಓಡಿಬರುವುತಾವೇನ
ಓಡಿ ಬರುವುತಾವೇನ ಕಾವಲ ಮಾಡುತಾವೇನ
ಕಾವಲ ಮಾಡುತಾವೇನ ಮಡ್ಡಪ್ಪ ನೋಡುತಾನೇನ

ಸುಖಕ ಕೊಳಲ ಊದಿದರ ಗಿಡದ ಬಲ್ಲ ಮನಗ್ಯಾವ
ಹತ್ತ ವರ್ಷನಾದವೆ ಹನ್ನೆರಡು ವರ್ಷನಾದವ
ಕಪ್ಪಿಲೆ ಕರಿಚಲುವನ ಒಪ್ಪಿಲೆ ಬಹಳ ಹಿರಯನ
ಮೂರ ಮಳದ ಕಂಬಳೆ ಮೈಮ್ಯಾಲ ಹಾಕುತಾನೇನ
ಮೂರ ಮಳದ ಕಂಬಳೆ ಹುಟ್ಟಗಂಬಳಿನಾದವ
ಹನ್ನೆರಡು ವರ್ಷನಾದವೆ ಹದಿನೈದು ವರ್ಷನಾದವ
ಇಪ್ಪತ್ತು ವರ್ಷನಾದವ ಇಪ್ಪತ್ತೈದು ವರ್ಷನಾದವ
ಅದೇ ಊರ ವಳಗೇನ ವಂಟೆಗಾಣಿಗೇರನ
ಗಾಣಿಗೇರ ಮಲ್ಲಪ್ಪ ಹೆಚ್ಚಿನ ಬಡತನಿದ್ದಾವ
ಹೆಚ್ಚಿನ ಬಡತಾನಿದ್ದಾವೆ ಕೈಯಾಗ ಗುದ್ದಲಿ ಹಿಡದಾನ
ಕೈಯಾಗ ಗುದ್ದಲಿ ಹಿಡದಿದ್ದ ಚರಗಿ ನೀರ ಹಿಡದಿದ್ದ
ಚರಗಿ ನೀರ ಹಿಡದಿದ್ದ ಭರ್ತಿ ಬಾರದೊಳಗೇನ
ಬಾರಾಕ ಬರಬೇಕಂದಾನೆ ಮುಂಜಾಳಿ ತಯ್ಯಾರಾದನ
ಮುಂಜಾಳಿ ತಯ್ಯಾರಾದನೆ ಬಾರಾಕ ಬರಬೇಕಂದಾನ
ಗುದ್ದಲಿ ಹೆಗಲಿಗ ಹಾಕ್ಯಾನ ಚರಗಿ ಕೈಯಾಗ ಹಿಡದಾನ
ಉಂಡೇನಂದರ ಇಲ್ಲಪ್ಪ ಉಟೇನಂದರ ಇಲ್ಲಪ್ಪ
ಗಾಣಿಗೇರ ಮಲ್ಲಪ್ಪ ಹ್ಯಾಂಗ ಮಾಡಬೇಕಂದಾನ
ನನಗೂ ಇರಲುಕಲ್ಲಪ್ಪ ಒಂದೇ ಎದಕರೆ ಹೊಲವೇನ
ಒಂದೇ ಎಕರೆ ಹೊಲದಾಗ ನಟ್ಟು ಕಡಿಬೇಕಂದಾನ
ನಟ್ಟು ಕಡಿಬೇಕಂದಾನೆ ಕರಕಿ ಕಡಿಬೇಕಂದಾನ
ಕೂಲಿ ಯಾರು ಕರದಿಲ್ಲ ಹೊಟ್ಟಿಗೆ ರೊಟ್ಟಿ ಇಲ್ಲೇನ
ಹೊಲಕ ಹೋಗಬೇಕಂದಾನೆ ಗುದ್ದಲಿ ಹೆಗಲಿಗ ಇಟ್ಟಾರ
ಕೈಯಾಗ ಚರಗಿ ಹಿಡದಾನ ಊರದಾಟಿ ನಡದಾನ
ಊರದಾಟಿ ಬಂದಾನೆ ಅಡವಿಗ ಹೋಗುತಾನೇನ
ಏಳೆಂಟು ಗಿಡಗೋಳು ನೋಡ್ಯಾನ ಹತ್ತೆಂಟು ಗಿಡಗೋಳು ನೋಡ್ಯಾನ
ಗಿಡವ ನೋಡುತಾನೇನ ಮ್ಯಾಕ ನೋಡುತಾನೇನ
ಸಂಜಿ ಒಳಗನಲ್ಲಪ್ಪ ಕತ್ತಲಿ ಬಿದ್ದಂಗಾದವ
ಹೊತ್ತ ಹೋಗಿದಂಗೇನ ಏನೇನು ಮಾಡುತಾನೇನ
ಅಡ್ಡ ಕಟಗಿ ಇಟ್ಟಿದ ಅಟ್ಟ ಮಾಡುತಾನೇನ
ಕಂಗಳಿ ಹೊಚ್ಚುತಾನೇನ ಮಡ್ಡಪ್ಪ ಕುಂದ್ರತಾನೇನ
ಮಡ್ಡಪ್ಪ ಕುಂದ್ರುತಾನೇನ ಗಾಣಿಗೇರ ಮಲ್ಲಪ್ಪ
ಗಾಣಿಗೇರ ಮಲ್ಲಪ್ಪ ಕೈಯ ಮುಗಿಯುತಾನೇನ
ಕೈಯ ಮುಗಿಯುತಾನೇನ ಮಡ್ಡಪ್ಪಗ ಹೇಳುತಾನೇನ
ನನ್ನ ನೋಡಿದರಲ್ಲಪ್ಪ ಅಂಜಿ ಹೋಗುತಾನಂದಾನ
ಇವನೇ ಮ್ಯಾಲಕ ನೋಡ್ಯಾನ ನಮಸ್ಕಾರ ಕೊಟ್ಟಾನ
ಗಿಡದಾಗ ನೋಡುತಾನೇನ ಎರಡ ಕೈಲೆನಪ್ಪಯ್ಯ

ಎರಡ ಕೈಲೆ ನಮ್ಮಯ್ಯ ಜೋಡಿಲಿ ನಮಸ್ಕಾರೇನ
ಗಿಡದಾಗಿದ್ದ ಮಡ್ಡಪ್ಪನೆ ತಾಯೇನು ಹೇಳುತಾನೇನ
ತನ್ನ ಬುಡಕನಲ್ಲಪ್ಪ ಒಂಟಿಗೈಲೆ ತೋರ್‍ಯಾನ
ಒಂಟಿಗೈಲೆ ತೋರಿದ್ದ ಹಾಲಿನ ಡೋಣಿ ಇದ್ದಾವ
ಗಾಣಿಗೇರ ಮಲ್ಲಪ್ಪ ಹಾಲ ಹವುಜಿಗೆ ಬಂದಾನ
ಹಾಲ ಹವುಜಿಗೆ ಬಂದರೆ ಒಂದು ಚರಗಿ ತುಂಬ್ಯಾನ
ಒಂದು ಚರಗಿ ತುಂಬ್ಯಾನೆ ಮಲ್ಲಪ್ಪ ಕುಡಿಯುತಾನೇನ
ಎರಡ ಚರಗಿ ಕುಡದಾನೆ ಮೂರ ಚರಗಿ ಕುಡದಾನ
ಹೊಟ್ಟಿ ತುಂಬುತಾವೇನ ಐದ ಚರಗಿ ಕುಡದಾನ
ಹೊಟ್ಟಿಗ ಅನ್ನ ಇಲ್ಲೇನ ಬಾಯಿಗ ನೀರ ಇಲ್ಲೇನ
ಹೆಚ್ಚಿನ ಬಡತಾನಲ್ಲಪ್ಪ ದೇವರು ಕೊಟ್ಟಾನಂದಾನ
ಮಾನುವುನಂತೆ ತಿಳಿಯಲೆ ಮನುಷ್ಯನಂತೆ ತಿಳಿಯಲೆ
ನನ್ನ ಹೊಟ್ಟಿಗಲ್ಲಪ ಅನ್ನ ಕುಡತೀನಿ ಅಂದಾರ
ಒಂದ ಚರಗಿ ಹಾಲೇನೆ ತುಂಬಿ ಕೈಯಾಗ ಹಿಡದಾನ
ತುಂಬಿ ಕೈಯಾಗ ಹಿಡದಾನೆ ಗುದ್ದಲಿ ಹೆಗಲಿಗ ಇಟ್ಯಾನೆ
ಗುದ್ದಲಿ ಹೆಗಲಿಗ ಇಟ್ಟಾನೆ ರಾಯಿಮಾರಾಗ ಹಿಡದಾನ
ಹೊಲಕ ಹೋಗುತಾನೇನ ಚರಗಿ ಇಳಿಯುತಾನೇನ
ಚರಗಿ ಇಳಿಯುತಾನೇನ ಗುದ್ದಲಿ ಕೈಯಾಗ ಹಿಡದಾನ
ಗುದ್ದಲಿ ಕೈಯಾಗ ಹಿಡದಾನೆ ನಟ್ಟ ಕಡಿಯುತಾನೇನ
ಬಂದ ನಟ್ಟು ಕಡದಾರೆ ಬ್ರಹ್ಮಗ ಆರುವ ತಟ್ಟೇನ
ಎರಡ ಬಾರಿಗಲ್ಲೇಳ ನಿಂತಬಿಡುವುತಿದ್ದಾನ
ಒಂಬತ್ತ ಮಾರ ಕಡದಾನೆ ಹೊಟ್ಟಿತುಂಬ ಕುಡದಾನೆ
ಹೊಟ್ಟಿತುಂಬ ಕುಡದಾನೆ ಸಾಂಬ ನನಗೆ ಕೊಟ್ಟಾನ
ಚರಗಿ ಹಾಲ ಕುಡದಾನೆ ತಾನೇ ತಯ್ಯಾರಾದನ
ಹೊಟ್ಟೆ ತುಂಬ ಕುಡದೀನೆ ಅಲ್ಲಿಗೆ ಹೋಗಬೇಕಂದಾನ
ಮತ್ತ ನಮಸಗಾರೇನೆ ನಾನೇ ಕುಡಬೇಕಂದಾನ
ಹೆಂಡರ ಮಕ್ಕಳು ಅಲ್ಲೇಳ ಉಪವಾಸ ಕುಂತರ ಅಂದಾನ
ಹೆಗಲಿಗ ಗುದ್ದಲಿ ಇಟ್ಟಾನೆ ಕೈಯಾಗ ಚರಗಿ ಹಿಡದಾನ
ರಾಯಿಮಾರಗ ಹಿಡದಾನೆ ಮುಡ್ಡಪ್ಪನ ಬಲ್ಲಿಗ ಬಂದಾನ
ಎರಡು ಕೈಯ ಜೋಡಿಸಿ ನಮಸಗಾರ ಕೊಟ್ಟಾನ
ಗಿಡದಾಗಿದ್ದ ಮಡ್ಡಪ್ಪ ಒಂದ ಕೈಯಲಿಂದೇನೆ
ಒಂದ ಕೈಯಲಿಂದೇನ ಕೆಳಗ ತೋರುತಾನೇನ
ತೋರಿದಲ್ಲಿನಲ್ಲಪ್ಪ ಮಲ್ಲಪ್ಪ ಬರುವುತಾನೇನ
ಮಲ್ಲಪ್ಪ ಬರುವುತಾನೇನೆ ಚರಗಿ ತುಂಬುತಾನೇನ
ಚರಗಿ ತುಂಬುತಾನೇನೆ ರಾಯಿಮಾರಗ ಹಿಡದಾನ
ಸುಖದ ಕೊಳವಲ ಊದ್ಯಾನೆ ದುಃಖದ ಕೊಳವಲ ಬಿಟ್ಟಾನೆ

ದುಃಖದ ಕೊಳವಲ ಉದ್ಯಾನೆ ಸುಖದ ಕೊಳವಲ ಉದ್ಯಾನ
ಸುಖದ ಕೊಳವಲ ಬಿಟ್ಟಾನ ಅಡವಿನೊಳಗ ಇದ್ದಾರ
ಅಡವಿಯ ಒಳಗಿನ ಕಾಡಾಕಳ ಅಲ್ಲಿಗ ಬುರುವುತಾವೇನ
ಡೋಣಿಗ ಬರುವುತಾವೇನೆ ಹೆಜ್ಜಿ ಇಡುವುತಾವೇನ
ರಾಯಿಮಾರಗ ಹಿಡದಾನ ಹೆಜ್ಜಿ ಮೇಲೆ ಹೋದವ
ಸುಖದ ಕೊಳವಲ ಉದ್ಯಾನೆ ದುಃಖದ ಕೊಳವಲ ಬಿಟ್ಟಾನ
ಸುಖದ ಕೊಳವಲ ಉದ್ಯಾನೆ ಹೊರಳಿ ಬರುವುತಾವೇನೆ
ಹೊರಳಿ ಬರುವುತಾವೇನೆ ಮಡ್ಡಪ್ಪ ಕೆಳಗೆ ಇಳದಾನ
ಮಡ್ಡಪ್ಪ ಕೆಳಗೆ ಇಳದಾನ ಮೈಯ ನೆಕ್ಕೂತಾವೇನ
ಮೈಯ ನೆಕ್ಕೂತಾವೇನೆ ಜ್ವಾಕಿ ಮಾಡುತಾವೇನ
ಮೈಯ ನೆಕ್ಕೂತಾವೇನೆ ಜ್ವಾಕಿ ಮಾಡುತಾವೇನ
ಜಳಕ ಮಾಡುವ ಬಟ್ಟೇನ ಮಡಿಯ ಬಲ್ಲಿ ಇಲ್ಲೇನ
ಮಡಿಯಾಬಲ್ಲಿ ಇಲ್ಲಪ್ಪ ಆಕಳ ಮೈಯ ನೆಕ್ಕ್ಯಾವ
ಆಕಳ ಮೈಯ ನೆಕ್ಕಿದರ ಮಡ್ಡಪ್ಪನ ಮೈಯ ನಮ್ಮಯ್ಯ
ಮಡ್ಡಪ್ಪನ ಮೈಯ ನಮ್ಮಯ್ಯ ಸಾಬನ ಹಚ್ಚಿ ತೊಳದಂತ
ಸಾಬನ ಹಚ್ಚಿ ತೊಳದಂತೆ ಹಾಲ ಕುಡದ ಹೋಗ್ಯಾನ
ಹಾಲ ಕುಡಿಯುತಾನೇನ ಮೇಲ ಏರುತಾನೇನ
ಸುತ್ತ ಕೊಡುತಾವೇನ ಸುತ್ತ ಮನಗೂತಾವೇನ
ಒಂದರ ಬಾಲ ಒಂದಕ್ಕೆ ಕತ್ತರಿ ಹಾಕುತಾವೇನ
ಕತ್ತರಿ ವಳಗ ಹಾಕೇವ ಮಾರಿ ತಿರುವಿ ಮನಗ್ಯಾವ
ಗಾಣಿಗೇರ ಮಲ್ಲಪ್ಪನ ಮನಿಗಿ ಬರುವುತಾನೇನ
ಮನಿಗ ಬರುವುತಾನೇನ ಮಡದೀನ ಕರಿಯುತಾನೇನ
ಮಡದೀನ ಕರಿಯುತಾನೇನ ತಾಯೇನ ಹೇಳುತಾನೇನ
ಒಂದೇ ಗಂಡಸ ಮಗನೇನ ಒಂದೇ ಹೆಣ್ಣ ಮಗಳೇನ
ಹೆಣ್ಣಮಗಳಿಗಲ್ಲೇಳ ಹಾಲ ಕುಡಸರಿ ಅಂದಾನ
ಗಂಡಸ ಮಗನಿಗಲ್ಲಯ್ಯ ಹಾಲ ಕುಡಸರಿ ಅಂದಾನ
ನಾನು ಕಡದೀನಿ ಅಂದಾನೆ ನನ್ನ ಪಾಲ ಇಲ್ಲಯ್ಯ
ನೀವೇ ಮೂರಮಂದಿಯಾ ಸರಿಯಾ ಮಾಡಿ ಕುಡಿಯರೆ
ಒಳ್ಳೆದು ಒಳ್ಳೆದು ಅಂದಾರೆ ಚರಗಿ ಹಾಲಿನೊಳಗೇನ
ರೊಟ್ಟಿ ಉಣ್ಣುವುತಾರೇನ ಒಂದು ಚರಗಿ ಹಾಲೇನ
ಒಂದೇ ಚರಗಿ ಹಾಲೇನ ಸರಿಯಾ ಮಾಡಿ ಕುಡದಾರ
ಹೊತ್ತನೆ ಭರಮಂಡ್ಯಾವೆ ಹೊತ್ತನೆ ಗಮನಾದವ
ಉಂಡೇನಂದರಿಲ್ಲಪ್ಪ ಉಗಳೇನಂದರ ಇಲ್ಲಪ್ಪ
ಹಾಲಿನ ಮ್ಯಾಲ ಮಾರಾಯ ಮಲ್ಲನಮಲಗುತಾರೇನ
ಗಾಣಗೇರ ಮಲ್ಲಪ್ಪನೆ ಹೊತ್ತಾರೆ ಮುಂಜಾನಿ ಎದ್ದಾನ
ಜಾಮಜಳಕ ಮಾಡ್ಯಾನೆ ಚಿಂದಿ ಉಡುವುತಾನೇನ

ಚೆಂದಿ ಉಡುವುತಾನೇನ ಚೆಂದಿನ ಸುತ್ತುತಾನೇನ
ಚರಗಿ ಬಿಡುವುತಾನೇನ ಬಿಂದಗಿ ಹಿಡಿಯುತಾನೇನ
ಬಿಂದಗಿ ಕೈಯ್ಯಾಗ ಹಿಡದಿದ್ದ ಗುದ್ದಲಿ ಹೆಗಲಿಗೆ ಹಾಕಿದ್ದ
ಚಂದನ ಚವುಡಿಲಿ ಹಾಯ್ದಿದ್ದ ರಾಯರ ಓಣಿಲಿ ಹಾಯ್ದಿದ್ದ
ರಾಯಿಮಾರಗ ಹಿಡದಿದ್ದ ಇಳದಲ್ಲೆ ಇಳಿಗಾಳೇನ
ಅಲ್ಲ್ಯಾನ ಇಲ್ಲ್ಯಾನೇನ ಎಲ್ಲಿಗ ಬರುವುತಾನೇನ
ಗಾಣಿಗೇರ ಮಾಲ್ಲಪ್ಪನ ಗಿಡದ ಬಲ್ಲಿ ಬಂದಾನ
ಗಿಡದ ಬಲ್ಲಿ ಬಂದಾನ ಮ್ಯಾಕ ನೋಡುತಾನೇನ
ಮ್ಯಾಲಕುಂತ ಮಡ್ಡಪ್ಪಗ ಕೈಯ ಮುಗದಾನೇನಯ್ಯ
ಕೈಯ ಮುಗದ ಯಾಳ್ಯಾಕ ಮಡ್ಡಪ್ಪ ಕೈಯ ಮಾಡ್ಯಾನ
ಗಿಡದ ಕೆಳಗನಲ್ಲೇಳ ಮಡ್ಡಪ್ಪ ಹೇಳುತಾನೇನ
ಮಡ್ಡಪ್ಪ ಹೇಳುತಾನೇನ ಬಿಂದಿಗಿ ಚರಗಿ ತಂದಾನ
ಬಿಂದಗಿ ಚರಗಿ ತಂದಾನೆ ಚರಗಿಲಿ ಹಾಲ ಕುಡದಾನ
ಚರಗಿಲಿ ಹಾಲ ಕುಡದಾನ ಬಿಂದಗಿ ತುಂಬುತಾನೇನ
ಕೈಯಾಗ ಚರಗಿ ತುಂಬಿದ ಹೊಲಕ ಹೋಗುತಾನೇನ
ಚರಗಿ ಇಳುವುತಾನೇನ ಗುದ್ದಲಿ ಕೈಯಾಗ ಹಿಡದಿದ್ದ
ಗುದ್ದಲಿ ಕೈಯಾಗ ಹಿಡದಿದ್ದ ಚೆಂದಿ ಮ್ಯಾಗ ಏರಸಿದ್ದ
ಚೆಂದಿ ಏರಸುತಾನೇನ ಗುದ್ದಲಿ ಹಿಡಿಯುತಾನೇನ
ಆರ ಮಾರ ಕಡದಿದ್ದ ಒಂಬತ್ತ ಮಾರ ಕಡದಿದ್ದ
ಒಂಬತ್ತ ಮಾರ ಕಡದಿದ್ದ ಚರಗಿ ಹಾಲ ಕುಡದಿದ್ದ
ಚರಗಿ ಹಲ ಕುಡದಿದ್ದ ದಮ್ಮ ಬಂದ ಬಿಟ್ಟದ್ದ
ಗುದ್ದಲಿ ಹೆಗಲಿಗ ಹಾಕಿದ್ದ ಕೈಯಾಗ ಚರಗಿ ಹಿಡಿದಿದ್ದ
ಕೈಯಾಗ ಚರಗಿ ಹಿಡದಿದ್ದ ರಾಯಮಾರಗ ಹಿಡದಿದ್ದ
ರಾಯಿಮಾರಗ ಹಿಡದಿದ್ದ ಗಿಡದಾಗ ನೋಡುತಾನೇನ
ಗಿಡದಾಗ ನೋಡುತಾನೇನ ನಮಸಗಾರ ಕೊಟ್ಟಿದ್ದ
ಮ್ಯಾಲ ಇದ್ದ ಮಡ್ಡಪ್ಪ ಕೆಳಗೆ ಕೈಯ್ಯವ ಮಾಡ್ಯಾನ
ಚರಗಿ ಕೈಯ್ಯಾಗ ಹಿಡದಾನೆ ಹಾಲಿನ ಬಲ್ಲ್ಯಾಕ ಬಂದಾನ
ಚರಗಿ ಹಾಲುಕುಡಿದಾನೆ ಚರಗಿ ತುಂಬುತಾನೇನ
ಬಿಂದಗಿ ಹೆಗಲಿಗ ಹಾಕಿದ್ದ ಚರಗಿ ಕೈಯಾಗ ಹಿಡದಿದ್ದ
ಬಿಂದಿಗಿ ಮಂಡಿ ಮ್ಯಾಲೆನ ಗುದ್ದಲಿ ಹೆಗಲ ಮ್ಯಾಲೇನ
ಗುದ್ದಲಿ ಹೆಗಲ ಮ್ಯಾಲೆನ ಚರಗಿ ಕೈಯ್ಯಾಗ ಹಿಡದಾನ
ರಾಯಿಮಾರಗ ಹಿಡದಾನೆ ರವ್ವಣಿ ಮಾಡುತಾನೇನ
ಅಲ್ಲ್ಯಾನ ಇಲ್ಲ್ಯಾನೇನ ಬಣ್ಣದ ಅಗಸೀಲಿ ಹಾಯ್ದನ
ರಾಯರ ಓಣಿಲಿ ಹಾಯ್ದನೆ ರಡ್ಡೇರ ಮನಿಯ ಮುಂದೇನ
ರಡ್ಡೇರ ಮನಿಯ ಮುಂದೇನ ತನ್ನ ಮನಿಗೆ ಬಂದಾನ
ತನ್ನ ಮನಿಗೆ ಬಂದಾನೆ ಹಾಲಿನ ಬಿಂದಗಿ ಇಳುವ್ಯಾನೆ

ಹಾಲಿನ ಬಿಂದಗಿ ಇಳುವ್ಯಾನೆ ಚರಗಿ ಕೊಡುವುತಾನೇನ
ಇಬ್ಬರು ಮಕ್ಕಳು ಒಂದು ತಾಯಿ ತೆಪೇಲಿ ಹಾಲ ಕುಡದಾರ
ಹಾಲಿನ ವ್ಯಾಪರ ಇಟ್ಟಾರೆ ಊರನ ಮಂದಿ ಬರತಾರ
ಗಾಣಗ್ಯಾರ ಮನಿಯಾಗ ಹಾಲಿನ ಯಾಪಾರ ಮಾಡ್ಯಾರ
ಹಾಲಿನ ವ್ಯಾಪಾರ ಮಾಡ್ಯಾರೆ ಮಸರಿನ ವ್ಯಾಪಾರ ಮಾಡ್ಯಾರ
ದಿನ್ನ ಒಂದ ಕಾಲದಲ್ಲಿ ಕೊಡಗೋಳು ಹಾಲ ತಂದಾರ
ಮುಂಜಾಳಿ ತುಮಕೊಂಡು ಬಂದಾರೆ ಮಧ್ಯಾಹ್ನ ತುಮಕೊಂಡು ಬಂದಾರ
ಸಂಜಿಗ ತುಮಕೊಂಡು ಬಂದಾರೆ ಮೂರ ಸರತಿ ತಂದಾರೆ
ಮೂರ ಸರತಿ ತಂದಾರೆ ಹಾಲಿನ ವ್ಯಾಪಾರ ಇಟ್ಟಾರ
ಹಾಲಿನ ವ್ಯಾಪಾರ ಇಟ್ಟಾರ ಮನಿಯಾ ಬಿಚ್ಚಿ ಕಟ್ಟಸ್ಯಾರ
ಮನಿಯಾ ಬಿಚ್ಚಿ ಕಟ್ಟಸ್ಯಾರೆ ಭೂಮಿ ಖರೀದಿ ಮಾಡ್ಯಾರ
ಭೂಮಿ ಖರೀದಿ ಮಾಡ್ಯಾರೆ ತಾವೇ ತರುವುದಾತಾರೇನ
ಎಂಟ ಎತ್ತಿಂದಲ್ಲಪ್ಪ ಒಕ್ಕಲುತನ ನಡದಾವ
ಗಾಣಿಗೇರ ಮಲ್ಲಪ್ಪನ ಮಡದೀನ ಕೇಳುತಾನೇನ
ಇಂದಿಗ ಮೂರ ವರ್ಷೇನ ಹಾಲ ಮಾರಿವಿ ಅಂದಾನ
ಅನ್ನಕ ಗತಿಯ ಇಲ್ಲಪ್ಪ ನೀರಿಗ ಯಾಳ್ಯಾ ಇಲ್ಲೇನ
ಅವನ ಪುಣ್ಯದಲಿಂದೇನ ಹಾಲ ಮಾರಿವಿ ಅಂದಾನ
ಹಾಲ ಮಾರಿವಿ ಅಂದಾನೆ ವ್ಯಾಪಾರ ಮಾಡೀವಿ ಅಂದಾನ
ಭೂಮಿ ಗಳಸೇವಂದಾರೆ ಒಕ್ಕಲತನ ಮಾಡೇವ
ಒಕ್ಕಲತನ ಮಾಡೇವ ಅಂಗಡಿ ನಾವೇ ಮಾಡೇವ
ನಂದು ಮಾತುನಲ್ಲಯ್ಯ ನೀವೆ ಕೇಳಲಿ ಬೇಕಯ್ಯ
ಮಡದಿಯ ಈರಮ್ಮನ ಮಾತ ಕೇಳುತಾನೇನ
ನಾನು ಹೇಳಿದ ಮಾತೇನೆ ನೀನೇ ಕೇಳಲಿಬೇಕಯ್ಯ
ಒಳ್ಳೆದು ಒಳ್ಳೆದು ಅಂದಾನೆ ಮಾತ ಕೇಳತಾನೇನ
ನೀನು ಆಡಿದ ಮಾತಿಗೆ ನಾನು ಒಪ್ಪಿನಿ ಅಂದಾನ
ಮಡದಿಗ ಹೇಳುತಾನೇನ ನೀನು ಮಾಡಿದ ಮಾತಿಗ
ನೀನು ಮಾಡಿದ ಮಾತಿಗ ನಾನೇ ಹೋಗತೀನಿ ಅಂದಾನ
ಒಳ್ಳೆದು ಒಳ್ಳೆದು ಅಂದಾನೆ ಗಾಣಿಗೇರ ಮಲ್ಲಪ್ಪನ
ಗಾಣಿಗೇರ ಮಲ್ಲಪ್ಪ ಕೊಡವಂದು ಕೈಯಾಗ ಹಿಡದಾನ
ಕೊಡವ ಕೈಯಾಗ ಹಿಡದಾನೆ ಚರಗಿ ಕೈಯಾಗ ಹಿಡದಾನ
ಚರಗಿ ಕೈಯಾಗ ಹಿಡದಾನೆ ಹೊರಳಿ ಬರುವುತಾನೇನ
ಹೊರಳಿ ಬರುವುತಾನೇನ ಗಿಡದಾಗ ನೋಡುತಾನೇನ
ಬಾರೋ ಬಾರೋ ಏಯಪ್ಪ ಎರಡು ಕೈಯಲಿಂದೇನ
ಎರಡು ಕೈಯಲಿಂದೇನ ಕೈ ಜೋಡಸುತಾನೇನ
ನಿನ್ನ ಕೈಯಲಿಂದಪ್ಪ ಅನ್ನ ಕಂಡೀವಿ ಅಂದಾರ
ನಿನ್ನ ಪುಣ್ಯದಲಿಂದೇನ ರೊಕ್ಕ ಗಳಿಸೀವಿ ಅಂದಾರ

ರೊಕ್ಕಗಳಿಸೀವಿ ಅಂದಾರೆ ಭೂಮಿ ಗಳಸೀವಿ ಅಂದಾರ
ಎಂಟು ಎತ್ತಿಂದಲ್ಲಪ್ಪ ಒಕ್ಕಲುತನ ನಡದಾವ
ಊಟ ತುಂಬನಲ್ಲಪ್ಪ ಸಾವುಕಾರಂತ ಕರದಾರ
ಗಾಣಗೇರ ಮಲ್ಲಪ್ಪನ ಹಿಂತ ಮಾತನಾಡ್ಯಾನ
ಬಾರೋ ಬಾರೋ ಏಯಪ್ಪ ನನ್ನ ಮಾತ ಕೇಳಲ್ಲ
ನಿನಗ ಬಟ್ಟಿ ತಂದೇನ ತೊಡುವ ಅಂಗಿ ತಂದೇನ
ಉಡುವ ಧೋತುರ ತಂದೇನ ತೊಡುವ ಅಂಗಿ ತಂದೇನ
ತೊಡುವ ಅಂಗಿ ತಂದೇನ ತಲಿಮ್ಯಾಲ ರುಂಬಾಲ ತಂದೇನ
ಮೈಗೆ ಅರಿಶಿಣ ಹಚ್ಚೇನ ಕೈಗಿ ಕಂಕಣ ಕಟ್ಟೇನ
ಬಾರೋ ಬಾರೋ ಏಯಪ್ಪ ಲಗ್ಗನ ಮಾಡತೀವಿ ಅಂದಾರ
ಲಗ್ಗನ ಮಾಡತೀವಿ ಅಂದಾರ ಮೂರತ ಮಾಡತೀವಿ ಅಂದಾರ
ಗಿಡದ ಒಳಗನಲ್ಲಪ್ಪ ಮಡ್ಡಪ್ಪ ಮೂರುತಿ ಆದಾನ
ಮಡ್ಡಪ್ಪ ಮಾತನಾಡ್ಯಾನೆ ಏನಂದಾಡುತಾನೇನ
ನನ್ನ ಮಾತನಲ್ಲಪ್ಪ ನೀನೇ ಕೇಳಲಿಬೇಕಯ್ಯ
ನನಗೂ ಲಗ್ಗನ ಮಾಡಿದರ ನನ್ನ ಮಾತ ಕೇಳಯ್ಯ
ನನ್ನ ಮಾತ ಕೇಳಪ್ಪ ಕನ್ಯಾ ಯಾರ ಕುಡತಾರ
ಲಗ್ಗನ ಯಾರು ಮಾಡ್ಯಾರೆ ಹೆಣ್ಣು ಯಾರು ಕೊಡತಾರ
ಹೆಣ್ಣು ಯಾರು ಕೊಡತಾರೆ ಬಟ್ಟಿ ಯಾರು ತಂದಾರು
ಗಾಣಗೇರ ಮಲ್ಲಪ್ಪನೆ ನುಡದಾನೆ ಮಾತಾಡ್ಯಾನ
ಬಾರೋ ಬಾರೋ ಏಯಪ್ಪ ಹೊಟ್ಟಿಲಿ ಹುಟ್ಟಿದ ಮಗಳೇನ
ಹೊಟ್ಟಿಲಿ ಹುಟ್ಟಿದ ಮಗಳೇನ ಗಂಗಮ್ಮಗ ಕೊಡತೀನಿ ಅಂದಾನ
ನನ್ನ ಹೊಟ್ಟಿಲಿ ಹುಟ್ಟಿದ ಮಗಳ ಗಂಗಮ್ಮನ ಕೊಟ್ಟೇನ
ಒಳ್ಳೇದು ಒಳ್ಳೇದು ಅಂದಾನೆ ತಾನೆನು ಹೇಳುತಾನೇನ
ನೀನ ಬಟ್ಟಿ ತಂದರೆ ನಾನೇ ಋಣ ಕೊಟ್ಟೇನ
ನಾನೂ ಋಣ ಕೊಟ್ಟೇನ ನೀನು ಋಣ ಕೊಡಬೇಕ
ಒಳ್ಳೇದು ಒಳ್ಳೇದು ಅಂದಾನೆ ಗಾಣಿಗೇರ ಮಲ್ಲಪ್ಪನ
ಉಡುವ ಧೋತರ ತಂದಾನೆ ತೊಡುವ ಅಂಗಿ ತಂದಾನ
ಕೈಗಿ ಕಂಕಣ ತಂದಾನೆ ತೆಲಿಮ್ಯಾಲ ಪಟಗ ತಂದಾನೆ
ಹಂತ ಯಾಳ್ಯಾದೊಳಗೇನೆ ಯಾರು ಬರುವುತಾರೇನ
ಹಡಪದ ನಾಗಪ್ಪಣ್ಣನ ಕರಕೊಂಡು ಬರುವುತಾನೇನ
ನಬ್ಬನೆ ನವರಾತರೆ ಸಬ್ಬನೆ ಸರಹೊತ್ತೇನ
ಹಡಪದ ನಾಗಪಣ್ಣಗ ಚಾಜ ಕೊಡಬೇಕಾದರ
ಚಾಜ ಕೊಡುವುತಾರೇನೆ ಒಳ್ಳೆದು ಒಳ್ಳೆದು ಅಂದಾರ
ನಬ್ಬನೆ ನವರಾತರೆ ಸಬ್ಬನೆ ಸರಹೊತ್ತೇನ
ಗಾಣಗೇರ ಮಲ್ಲಪ್ಪನ ಮಗಳೆ ತಾಯಿ ಬಂದಾರ
ಮಗಳ ತಾಯಿ ಬಂದಾರ ಗಂಡನ ಕರಕೊಂಡು ಬಂದಾರ

ಊರ ಒಳಗನಲ್ಲಪ್ಪ ಗೌಡನ ಕರಕೊಂಡು ಬಂದಾರ
ಗೌಡಗ ಸುದ್ದಿ ಹೇಳ್ಯಾರ ಕರಮಣಿ ಕಟ್ಟುತಾರೇನ
ಗಿಡದ ಬುಡುಕನಲ್ಲಪ್ಪ ಲಗ್ಗನಾಗುತಾವೇನ
ನೀನೇ ಹೆಣ್ಣ ಕೊಟ್ಟಿದೆ ನೀನೆ ಬಟ್ಟಿ ತಂದಿದೆ
ನನ್ನಬಲ್ಲಿ ಇದ್ದದ್ದು ಮೂರೇ ಮಳ ಕಂಬಳಿ
ಮೂರ ಮಳ ಕಂಬಳಿ ಹೆಗಲಿಗ ಇರಬೇಕಂದಾನ
ಮರ್ತ್ಯಲೋಕದೊಳಗೇನ ಗಾಣಿಗ ಹೋಗಲಿಬೇಕಯ್ಯ
ಗಾಣಿಗ ಹೋಗಲಿಬೇಕಪ್ಪ ಗೌಳಿಗಿ ಹೋಗಲಿಬೇಕಯ್ಯ
ಗೌಳಿಗಿ ನಾದರಲ್ಲಪ್ಪ ನೀನೆ ಆಗಲಿಬೇಕಯ್ಯ
ಹತ್ತು ಎಮ್ಮಿ ಕಟ್ಟಿದರ ಒಂದು ಆಕಳ ಕಟ್ಟಯ್ಯ
ಆಕಳ ಹಾಲಿನಿಂದೇನೆ ನೀನೇ ಸೌಕರ ಆಗಿದೆ
ಆಕಳ ಪುಣ್ಯದಲಿಂದೇನೆ ನೀನೆ ಮಾಡಿದಿ ಅಂದಾರ
ಎರಡು ಎಮ್ಮಿ ಇದ್ದರೆ ಒಂದೇ ಆಕಳ ಕಟ್ಟಯ್ಯ
ಎರಡ ಎಮ್ಮಿ ಇದ್ದರೆ ಒಂದು ಆಕಳ ತರಬೇಕ
ಎಂಟು ಎಮ್ಮಿನಿದ್ದರ ಒಂದೇ ಆಕಳ ಇರಬೇಕ
ಹತ್ತು ಕುಣಿಕಿ ಬಿಚ್ಚಾಗ ಎಮ್ಮಿ ಬಯಲಿಗ ಬಿಡಬೇಡ
ನಾನು ಕೊಟ್ಟ ಮೂರ ಮಳದ ಕಂಬಳಿ ಹೆಗಲಿಗೆ ಇರಬೇಕ
ಕಂಬಳಿ ಹೆಗಲಿಗ ಇರಬೇಕ ಬಡಗಿ ಕೈಯಾಗ ಇರಬೇಕ
ಒಳ್ಳೆದು ಒಳ್ಳೆದು ಅಂದಾನೆ ಗಾಣಿಗೇರ ಮಲ್ಲಪ್ಪನ
ರಾತ್ರಿ ಮಗಳ ಕೊಟ್ಟಾನೆ ರಾತರಿ ಲಗ್ಗನ ಮಾಡ್ಯಾನ
ಮಗಳ ಖೂನ ಮಡ್ಡಪ್ಪಗ ಕಂಬಳಿ
ಕಂಬಳಿ ಯಾರಿಗ ಕೊಟ್ಟಾನ ಗೌಳಿಗ್ಯಾನ ಹೆಗಲಿಗೆ
ಗೌಳಿಗೇನ ಹೆಗಲಿಗೆ ಮೂರ ಮಳದ ಕಂಬಳಿ
ಮೂರ ಮಳದಿ ಕಂಗಳಿ ಶಿವಲಿಂಗಮ್ಮ ನೂತಾಳ
ಶಿವಲಿಂಗಮ್ಮ ನೂತಾಳೆ ಪದಮಾಗೊಂಡ ನೈದಾನ
ಪದುಮಾಗೊಂಡ ನೈದಾರ ಮಡ್ಡಪ್ಪನ ಕಂಬಳಿ
ಮಡ್ಡಪ್ಪನ ಹುಟ್ಟುಗಂಬಳಿ ಗೌಳಿಗೇನ ಮೈಮೇಲ
ಗೌಳಿಗೇನ ಮೈಮ್ಯಾಲ ಕಂಬಳಿ ಹೋಗುತಾವೇನ
ಕಂಬಳಿ ಹೋಗುತಾವೇನ ಗೌಳಗೇರ ಮಗನೇನ
ಮಲ್ಲಪ್ಪನ ಮಗಳೇನ ಮಡ್ಡಪ್ಪ ಲಗ್ಗನಾದನ
ಮಡ್ಡಪ್ಪನ ಲಗ್ಗನಾದವೆ ಕಂದ ಕಣ್ಣ ತೆರದಾವ
ಮಡ್ಡಪ್ಪ ಲಗ್ನನಾದರ ಗಂಗಮ್ಮ ಶರಣೆ ಇದ್ದಾಳ
ಗಂಗಮ್ಮನ ಹೊಟ್ಟೇಲಿ ಯಾರ ಹುಟ್ಟುತಾರೇನ
ಗಂಗಮ್ಮನ ಹೊಟ್ಟೇಲಿ ಅಡವೆಪ್ಪ ಹುಟ್ಟುತಾನೇನ
ಅಡವೆಪ್ಪ ಹುಟ್ಟುತಾನೇನ ಮಡಪ್ಪನ ಹೊಟ್ಟೇಲಿ
ದೇವಿಧರ್ಮರ ಹಾಡೇನೆ ಇಲ್ಲಿಗ ಬರುವುತಾವೇನ

ಇಲ್ಲಿಗ ಬರುತಾವೇನ ಶಿವಲಿಂಗಮ್ಮ ನೋಡಯ್ಯ
ನನ್ನ ಮಗನ ಮ್ಯಾಲೇನ ಖೂನ ಹಿಡಿತಿನಂದಾಳ
ಖೂನ ಹಿಡಿತಿನಂದಾಳೆ ಯಾವಲಿ ಹೋಗ್ಯಾನಂದಾಳ
ಹಾಂಗ ಹೀಂಗ ಹೋಗದರೊಳಗ ಗೌಳಗೇರ ಮೈಮೇಲ
ಗೌಳಗೇರ ಮೈಮೇಲ ಹೆಗಲ ಮ್ಯಾಲೆ ಕಂಬಳೆ
ಹೆಗಲ ಮ್ಯಾಲಿನ ಕಂಬಳಯ್ಯಾ ಯಾರು ನೋಡುತಾರೇನ
ಪದುಮಗೊಂಡ ನೊಯಿದಾ ಕಂಬಳಿ ಶಿವಲಿಂಗಮ್ಮ ನೂಲ ಮಾಡ್ಯಾಳ
ಮಡದಿ ಪುರುಷ ಕೂಡ್ಯಾರಯ್ಯ ಕಂಬಳಿಗುರುತ ಹಿಡದಾರ
ಹೆಗಲ ಮ್ಯಾಲ ಕಂಬಳೆ ಖೂನ ಹಿಡಿಯುತಾಳೇನ
ಪದುಮಗೊಂಡ ಬಂದಾನೆ ಕಂಬಳಿ ಖೂನ ಹಿಡದಾನ
ಕಂಬಳಿ ಖೂನ ಹಿಡದಾನೆ ಹ್ಯಾಂಗ ಬಂದಾದಂದಾನ
ಇದ್ದ ಮೂರ ಮಳದಾಗ ಕಂಬಳಿ ಇಲ್ಲಿಗ ಬಂದಾದ
ಬಾರೋ ಬಾರೋ ಗೌಳಿಗ್ಯಾ ಕಂಬಳಿ ಹ್ಯಾಂಗ ಬಂದಾವ
ಯಾರ ಕೊಟ್ಟ ಕಂಬಳಿ ಇದು ಎಲ್ಲಿಂದ ತಂದ ಕಂಬಳೆ
ಇದೇ ಕಂಬಳಿ ಅಲ್ಲಪ್ಪ ಯಾರ ಕೊಟ್ಟಾರ ಹೇಳಪ್ಪ
ಯಾರು ಕೊಟ್ಟಾರ ಹೇಳಪ್ಪ ಗೌಳಗ್ಯಾನ ಕೇಳ್ಯಾನ
ಒಳ್ಳೆದು ಒಳ್ಳೆದಂದಾನ ಗೌಳಿಗ್ಯಾ ಖರೇಯಾ ಹೇಳತಿನಿ ಅಂದಾನ
ಗೌಳಿಗ ಬರುವುತಾನೇನ ಕಂಬಳಿ ಖೂನ ಹೇಳ್ಯಾನ
ಕಂಬಳಿ ಖೂನಾ ಮಾರಾಯಾ ಹ್ಯಾಂಗ ಬಂದಾದಂದಾನ
ಕಾಡಿನಲ್ಲಿ ಹೋಗೀನೆ ನಾನು ಗಿಡದ ಬಲ್ಲಿ ನೋಡೇನೆ
ಗಿಡದ ಬಲ್ಲಿ ನೋಡೀನೆ ನಾನು ವಾಸ ಅವನು ಮಾಡ್ಯಾನ
ಅಡವಿ ಗಿಡದಾಗ ಇದ್ದಾವ ಕಾಡ ಆಕಳಂದಾನ
ಕಾಡ ಆಕಳ ಬಲ್ಲೇನ ಮಡ್ಡಪ್ಪ ಇರುವುತಾನೇನ
ಮಡ್ಡಪ್ಪ ಇರುವುತಾನೇನ ದೊಡ್ಡವನಾಗುತಾನೇನ
ವಾಸ ಗಿಡದಾಗ ಮಾಡಿದನಯ್ಯ ವಯಸ್ಸನಾಗುತಾವೇನ
ನಾನು ಬರವದಿಂದೇನ ಮಡ್ಡಪ್ಪ ಹೇಳುತಾನೇನ
ಮೊದಲೆ ಗಾಣಿಗ್ಯಾ ಇದ್ದಿನಿ ನಾನು ಅನ್ನ ಇಲ್ಲದೆ ಕುಂತಿನಿ
ಹಾಲ ನಮಗ ಕೊಟ್ಟಿದನಯ್ಯ ಹಾಲದಿಂದ ಬದುಕೇವ
ನಾನು ತಂದನಲ್ಲಪ್ಪ ವ್ಯಾಪಾರ ಮಾಡೇನಂದಾನ
ವ್ಯಾಪಾರಿ ಮಾಡೇನಂದಾನ ಭೂಮಿಕೊಂಡೇನಂದಾನ
ದೌಳತನ ಬಂದಾದಲ್ಲಿ ಸೌಕಾರ ಮಾಡ್ಯಾನಂದಾನ
ಉಪಗಾರ ಆದವಂದೇನ ಹೊಟ್ಟಿಲಿ ಹುಟ್ಟಿದಮಗಳೇನ
ಮಡಪ್ಪನ ಕೇಳಿನಲ್ಲೋ ನಾನು ಮಗಳ ಕುಡತೀನಿ ಅಂದೇನ
ಮಗಳ ಕುಡತೀನಿ ಅಂದೇನೆ ಮರ್ಯಾದಿ ತರತೀನಿ ಅಂದೇನ
ಹೊಟ್ಟಿಲಿ ಹುಟ್ಟಿದ ಮಗಳೇನ ಗಂಗಮ್ಮನ ಕೊಟ್ಟೇನಂದಾನ
ಗಂಗಮ್ಮನ ಕೊಟ್ಟೇನಂದಾನ ಲಗ್ನನ ಮಾಡಿದಂದಾನ

ಹೊಟ್ಟಿಲಿ ಹುಟ್ಟಿದ ಮಗಳ ಕೊಟ್ಟೆ ಮರ್ಯಾದಿ ನಾನೆ ತಂದೀನೆ
ನನಗ ಮರ್ಯಾದಿ ಮಾಡಿದಿ ನೀನು ನನಗ ಮಗಳ ಕೊಟ್ಟೀದೆ
ನಿನ್ನ ಋುನ ಕೊಟ್ಟೀದೆ ಮಲ್ಲಪ್ಪ ನನ್ನ ಋುನ ಕೊಡತೀನ
ಹುಟ್ಟಗಂಬಳಿ ಕೊಟ್ಟಾನ ನನಗ ಒಂದಾ ಆಕಳ ಕೊಟ್ಟಾನ
ಹಾಸಿ ಹೊರುವುದು ಕಂಬಳಿಯಲ್ಲಿ ಹೆಗಲಿಗ ಇರುವದು ಕಂಬಳಿ
ಹೆಗಲಿಗ ಇರುವದು ಕಂಬಳಿ ಮಡಪ್ಪ ನನಗೆ ಕೊಟ್ಟಾನ
ಮಡಪ್ಪ ನನಗೆ ಕೊಟ್ಟಾನೆಂದು ಅವನೇ ಹೇಳುತಾನೇನ
ಮಡಪ್ಪ ನನಗೆ ಕಂಬಳಿ ಕೊಟ್ಟಾನ ಮಲ್ಲಪ್ಪ ಹೇಳುತಾನೇನ
ಗೌಳಗ್ಯಾನಾಗಿನಂದಾನ ಹೆಗಲಿಗ ಕಂಬಳಿ ಬಂದಾದಂದಾನ
ಕಂಬಳಿ ನನಗೆ ಬಂದಾದ ಒಂದಾ ಆಕಳ ನನಗೆ ಕೊಟ್ಟಾನ
ನಾನು ಎರಡಾ ಕೊಟ್ಟೀನಿ ಅವನಿಗಿ ನನಗ ಎರಡು ತೋರಸ್ಯಾನ
ಪದಮಾಗೊಂಡನಲ್ಲೇಳ ಮಗನೀಗ ಹುಡುಕುತಾನೇನ
ಕಾಡಿನಲ್ಲಿ ವಾಸ ಮಾಡಿ ಮಗನ ಹಡದಾನೇನಯ್ಯ
ಮಡ್ಡಪ್ಪನೆಂಬ ತಂದೇನ ಆಡುವೆಪ್ಪನೆಂಬ ಮಗನೇನ
ಪದುಮಗೊಂಡ ಶಿವಲಿಂಗಮ್ಮ ಇಬ್ಬರು ಬುರುವುತಾರೇನ
ಇಬ್ಬರು ಬರುವುತಾರೇನಯ್ಯ ಕಂಬಳಿ ಕೇಳುತಾರೇನ
ಕಂಬಳಿ ಗುರುತ ಹೇಳಿದನಯ್ಯ ಮಗನ ಪಡದೀನಿ ಅಂದಾರ
ನನ್ನ ಋುನ ಅವರ ಬಲ್ಲಿ ಅವರ ಋುನ ನನ್ನ ಬಲ್ಲಿ
ತಂದಿ ನಾನೇ ಅಂದಾನೋ ಅಲ್ಲಿ ಪದುಮಾಗೊಂಡ ಹೇಳ್ಯಾನ
ತಾಯಿ ನಾನೇ ಅಂದಾಳೋ ಅಲ್ಲಿ ಶಿವಲಿಂಗಮ್ಮ ಹೇಳ್ಯಾಳ
ಕಾಡಿನಲ್ಲೆ ಕಳದಿದಿಯಪ್ಪ ಮಡಪ್ಪನಂತ ಹೇಳ್ಯಾಳ
ಕಾಡಿನಲ್ಲೆ ಕಳದಿದಿಯಪ್ಪ ಮಡಪ್ಪನಂತ ಹೇಳ್ಯಾರ
ಮಡಪ್ಪನಂತ ಹೇಳ್ಯಾರವರು ನನ್ನ ಮಗನೇಳು ಅಂದಾರ
ತಾಯಿ ಮಕ್ಕಳು ಕೂಡಿದರಯ್ಯ ತಂದಿ ಮಕ್ಕಳು ಕೂಡ್ಯಾರ
ತಂದಿ ಮಕ್ಕಳು ಕೂಡ್ಯಾರವರು ಪದುಮಗೊಂಡ ಹೇಳ್ಯಾನ
ಉಣ್ಣಿ ಕಂಕಣದವರಿಗಪ್ಪ ಹಿರಿಯಾ ಮಗನಂದಾರ
ಹತ್ತಿ ಕಂಕಣದವರಿಗಪ್ಪ ಸಣ್ಣ ಮಗನ ನೀನಯ್ಯ
ನೀನೇ ದೊಡ್ಡ ತಮ್ಮನೆ ಅವರೇ ಸಣ್ಣ ತಮ್ಮದೇರಾ
ಶಿವಲಿಂಗಮ್ಮನ ಮಕ್ಕಳಿಗಯ್ಯ ಹತ್ತಿ ಕಂಕಣದವರಿಗೆ
ಹತ್ತಿಕಂಕಣದವರಿಗಯ್ಯ ನೀವೇ ತಮ್ಮದೇರು ಅಂದಾಳ
ಮಡಪ್ಪ ಪಾಲ ಕೊಟ್ಟಾನೆ ಅಣ್ಣದೇರು ಪಾಲ ಕೊಟ್ಟಾನ
ಶಿವಲಿಂಗಮ್ಮನ ಮಕ್ಕಳಿಗಯ್ಯ ಇಬ್ಬರಿಗ ಪಾಲ ಕೊಟ್ಟಾರ
ಸಿದ್ಧಮ್ಮನ ಮಕ್ಕಳಿಗಲ್ಲೊ ಅವರು ಕುರಿಯಾ ಹಂಚಿ ಕೊಟ್ಟಾರ
ತಾಯಿದೇರಿಗ ಹಿಡಿದೇವೆ ತಂದಿನ ಬಿಟ್ಟು ಬಂದೀವೆ
ಸಿದ್ಧಮ್ಮನ ಗಂಡ ಪದುಮಾಗೊಂಡ ಶಿವಲಿಂಗಮ್ಮನ ಗಂಡ ಪದುಮಾಗೊಂಡ
ಇಬರ ಇಬ್ಬರಿಗಲ್ಲೇಳಯ್ಯ ಪದುಮಾಗೊಂಡನಿದ್ದಾನೆ

ತಂದಿ ಹಿಡದು ಬಂದಾರೆ ನಾವೇ ಗೊಂಡಗುರುಬರೆ
ಕಾಡಿನಲ್ಲಿ ಇದ್ದರ ನಾವ ಕಾಡಕುರಬರಾದೇವೆ
ಕಾಡ ಕುರುಬರು ನಾವೇನಾದೇವು ಅಡವೀಯ ಕುರುಬರು ನಾವೇನ
ಗೊಂಡಗುರಬರು ನಾವೇನಯ್ಯ ಪದುಮಾಗೊಂಡನ ಮಕ್ಕಳೆ
ಗೊಂಡಗೋಳಾ ಪದಗೋಳಯ್ಯ ಇಲ್ಲಿಗ ಮುಗದಾವೇನಯ್ಯ
ಇಲ್ಲಿಗ ಇದು ಒಂದು ಸಂದೇನ ಹಾಡಿದರ ಪದ ಮುಂದೇನ
ಕಳಸವಿಟ್ಟರ ಕವಿತ ಕಟ್ಟ್ಯಾರ ಹೊನ್ನ ಜಗ್ಗೂನಿ ಗೌಡರೋ
ದೇವರ ಬಂದಾರ ಬನ್ನೀರೆ.

***

# ವರಾಹ ಚರಿತ್ರಂ

ಪಾತ್ರಗಳು

| | |
|---|---|
| ದೇವೇಂದ್ರ | ಸ್ತ್ರೀವರ್ಗ |
| ಸನಕಸನಂದನರು | ದಿತಿ |
| ಜಯವಿಜಯರು | ಭೂಮಿದೇವಿ |
| ವಿಷ್ಣುಮೂರ್ತಿ | |
| ಕಾಶ್ಯಪರು | |
| ಹಿರಣಾಕ್ಷ | |
| ಬ್ರಹ್ಮ | |
| ವರುಣ | |
| ನಾರದ | |
| ವರಾಹಸ್ವಾಮಿ | |

ಮುನ್ನುಡಿ

ಆತ್ಮೀಯ ಬಂಧುಗಳೇ,

ಮೊದಲ ಮಾತು ಅನ್ಯರಿಂದ ಬರೆಸಬೇಕೆಂದಿದ್ದೆ. ಆದರೆ ಹೀಗೆ ತೋರಿತು ಕಾವ್ಯಕುರ್ತವೇ ಬರಿಯವದೊಳ್ಳಿತೆಂದು ನಾನೇ ಆ ಕಾರ್ಯಕ್ಕೆ ಕೈನೀಡಿದೆನು. ಕವಿಯ ಪರಿಚಯವು ಸೇಕಡಾ ತೊಂಭತ್ತು ಜನರ ಮಟ್ಟಿಗೂ ಗೊತ್ತೇ ಇದೆ. ಆದರೆ ಸಮಾಜದೊಳಗೆ ಅಪರಿಚಿತರ ಪರಿಚಯಕ್ಕಾಗಿ ಬಾಯಾರ ಜತ್ತಿ ಆಶುಕವಿ ಈಶ್ವರ ಭಾಗವತರು ಸಂಪೂರ್ಣ ರಾಮಾಯಣ ಮೊದಲಾದ ಏಳು ಪ್ರಸಂಗಗಳನ್ನೂ, ಹರಿಕಥೆಗೊಪ್ಪಿದ ಚಿಕ್ಕ ಕಥೆಗಳನ್ನೂ ಇವರೇ ರಚಿಸಿದವರೆಂದು ಗೊತ್ತುಗೊಳಿಸುವೆನು. ಈ (ವರಾಹ ಚರಿತ್ರಂ) ಚಿಕ್ಕ ಪ್ರಸಂಗವನ್ನು ಹಳ್ಳಿ ಶಾಲೆಯಲ್ಲಿ ವಿದ್ಯಾವ್ಯಾಸಂಗ ಮಾಡುತ್ತಿರುವಾಗ ಲೋಕವ್ಯವಹಾರ ಏನೂ ಅರಿಯದ ೧೨ನೇ ವಯಸ್ಸಿನವನಾದ ನನ್ನ ಬುದ್ಧಿಯಿಂದ

ಶ್ರೀದೇವರೇ ಹೊರಗೆಡವಿದನು. ಆ ಕವಿತೆಯಲ್ಲಿ ಈಶ್ವರನೆಂಬ ನಾನು ವಿಶ್ವವೆಂಬ ಪದ ಮುಂದಿಟ್ಟು (ವಿಶ್ವ+ಈಶ್ವರ) ವಿಶ್ವೇಶ್ವರ ಅಂಕಿತವಿಟ್ಟದ್ದಲ್ಲದೆ ಮುಂದಿನ ಪ್ರತಿಕೃತಿಗಳಲ್ಲಿ ವಿಶ್ವೇಶ್ವರ, ವಿಶ್ವನಾಥ ಎಂತಲೇ ಪದಾಂತ್ಯ ಬರೆಯುತ್ತಿದ್ದೇನೆ ಪರಂತು ಈ ಪ್ರಸಂಗವು ಅಂದೇ ನನ್ನ ಕಣ್ಮರೆಯಾಗಿತ್ತು. ಪ್ರಕೃತ ಎಲ್ಲಾ ನನ್ನ ಬಾಬ್ತು ಲಿಪಾಪೆಗಳುಳ್ಳ ಪೆಟ್ಟಿಗೆ ಶೋಧಿಸುವಲ್ಲಿ ದೈವವಶಾತ್ ಇದು ದೊರೆಯಿತು. ನೋಡಿದರೆ ಪದಗಳು ಸರಳವಾದ ಆಡುನುಡಿಗಳಿಂದ ಕಟ್ಟಲ್ಪಟ್ಟಿದೆ. ಕಥಾಸರಣಿ ಭಾಗವತವನ್ನು ಏನೂ ಬಿಟ್ಟಿಲ್ಲ. ಪ್ರಿಯ ವಾಚಕರೇ ಷಡಕ್ಷರಿಯ ಶಬರಶಂಕರವಿಲಾಶ ||ಕಂದ|| ತೆಗಳಿಲ್ ಬಲ್ಲಂಖಿಲಂ ತಾಂ | ನೆಗಳಲ್ ಬಲ್ಲನೆನವೀನ ಕೃತಿಯಂಶಾಖಾ || ಮೃಗಮಲಂ ಮಾಲೆಗೀಳಲ್ | ಮಿಗೆಬಲ್ಲುದಲ್ಲಿದಂತಿರೆಯೇಂ ರಚಿಯಿಕುಮೇ || ಈ ಭಾವಕರು ಈರ್ಷೆಯಿಂದ ಹಳಿದರೂ ಹಳಿವಲ್ಲವೆಂದೇ ಭಾವ, ಕವಿಯ ಕುಂದುಕಗಳನ್ನು ಗಮನಿಸದೇ ರಚಿಸಿದ ಕಾಲವನ್ನು ನೋಡಿ (ಇದಮಮೃತ ಬಾಲಭಾಷಿತಂ) ಇದಂ ಭಾವಿಸಿ ಕವಿಗೆ ಆಶಿಸುವಿರಾಗಿ ನಂಬುತ್ತೇನೆ. ಈ ಹಣದ ಅಡ್ಚಣೆ ಕಾಲದಲ್ಲಿ ಯೇನೇನೋ ಪ್ರಯತ್ನಪೂರ್ವಕ ಮುದ್ರಿಸಿ ನಿಮ್ಮ ಮುಂದಿಟ್ಟಿರುತ್ತೇನೆ. ಈ ಕಾಲವೆಂದರೆ ಕನ್ನಡ ಸಾಹಿತ್ಯದಲ್ಲಿ ಹೊಸ ಹುರುಪೆದ್ದ ಕಾಲ. ಈ ಸುಸಂಧಿಯಲ್ಲಿ ಸಾಧ್ಯವಾದಷ್ಟು ದೇಶಸೇವೆ ಮಾಡಲಿಚ್ಛಿಸುವ ಕವಿಯ ಭಾಗಕ್ಕೆ ಸಂತುಷ್ಟರಾಗಿ ಪೂರ್ಣ ಪ್ರೇಮಭಾಗಿಗಳಾಗಬೇಕಾಗಿ ಪ್ರಾರ್ಥಿಸುತ್ತೇನೆ – ಇದರ ಮುದ್ರಣಕ್ಕಾಗಿ ತುಂಬ ಖರ್ಚು ಮತ್ತು ಶ್ರಮ ತಕ್ಕೊಂಡು ನಮ್ಮೊಳಗಿನ ಮೈತ್ರತೆಯನ್ನು ಮತ್ತಷ್ಟು ವೃದ್ಧಿಗೊಳಿಸಲಿರುವ ತಮ್ಮ ಉದಾರತೆಯನ್ನು ವ್ಯಕ್ತಗೊಳಿಸಿದ ಮಂಗಳೂರು ಪ್ರೆಸ್ಸಿನ ಶ್ರೀ ಯಂ. ನಾರಾಯಣ ಪ್ರಭುಗಳವರಿಗೆ ಕೃತಜ್ಞತೆಯಿಂದ ನನ್ನ ಹೃತ್ಪೂರ್ವಕ ವಂದನೆಗಳನ್ನು ಸಮರ್ಪಿಸುತ್ತೇನೆ.

ಇತಿ ಸಜ್ಜನ ವಿಧೇಯ,

**ಬಾಯಾರ ಜತ್ತಿ ಈಶ್ವರ ಭಾಗವತ**

ಮೊ.ಚಿ.

ತಾ . ೯-೪-೪೧

# ವರಾಹ ಚರಿತ್ರಂ

ಯಕ್ಷಗಾನ ಶ್ರೀಮದ್ಭಾಗವತ ತೃತೀಯ ಸ್ಕಂಧ ಪ್ರೇಕ್ತ

**|| ವರಾಹ ಚರಿತ್ರಂ ||**

**ಶಾರ್ದೂಲವಿಕ್ರೀಡಿತ ವೃತ್ತಂ**

ಶ್ರೀಮತ್ಪಂಕಜಧಾರಣಂ ತ್ರಿನಯನಂ-ಸುಜ್ಞಾನ ಕಲ್ಪದ್ರುಮಂ |
ಭೀಮಂ ಭಕ್ತಜನಾತಾಪಹರಣಂ-ಕೈಲಾಸವಾಸಂ ವಿಭುಂ ||
ಸೋಮಾದಿತ್ಯ ಸಹಸ್ರಕೋಟಿ ರುಚಿರಂ-ಸೌಭಾಗ್ಯರತ್ನಾಕರಂ |
ಕೌಮಾರೀರಮಣಂ ಹರಿಪ್ರಿಯಕರಂ-ಶ್ರೀವಿಶ್ವನಾಥಂ ಭಜೆ || ೧ ||

**೩ರಾಗ ನಾ. ತಾ. ಝಂ**

ಜಯ ಜಯತು ಕರಿವದನ ಜಯ ಜಯತು ಗುಣಸದನ-
ಜಯ ಕುಜನಜನಹರಣ ಜಯ ನತಾಭರಣ | ಜಯ || ಪಲ್ಲ ||

ಹರಿಕೋಟಿ ಸಮಭಾಸ-ಹರಿತನುಜಭಯ ನಾಶ ಹರಿಸೂನುಶರಕಾಲ
ಹರಿವಿನುತ ಶೀಲಾ || ಜಯ || ೧ ||

ಚಂಡಿಕೋದರನುದಿತ ಚಂಡಭುಜ ಬಲಖ್ಯಾತ ಮಂಡಲಾಧಿಪ ಗಣಪ-
ದಿಂಡಪ್ರತಾಪಾ | ಜಯ || ೨ ||

ಕರುಣಾಬ್ಧಿ ಶುಭ್ರಾಂಶು ಕರುಣಿ ವರಧೃತಪರಶು ದುರಿತಟವಿಹುತ
ವಹನ ಪರಿಪಾಲಿಸೆನ್ನಾ || ೩ ||

**ಜಯತು – ವಾರ್ಧಿಕ್ಯ**

ಪದ್ಮಭವನಿಂಗೆರಗಿ ಪದ್ಮಾಕ್ಷಗಂ ಮಣಿದು
ಪದ್ಮಳಂ ಕೊಂಡಾಡಿ-ಪದ್ಮಿನಿಗೆ ವಂದಿಸುತ
ಪದ್ಮಸಖನಂ ಭಜಿಸಿ-ಪದ್ಮಧರನಂ ಪೊಗಳು ತದ್ರಿಜೆಯಬಲಗೊಂಬೆನೊ ||
ಕ್ಷುದ್ರಗಜದಾನವನ ಗುದ್ದಿ ಕೆಡಹಿದು ವೀರ
ಭದ್ರನಂ ನಿಜಜಟಾ ಪದ್ಮದಿಂ ಪಡೆದ ಮಹ
ರುದ್ರನಂ ಶುದ್ಧನಂ ಕದ್ರುಸುತ ಭೂಷನಂ ವಿಶ್ವೇಶನಂ ಭಜಿಪೆನೂ || ೧ ||

**ಭಾಮಿನಿ**

ಸಿರಿಗಿರಿಜೆ ಶಾರದೆಯ ಬೊಮ್ಮನ
ಹರನ ವಿಶ್ವಂಭರನ ಸುರಪನ
ಕರುಣರಸಮಂ ಪಡೆದು ರುಷಿ ವ್ಯಾಸಾದಿಗಳಿಗೆರಗೀ ||
ವರಮಹಾ ಭಾಗವತಜನಗಳ
ಚರಣಕಾನತನಾಗುತೆಂನಯ
ಗುರುಹಿರಿಯರಡಿಗೆರಗಿ ಪೇಳುವೆನೀ ಕಥಾಮೃತವಾ || ೧ ||

**ದ್ವಿಪದಿ**

ಸೂತಶುಕ ನಾರದ ವಸಿಷ್ಠ ಗೌತಮರಾ |
ಪ್ರೀತಿಯಿಂದುಪಚರಿಸಿ ಗಾರ್ಗ್ಯಗೋದ್ವಿಜರಾ || ೧ ||

ವಲ್ಮೆಯಂ ಪಡೆದು ವಾಲ್ಮೀಕಿಭಿನಮಿಸಿ |
ನಲ್ಮೆಯಿಂದ ಪಿತೃ ಮಾತೃ ಗುರುಗಳಂ ನೆನಸಿ || ೨ ||

ಅರಿದಂತೆ ವಿಸ್ತರಿಪೆ ಹರಿಯೊಲಿದು ಮುದದಿ |
ವರಹಾವತಾರವನು ಕೈಕೊಂಡು ಭರದೀ || ೩ ||

ದುರುಳ ಹಿರಣಾಕ್ಷನನು ಸೀಳಿ ಸುರವರರಾ |
ಪೊರೆದಿರುವ ಕಥನವಿದನೊರೆವೆನಾ ವಿವರಾ || ೪ ||

ತಪ್ಪು ಸಾವಿರವಿರಲು ತಿದ್ದಿ ಕೋವಿದರೂ-
ವಪ್ಪುವದು ಯನ್ನೊಡನೆ ಮಮತೆಯುಳ್ಳವರೂ || ೫ ||

**ರಾಗ ಸಾ-ತ್ರಿವುಡೆ ತಾಳ**

ಪರಮಋಷಿ ಮೈತ್ರೇಯನನ ಪದ ಸರಸಿಜಕ್ಕಭಿನಮಿ | ವಿ
ದುರನು-ಹರಿಚರಿತ್ರವ ಕೇಳುತಿರೆ ಮೇಣೊರದನಂದೂ || ೧ ||

ಅರುಹಬೇಕೈ ಹರಿಯುಮತ್ತಾ ವರಹರೂಪವದೇಕೆ ಧರಿಸಿದ
ದುರುಳರುದು ಭವವೆಂತು ನೀವಾ ಪರಿಯನೆಲ್ಲಾ || ೨ ||

ಪೇಳಬೇಕೆಂದೆನುತ ಸಂಯಮಿ ಕಾಲಿಗೆರಗಲ್ಕೆತ್ತಿತಳ್ಳಿಸಿ
ನೀಲಕಂಠನನುತಿಸಿ ನುಡಿದ ವಿಶಾಲಕಥೆಯಾ || ೩ ||

**ವಾರ್ಧಿಕ್ಯ**

ಹರಶರಣಕೇಳ್ ಮುತ್ತು ವೈಡೂರ್ಯಪವಳದಿಂ |
ದೆರಕವಹಬೋದಿಗೆಯು ನೀಲವಜ್ರಸ್ಥಂಭ |
ಮರಕತಂಮಾಣಿಕ್ಯಗೋಮೇಧಿಕಂಪುಷ್ಯರಾಗದಿಂದಿಹಭವನದೀ || ೧ ||

ಹರಿಹರಿಜಕರ್ಬುರಂ ಯಾದಸಾಂಪತಿಶ್ವಸನ
ಹರಮಿತ್ರಮೀಶಗುರುಪ್ರಮುಖರೈತರೆಕಂಡು
ಗಿರಿವೈರಿಯಾಸುಧರ್ಮೆಯೊಳೋಲಗಂಗೊಟ್ಟು-
ಹರಿಕಥೆಯನೆಂದ ಮುದದಿ || ೧ ||

**ರಾ-ಭ್ಯ | ತಾ-ಝಂಪೆ**

ಕೇಳಿ ಸುರವರರೆಲ್ಲ-ಶ್ರೀಲೋಲಾಚರಿತಸುಧೆ
ಮೂಲಕಾರಣ ಶ್ರೂತಿಯೋಲಾಲಿಪುದಪೇಳ್ವೇ || ೧ ||

ಜಲಮಯದೊಳಿಳೆಯಲ್ಲ ಮುಳುಗಿರಲು ಜಲಜಾಕ್ಷ
ವಲಿದಾಲದೆಲೆಯೊಳಗೆ ಮಲಗಿರಲು ಮುದದೀ || ೨ ||

ಕರ್ಣದಿಂ ಖಳರುದಿಸೆ ಮನ್ನಿಸಲು ಮಾಯೆಗಜ-
ಚಿನ್ಮಯನುಕಂದೆರದು ಸನ್ನದ್ಧನಾಗೀ || ೩ ||

ಮಧುಕೈಟಭರಧುರದಿ-ವಧಿಸಿ ಬ್ರಹ್ಮಗೆ ಸೃಷ್ಟಿ
ಗೊದಗಿಸಲು ಮಾನಸದೊಳುದಿಸಿದ ಮರೀಚಿ || ೪ ||

ಮುನಿ ತನುಜಕಾಶ್ಯಪಗೆ ವನಿತೆಯರು ಹದಿಮೂರು
ಜನದೊಳದಿತಿಗೆ ನಾವು ಜನಿಸಿಸುರಪುರದಾ || ೫ ||

ಧೊರೆತನವು ನಮಗಾತು-ಹಿರಿಯವ್ವೆದಿತಿ ಸುತರು
ದುರುಳರತಿಕಾಡಿದಡೆ ಹರಿಪೊರೆವನೆಮ್ಮಾ || ೬ ||

ಸಾರಸಾಕ್ಷಿಗಳಿದಕೆ-ವೀರತಮನನು ಕೊಂದು
ಭೂರಿವೇದವಕಾದಮಾರಮಣನಂದೂ || ೭ ||

**ಕಂದ**

ಸುರರಿಂತಿರಲತ್ತಲ್‌ವಿಧಿ
ತರಳರ್ ಸನಕಸನಂದನರ್ ಹರಿಪುರಕಂ |
ತೆರಳಿದುಕಂಡದಸಂತಸ |
ಶರಧಿಯೊಳಾಳುತ ವರ್ಣಿಸಿದರ್ ವಿಧವಿಧದಿಂ || ೧ ||

**ರಾಗ ಬೇ-ಏಕತಾಳ**

ಚಿತ್ತವಿಸು ಮುನಿಪುತ್ರ ಬುಧವಿದುರಾ | ವೈಕುಂಠನಾಳುವ |
ಪತ್ತನದಸಂಪತ್ತಘನಚದುರಾ |
ಬಿತ್ತರಿಸುತಾಕಿತ್ತಡಿಗಳೊತ್ತೊತ್ತೆ ನುಡಿದರು ಯತ್ತಲೋಮಿದನಿತ್ತು
ಸಾರುವ ಮೊತ್ತ ಸಾತ್ವಿಕರುತ್ತಮರುಪುಣ್ಯಾತ್ಮರೈ ಭಲಾ || ೧ ||

ಯೇಳುಸುತ್ತಿನ ತತ್ವನಿಕರದಲೀ |
ಕೋಟೆಗಳು ಭಕ್ತಿ ವಿಶಾಲಮಾರ್ಗಚತುಷ್ಟಯಂಗಳಲೀ |
ಮೇಲೆ ಮುಕ್ತಿದ್ವಾರ ಶೋಭೆಗಳ ಸ್ಥೂಲವಜ್ರೋಪಲಕವಾಟದ
ಕೀಲಣದ ವಿಷ್ಕಂಭ ತ್ರಿಪುಟಿಯ ಮೂಲವಿದ್ಯೆಯ ಮುಖ್ಯಮಾರ್ಗವ || ೨ ||

ಹರಿಪದಾಶ್ರಿತ ಸಾಧುಮೂರ್ತಿಗಳಾ | ಮರದೊಮ್ಮೆ ಹರಿಪದ |
ಕರಗಿದರ ಹರಿ ಕಥೆಯ ಲೀಲೆಗಳಾ ನಿರತಕೇಳಿದ
ಪರಮಪುರುಷರ ಕರತರುವ ಥರ ಥರವಿಮಾನಗಳಿರವಕತ್ತುರಿಪರಿಮಳದ
ವಿಸ್ತರದ ಬೀದಿಗಳಿರುವದಹಹಾ || ೩ ||

**ಭಾಮಿನಿ**

ಆಮಹಾವೈಕುಂಠಪುರದು | ದ್ಧಾಮ ಲಕ್ಷ್ಮಿಯನೇನಬಣ್ಣಿಪೆ-
ಸೋಮಸೂರ್ಯಕೃಶಾನುಕೋಟಿ ಪ್ರಭೆಗಳದುಭವದಾ ||
ಭೂಮಿಯಲ್ಲಾಭುವನವಂದ್ಯಮ |

ಹಾ ಮುನಿಗಳೀಕ್ಷಿಸುತಪೊಕ್ಕರು
ಮಮನೋಹರದೇವಶರಣಾಗೆನುತನಲಿ ನಲಿದೂ || ೧ ||

**ರಾಗ-ಮಾ | ತಾ-ರೂಪಕ**

ಮಾರರಮಣನನು ಮನೋನುರಾಗದಿ ಭಕ್ತಿ ಸೇರಿಸಂಕೀರ್ತಿಸುತವರೂ |
ದ್ವಾರವಂದೆರಡುಮೂರಾರರ ಪರಿಯಂತ ಮೀರಿಸಾರಿದರೇಳರೆಡೆಗೇ || ೧ ||

ಚಾರುಕೋಟೀರ ಕಂಕಣ ಮುಕ್ತಹಾರ ಕಾಹೇರಿದಕ್ಷಿಗಳು ಪೂಮಾಲೇ |
ಚಾರು ಚತುರ್ಭುಜನೀಲಾಂಗದುಭಯರು ಭಾರಿಕೈಗದೆಗಳುದ್ಧತರೂ || ೨ ||

ನಿಂದಿರಲವರಲೆಕ್ಕಿಸದೆ ಮುಂದೊತ್ತಿದರಿಂದಿರೆಯರಸಪರಾಕೂ |
ಯಂದು ಮುಂದಿನಬಾಗಿಲಂತೆ ದಾಟುತ ಪೋಪರಂದವಕಂಡು ಹಾಸ್ಯದಲಿ || ೩ ||

ಆಲಿಸಲ್ಯೆದಾರುವರುಷದಾತ್ಮಜರಾದಿಮೂಲಕಾರಿಗಳ ಚಿನ್ಮಯರಾ |
ಲೀಲೆಯನರಿಯದೆ ಹೇಳದ್ಯೆದುವರೆಂದು ಬೀಳಿಸಿದರು ಕೋಲತಡವೀ || ೪ ||

ಆ ಮಹಾಜನರೆಲ್ಲ ನೋಡಲಚ್ಚರಿಯದೊಳೀ ಮುನಿಗಳೊಳೊಬ್ಬೊಬ್ಬರನೂ |
ಸಾಮರ್ಥ್ಯದಿಂದಲಿ ಕೈಪಿಡಿದೆತ್ತಿಮತ್ತಾ ಮೂಡರಂಗವೀಕ್ಷಿಸುತ್ತಾ || ೫ ||

ಕಿಡಿಗೆದರುತಲಾಗ ರೋಮಕೂಪಗಳುಬ್ಬಿ ನುಡಿದರು ಜಯ ವಿಜಯರಿಗೇ |
ಘಡಭಾಹಿರರು ನೀವು ನಡೆಸಿದೀಯಪರಾಧಕ್ಕೊಡನೆ ಶಿಕ್ಷಿಸದಿರಬಹುದೇ || ೬ ||

ಯಂದುಗ್ರಮುಖರಾಗುತ್ತೆಂದರೀ ವೈಷ್ಣವ ವೃಂದ ಮಧ್ಯದೊಳು ನೀವಿಹುದೂ |
ಚಂದದಿಂ ಪಿಕವೃಂದದೆಡೆಕಡಂದುರುತೆಗಳ್ ನಿಂದಂದವಲ್ತೆಭಲ್ ಭಲರೇ || ೭ ||

**ರಾಗ-ಸಾ | ತಾ-ತ್ರಿ**

ಆರೆಲವೊ ಮೂಢರಿರ ನಿಮ್ಮವಿಕಾರವಿದು ತಾನೆತ್ತ ವಿಶ್ವಾ
ಧಾರಕನು ತಾನೆತ್ತ ನಿಮಗಿದು ಸೇರಿತೆಂತೊ || ೧ ||

ಅಂದು ಶತಯಾಗವನು ಮಾಡುತ್ತಿಂದ್ರಪದವಿಯನೇರಿನಹುಷನು
ಇಂದುಮುಖಿಶಚಿನೆವದಿ ಪಾವಾದಂದವ್ಯಾತೂ || ೨ ||

ಪಡೆಯಿಸಂಕಲ್ಪೋದಯವದಿದೊ ಕೊಡುವೆ ವೈಶಾಪವಿದ
ಪಡೆಯಿರಿ ಹಿಡಿರ್ಕೈಖಲಜನ್ಮನಿಮಗೀ ಯಡೆಯುಸಲ್ಲಾ || ೩ ||

**ಆರ್ಯ**

ಕೇಳಿ ನುಡಿಯಕ್ರೃ-ಗೋಲರು ಕಳವಳ-ತಾಳಿದು ಕಂಪನಭಡಾಳಿಸಲೂ |
ಘೋಳಿಡುತಲಿ ಜನಜಾಲವು ಕುಂಬಿಡೆ ಕಾಲಿಗೆ ಬಿದ್ದರು ಭಯದಿಬಲೂ ‖ ೧ ‖

**ರಾಗ-ಸೀತಾ | ರೂಪಕತಾಳ**

ಲಾಲಿಸಿ ಮುನಿಗಳು ಪರಮಕೃಪಾಳುಗಳೈಸಲೆ ನಮ್ಮನ-
ಪಾಲಿಪುದನುಚಿತ ಕೃತ್ಯದ ಲೀಲೆಗಳನು ಮರದೂ ||
ಬಾಲಕರೆಸಗಿದ ತಪ್ಪನು ಪಾಲಿಸದೀರ್ದಡೆ ಮಾತೆಯು
ಕೇಳುವರಾರೆನೆ ಮುನಿಕುಲ ಪಾಲರು ನುಡಿಯದಿರೇ ‖ ೧ ‖

ಯಾತಕೆ ಬಂದರೊ ತಾಪಸ-ರೇತಕೆ ತಡದೆವೊ ದ್ವಾರದಿ
ಯಾತಕೆ ಕೆಡದರೊ ಶಾಪವನ್ಯಾತಕೆ ನೀಡಿದರೋ |
ಯಾತಕೆ ಸೇರಿತು ಹರಿಪದ ವ್ಯಾತತೆಬಂದುದು
ದುರ್ವಿಧಿ ನೀತಿಯ ತಪ್ಪಿದೆವೈ ಜಗನ್ನಾಥನೆ ರಕ್ಷಿಪುದೂ ‖ ೨ ‖

**ಭಾಮಿನಿ**

ಇಂತು ದುಗುಡದೊಳಿರಲಿ ಕತ್ತಲು
ಕಂತುಪಿತತಾಂ ತಿಳಿದು ಮನದಲಿ
ಬಂತು ಬಾಹಿರರಿಂದಲೆನಗಪಕೀರ್ತಿ ಮೊಳೆಯನುತಾ ||
ಸಂತಸದೊಳೆಡಬಲದೊಳಿಹ ಜನ
ತಿಂಥಿಣಿಯ ಬೀಳ್ಕೊಟ್ಟು ಮನದೊಳ
ಗಂತರವನಿರ್ನೈಸು ತಿಳಿದ ನಹೀಂದ್ರ ವಿಷ್ಮರವಾ ‖ ೧ ‖

**ರಾಗ – ಮು. ಏಕತಾಳ**

ಹರಿ ಬಂದನಲ್ಲಿಗಾಕ್ಷಣಾ | ಸರಸಿಜ ನಯನಾ | ಹರಿ ‖ ಪಲ್ಲವಿ ||
ಧರೆಯಿಡೆ ಚಾಮೀಕರ ದುರುಪಾದುಕೆ ಸಿರಿಕರದೊಳ್ ವಿಸ್ಫುರಿಸಲ್ಟಾ |
ಮರ ಸುರನದಿಕಲಶೋೕತ್ಕರ ಮೋರೊಂದೆಡೆ ವರಪ್ರಬಲಾದಿಗಳಿರಲೆಡ
ಬಲದಲೀ | ಹರಿಬಂದ ‖ ಅನುಪಲ್ಲ ‖

ಕೊರಳ ಮೌತ್ತಿಕ ಹಾರದಾಪೇರುರದದಿವ್ಯಾ |
ಭರಣಕೌಸ್ತುಭತೇಜದಾ | ಸಿರಿಮೊಗದಲಿ ಬಂಧುರದ
ತಿಲಕಮೊಪ್ಪಿರಲು ಚತುಷ್ಟಯ ಕರದೊಳು ಚಕ್ರಾಂಬರರುಹಗದಾ
ಕಂಬಿರದೆಸೆಯಲು ನಿಜ ಶಿರದಲಿ ಮಲ್ಲಿಗೆ ಮೆರೆಯೆವೇದೋದ್ಧರ |
ಹರಿಬಂದನಲ್ಲಿಗಾಕ್ಷಣಾ ‖ ೧ ‖

**ವಾರ್ಧಿಕ ಷಟ್ಪಧಿ**

ಜಯಜಯ ರಮಾರಮಣ ಜಯ ಭಾನುಶತ ಕಿರಣ –
ಜಯ ದುಷ್ಟಕುಲ ನಾಶ ನಿಗಮ ನಿರ್ಮಲ ಘೋಷ
ಜಯಕೃಷ್ಣಗೋವಿಂದ ಪರತರಾತ್ಮಮುಕುಂದ ಜಯತು ವಿಶ್ವೇಶಮೀಶಾ ||

ಜಯತು ಹರಿಭುಜಗೇಂದ್ರಶಯನ ಸದ್ಗುಣಸಾಂದ್ರ
ಜಯತು ಮೂಜಗದೀಶ ಜಯಪಯೋದಧಿವಾಸ
ಜಯಭಕ್ತ ಸಂರಕ್ಷ ಜಯಜಯತು ಕಮಲಾಕ್ಷ ಜಯತೆಂದರಾ ಮುನಿಗಳು || ೧ ||

**ರಾಗ-ಮ. ಮಾ. | ತಾ-ತ್ರಿ**

ಕಡಲಜೆಯನಪ್ಪುವ ಕರಂಗಳೊಳಡಿಗೆರಗಿದಾ ಶ್ರಿತರನೆತ್ತುತ
ತಡವಿತಳ್ಕೆವಿಸುತ್ತ ನುಡಿದನು ಮೃಡನ ಸಖನನು ನಯದೊಳೂ |
ಚಂದದಿಂದಾ || ೧ ||

ಬಂನಿರೆಂನಾನೆಗಳು ಭಾಗ್ಯರು ಬಂನಿರೈ ಮಮದ್ವಾರ ಪಾಲರು
ಕುಂನಿಗಳು ತಡವಿದರೆ ನಿಮ್ಮುವನನ್ಯರೆಂದೇ ಬಗೆಯುತಾ |
ಲೆಂದನಾಗಾ || ೨ ||

ಪಾರುಷದ ಜನರಲ್ಲ ದ್ರೋಹವ ಸೇರಿಸಿದೆ ನಿಮಗಾನೆಯವದಿರ
ಮೀರಿರುವ ಕರತೀರ್ಚುವೆನು ಮದವೇರಿದುದಕಿಂದೀಗಲೇ
ಯಂದ ನಾಗಾ || ೩ ||

ಅಡದಿಹುದೇ ಲೋಕಭೃತ್ಯರು ಮಾಡಿದಪರಾಧವನು ಗುಣವನು
ಹೂಡುವುದು ಧೊರೆಗಳಿಗೆ ಭಜಕರ ನೋಡದಿಹುದೇ ನಜ್ಞತೇ |
ಯಂದ ಹರಿಯೂ || ೪ ||

ತಡೆಯದಾಯು ಶ್ರೀಗಳಿಂಗೊಡಬಡುವ ಡೌಕುವ ಕಾಲಪಾಶವ
ಕೆಡೆಯೊದೆವ ಡಾರಾಧಿಸುವದಾ ಪೊಡವಿಸುರರಾ ಸಂತತಾ ||
ಯಂದನಾಗಾ || ೫ ||

**ರಾಗ ದ್ವಿಜಾವಂತು ಝಂಪೆ ತಾಳ**

ಕೇಳಿ ಮುನಿತಿಲಕರಿರಾ ಪರಿತೋಷವೆರದೂ |
ಪೇಳುವೆನು ಮನದನುವ ನಾನಿಂಮೊಳೊಲಿದೂ || ಕೇಳಿ || ಪಲ್ಲವಿ ||

ಯಾಗಾ ಸಾವಿರವೆಸಗಿ ಘ್ರತಸೂಪವಿತ್ತಡೆಯು ಯೋಗಿಗಳ ಮನ ಹರುಷವಿಲ್ಲದಿರೆ ತನಗೇ |
ಆಗದೈ ಸಲೆ ತೃಪ್ತಿ ಭಜಕರೊಳಗಿನ ಮೋಹ ಪೋಗ
ಲರಿಯದು ಕೋಟಿ ಯುಗಯುಗಾಂತರಕೂ || ಕೇಳಿ ಮುನಿ || ೧ ||

ಅರಿಯದೇನೆಸಗಿದರು ಗ್ರಹಿಸಿದೋಪದಪರಿಯ ಶರಣರನು ಪಾಲಿ
ಪುದೆ ಧೃಡಮನದ ಬಯಕೇ | ಹರಿಯ ಮಹಿಮೆಯ ಪೂರ್ಣವರಿಯದ
ಜ್ಞಾನಿಗಳು ಹರಿಭಕತರನು ಕೆಣಕಿ ನರಕವಾಳುವರೂ | ಕೇಳಿ || ೨ ||

ಪೊದದಡೆಂನುರಕೆ ಭೃಗು ಪದವ ಪೂಜಿಸಿ ಕೀರ್ತಿಪ್ರದವನಾಕೃಕೊಂಡೆ
ನದನರಿಯದವರೇ | ಅದರಿಂದ ಭವಭಯವ ಕೆಡೆಯೊದೆದ ಯೋಗಿ
ಗಳು ಸದಮಳರುಯನ್ನಂತೆ ಸಕಲ ಸಂನೂತರೂ || ಕೇಳಿ || ೩ ||

ಸಿರಿ ತನಗೆ ಸರಕಲ್ಲ ಕಮಲಜನ ಹಂಗಿಲ್ಲ ಪರಶಿವನ ಭಯವಿಲ್ಲ ಸುರರೊಡನೆ
ಧಿಟಕೇ | ಬೆರಸಿಕೊಳದಿಹೆ ಮೋಹಭರಿತ ಸಚರಾಚರದಿ ಹರಿಪೂರ್ಣ
ನೆಂಬವರಿಗೆರಕವಾಗಿಹೆನೂ || ಕೇಳಿ || ೪ ||

ಹೇಮಹಾ ಮುನಿಗಳಿರ ಮರದುಮಾಡಿದ ಕೃತ್ಯಸಾಮದೊಳು ರಕ್ಷಿಪುದು ಜಯವಿಜಯರಿವರಾ
ಪ್ರೇಮದಿಂತತ್ಪಾದ ತಾಮರಸಕೊಂದಿಸುವೆ ಸ್ವಾಮಿಗಳೆ ಕ್ಷಮಿಸುವುದೆನುತ ಕೈಮುಗಿದಾ ||
ಕೇಳಿ ಮುನಿತಿಲಕರಿರ ಪರಿಶೋಷ || ೫ ||

**ಭಾಮಿನಿ**

ಯೋಗಮಾಯಾದೀಶ್ವರನುವರ
ಯೋಗಿಗಳಿಗಭಿನಮಿಸಲಮರರು
ತೂಗೆ ನಿಜಮಸ್ತಕವ ಮುನಿಗಳು ನಿಂದು ಬೆರಗಾಗೀ ||
ಈ ಗಲಿದು ತಾರ್ಲೋಕ ಸಂಗ್ರಹ
ಕಾಗಿ ನಟಿಸುವನಲ್ಲದಿರಲೀ
ಯೋಗಮೂರುತಿಗೇಕೆನಯವಿನಿತೆಂದರವರಂದೂ || ೧ ||

**ರಾ-ಮ | ಮಾ-ಏಕತಾಳ**

ಯೇನಿದು ಮಹಿಮಯೇನೆಲೆ ಪೀತಾಂಬರನೇ |
ಮಾನವರಂದ ದೊಳೆರಗುವೆವರನೇ |
ದಾನಾವಾಂತಕ ಸತ್ವಗುಣನಿಧಿದಿಟವೂ |
ಈನೋಳ್ಪ ಜಗದ್ವೃತ್ತಿ ನಿನ್ನ ನಾಟಕವೂ || ೧ ||

ಇಂದಿರೆ ರಮಣಗೋವಿಂದ ಚಿನ್ಮಯನೇ |
ತಂದೆ ಕೊಂಡಾಡಲು ಕಂದ ಹಿರಿದಹನೇ |
ಹೊಂದೀರ್ಪ ಶರಣರಿಗುಚಿತವಾದುದನೂ |
ನಿಂದು ನಿರೂಪಿಸಲಲ್ಲೆಂಬುದೇನೂ || ೨ ||

ಹಾಗಾದರಾಗಲಿ ಮೂರೇ ಜನ್ಮದಲೀ |
ಲೋಗರೆಂದೆನಿಸಿ ಭೀಕರ ಕೃತ್ಯಗಳಲೀ |
ಸಾಗಲೆನ್ನಲಿವೈರವಿಡಿದು ನಾಶನವಾ |
ನೀಗರ್ವರೆನಲೊಪ್ಪಲಾದುದು ವಿಭವಾ || ೩ ||

**ವಾರ್ಧಿಕ ಷಟ್ಪದಿ**

ಮನ್ನಿಸಿದು ಮುನಿಗಳಂ ಕಳುಪಿಹರಿನಸುನಗುತ
ತನ್ನವರಿಗೆಂದ ನೀವಂದೊಡತಿಯಂ ತಡೆದ
ಘನ್ನಾಂಟಿ ತೈಸೆಸಜ್ಜನರಕೋಪಂತಾಪಮಂ ಮಾಡದೇನಿರ್ಕುಮೇ ||
ಯನ್ನಲಡಿಗೆರಗಿ ಚಿನ್ಮಯನೆ ಜನ್ಮತ್ರಯಗ
ಳನ್ನೀಗಲೆಂತನಲ್ ಧರಣಿ ಧರಣೀಧರರು
ಚನ್ನೆಸಿರಿ ಚಕ್ರರಾಜರು ಹೊಣೆಗೆನಿಲೆಚಕ್ರಿ ಪಾರ್ಶ್ವದ್ವರಿಂಗೆಂದನೂ || ೧ ||

**ರಾಗ-ಕೆ | ಝಂಪೆ-ತಾಳ**

ಕೇಳಿರೈ ಜಯವಿಜಯರೂ ಯತಿಗಳಿಗೆ ಕೋಲನಡ್ಡೈಸಿ ಭೀರೂ ||
ಕೀಲಿಸಿದಿರೈ ಭುವನಕೇ ದುಃಖಿಸದಿರೇಳಿ ಮೂರೇ ಜನ್ಮಕೇ || ೧ ||

ಸೇರಿಸುವೆ ನಿಜಪದವನೂ | ಧೃಡವಿದಕೆ ಬೇರೆ ಯೋಚಿಸದಿರಂನೂ |
ಮೀರಲರಿದುಕರ್ಮವೂ | ಶ್ರುತಿಸಿದ್ಧ ಧಾರುಣಿಯೊಳುದಿಸಿ ನೀವೂ || ೨ ||

ಚಿರಕಾಲವಿರೆತರಿವೆನೂ | ಪಾಪಯುತವರಜನ್ಮವದರನಿಂನೂ |
ತೆರಳಿರೆನುತುಳಿದವರಿಗೇ ನೀತಿಗಳ ಧರಧರದೊಳೆಂದಕಡೆಗೇ || ೩ ||

**ವಾರ್ಧಿಕ ಷಟ್ಪದಿ**

ಅಂಗಜನಪಿತನತ್ತಲೈದೆಸಿರಿತಂದೆತ್ತೆ
ಮಂಗಳಾರತಿಗಳು ಸುರರು ಪೂಮಳೆ ಸುರಿಸೆ
ಶೃಂಗರದಿ ಸತಿಸಹಿತಲಹಿ ರಾಜಶಯ್ಯೆಯೊಳ್ ಹರಿಮೆರದನಾ ನಂದದೀ ||

ತುಂಗಬಲವಿದುರಕೇಳ್ ಮುಂದಣಾಗಮವವಿಧಿ
ಯಂಗದಿಂ ನವಪ್ರಜೇಶ್ವರರಾಗೆ ಮಾನಸದಿ
ಕಂಗೊಳಿಪ ಮುನಿಮರೀಚಿಯೊಳಾದ ಕಾಶ್ಯಪಂ | ವರತಪೋಧನ ವಾರ್ಯನೂ || ೧ ||

**ಭಾಮಿನಿ ಷಟ್ಪದಿ**

ವಿತತಮತಿ ಕಾಶ್ಯಪಗೆ ದಕ್ಷನ
ಸುತೆಯರಾಹದಿ ಮೂರಲಗ್ನವ

ನತಿಶಯದಿ ಮಾಡಿದೊಡೆಯವರೊಳು ಪಿರಿಯಳಾದಿತಿಯೂ ||
ಮತಿಯುತೆಯು ಸೋದರಿಯರೆಲ್ಲರು
ಸುತನುತಾನಂದದೊಳಗಾಳ್ವರು
ಸತತಬಾಹಿರಳಾದೆನೆಂದಳು ಸುತರಕಾಂಕ್ಷೆಯಲೀ || ೧ ||

**ರಾಗ-ಸಾಂಗತ್ಯ**

ಕಂಣಿಲ್ದ ಮೊಗಚಲ್ವ ಹೆಂಣಿಲ್ದ ಸಂಸಾರ ಬಂಣಿಲ್ದ ಸ್ವರ್ನಮಾಲಿಕೆಯೂ |
ಮಂಣಿಲ್ದ ವೈಭೋಗ ಸುಂಣಿಲ್ದವೀಳಯವೆಂಣಿಸಲಿದು ವ್ಯರ್ಥವಲ್ಲೈ || ೧ ||

ವಕ್ಕಲಿಲ್ಲದ ಗ್ರಾಮರೊಕ್ಕವಿಲ್ಲದ ಬಾಳು ಮಕ್ಕಳಿಲ್ಲದ ಭಾಗ್ಯವೇಕೇ |
ಅಕ್ಕಟೆನುತ ಸಂಧ್ಯಾವಂದನೆ ಸಮಯದಿ ಹೊಕ್ಕಳು ಪತಿಯ ಸಂನಿಧಿಗೇ || ೨ ||

**ರಾಗ ನಾ ಏಕತಾಳ**

ಪ್ರಾಣಾದೊಲ್ಲಭಕೇಳೂ | ಬಲ್ | ಜಾಣಕಾರುಣ್ಯದೊಳೂ | || ಪಲ್ಲವಿ ||
ಯೇಣಾಂಕನುಸುಮಬಾಣ ಸಮೀರೆಣರೇನು ಬಲರೊ ಹಾಜಾಣ ನಿಕಾಯದಿ || ಅನುಪಲ್ಲವಿ ||
ಸುಟ್ವರು ಬಾಳುವನೋರ್ವಾ | ಉರಿಮುಟ್ವಿದು ಬಾಳುವನೋರ್ವಾ |
ದುಷ್ಟಾಹಿಯು ಮುಟ್ಟಿ | ಬಿಟ್ಟಿರು ಬದುಕುವ ರಟ್ಟುಳಿಗೊಳುವರೆ ಬಟ್ಟಸ್ತನೆಯರ | ಪ್ರಾಣಾ || ೧ ||
ಪೂಗೋಲಾನಿನಿಬರೊಳು | ಶರತಾಗಿಸಲೆನ್ನಂಗದೊಳೂ |
ಬಾಗಿದೆ ಮೂರ್ಖನ ನೀಗೆಲತಕ್ಕವನಾಗಿರೆ ಭಯವೆನಗೇಗುವದ್ಯೆ ಪ್ರಿಯಾ | ಪ್ರಾಣ || ೨ ||
ಅನುಜಾತೆಯರ ಸುತರಾ | ಕಂಡು ಮನಕಪ್ಪುದತಿ ಕ್ರೂರಾ |
ಯನಗೆ ಕುಮಾರರನನುಗೊಳಿಸ್ಯೆ ಗುಣವನಧಿಶಭಾಸೆಂನಿನೆಯ ಪರಾಕೂ |
ಪ್ರಾಣದೊಲ್ಲಭ ಕೇಳೂ || ೩ ||

**ರಾಗ ಕೇದಾರಗೌಳ ಅಷ್ಟತಾಳ**

ಹೇಳುಹೇಳೆಲೆ ಮುದ್ದು ರನ್ನೆ ಸನ್ಮೋಹನೆ | ಕೋಲನೆಚ್ಚನೆ ಕಾಮನೂ |
ಪಾಲಿಪೆನಂಜದಿರಿದು ಯನ್ನ ಪುಣ್ಯದ ಕಾಲ ಪೂರ್ಣಾಹುತಿಯೂ || ೧ ||

ಬಾಲೆ ಸ್ಯೆರಿಸು ಕಾರ್ಯಗತಿ ಮೇಳವಿಸುವುದು | ತಾಳೊಂದು ಘಳಿಗೆ ನೀನೂ |
ನೀಲಕಂಠನು ಪ್ರಮಥರುಸಹಿತುಗ್ರ ಕರಾಳರೀವೇಳ್ಯದೊಳೂ || ೨ ||

ಅದರಿಂದ ಪೂಜಿಸು ಪುರಮಥನನಪಾದ ಪದುಮಾಕ್ಷಿ ಬಳಿಕ ನಾವೂ |
ಮದನಂ ಕೇಳಿಯೊಳಾಡಲುದಿಸುವರಾತ್ಮಜ ರಥಿಕರು ಧರಣಿಯಲೀ || ೩ ||

**ವಾರ್ಧಿಕ ಷಟ್ಪದಿ**

ಮಲ್ಲಿಕಾಸ್ಮಿತೆ ಪ್ರೀಯನಲ್ಲನಂಬಿಗಿದಪ್ಪಿ
ಲಲ್ಲೆಗೈದೊಡನೆ ಕೆಂಬಲ್ಲಿನಿಂದಧರಮಂ
ಘಲ್ಲಿಸುತ ಜೊಲ್ಲಸವಿಯುಲ್ಲಸವ ಮೆಲ್ಲನವಳಲ್ಲಿ ವಲ್ಲಿಸಿ ಮೆರೆದಳೂ ||
ನಲ್ಲೆಯಂ ಬಲ್ಮೆಯಿಂ ಸೊಲ್ಲಿಸಲ್ಕೊಪ್ಪದಿರ
ಅಲ್ಲಿಸುಮವಲ್ಲರಿಯ ಸಲ್ಲಲಿತ ಪಾಸಿನಿಂ
ದುಲ್ಲಾಸಪೇರ್ಚೆ ಶ್ರೀ ಮಲ್ಲಿಕಾರ್ಜುನ ದೇವಗೆಲ್ಲ ಸಲ್ಲಿಸಿ ನೆರೆದನೂ || ೧ ||

**ರಾಗ ಭೈರವಿ ಝಂಪೆತಾಳ**

ಕಾಲುಮೊಗ ಮಜ್ಜನವ ಲೀಲೆಯಿಂದೆಸಗಿ
ಮುನಿಪಾಲ ಕುಳ್ಳಿರಲೆದ್ದು ಬಾಲೆಯಂಬರವಾ || ೧ ||

ಬಿಗಿದುಟ್ಟು ಮೌನಿಪದ ಸೊಗಸಿನಿಂ ಪಿಡಿದೆನ್ನ
ಮುಗುದ ಕೇಳ್ ಕುಸುಮಶರನೊಗೆದೆನ್ನೊಳಿಂದೂ || ೨ ||

ಕೆಡಿಸಿದನು ಭೀಷ್ಟವನು ಮೃಡನನೀನೆ ಬೇಡಿ
ಹುಡುಗರಸುವನು ಕಾದ್ದುಕೊಡುವದೆನಲೆಂದಾ || ೩ ||

ಯಷ್ಟುಬೇಡಲು ಸಮಯ ಕೆಟ್ಟ ಫಲ
ತಟ್ಟುವದು ಪುಟ್ಟುವರು ದುಷ್ಟರೆನೆ ಸೃಷ್ಟಿಗೊರಗಿದಳೂ || ೪ ||

ಸುತರಿಲ್ಲದೀರ್ದೆನಾ ಸುತರೆ ಖಳರೆನಗೆಗತಿ |
ಮತಿಖೇದಕರವೆನುತ ದಿತಿಯು ಮೊರೆಯಿಡಲೂ || ೫ ||

ಮಡದಿಬೆದರದಿರ್ನಿನ್ನ ಹುಡುಗರೊಳು ಹಿರಿಯವಗೆ
ಕಡಲಶಯನನ ಭಕ್ತ ಹುಡುಗ ಜನಿಸುವನೂ || ೬ ||

ಅತಿ ಬಲಾನ್ವಿತನವನ ಪಿತನ ಹರಿಹತಿಸುವನು
ಧೃತಿಯೊಳ್ಳೈದೆಂದು ಮುನಿಪತಿತಪದೊಳಿರ್ದಾ || ೭ ||

**ವಾರ್ಧಿಕ ಷಟ್ಪದಿ**

ಮತ್ತಕಾಶಿನಿ ಮಿಂದು ಪೊಸವಸನಗಳ ನುಡುತ
ಪುತ್ರರಿಗೆ ಹರಿಯಲ್ಲದಿಲ್ಲಲೇ ಮರಣವೆನು
ತೊತ್ತಿನಿಜ ವ್ಯಸನಮಂ ಪೌತ್ರಗುಣಸುಧೆಯಿಂದ – ತೊಳೆದುಮನಕರ್ದಮವನೂ ||
ಪೊತ್ತಳ್‌ದಿತಿ ಗರ್ಭದೊಳ್ ಮೃತ್ಯುಗಳನೀರ್ವರಂ
ಪೊತ್ತಿತೀ ಜಗಸುರರು ಸುತ್ತಿ ಸುಳಿದರು ದೆಸೆಯ
ಕತ್ತಲೆಯ ಕಾಲಾಟವಾತು ಭಯ ಜೀವರಿಗೆ – ಮುತ್ತಿತಿನ್ನೇನೆಂಬೆನೂ || ೧ ||

**ಕಂದ**

ವಿದುರನೆ ನಿನಗಾನುಂಪೇ –
ಳಿದ ಜಯವಿಜಯರು ಬಂದಿವಳುದರದೊಳುತಾ |
ನುದಿಸಿದರಿಂಭೀತಿಯು ಜಗ
ಕುದಿಸಿತಲಾ ಹೆರಿಗೆಯು ಸತಿಗೇಂ ಕೇವಳಮೇ || ೧ ||

**ರಾಗ ಯರಕಲ್ ಕಾಂಬೋಧಿ ಆದಿತಾಳ**

ಹ್ಯಾಗೆ ತಾಳುವರೊ | ಹೆಂಗಸು ಗರ್ಭ | ಹ್ಯಾಗೆ | | ಪಲ್ಲವಿ ||

ಹ್ಯಾಗೆ ತಾಳುವರು ದರಾಗಾರದೊಳಗಿಪ್ಪಮೂಗರಂದದ
ಶಿಶುವಾಗಮವ್ಯಥೆಯಾ | ಹ್ಯಾಗೆತಾಳುವರೋ || ಅನುಪಲ್ಲವಿ ||

ಮಲಗುವಸಮಯದಲೀ | ಭ್ರೂಣವು ಬಲು ಗಲಿಬಿಲಿಯಾಗುತಲೀ |
ವಲೆಗೆ ಕಲ್ಲಿಟ್ಟಂತೆ ನಲಿದಾಡುತಿಹುದದರೊಳವ ಬಲ್ಲೆಯ ಬಾಲೆ
ನಳಿನಗಂಧಿನಿ ಪೇಳೆ || ಹ್ಯಾಗೆ || ೧ ||

ವಸನವಸಮದೊಳುಡೇ | ಮುಂನಂತದು | ಹಸನಾಗದೆಲೆ ಪ್ರೌಢೇ |
ಅಸನ ಹೆಚ್ಚುಂಡರೆ ವಿಷಮ ಬಾಧಕಬಹು ವ್ಯಸನಗೊಳಿಸುವದು
ಶಶುಮುಖಿಯೇನದೂ || ಹ್ಯಾಗೆ || ೨ ||

ಕಟಿಯಲ್ಲಿ ಗುದ್ದಿದಂತೇ | ಆಗುವದಿದು ಸಟೆಯಲ್ಲ ಕೇಳೆ ಕಾಂತೇ |
ಘಟುವಾಗುತ್ತೆನ್ನ ಚಂದ್ರುಟಿಯೆ ರಕ್ಷಿಪುದೆನೆ ಘಟಕಕರ್ಕೂರಿಯೊಳಿಡೆ ತ್ರುಟಿಲಾರ್ಣ
ಜಲಬೀಳೇ || ಹ್ಯಾಗೆ || ೩ ||

**ಭಾಮಿನಿ ಷಟ್ಪದಿ**

ತರಣಿದಿತಿ ಹರಿಭಯದಿ ಭ್ರೂಣವ
ನಿರಿಸಿ ಶತ ಸಂವತ್ಸರಾಂತ್ಯದೊ
ಳಿರುಳೆ ಯಮಳರ ಪಡದಳದ್ಭುತ ಘೋರರೂಪಿಗಳಾ ||
ಧರೆ ನಡುಗಳಂಬುಧಿಗಳುಕ್ಕಲು
ಗಿರಿಗಳೊಡೆಯೆ ರಸಾತಳದಿ ಧಿ
ಕ್ಕರಿಗಳಾಳಲು ತೂಳಲಂಧತಮಿಸ್ರ ದೆಸೆದೆಸೆಗೇ || ೧ ||

**ರಾಗ ಕೆ.ಗೌ. ಅಷ್ಟತಾಳ**

ವನಿತೆ ಮಕ್ಕಳಿಗಾಗಿ ದಿನ ಹನ್ನೊಂದಾ ವೇದಸನುಮತದಿಂ ಕಾಶ್ಯಪಾ |
ಮುನಿ ಪುಣ್ಯಾಹವಗೈದು ತನುಜರಂಗವ ನೋಡಿ | ಕನಕ ಕಶ್ಯಪ ಹಿರಿಯಾ || ೧ ||

ಕಿರಿಯವ ಹಿರಣ್ಯಾಕ್ಷರುಬಲಾನ್ವಿತರಿವರಿರಿದು ತ್ರೈಲೋಕವನೂ |
ಧೊರೆಗಳಹರು ಮೋಹದರಸಿ ಕೇಳೆಂದು ಮತ್ತಿರದೆ ಪರಸಿ ನಡೆದಾ || ೨ ||

**ಭಾಮಿನಿ ಷಟ್ಪದಿ**

ಮತ್ತೆ ಕೆಲವು ದಿನಕ್ಕೆ ಬಾಲರು
ಮೃತ್ಯುರೂಪಿಗಳಾಗಿ ನಿಜಕರ
ವೆತ್ತ ದಿಗ್ ದೆಸೆ ಕಾಣದಿಹುದೀ ಭಟರ ನಡಕೆಯಲೀ ||
ಪೃಥ್ವಿ ತಗ್ಗಿತನಂತ ಭುಜಬಲ
ವ್ಯರ್ಥವಾತಮರಾದ್ರಿ ಮಂದರ
ಪೊತ್ತುದೋತನುವೆನುತಮೂಜಗಕಾತು ಕಡುಭೀತಿ || ೧ ||

**ವಾರ್ಧಿಕ ಷಟ್ಪದಿ**

ನಿಲುಕೆ ಧ್ರುವ ಲೋಕವೊಂದೇ ಮೊಳಕೆ ಮಿಗಿಲಾತು
ತೊಳಪ ತಾರೆಗಳಾದವೇಕಾವಳಿಯ ಮುತ್ತು
ಗಳುಮುಭಯರುಬ್ಬಟೆಗೆ ನಡುಗೆ ಸುರಲೋಕ ಜಗದೊಡೆಯ
ರೋಡೋಡಿ ಬಂದೂ || ೧ ||

ಸಲಿಸೆ ಸಂಧಿಯ ಮೇಲೆ ಕಪ್ಪಮಂ ಕೈಕೊಂಡು
ವಲಿದಾ ಹಿರಣ್ಯಕಶ್ಯಪ ಶ್ರೋಣಿತಾಖ್ಯಪುರ
ವಳೆಯದೊಳ್ ನೆಲೆಯಾದನವನನುಜ ಹಿರಣ್ಯಾಕ್ಷ – ಹೂಂಕರಿಸು
ತೆಂದನೊಲಿದೂ || ೨ ||

**ರಾಗ-ಸೌ. | ತಾಳ-ತ್ರಿ**

ಗೆಲಿದೆ ನಿಖಿಳಾವನಿಯ ರಾಯರ ಹುಲು ನಪುಂಸಕರೇನು ಘನ
ಸುರಕುಲದ ಭುಜದಗ್ಗಳಿಕೆ ಕಾಂಬೆನು ತಳುವದಿಂದೂ || ೧ ||

ಮಲತಡಾಬಲ ಜಲಧಿ ವಡಭಾನಳ ಪರಾಕ್ರಮನೆಂನ ಕೈಗುಣಗಳ
ನಿರೀಕ್ಷಿಸಬಹುದು ತಿಕ್ಕುವೆ ಬಲು ಭುಜರನೂ || ೨ ||

ಉದರಲ್ಕೆ ತಾರಾವಳಿಯಂನೀ ಗದೆಯ ಘಾತಿಗೆಯಮರ ಲೋಕವ ನುದಧಿಯೊಳ
ಗದ್ದುವೆನು ತಡೆಯಲಿ ಪದುಮನಾಭಾ || ೩ ||

**ಕಂದ**

ವ್ಯಾಸಾತ್ಮಜ ಕೇಳ್ ದುರ್ಧರ
ರಾಶರನೃತಹುದಂ ಕಂಡತಿ ಭೀತಿಯೊಳುಂ |

ಆಸುಮನಸ ರಾಣ್ಮಗೆ ಭಿ
ನ್ನೈಸಿದರೀಪರಿ ನಡನಡುಗುತ ವಾರ್ತೆಗಳು || ೧ ||

**ರಾಗ-ಮು. | ಏಕತಾಳ**

ದಿವಿಜೇಂದ್ರ ಲಾಲಿಸೆಮ್ಮ ಮಾತಾ | ಲೋಕವಿಖ್ಯಾತ ದಿವಿಜೇಂದ್ರ || ಪಲ್ಲವಿ ||

ದಿತಿಬಳಲುತಲೊಂದು ದಿನದೀ | ಕಾಶ್ಯಪನೊಡನೆ | ಸುತರಾ ಬೇಡಲು ನೋಡಿ ದಯದೀ |
ಸತಿಯನು ಕೂಡಿದನತಿ ಮತಿದಿತಿ ಸತಿಸುತರತಿ ಮತಿಯುತರ್ಜತೆಯೊಳ್ ಪುಟ್ಟಿದರತಿ ಹತಿಕ್ಷಿತಿ
ಸತಿಗತಿ ಮತಿಸ್ತಿತಿಯೇನತಿಯತಿ ಶಯವದಿತಿಸುತ ಬಿನ್ನಹ | ದಿವಿಜೇಂದ್ರ || ೧ ||

ಅದೊ ಹಿರಣ್ಯಾಕ್ಷ ದಾನವನೂ | ಅವರೊಳು ಕಿರಿಯ | ನದುಭುತಬಾಹುವಿಕ್ರಮನೂ |
ಸದದವ ನೀತಳ ತ್ರಿದಶಾಲಯಕಿಂದೊದಗಿ ಬರುವ ಕೈಗದೆಯಬ್ಬರದೊಳು ಯದೆಗಿದೆ
ನಡನಡುಗದೆ ಸಿಡಿಲಂದದೊಳದೊ ಬಲ್ ಘರ್ಜನೆಗಿದಿರೆ ಪರಾಕೂ | ದಿವಿಜೇಂದ್ರ || ೨ ||

**ಭಾಮಿನಿ ಷಟ್ಪದಿ**

ದಿವಿಜರಾಡಿದ ನುಡಿಯ ಕೇಳುತ
ಹವಣವಿಂನೇನೆನುತ ಶಕ್ರನು
ಕವಲು ಮನದಿಂದೇರಿದನು ಮದಗಜವರೋಷದಲೀ ||
ದಿವಿಜ ಸಂತತಿ ಬೆರದು ಮಹದಾ
ರ್ಣವಕೆ ವಾರಿಧಿ ಮಲತವೋಲ್ ಖವ
ಖವಿಖಾ ಕುಲಿಶಾಯುಧವ ಝಡಿದಿಂತೆಂದನರಿ ಭಟಗೇ || ೧ ||

**ರಾಗ-ಭೈರವಿ | ಅಷ್ಟತಾಳ**

ಧಿರುರೇಮದಾಂಧ ಕೇಳೂ | ಶೌರ್ಯದ ಪಿತ್ಥ | ಶಿರಕಡರಿತೆ ಬಗುಳೂ |
ಸುರರನಂಜಿಸುತೆಲ್ಲಿಸರಿವೆ ಮುಂದಡಿಯಿಡಲಿರಗೊಡೆ ನಿಲ್ಲೆಂದನೂ || ೧ ||

ಸಿಕ್ಕಿದೆಯೈಸುರಪಾ | ನಿನ್ನನು ಗೆಲ್ಲತಕ್ಕವನೈಸೇಪಾಪಾ |
ಚುಕ್ಕಿಗರೊಡಗೂಡಿ ಸೊಕ್ಕಿ ಯುದ್ಧಕೆ ಮನವಿಕ್ಕಿದೆಯಯ್ಯ ವ್ಯರ್ಥಾ || ೨ ||

ಮರುಳು ನಿಶಾಚರನೇ | ನಿನ್ನನುಗೆಲ್ಲದಿರಲಾ ದಿವಾಚರನೇ |
ಧರೆಯರಸರನೆಲ್ಲ ಮುರಿದಹಮ್ಮಿಲಿ ಪ್ರಾಣತೊರೆಯದಿರೆನೆಘಮ್ಮನೇ || ೩ ||

ಭುವನಕಂಪಿಸುವಂದದೀ | ರಕ್ಕಸಘೋರಾಹವವನೆಸಗೆ ಬಂಧದೀ |
ದಿವಿಜೇಂದ್ರಕಾಲ್ಗೆಟ್ಟು ವಿಹಗೇಂದ್ರಗಿದಿರೆ ಸರ್ಪವು ಹಾಯಂದೋಡಿದನೂ || ೪ ||

**ರಾಗ-ಮಾ. | ಏಕತಾಳ**

ನಡದಗ್ನಿಯನೆಮನೈರುತಿ ವಾಯುವ ಮೃಡಸಖನೀಶಾನಾ |
ಪೊಡವಿಯನರಸುತ ಕಾಣದೆ ಹರಿಧ್ವನಿಗೊಡುತೆಂದನು ಕರದು ||೧||

ಕೊಲ್ಲೆನುಕೊಲ್ಲೆನುಬೆದರುವಿರ್ರ್ಯಾತಕೆ ಪಳ್ಳುಗಳಂದದೊಳೂ |
ನಿಲ್ಲಿರಿ ಸಮ್ಮುಖದೊಳು ರಣಕೌಶಲ ಬಲ್ಲರೆ ಕಾದುವದೂ ||೨||

ವೋಹೋ ಸುರಪನುಧರೆಗಗ್ಗಳ ಬಲುಬಾಹುಬಲಾಢ್ಯಗಡಾ |
ಸಾಹಸವಿನಿತೇ ಸರಿಯಲೆನ್ನೊಳಗಾಹವಕಾರಿಲ್ಲೈ ||೩||

ಕಡಲಿನೊಳಾಡುವೆ ಜಲ ಕೇಳಿಯನೆಂದೊಡನುಬ್ಬುತ ಖಳನೂ |
ಸಡಗರದಿಂ ಜಗನಡುಗುವಂತೈದುತಕಡಲಿಗಿಳಿದನವನೂ ||೪||

ಮೊಳಕಾಲ್ ಜಲವಿದುತಳಪಳನೆಂಬುದು ಜಲಜದಳಾಕ್ಷಿಯರೇ |
ಜಳಕಕೆ ಬನ್ನಿರಿ ಚಳಯದೊಳೆನು ತುಮ್ಮಳಿಸುತಬಲ್ ಬಲರೇ ||೫||

**ಭಾಮಿನಿ ಷಟ್ಪದಿ**

ಇತ್ತಡಿಗೆ ಕರತಳವ ಹಾಸುತ
ತುತ್ತುಗೊಂಬನು ಜಲವನೊಂದೇ
ಸರ್ತಿಯಲಿ ಮುಗುಳುಗಿವನೀ ತೆರದಿಂದ ವಾರ್ಧಿಯಲೀ ||
ದೈತ್ಯನಿರೆ ಸುಮನಸರುಧಾರುಣಿ
ಮತ್ತಕಾಶಿನಿಸಹಿತ ಬ್ರಹ್ಮನ
ಹತ್ತಿರಕೆ ನಡೆತಂದು ಬಿನ್ನೈಸಿದರು ಮನದಳಲಾ ||೧||

**ರಾಗ-ಸಾ | ಅ**

ಪರಿಪಾಲಿಸೆಮ್ಮ ವಿಧಾತ್ರಾ | ಪಾದಸರಸಿಜಕೆರಗಿದ ಪರಮ ಪವಿತ್ರಾ ||ಪಲ್ಲವಿ||

ತರುಣಿಮಣಿದಿತಿಕಾಶ್ಯಪರಸುತರುರುಬಲಾಢ್ಯರುಮವರೊಳೆರಡನೆ ತರುಣ
ಹಿರಣ್ಯಾಕ್ಷನ ಪರಾಕ್ರಮ ಬೆರಗುಮಾಡಿತಲಾಜಗತ್ರಯಾ || ಪರಿಪಾಲಿ || ||ಅ.ಪ||

ಸುರರಿದೊ ಮೂಗರಾಗಿಹರೂ | ಬೇಸ-ತ್ತರು ಭಯದಿಂದಿಲಿಂದೀ ದಿಗ್ವರರೂ |
ಪರಿಭವಕ್ಕೊಳಗಾದೆ ನಾನೆಂನರಸಪಾಲಿಸು ಪಾಲಿಸೆಂದಡಿಗೆರಗಿ ಸಂಕ್ರಂದನನು
ದೂರಲು ಧರಣಿದೇವಿಯು ವರದಳಜನೊಳೂ | ಪರಿಪಾಲಿ ||೧||

ಲೋಕನಾಯಕನೆ ಪರಾಕೂ | ಯನ್ನ | ವಾಕುಗಳಿದನು ನೀ ಲಾಲಿಸಬೇಕೂ |
ಭೀಕರಾಕ್ರುತಿಯಾದ ವರರತ್ನಾಕರದೊಳಡಗೀರ್ದಡೆನ್ನುವ
ನೇಕೆ ಮೇಲಕ್ಕೆಬ್ಬಿಸಿದೆ ನೀನೇಕೆ ಸೃಷ್ಟಿಯಗೈದೆ ಸ್ವಾಮಿಯೆ || ಪರಿಪಾ ||೨||

ನೊಂದೆನೊಂದೆನು ನೊಂದೆನೈಯ್ಯಾ | ಯನ್ನ ತಂದೆ ತಂದೆಯತಂದೆ ನೀ ವಂದನೀಯಾ |
ಮಂದಮತಿಯಿವನಿಂ ಯಥಾ ಸ್ಥಿತಿ ಬಂದುದೈಯನಗೀ ಚರಾಚರ ವೃಂದವಿಲಯಸ್ತಾನಕಾರಣ
ವಿಂದಲಾ ಗೋವಿಂದನಂದನಾ || ಪಾರಿಪಾಲಿ || ೩ ||

**ವಾರ್ಧಿಕ ಷಟ್ಪದಿ**

ವಂದೆಸೆಯೊಳಿಂತು ವಸುಧಾನಾರಿಪುಯ್ಯಲ್ಪ
ಲೊಂದೆಸೆಯೊಳಂಗದಿಂದೊಗೆದ ಮನುಶತರೂಪೆ
ಗಂದೆಡೆಗಳಿಲ್ಲಾತು ಸುರರ ಮೊರೆಬಲಾವಾತು
ನೊಂದಜಂ ಚಿಂತೆವೆತ್ತು |

ತಂದೆಯಾಕೆನ್ನ ನಿರ್ಮಿಸಿದೈ ನಪುಂಸಕನ
ಮುಂದೇನು ಗತಿಯೆಂದು ನಿಂದು ನಿಟ್ಟುಸುರಿಟ್ಟ
ಡಂದುನಾಸಾ ವಳಯದಿಂ ದಿಳಿದಮಿಗೆಬೆಳದ
ನಂದದಿಂ ಹಂದಿಯಾದಾ || ೧ ||

**ಭಾಮಿನಿ ಷಟ್ಪದಿ**

ನಳಿನಭವನಭಿವರ್ಣಿಸುತ್ತಿರೆ
ಕಳಭವೋ ಕುಲಶೈಲವೋ ಯೆನೆ
ಬೆಳೆದು ನಿಮಿಷಾರ್ಧದಲಿ ಘುಳುಘುಳಿಸುತ ರಸಾತಳಕೇ ||
ಯಿಳದನಂಬುಧಿ ಬಾಯಬಿಡೆ ಭೂ
ತಳವದುರೆ ಕಂಡಿದರನಜನುಂ
ಮ್ಮಳಿಸಿ ಹರಷೋಘ್ಪಡದಿ ಪೊಗಳಿದ ಜಯತು ಹರಿಯನುತಾ || ೧ ||

**ರಾಗ-ಸಾ | ಏಕತಾಳ**

ಅಂಜದಿರಂಜದಿರವ್ವ | ಭೂಮಿದೇವಿ |
ಸ್ವಾಮಿ ಕಂಜನಾಭ ಕಾವ ನವ್ವಾ ಭೂಮಿ ದೇವೀ ||
ಸಂಜೀವನ ಕೈಯ್ಯೊಳಿರಲೂ | ಭೂಮಿದೇವೀ |
ಕೆಟ್ಟ | ನಂಜಿಗಂಜಲುಂಟೆ ತಾಯೆ | ಭೂಮಿದೇವೀ || ೧ ||

ಶ್ವೇತವರಹನಾದಕಾಣೆ | ಭೂಮಿದೇವೀ | ರ
ಸಾತಳಕ್ಕೆ ಪೋದನಲ್ಲೆ | ಭೂಮಿದೇವೀ |
ಮಾತೆ ನಿನ್ನ ಕಾದ ಮೇಲೆ | ಭೂಮಿದೇವೀ | ಖಳನ
ಘಾತಗೈವಧೈರ್ಯಳಾಗು | ಭೂಮಿದೇವೀ || ೨ ||

ಅಯ್ಯಯ್ಯ ನೀ ನಡುಗಬೇಡ | ದೇವಪಾಲಾ | ನಮ್ಮ
ಕೈಯಬಿಡನು ಕಾವನ್ನೆಯ್ಯ | ದೇವಪಾಲಾ ||
ಕೈಯ ಮುಗಿದು ಪುಷ್ಪಾಂಜಲಿಯ | ದೇವಪಾಲಾ | ಯಂ
ನ್ನಯ್ಯ ಜಗದಯ್ಯ ಗೀವೋ | ದೇವಪಾಲಾ || ೩ ||

**ಕಂದ**

ಅನುಮಿಷರಿಂತಿರಲತ್ತಲ್
ವನಧಿಯೊಳಸುರಂ ಸಾಸಿರವತ್ಸರಮಂಕಳಿ |
ದನಿಮಿಷರಂಸದದಲ್ಲಿಯೇ
ಘನದಿಂ ವನಕ್ರೀಡೆಯೊಳಿರದುಮ್ಮಹದಿಂದಲ್ || ೧ ||

**ಭಾಮಿನಿ ಷಟ್ಪದಿ**

ಹೊಡೆದಡಿಬ್ಬಗಿಯಾತ್ತು ಗದೆಯಲಿ
ಕಡಲುರಸೆ ಪರಿಯಂತ ಕಂಡನು
ಕಡಲೊಡೆಯನರಮನೆಯನಲ್ಲಿ ವಿಭಾವರೀಪುರವಾ ||
ನುಡಿಸಿ ನೋಡುವೆನಿವನ ಮಲತರೆ
ಬಡಿದುಕೊಲುವೆನೆನುತ್ತ ವಾರಿಪ
ನಡಿಗೆ ಬಂದೆರಗಿದನು ಸಹಜವಿನೀತ ನಂದದಲೀ || ೧ ||

**ರಾಗ-ಸೌ | ತಾ-ತ್ರಿ**

ಭಲಭಲರೆ ಬಲುಧೀರನೆಂಬುದ ತಿಳಿದು ನಾನಿಂದಿಲ್ಲಿ ಗೈದಿಹೆ
ಮುಳಿವವನೊ ಮಣಿವವನೊ ಸಮರದಿ ಗಳಹು ನೀನೂ || ೧ ||

ರಾಜಸೂಯದ್ವರವ ಮಾಡಿದ ರಾಜನೆಂದೆಂಬುದನು ಕೇಳಿದು |
ಬೀಜ ಹೀನರ ಬಿಸುಟುಬಂದೆನು ಮಾಜದಿಂದೂ || ೨ ||

ಹುಲುಸುರಾಧಿಪನಂತೆ ಯಡಗದೆ ತಳುವದೆನ್ನನು ಕಂಡೆಯ್ಯೆ ಭುಜ
ಬಲನು ನಿರ್ಜರ ಗಣದೊಳೊಬ್ಬನೆ ಹಳೆಯಭಟನೂ || ೩ ||

ತೇಜವುಳ್ಳನ್ನೆಸೆ ತನ್ನೊಳು ರಾಜಯುದ್ಧವ ಕೊಡಸಮರ್ಥನೆ
ರಾಜಿಯಾದಡೆ ಸರಿಯ ಭಟನನು ಸೋಜಗೊಳಿಸೂ || ೪ ||

ಗುಣಯುತನು ಕುಲಕೋರ್ವ ಸಾಲದೆ ಬಿನುಗುಗಳು
ಹಲವಿದ್ದು ಫಲವೇನೆನುತ ಬೊಬ್ಬಿರಿಯಲ್ಕೆ ಕೇಳಿದು ಮಣಿಯುತೆಂದಾ || ೫ ||

**ರಾಗ ಶಂ | ತಾಳ-ತ್ರಿ**

ಮಗನೆ ಲಾಲಿಸಾನೆಂಬ ಮಾತಿನ ಬಗೆಯ ನೀನೂ ಶ್ರವಣದೀ |
ಹಗರಣವು ನಿನ್ನೊಡನೆ ಯನಗತಿ ಸೊಗಸೆ ಹೇಳೂ  || ೧ ||

ಗಡ್ಡವಿದು ಬಿಳುಪಾತ್ತು ದೇಹಕೆ ಜಡ್ಡು ತನವೂ ಸೇರಿತೂ |
ದೊಡ್ಡವನೆನ್ಸೈ ಪ್ರಾಯದೊಳು ಎಲ ದಡ್ಡಿಯಿಗಾ  || ೨ ||

ವೆಂಟಿಣಿಪ ವೈರಿಗಳ ಬಹುಬಲ ತಂಟೆಯಹುದೇ ಪೂರ್ವದೀ |
ಕಂಟಕವಲಾ ಮುಪ್ಪುತನಗೆಲೆ ನಂಟಕೇಳೂ  || ೩ ||

ಜಡನೆನುತ ಜನರೆಂಬ ನಾಣ್ನುಡಿ ಜಡದೊಳೆಂಬೂದಲ್ಲಿದೂ |
ಜಡಸತಿಯರತಿ ಮುದುಕಿಯರ ನಾ ಬಿಡುವದೆಂತೂ  || ೪ ||

**ರಾಗ ದೇಶಿ ಏಕತಾಳ**

ವಿಕಟಾ ವಿಕ್ರಮ ದೈತ್ಯಾ ಕುಂಜರಾ | ಕೇಳು ಶುಕನ ಕೋಪಕೆ ಶಾಂತಿ ಪಂಜರಾ |
ದೇವ ಸಕಲಾಲೋಕೇತ ವಿಷ್ಣು ಶಕುತ ನಿನಗೆ ಧುರದೀ || ೧ ||

ಮಸದ ಶೂಲವ ಬಿಟ್ಟು ಬಾಳೆಯಾ | ನೀನು ಬಸಿಯಲೇತಕೆ ಕೇಳು ನಿರ್ಣಯಾ |
ರಣಘಸಣಿಯ ಬಿಡುಬಿಡಿಂನಸುರಾರಿ ಬಲ್ಲಿದಾ || ೨ ||

**ಭಾಮಿನಿ ಷಟ್ಪದಿ**

ಯನಲು ಹಾಯೆಂದೆನುತವರುಣನ
ಮನೆಯ ಹೊರವಂಟೈ ತರುತ ಕಂ
ಡನು ಸಮೋದಿತ ಸೂರ್ಯ ಕೋಟಿ ಪ್ರಭೆಗೆ ಮಿಗಿಲಾದಾ ||
ತನು ರುಚಿಯ ಬಿಡುಜಡೆಯ ಕೃಷ್ಣಾ
ಜಿನ ವಸನದೆಡಗೈಯ್ಯ ವೀಣೆಯ
ವಿನುತ ನಾರಾಯಣನಿನಾದದಲೆಸವ ನಾರದನಾ  || ೧ ||

**ರಾಗ ನಾ ನಾ ಅಷ್ಟತಾಳ**

ಕಂಡವನಂಫ್ರಿಯೊಳೆರಗಲೂ | ಮುನಿ – ಮಂಡೆಯೆತ್ತುತಲೆಂದನಾಗಲೂ |
ದಿಂಡ ನೀನೆಲ್ಲಿಗೆ ತೆರಳುವೇ | ಸುಪ್ರಚಂಡ ನಿನ್ನಾ್ಯರ ನೀನರಸುವೇ  | | ೧ ||

ತಮ್ಮನೊ ಸುತನೊ ಬಾಂಧವನೋ | ನಿನ್ನ ಮೊಮ್ಮನೊ ಸಖನೊ ಸದ್ದಕನೋ |
ಹೆಮ್ಮೆಯಿಂದಾರ ನೀ ಹುಡುಕುವೆ | ಮನದುಮ್ಮಹ ಪರಿಯೇನು ತೊಡಕುವೇ  || ೨ ||

ಅಂಗನೆ ಬೇಕೆಂಬಪೇಕ್ಷೆಯೋ ಸಮರಾಂಗಣದೊಳು ಹೆಚ್ಚು ಬಯಕೆಯೋ |
ಹಿಂಗದೆ ಪೇಳೆನಲುಲಿಯುತ್ತಾ ವೃತ್ತಿ ಪುಂಗವನೊಡನಲಿಯುತ್ತಾ || ೩ ||

**ರಾಗ ಶಂಕರಾಭರಣ, ಅಷ್ಟತಾಳ**

ಲಾಲಿಸೈಯ್ಯ ಮೌನಿಕುಲ |
ಪಾಲಶ್ರೇಷ್ಠನೆನ್ನ ಮತವ ಕೀಳರಂತೆ ಕೇಳುವೆಯ ಪೇಳುವೆನೆಲ್ಲಾ |
ಲೀಲೆಯಿಂದಾನೊಂದು ದಿನದಿ |
ಮೇಲಿನಮರಾವತಿಯ ಕೇಳಿ ನೋಡಬೇಕೆಂದೆನುತ್ತಾಲಿಸುತ್ತೈದೀ || ೧ ||

ಕಂಡೆ ಸುರರೋಟವನ್ನ ಖಂಡಲನ ಯುದ್ಧದೊಳವ ಕಂಡೆನಗ್ನಿ ಗತಿಯ
ಯಮನ ದಂಡದಾಟವಾ |
ಚಂಡ ವಾಯುವೋಟವೈದ್ದು ಮಂಡೆಯವ ಕುಬೇರನೊಡನೆ ತಂಡಗೂಡಿ
ಪೋಪ ಬಗೆಯ ಕಂಡೆನೆಲ್ಲವಾ || ೨ ||

ಕಡೆಯಲೊಬ್ಬನನ್ನು ಕಂಡ ಕಡಲ ಕೋಣೆವಾಸನನ್ನು ನಡನಡುಗುತ್ತ
ಲಿಹ ಕಡು ಮುದುಕನಾ |
ಕೊಡುಸಂಗರವ ನೆನಲಡಿಗೆರಗುತ ಪೇಳ್ದನೊಡೆಯ ನಾರಾಯಣನಲ್ಲಿ
ನಡೆ ನೀನೆಂದೆನ್ನಾ || ೩ ||

ಯಂದ ಮಾತ ಕೇಳುತ್ತಲಾ | ಹಂದೆಯನ್ನು ಹುಡುಕುತ್ತ ಬಂದೆನವನೆಲ್ಲಿಹದು
ವಂದದಿ ಪೇಳೀ ||
ಮುಂದೆ ಪೋಪೆ ದಿತಿಸತಿಯ ಕಂದ ಹಿರಣ್ಯಾಕ್ಷಧೀರನೆಂದು
ಪೇಳ್ವರೆಲ್ಲರೆನಲಂದವಗೆಂದಾ || ೪ ||

**ರಾಗ ಬಿ. ಏಕತಾಳ**

ಭಲಾಭಲಾಭಲ್ ಶಭಾಸು ರಾಕ್ಷಸ ಕುಲತಿಲಕನೆನೀ ಕೇಳೆಲಾ
ಬಲಹಂಕಾರದೊಳೇತಕೆ ಕಾಡುವೆ ಸಲುವುದೆ ಗರ್ವವು ಹೇಳೆಲಾ || ೧ ||

ಸನ್ನುತನಾದರೆ ಧರೆಯೊಳ್ ಸುಜನರ ಬನ್ನವ ಬಡಿಸುವದೇಕೆಲಾ |
ಸ್ವರ್ಣದ ಗಟ್ಟಿಯ ವನ್ಹಿಯೊಳಿಡದಿರೆ ನಾಣ್ಯಗಳಪ್ಪುದೆಯೇನೆಲಾ || ೨ ||

ಬಿಡುಬಿಡು ನಿನ್ನಯ ಸಡಗರ ಮಾತನು ವಡೆಯನಾರಾಯಣನೆಂಬವಾ |
ಕಡುಹೀನಭಟರನು ಪೊಡೆವಗ್ಗಳನನು ತಡವೆಯ ಪೇಳುವೆ ವಾಹವ್ವಾ || ೩ ||

ಯಿಂದಿರೆರಮಣನು ಸುಂದರರೂಪ ಗೋವಿಂದನ ನೆಲೆಯ ನಾಪೇಳುವೇ |
ಹಂದಿಯರೂಪ ರಸಾತಳದೊಳಗಿರುವಂದವ ಕಂಡಿಹೆಪೋಗುವೇ || ೪ ||

**ವಾರ್ಧಿಕ ಷಟ್ಪದಿ**

ಯತಿವರನ ಬೀಳ್ಕೊಳುತ ಹರಿಯಕಾಂಬುಜ್ಜುಗದೊ
ಳತುಲ ಭುಜಬಲನಾರಸಾತಳಕೆ ದಾರಿಯಂ
ಶ್ರುತಗೊಳಿಪೆನೆಂದೆನುತ ಮೆಟ್ಟಲೀ ಧರಣಿಯಂ ಕಡಲಥೆರೆಯಂತೆ ಹೊರಳೇ ||

ಹತಹತಿಯೊಳಖಿಳಜನ ತತಿಯಳಿದುಮಳವಳಿದು
ಕ್ಷಿತಿಜಲಾರ್ಣವವಾತ್ತು ಸಚರಾಚರಂಪೊತ್ತು
ದಿತಿಜನೇನಗ್ಗಳನೊ ಕಂಪಿಸಿತಜಾಂಡವದು – ಪೃಥುವಿಸತಿ ಮೊರೆಯಿಟ್ಟಳೂ || ೧ ||

**ರಾಗ ಖಮಾಚು ಏಕತಾಳ**

ಪಾಲಿಸು ಪಂಕಜದಳನಯನಾ | ನತತತಿನುತಚರಣಾ || ಪಲ್ಲ ||
ಶೀಲಯಸ್ಥಿತಮಕರಾಲಯವರ ವನಮಾಲಯ ಪ್ರಿಯಪದ್ಮಾಲಯ ಚಿನ್ಮಯಾ |
ಪಾಲಿಸು || ಅನು ಪಲ್ಲ ||

ಶಂಖಚಕ್ರಗದೆ ಖಡ್ಗ ಪೀತಾಂಬರಧಾರೀ | ಶೌರಿ-ಶಂಕರಪ್ರೀಯ ಮನೋಹರ ಮತ್ಸ್ಯವತಾರೀ |
ಸಂಕರುಷಣವೇಕಾಂಕಿತನಾಮ ಕಳಂಕರಹಿತ ಶ್ರೀಓಂಕಾರಪ್ರಿಯ | ಪಾಲಿಸು || ೧ ||

ದೀನದಯಾಪರ ತತ್ವವಿನೋದ ವಿನೋದಾ | ಮೋದಾ |
ಭೂನಾರೀ ಸಿರಿವಲ್ಲಭ ಸಜ್ಜನಬೋಧಾ | ಮಾನಿನಿ ಕಳದರು
ಮಾನವಕಾದ್ದೆನಂ | ಬಾನುಡಿಗೊಪ್ಪಿದೆ | ದಾನವಮರ್ದನ | ಪಾಲಿಸು || ೨ ||

ನಚ್ಚಿದನಾರಿಯ ಕೈಬಿಡಬೇಡವೊ ದೇವಾ | ದೇವಾ |
ಸಚ್ಚಿನ್ಮಯದಾಶಾರ್ಹ ಮಹಾಪ್ರಭುಕಾವಾ |
ಯಿಚ್ಚೆಯದಿರೆ ಪ್ರಿಯನಚ್ಚಿನವಳನೀಲುಚ್ಚಗೆಮಾರದೆ ನಿಚ್ಚಯ ಪೊರೆಧೊರೆ ||
ಪಾಲಿಸು ಪಂಕಜದಳ ನಯನಾ || ૩ ||

**ವಾರ್ಧಿಕ ಷಟ್ಪದಿ**

ಮತಿಗೆಟ್ಟೆ ಧೃತಿಗೆಟ್ಟೆ ಪಥಗೆಟ್ಟನೈ ದೇವ
ಪ್ರತತಿಗತಿಮತಿಯೆ ಮದ್ವಲ್ಲಭಾಸ್ವಾಮಿಕಾ
ಮಿತಧಾತಧಾತಃ ಸ್ವಯಂಭು ಓಂ ಹರಿವಿಷ್ಣು ಕರುಣಾಬ್ಧಿಕಾವುದೆಂದೂ ||

ಕ್ಷಿತಿಮರುಗೆ ನುಡಿಕೇಳಿ ಪೃಥುವಿದಾಡೆಯೊಳಾಂತು
ಖತಿಯಿಂದ ಫಲ್ಗಡಿಯುತಿದಿರಾಗಿ ಘರ್ಜಿಸುತ
ಧೃತಿಗೆಡಿಸಿ ಖಳಪತಿಯನಬ್ಧಿಯೊಳ್ ಮೈದೋರ್ದ ಘನವರಾಹ ಸ್ವಾಮಿಯೂ || ೧ ||

**ರಾಗ ಮಾ ಏಕತಾಳ**

ಯಲೆಯಲೆ ಯೇನು ವಿಚಿತ್ರವೊ ಜಲದೊಳುಮಲತಿಹುದೀ ವರಹಾ |
ಫಲವಿದುತನ್ನಯ ಪುಣ್ಯದ ಬಳಕೆ ಕಂಗಳಿಗೆ ಗೋಚರವಾದ್ಯೆ || ೧ ||

ಬಿಡಿಬಿಡಿ ನಾಗಳ ತೊಡಿತೊಡಿ ಬಲೆಗಳ ಯಿಡಿರಿಡಿರೀಟಿಯಲೀ |
ಬಿಡೆಬಿಡೆನಿದರನು ಪೋಗಲು ಮುಂದಕೆ ಹಿಡಿಹಿಡಿರ್ಯೆ ಧನುವಾ || ೨ ||

ಬಿಡುದಾಡೆಯಧರೆಗಮನವಿದೆಲ್ಲಿಗೆ ನಡೆಗೊಡಲೆಡೆಯಿಲ್ಯೆ |
ವೊಡೆಯನೆ ನೀಂಫಡನುಡಿನುಡಿ ಭಳಿರೇ ಯಡಿಯಿಡಬಿಡೆನಲ್ಲ || ೩ ||

**ಭಾಮಿನಿ ಷಟ್ಪದಿ**

ಲಜ್ಜೆಯಿಲ್ಲದ ಭಂಡ ಫಡಫಡ
ಹಜ್ಜೆಯಿಡದಿರು ಮುಂದೆ ಸಂದುದು
ಕಜ್ಜವಿದು ನಿನಗೆನುತ ದುರ್ಮತಿ ಮೂದಲಿಸುತಿರಲೂ ||
ಉಜ್ವಲಿಪ ಕೋಪಾನಲನ ಬಲು
ಕಜ್ಜಳವ ಕೆದರಿದನುವಿಲಯದ
ದೂರ್ಜಟಿಯರೂಪಾದ ಖಳಕುಲ ಕಾಲಭೈರವನೂ || ೧ ||

**ರಾಗ ಸಾರಂಗ ತಾಳ ತ್ರಿವುಡೆ**

ಖೂಳಖಳ ಕೇಳೆಲವೊ ತೆಗೆತೆಗೆ ಮಾಲಿಸಿದ ಬಲೆಹಂದಿಯಹೆ
ನಾನಾಳುತನವೆನಗಿಲ್ಲ ಬಲು ಕಟ್ಟಾಳು ನೀನೂ || ೧ ||

**ರಾಗ ಮರಾಠಿ ಏಕತಾಳ**

ಫಡಫಡ ವಿಕ್ರಮನಾದರೆ ಸಮರವ ಕೊಡುಕೊಡು ಸುರರಿವರಾ |
ಬಿಡುಬಿಡು ಬಿರುನುಡಿ ಪಡೆಯಂನಯದಯ ಬಿಡುವೆನು ಕೊಲೆನಿನ್ನಾ || ೧ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಆದರೆಲೆ ರಿಪುಭಟರ ನಾನಾ | ರಾಧಿಸೆನು ಧಿಟವೆಂಬ ಮನವೆನ
ಗಾದರೆಯು ನೀಗೆವುಲುದಿದ್ದರೆ ಸಾಧಿಸುವದೂ || ೧ ||

**ರಾಗ ಮರಾಠಿ ಏಕತಾಳ**

ಯಾಕೆನಿ ಸಹಜವ ಬಿಟ್ಟಿದ ಧರಿಸಿದೆ ಸೂಕರ ರೂಪವನೂ |
ಸಾಕ್ ಬಿಡು ಮಲತೆರೆ ಶಾಕಿನಿ ಬಳಗಕೆ ತೋಕುವೆತನಿಗರುಳಾ || ೧ ||

**ರಾ-ಸೌ | ತಾ.-ತ್ರಿ**

ವೋಹೊ ನಿನ್ನೊಡ ನಿಂದು ತನಗಿನ್ನಾಹವವು ಸರಿಯಲ್ಲವೆಲ್ಲಿ
ಯು ಹೋಹ ದಾರಿಯ ಕಾಣೆ ನಾನೆಲೆ ಬಾಹುಬಲನೇ  || ೩ ||

**ರಾ ಮಾ ಏಕತಾಳ**

ಘೃಷ್ಟಿಯ ರೂಪದಿ ಪುಟ್ಟಿದೆ ಕರೆಕರೆ ಸೃಷ್ಟ ಮಹೇಶ್ವರರಾ |
ವಟ್ಟಲಿಕೊಡು ಧುರಬಿಟ್ಟಿಪೆನೇ ಬಡ ವಿಷ್ಣುವೆ ಭಳಿರೆಂದಾ        || ೩ ||

**ಭೋಗ ಷಟ್ಪದಿ**

ದಿತಿಜನೆಂದ ಮಾತಗಣಿಸ
ದತುಲಬಲ ವರಾಹ ಸ್ವಾಮಿ
ಕ್ಷಿತಿಯ ಮುನ್ನಿನಂತೆ ಯಥಾಸ್ಥಿತಿಯೊಳಿರಿಸುತಾ |
ಗತಿಸದಂತೆ ನಿಜಬಲೋಂ
ನತಿಯನೀಯಲಮರವಿತತಿ
ನುತಿಸುತಲರ ಮಳೆಯ ಸುರಿಸೆ ಖತಿಯೊಳ ಸುರತಾ || ೧ ||

**ರಾಗ ಭೈರವಿ ಏಕತಾಳ**

ಬೇರು ನಿಸುರರಿಗೆ ನಿನ್ನಾ | ಕೊಂದ್ಧಾರಿಸದಿರೆ ಸಂಪೂರ್ಣ |
ಬೇರನು ಕಡಿದರೆ ಮರವೂ | ಬೇರಾರಾಶ್ರೈಪುದು ದಿಟವೂ       || ೧ ||

ಹೂಂ ಕರಿಸುತ ಶ್ರೀನಾಥಾ | ಖಳನಂಕರದೆಂದನು ಮಾತಾ |
ಕಿಂಕರರಹುದೀಸುರರೂ | ನಿಶ್ಯಂಕರು ಮುನಿಪಿತೃ ಜನರೂ      || ೨ ||

ನುಡಿದೀ ನುಡಿ ಬಲುಚಂದಾ ಕ್ಷಣ ಬಿಡಿಸುವೆ ನಿನಗೀ ಬಂಧಾ |
ಅಡಗದೆ ನಿಲ್ ನಿಲ್ಲೆಂದಾ | ಮಿಗೆ ತುಡುಕಲು ಮುಂದಲೆ ಗಂದಾ || ೩ ||

ಸಿಡಿಲಂದದಿ ಭೋರ್ಗುಡಿಸೀ | ಹರಿ ನುಡಿದನು ಭಾಪುರೆ ಸಹಸೀ |
ಕೆಡಿಸಿದೆ ಜಗವುಮ್ಮಳಿಸಿ | ಫಲಕೊಡುವೆನೆನುತಲಡ್ಡೈಸೀ         || ४ ||

**ರಾಗ ಪಂ ಮ ತಾ**

ಗಿರಿಗೆ ಗಿರಿಗಳಾಂತ ವೋಲ್ಸಾಗರಕೆ ಶರಧಿಯಾಂತವೋಲು ಹರಿಗೆ
ಹರಿಗಳಾಂತವೋಲು ದುರವಿರೋಧದೀ ||
ಬೆರಸಿಹ್ಯೊದರಂದು ಪ್ರಳಯ ಹರನ ತೆರದೊಳೀರ್ವರೊಂದೆ ಗರುಡಿ
ಗಾರರೆನಲು ದುರುಳ ಹರನು ಗದೆಯನೂ    || ೨ ||

ಬೀಸಲದನು ಕಂಡು ಧರೆಗೆ ಯಾಸುರಾರಿಕೆಡಹೆ ಮೇಲೆ
ವಾಸವಾದಿ ಸುರರ ಬಹಳ ತೋಷಗುಂದಿತೂ |
ಯೇಸುಭಲನೊಖಳನು ರಣದಿ ವಾಸುದೇವ ಸೋತಡೆಂಮ
ವಾಸವಾಳ್ವ ಬಾಳ್ವೆಯಿಲ್ಲೆಂದಾ ಸಮೂಹವೂ || ೨ ||

ನಡುಗಲಾನಭಾಗ್ರದಿಂದ ನುಡಿದನಜನು ದೇವ
ಕೈಯ್ಯೋಳಿಡು ಕುಠಾರವೀಗ ಮುಗಿಸು ತಡವದೇಕೆನೇ |
ಧೃಡವೆನುತ್ತಲಬ್ಜನಾಭ ಪಿಡಿದ ಖಡ್ಗದಿಂದ ತಿವಿದು ಕೆಡಹಿ
ಖಳನ ಬಲದ ತೋಳ ನುಡಿದನುಬ್ಜುತಾ || ೩ ||

**ಭಾಮಿನಿ ಷಟ್ಪದಿ**

ಭಳಿರೆ ಹಿಡಿಹಿಡಿಧನುವನೇಕೀ
ಗಿಳೆಯ ನೋಡುವೆ ಕೊಳುಗುಳದ ಭಟ
ರೊಳಗೆ ಬಲ್ಲಿದನಹುದೊಹಾಯೆನಲೆತ್ತಿ ಕುಲಿಶವನೂ ||
ತಳೆದು ಘುಡುಘುಡಿಸುತ್ತ ವಕ್ಷ
ಸ್ಥಳಕೆರಗೆ ತಿರುತಿರುಗೆ ಧಿರ್‍ರನೆ
ಖಳನಡಗಿ ಬೀಸಿದನು ಮಾಯೆಯ ವಿದುರ ಕೇಳೆಂದಾ || ೧ ||

**ರಾಗ ಭೈ | ತಾ.ತ್ರಿ**

ಕಂಡುದಾಗಾ ಮಾಯದಿ ಕಂಡುದಾಗಾ || ಪಲ್ಲ

ಕಂಡುದತಿ ಸಿಡಿಲ್ ಮಿಂಚು ಗಿರಿಗಳ ತಂಡಕಲ್ಮರಶರಭ ವರ ಬೇರುಂಡ ಖಗತತಿ
ಧೂಮಕೇತುಗಳುಂಡು ಕಾರಿತು ರಕ್ತಮಳೆಯನು | ಕಂಡುದಾಗ || ಅನುಪಲ್ಲವಿ||

ಯಲೆಲೆ ಕವಿಕವಿ ಸೀಳುಹಂದಿಯ ತಲೆಯನಿರಿತೆಗೆ ಕರುಳ
ಸಸಲಿ ಕೊಳುಗುಳದೊಳಿದರಧಟ ನಿಲಿಸುವ ಬಲುಹುಬಹಳವೆನುತ್ತ
ಭೂತಗಳುಲಿದವತಿಬೊಬ್ಬೆಯಲಿ ದಿವಿಜಾವಳಿಗಳತಿ ಕಂಗೆಡುತ
ಲೋಕಪ್ರಳಯ ವಿಂದಾತ್ತೆಂದುಸುವುದು ನಳಿನನಾಭನು ಗ್ರಹಿಸು
ತೆಂದನು | ಯೇನನೆಂಬೇ ಸಾಹಸ || ಕಂಡುದಾಗಾ || ೧ ||

ಅಂಜದಿರಿಸುರವರರು ರಿಪುವನು | ಭಂಜಿಸುವೆನೊಂದರ್ಧ ಘಳಿಗೆಗೆ | ಕಂಜಸಖನಿರೆ
ಕಮಲವನವನು | ಮಂಜುಮುಚ್ಚುವದುಂಟೆನೀವೆಂ ನಂಜಲಿಯೊಳಿರೆ
ಭಯಗಳೇನೆನು ತಂಜದಂದದೊಳುಸುರಿಪುಗಳ ನಂಜಿಸುತ ಹೂಂಕ
ರಿಸಿ ನೋಡಿದ ರಂಜಿಸುವ ಬೆಂಗಡೆಯ ಚಕ್ರವಾ | ಯೇನನೆಂಬೇ |
ಸಾಹಸ | ಕಂಡುದಾಗಾ || ೨ ||

**ರಾಗ ಭೈರವಿ ಅಷ್ಟತಾಳ**

ಹರಿಯ ಸುದರ್ಶನದೀ | ಮಾಯಗಳೆಲ್ಲ – ಹರಿದೋಡೆ ಖಳಭರದೀ |
ಹರಿವುದೆ ಭುಜಬಲ ಹರಿನಿಲ್ಲೆನುತಗದಾ ಧರಗೆರಗಲು ತಡದೂ || ೧ ||

ಧಿರುರೇ ಮದಾಂಧಮನೇ | ಮೃಗೇಂದ್ರನ ಕುರಿಸೆಣಸಿದು ಬಾಳ್ವನೇ |
ಥರವೇನೊ ನಿನಗೆ ಯನ್ನೊಡನೆ ನೋಡೆನ್ನುತ್ತ ಹರಿಯೆಚ್ಚನಾರ್ಭಟಿಸೀ || ೨ ||

ಬಿಟ್ಟಬಾಣವ ಕಡಿದೂ | ರೋಷದಿ ಕಿರಿಗುಟ್ಟುತೆಂದನು ಮಲದೂ |
ಪೃಷ್ಠಿರೂಪದಿ ಬಂದು ಸಿಲುಕಿದೆಯನುತ ಕೈಥಟ್ಟಿ ನುಡಿದ ಖಳನೂ || ೩ ||

**ರಾಗ ಘಂ ಅಷ್ಟತಾಳ**

ಬಿಡೆಬಿಡೇ ಕೇಳ್ಕೆಳೆಲವೊ ಯಲವೊ ನಿನ್ನಾ |
ಕೆಡಹಿ ಕರುಳನೆ ಸೆಳೆದು ನುಂಗುವೆ ನಡೆನಡೆಯೊ ಹುಲುಹಂದಿಯೇ || ೧ ||

ಯೆನೆಂದೇನೆಂದೆ ಯಲೆಯಲೆ ಕುನ್ನಿಯೇ |
ನಾನು ನಿನ್ನನು ಕೊಲ್ಲದಿರಲಿಳೆ ಮಾನಿನಿಗೆ ಪತಿಯಪ್ಪೆನೇ || ೨ ||

ತೋರು ತೋರೆಲೊ ನಿನ್ನಯ ಭಾಷೆಯಾ |
ಹೀರಿನೆತ್ತರ ಕುಡಿಯದೀರ್ದಡೆ ಧೀರನಾ ಹಿರಣ್ಯಾಕ್ಷನೇ || ೩ ||

ನಿನ್ನ ವಿಕ್ರಮ ಕೆಲಸಕ್ಕೆ ಕಲಶವಿ |
ದೆನ್ನುತೆಡಗಾಲಿಂದ ಮೆಟ್ಟಿದ ಕೆನ್ನಿಗಾ ಖಳರಾಯನಾ || ೪ ||

ಚಂಡಖಂಡದ ರೌದ್ರಾವತಾರನ |
ಕಂಡು ಕಣ್ಮುಚ್ಚಿದನು ದಾನವ ಪುಂಡರೀಕಜನುಬ್ಬಿದಾ || ೫ ||

**ಭಾಮಿನಿ ಷಟ್ಪದಿ**

ಮೊಳಗಿದೌಸುರ ಭೇರಿ ಹೂವಿನ
ಮಳೆ ಸುರಿದು ಕೊಂಡಾಡಿ ಕಾಯ್ದ
ಇಳೆಯನೆಂದುಬ್ಬಿದರು ಹರುಷೋಗ್ಗಡನ ಘಾಡದಲೀ ||

ಬಲಜಭವ ಪುಷ್ಪಾಂಜಲಿಯಮಿಗೆ
ಸಲಿಸೆ ವೇದೋಕ್ತದಲಿ ನಗಧರ
ನಿಲಿಸಿದನು ಸುರವರರ ತತ್ತಸ್ಥಾನ ದೇಶದಲೀ || ೧ ||

**ಕಂದ**

ಭೂರಮಣಿಯ ಸಂತವಿಸುತ |
ವಾರಾಹಂಮಂದಸ್ಮಿತ ಮುಖನಾಗಿರೆ ರಂಭಾ |
ನಾರಿ ಪ್ರಮುಖ ಮರಿಯರಾ |
ವಾರಿರುಹಾಕ್ಷಂಗೆತ್ತಿದರಂದಾರತಿಯಂ || ೧ ||

**ಧವಳಾರ**

ಶ್ರೀ ಸರಸ್ವತಿ ಶಚಿದೇವೀ | ಭೂಸತಿ ಸಹಿತಲಿ ಠೀವೀ |
ಭಾವ ವಿಲಾಸದಿ ನಲಿನಲಿದಾಡೀ | ವಾಸುಕಿ ಶಯನನ ಬಲು ಕೊಂಡಾಡೀ |
ಮಾಸಿದ ಧರಣಿಗೆ ಭೂಷಣವಿತ್ತ ವಿಲಾಸಿ ವರಹ ಶ್ರೀ ಭೂಸುರ ಪ್ರಿಯಗೆ |
ಭಾಸುರದಾರಾತಿಯಾ | ಬೆಳಾಗೀರೇ || ೧ ||

ತರುಣಾರ್ಕ ಕೋಟಿ ಭಾಸುರಗೇ | ನಿರತ ಸಜ್ಜನರ ಪೋಷನಿಗೇ |
ದುರುಳ ನಿಶಾಟನ ಧುರದೊಳ್ ಗೆಲಿದೂ | ಸುರರಿಗೆ ಸೌಖ್ಯೋತ್ಕರವನೆ ಬಲಿದೂ |
ಕರುಣಿಸಿ ಕಾಮಿತ ಪೊರೆದ ಸಚ್ಚಿನ್ಮಯ | ಸ್ಥಿರಮಕರಾಲಯ ಸಿರಿವಲ್ಲಭನಿಗೆ
ಕುರುಜಿನಾರಾತಿಯಾ ಬೆಳಾಗೀರೇ || ೨ ||

ನಾಶರಹಿತನಿಗೆ ಹಿತಗೇ | ಶೇಶಶಯನ ಧಾರ್ಮಿಕಗೇ | ಭಾಸುರಾಂಗಿಯರು ವಿಲಾಸಗಳಿಂದಾ |
ಸೇಸೆಯ ತಳಿವುತ ಬಂದು ಮುಂದುಮುಂದಾ | ತೋಷ
ಭರಿತ ಕಮಲಾಸನ ವಂದಿತ ಈಶವಿನುತ ವಿಶ್ವೇಶಗೆ ದಿವ್ಯ ಕು | ಶೇಶೆಯ ದಾರಾತಿಯಾ
ಬೆಳಾಗೀರೇ || ೩ ||

**ವಾರ್ಧಿಕ ಷಟ್ಪದಿ**

ವಿದುರ ಕೇಳ್ಳೈ ನಿಜಸ್ಥಿತಿಗೆ ಹರಿ ಸರಿದನೀ
ಮದ ಮುಖಾಗ್ರಜ ಸುತನ ಬಾಧಿಸಲ್ ನರಸಿಂಹ
ದದುಬುತಾಕಾರದಿಂ ಕೊಂದ ಹರಿಮರುಜನ್ಮ ದಶವದನ ಕುಂಭಕರ್ಣ ||
ಕದನಗಲಿಗಳ ರಾಮನಾಮದಿಂ ಮೂರನೆಯೊ

ಳದೊಚೈದ್ಯದಂತವಕ್ರರ ಕೃಷ್ಣ ರೂಪದಿಂ
ವಧಿಸಿ ಭೃತ್ಯರ್ಗೆ ನಿಜಪದವಿಯಂ ಕರುಣಿಸಿದನೇಂದಯಾಬ್ಧಿಯೊ ಶ್ರೀವರಾ || ೧ ||

**ಭಾಮಿನಿ ಷಟ್ಪದಿ**

ಚಿತ್ತಜನ ಪಿತ ನೀ ಸುಸತ್ಕಥೆ
ಯುತರವ ವಿದುರಂಗೆಯಾ ಮುನಿ
ಮೈತ್ರೆಯನು ಪೇಳ್ದದನು ಸಂಕ್ಷೇಪದಲಿ ಮನವಲಿದೂ ||
ಉತ್ತಮದ ಬಾಯಾರ ಗ್ರಾಮದ

ಜತ್ತಿ ಕೃಷ್ಣಯ್ಯಾಖ್ಯ ಸೂರಿವಿ
ಪ್ರೋತ್ತಮನ ಸುತನೀಶ್ವರನು ತಾ ರಚಿಸಿದೆನು ಬಿಡದೇ || ೧ ||

ಮಂಗಲಪದ

**ರಾಗ ಭೂ ಝಂಪೆತಾಳ**

ಈಶಾಯತೇ ಮಂಗಲಂ | ಭಕ್ತಪರಿ | ಪೋಷಾಯತೇ ಮಂಗಲಂ || ಪಲ್ಲವಿ ||

ಗಂಗಾಧರಾಯನತ ಸಂಗಾಯನ ವಸುಂದರಾಂಗಾಯ ವೃಷಭ ತುರಂಗಾಯತೇ |
ತುಂಗಾಯ ಜಗದಂತ ರಂಗಾಯ ದುಷ್ಟಮದ ಭಂಗಾಯ ಸ್ಫಟಿಕ ವರ್ನಂಗಾಯತೇ || ೧ ||

ಮೋದಾಯ ಗಿರಿಜಾ ವಿನೋದಾಯ ಡಮರುಗಸುನಾದಾಯ ಮುನಿಗಣಪ ಬೋಧಾಯತೇ|
ವೇದಾಂತ ರಂಗಾಯ ಸಾಧುಜನಸಂಗ ಸಂಮೋದಾಯ ವಿಜಯನುತ ಪಾದಾಯತೇ |
ಈಶಾ || ೨ ||

ಶ್ರೀಶ ಪ್ರಿಯಾಯ ಜಗದೀಶಾಯ ಅಂಧಕ ವಿನಾಶಾಯ ರಜತಾದ್ರಿ ವಾಸಾಯತೇ |
ಈಶಾಯ ಪನ್ನಗ ವಿಭೂಪಾಯ ಶರಣ ಜನ ಪೋಷಾಯ ಸದ್ಗುರು ವಿ | ಶ್ವೇಶಾಯತೇ ||
ಈಶಾಯತೇ ಮಂಗಲಂ || ೩ ||

# ವಾಮನ ಚರಿತ್ರೆ

ಪಾತ್ರಗಳು

| | |
|---|---|
| ದೇವೇಂದ್ರ | ಶುಕ್ರಾಚಾರ್ಯ |
| ಅಗ್ನಿ | ಅದಿತಿ |
| ವಾಯು | ಕಶ್ಯಪ |
| ಯಮ | ವಿಷ್ಣು |
| ಬೃಹಸ್ಪತಿ | ಲಕ್ಷ್ಮೀ |
| ಬಲಿಚಕ್ರವರ್ತಿ | ದೇವದೂತ |
| ವೃಷಪರ್ವ | ವಾಮನ |
| ಜಂಭ | ಚಿತ್ರಸೇನ |
| ಬ್ರಾಹ್ಮಣರು | ದಂಷ್ಟ್ರೋಜ್ವತಿ |
| ವಿಂದ್ಯಾವಳಿ | ವಿಪ್ರರು |
| ಸೌಭಾಗ್ಯಲಕ್ಷ್ಮಿ | |

ವಾಮನ ಚರಿತ್ರೆ

ವೃತ್ತ

ಸರ್ವಾತ್ಮಂತ್ರಿಗುಣಾಕರಂ ಮುರರಿಪುಂ | ವೈಕುಂಠವಾಸಂಹರಿಂ ||
ಸರ್ವಾನಂದಪಯೋನಿಧಿಂಶಿರಿವರಂ | ಲೋಕೇಶ್ವರಂಮಾಧವಂ ||
ಸರ್ವಾಭೀಷ್ಟಫಲಪ್ರದಂನಘಧರಂ | ಪಂಕೇಜಪತ್ರೇಕ್ಷಣಂ ||
ಸರ್ವ್ವೋಪದ್ರವನಾಶನಂಸುರವರಂ | ಧ್ಯಾಯಾಮಿಕಂಠೀರವಂ || ೧ ||

**ರಾಗ ನಾಟಿ ಝಂಪೆತಾಳ**

ಕರಿರಾಜಘನವಕ್ತ್ರ | ಸುರನಮಿತಾಹರಪುತ್ರಾ | ಶರಣುಕೋಮಲಗಾತ್ರಾ |
ಸರಸಿರುಹನೇತ್ರಾ || ಜಯ | ಜಯತೂ | ಜಯತೂ || ೧ ||

ಧೂಮಕೇತನೆನಿನ್ನಾ | ಪ್ರೇಮಾದಿಂದಲಿ ಭಜಿಪೆ | ಕಾಮಿತವನೊಲಿದೀಯೊ |
ಸ್ವಾಮಿವಿಘ್ನೇಶಾ || ಜಯ | ಜಯತೂ | ಜಯತೂ || ೨ ||

ಮೂಷೀಕಾರೂಢಗಣ | ಪೋಷರವಿಶಶಿಭಾಸಾ | ಕ್ಲೇಶಹರಕಮ್ಮರಡಿ |
ವಾಸಗಣಧೀಶಾ || ಜಯ | ಜಯತೂ | ಜಯತೂ || ೩ ||

**ಭಾಮಿನಿ**

ಚಂಡಮುಂಡಾಸುರನಿಷೂಧಿನಿ | ಚಂಡಿಕೆವಾರಾಹಿಭಗವತಿ |
ಭಂಡಮರ್ಧಿನಿ ಬ್ರಾಹ್ಮಿಮಹಿಷಾಂತಕಿಯೆ ಕೌಮಾರೀ ||
ಖಂಡಪರಶುಪ್ರಿಯೆ ಚತುರ್ದಶ | ಮಂಡಲಾಧಿಪೆತ್ರಿಪುರಸುಂದರಿ |
ಶುಂಡಲಾನನಜನನಿ ರಾಜೇಶ್ವರಿಯೆಮಾಂಪಾಹೀ || ೧ ||

**ದ್ವಿಪದಿ**

ಹರಿಹರಬ್ರಹ್ಮಾದಿಗಳಿಗೆವಂದಿಸುವೆ |
ಶಿರಿಗೌರಿವಾಗ್ದೇವಿಯರನು ಪೂಜಿಸುವೆ || ೧ ||

ಪರಮವೇದೌವ್ಯಾಸನಂಘ್ರಿಗಳಭಜಿಸೀ ||
ಅರಿತಂತೆ ಕೃತಿಮಾಳ್ಪೆ ವಿಬುಧರನುನುತಿಸೀ || ೨ ||

ಪರಮಭಾಗವತಾಖ್ಯಪೌರಾಣವನ್ನು ||
ವರಯುತಿರೆ ಶಕಮುನಿಪಗುತ್ತರಾಸುತನು || ೩ ||

ವಂದಿಸುತ ಬೆಸಗೊಂಡ ಹರಿಶರಣಬಲಿಯ |
ಬಂಧಿಸಿದ ಚಿನ್ಮಯನದ್ಯಾಕೆಂಬಪರಿಯ || ೪ ||

ಅರುಹಬೇಹುದೆನಲ್ಕೆ ಶುಕಮುನಿಪನಾಗ |
ಧರಣಿಪಗೆಪೇಳಿದನು ವಿವರದಿಂಬೇಗಾ || ೫ ||

**ರಾಗ ಸೌರಾಷ್ಟ್ರ – ತ್ರಿವುಡೆ ತಾಳ**

ಧರಣಿಪಾಲಕ ಕೇಳುಪೂರ್ವದಿ | ಸುರಪಮುಖ್ಯಾಮರರುದೈತ್ಯರು |
ಶರಧಿಮ ಥಿಸಿದ ಕಥೆಯನೊರದಿಹೆ ಸಾಂಗವಾಗಿ || ೧ ||

ಪರಮಪುರುಷನು ಖಳರನೊಂಚಿಸಿ | ಸುರರಿಗಿತ್ತಿರೆಸುಧೆಯತವಕದಿ |
ಧುರವೆಸಗೆಬಲಿಜಂಭ ಶಂಭರರೆಲ್ಲಕನಲಿ || ೨ ||

ದಿವಿಜರೊಳ್ಕಾರುಣ್ಯಭಾವದಿ | ಭವಭಯಾಂತಕ ಗಲಿದುದೈತ್ಯರ |
ತವಕದೊಳ್ ತ್ರೈಭುವನಪಾಲಕಪದವಿಯನ್ನು || ೩ ||

ಸ್ಥಿರಗೊಳಿಸಿವಾಸವಗೆತೋಷದಿ | ತೆರಳಿದನುವೈಕುಂಠಮಂದಿರ |
ವರಕೆ ಲಕ್ಷುಮೀವರನು ಪೇಳುವೆನೆಡದಕಥೆಯಾ || ೪ ||

**ರಾಗ ಭೈರವಿ ಝುಂಪೆತಾಳ**

ಇತ್ತಾನೋಲಗನಾಕಮಂದಿರದಿಶಚಿವರನು | ಮಿತ್ರಸುತಶಿಖಿಪವನ ವರುಣರೊಡಗೂಡಿ ||
ಚಿತ್ರಸೇನಾಜ್ಞೆಯೊಳ್ ಖೇಚರೋರುಗರುಡ | ಸಪ್ತಮರುದಷ್ಟವಸುರುದ್ರಕಿನ್ನರರು || ೧ ||

ಮೆರದಿರಲು ಸಭೆಯೊಳಗೆ | ಸುದತಿಯರುನಟಿಸುತಿರೆ | ಪರಿಪರಿಯೊಳುಪಚರಿಸಿ | ಸಕಲರನುಸುರಪ ||
ಮರುತಪಾವಕಮುಖ್ಯರೊಡನೆ ತನ್ನಾತ್ಮದೊಳ | ಗಿರುವಶೋಕಾತುರವನೆಂದನಾಕ್ಷಣದಿ || ೨ ||

ಶ್ರೋಣೀತಾಧೀಶನಹ | ಬಲಿಚಕ್ರವರ್ತಿಯೆನು | ಮಾನಾದಿಂದನುಸರಿಸಿ | ಜಂಭವೃಷಪರ್ವಾ ||
ದಾನವರುವಾತಾಪಿಮುರ ನರಕತಾರಕರು | ಗೋಣರಿಯಬೇಕೆನುತ ಪೀಡಿಸಿದರೆಮ್ಮ || ೩ ||

ದುಷ್ಟಶುಂಭನಿಶಂಭಚಂಡಹೇತಿಪ್ರಹೇತಿ | ಭ್ರಷ್ಟಶಂಬರಮಹಿಷ ಬಲವಿಪ್ರಚಿತ್ತಿ ||
ಅಷ್ಟಸೇನಾಪತಿಗಳೊಡನಬ್ಧಿಮಥನದಲಿ | ಕುಟ್ಟಿಹಳಚೆರಮೇಶ ಜಯವಿತ್ತನೆಮಗೆ || ೪ ||

ಸೃಷ್ಟಿಮೂರಕೆ ಶ್ರೇಷ್ಟನೆಂದೆನಗೆ ಶ್ರೀಹರಿಯು | ಕೊಟ್ಟನಧಿಕಾರವನು | ಮರುಕವಿದೆಮನದಿ ||
ದಿಟ್ಟಬಲಿಯಂದಿಗೆನ್ನನು ಜಯಸಿಕಳೆಯುವನೊ | ಪಟ್ಟದಧಿಕಾರ ಸುರಪುರದಸಂಪದವಾ || ೫ ||

**ರಾಗ ಕೇತಾರಗೌಳ, ಅಷ್ಟತಾಳ**

ಎಂದಾಮಾತನು ಕೇಳುತೆಂದ ವೈಶ್ಯಾನರ | ಸಿಂಧೂಶಯನನೆಮ್ಮಾನು |
ಛಂದಾದಿರಕ್ಷಿಸದಿಹನೆಚಿಂತೆಗಳ್ಯಾಕೆ | ಮುಂದಿನ್ಯೋಚನೆಸುರಪಾ || ೧ ||

ಧುರಪರಾಕ್ರಮಿ ವೃತ್ರನಿಂದಪಹೃತವಾದ | ಸುರರಸಂಪದವನೋಡೀ |
ಹರಿಯುಪ್ರೇರಿಸಿದಂತೆಗೈಸಿದ ಕುಲಿಶದಿ | ದುರುಳನಗೆಲಿದೆನೀನು || ೨ ||

ಮರುತನೆಂದನು ಹಿಂದೆದುರುಳಹಿರಣ್ಯಕ | ಧರೆಮೂರರೊಡಯನಾಗಿ |
ಸುರರಧಿಕಾರವಪೊಂದಿರೆ ನರಹರಿ | ಕರುಳುಗಿದನುಖಳನಾ || ೩ ||

ಅಂಥಪೌರುಷಬಲಿಚಕ್ರವರ್ತಿಯೊಳುಂಟೆ | ಚಿಂತಿಪುದ್ಯಾಕೆನೀನು |
ದಂತಿ ವಹನಕೇಳು ಮಧುರಿಪುನಮ್ಮನಿ | ರಂತರಸಲಹುವನು || ४ ||

ಮರುತ ಲಾಲಿಸುಮೂರುಭುವನಪಾಲಕನೆಂದು | ಕರವರನಗೆನರಿದೆ |
ದುರುಳವೈರೋಚನಿಯೊಳಗುಂಟುಪಾತಾಳ | ನರಲೋಕಧೊರೆತನವೂ || ೫ ||

ಸುರಲೋಕಮಾತ್ರಾವೆನ್ನೊಶವಿದೆ | ಬಲಿಗೀಗಪರಮಾಪ್ತಕಿಂಕರರು |
ದುರುಳಕಾಲಿಕನಿವಾತಕವಚಶೂರ | ತ್ರಿಂಶತಿಯರ್ಬುಧವೂ || ೬ ||

ಯಂದಿಗೆಬರುವರೊ ಸುರರಪಾಳಯವೆಲ್ಲ | ತಿಂದೂಜೀರ್ಣಿಪರೊ ಕಾಣೇ |
ಸಿಂಧೂಶಯನಗಿದಭಾರಿಭಾರಿಗು ದೂರ | ಲಂದವೆಪೇಳಿನೀವೂ || ೭ ||

**ರಾಗ ಸೌರಾಷ್ಟ್ರ, ಅಷ್ಟತಾಳ**

ಬಿಡುಬಿಡುಮಘವಾನೆನುತಾಲೆಮನೂ | ಕಡುಪಾಪಿಗಳನ್ನು ||
ಬಡಿದೂದಂಡಾದಿಂದನರಕಕಿಡಿಸಿ ಬಾಧಿಪೆನಾನೂ || ೧ ||

ಹರಿಯುಶರಧಿಯನ್ನು ಮಥಿಸಿ | ಬರಿಸಿಯಮೃತವನ್ನೂ ||
ಕರುಣಿಸಿಹನುಮರಣವುಂಟೆ | ಮರುಳಾದೇಯೊನೀನು || ೨ ||

ಹರುಷಾಶೋಕಾಸರ್ವರಿಂಗೇ | ನಿರುತಾವಿಹುದೂ ನೋಡೂ ||
ಕೊರತೇಬಂದಾಗದರಾಗೊಡವೆಸುರಪಾಧೈರ್ಯಮಾಡೂ || ೩ ||

**ಭಾಮಿನಿ**

ತರಣಿಜನನುಡಿಕೇಳಿ ತನ್ನಯ |
ಶಿರವನೊಲಿಯುತಸುರಪ ಬಲಿಯನು |
ತರಿಯಲೆತ್ನವನೆಸದು ಹಂಬಲಿಸುತ್ತಲಿರಲಾಗಾ ||
ಕರದಿದಂಡವಧರಿಸಿ ಧೌತಾಂ |
ಬರವನಳವಟ್ಟಲ್ಲಿಗೈತಹ |
ಗುರುವರೇಣ್ಯನಿಗೆರಗಿ ಸತ್ಕರಿಸುತ್ತ ಕುಳ್ಳಿರಿಸಿ || || ೧ ||

**ರಾಗ ಸೌರಾಷ್ಟ್ರ, ತ್ರಿವುಡೆ ತಾಳ**

ಗುರುವೆನೀನಿರದೀ ಸುಧರ್ಮವು | ಮೆರವದುಂಟೆನಿರ್ಮಲಾಂಬರ |
ತ್ವರದುಶಶಿಯನನ್ನುಡುಗಣಂಗಳೊಳೇನುಸ್ವಾರ್ಥಾ || ೧ ||

ವರದುನಾನಾ ತೆರದಯುಕ್ತಿಯ | ಸುರರಪಾಲಿಪಗುರುವೆಯನ್ನಯ |
ಪರಮಸಚಿವರ ಜಯಜಯನ್ನುತ | ಲೆರಗೆಸುರಪಾ || ೨ ||

ಎತ್ತುತಪ್ರೀತಿಯೆಲಿ ಕುಳ್ಳಿರಿ | ಸುತ್ತಲಾಂಗೀರಸನುಪೇಳ್ದನು |
ಸ್ವಸ್ತವೆತವಮನಕೆಸಂತತಪೇಳುಪೇಳ್ಳೈ || ೩ ||

ಯನಲುಕೈಮುಗಿದಾಗಶಕ್ರನು | ಮನದಸಂಶಯಪೇಳ್ವೆ ಕೇಳ್ಳೈ |
ಘನಬಲಾಢ್ಯನು ಬಲಿಯು ಮೆರದಿಹ | ಧರಣಿಯೊಳಗೇ || ೪ ||

ಉರಗನರ ಲೋಕದೊಳುಸರ್ವರು – ಚರಣಸೇವಕರಾವಿರೋಚನ |
ತರಳನಿಂಗತಿ ಹಿತರುಯನ್ನನು | ಕೇಳ್ವರ್‍ಯಾರೈ | | ೫ ||

ಕಾರಣಂಗಳದೇನುಕೀರ್ತಿಯು | ಕ್ರೂರನಾದರುತುಂಬಿಕೊಂಡಿದೆ |
ಮೂರುಲೋಕಾಧೀಶನೆನ್ನಯಬಾಳುವೆರ್ಥಾ || ೬ ||

**ರಾಗ ಬೇಗಡೆ, ಆದಿತಾಳ**

**(ಏನಿದೂ ನಿಮ್ಮಲ್ಲಿ ಸಂವಾದ ಎಂಬಂತೆ)**

ಸುರಪಕೇಳೈಬಲಿಯ ಸಂಪದವು | ಸತ್ಕೀರ್ತಿಯಂಬುದು |
ಮೆರವುದೊಂದೇಧರ್ಮಸದ್ಗುಣವು | ಶಿರಿಮನೋಹರನಿಂಗೆಭಕ್ತನು |
ಧರೆಯಮರಸುಪ್ರೀತನಾತನು | ಶರಣಪ್ರಹ್ಲಾದಂಗೆಪೌತ್ರನು |
ದುರುಳನಲ್ಲವನ್ಯಾಕೆನಿಂದಿಪೆ || ೧ ||

ವರವೆಕೇಳೈಧರ್ಮವನುಸರಿಸೀ | ಸೌಭಾಗ್ಯಲಕ್ಷ್ಮೀಯು |
ಸ್ಥಿರದಿನೆಲಸುವಳಯ್ಯ ಘನವೆನಿಸೀ | ಶಿರಿಯನನುವರ್ತಿಪುದು ಭೋಗವು |
ಬೆರದುಕೊಂಬುದು ಕಾಂತಿಯದರೊಳು | ನಿರುತವಾಗಿಯೆಕೀರ್ತಿ ಜಗದೊಳು |
ಮೆರವುದೈತೇಜದೊಳುಶಚಿವರ || ೨ ||

ಬಲಿಯುಸಂತತಬಿಡನು ಧರ್ಮವನು | ಕಾಮ್ಯಾರ್ಥವೆಲ್ಲವ |
ನೊಲಿದು ಯಾಚಕರಿಂಗೆ ಕೊಡುತಿಹನು | ನಿಳಯಕೈತಂದತಿಥಿಗಳನಿ |
ಶ್ಚಲಭಕ್ತಿಗಳಿಂದ ಪೂಜಿಸಿ | ಹಲವಿಧದ ಷಡ್ರಸದೊಳುಣಿಸುವ |
ನಿಳೆಯೊಳವನನು ಪೋಲ್ವರಿಲ್ಲೈ || ೩ ||

**ರಾಗ ಕೇತಾರಗೌಳ, ಝಂಪೆ**

ಪರರಶಿರಿಗಾಗಿ ನೀನು | ದುಃಖಿಪುದು | ಥರವಲ್ಲ ಪೇಳ್ವೆನಾನು |
ಸುರರಾಜಸೈರಿಸೆನುತಾ | ಪೇಳೆಶಚಿ | ವರನೆಂದನಾಗನಗುತಾ || ೧ ||

ಗುರುವೆ ಧರ್ಮವೆಶ್ರೇಷ್ಟವು | ಸಾರಿಹುದು | ವರಶಾಸ್ತ್ರ ಶ್ರುತಿಸಾರವು |
ಅರಿಯದಾತನಗುಣವನು | ನಿನ್ನೊಡನೆ | ವರದೆನಾನೀಪರಿಯೆನೂ || ೨ ||

ಹರುಷದೊಳಗಿಹುದೆನ್ನುತಾ | ಸುರಪನಿಂ | ಗರುಹಿಗುರುವರನೇಳುತಾ |
ತೆರಳೆ ಗೃಹಕತಿವೇಗದಿ | ಸುರರಾಜ | ನರಿತಾಗತನ್ನಮನದಿ || ೩ ||

ವರುಣ ಮಾರುತವನಲರೂ | ವಟುರೂಪ | ಧರಿಸಿಬನ್ನಿರಿಪ್ರೌಢರೂ |
ಪರಮ ಭೂಸುರನಾಪೆನು | ಬಲಿಯಡೆಗೆ | ತೆರಳಿಪೋಗುವದೆಂದನೂ || ೪ ||

ಅಸ್ತೆನುತದಿಕ್ಪಾಲರೂ | ರೂಪನ್ಯ | ವೆತ್ತಿತೋಷದಿಪೊರಟರೂ |
ವೃತ್ತ ವೈರಿಯುಕಪಟದೀ | ವಿಬುಧನಾಗುತ್ತಬರ | ಲತಿತ್ವರ್‍ಯದಿ || ೫ ||

**ಭಾಮಿನಿ**

ಧರಣಿಪತಿ ಕೇಳಿತ್ತಶ್ರೋಣಿತ |
ಪುರದಧಿಪಬಲಿಚಕ್ರವರ್ತಿಯು |
ತರಣಿಯುದಯದಿ ಮಜ್ಜನಾದಿಗಳನ್ನು ವಿರಚಿಸುತಾ ||
ಹರಿಯನರ್ಚಿಸಿ ದಿವ್ಯತೀರ್ಥವ |
ಪರಮಭಕ್ತಿಗಳಿಂದ ಕೊಳುತಲೆ |
ಹರುಷದಿಂದೋಲಗಕೆ ಬಂದರಿತಾಗತನ್ನೊಳಗೆ || ೧ ||

**ರಾಗ ಕೇತಾರಗೌಳ, ಅಷ್ಟತಾಳ**

ಶರಧಿಮಥನದೊಳು ಧುರಗೈಯ್ಯೆ ವಿಜಯವು | ಸುರಪಗಾದುದೆ ಭಲರೆ |
ಸುರತರುತುರಗವೈರಾವತಸುಧೆಗಳ | ದುರುಳನೊಂಚಿಸಿಕೊಂಡನೆ || ೧ ||

ವಾಸುದೇವನದಯದಿಂದಾಗಲಿಂದ್ರಗೆ | ಲೇಸಾದುದಲ್ಲದಿರೆ |
ಮೋಸಕಾರನಕಂಠವರಿಯುತ್ತಲೀರ್ದರು | ರೋಷಾದಿಖಳರಾಯರೂ || ೨ ||

ಬಡವಾನೆಜಂಭನುವೃಷಪರ್ವಮಹಿಷನು | ದಡಿಗತಾರಕಬಲನೂ |
ವಡನಿವರೊಂಚಿಸಿಗೆಲಿಸಿದನಿಂದ್ರನು | ವಡಯಲಕ್ಷ್ಮೀಕಾಂತನೂ || ೩ ||

ಹರಿಗೆನಾಕಿಂಕರಮರವಾನೆ ಯನ್ನನು | ಧುರದೊಳಿಂದ್ರನತರಿದೂ |
ಸುರಪುರವನುಶಳಕೊಂಬೆಪೌರುಷದಿಂದ | ಮೆರವೆಮೂಲೋಕದಲ್ಲೀ || ೪ ||

**ವಾರ್ಧಿಕ**

ಪರಿಕಿಸುತಲಾದೈತ್ಯಸಭೆಯ ಸಂತೋಷದಿಂ |
ದರರೆ ವಾತಾಪಿಪಾಲೋಮನಿಲ್ವಲಜಂಭ |

ನರಕವೃಷಪರ್ವ ಧೂಮ್ರಾಕ್ಷತಾರಕ ಮುಖ್ಯ | ಸಚಿವರಿರದಿರೆಕರಸುತಾ |
ಹರುಷದಿಂಕುಳ್ಳಿರಿಸುತವರೊಡನೆಪೇಳಿದಂ |
ನಿರುಕಿಸುತಸಮಯಸಂದರ್ಭದೊಳ್ಸುಮನಸರ |
ತರಿದುಸ್ವರ್ಗವನಾಳಲೆಣಿಸಿರ್ಪೆನಿಮ್ಮಿರವ ನರುಹಿರೆನೆವೃಷಪರ್ವನು || ೧ ||

**ರಾಗ ಮಾರವಿ – ಏಕತಾಳ**

ಕೊಡುಕೊಡುನೇಮವವೆನಗೀಕ್ಷಣಸುರ | ರೊಡಯನಶರೆವಿಡಿದು ||
ಸಡಗರದೊಳಿನಿನಗೊಪ್ಪಿಸದಿರೆನಾ | ದಡಿಗನೆವೃಷಪರ್ವಾ || ೧ ||

ತರಣಿಜಶಿರವನ್ನರಿವೆನುವಹ್ನಿಯ | ನುರುಳಿವೆಮಾರುತನ ||
ಕೊರವೆನಖಡುಗದಿ ನಿರುತಿಕುಬೇರರ | ನಿರಿಸೆನುಜೀವದಲಿ || ೨ ||

ಸುರಸತಿಯರ ನಿಮ್ಮರಸಿ ವಿಂಧ್ಯಾವಳಿಚರಣಸೇವಿಪತೆರದಿ ||
ತ್ವರಿತದಿಗೈಸುವೆನೆನುತಿರೆ ಜಂಭನು | ಯರಗುತಲಿಂತೆಂದಾ || ೩ ||

**ರಾಗ ಘಂಟಾರವ, ಏಕತಾಳ**
**(ತಾಳಿ ಪರ್ವತಕಲ್ಮರಂಗಳನೆಲ್ಲ ಎಂಬಂತೆ)**

ಪಾಲಿಸಪ್ಪಣೆ ಸುರರಪಾಳ್ಯವನಾನು | ಶೀಳಿಬಿಸುಡದೆಬರಲು ಜಂಭನೆ |
ಶೂಲಿಗಂಜೆನು ಸಮರದಿ || ೧ ||

ಕ್ರೂರಮಾಯ ಜರ್ಝರಿಯಾದ ದಳ್ಳುರಿ | ದೋರಿಭಸ್ಮೀಕೃತವಗೈಯ್ಯುವೆ |
ಭಾರಿಸಿಡಿಲಾಗೆರಗುವೆ || ೨ ||

ಹಿಂದೆವಾರುಧಿಮಥನದಿನಿನ್ನನು | ಕೊಂದುಕಳೆದರು ಶುಕ್ರನಿರದಿರೆ |
ಸಂದಿತಂದಿಗೆಭೋಗವು || ೩ ||

**ಭಾಮಿನಿ**

ತಾಳಿರೈವೃಷಪರ್ವಜಂಭರೆ |
ಕಾಲಭೇದವನರಿತು ದಿವಿಜರ |
ಪಾಳಯವನುಗ್ಗೊತ್ತಿ ತ್ರಿದಿವವ | ನಾಳಲೆತ್ನಿಸುವೆ ||
ಶೂಲಿಸನ್ನಿಭಭಟರು ನೀವೆಂದೋಲಗವ |
ಬೀಳ್ಕೊಟ್ಟು ಮಜ್ಜನಖೇಲದಿಂದೇಳುತಿರೆ |
ಶಚಿವರನೊಟುಗಳೊಡಗೂಡಿ || ೧ ||

**ಕಂದಪದ್ಯ**

ಹರಿತಹಭೂಸುರವರರಂ |
ಪರಿಕಿಸುತಾಗವಿರೋಚನಿಭಕುತಿಯೊಳೆರಗುತ |
ಕರತಂದಾಸನವೇರಿಸಿ | ದರುಶನಮಾತ್ರದಿಹರಿದುದು ಕಿಲ್ಬಿಷವೆನುತಂ || ೧ ||

**ರಾಗ ಶಂಕರಾಭರಣ, ಆದಿತಾಳ**

**(ಕೇಳೂ ದಾನವಕುಲ ಎಂಬಂತೆ)**

ಧನ್ಯನಾದೆನುವಿಪ್ರ | ವರರೆ ನಾನೀಗಾ | ಸನ್ನುತಾಂಗರೆ ನಿಮ್ಮಾಗಮನದಿಭೇಗಾ || ಪಲ್ಲವಿ ||

ಪೂತವಾಯಿತುಗೃಹ | ಪಾದಧೂಸರದೀ | ಪೂತವಾಯಿತು ಶಿರ | ವೆರಗಿವಂದನದೀ || ೧ ||

ಪೂತನಾದೆನು ದಿವ್ಯ | ಮೂರ್ತಿದರ್ಶನದೀ | ಪೂತನಾದೆನು ವಿಪ್ರವರರ ಸ್ಪರ್ಶನದೀ || ೨ ||

ಚರಣದೊಳಜ ಹರಿ | ಯುರದೊಳಗಿಹನೂ | ಶಿರದೊಳಗೀಶನುನೆಲಸಿಕೊಂಡಿಹನೂ || ೩ ||

ಧರಣಿಸುರರೆ ನಿಮ್ಮಾಶ್ವಾಸವಾಶುಗನೂ | ಪರಮಜ್ಯೋತಿರ್ಮಯ | ಮುಖದಿಪಾವಕನೂ || ೪ ||

ತರಣಿಚಂದ್ರರೆ ನಿಮ್ಮನೇತ್ರದೊಳಿಹರೂ | ಸುರರುರೆನಿಮ್ಮಯ ಕೇಶದೊಳಿಹರೂ || ೫ ||

**ರಾಗ ಕಾಂಬೋಧಿ, ಝಂಪೆತಾಳ**

ಪರಿಪರಿಯಾಸ್ತುತಿಸುತಿಹ | ಧೊರೆಗೇಪೇಳಿದಿವಿಪ್ರ |
ದರಣಿಯೊಳುನಿನ್ನಂಥ | ಪ್ರಾಜ್ಞನೃಪರುಂಟೇ ||
ಕೊರತೆಯೊಂದಿದೆ ಯನ್ನ | ತರಳರಿವರೊಡಗೂಡಿ |
ಹರಿತಂದೆನಿನ್ನೊಡನೆಯಾಚಿಸುವಮನದೀ || ೧ ||

ಇಂತೆನಲೂಬಲಿಚಕ್ರ | ವರ್ತಿಪೇಳಿದಾಗ |
ಸಂತಸದೊಳ್ವಾಂಛಿತವ | ನೀವೆನಾಕಡೆಗೇ ||
ಸಂತೀಗಮಧ್ಯಾನ್ಹ ಕಾಲಮಾಗಿದೆ ತೃಷ್ಣೆ |
ಯಂತುಬಾಧಿಪುದೈಸೆ | ಬನ್ನಿಭೋಜನಕೇ || ೨ ||

ಧರಣಿಪಾಲನೆಯಮಗೆ | ಭೋಜ್ಯಾಪೇಕ್ಷೆಗಳಿಲ್ಲ |
ಕರುಣಾದಿಂವಾಂಛಿತವ | ನಿತ್ತರದುವಿಹಿತಾ ||
ಪರರನ್ನದೊಳ್ಮನವನಿರಿಸುವರು ನಾವಲ್ಲ |
ಬರಿದೆಪೀಡಿಸ ಬಾರದೆಂದನಾವಿಬುಧಾ || ೩ ||

**ಭಾಮಿನಿ**

ಧರಣಿಸುರಕೇಳನ್ನವೆಂಬುದೆ |
ಪರಮಸಾಕ್ಷಾದ್ಬ್ರಹ್ಮವೆನಿಪುದು |

ಸರುವಜೀವಾಧಾರವನ್ನದಿಜೀವನುದ್ಭವವು ||
ನಿರುತನೀವತಿಥಿಗಳು ನಿಮ್ಮನು |
ತ್ವರದುಭುಜಿಸಲು ಯನಗೆರೌರವ |
ನರಕವಲ್ಲದೆಗತಿಯಕಾಣೆನು ಬನ್ನಿದಯದಿಂದ || ೧ ||

**ರಾಗ ಕಾಂಬೋಧಿ ಆದಿತಾಳ**
**(ಏಸುದಿನಬೇಕೆನ್ನ ಪ್ರಾಣೇಶನಕಾಂಬುವದಕ್ಕೆ ಎಂಬಂತೆ)**

ಧರಣಿಪಾಲಾಕೇಳೊ ನೀನು | ಹರುಷದಿಂದವಾಂಛಿತವಾ |
ಕರುಣಿಸಾಲುಭೋಜ್ಯಾಕಿಂತ | ಪರಮತೃಪ್ತರಾಗೂತಿಹೆವು || ೧ ||

**ರಾಗ ಕೇತಾರಗೌಳ, ಅಷ್ಟತಾಳ**

ಥಟ್ಟಾನರುಹಬೇಕು ಭೂಸುರತವ ಮನ | ದಿಷ್ಟಾವನೀವೆ ನಾನೂ |
ಕೊಟ್ಟಾಭಾಷೆಗೆ ತಪ್ಪಾಲರಿಯೆನೆಂದೆಂದಿಗೂ | ಭ್ರಷ್ಟಾನಾಗೆನುಜಗದೀ || ೧ ||

**ರಾಗ ಕಾಂಬೋಧಿ, ಆದಿತಾಳ**

ಅದರಾಲಿಸಯ್ಯಾಧೊರೆಯೆ | ಮೋದದಿಂದನಿನ್ನೊಳೀರ್ಪ |
ಸಾಧುಧರ್ಮಗುಣವಾಭೇಗಾ | ಹ್ಲಾದದಿಂದಕೊಡು ಕೊಡೆನಗೇ || ೧ ||

**ರಾಗ ಕೇತಾರಗೌಳ, ಅಷ್ಟತಾಳ**

ಧನಧಾನ್ಯಕನಕಕ್ಷೇತ್ರವಸ್ತ್ರಾದಿಗ | ಳನು ಯಾಚಿಪರುದ್ವಿಜರೂ |
ಗುಣವಾನ್ಯಾಚಿಸಲೇನುಕಾರಣನಿಮ್ಮಯ | ಮನಕಿದುವಿಹಿತವಾಯ್ತೆ || ೧ ||

**ರಾಗ ಕಾಂಬೋದಿ ಆದಿತಾಳ**

ಯಾತಕೀವಿಚಾರಾನಿನಗೇ | ಪ್ರೀತಿಯಾದರೀಗಾಲೆನ್ನಾ |
ಮಾತಿನಂತೇ ಧರ್ಮಾಗುಣವಾ | ಭೂತಳೇಶಕರುಣೀಸುವದೂ || ೧ ||

**ರಾಗ ಕೇತಾರಗೌಳ, ಅಷ್ಟತಾಳ**

ಧೃಡದಿಭೂಸುರಗಿತ್ತವಚನ ತಪ್ಪುವದುಂಟೇ | ಕೊಡುವೆಸದ್ಧರ್ಮವೆಂದು |
ಮಡದಿವಿಂಧ್ಯಾವಳಿಯೊಳುಪೇಳ್ದ ಜಲವನ್ನು | ಕಡುವೇಗತಾರೆನುತಾ || ೧ ||

**ರಾಗ ಪಂತುವರಾಳಿ, ಏಕತಾಳ**
**(ಕಂತೂ ಪಿತನ ಕರೆಯೋ ಎಂಬಂತೆ)**

ಕೊಡುವೇಯಾಧರ್ಮವನ್ನು | ಮತ್ಕಾಂತನೆ | ಪಡದೀಪರತ್ನವನ್ನು || ಪಲ್ಲ ||
ಪಡವಿಯೊಳಗೆ ಜ್ಯೋತಿ | ಯಂತೇರಂಜಿಸಿ ಮುಂದೇ |
ಕೊಡು ವಾ ಸದ್ಗತಿಗಳನ್ನು | ಕೆಡಿಸಿಕೊಂಬೆ || ಅನುಪಲ್ಲ ||

ಓದಿಹೆನೃಪನೀತಿಯಾ | ಮತ್ತದರೊಳ | ಗಾದಿಯೊಳಿಹಭೋಧೆಯಾ |
ಮೇದಿನಿಪಾಲಕಕೊಡಲಿದರೊಳುಕಷ್ಟ | ಸಾಧಿಸಿಬರುತಿಹುದೂ |
ನಿನಗೆಮತ್ತೆ | ಭಾದಕವಾಗುವದೂ || ೧ ||

ಕನಕಾರತ್ನಗಳಲ್ಲದೇ | ಗೋಭೂದಾನ | ಮನೆಗ್ರಾಮಗಳ ಕೇಳದೇ
ಗುಣವಾನ್ಯಾಚಿಸಿದ ಬ್ರಾಹ್ಮಣನಾನಂಬವದುಂಟೇ | ಯನುಮಾನತೋರುತಿದೇ |
ಭಾಷೆಗೆತಪ್ಪ | ಲನುಮಾನವಿಲ್ಲಮುಂದೇ || ೨ ||

**ವಾರ್ಧಿಕ**

ವರಮನೋಹರೆಲಾಲಿಸೇನಾದಡೀದಿನಂ | ಪರಮವಿಪ್ರೋತ್ತುಮಗೆ ಕೊಟ್ಟ ಭಾಷೆಯನುಳಿದು |
ಮರೆಮಾಚಲೀಧರಣೀ | ಹೊರಳು ಶ್ರೀಹರಮನಕೆ | ಕೊರತೆಯಪ್ಪುದುಯನ್ನುತಾ ||
ಪರಮತುಲಸೀದಳವ ಪಿಡಿದು ಭೂವರನಾಗ | ತರುಣಿಯಳಕರದಿಂದ ಜಲವೆರಸಿ ತನ್ನೊಳಿಹ |
ಪರಮಸದ್ಧರ್ಮಪರಮಾತ್ಮಗರ್ಪಿತವೆನುತ ಭೂಸುರೋತ್ತಮಗಿತ್ತನೂ || ೧ ||

ಥಳಥಳಿಪದಿವ್ಯಪೀತಾಂಬರವನಳವಟ್ಟು | ಘಲಿರುಘಲಿರೆಂತೆಂಬ ಕಿರುಗೆಜ್ಜೆನಾದದಿಂ |
ದಿಳೆಯರಸನಂಗದಿಂ ಪೊರಮಟ್ಟುಪೋಗುತಿಹ ಚಲುವೆಯಳಕರವಿಡಿಯುತಾ ||
ಲಲಿತೆನೀನೆನ್ನತ್ವರದೆಲ್ಲಿಪೋಗುವೆಮಾತೆ | ಕಲಹಂಸಗಮನೆನೀಬಾರೆಂದು ಧರಣಿಪತಿ |
ನಳಿನಾಕ್ಷಿಯಳಕರವಪಿಡಿದು ನಿಲ್ಲಿಸಲಾಗ ಲತಿವಿರಾಗದೊಳಂದಳೂ || ೨ ||

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ನೆಲಸೆನಾ ಸೌಭಾಗ್ಯಲಕ್ಷ್ಮಿಯು | ಚಲಿಸುವೆನು ಸದ್ಧರ್ಮದೊಂದಿಗೆ |
ಚಲುವತೇಜವುಕೀರ್ತಿಭೋಗಗಳ್ಪೊರೆಯರೆನ್ನಾ || ೧ ||

ಅರಿಯದೇನಿನ್ನರಿಯುಸುರಪಗೆ | ಪರಮಧರ್ಮವನಿತ್ತಕಾರಣ |
ತ್ವರೆಯಲಾರೆವು ಜೇಷ್ಟಗುಣವನು | ಪೋಪೆವೀಗಾ || ೨ ||

ಕರವಬಿಡುನಾಪೋಪೆನೆನ್ನುತ | ಪರಮಭಾಗ್ಯದಲಕ್ಷ್ಮಿಪೊರಡಲು |
ತೆರಳೆಕೀರ್ತಿಯು ತೇಜಜೊತೆಯೆಲಿಸುರಪನೆಡೆಗೆ || ೩ ||

**ರಾಗ ಭೈರವಿ ಅಷ್ಟತಾಳ**

ಮಾಯಾಭೂಸುರನೆ ನೀನು | ಮೋಹಿಸಿ ಮೋಸೋ | ಪಾಯದುರಾತ್ಮಕನೂ |
ಆಯತವಾಗಿಹ ಧರ್ಮವಬೇಡಿಯ | ನ್ಯಾಯದೊಂಚಕಖೂಳನೂ || ೧ ||

ಆರಾತ್ಮಭವರಿವರೂ | ಪಾಮರನೀ | ನ್ಯಾರೆಂಬನಿಜವದರೂ |
ಕ್ರೂರಪಾಪಿಯೆ ಪೇಳದಿರೆಬಿಡೆಬಿಡೆನೆಂದು | ಧಾರುಣಿಗೆಳದುಕೇಳ್ದಾ || ೨ ||

ಸುರಪತಿಕೇಳೊ ನಾನು | ಖೂಳನೆ ನಿನ್ನ | ತರಿಯಾಲು ಬಂದಿಹೆನೂ |
ಮರುತಾದಿದಿಕ್ಪಾಲರಿವರೆಂದು ನಿಜರೂಪ | ಧರಿಸಿನಿಂದರು ಸರ್ವರೂ || ೩ ||

ಶೂರರಾದಡೆ ಧುರದೀ | ಜಯವಪೊಂದೀ | ಸಾರಿರಿ ಚಾತುರ್ಯದೀ |
ಚಾರುಧರ್ಮಾದಿಸದ್ಗುಣಗಳಕಳೆದಿಹ | ಚೋರರೆಂದನು ಭೂಪನೂ || ೪ ||

ದುಷ್ಟಾನಿಗ್ರಹಕೆನಾನು | ನಾನೋಪಾಯ | ವಿಟ್ಟು ಕಾದುವಶೂರನೂ |
ದಿಟ್ಟನಿಲ್ಲೆನುತಾಲೆಸುರಪತಿ ಘರ್ಜಿಸು | ತಟ್ಟಹಾಸವಗೈದನೂ || ೫ ||

ದಿತಿಯಾಗರ್ಭದಶಿಶುವಾ | ಮೋಸದಿಕೊದ | ಮತಿಗೇಡಿನಿನ್ನೊಲವಾ |
ಕ್ಷಿತಿಮೂರರೊಳುಖ್ಯಾತಿಯಾಗಿದೆ ಕಡುದುಷ್ಟ | ನತಿಪಾಪಿಗಳಹದಿರೋ || ೬ ||

**ರಾಗ ಶಂಕರಾಭರಣ, ಮಟ್ಟೆತಾಳ**

ಯನ್ನವಧಿಸುವಂಥತರಳ | ನನ್ನು ಪಡವೆನೆನುತ ಗರ್ಭ |
ವನ್ನು ಧರಿಸಿದಂಥವೈರಿ | ಶೀಳಿಬಿಸುಟೆನು || ೧ ||

ಪರಮವಂಚಕಾಗ್ರಗಣ್ಯ | ಶರಧಿಯಲ್ಲಿಜನಿಸಿದಂಥ |
ತುರಗವೃಕ್ಷವಮೃತಗಜವ ನೊದೆನೀನೆಲಾ || ೨ ||

ಸತ್ಯಸಂಧರಿಂಗೆದೇವ | ನರ್ಥಿಯಿಂದಲೊಲಿದು ಭಾಗ್ಯ |
ವಿತ್ತನದಕೆವಡಲವುರಿಗ | ಳೇಕೊಸುಮ್ಮನೆ || ೩ ||

ನೋಡುಗೌತುಮಾಖ್ಯನರಸಿ | ಕೂಡಿಋಷಿಯಶಾಪಗೊಂಡ |
ಖೋಡಿನೀನಸತ್ಯವಂತ | ಬಲ್ಲೆಬಲ್ಲೆನು || ೪ ||

ಅರಿಯೆನೀಹಿರಣ್ಯಕಾಖ್ಯ ತರುಣಿ ತರಳದ್ರೋಹವನ್ನು |
ವಿರಚಿಸಿರ್ದನವನಕುಲದಿ ಪುಟ್ಟಿದಧಮನು || ೫ ||

ತೊಲಗಿಸೀದೆಮುನಿಪನಸುವ | ಕುಲಿಶನಿರ್ಮಾಣಕಾಗಿ |
ಹೊಲಸುನಾಥದೆಲುವಪಿಡಿದೆ ಶಬರರಂದದಿ || ೬ ||

ಹರಿಯನೇಮದಿಂದಧೀಚಿ | ವರಮುನೀಶನಾಜ್ಞೆಪಡದು |
ಧರಿಸಿಕೊಂಡೆ ಕುಲಿಶವ್ರತಿಯ ತರಿಯಲಿಲ್ಲವೊ || ೭ ||

**ರಾಗ ಮಾರವಿ, ಏಕತಾಳ**

ದುರುಳಪುರಂದರಕೇಳೆಲೊ ಕೌಶಿಕ | ವಿರಚಿಪತಪಗಳನು ||
ಮರುಳೆಮೇನಕಿಯಿಂದಕೆಡಿಸೀಹೆ ಮುನಿದ್ರೋಹಿ | ಪರಮಪಾತಕಿನೀನೂ || ೧ ||

ಶೃತಿಗನುಚಿತಬಾ | ಹುಜರಿಗೆ ತಪಗಳ | ನತಿಛಲವಿಡಿದವನು ||
ವ್ರತಿಯಂದದೊಳಾಚರಿಸಿದಕೆಡಿಸಲು | ಸತಿಯನ್ನಟ್ಟಿದೆನು || ೨ ||

ದುಷ್ಟತನದೊಳೇನೆಸಗಿದರಾತನು | ಬಿಟ್ಟನೆತಪಮರುಳೆ ||
ಕಟ್ಟವನಿಂದ್ರನೆಂದಪಕೀರ್ತಿಗಳುರೆ | ಸೃಷ್ಟಿಯೊಳಾಗಿಹುದೂ || ೩ ||

**ಭಾಮಿನಿ**

ಮಾತಿನಿಂದೇನಹುದು ಖಳಪತಿ |
ಖ್ಯಾತನಾದಡೆ ಸಮರಮುಖದೊಳ |
ಗೀತತೂಕ್ಷಣಗೆಲಿದರೆನ್ನನುಶೂರನೆಂದೆನುವೆ ||
ಪ್ರೇತಗಣಕೌತಣವ ಗೈಯ್ಯುವ |
ರೀತಿಯನು ತೋರುವೆನುಭುವನಕೆ |
ಪಾತಕಿಯೆನಿಲ್ಲೆನುತಲಿಂದ್ರನು ಗಜರಿಘರ್ಜಿಸಿದಾ || ೧ ||

**ರಾಗ ಭೈರವಿ ಝಂಪೆತಾಳ**

ಖಿಡಗೆದರಿಬಲಿಚಕ್ರವರ್ತಿಪೇಳಿದನಾಗ | ಕಡುಪಾಪಿ ಬಂದೆನ್ನಗುಣವಾ ||
ವಡನೆವಂಚಿಸಿ ದರ್ಪದಿಂದನಿಂದಿಹೆ ನಿನ್ನ | ಬಿಡೆನುಜೀವದೊಳೆಂದುಭರದಿ || ೧ ||

ತ್ವರಿತದಿಂದಸಚಿವ ಜಂಭನೊಡನಿಂತೆಂದ | ಬರಿಸುಮಾರ್ಬಲಗಳೆಲ್ಲವನು ||
ತೆರಳಲೀಕ್ಷಣ ಕಾಲನೇಮಿಶುಂಭನಿಶುಂಭ | ಸುರಪುರದಸೂರೆಗೆಂದೆನುತಾ || ೨ ||

ಜೊತೆಯೊಳಗೆರಕ್ತಬೀಜಾಖ್ಯಧೂಮ್ರಾಕ್ಷಕರು | ಸಿತಲೋಮಮಾಲಿವಾತಾಪಿ ||
ಅತಿಬಲಾಢ್ಯಸುಮಾಲಿ | ಮಹಿಷದುಂದುಭಿನರಕ | ಶತದಂಷ್ಟ್ರರೊಡನೈದಲೀಗ || ೩ ||

ಶರಭನಿಲ್ವಲನೇಕ ದಂಷ್ಟ್ರಶಂಭರಕುಣಪ | ತೆರಳಲಂತಕರಗ್ನಿಪುರಕೆ ||
ಭರದಿಮುತ್ತಲಿಲಗ್ಗೆ | ನಿರುತಿವಾರುಣಿನಗರ | ಮುರತಾರಕಾಖ್ಯದಾನವರೂ || ೪ ||

ಅಸಿಲೋಮವಿಪ್ರಚಿತಿಚಂದ್ರಹಂತರುಭೇಗ | ಕುಶಲದಿಂದನಿಲಕೌಬೇರ ||
ವಸತಿಪಟ್ಟಣಸೂರೆಗೈಯ್ಯಲೋಸುಗ ಕಳುಹು | ಅಸುರರೆಲ್ಲರನೆಂದು ಬಲಿಯು || ೫ ||

ಕರದಿಚಾಪವಗೊಂಡುಝೇಗೈದುನಿಂದಿರಲು | ಪರಕಿಸುತಸುರಪಾಲನಾಗ ||
ನಿರುತಿಕೌಬೇರಮಾರುತರೊಡನೆ ಪೇಳಿದನು | ಕರದವರನಂತರಂಗದಲಿ || ೬ ||

**ರಾಗ ಸೌರಾಷ್ಟ್ರ, ತ್ರಿವುಡೆ**

ಕಡುದುರುಳಕರ್ಬುರರು ಯಮರಾವತಿಯು ತೇಜೋವತಿಯು ಶೈಮುನಿ |
ಯೊಡನೆಯಳಕಾವತಿಯು ರಕ್ಷಾವತಿಗೆತರುಬಿ || ೧ ||

ಮುತ್ತುವರುಪೋಗೀಗಲೊರುಣನೆ | ಸಪ್ತಮಾತೃಕೆ ವಿಶ್ವದೇವರ |
ಕೃತ್ತಿಕಾದಿಗಳಿಂದ ಪುರಗಳಸಲಹೊಬೇಗಾ || ೨ ||

ಮರುತಪೋಗೈಗರುಡಕಿನ್ನರ | ರುರಗಮರುತುಗಳಿಂದಲಂತಕ |
ಪುರವ ನಿನ್ನಯನಗರವೆರಡನು | ರಕ್ಷಿಸುವದು || ೩ ||

ತೆರಳುವೇಗಧನೇಶನಗ್ನಿಯಪುರಿಯು ಸತ್ಯಾವತಿಗಳೆರಡನು |
ದುರುಳರುಪಟಳಬಾರದಂದದಿ ಪೊರೆಯೊನೀನೂ || ೪ |

ನಿರುತಿ ನಿನ್ನಯ ನಗರಮತ್ತಾ | ಸುರಪುರವರಕ್ಷಿಪುದುವಿದ್ಯಾ |
ಧರರುಸುಮನಸರುದ್ರಗಣದೊಳು | ಪೋಗುಪೋಗೈ || ೫ ||

ಕಡುದುರುಳರಿವರನ್ನು ಮರ್ಧಿಸಿ | ಸಡಗರದಿನಾಬಹೆನುಪೋಗಿರಿ |
ನಡಿರಿನೀವೆಂದೆನುತ | ಕಳುಹಿದನಿಂದ್ರನವರಾ || ೬ ||

**ಭಾಮಿನಿ**

ಕೆರಳುತಲಿವೃಷಪರ್ವಧನುರ್ಘೋಂ ಕರಿಸುತಿತ್ತಲು |
ಮುಂದುವರಿಯುತ |
ಹರಿಯನಾದವಗ್ಯೆದುಮಾರಾಂತಿರಲುಪಾವಕನು ||
ಧುರಕೆಬಂದಿದಿರಾಗಿ ಶಕ್ತಿಯ |
ತಿರುಹಿತೂಗುತಲರರೆನಿನ್ನಯ |
ಕರಚಮತ್ಕೃತಿ ತೋರಿಸೆನ್ನಲು | ಪೇಳ್ದವೃಷಪರ್ವಾ || ೧ ||

**ರಾಗ ಭೈರವಿ ಏಕತಾಳ**

ಶರಧಿಯಮಥನದಧುರವಾ | ಜಯ | ಪಡದಿರುವನೆ ಬಾನಿನ್ನೊಲವಾ |
ಪರಿಕಿಪೆನೀಶರಮುಖದಿ | ಯಂ | ದರುಹುತಲೆಚ್ಚನುಭರದಿ || ೧ ||

ನಡುಮಾರ್ಗದಿಮುರಿದದನೂ | ಭೋ | ರಿಡುತಲೆ ವೈಶ್ವಾನರನೂ |
ಖಡಿದನುಚಾಪವನಾಗ | ಪ | ಲ್ಗಡಿಯುತಲೆಚ್ಚನುಬೇಗಾ || ೨ ||

ಯಲೆಲೇಶಿಖಿ ನೋಡಿದನೂ | ಝಳ | ಝಳಿಸುತಲಿಹಖಡ್ಗವನು |
ಕಲಿಯಾದರೆತಾಳೆನುತಾ | ತೂ ಗೊಲಿಯುತಲೆಸದಘರ್ಜಿಸುತಾ || ೩ ||

ಯಸಯುತಲೆಂಟಸ್ತ್ರವನು | ಕೂ | ರಸಿಯನುಮುರಿದಿಕ್ಕಿದನು |
ಅಸಮಪರಾಕ್ರಮಿಕೇಳೊ | ನಾ | ನೆಸದಿಹೆಶೂಲವತಾಳೊ || ೪ ||

ಶೂಲವತುಂಡಿಸುತಾಗ | ಕಂ | ಕಾಲಾಸ್ತ್ರವಬಿಡೆಬೇಗಾ |
ಜ್ವಾಲೆಯತೆರದೊಳಗುರಿದು | ಕ | ಪೋಲವ ಭೇದಿಸೆಕೊಂದೂ || ೫ ||

**ರಾಗ ಕೇದಾರಗೌಳ, ಝುಂಪೆತಾಳ**

ಯಕ್ಷಪತಿವೃಷಪರ್ವಮೂರ್ಛೆಯ | ನಾಕ್ಷಣವೆತಾಳುತ್ತಧರಣಿಗೆ |
ವೃಕ್ಷದಿಂ ಫಲವುದುರುವಂದದೊಳುರುಳೆಕಾಣುತಲಿ ||
ರಕ್ಷಪತಿಜಂಭಾಖ್ಯಕೋಪದೊ | ಳಕ್ಷಿಯೊಳುಖಿಡಿಗೆದರಿ ಸಮರಕೆ |
ದಕ್ಷಮಥನನತೆರದಿ ಘರ್ಜಿಸಿಬರಲಿಕಂತಕನು || ೧ ||

**ರಾಗ ಮಾರವಿ ಏಕತಾಳ**

ಯಲೆಯಲೆ ಜಂಭಾಸುರನೆನ್ನೊಳು ಮಾ | ರ್ಮಲಯುತ ವಿಜಯವನು ||
ಘಳಿಸಲು ಶೂರನೆಂದೆಂಬೆನು ಪೌರುಷ | ದೊಲವನುತೋರೆಂದಾ || ೧ ||

ದಂಡಧರನೆಕೇಳೆಲವೊ ಶಿರವನು | ಖಂಡಿಪೆನರಕ್ಷಣದಿ ||
ಚಂಡ ಪರಾಕ್ರಮಿತಾಳೆನುತಲೆ ಮುಂ | ಕೊಂಡುರೆಶರವೆಸದಾ || ೨ ||

ಮಿಹಿರಾತ್ಮ ಜನದಖಂಡಿಸಿವೇಗದಿ | ಗಹಗಹಿಸುತಲಾಗ ||
ಮಹಶೂರಾಗ್ರಣಿಶರವೆಲ್ಲಿದೆ ಯ | ನ್ನಹಿತನೆನೋಡೀಗಾ || ೩ ||

ಪರಿಘಾಯುಧವನುತಿರುಹುತಜಂಭನು | ಕೆರಳುತಲಂತಕನಾ ||
ಶಿರಕೆರಗಲುಕಸಿದದರೊಳುಬಡಿಯುತ | ಉರುಳಿಸಿದನುಕ್ಷಣದಿ || ೪ ||

**ರಾಗ ಕೇತಾರಗೌಳ, ಝುಂಪೆತಾಳ**

ತಳೆಯೆಜಂಭನುಮೂರ್ಛೆಯ | ಕಂಡಾಗ | ಬಲಿಯುದಿವಿಜರವಿತತಿಯಾ |
ಕೊಲುವೆನೆನ್ನುತಬರುತಿದೆ | ಸುರಪಮಾ | ರ್ಮಲಯೆಶ್ರೋಣಿತಪುರಧೊರೆ || ೧ ||

ದುರುಳನಿಂದ್ರನೆರಣದಲಿ | ಜಯವಿಲ್ಲ | ತೆರಳುಸಾತ್ವಿಕ ಜನರಲಿ |
ವಿರಚಿಸಿದ ದುಷ್ಕೃತ್ಯವು | ನಿನ್ನ | ಕೊರಳಿರಿಯುವದು ಕೇಳ್ಸಹಜವು || ೨ ||

ಸತ್ಯವಂತರುದಿವಿಜರು | ಈರೇಳುಪೃಥ್ವಿಯೊಳ್ಪೊಗಳುತಿಹರೂ |
ವಿಸ್ತರಿಸುದುಷ್ಕಾರ್ಯವಾ | ಗೈದುವನು | ಧೂರ್ತನೀಪೇಳೆಲ್ಲವಾ || ೩ ||

**ರಾಗ ಶಂಕರಾಭರಣ, ಮಟ್ಟೆತಾಳ**

ಗುರುವರೇಣ್ಯನಾದ ವಿಶ್ವ ರೂಪನೆಂಬವಿಪ್ರನನ್ನು |
ದುರುಳನೀನುಕೊಂದೆಯಾಕೆ | ಬ್ರಹ್ಮಘಾತಕಿ || ೧ ||

ದ್ವೇಷಿಯಾದಸುರರುಗಳಿಗೆ | ತೋಷದಿಂದಹವಿಯ ಕೊಡುವ |
ಭೂಸುರಾಧಮನಕೊಂದೆ | ದೋಷವೇನಿದೆ || ೨ ||

ದುರುಳನಾದಡಾಗಲವನು | ಗುರುವುನಿನಗೆಕೊಂದುಕಳದೆ |
ತ್ವರದುಪೋಪುದುಂಟೆಬ್ರಹ್ಮ | ಹತ್ಯ ಸುರಪನೆ || ೩ ||

ದುರುಳರನ್ನು ವಿಪ್ರರೆಂದು | ಕರಯಲಾಗದವನಕೊಂದ |
ದುರಿತಸುದತಿತರುಶಿಲಾದಿ | ಜಲಕೆ ಕೊಟ್ಟೆನೂ || ४ ||

ಯನ್ನತಾತವರಹಿರಣ್ಯ | ಕಸ್ಯಪಾಖ್ಯನರಸಿಯೆನ್ನು |
ಮುನ್ನನೀನೊದದ್ರೋಹಿ | ಪತಿವ್ರತೇಯಳಾ || ೫ ||

**ರಾಗ ಭೈರವಿ, ಅಷ್ಟತಾಳ**

ದುಷ್ಟಾನಿನ್ನಯತಾತನು | ದುಷ್ಕಾಮ್ಯವ | ನಿಟ್ಟುತಪವಗೈದನು |
ಕೆಟ್ಟಾಯೋಚನೆಗಳ ತೊಲಗೀಸಲೀಕೆಯ | ಥಟ್ಟಾನೊದೆನುಕೇಳೆಲೊ || ೧ ||

ಭೂಸುರಾನ್ವಯವೃತ್ರಾನ | ಕೊಂದಿಹಕ್ರೂರ | ದೋಷಿನೀನೊಂಚಕನಾ |
ದೇಶವತೆಜಿಸುತ್ತಾ | ಸರಸಿಯೊಳಡಗೀಸಿ | ಘಾಸಿಮಾಡಿತು ಪಾಪವು || ೨ ||

ಸನಕಸನಂದನರಾ | ಶಾಪದಿದುಷ್ಟಾ | ಧನುಜಾರಾಗುದಿಸಿರ್ದರಾ |
ನೆನಸೀಕೊ ನಿನ್ನಾಯ | ಪ್ರಪಿತಾಮಹರನ್ನು | ಕೆಣಕಾಬೇಡೆಂದನಿಂದ್ರಾ || ೩ ||

ಧರಿಸಿಭೂಸುರರೂಪವಾ | ಯಮ್ಮಯಪುರ | ವರಕೆ ಬಂದೆಯೊಮಘವಾ |
ತಿರಿದಪಹರಿಸಿದೆ ಪಿತವಿರೋಚನಗುಳ್ಳ | ಪರಮಾಯುರ್ದಾಯವನ್ನೂ || ४ ||

ದುರುಳಹಿರಣ್ಯಾಕ್ಷನು | ಜೀವಕೆಮೂಲ | ಧರೆಯಾಕೊಂಡೊದಿಹನು |
ಪರಮಾತ್ಮದಯದಿಂದತಂದಿಳುಹಿದಕೇಳೊ | ಪರಮಪಾವನಕುಲವೂ || ೫ ||

ಮಾತಾಡದಿರುಸಾರಿದೆ | ನಪುಂಸಕ | ನ್ಯಾತಕೊರಣಗೈಯ್ಯಾದೆ |
ಖ್ಯಾತಶುಂಭಗೆಸೋತು ವನವಾಸಕೈದಿಹ | ರೀತಿಯಬಲ್ಲೆ ನಾನು || ೬ ||

ವಾರುಧಿಮಥನದೊಳು | ವಜ್ರಕಪ್ರಾಣಾ | ಧಾರವಿತ್ತವೆನೆಕೇಳೂ |
ಪಾರಮಾರ್ಥದಿ ಶುಕ್ರ ಜೀವಗೈದಿಹನ್ಯಾಕೆ | ಕ್ರೂರಪಾಪಿಯೆನಿನ್ನನೂ || ೭ ||

**ರಾಗ ಭೈರವಿ ಏಕತಾಳ**

ಘುಡುಘುಡಿಸುತಬಲಿಯಾಗಾ | ಹೆದೆ | ಗಿಡುತಲೆಶರಮಂಬೇಗಾ |
ಬಿಡಲದಮುಕ್ಕಡಿಮಾಡಿ | ಸುರ | ರೊಡಯನುನಿಂದಿರೆನೋಡಿ || ೧ ||

ಕೆರಳುತಬಲಿಯಾಕ್ಷಣದಿ | ಶಿರ | ಕೆರಗೆಕರೋರದಶರದಿ |
ಸುರಪತಿಮೂರ್ಛೆಯತಳೆದು | ಕ | ಣ್ದೆರದಾಕ್ಷಣಮೇಲ್ವಾದು || ೨ ||

ತಿರುಹುತಲೊಜ್ರವನಾಗ | ಪಣೆ | ಗೆರಗಲುಕಂಪಿಸಿಬೇಗಾ |
ಉರುಳಿದ ಬಲಿಯಂಕಂಡೂ | ಬಲ | ತೆರಳಿತುಭೀತಿಯಗೊಂಡೂ || ೩ ||

**ವಾರ್ಧಿಕ್ಯ**

ಧರೆಯೊಳಗೆಮೂರ್ಛೆಯಂತಳೆದುಬಿದ್ದಿಹಬಲಿಯ |
ಪರಿಕಿಸುತಲಾ ಸುರಪನೆಂದನೆಲೆಪಾತಕಿಯೆ |
ವರವನಿತ್ತಿಹನಿನ್ನ ಕುಲಕೆಮೃತಿಯಿಲ್ಲೆನುತ | ನರಹರಿಯುಕಾರುಣ್ಯದಿ ||
ತರೆನುಭಂಗವನದಕೆ ಖಡುಮೂರ್ಖನೆಂದಾಗ |
ಸುರಪನೆಡಗಾಲಿನೊಳಗೊದ್ದು ಮೂದಲಿಸುತ್ತಾ |
ತರಣಿಜಾಗ್ನಿಗಳೊಡನೆ ತೆರಳಿಪೊಕ್ಕನುಪುರಿಯ ದೇವದುಂದುಭಿಮೊಳಗಿತು || ೧ ||

**ಭಾಮಿನಿ**

ಮರುತಧನಪಾದಿಗಳು ತಮ್ಮಯ |
ಪುರಕೆಮುತ್ತಿಹ ಖಳರನೋಡಿಸಿ |
ಹರುಷಮಯದೊಸಗೆಯನು ವಾಸವಗಾಗಬಿನ್ನೈಸೆ ||
ಪರಮ ಧರ್ಮವಸೆಳೆದೆಬಲಿಯೊಳು |
ದುರುಳಭಯಮಿಲ್ಲೆಂದು ಸುರಪತಿ |
ಹರುಷದಿಂದಿರಲಿತ್ತ ವೈರೋಚನಿಯುಚೇತರಿಸಿ || ೧ ||

**ಕಂದಪದ್ಯ**

ಶಿರವನ್ನೆಗಹುತಮೆಲ್ಲನೆ | ತೆರಳಿದನೆಲ್ಲಿಗೆ ಸುರಪತಿಯನ್ನುತನಾಲ್ದೆಸಿ |
ಪರಿಕಿಸಿಕಾಣದೆ ಮನದೊ | ಳ್ಕರಗುತೆನಾನಾತೆರದಿಂಚಿಂತಿಸುತಾಗಳ್ || ೧ ||

**ರಾಗ ನೀಲಾಂಬ್ರಿ ಏಕತಾಳ**
**(ಇಕ್ಷೂಚಾಪಾ ಎಂಬಂತೆ)**

ಹರಿಗೋವಿಂದಾ | ಪರಮಾನಂದಾ | ದುರಿತಾರಿಮುಕುಂದಾ ||
ಕರಣಾನೆನ್ನಾ | ಮರತೇದೇವಾ | ಸರುವಾಂತರ್ಯಾಜೀವಾ || ೧ ||

ವಾಸವಾಸ | ದ್ಧರ್ಮಾವನ್ನೂ | ಮೋಸಾದಿಂದಾಸೆಳದೂ ||
ಘಾಸೀಗೈದಾ | ಧುರದೊಳನ್ನಾ || ತೋಷಾವೇಶ್ರೀಹರಿಯೇ || ೨ ||

ಯಾತಾಕೆನಾ | ನಿಂದೇಧುರಕೇ | ಖ್ಯಾತೀಪೋಯಿತಕಟಾ ||
ಹೂತಾಲತೆಯಾ | ಮೂಲಾವರಿದಾ | ರೀತೀಯಾಯ್ತೇಯನಗೇ || ೩ ||

**ಭಾಮಿನಿ**

ಎಂದುಚಿಂತಾಂಬುಧಿಯೊಳಾಳುತ |
ಕುಂದಿಮೌನದೊಳಿರಲು ಶುಕ್ರನು |
ಬಂದುದನುಪರಿಕಿಸುತಲೊಂದಿಸೆ ಪರಸುತಾಕ್ಷಣದೀ ||
ಮಂದಹಾಸ ಮುಖಾಬ್ಜವೆಂಬುದು |
ಕಂದಿಚಿಂತಾತಪದಿಸೊರಗಿದ |
ವಂದವರುಹೆನಲೆಂದವೈರೋಚನಿಯು ದುಗುಡದಲಿ || ೧ ||

**ಸಾಂಗತ್ಯ**

ಲಾಲೀಸೂಗುರುವರೇಣ್ಯನೆ ಯನ್ನಾದುಗುಡಾವ | ಪೇಳಾಲಾರೆನು ನಿನ್ನಾಮುಂದೇ ||
ಖೂಳಾಪುರಂಧರ ಕಪಟಾಭೂಸುರನಾಗಿ | ಕೇಳಿದಾ ಸದ್ಧರ್ಮಗುಣವಾ || ೧ ||

ಕೊಟ್ಟೆಯಾಚಕನೆಂದೂ ಸೌಭಾಗ್ಯಾದಿಗಳೆಲ್ಲ | ಬಿಟ್ಟೆನ್ನಾತೆರಳಿರಲಾಗಾ ||
ದುಷ್ಟಾನೊಡನೆ ಕೊಳುಗುಳವಾಯ್ತು ಸೋತಿಹೆ | ಕೆಟ್ಟಾಪಕೀರ್ತಿಮೂಜಗದಿ || ೨ ||

ವಸುಧೆಭಾರಕನಾನು | ಬಾಳಿರ್ದರೇನೆನ | ಉಶನಾಪೇಳಿದ ಬಿಡುವೆಥೆಯಾ ||
ಅಸಮವಿಕ್ರಮಿ ವಿಶ್ವಜಿತುಮಖವನುಗೈದು | ಪಸರೀಸುಕೀರ್ತಿಸಂಪದವಾ || ೩ ||

ದೊರೆರಾಯಾಲಾಲಿಸೀಕ್ರತುವಾಗೈದರೆ ವಿಶ್ವ | ಧರೇಯಾದಿಗ್ವಿಜಯಾವಪಡವೇ ||
ಸುರಪುರ ಸಕಲಸಂಪದವಾಪೊಂದುವೆ ಸೋಪ | ಸ್ಕರವಾಸಂಗ್ರಹಿಸೀಗಪೇಳ್ವೆ || ೪ ||

**ವಾರ್ಧಿಕ್ಯ**

ಕ್ರೋಶಪಂಚಕಶಾಲೆಯಂಗೈಸು ತನ್ಮಧ್ಯ |
ಭಾಸುರಾಂಗದೊಳಷ್ಟಕೋಣ ಕುಂಡತ್ರಯವ |
ತೋಷದಿಂದಲೆರಚಿಸು ಕುಶಸಮಿಧ ಚರುಪುರೋಡಾಶಮಂಗಲದ್ರವ್ಯದೀ ||
ಭೂಸುರೋತ್ತಮರಿಂದ ವಿಧ್ಯುಕ್ತಮಾಗಿಕ್ರತು | ವೀಸಕಲಜಗವ ತನ್ನಾತ್ಮದೊಳಗಿರಿಸಿರ್ಪ |
ವಾಸುದೇವ ಪ್ರೀತನಾಗುವಂದದಿ ನಾನು ಮಖವಗೈಸುವೆನೆಂದನೂ || ೧ ||

**ಭಾಮಿನಿ**

ಹರುಷದಿಂದ ವಿರೋಚನಾಖ್ಯನ |
ತರಳ ಶುಕ್ರನಮತದಿ ಮಯನನು |
ಕರಸುತೆಮುನೆಯತಡಿಯಶಾಲೆಯ ರಚಿಸಿಸಂಭ್ರಮದೀ ||
ಚರುಪುರೋಡಾಶಾದಿ ಸಂಗ್ರಹ | ವೆರಸಿರುತ್ವಿಜವರರನೇಮಿಸಿ |
ಗುರುಮುಖೋದಿತದಂತೆ ದೀಕ್ಷಿತನಾಗಿಮಂಡಿಸಲು || ೧ ||

**ರಾಗ ಕಾಂಬೋದಿ ಝಂಪೆತಾಳ**

ವಸುಧೆಪತಿ ಬಲಿಚಕ್ರ | ವರ್ತೀದೀಕ್ಷಿತನಾಗ |
ಉಶನಾವೇಗದೊಳರಣಿ | ಮುಖದೊಳಗ್ನಿಯನೂ ||
ಕುಶಲದಿಂದಲೆಸ್ರುಜಿಸಿ | ಹೋಮಿಸಲುಕುಂಡದಿಂ |
ದೆಸದುಬಂದನು ದೇವಪುರುಷನೋರುವನು || ೧ ||

ಸುರಪನುಚ್ಚೈಶ್ರವವಪೋಲ್ವ ತುರಗವಕಟ್ಟಿ |
ವರಕಾಂಚನದದಿವ್ಯ | ರಥವನುರೆಕೊಂಡು ||
ಕರದಿಮಿಸುನಿಯಚಾಪಖಡ್ಗಶರಕವಚವನು |
ಧರಿಸಿಬಲಿಯೊಡನಿತ್ತು ಪೇಳ್ದಸಂತಸದೀ || ೨ ||

ಧೊರೆಯೇಕೇಳ್ ಸ್ಯಂಧನವ | ಚಾಪಖಡ್ಗಾದಿಗಳ |
ಹರುಷದಿಂದಲಿ ನಿನಗೆ | ಕೊಡಲೂ ಬಂದಿಹೆನೂ ||
ಪರಮವಿಕ್ರಮಿ ನಿನ್ನಪೋಲ್ವರಿನ್ನಿಲ್ಲೆನುತ |
ಕರುಣಿಸುತಲಗ್ನಿಯೊಳಗಡಗಿದನುಪುರುಷಾ || ೩ ||

ಹರುಷಾದೊಳೊ ಕೈಕೊಂಡೂ | ಗುರುವರೇಣ್ಯನ ಮತದೀ |
ವರಪೂರ್ಣಾಹುತಿಯಿಂದ | ಕ್ರತುವಾಪೂರೈಸೀ ||
ಪರಮರುತ್ವಿಜರಿಂಗೆ ದಕ್ಷಿಣಾದಿಗಳಿತ್ತು |
ಚರಣಕೆರಗಿದ ಬಲಿಯೊಳೆಂದ ಭಾರ್ಗವನೂ || ೪ ||

**ರಾಗ-ಜಂಜೋಟಿ, ಅಷ್ಟತಾಳ**

ಕೇಳಯ್ಯಾ ಬಲಿಚಕ್ರವರ್ತೀ | ನಾನು ಪೇಳೂವನುಡಿಯಾ ಸತ್ಕೀರ್ತಿ |
ಸೀಲಾನೀನಗ್ನಿಯೊಳ್ಪಡದಿಹರಥವೇರಿ | ತಾಳುತಿಹೆ ಸ್ವರ್ಗಾದಿವಿಜಯವ |
ನೇಳುತಡಬಡಮಾಡದೀಕ್ಷಣ || ೧ ||

ಕ್ರತುವಗ್ನಿಜನ್ಯಚಾಪದೊಳು | ಶರ | ವಿತತೀಯಪೂಡಿಶೌರ್ಯದೊಳು |
ಸತತನೀಪೊರಡೆಮಾರಾಂತು ನಿಲ್ಲುವರಿಲ್ಲ | ಖತಿಯತಾಳುತ ನಿಲುವಶೂರನು |
ಜಿತವಪೊಂದನು ಕೇಳುನಿಶ್ಚಯ || ೨ ||

ಕೊಡುವೇನೂಶಂಖವನಾನು | ಪಿಡಿ | ದೊಡನಿದನೂದೆನಾದವನು |
ವಡನೆಕೇಳಿದ ಜನರೊಳಗಿಹಬಲವರ್ಧ | ದಡಿಗ ನಿನ್ನನು ಪೊಂದಿಬರುವದು |
ಕಡುಪರಾಕ್ರಮಿಯನುತಲಿತ್ತನು || ೩ ||

**ರಾಗ ಮಾರವಿ ಏಕತಾಳ**

ಹರುಷದಿಕೈಕೊಂಡೆರಗುತ ಶುಕ್ರನ | ಚರಣಕೆಭಕ್ತಿಯೆಲಿ ||
ಸುರಪುರವಿಜಯಕೆ ಪರಸುತಕಳುಹೆನೆ | ತೆರಳೆಂದನುಭರದಿ || ೧ ||

ಲಾಲಿಸು ಜಂಭಾಸುರನೀಕ್ಷಣದೊಳು | ಕಾಲನಪುರವರಕೆ ||
ಪಾಳಯಕೂಡುತ ನಡಿನಡಿಸಮರದಿ | ಖೂಳರಜವೆಡಿಸು || ೨ ||

ವೃಷಪರ್ವನೆಶೂರಾಗ್ರಣಿಶುಂಭಾ ದ್ಯಸುರರಕೂಡುತಲೀ ||
ಬಸವಳಿದಗ್ನಿಯ ಮರುತಾದಿಗಳನು | ಕುಶಲದಿಬಾರೆಂದಾ || ೩ ||

ಯಂದುಸುರುತಖಳ ಸುಮುದಾಯಗಳನು | ಛಂದದಿತೆರಳಿಸುತಾ ||
ಕೊಂದುರುಳಿಪೆಶಚಿವಲ್ಲಭನನು ನಾ | ನೆಂದ್ಯೋಚಿಸುತಾಗಾ || ೪ ||

ಕುಂಡದಿಜನಿಸಿಹ ರಥವನ್ನಡರುತ | ಚಂಡಪರಾಕ್ರಮಿಯು ||
ಕೊಂಡನುಶಿಖಿಯೊಳ್ಪಡದಿಹಚಾಪವ | ಖಂಡೆಯಶರಗಳನೂ || ೫ ||

ತಾರಕಮಹಿಷಾಸುರಶಂಬರಮುರ | ಘೋರಖಳೇಶರನೂ ||
ಭೋರನೆ ತರುಬುತಪೊರಟನು ಮಾರ್ಬಲ | ಮೂರರ್ಬುಧದೊಡನೇ || ೬ ||

**ಭಾಮಿನಿ**

ಧರಣಿಕಂಪಿಸಲಾವಿರೋಚನ |
ತರಳಖಳಸಮುದಾಯದೊಂದಿಗೆ |
ತೆರಳಿಸುರಪುರಕೈದಲಿತ್ತಲು ಜಂಭದಾನವನೂ ||
ಭರಿತರೋಷದೊಳೈದಿಕಾಲನ |
ಪುರವಲಗ್ಗೆಯನಿತ್ತುಘರ್ಜಿಸಿ |
ಚರರಪಿಡಿದಪ್ಪಳಿಸಿ | ಕರಗಳ ಬಂಧಿಸುತಪೇಳ್ದ || ೧ ||

**ರಾಗ ಭೈರವಿ ಏಕತಾಳ**

ಪೇಳಿರಿನಿಮ್ಮಪ್ಪನಿಗೆ | ಕಡು | ಖೂಳೆನು ಬರಲೆನ್ನಡೆಗೆ |
ಕಾಳಗ ಕೊದಗಲಿಭರದಿ | ಯಮ | ಪಾಳಯಕೂಡುತರವದಿ || ೧ ||

ಯಂದರುಹುತಚಾರರನು | ಕರ | ಬಂಧಿಸಿಬಿಡೆದಾನವನು |
ಕುಂದುತಲೈತಂದವರು | ಖಳ | ಬಂದಿಹಪರಿಪೇಳಿದರೂ || ೨ ||

ಖಿಡಿಖಿಡಿಗೆದರುತಲೆಮನು | ಭೋ | ರ್ಗುಡಿಸುತಬರೆದಾನವನು |
ಖಡುಗವತೂಗುತನಿಂದೂ | ಬಾ | ದಡಿಗನೆಬಿಡೆನಾನಿಂದೂ || ೩ ||

ದುರುಳಖಳಾಧಮನಿನ್ನಾ | ಶಿರ | ವರಿಯದೆ ಬಿಟ್ಟೆಹೆಮುನ್ನಾ |
ತೆರಳಿಬಂದಿಹೆನೀಧುರಕೆ | ಈ | ಗಿರಿಸೆನುಜೀವದಿಜೋಕೆ || ೪ ||

ಅಂದಿನಸಮರವಿದಲ್ಲ | ಗೆಲು | ವಂದವತೋರುವೆಹಲ್ಲಾ |
ವಂದುಳಿಸೆನುನಾನೀಗಾ | ಮದ | ದಂಧನೆನಿಲುನೀಬೇಗಾ || ೫ ||

**ರಾಗ ಶಂಕರಾಭರಣ ಮಟ್ಟೆತಾಳ**

ಘೋರಧನುಜನಿಲ್ಲು ಶೌರ್ಯ | ವ್ಯಾರೊಳಿನಿತು ತೋರುತಿಹೆಯ |
ಧೀರನೆಮನಪರಿಯ ನೋಡೆನುತ್ತಲೆಚ್ಚನೂ || ೧ ||

ಬರುವಶರವಪಿಡಿದುಜಂಭ | ಕರದಿತಿಕ್ಕಿ ಪುಡಿಯಗೈದು |
ತಿರುಹಿಶೂಲವನ್ನು ವಕ್ಷಕೆಸದನಾಕ್ಷಣ || ೨ ||

ಭರಕೆತಪ್ಪುತಾಗಲೆಮನು | ಭರಿತರೋಷದಿಂದದಂಡ |
ತಿರುಹಿಬರಲುಗುರುವರೇಣ್ಯ ತಡದುಪೇಳ್ದನು || ೩ ||

**ಭಾಮಿನಿ**

ಬೇಡಸಂಗರಬಿಡುಬಿಡೀಕ್ಷಣ |
ಮಾಡಿಹನುಬಲಿವಿಶ್ವಜಿತುಮಖ |
ರೂಢಿಯೊಳಗಿವರನ್ನು ಜಯಸುವರಿಲ್ಲ ಸಮರದೊಳು ||
ಕೂಡಿಹರು ಖಳರೆಲ್ಲವಮ್ಮಡಿ |
ಮಾಡಿಹರುಸುರನಾಶಬುದ್ಧಿಯ |
ವೋಡುನೀಖಗರೂಪದಿಂದಲಿ ಪುರವಬಿಡುಬೇಗಾ || ೧ ||

**ರಾಗ ಕೇತಾರಗೌಳ, ಅಷ್ಟತಾಳ**

ಗುರುರಾಯನೊಚನಾವ ಕೇಳುತ್ತಲಂತಕ | ಪರಿವಾರದೊಡಗೂಡುತ್ತಾ |
ಪುರವಾಬಿಟ್ಟಾಕ್ಷಣಶುಕರೂಪದೊಳಗೆಲ್ಲ ಹಿಮಗಿರಿಸಾರಿದರೂ || ೧ ||

ಜಂಭದೈತ್ಯನು ಬಹುಸಂಭ್ರಮದೊಳುಪೋಗಿ | ಕುಂಭಿಪಾಕಾದಿಯೊಳು |
ಹಂಬಲಿಸುತರೋಧಿಪರನೆತ್ತಿ ಪೇಳಿದ | ನಂಬುಗೆಗಳನೀಯುತ್ತಾ || ೨ ||

ರಕ್ಷೀಪೆನಿಮ್ಮಾನು ಬಿಡಿಬಿಡಿಭಯಗಳ | ಶಿಕ್ಷಿಪನಲ್ಲನಾನು |
ದಕ್ಷಾನಾಗಿಹೆನೆಂದು ಪುರಕೆಕಾವಲನಿಟ್ಟು | ತಕ್ಷಣತ್ರಿದಿವಕೈದಾ || ೩ ||

ಬಲಿಚಕ್ರವರ್ತಿಗೆನಮಿಸಿವೃತ್ತಾಂತವ | ನೊಲವಿಂದಲರುಹೀದಾನು |
ಭಲರೆಶಭಾಸೆನುತಿರಲಗ್ನಿಪುರಕಿತ್ತಾ | ಲೊಳಪೊಕ್ಕುವೃಷಪರ್ವನೂ || ೪ ||

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ತಳ್ಳಿದ್ವಾರದೊಳಿರ್ಪಚರರನು | ಎಲ್ಲಿಹನುಶಿಖಿನೋಳ್ಪನೆನ್ನುತ |
ಮಲ್ಲಯಕ್ಷಾಧಿಪನುತೆರಳಿದನೊಳಗೆಬೇಗಾ || ೧ ||

ಜ್ವಲನಸಂತೋಷದಲಿ ಸಿಂಹಾಸನದಿಕುಳ್ಳಿರೆಕಂಡು ಘರ್ಜಿಸು |
ತೆಲೆಲೆಚಾಪವಕೊಂಡು ಬಾರೆನ್ನೆಡೆಗೆರಣಕೆ || ೨ ||

ಕುಟಿಲತನದೊಳುಬಂದು ವೈರೋ | ಚನಿಯಧರ್ಮವ ಸೆಳದಮೂರ್ಖರೆ |
ವಟುವೆನೀನೆಲೆಚೋರ ಯನ್ನನುಗೆಲಿದೆಹಿಂದೆ || ೩ ||

ಗಂಡುಗಲಿಬಾರೀಗಸಮರ | ಪ್ರಚಂಡನಾದರೆನಿಲ್ಲುನಿಲ್ಲೆನೆ |
ಕೆಂಡವನುಖಾರುತ್ತದಳ್ಳುರಿಯಿಂದಲಗ್ನಿ || ೪ ||

ಭಲರೆಯಕ್ಷಾಧೀಶನೆನ್ನೊಳು | ಕಲಹಕೋಸುಗಬಂದೆ ಭಾಪುರೆ |
ಗಳವನರಿಯುವೆನೆನಲು ಪೇಳಿದನೆಕ್ಷನಾಗ || ೫ ||

**ರಾಗ ಭೈರವಿ ಏಕತಾಳ**

ಶರವಿದತಾಳೆಂದೆನುತ | ಹೆದೆ | ಗಿರಿಸುತ ಗುರಿನೋಡುತ್ತಾ |
ಕೆರಳುತಲೆಕ್ಷಾಧಿಪನೂ | ಬಿಡ | ಮುರಿಯುತವೈಶ್ವಾನರನೂ || ೧ ||

ಧರಣಿಯುಬಿರಿವಂದದಲಿ | ಹೂಂ | ಕರಿಸುತಶಿಖಿಕೋಪದಲಿ ||
ತರಿತರಿದೊಟ್ಟುತಲಾಗಾ | ನಿಂ | ದಿರುವನಕಾಣುತಬೇಗಾ || ೨ ||

ಕುಹಕಿಯೆನಿನ್ನಂಗವನೂ | ನಾ | ದಹಿಸುವೆನೋಡಿದನೀನು ||
ಮಹಶರಕಾಳಾಂಜನವಾ | ಬಿ | ಟ್ಟಹೆನಾತೋರಿಸುಭಲವಾ || ೩ ||

ಪ್ರಳಯಾಗ್ನಿಯು ಭೋರ್ಗುಡಿಸೀ | ಜಗ | ವಿಲಯನತರ ಧಗಧಗಿಸೀ |
ಎಲೆಪಾಮರನೋಡೆನುತಾ | ಖಡಿ | ದಿಳುಹುತಶಿಖಿಕೋಪಿಸುತಾ || ೪ ||

ಯಕ್ಷಾಧಿಪನೋಡೆನ್ನಾ | ಜಗ | ಭಕ್ಷಕನೆಂಬರುನಿನ್ನಾ |
ಶಿಕ್ಷಿಪಭಲವೆಂದಾಗ | ಬಿಡ | ಲಕ್ಷಯಶರ ಶಿಖಿಬೇಗಾ || ೫ ||

**ರಾಗ ಮಾರವಿ ಏಕತಾಳ**

ವೃಷಪರ್ವನುಖಿಡಿಗೆದರಿ ಭ್ರಂಶುಂಡಿಯೊ | ಳೆಸದದಖಂಡಿಸುತಾ ||
ಅಸಮಪರಾಕ್ರಮಿ ಶಿಖಿಚಾಪವಮುರಿ | ದೊಸುಧೆಗೆಕೆಡಹಿದನೂ || ೧ ||

ಭಾಸುರಮಾಗಿಹಖಡುಗವನಗ್ನಿಯು | ರೋಷದಿತಿರುಹಿಡಲು ||
ತೋಷದಿಖಂಡಿಸಿಪಿಡಿದನುಶರೆಯಂ | ನಾಶುಗಪ್ರಿಯಸಖನಾ || ೨ ||

ತೋರೊನಿನ್ನಯ ಬಲದರ್ಪವನೆಲೆ | ವೀರಶಿಖಾಮಣಿಯೆ ||
ಬಾರೆನ್ನುತ ಕರಬಂಧಿಸಿ ರಥದೊಳು | ಭೋರನೆಕೆಡಹುತಲಿ || ೩ ||

ಹರುಷದಿ ಜಯಭೇರಿಗಳನು | ಪೊಡಿಸುತ ಪೊರಟತಿ ಶೀಘ್ರದಲಿ ||
ತೆರಳಿದ ಧನಪಾಶುಗರನು ನಿರರುತಿ | ವರುಣರಪಟ್ಟಣಕೆ || ೪ ||

**ಭಾಮಿನಿ**

ಗುರುವಚನದಿಂದವರುನಾನಾ |
ತೆರದಖಗರೂಪದೊಳುತಮ್ಮಯ |
ಪುರವತೆಜಿಸಿರೆಬಂದು ವಾಹಿನಿಯೊಡನೆ ವೃಷಪರ್ವಾ ||
ಪರಿಕಿಸುತ ಶೂನ್ಯ ಗೃಹಂಗಳ |
ನರರೆಯೆತ್ತೈದಿದರು ಲಂಡಿಗ |
ಳಿರಲಿಸಮಯವನೋಡಿಹನನವಮಾಳ್ಪನೆಂದೆನುತಾ || ೧ ||

**ವಾರ್ಧಿಕ್ಯ**

ಆತತೂಕ್ಷಣವೆ ಪೊರವಂಟು ಸಂತೋಷದಿಂ |
ದ್ಯಾತುಧಾನಾಸೀಕ ಚಲಿಚಕ್ರವರ್ತಿಗೆರಗಿ |
ಹೂತನುದ್ಯಾವನದಿ ಬೀಡಿಕೆಯನೆಸಗೀರ್ಪ |
ಬಲಿಚಕ್ರವರ್ತಿಗೆರಗಿ | ಮಾತರಿತ್ಯಕುಬೇರನಿರುತಿ ಪ್ರಾಚೇತಸರು | ಭೀ
ತಿಯೊಳಗೆತ್ತಪೋದರೊ ಕಾಣೆಸಂಗರದಿ |
ವೀತಿಹೋತ್ರನ ಕರೆಯಪಿಡಿತಂದೆನೋಡೆನುತ | ಮುಂದಿಳುಹಲಾನಂದದಿ ||

**ರಾಗ ಕೇದಾರಗೌರ ಝಂಪೆ**

ಕಂಡು ಬಲಿಯೆಂದನಗುತಾ | ಸುರರೊಳ್ವ | ಚಂಡಶಿಖಿಯೆಂಬ ಮಾತಾ |
ಚಂಡವೃಷಪರ್ವನಿಂದಾ | ಬರಿದೆಕಳ | ಕೊಂಡನೀಮೂರ್ಖನೆಂದಾ || ೧ ||

ಈತನೆಜ್ಞಾದಿಗಳಲಿ | ಹವಿಗಳನು | ಪ್ರೀತಿಯಿಂದನಿತ್ಯರೆಯೆಲಿ |
ಪೀತಾವಾಸನಿಗೀವನು | ಶರೆಪಿಡಿಯೆ | ಖಾತಿಗೊಂಬನುತ್ರೀಶನೂ || ೨ ||

ಯಲೆಧನಂಜಯನೆಕೇಳೊ | ಯಮ್ಮೊಡನೆ | ಘಳಿಸಬೇಡಹಿತ ತೆರಳೊ |
ಕೊಲೆನುನಾನೆಂದೆನುತಲೀ | ತರೆಬಿಟ್ಟು | ಕಳುಹೆ ನಡದನು ಭರದಲಿ || ೩ ||

ಧುರದೊಳೀಯಮರೇಂದ್ರನಾ | ಶಿರವಚಂ | ಡರಿಯಬೇಕ್ಕೈ ಖೂಳನಾ ||
ದುರಧೀರಬಲಿಯನ್ನು ತಾ | ಕೀರ್ತಿಗಳ | ಮೆರೆಸಿಕೊಂಬೆನು ಸಂತತಾ || ೪ ||

ಎಂದು ಯೋಚಿಸುತಾಗಳು | ಸೌಂದರ್‍ಯ | ದಿಂದರಂಜಿಪ ಗೃಹಗಳೂ |
ಮುಂದೆಸೆಯಲಿಹುದನೋಡೀ | ಬಲಿಮಹಾನಂದದಿಂ ಸುರರಪಾಡೀ || ೫ ||

**ರಾಗ ಸೂರಟ ಏಕತಾಳ**

ಪರಮಾನಂದದೊಳು | ಸುರಪುರ | ಮೆರವುದುವಿಭವದೊಳು |
ಥರಥರರತ್ನದಕುರಜುಮೇರುವೆಗಳು | ಮರಕತಬೀದಿಯುಮಾಣಿಕಧ್ವಜಗಳು || ೧ ||

ಕಲಹಂಸಾದಿಗಳು | ಮತ್ತಾ | ಜಲಚರಪಕ್ಷಿಗಳು |
ಅಳುಕದ ಸಾರಸಕುಮುದೋತ್ಪಲದೊಳು | ತಿಳಿನೀರಿನಕೊಳ ಪೊಳೆಯತಲಿರುವವು || ೨ ||

ಸುತ್ತಲುರಂಜಿಸುವಾ | ಭೋರ್ಗರೆ ಯುತ್ತಿಹಸುರನದಿಯಾ |
ಕೆತ್ತಿಹ ಗೋಮೇಧಿಕಸೋಪಾನದಿ | ತತ್ತೀರದಿ ಫಲಪುಷ್ಪದತರುಲತೆ || ೩ ||

ಕುಲಿಶೋಪಪುನೆಲದೀ | ವಿದ್ರುಮ | ನೆಲೆಸೌಧದಗೃಹದೀ |
ಲಲನೆಯರ್ವೀಣಾಗಾನವಿನೋದದಿ | ಲಲಿತಾಕ್ಷರಮೃದುಮಧುರದವಚನದಿ || ೪ ||

ಭೇರೀನಾದಗಳು | ತಮ್ಮಟೆ | ಭೋರಿಡುವಾದ್ಯಗಳು |
ನೀರಜನಯನೆಯರ್ನಾಟ್ಯಸೌರಂಭದಿ | ಮಾರಾಕಾರದಸುಮನಸರೀರ್ಪರು || ೫ ||

**ಭಾಮಿನಿ**

ಸೊಕ್ಕಿಹರುಸುಮನಸರುಭೋಗದಿ |
ಘಕ್ಕನಿಂದವರನುಮಡುಹಿದುರ್ಗವ |
ನಕ್ಕರಿಂಶಳಕೊಂಬೆನೆನ್ನುತ ಬಲಿಯುಮಾರ್ಬಲಕೆ ||
ಪೊಕ್ಕು ಲೂಟಿಯಗೈದುದಿವಿಜರ |
ಕಕ್ಕುಲಿತೆಗೊಳಿಸೆಂದುನೇಮಿಸಿ |
ಶುಕ್ರದತ್ತದ ಶಂಖವನುನಾದಿಸಿನಬ್ಬರಿಸಿ || ೧ ||

**ವಾರ್ಧಿಕ್ಯ**

ಏನಿದೇನಾಶ್ಚರ್‍ಯ ಪುರಿಯಪ್ರಾಕಾರದೊ |
ಳ್ದಾನವರ ಬೊಬ್ಬಾಟ ಕೇಳುತಿದೆಯಾರ್ಭಟಿಸಿ |

ಕ್ಷೀಣಬಲಬಲಿಚಕ್ರವರ್ತಿ ಬಂದಿಹನ್ಯಾಕೆ ಗೋಣರಿವೆನೆಂದು ಸುರಪಾ ||
ಭಾನುಸುತ ವರುಣ ಧನಪಾದಿಗಳ ಸ್ಮರಿಸಿಸುರ |
ಸೇನೆಯಂ ನೆರಹಬೇಕೆಂದೆನುತಲೆತ್ನಿಸಲ್ಕಾ
ಣುತಲೆ ಗುರುರಾಯ ನೈತಂದುವೇಗದಿಂ | ದರುಹಿದಂ ಪುರುಹೂತಗೆ || ೧ ||

**ರಾಗ ತೋಡಿ ಏಕತಾಳ**

ತಾಳುತಾಳೆಲೊ ಪಾಕಶಾಸನಾ | ನಾನು | ಪೇಳೂವನುಡಿ ಕಾರ್ಯ ಸಾಧನಾ || ಪಲ್ಲ ||
ಕಾಳಾಗವಿಂದಿಗೆಬೇಡಾ ಸಾರಿದೆಕೇಳು || ಅನುಪಲ್ಲ ||

ಹಿಂದೀನಪರಿಯಲ್ಲಲಾಲಿಸೂ | ಬಲಿ | ಮುಂದೇಪೋಗಲುಸಮಾಧಾನಿಸೂ |
ಛಂದಾದಿವಿಶ್ವಜಿತುಯಜ್ಞಾಗೈದಿಹವನ | ತಾಳತಾಳೆಲೊ || ೧ ||

ಹರಿಹರ ಬ್ರಹ್ಮರಿಗಂಜನೂ | ಸುರ | ನರರಾಲೆಕ್ಕಿಸುವನಶೂರನೂ |
ಬರದೂ ಜಯವು ಹರಿ | ರಕ್ಷೀಪಮುಂದಕೆ || ತಾಳುತಾಳೆಲೊ ಪಾಕಶಾಸನಾ || ೨ ||

ದಿವಿಜಾರೆಲ್ಲಾರು ಕಾಮರೂಪದೀ | ತೆರ | ಳುವದೀಗವಿಪಿನಕೆವೇಗದೀ |
ಯುವತೀಯರೊಡಗೊಂಡು ಪೋಗೀರೆಂದನು ಗುರು | ತಾಳುತಾಳೆಲೋ || ೩ ||

**ರಾಗ ಕೇತಾರಗೌಳ ಅಷ್ಟತಾಳ**

ಯನುತಲಾಂಗೀರಸನರುಹೆಪುರಂದರ | ಘನಚಿಂತೆಗಳತಾಳುತ್ತಾ |
ಮನದಿಭೀತಿಯಗೊಂಡು ಸುರರೆಲ್ಲಾನಿಮ್ಮಾಯ | ತನುವರಕ್ಷಿಪುದೆಂದನೂ || ೧ ||

ತರುಣಿಪುಲೋಮಜೆಯೊಡನೆಂದ ದುಗುಡಾದಿ | ಹರಿಕರುಣಗಳೆಂದಿಗೊ |
ನಿರುತದೈತ್ಯರ ದೆಸೆಯೊಳಗೀಗ ವಿಪಿನಾಕೆ | ತೆರಳೂವಕಾಲಬಂತು || ೨ ||

ಅರಕ್ಷಣನಿಲ್ಲಬಾರದುನಾವೆಂದೆನುತಾಲಿ | ಸುರಪಾಲಶಚಿಯೊಡನೆ |
ಭರದಿ ಪಾರಾವತಪಕ್ಷಿರೂಪವತಾಳಿ | ತೆರಳೀದರುಭಯಾರಂದೂ || ೩ ||

ಗೊರವಕಕ್ರೌಂಚ ಕಾರಂಡರೂಪದಿ ಸರ್ವ | ಸುರರೆಲ್ಲಾ ವೇಗದಿಂದಾ |
ಪುರವತಜಿಸಿಪೋಗೆ ಬಲಿಚಕ್ರವರ್ತಿಯು | ಚರಿಸುತ್ತಾ ಬೀದಿಯೊಳೂ || ೪ ||

**ವಾರ್ಧಿಕ್ಯ**

ಪರಿಪರಿಯ ಖಗರೂಪದಿಂದಲೋಡುತಲೀರ್ಪ |
ಸುರರನೀಕ್ಷಿಸಿ ನಗುತಬಲಿಯು ಸಂತೋಷದಿಂ |
ಸುರಪನೊಡ್ಡೋಲಗದಮಂದಿರಕೆ ದಾನವರ ಬಳಸಿಬಂದಾಕ್ಷಣದೊಳೂ ||
ಸುರತರುಣಿ ನಾಟ್ಯಸಂಗೀತವಾದ್ಯಗಳಿಂದ |

ಮೆರವವೈಭವವೆತ್ತಲಡಗಿಪಾಳಾಗಿಹುದು |
ತರುಣಿ ಪುರುಷರನೋರ್ವರಂಕಾಣೆನೀಪುರದಿ ಪೋಗಲೊಳ್ಳಿತುಮೂರ್ಖರೂ || ೧ ||

**ರಾಗ ಮಾರವಿ ಏಕತಾಳ**

ಕರಸುತಶುಕ್ರನ ಮತದೊಳಗಾಸುರ | ಪುರದಸಿಂಹ್ವಾಸನದಿ ||
ಹರುಷದಿಮಂಡಿಸಿ ಮೂಲೋಕದಧೊರೆ | ತನವನುಕೈಕೊಂಡಾ || ೧ ||

ಶುಂಭನಿಶುಂಭರು ಶೀಕ್ಷಾ | ಭಾಗವಸಂಭ್ರಮದೊಳಗೊಹಿಸಿ ||
ಕುಂಭಿನಿಜನರವಿಚಾರವನೆಮಪದ | ವೆಂಬಧಿಕಾರದೊಳೂ || ೨ ||

ಮಾಲಿಸುಮಾಲಿಗಳೊರುಣ ನೈರುತ್ಯರ | ಪಾಲಿಪಧೊರೆತನವಾ ||
ತಾಳುತಧಾನ್ಯಾದಿಗಳಿಗೆ ಜಲವನು | ಕೂಲಿಸಿಬೆಳೆಸುವದೂ || ೩ ||

ನರಕಮುರಾಸುರರೀರ್ವರು ಮರುತನ | ಪುರಿಯಧಿಕಾರದೊಳು ||
ಧರೆಯೊಳು ಶ್ವಾಸೊಛ್ವಾಸದಿಜೀವರ | ಪರಿಪಾಲಿಸುತಿಹುದೂ || ೪ ||

**ರಾಗ ಕಂಬೋಧಿ ಝುಂಪೆತಾಳ**

ದುಷ್ಟಾಶೀಕ್ಷಣೆಗಾಗಿ | ವಿಪ್ರಚಿತಿತಾರಕರು | ಶಿಷ್ಟಾಪಾಲನೆಕನಕ ಭಂಡಾರಗಳಿಗೆ ||
ದಿಟ್ಟವೃಷಪರ್ವ ಧೂಮ್ರಾಕ್ಷವಾತಾಪಿಗಳು | ಪಟ್ಟಾಭಿಷಿಕ್ತರಾಗುವದು ಮುಂದೆನುತಾ || ೧ ||

ಉರಗಾಕನ್ನೆಯರೆಲ್ಲಾಬರಲೀನಾಟ್ಯಕೆ ಸತತಾ | ವಿರಚಿಸಲೀವಾದ್ಯಗಳ | ನೆಕ್ಷಾರಾಕ್ಷಸರೂ ||
ಸುರಪಸಭೇಗಿಮ್ಮಡಿಯ | ಮೆರಸಾಬೇಕನುದಿನದೀ | ಧರೆಮೂರಕರಸಾನಾ | ನಾದೇರಕ್ಷಿಪೆನೂ || ೨ ||

ಮೊದಲಿಂದ್ರಾಸೇನಾನೆಂ | ಬಭಿಧಾನವಿತ್ತೆನಗೇ | ಕದನದೊಳುಧರಣಿಯೆನೂ | ಗೆದ್ದಾಕಾರಣದೀ ||
ವದಗಿದುದು ಬಲಿಚಕ್ರವರ್ತಿಯಂಬುವನಾಮ | ಮುದದೊಳೀಗಬಲೀಂದ್ರನಾದೆನಾನೆನುತಾ || ೩ ||

**ಭಾಮಿನಿ**

ಇತ್ತಲಾಬಲಿ ತೋಷದಿಂದಿರ |
ಲತ್ತಲದಿತಿಯು ವೆಸನದಿಂದಲಿ |
ಪುತ್ರನಾಖಂಡಲಗೆಸಂಪದವಳಿದು ವ್ಯಾಕುಲದಿ ||
ಮೃತ್ಯುದಾನವರಿಂದ ವಿಪಿನದಿ |
ಪತ್ನಿಸಹವಾಸಿಸುವದಾಯಿತೆ |
ಸುತ್ತ ಕಸ್ಯಪನೆಡೆಗೆ ನಡೆತಂದಾಗ ಲಭಿನಮಿಸೆ || ೧ ||

**ರಾಗ ತುಜಾವಂತು ಝುಂಪೆತಾಳ**

ಬಾರೆನ್ನಾಮೋಹದರ | ಗಿಣಿಯೇ ಸುಶೀಲೆ | ನೀರಾಜಾಂಬಕಿ ನಿನ್ನಾ | ದುಗುಡಗಳಪೇಳೇ |
ಚಾರೂಚಂದಿರಕಾಂತೀ ಪೊಲ್ವಾ ಕಪೋಲೇ | ತೋರುತಿದೇಚಿಂತೋಪ ರಾಗಗಳುವಿಮಲೇ || ೧ ||

**ರಾಗ ಮಧುಮಾಧವಿ ತ್ರಿವುಡೆತಾಳ**

ಪತಿಯೆಲಾಲಿಸುಯನ್ನದುಗುಡವ | ಸುತಪುರಂಧರಗಾದಭವಣೆಯ |
ಸತತತಮ್ಮಯಬಳಿಯೊಳುಸುರಲು | ವ್ರತಿಪಬೆದರಿಕೆಯಾಪುದೂ || ೧ ||

**ರಾಗ ತುಜಾವಂತ ಝಂಪೆತಾಳ**

ತರುಣಿಮಣಿಕೇಳೆನ್ನಾ | ನುಡಿಯಾ ಗುಣರನ್ನೇ | ವಿರಚಿಸಿದಕರ್ಮ ಘಟ | ಕೇಳೆಸಂಪನ್ನೇ |
ಹೊರಗಿಹುದುಜೀವ | ಮಾಯವನುಳಿದುಕನ್ನೇ | ಬರಿಮೋಹಸತಿಸುತರೂ ಕೇಳೆಮೋಹನ್ನೇ || ೧ ||

**ರಾಗ ಮಧುಮಾಧವಿ ತ್ರಿವುಡೆತಾಳ**

ಪರಮಪುರುಷನ ಮಾಯೆಯೊಳುನಾ | ನಿರುತಡಿಂಬವ ಪೊತ್ತಕಾರಣ |
ತರಳರೆಂಬಭಿಮಾನತಪ್ಪದು | ಕೊರತೆಗಳಪರಿ | ಹರಿಪುದೂ || ೨ ||

**ರಾಗ ತುಜಾವಂತು ಝಂಪೆತಾಳ**

ಆರಿಂದಾಭಾವಣೆಗಳು | ಬಂತಿವನಿಗುಸುರೇ | ಮೂರೂಲೋಕಾಧಿಪನ | ಪೋಲ್ವಾರಿನ್ಯಾರೇ |
ಕ್ರೂರಾವೃತ್ರಾದಿಗಳ | ಮಡುಹೀಶೃಂಗಾರೇ | ವಾರುಧಿಯಾಮಥಿಸಿ ಸುಧೆ | ಪಡದಿಹನೂನೀರೇ || ೧ ||

**ರಾಗ ಮಧುಮಾಧವಿ ತ್ರಿವುಡೆತಾಳ**

ಶ್ರೋಣಿತಾಧಿಪಬಲಿಯಗೆಲಿದನು | ಕ್ಷೀಣಬಲನವವಿಶ್ವಜಿತುಗಳ |
ತಾನೆಸಗಿಧುರಕೊದಗೆಭಯದೊಳು | ಕಾಣದೈದಿದವಿಪಿನಕೇ || ೧ ||

**ರಾಗ ತುಜಾವಂತು ಝಂಪೆತಾಳ**

ಇದಕೇನಾನೇನೆಸಗಾಬೇಕೂನೀಪೇಳೇ |
ಮೊದಲೇಗೈದಿಹಕರ್ಮ ಬಿಡಲರಿದುಕೇಳೇ |
ಚದುರೇವ್ಯಾಮೋಹಗಳ | ಬಿಟ್ಟೂ ದೃಢತಾಳೇ |
ಮಧುವೈರೀಚರಣ ಸದ್ಭಕ್ತಿಯೊಳುಬಾಳೇ || ೧ ||

**ರಾಗ ಮಧುಮಾಧವಿ ತ್ರಿವುಡೆತಾಳ**

ಹರಿಯಕರುಣಾರಸದೊಳಿಂದ್ರಗೆ | ದುರಿತನಾಶನವಾಗಿ ಸಂಪದ ||
ಪರಮಸುಖವನುಪೊಂದಿ ಮೆರೆಯುವ | ತೆರನಸತ್ಪಥವಿವರಿಸೂ || ೨ ||

**ಭಾಮಿನಿ**

ಕ್ಷೀರಸಾಗರಶಯನಗೋಸುಗ |
ನಾರಿಕೇಳ್ಫಾಲ್ಗುಣದಶುಕ್ಲದಿ |
ಭೂರಿಹರುಷದಿ ಪ್ರತಿಪದಾದಿಯ ದ್ವಾದಶಾನ್ಹದೊಳು ||
ಕ್ಷೀರದಭಿಷೇಕದೊಳು ಮತ್ತಾ |
ಕ್ಷೀರಪರಮಾನ್ನಗಳರ್ಪಿಸಿ |
ನೀರಜೇಕ್ಷಣನಾಮವಷ್ಟಾಕ್ಷರಿಯಜಪಗೈದೂ  || ೧ ||

**ವಾರ್ಧಿಕ್ಯ**

ಪರಮಮಂಗಲೆಕೇಳು ವರಪಯೋವ್ರತವಿದಂ |
ವಿರಚಿಸಲು ಸದ್ಭಕ್ತಿಭಾವದೊಳ್ ಶ್ರೀಹರಿಯು |
ತರಳನಾಗುದ್ಭವಿಸಿ ನಿನ್ನಮನದಿಷ್ಟಮಂ ನಿರುತಪಾಲಿಪನೆನ್ನುತಾ ||
ತೆರಳಲಾಮುನಿ ಪಕೆ ತರುಣಿಮಣಿಯಾವ್ರತವ |
ಹರುಷದಿಂದೆಸಗುತಿರಲಿತ್ತಲಮರಾವತಿಯ |
ಪುರದಿ ಬಲಿಚಕ್ರವರ್ತಿಯುಶುಕ್ರನಂಕರಸಿ ಚರಣಕರಗುತಲೆಂದನೂ || ೧ ||

**ರಾಗ ಕೇತಾರಗೌಳ, ಝಂಪೆತಾಳ**

ಲಾಲಿಸೈಗುರುವರ್ಯನೇ | ಹಿಂದೆಸುರ | ಪಾಲನೆಸಗಿದನೊಂಚನೇ |
ಕೋಳುಗೊಂಡುದುಭೋಗವು | ಬಂತೆನಗೆಪಾಲಿಸಲು ಮೂರ್ಲೋಕವೂ || ೧ ||

ಯನ್ನವಿಕ್ರಮಪೋಲ್ವರೂ | ಸುಭಟಗ್ರ | ಗಣ್ಯರಿನೆಲ್ಲಿರ್ಪರೂ |
ಚನ್ನವಾಗನುಭವಿಸುವೇ | ಅಮರಪದ | ವನ್ನು ನಾಸ್ಥಿರಗೊಳಿಸುವೇ || ೨ ||

ಹರಿಕೃಪೆಯೊಳೀವಿಭವವು | ಯನಗೀಗ | ದೊರಕಿದುದುಮತ್ಪುಣ್ಯವು ||
ಶರಣಪ್ರಹ್ಲಾದನಿಂಗೇ | ಪೌತ್ರನೆಂ | ದರಿದಿತ್ತದೇವನೆನಗೇ || ೩ ||

**ರಾಗ ಕೇತಾರಗೌಳ, ಅಷ್ಟತಾಳ**

ಧೊರೆಯೆಲಾಲಿಸು ಪುರಂಧರನಂತೆ ನಿನಗೀಗ | ಸ್ಥಿರವಾಗದೀಪದವೀ |
ಚರಿಸಿದನವನುಪೂರ್ವದಿ ಮಹಾಪುಣ್ಯವ | ನರಿಯೆನೀನೆಂದಶುಕ್ರ || ೧ ||

ಅಂಥಯೋಗ್ಯತೆಯನಿಂದ್ರನುಪಡದುದ ಗುರು | ಸಂತಸದಿಂದರು ಹೊ |
ಯಂತೂಶಾಶ್ವತಭೋಗವಾಳ್ವನೆಂಬುದಗುಣ | ವಂತನೆಪೇಳೆಂದನು || ೨ ||

ಧೊರೆರಾಯಕೇಳ್ ಶತಕ್ರತುವಗೈದವರಿಂಗೆ | ಸುರರಾಜಪದವಿಯೆಂದೂ |
ಹರಿಯನೇಮಗಳಂತೆ ವಿರಚಿಸಿದನು ಪುರಂ | ಧರನುತಾ ಶತಮಖವಾ || ೩ ||

**ಭಾಮಿನಿ**

ಕರುಣದಿಂದವಧರಿಸುಗುರುವರ |
ವಿರಚಿಸಿಹೆನೇಕೋನಶತಕೃತು |
ಹರುಷದಿಂದುಳಿದೊಂದನೀಗಳೆಮಾಡಿ ನರಹರಿಯಾ ||
ಶರಣನೆಂಬುವ ಕೀರ್ತಿಸಂತತಿ |
ಸ್ಥಿರಗೊಳಿಸಿ ಮೂರ್ಲೋಕಸಂಪದ |
ಪರಮಭೋಗದಿಮೆರವೆ | ನೆಂದಿಗೆಮಳ್ಪುದೀಮುಖವಾ || ೧ ||

**ರಾಗ ನೀಲಾಂಬ್ರಿ ಏಕತಾಳ**
**(ಕೇಳೊತಮ್ಮಾ ಬಾಲಾರೀರ್ವರೂ ಎಂಬಂತೆ)**

ಬರುವಾಶುಕ್ಲಪಂಚಮಿಯೊಳು | ರಚಿಸೈಯ್ಯಾಕರ್ಮ | ಧರೆಯೂರೇವಾನದಿಯಾತಟದೊಳು ||
ನೆರಹುಸಂಬಾರಗಳವಿಭವಾದಿ | ತರಿಸಯ್ಯದಿವ್ಯ | ತುರಗಾವನ್ನುಬಲಿಯೆಗಾಧದೀ || ೧ ||

ಬರಿಸುಮಯನಾಚರರಮುಖದೊಳು | ಸೌಂದರ್ಯಶಾಲಾ | ವಿರಚಿಸಾಲಿನೂತನದೊಳೂ ||
ಧರಣಿಯೊಳಗುಳ್ಳಖಿಳಾವಿಭುದಾರ | ಕರಸಯ್ಯಾ ವಾಂಛಾ | ವಿರುವಾದಿತ್ತು ಕಳುಹೂಸರ್ವರಾ || ೨ ||

ಎಂದುಶುಕ್ರನರುಹೆ ಕೇಳುತ್ತಾ | ಬಲಿರಾಯಜಂಭಾ | ಗೆಂದಾಸಿದ್ಧವಾಗಲೆನ್ನುತ್ತಾ ||
ವಂದಿಸುತ್ತಾಪೊರಟುನಡದಾನೂ | ಸನ್ನಾಹಗಳ | ಛಂದಾದಿಂದನೆರಹೂತೀರ್ದನೂ || ೩ ||

**ದ್ವಿಪದೆ**

ನಿಲಿಸಿದನುಮಹಿಷನನು | ಸುರಪುರದೊಳಾಗಾ ||
ಇಳೆಗೆಬಂದನುಯಜ್ಞ | ಕೆನುತಲತಿಭೇಗಾ || ೧ ||

ಇತ್ತಕ್ಷೀರಾರ್ಣವದೊಳೊಂದುದಿನ ಹರಿಯೂ ||
ಇತ್ತನೋಲಗ ಲಕ್ಷ್ಮಿಸಹಿತ | ಗುಣನಿಧಿಯು || ೨ ||

ಶಂಖಚಕ್ರಾಬ್ಜಗಧರತ್ನಕುಂಡಲದಿ ||
ಪಂಕಜೇಕ್ಷಣ ವೈಜಯಂತಿಮಾಲಿಕದಿ || ೩ ||

ಕಸ್ತೂರಿತಿಲಕನವರತ್ನಮಕುಟದೊಳೂ ||
ಸುತ್ತಸೇವಿಪತುಂಬುರಾದಿನಿವಹದೊಳು || ೪ ||

ಚರಣಸೇವಿಪ ಸರ್ವಮಂಗಲೆಯನೋಡೀ ||
ಪರಮಪುರುಷನುಪೇಳ್ದ | ಕಿರುನಗೆಯಗೂಡೀ || ೫ ||

**ರಾಗ ಜಂಜೋಟಿ ಅಷ್ಟತಾಳ**

ವರಮನೋಹರಲಾಲಿಸೀಗಾ | ಪುರಂ | ಧೆರನೀಗೆ ತ್ರಿದಿವದಭೋಗಾ |
ತ್ವರದಿದೆ ಬಲಿಯಿಂದಶೋಕೀಪಳದಿತೀಯೂ | ಪರಮಪಾವನೆ ಪುಣ್ಯಶಾಲಿನಿ |
ವಿರಚಿಪಳುಪಯವ್ರತವಮೋದದಿ || ೧ ||

ಆದಿಯೊಳದಿತಿಕಸ್ಯಪರೂ | ಯನ್ನ | ಮೋದಾದಿಸ್ತುತಿಸೀದರವರೂ |
ಸಾದರದೊಳುಪೋಗಿಭಕ್ತಿಭಾವಕೆಮೆಚ್ಚಿ | ಖೇದವೇನನೆಸತ್ಯಸಂಧಕ |
ರಾದವರು ಬೇಡಿಹರುವರಗಳಾ || ೨ ||

ತನಯಾನಾಗುದಿಸಾಬೇಕೆಂದೂ | ಮೂರು | ಜನುಮಾದೊಳಮ್ಮೊಳುಬಂದೂ |
ಮನವನ್ನುಕರಗಿಸಲಿತ್ತೆ ವರವನಾಗ | ಜನುಮಿಸುವೆನವರೊಳಗೆ ಧರ್ಮವ |
ನನುಗೊಳಿಸಲೋಸುಗವೆಧರೆಯೊಳು || ೩ ||

**ಸಾಂಗತ್ಯ**

ಮುಂದೇಕಸ್ಯಪದಶರಥನು ಕೋಸಲನೃಪ | ನಂದಾನೆಯ ದಿತೀದಂಪತಿಯಾ ||
ಕಂದಾನಾಗುದಿಸೂವೆ ದಶಶಿರನೊಧೆಗಾಗಲಿಂದೀರೆಜಾನ್ನಕಿನೀನೂ || ೧ ||

ವಸುದೇವನಹಮುನಿಕಸ್ಯಪನದಿತೀಯೆ | ಶಶಿಮುಖಿದೇವಕಿಯಹೆಳೂ ||
ಅಸುರಾನಾಶಕಕೃಷ್ಣನಹೆನೂ ರುಗ್ಮಿಣಿನೀನೇ | ಬಿಸಜಾಕ್ಷಿ ದ್ವಾಪರಾಯುಗದೀ || ೨ ||

ಬಲಿಗರ್ವದಹನಾಕಾಗಿಯೆ ಮಾಳ್ಪವ್ರತವಿದ | ಕೊಲಿದದಿತಿಯೊಳೀಗಜನಿಪೆ ||
ಇಳೆಮೂರರಧಿಕಾರವಿತ್ತೆನೀಕಲ್ಪದಿ | ಶಳದಿಹನಿಂದನೊಳ್ಬಲಿಯು || ೩ ||

ಶರಣವೈರೋಚನಿಯಹುದೂ ಮುಂದಿನಕಲ್ಪ | ಸುರಪತಿತ್ವವನೀವೆನವಗೇ ||
ಶಿರಯಾಭೋಗದಿ ಮದಿಸಿಹನದಶಳದೀಗ | ಸುರಪಾಗೆಸ್ಥಿರಗೊಳಿಸುವೆನೂ || ೪ ||

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಸರಸಿಜಾಸನದೂರಿಕೊಂಡಿಹ | ಸುರರಸ್ವರ್ಗದೊಳಿರಿಸಿಮುನ್ನಿನ |
ತೆರನರಕ್ಷಿಸಬೇಕೆನುತ್ತಲಿ ದೈನ್ಯದಿಂದಾ || ೧ ||

ಅದಿತಿಯೊಳಗವತರಿಪೆನಾನೆಲೆ | ಪದುಮಲೋಚನೆನಿನ್ನಮನವೇ |
ನದನುಪೇಳೆನೆನಮಿಸುತಿಂದಿರೆ ಪೇಳ್ದಳಾಗಾ || ೨ ||

ಪಂಕಜೇಕ್ಷಣಪ್ರಕೃತಿಪುರುಷರು | ಸಂಕಲನವಾಗಿರುವದಲ್ಲದೆ |
ಶಂಕೆಯಿಲ್ಲರ್ಧಾಂಗದೊಳುನಾನಿರುವೆನ್ನೆಸೆ || ೩ ||

ಅಹುದುನಿಶ್ಚಯವೆಂದು ಪದುಮಾಂಬಕನು ಕಸ್ಯಪನರಸಿಯೆಲ್ಲಿಗೆ |
ಮಹಿಯೊಳವತರಿಸಲ್ಕೆ ಪೋಗಲಿಕಿತ್ತಬಲಿಯು || ೪ ||

ತುರಗವನುಶೃಂಗರಿಸಿಭಾರ್ಗವ | ಗುರುಮುಖೋದಿತ ಶುಭಮುಹೂರ್ತದಿ |
ಪುರವಪೊರಮಡೆ ವಾದ್ಯದುಂದುಭಿ ಘೋಷದಿಂದಾ || ೫ ||

ನೋಡಿದನುನರ್ಮದೆಯತೀರದಿ | ಮಾಡಿರುವಸೌಂಧರ್ಯಶಾಲೆಯ |
ಕೂಡಿರುವಭೂಸುರರಮನ್ನಿಸಿವಿಭವಂದಾ || ೬ ||

**ರಾಗ ಕಾಂಬೋಧಿ, ಝಂಪೆತಾಳ**

ಮಿಂದೂನರ್ಮದೆಯೊಳಗೇ | ನಿತ್ಯಾಕರ್ಮವಗೈದೂ |
ಛಂದಾದಿಂಗಜಮುಖನಾ | ಪೂಜಿಸುತಬಲಿಯೂ ||

ಮಂದರಾಧರ ವಾಸುದೇವನನು ಭಜಿಸಿವಲ |
ವಿಂದಾದೀಕ್ಷೆಯತಾಳ್ದನಾಗಾ ಸಂತಸದಿ || ೧ ||

ಗುರುಭಾರ್ಗವೇಶ್ವರನ | ನೇಮದಲಿಗಾರ್ಗ್ಯಸಂ |
ವರಣಗಾಲವಕಪಿಲ | ಚವನಾದಿಗಳನೂ ||

ಹರುಷದಿಂರುತ್ವಿಜಕೆ ನೇಮಿಸುತಜಂಭನಿಗೆ |
ಧರಣಿಪಾತಿಥ್ಯಗಳಿಗಾಜ್ಞೆಗಳನಿತ್ತಾ || ೨ ||

ಅರಣಿಮುಖದೊಳಗಗ್ನಿ | ವಿಧ್ಯುಕ್ತದೊಳುಬರಿಸಿ |
ವರಗಾರ್ಹಪತ್ಯಾದಿಕುಂಡತ್ರಯಗಳಿಗೇ ||

ಹರುಷದಿಂಸ್ಥಾಪಿಸುತ ಕರ್ಮಖಾಂಡಗಳಂತೆ |
ತುರಗಮೇಧವಬಲಿಯುರಚಿಸುತಿರಲತ್ತಾ || ೩ ||

**ಭಾಮಿನಿ**

ವಂದುದಿನಸುರಪಾಲಹಿಮಗಿರಿ |
ಕಂದರದಗುಹೆಯೊಳಗೆಸುಮನಸ |
ವೃಂದದೊಡಗೂಡಿರಲು ನಮಿಸುತದೇವಚಾರಕನೂ ||
ಬಂದೆರಗಿಬಲಿಕ್ರುತುವಗೈಯ್ಯುವ |
ನೆಂದೆನುತಬಿನ್ನೈಸೆ ಸುರಪತಿ |
ಕಂದಿಕುಂದುತಲಾಗ ತನ್ನಯ ವಿಧಿಯನೆನನದೂ || ೧ ||

**ರಾಗ ನೀಲಾಂಬ್ರಿ, ರೂಪಕ**

ಛಂದದೊಳಾಲಿಸಿದಿವಿಜರು | ಬಂದುದೆವೆಥೆಮತ್ತೀಗಳು |
ಇಂದಿರೆಯರಸನಕರುಣಗ | ಳಂದಿಗೆಬರುತಿಹುದೊ || ೧ ||

ದುರುಳವೃತ್ರಾಸುರನಮುಚಿಯು | ಪರಿಪರಿಕಷ್ಟವನಿತ್ತರು |
ಸರಸಿಜನಾಭನಕರುಣದಿ | ಧುರದೊಳುಗೆಲಿದಿಹೆನು || ೨ ||

ಮೂರೂಲೋಕದೊಳಿಂದ್ರನು ಶೂರನು ಯಂಬುವಖ್ಯಾತಿಯು |
ತೀರಿತೆವೈರೋಚನಿಯೊಳು | ಮಾರಮಣಗೆಹಿತವೇ || ೩ ||

ದಿವಿಜರಿಗೋಸುಗಶರಧಿಯ | ಭವಭಯಭಂಝುನ ಶ್ರೀಹರಿ |
ತವಕದಿಮಥನವಗೈಸಿದ | ವಿವರಿಸಲಸದಳವು || ೪ ||

ಭಾರೀ ಭಾರಿಗುವೆಥೆಗಳ | ದೂರುವದಂದವೆನರಹರಿ |
ಪಾರಾಮಾರ್ಥಕೆಗೋಚರ | ದೋರದೆಪೋಗುವದೇ || ೫ ||

**ರಾಗ ಶಂಕರಾಭರಣ, ಆದಿತಾಳ**
**(ಹರಿಯೇಲಾಲಿಸು ನಿನ್ನಾಮರೆಹೊಕ್ಕಾ ಎಂಬಂತೆ)**

ಯನಲಾಮಾತನುಕೇಳಿ ಗುರುರಾಯಾನೆಂದಾ ||
ಕನಿಕರದೊಳುಕಾಯ್ದುಬಿಡನೂಮುಕುಂದಾ || ೧ ||

ಮೂಲೋಕದಧಿಕಾರ | ಬಲಿಯೊಳಗಿಹುದೂ ||
ಕೇಳಶ್ವಮೇಧಗಳ್ಪ್ರಾರಂಭಿಸಿಹುದೂ || ೨ ||

ವಂದೆಜ್ಞಮಾಡಾಲುಶತಮಖನಹನೂ ||
ಕುಂದಕಬರದಿರೇಸ್ಥಿರದೊಳಾಳುವನೂ || ೩ ||

ಮರಸೀನಿಮ್ಮಯರೂಪ | ಪೋಗೀಶಾಲೆಯೊಳೂ |
ಇರಲಾಗಹರಿಬಂದೂ | ಕಾಯ್ದುತೋಷದೊಳೂ || ೪ ||

**ರಾಗ ಕೇತಾರಗೌಳ, ಅಷ್ಟತಾಳ**

ಗುರುರಾಯನೆಂದೂದಕೇಳುತ್ತಾ ದಿಕ್ಪಾಲ | ವರರೇಕೇಳೆಲ್ಲನಾವು |
ತೆರಳೀ ಭೂಸುರರೂಪಿನೊಳಗೇ ಶಾಲೆಯೊಳಿರ್ದು | ದುರುಳಾಗೆತಿಳಿಯಾದಂತೇ || ೧ ||

ಅಲ್ಲಿನಾವಿದ್ದಂತೆ ಕೆಡಿಸಾಬೇಕೀಕ್ರತು | ಮಲ್ಲಸಹಸಿಕರೊಳು |
ಖುಲ್ಲಾಗೆಶತಮಖವಾಗದತೆರದಿ ನಾ | ವೆಲ್ಲವಿಘ್ನವಗೈವುದೂ || ೨ ||

ಧರಿಸಿಭೂಸುರರೂಪದಿಂದಲೆಪೊರವಂಟು | ತೆರಳಿಬಂದಿರೆಶಾಲೆಗೆ |
ವರವೆ ಕೇಳಿತ್ತಕಸ್ಯಪಮುನಿಯದಿತೀಯ | ಕರಯುತ್ತಾಲಿಂತೆಂದಾನೂ || ೩ ||

**ವಾರ್ಧಿಕ್ಯ**

ವರಮನೋಹರೆ ಪುಣ್ಯಚರಿತೆಪಯೊವ್ರತವೆಸಗಿ |
ಹರಿಯಪೆತ್ತಿಹ ಭಾದ್ರಪತಮಾಸ ಶುಕ್ಲದೋಳ್ |
ಪರಮದ್ವಾದಶಿಶ್ರವಣನಕ್ಷತ್ರ ಪ್ರಥಮಾಂ ಶಶುಭದಿವಸ ಸುಮೂಹೂರ್ತದೀ ||
ಹಿರಿಯಸುತನಿಂದ್ರನಿಗೆ ಜಯವು ನಿಶ್ಚಯವಹುದು |
ತರಳನಿಗೆ ವಾಮನನು ಯಂಬಪೆಸರಿಟ್ಟಹೆನು
ಸರಸಿಜಾಸನಮುಖದಿ ಚೌಲೋಪನಯನಾದಿ ವಿರಚಿಸೀರ್ಪೆವು ಮುದದಲೀ || ೧ ||

**ಭಾಮಿನಿ**

ಚಾರುಚಂದಿರವದನೆನಿನ್ನ ಕು |
ಮಾರವಾಮನನನ್ನು ನೋಳ್ಪರೆ |
ಪಾರಮಾರ್ಥಕದೊಳಗೆ ಮೋಹವುಬೀರಿ ಭಾದಿಪುದು ||
ನೀರಜಾಕ್ಷಿಯೆ ಕರದುತಾರೆನೆ |
ಭೋರನೈದುತಲದಿತಿಮತ್ಸುತ |
ಬಾರೆನುತಬಿಗಿದಪ್ಪಿ ಮುದ್ದಿಸಿಮುನಿಪಗೊಪ್ಪಿಸಲೂ || ೧ ||

**ರಾಗ ಮಾಧುಮಾಧವಿ ತ್ರಿವುಡೆತಾಳ**

ಬಂದುಪಿತನಡಿಗೆರಗಿ ದೈನ್ಯದಿ | ನಿಂದಕುವರನನಪ್ಪಿ ಮುನಿಪತಿ |
ಕಂದಬಾರೆನ್ನಯ್ಯಜಗದಾ | ನಂದಿಕುಳ್ಳಿರುಯನ್ನುತಾ || ೧ ||

ತರಳನೇಮಾಯಾವಿವಿಗತಾ | ವರಣಹೊರವಳಗೆಲ್ಲನೀನಿಹೆ |
ನಿರುತನಿನ್ನೊಳಗೈಕ್ಯವೀಜಗ | ಪರಮಪುರುಷಪರಾತ್ಮನೇ || ೨ ||

ತನುರಹಿತಪರಿಪೂರ್ಣನಿರ್ಗುಣ | ಗುಣನಿಧಿಯೆನೀ ಸಕಲಲೋಕದ |
ಜನನವಿಲಯಸ್ಥಾನಕಾರಣ | ಚಿನುಮಯಾತ್ಮಕಚೇತನಾ || ೩ ||

ಬೆಳಸುತಿಹೆರಜದೊಳಗೆಸತ್ವದಿ | ನಿಲಿಸಿತಾಮಸಗುಣದಿ ನಿಧನ |
ಕ್ಕುಳಿಸಿಜಗವನು ಪೊರೆವೆಮಾಯದಿ | ತಿಳಿವರ್ಯಾರೂ || ೪ ||

ಯನ್ನೊಳುದಿಸಿದಕಾರಣದಿನಾ | ಧನ್ಯನಾದೆನು ದೇವದೇವನೆ |
ಸನ್ನುತಾಂಗಳು ಯದಿತಿಪುಣ್ಯಗ | ಳನ್ನು ವರ್ಣಿಸಲಾರೆನು || ೫ ||

**ರಾಗ ತೋಡಿ, ಆದಿತಾಳ**
**(ಏಸುದಿನಬೇಕೆನ್ನ ಪ್ರಾಣೇಶನಕಾಂಬುವದಕ್ಕೆ ಎಂಬಂತೆ)**

ಯಂದುಮಾತಾಕೇಳೂತಾಗ | ಮಂದರಾದ್ರಿಧರನೂಪೇಳ್ದಾ |
ಛಂದದಿಂದಾಭಜಿಸುತ್ತಿಹರಾ | ನಂದಾದೊಳಪಾಲೀಸುವೇನೂ || ೧ ||

ಧರೆಯ ಭಾರವನ್ನೂಹರಿಸೀ | ನಿರುತಧರ್ಮಗಳನೂಮೆರಸೀ |
ಸುರರಪೊರವುದೊಂದೇಮನಕೇ | ಕೊರತೆಯಲ್ಲದುಂಟೇಮತ್ತೇ || ೨ ||

ಯಸವದಿವ್ಯತಪದೊಳೆನ್ನಾ | ವಶವಮಾಡಿಕೊಂಡೀರ್ದುದಕೇ |
ಕುಶಲದೊಳಗುದಿಸೀರ್ಪೆನಾ | ನೆಸಗಬೇಕಾದುದನೂಪೇಳೀ || ૩ ||

**ಭಾಮಿನಿ**

ಪರಮಪುರುಷನೆಜಗವ ಪೊರೆಯುವ |
ಬಿರಿದುನಿನ್ನಯಪದದೊಳಿರುತಿರೆ |
ವರವದೇನಿದೆ ನೋಡಿಕಾರ್ಯವನೆಸಗಬೇಕೆನಲೂ ||
ಸುರರಪಾಲಿಪೆನ್ಯುಕ್ತಿಯೊಳಗೆಂ |
ದರುಹಿಮುನಿಪಗೆಪರಮಪುರುಷನು |
ಹರುಷದಿಂದಿರಲಿತ್ತಬಲಿಯಧ್ವರದಶಾಲೆಯೊಳೂ || ೧ ||

**ರಾಗ ಕೇತಾರಗೌಳ, ಅಷ್ಟತಾಳ**

ಧರಣಿವಿಬುಧರೂಪದಿಂದೀರ್ಪಸುರಪನು | ಕರದುದಿಕ್ಪಾಲರನ್ನೂ |
ತುರಗಾಮೇಧಗಳರ್ಧವಾಯ್ತುನಾಳೆಯೊಳೀತ | ಪರಿಪೂರ್ಣಾಹುತಿಗೈವಾನೂ || ೧ ||

ಗಂಧರ್ವಚಿತ್ರಾಸೇನಗೆಪೇಳ್ದುವಿಘ್ನವ | ತಂದಿರಲನಕನಾವು |
ಇಂದಿರೆಪತಿಯವತರಿಸಿಹಬರುವನು | ಮುಂದೆಮ್ಮರಕ್ಷಿಪಾರೆ || ೨ ||

ನೆನೆಯೆಬಂದೆರಗಿದಚಿತ್ರಸೇನನೊಳಿಂದ್ರ | ಘನವೇಗದಿಂದಶ್ವವ |
ಮನಬಂದತೆರನೊಳಗಡಗಿಸೆನಲುಪೋದ | ನನುವಿನೊಳಾಖಚರಾ || ૩ ||

ಬಂಧೀಸಿರುವಯೂಪಸ್ತಂಭಾದತುರಗಾವ | ಗಂಧರ್ವಮಾಯಾಕದಿ |
ಅಂಧಾಕಾರವಗೈದುಕೊಂಡೊಯ್ಯೆನಭದೊಳ | ಗಂದಾವರಿತುಶುಕ್ರಾನು || ೪ ||

**ರಾಗ ತೋಡಿ ಅಷ್ಟತಾಳ**
**(ಕಂಡರತಿ ಚೆಲುವೆ ನೀನು ಭಂಡುಮಾತ ಎಂಬಂತೆ)**

ನೋಡುನೋಡುವಿರೋಚನಾಖ್ಯನೆ | ಮಾಡಿರುವ ಹಯಮೇಧಕೀಕ್ಷಣ |
ಕೇಡುಬಂದುದು ಖಚರನೋರುವನು || ಖೋಡಿತನದಲಿ ತುರಗವನುಶಳ |
ದೋಡಿಹನುಗಂಧರ್ವಗತಿಯೆಲಿ | ಮಾಡಿಸಿನ್ನೊಂದಗ್ನಿಕುಂಡವನೂ || ೧ ||

ಮಾರಣಧ್ವರಗೈಸಿ ದುರುಳನ | ಘೋರನರಿಯೆಲುಜನಿಪೆನೋರ್ವಳ |
ಭೂರಿಸಹಸವನೋಡುಕ್ಷಣದೊಳಗೆ || ಧೀರಕೇಳಥರ್ವಣ ರಹಸ್ಯದ |
ಘೋರಮುದ್ಗಲಸೂತ್ರದಿಂದಲೆ | ಮೂರುಲೋಕದ ಜಯವಪೊಂದಿಸುವೆ || ೨ ||

ಗುರುವರೇಂದ್ರನನುಡಿಯಕೇಳುತ | ತ್ವರಿತದೊಳುಗೈಸಿದನುಕುಂಡವ |
ನೆರಹೆಸೋಪಸ್ಕರವನೆಲ್ಲವನೂ || ಹರುಷದಿಂಸ್ಥಾಪಿಸುತಲಗ್ನಿಯ |
ಚರುಸಮಿಧಗಳ ಕೊಂಡುಶುಕ್ರನು | ವಿರಚಿಸಲುಹೋಮಗಳ ಸಂತಸದೀ || ೩ ||

**ವಾರ್ಧಿಕ್ಯ**

ವಡದುದಿಳೆ ಬಾದೆರಯುತಗ್ನಿಕುಂಡದೊಳಾಗ |
ಘುಡುಘುಡಿಸಿ ದಳ್ಳುರಿಯಮಧ್ಯದೋಳ್ ಝುಗಿಝುಗಿಸಿ |
ಖಡುಗಕುಂತಪರಶ್ವಚಾಪಶರ ಖಟ್ವಾಂಗ | ವಿಡಿದಷ್ಟಬಾಹುಗಳಲಿ ||
ಬಡಬಾಗ್ನಿಯಂತೆ ಹೂಂಕರಿಪವದನತ್ರಯದಿ |
ಖಿಡಿಗೆದರಿಕೆಂಜೆಡೆಯುಕೋರ್ದಾಡೆಮಸೆಯುತ್ತ |
ವಡನೆಪೊರಟಿಹಯೋಜನಾಯತಸ್ತನಭರದ | ಯುವತಿಯಂಕಾಣುತುಶನಾ || ೧ ||

**ಭಾಮಿನಿ**

ಕೇಳುದಂಷ್ಟ್ರೋಜ್ವಲೆಯೆವೇಗದಿ |
ಖೂಳಖೇಚರನೊದ ತುರಗವ |
ಜಾಲಮಾಯಕದಿಂದಪೋಗೈ ತಹುದುನೀನೆನುತಾ ||
ಪೇಳಿಕಳುಹಿಸೆಶುಕ್ರಗೊಂದಿಸಿ |
ಕಾಲಮೃತ್ಯುವಿನಂತೆದಳ್ಳುರಿ |
ಜ್ವಾಲೆಧಗಧಗಿಸುತ್ತಲೊದನದಿ | ಚಿಗಿದಳಂಬರಕೆ || ೧ ||

**ರಾಗ ಸೌರಾಷ್ಟ್ರ, ಮಟ್ಟೆತಾಳ**
**(ನಡೆಯಲೊಮುರಾರಿಸುಖದೊಳು ಎಂಬಂತೆ)**

ನಡದಳಾಗಳಭ್ರಮಾರ್ಗದಿ | ದಂತಗಳನು | ಖಡಿದುಧೈರ್ಯಶೌರ್ಯಸಹಸದಿ ||
ದಡಿಗಖಳರರೋಮಕೂಪ | ದೊಳಗೆ ಸೃಷ್ಟಿಗೈಯ್ಯುತಾಗ |
ಖಡುಮಹೋಗ್ರದಿಂದ ಭೋರ್ಗುಡಿಸುತಂದಕಾರವೆಸಗಿ |
ಕೆಡಹುತಗ್ನಿಯನ್ನು ದಂಷ್ಟ್ರ | ಜ್ವಾಲೆವದನತ್ರಯದೊಳಾಗಲೇ |
ಪಡವಿಗಲೆವಭಾರಿಕೆಂಜೆಡೆಯ | ನುಲಿವಶೌರ್ಯದಿಂದಲೇ || ನಡದಳಾಗ || ೧ ||

ತುರಗಸಹಿತ ಪೋಪಖಚರನಾ | ತಡದುಹೂಂ | ಕರಿಸಿ ಭಲರೆಮೂರ್ಖನೀತನಾ |
ಕೊರಳನರಿದುತಿಂಬೆನೆನುತ | ಪರಮಶೌರ್ಯದಿಂದಧನುಜೆ | ಕರದಖಡ್ಗವನ್ನುತಿರುಹಿ |
ಧೊರೆಯಮೇಧತುರಗವನ್ನು | ಭರದಿಶಳದುತಂದನಿನ್ನ | ನಿರಿಸೆಚೋರದುರುಳನೀನೆಲಾ
ಪರಮಶೌರ್ಯತೋರುತೋರು | ಖಡಿದುತಿಂಬೆನೀಗನೋಡೆಲಾ || ೨ ||

**ರಾಗ ಮಾರವಿ ಏಕತಾಳ**

ಖಡಖಡಿದೀಕ್ಷಣಭೂತಗಣಂಗಳಿ | ಗಿಡಿಸುವೆನೌತಣವಾ ||
ದಡಿಗ ಮಧಾಂದಳೆನೀನ್ಯಾರೆನುತಲಿ | ಪಡದನುಶರಗಳನೂ || ೧ ||

ಬರುವಸ್ತ್ರವ ಮುರಿದಿಕ್ಕುತಲೆಂದಳು | ದುರುಳನೆನಿನ್ನಸುವಾ ||
ಕರಕರನಗಿಯುತಮೆಲುತಿಹನಾನೇ | ಮರಣಾಂತಕಮೃತ್ಯು || ೨ ||

ಭಂಡರಕ್ಕಸೀ ನೀತೋರದಿರೆನ್ನೊಳು | ದ್ಧಂಡಪರಾಕ್ರಮವಾ ||
ಖಂಡಿಪನಿನ್ನೆಲು ಚಿತ್ರಸೇನಾಖ್ಯನ | ಚಂಡಸಹಸನೋಡು || ೩ ||

ಯಲೆಲೇಖಚರನೆ ಬಿಡುಬಿಡುತುರಗವ | ಫಳಿಸದಿರಹಿತವನು ||
ಕೊಲುಎನುಕೊಡದಿರೆ ಸಾರಿದೆನಿನ್ನಯ | ಛಲಗಳ ಬಿಡುಬೇಗಾ || ೪ ||

**ರಾಗ ಶಂಕರಾಭರಣ, ಮಟ್ಟೆತಾಳ**

ಭೃಷ್ಟೆಕೇಳು ಸಾಮದಿಂದ | ಕೊಡೆನುತುರಗ ನಿನ್ನಶೌರ್ಯ |
ವೆಷ್ಟುನೋಳ್ಪೆತಾಳುತಾಳೆನುತ್ತಲೆಚ್ಚನು || ೧ ||

ಕೊಡಹಿರೋಮಗಳನುದೈತ್ಯೆ | ಯಡದಕೈಯಿಂದಲದನು |
ಪಿಡಿದುಮುರಿದು ಬಿಸುಟಳಾಗ | ಬರುವಶರವನೂ || ೨ ||

ದಿಂಡೆನೋಡುನೋಡೆನುತ್ತ | ಚಂಡಚಿತ್ರಸೇನ ಖತಿಯ |
ಗೊಂಡು ಗಾಂಧರ್ವಶರವ | ನೆಚ್ಚಗಜರುತಾ || ೩ ||

ತಿಕ್ಕಿಪುಡಿಯಗೈದು ಕಾರ್ಗ | ತ್ತಲೇಯನೆಸಗಿದ್ಯೆತ್ಯೆ |
ಫಕ್ಕನೊಂದುತರುವತೂಗಿ | ಬಡಿದಳಾಕ್ಷಣ || ೪ ||

ಭರಕೆತಪ್ಪಿಚಿತ್ರಸೇನ | ಹರಿಸಿಮಾಯತಿಮಿರಗಂ |
ಧರುವಮಾಯದಿಂದಭೋ | ರ್ಮರದುನಿಂದನು || ೫ ||

ಭಳಿರೆಭಳಿರೆಯೆನುತಲವನ | ಚರಣವನ್ನು ಪಿಡಿದುತಿರುಹಿ |
ಭರದಿಬಂಧಿಸುತ್ತ ಧರಣಿ | ಯೊಳಗೆಕೆಡಹುತಾ || ೬ ||

**ವಾರ್ಧಿಕ್ಯ**

ತೋರುವಿಕ್ರಮವೆನುತಲಾರ್ಭಟಿಸಿ ಶರೆವಿಡಿದು |
ಘೋರನಶ್ವವಕೊಂಡುಪಿಂತಿರುಗಿ ಶಾಲೆಯಡೆ |
ಸಾರಿಬಲಿಪದಕೆರಗಿ ಬಂಧಿಸಿಹೆಗಂಧರ್ವ ವೀರನನುನೋಡೆನ್ನುತಾ ||
ನಾರಿ ಸಂತೋಷದಿಂದೊಪ್ಪಿಸಲ್ತುರಗಮಂ |

ಕಾರಮಂದಿರಕಿಡಿಸಿ ಖೇಚರನಶ್ರೋಣಿತಾ |
ಧಾರುಣಿಪ ಮುಖಭಂಗವಾಯಿತಿದಕೇನೆನುತಗುರುವರೇಣ್ಯನಿಗೆರಗಲೂ || ೧ ||

**ಸಾಂಗತ್ಯ**

ಕುಳ್ಳೀರೈತ್ರೈಲೋಕ | ಮಲ್ಲಾನೀಬಲಿರಾಯಾ | ಬಲ್ಲೇ ಪ್ರಾಯಚ್ಚಿತ್ತಂಗಳನೂ ||
ಸಲ್ಲೀಸುಲಕ್ಷಾಜ್ಯಾಹುತಿಯಷ್ಟಾಕ್ಷರಿಯೊಳು | ನಿಲ್ಲಾದೀದೋಷಾಪೋಗುವದೂ || ೧ ||

ಎಂದೂಹೋಮಗಳನ್ನು ಗೈಸೇವಿಧ್ಯುಕ್ತಾದಿ | ಬಂಧೀಸಿತುರಗಾವಧ್ವಜಕೇ ||
ಕುಂದಾಕಬರದಂತೇ ದಂಷ್ಟ್ರಜ್ವಾಲಿನಿಯನ್ನು | ಛಂದಾದೊಳಿಕ್ಕೀಕಾವಲನೂ || ೨ ||

ಇಂತೂಸಪ್ತಾಹದಿ ಹೋಮಗೈಸಲು ಗುರು | ಸಂತಸದೊಳುವೈರೋಚನಿಯೂ ||
ಚಿಂತೀತಾರ್ಥವವಿಪ್ರರಿಂಗಿತ್ತು ಪರದಿಮ | ಹಾಂತಪುಣ್ಯವಫಳಿವೆನೆನುತಾ || ೩ ||

**ರಾಗ ರೇಗುಪ್ತೆ ಅಷ್ಟತಾಳ**

ಚರಣಕೊಂದಿಪೆದ್ವಿಜವರರೇ | ಮನ | ದಿರವಬೇಡಿರಿಸದ್ಗುಣರೇ |
ಧರಣಿಮೂರಧಿಕಾರವಿರುವದಲ್ಲದೆ ಮಹ | ತುರಗಾಮೇಧವಗೈವೆವಾಂಛಿತ ಕೊಡುವೆನೂ || ೧ ||

ಇದ್ದಾಕಾಲದಿ ಧರ್ಮಗಳನೂ | ಮಾಡ | ದಿದ್ದರೆ ಫಲಗಳಿನ್ನೇನೂ |
ಬದ್ಧವಾಗಿಹಧನ ಸದ್ಧರ್ಮವೆಂಬೂದೇ | ಸಿದ್ಧವೆಂಬುದುಸರ್ವ | ಶೃತಿಸಾರವಚನಾದಿ || ೨ ||

ಕೊಡದಿರೆಧನಿಕದಾನವನು | ಮುಂ | ದೊಡನವದಾರಿದ್ರನಹನೂ |
ಮಡದಿಮಕ್ಕಳ ರಕ್ಷಿಸುವ ಶೋಕವಪಡುತಿರೇ | ಕಡೆಗಣ್ಣಿನೊಳುಕಾಣರಾಗ ಶಿರಿವಂತಾರು || ೩ ||

ಘೋರಸಂಸಾರ ಬಂಧನವು | ಬಿಡ | ದ್ಯಾರಿಗುಕರ್ಮಚೇತನವು |
ಪಾರಮಾರ್ಥದೊಳೀವೆವಾಂಛಿತಾರ್ಥವನೀಗ | ವಾರಿಜಾಕ್ಷನದಿವ್ಯಪಾದಕರ್ಪಣವಾಗಿ || ೪ ||

**ರಾಗ ಕಾಂಬೋಧಿ, ಝುಂಪೆತಾಳ**

ಕೇಳಯ್ಯಾ ಬಲಿಚಕ್ರವರ್ತೀ ನೀಪುಣ್ಯಾತ್ಮಾ |
ಪಾಲಿಸಿಹೆ ನಮ್ಮ ಮನದಿರವಿತ್ತೀವರಿಗೇ ||
ಮೂಲೋಕದೊಳು ನಿನ್ನವೋಲೀರ್ಪಧಾರ್ಮಿಕನ |
ಕೇಳಿಲ್ಲಪೂರ್ವದೊಳ | ಗಾಳೀರ್ಪರೊಳಗೇ || ೧ ||

ಕೊಟ್ಟಾದಕ್ಷಿಣದ್ರವ್ಯ | ದೊಳಗೇ ತೃಪ್ತಿಗಳಾತು |
ಅಷ್ಟೈಶ್ವರ್ಯಗಳೊಡನೆ ಶಾಶ್ವತದಿ ನೀನೂ ||
ಸೃಷ್ಟಿಯೊಳು ಚಿರಜೀವಿಯಾಗೆಂದುಪರಸಿಹೆವು |
ಕಟ್ಟಿಹುದು ಸದ್ಧರ್ಮಫಲವುಸಂತತದೀ || ೨ ||

ಭೂಸುರೋತ್ತಮರಿಂದಾ | ಪಡದಾಶಿರ್ವಾದವನು |
ತೋಷದೊಳೂ ಬಲಿಚಕ್ರವರ್ತಿಗುರುಮುಖದಿ ||
ಶೇಷಶಯನಪ್ರೀತವಾಗುವಂದದಿ ಸರ್ವ |
ದೋಷಹರಹೋಮಗಳನೆಸಗುತ್ತಲೀರ್ದಾ || ೩ ||

**ವಾರ್ಧಿಕ್ಯ**

ವರಗಾರ್ಹಪತ್ಯಾದಿಕುಂಡದೊಳ್ವಿದ್ಯುಕ್ತ |
ಚರುಪುರೋಡಾಶಾದಿ ಹವಿಯನರ್ಪಿಸುತಿರಲ್ |
ತರಣಿಕೋಟಿತ್ರಯದಿ ಝಳಝಳಿಸಿಪೊಳೆಯುತಿಹ ತೇಜವೇನಿದುಯನ್ನುತಾ ||
ಪರಮಮಖಶಾಲೆಯಂಬೆಳಗುತಿಹ ಪಾರ್ವನೊ |
ತುರಗಮೇಧವನೋಳ್ಪಮನವೆಳಸಿಮಾರ್ತಾಂಡ |
ಹರಿತಹನೊಪದ್ಮಜಂಕೃತುಶಾಲೆಯಡೆಗೀಗ | ತೇಜಪೂರ್ಣಿಮಕೌಮುದಿ || ೧ ||

**ರಾಗ ಮಧುಮಾಧವಿ ತ್ರಿವುಡೆತಾಳ**

ಉದಯಿಸಲುಸುಜ್ಞಾನಚಂದ್ರನು | ಮುದದಿಹೃತ್ತಾಕಾಶಮಧ್ಯದಿ |
ಚದುರುತಿರಲಜ್ಞಾನತಿಮಿರಗ | ಳೊದಗೆಸಂಶಯತಾರಕಿ || ೧ ||

ಅರಳಿಕೊಂಡಿಹಚಿತ್ತಕುಮುದವ | ಪರಿಕಿಸುತಲಾಹ್ಲಾದಕೋಕಿಲ |
ಮೆರಯಲಂತಃಕರಣಸಾಗರ | ಭರಿತಮೇರುವೆದಪ್ಪಿರೆ || ೨ ||

ಚೋರತನಕೈತಂದಮದಹಂ | ಕಾರಕರ್ತವ್ಯಗಳನಡಿಸದೆ |
ಸಾರುತಿವೆಭಳಿಭಳಿರೆಸಂಶಯ | ಕಾರಣಂಗಳಿದೇನಿದೂ || ೩ ||

ಯನುತಲಚ್ಚರಿಗೊಂಡುತನ್ನೊಳು | ಧನುಜಪತಿಮುಂದೆಸೆಯನೋಡಲು |
ದಿನಪಕೋಟಿಪ್ರಕಾಶದೊಟುವರ | ಘನತೆಯೊಳ್ಬರೆಕಾಣುತಾ || ೪ ||

ಕಿರುನಗೆಯುಸಂಪುಲ್ಲಪಂಕೇ | ರುಹಸಮೋಪಮವದನತುಳಸೀ |
ಸರದಿರಂಜಿಪಕಂಠದೇಶದ | ಪರಮಮಂಗಲ | ಮೂರುತೀ || ೫ ||

ಮೆರವದ್ವಾದಶನಾಮ | ವಾಮದ | ಕರದಿಪಿಡಿದಿಹಛತ್ರ ದಕ್ಷಿಣ |
ಕರದೊಳಗೆ ದಂಡವನುಧರಿಸಿಹ | ವಟುವರೇಣ್ಯನಿಗೆರಗುತಾ || ೬ ||

**ರಾಗ ನವರೋಜು ಏಕತಾಳ**
**(ಬಂದನು ದೇವರದೇವಾ ಎಂಬಂತೆ)**

ಧನ್ಯನುನಾನೀದಿನದಿ | ಪರ | ದುನ್ನತಭೋಗವಜವದೀ |
ಎಣ್ಣಿದ ತೆರದೊಳುಲಭಿಸಿತು ವಟುವರ | ರನ್ನು ನಾಕಂಡುದಕಾಗಿ ಸಂತೋಷಿಪೆ || ೧ ||

ಗುರುರಾಯಾನೊಡಗೊಂಡೂ | ವಟು | ವರನನುಮನ್ನಿಸಿಕಂಡೂ |
ಕರತಂದಾಕ್ಷಣಸುರಚಿರಪೀಠವ | ಹರುಷದೊಳೀಯುತಚರಣವತೊಳದೂ || ೧ || ಶಿರದೊಳುತೀರ್ಥವಧರಿಸೀ | ಧೃಡ |
ಧರದಾಕಿಂಕರನೆನಿಸೀ |

ವಿರಚಿಸಿಮಧುಪರ್ಕಾದ್ಯುಪಚರ‍್ಯವ | ಕರಗಳಜೋಡಿಸುತೆಂದನು ವಿನಯದಿ || ೩ ||

ಕುಶಲವೆತಮ್ಮಯಪದಕೆ | ಕ್ರತು | ವೆಸಗಿಹೆಸಾರ್ಥಕಪರಕೆ |
ಶಶಿರವಿಕೋಟಿನಿಭಾಂಗನೆ ಬಂದುದು | ಹಸನವಾಯಿತು ಯನ್ನಧ್ವರಶಾಲೆಯೂ || ೪ ||

**ರಾಗ ಶಂಕರಾಭರಣ ಆದಿತಾಳ**
**(ಹರಿಯೇಲಾಲಿಸು ನಿನ್ನಾಮರೆಹೊಕ್ಕಾ ಎಂಬಂತೆ)**

ಬಲಿರಾಯನೆನ್ನಾಗಮನ ನಿನ್ನಾಮನದೀ || ನೆಲಸೀದರ್ಥಗಳೇನೂ ಪೇಳೋನೀಮುದದೀ || ೧ ||

ಅರಿಯೂವೆನೆಲೆಸ್ವಾಮಿ | ಬ್ರಹ್ಮರ್ಷಿವರರಾ || ಧರಸೀತೊತಪವೇಪೇಳೀದೇಹವಿವರಾ || ೨ ||

ಸ್ವಾರಿಯಾಗಮನಾದಿ ಪಿತೃದೇವತೆಗಳೂ | ಭೂರಿತೃಪ್ತರು ಧನ್ಯನಾದೇಕೃಪಾಳೂ || ೩ ||

ತಮ್ಮಾಗಮನದಿಂದ | ಕೃತುಸಾಂಗವಾಯ್ತು | ಕರ್ಮಾಶಾಸ್ತ್ರೀಯದಗ್ನಿಹೋಮಿತವಾಯ್ತು || ೪ ||

ತವಪಾದಸಲಿಲಾಬಿಂದುಗಳಿಂದಶಿರವು | ಭವಭಯಾದುರಿತಾವ | ಹರಿಸೀತುನಿಜವೂ || ೫ ||

**ಭಾಮಿನಿ**

ಕಿರುಮೃದುಲಪದರಜದೊಳೆನ್ನಯ |
ತುರಗಮಖಮಂಟಪ ಪವಿತ್ರವು |
ಪರಮಭೂಸುರವಟುವರೇಣ್ಯನೆ ನಮೊನಮೋಯಂಬೇ ||
ಅರುಹುಜೋತಿರ್ಮಯನೆನಿನ್ನಯ |
ಭರಗಳೇನ್ನೈವಾಂಛಿತಾರ್ಥವ |
ಕರುಣಿಸುವೆ ಧನಕನಕಗೋಭೂದಾನಗಳನಾನೂ || ೧ ||

**ರಾಗ ಬೇಗಡೆ, ಏಕತಾಳ**
**(ಏನಿದು ನಿಮ್ಮಲ್ಲಿ ಸಂವಾದ ಎಂಬಂತೆ)**

ಕೇಳುಕೇಳೈಸಾರ್ವಭೌಮಕನೇ | ಸತ್ಕೀರ್ತಿಸದ್ಗುಣ |
ಸೀಲಭೂಸುರಪ್ರೀಯಧಾರ್ಮಿಕನೇ | ಪೇಳುವೆನು ತಪವೀರ್ಪಮುನಿಪನ |
ಬಾಲವಾಮನನೆಂಬವಟುನಾ | ಕೇಳಿಬಂದಿಹೆನಿನ್ನಧರ್ಮವ |
ಜಾಲಮಾತುಗಳಲ್ಲನಂಬಿಕೊ || ೧ ||

ನಿನ್ನಕುಲದೊಳಗ್ಯಾಚಿಸಿದರಿಂಗೇ | ಧಿಕ್ಕಾರಗೈದಿಹ |
ರನ್ನುನಾಕೇಳಿಲ್ಲವೀವರೆಗೇ | ಮುನ್ನ ಕೊಡುತಿಹೆನೆಂದು ಆಶೆಗ |
ಳನ್ನು ಪೇಳುತಕಡೆಯೊಳೀಯದೆ | ಬನ್ನಬಡಿಸುತಲುಬ್ಧರಾಗಿಹ |
ರನ್ನುನಿನ್ನನ್ವಯದಿಕೇಳನು || ೧ ||

ಬೆದರಿವೈರಿಗಳಿಂಗೆಸಮರದಲೀ | ವೋಡೀರ್ಪರುಂಟೇ |
ಕದನಶೂರರು ನಿನ್ನವಂಶದಲೀ | ಗಧೆಯಧರಿಸಿ ಹಿರಣ್ಯಕಾಕ್ಷನು |
ವುದಧಿಪರಿಮಿತಚರಿಸೆಸಮರವ | ನೊದಗಿಕೊಡುವವರನ್ನುಕಾಣದೆ |
ಕುದಿವಕೋಪದೊಳೊದಧರೆಯನು || ೩ ||

**ರಾಗ ಕಾಂಬೋದಿ ಅಷ್ಟತಾಳ**
**(ಮರುಳಾದೆಯೇನೊ ಬಾಲಾ ಎಂಬಂತೆ)**

ಪರಮಾಧಾರ್ಮಿಕನೇನೀನೂ | ನಿನ್ನನ್ವಯ | ಚರಿತೆವಿಸ್ತರಿಸೂವೆನೂ |
ವರಹನಾಗಿಯೆಹರಿ | ಕಷ್ಟದಿಂದರಿದಾರೂ | ಧುರದಿಹಿರಣ್ಯನಗೆಲಿದೇನೆಂದರಿತಾನೆ || ೧ ||

ಮಡಿದಾತಮ್ಮನವೈರಿಯಾ ಕೊಲ್ಲೂವಛಲ | ವಿಡಿದರಸಾಲುಧಾತ್ರಿಯಾ |
ಕಡುಶೂರಹಿರಣ್ಯ | ಕಸ್ಯಪಗಂಜುತ್ತಾ | ವಡಲ ಪೊಕ್ಕಾನುಹರಿ | ಬಿಡನೆಂದೂಭಯದೊಳೂ || ೨ ||

ಶರಧಿಸಪ್ತಕದೊಳಾಗೇ | ತ್ರೈಭುವನಾದಿ | ಗಿರಿತರುಲತೇಯೊಳಗೆ |
ಅರಸೀಕಾಣದೆಹರಿ | ಯಳಿದನೆನ್ನುತಮಹ | ಧುರಧೀರಹಿರಣ್ಯಕಸ್ಯಪುಮನದಲ್ಲಿ || ೩ ||

**ರಾಗ ಕೇತಾರಗೌಳ, ಅಷ್ಟತಾಳ**

ಮರಣಪರ್ಯಂತರವೈರವೆಂಬುದ ತನ್ನೊ | ಳರಿತಾಹಿರಣ್ಯಕನೂ |
ಹರಿಯನರಿಸಿಮತ್ತೆ ಪೋಗಲಿಲ್ಲಂತಹ | ಧುರಧೀರರವರು ಕೇಳೂ || ೧ ||

ತವತಾತಪ್ರಹ್ಲಾದ ಹರಿಭಕ್ತಧಾರ್ಮಿಕ | ಕವಿರಾಯಾ ಗುರುವರನೂ |
ಭುವನಾದೊಳಿವರಂಥ ಪ್ರಾಜ್ಞರಕಾಣೆನು | ವಿವರಿಪುದ್ಯಾಕೆನಾನೂ || ೨ ||

ಅರಿಗಳಾಗಿಹ ಸುಮನಸರಾಕಪಟವೃತ್ತಿ | ಯರಿತಾ ವಿರೋಚನನೂ |
ಧರಿಸಿ ಭೂಸುರರೂಪದಿಂದ ಬೇಡಲುಬಂದ | ಸುರರಿಗಾಯುಷ್ಯವಿತ್ತಾ || ೩ ||

ಹಿಂದಿನವರಿಗಿಂತಲಧಿಕನಾಗಿಹೆ ಧರ್ಮ | ದಿಂದಾಲೀಧಾತ್ರಿಯೊಳೂ |
ಮುಂದೆ ಜನಿಪರುಂಟೆಬಲಿರಾಯಮೂರ್ಜಗ | ವಂದೀಪುದೆನೆಕೇಳುತ್ತಾ || ೪ ||

**ಭಾಮಿನಿ**

ಆದರಾಲಿಸುಸ್ವಾಮಿಮನದೊಳು |
ಖೇದಪಡದಿರುವಾಂಛಿತಾರ್ಥವ |
ಸಾದರದಿಕೊಡುತೀರ್ಪೆನೆನೆ ವಟುವರನು ನಸುನಗುತಾ ||
ಮೇದಿನಿಯನೀ ನನ್ನ ಪದದೊಳ |
ಗಾದಮೂರಡಿಯೆನ್ನುಕರುಣಿಸು |
ಮೋದಪಡುವೆನು ಜೀವನಾವಧಿ ವೃತ್ತಿಯಾಗುವದೂ || ೧ ||

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಎಲೆಲೆವಟುವರಕೇಳುನಿನ್ನಯ | ಸಲೆಚಮತ್ಕೃತಿವಚನಕೇಳಲು |
ತಿಳಿದಮಹಿಮರಿಗತಿಹಿತಂಗಳುಪರಿಯನೋಡೆ || ೧ ||

ಬಾಲನೀನಹೆಸ್ವಾರ್ಥ ವಿಷಯದಿ | ಖೇಲವಿಲ್ಲಿದರಿಂದಲೇನಿದೆ |
ಕೇಳುಸಪ್ತದ್ವೀಪವಾದರು ಕೊಡುತಲಿಹೆನೂ || ೨ ||

ಮೂರುಲೋಕಾಧೀಶನೆನ್ನೊಳ | ಗ್ಯಾರುಯಾಚಿಪರನ್ಯರೆಡೆಯೊಳು |
ಸಾರಿಕೇಳುವದುಂಟೆ ಸಾಲದೆವೃತ್ತಿತಮಗೆ || ೩ ||

ಕೇಳುವೃತ್ತಿಗಳೆನಿತುಕೊಡುವೆನು | ಬಾಲಬುದ್ಧಿಯುನಿನ್ನಜೀವನ |
ಕಾಲಭೂಕ್ಷೇತ್ರಗಳಮೂರಡಿಯಿಂದಲೇನೂ || ೪ ||

**ಸಾಂಗತ್ಯ**

ಮೂರೂಲೋಕದಭೋಗ್ಯಾ | ವಸ್ತುಗಳಿರೆಬಲಿ |
ಪಾರೂಗಾಣರು ಆಸೇಗಳಿಗೇ ||
ಮೂರಡಿಯೊಳು ತೃಪ್ತಿಹೊಂದಾದೇ ಸಂಪೂರ್ಣ |
ಧಾರುಣೀಯಿತ್ತಾರಾಗುವದೆ || ೨ ||

ಆಳಿಕೊಂಡೀರ್ದರು ಸಪ್ತದ್ವೀಪದಭೂಮಿ |
ಪಾಲರುಪೃಥುಗಯಸಗರಾ ||
ಮೇಲಾಶಾಪೂರ್ತಾರಾಗಿರಲಿಲ್ಲವೆಂಬೂದ |
ಕೇಳಿಬಲ್ಲೆನುಬಲಿರಾಯಾ || ೨ ||

ದುರಿತಾಹೊಂದುವನ್ಯೆಸೆಪ್ರಕೃತಾಕಿಂದಧಿಕಾಶಾ |
ವೆರದೂಕೊಂಡಿಹ ದ್ವಿಜವರನೂ ||
ಕರವಾರು ಚೋರನೆಂದವ ನಿಂಗೇಸಾಕೀಗ |
ಚರಣಾಮೂರವನೀಯಕೊಡಲೂ || ೩ ||

ಎನೆಹಸಾದಗಳೆಂದೂ ಪರಮಾಭಕ್ತಿಗಳಿಂದ |
ಧನುಜಾಧಿಪತಿಜಲವನ್ನೂ ||
ವಿನಯಾದಿಕೈಕೊಂಡೂ ಕೊಡುವೇನೆನ್ನುತಲಿಹ |
ಮನವರಿತಾಗಭಾರ್ಗವನು || ೪ ||

**ರಾಗ ಕೇತಾರಗೌಳ, ಝಂಪೆತಾಳ**

ಲಾಲಿಸೆನ್ನಯನುಡಿಯನೂ | ಬಲಿರಾಯ | ಶ್ರೀಲಲನೆಪತಿಈತನೂ |
ಲೋಲಕಸ್ಯಪಸತಿಯೊಳು | ಜನಿಸಿರ್ಪಬಾಲ | ದಿವಿಜರಮೊರೆಯೊಳೂ || ೧ ||

**ರಾಗ ಮಾರವಿ ಏಕತಾಳ**

ಮೋದಗಳಾಯಿತುಗುರುವರ ತುರಗದ | ಮೇಧವೆಹರಿಗಾಗಿ ||
ಸಾದರದೊಳುನಾಗೈವೆನು ದಯದಿಂ | ಮಾಧವಮೆಚ್ಚಿಹನೂ || ೧ ||

**ರಾಗ ಕೇತಾರಗೌಳ, ಝಂಪೆತಾಳ**

ಅರಿಯದಿತ್ತೆಯೊಭಾಷೆಯಾ | ಕಂಟಕವ | ತರುವನೀತನುನಿಶ್ಚಯಾ |
ಶಿರಿಭೋಗಕೀರ್ತಿಗಳನೂ | ಬರೆಸೆಳದು | ಸುರಪನಿಂಗೀವನಿವನೂ || ೧ ||

**ರಾಗ ಮಾರವಿ ಏಕತಾಳ**

ಗುರುನಿನ್ನಭಿಮತವ್ಯಾವುದು ನಿತ್ಯದಿ | ಪರಿಸೇವಿಪೆನವನಾ ||
ಕರುಣಕೆಪಾತ್ರನಾನೊಂಚನೆಗೈವನೆ | ಶರಣಾಗತರಕ್ಷಾ || ೧ ||

**ರಾಗ ಕೇತಾರಗೌಳ, ಝಂಪೆತಾಳ**

ಧರೆಯನೊಂದಡಿಮಾಳ್ಪನೂ | ಸ್ವರ್ಗವನು | ಯರಡಕದಕೈಕೊಂಬನೂ |
ಇರದೆಧರಮತ್ತೊಂದಕೆ | ನಿನ್ನಶಿರಿ | ಬರೆಸೆಳವನಿವನುಜೋಕೆ || ೧ ||

**ರಾಗ ಮಾರವಿ, ಏಕತಾಳ**

ಕೊಟ್ಟಿಹೆಭಾಷೆಯಭೂಸುರನೀತಗೆ | ಶ್ರೇಷ್ಟನೆಕೇಳೀಗಾ ||
ದುಷ್ಟನಾನಾಗೆನು ಕೊಡುವದೆಸರಿಸರಿ | ಎಷ್ಟೆಂದರುಬಿಡೆನೂ || ೧ ||

**ರಾಗ ಕೇದಾರಗೌಳ, ಝಂಪೆತಾಳ**

ಸ್ಥಾನಚ್ಯುತಿಯಾಗುತಿಹುದೂ | ಕೆಡಬೇಡ | ದಾನವರಿಗತಿಮೃತ್ಯು ಬಹುದು |
ಯೇನಾದಡಾಗಲಿದನೂ | ನಂಬದಿರು | ನಾನರಿತುಪೇಳಿರ್ಪೆನೂ || ೧ ||

**ರಾಗ ಕೇದಾರಗೌಳ, ಝುಂಪೆತಾಳ**

ಪರಕಾರ್ಯಕಾಗಿತಾನು | ಕೆಡುತಿಹನೆ | ಮರುಳಾಟದಿಂದ್ಯಾವನು |
ಮರಣಸಂಕಟಬರುವದು | ವಾಗ್ದಾನ | ತ್ವರದರಿಂತೇನಾಹುದೂ || ೧ ||

**ರಾಗ ಮಾರವಿ ಏಕತಾಳ**

ಪರಕಾರ್ಯಕೆಸತ್ಪುರುಷರು ಜೀವವ | ತ್ವರವರು ಕೇಳ್ಗುರುವೇ ||
ಮೆರದಿದೆಕೀರ್ತಿದಧೀಚಿಮುನೀಶನ | ಧರೆಯೊಳುಶಿಬಿನೃಪನಾ || ೧ ||

**ವಾರ್ಧಿಕ್ಯ**

ವರಯುವೆನು ಬಲಿಚಕ್ರವರ್ತಿ ಗೋರಕ್ಷಣದಿ |
ತರುಣಿಯೊಳು ರತಿಕೇಳಿಸಮಯ ಕನ್ಯಾಘಟನ |
ವರನಿಗೆಸಗುವಕಾಲ ವ್ಯಾಪಾರದೊಳ್ಮತ್ತೆ ಜೀವನೋಪಾಯಗಳಲೀ ||
ಧರಣಿವಿಭುದರರಕ್ಷಣಾರ್ಥಮರಣೋಪದ್ರ |
ಪರಹಿಂಸೆಮುಂತಾದವಿಷಯದೊಳ್ಸಟೆಯಾಡೆ |
ಬರದುಪಾತಕ ಭಾಷೆತಪ್ಪಿದರೆ ಸುಖವಿಹುದು ಕೆಡಬೇಡನಾಸಾರಿದೆ || ೧ ||

**ರಾಗ ಶಂಕರಾಭರಣ ತ್ರಿವುಡೆತಾಳ**

ಗುರುವೆಕೇಳ್ದಯವಂತಪುರುಷರು | ತಿರಿದುಜೀವಿಪಜನರೊಳೂ |
ಕರುಣದಿಂದೀಯುವರಭೀಷ್ಟವ | ತ್ವರಯರವರಾ || ೧ ||

ಮತ್ತೆನಿಮ್ಮಂದದೊಳುಪೂಜ್ಯತೆ | ವೆತ್ತಶ್ರೌತ್ರಿಯರಾದರಾ |
ಇಷ್ಟಪಾಲಿಸದೀರ್ದಮೂರ್ಖನ | ಸೃಷ್ಟಿಪೊರುವಳೆಭಾರ್ಗವಾ || ೨ ||

ಪರಮಪೂಜ್ಯನೀಬ್ರಹ್ಮಚಾರಿಯು | ಪರಮಪುರುಷನೆಯನ್ನುತಾ |
ವರಯುತಿಹೆನೀನೆನಗೆಧನ್ಯನು | ಕೊಟ್ಟ ಭಾಷೆಯುನಡದರೇ || ೩ ||

**ರಾಗ ಘಂಟಾರವ ಅಷ್ಟತಾಳ**
**(ತಾಳಿ ಪರ್ವತಕಲ್ಮರಂಗಳನೆಲ್ಲ ಎಂಬಂತೆ)**

ಯಂದಮಾತನುಕೇಳುತ್ತಾ ಭಾರ್ಗವ | ಮಂದಮತಿ ನೀನೆನ್ನವಾಕ್ಯವ |
ಹಿಂದೆಕಳದೆಯೊವೆರ್ಥದೀ || ೧ ||

ತಾನೆಪ್ರಾಜ್ಞಾನೆಂತೆಂಬಾನೆಶೀಘ್ರದಿ | ಸ್ಥಾನಚ್ಯುತಿಯಾಗೆನುತಶಪಿಸಿದ |
ದಾನವಾಧಿಪಗಾಗಳೂ || ೨ ||

**ರಾಗ ಕಾಂಬೋಧಿ ಝುಂಪೆತಾಳ**

ಗುರುವೇನಿನ್ನಯಶಾಪ | ಶಿರದೊಳಗೇಧರಿಸಿಹೆನು | ಧರಣಿಸುರನಿಗೆಕೊಟ್ಟಾ |
ವಚನಗಳತ್ವರಯೇ || ಕರುಣನಿಧಿ ನಿನ್ನ ಕೃಪೆಯಿರಬೇಕು ಪೂರ್ಣದಲಿ |
ಶಿರಿಭೋಗಧರಣಿಯೊಳು ಮನವಿಲ್ಲವೀಗ || ೧ ||

ತರುಣೀ ವಿಂಧ್ಯಾವಳಿಯ | ಪರಿಕಿಸುತಲಿಂತೆಂದಾ | ವರಮನೋಹರೆನಿನ್ನ |
ಮತವನರುಹಿನಲೂ || ಚರನಕೆರಗುತಲವಳು ಪೂರ್ವಪುಣ್ಯಗಳಿಂದ |
ಕರವಿಡಿದೆ ನಾನಿನ್ನ | ಧನ್ಯಳಾಗಿಹೆನು || ೨ ||

ಪತಿಯೇನಿನ್ನಯಭಕ್ತಿ | ಗಾಗೀಶ್ರೀ ಪರಮಾತ್ಮಾ |
ನತಿಶಯದೀಪ್ರತ್ಯಕ್ಷವಾಗೀಬಂದಿಹನೂ || ಸತತಕೊಟ್ಟಿಹ ಬಾಷೆಗಳಕಬಾರದುವಾಂಛಾ |
ಪೃಥಿವಿಮೂರಡಿಗಳನು ಕೊಡುಕೊಡೀಕ್ಷಣದೀ || ૩ ||

ಯಂಬನುಡಿಯನುಕೇಳಿ | ಸಂಭ್ರಮದೊಳಾಬಲಿಯು | ಕಂಬೂಕಂಠಿನಿಜಲವಾ | ತಾರೀಗೆಂದೆನುತಾ || ಕುಂಭಿನಿಪಬೆಸಸಿದಾಕ್ಷಣ ತರಲುಭಕ್ತಿಯೊಳ |
ಗಂಬುಜೇಕ್ಷಣಮೂರ್ತಿಯನ್ನು ಪರಿಕಿಸುತಾ || ೪ ||

**ರಾಗ ಕಾಂಬೋಧಿ ತ್ರಿವುಡೆತಾಳ**
**(ಯಾತಾಕಿಷ್ಟುಪಚಾರವೈ ಎಂಬಂತೆ)**

ಜಯನಮೊಜಯಜಯತೂ | ಭೂಸುರವರ್ಯ | ಜಯನಮೊ | ಜಯ | ಜಯತೂ | | | ಪಲ್ಲ ||

ಜಯ | ಜಯಾ | ದುರಿತಾಧ್ರಿನಾಶನ | ಜಯ | ಜಯಾ | ನಿಗಮಾರ್ಥಸಾಧನ || ಜಯ |
ಜಯಾಮಂತ್ರಾದಿಬೀಜಕ | ಜಯತು ಜ್ಞಾನಾನಂದಕಾರಣ || ಅನುಪಲ್ಲ ||

ಚರಣಾವತೊಳದಿಹೆನು | ಅರ್ಘ್ಯವನಿತ್ತು | ಪರಮಾಚಮನವಿತ್ತೇನು |
ಪರಿಮಳಿಪಸೌಗಂಧವಕ್ಷತೆ | ಸುರಗಿಮಂದಾರಾದಿಪುಷ್ಪವ |
ಪರಿಗ್ರಹಿಸಿ ಭಕ್ಷಾದಿಭೋಜನ | ಕರುಣಗೊಳುವಟುವರರೆವೇಗದಿ || ಜಯನಮೊ || ೧ ||

ಇದಕೊಕರ್ಪುರವೀಳ್ಯವ | ಸೇವಿಸುದಯಾಂ |
ಬುಧಿಯೆನೀರಾಜನವಾ | ಸದಮಲಾತ್ಮಕಮಂತ್ರ ಪುಷ್ಪದೊ |
ಳ್ಮುದದಿಪ್ರದಕ್ಷಣೆಯಗೈಯ್ಯುತ | ಪದಕೆನಮಿಸುವ ಧನ್ಯನಾದೆನು |
ಪದುಮನಾಭಸ್ವರೂಪಜಯಜಯ || ಜಯನಮೋಜಯಜಯತೂ || ೨ || || ૩೭೯ ||

**ಭಾಮಿನಿ**

ಪರಮಭಕ್ತಿಗಳಿಂದ ಪ್ರೋಣಿತ |
ಪುರದಧಿಪನಾಕ್ಷಣವೆ ಪತ್ನಿಯ |
ಕರದೊಳಿಹ ಸೌವರ್ಣಕಲಶದಜಲವಕೈಕೊಂಡು |
ಪರಮಭೂಸುರವರ್ಯ ನಿಮ್ಮಯ |

ಚರಣದೊಳುಮೂರಡಿಯಭುವನವ |
ಹರಿಜನಾರ್ದನವಾಸುದೇವಾರ್ಪಣದಿಕೊಟ್ಟಿಹೆನೂ || ೧ || || ೩೭೭ ||

**ವಾರ್ಧಿಕ್ಯ**

ನೀರಜೇಕ್ಷಣವಿಶ್ವರೂಪತನ್ನೊಳಗಾಂತು |
ಮೂರುಲೋಕೋನ್ನತಕೆಬೆಳಸಿತನುರಂಜಕದ |
ಹಾರಕುಂಡಲಮುಕುಟಮಣಿರಮ್ಯಕಾಂತಿಕೇ | ಯೂರಕೌಂಸ್ತುಭರತ್ನದಿ ||
ಚಾರುಕಂಠಾಭರಣಕಿರಣಪ್ರಕಾಶದೊಳ್ |
ತೋರುತಿಹಖದ್ಯೋತಶತಕೋಟಿಭಾಸದಿಂ |
ಮೂರುತಿತ್ರಿವಿಕ್ರಮನುಕ್ಷಣಮಾತ್ರದೊಳ್ಸರ್ವ | ರಕ್ಷಿಗೋಚರಮಾಗಲು || ೧ || || ೩೭೮ ||

**ರಾಗ ಕೇತಾರಗೌಳ ಝಂಪೆತಾಳ**

ಧಾರುಣಿಯನೊಂದುಪದದಿ | ವ್ಯಾಪಿಸುತ | ವಾರಿಜಾಕ್ಷನುಮೋದದಿ |
ಭಾರಿದೇಹದಿದಿಶಗಳಾ | ತುಂಬಿಮುದ | ವೇರಿಯಂಬರಪಥಗಳಾ || ೧ ||

ಎತ್ತಿ ಎರಡನೆಪಾದವಾ | ಸ್ವರ್ಗಾದಿ | ಸತ್ಯತಪಜನಲೋಕವಾ |
ಅರ್ಥಿಯಿಂದಳದೆಂದನೂ | ಬಲಿಯೆನಾ | ನೆತ್ತಿಡಲಿಪದವಂದನೂ || ೨ ||

ತೋರುತೋರ್ಬೆವೇಗದಿ | ಯರಡಾಯ್ತು | ಮೂರನೆಯಪದಕರುಣದೀ |
ಧಾರೆಯರದುದತೆಜಿಪುದೂ | ಸರಿಯಲ್ಲ | ಕ್ರೂರಪಾತಕಬರುವದೂ || ೩ ||

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಅಂಬುಜೇಕ್ಷಣನೆಂದಮಾತನು | ಜಂಭಮೊದಲಾಗಿರುವ ದೈತ್ಯಕ |
ದಂಬಕೇಳುತ ಖತಿಯಗೊಳುತಾರ್ಭಟಿಸುತಾಗಾ || ೧ ||

ಸತ್ಯವನುಬಿಡೆನೆಮತಲೆಮ್ಮಯ | ಪೃಥ್ವಿಪಾಲಕಕುಳಿತುಕೊಂಡಿಹ |
ಧೂರ್ತವಟುಬಂದೆಮ್ಮವಡಯನಗೋಣಕೊದಾ || ೨ ||

ಕಳೆದುಕೊಂಡನು ಸತ್ಯಧರ್ಮಕೆ | ನಿಳಯಸರ್ವಸ್ವವನು ಭೂಪತಿ |
ಕೊಲಲುಬೇಕೀ ಕಪಟವಿಪ್ರನನೆನುತಕನಲೀ || ೩ ||

ಭೋರಿಡುತಮುಂಬರಿದುಬರುತಿಹ | ಘೋರದಾನವರನ್ನು ಕಾಣುತ |
ವಾರಿಜಾಕ್ಷನು ಕರದುಗರುಡನೊಳೆಂದನಾಗ || ೪ ||

ಧುರಕೆ ಖಳರೈತಹರುಭಾಷೆಯ | ಸಲಿಸಲಿಲ್ಲೀದೈತ್ಯನಾಥನು |
ಕೆರಳಿತಾನಿನ್ನೇನಗೈವನೊ | ಬಂಧಿಸಿವನಾ || ೫ ||

ಅರುಹೆನಮಿಸುತಲಾಗಗರುಡನು | ವರುಣಪಾಶದಿಬಲಿಯಕರಗಳ |
ಭರಿದಿಬಂಧಿಸೆ ದಂಷ್ಟ್ರಜ್ವಾಲಿಯಾರುಭಟಿಸೀ || ೬ ||

**ರಾಗ ಶಂಕರಾಭರಣ ಮಟ್ಟೆತಾಳ**

ಆರೊನಮ್ಮಧರಣಿಪತಿಯ | ಕ್ರೂರತನದಿಬಿಗಿದಮೂರ್ಖ |
ತೋರುನಿನ್ನಸಹಸವೆನುತ ಮಲತುನಿಂದನು || ೧ ||

ದುಷತಾಳುತಾಳೆನುತ್ತ | ಮುಷ್ಟಿಯನ್ನುಬಲಿದುಗರುಡ |
ಕುಟ್ಟೆತಿವಿಯೆ ವೃಕ್ಷದಿಂದಬಡಿದನಾಕ್ಷಣಾ || ೨ ||

ಭರಕೆತಪ್ಪಿವೈನತೇಯ | ಕೆರಳಿರಕ್ಕೆಯಿಂದಬಡಿದು |
ದುರುಳನೋಡೆನುತ್ತಲೆತ್ತಿನಭದೊಳೆಸದನೂ || ೩ ||

ಘೋರನಾದದಿಂದಬಂದು | ಭಾರಿಶಿಲೆಯನೆತ್ತಿಪೊಯ್ಯೆ |
ಶೂರತನದಿಕೊಕ್ಕಿನಿಂದ ಕುಕ್ಕಿ ಕೆಡಹಿದಾ || ೪ ||

ಖಾರಿರಕ್ತವನ್ನುದಂಷ್ಟ್ರ | ಜ್ವಾಲೆಬಿದ್ದಪರಿಯಕಂಡು |
ಘೋರನಾದದಿಂದಜಂಭಬರಲುಕಾಣುತಾ || ೫ ||

ನಿಲ್ಲುನಿಲ್ಲುಯನುತಧನಪ | ಮಲ್ಲಸಹಸಿಯಹುದೊಭಳಿರೆ |
ಚೆಲ್ಲುತಿಹೆನುರಕ್ತವೆನುತಶರದೊಳೆಸದನು || ೬ ||

**ರಾಗ ಭೈರವಿ, ಏಕತಾಳ**

ಬರುವಸ್ತ್ರವಮುರಿದಾಗ | ಖಳ | ಪರಿಘವತಿರುಹುತಭೇಗಾ |
ಯರಗಲುಧನಪತಿಯನ್ನು | ತುಂ | ಡರಿಯುತಕೆಡಹಿದನದನೂ || ೧ ||

ಫಡಫಡಧನಪತಿನಿನ್ನಾ | ಶಿರ | ಖಡಿಯುವೆಕೇಳೀಗೆನ್ನಾ |
ಖಡುಗವನೋಡೆಂದೆನುತಾ | ನೆಗ | ದಿಡುವದಮುರಿದದನಗುತಾ || ೨ ||

ಮುಕ್ಕಡಿಗೈಯ್ಯಲು ಕಂಡೂ | ಖಳ | ಗಕ್ಕನೆಶೂಲವಗೊಂಡು |
ಉಕ್ಕುತರೋಷದೊಳೆಸೆಯೆ | ಕೈ | ಯಿಕ್ಕಿಕುಬೇರನುಕಸಿಯೆ || ೩ ||

ಗಧೆಯನುತಿರುಹುತಭರದಿ | ಬರ | ಲದರನುಕಸಿಯುತರವದಿ |
ಯದೆಗೆರಗಲುಖಳಗಾಗ | ಶಿರ | ಚದುರುತ ಬಿದ್ದನುಭೇಗಾ || ೪ || || ೩೯೭ ||

**ಭಾಮಿನಿ**

ಕುಂಭಿನಿಗೆಮೂರ್ಛಿಸುತಬಿದ್ದಿಹ |
ಜಂಭನನುಕಂಡಾಗಧನುವಿನೊ |
ಳಂಬುಕೀಲಿಸಿ ಶೌರ್ಯದೊಳುವೃಷಪರ್ವ ಮುಂದರಿಯೆ |
ಅಂಬುನಿಧಿಪತಿ ತಡದುರೌದ್ರದಿ |
ಸ್ತಂಬಡಿಂಬೋದ್ಭವನತೆರದಲಿ |
ಮುಂಬರಿದುಶರಮಳೆಯಸುರಿಸುತಲೆಂದನಾಕ್ಷಣದಿ || ೧ || || ೩೯೮ ||

**ರಾಗ ಮಾರವಿ ಏಕತಾಳ**

ನಿಲ್ಲೆಲೊನಿಲ್ಲೆಲೊ ಖುಲ್ಲಯಕ್ಷಾಧಮ | ನಿಲ್ಲೀಕ್ಷಣಧುರಕೆ ||
ಬಲ್ಲಿದನಹೆಧಿಟನಿನ್ನಯರಕುತವ | ಚೆಲ್ಲುವೆನೋಡೆಂದಾ || ೧ ||

ವರುಣನೆನಿನ್ನಯುಪೌರುಷಬಲ್ಲೆನು | ಧುರದೊಳಗೆನಗಂಜಿ ||
ತೆರಳಿದೆ ಖಗರೂಪುಗಳನು ಧರಿಸುತ | ಶಿರವರಿಯುವೆನೀಗಾ || ೨ ||

ಏನಂದೆಯೊಫಡಯಕ್ಷನೆ ನಿನ್ನಯ | ಗೋಣರಿದೀಕ್ಷಣದೀ ||
ಕಾಣಿಸುವೆನುಯಮನಾಲಯನೋಡೀ ಬಾಣದೊಳನುತೆಚ್ಚಾ || ೩ || || ೪೦೦ ||

**ರಾಗ ಮಾರವಿ ಮಟ್ಟೆತಾಳ**

ದುರುಳನಿನ್ನ ಕರುಳನುಗಿವೆನೆನುತಲೆಕ್ಷನೂ ||
ಉರುಕಠೋರಶರವನುಗಿದುಪಡದುನಿಂದನೂ || ೧ ||

ಖಿಡಿದುವರುಣನಾಗಖತಿಯತಳದು ವೇಗದಿ ||
ಪಿಡಿದಚಾಪವನ್ನು ಮುರಿಯೆಯಕ್ಷಶೌರ್ಯದಿ || ೨ ||

ಭಾರಿಶೂಲವನ್ನು ವರುಣನಂಗಕೆಸಯಲು ||
ಚೂರುಗೈಯ್ಯಲೊಂದೆವಿಶಿಖದಿಂದ ಖತಿಯೊಳು || ೩ ||

ಬಿಂಡಿವಾಲವನ್ನುತಿರುಹುತಾಗಲೆಕ್ಷನು ||
ಚಂಡಕೋಪದಿಂದಪೊಯ್ಯಲಾಗವರುಣನು || ೪ ||

ಕಸಿದುಬಿಸುಡಿ ಸಿಂಹ್ವನಾದಗೈದು ದುರುಳನೇ ||
ಅಸಮಸಹಸಿಯಹುದು ಪಾದಕೆರಗುಗಮ್ಮನೆ || ೫ ||

**ರಾಗ ಮಾರವಿ ಏಕತಾಳ**

ಖಿಡಿಖಿಡಿಯೇರುತ ವೃಷಪರ್ವಾಖ್ಯನು | ಖುಡುಗವಜಳಪಿಸುತಾ ||
ದಡಿಗತನವನಾನಿಲಿಸುವೆನೆನ್ನುತ | ವಡನದತೂಗಿಡಲೂ || ೧ ||

ಭಳಿರೇಭಾಪುರೆಯನುತದಖಂಡಿಸಿ | ಛಲದೊಳುಘರ್ಜಿಸುತಾ ||
ಗಳವನುಖಂಡಿಪೆನೆನುತಲೆಪಾಶದಿ | ಬಲಿಯುತಲುರುಳಿಸಿದ || ೨ || || ೪೦೭ ||

**ಭಾಮಿನಿ**

ಧುರದಿ ವೃಷಪರ್ವನನುಬಂಧಿಸಿ |
ಹರಿಯನಾದದೊಳೊರುಣ ನಿಂದಿರೆ |
ಗುರುವುನಡೆತಂದಾಗ ಶಿರದೂಗುತ್ತಲಿಂತೆಂದಾ ||
ದುರುಳದಾನವರೆಲ್ಲ ಶುಕ್ರನ |
ಭರವಸದಿಕೊಂಡಿಹರುಸ್ವರ್ಗವ |
ಕೊರಳಕೊದನು ತ್ವರದನಿವರಿಗೆಬಂದಿತಪಜವು || ೧ || || ೪೦೮ ||

**ರಾಗ ಶಂಕರಾಭರಣ ಮಟ್ಟೆತಾಳ**

ನುಡಿಯಕೇಳುತಾಗಶುಕ್ರ | ಯಲವೊಲಂಡಿಗುರುವೆಹಿಂದೆ |
ಕಡುಬಲಾಢ್ಯಶಿಷ್ಯರೊಡನೆ ವನಕಪೋದೆಲಾ || ೧ ||

ಅರಿತುಜಯದಕಾಲವನ್ನು ಪಾಯದಿಂದ | ಲಹಿತರನ್ನು
ಶಿರವನರಿವೆನನುತಲಡಗಿಬಂದೆವೀಗೆಲಾ || ೨ ||

ಯನ್ನ ಶಿಷ್ಯರೈಕಮತ್ಯ | ವೆನ್ನೊಳಿರ್ಪಭಕ್ತಿಯಂತೆ |
ನಿನ್ನ ಶಿಷ್ಯರೀರ್ದರಿನಿತು | ಕಷ್ಟವ್ಯಾತಕೊ || ೩ ||

ನಿನ್ನ ಶಿಷ್ಯನ್ಯಾಕೆನುಡಿಗಳ | ನ್ನುಕೇಳದಿನಿತುಗೈದ |
ರೆನ್ನಮಾತಸುರರುಕೇಳ್ವುದಕ್ಕೆಗೆಲಿದರೂ || ೪ ||

ಸುರಪನಿನ್ನತೆಜಿಸಿವಿಶ್ವ | ರೂಪನೆಂಬವಿಬುಧನನ್ನು |
ಗುರುವಮಾಡಿಕೊಂಡುಕೊರಳಕೊದನ್ಯಾತಕೊ || ೫ || || ೪೧೩ ||

**ರಾಗ ಘಂಟಾರವ ಏಕತಾಳ**
**(ತಾಳಿಪರ್ವತಕಲ್ಮರಂಗಳನೆಲ್ಲ ಎಂಬಂತೆ)**

ಯಲವೊಶುಕ್ರನೆ ಜಡಿದೆನೀಯನ್ನಾನು | ಫಳಿಸಿರುವತಪವಿರಲು | ಶಪಿಸುವೆ |
ಛಲವನೋಡೀಗೆಂದನೂ || ೧ ||

ಗುರುವೆಯನ್ನಯತಪದಶಕ್ತಿಗಳಿರೆ | ಉರುಹುತಿಹಪ್ರತಿಶಾಪದಿಂದಲಿ |
ಪರಿಯನೋಡೇವೇಗದಿ || ೨ ||

**ಭಾಮಿನಿ**

ವಿಲಯರುದ್ರನತೆರದೊಳೀರ್ಪರ |
ಬಲಿಯುಕಾಣುತ ಶಿರವಬಾಗಿಸಿ |
ಕಲಹವ್ಯಾತಕೆ ನಿಮ್ಮೊಳೀರ್ವರು ಪರಮವಿಕ್ರಮರು ||

ಹಲವುಶಾಸ್ತ್ರವನರಿತಪ್ರಾಜ್ಞರೆ |
ಖಳರುಕೈಕೊಂಬುವರುಕ್ರೋಧವ |
ನೊಲಿಸದಿರಿನೀವೆಂದುಸಂತೈಸುತ್ತ ದೈನ್ಯದೊಳು || ೧ || || ೪೧೬ ||

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ತಾಳಿರೈಧಾನವರು ಕ್ಷಮೆಯನು | ಕೇಳಿಯನ್ನಯನುಡಿಯತಾರಕ |
ಮಾಲಿಶಂಬರಹೇತಿಮುಖ್ಯರೆನುತ್ತಬಲಿಯು || ೧ ||

ಧುರವಿಜಯವೆಮಗಿಲ್ಲವೀಗಳು | ಸರುವಭೂತಗಳಿಂಗೆ ಕರ್ಮದಿ |
ಬರುವ ಸುಖದುಃಖಗಳ ಹರಿಸೆಸಮರ್ಥರಾರು || ೨ ||

ಮೊದಲೆಮಗೆಜಯ ಸುರರಿಗಪಜಯ | ವದಗಿದಂದವನೆನಯಬೇಡಿರಿ |
ವಿಧಿವಶದಿವೆತ್ಯಸ್ತವಾಗಿದೆ ಕ್ಷಮಿಸಿರಯ್ಯಾ || ೩ ||

ನೋಡಿದೈವದಗತಿ ಪ್ರಸನ್ನತೆ | ಕೂಡೆವದಗಲು ವಿಜಯಮನಗಳ |
ಮಾಡಿಹೊಂದುವತನಕ | ಕಾಲವನೋಡುತಿಹುದು || ೪ ||

ರಕ್ಷಿಪರೆನೀವ್‌ನಿಮ್ಮಜೀವವ | ನೀಕ್ಷಣಪೊಂದಿರಿರಸಾತಳ |
ಶಿಕ್ಷಿಪಿರಿನೀವೀಗಸುರರೊಳಗೆಂದುಕಳುಹೆ || ೫ ||

ನಡಿದರಾಕ್ಷಣನಮಿಸಿದೈತ್ಯರು | ಜಡಜಲೋಚನನೆಂದಬಲಿಯೊಳು |
ಅಡಿಗಳೆರಡಾಯ್ತೆನಗೆ | ಮೂರರಪಡವಿತೋರೂ || ೬ ||

**ವಾರ್ಧಿಕ್ಯ**

ಕೊಟ್ಟಮಾತುಗಳಂತೆನಡಸದಿರಲಾಪುರುಷ |
ದುಷ್ಟನಹಸುರಲೋಕಧೂರವಾಪುದುಮತ್ತೆ |
ಸೃಷ್ಟಿಯೊಳ್ ಕ್ರಿಮಿಕೀಟಜನ್ಮಗಳತಾನೆತ್ತಿನರಕಯಾತನೆಪೊಂದುವಾ ||
ಕೆಟ್ಟಹಂಕಾರದೊಳಗಿತ್ತವಾಗ್ದಾನಮಂ |
ಬಿಟ್ಟುಬಾಳ್ದರೆ ನರಕದೊಳಗೆವಾಸಿಸುಯಂದು |
ಶಿಟ್ಟಿನೋಳ್ನಿಂದಿರುವಹರಿಯ ಮೂರ್ತಿಯದಿವ್ಯ ದೃಷ್ಟಿಯೊಳ್ತಾನೋಡಿದಾ || ೧ ||

ಪರಮವಿಶ್ವಂಭರನ ಮೂರ್ತಿಯೊಳ್ಬ್ರಂಹ್ಮಾಂಡ |
ಶರಧಿಗಿರಿತರುಗಹನಗುಲ್ಮನದ್ಯಾದಿಗಳು |

ಸುರರುಕಿನ್ನರ ಯಕ್ಷಸಾಧ್ಯಚಾರಣಗರುಡ ರುರಗತಿರ್ಯಕ್ ಪ್ರಾಣಿಯು ||
ತುರಗಮಖಶಾಲೆಯಾಚಾರ್ಯರುತ್ವಿಜರಿಂದ |
ಮೆರವದಕ್ಷಿಣವನ್ಹಿಯಹವನಿಯಜಾಜ್ವಲ್ಯ |
ವರಗಾರ್ಹಪತ್ಯಗಳಬಳಿಯೊಳಗೆತಾನಿರ್ಪುವಂತೆ ಕಂಡನುದೇಹದಿ || ೧ || || ೪೧೪ ||

**ರಾಗ ಆಹೇರಿ ಆದಿತಾಳ**
**(ಅಹುದೇ ಯನ್ನಾಯರಮಣಾ ಎಂಬಂತೆ)**

ಹರಿಜಗನ್ಮಯಪಾಲಿಸೂ | ದುರಿತಾರಿಶೌರೇ | ಪರಮಾಪುರುಷಾಲಾಲಿಸೂ || ಪಲ್ಲ ||

ಸರಸಿಜದಳನೇತ್ರಾ | ವರಕಮನೀಯಗಾತ್ರಾ | ಸುರಮುನಿಗಣಸ್ತೋತ್ರಾ |
ಶರಣುಸನ್ನುತಿಪಾತ್ರಾ || ಅನು ಪಲ್ಲ ||

ಶಿರಿಧರೆಸತಿಸುತರಾ | ಭೋಗಾದಿಮನ | ವಿರಿಸಾದಸದ್ಭಕ್ತಾರ | ಅರಿವೆನೀನೇಕಾಂತ |
ಭಕ್ತರೆಂದವರೀಗೆ | ಪುರುಷಾರ್ಥಗಳನಿತ್ತೂ | ಕರುಣೀಪೆಮೋಕ್ಷಾವ ||
ಹರಿಜನನ್ಮಯಲಾಲಿಸು || || ೧ ||

ನಿನ್ನಿಂದಾಲಜಭವರೂ | ಸುರಸಿದ್ಧಸಾಧ್ಯ | ಪನ್ನಾಗಾದಿಗಳೆಲ್ಲಾರೂ |
ನಿನ್ನೊಳುಸ್ಥಾವರ | ಜಂಗಾಮಾದಿಗಳೆಲ್ಲ | ಜನ್ಮಿಸಿಕಡೆಯೊಳು |
ನಿನ್ನೊಳಗೈಕ್ಯವೂ | ಹರಿಜಗನ್ಮಯಪಾಲಿಸೂ || ೨ ||

ನರಕಾಪೊಂದಾಲುಬೆದಾರೆ | ನಷ್ಟಾಗಳೈದೀ | ವರುಣಾಪಾತಕುಬೆದಾರೇ |
ಹರಿಯೇನೀನಿತ್ತವ | ಮಾನಾಕೂಬೆದರೇನೂ | ತ್ವರಯಾಲಾರೆನೂಸತ್ಯಾ |
ವದಕಗಿಬೆದರರೂವೇ | ಹರಿಜಗನ್ಮಯಪಾಲಿಸೂ || ೩ ||

ಉತ್ತುಮವಿದುನೋಡಾಲು | ಮಹನೀಯಾಪುರುಷಾ | ವಿತ್ತಿಹಶಾಸನಂಗಾಳೂ |
ಮತ್ತೆಪಿತನುಮಾತೃ | ಭ್ರಾತೃಗಳೀಯದ | ನಿತ್ತೂಶಿಕ್ಷಿಪರೈಸೆ | ಹಿತಕಾಗಿ ಮಹಿಮಾರೂ ||
ಹರಿಜಗನ್ಮಯಪಾಲಿಸೂ || ೪ ||

ಧನಧಾನ್ಯಮದದೊಳಾಗೇ | ಕನಕಾದಿಭುವನ | ವನಿತಾದಿಭೋಗಾದೊಳಾಗೆ |
ತನುಮಧಾಂದದಿದುಷ್ಟ | ಧನುಜಾರಾದೆಮ್ಮಾನು | ಕನಿಕರದೊಳಗದ | ತೆಜಿಸೀರಕ್ಷಿಪೆದೇವಾ ||
ಹರಿಜಗನ್ಮಯಪಾಲಿಸೂ || ೫ ||

**ಭಾಮಿನಿ**

ಧರೆಯನೆಲ್ಲವನಳದುಯನ್ನನು |
ವರುಣಪಾಶದಿಬಿಗಿದೆಯಾದರು |
ಹರಿಯೆ ನಿನಗರ್ಪಿಸಿದ ಮೂರನೆಯಡಿಯ ಕೊಡುತಿಹೆನೂ ||
ಸುರನರಾದಿಗಳಿಂಗೆದುರ್ಲಭ |

ಪರಮಪದಮಂಪಡವೆ ಕರುಣಾ |
ಕರನೆಯನ್ನಯ ಶಿರದೊಳಿರಿಸೈ ಪಾದಪಂಕಜವಾ || ೧ || || ೪೩೦ ||

**ಕಂದ ಪದ್ಯ**

ಇಂತೆನೆಶ್ರೀಹರಿ ಮನದೊಳ್ |
ಸಂತಸಗೊಂಡಿರೆ ವಿಂದ್ಯಾವಳಿಯತಿ ದೈನ್ಯದಿ |
ನಿಂತಿಹಮೂರುತಿಗೊಂದಿಸಿ |
ತಾಂತವಕದಿಕರಗಳಮುಗಿಯುತಲೆಂದಳ್ಭರದಿಂ || ೧ || || ೪೩೧ ||

**ಭಾಮಿನಿ**

ಸೃಷ್ಟಿಸಿಹೆನೀನಖಿಳಲೋಕವ |
ಸೃಷ್ಟಿಸಿಹೆಜೀವಗಳದೇವನೇ |
ಶ್ರೇಷ್ಟರೆಂಬರುತಾವೆ ತಮ್ಮಯಗರ್ವದಿಂಬರಿದೇ ||
ಸೃಷ್ಟಿಸ್ಥಿತಿಲಯನಿನ್ನೊಳಿದೆಹರಿ |
ಕೊಟ್ಟುಕೊಂಬಸ್ವತಂತ್ರರ್ಯಾರೈ |
ಹೃಷ್ಟಮಾನಸ ರಕ್ಷಿಸೆನೆಮನ್ನಿಸುತಲಾಕ್ಷಣದಿ || ೧ || || ೪೩೯ ||

**ರಾಗ ಜಂಜೋಟಿ ಅಷ್ಟತಾಳ**

ಶರಣಾರೊಳತಿಶ್ರೇಷ್ಟನೀನೂ | ಮಹ | ಹರುಷಾತಾಳಿಹೆಕೇಳೂ ನಾನೂ |
ಧರೆಯೊಳುಬಲಿಚಕ್ರವರ್ತಿನಿಂಗೆಣೆಗಾಣೆ | ಪರಮಭಕ್ತನುಸತ್ಯಧರ್ಮವ |
ವಿರಚಿಪರುಮತ್ತ್ಯಾರುಲೋಕದಿ || ೧ ||

ಆದಿಯೊಳ್ಭಕ್ತಾರಶಿರಿಯಾ | ನಾನು | ಮೋದಾದಿಶಳದೀವೆಸುಖವಾ |
ಖೇದಪಡಲುಬೇಡ ಸುರನರೋರುಗರಿಂದ | ಸಾಧನದಿಪಡಯುವರೆ ದುರ್ಲಭ |
ವಾದಘನಥರ ಸ್ಥಾನವೀವೆನು || ೨ ||

ಕಳಯಾಲೀಮನ್ವಂತರಗಳೂ | ಮನ | ವಳುಕಲಾಗದುಹರ್ಷತಾಳು |
ವಲಿದೀವೆಸೂರ್ಯಾಸಾವರ್ಣಿಯಕಾಲದಿ | ಬಲಿಯೆನಿನಗಾಗಿಂದ್ರಪದದೊಳು |
ನೆಲಸುವಂದವಮಾಳ್ಪೆಧಿಟವಿದು || ೩ ||

ವೆಥೆರೋಗಶೂನ್ಯವಾಗಿಹುದೂ | ಮತ್ತಾ | ಸುತಳಾದಿಬಳಲೀಕೆಬರದೂ |
ಕ್ಷುತುಕ್ಷಾಮಭಯವಿಲ್ಲ ವಿಶ್ವಕರ್ಮನುಗೈದ | ನತಿಶಯದರಂಜಕದಲೋಕದಿ |
ಸತಿಸುತಾದಿಗಳಿಂದಸುಖಿಸೈ || ೪ || || ೪೩೭ ||

**ಶ್ರೀರಾಗ ಆದಿತಾಳ**
**(ಶ್ರೀರಮಣಾಸರಸೀರುಹಾಕ್ಷಿಯ ಎಂಬಂತೆ)**

ಮಾರಜನಕಸುರ | ವಾರವಿನುತಕೇ | ಯೂರಧಾರೀಶ್ರೀಶಂ || ಪ ||
ಘೋರಧನುಜಸಂ | ಹಾರಗುಣೋದಯ | ಹೀರಕೌಂಸ್ತುಭಮಣಿ |
ಹಾರಧೀರಜಯ | ಮಾರಜನಕ || || ಅನುಪಲ್ಲ ||

ಚರಣಾನಂಬೀದರನ್ನೂ | ಪರಯೂವಾಬಿರೀದನ್ನೂ | ಧರಿಸೀಮೆರವದೇವಾ ||
ಸ್ಥಿರಚರಾತ್ಮಕಜೀವಾ | ನರಹರಿರೂಪವನೂ | ತಾಳುತತಾತಪ್ರಹ್ಲಾದನನೂ |
ಪರದಿಹೆ ತತ್ಪಿತನಿಂದಪಮೃತ್ಯುವ | ಹರಿಸಿದೆದೀನೋದ್ಧರಣ ನೃಕೇಸರೀ || ಮಾರಜನಕ || ೧ ||

ಧನುಜಾರವೈರಿಯಂದೂ | ನಿನಗೇಪೇಳೂವರಿಂದೂ | ಹನನಾಮಾಡುತ್ತಖಳರಾ |
ಘನಮೋಕ್ಷಾದೊಳಗೆಮ್ಮವರಾ | ಕನಿಕರದೊಳುನಿಲಿಸೀ | ಮುನಿಜನದುರ್ಲಭಪದವೆನಿಸೀ |
ಚಿನುಮಯನೀಸನ್ಮಿತ್ರನುಕರ್ಬುರ | ಜನರಿಂಗಹಿತನೆಂತೆಂಬರುಬರಿದೇ || ಮಾರಜನಕ || ೨ ||

ಆದೀಪುಣ್ಯದೊಳೀಗಾ | ಳಾದೀತೇಯಾರಭೋಗಾ | ಮೋದಾಶಾಶ್ವತವಲ್ಲಾ | ಭಾದಾಕವಹುದಲ್ಲಾ |
ಪೋದರೆಪುಣ್ಯಗಳೂ | ಪುನರಪಿಖೇದದಜನ್ಮಗಳೂ | ಮಾಧವಕೇಳ್ಸುರರಿಂಗತಿಕಷ್ಟವು |
ಸಾಧಿಸಿಮುಕ್ತಿಯಪಡವರು ಧನುಜರು || ಮಾರಜನಕ || ೩ || || ೪೩೯ ||

**ಸಾಂಗತ್ಯ**

ಹರಿಯಂದಾಶ್ವಾಸಾಮಾತ್ರದಿ ವಿರೋಚನನಿಹಾ | ಸುರರಾಯುಷ್ಯವ ಶಳದಿಹರೂ ||
ತ್ವರಯಾಲಾಪುದೆವಿಧಿ ವಶವನ್ನೂ ಸುತಳಾಕೆ | ಕರದೊದೂಸಲಹೋನೀನವನಾ || ೧ ||

ಶರಣಾಪ್ರಹ್ಲಾದನನೊಡಗೊಂಡೂವೇಗಾದಿ | ತೆರಳೂದೈತ್ಯರಘಡೆಸಹಿತಾ ||
ಸುರಪತಿಯೊಳುವೈರವಿಡದಿರೂಮನದೊಳೂ | ಸುರರಂಗೋಪಾಂಗಳೆನಗೇ || ೨ || || ೪೪೧ ||

**ರಾಗ ಶಂಕರಾಭರಣ ಅಷ್ಟತಾಳ**
**(ಯಾದವೋತ್ತುಮಾನೀನೂಲಾಲಿಸಿಕೇಳೂ ಎಂಬಂತೆ)**

ಸುರನರೋರುಗಾಯಕ್ಷಾ | ವಂದ್ಯಪಾದಾಬ್ಜಂ |
ಕರುಣದಿಸಲ ಹೆನ್ನಾನಭಯವನಿಡುತಂ || ಸುರನರೋರುಗ || ೧ ||

ನಿನ್ನನೇಮಕೆಭಂಗಾ | ವಿತ್ತಿಹೆನಾನೂ | ಮುನ್ನದೇವೇಂದ್ರನ |
ಪದವಕೊಂಡಿಹೆನೂ || ಸುರನರೋರುಗಯುಕ್ಷಾ || ೨ ||

ಪಕ್ಷಿವಾಹನಾದೇವಾ | ಗೈದುದುಷ್ಕೃತ್ಯಂ | ಕುಕ್ಷಿಯೊಳಿಡಬೇಡ |
ಪಾಲಿಸುನಿತ್ಯಂ || ಸುರನರೋರುಗಯಕ್ಷಾ || ೩ || || ೪೪೪ ||

**ರಾಗ ಅಷ್ಟತಾಳ**

ಶರಣನಿನ್ನಯಾ | ಸತ್ಯನಡತೆಯಾ | ಪರಿಕಿಸೂವರೇ | ವರುಣ ಪಾಶವಾ ||
ಗರುಡನಿಂದಲೀ | ಬಂಧಿಸೀರ್ಪನೂ | ಪರಮಕಿಂಕರಾ | ಸದ್ಗುಣಾಕರಾ ॥ ೧ ॥

ಕರುಣದಿಂದಲೀ | ಬಿಚ್ಚಿಶ್ರೀಹರೀ | ವರವಕೇಳಿಕೊ | ಕೊಡುವೆನೆಂದನೂ ||
ಚರಣಕೆರಗುತಾ | ಬಲಿಯುಸಂತತಾ | ಹರಿಯೆಯನ್ನಯಾ | ಗೃಹದಿನೆಲಸಯ್ಯಾ ॥ ೨ ॥ ॥

**ರಾಗ ಮಧ್ಯಮಾವತಿ ಆದಿತಾಳ**
**(ದೇವಾದೇವರದೇವಾ ಎಂಬಂತೆ)**

ಭಳಿರೇಭಳಿರೇಶರಣಾ | ನಿನ್ನನಿ | ಶ್ಚಲದಭಕ್ತಿಗೆಕರುಣಾ | ಯಳಸಿತೆನ್ನಾಯಮನ |
ಕಳವಳಿಸುತಲಿದೇ | ನೆಲಸೂವೇನನೂದಿದ | ಚಲಿಸೆನಾನೆಂದಿಗೂ ॥ ಭಳಿರೇ ॥ ೧ ॥

ಕರುಣೀಸೂವೆನೂನಿನಗೇ | ಭೋಗಕಿ | ನ್ನರರಂತೇಸುಖದೊಳಾಗೇ | ಸುರಸಿದ್ಧ ಸಾಧ್ಯಪ |
ನ್ನಗರಿಂದಪೊಂದದ | ಪರಮಸಂಪದನಿ ನಗೀವೆನಾಸುತಳದೀ ॥ ಭಳಿರೇ ॥ ೨ ॥

ಶರಣಾರಮನದೊಳಗೇ | ಸಂತತ | ವಿರುವೇನೂಮುದದೊಳಗೇ |
ತರಳರಂದದಿದಿವ್ಯಕರುಣಕಟಾಕ್ಷದೀ | ಪೊರವೆನಲ್ಲದೆತ್ವರದಿರೆನಾನೆಂದಿಗೂ ॥ ಭಳಿರೇ ॥ ೩ ॥

**ಭಾಮಿನಿ**

ವರಚತುರ್ಭುಜಮಂಡಲದಪೀ |
ವರವರೋರುಸ್ತಳದತೊಳಗುವ |
ತರುಣತುಲಸೀಮಾಲೆಗಳ ವರ | ವೈಜಯಂತಿಗಳಾ ||
ಕರವಿರಾಜಿತಶಂಖಚಕ್ರಾಂ |
ಬುರುಹಗಧೆಯೊಳುಮೆರವ ಪೀತಾಂ |
ಬರತ್ರಿವಿಕ್ರಮನೆನ್ನ ಬಿನ್ನಪವನ್ನು ಲಾಲಿಪುದೂ ॥ ೧ ॥ ॥ ೪೫೦ ॥

**ರಾಗ ಅಹೇರಿ ಏಕತಾಳ**
**(ಕೈಯ್ಯಾತೋರೊ ಕರುಣಿಗಳರಸನೆ ಎಂಬಾಂತ)**

ಲಾಲೀಸಯ್ಯಾದೇವಾಲಕ್ಷ್ಮೀ | ಲೋಲಾಶ್ರೀಹರೇ |
ನೀಲಾಮೇ ಘಶ್ಯಾಮಪಂಕಜ | ಮಾಲಾನರಹರೇ ॥ ಪಲ್ಲ ॥

ತುರಗಾಧ್ವರವಾನೆಸಗೀರ್ಪೇನೂ | ಹರಿಯೇನಾನೀಗಾ |
ಪರಿಸಮಾಪ್ತಿಪೂರ್ಣಾಹುತಿಯ ಗೈವೇನೂಭೇಗಾ ||
ಲಾಲಿಸಯ್ಯಾದೇವಾ ಲಕ್ಷ್ಮೀ | ಲೋಲಾಶ್ರೀಹರೇ ॥ ೧ ॥

ಸರಸೀಜಾಕ್ಷಾ ನಿನಗರ್ಪಣೆಯಾ | ಮಾಳ್ಪೇನೂಸ್ವಾಮೀ |
ತೆರಳೂವೆನಾಮೇಲೆಯಾಜ್ಞೆ | ಯಂತೇಸುಪ್ರೇಮೀ ||
ಲಾಲಿಸಯ್ಯಾದೇವಾಲಕ್ಷ್ಮೀಲೋಲಶ್ರೀಹರಿ || ೨ ||

ಖತಿಯೊಳಿಹನೂಗುರುವರೇಣ್ಯ | ಮತವಾಮೀರ್ದೆನೂ |
ಕೃತುಸಮಾಪ್ತಿಗೈಸೂವಂತೇ | ಪೇಳ್ವೂದೂನೀನೂ ||
ಲಾಲಿಸಯ್ಯಾದೇವಾಲಕ್ಷ್ಮೀಲೋಲಾ ಶ್ರೀಹರೇ || ೩ || || ೪೫೩ ||

**ರಾಗ ಸೂರಟ ಏಕತಾಳ**

**(ಕೋಮಲಾಂಗಿಕೇಳೆ ಎಂಬಂತೆ)**

ಬಲಿಯಂದುದಕೇಳೀ | ಮಾಧವ | ಫಳಿಲನೆಮುದತಾಳೀ |
ಕಳಿಯದೆಕಾಲವ ಪೂರ್ಣವಗೈಸನೆ | ಜಲಜಾಕ್ಷನಿಗಭಿವಂಧಿಸಿ ಶುಕ್ರನು || ೧ ||

ಯಜ್ಞಾಂಗನೆನೀನೂ | ಬಂದಿರ | ಲೆಜ್ಜದೊಳಿನ್ನೇನೂ |
ಯಜ್ಞಸಂಪೂರ್ಣಾಹುತಿಯಿನ್ನೇತಕೆ | ಸುಜ್ಞಾನವನೀಕರುಣಿಪದಾತನೂ || ೨ ||

ಉಶನನನುಡಿಗಾಗ | ಪೇಳ್ದನುಬಿಸಜಾಕ್ಷನುಬೇಗಾ | ಯಸಗಿದಕರ್ಮವಪೂರೈ
ಸದೆಬಿಡ | ಲುಸುರಿದೆಪಾತಕವೆನ್ನುತನಿಗಮದಿ || ೩ ||

ಅಸ್ತೆಂದೆರಗುತಲೀ | ಭಾರ್ಗವ | ಚಿತ್ತದಿಗ್ರಹಿಸುತಲೀ | ಅತ್ಯಧಿಕಪೂರ್ಣಾಹುತಿಗೈಸಲು |
ಚಿತ್ತಜಪಿತಗಭಿವಂದಿಸಿಬಲಿಯೂ || ೪ || || ೪೫೬ ||

**ಭಾಮಿನಿ**

ಹರಿಯಪದಕರ್ಪಿಸುತಲೆಜ್ಞವ |
ಗುರುವರೇಣ್ಯನಿಗಿತ್ತುದಕ್ಷಿಣೆ |
ಪರಮರುತ್ವಿಜರಿಂಗೆಸಾಮ್ಯಾದಿಗಳ ಕರುಣಿಸುತಾ ||
ಸುರಿವನೇತ್ರೋದಕದಿಶುಕ್ರನ |
ಚರಣಪ್ರಕ್ಷಾಳನವಗೈಯ್ಯುತ |
ಗುರುವೆನೀನ್ಯೆತಹುದುಸುತಳಕೆಯನ್ನಜೊತೆಗೂಡೀ || ೧ || || ೪೫೮ ||

**ರಾಗ ಕಾಂಬೋಧಿ ಝಂಪೆತಾಳ**

ಬರುವೆನೆಲೆಬಲಿಚಕ್ರ | ವರ್ತೀಮುನ್ನಿನತೆರದೊ | ಳಿರುವೇನಿನ್ನೊಡಗೊಂಡೂ |
ಧೈರ್ಯಾನಾಗೀಗಾ | ಶಿರಿವರನುಸಲಹುವನು ಶರಣರಕ್ಷಕನೆನಲು |
ಹರುಷದಿಂದೊಂದಿಸುತ ವೇಗದೊಳುಬಲಿಯೂ || ೧ ||

ಹರಿಯೆಮೂರನೆಪದಕೆ | ಶಿರದೊಳಿರಿಸೆಂದೆನುತ |
ಪರಮಾಭಕ್ತಿಯೊಳೆರಗೆ | ಮಾಧವನುದಯದಿ ||
ಶರಣರೊಳುನಿನ್ನಂದಕಾಣೆನುತ ಪಾದವನು |
ಶಿರದೊಳಿರಿಸಲು ಸುತಳಲೋಕಕ್ಕೈದಿದನೂ ‖ ೧ ‖

ಸುರರಪೊಳಲಿಂದಧಿಕ | ಶಿರಿಭೋಗಾದಿಂದಬಲಿ |
ತರುಣೀಬಾಂಧವರೊಡನೇ | ಹರಿಯಾಪೂಜಿಸುತಾ ||
ಹರುಷದಿಂದಿರೆ ಸುತಳದೊಳಗಿತ್ತಪರಮಾತ್ಮ |
ಸುರಪದಿಕ್ಪಾಲಾದಿಗಳಕೂಡಿಭರದೀ ‖ ೩ ‖

ತೆರಳೀಪುಷ್ಪಕದಿಂದ ಸುರಪುರಕೆವಿಭವದಲಿ |
ಪರಿಯಾಕಸ್ಯಪರದಿತಿ | ಯರಿಗೇಬಿನ್ನೈಸೀ ||
ಹರುಷದಿಂದಮರಪುರವಧಿಕಾರವಿಂದ್ರನಿಗೆ |
ಕರುಣಿಸಿಯೆಚಿನ್ಮಯ ಮೋದದಿಂದೀರ್ದಾ ‖ ೪೮೧ ‖

**ಭಾಮಿನಿ**

ವರತ್ರಿವಿಕ್ರಮಮೂರ್ತಿಸುತಳದೊ |
ಳಿರಿಸಿ ಬಲಿಯಡೆಯೊಳಗೆ ಸ್ವರ್ಗದಿ |
ಪರಮಪುರುಷನುಪೇಂದ್ರನಾಮಕದಿಂದಮೆರಯುತಲಿ ||
ಹರುಷಗೊಳಿಸುತಮಾತೃಪಿತೃಗಳ |
ಕರುಣಪಾತ್ರಕೆಸಿಲುಕಿ ಲಕ್ಷುಮೀ |
ವರಸುನಿತ್ಯಾನಂದಚಿನ್ಮಯಮೋದದಿಂದರ್ದಾ ‖ ೧ ‖ ‖ ೪೮೩ ‖

**ರಾಗ ಕೇತಾರಗೌಳ ಅಷ್ಟತಾಳ**

ಈ ರೀತಿಯೊಳುಶುಕಮುನಿ ಪರೀಕ್ಷಿತನಿಂಗೇ | ವಾರಿಜಾಕ್ಷನಕಥೆಯಾ |
ಪಾರಾಮಾರ್ಥದಿಪೇಳ್ದತೆರನಂತೆಗೈದೆನು | ದ್ವಾದಶಕೃತಿಯಿದನೂ ‖ ೧ ‖

ವರುಷಸಾಧಾರಣದೊಳುಶ್ರಾವಣ್ಯದಶುಕ್ಲ | ಹರಿದಿನವೇಕಾದಶಿ |
ವರಭೌಮವಾಸರದೊಳಗೆ ಮಂಗಲಗೈದೆ | ನರಿಯೆನಾಕೃತಿಗಳನೂ ‖ ೨ ‖

ಪನಸಾಖ್ಯಪುರದುರಗೇಂದ್ರಶಾಸ್ತ್ರಿಯಸುತ | ಮನುಜಕೇಸರಿಯಿದನೂ |
ಚಿನುಮಯಪ್ರೇರಿಸಿದಂತೆಗೈದಿಹೆ ವಿದ್ಯುಜ್ಜನರಿಗರ್ಪಿತವಾಗಲಿ ‖ ೩ ‖ ‖ ೪೮೮ ‖

**ಮಂಗಲಪದ**

ಮಂಗಲಜಯಜಯತೂ | ಜಯಜಯ | ಮಂಗಳಜಯ | ಜಯತೂ ‖ ಪಲ್ಲ ‖

ಮಂಗಲಜಯಜಯ | ರಂಗನಾಥಗೆಯದು | ಪುಂಗವಖಳರಸು |
ಭಂಗಗೋಪಾಲಗೆ || ಅನುಪಲ್ಲ ||

ವರನಿಗಮವಕೊಂಡೊದನಮಡುಹಿದ | ಮತ್ಸ್ಯಗೆ ಜಯಜಯತೂ |
ಶರಧಿಯಮಥನದಿ ಗಿರಿಯನುಪೊತ್ತಿಹ | ಕೂರ್ಮಗೆಯಜಯಜತೂ |
ವರಹವತಾರ ನೃಸಿಂಹ್ವಗೆ ವಾಮನ | ಪರಶುರಾಮಗೆಶ್ರೀರಾಮಗೆಜಯಜಯ ||
ಮಂಗಲಜಯಜಯತೂ | ಜಯಜಯ | ಮಂಗಲಜಯಜಯತೂ || ೧ ||

ಧರೆಯೊಳಗಾಗುಂಬಾಖ್ಯದಪುರದಲಿ | ಹರುಪದಿನೀನೆಲಸೀ |
ಕರುಣಕಟಾಕ್ಷದಿಶರಣರಪಾಲಿಪೆ | ದುರಿತವಪರಿಹರಿಸೀ |
ದುರುಳಕಂಸಾಸುರಪೂತನಿಶಕಟರ | ತರಿದಿಹವೇಣುಗೋಪಾಲಗೆ ಜಯಜಯ ||
ಮಂಗಲ | ಜಯಜಯತೂ || ೨ ||

ದುರುಳತ್ರಿಪುರಖಳಸತಿವ್ರತಗಡಿಸಲು | ಬೌದ್ಧನುನೀನಾದೇ |
ತುರಗವನೇರುತಮ್ಲೇಂಭರಮಥನಕೆ |
ಕಲ್ಕ್ಯನೆನೀಮುಂದೇ | ಶರಣಪ್ರಹ್ಲಾದನಪೊರೆಯಲುಸ್ತಂಭದಿ | ಪೊರಟಿಹಲಕ್ಷುಮೀನರಸಿಂಹ್ವಮೂರ್ತಿಗೆ ||
ಮಂಗಲಜಯಜಯತೂ | ಜಯಜಯ | ಮಂಗಲಜಯಜಯತೂ || ೩ || || ೪೭೯ ||

***

## ಇತರ ಶರಣರ ಹಾಡುಗಳು

**ವಚನ :**

ಆನಂದದಿಂದ ಹೊರಟ ಶಿವದೇವ ತಾ, ಇತ್ತ ಚೆನ್ನಕ್ಕ ನಿತ್ಯದಂತೆ ಸ್ನಾನ-ಗೈಯ್ಯುತ್ತ, ಉತ್ತಮ ವಸ್ತ್ರಂಗಳ ಧರಿಸುತ್ತ, ನಿರ್ಮಲ ಮನದಿಂ ಹಾಲು ಹಿಂಡುತ್ತ, ಸಮ್ಮತದಿಂ ಪತ್ರಿ ನೈವೇದ್ಯವನು ಒಯ್ಯುತ್ತ, ನೋಡಿದಳು ಶ್ರೀಗುರುನಾಥನ. ನೀಡಿದಳು ಪಾಲ್‌ಬಟ್ಟಲವನ್ನು ಭಕ್ತಿಯಿಂದ.

**ಪದ :**

ತಂದು ಶಿವನ ಮುಂದ ಇಟ್ಟು ಹಾಲನು
ತಂದೆ ಸವಿಯೊ ನೀ ಪ್ರೀತಿಯಲಿ
ತಂದೆ ಸವಿಯೊ ನೀ ಪ್ರೀತಿಯಲಿ | ಎಂದು
ಹಿಂದೆ ಸರದಳತಿ ಬೇಗದಲಿ || ಲ ||

ಒಂದು ಗಳಿಗೆ ತಾನಿಂದು ಮರೆಯಲಿ
ಬಂದು ನೋಡಿದಳು ಬಟ್ಟಲವ

ಬಂದು ನೋಡಿದಳು ಬಟ್ಟಲವ | ಹಾಲು
ಕುಡಿಯದಿದ್ದ ವರಸಾಂಬಶಿವ || ೯ ||

ಕಂದಿ ಕುಂದಿ ಮನದೊಳು ಮರಗುತ
ತಂದ ಹಾಲು ಕುಡಿಯದೆ ನೀನು
ತಂದ ಹಾಲು ಕುಡಿಯದೆ ನೀನು | ಶಿವ
ಸುಮ್ಮನಿರುವ ಕಾರಣವೇನು || ೧೦ ||

ಹಾಲು ಕಾಯವೊ ಹಾಲು ಒಡದವೊ
ಹಾಲು ಬಲು ಸುಡುತಿರುವವೊ
ಹಾಲು ಬಲು ಸುಡುತಿರುವವೊ | ನೀ
ಬ್ರಾಂತಿ ಎಂದು ಬಿಟ್ಟಿರುವೆಯೋ || ೧೧ ||

ಸಾಕು ಬೇಕು ಎಂದು ಕೇಳದೆ ನೀನು
ಹಾಲು ಯಾಕೆ ಕುಡಿಯದೆ ನೀನು
ಹಾಲು ಯಾಕೆ ಕುಡಿಯದೆ ನೀನು | ಶಿವ
ಸುಮ್ಮನಿರುವ ಕಾರಣವೇನು || ೧೨ ||

ಉಂಡಿ ಸಕ್ಕರಿ ಚಂಡು ಗುಂಡುಗಳ
ಕೊಂಡು ಕೊಡುವೆ ನಾ ನಿನಗಿನ್ನು
ಕೊಂಡು ಕೊಡುವೆ ನಾ ನಿನಗಿನ್ನು | ನಂ-
ಜುಂಡ ಕುಡಿಯೊ ನೀ ಹಾಲನ್ನು || ೧೩ ||

ತಂದೆ ಬಂದು ಎನ್ನ ಕೊಂದು ಹಾಕುವನು
ಹಾಲು ಕುಡಿಯದಿರೆ ಕೇಳಿನ್ನು
ಹಾಲು ಕುಡಿಯದಿರೆ ಕೇಳಿನ್ನು | ನಿನ
ಪಾದದಲ್ಲಿ ಬಿದ್ದು ಸಾಯುವೆನು || ೧೪ ||

ಕಲ್ಲಿನಾಥ ನಿನ ಎದುರಿನಲ್ಲಿ ನಾ
ಕಲ್ಲ ಹಾದು ಬಿಡುವೆನು ಪ್ರಾಣ
ಕಲ್ಲ ಹಾದು ಬಿಡುವೆನು ಪ್ರಾಣ | ನೀ
ಹಾಲು ಕುಡಿಯದಿರೆ ಕೇಳಿನ್ನು || ೧೫ ||

ಜಾಣಿ ಪನ್ನಗವೇಣಿ ಚೆನ್ನಿಯು
ಆಣಿ ಮಾಡಿದಳು ಶಿವನಲ್ಲಿ
ಆಣಿ ಮಾಡಿದಳು ಶಿವನಲ್ಲಿ | ನಿನ್ನ
ಪಾದದಾಣೆ ಸಾಯುವೆನಿಲ್ಲಿ || ೧೬ ||

ಎಂದು ಹೇಳಿ ಆಗ ಮುಂದನಿಂತು ತಾ
ನಂದು ಹಾಯುತಿರೆ ಕಲ್ಲನ್ನು
ನಂದು ಹಾಯುತಿರೆ ಕಲ್ಲನ್ನು | ಶಿವ
ಬಂದು  ಹಿಡಿದನಾ ಚೆನ್ನಿಯನು      || ೧೭ ||

ಸಾಯಬೇಡ ಕಂದ ಕುಡಿಯುವೆ ಹಾಲ
ಬಳಲಬೇಡ ನೀನಂಬುತ
ಬಳಲಬೇಡ ನೀನಂಬುತ | ಹಾಲು
ಕುಡಿದನು ಶಿವ ತಾ ನಕ್ಕೊಂತ      || ೧೮ ||

**ವಚನ :**

ಇಂತು ಹಾಲು ಕುಡಿಯೆ ಪರಮೇಶ್ವರ, ಸಂತುಷ್ಟಳಾಗಿ ಚೆನ್ನವ್ವೆಯು ಮನಃಪೂರ್ವಕ ಕೂತು ಹರನ ಧ್ಯಾನಮಾಡುತ್ತ, ಹರಹರಾ ಎಂದು ನುಡಿದು ಬಂದಾಳೊ ಸರರರಾ.

**ಪದ :**

ಇಂತು ಕೊಡಗೂಸು ಸಂತೋಷದಿಂದಲಿ
ಕಂತು ಹರಗ ಒಯ್ಯುತ ಹಾಲ
ಕಂತು ಹರಗ ಒಯ್ಯುತ ಹಾಳ
ಕಂತು ಹರಗ ಒಯ್ಯುತ ಹಾಲ | ಭಯ
ಭಕ್ತಿಯಿಂದ ಕುಡಿಸುತ್ತಿರಲು || ೧೯ ||

ಒಂದು ದಿನವಸ ಬಾಲಿಂದುಧರನಿಗೆ
ಚಂದದಿಂದ ಹಾಲು ಕುಡಿಸುತ್ತ
ಚಂದದಿಂದ ಹಾಲು ಕುಡಿಸುತ್ತ | ತನ
ಮಂದಿರಕ ತಾನು ಹೋಗುತ್ತ        || ೨೦ ||

ಊರಿಗೆ ಹೋದ ಅವರಪ್ಪ ಬಂದನು
ದಾರಿಯೊಳಗ ಕಂಡಾನು ಮಗಳ
ದಾರಿಯೊಳಗ ಕಂಡಾನು ಮಗಳ | ತಾ
ಬರಿಯ ಬಟ್ಟಲಾ ಪಿಡಿದಿಹಳು        || ೨೧ ||

ಬರಿಯ ಬಟ್ಟಲಾ ಹಿಡಿದು ಹೊರಟೆ ನೀ
ಎಲ್ಲಿ ಸುರುವಿರಿ ಹಾಲನ್ನು
ಎಲ್ಲಿ ಸುರಿವಿದಿ ಹಾಲನ್ನು | ನೀ
ಕುಡಿದು ಬಿಟ್ಟೆಯೋ ಹೇಳಿನ್ನು        || ೨೨ ||

ಅಪ್ಪ ಕೇಳು ನಿನ್ನಪ್ಪಣೆಯಂತೆ
ತಪ್ಪದೆ ಹಾಲು ಒಯ್ಯುವೆನು
ತಪ್ಪದೆ ಹಾಲು ಒಯ್ಯುವೆನು | ಶ್ರೀ
ಮುಕ್ತಿಕೇಶಗ ಉಣಿಸುವೆನು || ೧೩ ||

ಕುಲ್ಲಿ ಹುಡುಗಿ ನೀ ಸುಳ್ಳ ಹೇಳದಿರು
ಎಲ್ಲಿ ಚೆಲ್ಲಿದಿ ಹಾಲನ್ನು
ಎಲ್ಲಿ ಚೆಲ್ಲಿದಿ ಹಾಲನ್ನು | ವರ
ಕಲ್ಲಿನಾಥ ಪ್ರಸಾದವನು || ೧೪ ||

ನಿಕಟವಿದ್ದ ಮಾತು ಗಟ್ಟಿ ಹೇಳತಾಳ
ಹಾಲು ಕುಡಿಯುವನು ಪರಶಿವನು
ಹಾಲು ಕುಡಿಯುವನು ಪರಶಿವನು | ವರ
ತಾತಾ ನಾಳೆ ತೋರುವ ನಿನಗೆ || ೧೫ ||

ಉದಯವಾಗಲು ಚದುರಚೆನ್ನಿ ತಾ
ಮುದದಿ ನಡೆದಳು ಈಶನ ಗುಡಿಗೆ
ಮುದದಿ ನಡೆದಳು ಈಶನ ಗುಡಿಗೆ | ತನ
ತಂದೆ ಸಹಿತ ಶಂಕರನಡಿಗೆ || ೧೬ ||

ಬಾಲೆ ಭಕ್ತಿಯಲಿ ಹರನ ಎದುರಿಗೆ
ಹಾಲ ಇಟ್ಟು ಮುಗಿದಳು ಕೈಯ
ಹಾಲ ಇಟ್ಟು ಮುಗಿದಳು ಕೈಯ | ವರ
ಕಲ್ಲಿನಾಥ ನೀ ಕುಡಿ ಹಾಲ || ೧೭ ||

ಹಸುಳೆಯ ಭಕ್ತಿ ವಸುಧೆಯೊಳಗೆ ತಾ
ಪಸರಿಸಲೆಂದು ಪರಶಿವನು
ಪಸರಿಸಲೆಂದು ಪರಶಿವನು | ತಾ
ಕುಡಿಯದಿದ್ದ ವರಕ್ಷೀರವನು || ೧೮ ||

ನಿಂತು ನೋಡಿ ಶಿವದೇವ ಕೇಳತಾನು
ಇಂದು ಯಾಕ ಕುಡಿಯನು ಹಾಲ
ಇಂದು ಯಾಕ ಕುಡಿಯನು ಹಾಲ | ನೀ
ಇಂದುಧರಗ ಹಾಲುಣಿಸಿಲ್ಲ || ೧೯ ||

ಮೃತ್ಯುಂಜಯಗ ನೀ ಕುಡಿಸದೆ ಹಾಲ
ಮತ್ಯಾರಿಗೆ ಕುಡಿಸಿದೆ ಹಾಲ

ಮತ್ಯಾರಿಗೆ ಕುಡಿಸಿದೆ ಹಾಲ | ನಿನ
ಕುತ್ತಿಗೆ ಕಡಿದು ಚೆಲ್ಲುವೆನು || ೨೦ ||

ರೂಢಿಯೊಳಗೆ ನೀ ಎತ್ತ ಬದುಕುವಿ
ಛಿದ್ರ ಛಿದ್ರ ಮಾಡುವೆ ನಿನ್ನ
ಛಿದ್ರ ಛಿದ್ರ ಮಾಡುವೆ ನಿನ್ನ | ಎಂದು
ಬೆನ್ನ ಹತ್ತಿಬರಲು ಮುನ್ನ || ೨೧ ||

ಬಾಲೆ ಹೆದುರುತ ಚಿನ್ಮಯ ಶಿವನೆ
ಎನ್ನ ಸಲಹು ನೀ ಎನ್ನುತಲಿ
ಎನ್ನ ಸಲಹು ನೀ ಎನ್ನುತಲಿ | ಶಿವ
ಎನ್ನುತ ಪಾದಕೆ ಎರಗುತಲಿ || ೨೯ ||

ಹೆದರಬೇಡವೆಂದು ಮುಕ್ಕಣ್ಣ ಶಿವನು
ಹಾಲು ಕುಡಿದನು ಪ್ರೀತಿಯಲಿ
ಹಾಲು ಕುಡಿದನು ಪ್ರೀತಿಯಲಿ | ವರ
ಬಾಲೆಯನ್ನು ಸಂತೈಸುತಲಿ || ೨೨ ||

ಚದುರ ಶಿವನು ತನ್ನ ಉದರವ ಬಗಿಯುತ
ಅದರೊಳಗಿರಿಸಿದ ಚೆನ್ನಿಯನು
ಅದರೊಳಗಿರಿಸಿದ ಚೆನ್ನಿಯನು | ಅವ
ರಪ್ಪ ಹಿಡಿದ ಮುಂಗರುಳನ್ನು || ೨೪ ||

ಅಂಗಲಿಂಗದೊಳು ಸಂಗಮವಾಯಿತು
ಮುಂಗುರಳಾದವು ಹೊರಗಿನ್ನು
ಮುಂಗುರುಳಾದವು ಹೊರಗಿನ್ನು | ಪ್ರತಿ
ವರುಷ ಬೆಳೆಯುತಿರುವವು ಇನ್ನು || ೨೫ ||

ಸರಸವಾದ ಕೊಡಗೂಸಿನ ಕಥೆಯನು
ಆರು ಕೇಳುವರು ಭಕ್ತಿಯಲಿ
ಆರು ಕೇಳುವರು ಭಕ್ತಿಯಲಿ | ಅವ
ರಿಷ್ಟ ಸಿದ್ಧಿಪವು ಶೀಘ್ರದಲಿ || ೭೬ ||

* * *

## ಭಕ್ತ ಪ್ರಲ್ಹಾದ

ವಂದಿಸಿ ಸದ್ಗುರು ಶಂಕರಗುರುವರ
ಚರಣಾಬ್ಜಕೆ ಸಾನಂದದಲಿ || ೧ ||

ಮಂದರಧರ ಶ್ರೀ ವರಗೋವಿಂದನು
ಕರುಣಿಸಿದನು ಪ್ರಲ್ಹಾದನಲಿ || ೨ ||

ಕೇಳಿರಿ ಸುಜ್ಞರು ವರಪ್ರಲ್ಹಾದನ
ಸತ್ಯಕಥೆಯನು ಸಾಮೋದದಲಿ || ૩ ||

ಖೂಳ ಹಿರಣ್ಯಕಶ್ಯಪನು ಕಾಡಿದ
ವರಪ್ರಲ್ಹಾದನ ನಿಷ್ಕರುಣದಲಿ || ೪ ||

ವರವೈಕುಂಠದ ಪರಮಪುರುಷ ಹರಿ
ಧರಣಿಧರನ ಮೇ ಮಲಗಿರಲು || ೫ ||

ತೋರುತ ಪರಮಾನಂದವನೀಯುತ
ಗರುಡಪಕ್ಷಿ ಮೊದಲಾದವರು || ೬ ||

ಸನಕಸಾನಂದ ಸನಾತನ ಮುನಿಗಳು
ಕನಕ ಕಶ್ಯಪನು ಕಾಡುದಕೆ || ೭ ||

ಇಂತು ಬಳಲುತನಂತ ಸನ್ನಿಧಿಗೆ
ಬ್ರಹ್ಮರುದ್ರ ಮುನಿ ಮೊದಲಾಗಿ || ೮ ||

ಶಾಂತಮುನಿ ಶ್ರೀಕಂತು ಪಿತನ ಗುಣ
ವರ್ಣನ ಮಾಡಿದರವರಾಗ || ೯ ||

**ವಚನ :**

ಜಯಜಗನ್ನಿವಾಸ, ಜಯಜಗತ್‌ವಂದ್ಯ, ಜಯಜಯರೆನಿಪೆವು ನಿನಗೆ. ಜಗದಾ-ಧಾರವು ನೀನೆ. ಜಗದೊಳು ಧೀರ. ಜಗದೊಳು ಅತಿಹರುಷ ಪೂರ. ಶೂರ ರಕ್ಕಸ ಹಿರಣ್ಯಕಶ್ಯಪನ ಕೊಂದು ಭೂಮಿಭಾರ ಇಳಿಸುವುದಿಲ್ಲವೆ, ಮುನಿಜನ ವಂದಿತ ಕರುಣ ಸಾಗರನೆ ರಕ್ಷಿಸು ಅಖಿಲಗಣವ.

**ಪದ :**

ಕರುಣವಿರಲಿ ಬಹು ತರುಣಿ ಪ್ರೀತನೆ
ಚರಣಕೆರಗಿ ಬೇಡುವೆ ನಾನು || ೧೦ ||

ಶರಣರ ಕಷ್ಟವ ಧರಣಿಗಿಳಿದು ನೀ
ಕರುಣಮಾಡು ಕೋರಿಕೆಯನ್ನು || ೧೧ ||

ಬ್ರಹ್ಮಗೆ ರಕ್ಕಸ ವರವನು ಬೇಡಿದ
ಇಂದ್ರಚಂದ್ರ ದೇವತೆಯಿಂದ || ೧೨ ||

ಕುಬೇರ ಅಗ್ನಿ ವರುಣ ಆಕಾಶ
ಅಸ್ತ್ರ ಶಸ್ತ್ರ ಆಯುಧದಿಂದ || ೧೩ ||

ಧರಣಿಪತಿ ನನಗೆ ಮರಣವಿಲ್ಲ
ಶಿವಶರಣರಂತೆ ಬದುಕುವೆ ನಾನು || ೧೪ ||

ಕರಡಿ ಹುಲಿಯು ಕಾಡಹಂದಿ ಮೊಲಗಳು
ಹೆದರಿ ಓಡಿಹೋದವು ಬೇತಾಳ || ೧೫ ||

ಒಳಗೆ ಹೊರಗೆ ಮತ್ತಿಳೆಗೆ ಇಲ್ಲವೊ
ಸಾವು ಎನಗೆ ಶೂರೋತ್ತಮಗೆ || ೧೬ ||

ನಾಳಿನ ವಿಘ್ನವ ಗೆಲುವನೆಂದು
ಸಾರಿ ಹೇಳಿದನು ಭರದಿಂದ || ೧೭ ||

**ವಚನ :**

ಇಂತು ಹೇಳಿದನು. ಎಲೋ ದೇವತೆಗಳಿರಾ ಬೆದರಬೇಡಿರೆಂದು ಅಭಯ ವಚನವಿತ್ತು ಅಂದುದೇನೆಂದರೆ, ಶೂರರಕ್ಕಸನಾದ ಹಿರಣ್ಯಕಶ್ಯಪನ ಹೆಂಡತಿಯಾದ ಗದದೇವಿ ಹೊಟ್ಟೆಯಲ್ಲಿ ಸ್ವಲ್ಪ ಕಾಲದಲ್ಲಿ ಪ್ರಲ್ಹಾದನೆಂಬುವ ಶಿಶುವು ಯಾವಾಗ್ಗೆ ಜನಿಸುವದೋ ಆವಾಗ್ಗೆ ನಿಮ್ಮ ದುಃಖ ಪರಿಹರಿಸುವೆನೆಂದು ಹೇಳಿದ ಮಹಾವಿಷ್ಣು ದೇವನು.

**ಪದ :**

ಇಂದುಮುಖಿಯ ಗೋವಿಂದನ ದಯದಿಂದ
ಕಂದನಹೊಂದಿ ಕೈಲಾಸದಲಿ || ೧೮ ||

ಚಂದದಿ ಚಂದಿರನಂತೆ ನಗುವುತ
ಆನಂದದಿ ತೋರುವ ನವಜಗಕೆ || ೧೯ ||

ನಿತ್ಯದಿ ಬೆಳೆದನು ಶಿಸು ಪ್ರಲ್ಹಾದನು
ಐದು ವರ್ಷ ಬಾಲಕನಾಗಿ || ೨೦ ||

ಹುಡುಗನ ನೋಡಿ ಸಡಗರದಿಂದ
ಸಾಲಿಗ್ಹಾಕ್ಯಾರೊ ಶುಭಮೂರ್ತದಲಿ || ೨೧ ||

ಕೂಡಿದ ಹುಡುಗರ ಹಿಂದೆ ಹಾಕಿದನು
ಶಾಸ್ತ್ರವಿದ್ಯೆ ಪುರಾಣದಲಿ || ೨೨ ||

ಬಾಲಕನಲ್ಲಿ ಅರಸನೆಂದು ಬಹು
ಭಕ್ತಿಯಿಂದ ನಡಕೊಳ್ಳುತಲಿ || ೨೩ ||

ಬಾಲಕ ಶ್ರೀಹರಿ ಸರ್ವೋತ್ತಮ ತಾ
ನೆಂದು ಭಜನೆಯ ಮಾಡುತಲಿ || ೧೪ ||

ಹರಿಭಜನೆಯನ್ನು ಮಾಡುತ ನಿಂತರು
ಕೈಹಾಕಿ ಚಪ್ಪಾಳೆ ಹೊಡಿದು || ೧೫ ||

ಗುರುಗಳ ತಂಡ ಹಿರಿಯರೆಲ್ಲರು
ನೋಡಿದಾರು ಹುಡುಗನ ಆಟ || ೧೬||

ಹುಡುಗನ ಆಟ ನೋಡಿ ರಕ್ಕಸ
ತರುವನು ಮಗ ದಾಳಿಯ ಬೇಗ || ೧೭ ||

**ವಚನ :**

ಇಂತು ಹೇಳಿದನು ಹಿರಣ್ಯಕಶ್ಯಪ. ಶಾಂತ ಪ್ರಲ್ಹಾದನೆ ಕಂತು ಪಿತನ ಧ್ಯಾನವನ್ನು ಬಿಡುಬಿಡು. ನಮ್ಮ ರಕ್ಕಸ ಕುಲಕ್ಕೆ ಪೂಜಿಪನಾಗು. ವೇದಾ ಗಮನವನ್ನು ತ್ಯಜಿಸು. ಮುನಿಜನರನ್ನು ಕಷ್ಟಗೊಳಿಸು. ಎಲೈ ಬಾಲಕನೆ ನಿಖಿಳಜನಲೋಲನೆ.

**ಪದ :**

ತರುಳಮಗನೆ ಬಿಡು ದುರಳತನವನು
ಸರಳಮಾತಿಲಿಂದಿರು ನೀನು || ೧೮ ||

ಕಪ್ಪುಗೊರಳನ ಪೂಜಿಸುವ ಶಿಸುವೆ
ಮರೆತುಬಿಡು ಆ ಹರಿಯನ್ನು || ೧೯ ||

ತಂದೆಯೆ ಎನ್ನನು ರಕ್ಷಿಪ ಹರಿಯು
ಅವನ ಸಮರಣೆ ಬಿಟ್ಟರೇನಿನ್ನು || ೨೦ ||

ಇಂದಿರ ರಮಣನ ಆಜ್ಞೆ ಇದ್ದರೆ
ಪ್ರಾಣಹೋದರೂ ಭೀತಿಯು ಇಲ್ಲ || ೨೧ ||

ಕೇಳಿ ಈ ಮಾತನು ಸಿಟ್ಟಿಗೆದ್ದು
ನಿಟ್ಟುಸುರ ಬಿಟ್ಟ ರಕ್ಕಸ ತಾನು || ೨೧ ||

ಖೂಳ ನಿನ್ನಯ ಪ್ರಾಣ ತೆಗೆಯುವೆ
ಹರಿ ಅಂದರೆ ನಾಳಿನ ದಿವಸ || ೨೨ ||

ಸಾರಿ ಹೇಳತೇನಿ ಶೂರಶಿಖಾಮಣಿ
ವಾರಿಜಾಕ್ಷನೆಲ್ಲಿ ಹುಟ್ಟಿದನು || ೨೪ ||

ಪರಂಜ್ಯೋತಿ ಪರಬ್ರಹ್ಮನಲ್ಲಿಯೇ
ಅಂಬ ಹುಟ್ಟಿತು ಅದು ಮೊದಲ || ೩೫ ||

ನಾನೆಂಬುವ ದೈತ್ಯಭಾವಗಳು
ತಿಳಿದು ನೋಡಿದರೇನಿಲ್ಲ || ೩೬ ||

ಜ್ಞಾನಿಗಳೆಲ್ಲ ತಿಳಿದು ಹೇಳುವರು
ಮೊಟ್ಟಮೊದಲು ಏನೇನಿಲ್ಲ || ೫೭ ||

ಪ್ರಲ್ಹಾದನು ಹೇಳುತ ತಂದೆಗೆ
ಹರಿಹರನೆಂಬುದು ಬೇದಿಲ್ಲ || ೩೮ ||

ಹರಿಹರನೆಂಬುದು ಬೇದಿಲ್ಲವೊ
ವೀರಧೀರ ಮೊದಲಾದವರು || ೩೯ ||

ಇಂತು ಮಾತನು ಕೇಳಿ ರಕ್ಕಸ
ರಟ್ಟಿ ಹಿಡಿದು ಒಗೆದನು ದೂರಾ || ೪೦ ||

ಕಣ್ಣುಮುಚ್ಚಿ ಹರಿ ಸ್ಮರಣೆ ಮಾಡಿದರೆ
ಬಂದಿತಾಗ ಮೈಮೇಲೆ ಖಬರ || ೪೧ ||

ಸಣ್ಣ ಕಂದನು ಸಭೆಗೆ ಬಂದನು
ತಂದೆ ಕುಂತ ಜಾಗಾದಲ್ಲಿ || ೪೨ ||

ಆನೆಯ ಕಾಲಿಗೆ ಕಟ್ಟಿ ಎಳೆಸಿರೆಂದು
ಆಳಿಗೆ ಆಜ್ಞೆಯ ಮಾಡಿದನು || ೪೩ ||

ಆನೆ ಎಳದರೂ ಪ್ರಾಣ ಹೋಗಲಿಲ್ಲ
ಮತ್ತೆ ತಿರುಗಿ ಬಂದನು ಮಗನು || ೪೪ ||

ಮಾನಿನಿ ಕರೆದು ಮನ್ನಿಸಿ ಹೇಳತಾನು
ಮಗನಿಗೆ ವಿಷವನು ಕೊಡು ನೀನು || ೪೫ ||

ಶಿಶುವ ಕೇಳು ನಿನ್ನ ಪಿತನ ಮಾತನು
ಮೀರಿ ಹೋಗುವದು ಧರ್ಮಲ್ಲ || ೪೬ ||

ಅಸುರರ ಕುಲಕೆ ವೈರಿಯಾದ ಹರಿ
ಸ್ಮರಣೆ ಮಾಡುವದು ತರವಲ್ಲ || ೪೭ ||

ಹುಟ್ಟಿದ ಕುಲಕೆ ನೋಡಿ ನಡೆದರೆ
ಲೋಕದೊಳಗೆ ಅವನೇ ಹೆಚ್ಚು || ೪೮ ||

ಗಟ್ಟಿಸಿ ಹೇಳತಾನು ಬಾಲನು ತಾಯಿಗೆ
ಅಸುರ ಕುಲಕೆ ಬೆಂಕಿಯ ಹಚ್ಚು || ೪೯ ||

ಬೇಡಮಗನೆ ಈ ಕೇಡ ವಿಷವು
ಕಾಡುಗಿಚ್ಚಿನಂತಿರುವುದು || ೫೦ ||

ಬಳಲುತ ಬಟ್ಟಲು ತುಂಬಿಕೊಟ್ಟಳು
ಎರವು ಎನಗೆ ಕಂದನ ರೂಪ || ೫೧ ||

ಬಾಲ ನಿನ್ನಯ ವಜ್ರ ಕೆತ್ತಿಸಿದ
ಗೆಜ್ಜೆ ಸರಪಣಿ ಉಡದಾರ || ೫೨ ||

ಶಾಲುಜೋಡು ಶಕಲಾತಿ ಅಂಗಿಯು
ಎಷ್ಟು ಹೇಳಲಿ ಅಪರಂಪಾರ || ೫೩ ||

ಕಷ್ಟಬಂತು ಬಲುಬ್ರಷ್ಠಳೆಂದು ಜನ
ಬಯ್ಯುವರೆನಗೆ ಬಗೆಬಗೆಯ || ೫೪ ||

ಇಂತು ದುಃಖಿಸುತ ನಿಂತಿರುತಾಯಿ
ನೋಡುವಷ್ಟರಲಿ ವಿಷಕುಡಿದು || ೫೫ ||

ಶಾಂತನಾಗಿ ಅನಂತನ ನೆನಸುತ
ತೋರಿದ ಮಗ ತಾ ಅತಿ ಹರುಷ || ೫೬ ||

ಆಡುತ ಬಂದ ಪ್ರಲ್ಹಾದನು
ತಂದೆ ಕುಂತ ಜಾಗಾದಲ್ಲಿ || ೫೭ ||

ನೋಡಿದ ತಂದೆ ಹೇಳಿದನಾಗ
ಹಾಕವನ ಕಾದ ಎಣ್ಣೆಯಲಿ || ೫೮ ||

ರಾಜನ ಮಾತಕೇಳಿ ಕಡಾವಿಗೆ
ಇಟ್ಟರಾಗ ಒಲಿಯನು ಹೂಡಿ || ೫೯ ||

ಹೂಜಿಲೆ ಎಣ್ಣೆ ತುಂಬಿದರಾಗ
ನೂರುಕೊಡ ದೌಡಾದೌಡಿ || ೬೦ ||

ಕಳಕಳ ಕುದಿಯುವ ಎಣ್ಣೆಯೊಳಗೆ
ಒಗೆದುಬಿಟ್ಟರು ರಕ್ಕಸ ಮಗನ ‖ ೬೧ ‖

ನಳಿನನಾಭನ ಭಜಿಸಲು ಎಣ್ಣೆ
ತಣ್ಣಗಾಗಿ ಹೋಯಿತು ಪೂರಾ ‖ ೬೨ ‖

ಮತ್ತೆ ನುಡಿದನು ಅಧಮ ರಕ್ಕಸ
ಸುತ್ತು ಮುತ್ತು ನೋಡಿದ ಸದರ ‖ ೬೩ ‖

ಹೊತ್ತ ಮುಳುಗುತ ಬಂದ ವ್ಯಾಳ್ಯದಾಗ
ಕತ್ತಿ ಹಿಡಿದು ಕಡಿದನು ಚದುರ ‖ ೬೪ ‖

ಕುಲಗೇಡಿ ನಿನ್ನ ಕಡಿದು ಹಾಕುವೆನು
ಹೇಳು ನಿನ್ನ ಸ್ವಾಮಿಯು ಎಲ್ಲಿ ‖ ೬೫ ‖

ಕುಲುಕುಲುನಕ್ಕು ಖುಲ್ಲಾ ಹೇಳತಾನು
ಇರುವಸ್ವಾಮಿ ಎಲ್ಲಾದರಲ್ಲಿ ‖ ೬೬ ‖

ಭೂತಳ ತೇಜ ವಾಯು ಆಕಾಶ
ಚಂದ್ರಸೂರ್ಯ ದಶದಿಕ್ಕಿನಲ್ಲಿ ‖ ೬೭ ‖

ಒಡಿಯುತ ಕಂಬ ಗಡಗಡನೆಂದು
ಸಿಡಿಲಿನಂತೆ ಆಯಿತು ಶಬ್ದ ‖ ೬೮ ‖

ದಡದಡ ಬಿದ್ದವು ಗುಡ್ಡ ಗಿಡಗಳು
ಉಕ್ಕೇರಿತು ಆಗ ಸಮುಂದರ ‖ ೬೯ ‖

**ವಚನ :**

ಕೇಳಿರಿ, ಆ ಹರಿಯು ನಾರಸಿಂಹನ ಅವತಾರವನ್ನು ತಾಳಿ ಕಂಬದಿಂದ ಹೊರಬಂದು ಹಿರಣ್ಯಕಶ್ಯಪನನ್ನು ಕೊಂದನು. ಆಮೇಲೆ ಪ್ರಲ್ಹಾದನನ್ನು ಮುಂದೆ ಕರೆದು ತಲೆಯ ಮೇಲೆ ಅಭಯ ಹಸ್ತವನ್ನಿಟ್ಟು ಸಾಯುಜ್ಯ ಪದವಿ ದಯಪಾಲಿಸಿದನು.

**ಗುರುಭಕ್ತ**

ಶ್ಲೋಕ :

ಸತ್ಯಮಾತಾ ಪಿತಾಜ್ಞಾನಂ. ಧರ್ಮೋಭ್ರಾತಾ ದಯಾ ಸಖಾ. ಶಾಂತಿ ಪತ್ನೀ ಕ್ಷಮಾ ಪುತ್ರಾಂ ಪಡೇತೆ ಮಮ ಬಾಂಧವಾ ‖

**ಪದ :**

ಪೃಥ್ವಿಯೊಳಗತ್ಯಧಿಕವಾದ
ಸತ್ಯ ಕೇರಳ ದೇಶವಿತ್ತ
ಸತ್ಯ ಕೇರಳ ದೇಶವಿತ್ತ | ಶಿವ
ಭೃತ್ಯ ಧರಣಿ | ಕೇಶವ ಭಕ್ತ || ೧ ||

ಪುರಾಣದಾಗ ಪುರಾತರಡಿಗಳ
ಪುರಕೆ ನಂಬಿ ಕೇಳುವೆನೆಂತ
ಪುರಕೆ ನಂಬು ಕೇಳುವೆನೆಂತ | ಮನ
ಪೂರೈಸಿ ಅದರೊಳು ನಿಂತ || ೨ ||

ಒಂದಿನ ಪುರಾನ ಕೇಳುವ ಸಮಯದಿ
ಬಂದಿತಾಗ ಒಂದು ವಿಪರೀತಾ
ಬಂದಿತಾಗ ಒಂದು ವಿಪರೀತಾ | ಈ
ಕಂದರಿಲ್ಲ | ದವಗಿಲ್ಲ ಮುಕ್ತಿ || ೩ ||

ನ ಪುತ್ರಸ್ಯ ಗತಿರ್ನಾಸ್ತಿ ಕರೆ
ನರಕ ಪ್ರಾಪ್ತಿ ಅವಗಾನಂತ
ನರಕ ಪ್ರಾಪ್ತಿ ಅವಗಾನಂತ | ಆ
ಗುರುಗಳ್ಹೇಳಿದರು ಏಕಾಂತ || ೪ ||

**ವಚನ :**

ಗುರುಗಳು ಹೇಳಿದಂಥ ಅಗಮ್ಯ ವಾಕ್ಯವನ್ನು ಧರಣಿ | ಕೇಶವ ರಾಜನು ಕೇಳಿ ಗುರುಗಳನ್ನು ಕರಸಿ ಕೇಳುತ್ತಾನೆ ಏನಂದರೆ –

**ಪದ :**

ಮಕ್ಕಳಿಲ್ಲದ ಸಕಲಭಾಗ್ಯವಿದು
ಬೆಕ್ಕು ಮುಟ್ಟಿದೆಂಜಲವೆಂದ
ಬೆಕ್ಕು ಮುಟ್ಟಿದೆಂಬಜಲವೆಂದ | ನೀವು
ಚಕ್ಕನೆ ಹೇಳಿರಿ ಗತಿ ಮುಂದ || ೫ ||

ತರುಳರನ್ನು ತವ ಕಾಂಬುವದಾ ಶ್ರೀ
ಗಿರಿಗೆ ಹೋಗೊ ನೀ ಇಲ್ಲಿಂದಾ
ಗಿರಿಗೆ ಹೋಗೊ ನೀ ಇಲ್ಲಿಂದಾ | ಅಲ್ಲಿ
ಸರಿಯಾಗಿ ಪೂಜೆಮಾಡು ಶಿವಂದಾ || ೬ ||

ಸದಮಲ ಸಾವಿರ ಗಣರಂದಾ ನೀ
ಮುದದಿ ಉಣಿಸಿ ಮಾಡಾನಂದಾ

ಮುದದಿ ಉಣಿಸಿ ಮಾಡಾನಂದಾ | ನೀ
ಸುದತಿ ಕೇಳಿ ಬಾ ಆನಂದ || ೭ ||

ಅಲ್ಲಿಂದ ನಿನಗೊಬ್ಬ ಚಲ್ವಪುತ್ರನು
ಸಲ್ಲುವ ಲಗುಹೋಗು ಇಲ್ಲಿಂದಾ
ಸಲ್ಲುವ ಲಗುಹೋಗು ಇಲ್ಲಿಂದಾ | ಅಂತ
ಎಲ್ಲ ಹೇಳಿ ಗುರು ತಾ ಹೋದಾ || ೮ ||

**ವಚನ :**

"ನಗುರೋರಧಿಕಂ. ನಗುರೋರಧಿಕಂ' "ಹರಮುನಿದರು ಗುರುಕಾಯ್ವನು ಹಾಗು ಆತನೆ ದೊಡ್ಡಾತನು. ಅದಕ್ಕಾಗಿ ಧರಣೀಕೇಶವರಾಜನು ಪುತ್ರರಿಲ್ಲದವರಿಗೆ ಪೂರ್ತ ನರಕ ಪ್ರಾಪ್ತಿಯಾಗುವದೆಂಬ ವಚನವನ್ನು ಕೇಳಿ ತನ್ನ ಗುರುಗಳನ್ನು ಕರೆಯಿಸಿ ಅವರ ಅಭಿಪ್ರಾಯವನ್ನು ಕೇಳಲಾಗಿ ಅವರು ಹೇಳಿದ್ದೇನೆಂದರೆ ;-

ಶ್ರೀಶೈಲ ಮಲ್ಲಿಕಾರ್ಜು ಪಾದದಡಿಯೋಳ್ ಒಡಲನೀಡಾಡಿ, ಸಾವಿರಾರು ಜಂಗಮಾರ್ಚನೆ ಮಾಡಿ, ಮೃಷ್ಟಾನ್ನಭೋಜನ ಉಣಿಸಿ, ಯೋಗ್ಯತಾಪ್ರಕಾರ ದಕ್ಷಿಣೆಕೊಟ್ಟು ಅವರನ್ನು ಸಂತುಷ್ಟಪಡಿಸಿದರೆ ಗಂಡು ಮಗುವಾತ್ತಾನೆಂಬ ಗುರುಗಳ ವಚನ ಕೇಳಿ, ತನ್ನ ಮಂತ್ರಿ ವರಮತಿಯನ್ನು ಕರೆದು ಧರಣಿಕೇಶವರಾಜನು ಶ್ರೀಗಿರಿಗೆ ಹೋಗಲು ಸಕಲಸಿದ್ಧತೆಗಳನ್ನು ಮಾಡೆಂದಾಗ, ಮಂತ್ರಿಯು ಅದರಂತೆ ಮಾಡಲಾಗಿ ರಾಣಿಯೊಂದಿಗೆ ಪಲ್ಲಕ್ಕಿಯಲ್ಲಿ ಕುಳಿತು ಸಕಲವೈಭವದೊಂದಿಗೆ ಶ್ರೀಶೈಲ ಮಾರ್ಗವಾಗಿ ಪ್ರಯಾಣ ಬೆಳೆಸುವಾಗ ಆದಂಥ ಕಥಾ ಏನೆಂದರೆ –

**ಪದ :**

ಚಂದದ ಹೂವಿನ ಬೃಂದಾವನವನು
ಮಂದಗಮನಿ ಕಂಡಳು ಚಂದ
ಮದಗಮನಿ ಕಂಡಳು ಚಂದ | ಆ
ಮಂದಾರಮಲ್ಲಿಗಿ ಹರಿ ಚಂದ || ೯ ||

ನೆಲ್ಲು ತೆಂಗು ಬಹು ಬಲ್ಲಿದ ಚಂದನ
ಮಲ್ಲಿಗೆ ಲತೆಗಳು ಒಂದೊಂದ
ಮಲ್ಲಿಗೆ ಲತೆಗಳು ಒಂದೊಂದ | ಈ
ವಲ್ಲಭೆ ಕಾಣುತಾ ತಾ ಮುಂದ || ೧೦ ||

ಬೆಕ್ಕು ಇಲಿಯು ಬಹು ಅಕ್ಕರಲಿರುವವು
ಮರ್ಕಟ ಸಂದಣಿ ಅದರಿಂದ
ಮರ್ಕಟ ಸಂದಣಿ ಅದರಿಂದ | ತವ
ಮಕ್ಕಳನೆತ್ಯಾವೊ ಒಂದೊಂದ || ೧೧ ||

**ವಚನ :**

ವೇಶ್ಯಾ ಸ್ತ್ರೀಯಳಿಗೆ ವಿಟಗಾರನೆ ಪ್ರಾಣಲಿಂಗ. ಆ ದೇವರು ಈ ದೇವರು ಎಂದು ಕೈಮುಗಿದಯುವಂಥಾ ಭಕ್ತನಿಗೆ ಹೊರಗಿಟ್ಟ ಪಾದರಕ್ಷೆಯೇ ಪ್ರಾಣಲಿಂಗ. ಅದರಂತೆ ಯಾವಾತನ ಮನಸ್ಸಿನಲ್ಲಿ ಏನಿರುವುದೋ ಅದರಂತೆ ವರ್ತಿಸುವನೆಂಬ ನೀತಿಯಂತೆ ಧರಣಿಕೇಶವರಾಜನು ಸತಿಯೊಡನೆ ಅಂದವಾದ ಮಾರ್ಗದಲ್ಲಿ ಐತರುತ್ತಿರುವಾಗ ರಮ್ಯಕರವಾದ ವನವು ರಾಜನ ಸತಿಯ ಕಣ್ಣಿಗೆ ಕಾಣಿಸಲಾಗಿ ಅದರಲ್ಲಿ ಪರಮಾನಂದದೊಡನೆ ತರುಣಿ ತನ್ನ ತರುಳನನ್ನು ಬಲಗೈಯಲಲಿ ಎತ್ತಿ ತಿರುಗಾಡುತ್ತಿರುವ ಮರ್ಕಟವನ್ನು ನೋಡಿ ಅನ್ನುತ್ತಾಳೆ ಏನೆಂದರೆ –

**ಪದ :**

ಕಾಂತ ಕೇಳು ಆ ಕೋತಿಯ ಕೊಂದು
ಪುತ್ರನನ್ನು ಹಿಡಕೊಂಡು ಬನ್ನಿರಿ
ಪುತ್ರನನ್ನು ಹಿಡಕೊಂಡು ಬನ್ನಿರಿ | ನಾ
ಪ್ರೀತಿಲಿಂದ ಸಲಹುವೆನು || ೧೨ ||

ಮಕ್ಕಳೆಂದರೆ ಮನ ಉಕ್ಕಿ ಹರಿವುದು
ಚಿಕ್ಕ ಪ್ರಾಣಿ ಮರ್ಕಟ ಮರಿ
ಚಿಕ್ಕ ಪ್ರಾಣಿ ಮರ್ಕಟ ಮರಿ | ನಾ
ಮಕ್ಕಳಂತೆ ಎತ್ತುವೆ ದೊರಿ || ೧೩ ||

ಅಂದಮಾತಕೇಳಿ ಹೊಡೆದ ಒಂದು ಬಾಣ
ಕಂದನ ತಪ್ಪಿಸಿ ಪರಭಾರಿ
ಕಂದನ ತಪ್ಪಿಸಿ ಪರಭಾರಿ | ತಾಯಿ
ನೋಡಿತಾಗ ಬಹು ಹೌಹಾರಿ || ೧೪ ||

ತಾಯಿಗಿಟ್ಟೆಗುರಿ ತಪ್ಪಿ ಕೂಸಿಗೆ
ಬಾಯಮೇಲೆ ಬಡದಿತು ಹಾರಿ
ಬಾಯಮೇಲೆ ಬಡದಿತು ಹಾರಿ | ಆ
ತಾಯಿ ನೋಡಿತಾಗ ಹೌಹಾರಿ || ೧೫ ||

**ವಚನ :**

ಸ್ತ್ರೀಬುದ್ಧಿ ಪ್ರಳಯಾಂತಕ ಎಂಬ ನೀತಿಯಂತೆ ಧರಣಿಕೇಶವರಾಜನ ಸತಿಯಳು ಆ ತೋಟದಲ್ಲಿ ಚರಿಸತಕ್ಕ ಮಂಗಗಳನ್ನು ನೋಡಿ, ಮಂಗನಕೂಸಿನ ಮೇಲೆ ಮನಸಾಗಿ, ತನ್ನ ಕಾಂತನಿಗೆ ಹೆಣ್ಣುಮರ್ಕಟವನ್ನು ಕೊಂದು ಅದರ ಕೂಸನ್ನು ನನಗೆ ತಂದುಕೊಡಿರೆಂದು ಕೇಳಿದ್ದಕ್ಕೆ ರಾಜನು ಅದರಂತೆ ಬಾಣತೊಟ್ಟು ತಾಯಿ ಮಂಗವನ್ನು ಕೊಂದು ಅದರ ಕೂಸು ಪಡೆಯಬೇಕೆಂಬ ಆಸೆಯಿಂದ ಗುರಿಯಿಟ್ಟು ಹೊಡೆಯಲು, ಆರೇನು ಮಾಡುವರು, ಆರಿಂದಲೇನಾಗುವುದು, ಪೂರ್ವಜನ್ಮದ ಕರ್ಮವಿಧಿ ಬೆನ್ನು ಬಿಡದು ಎಂಬ ನೀತಿಸಾರದಂತೆ-ದೈವಯೋಗದಿಂದ ತಾಯಿ ಮಂಗವೇ ಜೀವದಿಂದುಳಿದು ಮರಿಮಂಗ ರಾಜನ ಬಾಣ ತಗುಲಿ ಹತವಾಯಿತು. ರಾಜನು ಲವಲವಿಕೆಯಿಂದ ನೋಡುತ್ತಾನೆ. ತಾಯಿಮಂಗವು ತನ್ನ ಕೂಸನ್ನು ತೊಡೆಯ ಮೇಲಿಟ್ಟು ಕೊಂಡು ಅನ್ನುತ್ತದೆ ಏನಂದರೆ –

**ಪದ :**

ಪ್ರಾಣಪುತ್ರ ನಿನಗೋಣು ಮುರಿದವ
ಕ್ಷೋಣಿಯೊಳಗ ಬ್ಯಾಡೋ ಮಗನ
ಕ್ಷೋಣಿಯೊಳಗ ಬ್ಯಾಡೋ ಮಗನ | ಶಿವ
ನಾಣಿಯಾಗಿ ಹೇಳತೆನಿ ನಾನ || ೧೬ ||

ಸಣ್ಣವನಿರುತಲಿ ಹಣ್ಣು ತಿನಿಸಿದೆನು
ಕಣ್ಣಿನಿಂದ ನೋಡುತ್ತಿದ್ದೆ ದಿನಾ
ಕಣ್ಣಿನಿಂದ ನೋಡುತ್ತಿದ್ದೆ ದಿನಾ | ನಿನ
ಮಣ್ಣಿಗಿಟ್ಟು ಹ್ಯಾಂಗಿರಲಿ ನಾ || ೧೭ ||

ಹಡದಮಗನೆ ನಿನ್ಹೊಡಿದಾತ ಮುಂದೆ
ಪಡೆಯಬೇಡ ನಿನ್ನಂತವನಾ
ಪಡೆಯಬೇಡ ನಿನ್ನಂತವನಾ | ಅಂತ
ತೊಡೆಯ ಮೇಲೆ ಮುದ್ದಿಸಿ ಮಗನಾ || ೧೮ ||

ಅರಸ ಕೇಳೋ ನೀನಿರುತ ಪುತ್ರನ
ಹರಣ ನೀಗಿದೆ ಮುದದಿಂದಾ
ಹರಣ ನೀಗಿದೆ ಮುದದಿಂದಾ | ಈ
ಪಾಪ ತಟ್ಟುವದು ದಿಟವೆಂದಾ || ೧೯ ||

ಅರ್ಜುನನಂಗ ಶ್ರೀ ಅಜ್ಜ ಮಲ್ಲನಲಿ
ಸಜ್ಜಾಗಿ ಹೋಗತಿದಿ ಬಹುದುಂದಾ
ಸಜ್ಜಾಗಿ ಹೋಗತಿದಿ ಬಹುದುಂದಾ | ನಿನ
ದುರ್ಜನತನ ಅಲ್ಲಿ ತಿಳಿಯುವುದಾ || ೨೦ ||

ಸಣ್ಣ ಮಗನ ಮುಕ್ಕಣ್ಣ ತಾ ಕೂಡಲಿ
ಅರಣ್ಯದಿ ಸಾಯಲಿ ದಿಕ್ಕಿಲ್ಲದಾ
ಅರಣ್ಯದಿ ಸಾಯಲಿ ದಿಕ್ಕಿಲ್ಲದಾ | ನಿನ
ಕಣ್ಣ ಕಾಣದಂತಾಗಲಿ ಮುಂದಾ || ೨೧ ||

**ವಚನ :**

"ಹೃದ್ಬಾಧೆ ಪುತ್ರಚಿತಃ' ಎಂಬಂತೆ ತಾಯಿಮಂಗವು ಧರಣಿಕೇಶವರಾಜನನ್ನುದ್ದೇಶಿಸಿ ಹೇಳಿದ್ದೇನೆಂದರೆ, ನೀನು ಧನುಮನದಿಂದ ನನ್ನ ಕೂಸು ಕೊಂದಿರುವಿ. ಶ್ರೀಶೈಲ ಮಲ್ಲಿಕಾರ್ಜುನನು ನಿನಗೆ ಪುತ್ರನನ್ನು ಕರುಣಿಸಲಿ. ಆದರೆ ಅದು ಅರಣ್ಯದಲ್ಲಿ ದಿಕ್ಕಿಲ್ಲದೆ ಸಾಯಲಿ ಎಂದು ಶಾಪಕೊಟ್ಟ ಮಾತು ಕೇಳಿ ರಾಜನು ಅನ್ನುತ್ತಾನೆ ಏನಂದರೆ –

**ಪದ :**

ಕೆಟ್ಟೆ ಕೆಟ್ಟೆ ಈ ಮರ್ಕಟಶಾಪವು
ತಟ್ಟದೆನಗೆ ಬಿಡುದಿಲ್ಲ ಮುಂದಾ
ತಟ್ಟದೆನಗೆ ಬಿಡುದಿಲ್ಲ ಮುಂದಾ | ನನ
ದುಷ್ಟ ಹೆಂಡತಿಯ ಮಾತಿಂದಾ || ೧೩ ||

ಶಾಪತೆಗೆದುಕೊಂಡು ಭೂಪಾಲ ತನ್ನಯ
ಪ್ರೀತಿ ಪತ್ನಿಯ ಹತ್ತಿರ ಬಂದಾ
ಪ್ರೀತಿ ಪತ್ನಿಯ ಹತ್ತಿರ ಬಂದಾ | ಅದು
ಕೊಟ್ಟೈತಿ ಶಾಪ ಹಿಡಿಯಂದಾ || ೧೪ ||

**ವಚನ :**

ಧರಣಿಕೇಶವರಾಜ ದುಃಖದಿಂದ ಮಂಗನಶಾಪವನ್ನು ಪಡೆದು ತಿರುಗಿ ತನ್ನ ಸತಿಯ ಮುಂದೆ ಸರ್ವಸಂಗತಿ ವಿವರಿಸುತ್ತಾನೆ ಏನಂದರೆ –

**ಪದ :**

ಆಯತಾಕ್ಷಿ ಕೇಳೆ ತಾಯಿ ಉಳಿದು ಮೆಗೆ
ಸಾಯಲು ಹೋದಾನು ತಾ ಸತ್ತ
ಸಾಯಲು ಹೋದನು ತಾ ಸತ್ತ | ಆ
ತಾಯಿ ಕುಳಿತುಕೊಂಡು ಅಳತಿತ್ತಾ || ೧೫ ||

ಇಷ್ಟು ಕೇಳಿ ನಾ ಭೆಟ್ಟಿಯಾಗಲು
ಕೊಟ್ಟೈತಿ ಶಾಪವ ಹಿಡಿಯಂತಾ
ಕೊಟ್ಟೈತಿ ಶಾಪವ ಹಿಡಯಂತಾ | ನಿನಗ
ಹುಟ್ಟಲಿ ಮಂಗನ ಮಗನಂತಾ || ೧೬ ||

ಪರರ ಕೈಲಿ ಅವ ಮರಣ ಹೊಂದಲಿ
ಸರ್ಪ ತಾಕಿ ಹೋಗಲಿ ಸತ್ತ
ಸರ್ಪ ತಾಕಿ ಹೋಗಲಿ ಸತ್ತ | ಈ
ಪರಿಕೊಟ್ಟು ಕಳಿಸಿತು ತುರ್ತು || ೧೭ ||

**ವಚನ :**

'ಅಲ್ಪ ಬುದ್ಧಿ ನಾರೀಣಾಂ'ಯಂತಹ ಉತ್ತಮ ಸ್ಥಿತಿ ಇದ್ದಾಗ್ಯೂ ಅವಳಿಗೆ ಮತಿ ಕಡಿಮೆಯಾಗುವ ಸಂಭವ ಉಂಟು. ಅಂತೆಯೆ ರಾಜನ ಸತಿ ಅನ್ನುತ್ತಾಳೆ – ಕಾಗೆಯ ಶಾಪ ದೊರೆಗೆ ಮುಟ್ಟಲಿಲ್ಲವಂತೆ. ಅಡವಿ ಸಂಚರಿಸುವ ಅಜ್ಞಾನಕೋತಿಯ ಶಾಪವು ನಮಗೆ ಮುಟ್ಟಲಾರದೆಂದು ಅಹಂಕಾರದಿಂದ ಪತಿಗೆ ವಿವರಿಸಿದಳಲ್ಲದೆ ಜಾಗ್ರತೆ ಪ್ರಯಾಣ ಬೆಳಸಲು ರಾಜನಿಗೆ ಪಲ್ಲಕ್ಕಿ ಏರಬೇಕೆಂದಳು. ಹೀಗೆ ಮಾರ್ಗ ಕ್ರಮವಹಿಸುತ್ತಿರುವಾಗ ಮುಂದೇನಾಗು ವುದೆಂದರೆ –

**ಪದ :**

ಮುದುಕನಾಗಿ ಮೈ ಗದಗದ ನಡಗುವ
ಮುದಿಯ ಸರ್ಪವ ಕಂಡನೋ ಒಂದಾ
ಮುದಿಯ ಸರ್ಪವ ಕಂಡನೋ ಒಂದಾ | ಆಗ
ಸುದತಿ ಹೇಳಿದಳು ಅಲ್ಲೊಂದಾ || ೧೮ ||

ಮಕ್ಕಳಿಗೋಸ್ಕರ ಮುಕ್ಕಣನಲ್ಲಿಗೆ
ಅಕ್ಕರದಲಿ ಹೋಗತೇವಿ ಇಂದಾ
ಅಕ್ಕರದಲಿ ಹೋಗತೇವಿ ಇಂದಾ | ಇದಕೆ
ವಿಷವು ಬಂದಿತೋ ನಮ ಮುಂದಾ || ೧೯ ||

ಕಡಿದು ತುಂಡುಮಾಡಿ ಕಡೆಗೆ ಒಗೆದು ಲಗು
ನಡೆಯಿರಿ ಮುದಿ ಮಲ್ಲನ ಮುಂದಾ
ನಡೆಯಿರಿ ಮುದಿ ಮೆಲ್ಲನ ಮುಂದಾ | ಅಂತ
ಮಡದಿ ಹೇಳಿದಳು ತ್ವರೆಯಿಂದಾ || ೨೦ ||

ಸತಿಯ ಮಾತಿಗೆ ತುಂಡಗಡಿದ ದೊರಿ
ತುಂಡ ಸರ್ಪ ಹೇಳಿತು ಕರೆದಾ
ತುಂಡ ಸರ್ಪ ಹೇಳಿತು ಕರೆದಾ | ಎಲೊ
ಮಂಡಲಪತಿ ಕೊಂದೆಲೊ ಮರ್ದಾ || ೨೧ ||

**ವಚನ :**

ಮದಾಂಧ ಕಾಲದಲ್ಲಿ ಮಂದ ಬುದ್ಧಿ ಪ್ರಾಪ್ತವಾಗಿ ರಾಜನು ಹೊಡೆದ ಬಾಣದ ಪೆಟ್ಟಿಗೆ ಆ ಸರ್ಪವು ಎರಡು ತುಂಡಾಯಿತು. ಆಗ ಮಂಡಲಾಧಿಪತಿ ಅರಸನನ್ನು ಕರೆದು ಹೇಳಿದ್ದೇನೆಂದರೆ – ಎಲೋ ಮಹಾರಾಜಾ ನೀನು ಪುತ್ರಾರ್ಥಿಯಾಗಿ ಶ್ರೀ ಮೃತ್ಯುಂಜಯನಾದ ಶ್ರೀಶೈಲ ಮಲ್ಲಿಕಾರ್ಜುನನಲ್ಲಿ ಹೋಗುತ್ತಿ. ಆ ಮಲ್ಲಿಕಾರ್ಜುನನು ನಿನಗೆ ಪುತ್ರನನ್ನು ಕರುಣಿಸಲಿ. ಪುತ್ರನ ಜನನವಾದ ತರುವಾಯವೇ ನಿಮ್ಮಿರ್ವರ ಕಣ್ಣುಗಳು ಕಾಣದಂತಾಗಲೆಂದು ಶಿವನಾಣೆ ಇಟ್ಟು ಶಾಪವನ್ನಿತ್ತಿತ್ತು. ರಾಜನು ಭಾರ ಹೃದಯನಾಗಿ ತನ್ನ ಸತಿಯ ಮುಂದೆ ಬಂದು ನಡೆದ ಸಂಗತಿ ವಿವರಿಸಿದಾಗ ಅದನ್ನೊಂದೂ ಮನಸ್ಸಿಗೆ ಹಚ್ಚಿಕೊಳ್ಳಬೇಡಿರೆಂದು ಹೇಳಿ ಶ್ರೀಗಿರಿಗೆ ಪ್ರಯಾಣ ಬೆಳಸಿದರಲ್ಲದೆ ಶ್ರೀಗಿರಿಯ ಮಲ್ಲಿಕಾರ್ಜುನನ ಗುಡಿ ತಲುಪುತ್ತ –

**ಪದ :**

ಎಲ್ಲಿ ಕಾಣೆನು ಈ ಮಲ್ಲನ ಗುಡಿ
ವಲ್ಲಭೆ ನೋಡಂತ ಪೇಳಿದನು
ವಲ್ಲಭೆ ನೋಡಂತ ಪೇಳಿದನು | ಸುತ್ತ
ಎಲ್ಲ ಕಳಸರತ್ನದ ತೆನಿಯನ್ನು || ೨೨ ||

ಪುತ್ರ ಪವಳಿಯಲ್ಲಿ ಮುತ್ತಿನಗೊಂಚಲ
ಹತ್ತು ದಿಕ್ಕಿನಲ್ಲಿ ವೈಭವನು
ಹತ್ತು ದಿಕ್ಕಿನಲ್ಲಿ ವೈಭವನು | ಮುಖ
ವೆತ್ತಿ ನೋಡಿ ಮೈಮುರಿದಾನು || ೩೩ ||

ಎಲ್ಲಿ ನೋಡಿದರು ಫುಲ್ಲಶರಣರು
ಬಲ್ಲಿದ ಶಿವಲಿಂಗದ ಸ್ಥಾನ
ಬಲ್ಲಿದ ಶಿವಲಿಂಗದ ಸ್ಥಾನ | ಮುದಿ
ಮಲ್ಲನಿರುವನು ಆ ಸ್ಥಾನ || ೩೪ ||

ಧರಣಿಕೇಶ ಅವ ಶರಣಮಾಡಿ ಶಿವ
ಚರಣಕೆ ಎರಗಲು ನಡೆದಾನು
ಚರಣಕೆ ಎರಗಲು ನಡೆದಾನು | ತನ
ತರುಣಿಕೊಡಿ ಹೊಕ್ಕ ಗುಡಿಯನು || ೩೫ ||

ಸಾಷ್ಟಾಂಗ ಮಾಡುತ ಶ್ರೇಷ್ಠ ಶಂಕರಗ
ಭೆಟ್ಟಿಯಾಗಿ ತುಸು ಕುಳಿತಾನು
ಭೆಟ್ಟಿಯಾಗಿ ತುಸು ಕುಳಿತಾನು | ತಂದು
ಅಷ್ಟ ಸಾಹಿತ್ಯನೆಲ್ಲ ಇಳಸಿದನು || ೩೬ ||

ರಾಜ ಹೇಳಿತಾನ ಪೂಜಾರಿ ಕರೆದು
ವಾಜಮಿ ಮಾಡಭಿಷೇಕವನು
ವಾಜಮಿ ಮಾಡಭಿಷೇಕವನು | ಈ
ರಾಜೇಶ್ವರಿಕಾಂತನ ನೀನು || ೩೭ ||

ಹಿಟ್ಟು ಅಕ್ಕಿಗಳ ಮೆಟ್ಟಿಗೆ ಇರಿಸುತ
ಚಟ್ಟನೆ ಹೂಡಿಸಿದಡಗಿಯನಾ
ಚಟ್ಟನೆ ಹೊಡುಸಿದಡಗಿಯನಾ | ಬಂ
ದಷ್ಟು ಚರರಿಗೆ ಹೇಳಿ ಬಿನ್ನಾಯನಾ || ೩೮ ||

ತುಪ್ಪಹೋಳಗಿ ಅಪ್ಪಗಣಕೆ
ಸಂತುಷ್ಟಪಡಿಸಿದ ಪರಿಪೂರ್ಣ
ಸಂತುಷ್ಟಪಡಿಸಿದ ಪರಿಪೂರ್ಣ | ಆಗ
ಇಂತಪ್ಪ ಗಣರಿಗೆ ಸಮಾಧಾನ || ೩೯ ||

**ವಚನ :**

ಶ್ರೀಶೈಲ ಮಲ್ಲಿಕಾರ್ಜುನನಿಗೆ ಧೂಪ ದೀಪ ನೈವೇದ್ಯ ಎಡಿಮಾಡಿ ಹಾಗೂ ಗಣರಿಗೆ ತೃಪ್ತಪಡಿಸಿದರೂ ಪೂರ್ವದಲ್ಲಿ ಮಾಡಿದ ಮರ್ಕಟ ಹಾಗೂ ಉರಗತಿಯ ಪಾಪವನ್ನು ಕಳೆದುಕೊಳ್ಳುವುದರಲ್ಲಿ ರಾಜದಂಪತಿಗಳು ಅಸಫಲರಾದರು. ಅಂತೆಯೇ, ಸತಿಪತಿಯರ ನೇತ್ರಗಳು ಅದೇ ದಿವಸ ದೃಷ್ಟಿಯನ್ನು ಕಳೆದುಕೊಂಡು ಅದೇ ದೇವಾಲಯದಲ್ಲಿ ಕಾಲಕಳೆಯುತ್ತಿರುವಾಗ –

**ಪದ :**

ಕಣ್ಣು ಹೋಗಿ ಮುಕ್ಕಣ್ಣನ ಗುಡಿಯಲಿ
ಬಣ್ಣಗೆಟ್ಟು ಬಾಯಿ ಬಿಡತಾರ
ಬಣ್ಣಗೆಟ್ಟು ಬಾಯಿ ಬಿಡತಾರ | ತಮ್ಮ
ಪುಣ್ಯ ತೀರಿತಂತ ಅಳತಾರ || ೪೦ ||

ಮಂತ್ರಿದಂಡು ಸ್ವಾತಂತ್ರ್ಯದಿ ತಮ್ಮ
ಪ್ರಾಂತಕ ಎಲ್ಲರು ತಿರುಗಿದರ
ಪ್ರಾಂತಕ ಎಲ್ಲರು ತಿರುಗಿದರ | ಅ
ತಂತ್ರವಾಗಿ ಉಳಿದರು ಇವರ || ೪೧ ||

ಒಡೆಯ ಮಲ್ಲನ ಗುಡಿಯೊಳು ಇಬ್ಬರು
ಕಡುದುಃಖದಿ ಉಳಕೊಂಡಾರ
ಕಡುದುಃಖದಿ ಉಳಕೊಂಡಾರ | ತಾವು
ಪಡೆದ ರಾಜ್ಯವೆಲ್ಲ ಮರೆತಾರ || ೪೨ ||

ಗಂಡಹೆಂಡರು ಕುರುಡಗಣ್ಣಿನಲ್ಲಿ
ಉಂಡೇನಂದರ ಅನ್ನ ಇಲ್ಲದ
ಉಂಡೇನಂದರ ಅನ್ನ ಇಲ್ಲ | ಬಹು
ಬಂಡಾಟ ಬಿಡುತ ಅಳತಾರ || ೪೩ ||

ಹರನ ಪೂಜೆ ಮಾಡಾವ ಇವರಿಗೆ
ಕರೆದುಕೊಡುವ ತಂಗಚೂರ
ಕರೆದುಕೊಡುವ ತಂಗಳಚೂರ | ಬಹು
ಮರಮರ ಮರುಗುತ ತಿಂಬುವರ || ೪೪ ||

ಈಶನ ಗುಡಿಯಲಿ ಶಶಿಮುಖಿನಾರಿ
ಬಸರು ಆಗಿಬಿಡತಾಳೊ ಘೋರಾ
ಬಸರು ಆಗಿಬಿಡತಾಳೊ ಘೋರಾ | ಆ
ಶಶಿಮುಖಿ ಬಯಕಿ ಬಲುಜೋರಾ || ೪೫ ||

ಒಂಭತ್ತು ತಿಂಗಳು ತುಂಬುತ ನಾರಿಗೆ
ಕುಂಭಿನಿಯೊಳು ಜನಿಸಿದ ಕುವರ

ಕುಂಭಿನಿಯೊಳು ಜನಿಸಿದ ಕುವರ | ಬಹು
ಸಂಭ್ರಮ ಕಳವಳಪಡತಾರ ‖ ೪೭ ‖

ತಂದಿತಾಯಿಗಳ ಕಂದನ ನೋಡಾಕ
ಅಂಧಕರಾಗಿ ಇರುವರು ಪೂರಾ
ಅಂಧಕರಾಗಿ ಇರುವರು ಪೂರಾ | ತಮ
ಕಂದನ ಬಿಟ್ಟಾರೊ ಪರಭಾರ ‖ ೪೭ ‖

ಆ ಸಮಯದಿ ತಾ ಈಶನ ಪೂಜೆಗೆ
ಹಸನಾಗಿ ಪೂಜಾರಿ ಬಂದಾನೊ
ಹಸನಾಗಿ ಪೂಜಾರಿ ಬಂದಾನೊ ಈ
ಕೂಸಿನ ಗುಡಿಯಾಗ ನೋಡ್ಯಾನೊ ‖ ೪೮ ‖

ಮುದಿಯ ಮಲ್ಲನು ನನಗೆ ಒಲಿದುಕೊಟ್ಟ
ಎನುತ ಮಾಡಿದನು ಅವಸರ
ಎನುತ ಮಾಡಿದನು ಅವಸರ | ತನ
ಸುದತಿಗೊಯ್ದು ಕೊಟ್ಟನು ಸದರ ‖ ೪೯ ||

**ವಚನ :**

ಆಗ್ಗೆ ದಶರಥನು ಕಟಗಿ ಕುಳ್ಳನು ಆರಿಸಿ ತಾಳಿಯನ್ನು ಹಾಕಿ ಶವವನ್ನು ಅದರ ಮೇಲಿಟ್ಟು ಬೆಂಕಿ ಹಚ್ಚಿದಾಗ, ದುಃಖ ಸಹಿಸದ ಧರಣಿಕೇಶನು ತನ್ನ ಸತಿಸಹಿತ ಚಿತೆಯಲ್ಲಿ ಹಾರಿದಾಗ ದಶರಥನು ಅನ್ನುತ್ತಾನೆ ಏನೆಂದರೆ –

**ಪದ :**

ನನ್ನಕ್ಕ ನನ ಅಳಿಯನ ಬಿಟ್ಟು
ನನ್ನ ಜಲ್ಮ ಹೆಚ್ಚಿನದಲ್ಲ
ನನ್ನ ಜಲ್ಮ ಹೆಚ್ಚಿನದಲ್ಲ | ಅಂತ
ತನ್ನ ಜಲ್ಮದ ಆಶೆಯು ಇಲ್ಲ ‖ ೧೦೭ ||

ಎಚ್ಚರಿಲ್ಲದೆ ಕಿಚ್ಚು ಜಿಗಿಯಲು
ಕಿಚ್ಚುಗಣ್ಣ ಮೆಚ್ಚಿದನಲ್ಲ
ಕಿಚ್ಚುಗಣ್ಣ ಮೆಚ್ಚಿದನಲ್ಲ | ಮನ
ಮೆಚ್ಚಿ ವರಬೇಡೆಂದನಲ್ಲ ‖ ೧೦೮ ‖

ಬೇಡ ಬೇಡ ಅವರು ಮೂವರು ಬದುಕಲಿ
ಮಾಡುವೆ ಸೇವೆಯ ತ್ರಿಕಾಲ

ಮಾಡುವೆ ಸೇವೆಯ ತ್ರಿಕಾಲ | ಅಂತ
ಹಿಡಿದಾನೊ ಅವ ಶಿವನ ಕಾಲ || ೧೦೯ ||

ನೋಡಿರಿ ನಿಮಗ ಯಾವ ಒಡವಿ ಬೇಕಂತ
ಮೃಡನು ಹೇಳಿ ತಗಸಿದ್ದನಲ್ಲ
ಮೃಡನು ಹೇಳಿ ತಗಸಿದ್ದನಲ್ಲ | ಅಂಥ
ಪದವಿಗೆ ನಡೆದಾರೊ ಅವರೆಲ್ಲ || ೧೧೦ ||

ಪ್ರಾಲಬ್ಧದ ಬರಿಭೋಗ ತಪ್ಪಿಸುವರು
ಯಾರಿಲ್ಲ ಈ ಧರಿಯ ಮ್ಯಾಲ
ಯಾರಿಲ್ಲ ಈ ಧರಿಯ ಮ್ಯಾಲ | ಆ
ಮುರಾರಿನು ಬಿಟ್ಟಿಲ್ಲ ಇದು ಮೊದಲ || ೧೧೧ ||

ಪಾಪರಹಿತ ಈ ದೀಪದ ಕಲಿಯು
ರೂಪತ್ಯಾವದೊಳಗಿನ ಕೀಲ
ರೂಪತ್ಯಾವದೊಳಗಿ ಕೀಲ | ಈ
ದೀಪದಲ್ಲಿ ಮುಗನೂರ ಸ್ಥಲ || ೧೧೨ ||

* * *

**ಪತಿಭಕ್ತೆ ಅನಲಾದೇವಿ**

ಆದಿಯಲಿ ಕೇಳತ್ರಿ ಋಷಿಯ ಸತಿ
ಅನಸೂಯಾ ಈ ದೇವಿಯು |
ಮಕ್ಕಳಿಲ್ಲದೆ ಮೋಕ್ಷವಾಗದು
ಎಂಬ ಶ್ರುತಿಯನು ಕೇಳುತಲಿ || ೧ ||

ಸತಿಯು ಭಕ್ತಿಯ ಮಾಡುತಲಿ
ಹನ್ನೆರಡು ಸಾವಿರ ವರುಷದಲಿ |
ತಪವ ಮಾಡುತ ತಲೆಯ ಕೇಶದಿ
ಪುತ್ರಿಯಂ ಸಲೆ ಪಡೆದಳು || ೨ ||

**ವಚನ :**

ಪೂರ್ವಕಾಲದಲ್ಲಿ ಅತ್ರಿಮಹರ್ಷಿಯ ಪತ್ನಿ ಅನುಸೂಯಾದೇವಿಯು ಪತಿಭಕ್ತಿ ಪರಾಂಗಿತಳಾಗಿರ್ದು, ಮಕ್ಕಳಿಲ್ಲದವರಿಗೆ ಮೋಕ್ಷವಾಗದೆಂಬ ಶ್ರುತಿಯನ್ನು ಕೇಳಿ, ಹನ್ನೆರಡು ಸಾವಿರ ವರ್ಷದವರೆಗೆ ಮಹಾದೇವನನ್ನು ಭಜಿಸಿ, ಅವನ ವರದಿಂದ ಅನಲೆ ಎಂಬ ಹೆಣ್ಣು ಮಗಳನ್ನು ಕೇಶದಿಂದ ಪಡೆದಳು.

**ಪದ :**

ಸಾದರದಿ ಸಾಕಿರ್ದಳನಲೆಯು
ಕನಸಿಲಾದರು ಮದುವೆಯನು |
ಒಲ್ಲೆನೆಂದು ಕಲ್ಲುಮನಸು ಮಾಡಲು
ಆಕಾಶವಾನಿಯಾದುದೇನು || ೩ ||

ತರುಣಿ ರತ್ನವೇ ಕೇಳು ಪಣಿಯಲಿ
ಹೆಳವ ಪತಿಯು ಇರುವನು |
ಪುರುಷನೊಲ್ಲದೆ ಇರಲು ಬಿಡುವುದೆ
ಎನಲು ಚಿಂತೆಯ ಮಾಡಿದಳು || ೪ ||

**ವಚನ :**

ಈ ಪ್ರಕಾರವಾಗಿ, ಪ್ರೀತಿಯಿಂದ ಜೋಪಾನಮಾಡಿದ ಮಗಳು ಕನಸಿನಲ್ಲಿಯಾದರೂ ಕೂಡಾ ಮದುವೆಯನ್ನು ಮಾಡಿಕೊಳ್ಳಬಾರದೆಂದು ಗಟ್ಟಿ ಮನಸ್ಸು ಮಾಡಿ ಇರುತಿರಲಿಕ್ಕೆ. ಒಂದಾನೊಂದು ದಿವಸ ಆಕಾಶವಾನಿಯಾದುದೇನೆಂದರೆ – ಎಲೈ ಸ್ತ್ರೀರತ್ನವೇ ನೀನು ಗಂಡನನ್ನು ಒಲ್ಲೆನೆಂದರೆ ಬಿಟ್ಟಿದ್ದಲ್ಲ. ನಿನ್ನ ಹಣಿಲಿಖಿತದಲ್ಲಿ ಹೆಳವಪತಿ ಘಟಿಸಿರುವನು. ಗಂಡನನ್ನು ಒಲ್ಲೆನೆಂದರೆ ಬಿಡುವುದೇ ವಿಧಿಯು ಎನಲು ಘಾಬರಿಗೊಂಡು ಚಿಂತೆಯನ್ನು ಮಾಡಹತ್ತಿದಳು.

**ಪದ :**

ತಡೆಯದಲಿ ಸಂಕೋಚಮಾಡುತ
ಅಡವಿ ಅಡವಿಯು ತಿರುಗುತ |
ಪೊಡವಿಪತಿ ಹಿಮಗಿರಿಯ ಈಶನ
ಅಡಿಗೆ ತಪವನು ಮಾಡುತ || ೫ ||

ಇರಲು ಹಿಮಗಿರಿಯಲ್ಲಿ ಅನಲೆಯ
ವಿರತಿ ಬೆಳೆದುದು ಘನತರವು |
ಪರಮ ಪುಣ್ಯಳು ಹಸಿವು ತೃಷೆಯ
ಅರುಹನವಳು ಮರೆದಿರ್ದಳು || ೬ ||

**ವಚನ :**

ಆಗ್ಗೆ, ಮನಸ್ಸು ತಡೆಯದೆ ತಾಪಗೊಂಡು ಅಡವಿ ಅರಣ್ಯವ ತಿರುಗುತ್ತ, ತಂದೆ ತಾಯಿಗಳನ್ನಗಲಿ ಕಡೆಗೆ ಹಿಮಾಚಲ ಪರ್ವತಕ್ಕೆ ಹೋಗಿ ಅಲ್ಲಿ ಈಶ್ವರನನ್ನು ಕುರಿತು ತಪಸ್ಸು ಮಾಡುತ್ತ, ವಿರಕ್ತಿ ಬೆಳೆದು ಘನತರವಾದ ತಪಸ್ಸಿನಿಂದ ಅನಲಾಂಬಿಕೆಯು ಹಸಿವು ತೃಷೆ ಎಲ್ಲವನ್ನು ಮರೆತು ತಪದೊಳಗೆ ಇದ್ದಳು.

**ಪದ :**

ಇರಲು ಆಕೆಯ ತಾಯಿಯಾದ
ಅನುಸುಯಾ ಈ ದೇವಿಯು |
ಪತಿಯ ಪಾದವ ನಿತ್ಯ ತೊಳೆಯುತ
ಅತಿಶಯ ಸಂತೋಷದಿ ಇರುತ || ೭ ||

ಹಿತದಿ ಉದಕವ ತನ್ನ ತಲೆಯಲಿ
ನಿತ್ಯ ಪ್ರೋಕ್ಷಿಸಿಕೊಳ್ಳುತಲಿ |
ಅತಿತ್ವರದಿ ಚಳಿಗಿರಿಯ ದೆಶೆಗೆ
ಸುತೆಯ ಕಡೆಗೆ ತಾನ ಚಲ್ಲಿದಳು || ೮ ||

**ವಚನ :**

ಹೀಗಿರಲು, ಆಕೆಯ ತಾಯಿಯಾದ ಅನಸೂಯಾದೇವಿಯು ನಿತ್ಯಕರ್ಮದಂತೆ ಪತಿಯ ಪಾದವ ತೊಳೆದು ಆ ಪಾದೋದಕವನ್ನು ತನ್ನ ತಲೆಯ ಮೇಲೆ ಸಿಂಪಡಿಸಿಕೊಳ್ಳುತ್ತಿದ್ದಳು; ಹಾಗು ಸ್ವಲ್ಪವನ್ನು ಬಾಯಲ್ಲಿ ಹಾಕುತ್ತಿದ್ದಳು. ಆ ದಿನ ಹೀಗೆ ಮಾಡಿದ್ದಲ್ಲದೆ ಮಗಳು ಐದುನೂರು ಹರದಾರಿಯ ಮೇಲೆ ತಪಶ್ಚರ್ಯಕ್ಕೆ ಕುಳಿತಿದ್ದ ಹಿಮಾಲಯ ಪರ್ವತದ ದಿಕ್ಕಿನ ಕಡೆಗೂ ಸಿಂಪಡಿಸಿದಳು.

**ಪದ :**

ಪತಿಯ ಕಾಣುತ ನಿತ್ಯನೇಮವ
ತಪಶ್ವಿನೀ ಆ ದಿಸೆಗೆಯೂ |
ಬಿಸುಟ ಪರಿಯನು ಹೇಳಬೇಕೆಂದು
ಎನಲು ಅನಲೆಯ ತಪವದು || ೯ ||

ಸುಟ್ಟು ಜಠರಾಗ್ನಿಯಲಿ ಹೋಗುವದು
ಎಂದು ಪಾದದ ಉದಕವ |
ತಳಿದನನೆ ಬೆರಗಾಗಿ ಇದು
ಎಂದು ಆಡದನಾತನು || ೧೦ ||

**ವಚನ :**

ಆಗ್ಯೆ, ಅನುಸುಯಾದೇವಿಯ ಗಂಡನಾದ ಅತ್ರಿಮಹರ್ಷಿಯು – ಹೇ ಸತಿಯೇ, ನೀನು ನಿತ್ಯ ನೇಮದಂತೆ ಮಾಡದೆ ಇವತ್ತಿನ ದಿವಸ ಹಿಮಾಲಯ, ಪರ್ವತದ ಕಡೆಗೆ ಪಾದೋದಕವನ್ನು ಸಿಂಪಡಿಸಿ ಕಾರಣವನ್ನು ಹೇಳಿಂದೆನಲು; ಹೇ ಪ್ರಾಣ ರತ್ನಾ, ಮಗಳಾದ ಅನಲಾದೇವಿಯನ್ನು ಜಠರಾಗ್ನಿ ಬಾಧಿಸುತ್ತಿದ್ದು ತಪಸ್ಸು ಕೆಡುವುದೆಂದು ಪಾದೋದಕವನ್ನು ಸಿಂಪಡಿಸಿದೆನು. ಈಗ ಅದು ಆರಿ ಶಾಂತವಾಯಿತೆಂದು ನುಡಿದಳು. ಇದನ್ನು ಅತ್ರಿಋುಷಿ ಕೇಳಿ – ಆಕೆ ಅಲ್ಲಿ, ನೀನು ಇಲ್ಲಿ; ನೀನು ಸಿಂಪಡಿಸಿ ಪಾದೋದಕದಿಂದ ಜಠರಾಗ್ನಿಯು ಆರೆತೆನ್ನುವ ಮಾತು ಪುಸಿಎಂದನು. ಅದಕ್ಕೆ ಅನುಸುಯಾದೇವಿಯು ಹೇಳಿದ್ದೇನೆಂದರೆ – ಎನ್ನೊಡೆಯ ಮುನಿರಾಯನೆ ನಿಮ್ಮ ಭಕ್ತಿಯ ದಯದಿಂದಲೂ ಹಾಗು ಆ ಶ್ರೇಷ್ಠವಾದಂತಹ ಪಾದೋದಕದಿಂದಲೂ ಅಗ್ನಿಯು ಶಾಂತವಾಯಿತು. ಮನ್ನಿಸು, ಗುಣವಾಗಿದೆ ಎನಲು ಅತ್ರಿಋುಷಿಯು ತನ್ನ ಮಗಳಾದ ಅನಲಾದೇವಿಯು ಚನ್ನಾಗಿ ಇದ್ದಾಳೋ ಇಲ್ಲವೋ ಎಂಬುದನ್ನು ನೋಡಿ ಈ ಮಾತು ಪರೀಕ್ಷಿಸಬೇಕೆಂದು ದಂಪತಿಗಳೀರ್ವರು ಮಗಳಿದ್ದ ಹಿಮಾಲಯ ಪರ್ವತಕ್ಕೆ ಬಂದರು.

**ಪದ :**

ನೋಡಿ ಶೆಕೆ ಶಾಂತವಾದದು
ಸತಿಯು ಪತಿವೃತೆ ಎಂಬುದು |
ಮನಕೆ ಖಾತ್ರಿಯ ಮಾಡಿಕೊಂಡು
ಮಗಳೆ ಮಾತಾಡೆಂದನು || ೧೧ ||

ಬಹಳ ತಪವ ಮಾಡ್ವದರಿಂದ
ಹುರುಳು ಏನಿಲ್ಲವೆಂದನು |
ಪೇಳುವೆ ಕಜ್ಜೆ ಫಲವು ದೊರೆಯುವ
ತಿಳಿದು ಕೇಳೆಂದ್ಹೇಳ್ದನು || ೧೨ ||

**ವಚನ :**

ಅಲ್ಲಿ ಮಗಳ ಒಡಲಬೆಂಕಿಯು ಶಾಂತವಾದುದನ್ನು ನೋಡಿ ಅನುಸೂಯಳು ಬಹು ಪತಿವೃತೆಯುಳ್ಳವಳೆಂದು ಮನಸ್ಸಿಗೆ ಖಾತ್ರಿಮಾಡಿಕೊಂಡು ಮಗಳನ್ನು ಮಾತಾಡಿಸಿ; ಎಲೈ ಪ್ರೀತಿಯ ಮಗಳೆ, ನಿನಗೆ ಪತಿ ಇಲ್ಲದೆ ಗತಿಯಾಗಲಾರದೆಂದೂ, ಬರಿ ಗೋರ ತಪಸ್ಸು ಮಾಡಿ ಪ್ರಯೋಜಜವಿಲ್ಲೆಂದೂ ಹೇಳಿ ಪತಿ ಸೇವೆಯೇ ತಪಸ್ಸು, ದೈವದಲ್ಲಿದ್ದುದು ಎಲ್ಲಿಗ್ಹೋದರೂ ಬಿಡುವುದಿಲ್ಲ. ನಿನಗೆ ಕಲ್ಯಾಣವಾಗುವ ದಾರಿಯನ್ನು ಹೇಳುತ್ತೇನೆ. ವಿಚಾರಮಾಡಿ ನೋಡಿ ನನ್ನ ಮಾತು ಕೇಳು; ಎಂದು ಅನಲೆಯ ತಂದೆಯಾದ ಅತ್ರಿಋಷಿ ಮಗಳಿಗೆ ಬುದ್ಧಿ ಹೇಳಿದನು.

**ಪದ :**

ಬಹಳ ಪರಿಯಲಿ ಹೇಳಿ ಬುದ್ಧಿಯ
ಘೋರಮುನಿ ಎಂಬ ಹೆಳವನು |
ಕರುಣಾತ್ಮಕನೆಂದು ಲಗ್ನವ
ಮಾಡ್ದರಂ ಮತ್ತ್ಹೇಳ್ದರು || ೧೩ ||

ಪತಿಯ ಸೇವೆಯ ಮಾಡುತನುಜೆಯೆ
ಹಿತವು ಆಗ್ವದು ನಿನಗೆಯು |
ಗತಿಯು ದೊರೆವುದು ಎಂದು ಬುದ್ಧಿಯ |
ಹೇಳ್ದರಂ ಬಿಟ್ಹೋದರಂ || ೧೪ ||

**ವಚನ :**

ಹೀಗೆಂದು ನಾನಾಪರಿಯಲಿ ಬುದ್ಧಿಹೇಳಿ ಘೋರಮುನಿ ಎಂಬ ಹೆಳವನಿಗೆ ಮಗಳನ್ನು ಕೊಟ್ಟು ಲಗ್ನಮಾಡಿ ಮಗಳಿಗೆ ಹೇಳಿದ್ದೇನೆಂದರೆ – ಮಗಳೆ ಪತಿ ಸೇವೆಯನ್ನು ಮಾಡು. ಗಂಡನೆ ದೇವರೆಂದು ತಿಳಿ. ಅಂದರೆ ನಿನಗೆ ಮೋಕ್ಷವಾಗುವುದೆಂದು ಹೇಳಿ. ಗಂಡ ಹೆಂಡರನ್ನು ಬೀಳ್ಕೊಟ್ಟು ಋಷಿಯು ತನ್ನ ಹೆಂಡತಿಯೊಡನೆ ಹೊರಟು ಹೋದನು.

**ಪದ :**

ಇತ್ತಳನಲೆಯು ಗಂಡನಂ
ಹೊತ್ತು ಕೊಂಡಳು ಹೆಗಲಲಿ |
ಕತ್ತಲೆನ್ನದೆ ಪೃಥ್ವಿಯಲಿ
ಮತ್ತೆ ಪ್ರಯಾಣವ ಮಾಡ್ದಳು || ೧೫ ||

ಕಡೆಗೆ ಕಲ್ಯಾಣಪುರಕೆ ಬಂದಳು
ಗೃಹವ ಕೇರಿಗಳ್ ನೋಡ್ದಳು |
ಬರಲು ಆ ಪಥಬಿಟ್ಟು ಮುಂದಿನ
ಮಾರ್ಗ ಹಿಡಿದೇ ಹೋದಳು || ೧೬ ||

**ವಚನ :**

ಇತ್ತ ಅನಲಾದೇವಿಯು ತನ್ನ ಗಂಡ ಘೋರಮುನಿಯನ್ನು ತನ್ನ ಹೆಗಲ ಮೇಲೆ ಕೂಡ್ರಿಸಿಕೊಂಡು ಹಗಲು ರಾತ್ರಿ ಎನ್ನದೆ ಪ್ರಯಾಣ ಮಾಡುತ್ತಿರಲು; ಕಡೆಗೆ ಕಲ್ಯಾಣ ಪಟ್ಟಣಕ್ಕೆ ಬಂದು ಆ ಊರಲ್ಲಿಯ ಮನೆಗಳನ್ನು ನೋಡುತ್ತ ಕೇರಿಯಲ್ಲಿ ಬರುತ್ತಿರಲು; ಒಮ್ಮಿಂದೊಮ್ಮೆಲೆ ಮಾರ್ಗ ಬದಲಿಸಿ ಬೇರೆ ಮಾರ್ಗ ಹಿಡಿದು ನಡೆದಳು.

**ಪದ :**

ಸುತ್ತಿ ಹೋಗುವ ತೆರನ
ವಿಸ್ತರದಿಂದ ಹೇಳೆಂತೆಂದನು |
ಚಿತ್ತದೊಲ್ಲಭ ಕೇಳು ಹರುಷದಿ
ಬಿತ್ತರಿಸುವೆ ಕಥೆಯನು || ೧೭ ||

ಚಂದದಿಂ ವಂದನೆಯ ಮಾಡಿ
ಹೇಳಲಿಕ್ಕನುವಾದಳು |
ಕೇಳು ವಲ್ಲಭ ಹೇಳುವೆನು
ಈ ಪುರದೋಳಿರುವಂಥ ಸೂಳೆಯು || ೧೮ ||

ಬಹಳ ಚೆಲುವೆಯು ಪದ್ಮಾವತಿ
ಎಂಬ ನಾಮದಿಂದ ಮೆರೆವಳು |
ಅವಳ ಸ್ನಾನದ ಕೀಳು ಜಲವನು
ದಾಂಟಬಾರದು ಎನ್ನುತ || ೧೯ ||

ತವಕದಿಂ ನಾ ಹೊರಳಿ ಬಂದೆನು
ವಿವೇಕದಿಂ ತಿಳಿಯೆಂದಳು |
ಹೆಗಲ ಮೇಲಿನ ಹೆಳವ ನುಡಿದನು
ಸುಗುಣ ಸತಿಯೆ ನೀನೀಗ || ೨೦ ||

ಈಗಳೆ ಇಲ್ಲದೆ ಪದ್ಮಾವತಿಯ-
ನಗೊದಗುವಂತೆ ಮಾಡೆಂದನು |
ಪತಿಯ ಆಜ್ಞೆಯ ಮೀರಿದರೆ ಮುಂದೆ
ಪಾಪ ತಗಲುವದೆನ್ನುತಾ ‖ ೨೧ ‖

**ವಚನ :**

ಅಂದಿನ ರಾತ್ರಿ ಹನುಮಂತ ದೇವರ ಗುಡಿಯಲ್ಲಿ ಗಂಡನನ್ನು ಬಿಟ್ಟು, ಗಣಿಕಾ ಸ್ತ್ರೀಯಳ ಬಾಗಿಲಿಗೆ ಬಂದು, ಅವಳ ಅಂಗಳವ ಸಾರಿಸಿ ರಂಗವಲ್ಲಿಯನಿಟ್ಟು, ಹೊಸ್ತಿಲಿಕೆ ಕುಂಕುಮವನಿಟ್ಟು, ಯಾರಿಗೂ ಗೊತ್ತಾಗದಂತೆ ತಿರುಗಿ ತನ್ನ ಗಂಡನಿದ್ದ ಸ್ಥಳಕ್ಕೆ ಹೋಗುವಂಥವಳಾದಳು. ಮರು ದಿವಸ ಸೂರ್ಯೋದಯಕ್ಕೆ ಸೇವಕಳು ನೋಡಿ ತನ್ನೊಡತಿಗೆ ಈ ಸಂಗತಿಯನ್ನರುಹಲು, ಆಕೆಯೂ ಆಶ್ಚರ್ಯಪಟ್ಟು ನಾಳಿನ ರಾತ್ರಿಯಲ್ಲಿ ರಂಗವಾಲಿಯ ಹಾಕಲಿಕ್ಕೆ ಬರುವವರು ದೇವಾನು ದೇವತೆಗಳಾದರೂ ಬಿಡದೆ ತನ್ನ ಕಡೆಗೆ ಕರೆತರುವದೆಂದು ತನ್ನ ಸೇವಕಳಿಗೆ ಆಜ್ಞೆವಿಧಿಸಿದಳು. ಹಿಂದಿನ ದಿನದಂತೆ ಅನಲಾದೇವಿ ನಿಶಿ ಬಲಿತ ಮೇಲೆ ರಂಗವಲ್ಲಿಯನ್ನಿಡಲು ಬರಲು; ಸೇವಕಳು ಆಕೆಯನ್ನು ಹಿಡಿದು ಕರಕೊಂಡು ತಮ್ಮೊಡತಿ ಪದ್ಮಾವತಿಗೆ ಒಪ್ಪಿಸುವಂಥವಳಾದಳು.

**ಪದ :**

ನೀನು ಪರಮೆಯು ಗಣಿಕೆಯರಂಗಳ
ಸಾರಿಸಿದ ಪರಿಯನು ಸಾನುರಾಗದಿ |
ಪೇಳು ಎಂದು ಪದ್ಮಾವತಿ ನುಡಿಯಲು
ಅದಕನಾಂಬಿಯು ನುಡಿದಳು ‖ ೨೨ ‖

ಎನ್ನ ಕಾಂತನು ನಿನಗೆ ಮುದದಿ
ಮನಸೋತನಾಗಿರುವನು |
ಬಂದೆ ನಾನು ನಿನ್ನ ಗೃಹಕೆ
ಎಂದು ಮತ್ತೆಯು ನುಡಿದಳು ‖ ೨೩ ‖

ಇಂದು ಪತಿಯ ಇಷ್ಟವನ್ನು
ಚಂದದಿಂ ಮಾಡೆಂದಳು |
ಒಲ್ಲದಿರ್ದೊಡೆ ಪ್ರಾಣಕೊಡುವೆನು
ಕಣಿ ನೀ ಎಂದಳು ‖ ೨೪ ‖

ಸೊಲ್ಲು ಕೇಳುತ ರೂಪಸಿಯು
ಕರುಣದಿಂದ ಇತೆಂದಳು |
ಕುಂಟ ಗಂಡನ ಸೇವೆಯು ನಿನಗೆ
ಅಂಟಿಕೊಂಡ ಕಾರಣ ‖ ೨೫ ‖

ಕುಂಟಲಗಿತ್ತಿಯಾಗಿ ನೀ
ಟೊಂಕಕಟ್ಟಿ ನಿಂತಿರುವಿಯಾ |

ನಿನ್ನ ಅಂದದಿ ಪತಿಯ ಭಕ್ತಿಯ
ಮಾಳ್ಪರಂ ನಾ ಕಾಣೆನು || ೧೬ ||

ಸಂದೇಹವಿಲ್ಲದೆ ಇಂದು ನೀ
ಕರಕೊಂಡು ಬಾ ಎಂದಳು |
ಅಂದಮಾತ ಕೇಳಿ ಅನಲಾಂಬಿಕೆಗೆ
ಹರುಷವು ನೂರ್ಮಡಿಯಾಯಿತು || ೧೭ ||

ಬಂದು ಕಾಂತನ ಮುಂದೆ ಎಲ್ಲವ
ಪೇಳಿ ಮರುದಿನ ಸಂಜೆಗೆ |
ಹೊತ್ತು ಹೆಗಲಲಿ ಪದ್ಮಾವತಿಯ
ಶಯನ ಮಂಚಕ ಇಳಿಸಿದಳು || ೧೮ ||

ಮತ್ತೆ ಮಂಚದ ಮೇಲೆ ಕೂಡ್ರಿಸಿ
ಹೊರಗೆ ಬಾಗಿಲು ಕಾಯ್ದಳು |
ಸರಸಿಜಾನನೆ ಪದ್ಮಾವತಿಯು
ಹರುಷದಿಂದ ಸವಿಮಾತನು || ೧೯ ||

ವರ ಪರಿಮಳಗಳನು ತೀಡಿ
ವೀಳ್ಯವನು ಇತ್ತಳು |
ಸ್ಮರನ ಯುದ್ದದಿ ಭರದಿ ಶಾಂತಿಯ
ಮಾಡಿ ಸ್ನೇಹದಿ ಅಪ್ಪಿದಳು || ೨೦ ||

**ವಚನ :**

ತದನಂತರ ಅನಲಾಂಬಿಕೆಯು ಬಾಗಿಲು ತೆರೆದು ಪತಿಯನ್ನು ಹೊತ್ತುಕೊಂಡು ಆ ಘೋರವಾದ ನಿಶೆಯಲ್ಲಿ ಮಾರ್ಗಕ್ರಮಿಸುತ್ತಿರುವಾಗ, ಮಾರ್ಗದಲ್ಲಿ ಮಾಂಡವ್ಯನೆಂಬ ಋಷಿಯು ತಪವಗೈಯ್ಯುತ್ತಿರಲು ಅವನ ಚರಿತ್ರೆ ಪೇಳ್ವೆನು.

**ಪದ :**

ಅವನ ಹೆಂಡರು ಇಬ್ಬರಿದ್ದರು
ಚಪಲೆ ಚಂಚಲೆ ಎಂಬುವರು |
ಅವಿವೇಕಿ ಇದ್ದರು ಪತಿಯ ತಪಕೆ
ವಿಘ್ನವ ಮಾಡುತಿರ್ದರು || ೨೧ ||

ಮುನಿಯು ಅವರನು ಬಿಟ್ಟು ವೈರಾಗ್ಯದಿ
ವನದೊಳು ಇರಲು ಹೆಂಡರು |

ಬಿಡದೆ ತೊಣಚೆಗಳಾಗಿ ಕಿವಿಯಲಿ
ಕಡಿಯುತ ಕಷ್ಟ ಕೊಡುತಿರ್ದರು || ೩೧ ||

**ವಚನ :**

ಆಗ ತಪಕೆ ವಿಘ್ನವ ತರಲು, ಅವನ (ಮಾಂಡವ್ಯ ಋಷಿಯ) ಚಿತ್ತ ಪಲ್ಲಟವಾಗಲು, ಅಪಾರ ಸಿಟ್ಟಿನಿಂ ಸತಿಯರಿಗೆ ಮುಳ್ಳಿನಿಂದೊತ್ತಿ ಚುಚ್ಚಿದನಾತನು. ಸತಿಯರುಗಳ ಸತ್ತ ಮೇಲೆ ಮುನಿಯ ಕೋಪ ಶಾಂತವಾಗಿ ಅತಿತ್ವರತದಿ ವಿಚಾರಬಂದು ಚಿಂತೆಯನ್ನು ಮಾಡ್ಡನು. ಕೊಂದವಗೆ ಕೊಲೆ ತಪ್ಪದಿದನಾ ಮಂದಮತಿ ಇದನೇನು ಮಾಡಿದೆ; ಎಂದು ಚಿಂತೆಗೈಯ್ಯುತ್ತ ಮತ್ತೆ ಮುಂದೆ ತಪವನು ಮಾಡುತ್ತಾ ಇರಲು ಆಕಾಶವಾಣಿಯಾದುದೇನೆಂದರೆ – ವರ ಶೂಲಕಿಕ್ಕಿದವನಿಗೆ ಶೂಲ ತಪ್ಪದು ಎಂದು ಸಂಕಲ್ಪ ಕೇಳಿದ ಮೇಲೆ –

**ಪದ :**

ಆಗ ಮಾಂಡವ್ಯ ಮುನಿಯು
ಬೇಗ ಘಾಬರಿಯಾಗುತಾ |
ಗಗನ ವಾಕ್ಯದಂತೆ ಈಗ
ನನಗೆ ತಪ್ಪದು ಎಂದು || ೩೩ ||

ಮೇಣದ ಶೂಲ ಮಾಡಿ ನೆಲದಿ
ನಡಸಿದನು ಆತನು |
ಬಂದ ಬಾಧೆಯ ಕಳೆಯಬೇಕು
ಎಂದು ಹಾಯ್ದನಾತನು || ೩೪ ||

ಬರಿಯ ಮೇಣದ ಶೂಲ ಹೋಗಿ
ಖರೆಯ ಕಬ್ಬಿಣವಾಯಿತು |
ಪರಮಪಾತಕ ತಪ್ಪದೆಂದು
ಹೊರಳಿ ಬಿದ್ದನಾತನು || ೫೫ ||

ಇರಿದು ಶೂಲವು ಬೆನ್ನಿನೊಳುಮೂಡಿ
ಘಾಯ ಮಾಡಿತಾತನಿಗೆ |
ಮರಮರನೆ ಮರಗುತ್ತ ಮನದಲಿ
ತಪವ ಮಾಡುತ ಇರ್ದನು || ೫೬ ||

**ವಚನ :**

ಬರೀ ಮೇಣದಿಂದ ಮಾಡಿದ ಶೂಲ ಹೋಗಿ ಖರೇ ರೀತಿಯಿಂದ ಉಕ್ಕಿನ ಶೂಲವಾಗಿ ಮಾಡಂವ್ಯಋಷಿಯ ಹೊಟ್ಟೆಯೊಳಗಿಂದ ಹಾಯ್ದು ಬೆನ್ನಿಗೆ ನಡಲು; ನಾನು ಮಾಡಿದ ಪಾಪವು ಹೇಗೆ ಮಾಡಿದರೂ ಹೋಗೆಲಿಲ್ಲವೆಂದು ಅನೇಕ ರೀತಿಯಿಂದ ಕಷ್ಟಪಟ್ಟು ಮತ್ತೂ ತಪಸ್ಸುಮಡುತ್ತ ಕುಳಿತನು.

**ಪದ :**

ಇತ್ತ ಅನಲಾದೇವಿಯು ಕಾಂತನ
ಹೊತ್ತು ಹೆಗಲಲಿ ಚಂದದಲಿ |
ಕತ್ತಲಲಿ ವನದಲ್ಲಿ ಮತ್ತೆಯು
ಮಾರ್ಗ ಹಿಡಿದೇ ಬರುತಲಿ || ೩೭ ||

ಅನಿತರೊಳಗೆ ಅವಳ ನಲ್ಲನ
ಚರಣವು ಮಾಂಡವ್ಯಗೆ |
ಘನತರದಿ ಬಡಿಯಲ್ಕೆ ಕೋಪದಿ
ಶಾಪಿಸಿದನು ಬಹು ಆತನು || ೩೮ ||

ಎನ್ನ ನೋಯಿಸಿದವರ ಶಿರವು
ಇನ್ನು ದಿನಮಣಿ ಉದಯಕೆ |
ಮನ್ನಣೆ ಇಲ್ಲದೆ ಸಹಸ್ರಹೋಳು
ಆಗಲೆಂದು ಶಪಿಸಲು || ೩೯ ||

ಆಗ ಅನಲಾದೇವಿ ಅದನನು
ಕೇಳಿ ಮನದಲಿ ನಡಗುತಾ |
ಭೋಗ ಎಂತಿಹುದೋ ಎಂದು
ಚಿಂತೆ ಮಾಡುತ ಕುಳಿತಳು || ೪೦ ||

**ವಚನ :**

ಮರುಕ್ಷಣವೆ ಅನಲಾದೇವಿಯು ಹೊತ್ತು ಉದಿಸಬೇಡೆಂದು ಸೂರ್ಯಗೆ ಎತ್ತಿ ಕೈಮುಗಿದು ಶಿವನಾಣೆ ಇಟ್ಟು ಮಾರ್ಗಕ್ರಮಿಸುತ್ತಿರಲು, ದಿನಮಣಿಯು ಅನಲಾಯಿಯ ಆಣೆಗೆ ನಡಗುತ್ತ ಗುಪ್ತದಿಂದ ಕುಳಿತ. ಒಂದು ಪಕ್ಷ ಕಾಲದವರೆಗೆ ಕತ್ತಲು ಕವಿಯಲು ಅಂದು ವಿಭುದರು ಸುರಪನೊಡಗೂಡಿ ಮೊರೆ ಇಟ್ಟರೈ ಶಂಕರನಿಗೆ. ಸೂರ್ಯನ ಕಿರಣವ ಕಾಣದೆ ಎಮ್ಮಯ ಕರ್ಮಂಗಳು ನೆರೆ ಕೆಟ್ಟವೆಂದು ವಿಷಮಗೊರಳನು ಅವರ ವಾಕ್ಯವ ಕೇಳಿ ಸಂತೈಸಲು ಭುವಿಗೆ ಬಂದನು.

**ಪದ :**

ಶಿವನು ಅನಲಾದೇವಿಗೆಯು
ಪ್ರತ್ಯಕ್ಷವು ಆಗುತ |
ಯುವತಿರತ್ನವೆ ರವಿಯ ಆಣೆಯ
ತವಕದಿಂ ತೆಗೆ ಎಂದನು || ೪೧ ||

ಅನಲೆಯು ಅವಸರದಿಂದ ಶಿವನಿಗೆ
ನಮಿಸಿ ಎಲ್ಲವ ಪೇಳ್ದಳು |
ದಿನಮಣಿಯೆ ನೀ ಉದಿಸು ಎಂದು
ಆಣೆಯಂ ನೆರೆಕೊಂಡಳು || ೪೨ ||

ಅಣೆಕೊಂಡಾಕ್ಷಣಕೆ ಸೂರ್ಯನು
ಕಾಣುವಂಥವನಾದನು |
ಮಾಣದೆಯು ಅನಲಾಯಿಯ ದೇವನ
ಮಸ್ತಕವು ಒಡೆದ್ಹೋಯಿತು || ೪೩ ||

ತ್ವರಿತದಿ ಪರಮೇಶ್ವರನು ಹಸ್ತವ
ಹರಿದ ಶಿರದಲಿ ಇಟ್ಟನು |
ಭರದಿ ಷೋಡಶರೂಪದ
ಪರಮ ಪುರುಷನು ಆದನು || ೪೪ ||

**ವಚನ :**

ಹರನು ಅನಲಾದೇವಿಗೆ ವರವು ಬೇಡೆಂದಾಗ, ಭರದಿ ಶೂಲದಿ ಇರಿದು ಕೊಂಡಿಹ ಸತಿ ಪತಿಗಳೆಲ್ಲರನು ಕರುಣದಿಂದಲಿ ಸಲಹು ಎನ್ನಲು, ಸರ್ವರನು ಜಗದೀಶನು ಹರುಷದಿಂದಲಿ ಬೇಡಿದಂತೆ ಕೊಟ್ಟು ಕಾಯುವಂಥವನಾದನು.

**ಪದ :**

ಇತ್ತ ಆಕಾಶ ಮಾರ್ಗದಿ
ಬಂದುದೈ ವಿಮಾನವು |
ಭಕ್ತರನು ಕರಕೊಂಡು ಹೋಗಲು
ಪುಷ್ಪವೃಷ್ಟಿಯು ಕರೆದುದು || ೪೫ ||

ಪತಿಯು ಅಗಲದೆ ಅನಲಾದೇವಿಯು
ಮುಕ್ತಿಯನು ಸಲೆ ಪಡೆದಳು |
ಹಿತದಿ ಶಿವ ಶಿವ ಎನ್ನುತಲಿ
ಮಾರ್ಗ ಹಿಡಿದೇ ನಡೆದಳು || ೪೬ ||

ನಾಕು ಮಂದಿ ಅಣ್ಣದೇರಾ ಹಳಿಗೇರೆಂಬ ಊರಾಗ
ಹಳಿಗೇರೆಂಬ ಊರಾಗ ಹುಲಿ ಹೋಗ್ಯಾವ ನಾಗಠಾಣಕ
ಹುಲಿ ಹೋಗ್ಯಾವ ನಾಗಠಾಣಕ ಕುರಿ ಬಂದು ಮಂದ್ಯಾಗ ನಿಂತಾವ
ಗಂಗಿ ಮಾಳಮ್ಮನಂದಾರೆ ಅಡ್ಡ ಬರುವುತಾಳೇನ
ಅಡ್ಡ ಬರುವುತಿದ್ದಾಳೆ ಮರಿಯಾ ಹಿಡಿಯುತಿದ್ದಾಳ
ನಾಕು ಮಂದಿ ಅಣ್ಣದೇರಾ ತಾಯಿನ ಕೇಳುತಾರೇನ
ಬಾರೋ ಬಾರೋ ಏಯವ್ವ ತಂಗಿ ಎಲ್ಲಿಗ ಹೋಗ್ಯಾಳ
ಭಾಗ್ಯದೊಳಗ ಬರುವಕ್ಕೆ ಬದುಕಿನೊಳಗ ಇರುವಕ್ಕೆ
ಕುಡದ ಮರಿಗೋಳಲ್ಲವ್ವ ಹೊಟ್ಟಿ ನೋಡಿ ಉಣಸಕೆ
ಬಾರೋ ಬಾರೋ ಹಡದವ್ವ ತಂಗಿ ಎಲ್ಲಿ ಹಾಳವ್ವ
ಹಣೇಗಿ ಗಂಧ ಹಚ್ಯಾನ ಕುಂಕುಮಬಟ್ಟ ಹಚ್ಚಾನ

ಬಿಳಿಯಾ ರುಂಬಾಲ ಸುತ್ತ್ಯಾನ ಕಪ್ಪಿಲೆ ಕರಿಚಲುವನೆ
ಕಪ್ಪಿಲಿ ಕರಿಚಲುವನೇ ಬೂದಿಬಡಕನ ಹಿಂದೇನ
ಬೂದಿಬಡಕನ ಹಿಂದೇನ ಕೈಯಾಗ ಚರಗಿ ಹಿಡದಾಳ
ಕೈಯಾಗ ಚರಗಿ ಹಿಡದಾಳೆ ಬೆನ್ನಿಂದ ಹೋಗ್ಯಾಳೇನಯ್ಯ
ಬೆನ್ನಿಂದ ಹೋಗ್ಯಾಳಂದಾಳೆ ಬೆನ್ನಿಂದ ಹೋಗ್ಯಾಳೇನಯ್ಯ
ನಾಲ್ಕು ಮಂದಿ ಮಕ್ಕಳ ಹಿಂತ ಮಾತ ಕೇಳ್ಯಾರ
ಹಿಂತ ಮಾತ ಕೇಳ್ಯಾರೆ ದೊಣ್ಣಿ ಕೈಯಾಗ ಹಿಡದಾರ
ದೊಣ್ಣಿ ಕೈಯಾಗ ಹಿಡದಾರ ಹೆಗಲಿಗ ಹೊರವುತಾರೇನ
ಬಾರೋ ಬಾರೋ ತಾಯವ್ವ ಯಾವ ಧಾರಿಗ ಹೋಗ್ಯಾರೆ
ಮೂಡಲ ದಿಕ್ಕಿಗಲ್ಲೇಳ ಗುಡ್ಡದ ದಾರಿಗ ಹೋದಾರ
ನಾಲ್ಕು ಮಂದಿ ಅಣ್ಣದೇರಾ ಹೆಗಲಿಗ ಬಡಗಿ ಹೊತ್ತಾರ
ದೊಣ್ಣಿ ಹೆಗಲಿಟ್ಟಾರ ರಾಯಿಮಾರಗ ಹಿಡದಾರ
ಹೋಗುತ ಹೋಗುತಲ್ಲೇಳ ಗುಡ್ಡಕ ಬರುವುತಾರೇನ
ಗುಡ್ಡಕ ಬರುವ ಯಾಳ್ಯಾಕ ಸ್ಯಾಸಿಲಗ್ಗನ ನಡದಾವ
ಹರಿಯಾ ನೀರ ಬಿಟ್ಟೇನೆ ಸ್ಯಾಸಿಗ ಸುರುವನಾದಾವ
ತಾಳಿ ಗುಂಡ ತಂದಾರೆ ಕೊಬ್ಬರಿಗುಂಡ ತಂದಾರ
ಕೊಬ್ಬರಿ ಗುಂಡಿನೊಳಗೇನ ತಾಳಿ ಮುತ್ತನಿಟ್ಟಾರ
ತಾಳಿ ಮುಟ್ಟುನಿಟ್ಟಾರ ಬಯಲಿಗ ಬರುವುತಾರೇನ
ಮಲ್ಲಿಕಾರ್ಜುನ ಮಾದೇವಗ ಗಂಗಿಯ ಮಾಳಮ್ಮನ
ಗಂಗಿಯ ಮಾಳಮ್ಮಗ ಲಗ್ಗನಾಗತಾವಂದಾರ
ಕೈಯಾಗ ಗುಂಡ ಹಿಡದಾರೆ ತಾಯಿ ತಂದಿನ ಕೇಳ್ಯಾರ
ತಾಯಿ ಬಂದಿರಲಂದಾರೆ ತಂದಿ ಬಂದಾನಂದಾರ
ಬಂಧು ಬಂದಾರಂದಾರೆ ಬಳಗ ಬಂದಾರಂದಾರ
ಎಲ್ಲರೂ ಬಂದಾರಲ್ಲೇಳ ಎಲ್ಲರ ಒಪ್ಪಿಗಿದ್ದಾವ
ಎಲ್ಲರ ಒಪ್ಪಿಗಿದ್ದಾರೆ ಕರಮಣಿ ಕಟ್ಟತೀನಂದಾರ
ಹಂತ ಯಾಳ್ಯಾದೊಳಗೇನೆ ಗಂಗಿ ಮಾಳಮ್ಮನಣ್ಣದೇರಾ
ಗಂಗಿ ಮಾಳಮ್ಮನಣ್ಣದೇರಾ ಹೆಗಲಿಗ ಕೊಡ್ಲಿ ಹೊತ್ತಾರ
ಯಾರನ ಕೇಳಿದಂದಾರ ಯಾರಿಗ ಹೇಳೀದಂದಾರ
ಯಾವ ನಾಡದ ತುಡಗನೆ ಯಾವ ನಾಡದ ಕಳ್ಳನೆ
ಬೂದಿಬಡಕ ಸನ್ಯಾಸಿ ಎಲ್ಲಿಂದ ಬಂದೀದಂದಾರ
ಹ್ಯಾಂಗ ಕಟ್ಟತೀನಂದಾರ ನೋಡಿ ಬಿಟ್ಟೇವಂದಾರ
ನೋಡಿ ಬಿಟ್ಟೇವಂದಾರೆ ನಿನ್ನವ್ನಹಾಡ ಅಂದಾರ
ನಿನ್ನವ್ನಹಾಡ ಅಂದಾರೋ ಟೊಣ್ಣಿ ಎತ್ತಿ ಹಿಡದಾರ
ಟೊಣ್ಣಿ ಎತ್ತಿ ಹಿಡದಾರ ಗುಲ್ಲ ನಾಯಿ ತಂದಾರ
ಗುಲ್ಲನಾಯಿತಂದರೋ ಮಲ್ಲಯ್ಯನಮ್ಯಾಲೆ ಬಿಟ್ಟಾರೆ
ಮಲ್ಲಯ್ಯನಲ್ಲೆ ಬಿಟ್ಟಾರ ಮಾಳಮ್ಮನಮ್ಯಾಲೆ ಬಿಟ್ಟಾರ

ತುರಂಗ ಬಾಲಿನಲ್ಲೇಳ ಮಾನಕಂಜುತಾಳೇನ
ಮಾನಕಂಜೂತಾಳೇನ ಗವಿಯ ಹೋಗುತಾಳೇನ
ಗವಿಯ ಒಳಗನಲ್ಲೇಳ ತುರಂಗ ಬಾಲಿನಂದಾಳ
ಗಂಗಿ ಮಾಳಮ್ಮನಲ್ಲೇಳ ಬಯಲಿಗ ಕುಂದ್ರುತಾಳೇನ
ನಾಕು ಮಂದಿ ಅಣ್ಣದೇರಾ ಮುಂದ ಮಾಡುತಾರೇನ
ಮುಂದ ಮಾಡುತಾರೇನ ಏನಂದಾಡುತಾಳೇನ
ಏನಂದಾಡುತಾಳೇನ ಹೆಜ್ಜಿ ಮುಂದಕಿಟ್ಟೇನೆ
ಹೆಜ್ಜೆ ಮುಂದಕಿಟ್ಟೇನೆ ಹಿಂದುಕಿಡುದಿಲ್ಲಂದಾಳ
ಗುಲ್ಲನಾದವಂದಾರ ಕರಮಣಿ ಕಟ್ಟಲಿಲ್ಲೇನ
ಕರಿಮಣಿ ಕಟ್ಟಲಿಲ್ಲೇನ ಸ್ಯಾಸಿ ನಿಂತಾವೇನಯ್ಯ
ಸ್ಯಾಸಿ ನಿಂದ್ರುತಾವೇನ ಲಗ್ಗನ ನಿಂದ್ರತಾವೇನ
ವರ್ಷಕೊಮ್ಮಿನಲ್ಲೇಳ ಲಗ್ಗನಾಗುತಾವೇನ
ಲಗ್ಗನಾತುತಾವೇನ ಗುಲ್ಲನಾಗುತಾವೇನ
ಗುಲ್ಲನಾಗುತಾವೇನ ಕರಮಣಿ ನಿಂದ್ರತಾವೇನ
ನಾಲ್ಕು ಮಂದಿ ಅಣ್ಣದೇರಿಗ ಶಾಪ ಕುಡುತಾಳೇನಯ್ಯ
ಡೋಣಿ ಹಿಡಯುತಾರೇನ ಒಗ್ಗನಾಗುತಾರೇನ
ಹೆಗಲಿಗ ಅಡ್ಡ ಹಾಕ್ಯಾನೆ ಟೊಂಕಕ ಗಂಟ ಕಟ್ಯಾನ
ಕೌಡಿ ಕೊಳ್ಳಾಗ ಕಟ್ಯಾನ ನಾಯಿನಾಗಿ ಬೊಗಳ್ಯಾರ
ನಾಲ್ಕು ಮಂದಿನಲ್ಲೇಳ ಗಂಗಿ ಮಾಳಮ್ಮನಣದೇರಾ
ಗಂಗಿ ಮಾಳಮ್ಮನಣದೇರಾ ನಾಲ್ಕು ಮಂದಿ ಇದ್ದಾರ
ಅಳಿಗೇರಿ ಎಂಬ ಊರಿಗೆ ಮೂರ ತಿಂಗಳ ದಿನಾಮಾನ
ಮೂರ ತಿಂಗಳ ದಿನಮಾನ ಮಲ್ಲಯ್ಯ ಹೋಗುತಾನೇನ
ಮಲ್ಲಯ್ಯ ಹೋಗುತಾನೇನ ಮನಿಯಾ ಅಳಿಯಾನಾದನೆ
ಅತ್ತಿಮಾವನ ಮನಿಗೇನೆ ಹಬ್ಬದೂಟಕ ಹೋಗ್ಯಾನ
ಅರಕೇರಿ ಎಂಬ ಅರಮನಿಗೆ ತಾನೇ ಹೋಗುತಾನೇನ
ಏನಮ್ಮ ದೇವರ ಹಾಡೇನೆ ಇಲ್ಲಗ ಇದು ಒಂದು ಸಂದೇನ
ಇಲ್ಲಿಗ ಇದು ಒಂದು ಸಂದೇನ ಮುಂದಿನ ಸಂದಿಗ ತಿಳಸೇನೆ
ಕಳಸವಿಟ್ಟರ ಕವಿತಾ ಕೆಟ್ಯಾರ ಹೊನ್ನ ಜಗ್ಗನಿ ಗೌಡರೊ
ದ್ಯಾವರು ಬಂದಾರ ಬನ್ನಿರೆ
ದೇವಿಯ ಮೊದಲ ದೇವರ ಮೊದಲ ದೇವಿಂದರಾಯನೆ ಮೊದಲಯ್ಯ
ತಾಯಿನಂದರ ಯಾರು ಮರ್ತ್ಯಕ ತಂದಿನಂದರ ಯಾರಯ್ಯ
ತಾಯೇಳ ಪಾರವತಿದೇವಿ ನಮ್ಮ ದೇವರು ಪರಮೇಸೂರನ
ಇವರ ಇಬ್ಬರ ಹೊರತ ಧರ್ಮರ್ಯಾ ಮಾರುತ್ಯಾಕ್ಯಾರ್ಯಾರಿಲ್ಲಯ್ಯ
ದೇವಿಧರ್ಮರ ಹಾಡೇನೆ ಎಲ್ಲಿಗ ಬರುತಾವೇನಯ್ಯ
ಸತ್ಯಧರ್ಮರ ಹಾಡೇನೆ ಜತ್ತುನಾರ್ಯಾಣಪುರದಾಗ
ಗ್ರಾಮನೇಳು ಹುಲಿಜಂತ್ಯಾಗೆ ದಿಂಡಗದ್ದುಗಿ ಹಾಕ್ಯಾನ

ದಿಂಡಗದ್ದುಗಿ ಹಾಕ್ಯಾನ ಮಾಳಪ್ಪ ಮಂಡಿಲಿ ಶಾಯವ ಮಾಡ್ಯಾನ
ಊಟಕ ಹುಲಿಗಿಣ್ಣವ ಕೊಟ್ಟಾನ ಆಟಕ ಹುಲಿಮರಿಯೇನ
ನಂದನ ಬನದಾಗ ಲಿಂಗ ಬಾ ನನ್ನ ರುದ್ದರ ಮಾಯವ್ವನ ತಮ್ಮನ

ಮಾರಗ ಮಾರಗಂದಾರೆ ಯಾವಲಿ ಇರುತಾವೇನ
ಸತ್ಯ ಧರ್ಮರ ಹಾಡೇನೆ ಯಾವ ಠಾಣೆದ ಮ್ಯಾಲೇನ
ಯಾವ ಠಾಣೆದ ಮ್ಯಾಲೇನ ಸೊನ್ನಲಗಿರಿಯ ಒಳಗೇನ
ಸೊನ್ನಲಗಿರಿಯ ಒಳಗೇನ ತಂದೇಳ ಮದ್ದುಗೌಡನ
ತಂದೇಳ ಮುದ್ದುಗೌಡನೇ ತಾಯೇಳ ಸುಗಲವ್ವನ
ಗೌಡಕಿ ಯಾರಿಗಿದ್ದಾವೆ ರಾಜಕಿ ಯಾರಿಗಿದ್ದಾವ
ದೇಶಕಿ ಯಾರಿಗಿದ್ದಾವೆ ಹಕ್ಕು ಯಾರಿಗಿದ್ದಾವ
ಮೂರವರ್ಷನಾದರೆ ಮಕ್ಕಳ ಫಲಗೋಳು ಇಲ್ಲಯ್ಯ
ಟೊಂಕಿಗ ಸೆರಗ ಸುತ್ಯಾರೆ ನಡುವಿಗ ನಡುಕಟ್ಟು ಸುತ್ಯಾರೆ
ನಡುವಿಗ ನಡುಕಟ್ಟು ಸುತ್ಯಾರೆ ಲ್ಯಾವಿದಂಡಕೋಲ ಹಿಡದಾರ
ಟೊಂಕಿಗ ಸೆರಗ ಸುತ್ಯಾರೆ ನಡುವಿಗ ನಡಕಟ್ಟು ಸುತ್ಯಾರೆ
ನಡುವಿಗ ನಡುಕಟ್ಟು ಸುತ್ಯಾರೆ ಲ್ಯಾವಿ ದಂಡಕೋಲ ಹಿಡದಾರ
ಟೊಂಕ ಬಾಗುತಾವೇನ ಮುಪ್ಪಿನವರು ಆದರ
ಮುಪ್ಪಿನವರು ಆದಾರೆ ಗುರುವಿನ ಕರುಣ ಇಲ್ಲೇನ
ಕಪ್ಪನೆ ಕರಿಮಡ್ಯಾಗೆ ನೆಲದ ಭುಂಯಾರದೊಳಗೇನ
ನೆಲದ ಭುಂಯಾರದೊಳಗೇನ ಗುರುವ ರೇವಣಸಿದ್ದನ
ಗುರುವ ರೇವಣಸಿದ್ದನ ಕ್ಯಾವಿ ಭಗವಾ ಹಾಕ್ಯಾನ
ಮುಂಗೈಗ ಜೋಳಿಗೆ ಹಾಕ್ಯಾನೆ ರುಂಡಮಾಳಾ ಹಾಕ್ಯಾನ
ರುಂಡಮಾಳಾ ಹಾಕ್ಯಾನೆ ಗುಂಡಮಣಿಗೋಳು ಹಾಕ್ಯಾನ
ರುಂಡಮಾಳಾ ಹಾಕ್ಯಾನೆ ಗುಂಡಮಣಿಗೋಳು ಹಾಕ್ಯಾಳಾ
ಲ್ಯಾವಿದಂಡಕೋಲ ಹಿಡದಾನೆ ಮುಂಗೈಗ ಜೋಳಗಿ ಹಾಕ್ಯಾನ
ಹೊಕ್ಕಳಗುಂಟಿ ಕಟ್ಟ್ಯಾನೆ ಮುಳ್ಳ ಆಂವಿಗಿ ಹಾಕ್ಯಾನ
ನೆಲದ ಭುಂಯಾರ ಬಿಟ್ಟಾನೆ ಏಳಗಜದ ಕಲ್ಲೇನ
ಏಳಗಜದ ಕಲ್ಲೇನ ಈಡಬಾಗಲ ಮಾಡ್ಯಾನ
ರಾಯಿಮಾರಗ ಹಿಡದಾನೆ ಎಲ್ಲಿಗ ಬರುತಾನೇನಯ್ಯ
ಅಲ್ಲ್ಯಾನ ಇಲ್ಲ್ಯಾನೇನೆ ಸೊನ್ನಲಗಿರಿಯ ಒಳಗೇನ
ಸೊನ್ನಲಗಿರಿಯ ಒಳಗೇನ ತಂದೇಳ ಮುದ್ದಗೌಡನ
ತಂದೇಳ ಮುದ್ದಗೌಡನ ಮನಿಗಿ ಗುರುವ ರೇವಣಸಿದ್ದನ
ಗುರುವ ರೇವಣಸಿದ್ದನೆ ಮನಿಗಿ ಬರುವುತಾನೇನ
ತಾಯೇಳ ಸುಗಲವ್ವನ ಗುರುವಿಗ ನೋಡುತಾಳೇನ
ಗುರುವಿನ ನೋಡುತಾಳೇನೆ ತುಂಬಿದ ಕೊಡದ ನೀರೇನ
ತುಂಬಿದ ಕೊಡದ ನೀರೇನೆ ಪಾದ ತೊಳಿಯುತಾಳೇನ

ತಂದೇಳ ಮುದ್ದುಗೌಡನೇ ತಾಯೇಳ ಸುಗಲವ್ವನ
ತಾಯೇಳ ಸುಗಲವ್ವನ ಸೀತಾಳ ಮುಗಿಯುತಾಳೇನ
ಗುರುವ ಬಂದಾನಂದಾರೆ ಕುಂದ್ರು ಮನ್ನುಣಿ ಮಾಡ್ಯಾರ
ಕುಂದಲ ಹಚ್ಚಿದ ಮಣಿಯ ಚೌಕಿ ತಾವಂದು ಮನ್ನುಣಿ ಮಾಡ್ಯಾರ
ಗುರುವ ರೇವಣಸಿದ್ದನೆ ತಾವಂದು ಮೂರುತಿ ಆದಾನ
ಗುರುವ ಬಂದಾನಂದಾರೆ ಅಡಗೀಯ ಸಿಂಗಾರ ಮಾಡ್ಯಾರೆ
ಗುರುವ ರೇವಣಸಿದ್ದನೆ ನುಡದಾನೆ ಮಾತಾಡ್ಯಾನ
ನುಡದಾನೆ ಮಾತಾಡ್ಯಾನೆ ಮಕ್ಕಳಿಲ್ಲದ ಮನಿಯಾಗ
ಮಕ್ಕಳಿಲ್ಲದ ಮನಿಯಾಗೆ ಊಟ ಮಾಡದಿಲ್ಲೇನ
ಜಗವಂದು ಮಾತಾನಾಡ್ಯಾರೆ ನೀನೊಂದು ಮಾತನಾಡಿದೆ
ನೀ ಕೊಡದ ಮಕ್ಕಳ ಎಲ್ಲಿಂದ ಬರುತಾವಂದಾರ
ಅರುವನಿಲ್ಲದ ಗುರುವೇನ ವರನಿಲ್ಲದ ಗುರುವೇನ
ಪರವನಿಲ್ಲದ ಗುರುವಿಗ ಏನಂದು ಮಾತನಾಡ್ಯಾರ
ಒಳ್ಳೇದು ಒಳ್ಳೆದೆಂದಾರೆ ಗುರುವ ರೇವಣಸಿದ್ದನ
ಗುರುವ ರೇವಣಸಿದ್ದನೆ ಸೀತಾಳ ಕೊಡುವುತಾನೇನ
ಇಂದಿನ ದಿನಮಾನಿಲ್ಲೇನ ಮುಂದಿನ ದಿನಮಾನಿಲ್ಲೇನ
ಇಂದೇ ಪಾರಗೋಳು ಕೊಟ್ಟೇನೆ ದಿನಮಾನ ಎಣಸಾಲಿ ಅಂದಾನ
ನಿಂದ್ಯದ ಮಾತೊಂದು ಆಡ್ಯಾರೆ ಕುಂದ್ಯಾದ ಮಾತೊಂದು ಆಡ್ಯಾರ
ನೀವಂದು ಮಾತಾನಾಡಿದರೆ ಮನಸಿಗ ಒಡದಾವಂದಾನ
ಮನಸಿಗ ಬಡದಿಲ್ಲಂದಾರೆ ಮುಪ್ಪಿನವರಾದೇವ
ಮುಪ್ಪಿನವರ ಆದೇವ ಮಕ್ಕಳು ಹ್ಯಾಂಗ ಆದಾವ
ಟೊಂಕಿಗ ಸೆರಗ ಸುತ್ತಿವೆ ಲ್ಯಾವಿದಂಡಕೋಲ ಹಿಡದೀವೆ
ನಡುವಿಗ ನಡಕಟ್ಟ ಸುತ್ತೀವೆ ಲ್ಯಾವಿದಂಡಕೋಲ ಹಿಡದೀವೆ
ಒಳ್ಳೆ ರಾಜನಂದಾರೆ ಒಳ್ಳೆ ಗೌಡನಂದಾರ
ರೈತರಾಣೆರ ಮಕ್ಕಳೆ ಏನಂದಾಡುತ್ತಿದ್ದಾರ
ನಮಗೂ ಮಕ್ಕಳಿಲ್ಲೇಳ ಮಕ್ಕಳ ಕುಡಿಗೋಳು ಇಲ್ಲೇಳ
ಹುಟ್ಟ ಬಂಜಿನಾದೇವ ಎಲ್ಲಿಂದ ಮಕ್ಕಳ ಬರತಾವ
ಗುರುವ ರೇವಣಸಿದ್ದನೆ ನುಡದಾನೆ ಮಾತಾಡ್ಯಾನ
ಇಂದಿನ ದಿನಮಾನಿಲ್ಲೇನೆ ಮುಂದಿನ ದಿನಮಾನಿಲ್ಲೇನ
ಇಂದಿನ ದಿನಮಾನ ಅಲ್ಲ ಸುಗಲವ್ವ ನೀನೆ ಇಳಸಲಿಬೇಕವ್ವ
ಒಂಬತ್ತು ತಿಂಗಳಾದಾವೆ ಒಂಬತ್ತು ದಿನಮಾನದಾವ
ಬಾಣಸ್ತಾನ ಆದಾವೆ ತೊಟ್ಟಿಲದೊಳಗ ಹಾಕರೆ
ತೊಟ್ಟಿಲದೊಳಗೆ ಹಾಕರೆ ಬಾಣಸ್ತಾನ ಮಾಡರೆ
ನನ್ನ ಧ್ಯಾನ ಮಾಡರೆ ನಾನೇ ಬರತೀನಿ ಅಂದಾನ
ತೊಟ್ಟಿಲದೊಲಗ ಹಾಕಿದರೆ ಹೆಸರ ನಾವೇ ಕರದೇವ
ಹೆಸರ ನಾವೇ ಕರದೇವೆ ಊಟ ನಾವು ಮಾಡೇವ

ತಾಯೇಳ ಸುಗಲವ್ವನ ತಂದೇಳ ಮುದ್ದುಗೌಡಗ
ತಂದೇಳ ಮುದ್ದುಗೌಡಗ ಫಲಗೋಳು ಕೊಟ್ಟು ನಡದಾನ
ಹನ್ನೆರಡು ಹನ್ನೆರಡು ವರ್ಷೇನ ಇಪ್ಪತನಾಲ್ಕು ವರ್ಷನ
ಇಪ್ಪತ್ತನಾಲ್ಕು ವರ್ಷಿನ ವಯಾ ಸುಗಲವ್ವಗ ಕೊಟ್ಟೇನೆಂದಾನ
ಮೂವತ್ತು ವರ್ಷಿನ ವಯಾ ಮುದ್ದುಗೌಡಗ ಕೊಟ್ಟೇನ
ನಿಮ್ಮ ಮನಕನಲ್ಲೇಳ ಮೂವತ್ತು ವರ್ಷ ವಯಸ್ಸ
ನಿಮ್ಮ ಅತ್ಯುಕಲ್ಲೇಳ ಇಪ್ಪತ್ತೈದ ವಯಸ್ಸ
ರೈತರಾಣೆರ ಮಕ್ಕಳಿಗೆ ಮುಪ್ಪಿನವರ ಕಂಡೀರೆ
ಒಳ್ಳೆದು ಒಳ್ಳೇದಂದಾನೆ ಮಂಡಿಲಿ ಹಸ್ತ ಇಟ್ಟಾನ
ಮಂಡಿಲಿ ಹಸ್ತ ಇಟ್ಟಾನೆ ಹೋಗಿ ಬರತೀನಿ ಅಂದಾನ
ಸೊನ್ನಲಗಿರಿಯಾ ಬಿಟ್ಟಾನೆ ರಾಯಿಮಾರಗ ಹಿಡದಾನ
ಇಳದಲ್ಲಿ ಇಳಿಗಾಳೇನ ಸುಳದಲಿ ಸುಳಿಗಾಳೇನ
ಗಾಳಿಕ್ಕಿಂತ ಮುಂದೇನ ಪರಮಾಳದ ಗಾಳಿನಾದನ
ಹೋಗುತ ಹೋಗತಲ್ಲೇಳ ಕಪ್ಪನೆ ಕರಿಮಡ್ಡಿಗೆ
ಕಪ್ಪನೆ ಕರಿಮಡ್ಯಾಗೆ ನೆಲಸ ಭುಂಯಾರದೊಳಗೇನ
ಈಡ ಬಾಗಲತೆರದಾನೆ ಗವಿಯ ಒಳಗ ಹೋಗ್ಯಾನ

ಮುದ್ದಪ್ಪ ಸುಗಲವ್ವಗೆ ಏನಂದಾಡುತ್ತಿದ್ದಾನ
ಸೊನ್ನಲಗಿರಿಯ ಒಳಗೇನೆ ಗೌಡಿಕಿ ನಮ್ಮದಿದ್ದಾವೆ
ಗೌಡಕಿ ನಮ್ಮದಿದ್ದಾವೇ ರಾಜಕಿ ನಮ್ಮದಿದ್ದಾವೆ
ಟೊಂಕ ಬಾಗಿ ನಡದಾರೆ ಬೆನ್ನ ಬಾಗಿ ನಡದಾರ
ವಯಸ್ಸ ಬದಲನಾದವೆ ದಾರಿ ನಡಿಯುತಾರೇನ
ರೈತರಾಣೆರ ಮಕ್ಕಳೆ ನುಡದಾರೆ ಮಾತಾಡ್ಯಾರ
ನಮ್ಮಗ ನೋಡದಕಲ್ಲೇಳ ಮುಪ್ಪಿನವರ ಕಂಡಾರ
ಲ್ಯಾವಿದಂಡಕೋಲ ಬಿಟ್ಟಾರೆ ನಡವಿಗ ಸೆರಗ ಬಿಟ್ಟಾರ
ನಡಕಟ್ಟ ಬಿಡುವುತಾರೇನೆ ಲ್ಯಾವಿದಂಡಕೋಲ ಬಿಟ್ಟಾರ
ಒಂದಾ ತಿಂಗಳಾದಾವೆ ಎರಡ ತಿಂಗಳಾದಾವ
ಮೂರು ತಿಂಗಳಾದವೇ ತಾಯೇಳ ಸುಗಲವ್ವಗ
ತಾಯೇಳ ಸುಲವ್ವನ ಮೊದಲಿನ ಆವುತಾರ ತಾಳ್ಯಾಳ
ಮೈಯ ತುಂಬುತಾವೇನೆ ಕೈಯ ತುಂಬುತಾವೇನೆ
ಅವುತಾರ ಹೋಗುತಾವೇನ ಹೆಂತಾ ಅವುತಾರ ಬಂದಾವ
ಅತ್ತಿಯ ಮನಿಯ ಸೊಸ್ತೇರಿಗೆ ತೌರಮನಿಯ ಹೆಣ್ಣಮಕ್ಕಳಿಗೆ
ದೇವರ ಕೊಟ್ಟಾನಂದಾರೆ ಸಂಬಾ ಕೊಟ್ಟಾನಂದಾರ
ರೈತರಾಣ್ಯಾರ ಮಕ್ಕಳೆ ಏನುಂದಾಡುತಾರೇನ
ದೇವರು ಕೊಟ್ಟಾನಂದಾರೆ ಮುಪ್ಪಿಗಾದಾವಂದರ
ಮುಪ್ಪಿನ ವಯಸ್ಸುದಾಗೇನ ತಾಯೇಲ ಸುಗಲವ್ವಗ

ಬುತ್ತಿ ತರುವುತಾರೇನ ಬಾನಾ ತರವುತಾರೇನ
ರೈತ ರಾಣೆರ ಮಕ್ಕಳ ತಾಯೇಳ ಸುಗಲವ್ವಗ
ಎಳ್ಳು ಹಚ್ಚಿದ ರೊಟ್ಟೇನ ಎಣ್ಣೆ ಬದನಿಕಾಯೇನ
ಎಣ್ಣೆ ಬದನಿಕಾಯೇನ ಮಸರಬಾನದ ಬುತ್ತೇನ
ಹಪ್ಪಳ ಸಂಡಿಗೆ ತಂದಾರೆ ಉಪ್ಪಿನಕಾಯಿ ತಂದಾರ
ತಾಯೇಳ ಸುಗಲವ್ವನ ಬುತ್ತಿ ಬರುವುತಾರೇನ
ನಾಲ್ಕು ತಿಂಗಳಾದಾವೆ ಒಂಬತ್ತು ತಿಂಗಳಾದವೆ
ಒಂಬತ್ತು ದಿನಾಮಾನಾದಾವ ಒಂಬತ್ತು ತಾಸನಾದವ
ದಿನಮಾನ ಎಣಸುತಾರೇನ ದೇವರು ಕೊಟ್ಟೇದಂದಾರ
ರೈತರಾಣೆರ ಮಕ್ಕಳೆ ಅತ್ತಿಯ ಮನಿಯ ಸೊಸ್ತೇರ
ನೆರಿಬಂದ ಗುರುಹಿರಿಯರ ಸೂಲಗಿತ್ತಿ ಸುಬ್ಬವ್ವ
ನಡುವ ಹಿಡಿಯ ನಾಗವ್ವ ಸುದ್ದಿ ವೈಯ್ಯಾ ಸಿದ್ದವ್ವ
ಮೂರು ಮಂದಿ ಬಂದಾರೆ ಮುಂದ ನಿಂದ್ರತಾರೇನ
ನೀರ ಕಾಸುತಾರೇನ ತಾಯಿಗ ಹಾಕುತಾರೇನ
ಸುಗಲವ್ವ ತಾಯಿಗಲ್ಲೇಳ ಬಾಣಸ್ತಾನ ನೋಡವ್ವ
ಹಿಂದ ಕುಂದ್ರುತಾರೇನ ಮುಂದ ಕುಂದ್ರತಾರೇನ
ಸಾಯಿತೇನ ಹಡದವ್ವ ತಾಯಿನ ಕಾಣದವರವ್ವ
ಅಕ್ಕನ ಕಾಣದವರವ್ವ ತಂಗಿನ ಕಾಣದವರವ್ವ
ನಾವೇ ಮುಪ್ಪಿನವರವ್ವ ದೇವರ ಕೊಟ್ಟನಂದಾರ
ದೇವರ ಧ್ಯಾನ ಮಾಡ್ಯಾರೆ ತಾಯೇಳ ಸುಗಲವ್ವಗ
ಕೊಡುವದಕೆಲ್ಲ ಕೊಟ್ಟೇನೆ ಕಣ್ಣು ತೆರಿಯಲಿಬೇಕಯ್ಯ
ಸಂಬಾ ಕಣ್ಣ ತೆರದಾನೆ ಶಿವನು ಕಣ್ಣು ತೆರದಾನ
ಶಿವನು ಕಣ್ಣ ತೆರದಾನ ತಾಯೇಳ ಸುಗಲವ್ವಗ
ತಾಯೇಳ ಸುಗಲವ್ವನೆ ಗಂಡಸ ಮಗನೆ ಹಡದಾಳ

ಸೊನ್ನಲಗಿರಿಯ ಪಟ್ಟಣಕ ರಾಜಾ ಹುಟ್ಯಾನಂದಾರ
ರಾಜಾ ಹುಟ್ಯಾನಂದಾರ ಗೌಡ ಹುಟ್ಯಾನಂದಾರ
ಗೌಡ ಹುಟ್ಯಾನಂದಾರೆ ದೇಸಾಯಿ ಹುಟ್ಯಾನಂದಾರ
ಹಕ್ಕು ನಿಂದೇನಾದಾವೆ ದಕ್ಕು ನಿಂದೇನಾದವ
ಸೊನ್ನಲಪೂರಕಲ್ಲೇಳ ಅಧಿಪತಿ ಆದಾನಂದಾರ
ದೇವರ ಕೊಟ್ಟನಂದಾರೆ ಜ್ವಾಕಿನಾಗುತಾರೇನ
ರೈತರಾಣ್ಯಾರ ಮಕ್ಕಳ ಬಾಣಾಸ್ತಾನ ಮಾಡ್ಯಾರ
ಎಂಟು ದಿನಗೋಳು ಆದಾವೆ ಒಂಬತ್ತು ದಿನಗೋಳ ಆದಾವ
ಹನ್ನೊಂದು ದಿನದ ಒಳಗೇನ ಬಣ್ಣದ ತೊಟ್ಟಿಲ ತಂದಾರ
ನಡುಮನಿ ಪಡಸಾಲಿ ಒಳಗೇನ ತೊಟ್ಟಿಲ ಕಟ್ಟುತಾರೇನೆ
ಒಕ್ಕಳ ಹೂರಣಕ ಹಾಕ್ಯಾರ ಊರಿಗೆ ಊಟ ಹೇಳ್ಯಾರ

ತಾಯೇಳ ಸುಗಲವ್ವನೆ ಬಿಂದಿಗಿ ಕೈಯಾಗ ಹಿಡದಾರ
ವಾರಿಗಿ ನಾರ್‍ಯಾರಿಗಲ್ಲೇಳ ತಾನೇ ಕರಿಯುತಾಳೇನ
ದೇವರ ನಮಗೆ ಕೊಟ್ಟಾನೆ ಇದೇ ಒಂದ ಅಂದಾಳ
ಎಂದು ಹೋಗಿಲ್ಲಂದಾಳೆ ನಾನೇ ಮಾಡಿಲ್ಲಂದಾಳ
ಮಕ್ಕಳ ಹಡದ ತಾಯಿದೇರ ನಾವೇ ಮರತೀವಿ ಅಂದಾರ
ಕೈಯಾಗ ಬಿಂದಿಗಿ ಹಿಡದಾರ ಕುಂಕುಮ ಚೀಟಿ ತಂದಾರ
ಹಣಿಯಲಿ ಕುಂಕುಮ ತಂದಾರೆ ಹಲ್ಲಿಗಿ ಜಾಚೇಲಿ ತಂದಾರ
ಉತ್ತುತಿ ಉರಿಗೊಬ್ಬರೆ ಉಡಿಯಕ್ಕಿ ಸಾಮನ ತಂದಾರ
ಅರಬಳ್ಳ ಅರಶಿಣ ತಂದಾರೆ ಕಿರಬಳ್ಳ ಕುಂಕುಮ ತಂದಾರ
ಹರುವ ಕಬ್ಬ ತಂದಾರೆ ಒಡುವ ಟೆಂಗ ತಂದಾರ
ಗುಲಾಬಿ ಹುಗೋಳು ತಂದಾರೆ ಬಿಳಿಯಾ ಮಲ್ಲಿಗಿ ತಂದಾರ
ನೆನಿಯಕ್ಕಿ ನೆನಿಗಡಲೇನ ಕೊನಿಯೊಂದು ಬಾಳಿಹಣ್ಣೇನ
ಕಲ್ಲ ಕಟ್ಟಿದ ಬಾಂಯೇನ ಮಲ್ಲಿಗಿ ಹಚ್ಚಿದ ಸೋಪಾನ
ಮೆಲ್ಲ ಮೆಲ್ಲಕ ಇಳದಾರ ಗಂಗಿ ಪುಜಿಗೆ ನಿಂತಾರ
ಪಾದಕ ನೀರ ಬಡದಾವೆ ಪೈರಿಗೆ ಬಡಿಯುತಾವೇನ
ಪೈರಿಗ ಹೊಡಿಯುತಾರೇನ ಅರಬಳ್ಳ ಅರಿಶಿಣ ಹಚ್ಯಾರ
ಅರಬಳ್ಳ ಅರಿಶಿಣ ಹಚ್ಯಾರೆ ಕಿರಬಳ್ಳ ಕುಂಕುಮ ಹಚ್ಯಾರ
ಉತ್ತುತಿ ಉರಿಗೊಬ್ವರೆ ಉಡಿಯಕ್ಕಿ ಸಾಮನಿಟ್ಟಾರ
ಕಡುವ ಕಬ್ಬ ಇಟ್ಟಾರೆ ಒಡುವ ಟೆಂಗ ಇಟ್ಟಾರ
ಉತ್ತುತ್ತಿ ಉರಿಗೊಬ್ಬರೆ ಉಡಿಯಕಿ ಸಾಮನ ತುಂಬ್ಯಾರ
ನೆನಿಯಕ್ಕಿ ನೆನಿಗಡಲೇನ ಕೊನಿಯೊಂದು ಬಾಳಿ ಹಣ್ಣೇನ
ಕೊನಿಯ ಬಾಳಿ ಹಣ್ಣೇನ ಚಲುವ ಬಾಳಿ ಹಣ್ಣೇನ
ತಾಯೇಳ ಸುಗಲವ್ವನ ಗಂಗಿ ಪೂಜ ಮಾಡ್ಯಾಳ
ಗಂಗಿ ಪೂಜೆ ಮಾಡ್ಯಾಳೆ ಗೌರಿ ಪೂಜಿ ಮಾಡ್ಯಾಳ
ಗಂಗಿನ ಮಿನದಾಳೇನಪ್ಪ ಗೌರಿನ ಮಿನದಾಳೇನಯ್ಯ
ಬಿಂದಿಗಿ ಪೂಜಿ ಮಾಡ್ಯಾಳೆ ಬಾಗಿಸಿ ತುಂಬುತಾಳೇನ
ತಾಯೇಳ ಸುಗಲವ್ವನ ಬಿಂದಗಿ ಹೆಗಲ ಮ್ಯಾಲೇನ
ಮೆಲ್ಲ ಮೆಲ್ಲಕ ಏರ್‍ಯಾಳೆ ರಾಯಿಮಾರಗ ಹಿಡದಾಳ
ಅಲ್ಲ್ಯಾ ಳ ಇಲ್ಲ್ಯಾ ಳೇನ ಎಲ್ಲಿಗ ಬರುವುತಾಳೇನ
ರಾಯರ ಓಣಿಲಿ ಹಾಯ್ದಳೆ ರಡ್ಡೇರ ಮನಿಯ ಮುಂದೇನ
ಚಂದನ ಚಾವುಡಿಲಿ ಹಾಯ್ದಳೆ ಮಂದನ ಮಳಗೀಯ ಮುಂದೇನ
ರಾಜಾವಾಡದ ಮುಂದೇನ ತಮ್ಮ ಮನಿಗ ಬಂದಾಳ
ತಮ್ಮ ಮನಿಗೆ ಬಂದಾಳೆ ಲ್ಯಾಯದ ಪಡಸಾಲಿ ಒಳಗೇನ
ಲ್ಯಾಯದ ಪಡಸಾಲಿ ಒಳಗೇನ ತೊಟ್ಟಿಲ ಬುಡಕೆ ಇಳುವ್ಯಾಳ
ತೊಟ್ಟಿಲ ಬುಡಕೆ ಇಳುವ್ಯಾಳೆ ತಾಯಿ ಕುಂದ್ರುತಾಳೇನ
ಕುಬಸ ಮಾಡುತಾರೇನ ಮುತ್ತ ಮಾಡುತಾರೇನ

ಮುತ್ತ ಮಾಡುತಾರೇನ ಕುಬಸದ ಗಳಗಿ ಮಾಡ್ಯಾರ
ಒಕ್ಕುಳ ಗುಗ್ಗರಿ ಹಾಕ್ಯಾರೆ ಗುಗ್ಗರಿ ಬೀರುತಾರೇನ
ಮುದ್ದವ್ವ ಸುಗಲವ್ವನ ಏನಂದಾಡುತಾರೇನ
ಮುದ್ದಗೊಂಡನಲ್ಲೇಳ ಗುರುವಿನ ಧ್ಯಾನ ಮಾಡ್ಯಾನ
ಕಪ್ಪ ಕರಿಮಡ್ಯಾಗ ಗುರುವ ರೇವಣಸಿದ್ದನ
ಹೊಕ್ಕಳಗಂಟಿ ಕಟ್ಯಾನೆ ಮಲಕಾಲಜಂಗ ಕಟ್ಯಾನ
ಲ್ಯಾವಿದಂಡಕೋಲ ಹಿಡದಾನೆ ಕ್ಯಾವಿಭಗವಾ ಹಾಕ್ಯಾನ
ರುಂಡಮಣಿಗೋಳು ಹಾಕ್ಯಾನ ಗುಂಡಮಣಿಗೋಳು ಹಾಕ್ಯಾನ
ಕೈಯಾಗ ತ್ರೀಸೂಲ ಹಿಡದಾನ ಗುಂಡ ಬುಗರಿ ಹಿಡದಾನ
ಮುಳ್ಳಾಆವಿಗಿ ಹಾಕ್ಯಾನ ಕೈಯಾಗ ಜೋಗಿ ಹಿಡದಾನ
ಹೊನ್ನಹೊಸ್ತುಲ ಧಾಟ್ಯಾನೆ ಏಳ ಗಜದ ಕಲ್ಲೇನ
ಏಳ ಗಜದ ಕಲ್ಲೇನ ಮಾಮುರಿ ಮಾಡುತಾನೇನ
ಇಳದಲ್ಲಿ ಇಳಿಗಾಳೇನ ಸುಳದಲ್ಲಿ ಸುಳಿಗಾಳೇನ
ಗಾಳಿಕ್ಕಿಂತ ಮುಂದೇನ ಪರಮಾಳದ ಗಾಳಿನಾದಾವ
ಅಲ್ಲ್ಯಾನ ಇಲ್ಲ್ಯಾನೇನ ಸೊನ್ನಲಪುರದ ಒಳಗೇನ
ಸೊನ್ನಲಪುರದ ಒಳಗೇನ ರಾಯರ ಓಣಿಲಿ ಬಂದಾನ
ರಡ್ಡೇರ ಮನಿಯ ಮುಂದೇನ ರಾಜಾವಾಡಕ ಬಂದಾನ
ರಾಜಾವಾಡಕ ಬಂದಾನೆ ಲ್ಯಾಯದಪಡಸಾಲಿ ಒಳಗೇನ
ಲ್ಯಾಯದ ಪಡಸಾಲಿ ಒಳಗೇನ ಗುರುವಿನ ಪಾದ ತೊಳದಾರ
ಗುರುವಿನ ಪಾದತೋಳದಾರೆ ಪಾದ ಧೂಳ ಹೊಡದಾರ
ತೊಟ್ಟಿಲ ಬಲ್ಲಿ ಬಂದಾನ ರೈತರಾಣೇರ ಮಕ್ಕಳ
ಸೊನ್ನಲಪುರಕಲ್ಲೇಳ ಅಧಿಪತಿ ಅಂತ ಕೂಗ್ಯಾರ
ಅಧಿಪತಿ ಅಂತ ಕೂಗ್ಯಾರ ರಾಜ್ಯಾನಂತ ಕೂಗ್ಯಾರ
ದೇಸಾಯಿನಂತ ಕೂಗ್ಯಾರೆ ಗೌಡನಂತ ಕೂಗ್ಯಾರ
ಮಲ್ಲಿಕಾರ್ಜುನ ಮಾದೇವನಂತ ಹೆಸರ ಕರಿಯುತಾರೇನ
ಸಿದ್ಧರಾಮನಂದಾರೆ ಕಲಿಯ ಯೋಗದೊಳಗೇನ
ಜೋ ಜೋ ಅನುವುತಾರೇನ ಜೋಗಳ ಹಾಡುತಾರೇನ
ಜೋಗುಳ ಹಾಡುತಾರೇನ ಸಿದ್ಧರಾಮನಂದಾರ
ಸಿದ್ಧರಾಮನಂದಾರ ಗುಗ್ಗರಿ ಬೀರುತಾರೇನ
ಹೊಕ್ಕಳ ಗುಗ್ಗರಿ ಬೀರ್ಯಾರೆ ಊಟ ಹೇಳುತಾರೇನ
ಊಟ ಹೇಳುತಾರೇನ ಬಿನ್ನ ಕೊಡುವುತಾರೇನ
ಬಿನ್ನ ಕೊಡುವುತಾರೇನ ಗುರುವ ರೇವಣಸಿದ್ಧನ
ಗುರುವ ರೇವಣಸಿದ್ಧನ ಬಿನ್ನ ಹೇಳುತಾನೇನ
ಐವತ್ತೊಂದು ಮಂದಿಗೆ ಬಿನ್ನಾ ಕೊಡಬೇಕಂದಾನ
ತೊಂಬತ್ತೊಂದು ಮಂದಿಗೆ ಬಿನ್ನಾ ನಡಸೂತಾರೇನ
ಊಟ ಮಾಡುತಾರೇನ ಹೆಸರ ಕೇಳೂತಾರೇನ

ಹನ್ನೆರಡು ವರ್ಷಿನ ಮಗನೇನ ಮೂಕ ಮಗನ ಕೊಟ್ಟೇನೆ
ಮೂಕ ಮಗನ ಕೊಟ್ಟೇನೆ ಸಿದ್ಧರಾಮನಂದಾರ
ಸಿದ್ಧರಾಮನಂದಾರೆ ಊಟ ಮಾಡುತಾರೇನ
ಉಂಡಾರೆ ಭಾಳುಭಟ್ಟಾರೆ ಬಾಯಿಲಿ ಸೀತಾಳ ಉಗಳ್ಯಾರೆ
ಬಾಯಿಲಿ ಸೀತಾಳ ಉಗಳ್ಯಾರೆ ಊಟ ಮುಗುಸೂತಾರೇನ
ಗುರುವ ರೇವಣಸಿದ್ಧನ ಹೋಗಿ ಬರತೀನಿ ಅಂದಾನ
ತಂದೇಳ ಮುದ್ದುಗೌಡನ ತಾಯೇಳ ಸುಗಲವ್ವನ
ಗುರುವ ರೇವಣಸಿದ್ಧನ ಪಾದಕ ಹೊಂದುತಾರೇನ
ಹೋಗಿ ಬರತೀನಿ ಅಂದಾನೆ ಬೇಗಿ ಬರತೀವಿ ಅಂದಾನ

## ಮೂಕ ಮಗನಿಗೆ ಮಾತು ಬರತಾದ

ಒಂದಾ ತಿಂಗಳಾದವ ಎರಡ ತಿಂಗಳಾದವ
ಐದ ತಿಂಗಳಾದವೆ ಒಂದು ವರ್ಷನಾದವ
ಮೂರ ವರ್ಷನಾದವ ನಾಲ್ಕು ವರ್ಷನಾದವ
ಐದ ವರ್ಷನಾದವ ಮೂಕ ಮಗನಿದ್ದಾನ
ಮೂಕ ಮಗನಿದ್ದಾನ ಮಾತ ಬರುವುದಿಲ್ಲೇನ
ಐದು ವರ್ಷನಾದವ ಮೂಕ ಮಗನಿದ್ದಾನೆ
ಮೂಕ ಮಗನಿದ್ದಾನ ಮಾತ ಬರುವುದಿಲ್ಲೇನ
ಐದು ವರ್ಷನಾದಾವೆ ಆರ ವರ್ಷನಾದಾವ
ಎಂಟ ವರ್ಷನಾದಾವ ಏನಂದಾಡುತಾರೇನ
ಸೊನ್ನಲಗಿರಿ ಅರಸನ ಸಾಲಿಗ ಹ್ಯಾಂಗ ಹೋದನ
ವಾರಿಗ್ಯಾನ ಸಂಗಟ ಎಮ್ಮಿ ಕಾಯಿಲಾಕ ಹೋದನ
ಎಮ್ಮಿ ಕಾಯಲಾಕ ಹೋದನೆ ಎಮ್ಮಿಕಾಯಲಿ ಹೋದಲ್ಲಿ
ವಾರಿಗಿ ಹುಡುಗರಲ್ಲೇಳ ಬೆಂಕಿ ಖೆಂಡ ತಂದಾರ
ಬೆಂಕಿ ಖೆಂಡ ತಂದಾರೆ ತೆಲಗಿ ಇಡುವುತಾರೇನ
ಮಾತನಾಡುದಿಲ್ಲೇನೆ ತಾನೇನಾಗುವುದಿಲ್ಲೇನ
ಇಟ್ಟ ಬೆಂಕಿನಲ್ಲೇಳ ತಾಂವೇ ತಗದಾರೇನಯ್ಯ
ಹತ್ತು ವರ್ಷನಾದವ ಹನ್ನೊಂದು ವರ್ಷಿನವನೇನ
ಬಾರೋ ಬಾರೋ ನಮ್ಮಪ್ಪ ನಂದೊಂದು ಮಾತಕೇಳಯ್ಯ
ಬಾರೋ ಬಾರೋ ಸಿದ್ಧರಾಮ ನಿಮ್ಮ ಮನಿಯ ಒಳಗೇನ
ನಿಮ್ಮ ಮನಿಯ ಒಳಗೇನ ಎಳ್ಳು ಕೊಡಬೇಕಂದಾರ
ಎಳ್ಳ ಕೊಡಬೇಕಂದಾರ ನಾವು ಎಳ್ಳು ತಿನ್ನಬೇಕಂದಾರ
ಕೈಯಾಗ ಬಡಗಿ ಹಿಡದಿದ್ದ ಮುಂದನಾಗುತಾನೇನ
ಮುಂದನಾಗುತಾನೇನ ಹಿಂದ ಹೋಗುತಾರೇನ
ಸೊನ್ನಲಗಿರಿಯ ಒಳಗೇನೆ ಸಿದ್ಧರಾಮ ಬಂದಾನ

ಸಿದ್ಧರಾಮನಲ್ಲೇಳ ಒಳಿಯಾಕ ಬರುವುತಾನೇನ
ತಾಯೇಳ ಸುಗಲವ್ವನ ಎಳ್ಳಿನ ಗಡಗಿ ನೆಲಿಮ್ಯಾಲ
ಎಳ್ಳಿನ ಗಡಗಿ ನೆಲಿಮ್ಯಾಲೆ ತುಂಬಿ ಇಡುವುತಾಳೇನ
ತುಂಬಿದ ಗಡಗಿಗ ಸಿದ್ಧರಾಮ ಕ್ಷಣದಾಗ ತೂತ ಹಾಕ್ಯಾನ
ವಾರಿಗಿ ಹುಡುಗಲ್ಲೇಳ ಅಂಗಿ ಒಡ್ಡುತಾರೇನ
ಮನುಷನ ಒಂದಾ ಅಂಗೇನ ತುಂಬಿಕೊಂಡು ಬಂದಾರ
ಉಡಿಯಾಗ ಎಳ್ಳ ತುಂಬ್ಯಾರೆ ಓಡಿ ಹೋಗುತಾರೇನ
ವಾರಿಗಿ ಹುಡುಗರ ಸಂಗಟ ಸಿದ್ಧರಾಮ ಹೋಗ್ಯಾನ
ಅಂಗಿಯ ಒಡ್ಡಿನಿಂತಾನ ಉಡಿಯಾಗ ಎಳ್ಳು ಬಿದ್ದಾವ
ಉಡಿಯಾಗ ಎಳ್ಳು ಬಿದ್ದಾವ ಕೈಯಾಗ ಬಡಗಿ ಹಿಡದಾನ
ಕೈಯಾಗ ಬಡಗಿ ಹಿಡದಾನೆ ಗಡಗಿ ತಳಕ ಬಡಸ್ಯಾನ
ಚೆಲ್ಲಿಯಾ ಬಂದನಾಗ್ಯಾವೆ ಎಳ್ಳು ಒಳಗೆ ಉಳದಾವ
ವಾರಿಗಿ ಹುಡುಗರ ಸಂಗಟ ತಾನು ಓಡಿ ಬಂದಾನ
ಕೆರಿಯ ಒಳಗೇ ಬಂದಾರೆ ಎಮ್ಮಿ ಕಾಯುತ್ತಿದ್ದಾರ
ಮಾತ ಬಾರದ ಸಿದ್ಧರಾಮ ಎಳ್ಳ ನಮಗ ತಿನಸ್ಯಾನ
ಎಳ್ಳು ನಮಗೆ ತಿನಸ್ಯಾನೆ ಮಾತ ಇವನಿಗ ಬರತಾವ
ಮಾತ ಇವನಿಗ ಬರತಾವೆಂದು ಎಳ್ಳು ತಿನುವುತಾರೇನ
ಎಳ್ಳು ತಿನವುತಾರೇನ ಹೊತ್ತನೆ ಹೊಡಮಳ್ಯಾವ
ಮನಿಗಿ ಹೋಗುತಾರೇನೆ ಎಮ್ಮಿ ಕಟ್ಟುತಾರೇನ
ವಾರಿಗಿ ಹುಡುಗರಲ್ಲಪ್ಪ ತಮ್ಮ ತಮ್ಮ ಮನಿಯಾಗ
ತಮ್ಮ ತಮ್ಮ ಮನಿಯಾಗೆ ತಾಯಿ ತಂದಿಗ ಹೇಳ್ಯಾರ
ಸಿದ್ಧರಾಮಗಲ್ಲೇಳ ನಾವು ಗಮ್ಮತ ಮಾಡಿವಿ ಅಂದಾರ
ಬಾರೋ ಬಾರೋ ಸಿದ್ಧರಾಮ ಎಳ್ಳ ತಿನುವಂಗಾದವ
ಬಡಗಿ ತೊಗೊಂಡಲ್ಲಪ್ಪ ಮುಂದನಾಗುತಾನೇನ
ಮನಿಗಿ ಬರವುತಾನೇನ ನೆಲಿಯ ಮ್ಯಾಲಿನ ಗಡಗೇನ
ನೆಲಿಯ ಮ್ಯಾಲಿನ ಗಡಗೀಗೆಲ್ಲ ತಳದಾಗ ತೂತ ಹಾಕ್ಯಾನ
ಅಂಗಿ ಒಡ್ಡಿ ನಿಂತೇವ ಉಡಿಯಾಗ ಎಳ್ಳ ಬಿದ್ದಾವ
ಉಡಿಯಾ ತುಂಬಿಕೊಂಡೇವೆ ಹೊರಗ ಓಡಿ ಹೋದೇವ
ಹತ್ತೆಂಟು ಮಂದಿ ಹುಡುಗರೆ ಎಳ್ಳ ತಂದಿವಿ ಅಂದಾರ
ಸಿದ್ಧರಾಮನಲ್ಲೇಳ ಅವನು ತರುವುತಾನೇನ
ಎಲ್ಲರೂ ಕೂಡಿವಿ ಅಂದಾರೆ ಎಳ್ಳ ತಿಂದೀವಂದಾರ
ಅಂದಿನ ದಿನಮಾನಲ್ಲೇಳ ನಮ್ಮತಾಯಿ ತಂದಿನ
ಮೂರ ದಿನದ ಮ್ಯಾಲೇನ ಎಮ್ಮಿ ಹೊಡಕೊಂಡು ಬಂದಾರ
ಸಿದ್ಧರಾಮನ ಮನಿಯಾ ಮುಂದ ಎಮ್ಮಿ ಹೊಡಕೊಂಡು ಬಂದಾರ
ತಾಯೇಳ ಸುಗಲವ್ವನ ಹುಡುಗರಿಗ ಹೇಳುತಾಳೇನ
ಸಿದ್ಧರಾಮಗಲ್ಲಪ್ಪ ಬಹಳ ಕರಕೊಂಡು ಕಾಯಿಬೇಕ

ಶಾಣ್ಯಾ ಹಾನೇಳಂದಾರೆ ಇವನಿಗ ಮಾತ ಬರತಾವಂದಾರ
ಹಂತ ಮಾತನಲ್ಲಪ್ಪ ನಿಮ್ಮಗ್ಯಾಂಗೆ ತಿಳದಾವ
ವಾರಿಗಿ ಹುಡುಗರಲಪ್ಪ ಬಾಯನ ಮಾತ ಹೇಳ್ಯಾರ
ಎಳ್ಳು ತಿರುವಂಗಾದಾವೆ ಎಳ್ಳು ಕುಡಬೇಕಂದೇವ
ಬಡಗಿ ತೊಗೊಂಡಲ್ಲವ್ವ ಮನಿಗಿ ಬರುವುತಾನೇನ
ಸಿದ್ಧರಾಮನ ಬೆನ್ನ ಹಿಂದ ನಾವನೇ ಬಂದೀವಿ ಅಂದಾರ
ನಾವೇ ಮನಿಗಿ ಬಂದೇವೆ ನೀನೆ ಹೊರಗ ಹೋಗಿದ್ದೆ
ಸಿದ್ಧರಾಮ ನೋಡವ್ವ ಎಳ್ಳ ಗಡಗಿ ತಳದಾಗ
ತಳದಾಗ ತೂತ ಹಾಕ್ಯಾನೆ ಎಳ್ಳಾ ತೆಳಗ ಚೆಲ್ಯಾವ
ಅಂಗಿ ನಾವು ಒಡ್ಡೇವೆ ಮನುಷ್ಯಗೊಂದಾ ಉಡಿಯೇನ
ನಮ್ಮ ಉಡಿಯಾ ಒಳಗವ್ವ ಎಳ್ಳ ತೊಗೊಂಡೇವ
ಬಾರೋ ಬಾರೋ ಏಯವ್ವ ನೀನೆ ಬೈಯಲಿಬ್ಯಾಡಪ್ಪ
ನಿನ್ನ ಮನಿಯ ಒಳಗವ್ವ ಎಳ್ಳ ಕಳವ ಮಾಡೇವ
ಸಿದ್ಧರಾಮನ ಕೈಯದಾಗೆ ಎಳ್ಳ ವೈಯದೀವಿ ಅಂದಾರ
ತಾಯೇಳ ಸುಗಲವ್ವನ ಹಿಗ್ಗಿಲಿ ಮಾತನಾಡ್ಯಾಳ
ಬರಿಯಾ ನನ್ನ ತಮ್ಮದೇರಾ ಸುಳ್ಳುನಾಡಲಿ ಬಾರದ
ಒಬ್ಬರಿದ್ದಾರಲ್ಲೇಳ ಹತ್ತೆಂಟು ಮಂದಿ ಹೇಳ್ಯಾರ
ಹತ್ತೆಂಟು ಮಂದಿ ಹೇಳ್ಯಾರ ಎಮ್ಮಿ ಹೊಡಕೊಂಡು ಹೋದಾರ
ಏನಮ್ಮ ತಾಯಿ ಸುಗಲವ್ವ ಹೊರಳಿ ಮನಿಗೆ ಬಂದಾಳ
ಹೊರಳಿ ಮನಿಗಿ ಬಂದಾಳೆ ಎಳ್ಳ ಗಡಗಿ ನೋಡ್ಯಾಳ
ಎಟ್ಟು ತುಂಬಿದ ಎಳ್ಳೇನ ಅಟ್ಟೇ ಇರುವುತಾವೇನ
ಯಾರಿಗ ನಂಬಲಿ ಅಂದಾಳೆ ಯಾರಿಗ ಕರಿಯಲಿ ಅಂದಾಳ
ಸಿದ್ಧರಾಮನಂದಾರ ಅವರೇ ಮಕ್ಕಳಿದ್ದಾರ
ಮಕ್ಕಳ ಮಾತನಲ್ಲೇಳ ಹ್ಯಾಂಗ ಸುಳ್ಳ ಅನುವಲೇ
ಗುರುವ ರೇವಣ್ಣಸಿದ್ಧನೇ ಎಂಥಾ ಮಗನ ಕೊಟ್ಟಿದೆ
ಹನ್ನೆರಡು ವರ್ಷಿನತಾನೇನ ಮೂಕ ಮಗನ ಕೊಟ್ಟೇನ
ಒಳ್ಳೆದು ಒಳ್ಳೆದಂದಾಳೆ ಎಮ್ಮಿ ಬಿಡುವುತಾಳೇನ
ಎಮ್ಮಿ ಬಿಡುವುತಾಳೇನ ಬುತ್ತಿ ಕಟ್ಟುತಾಳೇನ
ವಾರಿಗ ಹುಡುಗರ ಸಂಗಟ ಕೆರಿಯಾಗ ಎಮ್ಮಿ ಬಂದಾವ
ಬಾರಾತಾನ ಕಾಯಿದಾರೆ ಸಿದ್ಧರಾಮಗ ಕರದಾರ
ಬಾರಾ ಬಾರಾ ಸಿದ್ಧರಾಮ ಊಟ ಮಾಡರಿ ಅಂದಾರ
ಊಟ ಮಾಡರಿ ಅಂದಾರ ಹೊರಳಿ ನೋಡುತಾನೇನ
ಕಿಂವಿಯ ಕೇಳುತಾವಂದಾರೋ ಇಂವಗ ಮಾತ ಬರತಾವಂದಾರ
ತಾವೇ ಕರಿಯುತಾರೇನ ಬುತ್ತಿಯ ಗಂಟ ಬಿಚ್ಚ್ಯಾರ
ಬುತ್ತಿಗಂಟ ಬಿಚ್ಚ್ಯಾರ ಊಟ ಮಾಡುತಾರೇನ
ಸೀತಾಳ ಮುಗಿಯುತಾರೇನ ಎಮ್ಮಿ ಕಾಯುತಾರೇನ

ಬಾರಾದ ಮ್ಯಾಲ ಎರಡೇನ ಮೂರನಾಗುತಾವೇನ
ಒಂಬತಾಸಿನ ಟೈಮಿಗೆ ಮಲ್ಲಿಕಾರ್ಜುನ ಮಹಾದೇವ
ಮಲ್ಲಿಕಾರ್ಜುನ ಮಹಾದೇವ ನವಣಿ ಹೊಲದಾಗ ಬಂದಾನ
ನವಣಿ ಹೊಲದಾಗ ಬಂದಾನ ಎಮ್ಮಿ ಕಾಯಲಿ ಬಂದಾನ
ಎಮ್ಮಿ ಕಾಯಲಿ ಬಂದಾರೆ ಸಿದ್ಧರಾಮ ನೋಡ್ಯಾನ
ಸಿದ್ಧರಾಮನಲ್ಲೇಳ ಮಹಾದೇವಗೆ ನೋಡತಾನೇನ
ಬಡಗಿ ತೆಳಗ ಇಟ್ಟಾನೆ ಪಾದಕ ಹೊಂದುತಾನೇನ
ಪಾದಕ ಹೊಂದುತಾನೇನ ಮಲ್ಲಿಕಾರ್ಜುನ ಮಹಾದೇವ
ಮಲ್ಲಿಕಾರ್ಜುನ ಮಹಾದೇವ ಮಂಡಿಲಿ ಹಸ್ತ ಇಟ್ಟಾಗ
ಸಿದ್ಧರಾಮನೆಂದಾನೆ ಮಲ್ಲಯ್ಯಾ ಕೂಗುತಾನೇನ
ಬಾರೋ ಬಾರೋ ಸಿದ್ಧರಾಮ ಮಾರಿಗ ನೀರ ಇಲ್ಲೇನ
ಮೂರ ದಿವಸನಾದಾವೆ ಊಟ ಮಾಡಿಲ್ಲಂದಾನ
ಊಟ ಮಾಡಿಲ್ಲಂದಾನ ಹೊಟ್ಟಿಗ ಹೊಡವನಾದಾವ
ಹ್ಯಾಂಗ ಮಾಡಬೇಕಂದಾನ ಎಲ್ಲಿಗ ಹೋಗಬೇಕಂದಾನ
ಮಲ್ಲಿಕಾರ್ಜುನ ಮಹಾದೇವ ಸಿದ್ಧರಾಮನ ಹೇಳ್ಯಾನ
ಬಾರೋ ಬಾರೋ ಸಿದ್ಧರಾಮ ಮನಿಗಿ ಹೋಗಲಿಬೇಕಯ್ಯ
ಮನಿಗಿ ಹೋಗಲಿಬೇಕಪ್ಪ ಮಸರ ಬಾನಾದ ಬುತ್ತೇನ
ಮಸರ ಬಾನಾದ ಬುತ್ತೇನ ನೀನೇ ತರಬೇಕಂದಾರ
ಬಾರೋ ಬಾರೋ ಸಿದ್ಧರಾಮ ಮನಿಗಿ ಹೋಗಲಿಬೇಕಯ್ಯ
ಮನಿಗಿ ಹೋಗಲಿಬೇಕಪ್ಪ ಮಸರ ಬಾನಾದ ಬುತ್ತೇನ
ಮಸರ ಬಾನಾದ ಬುತ್ತೇನ ನೀನೇ ತರಬೇಕಂದಾರ
ನಾನು ಬರುವತನಕೇನ ಎಮ್ಮಿ ಯಾರು ಕಾಯಿದಾರ
ಎಮ್ಮಿ ಯಾರು ಕಾಯಿದಾರ ನವಣಿ ಹೊಲದಾಗ ಹೋದವ
ಸಿದ್ಧರಾಮಗಲ್ಲೇಳ ಮಹಾದೇವ ಹೇಳುತಾನೇನ
ನೀನು ಬರುತನಕಲ್ಲೇಳ ಎಮ್ಮಿ ಕಾಯಿತೀನಿ ಅಂದಾನ
ಮಸರ ಬಾನಾದ ಬುತ್ತೇನ ನೀನೇ ತರಬೇಕಂದಾನ
ಒಳ್ಳೆದು ಒಳ್ಳೆದಂದಾನ ಸಿದ್ಧರಾಮನಂದಾನ
ಮನಿಗಿ ಹೋಗಿ ಬರತೀನಿ ಬುತ್ತಿ ತರತೀನಿ ಅಂದಾನ
ಬುತ್ತಿ ತರತೀನಿ ಅಂದಾನ ಇಲ್ಲೇ ಇರಬೇಕಂದಾನ
ಸಿದ್ಧರಾಮನಲ್ಲಪ್ಪ ಮನಿಗಿ ಹೋಗುತಾನೇನ
ಮಲ್ಲಿಕಾರ್ಜುನ ಮಹಾದೇವ ಕೆರಿಯಾಗ ಎಮ್ಮಿ ಕಾಯದಾನ
ಸಿದ್ಧರಾಮನ ಧಾರೇನ ಮಹಾದೇವ ನೋಡುತಾನೇನ
ಸಿದ್ಧರಾಮನಲ್ಲೇಳ ಮನಿಗಿ ಹೋಗುತಾನೇನ
ಬಾಗಲ ಬಳಿಗೆ ನಿಂತಾನ ಎವ್ವಾ ಎವ್ವಾನಂತ ಕೂಗ್ಯಾನೆ
ಏ ನನ್ನ ತಾಯಿ ನೀ ಬಾರೋ ಮಸರ ಬಾನಾದ ಬುತ್ತೇನ
ಮಸರ ಬಾನಾದ ಬುತ್ತೇನ ನೀನೇ ಕಟ್ಟಲಿಬೇಕಪ್ಪ

ಮಾದೇವ ಬರತಾನಂದಾರೆ ಮಲಿಕಾರ್ಜುನ ಮಹಾದೇವ
ಮಲ್ಲಿಕಾರ್ಜುನ ಮಹಾದೇವಗ ಬುತ್ತಿ ವೈತೀನಿ ಅಂದಾನ
ತಾಯೀಳ ಸುಗಲವ್ವಗೆ ಮನಸು ಆನಂದಾದವ
ಹನ್ನೆರಡು ವರ್ಷದ ಮಗನಿಗೆ ಮಾತ ಬಂದಾವಂದಾಳ
ಹನ್ನೆರಡು ವರ್ಷ ದಿನಮನ ಮೂಕ ಇರುವುತಾನೇನ
ಸಂಬ ಕಣ್ಣಾ ತೆರೆದಾನೆ ಶಿವನು ಕಣ್ಣ ತೆರದಾನ
ಬಿಳಿಯಾ ಬಟ್ಟೆ ಹರದಾಳೆ ಮಸರ ಬಾನಾದ ಬುತ್ತೇನ
ಮಸರ ಬಾನಾದ ಬುತ್ತೇನ ಕಲಿಸಿ ಕಟ್ಟುತಾಳೇನ
ಸಿದ್ಧಾರಾಮನಪ್ಪ ಬುತ್ತಿ ಕೈಯಾಗ ಹಿಡದಾನ
ಎಡಕಿನ ಕೈಯ ಒಳಗೇನ ಬುತ್ತಿ ಹಿಡಿಯತಾನೇನ
ಬಲಕಿಯ ಕೈಯನಲ್ಲಪ್ಪ ಎತ್ತಿ ಹಿಡಿಯುತಾನೇನ
ಮಲ್ಲಿಕಾರ್ಜುನ ಮಹಾದೇವನ ತಾನೇ ಕರಿಯುತಾನೇನ
ಮಲ್ಲಯ್ಯಂತ ಕೂಗ್ಯಾನೆ ಮಾದೇವಂತ ಕೂಗ್ಯಾನ
ಮಾದೇವಂತ ಕೂಗ್ಯಾನೆ ಕೆರಿಯಾಗ ಬರವುತಾನೇನ
ವಾರಿಗಿ ಹುಡುಗರಿಲ್ಲೇಳ ತಾನೇ ಕೇಳುತಾನೇನ
ಬರಿಯಾ ನನ್ನ ತಮ್ಮದೇರ ಎಮ್ಮಿ ಕಾಯಲಾಕಲ್ಲಪ್ಪ
ಎಮ್ಮಿ ಕಾಯುವದಕಲ್ಲೇಳ ಮಲ್ಲಿಕಾರ್ಜುನ ಮಾದೇವ
ಮನಿಗಿ ಹೋಗಂತೇಳ್ಯಾನ ಬುತ್ತಿ ತರಬೇಕಂದಾನ
ಬುತ್ತಿ ತಂದೀನಿ ಅಂದಾನೆ ಮಲ್ಲಯ್ಯ ಎಲ್ಲಿ ಹಾನಯ್ಯ
ಹುಚ್ಚ ಸೂಳಿ ಮಗನೆ ಹ್ಯಾಂಗ ಬರತಾನಂದಾರ
ಮಲ್ಲಿಕಾರ್ಜುನ ಮಹಾದೇವ ಹ್ಯಾಂಗ ಮಾನುವರ ಕಣ್ಣಿಗ ಬಿದ್ದಾನ
ಮಾನುವರ ಕಣ್ಣಿಗಲ್ಲಪ್ಪ ಹ್ಯಾಂಗ ಬೀಳತಾನಂದಾರ
ಎಡಗೈ ಎತ್ತಿ ಹಿಡದಾನೆ ಬಲಿಗೈಲಿ ಕೂಗುತಾನೇನ
ಬುತ್ತಿ ಎತ್ತಿ ಹಿಡದಾನ ಬಲಗೈ ಎತ್ತಿ ಕೂಗ್ಯಾನ
ಮಲ್ಲಯ್ಯ ಮಲ್ಲಯ್ಯನಂದಾನೆ ಮಲ್ಲಿಕಾರ್ಜುನಂದಾನ
ಕಾಡಿಗ ಹೋಗುತಾನೇನ ನಾಡಿಗೆ ಹೋಗುತಾನೇನ
ಹ್ಯಾಂಗ ಮಾಡಲಿ ಅಂದಾನ ಎಲ್ಲಿದೊರಕ್ಯಾನಂದಾನ
ಧಾರಿ ಒಳಗ ಬಂದಾರೆ ಮಾನುರ ಕೇಳೂತಾನೇನ
ಮಲ್ಲಿಕಾರ್ಜುನ ಮಹಾದೇವನ ನೀವು ನೋಡಿರೇನಂದಾನ
ಮಲ್ಲಯ್ಯಗ ನೋಡಿರಿ ಅಂದಾನೆ ಮಾದೇವಗ ನೋಡಿರಿ ಅಂದಾನ
ಬಲಗೈ ಎತ್ತಿ ಹಿಡದಾನ ಬಲಗೈ ಬುತ್ತಿ ಹಿಡಿದಾನ
ಮಲ್ಲಿಕಾರ್ಜುನಂದಾನೆ ಮಾದೇನಂತ ಕೂಗ್ಯಾನ
ಎಡಗೈ ಒಳಗ ಬುತ್ತೇನ ಬಲಗೈ ಎತ್ತಿ ಕೂಗ್ಯಾನ
ಮಲ್ಲಯ್ಯ ಮಲ್ಲಯ್ಯನಂದಾರೆ ಮಲ್ಲಿಕಾರ್ಜುನಂದಾನ
ಮಲ್ಲಿಕಾರ್ಜುನ ಮಾದೇನಂದು ಓ ಎಂಬ ಶಬುದ ಕೂಗ್ಯಾನ
ನಾಡ ನಾಡ ತಿರಗ್ಯಾನೆ ಕಾಡ ಕಾಡ ತಿರಗ್ಯಾನೆ

ಕಾಡ ಕಾಡ ತಿರಗ್ಯಾನೆ ಬೆಟ್ಟಕ ಹೋಗುತಾನೇನ
ಬೆಟ್ಟಕ ಹೋಗುತಾನೆನ ಮಲ್ಲಿಕಾರ್ಜುನ ಮಾದೇವ
ಮಲ್ಲಿಕಾರ್ಜುನ ಮಾದೇವನಂದು ಮಲ್ಲಯ್ಯನೆಂದು ಕೂಗ್ಯಾನ
ಒಂದು ಬೆಟ್ಟ ಏರ್‍ಯಾನೆ ಎರಡು ಬೆಟ್ಟ ಇಳದಾನ
ಬೆಟ್ಟ ಇಳಿಯುತಾನೇನ ಕೊಳದಾಗ ಹೋಗುತಾನೇನ
ಶ್ರೀಶೈಲ ಬೆಟ್ಟದೊಳಗೇನೆ ಮಲ್ಲಿಕಾರ್ಜುನ ಮಹಾದೇವ
ಮಲ್ಲಿಕಾರ್ಜುನ ಮಹಾದೇವನಂದು ತಾನೇ ಕೂಗೂತಾನೇನ
ದಿಮ್ಮಿ ಕೊಳ್ಳಕ ಹೋಗ್ಯಾನ ಮ್ಯಾಲೆ ಹೋಗಿನಿಂತಾನ
ಮಲ್ಲಿಕಾರ್ಜುನ ಮಾದೇವ ಓ ಯೆಂಬ ಶಬುದ ಕೂಗ್ಯಾನ
ಓ ಎಂಬ ಶಬುದ ಕೂಗ್ಯಾನೆ ನೀವೇ ನೋಡಿರಿ ಅಂದಾನ
ನೀವೇ ನೋಡಿರಿ ಅಂದಾನೆ ಎಲ್ಲಿಗ ಹೋಗ್ಯಾರಂದಾನ
ಹ್ಯಾಂಗ ಮಾಡಲಿ ಅಂದಾನೆ ಬುತ್ತಿ ಯಾರು ಉಂಡಾರ
ಯಾವಾಗ ಉಂಡಿದಿ ಅಂದಾನ ಎಲ್ಲಿಂದ ಬಂದಿದಿ ಅಂದಾನ
ಉಣಸುತಾನಕಲ್ಲೇಳ ನಾನೇ ಬಿಡುವುದಿಲ್ಲಂದಾನ
ಊಟ ಮಾಡುತಾನಕೇನ ನಾನೇ ಬಿಡವದಿಲ್ಲಯ್ಯ
ಎಡಗೈಯ ಒಳಗ ಬುತ್ತೇನೆ ಬಲಗೈಯ ಎತ್ತಿ ಕೂಗ್ಯಾನ
ಕಮರಿ ಏರಿ ನಿಂತಾನ ತಾನೇ ನೋಡತಾನೇನ
ಮಲ್ಲಿಕಾರ್ಜುನ ಮಹಾದೇವಂದು ಓ ಯೆಂಬ ಶಬುದ ಕೂಗ್ಯಾನ
ನಿನಗೂ ಸಾಕಾನಾದಾರ ನನಗೂ ಯಾಕಬೇಕಯ್ಯ
ನನ್ನ ಜೀವನಲ್ಲಪ್ಪ ನನಗ ಸಾಕನಾದವ
ಮಲ್ಲಿಕಾರ್ಜುನ ಮಹಾದೇವ ಮಹಾದೇವಂತ ಕೂಗ್ಯಾನ
ಮಹದೇವಂತ ಕೂಗ್ಯಾನೆ ಮಲ್ಲಯ್ಯನಂತ ಕೂಗ್ಯಾನ
ಮಲ್ಲಯ್ಯನಂತ ಕೂಗ್ಯಾನೆ ಕಣ್ಣಿಗ ನೀರ ತಂದಾನ
ಕಣ್ಣಿಗ ನೀರ ತಂದಾನ ಹಿಂದ ಮೂರ ಮಾರೇನ
ಹಿಂದಕ ಮೂರ ಮಾರೇನ ಸಿದ್ಧರಾಮ ಸರದಾನ
ಸಿದ್ಧರಾಮ ಸರದಾನೆ ಕಣ್ಣಿಗ ನೀರ ತಂದಾನ
ಮಲ್ಲಿಕಾರ್ಜುನ ಮಹಾದೇವ ಮಲ್ಲಯ್ಯನಂತ ಕೂಗ್ಯಾನ
ಕಣ್ಣನೀರನಲ್ಲಪ್ಪ ಕೆಳಗ ಬೀಳುತಾವೇನ
ಕೆಳಗ ಬೀಳುತಾವೇನ ಜರಿಯಾ ಗುಂಡನಾದವ
ಮೂರ ಮಾರ ಸರದಾನ ಮುಂದಕ ಹೋಗುತಾನೇಕ
ನಿನಗೂ ಸಾಕನಾದಾರ ನನಗೂ ಯಾತಕಬೇಕಯ್ಯ
ನಿನ್ನಗ ಸಾಕನಾದರ ನನ್ನಗ ಯಾತಕಬೇಕಯ್ಯ
ಎಡಗೈ ಒಳಗ ಬುತ್ತೇನ ಬಲಗೈ ಎತ್ತಿ ಕೂಗ್ಯಾನ
ಬಲಗೈ ಎತ್ತಿ ಕೂಗ್ಯಾನೆ ಕುಮರಿ ಹಾರುತಾನೇನ
ದಕ್ಷಿಣ ತೆಲಿಯನಾದಾವ ಉತ್ತರ ಕಾಲನಾದಾವ
ಪೂರ್ವ ದಿಕ್ಕಿನಿಂದೇನ ಮಲ್ಲಯ್ಯ ಓಡಿ ಬಂದಾನ

ಮಲ್ಲಯ್ಯ ಓಡಿ ಬಂದಾನ ಟೊಂಕಕ ಕೈಯ ಹಾಕ್ಯಾನ
ಹೆಡಕಿಗ ಒಂದು ಕೈಯೇನ ಟೊಂಕಕ ಒಂದು ಕೈಯೇನ
ಬಾರೋ ಬಾರೋ ಸಿದ್ಧರಾಮ ಎಂಥಾ ಘಾತಕ ಇದ್ದಿಗೆ
ಕಣ್ಣು ಮುಚ್ಚುತಾನೇನ ಬಾಯಿ ಮುಚ್ಚುತಾನೇನ
ಬಾಯಿ ಮುಚ್ಚುತಾನೇನ ಸಾವಿಗಂಜಲಿಲ್ಲೇನ
ಮಲ್ಲಿಕಾರ್ಜುನ ಮಹಾದೇವ ಮ್ಯಾಲ ತರವುತಾನೇನ
ಮ್ಯಾಲ ತರುವುತಾನೇನ ಕೈಯಾಗ ಹಿಡಕೊಂಡು ತಂದಾನ
ಬಾರೋ ಬಾರೋ ಸಿದ್ಧಾರಾಮ ಶೆಡವ ಮಾಡಿದೇನಪ್ಪ
ನನ್ನ ಮ್ಯಾಲನಲ್ಲಪ್ಪ ಮುಣಸ ಮಾಡಿದಿ ಅಂದಾನ
ಸಿದ್ಧರಾಮನಂದಾನೆ ತಾನೇ ಕೂಗೂತಾನೇನ
ಸಿದ್ಧರಾಮನಂದೇನ ಮಲ್ಲಯ್ಯ ಕೂಗೂತಾನೇನ
ಗದ್ದ ಹಿಡದು ಹೇಳ್ಯಾನ ತುಟಿಯ ಹಿಡದು ಕರದಾನ
ತುಟಿಯಾ ಹಿಡದು ಹೇಳ್ಯಾನ ಕಣ್ಣ ತೆರೆದು ನೋಡ್ಯಾನ
ಕಣ್ಣು ತೆರದು ನೋಡ್ಯಾನೆ ಬಾಯಿ ತೆರದು ನೋಡ್ಯಾನ
ಬಾಯಿ ತೆರಿಯುತಾನೇನ ಕಣ್ಣ ತೆರಿಯುತಾನೇನ
ಹದಿನಾಲ್ಕು ವರ್ಷನಲ್ಲೇನ ಸಿದ್ಧಾರಾಮನಿದ್ದಾನ
ಕಿರಿಯಾ ಜಡಿಯಾ ಬಿಟ್ಟಾನ ಕಣ್ಣಾ ತೆರೆದು ನೋಡ್ಯಾನ
ಮಲ್ಲಿಕಾರ್ಜುನ ಮಹಾದೇವ ಮಲ್ಲಯ್ಯ ಕೂಗುತಾನೇನ
ಸಿದ್ಧರಮನಲ್ಲೇಳ ಎದ್ದು ಕುಂದ್ರುತಾರೇನ
ಎದ್ದು ಕುಂದ್ರುತಾನೇನ ಮಲ್ಲಯ್ಯಗ ಹೇಳುತಾನೇನ
ಬುತ್ತಿ ಗಂಟ ಬಿಚ್ಚೇನ ಊಟ ಮಾಡೇಳಂದಾನ
ಊಟ ಮಾಡಲಿಬೇಕಪ್ಪ ಸೀತಾಳ ಮುಗಿಯಲಿಬೇಕಯ್ಯ
ಯಾವಾಗ ಉಂಡಿದಿ ಅಂದಾನೆ ಎಲ್ಲಿ ಬಂದಿದಿ ಅಂದಾನ
ಮಲ್ಲಿಕಾರ್ಜುನ ಮಹಾದೇವ ನುಡದಾನೆ ಮಾತಾಡ್ಯಾನ
ಒಲ್ಲೇನಪ್ಪ ಒಲ್ಲೇನ ನನಗ ಹಸುವನಾಗಿಲ್ಲ
ನಿನಗ ಹಸುವನಾಗಲಿಕ್ಕ ನನಗ ಹಸುವನಾಗಿಲ್ಲ
ನಿನಗ ಹಸುವನಾಗಲಿಕ್ಕ ಬುತ್ತಿಯಾರಿಗ ಬೇಕಪ್ಪ
ಸಿದ್ಧರಾಮನಲ್ಲೇಳ ತಯ್ಯಾರಾಗುತಾನೇನ
ಮಲ್ಲಿಕಾರ್ಜುನ ಮಹಾದೇವ ಏನಂದಾಡುತ್ತಿದ್ದಾನೇನ
ನೀನು ಉಣುವಲಿಬೇಕಪ್ಪ ನಾನು ಉಣತೀನಿ ಅಂದಾನ
ನಾನೇ ಉಣತೀನಿ ಅಂದಾನೆ ನೀನೇ ಉಣಬೇಕಂದಾನ
ಮೊದಲೆ ನೀನೇ ಉಂಡಾರ ಹಿಂದಿದ ನಾನೇ ಉಂಡೇನ
ನನ್ನಗೂಡ ಸಿದ್ಧರಾಮ ಕೂಡಿ ಉಣಬೇಕಂದಾರ
ಒಳ್ಳೇದು ಒಳ್ಳೇದಂದಾರೆ ಉಂಡಾರೆ ಬಾಳುಟ್ಟಾರೆ
ಉಂಡಾರೆ ಭಾಳುಟ್ಟಾರೆ ಬಾಯಿಲಿ ಸೀತಾಳ ಉಗಳ್ಯಾರ
ದೇವಿಧರ್ಮರ ಹಾಡೇನ ಇಲ್ಲಿಗ ಇದು ಒಂದು ಸಂದೇನ

ಕಳಸವಿಟ್ಟಾರ ಕವಿತಾ ಕಟ್ಯಾರ ಹೊನ್ನ ಜಗ್ಗುನಿ ಗೌಡರೋ
ದೇವರ ಬಂದಾರ ಬನ್ನೀರೆ !

## ದೇವಿ ಧರ್ಮರ ಹಾಡೇನೆ ಸೊನ್ನಲಾಪುರದ ಒಳಗೇನೆ

ಶಿವನೆ ನಮ್ಮಯಿ ದ್ಯಾವರು ಬಂದಾರ ಬನ್ನೀರೆ
ಸ್ವಾಮಿ ನಮ್ಮಯಿ ದ್ಯಾವರು ಬಂದಾರ ಬನ್ನೀರೆ
ದೇವಿ ಧರ್ಮರ ಹಾಡೇನೆ ಸೊನ್ನಲಪುರದ ಒಳಗೇನ
ಸೊನ್ನಲಪುರದ ಒಳಗೇನೆ ಶ್ರೀಶೈಲಾದ ಒಳಗೇನ
ಶ್ರೀಶೈಲದ ಒಳಗೇನ ಮಹಾನಂದಿಯ ಮ್ಯಾಲೇನ
ಭೀಮನಕೊಳ್ಳದ ಮ್ಯಾಲೇನ ಕಮರಿಕೊಳ್ಳದ ಮ್ಯಾಲೇನ
ಕಮರಿಕೊಳ್ಳದ ಮ್ಯಾಲೇನ ಸಿದ್ಧರಾಮ ಇಳದಾನ
ಮಲ್ಲಿಕಾರ್ಜುನ ಮಹಾದೇವ ಊಟ ಮಾಡಲಂದಾನ
ಉಂಡಾರೆ ಬಾಳುಟ್ಟಾರೆ ಬಾಯಿಲಿ ಸೀತಾಳ ಉಗಳ್ಯಾರ
ಸಿದ್ಧರಾಮನಲ್ಲೇಳ ಏನಂದಾಡುತಿದ್ದಾನ
ಮಲ್ಲಿಕಾರ್ಜುನ ಮಹಾದೇವ ತಾನೇನು ಹೇಳುತಾನೇನ
ಬಾರೋ ಬಾರೋ ಸಿದ್ಧರಾಮ ಬೇಡಿದ ಕುಡತೀನಿ ಅಂದಾರ
ಸೊನ್ನಲಗಿರಿನಿದ್ದಾವೆ ಸೋಲಾಪುರನಾದವ
ಸೋಲಾಪುರದಾವೆ ಕೋಲಾಪೂರನಾದಾವ
ಸೋಲಾಪುರದಾಗೇನೆ ದಂಡಸೋಲಾಪೂರೇನ
ದಂಡಸೋಲಾಪುರದಾಗೆ ಅನ್ನ ಅನುವಲಿಬಾರದ
ಅನ್ನ ಅನುವಲಿಬಾರದ ನೀರ ಅನುವಲಿಬಾರದ
ಯಾವ ತರದಿಂದೇನ ಬಡತನ ಇರುವಲಿಬಾರದ
ಮಲ್ಲಿಕಾರ್ಜುನ ಮಹಾದೇವ ಒಳ್ಳೆದು ಒಳ್ಳೇದಂದಾನ
ಒಳ್ಳೆದು ಒಳ್ಳೇದಂದಾನೆ ಕೊಟ್ಟೆನಿ ಕೊಟ್ಟೆನಿ ಅಂದಾನ
ಅನ್ನನೀರನ್ನಲ್ಲಪ್ಪ ನಿನಗೆ ಕೊಟ್ಟೆನಿ ಅಂದಾನ
ಸಿದ್ಧರಾಮನಲ್ಲೇಳ ಮಲ್ಲಿಕಾರ್ಜುನ ಮಹಾದೇವಗ
ಮಲ್ಲಿಕಾರ್ಜುನ ಮಹಾದೇವಗ ಗಟ್ಟಿ ಪಾದ ಹಿಡದಾನ
ಮಂಡಿಲಿ ಹಸ್ತ ಇಟ್ಟಾನೆ ಆಶೀರ್ವಾದವ ಮಾಡ್ಯಾನ
ಕೈ ಕೊಟ್ಟ ಶರಣಂದಾನೆ ರಾಯಿಮಾರಗ ಹಿಡದಾನ
ಮಲ್ಲಿಕಾರ್ಜುನ ಮಹಾದೇವ ಬೆಟ್ಟ ಇಳದು ಬಂದಾನ
ಸಿದ್ಧರಾಮನಲ್ಲೇಳ ಬೆಟ್ಟ ಇಳಿಯುತಾನೇನ
ಒಂದ ಕೊಳ್ಳ ಇಳದಾನೆ ಒಂದು ಕೊಳ್ಳ ಏರ್ಯಾನ
ಏಳ ಕೊಳ್ಳ ಇಳದಾನೆ ಏಳ ಗುಡ್ಡ ಏರ್ಯಾನ
ಏಳ ಗುಡ್ಡ ಇಳದಾನೆ ಏಳ ಕೊಳ್ಳ ಏರ್ಯಾನ

ಸಿದ್ಧರಾಮನಂದಾರೆ ರಾಯಿಮಾರಗ ಹಿಡದಾನ
ಹಿಡಗಲ್ಲ ಹಿಟ್ಟಾದವೆ ಕಗ್ಗಲ್ಲ ನುಗ್ಗಾದವ
ಕೆಂಧೂಳ ಭರಮಂಡ್ಯಾವೆ ಸೊನ್ನಲಗಿರಿಯ ಒಳಗೇನ
ಸೊನ್ನಲಗಿರಿಯ ಒಳಗೇನೆ ರೈತರೋಣಿಲಿ ಹಾಯ್ದರ
ರಾಜರ ಗಲ್ಲಿಲಿ ಹಾಯ್ದನೆ ರಾಜರ ಬಲ್ಲಿಗ ಬಂದಾನ
ತಂದೇಳ ಮುದ್ದುಗೌಡನೆ ತಾಯೇಳ ಸುಗಲವ್ವನ
ಬಾರ ನನ್ನ ಹಡದಪ್ಪ ಎಲ್ಲಿಗ ಹೋಗಿದಿ ಅಂದಾರ
ಎಲ್ಲಿ ಹೋಗಿದಿ ಅಂದಾರೆ ಯಾವಾಗ ಬಂದೀದಂದಾರ
ಅನ್ನ ಮೊಸರಬುತ್ತೆವ್ವ ನೀನೇ ಕಟ್ಟಿದಿ ಅಂದಾರ
ನೀನೆ ಕಟ್ಟಿದಿ ಅಂಥಾನೆ ನಾನೇ ವೈದಿನಿ ಅಂದಾನ
ಮಲ್ಲಿಕಾರ್ಜುನ ಮಹಾದೇವ ಕೆರಿಯಾ ಒಳಗ ಇಲ್ಲವ್ವ
ಕೆರಿಯಾ ಒಳಗ ಇಲ್ಲವ್ವ ನಾಡಿನೊಳಗ ಇಲ್ಲವ್ವ
ನಾಡ ನಾಡ ತಿರಗೇನ ಕಾಡ ಕಾಡ ತಿರಗೇನ
ಕಾಡ ಕಾಡ ತಿರಗೇನೆ ಬೆಟ್ಟಕ ಹೋದೇನಂದಾನ
ಹೆಜ್ಜಿನೆ ಸಿಗುವಲ್ಲವ ಹೋಲಿಕಿ ಹೊಳಿವಲ್ಲವ
ಹೋಲಿಕಿ ಹೊಳಿವಲ್ಲವೆ ಪರ್ವತ ಗುಡ್ಡಕ ಹೋದೇನ
ಏಳ ಗುಡ್ಡ ಏರೇನೆ ಕಮರಿ ಏರಿ ನಿಂತೇನ
ಕಮರಿಯ ಕೊಳದಾಗೇನ ಮಲ್ಲಿಕಾರ್ಜುನ ಮಹಾದೇವ
ಮಲ್ಲಿಕಾರ್ಜುನ ಮಹಾದೇವ ನಮಗೆ ದೊರತಾನಂದಾನ
ನಮಗೂ ದೊರತಾನಂದಿದ್ದ ಕಮರಿ ಮ್ಯಾಲೆ ಬಂದಿದ್ದ
ಕಮರಿ ಮ್ಯಾಲೆ ಬಂದಿದ್ದ ಊಟ ಮಾಡೇಳಂದೇನ
ಉಂಡಾನೆ ಬಾಳುಟ್ಟಾನೆ ಬಾಯಿಲಿ ಸೀತಾಳ ಉಗಳ್ಯಾನ
ಮಲ್ಲಿಕಾರ್ಜುನ ಮಹಾದೇವ ಬೇಡಿದ ಕೊಟ್ಟೇನಂದಾನ
ನನಗ ಬೇಡಿದ ಕೊಟ್ಟಾನೆ ಗಟ್ಟಿ ಪಾದ ಹಿಡದೇನ
ಕೈಕೊಟ್ಟ ಶರಣಂದೇನೆ ಆಶೀರ್ವಾದ ಮಾಡ್ಯಾನ
ಸಿದ್ಧರಾಮನಲ್ಲೇಳ ತಾಯಿಗ ಹೇಳುತಾನೇನ
ತಾಯಿಗ ಹೇಳುತಾನೇನೆ ತಂದಿಗ ಹೇಳುತಾನೇನ
ಗೌಡಕಿ ಮಾಡತ್ತಿದ್ದಾನೆ ರಾಜಕಿ ಮಾಡೂತಿದ್ದಾನೆ
ಶರಣಕ್ಕಿಂತನಲ್ಲಪ್ಪ ಶಿವಶರಣರ ಹೆಚ್ಚಿಗೆ
ಶಿವಶರಣರ ಸಂಗಟ ಸಹವಾಸ ಮಾಡುತಾನೇನ
ತಾಯಿತಂದಿನಲ್ಲೇಳ ನುಡದಾರೆ ಮಾತಾಡ್ಯಾರ
ನುಡದಾರೆ ಮಾತಾಡ್ಯಾರೆ ಏನಂದಾಡುತ್ತಿದ್ದಾರ
ಶರಣರ ಸಂಗ ನಿನ್ನಗ ಯಾಕ ಬೇಕೇಳಂದಾರ
ಯಾಕ ಬೇಕೇಳಂದಾರ ದೂರ ಸರದು ಕುಂದ್ರಯ್ಯ
ಹೆಚ್ಚಿನ ಮಾತ ಬ್ಯಾಡಪ್ಪ ನೀನೆ ಭವಿಯ ಇದ್ದೇನ
ನೀನೆ ಭವಿಯಾ ಇದ್ದೇನೆ ಗುರುವಿನ ಕರುಣ ಇಲ್ಲೇನ

ಗುರುವಿನ ಕರುಣ ಇಲ್ಲಪ್ಪ ಸರದ ಕುಂದ್ರಲಿ ಬೇಕಯ್ಯ
ಶಿವಶರಣರಂದಾರ ಸಿದ್ಧರಾಮ ತಿಳದಾನ
ಸಿದ್ಧರಾಮ ತಿಳದಾನ ಹ್ಯಾಂಗ ಮಾಡಲಿ ಅಂದಾನ
ಹ್ಯಾಂಗ ಮಾಡಲಿ ಅಂದಾನೆ ಎಲ್ಲಿಗೆ ಹೋಗಲಿ ಅಂದಾನ
ಸೊನ್ನಲಿಗಿರಿಯ ಬಿಟ್ಟಾನೆ ರಾಯಿಮಾರಗ ಹಿಡದಾನ
ರಾಯಿಮಾರಗ ಹಿಡದಾನೆ ಮಲ್ಲಯ್ಯನ ಧ್ಯಾನ ಮಾಡ್ಯಾನ
ಮಲ್ಲಯ್ಯನ ಧ್ಯಾನ ಮಾಡ್ಯಾನೆ ಮಹಾದೇವನ ಧ್ಯಾನ ಮಾಡ್ಯಾನ
ಮಲ್ಲಿಕಾರ್ಜುನ ಮಹಾದೇವನ ದರ್ಶನಾಗೇಳಂದಾನ
ಅಲ್ಲ್ಯಾನ ಇಲ್ಲ್ಯಾನೇನ ಪರ್ವುತ ಬೆಟ್ಟಕ ಹೋದನ
ಬೆಟ್ಟಕ ಹೋಗುತಾನೇನ ಎಲ್ಲಿಗ ಹೋಗುತಾನೇನ
ಒಂದು ಗುಡ್ಡ ಏರ್ಯಾನೆ ಒಂದಾ ಕೊಳ್ಳ ಇಳದಾನ
ಒಂದಾ ಕೊಳ್ಳ ಇಳದಾನೆ ಎರಡ ಕೊಳ್ಳ ಏರ್ಯಾನ
ಕಾಡ ಇಳಿಯುತಾನೇನ ಗುಡ್ಡ ಏರುತಾನೇನ
ಎಪ್ಪತ್ತೊಂದು ಗಿರಿಯಾಗ ಮಲ್ಲಿಕಾರ್ಜುನ ಮಹಾದೇವ
ಮಲ್ಲಿಕಾರ್ಜುನ ಮಹಾದೇವ ಬೆಟ್ಟದೊಳಗೆ ದೊರತಾನ
ಬೆಟ್ಟದೊಳಗೆ ದೊರತಾನ ಗಟ್ಟಿ ಪಾದಕ ಹೊಂದ್ಯಾನ
ಗಟ್ಟಿ ಪಾದ ಹಿಡದಾನೆ ಏನಂದಾಡುತ್ತಿದ್ದಾನ
ಬಾರೋ ಬಾರೋ ಸಿದ್ಧರಾಮ ಬಂದ ಕಾರಣ ಹೇಳಯ್ಯ
ಸಿದ್ಧರಾಮನಂದಾನೆ ನುಡದಾನೆ  ಮಾತಾಡ್ಯಾನ
ಶಿವನಕಿಂತನಲ್ಲಪ್ಪ ಹೆಚ್ಚಿನ ಶರಣರಂದಾರ
ಶಿವನಕೀನ ಶರಣರ ಹೆಚ್ಚ ಶಿವಶರಣರಂದಾರ
ಶಿವನಕೀನ ಶಿವಶರಣರು ಹೆಚ್ಚು ಹೆಚ್ಚಿನ ಮಾತೊಂದು ಆಡ್ಯಾರ
ಗುರುವಿನ ಕರುಣ ಇಲ್ಲೇನ ಭವಿಯ ಇದ್ದೇಳಂದಾರ
ಭವಿಯಾ ಇದ್ದೇಳಂದಾರ ಸರದು ಕುಂದ್ರು ಅಂದಾರ
ಆತ್ಮಧನವನಲ್ಲಪ್ಪ ನಿನಗೆ ಯಾಕೆ ಬೇಕಪ್ಪ
ಸಿದ್ಧರಾಮನಲ್ಲಪ್ಪ ಸರದು ಕುಂದ್ರು ಅಂದಾನ
ಒಳ್ಳೆದು ಒಳ್ಳೆಂದದೇನ ಇಲ್ಲಿಗ ಬಂದೇನಂದಾನ
ಮಲ್ಲಿಕಾರ್ಜುನ ಮಹಾದೇವ ಏನಂದಾಡುತಾನೇನ
ಚರಗಿ ತುಂಬಿ ಇಟ್ಟಾನ ಸುರಗಿ ತುಂಬುತಾನೇನ
ಸಾಮಾನ ತುರುವುತಾನೇನ ತಾಯೇನಂದಾಡ್ಯಾನ
ಸುರಗಿ ಸುತ್ತುತಾನೇನ ಸುರಗಿ ಒಳಗೆ ಕುಂತಾನ
ಮಲ್ಲಿಕಾರ್ಜುನ ಮಹಾದೇವ ಏನ ಹೇಳುತಾನೇನ
ತನುವ ಧನವ ಮನವೇನ ಮೂರು ಬಿಡಬೇಕಂದಾನ
ತನುವ ಬಿಡಬೇಕಂದಿದ್ದ ಮನವ ಬಿಡಬೇಕಂದಿದ್ದ
ಮನವ ಬಿಡಬೇಕಂದಿದ್ದ ತನವ ಬಿಡಬೇಕಂದಿದ್ದ
ಹೆಣ್ಣು ಬಿಡಬೇಕಂದಿದ್ದ ಹೊನ್ನು ಬಿಡಬೇಕಂದಿದ್ದ

ಹೊನ್ನು ಬಿಡಬೇಕಂದಿದ್ದ ಮಣ್ಣು ಬಿಡಬೇಕಂದಿದ್ದ
ಆಶೀರ್ವಾದ ಮಾಡಿದ್ದ ಆಶೀರೋಜನ ಮಾಡ್ಯಾನ
ಆಶೀರೋಜನ ಮಾಡ್ಯಾನೆ ಗಟ್ಟಿ ಪಾದ ಹಿಡದಾನ
ಮಂಡಿಲಿ ಹಸ್ತ ಇಟ್ಟಾನೆ ಮಲ್ಲಿಕಾರ್ಜುನ ಮಾದೇವ
ಮಲ್ಲಿಕಾರ್ಜುನ ಮಹಾದೇವ ಸಿದ್ಧರಾಮಗ ಹೇಳ್ಯಾನ
ಸಿದ್ಧರಾಮಗಲಲ್ಲಪ್ಪ ನಿನಗೆ ಕೊಟ್ಟಿನಿ ಅಂದಾನ
ಶಿವನಕೀನ ಶರಣರ ಹೆಚ್ಚ ಶಿವಶರಣ ಆದಿಗೆ
ಶಿವಶರಣ ಆದಿಗೆ ಅಂದಾನೆ ನೀನೆ ಹೋಗಲಿಬೇಕಯ್ಯ
ಬಾರೋ ಬಾರೋ ಹಡದಪ್ಪ ನಾನು ಹೋಗದಿಲ್ಲೇನ
ನೀನೇ ಮುಂದ ಇದ್ದಾರ ನಾನೇ ಹಿಂದ ಬಂದೇನ
ನೀನೇ ಹಿಂದನಾದರ ನಾನು ಮುಂದ ಒಲ್ಲೇನ
ಮಲ್ಲಿಕಾರ್ಜುನ ಮಹಾದೇವ ಏನಂದಾಡುತಾನೇನ
ಬ್ಯಾಡೋ ಬ್ಯಾಡೋ ಸಿದ್ಧರಾಮ ಒಬ್ಬಂವ ಹೋಗಲಿಬೇಕಯ್ಯ
ನಾನು ಹೋಗಬೇಕಾದರೆ ಸಂಗಟ ಗುರುವ ಬೇಕಯ್ಯ
ನನಗ ಜೋಡ ಬೇಕಪ್ಪ ನನಗ ಜತಿಯಾ ಬೇಕಪ್ಪ
ನೀನು ಸಂಗಡಿದ್ದರ ಸೊನ್ನಲಗಿರಿಗೆ ಹೋದೇನ
ಸೊನ್ನಲಗಿರಿಯ ಒಳಗೇನ ನಿನ್ನ ಗುಡಿಯಾ ಕಟ್ಟಸೇನ
ಸೊನ್ನಲಗಿರಿಯ ಒಳಗೇನ ನಿನ್ನ ಮಠಗೋಳು ಕಟ್ಟಸೇನ
ಗುರುವ ಶಿಷ್ಯರು ಕೂಡ್ಯಾರೆ ರಾಯಿಮಾರಗ ಹಿಡದಾರ
ರಾಯಿಮಾರಗ ಹಿಡದಾರೆ ರವ್ವಣಿ ಮಾಡುತಾರೇನ
ಇಳದಲ್ಲಿ ಇಳಿಗಾಳೇನ ಸುಳದಲ್ಲಿ ಸುಳಿಗಾಳೇನ
ಸುಳದಲ್ಲಿ ಸುಳಿಗಾಳೇನ ಗಾಳಿಕ್ಕಿಂತ ಮುಂದೇನ
ಗಾಳಿಕ್ಕಿಂತ ಮುಂದೇನ ಸೊನ್ನಲಪುರದ ಒಳಗೇನ
ಸೊನ್ನಲಪುರದ ಒಳಗೇನ ಸೋಲಾಪುರದ ಒಳಗೇನ
ಸೋಲಾಪುರದೊಳಗೇನ ಕುಂಬಾರ ಓಣಿಯ ಮುಂದೇನ
ಕುಂಬಾರ ಓಣಿ ಮುಂದೇನ ಬಾಳಿ ಅಗಸಿ ಹಿಂದೇನ
ಬಾಳಿ ಅಗಸಿ ಹಿಂದೇನ ಮಲ್ಲಿಕಾರ್ಜುನ ಮಹಾದೇವಗ
ಮಲ್ಲಿಕಾರ್ಜುನ ಮಹಾದೇವಗ ಗುಡಿಯ ಕಟ್ಟುತಾನೇನ
ಗದ್ದುಗಿ ಹಾಕುತಾನೇನ ಗುಡಿಯ ಮುಗಸೂತಾನೇನ
ಗಂಟಿ ಮಾಡುತಾನೇನ ಜಾಗುಟ ಮಾಡುತಾನೇನ
ಮಲ್ಲಿಕಾರ್ಜುನ ಮಹಾದೇವಗ ನಾಗರ ಹೆಡಿಯಾ ಧೂಪರ್ತೆ
ನಾಗರ ಹೆಡಿಯಾ ಧೂಪರ್ತೆ ಎತ್ತಿ ಬೆಳಗುತಾನೇನ
ಮಲ್ಲಿಕಾರ್ಜುನ ಮಹಾದೇವನ ಗುಡಿಯಾ ಮುಂದೇ ಇರುವುತಾನೇನ
ಗುಡಿಯಾ ಹಿಂದ ಸಿದ್ಧರಾಮನ ಮನಿಯಾ ಇರುವುತಾವೇನ
ಮನಿಯಾ ಇರುವುತಾವೇನ ಸಂಸಾರ ಮಾಡತ್ತಿದ್ದಾನ
ಸಂಸಾರ ಮಾಡತ್ತಿದ್ದಾನ ದಂದಿಗಿ ಮಾಡತ್ತಿದ್ದಾನ

ತಾನೇ ಬರಬೇಕಾದ ಗುರುವಿನ ಕರಕೊಂಡು ಬಂದಾರ
ಸಂಗಟ ಗುರುವ ಬಂದಾನ ಮಲ್ಲಿಕಾರ್ಜುನ ಮಹಾದೇವ

ಕೆರಿಯಾ ಒಳಗೆ ಹೋಗ್ಯಾನೆ ಏನ ನೋಡುತಾನೇನ
ಕೆರಿಯಾ ಒಳಗನಲ್ಲಪ್ಪ ಸಿದ್ಧರಾಮು ಬಂದಾನ
ಸಿದ್ಧರಾಮನಲ್ಲೇಳ ಏನಂದಾಡುತ್ತಿದ್ದಾನ
ಬಾರೋ ಬಾರೋ ನನ್ನಪ್ಪ ಒಡ್ಡ ಹಾಕಲಿಬೇಕಯ್ಯ
ಎಷ್ಟು ದುಡದೀರಲ್ಲಪ್ಪ ಅಷ್ಟೇ ದುಡಿಯಲಿಬೇಕಯ್ಯ
ಅಷ್ಟೇ ದುಡದರಲ್ಲಪ್ಪ ನಿಮ್ಮ ಪಗಾರಂದಾನ
ನಿಮ್ಮ ಪಗಾರಲ್ಲಪ್ಪ ಮಣ್ಣ ಗುಂಪಿ ಒಳಗೇನ
ಕೆಲಸ ಮಾಡಲಿ ಬೇಕಪ್ಪ ಮಣ್ಣ ತೋಡಲಿಬೇಕಯ್ಯ
ಬುಟ್ಟಿ ತುಂಬಲಿಬೇಕಪ್ಪ ಒಡ್ಡಿಗ ಹಾಕಲಿಬೇಕಯ್ಯ
ಹೊತ್ತ ಹೋದ ಮ್ಯಾಲೇನ ದಂವತಿ ಬಿಟ್ಟ ಮ್ಯಾಲೇನ
ಕೈಕಾಲ ಮಾರಿ ತೊಳದೇನ ಬಟ್ಟಿ ಹಾಕೊಂಡು ಮ್ಯಾಲೇನ
ತಾಯ್ಯಾರಾಗಿ ಬರಬೇಕ ಮಣ್ಣ ಕುಂಪಿಉ ಕೆದರರೆ
ಮಣ್ಣ ಕುಂಪಿ ಕೆದರಿದರ ನಿಮ್ಮ ಭಕ್ತಿನಂದಾನ
ನೀನಾ ದುಡಿದಿದ ಅಲ್ಲೇ ಕುಡತಾನಂದಾನ
ಅಲ್ಲೇ ಕುಡತಾನಂದಾರ ಕೆರಿಯಾ ಹಾಕುತಾರೇನ
ದುಡದ ಪಗಾರಲ್ಲೇಳ ಮಣ್ಣ ಕುಂಪಿ ಒಳಗೇನ
ಮಣ್ಣ ಕುಂಪಿ ಒಳಗೇನೆ ಪಗಾರ ಕುಡುವುತಾರೇನ
ಭಕ್ತಿ ಇದ್ದಷ್ಟು ಸಿಕ್ಕಾವೇ ಧಿಡವ ಇದ್ದದು ದೊರತಾವ
ಸಿದ್ಧಾರಾಮನಲ್ಲಪ್ಪ ಒಡ್ಡ ಮುಗಸೂತಾನೇನ
ಒಡ್ಡ ಮುಗಸೂತಾನೇನ ಕೆರಿಯಾ ಮುಗುಸೂತಾನೇನ
ಸೊನ್ನಲಗಿರಿಯ ಒಳಗೇನೆ ಸುತ್ತುಮುತ್ತ ಒಡ್ಡೇನ
ಸುತ್ತಮುತ್ತ ಒಡ್ಡೇನ ನಡುವ ಕೆರಿಯಾ ಒಳಗೇನ
ನಡುವ ಕೆರಿಯಾ ಒಳಗೇನ ಪಾತಾಳ ಪಾಯ ಹೊಡದಾರ
ಪಾತಾಳ ಪಾಯ ಹೊಡದಾನೆ ಗುಡಿಯಾ ಕಟ್ಟುತಾನೇನ
ಗುಡಿಯಾ ಕಟ್ಟುತಾನೇನ ವಾಸ ಮಾಡುತಾನೇನ
ವಾಸ ಮಾಡುತಾನೇನ ಸಿದ್ಧರಾಮ ಕುಂತಾನ
ಸಿದ್ಧರಾಮನಲ್ಲೇಳ ಕೆರಿಯಾ ಒಳಗ ಕುಂತಾನ
ಕೆರಿಯಾ ಒಳಗೆ ಕುಂತಾನ ಪೂಜಿ ಮಾಡತಾನೇನ
ಹೂವಿನ ಗಿಡಗೋಳಿಗೆ ಹಾಕ್ಯಾರೆ ಪೂಜಿ ಮಾಡುತಾರೇನ
ಪೂಜಿ ಮಾಡುತಾರೇನ ಕಸಗೋಳು ಹೊಡಿಯುತಾರೇನ
ಕಸಗೋಳು ಹೊಡಿಯುತಾರೇನ ಪೂಜಿ ಮಾಡುತಾರೇನ
ದಾಸೋಗ ಇಡುವುತಾರೇನ ಅನ್ನ ಕ್ಷೇತ್ರ ಮಾಡ್ಯಾರ
ಅನ್ನಕ್ಷೇತ್ರ ಅಲ್ಲಪ್ಪ ಧರ್ಮ ಮಾಡುತಾರೇನ

ಸೊನ್ನಲಪುರದ ಒಳಗೇನ ಜಾತೂರಿ ಮಾಡುತಾರೇನ
ಜಾತುರಿ ಮಾಡುತಾರೇನ ಹೂವ ಹರಿಯುತಾರೇನ

ಹೂವಿನ ಬಗೀಚದೊಳಗೇನ ಹೆಣ್ಣಮಗಳ ಇದ್ದಾಳ
ಹೆಣ್ಣಮಗಳ ಯಾಮನಗೊಂಬಿ ನೀರ ಹಾಕುತಾಳೇನ
ಚಿಕ್ಕ ವಯಾಸ್ಸದಾಗೇನ ಅಲ್ಲೇ ದುಡಿಯುತಾಳೇನ
ಅಲ್ಲೇ ದುಡಿಯುತಾಳೇನ ಅಲ್ಲೇ ಕುಂದ್ರುತಾಳೇನ
ಧರ್ಮರ ಗುಡಿಯ ಒಳಗೇನೆ ತಾನೇ ಇರುವುತಾಳೇನ
ಹೊಸ್ತಲದೊಳಗೇನಲ್ಲಪ್ಪ ತಾನೇ ಇರುವುತಾಳೇನ
ತಾನೇ ಇರುವುತಾಳೇನ ರಾತುರಿ ಹಗಲ ಇದ್ದಾಳ
ಮನಿಯಾಮಾರ ಬಿಟ್ಟಾಳ ತಾನು ತಂದೀನ ಬಿಟ್ಟಾಳ
ಅಣ್ಣ ತಮ್ಮದೇರು ಬಿಟ್ಟಾಳೆ ಏನಂದಾಡುತಾರೇನ
ಹೂವ ಕಾಯುತಾಳೇನ ಮಠವ ಕಾಯುತಾಳೇನ
ಹಗಲ ಹನ್ನೆರಡು ವರ್ಷೇನ ಇರುಳು ಹನ್ನೆರಡು ವರ್ಷೇನ
ಇಪ್ಪತನಾಲ್ಕು ವರ್ಷಪ್ಪ ಅಲ್ಲೇ ಇರುವುತಾಳೇನ
ಒಂದಾನ ಒಂದು ಕಾಲದಲ್ಲೇ ಒಂದಾನ ಒಂದು ದಿನದಲ್ಲೇ
ಒಂದಾನ ಒಂದು ದಿನಮಾನ ಸಿದ್ಧಾರಾಮನಂದಾನ
ಬಾರೋ ಬಾರೋ ತಾಯವ್ವ ನನ್ನ ಮಾತ ಕೇಳವ್ವ
ತಾಯಿನ ಬಿಟ್ಟಿದಿ ಅಂದಾನೆ ತಂದಿನಿ ಬಿಟ್ಟಿದಿ ಅಂದಾನ
ಬಂಧು ಬಿಟ್ಟಿದಿ ಅಂದಾನೆ ಬಳಗ ಬಿಟ್ಟಿದಿ ಅಂದಾನ
ರಾತುರಿ ಹಗಲ ಮಾಡಿದ್ದೆ ಹಗಲ ರಾತುರಿ ಮಾಡಿದ್ದೆ
ಬಾರೋ ಬಾರೋ ಏಯವ್ವ ಸೇವಾ ಮಾಡಿದಿ ಅಂದಾನ
ಸೇವಾ ಮಾಡಿದಿ ಅಂದಾನೆ ಶಾಯವ ಮಾಡಿದಿ ಅಂದಾನ
ನೀರ ಹಾಕಿದಿ ಅಂದಾನ ಗಿಡಗೋಳು ಬೇಸೀದಿ ಅಂದಾನ
ಕೆರಿಯಾ ಒಳಗನಲ್ಲೇಳ ಸಿದ್ಧರಾಮ ಹೇಳ್ಯಾನ
ಬಂಧು ಬಿಟ್ಟದಿ ಅಂದಾನೆ ಬಳಗ ಬಿಟ್ಟಿದಿ ಅಂದಾನ
ಎಷ್ಟು ದುಡದಾರಲ್ಲಪ್ಪ ನಿನ್ನಗ ಏನು ದೊರತಾವ
ನಿನ್ನಗ ಏನು ದೊರತಾವೇ ನಾನೇ ಹೇಳೇನು ಕೇಳವ್ವ
ಇಪ್ಪತ್ತು ವರ್ಷ ದಿನಮಾನ ಭಕ್ತಿ ಮಾಡಿದಿ ಅಂದಾನ
ಇಪ್ಪತ್ತು ವರ್ಷ ದಿನಮಾನ ಭಕ್ತಿ ಮಾಡಿದಿ ಅಂದಾನ
ಕೊಟ್ಟಟು ಉಂಡಿದಿ ಅಂದಾನೆ ದುಡದಟ್ಟು ಮಾಡಿದಿ ಅಂದಾನ
ನೀನು ದುಡದ ಕೂಲೆವ್ವ ನಾನೇ ಕಡುತೀನಿ ಅಂದಾನ
ಏನ ಬೇಡತಿ ಬೇಡವ್ವ ಬೇಡಿದ ಕುಡತೀನಿ ಅಂದಾನ
ನೀನು ಬೇಡಿದಲ್ಲವ್ವ ನಾನೇ ಕುಡತೀನಿ ಅಂದಾನ
ನೀನೆ ಬೇಡಿದಲ್ಲವ್ವ ನಾನೇ ಕುಡತೀನಿ ಅಂದಾನ
ಹೆಣ್ಣುಮಗಳ ಯೌವನಗೊಂಬಿ ಏನಂದಾಡುತಾಳೇನ

ಏನಂದಾಡುತಾಳೇನೆ ಸಿದ್ಧರಾಮ ಕೇಳ್ಯಾನ
ಬಾಯಿ ಮಾತಿಗಲ್ಲಪ್ಪ ನಾನೇ ಬೇಡುದಿಲ್ಲಯ್ಯ
ಭಾಷೆ ಕೊಟ್ಟರಲ್ಲಪ್ಪ ನಾನೇ ಬೇಡೇನಂದಾಳ
ನೀನೇ ಭಾಷಿ ಕೊಟ್ಟಾರೆ ನಾನೇ ಬೇಡೇನಂದಾಳ
ಸಿದ್ಧರಾಮನಂದಾರೆ ತನ್ನ ಮನಸಿಗ ತಿಳಿದಾನ
ಜಾಗಿರ ಬೇಡ್ಯಾಳಂದಾನೆ ರೊಕ್ಕಾ ಬೇಡ್ಯಾಳಂದಾನ
ಹಕ್ಕ ಬೇಡ್ಯಾಳಂದಾನೆ ದಕ್ಕ ಬೇಡ್ಯಾಳಂದಾನ
ರೊಕ್ಕ ಕುಡತೀನಿ ಅಂದಾನೆ ರೂಪಾಯಿ ಕುಡತೀನಿ ಅಂದಾನ
ಬಾರೋ ಬಾರೋ ಏಯವ್ವ ಏನಬೇಡತಿ ಬೇಡವ್ವ
ತಳದ ಮಾನ್ಯದ ಹೊದಾಗ ಅರ್ಧ ಪಾಲ ಕೊಟ್ಟೇನ
ಆಕಳ ಜನ್ನುಗಿ ಕೊಟ್ಟೇನ ಹೋರಿ ಕಂಟಲಿ ಬಿಟ್ಟೇನ
ಗೌಡಕಿ ಪಾಲ ಕೊಟ್ಟೇನೆ ರಾಜಕಿ ನಿನಗ ಬಿಟ್ಟೇನ
ಗೌಡಕಿ ಒಲ್ಲೇನಂದಾಳ ರಾಜಕಿ ಒಲ್ಲೇನಂದಾಳ
ಎಮ್ಮಿ ಒಲ್ಲೇನಂದಾಳೆ ರಾಜಕಿ ಒಲ್ಲೇನಂದಾಳ
ಬಾರೋ ಬಾರೋ ಏಯವ್ವ ಏನ ಬೇಡತಿ ಬೇಡವ್ವ
ನಾನು ಬೇಡಿದಲ್ಲಪ್ಪ ನೀನೇ ಕುಡುವಲಿ ಬೇಕಯ್ಯ
ಬಾರೊ ಬಾರೊ ಏಯವ್ವ ಏನ ಬೇಡತಿ ಬೇಡವ್ವ
ನಾನು ಬೇಡಿದಲ್ಲಪ್ಪ ನೀನೇ ಕುಡುವಲಿ ಬೇಕಯ್ಯ
ಬಾರೊ ಬಾರೊ ಏಯಪ್ಪ ನೀನೇ ಬೇಕೇಳಂದಾಳ
ನೀನೆ ಬೇಕೇಳಂದಾಳೆ ಮದುವಿ ಆದೇನಂದಾಳ
ನೀನೇ ನನ್ನವನಾದಾಗ ಗೌಡಿಕಿ ನಮ್ಮದಾದಾವ
ಗೌಡಕಿ ನಮ್ಮದಿದ್ದಾವೆ ರಾಜಿಕಿ ನಮ್ಮದಿದ್ದಾವ
ನೀನೇ ನನ್ನವನಾದಾಗ ಎಲ್ಲಾ ಗೌಡಕಿ ನಂದೇನ
ಬಾರೋ ಬಾರೋ ಏಯವ್ವ ನಂದೊಂದು ಮಾತ ಕೇಳವ್ವ
ನನ್ನ ತೊಗೊಂಡಲ್ಲವ್ವ ನೀನು ಏನು ಮಾಡಿಗೆ
ನೀನು ಏನು ಮಾಡಿಗೆ ನಾನು ಏನು ಮಾಡಿಲ್ಲ
ನಾನು ಶಿವಭಕ್ತ ಅಂದಿದ್ದ ನೀನು ಬ್ಯಾರೆ ಅಂದಿದ್ದ
ನಂದ ಮತಗೋಳು ಏನವ್ವ ನಿನ್ನ ಮತಗೋಳೇನವ್ವ
ಕೊಟ್ಟನಾದಿಗಲ್ಲೇಳ ಎಂಥಾ ತಪ್ಪನಾದಾವ
ನಾಲಿಗಿ ಕಡಕನಾದೀಗೆ ಯಾಸಿಗಡಕ ನಾದೀಗೆ
ನಿನ್ನ ಗುರುವಿನ ಮುಂದೇನ ನೀನೇ ಹೇಳಿದಿ ಅಂದಾಳ
ಬಾಯಿ ಮಾತ ಬ್ಯಾಡಂತ ಮೊದಲೇ ಹೇಳಿನಿ ಅಂದಾಳ
ಸಿದ್ಧರಾಮನಂದಾರೆ ಒಳ್ಳೆದು ಒಳ್ಳೇದಂದಾರ
ವಚನ ಕೊಟ್ಟೇನಂದಾನ ಬೇಡಿದ ಕುಡತೀನಿ ಅಂದಾನ
ನನ್ನಗ ಲಗ್ಗನಾದರೆ ನೀನು ನನ್ನವನಾದಿಗೆ
ನಾನು ನಿನ್ನವಳಾದೇನ ನೀನು ನನ್ನವನಾದೀಗೆ

ನೀನು ಲಗ್ಗನಾದರೆ ನಾನು ನಿನ್ನವಳಾದೇನ
ನೀನು ನನ್ನವಳಾದೀಗೆ ನನ್ನ ಮನಸಿನ ಮ್ಯಾಲೇನ
ನನ್ನ ಮನಸ್ಸಿಗಲ್ಲೇಳ ನನ್ನಗ ಬಂದುದು ಮ್ಯಾಡೇನ
ಆದುದು ಮಾಡೇನಂದಾನೆ ಬಂದುದು ಮಾಡೇನಂದಾನ
ನಿನ್ನ ಮನಸಿಗ ತಿಳಿದಿದ್ದ ನೀನೆ ಮಾಡಲಿಬೇಕಯ್ಯ
ನಿನ್ನ ಮನಸಿಗ ತಿಳಿದಿದ್ದೆ ನಾನು ನಿನ್ನವಳಾದೇನ
ಒಳ್ಳೆದು ಒಳ್ಳೇದಂದಾನೆ ಸಿದ್ಧರಾಮ ಕೇಳ್ಯಾನ
ಸಿದ್ಧರಾಮ ಕೇಳ್ಯಾನ ಸಂಕ್ರಮಣ ದಿವಸೇನ
ಸಂಕ್ರಮಣ ದಿವಸೇನ ಮುಂಜಾಳಿ ಆರಗಂಟೇನ
ಮುಂಜಾಳಿ ಆರಗಂಟೀಗೆ ಚಾಜ ಮಾಡುತಾರೇನ
ಬೀಗರು ಬರುವುತಾರೇನ ಮದುವಿ ಮಾಡುತಾರೇನ
ಎಣ್ಣೆ ಹಚ್ಚುತಾರೇನ ಅರಿಶಿನ ಹಚ್ಚುತಾರೇನ
ನೀರ ಮಿನಿಯುತಾರೇನ ಸುರಗಿ ಸುತ್ತುತಾರೇನ
ಕಾಲುಂಗರ ಇಡುವುತಾರೇನ ಪಿಲ್ಯಾ ಇಡವುತಾರೇನ
ಮುತ್ತೈದಿ ಬಳಿಯಾ ಹಾಕ್ಯಾರೆ ಮುತ್ತು ತರುವುತಾರೇನ
ತಾಯಿ ಮಕ್ಕಳು ಮಿನದಾರ ಬಟ್ಟಿ ಮಾಡುತಾರೇನ
ಸ್ಯಾಸಿಕಟ್ಟಿ ಮ್ಯಾಲೇನ ಸಿದ್ಧರಾಮ ಹೋದನ
ಸಾಂಬಾಯಿ ಅಲ್ಲೇಳ ಸಿದ್ಧರಾಮನ ಜೋಡಿಗೆ
ಸಿದ್ಧಾರಾಮನ ಜೋಡಿಗೆ ಎಡಕ ಕೂಡುತಾಳೇನ
ಮುಂಜಾನಿ ಏಳನ ಹೋಗ್ಯಾನ ಹದಿನೈದು ನಿಮಿಷದೊಳಗೇನ
ಏಳು ಹದಿನೈದಕಲ್ಲೇಲ ಕರಮಣಿ ಕಟ್ಟುತಾರೇನ
ಕರಮಣಿ ಕಟ್ಟುತಾರೇನ ಅಕ್ಕಿಕಾಳ ಒಗದಾರ
ಅಕ್ಕಿಕಾಳ ಒಗದಾರ ಸ್ಯಾಸಿ ಮುಗಸೂತಾರೇನ
ಹತ್ತು ಮಂದಿನಲ್ಲೇಳ ರೈತರು ಮದುಮಕ್ಕಳಾದರ
ಕಳಸ ಹಿಡಿಯುತಾರೇನ ಮದುಮಕ್ಕಳು ಆಗುತಾರೇನ
ಅಂಗಿ ಕಳಿಯುತಾರೇನ ಕಸಿಅಂಗಿ ಹಾಕುತಾರೇನ
ಅರಿಶಿಣ ಹಚ್ಚುತಾರೇನ ಭಾಸಿಂಗ ಕಟ್ಟುತಾರೇನ
ಕೈಗಿ ಕಂಕಣ ಕಟ್ಯಾರೆ ಮೈಗಿ ಅರಿಶಿಣ ಹಚ್ಯಾರ
ಏಳು ಹದಿನೈದಕಲ್ಲೇಳ ಕರಮಣಿ ಕಟ್ಟುತಾರೇನೆ
ಸಂಜಿತಾನನಲ್ಲಪ್ಪ ಮಡದಿ ಇರುವುತಾಳೇನ
ಸಿದ್ಧರಾಮನ ಸಂಗಟ ಮಡದಿ ಮಾತನಾಡ್ಯಾಳ
ಮಡದಿ ಸಂಗಟಲ್ಲೇಳ ಸಿದ್ಧಾರಾಮ ನಡದಾನ
ಆರು ಘಂಟನಾದವ ಏಳ ಘಂಟಾನಾದವ
ಎಂಟರ ಒಳಗನಲ್ಲೇಳ ಸಿದ್ಧಾರಾಮನಂದಾನ
ಸಿದ್ಧಾರಾಮನಲ್ಲೇಳ ಮದ್ದಿಲಿ ಕುಣಿಯಾ ಹೊಡದಾನ
ಮದ್ದಿಲಿ ಕುಣಿಯಾ ಹೊಡದಾನೆ ಮದ್ದ ಹಾಕುತಾನೇನ

ಗಂಡನ ಮಾತನಲ್ಲೇಳ ಮಡದಿ ಮೀರಲಿ ಬಾರದ
ಮಡದಿ ಮಾತನಲ್ಲೇಳ ಗಂಡ ಮೀರಲಿ ಬಾರದ
ಮದ್ದಿನ ಕುಣಿಯ ಒಳಗೇನ ಮಡದೀನ ಕುಂದ್ರುತಾಳೇನ
ಮೂರ ಕಂಡಗ ಮದ್ದೇನ ಮ್ಯಾಲ ಒಟ್ಟುತಾರೇನ
ಸಂಜಿ ಎಂಟನಾದರ ಮದ್ದು ಒಟ್ಟುತಾರೇನ
ಒಂಬತ್ತರೊಳಗನಲ್ಲೇಳ ಮದ್ದು ಕುಂದ್ರುತಾವೇನ
ಮದ್ದು ಕುಂತ್ರುತಾವೇನ ಮದ್ದು ಬಿಚ್ಚುತಾರೇನ
ಸಿದ್ಧರಾಮನ ಮಡದೇನ ಮದ್ದಿನ ಕುಣಿಯ ಒಳಗೇನ
ಒಂಬತ್ತುವರಿಯನಾದಾಗ ಮದ್ದಿಗಬೆಂಕಿಯ ಕೊಟ್ಟಾರ
ಮದ್ದಿಗ ಕೊಳ್ಳಿಯ ಕೊಟ್ಟಾನೆ ಮದ್ದ ಸುಡುವುತಾವೇನ
ಮದ್ದ ಸುಡುವುತಾವೇನ ಮಡದಿ ಸುಡುವುತಾಳೇನ
ಏಳು ಹದಿನೈದು ನಿಮಿಟಕ ಕರಮಣಿ ಕಟ್ಟುತಾರೇನ
ಸಂಜಿ ಒಂಬತ್ತರತಾನೇನ ಮಡದಿ ಸುಟ್ಟ ಹೋದಳ
ಐದು ನಂದಿಕೋಲೇನ ಯಾರ ಪಾಲಿಗ ಆವೇಳ
ಮಲ್ಲಿಕಾರ್ಜುನ ಮಹಾದೇವಗ ಎರಡ ನಂದಿಕೋಲೇನ
ಸಿದ್ಧರಾಮಗಲ್ಲೇಳ ಎರಡ ನಂದಿಕೋಲೇನ
ಒಂದು ನಂದಿ ಕೋಲೇನ ಹರಿಯ ಜನರ ಓಣ್ಯಾಗ
ಹರಿಯಾಜನರ ಓಣ್ಯಾಗ ನಂದಿಯಾಕೋಲ ಬಿಟ್ಟಾರ
ನಂದಿಯ ಕೋಲನಂದಾರ ಖೂನ ಉಳಿಯುತಾವೇನ
ಖೂನ ಉಳಿಯುತಾವೇನ ಚಾಜ ಬರುವುತಾವೇನಬ
ಸೊನ್ನಲಗಿರಿಯ ಒಳಗೇನ ಐದ ದಿನಮಾನಲ್ಲೇಳ
ಐದ ದಿನಮಾನಲ್ಲೇಳ ನಂದಿಯ ಕೋಲ ಮೆರದಾವ
ನಂದಿಯ ಕೋಲ ಮೆರದಾರ ಜಾತೂರಿ ಆಗುತಾವೇನ
ಸಿದ್ಧಾರಾಮನ ಹಾಡೇನೆ ಇಲ್ಲಿಗ ಮುಗಿಯುತಾವೇನ
ದೇವಿ ಧರ್ಮುರ ಹಾಡೇನ ಇಲ್ಲಿಗ ಒಂದು ಸಂದೇನ
ಇಲ್ಲಿಗ ಒಂದು ಸಂದೇನ ಹಾಡಿದರ ಪದ ಮುಂದೇನ
ಕಳಸವಿಟ್ಟಾರ ಕವಿತ ಕಟ್ಯಾರ ಹೊನ್ನ ಜಗ್ಗನಿ ಗೌಡರೋ
ಬ್ಯಾವರು ಬಂದಾರ ಬನ್ನೀರೆ

## ಶಿವಶರಣೆ ನಿಂಬೆಕ್ಕ

ಗುರುವೆ ನಿಮ್ಮಯ ಪರತರ ಚರಣಕೆ
ಸರಸಿಜಾತಕೆರಗುವೆ ನಾನು
ಸರಸಿಜಾತಕೆರಗುವೆ ನಾನು | ಎನ್ನ
ದುರಿತವ ಪರಿಹರಿಸಯ್ಯ ನೀನು ||೧||

ಧರೆಯೊಳು ನಾನಾ ಯೋನಿಗಳಲ್ಲಿ
ತಿರುಗಿ ತಿರುಗಿ ಬಹು ಬಳಲಿರುವೆನು
ತಿರುಗಿ ತಿರುಗಿ ಬಹು ಬಳಿರುವೆನು | ಎನ್ನ
ತರಳನೆಂದು ಕಾಪಾಡಿನ್ನು || ೨ ||

ಕರುಣ ಸಾಗರನೆಂಬುವ ನಿನ್ನ
ಬಿರುದಿಗಾಗಿ ಕರುಣಿಸು ಎನ್ನ
ಬಿರುದಿಗಾಗಿ ಕರುಣಿಸು ಎನ್ನ | ಎನ್ನ
ದುರುಳತನವ ನೋಡಬ್ಯಾಡಿನ್ನಾ || ೩ ||

ಹಿರಿಯ ನೀನು ಕಿರಿಯ ನಾನು ನಿನ್ನ
ಮರೆಯ ಹೊಕ್ಕ ಬೇಡುವೆ ನಾನು
ಮರೆಯ ಹೊಕ್ಕ ಬೇಡುವೆ ನಾನು | ಎನ್ನ
ಮರೆಯ ಬೇಡ ಗುರು ಹರ ನೀನು || ೪ ||

ಹರನ ಭೂಮಿಯೊಳು ಗುರುವಿನ ರೂಪ
ಧರಿಸಿ ಜಗದಿ ಚರಿಸಯ್ಯ ನೀನು
ಧರಿಸಿ ಜಗದಿ ಚರಿಸಯ್ಯ ನೀನು | ಉ
ದ್ಧರಿಸು ನಂಬಿದ ಭಕ್ತರನು || ೫ ||

ಕಂದನು ಮಾಡಿದ ಕುಂದವ ಚಂದದಿ
ತಂದೆ ಸೈರಿಸುವ ಪಂಥವ ನೀ
ತಂದೆ ಸೈರಿಸು ಪಂಥವ ನೀ | ಎನ್ನ
ಮಂದುಮತಿಯ ತೊಲಗಿಸು ಇನ್ನಾ || ೬ ||

ಹರನಿಗಿಂತ ಬಲು ಹಿರಿಯನೆಂದು ಬಹು
ಪರಿಯಲಿ ನಿನ್ನನು ಹಾಡುವೆನು
ಪರಿಯಲಿ ನಿನ್ನನು ಹಾಡುವೆನು | ನಾ
ವರ ಕೈವಲ್ಯವ ಬೇಡುವೆನು || ೭ ||

ಜಗದೊಳು ನಿನಗಿಂತ ಮಿಗಿಲಾದವರು
ನಿಗಮಾಗಮ ಶಾಸ್ತ್ರಗಳನ್ನು
ನಿಗಮಾಗಮ ಶಾಸ್ತ್ರಗಳನ್ನು | ನಾ
ನಗಿಮುಗದಿ ಪೊಗಳುವೆ ನಿಮ್ಮನ್ನು || ೮ ||

**ವಚನ :**

ಇಂತು ಮೂರು ಲೋಕದಲ್ಲಿ ಗುರುವೆ ಅಧಿಕ್ಯನು. ಗುರುವಿನಿಂದಲೇ ಮುಕ್ತಿಯು. ಗುರುವು ಇಲ್ಲದಂಥ ನರನು ಪರಿಪರಿ ಜನ್ಮಗಳಲ್ಲಿ ತಿರುಗಿ ಬಹು ಕಷ್ಟಕ್ಕೆ ಗುರಿಯಾಗುವನು. ಇದರಿಂದ ಗುರುವಿನ ಪಾದವನ್ನು ಮೊದಲು ನೆನೆದು ಕತೆಯನ್ನು ಹೇಳುತ್ತೇವೆ. ಸಜ್ಜನರು ಒಲಿದು ಕೇಳ್ರಿ.

**ಪದ :**

ನೀಲನೊರೆನೆಂಬುವ ಮೇಲದಿ ಪುರದಿ
ಬಾಲಿ ನಿಂಬೆಕ್ಕನು ತಾನು
ಬಾಲಿ ನಿಂಬೆಕ್ಕನು ತಾನು | ಬಲು
ಶೀಲದೊಳಿದ್ದಳು ಬಹು ತಾನು || ೯ ||

ಏಳು ವರ್ಷದ ಬಾಲಕನಿದ್ದನು
ಬಾಲಿ ನಿಂಬಿಯಕ್ಕನ ಮಗನು
ಬಾಲ ನಿಂಬಿಯಕ್ಕನ ಮಗನು | ತಾ
ಬಲು ಶೀಲದಲ್ಲಿ ಇದ್ದನವನು || ೧೦ ||

ಶರಣೆ ನಿಂಬಿ ತಾ ಶರಣರ ಮನಿಗೆ
ತರುವಳು ಕೂಲಿಯ ನೀರನ್ನು
ತರುವಳು ಕೂಲಿಯ ನೀರನ್ನು | ನಿತ್ಯ
ನೇಮದಿ ನೆನೆವಳು ಶಿವನನ್ನು || ೧೧ ||

ಕೂಲಿ ದನಗಳ ಕಾಯಲಿಕ್ಕೆ ತನ್ನ
ಬಾಲಕನ ಹಚ್ಚಿದಳಿನ್ನು
ಬಾಲಕನ ಹಚ್ಚಿದಳಿನ್ನು | ತಾ
ಪಾಲಿಸುವನು ದರಕರುಗಳನು || ೧೨ ||

**ವಚನ :**

ನೀಲನೂರವೆಂಬ ಗ್ರಾಮದಲ್ಲಿ ನಿಂಬೆಕ್ಕನೆಂಬ ಶಿವಶರಣೆ ಧನ-ಕನಕ-ಪುತ್ರಾದಿ ಭೋಗಗಳನ್ನು ನಂಬದೆ, ಕಾನನದೊಳಗಾದರೋ ಮುಕ್ತಿಗೆ ಮನವಿಟ್ಟು ಬಯಸದೆ ಬಂದ ಬಡತನಕ್ಕೆ ಎಳ್ಳಷ್ಟಾದರು ಚಿಂತಿಸದೆ. ಗುರು-ಲಿಂಗ-ಜಂಗಮ-ದಾಸೋಹವನ್ನೇ ತಾನು ನಿತ್ಯದಲ್ಲಿ ಮಾಡುತ್ತಲೆ. ಶಿವಭಕ್ತರ ಮನಿಗೆ ಕೂಲಿಯ ನೀರನ್ನು ತರುತ್ತ, ತನ್ನ ಏಳು ವರ್ಷದ ಮಗನನ್ನು ಕೂಲಿಯ ದನಗಳನ್ನು ಕಾಯಲಿಕ್ಕೆ ಹಚ್ಚಿ, ಅ ಕಾಯಕದಿಂದ ಜಂಗಮರ ಸೇವೆಯಲ್ಲಿ ತೃಪ್ತಳಾಗಿದ್ದಳು.

**ಪದ :**

ತಾಯಿ ಮಗನು ದುಡಿತಂದ ಕೂಲಿಯಲಿ
ಹಾಯವಾಗಿ ಜಂಗಮರನ್ನು
ಹಾಯವಾಗಿ ಜಂಗಮರನ್ನು | ಸುದ್ದ
ಭಾವದಿಂದ ಉಣಿಸುವಳಿನ್ನು || ೧೩ ||

ಬಂದ ಜಂಗಮರ ಹಿಂದಕೆ ಕಳಿಸಿದೆ
ಚಂದದಿಂದ ತಾ ನೀಡುವಳು
ಚಂದದಿಂದ ತಾ ನೀಡುವಳು | ಮನ
ದೊಂದು ನಿತ್ಯ ದಾಸೋಹವನು || ೧೪ ||

ಬೇಡಿದನ್ನವ ನೀಡುತಲಿದ್ದಳು
ರೂಢಿಯಲ್ಲಿ ಉಪಚಾರವನು
ರೂಢಿಯಲ್ಲಿ ಉಪಚಾರವನು | ನಲಿ
ದಾಡಿ ಮಾಡಿದಳು ತೃಪ್ತಿಯನು || ೧೫ ||

**ವಚನ :**

ನಿಂಬೆಕ್ಕನು ತನ್ನ ಸುಕುಮಾರನು ದುಡಿದು ತಂದ ಹಣದಿಂದಲೇ ಬಂದಂಥ ಜಂಗಮರಿಗೆ ಭಕ್ತಿಮಾಡುತ್ತಿದ್ದಳು. ಗಣಂಗಳು ಎಷ್ಟೋ ಕೂಡಿದ ಹಾಗಾದರೂ ನಿಂಬೆಕ್ಕನ ಅಂಬಲಿಯು ಅಮೃತಕ್ಕಿಂತ ಮಧುರವಾಗಿ ಬಂದಂಥ ಚರಮೂರ್ತಿಗಳು ಆನಂದದಿಂದ ಅವಳನ್ನು ಹರಸುತ್ತಿದ್ದರು.

**ಪದ :**

ಒಂದು ದಿವಸ ಕೈಲಾಸದಿ ಶಿವನು
ಚಂದದಿಂದ ಓಲಗದೊಳಗೆ
ಚಂದದಿಂದ ಓಲಗದೊಳಗೆ | ಆ
ನಂದದಿಂದ ಕುಳಿತಿರಲಾಗಿ || ೧೬ ||

ಓಲಗದೊಳು ಸಿರಿಯಾಳ ಶೆಟ್ಟಿ ತಾ
ನೀಲಕಂಠನೆದುರಿಗೆ ಬೇಗ
ನೀಲಕಂಠನೆದುರಿಗೆ ಬೇಗ | ತಾ
ತಾಂಬಲೆಂಬ ಗರ್ವದೊಳಗೆ || ೧೭ ||

ನನ್ನ ಹಾಗೆ ಮಗನನ್ನು ಕೊಯ್ದು ಶಿವಗೆ
ಉಣಿಸಿದವರು ಯಾರು ಇಹದೊಳಗೆ
ಉಣಿಸಿದವರು ಯಾರು ಇಹದೊಳಗೆ | ಸಾ
ಮಾನ್ಯನಲ್ಲ ನಾ ಜಗದೊಳಗೆ || ೧೮ ||

ಮಾನ್ಯ ನಾನು ಮುಕ್ಕಣ್ಣನ ಸಭೆಯೊಳು
ಎನ್ನನು ಹೋಲುವರ್‍ಯಾರೀಗ
ಎನ್ನನು ಹೋಲುವರ್‍ಯಾರೀಗ | ಬಹು
ಮನ್ನಿಸುವರು ಸರ್ವರು ಎನಗ || ೧೯ ||

ಇಂತು ಸೊಕ್ಕಿ ಮನ ಬಂದ ಹಾಗೆ ತಾ
ಕುಂದದಿ ನುಡಿದನು ಸಭೆಯೊಳಗೆ
ಕುಂದದಿ ನುಡಿದನು ಸಭೆಯೊಳಗೆ | ಬಲು
ಮಂದಮತಿಯ ಮನುಜರ ಹಾಗೆ    || ೧೦ ||

**ವಚನ :**

ಒಂದು ದಿವಸ ಕೈಲಾಸ ನಗರದಲ್ಲಿ ಶಿವನು ಓಲಗದೊಳಗೆ ಪಾರ್ವತಿಯೊಡನೆ ಕುಳಿತಿದ್ದ. ಹರಿ ಬ್ರಹ್ಮ ದೇವೇಂದ್ರ ಮುಂತಾದ ದೇವತೆಗಳು ಕುಳಿತಿರಲು, ವಶಿಷ್ಠ ವಾಮದೇವಾದಿ ಮುನಿಗಳು ಶಿವನಿಗೆ ಸಮಾನರಾದ ಪ್ರಮಥರು ಅನೇಕ ಶರಣರು ನೆರದಿದ್ದರು. ಆಗ ಸಿರಿಯಾಳನು ನುಡಿದಿದ್ದೇನೆಂದರೆ – ನನ್ನ ಹಾಗೆ ಮಗನನ್ನು ಕೊಯ್ದು ಶಿವನಿಗೆ ಉಣಿಸಿ ಕೈಲಾಸ ಸೂರಿಗೊಂಡವರಾರು? ನಾನೇ ಶ್ರೇಷ್ಠನು. ನನ್ನಂಥ ಭಕ್ತಿವಂತರು ಸಭೆಯೊಳಗೆ ಯಾರೂ ಇಲ್ಲವೆಂದು ಮಂದಮತಿಗಳ ಹಾಗೆ ನುಡಿದ ಶಿರಯಾಳನ ಸೊಕ್ಕು ಮುರಿಯಬೇಕೆಂದು ಪರಿಶಿವನು ಯೋಚಿಸಿದನು.

**ಪದ :**

ಸೊಕ್ಕಿಲೆ ನುಡಿದ ಶೆಟ್ಟಿಯ ಸೊಕ್ಕನು
ಮುಕ್ಕಣ್ಣನು ಮುರಿಯಲು ಬೇಗ
ಮುಕ್ಕಣ್ಣನು ಮುರಿಯಲು ಬೇಗ | ತಾ
ಗಕ್ಕನೆ ಕರೆತಂದನು ಆಗ  || ೧೧ ||

ಚರವೇಷ ತಾ ಧರಿಸಿ ಸೊಕ್ಕಿನ
ಸಿರಿಯಾಳನೊಡಗೊಂಡವ ಆಗ
ಸಿರಿಯಾಳನೊಡಗೊಂಡವ ಆಗ | ತಾ
ಧರಿಗಿಳಿದನು ಅರಿಯದ ಹಾಗೆ       || ೧೧ ||

ನಿಂಬಿಯಕ್ಕನ ಮನೆಗೆ ಬಂದರು
ಸಂಭ್ರಮಗೊಳ್ಳುತ ಮನದೊಳಗ
ಸಂಭ್ರಮಗೊಳ್ಳುತ ಮನದೊಳಗ | ಜಗ
ದಾಂಬಿ ಶರಣೆ ನೋಡಿದಳಾಗ       || ೧೨ ||

**ವಚನ :**

ಆಗ ಶಿವನು ಸಿರಿಯಾಳಶೆಟ್ಟಿಯನ್ನು ಕರೆದುಕೊಂಡು ಜಂಗಮ ರೂಪದಿಂದ ಗುರು ಶಿಷ್ಯರಾಗಿ ಭೂಲೋಕಕ್ಕಿಳಿದು ಅಡಿಗಡಿಗೆ ಶಿವ ಶಿವ ಎಂದು ನುಡಿಯುತ್ತ ನಿಂಬೆಕ್ಕನ ಮನೆಗೆ ಬಂದರು. ಆಗ ಶರಣೆ ನಿಂಬೆಕ್ಕನು ಆ ಚರಮೂರ್ತಿಗಳ ಕಂಡು ಮನದಲಿ ಹರುಷಗೊಂಡು ಅವರಿಗೆ ನೀರನ್ನು ಕೊಟ್ಟಳು.

**ಪದ :**

ಶರಣೆ ನಿಂಬಿ ತಾ ಬರದಲಿ ಕಾಣುತ
ಚರಮೂರ್ತಿಯ ಪಾದವ ತೊಳದು
ಚರಮೂರ್ತಿಯ ಪಾದವ ತೊಳದು | ತಾ
ವರಗಿ ನಮಿಸಿದಳು ಮನ ಒಲಿದು || ೧೪ ||

ಆಗ ಕಪಟ ಶಿವ ಬೇಗನೆ ನಂಬಿಗೆ
ರಾಗದಿಂದ ನುಡಿದನು ತಿಳಿದು
ರಾಗದಿಂದ ನುಡಿದನು ತಿಳಿದು | ನಮ
ಗೀಗ ನೀಡು ಅನ್ನವ ತಿಳಿದು || ೧೫ ||

ನಂಬಿ ಬಂದೆನು ಸಾಂಬನ ನೆನೆಯುತ
ನಿಂಬಿಯೆ ನಿನ್ನ ಮನ ಒಲಿದು
ನಿಂಬಿಯೆ ನಿನ್ನ ಮನ ಒಲಿದು | ತುಸು
ಅಂಬಲಿ ನೀಡವ್ವ ನೀ ತಿಳಿದು || ೧೬ ||

**ವಚನ :**

ಬಂದ ಚರಮೂರ್ತಿಗಳ ಪಾದ ತೊಳಿದು, ಗದ್ದಿಗೆಯನ್ನು ಹಾಕಿ, ಕೈಮುಗಿಯಲಾಗಿ ಕಪಟ ಜಂಗನು ಹೇಳುತ್ತಾನೆ. ಹೇ ತಾಯಿ ಈಗ ಮೂರು ದಿವಸ ಹೊಟ್ಟೆಗೆ ಅನ್ನವಿಲ್ಲದೆ ಹಸಿವಿನಿಂದ ಪ್ರಾಣ ಹೋಗಲಿಕ್ಕೆ ಹವಣಿಸುವುದು. ಒಡಲುರಿಯನ್ನು ತಾಳಲಾರದೆ ನಿನ್ನ ಮನಿಗೆ ಬಂದಿದ್ದೇವೆ. ತುರ್ತ ಎಮಗೆ ಊಟ ಮಾಡಿಸು. ಅಂದ ಮಾತಿಗೆ ಶರಣೆ ನಿಂಬೆಕ್ಕನು ಮನದಲ್ಲಿ ಮರಮರನೆ ಮರುಗಿ ಅನ್ನುತ್ತಾಳೇನೆಂದರೆ –

**ಪದ :**

ಅವರ ಮಾತ ಕೇಳಿ ಮಾಡಿದಳಾಗ
ಅವಸರದಲಿ ಅಡಗಿಯನೊಲಿದು
ಅವಸರದಲಿ ಅಡಗಿಯನೊಲಿದು | ಆ
ಶಿವನಿಗೊಂದು ಶಾಂತಿಯು ತಿಳಿದು || ೧೭ ||

ಅಡಗಿ ಮಾಡಿ ಬಹು ಸಡಗತದಿಂದಲಿ
ಮಡಿ ನೀರಿಗೆ ಹೋದಳು ಜಲ್ದಿ
ಮಡಿ ನೀರಿಗೆ ಹೋದಳು ಜಲ್ದಿ | ಆ
ಹುಡುಗ ಬಂದನು ಬಹು ಹಸ್ದು || ೧೮ ||

ತಾಯಿ ಕರೆಯುತ ಒಳಗೆ ಬಂದನು
ಬಾಯಿ ಬಿಡುತ ಬಿಸಲಿಗೆ ಬೆಂದು
ಬಾಯಿ ಬಿಡುತ ಬಿಸಲಿಗೆ ಬೆಂದು | ತಾ
ಆಯಾಸದಿಂದ ಸಣ್ಣವ ಬಂದು || ೧೯ ||

ಮನಿಯೊಳಗೆ ತನ್ನ ಜನನಿಯಿಲ್ಲದೆ
ತನುಜನು ಸಂಕಟದಲಿ ನೊಂದು
ತನುಜನು ಸಂಕಟದಲಿ ನೊಂದು | ತಾ
ನಿಂತನು ಪರಿಪರಿಯಲ್ಲಿ ಇಂದು || ೨೦ ||

**ವಚನ :**

ಆಗ ಶಿವಶರಣೆ ನಿಂಬೆಕ್ಕನು. ಶರಣರು ಹಸಿದುಗೊಂಡು ಬಂದಿದ್ದಾರೆಂದು ತಡವಿಲ್ಲದೇ ಅಡಗಿಯನ್ನು ಮಾಡತೊಡಗಿದಳು. ಅಡಗಿಯಾದ ಮೇಲೆ ಶರಣೆ ನಿಂಬೆಕ್ಕನು ಕೊಡ ಹೊತ್ತುಕೊಂಡು ಮಡಿ ನೀರಿಗೆ ಹೋದಳು. ಆಗ ಹುಡುಗನು ತಾಯಿ ತಾಯಿ ಎಂದು ಮನಿಗೆ ಬಂದು ತನ್ನ ತಾಯಿ ಇಲ್ಲದ್ದನ್ನು ನೋಡಿ ನೀರು ಕುಡಿದು ಒಡಿಯರಿಗೆ ಮಾಡಿದ ಮೀಸಲಡಿಗೆಯೆಂಬುವುದನ್ನು ತಿಳಿಯದೆ ಕಡುಬು ಕಜ್ಜಾಯವನ್ನು ಕೈಯಲ್ಲಿ ಹಿಡಿದು ತಿನ್ನುತ್ತಾ ಕುಂತದ್ದನ್ನು ಕೊಡ ಹೊತ್ತುಕೊಂಡು ಬರುವ ನಿಂಬೆಕ್ಕನು ನೋಡಿ –

**ಪದ :**

ಒಂದು ವನಿಕೆಯನು ತಂದು ಹೊಡೆದಳು
ಕೊಂದುಬಿಟ್ಟಳು ತನ್ನ ಮಗನನ್ನು
ಕೊಂದುಬಿಟ್ಟಳು ತನ್ನ ಮಗನನನ್ನು | ಎಳೆ
ತಂದಳು ಕಂದನ ಹೆಣವನ್ನು || ೨೧ ||

ನಿಲ್ಲದೆ ಗ್ವಾದಲಿಗೆಳೆದು ಮುಚ್ಚಿದಳು
ಹುಲ್ಲಿನಿಂದ ಮರಿ ಮಾಡಿದಳು
ಹುಲ್ಲಿನಿಂದ ಮರಿ ಮಾಡಿದಳು | ಇದ
ನೆಲ್ಲ ಮುಸುಕಿನೊಳು ನೋಡಿದರು || ೨೨ ||

ನೋಡಿ ಮನದಿ ಭಯಗೂಡಿ ಶೆಟ್ಟಿಗೆ
ಗಾಡದಿ ತೋರಿದ ಶಂಕರನು
ಗಾಡದಿ ತೋರಿದ ಶಂಕರನು | ಮತಿ
ಗೇಡಿ ಶೆಟ್ಟಿ ಬೆರಗಾದನ || ೨೨ ||

**ವಚನ :**

ಆಗ ನಿಂಬೆಕ್ಕನು ಕಂದನೆಂಬ ಕಕ್ಕುಲತೆಯಿಲ್ಲದೆ ಮನೆ ಹೊಕ್ಕ ತುಡುಗ ನಾಯಿ ಬಡಿದಂತೆ ಬಡಿದಳು. ಹುಡುಗನ ಬಾಯಿಯೊಳಗಿಂದ ಅನ್ನವು ಹೊರಬಿದ್ದು ಘೋರ ಕೊಳ್ಳದಂತೆ ರಕ್ತವು ಚಿಮ್ಮುತ್ತ ದಮ್ಮು ಹತ್ತಿ ಅಳ್ಳಿ ಬಡಕೊಳ್ಳುತ್ತ ಹಾಗೇ ಬಿಕ್ಕಿ ಪ್ರಾಣ ಬಿಡುವ ಕೂಸಿನ ತಲೆಯ ಮೇಲೆ ಆ ನಿಷ್ಠುರಳಾದಂತಾ ತಾಯಿಯು ಅದೇ ಒನಕೆಯಿಂದ ಹೊಡೆದು ಬಡದು ಎಳತಂದು ಗ್ವಾದಲ್ಲಿಯಲ್ಲಿ ಹಾಕಿ ಮೇಲೆ ಹುಲ್ಲು ಮುಚ್ಚಿದಳು. ಇದನ್ನು ಕಂಡ ಸಿರಿಯಾಳ ಶೆಟ್ಟಿಗೆ ಅನ್ನುತ್ತಾಳೇನೆಂದರೆ –

**ಪದ :**

ಕೆಟ್ಟ ನಾಯಿ ಕಾಲಿಟ್ಟು ಮನಿಯ ಮುಡ
ಚಟ್ಟು ಮಾಡಿಬಿಟ್ಟಿತೋ ಎಂದು
ಚಟ್ಟು ಮಾಡಿಬಿಟ್ಟಿತೋ ಎಂದು | ತಾ
ತಟ್ಟನೆ ಸಾರಿಸಿದಳು ಎಂದು || ೩೪ ||

ದಿಟ್ಟ ಶರಣ ಮಡಿಯುಟ್ಟ ಮಾಡಿದಳು
ತಟ್ಟನೆ ಹೊಸ ಅಡಿಗಿಯನ್ನು
ತಟ್ಟನೆ ಹೊಸ ಅಡಿಗಿಯನ್ನು | ಮಡಿ
ಯುಟ್ಟು ಬಹಳ ಮನಸಿಗೆ ತಂದು || ೩೫ ||

ಅಡಿಗೆಮಾಡಿ ಬಹು ಸಡಗರದಿಂದಲಿ
ಒಡಿಯರನೆಬ್ಬಿಸಿ ಕರತಂದು
ಒಡಿಯರನೆಬ್ಬಿಸಿ ಕರತಂದು | ತಾ
ಎಡಿಯಮಾಡಿ ನಮಿಸಿದಳಂದು || ೩೬ ||

**ವಚನ :**

ಆಗ ನಿಂಬೆಕ್ಕನು ಮನಿ ಸಾರಿಸಿ, ಮೈ ತೊಳೆದುಕೊಂಡು, ಭಕ್ತಿಯಿಂದ ಶರಣುಮಾಡಿ. ಕೈ ಜೋಡಿಸಿ ನಿಂತಳು.

**ಪದ :**

ಶರಣು ಮಾಡುವ ಶರಣೆಯ ನೋಡಿ
ಹರನು ಹೇಳತಾನು ಮನಒಲಿದು
ಹರನು ಹೇಳತಾನು ಮನಒಲಿದು | ನೀ
ಅರಿದು ತಾರ ಕಂದನ ಒಲಿದು || ೩೭ ||

ಧರಿಯೊಳು ಎಂಥ ಮರಗುಟಗೇಡಿ ನೀ
ತರುಳನನ್ನು ಕರೆಯುದ ಮರತಿ
ತರುಳನನ್ನು ಕರೆಯುವ ಮರತಿ | ನೀ
ಅರಿದುಣಿಸುವಿ ನಮ್ಮನು ಕರೆದು || ೩೮ ||

ತಾಯಿ ತಾಯಿಯೆಂದು ಒಬ್ಬ ಬಾಲಕನು
ಬಾಯಿ ಬಿಡುತ ಕೂಗಿದ ಬಂದು
ಬಾಯಿ ಬಿಡುತ ಕೂಗಿದ ಬಂದು | ಆ
ಯಾಸದಿಂದ ಹುಡಿಕಿದನೆಂದು || ೩೯ ||

ನಿದ್ದಿಗಣ್ಣಿಲೆ ಮುದ್ದಬಾಲನ
ಶಬ್ದ ಕೇಳಿದೆವು ಮೈಮರೆದು

ಶಬ್ದ ಕೇಳಿದೆವು ಮೈಮರೆದು | ನೀ
ಸದ್ಯಕೆ ಕರಿ ಬರುವನು ಒಲಿದು || ೪೦ ||

ಬಂದ ಜಂಗಮರ ಪಂಕ್ತಿಗೆ ನಿನ್ನ
ಕಂದನ ಬಿಡುವರೆ ನೋಡಿನ್ನು
ಕಂದನ ಬಿಡುವರೆ ನೋಡಿನ್ನು | ನಾವು
ಕಂದನ ಬಿಟ್ಟು ಹೆಂಗ ಉಣ್ಣುವುದು || ೪೧ ||

**ವಚನ :**

ಹೇ ತಾಯಿ ನಾವು ಮಲಗಿದಾಗ, ಯಾರೋ ಒಬ್ಬ ಬಾಲಕ ಬಂದು, ಅವ್ವಾ ಎಂದು ನಿನ್ನನ್ನು ಕರೆದು ಹಾಗಾಯಿತು. ಬಹಳಮಾಡಿ ಆ ಹುಡುಗ ನಿನ್ನ ಮಗನಿರಬಹುದು. ಯಾಕಂದರೆ ಇಂದು ನಿನ್ನ ಮನಿಗೆ ಬಂದಿದ್ದೇವೆ. ಇಂತಾ ದಿವಸದಲ್ಲಿ ನಿನ್ನ ಮಗನನ್ನು ಬಿಟ್ಟು ಹೇಗೆ ಉಂಬೋಣ. ಅದಕ್ಕೆ ಅವನನ್ನು ಊಟಕ್ಕೆ ಕುಳ್ಳಿರಿಸೆಂದು ಹೇಳಿದರು.

**ಪದ :**

ಅಂದ ಮಾತ ಕೇಳಿ ನಿಂಬಿಯು ತಾ
ಕುಂದದೆ ಶಿವ ಈತನು ಎನುತ
ಕುಂದದೆ ಶಿವ ಈತನು ಎನುತ | ಮನ
ಗುಂದದೇ ಹೇಳಿದಳು ಕೋಪಿಸುತ || ೪೨ ||

ಬಡಿವಾರದ ಸಿರಿಯಾಳ ಅಲ್ಲ ನಾನು
ಮಡಿದ ಮಗನ ಕರಿಲಿಕ್ಕೆನುತ
ಮಡಿದ ಮಗನ ಕರಿಲಿಕ್ಕೆನುತ | ಬಿಡು
ಸುಡುಗಾಟದ ಮಾತುಗಳತ್ತ || ೪೩ ||

ಬಂದಿಸಲಿಕೆ ನಿನ್ನ ಹಂಗಿನೊಳಿರುವಂಥ
ಚಾಂಗಳೆಯು ನಾನಲ್ಲ ಪೂರ್ತ
ಚಾಂಗಳೆಯು ನಾನಲ್ಲ ಪೂರ್ತ | ನೀ
ತಿಳಿದುಕೋ ಬೇಗನೆ ಇದ ತುರ್ತಾ || ೪೪ ||

## ಕೋಳೂರ ಕೊಡಗೂಸು

ಇಂದು ಶೇಖರಗೆ ಒಂದೆ ಮನದಿ ನಾ
ವಂದಿಸಿ ಕರಗಳ ಮುಗಿಯುವೆನು

ವಂದಿಸಿ ಕರಗಳ ಮುಗಿಯುವೆನು | ನಾ
ಶ್ರೀ ಅಂಬೆಯ ಪಾದಕೆ ಎರಗುವೆನು || ೧ ||

ಆರುಮುಗದೇವ ವರ ವೀರೇಶಗ
ಪರತರ ಕರಿಮುಖದೇವನಿಗೆ
ಪರತರ ಕರಿಮುಖದೇವನಿಗೆ | ಗುರು
ಎರಗುವೆನು ಗುರು ಪ್ರಮಥರಿಗೆ || ೨ ||

ಬುವನದಲಿ ಶಿವಭಕ್ತಿ ಬೆಳೆಸಲು
ಅವತರಿಸಿದ ಶ್ರೀ ಬಸವೇಶ
ಅವತರಿಸಿದ ಶ್ರೀ ಬಸವೇಶ | ನೀ
ನಮ್ಮನು ಸಲಹು ಸದ್ಗುಣಕೋಶ || ೩ ||

ಶಾರದಿ ನೀನು ಪೂರ ಕರುಣದಿ
ಪೋರನ ಕಾಯೋ ಪ್ರೀತಿಯಲಿ
ಪೋರನ ಕಾಯೋ ಪ್ರೀತಿಯಲಿ | ನಿಮ್ಮ
ಚರಣಕೆ ಎರಗುವೆ ಹರುಷದಲಿ || ೪ ||

ದೇಶದೊಳಗ ಕೋಳೂರ ವಾಸನು
ಈಶಭಕ್ತ ಶಿವದೇವ ತಾನು
ಈಶಭಕ್ತ ಶಿವದೇವ ತಾನು | ವರ
ಕಲ್ಲೇಶಗ ಪಾಲು ಒಯ್ಯುವನು || ೫ ||

ಒಂದು ದಿವಸ ಶಿವದೇವ ಕಾರ್ಯಕೆ
ಒಂದೂರಿಗೆ ತಾನು ಹೋಗುತ್ತ
ಒಂದೂರಿಗೆ ತಾನು ಹೋಗುತ್ತ | ತನ್ನ
ಕಂದನ ಕರದು ಹೇಳುತ್ತ || ೬ ||

ಬಾಲೆ ಕೇಳು ವರ ನೀಲಕಂಠಗ
ಹಾಲನೊಯ್ಯುವದು ಭಕ್ತಿಯಲಿ
ಹಾಲನೊಯ್ಯುವದು ಭಕ್ತಿಯಲಿ | ನಮ
ನಿತ್ಯ ನಿಯಮನು ನಡೆಸುತಲಿ || ೭ ||

## ಹಾಯಲಿಂಗಮ್ಮನ ವೃತ್ತಾಂತ

ಶಿವನೆ ನಮ್ಮಯಾ ದ್ಯಾವರು ಬಂದರ ಬನ್ನೀರೆ
ಸ್ವಾಮಿ ನಮ್ಮಯ ದ್ಯಾವರು ಬಂದಾರು ಬನ್ನೀರೆ
ಮಾರಗ ಮಾರಗಂದಾರ ಯಾವಲಿ ಇರುವುತಾವೇನ

ಏನಮ್ಮ ದೇವರ ಮಾರಗ ಎಕಚಿಂತಿಯಾ ಊರಾಗ
ಎಕಚಿಂತಿಯಾ ಊರಾಗೆ ಹತ್ತುರಿಗೆಂಬ ಅರಮನೆ
ಹತ್ತರಗಿ ಎಂಬೋ ಅರಮನೆ ಹೈಯಳೆಂಬ ಗುರುಮನೆ
ಹಾಯಲಿಂಗಮ್ಮನಲ್ಲೇಳ ಎಕಚಿಂತಿಯ ದೇಸಾಯನ
ಎಕಚಿಂತಿಯ ದೇಸಾಯನ ಮನಿಗಿ ಹಾಯಲಿಂಗಮ್ಮನ ಕೊಟ್ಟಾರ
ನಾಗರಪಂಚಮಿ ಮುಂದೇನೆ ದೇಸಾಯಿ ತಯ್ಯಾರಾದನ
ದೇಸಾಯಿ ತಯ್ಯಾರಾದನೆ ಹೊತ್ತೇರಿ ಮುಂಜಾಳಿ ಎದ್ದಾರ
ಜಾಮ ಜಳಕವ ಮಾಡ್ಯಾನೆ ನೇಮ ನಿಗತಿ ಮಾಡ್ಯಾನ
ಸಣ್ಣನೆ ಸುರದುಟ್ಟಾನೆ ಬಣ್ಣನೆ ಬಿಗಿದುಟ್ಟಾನ
ಉಂಡಾನೆ ಬಾಳುಟ್ಟಾನೆ ಬಾಯಿಲಿ ಸೀತಾಳ ಉಗಳ್ಯಾನ
ನಂದಿನ ಬಯಲಿಗ ಕಟ್ಯಾನೆ ಮಗ್ಗಿಯಮುಟ್ಟ ಬಿಗದಾನ
ಗೆಜ್ಜಿಲ್ಯಾವಳಿ ಕಟ್ಯಾನೆ ಮೂಗಿಗ ಮುಗದಾಣಿ ಹಾಕ್ಯಾನ
ಎಕಚಿಂತಿಯ ದೇಸಾಯಿನ ಮನಿಯಾಗ ಬುತ್ತಿ ಕಟ್ಟುತಾರೇನ
ಬುತ್ತಿ ತರವುತಾರೇನೆ ಎತ್ತಿನ ಮ್ಯಾಲ ಹಾಕ್ಯಾರ
ಅಲ್ಯಾನ ಇಲ್ಯಾನೇನೆ ಊರ ಧಾಟಿ ಬಂದಾನ
ಊರ ಧಾಟಿ ಬಂದಾನೆ ಎತ್ತಿನ ಮ್ಯಾಲ ಹಾಯ್ದನ
ಕೋಳೂರ ಮ್ಯಾಲ ಹಾಯ್ದನೆ ಶಹಾಪೂರ ಮ್ಯಾಲೆ ಬಂದಾನ
ಮರ್ತ್ಯದ ಮೇಲ ಹಾಯ್ದನೆ ಮಾವನೂರ ಮ್ಯಾಲೆ ಹಾಯ್ದನ
ಎಕಚಿಂತಿ ದೇಸಾಯನೆ ಮರ್ತ್ಯಕ ಹೋಗುತಾನೇನ
ಸೊನ್ನದ ಭೂಮ್ಯಾಗ ವೈದಾರೆ ಹಂಗುರಗಿ ಎಂಬ ಅರಮನೆ
ಹಂಗುರಗಿ ಎಂಬ ಅರಮನೆ ಗೌಡರ ಮನಿಗ ಬಂದಾನ
ಹಂಗುರಗಿ ಗೌಡರ ಮನಿಯಾಗ ಅಂಗಳದೊಳಗ ನಿಂತಾನ
ಎತ್ತು ಕಟ್ಟುತಾರೇನೆ ಬುತ್ತಿ ಇಳುವುತಾರೇನ
ಮಗ್ಗಿಯ ಮುಟ್ಟ ಬಿಚ್ಯಾರ ಗೆಜ್ಜಿಯಲ್ಯಾವಳಿ ತಗದಾರ
ಹಾಯಲಿಂಗಮ್ಮನು ಬಂದಾಳೆ ಗಿಂಡೀಲಿ ನೀರ ಹಿಡದಾಳ
ಗಿಂಡಲಿ ನೀರ ಹಿಡದಾಳ ಮಾವಗ ನೀರ ಕೊಟ್ಟಾಳ
ಎಕಚಿಂತಿ ದೇಸಾಯರು ಲ್ಯಾಯದ ಪಡಸಾಲಿ ಒಳಗೇನ
ಲ್ಯಾಯದ ಪಡಸಾಲಿ ಒಳಗೇನ ಕುಂದಲ ಹಚ್ಚಿದ ಚೌಕೇನ
ಕುಂದಲ ಹಚ್ಚಿದ ಚೌಕಿಯ ಮ್ಯಾಲ ತಾವಂದು ಮೂರತಿ ಆದಾನ
ಏನಮ್ಮ ಗುರುವಿನ ಮಾರಗ ಎಕಚಿಂತಿ ದೇಸಾಯನೆ
ಎಕಚಿಂತೆ  ದೇಸಾಯನೆ ಹೊತ್ತಾನೆ ಗಮನಾದವ
ಉಂಡಾರೆ ಬಾಳುಟ್ಟಾರೆ ಮಲ್ಲನಮನಗೂತಾರೇನ
ಹಾಯಲಿಂಗಮ್ಮನಲ್ಲೇಳ ಅಣ್ಣದೇರು ತಮ್ಮದೇರ ಹೇಳ್ಯಾರ
ತಾಯಿ ತಂದಿ ಹೇಳ್ಯಾರ ನಾಳಿಗ ಹೋಗಲಿಬೇಕವ್ವ
ಬುತ್ತಿ ತಂದಾರಂದಾನೆ ಎತ್ತ ಬಂದಾವಂದಾರ
ಹಂಗುರಿಗಿ ಗೌಡರಮಗಳ ಸಿಂಗಾರ ಮಾಡುತಾರೇನಯ್ಯ

ಹೊತ್ತೇರಿ ಮುಂಜಾನಿ ಎದ್ದಾರೆ ಹಾಯಲಿಂಗಮ್ಮಗ ಹೇಳ್ಯಾರ
ಬಾರ ಬಾರ ನಿಂಗಮ್ಮ ಮಂಡಿ ಎರಿತೇವಂದಾರ
ಮಂಡಿ ಎರಿತೇವಂದಾರ ಜಳಕ ಮಾಡಲೀಬೇಕವ್ವ
ಜಳಕ ಮಾಡುತಾಳೇನೆ ಗಚ್ಚಿನ ಬಚ್ಚಲಕ ಹೋಗ್ಯಾಳ
ಹೆಚ್ಚಿನ ಜಳಕ ಮಾಡ್ಯಾಳೆ ಮಡಿ ಕಳದ ಮಡಿ ಉಟ್ಟಾಳ
ಮಡಿ ಕಳದ ಮಡಿ ಉಟ್ಟಾಳೆ ಹಣಿಯಲಿ ಕಂಕುಮವಿಟ್ಟಾಳ
ಹಲ್ಲಿಗ ಜಾಚೇಲಿ ಹಚ್ಚ್ಯಾಳೆ ಉಂಡಾಳೆ ಬಾಳುಟ್ಟಾಳ
ಎಕಚಿಂತಿ ದೇಸಾಯರು ತಯ್ಯಾರಾಗುತಾರೇನ
ನಂದಿ ಬಯಲಿಗ ಹಿಡದಾರ ಮಗ್ಗಿಮುಟ್ಟ ಬಿಗದಾರ
ಮಗ್ಗಿಮುಟ್ಟ ಬಿಗದಾರೆ ಕುತನಿಜೂಲ ಹಾಕ್ಯಾರ
ಗೆಜ್ಜಿಲ್ಯಾವಳಿ ಕಟ್ಯಾರೆ ಕೊಂಬಿಗ ಕೊಂಬಣಸ ಹಾಕ್ಯಾರ
ಕಾಲಿಗ ಲಿಂಗ ಕಟ್ಯಾರ ಕೋಡಿಗ ಲಿಂಗ ಕಟ್ಯಾರ
ಕೋಡಿಗ ಲಿಂಗ ಕಟ್ಯಾರೆ ಬುತ್ತಿಯ ತಂದು ಹೇರ್ಯಾರ
ಎಕಚಿಂತಿಯ ದೇಸಾಯಿನೆ ಎತ್ತು ಬಯಲಿಗೆ ಬಿಟ್ಟಾರ
ಹಂಗುರಗಿಯ ಗೌಡನ ಮಗಳು ಹಾಯಲಿಂಗಮ್ಮನ ನಮ್ಮಯ್ಯಾ
ಉಡಿಯಕ್ಕಿ ಹಾಕುತಾರೇನ ದೇವರ ಜಗುಲಿಗ ಹೋಗ್ಯಾಳ
ದೇವರ ಜಗುಲಿಗ ಹೋಗ್ಯಾಳೆ ಹಿರಿಯರಿಗೆ ಹ್ಯಾಂಗ ನಡಸೀಗೆ
ಹಿರಿಯರಿಗ ಹ್ಯಾಂಗ ನಡಸೀಗೆ ಕಿರಿಯರಿಗ ಹಾಂಗ ನಡಸಯ್ಯಾ
ತಾಯಿ ಪಾದಕ ಎರಗ್ಯಾಳ ತಂದಿಯ ಪಾದಕ ಎರಗ್ಯಾಳ
ಮಂಡಿಲಿ ಹಸ್ತ ಇಟ್ಟಾರೆ ಹೋಗಿ ಬಾರಂತ ಹೇಳ್ಯಾರ
ಆಶೀರ್ವಾದ ಕೊಟ್ಟಾರೆ ಆಶೀರೋಜನ ಮಾಡ್ಯಾರ
ಅತ್ತಿನಾದುನಿದೇರಪ್ಪ ಕಾಲಿಗಿ ಬೀಳುತಾರೇನ
ಅತ್ತಿಯ ಮನಿಯ ಸೊಸ್ತೇರ ತೌರಮನಿಯ ಹೆಣ್ಣುಮಕ್ಕಾಳ
ತೌರಮನಿಯ ಹೆಣ್ಣಮಕ್ಕಳ ಉಡಿಯಕ್ಕಿ ಹಾಕುತಾರೇನ
ಹಾಯನಿಂಗಮ್ಮಗಲ್ಲೇಳ ಉಡಿಯಕ್ಕಿ ತುಂಬುತಾರೇನ
ಅತ್ತಿಯ ಮನಿಯ ಸೊಸ್ತೇರ ತೌರಮನಿಯ ಹೆಣ್ಣುಮಕ್ಕಾಳ
ರೈತರಾಣೆರ ಮಕ್ಕಾಳೇ ಅಕ್ಕಾನ ಕಳವುತ ಬಂದಾರ
ಹಂಗುರಗಿಯ ಗೌಡರ ಮಗಳು ಹಾಯನಿಂಗಮ್ಮನಂದರ
ಹಾಯ ನಿಂಗಮ್ಮನಲ್ಲೇಳ ಬೆನ್ನತ್ತಿ ಬರುತಾರೇನ
ಬೆನ್ನತ್ತಿ ಬರುತಾರೇನ ಅಗಸಿಯ ಒಳಗೇ ನಿಂತಾರ
ಊರ ಸುತ್ತಿವನ ಬಾಲೇನ ಊರ ಮುಂದಿನವನ ಪಾದೇನ
ಊರ ಮುಂದಿವರ ಪಾದೇನ ಬಾಲಹಣಮನ ಗುಡಿಯೇನ
ಬಾಲ ಹಣವನ ಗುಡಿಯಾಗೆ ಹಾಯಲಿಂಗಮ್ಮ ಹೋದಾಳ
ಹಾಯಲಿಂಗಮ್ಮ ಹೋದರೆ ಪಾದಕ ಹೊಂದುತಾರೇನ
ಹಿರಿಯರಿಗೆ ಹ್ಯಾಂಗ ನಡಸೀಗ ಕಿರಿಯರಿಗೆ ಹಂಗೆ ನಡಸಯ್ಯ
ಹಾಯಲಿಂಗಮ್ಮನಲ್ಲೇಳ ಹೊಂದುಸಿ ಕೈಯ ಮುಗದಾಳ

ಹೊಂದಿಸಿ ಕೈಯ ಮುಗದಾಳೆ ಹಿಂದ ಸರದ ಇಳದಾಳ
ಅಗಸೀಯ ಒಳಗ ನಿಂತಾಳ ರೈತರಾಣ್ಯಾರ ಮಕ್ಕಾಳ
ಅಣ್ಣನ ಮಡದಿ ಬಂದಾಳೆ ತಮ್ಮನ ಮಡದಿ ಬಂದಾಳ
ಅತ್ತಿಯ ಮನಿಯ ಸೊಸ್ತೆರ ತೌರಮನಿಯ ಹೆಣ್ಣಮಕ್ಕಳ
ರೈತರಾಣ್ಯಾರ ಮಕ್ಕಳೆ ವಾರಗಿ ವಾರಿಗಿ ಗೆಳೆತೇರ
ಸರ್ವರು ಎಲ್ಲರೂ ಕೂಡ್ಯಾರೆ ಲಿಂಗಮ್ಮನ ಪಾದ ತೊಳದಾರ
ಲಿಂಗಮ್ಮನ ಪಾದ ತೊಳದಾರೆ ಪಾದಕ ಹೊಂದುತಾರೇನ
ಹಾಯಲಿಂಗಮ್ಮನಲ್ಲೇಳ ಮಂಡೀಲಿ ಹಸ್ತ ಇಟ್ಟಾಳ
ಹಿರಿಯರಿಗ ಹ್ಯಾಂಗ ನಡಸೀಗೆ ಕಿರಿಯರಿಗೆ ಹಂಗೆ ನಡಸಯ್ಯ
ಎಕಚಿಂತಿಯ ದೇಸಾಯರೋ ಎತ್ತಾ ಹೊಡಿಯುತ್ತಿದ್ದಾರ
ಹಾಯಲಿಂಗಮ್ಮನಲ್ಲೇಳ ಅಗಸಿಯ ಹೊರಗೆ ಬಂದಾಳ
ಊರ ಮುಂದ ಧಾರೇನೆ ರಾಯಿಮಾರಗ ಹಿಡದಾಳ
ರಾಯಿಮಾರಗ ಹಿಡಿದಾಳೆ ನಿಂಬಿಯ ಭಾಂಯಿ ಮುಂದೇನ
ನಿಂಬಿಯ ಭಾಂಯಿ ಮುಂದೇನೆ ಹೊಂದಿಸಿ ಕೈಯ ಮುಗದಾಳ
ಅರಿಯದವರಿಗಲ್ಲೇನ ಕರಿಯಾಕಲ್ಲನಾದೇನ
ನಮ್ಮಗೊರವಿನ ಕಲ್ಲೇನೆ ಭಂಡಾರ ಹಚ್ಚಿದ ಕಲ್ಲೇನ
ಭಂಡಾರ ಹಚ್ಚಿದ ಕಲ್ಲೇನ ಎಣ್ಣಿ ಮದ್ದಣ ಕಲ್ಲೇನ
ನಿಂಬಿಯ ಬಾಂಯಿ ಮುಂದೇನೆ ಹೊಂದಿಸಿ ಕೈಯ ಮುಗದಾಳ
ಹಿರಿಯರಿಗೆ ಹ್ಯಾಂಗ ನಡೆಸೀಗೆ ಕಿರಿಯರಿಗೆ ಹಂಗೇ ನಡಸಯ್ಯ
ನಿಂಬಿಯಾ ಭಾಂಯನ ಲಿಂಗಣ್ಣ ನಿಪ್ಯಾದಕಲ್ಲ ಆದೆಣ್ಣ
ನಿಪ್ಯಾದಕಲ್ಲ ಆದೇನೆ ಲಿಂಬಿಯ ಭಾಂಯಿಗ ನಿಜವಣ್ಣ
ನಿಂಬಿಯ ಬಾಂಯಿಗ ನಿಜವಣ್ಣ ಹಂಗುರಿಗಿ ನಿಂಗಮ್ಮ ನಿಜವಣ್ಣಾ
ಹಂಗುರಗಿ ನಿಂಗಮ್ಮ ನಿಜವಣ್ಣ ಜಗುಲಿ ಗುಡ್ಡದೊಳಗೇನೆ
ಜಗುಲಿ ಗುಡ್ಡದೊಳಗೇನೆ ಅಕ್ಕಮ್ಮಾಯಿ ತಮ್ಮನ
ಅಕ್ಕಮ್ಮಾಯಿ ತಮ್ಮನೆ ಚಿಕ್ಕ ಬೀರಣ ದೇವರ
ಹಿರಿಯರಿಗ ಹ್ಯಾಂಗ ನಡೆಸೀಗ ಕಿರಿಯರಿಗೆ ಹಂಗೆ ನಡಸಯ್ಯಾ
ಹೊಂದುಸಿ ಕೈಯ ಮುಗದಾಳೆ ಮಂದಕ ಹೋಗುತಾಳೇನ
ಊರ ಧಾಟಿ ಬಂದಾಳೆ ಎಕಚಿಂತಿ ದೇಸಾಯರ
ಏಕಚಿಂತಿಯ ದೇಸಾಯರೆ ಎತ್ತ ಹಿಡಿಯುತಾರೇನ
ಹಾಯಲಿಂಗಮ್ಮ ಬಂದಾಳೆ ಎತ್ತಿನ ಮ್ಯಾಲ ಕುಂತಾಳ
ಎಕಚಿಂತಿಯ ದೇಸಾಯನೆ ಎತ್ತು ಹೊಡಿಯುತ್ತಿದ್ದಾನೆ
ಹೋಗುತ ಹೊಗುತಾಲೇಳ ಎಲ್ಲಿಗ ಬರುವುತಾರೇನ
ಮಾವನೂರ ಭೂಮಿಗೆ ಎತ್ತ ಬರುವುತಾವೇನ
ಊರ ಬಂದಾವಂದಾಳೆ ಎತ್ತ ಇಳಿಯುತಾಳೇನ
ಎತ್ತ ಇಳಿಯುತಾಳೇನ ಎಕಚಿಂತಿ ದೇಸಾಯರ
ಎಕಚಿಂತಿಯ ದೇಸಾಯರೆ ಎತ್ತಾ ಹೊಡಿಯುತ್ತಿದ್ದಾನ

ಹಾಯನಿಂಗಮ್ಮ ಇಳದಾಳ ಉಡಿಯಾ ಜಗ್ಗುತಾವೇನ
ಉಡಿಯಾ ಜಗ್ಗುತಾವೇನ ಹಿಂದಕಾಗುತಾಳೇನ
ಹಿಂದಕಾಗುತಾಳೇನ ಉಡಿಯಾಗ ಕೈಯ ಹಾಕ್ಯಾಳ
ಭಂಡಾರ ಹಚ್ಚಿದ ಕಲ್ಲೇನೆ ಎಣ್ಣಿ ಬಣ್ಣದ ಕಲ್ಲೇನ
ಮೂರು ಕಣ್ಣೀನ ಹುತ್ತಿಗೆ ಲಿಂಗಮ್ಮ ಬರವುತಾಳೇನ
ಲಿಂಗಮ್ಮ ಬರವುತಾಳೇನ ಅಲ್ಲೇ ಕುಂದ್ರುತಾಳೇನ
ಉಡಿಯಕ ಕೈಯ್ಯ ಇಟ್ಟಳೇ ಭಂಡಾರ ಹಚ್ಚಿದ ಕಲ್ಲೇನ
ಅರಿಯದವರಿಗಲ್ಲಪ್ಪ ಕರಿಯಾಕಲ್ಲ ಆದಿಗೆ
ನನ್ನಗ ಬಾರೋ ತಮ್ಮಯ್ಯ ವರವಿನ ಕಲ್ಲನಾದಿಗೆ
ಭಂಡಾರ ಹಚ್ಚಿದ ಕಲ್ಲೇನ ಹುತ್ತಿನಗಡ್ಡಿ ಒಳಗೇನ
ಹುತ್ತಿನಗಡ್ಡಿ ಒಳಗೇನ ಇಲ್ಲೇ ಇರಬೇಕಂದಾಳ
ಮಾವನೂರ ಭೂಮ್ಯಾಗ ಧರ್ಮರಾಯ ಆಗಯ್ಯ
ಧರ್ಮರಾಯ ಆಗಪ್ಪ ಇಲ್ಲೇ ಇರವಲಿಬೇಕಪ್ಪ
ಹೊಂದಿಸಿ ಕೈಯ ಮುಗದಾಳೆ ರಾಯಿಮಾರಗ ಹಿಡದಾಳ
ಊರ ದಾಟಿ ಬಂದಾಳೆ ರಾಯಿಮಾರಗ ಹಿಡದಾಳ
ಎಕಚಿಂತಿಯ ದೇಸಾಯರೆ ಎತ್ತ ಹೊಡಿಯುತ್ತಿದ್ದಾರ
ಊರ ಧಾಟಿ ಬಂದಾಳೆ ಎತ್ತ ನಿಲ್ಕಿ ಮಾಡ್ಯಾರ
ಹಾಯಲಿಂಗಮ್ಮನಲ್ಲೇಳ ಎತ್ತಿನ ಮ್ಯಾಲೆ ಕುಂತಾಳ
ಎತ್ತಿನ ಮ್ಯಾಲೆ ಕುಂತಾಳೆ ಎಕಚಿಂತಿ ದೇಸಾಯರ
ಎಕಚಿಂತಿ ದೇಸಾಯರ ಎತ್ತ ಹೊಡಿಯುತ್ತಿದ್ದಾನ
ಎತ್ತ ಹೊಡಿಯುತ್ತಿದ್ದಾನೆ ರಾಯಿಮಾರಗ ಹಿಡದಾರ
ಹೋಗುತ ಹೋಗುತಲ್ಲೇಳ ಎಲ್ಲಿಗ ಬರುವುತಾರೇನ
ಅಲ್ಲ್ಯಾರ ಇಲ್ಲ್ಯಾರೇನ ಏಳವೂರ ಭೂಮಿಗ
ಏಳವೂರ ಭೂಮಿಗೆ ಎತ್ತ ಬರುವುತಾವೇನ
ಊರ ಬಂದಾವಂದಾಳೆ ಎತ್ತು ಇಳದಾಳೇನಯ್ಯ
ಎತ್ತ ಇಳಿಯುತಾಳೇನ ಎಕಚಿಂತಿಯ ದೇಸಾಯರ
ಎಕಚಿಂತಿಯ ದೇಸಾಯರೆ ಎತ್ತು ಹೊಡಿಯತ್ತಿದ್ದಾನ
ಎತ್ತು ಹೊಡಿಯುತ್ತಿದ್ದಾರೆ ಹಾಯಲಿಂಗಮ್ಮ ಇಳದಾಳ
ಹಾಯಲಿಂಗಮ್ಮ ಇಳದಾರೆ ಉಡಿಯಾ ಜಗ್ಗುತಾವೇನ
ಉಡಿಯಾ ಜಗ್ಗುತಾವೇನ ಉಡಿಯಾಗ ಕೈಯಾ ಹಾಕ್ಯಾಳ
ಎಣ್ಣಿ ಬಣ್ಣದ ಕಲ್ಲೇನ ಭಂಡಾರ ಹತ್ತಿದ ಕಲ್ಲೇನ
ಭಂಡಾರ ಹತ್ತಿದ ಕಲ್ಲೇನ ಅರಿದವರಿಗಂದಾಳ
ಅರಿಯದವರಿಗಂದಾಳೆ ಕರಿಯಾ ಕಲ್ಲನಾದಿಗೆ
ಬಾರೋ ಬಾರೋ ನನ್ನಪ್ಪ ನನ್ನ ಭಂಡಾರ ಕಲ್ಲೇನ
ಬಾರೋ ಬಾರೋ ನನ್ನಯ್ಯ ನನ್ನಗ ವರವಿನ ಕಲ್ಲೇನ
ನನ್ನಗ ವರವಿನ ಕಲ್ಲೇನ ಮೂರ ಕಲ್ಲಿನ ಹುತ್ತಿಗೆ

ಲಿಂಗಮ್ಮ ಹಿಂದಕಾದಳೆ ಹುತ್ತಿನ ಗಡ್ಡಿಗ ಬಂದಾಳ
ಹುತ್ತಿನ ಗಡ್ಡಿಗ ಬಂದಾಳೆ ಅಲ್ಲೇ ಕುಂದ್ರುತಾಳೇನ
ಅಲ್ಲೆ ಕುಂದ್ರುತಾಳೇನ ಉಡಿಯಾಗ ಕೈಯ ಹಾಕ್ಯಾಳೆ
ಉಡಿಯಾಗ ಕೈಯ ಹಾಕ್ಯಾಳೆ ಭಂಡಾರಚ್ಚಿದ ಕಲ್ಲೇನ
ನನ್ನಗ ವರವಿನ ಕಲ್ಲೇನ ಕೈಯಾಗ ಕಲ್ಲ ಹಿಡದಾಳ
ಏಳವೂರದೊಳಗೇನೆ ಸಿದ್ದರಾಯಿ ಆಗಲೀಬೇಕಯ್ಯ
ಸಿದ್ದರಾಯಿ ಆಗಲಿಬೇಕಪ್ಪ ಇಲ್ಲೇ ಇರಬೇಕಂದಾಳ
ಇಲ್ಲೇ ಇರಬೇಕಂದಾಳೆ ಹುತ್ತಿನಗಡ್ಡಿ ಒಳಗೇನ
ಹುತ್ತಿನಗಡ್ಡಿಗ ಬಂದಾಳೆ ಅಲ್ಲೇ ಕುಂದ್ರುತಾಳೇನ
ಅಲ್ಲೆ ಕುಂದ್ರುತಾಳೇನ ಉಡಿಯಾಗ ಕೈಯ ಹಾಕ್ಯಾಳ
ಉಡಿಯಾಗ ಕೈಯ ಹಾಕ್ಯಾಳೆ ಭಂಡಾರಚ್ಚಿದ ಕಲ್ಲೇನ
ನನ್ನಗ ವರವಿನ ಕಲ್ಲೇನ ಕೈಯಾಗ ಕಲ್ಲ ಹಿಡದಾಳ
ಏಳಂಪೂರದೊಳಗೇನೆ ಸಿದ್ದರಾಯಿ ಆಗಲಿಬೇಕಯ್ಯ
ಸಿದ್ದರಾಯಿ ಆಗಲಿಬೇಕಪ್ಪ ಇಲ್ಲೇ ಇರಬೇಕಂದಾಳ
ಇಲ್ಲೇ ಇರಬೇಕಂದಾಳೆ ಹುತ್ತಿನಗಡ್ಡಿ ಒಳಗೇನ
ಹುತ್ತಿನಗಡ್ಡಿಗ ಬಂದಾಳೆ ಅಲ್ಲೇ ಕುಂದ್ರುತಾಳೇನ
ಅಲ್ಲೆ ಕುಂದ್ರುತಾಳೇನ ಉಡಿಯಾಗ ಕೈಯ ಹಾಕ್ಯಾಳ
ಉಡಿಯಾಗ ಕೈಯ ಹಾಕ್ಯಾಳೆ ಭಂಡಾರಚ್ಚಿದ ಕಲ್ಲೇನ
ನನ್ನಗ ವರವಿನ ಕಲ್ಲೇನ ಕೈಯಾಗ ಕಲ್ಲ ಹಿಡದಾಳ
ಏಳಂಪೂರದೊಳಗೇನೆ ಸಿದ್ದರಾಯಿ ಆಗಲಿಬೇಕಯ್ಯ
ಸಿದ್ದರಾಯಿ ಅಗಲಿಬೇಕಪ್ಪ ಇಲ್ಲೇ ಇರಬೇಕಂದಾಳ
ಇಲ್ಲೇ ಇರಬೇಕಂದಾಳೆ ಹುತ್ತಿನಗಡ್ಡಿ ಒಳಗೇನ
ಹುತ್ತಿನಗಡ್ಡಿ ಒಳಗೇನ ಭಂಡಾರ ಹತ್ತಿದ ಕಲ್ಲೇನ
ಭಂಡಾರ ಹತ್ತಿದ ಕಲ್ಲೇನ ಎಣ್ಣಿ ಬಣ್ಣದ ಕಲ್ಲೇನ
ಅರಿಯದವರಿಗಲ್ಲೇಳ ಕರಿಯಾಕಲ್ಲ ಬಿಟ್ಟಾಳ
ಸಿದ್ದರಾಯನಾಗಪ್ಪ ಇಲ್ಲೇ ಇರುವಲಿಬೇಕಪ್ಪ
ಇಲ್ಲೇ ಇರಬಲಿಬೇಕಪ್ಪ ಹೊಂದಿಸಿ ಕೈಯ ಮುಗದಾಳ
ಹೊಂದಿಸಿ ಕೈಯ ಮುಗದಾಳ ರಾಯಿಮಾರಗ ಹಿಡದಾಳ
ಊರ ಧಾಟಿ ಬಂದಾಳೆ ಎತ್ತಿನ ಮ್ಯಾಲ ಕುಂತಾಳ
ಕೊಡಚಿಗ ವನ ಭೂಮ್ಯಾಗ ಎಕಚಿಂತಿ ದೇಸಾಯ್ಯನ
ಎಕಚಿಂತಿಯ ದೇಸಾಯರ ಎತ್ತ ಹೊಡಿಯುತ್ತಿದ್ದಾರ
ಹಾಯಲಿಂಗಮ್ಮನಲ್ಲೇಳ ಉಡಿಯಾ ಜಗ್ಗುತಾವೇನ
ಉಡಿಯಾಗ ಕೈಯ ಹಾಕ್ಯಾಳೆ ಎಣ್ಣಿ ಬಣ್ಣದ ಕಲ್ಲೇನ
ಅರಿಯದವರಿಗ ಕರಿಯಕಲ್ಲ ಭಂಡಾರ ಹಚ್ಚಿದಕಲ್ಲೇನ
ನನ್ನ ವರವಿನ ಕಲ್ಲೇನ ಎಣ್ಣಿ ಬಣ್ಣದ ಕಲ್ಲೇನ
ಮೂರ ಕಣ್ಣಿನ ಹುತ್ತಿಗೆ ಲಿಂಗಮ್ಮ ಬರುವುತಾಳೇನ

ಭಂಡಾರ ಹಚ್ಚಿದ ಕಲ್ಲೇನ ಉಡಿಯಾಗ ತಗದಾಳೇನಯ್ಯ
ಮೂರ ಕಣ್ಣಿನ ಹುತ್ತಿನೊಳಗ ಭೂತಾಳಿಸಿದ್ದನಾಗಯ್ಯ
ಕೊಡಚಿಗ ವನಭೂಮ್ಯಾಗೆ ಭೂತಾಳಿಸಿದ್ದನಾಗಯ್ಯ
ಭೂತಾಳಿಸಿದ್ದನಾಗಪ್ಪ ಇಲ್ಲೇ ಇರಬೇಕಂದಾಳ
ರಾಯಿಮಾರಗ ಹಿಡದಾಳೆ ರವ್ವಣಿ ಮಾಡುತಾಳೇನ
ಊರ ಧಾಟಿ ಬಂದಾಳೆ ಎತ್ತಿನ ಮ್ಯಾಲ ಕುಂತಾಳ
ಎಕಚಿಂತಿಯ ದೇಸಾಯನೆ ಎತ್ತ ಹೊಡಿಯುತ್ತಿದ್ದನ
ಹೋಗುತ ಹೋಗುತಲ್ಲೇಳ ಎಲ್ಲಿಗ ಹೋಗುತಾವೇನ
ಊರಬಂದಾವಂದಾಳ ಲಿಂಗಮ್ಮ ಎತ್ತ ಇಳದಾಳೇನ
ಎಕಚಿಂತಿಯ ದೇಸಾಯನ ಎತ್ತ ಹೊಡಿಯುತ್ತಿದ್ದಾನ
ಹಾಯಲಿಂಗಮ್ಮನ ಉಡಿಯಾಗೆ ಭಂಡಾರ ಹಚ್ಚಿದ ಕಲ್ಲೇನ
ಎಣ್ಣಿ ಬಣ್ಣದ ಕಲ್ಲೇನ ಅರಿಯದವರಿಗಲ್ಲೇನ
ಅರಿಯದವರಿಗಿ ಕರಿಯಾಕಲ್ಲ ನನ್ನಗ ವರವಿನ ಕಲ್ಲಯ್ಯ
ಮೂರ ಕಣ್ಣಿನ ಹುತ್ತಿಗೆ ಲಿಂಗಮ್ಮ ಬರುವುತಾಳೇನ
ಉಡಿಯಾಗ ಕೈಯಾ ಇಟ್ವಾಳೆ ಎಣ್ಣಿ ಬಣ್ಣದ ಕಲ್ಲೇನ
ಎಣ್ಣಿ ಬಣ್ಣದ ಕಲ್ಲೇನೆ ಕೈಯಾಗ ಹಿಡದಾಳೇನಯ್ಯ
ಮದ್ದರಕಿ ವನ ಭೂಮ್ಯಾಗೆ ಬಸವಣ್ಣಪ್ಪನಂತಾಳ
ಬಸವಣ್ಣನಾಗೆಪ್ಪ ಇಲ್ಲೇ ಇರುವಲಿಬೇಕಯ್ಯ
ಹಂಗುರಗಿ ಗೌಡರ ಮಗಳ ಹೊಂದಿಸಿ ಕೈಯ ಮುಗದಾಳ
ಹಿರಿಯರಿಗ ಹ್ಯಾಂಗ ನಡಸಿಗೆ ಕಿರಿಯರಿಗೆ ಹಂಗೇ ನಡಸಯ್ಯ
ಹೊಂದಿಸಿ ಕೈಯ ಮುಗದಾಳೆ ರಾಯಿಮಾರಗ ಹಿಡದಾಳ
ಊರ ಧಾಟಿ ಬಂದಾಳೆ ಎತ್ತಿನ ಮ್ಯಾಲ ಕುಂತಾಳ
ಏಕಚಿಂತಿಯ ದೇಸಾಯರೆ ಎತ್ತ ಹೊಡಿಯುತ್ತಿದ್ದಾರ
ಅಲ್ಲ್ಯಾರ ಇಲ್ಲ್ಯಾರೇನ ಎಲ್ಲಿಗ ಬರುವುತಾರೇನ
ಎಲ್ಲಿಗ ಬರುವುತಾರೇನೆ ಶಿವಪುರ ಮ್ಯಾಲ ಹಾಯ್ದರ
ಶಿವಪುರ ಮ್ಯಾಲ ಹಾಯ್ದರ ಶಹಾಪುರ ಮ್ಯಾಲ ಬಂದಾರ
ಶಹಾಪುರ ಮ್ಯಾಲ ಧಾಟ್ಯಾರೆ ಕನ್ಯಾಕೋಳೂರ ಮ್ಯಾಲೇನ
ರಾಯಿಮಾರಗ ಹಿಡದಾರ ಎಲ್ಲಿಗ ಬರುವುತಾರೇನ
ಹೊನ್ನ ಹೈಯಾಳ ಭೂಮ್ಯಾಗ ಊರ ಬಂದಾವಂದಾಳ
ಊರ ಬಂದಾವಂದಾಳ ಲಿಂಗಮ್ಮ ಎತ್ತಾ ಇಳದಾಳೇನಯ್ಯ
ಎತ್ತ ಇಳಿಯುತಾಳೇನೆ ಉಡಿಯಾ ಜಗ್ಗುತಾವೇನ
ಎಕಚಿಂತಿಯ ದೇಸಾಯರೆ ಎತ್ತ ಹೊಡಿಯುತ್ತಿದ್ದಾರ
ಉಡಿಯಾಗ ಕೈಯ ಹಾಕ್ಯಾಳ ಭಂಡಾರ ಹಚ್ಚಿದ ಕಲ್ಲೇನ
ಎಣ್ಣಿ ಬಣ್ಣದ ಕಲ್ಲೇನ ಕರಿಯಾ ಕಲ್ಲನಾದವ
ಅರಿಯಾದವರಿಗಿ ಕರಿಯಾ ಕಲ್ಲ ನನ್ನಗ ವರವಿನ ಕಲ್ಲೇನ
ಮೂರಕಣ್ಣಿನ ಹುತ್ತಿಗೆ ಲಿಂಗಮ್ಮ ಬರುವುತಾಳೇನ

ಲಿಂಗಮ್ಮ ಬರುವುತಾಳೇನ ಹುತ್ತಿನ ಗಡ್ಡಿಗಿ ಕೈಯಯಿಟ್ಟಾಳ
ಭಂಡಾರ ಹಚ್ಚಿದ ಕಲ್ಲೇನ ಎಣ್ಣೆ ಬಣ್ಣದ ಕಲ್ಲೇನ
ಎಣ್ಣಿ ಬಣ್ಣದ ಕಲ್ಲೇನ ಹುತ್ತಿನ ಗಡ್ಡಿ ಒಳಗೇನ
ಹುತ್ತಿನ ಗಡ್ಡಿ ಒಳಗೇನೆ ಭಂಡಾರ ಹಚ್ಚಿದ ಕಲ್ಲೇನ
ಸಗರಗಡ್ಡಿ ಬಾ ಸಣ್ಣಳ್ಳಿ ಮುತ್ತು ನನ್ನ ವಾರಿದುರಬಿನ ಹೈಯಾಳೆ
ವಾರಿದುರಬಿನ ಹೈಯಾಳೆ ಗಜ್ಜ ಎಳದ ಲಿಂಗನೇ
ಗಜ್ಜ ಎಳದ ಲಿಂಗೇನೆ ಇಲ್ಲೇ ಇರಬೇಕಂದಾಳ
ಹೊಂದುಸಿ ಕೈಯ ಮುಗದಾಳೆ ಹಿರಿಯರಿಗ ಹ್ಯಾಂಗ ನಡಸೀಗೆ
ಹಿರಿಯರಿಗ ಹ್ಯಾಂಗ ನಡಸೀಗೆ ಕಿರಿಯರಿಗೆ ಹಂಗೇ ನಡಸಯ್ಯ
ಹೊಂದುಸಿ ಕೈಯ ಮುಗದಾಳ ರಾಯಿಮಾರಗ ಹಿಡದಾಳ
ಮುಂದಕ ಬರುವುತಾಳೇನೆ ಎತ್ತಿನ ಮ್ಯಾಲ ಕುಂತಾಳ
ಎಕಚಿಂತಿಯ ದೇಸಾಯರೆ ಎತ್ತ ಹೊಡಿಯುತ್ತಿದ್ದಾರ

ಎತ್ತ ಹೊಡಿಯುತಾನೇನೆ ರಾಯಿಮಾರಗ ಹಿಡದಾನ
ರಾಯಿಮಾರಗ ಹಿಡಿದಾನೆ ಹರಿಯಾ ಹಳ್ಳ ಬಂದಾವ
ಹರಿಯಾ ಹಳ್ಳ ಬಂದಾವೆ ಊರ ಬಂದಾವೇನಯ್ಯ
ರಾಯರ ಓಣಿಲಿ ಹಾಯ್ದರ ರಡ್ಡೇರ ಮನಿಯ ಮುಂದೇನ
ಚಂದನ ಚೌಡಿಲಿ ಹಾಯ್ದರೆ ಮಂದನ ಮಳಗೀಲಿ ಬಂದಾರ
ಎಕಚಿಂತಿ ದೇಸಾಯರೆ ಮನಿಗೆ ಬರುವುತಾರೇನ
ಮನಿಗಿ ಬರುವುತಾರೇನ ಗಿಂಡಿಲಿ ನೀರ ಕೊಟ್ಟಾರ
ಗಿಂಡಿಲಿ ನೀರ ಕೊಟ್ಟಾರೆ ಸೀತಾಳ ಮಕಮಜ್ಜನ
ಸೀತಾಳ ಶಿವಮಜ್ಜಲೆ ನೀರಿಲೆ ಮಕಮಜ್ಜನ
ಸೀತಾಳ ಶಿವಮಜ್ಜಲೆ ನೀರಿಲೆ ಶಿವಮಜ್ಜಲ
ಎತ್ತು ಕಟ್ಟುತಾರೇನೆ ಮಗ್ಗಿಯಮುಟ್ಟ ಬಿಚ್ಯಾರ
ಕುತನಿಯ ಜೂಲ ತಗದಾರೆ ಎತ್ತಿಗ ಪತ್ತರಿ ಹಾಕ್ತಾರ
ಲ್ಯಾಯದ ಪಡಸಾಲಿ ಒಳಗೇನೆ ತಾವಂದು ಮೂರತಿ ಆದರ
ತಾವಂದು ಮೂರುತಿ ಆದರೆ ಕಟ್ಟಿದ ಬುತ್ತಿ ಬಿಚ್ಯಾರ
ಉಂಡಾರೆ ಭಾಳುಟ್ಟಾರ ಬಾಯಲಿ ಸೀತಾಳ ಉಗಳ್ಯಾರ
ಬಾಯಿಲಿ ಸೀತಾಳ ಉಗಳ್ಯಾರೆ ಲ್ಯಾಯದ ಪಡಸಾಲಿ ಒಳಗೇನ
ಹಾಯಲಿಂಗಮ್ಮನ ಪುರುಷನ ಹೊಲದಾಗಿರತಾನೇನಯ್ಯ
ಅತ್ತಿಗಿ ನಾದಿನಿದೇರ ಸಂಗಟ ಕೂಡೂತಾಳೇನ
ಉಂಡಾರೆ ಬಾಳುಟ್ಟಾರೆ ಮಲ್ಲನಮನಗೂತಾಳೇನ
ಮೀಸಲ ನಿದ್ದಿ ನಡದಾವೆ ಹಬ್ಬನೆ ಹವರಾತರೆ
ಹಬ್ಬನೆ ಹವರಾತರೆ ಸಬ್ಬನೆ ಸರಹೊತ್ತೇನೆ
ಸಬ್ಬನ ಸರಹೊತ್ತಿನಾಗ ಗಜ್ಜ ಎಳದ ಲಿಂಗನ

ಗಜ್ಜ ಎಳದ ಲಿಂಗನೆ ಹಾಯಲಿಂಗಮ್ಮನ ಉಡಿಯಾಗ
ಹಾಯಲಿಂಗಮ್ಮನಲ್ಲೇಳ ನುಡದಾಳೆ ಮಾತಾಡ್ಯಾಳ

ಯಾರು ಏಳದುಕಿಂತೇನ ಕೋಳಿ ಕೂಗದ ಮೊದಲೇನ
ಕೋಳಿ ಕೂಗದ ಮೊದಲೇನೆ ಮನವಂದು ಮೀಸಲ ಮಾಡವ್ವ
ಮನವಂದು ಮೀಸಲ ಮಾಡವ್ವ ಕಾಯ ವಜ್ಜರ ಮಾಡವ್ವ
ಗಚ್ಚಿನ ಬಚ್ಚಲದೊಳಗವ್ವ ಹೆಚ್ಚಿನ ಜಳಕ ಮಾಡವ್ವ
ಕರಗೋಳುಬಿಡಬೇಕಂದಾನೆ ಹಾಲ ಹಿಂಡಲಿಬೇಕವ್ವ
ಚರಗಿ ನೀರ ತರಬೇಕಾ ಹಾಲು ಸಕ್ಕರಿ ತರಬೇಕವ್ವ
ಹಳ್ಳುಲೋಭನ ತರಬೇಕಾ ಹಾಲು ಸಕ್ಕರಿ ತರಬೇಕವ್ವ
ಹಳ್ಳುಲೋಭನ ತರಬೇಕಾ ಗಜ್ಜ ಎಳದ ಲಿಂಗನ
ಹಾಯಲಿಂಗಮ್ಮನಲ್ಲೇಳ ಕುಂತ ಕೇಳುತಾಳೇನ
ಹೈಯ್ಯಾಳದಪ್ಪನಲ್ಲೇಳ ಗದ್ದ ಹಿಡದು ಹೇಳ್ಯಾನ
ಗದ್ದ ಹಿಡದು ಹೇಳ್ಯಾನ ತುಟಿಯಾ ಹಿಡದು ಹೇಳ್ಯಾನ
ನೀನೆ ಬರಬೇಕಂದಾನೆ ಭಕ್ತಿ ಮಾಡಬೇಕಂದಾನ
ಹಂಗುರಗಿ ನಿಂಗಮ್ಮನ ಒಳ್ಳೆದು ಒಳ್ಳೆದಂದಾಳ
ಒಳ್ಳೆದು ಒಳ್ಳೆದಂದಾಳ ನಾನೇ ಬರತೀನಿ ಅಂದಾಳ
ಗಜ್ಜ ಎಳದ ಲಿಂಗನೇ ಹೊರಳಿ ಹೋಗುತಾನೇನ
ಯಾರು ಏಳದುಕಿಂತೇನ ಕೋಳಿ ಕೂಗದು ಮೊದಲೇನ
ಬೆಜ್ಜರ ಹೊಡದು ಎದ್ದಾಳೇ ಗಚ್ಚಿನ ಬಚ್ಚಲಕ ಹೋಗ್ಯಾಳ
ಮಿನದಾಳ ಮಡಿ ಉಟ್ಟಾಳೆ ಕರಗೋಳು ಬಿಡುವುತಾಳೇನ
ಚರಗಿ ಹಾಲ ಹಿಡದಾಳ ಮೀಸಲ ಸೀತಾಳ ಹಿಡದಾಳ
ಹಾಲು ಸಕ್ಕರಿ ಹಿಡದಾಳೆ ಲ್ಯಾಯದ ಪಡಸಾಲಿ ಇಳದಾಳ
ಅಗಳಿಯ ದಬ್ಬುತಾಳೇನ ಬಾಕಲ ತೆರದು ಹೋದಳ
ಊರ ಒಳಗನಲ್ಲಪ್ಪ ಚಂದರ ಸಾಲಿಲಿ ಹಾಯ್ದಳ
ರೈತರಾಣ್ಯಾರ ಓಣ್ಯಾಗೆ ಚಂದರಸಾಲಿ ಒಳಗೇನ
ಊರ ಹೊರಗೆ ಬಂದಾಳೆ ರಾಯಿಮಾರಗ ಹಿಡದಾಳ
ಹಳ್ಳ ಧಾಟುತಾಳೇನ ಮಾರಗ ಹಿಡಿಯುತಾಳೇನ
ಎಕಚಿಂತಿಯ ಊರಿಗೆ ಗಜ್ಜಯಿ ಎಳದ ಲಿಂಗೇನ
ಗಜ್ಜಯಿ ಎಳದ ಲಿಂಗನೇ ಒಂದ ಹರದಾರಿ ಆದವ
ಹಂಗುರಿಗಿಯ ಗೌಡರ ಮಗಳು ಹಾಯಿಲಿಂಗಮ್ಮನಂದರ
ಕರಿವಂದು ಕಂಟಿ ಒಳಗೇನ ಸಿಗರಿನ ಕಂಟಿ ಒಳಗೇನ
ಕಾಡರುದ್ದರ ಭೂಮ್ಯಾಗ ಮೂರ ಕಣ್ಣಿನ ಹುತ್ತಿಗೆ
ಮೂರ ಕಣ್ಣಿನ ಹುತ್ತಿಗೆ ಲಿಂಗಮ್ಮ ಬರುವುತಾಳೇನ
ಲಿಂಗಮ್ಮ ಬರುವುತಾಳೇನ ಚರಗಿ ನೀರ ಸುರುವ್ಯಾಳ
ಚರಗಿ ನೀರ ಸುರವ್ಯಾಳೆ ಕುಂಕುಮ ಹಚ್ಚುತಾಳೇನ

ಕುಂಕಮ ಹಚ್ಚುತಾಳೇನ ಭಂಡಾರ ಹಚ್ಚುತಾಳೇನ
ಭಂಡಾರ ಹಚ್ಚುತಾಳೇನ ಹಳ್ಳುಲೋಭನ ಹಾಕ್ಯಾಳ
ಹಳ್ಳುಲೋಭನ ಹಾಕ್ಯಾಳೆ ಪೂಜೆ ಮಾಡುತಾಳೇನ
ಹಾಲು ಸಕ್ಕರಿ ಅಲ್ಲಪ್ಪ ಚರಗಿ ತುಂಬಿ ಇಟ್ಟಾಳ
ಕೈಯ್ಯಾನ ಲಿಂಗನಲ್ಲೇಳ ಹಾಲ ಸವಿದಾನೇನಯ್ಯ
ಹಾಲ ಸವಿದಾನಲ್ಲಪ್ಪ ಚರಗೀಯ ಬಟ್ಟಲ ಹಿಡದಾಳ
ಚರಗಿ ಬಟ್ಟಲ ಹಿಡದಾಳ ರವ್ವಣಿ ಮಾಡುತಾಳೇನ
ರವ್ವಣಿ ಮಾಡುತಾರೇನ ಊರಾಗ ಬರುವುತಾರೇನ
ಬಾಕಲದೊಳಗೆ ಹೋಗ್ಯಾಳೆ ಅಗುಳಿ ಹಾಕುತಾಳೇನ
ಅಗುಳಿ ಹಾಕುತಾಳೇನ ಲ್ಯಾಯದ ಪಡಸಾಲಿ ಒಳಗೇನ
ಲ್ಯಾಯದ ಪಡಸಾಲಿ ಒಳಗೇನ ಮಲ್ಲನ ಮನಗೂತಾಳೇನ
ಮಲ್ಲನ ಮಲಗೂತಾಳೇನೆ ಹೊತ್ತೇರಿ ಮುಂಜಾನಿ ಎದ್ದಾರ

## ಶಿವಭಕ್ತ ತಿರುನೀಲಕಂಠ

ಶರಣ ಗುರುವೆ ನಿಮ್ಮ ಅಡಿಯ ಪೂಜಿಸುವೆ
ಮರಣರಹಿತ ಕರುಣಿಸು ದೇವ
ಶರಣರ ಪಾದಕೆ ಸ್ಮರಿಸುತ ಹೇಳುವೆ
ತಿರುನೀಲಕಂಠನ ಅನುಭಾವ

ಮೆರೆಯುತಿರುವದು ತೋರೆಂಬ ಊರ
ಆ ಪುರದ ವರ್ಣನಾ ಹೇಳುವೆ ನಾ
ಸರಸದಿ ರತ್ನದ ತೆನೆಗಳ ಕೊತ್ತೆಮರ
ಕೊತ್ತಲದೆನೆ ಬಾಗಿದ ಕ್ಯಾದಗಿ

ಎನ್ನ ಸಾಂಬ ಹೇಳತಾನೆ ಸೌಂದರ್ಯ
ನಂಬಿಗೆ ನಿಂಬಣ್ಣನೆ ಕೇಳಲು
ಕುಂಬಿನಿಯೋಳ್ ಶಿವಶರಣರು ನಿಮ್ಮನು
ತಗದರು ಕುಲದಿಂದ ಹೊರಗೆ

ಅಂದಮಾತ ಕೇಳಿ ಸೌಂದರ್ಯ ಹೇಳತಾನ
ಇದೇನ ಮಾಡುವಿ ಹಂತವನ
ತಮ್ಮಗೊಳ ನಿಮ್ಮ ಹೊಂದಿಗಿರುವೆನು
ಕುಂದೇನು ಬರುವದು ನಮಗಿನ್ನ

ಶಂಕರನಿಗೆ ಹೇಳತಾನ ನಿಂಬಣ್ಣನು ತಾನ
ನಾವೇನ ಮಾಡೇವಿ ಹಂತಾದನ್ನ

ನಮ್ಮಣ್ಣ ಯಾಕ ತಗದಾರ ಕುಲದಿಂದ
ಹೊರಗೆ ಬಂದು ಚಿಂತೆಯಿಂದಿರಲು

ಆಗ ಶಂಕರನು ಹೇಳತಾನ ನಿಂಬಿಗೆ
ನೀನಿಷ್ಟು ಮಾಡುವಿ ಭಕ್ತಿಯನು
ನಿನಗಿಂತ ಹೆಚ್ಚಿನ ತಿರುನೀಲಕಂಠನಿರುವನು
ಹೇಳುವೆನು ಕೇಳು ಆತನ ಚರಿತ್ರೆ

ತಿರುಮಲೇಶ್ವರನ ಪೂಜೆ ಮಾಡಲು
ತಿರುನೀಲಕಂಠನ  ಭಕ್ತಿಯನು
ಹರುಷದಿ ಹೇಳುವೆ ಕೇಳಲು ನಂಬಿ
ಮರಿಬ್ಯಾಡೋ ಮುದದಲಿ ಇನ್ನು

ಒಂದು ದಿನ ಈಶ್ವರನ ಪೂಜೆಗೆ
ಹೋಗುತ್ತಿದ್ದ ಶರಣನು ತಾನು
ಕಂದುಗೊರಳನ ಪೂಜೆಯ ಮಾಡಿ
ಅಂದವಾಗಿ ಏರಿಸಿದನು ದಳವನು

ಧೂಪ ದೀಪ ನೈವೇದ್ಯ ತಾಂಬೂಲ
ದೀಪ ಬೆಳಗಿ ಏಕಾರತಿಯನು
ಪಾಪಹರನೆ ಪರಮಾತ್ಮ ಶಂಕರ
ಲೋಪಮಾಡು ನನ್ನ ಭವವನು

ಶೋಡಸ ಪೂಜೆಯ ಮಾಡುತ ಶರಣನು
ಹಾಡತಾನ ಶಿವನ ಸ್ತುತಿಯನು
ಬೆಡಗೊಲಿದ ಸುಡುಗಾಡವಾಸನೆ
ಬೇಡಿಕೊಂಬೆ ಕೈಪಿಡಿದು ಎನ್ನನು

ಹಾಡುತ ಬಹುಕೊಂಡಾಡುತ ಭಕ್ತಿಯ
ಮಾಡುತಿದ್ದ ಶರಣನು ತಾನು
ನೋಡುತ ಪುರವನು ಶರಣನು ತಾನು
ಮನೆಯ ದಾರಿ ಹಿಡಿದಿಹನು

**ವಚನ**

ತಿರುನೀಲಕಂಠನು ಒಂದು ಓಣಿಯ
ಬಾಜಾರ ಹಿಡಿದು ಬರುತ್ತಿದ್ದ

ವೇಶ್ಯಾಸ್ತ್ರೀಯ ಮನೆಮುಂದೆ ಹಾದು
ಬರುತಿದ್ದ ಆ ಶಿವಮೂರ್ತಿ

ಎಂಜಲ ನೀರ ಒಗೆದಾಳ ಆ ಸ್ತ್ರೀ
ಮೈಮೇಲೆ ಮಾಳಗಿ ಮೇಲಿಂದ
ಕಣ್ಣಾರೆ ನೋಡ್ಯಾನು ಶರಣನು ತಾನು
ಶಿವ ಶಿವ ಎಂದು ಅಂದಾನ

ಪಾತರದವಳು ಆತುರದಿಂದ ಬಂದು
ನೋಡತಾಳ ಕಿಡಿಕ್ಯಾಗ
ಭೀತಳಾಗಿ ಶಿವ ಘಾತವಾಯಿತೆಂದು
ಒತ್ತರಮಾಡಿ ಕೆಳಬಂದಾಳ

ತಿರುನೀಲಕಂಠನ ಚರಣಕ ಎರಗಿ
ಹೇಳತಾಳ ತಾ ಕೈಮುಗಿದು
ಮರುವಿನ ಜನ್ಮದು ಮರತೇನ ದೇವ
ಕರುಣಮಾಡಿ ಕೃಪೆ ಮಾಡೋ

ಕಾಯೋ ದೇವನೆ ಕಾಯೋ ಕರುಣದಿ
ವೇಗವ ಮರುವಿಗೆ ನಾ ಬಪ್ಪೆ
ಕಾಯದ ತಪ್ಪು ವಿಘ್ನದ ಮಾತಿದು
ನಾನು ನಾಶ ಆಗುವ ಮುನ್ನ

ಸ್ತುತಿಯ ಕೇಳಿ ಶಿವಶರಣ ಅಂತಾನು
ನಿನ್ನ ಕಡೆಗಿಲ್ಲವು ಭೇದ
ಗತಿಗೆ ಹೊಂದಿ ಸದ್ಗತಿಗೆ ಹೋಗ ನೀ
ಮತಿವಂತಿಯಾಗಿ ಬಾಳು ನೀ

ವೇಶ್ಯಾಸ್ತ್ರೀ ಹೇಳತಾಳ ಶರಣಗೆ
ನಮ್ಮ ಮನಿಗೆ ಬರಬೇಕರಿ ಈಗ
ಪಾದಪೂಜೆ ಮಾಡತೇನಿ ತಮ್ಮದು
ಆಗುವದು ನನಗ ಸನಮಂತ

ಪಾತರದವಳು ಕೇಳತಾಳ ಶರಣಗ
ಮನೆಗೆ ಬರಬೇಕರಿ ಅಂತ
ನಿಡಿ ತಾಯಿ ಬರುವೆನಂತ ಶರಣನು
ವಚನ ಕೊಟ್ಟಾನ ಆ ಸ್ತ್ರೀಗೆ

ಗದ್ದುಗೆ ಹಾಸ್ಯಾಳ ವಿನಯದಿಂದ
ಸ್ನಾನ ಮಾಡಿಸಿದಳು ಅಲ್ಲಿಂದ
ಅಂಗಾರ ಕುಂಕುಮ ಜೀವಾದಿ ಕಸ್ತೂರಿ
ಮಲ್ಲಿಗಿ ಎಣ್ಣಿ ಹಚ್ಯಾಳ

ಗಂಧ ಸೊಗಸದಿ ಪರಿಮಳ ಚೆಂದದಿ
ತೀಡುತ ಜೀವದಿ ಮಕರಂದ
ಗುಲಾಬಿ ಗುಳಿಗುಳಿ ಸಂಪಿಗಿ ಎಣ್ಣಿ
ಮೈತುಂಬಿ ಹಚ್ಚಿ ತೊಳದಾಳೆ

ಪನ್ನೀರ ಸ್ನಾನವ ಮಾಡಿಸಿ ಚೆನ್ನಾಗಿ
ಹೊನ್ನ ಗದ್ದುಗೆ ಹಾಕುತ ಚಂದ
ಹಲವು ಪರಿಯಿಂದ ಸೇವೆ ಮಾಡ್ಯಾಳ
ಮಲಹರದೇವನು ಇವನಂತ

ಧೂಪ, ದೀಪ, ನೈವೇದ್ಯ ತಾಂಬೂಲ
ಅಕ್ಷತೆ ಕುಂಕುಮ ಪರಿಮಳವ
ಪಾಪಹರಗ ಪವಿತ್ರ ಪತ್ನಿಯು
ಧರಿಸಿ ಮಂಗಲ ಪುಷ್ಪವನ

ಶರಣನ ಪೂಜೆ ಮಾಡ್ಯಾಳ ಖುಶಿಯಿಂದ
ಹರುಷವುಕ್ಕಿ ಬಂದೀತ ಆಗ
ಪಾತರದವಳಿಗೆ ಆಶೀರ್ವಾದ ಮಾಡ್ಯಾನ
ತಿರುನೀಲಕಂಠನು ಆ ಕ್ಷಣದಾಗ

ಮನೆಯ ದಾರಿ ಹಿಡದಾನ ಶರಣನು
ಬಾಗಿಲ ಬಳಿ ಬಂದು ನಿಂತಾನ
ಅಡರಿಸಿ ಬಂದಳು ಒಳಗಿಂದ ಹೆಂಡತಿ
ಸುವಾಸನೆ ಹೊಡೆಯುತಿತ್ತು ದೂರದಿ

ಹಿಂದಕ ಸರಿದು ಮಂದನ್ನ ದನಿಯಾಗ
ಹೇಳತಾಳ ತನ್ನ ಪತಿ ಮುಂದೆ
ಕುಂದೇನು ತಂದಿರಿ ಯಾವ ಸ್ತ್ರೀಯಳ
ಮನೆಗೆ ಹೋಗಿ ಬಂದಿರಿ ನೀವಿಂದು

ಪಾತಕ ದೋಷಕ ಬಿದ್ದಿರಿ ಕಾಂತಾ
ನಮ್ಮ ನಿಮ್ಮ ಸಲಿಗಿ ಸಾಕೆಂದೆ

ಕಳ್ಳತನವ ಮಾಡಿ ಕಳ್ಳಿ ಮನಿಯೊಳ್
ಉಳ್ಳಾಡಿ ಬಂದಿರಿ ನೀವಿಂದು

ಎಂಜಲ ಸಿಡಿದದ್ದು ಮಂಜುಳವಾಣಿ
ತೊಳದ ಹಚ್ಚಿದಳು ಮಕರಂದ
ಕೆಂಜೆಡೆ ಶಿವನ ಪಾದವೆ ಸಾಕ್ಷಿ
ನನ್ನ ತಪ್ಪು ಇಲ್ಲ ಎಳ್ಳಷ್ಟ

ಶಿವನಾಣಿ ಕೊಟ್ಟದ್ದಕೆ ಸತಿ ಒಡಂಬಟ್ಟು
ಒಳಗೆ ಬರಲಿಕ್ಕೆ ಹೇಳ್ಯಾಳು
ಸಂಜೆಯ ಪೂಜೆಯ ಮಾಡ್ಯಾಳ ಗಂಡಗ
ನೀರಕೊಟ್ಟು ಊಟ ನೀಡ್ಯಾಳ

ಗಂಡಗ ಊಟ ನೀಡ್ಯಾಳ ಸರಿಯಳು
ತಾನೋ ಊಟವ ಮಾಡ್ಯಾಳ
ಗಂಡಗ ಬೇರೆ ಹಾಸಿಗಿ ಹಾಸ್ಯಾಳ
ಗಂಡನ ಬಿಟ್ಟು ತಾ ಮಲಗ್ಯಾಳ

ಮಧ್ಯರಾತ್ರಿಯ ಹೊತ್ತಿನಲ್ಲಿ ಹೆಂಡತಿ
ಮನಮುಟ್ಟಿ ಆಳಲಿಕ್ಕೆ ಹೋದಾನು
ಮುಟ್ಟಿದರೆ ಶಿವನಾಣೆ ಎಂದು ಸತಿ
ಆಗಲೆ ಆಣೆಯ ಇಟ್ಟಾಳು

ಮುಟ್ಟಬ್ಯಾಡೊ ಮುದಿಮಲ್ಲನ ಆಣೆ
ಕೆಟ್ಟು ಹೋಗತಿನಿ ನಾನಿಂದ
ಕೆಟ್ಟ ಕಾರ್ಯ ಮಾಡಿ ಬಂದಿರಿ ನೀವು
ಎಷ್ಟು ಹೇಳಿದರೂ ಬ್ಯಾಂಡಾಂತ

ಪತಿವೃತಾ ಸ್ತ್ರೀಯಳ ಸತಿಯ ಬಿಟ್ಟು
ಪರಸತಿಯ ನೋಡಿ ಬಂದಿರಿ ಇಂದು
ಹ್ಯಾಂವ ಹತ್ತೇತಿ ಅವರಿಬ್ಬರಿಗೆ
ಹೆಂಡತಿ ಮರತಾನೊ ಮಾಕಾಂತ

ಶಂಭೋ ನಿನ್ನಾಣೆ ಎಂಬತ್ತು ವರುಷ
ಹೆಣತಿ ಮುಟ್ಟಲಿಲ್ಲೋ ಏಕಾಂತ
ತುಂಬ್ಯಾವು ದಿನಗಳು ಮುದಕರುವರು
ಅವರಿಗೆ ಮಕ್ಕಳಾಗಲಿಲ್ಲ ಒಬ್ಬಾತ

ಚೆಂತಿ ಹತ್ತಿ ಶಿವಶಂಕರ ಅಂತಾನು
ಎಂಥಾಹಾ ಶಿವಭಕ್ತ ನಿಷ್ಠೆವಂತ ಶಿವಭಕ್ತ
ಕಾಂತಿಯ ಗಂಡನ ಕೂಡಿಸಿ ಬರ್ತಿನಿ
ಅಂಥಾ ಹೊಂಟ ಪಾರ್ವತಿನಾಥಾ

* * *

## ಚಂಗಳವ್ವ

ಮೂರು ಕಣ್ಣಿನವ ಮುಕ್ಕಣ್ಣ ಶಿವರಾಯ
ತಾ ಒಂದು ರೂಪ ಆಗ್ಯಾನೋ
ತಾ ಒಂದು ರೂಪ ಆಗ್ಯಾನಲ್ಲೋ
ಲಿಂಗ ಜಂಗಮನಾಗ್ಯಾನೋ

ಕಂತಿ ಅರಬಿಯ ಉಟ್ಟಾನಲ್ಲೋ
ಕಂಟಿ ಅಂಗಿಯ ತೊಟ್ಟಾನೋ
ಕಂಟಿ ಅಂಗಿಯ ತೊಟ್ಟಾನಲ್ಲೋ
ಮುರಗಿ ಮುಂಡಾಸ ಸುತ್ಯಾನೋ

ಕಾಲಿಗಿ ಜಂಗ ಕಟ್ಟ್ಯಾನಲ್ಲೋ
ಇಬತ್ತಿ ಭಸ್ಮ ಧರಿಸ್ಯಾನೋ
ಇಬತ್ತಿ ಭಸ್ಮ ಧರಿಸ್ಯಾನಲ್ಲೋ
ಮುಂಗೈಗೆ ಜೋಳಿಗಿ ಹಾಕ್ಯಾನಲ್ಲೋ

ಮುಂಗೈಗೆ ಜೋಳಿಗಿ ಹಾಕ್ಯಾನಲ್ಲೋ
ಮುರಗಿ ಬೆತ್ತವ ಹಿಡಿದಾನೋ
ಮುರಗಿ ಬೆತ್ತವ ಹಿಡಿದಾನಲ್ಲೋ
ಊರನೆಲ್ಲ ಆಡ್ಯಾನೋ

ಊರನೆಲ್ಲ ಆಡ್ಯಾನಲ್ಲೋ
ಚಂಗಳವ್ವನ ಮನಿಗೆ ಬಂದಾನೋ
ಆಗ ನೋಡು ಚಂಗಳವ್ವನಲ್ಲೋ
ಮುತ್ತುರತ್ನ ತುಂಬಿ ತಂದಾಳೋ

ಕೈಲಾಸದ ಗುರುವೇಳೋ
ಮತ್ತೊಂದು ಮಾತು ಹೇಳ್ಯಾನೋ
ಮುತ್ತು ನಮಗೇನು ಕಡಿಮಿಲ್ಲ ಚಂಗಳವ್ವ
ರತ್ನ ನಮಗ ಏನು ಕಡಿಮಿಲ್ಲ

ಮುತ್ತುರತ್ನ ಹಿಂದಕ ಓದು
ಬೆಳ್ಳಿಬಂಗಾರ ತುಂಬಿ ತಂದಾಳೋ
ಕೈಲಾಸದ ಗುರುವೇಳೋ
ಮತ್ತೊಂದು ಮಾತು ಹೇಳ್ಯಾನೋ

ನಮಗ ಹಸಿವು ಆಗ್ಯಾವು ಚಂಗಳವ್ವ
ನಿಮ್ಮ ಮನಿಯ ಬಿನ್ನಾಯವೋ
ನಿನ್ನ ಮಗನ ಕೊರದ ಅಡಗಿಯ ಮಾಡಿ
ನಮಗ ಪಲ್ಲೇವ ನೀಡಲ್ಲೋ

ಆಗ ನೋಡು ಚಂಗಳವ್ವ ಅಲ್ಲೆ
ಬಹಳ ದುಃಕವ ಮಾಡ್ಯಾಳೋ
ಬಹಳ ದುಃಕವ ಮಾಡ್ಯಾಳಲ್ಲೋ
ಸ್ವಾಮಿ ಪಾದಕ ಬಿದ್ದಾಳೋ

ಸ್ವಾಮಿ ಪಾದಕ ಬಿದ್ದಾಳ ಚಂಗಳವ್ವ
ಮೆಲ್ಲಮೆಲ್ಲಕ ಎದ್ದಾಳೋ
ಓದುಸಾಲಿಗ ಹೋಗ್ಯಾಳ ಚಂಗಳವ್ವ
ಕೂಗ್ಯಾಡಿ ಮಗನ ಕರದಾಳೋ

ಕೂಗ್ಯಾಡಿ ಮಗನ ಕರದಾಳ ಚಂಗಳವ್ವ
ಬಾ ಚೆಲ್ಲಾಳಂತ ಅಂದಾಳೋ
ಲೆತ್ತದಾಲಿಯೇ ಲೇಕುಣಿ ಕಡ್ಡಿ
ಗಿಲಿ ಗಿಲಿ ಮಗ ಓಡಿ ಬಂದಾನೋ

ಗಿಲಿ ಗಿಲಿ ಮಗ ಓಡಿ ಬಂದನಲ್ಲೋ
ಅಡಗಿ ಮನೆತನ ಕರತಂದಾಳೋ
ಅಡಗಿ ಮನೆತನ ಕರೆದು ತಂದಾಳೋ ಚಂಗಳವ್ವ
ಕೊಳ್ಳು ಮೆಟ್ಟಿ ಕುತಗಿ ಕೊಯ್ದಾಳೋ

ಕೊಳ್ಳು ಮೆಟ್ಟಿ ಕುತಗಿ ಕೊಯ್ದಾಳೊ ಚಂಗಳವ್ವ
ರನ್ನದ ಈಳಿಗಿ ಹಿಡಿದಾಳೋ
ರನ್ನದ ಈಳಿಗಿ ಹಿಡಿದಾಳೋ ಚಂಗಳವ್ವ
ಸಣ್ಣಗಾದರೂ ಹೆಚ್ಯಾಳೋ

ಸಣ್ಣಗಾದರೂ ಹೆಚ್ಚಾಳೊ ಚಂಗಳವ್ವ
ತಾಮ್ರದ ತಪೆಲ್ಯಾಗ ಇಳಿವ್ಯಾಳೋ

ತಾಮ್ರದ ತಪೆಲ್ಯಾಗ ಇಳಿವ್ಯಾಳ ಚಂಗಳವ್ವ
ಉಪ್ಪು ಕಾರ ಮೆಣಸಿಂಡಿ ಹಾಕ್ಯಾಳೋ

ಉಪ್ಪುಕಾರ ಮೆಣಸಿಂಡಿ ಹಾಕ್ಯಾಳ ಚಂಗಳವ್ವ
ಬೆಳ್ಳಿ ಒಲಿಮ್ಯಾಲೆ ಇಳಿವ್ಯಾಳೋ
ಬೆಳ್ಳಿ ಒಲಿಮ್ಯಾಲೆ ಇಳಿವ್ಯಾಳ ಚಂಗಳವ್ವ
ಊದಿನ ಕಡ್ಡಿಲೆ ಉರಿವ್ಯಾಳೋ ಚಂಗಳವ್ವ

ಊದಿನ ಕಡ್ಡಿಲೆ ಉರಿವ್ಯಾಳೋ
ಬಂಗಾರ ಹುಟ್ಟಿಲಿ ತಿರಿವ್ಯಾಳೋ
ಆಗ ನೋಡು ಚಂಗಳವ್ವ ಅಲ್ಲೇ
ಹದಹಾಕಿ ಅಡಗಿ ಮಾಡ್ಯಾಳೋ

ಹದಹಾಕಿ ಅಡಗಿ ಮಾಡ್ಯಾಳೋ ಚಂಗಳವ್ವ
ಜಂಗಮಗ ನೀರನು ಕೊಟ್ಟಾಳೋ
ಏಳೋ ಏಳೋ ಏಳ ನನ ಗುರುವೆ
ಜಳಕದ ವೇಳೆ ಆದಾವೋ

ಕೈಲಾಸದ ಗುರುವೆ ಏಳು
ಮೆಲ್ಲ ಮೆಲ್ಲಗೆ ಎದ್ದಾನೋ
ಮೆಲ್ಲ ಮೆಲ್ಲಗೆ ಎದ್ದಾನಲ್ಲೊ
ಮೈಯ ಮೇಲಿನ ಅರಿಬಿ ಇಳಿವ್ಯಾನೋ

ಮೈಮ್ಯಾಲಿನ ಅರಿಬಿ ಇಳಿವ್ಯಾನಲ್ಲೊ
ಜಳಕ ಜಾಪತ್ರಿ ಮಾಡ್ಯಾನೋ
ಜಳಕ ಜಾಪತ್ರಿ ಮಾಡ್ಯಾನಲ್ಲೋ
ಶಿವಪೂಜೆ ಮಾಡುತಲೈದಾನೋ

ಆಗ ನೋಡು ಚಂಗಳವ್ವನು ಅಲ್ಲೆ
ಜಂಗಮಗ ಎಡಿಯ ಮಾಡ್ಯಾಳೋ
ಕೈಲಾಸದ ಗುರುವೇಳು ಅವ
ಮತ್ತೊಂದು ಮಾತು ಹೇಳ್ಯಾನೊ

ಬಾರೋ ಬಾರೋ ಬಾ ನನ್ನ ಮಗಳ
ನಂದೊಂದು ಮಾತು ಕೇಳಿ ಹೋಗು
ಏನನ್ನ ಕೋಟಿ ನಿನ್ನ ಮಗನು
ಬಿನ್ನಾಯ ಮಾಡಬೇಕೆಂದಾನೋ

ಆಗ ನೋಡು ಚಂಗಳವ್ವ ಅಲ್ಲೆ
ಬಹಳ ದುಃಕವ ಮಾಡ್ಯಾಳೋ
ಬಹಳ ದುಃಕವ ಮಾಡ್ಯಾಳಲ್ಲೋ
ಏನೆಂದು ಹೇಳುತೈದಾಳೋ

ಒಬ್ಬನ ಮಗನ ಕೊಂದು ಅಡಿಗಿ ಮಾಡಿನಿ
ಇನ್ನೊಬ್ಬ ಮಗನಿಲ್ಲೇಳೋ
ಬಾರೋ ಬಾ ನನ್ನ ಮಗಳ
ನಂದೊಂದು ಮಾತು ಕೇಳಿ ಹೋಗೋ

ಓದು ಸಾಲಿಗೆ ಹೋಗವ್ವ ಚಂಗಳವ್ವ
ಕೂಗ್ಯಾಡಿ ಮಗನ ಕರೆಯಲ್ಲೆ
ಆಗ ನೋಡು ಚಂಗಳವ್ವ ಅಲ್ಲಿ
ಕೂಗ್ಯಾಡಿ ಮಗನ ಕರದಾಳೋ

ಕೂಗ್ಯಾಡಿ ಮಗನ ಕರೆದಾಳು ಚಂಗಳವ್ವ
ಬಾಲೇಳಂತದಾಳೋ
ಲೆತ್ತದಾಲಿಯೋ ಲೇಕುಣಿಕಡ್ಡಿ
ಗಿಲಿ ಗಿಲಿ ಮಗ ಓಡಿ ಬಂದಾನೋ

ಗಿಲಿ ಗಿಲಿ ಮಗ ಓಡಿ ಬಂದಾನಲ್ಲೋ
ಸ್ವಾಮಿ ಹಂತಿಲೇ ಕುಳಿತಾನೋ
ಕೈಯಲಾಸದ ಗುರುವೇಳು ಅವ
ಮತ್ತೊಂದು ಮಾತು ಹೇಳ್ಯಾನೋ

ಬಾರೋ ಬಾರವ್ವಾ ನನ ಮಗಳ
ನಂದೊಂದು ಮಾತು ಕೇಳಿ ಹೋಗು
ಏನ ಬೇಡತಿ ಬೇಡ ನನ್ನ ಮಗಳ
ಬೇಡಿದ ಭಾಗ್ಯವ ಕೊಡುವೆನು

ಆಗ ನೋಡು ಚಂಗಳವ್ವ ಆಗ
ಗುರುವಿನ ಆಸರ ಕೇಳ್ಯಾಳೋ
ಕೈಲಾಸದ ಗುರುವೇಳು ಅವ
ಯಾಕಾಗಲೊಲ್ಲದಂದಾನೋ

ಯಾಕಾಗವಲ್ಲದಂದಾನಲ್ಲೋ
ನಂದಿ ಏರುತಲೈದಾನೋ

ನಂದಿ ಏರುತಲೈದಾನಲ್ಲೋ
ಕೈಲಾಸಕ ಹೋಗ್ಯಾನೋ

## ಇತರ ಶರಣರ ವೃತ್ತಾಂತಗಳು

ಹೊಲದಾಗಿದ್ದ ದೇಸಾಯಿ ಮನಿಗಿ ಬರುವುತಾನೇನ
ಜಳಕ ಮಾಡುತಾನೇನೆ ಊಟ ಮಾಡುತಾನೇನ
ಮೂರ ತಿಂಗಳ ದಿನಮಾನ ಯಾಳ್ಯಾ ಹೋಗುತಾವೇನ
ಸಣ್ಣ ದೇಸಾಯಿನಲ್ಲೇಳ ಹೊಲದಾಗಿರುವತಾನೇನ
ತಂದಿಯ ದೇಸಾಯನಲ್ಲೇಳ ಜೇಳಜಿ ಒಳಗೆ ಮನಗ್ಯಾನ
ಯಾರು ಏಳದುಕಿಂತೇನ ಕೋಳಿ ಕೂಗದು ಮೊದಲೇನ
ಕೋಳಿಕೂಗದು ಮೊದಲೇನ ಲಿಂಗಮ್ಮ ಏಳುತಾಳೇನ
ಗಚ್ಚಿನ ಬಚ್ಚಲಕ ಹೋಗ್ಯಾಳೆ ಹೆಚ್ಚಿನ ಜಳಕ ಮಾಡ್ಯಾಳೆ
ಮಿನದಾಳ ಮಡಿಯುಟ್ಟಾಳೆ ಹಣಿಯಲಿ ಕುಂಕಮಿಟ್ಟಾಳ
ಕೈಯಾಗ ಚರಗಿ ಹಿಡದಾಳೆ ಕರವಂದು ಬಿಡುವುತಾಳೇನ
ಕರವಂದು ಬಿಡುವುತಾಳೇನ ಹಾಲ ಹಿಂಡುತಾಳೇನ
ಕಾಯಿಕರ್ಪೂರ ಹಿಡದಾಳೆ ಮೀಸಲ ಸೀತಾಳ ಹಿಡದಾಳೆ
ಚರಗಿ ಹಾಲ ಹಿಡದಾಳೆ ಲ್ಯಾಯದ ಪಡಸಾಲಿ ಒಳಗೇನ
ಬಾಕಲ ತೆರಿಯುತಾಳೇನ ಹೊರಗ ಹೋಗುತಾಳೇನ
ಚಂದನ ಚೌಡಿಯ ಮುಂದೇನ ಮಂದನ ಮಳಗೀಲಿ ಹಾಯ್ದಳ
ಊರ ನಾಯಿಕೋಡಿ ಅಲ್ಲಪ್ಪ ಲಿಂಗಮ್ಮ ನೋಡುತಾಳೇನ
ಹಬ್ಬನೆ ಹವರಾತರೆ ಸಬ್ಬನೆ ಸರಹೊತ್ತೇನ
ಇಂತಯಾಳಿ ಒಳಗೇನ ಒಬ್ಬಾಕಿ ಹೆಣ್ಣುಮಗಳೇನ
ಒಬ್ಬಾಕಿ ಹೆಣ್ಣಮಗಳೇನ ಎಲ್ಲಿಗ ಹೋಗತಾಳಂದಾನ
ಹಾಯಲಿಂಗಮ್ಮ ಮುಂದೇನ ನಾಯಿಕೋಡಿ ಹಿಂದ ನಡದಾನ
ಹಳ್ಳದಾಟಿ ಹೋಗ್ಯಾನ ಹಳ್ಳದ ಗಡ್ಡಿಗ ನಿಂತಾನ
ಗಜ್ಜ ಹೈಯ್ಯಾಳ ಲಿಂಗನೆ ಹೈಯಾಳ ಸೀಮಿಗ ಹೋದಳ
ಹೈಯಾಳ ಸೀಮಿಗ ಹೋದಳ ನಾಯಿಕೊಡಿ ಮರಳಿ ಬಂದಾನ
ಯಾವ ಗೆಣಿಯನಿದ್ದಾನೆ ಯಾವ ಮಿಂಡನಿದ್ದಾನ
ಹೊತ್ತೇರಿ ಮುಂಜಾನಿ ಹೋದೇನ ದೇಸಾಯಿಗ ಹೇಳೇನಂದಾನ
ಮನಸೀನೊಳಗನಲ್ಲೇಳ ನಾಯಿಕೊಡಿ ಮಾತನಾಡ್ಯಾನ
ಇಂಥ ಮಾತನಾಡ್ಯಾನೆ ಮನಿಗಿ ಹೋಗುತಾನೇನ
ಹಾಯಲಿಂಗಮ್ಮನಲ್ಲೇಳ ಹುತ್ತಿನಗಡ್ಡಿಗ ಬಂದಾಳ
ಚರಗಿ ನೀರ ಸುರುವ್ಯಾಳೆ ಕುಂಕುಮ ಭಂಡಾರ ಹಚ್ಯಾಳ
ಹಳ್ಳುಲೋಭನ ಸುಟ್ಟಾಳೆ ಕಾಯಿಕರ್ಪೂರ ಒಡದಾಳ
ಹಾಲ ಸಕ್ಕರಿ ಇಟ್ಟಾಳೆ ಗಜ್ಜ ಎಳದ ಲಿಂಗನ

ಗಜ್ಜಯಿ ಎಳದ ಲಿಂಗನೆ ಹಾಲ ಕುಡಿಯುತಾನೇನ
ಬಾರೋ ಬಾರೋ ಲಿಂಗವ್ವ ನಾಳಿಗ ನಿನ್ನ ಪೂಜೆವ್ವ
ನಾಳಿಗ ನಿನ್ನ ಪೂಜೆವ್ವ ಎರವನಾದವಂದಾನ
ಒಳ್ಳೆದು ಒಳ್ಳೆದಂದಾಳೆ ಹೊರಳಿ ಹೋಗುತಾಳೇನ
ಹೊರಳಿ ಹೋಗುತಾಳೇನ ಹಳ್ಳ ಧಾಟುತಾಳೇನ
ಊರ ಒಳಗೆ ಹೋದಾಳೆ ದೇಸಾಯಿ ಮನಿಗೆ ಬಂದಾಳ
ಬಾಗಲ ತಲುಪ ಹಾಕ್ಯಾಳ ಅಗಳಿಯ ದಬ್ಬುತಾಳೇನ
ಅಗಳಿಯ ದಬ್ಬುತಾಳೇನ ಮನಿಯಾಕ ಹೋಗುತಾಳೇನ
ಲ್ಯಾಯದ ಪಡಸಾಲಿ ಒಳಗೇನ ಚರಗಿ ಇಡುವುತಾಳೇನ
ಮಲ್ಲನಮನಗೂತಾಳೇನ ಹೊತ್ತರೆ ಮುಂಜಾನಿ ಎದ್ದಾಳ

ಊರ ನಾಯಿಕೋಡಿ ಅಲ್ಲೇಳ ಮನಿಗಿ ಬರುವುತಾನೇನ
ಮನಿಗಿ ಬರುವುತಾನೇನ ದೇಸಾಯಿ ಕುಂತಾನೇನಯ್ಯ
ಬಾಗಿ ಮುದ್ರಿ ಕೊಟ್ಟಾನೆ ಏನಂದಡಾತಾನೇನ
ಸಣ್ಣ ದೇಸಾಯಿನಲ್ಲಪ್ಪ ಎಲ್ಲಿ ಇರುತಾನಂದಾನ
ಇಂದಿಗ ಮೂರತಿಂಗಳ ವನದಾಗ ಇರತಾನಂದಾನ
ಎಂಟು ಎತ್ತಾನಲ್ಲೇಳ ವನದಾಗ ಇರತಾನಂದಾನ
ಮುಂಜಾಳಿ ಜಳಕಕ ಬರತಾರೆ ಊಟ ಮಾಡೇವಂದಾನ
ಊಟ ಮಾಡಿ ಹೋಗತಾನೇ ಬುತ್ತಿ ಒಯ್ಯುತಾಳೇನಯ್ಯ
ಬುತ್ತಿಯನಿಲ್ಲೇಳಂದಾನೆ ವಿದ್ಯಯಿಲ್ಲೇಳಂದಾನ
ಮಾನ ಹೋಗಲಿಬಾರದ ಜೀವ ಹೋಗದು ಪಾಡಯ್ಯ
ಹಂಗುರಗಿ ಗೌಡರ ಮಗಳ ಹಾಯಿನಿಂಗಮ್ಮನೇನೆ ನಮ್ಮಯ
ಕೈಯಾಗ ಚರಗಿ ಹಿಡದಾಳೆ ಊರ ಬಿಟ್ಟು ಹೋದಾಳೆ
ಹಬ್ಬನೆ ಹವರಾತರೆ ಸಬ್ಬನೆ ಸರವತ್ತೇನ
ಸಬ್ಬನೆ ಸರಹೊತ್ತಿನಾಗ ಒಬ್ಬಕಿ ಹೋಗುತಾಳೇನ
ಖೂನ ಹಿಡದಾ ಹೋಗೀನೆ ಗುರುತ ಹಿಡದಾ ಹೋಗಿನೆ
ಹಳ್ಳ ಧಾಟೀನಂದಾನೆ ಬೆನ್ನ ಹತ್ತೀನಂದಾನ
ಹಯ್ಯಾಳ ಸೀಮಿತಾನೇನ ನಾನೇ ಹೋಗಿನಂದಾನ
ಯಾವ ಗೆಣಿಯಾನಿಟ್ಟಾಳ ಯಾವ ಮಿಂಡನಿಟ್ಟಾಳ
ಕತ್ತಲಿ ಅಡುವಿ ಒಳಗೇನ ಕಂಟಿ ಒಳಗೆ ಹೋದಾಳ
ಹೊರಳಿ ಬಂದೀನಂದಾನ ಮನಿಗಿ ಹೋಗಿನಂದಾನ
ಎಕಚಿಂತಿಯಾ ದೇಸಾಯನೆ ಉರದ ಬೆಂಕಿನಾದಾನ
ಉರದ ಬೆಂಕಿನಾದನೆ ತೆಲಿವಂದು ಖೆಂಡನಾದನ
ಹೊತ್ತೇರೆ ಮುಂಜಾನಿ ಎದ್ದಿದ್ದ ದೇಸಾಯಿ ಮನಿಗಿ ಬಂದಿದ್ದ
ಜಾಮ ಜಳಕವ ಮಾಡಿದ್ದ ಉಂಡಾನೆ ಬಾಳುಟ್ಟಾನೆ
ತಂದಿ ಹೇಳುತಾನೇನ ಮಗನೆ ಕೇಳುತಾನೇನ

ಸಂಜಿಗ ಬರಬೇಕಂದಾನ ಜೇಳಜಿ ಒಳಗೆ ಇರಬೇಕ
ನಿನ್ನ ಮಡದಿನಲ್ಲೇಳ ಹೈಯ್ಯಾಳದೂರಿಗ ಹೋದಳ
ಊರಿಗ ಹೋಗ್ಯಾಳಂದಾನೆ ಹಬ್ಬನೆ ಹವರಾತರೆ
ಯಾವಾಗ ಹೋತಾಳಲ್ಲಪ್ಪ ಯಾವಗ ಬರತಾಳೇನಯ್ಯ
ಮೂರ ತಿಂಗಳ ದಿನಮಾನ ಮನಿಯಾಗ ನೀನೆ ಇಲ್ಲಯ್ಯ
ಒಳ್ಳೆದು ಒಳ್ಳೇದಂದಿದ್ದ  ಸಂಜಿಯ ಮಾಡಿ ಬಂದೇನ
ಸಂಜಿಯ ಮಾಡಿ ಬಂದಾನೆ ಉಂಡಾನೆ ಬಾಳುಟ್ಟನ
ಜೇಳಜಿ ಒಳಗ ನಮ್ಮಯ್ಯ ಇಬ್ಬರು ತಂದಿಯ ಮಕ್ಕಳ
ಚಂದುರಾಯುಧ ಹಿಡದಾರ ಚಪ್ಪಗೊಡಲಿ ಹಿಡದಾರ
ಯಾರು ಏಳದುಕಿಂತೇನ ಕೋಳಿ ಕೂಗದ ಮೊದಲೇನ
ಗಚ್ಚಿನ ಬಚ್ಚಲಕ ಹೋಗ್ಯಾಳೆ ಹೆಚ್ಚಿನ ಜಳಕ ಮಾಡ್ಯಾಳ
ಮಡಿ ಕಳದ ಮಡಿ ಉಟ್ಟಾಳೆ ಹಣೆಯಲಿ ಕುಂಕುಮಿಟ್ಟಾಳ
ಕರವಂದು ಬಿಡುವುತಾಳೇನ ಚರಗಿ ಹಾಲ ಹಿಂಡ್ಯಾಳ
ಕೈಯಾಗ ಸೀತಾಳ ಹಿಡದಾಳ ಕಾಯಿ ಕರ್ಪೂರ ಹಿಡದಾಳ
ಕಾಯಿ ಕರ್ಪೂರ ಹಿಡದಾಳೆ ರಾಯಿಮಾರಗ ಹಿಡದಾಳ
ಲ್ಯಾಯದ ಪಡಸಾಲಿ ಇಳದಾಳ ಅಗಳಿ ದಬ್ಬುತಾಳೇನ
ಅಗಳಿಯ ದಬ್ಬುತಾಳೇನ ಬಾಕಲ ತಲುಪ ತೆರದಾಳ
ರಾಯಿಮಾರಗ ಹಿಡದಾಳ ರವ್ವಣಿ ಮಾಡುತಾಳೇನ
ಹೊನ್ನ ಹಯ್ಯಾಳ ಭೂಮ್ಯಾಗೆ ಗಜ್ಜಯಿ ಎಳದ ಲಿಂಗನೆ
ಗಜ್ಜಯಿ ಎಳದ ಲಿಂಗನೆ ಹಾಯಲಿಂಗಮ್ಮನೆ ಬಂದಾಳ
ತಂದಿ ಮಗನ ಕೂಡ್ಯಾರ ಕೊಡಲಿ ಹಿಡದಾರೇನಯ್ಯಾ
ಚಂದರಾಯುಧ ಹಿಡದಾರ ಚಪ್ಪಗೊಡಲಿ ಹಿಡದಾರ
ಹಾಯಲಿಂಗಮ್ಮನಲ್ಲೇಳ ದೇಸಾಯಿ ಹಿಂದ ನಡದಾರ
ಕಾಂತಾರ ಕಂಟಿ ಒಳಗೇನ ಹಿಂಗಾರಿಗಳ್ಳಿ ಒಳಗೇನ
ಒಡಿಯಾನ ಕಂಟಿ ಒಳಗೇನ ಮುರಗಿ ಹೊಡದಾ ಬೆಳದಾವ
ಮುರಗಿ ಹೊಡದು ಬೆಳದಾವೆ ಹಾಯಲಿಂಗಮ್ಮನೆ ಬಂದಾಳ
ಮೂರಕಣ್ಣಿನ ಹುತ್ತಿಗೆ ಚರಗಿ ಸುರುವುತಾಳೇನ
ಚರಗಿ ಸುರುವುತಾಳೇನ ಭಂಡಾರ ಹಚ್ಚುತಾಳೇನ
ಊದು ಭಂಡಾರ ಹಚ್ಯಾಳ ಕಾಯಿಕರ್ಪೂರ ಒಡದಾಳ
ಚರಗಿ ಮ್ಯಾಲಯಿಟ್ಟಾಳೆ ಹೊಂದಿಸಿ ಕೈಯ ಮುಗದಾಳ
ಇಬ್ಬರು ದೇಸಾಯಿಗಳೇನ ಎಡಕ ಬಲಕ ನಿಂತಾರ
ಚಪ್ಪಗೊಡಲಿ ಎತ್ಯಾರೆ ಚಂದುರಾಮನಂತವ
ಚಂದರಾಮನಂತವೇ ಚಪ್ಪಗೊಡಲಿ ಎತ್ಯಾರ
ಆಯುಧ ಎತ್ತುತಾರೇನ ಹಂಗೇ ನಿಂದ್ರುತಾರೇನ
ಮ್ಯಾಕ ಏಳವಲ್ಲವೆ ತೆಳಿಯಾಕ ಇಳಿಯಾವಲ್ಲವ
ನಿಂಗಮ್ಮ ಹೊರಳಿ ನೋಡಿಲ್ಲ ಹೊಂದಿಸಿ ಕೈಯ ಮುಗದಾಳ

ಹೊಂದುಸಿ ಕೈಯ ಮುಗದಾಳೆ ಕಣ್ಣಮುಚ್ಚಿ ನಿಂತಾಳ
ಹಿರಿಯರಿಗ ಹ್ಯಾಂಗ ನಡಸೀದಿ ಲಿಂಗಯ್ಯ ಕಿರಿಯರಿಗ ಹಂಗೇ ನಡಸಯ್ಯ
ಎಕಚಿಂತಿಯ ದೇಸಾಯಿರಿಗೆ ಕೈಯ ಹೋಗಿ ನಿಂತಾವ
ಕೈಯ ಹೋಗಿ ನಿಂತಾರೆ ಕಣ್ಣ ಹೋಗಿ ನಿಂತಾರ
ಕೊಡ್ಲಿ ಏಳವಲ್ಲವೇ ತಲವಾರ ಏಳವಲ್ಲವ
ಎತ್ತಿದ ಕೈಯ ದೇಸಾಯಿಗ ತೆಳಗ ಇಳಿಯಾವಲ್ಲವ
ತೆಳಗ ಇಳಿಯಾವಲ್ಲವೇ ಕಣ್ಣ ಹೋಗಿ ನಿಂತಾವ
ಎಕಚಿಂತಿಯ ದೇಸಾಯಿಗ ತೆಳಗ ಇಳಿಯಾವಲ್ಲವ
ಹಾಯಲಿಂಗಮ್ಮನಗೂಡೇನೆ ಲಿಂಗ ಮಾತಾನಾಡ್ಯಾನ
ಬಾರೋ ಬಾರೋ ಲಿಂಗಮ್ಮ ಏನ ಬೇಡತಿ ಬೇಡವ್ವ
ಏನ ಬೇಡತಿ ಬೇಡವ್ವ ಬೇಡಿದ ಕುಡಿತೀನಿ ಅಂದಾನ
ಬೇಡಿದ ಕೊಡುತೀನಲ್ಲವ್ವ ಹಿಂದಕ ಹೊರಳಿ ನೋಡವ್ವ
ಹಿಂದಕ ಹೊರಳಿ ನೋಡ್ಯಾಳೆ ಮಾವ ಬಲಕ ನಿಂತಾನ
ಮಾವ ಬಲಕ ನಿಂತಾನೆ ಪುರುಷ ಎಡಕಾ ನಿಂತಾನ
ಕೊಡಲಿ ಎತ್ತಿ ಹಿಡದಾರೆ ಚಂದರಾಯುಧ ಹಿಡದಾರ
ಮ್ಯಾಕ ಏಳವಲ್ಲವೇ ತೆಳಿಯಾಕ ಇಳಿಯವಲ್ಲವ
ಬಾರೋ ಬಾರೋ ಲಿಂಗಮ್ಮ ತಪ್ಪು ನನಗೆ ಆದವ
ಭೂಮಿಗಿ ಬೀಳುತಾರೇನೆ ಪಾದ ಕೊಡಬೇಕಂದಾರ
ನೀವೆ ತಂದಿ ತಾಯಪ್ಪ ನಾನು ಎಷ್ಟರ ಮನಸೇಳ
ನಾನು ಎಷ್ಟರ ಮನಸ್ಯಾನೆ ಹೈಯ್ಯಳ ಲಿಂಗಗ ಕೇಳರೆ
ಗಜ್ಜಯಿ ಎಳದ ಲಿಂಗನೆ ನುಡದಾನೆ ಮಾತಾಡ್ಯಾನ
ಬಾರೋ ಬಾರೋ ಲಿಂಗಮ್ಮ ಬೇಡಿದ ಕೊಡಿತೀನಿ ಅಂದಾನ
ಬೇಡಿದ ಕೊಡತೀನಿ ಅಂದಾನೆ ಹೇಳಿದ ಮಾಡೇನಂದಾನ
ಅತ್ತಿ ಮಾವ ಗಂಡಗೆ ಕಣ್ಣ ಹೋಗಿ ನಿಂತಾರ
ಎಂಟನೇಗಲ ಎತ್ತೇನೆ ಕಣ್ಣ ಹೋಗಿ ನಿಂತಾವ
ಅತ್ತಿಯ ನಾದುನಿದೇರಪ್ಪ ಮನಿಯಾಗ ಕಣ್ಣ ಹೋದವ
ಹ್ಯಾಂಗ ಮಾಡಬೇಕಂದಾಳ ಲಿಂಗಮ್ಮ ಎಂತುಮಾಡಬೇಕಂದಾಳ
ಬಾರೋ ಬಾರೋ ಲಿಂಗಮ್ಮ ಬೇಡಿದ ಕೊಡತೀನಿ ಅಂದಾನ
ನೂಲಹುಣ್ಣಿಮಿ ದಿವಸೇನ ಪಲ್ಲಕ್ಕಿ ಸಂಗಟ ಬರಬೇಕಾ
ಹವುಳ ಮುತ್ತಿನ ಪಲ್ಲಕ್ಕಿ ಸಂಗಟ ನೀವೆ ಬರಬೇಕಂದಾಳ
ನೀವು ಬರತನಕಲ್ಲೇಳ ಜಾತರಿನಾಗದಿಲ್ಲೇನ
ಏಕಚಿಂತಿಯ ದೇಸಾಯರ ಧಾರಿಯ ನೋಡುತಾರೇನ
ಧಾರಿಯ ನೋಡುತಾರೇನ ಬಾಜಿಯ ಸಂಗಟ ಬರಬೇಕ
ಒಡ್ಡಿವಾಲಗ ಸಂಗಟೆ ಕಟ್ಟಿ ಮುಂದ ನಿಂದ್ರರೆ
ಐದ ಹಿಡಿಯಾ ಹೊನ್ನನೇ ನೀವೇ ಹಾಲಿಸಬೇಕಯ್ಯ
ನೀವೆ ಬಂದಾರಲ್ಲವ್ವ ಜಾತರಿ ಬಿದ್ದಾವಂದಾರ

ಎಲ್ಲಿಯ ಬೇಕೆನಲ್ಲವ್ವ ಬ್ಯಾಟಿಯ ಚೂರಿ ಹಾಕ್ಯಾರ
ಬ್ಯಾಟಿಯ ಚೂರಿ ಹಾಕ್ಯಾರೆ ಜಾತೂರಿ ನಡಿಯುತಾವೇನ
ನಿನ್ನ ಬಾಯಿಲಿ ಅಲ್ಲವ್ವ ನುಡುದುದು ಆದಾವಂದಾನ
ನೀನೆ ಸೀತಾಳ ಹಾಕಿದರೆ ನೀನೆ ಭಂಡಾರ ಹಚ್ಚಿದರ
ಮಾವಗ ಕಣ್ಣ ಬಂದಾವೆ ಪುರುಷಗ ಕಣ್ಣ ಬಂದಾವ
ಎಂಟನೇಗಲ ಎತ್ತಿಗ ನೀನೆ ಭಂಡಾರ ಹಚ್ಚಿದರ
ಭಂಡಾರ ಹೊಡಿಯಲಿಬೇಕವ್ವ ಭಂಡಾರ ತೂರಲಿಬೇಕವ್ವ
ಮನಿಯಾಗ ಹೊಡಿಯಲಿ ಬೇಕವ್ವ ಹಣಿಗಿ ಹಚ್ಚಲಿ ಬೇಕವ್ವ
ಮನದಾನ ಹರಿಕಿ ನಿಂಗಮ್ಮ ಆಗಿ ಬರತಾವಂದಾನ
ಹಿಂದಿನ ಕಾಲ ಹೋದಾವೆ ಮುಂದಿನ ಕಾಲ ಬಂದಾವ
ಪೂಜಿ ಸರದಾವಂದಾನೆ ಇಂದಿಗ ಕಡಿಯನಾದಾವ
ಇಂದಿಗ ಕಡಿಯಾನಾದವೆ ಗಜ್ಜಯಿ ಎಳದ ಲಿಂಗನೆ
ಸೀತಳ ಕೊಡುವುತಾನೇನ ಭಂಡಾರ ಕೊಡುವುತಾನೇನ
ಹೈಯ್ಯಾಳ ಲಿಂಗನಲ್ಲೇಳ ನಿಂತಲ್ಲೆ ಮಾಯವಾದನ
ಮಾವಗ ಸೀತಾಳ ಹೊಡದಾಳೆ ಗಂಡಗ ಸೀತಾಳ ಹೊಡದಾಳ
ಭಂಡಾರ ಹಚ್ಚುತಾಳೇನೆ ಕಣ್ಣ ಬರುವುತಾವೇನ
ಬಾರ ಬಾರ ದೇಸಾಯಿ ಏನ ತಪ್ಪ ಮಾಡಿದೆ
ತಾಯಿನಂದರ ನೀನಪ್ಪ ತಂದಿನಂದರ ನೀನಪ್ಪ
ಮೂರು ಮಂದಿ ಕೂಡ್ಯಾರೆ ಮನಿಗಿ ಬರುವುತಾರೇನ
ಎಂಟನೇಗಲ ಎತ್ತಿಗ ಭಂಡಾರ ಹೊಡಿಯುತಾಳೇನೆ
ಸೀತಾಳ ಹೊಡಿಯುತಾಳೇನ ಕಣ್ಣ ಬರುವುತಾವೇನ
ಮನಿಯಾ ಒಳಗ ನಮ್ಮಯ್ಯ ಭಂಡಾರ ಹೊಡಿಯಲಿಬೇಕವ್ವ
ಎಮ್ಮಿ ಕರಗೋಳಗಲ್ಲೇಳ ಉಟಗಿ ಬ್ಯಾನಿ ಹೋದವ
ಆಕಳ ಕರಗೋಳಿಗಲ್ಲೇಳ ಉಟಗಿ ಬ್ಯಾನಿ ಹೋದವ
ರಕ್ತಹಿಂಡ ಎಮ್ಮಿ ಆಕಳ ಹಾಲ ಹಿಂಡುತಾವೇನ
ಹರಕಿನಾಗಿ ಬಂದಾವೇ ವರವ ಕೂಡಿ ಬಂದಾವ
ಹಂಗುರಗಿ ಗೌಡರ ಸೊಸಿಯೇನ ಹಾಯನಿಂಗಮ್ಮನ ನಮ್ಮಯ್ಯ
ಹಾಯಿನಿಂಗಮ್ಮ ನಮ್ಮಯ್ಯ ಎಕಚಿಂತಿ ದೇಸಾಯನ
ಎಕಚಿಂತಿ ದೇಸಾಯಿನ ಮಗಳೇನ ಹಾಯಲಿಂಗಮ್ಮ ನಮ್ಮಯ್ಯಾ
ದೇವಿ ಧರ್ಮರ ಹಾಡೇನೆ ಇಲ್ಲಿಗ ಇದು ಒಂದು ಸಂದೇನ
ಇಲ್ಲಿಗ ಇದು ಒಂದು ಸಂದೇನ ಮುಂದಿನ ಸಂದಿಗ ತಿಳಸೇನ
ದ್ಯಾವರು ಬಂದಾರ ಬನ್ನೀರೆ

***

# ಗಂಗಿ ಮಾಳಮ್ಮನ ವೃತ್ತಾಂತ

ಶಿವನೆ ನಮ್ಮಯಿ ದ್ಯಾವರು ಬಂದಾರ ಬನ್ನೀರೆ
ಸ್ವಾಮಿ ನಮ್ಮಯಿ ದ್ಯಾವರು ಬಂದಾರ ಬನ್ನೀರೆ
ಮೂಡಲ ನಡುಬಾ ಮುತ್ತಿನಚಂಡು ನನ್ನ ಮುತ್ಯಾ ಮೈಲಾರಿಲಿಂಗನ
ಮರ್ತ್ಯಲೋಕದೊಳಗೇನಪ್ಪಿಲ್ಲಿ ಮಣಿಯಾನಮಲ್ಲಸೂರನ
ಮಣಿಯಾಮಲ್ಲಸೂರಗೆ ವಧಗೋಳು ಮಾಡಬೇಕಂದಾನ
ವಧಗೋಳು ಮಾಡಬೇಕಂದಾನೆ ಕೈಯಲಾಸ ಬಿಟ್ಟಾನ
ಕೈಯಲಾಸ ಬಿಟ್ಟರೆ ಮರ್ತ್ಯಲೋಕಕ ಇಳದಾನ
ಬುರುವದಕೆಲ್ಲ ಬಂದಾನೆ ಭಂಡಾರ ಬಲ್ಲಿನಿಲ್ಲೇನ
ಭಂಡಾರ ಬಲ್ಲಿ ಇಲ್ಲೇನೆ ಯಾರನ ಕೇಳಬೇಕಂದಾನ
ಯಾರನ ಕೇಳಬೇಕೆಂದಾರೆ ಹೆಗ್ಗಣ ಪರದಾನಿದ್ದಾನ
ಹೆಗ್ಗಣ ಪರದಾನಿಗಲ್ಲೇಳ ಭಂಡಾರ ಶೋದ ಕೇಳಯ್ಯ
ಅಣ್ಣಿಗೇರಿ ಎಂಬ ಊರಾಗೆ ಗಂಗಿಮಾಳಮ್ಮಿದ್ದಾಳ
ಗಂಗಿಮಾಳಮ್ಮನ ಬಲ್ಲೇನೆ ಭಂಡರ ಇರತಾದಂದಾರ
ಒಳ್ಳೆದು ಒಳ್ಳೆದಂದಾರ ಮಲ್ಲಯ್ಯ ಹೇಳುತಾನೇನ
ಮಲ್ಲಯ್ಯ ಹೇಳುತಾನೇನ ಹೆಗ್ಗಣ ಪರಧಾನಿ ಬಂದಾನ
ಮಾದೇವ ಬರುವುತಾನೇನ ಮಲ್ಲಯ್ಯ ಬರುವುತಾನೇನ
ಅಣ್ಣಿಗೇರಿ ಊರ ಮುಂದೇನ ಬಳಿಯ ವ್ಯಾಪಾರಿಟ್ಟಾರ
ಬಳಿಯಾ ವ್ಯಾಪಾರಿದ್ದಾರೆ ಡೇರ್ಯಾ ಹೊಡಿಯುತಾರೇನ
ವೀರಗಂಧ ಹಚ್ಯಾರ ಕುಂಕುಮ ಬಟ್ಟ ಹಚ್ಯಾರ
ಕಪ್ಪಿಲಿ ಕರಿ ಚಲುವನೇ ಮುಪ್ಪಿಲೆ ಬಹಳ ಹಿರಿಯನ
ಮುಪ್ಪಿಲೆ ಬಹಳ ಹಿರಿಯನೆ ಗಂಗಿ ಢೇರ್ಯಾ ಒಳಗೇನ
ಗಂಗಿ ಡೇರ್ಯಾ ಒಳಗೇನೆ ಕಡ್ಡಿಬಿಲವಾರ ಒಳಗೇನ
ಹಸುರು ಬಿಳಿಯಾ ಇಟ್ಟಾನೆ ಚಿಕ್ಕಿಯ ಬಳಿಗೋಳಿಟ್ಟಾನ
ಕಡ್ಡಿಯ ಬಿಲ್ವಾರಿಟ್ಟಾನೆ ಕೆಂಪ ಬಳಿಗೋಳಿಟ್ಟಾನ
ಕೆಂಪ ಬಿಳಿಗೋಳಿಟ್ಟಾನೆ ಗುಲಾಬಿ ಬಿಳಿಗೋಳಿಟ್ಟಾನ
ನಾನ ತರಹದ ಬಳಿಯೇನೆ ವ್ಯಾಪಾರಿಡುವುತಾನೇನ
ಅತ್ತಿಯ ಮನಿಯ ಸೊಸ್ತೇರೆ ತೌರಮನಿಯ ಹೆಣ್ಣಮಕ್ಕಳೆ
ರಾಯಿಮಾರಗ ಹಿಡದಾರೆ ಭಾಂಯಿ ಧಾಟಿ ಬಂದಾರ
ಭಾಂಯಿ ಧಾಟಿ ಬಂದಾರೆ ಬಳಿಯ ವ್ಯಾಪಾರ ಕೇಳ್ಯಾರ
ಗುತ್ತಾಗಿ ಬಳಿಗೋಳು ಹಾಕೇವೆ ಪುಣ್ಯ ಪಡಿಯಲಿ ಬಂದೇವ
ಪುಣ್ಯದ ಬಳಿಗೋಳು ಹಾಕೇವೆ ಪುಣ್ಯ ಪಡಿಯಲಿ ಬಂದೇವ
ಹೆಗ್ಗಣ ಪರಧಾನಲ್ಲೇಳ ಕರಕೊಂಡು ಬರುವುತಾನೇನ
ಅತ್ತಿಯ ಮನಿಯ ಸೊಸ್ತೇರ ತೌರಮನಿ ಹೆಣ್ಣಮಕ್ಕಳ
ಅಂಗೈಲಿಂದ ಬಳಿಯೇನೆ ಮುಂಗೈತಾನ ಏರ್ಯಾವ

ಒಳ್ಳೆದು ಒಳ್ಳೇದಂದಾನೆ ಪುಣ್ಯ ಪಡಿಯಲಿ ಬಂದೇನ
ಏ ನನ್ನ ಹಡದಪ್ಪಾಗೋಳ ಹೆಣ್ಣ ಗಂಡು ಹುಟ್ಟಲಿ
ಹೆಣ್ಣು ಗಂಡು ಹುಟ್ಟಲೆ ಹೊಟ್ಟೆ ಬೆಳೆಯಲಿ ಅಂದಾರ
ಹರಕಿ ಕೊಡವುತಾರೇನ ಸಾಗಿ ಹೋಗುತಾರೇನ
ರಾಯರ ಓಣಿಲಿ ಹಾಯ್ದರ ಹಿರಿಯ ಕುರುಬರ ಮನಿಗೇನ
ಹಿರಿಯ ಕುರುಬರೆ ಮನಿಯಾಗೆ ಗಂಗಿ ಮಾಳಮ್ಮನಿದ್ದಾಳ
ಬರಿಯಾ ನನ್ನ ಅಕ್ಕದೇರಾ ಎಲ್ಲಿಗೆ ಹೋಗೀರುದಾನ
ಬರಿಯಾ ನನ್ನ ತಂಗಿದೇರಾ ಯಾವಲಿ ಬಳಿಯಾ ಬಂದಾವೆ
ಬಾರೋ ಬಾರೋ ಮಾಳಮ್ಮ ನಾವೇನು ಹೇಳಮಿ ಅಂದಾರ
ಬಳಿಯಾ ವರ್ಣನಲ್ಲವ್ವ ನಾವೇ ಹೆಳಂಗಿಲ್ಲವ್ವ
ಎಷ್ಟು ವರ್ಣನ ಮಾಡಿದರ ಹಾಳೇ ಅವೇಳಂದಾಳ
ಬಳಿಯಾ ವರ್ಣನಲ್ಲವ್ವ ನಾವೇ ಹೇಳಂಗಿಲ್ಲವ್ವ
ಎಷ್ಟು ವರ್ಣನ ಮಾಡಿದರ ಹಾಳೇ ಅವೇಳಂದಾಳ
ಬಳಿಯಾ ವ್ಯಾಪರವಲ್ಲವ್ವ ಭಾಂಯಿ ಮಂದನಾದವ
ವಾರಿಗಿ ನಾರ್ಯಾರಲ್ಲೇಳ ಹೇಳಿ ಮನಿಗಿ ಹೋದರ

ಗಂಗಿ ಮಾಳಮ್ಮನಲ್ಲೇಳ ಕೈಯಾಗ ತಂಬಿಗೀ ಹಿಡದಾಳ
ಕೈಯಾಗ ತಂಬಗಿ ಹಿಡಿದಾಳೆ ರಾಯಿಮಾರಗ ಹಿಡದಾಳ
ರಾಯಿಮಾರಗ ಹಿಡದಾಳೆ ಎಲ್ಲಿಗೆ ಬರುವುತಾಳೇನ
ಬಾಂಯಿ ಧಾಟಿ ಬಂದಾಳೆ ಹೆಗ್ಗಣ ಪರದಾನೀಗ ಬಂದಾಳ
ಪುಣ್ಯದ ಬಳಿಗೋಳು ಹಾಕೇವ ಪುಣ್ಯ ಪಡಿಯಲಿ ಬಂದೇವ
ಬಾರ ಬಾರ ನನ್ನವ್ವ ಗಂಗಿ ಧೇರ್ಯಾ ಒಳಗೇನ
ಒಳಗ ಮನ್ನುಸುತಾನೇನ ಒಳಗ ಕರಿಯುತಾನೇನ
ಗಂಗಿ ಮಾಳಮ್ಮನಂದಾರೆ ಗಂಗಿ ಧೇರ್ಯಾದೊಳಗೇನ
ಹಣಿಮ್ಯಾಲ ನಾಮ ಇಟ್ಟಿದ್ದ ಗಂಧ ಹಚ್ಚುತಾನೇನ
ಗಳಗಿ ರೂಪದವನೇನ ಗಳಗಿಗಂಟಕದವನೇನ
ಒಳಗ ಕರಿಯುತಾನೇನ ಮಲ್ಲಯ್ಯಗ ನೋಡುತಾಳೇನ
ಮಲ್ಲಯ್ಯಗ ನೋಡುತಾಳೇನ ಮನುಸ ಹೋಗುತಾವೇನ
ಮನುಸ ಹೋಗುತಾವೇನ ಮೈಯಮರತ ಕುಂತಾರ
ಗಂಗಿ ಧೇರ್ಯಾದೊಳಗೇನೆ ಮಾಳಮ್ಮ ಕುಂದ್ರುತಾಳೇನ
ಮಾಳಮ್ಮ ಕುಂದ್ರತಾಳೇನ ಮಾದೇವ ಕುಂದ್ರುತಾನೇನ
ಬಾರೋ ಬಾರೋ ಏಸ್ವಾಮಿ ಯಾಕ ಬಂದೀದಂದಾಳ
ಕೈಯಲಾಸದಲಿಂದೇನೆ ಏನು ಕಾರಣ ಬಂದಿದೆ
ಮಣಿಯಾ ಮಲ್ಲಸೂರಗೆ ಕೊಲಿಯಾ ಮಾಡಲಿ ಬಂದೇನ
ಬರುವದಕೆಲ್ಲ ಬಂದೀನೆ ಭಂಡಾರ ಮರತ ಬಂದೇನ
ಬರುವುದಕೆಲ್ಲ ಬಂದೀನೆ ಭಂಡಾರ ಮರತ ಬಂದೀನೆ

ನಿನ್ನ ಹಡದಲ್ಲವ್ವ ಭಂಡಾರಾದಂತೇಳ್ಯಾರ
ಭಂಡಾರಾದಂತೇಳ್ಯಾರೆ ನಿನ್ನ ಸಲುವಾಗಿ ಬಂದೇನ
ನನ್ನ ಬಲ್ಲಿ ಮಾರಾಯ ಭಂಡಾರಾದೇಳಂದಾಳ
ನನಗ ಲಗ್ನನಾಗಿಲ್ಲ ಲಗ್ಗನಾಗಲಿ ಬೇಕಯ್ಯಾ
ಭಂಡಾರ ಕೈವಾಸ ಕೊಟ್ಟೇನೆ ಬೆನ್ನಿಂದ ಬರತೀನಿ ಅಂದಾಳ

ಅಂತೂ ಇಂತೂ ಯಾಳ್ಯಾಗ ಮಾತನಾಡುತಾಳೇನ
ಹಂತ ಯಾಳ್ಯಾದೊಳಗೇನೆ ತಾಯಿ ಬರುವುತಾಳೇನ
ತಾಯಿ ಬರುವುತಾಳೇನ ಹೆಗ್ಗಣ ಪರಧಾನಿ ಕುಂತಾನ
ಕಪ್ಪಿಲೆ ಕರಿಚಲುವಳೆ ಹಂತಕಿ ಬರತಾಳಂದಾನ
ಕಪ್ಪಿಲೆ ಕರಿ ಚಲುವೇನೆ ಗುಂಡನ ಮಾರಿ ಹೆಣ್ಣೇನ
ಗುಂಡನ ಮಾರಿ ಹೆಣ್ಣೇನ ಗಂಗಿ ಮಾಳಮ್ಮನಂದಾರ
ಗಂಗಿ ಮಾಳಮ್ಮನಂದಾರೆ ನನ್ನ ಮಗಳ ಇದ್ದಾಳ
ನನ್ನ ಮಗಳ ಇದ್ದಾಳೆ ಕೈಯಾಗ ಚರಗಿ ಹಿಡದಾಳ
ಗಂಗಿ ಥೇರ್ಯಾದೊಳಗೇನೆ ಮಾಳಮ್ಮ ಹೋಗ್ಯಾಳೇನಯ್ಯ
ಖರಿಯಾ ಮಾತನಾಡಿರೆ ಒಳ್ಳೇದು ಒಳ್ಳೇದಂದಾನ
ಗಂಗಿ ಮಾಳಮ್ಮನಲ್ಲೇಳ ಮಲ್ಲಯ್ಯನಗೂಡ ಮಾತೇನ
ನಿಮ್ಮ ಅವ್ವ ಬರತಾಳೆ ನಿನಗ ಬಡಿದ ವೈದಾಳೆ
ನಿನಗೂ ಬಡದ ವೈದಾಳೆ ಬರುವದು ಯಾವಗಂದಾನ
ಬಳಿಯಾ ವ್ಯಾಪಾರ ಬಂದ ಮಾಡಿ ಗೂಳ್ಯಾ ಕಟ್ಟಿದ ಯಾಳ್ಯಾಕ
ಗೂಳ್ಯಾ ಕಟ್ಟಿದ ಯಾಳ್ಯಾಕೆ ತೆಲಿಮ್ಯಾಲೆ ಹೊತ್ತ ಯಾಳ್ಯಾಕೆ
ಹೊನ್ನ ಹೊಸ್ತಲ ಚೆನ್ನದ ತೋಳ ಬಂಗಾರದ ಮೇಲಕಟ್ಟೇನ
ಬಂಗಾರದ ಮೇಲಕಟ್ಟಿನ ಮನಿಯ ನಮ್ಮದಾದೋ ಮಲ್ಲಯ್ಯ
ಎರಡ ಅಂತಸ ಮ್ಯಾಲೇನ ಜಡಿಯಾ ಅರಸಲಿ ನಿಂತೇನ
ಧಾರಿಯ ಮ್ಯಾಲೆ ಬಂದಾರ ತೆಳಗ ನಾನೇ ಇಳದೇನ
ಕೈಯಾಗ ಚರಗಿ ಹಿಡದೇನ ಉಡಿಯಲಿ ಭಂಡಾರ ಕಟ್ಟೇನ
ಉಡಿಯಲಿ ಭಂಡಾರ ಕಟ್ಟೇನೆ ಬೆನ್ನಿಂದ ನಾನೇ ಬಂದೇನ
ಬೆನ್ನಿಂದ ನಾನೇ ಬಂದೇನ ಭಾಷಿ ಕೊಡುವುತಾಳೇನ
ಹುಟ್ಟುಬಾರಂದಾಳ ಬಿಳಿಯಾಬಾರದಂದಾಳ
ಯಾವ ದೇಶದ ತುಡಗನೆ ಯಾವ ದೇಶದ ಕಳ್ಳನ
ಬೂದಿಬಡಕ ಸನ್ಯಾಸಿಗಿ ಬೆನ್ನ ಹತ್ತೀದಂದಾಳ
ಗಂಗಿ ಥೇರ್ಯಾದೊಳಗೇನೆ ತೆಲಿಯಾ ಮ್ಯಾಲಿನ ಜುಂಜರಿ ಹಿಡದಾಳ
ತೆಲಿಯಾ ಮ್ಯಾಲಿನ ಜುಂಜಿರಿ ಹಿಡಿದಾಳೆ ಬಡತಾ ಮಾಡುತಾಳೇನ
ಬಡತ ಮಾಡುತಾಳೇನ ಎಳದ ವೈಯುತಾಳೇನ
ಈಗ ಬಂದ ಹುಡುಗಿ ನೀನು ಎಲ್ಲಿಗೆ ಬರಬಾರದಂದಾಳ

ತೆಲಿಯಾ ಮ್ಯಾಲೆ ಹೊಡದಾಳ ಬೆನ್ನಿನ ಮ್ಯಾಲೆ ಹೊಡದಾಳೆ
ಸೆರಗ ಹಿಡದು ಎಳದಾಳ ಬೆನ್ನಿನ ಮ್ಯಾಲೆ ಹೊಡದಾಳೆ

ಮುಪ್ಪನ ಮುದುಕಿ ಅಲ್ಲೇನೆ ಮನಿಯಾ ಒಳಗೆ ಕುಂತಾಳ
ಎರದಾಳೆ ಹೆಣುಲ ಹಾಕ್ಯಾಳೆ ಗಚ್ಚಿನ ಬಚ್ಚಲಕ ಹೋಗ್ಯಾಳ
ಗಚ್ಚಿನ ಬಚ್ಚಲಕ ಹೋಗ್ಯಾಳೆ ಎರದಾಳೆ ಹೆಣುಲ ಹಾಕ್ಯಾಳ
ಎರದಾಳೆ ಹೆಣುಲ ಹಾಕ್ಯಾಳೆ ಎಳಿಯಾ ಬೇತಲ ತಗದಾಳ
ಹಣಿಯಲಿ ಕುಂಕಮಿಟ್ಟಾಳೆ ಹಲ್ಲಿಗ ಜಾಚೇಲಿ ಹಚ್ಯಾಳ
ಹಲ್ಲಿಗ ಜಾಚೇಲಿ ಹಚ್ಯಾಳೆ ಉಡಿಯಲಿ ಭಂಡಾರ ಕಟ್ಯಾಳ
ತಾಯಿನ ತೆಳಗ ಬಿಟ್ಟಾಳೆ ಮೇಲಮ್ಯಾಳಿಗಿ ಏರ್ಯಾಳ
ಮೂರ ಲೋಕದೊಡಿಯಾನೆ ಮಲ್ಲಯ್ಯ ದೇವರು ಬಂದಾರ
ಮಲ್ಲಿಕಾರ್ಜುನ ಮಹಾದೇವ ಬಳಿಯಾ ವ್ಯಾಪಾರ ಕಟ್ಯಾನೆ
ಬಳಿಯಾ ವ್ಯಾಪಾರ ಕಟ್ಯಾನೆ ನಂದಿಗ ಮುಂದ ಮಾಡ್ಯಾನ
ನಂದಿನ ಮುಂದ ಮಾಡ್ಯಾನೆ ತಾನೇ ಹಿಂದ ನಡದಾನ
ನಂದಿಯ ಹಿಂದ ನಡದಾನೆ ಹೆಗ್ಗಣ ಪರದಾನಿ ನಡದಾನ
ನಂದಿಯ ಹಿಂದ ನಡದಾನ ಹೆಗ್ಗಣ ಪರದಾನಿ ನಡದಾನೆ
ಮೇಲಮಾಳಿಗಿ ಮ್ಯಾಲೇನ ತುರುಬ ಬಿಚ್ಚುತಾಳೇನ
ತುರುಬ ಬಿಚ್ಚುತಾಳೇನ ಗಾಳಿಗರವುತಾಳೇನ
ಗಾಳಿಗರವುತಾಳೇನ ಕೈಯ ಮಾಡುತಾಳೇನ
ಮಲಿಕಾರ್ಜುನ ಮಾದೇವ ರಾಯಿಮಾರಗ ಹಿಡದಾನ
ತೆಳಿಯಾಕ ಇಳಿಯುತಾಳೇನ ಕೈಯಾಗ ಚರಗಿ ಹಿಡದಾಳ
ಕೈಯಾಗ ಚರಗಿ ಹಿಡದಾಳೆ ಬೆನ್ನ ಹತ್ತಿ ನಡದಾಳ
ಮುಪ್ಪಿನಂತ ಎಲ್ಲವ್ವ ಮನಿಯಾಗ ಉಳಿಯುತಾಳೇನ
ಮಲ್ಲಿಕಾರ್ಜುನ ಮಹಾದೇವಗ ಬೆನ್ನ ಹತ್ತಿ ನಡದಾಳ
ಅಲ್ಲ್ಯಾನ ಇಲ್ಲ್ಯಾನೇನ ಮೈಲಾಪುರದ ಗುಡ್ಡಕ
ಮೈಲಾಪುರದ ಗುಡ್ಡಕ ಮಲ್ಲಯ್ಯ ಹೋಗುತಾನೇನ
ಮಲ್ಲಯ್ಯ ಹೋಗುತಾನೇನ ತಾನೇನು ಹೇಳುತಾನೇನ
ಮನಸ ಕಲತಾವಂದಾರೆ ಮಾತ ಕಲತಾವಂದಾರ
ಹಾದಿಗಂದಾರ ಹಾಕ್ಯಾರೆ ಬೀದಿಗ ಚಳಿಯಾ ಕೊಟ್ಟಾರ
ಹಸುರ ಬಳಿಗೋಳು ಹಾಕ್ಯಾರ ಕಾಲಿಗಿ ಕಾಲಪಿಲ್ಲೆ ಇಟ್ಟಾರ
ಕೈಯಾಗ ಬಳಿಯಾ ಇಟ್ಟಾರೆ ಕಾಲಗ ಕಾಲುಂಗರಿಟ್ಟಾರ
ಕಾಲಿಗ ಕಾಲುಂಗರಿಟ್ಟಾರೆ ಸ್ಯಾಸಿ ಮಾಡಬೇಕಂದಾರ

## ಸಂಗನ ಬಸವ ದೊಡ್ಡವ !

ಧರುಣಿ ಮ್ಯಾಲ ನೋಡಪ್ಪಾ ಯಾರ್ಯಾರು ದೊಡ್ಡವರು ಐದಾರೊ
ಯಾರ್ಯಾರು ದೊಡ್ಡವರೈದಾರೆಂದರ ಕೃಷ್ಣದೇವರು ದೊಡ್ಡವರೋ

ಕೃಷ್ಣದೇವರು ದೊಡ್ಡವನೆಂದರ ತೋಳಿಗೆ ಸಾವಿರ ಗೋಪ್ಯಾರೋ
ತೋಳಿಗೆ ಸಾವಿರ ಗೋಪ್ಯಾರಂದರ ಅವೇನು ಆಳಲಿಲ್ಲೇನೋ
ಯಾರ್‍ಯಾರು ದೊಡ್ಡವರೈದಾರಂದರ ಗಣಪತಿರಾಯನು ದೊಡ್ಡವನೋ
ಗಣಪತಿರಾಯ ದೊಡ್ಡವನೆಂದರ ಆನಿಯ ಮುದದವನಲ್ಲೇನೋ
ಯಾರ್‍ಯಾರು ದೊಡ್ಡವರೈದಾರೆಂದರ ಹರಿಶ್ಚಂದ್ರರಾಯ ದೊಡ್ಡವನೋ
ಹರಿಶ್ಚಂದ್ರರಾಯ ದೊಡ್ಡವನೆಂದರ ಸುಡುಗಾಡಿ ಕಾಯಲಿಲ್ಲೇನೋ
ಯಾರ್‍ಯಾರು ದೊಡ್ಡವರೈದಾರೆಂದರ ತಿಪ್ಪೇಸೂರನು ದೊಡ್ಡವನೋ
ತಿಪ್ಪೇಸುರ ದೊಡ್ಡವನಾದರ ತಿಪ್ಪಿಯ ಕಾಯಲಿಲ್ಲೇನೋ
ಯಾರ್‍ಯಾರು ದೊಡ್ಡವರೈದಾರೆಂದರ ಹನುಮಂತದೇವರು ದೊಡ್ಡವನೋ
ಹನುಮಂತದೇವರು ದೊಡ್ಡವನಾದರ ಒರಗು ಮಾರಿಯವನಲ್ಲೇನೋ
ಯಾರ್‍ಯಾರು ದೊಡ್ಡವರೈದಾರೆಂದರ ನಾಗಭೂಷಣ ದೊಡ್ಡವನೋ
ನಾಗಭೂಷಣ ದೊಡ್ಡವನಾದರ ನಾಲಿಗಿ ಸೀಳಲಿಲ್ಲೇನೋ
ಯಾರ್‍ಯಾರು ದೊಡ್ಡವರೈದಾರೆಂದರ ಸರ್ವಗೇರಿ ಬಸವಣ್ಣನೋ
ಸರ್ವಗೇರಿ ಸಂಗನಬಸವ ಅವನು ದೊಡ್ಡವ ಹೌದೇಳೋ

* * *

## ಬಸವಯ್ಯ

ನಿರಂಕಾರದ ಅಡ್ಡ ಅಗಲ ಗುರಳಿ ಹುಟ್ಟಿತೊ
ಆಕಾಶದ ಅಡ್ಡ ಅಗಲ ಬಸವಯ್ಯನೊ
ಗುರಳಿ ಒಡೆಯಿತೊ ಗಗನ ತುಳಕಿತೊ
ಸಾಕ್ಷಾತ್ ಭಗವಂತ ಬಸವಯ್ಯನೊ

ಸಾಕ್ಷಾತ್ ಭಗವಂತನ ಲಗ್ನ ಹಿಡಿದಾನ
ಏನ ಹೇಳಲ್ಯೊ ಬಸವಯ್ಯನೊ
ದೇವಿ ದ್ಯಾವರ ಲಗ್ನ ಹಿಡದಾನ
ಭಕ್ತಿವಂತ ನನ್ನ ಬಸವಯ್ಯನೊ

ಕತ್ತಲೆಂಬುದೊಂದ ಹಂದರ ಹಾಕಿದಾನೊ
ಏನ ಹೇಳಲೆಪ್ಪ ನಾ ಬಸವಯ್ಯನೊ
ಅರವತ್ತಾರು ಸೂರ್ಯರ ತಳಕ ಕಟ್ಟಿದನೊ
ಭಕ್ತಿವಂತ ನನ್ನ ಬಸವಯ್ಯನೊ

ತನ್ನ ಶರೀರದಿಂದ ವಿಚಾರವೆನ್ನ
ಹಾಲ್ಗಂಬ ಕಟ್ಟತಾನೊ ಬಸವಯ್ಯನೊ
ತನ್ನ ಶರೀರ ಮಣ್ಣನು ತಗದು
ಏನು ಹೇಳಲೆಪ್ಪ ನಾ ಬಸವಯ್ಯನೊ

ಐರ್ಯಾಣಿ ಮಗಿ ಮಾಡಿದಾನೊ ನನ ಬಸವಯ್ಯನೊ
ಪಂಚತಂತ್ರದಿಂದ ಐದು ಮಂತ್ರ ಊದಿ
ಮತ್ತೈದ್ಯಾರ ಮಾಡತಾನೊ ಬಸವಯ್ಯನೊ
ಏನ ಹೇಳಲೆಪ್ಪ ನಾ ಬಸವಯ್ಯನೊ

ತನ್ನ ಕೋಡಿನ್ಯಾಗಿನ ಬೆವರನು ತಗದು
ಅರಿಷಿಣ ಭಂಡಾರ ಮಾಡಿ ನನ್ನ ಬಸವಯ್ಯನೊ
ಕಂಕಣ ಕಟ್ಟತಾನೋ ತಾ ಕೂತು
ಏನ ಹೇಳಲೆಪ್ಪ ನನ ಬಸವಯ್ಯನೊ

ಇಬತ್ತಿ ಧರಸಿ ಸುರಗಿ ಮಗಿ ಹಿಡಸತಾನೊ
ಭಕ್ತಿವಂತ ನನ ಬಸವಯ್ಯನೊ
ತನ್ನ ಶರೀರದಿಂದ ಎಳಿಯನು ತಗದು
ಸುರಗಿ ಸುತ್ತತಾನ ಬಸವಯ್ಯನೊ

ವಿಚಾರದಿಂದ ಗಣಗಳ ಹಿಡಕೊಂಡು
ಬಾಸಿಂಗ ಕಟ್ಟತಾನೊ ಬಸವಯ್ಯನೊ
ತಾನೆ ಬ್ರಹ್ಮ ತಾನೆ ಉಪಾಧ್ಯಾಯ
ಏನ ಹೇಳಲೆಪ್ಪ ಬಸವಯ್ಯನೊ

ಸೋಬಾನ ಅನ್ನೀರಿ ಸೋಬಾನ ತಂಗಿ
ಸೋಬಾನ ಸೋ ಅನ್ನಿ ಬಸವಯ್ಯನೊ
ಪಂಚತಂತ್ರದಿಂದ ಐದ ಮಂತ್ರ ಊದಿ
ಕಂಕಣ ಕಟ್ಟತಾನೊ ಬಸವಯ್ಯನೊ

ಸಾಮದೋಮ ಎಂಬ ಮಂತ್ರವ ಊದಿ
ಅಕ್ಕಿಕಾಳ ಹಾರಸತಾನ ಬಸವಯ್ಯನೊ
ಬಸವರಾಜನಂತ ದೇವರ್‍ಯಾರೂ ಇಲ್ಲ
ಏನ ಹೇಳಲೆಪ್ಪ ನನ್ನ ಬಸವಯ್ಯನೊ

ನೀರಿನ ಮ್ಯಾಲ ಮೆರವಣಿಗಿ ತಗಿಶ್ಯಾನ
ಆಕಾಶಕ ಬಾರಿಸೆಂದ ಬಸವಯ್ಯನೊ
ನಡುವ ಸುಳ್ಯಾಗ ನೊಸಲಗಣ್ಣ ಇಟಗೊಂಡು
ಹಗಲ ದೀಪ ಹಚ್ಚತಾನ ಬಸವಯ್ಯನೊ

ಸುಳ್ಳ ಅನಬ್ಯಾಡರೆಪ್ಪ ಸುಟಗೊಂಡ ಸತ್ತೀರಿ
ಬಬಲಾದಿ ತಳದಾಗ ನೋಡಂದೆನಿ

ಕಲ್ಲ ಕಾಗದ ಮ್ಯಾಲ ಬರದ ಇಟ್ಟೈತೊ
ಏನ ಹೇಳಲೆಪ್ಪ ನಾ ಬಸವಯ್ಯನೊ

* * *

## ಬಸವನ ಭಕ್ತಿ

ಕಲ್ಯಾಣ ಪಟ್ಟಣದಾಗ ಕೋಟಿ ಜಂಗಮ್ರ ತಂದು ಭಕ್ತಿ ಮಾಡಿದ ಬಸವೇಶ್ವರನು
ಲಕ್ಷದ ಮ್ಯಾಲ ತೊಂಬತ್ತಾರು ಸಾವಿರ ಮೊದಲ ಮಾಡಿದ ಬಸವೇಶ್ವರನು
ಇಷ್ಟು ಜಂಗಮರಿಗೆಲ್ಲ ಉಟ್ಟ ಮಡಿಯ ತಂದು ಬಿಚ್ಚಿ ಉಡಿಸಿದ ಬಸವೇಶ್ವರನು
ಅಂಗಯ್ಯಾಗ ಇಟ್ಟು ಪೂಜೆ ಮಾಡಿದರ ವಿಭೂತಿ ಕೊಟ್ಟ ಬಸವೇಶ್ವರನು
ತಾಲಿತಂಬಿಗಿ ಕೊಟ್ಟು ಗಿಂಡಿಲುದಕವಿಟ್ಟು ತಳಗಿ ಕೊಟ್ಟ ಬಸವೇಶ್ವರನು
ಕುಂತ ಜಂಗಮರಿಗೆಲ್ಲ ಕಾಣುಕಾಂತಿ ಕೊಟ್ಟ ಸತ್ಯವಂತ ಬಸವೇಶ್ವರನು
ಕಂತಿಜಂಗಮರಿಗೆಲ್ಲ ಪಂಚಪಕ್ವಾನ್ನ ಮಾಡಿ ನೀಡತಿದ್ದ ಬಸವೇಶ್ವರನು
ದ್ವಾರಬಾಗಿಲದೊಳು ಪಾರ ಕಾವಲಯಿಟ್ಟು ದ್ವಾರ ಪಾಲಕರ ಬಸವೇಶ್ವರನು
ಬಸವಣ್ಣ ಭಕ್ತಿಯ ಸಾರುದು ಶಿವ ಕೇಳಿ ನೋಡಬೇಕೆಂದಲ್ಲಿ ಈಶ್ವರನು
ಕಪಟರೂಪವ ತಾಳಿ ಕಲ್ಯಾಣಕ ಬಂದು ಕುಲ್ಲ ಜನರನ್ನ ಕೇಳಿದ ಈಶ್ವರನು
ಬಿಜ್ಜಳನು ಮನಿಮುಂದ ಬಸವಣ್ಣನ ಮನಿ ಕೇಳಿದರ ಕೈಮಾಡಿದ ಬಿಜ್ಜಳನು
ಹೆಂಡ ಖಂಡನೊಯಿದು ಭಂಗಿ ಚೇಲಾನಾಕಿ ಬಾಗಿಲಿಗಿ ನಿಂತಾನು ಈಶ್ವರನು
ಕ್ವಾರ್ಥಲ್ಲು ತೋರುತ ವಾರಿನೋಟ ನೋಡುತ ಅರಮನಿಗ್ಹೋದ ಈಶ್ವರನು
ದ್ವಾರಪಾಲಕರ ನೀವ್ಯಾರಂತ ಕೇಳಿದರ ಊಟಕ ಬಂದೇನಿ ಎಂದ ಈಶ್ವರನು
ಅಂಗರೂಪವ ತಾಳಿ ಲಿಂಗವಿಲ್ಲವೆಂದು ಜಂಗಮ ಬಂದನು ಈಶ್ವರನು
ಹೇಸಿಮಾನವನಲ್ಲಿ ಈಶ್ವರ ಶಿವಪ್ಪನ ದಾರಿ ಕೇಳಿದ ಬಸವೇಶ್ವರನು
ಯಾಸಿಗಾಲವನು ಕೇಶಿ ಮಾರ್ಗಹಿಡಿದು ಕೇತನಕೇರಿಗೋದ ಈಶ್ವರನು
ಕೇತನ ಕೇರಿಯೊಳು ಸತ್ತ ಕರವ ಬಿಚ್ಚಿ ಹಾಲ ಹಾಕಿದ್ದ ಈಶ್ವರನು
ಇಷ್ಟ ಮಾತುಕೇಳಿ ಬಿಟ್ವಾನು ಅರಮನಿ ಕೇಳಿಮಾರ್ಗ ಹಿಡಿದ ಬಸವಣ್ಣನು
ಕೇಶಿಮಾರ್ಗ ಹಿಡಿದು ಕೇತನ ಕೇರಿಗೆ ಹೋದ ಈಶ್ವರನ ಕಂಡ ಬಸವೇಶ್ವರನು
ಬಾರಪ್ಪ ಶಿವನೆಂದು ಬಾಗಿ ಪಾದ ಹಿಡದರ ಪಾದ ಕಿತ್ತುಬಂದ ಈಶ್ವರನು
ಕಿತ್ತಪಾದ ನೋಡೋ ಹೊತ್ತಾನು ಬೆನ್ನಿಲೆ ಅರಮನಿಗ್ಹೋದ ಬಸವೇಶ್ವರನು
ಅರಮನಿ ಒಳಗೊಂದು ಗುರುವಿನ ಗದ್ದಿಗಿ ಓದು ಇಳವಿದ ಬಸವಣ್ಣನು
ಹತ್ತು ಅವತಾರ ತಾಳಿ ದಶಭುಜವ ತೋರಿದ ಪಂಚಮುಖದ ಪರಮೇಶ್ವರನು
ಬಾರಪ್ಪ ಬಸವಣ್ಣ ನಿನ್ನ ಭಕ್ತಿಗೆ ಒಲಿದೆ ಏನ ಬೇಡತೀದಿ ಎಂದ ಈಶ್ವರನು
ಬೇಡಿದ್ದ ಕೊಡು ಗುರುಭಕ್ತಿ  ಮಾಡುವಂಥ ಪರುಷ ಬಟ್ಟ ಬೇಡಿದ ಬಸವೇಶ್ವರನು
ಕಾಗಿ ಕರ್‍ರಗ ಇದ್ದರ ಗುರುವೆ ಕೋಗಿಲ ಹೋಲಲು ಬಲ್ಲದಾ
ಬೆಳ್ಳಕ್ಕಿ ಬೆಳ್ಳಗಿದ್ದರೇನು ಬೆಳದಿಂಗಳ್ಹೋಲಲು ಬಲ್ಲದಾ
ಕ್ಯಾವಿ ಅಂಗಿ ತೊಟ್ಟವರೆಲ್ಲ ಸ್ವಾಮಿಯಾಗಲು ಬಲ್ಲರಾ
ಅಡ್ಡಜ್ಯಾಡಿಯ ಹೊದ್ದವರೆಲ್ಲ ಸಿದ್ಧರಾಗಲು ಬಲ್ಲರಾ

ಜಂಗಕಟ್ಟಿದ ಮನುಜರೆಲ್ಲ ಜಂಗಮನ್ನೋಲಲು ಬಲ್ಲರಾ
ಅತ್ತಿಗೆ ಜಡದ ಸೊಸ್ಯಾರೆಲ್ಲ ಮಲ್ಲವ್ವನ್ನೋಲಲು ಬಲ್ಲರಾ
ನೀರಿಗ್ಹೋದ ನಾರ್‍ಯಾರೆಲ್ಲ ನೀಲವ್ವನ್ನೋಲ ಬಲ್ಲರಾ
ನೀತಿಗೇಳ ನೀಲವ್ವ ಮೇಲ ಭಕ್ತಿಗೇಳ ಬಸವಣ್ಣವನು
ಅಂಗಸ್ವರ ನೀಲವ್ವ ಬಲ್ಲಳ ಜಂಗಸ್ವರ ಬಸವಣ್ಣನೋ
ನಮ್ಮ ಹಸಿವ ನೀನು ಬಲ್ಲ್ಯೋ ಪಂಚಲಿಂಗ ನನ್ನ ಬೀರಯ್ಯ
ರಾಜಮಾರ್ಗ ಹಿಡಿರೆವ್ವ ನಾವು ರಾಜರ್‍ಹೊತ್ತಿಗೆ ಓದವರು
ರಾಜರೊತ್ತಿಗೆ ಓದವರೇನ ಸಿದ್ದರ್‍ಹೊತ್ತಿಗೆ ಓದುವನೋ

* * *

## ಮಲ್ಲವ್ವನ ಮಹಿಮೆ

ಸ್ವಾಮಿ  ನಮ್ಮೈ ದೇವರ ಬಂದಾರ ಬನ್ನೀರೇ
ಅಲ್ಲಿ ನೋಡಿದರೆ ನಮ್ಮವರು ಇಲ್ಲಿ ನೋಡಿದರೆ ನಮ್ಮವರು
ಕಲ್ಯಾಣದಾಗ ನಮ್ಮವರು ಕಲಿಯುಗದೊಳು ನಮ್ಮವರು
ದೇವಿ ಕರಿವೂನ ಬನ್ನಿರೇ ದೇವರ ಕರಿವೂನ ಬನ್ನೀರೆ

ಹೊಸದಾಗಿ ಕಲತೀನಿ ಕುಸಿಲಿಂದ ಹೇಳತೀನಿ ಹೇಳುವೆ ಮಲ್ಲವ್ವನ ಚರಿತೆಯನಾ
ಕರುಣದಿ ಕಾಯೋ ನಿಮ್ಮ ಮೊರೆಯಹೊಕ್ಕೆನು ಚರಣಕಮಲಕ್ಕೆ ಎರಗುವೆ ನಾನಾ
ಕುಳಕುಂಬಿ ಊರಾಗ ಮಂದಿ ಬಳಗದಾಗ ಎಲ್ಲರು ಪ್ರೀತಿ ಮಲ್ಲವ್ವಗ
ಎಲ್ಲರು ಪ್ರೀತಿ ಮಲ್ಲವ್ವಗ ದರ್ಪಿಲೆ ಹಿರಿತನ ಮನಿಯೊಳಗ
ಮಾವ ದೊಡದೊಂದು ಬಾವಿ ಕಟ್ಟಿಸಿದಾ ಸಾವಧಾನ ಸಂಪಾದಿಸಿದಾ
ಸಾವಿರ ರೂಪಾಯಿಗಳ ಖರ್ಚು ಮಾಡಿದನೊ ನೀರ ಬೀಳಲಿಲ್ಲೊ ಬಾವ್ಯಾಗ
ನೀರ ಬೀಳಲಿಲ್ಲೋ ಬಾವ್ಯಾಗ ರಮಲ ತೆಗೆಸಿ ನೋಡ್ಯಾನ ಆಗ
ರಮಲ ತೆಗೆಸಿ ನೋಡ್ಯಾನ ಆಗ ಸೊಸಿಯ ಹಾರ ಬೇಡಿತು ಆಗ
ಸೊಸಿಯ ಹಾರ ನಾ ಕೊಡುವದಿಲ್ಲೆಂದಾ ಕಲ್ಲು ದುಂಡಿಲೆ ಬಾವಿ ಮುಚ್ಚುವೆನೆಂದಾ
ಹ್ಯಾವ ತೊಟ್ಟು ಹೊಲದಾಗ ಇರುವನೋ ಉರಿಜ್ವರ ಮನಿಯಾಗ ಎಲ್ಲರಿಗಾ
ಉರಿ ಜ್ವರ ಮನಿಯಾಗ ಎಲ್ಲರಿಗೆ ಹ್ವಾರೇವು ಒಬ್ಬಾಕಿ ಮಲ್ಲವ್ವಗ

**ವಚನ**

ನೊರೆ ಹಾಲು ಕಾಸಿ ಅಡಗಿ ಮಾಡಿ ತುಂಬ್ಯಾಳೊ ಮಲ್ಲಮ್ಮ ಬುಟ್ಟಿಗೆ
ಸೇರಿಸಿ ಕಾಂತಿ ಹೊತ್ತಾಳೊ ಹೆಡಗಿ ಹೊಲದಾಗ ಮಾವ ಹಸಗೊಂಡ
ಹೊಲಕ ತಂದ ಇಳಿವ್ಯಾಳೋ ಬುತ್ತಿ ಎತ್ತು ತುಳದ ಒಡದಿತೋ ಕೊಡಾ
ಅಲ್ಲಿ ನೀರು ಇಲ್ಲೋ ಕುಡಿಯಾಕ ಮುಕ್ಕಾ
ತಂಬಿಗಿ ಹಿಡಿದು ಬಾವ್ಯಾಗ ಒಂಬತ್ತು ಪಾಟುಣಗಿಗೆ ಹೋಗಿದಳೋ
ಒಂಬತ್ತು ಪಾಟುಣಿಗೆ ಇಳಿದಾಳೋ ಮಲ್ಲಮ್ಮ ಗಂಗವ್ವ ಉಕ್ಕಲೇರಿ ಬಂದಿದಳೋ
ಜಲಧಿ ಕೂಡಿಕೊಂಡು ಹೊಂಟಾಳೋ ಮಲ್ಲವ್ವ ಮಾವ ಹೊಂಟನು ಹಲಬುತ
ಹರನ ಹಂಬಲಿಸುತ ಹರಳ ಒಗೆದು ನೆಲೆಹತ್ತದ ಗಿರಿಕಳಸವನಾ
ಬೆಳವಲದಾಗಿ ಹಿಡಿದಾಳೊ ಮಲ್ಲಮ್ಮ ಕೋಳಿ ಕೂಗಿತು ಒಳೇ ನಿವಳಾ
ಕೋಳಿ ಕೂಗಿದ ದನಿ ಕೇಳಿ ಗಂಗವ್ವ ಬೆಳವಲದಾಗ ಬಿದ್ದು ಹೊರಳಿದಳೋ
ಬೆಟ್ಟವೇರಿ ಗುಡ್ಡ ಬಡದಾಳ ಗಂಗವ್ವ ಕೂಡಲಸಂಗಮಕ ಕೂಡಿದಳೋ
ಕೂಡಲಸಂಗಮಕ ಕೂಡ್ಯಾಳೋ ಗಂಗವ್ವ ಸೃಷ್ಟಿ ಪಾತಾಳಕ ಹೋಗಿದಳೋ
ಹಳಿಬಂಡಿ ಬರತಾವ ಪನ್ನಾಸಾ ಕಾಳಿ ಕರ್ಣಿಗಳ ಆರ್ಭಾಟ
ಬಾಳಿ ತೆಂಗು ಸೀರಿ ಕುಪ್ಪಸ ಏರಿಸುವರು ಗಂಗವ್ವಗ
ಇಡಿಗಡ್ಲಿ ಗಂಧ ಕುಂಕುಮಬಟ್ಟು ಬಿಡಿಮಲ್ಲಿಗೆ ಹಂಗ ನೊಲವನೋ
ಹಂಗನೂಲನು ಕೊರಳಾಗ ಹಾಕಿ ಉಡಿಯತುಂಬಿ ಉಣಸತಾರ ಮುತ್ತೈದೆಯರು
ಮುತ್ತೈದಿ ಮಲ್ಲಮ್ಮಗ ಮುಕ್ತಿಕೊಡಲೆಂದು ಎತ್ತಿ ಬೆಳಗುವೆ ಆರತಿಯಾ
ಇಲ್ಲಿಗೆ ಒಂದು ಸಂದೇಳ ಗುರುವೆ ಹಾಡಿದವರ ಪದ ಮುಂದ್ಕೇಳೋ

* * *

## ಅತ್ತಿ - ಸೊಸಿ ಕಥೆ

ಅತ್ತೀ ಮನಿಗೆ ಸೊಸಿಯು ಬಂದಾಳೊ
ಪ್ರೀತಿಯಿಂದ ಬಾಳ ಮಾಡುದಕ
ಯಾಕ ಸೊಸಿ ಹಿಂಗ್ಯಾಕ ಮಾಡತಿ
ನೀ ಬಂದಿ ನನ್ನ ಕೊಲ್ಲುದಕ

ಕೊಲ್ಲ ಬ್ಯಾಡ ಸೊಸಿ ಕಾಲಿಗಿ ಬೀಳತೇನಿ
ಬಿಜಗಣಿ ಕೊಡುವೇನು ಸ್ವಾಧಿನಕ
ಉಂಡು ಗಂಡ ಕೊನೆಗೆ ಹೊಲಕ ಹೋದನೊ
ವ್ಯಾಳ್ಯೆಕ ಯಾರಿಲ್ಲ ಮನಿಯಾಗ

ಎಪ್ಪತ್ತು ವರುಷದ ಮುಪ್ಪಾನ ಮುದಕಿ
ನೂಲಕ ಕುಂತಾಳೊ ಕೋಣ್ಯಾಗ

ಬಾಯಿ ಮಾಡ್ಯಾಳಂತ ಬಾಯ್ತುಂಬ ಅರಳಿ
ತುರಕಿ ಬಿಟ್ಟಳೊ ಗಂಟಲದೊಳಗ

ಮುದಕಿ ಮಾಡಿದ ಧರ್ಮ ಒದಗಿ ಬಂದಿತೋ
ಹೊಲದಿಂದ ಮಗ ಬಂದ ಮದ್ಯಾನಕ
ಮಗನ ಕಂಡ ಕೈಸೊನ್ನಿ ಮಾಡತಾಳ
ಬಾಯಾಗ ಅರಳಿ ತಗಿಯುದಕ

ತಾಯಿ ಕೈಸೊನ್ನಿ ಮಗ್ಗ ತಿಳಿಯಲಿಲ್ಲ
ಹೆಣತಿ ಕೇಳತಾನ ಆ ಕ್ಷಣಕ
ಕಳ್ಳ ನನ್ನತ್ತಿ ಹಾಳ ಮಾಡತಾಳ
ಹೊತಗೊಂಡ ಹೋಗಿ ಚಲ್ಲ ದೊಡ್ಡ ಮಡಕ

ಹೆಣತಿ ಮಾತ ಕೇಳಿ ಕಂಬಳಿ ತೊಗೊಂಡು
ಪಡಚಿ ಕಟ್ಟಿದನು ಆ ಕ್ಷಣಕ
ಪಡಚಿ ಹೊತಗೊಂಡು ಕಾನನಕ ಹೋಗಿ
ಬಿರಿಸಿಲಿ ಒಗಿದನೋ ದೊಡ್ಡ ಮಡಕ

ಮುದಕಿ ಮಾಡಿದ ಧರ್ಮ ಒದಗಿ ಬಂದಿತು
ಮಾದೇವರು ಬಂದನೋ ಆಕಿ ಗುಣಕ
ಮಡದಾನ ಮುದಕಿ ಕಡಿಯಾಕ ತಗದು
ಅಕಲ ಹೇಳತಾನ ಆಕಿ ಗುಣಕ

ಕೊಡಪಾನ ಹೊನ್ನ ಕೊಡತೇನಿ ಮಗಳ
ಬೇಕಾದಂಗ ತಿನ್ನೋಣ ಸಾಯುತನಕ
ಇಷ್ಟ ಹೇಳಿ ಶಿವ ಮಾಯವಾದನು
ಅಕಲ ಮಾಡಿತೋ ತಿಳಿಗೇಡಿತನಕ

ಇದು ಒಂದು ಕೊಡಪಾನ ಕೊಡಬೇಕೊ
ಮಗ್ಗ ಹೆಸರು ಉಳಿಯುವದು ಕಡಿತನಕ
ಕೊಡಪಾನ ಹೊತಗೊಂಡು ಬರುವದ ಕಂಡು
ಗಂಡಗ ಹೇಳತಾಳ ಆ ಕ್ಷಣಕ

ಮತ್ತ ನಿಮ್ಮವ್ವ ದೆವ್ವಾಗಿ ಬರತಾಳ
ಹೊಡಿಬೇಕ ಕಡಕೊಂಡು ಮೀಳುವಂಗ
ಹೆಣತಿ ಮಾತಕೇಳಿ ಒಣಕಿಯ ತೊಗೊಂಡು
ತಾಯಿ ಬಡಿದ ನೆಲಕ ಬೀಳುವಂಗ

ಹೊಡಿಬ್ಯಾಡ ಮಗನ ಬಡಿಬ್ಯಾಡ ಮಗನ
ಕೊಡಪಾನ ತೋರಸ್ಯಾಳ ಬಗಲಾಂದ
ಕೊಡಪಾನ ನೋಡಿ ಹೊಡಿವದ ಕಂಡು ಸೊಸಿ
ಬಿಡಿಸಿಕೊಂಡು ಹೋದಳು ಅರಮನಿಗೆ

ಕೊಡಪಾನವನ್ನು ಎಲ್ಲಿಂದ ತಂದಿ
ಒತ್ತರಮಾಡಿ ಹೇಳ ಅತ್ತೆವ್ವ
ಏನ ಹೇಳಲಿ ಸೊಸಿ ನಾ ಬಿದ್ದ ಮಡದಾಗ
ಕೊಡಪಾನ ಆದಾವೊ ಬಲ್ಲಂಗ

ಐ ನನ್ನ ಗಂಡ ನನ್ನ ಒಗೆದು ಬಾರೋ ನೀ
ಅತ್ತಿ ಒಗೆದ ಆ ಮಡದಾಗ
ಜಾಳಗಿ ಹೊನ್ನ ಬಳಕೊಂಡ ಬರತೇನಿ
ದೈವುಳ್ಳರಾಗನು ಉರಾಗ

ಹೆಣತಿ ಮಾತ ಕೇಳಿ ಕಂಬಳಿ ತೊಗೊಂಡು
ಪಡಚಿ ಕಟ್ಟಿದನು ಲಗುಬೇಗ
ಪಡಚಿ ತೊಗೊಂದು ಕಾನನಕ ಹೋಗಿ
ಬಿರಿಸಿಲಿ ಒಗೆದನೊ ಮಡದಾಗ

ಮುಳಗಿದ ಹೆಣತಿ ಮ್ಯಾಗ ಬರಲಿಲ್ಲ
ತಾಯಿ ಕೇಳತಾಳ ಆ ಕ್ಷಣಕ
ಮೂರು ದಿವಸದಮ್ಯಾಲ ಬಳಕೊಂಡು ಕರಕೊಂಡು
ಬರುವೇನು ಆ ಮ್ಯಾಲ ನಿಮ್ಮನಿಗೆ

ಮೂರು ದಿವಸದ ಮ್ಯಾಲ ಹೋಗಿ ನೋಡತಾರ
ಹೆಣ ಆಗಿ ತೆಲಿ ಕಾಲಮೇಲ
ಸತ್ತದ್ದು ಕಂಡು ತಾಯಿ ಕೇಳತಾನ
ಎವ್ವಾ ಹೆಣತಿಗೆ ಜೀವಿಲ್ಲ

ಈಶ್ವರ ಹೆಣತಿಗೆ ಜೀವಿಲ್ಲ
ಮತ್ತೆ ಮದವಿ ಮಾಡಿದಳಲ್ಲ

* * *

## ತ್ರಿಕಾಲ ಮಾಡತಿ ಶಿವಭಜನೆ

ನಂಬಿ ನಾನು ಮಾಡುವೆ ಭಜನಾ ಜಗದಂಬಿ ಪತಿಯೆ ಪಾಲಿಸೋ ಎನ್ನ
ಶಂಭುಶಂಕರ ತೋರೋ ಚರಣ ಪ್ರಾರಂಭದಲ್ಲಿ ಸ್ಮರಿಸುವೆ ನಿನ್ನ

ಪಾರ್ವತಿ ಸುತಾ ಗಜಾನನ ನಿನ್ನ ಪೂರ್ವದಲ್ಲಿ ಪೂಜಿಸುವೆ ಮುನ್ನ
ಘೋರಭಯಗಳ ದೂರು ಮಾಡುತ ಪಾರಗಾಣಿಸೋ ಪಾಮರನ
ಆದಿಯಲ್ಲಿ ಯಮನಾದಿ ದೇವರ ನಾಂದಿಯಲ್ಲಿ ಮಾಡುವೆ ಭಜನ
ಶಿವನೆ ಬಂದು ತಾ ಭೋಗಿಸಲೆಂದು ಸಾಧಿಸಿ ಬೇಡುವೆ ವರಗಳನ
ಸಣ್ಣ ಹುಡುಗ ನಾ ಮತಿಹೀನ ಸುಜ್ಞಾನ ನೀಡಿ ಪಾಲಿಸೋ ಪೂರ್ಣ
ನಿನ್ನ ಮಹಿಮೆಯನ್ನು ಬಣ್ಣಿಸಲಾರೆ ವೇದಗಳೆಲ್ಲಾ ಆದಾವು ಸುಮ್ಮನಾ
ಎರೆಯುವ ಪರಿಮಳ ಜಲವನ್ನು ಮೇಲೆ ಧರಿಸಿ ಶ್ರೀ ಗಂಧವನು
ಏರಿಸುವೆ ಜಾಜಮಲ್ಲಿಗೆ ಶಾವಂತಿಗೆ ಕುಸುಮಗಳನ್ನ
ನಿತ್ಯ ಬೆಳಗುವೆ ನಿರಂಜನಾ ಕಡ್ಡಿ ಬತ್ತಿ ಕರ್ಪೂರಾರುತಿಯನ್ನ
ಎಡಬಿಡದೆ ನಿನ್ನ ಅಡಿಗಳ ಪೂಜಿಸಿ ಎಡಿಯ ಮಾಡುವೆನು ಪರಮಾನ್ನ
ದೋಷ ಹರಿಸಿ ಈ ಕೂಸುಗಳನ್ನು ಪರಿಪೋಷಿಸಿ ನೀಡ್ಯೆ ವರಗಳನು
ಶಂಭುಶಂಕರ ತೋರು ಚರಣ ಪ್ರಾರಂಭದಲ್ಲಿ ಸ್ಮರಿಸುವೆ ನಿನ್ನಾ
ಕರುಣದಿಂದ ಕಾಯೋ ಗೌರೀವರ ಜರಾಮರಣರಹಿತ ನೀಡ್ಯೆ ವರವಾ
ವಾಲಗ ಮಜಲ ನೋಡಲಾಕ ಕೂಡ್ಯಾರೊ ದೊಡ್ಡ ದೊಡ್ಡ ಪಂಡಿತರಾ
ಸರ್ವರಿಗೆ ಮಾಡುವೆ ನಮಸ್ಕಾರ ಕೈ ಮುಗಿದು ಹೇಳುವೆ ವಿಸ್ತಾರ
ಗುಲ್ಲ ಮಾಡುವೆ ಎನ್ನ ಸೊಲ್ಲ ಕೇಳರಿ ಚಿತ್ತಗೊಟ್ಟು ಕುಂತ ನಿಂತವರಾ
ಸರ್ವರಿಗೆ ಒಬ್ಬನೇ ದೇವರು ಶ್ರೀ ಸಾಂಬನ ಹೊರತು ಇನ್ನಾರಿಲ್ಲ
ವೀರಶೈವರಿಗೆ ಶಂಕರ ರೂಪ ಬ್ರಾಹ್ಮಣರಿಗೆ ದೇವತಾ ಕುವರ
ಕ್ಷತ್ರಿಯರಿಗೆ ಶ್ರೀ ರಘುವೀರ ಮತ್ತು ಕುರುಬರಿಗೆ ಆದನೋ ಬೀರಪ್ಪ
ಅಣುರೇಣುವಿನಲಿ ತುಂಬಿ ತುಳಕತಾನೋ ರೂಪ ತೋರತಾನೋ ನಾನಾಥರಾ
ಶಕ್ತಿಪತಿ ಶ್ರೀ ಶಂಕರ ನೇತ್ರ ಸಿಂಹಾಸನದವನೋ ಶೂಲಧರಾ
ಪರಿಪರಿಯಿಂದಲಿ ಪಾಲಿಪ ಜಗವನು ಪಾವನಮೂರ್ತಿ ಪರಮೇಶ್ವರಾ
ಲೋಕಪಾಲಕ ಮುಕ್ಕಣ್ಣ ಜಗದೀಶ ಮುಕ್ತಿ ನಂದಿಯವನಾ
ಕಂಬುಕಂದರ ತೋರೋ ಚರಣ, ಪ್ರಾರಂಭದಲಿ ಸ್ಮರಿಸುವೆ ನಿನ್ನಾ
ಮಹಾಮಹಿಮನೋ ಮಹೇಶ್ವರ ಸಕಲ ಜೀವಿಗಳಿಗೆ ಆಧಾರ ನಾತಾ
ಭೂಮಿ ಆಕಾಶ ನೀರು ಗಾಳಿ ಬೆಂಕಿ ಇವನಿಂದಲೇ ಹುಟ್ಯಾವೊ ಪೂರಾ
ಶಿವನಿಂದ ಸೃಷ್ಟಿ ಆಕಾರಾ ಈ ಸೃಷ್ಟಿ ತುಂಬ ಅವನ ಹೆಸರಾ
ಶಕ್ತಿ ಹೆಚ್ಚು ಅಂತ ಮತ್ತೊಬ್ಬರನ್ನುವರು ತತ್ವದ ಅರ್ಥ ತಿಳಿಯದ ಜನರಾ
ತರ್ಕ ಮಾಡಿರಿ ಬಲ್ಲಿದರಾ ಸುಳ್ಳ ಯಾಕ ಮಾಡತೀರಿ ತಕರಾರಾ
ಮೋಕ್ಷದಾತ ಮಹಾದೇವನ್ಹೆಂಡತಿ ಸೇವೆ ಮಾಡತಾಳ ನಿರಂತರಾ
ಧರಿಯೊಳು ಹುಲಕುಂದ ಜಾಹೀರಾ ನಮ್ಮ ಹಿರೇಮಠೇಶನ ಆಕಾರಾ
ಈಶಭಕ್ತ ಸುಖವಾಸ ಚಿಕ್ಕುಂಬಿ ಸಂಶಯ ಬಂದರೆ ಕೇಳರಿ ಪೂರಾ
ಕಾಲಿ ಮಾಡಬೇಡರಿ ಕಾಲಹರಣ ತ್ರಿಕಾಲ ಮಾಡರಿ ಶಿವಭಜನಾ
ಶಂಭುಶಂಕರ ತೋರೋ ಚರಣ ಪ್ರಾರಂಭದಲ್ಲಿ ಸ್ಮರಿಸುವೆ ನಿನ್ನಾ

## ಹೀಗಿರಬೇಕೋ !

ಇಲ್ಲಿಗೆ ನಾನು ಬರಬೇಕಾದರೆ ನಮನಿಮ ಮನಸೊಂದಿರಬೇಕೊ
ತನುಮನಧನ ಗುರುವಿಗೆ ಕೊಟ್ಟು ಗರವು ಅಹಂಕಾರ ಬಿಡಬೇಕೊ
ಆರು ಅಳಿದು ಆರೂಢಮಾರ್ಗವು ಅದು ಪತ್ತವಂದಿರಬೇಕೊ
ರೂಢಿಯೊಳಗೆ ಮಾಡಿನೀಡಿ ನೀಡದ್ಹಾಂಗಿರಬೇಕೊ

ಸತ್ಯ ಪತಾಕಿ ಹಿಡಿದಿರಬೇಕೋ ನಿತ್ಯದಿ ಮನಿ ಹಸನಿರಬೇಕೊ
ನೆನವಿನೊಳಗ ನಿಜರೂಪದ ನುಡಿಗಳು ಘನವಾಗಿ ತನ್ನಲ್ಲಿರಬೇಕೊ
ಅಜಹರಸುರ ಮುನಿಗಳು ಹೌದ ಹೌದನ್ನುವಂಗಿರಬೇಕೊ
ಹಮ್ಮನ್ನಳಿದು ಹರಿಬ್ರಹಮ್ಮನ ಸ್ಮರಣೆಯು ಅನುಗಾಲ ತನ್ನಲ್ಲಿರಬೇಕೊ

ಪ್ರಪಂಚದಲ್ಲಿರಬೇಕು ಪರಮಾತ್ಮನ ದ್ಯಾನಾ ಮಾಡಬೇಕೊ
ಪರರ ನಿಂದೆಯನು ಬಿಡಬೇಕೊ ಪರಬ್ರಹ್ಮನಲ್ಲಿ ಮನಸಿಡಬೇಕೊ
ಆತ್ಮದಲಿ ಅರಳಿರಬೇಕೊ ಅರವಿಡಿದು ಗುರುವಿನ ತಿಳಿಬೇಕೊ
ಹುಡುಗ ಬುದ್ಧಿಯ ಬಿಡಬೇಕೊ ದೃಡದಿ ಮೋಕ್ಷವ ಪಡಿಬೇಕೊ

ದೃಢದಿ ಮೋಕ್ಷವ ಪಡಿಬೇಕೊ ಇದ್ದು ಇಲ್ಲದಾಂಗಿರಬೇಕೊ
ಇದ್ದು ಇಲ್ಲದಾಂಗಿರಬೇಕೊ ದೇಹ ಬಿದ್ದು ಹೋಗುವ ಭ್ರಮೆ ಬಿಡಬೇಕೊ
ತನುಮನ ಗುರುವಿಗೆ ಕೊಟ್ಟು ಘನತಪ್ಪಿಸಿಕೊಂಡಿರಬೇಕೊ
ಜಪತಪ ಮಂತ್ರ ಯಾತಕೆ ಬೇಕೊ ಉಪವಾಸ ಮಾಡುವದು ಸಾಕೊ

ದೇಹದ ಮರ್ಮವ ತಿಳಿಬೇಕಾದರೆ ಮಾದೇವರ ವರವಿರಬೇಕೊ
ನಮನಿಮ ಮನವೊಂದಿರಬೇಕೊ ಮನದಾಗ ನಿಜ ತುಂಬಿರಬೇಕೊ
ಗಾದಿ ಶಾಸ್ತ್ರ ಓದಿ ವಾದ ಮಾಡುವವರಿಗೆ ಹಾದಿ ಇನ್ನೆಲ್ಲಿ ದೊರಿಬೇಕೊ
ಪಂಚಮುಖದ ಸಿವ ಹಂತೆಲೆ ಇರುವಾಗ ಚಿಂತಿ ಇಲ್ಲದಾಂಗಿರಬೇಕೊ

ಪ್ರಪಂಚ ಹಿಡಿದು ಕಂಚಿಪುರಕೆ ಹೋಗಿ ಪಂಚಾಮೃತವನುಣಬೇಕೊ
ಅಂದು ಇಂದು ಸಂದೇಹವ್ಯಾಕೆ ಬಂದ ದಾರಿಯ ನೋಡಲು ಬೇಕೊ
ಚಂದುಳ್ಳ ಮಾರುತಿ ತಂದೆಯಳೊಡನಾಡಿ ಕುಂದಿಲ್ಲದನ್ನವನುಣ ಬೇಕೊ
ಶಿಶ್ವಿನಹಳ್ಳಿಯಲ್ಲಿರಬೇಕು ನಿನ ನೆನಿಸಿದಾಗ ಇಲ್ಲೇ ಬರಬೇಕೊ
ನೆನಸಿದಾಗ ಇಲ್ಲೆ ಬರಬೋಕೊ ಮಾರುತಿ ಸ್ಮರಿಸಿ ಪದಹೇಳಬೇಕೊ

* * *

# ಪಾಪ ಪುಣ್ಯದ ಪ್ರಶ್ನೆ

ಪಾಪ ಪುಣ್ಯದಾಗ ಜಾಸ್ತಿಯಾವದೆಂದು
ಪ್ರಶ್ನೆ ಮಾಡಿದಳು ಪಾರ್ವತಾ
ಪುಣ್ಯದ ಬಲದಿಂದ ಪಾಪ ಹುಟ್ಟಿತು
ಪರಮೇಶ್ವರಾ ಹೇಳಿದಾ ಮಾತಾ

ಹೊನ್ನು ಹೆಣ್ಣು ಆನಂದ ಕೊಟ್ಟಾರಾ
ಬಾಳ್ವೆ ಮಾಡಲಾಕ ಬಲುಸಿಸ್ತಾ
ಮನಿಹೊಲ ಮನಿಮಕ್ಕಳ ಮಾಯದಾಗ
ಈಶ್ವರನ ಬಿಟ್ಟರು ಮರತಾ

ಶಿವಾ ತನ್ನಗ ಶಕ್ತಿ ಕೊಟ್ಟರ
ವಂಕಿ ಸರಗಿ ಮಾಡಿಸೇನಂತ
ಸತ್ತು ಮಾಡಿದ ಅಗಸಾಲೇಗ ಅಂತಾಳೋ
ಏನ ಹೆಸನ ಹಚ್ಯಾನ ಮುತ್ತಾ

ಅಂಥಾ ಶ್ಯಾಣ್ಯಾ ಅಗಸಾಲ್ಯಾ ಹುಟ್ಟಿದಾನಾ
ತಾ ಹ್ಯಾಂಗ ಆದನು ಬುದ್ದಿವಂತ
ಮೂಗ ಹರದ ಮೂಳನ್ನ ಮಾಡಿದರ
ಯಾತರಾಗ ಇಡತಾಳ ನತ್ತಾ

ದೇವರ್‍ಯಾಕ ಮೂಗ ಹರದನೆಂದು ದಿನಾ
ನೆನಸತಾಳು ಮುಚ್ಚಿಗೊಂತಾ
ನತ್ತಿನ ತಕ್ಕೊಂಡು ಅತ್ತಿ ಹೂವಿನ ಸೀರಿಯ
ತಂದಳೋ ನಕ್ಕೊಂತಾ

ಜ್ಯಾಡನ ನೆನೆದು ಸೆರಗ ತೋರಸ್ಯಾಳೋ
ಜರಾ ಹಾಕ್ಯಾನು ಸುತ್ತಮುತ್ತಾ
ನಡ ಮುರದು ಕುಡುಗೋಲು ಮಾಡಿದರ
ಸೀರಿಯಲ್ಲಿ ಹಾಕುತಾಳು ಸುತ್ತಾ

ದೇವರ್‍ಯಾಕ ನನ್ನ ಊನ ಮಾಡ್ಯಾನೆಂದು
ನೆನಸಾಡಿ ಕುಂಟ್ಯಾಡಿಕೊಂತಾ
ಊರ ಮುಂದಿನ ಹೊಲ ಮಾಡಿದನು
ಮೂಡಲ ಹೋರಿಕಟ್ಟಿ ಎತ್ತಾ

ರಂಟಿ ನೇಗಲಿ ನಟ್ಟಕಡಿದು ಗೊಬ್ಬರ
ಒದು ಹಾಕ್ಯಾನೊ ಮಸ್ತಾ
ಮನ ನೋಡುದು ಮಸ್ತ ಬೆಳದೀತು
ಮ್ಯಾಟ ಹತ್ತಿ ನೋಡಿದ ನಿಂತಾ

ನೋಡಿ ಅಂತಾನೊ ಹಿಡಿದೆ
ಆಯಿಗಾರಗ ಕೊಡಬೇಕು ಎತ್ತ
ಮಾಯರೂಪದಿಂದ ಆಗ ಈಶ್ವರ
ಬಂದು ಕುಂತಾ ಮಾತಾಡಿಕೊಂತಾ

ಬೀಳಹೊಲ ಏನ ಬೆಳದೈತಂತಾನೋ
ನೀನ ಕಾಣತೀದಿ ಮಣಿವಂತಾ
ಏನ ಹೇಳತಿ ಎತ್ತು ಅಳಿಗೆ ನೆತ್ತರು
ಇಳಿದಾವು ಎದಿಯಾಗಂತ

ಮೇನತ್ತ ಮಾಡಿ ನೀ ಮಿಕ್ಕಿ ಬೆಳೆದೀತು
ದೇವರು ಹೋದ ಒಳ್ಳೆಯದಂತಾ
ಮುಂದಿನ ವರುಷಕ ಮಸ್ತ ಬದುಕು ಮಾಡಿ
ಬಿತ್ತಿದಾನು ಬೆಳೆದೀತಂತಾ

ಬಿತ್ತಿದ ಬೀಜ ಭೂಮಿ ನುಂಗಿತು
ಕಾಣಲಿಲ್ಲ ಹುಟ್ಟಿದ ಗುರುತಾ
ಆಗ ಈಶ್ವರ ಬಂದ ಕೇಳತಾನೊ
ಬೀಳಯ್ಯಾಕ ಬಿದ್ದೈತಂತಾ

ಏನ ಹೇಳಲಿ ದೇವರ ಮನಸ್ಸಿಗೆ
ಬರಲಿಲ್ಲಾ ಮಾಡಿದ ಗಾತಾ
ಆಡಿದ ಮಾತಿಗೆ ಅನುಭೋಗಿಸೆಂದು
ಮಾಯವಾದನೋ ಭಗವಂತಾ

ನೆಳ್ಳುವಾಗ ನೆನವುದು ಕರೆ ಎಂದು
ಕರಬಲ ಆದಳೊ ಪಾರ್ವತಾ
ಶ್ಯಾರ ಕುಂದಗೋಳ ಶಂಭುಲಿಂಗನ
ನಂಬಿವವನು ಆದಾನು ಮುಕ್ತಾ

* * *

## ಆತ್ಮಲಿಂಗನ ಜಾತ್ರಿ

ಸ್ವಾಮಿ ನಮ್ಮಯ ದೇವಾರ ಬಂದಾರ ಬನ್ನಿರೋ
ಗುರುವೆ ನಮ್ಮಯ ದೇವಾರ ಬಂದಾವು ಬನ್ನಿರೋ
ಆತ್ಮಲಿಂಗನಜಾತ್ರಿ ಆಗತದ ಪ್ರೀತಿಲಿಂದ ಕೇಳರಿಕುಂತಾ

ದೇಹವೆಂಬುದು ತೇರ ಮಾಡಿದನೊ
ರಥಾ ನಡಿಸಿದನೊ ವಾಯುಸುತಾ
ಎರಡು ಪಾದಗಳ ಗಾಲಿ ಮಾಡಿದನೊ
ತೂಕ ಇಟ್ಟಿದಾನೊ ಸಮತೋಲಾ

ಕಾಲುಗಾಲಿಗೆ ಅಚ್ಚು ಹಾಕಿದನೊ
ಸದರ ಸಂದಿಗೆ ಜಡಿದಾನೊ ಕೀಲಾ
ಕರೆಯ ಮಾಡಬಹುದು ತೇರಾ
ಹೆಚ್ಚಿನ್ಯಾವ ಬ್ರಹ್ಮದೇವರಾ

ಒಂದೊಂದು ಕೆಲಸಕ ಒಬ್ಬಬ್ಬರ ನೇಮಿಸಿದರ
ಕುಂತು ನಡಸಿದಾರೋ ಆ ತೇರಾ
ಜಂಗಿನ ಗಡ್ಡಿ ಆತೊ ಇಲ್ಲಿಗೆ
ಬ್ರಹ್ಮನ ಹುನ್ನಾರ ಬಹು ಅಸಲಾ

ಬ್ರಹ್ಮ ಬಡಿಗನಾಗಿ ತೇರ ಮಾಡಿದಾನೊ
ಉಳಿಯ ಬಾಚಿ ಕೈಯೊಳಗಿಲ್ಲಾ
ಮೂರು ಲೋಕಕ ಮೀರಿದಂತವ
ಅವನ ಬುದ್ದಿಗೇನು ಕಡಿಮಿಲ್ಲಾ

ವಿಸ್ತಾರದಿಂದ ನೆಲೆ ಏರಿಸಿದಾನೊ
ಕೊಟ್ಟು ಕಳವಿದಾನೊ ತಾ ಕುಂತ
ದುಂಡು ಬಾಳಿಯ ದಿಂಡಿನಂತವು
ಎರಡು ತೊಡಿಗಳ ಬಹು ಸಾಚಾ

ಚಂಡಿಕಿ ಕಳಸದ ಮೇಲೆ ನಿಶಾನಿ
ನೋಡಿ ಮನಾ ಆದೀತು ಶಾಂತಾ
ತೇರಿನ ಹೊಂದಿಕೆ ಇನ್ನೇನ ಹೇಳಲಿ
ಬಡಿಗ ಕಳಸವನ್ನು ಹೊಂದಿಸಿದ್ದ

ಎತ್ತ ನೋಡಿದರ ಗೊತ್ತು ಹತ್ತದಂಗ
ಗುಪ್ತರೀತಿಲಿಂದ ಮುಗಿಸಿದ್ದ
ಮುನ್ನೂರಾ ಅರವತ್ತು ನರಾ ಹುರಿಯ ಮಾಡಿ
ಅದಕ ಮುರವಳಿ ಗಂಟಿ ತಿರವಿದ್ದ

ಬಿರಿಯ ಬಲಾದಿಂದ ಬಿಗದ ನಿಂತಿತೊ
ಹೋದಾಡುತ್ತಿದ್ದಿಲ್ಲ ಹಿಂದಮುಂದ
ಚರ್ಮ ಎಂಬುದು ಸೆಲ್ಲೆಯ ಮಾಡಿದಾನೊ
ತೇರಿನ ಸುತ್ತಲು ಸುತ್ತಿದ

ಪಂಚತತ್ವವೆಂಬು ಆಯ್ದು ಗುಣಗಳ
ಅರಿವಿನಿಂದ ಸಿಂಗರಿಸಿದ್ದ
ಒಬ್ಬ ಮೂರುವರಿಮಳಾ ಉದ್ದಾ
ಅಳತಿ ತಗೋಳಿರಿ ನೀವು ನಿಂತ

ಗುಣಗಳೆಂಬು ಎರಡು ಉದ್ದಿಗಿ ಮಾಡಿ
ಮೊದಲ ಮಾಡಿದಾನೋ ತಯ್ಯಾರ
ಧೈರ್ಯವೆಂಬುದು ನಗಾ ಬಿಗದಾನೊ
ಮೂಕದೊಳಗ ಇರುವ ಆಧಾರ

ಬುದ್ಧಿ ಮನಸು ಇವು ಎರಡು ಕೂಡಿಕೊಂಡು
ತೇರ ಜಗ್ಗಿದಾವೊ ಜೋಡ ಸರಾ
ಬಾಯಲ್ಲಿ ಹೊರಬಿದ್ದ ಶಬ್ದ ವಾಕ್ಯಗಳು
ಆಗ ಹೊಡದಾವೊ ಜಯಕಾರಾ

ಸಪೂರಿ ತೇರಿನ ಹಿಂದೆ ನಿಂದರಿಸಿ
ಊದಿಸ್ಯಾರೊ ಅವರು ಗೋರಸ್ವರಾ
ಭೀಕರೆಂಬುದ ಗದ್ದಿಗೆ ಮಾಡಿ
ಸಿಂಹಾಸನ ರಚಿಸ್ಯಾನೊ ಬಡಿಗ್ಯಾ

ಅಪೂರ್ಣದ ಮೇಲೆ ಮೂರ್ತನಾದನೊ
ಆತ್ಮಲಿಂಗನು ತಾ ಕುಂತ
ವಿಚಾರ ಎಂಬುವ ಮಾರ್ಗವ ಹಿಡದು
ಸಾಗಿ ಬಂತೊ ಭೂಮಿಯ ಮ್ಯಾಲ

ಚಪ್ಪನ್ನ ದೇಶಕ ಒಪ್ಪುವ ತೇರಿದು
ಜನಾ ನೋಡಿ ಆದಿತೋ ಹುಚ್ಚ
ಮೂರು ದಿನದ ಜಾತರಿಯ ಮಾಡಿಕೊಂಡು
ಹೋಗುದಲ್ಲ ಸಣ್ಣಾಗಿ

* * *

# ಗುರುಮಾರ್ಗ ಬಿಡಬ್ಯಾಡ

ಗುರುವಿನ ಪಾದ ಗಟ್ಟ್ಯಾಗಿ ಹಿಡಿಯೋ
ಗುರುಮಾರ್ಗ ನೀ ಬಿಡಬ್ಯಾಡ
ಹುಡುಗನಾಂಗ ಅಡವಿ ಹಿಡಿಯಲು ಬ್ಯಾಡ
ಕಡುವನಂಗ ತಿರುಗಲು ಬ್ಯಾಡ

ಕುಂತು ಕೇಳು ಸಾಕ್ಷಾತ್ ಹೇಳತೀನಿ
ಭ್ರಾಂತಿಗೆಟ್ಟು ನೀ ತಿರುಗಲು ಬೇಡ
ನಗುತ ಹೇಳತಿನಿ ಸತ್ಯದ ಮಾತ
ಹೇಳಿದರ ಸಿಟ್ಟಿಗೆ ಬರಬ್ಯಾಡ

ಕೆಳಗ ನೋಡಿ ನಡಿಬೇಕೋ ತಮ್ಮ
ಹೆಡಿ ಎತ್ತಿ ತಿರುಗಲು ನೀ ಬೇಡಾ
ಕೂಲಿ ಮಾಡುದು ನಿನ್ನ ಪಾಲಿಗೆ ಇಟ್ಟಾನ
ಅರಸ್ತಾನ ನೀ ಬೇಡ ಬ್ಯಾಡಾ

ನೆಲ ಸಕಲ ಹೊತ್ತು ತಿರುಗುವ ಮಂದಿ ನೋಡಿ
ಉಸಿರುಗಳೆಯಲು ನೀ ಬೇಡಾ
ಹರಕ ಚಾಪಿ ಹಾಸಿಕೊಳ್ಳವರೆಲ್ಲ
ಅರಸ್ತಾನಕ ಆಸೆ ಮಾಡಬ್ಯಾಡಾ

ಅಗಸರ ಮನೆಯೊಳು ಅಡಕ ಅರಬಿ ಹೊತ್ತು
ಸುಳ್ಳು ಬಡಿವಾರ ಮಾಡಬೇಡಾ
ಶಿವ ನಿನ್ನ ಪಾಲಿಗೆ ಸತ್ವವ ಕೊಟ್ಟರೆ
ನನ್ನ ಸರಿ ಯಾರಿಲ್ಲ ಅನಬೇಡಾ

ನಿನ್ನ ಮಡದಿ ಮಾತು ಕೇಳಿ
ತಾಯಿತಂದ್ಗೆ ಹರಿಹಾಯ ಬೇಡಾ
ಕುಡಿದ ಹಾಲಿನ ಕೂನವಿಲ್ಲದೆ
ಅವರ ಮನಸು ನೋಯಿಸಬೇಡಾ

ಕಾಶೀರಾಮೇಸುರ ಅವರೆಂದು ತಿಳಕೊ
ನೀಯೇನು ಕಾಶಿಗೆ ಹೋಗಬೇಡಾ
ಶಿವ ನಿನ್ನ ಪಾಲಿಗೆ ದವಳತನ ಕೊಟ್ಟರೆ
ಬಡವರಿಗೆ ಹಣ ಕೊಡಲು ಮರಿಬೇಡಾ

ಅನ್ನಿಲ್ಲಂತ ಕಿವಿಲೆ ಕೇಳಬ್ಯಾಡ ತಮ್ಮಾ
ಅರ್ರ್ವಿಲ್ಲಂತ ಕಣ್ಣಿಲೆ ನೋಡಬೇಡಾ
ಸ್ವರ್ಗವು ನಿನ್ನಂಗ ಸರತಿ ಹಾಡಿತು
ದಾನಧರ್ಮಕ ಕೈ ಬಿಡಬೇಡಾ

ಶಿವ ನಿನ್ನ ಪಾಲಿಗೆ ದೊರೆತರೆ
ಹಣಕೊಟ್ಟು ಬಡ್ಡಿ ತಿನಬ್ಯಾಡಾ
ಗುರುವು ಕಲ್ಲು ಕಟಿದು ಬಜನಿ ಮಾಡಂದ್ರೆ
ಮೈ ಮರೆತು ತಿರುಗಲು ನೀ ಬೇಡಾ

ಹಸುಮಗನಾ ತುಸು ಹೇಳತೀನಿ
ತಿಳಕೊಂಡು ಹೇಳೋ ನಿನ ಮನದಾಗ

***

## ನಾನೆಂಬುದು ನರಕ

ನಾನೆಂಬುದು ನರಕದ ಪ್ರಾಪ್ತಿ
ಗರವಿನ ಮಾತೊಂದು ಬಿಡಬೇಕೊ
ಗುರುವಿನ ಹೊರತು ಮತ್ತ್ಯಾರಿಲ್ಲ
ಚರಣಕೆ ಚಿತ್ತವನಿಡಬೇಕೊ

ಶಿವಕೊಟ್ಟ ಕಾಲಕ್ಕೆ ದಾನಾಧರ್ಮ
ಪುಣ್ಯದ ವಾಸನೆ ಇರಬೇಕೊ
ಉಂಡದ್ದು ಉಟ್ಟದ್ದು ಕೊಟ್ಟದ್ದು
ಲಾಭದೊಳಗೆ ಲಾಭ ಅನಬೇಕೊ

ಪರಸ್ತ್ರೀಯರು ಇದರಿಗೆ ಬಂದರೆ
ಅವರು ನಮತಾಯಿ ಸರಿ ಅನಬೇಕೊ
ತನ್ನ ದೇಹಾ ತಾನೆ ಸುಟ್ಟರೆ
ಅವನೆ ಸಾಧು ಅನಬೇಕೊ

ತನ್ನ ಬಡತನ ತನ್ನಲ್ಲಿ ಇದ್ದರೆ
ವಚನಕ ಪ್ರಾಣವ ಕೊಡಬೇಕೊ
ಊರ ಹೊರಗಿನ ಮೂರುವರಿಮೊಳ ಜಗ
ನಮ್ಮದ ಅಂತ ಎನಬೇಕೊ

ಸಿವ ಕರದ ಕಾಲಕೆ ಮೇಲಕೆ ಹೋಗಿ
ವಂದಿನ ಜಡತಿಯ ಕೊಡಬೇಕೊ
ಪುಂಡ ನವಲಗುಂದ ಗಂಡಮೆಟ್ಟ ನೋಡ
ನಾಗಲಿಂಗನ ನೆನಿಬೇಕೊ

ಕಂಡಿತ ಮಾತಿಗಿ ವಾದ ಹಾಕುವ
ಭಂಡರ ಗೋಷ್ಠಿಯ ಬಿಡಬೇಕೊ

* * *

# ನೀತಿ ಮಾತು

೧

ಅಕ್ಕತಂಗಿಯರೆಲ್ಲ ಏಕ ರೀತಿ ಚಿತ್ತದಿಂದ
ಅಕ್ಕರತಿಲಿ ಕೇಳರೆವ್ವ ಕುಂತ
ಹೆಣ್ಣಮಕ್ಕಳಾಗಿ ಹುಟ್ಟಿ ಬಂದ ಮ್ಯಾಲ
ಹ್ಯಾಂಗ ಆಗತೀರಿ ನೀವು ಮುಕ್ತ

ಮದವೀಗಂಡನ ಅಂಶ ಮನೆಯ ದೇವರೆಂದು
ಪಾದಸೇವೆ ಮಾಡರಿ ನಿರ್ತ
ಪಾದ ತೊಳೆದು ಪಾದೋದಕವ ಕುಡಿರೆವ್ವ
ಅದರಾಗೈತರಿ ನಿಮಮುಕ್ತಿ

ಚೆಲುವನಿಲ್ಲವೆಂದು ಜರಿಯ ಬ್ಯಾಡರಿ
ಅದರಾಗ ನಿಮಗ ಮುಕ್ತಿ
ಬಡವ ಗಂಡನಿದ್ದರ ದುಡದ ತಂದ ಹಾಕಬೇಕ
ಜೋಪಾನ ಮಾಡಬೇಕ ನಗನಗತ

ಮಂಗಳಸೂತ್ರ ಇದ್ದರ ಸಾಕ
ಬೇಡಬಾರ್ದು ಬಂಗಾದ ವಸ್ತಾ

ಹತ್ತು ಸಾವಿರ ವಸ್ತ ಇಟ್ಟರ ಏನು
ನತ್ತು ಇಲ್ಲದಿದ್ದರ ವ್ಯರ್ಥ

ಮೂಗುತಿ ನತ್ತ ಮಂಗಳಸೂತ್ರ
ಪ್ರಾಣನಾಥ ಗಂಡನ ಗುರ್ತ
ರೂಡಿಲಿ ಗಂಡ ಚಲುವ ಇಲ್ಲದಿದ್ದರ
ಹೋಗಿ ಸೇರತಾರ ತವರೂರ

ಕುಂಟನೆವಾ ಹೇಳಿ ತಂಟೆ ತೆಗೆಯತಾರ
ಹೇಳಲಾಕ ಬಂದರ ಹಿರಿಯರಾ
ಹಿರಿಯರು ಬಂದು ಕರೆಮಾತ ಹೇಳಿದರ
ಬೇದು ಕಳಸತಾರ ಬೆರಕಿಯವರಾ

ಹೇಳಿದಂಗ ಕೇಳು ಗಂಡನಿದ್ದರ
ಪೂರಾ ಹೆಂಗಸರ ಅಧಿಕಾರ
ಮೂಕ ಕುರಿಯಂಗ ಮುನ್ನೋಡಿ ಬೀಳಂತ
ಕಣ್ಣಕಿಸದು ಮಾಡತಾರ ಜಬರ

ಜಬರಮಾಡಿ ಜಗ್ಗಿ ಜೋಲಿ ಹೊಡೆಯತಾರ
ಅವರಿಗಿಲ್ಲ ಗಂಡರಸ ಕಬರ
ಅತ್ತಿ ಮನಿಗೆ ಹೋಗಿ ಅಂಜಿ ನಡೆಯಬೇಕು
ತವರವರಿಗ್ಹೇಸರ ತರಬೇಕ

ಕೆಟ್ಟ ಗುಣಗಳೆಲ್ಲ ಬಿಟ್ಟು ಬಿಡರೆವ್ವ
ಗಟ್ಯಾಗಿ ಮಾಡತೀನಿ ನಮಸ್ಕಾರ
ಅನಾಚಾರದಿಂದ ಅಡವಿ ಕೂಡಬ್ಯಾಡ್ರಿ
ಹಿಡಿಯರೆವ್ವ ಧರ್ಮದ ಗುರತ

ರಾಮದೇವರ ಹೆಂಡತಿ ತಾನೆ ಸೀತಾದೇವಿ
ಪತಿಲಿಂದ ಪಡದಾಳೊ ಸಂಪತ್ತಾ
ಗಂಡಗಂಜದ ಮಿಂಡ ರಂಡ್ಯಾರು
ಹಿಂಡಗಟ್ಟಿ ತಿರುಗುವರೊ ಪೂರಾ

ಆ ರಂಡ್ಯಾರನ ಹಿಡದ ಕಡಿಯಬೇಕ ಸೀದಾ
ಇಲ್ಲದಿದ್ದರೆ ಸೆರಗ ಹರದು ಬಿಡಬೇಕ ಪೂರಾ
ಬ್ರಹ್ಮರೆಲ್ಲರೂ ಧರ್ಮವಂತರು
ಬ್ರಹ್ಮ ಆಜ್ಞೆ ಬಲ್ಲವರೊ

ಅನಾಚಾರದಿಂದ ಅಡವಿಕೂಡತಾರ
ಹಿಡಿಯಲಿಲ್ಲ ಧರ್ಮದ ಗುರತ
ಬೋಳ್ಯಾರಾಗಿ ನಾರುಮಡಿ ಉಡುದುಬಿಟ್ಟು
ಬೇಡತಾರ ಹೊಸ ಪೀತಾಂಬರಾ

ಆಚಾರಗೆಟ್ಟು ಅಡ್ಡದಾರಿ ಹಿಡಿದು
ಗುಡ್ಡ ತುಳಿಯತಾರ ತಿಳಿಯದವರಾ
ಕೆಟ್ಟಗುಣಗಳೆಲ್ಲ ಬಿಟ್ಟು ಬಿಡರೆಂತ
ಗುಟ್ಟಾಗಿ ಮಾಡತೀನಿ ನಮಸ್ಕಾರ

ಕರಿಯಪ್ಪ, ಪರಸಪ್ಪ ಇವರಿಬ್ಬರೂ
ಬುದ್ಧಿವಂತನ ಸೇವಕರೊ

೧

ಜಂಗಮನಿದ್ದಾ ಜಗದೊಳಗವ್ವಾ
ಜಂಗಮನೋಳು ಜಗವೆಲ್ಲಾ
ಆಕಾರ ಮಾಡಿಕೊಂಡು ಬಂದೆವ್ವಾ
ನಿರಾಕಾರ ಮಾಡಿಕೊಂಡು ಕುಂತೆವ್ವಾ

ಶಾಂತ ಚಿತ್ತದಿಂದ ಆದಾನವ್ವಾ
ಅದು ಏಕಮುಖವಾಯ್ತು ಶಾಂತವ್ವಾ
ಅನುಮಾನವಿಲ್ಲದೆ ಸನ್ಮಾನವಿಲ್ಲದೆ
ತನುಮನ ಯೋಚನೆ ಬಿಡರೆವ್ವಾ

ಒಂಬತ್ತು ಪುರದೊಳು ಹೋದ ಪುರುಷನು
ಕುಂಬಿನಿಗಿಳಿದು ಬಂದಾನವ್ವಾ
ಅಂಬಿಕಾಮುಖಿಯರೆ ನಂಬಿಗೆಯಿಂದಲಿ
ಸಾಂಬನಿವನೆಂದರಿರೆವ್ವಾ

ಬಂದ ವಿಧರಿಗಿನ್ನು ಸಂದೇಹವ್ಯಾಕೆ
ಬಂದಾನ ಭವಗಳ ಕಡಿರೆವ್ವಾ
ಮುಂದಿನ್ನ ಹುಡಕಿದರೆ ಎಂದಿಗೆ ಸಿಕ್ಕಾನು
ಮಂದಮತಿಯಾಗುದು ಬಿಡಿರೆವ್ವಾ

ಎಲ್ಲದರಲ್ಲೆ ಇರುವವನವ್ವಾ
ಮುಂದೆ ಇಲ್ಲೆ ನುಡಿಯುವನೊ

ಆರು ಭಾಗದಲ್ಲಿದ್ದವನವ್ವಾ
ಅರರಲಾಡುತ ಐದಾನವ್ವಾ

ಆರರಲಾಡುತ ಐದಾನವ್ವಾ
ಅರಿಗೆ ಸಿಗದಂಗೈದವನವ್ವಾ
ಶೂನ್ಯ ಸ್ಥೂಲ ಜಂಗಮನವ್ವಾ
ಸ್ವಾನಕ ಬಂದಾನ ನೋಡವ್ವಾ

ಧರಿಯೊಳು ಸೆಟ್ಟರ ಸಿವನವ್ವಾ
ಅರವಿನೊಳರವು ಹಿಡಿಯವ್ವಾ
ಪರಿಪರಿ ಕಷ್ಟವು ನೋಡವ್ವಾ
ಪರಸಿವನಿಗೆ ಕೈವೊಡ್ಡವ್ವಾ

ಧರೆಯೊಳು ಶಿಶ್ವಿನಹಳ್ಳಿ ವಾಸವ್ವಾ
ಆತನ ದಯದಿಂದ ಹೇಳೆನವ್ವಾ

## ರೇವಣ ಸಿದ್ಧನ ವೃತ್ತಾಂತ

ಶಿವನೆ ನಮ್ಮಯಿ ದೇವರು ಬಂದಾರು ಬನ್ನೀರೆ
ಸ್ವಾಮಿ ನಮ್ಮಯ ದೇವರು ಬಂದಾರ ಬನ್ನೀರೆ
ಏನಮ್ಮ ಚಲುವ ದೇವರಿಗೆ ಎಂಥಾ ಹೂಗೋಳು ಬಂದಾವೆ
ಸಗರದ ಸಣ್ಣ ಮಲ್ಲಿಗಿ ಬಂದಾವ ದುರ್ಗದ ದುಂಡಮಲ್ಲಿಗಿ
ಕೆಸರಗೊಟ್ಟ ಕ್ಯಾದಿಗಿ ಬಂದಾವ ಮರಳಗೊಟ್ಟ ಮಲ್ಲಿಗೆ
ಈಳಗಿ ಹಚ್ಯಾರ ಸೀಳಿ ನೈದರ ಬಾಳಿ ದಿಂಡಿನ ಭಾಸಿಂಗ
ಕಟ್ಯಾರೋ ಕೈಲಾಸದ ಮಾಲಿ ಒಟ್ಯಾರೋ ಹೂವಿನ ಬಣಮೇನ
ಒಟ್ಟಿದ ಹೂವಿನ ಒಣಮಿಯ ಮ್ಯಾಲ ಹೊಟ್ಟೆ ಮೇಲ ಮಾಡಿ ಆಡ್ಯಾನ
ಹೂವಿನಾಗ ಹುದಗ್ಯಾನ ಮಾಲ್ಯಗ ಮಲಗ್ಯಾನ ಮಣ್ಯಗ ಕಣ್ಣ ತೆರದಾನ
ಮಗ್ಗ್ಯಾಗ ಕಣ್ಣ ತೆರದಾನ ಜಗ್ಗಿನ ಗಾಳಿ ಹೊಡೆದಾನ
ಮಾರಗ ಮಾರಗಂದಾರೆ ಯಾವಲಿ ಇರುವತಾವೇನ
ಏನಮ್ಮ ದೇವರ ಮಾರಗ ಭುಂಯಾ ಕಾಡಮಗೇರ‍್ಯಾಗ
ಭುಂಯಾ ಕಾಡಮಗೇರ‍್ಯಾಗೆ ನೆಲದ ಭುಂಯಾರದೊಳಗೇನಾ
ನೆಲದ ಭುಂಯಾರದೊಳಗೇನೆ ಗುರುವ ರೇವಣಸಿದ್ಧನ
ಗುರುವ ರೇವಣಸಿದ್ಧನ ಮನದಾಗ ಯೋಚನ ಮಾಡ್ಯಾನ
ಮನದಾಗ ಯೋಚನ ಮಾಡ್ಯಾನೆ ಭಿಕ್ಷುಕ ಹೋಗಬೇಕಾಂದನ
ಶರಣ ತಿಂಗಳ ಕಡಿಯೇನ ಹಾಲಿನ ಬಿಕ್ಷಕ ಹೋಗಬೇಕಾಂದನ
ಹೊಕ್ಕಳ ಗಂಟಿ ಕಟ್ಯಾನೆ ಮಳಕಾಲ ಜಂಗ ಕಟ್ಯಾನ
ರುಂಡಮಾಳ ಹಾಕ್ಯಾನೆ ಗುಂಡಮಣಿಗೋಳು ಹಾಕ್ಯಾನ

ಮುಂಗೈಗ ಜೋಳಗಿ ಹಾಕ್ಯಾನೆ ಕ್ಯಾವಿಯ ಭಗವಾ ಹಾಕ್ಯಾನ
ಕ್ಯಾವಿಯ ಭಗವಾ ಹಾಕ್ಯಾನೆ ಲ್ಯಾವಿ ದಂಡಕೋಲ ಹಿಡದಾನ
ಲ್ಯಾವಿಯ ದಂಡಕೋಲ ಹಿಡದಾನೆ ಕೈಯಾಗ ತ್ರೀಸೂಲ ಹಿಡದಾನ
ಕೈಯಾಗ ತ್ರೀಸೂಲ ಹಿಡದಾನೆ ಮುಳ್ಳಾಆಂವಿಗಿ ಹಾಕ್ಯಾನ
ಮುಳ್ಳ ಆಂವಿಗಿ ಹಾಕ್ಯಾನೆ ಕಾಲರುಳಿಗೋಳು ತೊಟ್ಟಾನ
ಗುರುವ ರೇವಣಸಿದ್ದನೆ ನೆಲದ ಭುಂಯಾರದೊಳಗೇನ
ಹೊನ್ನ ಹೊಸ್ತುಲ ಧಾಟ್ಯಾನೆ ಏಳಗಜದ ಕಲ್ಲೇನ
ಏಳಗಜದ ಕಲ್ಲೇನೆ ಈಡ ಬಾಗಲ ಮಾಡ್ಯಾನ
ಏನಮ್ಮ ಗುರುವ ಬರುವಾಗೆ ಮುಗಲನೆ ಥೆರಿ ಹೊಡದಾವೆ
ಮುಗಲನೆ ಥೆರಿ ಹೊಡದಾವೆ ಭೂಮಿನೆ ಭುಗುಲಂದಾವ
ಗುರುವ ರೇವಣಸಿದ್ಧನೆ ರಾಯಿಮಾರಗ ಹಿಡದಾನ
ಅಲ್ಲ್ಯಾನೆ ಇಲ್ಲ್ಯಾನೇನ ಎಲ್ಲಿಗ ಬರುವುತಾರೇನ
ಶರಣ ತಿಗಳ ಕಡಿಯಾ ಸೋಮರ ಹಾಲಿನ ಭಿಕ್ಷಕ ಬಂದಾನ
ಶರಣ ತಿಂಗಳ ಕಡಿಯಾ ಸೋಮರ ಹಾಲಿನ ಭಿಕ್ಷಕ ಬಂದಾನ
ಹೋಗುತ ಹೋಗುತಲ್ಲೇಳ ಎಲ್ಲಿಗ ಬರುತಾನೇನಯ್ಯ
ಹೋಗುತ ಹೋಗುತಲ್ಲೇಳ ಹಾರರ ಗುಂಡವ್ವನ
ಹಾರರ ಗುಂಡವ್ವನ ಮನಿಗಿ ಕೋರಣ ಭೀಕ್ಷೇಳಂದಾನ
ಕಡಿಯಾಗ ಆಗಿನಿ ಮಡಿಯಾ ಉಟ್ಟಿನಿ ಮುಂದಿನ ಮನಿಯೊಂದು ಆಗಲೆ
ಮಾನವಿಲ್ಲದ ಹೀನ ಜಾತಿ ಎಂಥಾ ಮಾತೊಂದು ಆಡಿದೆ
ಗುರುವ ರೇವಣಸಿದ್ಧನೆ ನಿಂತಲ್ಲೆ ಮಾಯವಾದನ
ನಿಂತಲ್ಲೆ ಮಾಯವಾದನೆ ಎಲ್ಲಿಗ ಬಂದಾನೇನಯ್ಯ
ರಡ್ಡೇರ ನೀಲವ್ವನ ಮನಿಗೆ ಕೋರಣ ಬಿಕ್ಷೇಳಂದಾನ
ಕೋರಣ ಬಿಕ್ಷೇಳಂದಾನೆ ರೆಡ್ಡೇರ ನಿಲವ್ವನ
ಯಾವ ನಾಡದ ಜಂಗಮ ಎಂಥಾ ಬಿಕ್ಷಕ ಬಂದಿದೆ
ಶರಣ ತಿಂಗಳ ಕಡಿಯಾ ಸೋಮರ ಹಾಲಿನ ಬಿಕ್ಷಕ ಬಂದೇನ
ಚರಗಿ ಹಿಡದೀನೆ ಕರಗೋಳ ಬಿಟ್ಟೀನೆ ಚರಿಗಿ ಕೈಯಾಗ ಹಿಡದೀನೆ
ಚರಗಿ ಕೈಯೋಳ ಹಿಡದೀನೆ ಕೈವಂದು ಖಾಲಿ ಇಲ್ಲೇನ
ನಿನ್ನ ಕರಗೋಳಲ್ಲೇನ ನಿನ್ನಗಿಲ್ಲದಂಗಾಗಲೆ
ನಿನ್ನ ಕರಗೋಳಲ್ಲವ್ವ ನಿನ್ನಗಿಲ್ಲದಂಗಾಗಲೇ
ನಿನಗ ಇಲ್ಲದಂಗಾಗಲೆ ಕೈವಂದು ಖಾಲಿ ಆಗಲೇ
ಗುರುವ ರೇವಣಸಿದ್ಧನ ನಿಂತಲೆ ಮಾಯಾವಾದವ
ಅಲ್ಲ್ಯಾನ ಇಲ್ಲ್ಯಾನೇನ ಎಲ್ಲಿಗ ಬರುವುತಾನೇನೆ
ಇಳದಲ್ಲಿ ಇಳಿಗಾಳೇನ ಸುಳದಲ್ಲಿ ಸುಳಿಗಾಳೇನ
ರಾಯರ ಓಣಿಲಿ ಹಾಯ್ದನೆ ರಡ್ಡೇರ ಮನಿಯ ಮುಂದೇನ
ರಡ್ಡೇರ ಮನಿಯ ಮುಂದೇನ ಚಕ್ಕರಗಟ್ಟಿ ಮುಂದೇನ
ಚಕ್ಕರಗಟ್ಟಿ ಮುಂದೇನೆ ಕುರಬರ ಸಿದ್ದವ್ವನ

ಕುರಬರ ಸಿದ್ದವ್ವನ ಮನಿಗಿ ರೇವಣ ಬರುವುತಾನೇನ
ರೇವಣ ಬರುವುತಾನೇನ ಏನಂದಾಡುತಾನೇನ
ಸರ್ವ ಕುಲದ ಹಿರಿಯಾ ಬಾ ನನ್ನ ಗುರುವ ರೇವಣಸಿದ್ಧನ
ಗುರುವ ರೇವಣಸಿದ್ಧಗೆ ಕುರುಬರ ಸಿದ್ದವನ
ಕುರುಬರ ಸಿದ್ದವನೇ ಏನಂದಾಡುತಿದ್ದಳ
ಏ ನನ್ನ ಗುರುವ ನೀ ಬಾರೋ ಎಂಥ ಬಿಕ್ಷಕ ಬಂದೀದೆ
ಶರಣತಿಂಗಳ ಕಡಿಯಾ ಸೋಮರ ಹಾಲಿನ ಬಿಕ್ಷಕ ಬಂದೇನ
ಕುರುಬರ ಸಿದ್ದವನೇ ಒಳ್ಳೆದು ಒಳ್ಳೇದಂದಾಳ
ಚಕ್ಕರಗಟ್ಟಿ ಮ್ಯಾಲೇನ ರೇವಣಸಿದ್ದನಿದ್ದಾರ
ಗುರುವ ರೇವಣಸಿದ್ದನ ತಾವೊಂದು ಮೂರುತಿ ಆದನ
ಮನಿಯಾ ಸಾರುಣಿ ಮಾಡ್ಯಾಳ ಮನವಂದು ಮೀಸಲ ಹಾಕ್ಯಾಳ
ಮನವ ಮೀಸಲ ಹಾಕ್ಯಾಳೆ ಮನಿಯಾ ಸಾರುಣಿ ಮಾಡ್ಯಾಳ
ಏನಮ್ಮವ್ವ ಸಿದ್ದವ್ವ ಗಚ್ಚಿನ ಬಚ್ಚಲಕ ಹೋದಾಳ
ಮಡಿ ಕಳದ ಮಡಿ ಉಟ್ವಾಳೆ ಎರದಾಳ ಹೆಣುಲ ಹಾಕ್ಕಾಳ
ಎರದಾಳ ಹೆಣುಲ ಹಾಕ್ಯಾಳೆ ಹಣಿಯಲಿ ಕುಂಕುಮ ವಿಟ್ವಾಳ
ಹಣಿಯಲಿ ಕುಂಕಮಿಟ್ವಾಳೆ ಹಲ್ಲಿಗಿ ಜಾಚೇಲಿ ಹಚ್ಯಾಳ
ಕೈಯಾಗ ಚರಗಿ ಹಿಡದಾಳೆ ಗೆಜ್ಜಿ ಬಿಂದಿಗಿ ಹಿಡದಾಳ
ಗೆಜ್ಜಿ ಬಿಂದಗಿ ಹಿಡದಾಳೆ ಈಡ ಬಾಗಲ ತೆರದಾಳ
ಈಡ ಬಾಗಲ ತೆರದಾಳೆ ದೊಡ್ಡಿ ಒಳಗೆ ಹೋದಳ
ದೊಡ್ಡಿ ಒಳಗೆ ಹೋದಾಳೆ ಹುಟ್ಟಗ್ವಾಮರಿ ಆಡೇನ
ಹುಟ್ಟಗ್ವಾಮರಿ ಆಡೇನ ಕಾಮಧೇನು ಇದ್ದಾವ
ಕಾಮಧೇನು ಕಲ್ಪವೃಕ್ಷ ಆಡ ಮುಂದಕ ಕರದಾಳ
ಆಡ ಮುಂದಕ ಕರದಾಳ ಆಡ ಮುಂದ ಬಂದು ನಿಂತಾವ
ಬಾರ ಬಾರ ತಾಯವ್ವ ನಮ್ಮ ಗುರುವ ಬಂದಾನ
ಶರಣಸೋಮರ ಕಡಿಯಾ ತಿಂಗಳ ಹಾಲಿನ ಬಿಕ್ಷಾಕ ಬಂದಾನ
ಮರಿಯಾ ಕುಡದ ಎಂಜಲ ಹೋತ ಹಾರಿದ ಎಂಜಲ
ಏ ನನ್ನ ಗುರುವನಲ್ಲವ್ವ ಮೀಸಲಹಾಲ ಬೇಡ್ಯಾನ
ಗಿಣ್ಣ ಹಿಂಡುತಾಳೇನ ಚರಗಿ ತುಂಬುತಾಳೇನ
ಹಾಲ ಹಿಂಡುತಾಳೇನ ಚರಗಿ ತುಂಬುತಾಳೇನ
ಚರಗಿಯ ತುಂಬುತಾಳೇನ ಮಿಸಲದ್ವಾಲ ತಂದಾಳ
ಮೀಸಲದ್ವಾಲ ತಂದಾಳ ಗುರುವ ರೇವಣಸಿದ್ದಗ
ಗುರುವ ರೇವಣಸಿದ್ದಗೆ ಹಾಲ ಕೊಡವುತಾಳೇನ
ಏನಮ್ಮ ರೇವಣಸಿದ್ಧನ ಹಾಲ ಸವಿದಾನೇನಯ್ಯ
ಹಾಲ ಸವಿದಾನೇನಪ್ಪ ಹರಕಿ ಕೊಡುವುತಾನೇನಯ್ಯ
ನನಗೆ ಬಿಕ್ಷೆ ಕೊಟ್ಟಿದೆ ದೊಡ್ಡಿಯಾ ದೊಡ್ಡದಾಗಲೇ
ಒಂದಕೆರಡನಾಗಲೆ ಎರಡಕ ಹತ್ತನಾಗಲೇ

ಎರಡಕ ಹತ್ತನಾಗಲೇ ಹತ್ತಕ ಸಾವೀರಾಗಲೇ
ಹಾಲ ದಾನಿವರ ಹಟ್ಯಾಗ ಮಜ್ಜಿಗಿ ದಾನಿವರ ಮನಿಯಾಗ
ಹಸುವಿಗ ಹಾಲ ಹಾಕ್ಯಾರೆ ಸಿಸುವಿಗ ಬೆಣ್ಣೊಂದು ಇಟ್ಟಾರೆ
ಬಂಜಿ ತೊಟ್ಟಲ ಕಟ್ಟಲೆ ಬಾಣತಿ ಜೋಗಳ ಹಾಡಲೆ
ಕುಂಬಿ ಕುಂಬಿ ಹತ್ತಲೆ ರಂಬಿ ರಂಬಿ ಹತ್ತಲೆ
ಹಗುಲ ಬೆಳ್ಳನಾಗಲೇ ಹಗಲ ದೀವಟಗಿ ಆಗಲೆ
ಸರ್ವ ಕುಲಕ ಹಿರಿಯಾ ಬಾ ನನ ಗುರುವ ರೇವಣಸಿದ್ದನ
ಗುರುವ ರೇವಣಸಿದ್ದನೆ ಹರಕಿ ಕೊಡುವುತಾನೇನ
ಕುರುಬರ ಸಿದ್ದವನ ಗಟ್ಟಿ ಪಾದ ಹಿಡದಾಳ
ಗಟ್ಟಿ ಪಾದ ಹಿಡದಾಳ ಮಂಡೀಲಿ ಹಸ್ತ ಇಟ್ಟಾನ
ಯಾವಂದ ಯಾವ ಕಾಲದಲ್ಲಿ ಇದಿಯಾ ತೌರ ತಿಳಿಯವ್ವ
ಪಾದ ಬಿಡುವುತಾಳೇನ ಪಾವನಾಗುತಾಳೇನ

ಗುರುವ ರೇವಣಸಿದ್ದನೆ ರಾಯಿಮಾರಗ ಹಿಡದಾನೇನ
ಅಲ್ಲ್ಯಾನ ಇಲ್ಲ್ಯಾನೇನ ಎಲ್ಲಿಗ ಹೋಗುತಾನೇನ
ಅಲ್ಲ್ಯಾನ ಇಲ್ಲ್ಯಾನೇನ ಅಗಸರ ಮಡಿವಾಳನ
ಅಗಸರ ಮಡಿವಾಳನ ಮನಿಗಿ ಗುರುವ ರೇವಣಸಿದ್ದನ
ಗುರುವ ರೇವಣಸಿದ್ದನ ಕೋರಣ ಬಿಕ್ಷೇಳಂದಾನ
ಮಡಿವಾಳನ ಮಡದಿ ನೀಲಮ್ಮ ಊರಾನ ಬಟ್ಟಿಗ ಹೋಗ್ಯಾಳ
ಅಗಸರ ಮಡಿವಾಳನ ಮನಿಯಾಗ ಇರುವುತಾನೇನ
ಮನಿಯಾಗಿರುವುತಾನೇನ ಯಾವ ನಾಡದ ಜಂಗಮ
ಯಾವ ನಾಡದ ಜಂಗಮ ಕೋರಣ ಭಿಕ್ಷೇಳಂದಾನ
ಯಾವ ನಾಡದ ಜಂಗಮನೆದು ಮನಿಯಾ ಹೊರಗೆ ಬಂದಾನೆ
ಹೊರಳಿ ಮನಿಯಾಕ ಹೋದನೆ ಮರ ತುಂಬ ಮುತ್ತ ತಂದಾನ
ಮರ ತುಂಬ ಮುತ್ತ ತಂದಾನೆ ಭಿಕ್ಷಾ ನೀಡಲಿ ಬಂದಾನ
ಗುರುವ ರೇವಣಸಿದ್ದನೆ ನುಡದಾನೆ ಮಾತಾಡ್ಯಾನೆ
ಮರ ತುಂಬ ಮುತ್ತ ಮಡಿವಾಳ ಹಳಿಯಾ ಜ್ವಾಳನಿದ್ದಾವ
ಒಲ್ಲೇನ ನುಡಿವಾಳ ಒಲ್ಲೇನ ಹಿಂತಾ ಭಿಕ್ಷಾ ಒಲ್ಲೇನ
ನನ್ನ ಮನಿಯಾ ಒಳಗೇನ ಹಳಿಯಾ ಜ್ವಾಳನಿದ್ದಾವ
ಇಂಥ ಭಿಕ್ಷಾ ಒಲ್ಲೇನೆ ಹೊರಳಿ ಮನಿಯಾಗ ಹೋಗ್ಯಾನ
ಹೊರಳಿ ಹೋಗುತಾನೇನೆ ಮಡಿವಾಳ ಮನಿಯಾಕ ಹೋಗ್ಯಾನ
ಹವುಳ ಮುತ್ತ ತಂದಾನ ಭಿಕ್ಷಾ ನೀಡಲಿ ಬಂದಾನ
ಭಿಕ್ಷಾ ನೀಡಲಿ ಬಂದಾನ ಗುರುವ ರೇವಣಸಿದ್ದನ
ನಿನ್ನ ಮನಿಯ ಒಳಗೇನೆ ಮುಗ್ಗಜ್ವಾಳನಿದ್ದಾವ
ಅಗಸರ ಮಡಿವಾಳನೇ ಏನಂದಾಡುತ್ತಿದ್ದಾನ
ಯಾವ ನಾಡಾದ ಜಂಗಮ್ಮ ಎಂಥಾ ಭಿಕ್ಷಾ ಬೇಡಿಗೆ

ಎಂಥಾ ಭಿಕ್ಷಾ ಬೇಡಿದೆ ಬೇಡಿದ ಭಿಕ್ಷಾ ಕೊಟ್ಟೇನೆ
ಗುರುವ ರೇವಣಸಿದ್ದನೆ ನುಡದಾನೆ ಮಾತಾಡ್ಯಾನ
ಹನ್ನೆರಡು ವರ್ಷಿನ ಕಂತೇನ ಗಂಜಿ ಮಾಡಲಿಬೇಕಯ್ಯ
ಇಪ್ಪತ್ತು ವರ್ಷಿನ ಕಂತೇನ ಗಂಜಿ ಮಾಡಲಿಬೇಕಯ್ಯ
ಇಪ್ಪತ್ತು ವರ್ಷಿನ ಕಂತೇನ ಗಂಜಿ ಮಾಡಲಿಬೇಕಯ್ಯ
ಅಗಸರ ಮಡಿವಾಳನೆ ಒಳ್ಳೆದು ಒಳ್ಳೆದಂದಾನ
ಸರ್ವ ಕುಲಕ ಹಿರಿಯಾ ಬಾ ನನ್ನ ಗುರುವ ರೇವಣಸಿದ್ದನೆ
ಹನ್ನೆರಡು ವರ್ಷಿನ ಕಂತೇನೆ ಮಡಿವಾಳ ಕೈಯಾಗ ಕೊಟ್ಟಾನ
ಇಪ್ಪತ್ತು ವರ್ಷಿನ ಕಂತೇನ ಮಡಿವಾಳ ಕೈಯಾಗ ಕೊಟ್ಟಾನ
ಗುರುವ ರೇವಣಸಿದ್ದನ ನುಡದಾನೆ ಮಾತಾಡ್ಯಾನ
ಉರಿಯಾ ಕಟಗಿ ಬ್ಯಾಡಲ್ಲ ಹೊರವ ಕಟಗಿ ಬ್ಯಾಡಲ್ಲ
ಸುಣ್ಣ ಬೀಳಲಿ ಬಾರದ ಭಟ್ಟಿ ಹಾಕಲಿ ಬಾರದ
ಹರಿಯಾ ನೀರ ಬ್ಯಾಡಲ್ಲ ಹಚ್ಚು ಸಾಬನ ಬ್ಯಾಡಲ್ಲ
ಒಗಿಯಾ ಭಂಡಿ ಬ್ಯಾಡಲ್ಲ ಕಲ್ಲಿಗಿ ಬಡಿಯಲಿ ಬಾರದ
ಕಲ್ಲಿಗಿ ಬಡಿಯಲಿ ಬಾರದ ಕೈಯಲಿ ಹಿಂಡಲಿಬಾರದ
ಕೊರಿಯಾ ಕಡ್ಡಿ ಬ್ಯಾಡಲ್ಲ ಕಡ್ಡಿನ ಮನಿಯಾ ಬ್ಯಾಡಲ್ಲ
ಕಲ್ಲಿಗಿ ಬಡಿಯಲಿ ಬಾರದ ಕೈಯಲಿ ಹಿಂಡಲಿಬಾರದ
ಕೊರಿಯ ಕಡ್ಡಿ ಬ್ಯಾಡಲ್ಲ ಕುದಿಯಾ ಗಡಗಿ ಬ್ಯಾಡಲ್ಲ
ಒಳ್ಳೆದು ಒಳ್ಳೇದಂದಾನೆ ಅಗಸರ ಮಡಿವಾಳನೆ
ಒಳ್ಳೆದು ಒಳ್ಳೇದಂದಾನೆ ಇಂದ ಹೋಗತೀನಿ ಅಂದಾನ
ಇಂದ ಹೋಗತೀನಿ ಅಂದಾನೆ ನಾಳಿಗ ಬರತೇನಿ ಅಂದಾನ
ನಾಳಿಗ ಬರತೇನಿ ಅಂದಾನ ರೇವಣ್ಣ ನಿಂತಲ್ಲೆ ಮಾಯವಾದನ

ಅಗಸೂರ ಮಡಿವಾಳನೆ ದೇವರ ಕೋಲಿ ಒಳಗೇನೆ
ದೇವರ ಕೋಲಿಯ ಒಳಗೇನೆ ಜಗಲಿಯ ಮ್ಯಾಲ ಇಳುವ್ಯಾನ
ಜಗಲಿಯ ಮ್ಯಾಲೆ ಇಳುವ್ಯಾನೆ ಹಳ್ಳ ಲೋಭಾನ ಸುಟ್ಟಾನ
ನಡುವಿನ ಮನಿಯಾಗ ಕುಂತಾನೆ ಮಾರಿ ಸಣ್ಣದು ಮಾಡ್ಯಾನೆ
ಮಡಿವಾಳನ ಮಡದಿ ನೀಲಮ್ಮ ಊರನ ಬಟ್ಟಿಗ ಹೋಗ್ಯಾಳ
ಊರನ ಬೆಟ್ಟಿಗ ಹೋಗ್ಯಾಳೆ ಮಡದೀಯ ನೀಲಮ್ಮನ
ಮಡದೀಯ ನೀಲಮ್ಮನೆ ಊರಾನ ಬಟ್ಟಿ ತಂದಾಳ
ಊರನ ಬಟ್ಟಿ ತಂದಾಳೆ ಹೊರಗಿನ ಕಟ್ಟಿಗ ಒಗದಾಳ
ಊರನ ಬಟ್ಟಿ ತಂದಾಳೆ ಹೊರಗಿನ ಕಟ್ಟಿಗ ಒಗದಾಳ
ಹೊನ್ನ ಹೊಸ್ತುಲ ಧಾಟ್ಯಾಳೆ ನೀಲಮ್ಮ ಮನಿಯಾಗ ಬಂದಾಳ
ನೀಲಮ್ಮ ಮನಿಯಾಗ ಬಂದಾಳೆ ಪುರುಷನ ಮಾರಿ ನೋಡ್ಯಾಳ
ಮಾರಿ ಸಣ್ಣವಾದಾವೆ ಮಕವ ಸಣ್ಣವಾದವ
ಯಾರೇನಂದಾರ ಹೇಳಯ್ಯ ಯಾರೇನಾಡ್ಯಾರ ಹೇಳಯ್ಯ

ಯಾರೇನಾಂದರ ಹೇಳ ನನಗ ಹೊಸ್ತುಲ ತಗಸೇನಂದಾಳ
ಕಣ್ಣಿಲಂದಾರ ಹೇಳ ನನಗ ಕಣ್ಣ ತಗಸೇನಂದಾಳ
ಕಣ್ಣಿಲಂದಾರ ಹೇಳ ನನಗ ಕಣ್ಣ ತಗಸೇನಂದಾಳ
ಯಾರೇನಂದಿಲ್ಲಂದಿದ್ದ ಯಾರೇನಾಡಿಲ್ಲಂದಿದ್ದ
ಯಾವ ನಾಡ ಜಂಗಮ್ಮ ಭಿಕ್ಷಾಕ ಬಂದೇನಂದಾನ
ಹವುಳ ಮುತ್ತು ವೈದರ ಹಳಿಯಾ ಜ್ವಾಳನಂದಾನ
ಮನಿಯಾಗ ಹೊರಳಿ ತಂದೇನ ಬಿಳಿಯಾ ಮುತ್ತ ವೈದೇನ
ಬಿಳಿಯಾ ಮುತ್ತು ವೈದರೆ ನುಡದಾನೆ ಮಾತಾಡ್ಯಾನ
ನನ್ನ ಮನಿಯಾ ಒಳಗೇನೆ ಮುಗ್ಗಜ್ವಾಳನಿದ್ದಾವ
ಹೊರಳಿ ಹೋದೇನಂದಾನೆ ಎಂಥಾ ಭಿಕ್ಷಾ ಬೇಡ್ಯಾನೆ
ಯಾವ ನಾಡದ ಜಂಗಮನೇನು ಎಂಥಾ ಭಿಕ್ಷಾ ಬೇಡ್ಯಾನೆ
ಯಾವ ನಾಡದ ಜಂಗಮನೇನು ಎಂಥಾ ಭಿಕ್ಷಾ ಬೇಡ್ಯಾನ
ಎಂಥಾ ಭಿಕ್ಷಾ ಬೇಡ್ಯಾನೆ ಗುರುವ ರೇವಣಸಿದ್ದನ
ಹನ್ನೆರಡು ವರ್ಷಿನ ಕಂತೇನೆ ಇಪ್ಪತ್ತು ವರ್ಷಿನ ಕಂತೇನ
ಹನ್ನೆರಡು ವರ್ಷಿನ ಕಂತೇನೆ ಗಂಜಿ ಮಾಡಲಿಬೇಕಯ್ಯ
ಗಂಜಿ ಮಾಡಲಿಬೇಕಪ್ಪ ಗಳಗಿ ಹಾಕಲಿಬೇಕಯ್ಯ
ಇಪ್ಪತ್ತು ವರ್ಷಿನ ಕಂತೇನ ಗಂಜಿ ಮಾಡಲಿಬೇಕಯ್ಯ
ಗಂಜಿ ಮಾಡಲಿಬೇಕಪ್ಪ ಗಳಗಿ ಮಾಡಲಿಬೇಕಯ್ಯ
ಗುರುವ ರೇವಣ್ಣಸಿದ್ದನ ನುಡದಾನೆ ಮಾತಾಡ್ಯಾನ
ಹೂಡ ಒಲಿಯಾ ಬ್ಯಾಡಪ್ಪ ಕುದಿಯಾ ಗಡಗಿ ಬ್ಯಾಡಯ್ಯ
ಕುದಿಯಾ ಗಡಗಿ ಬ್ಯಾಡಪ್ಪ ಸುಣ್ಣಕ ಬೀಳಲಿ ಬಾರದ
ಸುಣ್ಣಕ ಬೀಳಲಿಬಾರದ ಭಟ್ಟಿಗಿ ಬೀಳಲಿಬಾರದ
ಉರುವ ಕಟಗಿ ಬ್ಯಾಡಪ್ಪ ಕುಡಿಯಾ ನೀರ ಬ್ಯಾಡಯ್ಯ
ಹಚ್ಚು ಬೆಂಕಿ ಬ್ಯಾಡಪ್ಪ ಕುದಿಯಾ ಗಡಗಿ ಬ್ಯಾಡಯ್ಯ
ಒಗಿಯಾ ಭಂಡಿ ಬ್ಯಾಡಪ್ಪ ಹರಿಯಾ ನೀರ ಬ್ಯಾಡಪ್ಪ
ಕಲ್ಲಿಗಿ ಬಡಿಯಲಿ ಬಾರದ ಕೈಯಲಿ ಹಿಂಡಲಿ ಬಾರದ
ಬಂಡಿಗಿ ಬಡಿಯಲಿ ಬಾರದ ಹಚ್ಚು ಸಾಬನ ಬ್ಯಾಡಂದ
ಇಷ್ಟು ಮಾತ ಹೇಳಿದ್ದ ನಿಂತಲ್ಲೆ ಮಾಯವಾಗಿದ್ದ
ಇಂದ ಹೋಗತೇನಿ ಅಂದಾನೆ ನಾಳಿಗ ಬರತೀನಿ ಅಂದಾನ
ಒಳ್ಳೆದು ಒಳ್ಳೆದಂದಾನೆ ಕಂತಿ ಇಳವೀನಿ ಅಂದಾನ
ಮಡದೀಯ ನೀಲಮ್ಮನೆ ಒಳ್ಳೆದು ಒಳ್ಳೇದಂದಾಳೆ
ಗಂಜಿ ಮಾಡತೀನಿ ಅಂದಾರೆ ಗಳಿಗಿ ಮಾಡತೀನಂದಾರ
ಮನಿಯಾ ಸಾರುಣಿ ಮಾಡ್ಯಾಳೆ ಮನವಂದು ಮೀಸಲ ಮಾಡ್ಯಾಳ
ಕಾಯ ವಜ್ಜರ ಮಾಡ್ಯಾಳೆ ಮನವಂದು ಮಿಸಲ ಮಾಡ್ಯಾಳ
ಗಚ್ಚಿನ ಬಚ್ಚಲಕ ಹೋಗ್ಯಾಳೆ ಎರದಾಳ ಹೆಣುಲ ಹಾಕ್ಯಾಳ
ಎರದಾಳ ಹೆಣಲ ಹಾಕ್ಯಾಳೆ ಎಳಿಯಾ ಬೇತುಲ ತಗದಾಳ

ಮಡಿ ಕಳದ ಮಡಿ ಉಟ್ವಾಳೆ ಹಣಿಯಲಿ ಕುಂಕುಮಿಟ್ವಾಳ
ಹಣಿಯಲ್ಲಿ ಕುಂಕುಮಿಟ್ವಾಳೆ ಹಲ್ಲಿಗಿ ಜಾಚೇಲಿ ಹಚ್ಯಾಳ
ಮಡದೀಯ ನೀಲಮ್ಮನೆ ಹಿರಿಯರು ಗಳಿಸಿದ ಜಂಬೇನ
ಹಿರಿಯರು ಗಳಿಸಿದ ಜಂಬೇನ ದೇವರ ಜಗುಲಿ ಮ್ಯಾಲೇನ
ದೇವರ ಜಗುಲಿಯ ಮ್ಯಾಲೇನ ಜಂಬ್ಯಾ ಕೈಯಾಗ ಹಿಡದಾಳ
ಜಂಬ್ಯಾ ಕೈಯಾಗ ಹಿಡದಾಳೆ ನುಡದಾಳೆ ಮಾತಾಡ್ಯಾಳೆ
ಹರಕಿನಾಗಿ ಬಂದಾವೆ ವರವ ಕೂಡಿ ಬಂದಾವ
ವರವ ಕೂಡಿ ಬಂದಾರೆ ಜಲ್ಮ ಸಾರ್ಥಕ ಮಾಡಯ್ಯ
ಗುರುವ ರೇವಣಸಿದ್ಧಗೆ ಜಲ್ಮ ಸಾರ್ಥಕ ಮಾಡಯ್ಯ
ಜಲ್ಮ ಸಾರುತ ಮಾಡಯ್ಯ ಸಿರಸ ಪವಾಡ ಕೊಟ್ಟೇನ
ಜಂಬ್ಯಾ ಹಿಡಯುತಾಳೇನ ಉಟ್ಟರದೊಳಗ ಸಿಗಸ್ಯಾಳ
ಹನ್ನೆರಡು ವರ್ಷಿನ ಕಂತೇನ ಇಪ್ಪತ್ತು ವರ್ಷಿನ ಕಂತೇನ
ಇಪ್ಪತ್ತು ವರ್ಷಿನ ಕಂತೇನ ಮಡಿವಾಳಗ ಹೊರಸುತಾಳೇನ
ಊರಾನ ಬಟ್ಟೆ ನೀಲಮ್ಮ ಮಂಡಿಯಾ ಮ್ಯಾಲ ಹೊತ್ತಾಳ
ಮಂದನ ಮಳಗೀಲಿ ಬಂದಾರೆ ಚಂದನ ಚಾವುಡಿಲಿ ಹಾಯ್ದರ
ರಾಯರ ಓಣಿಲಿ ಹಾಯ್ದರೆ ರಡ್ಡೇರ ಮನಿಯ ಮುಂದೇನ
ರಾಜವಾಡದ ಮುಂದೇನೆ ಬಣ್ಣದಗಸೀಲಿ ಹಾಯ್ದರ
ಬಣ್ಣದಗಸೀಲಿ ಹಾಯ್ದರೆ ರಾಯಿಮಾರಗ ಹಿಡದಾರ
ಅಲ್ಯಾರ ಇಲ್ಯಾರೇನೆ ಎಲ್ಲಿಗ ಬರವುತಾರೇನ
ಎಲ್ಲಿಗ ಹೋಗುತಾರೇನ ಹರಿಯಾ ಹಳ್ಳದೊಳಗೇನ
ಹರಿಯಾ ಹಳ್ಳದೊಳಗೇನ ಊರನ ಬಟ್ಟೆ ಒಗದಾಳ
ಊರಾನ ಬಟ್ಟೆ ಒಗದಾಳ ಗಳಗಿ ಹಾಕುತಾಳೇನ
ಗಳಗಿ ಹಾಕುತಾಳೇನ ಪುರುಷಾಗ ಹೇಳುತಾಳೇನ
ಯಾಳ್ಯಾಗೋಳು ಬಹಳಾದವೇ ಗಂಜಿ ಮಾಡಬೇಕಂದಾಳ
ಗಂಜಿ ಮಾಡಬೇಕಂದಾಳೆ ಗಳಗಿ ಮಾಡಬೇಕಂದಾಳ
ಏ ನನ್ನ ಪುರುಷ ನೀ ಬಾರೋ ಜಂಬ್ಯಾ ಕಿತ್ತುತಾಳೇನ
ಎತ್ತಿ ಹಾಕಲಿಬೇಕಪ್ಪ ನನ್ನ ಕುತ್ತಗಿ ಕೊಯಲಿಬೇಕಲ್ಲ
ಒಂದಾ ತೆಲಿಯಾ ಎರಡ ಮಲಿಯಾ ಹೂಡ ಒಲಿಯಾ ಮಾಡಯ್ಯ
ಕಯ್ಯಾ ಕಾಲ ಕಡದ ನೀನು ಉರುವ ಕಟಗಿ ಮಾಡಯ್ಯ
ಉರುವ ಕಟಗಿ ಮಾಡೇ ನೀನು ಮೈಯಾ ಮ್ಯಾಲಿನ ಕೂದಲ
ಮೈಯಾ ಮ್ಯಾಲಿನ ಕೂದಲಕೊಂದು ಕಡ್ಡಿ ಮಾಡಲಿಬೇಕಯ್ಯ
ಕುತ್ತಗಿ ಕೊಯ್ದು ರಕ್ತನೆ ಅಳಿಯಾ ನೀರ ಮಾಡಯ್ಯ
ಅಂಗೈ ಬಂಡಿ ಮಾಡೋ ನೀನು ಮುಂಗೈ ಹಿಂಡಲಿ ಬೇಕಯ್ಯ
ತೆಲಿಯಾ ಮಿದುಡ ತಗದ ನೀನು ಹಚ್ಚು ಸಾಬನ ಮಾಡಲ್ಲ
ಒಂದಾ ತೆಲಿಯಾ ಎರಡ ಮಲಿಯಾ ಹೂಡ ಒಲಿಯಾ ಮಾಡಯ್ಯ
ಹೂಡ ಒಲಿಯಾ ಮ್ಯಾಲೇನ ಡೊಕ್ಕಿ ಹಿಡಿಯಲಿಬೇಕಯ್ಯಾ

ಡೊಕ್ಕಿ ಹಿಡಿಯಲಿಬೇಕಲ್ಲೊ ಕಡ್ಡಿ ಕೊರದ ಹಚ್ಚಯ್ಯ
ಕೈಯಾ ಕಾಲ ಕಡದ ನೀನು ಉರವ ಕಟಗಿ ಮಾಡಲ್ಲ
ಹ್ಯಾಂಗ ಮಾಡಬೇಕಂದಾರೆ ಹ್ಯಾಂಗ ಹೊಡಿಬೇಕಂದಾರ
ಮಡದೀಯ ನೀಲಮ್ಮನೆ ಕಣ್ಣ ತೆರಿಯುತಾಳೇನ
ನನ್ನ ಮಾತ ಕೇಳಿದರ ಅಪ್ಪಗ ಹುಟ್ಟಿದಿ ಅಂದಾಳ
ಅಪ್ಪಗ ಹುಟ್ಟಿದಿ ಅಂದಾಳೆ ಗುರುವಿನ ಹರಕಿ ಮುಟ್ಟಿಸಿಗೆ

ಅಗಸರ ಮಡಿವಾಳನೆ ಉರದ ಬೆಂಕಿನಾದನ
ಉರದ ಬೆಂಕಿನಾದನೆ ತೆಲಿವಂದು ಖೆಂಡನಾದನ
ಹುಟ್ಟಿದು ಒಮ್ಮೆಳಂದಾನೆ ಸಾವುದು ಒಮ್ಮೆಳಂದಾನ
ಕೈಯಾಗ ಜಂಬ್ಯಾ ಹಿಡಿದಾನೆ ಮಡದೀನ ಎತ್ತಿ ಹಾಕ್ಯಾನ
ಮಡಿದೀಯ ನಿ ಲಮ್ಮಗೆ ಕುತ್ತಿಗಿ ಕೊಯ್ಯುತಾನೇನ
ಎರಡ ಮಲಿಯಾ ಒಂದ ತಲಿಯಾ ಹೂಡ ಒಲಿಯ ಮಾಡ್ಯಾನ
ಕೈಯಾ ಕಾಲ ಕಡದಾನೆ ಉರವ ಕಟಗಿ ಮಾಡ್ಯಾನ
ಕಡ್ಡಿ ಮುಂದ ಇಟ್ಟಾನೆ ಡೊಕ್ಕಿ ಸೀಳುತಾನೇನ
ಎರಡ ಮಲಿಯಾ ಒಂದ ತೇಲಿಯಾ ಹೂಡ ಒಲಿಯ ಮಾಡ್ಯನ
ಕೈಯಾ ಕಾಲ ಕಡದಾನೆ ಉರವ ಕಟಗಿ ಮಾಡ್ಯಾನ
ಕಡ್ಡಿ ಮುಂದ ಇಟ್ಟಾನೆ ಡೊಕ್ಕಿ ಸೀಳುತಾನೇನ
ಎರಡ ಮಲಿಯಾ ಒಂದು ತೇಲಿಯಾ ಹೂಡ ಒಲಿಯಾ ಮಾಡ್ಯಾನ
ಎರಡ ಮಲಿಯಾ ಒಂದು ತೇಲಿಯಾ ಹೂಡ ಒಲಿಯಾ ಮಾಡ್ಯಾನ
ಹೂಡ ಒಲಿಯಾ ಮ್ಯಾಲೇನೆ ಡೊಕ್ಕಿ ಇಡುವುತಾನೇನ
ಡೊಕ್ಕಿ ಹಿಡಿಯುತಾನೇನೆ ತೆಲಿಯನ ಕೂದಲ ಹರದಾನ
ಕೈಯಾ ಕಾಲ ತಗದಾನೆ ಒಲಿಯಾಗ ಇಡುವುತಾನೇನ
ಕಡ್ಡಿ ಕೊರದಾನಲ್ಲಪ್ಪ ಒಲಿಯಾ ಪುಟವ ಮಾಡ್ಯಾನ
ಒಲಿಯಾ ಪುಟವ ಮಾಡ್ಯಾನೆ ಒಲಿಯಾ ಕುದಿಯಾ ಹಿಡದಾನ
ಹನ್ನೆರಡು ವರ್ಷಿನ ಕಂತೇನ ಇಪ್ಪತ್ತು ವರ್ಷಿನ ಕಂತೇನ
ಇಪ್ಪತ್ತು ವರ್ಷಿನ ಕಂತೇನ ಡೊಕ್ಕಿ ಒಳಗ ಇಟ್ಟಾನ
ಡೊಕ್ಕಿ ಒಳಗ ಇಟ್ಟಾನೆ ಕುದಿಯಾ ಹಿಡಯುತಾನೇನ
ಕುದಿಯಾ ಹಿಡಿಯುತಾನೇನ ಉಕ್ಕ ಬರುವುತಾವೇನ
ಉಕ್ಕಾ ಬರವುತಾವೇನ ಕಟಗಿ ಕಡಿಯಾಕಾದವ
ಕಟಗಿ ಕಡಿಯಾಕಾದಾವೆ ಗಂಜಿ ಬಯಲಿಗ ತಗದಾನ
ಗಂಜಿ ಬಯಲಿಗ ತಗದಾನೆ ಅಂಗೈ ಬಂಡಿ ಮಾಡ್ಯಾನ
ಅಂಗೈ ಬಂಡಿ ಮಾಡ್ಯಾನೆ ಅರುವಿ ನೀರ ನೋಡ್ಯಾನ
ಹರಿಯಾ ರಂಗದೊಳಗೇಳ ಕಂತಿ ಗಂಜಿ ಮಾಡ್ಯಾನ
ತಲಿಯ ಮಿದಡ ತಗದಾನ ಅಂಗೈ ಭಂಡಿ ಮಾಡ್ಯಾನೆ
ಅಂಗೈ ಭಂಡಿ ಮಾಡ್ಯಾನೆ ತೆಲಿಯನ ಮಿದಡ ಹಚ್ಯಾನ

ತೆಲಿಯಾನ ಮಿದಡ ಹಚ್ಯಾನ ರಕ್ತದೊಳಗ ಇಟ್ವಾನ
ಹನ್ನೆರಡು ವರ್ಷಿನ ಕಂತೇನ ಗಂಜಿ ಮಾಡುತಾನೇನೆ
ಗಂಜಿ ಮಾಡುತಾನೇನೆ ಗಳಗಿ ಹಾಕುತೇನೇನ
ಇಪ್ಪತ್ತು ವರ್ಷಿನ ಕಂತೇನ ಗಳಗಿ ಮಾಡುತಾನೇನ
ಗಂಜಿ ಮಾಡುತಾನೇನ ಗಳಗಿ ಹಾಕುತಾನೇನ
ಗುರುವಿನ ಕಂತಿನಲ್ಲೇಳ ಗಳಗಿ ಮಾಡುತಾನೇನ
ಹನ್ನೆರಡು ವರ್ಷಿನ ಕಂತೇನ ಇಪ್ಪತು ವರ್ಷಿನ ಕಂತೇನ
ಇಪ್ಪತ್ತು ವರ್ಷಿನ ಕಂತೇನ ಮಂಡಿಯ ಮ್ಯಾಲ ಹೊತ್ತಾನ
ಊರನ ಬಟ್ಟಿ ಮಡಿವಾಳ ಹೆಗಲಿನ ಮ್ಯಾಲ ಹಾಕ್ಯಾನ
ಹೆಗಲಿನ ಮ್ಯಾಲೆ ಹಾಕ್ಯಾನೆ ಹರಿಯಾ ಹಳ್ಳ ಬಿಟ್ವಾನ
ಅಗಸರ ಮಡಿವಾಳನೆ ಚಿಂತಿ ಮಾಡುತಾನೇನ
ಬರುವಾಗ ಇಬ್ಬರು ಬಂದೇವೆ ಹೋಗುವಾಗ ಒಬ್ಬವನಾದೇನ
ಮಾರಿ ಸಣ್ಣದು ಮಾಡ್ಯಾನೆ ಕಣ್ಣಿಗೆ ನೀರು ತಂದಾನ
ಇಲ್ಲದ ಮಡದೀನಲ್ಲೇಳ ಎಲ್ಲಿಂದ ತರಬೇಕಂದಾನ
ಅಗಸರ ಮಡಿವಾಳನೆ ಹಳ್ಳ ಬಿಟ್ಟು ನಡದಾನ
ಹಳ್ಳ ಬಿಟ್ಟು ನಡದಾನೆ ರಾಯಿ ಮಾರಗ ಹಿಡದಾನ
ಅಲ್ಲ್ಯಾನ ಇಲ್ಲ್ಯಾನೇನೆ ಬಣ್ಣದಗಸೀಲಿ ಹಾಯ್ದನ
ರಾಯರ ಓಣಿಲಿ ಹಾಯ್ದನೆ ರಡ್ಡೇರ ಮನಿಯಾ ಮುಂದೇನ
ಚಂದನ ಚೌಡೀಲಿ ಹಾಯ್ದನೆ ಮಂದನ ಮಳಗೀಲಿ ಬಂದಾನ
ರಾಜಾವಾಡದ ಮುಂದೇನೆ ತನ್ನ ಮನಿಗೆ ಬಂದಾನ
ತನ್ನ ಮನಿಗೆ ಬಂದಾನೆ ಹೊರಗಿನ ಕಟ್ಟಿ ಮ್ಯಾಲೆನ
ಹೊರಗಿನ ಕಟ್ಟಿಯ ಮ್ಯಾಲೇನ ಊರನ ಬಟ್ಟಿ ಒಗದಾನ
ದೇವರ ಜಗುಲಿಯ ಮ್ಯಾಲೇನ ಗುರುವಿನ ಕಂತಿ ಹಿಡದಾನ

ಅಂತ ಇಂತ ಯಾಳ್ಯಾದೊಳಗ ಗುರುವ ಬರವುತಾನೇನ
ಕಡಿಯಾ ಸೋಮರದಿವಸೇನ ಕಂತಿಯ ಬಿಕ್ಷಕ ಬಂದಾನ
ಕಂತಿಯಾ ಭಿಕ್ಷಕ ಬಂದಾನೆ ಗುರುವ ರೇವಣಸಿದ್ಧನ
ಗುರುವ ರೇವಣಸಿದ್ಧನ ಕೋರಣ ಭಿಕ್ಷೇಳಂದಾನ
ಅಗಸರ ಮಡಿವಾಳನೆ ಮನಿಯಾಗ ಹೋಗುತಾನೇನ
ಹನ್ನೆರಡು ವರ್ಷಿನ ಕಂತೇನ ಇಪ್ಪತ್ತು ವರ್ಷಿನ ಕಂತೇನ
ಎರಡು ಕಂತಿನಲ್ಲೇಳ ಕೈಯಾಗ ಹಿಡಿಯುತಾನೇನ
ಅಗಸರ ಮಡಿವಾಳನೆ ಭಿಕ್ಷಾ ನೀಡಕ ಬಂದಾನ
ಭಿಕ್ಷಾ ನೀಡಲಿ ಬಂದಾರೆ ಅಗಸರ ಮಡಿವಾಳಗ
ಗುರುವ ರೇವಣಸಿದ್ದನೆ ನುಡದಾನೆ ಮಾತಾಡ್ಯಾನ
ನುಡದಾನೆ ಮಾತಾಡ್ಯಾನೆ ಭಿಕ್ಷಾ ನೀಡಕ ಬಂದಾನ
ಒಬ್ಬರ ಕೊಟ್ಟರಲ್ಲಪ್ಪ ಗಳಗಿ ಒಲ್ಲೇಳಂದಾನ

ಗಳಗಿ ಒಲ್ಲೇಳಂದಾನೆ ಗಂಜಿ ಒಲ್ಲೇಳಂದಾನ
ಮಡದೀಯ ನೀನು ಬರಬೇಕೆ ಕಂತಿ ಕೊಡಬೇಕಂದಾನ
ಅಗಸರ ಮಡವಾಳನೆ ನುಡದಾನೆ ಮಾತಾಡ್ಯಾನೆ
ಲಗ್ಗನಾಗಿಲ್ಲಂದಾನೆ ಇಲ್ಲದ ಮಡದೀನಂದಾನ
ಇಲ್ಲದ ಮಡದೀನಲ್ಲೇಳ ಎಲ್ಲಿಂದ ತರಬೇಕಂದಾನ
ನನಗೆ ಲಗ್ಗನಾಗಿಲ್ಲ ನನ್ನ ಮಡದಿ ಇಲ್ಲೇಳ
ನನ್ನ ಮಡದಿ ಇಲ್ಲಯ್ಯ ಭಿಕ್ಷಾ ಕೊಡತೀನಿ ಮೈಯಬೇಕ
ಗುರುವ ರೇವಣಸಿದ್ಧನ ನುಡದಾನೆ ಮಾತಾಡ್ಯಾನ
ದೇವರ ಖೋಲಿ ಒಳಗೇನ ದೇವರ ಜಗಲಿ ಮ್ಯಾಲೇನ
ದೇವರ ಜಗುಲಿಮ್ಯಾಲೇನ ಕಂತಿ ಇಡುವುಲಿಬೇಕಯ್ಯ
ಮಡದೀಯ ನೀಲಮ್ಮನೆಂದು ಓ ಎಂಬ ಶಬ್ದ ಕೂಗಯ್ಯಾ
ಒಳ್ಳೆದು ಒಳ್ಳೆದಂದಾನೆ ಕಂತಿಯ ಮನಿಯಾಗ ಒಯ್ದಾನ
ಕಂತಿ ಮನಿಯಾಕ ಒಯ್ದನೆ ದೇವರ ಜಗುಲಿ ಮ್ಯಾಲೇನ
ದೇವರ ಜಗುಲಿಮ್ಯಾಲೇನ ಕಂತಿ ಇಳುವುತಾನೇನ
ದೇವರ ಖೋಲಿ ಒಳಗೇನೆ ಮಡದೀಯ ನೀಲಮ್ಮನ
ಮಡದೀಯ ನೀಲಮ್ಮನೆಂದು ಓ ಎಂಬ ಶಬುದ ಮಾಡ್ಯಾನ
ಮಡದೀಯ ನೀಲಮ್ಮನೆಂದು ಓಯೆಂಬ ಶಬುದ ಕೂಗ್ಯಾನ
ಓಯೆಂಬ ಶಬುದ ಕೂಗ್ಯಾನೆ ಹಳ್ಳದಾಗ ಧನಿಯಾ ಕೊಟ್ಟಾನ
ಅಗಸರ ಮಡಿವಾಳನೆ ನಡುವಿನ ಮನಿಯಾ ಒಳಗೇನ
ನಡುವಿನ ಮನಿಯಾ ಒಳಗೇನೆ ಓಯೆಂಬ ಶಬುದ ಮಾಡ್ಯಾನ
ಮಡದೀಯ ನೀಲಮ್ಮನೆಂದು ಓಯೆಂಬ ಶಬುದ ಕೊಟ್ಟಾನ
ಓಯೆಂಬ ಶಬುದ ಕೊಟ್ಟಾಗ ಊರಾಗ ಧನಿಯಾ ಕೊಟ್ಟಾಳ
ಊರಾಗ ಧನಿಯಾ ಕೊಟ್ಟಾಳೆ ಮಡದೀಯ ನೀಲಮ್ಮನೆ
ಅಗಸರ ಮಡಿವಾಳನೆ ಹೊರಗಿನ ಕಟ್ಟಿಗ ಬಂದಾನೆ
ಹೊರಗಿನ ಕಟ್ಟಿಗ ಬಂದಾನೆ ಓಯೆಂಬ ಶಬುದ ಕೂಗ್ಯಾನ
ಓಯೆಂಬ ಶಬುದ ಕೂಗ್ಯಾನೆ ದೇವರ ಖೋಲಿ ಒಳಗೇನ
ದೇವರ ಖೋಲಿಯ ಒಳಗೇನೆ ಮಡದೀಯ ನೀಲಮ್ಮನೆ
ಮಡದೀಯ ನೀಲಮ್ಮನೆ ಧನಿಯಾ ಕೊಡವುತಾಳೇನ
ಅಗಸರ ಮಡಿವಾಳನೆ ದೇವರ ಖೋಲಿಗ ಹೋಗ್ಯಾನ
ಮಡದೀಯ ನೀಲಮ್ಮನೆ ಅಗಸರ ಮಡಿವಾಳನೆ
ಇಪ್ಪತ್ತು ವರ್ಷಿನ ಕಂತೇನೆ ಮಡದೀಯ ಕೈಯಾಗ ಕೊಟ್ಟಾನ
ಹನ್ನೆರಡು ವರ್ಷಿನ ಕಂತೇನ ತನ್ನ ಕೈಯಾಗ ಹಿಡದಾನ
ಮಡದಿ ಪುರುಷರು ಕೂಡ್ಯಾರೆ ಕಂತಿನ ಭಿಕ್ಷವ ತಂದಾರ
ಅಗಸರ ಮಡಿವಾಳನೆ ಕಂತಿಯ ಭಿಕ್ಷಾ ನೀಡ್ಯಾನ
ಮಡದೀಯ ನೀಲಮ್ಮನೆ ಕಂತಿಯಾ ಭಿಕ್ಷಾ ನೀಡ್ಯಾಳ
ಗುರುವ ರೇವಣಸಿದ್ಧನೆ ನುಡದಾನೆ ಮಾತಾಡ್ಯಾನ

ಭಾವಕ ಮೆಚ್ಚೀದಂದಾನೆ ಭಕ್ತಿಗ ಮೆಚ್ಚೀದಂದಾನ
ಏನ ಬೇಡತಿ ಬೇಡರೆ ಬೇಡಿದ ಕುಡತಿನಿ ಅಂದಾನ
ಅಗಸರ ಮಡಿವಾಳನೆ ಮಡದೀಯ ನೀಲಮ್ಮನ
ಮಡದೀಯ ನೀಲಮ್ಮನ ತಾಯೇನು ಬೇಡುತಾಳೇನ
ಹರಿಯಾ ಹಳ್ಳದೊಳಗೇನೆ ಹರಿಯಾ ನೀರ ಬೇಡ್ಯಾರ
ಹರಿಯಾ ಗಂಗಿ ಒಳಗೇನೆ ಹರಿಯಾ ನೀರ ಬೇಡ್ಯಾರ
ಕಣಕಿಸ ಜ್ವಾಳ ಬೇಡ್ಯಾರೆ ಮನಿಗೊಂದು ರೊಟ್ಟಿ ಬೇಡ್ಯಾರ
ಗುರುವ ರೇವಣಸಿದ್ದನೆ ಒಳ್ಳೆದು ಒಳ್ಳೆದಂದಾರ
ಹರಿಯಾ ಹಳ್ಳದೊಳಗೇನ ಹರಿಯಾ ನೀರ ಕೊಟ್ಟೇನೆ
ಕಣಕಿಸ ಜ್ವಾಳ ಕೊಟ್ಟೇನೆ ಮನಿಗೊಂದು ರೊಟ್ಟಿ ಕೊಟ್ಟೇನ
ಮಡದಿಯ ನೀಲಮ್ಮನ ಅಗಸರ ಮಡಿವಾಳನ
ಗುರುವ ರೇವಣಸಿದ್ಧನೆ ಮಂಡೀಲಿ ಹಸ್ತ ಇಟ್ಟಾರ
ಮಂಡೀಲಿ ಹಸ್ತ ಇಟ್ಟಾನೆ ಆಶೀರ್ವಾದ ಮಾಡ್ಯಾನ
ಆಶೀರ್ವಾದ ಮಾಡ್ಯಾನೆ ಆಶೀರೋಜನ ಕೊಟ್ಟಾರ
ಮಡದಿಯ ನೀಲಮ್ಮನ ಅಗಸರ ಮಡಿವಾಳನ
ಹೊರಳಿ ಮನಿಯಾಗ ಹೋದರೆ ಗುರುವ ರೇವಣಸಿದ್ದನ
ಗುರುವ ರೇವಣಸಿದ್ಧನೆ ನಿಂತಲ್ಲೆ ಮಾಯವಾದನ
ದೇವಿ ದರ್ಮರ ಹಾಡೇನ ಇಲ್ಲಿಗಿ ಇದು ಒಂದು ಸಂದೇನ
ಕಳಸವಿಟ್ಟರ ಕವಿತ ಕಟ್ಯಾರ ಹೊನ್ನ ಜಗ್ಗುನಿ ಗೌಡರೋ
ದೇವರು ಬಂದಾರ ಬನ್ನೀರೆ

## ಗಣಸ್ತುತಿ, ಮತಸ್ತುತಿ, ಪುರಾಣಸ್ತುತಿ

## ಅರಿಕೆ

ಡೊಳ್ಳಿನ ಹಾಡು (ಪದ)ಗಳು ನನಗೆ ಬಾಲ್ಯದಿಂದಲೂ ಆಸಕ್ತಿಯನ್ನು ಮೂಡಿಸುತ್ತ ಬಂದವುಗಳಾಗಿವೆ. ಹರಕೆಯ ಹಾಡುಗಳನ್ನು ಹೇಳುವುದರಲ್ಲಿ ನನ್ನದೇ ಮೇಲು ಹೆಸರು. ನನಗೆ ನೀಡಿದ ಈ ಯೋಜನೆ ಅತ್ಯಂತ ಸ್ವಾಗತಾರ್ಹವಾದುದು. ಈ ಯೋಜನೆಯನ್ನು ರೂಪಿಸಿದ ಕರ್ನಾಟಕ ದಫನ ಸರಕಾರಕ್ಕೂ, ಕನ್ನಡ ಸಮಗ್ರ ಜಾನಪದ ಸಂಪುಟ ರಚನೆಯ ಸರ್ವ ಸದಸ್ಯರಿಗೂ, ಅಧ್ಯಕ್ಷರಿಗೂ ಈ ಕೃತಿಯ ಪರಿಶೀಲನಾಕಾರರಿಗೂ ನನ್ನ ಅತ್ಯಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನಾಡಿನ ಹಿರಿಯ ಜನಪದ ಡೊಳ್ಳುಕಲೆ ಗಂಡು ಕಲೆ ಎಂದು ಹೆಸರು ಪಡೆದಿದೆ. ಈ ಕಲೆಯನ್ನು ಬೆನ್ನಿಗೆ – ಹೊಟ್ಟೆಗೆ, ಕಟ್ಟಿಕೊಂಡು ; ಕಾಲುಗಳಿಗೆ, ಕೈಗಳಿಗೆ, ಬಾಯಿಗಳಿಗೆ, ಹೃದಯಕ್ಕೆ ಹಚ್ಚಿಕೊಂಡು ಸರ್ವಕಲಾವಿದರಿಗೂ ಕೃತಜ್ಞತೆಗಳನ್ನು ಹೇಳಲೇಬೇಕು.

ನನಗೆ ಈ ಯೋಜನೆಯ ಬಗೆಗೆ ಕಾಗದ ಬಂದೊಡನೆ ಕಾರ್ಯೋನ್ಮುಖನಾದೆನು. ಉತ್ತರ ಕರ್ನಾಟಕವನ್ನೆಲ್ಲ ಕ್ಷೇತ್ರ ಕಾರ್ಯಕೈಕೊಂಡು ಕಲಾವಿದರಿದ್ದೆಡೆಗೆ ಓಡೋಡಿ ಹೋಗಿ ಕ್ಷೇತ್ರಕಾರ್ಯ ಮಾಡಿದೆನು. ಪ್ರಮುಖ ಡೊಳ್ಳುಹಾಡಿನ ''ಜನಪದ ಹಾಲುಮತ ಕಾವ್ಯ ಹಾಡಿದ ಸೈದಾಪುರದ ಶ್ರೀ ಸಿದ್ಧಪ್ಪ ಮೇಟಿ ಹಾಗೂ ಸಂಗಡಿಗರನ್ನು ಭೆಟ್ಟಿ ಮಾಡಿದೆನು. ಅವರು ಹಾಡಿದ್ದನ್ನೇ ಹಾಡಬೇಕೆ ? ಎಂದು ಪ್ರಶ್ನಿಸಿದರು.

ಆದರೂ ಅವರ ಹಾಡಿನ ರುಚಿ-ಸುರುಚಿ ಕಂಡುಕೊಂಡೆನು. ಅವರಿಗೆಲ್ಲ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಹಾಗೇ ಬೀದರ್‌ದವರೆಗೂ **ಜನಪದ ಪ್ರಶಸ್ತಿ ವಿಜೇತ** ಶ್ರೀ ಹಮ್ಮಗಿ ಮರಿಮಲ್ಲಪ್ಪನವರ ಶಿಷ್ಯರಿಗೆ ಭೇಟ್ಟಿಯಾಗಿ ಹಾಡು ಕೇಳಿ ದಾಖಲಾಯಿಸಿದ್ದಾಯ್ತು. ಅವರೆಲ್ಲರಿಗೂ ಕೃತಜ್ಞತೆಗಳು.

ಈಗಾಗಲೆ ಡೊಳ್ಳು ಹಾಡುಗಳ ವಸ್ತು-ವೈವಿಧ್ಯತೆಯ ಬಗೆಗೆ ಬರೆದುದಾಗಿದೆ. ಹಲವಾರು ಡೊಳ್ಳು ಕಲಾವಿದರು "ಎಲ್ಲಿ ಊರು-ಶಹರ-ಪಟ್ಟಣಗಳಿವೆಯೋ, ಅಲ್ಲೆಲ್ಲ ಡೊಳ್ಳುಗಳಿವೆ. ಹಾಡುಕಾರರಿದ್ದಾರೆ. ಎಂಬ ಮತು ಸತ್ಯವೆನಿಸಿತು. ನಾನು ಸಂದರ್ಶಿಸಿ, ಟಿಪ್ಪಣಿ-ಸಂಗ್ರಹ ಮಾಡಿಕೊಂಡ ನೂರಕ್ಕೂ ಹೆಚ್ಚು ಕಲಾವಿದರು ಧ್ವನಿ ಸುರಳಿ ನೀಡಿದ್ದಾರೆ. ಅವುಗಳ ಬೆಲೆಯನ್ನೂ ನೀಡಿದ್ದೇನೆ. ಅವರ ಹಾಡುಗಳು ಪುಸ್ತಕಗಳಲ್ಲೂ ಮೂಡಿವೆ ನೋಡಿರಿ ಎಂದೆನ್ನುವುದನ್ನು ಪ್ರತ್ಯಕ್ಷ ಕಂಡುಕೊಂಡೆನು. ಅವರಿಗೆಲ್ಲರಿಗೂ ಅನನ್ಯ ಕೃತಜ್ಞತೆಗಳು.

ಈ ಸಂಗ್ರಹದಲ್ಲಿರುವ ಆಕರ ಗ್ರಂಥಗಳ ಸಂಗ್ರಹಕಾರರೆಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಗಳನ್ನು ನೀಡುವೆನು. ಹಾಗೇ ಸಂದರ್ಭ ಸೂಚಿಯ ಲೇಖಕರಿಗೆಲ್ಲರಿಗೂ ನನ್ನೀ ಕೃತಜ್ಞತೆಗಳು.

ಈ ಸಂಗ್ರಹ ಸಂಶೋಧನೆಯ ಕಾರ್ಯ ಘನ ಕಾರ್ಯವೇ ಆಗಿರುವುದು. ಇಲ್ಲಿ ಒಂದು ಸಂಪುಟ ಮಾತ್ರವಾಗಿದೆ. ಇಂತಹ ಅನೇಕ ಡೊಳ್ಳಿನ ಹಾಡು (ಪದ)ಗಳ ಸಂಪುಟಗಳು ರಚನೆಯಾಗುವಷ್ಟು ವಸ್ತು-ವೈವಿಧ್ಯ-ವಿಸ್ತಾರದ ಸಾಹಿತ್ಯವಿದೆ. ಈ ಸಂಪುಟಕ್ಕೆ ನನ್ನ ಸಂಗ್ರಹದಿಂದಲೂ ಪ್ರಕಟಿತ ಆಕರಗಳನ್ನೂ ಸೇರಿಸಲಾಗಿದೆ. ಇನ್ನೂ ಹಸ್ತ ಪ್ರತಿಯ ಪುಟಗಳು ಉಳಿದುಕೊಂಡಿವೆ.

ನನಗೆ ಕ್ಷೇತ್ರ ಕಾರ್ಯದಲ್ಲಿ ಅನೇಕ ಅಡೆ-ತಡೆಗಳು ಎದುರಗಿದ್ದುಂಟು. ಅವುಗಳನ್ನು ಹೇಳಿಕೊಳ್ಳುವುದು ಸರಿಯಲ್ಲ! ದಕ್ಷಿಣ ಕರ್ನಾಟಕದಲ್ಲೂ! ಉತ್ತರ ಕರ್ನಾಟಕದಲ್ಲಿ ನೂರಾರು ದೈವಗಳು ಕುರುಬರವುಗಳಾಗಿವೆ. ಹಾಗೇ ಕುರುಬರು ಶೈವ ಮತ್ತು ವೈಷ್ಣವ ಪಂಥಗಳಲ್ಲಿ ತಾರತಮ್ಯವನ್ನುಂಟು ಮಾಡಿಲ್ಲ! ತ್ರಿಮೂರ್ತಿಗಳನ್ನೂ ಹಾಗೂ ಇತರ ಶಕ್ತಿ ದೇವತೆಗಳನ್ನು ಆರಾಧಿಸುತ್ತ ಸಾಗಿ ಬಂದಿದ್ದಾರೆ. ಚರಿತ್ರೆ ಕಟ್ಟಿ ಹಾಡುತ್ತ ಬಂದಿದ್ದಾರೆ. ತಮ್ಮ ಪರಂಪರೆಯನ್ನು ಹೆಚ್ಚಿಸುತ್ತ ಬಂದಿದ್ದಾರೆ.

ದೇವರ ಗುಡ್ಡದ ಮಾಂತೇಶ (ಮಾಲತೇಶ)ನ ಪೂಜಾರಿ (ಸೇವಕವಗ್ಗರು)ಗಳು ; ಮೈಲಾರದ ಮೈಲಾರ ಲಿಂಗನ ಪೂಜಾರಿ (ವಗ್ಗರು)ಗಳಿಗೂ ನಾನು ಕೃತಜ್ಞತೆ ಹೇಳಲೇಬೇಕು.

ಈ ಇಪ್ಪತ್ತೊಂದನೆಯ ಶತಮಾನ ಪ್ರಾರಂಭವಾಗುವ ಮುಂಚೆ, ಅಂದರೆ ಇಪ್ಪತ್ತನೆಯ ಶತಮಾನದ ಕೊನೆಯ ದಶಕದಿಂದ, ಡೊಳ್ಳುಕಲೆಯನ್ನು ಮಹಿಳೆಯರೂ ಕೈಗೆತ್ತಿಕೊಂಡಿದ್ದಾರೆ. (ಪ್ರಸ್ತಾವನೆಯಲ್ಲಿ ಹೆಸರಿಸಿರುವೆ). ಅವರೆಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸುವೆನು.

ಡೊಳ್ಳು ಕಲೆಯನ್ನು ಭಾರತ – ರಶಿಯಾ ದೇಶಗಳಲ್ಲಿ ಪರಿಚಯಿಸಿದ ಶಿವಮೊಗ್ಗಾ ಜಿಲ್ಲೆಯ ಸಾಗರ ತಾಲೂಕಿನ ಕಣ್ಣೂರ ಗ್ರಾಮದ ಕಣ್ಣೇಶ್ವರ ಡೊಳ್ಳು ಮೇಳದವರಿಗೂ ಕೃತಜ್ಞತೆಗಳು.

ಡೊಳ್ಳಿನ ಸಾಹಿತ್ಯ-ಸಂಸ್ಕೃತಿ ಸಂಶೋಧಿಸಿದಷ್ಟು ಎತ್ತರವಾಗುತ್ತಿದೆ. ಆಳಕ್ಕಿಳಿಯುತ್ತಿದೆ. ವಿಶಾಲ ಹೊಂದುತ್ತದೆ.

**ಡಾ. ಲಿಂಗಣ್ಣ ಸಣ್ಣಕ್ಕಿ**

**ಬೆಂಗಳೂರು**

**ಕನ್ನಡ ಭವನ**

**೩೦-೮-೨೦೦೯**

**ಗೋಕಾಕ**

# ಅಧ್ಯಕ್ಷರ ಮಾತು

**ಪರ್ಯಾಯದ ಬೆಲೆ : ಗೊತ್ತಿಲ್ಲದ ನೆಲೆ**

ಈಗ ಜಗತ್ತಿನಾದ್ಯಂತ ಪರ್ಯಾಯ ಜ್ಞಾನದ ಹುಡುಕಾಟ ತುಂಬ ತುರ್ತಿನ ಕೆಲಸವೆಂಬಂತೆ ನಡೆಯುತ್ತಿದೆ. ಅಭಿವೃದ್ಧಿಶೀಲ ದೇಶಗಳು ಇರುವ ಸೌಕರ್ಯಗಳನ್ನು ಇನ್ನೂ ಹೆಚ್ಚಿಸಿಕೊಳ್ಳುವ ಕಾರಣಕ್ಕೆ ಪರ್ಯಾಯ ಜ್ಞಾನದ ಹುಡುಕಾಟದಲ್ಲಿ ತೊಡಗಿವೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು 'ಪ್ರಭುರಾಷ್ಟ್ರಗಳ ಪ್ರಭುತ್ವ ವಿಜ್ಞಾನ'ಕ್ಕೆ ಪರ್ಯಾಯವಾಗಿ ತಮ್ಮ ತಮ್ಮ ದೇಶದ 'ಪಾರಂಪರಿಕ ಜ್ಞಾನ ಮಾದರಿ'ಗಳನ್ನು ಸಮಕಾಲೀನಗೊಳಿಸಿಕೊಳ್ಳುವ ಹವಣಿಕೆಯಲ್ಲಿವೆ. ಕರ್ನಾಟಕದಲ್ಲಿ ಜನಪದ ಸಾಹಿತ್ಯವನ್ನು ದೇಸಿಸಾಹಿತ್ಯವೆಂದೂ, ಜಾನಪದವನ್ನು ದೇಶಿಜ್ಞಾನವೆಂದೂ ಹೆಸರಿಸಿ ಅವುಗಳ ಪ್ರತ್ಯೇಕತೆ ಮತ್ತು ವಿಶಿಷ್ಟತೆಯನ್ನು ಬಹಳ ಕಾಲದಿಂದಲೂ ಗುರುತಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಹೊಸ ತಲೆಮಾರಿನ ಜಾನಪದ ಚಿಂತಕರು ಜಾನಪದವನ್ನು ಸಮಕಾಲೀನ ಜ್ಞಾನ – ವಿಜ್ಞಾನವನ್ನಾಗಿ ನಿರ್ವಚಿಸಿ ಮಂಡಿಸುತ್ತಿದ್ದಾರೆ. ಉದಾಹರಣೆಗಾಗಿ ಹಿ. ಶಿ. ರಾಮಚಂದ್ರೇಗೌಡರ ಕೆಳಗಿನ ನುಡಿಗಳನ್ನು ಗಮನಿಸಿ;

'ಪುರದಪುಣ್ಯಂ ಪುರುಷರೂಪಿಂದೆ ಪೋಗುತಿದೆ
ಪರಿಜನದ ಭಾಗ್ಯವಡವಿಗೆ ನಡೆಯುತಿದೆ.'
**– ರಾಘವಾಂಕ**

"ವಿಜ್ಞಾನವೆಂಬ ಯಜಮಾನನಿಗೆ ಜನತೆಯ ಜ್ಞಾನ ಸೊರಗಿ ಸೋತುಹೋಯಿತು. ಇಲ್ಲಿಂದಲೆ ಬಡವರ ಸೋಲು ಆರಂಭವಾಯಿತು. ಎಲ್ಲ ಸ್ಥಳೀಯ ಕುಶಲಕರ್ಮಿಗಳು ಕೈಚೆಲ್ಲಿದರು. ಆ ಮೂಲಕ ಬಹುಜನರ ಸೃಜನಶೀಲತೆ ತಟಸ್ಥವಾಯಿತು. ಅನೇಕ ಶತಮಾನಗಳ ಜ್ಞಾನ ಅವನತಿಯ ಹಾದಿಹಿಡಿಯಿತು. ಇದೆ ಜಾನಪದ ; ಜನರ ಜ್ಞಾನ-ವಿಜ್ಞಾನ. ಒಂದು ದೇಶ ಸಮಗ್ರವಾಗಿ ಅಭಿವೃದ್ಧಿ ಹೊಂದಬೇಕಾದರೆ, ಬಹುಜನರು ಕ್ರಿಯಾಶೀಲರಾಗಬೇಕಾದರೆ, ಯುಗಶೀಲವಾದ ಜಾನಪದ ಮರುಹುಟ್ಟು ಪಡೆಯಬೇಕು ಮತ್ತು ಸಮಕಾಲೀನವಾಗಬೇಕು. ಧುತ್ತನೆ ಎದ್ದು ನಿಂತು ಬಡವರ ಹಾಗೂ ಬಹುಜನರ ಮನಸ್ಸು ಮತ್ತು ಶ್ರಮವನ್ನು ನಿಷ್ಕ್ರಿಯಗೊಳಿಸಿದ ಆಧುನಿಕತೆ ನಿಶ್ಶಸ್ತ್ರೀಕರಣಗೊಳ್ಳಬೇಕು. ಇಲ್ಲದಿದ್ದಲ್ಲಿ ನಮ್ಮನ್ನು ಅಮೆರಿಕ ಕಾಡಿದಂತೆ, ಅಮೆರಿಕವನ್ನು ಬಿನ್ ಲಾಡೆನ್ ಕಾಡಿದಂತೆ ನವ ಆಧುನಿಕತೆ ನಮ್ಮನ್ನೆಲ್ಲ ನಿರಂತರ ಭಯದಲ್ಲಿ ಇಟ್ಟಿರುತ್ತದೆ" (ಪುರದ ಪುಣ್ಯ ೬೧.೧೯೦೪).

ನಮ್ಮ ಜನಪದ ಸಾಹಿತ್ಯದ ಸಂಗ್ರಹ, ಅಧ್ಯಯನ ತಲುಪಬೇಕಾದ ಗುರಿ ಇದು. ಇಲ್ಲದಿದ್ದಲ್ಲಿ ಎಂದಿನಂತೆ ಜನಪದ ಸಾಹಿತ್ಯ ನಶಿಸಿಹೋಗುತ್ತಿದೆ, ನಾವು ಕಳೆದು ಹೋಗುತ್ತಿದ್ದೇವೆ ಎಂದು ಪರಿತಪಿಸುತ್ತಲೇ ಇರಬೇಕಾಗುತ್ತದೆ. ಈ ಪರ್ಯಾಯದ ಪ್ರಶ್ನೆ ಸರಳವಾದುದಲ್ಲ. ಅದು ನಮ್ಮ ಜೀವನ ಭದ್ರತೆಯ ಹುಡುಕಾಟ. ಜಾಗತೀಕರಣವೆಂಬ ವಸ್ತುರಾಕ್ಷಸನಿಂದ ಇಡೀ ಭಾರತೀಯ ಸಂಸ್ಕೃತಿ

ವಸ್ತುಸಂಸ್ಕೃತಿಯಾಗಿ ಪರಿವರ್ತಿತವಾಗುತ್ತಿದೆ. ತಮ್ಮಲ್ಲೆ ವಸ್ತುವನ್ನು ಸೃಷ್ಟಿ ಮಾಡುವ ಜೀವನ ಸಂಸ್ಕೃತಿಯ ಆಶಯಗಳಾದ ಭೂಮಿ, ನೀರು, ಗಾಳಿ, ಆಹಾರ ಕಲುಷಿತಗೊಳ್ಳುತ್ತಿವೆ. ಜೀವನ ಸಂಸ್ಕೃತಿಯ ಅಭಿವ್ಯಕ್ತಿಗಳಾದ ಹೆಣ್ಣು, ಕಲಾವಿದರು, ಮಕ್ಕಳು ಮತ್ತು ಸಮುದಾಯಗಳು ಶಕ್ತಿಗುಂದುತ್ತಿವೆ. ಜೀವನ ಸಮತೋಲನಕ್ಕೆ ಒಡನಾಡಬೇಕಾದ ಅಂಚಿಗೆ ಸರಿದವರು, ರಾಜಕೀಯವನ್ನು ಎಟುಕಿಸಿಕೊಳ್ಳಲಾಗದ ಕಿರುಸಮುದಾಯಗಳು, ತಳ – ಕೆಳವರ್ಗದವರು ಸಾಂಸ್ಕೃತಿಕ ಅನನ್ಯತೆಯನ್ನು ಪಡೆಯದೆ ಹೋಗುತ್ತಾರೆ. ಅವರಿಗೊಂದು ಇತಿಹಾಸ ಮತ್ತೂ ದಕ್ಕದೆ ಹೋಗುತ್ತದೆ. ಇದರ ಅರ್ಥ ಭಾರತವನ್ನು ಇರುವ ಹಾಗೆಯೇ ಉಳಿಸಿಕೊಳ್ಳುವುದಲ್ಲ. ಜಾನಪದ ಜೀವನ ಚಿಂತನೆ ಹೇಳುವ; 'ಎಲ್ಲರಿಗೂ ಬದುಕು ಮತ್ತು ಎಲ್ಲರಿಗೂ ಅವಕಾಶ' ಎಂಬುದನ್ನು ಸಮಕಾಲೀನವಾಗಿ ಸಾಧ್ಯಮಾಡಿಕೊಡುವುದು. ಅರ್ಥಾತ್, ಜ್ಞಾನ ಮತ್ತು ಅವಕಾಶ ಎಲ್ಲರ ಸೊತ್ತು ಮತ್ತು ಬಳಕೆಯಾಗುವಂತೆ ನೊಡಿಕೊಳ್ಳುವುದು. ಜಾನಪದ ಅಧ್ಯಯನ ಅಂಥ ಹೊಸದಾರಿಯಲ್ಲಿ ನಡೆಯುತ್ತಿರುವುದನ್ನು ನಾವು ಮನ್ನಿಸಬೇಕು. ಜನಪದ ಸಾಹಿತ್ಯವನ್ನು  ಕಿರಿದಾಗಿ ನಿರ್ವಚಿಸಿ ಅದರ ಸ್ಥಾನಮಾನವನ್ನು ಶಿಷ್ಟ ಸಾಹಿತ್ಯದ ಕೆಳಗೆ ಇಟ್ಟು ನೋಡುವ ಮನೋಧರ್ಮ ಹುಟ್ಟಿರುವುದೇ ವರ್ಗಶಾಹಿ ಮತ್ತು ವಸಾಹತುಶಾಹಿ ಜ್ಞಾನ ಮಾದರಿಗಳು ನಮ್ಮ ಮೇಲೆ ಸವಾರಿ ನಡೆಸುತ್ತಿರುವುದರಿಂದಾಗಿದೆ. ಆ ಕಾರಣದ ಮೇಲೆ ಜನಪದ ಸಂಸ್ಕೃತಿ ಮತ್ತು ಜನಪದ ಸಾಹಿತ್ಯದ ಮೌಲ್ಯಮಾಪನ ಸಮಸಂಸ್ಕೃತಿ ಸ್ಥಾನಮಾನದ ಮೇಲೆ ನಡೆಯಬೇಕಿದೆ.

ಕನ್ನಡ ಜನಪದ ಸಾಹಿತ್ಯ ಸಂಗ್ರಹ ಎರಡು ನೆಲೆಯಲ್ಲಿ ನಡೆಯಿತು. ರಾಷ್ಟ್ರೀಯ ಪುನರುತ್ಥಾನದ ಕಾರಣದಿಂದ ಮತ್ತು ರಾಷ್ಟ್ರದ ಮೂಲ ಸಂಪತ್ತಾದ ಎಲ್ಲವನ್ನೂ ಪುನಶ್ಚೇತನಗೊಳಿಸುವ ಸಂದರ್ಭದಲ್ಲಿ, ರಾಷ್ಟ್ರೀಯ ಸಂಪತ್ತುಗಳಲ್ಲಿ ಒಂದಾದ ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಗ್ರಹಿಸುವ ಪ್ರಯತ್ನ ಮೊದಲನೆಯದು. ಈ ಪ್ರವೃತ್ತಿ ಸಂಪೂರ್ಣವಾಗಿಯೂ ಭಾವನಾತ್ಮಕವಾದುದು. ರಾಷ್ಟ್ರೀಯ ಪುನರುತ್ಥಾನದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಭಾಗವಹಿಸಿದ ನವೋದಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಈ ಹಿನ್ನೆಲೆಯಲ್ಲಿ ಸಂಗ್ರಹಿಸಿದರು. ಆದಕಾರಣ 'ಸಾಹಿತ್ಯವೆಂಬ ಸಾಮಗ್ರಿಗೆ' ಅವರು ಒತ್ತುಕೊಟ್ಟರು. ಅದರ ಉತ್ಪಾದಕರು, ಅವರ ಅಸ್ತಿತ್ವ, ನೆಲೆ-ಬೆಲೆ ಮತ್ತು ಜನಪದ ಸಾಹಿತ್ಯದ ಸಾಮಾಜಿಕ ಸಾಂಸ್ಕೃತಿಕ ಸಂದರ್ಭದ ಕಡೆಗೆ ಗಮನ ಹರಿಸಲಿಲ್ಲ. ರಾಷ್ಟ್ರದ ಆರಾಧನೆಯಂತೆ ಜನಪದ ಸಾಹಿತ್ಯವೂ ಒಂದು ರೀತಿಯ ಆರಾಧನೆಯ ಸಾಮಗ್ರಿಯೆ ಆಯಿತು. ಆ ಸಾಹಿತ್ಯವನ್ನು ಸಂಗ್ರಹಿಸುವ, ಪ್ರೇಮಿಸುವ ಮತ್ತು ಕೊಂಡಾಡುವ ಪ್ರವೃತ್ತಿ ತುಂಬು ಹೊಳೆಯಂತೆ ಹರಿಯಿತು. ಜನಪದ ಸಾಹಿತ್ಯವೂ ದೇಶವನ್ನು ಕಟ್ಟುವ ಒಂದು ಉಪಕರಣವಾಗಿ ಬಳಕೆಯಾಯಿತು. ಅಷ್ಟೇ ಪ್ರಮಾಣದಲ್ಲಿ ಸಾಹಿತ್ಯವೂ ಸಂಗ್ರಹವಾಯಿತು. ಜನಪದ ಸಾಹಿತ್ಯ ಸಂಗ್ರಹ ಜಂಗಮರು ತಾವಿರುವ ಕಡೆಯಲ್ಲಿ ಮಾತ್ರವಲ್ಲದೆ, ಜನಪದ ಸಾಹಿತ್ಯ ಸಂಗ್ರಹಯಾತ್ರೆಯನ್ನು ಕೈಕೊಂಡರು. ಈ ಸಂಗ್ರಹಯಾತ್ರೆ, ಅದನ್ನು ಕುರಿತ ಪ್ರಚಾರವೂ ಪ್ರಶಂಸೆಯೂ ಆಗಿತ್ತು. ಅದು ಅಗತ್ಯ ಭೂಮಿಕೆಯೂ ಆಯಿತು.

ಯಾವಾಗ ಜಾನಪದ ಎಂಬುದು ಅಧ್ಯಯನದ ವಿಷಯವೂ ಆಯಿತೊ ಆಗ ಅದಕ್ಕೊಂದು ಶಾಸ್ತ್ರೀಯ ಶಿಸ್ತು ಸೇರಿಕೊಂಡಿತು. ಅಲ್ಲಿಂದ ಜನಪದ ಸಾಹಿತ್ಯ ಸಂಗ್ರಹದ ಭರಾಟೆ ಕಡಿಮೆಯಾಯಿತು. ಯಾವಾಗ ಇದು ವೈಜ್ಞಾನಿಕವೆಂಬ ಹೆಸರಿನ ಪ್ರಜ್ಞಾಪೂರ್ವಕ ಚಟುವಟಿಕೆ ಆಯಿತೊ ಅಲ್ಲಿಂದ ಪ್ರೇಮದ ವಿವಾಹ ಕೌಟುಂಬಿಕ ಜವಾಬ್ದಾರಿ ಆದಂತಾಯಿತು. ಒಂದು ರೀತಿಯಲ್ಲಿ ಇದು ಜನಪದ ಸಾಹಿತ್ಯ ಸಂಗ್ರಹಕ್ಕೆ ತಗುಲಿದ ಪೆಟ್ಟು ಎನಿಸಿದರೂ ಮತ್ತೊಂದು ಬಗೆಯಲ್ಲಿ ಆ ಸಾಹಿತ್ಯದ ಅಂತರಂಗ ಪ್ರಕಾಶಿಸಲು ಅನುಕೂಲವಾಯಿತು.

ಅಭಿಮಾನದ ದೃಷ್ಟಿಯಿಂದ ಸಂಗ್ರಹಿಸಲಿ ಅಥವಾ ಅಧ್ಯಯನ ದೃಷ್ಟಿಯಿಂದ ಸಂಗ್ರಹಿಸಲಿ ಈ ಸಂಗ್ರಹ ಕಾರ್ಯ ಮಾತ್ರ ಸುಲಭದ್ದಲ್ಲ. ಮೂಲತ: ಅದು ಸಂಗ್ರಾಹಕನ ಅನುಭವ, ಬದ್ಧತೆ, ಶ್ರಮ ಮತ್ತು ಆರ್ಥಿಕ ಅನುಕೂಲತೆಯನ್ನು ಅಪೇಕ್ಷಿಸುತ್ತದೆ. ಆರಂಭಿಕ ಕಾಲದಲ್ಲಿ ಸಂಗ್ರಾಹಕರಲ್ಲಿ ಅರ್ಥಿಕ ಬಡತನವಿದ್ದರೂ, ಅವರ ಸಾಂಸ್ಕೃತಿಕ ಸ್ವಾಭಿಮಾನವೆಂಬುದು ಕಷ್ಟನಷ್ಟಗಳ ಪರಿವೆಯನ್ನು ಮರೆತು ಜನಪದ ಸಾಹಿತ್ಯವನ್ನು ಹಾಡಿ, ಸಂಗ್ರಹಿಸಿ ಜನತೆಯ ಮುಂದೆ ಮಂಡಿಸಿತು. ಇದೊಂದು ಅಧ್ಯಯನದ ವಿಷಯವಾದ ತಕ್ಷಣದಿಂದ ಅದಕ್ಕೊಂದು ಉದ್ಯಮದ ಸ್ವರೂಪ ಉಂಟಾಯಿತು. ಲಾಭ-ನಷ್ಟಗಳ ಪರಿವೆ ಸಂಗ್ರಾಹಕನನ್ನು ಕಾಡಹತ್ತಿತು. ಈ ಹೊತ್ತಿಗೆ ಜನಪದ ಸಾಹಿತ್ಯವನ್ನು ಜನಪ್ರಿಯ ಸಾಹಿತ್ಯದಂತೆ ಪ್ರಕಟಿಸಿ ಬೀದಿಬದಿಯಲ್ಲಿ ಮಾರಿ ಕಾಸು ಮಾಡುವ ಪರಿಸ್ಥಿತಿ ನಿಂತುಹೋಯಿತು. ವ್ಯಾಪಾರಿಗಳು ಈ ಸಾಹಿತ್ಯವನ್ನು ಪ್ರಕಟಿಸುವುದನ್ನು ನಿಲ್ಲಿಸಿದರು, ಪ್ರಕಾಶಕರೆಂಬುವವರು ಹುಟ್ಟಿಕೊಂಡರು. ಅಕೆಡೆಮಿಷಿಯನ್ ಮತ್ತು ಪ್ರಕಾಶಕರೆಂಬ ಉದ್ಯಮ ಆಧಾರಿತ ದಣಿಗಳಿಂದಾಗಿ ಹೊಸ ಸಂಗ್ರಹಕಾರರು ಮುಂದೆ ಬರುವುದಾಗಲಿಲ್ಲ. ಜನಪದಸಾಹಿತ್ಯ ಸಂಗ್ರಹಕಾರ್ಯ ಬಹಳ

ಶಿಸ್ತಿನ ವಿಷಯವಾಯಿತು. ಸಂಗ್ರಹಕಾರ್ಯಕ್ಕೂ ಹೆಚ್ಚು ಓದು ಮತ್ತು ವಿದ್ವತ್ತು ಬೇಕೆನಿಸಿತು. ಸಹಜವಾಗಿ ಹವ್ಯಾಸಿ, ಭಾಷಾಪ್ರೇಮಿ ಮತ್ತು ಅಲೆಮಾರಿ ಸಂಗ್ರಹಕಾರರು ಹಿಂದೆ ಸರಿದರು. ಜನಪದ ಸಾಹಿತ್ಯವನ್ನು, ಸಂಗ್ರಹಿಸುವುದಕ್ಕಿಂತ ಅದರ ಸತ್ವ ಮತ್ತು ಸಾರ್ಥಕತೆಯ ಪ್ರಶ್ನೆ ಮುಂದೆ ಬಂದು ವಿದ್ವಾಂಸರು ಮಾತ್ರವೇ ಈ ಕೆಲಸವನ್ನು ಮಾಡಬೇಕು ಎಂಬ ಮನೋಧರ್ಮ ಉಂಟಾಯಿತು. ಜನಪದ ಸಾಹಿತ್ಯ ಸಂಗ್ರಹ ಹಿಂದೆ ಸರಿದುದಕ್ಕೆ ಅದು ಒಂದು ಅಧ್ಯಯನ ಶಿಸ್ತಿಗೆ ಒಳಪಟ್ಟುದಷ್ಟೆ ಕಾರಣವಲ್ಲ. ಆಧುನಿಕವೆಂಬ ವಸ್ತುಪ್ರಧಾನ ಚಿಂತನೆ ಮತ್ತು ಬಳಕೆಯ ಜೀವನ ವಿಧಾನ ಪಾರಂಪರಿಕ ಮತ್ತು ಸ್ಥಳೀಯವೆಂಬ ಎಲ್ಲ ಸಾಂಸ್ಕೃತಿಕ ಉತ್ಪನ್ನಗಳನ್ನು ಜನಬಳಕೆಯಿಂದ ದೂರಮಾಡಲು ತೊಡಗಿದ್ದು ಮುಖ್ಯಕಾರಣವಾಗಿದೆ. ಸೀಮಿತ ವರ್ಗದ ವಿಶಿಷ್ಟ ಚಟುವಟಿಕೆಯಾಗಿದ್ದ ಬರಹದ ಸಾಹಿತ್ಯ ಆಧುನಿಕತೆಯ ಜೊತೆಗೆ ಸ್ಪರ್ಧಿಸಿ ಮತ್ತು ಹೊಂದಿಕೊಂಡು ಮರುಹುಟ್ಟು ಪಡೆದ ಕಾರಣದಿಂದ ಅದು ವರ್ಗಾತೀತವಾದ ಸಾಹಿತ್ಯಕ ಚಟುವಟಿಕೆಯಾಯಿತು. ಎಲ್ಲಾ ಜಾತಿ, ಪಂಗಡದ ವ್ಯಕ್ತಿಗಳೂ ಈ ಸಾಹಿತ್ಯದೊಂದಿಗೆ ಸ್ಪಂದಿಸುವುದು ಸಾಧ್ಯವಾಯಿತು. ಇದರಿಂದ ಸಾಹಿತ್ಯವೆಂದರೆ ಬರಹಗಾರರು ಬರೆದದ್ದು ಎಂಬ ಪ್ರತೀತಿ ದೃಢವಾಯಿತು. ಹೆಚ್ಚು ವ್ಯಕ್ತಿಗಳು ತಮ್ಮ ವ್ಯಕ್ತಿನಿಷ್ಠೆ ಮತ್ತು ವ್ಯಕ್ತಿವೃತ್ತಿ ಸಾಮರ್ಥ್ಯದೊಡನೆ ಈ ಸಾಹಿತ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡರು. ಜೊತೆ ಜೊತೆಯಲ್ಲೆ ಓದು ಮಾತ್ರ ಅರ್ಹತೆ, 'ಓದಿಲ್ಲದ್ದು' ಅನರ್ಹತೆ ಎಂಬ ಜೀವನ ತತ್ವ ಬಳಕೆಗೆ ಬಂತು. ಸಹಜವಾಗಿಯೆ ಅವಿದ್ಯಾವಂತರ ಜನಪದ ಸಾಹಿತ್ಯ ಸತ್ವದಲ್ಲಿ ಸಂಪುಷ್ಟವಾಗಿದ್ದರೂ ಗುರುತುಪಡೆಯುವಲ್ಲಿ ಹಿಂದೆ ಬಿದ್ದಕಾರಣ ವಿಸ್ಮೃತಿಗೆ ತುತ್ತಾಯಿತು. ಶಿಷ್ಟ ಸಾಹಿತ್ಯದ ನಿರಂತರ ಪ್ರಯೋಗಶೀಲತೆ ಜನಪದಸಾಹಿತ್ಯದ ನಿಧಾನ ಹಾಗೂ ನಿಶ್ಚಿತಚಲನೆಯನ್ನು ಹಿಂದೆ ಹಾಕಿತು. ಇದು ನಿಶ್ಚಿತ ಅಭಿರುಚಿಗೆ ನಿರಂತರ ಅಭಿರುಚಿ ಒಡ್ಡಿದ ಸವಾಲುಕೂಡ ಹೌದು. ಜನಪದ ಸಾಹಿತ್ಯ ಶಿಷ್ಟಸಾಹಿತ್ಯದಂತೆ 'ಅಧಿಕೃತ ಸಾಹಿತ್ಯ'ವಾಗಲಿಲ್ಲ ಎಂಬ ಸತ್ಯಸ್ಯಸತ್ಯವೂ ಜನಪದ ಸಾಹಿತ್ಯ ಇನ್ನಿತರ ಆಧುನಿಕ ಸಾಹಿತ್ಯ ಪದ್ಧತಿಗಳೊಡನೆ ಸ್ಪರ್ಧಿಸದೆ ಹಿಂದೆ ಬೀಳಲು ಕಾರಣವಾಗಿದೆ. ಉದ್ಯಮ, ಉದ್ಯೋಗ, ವ್ಯತ್ತಿಯಲ್ಲದ ಈ ಸಾಹಿತ್ಯ ಆಧುನಿಕ ತತ್ತ್ವವಾದ 'ಸ್ಪರ್ಧೆ ಮತ್ತು ಗೆಲ್ಲು' ಸಮರದಲ್ಲಿ ಸೋಲೊಪ್ಪಿಕೊಳ್ಳುವುದು ಅನಿವಾರ್ಯವಾಯಿತು.

ಆದರೆ ಜನಪದ ಸಾಹಿತ್ಯದ ಸತ್ವ ಮತ್ತು ಸಾತತ್ಯ ಎಲ್ಲಿದೆ ಎಂಬುದನ್ನು ಗುರುತಿಸಿಕೊಳ್ಳಲಾಗದ ಹೆಳವತನ ನಮ್ಮನ್ನು ಕಾಡಬೇಕಿತ್ತೆ? ನವೋದಯ ಸಾಹಿತಿಗಳಾದ ಬಿ. ಎಂ. ಶ್ರೀ, ದ. ರಾ. ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬೆಟಗೇರಿ ಕೃಷ್ಣಶರ್ಮ, ಮಧುರಚೆನ್ನ- ಈ ಮೊದಲಾದ ಹಿರಿಯರು ಜನಪದ ಸಾಹಿತ್ಯದಿಂದ ಒಂದು ಸತ್ವವನ್ನು ಕಂಡುಕೊಂಡು ಅದನ್ನು ಹೆಕ್ಕಿ ತೆಗೆದು, ತಮ್ಮ ಸಾಹಿತ್ಯವನ್ನು ಮೈದುಂಬಿಸಿಕೊಂಡರು. ಅವರಿಂದ ಮುಂದೆ ನಮ್ಮ ಸಾಹಿತ್ಯ ಚಿಂತಕರಾಗಲೀ, ಸಂಸ್ಕೃತಿ ಚಿಂತಕರಾಗಲಿ ಜನಪದ ಸಾಹಿತ್ಯದ ಹೊಸ ಸಾಧ್ಯತೆಗಳನ್ನು ಹುಡುಕಲೇ ಇಲ್ಲ ಎಂಬುದು ದುರ್ದೈವದ ಸಂಗತಿ. ಅಲ್ಲಲ್ಲಿ ಕೆಲವು ಸಾಹಿತಿಗಳು ಜನಪದ ಸಾಹಿತ್ಯದ ಸೆಲೆಗಳನ್ನು ಹಿಡಿದು ಬರೆಯುತ್ತಿದ್ದಾರೆ ನಿಜ. ಆದರೆ ಅದು ಅವರ ಬರಹದ ಪ್ರವೃತ್ತಿಗಳಲ್ಲಿ ಒಂದಾಗಿದೆಯೆ ಹೊರತು ಅವರ ಸೃಜನಶೀಲತೆಯ ಪ್ರಕೃತಿಯಾಗಿಲ್ಲ. ಈ ಕಾರಣದಿಂದ ಆಧುನಿಕ ಸಂದರ್ಭದಲ್ಲಿ ಜನಪದ ಜೀವನ ಮತ್ತು ಸಂಸ್ಕೃತಿ ಹೊರಗಿನ ಸರಕು, ಕನಸು, ಅಪೇಕ್ಷೆ, ತುಡಿತ, ಆಕರ್ಷಣೆ ಆಗಿದೆಯೆ ಹೊರತು ಜೀವನ ಬಂಧ, ಸಂಬಂಧ ಅಥವಾ ಬದುಕೇ ಆಗಬೇಕಿತ್ತಲ್ಲ, ಅದು ಆಗಲಿಲ್ಲ; ಹಾಗೆ ಆಗುವ ಸಾಧ್ಯತೆಯೂ ಹತ್ತಿರದಲ್ಲಿ ಇಲ್ಲ.

ಯಾವಾಗ ಆಧುನಿಕ ವ್ಯಕ್ತಿಗಳು ವ್ಯಕ್ತಿತ್ವ ಪ್ರತ್ಯೇಕತೆಯನ್ನು ಅನುಭವಿಸುವ ಅಪೇಕ್ಷೆಯನ್ನು ಅನಿವಾರ್ಯ ಅಂತ ಮಾಡಿಕೊಂಡರೊ ಅಂದಿನಿಂದ ಜನಪದ ಸಾಹಿತ್ಯ ಮತ್ತು ಜನಪದ ಸಂಸ್ಕೃತಿಯನ್ನು ಅನುಭವಿಸುವ ಮತ್ತು ಅನುಸರಿಸುವ ಅವಕಾಶಗಳನ್ನು ಕಳಕೊಂಡರು. ಪ್ರಭುಕೇಂದ್ರಿತ ಮತ್ತು ಧರ್ಮಕೇಂದ್ರಿತ ರಾಜಸತ್ತೆ ಇದ್ದಾಗ ಜನಪದಜೀವನ ಸತ್ವವನ್ನು ಆಗಾಗ ಪಡೆಯುತ್ತ ತಮ್ಮನ್ನು ಹಿಗ್ಗಲಿಸಿಕೊಳ್ಳುತ್ತಿದ್ದವು. ಪ್ರಭುವ್ಯವಸ್ಥೆಯ ಅಧೀನದಲ್ಲಿದ್ದೂ ಮಹಾಕವಿ ಪಂಪ ತನ್ನ ಮೂಲ ನೆಲೆಯಾದ ಬನವಾಸಿ ದೇಶವನ್ನು ನೆನೆದು ತನ್ನನ್ನು ಹಿಗ್ಗಲಿಸಿಕೊಂಡನು. ಪ್ರಭು ಕೇಂದ್ರಿತ ಹಿರಿಯ ಪ್ರಜೆಗಳು ತಮ್ಮ ಬಾಲ್ಯಜೀವನದಲ್ಲಿ ಜನಪದ ಬದುಕನ್ನು ಅನುಭವಿಸಿದರೆ ಮತ್ತೆ ಅದಕ್ಕೆ ಹಿಂದಿರುಗುತ್ತಿದ್ದುದು ವಾನಪ್ರಸ್ಥ ಸಮಯದಲ್ಲಿಯೆ. ಆದರೆ ನಾವು ಪ್ರಜಾಪ್ರಭುತ್ವವೆಂಬ ಜನಪದ ಜೀವನ ತತ್ತ್ವದೊಳಗೆ ಇದ್ದರೂ ಬದುಕುತ್ತಿರುವುದು ಮಾತ್ರ 'ಆಧುನಿಕ ವಾನಪ್ರಸ್ಥ' ದಲ್ಲಿ. ಸತ್ತಲ್ಲದೆ ಬದುಕಲಾರೆವು ಎಂಬ ಈ ಸ್ಥಿತಿಗೆ ನಮ್ಮನ್ನು ನಾವು ಶಪಿಸಿಕೊಂಡಿರುವುದೆ ಕಾರಣವಾಗಿದೆ. ಅಂತಹ ಒಂದು ದುರವಸ್ಥೆಯಿಂದ ಬಿಡುಗಡೆಗೊಳ್ಳುವ ಕಾರಣಕ್ಕಾಗಿಯೇ ನಾವಿಂದು ಜನಪದ ಸಾಹಿತ್ಯವನ್ನು ಓದಬೇಕಾಗಿದೆ ಮತ್ತೆ ಜನಪದ ಸಂಸ್ಕೃತಿಯನ್ನು ಕಲಿಯಬೇಕಾಗಿದೆ. ಇದರಿಂದ ಆಧುನಿಕತೆಯನ್ನು ಕಳೆದುಕೊಳ್ಳುತ್ತೇವೆ

ಎಂದು ನಾವ್ಯಾರು ಭಯಪಡಬೇಕಾಗಿಲ್ಲ. ಆಧುನಿಕತೆಯನ್ನು ಜನಪದ ಬದುಕಾಗಿ ಹಂಚಿಕೊಳ್ಳುವ ಸಾಧ್ಯತೆಗಳನ್ನಷ್ಟೆ ನಾವು ನಮ್ಮಲ್ಲಿ ಕಂಡುಕೊಳ್ಳಬೇಕಾಗಿದೆ.

**ಕರ್ನಾಟಕ ಸರ್ಕಾರ; ಚಿಗುರಿದ ಸಂಸ್ಕೃತಿಯ ಸಾರ**
**ಸರ್ಕಾರ ನಿಂತಕಡೆ ಜನಪದಗಳು ಚಲಿಸಬೇಕು**

ಜನಪದಗಳು ತಾಟಸ್ಥ್ಯಕ್ಕೆ ಬರುತ್ತಿವೆ ಎಂದ ಕಡೆ ಸರ್ಕಾರ ಚಲಿಸಬೇಕು. ಜಗತ್ತಿನ ಎಲ್ಲ ಕಡೆಯೂ ಇಂತಹ ಚಲನೆಗಳು ಸಂಭವಿಸಿವೆ. ಕರ್ನಾಟಕದ ತಳ-ಕೆಳವರ್ಗಗಳು ಎಲ್ಲ ಅನುಕೂಲಗಳಿಂದ ವಂಚಿತವಾಗಿ ಸ್ತಬ್ಧತೆಯ ಕಡೆಗೆ ಹೊರಟಿವೆ ಎಂಬುದನ್ನು ಕಂಡ ಶ್ರೀ ಡಿ. ದೇವರಾಜ ಅರಸು ಅವರ ಸರ್ಕಾರ ಬೇರೆ ಬೇರೆ ರೀತಿಯಲ್ಲಿ ಅವುಗಳನ್ನು ಪ್ರೋತ್ಸಾಹಿಸಿ, ಪೋಷಿಸಿ ಮುಖ್ಯಧಾರೆಗೆ ಅಭಿಮುಖೀಕರಿಸಿದರು. ಭಾಷೆಯ ದೃಷ್ಟಿಯಿಂದ ಕರ್ನಾಟಕ ಸರ್ಕಾರ ಅನ್ಯತೆಗೆ ಸೋಲುತ್ತದೆ ಎಂದು ತಿಳಿದಾಗ ಕರ್ನಾಟಕ ಜನತೆ ಗೋಕಾಕ್ ಚಳವಳಿಯನ್ನು ಆರಂಭಿಸಿ ಕನ್ನಡ ಭಾಷೆ ಮತ್ತು ಕನ್ನಡ ಸಂಸ್ಕೃತಿಯನ್ನು ಸಮನೆಲೆಗೆ ತಂದರು. ಜನಪದಸಾಹಿತ್ಯ ಮತ್ತು ಸಂಸ್ಕೃತಿಯ ಪುನರುತ್ಥಾನದ ಸಂದರ್ಭಕ್ಕೆ ಇಂಥದೊಂದು ಚಲನೆ ಜನರ ಮಧ್ಯೆ ಉಂಟಾಗಬೇಕಿದೆ. ಆದರೆ ಅಂತಹ ಸೂಚನೆಗಳು ಕಾಣುತ್ತಿಲ್ಲ. ಇಂತಹ ಸ್ಥಿತಿಯನ್ನು ಅಲುಗಾಡಿಸಲು ಜನತೆಯ ಸಂಸ್ಕೃತಿಯ ಪ್ರತಿನಿಧಿಯಾಗಿರುವ ಸರ್ಕಾರ ಹೊಸಹೆಜ್ಜೆಯನ್ನು ಹಸನಾದ ಗೆಜ್ಜೆ ಸದ್ದಿನೊಂದಿಗೆ ಇಡಬೇಕಾಗಿದೆ. 'ಕನ್ನಡ ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ' ಗಳನ್ನು ಹೊರತರಲು ಹೊರಟಿರುವ ಕರ್ನಾಟಕ ಸರ್ಕಾರ ಮತ್ತು ಅದರ ಸಂಸ್ಕೃತಿ ಚಾಲಕ ಸಂಸ್ಥೆಯಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಂತಹ ಒಂದು ಮಹತ್ವದ ಕೆಲಸಕ್ಕೆ ಕೈಹಾಕಿದೆ.

ಭಾರತದ ಅನೇಕ ಸಂಸ್ಥಾನಗಳಲ್ಲಿ ಜನಪದ ಸಾಹಿತ್ಯ ಸಂಗ್ರಹ ಹಾಗೂ ಜಾನಪದ ಅಧ್ಯಯನ ನಡೆದಿದೆ. ಆದರೆ ಕರ್ನಾಟಕದ ಈ ದಿಸೆಯ ಕೆಲಸ ಆ ಎಲ್ಲವನ್ನೂ ಮೀರಿಸಿ ಮುಂದೆ ನಿಂತಿದೆ. ಈ ಸಾಧನೆಯ ಮೊದಲ ಗೌರವಕ್ಕೆ ಪಾತ್ರರಾದವರೆಂದರೆ ಕನ್ನಡ ನಿಜ ನೆಲದಿಂದ ಬಂದ ನಮ್ಮ ನಾಡಿನ ಸಾಹಿತಿಗಳು. ನೆಲ ಸಂಸ್ಕೃತಿಯ ನೆಲೆಯಲ್ಲಿ ನಿಂತು ನಾಡಿನ ಭವಿಷ್ಯದ ಬಗ್ಗೆ ತಲೆಬಿಸಿ ಮಾಡಿಕೊಂಡ ಸಂಸ್ಕೃತಿ ಚಿಂತಕರ ಪಾತ್ರ ಈ ಸಾಧನೆಯನ್ನು ಸತ್ವಯುತಗೊಳಿಸಿದೆ. ಪ್ರತ್ಯಕ್ಷವಾಗಿ ನಮ್ಮ ನಾಡಿನ ಎಲ್ಲ ವಿಶ್ವವಿದ್ಯಾನಿಲಯಗಳು ಜನಪದ ಸಾಹಿತ್ಯ ಮತ್ತು ಜಾನಪದ ಅಧ್ಯಯನವನ್ನು ತಮ್ಮ ಒಂದು ಬದ್ಧತೆಯನ್ನಾಗಿ ಸ್ವೀಕರಿಸಬೇಕು. ಕರ್ನಾಟಕ ಜಾನಪದ ಪರಿಷತ್ತಿನಂತಹ ಕೆಲವು ಖಾಸಗಿ ಸಂಸ್ಥೆಗಳು ಜಾನಪದ ಪುನರುದ್ಧಾರ ಕೆಲಸದಲ್ಲಿ ತೊಡಗಿವೆ. ಕರ್ನಾಟಕದ ರಾಜಕಾರಣ ಮತ್ತು ರಾಜ್ಯ ಪ್ರತಿನಿಧಿಗಳನ್ನು ದೂರವಿಟ್ಟು ಮಾತನಾಡುವಂತಿಲ್ಲ. ಗ್ರಾಮೀಣ ಪ್ರದೇಶದಿಂದ ಬಂದ ಎಲ್ಲ ಜನಪ್ರತಿನಿಧಿಗಳು ಜಾನಪದ ನಮ್ಮದೆಂದು ಪ್ರೀತಿಸಿ ಪ್ರೋತ್ಸಾಹ ಕೊಡುತ್ತಾ ಬರುತ್ತಿದ್ದಾರೆ. ಕರ್ನಾಟಕದಲ್ಲಿ ಜನಪದ ಕಲೆ ಮತ್ತು ಕಲಾವಿದರಿಗೆ ಸಿಗುತ್ತಿರುವ ಪ್ರೋತ್ಸಾಹ ಭಾರತದ ಬೇರಾವ ಸಂಸ್ಥಾನದಲ್ಲಿಯೂ ಸಿಗುತ್ತಿಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು. ಇಂತಹ ಜನಪದ ಸಾಹಿತ್ಯ, ಕಲೆ, ಸಂಸ್ಕೃತಿ ಬದ್ಧ ರಾಜ್ಯಶಕ್ತಿಯ ಪ್ರತ್ಯುತ್ಪನ್ನವಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಾನಪದಕ್ಕೆ ಕೊಟ್ಟಿರುವ ಪ್ರೇರಣೆ, ಪ್ರೋತ್ಸಾಹ ಅಪಾರವಾದುದು. ತಾನೇ ನೇರವಾಗಿ ಹಾಗೂ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಮೂಲಕ ಜನಪದ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆಯ ಪುಸ್ತಕಗಳಿಗೆ ಅರ್ಥಿಕ ನೆರವು ನೀಡುತ್ತಿದೆ. ಜನಪದ ಸಾಹಿತ್ಯದ ಪ್ರಾಮಾಣ್ಯ ಸಂಗ್ರಹಗಳನ್ನು ಪುನರ್ ಮುದ್ರಿಸಿದೆ. ಜನಪದ ಕಲಾವಿದರಿಗೆ ಮಾಸಾಶನ, ಕಲಾವಿದ ಪ್ರಶಸ್ತಿ ಮತ್ತು ಅತ್ಯುನ್ನತ 'ಜಾನಪದ ಶ್ರೀ' ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ. ಕಲಾವಿದರ ಪುನಶ್ಚೇತನ, ಗುರು-ಶಿಷ್ಯ ಪರಂಪರೆಯ ಮೂಲಕ ಜನಪದ ಕಲೆಗಳ ಪುನರುಜ್ಜೀವನ, ಜನಪದ ಕಲಾವಿದರಿಗೆ ವಾದ್ಯೋಪಕರಣಗಳ ಸಹಾಯ, ಶ್ರೇಷ್ಠ ಕಲಾವಿದರಿಗೆ ರಾಜ್ಯೋತ್ಸವದ ಪ್ರಶಸ್ತಿ ನೀಡಿ ರಾಜ್ಯದ ಇನ್ನಾವುದೇ ಕಲೆ, ಸಂಸ್ಕೃತಿಯ ಸಮಸಮಕ್ಕೆ ತಂದು ಅವರ ಸ್ವಾಭಿಮಾನವನ್ನು, ಸ್ವಾಯತ್ತತೆಯನ್ನು ಮಾನ್ಯ ಮಾಡಿದೆ.

ಇದೀಗ ಇದೇ ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇದರಿಂದ ಸುಮಾರು ಐದುನೂರು ಪುಟಗಳ ನೂರು ಜನಪದ ಸಾಹಿತ್ಯ ಸಂಪುಟಗಳು ಹೊರಬರುತ್ತಿವೆ. ಇದನ್ನು ಕನ್ನಡ ಜನಪದ ಸಾಹಿತ್ಯ ಪುನರುತ್ಥಾನದ ಪರ್ವ ಎಂದು ಕರೆಯಬಹುದು. ಈ ಬಗೆಯ ಕೆಲಸ ಭಾರತದ ಮತ್ತಾವುದೇ ರಾಜ್ಯದಲ್ಲಿ

ಆರಂಭಗೊಂಡಿಲ್ಲ. ವಚನ ಸಾಹಿತ್ಯ ಹಾಗೂ ದಾಸಸಾಹಿತ್ಯವನ್ನು ಕುರಿತ ಸಂಪುಟಗಳನ್ನು ಪ್ರಕಟಿಸಿದ ನಂತರದ ಮೂರನೆಯ ಬೃಹತ್ ಕಾರ್ಯಯೋಜನೆ ಇದು. ಕನ್ನಡಿಗರನ್ನು ಇಷ್ಟೊಂದು ಸಂತಸಪಡಿಸಿದ ಸಂದರ್ಭ ಇನ್ನೊಂದಿಲ್ಲ. ಇದೊಂದು ನಿರಂತರವಾದ ನಾಡ ಚಳವಳಿ ಇದ್ದಂತೆ. ಈ ಕಾರಣಕ್ಕೆ ಕರ್ನಾಟಕ ಸಮಸ್ತ 'ಜನಶ್ರೀ' ಕರ್ನಾಟಕ ಸರ್ಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಋಣಿಯಾಗಿದೆ. ಈ ಋಣ ಯಾಕೆಂದರೆ ಕೆರೆಯ ನೀರನು ಕೆರೆಗೆ ಬಿಡಿ ಎಂಬಂತೆ ಜನತೆಯ ಸಾಹಿತ್ಯವನ್ನು ಜನರ ಮಧ್ಯೆ ಜನಪ್ರಿಯಗೊಳಿಸುವ ಕೆಲಸ, ನಿಮ್ಮ ಸಂಪತ್ತು ನಿಮ್ಮ ಪ್ರೇಮ, ನಿಮ್ಮ ಅಭಿಮಾನ ಮತ್ತು ನಿಮ್ಮ ಅಂತರಂಗದ ಅಭಿವೃದ್ಧಿಯನ್ನಾಗಿ ಮಾಡಿಕೊಳ್ಳಿ ಎಂಬ ಸಂದೇಶವನ್ನು ಕೊಟ್ಟಂತಾಗಿದೆ. ಜನರಿಂದ ಜನರಿಗಾಗಿ ಜನರಿಗೋಸ್ಕರ ಇರುವ ರಾಜಕೀಯ ಶಕ್ತಿ ಮಾತ್ರ ಇಂಥ ಕೆಲಸವನ್ನು ಮಾಡಬಲ್ಲದು. ಇಂತಹ ಮಹತ್ವದ ಯೋಜನೆಯನ್ನು ಕೊಟ್ಟ ಕರ್ನಾಟಕ ಸರ್ಕಾರಕ್ಕೆ ಸಮಗ್ರ ಕನ್ನಡ ಜನಪದ ಸಾಹಿತ್ಯ ಸಮಿತಿ ಗೌರವ ವಂದನೆಗಳನ್ನು ಸಲ್ಲಿಸುತ್ತದೆ.

ಜನಪದ ಸಾಹಿತ್ಯ ಮುಗಿಯದ ಸಾಹಿತ್ಯ. ಜನರ ಜೀವನದ ಜೊತೆಗೇ ಅದು ಬೆಳೆಯುತ್ತಿರುತ್ತದೆ. ಈ ಕಾರ್ಯಯೋಜನೆ ಕೂಡ ಹಾಗೆಯೇ ಮುಂದುವರಿಯಬೇಕಾದ ಅವಶ್ಯಕತೆ ಇದೆ. ಕರ್ನಾಟಕದಲ್ಲಿ ಇರುವ ಜಾನಪದ ವಾತಾವರಣ ಇದನ್ನು ಆಗು ಮಾಡಿಕೊಡುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ ಸಂಪುಟ ಸಮಿತಿ ಇಂತಹ ಪ್ರತಿಯೊಂದು ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕಿದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡೆ ಸಂಪುಟ ಸಮಿತಿ ತುಂಬು ಜವಾಬ್ದಾರಿಯಿಂದ ತನ್ನ ಕೆಲಸದಲ್ಲಿ ತೊಡಗಿದೆ. ಕರ್ನಾಟಕದಲ್ಲಿ ಈಗಾಗಲೆ ಹಲವು ವ್ಯಕ್ತಿಗಳು ಮತ್ತು ಕೆಲವು ಸಂಸ್ಥೆಗಳು ನಿರಂತರವಾಗಿ ಜನಪದ ಸಾಹಿತ್ಯ ಸಂಗ್ರಹಗಳನ್ನು ಪ್ರಕಟಿಸುತ್ತಾ ಬಂದಿವೆ. ಇವುಗಳಲ್ಲಿ ಕೆಲವು ಮಾತ್ರ ಶಾಸ್ತ್ರೀಯವಾಗಿದ್ದು ಹೆಚ್ಚಿನವು ಸಾಂದರ್ಭಿಕ ಒತ್ತಡ ಮತ್ತು ಅಗತ್ಯತೆಗೆ ಹೊಂದಿಕೊಂಡು ಪ್ರಕಟವಾಗಿವೆ. ಅನೇಕ ವೇಳೆ ಅದೆ ಅಂಶಗಳು ಪದೇಪದೇ ಬೇರೆಬೇರೆ ಸಂಗ್ರಹಗಳಲ್ಲಿ ಪುನರುಕ್ತಿಗೊಂಡಿವೆ. ಇದನ್ನು ಗಮನಕ್ಕೆ ತೆಗೆದುಕೊಂಡಿರುವ ಪ್ರಕಟಣ ಸಮಿತಿಯು ಇರುವುದನ್ನೆಲ್ಲ ಇದ್ದ ಹಾಗೇ ಪ್ರಕಟಿಸುತ್ತಿಲ್ಲ, ಒಂದು ಪ್ರಕಾರದ ಒಂದು ಪ್ರಧಾನ ಆಶಯದ ಮೇಲೆ ನೆಲೆ ನಿಂತಿರುವ ಒಂದು ಹಾಡು, ಕಥೆ, ಕಥನಗೀತೆ, ಗಾದೆ, ಒಗಟು, ಒಡಪು, ನುಡಿಗಟ್ಟು..... ಹೀಗೆ ಒಂದು ಪಾಠವನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಕರ್ನಾಟಕವನ್ನು ಸಾಂಸ್ಕೃತಿಕವಾಗಿ ಅಥವಾ ಭಾಷಿಕವಾಗಿ ವಿಶೇಷವಾಗಿ ಪ್ರತಿನಿಧಿಸುವ ಮತ್ತೊಂದು ಪಾಠವಿದ್ದಲ್ಲಿ ಅದನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಯಾವುದೇ ಪಾಠವನ್ನು ಶಿಷ್ಟ ಸಂಪಾದನೆಯ ಕ್ರಮಕ್ಕೆ ಒಳಪಡಿಸಿರುವುದಿಲ್ಲ. ಆ ಕ್ರಮ ಬಹುಜನರಿಂದ, ಬಹುಪಾಠಗಳಲ್ಲಿ ಮತ್ತು ಬಹುಕಾಲಗಳಲ್ಲಿ ಸೃಷ್ಟಿಯಾಗುವ ಜನಪದ ಸಾಹಿತ್ಯಕ್ಕೆ ಸಲ್ಲತಕ್ಕುದಲ್ಲ. ಭಾಷಿಕ ದೋಷಗಳನ್ನು ಸರಿಪಡಿಸಲು ಮಾತ್ರ ಮುಂದಾಗಿದ್ದೇವೆ. ಆಗತ್ಯವಿದ್ದಷ್ಟು ಸಾಂಸ್ಕೃತಿಕ ಪದಕೋಶವನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಶಿಷ್ಟ ಮತ್ತು ಜನಪ್ರಿಯ ಸಾಹಿತ್ಯ ಪ್ರವೃತ್ತಿಗಳು ಜನಪದ ಸಾಹಿತ್ಯದ ಮೇಲೆ ಯಾವ ಕಾಲದಿಂದಲೂ ಪ್ರಭಾವಬೀರುತ್ತ ಬಂದಿವೆ. ಸಮೂಹ ಮಾಧ್ಯಮಗಳು ಈ ಹೊತ್ತು ಭಾರಿ ಪರಿಣಾಮವನ್ನು ಜನಜೀವನದ ಎಲ್ಲ ಕ್ಷೇತ್ರಗಳ ಮೇಲೆ ಬೀರುತ್ತಾ ಇವೆ. ಇಂತಹ ಸಂದರ್ಭಗಳಲ್ಲಿ ಶಿಷ್ಟ ಮತ್ತು ಜನಪದ ಸಾಹಿತ್ಯದ ನಡುವೆ 'ಮಧ್ಯಮ ಸಾಹಿತ್ಯ' ಸೃಷ್ಟಿಯಾಗಿದೆ. ಈ ಸಾಹಿತ್ಯ ಬಾಯಿ ಮಾತಿನಲ್ಲೂ ಇದೆ, ಬರಹದಲ್ಲೂ ಇದೆ. ಇದು ಜನಪದದ ಮಧ್ಯೆಯೇ ಪ್ರಚಾರದಲ್ಲಿದೆ. ಜನ ಈ ಸಾಹಿತ್ಯವನ್ನು ಜನಪದ ಸಾಹಿತ್ಯದ ಒಂದು ಭಾಗ ಎಂದು ಒಪ್ಪಿ ಸ್ವೀಕರಿಸಿ ಹಾಡುತ್ತಿದ್ದಾರೆ. ತತ್ವಪದಗಳು ಮತ್ತು ಭಜನೆಯ ಪದಗಳು ಈ ಪ್ರವೃತ್ತಿಗೆ ಮುಖ್ಯ ಸಾಕ್ಷಿಗಳಾಗಿವೆ. ಮೌಖಿಕ ಪರಂಪರೆಯೊಳಕ್ಕೆ ಬಂದು ಅನ್ಯೋನ್ಯವಾಗಿ ಸೇರಿಕೊಂಡ ಎಲ್ಲವೂ ಹಾಗೂ ಜಾನಪದೀಯವಾಗಿ ಪರಿಗಣಿತವಾದುದೆಲ್ಲವೂ ಜಾನಪದ ಎಂದು ನಮ್ಮ ವಿಶ್ವ ಪರಂಪರೆಯ ಜಾನಪದ ವಿದ್ವಾಂಸರು ಅನುಮೋದನೆ ನೀಡಿದ್ದಾರೆ. ಉತ್ತರ ಕರ್ನಾಟಕದಂಥ ಸಮೃದ್ಧ ಜಾನಪದ ಜೀವನವನ್ನು ಬದುಕುತ್ತಿರುವ ಜನ ತಮ್ಮ ಅಂತಃಸತ್ವದಲ್ಲಿ ಕೆಲವು ಶಿಷ್ಟ ಹಾಡುಗಳನ್ನು ಜಾನಪದೀಯಗೊಳಿಸಿಬಿಟ್ಟಿದ್ದಾರೆ. ದಾಸಸಾಹಿತ್ಯದ ಅನೇಕ ಹಾಡುಗಳು, ಶಿಶುನಾಳ ಷರೀಫರಂಥ ಜನಸಾಮಾನ್ಯರ ನಡುವಿನ ತತ್ವಚಿಂತಕರ ಹಾಡುಗಳು ಜನರ ಬಾಯಲ್ಲಿ ಜಾನಪದೀಯವಾಗಿವೆ. ವಚನ ಚಳವಳಿಯ ಮುಖ್ಯ ಧಾರೆಯ ಹಿಂದಿನಿಂದ ಬಂದ ಶರಣ ಕವಿಗಳ ಹಾಡುಗಳು ಭಜನೆಯ ಪದಗಳಾಗಿ ಹಾಡಲ್ಪಡುತ್ತಿವೆ. ಜನಪದ ಸಾಹಿತ್ಯದ ಒಂದು ಪ್ರಕಾರವನ್ನು ಮತ್ತೊಂದು ಉದ್ದೇಶಕ್ಕೆ ಬಳಸಿಕೊಳ್ಳುವ ಪರಿಪಾಠ ಎಲ್ಲ ಜನಪದಗಳಲ್ಲೂ ಇದೆ. ಪ್ರಕಾರದೊಳಗಿನ ಉಪಪ್ರಕಾರಗಳಲ್ಲಿ ಕಾರ್ಯಾಂತರವಾಗುವ ರೂಢಿಯೂ ಇದೆ, ಇದನ್ನು ಅಡ್ಡ ಪ್ರಕಾರ ಸ್ವಭಾವ ಎಂದು ಕರೆಯಬಹುದು. ವ್ಯಕ್ತಿ ಯೊಬ್ಬ ಮರಣ ಹೊಂದಿದಾಗ ಆ ದಿನ ರಾತ್ರಿ ಇಡೀ ದಾಸರ ಪದಗಳನ್ನು ಕರುಣಾಕೃತಿಯಾಗಿ ಬಳಸಲಾಗುತ್ತದೆ. ಜನಪದದಲ್ಲಿ ಈ ಸಂದರ್ಭಕ್ಕೆಂದು ಮರಣಗೀತೆಗಳಿದ್ದಾಗ್ಯೂ ಹಾಡುಗಾರರು ದಾಸರ ಪದಗಳನ್ನು ಬಳಸುತ್ತಿರುವುದು ಸಾಂದರ್ಭಿಕ ಔಚಿತ್ಯವೇ ಆಗಿದೆ.

ಇತ್ತೀಚಿನ ದಿನಗಳಲ್ಲಿ ಪ್ರತಿ ಜಾನಪದ ಪ್ರಕಾರ ವಿಸ್ತೃತಗೊಂಡು ಆಧುನಿಕ ಅವಶ್ಯಕತೆಗಳಿಗಾಗಿ ಬಳಕೆಯಾಗುತ್ತಿದೆ. ಈ ಚಟುವಟಿಕೆಯನ್ನು ಪಾಶ್ಚಾತ್ಯ ಜಾನಪದ ವಿದ್ವಾಂಸರು 'ಸಾರ್ವಜನಿಕ ಜಾನಪದ' ಎಂದು ಕರೆದಿದ್ದಾರೆ. ಈಗ ಬರುತ್ತಿರುವ ಟಿ.ವಿ, ಧಾರಾವಾಹಿಗಳನ್ನು ಗಮನಿಸಿದರೆ ಮುಂದೊಂದು ದಿನ 'ಸಾರ್ವಜನಿಕ ಸಾಹಿತ್ಯ' ಎಂಬ ನಡುಮಧ್ಯದ ಸಾಹಿತ್ಯವೂ ಹುಟ್ಟಿಕೊಳ್ಳಬಹುದು. ಇಂತಹ ಸನ್ನಿವೇಶದಲ್ಲಿ ಜನಪದ ಸಾಹಿತ್ಯ ತಾಳುವ ಭಿನ್ನ ಉಪಪ್ರಕಾರಗಳ ಚಲನೆಯನ್ನು ಜಾನಪದ ವಿದ್ವಾಂಸರು ತೆರೆದ ಮನಸ್ಸಿನಿಂದ ನೋಡಬೇಕಾಗಿದೆ.

ಈ ಯೋಜನೆಯನ್ನು 'ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಪ್ರಕಟಣ ಯೋಜನೆ' ಎಂದು ಕರೆಯಲಾಗಿದೆ. ಇದರೊಳಗೆ ಬಯಲಾಟ ಮತ್ತು ಯಕ್ಷಗಾನ ಪ್ರಸಂಗಗಳನ್ನು ವಿಶೇಷ ಗಮನಕ್ಕೆ ಅರ್ಹವೆಂದು ಪರಿಗಣಿಸಲಾಗಿದೆ. ಜನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯದ ಮಧ್ಯೆ ಜನಪರವಾಗಿ ಬೆಳೆದುನಿಂತಿರುವ ಈ ಸಾಹಿತ್ಯ ಒಂದು ವಿಶೇಷ ಸಾಹಿತ್ಯ ಪ್ರಕಾರವಾಗಿದೆ. ಶಿಷ್ಟ ಸಾಹಿತ್ಯ ಮೀಮಾಂಸೆ ಜನಪದ ಸಾಹಿತ್ಯವನ್ನು ಅವಗಣಿಸಿರುವಂತೆ ವಿವಿಧ ಬಯಲಾಟ ಪ್ರಕಾರಗಳ ಪ್ರಸಂಗ ಸಾಹಿತ್ಯವನ್ನು ತನ್ನಿಂದ ದೂರವಿರಿಸಿದೆ. ಶಿಷ್ಟ ಸಾಹಿತ್ಯವನ್ನು ಮೀರಿ ಬೆಳೆದ ಯಾವ ಸಾಹಿತ್ಯ ಪ್ರಕಾರವಿದ್ದರೂ ಅದನ್ನು ಗಮನಿಸುವುದು ಬೆಳೆಯುವ ಪ್ರತಿಭಾ ಚಟುವಟಿಕೆಯ ಪುರಸ್ಕಾರವಾಗುತ್ತದೆ. ಜನಪದ ಸಾಹಿತ್ಯ ಸಂಪುಟ ಸಮಿತಿ ತುಂಬ ಜವಾಬ್ದಾರಿಯಿಂದಲೆ ಈ ಬೆಳೆದ ಸಾಹಿತ್ಯ ಪ್ರಕಾರವನ್ನು ಗುರುತಿಸಿ ಗೌರವಿಸಿದೆ.

ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಯ ಈ ಯೋಜನೆಯಲ್ಲಿ ಮೊದಲಾಗಿ ಪ್ರಕಟಿತ ಸಾಹಿತ್ಯವನ್ನು ಆರಿಸಿ ವಿದ್ವಾಂಸರು ಹಾಗೂ ಕನ್ನಡ ಸಾಹಿತ್ಯಾಭಿರುಚಿಯುಳ್ಳ ಎಲ್ಲರಿಗೂ ಒಪ್ಪುವಂತೆ ಸಂಪುಟಗಳಲ್ಲಿ ಪ್ರಕಟಿಸಲಾಗುತ್ತದೆ. ಎರಡನೆಯ ಹಂತದಲ್ಲಿ ಕರ್ನಾಟಕ ನಾಡಿನಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ, ಪ್ರಕಟಿಸಲು ಸಾಧ್ಯಾವಾಗದೆ ಇಟ್ಟುಕೊಂಡಿರುವ ವ್ಯಕ್ತಿ ಹಾಗೂ ಸಂಸ್ಥೆಗಳ ಜನಪದ ಸಾಹಿತ್ಯವನ್ನು ಪ್ರಕಟಿಸಲು ಯೋಜಿಸಲಾಗಿದೆ. ಇಲ್ಲಿ ಕೂಡ ಈಗಾಗಲೆ ಬೇರೆ ಬೇರೆ ಕೃತಿಗಳಲ್ಲಿ ಕಾಣಿಸಿಕೊಂಡಿರುವ ಸಾಹಿತ್ಯ ಭಾಗವನ್ನು ಬಿಟ್ಟು ಹೊಸದೆನಿಸಿದುದನ್ನು ಕೈಗೆತ್ತಿಕೊಳ್ಳಲಾಗುವುದು. ಮೂರನೆಯ ಹಂತದಲ್ಲಿ ನಾಡಿನಾದ್ಯಂತ ಕೆಡೆದು ಬಿದ್ದಿರುವ ಅಪೂರ್ವವೂ, ಅಮೂಲ್ಯವೂ ಆದ ಜನಪದ ಸಾಹಿತ್ಯವನ್ನು ಕ್ಷೇತ್ರ ಕಾರ್ಯ ಮಾಡಿಸಿ, ಸಂಗ್ರಹಿಸಿ ಪ್ರಕಟಿಸುವ ಬಹುದೊಡ್ಡ ಯೋಜನೆ ಇದೆ. ನಮ್ಮ ಸಾಹಿತ್ಯ – ಸಂಸ್ಕೃತಿ ಚಿಂತಕರು 'ಕರ್ನಾಟಕದ ಮುರಿದ ಭಾಗವನ್ನು ಸರಿಪಡಿಸಿ ಕಟ್ಟಿರಿ, (ಅರ್ಚಕ ಬಿ. ರಂಗಸ್ವಾಮಿ: ಹುಟ್ಟಿದ ಹಳ್ಳಿ; ಹಳ್ಳಿಯ ಹಾಡು ೧೯೩೩) ಎಂಬ ಕಳಕಳಿಯ ಆದೇಶವನ್ನು ಕೊಟ್ಟಿದ್ದಾರೆ, ಅದನ್ನು ಪಾಲಿಸುವುದು ನಮ್ಮ ಕರ್ತವ್ಯ ಹಾಗೂ ಧರ್ಮವಾಗಿದೆ.

ಕರ್ನಾಟಕ ಸರ್ಕಾರವು ದಿನಾಂಕ ೧೦-೦೨-೨೦೦೪ರಂದು ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಯೋಜನೆಯ ನಿರ್ವಹಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇಲ್ಲಿ ನಾಡಿನ ಹಿರಿಯ ಹಾಗೂ ಶ್ರೇಷ್ಠ ಜಾನಪದ ತಜ್ಞರಿದ್ದಾರೆ. ಅವರ ಪ್ರತಿಭೆ ಮತ್ತು ಪರಿಶ್ರಮ ಇಲ್ಲಿ ಕೆಲಸ ಮಾಡಿದೆ. ಬಹಳ ಕಾಲದ ಕನಸೊಂದು ನನಸಾಗುತ್ತಿರುವ ಬಗ್ಗೆ ಅವರು ಸಂತಸಗೊಂಡಿದ್ದಾರೆ. ಇದೊಂದು ನಾಡಿಗೆ ಸಲ್ಲಿಸುವ ಸೇವೆಯ ಕೆಲಸವೆಂಬಂತೆ ದುಡಿಯುತ್ತಿದ್ದಾರೆ. ಅವರು ಕರ್ನಾಟಕ ಸರ್ಕಾರ ಹಾಗೂ ಕನ್ನಡಿಗರ ಗೌರವಕ್ಕೆ ಪಾತ್ರರಾಗಿದ್ದಾರೆ. ಕರ್ನಾಟಕದ ನಾನಾ ಕಡೆ ಬಹಳಕಾಲದಿಂದ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿ ನುರಿತಿರುವ ನೂರೈವತ್ತಕ್ಕೂ ಹೆಚ್ಚು ಜಾನಪದ ವಿದ್ವಾಂಸರು ಸಂಪುಟಗಳ ಸಂಪಾದಕರಾಗಲು ಒಪ್ಪಿಕೊಂಡಿದ್ದಾರೆ. ನಾಡ ಮೇಲಿನ ಅವರ ಪ್ರೀತಿ ಅಪಾರವಾದುದು. ಅವರನ್ನು ಕರ್ನಾಟಕ ಸಾಹಿತ್ಯ ಸಂಸ್ಕೃತಿ ಪ್ರೇಮಿಗಳು ಸ್ಮರಿಸುತ್ತಾರೆ. ಸಂಪುಟ ಸಮಿತಿ ಅವರನ್ನು ತುಂಬುಮನಸ್ಸಿನಿಂದ ವಂದಿಸುತ್ತದೆ.

ಈ ಸಂಪುಟಗಳು ಹೊರಬರುವಲ್ಲಿ ಕರ್ನಾಟಕ ಸರ್ಕಾರದ ಪ್ರಯತ್ನ ಶ್ಲಾಘನೀಯ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಹಾಗೂ ನಿರ್ದೇಶಕರು ಈ ನಿಟ್ಟಿನಲ್ಲಿ ಮುಕ್ತ ಸಹಕಾರವನ್ನು ನೀಡಿದ್ದಾರೆ. ಈ ಇಲಾಖೆಯ ಜಂಟಿ ನಿರ್ದೇಶಕರೂ, ಸಾಹಿತಿಗಳೂ ಆದ ಶ್ರೀ ಕಾ.ತ. ಚಿಕ್ಕಣ್ಣನವರು ಪ್ರತಿಯೊಂದು ಹಂತದಲ್ಲೂ ಸಂಪುಟ ಸಮಿತಿಯ ಜೊತೆಗಿದ್ದು ಅವರ ಅಪಾರ ಶ್ರಮ ಮತ್ತು ಸಹಕಾರವನ್ನು ಧಾರೆ ಎರೆದಿದ್ದಾರೆ. ಕರ್ನಾಟಕ ಜಾನಪದ ಅಕಾಡೆಮಿಯು ಪ್ರಕಟಣೆಯ ಕೆಲಸಕಾರ್ಯಗಳನ್ನು ನಿರ್ವಹಿಸಿ ತುಂಬು ಬೆಂಬಲ ನೀಡಿದೆ. ಈ ಸಮಸ್ತರಿಗೂ ನನ್ನ ಗೌರವಪೂರ್ವಕ ವಂದನೆಗಳು ಸಲ್ಲುತ್ತವೆ.

**ಪ್ರೊ. ಹಿ. ಶಿ. ರಾಮಚಂದ್ರೇಗೌಡ**
ಅಧ್ಯಕ್ಷರು
ಸಮಗ್ರ ಕನ್ನಡ ಜನಪದ ಮತ್ತು
ಯಕ್ಷಗಾನ ಸಾಹಿತ್ಯ ಸಂಪುಟ ಸಮಿತಿ

# ಗಣಸ್ತುತಿ

**ಗುರುನಾಥ ಕರಿಯಪ್ಪ**

ಬಸವಣ್ಣನ ಭಕ್ತಿಗೆ ಮಹಾದೇವ ತಾ ಮೆಚ್ಚಿ ಮರ್ತ್ಯಕ್ಕೆ ಬಂದಂತೆ ಶಂಕರನು
ಮಳ್ಳ ಮಾಯಪ್ಪನ ಮನದೊಳು ತಾ ಮೆಚ್ಚಿ ಮಳಲ ಗದ್ದಿಗೆ ಹೊಯ್ದು ಕರಿಯಪ್ಪನೋ
ಹುಟ್ಟಿ ಕಾಮಾಲೆ ಹಾವ ಹುತ್ತಿಗೆ ಹಾಲು ಕರೆದು ಉದಿ ಹಾಯ್ದ ಕರಿಯಪ್ಪನೋ
ಕಾಮಜನಗ ಹಾಲಕರದುಂಡ ಮಾಳಪ್ಪಗ ವರಕೊಟ್ಟ ಗುರುನಾಥ ಕರಿಯಪ್ಪನೋ
ವರಕೊಟ್ಟ ಗುರುವಿಗೆ ಅರಿವಿಟ್ಟು ನಡೆದರ ತಪ್ಪದೆ ಭಾಷೆಕೊಟ್ಟ ಕರಿಯಪ್ಪನೋ
ಶೀತಾಳ ಮಿನುಗುವಂಥ ಶಿರಿಮಂತ ಶಿವನಿಗೆ ಗಂಧ ಕಸ್ತೂರಿ ಧರಿಸಿದ ಕರಿಯಪ್ಪನೋ
ಗೊಂಡೇದ ನಡುಕಟ್ಟು ಗುಂಡಿಗೆ ಮುಂಡಾಸ ಕಂಡಿರಿ ಕಿರಿಜಾಡಿ ಕರಿಯಪ್ಪನೋ
ಕರಿಯ ಮಲ್ಲಿಗೆಯೊಳಗೆ ಕಣಗಿಲ ಹೂಚಾಯಾ ಗರಿಕ್ಯಾದಗಿ ಮುಡಿದ ಕರಿಯಪ್ಪನೋ
ಬೇಗಿನ ಪೂಜೆಗೆ ಹೊಳೆವಂಥ ಕ್ಯಾದಿಗಿ ಹವಳ ಮಲ್ಲಿಗ ಸರ ಕರಿಯಪ್ಪನೋ
ಸಂಜೆಯ ಪೂಜೆಗೆ ಬಂಗಾರ ಕಿರಿಟವೋ ಖಂಡಗದ್ಹೂವ ಮುಡಿದಾ ಕರಿಯಪ್ಪನೋ
ಹೊನ್ನಾರಿ ಹೂವಿನ್ಯಾಂಗ ಕೆಂಗರಿಗಣ್ಣ ತೆರೆದುಂಗರ ಮೀಸಿ ನೋಡೊ ಕರಿಯಪ್ಪನೋ
ಜಂಗಿನ ಅಯ್ಯರು ಅಂಗಿಯ ತೊಡುವರು ಮುಂದಿನ ಮಳೆ ಹೇಳೋ ಕರಿಯಪ್ಪನೋ
ಬತ್ತಿಯ ಮುಂಡಾಸ ಅತ್ತಿ ಹೂವಿನ ಶ್ಯಾಲ ಹೊತ್ತ ಕುಂತಾನ ಗುರು ಕುರಿಯಪ್ಪನೋ

**ವರವಿನ ಸಿದ್ಧ**

ಯಾವಲ್ಲಿ ಹುಟ್ಟಿದ್ಯೋ ಯಾವಲ್ಲಿ ಬೆಳದ್ಯೋ
ಯಾವಲ್ಲಿ ಹುಡಿಯ ಹಾಯ್ದಯ್ಯ
ಅಂದನ ಗಿರಿಯಾಗ ಹುಟ್ಟಿದೆವಪ್ಪ ನಾವು
ಮುಂದನ ಗಿರಿಯಾಗ ಬೆಳದೇವೊ

ಅಂದನ ಗಿರಿಯಂದರ್ಯಾವದಪ್ಪ ನಿಂದು
ಮಂದನ ಗಿರಿಯಂದ್ರ ಯಾವದೊ

ಅಂದನ ಗಿರಿಯಂದ್ರ ತಾಯಿಯ ಒಡಲೊ
ಮಂದನ ಗಿರಿಯಂದ್ರ ಮಲಿಹಾಲೊ

ಮಂದನ ಗಿರಿಯ ಮಲಿಹಾಲ ಕುಡದು
ಕಂದ ಸಿದ್ಧ ತಾ ಬೆಳದಾನೊ
ಪಂಚ ಪರ್ವತ ಒಳಗಪ್ಪ
ಮೂರ ಏಣಿನ ಮರವೇಳೊ

ಮೂರ ಏಣಿನ ಮರಮೇಳಪ್ಪ
ಕಂದನ ತೊಟ್ಟಿಲ ಕಟ್ಯಾ ವೊ
ಸಿದ್ಧನ ಸೇವಾ ನೋಡಪ್ಪ
ಎಂತೆಂಥವರು ಮಾಡ್ಯಾರೊ

ಮೇಘರಾಜ ಬಂದ ಚಳಿಯ ಕೊಟ್ರ
ವಾಯು ತೊಟ್ಟಿಲ ತೂಗ್ಯಾನೆ
ಮೃಗಗಳ ರಾಜ ಹುಲಿಯ ನೋಡಪ್ಪ
ಪಾದವನೊತ್ತುತ ಕುಳಿತಾನೊ

ಏಳ ಹೆಡಿಯ ಕಾಳಿಂಗನೊ
ಏಳ ಸುತ್ತನು ಹಾಕಿದನೊ
ಕೋಗಿಲ ಕೊಳಲನೂದ್ಯಾವು
ನರಿಗಳ ಸೋಬಾನ ಪಾಡ್ಯಾವ

ಶಿವನ ವರವಿನ ಸಿದ್ಧನೊ
ಅಂ ಅಂತ ಅಳವುತ ಇದ್ದಾನೊ
ಅಂ ಅಂತ ಅಳುವ ಹೊತ್ತಿಗೆ
ಜೇನ ತುಪ್ಪ ಹೊಯ್ಯಲೊ

ಜೇನ ತುಪ್ಪ ಹೊಯ್ಯಾಲ ಕಡಿದರ
ಕಂದ ಸಿದ್ಧತಾ ಮಲಗ್ಯಾನ
ಚಂದಾಗಿ ನಿದ್ದಿ ಮಾಡ್ಯಾನ
ಹೆಚ್ಚಿ ಹೆಚ್ಚಿಗೆ ಪವಾಡ ಮಾಡ್ಯಾನ
ಸುರ್ಚಿ ಮಾಯವ್ವನ ತಮ್ಮನೋ

**ಮಾಳಪ್ಪ – ದ್ಯಾಮವ್ವ**

ದೇವದೇವತೆರ ಕತಿಯ ಕೇಳರಿ
ದೈವ ಕುರಿತು ಹಿತದಿಂದ

ದೇವಿ ನಿಂತಾಳ ಕೈಲಾಸದಲ್ಲಿ
ದ್ಯಾಮವ್ವ ಕೇಳತಾಳ ಮಾದೇವಗಲ್ಲಿ

ಅಂತು ಮಾಳಪ್ಪನ ಸ್ವಂತ್ಹೋಗಿ
ತರತೀನಿ ದೀಡ ತಾಸಿನಲ್ಲಿ
ಮಾದೇವ ಹೇಳತಾನ ದ್ಯಾಮವ್ವಗಲ್ಲಿ
ಹೊಗಬೇಡ ಮಗಳೆ ಮರತ್ಯದಲ್ಲಿ

ಮಾಳಪ್ಪ ಭಕ್ತಿವಾನ ಭವದಾಗ
ಹ್ವಾದರ ಅಲ್ಲೆ ಬರುದಿಲ್ಲ ಇಲ್ಲೆ
ತಿರುಗಿ ಕೈಲಾಸದಲ್ಲಿ
ಸಿಟ್ಟಿಗೇರಿ ದ್ವಾಮವ್ವ

ಕ್ವಾಣನ ಬಂಡಿ ಹೂಡ್ಯಾಳ
ಮೂಗಂಡ ಇಸ ಹೇರ್ಯಾಳ ಬಂಡ್ಯಾಗ
ಶರ್ಪಿನ ಬಾರಕೋಲ ಹಿಡದಾಳ ದ್ಯಾಮವ್ವ
ಕುಂತಾಳ ಬಂಡಿಯ ಮ್ಯಾಗ

ಪೋತರಾಜ ಮುಂದ ಕೈಲಾಸದಿಂದ
ಇಳದಾಳೋ ಬೇಜಗುತ್ತಿ ಬೈಲಾಗ ಬಂದು
ಹುಡಕತಾಳ ಸಿದ್ಧ ಮಾಳಿಂಗರಾಯನೋ
ಹುಡುಕಿ ಬ್ಯಾಸತ್ತು ಬಂದು ನಿಂತಾಳೋ

ಸತ್ಯ ಸಿಡಿಯಾಣದಾಗೋ
ಬಿರಪ್ಪ ಹೇಳತಾನ ದ್ಯಾಮವ್ವಗಲ್ಲಿ
ಇಸ ಬಿಡಬೇಡ ತಾಯಿ ಮರತ್ಯದಲ್ಲಿ
ನೀನು ಉಳಸವ್ವ ಜನರಿಗೋ

ಭಾಗ್ಯದ ಹಟ್ಯಾಗ ಮಾಳಪ್ಪದಾನಂತ
ಬೀರಪ್ಪ ಹೇಳ್ಯಾನೀಗ
ಸಿಟ್ಟಿಗೇರಿ ದ್ಯಾಮವ್ವ ಹೋಗ್ಯಾಳೋ
ಭಾಗ್ಯದ ಹಟ್ಟೀಗಿ

ಹೋಗಿ ಹಿಡಿದಾಳೋ ಮಾಳಪ್ಪನ
ಮೂರು ದಿವಸಾಯ್ತೋ ಹುಡಕತೀನಿ ನಿನ್ನ
ನಡಿಯೋ ಕೈಲಾಸಕೀಗ
ಇಬ್ಬರೂ ಕೂಡಿ ಕುಂತಾರೋ ಜೋಡಿ

ಬಂಡಿ ಹೊಡದರಾಗೋ
ಮಾಳಪ್ಪ ಭಗತಿವಾನ ಭವದಾಗೋ
ಬಂಡಿಯ ಗಾಲಿ ತುಂಡಾಗಿ ಬಿದ್ದಾವೋ
ಮುತ್ತಲಮೋರಿ ಹಳದಾಗೋ

ಮಾಳಪ್ಪ ಕೇಳತಾನ ದ್ಯಾಮವ್ವಗಲ್ಲಿ
ಮೂಗತೆಲ್ಲೆದ ಹೇಳ್ತಾಯಿ ನಿನ್ನ
ನಡಿಯೋ ಕೈಲಾಸಕೀಗ
ಇಬ್ಬರೂ ಕೂಡಿ ಕುಂತಾರೋ ಜೋಡಿ

ಬಂಡಿ ಹೊಡದರಾಗೋ
ಮಾಳಪ್ಪ ಭಗತಿವಾನ ಭವದಾಗೋ
ಬಂಡಿಯ ಗಾಲಿ ತುಂಡಾಗಿ ಬಿದ್ದಾವೋ
ಮುತ್ತಲಮೋರಿ ಹಳದಾಗೋ

ಮಾಳಪ್ಪ ಕೇಳತಾನ ದ್ಯಾಮವ್ವಗಲ್ಲಿ
ಮೂಗತೆಲ್ಲೆದ ಹೇಳ್ತಾಯಿ ನಿನ್ನ ಮೂಗಿನಾಗೋ
ಹುಡಕತಾಳೋ ಮುತ್ತಲಮೋರಿ ಹಳದಾಗೋ
ಕಲ್ಲು ಮಣ್ಣ ಗ್ವಾಳೇ ಮಾಡಿ ಮೆಟ್ನಾಲಿಗಚ್ಚಿ

ತೋರತಾಳೋ ಮುತ್ತಲಮೋರಿ ಹಳ್ಳದಾಗೋ
ದ್ವಾಮವ್ವ ಕೇಳತಾಳ ಮಳಪ್ಪಗಾಗ
ಮೂಗ್ತೆಲ್ಲದ ಹೇಳಪ್ಪ ನೀ ನನಗೀಗ
ನಾನು ಸೋತ ನಿಂತೆ ಭವದಾಗ

ಕೈಲಾಸಕ ಹೋಗುದಿಲ್ಲ
ಜಾಗ ಕೊಡುವೋ ನನಗ
ಮಾಳಪ್ಪ ಹೇಳತಾನ ದ್ಯಾಮವ್ವಗಳಲ್ಲಿ
ಮೂಗತಿ ಆದ ನೋಡ ತಾಯಿ ನಿನ್ನುಡಿಯಲ್ಲಿ

ಸುಳ್ಳೆ ಹೈರಾಣ ಭವದಲ್ಲಿ
ಸಿದ್ಧರೊಳಗ ಶೀಲವಂತ ನೆನದಾಳೋ
ಸಿದ್ಧರೊಳಗ ಶೀಲವಂತ ನೆನದಾಳೋ
ಸತ್ಯ ಸಿಡಿಯಾಣದಾಗೋ

**ಗುಡ್ಡದ ಸ್ವಾಮಿ**

ಹರಾ ಹರಾ ದೇವ಼ರ ಬಂದಾವ ಬನ್ನಿರೆ
ಮೈಲಾರ ಲಿಂಗನ ದೇವ಼ರ ಬಂಧಾವ ಬನ್ನಿರೆ

ಅವತಾರ ಪುರುಷಾಗಿ ಬಂದನು ಸ್ವಾಮಿ
ಏಳು ಗುಡ್ಡದ ಕಣಿವೆಯಲಿ
ಭಕ್ತರು ಕರೆದರು ಮೈಲಾರ ಗುಡ್ಡ
ಭಕ್ತರ ಉದ್ಧಾರ ಆದೀತೋ

ವೇಷವ ಅಡಗಿಸಿ ದೇಶವ ತಿರುಗುತ
ದೇಶದ ಉದ್ಧಾರ ಮಾಡುತಲಿ
ಶಿಷ್ಟರ ಉದ್ದಾರ ಮಾಡುತ ಸ್ವಾಮಿ
ದುಷ್ಟರ ಸಂಹಾರ ನಡೆಸಿದನು

ಕಾಮದ ಗಾಳಿ ಬೀಸಿತು ಜೋರ
ಮಾವಿನ ತೋಪು ಚಿಗುರೀತ
ವಸಂತಮಾಸ ಬಂದಿತು ಬೇಗ
ಸ್ವಾಮಿಗೆ ಮಾಡಿತು ಮೋಡಿಯ

ಮಾಲಾಪುರಕೆ ಬಂದನು ನಡೆಯುತ
ಸೃಷ್ಟಿಯ ಸೊಬಗ ನೋಡೂತ
ದೃಷ್ಟಿಗೆ ಬಿದ್ದಳು ಗರತಿ ಗಂಗಮ್ಮ
ಕಾಮಗ ಸೋತನು ಕಣದಲ್ಲಿ

ಪುಂಗಿಯ ನಾದಕೆ ನಾಗನು ಸೋತಂತೆ
ಗಂಗಿಯ ರೂಪಕ ಸೋತನು
ಮಂಗನು ಆದನು ಮೈಲಾರಸ್ವಾಮಿ
ತಂಗಿಯ ಪಾದಕ ಬಿದ್ದಾನು

ನಾಚಿಕೆ ಬಿಟ್ಟು ಹೇಳುತ ಸ್ವಾಮಿ
ತಂಗಿಯ ಮಂದೆ ತನ್ನಾಸೆ
ಗಂಗಿ ಮಾಳಮ್ಮಗ ಗಂಡನು ಇರುವನು
ತಗಿಬ್ಯಾಡ ತಮ್ಮ ಆಕಿ ಹೆಸರ

ಮುತ್ತಿನಂಥ ಮಾತು ಮರತವು ಆಂವಗ
ಮುತ್ತಿನ ಮುಖದ ನೆನಪಲ್ಲಿ
ಕೈಗೆ ತ್ರಿಸೂಲ ಬಂದಿತು ಸ್ವಾಮಿಗೆ
ಕೊರಳಿಗೆ ಡಮರು ಏರೀತ

ಅಂಬಲಿ ಡೋಣಿ ಬಿದ್ದಿತು ಬೆನ್ನಿಗೆ
ತಲೆಮೇಲೆ ಜುಟ್ಟ ಕಟ್ಟಿದನು
ಭಂಡಾರ ಚೀಲ ತೂಗಿತು ಕೊರಳಿಗೆ
ಮಾಳಿಯ ಮನೆಕಡೆ ನಡದಾನ

ಮಾಯ್ಕಾರ ಮಾದೇವನಾಟ ಕೇಳುದೇನು
ಮಾಳಿಯ ಮನೆ ಮುಂದ ನಿಂತಿಹನು
ಅತ್ತಿತ್ತ ನೋಡುತ ಒಳಗೆ ಇಣುಕುತ
ಡಮರಿನ ನಾದವ ಮಾಡಿದನು

ಏಳುಕೋಟಿ ಏಳುಕೋಟಿ ಎನ್ನುತ
ಒಳಗೆ ಇಣುಕುತ ಕೂಗಿದನು
ಮಾಳವ್ವ ತಾಯಿ ಬಂದಳು ಹೊರಗ
ಮರತುಂಬ ಕಾಳು ನೀಡಾಕ

ಮುದುಕಿಯರ ಕೈಯಾನ ಭಿಕ್ಷೆ ......
ಸೋಗು ಹಿಡಿದನು ಮೈಲಾರಸ್ವಾಮಿ
ಮಾಳಿಯು ಬಂದಳು ಭಿಕ್ಷೆ ನೀಡಾಕ
ಮೈತುಂಬ ಸೆರಗ ಹೊತ್ಕೊಂಡು

ಕಾಳನು ಸುರಿದಾಳ ಸ್ವಾಮಿ ಜೋಳಿಗೆ
ನೆಲವನು ನೋಡುತ ಮಾಳಮ್ಮ
ಕಾಳು ನೀಡಿ ಹಿಂದಕ ಹೋಗುವಾಗ ಸ್ವಾಮಿ
ಸೆರಗು ಹಿಡಿದು ಜಗ್ಗಿದನು

ಗಂಟು ಮುಖದಲಿ ನೋಡ್ಯಾಳ ತಾಯಿ
ಸೆರಗು ಹಿಡಿದ ಬಟಂನ್ನ
ಕೈಯಾಗ ಸೆರಗು ಹಿಡಿಯುತ ಸ್ವಾಮಿ
ತನಗ ಸತಿಯಾಗೆಂದು ಕೇಳಿದನು

ಸೆರಗನು ಬಿಡೋ ಬಿಕ್ಷುಕ ಗೊರವ
ಗಂಡನು ನನಗೆ ಇರುವನು
ಗಂಡನು ನನಗೆ ಇರುವನು ಅವನೊಂದು
ಕೂಸಿನ ತಂದೆ ಆಗಿಹನು

ಕೈಯನು ಕೊಸರುತ ಗೊರವನ ಕೈಯಿಂದ
ಗಂಡನ ಹೆದರಿಕೆ ಹೇಳ್ಯಾಳ

ಈ ಸುದ್ದಿ ನನ್ನ ಗಂಡಗ ತಿಳಿದರ
ಹಾರಿಸ್ತ್ನೋಡೊ ನಿನ ರುಂಡ

ಗಾಬರಿಯಿಂದ ಓಡ್ತಾಳ ಒಳಗ
ಕೂಸನ್ನು ಹೊರಗ ಬಿಟಗೊಟ್ಟು
ಕೂಸಿನ ಎತ್ತಿ ಹಿಡಿಯುತ ಸ್ವಾಮಿ
ಬೆಟ್ಟದ ಹಾದಿ ಹಿಡದಾನ

ಸ್ವಾಮಿಯ ಹಿಂದೆ ಬಂದಳು ತಾಯಿ
ಮಗನ ಕೊಡೆಂದು ಕೇಳೂತ
ಮಗನ ಕೊಡೆಂದು ಕೇಳೂತ ಮಾಳಿ
ಬಹುದೂರ ನಡೆದು ಬಂದಾಳ]

ಯುದ್ಧಕೆ ಹೋದ ಮಾಳಿಯ ಪತಿರಾಯ
ಮರಳಿ ಮನೆಗೆ ಬಂದಿಹನು
ಚೆನ್ನಿಗರಾಯ ಹೋದನು ಒಳಗ
ತಾಯಿಂದ ಸುದ್ದಿ ತಿಳದಾನು

ಹೆಂಡತಿಗಾಗಿ ಮರಗುತ ಕಲಿರಾಯ
ಕೈಯಲ್ಲಿ ಖಡುಗ ಎತ್ತಿದನು
ಕೈಯಾಗ ಖಡುಗ ಹಿಡಿಯುತ ರಾಯ
ಸ್ವಾಮಿಯ ಕೊಲ್ಲಲು ಬಯಸಿದನು

ಮಾಯ್ಕಾರ ಸ್ವಾಮಿಗೆ ತಿಳಿದಿತು ವಿಷಯ
ದಡ ದಡ ಈ ಕಡೆ ಬಂದಿಹನು
ಮನೆ ಮೇಲೆ ಬಂಡಾರ ಚೆಲ್ಲುತ ಸ್ವಾಮಿ
ಮನೆ ಭಸ್ಮ ಮಾಡಿ ಕೊಂದನು

ಮಾಡುತ ನಾಶ ವೈರಿಯ ಜನುಮ
ಗುಡ್ಡದ ಹಾದಿ ಹಿಡಿದಿಹನು
ಸ್ವಾಮಿಯ ಬೆನ್ನತ್ತಿ ಬಂದಳು ತಾಯಿ
ಕೂಸಿನ ಕರುಳಿನ ಆಸೆಯಲಿ

ತಾಯಿಯ ಪಾದಕೆ ಬೀಳುತ ಸ್ವಾಮಿ
ತಾಯಿಗೆ ಸುದ್ದಿ ಹೇಳಿದನು
ಕೋಪವ ಮಾಡ್ಯಾಳ ಮಗನ ಮೇಲೆ
ಸಿಟ್ಟಿಂದ ಬೈದು ಕಳಿಸಿದಳು

ಗುಡ್ಡವ ಹತ್ತಿ ಗುಡ್ಡವ ಇಳಿಯುತ
ಏಳು ಗುಡ್ಡದ ಕಣವಿಗೆ ಬಂದನು
ಮಾಳಮ್ಮನ ಜತೆಗೂಡಿ ಬಂದನು ಸ್ವಾಮಿ
ಅಲ್ಲೆ ಕಲ್ಲಾಗಿ ನಿಂತಿಹನು

**ಗುರು ಬೀರಪ್ಪ**

ನಂದನ ವನದಾಗ ಚಂದ ತೊಟ್ಟಿಲ ಕಟ್ಟಿ
ಕಂದ ಮನಗ್ಯಾನ ಗುರು ಬರಪ್ಪನೋ
ಬಾಳಿಯ ವನದಾಗ ಬಾಲೇರು ತೊಟ್ಲ ಕಟ್ಟಿ
ಬಾಲ ಮನಗ್ಯಾನ ಗುರು ಬೀರಪ್ಪನೋ

ತೊಟ್ಲಯಾರು ತೂಗಿದ್ದಾರು ಜೋಗುಳ್ಯಾರು ಹಾಡಿದ್ದಾರು
ಹೆಸರ್ಯಾರು ಇಟ್ಟಿದ್ದಾರು ಗುರು ಬೀರಪ್ಪಗ
ತೊಟ್ಟಲಾ ತೂಗ್ಯಾಳ ಲಕ್ಸುಂಬಾಯಿ
ಜೋಗುಳಾ ಹಾಡ್ಯಾಳ ಸರಸೋತಿ

ಹೆಸರಿಟ್ಟಾಳ ಪಾರವತಿ ಗುರು ಬೀರಪ್ಪಗ
ಗಾಳಿದೇವಿ ತೊಟ್ಟಿಲ ತೂಗಿ
ಹುಲಿರಾಜ ಜೋಗುಳ ಹಾಡಿ
ಹಾಲ್ಯಾರ ಕುಡಿಸ್ಯಾರ ಗುರು ಬೀರಪ್ಪಗ

ಹೊನ್ನ ಮೂಗಿನ ಹಕ್ಕಿ ಬಂದು
ಹಾಕತಿತ್ತೋ ಜೇನುತುಪ್ಪ
ಕಾವಲ್ಯಾರು ಮಾಡ್ಯಾರು ಗುರು ಬೀರಪ್ಪಗ
ಏಳ ಹೆಡಿ ನಾಗೇಂದ್ರಯ ಕಾವಲವ ಮಾಡಿದ್ದಾನು

ಕರಕೊಂಡ್ಯಾರು ಹೋದರು ಗುರು ಬೀರಪ್ಪನ್ನ
ಅಕ್ಕಮಾಯವ್ವ ಬಂದು ಎತ್ತಿಗೊಂಡು ಅಪ್ಪಿಗೊಂಡು
ಹರುಸಾಗಿ ನಿಂತಾದ್ದಾಳು ಗುರು ಬೀರಪ್ಪಗ
ತಮ್ಮನ ಮಾಡಿ ಎತ್ತಿಕೊಂಡು ಮಗನ ಮಾಡಿ ಮುದ್ದುಕೊಟ್ಟು

ಹರುಸದಿಂದ ಓದಾಳು ಗುರು ಬೀರಪ್ಪನ್ನ
ಆಡು ಕಾಯಲು ಹೋದ ಬೀರಣ್ಣ
ನಾಡು ನೋಡಲು ಹೋದಾನು
ನಾಡು ನೋಡಲು ಹೋದಾನು ಬೀರಣ್ಣ

ನಾಡಿನೊಳಗೇನು ಕಂಡಾನೋ
ನಾಡಿನೊಳಗೇನು ಕಂಡಾನು ಬೀರಣ್ಣ
ಕಲ್ಲ ಹಳ್ಳವ ಕಂಡಾನು
ಕಲ್ಲ ಹಳ್ಳವ ಕಂಡಾನು ಬೀರಣ್ಣ

ಆರು ಮಡಿಯೋ ಕಂಡಾನು
ಆರು ಮಡಿಯೋ ಕಂಡಾನು ಬೀರಣ್ಣ
ಆರು ಮಡಿಯೋ ಕಂಡಾನು ಬೀರಣ್ಣ
ಹಿಂಡ ನೀರಿಗೆ ತಿರಿವ್ಯಾನೋ

ಹಿಂಡ ನೀರಿಗೆ ತಿರಿವ್ಯಾನೋ ಬೀರಣ್ಣ
ಹಿಂಡ್ಗೆ ನೀರನು ಕುಡಿಸ್ಯಾನೋ
ಹಿಂಡ್ಗೆ ನೀರನು ಕುಡಿಸ್ಯಾನೋ ಬೀರಣ್ಣ
ಹಿಂಡ ಬಯಲಿಗೆ ತಿರುವ್ಯಾನೋ

ಹಿಂಡ ಬಯಲಿಗೆ ತಿರಿವ್ಯಾನೋ ಬೀರಣ್ಣ
ಮುಂದ ಮುಂದಕೆ ಹೊಂಟಾನೋ
ಮುಂದ ಮುಂದಕ್ಕೆ ಹೋಗುದರೊಳಗೆ
ಹಿಂದಿನ ಮರಿಗಳು ಶೀತಾವೋ

ಹಿಂದಿನ ಮರಿಗಳು ಶೀತಾವಂತ
ಹಿಂದಕ ಓಡುತ ಬಂದಾನೋ
ಹಿಂದು ಮುಂದಲಿ ಬೆದರ್‍ಯಾವೋ ಬೀರಣ್ಣ
ಹಿಂಡ ಆ ಕಡೆ ಹೊಡದಾನೋ

ಹಿಂಡ ಆ ಕಡೆ ಹೊಡೆದಾನ ಬೀರಣ್ಣ
ದೊಡ್ಡ ಗುಡ್ಡಕ ಹೋದಾನೋ
ದೊಡ್ಡ ಗುಡ್ಡದ ಒಳಗೇನೋ ಬೀರಣ್ಣ
ಅಲ್ಲಿ ಏನನು ಕಂಡಾನೋ

ಅಲ್ಲಿ ಏನನು ಕಂಡಾನ ಬೀರಣ್ಣ
ಕಂಚಿಗನ ಕಂಟಿ ಕಂಡಾನೋ
ಕಂಚಿಗನ ಕಂಟಿ ಬುಡಕೆ ಬೀರಣ್ಣ
ಹಾಸ ಬಂಡಿಯ ಕಂಡಾನೋ

ಹಾಸ ಬಂಡಿಯ ಕಂಡಾನ ಬೀರಣ್ಣ
ಹುಲಿಯ ಗವಿಯ ಕಂಡಾನೋ

ಹುಲಿಯ ಗವಿಯ ಕಂಡಾನೋ ಬೀರಣ್ಣ
ಹುಬ್ಬುಲಿ ಹುಲಿವೊಂದ ಕಂಡಾನೋ

ಹೆಬ್ಬುಲಿ ಹುಲಿವೊಂದು ಕಂಡಾನ ಬೀರಣ್ಣ
ಹಿಂದಕ ಹಿಂಡ ತಿರವ್ಯಾನೋ
ಹಿಂದಕ ಹಿಂಡ ತಿರವ್ಯಾನೋ ಬೀರಣ್ಣ
ತನ್ನ ಊರಿಗೆ ಬಂದಾನೋ

ತನ್ನ ಊರಿಗೆ ಬಂದಾನೋ ಬೀರಣ್ಣ
ಹಿಂಡ ದಡ್ಡಿಗೆ ಹೊಗಸ್ಯಾನೋ
ಉಣಲಾರದ ಮರಿಯ ಉಣಸ್ಯಾನೋ
ಉಣಲಾರದ ಮರಿಯ ಉಣಸ್ಯಾನ ಬೀರಣ್ಣ

ನೆಂಬಲಾರದ ಮರಿಯ ನೆಂಬಸ್ಯಾನೋ
ನೆಂಬಲಾರದ ಮರಿಯ ನೆಂಬಸ್ಯಾನೋ ಬೀರಣ್ಣ
ಕಂಡಗ ಮುಳ್ಳ ಕಡಿದಾನೋ
ಕಂಡಗ ಮುಳ್ಳ ಕಡದಾನ ಬೀರಣ್ಣ

ಮೇಲು ಮುಳ್ಳ ಸೆಳದಾನೋ
ಕುರಿಯ ಹಿಂಡ ಕಾದಾನೋ
ಅಲ್ಲಿಗಿಲ್ಲಿಗೆ ಇದು ಒಂದು ಸಂದು
ಹಾಡಿದವರ ಪದ ಮುಂದ್ಕೇಳ್ಕೋ

**ಬೀರಯ್ಯಲಿಂಗ**

ಶಿವನೇ ನಮ್ಮಯ್ಯ ದೇವರು ಬಂದಾನ ಬನ್ನಿರೇ
ದೇವಿ ಮನೆಗೆ ದ್ಯಾವರ ಹೋದರ ದೇವಿಯೆದ್ದು ಪಾದಾ ತೊಳದಾಳ
ದೇವಿಯೊಳು ಪಾರ್ವತಿ ನಮ್ಮ ದೇವರೊಳು ಪರಮೇಸೂರನೆ
ಪರಮೇಸೂರನ ಬೆವರಿಲೆ ಹುಟ್ಟಿದ್ಯೋ ಬ್ರಹ್ಮಪುತ್ರ ಬೀರಣ್ಣ
ಬಲಾದಿ ಬ್ರಹ್ಮನ ಮಗನೆ ನೀ ಸೂರವತಿಯ ಕೊಮಾರನೇ
ಸೂರವತಿಯ ಕೊಮಾರನಪ ನೀ ನಾರಾಯಣ ದೇವರಳಿಯನೇ
ನಾರಾಯಣ ದೇವರಳಿಯಪ ನೀ ನಗರಿ ಪಟ್ಟಣದರಸನೇ
ನಗರಿ ಪಟ್ಟಣದರಸನಪ ನೀ ಕನಕ ಮರಳಿ ಪುರುಷನೇ
ಸಿದ್ಧ ಹೌದೋ ಬೀರೈಲಿಂಗಾ ಸೂರವತಿಯ ಹೊಟ್ಟಿಲೇ
ಸೂರವತಿಯ ಹೊಟ್ಟಿಲೇ ಹುಟ್ಟಿದಾಗ ನಾರಾಯಣ ದೇವರು
ತಂಗಿ ಹೊಟ್ಟಿಲೆ ಮಗನು ಹುಟ್ಟಿದರ ಮಗಳಿಗೆ ಮೂಲಂದಾನೆ
ಮಗಳಿಗೆ ಮೂಲಂದನ ನಾರಾಯಣ ಅಡವಿಪಾಲ ಮಾಡಬೇಕಂದಾನೆ
ಒಂಟಿ ದೋತರ ಉಟ್ಟಾನ ನಾರಾಯಣ ಗಂಟಿ ನಾಗರ ಇಟ್ಟಾನ

ಗಂಟೆನಾಗರ ಇಟ್ಟಾನ ನಾರಾಯಣ ಎಂಟೆಳೆ ಜನಿವರ ಹಾಕ್ಯಾನ
ಎಂಟೆಳೆ ಜನಿವಾರ ಹಾಕ್ಯಾನ ನಾರಾಯಣ ಕಯ್ಯಾಗ ಪಂಚಾಂಗ ಹಿಡಿದಾನ
ಕಯ್ಯಾಗ ಪಂಚಾಂಗ ಹಿಡಿದನ ನಾರಾಯಣ ತಂಗಿಯರಿಗೆ ಹೊಂಟಾನ
ಅರಳೀ ಬಾವಿಗೆ ಹೋಗ್ಯಾನ ನಾರಾಯಣ ಅಗಸಿಬಾಗಲಕ ನಿಂತಾನ
ಇದೇ ಊರೊಳಗೇನು ಶಿವನೆ ಕೋಡಿ ಕಂದ ಹುಟ್ಟ್ಯಾನ
ಊರಿಗೊಳಿತಿಲ್ಲಂದಾನ ನಾರಾಯಣ ಕೇರಿಗೊಳಿತಿಲ್ಲಂದಾನ
ಇಂತ ನುಡಿಯ ಅಂದಾನ ನಾರಾಯಣ ಅಗಸಿ ದಾಟ್ಯಾನೇನಯ್ಯ
ಅಗಸಿ ದಾಟ್ಯಾನಲ್ಲೋ ಶಿವನೆ ಚಾವಡಿ ಮುಂದ ನಿಂತಾನೆ
ಚಾವಡಿ ಮುಂದ ನಿಂತಾನ ನಾರಾಯಣ ಎನಂತಾನೋ ನಮ್ಮಯ್ಯ
ಇದೇ ಊರ ಒಳಗೋ ಶಿವನೆ ಕೋಡಿ ಕಂದಾ ಹುಟ್ಟ್ಯಾನೇ
ಊರಿಗೊಳಿತಿಲ್ಲಂದಾನ ನಾರಾಯಣ ಕೇರಿಗೊಳಿತಿಲ್ಲಂದಾನೆ
ಊರಾಳುವ ಗೌಡ ಕುಲಕರ್ಣಿಗೆ ಒಳಿತಿಲ್ಲಂದಾನೆ
ಇಂತ ನುಡಿಯ ಸಾರ್‍ಯಾನಲ್ಲ ತಂಗಿ ಓಣಿಗೆ ಹೋಗ್ಯಾನ
ತಂಗಿ ಮನಿಮುಂದ ನಿಂತೋ ಶಿವನೆ ಏನಂತಾನೋ ನಮ್ಮಯ್ಯ
ಇದೇ ಓಣಿಯೊಳಗ ಏನೋ ಕೋಡಿ ಕಂದಾ ಹುಟ್ಟ್ಯಾನ
ಓಣಿಗೊಳಿತಿಲ್ಲಂದನ ನಾರಾಯಣ ಕೇರಿಗೊಳಿತಿಲ್ಲಂದಾನೆ
ತಾಯಿಗೊಳಿತಲ್ಲಂದಾನ ನಾರಾಯಣ ತಂದಿಗೊಳಿತಿಲ್ಲಂದಾನೆ
ಸೋದರಮಾವಾ ನಾರಾಯಣ ದೇವರಿಗೆ ಒಳಿತಿವಿಲ್ಲೋ ನಮ್ಮಯ್ಯ
ಇಂತ ನುಡಿಯ ಕೇಳಿ ಸೂರವತಿ ಹೊರಗ ಬಂದಾಳೋ ನಮ್ಮಯ್ಯ
ಈಗ ಸಾರಿದ ನುಡಿ ಏನಪ್ಪ ಇನ್ನೊಮ್ಮೆ ಸಾರಿ ಹೇಳಯ್ಯ
ಆವಾಗ ನೋಡೋ ಜೋಸಿಗೇರಣ್ಣ ಏನಂತಾನೊ ನಮ್ಮಯ್ಯ
ನಿನ್ನ ಹೊಟ್ಟಿಲಿ ಹೌದೇನವ್ವ ಕೋಡಿ ಕಂದಾ ಹುಟ್ಟ್ಯಾನ
ತಾಯಿಗೊಳಿತಿಲ್ಲಂದಾ ನಮ್ಮಯ್ಯ ತಂದಿಗೊಳಿತಿಲ್ಲಂದಾನ
ಸೋದರ ಮಾವಾ ನಾರಾಯಣ ದೇವರಿಗೆ ಒಳಿತಿಲ್ಲವೆಂದಾನೆ
ಇದೇ ಕೂಸು ಹಟಮಾಡಿ ಅತ್ತರ ನಾರಾಯಣದೇವರಿಗಲ್ಲೇಳೆ
ನಾರಾಯಣ ದೇವರಿಗಲ್ಲೇಳವ್ವ ಮರಣ ಆದಾವಂದಾನ
ಆವಾಗ ನೋಡೋ ಸೂರವತಿಯು ಏನಂತಳೊ ನಮ್ಮಯ್ಯ
ಬಾರೋ ಬಾರೋ ಜೋಸಿಗೇರಣ್ಣ ಮನ್ಯಾಕ ಬಾರೇಳಂದಾಳೆ
ಆವಾಗ ನೋಡೋ ಜೋಸಿಗೇರಣ್ಣ ಮನ್ಯಕ ಹೋಗ್ಯಾನೇನಯ್ಯ
ನಿನ್ನ ಹೊಟ್ಟಿಲೆ ಹೌದೇನವ್ವ ಕೋಡಿ ಕಂದಾ ಹುಟ್ಟ್ಯಾನ
ಸೋದ ಮಾವ ನಾರಾಯಣ ದೇವರಿಗೆ ಒಳಿತಿಲ್ಲ ಅಂದಾನೆ
ಇದೇ ಕೂಸಾ ಹಟಮಾಡಿ ಅತ್ತರ ನಾರಾಯಣ ದೇವರಿಗಲ್ಲೇಳ
ನಾರಾಯಣ ದೇವರಿಗಲ್ಲೇಳವ್ವ ಮರಣ ಆದಾವೆಂದಾನ
ನಾರಾಯಣ ದೇವರಿಗಲ್ಲೇಳವ್ವ ದೌಲತ ಹಾಳ ಆದಾವವ್ವ
ಆನಿಪಾಗಾ ಆಳದಾವವನ ಒಂಟಿ ಪಾಗಾ ಆಳದಾವ
ನಾರಾಯಣ ದೇವರು ಸತ್ತಮ್ಯಾಲ ತವರ ಮನಿಯೋ ನಮ್ಮಯ್ಯ

ಹೆಣ್ಣು ಮಕ್ಕಳ ಜೀವ್ಹೋ ಶಿವನೇ ತವರ ಮನಿಯ ಮ್ಯಾಲೇನೋ
ನನ್ನ ಶಿವನೆ ನನ್ನ ಗುರುವೇ ಹ್ಯಾಂಗ ಮಾಡಬೇಕಂದಾಳೆ
ಆವಗ ನೋಡೊ ಜೋಸಿಗೇರಣ್ಣ ಏನಂತಾನೋ ನಮ್ಮಯ್ಯ
ಇದೇ ಮಗನೇ ಸತ್ತರವ್ವ ಮುಂದ ಕಂಡಿ ಅಂದಾನೆ
ಕೇಲಸಂದಿ ಲಲ್ಲವ್ವ ತಂಗಿ ಮಗಿಯ ಉಳ್ಳವೇ ಕೇಳು
ನಾರಾಯಣ ದೇವರು ಸತ್ತರವ್ವ ತವರ ಮನಿಯ ಇಲ್ಲದಂಗಾದವ್ವಾ
ಬಾರೋ ಬಾರೋ ಜೋಸಿಗೇರಣ್ಣಾ ಹ್ಯಾಂಗ ಮಾಡಬೇಕಂದಾಳೆ
ಆವಾಗ ನೋಡೋ ಜೋಸಿಗೇರಣ್ಣ ಏನಂತಾನೋ ನಮ್ಮಯ್ಯ
ಏಳಮಂದಿ ಯಮದೂತರನ ಕರಿಸಬೇಕಂದಾನೆ
ತೊಟ್ಟಲ ಹೊರಸು ಬೇಕಂದಾನಲ್ಲ ಆರ್ಯಾಣಕೊಯ್ಯಬೇಕಂದಾನೆ
ಆರ್ಯಾಣಕೊಯ್ಯಬೇಕೇಳವ್ವ ಕಂದನ್ನೊಡಿ ಬೇಕಂದಾನೆ
ಕಂದನ್ನೊಡದಾಗಲ್ಲೇಳವ್ವ ನಾರಾಯಣ ದೇವರಿಗಲ್ಲೇಳ

ನಾರಾಯಣ ದೇವರಿಗಲ್ಲೇಳವ್ವ ಮರಣ ಹಿಂದ ಆದಾವ
ಆವಾಗ ನೋಡೊ ಸೂರವತಿಯು ಏನಂತಾಳೋ ನಮ್ಮಯ್ಯ
ಏಳುಮಂದಿ ಯಮದೂತರು ನನಗ ಹ್ಯಾಂಗ ಬಂದಾರು
ಏಳುಮಂದಿ ಯಮದೂತರನು ನಾನು ಕರಿಸೇನಂದಾನೆ
ಆವಾಗ ನೋಡೋ ಜೋಸಿಗೇರಣ್ಣ ನಾನು ಕರಿಸೇನಂದಾನೆ
ತಾನು ಕರಿಸ್ಯಾನಲ್ಲೋ ಶಿವನೆ ತೊಟ್ಟಿಲಿಳಿವೆನಂದಾನ
ಆವಾಗ ನೋಡೋ ಸೂರವತಿಯೋ ಏಳು ಅರವಿ ಹಾಸ್ಯಾಳ
ಏಳು ಅರಿವಿ ಹಾಸ್ಯಾಳಲ್ಲ ಏಳು ಅರಿವಿ ಹೊಚ್ಚ್ಯಾಳ
ಆವಾಗ ನೋಡೋ ನಾರಾಯಣದೇವರು ಸುತ್ತುಮುತ್ತೊ ನಮ್ಮಯ್ಯ
ಸುತ್ತಮುತ್ತ ಅಲ್ಲೋ ಶಿವನೆ ಏಳು ಸೂಲ ಇಟ್ಟಾನೆ
ಆವಾಗ ನೋಡೋ ಸೂರವತಿಯು ಮುಚ್ಚಳದಾಗೋ ನಮ್ಮಯ್ಯ
ಮುಚ್ಚಳದಾಗ ಅಲ್ಲೋ ಶಿವನೆ ಅಗಲು ಮಾಡ್ಯಾಳೇನಯ್ಯ
ಅಗಲ ಮಾಡ್ಯಾಳಲ್ಲೋ ಶಿವನೆ ತೊಟ್ಟಲದಾಗ ಇಟ್ಟಾಳೋ
ಏಳುಮಂದಿ ಯಮದೂತರಿಗೆ ಏನಂತಾನೋ ನಮ್ಮಯ್ಯ
ಇದೇ ಕೂಸಿನಲ್ಲೋ ಶಿವನೆ ಆರ್ಯಾಣಕೊಯ್ಯಬೇಕಂದಾನೆ
ಹಾಲ ಸಮುದರ ದಾಟಬೇಕೋ ಕೀಲ ಸಮುದರ ದಾಟಬೇಕೋ
ಕೀಲ ಸಮುದರದಾಚೆಗಪ್ಪ ಇಂಜಾಣಾ ಮಲಿ ಮಂಜಾಣಾ
ಇಂಜಾಣಾ ಮಲಿ ಮಂಜಾಣದಾಚೆಗೆ ಕೊದಲಿನಂದನ ಬನವೇನೊ
ಕೊದಲಿನಂದನ ಬನದಾಗಪ್ಪ ಕಂದನ ಹೊಡಿಬೇಕಂದಾನೆ
ಹಾಲ ಸಮುದರ ಕೀಲ ಸಮುದರ ನಾವ್ಹ್ಯಾಂಗ ದಾಟಬೇಕಂದಾರ
ಇಂಜಾಣ ಮಲಿ ಮಂಜಾಣಲ್ಲ ನಾವ್ಯಾಂಗ ದಾಟಬೇಕಂದಾರ
ಆವಾಗ ನೋಡೋ ನಾರಾಯಣ ದೇವರು ಏಳುಹಳ್ಳ ಮಂತರಿಸ್ಯಾನ
ಏಳು ಹಳ್ಳ ಮಂತ್ರಿಸ್ಯಾನಲ್ಲ ಅವರ ಕೈಲೆ ಕೊಟ್ಟಾನ

ಹಾಲ ಸಮುದರ ಕೀಲ ಸಮುದರಕ ಹಳ್ಳ ಒಗದರ ಹಾದಿ ಬಿದ್ದಾವಂದಾನೆ
ಇಂಜಾಣ ಮಲಿ ಮಂಜಾಣಕಪ್ಪ ಹಳ್ಳ ಒಗಿಬೇಕಂದಾನೆ
ಹಳ್ಳ ಒಗದರ ಮಲಿ ಮಂಜಾಣ ಕಡದು ಹಾದಿ ಆಗುವದೆಂದಾನೆ
ಏಳುಮಂದಿ ಯಮದೂತರೆಲ್ಲ ತೊಟ್ಟಲೆತ್ತ್ಯಾರೇನಯ್ಯ
ಏಳು ದಿನದ ಕೂಸು ಶಿವನೆ ಏಳು ಮಂದಿಗೆ ಅಲ್ಲೇನು
ಏಳು ಮಂದಿಗಲ್ಲೋ ಶಿವನೆ ಏಳವಲ್ಲದೋ ನಮ್ಮಯ್ಯ
ಏಳು ಮಂದಿಗೆ ಏಳವಲ್ಲದಂತ ತಾನು ಎತ್ತ್ಯಾನೇನಯ್ಯ
ಆವಾಗ ನೋಡೋ ನಾರಾಯಣ ದೇವರು ಏನಂತಾನೋ ನಮ್ಮಯ್ಯ
ಬಾರೋ ಬಾರೋ ಹಡದ ತಂಗೆವ್ವ ಹರಕಿ ಕೊಡಬೇಕಂದಾನೆ
ಆವಾಗ ನೋಡೋ ಸೂರವತಿಯು ಹರಕಿ ಕೊಡತಾಳೇನಯ್ಯ
ಸತ್ಯರ ಮಗ ನೀ ಆದರಪ್ಪ ಮತ್ತೊಂದು ಯುಗದಲ್ಲಿ ಹುಟ್ಟಪ್ಪ
ಕಲ್ಲಿನಕಿನ ಕಣಿಯಾಗ ಮಗನೆ ಮುಳ್ಳಿನಕಿನ ಮೊನ್ಯಾಗು ಮಗನೆ
ವೈರಿಯ ಅಸ್ಥಕರೇನ ನಿನ್ನಸ್ಥ ಮೇಲಾಗಲಿ ಮೆರೆಯಲಿ
ಕೋಟೀಸ್ಥನಾಗೇಳೋ ಮಗನೆ ಕೊನೆಯ ಭಾಗೇಳಂದಾಳೆ
ಆವಾಗ ನೋಡೋ ಸೂರವತಿಯು ತೊಟ್ಟಿಲ್ಬಿಡದಾಳೇನಯ್ಯ
ಏಳುಮಂದಿ ಯಮದೂತರೆಲ್ಲಾ ತೊಟ್ಟಿಲ್ಹೊತ್ತಾರೇನಯ್ಯ
ತೊಟ್ಟಿಲ್ಹೊತ್ತಾರಲ್ಲೋ ಶಿವನೇ ಆರ್ಯಾಣ ದಾರಿ ಹಿಡಿದಾರ
ಆರ್ಯಾಣ ದಾಟ್ಯಾರಲ್ಲೋ ಶಿವನೆ ಹಾಲ ಸಮುದರಕ್ಹೋಗ್ಯಾರ
ಹಾಲ ಸಮುದರಕ್ಹೋಗ್ಯಾರಲ್ಲ ಅಲಿಗೊಂದ ಹಳ್ಳ ಒಗದಾರ
ಅಲಿಗೊಂದ ಹಳ್ಳ ಒಗದಾಗೆಲ್ಲ ನೀರ ಮ್ಯಾಲ ಹಾದಿ ಬಿದ್ದಾವ
ನೀರ ಮ್ಯಾಲ ಹಾದಿ ಬಿದ್ದಾಗ ದಾಟಿ ಹೋಗ್ಯಾರೇನಯ್ಯ
ಹಾಲ ಸಮುದರ ದಾಟ್ಯಾರಲ್ಲ ಕೀಲ ಸಮುದರಕ್ಹೋಗ್ಯಾರ
ಕೀಲ ಸಮುದರಕ್ಹೋಗ್ಯಾರಲ್ಲ ಅಲಿಗೊಂದ ಹಳ್ಳ ಒಗದಾರ
ಅಲಿಗೊಂದ ಹಳ್ಳ ಒಗದಾಗೆಲ್ಲ ನೀರ ಮ್ಯಾಲ ದಾರಿ ಬಿದ್ದಾವ
ನೀರ ಮ್ಯಾಲ ದಾರಿಬಿದ್ದಾಗ ದಾಟಿ ಹೋಗ್ಯಾರೇನಯ್ಯ
ಕೀಲ ಸಮುದರ ದಾಟ್ಯಾರಲ್ಲ ಇಂಜ್ಯಾಣ ಮಲಿ ಮಂಜ್ಯಾಣ
ಇಂಜ್ಯಾಣ ಮಲಿ ಮಂಜ್ಯಾಣಕೆಲ್ಲ ಅಲಿಗೊಂದ ಹಳ್ಳ ಒಗದಾರ
ಅಲಿಗೊಂದ ಹಳ್ಳ ಒಗದಾಗೆಲ್ಲ ಮಲಿ ಕಡದು ಬಯಲಾಗ್ಯಾವ
ಹನ್ನೆರಡು ಗಾವದ ನೆಲವ ಶಿವನೆ ಮಲಿಯ ದಾಟ್ಯಾದೇನಯ್ಯ
ಇಂಜಣ ಮಲಿ ಮಂಜಣದಾಚೆಗೆ ಕೊದಲಿನಂದನ ಬನವೇನೋ
ಕೊದಲಿ ನಂದನ ಬನದಾಗೆಲ್ಲ ಬಾರಂಗ ಬಾಯಿ ಇದ್ದಾವ
ಬಾರಂಗ್ಬಾಯಿ ಮ್ಯಾಲೋ ಶಿವನೆ ಕಂಚಿ ಆಲದ ಮರವೇನೋ
ಕಂಚಿ ಆಲದ ಮರದ ನೆರಳಿಗೆ ತೊಟ್ಟಿಲಿಳಿವ್ಯಾರೇನಯ್ಯ
ತೊಟ್ಟಿಲಿಳಿವ್ಯಾರೇನೋ ಶಿವನೆ ನೀರ ಕುಡಿದಾರೇನಯ್ಯ
ನೀರ ಕುಡಿದಾರೋ ಶಿವನೆ ಅಗಲ ನೋಡ್ಯಾರೇನಯ್ಯ
ಅದರಾಗೆಲ್ಲ ಒಬ್ಬ ಶಿವನೆ ಏನಂತಾನೋ ನಮ್ಮಯ್ಯ

ಮುಚ್ಚಳದೊಳಗಿನ ಅಗಲ ಊಟ ಮಾಡಬೇಕಂದನೆ
ಅದರಾಗಲ್ಲೊ ಒಬ್ಬ ಶಿವನೇ ಏನಂತಾನೋ ನಮ್ಮಯ್ಯ
ಒಬ್ಬ ಒಬ್ಬ ಅಲ್ಲ ಅಪ್ಪ ಒಕ್ಕಳನ್ನ ಉಣ್ಣವರು ನಾವು
ಒಕ್ಕಳನ್ನ ಉಣ್ಣವರಿಗೆಲ್ಲ ಮುಚ್ಚಳದಾಗಿನ ಅಗಲೇನೋ
ಮುಚ್ಚಳದಾಗಿನ ಅಗಲೇನಪ್ಪ ಯಾರಿಗೆ ಸಾತೀತಂದಾನೆ
ಅದರಾಗಲ್ಲೋ ಒಬ್ಬ ಶಿವನೇ ಏನಂತಾನೋ ನಮ್ಮಯ್ಯ
ಸಾತಟ ಸಾತೀತಲ್ಲೇಳೆಪ್ಪ ಎಲ್ಲರೂ ಉಣ್ಣುನಂದಾನೆ
ತೊಟ್ಟಲದೊಳಗಿನ ಅಗಲ ಶಿವನೆ ಬೈಲಿಗೆ ತಗದರೇನಯ್ಯ
ಬೈಲಿಗೆ ತಗದಾರಲ್ಲೊ ಶಿವನೆ ಸುತ್ತುಮುತ್ತ ಕುಂತಾರ
ಸುತ್ತುಮುತ್ತ ಕುಂತಾರಲ್ಲ ಊಟ ಮಾಡ್ಯಾರೇನಯ್ಯ
ಏಳುಮಂದಿಗೆಲ್ಲಾ ಶಿವನೆ ಶಾಂತಿ ಆಗ್ಯಾವೇನಯ್ಯ
ಶಾಂತಿ ಆದಾಗೆಲ್ಲಾ ಶಿವನೆ ನೀರ ಕುಡದಾರೇನಯ್ಯ
ಅದರಾಗಲ್ಲೋ ಒಬ್ಬ ಶಿವನೆ ಕೂಸಿನ್ಹೊಡಿಬೇಕಂದಾನೆ
ಕೂಸಿನ್ಹೊಡಿಬೇಕಂದಾನಲ್ಲ ಅದರಾಗೊಬ್ಬವ ನಮ್ಮಯ್ಯ
ಇದೇ ಕೂಸಿನ ಉಪ್ಪು ಉಂಡು ಹ್ಯಾಂಗ ಹೊಡಿಬೇಕಂದಾನೆ
ಅದರಾಗಲ್ಲೋ ಒಬ್ಬ ಶಿವನೆ ಏನಂತಾನೋ ನಮ್ಮಯ್ಯ
ಕೂಸಿನ ಬಿಟ್ಟು ಹೋದರಪ್ಪ ಕೂನ ಏನು ಒಯ್ಯತೀರಿ
ಕೂನ ಒಯ್ಯದಲ್ಲ ಅಪ್ಪ ಏನು ಅಗಾದ ಅಂದಾನೆ
ರಕ್ತ ಹೊನ್ನೀಮರ ಕಡದು ರಕ್ತ ಮಾಡಿಕೋಳುನಂದಾನೆ
ಬಾಯಾಗ ಬಂದ ಅಡ್ಡಗೊಲ್ಲೆಕ ತೊಟ್ಟಲಕ ಕಟ್ಯಾರೇನಯ್ಯ
ತೊಟ್ಟಲಕ ಕಟ್ಯಾರಲ್ಲೋ ಶಿವನೆ ದಾರಿ ಹಿಡದಾರೇನಯ್ಯ
ಏಳದಿಂದ ಬೀರೈಲಿಂಗ ಒಡನುಡಿದು ಮಾತಾಡ್ಯಾನ

ಹೋದವರು ಹೋಗತೀರಲ್ಲೇಳಪ ನೀವು ತಿರುಗಿ ನೋಡಲಾರದೆ
ತಿರುಗಿ ನೋಡಲಾರದಪ್ಪ ನೀವು ಹೋಗಬೇಕಂದಾನೆ
ಏಳುಮಂದಿ ಯಮದೂತರೆಲ್ಲಾ ಏನಂತಾರೋ ನಮ್ಮಯ್ಯ
ಏಳದಿಂದ ಕೂಸು ಈಗ ಹಿಂಗ್ಯಾಕಂದಿತೇನಯ್ಯ
ಹಿಂಗ್ಯಾಕಂದಿತಂದರಲ್ಲ ಮುಂದ ನೋಡಿ ದಾರಿ ಹಿಡದಾರಲ್ಲ
ಮುಂದ ನೋಡಿ ದಾರಿ ಹಿಡಿದರಲ್ಲ ಅದರಾಗೊಬ್ಬ ನಮ್ಮಯ್ಯ
ಅದರಾಗೊಬ್ಬ ಅಲ್ಲೋ ಶಿವನೆ ಅಮರಿ ಗಿಡದ ಹಂತೀಲೆ
ಅಮರಿ ಗಿಡದ ಹಂತಿಲೆ ನಿಂತು ಹಿಂದಕ್ಹೊಳ್ಳಿ ನೋಡ್ಯಾನೆ
ಹಿಂದಕ್ಹೊಳ್ಳಿ ನೋಡಿದರಲ್ಲಾ ಅಮರಿಗಿಡದ ಈರಪ್ಪ ಆಗ್ಯಾನ
ಆರುಮಂದಿ ಉಳದಾರಲ್ಲ ಮುಂದಕ್ಹೋಗ್ಯಾರೇನಯ್ಯ
ಬನ್ನೀ ಗಿಡದ ಹಂತಿಲಿ ನಿಂತು ಹಿಂದಕ್ಹೊಳ್ಳಿ ನೋಡ್ಯಾರೇನಯ್ಯ
ಹಿಂದಕ್ಹೊಳ್ಳಿ ನೋಡಿದರೆಲ್ಲಾ ಹೊಲದ ನೀರಪ್ಪಾಗ್ಯಾನ
ಐದುಮಂದಿ ಉಳದಾರಲ್ಲ ಸಾಗಿ ಮುಂದಕ ನಡದಾರಲ್ಲ

ಸಾಗಿ ಮುಂದಕ ನಡದಾರಲ್ಲ ಸೀಮಿಗ್ಹೋಗ್ಯಾರೇನಯ್ಯ
ಸೀಮಿಗ್ಹೋಗ್ಯಾರಲ್ಲೋ ಶಿವನೆ ಅದರಾಗೊಬ್ಬವ ನಮ್ಮಯ್ಯ
ಅದರಾಗೊಬ್ಬ ಅಲ್ಲೋ ಶಿವನೆ ತಿರುಗಿ ನೋಡ್ಯಾನೇನಯ್ಯ
ಹಿಂದಕ ತಿರುಗಿ ನೋಡಿದರವನು ಸೀಮಿಕಲ್ಲು ಆಗ್ಯಾನ
ಸೀಮಿಕಲ್ಲ ಅಂಬುದಪ್ಪ ಅಂದಿಗ್ಹುಟ್ಟಿತೋ ನಮ್ಮಯ್ಯ
ನಾಲ್ಕು ಮಂದಿ ಉಳದಾರಲ್ಲ ಮುಂದಕ ನಡದಾರೇನಯ್ಯ
ಅದರಾಗೊಬ್ಬ ಅಲ್ಲೋ ಶಿವನೆ ಹಣಮಂತ ದೇವರ ಗುಡಿಮುಂದ
ಹಣಮಂತದೇವರ ಗುಡಿ ಮುಂದ ನಿಂತು ಹಿಂದಕ್ಹೊಳ್ಳಿ ನೋಡ್ಯಾನ
ಹಿಂದಕ್ಹೊಳ್ಳಿ ನೋಡಿದರವನು ಮಾಲಗಂಬಾ ಆಗ್ಯಾನು
ಮೂರು ಮಂದಿ ಉಳದಾರಲ್ಲ ಸಾಗಿ ಮುಂದಕ ನಡೆದಾರಲ್ಲ
ಅಗಸಿ ಹೊರಗ ನಿಂತಾನಲ್ಲ ಹಿಂದಕ್ಹೊಳ್ಳಿ ನೋಡ್ಯಾನ
ಹಿಂದಕ್ಹೊಳ್ಳಿ ನೋಡಿದರವನು ಹೊರುಕಲ್ಲು ಆಗ್ಯಾನ ಅವನು
ಇಬ್ಬರುಳದಾರಲ್ಲೋ ಶಿವನೆ ಅಗಸಿ ಹೊರಗೊಂದು ಕಾಲೇನೋ
ಅಗಸಿ ಹೊರಗ ಒಂದು ಕಾಲು ಅಗಸಿ ಒಳಗ ಒಂದು ಕಾಲು
ಅಗಸಿ ಒಳಗ ಒಂದು ಕಾಲು ಹಿಂದಕ ಹೊಳ್ಳಿ ನೋಡ್ಯಾನ
ಹಿಂದಕ ಹೊಳ್ಳಿ ನೋಡಿದರವನು ಬಡ್ಡಗಲ್ಲು ಆಗ್ಯಾನ
ಅದರಾಗೊಬ್ಬ ಉಳದಾನಲ್ಲ ಅಗಸಿ ಒಳಗ ಆಗ್ಯಾನ
ಅಗಸಿ ಒಳಗ ನಿಂತಾನಲ್ಲ ಹಿಂದಕ್ಹೊಳ್ಳಿ ನೋಡ್ಯಾನ
ಹಿಂದಕ ಹೊಳ್ಳಿ ನೋಡಿದರವನು ಒಳಕಲ್ಲು ಆಗ್ಯಾನೇನಯ್ಯ
ಪಾರ್ವತಿ ಪರಮೇಸೂರ ರಾಜ್ಯಾ ನೋಡಬೇಕಂದಾರ
ರಾಜ್ಯಾ ನೋಡಬೇಕಂತೋ ಶಿವನೆ ನಂದಿ ತಯಾರಮಾಡ್ಯಾರ
ಕೊರಳಗಂಟ್ಯೋ ಕೋಡಿಲಣಸೋ ಇಣಿಸುತ್ತ ಮಾಣಿಕೋ
ಮುತ್ತಿನ ಮುಗದಾಣ ಹಾಕ್ಯಾರಲ್ಲ ಬಂಗಾರ ಮಗಡಾ ಹಾಕ್ಯಾರೋ

ಬಂಗಾರ ಮಗಡಾ ಹಾಕ್ಯಾರಲ್ಲ ಬೆಳ್ಳಿಯ ಸಿಡಿ ಹಗ್ಗೇನು
ಹೂವಿನ ಮುಟ್ಟಾ ಹಾಕ್ಯಾರಲ್ಲ ಮಗ್ಗಿ ಪಟ್ಟಲಿ ಬಿಗದಾರಲ್ಲ
ಪಾರ್ವತಿ ಪರಮೇಸೂರ ನಂದಿ ತಯಾರ ಮಾಡ್ಯಾರಲ್ಲ.
ನಂದಿ ತಯಾರ ಮಾಡ್ಯಾರಲ್ಲ ನಂದಿ ಮ್ಯಾಲ ಕುಂತಾರ
ದೇವಲೋಕಾ ಬಿಟ್ಟಾರಲ್ಲಾ ಮೃತ್ಯುಲೋಕಕಿಳದಾರಲ್ಲಾ
ಅಂತರಂಗ ಮಾರ್ಗದಲ್ಲಿ ನಂದನ ಬನಕ ಇಳದಾರ
ನಂದನ ಬನಕ ಇಳದಾರಲ್ಲ ಪಾರ್ವತಿಯೋ ನಮ್ಮಯ್ಯ
ಪಾರ್ವತಿಯು ಅಲ್ಲೋ ಶಿವನೆ ಕಂಚಿ ಆಲದ ಮರದಾಗ
ಆಲದ ಮರದಾಗಲ್ಲೋ ಶಿವನೆ ತೊಟ್ಟಲ ಕಣ್ಣಿಲೆ ಕಂಡಾಳೋ
ತೊಟ್ಟಲ ಕಣ್ಣಿಲೆ ಕಂಡಾಗೆಲ್ಲಾ ಏನಂತಾಳೋ ನಮ್ಮಯ್ಯ
ಕೊದಲಿ ನಂದನ ಬನದಾಗೆಲ್ಲಾ ಹಕ್ಕಿ ಸುಳುವು ಇಲ್ಲೇನೋ
ಹಕ್ಕಿ ಸುಳಿವು ಇಲ್ಲೇನೋ ಇಲ್ಲೆ ಪಕ್ಕಿ ಸುಳುವು ಇಲ್ಲೇನೋ

ಮಂದಿ ಸುಳುವು ಇಲ್ಲೇನೋ ಇಲ್ಲೆ ಮಾನವರ ಸುಳುವು ಇಲ್ಲೇನೋ
ಮಾನವರ ಸುಳುವು ಇಲ್ಲದಲ್ಲಾ ಕ ತೊಟ್ಟಲ್ಯಾಕ ಅದಾವ
ಪಾರ್ವತಿಯು ಮತ್ತೆ ಶಿವನೆ ಪರಮೇಸೂರನ ಕೇಳ್ಯಾಳೋ
ಆವಾಗ ನೋಡೋ ಪರಮೇಸೂರ ಏನ ಹೇಳಬೇಕಂದಾನೆ
ನಿನಗ ಗೊತ್ತಿದ್ದ ಮಾತ ಅದ ಹೇಳಬೇಕು ಅಂದಾಳೆ
ಹೇಳಬೇಕಂದಾಗೆಲ್ಲಾ ಏನಂತಾನೋ ನಮ್ಮಯ್ಯ
ನಾರಾಯಣದೇವರು ಕಿಡಿಗೇಡಿ ಅಲ್ಲಾ ತಂಗಿ ಮಗನು ಅಲ್ಲೇನು
ತಂಗಿಮಗನು ಹೌದೇಳ ಪಾರ್ವತಿ ಮಗಳಿಗೆ ಮೂಲಂದಾನೆ
ಮಗಳಿಗೆ ಮೂಲಂದಾನಲ್ಲ ಆರ್ಯಾಣ ಪಾಲಾ ಮಾಡ್ಯಾನ
ಆರ್ಯಾಣ ಪಾಲಾ ಮಾಡಿದರಲ್ಲಾ ಕೂಸಿನ ಜ್ವಾಕಿ ಹ್ಯಾಂಗ ಅಂದಾಳೆ
ಹ್ಯಾಂಗಮಾಬೇಕಂದಾನಲ್ಲ ಪರಮೇಸೂರನು ನಮ್ಮಯ್ಯ
ಜ್ವಾಕಿ ಮಾಡು ಹಂಚಿಕಿಯನ್ನು ನೀ ಮಾಡಬೇಕಂದಾನೆ
ನೀ ಮಾಡಬೇಕಂದಾನಲ್ಲಾ ಚಂದ್ರಗಾವಿ ಗುಡ್ಡೇನ
ಚಂದ್ರಗಾವಿ ಗುಡ್ಡದ ಮ್ಯಾಲ ಚಂದ್ರಲೋಪನದ ಹುತ್ತೇನ
ಚಂದ್ರಲೋಪದ ಹುತ್ತಿನ ಮಾಲ್ಯ ಮಲಿಹಾಲ ಹಿಂಡ್ಯಾಳ
ಮಲಿಹಾಲ ಹಿಂಡ್ಯಾಳ ಪಾರ್ವತಿ ಕೆಸರ ಕಲಿಸ್ಯಾಳೇನಯ್ಯ
ಕೆಸರ ಕಲಿಸ್ಯಾಳಲ್ಲೋ ಶಿವನೆ ಅಡ್ಡ ಬಂದ ಕೊಲ್ಲೇಕ
ಅಡ್ಡ ಬಂದ ಕೊಲ್ಲೇಕೆಲ್ಲ ಕೆಸರ ಒಗದಾಳೇನಯ್ಯ
ಬೀರ ಅಣ್ಣ ಸಂಗಾಟೆಲ್ಲಾ ಹೇಲ ಅರಿವಿ ಸಂಗಾಟ
ಹೇಲ ಅರಿವಿ ಸಂಗಾಟೆಲ್ಲ ನೊಣಗಳು ಬಂದಾವೇನಯ್ಯ
ನೊಣದ ಹುಳಗಳ ಹಿಡದು ಪಾರ್ವತಿ ಜೇನಹುಳ ಮಾಡ್ಯಾಳೆ
ಹೆಬ್ಬ ಜೇನು ಅಲ್ಲೋ ಶಿವನೆ ಅಂದಿಗ್ಹುಟ್ಟತೋ ನಮ್ಮಯ್ಯ
ಆವಾಗ ನೋಡೋ ಪಾರ್ವತಿ ನಾನು ಮಾಡುದು ಮಾಡೀನಿ
ನಾನು ಮಾಡುದು ಮಾಡಿನಂತ ಪಾರ್ವತಿದೇವಿ ಅಂದಾಳ
ಆವಾಗ ನೋಡೋ ಪರಮೇಸೂರ ತಾನು ಮಾಡೂದಲ್ಲೇನ
ಬಾರಂಗ್ಬಾಯಿ ಒಳಗೇನಲ್ಲಾ ಕಾಳಿಂಗರಾಯ ಇದ್ದಾನಲ್ಲಾ
ಏಳುಹೆಡಿಯ ಕಾಳಿಂಗರಾಯನ ಪರಮೇಶ್ವರ ಕರದನಯ್ಯಾ
ಪರಮೇಶ್ವರನು ಕರದು ಹೇಳ್ಯಾನ ಕೂಸಿನ ಜೋಪಾನ ಮಾಡಂತ
ಏಳು ಹೆಡಿಯ ಕಾಳಿಂಗರಾಯಾ ಏನಂತಾನೋ ನಮ್ಮಯ್ಯ
ಮೂಗಂಡಗ ವಿಷವ ಕೊಟ್ಟೇದಿ ಶಿವನೆ ಹ್ಯಾಂಗ ಜೋಪಾನ ಮಾಡಲಿ
ಆವಾಗ ನೋಡೋ ಪರಮೇಸೂರ ಏನಂತಾನೋ ನಮ್ಮಯ್ಯ
ತೊಟ್ಟಲ ಕಟ್ಟಿದ ಕೊಲ್ಲೆಕೆಲ್ಲಾ ಜೇನ ಇಟ್ಟಾದಂದಾನೆ
ಜೇನು ಇಟ್ಟದಲ್ಲೋ ಕಾಳಿಂಗ ಕೂಸುಹಟಮಾಡಿ ಅತ್ತಾಗ
ಕೂಸುಹಟಮಡಿ ಅತ್ತಾಗ ಕಾಳಿಂಗ ಬಾಲಿಲೆ ತೂತ ಮಾಡಯ್ಯ
ಆವಾಗ ನೋಡೋ ಕಾಳಿಂಗರಾಯಾ ಗಿಡವ ಏರ್ಯಾನೇನಯ್ಯ
ಗಿಡವ ಏರ್ಯಾನಲ್ಲೋ ಶಿವನೆ ತೊಟ್ಟಲದೊಳಗೆ ಕುಂತಾನೋ

ಕೂಸು ಹಟಮಾಡಿ ಅತ್ತಾಗೆಲ್ಲಾ ಬಾಲಿಲೆ ತೂತ ಮಾಡ್ಯಾನೆ
ಜೇನ ತುಪ್ಪ ಉಂಡು ಬೆಳದ್ಯೋ ಹಬ್ಬಲಿ ಕೋಣಗನೂರವನೆ
ನಾಗೇಂದ್ರಯನ ಹೆಡಿ ತೆಳಗಾಡಿದ್ಯೋ ಗೂಳಿಕೋಣಗನೂರವನೆ
ನಾಗಕ್ಕಿ ನಾಗಗನ್ನೇರಪ್ಪ ನಾಗೇಂದ್ರಾಯನ ಮಕ್ಕಳೋ
ದೇವಕ್ಕಿ ದೇವಗನ್ನೇರಪ್ಪ ದೇವೇಂದ್ರಾಯನ ಮಕ್ಕಳೋ
ವಕ್ತನಿಲ್ಲದ ಬಾಲೇರಪ್ಪ ಮಲಿಮೂಗಿನಲ್ಲದ ಸೂಳೇರು
ಹಗಲಿ ಹಂಗನಬ್ಯಾಟಿ ಆಡವರು ಇಗಳಿಗಿಡಗನ ಬ್ಯಾಟಿ ಆಡವರು
ಕೊದಲಿನಂದನ ಬನದಾಗೆಲ್ಲಾ ಬ್ಯಾಟಿ ಆಡುತ ಹೊಂಟಾರ
ಕಡಿ ಹುಟ್ಟ ಹೆಣ್ಣು ಮಗಳು ಬಂದಮ್ಮ ಕಂದನ ಶಬ್ದ ಕೇಳ್ಯಾಳ
ಬನ್ನಿ ಬನ್ನಿ ಅಕ್ಕದೇರ್ಯಾ ಕೊದಲಿನಂದನ ಬನದಾಗ
ಕೊದಲಿ ನಂದನ ಬನದಾಗವ್ವ ಕಂದನ ಶಬ್ದ ಕೇಳ್ಯಾವ
ಏಳುಮಂದಿ ಹೆಣಮಕ್ಕಳೆಲ್ಲಾ ಕಿವಿಗೊಟ್ಟು ಕೇಳ್ಯಾರ
ಚಲಮಾರಿ ಹೌದೋ ಬೀರೈಲಿಂಗಾ ಸುಮ್ಮನಾಗೇನೇನಯ್ಯ
ಆರುಮಂದಿ ಹೆಣಮಕ್ಕಳೆಲ್ಲಾ ಏನಂತಾರೋ ನಮ್ಮಯ್ಯ
ಕೊದಲಿ ನಂದನ ಬನದಾಗವ್ವ ಹಕ್ಕಿ ಸುಳುವು ಇಲ್ಲೇನ
ಹಕ್ಕಿ ಸುಳವು ಇಲ್ಲ ಇಲ್ಲೆ ಪಕ್ಕಿ ಸುಳವು ಇಲ್ಲೇನ
ಮಂದಿ ಸುಳವು ಇಲ್ಲ ಇಲ್ಲೇ ಮಾನವರ ಸುಳುವು ಇಲ್ಲೇನ
ಮಂದಿ ಸುಳುವು ಇಲ್ಲದಲ್ಲೇ ಕಂದನ ಶಬ್ದ ಹ್ಯಾಂಗ ಆದಾವ
ಎಂಥಾ ಹಗಮಾಲಿ ಹೆಂಗಸುವ್ವ ನೀ ಏಂಥಾ ದಿಗಮಾಲಿ ಹೆಂಗಸವ್ವ
ಎಂಥಾ ದತ್ತೂರಿ ಹೆಂಗಸ ಏಳುಮಂದಿ ಅಲ್ಲೋ ಶಿವನೆ
ಆವಾಗ ನೋಡೋ ಬೀರೈಲಿಂಗಾ ಹಟಮಾಡಿ ಅತ್ತಾನೇನಯ್ಯಾ
ಕಡಿಹುಟ್ಟ ಹೆಣ್ಣುಮಗಳು ಕಿವಿಲೆ ಕೇಳ್ಯಾಳೇನವ್ವ
ಬರ್ರಿ ಬರ್ರಿ ಅಕ್ಕದೇರ್ಯಾ ಕೊದಲಿನಂದನ ಬನದಾಗ
ಕೊದಲಿನಂದನ ಬನದಾಗವ್ವ ಕಂದನ ಶಬ್ದ ಆದಾವ
ಏಳುಮಂದಿ ಹೆಣಮಕ್ಕಳೆಲ್ಲಾ ಕಿವಿಯಕೊಟ್ಟು ಕೇಳ್ಯಾರ
ಕಣ್ಣ ಮುಟ್ಟ ನೋಡ್ಯಾರಲ್ಲ ಕೂಸು ನಂದು ನಿಂದು ಅಂದಾರ
ನಂದು ನಿಂದು ಅಂದಾರಲ್ಲಾ ಹಿರಿಯ ಅಕ್ಕನು ನಮ್ಮಯ್ಯ
ಹಾಲ ಹರದ ಮಾಯವ್ವ ಸಮಾಜ ಹೇಳ್ಯಾಳೇನಯ್ಯ
ವಕ್ತನಿಲ್ಲದ ಬಾಲೇರವ್ವ ನಾವುಮಲಿಮೂಗಿಲ್ಲದ ಬಾಲೇರ
ನಾವ್ಯಾಕ ಮುಂದ ಹೋಗತೀವವ್ವ ಅವರದು ಕೂಸೇಳಂದಾಳ
ಕಡಿಹುಟ್ಟ ಹೆಣ್ಣುಮಗಳು ಬಂದಮ್ಮ ಕಾಲಿಲೆ ಚಮತ ಇದ್ದಾಳ
ಕಾಲಿಲೆ ಚಮತ ಇದ್ದಾಳಲ್ಲಾ ಅವಸರಲೆ ಮುಂದಕ ಹೋಗ್ಯಾಳಲ್ಲಾ
ಅವಸರಲೆ ಮುಂದಕ ಹೋಗ್ಯಾಳಲ್ಲಾ ಗಿಡವ ತೆಕ್ಕಿಲೆ ಹಿಡದಾಳಲ್ಲಾ
ಗಿಡವ ತೆಕ್ಕಿಲೆ ಹಿಡದಾಳಲ್ಲಾ ಮ್ಯಾಲಕೇರ್ಯಾಳೇನಯ್ಯ
ಮ್ಯಾಲಕೇರ್ಯಾಳಲ್ಲೋ ಶಿವನೆ ತೊಟ್ಟಲ ಹಂತ್ಯಾಕ ಹೋಗ್ಯಾಳಲ್ಲಾ
ಏಳು ಹೆಡಿ ಕಾಳಿಂಗರಾಯಾ ದುಮ್ಮಡಿಸಿ ಮೈಮ್ಯಾಲ ಬಂದಾನ

ಕಡಿಹುಟ್ಟ ಹೆಣ್ಣು ಮಗಳು ಬಂದಮ್ಮ ಜೀವಕ ಹೆದರ್ಯಾಳೇನಯ್ಯ
ಜೀವಕ ಹೆದರ್ಯಾಳಲೋ ಶಿವನೆ ಗಿಡವ ಇಳದಾಳೇನಯ್ಯ
ಆವಾಗ ನೋಡೋ ಹಿರಿಯ ಅಕ್ಕಾ ಏನಂತಾಳೋ ನಮ್ಮಯ್ಯ
ಆರುಮಂದಿ ತಂಗೀದೇರಿಗೆ ಸಕಾಜ ಹೇಳತಾಳೇಳಯ್ಯ
ವಗತನ ಇಲ್ಲದ ಬಾಲೆರವ್ವ ನಾವು ಮಲಿಮೂಗು ಇಲ್ಲ ಸಂಗಡೇರು
ಪಟ್ಟಣಕ ಪತಿಗರ್ತೆರು ಏಳುಮಂದಿ ಅಲ್ಲೇಳವ್ವ ಸಾಲ ನಿಂದ್ರೊಣಂದಾಳ
ಆವಾಗ ನೋಡೋ ಹಿರಿಯ ಅಕ್ಕ ಏನಂತಾಳೋ ನಮ್ಮಯ್ಯ
ಐದು ಸುತ್ತು ಅಲ್ಲೇಳವ್ವ ಗಿಡಕ ಪರದಕ್ಷಿಣಿ ಹಾಕೂನ
ಐದು ಸುತ್ತ ಸುತ್ತರಿಯುವದರೊಳಗ ಮಲಿಯ ಮೂಗು ಚಿಗಿಬೇಕ
ಮಲಿಯ ಮೂಗು ಚಿಗತೇನವ್ವ ತೊಟ್ಟಲಕ ಹಾಲು ಚಿಮ್ಮಬೇಕ
ತೊಟ್ಟಲಕ ಹಾಲು ಚಿಮ್ಮಿದರೇಳೆ ಅವರದು ಕೂಸು ಅಂದಾಳೆ
ಏಳುಮಂದಿ ಅಲ್ಲೋ ಶಿವನೆ ಗಿಡವನ್ನು ಸುತ್ತುವರಿದಾರೆ
ಹಿರಿಯ ಅಕ್ಕಗಲ್ಲೋ ಶಿವನೆ ಮಲಿಯ ಮೂಗು ಚಿಗತಾವ
ಕಣ್ಣಿಗಿ ಕಾಡಿಗಿ ಆಗೆದಲ್ಲಾ ಬೆನ್ನಿಗರಿಸಿಣ ಆಗೇದ
ಬೆನ್ನಿಗರಿಸಿಣಾಗೇದಲ್ಲ ಹಣಿಗೆ ಕೂಕಮ ಆಗೇದ
ಹಣಿಗೆ ಕೂಕಮ ಆಗೆದಲ್ಲ ತೊಟ್ಟಲಕ ಹಾಲು ಚಿಮ್ಮ್ಯಾವೆ
ಹಾಲಹರದ ಹರಮಾಯವ್ವ ಗಿಡವ ತೆಕ್ಕಿಲಿ ಹಿಡದಾಳ
ಗಿಡವ ತೆಕ್ಕಿಲಿ ಹಿಡದಾಳೆಲ್ಲ ಮ್ಯಾಲಕೇರ್ಯಾಳೇನಯ್ಯ
ಏಳ್ಹೆಡಿ ಕಾಳಿಂಗರಾಯಾ ದುಮ್ಮಸಿ ಮೈಮ್ಯಾಲ ಬಂದಾನ
ದುಮ್ಮಸಿ ಮೈಮಾಲ ಬಂದರ ಕಾಳಿಂಗ ಕೂಸುನಂದ ಆದಾನಪ್ಪ
ಕೂಸು ನಿಂದು ಇದ್ದರವ್ವ ನಾನು ಜ್ವಾಕಿ ಮಾಡತೀನಿ
ನೀನು ಜ್ವಾಕಿ ಮಾಡಿದರಪ್ಪ ನಿನಗ ಚಾಚಾ ಕೊಟ್ಟೇನ
ನನಗ ಜಾಜಾ ಅಲ್ಲೇಳವ್ವ ನೀಯೇನ ಕೊಡತೀದಂದಾನೆ
ನಾಡ ಮ್ಯಾಲ ಅಲ್ಲೋ ಕಾಳಿಂಗಾ ನಾಗೂರ ಜಾತುರಿ ಅನಸೇನ

ಅತ್ತಿ ಮನಿಯ ಸೊಸಿಯರನೆಲ್ಲ ತವರ ಮನಿಗೆ ಕರಿಸೇನ
ತವರ ಮನಿಗೆ ಕರಿಸೇನ ಕಾಳಿಂಗಾ ಬರಿಗಾಲೊಂದ ತಿದ್ದೇನ
ಬರಿಗಾಲೊಂದ ತಿದ್ದೇನ ಕಾಳಿಂಗಾ ಬೆಲ್ಲದ ಹಾಲ ಎರದೇನ
ಬಿಲ್ಲದ ಹಾಲ ಎರದೇನ ಕಾಳಿಂಗಾ ಬಿಳಿಯ ಹಾಲಾ ಎರದೇನ
ಏಳು ಹೆಡಿಯ ಕಾಳಿಂಗರಾಯಾ ಚಾಜಾ ಗೆದ್ದಾನೇನಯ್ಯ
ಹಾಲಹರದ ಹರಮಾಯವ್ವ ಚಾಜಾ ಕೊಟ್ಟಾಳೇನಯ್ಯ
ನಾಗರ ಪಂಚಮಿ ಅಂಬೂದು ಅಂದಿಗ್ಹುಟ್ಟಿತೋ ನಮ್ಮಯ್ಯ
ಹಾಲ ಹರದ ಹರಮಾಯವ್ವ ತೊಟ್ಟಲುಚ್ಚ್ಯಾಳೇನಯ್ಯ
ತೊಟ್ಟಲುಚ್ಚ್ಯಾಳಲ್ಲೋ ಶಿವನೆ ಗಿಡದ ಇಳದಾಳೇನಯ್ಯ
ಗಿಡವ ಇಳದಾಳಲ್ಲೋ ಶಿವನೆ ಆರುಮಂದಿ ತಂಗಿದೇರಿಗೆ
ಆರುಮಂದಿ ತಂಗಿದೇವರಿಗೆ ಸಮಾಜ ಹೇಳತಾಳೇನಯ್ಯ

ಏಳುಮಂದಿಗಲ್ಲೇಳವ್ವ ತಮ್ಮ ಅಂದರ ಇವನೇನ
ತಮ್ಮ ಅಂದರ ಇವನೇನವ್ವ ತವರು ಅಂದರ ಇವನೇನ
ತಂದಿ ಅಂದರ ಇವನೇನವ್ವ ತಾಯಿ ಅಂದರ ಇವನೇನ
ಆರುಮಂದಿ ತಂಗಿದೇರಿಗೆ ಸಮಾಜ ಹೇಳ್ಯಾಳೇನಯ್ಯ
ಚತ್ರೇರ ಕುಲದವ ದೇವರಲ್ಲಾ ಮಿತ್ರೇರ ಕುಲದಕಿ ಅಕ್ಕವ್ವ
ಕೂಡಬಾರದ ಕೂಡ್ಯಾರಪ್ಪಿವರು ಕೊದಲಿನಂದನ ಬನದಾಗ
ಏಳುಮಂದಿ ಹೆಣ್ಣುಮಕ್ಕಳಿವರು ತೊಟ್ಟಲ್ಹೊತ್ತಾರೇನಯ್ಯ
ತೊಟ್ಟಿಲ್ಹೊತ್ತಾರೋ ಶಿವನೆ ಬಾರಂಗ್ಬಾಯಿ ಬಿಟ್ಟಾರ
ಬಾರಂಗ್ಬಾಯಿ ಬಿಟ್ಟಾರಲ್ಲಾ ಮುಂದಕ ಹೋಗ್ಯಾರೇನಯ್ಯ
ಕದ್ನರೆಂಬುವ ಕದನರಲ್ಲಾ ಮದ್ನರೆಂಬುವ ಮಡಾವನಲ್ಲಾ
ಮದ್ನ ಎಂಬುವ ಮಡುವಿನಲ್ಲಿ ಹುಲ ಜೋಪಡಿ ಹಾಕ್ಯಾರ
ಹುಲ್ಲ ಜೋಪಡಿ ಹಾಕ್ಯಾರವರು ಒಳಗ ತೊಟ್ಟಲ ಕಟ್ಟ್ಯಾರ
ಒಳಗ ತೊಟ್ಟಲ ಕಟ್ಟ್ಯಾರವರು ಅಲಿಗೊಂದ ವಸ್ತಿಮಾಡ್ಯಾರ
ಮುಂಜಾನೆ ಎದ್ದಾಳ ಮಾಯವ್ವ ಆರುಮಂದಿ ತಂಗಿದೇರಿಗೆ
ಆರುಮಂದಿ ತಂಗಿದೇರಿಗೆ ಸಮಾಜ ಹೇಳತಾಳೇನಯ್ಯ
ಆರುಮಂದಿ ಅಲ್ಲೇಳವ್ವ ನೀವು ಬ್ಯಾಟಿಗ್ಹೋಗಿ ಬರುದ್ರಾಗ
ಬ್ಯಾಟಿಗ್ಹೋಗಿ ಬರೂದರೊಳಗ ಅಡಗಿ ಮಾಡತೀನಂದಾಳ
ಕೂಸಿನ ಹಂತಿಲೆ ಇದ್ದಂಗಾಗತದ ಅಡಗಿ ಮಾಡತೀನಂದಾಳ
ಆರುಮಂದಿ ತಂಗಿದೇರು ಅಕ್ಕನ ಮಾತು ಕೇಳ್ಯಾರ
ಅಕ್ಕನ ಮಾತ ಕೇಳ್ಯಾರವರು ಬ್ಯಾಟಿಗೆ ಹೋಗ್ಯಾರೇನಯ್ಯ
ಆಗ ಬಿತ್ತಿ ಆಗ ಬೆಳೆಯುವ ಬೀಜ ಅವರ ಹಂತೀಲಿದ್ದಾವ
ಅವರ ಹಂತೀಲಿದ್ದಾಗ ಮಾಯವ್ವ ಮಡಿಯ ಮಾಡ್ಯಾಳೇನಯ್ಯ
ಬೀಜ ಚಲ್ಲ್ಯಾಳಲ್ಲೋ ಶಿವನೆ ಒಮ್ಮೆ ನೀರ ಹಾಕ್ಯಾಳೇನಯ್ಯ
ಒಮ್ಮೆ ನೀರ ಹಾಕಿದರಲ್ಲ ಬೆಳೆಯು ಆಗ್ಯಾವೇನಯ್ಯ
ಮತ್ತೊಮ್ಮೆ ನೀರ ಹಾಕಿದ ರಾಗ ಹೊಡಿಯ ತೆನೆಗೆ ಬಂದಾವೆ
ಮತ್ತೊಂದು ನೀರಿಗೆ ಕೊಯ್ದು ರಾಸಿ ಮಾಡ್ಯಾರೆ
ಕೊಯ್ದು ರಾಸಿ ಮಾಡ್ಯಾಳಲ್ಲಾ ಬೀಸಿ ಅಡಗಿ ಮಾಡ್ಯಾಳ
ಬೀಸಿ ಅಡಗಿ ಮಾಡ್ಯಾಳಲ್ಲಾ ತಂಗಿದೇರಿಗೋ ನಮ್ಮಯ್ಯ
ತಂಗಿದೇರು ಬರೂದರೊಳಗ ಜಳಕಕ ನೀರ ಇಟ್ಟಾಳ
ಆರುಮದಿ ತಂಗಿದೇರು ಬ್ಯಾಟಿ ಆಡ್ಯಾರೇನಯ್ಯ
ಹಾರು ಹಕ್ಕಿ ಹೊಡದಾರಲ್ಲವರು ಹಾರು ಗಿಡಗ ಹೊಡದಾರ
ಹುಲಿ ಹೊಡದಾರಲ್ಲೊ ಶಿವನೆ ಕರಡಿ ಹೊಡದಾರೇನಯ್ಯ
ಸಾರಂಗ ಹೊಡದಾರ ಸಾರಂಗನ ಕೋಡು ಮೆಟ್ಟ್ಯಾರ
ಸಾರಂಗನ ಕೋಡು ಮೆಟ್ಟಿ ಸಾವಿರ ಮಿಕವ ಹೊಡದಾರ
ಬ್ಯಾಸಿಗಿ ಬಿಸಲು ವಸಂತಕಾಲೋ ಬ್ಯಾಟಿ ಆಡ್ಯೋ ನಮ್ಮಯ್ಯ
ಬ್ಯಾಟಿ ಆಡಿ ಅಲ್ಲೋ ಶಿವನೆ ಬಾಳ ಬ್ಯಾಸರಗೊಂಡಾರ

ಬಾಳ ಬ್ಯಾಸರಗೊಂಡಾರಲ್ಲವರು ಗಿಡದ ನೆರಳಿಗೆ ಕೂತಾರ
ಗಿಡದ ನೆರಳಿಗೆ ಕುಳಿತು ಏನಂತಾರೋ ನಮ್ಮಯ್ಯ
ಅದೇ ಕೂಸಿನ ದಸಿಂದಲ್ಲ ಅಕ್ಕ ಒತ್ತಟ್ಯಾದಾಳ
ಅಕ್ಕ ಒತ್ತಟ್ಯಾದಳಲ್ಲ ನಾವು ಒತ್ತಟ್ಯಾದೇವ
ಅಕ್ಕ ಏನಾದರೇನ ನಮಗ ಎನು ತಿಳಿಬೇಕ
ನಮ್ಮಗ ಏನಾದರ ಅಕ್ಕಗ್ಯಾಂಗ ತಿಳಿಬೇಕ
ಅದೆ ಕೂಸಿನ್ನೊಡದರಲ್ಲ ಅಕ್ಕ ನಮ್ಮಗೂಡ ಬಂದಾಳಲ್ಲ
ಇಂದಿನ ರಾತ್ರಿ ಅಲ್ಲೋ ಶಿವನೆ ಅಕ್ಕಗ ನಿದ್ರಿ ಹತ್ತಿದಾಗ
ಅಕ್ಕಗ ನಿದ್ದಿ ಹತ್ತಿದಾಗಲ್ಲ ಕೂಸಿನ ಕುತ್ತಿಗೆ ಹಿಚಗೂನ
ಕೂಸಿನ ಕುತ್ತಿಗಿ ಹಿಚಗಿದರಲ್ಲ ನಮ್ಮ ಕೂಡ ಬರತಾಳ
ಇಂಥ ಮಾತ ಮನಸಿನಾಗ ಮಾಡಿ ಗುಡಸಲಕ ಬಂದಾರೇನಯ್ಯ
ಹಾಲಹರದ ಹರಮಾಯವ್ವ ನೀರ ಕಾಸ್ಯಾಳೇನಯ್ಯ
ಅಡಗಿ ಮಾಡ್ಯಾಳಲ್ಲೋ ಶಿವನೆ ನೀರ ಕಾಸ್ಯಾಳೇನಯ್ಯ
ಬ್ಯಾಟಿ ಆಡಿ ದಣಿದು ಬಂದಿರಂತ ಕೈಕಾಲು ಒತ್ಯಾಳೇನಯ್ಯ
ಕಾಲು ಒತ್ಯಾಳೇನಯ್ಯ ಶಿವನೆ ನೀರ ಹಾಕ್ಯಾಳೇನಯ್ಯ
ಮೈಯ ಕೈಯ ಒತ್ಯಾಳಯ್ಯಾ ಜಳಕ ಮಾಡಿಸ್ಯಾಳೇನಯ್ಯ
ಜಳಕ ಮಾಡಿಸ್ಯಾಳೇನೊ ಶಿವನೆ ಉಣ್ಣಾಕ ನೀಡ್ಯಾಳೇನಯ್ಯ
ಊಟಾ ಮಾಡಿಸ್ಯಾಳೇನಯ್ಯ ಹಾಸಿ ಹೊಚ್ಚಿ ಮಲಿಗಿಸ್ಯಾಳ
ದಣದ ಬಂದ ನಾರೇರೆಲ್ಲ ಮಲಗಿಕೊಂಡಾರೇನಯ್ಯ
ಸಿದ್ಧ ಹೌದೋ ಬೀರೈಲಿಂಗಾ ಒಡನುಡಿದು ಮಾತಾಡ್ಯಾನೋ
ಇಂದಿನ ದಿನವು ಅಲ್ಲೇಳವ್ವ ಇಲ್ಲಿ ಇದ್ದರ ನಮ್ಮಯ್ಯ
ನಿಮ್ಮ ತಂಗಿದೇರೇಳವ್ವ ನನ್ನ ಜೀವಾ ಹೊಡದಾರ
ನನ್ನ ಜೀವ ಹೊಡದಾರವ್ವ ಜಾಗಾ ಬಿಡಬೇಕಂದಾನ
ಹಾಲ ಹರದ ಹರಮಾಯವ್ವಾ ತೊಟ್ಟಲ ಹೊತ್ತಾಳೇನಯ್ಯ
ತೊಟ್ಟಿಲ್ಹೊತ್ತಾಳಲ್ಲೋ ಶಿವನೆ ನಾಗರ ಬಟ್ಟಕ ಬಂದಾಳೋ
ಹಾಲ ಹರದ ಹರಮಾಯವ್ವಾ ದುಃಖ ಮಾಡ್ಯಾಳೇನಯ್ಯ
ಮೂಡಲ ನಾಡಾ ಬಿಟ್ಟಾಳ ಮಾಯವ್ವ ಪಡುವಲ ನಾಡಿಗೆ ಬಂದಾಳ
ಕೊದಲಿ ನಂದನ ಬನವ ಬಿಟ್ಟಾಳ ಬ್ಯಾರೆ ಆರಣ್ಯಾಕ ಬಂದಾಳ

**ಗಣಪಸ್ತುತಿ**

ಸಿದ್ಧಿ ವಿನಾಯಕ ಬುದ್ಧಿ ಪ್ರದಾಯಕ
ಸ್ತುತಿ ಮಾಡುವೆ ನಾ ನಿನ್ನ ಪಾದಾ
ಭಜಿಸುವೆ ನಿನ್ನ ಏಕೋಭಾವದಿಂದ
ಸಭಾದಾಗ ಕಾಯೊ ಮಾನವನಾ

ಪಾರ್ವತಿದೇವಿಯ ಮುಂದಿರು ಕಂದಾ
ಸರ್ವರಿಗೂ ಮಾಡುವೆ ಆನಂದಾ
ಸುರನ ಕೊರಳಾಗ ಚರಣಾರವಿಂದ
ದಿವಸರಾತ್ರಿ ಹೊಗಳುವೆ ಮುದದಿಂದ

ಚಂದ ಗಂಧದ ಅಕ್ಷತೆಯಿಂದ
ನಿನ ಕೊರಳಿಗೆ ಹಚ್ಚುವೆ ಮುದದಿಂದ
ಚಂದ ಚದದ ಹೂಗಳಿಂದ
ಪೂಜೆಯ ಮಾಡುವೆ ಪ್ರೀತಿಲಿಂದ

ಸಭಾದಾಗ ನಿನ್ನ ಆಧಾರದಿಂದ
ಪದಗಳ ಹಾಡುವೆ ಮುದದಿಂದ
ಪ್ರಸನ್ನಾಗೊ ತರಿದೆ ನೀ ಬಂದ
ಹರುಷ ಆಗುವೆ ನಿನ ಕಂದ

ಹಾಲಿಕಟ್ಟಿ ಕುರಬರ ಓಣಿಯಿಂದ
ಕರೆಪ್ಪ ಮಾಡಿದ ಕವಿ ಚಂದ
ರೇವಣಸಿದ್ಧನ ಪ್ರೇರಣೆಯಿಂದ
ಹರುಷದಿ ಮಾಡುವೆ ನಿಮ್ಮ ಮುಂದ

*** ಜೀವನ ಜೋಕಾಲಿ ; ಭಾಗ – ೭ ಡೊಳ್ಳಿನ ಹಾಡು ಸಂ|| ಡಾ. ಎಂ.ಎಸ್. ಸುಂಕಾಪುರ ಕನ್ನಡ ಅಧ್ಯಯನ ಪೀಠ, ಧಾರವಾಡ – ೧೯೭೭.**

**ಸ್ತುತಿಪದ**

ಸ್ವಾಮಿ ನಮ್ಮಯ ಬಂದಾವು ಬನ್ನಿರೇ ||
ನಿದ್ರೆ ಹೊತ್ತಿನ್ಯಾಗ ನಿಜರೂಪ ತೋರಿಸಿ ಎಬ್ಬಿಸಿ ಪದಗಳ ಹಾಡಂದ
ಯಾರ ಹಾಡಲೋ ಯಾರನು ಬಿಡಲೋ ಯಾರಿಗ್ಹೇಳಿ ಶರಣೆನ್ನಲಿ
ಯಾರಿಗೇಳಿ ಶರಣೆನ್ನಲಿ ಸ್ವಾಮಿ ನಮ್ಮ ಹಾಲುಮತದ ಗುರುವೀಗೆ,
ಮೊದಲು ಗುರುವಿಗೆ ಸ್ಮರಣೆಯ ತಗದು ಸರುವರಿಗೆ ಮಾಡುವೆ ನಮ್ಮ ಶರಣ
ಬಿದ್ರು ಕೈ ತಳಡೊಳ್ಳಿಗೆ ಮೊದಲಿಗೆ ಗುರುಹಿರಿಯರಿಗೆ ಮಾಡುವೆ ಶರಣ
ವೀರಂಕಾರಿ ನಿರಹಂಕಾರಿ ಆದಿಮೂರ್ತಿಗೆ ನಮ್ಮ ಶರಣ
ನೀರ ಲಾಭವ ನುಸಲವೋವಂತ ಬಸವಣ್ಣಗೆ ಮಾಡುವೆ ನಮ್ಮ ಶರಣ
ಪೂರ್ವ ಪಶ್ಚಿಮ ಉತ್ತರ ದಕ್ಷಿಣ ಮೂಡಿ ಬರುವ ಸೂರ್ಯಗೆ ನಮ್ಮ ಶರಣ
ರಾತ್ರಿ ಕಾಲದಲ್ಲಿ ಬೆಳಕು ನಡೆಸುವಂತ ಚಂದ್ರಗೆ ಮಾಡುವೆ ನಮ್ಮ ಶರಣ
ಇಂದ್ರ ಚಂದ್ರ ದೇವೇಂದ್ರ ಲೋಕಕೆ ಬಂದ ಸಭಿಕರಿಗೆ ಮಾಡ್ವೆ ನಮ್ಮ ಶರಣ

**ಸದರಿಗೆ ಸಲಾಮು ಕೊಟ್ಟೇವು**

ಸ್ವಾಮಿ ನಮ್ಮಯ ದೇವಾರು ಬಂದಾವ ಬನ್ನಿರೆ
ಬಂದೆವೊ ಬಲಗೊಂದೇವೋ ಬಂದು ನಿನ ಬಾಗಿಲಿಗೊಂದೇವೋ
ಬಂದು ನಿನ ಬಾಗಿಲಿಗೊಂದೇವವ್ವ ಬಂಗಾರದೊಂದು ಕದಗಳು
ಬಂಗಾರದೊಂದು ಕದಗಳು ತಗಿಯವ್ವ ಶೃಂಗಾರನೆಲ್ಲ ನೋಡೇವು
ಶೃಂಗಾರನೆಲ್ಲ ನೋಡೇವು ತಾಯಿ ಎಂಥೆಂಥ ಮಂಚ ನೋಡೇವು
ಎಂಥೆಂಥ ಮಂಚ ನೋಡೇವು ತಾಯಿ ಬೆಳ್ಳಿಯ ಸೆಳಿಮಂಚವೆ
ಬೆಳ್ಳಿಯ ಸೆಳಿಮಂಚದ ಮೇಲೆ ಎಂಥಪ್ಪ ಶರಣರೈದಾರೆ
ಎಂಥಪ್ಪ ಶರಣರೈದಾರಲ್ಲ ಬೆಳ್ಳಿಬೆತ್ತದ ದೊರಿಮಗಳೆ
ಬೆಳ್ಳಿ ಬೆತ್ತದ ದೊರಿಮಗಳ ಕುಂತ್ಹಾಡು ಕೇಳೆನಂದಾಳ
ಹಾಡು ಕೇಳೆನಂದಾಳ ಸೊಲ್ಲವ್ವ ಹಾದಿಗೆ ಅಡ್ಡ ಬಂದಾಳ

**ಪಲ್ಲವಿ**

ಶಿವ ಶಂಕರೇಶ ಓಂ ನಮಃ ಶಿವಾಯ
ಮರಿಯಲಾರೆ ನಿಮ್ಮ ಧ್ಯಾನ ಓಂ ನಮಃ ಶಿವಾಯ ||೧||

ಹಗಲಿ ಇರುಳು ನಿಮ್ಮ ಧ್ಯಾನ ಓಂ ನಮಃ ಶಿವಾಯ
ಮನದ ಮುತ್ತು ಸುರಿಸುವಾಯ್ತು ಓಂ ನಮಃ ಶಿವಾಯ ||೨||

ನೀರ ಒಳಗೆ ಬೇರು ಬಿಟ್ಟು ಓಂ ನಮಃ ಶಿವಾಯ
ಬೇರಿನೊಳಗೆ ಸಸಿಯನಾಟಿ ಓಂ ನಮಃ ಶಿವಾಯ ||೩||

ನೂರಾಒಂದು ಟೊಂಗಿ ಚಿಗಿತು ಓಂ ನಮಃ ಶಿವಾಯ
ಹೂವು ಕಾಯಿ ಸುರಿಸುವಾಯಿತು ಓಂ ನಮಃ ಶಿವಾಯ ||೪||

ಕಂತು ಹರನ ತಂತ್ರ ತಿಳಿಯದು ಓಂ ನಮಃ ಶಿವಾಯ
ಚಿಂತಿಸುವದು ದೇಹದೊಳು ಓಂ ನಮಃ ಶಿವಾಯ ||೫||

ಪ್ರಾಂತ ಹುಬ್ಬಳ್ಳಿಯೊಳಗ ಇರುವ ಓಂ ನಮಃ ಶಿವಾಯ
ಶಾಂತ ಆರೂಢಸ್ವಾಮಿಗೆ ಓಂ ನಮಃ ಶಿವಾಯ ||೬||

ಓಂ ನಮಃ ಶಿವಯ ಎಂಬು ಅಕ್ಷರ ಬರಿ ಬರಿದು
ವಹಿತುಂಬಿ ಓಂ ನಮಃ ಶಿವಾಯ ||೭||

**ದೇವತಾ ಸ್ತುತಿ**

ಮಂದಮತಿಯು ನಿಮ್ಮ ಕಂದನು ನಾನು
ವಂದಿಸಿ ಸಭಾದೊಳು ನಿಂತಿಹೆ ನಾ |

ಕಂದುಗೊರಳಿನ ಇಂದುಶೇಖರಗ
ಚಂದದಿ ವಂದನೆ ಮಾಡುವೆ ನಾ
ಚಂದದಿ ವಂದನೆ ಮಾಡುವೆ ನಾನಾ
ಏನು ತಿಳಿಯದಾ ಬಾಲಕನಾ

ಏಕದಂತನನು ಆತಂಕವಿಲ್ಲದೆ
ಏಕಾಂತದಲಿ ಬಂದು ನೆನೆಯುವೆನು
ಏಕಾಂತದಲಿ ಬಂದು ನೆನೆಯುವೆ ನಾನಾ
ಆತಂಕ ದೂರಮಾಡೊ ನೀನಾ

ಸಾನುರಾಗದಿ ಸರಸೋತಿ ತಾಯಿಗೆ
ಶಿರಬಾಗಿ ವಂದನೆ ಮಾಡುವೆ ನಾ
ಶಿರಬಾಗಿ ವಂದನೆ ಮಾಡುವೆ ನಾನಾ
ಸಭಾದಾಗ ಕಾಯೊ ಮಾನವನಾ

ಭಾಸುರಾಂಗ ಬೀರಲಿಂಗ ನಿನ್ನನು
ಅಂಗಾಂಗದಲಿ ಬಂದು ನೆನೆಯುವೆನು
ಅಂಗಾಂಗದಲಿ ಬಂದು ನೆನೆಯುವೆ ನಾನು
ಇಂಗದ ಮತಿಯ ಕೊಡೊ ನೀನಾ

ರೇವಣಸಿದ್ಧನೆಂಬ ಸಿದ್ಧಿ ಪಡೆದಂತಾ
ಮರುಳಸಿದ್ಧನೆಂಬ ಗುರುವರನೊ
ಮರುಳಸಿದ್ಧನೆಂಬ ಗುರುವರನೊ
ಹಾಲುಮತಕೆಲ್ಲ ಹಿರಿಯವನೊ

ಗುರುವೆ ನಿನ್ನಯ ಚರಣಕೆ ನಾನು
ಶಿರಬಾಗಿ ವಂದನೆ ಮಾಡುವೆನು
ಶಿರಬಾಗಿ ವಂದನೆ ಮಾಡುವೆ ನಾನು
ಕರುಣದಿ ಹರಕೆಯ ಬೇಡುವೆನು

ಕಲ್ಪನೆ ಇಲ್ಲದ ಅಲ್ಪಮತಿಯೆಂದು
ಸ್ವಲ್ಪ ಸೇವೆಯ ಮಾಡುವೆ ನಾನು
ಸ್ವಲ್ಪ ಸೇವೆಯ ಮಾಡುವೆ ನಾನು
ಅಪ್ಪಿಕೊಳ್ಳಿರಿ ನಿಮ್ಮ ಕಂದನನು

ಹೂಲಿಕಟ್ಟಿ ಊರಾ ಮೋಜಿನ ಶಾರಾ
ಸುತ್ತು ಕಡೆ ಇರುವದು ಜಾಹಿರಾ
ಸುತ್ತು ಕಡೆ ಇರುವದು ಜಾಹಿರಾ
ಅದರಾಗ ಕುರುಬರೋಣಿಯ ಹೆಸರಾ

ಒಳ್ಳೆರೀತಿಯಿಂದ ಕಸರು ಇಲ್ಲದೆ
ಎಲ್ಲ ಪದಗಳ ಮಾಡುವರಾ
ಎಲ್ಲ ಪದಗಳ ಮಾಡುವರವರಿಗೆ
ರೇವಣಸಿದ್ಧನ ದಯಾ ಪೂರಾ™

**ಗುರುಹಿರಿಯರ ಸ್ತುತಿ**

ಮೊದಲಿಗೆ ಗುರುವಿನ ಸ್ಮರಣೆಯ ಮಾಡಿ ಸರ್ವರಿಗೆ ಮಾಡುವೆ ಶರಣಾ
ತಾಳ ಕೈಪಿಡಿ ಡೊಳ್ಳು ಮೊದಲುಮಾಡಿ ಗುರು ಹಿರಿಯರಿಗೆ ನಮ್ಮ ಶರಣಾ
ಅಂದ ಚಂದ ದೇವೇಂದ್ರ ಲೋಕಕ ಬಂದ ಸಭೆಗೆ ಮಾಡುವೆ ಶರಣಾ
ಪೂರ್ವ ಪಶ್ಚಿಮ ಉತ್ತರ ದಕ್ಷಿಣ ಮೂಡಿ ಬರುವ ಸೂರ್ಯಗ ಶರಣಾ
ರಾತ್ರಿಕಾಲದೊಳು ಬೆಳಕ ನಡಿಸುವಂಥ ಚಂದ್ರಮಗ ಮಾಡುವೆ ಶರಣಾ
ಅರ್ಧಾಂಗಿ ಪಾರ್ವತೀಪಾದವ ನಂಬೇನಿ ನೀಲಕಂಠ ಭೂಮಿಗೆ ಶರಣಾ
ಹರುಷದಿಂದ ಹನುಮಂತ ದೇವರಿಗೆ ಮುಜರಿಕೊಟ್ಟು ಮಾಡುವೆ ಶರಣಾ
ಸಣ್ಣವನಾಗಿ ನಾ ಬಂದಷ್ಟ ಹೇಳತೇನಿ ತಂದಿತಾಯಿಗೆ ಮಾಡುವೆ ಶರಣಾ
ಗದ್ದಲಮಾಡದೆ ಕೇಳಬೇಕಂತ ಸರ್ವರಿಗೆ ಮಾಡುವೆ ಶರಣಾ
ಬಗ್ಗಿ ಬಾಗಿಲ ಹೊಂದೇನಿ ಬೀರಪ್ಪ ನಿಮಗ ಶರಣವ ಮಾಡುವೆನೋ
ಇಲ್ಲಿಗೆ ಒಂದು ಸಂದೇಶ ಗುರುವೆ ಹಾಡಿದವರ ಪದ ಮುಂದ್ಕೇಳೋ

**ಬಲ್ಲವರ ಸ್ತುತಿ**

ಗುರುಹಿರಿಯರಿಗೆ ಶರಣು ಮಾಡುವೆನು ಕರುಣದಿಂದ ಕೇಳರಿ ಕುಂತಾ
ಮರಣರಹಿತ ಮಹಾದೇವನ ಭಜಿಸುತ ಹೇಳುವೆ ಮುಂದಿನ ವೃತ್ತಾಂತ
ಚರಣ ಪ್ರಾಸ ಗಣ ವರ್ಣ ಕೂಡಿದರ ಕವಿತೆ ಆಗುವದು ರಸಭರಿತ
ಕವಿತೆ ಆಗುವದು ರಸಭರಿತಾ ವಿದ್ವಾನರಾಗುವರು ಸನಮಂತಾ
ಕುರುಬರ್ಡಾಡಂತ ಅಲ್ಲಗಳೆಯದೆ ಪ್ರೇಮದಿಂದ ಇರಬೇಕ ಚಿತ್ತ
ಯಾತರ ಹಾಡಂತ ಏಳ ಬ್ಯಾಡರಿ ಸೆರಗ ಒಡ್ಡಿ ಬೇಡುವೆ ನಿಂತಾ
ಹಾಳರಗಳಿ ಹಾಡುವುದಿಲ್ಲ ಪುರಾಣದೊಳಗಿನ ಸವಿಮಾತಾ
ಸವಿಮಾತಾ ಸರಸಾಗಿ ಹೇಳತೀನಿ ಹರುಷದಿಂದ ಕೇಳರಿ ಕುಂತ
ಸತ್ಯ ಸದಾಚಾರ ಭಕ್ತಿ ಸದ್ಗುಣ ಪೂರ್ತಿಯಾದ ನಮ್ಮ ಹಾಲಮತಾ
ಅನಾಚಾರದಿಂದ ಅಡವಿಯ ಕೂಡಿದರ ಹಿಡಿಯಲಿಲ್ಲ ಧರ್ಮದ ಗುರುತಾ

ಹೆಂಡ ಕುಡಿದರೋ ಕಂಡ ತಿಂದರೋ ಭಂಡರಾದಾರೋ ಬರಬರತಾ
ಮದ್ಯಪಾನ ಮಾಡಿ ಮೆರದಾಡಿ ಉರದಾಡಿ ನರಜಲ್ಮ ಕಳದೇವೊ ವ್ಯರ್ಥ
ಮೊದಲಿನ ಕುರುಬರು ಕಂಬಳಿ ಬೀಸಲು ಮಳೆ ಬರುವದು ಖಂಡಿತಾ
ನೂರು ವರುಷ ಅತ್ತ ಕಡೆಗೆ ಹಾಂಗ ಇತ್ತು ಹಿಂದೆ ಆಗಿ ಹೋದ ಹಳೆ ಮಾತಾ
ನಿಷ್ಠೆಯಿಂದ ಈ ದುಷ್ಟಗುಣಗಳನ್ನು ಬಿಟ್ಟು ನಡದವನೇ ಗುಣವಂತ
ಬಿಟ್ಟು ನಡೆದವನೇ ಗುಣವಂತ ವರಶ್ರೇಷ್ಠ ಮುಕ್ತಿ ಹೊಂದುವನಂತಾ
ಮರಣರಹಿತ ಮಹಾದೇವನ ಭಜಿಸುತ ಹೇಳುವೆ ಮುಂದಿನ ವೃತ್ತಾಂತ
ಸದಾಚಾರವ ಹಿಡಿಯಲೆಂದು ಬೋಧ ಮಾಡತಾನ ಗುರುನಾಥಾ
ಗುರುವಿನ ಮಾತು ಮೀರಿ ನಡೆದವರು ಮುಕ್ತಿ ಮಾರ್ಗಕಾದಾನು ಹೊರತಾ
ಗೀತರೂಪದಿಂದ ನೀತಿ ಹೇಳಿದರ ಪ್ರೀತಿಯಾಗತಾರ ಪಂಡಿತರಾ
ಕಂಬಳಿ ಕುಂಚಿಗೀ ಹುಂಬ ಜನರಿಗೆ ಸರಿ ಬರುದಿಲ್ಲರಿ ಈ ಮಾತಾ
ಅಕಲ ಹಾಕಿ ನಾವು ನಕಲಿ ಪದಗಳ ಹಾಡಿದರಾಗತಾರಾ ಸನಮಂತಾ
ಅಕ್ಕರತಿಲೆ ಭಪ್ಪರೆ ಮಗನೆಂದು ಕ್ಯಾಕಿ ಹೊಡೆಯತಾರಾ ನಕ್ಕೊಂತಾ
ಬಲ್ಲ ಪಂಡಿತರು ಸಾರಿ ಹೇಳತಾರ ಕುಲ್ಲ ಪದಗಳನ್ನು ಬ್ಯಾಡಂತಾ
ಬುದ್ಧಿಬರುವ ಪದಾ ತಿದ್ದಿ ಹಾಡಿದರ ನಿದ್ದಿ ಮಾಡತಾರ ನಗನಗತ
ತಿಳಿಯದಕ ತಿಕ್ಕಾಡಿ ಹೇಳತಾರ ಬಾಯಿ ತೆಗೆದು ಆಕಳಿಸುತ್ತಾ
ಹ್ಯಾಂಗ ಮಾಡಿ ನಾವು ಮಜಲ ಗೆದಿಯಬೇಕು ನೀವು ಮಾಡಿಹೇಳರಿ ಗಣಿತಾ
ಬೈದರು ಚಿಂತಿಲ್ಲ ಕ್ರೋಧ ಬರುವದಿಲ್ಲ ಹಾಡಿ ಹಿಡಿಯುವೆ ನಿರ್ಧಾರಾ
ನಮ್ಮ ಜಾತಿಧರ್ಮದ ಕಥೆಯನು ನಿರ್ಮಲದಿಂದ ಹೇಳುವೆ ನಿಂತಾ
ಕೇಳಬೇಕಂತ ಕೂಡಿರಿ ಎಲ್ಲರು ನೋಡಿ ನಮಗ ಆದಿತೋ ಶಾಂತಾ
ಹಮ್ಮುಬಿಮ್ಮು ಬೇಡ ವರ್ಮಜಿದ್ದು ಬೇಡಾ ಪ್ರೇಮದಿಂದ ಹಾಡುವೆ ನಿಂತ
ಬಂದದ್ದು ಹಾಡೂನು ಬಾರದ್ದು ಕೇಳೂನು ನಮಗೆ ನಿಮಗ ತಿಳಿಯದ ಮಾತಾ
ಅರ್ಥ ತಿಳಿಯದೆ ವ್ಯರ್ಥ ಹಾಡಿದರ ಕತ್ತೆಗಿಂತ ಕಡೆ ಆದ ಮಾತಾ
ಕತ್ತೆ ಮೇಲೆ ಮುತ್ತುರತ್ನ ಹೇರಿದರೆ ರತ್ನದ ಬೆಲೆ ಅದಕೇನು ಗೊತ್ತ
ಅರ್ಥ ತಿಳಿದವನು ಕೀರ್ತಿ ಹೊಂದುವನು ಪೃಥ್ವಿಯೊಳಗ ಪಂಡಿತನಂತ
ಸಂಶಯ ಬಂದದ್ದು ಸಾರಿ ಹೇಳುವೆನು ಸೆರಗ ಒಡ್ಡಿ ಕರಜೋಡಿಸುತ
ಮರಣರಹಿತ ಮಹಾದೇವರನ ಭಜಿಸುತ ಹೇಳುವೆ ಮುಂದಿನ ವೃತ್ತಾಂತ
ಚಿಕ್ಕುಂಬಿ ಊರೊಳು ಬಂದು ಕೂಡಿದ್ದರೋ ನೂರಾರು ಮಂದಿ ಹಾಡವರಾ
ಸಿದ್ಧನಾಳ ಬುದ್ಧನಾಳ ಸುದ್ನಿ ಲೋಕಾಪೂರ ಖಜ್ಜಿ ಡೋಣಿ ಕಾಲೋಡದವರಾ
ನಿವಳ ಹಾಡುವರೋ ನಿಂಗಾಪೂರದವರೋ ಶೃಂಗಾರದಿಂದ ಸಂಗಮದವರಾ
ಹುಲಕುಂದದವರು ಬಲೆ ಹುರುಪಿಲೆ ಹಾಡಿದರೋ ಜಲಲಪುರ ಜಾವೂರವರೋ
ಶಿರಗುಪ್ಪಿ ಶಿದಮಗ್ಗಿ ಸಿರಸಿ ಸಿದ್ಧಾಪೂರ ಸರಸಗ್ರಾಮ ಸಿರಸಂಗಿಯವರಾ
ಇಷ್ಟು ಊರವರು ಓಟ್ಟು ಕೂಡಿದ್ದರೋ ಪೆಟ್ಟುತಾಳ ಗತಿ ಬಲ್ಲವರಾ
ಎಲ್ಲರಾದ ಮೇಲೆ ನಮ್ಮ ಸರತಿ ಬಂತು ಏಳಂತ ಎಬ್ಬಿಸ್ಯಾರೋ ಕುಂತವರಾ
ಒಂದೊಂದು ಪದಾ ಚಂದಾಗಿ ಹಾಡಲು ಮುಂದ ಇದ್ರೊ ಅರಕೇರಿಯವರಾ
ಅರಿಕೇರಿಯವರು ಬಂದು ತರಬಿ ಕೇಳಿದರ ಮಾಹಿತ್ಯಾಗಲಿಲ್ಲ ಮಜಕೂರಾ

ದೇವಾದಿದೇವ ರೇವಣಸಿದ್ಧ ಹಾಲಮತದ ಉದ್ಧಾರಕರಾ
ಮಂಗಲಮಯವಾದ ರೇವಣಸಿದ್ಧ ಹ್ಯಾಂಗ ತಾಳಿದಾನು ಅವತಾರಾ
ಅವತಾರ ತಾಳಿದ ಹುಟ್ಟಿದ ಕಥೆಯನು ಬಿಟ್ಟು ಬಿಡದೆ ಹೇಳರಿ ಪೂರಾ
ಹೇಳಿ ಮುಂದ ನೀವು ತಾಳ ಬಡೀರಂತ ತಾಕಿತಕೊಟ್ಟರೋ ಬೆರಕಿಯವರಾ
ನಮಗ ತಿಳಿಯದಕ ಮಾರಿ ಸಣ್ಣ ಮಾಡಿ ಹೊರಳಿ ಬಂದೇವಪ್ಪ ನಾವೆಲ್ಲರಾ
ಬಂದರ ಹೇಳಿರಪ್ಪ ಬಲ್ಲವರು ಬಾರದಿದ್ದರೆ ಮಾಡುದಿಲ್ಲೋ ಜೋರ್ದಾರಾ
ಚಂದಗ್ರಾಮ ಹುಲಕುಂದ ಠಿಕಾಣ ಕಂದ ಶಿವಲಿಂಗನ ಕವಿ ಕುಶಲಾ

### ಹರುಷದಿಂದ ಹಾಡೂನ

ಚಿಕ್ಕಮಕ್ಕಳ ತೊದಲ ನುಡಿಯನು ಅಕ್ಕರತಿಲೆ ಕೇಳಿರಿ ಕುಂತಾ
ನಾಡಮ್ಯಾಲ ಹಾಡುವವರು ಬಹಳ ಮಂದಿ ಹೇಳಾಕ ಬರಬೇಕ ಅವರೆಲ್ಲ
ಕಲ್ಪನೆ ಮಾತು ಅಲ್ಲ ಪುರಾಣೋಕ್ತ ಇದು ಅಲ್ಪರಿಗೆ ಆಗುವದಿಲ್ಲ ಗೊತ್ತ
ಅಲ್ಪರಿಗೆ ಆಗುದಿಲ್ಲ ಗೊತ್ತ ನೀ ಆಗಬೇಕ ಗುರುವಿನ ತೊತ್ತಾ
ನಮಗೆ ನಾವು ಬಲಾ ಅಂದರ ಜನರು ಹ್ಯಾಂಗ ಆಗತಾರ ಸನಮಂತಾ
ಕುಂತ ನಿಂತವರು ಶಭಾಸ್ ಅಂದರ ಹಾಡುವವರಿಗೆ ಮನಸ್ಸಿಗೆ ಶಾಂತಾ
ನಾಲ್ಕು ದುಡ್ಡಿಗೊಬ್ಬ ಬೇಕ ಅನ್ನುವರ ತರುವಿರೆಪ್ಪ ಮಾಡಿಕೊಂಡು ಬೇಽ
ಕೇಳವರ್‍ಯಾರಿಲ್ಲ ಹಾಳಹರಟೆ ಹೊಡದು ವ್ಯಾಳೆಗಳೆದು ಹೋಗತೀರಿ ವ್ಯಥತ
ಆಗಾವ ನಮಗೊಂದು ಲಗಾಮ ಹಾಕುವೆ ಜಬಾಬ ಕೊಡಬೇಕ ನಕ್ಕೊಂತ
ಅದನ ಇದನ ಹಾಡಿ ಕದನ ಎಬ್ಬಿಸಿ ಅಗ್ಗ ಮಾಡಿ ಇಟ್ಟಾರ ಕವಿತಾ
ರೇವಣಸಿದ್ಧರ ಕಥಿ ಕೇಳೆದೆವು ಬಿಡದೆ ಹೇಳಿರಿ ವೃತ್ತಾಂತ
ಆನಂದ ಆಗಿ ನಿಮ್ಮ ಪದಗಳಿಗೆ ಎಲ್ಲ ಜನರು ಕೊಟ್ಟಾರೋ ಮತಾ
ಸತ್ಯವಂತರಿಗೆ ಸಾವಿಲ್ಲ ತಮ್ಮಾ ಭಕ್ತಿಗೆ ಮೆಚ್ಚುವನು ಭಗವಂತಾ
ಮತ್ತೊಂದು ಮಾತ ಹೇಳಬೇಕ ನೀವು ಕೇಳತೀವಿ ಮುಂದಿಂದಾ
ಬಲ್ಲ ಪಂಡಿತಗ ಬಹಳ ಬಿರಿ ಇಲ್ಲ ಅರಿಯದವರು ಮಾಡತಾರ ಭೇದ
ಉಣ್ಣು ಅಂದರ ಹೊನ್ನಿನ ರೂಪ ಎಲ್ಲರಿಗೆ ಬೇಕಾಗುವದಾ
ಗುರುವಿನ ಗದ್ದುಗೆ ಹಾಸಗಂಬಳಿ ಉಣ್ಣಿಯಿಂದ ಆಗುದು ಚಂದಾ
ಕುರಿಯ ಉಣ್ಣಿಗೆ ಮಡಿಯ ಮೈಲಿಗಿಲ್ಲ ಹುಟ್ಟೀತಿ ಸಾಂಬನ ವರದಿಂದ
ರಾಡಿಪದಗಳ ಹಾಡಿ ಏನು ಫಲಾ ನೋಡಿರೆಪ್ಪ ಮನಸ್ಸಿಗೆ ತಂದ
ಡೊಳ್ಳಿನೊಳಗ ಕೈಪೆಟ್ಟ ಹಾಕಿ ನೀವು ಸ್ವರಾ ತಗದು ಹಾಡತೀರಿ ಕುಣದಾ
ಕಡ್ಡಿಯಂತೆ ಕುಣಕುಣದು ಹಾಡಿದರ ದಡ್ಡ ಅಂತ ಜನಾ ಅನ್ನುವದಾ
ಹಿಂದಿನ ಮಾತ ಮರಿಯದೆ ಹೇಳಿರಿ ಕುರಿಯು ಟಗರು ಹುಟ್ಟಿದ ಗುರತಾ
ತೋಡಿಗೆ ತೋಡಿ ಹಾಡುತ್ತ ಹೋದರ ನೋಡುವವರಿಗೆ ಉಲ್ಲಾಸ
ಚಲೋ ಹಾಡುವವರಂತ ನಮ್ಮ ನಿಮ್ಮನ್ನ ಕರಸತಾರ ಮುಂದಿನ ವರುಷ
ಮಾತಿನ ಉತ್ತರ ಹೇಳದಿದ್ದರ ನಿಮ್ಮ ಕಡೆ ಉಳಿಯುವದು ದೋಷ

ಬಾರದ ಮಾತಿಗೆ ಬಡದಾಡ ಬ್ಯಾಡರಿ ಸರಸವಾಗಿ ಹಾಡುದು ಲೇಸಾ
ಹರುಷದಿಂದ ಹಾರ್‍ಯಾಡಿ ಹಾಡೂನು ಹಾಡಿದರ ಸಭಾ ಆಗಬೇಕ ಸಂತೋಷ
ಬೆಂಡುಬೆತ್ತಾಸ ತಂದು ಹಾರಿಸಿ ಕುಂತ ಮಂದಿ ಅಂತಾರೋ ಪಾಸಾ
ಶಿವನ ಭಕ್ತಿ ಶಿವಲಿಂಗ ಸದ್ಗುರು ಭುವನದೊಳಗೆ ಹುಲಕುಂದ ಪಾಸಾ
ವರಕವಿ ಎಂದು ಬಿರುದು ಧರಿಸಿದಾ ಸಾರಜಾಕ್ಷ ಕವಿಕುಲ ಅರಸ
ಕುಳಗೇರಿ ಊರಾ ಇರುವದು ನಾವಾ ಭೂಮಿಯೊಳಗೆ ಇದು ಕೈಲಾಸ
ಶ್ರೀ ಗುರುಸಿದ್ಧ ಗ್ರಾಮದೇವರಾ ನಿತ್ಯದಲ್ಲಿ ಆತನ ಧ್ಯಾಸಾ
ನಮ್ಮ ನಾಮದ ನೆನಪು ಹಚ್ಚಿಕೊಳ್ಳಿರಿ ಪುರಮಾಸಾ˜ ™

**ಡೊಳ್ಳಿನ ಮೇಲೆ ಕೈಯಿರಲಿ**

ಹೋತೆನ್ನ ಹುಲಿಯೋ ಪಾತಾಳಕೆ ಇಳಿಯೋ
ಬಗ್ಗಿಸಿ ಕಡಿಯೋ ಬಿಡ ನನ ಕುರಿಯ
ಕುರುಬರಪ್ಪನವು ಕುರುಬಾರೊ
ಏನನ ಅರಿಯದ ಕುರುಬಾರೋ

ಬಿಳಿ ವಸ್ತುರ ಪಳಾರ ಹಾಕಿಕೊಂಡು
ಟರ್ ಅಂತ ಕುರಿಗಳು ಕಾಯುವರು
ವಟ ವಟ ಕೋಲು ಹಿಡಿಯುವರಪ್ಪ
ಒಡಕಲು ಸಂಗಟಿ ಉಣ್ಣುವರು

ಹೋತೆನ್ನ ಹುಲಿಯೋ ಪಾತಾಳವ ಹಿಡಿಯೋ
ಮಾತಾಡೋ ನನ್ನ ಕಿರಿಡೊಳ್ಳೊ
ಕುರಿಯ ಮೇಲೆ ಒಂದು ಕಣ್ಣಿರಲೆಪ್ಪ
ಡೊಳ್ಳಿನ ಮೇಲೆ ಒಂದು ಕೈಯಿರಲಿ

ಇಲ್ಲಿಗೆ ಒಂದು ಸಂದೇಳು ಗುರುವೆ
ಹಾಡಿದಾರ ಪದ ಮುಂದ್ಕೇಳು

**ಯಾವುದು ಮೇಲು ?**

ಸ್ವಾಮಿ ನಮ್ಮಯ್ಯ ದೇವರ ಬಂದಾವ ಬನ್ನಿರೆ
ಗುರುವೆ ನಮ್ಮಯ್ಯ ದೇವರ ಬಂದಾವ ಬನ್ನಿರೆ ||ಪ||

ಭಕ್ತಿಯೊಳಗ ಬಸವಣ್ಣ ಮೇಲು, ಯುಕ್ತಿಯೊಳಗ ನಾರದ ಮೇಲು
ಶಕ್ತಿಯೊಳಗ ಹನುಮಂತ ಮೇಲು | ಸ್ವಾಮಿ…..

ಊಟದೊಳಗ ಉಪ್ಪುಮೇಲು, ತ್ವಾಟದೊಳಗ ರಾಟಳ ಮೇಲು
ಆಟದೊಳಗ ಕುಣಿತ ಮೇಲು | ಸ್ವಾಮಿ…..

ಕತ್ತರಿಸಿದ ಕಮಾನ ಚಂದ, ಮೇಲಾಡುವ ವಿಮಾನ ಚಂದ
ನಾಚ ಮಾಡುವ ನಾರಿ ಚಂದ | ಸ್ವಾಮಿ….

ಹಕ್ಕಿಯೊಳಗ ಗಿಳಿ ಮೇಲು, ಚಿಕ್ಕಿಯೊಳಗ ಚಂದಿರ ಮೇಲು
ದೇಶಕ್ಕೆಲ್ಲ ಸೂರ್ಯಮೇಲು | ಸ್ವಾಮಿ…..

ಮಕ್ಕಳಿದ್ದ ಮನಿಚಂದ, ರೊಕ್ಕವಿದ್ದ ವ್ಯಾಪಾರ ಚಂದ
ಒಕ್ಕಲಿಗಗ ಬಸವಣ್ಣ ಚಂದ | ಸ್ವಾಮಿ……

ಒಕ್ಕಲುತನಕ ಮಂಡಿ ಮೇಲು, ಮುತ್ತೈತನಕ ದಂಡಿ ಮೇಲು
ಕರಿದರೊಳಗ ಕಂಬಳಿ ಮೇಲು | ಸ್ವಾಮಿ….

ವಾದ್ಯದೊಳಗ ವಾಲಗ ಮೇಲು, ಕಾಳಗದಾಗ ಬಾಣ ಮೇಲು
ಸ್ವಾಮಾನದೊಳಗ ತಾಳಿಮೇಲು | ಸ್ವಾಮಿ….

ಸ್ವಾಮಿ ನಮ್ಮಯ್ಯ ದೇವರ ಬಂದಾವ ಬನ್ನಿರೆ
ಗುರುವೆ ನಮ್ಮಯ್ಯ ದೇವರ ಬಂದಾವ ಬನ್ನಿರೆ.

~ ™

**ಡೊಳ್ಳಿನ ಮೇಲೆ ಕೈಯಿರಲಿ**

ಹೋತೆನ್ನ ಹುಲಿಯೋ ಪಾತಾಳಕೆ ಇಳಿಯೋ
ಬಗ್ಗಿಸಿ ಕಡಿಯೋ ಬಿಡ ನನ ಕುರಿಯ
ಕುರುಬರಪ್ಪನವು ಕುರುಬರೊ
ಏನನ ಅರಿಯದ ಕುರುಬಾರೋ

ಬಿಳಿ ವಸ್ತರ ಪಳಾರ ಹಾಕಿಕೊಂಡು
ಟರ್ ಅಂತ ಕುರಿಗಳು ಕಾಯುವರು
ವಟ ವಟ ಕೋಲು ಹಿಡಿಯುವರಪ್ಪ
ಒಡಕಲು ಸಂಗಟಿ ಉಣ್ಣುವರು

ಹೋತೆನ್ನ ಹುಲಿಯೋ ಪಾತಾಳವ ಹಿಡಿಯೋ
ಮಾತಾಡೋ ನನ್ನ ಕಿರಿಡೊಳ್ಳೊ
ಕುರಿಯ ಮೇಲೆ ಒಂದು ಕಣ್ಣಿರಲೆಪ್ಪ
ಡೊಳ್ಳಿನ ಮೇಲೆ ಒಂದು ಕೈಯಿರಲಿ

ಇಲ್ಲಿಗೆ ಒಂದು ಸಂದೇಳು ಗುರುವೆ
ಹಾಡಿದಾರ ಪದ ಮುಂದ್ಕೇಳು

~ ™

**ಡೊಳ್ಳಿನ ಗ್ಯಾನೊಂದಿರಬೇಕು**

ತಾಳ ನಿಮ್ಮ ಕೈಯಲ್ಲಿದ್ದರ ತಮ್ಮಾ
ತಾಳದ ಗ್ಯಾನೊಂದಿರಬೇಕೋ
ಸಂಗ ನಿಮ್ಮೊಳಗಿದ್ದರೆ ತಮ್ಮ ಸಂಗಿನ
ಗ್ಯಾನೊಂದಿರಬೇಕೋ

ಪುಸ್ತಕ ನಿಮ್ಮಲ್ಲಿದ್ದರೆ ತಮ್ಮಾ
ಅಕ್ಷರ ಗ್ಯಾನೊಂದಿರಬೇಕೋ
ದನಿಯು ನಿಮ್ಮಲ್ಲಿದ್ದರೆ ತಮ್ಮಾ
ಹಾಡಿನ ಗ್ಯಾನೊಂದಿರಬೇಕೋ

ಮನಸು ನಿಮ್ಮಲಿ ಇದ್ದರೆ ತಮ್ಮಾ
ಬುದ್ಧಿಯು ಗ್ಯಾನೊಂದಿರಬೇಕೋ
ವಿದ್ಯೆ ನಿಮ್ಮಲ್ಲಿದ್ದರೆ ತಮ್ಮಾ
ಗುರುವಿನ ಗ್ಯಾನೊಂದಿರಬೇಕೋ

ಜಗಲಿ ನಿಮ್ಮನಿಯಲಿದ್ದರೆ ತಮ್ಮಾ
ದೇವರ ಗ್ಯಾನೊಂದಿರಬೇಕೋ
ದೇವರ ನಂಬಿಕೆ ಇದ್ದರೆ ತಮ್ಮಾ
ಭಕ್ತಿಯ ಗ್ಯಾನೊಂದಿರಬೇಕೋ

ದಿಮ್ಮು ನಿಮ್ಮಲಿಯಿದ್ದರೆ ತಮ್ಮಾ
ದಿಮ್ಮಿನ ಗ್ಯಾನೊಮದಿರಬೇಕೋ
ಡೊಳ್ಳು ನಿಮ್ಮಲಿಯಿದ್ದರೆ ತಮ್ಮಾ
ನಾದದ ಗ್ಯಾನೊಂದಿರಬೇಕೋ

## ಮತಸ್ತುತಿ

**ಇದೆಲ್ಲ ಖರೆ !**

ಆದಿ ಹಿಡಿದು, ಆಕಾರವಾದೀತೋ ನಿರಾಕಾರ ಬೈಲಿದ್ದುದು ಖರೆ
ನಿರಾಕಾರ ನಿರ್ಮಾಣ ಮಾಡಿದಾಗ ಮಾನವ ಜಲ್ಮ ಹುಟ್ಟಿದ್ದುದು ಖರೆ
ಜಂಬನ ಮಕ್ಕಳ ಕೊಂದು ಭೂಮಿಗೆ ಹೆಪ್ಪಕೊಟ್ಟು ಭೂಮಿ ಹೊತ್ತ ಮಹಾಶೇಷ ಖರೆ

ಶಕ್ತಿವರವಿನಿಂದ ಸಂಕಪ್ಪ ಹುಟ್ಟಿದಾನೋ ಬಸಪ್ಪಯ್ಯ ಹುಟ್ಟಿದ್ದು ಖರೆ
ಬಸಪ್ಪಯ್ಯ ಮಹಾದೇವ ಸರ್ಪಹುಟ್ಟಿ ಸಮುದ್ರ ಮಥನ ಮಾಡಿದ್ದು ಖರೆ
ಸುತ್ತ ಕಡಿದರ ರತ್ನದ ಒಳಗ ಗಾಳಿಬೆಂಕಿ ಭೀರುಟ್ಟಿದ್ದು ಖರೆ
ತಾರ ಚಿಕ್ಕಿ ಮುಗಿಲಾಕಾರವಾದಿತೋ ಸೂರ್ಯಚಂದ್ರ ಹುಟ್ಟಿದ್ದು ಖರೆ
ದೊಡ್ಡ ಚಿಕ್ಕಿ ನಕ್ಷತ್ರ ಹುಟ್ಟಿದಾವೊ ದಕ್ಷಬ್ರಹ್ಮ ಹುಟ್ಟಿದ್ದು ಖರೆ
ದಕ್ಷಬ್ರಹ್ಮನ ಮಗಳು ಸಾಕ್ಷಾತ ಪಾರ್ವತಿ ಶಿವನ ಲಗ್ನವಾದದ್ದು ಖರೆ
ರೋಮದಿಂದ ಶಿವನ ರೋಮ ಜ್ಯಾಡಿ ಹುಟ್ಟಿ ಮೂರು ಕಂಬಳಿ ಹುಟ್ಟಿದ್ದು ಖರೆ
ನೇಮದಿಂದ ಶಿವನ ಹೋಮ ಹುಟ್ಟಿ ವೀರಭದ್ರ ಹುಟ್ಟಿದ್ದು ಖರೆ
ವೀರಭದ್ರ ಹುಟ್ಟಿ ರುದ್ರಾವತಾರ ತಾಳಿ ದಕ್ಷ ಬ್ರಹ್ಮನ್ನ ಹೊಡೆದದ್ದು ಖರೆ
ದಕ್ಷಬ್ರಹ್ಮನ ಹನಿ ರಕ್ತಕ ಮೂರು ಕೋಟಿ ರಾಕ್ಷಸರು ಹುಟ್ಟಿದ್ದು ಖರೆ
ಮೂರು ಲೋಕಕ ಮುನಿಗಳು ಹುಟ್ಟಿದಾರೋ ತೆತ್ತೀಸ ಕೋಟಿ ದೇವತ್ಯಾರು ಖರೆ
ಕಲಿಯು ಹುಟ್ಟಿತೊ ಕಡೆಯ ಆಟಕ ಕಲ್ಲದೇವರಾದದ್ದು ಖರೆ
ಕಲ್ಲದೇವರಿಗೆ ಕೈಮುಗಿದರ ಕರುಣವಿಟ್ಟು ಸಲಹುದು ಖರೆ˜ ™

**ಸೃಷ್ಟಿ ಹುಟ್ಟಿದ ರೀತಿ**

ತಂದೆಗಳಿರಾ ನಿಮಗ ವಂದಿಸಿ ಪೇಳುವೆ
ಕಂದನೆಂದು ಇಡಬೇಕ ಪ್ರೀತಿ
ಪ್ರೀತಿಯಿಂದ ನೀವು ಕೇಳಿರಿ ಚಂದಾಗಿ
ಸೃಷ್ಟಿ ಮದಲು ಹುಟ್ಟಿದ ರೀತಿ

ಆದಿಯಲ್ಲಿ ಆಕಾರ ಇದ್ದಿದ್ದಿಲ್ಲ
ನಿರಾಕಾರ ಇತ್ತೊ ಬರಿ ಬಯಲಾ
ವಿದ್ಯಾಧರ ಸುರ ಸಿದ್ಧಸಾಧ್ಯರು
ಯಕ್ಷ ಗರುಡ ಕಿಂಪುರುಷರು ಇಲ್ಲ
ಸತ್ತಾವೀಸ ನಕ್ಷತ್ರ ರಾಸಿಗಳು
ಸಪ್ತ ಸಮುದ್ರದ ಗುರುತಿಲ್ಲ

ಮುನ್ನೂರದರವತ್ತೈದಂಗಳು
ಸೋಮ ಸೂರ್ಯರ ಬೆಳಕಿಲ್ಲ
ಜೀವರಾಶಿ ಗಿಡಬಳ್ಳಿ ಆರ್ಯಾಣ
ಐವತ್ತಾರು ದೇಶ ಇದ್ದಿಲ್ಲ

ಎತ್ತ ನೋಡಿದತ್ತ ನಿರಮಯ
ಮತ್ತ ಸುತ್ತ ಇತ್ತರಿ ಕತ್ತಲ

ಚಿದಾನಂದ ಚಿನ್ಮಯ ಮೂರುತಿ
ಚಿದ್ದಬಿಂದು ಪ್ರಕಾಶಕ ಅಳತಿಲ್ಲ

ನಾನು ರಹಿತ ಕ್ರಿಯಾ ರಹಿತ
ಸೋಮಸೂರ್ಯರ ಬೆಳಕಿಲ್ಲ
ಸೋಮಸೂರ್ಯರ ಬೆಳಕಿಲ್ಲ
ಪ್ರಭು ಇದ್ದ ಆದಿಗೆ ಮೊದಲ

**ಗದ್ಯ :** ಏ! ಕೇಳಿರಿ, ಬಯಲಿನೊಳಗ ಆಕಾಶ ಹುಟ್ಟಿ, ಆಕಾಶದಿಂದ ವಾಯು ಹುಟ್ಟಿತ್ತು. ವಾಯು ಹುಟ್ಟಿತ್ತು. ವಾಯು ಹುಟ್ಟಿ ಸುಳಿದಾಡಿತು. ಇದೆ ವಾಯುತತ್ವದಿಂದ ಅಗ್ನಿ ಜನಿಸಿತು. ಇದೆ ಅಗ್ನಿಯಿಂದ ನೀರು ಹರಿಯಿತು. ಇದೆ ನೀರಿನಿಂದ ಹೆಪ್ಪುಗಟ್ಟಿ ಸೃಷ್ಟಿ ಆಕಾರ ಶೋಭಿಸಿತು.

**ಏರು :**

ಆಕಾರ ಆದ ಮ್ಯಾಲ
ಬೇಕಾದ್ದ ಆಗತೈತಿ
ಲೋಕೆಲ್ಲ ಆದಾವ ಉತ್ಪತ್ತಿ

ನಿರಕಾರದ ಮಾತ ನಿರಕ ಹೇಳತೀನಿ
ತರಕ ಮಾಡ್ರಿ ನೀವು ಬಲ್ಲವರ
ಓಂಕಾರ ಎಂಬ ನಾದ ಅಡಿಗೆಯಾಗಿ
ಗಟ್ಟಿ ಹೆಪ್ಪು ಕವದೀತ ನೀರಾ
ನೀರ ಜವಳ ಓಂಕಾರ ರೂಢಿಯಾ
ರೇವಣ ಸಿದ್ಧನ ಪರಭಾರ

ಮುನ್ನೂರ ಕೋಟಿ ಪಶು ಮೃಗಗಳು
ಅವನಿಂದ ಆದಾವ ಉದ್ಧಾರ
ಸೃಷ್ಟಿ ಮಾಡಿದಾನ ರೇವಣಸಿದ್ಧ
ಅಷ್ಟ ಮಾಡಿದಾನ ವಿಸ್ತಾರ
ಚತ್ತಿಸಕೋಟಿ ದೇವನುದೇವತ್ಯಾರು
ಗಿಡಬಳ್ಳಿ ಬೇಕಾದವು ಪೂರಾ

**ಗದ್ಯ** – ಕೇಳರಿ ಏಕಾಕಿಯಾದ ರೇವಣಸಿದ್ಧನೇ ಮೂರ್ತಿ, ಅವನ ಹೊರ್ತ ಯಾರೂ ಇಲ್ಲ ಓದಿ ನೋಡರಿ ಪುಸ್ತಕ, ಹಿಂಗಂತ ಹಗಲಿರಳು ಸಾರತಾವ ಸ್ಮೃತಿ ಮುಂದೆ ಸೂರ್ಯಚಂದ್ರಾದಿಗಳು ಹುಟ್ಟಿದ ಕಾರಣ ಚಿಕಿತಿ ಯೋಗ ಜೋತಿಷ್ಯ ನೋಡಿದವರಿಗೆ ಇದು ತಿಳುವತೈತಿ. ಸಪ್ತ ಸಮುದ್ರದ ಮುನ್ನೂರದರವತ್ತೈದು ದಿನಗಳು ಉತ್ಪನ್ನದಾವ ಇದರಂತ.

**ಏರು :**

ಸತ್ಯ ಸಾತ್ಯಕನು ನಿತ್ಯ ನಿರ್ಮಲನು
ವ್ರತಕೆಲ್ಲ ಅವನೆ ಚತ್ರಪತಿ
ಪ್ರೀತಿಯಿಂದ ನೀವು ಕೂತ ಕೇಳರಿ
ಸೃಷ್ಟಿ ಮೊದಲು ಹುಟ್ಟಿದ ರೀತಿ

ಮಂಗಲಾಂಗನೆಂಬ ರೇವಣಸಿದ್ಧನ
ಚಿತ್ತದಿ ನೆಲಸ್ಯಾಳ ಆದಿಶಕ್ತಿ
ಶಕ್ತಿ ಪ್ರಭುವಿನ ತೃಪ್ತಿಗಾಗಿ
ಅಕಿ ನಿತ್ಯ ಮಾಡಿದಾಳ ಅವನ ಸ್ತುತಿ

ಸ್ತುತಿಯ ಮಾಡಿ ಸದ್ಗತಿಯ ಹೊಂದಿದಾಳು
ಸತಿಯು ಆಗ್ಯಾಳೊ ಶಂಭಗ ಶಕ್ತಿ
ಶಕ್ತಿಪುರಾಣ ಹಿಂಗ ಸಾರಿ ಹೇಳತಾವ
ಪೂರಾ ನೋಡಿ ತಿಳಿಯಿರಿ ಪೂರ್ತಿ

ಪೂರ್ತಿ ಮಾತಿನ ಅರ್ಥ ತಿಳಿಯದೆ
ವ್ಯರ್ಥ ಮಾಡತೀರಿ ಹೊಸ ಕವಿತಾ
ನಾ ಹೆಚ್ಚ ನೀ ಹೆಚ್ಚ ವಾದ ಹಾಕತೀರಿ
ಬೋಧ ಮಾಡಿದವನ್ಯಾವ ಮತಿ

ನಾಲ್ಕು ಮಂದಿ ಸದ್ಬುದ್ಧಿವಂತರು
ವಿಚಾರ ಮಾಡಲಿ ಕೊಡ ಜಡತಿ
ಇಲದಿದ್ದರ ನಿನ ಡೊಳ್ಳ ಕಸಗೊಂಡು
ಮಂದ್ಯಾಗ ಮಾಡತೇನಿ ಪಜೀತಿ

**ಗದ್ಯ** – ಕೇಳರಿ, ಏಕಾಂಗಿಯಾದ ರೇವಣಸಿದ್ಧನಿಂದ ಇಂದ್ರಜಾಲ, ಮಹೇಂದ್ರ ಜಾಲ ಎಂಬ ಎರಡು ವಿದ್ಯಾಶಕ್ತಿ. ಆ ವಿದ್ಯಾಶಕ್ತಿ ಮಾರ್ಗವೆ ನಿರವಾಣೋಪಾಸನ. ಆ ವಿದ್ಯಾಶಕ್ತಿ ಮಾರ್ಗವೆ ಸಗುಣೋಪಾಸನ ಮಾರ್ಗ. ಮಾಯಾ ನಿರ್ಮಾಯನಾದವನಿಗೆ ಆಗತೈತಿ ಗೊತ್ತ, ಅರಿಯದವನಿಗೆ ತಿಳಿಯದು ಈ ಅನುಭವದ ಮಾತ, ಅನುಭವದಿಂದ ಅದ್ಭುತ ತಿಳಿದು ನೋಡೊ ವೇದಾಂತ.

ಏ ಧಾರವಾಡದ ಊರಾಗ ಕುರಬರ
ಓಣ್ಯಾಗ ಕವಿ ಹುಟ್ಟತಾವ ಹೊಸ ಜಡತಿ
ಪ್ರೀತಿಯಿಂದ ನೀವು ಕುಂತ ಕೇಳರಿ
ಸೃಷ್ಟಿ ಮೊದಲು ಹುಟ್ಟಿದ ರೀತಿ

**ಭೂಮಿ ಹುಟ್ಟಿದ ಬಗೆ**

ನಿರಹಂಕಾರ ನಿರ್ಬಯಲಿನೊಳಗ
ಪ್ರಭುದೇವನೆಂಬವನೊಬ್ಬನಿದ್ದ
ತೆತ್ತೀಸಕೋಟಿ ದೇವತೆಗಳನ್ನು ಅವ
ಹಿಂದುಗಡೆಯಲ್ಲಿ ಹುಟ್ಟಿಸಿದ

ಮಂತ್ರಜಪದಿಂದ ಶಿವ ಹುಟ್ಟಿದನು
ಪಟ್ಟಿಗಟ್ಟಿ ಅಂವ ಲಯಕಾರನಾದ
ಈರೇಳು ಹಿದಿನಾಲ್ಕು ಲೋಕವನ್ನೆಲ್ಲ
ಆಳುವಂಥ ಹರ ತಾನಾದ

ಬಸವ ಹುಟ್ಟಿದನು ಉಸಿರಿನಿಂದ
ಇಬ್ಬರು ಏಕಾಗಿ ಚಂದದಿಂದ
ನೀರು ಎಂಬುದು ಹರಿದಾಡುತಿತ್ತು
ಆಕಾರವಿದ್ದಿಲ್ಲ ಭೂಮಿಯೆಂಬ

ಓಂಕಾರವೆನಿಸಿತ್ತು ಆಗ ಹಂಗ
ಭೂದೇವಿ ಇದ್ದಳು ಅದರಾಗ
ಶಿವ ಬಸವಣ್ಣ ಬಂದರು ಆಗ
ಭೂದೇವಿಗೆ ಆಯಿತು ಮಾನ

ಚಂಡು ಮುರಿದು ಮೇಲೆ ಹಾಕಿ ಕುಳಿತಳು
ಶಿವನೆಂಬುವವನು ಮೇಲೆ ಕುಳಿತ
ಅಂತರ್ಮಾರ್ಗದಿ ಬರುವ ಸಮಯದಾಗ
ವಿಶ್ವಕರ್ಮ ಮಲಗಿದ್ದನಪ್ಪ

ಮೂರುಮಂದಿ ಕೂಡಿ ಅವನ ಒದರಿದರು
ನಿದ್ದೆಯಿಂದ ಏಳಲಿಲ್ಲ ಗಡ
ಮಾತಾಡಿಸಿದರೆ ಮಾತಾಡಲಿಲ್ಲ
ಶಿವ ಸಿಟ್ಟಿಗೆದ್ದು ಒದ್ದ ನಡ

ಚಳ್ಳುಗುರು ತೆಗೆದು ಹಣಿಗೆ ತಿವಿದರೆ
ರಕ್ತಬಿದ್ದಿತು ಬ್ರಹ್ಮಾಂಡ
ರಕ್ತ ಬಿದ್ದಿದ್ದು ಏನಾಯಿತು ಅಂದರ
ಗುಡ್ಡ ಗಂವಾರ ಭೂಮಿಯಾಯಿತು

ಎಪ್ಪತ್ತೇಳು ಕೋಟಿ ಗಿರಿಯಾಯಿತು
ರಕ್ತ ಮತ್ತಷ್ಟು ಚಿಮ್ಮಹತ್ತಿತು

ವಿಶ್ವಕರ್ಮನ ಕೊಂದು ಬಟ್ಟು ಇಟ್ಟರು
ರಕುತ ಚಿಮ್ಮದಂತೆ ನಿಂತಿತು

ಭೂಮಿ ಎಂಬುದು ಹೆಪ್ಪುಗಟ್ಟಿತು
ವಿಶ್ವಕರ್ಮನ ರುಂಡವು ರಕ್ತದಿಂದ
ವಿಶ್ವಕರ್ಮ ತಾ ನೆಟ್ಟಗೆ ಬಂದು
ಗಡವುಗಳಳಿದರೆ ಸರ್ಪ ಆಯಿತು

ಏಳು ಹೆಡೆಯ ಸರ್ಪ ಆಯಿತು
ಪಾರ್ವತಿದೇವಿಯ ಕಡಿಲಿಕ್ಕೆ ಹೋತು
ಪಾರ್ವತಿದೇವಿಗೆ ಚಿಂತೆ ಹತ್ತಲು
ಸಾಂಬನದಕೆ ಮಾಡಿದನು ಯುಕ್ತಿ

ಎರಡು ಕೈಲಿ ಸರ್ಪ ತೆಗೆದುಕೊಂಡು
ಕರ್ಣಕುಂಡಲವ ಮಾಡಿದನು
ಶಿವಪಾರ್ವತಿಯರ ಲಗ್ನವಾಯಿತೆಂದು
ಹಣಿಗೆ ಹಚ್ಚಿದರು ಅಕ್ಷತಿ

ಪಾರ್ವತಿ ಎಂಬುವಾಕಿ ಅರ್ಧಾಂಗಿಯದಳು
ಎಡಗಡೆ ದೇಹ ಹೆಂಗಸಿನದು
ಬಲಗಡೆ ದೇಹ ಗಂಡಿನದಾಯ್ತು ಹೆಚ್ಚ
ಇಲ್ಲ ಕೇಳುವದು ಏನು

~ ™

### ಕುರುಬ ಮೊದಲಿಗ

ಪಂಡಿತ ಜನರೆಲ್ಲ ಬಂದು ಕೂಡಿರಿ ಇಂದ್ರ ಸಭಾಕಿಂತ ಬಲೆ ಖಡಕ
ದೈವವಿದ್ದಲ್ಲಿ ದೇವರಿರುವನೆಂದು ತಿಳಿದು ಬಂದೆ ನಾನು ಇಲ್ಲಿ ತನಕ
ದೈವದ ಸೇವಾ ಮಾಡಿದವನಿಗೆ ದೇವರು ಒಲಿತಾನ ತಾ ಮುಂದ
ಸೇವಾದಲ್ಲಿ ಸ್ವಲ್ಪು ಕುಂದು ಬಂದರೆ ಹಂಸಕ್ಷೀರ ನ್ಯಾಯ ಅನಬೇಕ
ಹಾಲು ನೀರನ್ನು ಕೂಡಿಸಿ ನೀವು ಹಂಸಪಕ್ಷಿ ಮುಂದ ಇಡಬೇಕ
ಹಂಸಪಕ್ಷಿಯು ಹಾಲನು ಕುಡಿದು ನೀರನು ಬಿಡುವುದು ಕಡಿಯಾಕ
ಇದರಂತೆ ನನ್ನದು ತಪ್ಪು ಆದರೆ ಅಪ್ಪಿಕೊಳ್ಳಿರಿ ಕಡೆತನಕ
ಇಷ್ಟರಿಂದ ನಾ ಸಂತೋಷನಾಗುವೆ ಇನ್ನ ಮುಂದ ಕೇಳರಿ ಬೆಳತನಕ
ಚಲೊ ಚಲೊ ಗವಾಯಿಗಳು ಜಗದೊಳು ಇರುವಾಗ ಕುರಬರ ಪದ ಯರ ಕೇಳಬೇಕ
ಕುರುಬರಕಿಂತ ಮೊದಲ ಯಾವದಿಲ್ಲರಿ ತಿಳಿದು ನೋಡರಿ ನಿಮ್ಮ ಮನಕ
ಹೊಸವರ್ಷ ಉಗಾದಿ ಪಾಡ್ಯೇಕ ಹೊಲದಾಗ ಕುಂಟೆಯ ಹೂಡುದಕ

ಮೊದಲು ಕುರುಬನ ಕುಂಟಿ ಹೋಗಲೆಂದು ರೈತರು ಮಾಡ್ಯಾರೊ ನೇಮಣೂಕ
ಅಂಗಡಿ-ಮುಂಗಡಿ ವ್ಯವಹಾರ ಮೊದಲಿಗೆ ಕುರುಬನ ಬೋಣಗಿ ಆಗಬೇಕ
ಕುರುಬಗೌಡ ಬಂದು ಬೋಣಗಿ ಮಾಡಿದಾಗ ವ್ಯಾಪಾರದವರಾದರೊ ಮುಂದ
ಮೋಜು ಮಜಲಿಗೆ ಕುರುಬನು ಮೊದಲು ಗಣಪತಿಪೂಜೆಯ ಮಾಡಬೇಕ
ಕುರುಬಗೌಡ ಬಂದು ಪೂಜೆ ಮಾಡಿದಾಗ ಸಾಗಿ ಬಂತೊ ಮಜಲು ಮುಂದಕ
ಪಂಡಿತ ಜನರೆಲ್ಲ ಸೋಸಿ ತೆಗಿದಾರೊ ಒಂದು ತೂಕವನಾ
ಭವಿಷ್ಯ ಶಾಸ್ತ್ರದಾಗ ಹನ್ನೆರಡು ರಾಸಿಯೊಳಗ ಕುರುಬನಿರುವನು ಮೊದಲಿಗ
ಕುರುಬನ ಗುರ್ತು ಕುರಿಮರಿ ಇರುವದು ತಿಳಿದುನೋಡರಿ ನಿಮ್ಮ ಮನಕ
ಮೊದಲಿಗೆ ಕುರುಬ ಬಂದ ಸ್ರುತಿಯು ಸಾರತಾವ ಓದಿನೋಡರಿ ಪೂರಾ
ಹನ್ನೆರಡು ವರ್ಷ ಮಳಿ ಇಲ್ಲದೆ ಬರಾ ಬಿದ್ದಿತೊ ದೇಶಕ್ಕ
ಇರವಿ ಎಂಬತ್ನಾಲ್ಕುಕೋಟಿ ಜೀವರಾಸಿಗಳು ಬಾಯಿ ಬಿಡತಾವೊ ನೀರಿಲ್ಲದಕ
ರೈತರಾಣ್ಯಾರು ಬಂದು ಕೂಡತಾರೊ ಕೇಳತಾರ ಕುರುಬ ಗೌಡನಿಗೆ
ಕುರುಬಗೌಡನು ಗಾಬರಿಯಾಗಿ ಕೇಳತಾನ ಯ್ಯಾಕ ಬಂದಿರಿ ನನ್ನ ಹಂತೀಲೆ
ಮಳಿಬೆಳಿ ಇಲ್ಲದ್ದು ನಿನಗ ಗೊತ್ತೈತಿ ಹೇಳಬೇಕು ಮಳಿಯಾಗುವದ
ಕುರುಬಗೌಡಗ ದಿಗಲ ಬಿದ್ದಿತೊ ಮುಖಾ ಮಾಡಿದಾನೋ ಮ್ಯಾಕ
ಬೀರಲಿಂಗನ ಸ್ತೋತ್ರ ಮಾಡುತ ವಿಚಾರ ಮಾಡ್ಯಾನೋ ತನ್ನ ಮನಕ
ಚಿಂತಿಯ ಮಾಡಬ್ಯಾಡರಿ ನಾಳೆ ಮಳೆಯು ಬರುವದು ಮಧ್ಯಾಹ್ನಕ
ಕುರುಬಗೌಡನು ಮರುದಿನ ತಾನು ಗುಡ್ಡ ಹತ್ತಿನಿಂತ ಮ್ಯಾಲಕ
ಮೂಡಭಕ್ತಿಲಿಂದ ಕಂಬಳಿ ಬೀಸಿ ಮಳೆರಾಯಾ ನೀನು ಬರಬೇಕ
ಗುಡುಗು ಮಿಂಚು ಇಲ್ಲ ಮಾಡ ತೆರೆಗಳಿಲ್ಲ ಎದ್ದ ಬಂದಾವೊ ಮ್ಯಾಲಕ
ಕುರುಬಗೌಡನು ಕಂಬಳಿ ಬೀಸಿದ್ದಂಗ ಜಡಿಮಳೆ ಸುರದಿತೊ ಬೆಳತನಕ
ಸತ್ಯವಂತ ಧರ್ಮಶೀಲ ಕುರುಬ ಇವ ರೇವಣಸಿದ್ಧನ ಸೇವಕ
ಕುರುಬನ ಹಂತೆಲೆ ಧರ್ಮ ಇರುವದು ತಿಳಿದು ನೋಡರಿ ಮನದಾಗ
ಒಂದ ದಿವಸ ಒಬ್ಬ ರಾಜನು ಅಡವಿಗೆ ಬಂದಾನೋ ಬ್ಯಾಟಿಯನಾಡುದಕ
ವಿಲಾಸದಿಂದ ಬ್ಯಾಟಿಯನಾಡಿ ದಣಿದು ನೀರಡಿಸಿ ಕುಂತಾನೋ ಗಿಡಕ
ಸುತ್ತುಮುತ್ತಲು ಹುಡುಕಿದರೂ ನೀರು ಇಲ್ಲರಿ ಒಂದು ಗುಟುಕು
ಒಬ್ಬ ಕುರುಬನು ಕುರಿಯ ಮೇಸುತ ಬಂದಾನ ನೋಡೋ ಆ ಗಿಡಕ
ಕುರುಬನ ನೋಡಿ ಅರಸ ಕೇಳತಾನ ನೀರು ಎಲ್ಲಿ ಅದಾವ ಹೇಳಬೇಕ
ಕುರುಬನು ಹೇಳತಾನ ಸುತ್ತೆರಡು ಹರದಾರಿ ನೀರ ಇಲ್ಲರಿ ಒಂದ್ಗುಟಕ
ಅರಸ ಹೇಳತಾನ ಕುರುಬಗೌಡಗ ಹ್ಯಾಂಗಾರ ಮಾಡಿ ನೀರ ಕೊಡಬೇಕ
ಕುರುಬಗೌಡ ತನ್ನ ತತ್ರಾಣಿಯೊಳಗಿನ ನೀರ ಕೊಟ್ಟಾನೋ ಕುಡಿಯಾಕ
ನೀರು ಕುಡಿದು ಸಂತೋಷವಾಗಿ ಕುರುಬಗೌಡ ಏನು ಕೊಡಬೇಕ
ಅರಸನ ಹಂತೆಲೆ ಏನೇನು ಇದ್ದಿಲ್ಲ ಎದೆಯ ಮ್ಯಾಲೆ ಹೂ ಬಲೆ ಖಡಕ
ಎದೆಯ ಮ್ಯಾಲಿನ ಹೂ ಬಿಚಿಗೊಂಡು ತೆಗೆದುಕೊಂಡ ತನ್ನ ಕೈವೊಳಗ
ಕುರುಬಗೌಡ ಬಹುಮಾನ ತಗೊ ಹೂ ಐತಿ ಬಲು ನಾಜೂಕ
ದೊಡ್ಡ ಕುಂಚಿಗಿಯ ಒಳಗ ಕುರಿಮರಿ ಹಾಕಿ ಸಿಗಾಕಿದ್ದ ತೆಲಿಯ ಮ್ಯಾಲ

ಅರಸನ ಕೈಯೊಳಗಿನ ಹೂ ತೆಗೆದುಕೊಂಡು ಕುಂಚಿಗಿಯೊಳಗ ಹಾಕ್ಯಾನ ಮೆಲ್ಲಕ
ಇದನೆಲ್ಲ ನೋಡಿ ಅರಸನು ತಾನು ಗಾಬರಿಯಾಗಿ ನಿಂತಾನ ಸುಮ್ಮಕ
ಕುರುಬಗೌಡಗ ಹೂ ಕೊಟ್ಟರ ಕುಂಡಿಯ ಒಳಗೆ ಇಟಗೊಂಡಾ
ಕುರುಬನು ಅರಸನ ಮುಂದೆ ಹೇಳತಾನ ನಿನಗ್ಯಾಂಗ ತಿಳಿದೀತ ಇದರ ಮಹಿಮೆ
ಕುರುಬನ ಬಾಳೆವ ಕುರುಬನ ಪ್ರಪಂಚ ಕುಂಚಿಗಿಯ ಒಳಗೈತಿ ನೋಡ
ಕುಂಚಿಗ್ಯಾಗ ಇರುವ ಕುರಿಮರಿ ನೋಡಿ ಅರಸಗ ತಿಳಿಯಲಿಲ್ಲ ನೋಡ ದಿಕ್ಕ
ನಿ ಕೊಟ್ಟ ಹೂ ಕುರಿಮರಿಗೆ ಕೊಟ್ಟೇನಿ ತಿಳಿದು ನೋಡ ನಿನ್ನ ಮನದಾಗ
ನಾ ಕೊಟ್ಟ ಹೂ ಹಿಂಗ ಇಟ್ಟ ಮೇಲೆ ಕುಂಡ್ಯಾಗ ಇಟ್ಟನಂತ ನನ್ನ ಮನಕ
ಕುಂಡ್ಯಾಗ ಇಲ್ಲ ಹೂ ಕುರಿಮರಿ ಮಾಲ್ಯ ಐತಿ ಸತ್ಯವಂತ ಅನಬೇಕ
ನಾಡಿನೊಳಗ ನಿಷ್ಠುರ ಕುರುಬ ಎಂದು ಕೀರ್ತಿ ಬೆಳೆಯಲಿ ಲೋಕಕ್ಕ
ವಚನವಂತನು ನಿಷ್ಠುರ ಗರ್ವ ಇಲ್ಲ ಇವನ ಹಂತೇಕ
ಹಿಂಗ ಅಂತ ತಾ ಕುರುಬಗೌಡಗ ಹೇಳಿ ಅರಸ ಹೊಂಟಾನ ತನ್ನ ಪಟ್ಟಣಕ
ಅರ್ಥ ತಿಳಿಯದೆ ಅನರ್ಥ ಮಾಡಿ ಕುರುಬಗಂತಾರ ಎಲೆ ಪುಕ್ಕ
ಕುರುಬನಿಂದ ಬೈಗು ಕುರುಬನಿಂದ ಬೆಳಗು ಅನ್ನುವದ ನೀವು ಕೇಳಬೇಕ
ಕುರುಬನ ಮಹಿಮೆ ಕುರುಬನೇ ಮಹಾಬಲ್ಲವ ತಿಳಿದು ಕೋಡು ನಿನ್ನ ಮನಕ
ರೇವಣಸಿದ್ಧನ ಕರುಣ ಮತ್ತೆ ನಮ್ಮ ಮ್ಯಾಲೆ ಬಂದು ಇರಬೇಕ˜ ™

## ಪದ್ಮಗೊಂಡ

ಬಾರೋ ಬಾರೋ ಎನ್ನ ಪ್ರೇಮದ ಮಿತ್ರಾ ಹೇಳುವೆ ಮುಂದಿನ ಚರಿತ್ರ
ಆದಿಗೊಂಡನ ಮಕ್ಕಳಾರು ಮಂದಿ ಹೇಳುವೆನು ಒಂದೊಂದ ಹೆಸರಾ ||ಪ||
ಚೊಚ್ಚಲಮಗನು ಅಮರಗೊಂಡನು ಎಚ್ಚರಾಗಿ ಕೇಳಿರೆಪ್ಪ ನೀವಾ
ಸ್ವಚ್ಛ ಚಂದ್ರನಂತೆ ಚೆಲುವಿಕೆಯುಳ್ಳವಾ ಬೀರಗೊಂಡ ಎಂಬ ಕುಮಾರನೋ
ಭಕ್ತಿಯಿಂದ ಮಹಾದೇವರ ಒಲಿಸಿದ ಮಾರಗೊಂಡ ಮೂರನೆಯವನು
ಸಿದ್ಧಪುರುಷ ಒಳೆ ಬುದ್ಧಿವಂತ ಮುದ್ದುರಂಗ ಶಿವಗೊಂಡನು
ಐದನೆಯವನು ಸಾಧು ಪುರುಷನು ಮುದ್ದುಗೊಂಡನೆಂಬ ಬಾಲಕನಾ
ಮಾರ ಸಮಾನಾ ಚಾರು ಚಂದಿರಾ ಪದ್ಮಗೊಂಡ ಆರನೆಯವನು
ಬಿದಿಗಿ ಚಂದ್ರನಂತೆ ಬೆಳೆದಾರು ಪುತ್ರರು ಹಿಡಿದಾರು ಭಕ್ತಿಯ ಮಾರ್ಗವನಾ
ನಿತ್ಯದಲಿ ತಾಯಿತಂದಿಗಿ ವಂದಿಸಿ ಮಾಡತಿದ್ರು ಮನಿಕೆಲಸವನಾ
ಆದಿಗೊಂಡನು ಆನಂದದಿಂದ ನೋಡುತ ಮಕ್ಕಳ ಆಟವನಾ
ಚಿಕ್ಕ ಬಾಲಕರು ಅಕ್ಕರದಿಂದ ಒಕ್ಕಲತನ ಮಾಡುವರಣ್ಣಾ
ಕಡಿ ಹುಟ್ಟಮಗಾ ಪದ್ಮಣ್ಣನು ಉಂಡು ಚಂಡು ಗುಂಡಾಡವನು
ಅಣ್ಣಗಳೈವರು ತಾಯಿಗೆ ಹೇಳತಾರ ಬುದ್ಧಿ ಹೇಳವ್ವ ಬಾಳ್ವಿದ ಕಬರಾ
ತಾಯಿ ಆದಮ್ಮನು ಅತಿ ಮಮತೆ ಮಾಡಿ ಪದ್ಮಣ್ಣನಿಗೆ ಹೇಳ್ಯಾಳೋ ಬೋಧಾ
ಉಂಡು ತಿರುಗಿದರ ಉಡಾಳ ಅಂತಾರ ಹೊಲಕ ಹೋಗಿ ಮಾಡಪ್ಪ ದಗದಾ

ತಾಯಿ ಮಾತಕೇಳಿ ಪದ್ಮಗೊಂಡನು ಅದೇ ದಿವ್ಸ ಮುಂಜಾನೆ ಎದ್ದ
ನಮಸ್ಕಾರ ಮಾಡಿ ತಾಯಿಪಾದಕ ಹೋಗಿ ನಿಂತಾನೋ ಜಲದಾ
ದೊಡ್ಡಬಡಗಿ ಒಂದ ಕೊಡ್ಲಿಕುಡಗೋಲಾ ಹೆಗಲ ಮ್ಯಾಲಾ ಹೊತ್ತು ಕೊಂಡಾನಾ
ಪದ್ಮಗೊಂಡನ ಕಂಡಾರು ಅಯ್ನರು ಬಾ ಅಂತ ಕರಿದಾರು ಕೈಹಿಡದಾ
ತಮ್ಮ ಕೇಳೋ ನೀ ರಂಟೆಯನ್ನು ಹಿಡಿ ಕಲಸತೀವಿ ಮುಂದಿನ ದಗದಾ
ಇದೇ ಹೊಲದ ಒಳಗ ಮುಂದೆ ಐದುಮೊಳಾ ಶಿವನಿಗೆ ದಾನಾ ನೀಡಿದ್ದಾ
ದಾನಾ ನೀಡಿದ ಜಾಗಾ ಬಿಟ್ಟು ಹೊಡಿ ದೊಡ್ಡ ಹುತ್ತ ಐತಿ ಅಲ್ಲೊಂದಾ
ರಂಟೆ ಹೊಡಿಯುತಾ ಪದ್ಮಗೊಂಡನು ಹಾಡತಾನ ಭಜನಿ ಪದಾ
ಹುತ್ತನೋಡದೆ ಮರತ ಹೊಡೆದಾನೋ ರಂಟೆ ಬಡದು ಮುರದಿತ ಕದಾ
ಕದಾ ಮುರಿದು ಬಾಗಿಲ ತೆರದೀತು ಕುರಿಯ ಹಿಂಡು ಬಂತು ಹೊರಬಿದ್ದಾ
ಕುರಿಯ ಹಿಂಡು ಹೊರಗೆ ಎಸೆದಾವ ಪದ್ಮಗೊಂಡ ತಿಳಿಯ ಪೂರಾ
ಕುರಿಯ ಹಿಂಡನು ಕೊಳ್ಳ ಹರಿದಾನು ತಿಳಿಯಲಿಲ್ಲ ಒಳಗಿನ ಭೇದಾ
ಹಿರಿಯರು ಮಾಡಿದ ಹಿತದ ಖಜಾನಿ ತೆಗೆದನೆಂದು ಮರಗುತಲಿದ್ದ
ಹೊರಬಿದ್ದ ಕುರಿಗಳ ಒಳಗೆ ತಿರುವಿದಾನು ಮುಂದೆ ಮುಳ್ಳನು ಹಚ್ಚ್ಯಾನ
ಅತ್ತ ಇತ್ತ ಸುತ್ತಲೆ ಬಿದ್ದಿರುವ ಮುಳುಗಳನಾ ಗೂಡಿಸಿದಾ
ಗುಂಪಿಗೂಡಿಸಿ ಬೆಂಕಿ ಹಚ್ಚಿದಾನು ಕುರಿಗಳಿಗೆ ಉರಿಯ ಜಳಾ ಬಡದಾ
ಜಳಾ ಬಡಿದು ಸುಟ್ಟಂತ ಕುರಿಗಳು ಕರಿಯ ಬಣ್ಣ ಆದಾವೋ ಮುಂದಾ
ಪಾರಾದ ಕುರಿಗಳು ಕೆಂಗುರಿ ಆದವೋ ಪುರಾಣದೊಳಗಿನ ಕಥಿ ಸಂದಾ
ಅಲ್ಲ ಅಂದ್ರ ಸರಸಿ ನೋಡ್ರಿ ಸುಳ್ಳ ಮಾಡಬ್ಯಾಡ್ರಿ ವಾಂಡತನಾ
ಪದ್ಮಗೊಂಡನು ಧರ್ಮ ಪುರುಷನು ಧರೆಯ ಒಳಗೆ ಅವತರಿಸಿದ
ಅನೇಕ ಮಹಿಮಾ ಮಾಡಿ ತೋರಿಸಿದಾ ಕೇಳಿದ್ದ ಹೇಳುವೆ ಮುಂದಿಂದಾ

~ ™

**ಅಮೋಘ ಸಿದ್ಧ**

ಕೈಲಾಸದಾಗ ಅಮೋಘ ಇದ್ದ
ಏಕನಿಷ್ಠ ಸಾಧೂ ಸಿದ್ಧ
ಸಾಂಬನ ಪಾದಪೂಜ ಮಾಡತಿದ್ದ
ಕೇಳಿರಿ ನೀವಿನ್ನು

ನಿನ್ನಂಥ ಗುರು ಇಲ್ಲ ನನ್ನಂಥ ಶಿಷ್ಯ ಇಲ್ಲ
ಮೂರು ಲೋಕದಾಗ ಯಾರೂ ಇಲ್ಲ
ಕೇಳಿರಿ ನೀವಿನ್ನು
ನಿನಕಿಂತ ಹೆಚ್ಚಿನ ಸಿದ್ಧ ಬೇಜಗುತ್ತಿ ಬೈಲಾಗಿದ್ದ

ಅವನ ಭಕ್ತಿ ಬಾಳ ಸುದ್ದಾ
ಕೇಳಿರಿ ನೀವಿನ್ನು

ಅಳಕಿಲಿ ಮಳಕೀಲಿ ಬಂಜೆ ತೊಟ್ಟಿಲ
ವಾಮದ ಕಂಬಳಿ ಪರಸಾದ ಗಂಟ

ಅಮೋಘ ಸಿದ್ಧಗ ಮಾದೇವ ಕೊಟ್ಟಾನ
ಕೇಳಿರಿ ನೀವಿನ್ನು
ವಾಮದ ಕಂಬಳಿ ಪರಸಾದ ಗಂಟ
ನಂದೀ ಮ್ಯಾಲ ಹೇರಿಕೊಂಡ

ಕೈಲಾಸದಿಂದ ಅಮೋಘ ಹೊಂಟಾನ
ಕೇಳಿರಿ ನೀವಿನ್ನು
ಬಿಟ್ಟು ನಡದ ನಮ್ಮ ನಾಡ
ನಾನೂ ಬರತೀನಿ ನಿನ್ನ ಜೋಡ

ಹೊಳ್ಳಿ ನೋಡಬ್ಯಾಡ ಗುರುವಿನ ಕಡೆ
ಕೇಳಿರಿ ನೀವಿನ್ನು
ಆರಂಬನೋಡಿ ಅಮೋಘ ಸಿದ್ಧ
ಇಳಿವಿದ್ದಾನೋ ತನ್ನ ಜಾಡಿ

ಹೊಳ್ಳಿ ನೋಡ್ಯಾನೋ ಗುರುವಿನ ಕಡೆ
ಕೇಳಿರಿ ನೀವಿನ್ನು
ಮಾದೇವಾಗ್ಯಾನ ಆಕಳ ಕರ
ಭಕುತಿ ನೋಡ್ಯಾನ ಬಾಳ ಜೋರ

ಮಾಯವಾಗ್ಯಾನ ಮುಕ್ಕಣ ಪೂರ
ಕೇಳಿರಿ ನೀವಿನ್ನು
ದೇವರೊಲಿಮೆ ಇದ್ದವಗ ಯಾತರ
ಚಿಂತಿಯಿಲ್ಲ ಇನ್ನ

**ಕರಿಗಳ ಕಾದ ನಮ್ಮ ಶಿವ**

ಅರಿಯದ ಅರ್ಥ ಕೇಳಿಲ್ಲ ತಮ್ಮಾ, ಅಗಾಧ ನಮಗೇನು ಆಗಿಲ್ಲ
ಕುರಿಗಳು ಧರಣಿಗೆ ಬಂದ ಮಜಕೂರಾ ವರ್ಣಿಸಿ ಹೇಳುವೆ ತಿಳಿ ಮೊದಲಾ
ಗೌರೀ ಶಾಪದಿಂದ ಸಿದ್ಧ ಗಂಧರ್ವರು ಕುರಿಗಳು ‘‘ಆದರೋ ಸಂಪೂರ್ಣ
ನೋಡಿ ಸಾಂಬ ನಗ್ಗೇಡು ಆತುಯೆಂದು ಮಾಡಿದಾನು ಆಗೊಂದು ರಚನಾ
ಹರಿಹರರಿಗೆ ಕುರಿಯಕಾಯುವ ಸರತಿಮಾಡ ಒಂದೊಂದು ದಿನಾ
ಹರನ ಅಪ್ಪಣೆ ಮೀರಲಾರದೆ ಒಪ್ಪಿಕೊಂಡಿತೊ ದೇವಗಣಾ

ದೇವಲೋಕದಲ್ಲಿ ಇರುವವರೆಲ್ಲ ನೆವದಿ ಕಾದಾರೊ ಕುರಿಗಳನಾ
ಕೋಲ ಹಿಡಿದು ಶ್ರೀಲೋಲ ಕೃಷ್ಣನು ಕೊಳಲು ಊದಿ ಒಂದೇ ಸವನಾ
ದಿನ ಒಬ್ಬರು ಬಿಡದೆ ಕಾಯುತ ತೀರಿಸ್ಯಾರೋ ತಮ್ಮ ಸರತಿಯನಾ
ಸರ್ತಿ ಬಂದ ಪರಮಾತ್ಮ ಪಾರ್ವತಿಗೆ ಅರ್ತಿಲಿಂದ ಮಾಡ್ಯಾರ ಗಮನಾ
ಬಡಗಿ ಹಿಡಿದು ಕೈಯೊಳಗೆ ಶಂಕರನು ತಿರುವ್ಯಾಡಿ ಕುರಿಗಳನಾ
ತಲೆಯಮ್ಯಾಲಗೊಂಗಡಿ ಕುಂಚಗಿ ಧರಿಸಿಕೊಂಡಿದ್ದನೊ ಮುಕ್ಕಣ್ಣಾ
ಎಳಿಯ ಹುಲ್ಲನು ಮೇಸುತ ಸಾಂಬನು ಇಳಿದು ಬಂದ ಭೂಮಿಯ ಮ್ಯಾಲಾ
ಸಾಂಬನ ಊಟಕ್ಕೆ ಪಾರ್ವತಿದೇವಿಯು ಬುತ್ತಿ ಕಟ್ಟಿದಾಳ ಪ್ರೇಮದಲಿ
ಅಡವಿ ಭೋಜನ ಅಂಬಲಿರೊಟ್ಟಿ ಶಂಕರಿ ತಂದಾಳೊ ಬೇಗದಲಿ
ಹೆಸರ ಹುಲ್ಲನು ಹಸನಾಗಿ ಮೇಸುತ ಶಶಿಧರ ನಡೆದಾ ಅಡವಿಯೊಳು
ಬ್ಯಾಸರಾಗಿ ಶ್ರೀ ಗೌರಿ ಪಾರ್ವತಿ ಶೋಧಿಸಿ ನಡೆದಾಳ ಹಿಂಬಾಲಾ
ಪಾರ್ವತಿದೇವಿಯ ಮಾರಿ ನೋಡಿ ಮಾರಾರಿ ಶಂಕರನು ನಿಲ್ಲುತಲಿ
ಹೊತ್ತು ತಂದ ಅಂಬಲಿ ಬಕ್ಕರಿ ಇಡಿಸಿದ ಹಳ್ಳದ ದಂಡಿಯಲಿ
ಆರು ತಾಸು ಬಿಸಲೇರಿ ಬಂದಿತು ಕುರಿಗೆ ನೀರ ಕುಡಿಸಿದ ಪೈಲಾ
ಚಂದದಿಂದ ಶಿವನು – ಪಾರ್ವತಿ ಊಟ ಮಾಡಿದರೋ ಆ ಮ್ಯಾಲಾ
ಪಾರ್ವತಿದೇವಿಗೆ ಸಾಂಬ ಹೇಳತಾನ ಮಾತ ಕೇಳ ಮೋಹದ ಬಾಲಿ
ಹೋಗಿ ಬರುವೆ ನಾ ಅರ್ಧತಾಸು ನೀ ಕುರಿಯ ಕಾಯಬೇಕ ಹರುಷದಿ
ಹರನ ಮಾತಕೇಳಿ ಕುರಿಯ ಕಾಯಲಿಕ್ಕೆ ಗಿರಿಜಾದೇವಿ ಧರಿಸ್ಯಾಳೊ ಕೋಲಾ
ಕುರಿಹಿಕ್ಕಿಯನು ಸುಟ್ಟು ಭಸ್ಮವ ಧರಿಸಿಕೊಂಡನು ಶಿವ ಹಣಿಯ ಮ್ಯಾಲ
ಕಾವಿ ಲಾಂಚನ ಕಾಲೊಳು ಜಂಗು ತ್ರಿಸೂಲ ಹಿಡಿದಾನೋ ಕೈಯಲ್ಲಿ
ಜಂಗಮನಾಗಿ ಹೋದ ಸಾಂಬನು ತಿಮ್ಮಾಪೂರ ಎಂಬ ಗ್ರಾಮದಲಿ
ಆದಿಗೊಂಡನೆಂಬ ಗೌಡನ ಮನಿಗೆ ಹೋಗಿ ನಿಂತ ಆನಂದದಲಿ
ಭೂಮಿಯ ದಾನ ನೀಡಂತ ಬೇಡಿದಾನು ಆದಿಗೊಂಡನ ಮನೆಯಲ್ಲಿ
ಐದು ಮೊಳಾ ಭೂಮಿ ಕೊಡೋ ನಿನ್ನ ಕೀರ್ತಿಯನ್ನು ಹೊಗಳುವೆ ಪೃಥ್ವಿಯಲ್ಲಿ
ಭಕ್ತಿಲೆ ಗೌಡ ಭೂಮಿದಾನವನು ನೀಡಿದ ಶಿವನಿಗೆ ಅರ್ತಿಯಲಿ
ಆದಿಗೊಂಡನು ಭಕ್ತಿಗೆ ಮೆಚ್ಚಿ ವರವ ಕೊಟ್ಟ ಹರ ಕರುಣದಲಿ
ಹೊರಳಿ ಬಂದು ಪಾರ್ವತಾದೇವಿ ಆದ ಸಂಗತಿ ತಿಳಿಸುತಲಿ
ದಾನ ನೀಡಿದ ಭೂಮಿಯಲ್ಲಿ ನಿಂತ ತ್ರಿಸೂಲದಿಂದ ತಿವಿಯುತಲಿ
ತಿವಿದ ಭೂಮಿಯೊಳು ಗವಿಯು ಆದೀತೊ ತಿಳಿಯರೆಪ್ಪ ಮುಂದಿನ ಲೀಲಾ
ತ್ರಿಸೂಲದಿಂದ ತಿವಿದ ಗವಿಯೊಳು ತಿರುವಿದಾನ ಕುರಿಗಳ ಹಿಂಡಾ
ಕುರಿಗಳೆಲ್ಲ ಗವಿಯೊಳಗೆ ಅಡಗಿದಾಗ ಮುಂದೆ ತಂದು ಹಚ್ಚಿ ಹಿಂಡಾ
ಪಂಚತತ್ವ ಎಂಬ ಚಿಲಕ ಮಾಡಿದಾನು ಜ್ಞಾನ ಎಂಬುವ ಹೊಸ್ತಲ ಕೊರದಾ
ಪಾರ್ವತಾದೇವಿಯ ಮೂಗುತಿ ತೆಗೆದು ಬೀಗ ಹಾಕಿ ಮುಚ್ಯಾಳ ದವಡಾ
ಶಿವನು ಪಾರ್ವತಿ ಸ್ವರ್ಗಕ ಹೋದಾರು ಕೇಳಿರಪ್ಪ ಹಾಡಾ
ದಾನ ನೀಡಿದ ಭೂಮಿಗೆ ಬೀಜಾ ಬಿತ್ತಲಿಲ್ಲ ಗ್ರಾಮದ ಗೌಡಾ
ಗವಿಯ ಬಾಗಿಲಿಗೆ ಹುತ್ತ ಬೆಳದಿತೋ ಸುತ್ತ ಭೂಮಿ ಬಿದ್ದಿತೋ ಪಡಾ

ಶಂಕರಿ ಮೂಗುತಿ ಮೊಳಕಿ ಒಡದಿತೋ ಬೆಳದ ಆತು ಮುತ್ತಲ ಗಿಡಾ
ಮುತ್ತಲ ಗಿಡಾ ಅಲ್ಲಿ ಹುಟ್ಟಿತು ತೊಗೊ ನಿನ್ನ ತೋಡಿಗೆ ತೋಡಾ
ಧರೆಯೊಳು ಮೆರೆಯುವ ಪುರ ಹುಲಕುಂದ ಹಿರಿಮಠೇಶನ ಕವಿಕುಶಲಾ™

**ಮುಂಡಾಸುರ ದೈತ್ಯನ ವಧೆ**

ಗುಲ್ಲ ಮಾಡದೆನ್ನ ಸೊಲ್ಲ ಕೇಳರಿ ನಿಂತು ಕೇಳುವೆನು ಕೈಮುಗಿದಾ
ಮುಂಡಾಸೂರ ಎಂಬ ಪುಂಡ ದೈತ್ಯನ ರುಂಡ ಕಡಿದ ರೇವಣಸಿದ್ಧ
ಮುಂಡಾಸೂರನು ಮೀರಿ ಮಲತು ನಿಂತಿದ್ದನು ಮಂಡಲದೊಳು ಮೆರೆಯುತಲಿದ್ದ
ನಾರಿದ್ರೋಹಿ ಗುರುದ್ರೋಹಿ ರಾಕ್ಷಸ ಮಾಡತಿದ್ದ ಶಿವನಿಗೆ ನಿಂದಾ
ಪುಣ್ಯವೆಂಬುದು ಜನ್ಮದೊಳಗ ಇಲ್ಲ ಗನ್ನಗಾತಕನು ಮತಿ ಮುಂದಾ
ಅನ್ನೇದ ಕೆಲ್ಸ ಅಂಜದೆ ಮಾಡುವಾ ಆತ್ಮದ್ರೋಹಿ ಎಂದೆನಿಸಿದ್ದಾ
ಕರುಣವಿಲ್ಲದ ಕಟುಕ ರಾಕ್ಷಸ ನರರ ಮಾಂಸ ಭಕ್ಷಿಸುತಿದ್ದಾ
ಘಾತಕನೋ ಕುಲಪಾತಕನೋ ಭೂತಳದೊಳು ಧರಿಸಿದ ಬಿರದಾ
ಮದಾಂಧನಾಗಿ ಮಹೀತಳದೊಳು ಮೀರಿ ಹಾವಳಿ ನಡಿಸಿದ್ದ
ಚಾರುಗಾತ್ರ ಪತಿವೃತಾ ಸ್ತ್ರೀಯರ ಸೀರಿಕಳೆದು ಮರ್ಯಾದೆಗೆಡಸಿದಾ
ಖೂಳ ದೈತ್ಯನ ಕಾಟಕಾಗಿ ಗೋಳಾಡತಾರ ಜನಾ ಎಡಬಿಡದೇ
ಸರ್ವಜನಾ ಎಲ್ಲಾ ಭೋರಿ ಬಳಲತಾರ ರೇವಣ ಸಿದ್ಧನ ಪಾದ ಹಿಡಿದ
ಪಾದ ಹಿಡಿದು ತಮಗದ ಕಷ್ಟವನು ಹೇಳಿ ಬೇಡಿಕೊಂಡಾರೋ ಬಿದ್ದಾ
ಕುಜನ ಶಿಕ್ಷಕಾ ಸುಜನ ರಕ್ಷಕಾ ಪಾಲಿಸೋ ಗುರು ದಯದಿಂದ
ಗೋಳ ಕೇಳಿ ತನ್ನ ಭಕ್ತಮಂಡಳಿಗೆ ವಚನ ಕೊಟ್ಟಾನೋ ಗುರುರಾಯಾ
ಮುಂಡಾಸೂರನ ರುಂಡವ ತೆಗೆದು ಮೆರೆಸುವೆ ಹೇಯವನಾ
ಮಾರಿ ಸಣ್ಣ ಮಾಡಿ ಬಳಲ ಬೇಡಿರೊ ದೂರ ಮಾಡುವೆನು ನಿಮ್ಮ ಭಯಾ
ಭರದಿ ಹೋಗಿ ಶಿರಹರಿದು ಖಡ್ಗದಿಂದ ಕೊರೆದು ಬಿಡುವೆ ದೈತ್ಯನ ಕೈಯಾ
ಇಷ್ಟು ಅಭಯವ ಕೊಟ್ಟು ಕಳಿಸಿದಾನು ಹೊಂಟಹೋತು ಜನಸಮೂಹ
ಶತ್ರುರಾಕ್ಷಸನ ಕೊಲ್ಲಲೋಸ್ಕರ ಶಸ್ತ್ರಧರಿಸಿ ಎತ್ತಿದ ಕೈಯಾ
ಕೋಟಿಸೂರ್ಯರು ಮಾಡಿದಂತೆ ಥಳಾಥಳಾ ಹೊಳೆವ ಖಡ್ಗದ ಛಾಯಾ
ಶ್ರೀ ಗುರುರೇವಣಸಿದ್ಧ ಪ್ರಭುವಿಗೆ ಯಾರೂ ಇಲ್ಲರಿ ಸಹಾಯಾ
ದಂಡು ದಳಾ ಇಲ್ಲ ಮದ್ದುಗುಂಡು ಇಲ್ಲ ತಯ್ಯಾರಾದ ಸದ್ಗುರುರಾಯಾ
ಸಾರಿ ಚೀರಿ ಜಯಭೇರಿ ಹೊಡೆದು ವೈರಿಕೂಡ ತೆಗೆದಾನ ನ್ಯಾಯಾ
ದೈತ್ಯ ಆಗ ದಂಡೆತ್ತಿ ಬಂದನೋ ಹತ್ತುಕೋಟಿ ಕಾಲ್ಬಲ ಹಯಾ
ವೀರ ಧೀರ ಗಂಭೀರ ಸೈನಿಕರು ರಣದೊಳು ಕುಣಿಯುತ್ತಿದ್ದರು ತೈತಯ್ಯಾ
ಮಸ್ತಿಲಿಂದ ಮದಯುಕ್ತ ದೈತ್ಯನು ಸಿಸ್ತಿನಿಂದ ಯುದ್ಧಕೆ ಬಂದಾ
ಧಾವಿಸಿ ಶ್ರೀ ಗುರು ರೇವಣಸಿದ್ಧನು ಯುದ್ಧರಂಗದಲಿ ಅಡಿ ಇಟ್ಟಾ
ರಾಕ್ಷಸಗ ಮತ್ತು ರೇವಣಸಿದ್ಧಗ ನಡದೀತ ಭಯಂಕರ ಬಡಿದಾಟ
ಸುತ್ತಲು ರಾಕ್ಷಸದಂಡು ಮುತ್ತಿಗೆ ಹಾಕಿತು ಮಧ್ಯದಲಿ ನಿಂತು ಎದಿಗೊಟ್ಟ

ತಾಸಿನೊಳು ದಶಕೋಟಿ ಸೈನ್ಯವನು ನಾಶಮಾಡಿ ಓಡಿಸಿಬಿಟ್ಟಾ
ಒಬ್ಬನೇ ರೇವಣ ಅಬ್ಬರಿಸುತ ಕಣ ಬೊಬ್ಬೆ ಹೊಡೆದು ಬಿಚ್ಚಿದ ಜಟಾ
ಭಕ್ತಿಯಿಂದ ಶಿವನಾಮ ಭಜಿಸುತ ದೈತ್ಯನ ಕೊರಳಿಗೆ ಕೈಯಿಟ್ಟಾ
ಸಾಧು ಸಂತ ಶಿವಶರಣ ಜನರನ್ನು ಪರಿಪರಿಯಲಿ ಕಾಡಿದ ದುಷ್ಟಾ
ಶಿವದ್ರೋಹಿ ಇನ್ನ್ಯಾಂಗ ಬದಕುವಿ ತಾಳೋ ನನ್ನ ಖಡ್ಗದ ಪೆಟ್ಟಾ
ರೇವಣಸಿದ್ಧನ ನುಡಿಯನು ಕೇಳಿ ರಾಕ್ಷಸಗ ಬಹಳ ಬಂದಿತೋ ಸಿಟ್ಟಾ
ಡುರೆ ಅಂತ ಹಾರಿ ಜಿಗಿದು ಬಂದು ಕೈಹಿಡಿದಾನೋ ಮುಕ್ಕಾಟ್ಟಾ
ಮಂತ್ರವ ಜಪಿಸಿ ರೇವಣರು ಊದಿದಾರ ದೈತ್ಯ ಓಡಿದಾನು ದಿಕ್ಕೆಟ್ಟಾ
ಬೆನ್ನ ಹತ್ತಿ ತಿರುವ್ಯಾಡಿ ಜಡಿದರ ರಾಕ್ಷಸ ಬಿದ್ದಾನೊ ತಕ್ಕೆಟ್ಟಾ
ಖಡ್ಗದ ತುದಿಯಿಂದ ತಿವಿದ ಕರುಳಗಳ ಹರಿದು ತೂರ್ಯಾಡಿದ ತಲೆಕಿರೀಟಾ
ಮುಂಡಾಸೂರನು ಮರಾಮರಾ ಮರಗುತ ಯುದ್ಧರಂಗದೊಳು ಮೃತಪಟ್ಟಾ
ನದಿ ಆಕಾರ ನೆತ್ತರ ಹರದಿತೋ ಅಸ್ತಿ ಚರ್ಮವನು ಹಿರಿದೊಗೆದಾ
ಧರಿಯೊಳು ದೊಡ್ಡ ಕ್ಷೇತ್ರ ಕುಳಗೇರಿ ತಂದಿ ಸಿದ್ಧನು ನೆನದಿದ್ದಾ

~ ™

**ರೇವಣಸಿದ್ಧ**

ಸರಸವಾದ ಸಾರಾಂಶ ಹೇಳತೀವಿ ಹರುಷದಿಂದ ಕೇಳರಿ ಕುಂತಾ
ರೇವಣಸಿದ್ಧನು ಹುಟ್ಟಿಬಂದ ಮ್ಯಾಲಾ ಸೃಷ್ಟಿಯೆಲ್ಲಾ ಆತೋ ಉದ್ದರಣಾ
ಕೊಲ್ಲಿಪಾಕಿ ಸೋಮೇಶ ಲಿಂಗದ ಪೀಠದಲ್ಲಿ ಹುಟ್ಟಿದವರಿವರಾ
ಆದ ಇತಿಹಾಸ ಓದಿ ಹೇಳರಿ ಕೇಳರಿ ಶಾಂತಿ ಆತ ನಮ್ಮ ಮನಾ
ಅಳಿದ ದುಷ್ಟರನು ಕಳೆದ ಕರ್ಮವನು ಬೆಳೆದ ಭೂಮಿಯೊಳು ಸಂಪೂರ್ಣ
ಉಲ್ಲಾಸದಿಂದಲಿ ಕೊಲ್ಲಿಪಾಕಿ ಬಿಟ್ಟು ಹೊರಟ ಒಂದು ದಿನಾ ಸಂಚಾರಕ
ಭವಿಗಳೆಲ್ಲರಿಗೆ ಬೋಧ ಮಾಡುತ ಅಷ್ಟಾವರಣದ ಮಹಿಮೆಯನಾ
ಗುರುಲಿಂಗಜಂಗಮ ಪಾದೋದಕ ಪ್ರಸಾದ ಭಸ್ಮದ ಮಹಾತ್ಮೆಯನಾ
ಭಕ್ತಿಯಿಂದ ಶಿವಮಂತ್ರ ಜಪಿಸಲು ಏಳು ಜಲ್ಮದ ಪಾಪವನಾ
ಏಳು ಜಲ್ಮದ ಪಾಪ ಹೋಗವದು ಪವಿತ್ರ ಆತನು ಶಿವಶರಣ
ರೇವಣಸಿದ್ಧರ ಬೋದೆಯಿಂದಲಿ ಸರ್ವಜನರಿಗೆಲ್ಲ ಸನ್ಮಾನಾ
ಮೋಕ್ಷ ಕಾರಣಕ ಯೋಗ್ಯವಾದ ಗುರುದೀಕ್ಷ ಹೊಂದಿದಾರ ಸಂಪೂರ್ಣ
ಸಂಚಾರ ಮಾಡುತ ಸಾಗಿ ಮುಂದೆ ಬಂದು ಸರೂರಕ್ಕೆ ಹಾಕ್ಯಾರ ಠಾಣಾ
ಸರೂರ ಗ್ರಾಮದ ಶಾಂತ ಮುತ್ತಯ್ಯಗ ಕೊಟ್ಟಾರ ಶಿವಲಿಂಗ ದೀಕ್ಷೆಯನಾ
ಭಕ್ತಿಯನ್ನು ಪ್ರಸಾರಗೊಳಿಸುತ ನಿತ್ಯದಲಿ ಸಾಂಬನ ಭಜನಾ
ಧರ್ಮಪತಾಕಿ ಹಿಡಿದು ಹಸ್ತದಲಿ ಕರ್ಮಿಗಳಿಗೆ ಗಂಟಲ ಗಾಣಾ
ಶಾಂತಾ ಮುತ್ತಯ್ಯನು ಶುದ್ಧ ಕರುಣದಿ ಹಿಡಿದಾನ ಮುಕ್ತಿಯ ಮಾರ್ಗವನಾ
ಸರಸವಾದ ಸಾರಾಂಶ ಹೇಳತೀನಿ ಹರುಷದಿಂದ ಕೇಳರಿ ಕುಂತಾ
ಸರೂರದಿಂದ ಪ್ರಯಾಣ ಬೆಳಿಸಿ ಲಂಕಪುರದ ಬಂದಾನ ಮತ್ತ

ಲಂಕಪುರದೊಳು ರೂಪಬದಲಿಸಿ ಮಾಯಾದೇವಿಯ ಮನೆಯಲಿ ನಿಂತಾ
ನೌಕರನಾಗಿ ನೀರ ತರುವನು ನಿತ್ಯದಲಿ ಕಾವಡಿಹೊತ್ತಾ
ಮಾಯಾದೇವಿಗೆ ತಿಳಿಯದ್ಹೋಯಿತು ರೇವಣಸಿದ್ಧೇಶ್ವರ ಗುರುತಾ
ಒಂದಾನೊಂದು ದಿನ ವಿಭೀಷಣಗೆ ಭೆಟ್ಟಿಯಾದನೋ ಸಾಕ್ಷಾತಾ
ಜ್ಞಾನದೃಷ್ಟಿಯಿಂದ ನೋಡಿ ವಿಭೀಷಣ ಮಾನಕೊಟ್ಟು ಮಾಡಿದ ಮಮತಾ
ವೇಷ ಬದಲುಮಾಡಿ ಮೋಸ ಮಾಡಿದ್ಯಾಕೆ ಸೋಸಿ ಹೇಳೋ ಸದ್ಗುರುನಾಥಾ
ರೇವಣಸಿದ್ಧರು ಉತ್ತರಕೊಟ್ಟರು ಸದಾ ನಾನು ಭಕ್ತರ ತೊತ್ತಾ
ವರಚರಣಗಳಿಗೆ ಶರಣ ಮಾಡುವೆನು ಕರುಣದಿಂದ ಕಾಪಾಡಂತಾ
ದಯಾದೃಷ್ಟಿಯಿಂದ ವರವ ನೀಡುತ ತಲಿಯ ಮ್ಯಾಲೆ ಇಟ್ಟಾನೊ ಹಸ್ತಾ
ಶ್ರೇಷ್ಠ ಮಂತ್ರವನು ಊದಿ ಕಿವಿಯೊಳು ಪಾದೋದಕವನು ಸಹಿತಾ
ಪಾವನ ರೂಪಿಯಾದ ವಿಭೀಷಣ ಪಾದೋಕದವನು ಸೇವಿಸುತ
ಗುರು ಸ್ವರೂಪ ರೇವಣಸಿದ್ಧರ ಹಸ್ತದಿಂದ ಆದ ಶಿವಭಕ್ತ
ದೈತ್ಯ ಹೋಗಿ ಶಿವಭಕ್ತನಾದನೋ ಹತ್ತಿದ ಮುಕ್ತಿಯ ಸೋಪಾನ
ಶ್ರೀ ಗುರು ರೇವಣಸಿದ್ಧೇಶ್ವರನಿಗೆ ಮರೆಗೊಂಡು ದೊರಿ ವಿಭೀಷಣ
ಧನ್ಯ ಲಂಕಪೂರ ಪುಣ್ಯಭೂಮಿ ಮಾಡೆಂದು ಬೇಡಿದನು ಲಂಕೆಯನಾ
ಮೂರು ಕೋಟಿ ಶಿವಲಿಂಗ ಸ್ಥಾಪಿಸಿ ಅನುದಿನ ನಡಿಸ್ಯಾರೋ ಲಿಂಗಾರ್ಚನ
ಭಕ್ತಿ ಬೀಜವನು ಬಿತ್ತಿ ಸಿದ್ಧೇಶ್ವರತ್ತಮಾರ್ಗವ ತಿಳಿಸಿದ ಪೂರ್ಣ
ಸರ್ವಜನ ಹಣಿಯ ಮ್ಯಾಲೆ ವಿಭೂತಿವೀರಶೈವ ಧರ್ಮ ಚೆನ್ನ
ಧರ್ಮಪತಾಕಿ ಹಿಡಿದ ಹಸ್ತದಲಿ ಕರ್ಮಿಗಳಿಗೆ ಗಂಟಲ ಗಾಣಾ
ಸತ್ಯಸಾಕ್ಷ ಸರ್ವೇಶ ಚಿದ್ರೂಪ ಹೇಳಲಾರೆ ಸಿದ್ಧನ ವರಣಾ
ಶಿವನ ಶಾಪದಿಂದ ಅವನಿಯೊಳು ಅವತರಿಸಿ ತೋರಿದಾನು ರೂಪವನಾ
ದಾಸರಾಗಿ ಸಿದ್ಧೇಶ್ವರನ ಸ್ಮರಿಸಲು ದೋಷವೆಲ್ಲ ಆಗತದ ಹರಣ
ಸಂದು ಉಳಿತು ಮತ್ತೊಂದು ಹಾಡಿನೊಳು ಮುಂದೆ ಹೇಳುವೆನು ಸಂಪೂರ್ಣ
ಪೂರ್ಣ ಆತನ ವರ್ಣ ಮಾಡಲು ಆದಿಶೇಷಗ ಆಗದ ಕಥನಾ
ಸ್ಮರಣ ಮಾಡುವೆವು ಕುಳಗೇರಿ ಗುರುಸಿದ್ಧೇಶ್ವರನ ಚರಣವನಾ™

**ಭಕ್ತ ಮಡಿವಾಳ**

ಒಪ್ಪಿಟ್ಟು ಹಾಡೇನು-ನೆಪ್ಪಿಟ್ಟು ಕರದೇನು
ಗುರುವು ರೇವಣಸಿದ್ಧಾನೇ
ಗುರುವು ರೇವಣಸಿದ್ಧನೆಂದರ
ದೊಡ್ಡವನಿದ್ದ ಬನ್ನೀರೆ

ಕೈಲಾಸಕ ಮರ್ತ್ಯ ಲೋಕಕ
ಮಲ್ಲಿಗ್ಹೂವಿನ ಸೋಪಾನೇ

ಕೈಲಾಸವ ಬಿಟ್ಟಾನ ರೇವಣ
ಮರ್ತ್ಯಲೋಕಕ ಬಂದಾನೇ

ಮರ್ತ್ಯಲೋಕದೊಳಗ ಬಂದಾನ ರೇವಣ
ಏನೇನ ಕೌತುಕ ಮಾಡ್ಯಾನೇ
ಬಿಕ್ಷಾವ ಮಾಡ್ಯಾನ ಲಕ್ಷವ ಸಲುವ್ಯಾನ
ಗುರುವು ರೇವಣಸಿದ್ಧಾನೇ

ನಂದ್ವಾಡಗಿ ನಂದವ್ವನ ಮನಿಗೇ
ಕೋರಾಣ ಭಿಕ್ಷಾ ಅಂದಾನೇ
ನಂದ್ವಾಡಗಿ ನಂದವ್ವ ಅಪ್ಪ
ಏನೊಂದ ಹೇಳತಿದ್ದಾಳೆ

ಕರಗೋಳ ಬಿಟ್ಟೇನ ಮರಗೂಳ ಹಾಕೀನಿ
ಮುಂದಿನ ಮನಿಗನುವಾಗಲಿ
ಗುರುವು ರೇವಣಸಿದ್ಧಾನಪ್ಪ
ಮುಂದಕ ಸಾಗಿ ನಡದಾನೇ

ಒಕ್ಕಲಿಗೇರ ಮುದ್ದವ್ವನ ಮನಿಗೆ
ಕೋರಾಣ ಭಿಕ್ಷಾ ಅಂದಾನೇ
ಒಕ್ಕಲಿಗರ ಮುದ್ದವ್ವ ಅಪ್ಪ
ಏನೊಂದ ಹೇಳುತಿದ್ದಾಳೋ

ಗಂಡುಗುಣಲಾಕ ಕೊಟ್ಟೇನ್ನೈನೋರೆ
ಮುಂದಿನ ಮನಿಗನುವಾಗಲೇ
ಗುರುವು ರೇವಣಸಿದ್ಧಾ ಅಪ್ಪ
ಮುಂದಕ ಸಾಗಿ ನಡೆದಾನೋ

ಅಗಸರ ಮಡಿವಾಳನ ಮನಿಗೇ
ಕೋರಾಣ ಭಿಕ್ಷಾ ಅಂದಾನೇ
ಅಗಸರ ಮಡಿವಾಳ ಅಪ್ಪ
ಗುರುವಿನ ಗುರ್ತೊಂದ ಹಿಡದಾನೋ

ಗುರುವಿನ ಗುರ್ತೊಂದ ಹಿಡಿದಾನಪ್ಪ
ಕರೀಕಂಬಳಿ ತಂದಾನೋ
ಕರಿಯ ಕಂಬಳಿ ತಂದಾನಪ್ಪ
ಮುರದು ಗದ್ದಿಗಿ ಹಾಕ್ಯಾನೋ

ಮುರುದ ಗದ್ದಿಗಿ ಮ್ಯಾಗೇಳೊ ನಮ್ಮ
ರೇವಣ ಮೂರುತ ಮಾಡ್ಯನೋ
ಅಗಸರ ಮಡಿವಾಳಪ್ಪ ಅಂವ
ಗೋದಿ ಗುಮ್ಮಿಗೆ ಹ್ವಾದಾನೋ

ಗೋದಿ ಗುಮ್ಮಿಗೆ ಹ್ವಾದಾನಪ್ಪ
ಮರತುಂಬಿ ಗೋದಿ ತುಂಬ್ಯಾನೊ

ಮರತುಂಬಿ ಗೋದಿ ತುಂಬ್ಯಾನ ಮಡಿವಾಳ
ಗುರುವಿಗೆ ನೀಡಲು ಬಂದಾನ
ಗುರುವಾ ರೇವಣಸಿದ್ದಾ ಅಪ್ಪ
ಏನೊಂದ್ಹೇಳತಿದ್ದಾನೋ

ಇವೇ ಗೋದಿ ಅಲ್ಲೋ ಮಡಿವಾಳಾ
ದೇವರು ನನಗ ಕೊಟ್ಟಾನೋ
ಅಗಸರ ಮಡಿವಾಳಪ್ಪ ಇಂವ
ತಿರಿಗಿ ಹಿಂಬರಿಕಿ ಬಂದಾನೋ

ತಿರಿಗಿ ಹಿಂಬರಕಿ ಬಂದಾನ ಮಡಿವಾಳ
ದೇವರ ಮನಿಯ ಹೊಕ್ಕಾನೋ
ದೇವರ ಮನಿಯ ಹೊಕ್ಕಾನೊ ಮಡಿವಾಳ
ಹವಳ, ಮುತ್ತು ತುಂಬ್ಯಾನೋ

ಹವಳ, ಮುತ್ತು, ತುಂಬ್ಯಾನೊ ಮಡಿವಾಳ
ಗುರುವಿಗೆ ನೀಡಲು ಬಂದಾನೋ
ಗುರುವು ರೇವಣಸಿದ್ಧಾ ಅಪ್ಪ
ಏನೊಂದ್ಹೇಳತಿದ್ದಾನೋ

ಇವೇ ಹವಳ ಅಲ್ಲೋ ಮಡಿವಾಳ
ದೇವರು ನನಗೆ ಕೊಟ್ಟಾನೋ
ಅಗಸರ ಮಡಿವಾಳಪ್ಪ ಅಂವ
ಏನೊಂದ್ಹೇಳತಿದ್ದಾನೋ

ಎನ ಬೇಡತಿ ಬೇಡು ನನ ಗುರುವೆ
ಬೇಡಿದ್ದ ಕೊಡತೀನಂದಾನೋ
ಗುರುವು ರೇವಣಸಿದ್ದಾ ಅಪ್ಪ
ಏನೊಂದ್ಹೇಳತಿದ್ದಾನೋ

ಹನ್ನೆರಡೊರಸಿನ ಹಳೆಯ ಕಂತಿ
ಬಾಳ ಮಾಸ್ಯಾವಂದಾನೋ
ಬಾಳ ಮಾಸ್ಯಾವಂದರ ಕಂತಿ
ಗಂಜಿ ಮಾಡಬೇಕಂದಾನೋ

ಗಡಿಗ್ಯಾಗ ಕುಚ್ಚಲಿಬಾರದಪ್ಪ
ನೀರಾಗ ಸೆಳೆಯಲಿಬಾರದೋ
ಬಂಡಿಗೆ ಬಡಿಯಲಿಬಾರದಪ್ಪ
ಕಾಲಲಿ ತುಳಿಯಬಾರದೊ

ಏಪ್ಪತ್ತೊರಸಿನ ಮುಪ್ಪಿನ ಕಂತಿ
ಮುಕ್ಕಾದರ ನಾ ಹಿಡಿಲಾರೆನೋ
ಅರವೊತ್ತುರಸಿನ ವರವಿನ ಕಂತಿ
ಹರದರ ನಾ ಹಿಡಿಲಾರನೋ

ಗುರುವು ರೇವಣಸಿದ್ಧಾನಪ್ಪಾ
ಅಂದು ಹೀಗೊಂದ್ಹೇಳತಿದ್ದಾನೋ
ಮೂರು ಮಾತು ಹೇಳ್ಯಾನೋ ರೇವಣ
ಅಲ್ಲೇ ಮಾಯವಾದನೋ

ಅಗಸರ ಮಡಿವಾಳನಪ್ಪ ಅಂವ
ಬಾಳ ಗಾಬರ‍್ಯಾದಾನೋ
ಅಗಸರ ಮಡಿವಾಳನ ಹೆಂತಿ
ಬಾವಿ ನೀರಿಗೆ ಹೋಗ್ಯಾಳೋ

ಬಾವಿ ನೀರಿಗೆ ಹೋಗ್ಯಾಳಪ್ಪ
ಭರಮಾಡಿ ಮನಿಗೆ ಬಂದಾಳೋ
ಭರಮಾಡಿ ಮನೆಗೆ ಬಂದಾಳಪ್ಪ
ಕೊಡ ತಮ್ಮನಿಯಾಗಿಳಿವ್ಯಾಳೋ

ಕೊಡ ತಮ್ಮನಿಯಾಗಿಳಿವ್ಯಾಳಪ್ಪ
ಗಂಡನ ಮಾರಿ ನೋಡ್ಯಾಳೋ
ಯಾರೇನ ನಿಂದಿಯಾಡ್ಯಾರ ಗುರುವೇ
ಯಾರೇನು ಕುಂದನಾಡ್ಯಾರೇ

ಯಾರೇನು ಕುಂದನಾಡಿಲ್ಲ ಹೆಣ್ಣೇ
ಯಾರೇನು ಕುಂದನಾಡಿಲ್ಲೇ

ಗುರುವು ರೇವಣಸಿದ್ಧನೋ ಅಂವ
ಭಿಕ್ಷೆ ಬೇಡಲು ಬಂದಿದ್ದನೋ

ಜ್ವಾಳಾ ನೀಡಿದರ ಹಿಡಿಲಿಲ್ಲ ಹೆಣ್ಣೇ
ಗೋದಿ ನೀಡಿದರ ಹಿಡಿಲಿಲ್ಲೇ
ಗೋದಿ ನೀಡಿದರ ಹಿಡಿಲಿಲ್ಲ ಹೆಣ್ಣೇ
ಹವಳ ನೀಡಿದರ ಹಿಡಿಲಿಲ್ಲೇ

ಹನ್ನೆರಡು ವರಸಿನ ಹಳೆಯ ಕಂತಿ
ಬಾಹಳ ಮಾಸ್ಯಾವಂದಾನೇ
ಬಾಹಳ ಮಾಸ್ಯಾವಂದಾನ ಕಂತಿ
ಗಂಜೀ ಮಾಡಬೇಕಂದಾನೇ

ಗಡಿಗ್ಯಾಗ ಕುಚ್ಚಲು ಬಾರದಂತ
ನೀರಲಿ ಸೆಳೆಯಬಾರದೋ
ಬಂಡಿಗೆ ಬಡಿಯಲಿ ಬಾರದಂತ
ಕಾಲಲಿ ತುಳಿಯ ಬಾರದೋ

ಎಪ್ಪತ್ತೊರಸಿನ ಮುಪ್ಪಿನ ಕಂತಿ
ಮುಕ್ಕಾದರ ನಾ ಹಿಡಿಯಲಾರೆನೇ
ಅರವತ್ತೊರಸಿನ ವರವಿನ ಕಂತಿ
ಹರದರ ನಾ ಹಿಡಿಲಾರನೇ

ಅಗಸರ ಮಡಿವಾಳನ ಹೇಣ್ತಿ
ಇದೇನೆ ಆಗಾದಂದಾಳೋ
ಇದೇನಗಾದಂದಾಳ ಕಂತಿ
ಗಂಜೀ ಮಾಡೂನಂದಾಳೋ

ಗಂಡಾ ಹೇಣ್ತಿ ಕೂಡ್ಯಾರವರು
ಊರನ ಅರವಿ ಎತ್ಯಾರೋ
ಊರನ ಅರವಿ ಎತ್ಯಾರಪ್ಪ ಅವರು
ಹೊಳ್ಳಿಸಿ ಗಂಟ ಬಿಗಿದಾರೋ

ಹೊಳ್ಳಿಸಿ ಗಂಟ ಬಿಗಿದಾರಪ್ಪ ಅವರು
ಏರು ಮಾರ್ಗೊಂದು ಹಿಡಿದಾರೋ
ಏರು ಮಾರ್ಗೊಂದು ಹಿಡಿದಾರಪ್ಪ ಅವರು
ಹಾಲ ಹಳ್ಳಕ ಹೋಗ್ಯಾರೋ

ಊರ ಅರವಿ ಒಗೆದಾರಪ್ಪ ಅವರು
ಗುರುವಿನ ಕಂತಿ ಹಿಡಿದಾರೋ
ಬಾರ ಬಾರ ನನ ಮೋಹದ ಮಡದಿ
ಕಂತೀ ಗಂಜೀ ಮಾಡೂನು

ಅಗಸರ ಮಡಿವಾಳನ ಹೇಣ್ತಿ
ಏನೊಂದ್ಹೇಳತಿದ್ದಾಳೊ
ಎತ್ತಿ ನೆಲಕ ಒಗಿಬೇಕು ನನ್ನ
ಕುತ್ತೀಗ್ಯಾದರೂ ಕೊಯ್ಯಬೇಕೊ

ಮಲಿಯ ಮೂಗ ಕೊಯ್ಯಬೇಕು ಅಲ್ಲಿ
ಒಲಿಯ ಗುಂಡ ಹೂಡಬೇಕು
ಕೈಯ ಕಾಲ ಕಡಿಬೇಕೋ ಅಲ್ಲಿ
ಕಟಗೀ ಕುಳ್ಳ ಮಾಡಬೇಕೋ

ತಲಿಯ ಡೊಗೀ ಒಡೀಬೇಕು ಅಲ್ಲಿ
ಕುಚ್ಚುವ ಗಡಗೀ ಮಾಡಬೇಕು
ತಲಿಯ ಮಿದುಡ ತರೀಯಬೇಕು ಅಲ್ಲಿ
ಸೇದಿ ಸುಣ್ಣವ ಮಾಡಬೇಕು

ಡೊಕ್ಕೀ ಎಲುವ ಮುರಿಬೇಕು ಅಲ್ಲಿ
ಒಗಿಯುವ ಬಂಡಿ ಮಾಡಬೇಕು
ಹರಿಯುರಗತ ತಗೀಬೇಕು ಅಲ್ಲಿ
ಹಾಲ ಹಳ್ಳವ ಮಾಡಬೇಕು

ಹಾಲ ಹಳ್ಳವ ಮಾಡಬೇಕು ಅಲ್ಲಿ
ಕಂತೀ ಗಂಜಿ ಮಾಡಬೇಕು
ಅಗಸರ ಮಡಿವಾಳನ ಹೇಣ್ತಿ
ಹೀಂಗೆಂದ್ಹೇಳತಿದ್ದಾಳೋ

ಅಗಸರ ಮಡಿವಾಳನಪ್ಪ ಅಂವ
ಬೋರ್ಯಾಡಿ ದುಃಖವ ಮಾಡ್ಯಾನೋ
ಬೋರ್ಯಾಡಿ ದುಃಖವ ಮಾಡ್ಯಾನಪ್ಪ ಅಂವ
ತನ್ನ ಮನೀಗೆ ಬಂದಾನೋ

ಮಲೀ ಮೂಗ ಕೊಯ್ದಾನಪ್ಪ
ಓಲಿಯ ಗುಂಡ ಹೂಡ್ಯಾನೋ

ಕೈಯ ಕಾಲ ಕಡಿದಾನಪ್ಪ ಅಂವ
ಕಟಗಿ ಕುಳ್ಳು ಮಾಡ್ಯಾನೋ

ತಲೆಯ ಡೋಗಿ ಒಡೆದಾನಪ್ಪ ಅಂವ
ಕುದಸು ಗಡಗೀ ಮಾಡ್ಯಾನೋ
ತಲಿಯ ಮಿದುಡು ತಗದಾನಪ್ಪ ಅಂವ
ಸೇದಿ ಸುಣ್ಣವ ಹಚ್ಚ್ಯಾನ

ಡೊಕ್ಕಿ ಎಲು ಮುರಿದಾನಪ್ಪ ಅಂವ
ಒಗಿಯುವ ಬಂಡೀ ಮಾಡ್ಯಾನೋ
ಹರಿಯುವ ರಗತ ತರಬ್ಯಾನಪ್ಪ ಅಂವ
ಹಾಲ ಹಳ್ಳವ ಮಾಡ್ಯಾನೋ

ಹಾಲ ಹಳ್ಳವ ಮಾಡ್ಯಾನಪ್ಪ ಅಂವ
ಕೈಯಲಿ ಕಂತಿ ಹಿಡಿದಾನೋ
ಊರ ಅರವಿ ಕಟ್ಯಾನಪ್ಪ ಅಂವ
ಹೊಳಸಿ ತಲಮ್ಯಾಲ ಇಟ್ಟಾನೋ

ಹೊಳಸಿ ತಲಿಮ್ಯಾಲೆ ಇಟ್ಟಾನಪ್ಪ ಅಂವ
ಏರು ಮಾರ್ಗವ ಹಿಡಿದಾನೋ
ಏರು ಮಾರ್ಗವ ಹಿಡಿದಾನಪ್ಪ ಅಂವ
ರಾಯ ಮಾರ್ಗದಿಂದ ಬಂದಾನೋ

ಊರ ಅರವಿ ಕೊಟ್ಟಾನಪ್ಪ ಅಂವ
ಕಂತೀ ಕೈಯಲ್ಲಿ ಹಿಡಿದಾನೋ
ಮುರಗಿ ಬೆತ್ತ ಮೂರೂರ ಜಂಗಮ
ಮುಂಜಾಳೆ ಭಿಕ್ಷಕ ಬಂದಾನೋ

ಅಗಸರ ಮಡಿವಾಳನಪ್ಪ ಅಂವ
ಗುರುವಿನ ಗುರ್ತೋಂದ ಹಿಡಿದಾನೋ
ಗುರುವಿನ ಗುರ್ತೋಂದ ಹಿಡಿದಾನಪ್ಪ ಅಂವ
ಕರಿಯ ಕಂಬಳಿ ತಂದಾನೋ

ಕರಿಯ ಕಂಬಳಿ ತಂದಾನೊ ಮಡಿವಾಳ
ಮುರದ ಗದ್ದಿಗೀ ಹಾಕ್ಯಾನೋ
ಅಗಸರ ಮಡಿವಾಳಪ್ಪ ಅಂವ
ಕಂತೀ ನೀಡಲು ಬಂದಾನೋ

ಗುರುವು ರೇವಣಸಿದ್ಧಾನಪ್ಪ ಅಂವ
ಏನೊಂದ್ಹೇಳತಿದ್ದಾನೋ
ಸತಿಯು ಪತಿಯು ಕೂಡಬೇಕು
ಗುರುವಿಗೆ ಕಂತೀ ನೀಡಬೇಕು

ಅಗಸರ ಮಡಿವಾಳನಪ್ಪ ಅಂವ
ಏನೊಂದ್ಹೇಳತಿದ್ದಾನೋ
ನನ್ನ ಮಡದಿ ಕಾಮಾಳದೇವಿ
ಊರಿಗ್ಹೊಗ್ಯಾಳಂದಾನೋ

ಊರಿಗೆ ಹೋದಾಳಲ್ಲೋ ಮಡಿವಾಳ
ನಾಳಿಗೆ ಬರತೀನಂದಾನೋ
ಊರಿಗೆ ಹೋಗಿಲ್ಲ ಗುರುವೇ
ನೀರಿಗ್ಹೋಗ್ಯಾಳಂದಾನೋ

ನೀರಿಗ್ಹೋದಾಳಲ್ಲೋ ಮಡಿವಾಳ
ಈಗ ಬರ್ತೀನಿ ಅಂದಾನೋ
ಅಗಸರ ಮಡಿವಾಳನಪ್ಪ ಅಂವ
ಏನೋಂದ್ಹೇಳತಿದ್ದಾನೋ

ನಾನೇ ಸತ್ತು ಹೋದರಯ್ಯ
ತಾನೇ ಎದ್ದು ಹೋಗತಾನೋ
ದೇವರ ಮನೆಯ ಹೊಕ್ಕಾನೋ ಮಡಿವಾಳ
ಚಂದರ ಅಲಗ ಹಿಡದನೋ

ಚಂದರ ಅಗಲ ಕೈಯಲಿ ಹಿಡಕೊಂಡು
ನೋಡಿ ಕಂಬಕ ಬಿಗಿದಾನೋ
ಅವನ ಮಡದಿ ಕಾಮಾಳದೇವಿ
ಅವಾಗ ತೈಯಾರ ಆಗ್ಯಾಳೋ

ಜರದ ಸೀರಿ ಉಟ್ವಾಳ ಮಡದಿ
ಜರದ ಕುಪ್ಪಸ ತೊಟ್ವಾಳೋ
ಕಂಚಿನ ಕಳಸೊಂದ ಹಿಡದಾಳ ಮಡದಿ
ಗಂಡನ ಸನಿಯಕ ಬಂದಾಳೋ

ಬಾರೋ ಬಾ ನನ ಬಲ್ಲಿದ ಗುರುವೇ
ಗುರುವಿಗೆ ಕಂತಿ ನೀಡೋಣ

ಸತಿಯು ಪತಿಯು ಮಾಡ್ಯಾರ ಗುರುವೇ
ಗುರುವಿಗೆ ಕಂತಿ ನೀಡ್ಯಾರೋ

ಗುರುವು ರೇವಣಸಿದ್ಧಾನಪ್ಪ ಅಂವ
ಏನೊಂದ್ಹೇಳತಿದ್ದಾನೋ
ಮೆಚ್ಚಿನಿ ಮಡಿವಾಳ ಮೆಚ್ಚೀನೋ
ನಿನ್ನ ಭಾವಕಾದರೂ ಮೆಚ್ಚೀನೋ

ನಿನ್ನ ಭಾವಕಾದರೂ ಮೆಚ್ಚೀನೋ
ನಿನ್ನ ಭಾವಕಾದರೂ ಮೆಚ್ಚೀನಿ ಮಡಿವಾಳ
ಏನ ಬೇಡ್ತಿ ಬೇಡೇಳೋ
ಏನ ಬೇಡ್ತಿ ಬೇಡೇಳೋ ಮಡಿವಾಳ

ಬೇಡಿದ್ದ ಕೊಡತೀನಿ ಅಂದಾನೋ
ಅಗಸರ ಮಡಿವಾಳನಪ್ಪ ಅಂವ
ಏನೊಂದು ಬೇಡತಿದ್ದಾನೋ
ಕತ್ತೆಗೆ ಕರಕಿ ಇರಲೇಳು ಗುರುವೆ

ಹಳ್ಳಕ ನೀರೊಂದು ಇರಲೇಳು
ಹಳ್ಳಕ ನೀರೊಂದಿರಲೇಳು ಗುರುವೆ
ಊರು ತಣ್ಣಗ ಇರಲೇಳು
ಮನಿಯ ಹೇಣ್ತಿ ಸಿರವ ಕೋದು

ಶಿವನ ಕಂಡವ ಯಾಂವನು
ಶಿವನ ಕಂಡವ ಯಾಂವನಪ್ಪ
ಅಂವ ಅಗಸರ ಮಡಿವಾಳನು
ಹೀಂಗ ಹಾಡತ ಹ್ವಾದರೊ ಗುರುವೆ

ಬೇಗ ಆದಾವು ಬೆಳಗಾಗ
ಬೇಗಾದವು ಬೆಳಗಾದವು ಗುರುವೆ
ಬೆಳ್ಳಿ ಮೂಡಲು ಹರಿದಾವು
ಬೆಳ್ಳಿ ಮೂಡಲು ಹರಿದಾವು ಗುರುವೆ

ಬೆಳ್ಳಿ ಮೂಡಲು ಹರಿದಾವು ಗುರುವೆ
ಸೂರ್ಯ ಕಿರಣ ಚೆಲ್ಲ್ಯಾವು
ಇಲ್ಲಿಗೊಂದು ಸುದು ನನ ಗುರುವೆ
ಹಾಡಿದವರ ಪದ ಮುಂದ್ಕೇಳು

# ಮತಸ್ತುತಿ – ಭಾಗ – ೨

**ಬೀರೇಶ್ವರ ಚರಿತ್ರೆ**

**ಜೋಗುಳ :**

ಜೋ ಜೋ ಸಿದ್ಧಭಕ್ತ ಕೃಂಪಂಗ ಜೋ ಜೋ
ನಂದನ ಕಂದನ ಜನಿಸಿತೊ ಕೂಸು
ರಿಂದ ವನದೊಳು ಆಡುವ ಕೂಸು
ಚಂದದಿಂದಲಿ ಆಭರಣ ಇಟ್ಟಿತೊ ಕೂಸು
ಬಂದ ದೇವರನೆಲ್ಲ ದೂರ ಮಾಡಿತೊ ಕೂಸು ||
ಜೋ ಜೋ ||೧||

ಭಕ್ತ ತ್ರಿಪುರಕೆ ಪೋಗಿತೊ ಕೂಸು
ಉತ್ತಮ ಶ್ರೀರಥವ ನಡೆಸಿತೊ ಕೂಸು
ಮುತ್ತು ಕದ್ದುಕೊಂಡು ಬಂದಿತೊ ಕೂಸು
ನಿತ್ಯ ತೃಪ್ತ ಇವರ್ಣ ಆಡಿತೊ ಕೂಸು ||
ಜೋ ಜೋ ||೨||

ಚಾರಿ ವಾಹನ ಏರಿತೊ ಕೂಸು
ಇರೇಳು ಲೋಕಕ್ಕೆ ಜನಿಸಿತು ಕೂಸು
ಮುರಹರನ ಶಂಖ ನುಡಿಸಿತು ಕೂಸು
ನಮ್ಮ ಗುರುವ ರೇವಣನ ವರವಿನ ಕೂಸು
ಜೋ ಜೋ ||೩||

**ಒಂದನೇ ಸಂದು :**

ಚಂದಿದಿತೆರೊಳಗೆ ಬೀರೇಶನೆಂದು
ಹೆಸರಿಟ್ಟು ಜೋಗುಳ ಪಾಡಿರೊ
ಹರಿಯ ಅಂತಾನೊ ತಿರುಳನ ಬಿಟ್ಟರೆ
ಯನಗೆ ವೈರಿ ಅಂದಾನೊ ||೧||

ತ್ವರಿದಿ ಕೊಲ್ಲುವ ಯತ್ನವೇನಂದ
ಮನದಲ್ಲಿ ಯೋಚನೆ ಮಾಡಿದನೊ
ಆಗ ಕೃಷ್ಣನು ಜೋಯಿಸನ ವೇಷದಿ
ತಾನು ಬಗಲೊಳ ಪಂಚಾಂಗವನೊ ||೨||

ಬೇಗ ತಾನು ಪುರದೊಳು ಚಲಿಸುತ
ಸೂರಾವತಿ ಮನಿಗೆ ಬಂದಾನೊ
ಆಗ ಸುರವತಿ ಜೋಯಿಸ ಕರೆದು
ಮಗನು ಜನಿಸಿದ ಮುಹೂರ್ತವನೊ ||೩||

ಬೇಗನೇ ಕೇಳಲು ಅವ ಪಂಚಾಂಗ ಹಿಡಿದು
ಅವಳಿಗೆ ಆಗ ಹೇಳಿದನು
ಕಂದನು ಹುಟ್ಟಿದ ಮುಹೂರ್ತ ಒಳ್ಳೆಯದಲ್ಲ
ಮುಂದೆ ನಿಮಗೆ ಕೇಡೆಂದಾನೊ ||೪||

ಒಂದು ತಿಂಗಳಲ್ಲಿ ನಿಮ್ಮಣ್ಣ ಕೃಷ್ಣಗೆ –
ಮರಣವಿದು ನಿಶ್ಚಯವೆಂದಾನೊ
ಈಗೀ ಕೂಸಿನ ಕರ್ಣವ ನೋಡಬೇಡ
ದುಃಖಕೆ ಗಾರಿಯಾದಿ ನೀನೊ ||೫||

ಬೇಗ ಕೂಸಿನ ಘೋರ ಅಡವಿಯೊಳು ಬಿಟ್ಟು
ಬರುವ ಯತ್ನ ಮಾಡಂದಾನೊ
ಕೇಳಿ ಸೂರಾವತಿ ಮನದೊಳು ನೊಂದು
ಮುಂದೇನು ಮಾಡಬೇಕೆಂದಾಳೊ ||೬||

ಬಂದ ದುಃಖವನು ಮನದೊಳು ತಾಳಿ
ಒಂದು ಯೋಚನೆ ಮಾಡಿದಳೊ
ಮಗನು ಸತ್ತರೆ ಇಂಥ ಮಗನನ್ನು
ಜನ್ಮದಿ ಕಾಣಬಹುದೆಂದಾಳೊ ||೭||

ಜಗವನು ಪಾಲಿಪ ಅಣ್ಣನು ಸತ್ತರೆ
ಕಾಣುವದು ಕಠಿಣ ಅಂದಾಳೊ
ಹೀಗೆ ಯೋಚಿಸಿ ಕೂಸಿನ ತಗೊಂಡು
ತೊಟ್ಟಿಲದೊಳಗೆ ಹಾಕಿದಳೊ | |೮||

ಈಗೀ ತೊಟ್ಟಲ ಹುಲಿ ಕರಡಿ ಸಿಂಹ ಇರುವ
ಘೋರ ಅಡವಿಯೊಳು
ಇಟ್ಟು ಬರ್ರೀ ಎಂದು ಚಾರರಿಗೆ
ಬೇಗನೆ ಅಪ್ಪಣೆ ಕೊಟ್ಟಾಳೊ ||೯||

ತಟ್ಟನೆ ಚಾರರು ತೊಟ್ಟಲು ಹೊತಗೊಂಡು
ಅಡವಿಯ ದಾರಿ ಹಿಡಿದಾರೊ

ನಡು ಹಾದಿಯಲಿ ಉಗ್ಗರಗಲ್ಲನೋಡಿ
ಕಲ್ಲಿನ ಮ್ಯಾಲ ತೊಟ್ಟಿಲ ಇಟ್ಟಾರ ||೧೦||

ಉಗ್ಗರಗಲ್ಲಿನ ಮ್ಯಾಲೆ ಸಿದ್ಧಪ್ಪ
ಸಬ್ಬನೆ ನಿದ್ರಿಯ ಮಾಡಿದನೊ
ಚಾರರು ನೋಡಿ ಗಾಬರಿಯಾಗಿ
ತೊಟ್ಟಿಲ ಕೆಳಗಿಟ್ಟಾರಿನ್ನೊ ||೧೧||

ಘೋರ ಅರಣ್ಯದಿ ತೊಟ್ಟಿಲ ವಯಿದು
ವೃಕ್ಷದಿ ಕೆಳಗಿಟ್ಟಾರಿನ್ನೊ
ನೀರಡಿಸಿ ತಾವು ಹೇವಲಿಹಳ್ಳಕ
ನೀರ ಕುಡಿಯಲು ಹೋಗ್ಯಾರಿನ್ನೊ ||೧೨||

ಇತ್ತ ಆ ಕೂಸು ಅಳುತ ಚೀರುತ
ಭೋರಾಡುತ ಕಷ್ಠ ಪಟ್ಟತಿನ್ನೊ
ಇತ್ತ ಶಿವನಿಗೆ ಈ ವರ್ತಮಾನ ತಿಳಿದು
ವಾಯುವಗೆಪ್ಪಣಿ ಕೊಟ್ಟಾನೊ ||೧೩||

ಹರನ ಅಪ್ಪಣೆಯನ್ನು ವಾಯು ಪಡಕೊಂಡು
ವೃಕ್ಷದ ಬಳಿಯಲಿ ಬಂದಾನೊ
ಬಿರುಗಾಳಿಯಿಂದ ಗಿಡವ ಬಗ್ಗಿಸಿ
ತುದಿಹರಿಗೆ ತೊಟ್ಟಿಲ ವಯಿದಾನೊ ||೧೪||

ಬಿಡದಿ ಚಾರರು ನೀರು ಕುಡಿದು
ತಿರುಗಿ ತೊಟ್ಟಿಲಕ ಬಂದಾರಿನ್ನೊ
ಗಿಡದಡಿಯಲ್ಲಿ ತೊಟ್ಟಿಲು ಇಲ್ಲದ್ದುಕಂಡು
ಗಾಭರಿಯಾಗೆ ಎದೆಯೊಡೆದಾರಿನ್ನೊ ||೧೫||

ಗದಗದ ನಡುಗುತ ಏನು ಸೋಜಿಗವೆಂದು
ಹೆದರಿ ತಾವು ನಿಂತಾರಿನ್ನೊ
ಎದೆಯೊಡೆದು ಅವರು ರಕ್ತಕಾರಿ
ಮರಣ ಹೊಂದಿದರು ಕೇಳಿನ್ನೊ ||೧೬||

ಮಾರಹರನು ಆ ಶಿಶುವನ್ನು ನೋಡಲು
ಪಾರ್ವತಿ ಸೂರಪತಿ ಬ್ರಹ್ಮರಿನ್ನೊ
ನಾರದ ಋಷಿಗಳು ಕೂಡಿ ಹೇವಲಿಹಳ್ಳಕ
ಬಂದು ಇಳಿದಾರಿನ್ನೊ ||೧೭||

ಗಿಡದ ತುದಿಯಲಿ ಜೋತಾಡುತಿರುವ
ಕೂಸಿನ ತೊಟ್ಟಿಲ ಕಂಡಾರಿನ್ನೊ
ಬಿಡದೆ ಶಿವನು ಸುರನಾರಿಯರಿಂದ
"ಕರಿಸಿದ್ಧ"ನೆಂದು ಹೆಸರಿಡಿಸಿದನೂ ||೧೮||

ಗಿರಿಜೆ ಕೂಸಿನ ಕೈಯಲಿ ತೂಕ್ಕೊಂಡು
ಲಟಲಟ ಕೊಟ್ಟಳು ಮುದ್ದನ್ನು
ಧರಣಿಗೆ ಪೋಗಿ ಮಹಿಮೆಯ ತೋರೆಂದು
ವರವ ತಾ ಕೊಟ್ಟಾಳಿನ್ನೊ ||೧೯||

ಇಂದುಧರನು ಆನಂದದಿಂದಲಿ
ಕಂದನಿಗೆ ಮುದ್ದು ಕೊಟ್ಟಾನೊ
ಕಂದನ ಚರಿತೆಯ ಸುರರಿಗೆ ಪೇಳಿ
ಬೇಗ ಅಪ್ಪಣೆಯನು ಕೊಟ್ಟಾನೊ ||೨೦||

ಇಂದಿನಿಂದ ಈ ಬಾಲಕನನ್ನು
ನೀವ ಚಂದಾಗಿ ಸಲುಹರಿ ಅಂದಾನೊ
ಇಲ್ಲಿಗೆ ಹರಹರ ಇಲ್ಲಿಗೆ ಶಿವಶಿವ
ಇಲ್ಲಿಗೆ ಇದು ಒಂದು ಸಂದೇಳೊ ||೨೧||

ಸಂದಿನ ಪದಗಳ ವಂದಿಸಿ ಹೇಳುವೆ
ತಂದಿ ಕರಿಯಸಿದ್ಧಾನೊರ
ದೇವಾರು ಬಂದಾವು ಬನ್ನೀರೆssss ||೨೨||

**ಎರಡನೇ ಸಂದು :**

ಕುಂದು ಕೊರತೆಯೊಂದು ಬಾರದೆ
ಶಿಶುವನು ಪಾಲಿಸರೆಂದಾನೊ
ಮತ್ತೆ ಶಿವನು ಕಾಮಧೇನುವ ಕರೆದು
ಪ್ರೇಮದಿಂದಲಿ ಹೇಳಿದೆನೊ ||೨೩||

ನಿತ್ಯದಿ ಕೂಸಿಗೆ ಹಾಲನು ಕೊಟ್ಟು
ರಕ್ಷಿಸೆಂದು ಅದಕ ಹೇಳಿದನೋ
ಕಂದನು ಇದ್ದ ವೃಕ್ಷಕ್ಕೆ ಶಿವನು
ಆಗ ವರವ ಕೊಟ್ಟಾನೋ ||೨೪||

ನಿನ್ನ ನೆರಳಿಗೆ ಕುಳಿತ ಸ್ತ್ರೀಯರು
ಗರ್ಭವ ಧರಿಸಲಿ ಅಂದಾನೋ
ಬೇಗ ಗಿಡಕೆ ವರವನಿಟ್ಟು ಶಿವ
ಕೈಲಾಸ ದಾರಿ ಹಿಡಿದಾನೋ ||೧೫||

ದೇವಗನ್ನೇರು ಐದು ಮಂದಿ
ಸಂಚಾರ ಮಾಡುತ ಬಂದಾರಿನ್ನೋ
ಸಂಚಾರ ಮಾಡುತ ವನವೆಲ್ಲ ತಿರುಗಿ
ವೃಕ್ಷದ ನೆರಳಿಗೆ ಕುಳಿತಾರಿನ್ನೋ ||೧೬||

ವನತಿಯರೈದು ಮಂದಿ ಗರ್ಭವ ಧರಿಸಿ
ನವಮಾಸದಿನ ತುಂಬಿದವಿನ್ನು
ಕೇಡು ಬಂತು ನಮಗ ಮನೆಗೆ ಪೋದರೆ
ನಮ್ಮನ್ನು ಬಿಡುವದಿಲ್ಲಿನ್ನು

ಯೇನು ಯತ್ನವೆಂದು ಚಳ್ಳ ಉಗುರಿನಿಂದ
ತಮ್ಮ ಗರ್ಭವ ಸೀಳಿದರಿನ್ನು
ಕಾಣುತ ಪಿಂಡವ ಐದನು ಕೂಡಿಸಿ
ನದಿಯಲಿ ತೇಲಿಬಿಟ್ಟಾರಿನ್ನು ||೧೮||

ನದಿಯ ದಡದಲಿ ಭೀಮರಾಯನೆಂಬ
ಕುರುಬನು ಕುರಿಯ ಕಾಯುತ್ತಿದ್ದನು
ನದಿಯಲಿ ತೇಲಿಬರುವ ಶಿಶುಗಳ ಕಂಡು
ತೆಗೆದುಕೊಂಡು ಅವುಗಳನು ||೧೯||

ಬಂದು ಮನೆಯೊಳು ಹೆಂಡತಿ ಶಾಂಭವಿ
ಕೈಯೊಳು ಶಿಶುಗಳ ಕೊಟ್ಟಾನೊ
ಅಂದು ಶಾಂಭವಿ ಶಿಶುಗಳ ನೋಡಿ
ಆನಂದ ಮನದೊಳು ಹರುಷವನು ||೨೦||

ತನಗೆ ಮಕ್ಕಳಲ್ಲೆಂದು ಹಿಗ್ಗುತ
ಚನ್ನಾಗಿ ಜೋಪಾನ ಮಾಡ್ಯಾಳಿನ್ನು
ವನತಿಯರ ಕರಿಸಿ ಜೋಗುಳ ಪಾಡಿಶಿ
ಬಂಗಾರ ತೊಟ್ಟಲ ಕಟ್ಟಿಸ್ಯಾಳಿನ್ನು ||೨೧||

ಮಾಯವ್ವ, ಮಹಾಂಕಾಳಿ, ಯಕ್ಕವ್ವ
ಲಕ್ಕವ್ವ, ಲಕ್ಷ್ಮಿಯೆಂದು ಹೆಸರಿಟ್ಟಾಳಿನ್ನೂ
ವೆಗ್ಗಳಾಗಿ ಬೆಳೆದಾರಿನ್ನು | | ೨೧||

ಮತಿಮತರಾಗಿ ಪ್ರಾಯಕೆ ಬರಲು
ಕುರಿಯ ಕಾಯತೇವಂದಾರಿನ್ನೊ
ತಂದೆ ತಾಯಿಗಳು ಐದು ಮಂದಿಯ
ಕುರಿಯ ಕಾಯಲು ಕಳಿಸ್ಯಾರಿನ್ನು ||೩೩|

ನಂದದಿ ಐವರು ಕುರಿಯ ಕಾಯುತ
ಹೇವಲಿಹಳ್ಳಕ ಬಂದಾರಿನ್ನೊ
ಅಲ್ಲಿ ಹಳ್ಳದ ಬದಿಯಲ್ಲಿ ವೃಕ್ಷದ
ಬುಡದಲಿ ಬಂದಾರಿನ್ನೊ ||೩೪||

ವೃಕ್ಷದ ಹರಿಯೊಳು ಜೋತಡುತಿರುವ
ಕಂದನ ತೊಟ್ಟಿಲ ಕಂಡಾರಿನ್ನೂ
ಅಳುವ ಚೀರುವ ಧ್ವನಿಕೇಳಿ
ಇದು ಏನು ಸೂಜಿಗಂದಾರಿನ್ನೂ ||೩೫||

ಘಳಿಲನೆ ಆ ಕೂಸು ನೀನು ತೊಗೊಬೇಕು
ನಾನು ತೊಗೋಬೇಕಂದಾರಿನ್ನು
ಅಕ್ಕ ಮಾಯವ್ವನು ಯುಕ್ತಿ ಹೇಳ್ಯಾಳು
ಅದಕೆಲ್ಲಾರು ಒಪ್ಯಾರಿನ್ನು ||೩೬||

ಶಿವನನು ಸ್ಮರಿಸಿರಿ ಶಿವನು ಕರುಣದಿಂದ
ಯಾರ ಉಡಲೊಳು ಹಾಕುವನೊ
ಅವರಿಗೆ ಆ ಕೂಸು ನಮ್ಮೊಳಗೆ ತಂಟೆ
ಬ್ಯಾಡೆಂದು ಕರಾರು ಮಾಡ್ಯಾರಿನ್ನು ||೩೭||

ಶಿವನನು ಸ್ತುತಿಸುತ ಐದು ಮಂದಿಯು
ಉಡಿಯೊಡ್ಡಿ ನಿಂತಾರಿನ್ನು
ಬೇಗ ಶಿವನು ಬಂದು ಆ ಕೂಸು ತೊಗೊಂಡು
ಮಾಯವ್ವನ ಉಡಲೊಳು ಹಾಕಿದನು ||೩೮||

ಆಗ ಮಾಯವ್ವನು ಶಿವನು ಮಗನ ಕೊಟ್ಟನು
ಎಂದು ಹರುಷ ಆದಾಳಿನ್ನು
ಬೇಗ ಮನಗ ಲಕ್ಷಣ ನೋಡಿ
ಲಟಲಟ ಮುದ್ದು ಕೊಟ್ಟಾಳಿನ್ನು ||೩೯||

ಮ್ರುಢನೂ ಮಾಯವ್ವಗ ನಿಜರೂಪ ತೋರಿ
ಶಿದ್ಧವೀರನ ಚರಿತೆಯನೂ

ಬಿಡದೆ ಎಲ್ಲ ಹೇಳಿ ಸುಖ ಕೊಡುವೆನೊ
ಚನ್ನಾಗಿ ಜೋಪಾನ ಮಾಡೆಂದನು ||೪೦||

ಇಂದುಧರನೂ ಆಗ ಶಿಶುವಿನ ತಲಿಮೇಲೆ
ಹಸ್ತೆ ಇಟ್ಟು ಹಾಡಿ ಹರಸಿದನು
ಮುಂದೆ ನಿನ್ನ ಯಂತ್ರ ಮಂತ್ರಗಳು
ಸತ್ಯವಾಗಲಿ ಜಗದೊಳಗಿನ್ನು ||೪೧||

ಧರೆಯೊಳು ನಿನ್ನ ಮಹಿಮೆಯು ಬೆಳೆಯಲಿ
ಮುಂದೆ ನಿನಗೆ ರೇವಣಶಿದ್ಧನೋ
ವರಗುರುವಾಗಲಿಯೆಂದು ಹೇಳಿ
ಶಿವ ಕೈಲಾಸಕ್ಕೆ ತಾ ತೆರಳಿದನೊ ||೪೨||

ಅಕ್ಕ ಮಾಯಾವ್ವನು ಕುರಿಗಳ ಕೂಡಿಸಿ
ಬೇಗ ಬಂದು ತೊಟ್ಟಿಲವನ್ನು
ಬೇಗ ಹೊತ್ತು ಐವರು ಒಂದಾಗಿ
ಮನೆಯ ದಾರಿ ಹಿಡಿದಾರಿನ್ನೊ ||೪೩||

ಮನೆಗೆ ಬರಲು ತಂದೆ ತಾಯಿಗಳು
ಎಲ್ಲಿ ಸಿಕ್ಕ ಈ ಬಾಲಕನೊ
ತ್ವರದಿ ಹೇಳಿದರು ಶಿವನು ಕೊಟ್ಟನೆಂದು
ಹೇಳಿದರೆಲ್ಲ ವಾರ್ತೆಯನು ||೪೪||

ತಂದೆ ತಾಯಿಗಳು ಕೇಳಿ ಹರುಷದಿ
ಸಲುಹರಿ ಈ ಬಾಲಕನನ್ನು
ಎಂದು ಹೇಳಲು ಅವರು ಸಲುಹುತ
ಎರಡು ವರ ಪದವನಾದಾನೋ ||೪೫||

ಒಂದು ದಿನ ಶಿದ್ಧವೀರ ಬಾಲನಿಗೆ
ಮರಿ ಉಂಡ ಎಂಜಲ ಹಾಲನ್ನು
ತಂದು ಎನಗಿ ಕುಡಿಸಿದಿರಿ ನೀವು
ಆ ಹಾಲು ಕುಡಿಯುವದಿಲ್ಲಿನ್ನು ||೪೬||

ಕುಡಿಯುವದಿಲ್ಲೆಂದು ಹಟ ಹಿಡಿದನು
ಅಕ್ಕ ಮಾಯವ್ವನ ಚಿಂತೆಯನೋ
ಗಡನೆ ಇದಕೆ ನಾನೇನು ಮಾಡಲೆಂದು
ಮನದಿ ಸ್ಮರಿಸಿದಳು ಶಿವನನ್ನು ||೪೭||

ಇಂದುಧರನು ತಿಳಿದು ಅವರ ಬಳಿ
ಬೇರೆ ಚರನೊಬ್ಬನ ಕಳುಹಿದನೋ
ಬಂದು ಖೇಚರನು ಅಕ್ಕಮ್ಮಗ ಹೇಳಿದ
ಮಾಡಬೇಡವ್ವ ಚಿಂತೆಯನ್ನು ||೪೮||

ಈಗ ನಿನಗೆ ಶಿವ ಹೇಳಿ ಕಳುಹಿದ
ಅದರಂತೆ ಮಾಡವ್ವ ನೀನು
ಬೇಗ ಮಗನು ಹಾಲು ಕುಡಿವನು
ಹೇಳಿದ ಎಲ್ಲ ಸಂಗತಿಯನ್ನು ||೪೯||

ಒಂದು ದಿನ ಸೊರನಾರಿಯೊಬ್ಬಳು
ನಿಂದಿಸಿದಳು ಪಾರ್ವತಿಯನ್ನು
ಆಗ ಪಾರ್ವತಿ ಕೋಪದ ಅವಳಿಗೆ
ಕುರಿಯಾಗಿ ಹುಟ್ಟೆಂದು ಶಾಪವನ್ನು ||೫೦||

ಆಗ ಸುರನಾರಿ ಬೆದರಿ ಬಾಯಾರಿ
ಪಾರ್ವತಿಗೆ ಹೇಳಿಕೊಂಡಾಳಿನ್ನು
ಬೇಗ ಎನಗೆ ನಿಶ್ಯಾಪ ಕೊಡೆಂದು
ಗಿರಿಜೆಯ ಪಾದಕ ಎರಗ್ಯಾಳಿನ್ನು ||೫೧||

ಭೂಲೋಕದೋಳು ಶಿದ್ಧ ವೀರನಿಗೆ
ಹಾಲು ಕುಡಿಸಬೇಕು ಹೋಗು ನೀನು
ಆ ಮಗುವಿಗೆ ನಿನ್ನ ಕೊರಳ ಮಲಿಹಾಲು
ಕುಡಿಸಬೇಕವ್ವ ನೀನು ||೫೨||

ಬೀರೇಶ ನಿನ್ನ ಕೊರಳ ಮೊಲೆಹಾಲು
ಕುಡಿದರಾ ನಿಶ್ಯಾಪಿನ್ನು
ಹೀಗೆ ಖೇಚರನು ಅಕ್ಕಮ್ಮಗ ಹೇಳಿದ
ನಿನ್ನ ಕುರಿಹಿಂಡಿನೊಳಿನ್ನು ||೫೩||

ಅದರೊಳು ಸುರನಾರಿ ಕುರಿಯಾಗಿ ಹುಟ್ಟಿದಳು
ಅದರ ಗುರ್ತು ಹೇಳುವೆನೊ
ಕೆಂದು ಕೆಂಪು ಬೋಳಿ ಸುಗಡಿಯು
ಕೊರಳೊಳು ಮೊಲೆ ಇರುವವನು ಇನ್ನು ||೫೪||

ಇಂದು ಅದು ನಿನ್ನ ಕುರಿಯೊಳು ಹುಡುಕಿ
ಅದರ ಕೊರಳ ಮೊಲೆಹಾಲನ್ನು

ಕಾಮಿನಿ ಮಣಿ ನೀ ಬೇಗನೆ ತಂದು
ಶಿದ್ದಬೀರೇಶಗೆ ಹಾಲಿನ್ನು ||೫೫||

ಪ್ರೇಮದಿಂದ ಕುಡಿಸೆಂದು ಹೇಳಿದನು
ಖೇಚರನು ತಾನು ಬಯಲಾದನೊ
ಅಕ್ಕ ಮಾಯವ್ವನು ಕುರಿಯೋಳು ಹುಡುಕಲು
ಸುಗಡಿ ಕೊರಳ ಮೊಲೆಹಾಲನ್ನು ||೫೬||

ಬೇಗ ತಂದು ಬೀರೇಶಗ ಕೊಡಲು
ಆನಂದದಿಂದ ಹಾಲು ಕುಡಿಯುವನು
ಇಲ್ಲಿಗೆ ಹರಹರ ಇಲ್ಲಿಗೆ ಶಿವಶಿವ
ಇಲ್ಲಿಗೆ ಇದು ಒಂದು ಸಂದೇಳೋ
ದೇವಾರು ಬಂದಾವು ಬನ್ನೀರೇssss ||೫೭||

**ಐದನೇ ಸಂದು :**

ಯಾರು ನೀವು ನಿಮ್ಮ ಹೆಸರೇನಿರುವದು
ಎನಗೆ ತಿಳಿಸಬೇಕಂದಾಳಿನ್ನು
ದೇವಿಯೆ ಎನಗೆ ನೀನ್ಯಾರೆಂದು ಕೇಳುವಿ
ಹೇಳುವೆ ಚಿತ್ತಗೊಟ್ಟು ಕೇಳು ನೀನು ||೧೨೫||

ಗಾಡಿಖೋರರ ಗಂಡ ಭರ್ಮನ ಸತಿ
ಸೂರಾವತಿ ಪುತ್ರಾನೊ
ಮೋಡಿಕಾರರ ಮಿಂಡ ವಿಷ್ಣುವಿನ ಅಳಿಯ
ಪುಂಡ ಪ್ರಚಂಡ ನಾನಿರುವೆನೊ ||೧೨೬||

ಮಾರಹರನ ಸುತನಿರುವೆನು
ಸಿದ್ಧರೇವಣನ ಶಿಷ್ಯನೊ
ಧರುಣಿಯಲ್ಲಿ ಶಿವಶಿದ್ದ ಬೀರ
ನಿನ್ನ ಪ್ರಾಣ ಪದವೆ ನಾನೆಂದಾನೊ ||೧೨೭||

ನಲ್ಲನೆ ಕೇಳು ಬಂಧನದೊಳಿರುವ
ಎನಗೆ ನೀ ಬಂದ ಸುದ್ದಿಯನೊ
ನಿಲ್ಲದೇ ಕೇಳಿ ಶ್ರೀ ಕೃಷ್ಣನು ನಿನ್ನನು
ಕೊಲ್ಲುವನೊ ಪಾರಾಗೊ ನೀನು ||೧೨೮||

ಕಾಂತೆ ಕೇಳು ಭೂಕಾಂತರೆಲ್ಲರು
ಬಂದರೆ ನಾ ಕೊಲ್ಲುವೆನೊ

ಚಿಂತೆ ಬಿಡು ನಿನ್ನೊಯ್ಯಲು ನಾ
ಬೇಕಂತೆ ಬಂದೆ ಸಿದ್ಧಳಾಗು ನೀನು ||೩೬||

ಓಡಿಸಿ ಆತನ ಮಗಳನ್ನು ಕರಕೊಂಡು
ಬಾಯೆಂದು ತಾನು ಹೋದಾನೊ
ಆಗ ಬೀರೇಶನು ಕದರಿ ರಾಹುತನ
ವೇಷ ಹಾಕಿ ಅಲ್ಲಿಗೆ ಹೋದಾನೊ ||೧೪೬||

ಬೇಗ ಭಟರ ಕೂಡಿ ಹರಿಯ ಸಭೆಗೆ ಹೋಗಿ
ಕೃಷ್ಣಗ ವಂದಿಸಿ ನಿಂತಾನೊ
ಮೀರಿದ ಕುದುರೆ ಏರಬಲ್ಲೆನು
ರಿಪುಗಳ ಯುದ್ಧದಿ ಗೆಲ್ಲುವೆನೊ ||೧೪೭||

ಶೂರನು ನಾನು ನಿಮ್ಮ ಬಳಿಯಲ್ಲಿ ಇರಲು
ಬಂದೆನೆಂದು ಹೇಳಿದನೊ
ಆಗ ಕೃಷ್ಣ ಇವನಾಕಾರ ನೋಡಿ
ನಮ್ಮಲ್ಲಿರು ಎಂದು ಹೇಳಿದನೊ ||೧೪೮||

ಚಾರಕರಿಂದ ಕುದುರೆಯ ತರಿಸಿ
ಇವನ ಮುಂದೆ ತಂದು ನಿಲ್ಲಿಸಿದನೊ
ಕುದುರೆಯು ಇವನನ್ನು ಕಂಡಕೂಡಲೇ
ಹೂಂಕರಿಸಿ ಒದರಿತಿನ್ನು

ಆಗ ಕರದಿ ಲಗಾಮು ತಕ್ಕೊಂಡು
ಕುದುರೆಯ ಮೇಲೆ ತಾನೇರಿದನೊ
ಹೋಗುತ ಕುದುರೆಯ ಅಂತಃರಿಕ್ಷಕೆ
ಕಾಮಾಲಿನಿ ಬಳಿಯಲಿ ಬಂದಾನೊ ||೧೫೦||

ಬೇಗ ಕಾಮಾಲಿನಿ ಪಿಡಿದೆತ್ತಿ
ಮುಂದೆ ಕೂಡ್ರಿಸಿಕೊಂಡು ತಾ ಬಂದಾನೊ
ಆಗ ಕೃಷ್ಣನ ಹತ್ತಿರ ಬಂದು
ಚನ್ನಾಗಿ ಅವನಿಗೆ ಹೇಳಿದನು ||೧೫೧||

ಇಂದು ಸಮಯದಿ ಎದುರಿಗೆ ನಿಂತವರ
ಗಂಡ ರಿಪುಗಳ ಮಿಂಡ ನಾನೊ
ಗಂಡುಗಲಿ ಭರ್ಮದೇವರ ಸತಿ
ಸೂರಾವತಿಯ ಮಗ ನಾನೊ ||೧೫೨||

ಎಲೋ ಕೃಷ್ಣನೇ ನಿನ್ನ ಮಗಳನ್ನು
ಎತ್ತಿಕೊಂಡು ಹೋಗುವೆ ನಾನೊ
ನೋಡಿ ಕೃಷ್ಣ ಪುಂಡರನ್ನು ಇವನನ್ನು
ಹಿಡಿಯಲು ಕಳಿಸಿದನೊ ||೧೫೩||

ಪುಂಡರು ಬಂದು ಶಿದ್ಧಗೆ ಹೇಳ್ಯಾರೊ
ಕಾಮಾಲಿಗೆ ಇಳಿಸಿಬಿಡೊ ನೀನು
ಕಾಮಾಲಿ ಕರಕೊಂಡು ಎಲ್ಲಿಗೆ ಹೋಗುವಿ
ಕೊಲ್ಲದೆ ಬಿಡೋದಿಲ್ಲ ನಿನ್ನನು ||೧೫೪||

ಪುಂಡರೆ ನಿಮ್ಮ ಮಾತಿಗೆಂಜುವವ ನಾನಲ್ಲ
ಕೊಲ್ಲುವೆ ನಿಮ್ಮೊಬ್ಬಬ್ಬರನು
ಚೆಂಡು ಹಾರಿಸುವೆ ಯಾಕೆ ಪ್ರಾಣವನು
ಕಳಕೊಳ್ಳುವಿರಿ ಹೋಗೆಂದಾನೊ ||೧೫೫||

ಕ್ರೂರ ಪುಂಡರು ಬೀರೇಶನ ಮೇಲೆ
ಹೊಡೆಯಲಿಕ್ಕೆ ಹೋದಾರಿನ್ನೊ
ಹರಹರನೋ ನನ್ನ ಕರಿಯದೇವರು
ಅಲ್ಲಿ ಏನು ಕಾರುಣ ಮಾಡ್ಯಾನು ||೧೫೬||

ಹೊಡಿಯಲಿಕ್ಕೆ ಬಂದ ಪುಂಡರ ಮೇಲೆ
ಅಂತರಲೆ ಕುದರಿ ಹಾರಿಸ್ಯಾನೊ
ಇಲ್ಲಿಗೆ ಹರಹರ ಇಲ್ಲಿಗೆ ಶಿವಶಿವ
ಇಲ್ಲಿಗೆ ಇದು ಒಂದು ಸಂದೇಳೊ
ದೇವಾರು ಬಂದಾವು ಬನ್ನಿರೇs sss ||೧೫೭||

**ಆರನೇ ಸಂದು :**

ಪುಂಡರು ಇವನ ಮಹಿಮೆಯ ನೋಡಿ
ಹರಿಯ ಬಳಿಗೆ ಬಂದಾರಿನ್ನೋ
ಚಿಂತೆ ಮಾಡುತ ವೈಕುಂಠ ಪುರದೊಳು
ವಸನದಿ ಹರಿಯು ಕುಳಿತಿದ್ದಾನು ||೧೫೮||

ಆಗ ಬೀರೇಶನು ಹರುಷದಿಂದಲಿ
ಬೆಳ್ಳಿಗುತ್ತಿಗೆ ಬಂದಾನೊ

ಬೆಳ್ಳಿಗುತ್ತಿಯೊಳು ಅಕ್ಕ ಮಾಯವ್ವನ
ಪಾದಕ ಕಾಮಾಲಿ ಯರಿಗ್ಯಾಳಿನ್ನೂ ||೧೫೯||

ಬೆಳ್ಳಿಗುತ್ತಿಯಲಿ ಶಿದ್ಧಬಿರ್ರೈಯನು
ನಿತ್ಯದಿ ಶಿವಧ್ಯಾನ ಮಾಡುವನೊ
ಅದೇ ಊರಲ್ಲಿ ಹೇಮಣ್ಣನ ಮಗ
ಸಾಯಲಾ ಆಗ ಆ ಮಗನನ್ನೊ ||೧೬೦||

ಮೋಸದಿಂದಲಿ ಬೀರೇಶನ ಹತ್ತರ
ತಂದರು ಸತ್ತಮಗನನ್ನು
ಸಾನುರಾಗದಿ ಭಸ್ಮವ ಧರಿಸಿ
ಸತ್ತಮಗನ ಪ್ರಾಣ ಪಡಿದಾನೊ ||೧೬೧||

ಹೇಮಣ್ಣಾಗ ಹಿಂದೆ ನನ್ನ ಮಗಾ
ಹೋಮಣ್ಣನ ನಿಮಗೆ ಕೊಟ್ಟಿದ್ದೆನೊ
ಇನ್ನೊಬ್ಬ ಮಗ ಮಳಮಲ್ಲನನ್ನು
ಕೊಡುವೆನೆಂದು ಪಾದಕ ಹಾಕಿದನು ||೧೬೨||

ಮರುದಿವಸ ಕುಡುವಕ್ಕಲಿಗರ ಮಗ
ಮುದ್ದಣ್ಣನು ತಂದಾನೊ
ತತ್ತರಿಸುತ ಬೀರೇಶನ ಹತ್ತಿರ ತರಲು
ಪ್ರಾಣವನು ಪಡಿದಾನೊ ||೧೬೩||

ಶಿದ್ಧಬೀರನ ಸೇವೆ ಮಾಡಲಿಕ್ಕೆ
ಇಬ್ಬರು ಮಕ್ಕಳ ಕೊಟ್ಟಾರಿನ್ನೊ
ದಿನಾ ನಿತ್ಯದಿ ಇಬ್ಬರು ಶಿದ್ಧನ ಸೇವಾ
ಮಾಡುತಲಿದ್ದಾರಿನ್ನೂ ||೧೬೪||

ಇಬ್ಬರು ಸೇವಕರು ಸೇವಾ
ಮಾಡೂದ ಬಿಟ್ಟು ಓಡಿ ಹೋದಾರಿನ್ನೊ
ಹರಹರನೋ ನನ ಕರಿಯ ಶಿದ್ದನು
ಬಹಳ ಚಿಂತಿಯೊಳಗಾದಾನೊ ||೧೬೫||

ಆಗ ಸೇವಕರ ಎಲ್ಲಿ ಹುಡುಕಲೆಂದು
ಕೈಲಾಸಕ ತೆರಳಿದನೊ
ಇಲ್ಲಿಗೆ ಹರಹರ ಇಲ್ಲಿಗೆ ಶಿವಶಿವ
ಇಲ್ಲಿಗೆ ಇದುವೆಂದು ಸಂದೇಳೊ ||೧೬೬||

ಸಂದಿನ ಪದಗಳ ವಂದಿಸಿ ಹೇಳುವೆ
ತಂದಿ ಕರಿಯ ಶಿದ್ದಾನೊ
ದೇವಾರು ಬಂದಾವು ಬನ್ನೀರೇssss ||೧೬೭||

~ ™

**ವೀರಗೊಲ್ಲಾಳ**

ರುದ್ರ ಭಾರತ ಬ್ರಹ್ಮಾಂಡ ಪುರಾಣದೊಳು
ಇದ್ದ ಸಂಗತಿ ನಾ ತಿಳಿಸುವೆನು ||೧||

ಈರ ಬೀರನೆಂಬ ಸಾರುವ ಶೃತಿಗಳು
ವೀರಗೊಲ್ಲಾಳನ ಮಹಿಮೆಯನ ||೨||

ತೋರಿಕೆಯಲ್ಲಿ ತನ್ನ ತಾರುಮಂಡಲದಂತೆ
ಕೋರು ದೈತ್ಯರ ಕುಲ ಅಳಿಯವನು | | ೩||

ಸಾನಂದ ಋಷಿಗಳು ಆನದಿಂದಮ
ಕೈಲಾಸ ಹೋಗಿದ್ದು ಮರೆತಿರಲು ||೪||

ಅಷ್ಟರೊಳಗ ಒಬ್ಬ ಸಾಹುಕಾರನು ಪೋಗಿ
ಕಾಶಿ ವಿಸ್ತಾರ ನೋಡಿ ಬರುತಿರಲು ||೫||

ಅಷ್ಟರೊಳಗ ಒಬ್ಬ ಸಾಹುಕಾರನು ಪೋಗಿ
ಕಾಶಿ ವಿಸ್ತಾರ ನೋಡಿ ಬರುತಿರಲು ||೬||

ಮದ ಹೆಚ್ಚಿ ಮನಸ್ಸಿಗೆ ಬಂದಂತೆ ನಡೆಯಲು
ಬೆನ್ನ ಬಿದ್ದ ತಾ ಲಿಂಗಕೆ ಪೋಗುವನು ||೭||

ಮನಗಂಡ ಮಾರ್ಗದೊಳು ಲಿಂಗಬರುವುದೆಂದು
ಅಂಗಾಸಿಗೊಂಡ ಅವ ಇರತಿಯೇನು ||೮||

ಬರುತ್ತಿದ್ದ ಜಂಗಮ ಎದೆ ಒಡೆದು ಎರಡಾಗಿ
ಹದಡದತ ಕುರಿ ಹಿಕ್ಕಿ ಪಿಡಿದಿದ್ದನು ||೯||

ಆಗು ಆಗಂದ ಈಶ್ವರನಾ ತನ್ನ ಕರುಣದಿ
ಕುರಿಯ ಹಿಕ್ಕಿಯ ಲಿಂಗವ ಮಾಡಿದನು ||೧೦||

ತುಸು ಮಾತ್ರ ಸಂಶೆ ಹಿಡಿಯದ ಮನದೊಳು
ಹೊಸ ವಸ್ತ್ರದೊಳು ಲಿಂಗ ಪೂಜೆಯೇನ ||೧೧||

ಪಂಚಮಾಂಬ ಬೂದಿಯೊಳು ಪ್ರಭುರಾಯ ಬರುವಾಗ
ಸ್ವಚ್ಛಾತ ಮನದಿಂದ ಇರುತಿಯೇನು ||೧೨||

ಅಚ್ಚ ಕುರಿಹಾಲು ನಿತ್ಯಾದಿ ನೈವೇದ್ಯ
ಅಚ್ಚುತ ಆ ಕುನಿಗೆ ಉಣಿಸುವೆನು ||೧೩||

ಮನೆಯೊಳು ಕಾವಡಿ ಹಾಲಿನ ಕೂಡಗಳು
ಬರುತಿರಲು ಒಂದಿನ ಕಾಣಿಸಿತು ||೧೪||

ಪಿತಮಾತೆ ಮನೆಯೊಳು ಸಂತನಿಗೆ
ಎಲ್ಲ ಬುದ್ಧಿ ಕೆಟ್ಟವನ್ನತ ಮನಕಂಬವನು ||೧೫||

ಬೆಳಗ ಮುಂಜೇಲೆ ಎದ್ದು ಕುರಿ ಹಿಂಡಿಗೆ ಬಂದ
ಜಳ ಜಳ ಜಾಗಿತ ನೋಡಿದನು ||೧೬||

ತಂದೆ ತಾಯಿ ನೀನೇ ಬಂಧು ಬಳಗ ನೀನೇ
ಇಂದಿಗೆ ಕುಲಸ್ವಾಮಿ ದೊರಕಿದನು ||೧೭||

ಎಂದಿಗೆ ಹಸಿವು ಇಂಗಿತ ಈ ಲಿಂಗಕ್ಕೆ
ತಂದು ಅರ್ಪಿಸ ಹಾಲು ಎರೆಯುವೆನು ||೧೮||

ಹರುಷಾದಿ ಸ್ವಾಮಿಗೆ ಸರಸದಿ ಹಾಲಿನ
ಕೊಡಗಳ ಎತ್ತಿ ತಾ ಎರೆಯುವನು ||೧೯||

ನಿಂತು ನಿಂತು ನೋಡಲು ಆ ಕ್ಷಣದಲ್ಲೇ
ತಂದಿ ಭ್ರಾಂತಿ ಮುಸಗಿ ಕಾಲಿಲೇ ಒದೆಯುವನು ||೨೦||

ಸತ್ತ ಶರಣರ ಶಿವಲಿಂಗವ ಕೆಡಿಸಿದನೆಂದು
ಮೃತಸ್ಥಾನದ ಕೊಡಲಿ ಎತ್ತಿದನು ||೨೧||

ಶಿರಸವು ಭೂಮಿಗೆ ಬೀಳಲು
ಭಕ್ತಿ ಭಾವ ಕೆಟ್ಟಿಲ್ಲಂತ ಹೇಳಿದನು ||೨೨||

ಅರಿಯದ ತಂದೆ ಶಿರವ ಕಡಿದು ಬಂದು
ಲಿಂಗದ ಸೇವಕ ನಿಂತಿರಲು ||೨೩||

ಆ ಕ್ಷಣದಲೇ ಎರಗಿ ಜಾಗಲಕ ಬರಲು
ಚಂಡನ ಶಿರ ನೋಡಿದನು ||೨೪||

ಮೆಚ್ಚಿದೆ ಏಳು ನಿನ್ನ ಭಕ್ತಿಗೆ ಬಂದೆನು
ಹೆಚ್ಚಿನ ಮುಕ್ತಿ ಬೇಡಂದಾನು ||೧೫||

ಮೆಚ್ಚಿದ್ದರ ಎನ್ನ ತಂದಿಯ ಬದಕಿಸು
ಪಂಚಮುಖ ನಂದಿಯ ತೋರಂದನು ||೧೬||

ಮೂಡರಾಯ ತನ್ನೊೀಳು ಉಡುಗರೆಸಾಯುತವಾಗಿ
ತೊಡೆಯಲ್ಲಿ ಪಾರ್ವತಿ ಕುಳಿತಿರಲು ||೧೭||

ಮುಡಿಯಲ್ಲಿ ಗಂಗೀ ಒಡೆಯ ಶ್ರೀಋಷಿ ಬಾ
ಪಿಡಿದು ಗಣರಾಜನ ಎತ್ತಿದಳು ||೧೮||

ನಂದಿ ಗಣಪ ಮುಕುಂದ ಪ್ರಮತಗಳು
ಬಂದಿಳಿದಾರು ಆನಂದದಲೇ ||೧೯||

ತಂದಿ ಶಿವನು ತನ್ನ ನಿಜರೂಪ ತೋರಿದರ
ಬಿದ್ದದು ಶ್ರವ ಎದ್ದು ಕುಳ್ಳಿರವದು || ೨೦||

ಶಿವರಾಯ ನಿಮ್ಮ ಪಾದಕ ಎರಗುವೆನು
ತವಕದಿ ಕೈಲಾಸಕೆ ಹೊಯೆಂದಾನು ||೨೧||

ಹೂಮಾಲೆ ಅರಿನ್ಯಾಳೋ ದೋ ಮಾಲೆ ಧರಿಸ್ಯಾನೇಳೊ
ಹುಬಯೇರ ಗಿರಿಗೆ ಏರ ಅಂದಾನೂ ||೨೨||

ಚಂಗ ಬಾಲನೆಂದು ಸಂಗನ ಶರಣರು
ಹೂಮಳೆ ಗರಿಚಾರು ತುರ್ತಿಲೆ ||೨೩||

ಲಿಂಗ ಫಲದಿಂದ ಅಂಗ ಪಾವನಾದ
ಮಂಗಳ ಚರಕ ಸೇರಿಯಾನು ||೨೪||

ದೇಶ ದೇಶಕ ಹೆಸರಾದ ಶಿರಪುರ
ಈಶನ ದಯದಿಂದ ಸಾರುವೆವು ||೨೫||

ದೋಶರ ಹಿತ ಕುಲ ದೇಶ ಗೆದೇನೆ
ಭಾಷೆಗೆ ಮುಂದಾಗಿ ಸಾರುವೆವು ||೨೬||

ಭಾಷೆಗೆ ಮುಂದಾಗಿ ಸಾರುವೆವು
ನಮ್ಮ ವೀರಗೊಲ್ಲಾಳನ ಚರಿತ್ರೆಯನ್ನು ||೨೭||

ರುದ್ರ ಭಾರತ ಬ್ರಹ್ಮಾಂಡ ಪುರಾಣದೊಳು
ಇದ್ದ ಸಂಗತಿ ನಾ ತಿಳಿಸುವೆನು ||೩೮||

~ ™

**ಸೈನ್ಯದೇವನ ಪದಾ**

ಸೈನ್ಯದೇವನು ದ್ರೌಪದಿಯ ವಹಿಸಿದನು
ನಾ ವಿಸ್ತಾರ ಮಾಡಿ ಹೇಳುವೆನು ||೧||

ವಿಸ್ತಾರ ಮಾಡಿ ನಾ ಹೇಳುವೆನು
ಸರ್ವರೂ ಕೇಳರಿ ನೀವು ಇದನ್ನು ||೨||

ಮಧ್ಯ ಮಾರ್ಗದಲ್ಲಿ ಮದ್ಯ ಪಾಂಡವರು
ಯುದ್ಧ ಮಾಡಿ ತಂದರು ದ್ರೌಪದಿಯನ್ನು ||೩||

ಕೌರವರಾಜ ಕಾಶೀಯಾತ್ರೆಗೋಸ್ಕರವಾಗಿ
ಹೊರಟನು ನಿಶ್ಚಯಿಸಿ
ತಮ್ಮ ಸೈನ್ಯ ಸಿದ್ಧವನು ಏರೈಸಿ ||೪||

ಶೀಘ್ರದಲಿ ಹೊರಟನು ಮನದೊಳ ಕುಸಿ
ಚದುರಂಗ ಬಲ ಸಾಯಿತದಲಿ ಹೊರಟರು ||೫||

ವಾದ್ಯಗಳ ಘೊಳಡಿಸಿ ಆನೆ ಕುದುರೆ
ದಂಡು ಸಹಿತವಾಗಿ ಆರ್ಭಟಿಸುವರು ||೬||

ಮಾವುತರು ಚೆನಕಾಳಿ ಹೆಗ್ಗಾಳಿ
ಮುಂದ ಹಿಡಿಸಿದರು ಬರರರರರss ||೭||

ಮುಂದ ಹಿಡಸಿದ ಬರರss
ಹಿಂಗ ಸಾರಿದರು ಆರ್ಭಟರು ||೮||

ಅವನ ಆರ್ಭಟಕ ಭೂಮಿ ಬಿಚ್ಚಿ ತೆಗೆಯಿತು
ಆಗ ಬಿಚ್ಚಿ ಬಾಯಿ ತೆಗೆಯಿತು ||೯||

ಆಗ ಆದಿ ಶೇಷನ ಶಿರಕುಸಿತಿತ್ತು ಬ್ಯಾಗ
ಸೈನ್ಯ ಅಡಗಳಿಗೆ ಭೂಮಿ ಆಕಾಶದಂಗ ಹೆಳತೆವಿ ಈಗ ||೧೦||
ಬೇಗದಿಂದ ಹೋದಾರು ಕಾಶಿಗೆ
ಡೇರೆ ಹೊಡೆದರು ನದಿ ದಂಡೇಲಿ ||೧೧||

ನಮಸ್ಕಾರ ಈಶ್ವರನಾಥನಿಗೆ ಮಾಡಿದರು
ಹರಸಾ ಮನದಾಗ ಪೂಜೆ ಮಾಡಿಸಿದರು ||೧೨||

ಲಗು ಬೇಗ ತಿರುಗಿ ಬಂದರು ಮದ್ಯ ಮಾರ್ಗದಲಿ
ಮದ್ಯ ಪಾಂಡವರು ಯುದ್ಧಮಾಡಿ
ತಂದರು ದ್ರೌಪದಿಯ ||೧೩||

ಇಲ್ಲಿ ಇಂದ್ರವನವ ಕಂಡು
ಒಬ್ಬ ಹೊರಟ ಕೌರವ ತಾನು ||೧೪||

ವನ ಕಂಡು ಮನಸ್ಸಿಗೆ ಅಂದಾನು
ಪುಷ್ಪವನು ಕಂಡು ತಾ ಹಿಗ್ಯಾನು ||೧೫||

ವನದೊಳಗೆ ಇರುವ ಫಲಗಳನ್ನೆಲ್ಲ
ಆಜ್ಞೆ ಇಲ್ಲದೆ ಹರಕೊಂಡಾನು ||೧೬||

ಚಿತ್ರಸೇನ ಬಂದು ಅವನು ನಾಗ ಪಾಶದಿ
ಬಂಧನ ಮಾಡಿದನು ||೧೭||

ಸೆರೆಯಲ್ಲಿ ಸಿಕ್ಕು ಒದ್ದಾಡಿದನು
ಸೂಜಣದಿಂದ ಗೌಳಿ ತಿಳಿಸಿದಳು ||೧೮||

ವನದೊಳಗೆ ಇರುವ ಧರ್ಮಯ್ಯನನ್ನು
ಬಿಡಿಸಿತಾನು ಇಂದಿನ ದಿನ ನಿನ್ನ ಹಿಡಿದು ||೧೯||

ಬಾಣದಿಂದ ತಡೆದು ಕೇಳತಾನ
ಬಿಡರೀ ಅಣ್ಣ ಕೌರಯ್ಯನನ್ನು ||೨೦||

ಬಿಡದಿದ್ದರೆ ಕೊಡರೀ ನಮಗೆ ಯುದ್ಧವನು
ತಡೆಯಲಾರದೆ ಓಡಿ ಹೋದನಾಗ ಬಿಚ್ಚಲಿಕ್ಕೆ ||೨೧||

ಹೋದ ಫಾಲ್ಗುಣನಾಗ ಬಿಚ್ಚಲಿಲ್ಲ ಪಾಶಿ ಪಾರ್ಥನಿಗೆ
ತೊಕ್ಕಂಡು ಬಂದನು ಅಲ್ಲಿಂದ ||೨೨||

ಒಪ್ಪಿಸಿದ ಅಲ್ಲಿ ಅಣ್ಣ ಧರ್ಮಯ್ಯನಿಗೆ
ಧರ್ಮರಾಯ ಬಿಚ್ಚಂತೆ ಹೇಳಿದನು ||೨೩||

ಫಾಲ್ಗುಣನು ಬಿಚ್ಚುವಲ್ಲದು ಎಂದಾನು
ಇದ ನೋಡಿ ಧರ್ಮಜ ಅಂದಾನು ||೨೪||

ದ್ರೌಪದಿಯ ಕರಸಿದರು ಆ ಕ್ಷಣಕ
ದ್ರೌಪದಿಯ ಕರೆಯಲು

ನಗುತಲಿ ಬಂದು ಎಡಗಾಲಿನ ಚರಣ
ಅಂಗುಷ್ಠದಲ್ಲಿ ||೧೫||

ಬಿಚ್ಚಿದಳು ಆಶೆತನ ಮಾಡುತಲಿ
ಹಟ ಇಟ್ಟ ಕೌರವ ಮನಸ್ಸಿನಲಿ ||೧೬||

ವಿಷಾ ಇಟ್ಟ ಕೌರವರಾಜ ತಳಲಿಪೊದ
ತನ್ನ ಪಟ್ಟಣಕೂ ಹರನಗಳೆಯಲಾರೆ
ಎಂದ ಕೌರವ ||೧೭||

ಹೋದ ನದಿಯ ದಡದಲ್ಲಿ
ನದಿಯ ದಡದಲ್ಲಿ ಪ್ರಾಣಕೊಡುವೆ ತತ್ಕಾಲದಲಿ ||೧೮||

ಈ ವಾರ್ತೆ ಸೈಂದವನು ಕೇಳುತಲಿ
ತಡಮಾಡದೆ ಬಂದನು ಓಡುತಲಿ ||೧೯||

ಯಾಕೆ ಹೇಳಿ ನೀವು ಇಂದಿನಲ್ಲಿ
ಪ್ರಾಣ ಕೊಡತೆನಂತ ಬಂದೆನಿಲ್ಲಿ ||೨೦||

ಅಪಮಾನ ಆದದ್ದು ಎಲ್ಲ ಆಮ್ಯಾಗ
ಹೇಳಿದನು ಸರ್ವ ಉಳಿದಂಗ ||೨೧||

ಇದರ ಚಿಂತಿ ಬಿಡರೀ ನೀವು
ಈಗ ತರುವೆನು ಒಂದು ಗಳಿಗ್ಯಾಗ ||೨೨||

ದ್ರೌಪದಿಯ ಚಿಂತಿ ನಿಮಗ್ಯಾಕೆ
ತಂದು ಕುಂದರಿಸುವೆ ಎಡ ತೊಡಿಮ್ಯಾಕ ||೨೩||

ಇಷ್ಟು ಧೈರ್ಯ ಸೈನ್ಯದೇವ
ಕೌರವಗ ಹೇಳಿ ಹೊರಟ ವನಕ ತಾನು ||೨೪||

ಪಾಂಡವರು ಹೋಗಿದ್ದಾರು ಬೇಟೆಯನಾಡಕ
ಮಡಿಯ ಹಿಡಿಯಿರಿ ||೨೫||

ದ್ರೌಪದಿಯ ನೀನಂತ
ಬಡತನ ನೋಡಿ ನಾ ಬಂದೆನು ||೨೬||

ಗಂಡರಿಲ್ಲದ ಯ್ಯಾಳೆದಲ್ಲಿ
ತಕ್ಕೊಳದಿಲ್ಲ ಈ ಮಡಯಿನ್ನು ||೩೭||

ಇನ್ನು ತಾಸಿಗೆ ಐವರು ಬರುವರು
ಭಿನ್ನಹ ಇಲ್ಲವೇ ತಕ್ಕೊಳ್ಳುವೇ ನಾನು ||೩೮||

ಇಷ್ಟು ಮಾತು ಕೇಳಿದನು ಎಲ್ಲಾ
ತಡಕೋಪದಿಂದ ಎದ್ದಾನು ಕೈ ಹಿಡಿದು ||೩೯||

ಜೋಲಿಯಾ ಹೊಡಿದಾನು ಮುಡಿಯನ್ನು ಹಿಡಿದು
ಎಳೆದಾನು ಬೇಡ ಯಣ್ಣಾ ಯಾಕ ಇಂತಾದು ||೪೦||

ಭೀಮ ಕೇಳಿ ಬಡಿದು ಚಲ್ಲಾನು
ಮತ್ತೆ ಸೈಂದವ ಎತ್ತಿ ದ್ರೌಪದಿ ||೪೧||

ಚಿತ್ರದ ರಥದೊಳಗೆ ಕುಂಡರಿಸಿದನು
ಕುದುರೆ ಜಡಿಸಿ ರಥಕೆ ಮುಂದಕೆ ಹಾರಿಸಿದನು ||೪೨||

ಬೇಟೆ ಆಡುವದೊಳಗ ಪಾಂಡವರಿಗೆ
ವನದ ಕಡೆ ಹೋತು ದ್ಯಾಸವನು ||೪೩||

ವನದಕಡೆ ಹೋತು ದ್ಯಾಸವನು
ಈ ಸುದ್ದಿ ಭೀಮಸೇನ ಕೇಳುವನು ||೪೪||

ರಥ ಹೊಡಿಯತೀದಿ ಯತ ಮೂಳಿ
ಪರಿಹರಿಸುವೆ ನಿನ್ನ ಐಯ್ಯದೊಳಿ ||೪೫||

ರಥ ತಂದ ತಿರುಗಿ ಹೊಡ ಮರಳಿ
ಒಪ್ಪಿಸಿದ ಅಣ್ಣಗ ಹೇಳಿ ಕೇಳಿ ||೪೬||

ಮದ್ಯ ಮಾರ್ಗದಿ ಯುದ್ಧ ಮಾಡಿ
ತಂದರು ದ್ರೌಪದಿಯನ್ನು ||೪೭||

ಸೈನ್ಯದೇವನು ದ್ರೌಪದಿಯು ವಹಿಸಿದನು
ನಾ ವಿಸ್ತಾರ ಮಾಡಿ ತಿಳಿಸುವೆನು | |೪೮||

**ಮೂರನೇ ಸಂದು :**

ಹೀಗೆ ಹಾಲು ಕುಡಿಯುತ ದೇವರು
ದೊಡ್ಡವನಾಗಿ ಬೆಳೆದಾನೊ

ಆಗ ಸುರನಾರಿ ನಿಶ್ಯಾಪದಿಂದ
ಸ್ವರ್ಗಕ್ಕೆ ತಾನು ಹೋಗ್ಯಾಳಿನ್ನು ||೫೮||

ಹೀಗೆ ಬೀರೇಶ ದೊಡ್ಡವನಾಗುತ
ಮನೆಯ ಬಿಟ್ಟು ತಿರುಗ್ಯಾಡುವನೊ
ವಾರಿಗೆಯ ಹುಡುಗರ ಕೂಡ
ಆಟವಾಡಲಿಕ್ಕೆ ಹೋಗುವನೊ ||೫೯||

ಹುಡುಗರಾಡುವ ಚಂಡಿನಾಟವ ಕಂಡು
ತಾನೊಂದು ಚಂಡ ಬೇಡುವೆನೊ
ಗಡನೆ ಮನೆಗೆ ಬಂದು ಚಂಡು ಮಾಡಿಸೆಂದು
ಅಕ್ಕಗ ಹಟವ ಮಾಡಿದನೊ ||೬೦||

ಉಂಡಾಡುತಿರು ನೀ ಸುಮ್ಮನೆ ಮನೆಯೊಳು
ಚಂಡಿನಾಟ ಬೇಡಿನ್ನು
ಮಾತು ಕೇಳದು ಚಂಡು ಮಾಡಿಸೆಂದು
ಪರಿಪರಿ ಕಾಡಹತ್ತಿದನು ||೬೧||

ಅಕ್ಕ ಮಾಯವ್ವನು ನಿರ್ವಾಹವಿಲ್ಲದೆ
ಚಂಡು ಮಾಡಿಸಿ ಕೊಟ್ಟಾಳಿನ್ನು
ರೇವಣಶಿದ್ಧನು ಬಂದು ಬೀರೇಶಗ
ಲಿಂಗದೀಕ್ಷೆಯನು ಮಾಡಿದನೊ ||೬೨||

ಗಡನೆ ಪಂಚಾಕ್ಷರಿ ಮಂತ್ರವ ಬೋಧಿಸಿ
ರೇವಣ ತಾನು ಹೋದಾನೊ
ಒಡನೆ ಬೀರೇಶನು ಚಂಡನು ತೊಕ್ಕೊಂಡು
ಬೀದಿ ಬೀದಿಯಲಿ ಆಡಿದನೊ ||೬೩||

ಬೀರೇಶನ ಚಂಡೊಂದು ಹುಡುಗಗೆ ಬಡದಿತು
ಆಗ ಹುಡುಗ ಮರಣ ಹೊಂದಿದನೊ
ಸತ್ತ ಹುಡುಗನ ನೋಡಿ ಬೀರೇಶನು
ಮನೆಗೆ ಓಡಿ ಹೋಗ್ಯಾನಿನ್ನು ||೬೪||

ಇತ್ತ ಹುಡುಗನ ತಂದೆ ತಾಯಿಗಳು
ಹುಡುಗ ಸತ್ತ ಸುದ್ದಿಯೆನೋ
ನೋಡಿ ದುಃಖದಿಂದ ಕೊಂದವರ್ಯಾರೆಂದು
ಕೇಳಿದರಲ್ಲಿಯ ಹುಡುಗರನೊ ||೬೫||

ಹುಡುಗರಾಗ ಬೀರನೆಂಬ ಹುಡುಗ
ತನ್ನ ಚಂಡಿನಿಂದ ಹೊಡದಾನೋ
ಒಡನೆ ನೆಲಕೆ ಬಿದ್ದು
ಒದ್ದಾಡುತ ಪ್ರಾಣ ಬಿಟ್ಟಾನೊ ||೬೬||

ಆಗ ಕೋಪದಿಂದ ಖಡ್ಗ ಖಟಾರಿ ತಗೊಂಡು
ಅವನ ಮನಿಗೆ ಬಂದಾರಿನ್ನೋ
ಬೀರನ ಹಿಡಿದು ಖಡ್ಗದಿ ಹೊಡೆಯಲು
ತುಂಡು ತುಂಡಾಗಿ ಉದಿರ್‍ಯಾವಿನ್ನು ||೬೭||

ಕೂಡಿದ ಜನರೆಲ್ಲ ಶಿದ್ಧನ ನೋಡಿ
ಗಾಬರ್‍ಯಾಗಿ ನಿಂತಾರಿನ್ನೊ
ಆಗ ಬೀರೇಶನು ಅಲ್ಲಿಗೆ ಬಂದು
ಸತ್ತ ಹುಡುಗನನ್ನು ನೋಡಿದನೋ ||೬೮||

ಒಂದೇ ಮನದಿ ಗುರುವಿನ ಸ್ಮರಿಸಿ
ಭಸ್ಮ ಹಚ್ಚಿ ಪ್ರಾಣ ಪಡೆದಾನೊ
ನೋಡಿ ಜನರು ಬೆರಗಾರಿ ನಿಂತು
ಇವ ಮನುಷ್ಯ ಅಲ್ಲ ಅಂದಾರಿನ್ನೊ ||೬೯||

ಹಾಡಿ ಹರಸುತ ಪುರದೊಳು ಕೂಡುತ
ಇವ ದೇವರಂದಾರಿನ್ನೊ
ಆಗ ಮಾಯವ್ವನು ಇವನ ಪುಂಡಾಟ ನೋಡಿ
ಊರ ಬಿಡಬೇಕಂದಾಳಿನ್ನೊ ||೭೦||

ಗಕ್ಕನೆ ಹುಡುಗನ ಕರಕೊಂಡು
ಬೆಳ್ಳಿಗುತ್ತಿಗೆ ಬಂದಾಳಿನ್ನೊ
ಹೋಗುವ ಮಾರ್ಗದಿ ಹುತ್ತವ ಕಂಡು
ಸರ್ಪಾಗಿ ಅದರೊಳು ಹೊಕ್ಕಾನು ||೭೧||

ಬೇಗ ಮೇಲೆ ಬಂದು ಶಿದ್ಧಬೀರನು
“ನಾಗಪುರ” ಆಗಲೆಂದಾನೊ
ಅಲ್ಲಿಂದ ಮುಂದಕೆ ದಾರಿಯ ಹಿಡಿದು
ಬೆಳ್ಳಿಗುತ್ತಿಗೆ ಬಂದಾರಿನ್ನು ||೭೨||

ಅಲ್ಲಿನ ಜನ ನೋಡಿ ಮಹಿಮರೆಂದು
ಇಬ್ಬರ ಪಾದಕ ಎರಗ್ಯಾರಿನ್ನು

ಕೂಡಿದ ಜನರೊಳು ಹೇಮಣ್ಣನೆಂಬ
ಕುರುಬನು ಅವರಿಗೆ ನಮಿಸಿದನೊ ||೭೩||

ಒಡನೆ ನಿಮ್ಮ ಪುರದೆಸರೆನೆಂದು
ಈ ತರುಳ ಯಾರೆಂದು ಕೇಳಿದನೊ
ಇವನು ನನ್ನ ತಮ್ಮ ಶಿದ್ಧಬೀರೇಶನು
ನಾನು ಅಕ್ಕ ಮಾಯವ್ವನು ||೭೪||

ಅವನಿಯೊಳು ನಮ್ಮ ಜನ್ಮಸ್ಥಾನವು
ಮೂಡಲಗಿರಿಯೆಂಬ ಪುರವಿನ್ನು
ಅಷ್ಟರೊಳು ಸತ್ತ ಕುರಿಗಳ ಹೊತಗೊಂಡು
ಕುರುಬರು ಅಲ್ಲಿಗೆ ಬಂದಾರಿನ್ನು ||೭೫||

ವಿನಯದಿಮದ ಇವು ಯಾಕ ಸತ್ತವೆಂದು
ಅಕ್ಕ ಮಾಯವ್ವನು ಕೇಳಿದಳು
ಹಿರೇಬೇನೆಯಿಂದ ಸತ್ತವೆನಲು
ಆಗ ಶಿದ್ದಬೀರೇಶಂತಾನೊ ||೭೬||

ಗುರುನಾಮವನು ಸ್ಮರಿಸಿ
ಭಸ್ಮ ಹಚ್ಚಲು ಕುರಿಗಳು ಎದ್ದಾವಿನ್ನು
ಬೆರಗಾಗಿ ಹೇಮಣ್ಣ ತನ್ನ ಮನಿಗೆ
ಬೇಗನೆ ಕರಕೊಂಡು ಹೋದಾನು ||೭೭||

ಇರುವದಕ್ಕೆ ಅವರಿಗೆ ಒಂದು ಮನೆ
ಗೊತ್ತು ಮಾಡಿ ಆಗ ಕೊಟ್ಟಾನು
ಮನೆ ಮನೆಗೊಂದರಂತೆ ಕುರಿಯ
ಕೊಡಿಸುವೆನೆಂದವರಿಗೆ ಹೇಳಿದನು ||೭೮||

ತನಯ ಬೀರೇಶನು ನಾವೇನ ಮಾಡೋನು
ಕಾಯುವರಾರಿಂದು ಕೇಳಿದನು
ಆಗ ಹೇಮಣ್ಣನು ತನ್ನ ಮಗ
ಹೋಮಣ್ಣನನ್ನು ಕಳಿಸುವನೋ ||೭೯||

ಬೇಗ ಏಳನೂರ ಕುರಿಯ ಕೊಡಿಸಿ
ಮಗನ ಕಾಯಲಿಕ್ಕೆ ಕಳಿಸಿದನೋ
ಅಕ್ಕ ಮಾಯವ್ವನು ಅವಗ ಕೋಲ ಕೊಟ್ಟು
ನಿತ್ಯದಿ ಕಾಯಲಿಕ್ಕೆ ಕಳಿಸಿದಳೋ ||೮೦||

ಆಗ ಬೀರೇಶನು ಬಿಲ್ಲು ಮಾಡಿಸಿ ಕೊಡು
ಎಂದು ಅಕ್ಕಗ ಹಟ ಮಾಡಿದನು
ಬಿಲ್ಲು ತೊಗೊಂಡು ನೀಯೇನು ಮಾಡುವಿ
ಸುಮ್ಮನೆ ಕಾಡಬೇಡ ಯನ್ನನು ||೮೧||

ಹಿಂದೆ ನಿನಗೆ ಚಂಡು ಮಾಡಿಸಿ ಕೊಟ್ಟ ಫಲದಿಂದ
ಊರು ಬಿಟ್ಟು ಬಂದಿಹೆನು
ಮುಂದೆ ಬಿಲ್ಲಿನಿಂದ ಏನು ನ್ಯಾಯ
ತರುವಿ ನಿನಗೆ ಬಿಲ್ಲು ಬ್ಯಾಡಿನ್ನು ||೮೨||

ಆಗ ಬೀರೇಶನು ಮಾತು ಕೇಳದೇ
ಮಾಡಿಸೆಂದು ಹಟ ಹಿಡಿದಾನೊ
ಬೇಗ ಸಾಲಿ ಈರಪ್ಪನ ಬಳಿಗ್ಹೋಗಿ
ಬಿಲ್ಲು ಮಾಡಿಸಿ ಕೊಟ್ಟಾಳು ತಾನು ||೮೩||

ಆಗ ಬೀರೇಶನು ಕಾಶೀಯ ಬಿಗಿದು
ಬಿಲ್ಲ ಪೂಜಿಯಗೊಂಡಾನೊ
ಗುರುವಿನ ಸ್ಮರಿಸುತ ಬಿಲ್ಲು ತೊಗೊಂಡು
ಝೇಂಕರಿಸಿ ಮುಂದೆ ನಡೆದಾನೊ ||೮೪||

ಹೋಗುವ ದಾರಿಯೊಳು ನೀರು
ತರುವ ಬಾಲೇರ ಕೊಡಕಿನ್ನು
ಬಿಲ್ಲೇಲೆ ಹೊಡೆಯಲು ಕೊಡವು ತೂತು
ಬಿದ್ದು ನೀರು ಸೋರಹತ್ಯಾವಿನ್ನು | |೮೫||

ಆಗ ಸಿಟ್ಟಿನಿಂದ ತಂದಿ ತಾಯಿ ಕಾಣದ
ಪರಮ ನೀಚನೊ
ಪರದೇಶಿ ಇದು ಎಲ್ಲಿಂದ ಬಂದಿತೆಂದು
ಸಿಕ್ಕ ಸಿಕ್ಕಂತೆ ಬೈದಾರಿನ್ನು ||೮೬||

ತ್ವರದಿ ಬೀರೇಶನು ಮೇಣದ ಗುಂಡಿನಿಂದ
ಕೊಡಕೆ ಹೊಡೆದು ತಾ ನಡೆದಾನು
ಸೋರುವ ಕೊಡಗಳು ನೋಡಲ್ಲಯ್ಯ
ಮೊದಲಿನಂತಾಗ್ಯಾವಿನ್ನು ||೮೭||

ತಂದೆ ತಾಯಿಗಳಿಲ್ಲದವನೆಂದು
ನಿಂದೆನಾಡಿನ ಮಾತನ್ನು

ಶಿದ್ಧಬೀರೇಶನು ಬೈಗಳ ಕೇಳಿ
ಮನಸ್ಸಿಗೆ ಕೆಟ್ಟಾಗಿ ಬಂದಾನಿನ್ನು ||೮೮||

ಮನೆಗೆ ಬಂದು ಅಕ್ಕಗ ಕೇಳಿದ
ನನಗೆ ತಂದೆ ತಾಯಿ ಇಲ್ಲೇನು
ನನಗೆ ತಂದೆ ತಾಯಿ ಇಲ್ಲದವನೆಂದು
ನಿಂದೆಯನಾಡಿದರು ಕೇಳಿನ್ನು ||೮೯||

ಬೇಗ ಹೇಳು ನನ್ನ ತಂದೆ ತಾಯಿಗಳು
ಅವರೆಲ್ಲಿರುವರು ಈಗಿನ್ನು
ಈಗ ನೀನು ಎನಗ ಹೇಳಬೇಕೆಂದು
ಹಟವ ಮಾಡುತ ಕುಳಿತಾನೊ ||೯೦||

ಆಗ ಮಾಯವ್ವನು ತಮ್ಮಗ ಹೇಳ್ಯಾಳು
ನಿಮ್ಮ ತಂದಿ ಬರಮದೇವಾನು
ಈಗ ನಿಮ್ಮ ತಾಯಿ ಸೂರಾವತಿದೇವಿ
ಇರುವಳಿನ್ನೂ ||೯೧||

ನನ್ನ ತಮ್ಮನೆ ಕೇಳೊ ನೀನು
ಚಂದ್ರಗಿರಿಯಲ್ಲಿರುವರಿನ್ನು
ಸುಮ್ಮನೆ ನಿನ್ನ ಮರೆತುಬಿಟ್ಟಿರು
ಮರಣ ಹೊಂದಿದನೆಂದು ತಿಳಿದಿನ್ನು ||೯೨||

ನೀನು ಹುಟ್ಟಿದ ಏಳು ದಿವಸದಲ್ಲೆ
ಅರಣ್ಯಕ್ಕೆ ಅಟ್ಯಾರಿನ್ನು
ನಾವು ಕುರಿ ಕಾಯಲಿಕ್ಕೆ ಬಂದಿದ್ದೆವು
ನೋಡಿ ಮನೆ ತಂದೆ ನಿನ್ನನ್ನು ||೯೩||

ಕೇಳಿ ಬೀರೇಶನು ಎನ್ನ ಅರಣ್ಯದಿ
ಇಡಲಿಕ್ಕೆ ಕಾರಣವೇನೆಂದಾನು
ಹೇಳವ್ವ ಎನಲು ಆಗ ಮಾಯವ್ವನು
ಹೇಳಿದಳೆಲ್ಲ ಸಂಗತಿಯನ್ನೂ ||೯೪||

ತರುಳ ಕೇಳೋ ನಿಮ್ಮಾವ ಕೃಷ್ಣನು
ನೀನಿದ್ದರೆ ತನ್ನ ಮಗಳನ್ನು
ತ್ವರದಿ ಒಯ್ಯುವನೆಂದು ನಿನ್ನನ್ನು ಕೊಲ್ಲಲು
ಮಾಡಿದ ಕಪಟ ಯತ್ನವನು ||೯೫||

ಏನು ಹೇಳಲಿ ತಮ್ಮ ನಿಮ್ಮಾವ
ಮಾಡಿದ ಕೆಟ್ಟ ಕೃತ್ಯವನು
ತಾನು ಜೋತಿಸ್ಯನಾಗಿ ನಿಮ್ಮ ತಾಯಿಗೆ
ಬೋಧಿಸಿ ಅರಣ್ಯದಿ ಒಗೆಸಿದನೊ ||೯೬||

ಕೇಳಿ ಬೀರೇಶನು ಕೋಪವ ತಾಳಿ
ನೀಚ ಕೃಷ್ಣನನ್ನು ನೋಡುವೆನು
ಆ ಖೂಳನ ಸೊಕ್ಕು ಮುರಿಯದಿದ್ದರೆ ನಾ
ಶಿದ್ದ ಬೀರೈಯ್ಯ ನಾನಲ್ಲೆಂದಾನೊ ||೯೭||

ಇಲ್ಲಿಗೆ ಹರಹರ ಇಲ್ಲಿಗೆ ಶಿವಶಿವ
ಇಲ್ಲಿಗೆ ಇದು ವಂದು ಸಂದೇಳೊ
ದೇವಾರು ಬಂದಾವು ಬನ್ನೀರೇssss ||೯೮||

**ನಾಲ್ಕನೇ ಸಂದು :**

ಅಕ್ಕ ಹೇಳವ್ವ ದುಷ್ಟನ ಪುರವನೊ
ವತ್ತರದಿಂದ ಹೇಳೆಂದಾನೋ
ದುಷ್ಟನ ಮಗಳ ಹೆಸರೇನಿರುವದು
ಬೇಗ ಎನಗೆ ತಿಳಿಸೆಂದಾನೋ ||೯೯||

ಆಗ ಮಾಯವ್ವನು ತಮ್ಮಗ ಹೇಳ್ಯಾಳು
ವೈಕುಂಠ ಪುರದಲ್ಲಿರುವನು
ಅವನ ಮಗಳು ಕುಮಾಲಿದೇವಿ
ಹರುಷದಿಂದಿರುವಳಿನ್ನು ||೧೦೦||

ನೀನು ಒಯಿದಾನೆಂಬ ಅಂಜಿಕೆಯಿಂದ
ಮಗಳಿಗೆ ಕಾವಲಿಟ್ಟಾನೊ
ಹೀಗೆ ಮಾಡಿದನೆಂದು ಕೋಪದಿಂದ
ಆಗ ಬೀರೇಶ ಕಾಶಿಯ ಕಟ್ಟಿದನೊ ||೧೦೧||

ಈಗ ನಾನು ಕಾವಲಿಗಾರರ ಕೊಂದು
ಗೆದ್ದು ಕನ್ಯೆಯನು ತರುವೆನೊ
ಹೋಗಬೇಡ ತಮ್ಮ ಈ ಸಮಯದಿ
ಕರಮುಗಿದು ಕೇಳಿಕೊಳ್ಳುವೆನು ||೧೦೨||

ಹೋಗುವೆನೆಂದು ಅಕ್ಕನ ಮಾತು ಮೀರಿ
ಬಿಲ್ಲು ತೊಗೊಂಡು ತಾ ಹೊರಟಾನೊ
ಭರದಿ ಬೀರೇಶನು ವೈಕುಂಟಕ ಹೋಗಿ
ಪಟ್ಟಣದೈಶ್ವರ್ಯ ನೋಡಿದನೊ ||೧೦೩||

ರಾಜ ಬೀದಿಯಲ್ಲಿ ಬೀರೇಶ ನಿಂತು
ಕನ್ಯೆ ಹೆಂಗ ಒಯ್ಯುವದಲ್ಲೆಂದಾನೊ
ಬೇಗ ಶಸ್ತ್ರಾಸ್ತ್ರವ ತೆಗೆದಿಟ್ಟು ಶಿದ್ಧನು
ತಾನೊಂದು ಯುಕ್ತಿಯ ಮಾಡಿದನೊ ||೧೦೪||

ತ್ವರದಿ ಮುದುಕ ಬಳಿಗಾರ ವೇಷದಿ
ಬೀದಿಯೊಳು ಕುಳಿತಾನೊ
ಚಂದ ಚಂದದ ಬಳಿಗಳಿಟಗೊಂಡು
ಬೀದಿಯಲ್ಲಿ ತಾ ಕುಳಿತಾನೊ ||೧೦೫||

ಆಗ ಕಾಮಾಲಿನಿ ದಾಸಿಯರೆಲ್ಲರೂ ಬಂದು
ಬಳಿಯ ನೋಡಿದರಿನ್ನು
ಅಂದ ಚಂದದ ಬಳಿಗಳ ನೋಡಿ ಬಂದು
ದೇವಿಗೆ ತಿಳಿಸ್ಯಾರಿನ್ನು ||೧೦೬||

ಏನು ಹೇಳಬೇಕು ಕಾಮಾಲಿನಿದೇವಿ
ಬಳಿಗಳ ಅಂದ ಚದವನು
ಕಾಣೆವು ನಾವಿಂಥ ಬಳಿಗಳ ಎಷ್ಟು
ಹೇಳಿದರೂ ತೀರದಿನ್ನು ||೧೦೭||

ರಾಜಕನ್ಯೆಯರಿಡುವಂಥ ಬಳಿಗಳು
ಯಾರಿಗೂ ಸಲ್ಲವು ಕೇಳಿನ್ನು
ಸೋಜಿಗಗೊಂಡೆವು ಬಳೆಗಳ ನೋಡಿ
ಕರೆಸಬೇಕವ್ವಾ ಅವನನ್ನು ||೧೦೮||

ಬೇಗ ನನ್ನ ತಂದಿ ಕೃಷ್ಣಗ ತಿಳಿಸಿ
ಕರಿಸಿರಿ ಆ ಬಳೆಗಾರನ್ನೊ
ವತ್ತರದಿಂದ ಕೃಷ್ಣಗ ಬಂದು ತಿಳಿಸಲು
ಕರಸಿದ ಆಗ ಬಳೆಗಾರನ್ನು ||೧೦೯||

ನೋಡಿ ಮುದುಕನೆಂದು ಒಗೆ ಹೋಗಲಿಕ್ಕೆ
ಕೃಷ್ಣ ಅಪ್ಪಣೆ ಕೊಟ್ಟಾನೊ

ಕರದಲಿ ಕೋಲು ಪಿಡಿದು ನಡಗುತ
ಹೆಗಲ ಮೇಲೆ ಬಳೆ ತಾ ಹೊತ್ತಾನೊ ||೧೧೦||

ಶಿರವ ನಡಗಿಸುತ ಕೋಲು ಊರುತ
ಕಾಮಾಲಿ ಸದರಿಗೆ ಬಂದಾನೊ
ಮಣಿಯ ಮಂಚದ ಮೇಲೆ ಕುಳಿತ
ಕಾಮಾಲಿದೇವಿಯ ಮಾರಿಯ ತಾ ನೋಡಿದನೊ ||೧೧೧||

ಪುಲ್ಲಲೋಚನೆಯ ರೂಪ ಲಾವಣ್ಯ ನೋಡಿ
ಬೆದರಿ ಬೆರಗಾಗಿ ನಿಂತಾನೊ
ಏನು ರೂಪವಿದು ಈ ಅವಳ ರೂಪಕ್ಕೆ
ರತಿದೇವಿ ಸಹ ಅಲ್ಲಿನ್ನು ||೧೧೨||

ಕ್ಷೋಣಿಯೊಳಗೆ ಇಂಥ ರೂಪವತಿಯ
ಕಾಣೆನು ಯಾವ ಸ್ತ್ರೀಯರನ್ನು
ಹೊಂಚು ಹಾಕಿ ಎತ್ತಿ ಒಯ್ಯುದಿದ್ದರೆ
ಧರೆಯೊಳಿದ್ದು ಫಲವೇನು ||೧೧೩||

ಹೀಗೆ ಯೋಚಿಸಿ ಮನದೊಳು ತಾನು
ಕೂಡಲೆ ನಿಜರೂಪ ತೋರಿದನೊ
ಬೇಗ ಕಾಮಾಲಿ ಇವನ ರೂಪ ನೋಡಿ
ಬೆದರಿ ಅಂಜುತ ತಾ ನಿಂತಾಳಿನ್ನು ||೧೧೪||

ಚಲುವ ಚನ್ನಿಗನ ರೂಪ ಲಾವಣ್ಯ ನೋಡಿ
ತನ್ನ ಮನಸು ಸೋತಾಳಿನ್ನು
ಎನಗೆ ಇವನು ಪತಿಯಾದರೆ
ಹೆಣ್ಣಿನೊಳಗೆ ಧನ್ಯಳಾಗುವೆನೊ ||೧೧೫||

ಹೀಗೆ ಯೋಚಿಸಿ ಬಳೆಗಾರನ
ಬಳಿಯಲ್ಲಿ ಬಂದು ಕುಳಿತಾಳಿನ್ನು
ಆಗ ನಾಚುತ ಮುಸುಗ ಸರಿಸುತ
ಅವನ ಕರದಿ ಕೈ ಕೊಟ್ಟಾಳಿನ್ನು ||೧೧೬||

ಆಗ ಬೀರೇಶನು ಇವಳ ಒಯ್ಯದಾದರ
ಈಗ ವ್ಯಾಳೆ ಅಲ್ಲವೆಂದಾನೊ
ಈಗ ಇವಳ ಮನದಾಶೆ ಏನಿರುವದು
ತಾನು ತಿಳಿಯಬೇಕೆಂದಾನೊ ||೧೧೭||

ತ್ವರದಿ ಮತ್ತೊಂದು ವೇಷದಿ ಬಂದು
ಇವಳ ಒಯ್ಯಬೇಕಂದಾನೊ
ಚೆನ್ನಿಗಳ ಮನದಾಸೆ ತಿಳಿಯಲು ಅವಳ
ಯೋಗಕ್ಷೇಮ ಕೇಳಿದನೊ

ಚೆನ್ನಿಗಳೆ ಇಂದು ಗಂಡನ ಮನಿಯೋ
ತವರುಮನಿಯೋ ಎಂದಾನು
ಸನ್ನುತಾಂಗಿ ನಿನಗೆ ಕಾವಲಿಟ್ಟದ್ದು
ಅದು ಏನು ಕಾರಣ ಹೇಳಂದಾನೊ ||೧೧೯||

ಎಲ್ಲಿ ಗಂಡ ನನ್ನಂಥಾ ದುರ್ದೈವಿಗೆ
ಲಗ್ನವಾಗಿಲ್ಲ ಎನಗಿನ್ನು
ಮತ್ತೆ ಕೇಳಿರಿ ಸೂರಾವತಿ ಪುತ್ರನು
ಚನ್ನಾಗಿ ಇರುವ ಬೀರೇಶನು ||೧೨೦||

ಎತ್ತಿಕೊಂಡು ಒಯ್ಯುವ ಭಯದಿಂದೆ
ನನ್ನ ಆತಂಕದೊಳಿಟ್ಟಾನೊ
ಸುಂದರಾಂಗ ನನ್ನ ಶಿದ್ಧಬೀರೈಯ್ಯನು
ಎಂದು ಬಂದು ಕರೆದೊಯ್ಯುವೆನೊ ||೧೨೧||

ಅದೇ ಚಿಂತಿಯಿಂದ ಮನದೋಳು
ನಾನೂ ಪರಿಕಷ್ಟದೊಳಿರುವೆನು
ಮನಸಿನೊಳಗಿನ ಕಷ್ಟವ ಹೇಳಿ
ಬಳ ಬಳ ಕಣ್ಣೀರು ಸುರಿಸ್ಯಾಳಿನ್ನು ||೧೨೨||

ಕಾಂತಿಮಣಿ ನೀ ಚಿಂತಿಸಬೇಡ
ಅಂದ ಚಂದ ಬೀರೇಶನನ್ನು
ಸ್ವತಾಃ ನಾನೇ ಪೋಗಿ ಕರೆತರುವೆನು
ಸಂತೋಷದಿಂದಲಿ ಇರು ನೀನು ||೧೨೩||

ವೃತ್ತ ಕುಚಳೆ ಇದು ಸತ್ಯ ಮಾತು ತಿಳಿ
ಅಗತ್ಯವಾಗಿ ಕರೆತರುವೆನು
ಹೀಗೆ ಹೇಳಿ ಮುದಿ ವೇಷ ತಾಳಿ
ಹೊರಬಿದ್ದು ತಾ ಹೋದಾನೊ ||೧೨೪||

ಇನ್ನು ಮುಂದೆ ಏನು ಮಾಡಬೇಕೆಂದು
ಮತ್ತೊಂದು ಹಂಚಿಕೆ ಮಾಡಿದನೊ

ತ್ವರದಿ ಸಿಂಪಿಗನ ವೇಷ ತಾಳಿ
ತರತರ ಜರದ ಕುಬ್ಬಸನ್ನು ||೧೨೫||

ರಾಜ ಬೀದಿಯಲಿ ಮಾರುತ ಬರಲು
ಕಾಮಾಲಿನಿದಾಸಿ ನೋಡ್ಯಾಳಿನ್ನು
ರಾಜ ಬೀದಿಯಲಿ ಮಾರುತ ಬರಲು
ಕಾಮಾಲಿನಿದಾಸಿ ನೋಡ್ಯಾಳಿನ್ನು
ಚಂದ ಚಂದದ ಜರದ ಅರಬಿ ನೋಡಿ
ನಮ್ಮ ದೇವಿಗೆ ಸಲ್ಲುವವಿನ್ನು ||೧೨೬||

ಓಡಿ ಬಂದು ಜರದ ಕಣದ ಸುದ್ದಿಯನೊ
ಕಾಮಾಲಿನಿಗೆ ಹೇಳಾಳಿನ್ನು
ಸರಿಯಾದ ಅರಬಿ ಅರಸು ಮಕ್ಕಳಿಗೆ
ಬೇಗನೆ ಕರಿತರಸವ ನೀನು ||೧೨೭||

ಕೇಳಿ ಕಾಮಾಲಿನಿ ತಂದೆಗೆ ತಿಳಿಸಿ
ಕರಕೊಂಡು ಬರ್ರಿ ಸಿಂಪಿಗನನ್ನೊ
ಹೇಳಿದಳಾಗ ದಾಸಿಯು ಕೃಷ್ಣಗ
ಜರದ ಕುಬ್ಬಸದ ಸುದ್ದಿಯನ್ನೊ ||೧೨೮||

ಆಗ ಕೃಷ್ಣನು ಸಿಂಪಿಗನ ಕರಿಸಿ
ನೋಡಿದ ಮುದಿ ಆಕಾರವನ್ನೊ
ಬೇಗ ಕಾಮಾಲಿನಿ ಬಳಿಗೆ ಹೋಗು
ನೀ ಕೊಡ ಬೇಡಿದ ಕುಬ್ಬಸವನ್ನೊ ||೧೨೯||

ಒಳಗೆ ಹೋಗಲಿಕ್ಕೆ ಅಪ್ಪಣೆ ಕೊಡಲು
ಹೊತ್ತನು ಕುಬ್ಬಸದ ಗಂಟನ್ನು
ಘಳಿಲನೆ ಒಳಗೆ ಹೋಗಿ ಗಂಟು
ಇಳುವಿ ಕುಳಿತಾನೊ ||೧೩೦||

ಸುಂದರಿ ಕಾಮಾಲಿನಿ ನೋಡಿ
ಇಂದಿಗೆ ಮನದಾಶೆ ತೀರಿತಿನ್ನು
ಬೇಡಿದ ಜರದ ಕುಬ್ಬಸ ಕೊಡಲು
ಕಾಮಾಲಿನಿ ಸಂತೋಷಗೊಂಡಾಳಿನ್ನು ||೧೩೧||

ಇಂದು ಇವಳ ಒಯ್ಯದೆ ಬಿಡುವದಿಲ್ಲ
ಎಂದು ನಿಜರೂಪ ತೋರಿದನೊ

ನೋಡಿ ಅವನ ಸೌಂದರ್ಯ ರೂಪವನು
ಬೆದರಿ ಬೆರಗಾಗಿ ನಿಂತಾಳೊ ||೧೩೨||

ಹಿಂದೆ ಬಳೆಗಾರ ಇವನು
ಮನದಿ ಸಂದೇಃಗೊಂಡಾಳಿನ್ನು
ಸಂದೇಹದಿಂದಲಿ ಸುಂದರನವನ
ಅಂದವನು ಕೇಳಿದಳನ್ನು ||೧೩೩||

ಇಲ್ಲಿಗೆ ಹರಹರ ಇಲ್ಲಿಗೆ ಶಿವಶಿವ
ಇಲ್ಲಿಗೆ ಇದು ಒಂದು ಸಂದೇಳೊ
ದೇವರಾರು ಬಂದಾವು ಬನ್ನೀರೇssss ||೧೩೪||

**ಸೈನ್ಯದೇವನ ಪದಾ**

ಸೈನ್ಯದೇವನು ದ್ರೌಪದಿಯ ವಹಿಸಿದನು
ನಾ ವಿಸ್ತಾರ ಮಾಡಿ ಹೇಳುವೆನು ||೧||

ವಿಸ್ತಾರ ಮಾಡಿ ನಾ ಹೇಳುವೆನು
ಸರ್ವರೂ ಕೇಳರಿ ನೀವು ಇದನ್ನು ||೨||

ಮಧ್ಯ ಮಾರ್ಗದಲ್ಲಿ ಮದ್ಯ ಪಾಂಡವರು
ಯುದ್ಧ ಮಾಡಿ ತಂದರು ದ್ರೌಪದಿಯನ್ನು ||೩||

ಕೌರವರಾಜ ಕಾಶೀಯಾತ್ರೆಗೋಸ್ಕರವಾಗಿ
ಹೊರಟನು ನಿಶ್ಚಯಿಸಿ
ತಮ್ಮ ಸೈನ್ಯ ಸಿದ್ಧವನು ಏರೈಸಿ ||೪||

ಶೀಘ್ರದಲಿ ಹೊರಟನು ಮನದೊಳ ಕುಸಿ
ಚದುರಂಗ ಬಲ ಸಾಯಿತದಲಿ ಹೊರಟರು ||೫||

ವಾದ್ಯಗಳ ಘೊಳಡಿಸಿ ಆನೆ ಕುದುರೆ
ದಂಡು ಸಹಿತವಾಗಿ ಆರ್ಭಟಿಸುವರು ||೬||

ಮಾವುತರು ಚೆನಕಾಳಿ ಹೆಗ್ಗಾಳಿ
ಮುಂದ ಹಿಡಿಸಿದರು ಬರರರರರss ||೭||

ಮುಂದ ಹಿಡಸಿದ ಬರರss
ಹಿಂಗ ಸಾರಿದರು ಆರ್ಭಟರು ||೮||

ಅವನ ಆರ್ಭಟಕ ಭೂಮಿ ಬಿಚ್ಚಿ ತೆಗೆಯಿತು
ಆಗ ಬಿಚ್ಚಿ ಬಾಯಿ ತೆಗೆಯಿತು ||೯||

ಆಗ ಆದಿ ಶೇಷನ ಶಿರಕುಸಿತಿತ್ತು ಬ್ಯಾಗ
ಸೈನ್ಯ ಅಡಗಳಿಗೆ ಭೂಮಿ ಆಕಾಶದಂಗ ಹೆಳತೆವಿ ಈಗ ||೧೦||

ಬೇಗದಿಂದ ಹೋದಾರು ಕಾಶಿಗೆ
ಡೇರೆ ಹೊಡೆದರು ನದಿ ದಂಡೇಲಿ ||೧೧||

ನಮಸ್ಕಾರ ಈಶ್ವರನಾಥನಿಗೆ ಮಾಡಿದರು
ಹರಸಾ ಮನದಾಗ ಪೂಜೆ ಮಾಡಿಸಿದರು ||೧೨||

ಲಗು ಬೇಗ ತಿರುಗಿ ಬಂದರು ಮದ್ಯ ಮಾರ್ಗದಲಿ
ಮದ್ಯ ಪಾಂಡವರು ಯುದ್ಧಮಾಡಿ
ತಂದರು ದ್ರೌಪದಿಯ ||೧೩||

ಅಲ್ಲಿ ಇಂದ್ರವನವ ಕಂಡು
ಒಬ್ಬ ಹೊರಟ ಕೌರವ ತಾನು ||೧೪||

ವನ ಕಂಡು ಮನಸ್ಸಿಗೆ ಅಂದಾನು
ಪುಷ್ಪವನು ಕಂಡು ತಾ ಹಿಗ್ಯಾನು ||೧೫||

ವನದೊಳಗೆ ಇರುವ ಫಲಗಳನ್ನೆಲ್ಲ
ಆಜ್ಞೆ ಇಲ್ಲದೆ ಹರಕೊಂಡಾನು ||೧೬||

ಚಿತ್ರಸೇನ ಬಂದು ಅವನು ನಾಗ ಪಾಶದಿ
ಬಂಧನ ಮಾಡಿದನ ||೧೭||

ಸೆರೆಯಲ್ಲಿ ಸಿಕ್ಕು ಒದ್ದಾಡಿದನು
ಸೂಜಣದಿಂದ ಗೌಳಿ ತಿಳಿಸಿದಳು ||೧೮||

ವನದೊಳಗೆ ಇರುವ ಧರ್ಮಯ್ಯನನ್ನು
ಬಡಿಸಿತಾರು ಇಂದಿನ ದಿನ ನಿನ್ನ ಹಿಡಿದು ||೧೯||

ಬಾಣದಿಂದ ತಡೆದು ಕೇಳತಾನ
ಬಿಡರೀ ಅಣ್ಣ ಕೌರಯ್ಯನನ್ನು ||೨೦||

ಬಿಡದಿದ್ದರೆ ಕೊಡರೀ ನಮಗೆ ಯುದ್ಧವನು
ತಡೆಯಲಾರದೆ ಓಡಿ ಹೋದನಾಗ ಬಿಚ್ಚಲಿಕ್ಕೆ ||೨೧||

ಹೋದ ಫಾಲ್ಗುಣನಾಗ ಬಿಚ್ಚಲಿಲ್ಲ ಪಾಶಿ ಪಾರ್ಥನಿಗೆ
ತೊಕ್ಕಂಡು ಬಂದನು ಅಲ್ಲಿಂದ ||೧೧||

ಒಪ್ಪಿಸಿದ ಅಲ್ಲಿ ಅಣ್ಣ ಧರ್ಮಯ್ಯನಿಗೆ
ಧರ್ಮರಾಯ ಬಿಚ್ಚಂತೆ ಹೇಳಿದನು ||೧೨||

ಫಾಲ್ಗುಣನು ಬಿಚ್ಚುವಲ್ಲದು ಎಂದಾನು
ಇದ ನೋಡಿ ಧರ್ಮಜ ಅಂದಾನು ||೧೪||

ದ್ರೌಪದಿಯ ಕರಸಿದರು ಆ ಕ್ಷಣಕ
ದ್ರೌಪದಿಯ ಕರೆಯಲು
ನಗುತಲಿ ಬಂದು ಎಡಗಾಲಿನ ಚರಣ
ಅಂಗುಷ್ಠದಲ್ಲಿ ||೧೫||

ಬಿಚ್ಚಿದಳು ಆಶೆತನ ಮಾಡುತಲಿ
ಹಟ ಇಟ್ಟ ಕೌರವ ಮನಸ್ಸಿನಲಿ ||೧೬||

ವಿಷಾ ಇಟ್ಟ ಕೌರವರಾಜ ತಳಲಿಪೊದ
ತನ್ನ ಪಟ್ಟಣಕೂ ಹರನಗಳೆಯಲಾರೆ
ಎಂದ ಕೌರವ ||೧೭||

ಹೋದ ನದಿಯ ದಡದಲ್ಲಿ
ನದಿಯ ದಡದಲ್ಲಿ ಪ್ರಾಣಕೊಡುವೆ ತತ್ಕಾಲದಲಿ ||೧೮||

ಈ ವಾರ್ತೆ ಸೈಂದವನು ಕೇಳುತಲಿ
ತಡಮಾಡದೆ ಬಂದನು ಓಡುತಲಿ ||೧೯||

ಯಾಕೆ ಹೇಳಿ ನೀವು ಇಂದಿನಲ್ಲಿ
ಪ್ರಾಣ ಕೊಡತೆನಂತ ಬಂದನೆಲ್ಲಿ ||೨೦||

ಅಪಮಾನ ಆದದ್ದು ಎಲ್ಲ ಅಮ್ಯಾಗ
ಹೇಳಿದನು ಸರ್ವ ಉಳಿದಂಗ ||೨೧||

ಇದರ ಚಿಂತಿ ಬಿಡರೀ ನೀವು
ಈಗ ತರುವೆನು ಒಂದು ಗಳಿಗ್ಯಾಗ ||೨೧||

ದ್ರೌಪದಿಯ ಚಿಂತಿ ನಮಗ್ಯಾಕೆ
ತಂದು ಕುಂದರಿಸುವೆ ಎಡ ತೊಡಿಮ್ಯಾಕ ||೨೨||

ಇಷ್ಟ ಧೈರ್ಯ ಸೈನ್ಯದೇವ
ಕೌರವಗ ಹೇಳಿ ಹೊರಟ ವನಕ ತಾನು ||೩೪||

ಪಾಂಡವರು ಹೋಗಿದ್ದಾರು ಬೇಟೆಯನಾಡಕ
ಮಡಿಯ ಹಿಡಿಯಿರಿ ||೩೫||

ದ್ರೌಪದಿಯ ನೀನಂತ
ಬಡತನ ನೋಡಿ ನಾ ಬಂದೆನು ||೩೬||

ಗಂಡರಿಲ್ಲದ ಯ್ಯಾಳೆದಲ್ಲಿ
ತಕ್ಕೊಳದಿಲ್ಲ ಈ ಮಡಯಿನ್ನು ||೩೭||

ಇನ್ನು ತಾಸಿಗೆ ಐವರು ಬರುವರು
ಭಿನ್ನಹ ಇಲ್ಲವೇ ತಕ್ಕೊಳ್ಳುವೇ ನಾನು ||೩೮||

ಇಷ್ಟು ಮಾತು ಕೇಳಿದನು ಎಲ್ಲಾ
ತಡಕೋಪದಿಂದ ಎದ್ದಾನು ಕೈ ಹಿಡಿದು ||೩೯||

ಜೋಲಿಯಾ ಹೊಡಿದಾನು ಮುಡಿಯನ್ನು ಹಿಡಿದು
ಎಳೆದಾನು ಬೇಡ ಯಣ್ಣಾ ಯಾಕ ಇಂತಾದು ||೪೦||

ಭೀಮ ಕೇಳೀ ಬಡಿದು ಚಲ್ಲಾನು
ಮತ್ತೆ ಸೈಂದವ ಎತ್ತಿ ದ್ರೌಪದಿ ||೪೧||

ಚಿತ್ರದ ರಥದೊಳಗೆ ಕುಂಡರಿಸಿದನು
ಕುದುರೆ ಜಡಿಸಿ ರಥಕೆ ಮುಂದಕೆ ಹಾರಿಸಿದನು ||೪೨|

ಬೇಟೆ ಆಡುವದೊಳಗ ಪಾಂಡವರಿಗೆ
ವನದ ಕಡೆ ಹೋತು ದ್ಯಾಸವನು | |೪೩||

ವನದ ಕಡೆ ಹೋತು ದ್ಯಾಸವನು
ಈ ಸುದ್ದಿ ಭೀಮಸೇನ ಕೇಳುವನು ||೪೪||

ರಥ ಹೊಡಿಯತೀದಿ ಯತ ಮೂಳಿ
ಪರಿಹರಿಸೇವೆ ನಿನ್ನ ಐಯ್ಯದೊಳಿ ||೪೫||

ರಥ ತಂದ ತಿರುಗಿ ಹೊಡ ಮರಳಿ
ಒಪ್ಪಿಸಿದ ಅಣ್ಣಗ ಹೇಳಿ ಕೇಳಿ ||೪೬||

ಮದ್ಯ ಮಾರ್ಗದಿ ಯುದ್ಧ ಮಾಡಿ
ತಂದರು ದ್ರೌಪದಿಯನ್ನು ||೪೭||

ಸೈನ್ಯದೇವನು ದ್ರೌಪದಿಯ ವಹಿಸಿದನು
ನಾ ವಿಸ್ತಾರ ಮಾಡಿ ತಿಳಿಸುವೆನು ||೪೮||

## ಮತಸ್ತುತಿ – ಭಾಗ – ೩

**೪ಂನೇ ಸಂಧಿ :**

ರೇವಣಸಿದ್ಧನ ವರದಿಂದಾ ನಮಗೆಲ್ಲಾ ಜೀವಕ
ಏನು ಕುಂದ ಬ್ಯಾಡಂದಾನೋ

ಅಷ್ಟ ಆಗುದರೊಳಗ ಅಲ್ಲಿ ಪದಮಣ್ಣ ಬಂದಾನು
ದಿಟ್ಟಿಸಿ ಮಗನಾ ಅವರು ನೋಡಿದ್ದಾರೋ

ಕಷ್ಟಕ ಕರಿದಾರೋ ನಿನ್ನ ಅಣ್ಣಗಳು ತಮ್ಮಾ
ಹೊಟ್ಟಿ ತುಂಬ ಉಂಡ ಹೊಲಕ ಹೋಗಂದಾರೋ

ತಾಯಿಯ ವಚನಾ ಕೇಳಿ ಉಂಡಾಡು ಪದಮಗೊಂಡಾ
ದಯಾವಿರಲಿ ತಾಯಿ ನಾ ಹೋಗುವೆನೋ

ಕೊಡಲಿ ಕುಡಗೋಲ ಹಿಡದು ನಡದಾನೋ
ಪದಮಣ್ಣಾ ನಿಡ ಭಕ್ತಿಯಾದಿಂದ ಹೊಂಟಿದಾನೋ

ದೃಢ ಭಕ್ತಿಯಾದಿಂದ ಗುರುವಿನಾ ನೆನಿಯುತ
ಘಡನೆ ಅಣ್ಣಗಳನ ಕೂಡಿದ್ದಾನೋ

ಉಂಡಾಡು ಪದಮಗೊಂಡಾ ಬಂದದ್ದು ಅವರು ನೋಡಿ
ಮಡಕಿಯ ಹೂಡಿ ಅಂತ ಹೇಳಿದ್ದಾರೋ

ಹೊಡಿಯುತ ಮಡಕೀಯ ಕಡಿಯುತ
ಗಿಡಗಳನು ಒಡಹುಟ್ಟಿದವರು ಹೇಳಿದ್ದಾರೋ

ನುಡಿದ ನುಡಿಯಾ ಕೇಳಿ ಒಡಹುಟ್ಟಿದ
ಪದಮಗೊಂಡಾ ಗಿಡಗಳನ ಕಡಿಯುತಾ ಒಗದಿದ್ದಾನೋ

ಮೃಡ ನೀನೇ ಗತಿ ಎಂದು ಎಡಬಲಗೈಯೊಳು
ಒಡದಾವೋ ಹಸ್ತದೊಳು ಗುಳ್ಳಿಯನೋ

ಮತ್ತ ಆದಮ್ಮ ಬುತ್ತಿಯ ಉಣ್ಣದಕ
ಬುತ್ತಿಯಾ ಕಟ್ಟಿ ತಾನು ಕಳವಿದ್ದಾಳೋ

ಬುತ್ತಿಯಾ ಕಟ್ಟಿ ತಾ ಕಳಹುತ ಆದಮ್ಮಾ
ನಿತ್ಯ ನೇಮ ಸೊಸಿಯರಿಗೆ ಹೇಳಿದ್ದಾಳೋ

ಮತ್ತ ಸೊಸಿಯರನ ಕರಿದು ಹೇಳತಾಳು
ಬುತ್ತಿಯ ಹೆಡಗಿ ಒಯ್ಯಿರಿ ಅಂದಾಳೋ

ಬುತ್ತಿಯ ಹೆಡಗಿ ಹೊಲದೊಳಗ ಹೋಗಿ
ಬಿತ್ತುವ ಸಾಲಿನಲ್ಲಿ ನೀವು ಇಡರಿ ಅಂದಾಳೋ

ತಿರುಗಿ ನೋಡದೆ ನೀವು ಹೊರಟು ಊರ
ಕಡೆಗೆ ಬರ್ರೆಂದು ಸೊಸಿಯರಿಗೆ ಹೇಳಿದ್ದಾಳೋ

ಅತ್ತಿಯ ವಚನಾ ಕೇಳಿ ಸೊಸಿಯಿರೆಲ್ಲ
ಕೂಡಿ ಎತ್ತಿಕೊಂಡ್ರೋ ಬುತ್ತಿಯಾ ಹೆಡಿಗೆಯನೋ

**೪೧ನೇ ಸಂಧಿ :**

ವರ ಗುರು ರೇವಣಸಿದ್ಧನ ಮಹಿಮಾ
ಕರವ ಮುಗಿದು ಕೊಂಡಾಡುವೆನು

ಕರವ ಮುಗಿದು ಕೊಂಡಾಡುತ ದೇವನು
ಚರಣ ಕಮಲಾ ಹಿಡಿದು ನಮಿಸುವೆನೋ

ಅತ್ತಿಯ ವಚನಾ ಕೇಳಿ ಸೊಸಿಯರೆಲ್ಲ ಕೂಡಿ
ಎತ್ತಿಕೊಂಡಾರು ಬುತ್ತಿಯಾ ಹೆಡಗಿನೋ

ಎತ್ತಿಕೊಂಡು ಹೋಗಿ ಬುತ್ತಿಯಾ ಹೆಡಗಿಯಾ
ಬಿತ್ತುವ ಸಾಲಿನಲ್ಲಿ ಇಟ್ಟೆದ್ದಾರೋ

ವಲ್ಲಭೆಯರು ತಂದ ಬುತ್ತಿಯಾ ಕಂಡಾರು
ಮೆಲ್ಲ ಮೆಲ್ಲನೆ ಊಟಕ ಅವರು ಬಂದಿದಾರೋ

ಎಲ್ಲಾರು ಬಂದಾರು ಬುತ್ತಿಯಾ ಬಳಿಯಲ್ಲಿ
ವಲ್ಲೆಂದು ಹೋದಾನ ಆಗ ಪದಮಣ್ಣನೋ

ಪದಮಗೊಂಡನ ಬಿಟ್ಟು ಉಳಿದವರೆಲ್ಲ
ಮುದ್ದೆಯ ಉಂಡು ಅವರು ಎದ್ದಿದ್ದಾರೋ

ಮುದ್ದೆಯ ಉಂಡು ಅವರು ಇದಂಥ ಬುತ್ತಿಯಾ
ಪದಮಣ್ಣನ ಎಡಿ ಅಂತ ತಿಳಿದಿದ್ದಾರೋ

ಪದಮಗೊಂಡಾನ ಎಡಿಯಾ ತಗೊಂಡಾರವರು
ಇದ್ದಲ್ಲಿಗೆ ಹೋಗಿ ಅವನ ಕರದಿದ್ದಾರೋ

ಕರದಾರೋ ಎಲ್ಲಾರು ಪದಮಗೊಂಡ ಅಲ್ಲಿ
ಭರದಿಂದಾ ಬಂದ ಊಟಾ ಮಾಡಂದಾರೋ

ಕರೆದು ನೀರವ ಕೊಟ್ಟು ಕೈ ಗುರಳಿಯ ನೋಡಿ
ಮರುಗಿದಾರೋ ತಾವು ಮನದೊಳಗೋ

ಮರುಗಿ ಅಂತಾರ ಅವರು ಪದಮಣ್ಣಾ
ಅರಿದಾವಾ ಕರೆತಂದೆವೋ ಕೆಲಸಕ್ಕ ಪದಮಣ್ಣನೋ

ಕರೆತಂದೆವೋ ನಿನ್ನ ಸುಮ್ಮನೆ ಕೆಲಸಕ
ಇರಸಿದ ಬುತ್ತಿಯ ಊಟಾ ಮಾಡಂದಾರೋ

ಇರಸಿದ ಬುತ್ತಿಯ ನೋಡಿ ಪದಮಗೊಂಡ
ಹರುಷಾಗಿ ಬುತ್ತಿಯಾ ಬಿಚ್ಚಿದಾನೋ

ಪರುಷ ಪಾಯಸ ಬುತ್ತಿ ಇದ್ದುದ ಕಂಡು
ಹರನು ಒಲಿದನೆಂದು ಅಂದಿದಾನೋ

ಇತ್ತ ಪದಮಗೊಂಡ ಹರ ಎನಗ ಒಲಿದನೆಂದು
ಬುತ್ತಿಯಾ ಹರುಷಾಗಿ ಉಂಡಿದ್ದಾನೋ

ಹೊತ್ತ ಮುಳುಗುವ ವ್ಯಾಳ್ಯಾಕ ಹೊಲಾ ಬಿಟ್ಟು
ಅವರೆಲ್ಲ ಮತ್ತ ಮತ್ತ ಮನಿಗಿ ಬಂದಿದಾರೋ

ಮನಿಗಿ ಬಂದು ಅವರು ಮಜ್ಜನ ಭೋಜನ ಮಾಡಿ
ವಿನಯಾದಿಂದ ಶಯನಾ ಮಾಡಿದ್ದಾರೋ

**೪೨ನೇ ಸಂಧಿ :**

ರೇಣುಕಾ ಗುರುಹರಾ ಧೀನ ದಯಾಕರಾ
ಗಾಯನದಿಂದಾ ನಿನ್ನ ಹೊಗಳುವೆನೋ

ಗುರುದೇವನು ನೀನು ಪರಮ ಅವತಾರ ನೀನು
ಪರಲಿಂದಾ ಕಾಯೋ ನೀನು ಭಕ್ತರನೋ

ಸತ್ಯವಂತರ ಮಾರ್ಗ ಹೇಳತೇವರಿ ನಾವಿನ್ನು
ಚಿತ್ತದಿಂದ ಕೇಳಾರಿ ಮಹಿಮವನೋ

ಚಿತ್ತವಿಟ್ಟ ಕೇಳಾರಿ ಸತ್ಯ ಪದಮಗೊಂಡಾ
ಮುತ್ತ ಉದಿಯಾಕ ತಾನು ಎದ್ದಿದಾನೋ

ದಿನಕರ ಉದಿಯಾಕ ವಿನಯದಿ ಪದಮಗೊಂಡಾ
ಘನ ಗುರು ರೇವಣಸಿದ್ಧಗ ನೆನದಿದಾನೋ

ವಿನಯದಿ ಪದಮಣ್ಣಾ ನೆನೆಯುದು ತಾನು ತಿಳಿದು
ಮನಿಗಿ ನಡಿದ ಬಸವಾ ಬಂದಿದಾನೋ

ಮನಿಗಿ ಬಂದ ಬಸವನಾ ಪದಮಣ್ಣ ತಾನು ಕಂಡು
ಆನಂದವಾಗಿ ಬಸವಾ ಅಂದಿದಾನೋ

ಕಂದನ ಬಿನನಹ ಕರುಣಿಸೋ ದಯಾದೇವಾ
ಇಂದು ಅವರೊಳಗ ಒಂದು ಹೊಲವನ್ನೋ

ಪಶುಪತಿ ಕೇಳಯ್ಯಾ ಹಸುಳನಾ ಬಿನ್ನಾ
ಹಸನು ಮಾಡುವೆ ನಿನ್ನ ಭೂಮಿಯನೋ

ವಶ ಮಾಡೋ ಎನಗ ಬಂದು ಹೊಲವನು
ಅನ್ನುತಾ ಬಸವನ ಪಾದಕ ತಾನು ಬಿದ್ದಿದಾನೋ

ಎರಗಿದ ಪದಮಗೊಂಡನ ಶಿವಾ ಹಿಡಿದು ಎತ್ತಿ
ಬರಿಸಿದ ಕಾಲ ಕಾಗದ ಬಸವಣ್ಣನೋ

ಹರಗಿ ಹಸನಮಾಡಿ ಬೆಳೆದು ಉಣ್ಣೋ ನೀನು
ಕರುಣಸಿ ಬಸವನು ನುಡದಿದ್ದಾನೋ

ಇತ್ತ ಆದಿಗೊಂಡಾನ ಮಕ್ಕಳೆಲ್ಲರೂ ಕೂಡಿ
ಮತ್ತ ಮಾಡ್ಯಾರೋ ತಮ್ಮೊಳಗ ಭೇದವನೋ

ಮೇನಿಯ ಭೂಮಿ ಹಸನ ಮಾಡುವನೆಂದು
ದಿಟ್ಟನಾಗಿ ನಡದಾನ ಪದಮಣ್ಣನೋ

ಕೊಡಲಿಯ ತಗೊಂಡು ಗಿಡಗಳನ್ನ ಕಡಿಯುತಾ
ತಡಿಯದೆ ಹುತ್ತಿನ ಬಳಿಗೆ ಬಂದಿದಾನೋ

ತಡಿಯದೆ ಹುತ್ತನ ಬಳಿಗೆ ಹೋಗಿ ಪದಮಗೊಂಡಾ
ಕಡದಾನೋ ಆಗ ಮುತ್ತಾಲ ಮರಗಳನೋ

ಮರವ ಕಡಿದನಾಗ ಪರಶಿವಾ ಮಾಡಿದಂಥಾ
ಪರಿಯೇನು ಅರಿಯನಂದೋ ಪದಮಣ್ಣನೋ

ಉರಗನ ಹುತ್ತಕ್ಕ ಸರಸಿ ಹಾಯಲು ಮಡಿಕಿ
ಧರಣಿ ಬಾಯಿ ಬಿಟ್ಟತಾಕ್ಷಣಕೋ

ನಾಲ್ಕು ಮಡಿಕೆಗಳನ ಸಾಲಾಗಿ ಹೊಡೆಯುವಾಗ
ಆಕಾಶಕ ಭೂಮಿ ತೆರದೀತ ಬಾಯಿಯನೋ

**೪೩ನೇ ಸಂಧಿ :**

ಯಾವ ಕಡಿಯಾದಿಂದ ಬಂದಿರಿ ಗುರುರಾಯಾ
ಏನು ಕಾರಣ ನೀನು ಬಂದಿದಿಯೋ

ಏನು ಕಾರಣಾ ನೀನು ಬಂದಿದಿ ಗುರುರಾಯ
ದೀನ ದಯಾ ಗುರುರೇವಣಸಿದ್ಧೇಶನೋ

ದೀನ ದಯಾ ಗುರು ರೇವಣಸಿದ್ಧೇಶಾ ಎನಗ
ತೋರೋ ನಿನ್ನ ಮಾರ್ಗವನೋ

ನಿನ್ನ ಮಾರ್ಗವ ಕೇಳಿ ಎಲ್ಲಾ ಭಕ್ತರು
ಆಗ ಧನ್ಯ ಧನ್ಯ ಅಂದಾರು ಸಭೆಯೊಳಗೋ

ನಾಲ್ಕು ಮಡಕಿ ಸಾಲಾಗಿ ಪದಮಣ್ಣ ಹೊಡಿಯಾಗ
ಆಕಾಶಕ್ಕೆ ಭೂಮಿ ಬಾಯ ತೆರದಿದ್ದಾವೋ

ರೇವಣಸಿದ್ಧನು ಹಾಕಿದ ಕುರಿಹಿಂಡ
ಭಯದಿಂದ ಮೇಲ ನುಗ್ಗಿ ಬಂದಿದಾವೋ

ಕುರಿಹಿಂಡ ಹೊಂಟದ್ದು ಬೆರಗಾದೋ ಪದಮಣ್ಣ
ಹರಾ ಹರಾ ಇದು ಏನಂಥ ಅಂದಿದಾನೋ

ಹಿರಿಯರು ಮಾಡಿದಂಥಾ ಹಿತದ ಭಂಡಾರವೇನೋ
ತೆರದಿನೋ ಅನ್ನುತಾ ಮರಗಿದ್ದಾನೋ

ಚಿಂತಿನಾಗಿ ಮರಗುತ ಪದಮಗೊಂಡಾ
ಹೊತ್ತ ತಂದೋ ಮುಳ್ಳ ಹೊರಿಗಳನೋ

ಕಟ್ಟಿದಾ ಹೆಂಟವನೊಟ್ಟಿ ಧರಣಿ ಬಾಯಿಗೆ
ಸುಟ್ಟಾನೋ ಅಗ್ನಿ ತಂದು ಕುರಿಗಳನೋ

ಸುಟ್ಟಂತಾ ಕುರಿಗಳು ಕರಿಕುರಿ ಆದಾವು
ಬಿಟ್ಟಂಥಾ ಕುರಿಗಳು ಎಲ್ಲಾ ಕುಂಗುರಿಯೋ

ಹುತ್ತವು ಬಿಟ್ಟಾವು ಕುರಿಯ ಹಿಂಡೆಲ್ಲ
ಮತ್ತ ಹರುಷನಾಗಿ ಹೊಂಟಿದ್ದಾವೋ

ಬಣ್ಣ ಸಾವಿರ ರೂಪ ಕುರಿಗಳನ್ನೆಲ್ಲ
ಕಣ್ಣಾಗಿ ಕಂಡಾನೋ ಪದಮಣ್ಣನೋ

ಕಣ್ಣಾರೆ ಕಂಡಾನೋ ಉಂಡಾಡು ಪದಮಣ್ಣಾ
ಚನ್ನಬಸವಗ ತಿಳಿಸಲು ಹೊಂಟಿದ್ದಾನೋ

ಚನ್ನಬಸವಗ ಕಾಯುತ ಪದಮಗೊಂಡ
ತನ್ನ ಮನದಾಗ ಮಾತು ತಿಳಿಸಿದ್ದಾನೋ

ಸ್ವಾಮಿ ಬಸವಾ ಕೇಳೋ ಭೂಮಿ ಹರದ ಬಿತ್ತು
ನೇಮದಿಂದಾ ನೋಡನು ಅಂದಿದಾನೋ

ಪ್ರೇಮದಿಂದಾ ನೋಡತಾರು ಉಪ್ಪರಗಿ ಏರಿ
ಅವರು ಹರಿದು ಭೂಮಿ ಬಿದ್ದಾಂಗ ಕಂಡಿದ್ದಾರೊ

ಚನ್ನಬಸವನು ಕುರಿಯ ಹಿಂಡ ಕಂಡು
ಮನ್ನಿಸಿ ಪದಮಗೊಂಡಾಗ ಹೇಳಿದ್ದಾರೋ

ಕುರಿಯ ಹಿಂಡ ಎಲ್ಲಾ ಚರಿಸುತ ನೀನು
ಇರೋ ಹೋಗೋ ಬೆನ್ನೀಲೆ ಅಂದಿದಾನೋ

**ಳಳನೇ ಸಂಧಿ :**

ಪರಶಿವಾ ಮಾಡಿದ ಪರನಿಧಿಯೋ ತಿಳಿ ಅಂದು
ವರಮಂತ್ರಿ ಬಸವಾ ಹೇಳಿ ಕಳುಹಿದ್ದಾನೋ

ಚನ್ನಬಸವನ ಮಾತವು ಕೇಳುತ
ಬೆನ್ನುಹತ್ತಿದ ಉಂಡಾಡಿ ಪದಮಣ್ಣನೋ

ಚಿನ್ನವು ಬಿಡದಾಂಗ ಆಯಿತು ನನಗೆಂದು
ಅನ್ನದ ಚಿಂತಿಯು ತಾನು ಮಾಡಿದ್ದಾನೋ

ಅನ್ನದ ಚಿಂತೆಯಿಂದಾ ಪದಮಗೊಂಡ ತಾನು
ಇನ್ನೇನು ಮಾಡಲಿ ಅಂತಾ ನುಡದಿದ್ದಾನೋ

ಕುರಿಗಳ ಹಿಂಡಿನಿಂದಾ ಮರಿಗಳನು ಎಲ್ಲಾ
ಕೊರಳಾಗ ಕಟ್ಟಿಕೊಂಡು ನಡದಿದ್ದಾನೋ

ಕುರಿಗಳ ಹಿಂಡಿನಿಂದಾ ಮರಿಗಳನು ಎಲ್ಲಾ
ಕೊರಳಾಗ ಕಟ್ಟಿಕೊಂಡು ನಡದಿದ್ದಾನೋ

ಮರಿಗಳನು ಸಲಹುದಕ ಪರಮಾತ್ಮ ತಾನು
ಕೊರಳಾಗ ಮಲಿಗಳ ಮಾಡಿದಾನೋ

ಏಳು ದಿವಸ ಆತ ಉಂಡಾಡು ಪದಮಣ್ಣಗ
ಕೂಳ ಇಲ್ಲದೆ ತಾನು ಮರಗಿದ್ದಾನೋ

ಕೂಳ ಇಲ್ಲದೆ ಮರಗುತ ಪದಮಗೊಂಡ
ಬಾಳಾಕ್ಷ ಪರಶಿವನಾ ನೆನದಿದಾನೋ

ಬಾಳಾಕ್ಷ ಪರಶಿವಾ ಪದಮಣ್ಣನ ಕಾಣುದಕ
ತಾಳಿದಾನೋ ಒಂದು ರೂಪವನೋ

ಮಟ್ಟಿದೋ ಆವಿಗಿ ಮೆತ್ತಿದೋ ಭಸ್ಮಾಂಗ
ಇಟ್ಟಾನೋ ರುದ್ರಾಕ್ಷಿ ಆಭರಣಾನೋ

ಸೃಷ್ಟಿಗಿ ಈಶ್ವರ ಗುರುವಾ ರೇವಣಸಿದ್ಧ
ಬಟ್ಟಲ ಹಿಡಿದು ಭಿಕ್ಷೇಕ ಬಂದಿದಾನೋ

ಬಂದಾನೋ ಗುರು ಅಲ್ಲಿ ಪದಮಗೊಂಡಾನ ಕಂಡು
ಅಂದಾನೋ ಧರ್ಮದ ಭಿಕ್ಷೆಯನೋ

ತಂದೋನೀದೋ ಅನ್ನಾ ಹಸವಿ ಆಗಿ ಬಂದಿನೋ
ಇಂದು ನೀನೇ ಗತಿ ಅಂತಾ ನುಡದಿದ್ದಾನೋ

ಇಂಥ ಶಬ್ದವು ಕೇಳುತ ಪದಮಗೊಂಡ
ಎಂಥ ಕಾಲವು ಒದಗಿತು ಅಂದಿದಾನೋ

ಊರಿಲ್ಲಾ ನೀರಿಲ್ಲಾ ಮನಿ ಇಲ್ಲಾ ಆಡಿನ್ಯಾಗ
ಸಾರಿ ಭಿಕ್ಷಾವ ಕೇಳುದು ಉಚಿತವೇನೋ

ಏಳು ದಿವಸ ಆಯಿತು ಕೂಳ ಇಲ್ಲದ
ನನಗಪ್ಪ ಬವಳ್ಯಾ ಶಂಖರನ ನೆನಿಯುತ ನಡಿದಾನೋ

**೪೫ನೇ ಸಂಧಿ :**

ಸತ್ಯುಳ್ಳ ಧರ್ಮಾರ ಮಹಿಮಾವು ತಮ್ಮಾ
ಚಿತ್ತಗೊಟ್ಟ ಕೇಳರಿ ಮಾರ್ಗವನೋ

ಚಿತ್ತವಿಟ್ಟ ಕೇಳಾರಿ ಮಹಿಮಾವು ತಮ್ಮಾ
ನಿತ್ಯಕಾಲ ಸಲುವಾದ ಗುರುರಾಯನೋ

ಬವಳ್ಯಾ ಶಂಖರಾ ಪದಮಣ್ಣನ ತಾಪ ನೋಡಿ
ವ್ಯಾಳ್ಯಾ ವ್ಯಾಳ್ಯಾಕ ಉಣ್ಣುವಾವ ಅಂದಿದಾನೋ

ಮೃತ್ಯುವು ನಿನಗಿಲ್ಲಾ ಎತ್ತ ಹೋದರೂ ಕೇಡಿಲ್ಲಾ
ಹಂತೀಲೆ ಬಾ ಅಂತ ಕರದಿದ್ದಾನೋ

ಹಂತೀಲೆ ಬಾ ಎಂದು ಗುರುರೇವಣಸಿದ್ಧ
ಚಿಂತಿಯ ಮಾಡಬ್ಯಾಡೊ ಅಂದಿದಾನೋ

ಚಿಂತಿ ನಿನಗ ಬ್ಯಾಡಾ ಅನವುತ ಗುರುರಾಯಾ
ಹಂತೇಲಿದ್ದ ಗುಂಡುಗೊಪ್ಪರಿಯಾ ಕೊಟ್ಟಿದ್ದಾನೋ

ಹಂತೀಲೆ ಇದ್ದ ಗುಂಡಗೊಪ್ಪರಿ ತೊಡಿಯಾಗಿಟ್ಟು
ಹೆತ್ತ ಕುರಿಯಾ ಹಾಲು ಹಿಂಡಿದಾನೋ

ಹಿಡತಂದು ಕುರಿಗಳನ ಹಿಂಡಿ ಕೊಪ್ಪರಿಗ್ಯಾಗ
ಅಡಿಗಿ ಮಾಡಿ ಗಿಣ್ಣಾವು ಉಣ್ಣಂದಾನೋ

ಮೃಡಮೂರ್ತಿ ರೇವಣಸಿದ್ಧ ನೆಲಕ ನೀರವಹಾಕಿ
ಪಾವಡದಲ್ಲಿ ಗಟ್ಟಿ ಮಾಡಂದಾನೋ

ಗುರುವಿನಾ ವಚನಾ ಕೇಳಿ ಹರುಷಾದೋ ಪದಮಣ್ಣಾ
ಯಾರು ಯಾತಕ ಬೇಕು ಅಂದಿದಾನೋ

ಗುಟ್ಯಾದ ಗಿಣ್ಣವು ನೆಲದಮ್ಯಾಗ ಇಟ್ಟಾನೋ
ಕೊಟ್ಟಾನೋ ಗುರುವಿಗೆ ಎಡಿಯಾ ಪದಮಣ್ಣನೋ

ಸೃಷ್ಟಿಗಿ ರೇವಣಸಿದ್ಧ ಶಿವಾರ್ಪಿತವ ಮಾಡಿ
ಹೊಟ್ಟೆ ತುಂಬ ತಾನು ಉಂಡಿದಾನೋ

ಉಣ್ಣದ ಉಪವಾಸ ದಣಿಯಲಾರದಂಗ
ರೇವಣಸಿದ್ಧ ಬೋದವು ಮಾಡಿದ್ದಾನೋ

ಅಗ್ನಿ ಇದ್ದಲ್ಲಿ ನೀನು ಅಡಗಿಯ ಮಾಡಿ
ಉಣ್ಣೆಂದು ಪದಮಣ್ಣಗ ತಿಳಿಸಿದ್ದಾನೋ

ಭಾರ್ಗವ ದೇವನು ಬೋಧಿಸಿ ಹೊಂಟಾನು
ಹಿಗ್ಗಿದಾನು ಉಂಡಾಡು ಪದಮಣ್ಣನೋ

ಗುರುವಿನಾ ವಚನಾ ಕೇಳಿ ಉಂಡಾಡು ಪದಮಣ್ಣಾ
ಕುರಿಗಳನ ಕಾಯುತ ತಾನು ಇರತಿದ್ದನೋ

**೪೬ನೇ ಸಂಧಿ :**

ಗುರುವಿನಾ ವಚನಾ ಕೇಳಿ ಉಂಡಾಡು ಪದಮಗೊಂಡಾ
ಕುರಿಗಳನು ಕಾಯುತ ತಾನು ಇರುತಿದ್ದನೋ

ಕುರಿಗಳನ ಹೊಡಿಯುತ ಮರಿಗಳನ ಎತ್ತುತಾ
ಬಿರಗಾಳಿ ಸಹಿಸುತಾ ಇರುತಿದ್ದನೋ

ಕೆರಿ ಭಾವಿ ಹಳ್ಳ ಕೊಳ್ಳ ಶರಧಿಯ ದಂಡೀಲೆ
ಕುರಿಗಳನು ನಿಲ್ಲಿಸುತಾ ಇರುತಿದ್ದನೋ

ಬಂದಾನ ಒಂದು ದಿವಸ ಉಂಡಾಡು ಪದಮಗೊಂಡಾ
ಹಸಿವೆಯಿಂದಾ ತಾನು ಬಳಲಿದಾನೋ

ಹಸಿವೆಯಿಂದಾ ಬಳಲುತಾ ಗುರುವಿನಾ ನೆನಿಯುತಾ
ದಶದಿಕ್ಕೆಲ್ಲಾ ಅಗ್ನಿಯಾ ನೋಡಿದಾನೋ

ಬೆಟ್ಟಾವ ಏರಿದಾನೋ ದಿಟ್ಟಿಸಿ ನೋಡಿದಾನು
ಪಟ್ಟಣಾ ಇಲ್ಲ ಊರಿಲ್ಲಾ ಅಂದಿದಾನೋ

ಪಟ್ಟಣ ಇಲ್ಲ ಊರಿಲ್ಲ ಅನುವುತ ಪದಮಣ್ಣಾ
ಕೆಟ್ಟ ರಾಕ್ಷಸಿಯಾ ಮನಿಯಾ ಕಂಡಿದಾನೋ

ಕೆಟ್ಟ ರಾಕ್ಷಸಿಯಾ ಕಾಣುತ ಪದಮಣ್ಣಾ
ಅಟ್ಟು ಉಣ್ಣುವ ಹೋಗಿಯಾ ಕಂಡಿದಾನೋ

ಹೊಗಿಯಾಗು ಕಾಣುತ ಉಂಡಾಡು ಪದಮಣ್ಣಾ
ಹೋಗಬೇಕಂತ ನಡದಿದ್ದಾನೋ

ದೆಗುಡುತ ಏಳುತ ಬೆದರುತ ಹೋಗಿದಾನು
ಅಗಣಿತ ರಾಕ್ಷಸಿಯ ಮನಿಯ ಕಂಡಿದ್ದಾನೋ

ಅಗಣಿತವಾಗ ರಾಕ್ಷಸಿ ಮನಿಯಾ ಕಂಡು
ಮಗಳಾಗಿ ಇದ್ದ ಚನ್ನಮ್ಮನ ಕಂಡಿದ್ದಾನೋ

ಹೆಣ್ಣಿನಾ ರೂಪವು ಕಣ್ಣಾರೆ ಕಂಡಾನು
ಬಣ್ಣಿಸಿ ಕರೆದು ಬೆಂಕಿಯಾ ಬೇಡಿದ್ದಾನೋ

ಅನ್ನವಿಲ್ಲದೆ ನಾನು ಬಳಲುವೆ ಸದ್ಯ ಈಗ
ಅಗ್ನಿಯಾ ಬೇಗದಿಂದ ಕೊಡಿರಿ ಅಂದಾನೋ

ಬೆಂಕಿಯ ಒಯಿದು ನಾನು ಗಿಣ್ಣಾವು ಕಾಸಿ
ಸಾಕಾಗುವ ತನಕ ಉಣ್ಣುವೆನೋ

ಬೇಗದಿಂದ ನೀನು ಅಗ್ನಿಯಾ ಕೊಟ್ಟರೆ ಹಿಗ್ಗುತಾ
ನಿನಗ ಗಿಣ್ಣಾ ತರುವುವೆನೋ

ಕುರಿಯಾ ಹಾಲನ್ನು ಕರೆದು ಇರದು ಗಿಣ್ಣಾವು
ಕಾಸಿ ಹೊರುವೆನೋ ಎನ್ನ ಆತ್ಮವನೋ

**ಬೀರೇದೇವರ ಮಾರ್ಗಪದ**

ಮತ್ತ ಶಂಖರ ತಾನು ಕೂಸಿನ ಸಲವುತಾನು
ಅಂತ ಆಕಾಶವಾಣಿಯಾ ಕೇಳಿದಾಳೋ

ಕೇಳಿ ಸುರಮಾದೇವಿ ಬಾಳ ಅಳುತ ಕುಂತಾಳು
ಹೇಳುದು ಯಾರಿಗೆ ನನ್ನ ದೈವ ಅಂದಾಳೋ

ಹಾಡಿ ಹರಸಿ ಬೇಡಿಕೊಂಡ ಮಗನಾ ಪಡಕೊಂಡೆ
ನಾನು ಕಾಡ ಅಡವಿಗೆ ಕಳಿಸುದಾತ ಅಂದಿನೋ

ಸುರಮಾದೇವಿ ಆಗ ದುಃಖವ ಮಾಡುತ
ತೊಟ್ಟಿಲದಾಗ ಹಾಕ್ಯಾಳ ಕಂದ ಬೀರಪ್ಪನೋ

ಬೀರದೇವರ ತೊಟ್ಟಿಲದಾಗ ಹಾಕಿ ತನ್ನ
ದ್ವಾರಪಾಲರನ ಕರಿದಿದ್ದಾಳೋ

ಸುರಮಾದೇವಿ ಆಗ ಚಾರರಿಗೆ ಹೇಳತಾಳು
ಘೋರ ಅರಣ್ಯಕ ಕಂದನ ಒಯ್ಯರೆಂದಾಳೋ

ಆಗ ಸೇವಕರು ಬಂದು ಕೂಸಿನ ಒಯ್ದಾರು
ಅವರು ಘೋರ ಅರಣ್ಯಕ ಇಟ್ಟ ಬಂದಿದಾರೋ

ಅಳವುತ ಚೀರುತ ಹೊರಳುತ ಬೀರದೇವರನ
ಎಳಿಸುವಂತಾ ಗುರು ಬಂದಿದ್ದಾನೋ

ಗಿರಿಜಾರಮಣ ಕರಿಗೊರಳ ಶಂಖರಾ ತಾನು
ಹರಸಿ ಕಂದಗ ನೋಡಿದ್ದಾರೋ

ಹನ್ನೆರಡು ದಿವಸಕ ಕಂದಗ ಅವರೆಲ್ಲ
ಚೆನ್ನಾಗಿ ನಾಮಕರಣ ಮಾಡಿದ್ದಾರೋ

**೩೫ನೇ ಸಂಧಿ :**

ಗುರುವಿನಾ ಉಪದೇಶ ಆಗದ ಮನುಜಾ ತಮ್ಮಾ
ಧರಿವಳಗ ಇದ್ದರ ಫಲವೇನಂದಿನೋ

ಕಟ್ಟಿದ ಬುತ್ತಿ ಕಲಿಸಿದ ಮಾತೋ ತಮ್ಮಾ
ಎಷ್ಟು ದಿನವಸ ಇದ್ದರ ಫಲುವೇನಂದಿನೋ

ನಾಯಿಯ ಮುಂದ ತಾಯಿನ ಬೈದರ ತಂದೆ
ತಾಯಿ ಇದ್ದರ ಫಲವೇನಂದಿನೋ

ತಂದೆ ತಾಯಿ ಮಾತುಕೇಳದ ಮನುಜಾ
ತಮ್ಮ ಮನಿಯಾಗ ಮಗಾ ಇದ್ದೇನ ಫಲ ಅಂದಿನೋ

ಗಾಣದ ಎತ್ತಿನಾಂಗ ಓಣಿ ಓಣಿ ತಿರಗಾವ
ಕೋಣಿನಂಥಾ ಮಗಾ ಫಲವೇನಂದಿನೋ

ಬುದ್ಧಿ ಇಲ್ಲದವಾ ಭೂಮಿ ಮ್ಯಾಲ ತಮ್ಮಾ
ಉದ್ದಾಗಿ ಬೆಳೆದರ ಫಲವೇನಂದಿನೋ

ಅತ್ತಿ ಮಾವನ ಕೂಡ ವಾದ ಹಾಕುವ ಸೊಸಿ
ಮನಿಯಾಗ ಇದ್ದರ ಫಲವೇನಂದಿನೋ

ಬೇಡಿದಂಥಾ ವರಗಳು ಕೊಡದ ದೇವರು ತಮ್ಮಾ
ಗುಡಿಯಾಗ ಇದ್ದರ ಫಲವೇನಂದಿನೋ

**ಬೀರಶ್ವರರ ಮಾರ್ಗಪದ**

ಸರವ ದೇವತ್ಯಾರು ಕಂದಗ ಮುದ್ದಿಸಿ ಬೀರೇಶ
ಅಂತಾ ಅವರು ಕರಿದಿದ್ದಾರೋ

ಬೀರೇಶ ಅಂದು ಅವರು ಜೋಗಳವನೆ ಹಾಡಿ
ಬೆರಳಾಗ ಅಮೃತ ಇಟ್ಟು ಹೋಗಿದ್ದಾರೋ

ಅಕ್ಕ ಮಾಯವ್ವಗ ಒಲಿದು ದೊಡ್ಡವನಾಗೋ
ಲೋಕದೊಳಗ ಮೆರಿ ಅಂತ ಹರಸಿದ್ದಾನೋ

ಧರಿಯೊಳಗ ನೀನು ಸರವ ಪವಾಡ ಗೆಲಿ ಅಂಥ
ಗಿರಿಜಾದೇವಿ ತಾನು ಹರಿಸಿದದಾಳೋ

ಕಾಮಧೇನನ ಕರೆದು ಮಹಾದೇವ ಹೇಳತಾನು
ನೇಮದಿಂದಾ ಹಾಲು ಕುಡಿಸಿ ಬಾ ಅಂದಿದಾನೋ

ಗಾಳಿದೇವಗ ಆಗ ತೊಟ್ಟಿಲ ತೂಗುಂಥ ಹೇಳಿ
ಹೋದೋ ಕೊಲ್ಲಿಪಾತಕ ಶಂಖರನೋ

ಮತ್ತೊಂದು ಕಥಿಯಾ ನೆನಪ ಆದೀತೋ ತಮ್ಮಾ
ಚಿತ್ತವಿಟ್ಟ ನೀವು ಕೇಳಿರಿ ಅಂದಿನೋ

ಧರಿವಳಗ ಹಿಂದಕ ಮಹಾದೇವ ತಾನು
ಮರವ ನೋಡಿ ವರವಾ ಕೊಟ್ಟಿದ್ದಾನೋ

ಮರದ ಸುತ್ತ ಮುತ್ತ ಆನಂದ ಜಾಗಾವ ನೋಡಿ
ಹರನು ಮರಕವರು ಕೊಟ್ಟಿದ್ದಾನೋ

ಮರದ ನೆರಳಾಗ ಬೇಕಾದ ಹೆಂಗಸರು ಕುಂತಾರು
ಗರ್ಭವು ಧರಿಸಲಿ ಅಂತಾ ನುಡಿದಿದ್ದಾನೋ

**೩೬ನೇ ಸಂಧಿ :**

ಯಾವಲ್ಲಿ ಹುಟ್ಟಿಸಿ ಯಾವಲ್ಲಿ ಬೆಳೆದಿದಿ
ಯಾವಲ್ಲಿ ಉದಿಯನಾದಿ ಬೀರಯ್ಯನೋ

ಅಂದನಗರಿಯಾಗ ಹುಟ್ಟಿದ ಬೀರಯ್ಯ
ಮಂದನಗರಿಮ್ಯಾಗ ಬೆಳದಾನ ಬೀರಯ್ಯನೋ

ಅಂದನಗಿರಿ ಅಂದರ ಯಾವುದು ತಮ್ಮಾ ನೋಡೋ
ಮಂದನಗಿರಿ ಅಂದರ ಯಾವದ ಅಂದಿನೋ

ಅಂದನಗಿರಿ ಅಂದರ ತಾಯಿಯ ಹೊಟ್ಟಿ ತಮ್ಮಾ
ಮಂದನಗಿರಿ ಅಂದರ ಮೊಲಿ ಹಾಲ ಅಂದಿನೋ

ಮಂದನಗಿರಿಯ ಮೊಲಹಾಲವ ಕುಡಿದು
ಕಂದ ಮಲಿಗ್ಯಾನ ಸಿದ್ಧ ಬೀರಯ್ಯನೋ

ಪಂಚ ಪರುವತದೊಳಗ ನೋಡೋ ತಮ್ಮಾ
ಅಲ್ಲಿ ಮೂರುವೇಣಿ ಮರಗಳ ಬೆಳೆದಿದ್ದಾವೋ

ಮೂರುವೇಣಿನ ಮರಕ್ಕ ನೋಡಪ್ಪ ನೀನು
ಸಿದ್ಧನ ತೊಟ್ಟಿಲಾ ಕಟ್ಟಿದ್ದಾನೋ

ಜೇನುತುಪ್ಪದ ಹಾಲು ಕುಡಿದ ಸಿದ್ಧವೀರ
ಆನಂದವಾಗಿ ಕಂದ ಮಲಗಿದ್ದಾನೋ

ಸಿದ್ಧವೀರನ ಸೇವಾ ಯಾರ್‍ಯಾರು ಮಾಡ್ಯಾರು ತಮ್ಮಾ
ಎಂಥಿತಾವರು ಮಾಡ್ಯಾರು ಕೇಳಿರಿ ಅಂದಿನೋ

ಮೇಘರಾಜಾ ಬಂದು ಛಳಿಯನು ಹೊಡಿತಾನು
ವಾಯುದೇವರಾ ತೊಟ್ಟಿಲಾ ತೂಗಿದ್ದಾನೋ

ಮಿಕ ಮಿರಗ ಜಾತಿಗಿ ರಾಜ್ಯಾದಂತ ಹುಲಿಯರಾಜಾ
ಪಾದವ ಒತ್ತುತಾ ಕುಳಿತಿದ್ದಾನೋ

ಕೋಗಿಲ ಪಕ್ಷಿಯು ಕೊಳಲನು ಉದ್ಯಾನು
ನರಿರಾಜ ಬಂದು ಸೋಬಾನ ಹಾಡಿದ್ದಾನೋ

## ಮಾರ್ಗಪದ

ಮತ್ತೊಂದು ಕಥಿಯಾ ನೆನಪ ಆದೀತೋ ತಮ್ಮಾ
ಚಿತ್ತಿಟ್ಟ ಕೇಳಾರಿ ಮಾರ್ಗ ಅಂದಿನೋ

ದೊಡ್ಡ ಮರದ ನೆರಳಿಗೆ ಹೆಣ್ಣು ಮಕ್ಕಳು ಕುಂತಾರ
ಗರ್ಭ ಧರಿಸಬೇಕೆಂತ ಮಹಾದೇವ ನುಡಿದಿದ್ದಾನೋ

ಆಗ ಐದು ಮಂದಿ ಗಾಂಧರ್ವ ಸ್ತ್ರೀಯರು
ಗಿಡದ ಬುಡಕ ಹೋಗಿ ಕುಂತಿದ್ದಾರೋ

ಪರಮೇಶ್ವರನ ವರದಿಂದಾ ಅವರೆಲ್ಲಾ
ಗರ್ಭವ ಧರಿಸಿ ತಾವು ನಿಂತಿದ್ದಾರೋ

ಐದು ಮಂದಿ ಗಾಂಧರ್ವ ಸ್ತ್ರೀಯರೆಲ್ಲ ಕೂಡಿ
ಬೆದರಿ ಹ್ಯಾಂಗ ಮಾಡಾನು ಅಂದಿದಾರೋ

ಆಗ ಬೆದರಿ ಅವರು ಹೆದರಿ ಅಂತಾರವರು
ಆಗಬಾರದಂತ ಕಾರ್ಯ ಆಗದ ಅಂದಾರೋ

ಗರ್ಭವ ಧರಿಸಿ ನಮ್ಮ ಲೋಕಕ್ಕ ಹೋದರ ಸರರು
ದೇವತ್ಯಾರು ನಮ್ಮನ್ನ ಹೊಡಿಯುವರೋ

ಗರ್ಭವು ಧರಿಸಿ ನಿಂತು ಏನು ತಿಳಿಯದಾಂಗ
ಸುವರೆಲ್ಲ ಚಿಂತಿಯ ಮಾಡಿದ್ದಾರೋ

ತಮ್ಮ ತಮ್ಮ ಹೊಟ್ಟೆ ತಮ ಉಗುರಿಲಿಂದಾ
ಒಮ್ಮೆಲೆ ಹೊಟ್ಟೆ ಅವರು ಸೀಳಿದ್ದಾರೋ

ಹೊಟ್ಟೆ ಸೀಲಿ ಅವರು ಹುಟ್ಟಿದ ಐದು ಕೂಸನ್ನ
ಕೆಟ್ಟ ಹೆಣ್ಣು ಶಿಸುವಿನ ನದಿಯಾಗ ಒಗದಿದ್ದಾರೋ

ತೇಲಿಬಿಟ್ಟ ಐದು ಹೆಣ್ಣು ಕೂಸುಗಳು ಅಲ್ಲಿ
ನಿಲ್ಲದೆ ಹೊಳಿಯಾ ಹಿಡಿದ ನಡದಿದ್ದಾವೋ

ಹೊಳಯ ದಂಡೀಲೇ ಚಾಮರಾಯನೆಂಬಾವ
ಬಳಿಗೆ ಕುರಿಗಳನ ಕಾಯುತ ನಿಂತಿದ್ದಾನೊ

**೩೭ನೇ ಸಂಧಿ :**

ನಾಲ್ಕು ಮಂದಿ ನೀವು ಚೆಂದಾಗಿ ಬಂದು
ನೀವು ಹೊಂದಿಕಿಯಾಗಿ ಕುಂತಿದ್ದು ಖರೆ

ದೈವ ಇದ್ದಲ್ಲಿ ದೇವರು ಇರುವನೆಂಬುವ
ಗಾದಿಯ ಮಾತು ಇರುವುದು ಖರೆ

ತಾಯಿಯ ಗರ್ಭದಿಂದ ಜನಿಸಿ ಬಂದಮ್ಯಾಗ
ಅಣ್ಣತಮ್ಮರ ಬ್ಯಾರಿ ಆಗುದ ಖರೆ

ನಾಲ್ಕು ಬಾಯಿ ನಾಲ್ಕು ಕೈಯಾನ ಕೂಡಿದರ
ಕಾರ್ಯ ಶುದ್ಧ ಆಗುವ ಖರೆ

ಹೆಂಡರು ಬಂದಮೇಲೆ ಪಂಡಿತರಾದೆವೆಂದು
ಸ್ವತಂತ್ರ ಹಿರಿತನಾ ಮಾಡುದು ಖರೆ

ಮನುಜಾಗ ರೋಗ ಬಂದು ಸಾಗಿಯ ಹೋದರ
ಮಡದಿಗೆ ವನವಾಸ ಬರುವುದು ಖರೆ

ಪಂಚಪಾಂಡವರು ವಂಚನೆ ಇಲ್ಲದೆ ಕಡಿತಾನ
ವನವಾಸ ಮಾಡಿದ್ರೊ ಖರೆ

ಭೀಮಸೇನ ಪುಂಡ ಮೂರುಲೋಕದ ಗಂಡ
ಅರ್ಜುನ ಬಿರದಾ ಸಾರಿದ್ದು ಖರೆ

ಧರ್ಮರಾಜನ ವಚನ ತಪ್ಪದೆ
ಎಲ್ಲಾ ಅಣ್ಣಾ ತಮ್ಮರು ನಡಸಿದ್ರೋ ಖರೆ

## ಮಾರ್ಗಪದ

ಹೊಳಿಯ ದಂಡಿಗುಂಟ ಚ್ಯಾಮರಾಯನೆಂಬಾವ
ಬಳಿಯಲ್ಲಿ ಕುರಿಗಳ ಕಾಯುತ ನಿಂತಿದ್ದಾನೋ

ತೇಲಿ ಬರುವಂಥಾ ಕೂಸುಗಳನ್ನು ನೋಡಿದಾನು
ನಿಲ್ಲದೆ ಹೊಳಿಯ್ಯಾಗ ತಾನು ಜಿಗಿದಿದ್ದಾನೋ

ಬರುವಂಥಾ ಕೂಸುಗಳನ ಹಿಡದಾನ ಚಾಮರಾಯಾ
ಹರುಷಾಗಿ ತನ್ನ ಮನಿಗೆ ಹೋಗಿದ್ದಾನೋ

ತನ್ನ ಮಡದಿಯಾದ ಶಾಂಭವಿನ ಕರದಾನು
ಚೆನ್ನಾಗಿ ಕೂಸಗಳನ್ನ ನೋಡ ಅಂದಾನೋ

ಚೆನ್ನಾಗಿ ಜೋಪಾನ ಮಡತೀನಂತಾಳು
ಮನದಾಗ ಹರುಷಾಗಿ ಕುಂತಿದ್ದಾಳೋ

ಹೇ ದೇವಾದಿದೇವಾ ಶಂಕರಾ ಎನಗ
ಈಗ ಐದು ಹೆಣ್ಣು ಕೂಸುಗಳನ್ನು ಕೊಟ್ಟಿದ್ದಾನೋ

ಮಕ್ಕಳಿಲ್ಲದೆ ನಾನು ಸದಾ ಮರಗುತ್ತಿದ್ದೆ
ಅಕ್ಕರತೆಯಿಂದ ನಾನು ಸಲವುವೆನೋ

ಹೊತ್ತು ಹೊತ್ತು ಕೂಸುಗಳಿಗೆ ಉಣಿಸುತಾ
ಮತ್ತು ಹಿರಿಹಿರಿ ಹಿಗ್ಗತ್ತಲೋ

ಐದು ಮಂದಿ ಮುತ್ತೈದಿಯರಿಗೆ ಹೇಳಿದಾಳು
ಐದೂ ಕೂಸಿನ ತೊಟ್ಟಲದಾಗ ಹಾಕಿಸಿದ್ದಾಳೋ

ಮಾಯಿ ಮಾಂಕಾಳಿ ಮಂಡಮ್ಮಲಕ್ಷ್ಮಿ
ಅಕ್ಕಮಾಯವ್ವನಂಥಾ ಕರಿದಿದ್ದಾರೋ

ಶಾಂಭವಿ ತಾಯಿಯ ಕೈ ಒಳಗ ಅವರು
ನಂಬಿಗಿ ಇಟ್ಟ ಆಗ ಬೆಳದಿದ್ದಾರೋ

**೩೮ನೇ ಸಂಧಿ :**

ಅದು ನೋಡೋ ಅದು ನೋಡೋ ಅದು ನೋಡೋ ತಮ್ಮಾ
ನೀನು ಸದ್ಗುರು ರೇವಣಸಿದ್ಧನ ನೋಡಂದಿನೋ

ಸುತ್ತೆಲ್ಲ ತುಂಬಿ ತುಳುಕುವಂಥವನೋ ನೋಡ ತಮ್ಮಾ
ಹಂತೀಲೆ ಸದಾ ಇದ್ದವನ ನೋಡಂದಿನೋ

ಅರವಿನ ಬಲಿಯಾಗ ಸಿಕ್ಕತಿ ನೋಡ ತಮ್ಮಾ
ಗುರುವಿನ ಕೀಲ ಹಾಕಿದ್ದ ನೋಡಂದಿನೋ

ನೋಡುತೀನ ಅಂದರ ನಿನಗ ಕಾಣುವದಲ್ಲೋ ತಮ್ಮಾ
ನೋಡಿದ ಕ್ಷಣದಾಗ ಬಿಡುವುದಿಲ್ಲ ಅಂದಿನೋ

ಹರಿನಾರಾಯಣ ದೇವರಲ್ಲೋ ಹರಮಹಾದೇವ
ದೇವರಲ್ಲೋ ಗುರುರೇವಣಸಿದ್ಧ ದೇವಾ ಬಲ್ಲಾಂದಿನೋ

ಗುರುವಿನ ಚಿಂತಿ ಒಳಗ ಇರಬೇಕ ನೋಡೋ ತಮ್ಮ
ಗುರುವಿನಾ ಧ್ಯಾನದ ಚಿಂತಿ ಬೇಕಂದಿನೋ

ಅತಿ ಹಿತದವರಲ್ಲ ಕೋಪಾಗಿರಲೆಪ್ಪ ಮತಿ ಹೀನನಾಗಿ
ನಿಂದಾ ಬ್ಯಾಡಂದಿನೋ

ಸತಿಯೊಳು ಮಳಿಯ್ಯಾಗ ಕಿರಿಕಿರಿ ಮಾಡಲೆಪ್ಪ
ಸುತರೆಲ್ಲ ಸತ್ತರ ಗುರುಧ್ಯಾನ ಇರಲಂದಿನೋ

**ಮಾರ್ಗಪದ**

ಶಾಂಭವಿ ತಾಯಿಯ ಕೈಯ್ಯ ಒಳಗ ಅವರು
ನಂಬಿಗಿ ಇಟ್ಟ ಅವರು ಬೆಳೆದಿದ್ದಾರೋ

ತಂದಿಯ ಸಂಗಡಾ ಕುರಿಗಳನ ಕಾಯುದಕ
ಅಂದದಿಂದಾ ಅವರು ಆಗ ನಡೆದಿದ್ದಾರೋ

ಕಾಯುತ್ತ ಕುರಿಗಳನ ಐದು ಮಂದಿ ಆಗ
ಹೇವಲಿ ಹಳ್ಳಕ ಕೂಡಿ ಬಂದಿದ್ದಾರೋ

ಅಲ್ಲಿ ಹಳ್ಳದ ದಂಡೀಲೆ ಐದು ಮಂದಿ ಹೆಣ್ಣು ಮಕ್ಕಳು
ಎಲ್ಲಾರು ಒಂದು ತೊಟ್ಟಿಲಾ ನೋಡಿದ್ದಾರೋ

ಗಿಡದ ಒಳಗ ಜೋತ್ಯಾಡು ತೊಟ್ಟಿಲದಾಗ ಅಲ್ಲಿ
ಅಳುವಂಥಾ ಕೂಸಿನ ಧ್ವನಿಯಾ ಕೇಳಿದ್ದಾರೋ

ಏನು ಸೋಜಿಗ ಅಂತಾ ನಾರಿಮಣಿಯರು ಎಲ್ಲಾ
ನಾ ಮುಂದ ನೀ ಮುಂದ ಅಂತ ಹೋಗಿದ್ದಾರೋ

ಮರವನ್ನು ಏರಿದಾರು ತೊಟ್ಟಿಲಾ ಬಿಚ್ಚಿದಾರು
ಹರುಷಾಗಿ ಕಂದನ ಅವರು ನೋಡಿದ್ದಾರೋ

ನನ್ನ ಕೂಸು ಇದನು ನನ್ನ ಕೂಸಾ ಅನ್ನುತಾ ಅವರು
ತಮ್ಮ ತಮ್ಮೊಳಗೆ ಬಡಿದಾಡುತ ನಿಂತಿದ್ದಾರೋ

ಅಕ್ಕ ಮಾಯವ್ವನು ಯಾಕರೆವ್ವಾ ಬಡಿದಾಟ
ಶಂಕರನ ಸೇವಾ ನೀವು ಮಾಡಿರಿ ಅಂದಳೋ

ನಮ್ಮ ಭಕ್ತಿಗೆ ಮಹಾದೇವ ತಾನೋ ಸ್ವಃತಾ ಬಂದು
ನಮ್ಮೊಳಗ ಬೇಕಾದವರಿಗೆ ಕೊಡುವವನೋ

ಯಾರ ಉಡಿ ಒಳಗ ಕಂದನ ಹಾಕತಾನೋ
ಅವರ ಪುತ್ರ ಅಂತ ತಿಳಿರಿ ಅಂದಾಳೋ

ಆಗ ಎಲ್ಲಾರು ಕೂಡಿ ಶಂಕರನ ಧ್ಯಾನವ ಮಾಡ್ಯಾರು
ಬೇಗ ಬಂದು ಶಂಕರ ಕೂಸಿನ ಹಿಡಿದಿದ್ದಾನೋ

ಕಂದಗ ತಾಯಾಗಿ ಜೋಪಾನ ಮಾಡಂತ ಅಂದ
ಅಕ್ಕ ಮಾಯವ್ವನ ಉಡಿಯಾಗ ಹಾಕಿದ್ದಾನೋ

**೩೯ನೇ ಸಂಧಿ :**

ಸತ್ಯವಂತರ ಲೀಲಾ ಮತ್ತೊಂದು ಹೇಳತೀವಿ
ಚಿತ್ತಿಟ್ಟ ಕೇಳಿರಿ ನೀವು ಮಾರ್ಗವನೋ

ಚಿತ್ತಿಟ್ಟ ಕೇಳಾರಿ ಸತ್ಯ ಆದಿಗೊಂಡ
ಇತ್ತ ಭೂಮಿ ಶಿವಗ ದಾನವನೋ

ಗುರುರೇವಣಸಿದ್ಧ ಆದಿಗೊಂಡಗ ಒಲಿತು
ವರವಾ ಬೇಡೋ ಕೊಡತೇನ ಅಂದಿದಾನೋ

ಇಂಥ ಶಬ್ದಾ ಕೇಳಿ ಗುರುವಿನ ಮುಂದ ನಿಂತು
ಸಂತಾನ ಕೊಡೋ ಗುರು ಅಂದಿದಾನೋ

ಗುರುವಾ ರೇವಣಸಿದ್ಧ ಆದಿಗೊಂಡಗ ಒಲಿತು
ವರವಾ ಕೊಟ್ಟ ಮಾಯನಾಗಿದ್ದಾನೋ

ಗುರುವಿನ ವರದಿಂದಾ ಆದಿಗೊಂಡಾಗ
ಆರು ಪುತ್ರ ಗಂಡಸ ಮಕ್ಕಳನೋ

ಆದಿಗೊಂಡನ ಮಕ್ಕಳು ಅಮರಗೊಂಡ
ಶಿವಗೊಂಡ ಸಾಧಿಸಿದಾನ ಬೀರಗೊಂಡಾನೋ

ಮಹಾದೇವನ ಒಲಿಸಿದಂತಾ ಮುರಿಗೊಂಡ
ಮತ್ತ ಮರಡಿಯ ಮುದ್ದುಗೊಂಡಾನೋ

ಕಡೆಯ ಹುಟ್ಟಿದ ಉಂಡಾಡು ಪರಮಗೊಂಡ
ನಡೆನುಡಿಯಾದಿಂದ ಬಲ್ಲವನೋ

ಹರಿಭಕ್ತ ಬಸವನ ಮುಂದೆ ಪದಮಗೊಂಡ
ಧರಿ ಒಳಗ ತಾನು ಮೆರೆದಿದ್ದಾನೋ

ಆದಿಗೊಂಡ ಮಕ್ಕಳಾರು ಮಂದಿ ಕೂಡಿ
ಮೇದಿನಿಯಾ ಹೊಲವಾ ಮಾಡಿದ್ದಾರೋ

ಹೊಲಗಳನ ಮಾಡುತ ಫಲಗಳನ ಬೇಡೂತ
ಮೂಲ ಹರ ಶಿವನ ಪೂಜಿಯಾ ಮಾಡಿದ್ದಾರೋ

ಚೆಲುವ ಪದಮಣ್ಣನ ಕೆಲಸಕ ಕರಿಲಾಕ
ಗಲಿಬಿಲಿಯಾದಿಂದ ಮಾತವ ಆಡಿದ್ದಾನೋ

ಮಾತೆ ಆದಮ್ಮನ ಕರೆದು ಮಾತ ಹೇಳ್ಯಾರವರು
ಆತ ಪದಮಣ್ಣನ ಕಳುಹ ಅಂದಾರೋ

ಹಿರಿಯ ಮಕ್ಕಳಾಡಿದ ಮಾತಿಗಿ ತಾಯಿ
ಸುರಶಾಳ ಆಗ ಕಣ್ಣಾನ ನೀರವನೋ

ಸತಿಯು ಮಾಡಿದಂಥಾ ದುಃಖವ ನೋಡಿದಾನು
ಪತಿಯ ಆದಿಗೊಂಡ ಕೇಳಿದ್ದಾನೋ

**೪೭ನೇ ಸಂಧಿ :**

ಅಕ್ಕರದಿಂದಾ ನೀನು ಬೆಂಕಿಯಾ ಕೊಟ್ಟರ
ಹರಣಾ ನಂದು ಉಳಿಯುವದು ಅಂದಿದಾನೋ

ಇಂಥ ಶಬ್ದವ ಕೇಳುತ ಆಗ ಚನ್ನಮ್ಮಾ
ಸಂತೋಷಾಗಿ ಮುಂದಕ ಕರದಿದ್ದಾಳೋ

ನಿನಗೆ ಅಗ್ನಿಯನ್ನು ವಿನಯದಿ ಕೊಡುವೆನೋ
ನನಗಿಷ್ಟು ಹಾಲು ತಂದುಕೊಂಡು ಅಂದಾಳೋ

ಸನುಮಂತ ಮಾಡಿ ಬೆಂಕಿಕೊಟ್ಟು ನುಡಿದಾಳು
ಜನನಿ ರಾಕ್ಷಸಿ ಬರುವ ಹೊತ್ತವನೋ

ರಕ್ಕಸಿ ಬಂದರೆ ಗಕ್ಕಾನೋ ಕೊಂದಾಳೋ
ಸಿಕ್ಕದೆ ನೀನು ಬೇಗ ಹೋಗುಂದಾಳೋ

ಮಕ್ಕಳ ಆಟವಲ್ಲಾ ಮನದ ಚೆಲ್ಲಾಟವಲ್ಲಾ
ಚಕ್ಕನೆ ಕಳುಹಿಸಿ ತಾನು ಕುಂತಿದ್ದಾಳೋ

ಬಂದಾನೋ ಪದುಮಣ್ಣಾ ನೊಂದು ಕುರಿಗಳ
ಬದಿಯಲಿ ಒಂದೊಂದ ಕುರಿಗಳನ ಹಿಂಡಿದಾನೋ

ಒಂದೊಂದ ಕುರಿಯಾ ಹಿಂಡುತ ಪದಮಣ್ಣಾ
ಚಂದದಿ ಗಿಣ್ಣವ ಕಾಸಿ ಉಂಡಿದಾನೋ

ಚಂದದಿ ಗಿಣ್ಣವು ಕಾಸಿ ಉಣವುತ ಪದಮಣ್ಣಾ
ಕಂದು ಗೊರಳಾನ ತಾನು ನೆನದಿದ್ದಾನೋ

ಉಂಡು ತಆನು ಪದಮಣ್ಣಾ ತಕ್ಕೊಂಡ ಬಂದ ಹಾಲು
ಉದ್ದಂಡ ರಾಕ್ಷಸಿಯ ಮನಿಗಿ ಅವನೋ

ಕಂಡಾಳು ಚನ್ನಮ್ಮಾ ತಕ್ಕೊಂಡು ಹಾಲು ಕಾಸಿ
ಉಂಡಾಳು ಮನದಣಿ ಚನ್ನಮ್ಮನೋ

ಮನದಣಿಯಹಾಂಗ ಉಂಡು ಮುದದಿಂದಾ
ಚನ್ನಮ್ಮಾ ನೆನಿದಾಳೋ ತಾನು ಒಂದು ಯುಕ್ತಿಯನೋ

ಉಂಡಾಡು ಪದಮಣ್ಣ ಹಿಂಡವ ಬಿಟ್ಟು
ಭಂಡ ರಾಕ್ಷಸಿಯ ಮನಿಗಿ ಹೋಗಿದ್ದಾನೋ

ಭಂಡ ರಾಕ್ಷಸಿ ಬಂದು ಉಂಡಾಡು ಪದಮಣ್ಣಗ
ಖಂಡಿತ ಕೊಂದಾಳ ಅಂದಾಳು ಚನ್ನಮ್ಮನೋ

ವಣಿಗುಡಿ ರಕ್ಕಸಿ ಒಂದು ತಿಂದಾಳೆಂದು
ಅನುಮಾನ ಯಾಕ ಇದಕ ಅಂದಿದಾಳೋ

ಎಲ್ಲೆಲ್ಲಿ ಕಾಣದಾಂಗ ಒಳ್ಳೆಯ ಜಾಗವ ನೋಡಿ
ಹಲ್ಲಿಯಾ ರೂಪಮಾಡಿ ನಿಲ್ಲಿಸಿದ್ದಾಳೋ

**೪೮ನೇ ಸಂಧಿ :**

ಸತ್ಯವಂತರ ಮಹಿಮಾ ಚಿತ್ತಿಟ್ಟ ಕೇಳಿರಿ ನೀವು
ಇತ್ತ ಕಥಿಯಾ ಬಿಚ್ಚಿ ಹೇಳುವೆನೋ

ಎಲ್ಲೆಲ್ಲಿ ಕಾಣದಹಾಂಗ ಒಳ್ಳೆಯ ಜಾಗವ ನೋಡಿ
ಹಳ್ಳಿಯ ರೂಪ ಮಾಡಿ ನಿಲಿಸಿದ್ದಾಳೋ

ಬಲ್ಲಿದ ರಕ್ಕಸಿ ಬಂದರ ಕಾಣದಾಂಗ ಹಲ್ಲಿಯ
ಮಾಡಿ ಪದಮಣ್ಣನ ಮುಚ್ಚಿದ್ದಾಳೋ

ಏಳು ಕೊಪ್ಪರಿಗಿ ಅನ್ನಾ ಏಳು ಭಾವಿ ನೀರಾ
ವ್ಯಾಳ್ಯಾ ಆಯಿತಂತ ಎಡಿಯ ಮಾಡಿದ್ದಾಳೋ

ವ್ಯಾಳ್ಯಾವು ಆಯಿತಂತ ಎಡಿಯಮಾಡಿ ಚನ್ನಮ್ಮ
ಕೂಳ ರಕ್ಕಸಿಯ ಹಾದಿ ಕಂಡಿದ್ದಾಳೋ

ಕಾಳ ರಾಕ್ಷಸಿ ಆಗ ಹೆಣಗಳನ ಹೊತ್ತುಕೊಂಡ
ಧೂಳ ಹಾರಿಸುತ ಅಲ್ಲಿಗೆ ಬಂದಿದಾಳೋ

ಎರಡು ಹೆಣಗಳನು ಎರಡು ಕೈಯಾಗ
ಹಿಡಿದು ಭರದಿಂದಾ ಬಾಯಿ ತೆರಿದು ಬಂದಿದಾಳೋ

ಐದು ಹೆಣಗಳನು ತಂದು ಕೊಯಿದು ಮನ್ಯಾಗ ಇಟ್ಟು
ಬೈಯುತ ಮಗಳನ ಒದರಿದ್ದಾಳೋ

ಬೈಯುತ ಮಗಳನ್ನ ಐದು ಕೊಪ್ಪರಗಿ ಅನ್ನಾ
ಐದು ಭಾವಿಯ ನೀರಾ ಕುಡದಿದ್ದಾಳೋ

ಹೆಣಗಳನ್ನು ಹೊತ್ತು ಹೊತ್ತು ದಣಿದ ರಕ್ಕಸಿ
ಆದ ಬಣ್ಣದ ಮಾತವ ಆಡಿದ್ದಾಳೋ

ಬಣ್ಣದ ಮಾತನ ಆಡುತ ರಕ್ಕಸಿ ಆಗ ಎನ್ನ
ಮನಿಗಿ ಬಂದವನ ತೋರಿಸ ಅಂದಾಳೋ

ಎನ್ನ ಮನಿಗಿ ಬಂದವನ ತೋರಿಸ ಚನ್ನಮ್ಮ
ಕಣ್ಣ ತುಂಬಾ ನಾನು ಅವನ ನೋಡುವೆನೋ

ಎಂದಿಗಾದರೂ ಅವನ ಕೊಲ್ಲುದಿಲ್ಲ ನನ್ನಾಣೆ
ತಂದು ತೋರಿಸ ಚನ್ನಮ್ಮಾ ಅಂದಿದಾಳೋ

ಬಂದವನು ಯಾರೆಂದು ಸಂಶವಿಲ್ಲದೆ ಬಂಧಿಸಿ
ಮಗಳನ್ನ ರಕ್ಕಸಿ ಕೇಳಿದ್ದಾಳೋ

ದುರಳ ರಕ್ಕಸಿ ತಾಯಿ ಆದಿಯ ನೀನು ನಾನಮ್ಮ
ಪರರೆನ್ನ ಮನಿಗಿ ಬರುದಿಲ್ಲ ಅಂದಿದಾಳೋ

ನೆರೆಯಿಂದಾ ನಿನ್ನ ಭೀತಿಗಿ ಹರದಾರಿಯಂದಲಿ
ನರರೆಲ್ಲ ಅಂಜಿ ಬರುದಿಲ್ಲ ಅಂದಿದಾಳೋ

**೪೯ನೇ ಸಂಧಿ :**

ಪೂರ್ವದ ಗೆರಿ ತಮ್ಮಾ ಪುರುಹಿತರಿಗೆ ಗೊತ್ತಿಲ್ಲಾ
ನರಮನುಜರ ಗತಿ ಪಾಡವೇನೋ

ನರಮನುಜರ ಗತಿ ಪಾಡವೇನೋ ತಮ್ಮಾ
ಪರಮಾತ್ಮಗ ವಿಧಿಯು ಕಾಡಿಲ್ಲೇನೊ

ತಾಯಿಗೆ ಉತ್ತರಾ ಕೊಡುವುತ ಚನ್ನಮ್ಮಾ
ಮಾಯಾಗಿ ಅಡಗಿದವನ ನೋಡುತಲೋ

ಮಾಯನಾಗಿ ಅಡಗಿದ ಪದಮಗೊಂಡನ ನೋಡಿ
ಕಾಯುತ ಚನ್ನಮ್ಮಾ ಎಬ್ಬಿಸಿದ್ದಾಳೋ

ಕಾಯುತ ಚನ್ನಮ್ಮಾ ಎಬ್ಬಿಸಿ ಪದಮಣ್ಣನ
ಉಪಾಯ ಒಂದು ಮಾಡೂನು ಅಂದಿದಾಳೋ

ದುರುಳ ರಕ್ಕಸಿ ಆಗ ಮಲಗುದನು ನೋಡಿ
ಭರದಿಂದಾ ಕುಣಿ ಎಂದು ತಗದಿದ್ದಾರೋ

ಚನ್ನಮ್ಮಾ ಪದಮಗೊಂಡಾ ಇಬ್ಬರು ಕೂಡಿ
ಆಗ ಸೊನ್ನಿ ಮಾಡುತ ಕುಣಿಯಾ ತಗದಿದ್ದಾರೋ

ಭರದಿಂದ ಕುಣಿಯಾವು ತಗಿದು ಮ್ಯಾಲ ಬಂದು
ದುರಳ ರಕ್ಕಸಿನ ಕೆಡವಿದ್ದಾರೋ

ದುರಳ ರಕ್ಕಸಿನ ಅವರು ಕೆಡವಿ ಬೇಗದಿಂದಾ
ಎರಗೊಡದಾಂಗ ಕಲ್ಲು ಮಣ್ಣು ಹಾಕಿದ್ದಾರೋ

ರಕ್ಕಸಿ ಪ್ರಾಣವು ಬಿಡುವ ಸಮಯದೊಳಗ
ಬಿಕ್ಕಿ ಬಿಕ್ಕಿ ಮಾತವ ಆಡಿದ್ದಾಳೋ

ಬಿಕ್ಕಿ ಬಿಕ್ಕಿ ಮಾತಾಡುವ ರಕ್ಕಸಿ ಅವರಿಗೆ
ಧಿಕ್ಕರಿಸಿ ಕುರಿಗಳನ ನಾನು ನೋಡುವೆನೋ

ಧಿಕ್ಕಾರ ಮಾಡಿ ರಕ್ಕಸಿ ಕುರಿಯಾ ಹಿಂಡಕ
ನಾನು ಶಿಕ್ಷ ಮಾಡದೆ ಇರಲಾರೆ ಅಂದಿದಾಳೋ

ಏಳು ಕೊಪ್ಪರಿಗೆ ಅನ್ನಾ ತಿನುವಂಥಾ ರಕ್ಕಸಿ
ತೋಳ ಆಗಿ ಧರಣಿಮ್ಯಾಲ ಜನಿಸಿದ್ದಾಳೋ

ಏಳುತ ಬೀಳುತ ಕುರಿಗಳ ತಿನ್ನುತ
ಕೂಳ ರಕ್ಕಸಿ ಧರಣಿ ಒಳಗ ಮೆರಿದಿದ್ದಾಳೋ

ದುರಳ ರಕ್ಕಸಿನಾ ಹೊಡಿದು ಉಂಡಾಡು ಪದಮಗೊಂಡಾ
ಕುರಿಗಳ ನೆನಪ ಆಗ ಮಾಡಿದ್ದಾನೋ

ಅಲ್ಲಿಂದಾ ಕುರಿಗಳ ಬಳಿಗೆ ಇಬ್ಬರೂ ಬಂದು
ಮೆಲ್ಲ ಮೆಲ್ಲನೆ ಹಾಲು ಕಾಸಿ ಉಂಡಿದ್ದಾರೋ

**೫೦ನೇ ಸಂಧಿ :**

ಸರವರ ಮುಂದ ಗುರುವಿಗೆ ನಾವು ಶರಣಾ

ಮಾಡತೀವರಿ ಸರುವ ಸಂಪತ್ತ ಕೊಡುವಂಥಾ ಗುರು ಹೊಂದರಿ

ತಿಳಿದ ನೋಡಿ ನಡಿಶೆಪ್ಪ ಯಾರ ಅನುಮಾನರಿ

ವ್ಯಾಳ್ಯಾ ವ್ಯಾಳ್ಯಾಕ ಗುರುವಿನಾ ನೆನೆದರ ಮುಕ್ತಿಯಾ ದೊರೆಯುದಲ್ಲಿ

ಗುರು ರೇವಣಸಿದ್ಧ ಅಂತಾ ಮಾಡ್ಯಾನ ಸ್ಥಾಪನಾರಿ

ಧರಿಯೊಳಗ ಜಗದ್ಗುರು ಅನಿಸಲಿಲ್ಲವೇನರಿ

ಧೃಡ ಭಕ್ತರನ ನೋಡಲಾಕ ಕಡಿ ಸೋಮವಾರ

ಗುಡಿಯಿಂದ ಬರತಾವರಿ ಅಡ್ಡ ಹೋಗಿ ದಡ್ಡರಾಗಿ ಅಹಂಕಾರ ಬ್ಯಾಡರಿ

ಅವರ ಮುಂದ ಅಹಂಕಾರ ಮಾಡಿದೆರಿಗೆ ಆಗುವ ದುರಮರಣಾರಿ

ಯಾರದೇನಂತ ತಿರುಗ ಬ್ಯಾಡರಿ ಧ್ಯಾನವ ಮಾಡರಿ

ವರ್ಷದಾಗ ಮೂರು ಸಾರೆ ಭಕ್ತರ ಭಾವಕ ಬರತಾನರಿ

ಹರ್ಷಾಗಿ ಗರವ ಬಿಟ್ಟರ ಸಂಪತ್ತ ಕೊಡಾವರಿ

ದೀವಳಗಿ ಹಬ್ಬದಾಗ ದೇವಾಧಿ ದೇವರಗಿ

ಗುರುವಾ ಆದಾವರಿ ಸ್ವಾರಿ ಏಳೂದು ನಿಮಗ

ಎಲ್ಲಾರ ಗೊತ್ತ ಇಲ್ಲೇನರಿ

ಚತುರ್ಥಿ ದಿವಸ ಭೆಟ್ಟಿ ಆದರ ಉದ್ದರಣಾ ಆಗತೀರಿ

ಕಡಿದಾಡಿ ಬಡಿದಾಡಿ ಅವನ ಮುಂದೆ ನಡದರ ಕೆಟ್ಟ ಹೋಗತೀರಿ

ಬೇಡಿದ್ದಾ ಕೊಡಾವ ನಮ ಗುರುವಾ ನೋಡಿ ಮಾಡರಿ

ದಿಡ ಭಕ್ತಿಯಿಂದಾ ನಿಮಗ ಭಯಾ ಇಲ್ಲರಿ

ಕರ್ತು ಗುರುರೇವಣಸಿದ್ಧ ನಮ್ಮ ಮ್ಯಾಲ ದಯಾರಿ

ಗುರು ಅಂಬು ಅರವಿನಾ ಕಾಯಾ ಮರಿಲಾರದ ಇರಬೇಕೊ

ಸಪ್ತ ಸಮುದರ ನೀರ ಒಂದು ಗುಟುಕು ಮಾಡುವಂಥಾ

ಅಗಸ್ತ್ಯ ಋಷಿ ಪಾದಕ ಬಿದ್ದು ಮೋಕ್ಷ ಹೋದ್ಯಾನರಿ

ಶಂಕರಾಚಾರ್ಯ ಚಂದ್ರಮೌಳಿಯ ಲಿಂಗವ ಪಡಿದಾನರಿ

ಹರಾ ಮನಿದರ ಗುರು ಕಾಯಾಂವಾ ವೇದವಾಕ್ಯವರಿ

ದೊಡ್ಡವರಂಥಾ ಹೆಡ್ಡರಾಗಿ ಊರಾಗ ತಿರಗಾಡಬ್ಯಾಡರಿ

ದೊಡ್ಡ ಗಂಡಾಂತರ ನಿಮಗ ಬರುವದು ನೋಡರಿ
ದುಡ್ಡ ಇದ್ದವರ ಸೊಕ್ಕಾ ಗುರು ಮುರದದ್ದು ಸುಳ್ಳೇನರಿ

ಬಡ್ಡಿ ಬೇರ ಕಿತ್ತಾಂಗ ಅವರಿಗಿ ಆಗಿಲ್ಲೇನರಿ
ಗುರುವಿನಾ ಮಹಿಮಾ ಹಿಂಗ ಅತಂಥಾ ಸಾರಿ

ಹೇಳುರೀವರಿ ಅರುಹಿಕೊಂಡ ಗುರುವಿನಾ
ನೆನದರ ಆಗಾವ ಪ್ರಸನ್ನರಿ

**೫೧ನೇ ಸಂಧಿ :**

ಕೆಂಡದಂಥ ಗುರುವಿನ ಮ್ಯಾಗ ನಂಬಿಗಿಟ್ಟ ನಡಿದರ
ಕಂಟಕ ಬಯಲ ಮಾಡಾಂವಾ ರೇವಣಸಿದ್ಧಾನೋ

ಎಷ್ಟೋ ಮಂದಿ ಬಾಳ ಕೆಟ್ಟ ನಡತಿದಿಂದ ನಡುತಾರು
ಹೊಟ್ಟೆಕಿಚ್ಚು ಮಾಡಿದರ ಫಲಾ ಏನ ಅಂದಿನೋ

ಸೃಷ್ಟಿ ಒಳಗ ಹಿಂಥಾಮಂದಿ ಆಗಿ ಬಂದರ ಪಾವನ
ನಿಷ್ಠಾವಂತರಿಗೆ ಮಾನ ಮರ್ಯಾದೆ ಇಲ್ಲ ಅಂದಿನೋ

ಎಷ್ಟ ಹೇಳಿದರ ತೀರೂದಿಲ್ಲಾ ನಮ್ಮ ಮಂದಿಗಿ
ಮಾಡೂದೇನು ದುಷ್ಟರನ ನಾಶ ಮಾಡಾವ ಗುರುರೇವಣಸಿದ್ಧನೋ

ಕಂಡದ್ದ ಆಡಿ ಮಂಡಲಕ ಬೆಂಕಿ ಹಚ್ಚಕೊಂಡ
ಇವರು ಪುಂಡರಾಗಿ ದಂಡ ಶಿಕ್ಷಾ ಕೊಟ್ಟಬಂದರ ಕೇಳಿರಿ ಅಂದಿನೋ

ಖಂಡಿತ ಮಾತ ನಿಮಗ ನಾವು ಶರಣಾ ಮಾಡಿ
ಹೇಳತೀವರಿ ದಂಡಿಶಿರಾಂಗ ಯಾಕ ಮಾಡುದ ಏನ ಅಂದಿನೋ

ಸರವರಿಗೆ ಗುರು ದೊಡ್ಡಾವ ನೋಡರೆಪ್ಪಾ ಆದಿ ತಾನು
ಮರಿಯಲಾರೆ ಹೊಂದರಿ ಅವನ ಪಾದಕ ಅಂದಿನೋ

ನಿಮ್ಮ ಸಂಕಟಾ ದೂರ ಮಾಡಾವ ಗುರು ತಾನು
ಬೇಸರ ಹಮ್ಮ ಅಹಂಕಾರ ಬಿಟ್ಟ ನಡಿರಿ
ಅವನ ಧ್ಯಾಸಕಂದಿನೋ

ಹರ ಮುನಿದರ ಗುರುಕಾಯುವಪ್ಪ
ದೇಶಕ್ಕ ಗುರುತಿಲ್ಲದಾಂಗ ಬೀಳಬ್ಯಾಡರಿ
ಕರ್ಮದ ಮಡಕ ಅಂದಿನೋ

ಗುರುವಿಗಿ ನಿಂದಾ ಮಾಡಿ ನೀವು ನಾಯಿ ನರಿ ಜಲ್ಮಾ
ತಾಳಬ್ಯಾಡರಿ ಅರವ ಬಿಟ್ಟ ಮರುವಿಗಿ ಬೀಳೂದ ಯಾಕಂದಿನೋ

ಸರಿಬರೂದಿಲ್ಲ ಜ್ಞಾನವಂತಿರಿಗಿ ನಾಮ
ಹಸರಾದೋ ತಮ್ಮಾ ಗುರುರೇವಣಸಿದ್ಧಾ ಬಲ್ಲಾ ಕೇಳರಿ ಅಂದಿನೋ

ಯುಗಾದಿ ಪಾಡ್ಯಾ ಗುರುಹೊಂಡತಾನು ಸಾಗಿ
ಭಕ್ತರ ಮನ ನೋಡಲಾಕ ಆಗ ನೋಡಿರಿ ಅವನ ರೂಪ
ಬಂಗಾರ ವರ್ಣ ಅಂದಿನೋ

ಆ ಬಂಗಾರ ರೂಪ ನೋಡಿದವರ ಜಲ್ಮಾ ಪಾವನ
ನಿಮ್ಮ ಪಾಪ ಬಿಟ್ಟು ಹೋಗುದು ತಿಳಿರಿ ಅಂದಿನೋ

ಹಿಂಥಾ ಗುರು ಇದ್ದಮ್ಯಾಲ ಚಿಂತಿ ಇಲ್ಲದೆ ದುಡಿರೆಪ್ಪ
ಅಂತ್ಯಕಾಲಕ ಅವನಿಂದಾ ಸುಖಾದೊದು ಅಂದಿನೋ

ಪಾಡ್ಯ ದಿವಸಾ ಗುರುವಿನಾ ಮರೆತರ ಕಾಡಬಾರದ
ಕಾಡತಾನರೆಪ್ಪ ಮಾಡಬಾರದ ಮಾಡಿ ಬಿಡತಾನ ತಿಳಿರಿ ಅಂದಿನೋ

ನಡೆ ನುಡಿ ಎರಡು ತಪ್ಪಿದರ ಕೇಡ ನಿಮಗ
ಬರುದು ಕಾಯಮಾ ಸಾಡೇ ಸಾತಕ ಕರ್ಮಕ ಬೀಳುವದ್ಯಾಕ ಅಂದಿನೊ

**೫೨ನೇ ಸಂಧಿ :**

ಮೂಲ ಮಾತಾ ನಿಮಗ ನಾವು ಕಾಲಬಿದ್ದ ಹೇಳತೀವರೆಪ್ಪ
ಛಲಾ ಬಿಡರಿ ಕುಡಕತಾನಾ ಕೇಳರಿ ಅಂದಿನೋ

ಕುಲಾ ಕೆಡಸಿಕೊಂಡ ಆಡುದ ರೀತಿ ನಮಮದು
ಅಲ್ಲರೆಪ್ಪ ಫಲಾ ಸಿಗುದಿಲ್ಲಾ ನಿಮಗ ದೂರುದು ಕರ್ಮ ಅಂದಿನೋ

ಬಲ್ಲವರಂತ ತಿಳಿದ ನಡದೀರಿ ಆಗಿ ಕಲ್ಪನಾ ತಮ್ಮಾ
ಎಲ್ಲಾರಿಗಿ ಗುರು ದೊಡ್ಡಾವ ತಿಳಿರಿ ಅಂದಿನೋ

ಹೇಳೂದು ಕೇಳೂದು ನಿಂತ ಹೋತರಿ ಗುಳೇ ಕಟ್ಟುಕಾಲ
ಬಂತರಿ ವ್ಯಾಳ್ಯಾ ಹಿಂತ ಜನರಿಗಿ ಬಂದರ ಏನಂದಿನೋ

ಗುರು ಅಂದರ ಕೊರಗುದು ಜನನ ಮರಣಾ ಬೇರಾ
ಗುರು ಅಂದರ ಸರುವದು ಭವರೋಗ ಅಂದಿನೋ

ಗುರು ಅಂದರ ಹೋಗುದರಿ ಕಂಟಕಾ ತಾನ ಎಲ್ಲಾ
ಗುರು ಅಂದರ ಮೋಕ್ಷ ಮಾರ್ಗ ದೊರದು ಅಂದಿನೋ

ಗುರು ಅಂದರ ಸಿಗುದು ಬುದ್ಧಿ ಜ್ಞಾನವು ತಮ್ಮಾ
ಗುರು ಅಂದರ ಏರೂದು ಮನಿಯತಾನ ಅಂದಿನೋ

ಪ್ರತಿ ವರ್ಷಾ ನೀವು ಎಲ್ಲಾ ಜಾತ್ರಿ ಮಾಡತೀರಿ
ಭಕ್ತಿಯದಿಂದಾ ಖಾತ್ರಿ ಆಗೇತಿ ಗುರುವಿನಾ ಮಹಿಮಾ ದೊಡ್ಡದು ಅಂದಿನೋ

ಜಾತ್ರಿ ಬಿಟ್ಟರ ನಿಮಗ ಬರುವರು ಬರಗಾಲ ಸೂಚರೆಪ್ಪ
ಕಾರ್ಯ ಮಾಡಿದರ ಗುರು ಆಗುವಾ ಪ್ರಸನ್ನ ಅಂದಿನೋ

ಜಗಳದೊಳಗ ಮಹಿಮಾಕಾರ ಅನಿಸಿಲ್ಲೆನೋ
ಗುರುರಾಯಾ ಮಗನಾದ ವೀರಶೈವ ಧರ್ಮಾ ಸ್ಥಾಪನಾ ಅಂದಿನೋ

ಜಗದ್ಗುರು ಅಂತಾ ಬಿರುದಾ ಪಡಿದಾನರಿ ನಮ್ಮ ಗುರು
ಜಗದೊಳಗೆ ಝಂಡಾ ಮರೆಯುದು ಕೇಳರಿ ಅಂದಿನೋ

ನಿನ್ನ ವರ್ಣಾ ಎಷ್ಟ ಮಾಡಿದರ ತೀರುದಿಲ್ಲೋ
ಗುರುರಾಯಾ ಧೀನ ಭಕ್ತರ ಮಾನ ಕಾಯಪ್ಪ ರೇವಣಸಿದ್ಧನೋ

ಅಜ ಹರಿ ಹರರಿಗೆ ಗುರುವನಾಗಿ ಮೆರೆದಾವಾ
ಮೂಜಗದೊಡಿಯಾ ನಮ್ಮ ರೇವಣಸಿದ್ಧನೋ

ಗುರು ಅದಾನಂತ ದುರ್ಗಿ ಸನಿಕ ಬರೂದಿಲ್ಲರಿ
ಯಾರ್‍ಯಾರದ ಆಟಾ ನಡುದಿಲ್ಲ ತಿಳಿರಿ ಅಂದಿನೋ

ಸಿದ್ಧಾಟಕಿ ಮಾಡತೀವಂದರ ಯಾರದೂ
ಎದ್ದ ಬಿಟ್ಟ ಓಡಿ ಹೋಗ್ಯಾರು ಕೇಳಿರಿ ಅಂದಿನೋ

ಕೊಲ್ಲಾಪೂರಕ ಹೋಗಿ ನಿಂತು ಖೊಂಗಿ ಸಿದ್ಧರನ್ನೆಲ್ಲಾ
ಹೊಡಿದು ಮಾ ಗಂಡಾ ವಿಷಾ ಕುಡಿದಾವಾ ರೇವಣಸಿದ್ಧನೋ

**೫೩ನೇ ಸಂಧಿ :**

ಗುರುರೇವಣಸಿದ್ಧಂಥ ಅನವಲ್ಲಿ ಗುರುವಿನ ಪಾದಾವ
ಹಿಡಿಯವಲ್ಲಿ ಮರವಿಗ ಬಿದ್ದು ಹೀನಗುಣಾ ಬಿಡವಲ್ಲಂದಿನೋ

ಭೇದವು ತಿಳಿಯದೆ ವಾದವು ಮಾಡಿದರೇನೋ
ಹಾದಿಗೆ ಸ್ರಾಪ ಕೊಟ್ಟರ ಫಲವೇನಂದಿನೋ

ಸುಳ್ಳ ಅಲ್ಲೋ ಲೋಕದ ಆಟವ ಇನ್ನ ನೋಡಾರಿ
ಮಳ್ಳ ಜನರಿಗೆ ಇದರ ಭೇದ ತಿಳಿಯುವುದಿಲ್ಲ ನೋಡರಿ

ಜೊಳ್ಳ ಹಾರೂದು ಒಳ್ಳೆ ಬೀಜೊಂದು ಉಳಿಯುದು ಕೇಳಾರಿ
ಮಳ್ಳ ಹಾದ ಕುರಿಹಾಂಗ ಜಗಾ ಹುರಿಯುದ ನೋಡರಿ

ಮುಂದ ಆಗುವ ಸಂಧ ನೀವು ಇಂದ ಕೇಳಾರಿ
ಮಂದಮತಿಗಳಾಗಿ ಎಂದೋ ಅನುವಾದಲ್ಲೊ ನೋಡರಿ

ಅಂಜುವ ಜನರಿಗಿ ಈಗಿನ ಕಾಲಕ್ಕೆ ಸುಖವ ಇಲ್ಲಾರಿ
ಸೆರಿಗಂಜಿ ಕಾಣದೆ ಮನಿ ಮನಿ ತಿರುಗಾತರ ನೋಡರಿ

ಮಂಜು ಮಳಿಗಳ ಮುಗಿಲಾ ಸೇರ್‍ಯಾವು ಬಂಜಿ ಭೂದೇವಿರಿ
ಎಂಜಲಾ ಪತ್ರವಳಿ ಹಾಂಗ ಜಗಾ ಹಾರೂದರಿ

ಜೋಡು ಸೂರ್ಯರು ಮಾಡುವ ಕಾಲಕ್ಕ ಕೇಡ ಬರುವದರಿ
ರೂಢಿ ತುಂಬಾ ಕಾಡು ಮಳಿಗಿ ಉರಿಯಹತ್ತುದರಿ

ಹಲ್ಲು ಕಲ್ಲಿಗೆ ಜಗಳ ಬರುವದು ಇನ್ನ ಕೇಳಾರಿ
ಹುಲ್ಲೆದ್ದು ಕಲ್ಲಿಗೆ ಹೊಡೆದರ ಪುಡಿಪುಡಿ ಆಗುದರಿ

ಅಲ್ಲ ಹೌದು ಎಂಬುವ ಮಾತು ಬಲ್ಲಾವರಿಗಿ ತಿಳಿಯುದರಿ
ಅಲ್ಲಮಪ್ರಭು ಬರುವ ಕಾಲಕ್ಕ ಜಗಾ ಬುಡ ಮೇಲರಿ

ಕಾಡುಕುಂಟಿ ಮೇಯುವ ತಾಳು ರೂಢಿಯ ಬಳಗಾರಿ
ವಾರಿ ಒಡಿಯುವ ನುಂಗತಾಳು ಸಿದ್ಧಶಂಖರಿ

ಮಡದಿ ಮಕ್ಕಳನ ಅಗಲಿ ಹೋಗುದು ಮಾರಿ ಸಿಗದಾಂಗರಿ
ರೂಢಿ ತುಂಬಾ ಕಾಡು ಮಳಿಯಾಗ ಗೋರಿ ಆದಾವರಿ

ಸಿದ್ಧ ಸಿದ್ಧರನ ಗುದ್ದತಾಳರಿ ಸಿದ್ಧಶಂಖರಿ
ಹದ್ದು ಕಾಗಿಗೆ ಹಂಚುವ ತಾಳು ತಿಳಿದ ನಡೆಯಿರಿ

ಅಷ್ಟಮಯ ಜ್ಯೋತಿ ನಷ್ಟವಾದವು ರೊಟ್ಟಿಯ ಕಾಣದರಿ
ಹೊಟ್ಟೆ ತುಂಬದೆ ಕೆಟ್ಟ ಮಾತುಗಳು ಕೆಟ್ಟು ಹೋದಾವರಿ

ಸತ್ಯ ಶರಣಾರು ಸಾರುವ ತಾರು ಇನ್ನ ಕೇಳರಿ
ಎತ್ತು ಕಾಣಚೆ ಕೈಲೆ ಕೆತ್ತಿ ಒತ್ತುವತಾರರಿ

ಹತ್ತಿ ಎಣ್ಣೆ ಬೆಣ್ಣೆ ಸಿಗದಾಂಗ ಆಗುವದರಿ
ಹತ್ತುಗಾವುದಕ ಸಂತಿ ಆಗೂದು ತಿಳಿದ ನೋಡರಿ

**ರೇವಣ ಸಿದ್ಧನ ಮಹಿಮೆ**

ಹರಹರಾ ಮಹಾದೇವರು ಜತಾದಿ
ಎಂಬ ಪರ್ವತದಲ್ಲಿ ||೧||

ಶ್ರೀಮಾನ್ ಮಹಾದೇವರ ಓಲಗದೋಳು
ಎಂತೆಂತ ಶರಣರಿದ್ದಾರು ||೨||

ಇಪ್ಪತ್ತೇಳು ಕೋಟಿ ಅಮರರಗೆಕಂಗಳು
ಮೂವತ್ತಾರು ಕೋಟಿ ರಾಕ್ಷಸರು ||೩||

ಮೂವತ್ತ ಮೂರು ಕೋಟಿ ದೇವ ದೇವತೆಯರು
ಕೋಟಿ ಸೂರ್ಯ ಕೋಟಿ ಚಂದ್ರರು ||೪||

ಕಿನ್ನೂರ ಕಿಂಪುರುಷ ಗಂಗಿ ಓಲಗ
ನಂದಿ ವಾಹನರು ಇರುತಿಹರು ||೫||

ನೋಡ್ಯಾರ ಶ್ರೀಮಾನ್ ಮಹಾದೇವರಿಗೆ
ಕುಡಿಶಡಗರದಿ ಶೆರಣು ಮಾಡುವರು ||೬||

ಹರುಷದಿಂದ ಆಗ ಅಡಿನೆರಗಿಂತಲಿ
ಶಿರವಬಾಗಿಸಿ ಶರಣು ಮಾಡಿದರೋ ||೭||

ಶರಣು ಮಾಡುದ ಪಾರ್ವತಿ
ಅಂತಾಳು ಶಿವನಿಗೆ ಶರಣು ಮಾಡಿದರು ||೮||

ಶಿವನಿಗೆ ಶರಣು ಮಾಡಿದರ
ಶಿವನಸತಿ ನಾನಂದಾಳೋ ||೯||

ಸತಿಯಾದ ಕಾರಣ ನನಗೊಂದು ಹಸ್ತ
ಈಶ್ವರಗೊಂದು ಹಸ್ತ ಅಂದಾಳೋ ||೧೦||

ಅದರೊಳಗೊಬ್ಬವ ರೇಣುಕನೆಂಬ
ನಾಧೀಶ್ವರ ಬಂದಾನು ||೧೧||

ರೇವಣಧೀಶ್ವರ ಬಂದು ಒಂದು
ಕರಿದಿ ಶರಣು ಮಾಡಿದನು ||೧೨||

ಶರಣು ಮಾಡುದ ಕಂಡು ಪಾರ್ವತಿದೇವಿಯು
ಈಶ್ವರನ ಬೆಸಗೊಂಡಾಳು ||೧೩||

ಕೇಳು ಪರಮೇಶ್ವರಾ ಈ ಶರಣನು
ಒಂದು ಕರದಿ ಶರಣು ಮಾಡಿದನು ||೧೪||

ಆಗ ಪರಮೇಶ್ವರ ಪಾರ್ವತಿಗೆ ಹೇಳಿದಾ
ನಿನಗೆ ಶರಣು ಮಾಡಬಾರದೆಂದಾನು ||೧೫||

ಕೇಳು ಪರಮೇಶ್ವರಾ ಈತನಿಗಿಂತ ಹೆಚ್ಚು
ನಾರುನುಂದು ಕೇಳಿದಳು ||೧೬||

ಅದನು ಕೇಳಿ ಈತನು ಮುನಿಗಿಂತ
ಬಲ್ಲಿದಾತನೆಂದು ಹೇಳಿದನೂ ||೧೭||

ಅದನು ಕೇಳಿ ಫಡ ಫಡಿಸಿ ಅಂಕುರಶಿ
ಖಡ್ಗ ಅವತಾರ ತಾಳಿದಳು ||೧೮||

ಮಾಯ ಕೋಲಾಹಲ ಮಾಯ ಮದನನ
ಇಂದ್ರ ತ್ರಿಶೂಲವತಾಳಿದಳು ||೧೯||

ಅಂಗಲಗಣ್ಣಿನವರು ಹುಲಿಬಣ್ಣದವರು
ನಸಲಗಣ್ಣು ಜಟಧಾರೆಗಳು ||೨೦||

ಏನ ಕಾಲೋಳು ಕಣ್ಣು ಸರಮಾಲಿಯೆ
ಇರುತ್ತೇವೆಂದು ಹೇಳಿದಳು ||೨೧||

ಇತ್ತ ನನ್ನ ಮರ್ತ್ಯಲೋಕದಲ್ಲಿ
ಕೈ ಸೇರಿತರುವೆನೆಂದು ಹೇಳಿದಳು ||೨೨||

ಪಾರ್ವತಿಗೆ ಈಶ್ವರ ಹೇಳಿದ
ಮುಂಚೆ ಆಗಬೇಕೆಂದಾನು ||೨೩||

ಪಾರ್ವತಿದೇವಿಗೆ ಅಪ್ಪಣೆ ಕೊಟ್ಟು
ಇತ್ತ ಏನು ಕನಸು ಕಂಡಾನು ||೧೪||

ಧರಣಿಯೊಳಗ ನನ ಶಿದ್ಧರಗೆಲ್ಲ
ಗುರುವಾಗಿರು ಹೋಗು ಅಂದಾನು ||೧೫||

ಆಗ ರೇಣುಕನು ನೋಡಲ್ಲಯ್ಯ
ಕೊಲ್ಲಿಪಾಕಿಯಲ್ಲಿ ಹುಟ್ಟಿದಮ ||೧೬||

ಇತ್ತ ಪಾರ್ವತಿ ತನ್ನ ತಾಮಸರೆಂಬ
ಶಕ್ತಿಯ ಕರೆದು ಹೇಳಿದಳು ||೧೭||

ಮಲ್ಲಾಪುರಕ್ಕಿಂತ ಕೊಲ್ಲಾಪುರಧಿಕವೆಂದು
ತಿಳಿದು ಅಲ್ಲಿಗೆ ಬಂದಾರು ||೧೮||

ಬಲ್ಲಿದ ಮಹಾಂಕಾಳಿಯಾಗಿ
ಪಾರ್ವತಿದೇವಿಯ ರೂಪವತಾಳಿದಳು ||೧೯||

ಇಲ್ಲಿಗಿ ಶಿದ್ಧರು ಬರುವರೆಂದು
ಮನದೊಳು ಧ್ಯಾನಿಸಿಕೊಂಡಾಳು ||೨೦||

ಅದ್ಧರಿಗೆ ತಕ್ಕಂತೆ ವಿದ್ಯೆಯ ಬೇಕು
ಮೂಡನ ದೇಶಕ ಬಂದಾಳೊ ||೨೧||

ತನ್ನ ವಿಪರೀತ ಬುಕಡಿ ಮಾಡಿಕೊಂಡು
ಪರ್ವತಕ್ಕೆ ಹೋಗಿನಿಂತಾಳು ||೨೧||

ಆಗ ರಾಕ್ಷಸ ಪಾದಕೆ ಬಿದ್ದು
ಎದುರಿಗೆ ನಿಂತುಕೊಂಡಾನು ||೨೨||

ಆಗ ಮಾಯಿಗೆ ನಮಸ್ಕರಿಸಿ
ಅಷ್ಟ ಶಿದ್ಧಿ ಕೊಡತೇನಿ ಅಂದಾನು ||೨೪||

ಆಗ ರಾಕ್ಷಸನು ಮೂರು ಖಂಡಗ
ವಿಷವನ್ನು ತಂದುಕೊಟ್ಟಾನು ||೨೫||

ಸಾಸ್ವಿಕಾಳಷ್ಟು ವಿಷವ ತೆಗೆದುಕೊಂಡು
ಭೂಮಿಗೆ ನೀಡೆಂದನೋ ||೨೭||

ಭೂಮಿಗೆ ವಿಷವ ನೀಡಿದರೆ
ಪಾತಾಳಲೋಕ ಕಂಡಾವು ||೩೮||

ಅಂದ ಕಂಡು ಮಾಯಿ ಬೆರಗಾಗಿ ನಿಂತು
ಇದು ಏನಂತ ಕೇಳಿದಳು ||೩೯||

ಆಗ ರಾಕ್ಷಸ ಮಾಯಿಗೆ ಹೇಳಿದ
ಇದು ಮಾಟವೆಂದಾನೋ ||೪೦||

ಅದ ಕಂಡು ಮಾಯಿ ಹರನವ ತಾಳಿ
ಇನ್ನಷ್ಟು ವಿಷ ಕೊಡಂದಾಳು ||೪೧||

ನಿನ್ನ ನಡುವಿನ ಮಾಲಿಯಲ್ಲಿ
ಮಾಯಿ ಮೂರು ಖಂಡಗ ವಿಷ ಕೊಟ್ಟೆನು ||೪೨||

ಆಗ ಮಾಯಿ ವಿಷವನ್ನು ತೊಕ್ಕೊಂಡು
ತನ್ನ ದೈತ್ಯರ ಕೈಯ್ಯಲ್ಲಿ ಕೊಟ್ವಾಳು ||೪೩||

ಶಾಕಿನಿ ಡಾಕಿನಿ ಎಂಬ ದೇವತೆಯರು
ವಿಷವ ಬಂಡಿ ಮೇಲೆ ಹೇರಿದರು ||೪೪||

ಕಟ್ಟು ಕಾವಲು ಮಂಡಿಕೊಂಡು ಮಾಯಿ
ಹಸ್ತಿನಾಪುರಕ್ಕೆ ಬಂದಾರು ||೪೫||

ಹಸ್ತಿನಾಪುರದೊಳು ಒಬ್ಬಾಕಿ
ಸತ್ಯ ಶಿವಶರಣಿಯಿದ್ದಾಳೋ ||೪೬||

ಮಾಯಿ ಗದ್ದಲವ ಕಂಡು ಆಗ ಶಿವಶರಣಿ
ರಥವ ನೋಡಬೇಕೆಂದಾಳು ||೪೭||

ರಥವ ಹಿಡಿದು ಬಂದ ಶಿದ್ದಾರಿತ್ಯೆನದ
ಶಿವದು ನೀಡಿದಳು ||೪೮||

ಹಸ್ತಿನಾಪುರದಿಂದ ಮೂರು ದಿ
ಕೊಲ್ಲಾಪುರಕ್ಕೆ ಬಂದಾಳು ||೪೯||

ಮೂರು ದಿವಸಕ್ಕ ಬಂದು ಮಾಯಿ
ಆರು ಮನಿಯ ಕಟ್ಟಿಸ್ಯಾಳು ||೫೦||

ಆರು ಮನಿಯ ಬಾಗಿಲಿಗೆ
ಒಂದು ಕಾವಲಿ ಇಟ್ಟಾಳೋ ||೫೧||

ಮೊದಲಿನ ಬಾಗಿಲದಲ್ಲಿ ಕಾವಲಿ
ಕರಡಿ ಸಿಂಹಗ ಇಟ್ಟಾಳೋ ||೫೨||

ಎರಡನೆಯ ಬಾಗಿಲಕ ನೋಡಲ್ಲಯ್ಯ
ಹುಲಿರಾಜನ ಕಾವಲಿಯೋ ||೫೩||

ಮೂರನೆಯ ಬಾಗಿಲಿಗೆ ಸಿಂಹನೂ
ನಾಲ್ಕನೆಯ ಬಾಗಿಲಿಗೆ ಚಾಮುಂಡೇಶ್ವರಿಯೊ ||೫೪||

ಐದನೆಯ ಬಾಗಿಲಿಗೆ ರುಂಡಾನೊ
ಆರನೆಯ ಬಾಗಿಲಿಗೆ ರುಂಡಾನೋ ||೫೫||

ಏಳನೆಯ ಬಾಗಿಲಿಗೆ ಸರ್ಪನ ಕಾವಲಿ
ಎಂಟನೆಯ ಬಾಗಿಲಿಗೆ ಚಂಡವೀರನೋ ||೫೬||

ಒಂಭತ್ತನೆಯ ಬಾಗಿಲಿಗೆ
ಗಂಡಬೇರುಂಡನ ಕಾವಲಿಯೋ ||೫೭||

ಇಂತಿಷ್ಟ ಕಾವಲು
ಅರಮನಿ ಕಾವಲಿಗೆ ಬಂದುಬಸ್ತ ಮಾಡಿಟ್ಯಾಳು ||೫೮||

ಭೂಮಿಯೊಳಗಿನ ಗವಿಶಿದ್ಧರನೆಲ್ಲ
ತರಬೇಕೆಂದಾಳೋ ||೫೯||

ಭಿಕ್ಷೆಯಂಬುವ ಶಬ್ದ ಶಿವಶರಣಿ ಕೇಳಿತ್ಯೆನದಿ
ಶಿವಡು ನೀಡಿದಳೋ ||೬೦||

ಶರಣಿ ನೀಡಿದ ಶಿವಡು ತಕ್ಕೊಂಡು
ಶಿದ್ಧರು ಕೊಲ್ಲಾಪುರಕ್ಕೆ ಬಂದಾರೋ ||೬೧||

~ ™

**ಶಿದ್ಧಬೀರ ಚರಿತ್ರೆ**

**ಒಂದನೇ ಸಂದು :**

ಸಣ್ಣತಮ್ಮನನ ಶಿದ್ಧಬೀರ ಮಂಡಿಗಿ
ಮಾರಾ ವಂದಾನೋ ||೧||

ಮಂಡಿಗಿ ಮಾರಾ ವಂದಾನೋ ಆಗ
ಅಕ್ಕನ ಮುಂದ ಹೇಳ್ಯಾನೋ ||೨||

ಅಕ್ಕನೋ ಮಾಯವ್ವನೋ ಆಗ
ತಮ್ಮನ ಮಾತೊಂದ ಕೇಳ್ಯಾಳೋ ||೩||

ತಮ್ಮನ ಮಾತೊಂದ ಕೇಳ್ಯಾಲು ಮಾಯವ್ವ
ಒಳ್ಳೆದೊಳ್ಳೇದಂದಾಳೋ ||೪||

ಒಳ್ಳೆದೊಳ್ಳೇದಂದಾಳು ಮಾಯವ್ವ
ಧರ್ಮರ ಮಗಳು ಕಾಮಾಲಿಯೋ ||೫||

ಧರ್ಮರ ಮಗಳು ಕಾಮಾಲಿ ಕರದು
ಏನಂತಾಗ ಹೇಳಿದಳೋ ||೬||

ಬಾರು ಬಾರ ಕಾಮಾಲಿದೇವಿ ನಿನ್ನ
ಪುರುಷನ ನೋಡವ್ವ ||೭||

ನಿನ್ನ ಪುರುಷನ ನೋಡವ್ವ ಕಾಮಾಲಿ
ಮಂಡಿಗಿ ಮಾರಾವಂತಾನೋ ||೮||

ಮಂಡಿಗಿ ಮಾರಾವಂತಾನವ್ವ ನನ್ನ
ತಮ್ಮನ ಯೇರಿಬೇಕಂತಾಳೋ ||೯||

ತಮ್ಮನ ಯೇರಿಬೇಕಂತಾಳು ಮಾಯವ್ವ
ನೀರಿಗೆ ಹೋಗಬೇಕಂತಾಳೋ ||೧೦||

ಧರ್ಮರ ಮಗಳು ಕಾಮಾಲಿದೇವಿ
ಒಳ್ಳೆದೊಳ್ಳೇದಂದಾಳೋ ||೧೧||

ರನ್ನದ ಕೊಡವು ಚಿನ್ನದ ಸಿಂಬಿ ಕಾಮಾಲಿ
ನೀರಿಗೆ ಹೊಂಟಾಳೋ ||೧೨||

ಬಡಬಡ ಹೋದಾಳು ಕಾಮಾಲಿ
ಕುರುಬಗೇವಿ ಹೊಕ್ಕಾಳೋ ||೧೩||

ಕುರುಬಗೇರಿನ್ನ ಅಕ್ಕಗಳಿರಾ
ನೀರಿಗೆ ಹೋಗೋಣ ಬನ್ನೀರೇ ||೧೪||

ಅಗಲಿ ಕೊಡಗಳ ತಂದೆ ಕಾಮಾಲಿ ಈಗೆಲೆ
ಕೊಡಗಳೆ ಇಳಿವೇವೆ ||೧೫||

ರನ್ನದ ಕೊಡವು ಚಿನ್ನದ ಸಿಂಬಿ ಕಾಮಾಲಿ
ನೀರಿಗೆ ಹೊಂಟಾಳೋ ||೧೬||

ಬಡಬಡ ಹೋದಾಳು ಕಾಮಾಲಿ
ಒಕ್ಕಲಿಗರೋಣಿ ಹೊಕ್ಕಾಳೋ ||೧೭||

ಒಕ್ಕಲಗೆರೆನ್ನ ಅಕ್ಕಗಳಿರಾ ನೀರಿಗೆ
ಹೋಗೋಣ ಬನ್ನೀರೇ ||೧೮||

ಆಗಲಿ ಕೊಡಗಳ ತಂದೆವಿ ಈಗಲೆ
ಕೊಡಗಳ ಇಳಿವೇವಿ ||೧೯||

ರನ್ನದ ಕೊಡವು ಚಿನ್ನದ ಸಿಂಬಿ ಕಾಮಾಲಿ
ನೀರಿಗೆ ಹೊಂಟಾಳೋ ||೨೦||

ಬಡಬಡ ಬಂದಾಳು ಕಾಮಾಲಿ
ಹಾರಾರಗೇರಿ ಹೊಕ್ಕಾಳೋ ||೨೧||

ಹಾರುರಗೇರನ್ನ ಅಕ್ಕಗಳಿರಾ ನೀರಿಗೆ
ಹೋಗೋಣ ಬನ್ನೀರೇ ||೨೨||

ಆಗಲಿ ಕೊಡಗಳ ತಂದೆವಿ ಈಗಲೆ
ಕೊಡಗಳ ಇಳಿವೇವಿ ||೨೩||

ರನ್ನದ ಕೊಡವು ಚಿನ್ನದ ಸಿಂಬಿ ಕಾಮಾಲಿ
ನೀರಿಗೆ ಹೊಂಟಾಳೋ ||೨೪||

ಧರ್ಮದ ಮಗಳು ಕಾಮಾಲಿ
ಹರಸಪುರ ಪಟ್ಟಣವೋ ||೨೫||

ಊರ ಅಗಸಿಯ ಮುಂದ
ಎರಕೊಂದು ದಾರಿ ಹೋಗ್ಯಾವೋ ||೨೬||

ಎಡಕೊಂದು ದಾರಿ ಹೋಗ್ಯಾವಯ್ಯ ಬಲಕೊಂದು
ದಾರಿ ಹೋಗ್ಯಾವೋ ||೧೭||

ಬಲಕಿನ ದಾರಿ ಹಿಡಿದಳು ಕಾಮಾಲಿ
ಹಾಲುಹಳ್ಳಕ ಬಂದಾಳೋ ||೧೮||

ಶಿವನ ವರವಿನ ಶಿದ್ದಾನು ಆಗ
ಅರಮನಿಯ ಒಳಗೆಲ್ಲೊ ||೧೯||

ಅರಮನಿಯ ಒಳಗಲ್ಲಯ್ಯ
ಏನಂತ ಮಾತಾಡ್ಯಾನೋ ||೨೦||

ಕಾಮಾಲಿದೇವಿ ನೋಡಲ್ಲಯ್ಯ ಹಾಲು
ಹಳ್ಳದ ಒಳಗಲ್ಲೋ ||೨೧||

ಹಾಲುಹಳ್ಳದ ಒಳಗಲ್ಲೊ ನಾ ಮನಸ
ನೋಡಬೇಕೆಂದಾನೋ ||೨೨||

ಶಿವನ ವರವಿನ ಶಿದ್ದಾನು ಆಗ ದಂಡ
ತಯ್ಯಾರ ಮಾಡ್ಯಾನೋ ||೨೩||

ದಂಡ ತಯ್ಯಾರ ಮಾಡ್ಯಾನು ಸ್ವಾಮಿ ತಾ
ಏನ ತಯ್ಯಾರಗ್ಯಾನೋ ||೨೪||

ಹರಹರನೋ ನನ ಕರಿಯದೇವರು
ಹಾಲುಹಳ್ಳದ ದಂಡೀಲೆ ||೨೫||

ಹಾಲುಹಳ್ಳದ ದಂಡೀಲೆ ತನ್ನ
ದಂಡ ಇಳಿಸುತೈದಾನೋ ||೨೬||

ಧರ್ಮರ ಮಗಳು ಕಾಮಾಲಿದೇವಿ
ಹಾಲುಹಳ್ಳದ ಒಳಗಲ್ಲೊ ||೨೭||

ಹಾಲು ಹಳ್ಳದ ಒಳಗಲ್ಲೋ ಆಗ
ಏನಂತ ಮಾತಾಡ್ಯಾಳೋ ||೨೮||

ಅವು ರಾಯರ ದಂಡವ್ವಾ ಇದು
ರಾಯರ ದರಬಾರೋ ||೨೯||

ಅವು ರಾಯರ ದರಬಾರೆಂದು ಹಾಲು
ಹಳ್ಳವ ಬಿಟ್ಟಳೋ ||೪೦||

ಇಲ್ಲಿಗೆ ಹರಹರ ಇಲ್ಲಿಗೆ ಶಿವಶಿವ ಇಲ್ಲಿಗೆ
ಇದು ಒಂದು ಸಂದೇಳೋ ||೪೧||

ಸಂದಿನ ಪದಗಳ ವಂದಿಸಿ ಹೇಳುವೆ
ತಂದಿ ಕರಿಯ ಶಿದ್ದಾನೋ ||೪೨||

ದೇವಾರು ಬಂದಾವು ಬನ್ನೀರೇಽಽಽಽ

**ಎರಡನೇ ಸಂದು :**

ಶಿವನ ವರವಿನ ಶಿದ್ಧಾನೋ ಹಾಲು
ಹಳ್ಳದ ದುಡಿಲ್ಯೋ ||೪೩||

ಹಾಲುಹಳ್ಳದ ದಂಡೀಲೆ ಸ್ವಾಮಿ
ಏನಂತ ಮಾತಾಡ್ಯಾನೋ ||೪೪||

ನಾಗರ ಭಾವಿ ಒಳಗಲ್ಲಾ ಕಾಮಾಲಿ
ದೇವಿ ಆಯಿದಾಳೋ ||೪೫||

ನಾಗರಬಾವಿ ಒಳಗಲ್ಲಾ ನಾ
ಮನಸ ನೋಡಬೇಕೆಂದಾನೋ ||೪೬||

ಮೂರು ಲೋಕದ ಶಿವರಾಯ ಹಾಲು
ಹಳ್ಳದ ದಂಡೀಲೇ ||೪೭||

ಹಾಲುಹಳ್ಳದ ದಂಡೀಲೆ ಅಲ್ಲಿ ಏನು
ಕಾರುಣ ಮಾಡ್ಯಾನೋ ||೪೮||

ಮೂರುಲೋಕದ ಶಿವರಾಯ ಆಗ ಒಂಟಿ
ಪಡಕಿ ತಾ ಉಟ್ಟಾನೋ ||೪೯||

ಒಂಟಿ ಪಡಕಿ ಉಟ್ಟಾನು ಸ್ವಾಮಿ ಯಂಟೇಳಿ
ಜನಿವಾರ ಹಾಕ್ಯಾನೋ ||೫೦||

ಯಂಟೇಳಿ ಜನಿವಾರ ಹಾಕ್ಯಾನು ಹಣೆಯಲಿ
ಹರಿನಾಮ ಹಚ್ಚ್ಯಾನೋ ||೫೧||

ಹಣೆಯಲಿ ಹರಿನಾಮ ಹಚ್ಯಾನೋ ಸ್ವಾಮಿ
ಕೈಯಲ್ಲಿ ಗಿಂಡಿ ಹಿಡಿದಾನೋ ||೫೨||

ಮೋಸಗಾರ ದೇವರಾಗಿ ಹಾಲು
ಹಳ್ಳವ ಬಿಟ್ಟಾನೋ ||೫೩||

ಹಾಲುಹಳ್ಳವ ಬಿಟ್ಟಾನು ದೇವರು
ನಾಗರಭಾವಿಗೆ ಬಂದಾನೋ ||೫೪||

ಹಾರೋ ಬ್ರಾಹ್ಮಣರ ವೇಷವ ತಾಳಿ
ನಾಗರಭಾವಿ ಒಳಗಲ್ಲೋ ||೫೫||

ನಾಗರಭಾವಿ ಒಳಗಲ್ಲಯ್ಯ
ಜಳಕ ಮಾಡುತೈದಾನೋ ||೫೬||

ನಾಗರಭಾವಿ ದಂಡಿಯ ಮ್ಯಾಲ
ಧರ್ಮರ ಮಗಳು ಕಾಮಾಲಿಯೋ | |೫೭||

ಧರ್ಮರ ಮಗಳು ಕಾಮಾಲಿದೇವಿ
ಏನಂತ ಮಾತಾಡ್ಯಾಳೋ ||೫೮||

..................... ಯಾರಿಲ್ಲವ್ವ ಬಲಕ
................... ಯಾರಿಲ್ಲೋ ||೫೯||

ನಾನು ಒಬ್ಬಾಕಿ ಬಾಲಿ ಅಂದಾಳು
ನಾಗರಭಾವಿ ದಂಡೀಲೇ ||೬೦||

ನಾಗರಭಾವಿ ಒಳಗಲ್ಲಯ್ಯ ಒಂದು
ಸೋಪಾನ ದಂಡೀಲೆ ||೬೧||

ಒಂದು ಸೋಪಾನ ಇಳಿದಾಳು ಕಾಮಾಲಿ
ಎರಡು ಸೋಪಾನ ಇಳಿದಾಳೋ ||೬೨||

ಆರು ಮೂರು ಒಂಭತ್ತು ಸೋಪಾನ
ಕಾಮಾಲಿದೇವಿ ಇಳಿದಾಳೋ ||೬೩||

ನಾಗರಭಾವಿ ಒಳಗ ಕಾಮಾಲಿ ಸಾಗಿಸಿ
ತೆರೆಗಳ ಹೊಡೆದಾಳೋ ||೬೪||

ಸಾರಿಸಿ ತೆರೆಗಳ ಹೊಡಿದಾಳೊ ಕಾಮಾಲಿ
ಬಾಗಿಸಿ ಕೊಡಗಳ ತುಂಬ್ಯಾಳೋ | |೬೫||

ಕಣಕಲ ಮ್ಯಾಗಿನ ಕೊಡ ನಮ್ಮಯ್ಯ
ಮಣಕಾಲ ಮ್ಯಾಲ ಭಾರವೋ ||೬೬||

ಮಣಕಾಲ ಮ್ಯಾಲ ಭಾರವೆಂದು ಧರ್ಮರ
ಮಗಳು ಕಾಮಾಲಿಯೋ ||೬೭||

ಮೋಸಗಾರ ದೇವರಿಗೆ ಏನಂತ
ಹೇಳತೈದಾಳೋ ||೬೮||

ಹಾರುರಣ್ಣ ಬ್ರಾಹ್ಮಣರಣ್ಣ ನಮ್ಮ
ಕೊಡವ ನೆಗವಣ್ಣಾ ||೬೯||

ನಿಮ್ಮ ಕೊಡವ ನೆಗವಿದರ ನನಗ
ಏನು ಕೊಡತಿದಿ ಬಾಲಿ ||೭೦||

ನಮ್ಮ ಕೊಡವ ನೆಗವಿದರ ನಮ್ಮ
ಅರಸ ಹತ್ತುವ ತೇಜಿ ||೭೧||

ನಿಮ್ಮ ಅರಸ ಹತ್ತುವ ತೇಜಿಯನ
ನಾನು ಒಲ್ಲೆನಂತಾನೋ ||೭೨||

ಹಾರರಣ್ಣ ಬ್ರಾಹ್ಮಣರಣ್ಣ
ನಮ್ಮ ಕೊಡವ ಹೊರಸಣ್ಣ ||೭೩||

ನಿಮ್ಮ ಕೊಡವ ಹೊರಸಿದರ ನನಗೇನು
ಕೊಡತಿದಿ ಬಾಲಿ ||೭೪||

ನಮ್ಮ ಕೊಡವ ಹೊರಸಿದನ ನಮ್ಮ ಅರಸ
ಹತ್ತುವ ಪಲ್ಲಕ್ಕಿ ||೭೫||

ಅರಸ ಹತ್ತುವ ಪಲ್ಲಕ್ಕಿ ನಾನು
ಕೊಡತೇನಂದಾಳೋ ||೭೬||

ನಿಮ್ಮ ಅರಸ ಹತ್ತುವ ಪಲ್ಲಕ್ಕಿ
ನಾನು ವಲ್ಲೆನಂತಾನೋ ||೭೭||

ಹಾರುರಣ್ಣ ಬ್ರಾಹ್ಮಣರಣ್ಣ ನಮ್ಮ
ಕೊಡವ ನೆಗವಣ್ಣಾ ||೭೮||

ನಿಮ್ಮ ಕೊಡವ ನೆಗವಿದರ ನನಗೇನು
ಕೊಡತಿದಿ ಬಾಲಿ ||೭೯||

ನಮ್ಮ ಕೊಡವ ನೆಗವಿದರ ನಮ್ಮ
ಅರ್ಧ ರಾಜ್ಯವ ಕೊಟ್ಟೇನೊ ||೮೦||

ಇಲ್ಲಿಗೆ ಹರಹರ ಇಲ್ಲಿಗೆ ಶಿವ ಶಿವ ಇಲ್ಲಿಗೆ
ಇದು ಒಂದು ಸಂದೇಳೋ ||೮೧||

ಸಂದಿನ ಪದಗಳ ವಂದಿಸಿ ಹೇಳುವೆ
ತಂದಿ ಕರಿಯ ಶಿದ್ಧಾನೋ ||೮೨||

ದೇವಾರು ಬಂದಾವು ಬನ್ನೀರೇssss

**ಮೂರನೇ ಸಂದು :**

ನಿಮ್ಮ ಅರ್ಧರಾಜ್ಯವನು ನಾನು
ವಲ್ಲೆನಂತಾನೊ ||೮೩||

ಹಾರುರಣ್ಣ ಬ್ರಾಹ್ಮಣರಣ್ಣ ನಮ್ಮ
ಕೊಡ ಹೊರಸಯ್ಯಾ ||೮೪||

ನಿಮ್ಮ ಕೊಡ ಹೊರಸಿದರ ನನಗೇನು
ಕೊಡತಿಯಲಿ ಬಾಲಿ ||೮೫||

ಬಾರು ಬಾರೊ ಬ್ರಾಹ್ಮಣರಣ್ಣ ಏನು
ಬೇಡತಿದಿ ಬೇಡಯ್ಯಾ ||೮೬||

ಏನು ಬೇಡತೀ ಬೇಡಣ್ಣ ನೀ
ಬೇಡಿದ ಭಾಗ್ಯ ಕೊಟ್ಟೇನೋ ||೮೭||

ಮೋಸಗಾರ ದೇವರೂ ಆಗ ತಾ
ಏನು ಬೇಡತೈದಾನೊ ||೮೮||

ನಿಮ್ಮ ಕೊಡವ ನೆಗವಿದರ ನಿಮ
ದೇಹ ನಂದಂದಾನೋ ||೮೯||

ದೇಹ ನಂದಂದಾನೋ ನಿಮ್ಮ ಆತ್ಮ
ನಂದು ಅಂದಾನೊ ||೯೦||

ಶಿವನ ವರವಿನ ಶಿದ್ದಾನೋ ಆಗ
ಇಂತು ಮಾತದ ಕೇಳ್ಯಾನೊ ||೯೧||

ಧರ್ಮರ ಮಗಳು ಕಾಮಾಲಿದೇವಿ ಇಂತು
ಮಾತವ ಕೇಳ್ಯಾಳೋ ||೬೨||

ಇಂತು ಮಾತನ ಕೇಳ್ಯಾಳು ಕಾಮಾಲಿ
ನಾಗರಭಾವಿ ವಳಗಲ್ಲೊ ||೬೩||

ನಾಗರಭಾವಿ ವಳಗಲ್ಲಯ್ಯ ಇರುವ
ಕೆಂಡ ಉಗುಳ್ಯಾಳೊ ||೬೪||

ಉರಿವ ಕೆಂಡ ಉಗುಳ್ಯಾಳು ಕಾಮಾಲಿ
ಭಗಭಗನೆ ಉರಿದೆದ್ದಾಳೊ ||೯೫||

ಅರಗೊಡ ನೀರು ಸುರಿದಾಳು ಕಾಮಾಲಿ
ಅರಗೊಡ ನೀರು ಹೊತ್ತಾಳೋ ||೯೬||

ಅರಗೊಡ ನೀರ ಹೊತ್ತಾಳು ಕಾಮಾಲಿ ಭಾವಿ
ಹತ್ತಿ ಮ್ಯಾಲ ಬಂದಾಳೊ ||೯೭||

ನಾಗರಭಾವಿ ವಳಗಲ್ಲಯ್ಯಾ ಶಿವನ
ವರವಿನ ಶಿದ್ಧಾನೋ ||೯೮||

ಶಿವನ ವರವಿನ ಶಿದ್ಧಾನೊ ಅವ ಒಳ್ಳೆ
ದೊಳ್ಳೆದ ಅಂದಾನೊ ||೯೯||

ನಾಗರಭಾವಿ ವಳಗಲ್ಲಾ ಅಡ್ಡ ಬ್ಯಾಡಿ
ಒಂದು ಹಾಕ್ಯಾನೊ ||೧೦೦||

ಆಡಬ್ಯಾಡಿ ಒಂದ ಹಾಕ್ಯಾನು ನಮ್ಮಯ್ಯ
ದೊಡ್ಡ ಬೆತ್ತವಂದು ಹಿಡಿದಾನೊ ||೧೦೧||

ದೊಡ್ಡ ಬೆತ್ತವ ಹಿಡಿದಾನು ದೇವರನಾಗಿ
ಮುಂದಕ ಬಂದಾನೋ ||೧೦೨||

ಮುಂದ ಹೋಗುವ ಕಾಮಾಲಿದೇವಿಗೆ ಇದುರಿಗೆ
ಬಂದು ನಿಂತಾನೋ ||೧೦೩||

ಧರ್ಮರ ಮಗಳು ಕಾಮಾಲಿದೇವಿ
ದೇವರ ನೊಡತೈದಾಳೊ ||೧೦೪||

ಹಂಗದೊರದ ನಿಂತಾಳುದೇವಿ
ಹೌಹಾರಿ ನಿಂತಾಳೋ ||೧೦೫||

ಶಿವನ ವರವಿನ ಶಿದ್ಧಾನೊ ಆಗ
ಕಾಮಾಲಿದೇವಿಗೆ ನೋಡಲ್ಲ ||೧೦೬||

ಕಾಮಾಲಿದೇವಿಗೆ ನೋಡಲ್ಲಯ್ಯ ಏನಂತ
ಹೇಳಗೈದಾನೋ ||೧೦೭||

ಬಾರು ಬಆರ ಕಾಮಾಲಿದೇವಿ ನಿನ್ನ
ಭಕ್ತಿಗೆ ಮೆಚ್ಚಿದೆನೋ ||೧೦೮||

ನಿನ್ನ ಭಕ್ತಿಗೆ ಮೆಚ್ಚಿದೆ ಕಾಮಾಲಿ ಏನು
ಬೇಡತಿದಿ ಬೇಡಲ್ಲ ||೧೦೯||

ಏನು ಬೇಡತಿದಿ ಬೇಡಲ್ಲ ಕಾಮಾಲಿ
ಬೇಡಿದ ಭಾಗ್ಯವ ಕೊಟ್ಟೇನು ||೧೧೦||

ವಳ್ಳೆದೊಳ್ಳೆದಂದಾಳು ಕಾಮಾಲಿ ಏನಂತ
ವರವ ಬೇಡ್ಯಾಳೋ ||೧೧೧||

ಅರಗೊಡ ಇದ್ದ ಕೊಡವೋ ಸ್ವಾಮಿ ತುಂಬಿದ
ಕೊಡವದಾಗಲಿ ||೧೧೨||

ಶಿವನ ವರವಿನ ಶಿದ್ದಾನೋ ಮುರಗಿಯ
ಬೆತ್ತಾ ಕೊಡಕಲ್ಲೊ ||೧೧೩||

ಮುರಗಿಯ ಬೆತ್ತ ಕೊಡಕಲ್ಲಯ್ಯ ಮೂರು
ತಿರ್ರನೇ ತಿರುವ್ಯಾನೋ ||೧೧೪||

ಅರಗೊಂಡ ಇದ್ದಕೊಡ ನಮ್ಮಯ್ಯ ತುಂಬಿದ
ಕೊಡವ ಆದಾವೋ ||೧೧೫||

ಮಾಯಕಾರ ನನ ಕರಿಯದೇವರು ಮಾಯ
ವಾಗಿ ತಾ ಹೋಗ್ಯಾನೋ ||೧೧೬||

ಧರ್ಮರ ಮಗಳು ಕಾಮಾಲಿದೇವಿ ತನ್ನ
ಅರಮನಿಗೆ ಬಂದಾಳೋ ||೧೧೭||

ಅರಮನಿಗೆ ಬಂದಾಳು ದೇವಿ ಮಿಸಲ
ಕೊಡವ ಇಳಿವ್ಯಾಳೊ ||೧೧೮||

ಶಿವನ ವರವಿನ ಶಿದ್ಧಗ ಕಾಮಾಲಿ
ಜಳಕಕ ನೀರು ಕಾಸಿದಳೋ ||೧೧೯||

ಶೀಗಿಕಾಯಿ ಮದು ಹಚ್ಚ್ಯಾಳು ಮಾಯವ್ವ
ಸಣ್ಣತಮ್ಮ ಶಿದ್ದಯ್ಯಗ ||೧೨೦||

ಹಾಲೂಹಳ್ಳ ಹೊನಾಲಿ ಮಾಯವ್ವ ನಮ್ಮ
ದೇವರ ಜಡಿಯ ಬಿಚ್ಚ್ಯಾಳೋ ||೧೨೧||

ಹಾಲುಹಳ್ಳದ ಹೊನಾಲಿ ಮಾಯವ್ವ ದೇವರ
ಯರವುತೈದಾಳೋ ||೧೨೨||

ಶಿವನ ವರವಿನ ಶಿದ್ಧಾನೋ ಗುರುವಿನ
ಧ್ಯಾನ ಮಾಡುವನೋ ||೧೨೩||

ಮಾಯಕಾರನನ ಕರಿಯದೇವರಿಗೆ
ಪಂಚಾಮೃತದ ಭೋಜನವೋ ||೧೨೪||

ಇಲ್ಲಿಗೆ ಹರಹರ ಇಲ್ಲಿಗೆ ಶಿವಶಿವ ಇಲ್ಲಿಗೆ
ಇದು ವಂದು ಸಂದೇಳೋ ||೧೨೫||

ಸಂದಿನ ಪದಗಳ ವಂದಿಸಿ ಹೇಳುವೇ
ತಂದಿ ಕರಿಶಿದ್ದಾನೋ

ದೇವಾರು ಬಂದಾವೊ ಬನ್ನೀರೇ

**ಬೀರೇಶ್ವರರ ಪದ**

**೨೮ನೇ ಸಂಧಿ :**

ಬಾಳ ಬಾಳ ದುಡಿದು ಬದಕ ಮಾಡಿರಿ ತಮ್ಮಾ
ಹೇಳ ಹೇಳದೆ ನೀ ಹ್ವಾದಿ ಅಂದಿನೋ

ಹರಿಯೋ ಹರಿಯೋ ನೀನು ಮನಸ್ಸಿನ ಸೊಕ್ಕಾ
ಅರಿಯೋ ಅರಿಯೋ ಅದರಿಂದಾ ನರಕಾ ಅಂದಿನೋ

ಅರಿಯೋ ಅರಿಯೋ ಅದರಿಂದಾ ಸ್ವರ್ಗ ನರಕಾ
ಮರಿ ಮರಿಯಬ್ಯಾಡ ತಿಳಿ ಅಂದಿನೋ

ಬರೀದ ಬರಿದ ನೀ ಕಾಲವ ಕಳಿದಿ ತಮ್ಮಾ
ಗುರು ಗುರುವಾ ತೋರಾವ ದಆರಿ ಅಂದಿನೋ

ನೀನು ನಂದ ನಂದ ಅಂದರ ನೆಚ್ಚಿಕಿ ಇಲ್ಲೋ ತಮ್ಮಾ
ಚೆಂದ ಚೆಂದಲ್ಲಾ ನಿನ್ನ ರೀತಿ ಅಂದಿನೋ

ಉಂಡ ಉಂಡ ಮನಿ ಎಣಸುವದ್ಯಾಕೋ ತಮ್ಮಾ
ಕೊಂಡ ಕೊಂಡ ಜಗಳಾ ತಗೆಯಾದು ಯಾಕ ಅಂದಿನೋ

ಉಡಾ ಉಡಾ ಉಬ್ಬಿದಾಂಗ ಉಬ್ಬಬ್ಯಾಡೋ
ಧಡಾ ಧಡಾ ಗ್ವಾಡಿ ಬಿದ್ದಾಂಗ ಅಂದಿನೋ

ಧಡಾ ಧಡಾ ಗೋಡಿ ಬಿದ್ದಾಂಗ ಆದಿತ ತಮ್ಮಾ
ಫಡಾ ಫಡಾ ಹಿಡಿ ಗುರುವಿನಾ ಪಾದ ಅಂದಿನೋ

**ಬೀರೇಶ್ವರರ ಮಾರ್ಗಪದ**

**ಪಲ್ಲ**

ಕೇಳಿರಪ್ಪ ನೀವು ಕೇಳಿರಿ ಸಿದ್ಧವೀರನ ಕಥಿ ಕೇಳು

ಬಗೆಬಗೆಯಾದಿಂದ ಲೀಲವ ಮಾಡ್ಯಾನು

ಜಗದಲ್ಲಿ ಭಕ್ತರ ಭಾವ ನೋಡಿದಾನು
ಮಗನಾಗಿ ಬ್ರಹ್ಮಗ ಜನಿಸಿದ್ದಾನೋ

ಅಲ್ಲಲ್ಲಿ ತಮ್ಮ ಮಾಹಿಮಾ ತೋರುತ ಬಂದಾನು
ನಿಲ್ಲದೆ ನಾಗರಾಣ ಗ್ರಾಮಿಕ ಇಳಿದವನೋ

ತಾಯಿ ಸುರಮಾದೇವಿಗಿ ಕಂದಾಗಿ ಜನಸಿದವನು
ಮಾಯಾಗಿ ಕನ್ಯಾ ಕೋಮಾಲಿ ಮಡದೀನ ತಂದವನು-ಬೀರಪ್ಪ
ದಯಾವಂತನಾಗಿ ಭಕ್ತರನ ಸಲುವಿದಾನೋ

ಕರದಾನೋ ಬೀರಪ್ಪ ತರುಳ ಮಾಲಿಂಗನಾ
ಇರಬೇಕೋ ಇಂಥಾ ಶಿಷ್ಯ ಅಂದಿದಾನೋ

ಅಕ್ಕ ಮಾಯವ್ವಗ ತಮ್ಮಾಗಿ ಬಂದವನು
ದಿಕ್ಕು ದಿಕ್ಕೆಲ್ಲ ತನ್ನ ಮಹಿಮಾ ತೋರಿದಾನು
ಇಕ್ಕ ತ್ವಾಣ್ಣೂರಾಗ ಸಿದ್ಧ ಆದವನೋ

**೧೯ನೇ ಸಂಧಿ :**

ರಾಗ ಇದ್ದರ ಹಾಡು ಜ್ಞಾನ ಇದ್ದರ ಪದಾ
ಸ್ವಾಮಿ ಇದ್ದರ ಭಲಾ ಚಂದ ಅಂದಿನೋ

ಒಡಿಯಾ ಇದ್ದರ ಭಂಡಿ ಜಡಿಯಾ ಇದ್ದರ ಜೋಗಿ
ಹೆಡಿಯಾ ಇದ್ದರ ಸರ್ಪ ಚಂದ ಅಂದಿನೋ

ಒಕ್ಕಲಿದ್ದರ ಊರು ಮಕ್ಕಳಿದ್ದರ ಮನೆ
ಮುಕ್ಕಣ್ಣಾ ಇದ್ದರ ಲೋಕ ಚಂದ ಅಂದಿನೋ

ಹಾಲು ಇದ್ದರ ಹಬ್ಬ ತಾಯಿ ಇದ್ದರ ಮಕ್ಕಳು
ಪೂಜಾರಿ ಇದ್ದರ ಸ್ವಾಮಿಗೆ ಚಂದ ಅಂದಿನೋ

ಗಂಗಿ ಇದ್ದರ ಭಾವಿ ಲಿಂಗ ಇದ್ದರ ಗುಡಿ
ಜಂಗಮ ಇದ್ದರ ಭೂ ಚಂದ ಅಂದಿನೋ
ಜ್ಯೋತಿ ಇದ್ದರ ಮನಿ ರೀತಿ ಇದ್ದರ ನಾರಿ
ಈಶ್ವರ ಇದ್ದರ ಕೈಲಾಸಕ ಚಂದ ಅಂದಿನೋ

**ಮಾರ್ಗಪದ**

ವಿಭಾಗ ಗೋತ್ರದಾಗ ಮಂದಾರ ಮುನಿಶ್ವರಗ
ಸಂಬನ ವರುವಾಗಿತ್ತು ಕೇಳರಿ ಅಂದಿನೋ

ಕೈಲಾಸ ಶಂಖರನ ವರದಿಂದಾ ಮಂದಾರಗ
ಬಿಲ್ಲಸೂರ ಎಂಬು ಪುತ್ರಾ ಜನಿಸಿದ್ದಾನೋ

ಬಿಲ್ಲಸೂರ ಆಗ ಬಲ್ಲಿದನಾಗಿ ತಾನು ಎಲ್ಲಾ
ಲೋಕವ ತಾನು ಆಳಿನ ಅಂದಾನೋ

ಅನ್ನ ನೀರ ಇಲ್ಲದೆ ಗಿರಿಜ ಪಾರ್ವತಿ ಮಧ್ಯಾನವ
ಮಾಡುತ ತಪಾ ಮಾಡಿದ್ದಾನೋ

ಉಗ್ರ ತಪವ ಮಾಡುತ ಪಾರ್ವತಾ ತಿಳಿದಾಗ
ಶೀಘ್ರದಿಂದ ಅಲ್ಲಿಗೆ ಬಂದಿದಾಳೋ

ಕಂದ ಏಳೋ ನೀನು ಇಂದು ವರವಾ ಬೇಡಪ್ಪ
ಅಂದು ಬಿಲ್ಲಸೂರನ ಎಬ್ಬಿಸಿದ್ದಾಳೋ

ತಾಯಿಯ ಶಬ್ದಾ ಕೇಳಿ ಕಣ್ಣು ತೆರೆದು ನೋಡ್ಯಾನು
ಕಾಯಬೇಕ ತಾಯಿ ಅಂತಾ ನುಡಿದಿದ್ದಾನೋ

ಆಗ ಬಿಲ್ಲಾಸೂರ ದೇವಿಗಿ ಹೇಳತಾನು ಜಗದೊಳಗಿನ
ಜನರಿಂದಾ ಮರಣ ಬ್ಯಾಡಂದಾನೋ

ನರರಿಂದಾ ಮರಣ ಬ್ಯಾಡ ಸುರರಿಂದಾ ಮರಣ ಬ್ಯಾಡ
ರಾಕ್ಷಸರಿಂದಾ ಮರಣ ಆಗದಾಂಗ ಮಾಡಂದಾನೋ

ಪರಮೇಶ್ವರನ ಅಂಶ ಧರಿಗೆ ಬಂದಮ್ಯಾಲ ಮರಣಾ
ಅವನಿಂದ ನನಗ ಬೇಕೆಂದನೋ

ಬಿಲ್ಲಾ ಸೂರ ಬೇಡಿದ ವರಗಳ ಕೊಟ್ಟಾಳೋ ದೇವಿ
ಕೈಲಾಸಕ ತಾನು ಹೋಗಿದ್ದಾಳೋ

ದೇವಿಯ ವರದಿಂದಾ ಬಿಲ್ಲಾ ಸೂರ ತಾನು
ರವಿಚಂದ್ರ ಇದ್ರರನ್ನೆಲ್ಲಾ ಗೆದ್ದಿದಾನೊ

ಸೂರ್ಯ ಚಂದ್ರ ವಾಯುವ ವರುಣಾ
ಕುಬೇರನ ಯಮದೇವರನ ಸಹಿತಾ ಗೆದ್ದಿದಾನೋ

ದೇವ ದೇವತ್ಯಾರನು ಯಕ್ಷ ಗಂಧರ್ವರನ
ನವನಾರಾಯಣರನ ಸುದ್ದಾ ಗೆದ್ದಿದಾನೋ

ಹರಿಹರಾ ದೇವರಲ್ಲಿ ಬಿಲ್ಲಾಸೂರಿ ಆಗ
ಗುರುಹಿರಿಯರೊಳಗ ಭಕ್ತಿಯಾ ಕೆಡಿಸಿದ್ದಾನೋ

**೩೦ನೇ ಸಂಧಿ :**

ಸುಮ್ಮ ಯಾತಕ ಕುಂತಿಯೋ ಒಣಾ ಚಿಂತಿ ಬಿಡೋ
ತಮ್ಮಾ ಏನಂತಿ ಮುತ್ತಿನ ಗುಂತಿ ಅಂದಿನೋ

ಹೆಣ್ಣು ಹೊನ್ನು ಮಣ್ಣು ಇವು ಮೂರು ಹುಣ್ಣಪ್ಪಾ
ಕಣ್ಣು ತೆರೆದು ಮಾಯಾ ನೋಡಬ್ಯಾಡ ಅಂದಿನೋ

ಆರು ಮಂದಿನ ತುಳಿದು ಮೈ ತೊಳಕೋ ನೀ
ತಿಳಿದು ಪಾರಾಗಿ ಹೋಗುದು ಬಿರಿ ಅಂದಿನೋ

ಹಸರು ಹಳದಿ ಬಿಳಿದು ಬಣ್ಣವು ನೋಡು ತಮ್ಮಾ
ಒಂದಕ್ಕೊಂದು ತಳಕ ಬಿದ್ದಾವ ತಿಳಿ ಅಂದಿನೋ

ಝುಗಾ ಝುಗಾ ಹೊಳೆಯುವಂಥಾ ಜಗದ್ಗುರು
ರೇವಣಸಿದ್ಧನನಿಂದ ಬಿಂದುನ್ಯಾಗ ತುಂಬಿ ನೊಂಡಂದಿನೋ

ಬೆಳ್ಳನ ಬೆಳದಿಂಗಳ ನೋಡಿ ನೋಡಿ ತಿಳಿನೋಡಿ
ಹುಡಕ್ಯಾಡಿ ಮನಶಾಂತ ಮಾಡಂದಿನೋ

ಸೂರ್ಯ ಚಂದ್ರ ಇಬ್ಬರು ಜೋಡಿ ಬರಶಾರಾ
ಬಂದಾರ ಕೂಡಿ ರಾಜಮಾರ್ಗ ಹಾಡುನಡಿಪ್ಪ ಕೂಡಿ ಅಂದಿನೋ

ಝುಳಾ ಝುಳಾ ಹೊಳಿಯುವ ರತ್ನದ ಹರಳಿನಾಂಗ
ಗುರುವಿನ್ನಾ ನೋಡಿಕೊಂಡ ಧ್ಯಾನ ಮಾಡಂದಿನೋ

**ಬೀರೇದೇವರ ಮಾರ್ಗಪದ**

ವೇದ ಪುರಾಣಗಳ ಜಪಾ ತಪಾ ನೇಮಗಳು
ಹೋಗುವಾಂಗ ಬಿಲ್ಲಾಸೂರ ಮಾಡಿದ್ದಾನೋ

ಧರ್ಮದ ಹೆಸರೆಲ್ಲಾ ಉಳಿಯದಾಂಗ ಬಿಲ್ಲಾಸೂರ
ಕರ್ಮಕ ಕೈಹಾಕಿ ನಿಂತಿದ್ದಾನೋ

ಬಿಲ್ಲಾಸೂರನ ಎದುರ ಯಾರೂ ಇಲ್ಲದಾಂಗ ಬಿಲ್ಲಾಸೂರ
ಎಲ್ಲಾ ಲೋಕವ ನಡಗುತ ನಿಂತಿದ್ದಾವೋ

ಇಂದ್ರ ಅಗ್ನಿ ಯಮ ಹರಿಬ್ರಹ್ಮರೆಲ್ಲಾ ಕೂಡಿ
ಚಂದ್ರಶೇಖರನ ಮುಂದ ಹೋಗಿದ್ದಾರೋ

ಬಿಲ್ಲಾಸೂರನ ಹಾವಳಿ ಶಂಖರಗ ಹೇಳತಾರ
ಎಲ್ಲಾ ದೇವತ್ಯಾರು ಶರಣ ಮಾಡಿದ್ದಾರೋ

ಕೇಳಿ ಶಂಕರಾ ತಾನು ಸಿಟ್ಟಗೇರಿ ಆವಾಗ
ಹೊಳೆಯುವ ಉಗ್ರಗಣ್ಣಾ ತೆರೆದಿದ್ದಾನೋ

ಉಗ್ರಗಣ್ಣಿನ ರೂಪದೊಳಗ ಶಂಖರ ತಾನು
ವೀರಭದ್ರನ ಹುಟ್ಟಶಾನು ಕೇಳಾರಿ ಅಂದಿನೋ

ವೀರಭದ್ರದೇವಾ ಶಂಖರಗ ಶರಣಾ ಮಾಡಿ
ಭರದಿಂದಾ ಅಪ್ಪಣೆ ಅಂದಿದಾನೋ

ಕಂದ ವೀರಭದ್ರಾ ತಾನು ತನ್ನ ಸತಿಯಳಿಗೆ
ಹೇಳತಾನು ಕವಳೇಶ್ವರಿಯಾಗಿ ಜನಿಸ ಅಂದಾನೋ

ಪತಿಯಾ ವಚನ ಕೇಳಿ ಭದ್ರಕಾಳಿದೇವಿ
ಕವಳೇಶ್ವರಿ ದೇವಿಯಾಗಿ ಜನಿಸಿದ್ದಾಳೋ

ಸತಿಪತಿಯಾಗಿ ಬಿಲ್ಲಾ ಸೂರನ ಹೊಡಿಯುದಕ
ಅತಿಕೋಪದ ರೂಪದವರಾಗಿದ್ದರೋ

ಭೂಲೋಕದಾಗ ಬಿಲ್ಲಾ ಸೂರನ ಹುಡಕಿ
ಅವರು ಬಲ್ಲಿದ ದೈತ್ಯರನ ಮುಂದೆ ಕರೆದಿದ್ದಾರೋ

ಸಿಟ್ಟಗೇರಿ ವೀರಭದ್ರ ಅಂತಾನು ಬಿಲ್ಲಾಸೂರಗ
ಬಿಟ್ಟ ಬಿಡೋ ನಿನ್ನ ಎಲ್ಲಾ ಬಿಂಕವನೋ

ಹರನ ಕುಮಾರ ನಾನು ವೀರಭದ್ರಾ ತಿಳಿ ನೀನು
ಧರಿಯೊಳಗ ಯಾಕ ನಿನ್ನ ಗರ್ವ ಅಂದಿನೋ

ಕೇಳಿ ಸಿಟ್ಟಿಗೆ ಬಂದು ಬಿಲ್ಲಾ ಸೂರ ಆಗತಾನು
ಕಾಳಿಕಾದೇವಿ ಧ್ಯಾನಾ ಮಾಡಿದ್ದಾನೋ

**೩೦ನೇ ಸಂಧಿ :**

ಸ್ವತಂತ್ರ ಯಾವುದೂ ಇಲ್ಲ ನೋಡೋ ತಮ್ಮಾ
ಗುರುವಿನ ಹೊರತು ಮತ್ಯಾವದು ಇಲ್ಲ ಅಂದಿನೋ

ಆಕಾರ ಉಕಾರ ಮಕಾರ ಸಾಕಾರ ಅವು ಇವು ಎಲ್ಲಾ
ತಿಳಿದ ನಡಿ ಅಂದಿನೋ

ಜನನ ಮರಣ ಅನುನಯದಿಂದಾ ತಿಳಿ ತಮ್ಮಾ
ಅನುಭವದೊಳಗ ಮನಾನಿಲ್ಲ ಅಂದಿನೋ

ಆರು ಲಿಂಗಕ್ಕೆ ಆರುಭಕ್ತಿ ಆರಕ್ಷರಾ ಮಂತ್ರದಿಂದ
ಆರು ಪ್ರಸಾದ ತಿಳಿರಿ ಅಂದಿನೋ

ಆರಕ್ಕ ಮೂರಕ್ಕ ಮೀರಿದ ಲಿಂಗವು ತಮ್ಮಾ
ತೋರಿಕೆ ಆಗಿ ಕಾಣದು ಅಂದಿನೋ

ಹಮ್ಮಿನಿಂದಾ ಹೋಗುವ ದಾರಿಯಲ್ಲೋ ತಮ್ಮಾ
ಇದು ಬ್ರಹ್ಮ ವಿಷ್ಣು ರುದ್ರರಿಗೆ ಸಾಧ್ಯ ಇಲ್ಲಂದಿನೋ

ಸುಮ್ಮನೆ ಶಾಸ್ತ್ರ ಓದಿದರ ಫಲವಿಲ್ಲ ಬ್ರಹ್ಮರೂಪ
ರೇವಣಸಿದ್ಧ ಬಲಾ ಅಂದಿನೋ

ಧರಿಯೊಳಗ ಕುಮಟಗಿ ಗುರುರೇವಣಸಿದ್ಧನ
ಚರಣಕಮಲ ಎನ್ನ ಶಿರಕ ಅಂದಿನೋ

**ಮಾರ್ಗಪದ**

ಪಾರ್ವತಿಯ ವರದಿಂದಾ ವೀರ ಬಿಲ್ಲಾಸೂರಾ
ಗರವದಿಂದಾ ವೀಭದ್ರಗಾ ಅಂದಿದಾನೋ

ಬೂದಿ ಬಡಕನ ಮಾತಿಗೆ ನನ್ನ ಹೊಡಿಲಾಕ ಬಂದಿದಿಯಾ
ಹೋದಿಯೋ ಯಮಲೋಕಕ ಅಂದಿದಾನೋ

ಸಿಟ್ಟಗೇರಿ ಕದನಾ ಮಾಡ್ಯಾರು ಇಬ್ಬರೂ ಆಗ
ಸೃಷ್ಟಿ ಒಳಗ ಕೌತುಕ ಮಾಡಿದ್ದಾರೋ

ಆಗ ವೀರಭದ್ರ ಬಿಲ್ಲಾ ಸೂರನ ಕೊಂದು ಬೇಗ
ಹೋಗಿ ಶಂಖರಗ ಶರಣ ಮಾಡಿದ್ದಾನೋ

ಆನಂದಾಗಿ ಶಂಖರಾ ತನ್ನ ಕಂದಗ ಅಂತಾನು
ನಿನ್ನ ಕೀರ್ತಿ ಜಗದಾಗ ಉಳದೀತ ಹೋಗ ಅಂದಾನೋ

ಬಿಲ್ಲಾಸೂರ ದೈತ್ಯಗ ಕೊಂದ ಕಾರಣಾ ನೀನು
ಭೂಲೋಕಕ ಹೋಗಿ ಜನಿಸಬೇಕ ಅಂದಾನೋ

ಭೂಲೋಕದೊಳಗ ನೀನು ವೀರದೇವರಾಗಿ
ಹಾಲುಮತದ ದೇವನಾಗಿ ಮೆರಿ ಅಂದಾನೋ

ನಿನ್ನ ಸತಿ ಕವಳೇಶ್ವರಿದೇವಿ ತಾನು ವಿಷ್ಣು
ದೇವರಿಗಿ ಮಗಳಾಗಿ ಜನಿಸ ಅಂದಾನೋ

**೩೨ನೇ ಸಂಧಿ :**

ಅನಾದಿಸಿದ್ಧನ ಧ್ಯಾನವ ಮಾಡೋ ತಮ್ಮಾ
ನಾನಾ ಸಂಕಟ ದೂರ ಹೋದಾವ ಅಂದಿನೋ

ಕಂತುಪಿತನ ಧ್ಯಾನಾ ಸಂತೋಷಾಗಿ ಮಾಡೋ
ಭ್ರಾಂತಿ ದೂರ ಆಗುದು ತಿಳಿರಿ ಅಂದಿನೋ

ಆಶಕ ಬಿದ್ದು ಬಹು ಪಾಶೇಕ ಬೀಳಬ್ಯಾಡಾ
ಘಾಸಿ ಆಗುದು ಮಾಯಾ ಹೇಸಿ ಅಂದಿನೋ

ಅರವು ಹಿಡಿದು ಸತ್ಯ ಗುರುವಿನಾ ಮರಿಯಬ್ಯಾಡೋ
ಮರುವಿಗೆ ಬಿದ್ದು ಕೆಡಬ್ಯಾಡೋ ತಿಳಿ ಅಂದಿನೋ

ತಂದೆ ತಾಯಿ ಬಂಧುಬಳಗಕ್ಕೆಲ್ಲಾ ನೋಡ ತಮ್ಮಾ
ಹಿಂದಂದಾ ಬರುವವರು ಯಾರಿಲ್ಲ ತಿಳಿ ಅಂದಿನೋ

ಮಂದಿ ನೋಡಲೆಂದು ಬಹು ಪರಿಯಾದಿಂದ
ಚೆಂದಾಗಿ ಹೆಣಾ ಮೆರಿಸಾವರ ತಿಳಿ ಅಂದಿನೋ

ಅಣ್ಣ ತಮ್ಮ ಅಕ್ಕ ತಂಗಿಯರನ ನೋಡಪ್ಪಾ ತಮ್ಮಾ
ನೀನು ಕಣ್ಣೀರು ಸುಮ್ಮನೆ ಸುರಶಾರು ತಿಳಿ ಅಂದಾನೋ

ಮಣ್ಣ ಹಾಕಿ ಮನಿಗಿ ಬಂದಮ್ಯಾಲ ಕೇಳೋ ತಮ್ಮಾ
ಉಣ್ಣನು ಬರ್‍ರೆಂಬುರು ತಿಳಿ ಅಂದಿನೋ

ಹೆಣ್ಣು ಮಕ್ಕಳು ಅಳುದಿಲ್ಲ ಹಣಕ್ಕ ಅಳತಾರೋ
ತಮ್ಮಾ ಹಣಾ ಸಂಗಾಟ ಬರುದಿಲ್ಲ ತಿಳಿ ಅಂದಿನೋ

ನಾರಾಯಣನ ಮಗಳಾಗಿ ಕನ್ಯಾ ಕೋಮಲಿಯಾಗಿ
ಬೀರದೇವರಿಗಿ ಮಡದಿ ಆಗಿ ಮೆರಿ ಅಂದಿನೋ

ತಂದಿಗಿ ಶರಣಮಾಡಿ ವೀರಭದ್ರ ಕೇಳತಾನು
ಅಂದಾನೋ ಹಾಲುಮತದವರ್‍ಯಾರ ಅಂದಿನೋ

ಹರಕು ಮಾರಾ ಬೀರದೇವರಾ ಹರಮಹಾದೇವಗ
ಕೇಳತಾನು ಧರಿಯೊಳಗ ಹಾಲುಮತಾ ಹ್ಯಾಂಗ

ಗಿರಿಜಾರಮಣಾ ಕರಿಗೊರಳ ಶಂಖರ ತಾನು
ಬೀರದೇವರ ಮುಂದೆ ಆಗ ಹೇಳಿದ್ದಾನೋ

ನಿರಾಳವಾಗಿ ಇರುವಂತ ಕಾಲದೊಳಗ ಹರನು
ಗಿರಿಜಾ ಕೂಡಿ ಹೊಂಟಿದಾರೋ

ಮಧು ಹರ ಪಾರ್ವತಾ ಕೂಡಿ ನೋಡುತ
ಬರಲು ಅದರೊಳಗ ಒಂದು ಜಗಲಿ ಕಂಡಿದಾಳೊ

ಅದರೊಳಗೊಂದು ಜಗುಲಿ ಮುದದಿಂದಾ ಕಾಣುತಾ
ಸದವಿನಯಾದಿಂದಾ ಬಂದಿದಾರೋ

ಹರಬಂದು ಜಗಲಿಮ್ಯಾಗ ಮೂರುತನಾದನೋ
ಎರಗಿದನೋ ಬಂದ ಜಾಂಬಋಷಿನೋ

ಗುರುವೆ ಕರುಣಿಸು ಎಂದು ಎರಡು ಪಾದಕ ಬಿದ್ದಾನು
ತೋರಿದಾವೋ ಆಗ ಪಾರ್ವತಾ ಮೊಲಿಗಳನೋ

ಗಿರಿಜೆಯ ಮೊಲಿಹಾಲು ಧರಿಯೊಳಗೆ ಸುರಿಯಲು
ವ್ಯರ್ಥ ಆಗಲಾರದಂಗ ಮಾಡಿದ್ದಾಳೋ

ಎರಡು ಕೈಒಳಗ ಎರಡು ಮೊಲಿಯ ಹಾಲು
ಕರದಲ್ಲಿ ಪಿಡಿದಾಳೋ ಪಾರ್ವತಾನೋ

ಬಲದ ಮೊಲೆಯಾ ಹಾಲು ಕಲಿಸಿ ಮುದ್ದಿಯ ಮಾಡಿ
ಸತಿ ಗಂಡ ರೂಪವ ಮಾಡಿದ್ದಾಳೋ

ಒಲುವಿಂದಾ ಎಡಮೊಲೆಯ ಹಾಲು ಮುದ್ದೆಯ
ಮಾಡಿ ಲಲನೆಯ ರೂಪ ತಾನು ಮಾಡಿದ್ದಾಳೋ

ಅಂದು ಪಾರ್ವತಾ ಇಂದುಧರನ ಮುಂದೆ
ತಂದು ಆ ಕ್ಷಣಕಾ ತೋರಿಸಿದ್ದಾಳೋ

ಚಂದ್ರಶೇಖರನು ದಯದಿಂದಾ ಪ್ರಾಣ ಹಾಕಿ
ಮುಂದ ಇವರು ಆದಿಗೆ ಬೇಕಂದಾನೋ

ಬೇಕಾಗಿ ಮುದ್ದುಗೊಂಡ ನಾಮವು ಇಟ್ಟಾನು
ಆಕೆಗೆ ಮುದ್ದವ್ವಾ ಅಂತ ಕಂದಿದ್ದಾರೊ

ಸತಿಪತಿಗಳ ಮಾಡಿ ಹಿತದಿಂದ ಇರುವಾಗ
ಸುತರನ್ನ ಅವರಿಗೆ ಕೊಟ್ಟಿದ್ದಾನೋ

ಮೊಲಿಯ ಹಾಲಿನಿಂದಾ ಹುಟ್ಟಿ ಬಂದಾರಿವರು
ಹಾಲುಮತದವರಂತ ಕರೆದಿದ್ದಾರೋ

ಕುರಿಹಿಂಡ ಮರಿಹಿಂಡ ಕಾಯುತ ಬಂದಾರಿವರು
ಹಾಲುಮತದವರಂತ ಕರೆದಿದ್ದಾರೋ

ಕುರಿಹಿಂಡ ಮರಿಹಿಂಡ ಕಾಯುತ ಬಂದಾರಿವರು
ಕುರಬರ ಅಂತಾ ಇವರಿಗೆ ಅಂದಿದಾರೋ

ಹಿಂದಕ್ಕ ಬ್ರಹ್ಮನ ಸತಿಯಾದ ಸರಸ್ವತಿದೇವಿ
ಕಂದನ ಸಲುವಾಗಿ ತಪಾ ಮಾಡಿದ್ದಾಳೋ

ಸರಸ್ವತಿ ತಪಕ ಮೆಚ್ಚಿ ಗಿರಿಜಾರಮಣ ಶಂಖರಾ
ವರವಾ ಕೊಟ್ಟು ತಾನು ಹೇಳಿದ್ದಾನೋ

ನಿನ್ನ ಉದರದಲ್ಲಿ ನನ್ನ ಅಂಶರೂಪ ಹುಟ್ಟುದು
ಚೆನ್ನಾಗಿ ಜೋಪಾನ ಮಾಡಂದಾನೋ

**೩೩ನೇ ಸಂಧಿ :**

ಕ್ಷಣದಿ ಸಂಸಾರಕ್ಕಾಗಿ ಜಾನ ನೀನು ಕೆಡಬ್ಯಾಡಾ
ಅಣುಮಾತ್ರ ಸುಖಾ ಇಲ್ಲಿ ತಿಳಿರಿ ಅಂದಿದೋ

ದುಡಿದು ದುಡಿದು ಹಣ ಬಾಳ ಗಳಿಸಿ ತಂದಿದಿ ತಮ್ಮಾ
ಮಡದಿ ಮಕ್ಕಳಿಗೆ ಕೊಟ್ಟಿರ ಏನಂದಿನೋ

ಮಣಿದು ಮಾತಾಡಿ ನಿನ್ನ ವರ್ಣಿಸಿ ಉಂಬಾವರೋ
ತಾರದಿದ್ದರ ಬಾರದ ಹಾದಿಗೆ ಹೋಗ ಅನ್ನಾವರೋ

ನಿಶ್ಚಯ ಆತ್ಮದೊಳಗ ಇಚ್ಚಿಸಿ ತಿಳಿಯೋ ತಮ್ಮಾ
ತುಚ್ಛ ಭಾವದಿಂದಾ ಸುಖಾ ಇಲ್ಲ ಅಂದಿನೋ

ಹುಚ್ಚಾ ನೀನು ಎಚ್ಚರ ಇಲ್ಲದೆ ಗಚ್ಚಿನ ಮನಿಗೆ ಮೆಚ್ಚ ಬ್ಯಾಡೋ
ನುಚ್ಚ ಉಂಡವರ ಇಚ್ಛಾ ನುಡಿ ಬ್ಯಾಡಂದಿನೋ

ಶ್ರೇಷ್ಟವಧ ಮನುಜಾ ನೀನು ಇಷ್ಟ ಯಾಕ ಕೆಡತಿಯಪ್ಪ
ಅಷ್ಟ ಐಶ್ವರ್ಯ ಸುಖಾ ನಿವೇನಂದಿನೋ

ದಿಟ್ಟಾ ನಿನ್ನ ಉಟ್ಟ ಬಟ್ಟೆ ಕಳೆದು ಬಿಟ್ಟ ಬಯಲು ಮಾಡಿ
ಮೆಟ್ಟಿ ಮಣ್ಣ ಕೊಟ್ಟ ಬರತಾರು ಘಟ್ಟಿ ಅಂದಿನೋ

ಧರಿಯೊಳಗ ಮೆರಿಯುವ ಈಶ ರೇವಣಸಿದ್ಧಗ
ಹರುಷಾಗಿ ಆತನ ಪಾದಕ ಹೊಂದ ಅಂದಿನೋ

**ಬೀರೇಶ್ವರ ಮಾರ್ಗಪದ**

ಹರನ ವಚನದಾಂಗ ಬ್ರಹ್ಮನರಾಣಿ
ಗರ್ಭವ ಧರಿಸಿ ತಾನು ಇರುತ್ತಿದ್ದಳೋ

ನವಮಾಸ ಬ್ಯಾನಿಗಳು ತವಕದಿ ಮಾಡ್ಯಾವು
ಶಿವ ಶಿವ ಅಂತಾ ಬೀರದೇವರ ಜನಿಸಿದ್ದಾನೋ

ನಗುಮೊಗಾ ಹಸನಮೊಗಾ ಚಲುವಮಗಾ ಬೀರಪ್ಪ
ಬೇಗ ಆಗ ಸುರಮಾದೇವಿ ಕಂಡಿದ್ದಾಳೋ

ಬಿರೇಶ ಜನಿಸುವ ಕಾಲವು ಹರುಷಪ್ಪಾ
ದೇವ ದೇವತ್ಯಾರು ಹೂ ಮಳಿ ಸುರಿಸಿದ್ದಾರೋ

ಅಂಥ ವ್ಯಾಖ್ಯಾದಾಗ ಸುರಮಾದೇವಿ ತಾನು
ಚಿಂತಿ ಇಲ್ಲದಾ ಕಂದನ ಜೋಪಾನ ಮಾಡಿದ್ದಾಳೋ

ಇಷ್ಟ ಆಗುದರೊಳಗ ಸೃಷ್ಟಿ ಒಳಗ ಶಬ್ದಾ
ಅರಿಷ್ಟ ವಚನಾ ಸುರಮಾದೇವಿ ಕೇಳಿದ್ದಾಳೋ

ನಿನ್ನ ಕಂದ ನಿನ್ನಲ್ಲಿ ಜೋಪಾನ ಆಗೂದಿಲ್ಲ ತಾಯಿ
ನಿನ್ನ ಜೀವಕ ಕಷ್ಟ ಅಂಥ ಶಬ್ದವನೋ

ಕಾರಣ ಈ ಕೂಸಿನ ತೊಟ್ಟಿಲದಾಗ ಹಾಕಿ ಬೇಗ
ಆರ್ಯಾಣ ಪಾಲ ಮಾಡದಂಥ ಶಬ್ದವನೋ

**೩೪ನೇ ಸಂಧಿ :**

ಸಿಸ್ತ ದೈವ ಎಲ್ಲಾ ಮಸ್ತ ಕೂಡಿರಿ ಅಪ್ಪಾ
ಇಂದ್ರ ಸಭಾಕಿಂತ ಕಡಕ ಅಂದಿನೋ

ರೇವಣಸಿದ್ಧನ ದಯಾ ಕರುಣಾದಿಂದ ಬಂದೀವರಿ
ಸೇವಾ ಮಾಡುದಕ ತಿಳಿರಿ ಅಂದಿನೋ

ಬೀರದೇವರ ಕರುಣ ಹಸ್ತ ನಮ್ಮ ಮ್ಯಾಲ ಅಪ್ಪಾ
ಇರುವದು ಕಡಿತಾನಕ ತಿಳಿರಿ ಅಂದಿನೋ

ಗುರುವಿನ ದಯಾದಿಂದ ಡೊಳ್ಳಿನ ಪದಗಳಾ
ನಾವು ನೀವು ಬೆಳತನಕಾ ಹಾಡೂನ ಅಂದಿನೋ

ಅಲ್ಲದೊಂದು ಇಲ್ಲದೊಂದು ಪದಗಳ ತಂದು
ನೀವು ಮಾಡತೀರಿ ದಿಮಾಕ ಕೇಳರಿ ಅಂದಿನೋ

ಗುರುವಿನ ಸೇವಾ ನೀವು ಕಡಿಗೆ ಮಾಡಿಲ್ಲೊ ತಮ್ಮಾ
ಪಕ್ಕಾ ಗುರು ನಿಮಗ ಹ್ಯಾಂಗ ಸಿಗುದು ಅಂದಿನೋ

ಗುರುವಿನ ವಿದ್ಯಾ ನಿಮಗ ಸಿಕಿಲ್ಲಂದಮ್ಯಾಗ
ಮಜಲ್ಯಾಂಗ ಗೆದುತಿದಿ ಕಡಕ ಅಂದಿನೋ

ಗುರು ಇಲ್ಲ ಅಂತಾ ಕೂತುಕೊಂಡು ಅಳುವಾಗ
ತಮ್ಮಾ ನಿನಗ ಮುರಗುಂಡಿ ಮುದಕಗ ಹ್ಯಾಂಗ ತಿಳಿಯದೊ ಅಂದಿನೋ

ಹಂತಿ ಪದಾ ಹಾಡುದು ನಿಮ್ಮ ಮುದುಕಗ ತಮ್ಮಾ
ಇಂಥ ಡೊಳ್ಳಿನ ಪದಾ ಹ್ಯಾಂಗ ಅಂದಿನೋ

## ಪುರಾಣ ಸ್ತುತಿ

**ಶನಿದೇವ**

ಗುರುವೆ ನಿನ್ನನು ಮೊದಲಿಗೆ ನೆನೆಯುವೆ
ಸಭಾದಾಗ ಕಾಯೊ ಎನ ಮಾನಾ
ನಾಗಪುರದ ಶರಣಬಸವನ
ಸ್ತುತಿಸುತ ಪದವನು ಹೇಳುವೆನಾ

ನಿತ್ಯನೇಮದಿ ಸತ್ಯತನದಿಂದ
ಪೃಥ್ವಿ ತಿರುಗುತಾ ಬರುತಿಹನಾ
ಕತ್ತಲು ಕಳೆಯುತಾ ಬೆಳಕನು ಬೀರುತಾ
ಮೂಡಣದೊಳು ಮೂಡುವನಾ

ಮೂಡಣದೊಳು ಮೂಡಿ ಸೂರ್ಯದೇವನು
ಪಡುವಣ ಪಾವಟಿ ಇಳಿಯುವನಾ
ಪಡುವಣ ಪಾವಟಿ ಇಳಿಯುವನಾ
ಜಗತ್ತಿನ ಜನಕ ಅನಿಸಿದನಾ

ಸರ್ವರಿಗೆ ಸರಿಯಾಗಿ ನಡೆಯುವ ಸೂರ್ಯಗ
ಹೆಳವ ಮಗ ಒಬ್ಬ ಜನಸಿದಾ
ಸರ್ವ ಆಭರಣ ಕಿರೀಟ ಕುಂಡಲ
ನೀಲಿ ವರ್ಣದ ಶನಿದೇವನಾ

ಕಪೋತಮಥನ ರಥಕ ಹೂಡಿಕೊಂಡು
ಪೃಥ್ವಿಯ ತುಂಬೆಲ್ಲಾ ತಿರುಗುವನಾ
ದೃಷ್ಟಿಗೆ ಬಿದ್ದಂತಾ ಜೀವರಾಶಿಗಳ
ಜರ್ಜರ ಮಾಡಿ ಬಿಡುತಿಹನಾ

ತೆತ್ತಿಸಕೋಟಿ ದೇವಾನುದೇವತೇರ
ತತ್ತರಗೊಳಿಸಿ ಅಳಸಿದನಾ
ಈರೇಳು ಲೋಕದಾಗ ತಿರುಗುತ ಶನಿದೇವ
ಭೂಮಿಗೆ ಬಂದು ಇಳಿದಿಹನಾ

ಚಿಕ್ಕಂದದಲಿ ತಿರುಗುತ ಶನಿದೇವ
ಚಪ್ಪನ್ನ ದೇಶ ನೋಡಿದನಾ
ಮುಸ್ಕರವಿಲ್ಲದೆ ಕಿಷ್ಕಿಂದೆ ಹತ್ತಿರ
ಆಕಸ್ಮಾತ ಗವಿಯೊಳು ಕಂಡಾನಾ

ಆ ಗವಿಯೊಳು ಮಾರುತಿರಾಯನು
ರಾಮಭಜನೆಯ ನಡೆಸಿದನಾ
ಭಜನೆಯ ಶಬ್ದ ಕೇಳಿ ಶನಿದೇವ
ಗವಿಬಾಗಿಲಿಗೆ ಬಂದಾನಾ

ಭಜನೆಯ ಮಾಡುತ ಹನುಮನ ಕಂಡು
ತನ್ನಯ ದೃಷ್ಟಿಯ ಬೀರಿದನಾ
ಮೊದಲಿಗೆ ಗೊತ್ತಾಗಿ ಮಾರುತಿರಾಯನು
ಬಾಲಕ ಅಪ್ಪಣೆ ಮಾಡಿಹನಾ

ಬಾಲದಂಡವು ಬೆಳೆಯುತಾ ಬೆಳೆಯುತಾ
ಸುತ್ತ ಹಾಕಿತೊ ಶನಿದೇವನಾ
ಗರಗರ ತಿರುಗುವ ಶನಿದೇವನ
ನೋಡಿ ಮಾರುತಿ ನಗುತ್ತಿದನಾ

ದೇವಾದಿದೇವ ಮಹಾನುಭಾವ
ನೀನಾರೆದು ಕೇಳಿದನಾ
ಸೂರ್ಯನ ಸುತನಾದ ಶನಿದೇವ ನಾನು
ನಿನ್ನಯ ಕಾಡಲು ಬಂದಿಹೆನಾ

ಬಹಳ ಕಾಡುವದಿಲ್ಲ ಗಳಿಗೀ ಕಾಡುವೆನು
ನಿನ್ನಯ ಅನುಮತಿ ಕೇಳುವೆನಾ
ನನ್ನಯ ಕಾಡುವ ಮನಸಿದ್ರ ದೇವಾ
ನಾಳಿಗೆ ಕಾಡೆಂದು ಹೇಳಿದನಾ

ನಾಳಿಗೆ ಅನ್ನುದಕ್ಕ ಪ್ರಮಾಣವೇನೆಂದು
ಹನುಮನ ಶನಿದೇವ ಕೇಳಿದನಾ
ನಿನ್ನನು ಕಾಡಲು ನಾಳಿಗೆ ಬರುವೆನಂತ
ಗೋಡೆಯ ಮೇಲೆ ಬರಿಯೆಂದನಾ

ಹನುಮನ ನುಡಿ ಕೇಳಿ ಶನಿಮಹಾರಾಯನು
ಅದರಂತ ಗ್ವಾಡಿಮ್ಯಾಲ ಬರಿದಾನಾ

ಇಷ್ಟ ಹೇಳಿ ತಾ ಅಬ್ಬರದಿಂದಲಿ ತಾನು
ಮನದೊಳು ಉಬ್ಬಿ ನಡೆದಾನಾ

ಅದೇ ವ್ಯಾಳೇಕ ಮರುದಿನ ಬಂದು
ನಿನ್ನನು ಕಾಡುವೆನೆಂದಾನಾ
ವಿಚಾರಮಾಡಿ ಮಾರುತಿ ಅಂತಾನ
ಬರೆದಿದ್ದ ಬರಹ ನೋಡೆಂದಾನಾ

ಗ್ವಾಡಿಯ ಮೇಲಿನ ಬರಹವ ನೋಡಿ
ಶನಿದೇವ ಗಾಬರಿಯಾದಾನಾ
ನಿನ್ನನು ಕಾಡಲು ನಾಳಿಗಿ ಬರತೇನಂತ
ಬಾಯಿಲಿ ಗುಟ್ಯಾಗಿ ನುಡಿದಾನಾ

ಬಾಯಿಲಿ ಬಂದ ವಿಚಾರ ಕೇಳಿ
ನಾಳಿಗೆ ಬಾರೆಂದ ಮಾರುತನಾ
ಮತ್ತೆ ಶನಿದೇವ ಮರುದಿನ ಬರಲಾಗಿ
ಅದೇ ಉತ್ತರ ಅವ ಕೊಟ್ಟಾನಾ

ಅದರಂತೆ ಶನಿದೇವ ಎಂಟು ವರ್ಷಗಳ
ಎಡತಾಕಿ ಎಡತಾಕಿ ಸತ್ತಾನಾ
ಒಂದಾನೊಂದು ದಿನ ಶನಿದೇವ ಮನದೊಳು
ಕಾಡುವ ನಿರ್ದಾರ ಮಾಡಿದನಾ

ಮರುದಿನ ಶನಿದೇವ ಮಾರುತಿ ಬಳಿಗೋಗಿ
ಈ ಹೊತ್ತು ಕಾಡದೆ ಬಿಡಲಾರೆನಾ
ಹಸನ ಮನದಿಂದ ನಗೆಯ ಮುಖದಿಂದ
ಮಾರುತಿ ಗಹಗಹಿಸಿ ನಕ್ಕಾನಾ

ನಕ್ಕದ್ದು ನೋಡಿ ಶನಿಮಹಾರಾಯನು
ಕೋಪದಿ ಕಿಡಿಕಿಡಿ ಆದಾನಾ
ಕೋಪದಿ ಕಿಡಿಕಿಡಿ ಆದಾಗಾ
ಕಣ್ಣಲಿ ಕೆಂಡವ ಕಾರಿದಾನಾ

ಕೆಂಡವ ಕಾರುವ ಶನಿಯನು ನೋಡಿ
ಮಾರುತಿ ವಿನಯದಿಂದ ನುಡಿದಾನಾ
ನಿನ್ನ ಲಿಪಿಯ ನೀನು ಅಲ್ಲಗಳೆದರೆ
ವಚನ ಭಾದೆ ಬರುವದೆಂದಾನಾ

ಮಗನ ಮಾರುತಿ ಬೇಡಿದ್ದನು ಕೊಡುವೆನು
ವರಗಳ ಹಿಡಿಯೋ ನೀನಾ
ವಿನಯದಿ ಬಾಗುತು ಕರಗಳ ಮುಗಿಯುತ
ಇಂತೆಂದು ಮಾರುತಿ ಬೇಡಿದನಾ

ಕಲಿಯುಗದೊಳು ನಿನ್ನ ವಾರದ ದಿನ
ಭಕ್ತರು ದರ್ಶನಕ ಬರಲೆಂದಾನಾ
ಭೂತ ಪಿಶಾಚಿರೋಗಗಳು ಭಕ್ತರಿಗೆ
ಇಲ್ಲದಂತೆ ಮಾಡೆಂದಾನಾ

ತಥಾಸ್ತು ಎಂದು ಶನಿದೇವ ತಾನು
ಅಲ್ಲಿಂದ ತಾನು ಮಾಯವಾದಾನಾ
ಶನಿವಾರ ದಿನ ಭಕ್ತರೆಲ್ಲರು
ತೆಗೆದುಕೊಳ್ಳುವದು ಮಾರುತಿ ದರ್ಶನಾ

ಚಿಂತೆ ಕಂಟಕ ಬೈಲ ಮಾಡುವನು
ಶ್ರೀರಾಮ ಭಕ್ತ ಮಾರುತನಾ
ಶನಿವಾರ ದಿನದಲ್ಲಿ ಭಕ್ತರು ನೆನೆದರು
ಮುಕ್ತಿಯ ಪಥವ ಕೊಡುತಿಹನಾ

ಅಂಥ ಗುರುವರ ಮಾರುತಿರಾಯನು
ಬಿಡದಲಿ ನೆನೆಯಿರಿ ನೀವಿನ್ನಾ
ಅಂಥ ಕಥೆಯನು ಹೇಳಿ ಕೇಳಿದರ
ಪ್ರಸನ್ನಾಗುವನು ಶನಿದೇವನಾ

ಪ್ರಸನ್ನಾಗುವ ಶನಿದೇವನಾ
ಹರುಷದಿ ಇಡುವನ ನಿಮ್ಮನ್ನಾ
ರವಿ ಕಿರಣದಂಗ ಹರಡಿದ ಯಮನೂರ
ದೂರ ದೂರ ಇರುವದು ವಾಹಿನಾ

ನಾಗರಹಳ್ಳಿಯ ಶರಣಬಸವ ಶಿಷ್ಯ
ಯಲ್ಲಣ್ಣ ಕವಿಗಾರ ಇರತಾನ

***

**ಹನುಮಪ್ಪ ನಸುನಕ್ಕ**

ಅಡ್ಡನೇಳ ಅಡಮಾರಗದಾಗ
ನಾಗರ್ಹಾಂವನೊಂದ ಕಂಡೇನ

ನಾಗರ್ಹಾಂವಿನ ಕುಲದವ ಬಾನನ
ಕರಣ ಕುಂಡಲ ಕರಿಹನುಮ
ಕರಿಹನುಮಪನೆಂದರೂ
ಹಾರ್‍ಯಾನು ಲಂಕಿ ಪಟ್ಟಣಕ

ಸಾಲ ಸಾಲ ಎರಡ ಮೇಲಮಾಳಿಗೆ
ಸೀತವ್ವನಿರುವ ಅರಮನೆಯ
ಸೀತವ್ವನಿರುವ ಅರಮನೆಗೆ ಹೋಗಿ
ಸೀತೆದುಂಗುರ ಚಲ್ಲುವನ

ಸುತ್ತಮುತ್ತಲಿ ನೋಡುತಲಯ್ದಳ
ಮ್ಯಾಲಕ ನೋಡುತ್ತೈದಾಳೊ
ಮ್ಯಾಲಕ ನೋಡುತ್ಯೆದಳು ಸೀತವ್ವ
ಸಣ್ಣ ಬಾಲಕ ಕಂಡಾನೊ

ಹಂತ ಹಿಂತ ಕಾವಲುದಾಗ ನೀ
ಹ್ಯಾಂಗ ಬಂದಿಯೋ ಮಗನೆಂದಾಳೊ
ಹ್ಯಾಂಗನಾದರು ಬಂದೆನು ತಾಯಿ
ಹೊಟ್ಟೆಗಳು ಬಾಳ ಹಸುವಾಗ್ಯಾವು

ಹೊಟ್ಟೆಗಳು ಬಾಳ ಹಸುವಾದರ ಮಗನೆ
ಕಾಸಿಬಾಯಿಯ ತೋಟೇಳು ಮಗನೆ
ಕಾಸಿಬಾಯಿಯ ತೋಟದೊಳಗ
ಹಣ್ಣುಹಂಪಲ ತಿನ್ಹೋಗೊ

ತೋಟದೊಳಗ ಹೊಕ್ಕಾನು ಹನುಮಪ್ಪ
ಬಾಲಾ ಸುತ್ತಿ ಗಿಡ ಕಿತ್ತಾನೊ
ಬಾಲ ಸುತ್ತಿ ಗಿಡ ಕಿತ್ತಾನು ಹನುಮಪ್ಪ
ಸಿಡಿಬಿದ್ದ ಹಣ್ಣನೊಂದು ತಿನ್ನುವನೊ

ಕೆಟ್ಟಕಪಿ ಬಂದು ಕೇಡು ಮಾಡತೈತಿ
ಹಿಡಕೊಂಡು ಬಾ ಎಂದ ರಾವಣನು
ಹಿಡಿದುಕೊಂಡು ಬಂದು ಅಕಾ ಕೊಳ್ಳಾಗ
ಗುದ್ದಿಕಟ್ಟಿ ಬಿಡಿಸಿಕೊಂಬುವರಾರುಂಟರೊ

ಬಿಡಿಸಿಕೊಂಬುವರ್ಯಾರುಂಟ ಸುದ್ದಿ ಕೇಳಿ
ಕಡಿಗ್ಯಾನ ಹನುಮಪ್ಪ ನಸುನಕ್ಕಾನೊ
ಕಡಿಗ್ಯಾನ ಹನುಪ್ಪ ನಸುನಕ್ಕ ಸುದ್ದಿಕೇಳಿ
ದಸಮುಕ ರಾವಣ ಬೆಸೆಗೊಂಡನೊ

ದಸಮುಕ ರಾವಣ ಬೆಸಗೊಂಡರಂದರು
ಎಲೋ ತಮ್ಮ ನಿನ್ನ ಹೆಸರೇನೊ
ರಾಜರಾಜರ ಗಂಡ ಲೋಕದ ಮಿಂಡ
ನನ್ನ ಹೆಸರು ಹನುಮಂತನೊ

ನಿನ್ನ ಹೆಸರು ಹನುಮಂತನಾದರ
ಸೀತಾನ ತರುವಾಗೆಲ್ಲಿದ್ದ್ಯೋ
ಸೀತಾನ ತರುವಾಗ ನಾನಿದ್ದದ್ದೆ ನಿಜವಾದರ
ಗುದ್ದಿ ಚೆಲ್ಲುವೆ ನಿಮ್ಮ ರಥದಾಗ

ಸೀತಾನ ತಂದು ಕದ್ದು ಬಂದೆನಂತ
ಬುದ್ಧಿವಂತನಾಗಿರು ಹೋಗೊ

* * *

**ಕುಂಭಕರ್ಣನ ಮರಣ**

ಕೇಳಿರಿ ಸುಜನರು ಮನಸಿನಿಂದಲಿ ಹೇಳುವ ಸರಸದ ಕಥೆಯನ್ನಾ
ಗದ್ದಲ ಮಾಡದೆ ಕೇಳಬೇಕಂತ ಸರ್ವರಿಗೆ ಮಾಡುವೆ ಶರಣಾ
ಯುದ್ಧಖಂಡದೂಳು ಅದ್ಭುತವಾಯಿತೋ ಇದು ಒಂದು ಕೇಳರಿ ಚಮತ್ಕಾರ
ರಾಮರಾವಣರ ಲಡಾಯಿಲಿಂದ ಕುಂಭಕರ್ಣ ಅದ ಸಂಹಾರಾ
ಹಿಂದಕ ರಾವಣ ಸೀತಾನ ಒಯ್ಯುವಾಗ ವಿಧಿಯು ಬಂದು ಹೊಕ್ಕಿತೊ ಲಂಕಾ
ಪಾಪವೆಂಬುದು ಪಣಿಯ ತುಂಬಿತೋ ಆಗತಿತ್ತೊ ಮುಂದಿನ ಮಹಿಮಾ
ರಾಮನ ದಂಡು ಮಂಗನ ಹಿಂಡು ಅಷ್ಟ ಕೋಟಿ ಪದ್ಮದ ಲೆಕ್ಕಾ
ಎಪ್ಪತ್ತೆಂಟುಕೋಟಿ ಸಿಂಹಕರಡಿಗಳು ಹುಲಿಯು ಬಂದವೋ ಲಢಾಯಕ
ನಳಾ ನೀಳಾ ಸುಗ್ರೀವ ಜಾಂಬುವಂತ ಹೊಕ್ಕು ಹೊಡಿದರೋ ದೈತ್ಯರನ
ರಾವಣ ಕಳಿಸಿದ ರಾಕ್ಷಸರೆಲ್ಲ ಸತ್ತುಹೋದರೊಬ್ಬರುಳಿಯಲಿಲ್ಲಾ
ಕೈಯಕಾಲ ಶಿರಹರಿದು ಸತ್ತರೋ ರಕ್ತದ ಹೊಳಿಯಲಿ ಒದ್ದಾಡಿ
ಎಪ್ಪತ್ತೆಂಟು ಕೋಟಿ ದೈತ್ಯರೆಲ್ಲಾ ತಿಕ್ಕಿ ಹಿಟ್ಟು ಮಾಡಿದರೊ ಕೈಯಲ್ಲಿ
ಆಗ ನೋಡರಿ ಕುಂಭಕರ್ಣನು ಮುರ್ಚ ಬಂದು ಬಿದ್ದಾನೋ ಭೂಮಿಮ್ಯಾಲ
ಕಾದಿಟ್ಟ ದಂಡಕರದ ರಾವಣ ಹೇಳತಾನು ಕುಂಭಕರ್ಣನೆಬ್ಬಿಸಿರಂತ

ಕುಂಭಕರ್ಣನ ಎಬ್ಬಿಸಲಿಕ್ಕೆ ದೈತ್ಯರೆಲ್ಲರು ಬಂದಾರೋ
ಎಪ್ಪತ್ತೆಂಟು ಕೋಟಿ ದೈತ್ಯರು ಬಂದು ಒದರಿಯಾಡಿದರೇಳಲಿಲ್ಲಾ
ಹರಿಯಗಾಣದ ಕಲ್ಲು ಸಿಕ್ಕಾಂಗ ಬಡಿದರ ಏನು ಮಾಡಿದ್ರ ಮಿಸಿಗ್ಯಾಡವಲ್ಲ
ಸರ್ವದೈತ್ಯರು ಚಿಂತಿಮಾಡುತ ಬ್ರಹ್ಮದೇವರ ಧ್ಯಾನ ಮಾಡಿದರೋ
ಬ್ರಹ್ಮದೇವರು ಬಂದು ಕುಂಭಕರ್ಣಗ ಮಂತ್ರ ಊದಿ ಬಿಟ್ಟರೋ ಮೂಗಿನೊಳಗೆ
ಕುಂಭಕರ್ಣ ನೋಡ್ರಿ ಎದ್ದ ಕುಳಿತಾನು ಆರ್ಭಟಿಸುತ ತನ್ನ ಮನದೊಳಗೆ
ಎಷ್ಟ ಮಾಂಸವನು ಅಳತಿ ಇಲ್ಲದೆ ತಂದು ಒಟ್ಟಿದ್ರೊ ಪರ್ವತದಾಂಗ
ತಿರುಗಿ ನೋಡುತವಾ ತಿಂದು ಕೂತಿದ್ದಾ ನೀಡದಾನು ಒಳಿತಾಗಿ
ಕುರಿಯ ಕೋಣಗಳ ಸೂರೆಂದು ತಿಂದನೋ ನೀರ ಕುಡಿದ ಮಧ್ಯಪಾನದೊಳಗ
ಅರ್ಧೇರಯೋಳ್ಧೇರ ಅಡಕಿ ಬಾಯಾಗ ಎಲಿಯ ಲೆಕ್ಕ ಹೇಳಲಿ ಹ್ಯಾಂಗ
ಕುಂಭಕರ್ಣನು ತಯಾರಾದನೋ ಧನುಸ್ಸು ಬಾಣ ಅವನ ಕೈಯಾಗ
ರಾಮಚಂದ್ರನ ಚಂಡು ಬಂದಿತೋ ಕುಳಿತಿದ್ದ ಕಬ್ಬಿಣ ರಥದೊಳಗ
ತ್ವರೆ ಮಾಡಿ ಬಂದು ರಾಮಚಂದ್ರನು ಕುಂಭಕರ್ಣನಿಗ್ಹೇಳಿದನು
ನಾನು ಹೋಡುವತೀನಿ ನೀನು ಹಿಡಿಯೋ ಜಾಣ ಬಿದ್ದು ನೆಲಕ ಕಚ್ಚಿಯೊ ಮಣ್ಣಾ
ತಾಯಿತಂದಿ ನಿಮ್ಮ ಗುರುವಿನ ಶೃತಿಮಾಡೋ ಉಳುವದಿಲ್ಲೋ ನಿನ್ನ ಪ್ರಾಣ
ರಾಮಚಂದ್ರನು ಅವಸರದಿಂದ ಬಾಣ ಹೊಡೆದವೊಂದುತ್ತರಲೇ
ಕುಂಭಕರ್ಣನ ರಥಾ ಸರದಿತೋ ಅಂಜಿಕೊಂಡು ಆ ಕ್ಷಣದಲ್ಲೇ
ಕುಂಭಕರ್ಣನ ಬಿಲ್ಲು ಮುರಿದಾವೋ ತಗೊಂಡು ಬಂದ ತನ್ನ ಕೈಯಲ್ಲಿ

ಭಕ್ತ ಭೃಂಗಿ

ಅಗಾವ ನಿಮಗೊಂದು ಲಗಾಮು ಹಾಕಿದ ಬಿಗಿಯ ಹಿಡಿದು ಹೇಳುವೆ ನಿಂತಾ
ಕುರಿಯು ಹುಟ್ಟಿದ ಪರಿಯ ತಿಳಿಸುವ ಹಿರಿಯರೆಲ್ಲ ಕೇಳರಿ ಕುಂತಾ
ಕೈಲಾಸದೊಳಗ ಶಿವಪಾರ್ವತಿಯರು ಕೂಡಿ ಕೂತಿದ್ದರು ಒಂದು ದಿನಾ
ಭೃಂಗಿ ಎಂಬವನು ಕುಣಿಯುತ ಹೋಗಿ ಸಾಂಬಶಿವಗ ಮಾಡಿದ ಶರಣ
ಶರಣು ಮಾಡಿದ್ದು ನೋಡಿ ಪಾರ್ವತಿ ಭೃಂಗಿಯನ್ನು ಕೇಳ್ಯಾಳ ಪೂರ್ಣ
ಸಾಂಬಶಿವಗ ಸಾಷ್ಟಾಂಗ ಹಾಕಿದಿ ನನಗ ಯಾಕ ಮಾಡಲಿಲ್ಲ ಶರಣ
ಪಾರ್ವತಿ ಮಾತಿಗೆ ಭೃಂಗಿ ಹೇಳತಾನ ಜಗದ್ಭರಿತ ಜಗಪಾಲಕನಾ
ಅಣುರೇಣುದಲ್ಲಿ ತುಂಬಿ ತುಳಕತಾನು ಏಕೋದೇವ ಶಂಕರ ತಾನಾ
ಏಕೋದೇವ ಪರಬ್ರಹ್ಮ ಅನಿಸಿದಾನು ವೇದವಂದಿತ ಮುಕ್ಕಣ್ಣಾ
ಅವನ ಬಿಟ್ಟು ಇನ್ನ್ಯಾವ ದೇವರಾ ಭಕ್ತಿಯಿಂದ ಹಿಡಿಯೆ ಚರಣಾ
ಮಹಾದೇವಿ ನೀನು ಮಾಯಾಸ್ವರೂಪಿ ನಿಮ್ಮ ಗೊಡವಿಯು ನಮಗಿಲ್ಲಾ
ನಿನ್ನ ಪಾದ ಹಿಡಿಯಲಾರೆನು ಖಂಡತುಂಡ ನಿಷ್ಠುರ ವಚನ
ನಿಷ್ಠುರ ವಚನ ಕೇಳಿ ಪಾರ್ವತಿ ಸಿಟ್ಟಿನಿಂದ ಹಾಕ್ಯಾಳ ಶವತಾ
ಕೋಪದಿಂದ ನುಡಿದಾಳೊ ಪಾಪಿ ಭೃಂಗಿ ಪಾರಾಗೋ ಇನ್ನ
ಆಡುತಾಡುತ ಕೂಡಿದ ಸಭೆಯೊಳು ಮಾಡಿದಿ ನೀ

ಶಿವಾ ಶಕ್ತಿ ಏರಡಂಶ ಕೂಡಿದಾಗ ನಿನ್ನ ಶರೀರ ಆತು ಉತ್ಪನ್ನ
ನನ್ನ ಅಂಶವನು ನನಗೆ ಕೊಟ್ಟು ಬಿಡು ಶಿವ ಬಂದು ಉಳಿಸಲಿ ನಿನ್ನ
ಶಕ್ತಿ ಅಂಶದ ರಕ್ತಮಾಂಸವನು ತಗದು ಒಗಿದಾನೋ ಶಿವಶರಣಾ
ಅಸ್ತಿಚರ್ಮ ಬರೇ ನರಾ ಉಳಿದಾವೋ ಭೃಂಗಿ ತಾಳಿದ ಬದಲಿ ರೂಪವನಾ
ಇಷ್ಟ ಅದರ ಪ್ರಾಣ ಹೋಗಲಿಲ್ಲ ಇಟ್ಟ ಅವನ ಮ್ಯಾಲ ಶಿವ ಕರುಣ
ಭೃಂಗಿ ಪ್ರಾಣ ಹರಣ ಮಾಡುದಕ ಪಾರ್ವತಿ ತೆಗೆದಾಳೋ ಹೊಸ ರಚನಾ
ವಾಯುದೇವನ ವಶಾಮಾಡಿಕೊಂಡು ಗಾಳಿ ಎಬ್ಬಿಸ್ಯಾಳೋ ಸಂಪೂರ್ಣ
ಪ್ರಚಂಡವಾದ ಗಾಳಿ ಹೊಡತಕ್ಕ ಅಲ್ಲಕಲ್ಲೋಲ ಆದಿತ ಜನಾ
ಹುಡಿಯ ಅಡರಿ ದುಮ್ಮಕಾರ ಹಿಡದೀತು ಪೊಡವಿಯೆಲ್ಲಾ ನಡಗೂತ
ಧರಿಯ ಮ್ಯಾಲ ಇರುವ ಗಿರಿಯು ಮರಗಳು ಗಾಳಿಗೆ ಆದಾವೋ ಬುಡಮೇಲಾ
ಗಾಳಿಹೋಗಿ ಕೈಲಾಸ ಹೊಕ್ಕಿತು ದೇವತೆಗಳು ಕಿಸಿದಾರ ಹಲ್ಲಾ
ದೇವಗಣಾ ಮುನಿಗಳು ಅನ್ನುವರು ಗಾಳಿ ಅಲ್ಲ ಇದು ಕೆಡಗಾಲಾ
ಹಾರಿ ಕೈಲಾಸ ತೂರಿ ತೂಗ್ಯಾಡತ್ಯೆತಿ ಇದರ ಒಳಗ ಉಳಿಯುವದಿಲ್ಲ
ಇಂಥ ಗಾಳಿಯೊಳು ನಿಂತಾನ ಸುಮ್ಮನೆ ಭಕ್ತ ಭೃಂಗಿಗೇನಾಗಿಲ್ಲ
ಭಕ್ತಭೃಂಗಿಗೆ ಜೋಪಾನ ಮಾಡಕ ಸಾಂಬಶಿವ ಇದ್ದ ಬೆನ್ನಮ್ಯಾಲಾ
ಬೆನ್ನಿಗೆ ತ್ರಿಶೂಲ ಹಚ್ಚಿ ನಿಲ್ಲಿಸ್ಯಾನು ದಯಾದೃಷ್ಟಿಯಿಂದ ಜಗಪಾಲಾ
ದಿಟ್ಟ ಭೃಂಗಿ ಗಟ್ಟಿಯಾಗಿ ನಿಂತಾನೋ ಪಾರ್ವತಿ ಆಟೇನು ನಡಿಲಿಲ್ಲ
ಬೀಸಿಬೀಸಿ ಗಾಳಿ ಶಾಂತ ಆದೀತು ಪಾರ್ವತಿಗೆ ಬಂದಿತು ಸೋಲಾ
ಶಿವನ ಭಕ್ತ ಶ್ರೀ ಭೃಂಗಿ ಆದ ಬಲಾ ಒಣಗಿತು ಪಾರ್ವತಿಯ ಮುಖಕಮಲಾ
ತೆಳಗ ಮಾರಿ ಮಾಡಿನಿಂತಾಳೊ ಪಾರ್ವತಿ ನೋಡ್ಯಾರ ಕೂಡಿದ ಸುರರೆಲ್ಲ
ಗರುಡ ಗಂಧರ್ವ ಸಿದ್ಧ ಸಾಧ್ಯರು ಕೈ ಹೊಡೆದು ಎಬ್ಬಿಸ್ಯಾರು ನಕಲಾ
ಕುಚೇಷ್ಟೆ ಮಾಡುವ ಕಂಡು ಪಾರ್ವತಿ ಶಾಪ ಕೊಟ್ಟಾಳೊ ಬಿಡಲಿಲ್ಲ
ನನ್ನ ಮಾರಿ ನೋಡಿ ನಕ್ಕವರೆಲ್ಲ ಕುರಿಯಾಗಿ ಹುಟ್ಟಲಿ ಧರಿಯ ಮ್ಯಾಲಾ
ಕುರಿಯಾಗಿ ಹುಟ್ಟಲಿ ಧರಿಯ ಮ್ಯಾಲಾ ಇಂದಿನ ವರೆಗೆ ಅದರ ಫಲ
ಚಂದ ಗ್ರಾಮ ಕುಳಗೇರಿ ಸಿದ್ಧನ ಪಾದಹಿಡಿದು ಹಾಡತೀವಿ ಆತನ ಲೀಲಾ

***

## ಮಾರ್ಕಂಡೆಯಮುನಿ

ಮಾರ್ಕಾಂಡೆ ಮುನಿ ಸಾವಿರ ವರ್ಷದಿನ
ತಪಾದಿಂದ ಕುಳಿತದ್ದು ಕರೆ
ಅಸ್ತು ಅಡ ಅವನು ಸುತ್ತ ವೃಕ್ಷವು
ಹುತ್ತ ಮ್ಯಾಲೆ ಬೆಳೆದದ್ದು ಕರೆ

ದೇಹದನ್ನ ಕೂದಲಾ ಬೇರು ಬಿಟ್ವಾ
ಭೂಮಿಗಿಳಿದದ್ದು ಕರೆ
ತಿಳಿದು ಈಶ್ವರಾ ಇಳಿದು ಬಂದನೋ
ಭೂಮಿಯಲ್ಲಿ ಮುಳಗಿದ್ದು ಕರೆ

ಕಮಂಡಲಾದನ್ನ ಉದಕ ಒಗೆದನು
ಮುನಿಯೆದ್ದು ಬಂದದ್ದು ಕರೆ
ಮಾರ್ಕಂಡ ನಿನ್ನ ಮನಾದಿಚ್ಛೆ
ಇದ್ದದ್ದು ಬೇಡು ಅಂದದ್ದು ಕರೆ

ಚರಣಕೆರಗಿ ಮತ್ತೇನ ಹೇಳಿದನು
ಪುತ್ರನ ಕೊಡು ಅಂದದ್ದು ಕರೆ
ಶ್ಯಾಣ್ಯಾ ನಿಪುಣಾ ಗುಣದವ ಕೊಡುವೆ
ಹದಿನಾಲ್ಕ ವರ್ಷ ಆಯುಶ್ಯ ಕರೆ

ಜ್ಞಾನವಿಲ್ಲದ ಮಗ ಹುಟ್ಟಿದರ
ಸಾವಿರ ವರ್ಷ ಇರುವುದು ಕರೆ
ಜ್ಞಾನವಿಲ್ಲದವನೇನ ಮಾಡುವದು
ಶ್ಯಾಣ್ಯಾನ ಕೊಡು ಅಂದದ್ದು ಕರೆ

ಕೊಟ್ಟವಚನ ಹೊಂಟಾನೋ ಈಶ್ವರ
ನಿಷ್ಟದವನು ಹುಟ್ಟಿದ್ದು ಕರೆ
ಆತ್ಮಕ್ಕೆ ವೈರಾಗ್ಯ ತಾಳಿದಾಕ್ಷಣಾ
ಲಿಂಗಪೂಜೆಗೆ ಹೊಂಟದ್ದು ಕರೆ

ಕಾಲಮೃಗವದಾ ಮಾಡುವ ಕಾಡಿಣಿ
ಹಗ್ಗಾ ಆದದ್ದು ಕರೆ
ಲಿಂಗಪೂಜೆ ನಿರ್ಮಳ ಮುಗಿಸಿದ
ಮತ್ತು ಸ್ತೋತ್ರ ಮಾಡಿದ್ದು ಕರೆ

ದೇವರಿಗೆ ದೇವರಿಗೆ ಎನ್ನ ನೀ
ಕಾಪಾಡಬೇಕು ಅಂದಿದ್ದು ಕರೆ
ನಿತ್ಯ ಲಿಂಗ ಪೂಜೆ ನಡೆಸಿದ್ದ
ನ್ನೆರಡು ವರ್ಷ ಮುಗದದ್ದು ಕರೆ

ಇನ್ನೆರಡು ವರುಷಕ ಇವನ ಮರಣವು
ಹತ್ತವಗೆ ಚಿಂತೆಯದು ಕರೆ
ದಿನಾ ಹೋದಂಗ ಮನ ತಡಿಯದು

ಪ್ರಳಾಪದಿ ಅಳುವುದು ಕರೆ

ದುಶಿನ್ನಾ ನೀವು ದುಃಖಮಾಡುವ
ಕಾರಣೆಂದು ಕೇಳಿದ್ದು ಕರೆ
ತಪಾಮಾಡಿ ನಿನ್ನ ಪಡದ ಯಾಳ್ಯಾಕ
ಈಶ್ವರನು ಹೇಳಿದ್ದು ಕರೆ

ಹದಿನಾಲಕು ನಿನಗೊರಸ ಆಯುಸ
ನಾಳೆ ಮರಣ ಆಗುವದು ಕರೆ
ಇದಯೇನು ಈಶ್ವರನು ಇದ್ದನು
ನೋವ್ಯಾತಕ ಅಂದದ್ದು ಕರೆ

ತನಗು ಈಶ್ವರಗು ಯಾವಸಿಗೊಂಡು
ಕಾಡ್ಗಿ ಹಗ್ಗ ಕಟ್ಟಿದ್ದು ಕರೆ
ನೇಮಕ ಸರಿ ಯಮನ ಹುಕಮು ಆಗುವುದು
ದೂತರಾಗಿ ಬಂದದ್ದು ಕರೆ

ಹೋಗಿ ತಿರುಗಿ ಹಿಂದಾದ ವಚನವು
ಮತ್ತು ಯಮಗ ಹೇಳಿದ್ದು ಕರೆ
ಬಿಡಬ್ಯಾಡರಿ ಅವ ನೋಡಿರಿ ಅಂದನು
ನೂರುಮಂದಿ ಕಳವಿದ್ದು ಕರೆ

ಆಜ್ಞೆಕ ಸರಿ ಅವರೊಂಟಿ ನೆಡೆದರು
ಹುಲಿವರದ ಉರಿ ಆದದ್ದು ಕರೆ
ಅಂಜಿದಾರೊ ನಮ್ಮಿಂದಾಗದು
ಎಂದು ಎಮಗೆ ಹೇಳಿದ್ದು ಕರೆ

ವಿರಸದಿಂದ ಯಮ ಕೋಣ ಏರದನು
ಒಳ್ಳೆಯದೆಂದು ಹೊರಟದ್ದು ಕರೆ
ಮುನ್ನೂರು ಅರವತ್ತು ರೋಗ ಕೈಯೊಳು
ದಾರುಣಾಗಿ ಬಂದದ್ದು ಕರೆ

ಕೋಪದಿಂದ ಕುಂತವನ ಕೊರಳಿಗೆ
ಪಾಸಿ ಹಗ್ಗ ಒಗದದ್ದು ಕರೆ
ಶಕ್ತಿಲಿಂದ ಕುಂತವನ ಎಳೆಯತಾನು
ಹತಿಜಲ್ಮ ಆದದ್ದು ಕರೆ

ಸಂತಾಪ ಸಂಕಟ ತಡಿಯದೆ
ಶಂಕರನೇ ಅಂದದ್ದು ಕರೆ
ಕೋಟಿಸಿಡಲು ಧರಣಿಗ ಬಿದ್ದಂಗ
ಈಶ್ವರನು ಎದ್ದದ್ದು ಕರೆ

ವಿರಸದಿಂದ ಯಮನ ಹೊಟ್ಟೆ ಹರಿವಂಗ
ತ್ರಿಶೂಲದಲೆ ಹೊಡೆದದ್ದು ಕರೆ
ಬಿದ್ದದರೊಳಗೆ ಬಿದ್ದು ಸೈರಿಸಿ
ಕೈಯ ಮುಗಿದು ನಿಂತದ್ದು ಕರೆ

ಇಂತ ಶರಣರ ಇನ್ನು ಮುಟ್ಟಬೇ
ಡೆಂದು ಯಮನ ಬಿಟ್ಟಿದ್ದು ಕರೆ
ಶ್ಯಾರ ಕುಂದಗೋಳ ಶಂಬುಲಿಂಗ ಎಂದು
ಶಿವಬಸವ ಹೇಳಿದ್ದು ಕರೆ

* * *

**ಕಾಮದಹನ**

ರತಿದೇವಿ ಮುಂದ ಕುಂತು ಪರಮಾತ್ಮ ಹೇಳತಾನ
ಪತಿ ಸತ್ತನೆಂದು ಮಾಡಬ್ಯಾಡ ಚಿಂತಿ
ಧರಿಯಲ್ಲಿ ನೀವು ಹೋಗಿ ನರಜಲ್ಮ ತಾಳಿದಾಗ
ಮಾಡಿದಂಥ ದೋಸನಾಶ ಆಗತೈತಿ

ಭೂಮಿಯೊಳು ಅಧಿಕವಾದ ಕಾಮನಕಟ್ಟಿ ಎಂಬುವಂಥಾ
ಗ್ರಾಮದೊಳು ಬ್ರಾಹ್ಮಣರ ಮನಿ ಐತಿ
ಬ್ರಾಹ್ಮಣರ ಮನಿಯಲ್ಲಿ ರಾಮನೆಂಬ ನಾಮದಿಂದ
ಮನ್ಮಥನು ಆಗತಾನ ಉತ್ಪತ್ತಿ

ಹೊಲಗೇರ್ಯಾಗ ಹುಟ್ಟಿ ನೀನು ಹೋಳಿ ಎಂಬ ಹೆಸರಿನಿಂದ
ಸೋಳಾ ವರ್ಷ ಆಗಿ ಪ್ರಾಯ ಬರತೈತಿ
ನೇಮದಿಂದ ನಿನ್ನ ಮ್ಯಾಲ ಕಾಮದೃಷ್ಟಿ ಇಡತಾನ
ಪ್ರೇಮ ಪ್ರೀತಿ ಇಬ್ಬರಿಗೂ ಕೂಡತೈತಿ

ಇಷ್ಟ ಹೇಳಿ ಸಾಂಬ ವರವ ಕೊಟ್ಟು ಮ್ಯಾಲ ಶಾಂತ ಆಗಿ
ನೇಮದಿಂದ ಮುಂದೆ ಹುಟ್ಟಿವ ರತಿಪತಿ

ಮನ್ಮಥನು ಪ್ರತಿ ಜಲ್ಮವನ್ನು ತಾಳಿ
ಕ್ಷಿತಿಯಲ್ಲಿ ಕಾಮನ ಜನನಾಗೇತಿ

**ಚಾಲ**

ಜನನಾಗಿ ಬೆಳದಾನ ಕಾಮ ಪ್ರಾಯಬಂತು ನೇಮ ಕೇಳಿ ವಿಸ್ತಾರ
ವರ್ಷ ಆಗಿದ್ದವು ಹದಿನಾರು ಹೊಲಗೇರಿಯಲ್ಲಿ
ರತಿದೇವಿ ಹುಟ್ಟಿದಾಳ ಚಲುವೆ ದೇಶ ಸುಂದರಾ
ಕರದ್ರೋ ಹೋಳಿ ಎಂಬ ಹೆಸರಾ ದೇವಲೋಕದ ಹೆಣ್ಣಾ
ತೇಟ ಪದ್ಮಜಾತ ರೂಪ ಶೃಂಗಾರ ಕಾಮ ಇಟ್ಟ ಇಕಿಮ್ಯಾಲ ನೆದರಾ
ಜಾತಿ ನೀತಿ ಎಂಬುವಂಥ ಅರಿಯದೆ ಹೊಲಗೇರಿಯಲ್ಲಿ ಹೊಕ್ಕಾ
ಹೋಳಿಯನ್ನು ಕೂಡಿಕೊಂಡು ನಡತಿ ಅನುದಿನಾ
ಕಾಲಾಂತರ ಮ್ಯಾಲ ತೀರಿಹೋಯಿತು ಮನಿಯೊಳಗಿನ ಹಣಾ
ಎಂತ ಬಡತನ ಜ್ಯಾತಿಯಿಂದ ದೂರ ಇಟ್ಟಾಗ ಊರೊಳಗಿನ ಜನಾ
ಕಾಮನ ಮೈಯೊಳಗ ಬಡಿದಾವ ಉಷ್ಣ ಶರೀರ ಆತ ಸಣ್ಣಾ
ಪ್ರಾಣ ಹೋಗುವ ಕಾಲ ಸಮೀಪಕ್ಕೆ ಬಂದೀತ ಪೂರ್ಣ
ಕರಿಸಿಕೊಂಡ ತನ್ನ ಗೆಳೆಯರನ್ನಾ ಮಾಡಿದಾನ ಶರಣಾ

**ಏರು**

ಮಿತ್ರರನ್ನು ಕೂಡಿಕೊಂಡು ವ್ರತದಿಂದ ಹೇಳತಾನ
ಮೃತ್ಯುಕಾಲ ಬಂತ ಇದು ನಿರ್ಧಾರಾ
ಕೋಪದಿಂದ ಮಹಾದೇವ ಶ್ಯಾಪಕೊಟ್ಟು ಮನ್ಮಥಗ
ಲೋಪವಾಗಿ ಸುಟ್ಟುಹೋದ ಹರಿಕುವರಾ
ಅಣ್ಣತಮ್ಮರಿಲ್ಲ ನನಗ ನನ್ನ ಪ್ರಾಣ ಹೋಗ್ತದ
ಮಾನ ಅಪಮಾನ ನಿಮ್ಮ ಸ್ವಾಧೀನಾ
ಬಹಳ ಕುಳ್ಳುಗಳ ಒಟ್ಟಿ ಹೋಳಿ ಹೊತಕೊಂಡು
ಬಂದು ಕುಳ್ಳ ತಳದಾಗ ಹಾಕಿ ಸುಡಬೇಕ
ನನ್ನ ಪ್ರಿಯ ಮಿತ್ರರಿಗೆ ಹೇಳಿ ಕೈಮ್ಯಾಲ ಕೈ ಇಟ್ಟ
ಕ್ರಿಯಾ ಕೊಟ್ಟ ಮ್ಯಾಲ ಬಿಟ್ಟ ಪ್ರಾಣವನಾ
ಕುಳ್ಳ ಯಾರು ಕೊಡಲಿಲ್ಲ ಕೊಳ್ಳಲಿಕ್ಕೆ ರೊಕ್ಕಯಿಲ್ಲ
ಕಳ್ಳರಾಗಿ ಒಡದಾರ ಕುಳಬಾನ
ಕಾಮ ಸತ್ತನೆಂದು ಗ್ರಾಮದೊಳು ಸುದ್ದಿ ಆತು
ಫಲ್ಗುಣ ಮಾಸ ಹುಣ್ಣಿವಿ ದಿನಾ
ಅದೇ ವಾರದೊಳಗ ಒಬ್ಬ ದೇವಪುರುಷ ಸಾಧು ಇದ್ದ ತ್ರಿಕಾಲ ಜ್ಞಾನ
ಇತ್ತ ಸಂಪೂರ್ಣ ಪೂರ್ವದಲ್ಲಿ ಆದ ಕತಿ ಸರ್ವರಿಗೆ ಹೇಳಲಾಕ

ಸಾಮಾನ್ಯ ನರನಲ್ಲೋ ಕಾಮಣ್ಣಾ ವಿಷ್ಣುವಿನ ಮಗಾ
ಇವ ಸುಟಕೊಂಡ ತನ್ನ ದೇಹ ಸರ್ವಲೋಕ ಮಾಡಿದಾನು ಉದ್ದರಣಾ

**ವಚನ**

ಹೀಂಗಂತ ಶ್ರುತಿ ಸಾರತ್ಯೆತಿ ತಾರಕನ ಕತಿಕೇಳಿ ಪರಿಪೂರ್ಣ
ಹೌದೆಂದು ನಂಬಿದಾರ ಜನಾ
ಕಾಮ ಸತ್ತ ಠಿಕಾಣಕ ಹೋಗಿ ಭಕ್ತಿಯಿಂದ ಭಜನಾ ಮಾಡಿ ಶರಣಾ
ಪೂಜಿ ಮಾಡತಾರ ಆತನ ಚರಣ ಮೋಜು ಮಜಲ ಒಳೆ ಶೃಂಗಾರ
ಮಾಡಿ ಸಡಗರ ಮೆರೆಸಿ ಆತ್ನ ಮಾಡ್ಯಾರ ಮಂಗಳಾರತಿಯನ್ನ

**ಪದ್ಯ**

ಗೆಳೆಯರು ಕೊಟ್ಟ ವಚನ ಪ್ರಕಾರ ಕಾಮನ ಬಳಿಯಲ್ಲಿ
ತಂದು ಒಗೆದಾರು ಹೋಳಿಯನ್ನ
ಹೋಳಿದು ತವರಮನಿ ಹೊಲಗೇರಿ ಆದಕಾರಣ
ಹೊಲಗೇರಿಯಿಂದ ಬೆಂಕಿ ತಂದ ಮಾಡಿದಾರ ಕಾಮದಹನಾ
ಬಸರಿ ಬೇವ ಅಂದ್ರ ತುರಾಯಿ ಆದಕಾರಣ ತಂದ ಇಡತಾರ ಪೂರ್ಣ
ಲೋಕೋಪಕಾರ ಮೂರ್ತಿಯು ಸ್ವರ್ಗವಾಸಿ ಆದನೆಂದು
ಕಸಿವಿಸಿ ಆಗಿ ಹೊಯಕೊಳ್ಳುವರೋ ಜನಾ
ಮೂರು ದಿವ್ಸ ಕಾಮ ಅಂದ್ರ ಪಾವನಾ
ಮೂರ್ತಿಯೆಂದು ಆತನನ್ನು ಸುಟ್ಟು ಬೂದಿಯನ್ನು ಸರ್ವರು ಧರಿಸಿಕೊಂಡಾರ
ಅದನ್ನ ಕ್ಷಿತಿಯೊಳು ಹುಲಕುಂದ ಪತಿ ರಾಮೇಶ್ವರ ಭಕ್ತ ಸಿದ್ಧರಾಯನ ಅಕ್ಷರಾ
ಇಲ್ಲಿಗೆ ಒಂದು ಸಂದೇಳಗುರವೆ ಹಾಡಿದವರ ಪದ ಮುಂದ್ಕೇಳೋ

***

**ಜಮದಗ್ನಿಯ ಶಾಪ**

ಋಷಿಪತಿ ಜಮದಗ್ನಿಗೆ ಸತಿಯಾದಳು
ಏಳು ಕೊಳ್ಳದ ಎಲ್ಲಮ್ಮ ತಾಯಿ
ಪತಿಯ ಸೇವೆಯ ಮಾಡುತ ತಾಯಿ
ಮತಿವಂತಿಯಾಗಿ ಬಾಳಿದಳು

ನಸುಕಲಿ ಏಳಂತ ರೇಣುಕ ತಾಯಿ
ನದಿಯಲಿ ಸ್ನಾನ ಮಾಡುವಳು

ಪರಿಪರಿ ಹೂ ಮಡಿನೀರನು
ತರುವಳು ಪತಿಯ ಪಾದಪೂಜೆಗೆ

ಕುಮಾರಿಯೆಂದು ಮರೆತಾಳ ರೇಣುಕ
ಮಾಡುತ ಋಷಿಯ ಸೇವೆಯನು
ಪತಿಯ ಸೇವೆ ಮಾಡುತಾ ತಾಯಿ
ಗರತಿಯ ಮಗಳಾಗಿ ಬಾಳಿದಳು

ಶನಿಯ ನೋಟಕೆ ಸಿಕ್ಕಳು ರೇಣುಕೆ
ಕಾಲಕೂಟದಲಿ ತಾ ಬಿದ್ದಳು
ಜೀವಕ ಬಂದಿತು ವಿಪರೀತ ಕಾಟ
ಹರಕತ್ತ ಆದೀತ ಜೀವಕ

ಹೊತ್ತಿಗೆ ಸರಿಯಾಗಿ ಏಳುತ ತಾಯಿ
ಪತಿಯ ಪಾದಕೆ ನಮಿಸಿದಳು
ಹಾವಿನ ಸಿಂಬೆಯ ಇಟ್ಟಳು ತಲಿಮೇಲೆ
ಉಸುಕಿನ ಕೊಡವ ಹೊತ್ತಳು

ಪ್ರಣಯ ಕೇಳಿ ನಡೆದಿತ ಅಲ್ಲಿ
ನದಿಯ ನೀರಿನ ದಡದಲ್ಲಿ
ಪ್ರಣಯ ಜೋಡಿಯ ನೋಡುತ ತಾಯಿ
ಮಾಡ್ಯಾಳು ಮನದಲಿ ಚಿಂತೆಯನು

ಕೊರಗುತ ನಿಂತಳು ಮನದಾಗ ತಾಯಿ
ಕರುಮದ ಜನ್ಮಕ ಬೈಯುತಲಿ
ಚಿಂತಿಯ ಮಾಡುತ ನಿಂತಾಗ ತಾಯ್ಗೆ
ಪತಿಯ ನೆನಪು ಮೂಡೀತ

ಭೀತಳಾಗಿ ಶಿವ ಘಾತವಾಯಿತೆಂದು
ಆತುರದಿಂದ ತಾಯಿ ಎದ್ದಾಳ
ಪತಿಯನು ನೆನೆಯುತ ಮನದಲಿ ತಾಯಿ
ನದಿಯ ಕಡೆಗೆ ಬಂದಾಳ

ಶಿವಸಮ ಪತಿಗೆ ಆಯಿತ ಅರಿವು
ಭಾವೀಸತಿಯ ಆಸೆಯು
ಜ್ಞಾನದೃಷ್ಟಿಯಿಂದರಿತನು ಋಷಿಯು
ಹೆಂಡತಿಯ ಹಣೆಬರಹವನು

ಉಸುಕಿನ ಕೊಡವು ಒಡೆದಿತು ಆಗ
ಹಾವಿನ ಸಿಂಬಿ ಚದರೀತ
ಕೆರಳುತ ಹಾವು ಬಂದಿತು ಮೇಲೆ
ತಿಳಿಯಿತು ಸತಿಗೆ ಪತಿಮಾಯೆ

ಆತುರದಿದ ಬಂದಳು ರೇಣುಕೆ
ಹೆದರುತ ನಡುಗುತ ಆಶ್ರಮಕೆ
ಭೀತಳಾಗಿ ಸತಿ ರೇಣುಕ ತಾಯಿ
ಪತಿಯ ಪಾದಕೆ ಬಿದ್ದಳು

ಋಷಿಗೆ ಏರಿತು ಸಿಟ್ಟಿನ ಭರವು
ಶಾಪ ಕೊಟ್ಟನು ರೇಣುಕೆಗೆ
ಸಿಟ್ಟಿನ ಭರದಲಿ ಕೊಟ್ಟನು ಶಾಪ
ಮೈತುಂಬ ಹುಣ್ಣಾಗಲೆಂದು

ರೂಪ, ರಂಭಿ ಸತಿ ರೇಣುಕ ಬಣ್ಣ
ಕರಿಯ ಬಣ್ಣಕ ತಿರುಗಿತ
ಋಷಿಯ ಮಾತು ಆಯಿತು ನಿಜವು
ಜೀವಕ ಬಂದಿತು ಕುತ್ತ

ಮಕ್ಕಳ ಕೂಗಿ ಕರೆದನು ಜಮದಗ್ನಿ
ಹೆಂಡತಿ ಚೆಂಡು ಕಡಿಯಾಕ
ತಾಯಿಯ ಚೆಂಡು ಕಡಿಯಾಕ ಪುತ್ರರು
ಶಂಕಿಸಿ ನೆವ ಹೇಳಿ ಜಾರಿದರು

ಪರುಶರಾಮನ ಕರದಾನ ಜಮದಗ್ನಿ
ಹೆಂಡತಿ ಚೆಂಡ ಕಡಿಯಾಕ
ತಂದೆಯ ಮಾತು ಕೇಳುತ ರಾಮ
ತಾಯಿಯ ಚೆಂಡು ಹಾರಿಸಿದ

ಜಲ್ಲೆಂದು ರಕ್ತ ಚಿಮ್ಮಿತು ಆಗ
ರೇಣುಕ ತಾಯಿ ಕೊರಳಿಂದ
ಮರುಗಿದ ರಾಮನು ತಾಯಿ ಜೀವಕ
ಮನಸಿಲಿ ನಿಶ್ಚಯ ಮಾಡುತಲಿ

ಭಲೆ ಭಲೆ ಎಂದು ಮೆಚ್ಚಿ ಜಮದಗ್ನಿ
ಮಗನ ಕಾರ್ಯವ ಹೊಗಳಿದನು

ಆಶೀರ್ವಾದ ಮಾಡುತ ಮಗನಿಗೆ
ಜಮದಗ್ನಿ ವರಬೇಡವು ಹೇಳಿದನು

ತಂದೆ ನನಗೆ ಹೊನ್ನು ಬೇಡ ತಂದೆ
ನನಗೆ ಮಣ್ಣು ಬೇಡ
ತಂದೆ ನನಗೆ ಹೆಣ್ಣು ಬೇಡ ನನಗೆ
ಬೇಕು ತಾಯಿಯ ಜೀವ

ಕೆಚ್ಚಿನ ಮಗನ ಮಾತಿಗೆ ಮೆಚ್ಚುತ
ಕೊಟ್ಟನು ಕ್ಷಣದಲಿ ವರವನ್ನ
ವರವನು ಕೊಡುತಲಿ ರಾಮನ ತಂದೆ
ರೇಣುಕ ಎದ್ದಳು ನೆಲದಿಂದ

ನನ್ನಯ ಸದ್ದು ನಿನಗೆ ಬೇಡ
ನಿನ್ನಯ ಸದ್ದು ನನಗೆ ಬೇಡ
ಶಾಪವ ಕೊಡುತ ಜಮದಗ್ನಿ ಋಷಿ
ಸತಿಬಿಟ್ಟು ದೂರ ನೆಲೆಸಿದನು

ಒಂಟಿಯಾಗಿ ಎಲ್ಲಮ್ಮ ತಾಯಿ
ಏಳುಕೊಳ್ಳದಾಗ ನೆಲಸಿದಳು
ಏಳುಕೊಳ್ಳದಾಗ ನೆಲೆಸಿದ ತಾಯಿ
ಮಾಯಕಾರ್ತಿಯಾಗಿ ನಿಂತಳು

## ಡೊಳ್ಳಿನ ಇತರ ಹಾಡುಗಳು

### ಪಾರ್ವತಿಯ ಬಯಕೆ

ಸಾಂಬ ಸದಾಶಿವ ನಂಬಿದ ಭಕ್ತರ
ಕುಂಭಿನಿಯೊಳು ಪಾಲಿಸು ಎನ್ನ
ಕುಂಭಿನಿಯೊಳು ಪಾಲಿಸ ಎನ್ನ | ಜಗ-
ದಂಗ ಪ್ರಿಯ ರಕ್ಷಿಸೊ ಮುನ್ನ ‖ ೧ ‖

ಒಂದಿನ ಶಂಕರ ಕೈಲಾಸ ನಗರದಿ
ಮಂದಗಮನಿ ಪಾರ್ವತಿ ತಾನಾ

ಮಂದಗಮನಿ ಪಾರ್ವತಿ ತಾನಾ। ಆ-
ನಂದದಿಂದ ಇದ್ದನೋ ಶಿವನ ॥ ೧ ॥

ಗೌರಿ ಕೇಳತಾಳೋ ಮಾರಹರನಿಗೆ
ಊರ್ವಿಯಲ್ಲಿ ಯಾರು ಬಲವಾನ
ಊರ್ವಿಯಲ್ಲಿ ಯಾರು ಬಲವಾನ। ಅಂತ
ಪಾರ್ವತಿ ಕೇಳತಾಳೊ ಗಂಡನ ॥ ೨ ॥

ಮಡದಿ ಮಾತು ಕೇಳಿ ಮೃಡನು ಹೇಳತಾನು
ಜಡಜನೇತ್ರಿ ಹೇಳುವೆ ನಾನಾ
ಜಡಜನೇತ್ರಿ ಹೇಳುವೆ ನಾನಾ। ಈ
ಪೊಡವಿಗೆ ಗಂಡನು ನರ ಅರ್ಜುನ ॥ ೪ ॥

ಅವನ ತಡವಿ ಈ ಭುವನದಿ
ಯಾರು ನೋಡಿಲ್ಲಾತನ ಬೆನ್ನಾ
ಯಾರು ನೋಡಿಲ್ಲಾತನ ಬೆನ್ನಾ। ಎಲೆ
ಆಯತಾಕ್ಷಿ ತಿಳಿಯಲೆ ನೀನಾ ॥ ೫ ॥

ಅಂಥ ಬಲಾಢ್ಯ ಪೃಥ್ವಿಯ ಮೇಲೆ
ಎಂಥವ ತೋರಿಸುವ ನನಗವನ
ಎಂಥವ ತೋರಿಸುವ ನನಗವನ। ಅಂತ
ಕಾಂತೆಮಣಿಯು ಕೇಳತಾಳು ಶಿವನ ॥ ೬ ॥

**ವಚನ :**

ಚಂದ್ರಧರ ಹೇಳುತಾನ ತನ್ನ ಹೆಂಡತಿಗೆ. ಆತಂದೆಲ್ಲ ಹೇಳ್ತೀನಿ ಕೇಳು ನಿನಗ. ಬಂಧುರ ಭರತಖಂಡದಲ್ಲಿ ಹಸ್ತಿನಾಪುರದಾಗ ಪಾಂಡುನಂದನನ ಮಗ ಪಾರ್ಥ ಅದಾನ ಬಲವಾನ. ಮಗಾ ತಪಾ ಮಾಡತಾನ ಬಾಣ ಬೇಕಂತ. ಚಪಲಾಕ್ಷ ನಾ ಹೋಗತೇನಿ ತುರ್ತಾ. ಗುಪ್ತಯೋಗ ಮಾಡತಾನ ಪರಿಪೂರ್ತಾ. ತಪದ ಭಾರದಿಂದ ನಾನಾದೇನನರ್ಥ.

**ಪದ :**

ತಡೆಯುವದಿಲ್ಲ ನಾ ಪೊಡವಿಪನ್ನುತ್ತರ
ಮಡದಿ ಕೇಳ ಹೋಗತೇನಿ ನಾನಾ
ಮಡದಿ ಕೇಳ ಹೋಗತೇನಿ ನಾನಾ। ಅವಗ
ಕೊಡುವೆ ಬೇಡಿದಂತಾ ಫಲಗಳನಾ ॥ ೭ ॥

**ವಚನ :**

ಮಾತಿನಿ ಹೇಳುತಾಳೊ ಶಂಕರಗ. ನಾನು ಬರುತ್ತೇನೆ ನೋಡಲಿಕ್ಕೆ ಆತನ ಹತ್ತಿರ. ಕೂನಾ ನೋಡುತ್ತೇನೆ ಆತನ ಭೀಕರ. ನನಗ ಬೆನ್ನ ತೋರಿಸಿರಿ ಆತನದು ಚೂರಾ.

**ಪದ :**

ಸೃಷ್ಠಿಗೀಶನೆ ನನ ಬಿಟ್ಟು ಹೋಗಬೇಡ
ಭೆಟ್ಟಿಯಾಗತೇನಿ ನಾನವನ
ಭೆಟ್ಟಿಯಾಗತೇನಿ ನಾನವನ । ಅಂತ
ಗಟ್ಟಿಪಾದ ಹಿಡಿದಾಳೊ ತಾನಾ ॥ ೮ ॥

**ವಚನ :**

ಪರಮೇಶ್ವರ ಹೇಳತಾನ ನಕ್ಕೊಂತ. ಹೇ ಗಿರಿಜೆ ಹೇಳತೇನಿ ಕೇಳ್ ಕಾಂತಾ. ತ್ವರೆಯಬೇಕು ರೂಪ ಎಲ್ಲ ಏಕಾಂತ. ಧರಿಸಬೇಕು ವೇಷ ಬೇಡರಂತ.

**ಪದ :**

ಬೇಡನ್ಹಂಗ ನಾ ರೂಪಮಾಡತೇನಿ
ಓಡ ನನಮುಂದ ಚಿಗರ‍್ಯಾಗಿ
ಓಡ ನನಮುಂದ ಚಿಗರ‍್ಯಾಗಿ । ಲಗು
ಕೂಡ ಅವನ್ಹಂತೆ ಓಡ್ಹೋಗಿ ॥ ೯ ॥

ಅಲ್ಲಿಂದ ನಿನಗೆ ತಿಳಿಸಿ ಹೇಳತೇನಿ
ಸೊಲ್ಲ ಕೇಳ ಬಹು ಸೊಗಸಾಗಿ
ಸೊಲ್ಲ ಕೇಳ ಬಹು ಸೊಗಸಾಗಿ । ನೀ
ಮೆಲ್ಲನೇಳ ಸ್ತ್ರೀ ಹರಣ್ಯಾಗಿ ॥ ೧೦ ॥

**ವಚನ :**

ಪರಮೇಶ್ವರನಂದ ಮಾತು ಕೇಳಿ ಪಾರ್ವತಿ ಕಬೂಲಾಗಿ, ಕೊಂಕಿನಿಂದ ನಿಂತಾಳೊ ಸಣ್ಣ ಚಿಗರ‍್ಯಾಗಿ. ಭಯಂಕರವಾಗಿ ನಿಂತಾನೋ ಶಿವನು ಬೇಡನಾಗಿ. ಝೇಂಕರಿಸ್ಯಾನು ಬಿಲ್ಲು ಬಾಣ ಬಹು ಸೊಗಸಾಗಿ. ಕಾಳಕೂಟ ವಿಷ ಮಾಡಿದ ಕಸ್ತೂರಿ ಗಂಧ ಬಾಳ ನೇತ್ರದೊಳ್ ಅಡಗಿಸಿಬಿಟ್ಟಾನೋ ಬಹುಚಂದ. ಹೇಳತಾನ ಪಾರ್ವತಿಗೆ ಲಗು ನಡಿ ಮುಂದ ಮುಂದ. ವ್ಯಾಳ್ಯವಾಗತೈತಿ ಪಾರ್ಥನ ಕಾಣುವದಾ.

**ಪದ :**

ಮೃಡನು ಶಂಕರಿ ನಡಿದರಿಬ್ಬರು
ಜೋಡಿಲೆ ಬ್ಯಾಡನ ರೂಪಾಗಿ

ಜೋಡಿಲೆ ಬ್ಯಾಡನ ರೂಪಾಗಿ | ದೂರ
ನೋಡಿದರು ಪಾರ್ಥಶಿವಯೋಗಿ ‖ ೧೧ ‖

ನೆತ್ತಿ ಮೇಲೆ ಜಡಿಸುತ್ತಿ ಕಾಂಬುವದು
ಸುತ್ತೆಲ್ಲ ಬೆಂಕಿ ನಿಗಿನಿಗಿ
ಸುತ್ತೆಲ್ಲ ಬೆಂಕಿ ನಿಗಿನಿಗಿ | ಅವನ
ಹತ್ತಿರ ನಿಂತಿತೊ ಚಿಗರ್‍ಹೋಗಿ ‖ ೧೨ ‖

ಪಾರ್ಥ ಸಾವುತೇನಿ ವ್ಯರ್ಥ ಕೊಲ್ಲತಾನ
ದೂರ್ಥ ಬ್ಯಾಟಿ ತಿಂಬುವ ಕಾಗಿ
ದೂರ್ಥ ಬ್ಯಾಟಿ ತಿಂಬುವ ಕಾಗಿ | ನಾನ-
ನರ್ಥ ಆಗತೇನಿ ಕಾಯೋಗಿ ‖ ೧೩ ‖

ದನಿಯು ಕೇಳಿ ಆ ಮುನಿಯು ಪಕ್ಕನೆ
ಕಣ್ಣು ತೆರೆದು ನೋಡಿದ ಬಾಗಿ
ಕಣ್ಣು ತೆರೆದು ನೋಡಿದ ಬಾಗಿ | ಹೆಣ್ಣು
ಚಿಗರಿ ಕಂಡಿತೋ ಎದುರಿಗೆ ‖ ೧೪ ‖

ಹೊಡೆಯಬ್ಯಾಡ ಎದಿ ಕೊಡುವದಿಲ್ಲ ಈ
ಪೊಡವಿಪ ಕ್ಷತ್ರಿಯ ವಂಶರಿಗೆ
ಪೊಡವಿಪ ಕ್ಷತ್ರಿಯ ವಂಶರಿಗೆ | ಮುಂದೆ
ಕೆಡಕು ತಂದಿರಿ ಮರಿಯಾದಿಗೆ ‖ ೧೫ ‖

ಇಷ್ಟು ವಚನವ ಗಟ್ಯಾಗಿ ಕೊಟ್ಟುದು
ಸ್ಪಷ್ಟ ತಿಳಿಯಿತೊ ಶಂಕರನಿಗೆ
ಸ್ಪಷ್ಟ ತಿಳಿಯಿತೊ ಶಂಕರನಿಗೆ | ಆಗ
ತಟ್ಟನೆ ಬಂದಾನೊ ಶಬರಾಗಿ ‖ ೧೬ ‖

ಎಲ್ಲಿ ಹೋತೊ ನನ್ನ ಹುಲ್ಲೆ ತೋರಿಸಂತ
ಪಾಲ್ಗುಣನನು ಕೇಳತಾನು ಕೂಗಿ
ಪಾಲ್ಗುಣವನನು ಕೇಳತಾನು ಕೂಗಿ | ಆಗ
ಪಾಲ್ಗುಣ ಹೇಳತಾನು ಸೊಗಸಾಗಿ ‖ ೧೭ ‖

**ವಚನ :**

ಎಲೈ ಧೂರ್ತನೆ ಕೇಳಬೇಕೆನ್ನ ಮಾತ. ಕ್ಷತ್ರಿಯ ವಂಶದಲ್ಲಿ ಹುಟ್ಟಿದ ಪಾರ್ಥ. ಮರ್ತಾದರು ಕೊಡಲಿಕ್ಕಿಲ್ಲ ಬೆನ್ನಿಗೆ ಬಿದ್ದ ತುತ್ತ. ತುರ್ತಕ್ಕೆ ಮಾಡಿ ತೋರೋ ನಿನ್ನ ಕಸರತ್ತ. ಯುದ್ಧದಲ್ಲಿ ಜಯಿಸಿ ಒಯ್ಯಬೇಕು ಚಿಗರಿಯ ಮರಿ. ಕದ್ದು ಒಯ್ದರೆ ಜೀವ ಹೋದೀತೊ ಹಾರಿ. ಶುದ್ಧ ಬಿಲ್ಲು ತೊಡು ಭಾರಿ. ಗುದ್ದಾಟ ಮಾಡಿ ಗೆದ್ದುಕೊಂಡು ಒಯ್ಯಬೇಕು ಹರಣಿಯ ಮರಿ.

**ಪದ :**

ಇಷ್ಟು ಕೇಳಿ ಶಿವ ಸಿಟ್ಟಿಗೆ ಎದ್ದಾನೊ
ತಟ್ಟನೆ ಯುದ್ಧಕ ನಿಲ್ಲಂದ
ತಟ್ಟನೆ ಯುದ್ಧಕ ನಿಲ್ಲಂದ । ವಳೆ
ಗಟ್ಟಿಬಾಣ ಬಿಟ್ಟನು ಒಂದ ॥ ೧೮ ॥

ಅರ್ಜುನನ ನೋಡಿ ಘರ್ಜಿಸಿ ನುಡಿದನು
ಮರ್ಜಿ ಹಿಡದಿದ್ದೆನು ನಾನಿಂದ
ಮರ್ಜಿ ಹಿಡದಿದ್ದೆನು ನಾನಿಂದ । ನೀ
ದುರ್ಜನ ಆದಿಯಂತ ಸಿಟ್ಟಾದ ॥ ೧೯ ॥

ಎದಿಯ ಜಗ್ಗಿ ಶಿವ ಮದನಾರಿ ಬ್ಯಾಡವ
ಎದಿಗೆಬಾಣ ಹೊಡಿದನೊ ಜಲದ
ಎದಿಗೆ ಬಾಣ ಹೊಡದನೊ ಜಲದ । ಶಿವ
ಬೆದರಿ ನಿಂತು ಬಾಣವ ತೆಗೆದ ॥ ೨೦ ॥

ನೋಡಲೆ ಪಾರ್ಥ ಬ್ಯಾಡನ ಕೈಯೊಂದು
ಮಾಡತೇನಿ ವಳೆ ಕಷ್ಟಂದ
ಮಾಡತೇನಿ ವಳೆ ಕಷ್ಟಂದ । ಜೋಡ
ಜೋಡ ಬಾಣ ಹೊಡಿದನೊ ದುಂದ ॥ ೨೧ ॥

ಹೊಡಿದ ಬಾಣವನು ಕಡಿದು ಪಾರ್ಥನು
ಆಡತಾನ ಬ್ಯಾಡನ ಮುಂದ
ಆಡತಾನ ಬ್ಯಾಡನ ಮುಂದ । ನೀ
ಓಡಿ ಹೋಗಲೆ ಇಲ್ಲಿಂದ ॥ ೨೨ ॥

ನಕ್ಕು ನರನು ಒಂದು ಚಿಕ್ಕ ಬಾಣದಿಂದ
ಮುಕ್ಕಣ್ಣಗ ಬಿಟ್ಟನೊ ಸರದ
ಮುಕ್ಕಣ್ಣಗ ಬಿಟ್ಟನೊ ಸರದ । ಆಗಿ
ದಕ್ಕಿ ಹತ್ತಿ ಶಿವ ತಾನೊಂದ ॥ ೨೩ ॥

ಬಗ್ಗಿ ಬಾಣದ ಕೀಲ ಜಗ್ಗಿ ಶಿವ
ಡೊಗ್ಗಾಲಮಂಡಿ ಹೂಡಿದಾ
ಡೊಗ್ಗಾಲಮಂಡಿ ಹೂಡಿದಾ | ಜಗ್ಗಿ
ಜಗ್ಗಿ ಪಾರ್ಥನಿಗೆ ತಗಿದೊಗಿದಾ      || ೧೪ ||

ನೋಡಿ ಪಾರ್ಥ ಜೋಡಿಸಿ ಬಿಲ್ಲು
ಬ್ಯಾಡನೆದಿಗೆ ಬಿಟ್ಟನೊ ಜಲದಾ
ಬ್ಯಾಡನೆದಿಗೆ ಬಿಟ್ಟನೊ ಜಲದ | ಇದ
ನೋಡತಾಳೊ ಪಾರ್ವತಿ ಮೋದ   || ೧೫ ||

ಬಾಣದ ಪೆಟ್ಟಿಗೆ ತ್ರಾಣಗುಂದಿ ಶಿವ
ಕ್ಷೋಣಿಗೆ ಕುಂತು ಪಾರ್ಥನಿಗಂದಾ
ಕ್ಷೋಣಿಗೆ ಕುಂತು ಪಾರ್ಥನಿಗಂದಾ | ಬಿಲ್ಲು
ಬಾಣ ಬಿಟ್ಟು ಕುಸ್ತಿಗೆ ಕರದ || ೧೬ ||

**ವಚನ :**

ಮುಷ್ಠಿ ಯುದ್ಧ ಮಾಡ್ಯಾರು ಬಹುಚಂದ. ಸೃಷ್ಟಿಪತಿ ಶಿವನು ಖುಸಿಲಿಂದ. ಪೆಟ್ಟಿಗೆಪೆಟ್ಟು ಕೊಟ್ಟಾರೊ ಬಹು ಹೊಂದಕಿಲಿಂದ, ಬಿಟ್ಟಾರೊ ಮುಷ್ಠಿ ಯುದ್ಧ ಅಲ್ಲಿಂದ.

**ಪದ :**

ಮಲ್ಲಯುದ್ಧ ವಳೆ ಬಲ್ಲಿದ ದೇವ
ಫುಲ್ಲಲೋಚನನು ತಾ ಕರದ
ಫುಲ್ಲಲೋಚನನು ತಾ ಕರದ | ವಳೆ
ಬಲ್ಲಿದ ನರ ಬಂದನೊ ಮುಂದ      || ೧೭ ||

ರಟ್ಟಿ ಹಿಡಿದು ಕೈಕಟ್ಟಿ ವಗೆಯುತಾನ
ದಿಟ್ಟ ಪಾರ್ಥ ಬ್ಯಾಡನ ಹಿಡಿದ
ದಿಟ್ಟ ಪಾರ್ಥ ಬ್ಯಾಡನ ಹಿಡಿದ | ಕಾಲ
ಕಟ್ಟಿ ಶಿವನು ತಾ ಕಡಿಗಾದ || ೧೮ ||

ಬುಡುಕಬಿದ್ದು ಶಿವ ಕಾಲತೊಡಕ ಹಾಕಿ
ನಡಕ ತೆಕ್ಕಿ ಹಾಕಿದನೊ ಬಂದಾ
ನಡಕ ತೆಕ್ಕಿ ಹಾಕಿದನೊ ಬಂದಾ | ವಳೆ
ದುಡುಕಿ ಹೊಡೆದು ನಿಂತಾನು ಬಂದಾ        || ೧೯ ||

ಬರಪುರ ಶಿಟ್ಟಾಗಿ ಭಕಾಶಿ ಪಾರ್ಥ
ಪುರಮಾಶಿ ತಲೆಮಟ ಹೊತ್ತೆದ್ದಾ
ಪುರಮಾಶಿ ತಲೆಮಟ ಹೊತ್ತೆದ್ದಾ । ಶಿವ
ತರಹರಿಸುತ ಭೂಮಿಗೆ ಬಿದ್ದಾ ॥ ೨೦ ॥

ಹರನು ನರನ ಅಂಗಿ ಹರಿದು ಪಾರ್ವತಿಗೆ
ನೋಡಂತ ಬಿದ್ದುಕೊಂಡು ತಾ ಕರೆದ
ನೋಡಂತ ಬಿದ್ದುಕೊಂಡು ತಾ ಕರೆದ । ಶಿವೆ
ನೋಡತಾಳೊ ತ್ವರಿತದಿ ಬಂದಾ ॥ ೨೧ ॥

ಅವನ ಮೇಲೆ ಹರಿದು ಅಂಗಿ ಮೈ
ತೆರೆದದ್ದು ಕಂಡಳು ಬಹುಚಂದ
ತೆರೆದದ್ದು ಕಂಡಳು ಬಹುಚಂದ । ಉಮೆ
ನರನ ಬೆನ್ನು ನೋಡಿದಳಂದ ॥ ೨೧ ॥

**ವಚನ :**

ಮೈ ಬೆನ್ನು ತೋರಿದ ಕೂಡಲೆ ಮಾಯವಾದ ಶಂಕರತಾನಾ. ಬೆನ್ನಿಗ ಪಾರ್ಥ ನೋಡಿದನಾಗ, ಹರಹರ ಎನ್ನಪರಾಧ ಕ್ಷಮಿಸಬೇಕೊ ಅಂತಾ. ಚೆನ್ನಾಗಿ ಮಾಡ್ತಾನ ಸ್ತೋತ್ರ.

**ಪದ :**

ಮಾರಹರ ಮದನಾರಿ ಕೃಪಾನಿಧಿ
ಪೂರ ಕಾಯಬೇಕು ಬಾಲನ್ನ
ಪೂರ ಕಾಯಬೇಕು ಬಾಲನ್ನ । ನಿಮ್ಮ
ಬೇರು ತಿಳಿಯದಂತ ಅಧಮನ್ನ ॥ ೨೨ ॥

ಕೂಸು ಮರವಿ ತಿಂಬೊ ಪಾಶಕ್ಕೆ ಶಿಲ್ಕಿಂದೆ
ಬ್ಯಾಸರ ಮಾಡದೆ ಕಾಯೆನ್ನ
ಬ್ಯಾಸರ ಮಾಡದೆ ಕಾಯೆನ್ನ । ತಂದೆ
ನೀಲಕಂಠನೆ ಈ ಪಾರ್ಥನ್ನ ॥ ೨೪ ॥

ಸ್ತೋತ್ರಕೆ ಶಂಕರ ಪ್ರತ್ಯಕ್ಷವಾಗುತ
ಪಾರ್ಥಗ ಮೆಚ್ಚಿದ ಶಿವ ತಾನು
ಪಾರ್ಥಗ ಮೆಚ್ಚಿದ ಶಿವ ತಾನು । ಬಹು
ಆರ್ಥಿಲೆ ಕೊಟ್ಟನೊ ಅಸ್ತ್ರವನ ॥ ೨೫ ॥

ಪಾಶುಪತಾಸ್ತ್ರವ ಪಾರ್ಥಗ ಕೊಡುವುತ
ಪಾರ್ವತಿ ಸಂಗಡ ಹೊರಟಾನು
ಪಾರ್ವತಿ ಸಂಗಡ ಹೊರಟಾನು । ಇತ್ತ
ಪಾರ್ಥ ಗಜಪುರಕೆ ನಡೆದಾನು ॥ ೩೮ ॥

## ಭೃಂಗಿ

ಪರಮಾನಂದ ಪರಮೇಶ್ವರ ಪಾರ್ವತಿ
ಹರ ಗುರುಪಾದಕ ನಮೋ ನಮೋ ॥ ಪ ॥

ಕಂದ ಕೇಳತಾನ ಕುಂದುಗೊರಳನ ತಾ
ಒಂದಿನ ಮಾಡಿದ ಕಥನವನಾ
ಒಂದಿನ ಮಾಡಿದ ಕಥನವನಾ । ಗಣ-
ವೃಂದಗೊಳಗೆ ನುಡಿದ್ಹಾಡುವೆನಾ ॥ ೧ ॥

ಗಂಗಾಧರ ಶ್ರೀಮಂಗಲಗೌರಿ
ಪಿಂಗದೆ ಏರುತ ಗಾದಿಯನಾ
ಪಿಂಗದೆ ಏರುತ ಗಾದಿಯನಾ । ಶಿವ
ಪುಂಗ ಭೃಂಗಿ ಬಂದನು ತಾನಾ ॥ ೨ ॥

ನೆಟ್ಟಗೆ ತನ್ನ ನಾಂಟ್ಯವನಾಡಿ
ಒಂಟಿ ಮಾಡಿದ ಮುಜುರಿಯನಾ
ಒಂಟಿ ಮಾಡಿದ ಮುಜರಿಯನಾ । ತಾ
ಒಂಟಿಗೈಯಲೆ ಸಾಷ್ಟಾಂಗವನಾ ॥ ೩ ॥

ಗಿರಿಜೆ ನೋಡಿ ಮನ ತರಹರಗೊಳ್ಳುತ
ಹರನಿಗ್ಹೇಳತಾಳೊ ತಾ ಆದನಾ
ಹರನಿಗ್ಹೇಳತಾಳೊ ತಾ ಆದನಾ । ಪುರ
ಹರನೆ ನೋಡು ಈ ಶರಣವನ ॥ ೪ ॥

ಏಕೊ ದೇವ ಪರಬ್ರಹ್ಮನೆ ಸಾಕಂತ
ಬೇಕಂದ ಮಾಡಿದ ಶರಣವನ
ಬೇಕಂತ ಮಾಡಿದ ಶರಣವನ । ಅವ
ಗ್ಯಾಕ ಕೊಟ್ಟರಿ ಇಷ್ಟು ಸಲುಗಿಯನ ॥ ೫ ॥

ನನ್ನ ಮಾಸ ನನ್ನ ಮಜ್ಜದಿಂದ ಇವ
ಉನ್ನತವಾಗಿ ಬೆಳೆದಾನು
ಉನ್ನತವಾಗಿ ಬೆಳೆದಾನು । ಇವ
ನನ್ನ ಬಿಟ್ಟು ಎಲ್ಲಿ ಹೋಗುವನು ॥ ೭ ॥

ಪಾರ್ವತಿ ಮಾತಿಗೆ ಹರನು ಹೇಳತಾನು
ಶರಣರ ಸ್ಥಿತಿ ಆರಿದಿಲ್ಲ ನೀನು
ಶರಣರ ಸ್ಥಿತಿ ಆರಿದಿಲ್ಲ ನೀನು । ಅವರಿಗೆ
ಸರಿಸಮ ಆಗಲಾರೆ ನೀನು ॥ ೭ ॥

ಆಡಿದ ಮಾತಿಗೆ ಮೃಡಾಣಿ ಹೇಳತಾಳು
ತಡೆದು ನೋಡ್ರಿ ಎನ್ನ ಶಕ್ತಿಯನು
ತಡೆದು ನೋಡ್ರಿ ಎನ್ನ ಶಕ್ತಿಯನು । ಅಂತ
ಮಾಡಿದಾಳೊ ಒಂದು ಯುಕ್ತಿಯನು ॥ ೮ ॥

ಮಜ್ಜ ಮಾಂಸವೆಲ್ಲ ನನ್ನದೆಂದು ತಾ
ಜಗ್ಗಿ ಮಾಡಿಕೊಂಡು ಕಪಟವನ
ಜಗ್ಗಿ ಮಾಡಿಕೊಂಡು ಕಪಟವನ । ಒಳೆ
ಹಿಗ್ಗಿ ಬಿಟ್ವಾಳ ಬಿರಗಾಳಿಯನಾ ॥ ೯ ॥

ಎಲಬು ತೊಗಲು ಎರಡು ಉಳಿದವೊ ಭೃಂಗಿ
ಹೊಲಬುಗೆಟ್ಟು ನಿಂತನು ತಾನಾ
ಹೊಲಬುಗೆಟ್ಟು ನಿಂತನು ತಾನಾ । ಒಳೆ
ಬಲ್ಮಿ ಶಿವನ ಸ್ತುತಿ ಮಾಡಿದನಾ ॥ ೧೦ ॥

ನಿರಂಜನನೆ ನಿರೂಪನೆ ನಿಶ್ಚಲ
ನಿಗಮಾತೀತನೆ ಕಾಯೋ ಎನ್ನ
ನಿಗಮಾತೀತನೆ ಕಾಯೋ ಎನ್ನ । ಬಹು
ನಿರ್ಭಯ ನಿನ್ನಯ ಮಗ ನಾನಾ ॥ ೧೧ ॥

ಗಾಳಿಯ ಜೋಲಿಗೆ ತಾಳದೆ ಭೃಂಗಿ
ಮೇಲಕೆ ಹಾರುತ ನಿಂತಾನ
ಮೇಲಕೆ ಹಾರುತ ನಿಂತಾನ । ಶಿವ
ಶೂಲಧರನ ನೋಡಿದ ತಾನ ॥ ೧೨ ॥

ಮಂಗಲ ಶಿವ ತಾ ಭೃಂಗಿಯ ನೋಡುತ
ಪಿಂಗದೆ ಕೈಯನ ಬೆತ್ತವನಾ

ಪಿಂಗದೆ ಕೈಯನ ಬೆತ್ತವನಾ । ಗುರು
ಸಂಗಮೇಶ ಹಿಂದ ಹಚ್ಚಿದನಾ ॥ ೧೩ ॥

ಚಿಕ್ಕ ಭೃಂಗಿಗೆ ಮುಕ್ಕಾಲುವಾದಿತು
ನಕ್ಕೊಂತ ಗಟ್ಯಾಗಿ ನಿಂತಾನು
ನಕ್ಕೊಂತ ಗಟ್ಯಾಗಿ ನಿಂತಾನು । ತಾ
ಮುಕ್ಕಣ್ಣನ ಸ್ತುತಿ ಮಾಡಿದನು ॥ ೧೪ ॥

ಜಗದ್ಗುರು ಜಗದೀಶ ಪಶುಪತಿ
ಬಗಳಾಂಬಿಯ ಮನೋಹರ ನೀನಾ
ಬಗಳಾಂಬಿಯ ಮನೋಹರ ನೀನಾ । ನಿಮ್ಮ
ಮಗನು ನಾನು ರಕ್ಷಿಸು ಎನ್ನಾ ॥ ೧೫ ॥

ಮುಕ್ಕಾಲು ಭೃಂಗಿ ಚಿಕ್ಕಮಾತ ಕೇಳಿ
ನಕ್ಕನಾಗ ಶಂಕರ ತಾನಾ
ನಕ್ಕನಾಗ ಶಂಕರ ತಾನಾ । ನಿನ್ನ
ಸೊಕ್ಕು ಮುರಿಯಿತು ಪಾರ್ವತಿ ಇನ್ನಾ ॥ ೧೬ ॥

ಹರನ ಮಾತು ಕೇಳಿ ಗೌರಿಯು ಮನದಾಗ
ಮರುಗಿ ನಾಚಿ ತಗ್ಗಿಸಿ ತೆಲಿನಾ
ಮರುಗಿ ನಾಚಿ ತಗ್ಗಿಸಿ ತೆಲಿನಾ । ಶರಣ-
ರಡಿಗೆ ಎರಗ್ಯಾಳೊ ತಾನಾ ॥ ೧೭ ॥

**ವಚನ :**

ಕಂದುಗೊರಳಗ್ಹೇಳತಾಳ ಪಾರ್ವತಿ, ಶರಣರ ಕಿಮ್ಮತ್ತು ತಿಳಿಯದೆ ಆಡಿದೆ ಹುಸಿ ಮಾತಾ. ಕಳೆಯಬೇಕು ನನ್ನ ದುರ್ಮತ. ತಿಳಿಯದಿದು ಕರುಣ ನಮ್ಮ ಮೇಲೆ ಮಮತಾ. ಶರಣರಲ್ಲಿ ನೀಚತನವಿರದಿದ್ದು ನಿಜವು. ಶರಣರ ಪ್ರಾಣವೇ ನಿನ್ನ ಪ್ರಾಣ. ನಿಮ್ಮ ಶರಣಂಗೆ ಶರಣು. ತ್ರಾಹಿ ತ್ರಾಹಿ ತ್ರಾಹಿ ಶಿವ ಕಾಯೋ ದಯಾನಿಧಿ ಕರುಣದಿಂದ ಕಾಯೋ ಎನ್ನ. ಕರುಣದಿಂದ ಕಾಯೋ ಪರಿಪೂರ್ಣ. ಆಯತಾಕ್ಷ ನಿಮ್ಮವಳನ್ನಾ.

**ಪದ :**

ಕರುಣದಿ ಶಂಕರ ಕರೆದು ಪಾರ್ವತಿಗೆ
ಹರುಷ ತೋರಿದನು ಆಕ್ಷಣ
ಹರುಷ ತೋರಿದನು ಆಕ್ಷಣ । ಇಂಥ
ಶರಣರ ಕಥೆಯೊಳಗಿನ ಕವನ ॥ ೧೮ ॥

* * *

## ವೀರಗಾರರು

ವೀರಗಾರರು ಬಂದಾರಪ್ಪ
ಧೀರರಾಗಿ ಇಲ್ಲೆ ನಿಂತಾರೊ
ಧೀರರಾಗಿ ಇಲ್ಲೆ ನಿಂತಾರಪ್ಪ
ಸೂರನಾಗಿ ಪದಹೇಳು

ಸೂರನಾಗಿ ಪದ ಹೇಳುವೆ ಸ್ವಾಮಿ
ಹಾಡುವನ ಮೇಲೆ ದಯವಿರಬೇಕು
ಹಾಡುವನ ಮೇಲೆ ದಯವಿರಬೇಕು ಸ್ವಾಮಿ
ಅಡ್ಡದಾಗಿ ಅಲ್ಲಂತ್ಹೇಳು

ಸುಳ್ಳರ ಹೇಳತೀವಿ ಕರೇನರ ಹೇಳತೀವಿ
ನಮ್ಮ ತಪ್ಪು ನಿಮ್ಮ ಮ್ಯಾಲಯ್ಯ
ನಮ್ಮ ತಪ್ಪು ನಿಮ್ಮ ಮ್ಯಾಲೆ ಹಾಕಿ
ದೈವಕ ಸಲಾಮ ಮಾಡತೀವರಿ

ದೈವವೆಂದರೆ ದೇವರಪ್ಪ
ದೈವಕ ಮಿಕ್ಕಿದವನ್ಯಾರೇಳು
ಕಾಲಾಗ ಗೆಜ್ಜಿ ಕಟ್ಟ್ಯಾರಪ್ಪ
ಟೊಂಕಕೆ ಡೊಳ್ಳು ಬಿಗಿದಾರೊ

ಟೊಂಕಕೆ ಡೊಳ್ಳು ಬಿಗಿದಾರಪ್ಪ
ಕೈಮಾಡಿ ಪದ ಹೇಳುವರು
ಕೈಮಾಡಿ ಪದ ಹೇಳುವೆ ಸ್ವಾಮಿ
ಹಾಡ ಮೇಲೆ ದಯವಿರಬೇಕು

ಹಾಡ ಹಾಡಿದರ ಬಾಯಾಕ ತಗಿತೀರಿ
ನೀವೊಂದು ಸವಾಲು ಹೇಳಯ್ಯ

## ಏಳುಕೊಳ್ಳದ ಎಲ್ಲಮ್ಮ

ಭಕ್ತಿವಂತರೆಲ್ಲ ಸಿಸ್ತಿಲೆ ಕೂಡಿರಿ
ಚಿತ್ತಿಟ್ಟ ಕೇಳಿರಿ ಕತಿ ಒಂದ।

ಏಳುಕೊಳ್ಳದ ರೇಣುಕೆ ಮಹಾತ್ಮೆಯ
ಕತಿ ಹೇಳುವೆ ನಾ ನಿಮ್ಮುಂದಾ ‖ ೧ ‖

ಒಂದು ದಿವಸ ವೈಕುಂಠ ಲೋಕದೊಳು
ಶೇಷಶಾಹಿಯಾದ ಮುಕ್ಕುಂದ ।
ಚಿಂತಿಯಿಲ್ಲದೆ ಸಂತೋಷದಿಂದ
ಶೇಷನ ಮ್ಯಾಲ ಮಲಗಿದ್ದ ‖ ೨ ‖

ಸಿರಿದೇವಿಯು ಸೇವೆಯ ಮಾಡುತ
ಪಾದವನೊತ್ತುತ ಮುದದಿಂದ ।
ಲಕ್ಷ್ಮಿದೇವಿಯು ಪತಿಗೆ ಕೇಳತಾಳ
ತನ್ನ ಮನದಾನ ಮಾತೊಂದ ‖ ೩ ‖

ಇಬ್ಬರ ಒಳಗ ಯಾರು ಶ್ರೇಷ್ಠರು
ಎಂಬುದು ಹೇಳಿರಿ ನನ್ನ ಮುಂದ ।
ನನಕಿಂತ ಶ್ರೇಷ್ಠರು ಜಗದೊಳಗ್ಯಾರಿಲ್ಲ
ವಿಷ್ಣು ಲಕ್ಷ್ಮಿಗೆ ಹೇಳಿದ ‖ ೪ ‖

ಮಧುಕೈಟಭ ಸೋಮಕಯಗ್ರಿವ
ದುಷ್ಟ ರಕ್ಕಸರನು ನಾ ಕೊಂದೆ ।
ಹಿರಣಾಕ್ಷ ಹಿರಣ್ಯಕಶಪ
ಮಣ್ಣು ಮುಕ್ಕಿದಾರ ನನ್ನಿಂದ ‖ ೫ ‖

ಅಂದಮ್ಯಾಲ ಯಾರು ಶ್ರೇಷ್ಠರೆಂಬುದು
ತಿಳಿದುನೋಡ ಲಕ್ಷ್ಮಿ ನೀ ಮುಂದಾ ।
ರಕ್ಷಕನೆಂಬ ಬಿರುದನು ನಾನು
ಧರಿಸಿ ಬಂದೆನು ಆದಿಯಿಂದ ‖ ೬ ‖

ನಿನಕಿಂತ ನಾನು ಶ್ರೇಷ್ಠ ಇರುವೆನು
ಕೇಳಬೇಕ ನೀ ಮುಕ್ಕುಂದ ।
ತ್ರಿಮೂರ್ತಿ ನೀವು ಕೂಸ ಇರುವಾಗ
ಮೊಲೆಯುಣಿಸಿದೆನು ಮುದದಿಂದಾ ‖ ೭ ‖

ಮಹಿಷ ಶುಂಭ ನಿಶುಂಭ ರಕ್ತಬೀಜ
ಸಂಹಾರ ಆದದ್ದು ಯಾರಿಂದಾ ।
ಆದಿಶಕ್ತಿಯೆಂಬ ಬಿರುದನು ಧರಿಸಿ
ಜಗದೊಳು ಆದೆನು ಪ್ರಸಿದ್ಧ ‖ ೮ ‖

ಅಂದಮ್ಯಾಲ ಯಾರು ಶ್ರೇಷ್ಠರೆಂಬುದು
ನೋಡಿಕೊಳ್ಳಬೇಕ ನೀ ತಿಳಿದಾ ।
ನಾ ಹೆಚ್ಚ ನೀ ಹೆಚ್ಚ ಅನ್ನುತ ಇಬ್ಬರು
ಜೋರಿಲೆ ನಡಿಶ್ಯಾರು ವಾಗ್ವಾದ ‖ ೯ ‖

**ವಚನ :**

ಕೇಳ ಶಾಹಿರ, ವೈಕುಂಠ ಲೋಕದಾಗ ಲಕ್ಷ್ಮಿ-ನಾರಾಯಣರದು ನಡಿವಂಥ ವಾದಾ. ಆಕಾಶಮಾರ್ಗದಿಂದ ಹೋಗುವ ನಾರದನು ಕೇಳಿದಾ. ಇವರಿಬ್ಬರ ನ್ಯಾಯದಾಗ ತಾ ಹೋಗಬೇಕೆಂದಾ. ವೈಕುಂಠಕ್ಕೆ ಹೋಗಿ ನ್ಯಾಯದ ಬೀಜಾ ಊರಿದಾ. ಇದರಲ್ಲಿ ಯಾರ್‍ಯಾರು ಏನೇನು ಮಾಡುವಿರಿ ಅಂತಾ ಕೇಳಿದಾ. ಆಮ್ಯಾಲೆ ನಿರ್ಣಯ ಹೇಳತೇನಂತ ವಚನ ನೀಡಿದಾ. ವಿಷ್ಣು ಲಕ್ಷ್ಮಿಯರು ಮಾಡಿದ ಕೀರ್ತಿಯ ಹೇಳಿದಾರ ಒಳೆಪಸಂದಾ.

**ಪದ :**

ಇಬ್ಬರು ಮಾಡಿದ ಕೀರ್ತಿಯ ಕೇಳಿ
ಹುಸಿನಗಿ ನಗುತ ನಾರದನು ।
ಲೋಕ ಕಲ್ಯಾಣ ಮಾಡುವ ಸಲುವಾಗಿ
ಅಕಲ ಹಾಕಿದಾನ ನಾರದನು ‖ ೧೦ ‖

ರಕ್ಷಣೆ ಮಾಡಿದ ವಿಷ್ಣು ನಿನಗೆ
ಸಹಾಯ ಮಾಡಿದವನ ಹೆಸರೇನು ।
ನನಗ್ಯಾರು ಸಹಾಯ ಮಾಡಿಲ್ಲ ನಾರದಾ
ತಿಳಿದು ಕೇಳತಿದಿ ನನ್ನನ್ನು ‖ ೧೧ ‖

ಸುದರ್ಶನ ಚಕ್ರದ ಸಹಾಯದಿಂದ
ದೈತ್ಯರೆಲ್ಲರನು ಕೊಂದಿ ನೀನು ।
ಚಕ್ರ ಇಲ್ಲದಿದ್ರ ವಿಷ್ಣು ನಿನ್ನನು
ಯಾರ ಕೇಳತಿದ್ರು ಅಂದಾನು ‖ ೧೨ ‖

ಇಷ್ಟ ಕೇಳಿ ಚಕ್ರ ಹೆಮ್ಮಿಯಲಿಂದ
ಗಿರಗಿರ ತಿರುಗುತ್ತ ನಿಂತಿಹನು ।
ತಿರುಗುವ ಚಕ್ರವ ನೋಡಿದ ವಿಷ್ಣು
ಸಿಟ್ಟು ಬೆಂಕ್ಯಾಗಿ ಅಂದಾನು ‖ ೧೩ ‖

ಭೂಲೋಕದೊಳಗ ಮಾನವನಾಗಿ
ಹುಟ್ಟಿ ಬಾ ಹೋಗು ನೋಡುವನ ।

ಸಾವಿರ ಭುಜಗಳ ಶಕ್ತಿಯ ತಾಳಿ
ಕಾರ್ತವೀರನಾಗಿ ಜನಿಸಿದನು ॥ ೧೪ ॥

ಆದೆಂಥ ಸುದ್ದಿಯ ನೋಡಿ ನಾರದಾ
ಕೈಲಾಸಪತಿ ಮುಂದ ಹೇಳಿದನು ।
ಕೈಲಾಸಪತಿಯು ಪಾರ್ವತಿ ಸಹಿತ
ಭೂಲೋಕದಲ್ಲಿ ಬಂದಿಹನು ॥ ೧೫ ॥

ರಾಮಶೃಂಗ ಪರ್ವತದೊಳು
ಜಮದಗ್ನಿ ಋಷಿಯಾಗಿ ಇರುತಿಹನು ।
ಹಣೆಯ ಮ್ಯಾಲೊಂದು ಕಣ್ಣನು ಧರಿಸಿ
ತಪಶ್ಚರ್ಯವ ಮಾಡುವನು ॥ ೧೬ ॥

ಭರತಖಂಡದ ಉತ್ತರ ಭಾಗದಿ
ಕಾಶ್ಮೀರವೆಂಬ ದೇಶವನು ।
ರೇಣುಕನೆಂಬ ಅರಸನು ಇರುವನು
ಕಾಳಿಕಾದೇವಿಯ ಭಕ್ತನು ॥ ೧೭ ॥

ಅರಸರ ಭಕ್ತಿಗೆ ಮೆಚ್ಚಿ ಕಾಳಿಕಾ
ಕೊಟ್ಟಾಳ ಪುತ್ರಿಯ ದಾನವನು ।
ಪಾರ್ವತ ದೇವಿಯು ಜನಿಸಿ ಬಂದಳು
ರೇಣುಕೆಯೆಂಬ ನಾಮದಲಿ ॥ ೧೮ ॥

**ವಚನ :**

ಕೇಳ ಶಾಹಿರ, ರೇಣಿಕಾದೇವಿ ತಂದೆಯಾದ ರೇಣಿಕರಾಜನು ಬಹಳ ಅಕ್ಕರತೆಯಿಂದ ಪಾಲನೆ ಮಾಡುತ್ತಿದ್ದನು. ರೇಣುಕೆಯು ದೊಡ್ಡವಳಾದ ಮೇಲೆ ರಾಜನು ತಕ್ಕ ವರ ಇಲ್ಲವೆಂದು ಚಿಂತಿಮಾಡುತ್ತಿದ್ದನು. ಒಂದು ದಿವಸ ನಾರದ ಅಲ್ಲಿಗೆ ಬಂದಾನು. ರೇಣುಕೆಗೆ ತಕ್ಕ ವರ ಜಮದಗ್ನಿ ಋಷಿಯೆಂದು ಅರುಹಿದನು. ರೇಣುಕ ರಾಜನು ಮಗಳನು ಕರಕೊಂಡು ಜಮದಗ್ನಿ ಹಂತ್ಯಾಕ ಬಂದಾನು.

**ಪದ :**

ಜಮದಗ್ನಿ ಕಂಡು ರೇಣುಕರಾಜನು
ಬಂದ ಅರಿಕೆಯ ತಿಳಿಸಿದನು ।
ಗಾಂದರ್ವ ವಿವಾಹ ಆಗಲಿಯೆಂದು
ಜಮದಗ್ನಿ ಋಷಿಯು ಹೇಳಿದನು ॥ ೧೯ ॥

ತೆಲಿಗೆ ಎಣ್ಣಿಯ ಹಚ್ಚಿ ರೇಣುಕಾ
ಕುಂಡಲ ಸ್ನಾನವ ಮಾಡೆಂದನು ।
ತರುಣಿ ತೀರ್ಥದಿ ಸ್ನಾನ ಆದಮ್ಯಾಲ
ಎಣಿಗೊಂಡ ಅಂತ ಕರೆದಿಹನು ॥ ೨೦ ॥

ಗಾಂದರ್ವ ವಿಧಿಯಂತೆ ಲಗ್ನ ಆದಮ್ಯಾಲ
ಸುಖದಿಂದ ಸಂಸಾರ ನಡಿಸಿದನು ।
ಸುಲೋಚನ ಉಲೋಚನ ಬ್ರಿಲ್ಲೋಚನ ರಾಮ
ನಾಲ್ವರು ಮಕ್ಕಳ ಪಡದಿಹನು ॥ ೨೧ ॥

ಸಾಕ್ಷಾತ್ ವಿಷ್ಣು ಜಮದಗ್ನಿ ರೇಣುಕಾಗ
ರಾಮನಾಗಿ ಜನ್ಮತಾಳಿದನು
ಜನನಿಜನಕರಿಗೆ ಬೇಕಾಗಿ ರಾಮಾ
ಸಕಲ ವಿದ್ಯವ ಗಳಿಸಿದನು ॥ ೨೨ ॥

ಒಂದು ದಿವಸ ಆ ಕಂದ ರಾಮನು
ತಂದೆಗೆ ವಂದಿಸಿ ಪೇಳಿದನು ।
ತಂದೆಯೆ ನಾನು ತಪವ ಮಾಡಲು
ವಿಂದ್ಯಾದ್ರಿಗೆ ಹೋಗುವೆನು ॥ ೨೩ ॥

ಹೋಗುವಾಗ ರಾಮ ಜನನಿ ಜನಕರಿಗೆ
ರಾಮವೆಂದರೆ ನಾನು ಬರುವೆನು ।
ತಂದೆತಾಯಿಯ ಅಪ್ಪಣೆ ಪಡೆದು
ವಿಂದ್ಯಾದ್ರಿ ಗುಡ್ಡಕ ನಡಿದಾನು ॥ ೨೪ ॥

ಏಕನಿಷ್ಟದಿಂದ ಕಠಿಣ ತಪವ ಮಾಡಿ
ನೀಲಕಂಠನನು ಒಲಿಸಿದನು ।
ಏನು ವರಗಳ ಬೇಡುತಿ ರಾಮಾ
ಬೇಡಿದ ವರಗಳ ಕೊಡುವೆನು ॥ ೨೫ ॥

ಸಕಲ ವಿದ್ಯವ ಪಾಲಿಸು ದೇವ
ಅದರಿಂದ ಸಂತುಷ್ಟನಾಗುವೆನು ।
ಮಹದೇವ ತಾನು ವಿಚಿಯಾರಮಾಡಿ
ರಾಮಗ ವರಗಳ ಕೊಡಿತಿಹನು ॥ ೨೬ ॥

ಒಂದು ಪರಶು ಒಂದು ಧನುಷ್ಯವನ್ನು
ಧರಿಸಬೇಕೆಂದ ನೀನಿನ್ನು ।

ಇಂದಿನಿಂದ ನೀನು ರಾಮನಲ್ಲ
ಪರುಶುರಾಮನಂತೆ ಕರೆಯುವೆನು ॥ ೧೭ ॥

ನನ್ನ ಅವತಾರ ಎಂದು ಮುಗಿಸಬೇಕು
ಹೇಳಬೇಕಪ್ಪ ತಂದೆ ನೀನು ।
ಧನುಸ್ಸು ಮುರಿದರೆ ನಿನ್ನ ಅವತಾರ
ಮುಗಿಯಿತೆಂದ ಶಿವ ಹೇಳಿದನು ॥ ೧೮ ॥

**ವಚನ :**

ಕೇಳ ಶಾಹಿರ, ಶಿವನಿಂದ, ವರಗಳ ಪಡೆದ ಪರಶುರಾಮನು ಸಹ್ಯಾದ್ರಿ ಪರ್ವತಕ್ಕೆ ಬಿರಿಬಿರಿ ಬಂದಾನು. ಸಕಲ ವಿದ್ಯಕ ಅಧಿಪತಿಯಾದ ಗಜಾನನು ಅಲ್ಲಿ ವಾಸಮಾಡುತ್ತಿದ್ದನು. ನನಗ ಸಕಲ ವಿದ್ಯೆ ಕಲಿಸಬೇಕಂತ ಪರಶುರಾಮ ಕೇಳಿದನು. ಒಳ್ಳೇದು ಅಂತ ಗಣಪತಿಯು ವಚನವನ್ನು ನೀಡಿದನು. ವಿದ್ಯೆ ಕಲಿಯುತ ಪರಶುರಾಮನು ಗಣಪತಿ ಹಂತ್ಯಾಕ ಉಳಿದನು.

**ಪದ :**

ಮಲಪ್ರಭಾ ನದಿಯ ನೀರಿನಿಂದ
ಆಚಮನ ಮಾಡುತ್ತಿದ್ದ ಋಷಿವರದನು ।
ಸೂರ್ಯನಿಲ್ಲದ ಸಮಯದಲ್ಲಿ
ರೇಣುಕೆ ತರತಿದ್ಲ ನೀರನ್ನು ॥ ೧೯ ॥

ಬೆಳಕು ಆಗೇತಂತ ರಾತ್ರಿ ಸಮಯದಿ
ಹಿಡಿದಾಳು ಮಲಪುರಿ ದಾರಿಯನು
ನದೀಗೆ ಬಂದು ದಂಡಿಲೆ ನಿಂತು
ನೋಡ್ಯಾಳು ಗಂಧರ್ವ ಸ್ತ್ರೀಯರನು ॥ ೨೦ ॥

ತನ್ನ ಸ್ತ್ರೀಯರೊಳು ಚಲ್ಲಾಟ ನಡಸಿದ್ದ
ಚಿತ್ರರಥನೆಂಬ ಗಂದರ್ವನ ।
ಚಲ್ಲಾಟ ನೋಡಿ ರೇಣುಕದೇವಿ
ಚಂಚಲ ಮಾಡ್ಯಾಳ ಮನವನ್ನ ॥ ೨೧ ॥

ತಂದೆಯ ಮನೆಯಲಿ ಇದ್ದಾಗ ನಾನು
ಇಂಥ ವೈಭವ ಕಂಡಿದ್ದೆನು ।
ಇಷ್ಟ ಯೋಚನಾ ಮಾಡಿ ರೇಣುಕಾ
ಸಿಂಬಿಗೆ ಹಾಕ್ಯಾಳ ಕೈಯನ್ನಾ ॥ ೨೨ ॥

ಸಿಂಬಿಗೆ ಕೈನು ಹಾಕುವಷ್ಟರಲ್ಲಿ
ಬುಸ್ಸೆಂತ ಎದ್ದನು ನಾಗಪ್ಪನು ।
ಗಾಬರಿಯಾಗಿ ಹಿಂದಕ ಸರಿದು
ನೋಡಕಹತ್ಯಾಳ ಕೈಯನ್ನು ॥ ೩೩ ॥

ಕೊಡಕ ಕೈಹಾಕಿದಂಗ
ಕೊಡ ಸೇರಿತು ಭೂಮಿಯನು ।
ಕೊಡ ಸಿಂಬಿ ಇಲ್ಲದೆ ರೇಣುಕೆ
ಹಿಡದಾಳು ಆಶ್ರಮ ದಾರಿಯನು ॥ ೩೪ ॥

ಗಾಬರಿಯಾಗಿ ಆಶ್ರಮಕ್ಹೋಗಿ
ಕಂಡಾಳ ತನ್ನ ಪತಿಯನ್ನು ।
ಮೊದಲ ಗೊತ್ತಾಗಿ ಜಮದಗ್ನಿ ಋಷಿಯು
ಕೋಪವ ತಾಳಿ ಕುಳಿತಿದ್ದನು ॥ ೩೫ ॥

ಕೊಡ ಸಿಂಬಿ ಎಲ್ಲ ಇಟ್ಟೆದಿ
ಮನದಾಗ ಮಾಡಿದಿ ಏನೇನು ।
ಕುಷ್ಟರೋಗ ನಿನಗೆ ತಾಗಲಿ ಎಂದು
ಕೋಪದಿ ಕೊಟ್ಟಾನು ಶಾಪವನು ॥ ೩೬ ॥

ಶಾಪವಹೊಂದಿ ರೇಣುಕದೇವಿಯು
ತಿರುಗುತ ಸೇರ್‍ಯಾಳ ಅಡವಿಯನು ।
ಜೋಗುಳ ಬಾವಿ ಸತ್ಯವನ್ನತ್ತರ
ಕಂಡ ಒಂದು ಕುಟೀರವನು ॥ ೩೭ ॥

**ವಚನ :**

ಕೇಳ ಶಾಹಿರ, ಯಕ್ಕಯ್ಯ ಜೋಗಯ್ಯರೆಂಬ ಅಣ್ಣ ತಮ್ಮಂದಿರು ಸವದತ್ತಿ ಅರಸರು. ರಾಜ್ಯವನ್ನು ತ್ಯಾಗಮಾಡಿ ಅಲ್ಲಿ ಆಶ್ರಮವನ್ನು ಕಟ್ಟಿಕೊಂಡು ಇರುತ್ತಿದ್ದರು. ಅದರ ಹತ್ತಿರ ರೇಣುಕಾದೇವಿಯು ಹೋಗಿ ಅವರ ಸೇವೆಯನ್ನು ಮಾಡುತ್ತಿರಲು, ಋಷಿಗಳು ಅವಳ ಸೇವೆಗೆ ಮೆಚ್ಚಿ ಉದ್ಧಾರಮಾಡುವ ಕಾಲಕ್ಕೆ ಎಂದು ಹೇಳುತ್ತ -

**ಪದ :**

ಕಲಿಯುಗದಲಿ ಯಲ್ಲಮ್ಮನೆಂದು
ಕರೆಯುವರೋ ನಿನ್ನನು ಭಕ್ತರು ।
ನಿನ್ನ ಭಕ್ತರಿಗೆ ನಮ್ಮಯ ಬಿರುದು
ಬೇಕೆಂದು ಯಕ್ಕಯ್ಯ ಹೇಳಿದನು ॥ ೩೮ ॥

ಇಷ್ಟ ಹೇಳಿ ತಾ ಮುನಿವರನು
ಕೊಟ್ಟಾನ ಬಂಡಾರ ಚೀಲವನು ।
ನಿಮ್ಮ ಇಷ್ಟದಂತೆ ಆಗಲಿಯೆಂದು
ರೇಣುಕೆ ಕೊಟ್ಟಾಳ ವಚನವನು ॥ ೩೯ ॥

ಯಕ್ಕಯ್ಯ ಜೋಗಯ್ಯ ಉಧ್ಭವೊ ಎಂದು
ಬಾಯಿಲೆ ಅನ್ನುವ ತಾಯಿ ನೀನು ।
ಬಾಯಿಲೆ ಅಂದು ರೇಣಿಕಾದೇವಿ
ಬಂಡಾರ ಹಚ್ಚಾಳು ಹಣಿಗಿನ್ನು ॥ ೪೦ ॥

ಅಲ್ಲಿಂದ ಗಂಡನ ಹತ್ತರ ಬಂದು
ಗಟ್ಯಾಗ ಹಿಡಿದಾಳ ಪಾದವನು ।
ಸಿಟ್ಟಿಗೆ ಎದ್ದ ಜಮದಗ್ನಿ ಋಷಿಯು
ಮೂರುಮಂದಿ ಮಕ್ಕಳ ಕರಿದಾನು ॥ ೪೧ ॥

ಮೂರುಮಂದಿ ಮಕ್ಕಳ ಕರೆದು ರೇಣುಕಾನ
ರುಂಡ ತಗೀ ಅಂತ ಹೇಳಿದನು ।
ಮೂರು ಮಕ್ಕಳ ಮಾತ ಕೇಳಲಿಲ್ಲ
ಸುಟ್ಟುಬೂದಿಯ ಮಾಡಿದನು ॥ ೪೨ ॥

ಪರಶುರಾಮನ ನೆನಸಿ ಜಮದಗ್ನಿ
ಮಗನೆ ಬಾಯೆಂದು ಕರೆದಾನು ।
ಮಗನೆ ಬಾಯೆಂದು ಕರೆದು ರೇಣುಕಾನ
ಚಂಡ ಹಾರಿಸುತ ನುಡಿದಾನು ॥ ೪೩ ॥

ತಂದಿಯ ಮಾತನು ಮೀರದಂತ
ತಾಯಿಯ ರುಂಡ ಕಡಿದಾನು ।
ಭಪ್ಪರೆ ಮಗನೆ ಪರಶುರಾಮನೆ
ಏನು ಬೇಡತಿ ಬೇಡೆಂದಾನು ॥ ೪೪ ॥

ತಂದಿಯೆ ಎನ್ನ ಅಣ್ಣಂದಿರ
ತಾಯಿಯ ಪ್ರಾಣ ಪಡಿ ಎಂದಾನ ।
ಅದರಂತೆ ಆಗಲಿ ಎಂದು ತಂದೆಯು
ಪ್ರಾಣದಾನವ ನೀಡಿದನು ॥ ೪೫ ॥

ಸುಖದಿಂದ ಇರುವಂಥ ಸಮಯದಲ್ಲಿ
ಕಾರ್ತವೀರನೆಂಬ ಅರಸನು ।

ಬೇಟೆಯಾಡುತ ಬಂದಾನು
ಜಮದಗ್ನಿ ಪಾದಕ ನಮಿಸಿದನು ‖ ೪೭ ‖

ಜಮದಗ್ನಿ ಪಾದಕ ನಮಿಸಿದನು
ಕಾಮಧೇನು ಒಂದ ನೋಡಿದನು ।
ಕಾಮಧೇನು ಒಂದ ನೋಡಿದನು
ನನಗೆ ಕೊಡೆಂದು ಕೇಳಿದನು ‖ ೪೭ ‖

ಜಮದಗ್ನಿ ಪ್ರಾಣವ ಹೀರಿದನು
ಧಾವಿಸಿ ಪರಶುರಾಮ ಬಂದಾನು ।
ತಂದೆ ಮೈಮ್ಯಾಲಿನ ಗಾಯವ ನೋಡಿ
ಒಂದೊಂದಾಗಿ ಎಣಿಸಿದನು ‖ ೪೮ ‖

ಗಾಯಗಳಾದದ್ದು ಇಪ್ಪತ್ತೊಂದು
ಅಷ್ಟುಸಾರೆ ಕ್ಷತ್ರಿಯರ್ನ ಕೊಂದಾನು
ಕಾರ್ತವೀರನನು ಕಂಡಾನು
ಯುದ್ಧದಲ್ಲಿ ಅವನ ಕೊಂದಾನು ‖ ೪೯ ‖

**ವಚನ :**

ಕೇಳ ಶಾಹಿರ, ಜಮದಗ್ನಿ ಋಷಿಯು ಸತ್ತ ದಿವಸ ಹುಣ್ಣಿಮೆ ಇದ್ದುದರಿಂದ ಅದಕ್ಕೆ ಮುಂದೆ ಕಲಿಯುಗದಲ್ಲಿ ರಂಡಿ ಹುಣ್ಣಿಮೆಯೆಂದು ಅನ್ನುವರು. ಆ ಮುಂದೆ ಪರಶುರಾಮನು ತಂದೆಯ ಪ್ರಾಣ ಪಡೆದುದಕ್ಕೆ ಮುತ್ತೈದಿ ಹುಣ್ಣಿಮೆ ಅನ್ನುವರು. ರಂಡಿ ಹುಣ್ಣಿಮೆಗೆ ಮತ್ತು ಮುತ್ತೈದಿ ಹುಣ್ಣಿಮೆಗೆ ಮೂರು ತಿಂಗಳ ಅಂತರವೆಂದು ಹಿರಿಯರು ಅನ್ನುವರು. ತಂದೆ ತಾಯಿಗೆ ಪರಶುರಾಮನು ಸುಖವಾಗಿ ಸ್ವರ್ಗಕ್ಕೆ ಹೋಗೆಂದನು.

**ಪದ :**

ಇಷ್ಟ ಮಾತ ಕೇಳಿ ತಾಯಿ ರೇಣುಕಾ
ಪರಶುರಾಮ ಕೇಳ ಮಾತನ್ನು
ನನ್ನ ಭಕ್ತರನು ಬಿಟ್ಟಿರಲಾರೆ
ಸೇರಲಾರೆ ನಾನು ಸ್ವರ್ಗವನು ‖ ೫೦ ‖

ನಿನ್ನ ಭಕ್ತರನು ರಕ್ಷಿಪೆನೆಂದು
ತಾಯಿಗೆ ವಚನವ ನೀಡಿದನು ।
ಈ ಕೆಲಸ ಮಾತ್ರ ಆಗಲಾರದೆಂದು
ಮಗನಿಗೆ ಹೇಳ್ಯಾಳ ಮಾತನ್ನು ‖ ೫೧ ‖

ನಿನ್ನ ಸಲ್ಲು ನನಗ ಬ್ಯಾಡ
ನನ್ನ ಸಲ್ಲು ನಿನಗ ಬ್ಯಾಡೆಂದಾನು
ಇಷ್ಟ ಮಾತ ಆಡಿ ಪರಶುರಾಮನು
ಅಲ್ಲಿಂದ ದಾರಿಯ ಹಿಡಿದಾನು ‖ ೫೨ ‖

ಈಗಲು ಗುಡ್ಡದಲ್ಲಿ ನಡಿತೈತಿ ಇಲ್ಲಂತ
ಪರೀಕ್ಷೆ ಮಾಡಿರಿ ನೀವದನು ।
ತಾಯಿಯ ಕತಿಯ ಹೇಳಿ ಕೇಳಿದವಗ
ಕೊಡತಾಳ ಪುಣ್ಯದ ಫಲವನ್ನು ‖ ೫೩ ‖

## ವೀರ ಗೊಲ್ಲಾಳ

ವಾಲಗಿಡುವನು ಬನ್ನೀರೆ
ಕೈಲಾಸಾದ್ರಿ ನಿವಾಸಗೆ ‖ ೧ ‖

ನಾದಬಿಂದು ಕಲಿದಾತನೆ
ವೇದಕ ನಿಲುಕದಾತನೆ ‖ ೨ ‖

ಸತ್ಯವಾದ ಶರಣರಡಿಗೆ ನಾ
ವ್ಯರ್ಥಾನಂದದಿ ಕುಣದೇನು ‖ ೩ ‖

ಹಾರಿ ಕುಣಿದು ಡೊಳ್ಳು ಬಾರಿಸಿ
ಬೀರನೋಲಗ ಇಡುವುವನು ‖ ೪ ‖

ಪೊಡವಿಯೊಳು ದೃಢ ಭಕ್ತ ಗೊಲ್ಲಾಳ
ಬಿಡದೆ ಕುರಿಯ ಕಾಯುವನು ‖ ೫ ‖

ಅಡವಿಯಲ್ಲಿ ಕುರಿಯ ಮೇಸಿ
ಮಡದ ನೀರು ತಾ ಕುಡಿಸುವನು ‖ ೬ ‖

ಮುಂದಿನವೆಲ್ಲ ಕುರಿಗಳ್ಹೊಡೆದು
ಹಿಂದಿನ ನಾಯಿ ಕರೆಯುವನು ‖ ೭ ‖

ಗುಡ್ಡದಂತ ದೊಡ್ಡ ದೇಹ
ಗಡ್ಡ ಮೀಸೆ ಬೆಳಸಿರುವನು ‖ ೮ ‖

ಶುದ್ಧ ಮನಸಿನ ಗೊಲ್ಲಾಳ
ಗದ್ದಕ ಕೋಲು ಕೊಟ್ಟಾನು ‖ ೯ ‖

ಎಲ್ಲಿ ನೋಡಿದರ ಹರ ಹರನೆಂಬುದು
ಸೊಲ್ಲು ಗೊಲ್ಲಾಳ ಕೇಳ್ಯಾನ ‖ ೧೦ ‖

ಇಂದು ಗುಳೆವ ಕಟ್ಟಿಕೊಂಡು
ಮುಂದಕೆಲ್ಲಿ ಹೋಗುವಿರೋ ‖ ೧೧ ‖

ಮರುಳನೆಂದು ನಕ್ಕು ಅವರು
ತಿರುಗಿ ಮಾತನಾಡಲಿಲ್ಲವೋ ‖ ೧೨ ‖

ಅರುವುಗೆಟ್ಟು ಹೋಗತಾವೆಂದು
ಕುರುಬ ಮನಕ ತಿಳಕೊಂಡಾನು ‖ ೧೩ ।

ಹಿಂದ ಬರುವ ಜಂಗಮಯ್ಯನ
ನಂದ ಗೊಲ್ಲಾಳ ಕೇಳ್ಯಾನು ‖ ೧೪ ‖

ಇಂದು ಗುಳೆವ ಕಟ್ಟಿಕೊಂಡು
ಮುಂದಕೆಲ್ಲಿ ಹೋಗುವಿರೋ ‖ ೧೫ ‖

ಆಗ ನೋಡೋ ಜಂಗಮಯ್ಯ
ಎಲ್ಲ ತಿಳಿಸಿ ಹೇಳ್ಯಾನು ‖ ೧೬ ‖

ಮಲ್ಲಿಕಾರ್ಜುನನ ದರ್ಶನಕ
ನಿಲ್ಲದೆ ನಾವು ಹೋಗುವೆವು ‖ ೧೭ ‖

ಬೇಡಿದಂತ ವಡವಿಯ ನನಗ
ತಂದುಕೊಡಬೇಕು ಅಂದಾನೋ ‖ ೧೮ ‖

ಬಿಂದಿಗಿ ಹೊನ್ನ ಕೊಟ್ಟರ ಲಿಂಗ
ತಂದುಕೊಡತೇನಂದಾನೋ ‖ ೧೯ ‖

ದಡ್ಡಿಯಲ್ಲಿ ಹುಗುದ ಹೊನ್ನು
ಅಡ್ಡ ಗಾಳಿಗೆ ತೂರುವನು ‖ ೨೦ ‖

ಮಡ್ಡಗರುಬ ದಡ್ಡಿಯಲ್ಲಿ
ಬಿಂದಿಗೆ ಹೊನ್ನ ಎಬ್ಬಿ ಕೊಟ್ಟಾನು ‖ ೨೧ ‖

ದುಡ್ಡು ತಗೊಂಡು ಜಂಗಮಯ್ಯ
ದೊಡ್ಡ ಹರುಷವಾಗ್ಯಾನು ‖ ೨೨ ‖

ಮಲ್ಲಿಕಾರ್ಜುನನ ದರ್ಶನಕ್ಹೋಗಿ
ತನ್ನ ಹರಕೆಯ ಮುಟ್ಟಿಸ್ಯಾನು ‖ ೧೩ ‖

ದುಡ್ಡ ದೊರೆತ ಮಬ್ಬಿನಿಂದ
ಲಿಂಗ ತರುವುದ ಮರತಾನು ‖ ೧೪ ‖

ತಿರುಗಿ ಬರುತ ಜಂಗಮಯ್ಯ
ಕುರಬನ ಕಣ್ಣಿಲೆ ಕಂಡಾನು ‖ ೧೫ ‖

ಕುರಿಯ ಹಿಕ್ಕಿಯ ತಗೊಂಡು ಜಂಗಮ
ವಲ್ಲಿ ಪದರಲಿ ಕಟ್ಯಾನು ‖ ೧೬ ‖

ವೀರ ಗೊಲ್ಲಾಳ ಜಂಗಮನ ಕಂಡು
ತಾರೋ ಲಿಂಗ ಒಂದನ್ನು ‖ ೧೭ ‖

ಕುರಿಯ ಹಿಕ್ಕಿಯ ಕೊಟ್ಟು ಜಂಗಮ
ಜಾರಿಕೊಂಡು ತಾ ನಡದಾನು ‖ ೧೮ ‖

ಕುರಿಯ ಹಿಕ್ಕಿಯ ಕಟ್ಟೆಯ ಕಟ್ಟಿ
ಅಷ್ಟ ಮೂರುತಿ ಇಟ್ಟಾನು ‖ ೧೯ ‖

ವೀರ ಕುರಿಯ ಹಾಲ ಹಿಂಡಿ
ಶ್ರೇಷ್ಠ ಲಿಂಗಕೆ ಎರದಾನು ‖ ೨೦ ‖

ಮನೆಗೆ ಹಾಲು ಬಾರದಿರಲು
ಜನಕ ಕೋಪವ ತಾಳ್ಯಾನು ‖ ೨೧ ‖

ಹೊಂದಿಕಿಲಿಂದ ಕೊಡಲಿಯ ಪಿಡಿದು
ತರುಳನ ಬಳಿಗೆ ಬಂದಾನು ‖ ೨೧ ‖

ಹಿರಿಯ ಕುರುಬ ಲಿಂಗವನು
ಕೆರವುಗಾಲಿಲೆ ಒದ್ದಾನು ‖ ೨೨ ‖

ತರುಬಿ ಅವನ ಕೊಡಲಿಯ ಪಿಡಿದು
ತಂದಿಯ ಶಿರವ ಕಡಿದಾನು ‖ ೨೪ ‖

ಕುರಿಯ ಹಿಕ್ಕಿಲಿಂದ ಮೆರೆದು
ಗ್ವಾಲಿಗೇರಿ ಲಿಂಗ ಎನಿಸ್ಯಾನು ‖ ೨೫ ‖

ಕರುಣದಿಂದ ಅವರಿಗೆ ಮೋಕ್ಷ
ಕೊಟ್ಟ ಜಗದ್ಗುರು ಮಲ್ಲೇಶ್ವರ ॥ ೩೮ ॥

* * *

## ಬೂದಿಯ ಮಹಿಮೆ

ಬೂದಿಯ ಧರಿಸಿದರ ಹೋದಿತೋ ಭವರೋಗ ಬೂದಿಕಿಂತ ಹೆಚ್ಚಿನದಿಲ್ಲಾ
ಹಂಬಲ ಬಿಟ್ಟು ನಂಬಿಕೆ ಇಟ್ಟರ ಇಂಬಾಗಿ ಕಾಯ್ದಿತೋ ಈ ಬೂದಿ
ತುಂಬಿದ ನದಿಯೊಳು ಅಂಬಿಗನಾಗಿ ದಂಡಿಗೆ ಹಚ್ಚೀತೊ ಈ ಬೂದಿ
ಹುಣ್ಣು ಹುಳಗಳ ಹತ್ತಿ ಹುಚ್ಚಿದ್ದು ತಿರುಗುವಾಗ ನಿಚ್ಚಳಮಾಡಿತು ಈ ಬೂದಿ
ಎತ್ತು ಬಂಡಿಯ ಹೂಡಿ ಹೊಲಕ ಹಾಕಿದರ ಹುಚ್ಚಿದ್ದು ಬೆಳೆದೀತೊ ಈ ಬೂದಿ
ಅಟ್ಟಂತ ಗಡಗಿಗೆ ಪಟ್ಟವ ಬಡಿದರ ಅಮೃತ ಎನಸೀತೊ ಈ ಬೂದಿ
ತಂಬಿಗಿ ತಪ್ಪೇಲಿ ಉಂಡೆಂಜಲ ಗಂಗಾಳ ಮಡಿಮಾಡಿ ಇಡಿಸಿತೋ ಈ ಬೂದಿ
ಹೆಚ್ಚಾಗಿ ಬೂದಿ ಮೈಯಲಿ ಧರಿಸಿದರ ಸನ್ನೇಸಿ ಎನಸೀತೋ ಈ ಬೂದಿ
ಅದ್ವೈತ ಸಮಸ್ತರಿಗೆ ದೂರವೆನಿಸದು ಬೂದಿ ಇದ್ದ ಇದ್ದ ಸಾಧುಗಳಿಗೆ ಈ ಬೂದಿ
ಹಿರೆಹೊಳಿ ದಂಡಿಲಿ ಬಬಲಾದಿ ಅಪ್ಪನವರ ಹಸ್ತದೊಳಾಡಿತೋ ಈ ಬೂದಿ
ಶಿವಭಕ್ತರ ಹೊರತು ಯಾರಿಲ್ಲ ಜಗದೊಳು ಬಸವ ಪುರಾಣಕ ಗನವಿಲ್ಲಾ
ಬಸವಣ್ಣನ್ಹೆಂಡಿ ಭಕ್ತಿಲಿ ತಂದರ ಹಸನ ಆದಾವೋ ನಿಮ್ಮ ಮನಿಮಾರಾ
ಬಸವಣ್ಣನ್ಹೆಂಡ್ತಿ ಇಬೂತಿ ಉಂಡಿ ಎಲ್ಲ ದೇವರ ಮುಂದೆ ಇರುವುದೋ
ಎಲ್ಲ ದೇವರ ಮುಂದೆ ಇರುವುದೋ ಇದು ಸರ್ವಕಾರ್ಯಕೆಲ್ಲ ಬರುವುದೋ
ಸರ್ವಕಾರ್ಯಕೆಲ್ಲ ಬರುವುದೋ ಇದು ಶರಣರ ಹಣಿಮ್ಯಾಲ ಧರಿಸುವದೋ

* * *

## ಒಕ್ಕಲಿಗ ಮುದ್ದಣ್ಣ

ಒಕ್ಕಲಿಗ ಮುದ್ದಣ್ಣ ನಡಿಸಿದಾನ
ಧರ್ಮ ಮಾಡದ ಪಂತಾ
ನಿಲವ ಕೊಯ್ಯಕ ಕುಡಗೋಲ ಹಾಕಿದನು
ಜಂಗಮಾಗಿ ಬಂದ ಭಗವಂತ

ಶಿವಾಂತ ನಾವು ಇವತ್ತ ಬಂದೇವು
ಹೊಲ ಬಿಟ್ಟು ನುಗಿಸಿದರತ್ತ
ಕೋದ ಪೆಂಡಿಕಟ್ಟಿ ಹಾಕತಾನ
ಆಗ ಬಂದು ಕೊಟ್ಟಾನಂತ

ಮುದುಕ ಮನುಷ ಎಡತಾಕಲಾರೆ
ನನ್ನ ದಾನ ಮುಂಚೆ ಕೊಡಬೇಕು ಭಕ್ತ
ಕೇಳುದಿಲ್ಲಾ ನೀ ಜೋಳ ಕೊಡತೇನಿ
ಕಡೆಗಣಕ ಬರಹೋಗಂತಾ

ಲಗು ರಾಶಿಮಾಡಿ ಹಗೇಕ ಹೊರತಾನು
ಆಗ ಬಂದ ಕೊಟ್ಟಾನಂತ
ಆಗಿಹೋದವು ಈಗೆಲ್ಲಿ ಸಿಕ್ಕಾವು
ಮನ್ಯಾಗ ನಡಿ ಅಂದ ಮತ್ತಾ

ಮನಿಗಿ ಹೋಗಿ ಮತ್ತೇನ ಹೇಳತಾನು
ಹೋಗಿ ಬಾರ ಉಣತೇನಿ ಹಸ್ತಾ
ಇನ್ನ ಬಂದರಿಗೆಲ್ಲಾ ಹೋಗು ಹೊರಗಾ
ಮುಂದ ಮಾಡಿದನು ಮಸಲತ್ತಾ

ಅತ್ತಂಗ ಮಾಡಿ ಸತ್ತಾನಂದ ಬಿಡು
ಹೇಣತಿಗೆ ಹೇಳಿದ ಮಾತಾ
ಬಂದು ವ್ಯಾಳ್ಯಾಕ ಬಂಡ ಮಾಡತಾಳ
ಸತ್ತಾವೇನ ಕೊಡತಾನಂತಾ

## ಚೋರ ಬಸವ ಚರಿತ್ರೆ!

ಕಲ್ಯಾಣ ಪುರದೊಳು ನಿತ್ಯಕ ಜಂಗಮರಿಗೆ
ಅನ್ನ ಪ್ರಸ್ತನಿಟ್ಟನು ಬಸವೇಶ್ವರನು ॥ ೧ ॥

ಲಕ್ಷದ ಮೇಲೆ ತೊಂಭತ್ತು ಸಾವಿರ
ಜಂಗಮರಿದ್ದ ಬಸವೇಶ್ವರನು ॥ ೧ ॥

ಇನ್ನಾರು ಸಾವಿರ ಜಂಗಮರು ಬೇಕೆಂದು
ಯೋಚನೆಮಾಡಿ ಬಸವೇಶ್ವರನು ॥ ೨ ॥

ತೆಪ್ಪಿದ ನಿಜರೂಪಿ ಹಚ್ಚಿದ ವಿಭೂತಿ
ಬೆತ್ತ ಹಿಡಿದು ಬಸವೇಶ್ವರನು ‖ ೪ ‖

ಅಡ್ಡಗೊಂಗಡಿ ಹೊತ್ತು ಲಿಂಗ ವಸ್ತ್ರವ ಕೋರಿ
ಸಂಗಮನಾದ ಬಸವೇಶ್ವರನು ‖ ೫ ‖

ಗಗ್ಗರಿ ಉಂಗುರ ಜಂಗುಮಲಿಕಿನ ಚೀಲ
ಹೆಗಲಲಿ ಹೊತ್ತ ಬಸವೇಶ್ವರನು ‖ ೬ ‖

ಹಿಂಗೆಲ್ಲ ಹುಡುಕಿದ ಎಲ್ಲಿ ಸಿಕ್ಕಾರೆಂದು
ಆಲೋಚನಾದ ಬಸವೇಶ್ವರನು ‖ ೭ ‖

ಮಾದೇವರಾಜನ ಬಳಿಯಲ್ಲಿ ಜಂಗಮರು
ಇದ್ದಾರೆಂದನು ಬಸವೇಶ್ವರನು ‖ ೮ ‖

ಕಾಲಲಿ ನಡಿದರ ಕಾಮಿಕದೊನಕೆ
ಹ್ಯಾಂಗ ಹೋಗುವದಂದ ಬಸವೇಶ್ವರನು ‖ ೯ ‖

ಮನಸಿಗೆ ತಿಳಿದಾನು ಮಾಯದಲಿ ಒಂದು
ಕ್ಷಣದಾಗ ಹೋದ ಬಸವೇಶ್ವರನು ‖ ೧೦ ‖

ಕಾಮಿಕವನದ ಅಗಸಿ ಬಾಗಿಲ
ಕಾಣೂತಂದ ಬಸವೇಶ್ವರನು ‖ ೧೧ ‖

ಅಗಸಿಯ ಬಾಗಿಲಿಗೆ ಆಳಿನ ಕಾವಲ
ಇದ್ದಾರೆಂದನು ಬಸವೇಶ್ವರನು ‖ ೧೨ ‖

ಬಂದೇವಿ ಇಲ್ಲೀಗೆ ಮುಂದಿನ ಯತ್ನ ಹ್ಯಾಂಗ
ಹೋಗುವದಂದ ಬಸವೇಶ್ವರನು ‖ ೧೩ ‖

ಇಂಗು ಜೀರಿಗೆ ಮಾರುವ
ಕೋರಿಶೆಟ್ಟಿಯಾದನು ಬಸವೇಶ್ವರನು ‖ ೧೪ ‖

ಕಂಚು ತಾಂಬರ ಹಿತ್ತಾಳಿ ಕೊಡರ್ಥಿಂಗ
ಅನ್ನೂತ ಹೊಂಟ ಬಸವೇಶ್ವರನು ‖ ೧೫ ‖

ಶೆಟ್ಟಿಯ ಕಂಡಾರ ಸಿಟ್ಟೇಲೆ ಕೇಳ್ಯಾರ
ಕೊಟ್ಟವರ್‍ಯಾರ ನಿಗಪ್ಪಣೆಯನು ‖ ೧೬ ‖

ಬಿಟ್ವಾರು ಎನ್ನೂದು ದೃಷ್ಟಾಂತ ತಿಳಿ ಎಷ್ಟು
ಹೇಳುವೆ ರಾಜನ ಆಜ್ಞೆಯನು ‖ ೧೭ ‖

ಹೊರಗಿನ ಜನ ಬಂದು ವನದೊಳಗ ಹೊಕ್ಕರ
ಚಾಕರಿ ಕಸಗೊಂಡು ಅಟ್ಟುವನು ‖ ೧೮ ‖

ವನದ ಒಳಗಿನ ಹೈರಿಯಾಕ ಬಿಟ್ಟರೆ
ಅನ್ನುವನು ನಮಗ ಶಿಕ್ಷೆಯನು ‖ ೧೯ ‖

ಪಕ್ಷಿ ಪಶು ಮೃಗ ವೃಕ್ಷವು ಹೊಕ್ಕರೆ
ಕೋಪಿಸಿ ಕೊಟ್ವಾನು ಅಪ್ಪಣೆನೂ ‖ ೨೦ ‖

ರಾತರೀ ಹಗಲಿಯು ನಿಂತಲ್ಲೇ ಪಾರವು
ಘಾತಕ ರಾಜ ಭೀತಿಯನು ‖ ೨೧ ‖

ಒಂದಿವಸ ಒಪ್ಪತ್ತು ಅನ್ನುವ ಇಲ್ಲೆಂದು
ಅನುಭವ ಅವರಿಗೆ ಹೇಳಿದನು ‖ ೨೨ ‖

ಬಿಟ್ಟರೆ ನೀ ಹೋಗಿ ಭೆಟ್ಟಿಯಾದರೆ
ನಿಮ್ಮನ್ನಿಟ್ಟಿದ್ದು ಯಾಕೆಂದು ಕೇಳುವನು ‖ ೨೩ ‖

ಬಡವರು ಆಡುವ ನುಡಿಗಳು ನಿಶ್ಚಯ
ಬಿಡುವದು ಹ್ಯಾಗೆಂದು ತಿಳಿಯುವನು ‖ ೨೪ ‖

ಕೇಳಿರಿ ಪಾಲಕರೆ ಹೇಳುವನು ನಮ್ಮ
ಜಾತಿಯು ಆದಿ ಬಣಜಗನು ‖ ೨೫ ‖

ನಿತ್ಯಕ ಜಂಗಮರು ತಪ್ಪಿದರೆ ನಮ-
ಗನ್ನಕ ಅಪ್ಪಣೆ ಇಲ್ಲನ್ನುವನು ‖ ೨೬ ‖

ನೀತಿಯ ನಿಷ್ಠಕ್ಕದ ಬ್ಯಾಸರ ಬಳಸಿದರ
ಯಾತಕ್ಕ ಕಲಿಯೊಳು ಹುಟ್ಟುವದು ‖ ೨೭ ‖

ಹಸುವಾಗಿ ಎನ್ನಗ ಅಸುವು ಹಾರುವದು
ಬಕ್ಷೀಸ ಬಿಡಿರೆಂದು ಕೇಳಿದನು ‖ ೨೮ ‖

ಹಾರೂದು ಹಲ್ಲಾಣ ಮಾಡಿರಿ ಕಲ್ಯಾಣ
ಶಿಶುವಿಗೆ ಸಿಗುವುದು ಪುಣ್ಯವನು ‖ ೨೯ ‖

ಕಳ್ಳ ಅಲ್ಲ ನಾನು ತಳ್ಳಿಸು ಲಗುಮಾಡಿ
ಕೊರಳಲ್ಲಿ ರುದ್ರಾಕ್ಷಿ ಲಿಂಗವನು ॥ ೩೦ ॥

ವಿಶ್ವಾಸ ಕೊಟ್ಟವಗ ವಿಘ್ನವ ತಂದರೆ
ಅಗ್ನಿಯ ಪ್ರವೇಶನಾಗುವೆನು ॥ ೩೧ ॥

ಹೇಳಿದನಾತಂಗ ಬಂದೀತು ಕರುಣವು
ಜ್ಞಾನಿ ಇದ್ದನು ಒಬ್ಬ ಪಾಲಕನು ॥ ೩೨ ॥

ಕೇಳೋ ಬಣಜಿಗನ್ನಿನ್ನ ಹೇಳು ಪ್ರಲಾಪ ಎನ್ನ
ಕಾಯದೊಳಗಾತು ಕಷ್ಟವನು ॥ ೩೩ ॥

ಬರುವಂಥ ವಿಘ್ನಕ ಇದುರಾಗಿ ಇರತೇನಿ
ಬಿಡತೇನಿ ಹೋಗೆಂದ ಹಾದಿಯನು ॥ ೩೪ ॥

ಹೋಗಿ ಹೊಳ್ಳಿ ಬರುವಾಗ ನಾಲ್ಕು ಮಂದಿ ಆಳಿಗೆ
ಸ್ವಾಧೀನ ಕೊಡಬೇಕು ನೋಡುವೆನು ॥ ೩೫ ॥

ಸಂತೋಷ ಒಡಲೊಳು ಸಮುದ್ರ ಸಮನಾಗಿ
ಪ್ರತ್ಯಕ್ಷ ಇದುರಿಗೆ ಈಶ್ವರನು ॥ ೩೬ ॥

ಶರಣೆಂದು ಕರಮುಗಿದು ಬರುವೆನು ಹೋಗೆಂದು
ವನದೊಳಗ್ಹೊಕ್ಕು ಬಸವೇಶ್ವರನು ॥ ೩೭ ॥

ಮಡಿವಾಳ ಗುರುವಿನ ಮನದಲ್ಲಿ ಸ್ಮರಿಸುವೆ
ಕೇಳರಿ ಮುಂದಿನ್ನು ಹೇಳುವೆನು ॥ ೩೮ ॥

ಮಾದೇವರಾಜನ ವನದಾಗಿನ್ಯಶ್ವರ್ಯಕ
ಆಶ್ಚರ್ಯನಾದ ಬಸವೇಶ್ವರನು ॥ ೩೯ ॥

ಮಲ್ಲೀಗಿ ಮುಳಬಾಜಿ ಬಿಲ್ವ ಪತ್ತರಿಗಿಡ
ಗುಲಾಬಿ ಕಾಮಕಸ್ತೂರಿ ವಾಸನಿನೋ ॥ ೪೦ ॥

ಸೂರ್ಯಪಾನ ಡೇರೆದ್ದೂ ಚೆಂಕೇಶ್ವರ ದಾಳಿಂಬ್ರ
ಸದರಿ ಒಪ್ಪುವದು ಅಗ್ರವನು ॥ ೪೧ ॥

ಕ್ಯಾದಗಿ ವನದೊಳು ವಸಂತ ಕಾಲದಿ
ಕೋಗಿಲ ದನಿಗಳ ಕೇಳಿದನು ॥ ೪೨ ॥

ವಜ್ರದ ಅರಮನಿ ಕನ್ನಡಿ ಹೊಳಿದಾವು
ಕಿರಣ ಸೂರ್ಯನಂಗ ಜ್ಯೋತಿಯನು ॥ ೪೩ ॥

ಮಂಟಪ ಸಿಂಹಾಸನ ಗದ್ದಗಿಮ್ಯಾಲಿನ್ನ
ವಿರಕ್ತಮುನಿಗಳ ಕಾಣುವನು ॥ ೪೪ ॥

ಊದುವರು ಹಾಡುವರು ಬಾರಿಸುವರ ಜಂಗಮರು
ಯಾವತ್ತು ಶಿವಯೆಂಬ ಶಬ್ದವನು ॥ ೪೫ ॥

ಪಂಚಾಕ್ಷರ ಶಿವಮಂತ್ರ ಓದೂದು ಕೇಳಿ
ಸಂತೋಷನಾದ ಬಸವೇಶ್ವರನು ॥ ೪೬ ॥

ಇಂಥವರ್ನಿ ನ್ಯಾಂಗ ಸಂರಕ್ಷಣೆ ಮಾಡ್ಯಾರೆಂದು
ನಿಂತಲ್ಲೆ ತರತರ ನಡುಗುವನು ॥ ೪೭ ॥

ಇಷ್ಟೂರಿಗೆ ತಿಳಿದೊಬ್ಬ ಹೆಚ್ಚಿನ ಶರಣ
ಶೆಟ್ಟಿಯ ಕಣ್ಣಿಲೆ ಕಾಣುವನು ॥ ೪೮ ॥

ಮಾನವರೊನದೊಳು ಬರುವ ಸ್ಥಿರವ್ಹೆಂಗ
ಮನುಷ್ಯಾನಲ್ಲೀವ ಹೆಂಗೆಂಬುವನು ॥ ೪೯ ॥

ಯಾವನಡಿನವನೆಂದು ಮಾತಾಡಿಸಿ ಕೇಳಿದ
ಬಂದದ್ದು ಹ್ಯಾಂಗೆಂದು ಹೇಳೆಂದನು ॥ ೫೦ ॥

ಕೇಳರಿ ಶಿವ ಶಿವ ಹೇಳುವೆನು ನಿಮಗ
ಬಂದದ್ದು ಎಂಥಾ ವ್ಯಾಳ್ಯೇವನು ॥ ೫೧ ॥

ಕಲ್ಯಾಣ ದೇಶದ ಬಣಜಿಗನು ಕೋರಿ
ಶೆಟ್ಟಿಯ ಸಂಗಮನೆಂಬುವನು ॥ ೫೨ ॥

ತಿರುಗುತ್ತ ಬಂದೇವಿ ಪರನಾಡ ಇಲ್ಲಿಗೆ
ತರಬಿದ್ದ ಖರೆ ಹೌದೆಂಬುದವನು ॥ ೫೩ ॥

ಇಂಗುವ ಜೀರಿಗೆ ಮಾರುವೆನು
ಕಂಚು ತಾಂಬರ ಹಿತ್ತಾಳಿ ಎತ್ತುವೆನು ॥ ೫೪ ॥

ಒಂದ್ಹೊತ್ತು ಉಪವಾಸ ಬಂದಿತು ಸಂತಾಪ
ಅನುಭವ ಅವರಿಗೆ ಹೇಳಿದನು ॥ ೫೫ ॥

ಅನ್ನವ ನೀಡುವೆ ಕಂಚಾಣ ಕೊಡುವೆನು
ಬರ್‍ರೊಬ್ಬ ಶಿವ ಶಿವ ಎಂಬುವನು ॥ ೫೬ ॥

ಅನಬ್ಯಾಡೋ ಈ ನುಡಿ ಮಾದೇವ ಕೇಳಿದರ
ಮುಂದೇನು ಹೇಳೂನು ಮಾರ್ಗವನು ॥ ೫೭ ॥

ಪುಣ್ಯವ ಪಡೆಯುದಕ ಆರಸಾವಿರ ಜಂಗಮರಿಗೆ
ಅನ್ನದ ಆಧಾರ ನೀಡುವೆನು ॥ ೫೮ ॥

ಅವನಲ್ಲೇ ಧೃಢವಿರುತ ಅನ್ನಿಗರನ್ನದ
ಆಸೇವು ನಮಗೇನು ಎಂಬುವರು ॥ ೫೯ ॥

ಎನ್ನಲ್ಲೇ ಹಿಡಿ ಅನ್ನ ಕಣ್ಣಿಗೆ ತೋರೂದು
ಇಷ್ಟೂರನ್ನಿದರೊಳಗೆ ಉಣಿಸುವೆನು ॥ ೬೦ ॥

ಇಷ್ಟೂರಿಗೆ ಹಿಡಿಯನ್ನ ಕೊಟ್ಟೇನಿ ಅಂತಾನು
ಅವನಲ್ಲೇ ಏನೈತೋ ನಿಷ್ಟವನು ॥ ೬೧ ॥

ಖಂಡಗನ್ನ ಒಮ್ಮೆ ಉಂಡರೆ ಸಾಲದು
ಬಂಡಾಗುದು ಬಂತು ವ್ಯಾಳ್ಯೇವನು ॥ ೬೨ ॥

ನೂಕುತಲೊಬ್ಬಬ್ಬರು ಹೊಡೆಹೊಡೆದು ನಗತಾರೋ
ಅಂತಾರು ಇದು ಒಳ್ಳೆ ಆಶ್ಚರ್ಯವನು ॥ ೬೩ ॥

ಕರಿದಂಥ ಪ್ರಸ್ತಕೆ ಬಾರದಿರ್ದೊಡೆ
ಕಾಯೂವ ಗೂಳ್ಯಾಗಿ ಹುಟ್ಟುವನು ॥ ೬೪ ॥

ಬರೆತೇವಿ ಎಲ್ಲಾರು ಹರದಾಡಿತೋ ಮನ
ಗಟ್ಯಾಗಿ ಹೇಳಂದಾರೋ ವಚನವನು ॥ ೬೫ ॥

ಏಳರಿ ಶಿವ ಶಿವ ಆಗಲಿ ಜಳಕವು
ಮಾಡಿರಿ ನೀರು ಲಿಂಗ ಪೂಜೆಯನು ॥ ೬೬ ॥

ಜಗಕಾಗಿ ಮಡಿಯುಟ್ಟು ಮುಗಿಸ್ಯಾರು ಜಪತಪ
ಮುಂದಿನ ನಡಿಯೂದು ಊಟವನು ॥ ೬೭ ॥

ಮಡಿವಾಳ ಗುರುವಿನ ಮನದಲ್ಲೆ ಸ್ಮರಿಸುವ
ಕೇಳರಿ ಮುಂದಿನು ಹೇಳುವೆನು ॥ ೬೮ ॥

ಹಿಡಿಯ ಅನ್ನದ ಗಂಟು ನಡುಮಧ್ಯದಲ್ಲಿಟ್ಟು
ನಡೆಯಲೆಂದ ಬಸವೇಶ್ವರನು || ೭೯ ||

ನೀಡುವ ಇದನ ಹ್ಯಾಂಗ ಉಣ್ಣೂನು ಅಂತೀರಿ
ಕಾಣದೆ ಬಂದಿಲ್ಲ ಅನ್ನವನು || ೮೦ ||

ಬಿಟ್ಟು ಬಿಟ್ಟೇಳೂರ ಬಿಚಗ್ಯಾಸಿಯಾಡುರು
ತರವಲ್ಲ ಇನ್ನತಿ ಕೋಪವನು || ೮೧ ||

ಕಾಸಿಯ ಬಿಗದುಟ್ಟು ನಿಂತಾನೋ ಬಸವಣ್ಣ
ನಡಿಯಿರಿ ಶರಣರೆ ನೀಡುವೆನು || ೮೨ ||

ಗಿಂಡಿಯಷ್ಟು ಅನ್ನ ದಂಡಿಗೆ ನಡೆಸಿದರೆ
ಇದ್ದಷ್ಟು ಇತ್ತ ಹಿಡಿ ಬುಟ್ಟಿಯನು || ೮೩ ||

ನಡೆಸಿದ ಜನಕೆಲ್ಲ ನಿಂತಾನೋ
ಅಪ್ಪಣೆ ಕೊಟ್ಟ ಬಸವೇಶ್ವರನು || ೮೪ ||

ಉಣ್ಣುವುದಕ್ಕಿಂತ ಅನ್ನೂರು ಮನದೊಳು
ತಿಳಿಲಿಲ್ಲ ಇವ ಬಸವೇಶ್ವರನು || ೮೫ ||

ಹಾಲು ಸಕ್ಕರೆ ತುಪ್ಪ ನಿತ್ಯದಲುಂಡೇವಿ
ಅದಕ ಹೆಚ್ಚಿನ ರುಚಿ ಬುತ್ತಿಯನು || ೮೬ ||

ಅಕ್ಕರದಲಿ ಉಂಡು ನಕ್ಕಾರು ಡೇಗುತ
ಸಿಕ್ಕಾನು ನಮಗಿಂದು ಈಶ್ವರನು || ೮೭ ||

ಶಿವಶಿವ ನಿನ್ನ ಪುಣ್ಯ ಬಹಳಾತೋ ನಮಗಿನ್ನು
ತಿಳಿಯದು ಹೇಳರಿ ಶೂನವನು || ೮೮ ||

ಹೇಳಿದ ಆಜ್ಞೆಯ ಕೇಳಿದರ ಇದಕ
ಹೆಚ್ಚಿಂದು ಕಂಡೀರಿ ಐಶ್ವರ್ಯವನು || ೮೯ ||

ಬಿಜ್ಜಳನ ಐಶ್ವರ್ಯಕ ಹೇಳೂದಕಳೆತಿಲ್ಲ
ಕಲ್ಯಾಣ ಕಾಣೂದು ಪುಣ್ಯವನು || ೯೦ ||

ನಿಮ್ಮಲ್ಲೇ ಮನಸಾಗಿ ಬಂದೇನಿ ಇಲ್ಲಿಗೆ
ಹೌದೇಳು ನಾ ಬಸವೇಶ್ವರನು || ೯೧ ||

ಸಲಹು ಗಣಂಗಳು ಬರುಮನವಿದ್ದರೆ
ನಡೆಯಿರಿ ಕಲ್ಯಾಣಕ ಹೋಗುವೆನು ॥ ೮೨ ॥

ಬಸವಣ್ಣಾ ಇಂಥದಕ ಅಗಸಿಗೆ ಕಾವಲು
ಹೋಗುವದ್ಯಾಂಗೇಳೋ ಮಾರ್ಗವನು ॥ ೮೩ ॥

ಇದಕ್ಯಾಕ ಭೀತಿಯೆಂದು ಬಿಚ್ಚಿದನೋ ಚೀಲ
ಇದರೊಳಗೊಬ್ಬಬ್ಬರ್ಹೋಗೆಂದನು ॥ ೮೪ ॥

ಬಸವಣ್ಣ ನಿನ್ನ ಮಹಿಮೆಯು ತಿಳಿಯದು ನಮಗಿನ್ನು
ಚೀಲವು ಹಿಡಿಸದು ಒಬ್ಬರನು ॥ ೮೫ ॥

ಸಬ್ಬೈಲಿ ಸಾಲದು ಆರು ಸಾವಿರ ಜನ
ಇದರೊಳಗ್ಯಾಂಗಿನ್ನು ಹೋಗುವದಿನ್ನು ॥ ೮೬ ॥

ಹಿಂಚ್ಯಾಳಿಸುವದ್ಯಾಕ ಹಂತೇಕ ಬರತೇನಿ
ನಡೆಯಿರಿ ಒಳಿಯಾಕ ನೋಡುವನು ॥ ೮೭ ॥

ವರ್ವರು ನಡೆದಾರು ಹೆಚ್ಚಿನ ಸದರಿನ್ನ
ಮುತ್ತಿನ ಅರಮನಿ ಗದ್ದಗೀನೋ ॥ ೮೮ ॥

ಬಸವನ ಭಾವಕ ಹಸುವಿನ್ನು ಹರಿದಾವು
ಶರಣರು ಆದರು ಮೋಕ್ಷವನು ॥ ೮೯ ॥

ಶಿವ ಶಿವ ಎನ್ನುತಲಿ ಹೊತ್ತಾನು ಚೀಲವು
ಬಿಟ್ಟಾನು ವನ ಬಸವೇಶ್ವರನು ॥ ೯೦ ॥

ಬರುವಾಗ ಆಳಿಗೆ ಆಜ್ಞೆವ ಹೇಳಿದ್ದೆ
ಆಗೂನು ಅವರಿಗೆ ಭೆಟ್ಟಿಯನು ॥ ೯೧ ॥

ಪಾಲ್ಕರಿರಾ ಇನ್ನ ಕಲ್ಯಾಣಕ ಹೋಗುವೆ
ಸ್ವಾಧೀನ ನೋಡಿರಿ ಅನ್ನುವನು ॥ ೯೨ ॥

ಬರಿಯದು ಚೀಲವು ಅದರೊಳಗೇನೈತಿ
ಹೋಗಂತ ಕೊಟ್ಟಾರು ಅಪ್ಪಣೆನೊ ॥ ೯೩ ॥

ಅಗಸಿಯ ದಾಟಿಂದ ಆರಸಾವಿರ ಜನ
ಕದಕೊಂಡ ಹೊದ ಬಸವೇಶ್ವರನು ॥ ೯೪ ॥

ಹ್ವಾದಾನು ಕಲ್ಯಾಣಕ ಧೀರ ದಂಡು ಒಳ್ಳೇ
ತುಂಬಿಕೊಳ್ಳುವು ಲಿಂಗ ಪೂಜೆಯನು ॥ ೯೫ ॥

ಲಕ್ಷದ ಮೇಲೆ ತೊಂಬತ್ತಾರು ಸಾವಿರ
ಜಂಗಮರ ಸಲುಹಿದ ಬಸವೇಶ್ವರನು ॥ ೯೬ ॥

ಜಂಗಮರ ಕದ್ದ ಕತೆಯನ್ನು ಕೇಳರಿ
ಇದಕಾದ ಚೋರ ಬಸವೇಶ್ವರನು ॥ ೯೭ ॥

ಮಹಾಶರಣ ಮಡಿವಾಳ ಗುರುವಿನ ಮನದಲಿ ಸ್ಮರಿಸುವೆ
ಕೇಳರಿ ಮುಂದಿನ್ನು ಹೇಳುವೆನು ॥ ೯೮ ॥

ಮಾದೇವ ಜಂಗಮರ ಹಾದಿಯ ನೋಡ್ಯಾನು
ಆದೀತು ಶಿವಪೂಜೆ ವ್ಯಾಳ್ಳೇವನು ॥ ೯೯ ॥

ತಿಳಿಲಿಲ್ಲೋ ಮಾಯವು ತಲ್ಲಣಿಸುತ ವನ
ಎಲ್ಲಿ ನೋಡಿದರ ಶಬ್ದವಿಲ್ಲ ॥ ೧೦೦ ॥

ಹಸಿದಾರು ಜನರೆಂದು ವಿಷವು ಆದಿತು ಮನ
ಮಾಡುವದೇನಾತು ಮೋಸವನು ॥ ೧೦೧ ॥

ಮುಣಗಿತು ಪುಣ್ಯವು ಮುನಿದಾನು ಈಶ್ವರ
ಮನದಲ್ಲೇ ತಾಳಿದ ಕೋಪವನು ॥ ೧೦೨ ॥

ಕಪಟವ ತಿಳಿದಾನು ಕಲ್ಯಾಣಕ ಹೋದಾನು
ಒಯ್ದಿರುವ ಬಸವೇಶ್ವರನು ॥ ೧೦೩ ॥

ಉಗ್ರವ ತಾಳಿದ ತಿದ್ದಿದ ಮೀಸಿಯು
ಇನ್ನ್ಯಾಕ ನಡಿಯಲಿ ಯುದ್ಧವನು ॥ ೧೦೪ ॥

ಕಡಿದು ಅವನ ಶಿರ ಹರಿಸುವೆ ರಕ್ತವು
ಬಿಡರೆಂದ ಮಾಡಿದ ಪಂಥವನು ॥ ೧೦೫ ॥

ಇನ್ನ್ಯಾತರಾಸೆವು ಬಸವಣ್ಣನ ಬಲ
ಮುರಿದಿದ್ದ ಕಲ್ಲೆಂದ ಮಾದೇವನು ॥ ೧೦೬ ॥

ತನ್ನಲ್ಲಿ ಇದ್ದಾವ ಬಲ್ಲಾವ ಪೌರಾಣಿ
ಸಲ್ಲದು ಬ್ಯಾಡೆಂದು ವ್ಯಾಜ್ಯವನ್ನು ॥ ೧೦೭ ॥

ಮರ್ತ್ಯದೊಳು ಹುಟ್ಟಿದಾವ ಮನುಷ್ಯನು ಅಲ್ಲಾವ
ಕಂಡುಳಿದನು ಕೈಲಾಸವನು ॥ ೧೦೮ ॥

ಮಾದೇವನ ಕೋಪವು ಮಸ್ತಕ ಏರಿತು
ಹತ್ತಿಕಿ ಇಟ್ಟ ಪೌರಾಣಿನ ॥ ೧೦೯ ॥

ಆಗಿನ್ನ ತಿಳಿದಾನು ಅರಣ್ಯದೊಳಗಿದ್ದ
ಕರಸಿದ ಕಳ್ಳ ಕಿರಾತರನು ॥ ೧೧೦ ।

ಬ್ಯಾಡರಿಗೆ ಹೇಳಿದ ಮಾಡಿದ್ದು ಬಸವಣ್ಣ
ಮೃತವಳಿದು ವೈಯ್ದಾನು ಶರಣರನು ॥ ೧೧೧ ॥

ಜೈಯಿಸಿರಿ ಈ ವ್ಯಾಳ್ಯಾ ಮಾಯದಲ್ಲೇ
ನಿಮ್ಮ ಆಯುಧದಲ್ಲೇ ಹೊಡೆಯಿರೆಂಬುವನು ॥ ೧೧೨ ॥

ಈಶ್ವರ ಇದು ಎಂಥ ವ್ಯಾಳ್ಯವ ತಂದಾನು
ಪ್ರಾಣವ ಕೊಲ್ಲುದು ಪ್ರಾಪ್ತಿಯನು ॥ ೧೧೩ ॥

ಕ್ರೋಧವ ತಾಳಿ ಹ್ಯಾಂಗ ಕಾದುವನು
ಅಲ್ಲಿ ಕಲ್ಯಾಣದೊಳು ಬಸವೇಶ್ವರನು ॥ ೧೧೪ ॥

ಶಿವ ಶಿವ ಶರಣನ ವಚನ ಹ್ಯಾಂಗ ಮೀರುನು
ಚೆಂತೀಲೆ ಹಿಡಿದಾರು ವೀಳ್ಯಯನು ॥ ೧೧೫ ॥

ಬ್ಯಾಡರ ಹುಡುಗರ ಅರೆಚಣ್ಣ ತೆಗಿಸ್ಯಾನು
ಅದರು ಜಂಗಮ ವೇಷವನು ॥ ೧೧೬ ॥

ಓಡಲ ಕಟಗಿಯ ಬೆತ್ತವ ಮಾಡಿದರು
ಕಾಯಿಸರ ರುದ್ರಾಕ್ಷಿ ಲಿಂಗವನು ॥ ೧೧೭ ॥

ಹಚ್ಚಿದರ ವಿಭೂತಿ ಹೊತ್ತಾರು ಕಾವಿನಲ್ಲಿ
ಮುಚ್ಚಿ ಹಿಡಿದರು ತಮ್ಮ ಆಯುಧನು ॥ ೧೧೮ ॥

ಮಾರ್ಗವ ಹಿಡಿದಾರು ಮಹದೇವನಾಜ್ಞೆವು
ಮರತಾರು ಮತ್ತೇನು ಜ್ಞಾನವನು ॥ ೧೧೯ ॥

ಅಜ್ಞಾನ ಅಳಿದಾರು ಸುಜ್ಞಾನ ಜೈಸುತ
ಬಸವಣ್ಣನ ಮೇಲೆ ಭಕ್ತಿಯನು ॥ ೧೨೦ ॥

ನೆನೆಯುತ ಕಲ್ಯಾಣಕ್ಹೋದರು ಮಠಕಲ್ಲೇ
ಜಂಗಮರ ಕಂಡ ಬಸವಣ್ಣನು ॥ ೧೨೧ ॥

ಜಂಗಮರ ಲಿಂಗಪೂಜೆ ನಡೆದಿತ್ತು ಜನರೊಳು
ಕೂಡ್ರಿಸಿದ ಬ್ಯಾಡರನು ॥ ೧೨೨ ॥

ಶಿವ ಶಿವ ಶಿವಪೂಜೆ ಮಾಡೋನು ನಮ್ಮಲ್ಲಿ
ಆಯುಧ ಔಡಲ ಪಳಕವನು ॥ ೧೨೩ ॥

ಮಾಡಿದ ಅವರಂತೆ ನೋಡಿದರ ಸರ
ಆಗ್ಯಾವು ರುದ್ರಾಕ್ಷಿ ಲಿಂಗವನು ॥ ೧೨೪ ॥

ತೀರಿತು ಊಟವು ಕಿರಾತನರ ಕರೆದು
ಹೇಳಿದನು ಬಸವೇಶ್ವರನು ॥ ೧೨೫ ॥

ಶಿವಶರಣನ ಆಜ್ಞೆವ ಮೀರಬ್ಯಾಡರಿ ನೀವು
ತೀರಿಸಿರಿ ಬಂದ ಕಾರ್ಯವನ್ನು ॥ ೧೨೬ ॥

ಶಿವ ಶಿವ ಈ ನುಡಿ ಅನಬ್ಯಾಡೋ ನಮಗಿನ್ನು
ಸಲುಹೆಂದು ಹಿಡಿದಾರು ಪಾದವನು ॥ ೧೨೭ ॥

ಕಲ್ಯಾಣದೈಶ್ವರ್ಯ ನೋಡತಿರೋ ನೀವು
ಬಲ್ಲವರ್ಹೊಂದಿರಿ ಮೋಕ್ಷವನು ॥ ೧೨೮ ॥

ಶಿವ ಶಿವ ಈ ವ್ಯಾಳ್ಯ ಎಂದಿಗೂ ಸಿಗದಿನ್ನು
ಹೊಂದಿಸು ಗತಿ ಬಸವೇಶ್ವರನು ॥ ೧೨೯ ॥

ಕೈಲಾಸದಿಂದ ಪುಷ್ಪದ ವಿಮಾನ
ಇಳಿದಾವೊ ಹೊಂದಿರಿ ಮೋಕ್ಷವನು ॥ ೧೩೦ ॥

ಮಡಿವಾಳ ಗುರುವಿನ ಮನದಲ್ಲಿ ಸ್ಮರಿಸುವೆ
ಕೇಳರಿ ಮುಂದಿನ್ನು ಹೇಳುವೆನು ॥ ೧೩೧ ॥

ಕಿರಾತರು ಮೋಕ್ಷ ಹೊಂದಿದ ಸುದ್ದಿಯ
ಆದೀತು ಕೇಳಿದ ಮಹದೇವನು ॥ ೧೩೨ ॥

ಬಸವಣ್ಣನ ಮೇಲೆ ಮಥನವು ಮಾಡದಲೆ
ಹೋಗಿದ್ದರೆ ಗತಿ ಹೊಂದುವೆನು ॥ ೧೩೩ ॥

ನಿಂಗ್ರಾಸಿ ಪುತ್ರಗ ಹೇಳಿದ್ದಕ್ಕೆ ಎನ್ನ
ಐಶ್ವರ್ಯ ಕಲ್ಯಾಣಕ ಹೋಗುವೆನು ‖ ೧೩೪ ‖

ಜೋಡ ಮಡದಿಯ ತನ್ನ ಮಹದೇವಿ ಕರದಾನು
ಹಿಡಿದಾನು ಕಲ್ಯಾಣದ ಹಾದಿಯನು ‖ ೧೩೫ ‖

ಬಾಧಿನಿತೊಳಲೊಳು ಹೋದಾನು ಕಲ್ಯಾಣಕ
ಹೊರಗಿರುತಲಿ ಉಸುರು ಹಾಕುವನು ‖ ೧೩೬ ‖

ಚಿಂತೀಲಿ ಅಂತಾನು ಎಂಥವಗ ವಿಘ್ನವು
ಮಾಡಿದ ಮುಖ ಹೆಂಗ ತೋರುವೆನು ‖ ೧೩೭ ‖

ಮಹಾದೇವ ಶರಣನು ಬಂದಿರುವ ಸುದ್ಧಿಯ
ಕೇಳಿದನು ಬಸವೇಶ್ವರನು ‖ ೧೩೮ ‖

ಬಂದಾನು ಬಸವಣ್ಣ ನೋಡಲಾರದವ
ಮಾಡಿದ ಶಿರಬಾಗಿ ಶರಣವನು ‖ ೧೩೯ ‖

ಶರಣನ ಮುಖಬಾಡಿ ಉರಿತಾಕಿದ ಬಾಳಿ
ಗರಿಹಂಗ ಆಯಿತೆಂದ ಬಸವೇಶ್ವರನು ‖ ೧೪೦ ‖

ಅವರಿಗೆ ಮಥನವು ಬಹಳೊತ್ತು ಕೂಡ್ಯಾವು
ಮತ್ತೇನು ನಡಿದಾವು ಹೇಳುವೆನು ‖ ೧೪೧ ‖
ಮಹದೇವ ಅಂತಾನು ಶಿವ ಶಿವ ಕಲ್ಯಾಣ

ಒಳಗಿದ್ದು ಕಳೆಯುವೆ ಕಾಲವನು ‖ ೧೪೨ ‖

ಮಹದೇವ ಎಂಬುವ ನಾಮ ತೆಗೆದ ಅವ
ಹೆಸರಿಟ್ಟು ಮೋಗಳಿ ಮಾರಯ್ಯನು ‖ ೧೪೩ ‖

ಆಗದ ಕಾಯಕ ಕಷ್ಟ ಎಂದಿ ಹೇಳಿದ
ಕಟ್ಟಗಿ ಹೊರಿ ತಂದು ಮಾರುವನು ‖ ೧೪೪ ‖

ಕಾಲವನು ಹಾಕುತ ಕಲ್ಯಾಣ ದೊಳು ಹೊರಿ
ನಿಲ್ಲಿಸಿ ಬಸಲೊಳು ಮಾರುವನು ‖ ೧೪೫ ‖

ನಿತ್ಯಕ್ಕ ನಾಲ್ಕು ದುಡ್ಡ ರೊಕ್ಕ ದುಡಿದು
ಒಬ್ಬ ಜಂಗಮಗ ಅನ್ನ ನಡೆಸುವೆನು ‖ ೧೪೬ ‖

ಕಂಡಾನೋ ಬಸವಣ್ಣ ಐಶ್ವರ್ಯದಲ್ಲೇ
ಇದ್ದವಗ ಎಂಥ ವ್ಯಾಳ್ಯೇವನು || ೧೪೭ ||

ಮರಗುತ್ತ ಸೆರಗಿಲೆ ಜಾಳಿಗೆ ಹೊನ್ನವನು ಕಟ್ಟಿ
ಜಂಗಮನಾಗಿ ತಾ ಹೋಗುವನು || ೧೪೮ ||

ನಿತ್ಯಕ್ಕ ನಡಿದಂಥ ಮಹಾದೇವಿ ಪಾದಪೂಜೆ
ನಡಸಿದಳಾತನ ಊಟವನು || ೧೪೯ ||

ಹೊನ್ನವರ ಮನೆಯಲ್ಲಿ ಜಗಲಿ ಮ್ಯಾಲೆ ಇಟ್ಟು
ಮಾಯವಾದನೋ ಬಸವೇಶ್ವರನು || ೧೫೦ ||

ಬಂದಾನೋ ಮಹದೇವ ಮನೆಯಲ್ಲಿ ದೃವ್ಯವ
ಜಗಲಿಯ ಮ್ಯಾಲೆ ಕಾಣುವನು || ೧೫೧ ||

ಅಕಟಕಟಾ ಎಂದು ಮಹಾದೇವಿ ಕರೆದಾನು
ಇಲ್ಲಿ ಬಂದವರು ಯಾರು ಎಂದು ಕೇಳಿದನು || ೧೫೨ ||

ಜಂಗಮರ ಶಿವ ಇನ್ನಾರು ಬರುವರು
ಅರಿಯೆನು ಎಂದಳು ಮಹದೇವಿಯನು || ೧೫೩ ||

ಕೇಳಿದ ಮಡದಿಯ ಜಾಳಿಗೆ ಹೊನ್ನನು
ಕಾಲಿಲೆ ಉರುಳಿಸಿ ತಿಪ್ಪಿಯೊಳೊಗಸಿದನು || ೧೫೪ ||

ಲಕ್ಷದ ಮೇಲೆ ತೊಂಬತ್ತಾರು ಸಾವಿರ
ಬಸವಣ್ಣನ ಜನಕ ಊಟ ಹೇಳಿದನು || ೧೫೫ ||

ಇಂಥ ಬಸವ ಇಷ್ಟು ಜನಕೇನು ಉಣಿಸ್ಯಾನು
ಅಂತ್ಯಾರೋ ಜಂಗಮರು ಆಶ್ಚರ್ಯವನು || ೧೫೬ ||

ಶರಣನ ಜನರಿಗೆ ಕರೆತಂದು ಬಂಗಾರದ
ಪರಮಾಣದಲ್ಲಿ ಅವರ ಊಟವನು || ೧೫೭ ||

ಬೇಡಿದ್ದ ಉಣಸಿನ ಮಾಡಿದ ಭಿಕ್ಷವ
ಜನರಿಗೆ ಬಂಗಾರದ ಬೆತ್ತವನು || ೧೫೮ ||

ನಗು ನಗುತ ಜನರು ಹೊರಟಾರು ನಿಂತವರ
ಹಾದಿಯ ನೋಡುವ ಬಸವೇಶ್ವರನು || ೧೫೯ ||

ವ್ಯಾಳ್ಯೇವಾದಿತು ಎಲ್ಲ ಹೋಗಿದ್ದಿರಿ ನಡೆಯಿರಿ
ಆಗಲಿ ಅಂದ ಜಳಕವನು || ೧೬೦ ||

ಜಂಗಮರು ಅಂತಾರು ಬಸವಣ್ಣನ ಮೋಳಿಗೆಯ
ಮಾರಯ್ಯನ ಮನೆಯಲ್ಲಿ ಊಟವನು || ೧೬೧ ||

ಬೇಡಿದು ಉಣಸಿದ ಮಾಡಿದನು ಭಿಕ್ಷವ
ಜನರಿಗೆ ಬಂಗಾರದ ಬೆತ್ತವನು || ೧೬೨ ||

ಮಾದೇವ ಶರಣನು ವರ್ದಿ ಅವನು
ಹರುಷಾಗಿರಲೆಂದ ಬಸವೇಶ್ವರನು || ೧೬೩ ||

ಉಳವಿಯ ಬಾಗಿಲ ಕುಂದಗೋಳೆ ಮಡಿವಾಳ
ಗುರುವಿನ ಮನದಲ್ಲಿ ಸ್ಮರಿಸುವೆನು || ೧೬೪ ||

## ಅಕ್ಕ ನಾಗಮ್ಮ

ಮತ್ತೆ ಶ್ರೀಯದವಾಗಿ ಸರಸ್ವತಿ ಎನಗೊಲಿ
ಮೊದಲ ಎನ್ನಯ ಬಲಗೊಂಬುವೆನು
ಮೊದಲ ಎನ್ನಲ ಬಲಗೊಂಬುವೇನು ಸಣ್ಣ
ಹಸುಳರ ಸಲ್ಲಿನೊಳರುವೆ ನೀನು
ಹಸುಳರ ಸಲ್ಲಿನೊಳರುವೆ ನೀನು ಕಂದ
ಪಾರ್ವತಿ ಮೋಹದ ಕುಮಾರನು
ಎನಗೆ ಮತಿಯ ಕೊಡು ಗಜಮುಖದೊಡಯನೆ
ಗಣಪತಿ ಮಹರಾಜ ಅತಿಸುಂದರಾ
ಕಲ್ಯಾಣ ಪುರದೊಳು ಬಸವ ರಾಜೇಂದ್ರನು
ಬಹಳ ಪ್ರಖ್ಯಾತ ನಡೆಸುತಲಿ
ಬಹಳ ಪ್ರಖ್ಯಾತ ನಡಸುತಲಿ ಅಲ್ಲಿ
ಮರಣ ಅಂಬುದು ಅಂಜಿ ಓಡುತಲಿ
ಮರಣ ಅಂಬುದು ಅಂಜಿ ಓಡುತಲಿ ನಿತ್ಯ
ಪುಷ್ಪದ ಮಳಿಗಳು ಸುರಿಯುತಲಿ
ಪುಷ್ಪದ ಮಳಿಗಳು ಸುರಿಯುತಲಿ
ದಿಕ್ಕು ದೇಶದ ಶರಣರು ಇರುವುತಲಿ
ಲಕ್ಷದ ಮೇಲೆ ತೊಂಭತ್ತಾರು ಸಾವಿರ
ಪ್ರಥಮ ಗಣಂಗಳು ಸುಖದಿಂದಿರುತ
ಕಲ್ಯಾಣ ಪುರದೊಳು ಬಸವರಾಜೇಂದ್ರನು
ಇಲ್ಲದ ಪವಾಡ ಗೆಲಿದಿಹನು

ಇಲ್ಲದ ಪವಾಡ ಗೆಲಿದಿಹನು ಅಲ್ಲಿ
ಕೊಂಡೆಣ್ಣ ಮಂಚಣ್ಣ ಬಲ್ಲಿದರು
ಕೊಂಡೆಣ್ಣ ಮಂಚಣ್ಣ ಬಲ್ಲಿದರು ಬಸವ
ವಲ್ಲಭನೆಂದು ರಾಜಗ ಹೇಳಿದರು
ಇಲ್ಲದ ಬೋಧಗಳ ಬೋದಿಸಿದರು
ಎಲ್ಲರ ಗರ್ವವ ಮುರಿದರು
ಕಕ್ಕಯ್ಯನವರ ಮನಿ ಮಿಕ್ಕಿದ ಪ್ರಸಾದ
ಅಪ್ಪ ಬಸವರಾಜ ತಂದಿದ್ದನೊ
ಅಪ್ಪ ಬಸವರಾಜ ತಂದಿದ್ದನೋ ಅದನ
ಅಕ್ಕ ನಾಗಮ್ಮ ಶರಣೆ ನೋಡಿದಳು
ಜಳಕ ಜಾತುಣಿಮಾಡಿ ನೀಲಕಾಸಿ ಮಡಿಯುಟ್ಟು
ಲಿಂಗಕೆ ತೋರಿಸಿ ಸಲಸಿದಳು
ಲಿಂಗಕೆ ತೋರಿಸಿ ಸಲಸಿದಳು ಅಕ್ಕ
ಶರಣೆಗೆ ಗರ್ಭಿಣಿ ತೋರಿದವು
ಶಿವಲೀಲ ಸಂಪತ್ತು ನೊಡಲಾರದವರು
ಕಿಚ್ಚಗಣ್ಣಿನ ಕಿಡಿ ಆಗುತಲಿ
ಕಿಚ್ಚಗಣ್ಣಿನ ಕಿಡಿಯಾಗುತಲಿ ತಮ್ಮ
ಮನದಾನ ಅಸಂತೃಪ್ತಿ ಉಸುರುತಲಿ
ಮನದಾನ ಅಸಂತೃಪ್ತಿ ಉಸುರುತಲಿ ಇವು
ಖ್ಯಾತಿ ಯಾದವೆಂದು ಹುಡುಕುತಲಿ
ಕಲುಹಿನರೆಲ್ಲರು ಕೂಡಿ ಮಾತಾಡಾರೊ
ಬಲ್ಲಿದ ಮಸಲತ್ತು ನಡಸಿದರೋ
ಇತ್ತ ಪುರದೊಳು ಪೊಕ್ಕು ಜೈನರ ಕೇರಿಯೊಳು
ಬಸವನ ಮನೆ ಯಾವುದೆಂಬುವರು
ಬಸವನ ಮನೆ ಯಾವುದೆಂಬುವರು ಬಸವ
ನಮ್ಮ ಭಗತನೆಂದು ಹೇಳಿದರು
ದೂರ ಹಿಂದಕ ನಿಂತು ಬಿಟ್ಟು ಸನ್ನೆಯ ಮಾಡಿ
ತೊರಿಸಿ ಒಳಯಾಕ ಹೋಗೆಂದರು
ಕೂಡಿದ ಜನರೆಲ್ಲ ಬಸವನ ಮನಿ ಪೊಕ್ಕು
ಗಂಡನಿಲ್ಲದೆ ಗರ್ಭಿಣಿ ಹೆಂಗ ಅಂದರೋ
ಗಂಡನಿಲ್ಲದೆ ಗರ್ಭಿಣಿ ಹೆಂಗ ಅಂದರೋ ನಮ್ಮ
ಪುರದೊಳಗೆ ಇವ ಪುಂಡಗಾರಾದನೋ
ಪುರದೊಳಗೆ ಇವ ಪುಂಡಗಾರಾದನೋ ಇವನ
ಕೇಳುವ ಪಂಡಿತರು ಇಲ್ಲಾದರೋ
ಅವರು ರಆಜ್ಯ ಬಿಜ್ಜಳಗ್ಹೋಗಿ ಹೇಳಿದರು
ಅರಸ ಬಿಜ್ಜಳ ಎದ್ದು ಸದರಿನಲಿ ಕುಂತಾನು

ಹಣಿಯ ಗಂಟಕಿ ಮಾತ ನಾಡಿದನು
ಹಣಿಯ ಗಂಟಿಕಿ ಮಾತನಾಡಿದನು ನಿಮ್ಮ
ರೀತಿಯು ಇದು ಸೈಯೆಂಬುವನು
ರೀತಿಯು ಇದು ಸೈಯೆಂಬುವನು ನಮ್ಮ
ಪುರದೊಳಗಂಜಿಕಿ ಇಲ್ಲದಾಯಿತೆಂದನು
ದಾಸಿಯರನ ಕೊಟ್ಟು ಕರಿಯಲಿಕ್ಕೆ ಕಳಿಸ್ಯಾನ
ಭಾಷೆ ಪಾಲಿಪ ಅಕ್ಕನಾಗಮ್ಮನು
ಭಾಷೆ ಪಾಲಪ ಅಕ್ಕನಾಗಮ್ಮನು ಹೋಗಿ
ಕೆಳ್ಯಾರ ಒಳ ಹೊಕ್ಕು ನೀಲಮ್ಮನು
ಕೆಳ್ಯಾರ ಒಳ ಹೊಕ್ಕು ನೀಲಮ್ಮನು
ಸಭೆಗೆ ನೆನೆವುತ ಬಂದಳು ಶಂಕರನು
ನೆನೆವುತ ಬಂದಳು ಶಂಕರನು
ಕಂಡಾಳೊ ಬಸವ ರಾಜೇಂದ್ರವನು
ಕುಂತಿರು ಜನರೆಲ್ಲ ಚಿತ್ತಿಟ್ಟು ಕೇಳಿರಿ
ಹೊಟ್ಟೆನ್ನ ಶಿಶುವಿನ ನುಡಿಸುವೇನು
ಉದರ ದೊಳಿರುವಂಥ ಚದುರ ನೀದಾರೆಂದು
ಮಧುರತನದಿಂದ ಕೇಳಿದರು
ಮಧುರತನದಿಂದ ಕೇಳಿದರು ನೀನು
ಧರಿಗೆ ಬಾಳ ಭಾರ ಆದೆಂದರು
ಧರಿಗೆ ಬಾಳ ಭಾರ ಅದೆಂದರು ನೀನು
ಬರುವ ಕುರುಹು ಯಾವದ್ದೇಳೆಂದರು
ಸ್ವಾದರ ಮಾವನ ಸತ್ಯ ವಚನವ ಕೇಳಿ
ಮನಸಿನೊಳಗ ಕುಶಿ ಆದ ಗಂಭೀರನು
ಖಡ ಖಡ ಶಿಡಿಲಿನ ಗುಡುಗು ಗರ್ಜನೆಯಂತೆ
ಗರ್ಜಿಸಿ ತಾ ಮಾತನಾಡಿದನು
ಗರ್ಜಿಸಿ ತಾ ಮಾತನಾಡಿದನು ಮೂಢ
ಹುಡುಗ ಜೈನರ ಮಾತ ಕೇಳಿದನು
ಹುಡುಗ ಜೈನರ ಮಾತ ಕೇಳಿದನು ಕಾಡು
ಕ್ವಾಣನ ಸೊಕ್ಕು ನಿಮಗ್ಯಾಕೆಂದನು
ಕ್ವಾಣನ ಸೊಕ್ಕ ನಿಮಗ್ಯಾಕೆಂದನು ನಿಮಗ
ಕೆಡಗಾಲ ಸಮೀಪ ಆಯಿತೆಂದನು
ಜೈನ ಮತದ ಕೊಡು ಮುರಕೊಂಡ ಬರುವೆನು
ಚನ್ನಬಸವನೆಂದು ಬಿರುದು ಸಾರಿದನು
ವೀರ ಆರ್ಭಾಟವ ತಾಳದ ಜನರೆಲ್ಲ
ತಲ್ಲಣಿಸುತ ಗಜಗಂಬುತಲಿ
ತಲ್ಲಣಿಸುತ ಗಜಗಂಬುತಲಿ ದೊಡ್ಡ

ಪರ್ವತ ಗದಗದ ನಡುಗತಲಿ
ಪರ್ವತ ಗದಗದ ನಡುಗತಲಿ ಸೂರ್ಯ
ಚಂದ್ರನ ಮಾರ್‍ಯಾಗ ತಪ್ಪ ತಲಿ
ಚಂದ್ರನ ಮಾರ್‍ಯಾಗ ತಪ್ಪ ತಲಿ ಜನರು
ಎದೆವಡೆದು ಬಾಯಾರಿ ಉಸುರುತಲಿ
ಪ್ರಳಯ ಕಾಲದ ಹೊತ್ತು ಬಂದಿತು ನಮಗಿನ್ನು
ತ್ರಿಲೋಕದವರು ಚಿಂತಿಸುತ
ಅರಸ ಬಿಜ್ಜಳ ಎದ್ದು ಸದರಿನಲಿ ಕುಳಿತಾನು
ಬುದ್ಧಿ ಸುಜ್ಞವಂತನಾಗಿದ್ದನು
ಬುದ್ಧಿ ಸುಜ್ಞವಂತನಾಗಿದ್ದನು ಅಗ್ನಿ
ಕೆಣಕಿದವರ ಬುದ್ಧಿ ಕಡಿಮಿ ಅಂದನು
ಕೆಣಕಿದವರ ಬುದ್ಧಿ ಕಡಿಮೆ ಅಂದನು ನೀನು
ರಕ್ಷಿಸು ನಾನು ನಿನ್ನ ಶಿಶು ಅಂದನು
ಕರ ಮುಗಿದು ಜೈನರ ಚರಣಕ್ಕೆ ಎರಗ್ಯಾರು
ಅಕ್ಕನಾಗಮ್ಮನ ಕೊಂಡ್ಯಾಡುತ್ತ
ಸಡಗರದಿಂದ ವಸ್ತ್ರ ಉಡಗರಿ ಮಾಡ್ಯಾರೊ
ಹೆಚ್ಚಿನ ಜವಳಿಯ ತರಸಿದರೋ ಬಿಚ್ಚಿ
ಸೀರಿ ಕುಬ್ಬುಸ ಮುಯ್ಯ ಮಾಡಿದರೊ
ಸೀರಿ ಕುಬ್ಬಸ ಮುಯ್ಯ ಮಾಡಿದರೊ ವಾದ್ಯ
ಡುಮಿ ಡುಮಿ ಬೇರಿಯ ಹೊಡಿಸಿದರೊ
ಕಾಳಿಯು ಕರ್ಣಿಯ ಸಾರುತ ಬಾಜಾರುದೊಳು
ಅಕ್ಕಮ್ಮನ ಅರಮನಿಗೆ ಕಳೆಸಿದರೊ
ಅರಮನೆಯೊಳು ಶಿವ ಶರಣರ ಶಿವಪೂಜೆ
ಕರ್ಪುರ ಕೋಡ ಬತ್ತಿ ಪುಷ್ಪದಲ್ಲಿ ತುಂಬ
ಹಿಡಿಸಿದ ಬಂದಿತು ಸ್ವರ್ಗದಲ್ಲಿ
ಹೀನರೂಪವ ಬಿಟ್ಟು ಕಪಟರೂಪವ ತಾಳಿ
ಕಲ್ಯಾಣಪುರಕ ಬಂದ ಶಂಕರನು

* * *

## ಪಿಂಡಾಂಡ ಪ್ರಕೃತಿ

ಜನನ ಮರಣ ಎರಡು ನಿಮ್ಮ ಸ್ವಾಧೀನ
ಜಗದ್ಗುರು ಎನಿಸಿದಿ ನೀನು ‖ ೧ ‖

ಪರಮೇಶ್ವರನ ಪಾರ್ವತಿ ಕೇಳತಾಳ
ಕೈಮುಗಿದು ನಿಂತು ಅರ್ಧಾಂಗಿ ॥ ೧ ॥

ಪಿಂಡ ಪ್ರಕೃತಿ ಆಗುವಾಕೃತಿ
ನಮಗ ತಿಳಿಸಬೇಕ್ರಿ ಇದರ ಬಗಿ ॥ ೨ ॥

ಶಂಭು ಹೇಳತಾನ ಕೇಳ ಪಾರ್ವತಿ
ಪೈಲೆ ಪಿಂಡ ಆಗುವ ಕೂನ ॥ ೪ ॥

ಗಂಡಿನಿಂದ ಪಿಂಡ ಉತ್ಪನ್ನವಾಯಿತು
ಮೊದಲು ಇರುವ ತನ್ನ ಠಿಕಾಣಾ ॥ ೫ ॥

ಸ್ತ್ರೀಯಳು ಮುಟ್ಟಾದ ಮೂರು ದಿವಸಕ
ದೇಹ ಶುದ್ಧ ಚೌತಿಯದಿನ ॥ ೬ ॥

ಸತಿಯು ಪತಿಯು ಏಕಾಂತ ಕೂಡಿದರ
ರಾತ್ರಿ ವೇಳೆ ಅದೇ ದಿನಾ ॥ ೭ ॥

ಬಿಂದು ಬಿದ್ದು ಒಂದಾತು ನೇತ್ರ ಕಲಕಿ
ಅಲ್ಲಿಗಿಳಿತು ಪಿಂಡದ ಜೇನಾ ॥ ೮ ॥

ಐದು ದಿನವಸಕ ನೀರ ಗುರಳಿಯಂಗ
ಪಳ್ಳಾಗಿ ಇರುವದು ಪ್ರಮಾಣ ॥ ೯ ॥

ಮತ್ತೆ ಕೇಳ ಹತ್ತು ದಿವಸಕ
ರಕ್ತ ಕರಣಿಯಾಗುವದಣ್ಣ ॥ ೧೦ ॥

ಇಪ್ಪತ್ತು ದಿವಸಕ ಹೆಪ್ಪಗಟ್ಟಿತು
ಸಿಪ್ಪಿ ಸುಲಿದ ಬಾಳಿ ಹಣ್ಣ ॥ ೧೧ ॥

ತಿಂಗಳಾದ ಮೇಲೆ ಟಿಸುಳು ಒಡಿಯತೈತಿ
ಮುಂಚೆ ಹುಟ್ಟಿತು ಮಾರಿಯ ಶಿರ ॥ ೧೨ ॥

ಎರಡು ತಿಂಗಳಿಗೆ ತೋಳು ತೊಡಿಗಳು
ಬಾಳಿಯ ಸುಳಿಯ್ಹಂಗ ಬಹು ಮಧುರ ॥ ೧೩ ॥

ಮೂರು ತಿಂಗಳಿಗೆ ಮೂಡಿ ಬರುವ
ಚಂದ್ರಮನ್ಹಂಗ ಅದರ ಆಕಾರ ॥ ೧೪ ॥

ನಾಲ್ಕು ತಿಂಗಳಿಗೆ ನಾಸಿಕ ಜನನಿ
ಕೂಸು ಆಯಿತು ಮಾಯದ ವರ್ಣ ॥ ೧೫ ॥

ಐದು ತಿಂಗಳಿಗೆ ಕರ ನೇತ್ರಗಳು
ಹಸನಾಗಿ ಆಗುವವು ತಯ್ಯಾರ ॥ ೧೬॥

ಆರು ತಿಂಗಳಿಗೆ ಸರ್ವ ಸ್ವಾಮಾನ
ದೇಹಕ ಮೂಡಿ ಬಂದಾವ ಉಗುರಾ ॥ ೧೭ ॥

ಏಳು ತಿಂಗಳಿಗೆ ಒಳಗ ಬಲಾತ್ಕಾರ
ಓಡ್ಯಾಡುತಾನ ನೋಡು ಸರ್ದಾರ ॥ ೧೮ ॥

ಎಂಟು ತಿಂಗಳಿಗೆ ಜ್ಞಾನ ಹುಟ್ಟಿತು
ಹರದಾಡತೈತಿ ಹಲವು ಪ್ರಕಾರ ॥ ೧೯ ॥

ಹೇಸಿಕೆ ಉಚ್ಚಿ ಎಂಥಾ ಜಗದಾಗ
ಸ್ವಾಮಿ ಎನ್ನಗ ನೀ ತಂದಿಟ್ಟಿ ॥ ೨೦ ॥

ಇಂಥ ಕೆಲಸ ಎಂದೆಂದು ಮಾಡುದಿಲ್ಲ
ಹೇಳತೈತಿ ಗುರುವಿನ ಮುಟ್ಟಿ ॥ ೨೧ ॥

ಮಾನವ ಜಲ್ಮಕ ಹುಟ್ಟಿಬಾರದ್ದಾಂಗ
ಪುಣ್ಯವ ಪಡಿತೇನಿ ನಾ ಹುಟ್ಟಿ ॥ ೨೨ ॥

ಒಂಭತ್ತು ತಿಂಗಳಿಗೆ ದೊಡ್ಡದಾಯಿತು
ಹೊರಗ ಬಂದೇನಂತೈತಿ ದಾಟಿ ॥ ೨೩ ॥

## ಪಾಪ-ಪುಣ್ಯ

ಪಾಪ ಪುಣ್ಯದಲ್ಲಿ ಜಾಸ್ತಿಯಾವದೆಂದು
ಪ್ರಶ್ನೆ ಮಾಡಿದಳು ಪಾರ್ವತಾ ॥ ೧ ॥

ಪುಣ್ಯದ ಬಲದಿಂದ ಪಾಪ ಹುಟ್ಟಿತು
ಪರಮೇಶ್ವರ ಹೇಳಿದ ಮಾತ ॥ ೨ ॥

ಐಶ್ವರ್ಯ ಆನಂದ ಕೊಟ್ಟರ
ಬಾಳೇವ ಮಾಡ್ಯಾರು ಬಹು ಶಿಸ್ತ ‖ ೩ ‖

ಮಕ್ಕಳುಮರಿ ಹೆಚ್ಚಾದ ಕಾಲಕ
ಮನಿ ಕಟ್ಟಿಸ್ಯಾಳು ಮಾಲಿಂದ ಮ್ಯಾಲಕ ‖ ೪ ‖

ದುಡ್ಡು-ದುಗಾಣಿ ಮಿಕ್ಕಿದ ಕಾಲಕ
ವಂಕಿ ಸರಗಿ ಮಾಡಿಸ್ಯಾಳು ನತ್ತ ‖ ೫ ‖

ನತ್ತ ಮಾಡಿದ ಅಕ್ಕಸಾಲಿಗ್ಗ ಅಂತಾಳ
ಏನ ಹಸನ ಹಚ್ಯಾನ ಮುತ್ತ ‖ ೬ ‖

ಹೆಂತ ಶಾಣ್ಯಾ ಅಗಸ್ಯಾಲಿ ಹುಟ್ಯಾನು
ಎಲ್ಲಿ ಆದನು ಇವ ಬುದ್ಧಿವಂತ ‖ ೭ ‖

ಮೂಗಾ ಮುರಿದು ಮೂಳನ್ನ ಮಾಡಿದರ
ಯಾತರಾಗ ಇಡತಾಳ ನತ್ತ ‖ ೮ ‖

ದೇವರ್ಯಾಕ ನನ ಮೂಗು ಕಳೆದನೆಂದು
ನೆನಸತಾಳ ಮೂಗ ಮುಚಿಗೊಂತ ‖ ೯ ‖

ನತ್ತಿನ ತಕ್ಕೊಂದು ಅತ್ತಿಹೂವಿನ
ಶೀರಿಯ ತಂದಳು ನಕ್ಕೊಂತ ‖ ೧೦ ‖

ಶರಗಬಿಚ್ಚಿ ಜಾಡನ್ನ ನೆನಸತಾಳ
ಜರಾ ಹಾಕಿದಾನು ಸುತ್ತ ಮುತ್ತ ‖ ೧೧ ‖

ಎಂಥ ಶಾಣ್ಯಾ ಇವ ಶೀರಿ ನೇದನು
ಎಲ್ಲಿ ಆದನು ಇವ ಬುದ್ಧಿವಂತ ‖ ೧೨‖

ನಡಾ ಮುರಿದು ಕುಡಗೋಲಮಾಡಿದರ
ಶೀರಿ ಎಲ್ಲಿ ಹಾಕತಾಳ ಸುತ್ತ ‖ ೧೩ ‖

ದೇವರ್ಯಾಕ ನನ್ನ ಊನ ಮಾಡ್ಯಾನೆಂದು
ನೆನಸತಾಳ ಕುಂಟ್ಯಾಡಿಕೊಂಡ ‖ ೧೪ ‖

ಹೇಣತಿ ಸಂದು ಆದೀತು ಇಲ್ಲಿಗೆ
ಗಂಡನ ಸಂದು ಹೇಳುವೆ ಮುಂದೆ ‖ ೧೫ ‖

ಊರ ಮುಂದಿನ ಹೊಲಾ ಮಾಡಿದಾನು
ಮೂಡಲ ಹೋರಿ ಕಟ್ಯಾನು ಎತ್ತ ॥ ೧೬ ॥

ರಂಟಿ ನೇಗಿಲು ಹೊಡಿದು ಗೊಬ್ಬರ
ಹಾಕಿದಾನು ಅವನು ಮಸ್ತಾ ॥ ೧೭ ॥

ಹೊಲಾ ಎಲ್ಲಾ ಕೈದೆನಿ ಇರುವದು
ಅಯಗಾರಿಗೆ ಕೊಡಬೇಕಯೆತ್ತ? ॥ ೧೮ ॥

ಆಗ ಪರಮೇಶ್ವರ ಬಂದ ಕೇಳತಾನ
ನೀನು ಕಾಣತೀದಿ ಬುದ್ಧಿವಂತ ॥ ೧೯ ॥

ಬೀಳ ಹೊಲ ಇದು ಏನ ಬೆಳದೈತಿ
ನೀನು ಕಾಣತಿದಿ ಪುಣ್ಯವಂತ ॥ ೨೦ ॥

ಏನು ಹೇಳಬೇಕ್ರಿ ಎತ್ತು ಆಳಿನ
ನೆತ್ತರ ಇಳಿದಾವ್ರಿ ಉದಿಯಾಗಂದ ॥ ೨೧ ॥

ಆಗ ಪರಮೇಶ್ವರ ಹೇಳಿ ಹೊಂಟಾನು
ನೀನು ಕಾಣತಿದಿ ಬುದ್ಧಿವಂತ ॥ ೨೨ ॥

ಮುಂದಿನ ವರ್ಷಕ ಮಸ್ತ ಬದಕಮಾಡಿ
ಬಿತ್ತಿದಾನು ಬೆಳದೀತಂತ ॥ ೨೩ ॥

ಬಿತ್ತಿದ ಬೀಜ ಭೂಮಿಯ ನುಂಗಿತು
ಕಾಣಲಿಲ್ಲ ಹುಟ್ಟಿದ ಗುರ್ತ ॥ ೨೪ ॥

ಮತ್ತೆ ಪರಮೇಶ್ವರ ಬಂದ ಕೇಳತಾನ
ಬೀಳಯಾಕ ಬಿದ್ದೈತೆಂತ ॥ ೨೫ ॥

ಏನ ಹೇಳಬೇಕ್ರಿ ದೇವರ ಮನಸಿಗೆ
ಬರಲಿಲ್ಲರಿ ಮಾಡಿದ ಘಾತ ॥ ೨೬ ॥

ನೆಳ್ಳೂವಾಗ ನೆನಸೂದ ಕರೇವೆಂದು
ತರ್ಕ ಮಾಡಿದಳು ಪಾರ್ವತ ॥ ೨೭ ॥

ಶಿಲೇದ ಮ್ಯಾಗ ಶಿಕೆ ಹಾಕಿದ್ವಾಂಗ
ಅರುಚಿಗೆ ಬಸವ ಹೇಳಿದ ಮಾತ ॥ ೨೮ ॥

* * *

## ಹಾಲುಮತ ಹಿರಿಮೆ

ನಮಿಸುವೆ ಶಿವನೆ ಗಂಗಾಧರನೆ
ಗೌರಿವರನೆ ಪುರಹರನೆ
ಗೌರಿವರನೆಪುರಹರನೆ
ಕೈಲಾಸನಾಥನೆ ವಿಷಧರನೆ ॥ ೧ ॥

ಕಾಲಕಾಲಕೆ ಮಳೆ ಬೆಳೆಕೊಟ್ಟು
ಕಾಪಾಡೈ ಕರುಣಾಕರನೆ
ಕಾಪಾಡೈ ಕರುಣಾಕರನೆ
ಮೃತ್ಯುಂಜಯನೆ ಪನ್ನಗಧರನೆ ॥ ೨ ॥

ಕಾಲಕಾಲನೆ ನೀಲಕಂಠನೆ
ವ್ಯಾಲಾಭರಣನೆ ಶಂಕರನೆ
ವ್ಯಾಲಾಭರಣನೆ ಶಂಕರನೆ ಶ್ರೀ-
ಶೈಲವಾಸನೆ ಶಶಿಧರನೆ ॥ ೩ ॥

ನಮಿಸುವೆ ತಾಯೆ ಪಾರ್ವತಾ ದೇವಿಯೆ
ಕಾಪಾಡೌ ಕರುಣಾನಿಲಯ
ಕಾಪಾಡೌ ಕರುಣಾನಿಲಯ
ದಾಕ್ಷಾಯಣಿದೇವಿಯೆ ಶಾಂತಿಮಯೆ ॥ ೪ ॥

ಹೇಮಾಂಬರನೆ ಹೇಮಕಾಯನೆ
ವಿದ್ಯಾನಾಥ ವಿನಾಯಕನೆ
ವಿದ್ಯಾನಾಥ ವಿನಾಯಕನೆ ಕೊಡು
ನನ್ನ ಮತಿಗೆ ಮಂಗಲವನ್ನೆ ॥ ೫ ॥

**ವಚನ :**

ಪುಣ್ಯದಿಂದ ಬರುವ ಫಲವನ್ನು ಎಲ್ಲರೂ ಬೇಡುವಿರಿ. ಆದರೆ ಪುಣ್ಯಮಾಡುವುದನ್ನು ಬಿಟ್ಟಿರುವಿರಿ. ಪಾಪದಿಂದ ಒದಗುವ ಫಲವನ್ನು ಒಲ್ಲೆನ್ನುವಿರಿ. ಪಾಪ ಮಾಡುವುದನ್ನು ಮಾತ್ರಬಿಡಲಾರಿರಿ. ಇದಕ್ಕಾಗಿ ಬೆಳೆದ ಬೆಳೆ ಹೋಗುವುವು ಕೈಜಾರಿ. ನಮ್ಮ ಪಾಪ ಕಂಡೇ ದೇವರು ಕೊಲ್ಲುತ್ತಿರುವನು ವಿಷಕಾರಿ. ಇದನ್ನರಿತು ಎಚ್ಚರಾಗಿರಿ.

**ಪದ :**

ಇದ್ದವರೆಲ್ಲರು ಇಲ್ಲದವರಿಗೆ
ಸಲ್ಲಿಸಿ ಗಳಿಸಿರಿ ಪುಣ್ಯವನು
ಸಲ್ಲಿಸಿ ಗಳಿಸಿರಿ ಪುಣ್ಯವನು
ಪರಮಾತ್ಮನು ಬೇಗನೆ ಒಲಿಯುವನು ‖ ೬ ‖

ಪರೋಪಕಾರವು ವರಪುಣ್ಯವು ತಿಳಿ
ಪರಪೀಡೆಯೇ ಪಾಪವು ಇದನು
ಪರಪೀಡೆಯೇ ಪಾಪವು ಇದನು
ಇದನರಿತು ನಡೆಯಿರೆನ್ನುವೆ ನಾನು ‖ ೭ ‖

ನಮ್ಮ ಪಾಪಗಳ ಭಾರವನ್ನು
ಭೂದೇವಿ ಹೊತ್ತು ಕುಸಿದಿ ಹಳಿದನು
ಭೂದೇವಿ ಹೊತ್ತು ಕುಸಿದಿ ಹಳಿದನು
ನೀವಿಳಿಸಿರಿ ಅವಳ ಭಾರವನು ‖ ೮ ‖

ಇಳಿಸದಿದ್ದರೆ ಭೂಮಿತಾಯಿ ತಾ
ನುಂಗಿಬಿಡುವಳೆಂಬುವದನ್ನು
ನುಂಗಿಬಿಡುವಳೆಂಬುದನ್ನು
ದಿಟವೆಂದು ನಂಬಿರೆನ್ನುವ ನಾನು ‖ ೯ ‖

**ವಚನ :**

ಇಂದು ಪಾಪ ಪುಣ್ಯಗಳ ವಿಚಾರಣೆಯ ಕಾಲಸನ್ನಿತವಾಗಿದೆಯೆಂದು ಎಲ್ಲರೂ ತಿಳಿಯಬೇಕು. ಇಂದು ಮಾಡಿದ ಪಾಪ ಪುಣ್ಯದ ಫಲವನ್ನು ನಾಳೆಯೇ ಉಣ್ಣಬೇಕು. ದುಷ್ಟರು ಇನ್ನು ಬದುಕುವೆನೆಂಬುದನ್ನು ಮರೆಯಬೇಕು. ಈವರೆಗಾದ ಅನ್ಯಾಯದ ಅತಿರೇಖವನ್ನು ಸಹಿಸಿ ಸಹಿಸಿ ಸಾಕಾಗಿ ಕಾಲ ಪುರುಷನು ಕೆರಳಿರುವನೆಂದು ತಿಳಿಯಬೇಕು. ಇನ್ನಾದರೂ ಸನ್ಮಾರ್ಗ ಅರಸಬೇಕು. ಈಗ ಹಾಲುಮತದ ಮಹಿಮೆಯನ್ನು ದಯೆಯಿಟ್ಟು ಲಾಲಿಸಬೇಕು.

**ಪದ :**

ಇವರು ಕುರುಬರು ಇವು ಡೊಳ್ಳಿನ
ಹಾಡೆಂದು ಜರಿವ ಪಂಡಿತರನ್ನು
ಹಾಡೆಂದು ಜರಿವ ಪಂಡಿತರನ್ನು
ತಿರುಳರಿತು ನುಡಿಯಿರೆನ್ನುವ ನಾನು ‖ ೧೦ ‖

ಸಕ್ಕರಿ ಕೇಸರಿ ಬೆರೆಯಿಸಿ ಕೊಟ್ಟರೆ
ಕುಡಿಯಲು ಆಕಳ ಹಾಲನ್ನು

ಕುಡಿಯಲು ಆಕಳ ಹಾಲನ್ನು
ಕರಿ ಆಕಳದಾಮಗುವರೇನು ॥ ೧೧ ॥

ಜೇನು ತುಪ್ಪ ಹುಳದೆಂಜಲವಲ್ಲವೆ
ಮೆಲ್ಲುವರೇಕೆಲ್ಲರು ಅದನು
ಮೆಲ್ಲುವರೇಕೆಲ್ಲರು ಅದನು
ವಸ್ತುವಿನ ಗುಣಕೆ ಕೂಡಿ ಬೆಲೆಯನ್ನು ॥ ೧೨ ॥

ಇಲ್ಲಿ ಕೂಡಿರುವ ದೈವವೆ ದೇವರು
ಎಂದು ನಂಬಿ ಕೈಮುಗಿಯುವೆನು
ಎಂದು ನಂಬಿ ಕೈಮುಗಿಯುವೆನು
ತಮ್ಮಾಶೀರ್ವಾದ ಬೇಡುವೆನು ॥ ೧೩ ॥

**ವಚನ :**

ಈ ಪ್ರಪಂಚದಲ್ಲಿ ಯಾವುದೇ ಮತ ಪಂಥದಲ್ಲಿ ಹುಳುಕು ಇದೆ. ಅದರ ಜೊತೆಗೆ ಬೆಳಕು ಇದೆ. ಸಂಸ್ಕೃತಿ ಸುಧಾರಣೆಯರಿತ ಮಾನವನು ಕೊಳಕನ್ನು ತೊಳೆದು ತಿರುಳನ್ನು ಆಧರಿಸಿ ನಡೆಯಬೇಕು. ಅದರಲ್ಲಿಯೇ ಸಮಾನದ ಉನ್ನತಿ ಇದೆ.

**ಪದ :**

ಕುರುಬರು ನಾವು ಕುರುಬರು ನಾವು
ಕುರಿಗಳ ಮೇಯಿಸುವ ಕುರುಬರು
ಕುರಿಗಳ ಮೇಯಿಸುವ ಕುರುಬರು
ಮರೆಮೋಸಗಳರಿಯದ ಕುರುಬರು ॥ ೧೪ ॥

ಸುರಿಯುವ ಮಳೆಯಲಿ ನೆನೆಯುವ ಕುರುಬರು
ಕೊರೆಯುವ ಚಳಿಯಲಿ ಬಿರಿವವರು
ಕೊರೆಯುವ ಚಳಿಯಲಿ ಬಿರಿವವರು
ಉರಿ ಬಿಸಿಲಲಿ ಕರಿಯುವ ಧೀರರು ॥ ೧೫ ॥

ಅಡವಿಯ ಹೊಡೆಹುಲ್ಲ ಮೇಯಿಸುವವರು
ಮಡುವಿನ ತಿಳಿನೀರ ಕುಡಿಸವರು
ಮಡುವಿನ ತಿಳಿನೀರ ಕುಡಿಸವರು
ಯಾರೊಡನೆ ಜಗಳ ಮಾಡದಂಥವರು ॥ ೧೬ ॥

ಕಾಡಿನ ಬಂಟರು ಮುಗಿಲಿನ ನೆಂಟರು
ಹುಲಿ ಚಿರ್ತಗಳನ್ನಿರಿಯುವವರು

ಹುಲಿ ಚರ್ಚೆಗಳನ್ನುರಿಯುವವರು
ತೋಳಗಳ ಬೆದರಿಸಿ ಅಟ್ಟುವವರು ॥ ೧೭॥

**ವಚನ :**

ಹಳ್ಳಿ ನಮ್ಮ ತವರೂರು. ಅಡವಿ ನಮ್ಮ ಮನೆಮಾರು. ನಂಬಿಗೆಯ ನಾಯಿಗಳೇ ನಮ್ಮ ಗೆಳೆಯರು. ನಾವರಿಯೆವು ಪಟ್ಟಣದ ಸೆವಿಸಾರು. ಕುರಿಯೇ ನಮ್ಮ ದೇವರು. ಹಾದಿತಪ್ಪಿದವರಿಗೆ ಹಾಲು ಕುಡಿಸಿ ಹಾದಿತೋರಿಸುವವರು. ಒಂದು ಕೆನ್ನೆಗೆ ಹೊಡೆದರೆ ಎರಡನೇದನ್ನು ಕೊಡುವವರು. ತಾಳ್ಮೆ ಎಂಬುದನ್ನು ಕಲಿಸಿರುವರು ನಮ್ಮ ಹಿರಿಯರು. ಹಾಲ ಕುಡಿದು ಬದುಕುವೆವು ವರ್ಷ ನೂರು. ಇದೇ ನಮ್ಮ ಮೂಲ ಬೇರು.

**ಪದ :**

ಸತ್ತ ಕುರಿಗಳನು ಹೊತ್ತು ಮಾರುವೆವು
ಮತ್ತೆ ಮಾಂಸ ಸೇವಿಸದವರು
ಮತ್ತೆ ಮಾಂಸ ಸೇವಿಸೆದವರು ಆ
ಚಿತ್ತಜಾರಿಯನ್ನು ನೆನವವರು ॥ ೧೮ ॥

ಹಾಲ ಕುಡಿದು ಹಲ ಕಕ್ಕುತ ಹಾಲನು
ರೊಕ್ಕಕೆಂದು ಮಾರದಂಥವರು
ರೊಕ್ಕಕ್ಕೆಂದು ಮಾರದಂಥವರು
ನಾವಿಂತಹ ಉದಾರ ಗುಣದವರು ॥ ೧೯ ॥

ಇಂತಹ ಉದಾರ ಗುಣದವರೆಮಗೆ
ಹಾಲುಮತದವರು ಎನ್ನವರು
ಹಾಲುಮತದವರ ಎನ್ನುವರು ನಮ್ಮ
ಕುಲಕೆ ಹಾಲುಮತ ಎನ್ನುವರು ॥ ೨೦ ॥

ಇಂತಹ ಉದಾರ ಗುಣದವರೆಮಗೆ
ವಡ್ಡ ಮಡ್ಡರೆಂದು ಜರೆಯುವರು
ದಡ್ಡ ಮಡ್ಡರೆಂದು ಜರೆಯುವರು ನಮ್ಮ
ಹೊಲಬನೆ ಅರಿಯದ ಗಾವಿಲರು ॥ ೨೧ ॥

ಕುರುಬಗೆ ಹೂವನು ಕೊಟ್ಟರೆ ಅದನವ
ಕುಂಡಿಯೊಳಿಟ್ಟೆಂತೆನ್ನುವರು
ಕುಂಡಿಯೊಳಟ್ಟೆಂತೆನ್ನುವರು ನಿಜ
ಗುಟ್ಟನು ತಿಳಿಯದ ಪಾಮರನು ॥ ೨೨ ॥

**ವಚನ :**

ಹಿಂದೆ ನಮ್ಮ ಹಿರಿಯನಿಗೆ ಒಬ್ಬ ದೊರೆಯು ಒಂದು ಹೂವು ಕೊಟ್ಟನಂತೆ. ಅದನ್ನು ಅವನು ತಾನು ಮುಡಿಯದೆ ಹಿಂದೆ ಇದ್ದ ಶಿವಲಿಂಗಕ್ಕೆ ಮುಟ್ಟಿಸಿದನಂತೆ ಇದನ್ನು ಕಂಡ ಅರಸನು ಹೀಗೇಕೆ ಮಾಡಿದಿಯೆನ್ನಲು ನಮ್ಮ ಒಡಿಯ ಸ್ವಾಮಿ ಅಲ್ಲಿ ನನ್ನ ಶಿವನಿರುವನೆಂದು ಲಿಂಗತೋರಿಸಿದನಂತೆ ! ಆಗ ಆ ರಾಜನು ಅವನ ಭಕ್ತಿಗೆ ಮೆಚ್ಚಿ ಆ ನಾಡನ್ನೇ ಅವನಿಗೆ ಉಂಬಳಿ ಹಾಕಿಕೊಟ್ಟನಂತೆ. ಈ ವಸ್ತುಸ್ಥಿತಿ ಅರಿಯದವರು ನಮ್ಮನ್ನೇ ಅಪಾರ್ಥಮಾಡಿ ನಿಂದಿಸುವರು. ಇದನ್ನರಿತು ಬಲ್ಲವರು ನಡೆಯಬೇಕೆಂದು ಬೇಡುವೆನು.

**ಪದ :**

ಕುರುಬರು ನೇಯುವ ಕರಿಕಂಬಳಿಯು
ಗುರುವಿನ ಗದ್ದುಗೆಗಿರಬೇಕು
ಗುರುವಿನ ಗದ್ದುಗೆಗಿರಬೇಕು ಶುಭ-
ಕಾರ್ಯಕೆ ಇದು ಬೇಕೇಬೇಕು ॥ ೧೩ ॥

ಮದುವೆಯ ಹಂದರದೊಳಗೆ ಹಾಸಕ್ಕಿಯ
ಹೊಯ್ಯಲು ಕಂಬಳಿ ಇರಬೇಕು
ಹೊಯ್ಯಲು ಕಂಬಳಿ ಇರಬೇಕು ಒಕ್ಕಲಿಗರ
ಹೆಗಲಿಗೆ ಇದು ಬೇಕೇ ಬೇಕು ॥ ೧೪ ॥

ಕುರುಬರ ಉಣಿಯ ನೂಲದು
ಯಂತ್ರಕೆ ಮಂತ್ರಕೆ ಇರಬೇಕು
ಯಂತ್ರಕೆ ಮಂತ್ರಕೆ ಇರಬೇಕು ಈ
ತಂತ್ರವ ಮೊದಲರಿತಿರಬೇಕು ॥ ೧೫ ॥

ಗುದ್ದಲಿ ಪೂಜೆಗೆ ಕುರುಬರು ಬೇಕು
ಬಿತ್ತುವಾಗ ಕುರುಬರು ಬೇಕು
ಬಿತ್ತುವಾಗ ಕುರುಬರು ಬೇಕು
ಮತ್ತೆ ಉತ್ಸವಕ್ಕೆ ಡೊಳ್ಳಿರಬೇಕು ॥ ೧೬ ॥

ಮೈಲಾರ ಮಹದೇವನ ಗೊರವರಿಗೆ
ಧರಿಸಲು ಕರಿ ಕಂಬಳಿ ಬೇಕು
ಧರಿಸಲು ಕರಿ ಕಂಬಳಿ ಬೇಕು
ಕೇಳಿದುವೇ ಅವರಿಗೆ ಹಿರಬದುಕು ॥ ೧೭ ॥

**ವಚನ :**

ನಮ್ಮ ಕೈಗಳು ಕಾಮಧೇನು ! ಗೈಮೆ ಕಲ್ಪವೃಕ್ಷ ! ಮಂಗಳ ಗ್ರಹ ಮುಳುಗುವವರೆಗೆ ನಾವು ಕುರಿ ಮೇಯಿಸುವುದರಿಂದ ಅದಕ್ಕೆ ಕುರುಬರ ಚಿಕ್ಕೆ ಎಂದು ಹೆಸರು ಬಂದಿರುವದು. ಕಾರಣ ನಮ್ಮ ಚರಿತ್ರೆ ಹಾಗೆ ಮಹತ್ವದ್ದಾಗಿರುವದು.

ಪದ :

ಗೋಕುಲದೊಳಗಾಕಳ ಮೇಯಿಸಿದಾ
ಶ್ರೀಕೃಷ್ಣನು ಕುರುಬನು ಕೇಳು
ಶ್ರೀಕೃಷ್ಣನು ಕುರುಬರು ಕೇಳು
ಸುಳ್ಳಾದರೆ ಪಂಡಿತರನು ಕೇಳು ‖ ೧೮ ‖

ಸಂಸ್ಕೃತ ಸಾಹಿತ್ಯದಾಕಾಶ ದಿನ ಮಣಿ
ಕಾಲಿದಾಸ ಕುರುಬನು ಕೇಳು
ಕಾಲಿದಾಸ ಕುರುಬನು ಕೇಳು
ನೀನೊಪ್ಪದಿದ್ದರೀಗಲೆ ಹೇಳು ‖ ೧೯ ‖

ಕನ್ನಡ ನಾಡಿನ ಚನ್ನಿಗ ಕವಿವರ
ಕನಕದಾಸ ಕುರುಬನು ಕೇಳು
ಕನಕದಾಸ ಕುರುಬನು ಕೇಳು
ಕೇಳಿದಕಾಗಿ ನಮ್ಮಿ ಕುಲ ಮೇಲು ‖ ೨೦ ‖

ವಿಜಯನಗರ ಸಾಮ್ರಾಜ್ಯದ ಕಟ್ಟಿದ
ಹುಕ್ಕ ಬಕ್ಕರು ಕುರುಬರು ಕೇಳು
ಹುಕ್ಕ ಬುಕ್ಕರು ಕುರುಬರು ಕೇಳು
ಸಂಗೊಳ್ಳಿರಾಯಣ್ಣನು ಕಟ್ಟಾಳು ‖ ೨೧ ‖

ಮರಾಠಾ ಸಾಮ್ರಾಜ್ಯ ಕಟ್ಟಿದ ಶಿವಾಜಿ
ಮಹಾರಾಜ ಕುರುಬನು ಕೇಳು
ಮಹಾರಾಜ ಕುರುಬನು ಕೇಳು
ಸುಳ್ಳಾದರೆ ತಿಳಿ ಇತಿಹಾಸದೊಳು ‖ ೨೨ ‖

ಅಲ್ಪ ವೆಚ್ಚದಲಿ ರೈತಗೆ ಗೊಬ್ಬರ
ಕೊಡುವವರೇ ಕುರುಬರು ಕೇಳು
ಕೊಡುವವರೇ ಕುರುಬರು ಕೇಳು
ಹೀಗೀ ರೈತ ಕುರುಬರೊಳ್ಳೇ ಮೇಳು ‖ ೨೩ ‖

ಬಹಳ ಹೇಳಲಾರೆ ಮೈಲಾರ ಲಿಂಗನು
ಕುರುಬರ ಮನೆ ಕಾಯುವ ಆಳು

ಕುರುಬರ ಮನೆ ಕಾಯುವ ಆಳು
ಈ ಜಗದಿ ಭಕ್ತಿ ಗಾವುದ ಮೇಲು ॥ ೩೪ ॥

**ವಚನ :**

ಸಂಸ್ಕೃತದಲ್ಲಿ ಕುರಿಗೇ ಕುರರೀ ಅನ್ನುವರು. ಆದರೆ ತದ್ಭವವೇ ಕುರಿಯಾಗಿರುವುದು. ಕುರಿ ಸಾಕುವವರೇ ಕುರುಬರು. ಕುರುಹು ತೋರುವರೇ ಕುರುಬರು. ಹೀಗೆ ಬಂದಿದೆ ಕುರುಬರೆಂಬ ಹೆಸರು.

**ಪದ :**

ಇಂತಹ ಸುಂದರ ಕುರುಬರ ಚರಿತೆಯ
ಅಲ್ಪದರಲಿ ನಾ ಹೇಳಿದೆನು
ಅಲ್ಪದರದಲಿ ನಾ ಹೇಳಿದೆನು
ಬೇಕಾದರೆ ದೊಡ್ಡದು ಮಾಡುವೆನು ॥ ೩೫ ॥

ಕುರುಬರೆಂದರೆ ಕೀಳರಲ್ಲವೆಂದು
ಮನವರಿಕೆಯ ನಾ ಮಾಡಿದೆನು
ಮನವರಿಕೆಯ ನಾ ಮಾಡಿದೆನು
ಇದನರಿತರೆ ಧನ್ಯನು ಆಗುವೆನು ॥ ೩೬ ॥

**ವಚನ :**

ಹಾಲಿನ ದಾನ ಮಾಡುವುದೇ ನಮ್ಮ ಶೀಲ ಹಾಲಿನಂತೆ ನಮ್ಮ ಮನ ಬೆಳ್ಳಗೆ, ನಮ್ಮ ಕೃತಿ ಬೆಳ್ಳಗೆ. ಆದ ಕಾರಣ ಹಾಲುಮತದವರೆಂಬ ಅಭಿದಾನ. ಹಾಲುಮತದವರೆನಿಸಿಕೊಳ್ಳುವುದೇ ನಮಗೆ ಭೂಷಣ. ಹೀಗಾದ ವಿನಃ ನಮಗೆ ಸಮಾಜದಲ್ಲಿ ಇಲ್ಲ ಸ್ಥಾನ. ಈ ಗುರಿ ಬೇಗ ಯಶಸ್ವಿಯಾದಷ್ಟು ನಮ್ಮ ಕಲ್ಯಾಣ. ಆದ ಕಾರಣ -

**ಪದ :**

ಕುರುಬರ ಬದಲು ಹಾಲುಮತದವರು
ಎನಿಸಲು ಮಾಡಿರಿ ಯತ್ನವನು
ಎನಿಸಲು ಮಾಡಿರಿ ಯತ್ನವನು
ಸಮಾಜ ಧುರೀಣರು ಅರಿತಿದನು ॥ ೩೭ ॥

ಹಾಲುಮತ ಎಂಬ ಶಬ್ದವು ಎಂತಹ
ಸುಂದರವಿದೆಯೆಂದರಿತಿದನು
ಸುಂದರವಿದೆಯೆಂದರಿತಿದನು
ಲಗು ಬಳಕೆಗೆ ತರಲೆಂದೊರೆಯುವೆನು ॥ ೩೮ ॥

ಕುರುಬರೆಂಬ ನುಡಿ ಮಾಜುವವರಿಗೆ
ಸತತ ಮಾಡಿರಿ ಪ್ರಯತ್ನವನು
ಸತತ ಮಾಡಿರಿ ಪ್ರಯತ್ನವನು
ಹೀಗಾದರೆ ಪಡೆವೆವು ಹಿರಿಮೆಯನು ॥ ೩೯ ॥

ಕಿರಿದರಲ್ಲಿ ಹಿರಿಯರ್ಥವನೊರೆಯುವ
ಸರಸ ಚರಿತೆಯನು ರಚಿಸಿದೆನು
ಸರಸ ಚರಿತೆಯನು ರಚಿಸಿದೆನು ಅನು-
ಸರಿಸಲು ಧನ್ಯನು ಆಗುವೆನು ॥ ೪೦ ॥

## ಮಹಾಸತಿ ಅನಸೂಯೆ

ಗುರುವೆ ನಿಮ್ಮ ಘನ ಚರಣವ ನಂಬಿ
ಶರಣು ಬಂದೆ ಕರುಣದಿ ನೀನು
ಶರಣು ಬಂದೆ ಕರುಣದಿ ನೀನು । ನಿನ್ನ
ತರಳನೆಂದು ಕೊಡು ಜಯವನ್ನು ॥ ೧ ॥

ಮೂರು ಲೋಕವ ಪಾಲಿಸು ಶಂಕರ
ಗೌರಿ ಗಣಪ ವೀರೇಶ್ವರನು
ಗೌರಿ ಗಣಪ ವೀರೇಶ್ವರನು । ಸುಕು-
ಮಾರತನದಿ ಭೃಂಗಿಗಳನ್ನು ॥ ೨ ॥

ವೀರ ಕೈಲಾಸದಿ ಹರನ ರೂಪವ
ಧರಿಸಿ ಮೆರೆವ ಶಿವ ಪ್ರಮಥರನು
ಧರಿಸಿ ಮೆರೆವ ಶಿವ ಪ್ರಮಥರನು । ಈ
ಧರಣಿಯನ್ನು ತಾ ಶರಣರನು ॥ ೩ ॥

ಅರಿತು ಸರ್ವರ ಚರಣಗಳನ್ನು
ಶಿರದಿ ಹೊತ್ತು ಕುಣಿದಾಡುವೆನು
ಶಿರದಿ ಹೊತ್ತು ಕುಣಿದಾಡುವೆನು । ಇಹ-
ದುರಿತವನ್ನು ತುಳಿದಾಡುವೆನು ॥ ೪ ॥

ಕೇಳಿರೆಲ್ಲರು ಹೇಳುವೆ ನಾನು
ಶೀಲ ಧರ್ಮದ ಗುಣಗಳನ್ನು

ಶೀಲ ಧರ್ಮದ ಗುಣಗಳನ್ನು । ನೀವು
ಬಾಳಿರಿ ನಂಬಿ ಶಿವನನ್ನು ॥ ೫ ॥

ಸ್ಥಿರವಲ್ಲವು ನಿರ್ಗುಣನಳಿ ಎಂಥ
ನರ ಜಲ್ಮವು ಕಡೆಯೊಳೆ ಇನ್ನು
ನರ ಜಲ್ಮವು ಕಡೆಯೊಳೆ ಇನ್ನು । ತಾ
ಬೆರೆದು ಕೂಡುವುದು ಮಣ್ಣನ್ನು ॥ ೬ ॥

ಧರಣಿಯಲ್ಲಿ ನೀ ಇರುವುದರೊಳಗೆ
ಭರದಿ ಮಾಡುವುದು ಭಕ್ತಿಯನು
ಭರದಿ ಮಾಡುವದು ಭಕ್ತಿಯನು । ಮುರ-
ಹರನ ಹೊಂದಿರಿ ಮುಕ್ತಿಯನು ॥ ೭ ॥

ಸೊಕ್ಕಿನಿಂದಲಿ ಮೆರೆಯಬೇಡಿರಿ
ಮುಕ್ಕಣ್ಣನ ಪಾದಗಳನ್ನು
ಮುಕ್ಕಣ್ಣನ ಪಾದಗಳನ್ನು । ಅವ
ಅಕ್ಕರತೆಯಲಿ ಕಾಯುವನು ॥ ೮ ॥

**ವಚನ :**

ಹೇ ಮನುಷ್ಯ, ಇರುವೆ ಮೊದಲು ಮಾಡಿಕೊಂಡು ಆನೆಯವರೆಗೂ ಎಲ್ಲಾ ಜೀವಿಗಳಲ್ಲಿ ಮನುಷ್ಯನೇ ಶ್ರೇಷ್ಠನು. ಯಾಕಂದರೆ, ದೇವರು ಮನುಷ್ಯನಿಗೆ ವಿಚಾರ ಶಕ್ತಿಯನ್ನು ಕೊಟ್ಟಿದ್ದಾನೆ. ಈ ವಿಚಾರ ಶಕ್ತಿಯಿಂದ ಪಾಪ ಪುಣ್ಯಗಳನ್ನು ತಿಳಿದುಕೊಳ್ಳುವುದಕ್ಕೆ ಬರುತ್ತದೆ. ಹೀಗಿದ್ದು ಅಜ್ಞಾನದಿಂದ ಪಶುಗಳಂತೆ ಸಂಸಾರಕ್ಕೆ ಮೋಹಿಸಿ ಭಗವಂತನ ಭಜನೆಯನ್ನು ಮರೆತು ನಾಯಿ ನರಿ ಮೊದಲಾದ ಅನೇಕ ಜನ್ಮಗಳನ್ನು ತಿರುಗಬೇಡಿರಿ.

॥ ಕಂದ ॥

ಸತಿ ಸುತರು ಬಂಧು ಬಳಗವು ಮೃತ್ಯದೊಳು
ತನ್ನೊಡನೆ ಬರುವ ದೇಹವಿದು ಕ್ಷಿತಿಯೊಳು ಶಾಶ್ವತವೆ?
ಎಲೆ ಮತಿಗೇಡಿ ಮನುಜ ಧರ್ಮದಿಂದ ಚರಿಸು.

**ವಚನ :**

ಹೇ ಮೂಢಾ, ನೀನು ಚಿರಂಜೀವಿಯಲ್ಲ. ನೀರಿನ ಮೇಲಿನ ಗುರುಳೆಯಂತೆ ಈ ಶರೀರವು ಅಸ್ಥಿರವಾದದ್ದು. ಹೆಂಡರು ಮಕ್ಕಳಿಗೆ ಮೋಹಿಸಿ ಮೈ ಮರೆತು ಪರಮಾತ್ಮನನ್ನು ಮರತೆಯಲ್ಲ. ನೀನು ಸಾಯುವಾಗ ನಿನ್ನ ಹೆಂಡಿರು ಮಕ್ಕಳು ನಿನ್ನ ಸಂಗಡ ಬರುವರೆ ಹ್ಯಾಗೆ? ಮತ್ತು ನೀನು ಗಳಿಸಿದ ಹೊಲ ಮನೆಗಳನ್ನು ನಿನ್ನ ಹಿಂದೆ ತೆಗೆದುಕೊಂಡು ಹೋಗುವಿಯಾ? ಯಮದೂತರು ಹಿಡಿದು ಬಡಿದು ಹೊಡೆಯುವಾಗ ನಿನ್ನನ್ನು ಬಿಡಿಸಿಕೊಳ್ಳುವವರು ಯಾರು ಹೇಳು. ಅಜ್ಞಾನವಂತನಾಗಬೇಡ. ದೇವರ ಭಕ್ತಿಯನ್ನು ಸಂಪಾದಿಸು.

ಪದ :

ನಿನ್ನ ಕುಲದ ನಡತೆಯ ಬಿಡಬೇಡ
ಮನ್ನಿ ಸು ಗುರು ಯಜಮಾನರನು
ಮನ್ನಿ ಸು ಗುರು ಯಜಮಾನರನು । ತಿಳಿ
ಸನ್ನುತ ಲೀಲೆಯ ಮಾರ್ಗವನು ॥ ೯ ॥

ಮಾಡಬೇಡ ಪರ ಹೆಣ್ಣಿಗೆ ಆಸೆಯ
ಕೇಡು ತಪ್ಪಲಾರದು ನಿನಗೆ
ಕೇಡು ತಪ್ಪಲಾರದು ನಿನಗೆ । ಒಡ-
ನಾಡು ಸಜ್ಜನರ ಕೂಡಿನ್ನು ॥ ೧೦ ॥

ಕಳ್ಳತನಕೆ ಮೈಗೊಡಬೇಡ
ಸುಳ್ಳು ಸಾಕ್ಷಿ ಹೇಳುವುದನ್ನು
ಸುಳ್ಳು ಸಾಕ್ಷಿ ಹೆಳುವುದನ್ನು । ಮೈ
ಗಳ್ಳನಾಗದಿರು ನೀ ಮುನ್ನು ॥ ೧೧ ॥

ಮಂದಿಯ ಮನನೊಂದಿಸಿ ಹೊಂದಬೇಡ ಬಿಡು
ಹಂದಿ ನರಿ ನಾಯಿ ಜನ್ಮವನು
ಹಂದಿ ನರಿ ನಾಯಿ ಜನ್ಮವನು । ಮನ-
ಬಂದ ಹಾಗೆ ನಡೆಯದಿರು ಇನ್ನು ॥ ೧೨ ॥

ಕುಲದಿ ಛಲದಿ ಬಲವಂತನೆಂದು ನೀತಿ
ತಿಳಿದು ಸೊಕ್ಕಿ ಮೆರೆಯುವದನ್ನು
ತಿಳಿದು ಸೊಕ್ಕಿ ಮೆರೆಯುವದನ್ನು । ಬಿಡು
ತಿಳಿದು ನೋಡು ರಾವಣನನ್ನು ॥ ೧೩ ॥

ಜಾಣನಂಥ ಕಡು ಜಾಣನಲ್ಲ ಬಿಡು
ಕೋಣ ಸೊಕ್ಕು ಬಡಿವಾರವನ್ನು
ಕೋಣ ಸೊಕ್ಕು ಬಡಿವಾರವನ್ನು । ನೀ
ಕ್ಷೋಣಿಯಲ್ಲ ಅಲ್ಪನು ನೀನು ॥ ೧೪ ॥

ಪರರಿಗೆ ಇದ್ದ ಸಂಪತ್ತನ್ನು
ಮರುಗಬೇಡ ಹಿಡಿಧೈರ್ಯವನು
ಮರುಗಬೇಡ ಹಿಡಿಧೈರ್ಯವನು । ಪುರ
ಹರನು ಕೊಡುವನು ಸಿರಯನ್ನು ॥ ೧೫ ॥

ಕುಂದು ಹೊರಲಬ್ಯಾಡೆಂದಿಗೂ ಜಗದಿ
ಇಂದುಧರನ ಪಾದಗಳನ್ನು
ಇಂದುಧರನ ಪಾದಗಳನ್ನು | ಬಲು-
ಚಂದದಿಂದ ಧ್ಯಾನಿಸು ನೀನು ‖ ೧೬ ‖

**ವಚನ :**

ಹೇ ಮಾನವಾ, ನಿತ್ಯ ಆಚರಣೆಯನ್ನು ದಾನ ಧರ್ಮ ಪರೋಪಕಾರವನ್ನು ಪರಮಾತ್ಮ ಪೂಜೆಯನ್ನು ಸಹಾಯವನ್ನು ಮಾಡಿ ಸುಖ ಪಡದೆ ಸುಖಾದಾಸೆಯಿಂದ ಹಗಲಿರುಳು ಕಳವು, ಕೊಲೆ, ಹಾದರ, ಸುಳ್ಳು, ಚಾಡಿ ಮುಂತಾದ ನೀಚ ಕಾರ್ಯಗಳಲ್ಲಿ ಮಗ್ನನಾಗಿ ತಿರುಗುವಿಯಲ್ಲ? ಇಂಥ ದುರಾಚಾರದಲ್ಲಿ ನಿನಗೆ ಸುಖವೆಷ್ಟು? ಈ ಲೋಕದಲ್ಲಿ ಪ್ರಾರಬ್ಧದಿಂದ ಸುಖ ದುಃಖಗಳು ದೊರೆಯುವವಲ್ಲದೆ ಬೇರೆ ನಿನ್ನ ಹಂಬಲದಿಂದಲೇನಾಗುವುದು? ಪೂರ್ವದಲ್ಲಿ ಮಹಾತ್ಮರನ್ನು ವಿಚಾರಿಸು.

**‖ ವೃತ್ತ ‖**

ಫಣಿಯಂ ಬುಟ್ಟಿಯೋಳ್ ಇಟ್ಟು ಕಟ್ಟಿರಲು ಕೂಳಂ ಕಾಣದೆ ಸಾಯುವ ಕ್ಷಣದೋಳ್ ಒಂದು ಇಲಿಯು ಬುಟ್ಟಿಯಂ ಕಡಿ ಹೊಕ್ಕು ಹಾವಿಗೆ ಆಹಾರವಾಯಿತು. ಹಾವು ತನ್ನ ದೈವದಿಂದ ಕಿಂಡಿಯೊಳಗಿಂದ ಓಡಿ ಹೋಯಿತು ನೋಡಿರಿ ಜಗದೋಳ್ ಪ್ರಾರಬ್ಧವೇ ಕಾರಣಂ.

**ವಚನ :**

ಒಬ್ಬ ಹಾವಾಡಿಗನು ಹಾವನ್ನು ಹಿಡಿದುಕೊಂಡು ಬಂದು ಪುಟ್ಟಿಯಲ್ಲಿ ಹಾಕಿ ಕಟ್ಟಿ ತಲೆ ದಿಂಬಿಗೆ ಇಟ್ಟು ಮಲಗಿದ್ದನು. ಹಾವು ಅನ್ನವು ಇಲ್ಲದೆ ಹೊರಗೆ ಹೋಗುವುದಕ್ಕೆ ಮಾರ್ಗವನ್ನು ಕಾಣದೇ ಗೋಳಾಡುತ್ತಿತ್ತು. ಒಂದಾನೊಂದು ಇಲಿಯು ತನ್ನಿಂದ ತಾನೇ ಪ್ರಯತ್ನದಿಂದ ಬುಟ್ಟಿಯನ್ನು ಕಡಿದು ಕಿಂಡಿಯನ್ನು ಮಾಡಿತು. ಆಗ ಹಾವು ಇಲಿಯನ್ನು ತಿಂದು ಅದೇ ಇಲಿಯು ಮಾಡಿದ ತೂತಿನಿಂದ ಹೊರಗೆ ಹೋಗಿ ಸಂಕಟದಿಂದ ಪಾರಾಯಿತು. ಆದ್ದರಿಂದ ದೈವಬಲವೇ ಮುಖ್ಯವಾದದ್ದು. ಈ ದೈವವಾದರೂ ತನ್ನಿಂದ ತಾನೇ ಎಂದೂ ಆಗುವುದಿಲ್ಲ. ನಾವು ಮಾಡಿದ ಕರ್ಮವೇ ಪ್ರಾರಬ್ಧವಾಗುವುದು. ಆದ್ದರಿಂದ ಪುಣ್ಯವನ್ನು ಮಾಡು. ಉತ್ತಮವಾದ ಪಾರಮಾರ್ಥವು ಪ್ರಾಪ್ತವಾಗುತ್ತದೆ.

**ಪದ :**

ಸತ್ತ ಕುರಿಯನ್ನು ಹೊತ್ತು ಮಾರುವವನು
ನಿತ್ಯದಲ್ಲಿ ಕುರುಬನು ನೋಡಾ
ನಿತ್ಯದಲ್ಲಿ ಕುರುಬನು ನೋಡಾ | ನೀ
ಕುತ್ತಗಿ ಕೊಯ್ಯಲಿ ಬೇಡಾ ‖ ೧೭ ‖

ಅರಿಯದಲೆ ವರ ಹರಕೆಯೆಂದು ನೀ
ಕುರಿಯನ್ನು ಕಡಿಯಲಿ ಬೇಡ
ಕುರಿಯನ್ನು ಕಡಿಯಲಿ ಬೇಡ | ದೇವರು
ಕುರಿ ತಿಂಬುವನೇ ಮೂಢಾ ‖ ೧೮ ‖

ಹೆಂಡ ಸಾರಾಯಿ ಕುಡಿದು ನೀನು ಯಮ-
ಗೊಂಡದಲ್ಲಿ ಬೀಳಲಿ ಬೇಡ
ಗೊಂಡದಲ್ಲಿ ಬೀಳಲಿ ಬೇಡ | ಜಗ-
ಬಂಡನಾಗಿ ಹೊಂದುವಿ ಕೇಡ ॥ ೧೯ ॥

ನಿನ್ನ ಮತ ಧರ್ಮಾಚರಣೆಯನು
ಮಾಡದೆ ನೀನು ಬಿಡಬೇಡ
ಮಾಡದೆ ನೀನು ಬಿಡಬೇಡ | ಅದು
ಕೊಡುವು ನಿನಗೆ ಫಲವನ್ನು ॥ ೨೦ ॥

ಹರಿಯ ನಾಮವನು ಉಚ್ಛರಿಸುತಲಿರು
ಎಚ್ಚರಿಕೆಯಲಿ ಮರಿಯಲಿಬೇಡ
ಎಚ್ಚರಿಕೆಯಲಿ ಮರಿಯಲಿಬೇಡ | ಇದು
ನರ ಜನ್ಮಕೆ ಭೂಷಣ ನೋಡ ॥ ೨೧ ॥

ಪರರ ಗಂಟು ಅಪಹರಿಸಲಿ ಬೇಡ ನೀ
ಮೊರೆ ಹೊಕ್ಕವರನು ಬಿಡಬೇಡ
ಮೊರೆ ಹೊಕ್ಕವರನು ಬಿಡಬೇಡ | ನಂ-
ಬಿರುವವರನು ವಂಚಿಸಬೇಡ ॥ ೨೨ ॥

ಸ್ಮೃತಿ ಗುರುವಾಖ್ಯವ ಮೀರದೆ
ಪಾದವ ಹಿಡಿದು ನಡಿ ಬಿಡಬೇಡ
ಪಾದವ ಹಿಡಿದು ನಡಿ ಬಿಡಬೇಡ | ಸದ್ಗತಿ
ಯಾಗುವುದು ನಿನಗೆ ನೋಡಾ ॥ ೨೩ ॥

**ವಚನ :**

ಧರ್ಮವಂತರೆ, ಸತ್ಯ ಹಾಗೂ ಧರ್ಮವನ್ನು ಸದಾ ಆಚರಿಸಬೇಕೆಂಬುದಾಗಿ ಸ್ಮೃತಿಯು ಬೋಧಿಸುತ್ತದೆ. ಗೃಹಸ್ಥ ಜಗತ್ತಿನಲ್ಲಿ ಧರ್ಮವೇ ಮುಖ್ಯ ಕಾರಣವಾಗಿದೆ. ಜಾತಿ, ಕುಲ, ಕ್ರಿಯಾದಿಗಳನ್ನು ಬಿಡದೇ ನಡೆಯಬೇಕು. ಕುಲ ಧರ್ಮ ಕೆಟ್ಟರೆ ನರಕ ವಾಸವು ಎಂದಿಗೂ ತಪ್ಪಲಾರದು. ತಮ್ಮ ಕುಲಧರ್ಮವು ಹೇಗೇ ಇದ್ದರೂ ಅದೇ ತಮಗೆ ದೊಡ್ಡದು. ಪರರ ಹಿತ ಕೇಳುತ್ತಿರಬೇಕು. ಶಾಸ್ತ್ರ ಸಮ್ಮತವಾಗದಂಥ ನಡತೆಯು ತಮ್ಮಲ್ಲಿ ಅಜ್ಞಾನದಿಂದ ಬಂದು ಬೇರೂರಿದ್ದರೆ ಬಿಟ್ಟುಕೊಡಬೇಕು. ತನ್ನ ಧರ್ಮದಲ್ಲಿ ನಿರತನಾಗಿರಬೇಕೆಂದು ಕೃಷ್ಣನು ಅರ್ಜುನನಿಗೆ ಹೀಗೆ ಹೇಳಿದ್ದಾನೆ :

“"ಸ್ವಧರ್ಮನಾಪಿನ ಶ್ರೀ ಅಹಾಃ ಪರಮೋ ಧರ್ಮ ಭಯಂವಃ” ಎಂಬ ಗೀತೆಯ ವಚನದಂತೆ ತನ್ನ ಧರ್ಮವು ತನಗೆ ಸುಖವನ್ನು ಕೊಡುತ್ತದೆ. ಅನ್ಯಧರ್ಮವು ಭಯಂಕರವಾದದ್ದು, ಆದ್ದರಿಂದ ಪರಧರ್ಮವನ್ನು ಹಿಡಿಯಬೇಡ. ಅಹಿಂಸಾ ಪರಮೋಧರ್ಮಃ ಎಂಬಂತೆ ಧರ್ಮಗಳಲ್ಲಿ ಅಹಿಂಸೆಯೆಂದರೆ ಎರಡನೇ ಪ್ರಾಣಗಳನ್ನು ಕೊಲ್ಲದಿರು ಮತ್ತು ಎರಡನೇಯವರಿಗೆ ನೋವು ಮಾಡದಿರುವುದೇ ಶ್ರೇಷ್ಠವಾದ ಧರ್ಮವಾಗಿದೆ. ಯಜ್ಞಾದಿ ಕರ್ಮಗಳಲ್ಲಿ ಸಹ ಕುರಿಗಳನ್ನು ಕಡಿದು ತಿಂಬುವವರು ಮುಂದಿನ ಜನ್ಮದಲ್ಲಿ ಕುರಿಗಳಾಗಿ ಹುಟ್ಟುವರು.

ಕೊಲ್ಲಿಸಿಕೊಂಡಂಥ ಕುರಿಯು ಮನುಷ್ಯನಾಗಿಯೇ ಹುಟ್ಟಿ ಇವನನ್ನು ಕೊಲ್ಲುವದೆಂದು ಧರ್ಮ ಶಾಸ್ತ್ರವು ಹೇಳುತ್ತದೆ. ದೇವರಿಗೆಂದು ಬೇಡಿಕೊಂಡು ಕುರಿಗಳನ್ನು ಕೊಲ್ಲುವವರು ಪರಮಪಾಪಿಗಳಾಗಿ ಹುಟ್ಟುತ್ತಾರೆ. ಇವರನ್ನು ರಾಕ್ಷಸರೊಳಗೆ ಎಣಿಸತಕ್ಕದ್ದು. ದೇವರು ಕಾಣಬಲ್ಲನೆ? ಕುರಿಗಳನ್ನು ಬೇಡಬಲ್ಲನೆ? ದೇವರು ಕಾಡಿದರೆ ಮನುಷ್ಯರು ಉಳಿಯುವುದುಂಟೆ? ರಾಕ್ಷಸರಂತೆ ಮಾಂಸವನ್ನು ಬೇಡಿ ಮನುಷ್ಯರಿಂದ ಹೊಟ್ಟೆ ಹೊರಕೊಳ್ಳುವವರು ದೇವರಲ್ಲ. ಇಂಥ ಪಿಶಾಚಿಗಳಿಗೆ ದೇವರೆಂದು ನಂಬುವ ಪಾಪಿಗಳು ಭಕ್ತರಲ್ಲ. ನಿಜವಾದ ಕುರುವನು ಕುರಿಗಳನ್ನು ಮಕ್ಕಳಂತೆ ಜೋಪಾನ ಮಾಡುತ್ತಾನೆ. ಬದುಕಿ ಇದ್ದರೆ ಹಾಲುಂಬುವರು. ಸತ್ತರೆ ಹೊತ್ತು ಮಾರುವರು. ಯಾವನು ಕುರಿಯನ್ನು ಕೊಂದು ತಿಂಬುವನೋ ಅವನು ಕುರುಬನಲ್ಲ. ಅಂಥವನು ಲಿಂಗವನ್ನು ಧರಿಸಿ ತನ್ನ ಗುರುವನ್ನು ಕರೆತಂದು ತನ್ನ ಮನೆಯಲ್ಲಿ ಉಣಿಸಿದರೆ ನಾಯ ನರಕವನ್ನು ಹೊಂದುವನು. ಆದ್ದರಿಂದ ಹೇ ಮಾನವಾ. ನೀನು ನಿತ್ಯದಲ್ಲಿ ಸ್ನಾನಮಾಡಿ ವಿಭೂತಿಯನ್ನು ಧರಿಸು. ನಾಚಬೇಡ. ದೇವರನ್ನು ಪೂಜಿಸು. ಸದ್ಗುಣಗಳನ್ನು ಬಿಡದೆ ಉದ್ಯೋಗವನ್ನು ಮಾಡು. ಆಶ್ರಯಿಸಿದಂಥ ಸತಿ ಸುತರನ್ನು ಕಾಪಾಡು. ಪೂರ್ವದಲ್ಲಿ ಮಹಾತ್ಮರು ಹೇಗೆ ಸಂಸಾರ ಮಾಡಿದರೋ ಅವರಂತೆ ನೀನು ಸಂಸಾರಮಾಡಿ ಭಗವಂತನ ಅನುಗ್ರಹಕ್ಕೆ ಪಾತ್ರನಾಗು. ಮೊದಲಿನ ಸಂಸಾರಿಗಳಲ್ಲಿ ಶ್ರೇಷ್ಠರಾದ ಅತ್ರಿ-ಅನಸೂಯದೇವಿಯರ ಚರಿತ್ರೆ ಹೇಳುವೆ ಭಕ್ತಿಯಿಂದ ಕೇಳಿರಿ.

**ಪದ :**

ಘನ ಮಹಿಮದಿ ಪಾವನದಿಂದೆಸೆಯುವ
ಅನಸೂಯಾ ಚರಿತ್ರೆಯ ನಾನು
ಅನುಸೂಯಾ ಚರಿತ್ರೆಯ ನಾನು । ಸ
ಜ್ಜನರಲಿ ಚಂದದಿ ಹೇಳುವೆನು ॥ ೧೪ ॥

ಅತ್ರಿ ಎಂಬ ಮುನಿನಾಥನಿದ್ದನೀ
ಧರೀತ್ರಿಯಲಿ ಘನತಪವನ್ನು
ಧರೀತ್ರಿಯಲಿ ಘನತಪವನ್ನು । ಮಾ
ಡುತ್ತಿದ್ದ ನಿತ್ಯದಲಿ ತಾನು ॥ ೧೫ ॥

ಒಂದು ದಿನದೊಳು ಅತ್ರಿಯ ಮನಿಗೆ
ಬಂದನು ಶೌಬರಿಯೆಂಬ ಮುನಿವರನು
ಬಂದನು ಶೌಬರಿಯೆಂಬ ಮುನಿವರನು । ಆ
ನಂದದಿ ಅತ್ರಿಯ ನೋಡಿದನು ॥ ೧೬ ॥

ಬಂದ ತೌಬರಿಗೆ ವಂದಿಸಿ ಅತ್ರಿಯು
ಚಂದದಿಂದ ಉಪಚಾರವನು
ಚಂದದಿಂದ ಉಪಚಾರವನು । ಮನ-
ದಿಂದ ಮಾಡಿದನು ಮುನಿವರನು ॥ ೧೭ ॥

ಆಗ ಹೇಳಿದನು ಶೌಬರಿ ಅತ್ರಿಗೆ
ರಾಗದಿಂದ ಸಂಸಾರವನು
ರಾಗದಿಂದ ಸಂಸಾರವನು । ನೀ
ನೀಗಿ ಮಾಡು ಹೇಳುವೆ ನಾನು ॥ ೧೮ ॥

ಕೇಳೆಲೊ ಅತ್ರಿ ಸಕಲಾಶ್ರಮದೊಳು
ಮೇಲು ಗ್ರಹಸ್ಥಾಶ್ರಮವಿದು
ಮೇಲು ಗ್ರಹಸ್ಥಾಶ್ರಮವಿದು । ನೀ
ತಾಳು ಬಿಡದೆ ಸಂಸಾರವನು ‖ ೧೯ ‖

ಮೌನಿ ಜ್ಞನಿ ಸನ್ಯಾಸಿಗಳನ್ನು
ಮಾನದಿಂದ ಸಂಸಾರವನು
ಮಾನದಿಂದ ಸಂಸಾರವನು । ಈ
ಕ್ಷೋಣಿಯಲ್ಲಿ ಮಾಡಿಕೊಂಡಿರು ನೀನು ‖ ೨೦ ‖

**ವಚನ :**

ಎಲೈ ಅತ್ರಿ ಮುನಿಯೆ, ಬ್ರಹ್ಮಚಾರಿ, ಗ್ರಹಸ್ಥ, ವಾನಪ್ರಸ್ಥ, ಸನ್ಯಾಸ ಎಂಬ ನಾಲ್ಕು ಆಶ್ರಮಗಳಲ್ಲಿ ಗ್ರಹಸ್ಥಾಶ್ರಮವೇ ದೊಡ್ಡದು. ಯಾಕಂದರೆ ಅನೇಕ ಮುನಿಗಳು, ಜ್ಞಾನಿಗಳು, ಸನ್ಯಾಸಿಗಳು ಮತ್ತು ಪಾಪಿ ಪರದೇಶಿ ಮುಂತಾದ ಅನಾಥರು ಸಂಸಾರಿಗಳಲ್ಲಿ ರಕ್ಷಣವಾಗುತ್ತಾರೆ. ಆದ್ದರಿಂದ ನೀನು ಸಂಸಾರವನ್ನು ಮಾಡು ಎಂದು ಹೇಳಿದನು. ಶೌಬರಿಯ ಆಜ್ಞೆಯನ್ನು ಕೇಳಿ ಅತ್ರಿಯು ಪ್ರಪಮಚ ಮಾಡಲಿಕ್ಕೆ ಒಡಂಬಟ್ಟು ಲಗ್ನವಾಗಲಿಕ್ಕೆ ಯೋಗ್ಯವಾದ ಕನ್ಯೆಯನು ಹುಡುಕುತ್ತ ಅನೇಕ ದೇಶಗಳಲ್ಲಿ ಸಂಚರಿಸಿದನು. ಆಗ ಈತನಿಗೆ ಸುದೈವದಿಂದ ಅನಸೂಯಾ ಎಂಬ ಗುಣವಂತೆಯು ದೊರೆತಳು. ಅವಳನ್ನು ಲಗ್ನವಾಗಿ ತನ್ನ ಆಶ್ರಮಕ್ಕೆ ಕರೆತಂದು ಸಂಸಾರ ಸುಖದಿಂದ ಇದ್ದನು. ಅನಸೂಯಾ ಹೇಳಿದ್ದೇನಂದರೆ -

**ಪದ :**

ಗಂಡನೆ ದೇವರು ಗಂಡನೆ ಗುರು
ಗಂಡನೆ ಸರ್ವ ಬಳಗವು ಮತ್ತು
ಗಂಡನೆ ಸರ್ವ ಬಳಗವು ಮತ್ತು
ಗಂಡನಿಂದ ಸದ್ಗತಿಯೆನುತ ‖ ೨೧ ‖

ಪತಿಯ ಸೇವೆಯನು ಹಿತದಿ ಮಾಡುವಳು
ಸತಿ ಅನಸೂಯಾ ನಿರುತದಲಿ
ಸತಿ ಅನಸೂಯಾ ನಿರುತದಲಿ । ಆ
ಪತಿಗೆ ಹಿತವನು ಚಿಂತಿಸುತ ‖ ೨೧ ‖

ತನ್ನ ಗಂಡನ ಸುಖ ದುಃಖವನು
ತನ್ನವೆಂದು ತಾ ಭಾವಿಸುತ
ತನ್ನವೆಂದು ತಾ ಭಾವಿಸುತಾ । ಸತಿ
ಭಿನ್ನವಿಲ್ಲದಿದ್ದಳು ತಾನು ‖ ೨೨ ‖

ನಿತ್ಯ ಕನಸಿನಲ್ಲಿ ನೆನಸದಿದ್ದಳು
ಘನತರವಾದ ಸಂಪತ್ತು
ಘನತರವಾದ ಸಂಪತ್ತು | ತನ್ನ
ಮನಕೆ ತಾರದೆ ಏಪತ್ತು ‖ ೩೪ ‖

ಮನಿಗೆ ಬಂದ ಮುನಿಯೋಗಿಗಳನ್ನು
ಸನುಮತದಿಂದುಚರಿಸುತ್ತ
ಸನುಮತದಿಂದುಪಚರಿಸುತ್ತಾ | ಸತಿ
ಘನ ಕೀರ್ತಿ ಪಡೆದಳು ಮತ್ತು ‖ ೩೫ ‖

ಸುಳ್ಳು ಚಾಡಿ ಮೈಗಳ್ಳ ಗುಣಗಳು
ಎಳ್ಳಷ್ಟು ಇಲ್ಲ ಈಕೆಯ ಸುತ್ತು
ಎಳ್ಳಷ್ಟು ಇಲ್ಲ ಈಕೆಯ ಸುತ್ತು | ಮನ
ದಲ್ಲಿ ಶಂಕರನ ಧ್ಯಾನಿಸುತ ‖ ೩೬ ‖

ಎಂಥ ಕಷ್ಟ ಬಂದೊದಗಿದರೂ
ಚಿಂತಿ ಮಡದಿದ್ದಳೊ ನಗುತ
ಚಿಂತಿ ಮಾಡದಿದ್ದಳೋ ನಗುತ | ತನ್ನ
ಕಾಂತನನ್ನು ಸಂತೋಷಿಸುತ ‖ ೩೭ ‖

ಜಡಜ ನೇತ್ರಿಯ ನಡೆತೆಯಾ ನೋಡಿ
ಪೊಡವಿ ಜನರು ಕೊಂಡಾಡುತ್ತ
ಪೊಡವಿ ಜನರು ಕೊಂಡಾಡುತ್ತ | ನಮ್ಮ
ಹಡದ ತಾಯಿಯೆಂಬರು ಮತ್ತ ‖ ೩೮ ‖

**ವಚನ :**

ಈ ಪ್ರಕಾರವಾಗಿ ಅನಸೂಯಾದೇವಿಯು ಸದ್ಗುಣಿಯಾಗಿ ತನ್ನ ಪತಿಸೇವೆಯಲ್ಲಿ ಇರುತ್ತಿರಲಾಗಿ ಈಕೆಯ ಪತಿವ್ರತಾ ಧರ್ಮವನ್ನು ನೋಡಿ ಸೂರ್ಯ ತನ್ನ ಚರಣ ಕಿರಣಗಳಾದ ಬಿಸಿಲ ತಾಪವು ಈಕೆಯ ಮನೆಯ ಮೇಲೆ ಬೀಳಬಾರದೆಂದು ಓರಿಗೆ ಸಂಚರಿಸುತ್ತಿದ್ದನು. ಮಾರುತನು ಈಕೆಯ ಅಂಗಳದಲ್ಲಿ ಬಿದ್ದ ಕಸವನ್ನು ತೆಗೆಯುತ್ತಿದ್ದನು. ಆಶ್ರಮದ ಸುತ್ತಮುತ್ತ ಆ ವನದಲ್ಲಿ ಸಂಚರಿಸುವಂಥ ಕ್ರೂರ ಮೃಗಗಳು ತಮ್ಮ ಸ್ವಭಾವವಾದ ವೈರಭಾವವನ್ನು ಬಿಟ್ಟು ಈ ಮಹಾತಾಯಿಯ ಅಧೀನವಾಗಿ ವರ್ತಿಸುತ್ತಿದ್ದವು. ಈಕೆಯು ಜಗನ್ಮಾತೆಯೆಂದು ಸಜ್ಜನರು ಕೊಂಡಾಡುತ್ತಿದ್ದರು. ಇಂಥ ಅನಸೂಯಾ ದೇವಿಯು ಈ ಭೂಮಂಡಲದಲ್ಲಿರುವಳೆಂಬು ದನ್ನು ತಿಳಿಯದೆ, ನಮ್ಮ ಸಮಾನ ಪತಿವೃತಾ ಧರ್ಮವುಳ್ಳವರು ಯಾರು ಇದ್ದಾರೆಂದು ಪಾರ್ವತಿ, ಲಕ್ಷ್ಮಿ, ಸರಸ್ವತಿಯರಿಗೆ ಸೊಕ್ಕು ಬಂದಿತು. ಅದೆಂತೆಂದರೆ –

**ಪದ :**

ಮೂರು ಮೂರ್ತಿಗಳು ಹೆಂಡರುಗಳಿಂದ ಘನ
ಗೌರಿ ಲಕ್ಷ್ಮಿ ಶಾರದೆಯಿವರು
ಗೌರಿ ಲಕ್ಷ್ಮಿ ಶಾರದೆಯಿವರು । ನಾವು
ಮೂರು ಮಂದಿ ಪತ್ರಿಯವರು ॥ ೩೯ ॥

ನಮ್ಮ ಸಂಪತ್ತು ರೂಪದ ಸೊಗಸು
ವೈಭವವೇನು ಹೇಳುವದು
ವೈಭವವೇನು ಹೇಳುವದು । ನಮ್ಮ
ಪತಿವೃತಾಗುಣಗಾನ ಮಾಡದವರ್ಯಾರು ॥ ೪೦ ॥

ಯಾರಾರಿಲ್ಲವು ಮೂರು ಲೋಕದೊಳು
ಮೀರಿದಂಥ ನಾವು ಮೂವರು
ಮೀರಿದಂಥ ನಾವು ಮೂವರು । ನಮ-
ಗಾರು ಜೋಡು ಸುಖಪಡುವಲ್ಲೆ ॥ ೪೧ ॥

ಎಲ್ಲರಿಂದ ಪೂಜೆಗೈವೆವು
ಎಲ್ಲರಲ್ಲಿ ಮೇಲಾದವರು
ಎಲ್ಲರಲ್ಲಿ ಮೇಲಾದವರು । ನಾವು
ಎಲ್ಲರನ್ನು ಪಾಲಿಸುವವರು ॥ ೪೨ ॥

ದೊರೆಯದು ನಮ್ಮನು ಮರಿತವರಿಗೆ ಸುಖ
ಶಿರಿ ವಿದ್ಯಾ ಬುದ್ಧಿಗಳವರು
ಶಿರಿ ವಿದ್ಯಾ ಬುದ್ಧಿಗಳವರು । ಪರಿ
ಪರಿ ದುಃಖಕೆ ಗುರಿಯಾಗುವರು ॥ ೪೩ ॥

ಇವರ ಸೊಕ್ಕು ಮನ ಬಂದ ಹಾಗೆ ಬಲು
ಮಂದಗೆಟ್ಟು ಮಾತಾಡಿದರು
ಮಂದಗೆಟ್ಟು ಮಾತಾಡಿದರು । ಆ
ಸುಂದರಾಂಗಿ ದೇವಿಯವರು ॥ ೪೪ ॥

ನಮ್ಮ ಮಾತನು ಮೀರುವುದಿಲ್ಲ
ನಮ್ಮ ಗಂಡಿರು ಕೇಳುವರು
ನಮ್ಮ ಗಂಡರು ಕೇಳುವರು । ಬಲು
ಮೋಹಿಸಿ ಇರುವರು ನಮ್ಮನ್ನು ॥ ೪೫ ॥

**ವಚನ :**

ಹೀಗೆ ಮದೋನ್ಮತ್ತರಾದ ಪಾರ್ವತಿ, ಲಕ್ಷ್ಮಿ, ಸರಸ್ವತಿಯವರು ಶಂಕೆಯನ್ನು ಹೊಂದಿರಲು ಪತಿವೃತೆಯಾದ ಅನಸೂಯಾದೇವಿಯ ಕೀರ್ತಿಯನ್ನು ಜಗತ್ತಿನಲ್ಲಿ ಪ್ರಸಿದ್ಧಿ ಮಾಡಬೇಕೆಂದು ಒಂದಾನೊಂದು ದಿವಸ ನಾರದನು ವೀಣೆಯನ್ನು ಹಿಡಿದುಕೊಂಡು ಭಜನೆಯನ್ನು ಮಾಡುತ್ತ ಕೈಲಾಸಕ್ಕೆ ಹೋದನು. ಅಲ್ಲಿ ಪಾರ್ವತಿ, ಲಕ್ಷ್ಮಿ, ಸರಸ್ವತಿ ತಾಯಿಯವರು ವಿನೋದ ಮಾಡುತ್ತ ಕುಳಿತಿದ್ದರು. ಆಗ ನಾರದನು ದೇವಿಯವರಿಗೆ ನಮಸ್ಕರಿಸಿ ನಿಂತಿರಲು, ನೋಡಿ ದೇವಿಯವರು, ಹೇ ನಾರದಾ, ನೀನು ಅನೇಕ ಲೋಕಗಳಲ್ಲಿ ಸಂಚಾರ ಮಾಡುತ್ತಿ, ಯಾವ ಲೋಕದೊಳಗಾದರೂ ಪತಿವೃತಾ ಧರ್ಮದಲ್ಲಿ ನಮ್ಮನ್ನು ಸರಿಗಟ್ಟುವವರಿದ್ದರೆ ಹೇಳುವೆಯಾ? ಎಂದು ಕೇಳಲಾಗಿ ನಾರದನು ಅಂದದ್ದೇನಂದರೆ -

**ಪದ :**

ಅತ್ರಿ ಮುನಿಪನ ಪತ್ನಿ ಪತಿವ್ರತ
ಉತ್ತಮದಿಂದಲಿ ಲೋಕದೆ
ಉತ್ತಮದಿಂದಲಿ ಲೋಕದೋಳು | ಬಹು
ಸತ್ಯದಿಂದಲಿ ಬಾಳುವಳು ‖ ೪೬ ‖

ಯಾರು ಇಲ್ಲ ಅನಸೂಗ ಜೋಡು
ಮೂರು ಲೋಕದಲಿ ಬಲು ಮೇಲು
ಮೂರು ಲೋಕದಲಿ ಬಲು ಮೇಲು | ಈ
ನಾರಿಯು ಕಾಣುವಳು ಮಿಗಿಲು ‖ ೪೭ ‖

ಅಂದ ಮಾತಿಗೆ ಸುಂದರಾಂಗಿಯರು
ಚಂದದಿ ನಕ್ಕರು ಹಾಸ್ಯದೊಳು
ಚಂದದಿ ನಕ್ಕರು ಹಾಸ್ಯದೊಳು | ಮನ-
ನೊಂದು ಪೇಳಿದರು ತವರದೊಳು ‖ ೪೮ ‖

ಏನು ಬಲ್ಲ ಇವನಾರದ
ಕೂಳು ಕಾಣದೆ ತಿರುಗುವ ಹಗಲಿರುಳು
ಕೂಳು ಕಾಣದೆ ತಿರುಗುವ ಹಗಲಿರುಳು | ಆ
ಮುನಿಯು ಎಣಿಸಿದ್ದಳು ಅವಳು ‖ ೪೯ ‖

ನುಚ್ಚು ಹಾಕಿದವರತ್ತ ಕಾಣುವ
ಹುಚ್ಚ ನಾರದನ ಮಾತುಗಳು
ಹುಚ್ಚ ನಾರದನ ಮಾತುಗಳು | ಬಲು
ನೆಚ್ಚಿಗಿಲ್ಲ ಸಾಸಿವೆಯಷ್ಟು ‖ ೫೦ ‖

ಸುರಸತಿಯರನು ಹೋಲುವುದುಂಟೆ
ನರಸತಿಯರು ಈ ಭುವನದೊಳು

ನರಸತಿಯರು ಈ ಭುವನದೊಳು । ಬಿಡು
ನಾರದ ನೀವು ಹೇಳುವುದೇನು ॥ ೫೧ ॥

ತಾಯಿಯರೆ ಸುಳ್ಳಾಗದೆಂದಿಗೂ
ಆಕೆಗೆ ಸರಿಯಲ್ಲೆನ್ನುವದು
ಆಕಿಗೆ ಸರಿಯಲ್ಲೆನ್ನುವದು । ದೇವಿ
ನಿಮಗೆ ಇರುವಳು ಆಕಿ ಮೇಲು ॥ ೫೨ ॥

ಪತಿವೃತಾ ಶ್ರೇಷ್ಠಳು ಅನಸೂಯಾ
ಸುಗಮದಿಂದಲಿರುವಳು ಇಲ್ಲಿ
ಸುಗಮದಿಂದಲಿರುವಳು ಇಲ್ಲಿ । ಆ
ಸುದತಿ ಮೇಲು ತ್ರಿಭುವನದಲ್ಲಿ ॥ ೫೩ ॥

**ವಚನ :**

ಹೇ ಗೌರಿ ಪಾರ್ವತಿಯರೆ ಕೇಳಿರಿ, ಆ ಮಹಾ ಪತಿವ್ರತೆಯಾದ ಅನಸೂಯಾದೇವಿಗೆ ಎಳ್ಳಷ್ಟಾದರೂ ಜೋಡಿಲ್ಲ. ಆ ಸಾಧ್ವಿಯು ಮೂರು ಲೋಕದಲ್ಲಿ ಉಚ್ಛ ಪತಿವೃತೆಯು, ಆ ಶಿರೋಮಣಿಯು ಸಾಕ್ಷಾತ್ ಜಗತ್ತಿನಲ್ಲಿ ಪರಮಪೂಜ್ಯಳು. ಆಕೆ ಧನ್ಯಳು; ಮತ್ತು ಸುಗುಣಳು. ಅವಳನ್ನು ಹೊಗಳಲಿಕ್ಕೆ ಆದಿಶೇಷನಾದರೂ ಶಕ್ಯನಲ್ಲ. ಬಹಳ ಹೇಳುವುದೇನು; ಹೇ ತಾಯಿಗಳೇ ಅನಸೂಯಾದೇವಿಯು ನಿಮ್ಮನ್ನು ಪಾದರಾಕ್ಷಗಳಂ ಮಾಡಿ ಎರಡೂ ಕಾಲಿನಲ್ಲಿ ಹಾಕಿಕೊಂಡು ನಿತ್ಯದಲಿ ಸಂಚರಿಸುವಳು. ಮನಸ್ಸಿಗೆ ಬಂದ ಹಾಗೆ ಸೊಕ್ಕಿನಿಂದ ನುಡಿಯಬೇಡಿರಿ ಎಂದು ನಾರದನು ಹೇಳಿದನು. ಆಗ ಪಾರ್ವತಿ, ಲಕ್ಷ್ಮಿ, ಸರಸ್ವತಿಯರು -

**ಪದ :**

ಕೇಳಿ ಕೋಪವ ತಾಳಿ ಶಕ್ತಿಯರು
ಆಲೋಚನೆ ಮಾಡುತ ಮನೆಗೆ

ಆಲೋಚನೆ ಮಾಡುತ ಮನೆಗೆ । ಬಲು
ಗೋಳಾಡುತ ಬಂದರು ಕೊನೆಗೆ ॥ ೫೪ ॥

ತ್ರಿಮೂರ್ತಿಗಳ ಹೆಂಡರನ್ನು ಆ
ಸೀಮಂತಿನಿ ಎಡಗಾಲೊಳಗೆ
ಸೀಮಂತಿನಿ ಎಡಗಾಲೊಳಗೆ । ತಾ
ಪ್ರೇಮದಿಂದ ಹಾಕಿದಳೆನಗೆ ॥ ೫೫ ॥

ಮಾನ ಹೋಯ್ತು ಅಪಮಾನದಿಂದ ಈ
ಪ್ರಾಣವನ್ನು ಇಡಬೇಕು ಯಾಕೆ

ಪ್ರಾಣವನ್ನು ಇಡಬೇಕು ಯಾಕೆ | ಎಂದು
ಹೇಳಿಕೊಂಡರೋ ತಮ್ಮ ವಚನದಲ್ಲೆ ‖ ೫೬ ‖

ಮುಂದೆ ಬಾಳುವ ರೀತಿ ಹ್ಯಾಗೆ ಎಂದು
ಮನದಲಿ ಘನ ಚಿಂತಿಯನು
ಮನದಲಿ ಘನ ಚಿಂತಿಯನು | ಕಂದಿ-
ಕುಂದಿ ಬಿಟ್ಟರನ್ನ ನೀರನ್ನು ‖ ೫೭ ‖

ಬಣ್ಣ ಬಿಡುವ ಸತಿಯರ ಬಳಿಗೆ ಆ
ಸನ್ನುತ ಪತಿಗಳು ಅವರಡಿಗೆ
ಸನ್ನುತ ಪತಿಗಳು ಅವರಡಿಗೆ | ಆ
ಉನ್ನತ ಸುಂದರಾಂಗಿಯರೆಡೆಗೆ ‖ ೫೮ ‖

ಕಂದಿದ ಬಗೆಯನು ತಮ್ಮೊಳಗೆ
ಏನೆಂದು ಹೇಳಿರಿ ಬಿಡದ್ಹಾಗೆ
ಏನೆಂದು ಹೇಳಿರಿ ಬಿಡದ್ಹಾಗೆ | ನೀವು
ಸುಮ್ಮನೆ ಆಲೋಚನೆ ಮಾಡುವುದ್ಯಾಕೆ ‖ ೫೯ ‖

ಏಳಿ ಈಗ ನಿವ್ಯಾಕ ಮಲಗಿರಿ
ಹೇಳಿ ಈಗ ಚಿಂತೆಯ ನಮಗೆ
ಹೇಳಿ ಈ ಚಿಂತೆಯ ನಮಗೆ | ಮನ-
ದಾಲೋಚನೆ ಯಾತಕೆ ನಿಮಗೆ ‖ ೬೦ ‖

ಚಿಂತೆಯು ನಾವು ಬಿಡಿಸುವೆವೆಂದು
ಕಾಂತಿಯರಿಗೆ ಹೇಳಿದರಾಗ
ಕಾಂತಿಯರಿಗೆ ಹೇಳಿದರಾಗ | ಆ
ಶಂಕೆಯನ್ನು ಹರಿಸೇವಿ ಈಗ ‖ ೬೧ ‖

**ವಚನ :**

ಆ ಕಾಲದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರು ತಮ್ಮ ತಮ್ಮ ಹೆಂಡರಾದ ಸರಸ್ವತಿ, ಲಕ್ಷ್ಮಿ, ಪಾರ್ವತಿಯರನ್ನು ನೋಡಿ; ಹೇ ಶಕ್ತಿಯರೆ, ನಿಮಗೆ ಬಂದ ವಿಪತ್ತು ಯಾವುದು? ಯಾಕೆ ವ್ಯಸನದಿಂದ ಮಲಗಿದಿರಿ? ಯಾರಾದರೂ ನಿಮಗೆ ಬೈದರೋ? ಅಥವಾ ಹಾಸ್ಯ ಮಾಡಿದರೋ ಹೇಗೆ? ಏನಾಯಿತು ಹೇಳಿರಿ. ಮೇಲಕ್ಕೇಳಿರಿ ಎಂದು ಆಶ್ಚರ್ಯದಿಂದ ಕೇಳಿದರು. ಆಗ ಸರಸ್ವತಿ, ಲಕ್ಷ್ಮಿ, ಪಾರ್ವತಿಯರು ತಮ್ಮ ತಮ್ಮ ಗಂಡಂದಿರಿಗೆ ಹೇಳಿದ್ದೇನೆಂದರೆ, ಆಹೋ ಪತಿರಾಯರೆ ನಾವು ಹೇಳಿದಂತೆ ನಡೆಸಿಕೊಳ್ಳುತ್ತೇವೆಂದು ನಮಗೆ ನೀವು ಪೂರ್ಣವಾಗಿ ವಚನಕೊಟ್ಟರೆ ನಾವು ಹೇಳುತ್ತೇವೆ. ನಿಮ್ಮೊಡನೆ ಸಂಸಾರವನ್ನು ಮಾಡುತ್ತೇವೆ. ಇಲ್ಲದಿದ್ದರೆ ಪ್ರಾಣವನ್ನು ನೀಗುತ್ತೇವೆ ಎಂದು ಹೇಳಿದ ಮಾತುಗಳಿಗೆ ಹರಿ, ಹರ, ವಿರುಚಿಗಳು ಯಾಕಾಗಲೊಲ್ಲದೆಂದು ವಚನಕೊಟ್ಟರು. ಆಗ ಶಕ್ತಿಯರು ತಟ್ಟನೆ ಎದ್ದು ಅಂದದ್ದೇನಂದರೆ ಪ್ರಾಣ ಪತಿಗಳೆ ಅತ್ರಿ ಮಹಾಋಷಿಯ ಹೆಂಡತಿ ಅನಸೂಯಾ ಎಂಬವಳು ಪತಿವೃತಾ ಧರ್ಮದಿಂದ ಕೀರ್ತಿಯನ್ನು

ಹೊಂದಿ ನಮಕಿಂತಲೂ ಮೇಲಾಗಿರುವಳಂತೆ. ಸಾಮಾನ್ಯರಂತೆ ನಿಮಗೆ ನಾವು ಹೆಂಡರಾಗಿದ್ದು ಭೂಲೋಕದಲ್ಲಿ ಒಬ್ಬ ಹೆಂಗಸಿಗಿಂತ ಕಡಿಮೆಯಾದ ಮೇಲೆ, ಸರ್ವಥಾ ನಾವು ಜೀವಿಸಲಾರೆವು. ನಮ್ಮನ್ನು ಉದ್ಧಾರ ಮಾಡಬೇಕೆಂಬ ಇಚ್ಛೆ ನಿಮಗೆ ಇದ್ದರೆ ಅವಳ ಹತ್ತಿರ ನೀವು ಹೋಗಿರಿ; ಮತ್ತು ಅನ್ನವನ್ನು ಬೇಡಿರಿ. ಅವಳು ಬಡಿಸಲಿಕ್ಕೆ ಬಂದಾಗ ಬತ್ತಲೆಯಾಗಿ ಬಂದರೆ ನಾವು ಉಣ್ಣುತ್ತೇವೆಂದು ಹೇಳಿ ಅವಳ ಪಾತಿವೃತವನ್ನು ಕೆಡಿಸಿ ಬರಬೇಕೆಂಬುದಾಗಿ ಹೇಳಿದ ಮಾತಿಗೆ; ತ್ರಿಮೂರ್ತಿಗಳು ವಚನಕೊಟ್ಟ ತಪ್ಪಿಗೆ ನಡೆಸಬೇಕೆಂತಲೂ ಅನಸೂಯಾ ದೇವಿಯ ಪತಿವೃತಾ ಧರ್ಮವನ್ನು ಮೆರಿಸಬೇಕೆಂತಲೂ ಒಡಂಬಟ್ಟು ಆಗಿಂದಾಗ ಹೊರಡಲು ಸಿದ್ಧರಾದರು.

**ಪದ :**

ಬ್ರಹ್ಮ ವಿಷ್ಣು ಮಹೇಶ್ವರರಾದರು
ತಮ್ಮ ರೂಪವನು ಅಡಗಿಸುತ
ತಮ್ಮ ರೂಪವನು ಅಡಗಿಸುತ । ವರ
ಬ್ರಾಹ್ಮಣರಾಗಿ ವೇಷವತಾಳುತ್ತ ॥ ೬೧ ॥

ಮುನಿ ಪತಿವೃತೆಯರ ಆಶ್ರಮಕೆ
ಅನುನಯದೊಳು ಬಂದರು ತುರ್ತ
ಅನುನಯದೊಳು ಬಂದರು ತುರ್ತ । ಆ
ಮುನಿ ಮನಿಯೊಳಗಿದ್ದಿಲ್ಲಾತಾ ॥ ೬೩ ॥

ಅತಿಥಿಗಳು ಕಾಣುತ್ತ ಮುನಿಪನ
ಸತಿ ಅನಸೂಯಾ ನಸುನಗುತ
ಸತಿ ಅನಸೂಯಾ ನಸುನಗುತ । ಅತಿ
ಹಿತದಿಂದಲಿ ನೀರನು ಕೊಡುತ ॥ ೬೪ ॥

ಆಸನ ಬಿಟ್ಟು ಕೂಡಿಸಲಿಕ್ಕೆ
ಮೋಸಗಾರ ಗಡಬಡಿಸುತ್ತ
ಮೋಸಗಾರ ಗಡಬಡಿಸುತ್ತ । ನೀ
ಪೋಷಿಸವ್ವ ಆಸನಕೊಡುತ ॥ ೬೫ ॥

ಹಸಿವೆಯಾಗಿ ಕಸಿವಿಸಿಯಾಗುವುದು
ಆಸನಕೊಡು ತಂಗಿ ತ್ವರಿತ
ಆಸನ ಕೊಡು ತಂಗಿ ತ್ವರಿತ । ಈ
ಹಸುವಳಿ ಬೇಗನೆ ಅತಿ ತುರ್ತ ॥ ೬೬ ॥

ಈ ಪರಿ ಬೇಡಿದ ಮೋಸಗಾರರ
ಕಾಪಟ್ಯವ ತಿಳಿಯದ ವನಿತಾ
ಕಾಪಟ್ಯವ ತಿಳಿಯದ ವನಿತಾ । ಆ
ತಾಪಸರಿಗೆ ಬಡಿಸುವೆಯನುತ ॥ ೬೭ ॥

ಎಡೆಯ ಮಾಡಲಿಕ್ಕೆ ಬಂದ ಮುನಿಪನ
ಮಡದಿಯ ಕಂಡಿಲ್ಲವು ಎನುತ
ಮಡದಿಯ ಕಂಡಿಲ್ಲವು ಎನುತ । ತಾವು
ತಡೆಯದಿದ್ದರೆ ಚರಿಸುತ ॥ ೭೮ ॥

**ವಚನ :**

ಆಗ ತ್ರಿಮೂರ್ತಿಗಳು, ಅವ್ವಾ ನಮ್ಮನ್ನು ತೃಪ್ತಿ ಮಾಡಬೇಕೆಂಬ ಇಚ್ಛೆಯು ನಿಮಗೆ ಇದ್ದರೆ ನಮ್ಮ ವೃತಗಳನ್ನು ಕೈಗೂಡಿಸಬೇಕು. ಅದೇನೆಂದರೆ, ನೀನು ಬತ್ತಲೆಯಾಗಿ ಬಂದು ನಮಗೆ ಉಣಿಸಬೇಕು. ಅಂದರೆ ಶಾಂತರಾಗುತ್ತೇವೆ. ನಿನಗೆ ಪುಣ್ಯ ಕೀರ್ತಿ ಸಂಪತ್ತುಗಳು ದೊರೆಯುತ್ತವೆ. ಹಾಗೆ ಮಾಡದಿದ್ದರೆ ನಿಮ್ಮ ಮನೆಯಲ್ಲಿ ನಮ್ಮ ಭೋಜನವಾಗಲಾರದು. ನಾವು ಹೋಗುತ್ತೇವೆ. ಮಾರ್ಗವನ್ನು ಬಿಡಬೇಕೆಂದು ಹೇಳಿದ ಮಾತುಗಳನ್ನು ಕೇಳಿದ ಕೂಡಲೇ ಅನಸೂಯಾದೇವಿಯು ಮೂರ್ಛೆ ಹೊಂದಿ ಅಯ್ಯೋ ಪರಮಾತ್ಮ ಎಂಥ ವಿಪತ್ತನ್ನು ಉಂಟು ಮಾಡಿದಿ? ಆಹಾ ದೈವವೆ, ಏನು ಮಾಡಲಿ? ಎಂದು ದುಃಖಿಸಹತ್ತಿದಳು.

**ಪದ :**

ಎನ್ನ ದೇಹವ ಗಂಡನ ಹೊರತು
ಅನ್ಯ ಜನರು ಕಂಡರೆ ಇನ್ನು
ಅನ್ಯ ಜನರು ಕಂಡರೆ ಇನ್ನು । ಸಂ-
ಪನ್ನೆ ಯಾಗಲಾರೆನು ನಾನು ॥ ೭೯ ॥

ಅತಿಥಿಗಳನು ಉಣಿಸದಿದ್ದರೆಲ್ಲ
ಪತಿಹೊಂದುವನತಿ ಕೇಡನ್ನು
ಪತಿಹೊಂದುವನತಿ ಕೇಡನ್ನು । ದು-
ರ್ಗತಿಯಾಗುವುದು ಗತಿಯೇನು ॥ ೮೦ ॥

ಇಂತು ಮನದೊಳಗೆ ಚಿಂತಿಸುತ್ತ ತನ್ನ
ಕಾಂತನ ಪಾದೋದಕವನ್ನು
ಕಾಂತನ ಪಾದೋದಕವನ್ನು । ಮತಿ-
ವಂತಿ ಭಕ್ತಿಯಿಂದಲಿ ತಾನು ॥ ೮೧ ॥

ತಂದು ಹಾಕಿದಳು ಬಂದ ಯತಿಗಳಿಗೆ
ಚಂದದಿಂದ ಪಾದ ತೀರ್ಥವನು
ಚಂದದಿಂದ ಪಾದ ತೀರ್ಥವನು । ಆ
ನಂದದಿಂದ ನೆನಸಿದಳು ಪತಿಯನ್ನು ॥ ೮೨ ॥

ಏನು ಹೇಳಲಿ ಈ ಮಾನನಿಯ ಪ್ರತಿ-
ಭಾನ್ವಿತ ಮಹಿಮೆಯ ಬಲವನ್ನು

ಭಾನ್ವಿತ ಮಹಿಮೆಯ ಬಲವನ್ನು । ಆ
ಮಾನಿನಿ ಮುರಿದಳು ಗತಿಯನ್ನು ॥ ೭೩ ॥

ಶಿಶುಗಳಾದರು ತ್ರಿಮೂರ್ತಿಗಳು ಆ
ಋಷಿ ಸತಿ ಅನಸೂಯಾ ಹರುಷದಲಿ
ಋಷಿ ಸತಿ ಅನಸೂಯಾ ಹರುಷದಲಿ । ತಾ
ಕೊಟ್ಟಳು ತನ್ನ ಮಲೆ ಶಿಶುಗಳಿಗೆ ॥ ೭೪ ॥

ತೊಟ್ಟಲೊಳಗೆ ತಾನಿಟ್ಟು ಹಾಡಿದಳು
ನೆಟ್ಟಗೆ ಜೋಗುಳ ಪದಗಳನ್ನು
ನೆಟ್ಟಗೆ ಜೋಗುಳ ಪದಗಳನು । ಆ
ಶ್ರೇಷ್ಠ ಸೃಷ್ಟಿಯ ಪತಿಗಳನು ॥ ೭೫ ॥

ಆಡುತಿರುವ ಕೂಸುಗಳನು ಕಾಣುತ
ಅತ್ರಿಋಷಿಯು ಬಂದನು ಆಗ
ಅತ್ರಿಋಷಿಯು ಬಂದನು ಆಗ । ತನ್ನ
ಸುದತಿಗೆ ಕೇಳಿದನು ಏಕಾಂತ ॥ ೭೬ ॥

**ವಚನ :**

ಹೇ ಪ್ರಿಯತಮೆ ಈ ಶಿಶುಗಳು ಯಾರು? ನಿನಗೆ ಹೇಗೆ ದೊರೆತವು? ಇಂಥ ಕೋಮಲವಾದ ಕುಮಾರರನ್ನು ಪಾಲಿಸಬೇಕಾದರೆ ಈ ಶಿಶುಗಳಿಗೂ ಮತ್ತು ನಿನಗೂ ಸಮಂಧವೆಲ್ಲಿ? ಇಂತೆಂದು ತನ್ನ ಸತಿಯಳಾದ ಅನಸೂಯಾದೇವಿಯನ್ನು ಕೇಳಿದ ಅತ್ರಿಮುನಿಗೆ ಭಕ್ತಿಯಿಂದ ನಮಸ್ಕರಿಸಿ ಇಂತೆಂದಳು : ನೀವು ಹೊರಗೆ ಹೋದ ಕಾಲದಲ್ಲಿ ಮೂವರು ಅತಿಥಿಗಳು ಭಿಕ್ಷಾರ್ಥವಾಗಿ ಬಂದು ಹಸುವಿನ ಬಾಧೆಯನ್ನು ತಾಳಲಾರದೆ ನಮಗೆ ಉಣಿಸಬೇಕೆಂದು ಕೇಳಿದರು. ಆಗ ಅತಿಥಿ ಸತ್ಕಾರವನ್ನು ಮನಗಂಡು ಪಕ್ವಾನ್ನ ಮಾಡಿ ಉಣಿಸಲಿಕ್ಕೆ ಹೋದರೆ, ಬತ್ತಲೆಯಿಂದ ನಮಗೆ ಎಡಿಮಾಡಿದರೆ ನಾವು ಉಂಡು ಹೋಗುತ್ತೇವೆ. ಇಲ್ಲದಿದ್ದರೆ ನಿನ್ನ ಮನೆಯಲ್ಲಿ ಉಂಬುವದಿಲ್ಲ ಎಂದು ಹೇಳಿದರು. ಆಗ ನನ್ನ ಪತಿವೃತಾ ಧರ್ಮವನ್ನು ಉಳಿಸಿಕೊಳ್ಳಲಿಕ್ಕೆ ನಿಮ್ಮ ಪಾದೋದಕವನ್ನು ಅವರಿಗೆ ಸಿಂಪಡಿಸಲಾಗಿ ಈ ರೀತಿ ಶಿಶುಗಳಾಗಿದ್ದಾರೆ. ಇವುಗಳನ್ನು ಪ್ರೇಮದಿಂದ ರಕ್ಷಿಸುವ ಅಪೇಕ್ಷೆಯುಂಟು. ಅನುಗ್ರಹವಾಗಬೇಕೆಂದು ಹೇಳಿದ ಮಾತಿಗೆ ಮುನಿಯು ಆಶ್ಚರ್ಯಚಿತ್ತನಾಗಿ ಇವರು ಯಾರಿರಬಹುದೆಂದು ದಿವ್ಯ ದೃಷ್ಟಿಯಿಂದ ನೋಡಿ ತನ್ನ ಪತ್ನಿಗೆ ಹೇಳುತ್ತಾನೆ ಅದೇನಂದರೆ -

**ಪದ :**

ಇವರು ಬ್ರಹ್ಮ ಹರಿ ರುದ್ರರು ನನ್ನ
ಯುವತಿಯ ಪಾತೀವೃತ್ಯವನ್ನು
ಯುವತಿಯ ಪಾತೀವೃತ್ಯವನ್ನು । ತಾವು
ಅಪಹರಿಸಲಿಕ್ಕೆ ಬಂದಿಹರಿನ್ನು ॥ ೭೭ ॥

ನಿನ್ನಯ ವಿಮಲ ಮಹಿಮೆಯಿಂದ
ಕಮಲಾಸನ ಹರಿ-ಹರರಿನ್ನು
ಕಮಲಾಸನ ಹರಿ-ಹರರಿನ್ನು । ನಮ್ಮ
ಆಶ್ರಮದೊಳು ಶಿಶುವಾದವಿನ್ನು ॥ ೭೮ ॥

ಚಿಕ್ಕವು ಶಿಶುಗಳು ಇವುಗಳಿನ್ನು
ಬಿಡದಕ್ಕರದಿಂದ ರಕ್ಷಿಸು ನೀನು
ಬಿಡದಕ್ಕರದಿಂದ ರಕ್ಷಿಸು ನೀನು । ಎಂದು
ಬಿಡದೆ ಸುದತಿಗೆ ಹೇಳಿದನು ॥ ೭೯ ॥

ಪ್ರಾಣನಾಥನ ಮಾತುಗಳನು ಕೇಳಿ
ಸಾನು ರಾಗದಿ ಶಿಶುಗಳನು
ಸಾನು ರಾಗದಿ ಶಿಶುಗಳನು । ಆ
ಮಾನಿನಿ ಪಾಲಿಸುವಳು ತಾನು ॥ ೮೦ ॥

ಹತ್ತು ಸಾವಿರ ವರುಷವಾದರೂ
ಉತ್ತಮ ಶಿಶು ತೊಟ್ಟಿಲವನ್ನು
ಉತ್ತಮ ಶಿಶು ತೊಟ್ಟಿಲವನ್ನು । ಬಿಡ-
ದರ್ತಿಯಿಂದ ಬಾಳದವಿನ್ನು ॥ ೮೧ ॥

ಕಳೆದು ಹೋದವು ಬಹಳ ವರುಷಗಳು
ಬೆಳೆಯಲಿಲ್ಲ ಶಿಶುಗಳು ಇನ್ನು
ಬೆಳೆಯಲಿಲ್ಲ ಶಿಶುಗಳು ಇನ್ನು । ನಾ
ತಿಳಿಯಲಾರೆ ಚಮತ್ಕಾರವನು ॥ ೮೨ ॥

ಈ ಮಹಿಮೆಯನು ಗೌರಿ ಲಕ್ಷ್ಮಿ ಸರಸ್ವತಿ
ಬಾರದಿರುವ ತಮ್ಮ ಗಂಡರನ್ನು
ಬಾರದಿರುವ ತಮ್ಮ ಗಂಡರನ್ನು । ಹೌ
ಹಾರಿ ಬಯಸಿದರು ತಾವಿನ್ನು ॥ ೮೩ ॥

ನಮ್ಮ ಗಂಡರು ಬರಲಿಲ್ಲವೇಕೆ
ನಮ್ಮ ಗಂಡರ ಮುಖವನ್ನು
ನಮ್ಮ ಗಂಡರ ಮುಖವನ್ನು । ಇ-
ನ್ನೊಮ್ಮೆ ಕಾಣುವ ಬಗೆಯೇನು ॥ ೮೪ ॥

**ವಚನ :**

ತಮ್ಮ ಗಂಡಂದಿರು ಬಾರದ್ದರಿಂದ ದೇವಿಯರು ಗಾಭರಿಯಾಗಿ ಅನ್ನುತ್ತಾರೆ. ಅನಸೂಯಾದೇವಿಯ ಪಾತೀವ್ರತ್ಯವನ್ನು ಕೆಡಿಸಲಿಕ್ಕೆ ಹೋದ ನಮ್ಮ ಗಂಡರು ಈವರೆಗೂ ಬರಲಿಲ್ಲ. ನಾವು ಹೇಗೆ ಮಾಡೋಣ. ಹೋದ ಕಾರ್ಯವಾಗುವದು ಹೇಗಿರಲಿ; ನಾವು ನಮ್ಮ ಗಂಡರನ್ನು ವ್ಯರ್ಥವಾಗಿ ಕಳೆದುಕೊಂಡೆವಲ್ಲಾ. ಅವರ ಸುದ್ದಿಯೂ ಸಹ ತಿಳಿಯದೇ ಹೋಯಿತು. ಇದಕ್ಕೇನು ಮಾಡಬೇಕೆಂದು ಚಿಂತಿಸುವಷ್ಟರಲ್ಲಿ ಅಲ್ಲಿಗೇ ನಾರದ ಮುನಿಗಳು ಬರುವಂತಾದರು. ಅವರನ್ನು ಕಂಡು ದೇವಿಯವರು ಬಹಳ ಶೀಘ್ರದಿಂದ ಅಪ್ಪಾ, ಗೊತ್ತಿರದೆ ಹೇಳಬೇಕೆಂದು ಕೇಳಿದರು. ಆಗ ನಾರದರು ಅಮ್ಮ ತಾಯಿಗಳೇ ನಿಮ್ಮ ಗಂಡಂದಿರ ಆಸೆಯನ್ನು ಬಿಟ್ಟು ಬಿಡಿರಿ. ಅವರು ತಿರುಗವ ಹಾಗಿಲ್ಲ. ಯಾಕೆಂದರೆ ಅನುಸೂಯಾದೇವಿ ಯವರ ಮನೆಯಲ್ಲಿ ಈಗ ಶಿಶುಗಳಾಗಿ ಆಡುತ್ತಿದ್ದಾರೆ. ಆಕೆಯು ಬಹು ಪ್ರೇಮದಿಂದ ಸಲಹುತ್ತಿದ್ದಾಳೆ. ನಿಮ್ಮ ದುರಾಲೋಚನೆಯೇ ನಿಮಗೆ ಮುಳುವಾಯಿತು, ಈಗ ಚಿಂತಿಸಿದರೆ ಆಗುವದೇನು? ನಮ್ಮ ಸಮಾನರು ಯಾರು ಇಲ್ಲವೆಂದು ಸೊಕ್ಕಿನಿಂದ ನಿಮ್ಮ ಗಂಡರನ್ನು ಕಳಿಸಿ ಮೊದಲೇ ಬುದ್ಧಿಯನ್ನು ಕಳಕೊಂಡಿದ್ದೀರಿ. ನಿಮ್ಮ ಗಂಡರು ಶಿಶುಗಳಾದರೇನಾಯಿತು. ಅವರನ್ನು ಮರೆತು ಶಾಂತರಾಗಿ ಇರುವುದೇ ಲೇಸು; ಎಂದು ಹೇಳಿದನು. ಆಗ ಶಕ್ತಿಯರು ಹೌ ಹಾರಿ ಅಯ್ಯೋ ದೈವವೇ ಹ್ಯಾಗೆ ಮಾಡೋಣ? ನಾವು ಸರ್ವಥಾ ಅಪರಾಧಿಗಳಾದೆವು. ನಮ್ಮಂಥ ಬುದ್ಧಿಗೇಡಿಗಳು ದುಷ್ಟರು ಯಾರು ಇಲ್ಲ. ಹೇ ನಾರದ ಮುನಿಶ್ರೇಷ್ಠ ಹ್ಯಾಗಾದರು ಮಾಡಿ ನಮ್ಮ ಗಂಡರನ್ನು ತಂದು ಕೊಡಬೇಕು. ಕೇಳಿ ನಾರದರು ಅಂದದ್ದೇನಂದರೆ -

**ಪದ :**

ಅಮ್ಮನವರು ನಮ್ಮಿಂದ ಆಗದು
ಹೆಮ್ಮೆ ಯಾಕೆ ಹೋಗಿರಿ ನೀವು
ಹೆಮ್ಮೆ ಯಾಕೆ ಹೋಗಿರಿ ನೀವು । ಆ
ಎಮ್ಮಗ ಮರೆ ಬೀಳಿರಿ ನೀವು ॥ ೮೫ ॥

ಮಾಡಿದ ತಪ್ಪಿಗೆ ಬೇಡಿಕೊಳ್ಳಿರಿ
ಪಾಡಲ್ಲಾ ಮನಸಿನ ಛಲವು
ಪಾಡಲ್ಲಾ ಮನಸಿನ ಛಲವು । ಮಾ
ತಾಡದಿದ್ದ ರಾಗದು ಫಲವು ॥ ೮೬ ॥

ಬೇಡಿಕೊಂಡರ ನಿಮ್ಮ ಗಂಡರ
ನೀಡುವಳಾ ಮಾನಿನಿ ಮಣಿಯು
ನೀಡುವಳಾ ಮಾನಿನಿ ಮಣಿಯು । ನೆರೆ
ನೋಡಿ ಕರುಣಿಸುವಳು ದಯದಿಂದ ॥ ೮೭ ॥

ನಾರದ ಮುನಿಯು ಹೀಗೆಂದು ಹೇಳಲು
ಗೌರಿ ಲಕ್ಷ್ಮಿ ಭಾರತಿ ತಾವು
ಗೌರಿ ಲಕ್ಷ್ಮಿ ಭಾರತಿ ತಾವು । ಆ
ನಾರದನೊಡಗೊಳ್ಳುತ ಅವರು ॥ ೮೮ ॥

ಋಷಿಯ ಆಶ್ರಮಕ ಹೋಗಿ ಕಂಡರು
ಬಿಸಿಜನೇತ್ರ ಅನಸೂಯೆಯನು

ಬಿಸಿಜನೇತ್ರ ಅನುಸೂಯೆಯನು | ಅವರು
ಸರಿಯೆ ತಿಳಿದರು ತಮ ತಪ್ಪನ್ನು ॥ ೮೯ ॥

ತಾಯಿ ನಮ್ಮ ಅಪರಾಧವನ್ನು
ಮರೆದು ಕಾಯಬೇಕು ನಮ್ಮನ್ನು
ಮರೆದು ಕಾಯಬೇಕು ನಮ್ಮನ್ನು | ಕಮ-
ಲಾಕ್ಷಿ ನೀ ಕೊಡು ಪತಿಗಳನು ॥ ೯೦ ॥

**ವಚನ :**

ಹೇ ತಾಯಿ ಅನುಸೂಯಾದೇವಿ ನಮ್ಮ ಪತಿಗಳು ಹೇಗಿದ್ದರೋ ಅದರಂತೆ ಮಾಡಿ ಶತ ಅಪರಾಧಿಗಳಾದ ನಮಗೆ ನಿನ್ನ ಸುಗುಣಗಳಿಂದ ದಯಪಾಲಿಸಬೇಕು ಎಂದು ಬೇಡಿಕೊಂಡರು. ಆಗ ಅನಸೂಯಾದೇವಿಯು ಗಂಡನ ಅಪ್ಪಣೆಯನ್ನು ಪಡೆದು ಪತಿಯ ಪಾದೋದಕವನ್ನು ಆ ಶಿಶುಗಳಿಗೆ ಹಾಕಿದಳು. ಆ ಕೂಡಲೇ ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ತ್ರಿಮೂರ್ತಿಗಳು ನಿಜ ರೂಪ ತೋರಿದರು. ಆಗ ಪುಷ್ಪವೃಷ್ಟಿಯಾಯಿತು. ದೇವದುಂಬಿಗಳು ಮೊಳಗಿದವು. ಕೋಟಿ ಸೂರ್ಯರು ಉದಯವಾದಂತೆ ಪ್ರಕಾಶ ತುಂಬಿತು. ಆಗ ಋಷಿ ದಂಪತಿಗಳು ತ್ರಿಮೂರ್ತಿಗಳನ್ನು ನಮಸ್ಕರಿಸಿ ಭಕ್ತಿಯಿಂದ ಸ್ತುತಿಸಿದರು. ಆ ದಂಪತಿಗಳನ್ನು ನೋಡಿ ಪ್ರಸನ್ನಭಾವದಿಂದ ಹೇಳಿದ್ದೇನಂದರೆ -

**ಪದ :**

ತಾಯಿಯೆ ನಿನ್ನ ಮೊಲೆಯನು ಉಂಡು
ಬಲು ಪಾವನರಾದೆವು ನಾವು
ಬಲು ಪಾವನರಾದೆವು ನಾವು | ನಿನಗಾವ
ಫಲಗಳು ಬೇಕು ಕೇಳವ್ವಾ ॥ ೯೧ ॥

ತಾಯಿಯಾಗಿ ಮೊಲೆಯನುಣಿಸಿದ ನಮಗೆ
ತಾಯಿ ನೀನು ಹೌದೇಳವ್ವಾ
ತಾಯಿ ನೀನು ಹೌದೇಳವ್ವಾ | ನಾ
ಕಾಯುವೆ ಸುಖದಲಿ ಬಾಳವ್ವಾ ॥ ೯೨ ॥

ಇಂದುಧರನು ಹೀಗೆಂದು ಹೇಳಲು
ಚಂದದಿ ಮುನಿಸತಿ ವರವನ್ನು
ಚಂದದಿ ಮುನಿಸತಿ ವರವನ್ನು | ಆ-
ನಂದದಿ ಬೇಡ್ಯಾಳು ಆಗ ಶಾನು ॥ ೯೩ ॥

ತೊಟ್ಟಿಲು ಬರಿದಾಯ್ತು ಹೊಟ್ಟೆಯಲಿ
ಹುಟ್ಟಬೇಕು ನೀವು ಎನ್ನುತಲಿ

ಹುಟ್ಟಬೇಕು ನೀವು ಎನ್ನುತಲಿ | ಸಂ-
ತುಷ್ಟಪಡಿಸಬೇಕು ಎನ್ನುತಲಿ ‖ ೯೪ ‖

ಒಪ್ಪಿಕೊಂಡರು ಈ ವರವಾ ಬಹು
ಸಡಗರದಲಿ ನುಡಿದರು ಜಯವಾ
ಸಡಗರದಲಿ ನುಡಿದರು ಜಯವಾ | ಹೋ-
ದರು ಆಶೀರ್ವದಿಸಿ ತಾವಾ ‖ ೯೫ ‖

ಈಶ ವಿಷ್ಣು ಬ್ರಹ್ಮರು ತಾವು ತಮ್ಮ
ವಾಸಕೆ ಹೊರಟರು ಸಮುದ್ರದಿ
ವಾಸಕೆ ಹೊರಟರು ಸಮುದ್ರದಿ | ಮು-
ಟ್ಯಾರು ತಮ್ಮ ಕೈಲಾಸವನು ‖ ೯೬ ‖

ಕೆಲವು ದಿನದೊಳು ಅನಸೂಯಾದೇವಿ
ತಳೆದಳು ಸುಂದರ ಗರ್ಭವನು
ತಳೆದಳು ಸುಂದರ ಗರ್ಭವನು | ಮುನಿ
ನಲಿದು ತಾಳುತ ಸಂತಸವ ‖ ೯೭ ‖

**ವಚನ :**

ತ್ರಿಮೂರ್ತಿಗಳು ಕೊಟ್ಟ ವಚನವನ್ನು ನಡೆಸುವುದಕ್ಕೆ ಅನಸೂಯಾದೇವಿ ಗರ್ಭವನ್ನು ಪ್ರವೇಶ ಮಾಡಿದರು. ಆಗ ಅತ್ರಿಯು ಅನಸೂಯಾದೇವಿಯರಿಗೆ ವಿಶೇಷ ಆನಂದವು ತಲೆದೋರಿತು. ಸುಂದರವಾದ ಗರ್ಭವು ಆ ಪತಿವ್ರತಾ ಶಿರೋಮಣಿಗೆ ಮಂಗಲವಾಗಿ ಒಪ್ಪುತ್ತಿತ್ತು.

**ಪದ :**

ಹೆತ್ತಳಾಕಿ ಒಂಭತ್ತು ತಿಂಗಳು
ಉತ್ತಮ ವೇಳೆಗೆ ಮಕ್ಕಳನು
ಉತ್ತಮ ವೇಳೆಗೆ ಮಕ್ಕಳನು | ಅತ್ರಿ
ಪತ್ನಿ ಮೂರು ಶಿಶುಗಳನು ‖ ೯೮ ‖

ಭವ ಹರ ಶಿವ ಬಹಳ ಹಸನಾಗಿ ಈ
ಭುವನದಲ್ಲಿ ಅವತರಿಸಿದನು
ಭುವನದಲ್ಲಿ ಅವತರಿಸಿದನು | ಮುಂ-
ದಿವನು ತಪವನು ಆಚರಿಸಿದನು ‖ ೯೯ ‖

ಬ್ರಹ್ಮ ಹರಿ ರುದ್ರ ಮೂರು ಅಂಶ ಕೂಡಿ
ತವಕದಿಂದ ನಾರಾಯಣನು
ತವಕದಿಂದ ನಾರಾಯಣನು । ಮುನಿ
ಯುವತಿಯಲ್ಲಿ ಹುಟ್ಟಿದ ತಾನು ॥ ೧೦೦ ॥

ಮೂರು ಅಂಶದಿಂದ ಹುಟ್ಟಿದ್ದರಿಂದ
ಮೂರು ಮುಖಗಳಿದ್ದವು ಅವಗೆ
ಮೂರು ಮುಖಗಳಿದ್ದವು ಅವಗೆ । ಅವ
ತಾರಗೈದ ದತ್ತಾತ್ರಯನು ॥ ೧೦೧ ॥

ಒಂದು ಶಿವನ ಮತ್ತೊಂದು ಬ್ರಹ್ಮನ
ಒಂದು ಹರಿಯ ಮುಖಗಳು ಮುನ್ನಾ
ಒಂದು ಹರಿಯ ಮುಖಗಳು ಮುನ್ನಾ । ತಾ
ಒಂದು ದೇಹವಾಯಿತು ಇನ್ನಾ ॥ ೧೦೨ ॥

ಮೃತ್ಯುವನ್ನು ಉದ್ಧರಿಸಲಿಕ್ಕೆ
ದತ್ತನು ಗುರುವಿನ ರೂಪವನು
ದತ್ತನು ಗುರುವಿನ ರೂಪವನು । ತಾ-
ಳುತ್ತ ಜಗವನು ಉದ್ಧರಿಸಿದನು ॥ ೧೦೩ ॥

ಚಂದನಾಗಿ ಆ ಬ್ರಹ್ಮ ಹುಟ್ಟಿದ
ಹೊಂದಿದ ತಾನಾಕಾಶವನು
ಹೊಂದಿದ ತಾನಾಕಾಶವನು । ನೆರೆ
ಚಂದದಿ ಲೋಕವ ಬೆಳಗುವನು ॥ ೧೦೪ ॥

ಪೊಡವಿಯಲ್ಲಿ ಜಗದೊಡೆಯರು ಪಡೆದ
ಪಡೆದಳು ಘನ ಸಂಪದಗಳನು
ಪಡೆದಳು ಘನ ಸಂಪದಗಳನು । ಆ
ಮಡದಿ ಪಡೆದಳು ಮೋಕ್ಷವನು ॥ ೧೦೫ ॥

## ಭೀಮಾರ್ಜುನರ ಗರ್ವಭಂಗ

ಜನಮೇಜಯನ ಮುಂದ ವೈಶಂಪಾಯ ಹೇಳತಾನ
ಪಾಂಡು ಚರಿತ್ರೆಯ ಸಾರುವನು ।

ಭೀಮ ಅರ್ಜುನರ ಗರ್ವಭಂಗಮಾಡಿ
ಸಲುಹಿ ಕಾಯ್ದ ಮುರಲೀಧರನು ॥ ೧ ॥

ಅರ್ಜುನ ಅಂತಾನು ನಾನು ಹೆಚ್ಚಿನವ
ನನಕಿಂತ ಹೆಚ್ಚಿಲ್ಲ ಯಾವನು ।
ಪರಮ ಮಹಾಪುಂಡ ಮೂರು ಲೋಕದ ಗಂಡ
ಎಂಬ ಬಿರುದು ಹೀಂಗ ನನ್ನಲ್ಲಿ ॥ ೨ ॥

ಇಂದ್ರನು ರಚಿಸಿದ ಪಾಂಡುರ ವನವನು
ಧ್ವಂಸಮಾಡಿದೆ ಒಂದು ಕ್ಷಣದಲಿ ।
ಶಬರ ರೂಪದಿಂದ ಬಂದ ಶಿವನಕೂಡ
ಯುದ್ಧ ಮಾಡಿದೆ ಇಂದ್ರಕೀಲದಲಿ ॥ ೩ ॥

ಮೆಚ್ಚಿ ಪರಮೇಶ್ವರನ ಪಾಶುಪತಾಸ್ತ್ರ
ಕರೆದುಕೊಟ್ಟ ಅಂತಃಕರಣದಲಿ ।
ವಿರಾಟ ನಗರಕೆ ಹೋಗಿ ನಿಂತೆವು
ವಾಸವಾದೆವು ಗುಪ್ತರೂಪದಲಿ ॥ ೪ ॥

**ವಚನ :**

ಮಹಾವೀರ ಪಾರ್ಥ ರಣಶೂರ ಎಂಬ ನಾಮ ಕೇಳಿರಿ ನನಗ ಬಂದೈತಿ, ಹೀಗಂತ ಬಿರುದು ಸಾರತೈತಿ. ಹಿತಬೋಧಮಾಡಿ ಸರಿಯಾಗಿ ನಿಂತ ಸಾರಥಿ ಭೀಷ್ಮನ ನಾಶಿಕ ಹರಿದು ಸಂಹಾರ ಮಾಡಿದೆ. ಹಾಗು ಕೌರವನ ಬಲ ಮಡಿಯುವಂತೆ ಮಾಡಿ ಹಸ್ತಿನಾವತಿ ವಶಮಾಡಿಕೊಂಡೆ.

**ಪದ :**

ನನ್ನಿಂದ ಭೂಮಿ ನನ್ನಿಂದ ಸೀಮಿ
ನನಕಿಂತ ಹೆಚ್ಚಿಲ್ಲ ಯಾವನು ।
ಅರ್ಜುನನಾಡಿದ ಮಾತ ಕೇಳಿ
ಬಹಳ ಸಿಟ್ಟು ಬಂತು ಭೀಮಸೇನಗ ॥ ೫ ॥

ಪುಂಡ ಪ್ರಪಂಡಂತ ಮಾತನಾಡತಾನ
ಜಿಗದಾಡತಾನ ಸುಳ್ಳ ಕೋತಿ ಹಂಗ ।
ಕೃಷ್ಣ ಸಾರಥಿ ಆಗದಿದ್ದರ
ತಿಳಿಯತಿತ್ತ ಕುರುಕ್ಷೇತ್ರದಾಗ ॥ ೬ ॥

ನಿನ್ನ ರಥಕ ಬಾಣ ಹೊಡೆದಾನು ಕರ್ಣ
ಹೋಗಿ ಬಿತ್ತು ಕೊನ್ನರದಾಗ ।
ನನ್ನ ಕಸರತ್ತು ಕೇಳು ಪಾಲ್ಗುಣ
ಚಿತ್ತವಿಟ್ಟು ಹೇಳುವೆ ನಿನಗ ॥ ೭ ॥

ಮಗದ ಭೂಪತಿ ಜರಾಸಂಧನ
ಸೀಳಿಬಿಟ್ಟರೆ ದರ್ದಿಲ್ಲ ನನಗ ।
ದುಷ್ಟಕೀಚಕ ಇಟ್ಟ ಮನಸ
ಆ ನಿಷ್ಠೆಯುಳ್ಳ ದ್ರೌಪದಿ ಮ್ಯಾಗ ॥ ೮ ॥

**ವಚನ :**

ಶೋಕಮಾಡುತ್ತ ದ್ರೌಪದಿ ಹೇಳಿಕೊಂಡಳು ನಿಮಗೆ. ಹಾಕಿದಿರಿ ಒಬ್ಬೊಬ್ಬರ ಮ್ಯಾಲ. ನಿಮ್ಮ ಸ್ವರೂಪ ತಿಳಿದ ಮ್ಯಾಲ ಅತಿ ಸಿಟ್ಟ ಬಂತ ನನಗ. ಹೋಗಿ ಕುಂತೆ ಗರಡಿ ಮನಿಯಾಗ. ಕಮಲಮುಖಿ ಎಂದು ತಿಳಿದು ಕೀಚಕ ಹಸ್ತ ಇಟ್ಟನು ಎದಿಮ್ಯಾಗ. ಮುಷ್ಟಿ ಯುದ್ಧ ನಡೆದಾಗ.

**ಪದ :**

ಎತ್ತಿ ಹಾಕಿ ನಾ ಒತ್ತಿ ಹಿಡಿದು ಆಗ
ಸೀಳಿ ಮಾಡಿದೆ ಎರಡು ಭಾಗವನು ।
ಭೀಮ ಅರ್ಜುನಗ ಗರ್ವಹುಟ್ಟಿತೆಂದು
ತಿಳಿಯಬಂತು ಕೃಷ್ಣನ ಮನಕ ॥ ೯ ॥

ಇವರ ಗರ್ವಭಂಗ ಮಾಡದೆ ಹೋದರೆ
ಉದ್ಧಟವಾಗುವುದು ಈ ಕಾಲಕ್ಕ ।
ಕಪಟನಾಟಕಿ ಕೃಷ್ಣಗಾರುಡಿ
ವೇಷ ತಗೊಂಡು ಆಗ್ಯಾನ ಕ್ಷಣಕ ॥ ೧೦ ॥

ಮಾಯ ವಿಕಾರದ ಕುದುರೆ ಮಾಡಿದನ
ಕಾಣತಿತ್ತ ಬಹಳ ನಾಜೂಕ ।
ಕಪಟಭಾವದ ಸರ್ಪಮಾಡಿದನು
ಇತ್ತು ಮೂರು ಲಕದ ತೂಕ ॥ ೧೧ ॥

ಕುದುರೆ ಸರ್ಪ ಗಡ ತಂದ ಗಾರುಡಿ
ಬಂದು ನಿಂತ ಹಸ್ತಿನಾಪುರಕ ।
ಬೀದಿ ಬೀದಿಯನು ಹುಡುಕಿ ಹೊಕ್ಕನ
ಧರ್ಮರಾಯನ ಓಲಗಕ ॥ ೧೨ ॥

**ವಚನ :**

ತ್ರಿಲೋಕ ಸಂಚಾರ ಮಾಡಿಬಂದೆ. ಕಾಣಲಿಲ್ಲ ಮಹಾವೀರ ಈ ಕುದುರೆಯ ಮೇಲೆ ಏರುವರು. ಹೆಗಲಮೇಲಿನ ಸರ್ಪ ತೋರಿಸಿದೆ ನೆಗುವಲಿಲ್ಲ ಯಾರಾರಾ. ಈ ಗರಡಿಮನಿ ತಾಲೀಮ ಆದವರಾ. ಅಂದಮಾತಕೇಳಿ ಭೀಮಸೇನಗ ಬಂದಿತಾಗ ಅಹಂಕಾರ ನನಕಿಂತ ಹೆಚ್ಚು ಇನ್ನಾರಾ.

**ಪದ :**

ತಲ್ಲಣಿಸುತ ಭೀಮ ತಡೆಯಲಾರದೆ
ನೆಗುವಲಿಕ್ಕೆ ಹೋದ ಸರ್ಪವನು
ಬಾಹುಸತ್ವದಿಂದ ಎತ್ತಲಿಕ್ಕೆ ಹೋಗಿ
ಕೈಹಾಕಿದ ಸರ್ಪಿನ ಬುಡಕ ‖ ೧೩ ‖

ಹಾಕಿದ ಕ್ಷಣ ಮೂಲೋಕದ ಭಾರ
ತಾಳಿನಿಂದ ಆ ವ್ಯಾಳ್ಯಕ ।
ಎತ್ತುವದಂತು ಒತ್ತಟ್ಟಿಗಿರಲಿ
ಅವನ ಹಸ್ತ ಬರಲಿಲ್ಲ ಕಡಿಯಾಕ ‖ ೧೪ ‖

ಗರ್ವನಷ್ಟವಾಗಿ ಗರುಡವಾಹನನ
ಸ್ಮರಿಸಿದಾನು ಆಗಿನ ಕ್ಷಣಕ ।
ಅಂಜಿ ಅಂದು ಮುಕ್ಕುಂದ ಮುರಾರಿ
ಬಂದು ಒದಗು ಈ ಕಾಲಕ್ಕ ‖ ೧೫ ‖

ಇವನ ಗರ್ವ ಪರಿಹಾರವಾಯಿತೆಂದು
ತಿಳಿಯ ಬಂತು ಕೃಷ್ಣನ ಮನಕ ।
ಕಪಟನಾಟಕಿ ಹಿಡಿದ ಸರ್ಪನು
ತೂರಿನಿಂತ ಆ ಗಗನಕ್ಕ ‖ ೧೬ ‖

**ವಚನ :**

ಭೀಮಸೇನ ಅಂಜಿನಡುಗಿದ. ಆದ ಬಹಳ ಸಣ್ಣ. ಅವನ ಫಜೀತಿ ಬಲ್ಲ ಮುಕ್ಕಣ್ಣ. ಅರ್ಜುನ ಬಂದಂತಾನ ಗಾರುಡಿಗ. ಅಶ್ವ ಎಂಥಾದ್ದು ನೋಡೋಣ. ನಗುತ್ತ ಗಾರುಡಿ ಅಶ್ವಕ್ಕೆ ಜೀನ ಹಾಕಿ ತಂದ ಡಣಾಡಣಾ. ಪಾಲ್ಗುಣ ಹತ್ತಿದನು ಕಣಾಕಣಾ.

**ಪದ :**

ಪಂಚಸೂತ್ರಗಳ ಹರದಂಗ ಆದಿತು
ಹಿಡಿದು ನಡದಿತು ಗಗನಮಾರ್ಗವನು ।

ಆಕಾಶ ಮಾರ್ಗಕೆ ಕುದುರೆ ನಡೆದಿತೊ
ದಿಕ್ಕು ದಿಕ್ಕುಗಳ ಚರಿಸುತ ॥ ೧೭ ॥

ಒಯ್ದು ಸಮುದ್ರದಲಿ ಇವನ
ಉರುಳಿಸಿ ಬಿಟ್ಟಿತು ಬೇಕಂತ ।
ಭಕ್ತರ ರಕ್ಷಣೆ ಮಾಡುವುದಕ್ಕೆ
ಓಡಿಬಂದ ಅಲ್ಲಿ ಹರಿ ತುರ್ತಾ ॥ ೧೮ ॥

ಅದೇ ಸಮುದ್ರದ ಮಧ್ಯದಲಿ
ಒಂದ ಮಾಯದ ಮರಮಾಡಿ ಗೊತ್ತಾ ।
ದೈವಯೋಗದಿಂದ ಬಿದ್ದ ಅರ್ಜುನ
ಮರದಮ್ಯಾಲ ಹರಿ ಸ್ಮರಿಸುತ ॥ ೧೯ ॥

ತಡಾಮಾಡದೆ ಗಿಡದ ಟೊಂಗಿಯನು
ಹಿಡಿದು ಬಿದ್ದ ಜೊತಾಡುತ್ತಾ ।
ನೀರಾಗ ಮೊಸಳಿ ಬಾಯಿ ತೆರೆಯುತಿತ್ತ
ಬಿದ್ದರ ಇವನ ತಿನಬೇಕಂತ ॥ ೨೦ ॥

**ವಚನ :**

ಅರ್ಜುನ ಬಳಲಿ ಬಾಯಾರಿ ಕಂಗೆಟ್ಟು ನೀರು ತಂದ ತನ್ನ ಕಣ್ಣಿಗೆ. ಅನುರೇಣು ತೃಣದಲ್ಲಿ ವ್ಯಾಪವಾದ ಕಮಲಾಕ್ಷ ಕಾಯೋ ಇಂದಿಗೆ. ದಯಮಾಡೋ ನಂಬಿದಾ ಭಕ್ತಗೆ. ಘೋರ ಶೋಕ ಮಾಡುತ್ತ ಸಂತಾಪ ಇನ್ಯಾರಿಗೆ ಹೇಳಲಿ? ಅರಿವಾಯ್ತು ಕೃಷ್ಣನ ಮನಸ್ಸಿಗೆ.

**ಪದ :**

ರಾಕ್ಷಸಿ ರೂಪವ ತಾಳಿದ ಶ್ರೀಹರಿ
ಬಿಚ್ಚಿಬಿಟ್ಟ ತನ್ನ ಕೇಶವನು ।
ಸಮುಂದರ ದಂಡೆಯ ಮ್ಯಾಲೆ ರಾಕ್ಷಸಿ
ನಿಂತ ಕೇಳತೈತಿ ಅರ್ಜುನನ ॥ ೨೧ ॥

ಯಾರು ನೀನು ಇಲ್ಲ್ಯಾತಕ ಬಂದಿ
ಯಾವ ವಸ್ತು ಬೇಕು ಹೇಳ ನಿನಗ ।
ವಸ್ತುವಿನ ಮಾರಿಗೆ ಉರಿ ಹಚ್ಚಲಿ
ಪಾರಾಗುವ ಹಂಚಿಕೆ ಇನ್ನಾಂಗ ॥ ೨೨ ॥

ಆಡಿದ ನುಡಿಗಳು ಸ್ಮರಿಸಿ ಹೇಳತೈತಿ
ಪಾರ ಮಾಡುವೆನು ನಾ ಈಗ ।

ಮದವಿ ಇಲ್ಲದ ಹದಿನಾರು ಸಾವಿರ
ವರಷ ತುಂಬಿ ಹೋದವು ನನಗ ‖ ೧೩ ‖

ನನ್ನ ತಕ್ಕ ವರ ದೊರಿಯಲಿಲ್ಲ
ಎಲ್ಲ ಸ್ವರ್ಗ ಮರ್ತ್ಯ ಪಾತಾಳದಾಗ ।
ಮಾರ ಹರನ ಸರಿ ಮನೋಹರ ಕಾಣತೀದಿ
ಮದುವೆ ಮಾಡಿಕೊಳ್ಳೊ ನೀ ಎನಗ ‖ ೧೪ ‖

**ವಚನ :**

ಮುಂದಿನ ವಿಚಾರ ತಿಳಿಯದೆ ಪಾರ್ಥ ವಚನ ಕೊಟ್ಟ ರಾಕ್ಷಸಿಗಾಗ. ಅದ್ಭುತಾಕಾರವಾಗಿ ಚಾಚಿಬಿಟ್ಟಳು ತನ್ನ ಕೈಯನ್ನ. ಅರ್ಜುನ ಅಂಜಿ ನಡುಗ್ಯಾನು ಅಯ್ಯಯ್ಯೊ ಸ್ವಾಮಿ ವ್ಯರ್ಥ ತಿಂದು ಬಿಡತೈತಿ ನನ್ನನ್ನು. ವ್ಯರ್ಥ ಪ್ರಾಣ ಕಾಳ ಕೊಂಡೇನು. ರಾಕ್ಷಸಿ ಹೇಳತೈತಿ ಹೆದರಬೇಡಿ ಪ್ರಿಯ ನೀನು. ನಾನೇನು ಮಾಡುವದಿಲ್ಲ ನಿನಗ.

**ಪದ :**

ನಿಮಿಷ ಮಾತ್ರದಲ್ಲಿ ತೆಗೆದು ಕಡಿಯಕ
ಪಾರು ಮಾಡಿತು ಅವನನ್ನು ।
ವಚನ ಕೊಟ್ಟಹಾಗೆ ಲಗ್ನ ಮಾಡಿಕೊ
ತಡ ಮಾಡುವದು ಇನ್ಯಾಕ ‖ ೧೫ ‖

ಅಷ್ಟ ಇಷ್ಟ ರಾಕ್ಷಸರನೆಲ್ಲ
ಕರಸಿಕೊಂತ ಲಗ್ನ ಮಾಡುವುದಕ ।
ಸಾಕಿನಿ ಡಾಕಿನಿ ಶಾಲಿನಿ ಜ್ವಾಲೆಯರು
ಎಂಬ ಪಿಶಾಚ್ಯಾರು ಆಕ್ಷಣಕ ‖ ೧೬ ‖

ಬಂದ ಕೂಡಿದರು ಲಗ್ನ ಮಾಡಿದರು
ಏನು ಕೊರತೆ ಇಲ್ಲ ಒಂದಕ್ಕ ।
ಗಂಡ ಹೆಂಡಿರು ಹೊಂದಿಕಿಯಾದರು
ಗರ್ಭ ನಿಂತಿತು ಕೇಡುಗಾಲಕ ‖ ೧೭ ‖

**ವಚನ :**

ಬಸರಿನ ವಿಸ್ತಾರ ಕುಂತ ಕೇಳರಿ ಚಿತ್ತವಿಟ್ಟು ನಿಮ್ಮ ಧ್ಯಾನಕ್ಕ. ಹೊಟ್ಟೆ ಮುಂದಕ ಬೆಳೆದು ಹಬ್ಬಿತ್ತು ಮೇಲ ಪರ್ವತದ ಸರಿತೂಕ. ಕುಂಡಿ ತಿಗಾ ಹಿಂದ ದೊಡ್ಡವಾದವು. ಹೊಟ್ಟೆ ಜೋಲಿಯನ್ನು ಹಿಡಿಯುವುದಕ. ಎರಡು ಕುಚಗಳ ನಡುವಿನ ಅಂತರ ಅರವತ್ತು ಮೊಳ. ಈ ರೀತಿ ಬಸರಿನ ಕಳ. ನವಮಾಸ ತುಂಬಿ ರಕ್ಕಸಿಗೆ ಬ್ಯಾನಿ ಒತ್ತಿ ಬಂದವು ಬಹಳ. ಅರ್ಜುನನಿಗೆ ಆಯಿತು ಅತಿ ಗೋಳ. ಹಡೆಯಲಿಕ್ಕೆ ಹಸ್ತ ಊರಿ ಕುತಾಳ. ಕೂಸ ಇಳಿದವು ಸಳ ಸಳ. ತಲ್ಲಣಿಸಿ ಹೋತ ಭೂತಳ.

**ಪದ :**

ದಿನ ಒಂದರಂತೆ ಹಡೆಯುತ ನಡೆದಳು
ರಾಕ್ಷಸಿ ಮೂರು ವರ್ಷವನಾ ।
ತೊಡಿಯ ತೊಳೆಯಲಿಕ್ಕೆ ನಿತ್ಯ ನೀರಿಗೆ
ಹೋಗುತ್ತಿದ್ದ ಅರ್ಜುನ ನದಿಗೆ ॥ ೧೮ ॥

ನೀರ ಹೊತ್ತು ಹೆಗಲ ಗಂಟು ಆತ
ಬೇಡಿಕೊಂತಾನು ಪರಮಾತ್ಮನಿಗೆ ।
ನೀರಿಗೆ ಒಂದಿನ ಬಂದ ಅಲ್ಲಿಂದ
ಓಡಿ ಹೋದ ಹಸ್ತಿನಾಪುರಕ ॥ ೧೯ ॥

ಸುದ್ದಿ ಕೇಳಿ ಎದ್ದು ಒದರ್ಯಾಡತಾಳು
ಎಬ್ಬಿಸತಾಳ ತನ್ನ ಮಕ್ಕಳಿಗೆ ।
ಸಣ್ಣ ದೊಡ್ಡ ಹಿರಿ ಕಿರಿ ಮರಿಗಳನೆತ್ತಿ
ಅವಚಿಕೊಂಡಳು ತನ್ನೆದಿಗೆ ॥ ೨೦ ॥

ವಾಯುವೇಗದಿದ ಬೇಗನೆ ಜಿಗಿಯುತ
ಓಡಿ ಬಂದಳು ಗಜಪುರಕೆ।
ಧರ್ಮನ ಚರಣಕೆ ಎರಗಿ ನಿಂತಳೊ
ತೋರಿಸಿಕೊಡರಿ ನನ ಗಂಡನಿಗೆ ॥ ೨೧ ॥

ಅವಳ ಕಂಡ ಬಂಡ ಆದ ಅರ್ಜುನ
ನೀರತಂದ ತನ್ನ ಕಣ್ಣಿಗೆ ।
ಗರ್ವಭಂಗ ಮಾಡಿ ಗರ್ವಿಲಿಂದಲಿ
ಮಯವಾದಳು ರಾಕ್ಷಸಿ ॥ ೨೨ ॥

* * *

## ಗಿರಿಜಾ ಕಲ್ಯಾಣ

ಗಣಪತಿ ಪಾದಕ ನಮಿಸುವೆ ನಾನು
ಸರಸ್ವತಿ ಪಾದಕ ಎರಗುವೆ ನಾ ॥ ೧ ॥

ಬಂದ ದೈವಕ ಕೈಯ ಮುಗದು ನಾ
ಶಿವನ ಮದವಿ ಸಂದ ಹೇಳುವೆ ನಾ ॥ ೨ ॥

ಕುಂದರಪುರದಲಿ ಚಂದದಿಂದಲಿ
ಗಿರಿರಾಯ ರಾಜ್ಯವನಾಳಿದನ ‖ ೩ ‖

ದಂಡು ದರ್ಬಾರ ಇಟ್ಟಿದ್ದ ಗಿರಿರಾಯ
ಬಂದ ರಾಜರನ ಮುರದಾನ ‖ ೪ ‖

ದಾನ ಧರ್ಮದಲಿ ಹೆಸರಾದ ಗಿರಿರಾಯ
ಮಾನದಲ್ಲಿ ಕೀರ್ತಿ ಪಡದಾನ ‖ ೫ ‖

ದೇವ ಮಾನವರು ಹೆದರಿ ನಡಿಯುತಾರು
ಗಿರಿರಾಜನ ಸರಿನಾದವರಾ ‖ ೬ ‖

ಗಿರಿರಾಜನ ಸತಿ ಮೀನಾದೇವಿಯವರು
ಪರಿವೃತೆಯಂತೆ ಮೆರಿಯುವರಾ ‖ ೭ ‖

ಸತಿ ಪತಿ ಇಬ್ಬರು ಅತಿ ದುಃಖವ ಪಡುವರು
ಗತಿಗಾಣದಲೆ ಮಕ್ಕಳಿಲ್ಲದಲೆ ‖ ೮ ‖

ಮೀನಾದೇವಿಯವರು ತಪಕೆ ನಡಿದರು
ತಪಮಾಡಿ ಮಕ್ಕಳು ಪಡೆಯುದಕ ‖ ೯ ‖

**ವಚನ :**

ಇಂತು ಮೀನಾದೇವಿಯು ಮಕ್ಕಳಿಲ್ಲವೆಂಬ ಬಯಕೆಯಿಂದ ಮಂದಿರವನ್ನು ಬಿಟ್ಟು ಅರಣ್ಯಕ್ಕೆ ಪೋಗಿ ತಪವನಾಚರಿಸಲಾಗಿ ಜಗದಾಂಬಿ ಪ್ರಸನ್ನಳಾಗಿ ಅಂದದ್ದು ಏನಂದರೆ, ಎಲೌ ಮೀನಾದೇವಿ ನಿನ ತಪಕ್ಕೆ ಮೆಚ್ಚಿದೆ. ನಿನ್ನ ಹೊಟ್ಟೆಯಲ್ಲಿ ನಾನೇ ಜನಿಸುತ್ತೇನೆಂದು ಅಂತರ್ದಾನವಾದಳು. ಇತ್ತ ಮೀನಾದೇವಿಯು ಮನಿಗೆ ಬಂದು ಪತಿಯಾದ ಗಿರಿರಾಯನಿಗೆ ಅನ್ನುವದೇನಂದರೆ -

**ಪದ :**

ಪತಿ ಗಿರಿರಾಯ ಕೇಳು ಅತಿ ಹರುಷದಲಿ
ಸತಿಯಾಡುವ ನುಡಿಗಳನಾ ‖ ೧೦ ‖

ಜಗಜ್ಜನನಿ ಜಗದಾಂಬಿ ಒಲಿದಳು
ಮಗಳ ಫಲವಕೊಟ್ಟು ಸಾಗಿದಳು ‖ ೧೧ ‖

ಮಾತು ಮುತ್ತಿನ್ಹಂಗ ಕೇಳ್ಯಾನು ಗಿರಿರಾಯ
ಸತಿಕೂಡ ರತಿಕ್ರೀಡೆನಾಡಿದನು ‖ ೧೨ ‖

ಚಲ್ವ ಕೆಂದುಟಿ ಗಲ್ಲ ಬಿಲ್ಲದಳ
ಮೆಲ್ಲನೆ ನಲ್ಲ ಹಿಡಿಯುವನು ॥ ೧೩ ॥

ಕರಗಳ ಪಾಶವ ಬಿಗಿದನು ಗಿರಿರಾಯ
ಕಿರಿ ಕೂದಲಗಳ ಸರಿಸುವನು ॥ ೧೪ ॥

ಪುಟ್ಟ ಬೆಟ್ಟದಂತ ಬಟ್ಟ ಕುಚಕೆ
ಸೃಷ್ಟಿಪತಿ ಕಷ್ಟ ಕೊಟ್ಟಾನು ॥ ೧೫ ॥

ಎಷ್ಟು ಹೇಳಲಿ ಇನ್ನೆಷ್ಟು ಬಣ್ಣಿಸಲಿ
ಸೃಷ್ಟಿ ಪತಿಯ ಕಾಮನಾಟವನ ॥ ೧೬ ॥

ಸಾರಿ ಹೇಳತೇನಿ ನಾರಿ ಮೀನಾದೇವಿ
ಮೀರಿದ ಗರ್ಭವ ಧರಿಸಿದಳಾ ॥ ೧೭ ॥

ಬಯಕಿ ಹತ್ತಿದವು ಮೀನಾದೇವಿಗೆ
ದಿನಗಳ ತುಂಬ್ಯಾವು ಬರುಬರುತಾ ॥ ೧೮ ॥

ಬ್ಯಾನಿ ತಿನ್ನುತಲಿ ಮೀನಾದೇವಿಯರು
ಜ್ಞಾನವಿಲ್ಲದಂಗ ಬಳಲಿದರಾ ॥ ೧೯ ॥

**ವಚನ :**

ಈ ಪ್ರಕಾರವಾಗಿ ಮೀನಾದೇವಿಯು ನವಮಾಸ ತುಂಬಿದ ಕೂಡಲೆ ಹೆಣ್ಣು ಕೂಸು ಹೆತ್ತಳು. ಆ ಕೂಸಿಗೆ ಪಾರ್ವತಾದೇವಿಯೆಂದು ಹೆಸರಿಟ್ಟರು. ಹೆಣ್ಣು ಕೂಸು ಸಣ್ಣದಾದರೂ ಜಾಣರಂತೆ ಶಿವನ ಪ್ರಾಣಲಿಂಗನು ಪೂಜಿಸುವುದನ್ನು ತಾಯಿ ತಂದೆಗಳು ಕಣ್ಣಾರೆ ಕಂಡು ಸಂತೋಷಪಡುತ್ತಿರುವರು. ಇತ್ತ ಪಾರ್ವತಾದೇವಿಯವರು ದಿನ ದಿನಕ್ಕೆ ಬಿದಗಿ ಚಂದ್ರನಂತೆ ಬೆಳೆದು ಹತ್ತು ವರ್ಷದ ಪ್ರಾಯಕ್ಕೆ ಬಂದರು. ಆವಾಗ್ಗೆ ಮೀನಾದೇವಿಯವರು ಪತಿಯಾದ ಗಿರಿರಾಜನಿಗೆ ಅನ್ನುವುದೇನಂದರೆ -

**ಪದ :**

ಪ್ರಾಣಕಾಂತರೆ ನೋಡಿದಿರಾ ಈ
ಜಾಣ ಮಗಳೆ ಮದವಿಯ ಕಾರ್ಯ ॥ ೨೦ ॥

ಹರೇದ ಮಗಳು ಪಾರ್ವತಾದೇವಿಗೆ
ತುರ್ತ ಲಗ್ನ ಮಾಡಲಿಬೇಕ ॥ ೨೧ ॥

ಶಿವನ ಕರಸರಿ ಬಲು ಬೇಗ
ಅವನಿಗೆ ಕೊಡುವೆನು ನನ ಮಗಳ ॥ ೨೨ ॥

ನಾಗಭೂಷಣ ಶಿವ ಅಳಿಯನಾದರೆ
ಮಗಳು ಸುಖದಲ್ಲಿ ಇರುವಳ ॥ ೧೩ ॥

ಮಡದಿ ಮಾತಿಗೆ ಒಪ್ಪಿದನವ
ದಡನೆ ದೂತರನ ಕರಸಿದನು ॥ ೧೪ ॥

ಅಷ್ಟರಲ್ಲಿ ಬಂದ ಶ್ರೇಷ್ಠನಾರದ ಮುನಿ
ಸೃಷ್ಟಿ ಪತಿ ಕೇಳೆಂದಾನು ॥ ೧೫ ॥

ಸುಡಗಾಡದಲ್ಲಿ ಶಿವಾ ಇರುವನು
ಬಡವನಾಗಿ ತಿರದುಂಬುವನು ॥ ೧೬ ॥

ಕಾಡ ಹುಲಿಗಳ ಚರ್ಮವ ಹೊತಗೊಂಡು
ಗಾಢದಿ ಯೋಗವ ಮಾಡುವನಾ ॥ ೧೭ ॥

ಪಾರ್ವತಿ ಶಿವನಿಗೆ ಕೊಡಬ್ಯಾಡಾ
ಸರ್ವಸೌಖ್ಯದಿಂದ ಕೆಡಬ್ಯಾಡಾ ॥ ೧೮ ॥

ನಂದಕೃಷ್ಣನಿಗೆ ನಿನ್ನ ಮಗಳಕೊಡು
ಹಿಂದ ಮುಂದ ನೋಡಲು ಬ್ಯಾಡ ॥ ೧೯ ॥

ಮಾನವಂತನು ಬಲು ಜಾಣ
ಧನವಂತನು ನಮ್ಮ ಶ್ರೀಕೃಷ್ಣ ॥ ೨೦ ॥

ತನು ಮನದಲ್ಲೇ ಪಾರ್ವತಿಗೆ ಒಲಿದನು
ಪಾರ್ವತಿ ರೂಪಕ ಬಲು ಪ್ರಾಣಾ ॥ ೨೧ ॥

**ವಚನ :**

ಇಂತು ನಾರದನ ಮಾತನ್ನು ಗಿರಿರಾಯನು ಕೇಳಿ ತನ್ನ ಮಗಳನ್ನು ಕೃಷ್ಣನಿಗೆ ಕೊಡಬೇಕೆಂದು ವಚನಕೊಟ್ಟ; ಸಭಾದೊಳಗೆ ಸ್ಪಷ್ಟ. ಅತ್ತ ನಾರದನು ವೈಕುಂಠಕ್ಕೆ ಬಂದು ಕೃಷ್ಣನಿಗೆ ಈ ಸುದ್ದಿಯನ್ನು ಅರುಹಿದಾ. ಇತ್ತ ಪಾರ್ವತಾದೇವಿಯು ಈ ಸುದ್ದಿಯನ್ನು ಕೇಳಿ ತಾಯಿ ಕಡೆಗೆ ಬಂದು ಅನ್ನುವದೇನಂದರೆ -

**ಪದ :**

ಗಡನೆ ತಾಯಿ ಕಡೆ ಬಂದಾಳೊ
ಹಡದವ್ವಾ ಕೇಳಂದಾಳೊ ॥ ೨೨ ॥

ಶಿವನ ಮೇಲೆ ನನ್ನ ಮನಸ ಇರುವದು
ಶಿವನ ಮಡದಿ ತಾನಂದಾಳ ॥ ೩೩ ॥

ಜಡಜವಜನಿ ಕೇಳ ಪಾರ್ವತಿ
ಬಿಡು ಬಿಡು ತರವಲ್ಲವ ರೀತಿ ॥ ೩೪॥

ಪೊಡವಿಪತಿ ಶ್ರೀಕೃಷ್ಣದೇವರಿಗೆ
ಮಡದಿಯಾಗಿ ಸುಖದಿಂದಿರತಿ ॥ ೩೫ ॥

ಪೊಡವಿಪತಿಯು ನಿನ್ನ ಹಡಿದವರು
ನುಡಿದ ಮಾತಿಗೆ ತಪ್ಪದಂಥವರು ॥ ೩೬ ॥

ಬಡವರ ಮಣಿ ಹಡದ ಮಗಳ ಕೊಟ್ಟು
ಕಡು ಕಷ್ಟವ ನೋಡದಂಥವರು ॥ ೩೭ ॥

ಬಡಿವಾರ ಹೇಳಬ್ಯಾಡ ಕೃಷ್ಣಂದು
ತುಡುಗ ಮಾಡಿ ಬಡ್ತ ತಿನ್ನುವದು ॥ ೩೮ ॥

ನಾರಿ ಗೌಳಿಗರು ನೀರಿಗೆ ಹೋಗುವಾಗ
ದಾರಿ ಕಟ್ಟಿ ಶರಗ ಜಗ್ಗವದು ॥ ೩೯ ॥

ಬಡತನವಾದರು ನಮ್ಮ ಶಿವನು
ಬಡ ಭಕ್ತರನು ಕಾಯುವನು ॥ ೪೦ ॥

ಬಿಡದೆ ತಪಾ ಮಾಡಿ ಶಿವನ ಒಲಿಸಿಕೊಂಡು ಶಿವನ
ತೊಡಿಯಮ್ಯಾಲೆ ಕೂಡ್ರುವೆನು ॥ ೪೧ ॥

**ವಚನ :**

ಇಂತು ಪಾರ್ವತಾದೇವಿ ತಾಯಿ ಮುಂದ ಹೇಳಿ ಹಂಪಿವಿರುಪಾಕ್ಷನ ಗುಡಿಗೆ ಹೋಗಿ ಶಿವನನ್ನು ಕುರಿತು ತಪಸ್ಸನ್ನು ಆಚರಿಸಿ ಶಿವನೇ ಶಿವಲಿಂಗವೆಂದು ಲಿಂಗಾರ್ಚನೆಯನ್ನು ಮಾಡಿ ಹರನನ್ನು ಕುರಿತು ಭಜನೆಯನ್ನು ಮಾಡಿದಳು ಆ ಜಗದಾಂಬಿಕೆಯು -

**ಭಜನೆ :**

ಹರ ಹರ ಶಂಕರ ರಿಪು ಹರನೆ
ಮೂರ ಹರನೇ ಗಂಗಾಧರನೆ ।
ಗಿರವರನೆ ಸುರನುತನೆ
ಕರುಣದಿ ಪೊರೆಯೋ ಗುರುಹರನೆ ॥

ಹರ ಹರ ದಕ್ಷನ ಶಿರವನು ಹರಸಿದನೊ
ಸಾಕ್ಷಾತ ಗಿರಿಯಲೆ ಜನಿಸಿದನೊ।
ಅಕ್ಷಯನೆ ರಕ್ಷಿಸು ನೀ
ಈಕ್ಷಿಸು ಸತಿಯಳ ವೀಕ್ಷಿಪನೆ ॥

**ವಚನ :**

ಇಂತು ಗಿರಿಜಾದೇವಿಯು ಭಜನಿಯನ್ನು ಮಾಡಲಾಗಿ, ಅಲ್ಲಮನು ಮನ ಒಲಿದು ಬಂದು ಸಿರಸ್ಸಿನ ಮೇಲೆ ಹಸ್ತವನ್ನು ಇರಿಸಿ, ತಥಾಸ್ಥುಯಂದು ನಿನ್ನನ್ನೇ ಲಗ್ನವಾಗುತ್ತೇನೆಂದು ಹೇಳಿ ಅಂತರ್ಧಾನವಾದನು. ಇತ್ತ ಗಿರಿರಾಯನು ಸುತಳ ಸನ್ನಿಧಿಗೆ ಬಂದು ಅನ್ನುವದೇನಂದರೆ -

**ಪದ :**

ಮನಿಗೆ ನಡಿಯ ಪಾರ್ವತಿ ನೀನಾ ನನ್ನ
ಮನಸಿನಂತಾಹರೆ ಬರುವೆ ನಾ ॥ ೪೧ ॥

ನಿನ್ನ ಮನೋರಥಾ ಅದು ಏನಾ ಬಹು
ಮನ್ನಿಸಿ ಶಿವನಿಗೆ ಕೊಡು ನನ್ನಾ ॥ ೪೨ ॥

ಭಾಷೆ ಕೊಟ್ಟ ಹೆಣ್ಣ ಬಿಡುದಿಲ್ಲ
ಶಿಸುಪಾಲ ರುಕ್ಮಿಣಿ ಬಿಡಲಿಲ್ಲ ॥ ೪೪ ॥

ಗೆದ್ದೊಯ್ದನಾಕಿಯ ಹರಿ ತಾನು ನಾನು
ಗೆದ್ದವರಿಗೆ ಮಾಲಿ ಹಾಕುವೆನು ॥ ೪೫॥

ನಿನ್ನ ದಾವ ಪುರುಷ ಗೆದಿಯುವನು
ಮಹಾದೇವನು ನಿಶ್ಚಯ ತಿಳಿ ನೀನು ॥ ೪೬ ॥

ಗೆದೆಯನು ನಿನ್ನ ನಂತಾದ್ರೀಶ
ನಿನಗದರ ಚಿಂತಿಯಾತಕೋ ಶೈಲೇಶಾ ॥ ೪೭ ॥

**ವಚನ :**

ಇಂತು ಗಿರಿರಾಯನ ಮಗ ಮಾತಿಗೆ ಒಪ್ಪಿ ಮಗಳನ್ನು ಮಂದಿರಕ್ಕೆ ಕರೆದುಕೊಂಡು ಬಂದು ಲಗ್ನ ಮಂಟಪವನ್ನು ಸಿಂಗರಿಸಿ ದೇಶ ದೇಶದ ರಾಜರಿಗೆ ಪತ್ರ ಬರೆದನು -

**ಪದ :**

ಬರಿದಾನೊ ಪತ್ರವ ಗಿರಿರಾಯ ವತ್ತರದಿ
ಕರಿಸ್ಯಾನೊ ಛತ್ರಪತಿ ಅರಸರನ ॥ ೪೮ ॥

ಗಿರಿಜಾತಾ ಬಂದನು ಹರಿಸುತ ಬಂದನು
ಗಿರಿಜಾತಾ ಲಗ್ನ ಮಂಟಪಕ್ಕ ॥ ೪೯ ॥

ಶ್ರೀಧರ ಬಂದನು ಬುಧರ ಬಂದನು
ಶ್ರೀಕರ ಪಾರ್ವತಿ ಮಂಟಪಕೆ ॥ ೫೦ ॥

ಸುರಮುನಿ ಬಂದನು ನರಪತಿ ಬಂದನು
ಗಿರಿಜಾತೆ ಲಗ್ನ ಮಂಟಪಕೆ ॥ ೫೧ ॥

ಅಜ ಹರಿ ಬಂದರು ರವಿ ಚಂದ್ರರು ಬಂದರು
ರಾಜ ಪಾರ್ವತಿ ಲಗ್ನ ಮಂಟಪಕ ॥ ೫೨ ॥

**ವಚನ :**

ಇಂತು ನೆರೆದ ಸಭೆಯಲ್ಲಿ ಎನ್ನ ಪಂಥವ ನಡಿಸೌ ಗಿರಿಜೆಯೆನಲ್ಕೆ, ಪಾರ್ವತಿಯು ಪಟ್ಟೆ ಪೀತಾಂಬರವನ್ನುಟ್ಟು, ತಲಿಯಮೇಲೆ ಕಿರೀಟವನ್ನಿಟ್ಟು, ತೊಡಿಯ ಮೇಲೆ ಬಟ್ಟಿನಷ್ಟು ಕೂಸನಿಟ್ಟು, ಒಂದ ಕೈಲೆ ಈ ಕಂದನನ್ನು ಆರು ನೆಗುವುವರೋ ಅವರನ್ನೇ ಲಗ್ನವಾಗುವೆನು ಎಂದಳಾ ಮಾದೇವಿ –

**ಪದ :**

ನೆರಿದ ರಾಜಗಳು ಪರಿ ಪರಿಯಲಿ ಬಂದು
ಕಂದನ ಮುಖ ನೋಡುವರು ಹಿಂದಕ ಸರಿಯೂರು ॥ ೫೩ ॥

ಪಟ್ಟದ ರಾಜರು ಅಷ್ಟ ದಿಕ್‌ಪಾಲಕರು
ದಿಟ್ಟ ಕಂದನ ನೋಡಿ ಆನಂದ ಪಡೆಯುವರು ॥ ೫೪ ॥

ಹರಿ ತಾನು ಬಂದಾನು ವರ ಕಂದನಡಿಗೆ
ಒಂದು ಕೈಲೆ ಕಂದನ ನೆಗವುವು ॥ ೫೫ ॥

ಎತ್ತಲಿಲ್ಲ ಅಂದಾನೊ ಕೈ ಕತ್ತಿಯ ಹಿರಿದನು
ಕತ್ತರಿಸಿ ಕೂಸಿನ ಕೆಡವುವೆನು ॥ ೫೬ ॥

ಕಿತ್ತು ಎತ್ತ್ಯಾನು ಕೈ ಕತ್ತಿಯ ಮೇಲಕೆ
ಎತ್ತಿದ ಕೈ ನಿಂತಿತು ಮ್ಯಾಗ ॥ ೫೭ ॥

**ವಚನ :**

ಆವಾಗ್ಯೆ, ಶ್ರೀಹರಿ ಪರಮಾತ್ಮನು ಜ್ಞಾನದೃಷ್ಟಿಯಿಂದ ನೋಡಿ ಈ ಕಂದನು ಕಂದನಲ್ಲ. ಕಂದುಗೊರಳನೆಂದು ಶಿವನ ಭಜನೆಯನ್ನು ಮಾಡಿದೆನೊ ಆ ಗೋವಿಂದನೋ -

**ಭಜನೆ :**

ಈಶ ಮಹೇಶನೆ ವಾಸುಭೂಷಣನೆ
ಪೋಷಿಸು ನಮ್ಮನು ಗಡ ಬಾಲಕನು
ಅಂಬಿಯ ತೊಡಿಯಲಿ ಇಂಬವ ಕೊಟ್ಟವನು
ಸಾಂಬ ಸದಾಶಿವ ಬಾಲಕನು

ಶೂಲಧರನ ತವ ಜಾಲವನರಿಯದೆ
ಬಾಲ ರಕ್ಷಿಪುದು ಬಾಲಕನು

**ವಚನ :**

ಇಂತು ಶ್ರೀಹರಿ ನಿಂತು ಭಜಿಸಲ್ಕೆ ಸ್ತೋತ್ರಕ್ಕೆ ಮೆಚ್ಚಿ ಕಂತು ಹರನು ಬಂದನೋ -

**ಪದ :**

ಬಂದನೊ ಶಿವರಾಯ ಮಂದಿರಕೆ
ಒಂದ ಕೈಲೆ ಕೂಸಿನ ನೆಗವುದಕ ॥ ೫೮ ॥

ಗಿರಿಸುತೆ ಪಾರ್ವತಿ ಹರುಷದಿ ನಾಚುತ
ಬಂದು ಪಾದದ ಮೇಲೆ ಬೀಳುದಕ ॥ ೫೯ ॥

ಹರುಷದಿ ಶಂಕರ ಕರವ ಪಿಡಿದಾನೊ
ಸರ್ವರು ಸೋಬಾನ ಪಾಡುದಕ ॥ ೬೦ ॥

ಬ್ರಹ್ಮನು ಬಂದಿನು ಅಕ್ಷತಿ ಮಂತ್ರಕ
ಮಂಗಲ ತಾಳಿ ಕಟ್ಟುದಕ ॥ ೬೧ ॥

ಚಂದದಿ ಚಪ್ಪಾಳೆಗೊಂಡಾರೊ
ಅಕ್ಷತಿ ಕಾರ್ಯವ ಮುಗಿಸಿದರು ॥ ೬೧ ॥

ಬಂಧು ಬಾಂಧವರೆಲ್ಲ ನೆರೆದ ಸಂದಣಿಯಲ್ಲಿ
ಸಾಂಬನ ಮೇಲೆ ಸೋಬಾನ ಪಾಡಿದರೊ ॥ ೬೩ ॥

ಮಂಗಳಗೌರಿಗೆ ಮಂಗಳವಾಯಿತು
ಪರಶಿವನೊಳು ಲಗ್ನ ಮುಗಿಯಿತು ‖ ೬೪ ‖

ನೆರೆದ ಜನರೆಲ್ಲ ಸಾಂಬನ ಮೇಲೆ
ಮಂಗಳಾರತಿಯನ್ನು ಎತ್ತಿದರು ‖ ೬೫ ‖

ಧಾರುಣಿ ಮೇಲೆ ಮೆರೆವುದು ಮಣಕಟ್ಟಿ
ಸಾಂಬನ ಮದುವಿಗೆ ಕವಿಕಟ್ಟಿ ‖ ೬೬ ‖

* * *

## ಚಿಲ್ಲಾಟ

ಭೂಮಿಯೊಳಗ ಒಂದು ನೇಮವಾದ ಮಾತು
ಎಲ್ಲ ಜನರು ಕೇಳಿರಿ ಕೂತು ‖ ೧ ‖

ಕೈಲಾಸ ಬಿಟ್ಟು ಶಿವ ಬಂದಾನು
ಭಕ್ತರ ಭಾವಾ ನೋಡುದಕ ‖ ೨ ‖

ಬಾವಾನಾಗಿ ಶಿವ ಭಿಕ್ಷಕ ಬಂದನು
ಮೃತ್ಯುಲೋಕ ಎಂಬುದರೊಳಗ ‖ ೩ ‖

ಹರ ಹರ ನಿಮ್ಮ ಗುರುವಿನ ಧರ್ಮ
ಭಿಕ್ಷ ನೀಡಪ್ಪ ತಂಗಿ ಎನಗ ‖ ೪ ‖

ಬಾಲ ಮಕ್ಕಳೆರಡು ಬಾಗಿಲ ತೋಳು ಹಿಡಿದು
ಮೂಳ ಬಾವಾ ಹೋಗ ಮುಂದಕ ‖ ೫ ‖

ಮುಂದಿನ ಬಾಗಿಲಕ ಹೋಗಿ ನಿಂತಾನು
ಹುಲಿಯ ಚರ್ಮ ಅವನ ಬಗಲಾಗ ‖ ೬ ‖

ಹರ ಹರ ನಿಮ್ಮ ಗುರುವಿನ ಧರ್ಮ
ಭಿಕ್ಷ ನೀಡವ್ವ ತಂಗಿ ಎನಗ ‖ ೭ ‖

ಕೈಯಾಗ ರೊಟ್ಟಿ ತೊಡಿಮ್ಯಾಗ ಕೂಸು
ಮುಂದಕ ಹೋಗು ಬಾವಯ್ಯನವರ ‖ ೮ ‖

ಇಷ್ಟು ಕೇಳಿ ಶಿವ ಹೊಂಟು ನಿಂತಾನು
ಮೃತ್ಯಲೋಕ ಎಂಬುದು ಸಾಕು ‖ ೯ ‖

ಕೇಳ ಪಾರ್ವತಿ ನಿನಗ ಹೇಳತೇನಿ
ಬಾವಾನಾಗಿ ಹೋಗಿದ್ದೆ ಭಿಕ್ಷಕ್ಕ ‖ ೧೦ ‖

ಧರ್ಮ ಎಂಬುದು ನಿಲ್ಲಾಕ ಜಗವಿಲ್ಲ
ತಪಸ್ಸು ಮಾಡೇತಿ ಮುಳ್ಳ ಮನೆಯ ಮೇಲ ‖ ೧೧ ‖

ಕರ್ಮ ಎಂಬುದು ನೀರಿನ ಪ್ರಕಾರ
ಹರದಾಡತೈತಿ ಭೂಮಿಯ ಮ್ಯಾಲ ‖ ೧೨ ‖

ಕೇಳ ಸಾಂಬಾ ನಿನಗ ಹೇಳತೇನಿ
ಕಂಚಿ ಎಂಬ ಪಟ್ಟಣದೊಳಗೆ ‖ ೧೩ ‖

ಶಿರಿಯಾಳಶೆಟ್ಟಿ ಮಡದಿ ಇರುವಳು
ದಾನ ಮಾಡತಾಳ ಬಲ್ಲಾಂಗ ‖ ೧೪ ‖

ಬೇಡಿದ ದಾನ ನೀಡತೇನಂತ
ಕಾಳಿ ಹಿಡಸತಾಳ ನಾಡ ಮೇಲಾ ‖ ೧೫ ‖

ಬಿರದಿನ ಕಾಳಿ ಶಬ್ದವ ಕೇಳಿ
ಹೋಗಿ ಮುಟ್ಟ್ಯಾವ ಕೈಲಾಸಕ್ಕ ‖ ೧೬ ‖

ಕೇಳ ಪಾರ್ವತಿ ನಿನಗ ಹೇಳತೇನಿ
ಹೋಗಿ ಬರುವೆ ಕಂಚಿ ಪಟ್ಟಣಕ ‖ ೧೭ ‖

ಮುಪ್ಪಾನ ಮುದಿ ಜಂಗಮನಾಗಿ
ಹೋದಾನು ಕಂಚಿ ಪಟ್ಟಣಕ ‖ ೧೮ ‖

ಹರ ಹರ ನಿಮ್ಮ ಗುರುವಿನ ಧರ್ಮ
ಭಿಕ್ಷ ನೀಡವ್ವ ತಂಗಿ ನಮಗ ‖ ೧೯ ‖

ಹರ ಹರ ಶಬ್ದವು ತರುಣಿಯು ಕೇಳಿ
ಕಾಳ ತಂದಾಳು ಮುತ್ತಲ ತುಂಬ ‖ ೨೦ ‖

ಕಾಳ ನೋಡಿ ಮಾರಿ ಹೋಳ ಮಾಡತಾನ
ಕಾಳಿನಯ್ಯ ಅಲ್ಲವ್ವ ಇವನು ‖ ೨೧ ‖

ಮುತ್ತಲ ತುಂಬ ಹೊನ್ನು ತುಗೊಂಡು ಬಂದು
ಹಿಡಿಯಿರಿ ಸ್ವಾಮಿ ನಿಮ್ಮ ಜೋಳಿಗಿಗಿನ ॥ ೧೧ ॥

ಹೊನ್ನು ಹಣ್ಣ ವಯ್ಯಲಾಕವ್ವ ತಂಗಿ
ಮಕ್ಕಳು ಮರಿ ಇಲ್ಲವ್ವ ಎನಗ ॥ ೧೩ ॥

ಆನಿಯ ಕೊಡತೇನಿ ಒಂಟಿಯ ಕೊಡತೇನಿ
ಹತಗೊಂಡು ಅಡ್ಡಾಡು ನಾಡಮ್ಯಾಲ ॥ ೧೪ ॥

ಇಂಥ ದೌಲತ್ತು ಯಾರಿಗೆ ಬೇಕವ್ವ
ಊರ ಹೊರಗಿ ಇರುವ ಪರದೇಶಿಗೆ ॥ ೧೫ ॥

ಏನ ಬೇಡತೀದಿ ಬೇಡ ಜಂಗಮ
ಬೇಡಿದ್ದ ಕೊಡತೇನಿ ನಾ ನಿನಗ ॥ ೧೬ ॥

ಬೇಡಿದ ದಾನ ನೀಡತೇನಿ ಅಂತಾ
ಬಂದು ಮುಟ್ಟು ಎನ್ನ ಪಾದವನಾ ॥ ೧೭ ॥

ಏಕೋಭಾವದಿಂದ ಚಾಂಗುಣಿ ಹೋಗಿ
ಹಿಡಿದಾಳು ಸ್ವಾಮಿಯ ಪಾದವನಾ ॥ ೧೮ ॥

ನಿನ್ನ ಮಗನ ಚಿಲ್ಲಾಳನ ಕೊಯ್ದು
ಅಡಗಿ ಮಾಡಿ ಉಣಿಸವ್ವ ಎನಗ ॥ ೧೯ ॥

ಕುತ್ತಿಗಿ ಶಿರಾ ಬಿಗಿ ಹಿಡಿಕೊಂಡು
ಹೋಗಿ ನಿಂತಾಳು ಬಾಗಿಲದಾಗ ॥ ೨೦ ॥

ಬಾರೋ ಬಾರೋ ಮಗನೆ ಚೆಲ್ಲಾಳ
ನೀನು ಮನಿಗೆ ಬರಬೇಕು ॥ ೨೧ ॥

ಪಾಟಿಯ ಗಂಟು ಕೂಸು ಬರುವದು ಕಂಡು
ಹಿರಿ ಹಿರಿ ಹಿಗ್ಗ್ಯಾಳು ಮನದಾಗ ॥ ೨೧ ॥

ಕುತನಿಯ ಜರಾ ಗೊಂಡೆದ ಟೊಪ್ಪಿಗೆ
ಹ್ಯಾಂಗ ಒಪ್ಪ್ಯಾವು ನಮ ಚಂದ್ರಾಮಗ ॥ ೨೨ ॥

ಯಾರೇನಂದರವ್ವ ಯಾರೇನ ಬೈದಾರವ್ವ
ಯಾಕವ್ವ ನಿನಗ ಕಣ್ಣೀರ ॥ ೨೪ ॥

ಐನ್ಯಾರು ಬಂದಾರು ಅಡಗಿ ಮಾಡಕ ಇಟ್ಟೇನಿ
ಹೊಗಿಯ ಸೋಂಕಿ ಬಂದಾವ ನೀರ ‖ ೩೫ ‖

ಹೊಗಿಯ ಸೋಂಕಿದ ನೀರಲ್ಲವ್ವ ತಾಯಿ
ದುಃಖದ ಕಣ್ಣೀರು ಅಂದಾನು ‖ ೩೬ ‖

ಹೊಸದೊಂದು ಈಳಿಗಿ ಮಸದೊಂದು ಇಟ್ಟೇದಿ
ಚಮತ್ಕಾರ ಹೇಳವಲ್ಲೆಪ್ಪ ಎನಗ ‖ ೩೭ ‖

ಸ್ವಾಮಿ ಜೋಳಿಗ್ಯಾಗ ನೇಮದ ಕಾಯಿಪಲ್ಲೆ
ಹಚ್ಚಿ ಪಲ್ಯವ ಮಾಡುದಕ ‖ ೩೮ ‖

ಮಲಿಯ ಉಣ್ಣುತ ಮಲಗಿದ ಕಂದಗ
ಮಾಯದ ನಿದ್ರೆ ಗವಿದಿತು ಆಗ ‖ ೩೯ ‖

ಸಣ್ಣ ಈಳಿಗಿ ಸರಿಸ್ಯಾಳ ಚಾಂಗು
ಕಂದನ ಶಿರವನು ಕೊಯ್ಯುದಕ ‖ ೪೦ ‖

ಶಿರಾ ಒಯ್ದು ನೆಲವಿನ ಮ್ಯಾಲ ಇಟ್ಟಳು
ದೇಹ ಹೆಚ್ಚ್ಯಾಳು ಬಹು ಸಣ್ಣಾಗಿ ‖ ೪೧ ‖

ಅಡಗಿ ಮಾಡಿ ಏನ್ಯಾರ್ನ ಕುಡಿಯುತಾಳ
ಏಳರಿ ಸ್ವಾಮಿ ನಿಮ್ಮ ಜಳಕಕ್ಕ ‖ ೪೨ ‖

ಜಳಕ ಮಾಡಿ ಗದ್ದಿಗಿ ಮ್ಯಾಲ ಕುಂತು
ಜಂಗಮ ನುಡಿತಾನು ಬಲ್ಲಾಂಗ ‖ ೪೩ ‖

ಯಾಕೋ ಚಾಂಗುಣಿ ನಿನ್ನ ಮನಸು
ಬಹಳ ಚಂಚಲಾಗಿರಬಹುದು ‖ ೪೪ ‖

ಶಿರಾ ನೋಡಿ ದಿನಗಳೀ ಬೇಕಂತ
ಒಯ್ದು ಇಟ್ಟೇದಿ ನೆಲವಿನ ಮ್ಯಾಗ ‖ ೪೫ ‖

ಶಿರಾ ಜಜ್ಜಿ ಚಟ್ಟನಿ ಮಾಡಿದರೆ
ನಾನು ಉಂಡು ಹೋಗುವೆನೀಗ ‖ ೪೬ ‖

ಶಿರಾ ಜಜ್ಜಿ ಚಟ್ಟನಿ ಮಾಡಿ
ನಾಲ್ಕೆಡಿಯ ಮ್ಯಾಗ ಇಟ್ಟಳು ಆಗ ‖ ೪೭ ‖

ಒಂದೆಡಿ ನನಗಾತು ಒಂದೆಡಿ ನಿನಗಾತು
ಒಂದೆಡಿ ನಿನ ಗಂಡನಿಗೆ ‖ ೪೮ ‖

ತುಂಬಿದ ಮನಿಯಾಗ ಎಡಿ ಉಳಿಬಾರದವ್ವ
ಕರಿಯಬೇಕು ನಿನ್ನ ಮಗನ್ನ ‖ ೪೯ ‖

ಇದ್ದೊಬ್ಬ ಮಗನ ಕೊಯ್ದು ಅಡಗಿ ಮಾಡಿ ಇಟ್ಟೇನಿ
ಇನ್ನೆಲ್ಲಿ ತರಲವ್ವ ಮಗನ್ನ ‖ ೫೦ ‖

ಮಕ್ಕಳಿಲ್ಲದ ಮನಿಯಾಗ ತಾಯಿ
ನಂದು ಬಿನ್ನಾಯ ಆಗೂದಿಲ್ಲ ‖ ೫೧ ‖

ಇಷ್ಟು ಹೇಳಿ ಶಿವಾ ಹೊಂಟು ನಿಂತಾನು
ಚಾಂಗುಣಿ ಬಂದಾಳು ಬಾಗಿಲಕ ‖ ೫೨ ‖

ಒಳ್ಳ ಮ್ಯಾಲಿನ ಒನಕೆಯ ತಗೊಂಡು ಮೂರೇಟು ಹೊಡಿತೇನಿ
ಸತ್ತ ಬಳಿಕ ಎಳಿತೇನಿ ದನದ ಕಾಲಾಗ ‖ ೫೩ ‖

ನಾಗಬೆತ್ತ ಕೊಡತೇನಿ ಕೂಗಿ ನಿನ್ನ ಮಗನ್ನ ಕರಿ
ಓಡಿ ಬರುವ ಚೆಲ್ಲಾಳಾಗ ‖ ೫೪ ‖

ನಾಗಬೆತ್ತ ತೋರಿ ಕೂಗಿ ಮಗನ್ನ ಕರಿತಾಳ
ಓಡಿ ಬಂದ ಮಗ ಚೆಲ್ಲಾಳ ‖ ೫೫ ‖

ಕುದೂ ಗಡಿಗ್ಯಾನ ಕೂಸು ಕುಣಕೊಂತ ಓಡಿ ಬಂದು
ಸರಿಯಾಗಿ ಕುಂತಾನ ಪಂತ್ಯಾಗ ‖ ೫೬ ‖

ಧರಿಯೊಳು ದ್ಯಾಮಪುರ ವರ ಚೆಲ್ಲಾಳನ
ಸರಸದಿ ಪೇಳುವೆ ಕತೆಯನ್ನ ‖ ೫೭ ‖

## ಆದಿಗೊಂಡನ ಚರಿತ್ರೆ

ಪದ :

ಹರ ಗುರು ಶಂಕರನು ಇವನು ಆದಾನು ಕುರಿ ಕಾಯುವ ಕುರುಬನು ।
ಕುಡೊಕ್ಕಲಿಗಗ ಕುವರನಾಗಿ ಕುರುಹು ತೋರಿದ ಕುರುಬಾನು ।
ಆದಿಗೊಂಡನಿಗೆ ಅಣುಗನಾಗಿ ಅವತಾರ ಮಾಡಿದ ಕುರುಬಾನು ।
ಧರಿಗೆ ನೇಗಲಿ ಹೂದ ಶಿರದ ಮನೆಯಲ್ಲಿ ಕುರಿಗಳ

ಎಬಿಸಿದ ಕುರುಬಾನು | ಸತ್ತ ಕುರಿಯ ಮತ್ತೆ ಪ್ರಾಣವ ಪಡೆದು
ಸತ್ಯಕ್ಕೆ ಮೆರೆದಂಥ ಕುರುಬಾನು | ಧನುಜನ ಕೊಂದು
ದೇವಗನ್ಯಯ ಮದುವೆಯಾದಂಥ ಕುರುಬಾನು |
ಉಣ್ಣೆ ಕಂಕಣ ಕಟ್ಟಿ ಕೋರಿಗುರುವಿನ ಹೆಸರು ಹೇಳಿದ ಕುರುಬಾನು |
ಕಂಬಳಿ ಬೀಸಿ ಕುಂಬನಿಗೆ ಮಳೆ ತಂದ ಶಂಭು
ಅವತಾರದ ಕುರುಬಾನು | ಕಾಳಿಯ ವರನಾಗಿ ಕನ್ಯೆ ಲಗ್ನ
ವಾಗಿ ಕಾಳಿದಾಸನೆಂಬ ಕುರುಬಾನು | ಕುರಿಯ ಹಿಕ್ಕಿಯ
ಲಿಂಗವ ಮಾಡಿ ವೀರಗೊಲ್ಲಾಳನೆಂಬ ಕುರುಬಾನು |
ಅಜ್ಜ ಆದಿಗೊಂಡ ಮುತ್ಯ ಮುದ್ದುಗೊಂಡ
ನಮ್ಮಪ್ಪ ಸೆರೆವಾಡ ಸಿದ್ದಾನು ||

**ವಚನ :**

ಕುರುಬನು ಅಂದರೆ ಕುರುವು ಉಳ್ಳವನೇ ಒಬ್ಬ ಕುರುಬನು. ಆರು ಗುಣಗಳನ್ನು ಅಳಿದು ಮೂರು ಗುಣಗಳನ್ನು ದೂರ ಮಾಡಿ ಸರ್ವರಿಂದ ಬೈಸಿಕೊಂಡು ಕೋಪಬಾರದ ಹಾಗೆ ಅರಣ್ಯದಲ್ಲಿ ಕುರಿ ಕಾಯುವವನೆ ಒಬ್ಬ ಕುರುಬನು ಕರಿಯ ಕಂಕಣ ಕಟ್ಟಿ ಕೋರಿಗುರುವಿನ ಹೆಸರು ಹೇಳುವ ಒಬ್ಬ ಕುರುಬನು. ಕುರುಬನ ಚರಿತ್ರವನ್ನು ಚನ್ನಾಗಿ ಕೇಳಿರಿ. ಅದು ಏನಂದರೆ, ಹರನು ಗೌರಿಯ ಸದರಿನೊಳು ಕುಳಿತಾಗ್ಗೆ ಸುರಮುನಿಗಳು ನೋಡಿ ಹಾಸ್ಯಮಾಡಿ ನಕ್ಕರು. ನಕ್ಕದಕ್ಕೆ ನಗಜಾತಿಯಾದ ಪಾರ್ವತಿದೇವಿ ಅಂದದ್ದೇನಂದರೆ - ಎಲೋ ಸುರಮುನಿಗಳೇ ಹಾಸ್ಯಮಾಡಿ ನಕ್ಕವರೆಲ್ಲ ಕುರಿಗಳಾಗಿ ಧರಣಿಗೆ ಹೋಗಿರೆಂದು ಶಾಪ ಕೊಟ್ಟಳು. ಅದೇ ಶಾಪದಿಂದ ಸುರಮುನಿಗಳೆಲ್ಲರೂ ಕುರಿಗಳಾಗಿ ಧರಣಿಗೆ ಬಂದರು. ಮುಂದೆ ನಕ್ಕವರೆಲ್ಲ ಕುರಿಗಳಾದರು; ಹಿಂದೆ ನಕ್ಕವರೆಲ್ಲ ಮೇಕೆಗಳಾದರು. ಆವಾಗ್ಗೆ ಭೂಮಿ ತುಂಬ ಹರದಾಡಿ ಹುಲ್ಲು ಗಿಡಗಂಟಗಳನ್ನು ಮೇಯುತ್ತ ಭೂಮಿಯ ತುಂಬ ಆದರು. ಆವಾಗ್ಗೆ ಪರಮೇಶ್ವರನು ಬ್ರಹ್ಮನಿಗೆ ಕುರಿ ಕಾಯಲು ಆಜ್ಞೆ ಮಾಡಿದನು. ಬ್ರಹ್ಮನು ಧರಣಿಗೆ ಬಂದ ಕುರಿಯ ಹಿಂಡನ್ನು ತಿರುವಲು ಎಷ್ಟು ತಿರಿವಿದರೂ ಅವನಿಗೆ ಹೊಳ್ಳದಿರಲು ಸಾಕಾಗಿ ಕಂಗೆಟ್ಟು ತಿರುಗಿ ಕೈಲಾಸಕ್ಕೆ ಬಂದು ಶಂಕರನಿಗೆ ವಲ್ಲೆಂದು ಕೈಮುಗಿದನು. ಆವಾಗ್ಗೆ ಶಂಕರ ಮನಸ್ಸಿನಲ್ಲಿ ತಿಳಿದು ವಿಷ್ಣುವಿನನ್ನು ಕರೆಯಿಸಿ ಕುರಿಗಳನ್ನು ಕಾಯಲು ಹೇಳಿದನು. ಆವಾಗ್ಗೆ ವಿಷ್ಣು ಕುರಿ ಹಿಂಡಿಗೆ ಬಂದು ಕುರಿಗಳನ್ನು ಕಾಯ್ದು ಕಾಯ್ದು ಬೇಸತ್ತು ಕಟ್ಟಿ ಕಡೆಗೆ ಸಾಕಾಗಿ ಕಂಗೆಟ್ಟು ತಿರುಗಿ ಕೈಲಾಸಕ್ಕೆ ಬಂದು ಪರಮೇಶ್ವರನಿಗೆ ವಲ್ಲೆಂದು ಹೇಳಿದನು. ಆವಾಗ್ಗೆ ಪರಮೇಶ್ವರನು ಸ್ವತಃ ತನೇ ಕುರಿ ಕಾಯಲು ಹೋಗುವೆನೆಂದು ಪಾರ್ವತಿಗೆ ಬುತ್ತಿ ತರಲು ಹೇಳಿ ಕುರಿ ಹಿಂಡಿಗೆ ಬಂದನು. ಪರಮೇಶ್ವರನು ಕುರಿಗಳನ್ನು ಕಾಯುತ್ತಿರಲು ಅದೇ ಸ್ಥಳಕ್ಕೆ ಪಾರ್ವತಿಯ ಬುತ್ತಿಯನ್ನು ತೆಗೆದುಕೊಂಡು ಬಂದಳು. ಇಬ್ಬರೂ ಕೂಡಿ ಊಟ ಮಾಡಿ ಏಕಾಂತದಿಂದ ಮಾತಾಡಿದ್ದೇನಂದರೇ - ಹೀಗೆ ಕುರಿ ಕಾಯುತ್ತ ಕುಳಿತರೆ ಕೈಲಾಸ ಪಟ್ಟಣವು ಹಾಳಾಗುವು ದೆಂದು ಯೋಚಿಸಿ ಆದಿಗೊಂಡನಲ್ಲಿ ಭೂಮಿ ದಾನವನ್ನು ಬೇಡಲು ಆದಿಗೊಂಡನು ಪ್ರತ್ಯಕ್ಷ ಈಶ್ವರನು ಬಂದನೆಂದು ಭಾವಿಸಿ ಶಿರಬಾಗಿ ಸಾಷ್ಟಾಂಗ ಮಾಡಿ, ಏನು ಬೇಕೆಂದು ಕೇಳಿದನು. ಆಗ ಪರಮೇಶ್ವರನು ಅಂಗೈಯಗಲದಷ್ಟು ಭೂಮಿಯನ್ನು ಬೇಡಿದನು. ಅದಕ್ಕೆ ಆದಿಗೊಂಡನು | ಸ್ವಾಮಿಯೇ ನೀವು ಕೊಟ್ಟ ಭೂಮಿಯನ್ನು ನಾನೇಕೆ ಕೊಡಬೇಕು; ನೀವೇ ಬೇಕಾದಷ್ಟು ತೆಗೆದುಕೊಳ್ಳಿರೆಂದು ಹೇಳಲು, ಆವಾಗ್ಗೆ ಪರಮೇಶ್ವರನು ಎಲೋ ನರನೇ ಅದು ನಿನ್ನದಿರುವುದು, ನೀನೇ ಕೈಯೆತ್ತಿಕೊಡು ಎನ್ನಲು ಆವಾಗ್ಗೆ ಆದಿಗೊಂಡನು ಅಂಗೈಯಗಲ ಭೂಮಿಯನ್ನು ದಾನವಾಗಿ ಕೊಟ್ಟನು. ಆವಾಗ್ಗೆ ಪರಮೇಶ್ವರನು ಪಾರ್ವತಿಯು ಇಬ್ಬರೂ ಅರೇ ಅಂಗೈ ಭೂಮಿಯಲ್ಲಿ ಕೈಯಲ್ಲಿದ್ದ ತ್ರಿಶೂಲದಿಂದ ಗುಹೆಯನ್ನಗೆದು ಹುತ್ತವನ್ನು ಮಾಡಿ, ಅಷ್ಟೂ ಕುರಿಗಳನ್ನು ಹುತ್ತದಲ್ಲಿ ತುಂಬಿ, ಕಂಬಳಿಯಿಂದ ಕದವನ್ನು ಮಾಡಿ, ಬೀಗವನ್ನು ಹಾಕಿ, ಪಾರ್ವತಿಯ ಮೂಗಿನಲ್ಲಿದ್ದ ಮೂಗತಿಯನ್ನು ಕೀಲಿ ಮುದ್ರೆಯನ್ನು ಮಾಡಿದರು. ಅದೇ ಮೂಗುತಿಯು ಮುತ್ತಿಲ ಮರವಾಯಿತು. ಅಷ್ಟು ಮಾಡಿ ಕೈಲಾಸಕ್ಕೆ ತೆರಳಿದರು.

ಪದ :

ಆದಿಯಲ್ಲಿ ನೋಡಯ್ಯಾ ಆದಗೊಂಡ ಶರಣನು ।
ಆದಿಗೊಂಡ ಶರಣಗೆಲ್ಲೊ ಸತಿಯಳು ನಿಂಗವ್ವನು ।
ಆದಿಗೊಂಡನ ಮಕ್ಕಳೈಯಾ ಅರುಮಂದಿ ಮಕ್ಕಳಿನ್ನು ।
ಅದರಾಗೊಬ್ಬವ ಕಿರಿಯ ಮಗನು ತಮ್ಮ ಭೂಮಿಯಲ್ಲಿ ಬಾಳೇವನು ।
ಭೂಮಿಯಲ್ಲಿ ನೇಗಿಲು ಹೊಡೆಯುವಾಗ ಹುತ್ತಕ್ಕೆ ಹಚ್ಚಿ ನೇಗಿಲ ಹೊಡೆದಿದ್ದಾನು ॥
ಅದೇ ಹುತ್ತದಲ್ಲಿ ನೋಡಲ್ಲಯ್ಯಾ ಕುರಿಗಳು ಕಡಲೇ ಬಂದಾವಿನ್ನು ।
ಅದನ್ನು ನೋಡಿ ಗಾಬರಿಯಾಗಿ ಹೊಲದಲ್ಲಿದ್ದ ಕಸವನ್ನು ।
ಹುತ್ತದ ಬಾಗಿಲಿಗೆ ಕಸವಗೆದು ಬೆಂಕಿಯನ್ನು ತಾ ಮಾಡಿದನು ।
ಅದೇ ಬೆಂಕಿಯಲ್ಲಿ ಒಂದೊಂದು ಕುರಿಗಳು ಪಾರಾಗಿ ಕಡೆಕ ಬಂದಾವಿನ್ನು ।
ಬೆಂಕಿಯ ಜಳಾ ತಾಕಿದ ಕುರಿಗಳು ಹಂಡಾ ಬಂಡಾ ಆದಾವಿನ್ನು ।
ಅದನ್ನು ನೊಡಿ ಘಾಬರಿಯಾಗಿ ಬಹಳ ಚಿಂತಿ ಮಾಡಿದನೋ ।
ಮನೆಯಲ್ಲಿದ್ದ ತಂದೆ ತಾಯಿಗೆ ಹೇಳದಲೇ ತಾ ಹೊರಟಾನೋ ।
ಹೋಗಿ ಹೋಗಿ ಘೋರಾರಣ್ಯದೊಳಗ ಘಾಬರಿಯಾಗಿ ನಿಂತಾನೋ ॥

ವಚನ :

ಕುರಿಗಳನ್ನು ಬೆನ್ನತ್ತಿ ಹೋಗಲು ಎಡರು ಮೂರು ದಿವಸ ಅನ್ನವಿಲ್ಲದಲೇ ಬಳಲುವದನ್ನು ಪರಮೇಶ್ವರನು ಕಂಡು ಅವನು ಇದ್ದಲ್ಲಿಗೆ ಬಂದು ಕುರಿ ಹಾಲನ್ನು ಹಿಂಡಲಿಕ್ಕೆ ಕಲಿಸಿ, ಹಾಲು ಕಾಸಲಿಕ್ಕೆ ಕಲ್ಲಿಗೆ ಕಲ್ಲು ಕಡಿದು ಬೆಂಕಿಯನ್ನು ಮಾಡಿ ಗಿಣ್ಣವನ್ನು ಕಾಸಿದನು. ಇದರಂತೆ ಮಾಡಿಕೊಂಡು ನೀನು ಬದುಕೆಂದು ಹೇಳಿ ಕೈಯಲ್ಲಿದ್ದ ತ್ರಿಶೂಲವನ್ನು ಬಡಿಗೆಯ ಮಾಡ, ತನ್ನ ಜೋಳಗಿವಟ್ಟೆ ಚೀಲಮಾಡಿ ಭೂಮಿಯನ್ನು ಬಡಿದು ಡೋಣಿಯನ್ನು ಮಾಡಿ ಉಣಿಸಿ ನೀನು ನನ್ನನ್ನು ಯಾವಾಗ್ಯ ಧ್ಯಾನ ಮಾಡುವಿಯೋ ಆವಾಗ್ಗೆ ಬರುವೆನೆಂದು ವಚನ ಕೊಟ್ಟು ಕೈಲಾಸಕ್ಕೆ ಹೊರಟು ಹೋದನು. ಮುಂದೆ ಒಂದಾನೊಂದು ದಿವಸ ಬೆಂಕಿಯು ಸಿಗದಿರಲು ಅತ್ತಿತ್ತ ನೋಡುವಷ್ಟರಲ್ಲಿ, ಘೋರಾರಣ್ಯದಲ್ಲಿ ಹೊಗೆ ಹಾಯುವುದನ್ನು ಕಂಡು ಅಲ್ಲಿಗೆ ಬಂದನು. ಅಲ್ಲಿ ಸುಂದರ ಸ್ತ್ರೀಯನ್ನು ಕಂಡು, ಬೆಂಕಿಯನ್ನು ಕೇಳಲು ಯಾತಕ್ಕೆಂದು ಸ್ತ್ರೀಯಳು ಪ್ರಶ್ನೆ ಮಾಡಲು, ಗಿಣ್ಣವನ್ನು ಕಾಸುವೆನೆಂದು ಹೇಳಿದನು. ಅವಳು ಆಗ್ಗೆ ನನಗೂ ಗಿಣ್ಣವನ್ನು ಕೊಟ್ಟರೆ ಬೆಂಕಿಯನ್ನು ಕೊಡುವೆನೆಂದು ಹೇಳಿ ಬೆಂಕಿಯನ್ನು ತಂದಳು. ಮರುದಿನ ಗಿಣ್ಣವನ್ನು ಕೊಟ್ಟು ಆಕೆಯ ಸಮಾಚಾರ ಕೇಳಿದನು. ಆವಾಗ್ಗೆ ಸ್ತ್ರೀಯಳು ಹೇಳುದುದೇನಂದರೆ, ನನ್ನನ್ನು ಸುಮಲಿಯೆಂಬ ರಾಕ್ಷಸಿಯು ತಂದು ಇಲ್ಲಿ ಇಟ್ಟಿರುವದು. ನಾನು ದೊಡ್ಡ ರಾಜನ ಮಗಳು. ಆಗಲಿ, ನೀನು ಹೋಗು ರಾಕ್ಷಿಯು ಬರುವ ವೇಳೆಯಾಯಿತು. ಸಿಕ್ಕರೆ ನುಂಗೀತು ಎಂದು ಹೇಳಿ ಕುರಿ ಹಿಂಡಿಗೆ ಕಳಿಸಿದಳು. ಅಷ್ಟರಲ್ಲಿ ರಾಕ್ಷಸಿಯು ಬಂದು ಇಲ್ಲಿ ಹೊಸಬರಾರು ಬಂದಿದ್ದಾರೆಂದು ನುಡಿಯಿತು. ಆವಾಗ್ಗೆ, ಆ ಸ್ತ್ರೀಯು ಯಾರೂ ಇಲ್ಲ ಎಂದು ಹೇಳಿ, ತಾನು ನೀನು ಹೋದ ಮೇಲೆ ನಾನು ವಟ್ಟಾಕಿ ನೀನು ಬರುವೆಯೊ ಇಲ್ಲವೋ ಯೆಂಬ ಬಗೆ ಹೇಗೆ ನನಗೆ ನಿನ್ನ ಮರಣವನ್ನು ತಿಳಿಸಿದರೆ ಗೊತ್ತಾಗುವುದೆಂದು ಕೇಳಿದಳು. ಆವಾಗ್ಗೆ ಆ ಹುಚ್ಚಿ ರಾಕ್ಷಿಯು ತನ್ನ ಮರಣದ ಸುದ್ದಿಯನ್ನು ತಿಳಿಸಿತು. ಮರುದಿವಸ ಮತ್ತೆ ಬೇಟೆಗೆ ಹೋಯಿತು. ಇತ್ತ ಕುರುಬನು ಬರಲು ಅವನಿಗೆ ರಾಕ್ಷಿಯು ಮರಣವನ್ನು ತಿಳಿಸಿದಳು. ಆಗ್ಯೆ ಕುರುಬನು ರಾಕ್ಷಿಯ ಮರಣ ಇದ್ದ ಪಕ್ಷಿಯ ಹಿಡಿದು ಕೊಂದು ಬಿಟ್ಟನು. ಆವಾಗ್ಗೆ ಹೋದ ರಾಕ್ಷಸಿಯು ಅಲ್ಲಿಯೇ ಸತ್ತು ಬಿದ್ದಿತು. ಇತ್ತ ಆ ಸ್ತ್ರೀಯನು ಕರೆದುಕೊಂಡು ಕುರಿ ಹಿಂಡಿಗೆ ಬಂದು ಆ ಪರಮೇಶ್ವರನ ಧ್ಯಾನ ಮಾಡಲು ಪರಮೇಶ್ವರನು ಬಂದು, ಸ್ತ್ರೀಯಳ ವೃತ್ತಾಂತವನ್ನು ಕೇಳಿ ಕೈಲಾಸದಿಂದ ದೇವಾನುದೇವತೆಗಳನ್ನು ಕರೆಸಿ ಹಾವಿನ ಹಂದರ ಹಾಕಿಸಿ ಚೋಳಿನ ತೋರಣ ಕಟ್ಟಿ ಅದೇ ಕುರಿಯ ಉಣ್ಣೆಯ ಕಂಕಣವನ್ನು ಕಟ್ಟಿ ಲಗ್ನವನ್ನು ಮಾಡಿ ಕುರಿ ಉಣ್ಣೆಯನ್ನು ಕತ್ತರಿಸಲಿಕ್ಕೂ

ನೂಲಲಿಕ್ಕೂ ನೇಯುವದನ್ನು ಸಹ ಕಲಿಸಿ ಕೈಲಾಸ್ಕೆ ತೆರಳಿದರು. ಇಂಥಾ ಪವಾಡವನ್ನು ಗೆದ್ದು ಚೆಲುವೆಯಾದ ಚನ್ನಮ್ಮನನ್ನು ಲಗ್ನವಾದಂಥಾ ಪದ್ಮಗೊಂಡನೆಂಬವನೆ ಒಬ್ಬ ಕುರುಬನು.

**ಪದ :**

ಹಡಪದ ಹಂಪಯ್ಯ ಶರಣ ಬಡ ಹೋರಿ ಬ್ರಹ್ಮಯ್ಯನೋ
ಮೂಳ ಮಾರಗಿ ಮಾರಯ್ಯನವರ ಚಾರು ಚಾರಿಗೆ ಭಜಿಸುವೆನು
ಲೋಲಕಾರ ರಂಬೆವ್ವಾ ನೀಲಲೋಚನೆ ತಾಯವ್ವ
ಮೃತ್ಯುನಾಗಿ ತಾ ಡೊಳ್ಳು ಬಾರಿಸ್ಯಾನು ನರ್ತನಂದದಿ
ಕುಣಿಯವೊನೊ
ವೀರ ಗೊಲ್ಲಾಳ ರಾಯನ ಕಥಿಯ ಹೇಳುವೆನು ಭಕ್ತಿಯಿಂದ
ಪೂರ್ಣ ನೀವು ಕೇಳಿರೆಂದು ತೋರಿ ಜನಕ ನಾ ಹೇಳುವೆನು
ದಡ್ಡಿಯಲ್ಲಿ ಹುಗಿದ ಹೊನ್ನು ಅಡ್ಡಗಾಳಿಗೆ ತೋರಿದನು
ಅಡವಿಯ ಹುಲ್ಲು ಮೇಯಿಸುವನು ಅವಾ ಮಡುವಿನ
ನೀರು ಕುಡಿಸುವನು
ಮುಂದಕೆಲ್ಲ ಕುರಿಗಳ ಹೊಡಿದು
ಹಿಂದಿಂದ ನಾಯಿ ಕರಿಯುವನು

**ವಚನ :**

ವೀರಗೊಲ್ಲಾ ಚರಿತ್ರೆಯನ್ನು ಒಂದಷ್ಟು ವಿವರಿಸುವೆನು ಚಂದಾಗಿ ಕೇಳಿರಿ. ಕುರುಬನು ದಾರಿಯಲ್ಲಿ ಕುರಿಗಳನ್ನು ಕಾಯುತ್ತಾ ನಿಂತಿರಲು ಹತ್ತು ಮಂದಿ ಜಂಗಮರು ಶಿಸ್ತಿನಿಂದ ಹರ ಹರಯೆನ್ನುತ್ತ ಕಾಶೀ ನಿಶ್ವಲಿಂಗನ ಜಾತ್ರೆಗೆ ಪೋಗುತ್ತಿರಲು ಹರ ಹರಯೆನ್ನುವ ಶಬ್ದವು ತನಗೆ ಕೇಳಿದಾಕ್ಷಣ ಓಡಿಬಂದು ಜಂಗಮರನ್ನು ನೋಡಿ ಪಾದಕ್ಕೆ ಬಿದ್ದು ಕೇಳಿದ್ದೇನಂದರೆ - ಜಂಗರೇ ತಾವು ಎಲ್ಲಿಗೆ ಪೋಗುದಿರಿ ಎಂದು ಕೇಳಿದಾಕ್ಷಣ ಜಂಗಮರು ಹೇಳಿದರು - ಅಪ್ಪಾ ನಾವು ಕಾಶಿ ವಿಶ್ವನಾಥನ ಜಾತ್ರೆಗೆ ಹೋಗುತ್ತೇವೆ ಎನ್ನಲು ಆವಾಗ್ಗೆ ಜಂಗಮರು ದುಡ್ಡ ಕೊಟ್ಟರೆ ನಿನಗೆ ಲಿಂಗವನ್ನು ತರುತ್ತೇವೆ ಎನ್ನಲು, ಕುರುಬನು ದಡ್ಡಿಯಲ್ಲಿ ಹುಗಿದ ಹಣವನ್ನು ಜಂಗಮರಿಗೆ ಕೊಟ್ಟು ಬಿಟ್ಟನು. ಜಂಗಮರು ದುಡ್ಡು ತೆಗೆದುಕೊಂಡು ಹೋಗಿ ಕಾಶಿ ವಿಶ್ವನಾಥನ ಜಾತ್ರೆಯನ್ನು ಶಿಸ್ತಿನಿಂದ ಮಾಡಿ ಇವನ ಮರೆತು ತಿರುಗಿ ಬಂದರು. ದಾರಿಯನ್ನು ಕಾಯುತ್ತಾ ಇದ್ದ ಕುರುಬನು ಇವರನ್ನು ನೋಡಿ ಓಡಿ ಬಂದು ಪಾದಕ್ಕೆ ಬಿದ್ದನು. ಆವಾಗ್ಗೆ ಜಂಗಮರು ಲಿಂಗವನು ಮರತವೆಂದು, ಅವನ ಕುರಿಯ ಹಿಕ್ಕಿಯನ್ನು ತೆಗೆದುಕೊಂಡು ಅವನಿಗೆ ಗುರುತು ಆಗದ ಹಾಗೆ. ಇದೆ ನಿನ್ನ ಲಿಂಗವೆಂದು ಕೊಟ್ಟು ತಮ್ಮ ಸ್ಥಳಕ್ಕೆ ಹೋದರು. ಇತ್ತ ಕುರುಬನು ನಿಷ್ಠೆಯಿಂದ ಕಸದ ಕಟ್ಟೆಯನ್ನು ಮಾಡಿ, ಅಷ್ಟು ಕುರಿಯ ಹಾಲನ್ನು ಹಿಂಡಿ ಲಿಂಗಕ್ಕೆ ಎರೆಯಿತ್ತಿದ್ದನು. ಮೂರು ತಿಂಗಳವರೆಗೆ ಮನೆಗೆ ಹಾಲು ಬಾರದಿರಲು ಅವನ ತಂದೆಯಾದ ಕಾಟಕೂಟನೆಂಬವನು ಮನದಲ್ಲಿ ಸಿಟ್ಟನ್ನು ತಾಳಿ ರೂಪ ಕೊಡಲಿಯನ್ನು ತೆಗೆದುಕೊಂಡು ಕುರಿ ಹಿಂಡಿಗೆ ಬರಲು, ದಡ್ಡಿಯಲ್ಲಿ ಮೂರು ಆಳು ಪ್ರಮಾಣ ಹಾಲು ಹೆಪ್ಪಾಗಿ ಕೆನೆಗಟ್ಟಿದುದನ್ನು ಕಂಡು ಮನದಲ್ಲಿ ಉಗ್ರವನ್ನು ತಾಳಿ, ಎಲೋ, ನೀಜಾತ್ಮನೇ ನನ್ನ ಮನೆ ಹಾಳುಮಾಡಿದೆಯೆಂದು ಆ ಕಟ್ಟೆಯನ್ನು ಕೆರುವುಗಾಲಿಲೇ ಒದ್ದು ಬಿಟ್ಟನು. ಆವಾಗ್ಗೆ ಮಗನು ನನ್ನ ಇಷ್ಟಲಿಂಗವನ್ನು ಒದ್ದನೆಂದು ಕೋಪಾರೂಢನಾಗಿ ತಂದೆಯ ಕೈಯಲ್ಲಿದ್ದ ಕೊಡಲಿಯನ್ನು ಕಸಿದುಕೊಂಡು ತಂದೆಯ ಶಿರವನ್ನು ಕಡಿದು ಬಿಟ್ಟನು. ಆಗ್ಗೆ ಪರಮೇಶ್ವರನಿಗೆ ಅರಿವು ಆಗಿ ಅದೇ ಕುರಿಯ ಹಿಕ್ಕಿಯಲಿ ಪ್ರತ್ಯಕ್ಷವಾಗಿ ನಿಜರೂಪವನ್ನು ತಾಳಿ ಅವನ ಭಕ್ತಿಗೆ ಮೆಚ್ಚಿ ಅವನ ತಂದೆಯ ಪಡೆದು ಮಾಯವಾದನು. ಇಂತಹ ಈಶ್ವರನನ್ನು ಒಲಿಸಿದಂತ ವೀರಗೊಲ್ಲಾಳನೆಂಬುವನೇ ಒಬ್ಬ ಕುರುಬನು.

**ಪದ :**

ಆದಿಗೊಂಡನ ಮಕ್ಕಳ ಚರಿತ್ರವ ನಿತ್ಯ ನೇಮದಿಂದ ಹೇಳುವೆನು ।
ಒಲಿದ ಶರಣರ ಮಹಿಮೆಯನ್ನು ಸಾರಿ ಸಭಾಕ ನಾ ಹೇಳುವೆನು ।
ಮೃತ್ಯು ಲೋಕದೊಳು ಮಾಡಿದ ಮಹಿಮೆಯ ಪ್ರೀತಿಲಿಂದ ।
ಕೊಂಡಾಡುವೆನು॥

**ವಚನ :**

ಕೇಳರಿ – ಅಜ್ಜ ಆದಿಗೊಂಡ, ಮುತ್ತ್ಯಾ ಮುದ್ದುಗೊಂಡ ಆದಿಗೊಂಡನ ಮಕ್ಕಳು ಆರುಮಂದಿ. ಅವರು ಯಾರ್‍ಯಾರು ಎಂದರೆ, ಅಮರಗೊಂಡ, ಶಿವಗೊಂಡ, ಶಿದ್ದಗೊಂಡ, ಪಡ್ಡಿಗೊಂಡ, ಮಿಂಚುಗೊಂಡ ಕಡಿಯ ಹುಟ್ಟಿದನಾ ಉಂಡಾಡ ಪದ್ಮಗೊಂಡ; ಹೀಗೆ ಆರು ಮಂದಿ ಮಕ್ಕಳಿಗೆ ಆರು ಕಂಕಣಗಳು ಹುಟ್ಟಿದವು. ಅವು ಯಾವು ಯಾವುವೆಂದರೆ ಹತ್ತಿಕಂಕಣ ಉಣ್ಣೆ ಕಂಕಣ, ನಾರಗಂಕಣ, ಅಳಿಗಾರ, ಬಳಿಗಾರ, ಬಿರಂಚಿ ಎಂಬ ಆರು ಕಂಕಣಗಳು ಹುಟ್ಟಿದವು. ಆರು ಕಂಕಣದಿಂದ ೨೩ ಕುಲಗಳು ಹುಟ್ಟಿದವು. ಈ ಇಪ್ಪತ್ತಮೂರು ಕುಲಕ್ಕೆ ಶೆರೇವಾಡ ಸಿದ್ಧೇಶ್ವರನೇ ಗತಿಯೋ !

* * *

## ಮಾಳಿಗರಾಯನ ಚರಿತ್ರೆ

ಶಿವನಮಗಳು ಲಾಯವ್ವ ಮಾಳಪ್ಪ ಹೂವಿಗೆ ಕಾವಲೈದಾಳೋ
ಮುಂದ ಮಾರ ಪೈಣಕ ಮಾಳಪ್ಪ ಬೆಳ್ಳಿ ಪರ್ವತಾ ಆಯಿದಾವೊ
ಬೆಳ್ಳಿಬೆಟ್ಟ ದವಳ ಮಾಳಪ್ಪ ಕಡ್ಡಿರಾಜನ ಕಾವಲಿಯೊ
ಕಡ್ಡಿ ರಾಜನ ಕಾವಲಿ ಮಾಳಪ್ಪ ಹೂವಿಗೆ ಕಾವಲೈದಾನೊ
ಮುಂದ ಮಾರ ಪೈಣಕ ಮಾಳಪ್ಪ ಬಂಗಾರ ಪರ್ವತೈದಾವೊ
ಬಂಗಾರ ಬೆಟ್ಟದೊಳಗ ಮಾಳಪ್ಪ ಹೂಲಿ ರಾಜನ ಕಾವಲಿಯೋ
ಹೂಲೀ ರಾಜನ ಕಾವಲೀ ಮಾಳಪ್ಪ ಹೂವಿಗೆ ಕಾವಲೈದಾನೊ
ಮುಂದ ಮಾರ ಪೈಣಕ ಮಾಳಪ್ಪ ಕೈಲಾಸ ಕಡಿ ಬಾಗಿಲೋ
ಕೈಲಾಸ ಕಡಿ ಬಾಗಿಲದೊಳಗ ಬಸವಣ್ಣದೇವರ ಕಾವಲಿಯೋ
ಬಸಣ್ಣದೇವರ ಕಾವಲಿ ಮಾಳಪ್ಪ ಹೂವಿಗೆ ಕಾವಲಿಯದಾವೊ
ಕೈಲಾಸದೊಳಗ ಯೋಳು ಬಾಗಿಲಕ ಯೋಳು ಮಂದಿ ಯೋಳು ದೈತಾರೋ
ಯೇಳು ಮಂದಿ ದೈತಾರು ಮಾಳಪ್ಪ ಹೂವಿಗೆ ಕಾವಲೈದಾರೋ
ಕೈಲಾಸದೊಳಗೋ ಮಾಳೆ ಹಾಲು ಮತದ ಭಾವೇಳೋ
ಹಾಲುಮತದ ಭಾವಿಯ ವಳಗ ಕಪ್ಪಿ ಕಲಕದ ಶೀತಾಳೋ
ಹಾಲುಮತದ ಭಾವಿಯ ವಳಗ ಶೀತಾಳ ಗಂಗವ್ವನ ಕಾವಲಿಯೋ
ಕಾಳಿಂಗರಾಯನ ತೋಟದೊಳಗ ಕರಿಯ ಮಲ್ಲಿಗೆ ಆಯಿದಾವೊ
ಕರೇಮಲ್ಲಿಗೆ ಹೂವಿಗೆ ಮಾಳಪ್ಪ ಯೋಳು ದೆಡಿ ಕಾಳಿಂಗ
ಯೋಳು ಹೆಡಿ ಕರಿ ಕಾಳಿಂಗ ಮಗನ ಹೂವಿಗೆ ಸುತ್ತ ಬಿಗದಾನೊ

ಹರಹರನೂ ನನ ಕರಿಯದೇವರು ಹೂವಿನ ಕೂನಾ ಹೇಳಿದನೊ
ಮನಿಗ್ಯಾನಪ್ಪ ನನ ಮಾಳಿಗರಾಯ ಮಾತವರೇಳ್ಯಾನೋ
ಇಂತು ಮಾತನವರೇಳ್ಯಾನು ಮಾಳಪ್ಪ ಒಳ್ಳಿದೊಳ್ಳೆ ದಂಡಾನೋ
ಆಳೆಳೊ ಮಾಳಪ್ಪಾನೊ ಗುರುವಿನ ಪಾದಕೆರಗಿದನೊ
ಕಾಲ ಜೋಡಿಸಿ ಕರಗಳ ಮುಗಿದು ಶಿರವಬಾಗುತ ಹೇಳಿದನೊ
ನೀ ನನ ಬೆನ್ನಿಲೇ ಇದ್ದರೂ ಗುರುವೆ ಕೈಲಾಸಕ ಕೈ ಕೊಟ್ಟೆನೊ
ನೀ ನನ್ನ ಬೆನ್ನಿಲಿದ್ದರೆ ಗುರುವೇ ಸಮುದ್ರಕ್ಕೆ ಇದಿರೀಸುವೆನೊ
ವಡ್ಡಿರಾಯರ ಮಗ ಮಾಳಾ ವಳ್ಳೆದೊಳ್ಳೆದಂದಾನೊ
ದೊಡ್ಡದೇವರ ಪೂಜೇರಿ ಜಳಕ ನೇಮವ ಮಾಡುವನೊ
ಕ್ಯಾವಿಯವುಟ್ಟಾನು ಕ್ಯಾವಿಯ ಹೊದ್ದಾನು ಯನ್ನೊಡಿಯ ಮಾಳಪ್ಪನೊ
ಹಬ್ಬ ಮುಂಡಾಸಾ ಮಾಳಿಗರಾಯ ಬಿಗಬಿಗದ ತಾ ಸುತ್ತ್ಯಾನೊ
ಮೂರು ಹೇಡಿನ ಜ್ಯಾಡಿ ಮಾಳಪ್ಪ ಮುರದ ಗೊಂಡಿಯ ಮಾಡ್ಯಾನೊ
ನಡುವಿಗೆ ನಾಗಬಂದು ಹಾಕ್ಯಾನು ಮಾಳಪ್ಪ ಚಾಕ ಬಿಳಿ ಅಂಗಿ ತೊಟ್ಟಾನೊ
ವಡ್ಡಿರಾಯರಮಗ ಮಾಳಾತೆಯೇನು ತಯಾರಾಗ್ಯಾನೊ
ದೊಡ್ಡದೇವರ ಪೂಜೇರಿ ನಮ್ಮಪ್ಪ ತಾಯೇನು ತಯಾರಾಗ್ಯಾನೊ
ಕರಿಯದೇವರ ವರವಿನ ಆಳೋ ಗುರುವಿನ ಬಳಿಯಲಿ ಬಂದಾನೊ
ಗುರುವಿನ ಮುಂದಲ ಹಿಡಿ ಬಂಡಾರ ಉಡಲೊಳು ಆಗ ಕಟ್ಟುವನೊ
ಇಲ್ಲಿಗೆ ಹರಹರ ಇಲ್ಲಿಗೆ ಶಿವಶಿವ ಇಲ್ಲಿಗೆ ಇದು ವಂದ ಸಂದೇಳೊ
ಸಂದಿನ ಪದಗಳ ವಂದಿಸಿ ಹೇಳುವೆ ತಂದಿ ಮಾಳಗರಾಯಾನೊ
ದೇವರ ಬಂದಾವ ಬನ್ನೀರೇ -

ಗುರುವಿನ ಮುಂದಿನ ಹಿಡಿ ಬಂದಾರಾ ಉಡಲೋಳು ಆಗ ಕಟ್ಟುವನೊ
ಹೂವಿನ ಕರಡೀ ಬಗಲಿಗೆ ಹಾಕ್ಯಾನು ಶೀತಾಳ ಬಿಂದಿಗಿ ಹೆಗಲೀಗೊ
ಆಳೇಳೊ ಮಾಳಪ್ಪನೊ ತಾಯೇನು ತೈಯಾರಾಗ್ಯಾನೊ
ತಾಯೇನು ತೈಯಾರಾಗ್ಯಾನು ಮಾಳಪ್ಪ ಗುರುವಿನ ಅಪ್ಪಣೆ ಪಡಿದಾನೊ
ಗುರುವಿನ ಅಪ್ಪಣೆ ಪಡಿದಾನು ಮಾಳಪ್ಪ ಗುರುವಿನ ಮಠದ ವಳಗಲ್ಲೋ
ಗುರುವಿನ ಮಠದ ವಳಗ ಮಾಳಪ್ಪ ಕೀಲಿ ಮುದ್ರಿಯ ಹಾಕ್ಯಾನೊ
ಸುತ್ತಲೀ ದ್ವಾರ ಬಾಗಿಲವೆಲ್ಲಾ ಬೀಗಬಂಧನ ಹಾಕ್ಯಾನೊ
ಬೀಗ ಬಂಧನ ಮಾಡ್ಯಾನು ಆಗ ಗುರುವಿನ ಮಠವ ಬಿಟ್ಟಾನೊ
ಗುರುವಿನ ಮಠವ ಬಿಟ್ಟಾನು ಮಾಳಪ್ಪ ಕ್ವಾಣಿಗನೂರ ಬಿಟ್ಟಾನೊ
ಕ್ವಾಣಿಗನೂರ ಸೀಮಿಯ ವಳಗ ಮೂರು ಪೈಣವ ಹೊಗ್ಯಾನೊ
ಎತ್ತರ ನಾಡೊ ತ್ರಿಬೇತ ದೇಶೊ ಮೂರು ಪೈಣವ ಹೋಗ್ಯಾನೊ
ಕೇದಾರಲಿಂಗ ಹಿಮಾಲಯ ಬೆಟ್ಟ ಮೂರು ಪೈಣವ ಹೋಗ್ಯಾನೊ
ಮುಂದ ಮೂರ ಪೈಣಕ ಮಾಳಪ್ಪ ಶೀಲಾ ನದಿಗೆ ಬಂದಾನೊ
ಶೀಲಾ ನದಿಯ ದಂಡೀಲೆ ಶಿವನ ಮಗಳು ಲಾಯವ್ವ
ಶಿವನ ಮಗಳು ಲಾಯವ್ವ ಮಾಳನ ಕಣ್ಣೀಲೆ ಕಂಡಾಳೊ

ಮಾಳನ ಕಣ್ಣೀಲೆ ಕಂಡಾಳು ಲಾಯವ್ವ ದಾರಿಗೆ ಅಡ್ಡ ಬಂದಾಳೋ
ದಾರಿಗೆ ಅಡ್ಡ ಬಂದಾಳು ಲಾಯವ್ವ ಮಾತನಾಡಿಸಿ ಕೇಳ್ಯಾಳೊ
ಯಾವ ನಾಡಿನ ಕುರುಬಾನೋ ನೀ ಯಾವ ದೇಶದ ಕುರುಬಾನೊ
ಯಾವ ದೇಶದ ಕುರುಬಾನು ನೀ ಇಲ್ಲಿಗೆ ಯತಕ ಬಂದವನೊ
ಇಲ್ಲಿಗೆ ಯಾತಕೆ ಬಂದವನು ನೀ ಎಲ್ಲಿಗೆ ಹೋಗತಿ ಅಂಬುವಳೊ
ಮನಿಗೇನಪ್ಪ ನನ ಮಾಳಿಗರಾಯ ಇಂತು ಮಾತವ ಕೇಳ್ಯಾನೊ
ಇಂತು ಮಾತವ ಕೇಳ್ಯಾನು ಮಾಳಪ್ಪ ಲಾಯವ್ವಗ ಯೇನಂತ ಹೇಳುವನೊ
ಬಾರು ಬಾರಲಿಯಪ್ಪಾ ನಾ ಯೇನು ಹೇಳಲಿ ಅಂತಾನೊ
ವಡ್ಡಿರಾಯರ ಮಗ ಮಾಳ ನಾ ದೊಡ್ಡ ದೇವರ ಪೂಜೇರಿ
ನನ್ನ ಗುರುವು ನೋಡ ನಮ್ಮವ್ವ ಬಗಸಜರದ ಬಾಗಶಾನೋ
ಬಗಸಬಾರದ ಬಾಗಶ್ಯಾನು ಬೇಡಬಾರದ ಬೇಡ್ಯಾನೋ
ಹುಳುವ ಮುಟ್ಟದ ಹೂವ್ವ ಬೇಡ್ಯಾನು ಕಪ್ಪಿಕಲಕದ ಶೀತಾಳೊ
ಮರ್ತ್ಯಲೋಕದೊಳಿಲ್ಲವೆಂದು ಕೈಲಾಸಕ ನಾ ಹೋಗುವೆನು
ಕರಿಯ ಮಲ್ಲಗಿ ಹೂವಿಗೆವ್ವಾ ನಾನು ಹೋಗುವೆನಂತಾನೊ
ಶಿವನ ಮಗಳು ಲಾಯವ್ವ ಇಂತು ಮಾತ ಕೇಳ್ಯಾಳೊ
ಇಂತು ಮಾತವ ಕೇಳ್ಯಾಳು ಲಾಯವ್ವ ಮಾಳಪ್ಪಗೇನಂತ ಹೇಳಿದಳೊ
ಕರಿಯ ಮಲ್ಲಗಿ ಹೂವಿಗೆ ಮಾಳಪ್ಪ ನನ್ನ ಕಾವಲಿ ಅಂತಾಳೊ
ನನ್ನ ಕಾವಲಿ ಅಂತಾಳು ಲಾಯವ್ವ ದಾರಿಯ ಬಿಡುವದಿಲ್ಲಂತಾಳೊ
ಮುನಿಗೆನಪ್ಪನನ ಮಾಳಿಗರಾಯ ಹಂಗದೊರದಂಗಿತಾನೊ
ಹಂಗದೊರದ ನಿಂತಾನು ಮಾಳಪ್ಪ ಭದ್ರ ಹೊಡೆದ ಕುಂತಾನೊ
ಮನಿಗ್ಯಾನಪ್ಪ ನನ ಮಾಳಿಗರಾಯ ಹ್ಯಾಂಗ ಮಾಡಬೇಕಂತಾನೊ
ಶಿವನ ಮಗಳು ಲಾಯವ್ವ ಮಾಳಪ್ಪಗೇನಂತ ಹೇಳಿದಳೋ
ವಡ್ಡಿರಾಯರ ಮಗ ಮಾಳನಂದೊಂದು ಮಾತು ಕೇಳಪ್ಪಾ
ದೊಡ್ಡ ದೇವರ ಪೂಜೇರಿ ನಮ್ಮಪ್ಪ ಇಂತು ಮಾತವ ಕೇಳ್ಯಾನೊ
ಇಂತು ಮಾತವ ಕೇಳ್ಯಾನು ಮಾಳಪ್ಪ ವಳ್ಳೆದೊಳ್ಳೆದೆಂದಾನೊ
ಇಲ್ಲಿಗೆ ಹರಹರ ಇಲ್ಲಿಗೆ ಶಿವಶಿವ ಇಲ್ಲಿಗೆ ಇದು ವಂದು ಸಂದೇಳೊ
ಸಂದಿನ ಪದ ವಂದಿಸಿ ಹೇಳುವೆನು ಮಾಳಿಗರಾಯನೊ
ದೇವರ ಬಂದಾವ ಬನ್ನೀರೇ -

ಶಿವನ ಮಗಳು ಲಾಯವ್ವಗ ಮಾಳಪ್ಪಗೇನಂತೆ ಹೇಳಿದಳೊ
ಇರ ಮಾಳಪ್ಪ ಯನ್ನೊಡಿಯಗಾಗ ಕೇಳಂದಾಳೋ ಲಾಯವ್ವನೊ
ಕ್ವಾಣಿಗನವರ ಮಠದಾಗಯ್ಯ ನಿನ್ನ ಗುರುವಿನ ಸಂಗಾಟೊ
ನಿನ್ನ ಗುರುವಿನ ಸಂಗಾಟ ಮಗನೇ ನನ್ನ ಪೂಜಿ ನೀ ಮಾಡಿದರೊ
ನನ್ನ ಪೂಜಿ ನೀ ಮಾಡಿದರ ನಿನ ಹೂವಿಗೆ ದಾರಿ ಬಿಟ್ಟೇನೊ
ಹೂವಿಗೆ ದಾರಿ ಬಿಟ್ಟೇನಿ ಮಾಳಪ್ಪ ಬಲಗೈ ಭಾಷೆ ಕೊಡಬಾರೊ
ವಚವಬೃಷ್ಟ ನೀ ಆಗಬಾರದೆಂದು ಗಟ್ಟ್ಯಾಗಿ ಹೇಳ್ಯಾಳು ಮಾಳಪ್ಪಗೊ

ಶಿವನ ಮಗಳು ಲಾಯವ್ವಗ ಯೇನಂತ ಹೇಳಿದ ಮಾಳಪ್ಪನೊ
ಬಾರುಬಿರ ಲಯವ್ವಾ ಮಾನು ಲೋಕದ ವಳಗವ್ವ
ಮಾನುಲೋಕದ ಒಳಗ ಲಾಯವ್ವ ನನ್ನ ಗುರುವಿನ ಮಟದಾಗೋ
ನನ್ನ ಗುರುವಿನ ಮಟದಾಗವ್ವಾ ತ್ರಿಕಾಲ ಪೂಜಿ ಆಗುವದೊ
ನನ್ನ ಗುರುವಿನ ಮಟದಾಗವ್ವ ನಿನ್ನ ಪೂಜಿ ನಾ ಮಾಡುವೆನೊ
ಕೊಟ್ಟ ವಚನವ ತಪ್ಪುವದಿಲ್ಲವೆಂದು ಘಟ್ಟಾಗಿ ಹೇಳಿದ ಲಾಯವ್ವಗೋ
ಶಿವನ ಮಗಳು ಲಾಯವ್ವಾಗ ಹೂವಿಗೆ ದಾರಿ ಬಿಟ್ಟಾಳೋ
ವಡಿರಾಯರ ಮಗ ಮಾಳಾಗ ಮುಂದ ಮೂರ ಪೈಣಾವೊ
ಮುಂದ ಮೂರು ಪೈಣಾಕಲ್ಲು ಬಿಟ್ಟಾವೊ ಬೆಳ್ಳಿ ಬೆಟ್ಟಾವೊ
ಬೆಟ್ಟಾವೊ ಬೆಳ್ಳಿ ಬೆಟ್ಟದೊಳಗ ಕಂಡಾನೊ ಕಡ್ಡಿ ರಾಜಾನೋ
ಕಂಡಾನೋ ಕಡ್ಡಿರಾಜ್ಯಾನೋ ಆಗ ದಾರಿಗಿ ಅಡ್ಡ ಬಂದಾನೋ
ಯಾವನಾಡಿದ ಕರುಬಾನೋ ನೀ ಯಾವ ದೇಶದ ಕುರುಬಾನೋ
ಯಾವದೇಶದ ಕುರುಬಾನೋ ನೀ ಎಲ್ಲಿಗೆ ಹೋಗತೀ ಅಂಬುವನೋ
ವಡ್ಡಿರಾಯರ ಮಗ ಮಾಳ ಇಂತು ಮಾತವ ಕೇಳ್ಯಾನೋ
ಇಂತು ಮಾತವ ಕೇಳ್ಯಾನೋ ಒಳ್ಳೆದೊಳ್ಳೆದಂದಾನೋ
ಕಡ್ಡಿರಾಜಗ ಮಾಳಿಗರಾಯು ಯೇನಂತ ಹೇಳಿದನೋ
ವಡ್ಡಿರಾಯರ ಮಗ ಮಾಳಾನು ದೊಡ್ಡದೇವರ ಪೂಜೇರೋ
ನನ್ನ ಗುರುವಿಗೆ ನೋಡಲ್ಲಯ್ಯ ಕರೇಮಲ್ಲಗಿ ಬೇಕೇಳೋ
ಕರೇಮಲ್ಲಗಿ ಹೂವಿನಾ ಕೈಲಾಸಕ ನಾ ಹೋಗುವೆನೋ
ಕಡ್ಡಿರಾಜನ ನೋಡಲ್ಲೈ ಇಂತು ಮಾತವ ಕೇಳ್ಯಾನೋ
ಇಂತು ಮಾತವ ಕೇಳ್ಯಾನಾಗ ಮಾಳಪ್ಪಗೇನಂತ ಹೇಳುವನೋ
ಕರಿಮಲ್ಲಿಗಿ ಹೂವಿಗೆ ಮಾಳಪ್ಪ ನನ್ನ ಕಾವಲಿ ಅಂತಾನೋ
ನನ್ನ ಕಾವಲೀ ಅಂತಾನಲ್ಲೊ ದಾರಿಯ ಬಿಡೊದಿಲ್ಲಂತಾನೋ
ದಾರಿಯ ಬಿಡೊದಿಲ್ಲಂತಾನಲ್ಲೊ ದಾರಿಯ ಬಿಡೊದಿಲ್ಲಂತಾನೋ
ದಾರಿಯ ಬಿಡೊದಿಲ್ಲಂತಾನಲ್ಲೊ ದಾರಿಯ ಅಡ್ಡಗಟ್ಟುವನೋ
ಮನಿಗ್ಯಾನಪ್ಪ ನನ ಮಾಳಿಗರಾಯ ಹ್ಯಂಗ ಮಾಡಬೇಕಂತಾನೋ
ಹ್ಯಾಂಗ ಮಾಡಬೇಕಂತಾನು ಮಾಳಿಗರಾಯ ಗುರುವಿನ ಧ್ಯಾನಾ ಮಾಡುವನೋ
ನೆಂಬಂದ ಮಾತಿಗೆ ನಂಬಿದೆನೊ ನಾ ನೆಚ್ಚಂದ ಮಾತಿಗೆ ನೆಚ್ಚಿದನೋ
ಕೈಲಾಸ ನಡದರ್ಯಾಗಯ್ಯ ಎಂಥ ಬಂಧನಕಹಾಕಿದನೋ
ಮನಿಗ್ಯಾನಪ್ಪ ನನ ಮಾಳಿಗರಾಯ ಗುರುವಿನ ಧ್ಯಾನಾ ಮಾಡುವನೋ
ಇಲ್ಲಿಗೆ ಹರಿಹರ ಇಲ್ಲಿಗೆ ಶಿವಶಿವ ಇಲ್ಲಿಗೆ ಇದು ಒಂದು ಸಂದೇಳೋ
ಸಂದಿನ ಪದಗಳ ವಂದಿಸಿ ಹೇಳುವೆ ತಂದಿ ಮಾಳಿಗರಾಯಾನೋ
ದೇವಾರು ಬಂದಾವು ಬನ್ನೀರೇssss

ಕಡ್ಡಿರಾಜನ ನೋಡಲ್ಲಯ್ಯಾ ಮನಿಗೇ ನೀ ಮಾಳಪ್ಪಾಗೋ
ಮನಿಗೇನಿ ಮಾಳಪ್ಪಗಾಗ ಏನಂತ ಆಗ ಹೇಳಿದನೋ

ಬಾರು ಬಾರೋ ಮಾಳಿಗರಾಯ ನಂದೊಂದು ಮಾತು ಕೇಳಂದಾನೋ
ಮರ್ತ್ಯಲೋಕದ ಒಳಗ ಮಾಳಪ್ಪ ನಿನ್ನ ಗುರುವಿನ ಸಂಗಾಟೋ
ನಿನ್ನ ಗುರುವಿನ ಸಂಗಾಟ ಮಾಳಪ್ಪ ನನ್ನ ಪೂಜಿ ನೀ ಮಾಡಿದರೋ
ನನ್ನ ಪೂಜಿ ನೀ ಮಾಡಿದರ ನಿನ್ನ ಹೂವಿಗೆ ದಾರಿ ಬಿಟ್ಟೇನೋ
ಹೂವಿನ ದಾರಿ ಬಿಟ್ಟೇನಿ ಮಾಳಪ್ಪ ಬಲಗೈ ಭಾಷೆ ನೀ ಕೊಡಬಾರೋ
ಮನಿಗ್ಯಾನಪ ನನ ಮಾಳಿಗರಾಯ ಬಲಗೈ ಭಾಷೆ ಕೊಟ್ಯಾನೋ
ಕಡ್ಡಿರಾಜನ ನೋಡಲೈಯ್ಯಾ ಹೂವಿಗೆ ದಾರಿ ತಾ ಬಿಟ್ಟಾನೋ
ಮನಿಗ್ಯಾನಪ್ಪ ನನ ಮಾಳಿಗರಾಯ ದಾಟಿದನೋ ಬೆಳ್ಳಿ ಬೆಟ್ಟಾವೋ
ದಾಟಿದನೋ ಬೆಳ್ಳಬೆಟ್ಟವ ಮಾಳಪ್ಪ ಮುಂದ ಮೂರ ಪೈಣಾವೋ
ಮುಂದ ಮೂರ ಪೈಣಾವೊ ಕಲ್ಲೆ ಬಿಟ್ಟಾವೊ ಬಂಗಾರ ಬಿಟ್ಟಾವೋ
ಬಂಗಾರ ಬೆಟ್ಟದೊಳಗಲ್ಲೈಯಾ ಹುಲಿರಾಜನು ನೋಡ್ಯಾನೋ
ಹುಲಿರಾಜನು ನೋಡ್ಯಾನಲ್ಲೋ ದಾರಿಗಿ ಅಡ್ಡ ಬಂದಾನೋ
ದಾರಿಗಿ ಅಡ್ಡ ಬಂದಾನಲ್ಲೋ ಮಾತನಾಡಿಸಿ ಕೇಳ್ಯಾನೋ
ಯಾವನಾಡಿದ ಕುರುಬಾನೋ ನೀ ಯಾವದೇಶದ ಕುರುಬಾನೋ
ಯಾವ ದೇಶದ ಕುರುಬಾನೋ ನೀ ಎಲ್ಲಿಗ್ಹೋಗತಿ ಅಂಬುವನೋ
ಮನಿಗ್ಯಾನಪ್ಪ ನನ ಮಾಳಿಗರಾಯ ಇಂತು ಮಾತವ ಕೇಳ್ಯಾನೋ
ಇಂತು ಮಾತವ ಕೇಳ್ಯಾನು ಮಾಳಪ್ಪ ಹುಲಿರಾಜಗೇನಂತ ಹೇಳಿದನೋ
ನನ್ನ ಗುರುವಿನ ಪೂಜೆಗೆ ಕರೇಮಲ್ಲಿಗಿ ಬೇಕೇಳೋ
ಕರೇಮಲ್ಲಿಗಿ ಹೂವಿಗೆ ನಾ ಕೈಲಾಸಕ ಹೋಗುವೆನೋ
ಮಾಳಿಗರಾಯನ ಮಾತಿಗೆ ಹುಲಿರಾಜನು ಹೇಳಿದನೋ
ಬಾರು ಬಾರೋ ಮಾಳಿಗರಾಯ ಕರೇಮಲ್ಲಿಗಿ ಹೂವಿಗೋ
ಕರೇಮಲ್ಲಿಗೆ ಹೂವಿಗೊ ನಾ ಕಾವಲಿ ಅಂತಾನೋ
ನನ್ನ ಕಾವಲಿ ಅಂತಾನಲ್ಲೊ ದಾರಿಗಿ ಅಡ್ಡ ತಾ ನಿಂತಾನೋ
ಮನಿಗ್ಯಾನಪ್ಪ ಮಾಳಿಗರಾಯ ಗುರುವಿನ ಧ್ಯಾನಾ ಮಾಡುವನೋ
ಹುಲಿರಾಜನ ನೋಡಲ್ಲಯ್ಯಾ ಮಾಳಪ್ಪಗ ಏನಂತ ಹೇಳುವನೋ
ಬಾರು ಬಾರೋ ಮಾಳಿಗರಾಯ ನಂದೊಂದು ಮಾತು ಕೇಳಂದಾನೋ
ಮರ್ತ್ಯಲೋಕದ ಒಳಗಲ್ಲೈಯ್ಯಾ ನಿನ್ನ ಗುರುವಿನ ಸಂಗಾಟೋ
ನಿನ್ನ ಗುರುವಿನ ಸಂಗಾಟ ಮಾಳಪ್ಪ ನನ್ನ ಪೂಜಿ ನೀ ಮಾಡಿದರೋ
ನನ್ನ ಪೂಜಿ ನೀ ಮಾಡಿದರ ನಿನ್ನ ಹೂವಿಗೆ ದಾರಿ ಬಿಟ್ಟೇನೋ
ಮನಿಗ್ಯಾನಪ್ಪ ನನ ಮಾಳಿಗರಾಯ ಒಳ್ಳೆದೊಳ್ಳೆದಂದಾನೋ
ಹುಲಿರಾಜನ ನೋಡಲ್ಲೈಯ್ಯಾ ಬಲಗೈಯ್ಯೆ ಭಾಷೆ ಬೇಡ್ಯಾನೋ
ಮನಿಗ್ಯಾನಪ್ಪ ನನ ಮಾಳಿಗರಾಯ ಬಲಗೈ ಭಾಷೆ ಕೊಟ್ಟಾನೋ
ಹುಲಿರಾಜನ ನೋಡಲ್ಲೈಯ್ಯಾ ಹೂವಿಗೆ ಇದು ಒಂದು ಸಂದೇಳೋ
ಸಂದಿನ ಪದಗಳ ವಂದಿಸಿ ಹೇಳುವೆ ತಂದಿ ಮಾಳಿಗರಾಯಾನೋ
ದೇವಾರು ಬಂದಾವು ಬನ್ನೀರೇ

ಹುಲಿರಾಜನ ನೋಡಲ್ಲೈಯ್ಯ ಹೂವಿಗೆ ದಾರಿ ತಾ ಬಿಟ್ಟಾನೋ
ಮನಿಗ್ಯಾನಪ್ಪ ನನ ಮಾಳಿಗರಾಯ ಮುಂದ ಮೂರ ಪೈಣಾವೋ
ಮುಂದ ಮೂರ ಪೈಣಾಕಲ್ಲಿ ಕೈಲಾಸ ಬಾಗಿಲೋ
ಕೈಲಾಸ ಕಡಿ ಬಾಗಿಲದಾಗ ಬಸವಣ್ಣ ದೇವರು ಕಾವಲಿಯೋ
ಆಗ ನೋಡನನ್ನ ಬಸವಣ್ಣ ದೇವರು ಶಿದ್ಧಮಾಳಪ್ಪನ್ನ ನೋಡಿದನೋ
ಸಿದ್ಧಮಾಳಪ್ಪನ್ನ ನೋಡ್ಯಾನು ಬಸವಣ್ಣ ದಾರಿಗಿ ಅಡ್ಡ ಬಂದಾನೋ
ದಾರಿಗಿ ಅಡ್ಡ ಬಂದಾನು ಬಸವಣ್ಣ ಮಾತನಾಡಿಸಿ ಕೇಳ್ಯಾನೋ
ಮರ್ತ್ಯಲೋಕದ ಒಳಗಲ್ಲೈಯ್ಯಾ ಯಾರ ಮಗ ಹೇಳಂತಾರೋ
ಮರ್ತ್ಯಲೋಕದ ಒಳಗಲ್ಲೈಯ್ಯಾ ಗುರುವಿನ ಆಶ್ರಮ ಯಾವದೋ
ಮನಿಗ್ಯಾನಪ್ಪ ನನ ಮಾಳಿಗರಾಯ ಇಂತು ಮಾತನವ ಕೇಳ್ಯಾನೋ
ಇಂತು ಮಾತವ ಕೇಳ್ಯಾನು ಮಾಳಪ್ಪ ಬಸವಣ್ಣಗೇನಂತ ಹೇಳುವನೋ
ನಾಡೈತಿ ಒಂದು ನಾಡೈತಿ ಕಲ್ಲಿಯಾಣ ನಾಡಾವೋ
ಕಲ್ಲಿಯಾಣ ಮೂಡಲ ನಾಡೋ ಮೂಡಲಗಿರಿ ಒಂದ ನಾಡೈತೋ
ಮೂಡಲಗಿರಿಯ ನಾಡಿನ ಒಳಗ ಕ್ವಾಣಿಗನೂರು ಮಠವೈತೋ
ಕ್ವಾಣಿಗನೂರ ಮಟದ ಒಳಗ ಕರಿಯದೇವರು ಆಯಿದಾನೋ
ಮಂಗ ಮುದಿಗಿ ಭಂಗಿಯ ದೇವರು ಕ್ವಾಣಿಗನೂರ ಮಟದಾಗೋ
ಕರಿಯದೇವರ ಕರ್ತದ ಮಗ ನೋಡಲ್ಲೈಯ್ಯಾ ಕೈಲಾಸಕ ಹೋಗುವೆನೋ
ಸಾಕನಾಡೋ ಸವರನಾಡೋ ಹುಲ್ಲಜಂತಿಯ ಗ್ರಾಮವೋ
ಹುಲ್ಲಜಂತಿಯ ಗ್ರಾಮದೊಳಗ ತಂದಾಳೊ ಸೋಮರಾಯನೋ
ತಂದೇಳು ಸೋಮರಾಯಾನಲ್ಲೊ ತಾಯೇಳು ಕಣ್ಣು ಬಾಯೇಳೋ
ಅಣ್ಣಾನೋ ಜಕರಾಯಾನೋ ನನ ತಮ್ಮಾನೋ ಮಾಳರಾಯಾನೋ
ಜಾತಿಯಲ್ಲಿ ನಾ ಬ್ರಾಹ್ಮಣನೋ ನೀರಿಯಲ್ಲಿ ನಾ ಕುರುಬನೋ
ನೀತಿಯಲ್ಲಿ ನಾ ಕುರುಬಾನು ಕುಲಬಿರುದು ಹೊತ್ತು ನಾ ಮೆರೆಯವೆನೋ
ಆಗ ನೋಡು ನನ ಬಸವಣ್ಣದೇವರು ಒಳ್ಳೆದೊಳ್ಳದೆಂದಾನು ಬಸವಣ್ಣ
ಮತ್ತೇನಾಗ ಕೇಳುವನೋ

ಕೆರಿಯ ದೇವರ ಕರ್ತನಿಗೆ ಆಳಿನ ನಾಮೊಂದು ಯಾವದೋ
ಆಗ ನೋಡ ನನ ಶಿದ್ಧಮಾಳಪ್ಪ ಬಸವಣ್ಣಗ ಏನಂತ ಹೇಳಿದನೋ
ವಡಿರಾಯರ ಮಗ ನಾ ದೊಡ್ಡದೇವರ ಪೂಜೇರಿಯೋ
ಸಿದ್ಧರೊಳಗ ಶಿವಗೇನಿ ನಾ ಮನುರೊಳಗ ಮನಿಗೇನೋ
ಆಗ ನೋಡ ನನ ಬಸವಣ್ಣ ಮತ್ತ ಏನಂತ ಕೇಳುವನೋ
ಮರ್ತ್ಯಲೋಕದ ಮಾನವರಾರು ಇಲ್ಲಿಗೆಂದು ಬಂದಿಲ್ಲೋ
ಇಲ್ಲಿಗೆ ಯಾರು ಬಂದಿಲ್ಲೆಂದು ಎಲ್ಲಿಗೆ ಹೋಗತಿ ಅಂಬುವನೋ
ಬಾರು ಬಾರೋ ಬಸವಣ್ಣಾ ನಾಯೇನು ಹೇಳಲಿ ಅಂತಾನೋ
ನನ್ನ ಗುರುವು ನೋಡಲ್ಲೈಯ್ಯಾ ಬಗಸಬಾರಿದ ಬಗಸ್ಯಾನೋ
ಬಗಸಬಾರದ ಬಗಸ್ಯಾನೋ ಅವ ಬೇಡಬಾರದ ಬೇಡ್ಯಾನೋ

ಕಪ್ಪಿಕಲಕದ ಶೀತಾಳ ಬೇಡ್ಯಾನು ಹುಳವ ಮುಟ್ಟದ ಹೂವೇಳೋ
ಮಾನುಲೋಕದಾಗ ಇಲ್ಲವೆಂದ ಕೈಲಾಸಕ ಹೋಗುವೆನೋ
ಕರಿಯದೇವರ ಕರ್ತದ ಮಗನೊ ಕೈಲಾಸಕ ಹೋಗುವೆನೋ
ಇಲ್ಲಿಗೆ ಹರಹರ ಇಲ್ಲಿಗೆ ಶಿವಶಿವ ಇಲ್ಲಿಗೆ ಇದು ಒಂದು ಸಂದೇಳೋ
ಸಂದಿನ ಪದಗಳ ವಂದಿಸಿ ಹೇಳುವೆ ತಂದಿ ಮಾಳಿಗರಾಯನೋ
ದೇವಾರು ಬಂದಾವು ಬನ್ನೀರೇssss

ಕರಿಯದೇವರ ಕರ್ತದ ಮಗನೊ ಕೈಲಾಸಕ ಹೋಗುವೆನೋ
ಆಗ ನೋಡು ನನ ಬಸವಣ್ಣ ಸಿದ್ಧಮಾಳಪ್ಪಗ ಹೇಳಿದನೋ
ಹುಳವ ಮುಟ್ಟದ ಹೂ ಅಂದರ ಕರೀ ಮಲ್ಲಿಗಿ ಹೂವೇಳೋ
ಕಪ್ಪಿಕಲಕದ ಶೀತಾಳೆಂದರ ಹಾಲುಮತದ ಭಾವೇಳೋ
ಕರೇಮಲ್ಲಿಗಿ ಹೂವಿಗೆ ಮಾಳಪ್ಪ ಹಾಲುಮತದ ಭಾವಿಗೋ
ಹಾಲಮಥದ ಭಾವಿಗೆ ಮಾಳಪ್ಪ ಕಾಳಿಂಗರಾಯನ ಕಾವಲಿಯೋ
ಹಾಲಮತದ ಭಾವಿಗೆ ಶೀತಾಳ ಗಂಗವ್ವನ ಕಾವಲಿಯೋ
ಕರೇಮಲ್ಲಿಗಿ ಹೂವಿಗೆ ಏಳು ಹೆಡಿ ಕಾಳಿಂಗೋ
ಏಳು ಹೆಡಿ ಕರಿಕಾಳಿಂಗ ಮಾಳಪ್ಪ ಹೂವಿಗೆ ಸುತ್ತ ಬಿಗದಾನೋ
ಹೂವಿಗೆ ಸುತ್ತ ಬಿಗದಾನು ಮಾಳಪ್ಪ ಹಿಂದಕ ಹೋಗಂತ ಹೇಳಿದನೋ
ಮನಿಗ್ಯಾನಪ್ಪ ನನ ಮಾಳಿಗರಾಯಾ ಬಸವಣ್ಣಗೇನಂತ ಹೇಳಿದನೋ
ಮುಂದಕಿಟ್ಟ ಹೆಜ್ಜ್ಯೊ ಬಸವಣ್ಣ ಹಿಂದಕ ಇಡೋದಿಲ್ಲಂತಾನೋ
ನನ್ನ ಗುರುವಿನ ಸಲುವಾಗಿ ನನ ಪ್ರಾಣ ಹೋಗಲಿ ಅಂತಾನೋ
ಪ್ರಾಣ ಹೋಗಲಿ ಅಂತಾನು ಮಾಳಪ್ಪ ಮುಂದಕ ಹೋಗೋ ವ್ಯಾಳ್ಯಾಕೋ
ಆಗ ನೋಡಾ ನನ ಬಸವಣ್ಣದೇವರು ದಾರಿಗಿ ಅಡ್ಡ ಗಟ್ಟುವನೋ
ಬಾರು ಬಾರೋ ಮಾಳಿಗರಾಯಾ ಕರೇಮಲ್ಲಿಗಿ ಹೂವಿಗೋ
ಕಪ್ಪಿ ಕಲಗ ಶೀತಾಳಕ ನನ್ನ ಕಾವಲಿ ಅಂತಾನೋ
ನನ್ನ ಕಾವಲಿ ಅಂತಾನು ಬಸವಣ್ಣ ದಾರಿಯ ಬಿಡೊದಿಲ್ಲಂತಾನೋ
ಮನಿಗ್ಯಾನೆಪ್ಪ ನನ ಮಾಳಿಗರಾಯ ಹಂಗದೊರದ ಕುಂತಾನೋ
ಹಂಗದೊರೆದ ಕುಂತಾನಲ್ಲೊ ಹ್ಯಾಂಗ ಮಾಡಬೇಕಂತಾನೋ
ಹ್ಯಾಂಗಮಾಡಬೇಕಂತಾನು ಮಾಳಪ್ಪ ಗುರುವಿನ ಧ್ಯಾನಾ ಮಾಡುವನೋ
ಕೈಲಾಸ ಕಡಿ ಬಾಗಿಲದಾಗ ಎಂಥ ಬಂಧನಕ ಹಾಕಿದನೋ
ಹರಹರನೋ ನನ ಕರಿಯದೇವರು ಎಂಥ ಬಂಧನಕ ಹಾಕಿದನೋ
ನಂಬಂಧ ಮಾತಿಗೆ ನಂಬಿದೆನೋ ನಾ ನೆಚ್ಚಂದ ಮಾತಿಗೆ ನೆಚ್ಚಿದನೋ
ಹೇಳಿ ಕಳುವಿದ ಮಾತಿಗೆ ಬಂದೆನು ಕೈಲಾಸ ಕಡಿ ಬಾಗಿಲೋ
ಕೈಲಾಸ ಕಡಿ ಬಾಗಿಲದಾಗ ಎಂಥ ಬಂಧನಕ ಹಾಕಿದನೋ
ಎಂಥ ಬಂಧನಕ ಹಾಕಿದನೆಂದು ಗುರುವಿನ ಧ್ಯಾನಾ ಮಾಡುವನೋ
ಗುರುವಿನ ಧ್ಯಾನಾ ಮಾಡ್ಯಾನು ಮಾಳಪ್ಪ ತ್ರೀಪುಂಡಧಾರಣ ಹಣೆಯಲ್ಲೋ
ಭಂಡಾರ ಬಟ್ಟೊಂದು ಇಟ್ಟಾನು ಮಾಳಪ್ಪ ಗುರುವಿನ ಧ್ಯಾನಾ ಮಾಡುವನೋ

ಮಾಳಿಗರಾಯನ ಹಣೆಯಲ್ಲಿದ್ದ ತ್ರಿಪುಂಡಧಾರಣ ಭಸ್ಮಾವೋ
ಭಸ್ಮವು ಹಾರಿತು ಭಂಡಾರ ಕಂಡಿತು ಆಗ ನೋಡಿದ ಬಸವಣ್ಣೋ
ಆಗ ನೋಡಿದ ಬಸವಣ್ಣದೇವರು ಒಳ್ಳೆದೊಳ್ಳೆದಂದಾನೋ
ಒಳ್ಳೆದೊಳ್ಳೆದಂದಾನು ಬಸವಣ್ಣ ಮಾಳನ ಜಡಿಯ ಉಟ್ವಾನೋ
ಮಾಳನ ಜೆಡಿಯ ಉಟ್ವಾನು ಬಸವಣ್ಣ ಕಂಡಾನು ಶಿವಲಿಂಗವನೋ
ಕಂಡಾನು ಶಿವಲಿಂಗವ ಬಸವಣ್ಣ ಸಾವಿರದ ಎಂಟನೂರವನೋ
ಸಾವಿರದ ಎಂಟನೂರ ಲಿಂಗವ ಬಸವಣ್ಣಾಗ ನೋಡಿದನೋ
ಬಾರು ಬಾರೋ ಮಾಳಿಗರಾಯಾ ನಂದೊಂದು ಮಾತು ಕೇಳೆಂದಾನೋ
ವಡ್ಡಿರಾಯರ ಮಗ ಮಾಳಾಗ ಬಸವಣ್ಣದೇವರ ಮಾತಿಗ್ಯೋ
ಬಸವಣ್ಣದೇವರ ಮಾತಿಗೆ ಮಾಳಿಗರಾಯಾ ಹೇಳಂದಾನೋ
ಇಲ್ಲಿಗೆ ಹರಹರ ಇಲ್ಲಿಗೆ ಶಿವಶಿವ ಇಲ್ಲಿಗೆ ಇದು ಒಂದು ಸಂದೇಳೋ
ಸಂದಿನ ಪದಗಳ ವಂದಿಸಿ ಹೇಳುವೆ ತಂದಿ ಮಾಳಿಗರಾಯನೊ
ದೇವಾರು ಬಂದಾವು ಬನ್ನೀರೇssss

## ಗಜಾಸುರ

ಉಗ್ರ ತಪಸ್ಸವ ಮಾಡಿದನೋ ಗಜಾಸುರ
ಆನಿ ಮುಖದವನೋ ॥ ೧ ॥

ಗಡ್ಡಿ ಗೆಣಸಿನ ಹಂಪಲ ಸಾಧಿಸಿ
ದುಡ್ಡಿನ ತೂಕದಗ್ನಿಯನು ॥ ೨ ॥

ಬಂದು ಆತನ ಭಾವಕ ಒಲಿದನು
ಭೆಟ್ಟಿಯನಾದನು ಈಶ್ವರನು ॥ ೩ ॥

ಬೇಡಿದ್ದಾವರವನು ಕೊಡುವೆನಂದಾ
ಹೇಳಿದ ವಚನವನು ॥ ೪ ॥

ಅಂದ ಮಾತಿಗೆ ಅದ್ಭುತ ರಾಕ್ಷಸ
ಎಂಥ ವರವನ್ನು ಬೇಡಿದನು ॥ ೫ ॥

ಆಯುಷ್ಯ ಐಶ್ವರ್ಯ ಒಲ್ಲೆ
ಈಶ್ವರ ನಿನ್ನ ನುಂಗುವೆನು ॥ ೬ ॥

ಕೊಟ್ಟ ವಚನ ತಪ್ಪುವನಲ್ಲೆಂದು
ಶೃತಿಯೇ ಸಾರುವದು ಈಶ್ವರನದು ॥ ೭ ॥

ಭೂಮಿಯಾಕಾಶ ಏಕಾಗಿ ನಿಂತು
ನುಂಗುಂತ್ಹೇಳಿದ ಈಶ್ವರನು ‖ ೮ ‖

ಅದ್ಭುತ ರಾಕ್ಷಸ ತನ್ನ
ಶಕ್ತಿಲೆ ಎಳದಾಡಿದನು ‖ ೯ ‖

ಹಲಿಕ್ಯಾಡದೆ ಕುಂತ ಮುಕ್ಕಣ್ಣ ಈಶ್ವರ
ಮುಂದೇನ್ಹೇಳಿದ ರಾಕ್ಷಸನು ‖ ೧೧ ‖

ಮೂರು ತಿಂಗಳ ಕೂಸಿನಂತೆ
ಮುಂದೆ ನಿಂದರಂತ್ಹೇಳಿದನು ‖ ೧೧ ‖

ಈಶ್ವರಗ ಎಂಥಾ ವ್ಯಾಳ್ಯವ ಬಂದಿತು
ಹಾಳಾಗುದು ಕೈಲಾಸವನು ‖ ೧೨ ‖

ಶಿಶುವಿನ ವೇಷ ತಾಳಿ ಈಶ್ವರ
ರಾಕ್ಷಸಗ ಇದರಾದನು ‖ ೧೩ ‖

ಈಶ್ವರ ನೀ ಮೂರು ಲೋಕಕೆ
ಅಧಿಕಾರಿ ಆದವನು ‖ ೧೪ ‖

ಅಂದ ನುಂದಿದನು ಕುಂಭಸ್ಥಲಕ
ಹೋಗಿ ಕುಂತನು ಈಶ್ವರನು ‖ ೧೫ ‖

ಮುಂದ ಕೇಳರಿ ಮುಕ್ಕಣೀಶ್ವರ
ಮುಣಗಿದ ಕತೆಯನು ಹೇಳುವೆನು ‖ ೧೬ ‖

ಬ್ರಹ್ಮ ದೇವನು ಹಮ್ಮನಾಡಿದನು
ಇನ್ನ್ಯಾಕಹ್ವಾದನು ಈಶ್ವರನು ‖ ೧೭ ‖

ಅವನಂತೆ ನನಗೆ ಐದು ಮುಖವು
ಆಳುವೆನು ಕೈಲಾಸವನು ‖ ೧೮ ‖

ಪಾರ್ವತಿ ನನ್ನ ತೊಡಿ ಮ್ಯಾಗ ಕುಳಿತರೆ
ಈಶ್ವರನ ಸರಿಯಾಗುವೆನು ‖ ೧೯ ‖

ಬಸವಣ್ಣನ ಕರದ್ಹೇಳಿದನು
ಕರಸಬಕು ಇಲ್ಲಿಗೆ ಪಾರ್ವತಿಯನು ‖ ೨೦ ‖

ಏ ತಾಯಿ ಈ ಶಿವನ ಸದರಿಗೆ
ಬ್ರಹ್ಮ ಅಧಿಕಾರಿಯಾಗುವನು ॥ ೧೦ ॥

ಆ ದೇವಿಗೆ ಅವನಾಳಿನಂತೆ
ನಿನ್ನ ಕರಿತಾರೆಂಬುವನು ॥ ೧೧ ॥

ಬಸವಣ್ಣ ಇನ್ನಿರುವದಿಲ್ಲ
ಕಡಿಸ ಅಗ್ನಿಕುಂಡ ಹಾರುವೆನು ॥ ೧೨ ॥

ಇನ್ನೊಬ್ಬಗ ಈ ದೇಹ ತೋರಿದರ
ಎಲ್ಲಿರುವದು ಪತಿವೃತನವು ॥ ೧೪ ॥

ಅಂದ ಮಾತಿಗೆ ಬುದ್ಧಿಯ ಹೇಳಿ
ಇದ್ದಲ್ಲಿ ಹುಡುಕುವೆ ಈಶ್ವರನನು ॥ ೧೫ ॥

ಈಶ್ವರನ ನುಂಗಿದ ರಾಕ್ಷಸನ
ಅಗಸಿಗೆ ಬಂದ ಬಸವೇಶ್ವರನು ॥ ೧೬ ॥

ಮುಂದ ಬಾಗಿಲ ಕಾಯುವಂಥಾ
ಮೃದಂಗಸುರ ದೈತ್ಯನು ॥ ೧೭ ॥

ಬಂದ ಮಾಡಿ ಬಸವಣ್ಣನ ತರುಬಿ
ಬಿಡದ್ಹಾಂಗ ಮಾಡಿದ ಮಾರ್ಗವನು ॥ ೧೮ ॥

ಯುದ್ಧ ಮಾಡಿ ಎನ್ನೊ ಡಿದು
ಗೆದ್ದು ಹೋಗು ಆಡಿದ ಶಬ್ದವನು ॥ ೧೯ ॥

ಗುದ್ದಿ ಪಾದದೊಳು ಮೆಟ್ಟಿದನು
ಮತ್ತೇನು ಹೇಳಿದನು ರಾಕ್ಷಸನು ॥ ೨೦॥

ಬಸವಣ್ಣ ಪಾವನವಾಗಲು ಈ
ಶರೀರ ನಿನ್ನಲ್ಲಿ ಎಂಬುವನು ॥ ೨೧ ॥

ತೆಲಿಯ ಪಡಗವ ಚರ್ಮವ ಮುಚ್ಚಿದೆ
ಎಲಬಿನ ಗಟಿ ಮಾಡಿದನು ॥ ೨೧ ॥

ನರಾ ಹಗ್ಗ ಮಾಡಿ ಬಿಗಿದು ಮದ್ದಲಿ
ಕೊರಳಿಗ್ಹಾಕಿ ಬಸವೇಶ್ವರನು ॥ ೨೨ ॥

ಹೋಗಿ ಗಜಾಸುರನ ಮುಂದೆ ನಿಂತು
ಮದ್ದಳೆ ಬಾರಿಸಿ ಹಾಡಿದನು ॥ ೩೪ ॥

ಮಸ್ತಕದೊಳಗ ಇದ್ದ ಈಶ್ವರನು
ಮದ್ದಲಿ ನಾದನು ಕೇಳುವನು ॥ ೩೫ ॥

ಜಿಗಿದು ಮ್ಯಾಲಕ ಹಾರಿದನು
ಎರಡು ಹೋಳು ಆದ ರಾಕ್ಷಸನು ॥ ೩೬ ॥

ಈಶ್ವರ ಪಾವನವಾಗಲಿ ಈ
ಶರೀರ ನಿನ್ನಲ್ಲಿ ಎಂಬುವನು ॥ ೩೭ ॥

ಆನಿ ಚರ್ಮ ಆವಾಗ ಹೊತ್ತನು
ಬಂದ ಕಂಡ ಕೈಲಾಸವನು ॥ ೩೮ ॥

ಹಮ್ಮಿಲೆ ಆಡಿದ ಬ್ರಹ್ಮದೇವರು
ಈಶ್ವರನ ಗದ್ದಿಗೆ ಮೇಲಿದ್ದನು ॥ ೩೯ ॥

ಹಲ್ಲು ಕಡಿದು ಅವನ ಶಿರಾ ಹಿಡಿದು
ಚಲ್ಲುಗುರಿನಿಂದ ಚಿವಟಿ ಒಗೆದನು ॥ ೪೦ ॥

ತೆಲಿಯ ಒಡೆದು ಮೂರು ಭಾಗಮಾಡಿ
ಒಂದು ಹೋಳು ಸಮುದ್ರಕ ಒಗೆದನು ॥ ೪೧ ॥

ಈರ್ಷದಿಂದ ಒಗಿದನು ಸಮುದ್ರಕ್ಕ
ಉಕ್ಕಿ ಆತು ಒಡಬಾಗ್ನಿಯನು ॥ ೪೨ ॥

ಒಂದು ಪಾಲು ಧರಣಿಗೆ ಒಗೆದನು
ಶಿಡಿಲಾಗಿ ನದುಗಿತು ಧರಣಿಯನು ॥ ೪೩ ॥

ಒಂದು ಪಾಲು ಕೈಯಲ್ಲಿ ಹಿಡಿದನು
ಬ್ರಹ್ಮಕಪಾಲ ಎಂದೀಶ್ವರನು ॥ ೪೪ ॥

ಸಾಧುಗಳೆಲ್ಲ ಸೂರಟಿಯ ಗೋಪಾಳ
ಬುಟ್ಟಿಯ ಮಾಡಿದ ಈಶ್ವರನು ॥ ೪೫ ॥

ಭಿಕ್ಷುಕರ ಕೈಯಲ್ಲಿರುವದು ಈಶ್ವರ
ಕೊಟ್ಟಂಥ ಪಾತ್ರೆಯನು ॥ ೪೬ ॥

ಮಹಶರಣ ಮಡಿವಾಳ ಗುರುವಿನ
ಮಾತು ಕೇಳಿ ಹಾಡುವೆ ನಾನು ॥ ೪೭ ॥

* * *

## ಮಾರ್ಕಂಡೇಯ

ಮೃಕಂಡಮುನಿ ಸಾವಿರ ವರ್ಷದಿನ
ತಪಾದಿಂದ ಕುಳಿತದ್ದು ಖರೆ
ಅಸ್ತು ಅಡಗಿ ಅವನ ಸುತ್ತ ವೃಕ್ಷವು

ಹುತ್ತ ಮೇಲೆ ಬೆಳದದ್ದು ಖರೆ ॥ ೧ ॥
ದೇಹದನ್ನ ಕೂದಲಾ ಬೇರು ಬಿಟ್ಟು
ಭೂಮಿಗಿಳಿದದ್ದು ಖರೆ
ತಿಳಿದು ಈಶ್ವರ ಇಳಿದು ಬಂದನೋ

ಧರಣಿಯೊಳಗ ಮುಳಗಿದ್ದು ಖರೆ ॥ ೨ ॥
ಕಮಂಡಲದನ ಉದಕ ಒಗಿದರೆ

ಮುನಿಯು ಎದ್ದು ಬಂದದ್ದು ಖರೆ
ಮೃಕಂಡು ನಿನ್ನ ಮನದಿಚ್ಛೆಯ
ಇದ್ದದು ಬೇಡಂದದ್ದು ಖರೆ ॥ ೩॥

ಈಶ್ವರನಂಬುದು ಏನು ತಿಳಿಯಲಿ
ಕೂನ ತೋರಿಸೆಂದದ್ದು ಖರೆ
ಗಂಗಾ ಪಾರ್ವತಾ ನಂದಿಕೇಶ್ವರ
ಬೃಂಗಿ ಸಹಿತವಿದ್ದದ್ದು ಖರೆ ॥ ೪ ॥

ಷಣ್ಮುಖಿ ಗಪತಿ ಎಡಬಲ ಅವನ
ತೊಡಿಯ ಮೇಲೆ ಕುಳಿತದ್ದು ಖರೆ
ಗಜಾಸುರನ ತೆಲಿಯ ಸೀಳಿದಾಗ
ಆನಿ ಚರ್ಮ ಹೊದ್ದದು ಖರೆ ॥ ೫ ॥

ಕೃಷ್ಣನ ನೇತ್ರ ಪುಷ್ಪವೆಂದು
ಪಾದದ ಮೇಲೆ ಧರಿಸಿದ್ದು ಖರೆ
ಕರ್ಣ ಕುಂಡಲ ಹೆಡಿ ನೆರಳ ಮಾಡಿದಾಗ
ಮಹಾಶೇಷ ಆಭರಣ ಖರೆ ॥ ೬ ॥

ಸೂರ್ಯ ಚಂದ್ರ ಅಗ್ನಿ ಮೂರು ಮಂದಿ
ತ್ರಿನೇತ್ರವಾದದ್ದು ಖರೆ
ಉರಿಯ ನುಂಗಿ ಬ್ರಹ್ಮಾಂಡ ನುಂಗಿದ
ಕಪ್ಪಗೊರಳ ಶಂಕರನು ಖರೆ ‖ ೭ ‖

ಬ್ರಹ್ಮನ ತಲೆ ತ್ರಿಶೂಲ ಪಿಡಿದು ಅವ
ನಿಜರೂಪ ತೋರಿದ್ದು ಖರೆ
ಮೃಕಂಡು ಮುನಿ ಮತ್ತೇನು ಕೇಳತಾನ
ಪುತ್ರನಜಕೊಡು ಅಂದದ್ದು ಖರೆ ‖ ೮ ‖

ಶಾಣೆ ನಿಪುಣ ಗುಣದವನ ಕೊಡುವೆನು
ಹದಿನಾಲ್ಕು ವರ್ಷ ಆಯುಷ್ಯ ಖರೆ
ಜ್ಞಾನ ಇಲ್ಲದ ಮಗ ಹುಟ್ಟಿದರ
ಸಾವಿರ ವರುಷ ಇರುವೂದು ಖರೆ ‖ ೯ ‖

ಜ್ಞಾನ ಇಲ್ಲದವನೇನು ಮಾಡಲಿ
ಶ್ಯಾಣೆನ ಕೊಡು ಅಂದದ್ದು ಖರೆ
ಕೊಟ್ಟನು ವಚನ ಹೊರಟನು ಈಶ್ವರ
ನಿಷ್ಠಧರನು ಹುಟ್ಟಿದ್ದು ಖರೆ ‖ ೧೦ ‖

ನಿತ್ಯಕ ಲಿಂಗ ಪೂಜಿ ನಡಸಿದ
ಹನ್ನೆರಡು ವರುಷ ಮುಗಿದದ್ದು ಖರೆ
ಇನ್ನೆರಡು ವರುಷಕ ಮರಣ ಇರುವುದು
ಹೆತ್ತವರಿಗೆ ಚಿಂತಿಯು ಖರೆ ‖ ೧೧ ‖

ದಿನಾ ಹ್ವಾದಂಗ ಮನ ತಡೆಯದು
ಪ್ರತಾಪದಿ ಅಳುವೂದು ಖರೆ
ದುಶ್ಚಿನ್ ನೀವು ದುಃಖ ಮಾಡುವ
ಕಾರಣವೇನು ಕೇಳಿದ್ದು ಖರೆ ‖ ೧೨ ‖

ಹದಿನಾಲ್ಕು ವರುಷ ಆಯುಷ್ಯ ನಿನಗೆ
ನಾಳೆ ಮರಣ ಇರುವೂದು ಖರೆ
ತಪಾಮಾಡಿ ನಿನ್ನ ಪಡೆದ ವ್ಯಾಳ್ಯಕ
ಈಶ್ವರನು ಹೇಳಿದ್ದು ಖರೆ ‖ ೧೩ ‖

ಇದು ಏನು ಈಶ್ವರನು ಇರುವನೋ
ಶೋಕ ಯಾಕ ಅಂದದ್ದು ಖರೆ

ಆತ್ಮಕ ವೈರಾಗ್ಯ ತಾಳಿದಾಕ್ಷಣ
ಲಿಂಗ ಪೂಜೆಗೆ ಹೊರಟದ್ದು ಖರೆ ॥ ೧೪ ॥

ಕಾಲ ಮೃತ್ಯುವಿನ ವಧಾ ಮಾಡುವ
ಕಾಡ್ಣಿ ಹಗ್ಗ ಒಯ್ದದ್ದು ಖರೆ
ಲಿಂಗಪೂಝೆ ನಿರ್ಮಳ ಮುಗಿಸಿ
ಅವ ಮತ್ತೆ ಸ್ತೋತ್ರ ಮಾಡಿದ್ದು ಖರೆ ॥ ೧೫ ॥

ತನಗ ಈಶ್ವರಗ ವ್ಯಾಪಿಸಿಕೊಂಡು
ಕಾಡ್ಣಿ ಹಗ್ಗ ಕಟ್ಟಿದ್ದು ಖರೆ
ದೇವರಿಗೆ ದೇವರೆ ಎನ್ನನು
ಕಾಪಾಡಬೇಕೆಂದದ್ದು ಖರೆ ॥ ೧೬ ॥

ನಿಯಮಕ ಸರಿ ಯಮನ ಹುಕುಮು ಇರುವುದು
ದೂತರಾಗ ಬಂದದ್ದು ಖರೆ
ಬಾ ಎಂದು ಇವನ ಹಿಡಿದು ಜಗ್ಗಿದರ
ಬರುವುದಿಲ್ಲ ಅಂದದ್ದು ಖರೆ ॥ ೧೭ ॥

ತಿರುಗಿ ಹೋಗಿ ಹೀಂಗಾದ ಚರಿತ್ರ
ಬಂದು ಯಮಗ ಹೇಳಿದ್ದು ಖರೆ
ಬಿಡು ಬ್ಯಾಡರಿ ಅವನ ಹೊಡೆಯಿರಿ ಎಂದು
ನೂರು ಮಂದಿ ಕಳುಹಿದದ್ದು ಖರೆ ॥ ೧೮ ॥

ಅಜ್ಞಕ ಸರಿ ಅವರು ಹೊರಟು ಬಂದರು
ಸುತ್ತಲೂ ಉರಿಯಾದದ್ದು ಖರೆ
ಅಂಜಿದ ಅವರು ನಮ್ಮಿಂದಾಗದು
ಬಂದು ಯಮಗ ಹೇಳಿದ್ದು ಖರೆ ॥ ೧೯ ॥

ಕೋಪದಿಂದ ಯಮ ಕ್ವಾಣನ್ನೇರಿ
ಒಳ್ಳೇದೆಂದು ಹೊರಟದ್ದು ಖರೆ
ಮುನ್ನೂರಾ ಅರವತ್ತು ರೋಗ ಕೈಯೊಳು
ಧಾರುಣಾಗಿ ಬಂದದ್ದು ಖರೆ ॥ ೨೦ ॥

ಸಿಟ್ಟಿನಿಂದ ಕುಂತವನ ಕೊರಳಿಗೆ
ಪಾಶದ ಹಗ್ಗ ಒಗದದ್ದು ಖರೆ
ಶಕ್ತಿಲಿಂದ ಕುಂತವನ ಜಗ್ಗಿದರ
ಹತೀ ಜಲ್ಮವಾದದ್ದು ಖರೆ ॥ ೨೧ ॥

ಸಂತಾಪ ಸಂಕಟ ತಡಿಯಲಾರದೆ
ಶಂಕರನೇ ಎಂದದ್ದು ಖರೆ
ಕೋಟಿ ಸಿಡಿಲು ಧರಣಿಗೆ ಬಿದ್ದಾಂಗ
ಈಶ್ವರನು ಎದ್ದುದು ಖರೆ ॥ ೨೨॥

ವಿರಸದಿಂದ ಯಮನ ಹೊಟ್ಟಿ ಹರಿಯುವಾಂಗ
ತ್ರಿಶೂಲದಿಂದ ಹೊಡೆದದ್ದು ಖರೆ
ಬಿದ್ದನು ಧರಣಿಗೆ ಎದ್ದನು ಸೈರಿಸಿ
ಕೈ ಮುಗಿದು ನಿಂತದ್ದು ಖರೆ ॥ ೨೩ ॥

ಇಂಧ ಶರಣರಿನ್ನ ಮುಟ್ಟಬ್ಯಾಡಯೆಂದು
ಯಮಗ ಶಿವನು ಹೇಳಿದ್ದು ಖರೆ
ಚಿರಂಜೀವಿಯಾಗೆಂದು ವರವ ಕೊಟ್ಟನೋ
ಧರಣಿ ಮೇಲೆ ಇರುವದು ಖರೆ ॥ ೨೪ ॥

* * *

## ತಾಯಿ ಕರುಳು

ನಾಗರ ಪಂಚಮಿ ಬಂತಂತ
ಮಗನ ಮುಂದ ತಾಯಿಯ ಮಾತ ॥ ೧ ॥

ತಂಗಿಯ ಕರಕೊಂಡು ಬಾ ಹೋಗಂತ
ನನ್ನ ಜೀವದಾಗ ಇಲ ಸನಮಂತ ॥ ೨ ॥

ತಂಗೀ ಕರ್ರ್ಯಾಕ ಹೋಗಬೇಕಂತ
ಸಿಂಗಾರಮಾಡಿ ನಿಲ್ಲಿಸಿದ ಎತ್ತ ॥ ೩ ॥

ರೊಟ್ಟು ಬುತ್ತಿ ನೀ ಕಟ್ಟಿತಾರ ಎವ್ವ
ಹೋಗತೇನಿ ಆದಿತ ಹೊತ್ತ ॥ ೪ ॥

ದಾರಿಯೊಳಗ ನೀರಿಲ್ಲ ಅಗ್ಗರ
ಬರುವಾಗ ತಂಗಿ ಜ್ವಾಕಿ ಅಂತ ॥ ೫ ॥

ತಂಗಿ ಬಾಗಿಲದಾಗ ಹೋಗಿ ನಿಂತ
ಅಣ್ಣನೆಂದು ಹಿಡಿದಳು ಗುರ್ತ ॥ ೬ ॥

ಬೀಗ ಕರಿತಾನು ಬರ್‍ರೆಂತ
ಒಳಗೆ ಕಟ್ಟಿ ನಿಲ್ಲಿಸಿದ ಎತ್ತ ‖ ೭ ‖

ಅಣ್ಣ ಗಂಡಗ ಉಣ್ಣಂತ
ಸಣ್ಣ ಶಾವಿಗೆ ನಿಡ್ಯಾಳು ಬಸ್ತ ‖ ೮ ‖

ಮರುದಿನ ಮುಂಜಾನೆ ಮಾತನಾಡಿದರು
ಯಾಕ ಬಂದಿ ಬೀಗs ನೀನು ‖ ೯ ‖

ನಾಗರ ಪಂಚಮಿ ನಾಡಿಗೆ ದೊಡ್ಡದು
ಕರಿಯಕ ಬಂದೇನಿ ತಂಗಿಯನು ‖ ೧೦ ‖

ಕಳಸ್ತೇನಿ ಅಂತ ಕೊಟ್ಟಾನು ವಚನ
ತನ್ನ ಮಡದಿಗೆ ಹೋಗಿ ಹೇಳ್ಯಾನ ‖ ೧೧ ‖

ತಯ್ಯಾರಾಗಿ ನಿನ್ನ ತವರ ಊರಿಗೆ
ಇಟಗೊಂಡೆ ಹೋಗ ನಿನ್ನ ದಾಗೀನ ‖ ೧೨ ‖

ಶೀರಿ ಕುಬಸ ಭಲೆ ಜರತಾರ
ಭಾರಿ ವಸ್ತ್ರ ಇಟ್ಟಳು ತಾನ ‖ ೧೩ ‖

ರತ್ನ ಮೂಗಿನ ಮುತಿನ ಬುಗುಡಿ
ರತ್ನ ಕೆಚ್ಚಿದ ವಾಲಿಯನ ‖ ೧೪ ‖

ಗಂಡನ ಮನಿ ಅಂಬಲಿ ಬಿಟ್ಟು
ನಡಿಯೋ ಎಣ್ಣ ಹೋಗುನು ತುರ್ತ ‖ ೧೫ ‖

ನಡುದಾರಿ ಆರ್‍ಯಾಣಕ ಹೋಗಿ
ಹೊರಳಿ ನೋಡಿದ ತಂಗಿಯ ಮಾರಿ ‖ ೧೬ ‖

ತಂಗಿ ಮೈ ಮ್ಯಾಗಿನ ಬಂಗಾರ ನೋಡಿ
ದಿಂಗ ಬಡದ ನಿಂತಾನಾಗ ‖ ೧೭ ‖

ಏರಿ ಹತ್ತಿ ನೋಡಿದನಾಗ
ಯಾರು ಇಲ್ಲ ಆರ್‍ಯಾಣದಾಗ ‖ ೧೮ ‖

ಹಲ್ಲು ತಿಂದು ಇವ ಕೊಲ್ಲಬೇಕಂದ
ಹಿರಿದ ಚೂರಿಯ ಕೈಯಾಗ ‖ ೧೯ ‖

ಯಾಕೋ ಎಣ್ಣ ನನ ವ್ಯರ್ಥಕೊಲ್ಲಬ್ಯಾಡಾ
ಉಚ್ಚಿತಗೊಳ್ಳೊ ನನ ಬಂಗಾರ ಬಳಿ ॥ ೧೦ ॥

ತಂಗಿ ಬಿದ್ದು ಬೋರ್ಯಾಡುತ
ಅಣ್ಣ ಕೇಳವಲ್ಲ ನಿಕಾಲಸ್ತ ॥ ೧೭ ॥

ಮುಂದಕ ನುಗಿಸ್ಯಾನು ಚಂಡಾಳಿ
ತಲಿಯಮ್ಯಾಲ ಹೊಡೆದಾನು ಹುರುಳಿ ॥ ೧೧ ॥

ಎದಿಯ ಮ್ಯಾಲ ಕುಂತು ಕುತ್ತಗಿ ಕೋದು
ಕೊಂದು ಹಾಕ್ಯಾನು ಹೊಟ್ಟೆಯ ಶೀಳಿ ॥ ೧೨ ॥

ಭಗವಂತಗಾದೀತ ಅರುವಾ
ಆ ನೀಚಗ ಹಾಕಿದ ಮರುವಾ ॥ ೧೪ ॥

ತಿರುಗಿ ತಿರುಗಿ ಅಲ್ಲಿಗೆ ಬರುವ
ಹೆಣ ನೋಡಿ ಕಣ್ಣೀರ ತರುವ ॥ ೧೫ ॥

ಬ್ಯಾಟಿ ಆಡುತ ಬಂದ ಸರದಾರ
ಆಡವ್ಯಾಗ ನೋಡತಾನ ಆಕಾರ ॥ ೧೬ ॥

ಇದೇನಂತ ವಿಚಾರ ಮಾಡುತ
ಆ ಹೆಂಗಸಿನ ಕೊಂದವರ್ಯಾರ ॥ ೧೭ ॥

ತಪ್ಪಿಸಿ ಹೇಳ್ಯಾನು ಚದುರ
ತಂಗಿ ಕೊಂದತಿ ಹುಲಿ ಮುರಿದು ಕರೆ ॥ ೧೮ ॥

ಹುಲಿಯ ಗಾಯ ಅಲ್ಲ ಕುತ್ತಗೆ ಕೋದದ್ದು
ಮಾತಿನೊಳಗ ಸಿಕ್ಕನು ಪೂರ ॥ ೧೯ ॥

ಕಟ್ಟಿ ಬಡಿಸಿದನು ಸರದಾರ
ಬಡತನದೊಳಗ ಮಾಡ್ಯಾನು ಜೋರ ॥ ೨೦ ॥

ಬ್ಯಾನಿ ಸಂಗಟ ತಾಳಲಾರದೆ
ಕಬೂಲು ಆದನು ಆವಾಗ ಚದುರ ॥ ೨೭ ॥

ಸುದ್ದಿ ಬಿಟ್ಟರು ತಾಯಿಗೆ ಲಗುಮಾಡಿ
ತಾಯಿ ಬಂದಳು ಅಲ್ಲಿಗೆ ಓಡಿ ॥ ೨೧ ॥

ಗಂಡ ಬಮದ ಎದಿ ಬಡಕೊಂತ
ಸರದಾರ ಕಣ್ಣೀರ ಉದರಿಸುತ ॥ ೨೨ ॥

ಹುಕುಮ್ ಆಯಿತು ಸರದಾರಂದು
ಹಾಕುತೇವಿ ಗಲ್ಲಿಗೆ ಇಂದು ॥ ೨೪ ॥

ತಾಯಿ ಕರಸಿ ಸಾಹೇಬ ಹೇಳತಾನ
ಮಾರಿ ನೋಡ ನಿನ್ನ ಮಗಂದ ॥ ೨೫ ॥

ತಾಯಿ ತನ್ನ ಮನದಾಗ ತಿಳಿಕೊಂಡು
ಸತ್ತ ಮಗಳು ಬರುವುದಿಲ್ಲೆಂದು ॥ ೨೬ ॥

ಆಕಿ ಕಾಲಾಗ ಇವ ಸಾವುತಾನ
ಎಲ್ಲಿ ಇರಲಿ ಇಬ್ಬರ ಕೊಂದು ॥ ೨೭ ॥

ತಾಯಿಲಿಂದ ಮಗ ಪಾರಾದ
ನವಲಗುಂದ ಸುತ್ತ ಜಾಹೀರ ॥ ೨೮ ॥

## ವೀರ ಅಭಿಮನ್ಯುವಿನ ಪದ

ಅಭಿಮನ್ಯು ಇದ್ದ ರಣಶೂರ
ರಣದೊಳಗ ತಾ ಗಂಭೀರ
ಚಕ್ರಕೋಟೆಯೊಳಗೆ ಲಡಾಯಿ ಮಾಡಿದನು
ಯಾರ ಇಲ್ಲರೀ ಮಗನಂತವರ ॥ ೧॥

ತಾಯಿ ತಂದೆಗೆ ಮಗ ಸಣ್ಣವ
ನಕುಲ ಅವನ ಮ್ಯಾಗ ಬಲೇಜೀವ
ಲಡಾಯಿ ಮಾಡಾಕ ಅವರೆಲ್ಲಾ ಹೊಂಟರ
ಬರತೇನಂತ ಹಠಮಾಡಾವ ॥ ೯ ॥

ತಂದಿ ರಥದೊಳಗ ಕುಂದ್ರಾವ
ಕೃಷ್ಣ ಅವರ ಸೋದರ ಮಾವ
ಚಕ್ರಕೋಟೆ ತಂಗಿಗೆ ಹೇಳುವಾಗ
ಹೊಟ್ಟೆಯೊಳಗ ಕುಂತ ಕೇಳದವ ॥ ೨ ॥

ಅಭಿಮನ್ಯುನ ಜೀವ ಸುತ್ತ ಮುತ್ತ
ಮುಂದೆ ಬರುವದು ಐತಪ್ಪ ಘಾತ

ಹೇ ಬ್ರಹ್ಮ ಬರೆದ ಲಿಖಿತ ಇದು
ಯಾರಿಗೂ ತಪ್ಪದ ಈ ಮಾತ ‖ ೪ ‖

ನೂರಂದಮಂದಿ ಕೌರವರ
ದುರ್ಯೋಧನೊಂದು ಬಹಳ ಅಹಂಕಾರ
ಮಂಚದಮ್ಯಾಗ ಮನಗಿದ ಕೃಷ್ಣ
ಕೇಳಾಕ ಹೋದ ದುರ್ಯೋಧನ ‖ ೫ ‖

ಯಾರ ಕಡೆಗೆ ಸಾರಥಿಯಾಗತ್ತೀರಿ
ಹೇಳಬೇಕರಿ ಸ್ವಾಮಿ ನಮಗ
ಈಗ ಹೇಳುವದಿಲ್ಲ ನಾನು
ನಾಳೆ ಮುಂಜಾಲೇ ಎದ್ದು ಬಾಹೋಗ ನೀನು ‖ ೬ ‖

ಹರಿಯಲು ಎದ್ದು ನನ್ನ ದೃಷ್ಟಿಲೀ
ಬಿದ್ದೋರ ಸಾರಥಿಯಾಗುವೆ ನಾನು
ಹೊರಳಿ ಬಂದನು ದುರ್ಯೋಧನ
ಗಾದಿ ಮ್ಯಾಗ ತಾ ಕುಂದ್ರುವನ ‖ ೭ ‖

ಕಾಲದಸಿಲೇ ಕುಂತ್ರ ಅಬ್ರು ಹೋದಿತೆಂದು
ತಲೇ ಗುಂಬಿಲೇ ಕುಂತಾನು
ಅರ್ಜುನ ತಾನು ಹೋದಾನು ಹಿಂದಿಂದ
ಸ್ವಾಮಿ ಪಾದಕ ಇರಬೇಕಂದ ‖ ೮ ‖

ಅರವುಆತು ಅವ ಬಂದದ್ದು
ಅವನ ಕಡೆಗೆ ಮಾರಿ ಮಾಡಿ ಎದ್ದ
ಸ್ವಾಮಿ ಸಾರಥಿ ಆಗಿರೆಂದು ಕೈಮುಗಿದಾ
ಯಾಕ ಆಗಬಾರದು ಇರತೇನಂದಾ ‖ ೯ ‖

ಅವನಕ್ಕಿಂತ ಮುಂಚೇಕ ಬಂದವರು
ಸ್ವಾಮಿ ಸಾರಥಿ ನಮಗ ಇನ್ಯಾರು
ದುರ್ಯೋಧನಗ ಹತ್ತಿತು ಚಿಂತಿ
ಓಡಿ ಹೋದನು ಬಲರಾಮನ ಹಂತೇಲಿ ‖ ೧೦ ‖

ಬಲರಾಮ ಆಗ್ಯಾನು ಅವರಂತೆ
ಕೃಷ್ಣ ಮಾಡ್ಯಾನು ಮತ್ತೊಂದು ಯುಗತಿ
ಮಾಯೆದ ಗೋವು ಮುಂದೆ ಕಳುಹಿದ
ಹಳ್ಳ ಒಗದರ ಸತ್ತೈತಿ ‖ ೧೧ ‖

ಬಲರಾಮನಗ ಆಗೈತಿ ಗೊತ್ತ
ಓಡಿ ಬಂದಾನು ಕೃಷ್ಣನ ಹಂತೇಲಿ
ಧೈರ್ಯ ಹೇಳಿದ ಕೃಷ್ಣದೇವರು
ಮೂರ ಲೋಕಕೆ ಮರಲಿಧರ ॥ ೧೨ ॥

ಪೃಥ್ವಿ ಪ್ರದಕ್ಷಿಣೆ ನೀವು ಹೋದರ
ನಿಮ ಕರ್ಮ ಹಿಂದಗಾತಯಿತಿ
ಬಲರಾಮ ತಯಾರಾಗಿ ಹೊಂಟ
ಕೌರವರಿಗೆ ಬಿದ್ದಿತು ಸಂಗಟ ॥ ೧೩ ॥

ಶ್ಯಾಮ ಸಪ್ತೆಕರನ ಕರಸಿ ಹೇಳಿದನು
ಹಿಂದ ಆದ ಮೂಲಾಂಬಗಿರಿ
ಹಿಂದಕ ನಿಮ್ಮ ತಂದೆ ಅರ್ಜುನನ ಕೊಂದಾಗ
ಯಾವಲ್ಲಿದ್ದಿರೀ ಎಲ್ಲಿ ಮನಗಿದ್ದಿರೀ ॥ ೧೪ ॥

ಅವರ ಹೊಟ್ಟೆಯಾಗ ಬಿದ್ದಿತು ಉರಿ
ಅರ್ಜುನನ ಮಾಡೇವ ಸೂರಿ
ಪಂಚಪಾಂಡವರು ನಮ್ಮ ಕೈಯ್ಯಾಗ
ದಾಟಿ ಹೋಗುವದು ಇನ್ನೈತಿ ಬಿರೀ ॥ ೧೫ ॥

ಇತ್ತ ಕಡೆಗೆ ಶ್ಯಾಮ ಸಪ್ತೆಕರ
ಅರ್ಜುನಗ ಬಂತು ಬಲಿ ಘೋರ
ಎರಡು ಕಡೆಗೆ ಹೋಗುವರ್ಯಾರ ॥ ೧೬ ॥

ಶ್ಯಾಮ ಸಪ್ತಕರ ಕಡೆಗೆ
ಅರ್ಜುನ ಹೊಂಟ ಕೃಷ್ಣ ಸಾರಥಿ
ಆಗ್ಯಾನ ಆವಾಗ ಎಂದು ಬರುವದು
ನಿರ್ಧಾರ ಇನ್ನು ಹದಿನೆಂಟು ದಿವಸಕ ॥ ೧೭ ॥

ತಯಾರ ಆತು ಚಕ್ರಕೋಟೆ
ತಯಾರ ಆಗ ಬಾ ಅಂತ ಕರಿತಾರು
ಕೌರವರು ಚಕ್ರಕೋಟೆಗೆ
ಅಭಿಮನ್ಯು ಹೋಗ್ತಾನು ಶಂಸಬಿಡಿರಪ್ಪ ಮನದಂದು ॥ ೧೮ ॥

ನಕುಲ ಸಹದೇವ ಧರ್ಮ ಭೀಮಸೇನ
ಚಕ್ರಕೋಟೆಗೆ ಹೊರಟಾರ ಆಗ

ಚಕ್ರಕೋಟೆ ಬಂತು ಸನಿಯಾಕ
ಆಗ ಜಯದ್ರಥ ಇದ್ದನು ಬಾಗಲಕ ॥ ೧೯ ॥

ಎರಡು ಮೂರು ಬಾಣಕ ಸೋತು
ಬಂದರು ಅವರು ಹಿಂದಕ
ಧರ್ಮ ಹಾಕಿದ ಮುಸುಗ
ಅರ್ಜುನಗ ಹೆಂಗ ತೋರಲೀಮುಖ ॥ ೧೦ ॥

ಧೈರ್ಯ ಗುನ್ನಿದರು ನಾಲ್ವರೋ
ಮುಣಗಿತು ಅಂದರು
ಪಾಂಡವರ ಹೆಸರು
ಅಭಿಮನ್ಯು ಬಂದನಾ ಒಳಗಿಂದ ॥ ೧೧ ॥

ಕಳಾ ಹಿಡದಾನ ನಾಕು ಮಂದಿದ
ಮಾರಿಯಾಕ ಸಣ್ಣದು ಮಾಡೀರಿ
ಹೇಳಬೇಕರಪ್ಪ ನನ ಮುಂದ
ಅನುಭವ ತಿಳಿದಾನು ಹೊಟ್ಯಾಂದ ॥ ೧೧ ॥

ಇಳವ ಕೊಡಿರೆಪ್ಪ ನನಗೊಂದ
ಇನೇಷ ಮಾತ್ರದಲೀ ಕೌರವರನ
ಕಡೆದು ಹಾಕತೇನಿ ನಾ ಛಾಪ
ನಾಶನಲ್ಲಿ ಕುಲದೀಪ ಹುಟ್ಟಿದ ಹೆಸರು ॥ ೧೨ ॥

ತಂದಿ ಪಾಂಡುರಾಜ ಅಧರ್ಮ ಅಂತಾನ
ಬೇಡಾಂತ ನೀನು
ಅನುಬಾರದಪ್ಪ ನೀ ಈ ಮಾತ
ಸಣ್ಣ ಮಗನ ಕಳೂಸದ ಹೆಂಗ ॥ ೧೪ ॥

ಜನ ಏಳು ಅಂದಿತು ನಮಗ
ಹೋದ ಕಾರ್ಯವು ನನ ಮಗಂದು
ಆಗಲೆಂತ ಹರಕೆ ಕೊಡಿರೆಪ್ಪ ನೀವು ನಿಂತ
ಧರ್ಮ ಬೀಮಗ ಖುಷಿ ಬಂದ

ಹವಾಯಿ ಹಸ್ತ ಇಟ್ಟಾರ ಕರದು ॥ ೧೫ ॥
ತಾಯಿ ಬಂದಾಳು ಸುಭದ್ರ
ಕೊಂದು ಹೋಗು ನಮ್ಮನೆಲ್ಲಾರನು

ತಾಯಿಗೆ ಹೇಳಿದನು ನಿಷ್ಠುರಮಾತು
ನಿನ್ನ ಶಿರಾ ಇರುವದು ಖಚಿತ ‖ ೧೬ ‖

ಹೋದ ಕಾರ್ಯ ನನ ಮಗಂದ
ಆಗಲೆಂತಾ ಹರಕೆ ಕೊಡ ತಾಯವ್ವ
ನಿಂದು ರಣದೊಳಗ ಜಯಶೀಲನಾಗಿ
ಹೋಗಿ ಬಾರೋ ಕಂದವ್ವ ನೀನ ‖ ೧೭ ‖

ಚಕ್ರಕೋಟೆಗೆ ಅಭಿಮನ್ಯು ಹೋಗ್ತಾ
ಬಾಣ ಬತ್ತಳಿಕೆ ಅವನ ಬಗಲಾಗ
ಬಾಣ ಬತ್ತಳಿಕೆ ಅವನ ಬಗಲಾಗ
ತುಡಮಿ ನಗಾರ ನುಡಿಸ್ಯಾರು ‖ ೧೮ ‖

ಹೊರಗ ನಗಾರಿ ಸೌ ಭತ್ತು
ತೂತರೀ ಸಪ್ಪುರೀ ಹಿಂದ
ಬದರಿ ಕಾಳಿ ಹಿಡಸ್ಯಾನ
ಆಯುಧಗಳ ತನ್ನ ಸಾಯುತ ತಗೊಂಡ ‖ ೧೯ ‖

ಹೋಗಿ ಹತ್ಯಾನು ರಥ
ಕಳಸಾಕ ಹೊರಟಾರ ಒಂದ ಕೇಳು
ಹೋಗರಿ ಅಂತಾನ ಅಭಿಮನ್ಯು ಭೂಪ
ಊರೆಲ್ಲಾ ಮಾಡ್ಯಾರ ಆಳಾಪ ‖ ೨೦ ‖

ಈ ವ್ಯಾಳೇಕ ಇಲ್ಲನೋಡ ಅವರಪ್ಪ
ರಥ ಹೊರಟಿತು ರಂಪಾರ
ನಡುಗ್ಯಾನು ಕೈಲಾಸ ಶಂಕರ
ರಥ ಕಂಡರು ಕೌರವರು ‖ ೨೦ ‖

ಇಷ್ಟು ದೌಡು ಬರುವವರ್‍ಯಾರು
ಬ್ರಹ್ಮ ವಿಷ್ಣು ಶಿವ ಶಂಕರ ಮತ್ತಿನ್ಯಾರ
ಶಿವನ ಮಗ ಷಣ್ಮುಖನಾದರ
ಅಯಿತಿ ವೀರಭದ್ರನ ಅವತಾರ ‖ ೨೧ ‖

ಅವರು ಪುರಮಾಸಿ ಇಲ್ಲಿಗ ಬಂದರ
ನಾವು ಆಗತೇವಿ ಸಂಹಾರ
ಸಾರಥಿಗೆ ಹೇಳ್ಯಾರ ಹುಶಾರಿ
ಅಗಸಿಗೆ ಬಂತು ಕಾಳಿ ತಯಾರಿ ‖ ೨೨ ‖

ಚಕ್ರಕೋಟೆ ಬಂತು ಸನಿಯಾಕ
ಜಯದ್ರಥ ಇದ್ದ ಬಾಗಲಕ
ಜಯದ್ರಥ ಅಭಿಮನ್ಯುನ ಕಂಡು
ಭಪ್ಪರೇ ಮಗನ ಬಹದ್ದೂರ ॥ ೩೪ ॥

ನೀ ಬಂದದ್ದು ಹೆಚ್ಚು ಇಲ್ಲಿಗೆ
ನೀ ಎಲ್ಲಾರಿಗ ಮಗ ಹೋಗ ತಿರುಗಿ
ನಾನು ಬಂದೇನಿ ನಿಮಗಾಗಿ
ಬೇಕದಾರ ಹೋಗ ಶಿಖಂಡಿ ॥ ೩೫ ॥

ಬರುವ ಬಾಣ ಹೊಡಿತಾನ ವಾರಿ
ಕಡದು ಕಡದು ಮಾಡತಾನ ಸೂರಿ
ಕೌರವ ಆಗ್ಯಾನು ಕೈಸೆರಿ ರಥಕ
ಕಟ್ಟಿ ಹೇಳ್ಯಾನು ಸಾರಿ ॥ ೩೭ ॥

ಕ್ಷತ್ರಿ ವಂಶದವರು ನೀವ ಆದರ
ಬಿಡಸಿಕೊಂಡು ನೀವು ಹೋಗರೀ
ಮಾತಾಡಿ ಮಾಡಿದರು ಮಸಲತ್ತ
ಬೆನ್ನಿಗೆ ಬಿದ್ದವರನ ಕೊಲ್ಲಬಾರದಂತ ॥ ೩೮ ॥

ಕಿರಿಯವ ಕೊಟ್ಟಾನು ಅವರಂತೆ
ಕೊಲ್ಲೊದಿಲ್ಲ ಮ್ಯಾಲೆ ಏಳಂತೆ
ಕರ್ಣಗ ಹೇಳಿದರು ಏಕಾಂತ
ಹಿಂದು ಬಂದ ಕಡಿಬೇಕಂತಾ ॥ ೩೯ ॥

ಕರ್ಣ ಬಂದು ಹಿಂದ ಕೈ ಕಡದಾ
ಹಾರಿ ಹೋದವು ಎರಡು ಹಸ್ತಾ
ರಥದ ಗಾಲಿಯೊಳಗ ಮಂಡಗೈಯಿ
ಹೆಟ್ಟಿ ತಿರುವಾಡಿ ಒಗಿತ್ಯಾನು ॥ ೪೦ ॥

ಗುಂಪಿಗೆ ಅಭಿಮನ್ಯು ನಿಂದರವಲ್ಲಾ
ಕಾಲಗೆರಿ ಹಿಂದಿನವರು ಕಡಿತಾರು
ಆವಾಗ ಆಯಿತು ಅವರಿಗೆ ಧೈರ್ಯ
ಮುಕರಿ ಬಂದರು ಅವರೆಲ್ಲಾರು ॥ ೪೧ ॥

ಸಾಗ ಕಂಬಳಿ ಮಡಿಗೆ ಮುಳ್ಳು
ಚೂಟದಂಗ ಬಾಣ ಬಡಿದಾವ ಯಾವ ಪರಿ

ದೇವಲೋಕದವರು ಅಳುತ್ತ
ಕಣ್ಣೀರು ಆಗಿ ಸುರಿದಾವ ಮುತ್ತ ॥ ೪೧ ॥

ಅಭಿಮನ್ಯು ಇದ್ದರಣಶೂರ
ರಣದೊಳಗ ತಾ ಗಂಭೀರ
ಚಕ್ರಕೋಟೆಯೊಳಗ ಲಡಾಯಿ ಮಾಡಿದನು
ಯಾರೂ ಇಲ್ಲರೀ ಮಗನಂತವರ ॥ ೪೨ ॥

* * *

## ಪುಂಡ ಭೂತಾಳ ಸಿದ್ಧದೇವರು

೧

ಸಲ್ಲಿಹೊತ್ತಿನ ನನ್ನ ಗುರುವಿನ ಕರದರ ಮಲ್ಲೀಗಿ ನೆನಿಬಂದ ಇಳಿದಾವ
ಮಲ್ಲೀಗಿ ಹೇಳ ಮಂಟಪದೊಳಗ ಗೊಲ್ಲಾಳ ಶಿವಾ ಬಂದ ಇಳಿದಾನ

ಗೊಲ್ಲಾಳ ಶಿವನೇ ನೀನೇ ಬಾ ನನ್ನ ಸಲ್ಲಗುದರಿ ಸಾಯೇಬೋ
ಸಲ್ಲಗುದರಿ ಕೈಯಾಗ ಹಿಡಕೊಂಡ ಸೊಗಸಾಗಿ ಮಾಡಿ ತಿರಿವ್ಯಾಡಿದೋ

ಗೊಲ್ಲಗುದಂ ಬಲಗೈಯ ಮ್ಯಾಲ ಬಲ್ಲಾಂಗ ತಿರಿವ್ಯಾಡಿದೋ
ಕೆಂದಗುದರಿ ಒಂದ ಗದ್ದದ ಮ್ಯಾಲ ಇಂಡಿಮಾಡಿ ಇಡ್ಯಾಡಿದೋ
ಇಂಡಿ ಮಾಡಿ ಈಡ್ಯಾಡುತ ಬಾ ನನ್ನ ದುಂಡ ಮಲ್ಲೀಗಿ ಧಡಿಗೊಳೊ

ದುಂಡ ಮಲ್ಲೀಗಿ ಧಡಿಗೋಳ ನಿನಗ ಸಣ್ಣಮಲ್ಲೀಗಿ ಸರಗೊಳೋ
ಸಣ್ಣ ಮಲ್ಲೀಗಿ ಸರಗೋಳ ನಿನಗ ಮಲ್ಲೀಗಿ ಹೂವಿನ ಮುಂಡಾಸೋ

ಮಲ್ಲೀಗಿ ಹೂವಿನ ಮುಂಡಾಸ ನಿನಗ ಶಾವಂತ್ರಿಹೂವಿನ ಶೆಲ್ಲೆನೋ
ಜಲ್ಲಿ ಜಲ್ಲಿಲೇ ಹುವ ಬಂದರ ಜಲ್ಯಾಡಿ ಮುಡಿದಿನಂದಾನೋ
ಬಂಡಿ ಬಂಡಿಲೇ ಹೂವ ಬಂದರ ಮಂಡಿಗಿ ಸಾಲ್ಯಾವ ಅಂದಾನೋ

ಅವರಿ ಪತ್ತರಿ ಅಡವ ಹಚ್ಚಿಕೊಂಡ ಹೋಳ ಮೈಯಲೇ ಹೊಳ್ಯಾನೋ
ಎಳಪ್ಪ ಎಬ್ಬಸತಾನ ಕೆಂಗರಣ್ಣಾ ತೆರದಾನೋ
ಕೆಂಗರಗಣ್ಣ ಗುಂಗರ ಮೀಸಿ ನುಂಗುವಂಥಾ ಭಾಳ ಅವತಾರೊ
ನುಂಗುವಂಥಾ ಭಾಳ ಅವತಾರನಂದರ ಬೈಲ ಭೂತಳಸಿದ್ದನೋ
ಬೈಲಭೂತಾಳ ಸಿದ್ದಾ ಬಾ ನನ್ನ ಬಡವರ ಅರ್ಜಿ ಬಂದಾವೋ

ಬಡವರ ಅರ್ಜಿ ಬಂದಾವೇನ ಬಲ್ಲವರ ಅರ್ಜಿ ಬಂದಾವೋ
ನಮ್ಮದೇವರ ಬರುವ ಹಾದೀಲೆ ಕಗ್ಗಲ್ ಕಡಿ ಆದಾವೋ
ಕಗ್ಗಲ್ ಕಡಿ ಆದಾವ ಹಿಡಗಲ್ ಹಿಟ್ಟ ಆದಾವೋ
ಹಿಂಡದೇವಿಯ ಗಂಡನಂದರ ಗಂಡದೇವಿಯ ಮಿಂಡನೋ
ಗಂಡದೇವಿಯ ಮಿಂಡನಂದರ ಪುಂಡ ಭೂತಾಳ ಸಿದ್ದನೋ

* * *

ಹರ ನಿನ್ನ ನೆನದೀನ ಗುರು ನಿನ್ನ ನೆನದೀವ
ಮರತ್ಯೇ ಸಲವುನ ಬಸವಾನೋ

ಮರತ್ಯೇ ಸಲವುನ ಬಸವಾನ ನೆನೆದೀನ ಬಾಗೋಡಿ ಬಸವಣ್ಣನೋ
ಬಾಗೋಡಿ ಬಸವನ ನೆನದೀವೋ ತಿಳಿಗಾವೆ ಬಸವಣ್ಣನೋ

ತಿಳಿಗಾವಿ ಬಸವನ ನೆನದೀವೋ ಕಡಪಟ್ಟ ಬಸವಣ್ಣನೋ
ಕಡಪಟ್ಟ ಬಸವನ ನೆನದೇವೋ ಕೊಡೆಕಲ್ ಬಸವಣ್ಣನೋ

ನಾರಿಯ ಹೊಟ್ಟಿಲೆ ಹೊರ‍್ಯಾಗಿ ಹುಟ್ಯಾನ
ಹೊನ್ನ ಬೊರ‍್ಯಾಳ ಬಸವಾನೋ

ಬೋರ‍್ಯಾಳಿ ಬಸವಾನ ನೆನದೀವೋ ಪರಪೂತ ಮಲ್ಲನ ನೆನದೀವೋ
ಪರವೂತ ಮಲ್ಲನ ನೆನದೀವೋ ಪಾತಾಳ ಗಂಗೀನ ನೆನದೀವೋ
ತೊಡಿಮ್ಯಾಲಿರುವ ಗೌರಾನ ನೆನದೀವ ಜಡಿ ಒಳಗಿರುವ ಗಂಗಾನೋ

ನಟ್ಟ ನಡುವೂ ನಮ್ಮಯ್ಯ ಪರಮೇಸೂರನ ನೆನದೀವೋ
ಪರಮೇಸೂರನ ನೆನದೀವೋ ನಾವ ಪಾರಬತಿ ದೇವಿನ ನೆನದೀವೋ

* * *

ರತ್ನ ಒಂದ ದೊರದಿತ ನನಗ ಓದ ಕೊಟ್ಟನಪಾ
ಕುರುಬನ ಕೈಯ್ಯಾಗ

ಅದರ ಮೂಲ ತಿಳಿಲಿಲ್ಲ ಕುರುಬಗ
ಹವಳಂತೆ ತಿಳಿದ ಮನದಾಗ

ಓದ ಕಟ್ಯಾನಪ ಕುರಿ ಕೊಳ್ಳಾಗ
ಕುರಿಯ ಅಂತೈತಿ ತನ್ನ ಮನದಾಗ
ಆನಿಯಷ್ಟ ಉದ್ದ ಆಗೀನ ಈಗ

ಆನಿ ಕಿಮ್ಮತ್ತ ಕುರಿ ಆದೀತ ಹ್ಯಾಂಗ
ರತ್ನ ವ್ಯಾಪಾರಾತ ತನ್ನೊಳ್ಯಾಗ
ಯೋಗಣ್ಣ ಸಿದ್ದ ಹಾಡ್ಯಾರ್ಥಿಂಗ
ತಾಳ ಮೆಟ್ಟ ಲಯಾ ಸ್ವರಾ ಕೋಗಿಲ್ಹಾಂಗ
ರೇಲ್ವೆಗಾಡಿ ನಡದಾಂಗಾತೋ ಹಳಿಮ್ಯಾಗ
ಅಮೋಗಸಿದ್ಧ ವರುವಾದನೋ ಯೋಗಣ್ಣಗ

* * *

ಕತ್ತಲ ಮನಿಯೋ ಕನ್ನಡಿ ಬೆಳಕೋ
ಮುತ್ಯಾ ಅರಕೇರಿ ಗೌಡಾನೋ
ಮುತ್ಯಾ ಅರಕೇರಿ ಗೌಡಾ ಬಾ ನನ್ನ ಮುಪ್ಪೀಲೆ ಭಾಳ ಹಿರಿಯನೋ
ಮುಪ್ಪೀಲೆ ಧಾಳ ಹಿರಿಯಾ ನನ್ನ ಕಪ್ಪೀಲೆ ಭಾಳ ಕರಿಚೆಲುವೋ
ಕರಿಯ ಗಡ್ಡದ ಕಸ್ತೂರಿ ಬ ನನ್ನ ನರಿಯ ಗಡ್ಡದ ಹಿರಿಯನೋ
ನೀಲಗಡ್ಡದ ಲೋಲ್ಯಾ ಬಾ ನನ್ನ ನಾಡ ಗೌಡಮ್ಮಗೊಂಡಾನೋ

* * *

ಕಾಣಲ್ದ ಕಂಡೀರಿ ಇಪರೀತೋ
ಕುತ್ತ ಮೆಟ್ಟು ತಗಲ ಬಗಲ ಆದೀತೋ
ರಾಣಿಯ ಅಮಲ ಅಡಗಿತ್ತೋ
ಹೆಣ್ಣಮಕ್ಕಳ ಜಲಮಕ ಕೋಲಿ ಬಂತೋ
ಈಸ ದಿವಸ ಬಲು ಬೇಸಿತ್ತೊ
ಸಣ್ಣ ಕೂಸಿಗಾದರೂ ಸಹಿಸಾಲಿತ್ತೊ
ಭಾಗ್ಯವ ಗಳಿಸಿರಿ ಭವು ಮಸ್ತಾ
ನಾಡಾಂದೆಲ್ಲ ಇಪರೀತಾ
ಅನ್ನ ಬಂದ ಮ್ಯಾಲ ಗರವೀಕಿ ಬರಬ್ಯಾಡ
ಗರವಿನ ಮಾತೊಂದ ಬಿಡಬೇಕೋ
ಸುತ್ತ ದೇಶಕ ತೆರಿ ಹೊಡದೀತೋ
ಸುಳ್ಳಲ್ಲ ತಮ್ಮ ಸುಡಗಿ ಆದೀತೋ
ಪದಾ ಮಾಡಿ ತಾ ಸಾರಿ ಹೋಗುವಾಗ
ಚಿಕ್ಕಯ್ಯನ ವಚನ ಒಂದ ಆದೀತೋ

* * *

ಹಾಲಮತದಾಗ ನೀಲವ ತೋರ್ಯಾನ ನಿಂಗಾಗಿ ಬೀರಪ್ಪನೋ
ನಿಂಗಾಗಿ ಇರತಾನ ಬೀರಪ್ಪನೋ

ಅಂಗೈಯಾಗ ಹಿಡದಾನ ಮಾಳಪ್ಪನೋ
ಅಂಗೈಯಾಗ ಹಿಡಕೊಂಡ ಮಾರತಾಸ ರಾತ್ರ್ಯಾಗ
ಶಾವಿಯ ಮೂಡತಾನ ಮಾಳಪ್ಪನೋ
ಭಕ್ತೀಗಿ ಮೆಚ್ಚ್ಯಾನ ಬೀರಪ್ಪನೋ
ಏನ ಬೇಡ್ತಿ ಬೇಡಂದಾನ ಮಾಳಪ್ಪನೋ
ಬದಕವ ಬ್ಯಾಡಂದಾ ಭಾಗ್ಯವ ಬ್ಯಾಡಂದಾ
ನಿನ್ನ ವರವ ನನಗಿರಲೆಂದ ಮಾಳಪ್ಪನೋ

---

[1] ಡೊಳ್ಳಿನ ಪದಗಳು - “”ಕಾಡು ಹೂವುಗಳು” ಕೃತಿ. ಸಂ॥ ಜೆ.ಬಿ. ಖಾಡೆ, ಮೈ.ವಿ.ವಿ. ಕನ್ನಡ ಅಧ್ಯಯನ ಸಂಸ್ಥೆ, ೧೯೭೩.

## ಡೊಳ್ಳಿನ ಇತರ ಹಾಡುಗಳು

ಹಾಲಮಡ್ಡಿಯಮ್ಯಾಲ ಬಾಲ ಕಂದನಾಗಿ ನೀಲವ ಮಾಡಿದ ಗುರುವಚನೋ
ನೀಲವ ಮಾಡೂತ ಕುಲಕುಲು ನಗುವೂತ ಬಂದವರಿಗಿ ಹರಕಿ ಕೊಟ್ಟನೋ
ವರಗೋಳ ಕೊಡವೊತ ಹುಲಿಮಕದಗಶ್ಯಾಗ ಅಷ್ಟಪಾಲಕರವತಾರೋ
ಅಷ್ಟಪಾಲಕರ ಅವತಾರೋ ಮುಂದಿರು ಸಾಲಪಗಡಿ ಬಾಜಾರೋ
ಸಾಲಪಗಡಿ ಬಾಜಾರದೊಳಗಿರುವ ಡಾಲಗಣಿ ಮೆರೆವೂದು ಚೆಲುವೋ

ಎತ್ತ ನೋಡಿದರೂ ಸುತ್ತ ಖಾನೇಗಳು ನಡುವ ಮಾಲಗಂಬ ಚೆಲವೋ
ಒಳಗ ಗುರುವ ಕುತ್ತ ಹೊರಗ ಪಾದಗಳು ಎಡಬಲಕ ಎರಡಾಣಿ ಚೆಲವೋ
ಗುಲಾಬಿ ಹೂವಿನ್ಹಾಂಗ ಗುರ್ತಾವ ತೂರ್ಯಾವ ಮರ್ತೆಕ ಬಂದ ಮಾಸಿದ್ದ ಚೆಲವೋ
ಹಸಿರ ಹಳದಿಬಣ್ಣ ಕೆಂಪ ಸಿಂಹಾಸನ
ತನ ಹದಿನೇಳ ಕಳಿಯ ಅಮಗೊಂಡ ಚೆಲವೋ

* * *

ಸೋಮಾರ ಮಾಡ್ಯಾಳ ಸುದರಾಶಿ
ಐನಾರನ ಕರಿತಾಳ ಗುರಕಾಶಿ
ನೋಡಕ್ಕ ನೋಡನಾ ಹ್ಯಾಂಗ ಮಾಡತೀ

ಆತನ ಕೂಡಾ ನಾ ಬಾಳೆ ಹ್ಯಾಂಗ ಮಾಡಲೆ
ಮುಂಜಾಲೆ ಎಳತಾನ ಮೂರಮುದ್ದಿ ನುಂಗತಾನ
ಕಂಡವರ ಮ್ಯಾಲ ಹೋಗಿ ಬಿದ್ದನಂತಾನ
ನೋಡಕ್ಕ ನೋಡನಾ ಹ್ಯಾಂಗ ಮಾಡಲೇ

ಆತನಗೂಡ ಬಾಳೇ ಹ್ಯಾಂಗ ಮಾಡಲೇ
ಬಾಗೀಲಿಗಿ ಫಡಕಿಲ್ಲ ಬಾರಾಣೆ ರೊಕ್ಕಿಲ್ಲ
ಬಾದಾಮಿ ತೇರ ಏಳದೀನಂತಾನ
ನೋಡಕ್ಕ ನೋಡನಾ ಹ್ಯಾಂಗ ಮಾಡತೀ

ಪುಟ್ಯಾಗ ಹಿಟ್ಟಿಲ್ಲ ತಟ್ಟಾಗ ರೊಟ್ಟಿಲ್ಲ
ಏಳು ಮಂದಿ ಸಾಧೂರನ ಉಣಿಸಿನಂತಾನ
ನೋಡಕ್ಕ ನೋಡನಾ ಹ್ಯಾಂಗ ಮಾಡಲೇ

ಮರದಾಗ ಜ್ವಾಳಿಲ್ಲ ಕಲ್ಲಾಗ ಹಿಟ್ಟಿಲ್ಲ
ಬುಳಪ್ಪನ ಜಾತ್ರಿಗಿ ಹೋಗಲೇಂತಾನ
ನೋಡಕ್ಕ ನೋಡನಾ ಹ್ಯಾಂಗ ಮಾಡಲೇ

ಹೊಚ್ಚಲಾಕ ಅರಬಿಲ್ಲ ತಲಿಗಿ ಎಣ್ಣಿಲ್ಲ
ಕೂಸ ಹುಟ್ಟೈತೆಂತ ಕುಣದಾಡತಾನ
ನೋಡಕ್ಕ ನೋಡನಾ ಹ್ಯಾಂಗ ಮಾಡಲೇ

ಅಡವೀಗಿ ಹೋಗವಲ್ಲ ಹಿಡಿ ಹುಲ್ಲು ತರದಲ್ಲಿ
ಇದ್ದದ ಹೈನಾ ಎಲ್ಲಾ ಉಣತೀನಂತಾನ
ನೋಡಕ್ಕ ನೋಡನಾ ಹ್ಯಾಂಗ ಮಾಡಲೇ
ನೀರಿಗಿ ಹೋಗವಲ್ಲ ಊರಸುದ್ದಿ ಹೇಳತಾನ
ಗುರುವೀನ ಪಾದಾ ಹಿಡಿಬೇಕ
ನೋಡಕ್ಕ ನೋಡನಾ ಹ್ಯಾಂಗ ಮಾಡಲೇ
ಆತನಗೊಡ ಬಾಳೇ ಹ್ಯಾಂಗ ಮಾಡಲೇ

* * *

ಎಷ್ಟ ಹೇಳಿದರ ಕೇಳಿವಲ್ಲೋ
ವಟ್ಟತನ ಬುದ್ಧಿ ಬಿಡವಲ್ಲೋ
ನಾಯಿಬಾಲ ಲಳಗ್ಯಾನ ಹಾಕಿದರ ಎಂದಿಗಾಗದ ನೆಟ್ಟುಗ
ಒತ್ತಿ ಹಾಡಿದರ ಸತ್ತ ಹೋಗತಿ ಗೊತ್ತಿಜೀಂವಾ
ಇದ್ದರ ನೀನು ಹೇಳಬೇಕೋ
ಆತಾತು ಅನಬ್ಯಾಡ್ರಿ ಆಗಮಾನವ ಒಂದೈತಿ
ಆದದ್ದ ಗಂಟೆಲ್ಲ ಬಿಡಿಸುವವರ ಬರತಾರ

ಎಚ್ಚರ ಇರಬೇಕು ಕೇಳಿರಣ್ಣ
ಒಕ್ಕಳ ಬಿತ್ತೀರಿ ಇಕ್ಕಳ ಬೆಳದೀರಿ
ಎಚ್ಚರ ಇರಬೇಕಣ್ಣ

ಒಕ್ಕಲತನವೆಲ್ಲ ಹಕ್ಕಲಾದಾವೋ ಕೇಳಿರಣ್ಣ
ಎಂಟೆತ್ತ ಕಟ್ಟದಾಂವಾ ಒಂಟೆತ್ತ ಕಟ್ಟ್ಯಾನ
ಎಚ್ಚರ ಇರಬೇಕಣ್ಣ

ಗೌಡ ಕುಲಕರ್ಣಿ ತಾಡಾಗಿ ಹೋದರ
ಎಚ್ಚರ ಇರಬೇಕಣ್ಣ

ಉಳ್ಳಿಯ ಗಡ್ಡಿಗಿ ಹೆಣ್ಣೊಂದು ಆದಾವು
ಬಣ್ಣದ ಗುಬ್ಯಾರ ಮಣ್ಣಾಗಿ ಹ್ವಾದಾನ
ಹುಲಕಲ್ಲೀಗಿ ಕರ್ದವ ಬಿದ್ದೀತು
ಎಚ್ಚರ ಇರಬೇಕಣ್ಣ

ದೀವಳಿಗಿ ಹಬ್ಬಕ ದಿಮ್ಮವ ಬಡಿಸೀತು
ಕಾಗಿ ಗುಬ್ಬಿ ಕೂಡಿ ಹಬ್ಬವ ಹಾಕ್ಯಾವ

* * *

ಆದಿಸ್ಥಳದಲ್ಲಿ ಇದ್ದ ಕಂಬಳಿ
ಹಾಲುಮತದ ಧರಮಕ ಬತ್ತ ಕಂಬಳಿ

ಶಿಷ್ಯಾರದಿಂದ ಹುಟ್ಟಿತ ಕಂಬಳಿ
ಜಗದ ಗುರುವ ಮಡ್ಡಿಸಿದ್ದಾಗ ಹೊರುವ ಕಂಬಳಿ

ಮಳಿರಾಜ ಬಂದಾಗ ಬೆಚ್ಚಾತ ಕಂಬಳಿ
ತಲಿಮ್ಯಾಲ ಸುತ್ತುವ ಪಾವಡಾತ ಕಂಬಳಿ
ರಾಜಪಂಡಿತರಿಗೆ ಉಲನ್‌ಕೋಟ ಜಾಕೀಟನಂತ ಕಂಬಳಿ

ಬಿತ್ತು ಕೂರಿಗಿ ಹಾಕುವ ಕಂಬಳಿ ಕಣದಾಗ ರಾಶಿ ಅಳಿಯುವ ಕಂಬಳಿ
ಬಂಡಿ ರೈತಗ ಮುಂಡಿಮ್ಯಾಲ ಆಡುವ ಕಂಬಳಿ

ಬಂದ ಬೀಗರಿಗೆ ಹಾಸುವ ಕಂಬಳಿ
ಬಾಣಂತಿ ಮೈಮ್ಯಾಲ ಹೊರುವ ಕಂಬಳಿ

ಕೂಸಿನ ಕೈಯಾಗ ತಕಡಿಯಾತ ಕಂಬಳಿ
ಸರವರಿಗೆಲ್ಲ ಬೇಕಾತ ಕಂಬಳಿ

ದಿಮ್ಮಿನ ಬುಡಕ ಹಾಸುವ ಕಂಬಳಿ
ಇಂಗ ಜೀರಿಗಿ ಮಾರುವ ಕೋರಿ ಶೆಟ್ಟಿಗಾತು ಕಂಬಳಿ

ಶಿಷ್ಯಾರದಿಂದ ಹುಟ್ಟಿತ ಕಂಬಳಿ
ಸಿದ್ದ ಮಾಳಪ್ಪ ಎದ್ದ ಕರವೂದ
ಸುದ್ಧ ಜಾಡಿ ಗೊಂಗಡಿ

## ಹುಲಿಯ ಫಜೀತಿ

ಕುರಬ ಗುಡ್ಡದಾಗ ಕುರಿಯ ಮೇಸತಿದ್ದಾ
ಬೇಗು ಬೆಳಗು ರಾತರಿ ಹಗಲಾ ॥ ಪ ॥

ಗುಡ್ಡದ ವಾರ್‍ಯಾಗ ದಡ್ಡಿಹಾಕಿ ಮೆಟ್ಟಮಾಡಿದ್ದೊ ಗುಡಿಸಲಾ
ರೊಟ್ಟಿ ಬರತಿದ್ದು ಮ್ಯಾಲ ಮ್ಯಾಲ
ಹಿಂಡಕೊಂಡ ಬಡವತಿದ್ದ ಹಸಿ ಹಾಲಾ
ಕುರಿಮೇಸುದರೊಳಗೊಂದು ದಿನ ಬಿತ್ತೊ ಮಾಡಗತ್ತಲಾ
ಗಡ್ಡದ ಹೋತೊಂದು ದೊಡ್ಡಾ ಜನಾವರ ಕುರ್‍ಯಾಗಿತ್ತೊ ಮಿಗಿಲಾ
ತೆಪ್ಪಸಕೊಂಡ ಸರದ ನಿಂತಿತೋ ಮದಲಾ
ಬಿಟ್ಟ ಹ್ವಾದ ತಿರುಗಿ ನೋಡಲಿಲ್ಲ ಕುರಬ
ಒಂದ ತಾಸಿನ್ಯಾಗ ಮಳಿಯನಿಂತ ತುಸು ಮಾಡತೋ ಬಯಲಾ
ಕುರಿ ಹುಡಕುತ ಹರಿಹಿಡದ ಗಾಬರಿ ನಡೆದಿತ್ತಲ್ಲಾ
ಮುಂದ ಹುಲಿಗವಿ ಇತ್ತೊ ಅಸಲಾ
ಬಳಗ ಹೊಕ್ಕ ಝೂಡಿಸಿತೋ ಕೂದಲಾ
ಹುಲಿ ಗುಡ್ಡಕ ಮೈಲಾಕ ಹೋಗಿತ್ತು ಇನಾ ಬಂದಿದ್ದಿಲ್ಲಾ
ಬಂತ ಹುಲಿ ಗುಡಗ ಹೊಡಕೋತ ಆರಭಟ ಸರವತ್ತಿನ ಅಮಲಾ
ಗವಿ ಹಳಗ ನೀ ಯಾರ ಕರಗಾಲಾ
ಹೊರಬೀಳಂತ ಮಾಡತೈತಿ ಗುಲ್ಲಾ
ಧೈರ್ಯಮಾಡಿ ಹೋತಪ್ಪ ಮಾತಾಡತಾನ

* * *

## ಜೊಳ್ಳಾಸುರನ ಪದ

ಬೇಡಿದ್ದು ಕೊಡುವಂಥ ರೂಢಿಗೀಶನ ಕಾಡಿದ್ದು ಕೇಳಿರಿ ಹೇಳುವೆನು
ಜೊಳ್ಳಾಸುರನೆಂಬ ಕಳ್ಳ ದೈತ್ಯನು ಬೋಳ ಶಂಕರಗೆ ಮರೆ ಬಿದ್ದ
ಉಪವಾಸ ಕುಂತವ ತಪಸ್ಸು ಮಾಡಿ ಶರಶಿವಾರಸ್ತು ಏಡಿ ಬೇಕಂದ।
ದುಷ್ಟ ದೈತ್ಯನ ಹೊಟ್ಟೆಯೊಳಗಣ ಕೆಟ್ಟಗುಣ ಕೇಳಿರಿ ಒಂದೀಟ
ಅಷ್ಟ ದೈತ್ಯರೊಳ್ ಶ್ರೇಷ್ಠನಿನಿಸಿ ತಾ ಸ್ರಿಷ್ಟಿಗೀಶನಾಗಬೇಕೆಂದಾ
ದೇವರಿಗಿಂತಾ ದೇವನಾಗುತೀನಿ ಸಾವು ಹುಟ್ಟು ನನಗಿಲ್ಲೆಂದ
ಚಿರಂಜೀವಿಯಾಗಿ ಪರಸ್ಪರ ನಾನು ಪಾರ್ವತಿದೇವಿ ಆಳಬೇಕೆಂದ
ಅಷ್ಟ ತಿಳಿದು ದೈತ್ಯ ಶ್ರೇಷ್ಠ ತಾ ನಿಷ್ಟಲಿಂದ ಮಾಡಿದ ತಪಸ್ಸು
ಬೋಳ ಶಂಕರನು ಖೂಳ ದೈತ್ಯನಿಗೆ ಏನು ಬೇಡುತ್ತಿದಿ ಬೇಡೆಂದಾ
ನಿನ್ನ ತಪಸ್ಸಿಗೆ ಚೆನ್ನಾಗಿ ಮೆಚ್ಚಿನಿ ಇನ್ನೇನು ಬೇಡುತ್ತಿ ಬೇಡೆಂದಾ
ವಚನ ಕೊಟ್ಟರೆ ರಚನವಾಗಿ ಚರ್ಚಿಸಿ ಹೇಳುತೀನಿ ಮನದಂದಾ
ಸ್ರಿಷ್ಟಿಕರ್ತ ಶಿವ ಸಿಟ್ಟಾಗಿ ಹೇಳುತ್ತಾನೆ ಕೊಟ್ಟ ವಚನ ತಪ್ಪುವದಿಲ್ಲೆಂದ
ಮುಂದಲ ಮಜಕೂರ ಚಂದಾಗಿ ಕೇಳಿರಿ ಮಂದಬುದ್ಧಿ ಆ ದೈತ್ಯನದ
ಗಂಗಾಧರನನ್ನ ಅಂಗದ ಒಳಗೆ ನುಂಗುವ ವರವನ್ನು ಕೇಳಿದೀಗ
ಇಂಥಾದೊಂದು ನಾನು ಪಂಥ ಮಾಡಿಕೊಂಡು ಕುಂತಿದ್ದೇನು ನಾನು ಉಪವಾಸ
ಹೊನ್ನು ಒಲ್ಲೆ ನಾನು ಚಿನ್ನ ಒಲ್ಲೆ ನಾನು ನಿನ್ನನ್ನು ಮಾತ್ರ ನಾನು ನುಂಗುವೆನೆಂದಾ
ಅಂದ ಮಾತು ಕೇಳಿ ಕುಂದುಗೊರಳನಾಗ ನನ್ನದೊಂದು ಮಾತೈತೆ ಕೇಳೆಂದ

ವಚನ

ಪರಮಾತ್ಮನು ಅನ್ನುತ್ತಾನೆ ಎಲೈ ಜೊಳ್ಳಾಸುರನೆ ನಿನ್ನ ತಪಸ್ಸಿಗೆ ಮೆಚ್ಚಿದೆ. ಏನು ಬೇಡುತ್ತೀದಿ ಬೇಡೆಂದನು. ಆಗ ಜೊಳ್ಳಾಸುರನು ನಿನ್ನ ದೇಹವನ್ನು ನನ್ನ ಪಿಂಡಾಂದೊಳಗೆ ನುಂಗಬೇಕೆಂದು ತಪಸ್ಸು ಮಾಡಿದ್ದೇನೆ. ಈಗ ನಿನ್ನನ್ನು ನುಂಗುತ್ತೇನೆ ಎಂದನು. ಆಗ ಪರಮಾತ್ಮನು ಅನ್ನುತ್ತಾನೆ, ಎಲೈ ಜೊಳ್ಳಾಸುರನೇ ಕೇಳತಕ್ಕಂಥ ವಸ್ತುವನ್ನು ಕೇಳಲಿಲ್ಲಾ ಆದರೆ ನನ್ನ ದೇಹವನ್ನು ಕೊಡಲಿಕ್ಕೆ ಸಿದ್ಧನಿದ್ದೇನೆ. ಆದರೆ ನನ್ನ ದೇಹ ನನ್ನ ಸ್ವತಂತ್ರವಿಲ್ಲ. ಯಾಕಂದರೆ ನನಗೆ ಅರ್ಧನಾರೀಶ್ವರನೆಂಬ ಹೆಸರು ಬಂದಿರುವುದು ಆದಕಾರಣ ಪಾರ್ವತಾದೇವಿಯನ್ನು ಕೇಳಿಕೊಂಡು ಬಂದು ನನ್ನ ದೇಹವನ್ನು ನಿನಗೆ ಕೊಡುತ್ತೇನೆಂದು ಕೈಲಾಸಕ್ಕೆ ತೆರಳುವಂಥಾವನಾದನು.

ಪದ

ಹೋಗಿ ಬರುತ್ತೇನಂಥ ಆಗ ಪರಮಾತ್ಮನು ಬೇಗ ಕೈಲಾಸಕ್ಕೆ ತೆರಳಿದನು
ಹೊಕ್ಕನು ಕೈಲಾಸ ಮುಕ್ಕಣ್ಣ ಸಾಂಬನು ಮುಕ್ತಿಸಿಂಹಾಸನ ಏರಿದನು
ಗಂಧರ್ವ ಗರುಡರು ಬಂದು ಚೆನ್ನಾಗಿ ವಂದನೆ ಮಾಡಿದರು
ಗಿರಿಜನಂದಿನಿಯು ಆಗ ಹರನ ಪಾದಕ್ಕೆರಗಿ ಶಿರಬಾಗಿ ವಂದನೆ ಮಾಡಿದಳು
ಬಲ್ಲಿದ ಶಿವನಿಗೆ ಎಲ್ಲರು ಕೈಮುಗಿದು ಎಲ್ಲಿಂದ ಬಂದಿರಿ ಹೇಳಿನ್ನು
ಬಾಳಾಕ್ಷ ಅನ್ನುತ್ತಾನೆ ಲಾಲಿಸಿ ಕೇಳಿರಿ ಭೂಲೋಕಕ್ಕೆ ನಾನು ಹೋಗಿದ್ದೆನು
ಮರ್ತ್ಯಲೋಕದೊಳಗೆ ಆದ ವರ್ತಮಾನ ತುರ್ತಕ್ಕೆ ಕೇಳಿರಿ ಹೇಳುವೆನಾ
ಅನುಗಾಲ ನನಗಾಗಿ ಅಲ್ಲೊಬ್ಬ ದೈತ್ಯನು ಘನವಾದ ತಪಸ್ಸು ಮಾಡಿದನು

ಅಂತಃಕರಣದಿಂದ ಅವನ ಹತ್ತಿರ ಹೋಗಿ ಏನು ಬೇಡುತ್ತಿ ಬೇಡೆಂದೆನು
ಯಾರ್‍ಯಾರು ಬೇಡದ ವರವನ್ನು ಬೇಡಿದ ಘೋರ ಬಂತು ನನಗೆ ಮಾಡಲ್ಯಾಂಗೆ
ಮಂಗ ದೈತ್ಯನು ಅಂಗದ ಒಳಗೆ ನುಂಗುವ ವರವನ್ನು ಕೇಳಿದನು
ಗಂಗಾದೇವಿ ಇದಕೆ ಹ್ಯಾಂಗ ಮಾಡಲಿ ನಾ, ಮಂಗ ದೈತ್ಯಗೆ ಮಾತು ಕೊಟ್ಟಿಹೆನು।
ಮಾತು ಕೊಟ್ಟ ಮೇಲೆ ತಪ್ಪುವುದ್ಯಾಕಿನ್ನು ಪ್ರೀತಿಲಿಂದ ಹೋಗಿ ಬರ್‍ರಿ ನೀವು

**ವಚನ**

ಪರಮಾತ್ಮನು ಅರುಹಿದ ಮಾತಿಗೆ ಗಿರಿಜೆಯು ಅನ್ನುತ್ತಾಳೆ. ಅಯ್ಯೋ ಹರನೆ ಆ ದೈತ್ಯನು ನಿನ್ನ ಅಂಗವನ್ನು ನುಂಗಿದ ಮೇಲೆ ನನ್ನ ಮುತ್ತೈದಿತನಕ್ಕೆ ಧಕ್ಕಿಯನ್ನು ತಂದಿರಲ್ಲಾ ಎಂದಳು. ಆಗ ಪರಮಾತ್ಮನು ಅನ್ನುತ್ತಾನೆ, ಎಲೆ ಸತ್ಯವುಳ್ಳ ಪಾರ್ವತಿಯೇ ಕೇಳು. ನಿನ್ನ ಮುತ್ತೈದಿತನವು ಸ್ಥಿರವಾಗಿದ್ದರೆ ಆ ದೈತ್ಯನು ನನ್ನ ನುಂಗಿದರೇನು ಅಥವಾ ಬಿಟ್ಟರೇನು. ಮುತ್ತೈದಿತನಕ್ಕೆ ಕುಂದು ಬರಲರಿಯದು ಎಂದನು. ಆಗ ದುರ್ಗಿಯು ಅನ್ನುತ್ತಾಳೆ. ಹೇ ಸತ್ಯವುಳ್ಳ ಸದಾಶಿವ ಮೃತ್ಯುಂಜಯನೇ ನೀವು ಆ ದೈತ್ಯನಿಗೆ ಮಾತು ಕೊಟ್ಟಿದ್ದೀರಿ. ನಿಮ್ಮ ಸತ್ಯಕ್ಕೆ ನಿಮಿತ್ಯ ಬಾರದಂತೆ ಅದಕ್ಕಾಗಿ ತುರ್ತು ಹೋಗಿ ಬನ್ನಿರೆಂದು ಪಾರ್ವತಿದೇವಿಯು ಪರಮಾತ್ಮನನ್ನು ಕಳುಹಿಸುವಂಥಾಕಿಯಾದಳು.

**ಪದ**

ಗಿರಿಜೆ ಅಪ್ಪಣೆಯನ್ನು ಹರನು ತಕ್ಕೊಂಡು ತಿರುಗಿ ಬಂದನು ಸ್ವರ್ಗಲೋಕಕ್ಕೆ
ಸಾಕ್ಷಾತ್ ತಾ ಬಂದು ರಾಕ್ಷಸಗೆ ಅನ್ನುತ್ತಾನೆ. ಈ ಕ್ಷಣ ಕೇಳೋ ನೀ ಅಂಬುದೇನಾ
ಶಂಭುವೇ ನಾನೀಗ ಅಂಬುವದೇನೈತೆ ತಿಂಬುವದು ನಿನ್ನನ್ನು ತುರ್ತಕ್ಕೆ ನಾನಾ
ಇಂದಿಗೆ ನನ್ನ ನುಂಗಿ ಎಂದಿಗೆ ಬಿಡುವದು ಚೆನ್ನಾಗಿ ಮಾಡೋ ಕರಾರವನಾ
ಮುದ್ದತು ಮಾಡಿ ನೀ ನುಂಗ ನನ್ನ ಸದ್ಯಕ್ಕೆ ಸಿದ್ಧನಾಗಿ ಬಂದಿದ್ದೆನಾ
ಎಂದಿಗೆ ಕೂಡುವವು ಪಂಚರಾತ್ರಿಗಳು ಅಂದಿಗೆ ನಿನ್ನನ್ನು ಬಿಡುಹುವೆನು
ಒಳ್ಳೇದು ನುಂಗೋದು ಪರಮಾತ್ಮ ಆಗ ಕಳ್ಳ ದೈತ್ಯ ತಾ ನುಂಗಿದನಾ
ಮಸಲತ್ತು ಕೇಳಿರಿ ಅಸುರನು ಮಾಡಿದ್ದು ಕಸಿಬಸಿ ಬಿಡತನ ಮುಂದಲನೂ
ಮನದೊಳಗೆ ಅಂಬುತಾನೆ ಅಣಿಯಿಲ್ಲಾ ನನಗ್ಯಾರು ಘನ ಮಹಿಮ ಶಿವನನ್ನು ನುಂಗಿದೆನಾ
ಮೂರು ಲೋಕಕ್ಕೆಲ್ಲಾ ಕಾರಣನಾದಂತ ಧೀರ ಗಂಗಾದೇವಿ ಆಳುವೆನಾ
ಸಾಯುದು ಹುಟ್ಟಿದು ನನಗಿಲ್ಲಾ ಕೇಳಿರಿ ದೇವರಿಗಿಂತ ದೇವನಾದೆ ನಾನು
ಜಂಭರಾರಿಯು ನಾನು ಶಂಭೋಶಂಕರ ನಾನು ಗಂಭೀರ ಪರಶಿವ ನಾನಾದೆ
ಇಷ್ಟೊಂದು ಗರ್ವವು ಹುಟ್ಟಿತು ಅವನಿಗೆ ಸೃಷ್ಟಿಕರ್ತನ ಮಹಿಮೆ ಕೇಳಿರಿನ್ನು
ನಂಬಿ ಕೆಟ್ಟವರಿಲ್ಲ ಶಂಭುಶಂಕರ ತಾನುಕುಂಬಾರ ಹುಳದಂತೆ ಇರುತಿಹನು
ಇದರಂತೆ ದೈತ್ಯನ ಉದರದಲ್ಲಿ ಇದ್ದನು ಹೆದರಿಕಿ ಇದ್ದಿಲ್ಲ ಶಿವಗಿನ್ನು
ವಾಯ್ದಕ್ಕೆ ಸರಿಯಾಗಿ ಪಂಚರಾತ್ರಿಗಳು ಒಂದೇ ದಿವಸಕ್ಕೆ ಬಂದು ಕೂಡಿದವು
ವಾಯ್ದಕ್ಕೆ ಸರಿಯಾಗಿ ಪಂಚರಾತ್ರಿಗಳು ಒಂದೇ ದಿವಸಕ್ಕೆ ಬಂದು ಕೂಡಿದವು
ಕೂಡಿದರು ಬಿಡಲಿಲ್ಲ ರೂಢಿಗೀಶ್ವರನನ್ನು ಆಡಿದ ವಚನಕ್ಕೆ ತಪ್ಪಿದನು

ಕಾಡುವ ಕಾಲಕ್ಕೆ ಕೂಡಿ ದೈತ್ಯನಿಗೆ ಮಾಡಿತು ವಿಧಿ ಉಪಟಳವನು
ಮುಂದಲ ಮಜಕೂರ ಚೆಂದಾಗಿ ಕೇಳಿರಿ ಒಂದು ಉಳಿಯದಂತೆ ಹೇಳುವೆನು.

**ವಚನ**

ಕೇಳಿರಿ ಕೆಟ್ಟ ದೈತ್ಯನಿಗೆ ಕಟ್ಟು ಮಾಡಿಕೊಟ್ಟ ವಚನವೇನೆಂದರೆ ಒಂದೇ ದಿವಸಕ್ಕೆ ಪಂಚರಾತ್ರಿಗಳು ಎಂದಿಗೆ ಕೂಡುವವು ಅಂದಿಗೆ ಬಿಡುಹುವೆನೆಂದನು. ಪರಮಾತ್ಮನಿಗೆ ಪಂಚಮುಖಗಳು ಇದ್ದುವು. ಆದ್ದರಿಂದ ಪಂಚರಾತ್ರಿಗಳು ನಾನು ಮುಂಚೆ ನೀನು ಮುಂದೆ ಎಂದು ಕೊಡುವಂಥವುಗಳಾದವು. ಕೂಡಿದರು ಪರಮಾತ್ಮನನ್ನು ಬಿಡದೆ ಹೋದನು.

**ಪದ**

ಭಾಳಾಕ್ಷ ಹೋಗಿನ್ನು ಕೈಲಾಸ ಪಟ್ಟಣ ಹಾಳು ಬಿದ್ದಾಂಗ ಆಯಿತು ಕೇಳಿರಿ ಇನ್ನು
ಗಡಿಬಿಡಿ ಬಿದ್ದಿತು ಮಡದಿಯು ಪಾರ್ವತಿ ಬಿಡದೆ ಮಾಡಿದಳು ದುಃಖವನು
ಸೃಷ್ಟಿಕರ್ತನು ಹೋಗಿ ಎಷ್ಟು ದಿವಸವಾಯಿತು ಕೆಟ್ಟ ದೈತ್ಯನು ಮಾಡಿದನು
ಮಂದಾರಗಿರಿಯವಾಸ ಇಂದ್ರಾದ್ಯರು ಬರಲಿಲ್ಲ ಎಂದು ಕಂಡೆನವರ ಮಾರಿಯನು
ಮುಕ್ಕಣ್ಣ ಶಿವ ಎನ್ನ ದುಃಖಕ್ಕೆ ಗುರಿಮಾಡಿ ಅಕ್ಕರತೆ ಎಂಬುದು ಹೋಯಿತಿನ್ನು
ನಂದೀಶ ಎನಗಿನ್ನು ತಂದಾನು ವನವಾಸ ಮುಂದೇನು ನಾನಿದ್ದು ಮಾಡುವೆನು
ಎಲ್ಲಿಹನೆಂದು ವಲ್ಲಭ ಶಿವನನ್ನು ಎಲ್ಲರಿಗೆ ಹೇಳ್ಯಾಳು ಹುಡುಕರಿನ್ನು
ಹರಹರ ಎನ್ನುತ ಮರಮರ ಮರುಗುತ ಹರಿ ಮಾರಿಯ ನೋಡ್ಯಾಳು ದೃಷ್ಟಿಸಿನ್ನು
ಹರಿ ಬಂದು ಅಂಬುತಾನೆ ಗಿರಿಜಗೆ ನೀ ಇನ್ನು ಮರುಗುವುದ್ಯಾಕಮ್ಮ ಮನದೊಳಗೆ
ಅನುಮಾನವಿದ್ದಿದ್ದು ಎನಗಿಷ್ಟು ಹೇಳಮ್ಮ ಸನುಮತ ನಾನೀಗ ಹೇಳುವೆನು
ಅಂತಾಳೆ ಪಾರ್ವತಿ ಕಂತು ಹರನು ಹೋಗಿ ಸಂತೋಷ ನನಗಿಲ್ಲ ಕೇಳೋ ನೀನು
ಒತ್ತರದಿಂದ ಹೋಗಿ ಗೊತ್ತು ಹಚ್ಚಿಬಾ ಮತ್ತಾರ ಕಡೆಯಿಂದ ಆಗುವುದೇನು
ತಾಯವ್ವ ನೀಕೇಳೆ ಮಾಯ್ವಾದ ಶಿವನನ್ನು ಎಲ್ಲಿ ಹುಡುಕಲಿ ಹೇಳೆ ನೀನು
ನಿನ್ನ ಪ್ರಯತ್ನವು ಯಾರಿಗೂ ತಿಳಿದಿಲ್ಲ ಚನ್ನಾಗಿ ಸೋದಿಸಿ ಹುಡುಕು ನೀನು
ಪರಿಪರಿಯಿಂದಲಿ ಗಿರಿಜೆ ಹೇಳಿದ ಮಾತ ಸರಿಬಂದು ಅನ್ನುತ್ತಾನೆ ಹರಿಯು ತಾನು
ನಿನ್ನ ಆಶೀರ್ವಾದ ಎನ್ನ ಮೇಲೆ ಇದ್ದರೆ ಪನ್ನಂಗಧರನನ್ನು ಹುಡುಕುವೆನಾ
ಕೊಡು ಕೊಡು ಅಪ್ಪಣೆ ತಡವ್ಯಾಕೆ ಹಡದವ್ವ ಒಡಿಯ ಶಂಕರನನ್ನು ಹುಡುಕುವೆನಾ
ಲೇಸಾಗಿ ಈಶ್ವರನು ವಾಸವಾಗಲೆಂದು ಆಶೀರ್ವಾದ ಕೊಟ್ಟಳು ತಾಯಿಯಿನ್ನು

**ವಚನ**

ಕೇಳರಿ ವಿಷ್ಣುವಿನ ಪ್ರಯತ್ನವನ್ನು ಎಷ್ಟಂತ ಹೇಳಲಿ ಕೃಷ್ಣನು ಪರಮಾತ್ಮನನ್ನು ಹುಡುಕುವುದಕ್ಕೆ ಅತಳ ವಿತಳ ಪಾತಾಳ ರಸಾತಳ ಇಂಥಪ್ಪ ಹದಿನಾಲ್ಕು ಲೋಕಗಳನ್ನು ಹುಡುಕಿದಾಗ್ಯೂ ಪರಮಾತ್ಮನ ದರುಶನವೇ ಇಲ್ಲದೋಯಿತು. ಆಗ ತನ್ನ ದಿವ್ಯದೃಷ್ಟಿಯಿಂದ ನೋಡಲು ಆ ದೈತ್ಯನ ಉದರದಲ್ಲಿ ಇರುವದಂ ಕಂಡು ಹರಿಯು ಅನ್ನುತ್ತಾನೆ ಈ ದೈತ್ಯನನ್ನು ಕೆಣಕುವ ಶಕ್ತಿ ನನಗಿಲ್ಲ. ಆದ್ದರಿಂದ ಹರಿಯು ಮಾಡಿದ ಪ್ರಯತ್ನವೇನೆಂದರೆ

ಪದ

ಪರಮಾತ್ಮನಿಗಿನ್ನೂ ಅರಿವು ಆಗಲೆಂದು ಹರಿ ತನ್ನ ಸ್ತೋತ್ರ ಕೊಂಡಾಡಿದನು.
ಹರ ಹರ ಶಿವಶಿವ ಗುರುದೇವ ನೀ ಹೋಗಿ ಧರಿಯಲ್ಲಿ ಮರಮರ ಮರುಗುವದೋ
ಅದಕ್ಕಾಗಿ ನಾ ನಿನ್ನ ಪಾದಕೆ ವಂದಿಪೆ ನೀ ಎನ್ನ ಸಲವೋದೋ ದೇವ
ಪಾರಾಗಿ ಬರುವಂಥ ಭಾರವು ನಿನ್ನದು ಆಗದು ದೈತ್ಯನ ಕೆಣಕುವುದಾ
ದೈತ್ಯನ ಕೆಣಕುವ ಚೈತನ್ಯ ನನ್ನಿಂದ ಆದಿತ್ಯಾಂಗಿ ಹೇಳಿರಿ ಸ್ವಾಮಿ
ನೀ ಇಷ್ಟೆಲ್ಲ ಸ್ತೋತ್ರವ ವಿಷ್ಣು ತಾ ಮಾಡಿದ್ದು ಹೊಟ್ಟೆಯೊಳಗೆ ಶಿವಕುಂತು ಕೇಳಿದನಾ
ಸರ್ವಾಂತರ್ಯಾಮಿಯು ಸರ್ವರಿಗೂ ಮಹಿಮೆಯು ಅರವಾಯಿತೊ
ಹರಿಸ್ತೋತ್ರ ಮಾಡುವುದಾ
ಉಲ್ಲಾಸವಾಗಿನ್ನು ಕೈಲಾಸಧೀಶನ ಚಲ್ಲಾಟ ಕೇಳಿರಿ ಮುಂದಾಗೋದ
ಚಿನ್ಮಯ ಶಿವನಿಗೆ ಮರ ಉಕ್ಕಿದ್ಹಾಂಗೆ ದನುಜನ ಹೊಟ್ಟೆಯು ಬೆಳೆಯುವದ
ಹೊಟ್ಟೆಯು ಬೆಳೆದದ್ದು ಎಷ್ಟಂಥ ಹೇಳಲಿ ಬೆಟ್ಟದಾಕಾರ ತೋರುವುದು
ಅಷ್ಟಾಗಿ ತಿಳಿಲಿಲ್ಲ ಕೆಟ್ಟ ದೈತ್ಯನಿಗೆ ಹೊಟ್ಟೆಯು ಮಿರಿ ಮಿರಿ ಮಿಂಚುವುದ
ಪರಿಪರಿಯಿಂದಲಿ ಹರಿಯು ತಾ ಮತ್ತಿಷ್ಟು ಪರಮಾತ್ಮನ ಧ್ಯಾನ ಮಾಡುವನಾ
ಧ್ಯಾನ ಮಾಡಿದಾಗ ಮಹದೇವನಾ ಹನ್ನೊಂದು ಕ್ಷೋಣಿ ದೈತ್ಯನ ಹೊಟ್ಟೆ ಬೆಳೆಯುವುದಾ
ಆನಂದ ಆದದ್ದು ನಾನೇನು ಹೇಳಲಿ ಈಗ ಬೆಳೆಯುವುದಾ
ಬೆಳಕೊಂತ ನಡದೀತು ಉಳುಕೊಂತ ನಡೆದಿವುಳೆ
ಕೊಂಬದ್ಹಾಗಿನ್ನು ಅಳಿಗಾಲ ಬಂದಿತು ಸಾಯುವುದು
ಎಷ್ಟಂತ ತಡದೀತು ಚಟ್ಟನೆ ಸಿಡಿದೀತು
ಹೊಟ್ಟೆಯು ಹೊಡೆದಿತು ದೈತ್ಯನದಾ
ಎಡಬಲಕೆ ಎರಡು ತುಂಡಾಗಿ ಬಿದ್ದನು ಕೆಡಕು ದೈತ್ಯ ತನ್ನ ಗರ್ವದಿಂದ
ಪರಮಾತ್ಮ ಪಾರಾಗಿ ಹೊರಬಿದ್ದು ಕೂತದ್ದು ಹಿರಿಯರೇ ಕಳಿರಿ ಉಳಿದ ಪದಾ !!

ವಚನ

ಹುರಿಗಣ್ಣನ್ನು ಮುಚ್ಚಿಕೊಂಡು ಹೊರಗೆ ಬರುವಂಥಾದನು. ಆಗ ಹರಿಯು “”ಪರಮಾತ್ಮನನ್ನು ಮಾತಾಡಿಸಿದರೆ ಉರಿಗಣ್ಣು ತೆರೆಯುತ್ತಾನೆ. ನಾನು ಮತ್ತು ಈ ಭೂಮಿ ಕೂಡ ಸುಟ್ಟು ಹೋಗುತ್ತದೆ.

ಪದ

ಹರಿಯು ಮಾಡಿದ ಬೇತು ಹಿರಿಯರೆ ಕೇಳಿರಿ ಕುರಬರ ಡೊಳ್ಳಿನ ಪಡಗವನ
ಸೊಕ್ಕಿದ ದೈತ್ಯನ ಡೊಕ್ಕಿಯ ಎಲುಬನ್ನು ತಕ್ಕೊಂಡು ಮಾಡಿದ ಡೊಳ್ಳವನಾ
ಚರ್ಮವ ತಕ್ಕೊಂಡು ಡೊಳ್ಳಿಗೆ ಹಾಕಿದ ಕರುಳು ಹಗ್ಗವ ತಾ ಮಾಡಿದನು
ಘೋರನ ಬಿಟ್ಟನು ಕೈಗಳ ಕಿತ್ತನು ಡೊಳ್ಳಿನ ಗುಣಿಗಳ ಮಾಡಿದನಾ
ನಡಕೆ ಕಟ್ಟಿ ಹರಿ ಬಡಕೊಂತ ನಿಂತನು ನುಡಿದಿತು ಅದ್ಭುತನಾದವನಾ
ನಾದಿನ ಶಬ್ದವು ಮಹದೇವಗಾನಂದವಾದದು ನಾನೇನು ಹೇಳುವೆನಾ

ಹರಿ ಡೊಳ್ಳು ಬಡದಬ್ಯಾಂಗೆ ಹರ ತನ್ನ ನಾಂಟ್ಯವ ಪರಿಪರಿಯಿಂದಲಿ ಮಾಡಿದನು
ಪಾರ್ವತದೇವಿಗೆ ಅರಿವು ಆಗಲೆಂದು ಹಾರ್ಯಾಡಿ ಡೊಳ್ಳು ಬಡಿಯುವನು
ಸ್ವಾಮಿಯು ನಮ್ಮಯ್ಯ ಬಮದಾನು ಎಂಬುದು ಆವಾಗ ಹುಟ್ಟಿತು ಕೇಳಿರಿನ್ನು
ಅದ್ಭುತನಾದವು ಬಿದ್ದಿತು ಡೊಳ್ಳಿನ ಶಬ್ದವು ಕೇಳಿರಿ ಹೇಳುವೆನು
ಡೊಳ್ಳಿನ ಬಡಿತಕ್ಕೆ ಸೀಳಿತು ಭೂಮಿ ಸುಳ್ಳಲ್ಲ ಕೇಳಿರಿ ಹೇಳುವೆನು
ಸಾಕಾಗಿ ನಾದವು ಆಕಾಶ ತುಂಬಿತು ಏಕಾಂತ ಕೈಲಾಸ ಕೇಳಿತಿನ್ನು
ಸಾಕ್ಷಾತ್ ದೇವಿಗೆ ಈ ಕ್ಷಣ ಶಬ್ದದ ಲಕ್ಷಣ ತೋರಿದು ಹೇಳುವೆನಾ
ಎಡಗಣ್ಣು ಎಡಭುಜ ಬಡದಬ್ಯಾಂಗೆ ಹಾರ್ಯಾವು ತಡಿಯಾದೆ ಕೇಳ್ಯಾಳಾ ನಂದೀನ
ನಂದಿ ಅನ್ನುತ್ತಾನೆ ಚೆಂದಾಗಿ ಕೇಳು ಮಂದಾಗಿರಿವಾಸ ಬಂದಿರುವಾ |
ಪರಮಾತ್ಮಗಿನ್ನೂ ಅರಿವು ಆಗಲೆಂದು ಹರಿಯು ತನ್ನ ಸ್ತೋತ್ರ ಕೊಂಡಾಡಿದನು
ಹರಹರ ಶಿವಶಿವ ಗುರುದೇವ ನೀ ಹೋಗಿ ಧರಿಯಲ್ಲಿ ಮರಮರ ಮರುಗುವುದೋ

ವಚನ

ಹರಿಯು ಬಾರಿಸಿದ ಡೊಳ್ಳಿನ ಶಬ್ದವು ಏಕಕಾಲಕ್ಕೆ ಕೈಲಾಸಕ್ಕೆ ಕೇಳಿಸಿತು. ಆಗ ಪಾರ್ವತಿಯು ನಾದದ ಶಬ್ದವನ್ನು ಕೇಳಿದಳು. ಆದರೆ ಪಾರ್ವತಿಗೆ ಎಡಗಣ್ಣು ಎಡಭುಜ ಹಾರಿದುವು. ಆಗ ನಂದೀಶನೊಡನೆ “”ಏ ನಂದಿಯೇ ! ಈ ಸುನಾದವು ಎಲ್ಲಿಂದ ಹೊರಡುವುದು” ಎಂದು ಕೇಳಿದಳು. ಆಗ ನಂದಿ “”ಪರಮಾತ್ಮನ ದರ್ಶನಕ್ಕೆ ಹರಿಯು ಬಂದಿರಬಹುದು. ಆದ್ದರಿಂದ ನಿನಗೆ ಅರಿವು ಆಗಲೆಂದು ಏನೋ ಒಂದು ಪರಿಯನ್ನು ಮಾಡಿರಬಹುದು” ಎಂದನು. ಆಗ ಪಾರ್ವತಿಯು ನಂದೀಶ್ವರನೊಡನೆ ನಾದಿನ ಶಬ್ದವನ್ನು ಹುಡುಕುತ್ತಾ ಹೋಗುವಂಥಾದವರಾದರು.

ಪದ

ನಾದಿನ ಶಬ್ದವ ಶೋಧಿಸಿ ಹುಡುಕುತ ಹೋದರು ಸಾಂಬನ ಸನ್ನಿಧಿಗೆ
ಸರ್ವಾಂತರ್ಯಾಮಿಯ ದರುಶನವಾದರು, ಹರುಷವಾದರು ತಮ್ಮ
ಮನದೊಳಗೆ, ಮುಂದೋಗಿ ದೇವಿ ತಾ ವಂದನೆ ಮಾಡ್ಯಾಳು ಬಂದಿನ್ನ
ಪರಶಿವಮೂರ್ತಿಗೆ ತಡಮಾಡಲಿಲ್ಲ.
ಉರಿಗಣ್ಣು ತೆರೆದಾರು ಅಡಗಿತು ಉರಿಯು ಕ್ಷಣದೊಳಗೆ
ನಡುಗಣ್ಣು ಮುಚ್ಚಿ ತಾ ಕಡಿಗಣ್ಣು ತೋರಿದನು ಅಡಗಿತು ಉರಿಯಲ್ಲ ಕ್ಷಣದೊಳಗೆ
ವೀರಶೈವರಿಗೆ ವೀರನಾಗಿ ತೋರ್ಯಾನು ತಾನು ಪರಶಿವನು
ಧರಿಯೊಳಗೆ ವೀರಸುತನಾದ ಬೀರನು ತಾನಾದ ಪೀರನಾದ ಮುಸಲ್ಮಾನರಿಗೆ
ಕುರುಬರ ಕುಲವನ್ನು ನಿರ್ಮಿಸಿ ಡೊಳ್ಳನು ಕರದಿನ್ನು ಕೊಟ್ಟನು ಅವರೊಳಗೆ
ಅಷ್ಟ ವಾಲಗದಲ್ಲಿ ಶ್ರೇಷ್ಠವಾದ್ಯವೆಂದು ಗಟ್ಯಾಗಿ ಹೇಳ್ಯಾನು ಕುರುಬರಿಗೆ
ಕೆಟ್ಟ ಕಾರ್ಯಕೆ ಡೊಳ್ಳು ಮುಟ್ಟಬಾರದು ನೀವ್ ಕೆಟ್ಟುಹೋದಿರಿ ನಿಮ್ಮ ಕುಲದೊಳಗೆ
ಬೋಧಿಸಿ ಕೈಲಾಸದ ದಾರಿಯ ಹಿಡಿದರು ವಾದಿಸಬಾರದು ಇದರೊಳಗೆ
ಹಾಸ್ಯ ಮಾಡಿದಂಥ ಹೇಸಿ ಮನುಜರೆಲ್ಲ ನಾಶಾಗಿ ಹೋದಿರಿ ನಿಮ್ಮೊಳಗೆ
ಪೊಡವಿಯೊಳ್ ಮಂಟೂರು ವಡಿಯ ವಾಲ್ಮೀಕೇಶ

ಬಿಡದೆ ನಿಮಗೆ ನಾ ವಂದಿಸುವೆ
ನಾ ತಡಮಾಡದೆ ಅಡಿಗೆರಗುವೆನು ॥

ವಚನ

ಹೇ ಬುದ್ಧಿಯುಳ್ಳ ಕುರುಬರೇ ಅಂದ್ಹಾಗೆ ನಮ್ಮ ಡೊಳ್ಳು ಹುಟ್ಟಿತು. ಚೆಂದಾಗಿ ಕೇಳಿದರೆ ಬಂದ ಪಾಪವು ಪರಿಹಾರವಾಗುತ್ತದೆ. ಆದರೆ ರಕ್ಕಸನ ಉದರವೇ ಡೊಳ್ಳಾಯಿತು. ಈ ಮಾತು ಸುಳ್ಳಲ್ಲ. ಪಾರ್ವತಿಯು ಪರಮಾತ್ಮನ ಹತ್ತಿರಕ್ಕೆ ಬರುವಾಗ ಕೈಲಾಸ ಮಂದಿರದಲ್ಲಿ ಷಣ್ಮುಖನನ್ನು ಬಿಟ್ಟು ಬಂದಿದ್ದಳು. ಆದ್ದರಿಂದ ಮಗನ ನೆನಪಾಯಿತು. ಆಗ ಮೊಲಿ ಜುಂ ಎಂದು ಮೊಲಿ ಹಾಲು ನೆಲಕ್ಕೆ ಬೀಳುವಂತಾದುವು. ಆಗ ಪಾರ್ವತಿಯು ಅಯ್ಯೋ ನನ್ನ ಮೊಲೆ ಹಾಲು ವ್ಯರ್ಥವಾದುವೆಂದು ಎಡದ ಮೊಲಿ ಹಾಲಿನ ಮಣ್ಣಿನಿಂದ ಆದಮ್ಮನನ್ನು ಬಲದ ಮೊಲಿ ಹಾಲಿನ ಮಣ್ಣಿನಿಂದ ಆದಿಗೊಂಡನನ್ನು ನಿರ್ಮಿಸಿ ಅವನಿಗೆ ಈ ಡೊಳ್ಳನ್ನು ಕೊಟ್ಟು ಅದೃಶ್ಯರಾದರು.

## ಶಂಕಿ ತೊಂಡಿ

ಗುರುವೆ ನಿಮ್ಮ ಪಾದದಿರುವೆನಲ್ಲ ನಾ ಮರುತುಬಿಟ್ಟು ಜಲ್ಮದ ಬೇರ
ಮರತು ಬಿಟ್ಟು ಜಲ್ಮದ ಬೇರ ಶಿವಶರಣರಡಿಗೆ ಬಾಗುವೆ ಶಿಽರ
ಚಂಡ ಪರಮ ಕಲಿಗಂಡ ಮೂಗನೂರ ಕೆಂಡಗಣ್ಣಿನ ಬಸವೇಶ್ವರ
ಕೆಂಡಗಣ್ಣಿನ ಬಸವೇಶ್ವರ ಪ್ರಚಂಡ ಅನ್ನದಾನಿ ಕವಿವರಣ
ದಕ್ಷನು ಧುರದಲ್ಲಿ ಸಾಕ್ಷಾತ್ ಜನಿಸಿದ ದಾಕ್ಷಾಯಣಿಗೆ ಮಾಡಿ ನಮಸ್ಕಾರ
ದಾಕ್ಷ। ದಕ್ಷನೋ ಈ ಹೊಟ್ಟೆಯ ಕುವರ
ನುತಿಸಿ ಹೇಳುವೆನು ಕ್ಷಿತಿಯೊಳ ಶರಣರ ಹಿತದಿ ಭಕ್ತಿಯನು ಮಾಡಿದರ
ನಾ ಸತತ ಹೇಳುವೆನು ಶರಣರ ಪೂರಾ
ಗ್ರೀಟ ದೇಶದಲ್ಲಿ ಹುಟ್ಟಿದ ಬಡವರ ಹೊಟ್ಟೆಯಲ್ಲಿ ಜನಿಸಿದ ಸದರಾ
ನಾ ಎಷ್ಟು ಹೇಳಲಿ ಚಮತ್ಕಾರ
ಕಿಂಕರತನದಲಿ ಶಂಕರನೊಲಿಸಿದ ಶಂಕಿತೊಂಡಿ ಶರಣನುತಾನ
ನಾ ಶಂಕಿಯಿಲ್ಲದೆ ಹೇಳುವೆ ಪೂರಾ

ವಚನ

ಗ್ರೀಟ ದೇಶದಲ್ಲಿ ಹುಟ್ಟಿಯಾನು ಶಂಕಿತೊಂಡಿ. ಆಟಪಾಟ ಮಾಡ್ತಾನೆ ಬಹು ಚಂಡಿ. ಉಂಟಾದಾಗೆ ಮಾಡ್ತಾನೆ ತಿಂದುಂಡು ಬಹು ಚಂಡಿ. ಎಷ್ಟೆಷ್ಟು ಹೇಳಿದರು ತೀರದು ಭಕ್ತಿ ಪ್ರಚಂಡಿ. ತಾಯಿ ತಂದೆ ಹೇಳುತ್ತಾರೆ ಶಂಕಿತೊಂಡಿಗೆ ಬಡತಾನ ಬಂದೈತೆ ಇವತ್ತಿಗೆ. ಕೂಲಿದನ ಕಾಯಬೇಕು ಹೊಟ್ಟೆ ಕೂಳಿಗೆ. ಆವಾಗೆ ಕಂದ ಅಂತಾನೆ ಸಂದೇಹವಿಲ್ಲ ತಂದು ಕೂಡರಿ ಕಾವುತ್ತೇನೆಂದನು ವಾರೇವು ಇಲ್ಲ ಮನಿಯೊಳಗೆ.

ಪದ

ತಂದೆ ಹೋಗಿ ತಾ ಮಂದಿಯ ದನಗಳ ತಂದುಕೊಟ್ಟನು ಕಾಯ್ವುದಕೆ
ಆ ಕಂದ ನೋಡಿ ಅಂತಾನೆ ಕ್ಷಣಕೆ।

ಕಟ್ಟ ಬುತ್ತಿ ನನ್ನ ಅಟ್ಟ ಅಡವಿಗೆ ಎಷ್ಟೊತ್ತು ಎವ್ವ ಕಟ್ಟದಕೆ
ಅದನಟ್ಟ ತಂದ ಅಪ್ಪಣು ಕ್ಷಣಕೆ।
ದನ ಕಾಯಲಿಕ್ಕೆ ದನಗಾರನಾಗಿ ತನಯ ಹೊಂಟನು ಅಡವಿಯ ಸ್ಥಲಕೆ
ತನ ಮನಿಯಲಿಂದನ ಕಾಯ್ವುದಕೆ
ಹತ್ತು ಹುಡುಗರು ಜತ್ತಿಲಿ ಕೂಡ್ಯಾರು ಜತ್ತಿಲಿ ದನಗಳ ಕಾಯ್ವುದಕೆ
ದನ ಸುತ್ತ ಬಿಟ್ಟರು ಮೇಯ್ವುದಕೆ
ಎಲ್ಲರು ಕೂಡಿ ಕಲ್ಲಿನದೊಂದು ಚೆಲ್ವಲಿಂಗ ಮಾಡಿದರದಕೆ
ಸುತ್ತೆಲ್ಲ ಗುಡಿ ಕಟ್ಟ್ಯದಕೆ

**ವಚನ**

ಶಂಕಿತೊಂಡಿ ಹೇಳುತಾನೆ ಹುಡುಗರಿಗೆ. ಶಂಕರಗೆ ಪೂಜೆ ಮಾಡ್ಬೇಕು ನಾವೀಗ. ತತ್ರಾಣಿ ನೀರು ಸುರುವ್ಯಾರು ಮ್ಯಾಗೆ. ಕಿಂಕರತನದಿಂದ ಭಸ್ಮವನ್ನು ಧರಿಸ್ಯಾರು ಫಣಿಗೆ. ಕಾಡುಪತ್ರಿ ಕೊಟ್ಟ್ಯಾರು ಮನಬಲ್ಲಂಗೆ. ಕೈ ಮುಗಿದು ಬೇಡಿಕೊಂಬುತಾರೆ ಗಂಗಾಧರಗೆ. ಬ್ಯಾಡಗೊಲಿದ ಕಾಡುಸಿದ್ಧನೆ ಕರುಣ ಇರಬೇಕು ನಮ್ಮ ಮ್ಯಾಗೆ. ಚೂರು ಬುತ್ತಿ ಎಡಿ ಮಾಡಿ ಉಂಡಾರು ಮುತ್ತುಗೆದೆಲಿಯಾಗೆ. ಮೃಧನಗೋಸ್ಕರ ದನದ ಮೇಲೆ ಆಸಿಬಿಟ್ಟು ದನಗಳನ್ನು ಕಳಕೊಂಡೇವು ನಾವೀಗ. ತಾಯಿ ತಂದೆ ಬೇಯುತ್ತಾರೆ ಮನಿಯೊಳಗೆ ಶಂಕಿತೊಂಡಿ ಹೇಳುತ್ತಾನೆ ಹುಡುಗರಿಗೆ ನಮ್ಮ ದನಗಳು ನಮ್ಮನಿಯೊಳಗಿದ್ದರೆ

ಬ್ರಹ್ಮ ಶಿವಗೆ ನೈವೇದ್ಯಕ ತರುವುದೇನಾ

ನಮ್ಮ ದನವು ನಮ್ಮನೆಯೊಳಗಿದ್ದರೆ ಬ್ರಹ್ಮಶಿವಗೆ ತರುವುದೇನಾ

**ಪದ**

ನಮ್ಮ ಮನಿಂದ ತರುವೆನು ಘೃತನಾ
ಹೋರಿ ಎತ್ತು ನಮ್ಮನಿಯೊಳಗಿದ್ದರೆ ಸೇರು ಬೆಣ್ಣೆ ತರುವನು ಪೂರಾ
ನಾ ಕ್ಷೀರ ತರುವೆನಂತರ ಹುಡುಗರಾ
ಇಷ್ಟು ಕೇಳಿ ಆ ದಿಟ್ಟ ಶಂಕಿಯು ಗಟ್ಟಿ ಕಲ್ಲು ತರುವನು ನೂರಾ
ನಮ್ಮಿಷ್ಟ ಭಕ್ತಿ ನಾವು ಬಡವಃರಾ
ಹರಗೆ ಬೇಡಿಕೊಂಡು ಊರಿಗೆ ಬಂದರು ಕರುಗಳಲ್ಲೆಲ್ಲ ಇದ್ದವು ಪೂರ
ಹಿರಿಹಿರಿ ಹಿಗ್ಗಿದರು ಹುಡುಗಃರಾ
**ವಚನ**
ಹಾಲು ಬೆಣ್ಣೆ ಹೊತ್ತು ಬಂದಾರು ಬಾಲರಿತ್ತ ಗಂಗಾಧರಗೆ ನೀಡ್ತಾರೆ ಮನಪೂರ್ತ. ಶಂಕಿತೊಂಡಿ ಜಡ್ಡಲಿಂದ ಮಲಗಿದನು ಗಡದ ಗುಡ್ಡದೊಳಗಿನ ಲಿಂಗದ ಹರಕಿಯನ್ನು ಮರತ. ಗುಡ್ಡದೊಳಗಿನ ಶಂಕರ ಅನ್ನುತಾನೆ ದೊಡ್ಡ ಭಕ್ತನ ಭ್ಕತಿ ಬರಲಿ ಬಹು ಚಂದ.

**ಪದ**

ಘೋರ ಬಿಟ್ಟನವ ಮೂರು ತಿಂಗಳು ಬಡತನ ಬಿಡಲಿಲ್ಲ
ಹೌಹಾರಿ ಆದ ಭಕ್ತನುಗಾಲ ಮದ್ದತು ಎದ್ದನು ಬಾಲ
ಶುದ್ಧ ಮೂರ ತಿಂಗಳು ಮೇಲ
ಎದಿವುದ್ದ ಕಲ್ಲು ಹೊಟ್ಯಾನು ಸಾಲಬಂಡಿವೂಡಿ ಕರಿದುಂಡಿ ಹೇರಿ ಶಂಕಿತೊಂಡಿ
ಕುಳಿತ ಬಂಡಿಯಮೇಲ
ಹೊಡಕೊಂಡು ಹೊಂಟ ಗುಡ್ಡದ ಮೇಲ
ಗುರಿಯ ನೋಡಲಿಕೆ ಕರಿಯಕಲು ಒಂದು ತರವಿಗಿಟ್ಟನೊಂದು ಬಾಲ
ಅಲ್ಲಿ ಹರನು ಇದ್ದನು ಖುಷಿಯಾಲ
ಮುಂದಕೆ ಹೋಗುತ ಚಂದ್ರಧರನ ಪಾದ ಕಂದ ಕಂಡ ಅಮೃತಪಾಲ
ಒಂದೊಂದು ಬಗೆವು ತಾನೆ ಕೈಕಲ್ಲ
ಒಂದು ದಿನಕೆ ಮೂರು ಬಂಧುರ ಕಲ್ಲು ಚಂದ್ರಧರನ ಮಾರಿಯ ಮೇಲ
ಆ ಕಂದ ಒಗಿದ ಆದವು ಕಲ್ಲ
ಚಂಡಿ ಕಾಂತಗೆ ದುಂಡಿಕಲ್ಲು ಮನಗಂಡು ಒಗಿದು ಬಿಟ್ಟಿದ್ದ ಮೊದಲ
ಶಂಕಿತೊಂಡಿ ನೋಡಿದ ಸುತ್ತಮುತ್ತೆಲ್ಲ

ವಚನ

ಶಂಕಿತೊಂಡಿ ಜಡ್ಡಿಲಿಂದ ಮಡಗಿದನು ಶುದ್ಧ. ಹರನ ಕಲ್ಲು ಬಂಡಿ ಮೇಲೆ ಮುದ್ಧ. ಪರಮೇಶ್ವರನಿಗೆ ಒಗೆವುತಾನೆ ಒಂದು ಒಂದು ಕಲ್ಲ ಲೆಕ್ಕಕೆ ಕಮ್ಮಿ ಹೇರ್ಯಾನು ಆಯಿತು ಒಂದು ಕಲ್ಲ. ಅಮ್ಮಮ್ಮಾ ಕಮ್ಮಿ ಎಂಬುವನೇ ನನ್ನ ಗುಣ ಮಾವಿತಿಗೆ ಕೊಡಬೇಕು ನನ್ನ ಪ್ರಾಣ. ಅಂತ ಸೋಮತನದಿಂದ ನಿಂತಾನು ಜಾಣ.

ಪದ

ಕತ್ತಿ ಎತ್ತಿ ತನ್ನ ಕುತ್ತಿಗೆ ಇಟ್ಟನು ಮೃತ್ಯುಂಜಯಗೆ ಮುಟ್ಟಲಿ ಕಲ್ಲ
ಅಂತ ಸತ್ಯಶೀಲ ನಿಂತನು ಬಾಲ
ಒಡೆಯ ಶಿವನು ಕೈಪಿಡಿದು ಹೇಳುತಾನೆ ಕಡಿದುಕೊಳ್ಳಲುಬ್ಯಾಡ ಶಿರ
ಅಂತ ಹುಡುಗನನ್ನು ಎತ್ತುತ ಮೇಲ
ತೊಡಿಯಲಿ ಪಾರ್ವತಿ ಜಡಿಯಲಿ ಗಂಗ ಮೃಡನು ನಿಜವು ತೋರಿದನಲ್ಲ
ನಿನಗ್ಗಿಡಿ ಎಂದನು ಸಾಯುಜ್ಯಪಾಲ
ಎತ್ತಿರ ಚತ್ರಗಿರಿ ಹೊತ್ತುವೊಯ್ದು ತನ್ನ ಉತ್ತಲಿ ಕೊಟ್ಟನು ಮುಕ್ತಿ ಫಲ
ಶಿವಶರಣ ನೊತ್ತಲಿದ್ದನು ಶಿವಶರಣ
ಧರೆಯೊಳು ಮೂಗನೂರು ಹಿರಿದು ಬಸವನ ಚರಣ ಪಿಡಿದು ಪಾಡುವೆ ಬಾಲ
ಇದು ತರುಳ ಅನ್ನದಾನಿ ಕವಿಯಾಲ

## ರೇವಣಸಿದ್ದ

ಏಸೊಂದು ಪರಿಯಲ್ಲಾಡಿದರ ಇವ ಸಾಸರ ಮುಖದವನೊಬ್ಬವನೆ
ಸಾಸರ ಮುಖದ ಸದಾಶಿವನು ಇದ್ದು ಇಲ್ಲದವ ನಮ್ಮವನೆ
ಇದ್ದು ಇಲ್ಲದ್ದು ನಿಮ್ಮೊಳಗಾಡಿದ ನಮ್ಮ ಹಿರಿಯರನು ಬಲ್ಲವರ
ನಿಮ್ಮೊಳಗಾಡಿದ ನಮ್ಮ ಹಿರಿಯರು ಮನ್ನನೇಳಿ ಮರಿಗೊಂಡಾರ
ಮನ್ನನೇರಿ ಮರಿಗೊಂಡಾರ ಸ್ವಾಮಿ ಪುಣ್ಯಕೆ ಜಾಗೀರಾಗ್ಯಾರೆ
ಹಿರಿಯರನ್ನೆಲ್ಲ ಹಿಂದೆಗಳೆದು ಕರುಹುಡುಗರು ನಾವು ಬಂದೀವಿ
ಕರು ಹುಡುಗರು ನಾವು ಬಂದೀವಿ ಸ್ವಾಮಿ ಕಡೆಗಣ್ಣಿನಲಿ ನೋಡಬ್ಯಾಡಯ್ಯ
ತಡೆದ ಕಂಠಮಲಿ ಕಿಡಿಗಣ್ಣಿಲೆ ನೋಟ ಸವಗಣ್ಣಿಲೆ ನಮ್ಮ ಸಲುವಯ್ಯ
ಸವಗಣ್ಣಿಲೆ ನಮ್ಮ ಸಲುವುತ ಬಾ ನಮ್ಮಪ್ಪ ರೇವಣಸಿದ್ಧನೆ
ಇಲ್ಲಿಗೆ ಹರಹರ ಇಲ್ಲಿಗೆ ಶಿವಶಿವ ಇಲ್ಲಿಗೆ ಇದು ಒಂದು ಸಂದೇಳು
ಹಾಲುಮತವೊ ಹನುಮಸಾಗರೊ ಗಿಳಿವೊಂದು ಕೋಣೆಗೆ ನೂರಯ್ಯೊ
ದೇವಾರು ಬದಾಂವು ಬನ್ನಿರೆ

## ದೇವಿ ಹಾಡು

ಕೂಸನು ಹೊತ್ತಾಳೆ ಗುಲ್ಬುಟ್ಟಿ ಹೊತ್ತಾಳೆ ತಾನೊಂದು ರೂಪವು ತಾಳ್ಯಾಳೆ
ತಾನೊಂದು ರೂಪವು ತಾಳ್ಯಾಳೆ ಊರವ್ವ ಊರೆಲ್ಲ ಭಾಳೇವು ಹೊಂಟಾಳೆ
ಎಳ್ಳೇನು ಕಾಯಂಗ ಕಳುಬಾವು ಹರದಾವು ಒಳ್ಳೊಳ್ಳೆರಿಗೆ ಬಲುದಾಳ
ಒಳ್ಳೊಳ್ಳೆರಿಗೆ ಬಲುದಾಳ ಊರವ್ವ ಮಲ್ಲಿಗೆ ಕ್ವಾಣನ ಬಿಡಿಸ್ಯಾಳೆ
ಎಸರೇನು ಕಾಯಂಗ ಹಸುಬಾವು ಹರಿದಾವು ಹಸುಮಕ್ಕಳಿಗೆ ಒಲುದಾಳ
ಹಸುಮಕ್ಕಳಿಗೆ ಒಲುದಾಳ ಊರವ್ವ ಮಸುಳೆಯ ಕ್ವಾಣನ ಬಿಡಿಸ್ಯಾಳ
ಆರು ಕಾಲಿನೇಣಿ ಹತ್ಯಾಳ ಊರವ್ವ ಹಾರಿ ನೋಡ್ಯಾಳ ಊರ ಗೌಡನ
ಹಾರಿ ನೋಡ್ಯಾಳ ಊರ ಗೌಡನ ಮನಿಯಾಗ ಆರತಿ ಮತ್ಯಾಕ ತಡದಾವ
ಹನ್ನೆರಡು ವರುಷದ ಎಣ್ಣುಂಡ ಕ್ವಾಣನ ಸಣ್ಣ ಮಿಣಿಯಾಕಿಡಿರಂದಾಳ
ಇಪ್ಪತ್ತು ವರುಷದ ತುಪ್ಪುಂಡ ಕ್ವಾಣನ ಜತ್ತಿ ಮಿಣಿಯಾಕಿಡಿರಂದಾಳ
ಜತ್ತಿ ಮಿಣಿಯಾಕಿಡಿರಂದಾಳ ಊರವ್ವ ಎತ್ಯಾಕಿ ಕೊರಳ ಕೊಯ್ಸಾಳ
ಎತ್ಯಾಕಿ ಕೊರಳ ಕೊಯ್ಸಾಳ ಊರವ್ವ ನೆತ್ತರದೋಕಳಿನಾಡ್ಯಾಳ
ನೆತ್ತರದೋಕಳಿನಾಡ್ಯಾಳ ಊರವ್ವ ಛತ್ತರಿ ನೆರಳಾಗ ನಿಂತಾಳ
ಛತ್ತರಿ ನೆರಳಾಗ ನಿಂತಿರ ಊರವ್ವ ಭಗತರು ಕರೆದಾರು ಓ ಎನ್ನೆ
ಭಗತರು ಕರೆದಾರು ಓ ಎನ್ನಲಿಲ್ಲೊ ತಪ್ಪಿಸಿಕೊಂಡವು ದೇವರು
ಒಗದಾಳು ಎಂಬ ವನದಾಗಪ್ಪ ದಾಳಿಂಬರದ ಗೊನಿಯಾಗ
ದಾಳಿಂಬರದ ಗೊನಿಯಾಗಪ್ಪ ದೇವಿ ದ್ಯಾವರ ಶಬ್ದವು
ದೇವಿ ಎಂದರೆ ಯಾರೇಳಪ್ಪ ದ್ಯಾವರಂದರ ಯಾರೇಳು
ದೇವಿ ಎಂದರೆ ಪಾರ್ವತದೇವಿ ಶಾಸ್ತ್ರ ಮುಖಕ್ಕ ಊರವ್ವನ
ದೇವರೆಂದರೆ ಪರಮೇಶ್ವರನು ಶಾಸ್ತ್ರ ಮುಖಕ್ಕ ಬೀರಣ್ಣನ
ಇಲ್ಲಿಗೆ ಹರಹರ ಇಲ್ಲಿಗೆ ಶಿವಶಿವ ಇಲ್ಲಿಗೆ ಇದು ಒಂದು ಸಂದೇಳು

# ಮಳಿರಾಯ

ಮಳಿಗಾಳಿಗಳಿಲ್ಲದೆ ಮಡುಗಳೆದ್ದವು ಸುಳಿಗಾಳಿಲ್ಲದೆ ತಿರುಗ್ಯಾವು
ಸುಳಿಗಾಳಿಲ್ಲದೆ ತಿರುಗ್ಯಾವಲ್ಲೊ ವಜ್ಜರದ ಕೀಲ ಸಡಿಲ್ಯಾವು
ವಜ್ಜುರದ ಕೀಲ ಸಡಿಲ್ಯಾವಲ್ಲೊ ಬಿದ್ದನಪ್ಪ ಮಳೆದೇವನೊ
ಬಿದ್ದನಪ್ಪ ಮಳಿದೇವನಲ್ಲೊ ಗುಡ್ಡಗಳೆಲ್ಲ ಹಸುರಾಗ್ಯಾವೊ
ಗುಡ್ಡಗಳೆಲ್ಲ ಹಸುರಾಗ್ಯಾವಲ್ಲೊ । ಬಸವನ ಬಣ್ಣಕೆ ಬಂದಾನೊ
ಬಸವನ ಬಣ್ಣಕೆ ಬಂದಾನಲ್ಲೊ ಬಿತ್ತು ಬೀಜ ಜತುನಾದಾವೊ
ಸೆದ್ದಿ ಬಟ್ಟಲ ಶರಕ್ಕಮಿಣಿಯೋ ಎಡಿ ನೊಗ ಇಟ್ಟೊಂದಾಮ್ಯಾನೊ
ಎಡಿನೊಗ ಇಟ್ಟೊಂದ ಮ್ಯಾನಲ್ಲೊ । ಕೂರಿಗಿ ಪೂಜೆ ಮಾಡ್ಯಾನೊ
ಹುಡಿಯಲಿ ಹುಡಿಬೀಜ ಹಿಡಿಯಲಿ ಹಿಡಿಬೀಜ ಹೊಡಿವ ಬಾರಿಕೋಲು ಹೆಗಲಲ್ಲೊ
ಹೊಡಿವ ಬಾರಿಕೊಳು ಹೆಗಲಲಿ ಹಾಕಿಕೊಂಡು ಜಳಜಳ ಬೀಜವ ಬಿಟ್ಟಾನೊ
ಹಂಡ ಎತ್ತಿದ ಹಗ್ಗವ ಹಿಡಿದು ಗುಂಡ ಎತ್ತಿನೊಂದೊಡಿದಾನೊ
ಗುಂಡ ಎತ್ತಿನೊಂದೊಡಿದಾನೊಲ್ಲೋ ಜಳ ಜಳ ಬೀಜವ ಬಿತ್ತ್ಯಾನೊ
ಹಸಿ ಮಣ್ಣಿನಾಗ ಸಸಿ ನಾಟಿ ಬರುವಾಗ ಹಸನಾಗಿ ಬೆಳಿಯೊ ಭೂಮ್ಯವ್ವಾ
ಹಸನಾಗಿ ಬೆಳಿಯೊ ಭೂಮ್ಯವ್ವ ನಿನ್ನ ಹಸರಂತ ಕಾಲಂದಾಡ್ಯಾವೊ
ಹಾಲು ತುಂಬಿ ಹದ ಮೀರಿದ ಬಳಿಕ ಹಾಲು ತುಪ್ಪ ಚಲ್ಯಾಡ್ಯಾವೊ
ನಾಲ್ಕು ಮೂಲಿಗೆ ಮಂಚಿಗಿ ಹಾಕಿ ಕೌಣಿಲಿ ಗುಬ್ಬಿ ಕಾದಾನೊ
ಕುಡಗೋಲು ತಗೊಂಡು ಬುಡಮಟ ಕೊಯ್ದನು ಹಿಡಿಹಿಡಿ ಸಿವುಡೊಂದು ಈಡಾಡ್ಯಾನೊ
ಹಿಡಿಹಿಡಿ ಸಿವುಡೊಂದೀಡ್ಯಾಡ್ಯನಲ್ಲೊ ಚೆಂಡಿ ಕಟ್ಟಿ ಗೂಡಾಕ್ಯಾನೋ
ಕಣಗಳ ಮಾಡಿ ತೆನಿಗಳ ಮುರಸಿ ಸುತ್ತಕಣಕೆ ದಿಂಡ ಕಟ್ಟ್ಯಾನೊ
ತೆನಿಯಾದು, ಕಡಿಯಣ್ಣ ಕಣಕಾದು, ಹರುವಣ್ಣ ರೂಲನಾದರ ಹೂಡ್ಯಾನೊ
ರೂಲನಾದರೂ ಹೂಡ್ಯಾನೊ ಒಕ್ಕಲಿಗ ಹಾಡ್ಯಾಡಿ ರೂಲ ಹೊಡದಾನೋ
ಹಾಡ್ಯಾಡಿ ರೂಲ ಹೊಡದಾನೋ ಒಕ್ಕಲಿಗ ಹುಲಿಗನಂದು ರೂಲ ಬಿಟ್ಟಾನೊ
ರೂಲನಾದರೂ ಬಿಟ್ಟಾನೊ ಒಕ್ಕಲಿಗ ಕಂಕಿನಾದರೂ ಎಳದಾನೊ
ಕಂಕಿನಾದರೂ ಎಳದಾನೊ ಒಕ್ಕಲಿಗ ಸುಂಕದ ರಾಸಿ ಕಟ್ಯಾನೊ
ಮೂರು ಕಾಲಿನ ಮೆಟ್ಟವನಾಕಿ ಸುಂಕದ ರಾಶಿ ತೂರ್ಯಾನೊ
ಸುಂಕದ ರಾಶಿ ತೂರ್ಯಾನಲ್ಲೋ ರಾಸಿ ತುಂಬಿ ಮೇಟಿಗಾಕ್ಯಾನೊ
ರಾಸಿ ತುಂಬಿ ಮೇಟಿಗಾಕ್ಯಾನೊ ಒಕ್ಕಲಿಗ ಮೋಜು ಮಾಡಿ ರಾಸಿ ಕಟ್ಟ್ಯಾನೊ
ಮೋಜ ಮಾಡಿ ರಾಸಿ ಕಟ್ಟ್ಯಾನೊ ಒಕ್ಕಲಿಗ ಪೂಜೆ ಮಾಡಿ ಎಡಿ ಹಿಡದಾನ
ಪೂಜೆ ಮಾಡಿ ಎಡಿಹಿಡಿದಾನ ಒಕ್ಕಲಿಗ ರಾಸಿಯಾದರೂ ಮೊಗಚಿದನೋ
ರಾಸಿಯಾದರೂ ಮೊಗಚ್ಯಾನ ಒಕ್ಕಲಿಗ ರಾಸಿ ತುಂಬಿ ಬಂಡಿಗಾಕ್ಯಾನೊ
ರಾಸಿ ತುಂಬಿ ಬಂಡಿಗಾಕ್ಯಾನೊ ಒಕ್ಕಲಿಗ ಬಸವಣ್ಣನ್ಹೂಡಿ ರಾಸಿ ತಂದಾನೊ
ಬಸವಣ್ಣಗಿಂತ ಬಲ್ಲಿದನ್ಯಾರೊ ಶಿವನಿಗಿಂತ ದೊಡ್ಡವನ್ಯಾರೊ
ಶಿವನಿಗಿಂತ ಶಿವಶರಣರಧಿಕರೆಂಬ ಶರಣಡಿಗೆ ನಾನು ವಂದಿಸುವೆ
ಉತ್ತಮರಾದ ಉಲ್ಪತ್ತಿ ಈರಗಾರು ಮುತ್ತಿನಂಥ ಪದ ಹಾಡಿದರು

ಹಾಡಿ ಹಾಡಿಕೊಂತೋದರೆ ಗುರುವೆ ಬೇಗುಂಟು ಬೆಳಗಾದಾವೆ
ಇಲ್ಲಿಗೆ ಇದು ಬಂದು ಸಂದೇಳು ಗುರುವೆ ಹಾಡಿದರು ಪದ ಮುಂದೇಳು

## ಶಿಂದೋಗಿ ಮರುಳಣ್ಣ

ಮುಂಜಾಲೆದ್ದು ಸಿಂದೋಗಿ ಮರುಳಣ್ಣ ಹಗರಿ ಹಳ್ಳಕ ಹೋಗ್ಯಾನ
ಹಗರಿ ಹಳ್ಳಕ ಹೋಗ್ಯಾನ ಸಣ್ಣದೊಂದು ವರ್ತಿ ತಗದಾನ
ಮಜ್ಜನ ಬಿಂದಿಗಿ ತುಂಬ್ಯಾನ ಹೂವು ಎತ್ತುತಲಿ ಹೋಗ್ಯಾನ
ಮಜ್ಜನ ಬಿಂದಿಗಿ ಹೆಗಲೀಲಿ ಹೂವಿನ ಕರಡಿ ಬಗಲೀಲಿ
ಹೂವಿನ ಕರಡಿ ಬಗಲೀಲಿ ತಕ್ಕೊಂಡು ಬೂದಿ ದಿಬ್ಬವ ಹತ್ಯಾನ
ಬೂದಿ ದಿಬ್ಬವ ಹತ್ತೊ ಹೊತ್ತಿಗೆ ತುರುಕರಣ್ಣ ಎದ್ರು ಬಂದಾನ
ತರುಕರಣ್ಣ ಎದ್ರಿಗೆ ಬಂದಾನ ಚೇಜಿ ಹೊಟ್ಟೇಲೇನೈತೆಂದು ಕೇಳ್ಯಾನ
ಮುಂಗಾಲ ಬಳಕಾಲು ಮೂಗುತಿ ಬಲ್ಲ ಅಚ್ಚ ನೀಲಗಂಡ ಮರಿ ಐತೆ
ಆಗ ನೋಡ ತರುಕಾರಣ್ಣ ಚೇಜಿ ಕಾಲವ ಕಟ್ಟ್ಯಾನ

## ಭರಮಣ್ಣ

ದುಮ್ಮಿನಾಳು ಭರಮಣ್ಣನಪ್ಪ ಸುಮ್ಮಾನು ಬರುವಲ್ಲೇಳು
ಆಡಮಕ್ಕಳ ಅಳಿಸ್ಯಾನ ಭರಮಣ್ಣ ಓದ ಮಕ್ಕಳ ಕೆಡಸ್ಯಾನ
ಓದ ಮಕ್ಕಳ ಕೆಡಿಸ್ಯಾನ ಭರಮಣ್ಣ ಮುಂದಕ ಸಾಗಿ ಬಂದಾನ
ಮುಂದಕ ಸಾಗಿ ಬಂದಾನ ಭರಮಣ್ಣ ಒಬ್ಬ ಸ್ತ್ರೀಯಳ ಕಂಡಾನ
ಒಬ್ಬ ಸ್ತ್ರೀಯಳ ಕಂಡಾನ ಭರಮಣ್ಣ ಲಗ್ಗಣಾಗಬೇಕಂದಾನ
ಅಂಗಳದಾಗ ಆಡುವ ತಂಗಿ ಸೂರವ್ವನ ಅಂಗೈಗೆರಿಗಳ ನೋಡ್ಯಾರ
ಒಂಟಿಯ ಸುಳಿಯೊ ಗಂಟಿಯ ಮುತ್ತೊ ಸಂತವುಳ್ಳ ಹೆಣ್ ಅಂದಾರ
ಸಂತವುಳ್ಳ ಹೆಣ್ಣಂದಾರ ನಮ್ಮ ಭರಮಗ ದಗ ಮಾಡಿ ತಗದಾರ
ಹಸಿಯೊ ಜಗಲೊ ಹಾಲುಗಂಬ ಗಗನಕ ಚಂದ ಹಂದರ
ಗಗನಕ ಚಂದವ ಹಂದರದಡಿಯಲೆ ಭರಮನ ಮದುವಿ ಮಾಡ್ಯಾರ
ಅದು ಎಲಿ ಹೋಳಿಗೆ ಸ್ವಾರಿಯಲ್ಲಿ ಬಾನ ಮ್ಯಾಲೆ ನೊರಿಹಾಲು ಸುರಿಯಾಲೆ
ಮ್ಯಾಲೆ ನೊರಿಹಾಲು ಸುರಿಯಲಪ್ಪ ತಂಗಿ ಸೂರವ್ವನ ಭೂಮಾತ
ಐದ ಮಂದಿ ಸ್ತ್ರೀಯರ ನೀವು ಆರತಿ ಮಾಡೇಳಂದಾರ
ಐದ ಮಂದಿ ಸ್ತ್ರೀಯರ ಕೂಡಿ ಆರತಿ ಮಾಡಲ್ಲಿಟ್ಟಾರ

ಏಳು ಏಳು ತಂಗಿ ಸೂರವ್ವ ಆರತಿ ಮಾಡೇಳಂದಾರ
ಆಗ ನೋಡು ತಂಗಿ ಸೂರವ್ವ ಸೂರ್ಯ ಚಂದ್ರ ನಿನ್ನೊಡಿಯಾನ?
ಸೂರ್ಯನಕಿಂತ ಬೆಳಕ್ಯಾರವ್ವ ಚಂದರಗಿಂತ ಖಳ ಯಾರ
ಚಂದರಗಿಂತ ಖಳ ಆದ ಪುತ್ರನ ಕೊಡು ಅಂಥ ನಾ ಬೇಡಿದೆನ

## ಈರಪ್ಪ

ಈರನೆಂದರೆ ಹ್ಯಾಗಿರಬೇಕು ಧೀರತನಗಳು ಇರಬೇಕು
ಧೀರತನಗಳು ಇಲ್ಲದ ಬಳಿಕ ಹಿರಿತನಗಳು ಸಲ್ಲಾವ
ಈರತನಕ ತಕ್ಕಂಗ ಒನಪು ಜಂಪುಗಳಿರಬೇಕು
ಒನಪು ಜಂಪುಗಳಿಗೆ ತಕ್ಕಂಗ ಕಿರುಗೆಜ್ಜೆ ಕುಣಿಸುತ ಬರಬೇಕು
ಡೊಳ್ಳಿನ ಮ್ಯಾಗಳ ಮುಂಗೈ ಹಸ್ತ ಗಿಳಿಪಾತರನಂತಿರಬೇಕು
ತಾಳಮೇಳ ಪಿಲ್ಲಾಳ ಕೊಳಲು ಸೈಸಂಗತಿ ಕೂಡಿ ಬರಬೇಕು
ಸೈ ಸಂಗತಿ ಕೂಡಿ ಬಂದರೆ ಸ್ವಾಮಿ ಕಂಡು ಸೈ ಅಂದಾರೆ
ಸ್ವಾಮಿ ಕಂಡು ಸೈ ಅಂದಾನಪ್ಪ ಹತ್ತು ಮಂದಿ ಹೌಹಂದಾರ
ಹತ್ತು ಮಂದಿ ಹೌದಂದಾರಪ್ಪ ಗುರುಹಿರಿಯರು ಒಪ್ಪಿಕೊಂಡಾರ
ಗುರುಹಿರಿಯರು ಒಪ್ಪಿಕೊಂಡಾರಪ್ಪ ಕಳುವ್ಯಾರ ಕರ್ಪುರದೀಳ್ಯಾವ
ಕಾಚುಪಂಚ ಕೈಯೊಳಗಿಡಕೊಂಡು ಈರಾರ ಮಕ್ಕಳು ಆಡ್ಯಾರ

## ಮಾಯವ್ವ

ಎಕ್ಕಲತ್ತಿ ಎಲ್ಲವ್ವ ನೀಬಾ ಕುಕನೂರು ದ್ಯಾಮವ್ವನೇ
ಒಡ್ಡಟ್ಟ ಉಡಸವ್ವ ನೀಬಾ ಸಿರಸಂಗಿ ಕಾಳವ್ವನೆ
ಬಾದೇವಿ ಬನದವ್ವ ನೀಬಾ ಬಾಳಿಯ ವನದವ್ವನೆ
ಹಾಲುಹಳ್ಳದ ಬಣ್ಣದ ಮಾಯವ್ವ ಇವರಾರು ಮಂದ್ಯತ ತಂಗೇಳೆ
ಇವರೇಳು ಮಂದಿ ಅಕ್ಕತಂಗೇರಪ್ಪ ಗಂಡನಿಲ್ಲದ ಬಾಲೇರು
ಗಂಡನಿಲ್ಲದ ಬಾಲೇರಪ್ಪ ಮಲಿ ಇಲ್ಲದ ಸುಗುಡೇರು
ಮಲಿ ಇಲ್ಲದ ಸುಗುಡೇರಪ್ಪ ಮಕ್ಕಳಿಲ್ಲದ ಬಂಜೇರು
ಮಕ್ಕಳಿಲ್ಲದ ಬಂಜೇರಪ್ಪ ಈರಗಾಸಿಯ ಹಾಕ್ಯಾರ
ಗಂಡಗಾಸಿಯ ಹಾಕ್ಯಾರಪ್ಪ ಕುನಿಗಿನ ಬ್ಯಾಟಿ ಹೊಂಟಾರೆ
ಆಡುತಾಡುತಲ್ಲೋದಾರಲ್ಲಾ ಅಧ್ವಾನರೊಂದ್ ಆಡಿವ್ಯಾಗ
ಅಧ್ವಾನದೊಂದ್ ಅಡರಿ ಒಳಗ ಟೋಪಿನಾರಿಯ ಹಳ್ಳವ
ಟೋಪಿನಾರಿದೊಂದ್ಹಳ್ಳದಾಗ ಸೋಸಿ ಬ್ಯಾಟಿಯೊಂದಾಡ್ಯಾರ

ಸೋಸಿ ಬ್ಯಾಟಿಯೊಂದಾಡ್ಯಾರಲ್ಲ ಗಿಡವೊಂದು ಬ್ಯಾಟಿ ಆಡ್ಯಾರ
ಗಿಡವೊಂದು ಬ್ಯಾಟಿನಾಡ್ಯಾರಲ್ಲ ಪುನಗಿನ ಬೆಕ್ಕ ಎಬಿಸ್ಯಾರ
ಪುನಗಿನ ಬೆಕ್ಕ ಎಬಿಸ್ಯಾರಲ್ಲ ಸೀಗಿ ಪೆಳಿಯಾಗ ಒಗಿಸ್ಯಾರ
ಸೀಗಿ ಪೆಳಿಯಾಗ ಹೋಗಿಸ್ಯಾರಪ್ಪ ಸುತ್ತುಗೋಲುಗಳ ಒಯ್ದಾರ
ಸುತ್ತಗೋಲುಗಳ ಒಯ್ದಾರಪ್ಪ ಪುನಗೀನ ಬೆಕ್ಕು ಬಡದಾರ
ಪುನಗಿನ ಬೆಕ್ಕು ಬಡದಾರಪ್ಪ ಆಡುತಾಡುತಲ್ಲೋದಾರ
ಆಡುತಾಡುತಲ್ಲೋದಾರಪ್ಪ ಅಧ್ವಾನದೊಂದ್ ಅಡಿವೇಳೆ
ಅಧ್ವಾನದೊಂದ್ ಅಡವಿಯ ಒಳಗ ಅಸ್ತಮಾನಗಳ ಮುಣುಗ್ಯಾವು
ಅಸ್ತಮಾನಗಳ ಮುಣುಗ್ಯಾವಪ್ಪ ಸಬ್ಬನಿದ್ದಿಯಗವುದಾರ
ಹಾಲು ಹಳ್ಳದ ಬಣ್ಣದ ಮಾಯೆ ಕಣ್ಣಿಗೆ ನಿದ್ರಿ ಇಲ್ಲಾವ
ಅಧ್ವಾನದೊಂದ್ ಅಡವಿವೊಳಗ ಕಂದನ ಸದದಲ್ಲಾಗ್ಯಾನೆ
ಏಳಿರೇಳಿರಿ ಅಕ್ಕಗಳಿರಾ ಕಂದನ ಸಬದಿಲ್ಲಾಗ್ಯಾವೆ
ಆರುಮಂದಿ ಅಕ್ಕಗಳಪ್ಪ ದಿಡಗ್ಗನೆದ್ದು ಕುಂತಾರ
ದಿಡಗ್ಗನೆದ್ದು ಕುಂತಾರಪ್ಪ ಕಂದನ ಸಬದ ಇಲ್ಲಾವ
ಇವಳೆಂಥ ಹಗಮಾಲಗಿತ್ತೇಳಪ್ಪ ಅವಳೆಂಥ ಹೊಯ್ಮಾಲಿಗಿತ್ತೇಳು
ಆ ಮಂದಿ ಅಕ್ಕಗಳಪ್ಪ ಸಬ್ಬ ನಿದ್ರಿಯ ಮಾಡ್ಯಾರ
ಮತ್ತೆ ಒಂದು ಜಾವದ ಮ್ಯಾಲೆ ಕಂದನ ಸಬದಲ್ಲಾಗ್ಯಾವೆ
ಏಳಿರೇಳಿರಿ ಅಕ್ಕಗಳಿರಾ ಕಂದನ ಸಬದಿಲ್ಲ್ಯಾ ಗ್ಯಾವೆ
ಆರುಮಂದಿ ಅಕ್ಕಗಳಪ್ಪಾ ದಿಡಗ್ಗನೆಂದು ಕುಂತಾರ
ದಿಡಗ್ಗನೆದ್ದು ಕುಂತಾರಪ್ಪ ಕಂದನ ಸಬದ ಕೇಳ್ಯಾವ
ನನ್ನ ಮಗನೆಂದು ನಿನ್ನ ಮಗನೆಂದು ಗುದ್ದ್ಯಾಡುತಲಿ ಹೋಗ್ಯಾರ
ಹಾಲು ಹಳ್ಳದ ಬಣ್ಣದ ಮಾಯವ್ವ ತಾನೊಂದೇಚಿನಿ ಮಾಡ್ಯಾಳ
ನನ್ನ ಮಗನಲ್ಲ ನಿನ್ನ ಮಗನಲ್ಲ ಯಾರ ಮಲಿಯಾಗ ಹಾಲೇಬರತಾವ
ಅವರ ಮಗನೇಳು ಅಂದಾಳ
ಕಾಡರುದ್ರನ ಭೂಮಿಯ ಮ್ಯಾಲೆ ಕನ್ಯಕಂಚೆಯ ಮರನೇಳೆ
ಕನ್ಯಕಂಚೆಯ ಮರಕ್ಕ ನೋಡು ಬೆಳ್ಳಿಯ ಹಗ್ಗ ಹಾಕ್ಯಾರೆ
ಬೆಳ್ಳಿಯ ಹಗ್ಗ ಹಾಕ್ಯಾರಪ್ಪ ಬಂಗಾರ ತೊಟ್ಟಿಲ ಕಟ್ಯಾ ರ
ಆರುಮಂದಿ ಅಕ್ಕಗಳಪ್ಪ ಒಂದು ಜುರಿಯ ತೂಗ್ಯಾರ
ಮೂರು ಜುರಿಯ ತೂಗ್ಯಾರಪ್ಪ ಮೂರು ಜುರಿಯ ತೂಗ್ಯಾರ
ಮೂರು ಜುರಿಯ ತೂಗ್ಯಾರಪ್ಪ ಮಲಿಯಾಗ ಹಾಲು ಇಲ್ಲಾವ
ಹಾಲು ಹಳ್ಳದ ಬಣ್ಣದ ಮಾಯವ್ವ ತಾನೊಂದು ಜುರಿಯ ತೂಗ್ಯಾಳ
ತಾನೊಂದು ಜುರಿಯ ತೂಗ್ಯಾಳಪ್ಪ ಮಲಿಯ ಮೂಗು ಜುಮ್ಮೆಂದಾವ
ಮೂರು ಜುರಿಯ ತೂಗ್ಯಾಳಪ್ಪ ಹಾಲು ಹಳ್ಳವಾಗಿ ಹರದಾವ
ಆರುಮಂದಿ ಅಕ್ಕಗೆಳಪ್ಪ ತಂಗಿಯ ಮ್ಯಾಲೆ ಇರುವಾದ
ನನ್ನ ಮಗನಲ್ಲ ನಿನ್ನ ಮಗನಲ್ಲ ಎಲ್ಲರ ನಡುವಿ ಒಬ್ಬವನ
ಎಲ್ಲರ ನಡುವಿ ಒಬ್ಬವನಪ್ಪ ತೊಟ್ಟಿಲಿಗ್ಹಾಕಿ ತೂಗ್ಯಾರ

ತೊಟ್ಟಲಿಗ್ಹಾಕಿ ತೂಗ್ಯಾರಪ್ಪ ಜೋ ಎಂದು ಜೋಗುಳ ಪಾಡ್ಯಾರ
ಎತ್ತ ಹೋದರು ಹೇನಮ ಶಿವಯ
ಚಿತ್ತ ಎನ್ನ ಮೇಲಿರಲೇಳ

## ಚೆಲ್ಲಳ್ಯವ್ವ (ಚೆಂಗಳಕ್ಯವ್ವ)

ನಾಕು ಟೆಂಗಿನ ಮರದ ನೆರಳಿಲೆ ಏಕ ಜಾಡಿಯ ಜಂಗಮನೊ
ಏಕ ಜಾಡಿಯ ಜಂಗನಪ್ಪ ಲೋಕಕ ಹುದಿಗಳಾದವನೊ
ಲೋಕಕ ಹುದಿಗಳಾದವನಪ್ಪ ಕೈಯಲಿ ಬೆತ್ತ ಹಿಡದವನೊ
ಕೈಯಲಿ ಬೆತ್ತ ಹಿಡಿದವನಪ್ಪ ಮುಂಗೈ ಜೋಳಿಗೆ ಹಾಕ್ಯಾನೊ
ಮುಂಗೈ ಜೊಳಿಗೆ ಹಾಕ್ಯಾನಪ್ಪ ಕಾಲಿಗೆ ಜಂಗ ಧರಿಸ್ಯಾನೊ
ಕಾಲಿಗೆ ಜಂಗ ಧರಿಸ್ಯಾನಪ್ಪ ಕೋರ್‍ಯಾಣ ಭಿಕ್ಷೆ ಬಂದಾನು
ಆಗ ನೋಡು ನನ ಹಾರರು ಬಾಲಿ ಮರ ತುಂಬ ದಾನವ ತಂದಾಳು
ಇವು ದಾನವ ಒಲ್ಲೆನು ಮಗಳ ಹಾಲು ದಾನ ಮಾಡಂದಾನ
ಆಗ ನೋಡು ನನ್ ಹಾರರ ಬಾಲಿ ಆಕಳು ಕರುಗಳ ಬಿಟ್ಟಾಳು
ಆಕಳು ಕರುಗಳ ಬಿಟ್ಟಾಳಪ್ಪ ಗಿಂಡಿಲೆ ನೊರೆಹಾಲು ಕರೆದಾಳು
ಗಿಂಡಿಲೆ ನೊರೆಹಾಲು ಕರೆದಾಳಪ್ಪ ಅಯ್ಯನ ಮುಂದೆ ಇಟ್ಟಾಳು
ಅಯ್ಯನ ಮುಂದೆ ಇಟ್ಟಾಳಪ್ಪ ಕರಕುಡದꠂ ಮಲಿ ಎಂಜಲವು
ಕರಕುಡದ ಮಲಿ ಎಂಜಲವೆಂದೆ ಮುಂದಿನ ಮನಿಗೆ ಹೊಂಟಾನ
ಆಗ ನೋಡು ನನ್ನಯ್ಯಪ್ಪನ ರಡ್ಡ್ಯರ ಮನಿಗೆ ಹೋದಾನ
ರಡ್ಡ್ಯರ ಮನಿಗೆ ಹೋದಾನಪ್ಪ ಕೋರಾಣ ಭಿಕ್ಷವಂದಾನು
ಆಗ ನೋಡು ನನ ರೆಡ್ಡೆರ ಬಾಲಿ ಮರತುಂಬ ದಾನವ ತಂದಾಳು
ಈವ ದಾನವ ಒಲ್ಲೆನು ಮಗಳೆ ಹಾಲದಾನವ ಮಾಡವ್ವ
ಹಾಲದಾನವ ಮಾಡಂಬತಿಗೆ ಎಮ್ಮಿಯ ಕರುಗಳು ಬಿಟ್ಟಾಳು
ಎಮ್ಮಿಯ ಕರುಗಳು ಬಿಟ್ಟಾಳಪ್ಪ ಗಿಂಡಿಲೆ ನೊರೆಹಾಲು ಕರೆದಾಳು
ಗಿಂಡಿಲೆ ನೊರೆಹಾಲು ಕರೆದಾಳಪ್ಪ ಅಯ್ಯನ ಮುಂದೊಯ್ದಿಟ್ಟಾಳು
ಆಗ ನೋಡು ನನ್ನಯ್ಯನಪ್ಪ ಕರಕುಡದꠂ ಮಲಿ ಎಂಜಲವು
ಕರಕುಡದ ಮಲಿ ಎಂಜಲವೆಂದೆ ಮುಂದಲ ಮನಿಗೆ ಬಂದಾನ
ಆಗ ನೋಡು ನನ ಜಂಗಮರಣ್ಣ ಕುರುಬರ ಮನಿಗೆ ಬಂದಾನ
ಕುರುಬರ ಮನಿಗೆ ಬಂದಾನಪ್ಪ ಕೋರ್‍ಯಾಣ ಭಿಕ್ಷೆ ಅಂದಾನ
ಆಗ ನೋಡು ನನ್ನ ಕುರುಬರ ಮಗಳು ಮರತುಂಬ ದಾನವ ತಂದಾಳು
ಈವ ದಾನವ ಒಲ್ಲೆನು ಮಗಳೆ ಹಾಲದಾನವ ಮಾಡ್ಹೋಗು
ಆಗ ನೋಡು ನನ್ನ ಕುರುಬರ ಬಾಲಿ ಸುತ್ತಿದ ಕುರಿಗಳು ಸುತ್ತಿದಂಗೊ
ಸುತ್ತಿದ ಕುರಿಗಳು ಸುತ್ತಿದಂಗಪ್ಪೊ ಮುಚ್ಚಿದ ಕುರಿಗಳು ಮುಚ್ಚಿದಂಗೊ
ಮುಚ್ಚಿದ ಮರಿಗಳು ಮುಚ್ಚಿದಂಗಪ್ಪ ಗಿಂಡಿಲೆ ನೊರೆಹಾಲು ಕರೆದಾಳು
ಗಿಂಡಿಲೆ ನೊರೆಹಾಲು ಕರೆದಾಳಪ್ಪ ಅಯ್ಯನ ಮುಂದೊಯ್ದಿಟ್ಟಾಳ

ಆಗ ನೋಡು ನನ್ನಯ್ಯನಪ್ಪ ಮೂರು ಬೊಗಸಿಯ ಸಲಿಸ್ಯಾನ
ಮೂರು ಬೊಗಸಿಯ ಸಲಿಸ್ಯಾನಪ್ಪ ಊಟಕೆ ಬರಬೇಕು ಅಂದಾಳ
ಊಟಕೆ ಬರ್ತೀನಂದಾನಪ್ಪ ನಿನ ಮಗನ ಕೊಯ್ಯಬೇಕಂದಾನ
ನಿನ್ನ ಮಗನ ಕೊಯ್ದು ಪಲ್ಯವ ಊಟ ಮಾಡತೀನಂದಾನ
ಗುರುವಿನ ಕರುಣ ನನಮೇಲ ಇದ್ದರ ಇಂಥ ಮಕ್ಕಳು ಇನ್ನೇನೊ
ಆಗ ನೋಡು ನನ ಕುರುಬರ ಬಾಲಿ ಓದೊ ಸಾಲಿಗೆ ಹೋಗ್ಯಾಳ
ಓದೊ ಸಾಲಿಗೆ ಹೋದಾಳಪ್ಪ ಮಗನನ ಕರೆದು ಬಂದಾಳು
ಮುಂದೆ ಮುಂದೆ ಚೆಲ್ಲಳ್ಯವ್ವನಪ್ಪ ಹಿಂದಿಂದೆ ಮಗ ಬಂದಾನ
ಹಿಂದಿಂದೆ ಮಗ ಬಂದಾನಪ್ಪ ದೇವರ ಮನಿಗೆ ಹೋದಾಳ
ದೇವರ ಮನಿಗೆ ಹೋದಾಳಪ್ಪ ಏತ್ಯಾಕಿ ಕುತಿಗಿ ಕೊಯ್ದಾಳ
ಏತ್ಯಾಕಿ ಕುತಿಗಿ ಕೊಯ್ದಾಳಪ್ಪ ಸಣ್ಣ ನುಣ್ಣಗ ಹೆಚ್ಚ್ಯಾಳ
ಸಣ್ಣಗ ನುಣ್ಣಗ ಹೆಚ್ಚಾಳಪ್ಪ ಚಿನ್ನದ ಚಿಟಿಗೆ ತುಂಬ್ಯಾಳ
ಚಿನ್ನದ ಚಿಟಿಗೆ ತುಂಬ್ಯಾಳಪ್ಪ ಒಲಿಯ ಮೇಲೆ ಒಯ್ದಿಟ್ಟಾಳ
ಒಲಿಯ ಮೇಲೆ ಒಯ್ದಿಟ್ಟಾಳಪ್ಪ ಮೂರು ಗಂಧದ ಸೆಕ್ಕೇಳು
ಮಗನ ಪಲ್ಲೇವು ಆದಿತಪ್ಪ ಗುರುಗಳ ನೀರ ಕಾದಾವು
ಈಗ ನೋಡು ನನ್ನ ಚೆಲ್ಲಳ್ಳವ್ವಾನು ಅಯ್ಯನ ಕರೆಯುತಲೋದಾಳು
ಮುಂದೆ ಮುಂದೆ ಚೆಲ್ಲಳ್ಳವ್ವನಪ್ಪ ಹಿಂದೆ ಹಿಂದೆ ಶಿವರಾಯನು
ಬಚ್ಚಲಿಗೆ ನೀರ್ಹಿಡಿದಾಳಪ್ಪ ಅಯ್ಯನ ಮೈಯ ತೊಳಿದಾಳು
ಅಯ್ಯನ ಮೈಯ ತೊಳಿದಾಳಪ್ಪ ಊಟಕ ನೀಡಿ ಕರದಾಳು
ಆಗ ನೋಡು ನನ್ನ ಜಂಗಮರಯ್ಯ ಮಗನ ಕರಯಬೇಕಂದಾನ
ಇದ್ದ ಒಬ್ಬ ಮಗನ ಕೊಲ್ಲಿನೊ ಗುರುವೆ ಇನ್ನೆಲ್ಲಿ ಮಗನ ಕರೆಯಲಿ
ಓದೋ ಸಾಲಿಗೆ ಹೋಗವ್ವ ಮಗಳೆ ನಿನ್ನಯ ಮಗನ ಕರಿಯವ್ವ
ಆಗ ನೋಡು ಚೆಲ್ಲಳ್ಳವ್ವನಪ್ಪ ಓದೋ ಸಾಲಿಗೆ ಬಂದಾಳು
ಓದೊ ಸಾಲಿಗೆ ಬಂದಾಳಪ್ಪ ಮಗನ ಕರೆಯುತಲೈದಾಳು
ಮಗನ ಕರೆಯುತಲೈದಾಳಪ್ಪ ಬಂದೀನ ತಾಯೆಂದು ಬಂದಾನು
ಮುಂದೆ ಮುಂದೆ ಚೆಲ್ಲಳ್ಳವ್ವನಪ್ಪ ಹಿಂದಿಂದೆ ಮಗ ಬಂದಾನ
ಹಿಂದಿಂದೆ ಮಗ ಬಂದಾನಪ್ಪ ಇಬ್ಬರು ಕಲೆತು ಉಂಡಾರು
ಇಬ್ಬರು ಕೈಬೆರಸುಂಡಾರಪ್ಪ ಏನೆಂದ್ಹರಕಿ ಕೊಟ್ಟಾರು
ಹಾಗಲ ಬಳ್ಳ್ಯಾಗ್ಹಬ್ಬಲಿ ಈ ಮನಿ ಕುಂಬಳದ ಕುಡಿ ಸಾಗಲೊ
ಗಂಗವ್ವ ಗೌರವ್ವ ಹುಟ್ಟಾಲಪ್ಪ ರಾಮಣ್ಣ ಲಕ್ಷ್ಮಣ ಹುಟ್ಟಾಲೊ
ಇಲ್ಲಿಗೆ ಇದು ಒಂದು ಸಂದೇಳು ಗುರುವೆ ಹಾಡಿದಾರು ಪದ ಮುಂದೇಳು

## ಚೆಂಡಿನ ಜಗಳ

ಮಾಳಣ್ಣ ಗುರಿಯ ಹೂಡ್ಯಾನಪ್ಪ ಬೀರಣ್ಣ ಚೆಂಡ ಒಗದಾನ
ಬೀರಣ್ಣ ಚೆಂಡ ಒಗದಾನಪ್ಪ ಚೆಂಡಯಾವಲ್ಲಿಗೋದೀತ
ಚೆಂಡ ಯಾವಲ್ಲಿಗೋದೀತಪ್ಪ ಕೆಮ್ಮಣ್ಣಗುದಿನಾಗ ಬಿದ್ದೀತು
ಕೆಮ್ಮಣ್ಣಗುದಿನಾಗ ಬಿದ್ದ ಚೆಂಡು ತಾ ಜಂಗುಮರಣ್ಣ ಕಂಡಾನ
ಜಂಗಮರಣ್ಣ ಕಂಡಾನಪ್ಪ ಚೆಂಡ ಬಕ್ಕಣಕಾಕ್ಯಾನ
ಚೆಂಡ ಬಕ್ಕಣಕಾಕ್ಯಾನಪ್ಪ ನೀರ ತುಂಬಿಕೊಂಡು ಬಂದಾನ
ನೀರ ತುಂಬಿಕೊಂಡು ಬಂದಾನ ಜಂಗಮ ಬೀರಣ್ಣ ಚಂಡ ಕೇಳ್ಯಾನ
ಬೀರಣ್ಣ ಚೆಂಡ ಕೇಳ್ಯಾನಪ್ಪ ಮುತ್ತಿನ ಚೆಂಡು ಉಂಟೇನೊ
ಬಡ ಬಡ ಮನಿಗೆ ಬಂದನ ಜಂಗಮ ಮಡದಿಯ ಕರೆದು ಹೇಳ್ಯಾನ
ಮಡದಿನಾದರು ಕರದಾನಪ್ಪ ಜಗಲಿನಾದರು ತೊಳಿಯೆಂದ
ಜಗಲಿನಾದರ ತೊಳಿಯಂದಾನೊ ನೆಲಗಳ ಸಾರಿಸಬೇಕಂದನೊ
ಮುತ್ತಿನ ಚೆಂಡು ಜಗಲಿ ಮ್ಯಾಲಿಟ್ಟು ನಮಿಸುತ ಪೂಜಿ ಮಾಡ್ಯಾರೊ
ಪೂಜಿಪುಕ್ಕವ ಮಾಡ್ಯಾರಯ್ಯ ಒಂದಿನ ಅಂಬೋದು ಓದೀತು
ಒಂದಿನ ಅಂಬೋದು ಓದೀತಪ್ಪ ಎರಡು ದಿನಗಳು ಹೋದಾವು
ಎರಡು ದಿನಗಳು ಹೋದಾವಪ್ಪ ಮೂರನೆ ದಿನಗಳು ಬಂದಾವು
ಸಣ್ಣ ಮನಿ ತುಂಬ ಸಾವಿರದಿನಗಳು ಇನ್ನೂರ್ ಮುನ್ನೂರ್ ಕರುಗಳೊ
ಸಣ್ಣ ಮನಿಯಾಗ ಸಾವಿರ ಎಮ್ಮಿ ನೆತ್ತರದ್ಹಾಲ ಕರೆದಾವೊ
ನೆತ್ತಿರ ಹಾಲು ಕರೆದಾವಪ್ಪ ಕರುಗಳ ಹೊಟ್ಟೆ ನೋವೇಳೊ
ಮನಿಯಲಿ ಹೂಡುವ ಎಂಟೆತ್ತಪ್ಪ ಬಂಟರೆಂಬೋರು ಮಕ್ಕಳೊ
ಬಂಟರೆಂಬೋರು ಮಕ್ಕಳ ಕಣ್ಣು ಇಳಿಗಣ್ಣಿಗೆ ಬಂದಾವು
ಇಳಿಗಣ್ಣಿಗೆ ಬಿದ್ದಾವಪ್ಪ ಎಂಟು ಎತ್ತು ಕುಂಟು ಬಿದ್ದಾವು
ಎಂಟೆತ್ತು ಕುಂಟು ಬಿದ್ದಾವು ಜಂಗನ ಇದು ಏನು ಗಾಚಾರಂದಾನೊ
ಇದು ಏನು ಗಾಚಾರಂದಾನೊ ಪ್ರಶ್ನಿ ಕೇಳುತಾನೋದಾನು
ಪ್ರಶ್ನಿ ಕೇಳುತಾಲೋದಾನಪ್ಪ ಮುತ್ತಿನ ಚೆಂಡಿನ ಕಾಟಾವು
ಮುತ್ತಿನ ಚೆಂಡಿನ ಕಾಟವಾದರೆ, ಇದನು ಹ್ಯಾಂಗೆ ಒಪ್ಪಿಸಲೊ
ಇದ ಒಂದಕ ಒಪ್ಪಿಗೆ ಇಲ್ಲ, ಇನ್ನೂರು ಮುನ್ನೂರು ಕೈಪಂಜ
ಇನ್ನೂರು ಮುನ್ನೂರು ಕೈಪಂಜಿಡಕೊಂಡಪ್ಪ ಮುತ್ತಿನ ಸತ್ತಿಗೆ ನೆಳಲಲ್ಲಿ
ಮುತ್ತಿನ ಸತ್ತಿಗೆ ನೆಳಲಲ್ಲಿ ಹೋಗಬೇಕು ಬೀರಣ್ಣಗ್ಹರಕಿ ಮುಟ್ಟಬೇಕು
ಬೀರಣ್ಣಗ್ಹರಕಿ ಮುಟ್ಯಾವಪ್ಪ ಎತ್ತುಗಳೆದ್ದು ನಿಂತಾವು
ಎತ್ತುಗಳೆದ್ದು ನಿಂತಾವಪ್ಪ ಮಕ್ಕಳು ಬಂಟಃರು ಎದ್ದಾರು
ನೆತ್ತುರುಗರದ ಎಮ್ಮಿ ಆಗಲೆ ಹಾಲನಾದರು ಕರೆದಾವು
ಹಾಲನಾದರು ಕರೆದಾವಪ್ಪ ಕರಗಳಗಟ್ಟಿ ಸಗಣೇಳು
ಇಲ್ಲಿಗೆ ಇದು ಒಂದು ಸಂದೇಳು ಗುರುವೆ ಹಾಡಿದಾರು ಪದ ಮುಂದೇಳು

## ಆರೋಹಣದ ಹಾಡು

ಹುಲುಲುಗ್ಯಾ ಹುಲುಲುಗ್ಯಲೇ ತಮ್ಮ ಹುಲುಲುಗ್ಯಾ
ಹೇಳ್ತೀನಿ ಕೇಳಲೇ ತಮ್ಮ ಹುಲುಲುಗ್ಯಾ
ಶಿರಹಟ್ಟಿ ಜಾತ್ರಿಗೊಮ್ಮೆ ಹೋರಿ ತರಾಕ  ಹೊಂಟ್ನೆಲೆ ತಮ್ಮ ಹುಲುಲುಗ್ಯಾ
ಹೋರಿ ನೋಡಿ ಖರೀದಿಗೆ ಕೇಳಿದ್ನೆಲೆ ತಮ್ಮ ಹುಲುಲುಗ್ಯಾ
ಕರದು ಸಾವಿರ ಹೇಳಿದ್ರಲೆ ತಮ್ಮ ಹುಲುಲುಗ್ಯಾ
ಸಾವಿರ ಹೇಳದ್ರೊಳಗ ಮೈಮುಟ್ಟ ಕೈಮುಟ್ಟಿ ಎಬ್ಬಿಸಿದ್ನೆಲೆ ತಮ್ಮ ಹುಲುಲುಗ್ಯಾ

## ನೀತಿ ಇಲ್ಲದ ಮಾತಲ್ಲ

ಪರಮನಂದನ ದೊರಿಯ ಕುವರನ ಶರಣರ ಪಾದಕ ನಮೋ ನಮೋ
ಶರಣರ ಪಾದಕ ನಮೋ ನಮೋ ನಮ್ ಗುರುಹಿರಿಯರಿಗೆ ನಮೋ ನಮೋ
ಗುರು ಹಿರಿಯರಿಗೆ ನಮೋ ನಮೋ ನಮ್ ಕುಂತಿರ ದೈವಕ ನಮೋ ನಮೋ
ಕಡಗವಿಲ್ಲದ ಕೈಯಲ್ಲಪ್ಪ ಕಡಿವಾಣಿಲ್ಲದ ತೇಜಲ್ಲ ।
ಕಂಟನಿಲ್ಲದೆ ಕೊಡನಲ್ಲಪ್ಪ ನೆಂಟರಿಲ್ಲದೆ ಸೂಳೆಲ್ಲ ।
ನೆಂಟರಿಲ್ಲದ ಸೂಳೆಲ್ಲಪ್ಪ । ಬಂಟನಿಲ್ಲದ ಬಂಡೆಲ್ಲ
ಇದ್ದಲಿಲ್ಲನ ಕಬ್ಬಿಣ್ಯಾತಕ ವಿದ್ಯೆ ಇಲ್ಲದೆ ಬಡಿಗ್ಯಾಕ
ನೀತಿ ಇಲ್ಲದ ಮಾತಲ್ಲಪ್ಪ ಜೀವಕವಿಲ್ಲದೊಂದಾಳ್ಯಾಕ
ಜೀಕವಿಲ್ಲದೊಂದಾಳು ಕಂಡರ ನೂಕವಾರಿ ಯಾಕಯ್ಯ
ಗೌಡರು ಒಳ್ಳೇರೆಂದೇ ರೈತರು ಗೌಡರ ನಂಬದು ಸಲ್ಲಾವೆ
ರೈತರು ಒಳ್ಳೇರೆಂದೇ ಗೌಡರು ರೈತರ ನಂಬದು ಸಲ್ಲಾವೆ
ಬಡವರ ನೆರೆಯಲ್ಲಿ ಬ್ರಾಹ್ಮಣರಿದ್ದರ ಒಂದಕ ನೂರ್ಮಡಿ ಕೆಡಿಸುವರು
ಸತಿಯಳು ಒಳ್ಳೇಳ್ಳೇಂದೇ ಪುರುಷ ಸರಿಸಿ ಕುಂದ್ರದು ಸಲ್ಲಾವೆ
ಪುರುಷರು ಒಳ್ಳೇರೆಂದೇ ಮಡದಿ ಮಂಚ ಏರಾದು ಸಲ್ಲಾವೆ
ತುಪ್ಪದಂಗ ಇದ್ದರ ತಮ್ಮ ತುರುಕರ ನಂಬದು ಸಲ್ಲಾವೆ
ಹಾಲಿನಂಗ ಇದ್ದರ ತಮ್ಮ ಹಾರರ್ನ ನಂಬದು ಸಲ್ಲಾವೆ
ಬೆಲ್ಲದಂಗ ಇದ್ದರು ತಮ್ಮ ಬ್ಯಾಡರ ನಂಬದು ಸಲ್ಲಾವೆ
ಬೇವಿನ ಮರಕೆ ಬೆಲ್ಲದ ಸೋಪಾನ ಜೇನು ತುಪ್ಪದಲಿ ಒಯ್ಯನೀರ
ಜೇನು ತುಪದಲಿ ಒಯ್ಯನೀರ ಒಯ್ದರೆ ಬೇವು ತನ್ನ ಇಸವ ಬಿಡದೇಳು
ಶಿವನು ಕುಂದ್ರ ಮುತ್ತಿನ ಸದರಿಗೆ ಮೂರು ಸುತ್ತನಾವು ತಿರುಗೇವು
ದೇವಾರು ಬಂದಾವ ಬನ್ನೀರೇ

## ಕಲಿಯುಗ

ದಗಲ್‌ಬಾಜಿ ಬುದ್ಧಿಯಿಂದ ಕೆಡತಾರೀ ಜನ | ಮಿಗಿಲ ಉತ್ತಮರೆನಿಸಿಕಗೊಂತಾರಿ
ಹೆಚ್ಚು ಹೆಚ್ಚು ಅನ್ನುತಲಿ ಹೆಣಗತಾರೊ | ತಮ್ಮ ಇಚ್ಛೆ ಬಂದವರಿಗೆ ಸೈ ಅಂತಾರ್‍ರಿ
ತುತ್ತ ಕೂಳಿಗೆ ಸುತ್ತ ಬಾಯಿ ಬಿಡತಾರೊ | ಬಹಳ ಪುಚ್ಚೆವಂತರಾಗಿ ನ್ಯಾಯ ಹೇಳ್ತಾರ್‍ರಿ
ನ್ಯಾಯವಾದ ಅನ್ಯಾಯ ಮಾಡ್ತಾರೊ | ತಮ್ಮ ಬಾಯಿ ಮಾತಿನಿಂದ ಕೆಡಿವಾಡ್ತಾರಿ
ಸಾಹಿತ ಸಂಪತ್ತುಗಳಿಗಂತಾರೊ | ಕೊಟ್ಟ ಬಾಯಿ ಬಡದು ಬಡವನೆನಿಸಿ ಕೊಂತಾರಿ
ಯಾವ ಧ್ಯಾಸನೆಂದು ಕಾಲ ಕಳಿತಾರೋ | ಒಂದು ಕಾಸ ತಂದು ಹೊಟ್ಟೆ ಹರಿತಾರ್‍ರಿ
ದ್ಯಾಸತಪ್ಪಿ ಸಜ್ಜನರಿನ್ನ ದೂಡುತಾರೊ | ಕೋಟಿ ರಾಯಸುಳ್ಳಿ ಒಳಗ ಬಿದ್ದು ಮುಳುಗುತಾರ್‍ರಿ
ಪಂಗ್ಯಾಂಗ ಪರಸಂಗ್ರಿ ಮಾಡುತಾರೊ | ಇಲ್ಲದಂಥ ಮತು ಹುಟ್ಟಿಸಿಗೊಂತಾರಿ
ಕುತುಹರನ ರೂಪ ಕಂಡು ಜರುಗುತಾರೊ | ತಮ ಸಂತಾನ ಸವರಿಕೊಂಡು ಹೋಗುತಾರ್‍ರಿ
ಬಿದ್ದಮಾತು ತಳ್ಳಿ ಹಿಡಿದು ಮಾಡ್ತಾರೊ ಅವರ ಬುದ್ಧಿಯೊಳಗ ಪರಕಾಗತಾರ್‍ರಿ
ಸಿದ್ಧಮೂರ್ತಿ ನನಗ ನಿನಗಂತಾರೊ | ಗವಿಸಿದ್ಧನ ಕಂಡು ಅವರು ಜರುಗುತಾರ್‍ರಿ

## ಬೆಡಗಿನ ಹಾಡು

ಬೆಡಗಿನ ಹಾಡ ಹಾಡೊಂದ ನನ್ನ ಜಡದೇವಿ ಕಳ್ಳಿ ಮೆಳಿಯಣ್ಣ
ಮೂಡಲದಿಂದ ಬಂದಾವೊ ಹೆಣ್ಣ ನೋವರ ಮಣಕಾವೊ
ಹೆಡಿಗಿಗಡತರ ಕೆಚ್ಚಲ ತೆಕ್ಕಿಗಡತರ ಮಲಿಯೇನು
ಹಿಂಡಿದ್ರ ಕೊಡ ಹಾಲೇನು | ಕಂಡ ಕಡದ ಮಾರೂದು
ಕಂಡ ಕಡದು ಮಾರೋದು ರಕ್ತ ಹಿರೋದು
ಆ ರಕ್ತ ನೋಡಲ್ಲಪ್ಪ ದೇವಸಭೆಯಲ್ಲಿರುವುದೋ
ಬಾಲಲ್ಲಿ ನೀರು ಕುಡಿಯುವುದು ಬಾಯಲ್ಲಿ ಹವಳ ಸುರಿಸುವುದು
ಒಂದೊಂದ ಮುತ್ತು ನುಂಗುವುದು ಒಂದೊಂದು ಮುತ್ತು ಉಗುಳುವುದು ‖ ಬೆಡಗಿನ ‖
ಹುಲ್ಲು ಹಾಕಿದರ ಹಿಂಡುವುದಿಲ್ಲ ಕಲ್ಲು ಹಾಕಿದರ ಹಿಂಡುವುದು
ಕಲ್ಲು ಹಾಕಿದರ ನೋಡಪ್ಪ ಬೋರಿಸಿ | ನೂರೆಯ ಹಾಲು ಕರೆಯುವುದು
ಮಲ್ಲಾಡಲಿಂದ ಬಂದಾವು ಮೂರು ಕಾಲಿನ ಮಣಕಾವು
ಕಟ್ಟಿದರ ಬಡ್ಡ (ಬರಡ) ಬೀಳವದು | ಕಟ್ಟದಿದ್ರ ಹೈನಾಗುವುದು
ನೆಡುವುದು ಹನ್ನೆರಡು ಕಾಲೇನು | ಹಿಡಿವುದು ಶಸ್ತ್ರದಾರೇನು ‖ ಬೆಡಗಿನ ‖

ನೆತ್ತಿಲೆ ಮುಕ್ಕ ಹಾಕುದು | ತುತ್ತಿಗೊಮ್ಮೆ ನೀರು ಕುಡಿಯುವುದು
ಹೊಟ್ಯಾಗ ಹಲ್ಲು ಇರುವುದು ಕಿವಿಯಾಗ ನಾಲಿಗೆ ಇರುವುದು ‖
ನೀರಾಗ ಹುಟ್ಟುವದು ನೀರಾಗ ಬೆಳೆವುದು ನೀರ ಸೋಕಿದರ ಕಾಯಾಗುವುದು
ಚಪ್ಪರಕ ಚಲ್ಲೊರೆಯುವುದು | ಬಸವಣ್ಣ ಬೆನ್ನಿಲೆ ಹೆರುವದೊ
ಬಸವಣ್ಣ ಬೆನ್ನಿಲೆ ಹೇರುವದೊ | ಬಾಜಾರಕ ಇಟ್ಟು ಮಾರುವದೋ ‖

## ಒಗಟುಗಳು

ಬುಡವ ನಡುವೆ ಹುಳಿ ಕೊನೆಯಲ್ಲಿ ಕೆಂಪೆಸಲಾವ
ಕೊನೆಯಲ್ಲಿ ಕೆಂಪೆಸಲಿನ ಬಾಲಿ ಮದ್ಯಣಕ ಮದುವ್ಯಾದಾಳ
ಮದ್ಯಣಕ ಮದುವ್ಯಾದಂಥ ಬಾಲಿ ಚೆಂಜೀಕ ಮೈ ನೆರತಾಳ
ಚೆಂಜೀಕ ಮೈ ನೆರತಂಥ ಬಾಲಿ ಸರ್ವತ್ತಿಗೆ ಬಸರಾಗ್ಯಾಳ
ಸರ್ವತ್ತಿಗೆ ಬಸರಾದಂಥ ಬಾಲಿ ಮುಂಜಾನಿಗೆ ಮಗನ್ಹಡದಾಳ
ಮುಂಜಾನಿಗೆ ಮುಗನ್ಹಡದಂಥ ಬಾಲಿ ಬಾಜ ಬಾಜರನ ತಿರುಗ್ಯಾಳ
ಬಾಜ ಬಾಜರನ ತಿರುಗ್ಯಾಳ ಬಾಲಿ ಅಂಗಡಿ ಮಳಿಗ್ಯಾಗ ಕುಂತಾಳ
ಅಂಗಡಿ ಮಳಿಗ್ಯಾಗ ಕುಂತಿರ ಬಾಲಿ ಕಂಡಾರ ಕಣ್ಣಾಕ್ಯಾರ
ಕಂಡಾರ ಕಣ್ಣಾ ಕ್ಯಾರ ಬಾಲಿ ಕೊಂಡರಿಗೆ ಮೈದುಂಬ್ಯಾಳ
ಬಲ್ಲಂಥ ಜಾಣನು ಬಾಯ್ವೊಳಗೈತೊಂದು ಹರಿಯ ಮೂಲಕ ತಿಳಿಯದ
ಹರಿಯ ಮೂಲಕ ತಿಳಿಯದಿದ್ದರ ಆರು ತಿಂಗಳೊಂದು ಕುರಿಕುರಿ
ಮರದಾಗ ಹುಟ್ಟುವುದು ಮಾತಿನ ಗಿಣಿ ಕಡೆಗೆಲ್ಲು ಬಾಯುಂಟು
ಎರಡು ಕಡಿಗೆಲ್ಲು ಬಾಯುಂಟು ಗಿಣಿಗೆ ಹೊಟ್ಟ್ಯಾಗ ಕಳ್ಳಿಲ್ಲಾವೆ
ಹೊಟ್ಟ್ಯಾಗ ಕಳ್ಳಿಲ್ಲಾದ ಗಿಳಿಯ ಬಾಯಾಗ ನಾಲಿಗಿಲ್ಲಾವ
ಬಾಯಾಗ ನಾಲಿಗಿಲ್ಲದ ಗಿಳಿಯ ಹೋಲು ಗೂಗಣ್ಣ ಕೂಗ್ಯಾವ
ಹಳ್ಳಿ ಪಿಳ್ಳಿಯ ಕಂಡಲ್ಲಿ ಗಿಳಿಯೆ ಪಿಲ್ಲಾಳಗೂಗನು ಕೂಗ್ಯಾವೆ
ಎರಿಯ ಹೊಲ್ದಾಗ ಬೆಳಿವುದಪ್ಪ ಅದು ಒಂದು ಕಾರ್ಯಕ ಬರುವುದು
ಗುಡದಾಗ ಹುಟ್ಟುವದು ಗುಡದಾಗ ಬೆಳಿವುದು ಅದು ಒಂದು ಕಾರ್ಯಕ ಬರುವುದು
ಆಡಿವ್ಯಾಗ ಹುಟ್ಟುವುದು ಆಡಿವ್ಯಾಗ ಬೆಳಿವುದು ಅದು ಒಂದು ಕಾರ್ಯಕ ಬರುವುದು
ಎರಿಯ ಹೊಲ್ದಾಗ ಬೆಳೆವುದಂದರ ನೂಲಿನಗ್ಗವನಲ್ಲೇನ
ಗುಡದಾಗ ಹುಟ್ಟುವದು ಗುಡದಾಗ ಬೆಳೆವುದು ಬಿದರ ಬಂಕ ಅಲ್ಲೇನು
ಆಡಿವ್ಯಾಗ ಹುಟ್ಟುವದು ಆಡಿವ್ಯಾಗ ಬೆಳೆವುದು ಆಡಿನ ಚರ್ಮ ಅಲ್ಲೇನೊ

* * *

## ಭೂತಾಳ ಸಿದ್ಧದೇವರು

ದೇವಗ ಶರಣೆನ್ನಿ ದೇವರಿಗೆ ಶರಣೆನ್ನಿರೋ
ಗುರುವಿಗೆ ಶರಣೆನ್ನಿ ಸಿದ್ಧಾಗ ಶರಣೆನ್ನಿರೋ ॥ ಪಲ್ಲ ॥

ಸಲ್ಲಿ ಹೊತ್ತಿನ ನನ ಗುರುವಿನ ಕರದರ ಮಲ್ಲಿಗಿ ನನಿಬಂದ ಇಳದಾವ
ಮಲ್ಲಿಗೆ ಹೇಳ ಮಂಟಪದೊಳಗ ಗೊಲ್ಲಾಳ ಶಿವ ಬಂದ ಇಳದಾನ

ಗೊಲ್ಲಾಳ ಶಿವನೆ ನೀನೇ ಬಾ ನನ್ನ ಸಲ್ಲಗುದರಿಯ ಸರದಾರನೋ
ಸಲ್ಲಗುದರಿ ಕೈಯಾಗ ಹಿಡಕೊಂಡ ಸೊಗಸಾಗಿ ಮಾರಿ ತಿರವ್ಯಾಡಿದೋ ॥ ೧ ॥

ಗೊಲ್ಲಗುದರಿ ಬಲಗೈಯ ಮ್ಯಾಲ ಬಲ್ಲಾಂಗ ತಿರವ್ಯಾಡಿದೋ
ಕೆಂದಗುದರಿ ಬಂದ ಗದ್ದದ ಮ್ಯಾಲ ಇಂಡಿಮಾಡಿ ಇಡ್ಯಾಡಿದೋ
ಇಂಡಿಮಾಡಿ ಈಡ್ಯಾಡುತ ಬಾ ನನ್ನ ದುಂಡಮಲ್ಲಿಗಿ ಧಡಿಗಳೋ
ದುಂಡಮಲ್ಲಿಗಿ ಧಡಿಗೊಳ ನಿನಗ ಸಣ್ಣಮಲ್ಲಿಗಿ ಸರಗೊಳೋ ॥ ೨ ॥

ಸಣ್ಣ ಮಲ್ಲಿಗಿ ಸರಗೋಳ ನಿನಗ ಮಲ್ಲಿಗಿ ಹೂವಿನ ಮುಂಡಾಸೋ
ಮಲ್ಲಿಗಿ ಹೂವಿನ ಮುಂಡಾಸ ನಿನಗ ಶ್ಯಾವಂತ್ರಿ ಹೂವಿನ ಶೆಲ್ಲೆನೋ
ಜಲ್ಲಿ ಜಲ್ಲಿಲೇ ಹೂವ ಬಂದರ ಜಲ್ಯಾಡಿ ಮುಡಿದೀ ನಂದಾನೋ
ಬಂಡಿ ಬಂಡಿಲೆ ಹೂವ ಬಂದರ ಮಂಡಿಗಿ ಸಾಲ್ಯಾವ ಅಂದಾನೋ ॥ ೩ ॥

ಅವರಿ ಪತ್ತರಿ ಅಡವ ಹಚ್ಚಿಕೊಂಡು ಹೋಳ ಮೈಯಲೇ ಹೇಳ್ಯಾನೋ
ಏಳಪ್ಪ ಅಂತ ಎಬ್ಬಸತಾನೋ ಕೆಂಗರಗಣ್ಣಗಳ ತೆರದಾನೋ
ಕೆಂಗರಣ್ಣಗೊಳು ಗುಂಗರ ಮೀಸಿ ನುಂಗುವಂಥಾ ಭಾಳ ಅವತಾರೋ
ನುಂಗುವಂಥಾ ಭಾಳ ಅವತಾರನಂದರ ಬೈಲ ಭೂತಾಳ ಸಿದ್ಧಾನೋ ॥ ೪ ॥

ಬೈಲ ಭೂತಾಳ ಸಿದ್ಧಾ ಬಾ ನನ್ನ ಬಡವರ ಬೇಡಿಕೆ ಬಂದಾವೋ
ಬಡವರ ಬೇಡಿಕೆ ಬಂದಾವೇನ ಬಲ್ಲವರ ಬೇಡಿಕೆ ಬಂದಾವೋ
ನಮ್ಮ ದೇವರ ಬರುವ ಹಾದಿಲೆ ಕಗ್ಗಲ ಕಡಿ ಆದಾವೋ
ಕಗ್ಗಲ ಕಡಿ ಆದಾವ ಭೂತಾಳಿ ಹಿಡಗಲ್ಲ ಹಿಟ್ಟ ಆದಾವೋ ॥ ೫ ॥

ಹಿಂಡ ದೇವಿಯ ಗಂಡನಂದರ ಗಂಡ ದೇವಿಯ ಮಿಂಡನೋ
ಗಂಡ ದೇವಿಯ ಮಿಂಡನಂದರ ಪುಂಡ ಭೂತಾಳ ಸಿದ್ಧಾನೋ
ಪುಂಡ ಭೂತಾಳ ಸಿದ್ಧಾಗ ನಡದರ ಗಂಡ ಶಕ್ತಿ ಕೊಟ್ಟಾನೋ
ಗಂಡಶಕ್ತಿ ಕೊಡುವ ಸಿದ್ಧಾನ ಚಂದಾಗಿ ನಾವ ಹಾಡೇವೋ ॥ ೬ ॥

ಹಾಲ ಹಾಲಿಗೋ ಕುಕುಮ ಕುಕುಮಕೋ ತರಿಸೇವೋಽ
ಕುಕುಮ ತರಿಸಿ ಭಂಡಾರ ನಾವು ಸಿದ್ಧಾಗ ಹಾರಿಸೇವೋಽ ॥
ಸಂತೋಷದಿಂದಲೆ ನವಮಾಸ ತುಂಬುತ ನಡದಿದಾವೋ
ಒಂಬತ್ತ ತಿಂಗಳ ರಾತ್ರಿ ಸಮಯದಲಿ ಚಂದ್ರನ ಕಂಡಿದಾಳೋ ॥ ೭ ॥

ಒಂಬತ್ತ ತಿಂಗಳ ರಾತ್ರಿ ಸಮಯದಲಿ ಚಂದ್ರನ ಕಂಡಿದಾಳೋ

ಮಲ್ಲಿಗೆ ಸಾವಂತಿಗೆ ಮನಸೋಭಿಸುವ ಹೂಗಳ ಕಂಡಿದಾಳೋ ‖ ೮ ‖
ಮಲ್ಲಿಗೆ ಸಾವಂತಿಗೆ ಮನಸೋಭಿಸುವ ಹೂಗಳ ಕಂಡಿದಾಳೋ
ಭವಾನಿ ಸುಗ್ಗಾದೇವಿಯ ಹೊಟ್ಟೆಲೆ ಅದ್ಭುತ ಮಗ ಹುಟ್ಟಿದಾನೋ ‖ ೯ ‖

ಭವಾನಿ ಸುಗ್ಗಾದೇವಿಯ ಹೊಟ್ಟೆಲೆ ಅದ್ಭುತ ಮಗ ಹುಟ್ಟಿದಾನೋ
ಕುರುಬರ ಗುರುವೆನಿಸಿದ ಸಿದ್ಧರಾಮಯ್ಯ ಹುಟ್ಟಿ ಬಂದಿದಾನೋ ‖ ೧೦ ‖

## ಹರಕಿ ಹಾಡು ಅಥವಾ ಕರಿ ಹಾಡು

ಶುಕ್ರವಾರ ಸುದ್ದೋ ನಿನ ಮನಿs
ಶನಿವಾರದ ರಂಗೇನೋss
ಶನಿವಾರದ ರಂಗೇನೋ ನಿನ್ನ ಮನಿ
ಆಯಿತಾರದ ಹಬ್ಬೇನೋss
ಆಯಿತಾರದ ಹಬ್ಬೇನೋ ನಿನ್ನ ಮನಿ
ಭಾವುಳ್ಳ ಭಗತರ ನೋಡಪ್ಪs ‖ ೧ ‖

ಭಾವುಳ್ಳ ಭಗತರ ನೋಡಪ್ಪs
ಹಬ್ಬದ ಕಾರ್ಯ ಹಿಡದಾನೋs
ಭಾವುಳ್ಳ ಭಗತರ ಮನಿ ಮುಂದ
ಸಾಕರಿ ಮಾವಿನ ಮರವೇನೋs
ಸಾಕರಿ ಮಾವಿನ ಮರಹುಟ್ಯೋs
ಮಾವಿನ ಮರಕ ನೋಡಪ್ಪ ‖ ೨ ‖

ಸುತ್ತ ದಿಕ್ಕಿನ ಹಕ್ಕಿ ಕೂಡ್ಯಾವೋs
ಸುತ್ತ ದಿಕ್ಕಿನ ಹಕ್ಕಿ ಕೂಡ್ಯಾಗಿ
ಗಕ್ಕಲ ಗಿರದ ಮೇದಾವೋs
ಪಕ್ಕನಿಲ್ಲದ ಪಾರಿವಾಳೋ
ಲೆಕ್ಕನಿಲ್ಲದ ಗಿಣಿ ಹಿಂಡೋs
ಲೆಕ್ಕನಿಲ್ಲದ ಗಿಣಿ ಹಿಂಡ ಕೂಡಿ
ಭಗತಗ ಹರಕಿ ಕೊಟ್ಟಾವೋs ‖ ೩ ‖

ದೇವರುಂಡ ಮನಿಯಾಗ
ಹೊನ್ನದ ರಾಶಿ ಹೊಳಿಯಲ್ಯೋs
ಪೂಜೇರಿ ಉಂಡ ಮನಿಯಾಗ
ತುಪ್ಪದ ಕಾವಲಿ ಹರಿಯಲ್ಲೋs
ಆಳಮಕ್ಕಳುಂಡ ಮನಿಯಾಗ
ಹಾಲ ಕಾವಲಿ ಹರಿಯಲ್ಯೋs ‖ ೪ ‖

ರಾಮಣ್ಣ-ಲಕ್ಷ್ಮಣನನ್ನುವ
ಜೋಡ್ಯಾಡ ಗಂಡ ಹುಟ್ಟಲ್ಯೋs
ಗಂಗವ್ವ ಗೌರವ್ವನೆನ್ನುವ
ಜೋಡ್ಯಾಡ ಹೆಣ್ಣ ಹುಟ್ಟಲೋs
ಯಂಕವ್ವ-ಮಾಯವ್ವನೆನ್ನುವ
ಜೋಡ್ಯಾಡ ಹಗಿಯ ಹಾಕಲ್ಯೋs ॥ ೫ ॥

ಅಂಗೈಯಷ್ಟು ಹೊಲವ ಮಾಡಿ
ಬಂಗಾರ ಬಿತ್ತಿ ಬೆಳೆಯಲ್ಯೋs
ಆವ ಜನ್ನಿಗಿ ಆಗಲಿ ನಿನ್ನಲಿ
ಎತ್ತ ಕಂಟಲಿಯಾಗಲೀs
ಹಾಗಲ ಬಳ್ಯಾಗ ಹಬ್ಬಲೆಪ್ಪ
ಕುಂಬಳ ಬಳ್ಯಾಗಿ ಕುಡಿ ಸಾಗಲಿs ॥ ೬ ॥

ಐದ ಮನಿಯು ಆಗಲೆಪ್ಪ
ಐದ ನೂರು ಮನಿಯ ಆಗಲಿs
ಹಿಂತಾ ಹಕ್ಕಿಯ ನೋಡಪ್ಪ
ಹಿಂಗ ಹರಕಿಯ ಕೊಟ್ಟಾನ
ಹಿಂತಾ ಭಗತರ ಮನಿಗೋಳೋs
ಗಲ್ಲಿಗಲ್ಲಿಗೆ ಬೆಳೆಯಲ್ಯೋs ॥ ೭ ॥

ಹೊಡೆಪ್ಪ ಡೊಳ್ಳ ಹಿಡೆಪ್ಪ ಸತ್ತಿಗೆ
ನಡೆಪ್ಪ ಮುಂದಿನ ಊರಿಗೆ
ಮುಂದಿನೂರು ಭಗತನೋs
ನಿಮ್ಮ ದಾರಿಯ ನೋಡ್ಯಾನೋs
ನಿಮ್ಮ ದಾರಿಯ ನೋಡ್ಯಾನಪ್ಪ
ಭಗತಿಯ ಮಾರಗ ಹಿಡದಾನೋs ॥ ೮ ॥

## ಅಂಕಲಗಿ ಅಡವೀಸ್ವಾಮಿ

**ಚಾಲ :**

ಸ್ವಾಮಿ ನಮ್ಮಯ್ಯ ದೇವರ ಬಂದಾವ ಬನ್ನಿರೆ
ಗುರುವಾ ರೇವಣಸಿದ್ದಾಗ ಶರಣೆನ್ನಿರೋs ॥ ಪಲ್ಲ ॥

ದೇವಿ ದೇವರೋ ನಮ್ಮಯ್ಯ
ಹಾಡಿಗೆ ಮೊದಲೋ ನಮ್ಮಯ್ಯ
ಹಾಡಿಗೆ ಮೊದಲೋ ನಮ್ಮಯ್ಯ
ಬಡ್ಡಿಗೆ ಮೊದಲೋ ನಮ್ಮಯ್ಯ
ಬಡ್ಡಿಗೆ ಮೊದಲೋ ನಮ್ಮಯ್ಯ
ದಿಮ್ಮಿಗೆ ಮೊದಲೋ ನಮ್ಮಯ್ಯ
ತಾಳಿಗಿ ಮೊದಲೋ ನಮ್ಮಯ್ಯ
ತಾಳ ಬಾರಿಸೊ ನನ್ನ ತಾಳಿನ ಜಾಣಾ
ಕೊಂಬ ಸೀಳಿದಂಗ ಆಗಲ್ಯೋಽ
ದಿಮ್ಮಿ ಬಾರಿಸೋ ನನ್ನ ದಿಮ್ಮಿನ ಜಾಣಾ
ಕೊಂಬ ಸೀಳಿದಂಗ ಆಗಲ್ಯೋಽ
ಕೊಳಲು ಊದೋ ನನ್ನ ಕೊಳಲಿನ ಭರಮ
ನವಿಲು ಕೂಗಿದಂಗ ಆಗಲ್ಯೋಽ

ಪದ :

ಬಂಗಾರ ಹುಲ್ಲಾತ ಸಿಂಗಾರ ಕಲ್ಲಾತ
ಜಂಗಮ ಗುರು ನನ್ನ ಅಡಿವೆಪ್ಪನೋಽ ‖ ೧ ‖

ಜಂಗಮ ಗುರು ನನ್ನ ಲಿಂಗಾಂಗಿ ಮಾತಾಡ
ಮಾತಿನ ಗಿಣಿ ಬಾ ಅಡಿವೆಪ್ಪನೋಽ ‖ ೨ ‖

ಮಾತಿನ ಗಿಣಿ ಬಂದ ಮನದಾಗ ಮಾತಾಡ
ತಿಳಿವಳಿಕೆ ತಿಳದ್ದೇಳ ಆಡಿವೆಪ್ಪನೋಽ ‖ ೩ ‖

ತಿಳಿವಳಿಕೆ ತಿಳದ್ದೇಳ ಎಲ್ಲ ಬೆಳಕಿನಾಗ
ಜಡಿ ತಂದಿ ನನ್ನ ಗುರು ಅಡಿವೆಪ್ಪನೋಽ ‖ ೪ ‖

ಜಡಿ ತಂದಿ ನನ್ನ ಗುರು ಲಿಂಗಾಂಗಿ ಮಾತಾಡ
ಮಾತಿನ ಗಿಣಿ ಬಾ ಅಡಿವೆಪ್ಪನೋಽ ‖ ೫ ‖

ಮಾತಿನ ಗಿಣಿ ಬಂದ ಮನದಾಗ ಮಾತಾಡ
ತಿಳವಳಿಕೆ ತಿಳಿದ್ದೇಳ ಅಡಿವೆಪ್ಪನೋಽ ‖ ೬ ‖

ತಿಳಿವಳಿಕೆ ತಿಳಿದ್ದೇಳ ಸರ್ವ ಬೆಳಕಿನಾಗ
ಜಡಿ ತಂದಿ ನನ್ನ ಗುರು ಆಡಿವೆಪ್ಪನೋಽ ‖ ೭ ‖

ತಿಳಿವಳಿಕೆ ತಿಳಿದ್ಹೇಳ ನವೀನ ಮಾರ್ಗದಲಿ
ಅಯಿದ ಅಕ್ಷರ ಕೊಡು ಅಡಿವೆಪ್ಪನೋs ॥ ೮ ॥

ಆಯಿದ ಅಕ್ಷರ ಕೊಡ ನಯಿನ ಮಾರ್ಗದಲಿ
ನಾಲಿಗೆ ಮ್ಯಾಲ ದೇವರ ಅಡಿವೆಪ್ಪನೋs ॥ ೯ ॥

ನಾಲಿಗಿ ಮ್ಯಾಲ ನಲಿದಾಡುತ ಬಾಯಪ್ಪ
ಕೋಗಿಲೆಯ ಸ್ವರ ಕೊಡ ಅಡಿವೆಪ್ಪನೋs ॥ ೧೦ ॥

ಕೋಗಿಲೆಯ ಸ್ವರ ಕೊಡ ಕೂಗಿ ಹಾಡತೀನಿ
ಸಾವಿರಾಳಿನಾಗ ಅಡಿವೆಪ್ಪನೋs ॥ ೧೧ ॥

ಸಾವಿರಾಳಿನಾಗ ತಡಾ ಬ್ಯಾಡ ತಂದೆ
ಕಡೆ ನುಡಿ ಕೊಡ ತಂದೆ ಅಡಿವೆಪ್ಪನೋs ॥ ೧೨ ॥

ಕಡೆ ನುಡಿ ಕೊಡತೇನ ಆಳ ಮಕ್ಕಳ ಕೂಡಿ
ಬಾರಪ್ಪ ಗುಡಿಗೆಂದ ಅಡಿವೆಪ್ಪನೋs ॥ ೧೩ ॥

ಬಾರಪ್ಪ ಗುಡಿಗೆ ಎಡಾ ದಿಮ್ಮನಿಟ್ಟ
ಎಚ್ಚರಲಿ ಹಾಡೆಂದ ಅಡಿವೆಪ್ಪನೋs ॥ ೧೪ ॥

ಎಚ್ಚರಲೆ ಹಾಡೋ ಹುಚ್ಚ ಆಳಮನಗ
ಸುಳ್ಳ ಬೇಡನೆಂದ ಅಡಿವೆಪ್ಪನೋs ॥ ೧೫ ॥

ಸುಳ್ಳ ಸರುಳಿ ಸುತ್ತಿ ಕೊರಳಿಗೆ ಚೆತ್ತಿಗಿ ಹಚ್ಚಿ
ಮಾಯದ ಮುರುಳೊಂದ ಅಡಿವೆಪ್ಪನೋs ॥ ೧೬ ॥

ಮಾಯದ ಮುರುಳೊಂದ ಹಳ್ಳ ಹಳ್ಳ ದಾಟಿ
ಇಸಾ ಕಾರಿಸಿದಾನ ಅಡಿವೆಪ್ಪನೋs ॥ ೧೭ ॥

ಇಸಾ ಕಾರಿಸಿದಾನ ರಾಜ ಪೌಳ್ಯಾಗ
ಭಕ್ತರ ಬಂದಾರ ಅಡಿವೆಪ್ಪನೋs ॥ ೧೮ ॥

ಭಕ್ತರ ಬಂದಾರ ಬಾಗಿಯ ಕೈಮುಗಿದ
ಬಾ ಭಕ್ತಿ ಮೂರ ಮುಕ್ತಿ ಅಡಿವೆಪ್ಪನೋs ॥ ೧೯ ॥

ಬಾ ಭಕ್ತಿ ಮೂರ ಮುಕ್ತಿ ಮುತ್ತೈದೆರ ಉಡಿತುಂಬಿ
ಹಿಡಿಕಾಯಿ ಒಡಿಕಾಯಿ ಅಡಿವೆಪ್ಪನೋs ॥ ೨೦ ॥

ಹಿಡಕಾಯಿ ಒಡಿಕಾಯಿ ಹಾರತಾವ ಗುಡಿಮ್ಯಾಲ
ಸೆಡಗರ ನಡದೈತೀ ಅಡಿವೆಪ್ಪನೋಽ ॥ ೧೧ ॥

ಹಾಲ ಮಂಚಕೋ ಮೇಲ ಗಿರಿಗ್ಯೋ
ಆಲಮನಿ ಮ್ಯಾಲಕ ನೂರೇಳೋಽ ॥ ೧೨ ॥

* * *

## ಚೀರವ್ವ-ಚನ್ನವ್ವನ ಪರೀಕ್ಷೆ

ಅಯ್ಯನೇಳೋ ಶಿವರಾಯನೋ
ಯಾವ್ಯಾವ ರೂಪಾ ತೋರ್ಯಾನೋ …..
ಯಾವ್ಯಾವ ರೂಪಾ ತೋರ್ಯಾನೆಂದರ ॥ ಪಲ್ಲ ॥

ಕುಲಮಿ ಕಂತಿಗಳ ಉಟ್ಟಾನೋ
ಕುಲಮಿ ಕಂತಿಗಳ ಉಟ್ಟಾನೇನ
ಕಾಲಾಗ ಗೆಜ್ಜಿಯ ಕಟ್ಯಾನೋ
ಕಾಲಾಗ ಗೆಜ್ಜೆಯ ಕಟ್ಟಾನೇನಂವ
ಮುರಗಿ ಬೆತ್ತವಂದ ಹಿಡದಾನೋ
ಮುರಗಿ ಬೆತ್ತವಂದ ಹಿಡದಾನೇನಂವ
ಮುಂಗೈ ಜೋಳಿಗೆ ಹಾಕ್ಯಾನೋ
ಮುಂಗೈ ಜೋಳಿಗೆ ಹಾಕ್ಯಾನೇನಂವ
ಮುಂದಿನ ಓಣಿಗೆ ಹೋದಾನೋ
ಮುಂದಿನ ಓಣಿಗೆ ಹೋದಾನೇನಂವ
ಕೋರ್ಯಾನ ಬಿಕ್ಷಾ ಎಂದಾನೋ ….. ॥ ೧ ॥

ಶಿವನ ಮಗಳ ಚೀರವ್ವ ಚೆನ್ನವ್ವ
ಹಿಟ್ಟಿನ ಭಿಕ್ಷಾ ತಂದಾಳೋ
ಹಿಟ್ಟಿನ ಭಿಕ್ಷಾ ತಂದಾರೇನವರ ಸ್ವಾಮಿ
ಒಲ್ಲೆ ಒಲ್ಲೇನ್ಹೇಳ ಎಂದಾನೋ
ಒಲ್ಲೆ ಒಲ್ಲನ್ಹೇಳ ಎಂದಾನಂವ
ಹೊಳ್ಳಿ ಮನಿಗೆ ಓದಿದಾಳೋ
ಹೊಳ್ಳಿ ಮನಿಗೆ ಓದಿದಾಳಾಕೆ
ಕಾಳ ಧಾನ್ಯಗಳ ತಂದಿದಳೋ
ಕಾಳ ಧಾನ್ಯಗಳ ತಂದಾರ ಸ್ವಾಮಿ
ಒಲ್ಲೆ ಒಲ್ಲೇನ್ಹೇಳ ಎಂದಿದಾನೋ
ಒಲ್ಲೆ ಒಲ್ಲೆನ್ಹೇಳ ಎಂದಿದರಾಗ

ರೊಕ್ಕ ಧಾನ್ಯಗಳ ತಂದಿದಳೋ
ರೊಕ್ಕ ಧಾನ್ಯಗಳ ತಂದಿದ ಸ್ವಾಮಿ
ಒಲ್ಲೆ ಒಲ್ಲೆನೇಳ ಎಂದಿದನೋ
ಒಲ್ಲೆ ಒಲ್ಲೆನೇಳ ಅಂದರ ಸ್ವಾಮಿ
ಹೊಳ್ಳಿ ಮನಿಗೆ ಓದಿದಳೋ
ಹೊನ್ನ ಧಾನ್ಯಗಳ ತಂದರ ಸ್ವಾಮಿ
ಒಲ್ಲೆ ಒಲ್ಲೆನ್ಹೇಳಂದಿದನೋ
ಒಲ್ಲೆ ಒಲ್ಲೆನ್ಹೇಳಂದರ ಸ್ವಾಮಿ
ಹೊಳ್ಳಿ ಮನಿಗೆ ಒಯ್ದಿದಳೋ
ಮುತ್ತ ಧಾನ್ಯಗಳ ತಂದಿದಳೋ
ಮುತ್ತ ಧಾನ್ಯಗಳ ತಂದರ ಸ್ವಾಮಿ
ಒಲ್ಲೆ ಒಲ್ಲೆನ್ಹೇಳಂದಿದನೋ ….. ॥ ೧ ॥

ಏನ ಬೇಡತಿರಿ ಬೇಡರಿ ಸ್ವಾಮಿ
ಬೇಡಿದ ಕೊಡುವೆನು ನಾನಿಂದು
ನಿನ್ನ ಮಗನ ನೋಡವ್ವಾ
ಕಡಿದು ಅಡಿಗೆಯ ಮಾಡವ್ವಾ
ಶಿವನ ಮಗಳು ಚೇರವ್ವ ಚೆನ್ನವ್ವ
ಕೂಗ್ಯಾಡಿ ಮಗನ ಕರದಾಳೋ
ರೊಕ್ಕದ ಹೆಜ್ಜಿ ಲಂಕನ ಕಟ್ಟಿ
ಗಲ್ ಗಲ್ ಮಗ ಬಂದಿದನೋ
ಗಲ್ ಗಲ್ ಮಗ ಬಂದಿದರೇನ
ದೇವರ ಕೋಲಿಗೆ ಕರಿದಿದಾಳೋ
ದೇವರ ಕಾಲಿಗೆ ಎರಗಿದನವನು
ಕಾಲ್ಮೆಟ್ಟಿ ಕೊರಳ ಕೊಯ್ದಿದಳೋ
ಕಡಿದು ಅಡುಗೆಯ ಮಾಡಿದಳೋ ….. ॥ ೨ ॥

ಕಡಿದು ಅಡುಗೆಯ ಮಾಡಿದಳೇನಾಕಿ
ಗುರುವನ ಊಟಕ ಕರಿದಿದಾಳೋ
ಗುರುವನ ಊಟಕ ಕರಿದಿದಾಳೇನಾಕಿ
ಒಲ್ಲೆ ಒಲ್ಲೆನ್ಹೇಳಂದಿದಾನೋ
ಏನ ಬೇಡತಿರಿ ಬೇಡಿರಿ ಸ್ವಾಮಿ
ಬೇಡಿದ್ದು ಕೊಡುವೆನು ಅಂದಿದಾಳೋ
ನಿನ್ನ ಮಗನ ನೋಡವ್ವ ಅಲ್ಲಿ
ನನ್ನ ಬದಿಯಲಿ ಕೂಡ್ರಿಸು ಇಲ್ಲಿ
ಶಿವನ ಮಗಳ ಚೇರವ್ವ ಚೆನ್ನವ್ವ

ಕೂಗಾಡಿ ಮಗನ ಕರಿದಿದಾಳೋ
ರೊಕ್ಕದ ಗೆಜ್ಜಿ ಲಂಕನ ಕಟ್ಟಿ
ಗಲ್ ಗಲ್ ಮಗ ಬಂದಿದಾನೋ
ಗಲ್ ಗಲ್ ಮಗ ಬಂದಿದಾನೋ
ಗಲ್ ಗಲ್ ಬಂದ ಮಗನ
ಗುರುವಿನ ಬದಿಯಲಿ ಕೂಡ್ರಿಸಿದಳೋ
ಗುರುವಿನ ಬದಿಯಲಿ ಕೂಡ್ರಿಸಿದಳೇನಕಿ
ಕರೆದು ಊಟಕೆ ಹಾಕಿದಳೋ ….. ॥ ೪ ॥

ಅಲ್ಲಿಗಿಲ್ಲಿಗೋ ಇದು ಒಂದ ಸಂಧಿ
ಸಂಧಿಗೇಳ ಪದ ಮುಂದೇಳೋ
ಸಂಧಿಗೇಳ ಪದ ಮುಂದೇಳೋ …. ಮಾಳಿಗಿರಾಯಾ ॥

## ಮಾರ್ಗಪದ

ಗಿರಿಜ ಗಂಗಾದೇವಿ ಹರಿಬ್ರಹ್ಮರೆಲ್ಲಾರು
ಧರೆಗೆ ಇಳದ ತಾವು ಅಲ್ಲಿ ಬಂದಿದ್ದಾರೋ

ಶಿವನ ಸತಿದೇವಿ ನಾಗಗನ್ನೆರು ಕೂಡಿ ಶಿಸುವಿನಾ
ತೊಟ್ಟಿಲಾ ಕಟ್ಟಿದ್ದಾರೋ

ಹೆತ್ತ ಶಿಸುವಿನಾ ಎತ್ತಿ ಪಾರ್ವತಾದೇವಿ
ಆಗ ಇಟ್ಟಾಳೋ ಶಿಸುವಿಗೆ ನಾಮವನೋ

ಮುತ್ತಿನ ತೊಟ್ಟಿಲಕಟ್ಟಿ ಜೋಗುಳವನೆ ಹಾಡಿ
ಇಟ್ಟಾರೋ ಅವರು ನಾಮವನೋ

ಮುದ್ದಿಸಿ ಶಿಸುವಿಗೆ ಇದ್ದವರೆಲ್ಲರು ಸಿದ್ಧರಾಮಯ್ಯ
ಅಂತ ಕರಿದಿದ್ದಾರೋ

ರುದ್ರ ಮಾರುತಿ ಕೂಡಿ ಹರಿ ಬ್ರಹ್ಮರೆಲ್ಲರು
ಎದ್ದಾರೋ ತಮ್ಮ ತಮ್ಮ ಗುರುಸ್ಥಳಕೋ

ಮಾತನಾಡಲಿ ಬ್ಯಾಡೋ ತಾಯಿ ತಂದಿಯಗೂಡ
ಆತನ ಮಾತ ಮಾಡಿ ಹೊಂಡಿದಾರೋ

ದೇವಗನ್ಯಾರು ನಾಗಗನ್ಯಾರು ಆಗ ಮಗುವಿಗೆ
ಮುದ್ದಿಸಿ ಸಾಗಿದ್ದಾರೋ

ಹಿಂಥಾ ವ್ಯಾಳ್ಯಾದಾಗ ಸುಗ್ಗಲಾದೇವಿಗಿ
ಎಚ್ಚರಾಗಿ ಮಗನಾ ಕಂಡಿದ್ದಾಳೋ

ಮಗನ ರೂಪವ ನೋಡಿ ಮನದಾಗ
ಸುಗ್ಗಲಾದೇವಿ ಗುರುವನ ನೆನಿಯುತ ನಿಂತಿದ್ದಾನೋ

ನನ್ನಕ್ಕಿಂತ ಹೆಚ್ಚಿನ್ಯಾವರು ಜಗದೊಳಗ
ಯಾರೂ ಇಲ್ಲ ತನ್ನ ಸತಿ ಲಕ್ಷ್ಮಿದೇವಿಗೆ ಹೇಳಿದಾನೊ

* * *

## ಮಾರ್ಗಪದ

ಆದಿನಾರಾಯಣ ಶಕ್ತಿಗೆ ಹೇಳತಾನು
ಮೊದಲಿಗೆ ನಾ ಒಬ್ಬಾವ ಇದ್ದಾವನೋ

ನನ್ನಕ್ಕಿಂತ ಹೆಚ್ಚಿನವರು ಜಗದೊಳಗ ಯಾರಿಲ್ಲ
ತನ್ನ ಸತಿಯಾ ಲಕ್ಷ್ಮಿಗೆ ಹೇಳಿದ್ದಾನೋ

ಎಷ್ಟ ಹೇಳಲಿ ದೇವಿ ಸೃಷ್ಟಿ ಒಳಗ ನಾನು ದುಷ್ಟ
ದೈತ್ಯರನ್ನ ಸಂಹರಿಸಿ ಬಿರುದವನೋ

ಹಿರಣ್ಯ ರಕ್ಕಸ ಹಿರಣ್ಯ ಕಶಪ ದೈತ್ಯರು
ಮಣ್ಣಪಾಲ ಆದವರು ನನ್ನಿಂದಾನೋ

ಅಂದಮ್ಯಾಲ ಯಾರು ಹೆಚ್ಚಿನವರು ಎಂಬುದು
ತಿಳಿದು ನೀನು ನಡಿ ಅಂದಾನೋ

ಭಕ್ತರ ಪಾಲಕಾ ದುಷ್ಟರ ನಾಶಕಾ
ಮುಕ್ತಿ ಪದವಿ ನನ್ನಿಂದಾ ತಿಳಿ ಅಂದಾನೊ

ನಿನ್ನಕ್ಕಿಂತ ಹೆಚ್ಚಿನ್ಯಾಕಿ ಅಂದಾಳೋ ಆದಿಶಕ್ತಿ
ತನ್ನ ಪತಿಯಾ ಮುಂದ ಹೇಳಿದ್ದಾಳೋ

ಆದಿಶಕ್ತಿಯು ತಾನು ಆದಿನಾರಾಯಣಗ ಹೇಳತಾಳ
ಮೊದಲಿಗಿ ನಾನು ಒಬ್ಬಾಕಿ ಅಂದಿದಾಳೋ

ಹರಿ ಬ್ರಹ್ಮ ರುದ್ರರು ಕೂಸಾಗಿ ಇರುವಾಗ ಯಾರು
ಮೊಲಿಯಾ ಕುಡಿಶ್ಯಾರು ಅಂದಿದಾಳೋ

ಶಂಭು ನೀ ಶಂಭ ದೈತ್ಯ ಮಹಿಷಾಸೂರೆಲ್ಲ ಸಂಹಾರ
ಆದದ್ದು ಯಾರಿಂದ ಅಂದಿದ್ದಾಳೋ

## ೧೬ನೆ ಸಂಧಿ - ದೇವಿಯ ಪದ

ಸದಾ ಸದಾ ಆದಿಶಕ್ತಿಗೆ ಶರಣ ಮಾಡತೇವರಿ
ವಾದ ಭೇದವಿಲ್ಲದೆ ನಾವು ಕುಂತ ಹೇಳತೇವರಿ

ನಗುತ ನಗುತ ನಿಮಗ ಒಂದ ಮಾತ ಕೇಳತೇವರಿ
ಬೇಗದಿಂದಾ ಹೇಳಿಕೊಟ್ಟರ ಶಾಣ್ಯಾ ಅಂತೇವರಿ

ನಿನ್ನೆ ರಾತರಿ ನನಗೆ ಒಂದ ಕನಸ ಬಿದ್ದಿತರಿ
ಅನ್ನಪೂರ್ಣದೇವಿಯ ಗುಡಿಯಾಗ ನಾಯಿ ಹೊಕ್ಕಿತರಿ

ನಾಯಿ ಹೋಗಿ ಗುಡಿ ಒಳಗ ಎಣ್ಣೆ ಕಂಡಿತರಿ
ಬಾಯಿತೆರದ ಕುಡಿಲಾಕ ಹೋಗಿ ಕುಳ್ಯಾಗ ಬಿದ್ದತರಿ

ಆಗ ಒಬ್ಬ ಗುಡಿಯಾಗ ಹೋಗಿ ನಾಯಿನ ಕಂಡಾನರಿ
ತೆಗಿಲಾಕ ಹೋದಾವವ ನಾಯಿ ನೋಡಿ ನುಂಗಿಬಿಟ್ಟತಿರಿ

ಆಗ ಒಂದ ನೊರಜ ಹೋಗಿ ಆ ನಾಯಿನ ತುಳದೀತರಿ
ಬೇಗದಿಂದಾ ಇಲಿ ಹೋಗಿ ಬೆಕ್ಕಿನ ನುಂಗಿತರಿ

ಊರಮುಂದಿನ ಹಳ್ಳ ನೋಡರಿ ಜಿಗದ ನಿಂತರಿ
ಹಾರಿನಿಂತ ಸಮುದ್ರಕ ತೆಕ್ಕಿಬಿದ್ದ ನುಗಸತಿತ್ತರಿ

ದೇವಿಯ ಧ್ಯಾನವ ಮಾಡಿದವರಿಗೆ ಅರ್ಥ ತಿಳಿಯುದರಿ
ಮಾಯಾದೊಳಗಿನ ಮಾನು ಮಂದಿಗಿ ತಿಳಿಯುದಿಲ್ಲ ನೋಡರಿ

ಒಬ್ಬಾಕಿ ಆದಿಶಕ್ತಿ ಜಗಕ ದೊಡ್ಡಾಕಿ ಅಲ್ಲೇನರಿ
ಇಬ್ಬರು ಅನ್ನುವ ಗಾದಿಯ ಮಾತ ತಿಳಿದ ನೋಡರಿ

ಗುರುವಿಗೆ ನಿಂದಾ ಮಾಡಿದ ಮಾಯಿಯ ಹರಣಾ ಅಲ್ಲೆನೋ
ಮಾಯಿ ಶಿಷ್ಯ ಗೋರಕ್ಷಕನ ಪ್ರಾಣ ಹೋಗಲಿಲ್ಲೇನೋ

ಹರನು ಮುನಿದರೆ ಗುರು ಕಾಯುವನು ತಿಳಿದಿಲ್ಲೇನೋ
ಅಪ್ಪ ಆದಿಂದ ನೆಪ್ಪ ಹಿಡಿ ಗುರು ದೊಡ್ಡಾಂವ ಅಲ್ಲೆನೋ

ಮುಪ್ಪ ಆದಿಂದ ನಿನಗ ಹ್ಯಾಂಗ ತಿಳಿಯುದಿಲ್ಲನೋ
ಶಿಕ್ಕರ ಶಿಕ್ಕಿತು ಕಣ್ಣಿಗೆ ಹ್ಯಾಂಗ ಕಾಣುದಿಲ್ಲೆನೋ

## ಮಾರ್ಗಪದ

ಹಿಂಥಾ ವ್ಯಾಳಾದಾಗ ಸುಗ್ಗಲಾದೇವಿ ಎಚ್ಚರಾಗಿ
ಮಗನಾ ಕಂಡಿದ್ದಾಳೋ

ತುರಳಯು ತಾ ಕಂಡು ಪರಿಲಿಂದಾ ಹಿಗ್ಗುತ
ಹರುಷಾಗಿ ತನ್ನ ಮಗನ ಕಂಡಿದ್ದಾಳೋ

ಮಗನ ತೊಟ್ಟಿಲದಾಗ ಹಾಕಿ ಸುಗ್ಗಲಾದೇವಿ
ಮನದಾಗ ಗುರುವಿನ ನೆನದಿದ್ದಾಳೋ

ಜಗಜಗಸುವಂಥಾ ಕಂದ ಅವರು
ಬಗೆಬಗೆಯಾ ಬೂದಿಯಾ ಧರಿಸಿದ್ದಾರೋ

ಕಂದಗೆ ತರಳೆಲೆ ಬಿಂದುಲಿ ಗೋಪವಾ
ಒಂದೊಂದು ಪರಿಯಾದಿಂದ ವಸ್ತ್ರವನೋ

ಚಂದ ಚಂದದ ವಸ್ತ್ರವ ಧರಿಸಿ ಸಿದ್ರಾಮಗ
ಅವರು ಅವನಾ ಸಲವಿದ್ದಾರೋ

ತಿಂಗಳ ಶಶಿಯಂತೆ ಬೆಳೆದಾನೋ ಬಾಬಾ
ಅಂಗದೊಳಗೆ ಆಭರಣ ಹೊಂದಿದ್ದಾವೋ

ಮಾತೆ ಸುಗ್ಗಲಾದೇವಿ ಕರದಾಳೋ ಮಗನಾ
ರೀತಿ ಹೀತಿ ಹಿಡಿದ ಅಂದಿದಾಳೋ

ಮುದ್ದು ಮಗನ ನೋಡಿ ಕರದಾಳೋ
ಸುಗ್ಗಲಾದೇವಿ ಹೊಂದಿಕೊಂಡ ತನ್ನ ಮತವನ್ನೊ

## ಮಾರ್ಗಪದ

ಆದಿಶಕ್ತಿ ತಾನು ಆಗ ಆದಿ ನಾರಾಯಣಗ ಹೇಳತಾಳ
ಮೊದಲಿಗೆ ನಾನು ಒಬ್ಬಾಕಿ ಅಂದಿದ್ದಾಳೊ

ಆದಿಶಕ್ತಿ ಎಂಬ ಬಿರದಾ ಧರಿಸಿ ಬಂದಿನೋ ದೇವಾ
ಮೇದಿನಿ ಒಳಗ ಹೆಸರನಂದ ಅಂದಾಳೋ

ನಾ ಹೆಚ್ಚು ನೀ ಹೆಚ್ಚು ಅನವುತ ಇಬ್ಬರು
ಆಗ ಜೋಡಿಲೆ ಅಲ್ಲಿ ವಾದವ ನಡಿಸಿದ್ದರೋ

ಲಕ್ಷ್ಮಿನಾರಾಯಣರ ವಾದವ ಕೇಳುತ
ಆಗ ನಾರದ ಮುನಿಗಳು ಬಂದಿದಾರೋ

ಇದರಲ್ಲಿ ಯಾರ‍್ಯಾರು ಏನು ಮಾಡಿದಿರಿ ಅಂದ
ಸದು ವಿನಯದಿಂದ ಅವರಿಗೆ ಕೇಳಿದ್ದಾನೋ

ನಾರದನ ಮಾತ ಕೇಳಿ ಸತಿಪತಿಗಳು ಆಗ
ಭರದಿಂದ ಹೇಳುದಕ ನಿಂತಿದ್ದಾರೋ

ಇಬ್ಬರು ಮಾಡಿದಂತಾ ಕೀರ್ತಿ ನಾರದಾ
ಕೇಳಿ ಶಭಾಸ ಅನವುತ ನಕ್ಕಿದಾನೋ

ಲೋಕ ಕಲ್ಯಾಣ ಮಾಡುದಕ ನಾರದಸ್ವಾಮಿ
ಕತೊಂದು ತಗದ ಅವರಿಗೆ ಹೇಳಿದ್ದಾನೋ

ರಕ್ಷಣಾ ಮಾಡಿದಿರಿ ವಿಷ್ಣುದೇವಾ ನೀನು ಆ ಕ್ಷಣಾ
ನಿನಗ ಮದತ್ತ ಯಾರದ ಅಂದಾನೋ

ಕೇಳಿ ನಾರಾಯಣ ನಾರದಸ್ವಾಮಿಯ ಮುಂದ
ನನಗ್ಯಾರು ಮದ್ದತ್ತ ಇಲ್ಲ ಅಂದಾನೋ

ನಾರಾಯಣ ಅಂದ ಮಾತ ಕೇಳಿ ನಾರದಸ್ವಾಮಿ
ಸುದರ್ಶನ ಚಕ್ರದ ಮದ್ದತ ಹೇಳಿದ್ದಾನೋ

ಸುದರ್ಶನ ಚಕ್ರದ ಸಹಾಯದಿಂದಾ ನೀನು
ಹದಗೆಟ್ಟ ದೈತರನ್ನ ಕೊಂದಾವ ನೀ ಅಲ್ಲನೋ

ಚಕ್ರ ಇರದಿದ್ದರ ನಾರಾಯಣ ಎಂಬುವ ಶಬುದ
ಧರೆಯೊಳಗ ಯಾರು ಕರಿಯವರು ಇಲ್ಲ ಅಂದಿನೋ

ಇಷ್ಟ ಮಾತವ ಕೇಳಿ ತಿರುಗುತ ಚಕ್ರವ ಬಂದು
ಗರವದಿಂದ ಮುಂದ ನಿಂತಿದ್ದಾನೋ

ತಿರುಗುವ ಚಕ್ರವ ನೋಡಿ ನಾರಾಯಣ
ಆಗ ಧರಿಸುವುದಿಲ್ಲ ಕೈಯೊಳಗ ಹೋಗ ಅಂದಾನೋ

ಧರಿಸುವುದಿಲ್ಲ ಅಂತ ಉರಿಯುತ ಸಿಟ್ಟಾಗಿ
ಧರಿಯೊಳಗ ನರಮಾನವ ಆಗಿ ಇರೋ ಅಂದಾನೋ

ಸಾವಿರ ತೋಳ ಧರಿಸಿ ಶಕ್ತಿಯು ಧರಿಶ್ಯಾನು
ಕಾರ್ತಿಕವಿರ್ಯಾಅರ್ಜುನ ಅಂತಾ ಜನಿಸಿದ್ದಾನೋ

## ೧೭ನೆ ಸಂಧಿ - ಗುರುವಿನ ಪದ

ಮಿಥ್ಯ ಅಲ್ಲೋ ಸತ್ಯ ಗುರುವಿಗೆ ಶರಣ ಮಾಡತಿವರಿ
ನಿಂತ ಶರಣಮಾಡಿ ನಾವು ಕುಂತ ಹಾಡತೇವರಿ

ಶಾಣ್ಯಾರಂತ ನಿಮಗ ನಾವು ಮಾತೊಂದ ಕೇಳತೀವರಿ
ಕೋಣನ ಬುದ್ಧಿಯವರು ಇದ್ದರ ಸುಮ್ಮಿ ಇರತೀರಿ

ಗಿಡಾ ವಂದು ಕಣ್ಣಿಲಿಂದಾ ನಾವು ಕಂಡಿವರಿ
ತುದಿ ಕೆಳಗ ಬೇರಮ್ಯಾಲ ಇದ್ದಿತ ನೋಡರಿ

ಯಾವ ತಾರೀಖಿಗೆ ಗಿಡಾ ಹುಟ್ಟಿತು ಹೇಳಾರಿ
ನೆಂಪಿಲೆ ಲೆಕ್ಕದ ಪ್ರಮಾಣ ಮಾಡಿ ನಮಗ ತಿಳಸರಿ

ಎತ್ತರ ಎಷ್ಟರ ಗಿಡದ ಪ್ರಮಾಣ ತಿಳಿದ ಹೇಳಿರಿ
ಸತ್ತರ ಸುದ್ದಾ ನಿಮಗ ಉತ್ತರಾ ಹ್ಯಾಂಗ ದೊರದವರಿ

ಹೂವು ಏಸು ಟೊಂಗಿ ಏಸು ಕಾಯಿ ಹೇಳರಿ
ನಮ್ಮ ಮುಂದ ಹೇಳಿದರೆ ನಿಮ್ಮನ್ನ ಬಿಡತೀವರಿ

## ಗುರುವಿನ ಮಾರ್ಗಪದ

ಮುದ್ದು ಮಗನಾ ನೋಡಿ ಕರದಾಳೋ ಸುಗ್ಗಲಾದೇವಿ
ಹೊಂದಿಕೊಂಡ ತನ್ನ ಮಾತು ಏನೋ

ಕರದಾಳೋ ಸುಗ್ಗಲಾದೇವಿ ಮಗನಾ ನೋಡುತ
ತಾನು ಬರಿಯಾ ಬಾಲಕರ ಮಾತು ಏನೋ

ಬೆರಸಿ ಆಡಿದಾನೋ ಅವರ ವಳಗ ಒಬ್ಬಾ ಅರಿಯ
ತಾಯಿ ಇವನ ಮಾತು ಏನೋ

ಮಾತನಾಡುವುದಿಲ್ಲ ಮನುಜರೊಳಗೆ ಇಂವಾ
ಕವತುಕ ಮಾಡತಾನೋ ನಿನ್ನ ಮಗನೋ

ಭೂತದೊಳಗ ಒಂದು ಕಲ್ಲು ಲಿಂಗವ ಮಾಡಿ
ಆತನು ದಿನಂಪ್ರತಿಯಾ ಪೂಜೆಯನೋ

ಕಲ್ಲು ಲಿಂಗಕ್ಕೆಲ್ಲ ಪುಷ್ಪಗಳನ್ನು ತಂದು
ಮಲ್ಲಯ್ಯನಂಥಾ ಪೂಜೆಯಾ ಮಾಡುವನೋ

ಎಲ್ಲಾರು ಅಂತಾರಪ್ಪ ನಿನ್ನ ಮಗಾ ಮಾತನು
ಬಲ್ಲೆವರಿ ಅಂಥಾ ಅವರು ನುಡಿದಿದ್ದಾರೋ

ಹರ ಹರ ಶಿವ ಶಿವ ನಮದು ಎಂಥಾ ದೈವವೋ
ತರುಣನ ಕೊಟ್ಟಹೋದೋ ಮಲ್ಲಯ್ಯನೋ

## ೧೮ನೆ ಸಂಧಿ - ದೇವಿಯ ಪದ

ಪಂಚಮುಖದ ಶಕ್ತಿಯು ಹುಟ್ಟಿ ಶಕ್ತಿಲಿಂದಾ
ತ್ರಿಮೂರ್ತಿ ಹುಟ್ಟಿ ತ್ರಿಮೂರ್ತಿಲಿಂದಾ

ಆದಿತ ಸೃಷ್ಟಿಶಕ್ತಿಯ ಅವತಾರವೋ
ಎಲ್ಲವ್ವ ಅಂತಾ ಅವತಾರ ತೊಟ್ಟಿ ಬಲ್ಲಿನಂದವರನ

ಕುಣಿದಾಡಿಸಿ ಬಿಟ್ಟ ಭಂಡಾರ ಚೀಲ ಬಗಲಿಗೆ ತೊಟ್ಟಿ
ಶಕ್ತಿಯ ಅವತಾರವೋ

ಸಿಂಹದ ಮ್ಯಾಲ ಅವತಾರ ತೊಟ್ಟಿ ಬ್ರಹ್ಮನ ಶಿರಾ
ಹರದ ಬಿಟ್ಟ ಸಂಟಗ ಸುಡಗಾಡ ಕಾವಲ ಇಟ್ಟ

ಶಕ್ತಿಯ ಅವತಾರವೋ
ಮೊಹಿನೀ ಅಂತಾ ಅವತಾರ ತೊಟ್ಟಿ ದೈತ್ಯರಿಗೆ

ವಿಷಾ ಕುಡಿಸಿ ಬಿಟ್ಟಿ ದೇವ ದೇವತ್ಯಾರಿಗಿ
ಅಮೃತ ಕೊಟ್ಟ ಶಕ್ತಿಯ ಅವತಾರವೋ

ಭವಾನಿ ಅಂತಾ ಬಂದಿದಿ ಹುಟ್ಟಿ ಗಂಡಸರಿಗೆ
ಕವಡಿ ಸರಾ ಕಟ್ಟಿ ಕೈಯಾಗ ದೀವಟಿಗಿ ಹಿಡಿಸಿದಿ

ಶಕ್ತಿಯ ಅವತಾರವೋ
ಆದಿಲಕ್ಷ್ಮಿ ಅಂತಾ ಹುಟ್ಟಿ ಭಕ್ತರ ಭಾವಕ ನಿಂತಬಿಟ್ಟ

ಕುರಿಯಾ ಹಿಂಡಕ ಭಾಗ್ಯ ಅನಿಸಿಬಿಟ್ಟ
ಶಕ್ತಿಯ ಅವತಾರವೋ

ಮಹಾಕಾಳಿ ಅನಿಸಿದಿ ಹುಟ್ಟಿ ಬ್ರಹ್ಮಾಂಡವೆಲ್ಲ ನುಂಗಿಬಿಟ್ಟ
ಶಂಕರನ ಎದಿಮ್ಯಾಲ ಪಾದಾ ಇಟ್ಟ

ಶಕ್ತಿಯ ಅವತಾರವೊ
ಲಕ್ಕವ್ವ ತಾಯಿಯ ಅವತಾರ ತೊಟ್ಟ ನಡವೂರಾಗ

ನೆನದಿದಿ ಗಟ್ಟಿ ಬಂದ ಭಕ್ತರಿಗೆ ಬೇಕಾದ ಕೊಟ್ಟಿ
ಶಕ್ತಿಯ ಅವತಾರವೋ

ಸಾವಿರತೋಳ ಧರಿಸಿ ಕಾರ್ತಿಕಅರ್ಜುನನಾಗಿ
ಶಕ್ತಿಯ ಧರಿಸ್ಯಾನೋ ಸುದರ್ಶನೋ

ಅದಂದಾ ಸುದ್ದಿಯ ಕೇಳಿ ನಾರದಸ್ವಾಮಿ ಆಗ
ಹೋದೋ ಕೈಲಾಸ ಶಂಖರನ ಮುಂದ ಅವನೋ

ಕೈಲಾಸದೊಳಗ ಮಹಾದೇವ ಪಾರ್ವತಿಯ ಸಂಗಡಾ
ಉಲ್ಲಾಸದಿಂದಾ ಅವರು ಇರುತ್ತಿದ್ದರೋ

ಆಗ ನಾರದಸ್ವಾಮಿ ವಿಷ್ಣುಲಕ್ಷ್ಮಿಯ ವಾದ
ಬೇಗ ದೇವನ ಮುಂದ ಹೇಳಿದ್ದಾನೋ

ಕೈಲಾಸ ಪತಿ ಶಂಖರಾ ಪಾರ್ವತಿಯಗೂಡಾ
ಭೂಲೋಕಕ ಇಳಿದ ಅವರು ಬಂದಿದಾರೋ

ರಾಮಶೃಂಗ ಪರವುತದೊಳಗ ಮಹಾದೇವ
ತಾನು ಜಮದಗ್ನಿ ಋಷಿಯಾಗಿ ಇರತಿದ್ದನೋ

ಹಣಿಯ ಮ್ಯಾಗ ಒಂದು ಕಣ್ಣನ್ನು ಧರಿಸಿಕೊಂಡು
ತಪಗಳ ಮಾಡುತ ಅವನು ಇರತಿದ್ದನೋ

## ೧೯ನೆ ಸಂಧಿ - ಗುರುವಿನ ಪದ

ಆದಿಯ ಮಾತಿನ ಭೇದವು ತಿಳಿಯದೆ ವಾದ
ಮಾಡುವದ್ಯಾಕೋ ಹುಚ್ಚ ಮರುಳೇ

ಕುರಿಯಾ ಹುಟ್ಟಿದ ಗುರುತಾ ಕೇಳತಿದಿ ತಮ್ಮಾ ನೀನು
ಕುರಿ ಅಂತ ಅದಕ ಯಾರು ಅಂದಿದಾರೋ

ಹಾಲುಮತದ ಸೋದರಮಾವನ ಕೇಳತಿರಿ ತಮ್ಮಾ ನೀನು
ಹಾಲುಮತ ಯಾರು ಹುಟಿಸ್ಯಾರು ಹೇಳಿರಿ ಅಂದಿನೋ

ಬಡ್ಡಿ ಬಿಟ್ಟು ತುದಿತುದಿಗೆ ಹಾರ್ಯಾಡ ಬ್ಯಾಡೋ ನೀನು
ಬಿದ್ದ ಮುರದಾವು ನಿನ್ನ ಹಲ್ಲ ಅಂದಿನೋ

ಹರಕ ಮುಚ್ಚತೆಂತ ದೇವರಿಗಿ ಹೋಗಬ್ಯಾಡೋ
ಫರಕ ದಲಾದ ಇರೂದ ಗುರುವಿನ ಮಾರ್ಗಿ ಅಂದಿನೋ

ದೇವರ ಮುಂದ ಇರುವ ಮಾಯಿ ಮೂರ್ತಿನ ಕೇಳತಿದಿ
ತಮ್ಮಾ ಭಾವನ್ನ ಬಂದಿನ ಹೆಸರಾ ಹೇಳಂದಿನೋ

ಗೊಳ್ಳ ಹಾಡಬ್ಯಾಡೋ ನಿನಗೊಂದ ಕೇಳತೀನೋ ತಮ್ಮಾ
ತಾಳ ಡೊಳ್ಳ ಅಂಥಯಾರ ಅಂದಿದ್ದಾರೋ

## ಮಾರ್ಗಪದ

ಹರಾಹರಾ ಶಿವಶಿವಾ ನಮ್ಮದೆಂಥ ದೈವವೋ
ತರುಳಾನ ಕೊಟ್ಟ ಹೋದೋ ಮಲ್ಲಯ್ಯನೋ

ಪರವಾಗಿ ಮಗನಿಗೆ ಸ್ಮರಣಿಕೊಟ್ಟು ದೇವಾ
ಕರುಣಿಸಿ ಕಾಯೋ ನೀನು ಮಲ್ಲಯ್ಯನೋ

ಅಂದು ಅಳವುತ ಆಗ ಸುಗ್ಗಲಾದೇವಿ ತಾನು
ಕಂದಗ ಕರಗಳ ಕಾಯಬೇಕ ಅಂದಿದಾಳೋ

ಚಂದದಿಂದ ನೀನು ಕಾಡಿನೊಳಗ ಕಾಯುತ ಹೋಗೋ
ಅಂದು ಕಟ್ಟಿದಾಳ ಆಗ ಬುತ್ತಿಯನೋ

ಮೂಕ ಸಿದ್ಧರಾಮೇಶ ಮರುಳಾಗಿ ತಾನು
ಶಂಖರನ ಗುಡಿಯಾ ಒಳಗೆ ಬಂದಿದಾನೋ

ಅಂಕಿತ ನೆವಮಾಡಿ ಕರಗಳನ ಕಾಯುತ
ಶಂಕರರ ಲಿಂಗಪೂಜೆ ಮಾಡುವನೋ

ಎತ್ತಿ ತಂದಾನೋ ಎಲ್ಲಾ ಪುಷ್ಪ ಫಲಗಳೆಲ್ಲ
ಸತ್ಯದಿ ಧರಿಸಿ ಶರಣ ಮಾಡಿದ್ದಾನೋ

ಬುತ್ತಿಯ ನೈವೇದ್ಯ ಮಾಡಿ ಸಲಸಿದಾನು ಕರ್ತ
ಗುರು ಆಗ ಅಲ್ಲಿ ಬಂದಿದಾನೋ

## ೧೦ನೆ ಸಂಧಿ - ದೇವಿಯ ಪದ

ಬೇಡಿದ ವರಗಳ ಕೊಡುವಂತ ಚಿಂಚಲಿ ಮಾಯವ್ವನ
ಗದ್ದಿಗಿ ಬಂದು ಮಾವಿನ ಹಣ್ಣಾ

ಪುಂಡಪುಂಡರನ ರುಂಡ ಹಾರಿಸಿದಂತ ಬಾದಾಮಿ
ಶಂಖರಿಯಾ ಗದ್ದಿಗಿ ಬಾಳಿಹಣ್ಣೊ

ಎಕ್ಕಿಯ ಗಿಡದಾಗ ಹಕ್ಕಿ ಬೊರ್‍ಯಾಡಿದಾಂಗ
ಲಕ್ಕವನ ಗದ್ದಿಗಿ ಬಂದು ಚಿಕ್ಕು ಹಣ್ಣೊ

ನಾ ಮೇಲ ಅಂದಾವರ್‍ನ ಬತ್ತಲೆ ಕುಣಶಾಳ
ಗುಡ್ಡದ ಎಲ್ಲವ್ವನ ಗದ್ದಿಗಿ ಹಲಸಿನ ಹಣ್ಣೊ

ಹಿಡಶಾಳೋ ದೀವಟಗಿ ಅನಶಾಳೋ ಉದೋ ಉದೋ
ತುಳಜಾ ಭವಾನಿ ಗದ್ದಿಗಿ ಪೇರಲ ಹಣ್ಣೊ

ಬಾಳ ಬಲ್ಲಿನಂದಾವರ್‍ನ ಗೋಳ ಮಾಡಿದಾಳು
ಕಾಳಮ್ಮ ದೇವಿ ಗದ್ದಿಗಿ ನೀಲದ ಹಣ್ಣೊ

ಗಿರಿಮ್ಯಾಗ ಮುರಿಯುವ ಭೌರಮ್ಮದೇವಿ
ಗದ್ದಿಗಿ ಸರವರಿಗೆ ಬೇಕಾದ ಭಾರಿ ಹಣ್ಣೊ

ಕಣಗೀಲ ಬನದಾಗ ಗಿಣಿ ಹಿಂಡ ಕುಂತಾಂಗ
ಸಣ್ಣ ದುರ್ಗವ್ವನ ಗದ್ದಿಗಿ ಅತ್ತಿಹಣ್ಣೊ

ಅನುಭವ ಮಂಟಪದಾಗ ಅಲ್ಲಮಪ್ರಭುವಿನ ಸೋಲಿಸಿ
ಅಕ್ಕಮಹಾದೇವಿ ಗದ್ದಿಗಿ ಓಂಕಾರದ ಹಣ್ಣೊ

## ಮಾರ್ಗಪದ

ರಾಮಶೃಂಗ ಪರವುತದ ಮ್ಯಾಗ ಮಹಾದೇವ
ತಾನು ಜಮದಗ್ನಿ ಋಷಿಯನಾಗಿ ಇರತಿದ್ದನೋ

ಇತ್ತ ಪಾರ್ವತಾ ಭರತಖಂಡಾ ಕಾಶ್ಮೀರ ದೇಶದೊಳಗ
ದೇವಿ ರೇಣುಕ ಎಂಬ ಅರಸನ ನೋಡಿದ್ದಾಳೋ

ರೇಣುಕನೆಂಬಾನ ಅರಸ ನಿತ್ಯಾ ನೇಮದಿಂದ
ತಾನು ಕಾಳಿಕಾದೇವಿಯ ಪೂಜೆಯ ಮಾಡುವನೋ

ಅರಸರ ಭಕ್ತಿಗೆ ಮೆಚ್ಚಿ ಕಾಳಿಕಾದೇವಿ
ವರವಾಗಿ ಕೊಟ್ಟಾಳ ಒಂದು ಪುತ್ರಿಯನೋ

ಪಾರ್ವತಾದೇವಿ ಆಗ ಜನಿಸಿ ಬಂದಿದಾಳು ಅಲ್ಲಿ
ರೇಣುಕ ಎಲ್ಲಮ್ಮನಂಥ ನಾಮವ ಪಡಿದಿದ್ದಾಳೋ

ರೇಣುಕ-ರಾಜನು ಮಗಳನ್ನು ಕರಕೊಂಡು
ಜಮದಗ್ನಿ ಋಷಿಯಾ ಬಳಿಗೆ ಬಂದಿದಾನೋ

## ೧೦ನೆ ಸಂಧಿ - ಗುರುವಿನ ಪದ

ಮಣ್ಣುಗೊಂಬಿ ನಿರ್ಮಾಣ ಮಾಡಿದ ಗುರು ಸಾಂಬವ
ನಂಬುವ ವಿದ್ಯೆದ ಮನಿಯವನೋ

ತಾನು ತಿಳಿದ ಶಿವಾ ಆಸರಮಾಡಿದಾನು
ಜೀವ ನಂಬುದ ಒಂದ ಮನಿಯೋ

ಮೊದಲಿನ ಸಮಯ ಒಂಭತ್ತು ತಿಂಗಳು
ತಾಯ ಹೊಟ್ಟಿ ಅಂಬುದು ಮನಿ ಅಂದಿನೋ

ಸರ್ವಕುಲಾ ಮಿಕ ಮಿರಗ ಜಾತಿಗೆ ತಾಯಿ
ಮೊಲಿಯಾ ಅಡಗಿಯ ಮೊಲಿಯೋ

ಕಂದ ಕಿರಿ ಕಿರಿ ಮಾಡುವಂಥ ಕಟ್ಟಿ ತೂಗುವ
ತೊಟ್ಟಿಲಾ ಮನಿಯೋ

ಪ್ರೇಮದಿಂದ ನಿದ್ರೆ ಮಾಡುವಂಥಾ ಬಾಲಕರು
ಇರುದು ಒಂದು ದೊಡ್ಡಮನಿಯೋ

ಇಷ್ಟೆಲ್ಲಾ ತಿಳಿಸುದು ಸುಜ್ಞಾನ ಮೊದಲ
ಬುನಾ ಹಿಡಯೋ ತಮ್ಮಾ ಮನಿ ಅಂದಿನೋ

ಅಜ್ಞಾನಗ ತರಕವಲ್ಲ ಇದ ಒಂದು ತಮ್ಮ ಬಲ್ಲವರು
ಉಣ್ಣುವಂಥಾ ಹಾಲು ಹಣ್ಣೋ

ಜಿಡ್ಡ ಮನುಜಾ ನೀನು ದುಡ್ಡು ಖರ್ಚುಮಾಡಿ
ಕಟ್ಟಿಸಿದ್ದೊ ನೀನು ಖಾಲಿ ಮನಿಯೋ

ತಾಯಿತಂದಿ ಮಗನಿಗೆ ಬರಿಲಿಕ್ಕೆ ಕಲಿಸಿರೋ
ಓದು ಕಲಿಸುವದೋರಿದು ಖಾಲಿ ಮನಿಯೋ

ಸರಸ್ವತಿ ಒಲಿತವರ ಜರಾ ತಡಾ ಇಲ್ಲರಿ
ಕಲಿತರ ಸರ್ವ ವಿದ್ಯೆದ ಮನಿಯಾ ಅಂದಿನೋ

ಸಕಲ ವೇದ ಶಾಸ್ತ್ರ ಪುರಾಣ ಹೇಳುದಕ ಯುಕ್ತಿ
ಎಂಬುದಕ ಶಕ್ತಿಯ ಮನಿ ಅಂದಿನೋ

ನೀವೆಲ್ಲ ತಿಳಿಯಿರಿ ಇರ ಒಂದು ಮಾತುವರಿ
ಇಳಿದಾಂಗ ಮಾಗಿಯ ಹೊತ್ತು ಅಂದಿನೋ

ಮನಸ್ಸಿನೊಳಗ ತಮ್ಮಾ ಮಾಡಿದಿ ಏನು ಗೊತ್ತಾ
ನಿನ್ನ ಜೀವಕ ಯಾವ ಮನಿ ಸನಮಂತೋ

ತಿಳಿದ ಹೇಳಬೇಕೋ ತಮ್ಮಾ ಮೊದಲ ನಿನಗ
ಯಾವಲ್ಲಿ ಇತ್ತ ನಿನ್ನ ಮನಿಯೋ

ಕಂತುಹರಾ ಕೊಟ್ಟ ದೇಹ ಬಿಟ್ಟಮ್ಯಾಗ ಜೀವ
ಹುಡುಕುದು ಒಂದು ನೆಲದ ಮನಿಯೋ

## ಮಾರ್ಗಪದ

ಎತ್ತಿ ತಂದಾನ ಸಿದ್ಧರಾಮ ಪುಷ್ಪಫಲಗಳನ್ನೆಲ್ಲ
ಸತ್ಯದಿಂದಾ ಶರಣಾ ಮಾಡಿದ್ದಾನೋ

ಬುತ್ತಿಯ ನೇವದ್ಯ ಮಾಡಿ ಸಲಸಿದಾನ
ಕರ್ತು ಗುರು ಆಗ ಬಂದಿದಾನೋ

ಕರಿಯಾ ಕಂಬಳಿ ಕಂಥೆ ಕರಿಯಾ ಜಡಿಗಳ ಬಿಟ್ಟು
ಕರದಲ್ಲಿ ತ್ರಿಶೂಲಾ ಹಿಡಿದು ಬಂದಿದಾನೋ

ಕೊರಳಲ್ಲಿ ರುದ್ರಾಕ್ಷಿ ಉರಗನಾ ಆಭರಣ
ಮರುಳ ಸಿದ್ಧನ ಬಳಿಗಿ ಬಂದಿದಾನೋ

ಉಂಡವಿದ್ದ ಬಾಲದ ಲಿಂಗದ ಬಳಿಯಲ್ಲಿ ಮಂಡಿಸಿ
ಇದ್ದ ಮರುಳನ ಕಂಡೋ ಶಂಕರನೋ

ಗುಂಡಗೊಪ್ಪರಿ ಹೊತ್ತು ಕೆಂಡದಂಥಾ ಗುರುನಾ
ಕಂಡು ಸಿದ್ಧರಾಮ ಅಂದಿದಾನೋ

ಹಸಿವೆ ನೀರಡಿಕೆಯಿಂದಾ ಬಳಲುವೆ ನಾನಯ್ಯ
ಶಿಶುವಿಗೆ ಭಿಕ್ಷವ ಬೇಡಿದ್ದಾನೋ

ಗುರುವಿನ ಶಬುದಾ ಕೇಳಿ ಸಿದ್ಧರಾಮ
ತಾನು ಕರವ ಮುಗಿದು ತಾನು ಬೇಡಿದಾನೋ

ಆಶನ ಆಯಿತು ಆಗಳೆ ಉಂಡಿನಪ್ಪ ಹುಸಿ ಅಲ್ಲೋ
ಕೇಳೊ ಎನ್ನ ಮಾತವನೋ

ತರುಳನ ಮುಖಾ ನೋಡಿ ಅಂತಾನು ಗುರು ಹರಾ
ಮರಳಿ ಮನಿಗಿ ಹೋಗ ಅಂತ ಅಂದಿದಾನೋ

ಕರಿತಾರೋ ನಿನಗ ತಾಯಿತಂದಿ ಪ್ರೀತಿಲಿಂದ
ತರಹೋಗೋ ನೀನು ಎನಗ ಬುತ್ತಿಯನೋ

ಬುತ್ತಿಗೆ ಹೋದರೆ ಮತ್ತ ಎನ್ನ ಕರಗಳು
ಅತ್ತಿತ್ತ ಹೋದಾವಾಂತ ನುಡಿದಿದ್ದಾನೋ

ಹೊತ್ತ ಮುಳುಗುವ ವ್ಯಾಳಕ ಕರಗಳು
ಅತ್ತಿತ್ತ ಹೋದಾವು ಅಂತ ಅಂದಿದಾನೋ

## ೧೨ನೆ ಸಂಧಿ - ಗುರುವಿನ ಮಾರ್ಗಪದ

ಮೂರ್ಖನ ಮುಂದ ಅರ್ಥ ಹೇಳಿದರ ವೇದಶಾಸ್ತ್ರ ಏನು ಬಲ್ಲಣ್ಣಾ
ಗುರು ಶಿಕ್ಷಣ ಆಗಿಲ್ಲೋ ನಿನಗಂಣ್ಣೊ

ನೂರುಸಾರೆ ನಿನಗ ಬುದ್ಧಿ ಹೇಳಿದರ ಮಾರಗ ನಿನಗ ತಿಳಿಯದಿಲ್ಲಣ್ಣಾ
ನಮ್ಮ ಗಡಿ ಹ್ಯಾಂಗ ನೀನು ಆದಿಎಣ್ಣೊ

ಕುರುಡನ ಕೈಯಾಗ ಕನ್ನಡ ಕೊಟ್ಟರ ಮಾರಿ ಅದಕ ಏನು ಕಾಣುದಣ್ಣಾ
ಬ್ಯಾರೆ ಪಿತಿ ಗುರುವಿನ ಆಟ ಅಣ್ಣಾ

ಕಿವುಡನ ಮುಂದ ಮಾರ್ಗ ಹಾಡಿದರ ಅದ ಏನ ಕಥಿಯಾ ಕೇಳುದಣ್ಣಾ
ಕತ್ತಿ ಮುಂದ ಹತ್ತಿಕಾಳ ಇಟ್ಟಾಂಗಣ್ಣಾ

ನಾಯಿಯ ಬಾಲ ಲಳಗ್ಯಾಗ ಇಟ್ಟರ ಅಹದ್ಯಾಂಗ ನೆಟ್ಟಗ ಆಗುದಣ್ಣಾ
ಇಂಥ ಸಾಕ್ಷಿ ನನಗ ಎಷ್ಟು ಹೇಳಲಿ ಅಣ್ಣಾ

ತನಗಿಂತ ಬುದ್ಧಿವಂತರ ಹಾಡುವರ ಸಂಗಡಾ ವಾದ ಮಾಡಬಾರದಣ್ಣಾ
ನಿಂದಾ ಮಾಡಿದರ ನೀನು ಕೆಟ್ಟಣ್ಣ

ಭಾವ ಬಿಟ್ಟು ಬರಿಕೊಟ್ಟರ ತಮ್ಮ ಮೈಯಾನ ರೋಗ ಹೋಗುವದೇನಣ್ಣಾ
ಸಕ್ಕರಿಕಿಂತ ಸವಿ ಮಾತು ಆಡಣ್ಣಾ

ಸಜ್ಜನರ ಸಂಗತಿ ಗೆಳೆತಾನ ಮಾಡಿದರ ಬುದ್ಧಿ ಜ್ಞಾನ ನಿನಗ ಬರುದಣ್ಣಾ
ನಿನ್ನ ಮನಕ ತಿಳಿದ ನೀ ನಡಿಯಣ್ಣಾ

ನಾ ಹೆಚ್ಚ ನೀ ಹೆಚ್ಚ ಅನಬ್ಯಾಡ ತಮ್ಮಾ ನೀನು ಸುಳ್ಳ ಸಂತಿ ತಿಳಿಯಣ್ಣಾ
ರೇವಣಸಿದ್ಧನ ಪಾದಕ ಹೊಂದಣ್ಣ

## ಮಾರ್ಗಪದ

ತರಹೋಗೋ ಎನಗಾಗಿ ಬುತ್ತಿಯ ನೀನು
ಕರಗಳನ ಕಾಯುತ ನಾನು ಇರುವುವೆನೋ

ಚಡಪಡಿಸುತ ದೇವ ತಾರಲಾರನೆಂದು
ಗಡಿಬಿಡಿದಾಂವಾ ಉಳಿಸೋ ಪ್ರಾಣವನೋ

ಗುರುವಿನಾ ಶಬ್ದ ಕೇಳಿ ಸಿದ್ಧರಾಮ ತಾನು
ಭರದಿಂದಾ ಮನಿಗಿ ಅವಾ ಬಂದಿದಾನೋ

ಬಂದು ತಾಯಿನ ಕಂಡು ವಂದಿಸಿ ಶರಣೆಂದು
ಇಂದ ಎನ್ನ ಬಳಿಗಿ ಒಬ್ಬಾವ ಬಂದಿದಾನೋ

ಕಂದನೆ ಹಸಿದನೆಂದು ಕಾಡಿದ ಎನಗ ತಾಯಿ ಬಂದೆನು
ಕಟ್ಟಮ್ಮಾ ಅವಗ ಬುತ್ತಿಯನೋ

ಮಗನ ಮಾತವ ಕೇಳಿ ಅತಿಯಾ ಹರುಷನಾಗಿ
ಸುಗ್ಗಲಾದೇವಿ ತಾನು ಎದ್ದಿದಾಳೋ

ಸುಗ್ಗಲಾದೇವಿಯು ಗುರುವಿನಾ ನೆನೆಯುತ
ಬಗೆ ಬಗೆಯಾ ಬುತ್ತಿ ಕಟ್ಟಿದಾಳೋ

ಬಗೆ ಬಗೆಯಾ ನಾಲ್ಕ ತರದ ಬುತ್ತಿಯ ಕಟ್ಟಿದ್ದಾಳೋ
ಮಗನ ಮುದ್ದಾಡಿ ಕಳುಹಿದ್ದಾಳೋ

ಮೂಕ ಮಗನ ಮಾತವ ಕೇಳಿ ಆಗ ಅವರು
ಶೋಕ ಸತಿಪತಿ ಬಿಟ್ಟಿದ್ದಾರೋ

ಇದ್ದ ಬದಿಗಿ ಬುತ್ತಿಯಾ ತಂದಿದಾನೋ
ಸಿದ್ಧರಾಮ ಸದು ವಿನಯದಿಂದ ಬಂದಿದಾನೋ

ಸದು ವಿನಯದಿಂದ ಬುತ್ತಿಯ ಎಣಿಸುದಕ ಬಂದು
ಗುರುವಿನಾ ನೋಡಿದಾ ಸಿದ್ಧರಾಮನೋ

ಅದಕ್ಕಿಂತ ಮೊದಲಿಗೆ ಹೋಗಿದ್ದ ಗುರುವಾ
ಹೆದರಿದಾನೋ ಆಗ ಸಿದ್ಧರಾಮರೋ

ಬುತ್ತಿಯ ತರವುದಕ ನನ್ನನ್ನು ಕಳುಹಿಸಿ
ಎತ್ತ ಹೋದೋ ಸ್ವಾಮಿ ಶಂಖರನೋ

ಹಂತೀಲೆ ಇದ್ದವರನ್ನ ಮತ್ತ ಕೇಳತಾನ
ಎತ್ತ ಹೋದೋ ಗುರುವಾ ಅಂದಿದಾನೋ

ನಿನಗೆಂದು ಬುತ್ತಿಯಾ ಮನಿಗೆ ತರಲಿಕ್ಕೆ ಹೋದೆ
ಘನ ಗುರುವಾ ರೇವಣಸಿದ್ಧೇಶನೋ

ಎನಕ್ಕಿಂತ ಮುಂಚೆ ನೀನು ನುಣಚಿ ಹೋದರ
ಎನಗ್ಯಾವ ಗತಿ ಅಂದೋ ಸಿದ್ಧರಾಮನೋ

ಎಕ್ಕಯ್ಯ ಜೋಗಯ್ಯ ಎತ್ತ ಹೋದೆ ಸ್ವಾಮಿ
ದಿಕ್ಕವ ತೋರಿಸಿರಿ ಅಂದಿದಾನೋ

ದಿಕ್ಕ ತೋರಿಸಿರಪ್ಪ ಅನವುತ ಸಿದ್ಧರಾಮ
ಚಿಕ್ಕ ಬಾಲಕರನ ಕೇಳಿದಾನೋ

## ೨೩ನೆ ಸಂಧಿ

ಕೇಳೊ ಮನುಜಾ ನೀನು ನಿನ್ನ ಗುಣಗಳನ ನೋಡಿ
ಹೊಗಳಿ ಹಿಗ್ಗಲಿ ಬ್ಯಾಡೋ ಕೇಳಿರಿ ಅಂದಿನೋ

ಅರ್ಜುನನ ಕೀರ್ತಿಯೋ ಧರ್ಮರಾಜನ ತಮ್ಮಾ
ಭೀಮಸೇನನ ಧೈರ್ಯ ಎಂಥಾದು ಕೇಳಿರಿ ಅಂದಿನೋ

ಶ್ರೀರಾಮನ ಶೌರ್ಯವ ಭರತನ ಅಂತಃಕರಣಾ
ಹರಿಶ್ಚಂದ್ರನ ಸತ್ಯವ ನೋಡ ಅಂದಿನೋ

ದುರ್ಯೋಧನನ ಸಂಪತ್ತನ ದಾನವೇಂದ್ರನ ದಿಟ್ಟತನ
ಬಾಣ ಭೂಪತೆ ಭಕ್ತತಾನ ಕೇಳಿರಿ ಅಂದಿನೋ

ಇಂಥಾವರಲ್ಲಿ ಎಂಥ ಗುಣಗಳು ನೋಡೋ ತಮ್ಮಾ
ಅಂತಾ ಗುಣಗಳ ಹಾಂಗ ಒಂದ ಇಲ್ಲಂದಿನೋ

ಕಾಲಿದಾಸನ ಕವಿತಾನ ಭೋಜರಾಜನ ಜಾಣತನ
ಜನಕರಾಜನ ಬ್ರಹ್ಮ ವಿದ್ಯೆ ನೋಡ ಅಂದಿನೋ

ವಾಲಕಿಯ ಬಲಾ ನೋಡೋ ಕಲಾಂತಕನ ವಿಜಯ ನೋಡೋ
ಹೈ ಹಯರಾಜನ ವೈಭವ ನೋಡಂದನೊ

ನಳರಾಜನ ಸೌಂದರ್ಯ ಗೋರಕ್ಷನ ಸಿದ್ದಿಯಾ
ವ್ಯಾಸ ಋಷಿಯ ಸಕಲ ವಿದ್ಯಾ ನೋಡ ಅಂದಿನೋ

ಶ್ರೀಕೃಷ್ಣನ ಯುಕ್ತತಾನ ಭಗೀರಥನ ಪ್ರಯತ್ನ
ಹಣಮಂತನ ಸಹಾಸ ನೋಡ ಅಂದಿನೋ

ಮಂದ ಬುದ್ಧಿಯ ಮನುಜಾ ನೀನು ಹಿಂದಿನವರ ಗುಣದಾಂಗ
ಸಿಂಹದ ಮುಂದ ನಾಯಿ ಹೊಗಳಿದಾಂಗ ಅಂದಿನೋ

ತಿಳಿದು ನೋಡೋ ತಮ್ಮಾ ಸ್ಥಿರವಲ್ಲೋ ನಿನ್ನ ವೇಗ ತಿಳಿದ
ಮ್ಯಾಲ ಹುರಳಿಲ್ಲ ಗುರುಬಲಾ ತಿಳಿ ಅಂದಿನೋ

## ಮಾರ್ಗಪದ

ದಿಕ್ಕವ ತೋರಿಸಿರಪ್ಪಾ ಅನವುತ ಸಿದ್ಧರಾಮ
ಚಿಕ್ಕ ಬಾಲಕರನ ಕೇಳಿದ್ದಾನೋ

ಚಿಕ್ಕವರೆಲ್ಲ ಅಂತಾರು ಮೂಕ ಸಿದ್ಧರಾಮಗ ದಿಕ್ಕರಿಸುತ
ಅವರು ನಕ್ಕಿದ್ದಾರೋ

ಆತನ ಕಾಣಿವೋ ಮಾತು ಹ್ಯಾಂಗ ಬಂದಾವೋ
ಬೇತವ ತಿಳಿಸಂಥ ಕೇಳಿದ್ದಾರೋ

ಆತನು ಬಂದನು ಎನಗ ಅನ್ನವ ಬೇಡಿದಾಗ
ಮಾತು ಬಂದಾವು ಅಂದೋ ಸಿದ್ಧರಾಮನೋ

ಅಂದ ಮಾತವ ಕೇಳಿ ಎಲ್ಲಾರು ಬೆರಗಾಗಿ
ಚಂದ್ರಶೇಖರ ಶಿವಾ ಅಂಥ ಅಂದಿದಾರೋ

ಮಂದ ಮತಿಗೆ ಶಿವಾ ಸಿಗವೇನೋ
ಇವಗಪ್ಪ ಹಿಂದಕ ಹೊರಳಿ ಅವರು ಹೊಂಟಿದ್ದಾರೋ

ತಿರುಗೆಂದ ಮಾತಿಗೆ ತಿರಗಾವ ನಾನಲ್ಲ
ಕುರುಹ ಎನಗ ಗುರು ತೋರಿಸಿದ್ದಾನೋ

ಪರವುತಗಿಯೊಳಗ ಇರತಿನೊ ನಾ ಯೆಂದು
ಅರವು ತೋರಿಸಿದ ಎನಗ ಅಂದಿದಾನೋ

ಅರವು ತೋರಿಸಿದ ಎನಗ ಅಂದೋ ಸಿದ್ಧರಾಮೇಶಾ
ಪರವೂತದ ದಾರಿ ಯಾವದಂಥ ಕೇಳಿದ್ದಾನೋ

ಪರವೂತದ ದಾರಿ ಅವರು ತೋರಿಸುತ ಅಂತಾರು
ಸೂರ್ಯನಾ ಎದುರಿಗೆ ನೀನು ಹೋಗಂದಾರೋ

ಸೂರ್ಯಗೆ ಎದುರಾಗಿ ಅರವತತು ಗಾವೂದ ಇರುವದು
ನೋಡಪ್ಪ ಶ್ರೀ ಶೈಲನೋ

ಅಲ್ಲಿರುವ ಶ್ರೀ ಗಿರಿಯ ಮಲ್ಲೇಶಲಿಂಗಕ್ಕ ನಾನು
ಇಲ್ಲಿಂದಾ ಬುತ್ತಿಯ ಒಯ್ಯುವನೋ

ಸಲ್ಲಿಸಿ ಅರ್ಪಣಾ ಮಾಡಿ ಬರುವೆನೋ ನಾನು
ಈಗ ಮೆಲ್ಲನೆ ತೆರಳಿದಾನೋ ಸಿದ್ಧರಾಮನೋ

ನಡೆದು ಮುಂದಕ ಹೆಜ್ಜೆ ಇಡವೊತ ನಡದಾನು
ಮುತ್ಯಾ ನೀನೇ ಗತಿ ಗುರುವಾ ಅಂದಿದಾನೋ

ಸಡಗರದಿಂದಾ ಬುತ್ತಿಯ ಸಾವರಿಕೊಂಡಾನು
ನಡೆದಾನು ಶ್ರೀಶೈಲಕ ಸಿದ್ಧರಾಮನೋ

ಇಲ್ಲಿಗಿ ಒಂದು ಶಿವಾ ಶಿವಾ ಸಂದೋ ಹಾಡಿದರ
ಪದ ಮುಂದ ಅಂದಿನೋ

# ೨೪ನೆ ಸಂಧಿ - ಮಾರ್ಗಪದ

ಸಡಗರದಿಂದ ಬುತ್ತಿ ಸಾವರಿಸಿಕೊಂಡು ತಾನು
ನಡದಾನು ಶ್ರೀಶೈಲಕ ಸಿದ್ಧರಾಮನೋ

ಬರಗಾಲು ಬಿಸಲೊಳು ಉರಿತಾವು ಅಂಗಾಲು
ಇರತಾವು ಹುಲಿ ಕರಡಿ ಮಿಕಗಳನೋ

ಬಿರುಗಾಳಿಯೊಳಗ ಬಾಯಿ ತೆರದಾವು ಮೃಗಗಳು
ಹರಿತಾವು ಅಲ್ಲಿ ಹೊಳೆ ಹಳ್ಳಗಳೋ

ಇಂಥಾದ ದಾರಿಯೊಳಗ ಅಂತಾನ ಸಿದ್ಧರಾಮ
ಚಿಂತೆ ಇಲ್ಲದೆ ಗುರುವಿನ ನೆನದಿದಾನೋ

ಚಿಂತೆ ರಿಲ್ಲದೆ ಸಿದ್ಧರಾಮ ಬರುವ ದಾರಿಯ ಒಳಗ
ನಿಂತತ ಅಲ್ಲಿ ಒಂದು ಹುಲಿಯವನೋ

ಎನೆಲೋ ಬಾಲಿಕಾ ಎಲ್ಲಿಗೆ ಹೋಗುವ ನೀನು
ನೀನ್ಯಾವ ದೆಶೆಯಿಂದಾ ಇಲ್ಲಿಗಿ ಬಂದಿಯೋ

ಮಾನವರಿಲ್ಲದ ಕಾನನದೊಳಗ ನೀನು ಏನು
ಕಾರಣಾ ಇಲ್ಲಿಗೆ ಬಂದಿದಿಯೋ

ಹುಲಿರಾಜಾ ಕೇಳೋ ಚೆಲುವಾ ಶ್ರೀ ಗಿರಿಮಲ್ಲಾ
ಸಲಿಸೆಂದು ಕೇಳ್ಯಾನೋ ಎನಗ ಭಿಕ್ಷೆಯನೋ

ಘಳಿಗೆ ತಡವಾಗದೆ ನಿಲ್ಲದೆ ಹೋಗುವೆ ಅಂದು
ಬಳಿಗೆ ನಾನು ಹೋಗಿ ಉಣಸುವೆನೋ

ಅಂದ ಮಾತವು ಕೇಳಿ ನೊಂದ ಹುಲಿರಾಜಾ
ಕಂದನ ಬೆನ್ನಹತ್ತಿ ಹೊಂಟಿದಾನೋ

ಮುಂದಕ ಸಾಗಿಸಿ ಮುಂದಕ ತಿರುಗುತ
ಅಲ್ಲಿಂದಾ ಶ್ರೀ ಶೈಲಕ ನಡದೋ ಸಿದ್ಧರಾಮ

ಬರುವಾಗ ಸಿದ್ಧರಾಮ ಕರಡಿಯ ಕಂಡನೋ
ತರುಬಿ ಅದನು ಸಿದ್ಧರಾಮ ಕೇಳಿದಾನೋ

ಪರವೂತ ದಾರಿ ಅರಹುಬೇಕೋ ಅಂದು ಕರಡಿ
ರಾಜಗ ಸಿದ್ಧರಾಮ ಕೇಳಿದ್ದಾನೋ

ಎಲ್ಲಿಯ ಪರವುತಾ ಇಲ್ಲಿಗ್ಯಾತಕ ಬಂದಿದಿಯೋ
ಕೊಲ್ಲುವವೋ ಇಲ್ಲಿ ನಿನ್ನ ಮೃಗಳನೋ

## ೨೫ನೆ ಸಂಧಿ

ಗುರು ಅಂದರ ಕೊರಗುದೋ ಜನನಾ ಮರಣ ಬೇರಾ
ಗುರು ಅಂದರ ಸುಡುದು ಭವರೋಗ ಅಂದಿನೋ

ಗುರು ಅಂದರ ಕಂಟಕ ಬೈಲಾಗುವದೋ ತಮ್ಮಾ
ಗುರು ಅಂದರ ಬುದ್ಧಿ ಜ್ಞಾನ ದೊರಿಯುವದು ಅಂದಿನೋ

ಹಮ್ಮು ಅಂತಾರ ಬ್ಯಾಡೋ ಸುಮ್ಮನೆ ಕೂತಕೊಂಡು
ಹಾಡೋ ತಮ್ಮ ಗುರುವಿನ ಮಾರ್ಗ ಅಂದಿನೋ

ಅಂಥಿಂಥಾ ದೊಡ್ಡವರು ಯಾವ ಪರಿ ಆಗಿ ಹೋದರು
ಪಂಥ ಮಾಡಿದರ ಆಗುವದೇನ ಅಂದಿನೋ

ನಿಶ್ಚಿಂತ ಆದಂಥಾ ಗುರು ರೇವಣಸಿದ್ಧನು ಸತತ
ಹಾಡೋ ನೀನು ಮಾರ್ಗ ಅಂದಿನೋ

ಬಲ್ಲಾವರಿಗಿ ಇದು ಭಾಳ ಹೇಳುವದೇನು
ಎಲ್ಲಾರಿಗಿ ಗುರು ದೊಡ್ಡಾವ ತಿಳಿರಿ ಅಂದನೋ

ಪಂಚತತ್ವಗಳ ಅರ್ಥ ತಿಳಿಸಿರೆಪ್ಪ ನೀವು
ಈಗ ಪಂಚಮುಖಗಳ ಉತ್ಪತ್ತಿ ಹೇಳರಿ ಅಂದಿನೋ

## ಮಾರ್ಗಪದ

ಮಲ್ಲೇಶ ಲಿಂಗಕ್ಕ ಬುತ್ತಿಯಾ ಒಯ್ಯುವನೆಂದು
ಎಲ್ಲಾ ಕಥಿಯಾ ಕರಡಿಗೆ ಸಿದ್ದರಾಮ ಹೇಳಿದ್ದಾನೋ

ಬುತ್ತಿಯ ಎಲ್ಲಿಗೆ ಇತ್ತಲ್ಯಾಕ ಬಂದಿದಿಯೋ
ಸತ್ತ ಹೋರಿಯೋ ಅಂದಿತ ಕರಡಿಯವನೋ

ಇತ್ತಿಂದಾ ಹಿಂದಕ ತಿರಗೋ ಬಾಳ ನೀನು
ಉತ್ತರ ಕೊಟ್ಟಿತು ಆಗ ಕರಡಿಯನೋ

ಕರಡಿಯ ಮಾತ ಕೇಳಿ ಮರುಳ ಸಿದ್ಧರಾಮೇಶಾ
ಕರುಗಳನ ಕಾಯುತ ನಾನು ಇರುತಿದ್ದೆನೋ

ಕರುಗಳ ಕಾಯುತ ಇರುವ ಜಾಗದಾಗ
ಪರವುತದ ಮಲ್ಲಯ್ಯ ಬಂದಿದ್ದಾನೋ

ಪರುವುತದ ಮಲ್ಲಯ್ಯ ಬಂದು ಭಿಕ್ಷವ ಕೇಳಿ
ಧರಿಯೊಳಗ ಮಾಯವಾಗಿ ಹೋಗಿದ್ದಾನೋ

ನಾನು ಬುತ್ತಿಯಾ ತರುವರೊಳಗ ಸಿಗದ ಹೋದೋ
ಹೀನ ಮಲ್ಲೇಶನೋ

ಬಾಲನ ಹೆಗಲ ಮ್ಯಾಗ ಹಾಕಿಕೊಂಡು ಕರಡಿ
ಆಗ ಪಲಾಯನ ಮಾಡಿತು ಕರಡಿಯನೋ

ತಿರುಗಂದ ಮಾತಿಗೆ ತಿರಗಾಂವ ನಾನಲ್ಲ
ಗಿರಿಯ ಮಲ್ಲಯ್ಯಾಗ ಹೋಗಿ ಉಣಸುವೆನೋ

ಗಿರಿಯ ಮಲ್ಲಯ್ಯನ ಉಣಿಸುವ ತನಕಾ ಮರಳಿ
ಬರಾಂವ ಅಲ್ಲ ಅಂದೋ ಸಿದ್ಧರಾಮನೋ

ಹಾದಿಯ ಕೇಳಿದರ ನಾಡಮಾತ ನಿಮ್ಮಲ್ಯಾಕೋ
ಅಂದು ನಡಿಯುತ ಹೊಂಟನೋ ಸಿದ್ಧರಾಮನೋ

ಕಲ್ಯಾಣದ ಸೀಮಿಯಲ್ಲಿ ಮಲ್ಲಯ್ಯನ ಜಾತ್ರಗೆ
ಎಲ್ಲಾರು ಉಘೇ ಉಘೇ ಅನವುತಲೋ

## ೨೬ನೆ ಸಂಧಿ

ಹೀನ ಮನುಜಾಗ ಏನು ಹೇಳಿದರೇನೋ
ಮನದಾಗ ಮಶ್ಚರ ಬಿಟ್ಟಿತೆನೋ

ಮಾನವರನು ಕಂಡು ಬೊಗಳಬ್ಯಾಡ ಅಂದರ
ಸ್ವಾನಾಗಿ ಬೊಗಳುದು ಬಿಟ್ಟೆತೇನೋ

ಸುದ್ದ ಹಡಿದರ ನಾವು ನಿದ್ರೆ ಬಂದವರಿಗೆ
ಸಿದ್ದಾಗಿ ಎದ್ದ ಕುಂತ ಕೇಳತೀನೋ

ವೀರ ಅರ್ಜುನಗ ರಣಹೇಡಿ ಅಂದರ
ಸೋಜಿಗವಾಗದೆ ಬಿಟ್ಟತೇನೋ

ನಾರಿ ಪರಿವ್ರತಿಗೆ ಜಾರಿ ಅಂದರ ಸರವರ
ಮನಾ ಅದಕ ಒಪ್ಪಿತೇನೋ

ರೀತಿಗೇಡಿಗೆ ಮಾತನ ಹೇಳಿದರ ಮಾತಿನಲ್ಲಿ
ಅದು ಮನಸಾ ಇಟ್ಟಿತೇನೋ

ನಮ್ಮ ಗುರು ರೇವಣಸಿದ್ಧನ ಮಾರ್ಗವು ಬಿಟ್ಟರ
ನರಕದ ದಾರಿಯು ತಪ್ಪಿತೇನೋ

* * *

## ಹರಕೆ ಹಾಡು

ಕಲ್ಲಿಗೆ ಕಲ್ಲೆ ಹೊಂದ್ಯಾವ ನಿನಗಂಡಿ ಕೆಬ್ಬಣದಿರಮಳಿ ಜಡಿದಾವ
ಕೆಬ್ಬಿಣದರಿಮಾಳ್ಗಿಗೆ ತಕ್ಕ ಉಕ್ಕಿನ ನೆಲಗಾರವು
ಉಕ್ಕಿನ ನೆಲಗಾರ್ಯದ ಮೇಲೆ ಕಾಜಿನ ಕಲ್ಲು ಕಂಬಾವೆ
ಕಾಜಿನ ಕಜಲ್ಲು ಕಂಬಾದ ಮೇಲೆ ಚಿನ್ನದ ಸಿಟಿ ಬೋದೇಳೆ
ಚಿನ್ನದ ಸಿಟಿ ಬೋದಿನ ಮೇಲೆ ರನ್ನದ ತೊಳಿಗಳನೇರ್ಯಾವೆ
ರನ್ನದ ತೊಳಿಕಂಬಕೆ ತಕ್ಕ ಬೆಳ್ಳಿಯ ಬಿಗಿ ಜಂತೇಳೆ
ಬೆಳ್ಳಿಯ ಬಿಗಿ ಜಂತೇಳಿನ ಮೇಲೆ ಹವಳದ ಮಳವಂತೇಳೆ
ಹವಳದ ಮಳವಂತಾದ ಮೇಲೆ ಅರಗಿನ ಬರಗಿನ ತೊಪ್ಪಲೆ
ಅರಗಿನ ಬರಗಿನ ತೊಪ್ಪಲ ಮೇಲೆ ಸೀಸದ ಮೇಲ್ ಮುದ್ದೇಳೆ
ಸೀಸದ ಮೇಲ್ ಮುದ್ದಿಗೆ ತಕ್ಕ ಭಂಡಾರದ ಬದಿ ಮಣ್ಣೇಳೆ
ಭಂಡಾರದ ಬದಿಮಣ್ಣಿಗೆ ತಕ್ಕ ಬೆಕ್ಕದಚ್ಚಿನ ಕುಂಬೇಳೆ
ಚೆಲ್ಲದಚ್ಚಿನ ಕುಂಬಿಯ ಕೆಳಗೆ ರನ್ನಾದರುನಾಳಿಗಿ ಇಟ್ಟಾರೆ
ರನ್ನಾ ದರುನಾಳಿಗಿಟ್ಟಾರಪ್ಪ ಬೆಲ್ಲದ ನೀರು ಬಿಟ್ಟಾರೆ
ಬಾಚಿಲೆ ಕೆತ್ತಿದ ಬಾಗಿಲು ತೋಳಿಗೆ ಜೋಡೆಳ್ಡು ಗಿಳಿಗಳ ಹಚ್ಚ್ಯಾರೆ
ಜೋಡೆಳ್ಡು ಗಿಳಿಗಳ ಹಚ್ಚ್ಯಾರಪ್ಪ ಮೇಲೆರಡು ಅರಗಿಣಿ ಹಚ್ಚ್ಯಾರೆ
ಮಲಿಯಮ್ಮ ನಿನ್ನ ಗುಡಿಯಾ ಮುಂದೆ ಸಕ್ಕರಿ ಬಾರಿ ಮರನೇಳೆ
ಸಕ್ಕರಿ ಬಾರಿ ಮರಕ್ಕೆ ನೋಡು ಲೆಕ್ಕವಿಲ್ಲದ ಗಿಳಿಹಿಂಡು
ಲೆಕ್ಕವಿಲ್ಲದ ಗಿಳಿಹಿಂಡಪ್ಪಾ ಪುಕ್ಕವಿಲ್ಲದ ಪಾರವಾಳ

ಪುಕ್ಕವಿಲ್ಲದ ಪಾರಿವಾಳಪ್ಪ ಏನೇನು ಸವಿಗಳ ಮೇದಾವ
ಏನೇನ್ ಸವಿಗಳ ಮೇದಾವಪ್ಪ ಹಣ್ಣು ಹಂಪಲು ಮೇದಾವ
ಹಣ್ಣು ಹಂಪಲು ಮೇದಾವಪ್ಪ ಕಬ್ಬುಕಡಲಿ ಮೇದಾವ
ಕಬ್ಬು ಕಡಲಿ ಮೇದಾವಪ್ಪ ಏನೊಂದು ಹರಕಿ ಕೊಡುತಾವ
ಹಬ್ಬಲಿ ಹಬ್ಬಲಿ ಹಬ್ಬಲಿ ಈಮನಿ ಹೀರಿ ಬಳ್ಳಾಗ್ಹಬ್ಬಲಿ
ಹೀರಿ ಬಳ್ಳ್ಯಾಗ್ಹಬಲಿ ಈಮನಿ ಹಿರೇತನಗಳು ನಡಿಯಲಿ
ಆಗಲಿ ಆಗಲಿ ಈಮನಿತನ ಹಾಗಲ ಬಳ್ಳಾಗ್ಹಬ್ಬಲಿ
ಹಾಗಲ ಬಳ್ಳ್ಯಾಗ್ಹಬ್ಬಲಿ ಈಮನಿ ಹಾಲು ತುಪ್ಪ ಹರದಾಡಲಿ
ಹಬ್ಬಲಿ ಹಬ್ಬಲಿ ಹಬ್ಬಲಿ ಈಮನಿ ಕವಡಿ ಬಳ್ಳಾಗ್ಹಬ್ಬಲಿ
ಕವಡಿ ಬಳ್ಳ್ಯಾಗ್ಹಬ್ಬಲಿ ಈಮನಿ ಗೌಡಿಕಿ ಪಟ್ಟ ನಡಿಯಾಲಿ
ಮಾಳಿಗಿ ತುಂಬಾ ಮಣ್ಯೆಕೆಮ್ಮಾಗಲಿ ಕೊಟಗಿ ತುಂಬಾ ಕ್ವಾರೆಮ್ಮಿ
ಕಟ್ಟಲಿ ಎತ್ತು ಕಟ್ಟಲಿ ಈಮನಿ ಎಂಟೆತ್ತಿನ ಬ್ಯಾಸಾಯ ನಡಿಯಲಿ
ಹಳ್ಳದ ಹೊಲವ ಮಾಡಲಿ ಈಮನಿ ಬನ್ನಿ ಮರ ನೆರಳಾಗಲಿ
ಕಾಮಣ್ಣ ಭೀಮಣ್ಣರೆಂಬೋ ಅಣ್ಣತಮ್ಮಗಳು ಆಗಲಿ
ಗಂಗವ್ವ ಗೌರವ್ವನೆಂಬೋ ಅಕ್ಕತಂಗೇರು ಆಗಲಿ
ನಿಂಗವ್ವ ನೀಲವ್ವರೆಂಬೋ ನೆಗಣ್ಣಿ ನೆಗಣ್ಣ್ಯಾರಾಗಲಿ
ಈ ಊರು ಭಂಡಾರ ಇಳದಾವಪ್ಪ ಮುಂದ್ಲೂರು ಭಂಡಾರೇರ್‍ಯಾವ
ಈ ಊರು ಭಕ್ತರು ಕಳುವ್ಯಾರಪ್ಪ ಮುಂದ್ಲೂರು ಭಕ್ತರು ಕಾದಾರೆ
ಹೊಡಿಯಪ್ಪ ಡೊಳ್ಳು, ಹಿಡಿಯಪ್ಪ ಚತ್ರಿಕಿ,
ನಡಿಯಪ್ಪ ನಮ್ಮ ನಾಡೀಗೆ !
ದೇವರು ಬಂದಾವು ಬನ್ನೀರೇ, ಸ್ವಾಮಿ ಗುರುವು ಬಂದಾವೆ ಬನ್ನೀರೇ.

* * *

## ಮಂಗಳಾರತಿ

ಮಂಗಲದಾರುತಿ ಬೆಳಗವ್ವಾ ತಂಗಿ
ಜಂಗಮದೇವಗ ನಮಿಸವ್ವಾ
ಅಂಗದ ಕಳಿಯನು ತಿಳಿಯವ್ವಾ ತಂಗಿ
ಗಂಗಾಧರನ ಪಾದಾ ಭಜಿಸವ್ವಾ

ಬಂದಿದಿ ತಪ್ಪನು ಹಿಡಬೇಡಾ
ಅಂದು ಮನದೊಳಗಿಡ ಬೇಡಾ
ದಂದೇವ ಮಾಡುದು ಬಿಡಬೇಡಾ
ತಂಗಿ ಜಿಂದಗಿ ಗರ್ವದಿ ಕುಣಿಬೇಡಾ

ಅರಗಿಳಿಯಂತೆ ನುಡಿಬೇಕ
ತಿರುಗುವ ಚ್ಯಾಳಿ ಬಿಡಬೇಕ
ಪರರೊಳು ವರ್ಮವ ಬಿಡಬೇಕ
ತಂಗಿ ಗುರುವಿನ ಗುಟ್ಟೊಂದರಿಬೇಕ

ತವರಮನಿಯ ಪ್ರೀತಿ ತರವಲ್ಲಾ
ತೋರುವ ಜಗವಿದು ಕರೆ ಅಲ್ಲಾ
ನಾರುವ ದೇಹ ಸ್ಥಿರವಲ್ಲಾ ತಂಗಿ
ಮೋರೆ ಕಟ್ಟಕೊಳೊ ದಿನವಲ್ಲಾ

ಅಗ್ಗದ ಸಿರಿಯು ಸುಡಬೇಡ
ಗುಗ್ಗರಿ ತಿಂದು ಕಾಲ ಕಳಿಬೇಕ
ಗುಗ್ಗರಿ ತಿಂದು ಕಾಲ ಕಾಳಿಬೇಕ
ಹಿಗ್ಗಿ ಶಿವಾನಂದ ನೆನಿಬೇಕ

## ೬ಲನೆ ಸಂಧಿ - ಮಂಗಳಾರತಿಯ ಪದ

ಮಂಗಳಾರುತಿಯ ರೇವಣಸಿದ್ಧಗ ಬೆಳಗುವನೋ
ಮಂಗಳಾರುತಿ ಬೆಳಗುವೆ ನಾನು ಪಂಚಮುಖದ ಪರಮೇಶೂರಗ
ಮಿಂಚು ಮುಕುಟು ಗಿಡಿಯ ಗಂಧ
ಪಂಚ ಪಾರ್ವತಿ ಅರಸಗೋ ಮಂಗಳಾರುತಿಯಾ

ಜರದ ಪೀತಾಂಬರ ಉಟ್ಟ ಪೈಟಣವಾದ
ಸರಸ ಕುಬ್ಬಸ ತೊಟ್ಟು
ಹತ್ತು ಸಾವಿರ ಸ್ತ್ರೀಯರೆಲ್ಲ ಎತ್ತಿ ಪಾಡಿರಿ
ಕರ್ತು ಗುರು ರೇವಣಸಿದ್ಧಗ ಭಕ್ತಿಲಿಂದಾ
ಬೆಳಗಿರಿ ಮಂಗಳಾರುತಿಯಾ

ಜಂಗಮನೇ ತಾನು ತನ್ನೊಳುತಾನು
ಲಿಂಗಪೂಜೆಯನೇ ಅಂಗನಾರಿಯರೆಲ್ಲ
ಶ್ರೀಂಗಾರಾಗಿರಿ ಶಿವನ ಪೂಜೆಗೆ
ತುಂಬ ಕುಮುಟಗಿ ಸಿದ್ಧಲಿಂಗ ಭಕ್ತಿಲಿಂದಾ ಬೆಳಗಿರಿ ಮಂಗಳಾರುತಿಯಾ

ಧರಿಯೊಳಗ ಅಧೀರನು ಭಜಿಸುವ ಭಕ್ತರ ನಿಡ್ಯ ಸಲುವನೋ
ಮೆರೆಯುವ ಕಮಟಗಿಯೆಂಬ ಪುರದೊಳು
ಗುರುವೆ ರೇವಣಸಿದ್ಧ ದೇವಗೋ

ಕರವ ಮುಗಿವೆ ಬಂದಿ ಮುಕ್ತಿ ಕೊಡೋ ಎನಗೆ
ಮಂಗಳಾರುತಿಯ ರೇವಣಸಿದ್ಧಗ ಬೆಳಗುವೆನೋ

## ೬೯ನೆ ಸಂಧಿ - ಮಂಗಳಾರತಿಯ ಪದ

ಆರುತಿ ಬೆಳಗುವೆನೋ ಸಿದ್ದೇಶಾಗ
ಆರುತಿ ಬೆಳಗುವೆನೋ ಸಿದ್ದೇಶಾಗ

ಆರುತಿ ಚೆಳಗುವಿ ನಿರುತ ಸೇವೆಯ ಮಾಡಿ
ಕರ್ತು ಗುರು ಅಲ್ಲಮಪ್ರಭು ದೇವರಿಗೆ ಆರುತಿ

ಸಿಂಧು ಬಲ್ಲಾಳಗ ಒಲಿದವನೋ ಕಂದನಾಗಿ
ಮೊಲಿಯ ಹಾಲವ ಕುಡದವನೋ

ಅಜ ಹರಿ ಹರರಿಗೆ ರೂಪವ ತೋರದವನೋ
ಸರಿ ನಿನಗೆ ಅರಹುದು ಶ್ರೀಗಿರಿ ವಲ್ಲಭನೇ

ವರವೇದ ಶಾಸ್ತ್ರಕೆ ನೆಲಕದಂತ ಏನೇ
ಪರಂಜೋತಿ ಅನಿಸಿದವನೇ

ಕುಮಟಗಿ ಒಡಿಯಾ ಗುರು ರೇವಣಸಿದ್ಧದೇವಾ
ನುಡಿಸೆನ್ನ ಬಾಯಿಂದಾ ನಿನ್ನ ನಾಮವನೋ

ಕೊಡೋ ಎನಗೆ ಮುಕ್ತಿ ನಾನು ಬೇಡುವನೋ
ಆರುತಿ ಬೆಳಗುವೆನೋ ಸಿದ್ಧೇಶಗ

***

## ಕಠಿಣ ಪದಗಳ ಅರ್ಥ ವಿವರ ಮತ್ತು ಆಕರಗಳು

ಅಗಶ್ಯಾಗ = ಊರ ಮುಂದಿನ ದ್ವಾರ ಬಾಗಿಲು
ಅಬ್ಬರಲೆ = ವೇಗದಿಂದ
ಅಂಟ = ಅಟ್ಟ
ಅಗಾಯ = ಅಸಾಧ್ಯ
ಆಯೇರಿ = ಮುಯ್ಯ, ತಿರುಗಿ ಕೊಡುವ ವಸ್ತು ಅಥವಾ ಹಣ ಕೊಟ್ಟದು
ಇಣಿ = ಎತ್ತಿನ ಕುತ್ತಿಗೆ ಮೇಲಿನ ಅಂಗ
ಅಗ್ಗೀನ = ಉಗಿ
ಅಂತಕ = ಯಮ
ಅಂಬರಾಗಿ = ಆಕಾಶಕ್ಕೆ ಮುಖಮಾಡಿ
ಇಟ್ಟ = ಇಷ್ಟು
ಇಟ್ಟ ಮಂದಿ = ಇಷ್ಟು ಮಂದಿ (ಜನ)
ಇಂಬು = ವಿಶಾಲವಾದ

ಈಡ = ಕುರಿಗಳ ದೊಡ್ಡಿ, ದೊಡ್ಡದಾದ
ಈಡ್ಡಂಗ = ಹೆಚ್ಚಾಗಿ, ದೊಡ್ಡದಾಗಿ
ಈದ = ಕರುಹಾಕಿದ
ಈಳ್ಯಾ = ಆಮಂತ್ರಣ
ಉಸ್ತರ = ವ್ಯವಸ್ಥೆ
ಉಸ್ತಾರೇನ = ಶೃಂಗಾರ
ಉಗ್ಗು = ಎರಚು
ಉಗ್ಗರಗಣ್ಣ = ಉಗ್ರಕಣ್ಣು
ಉಡಿತುಂಬು = ಉಡಿಯಲ್ಲಿ ಫಲಗಳನ್ನು ಹಾಕುವುದು
ಎಳಗರ = ಎಳೆಯಕರ (ಸಣ್ಣಕರ)
ಐರಾಣಿ = ಐದು ಮಣ್ಣಿನ ಮಡಿಕೆಗಳು
ಐಶಾಲಿ = ಐದು ಸೊಲಿಗೆ
ಐಗೋಳ = ಐದು ಸೊಲಿಗೆ; ಮಠದವರು
ಕಡಪಟ್ಟಿ = ಗ್ರಾಮದ ಹೆಸರು, ಜಂಬುಖಂಡಿ ಬದಿ ಊರು
ಕವಟಗಿ = ಗ್ರಾಮದ ಹೆಸರು
ಕಂಡಗ = ಬಹಳಷ್ಟು, ಖಂಡಗ
ಕಾಟರಲೆ = ತಳವಾರ
ಕಾಟರಲೆ ಕಾವಲಿ = ತಳವಾರರ ಕಾವಲು
ಕಾಲ = ಯಮ
ಕಬರ = ಜೀವ
ಕಕ್ಕಡ (ಕಕ್ಕಡಿ) = ದೊಡ್ಡದೀಪ ಅರಬಿಯ ಹುರಿಯಿಂದ ತಯಾರಾದ ದೀಪ
ಕಬಲ = ಒಪ್ಪಿಗೆ
ಕಾಲಿ = ಕೇವಲ
ಕ್ವಾಟ = ಕೋಟೆ
ಕಿಂವರಕ್ತ = ಕೀವುರಕ್ತ
ಕುದ್ದಲ = ದುಷ್ಟ
ಕುರಜಾವ = ಅಂದವಾದ ಕುರ್ಚಿ
ಕಸುಲದ = ಅಂದವಾದ, ಚೆಲುವು
ಕುಂದಳ = ಎಡಕ್ಕೆ ತೆಗೆಯುವ ಬೈತಾಲಿ
ಕುಣಕಿ = ದನಗಳಿಗೆ ಕಟ್ಟುವ ಹಗ್ಗದ ಗಂಟು
ಕುನಸಿ = ಗುರಿ
ಕೊಮರ = ಕುಮಾರ
ಕೋರಿ = ಹೊದ್ದುಕೊಳ್ಳುವ ವಸ್ತ್ರ ಹರಕು ಕಂಬಳಿ
ಖರಿಯ = ನಿಜ
ಖರೇನ = ನಿಜವಾಗಿ
ಖಾನಿ = (ಕೋಸಿ), ಮೂಲಿ
ಖಾಲಿ = ಬರಿದಾದದ್ದು, ಬರಿದು.
ಖ್ಯಾಲ = ಆಸೆ, ಆಸೆಯಿಡು.
ಖೋಡ = (ಕೋಡ) ಕೊಂಬು
ಖೇಚರ = ಗಂದರ್ವ ಪಕ್ಷಿ, ಸದಾ ಆಕಾಶದಲ್ಲಿ ಹಾರಾಡುವ ಪಕ್ಷಿ
ಗಟರ್‍ಯಾನ = ದವಡೆ ಕಚ್ಚುವುದು
ಗಲ್ಲೀಪ = ಶೃಂಗಾರ ಮಾಡಿದ ಅರಿವೆ (ಎತ್ತುಗಳಿಗೆ ಹಾಕುವ ಅರಿವೆ)
ಗದ್ದರಕಿ = ಗುಡಗಿನ ಸಪ್ಪಳ
ಗ್ವಾದಲಿ = ದನ ಕಟ್ಟುವ ಕೊಟ್ಟಿಗೆ
ಗತ್ತ = ಯೋಜನೆ
ಗಪಲಿ = ಖಪಲಿ, ಕಪಲಿ, ಮೊಟ್ಟೆ
ಗಪ್ಪೊರಸಿ = ಅಡ್ರಾಸಿ, ಒಮ್ಮಿಂದೊಮ್ಮೆ
ಗುಗ್ಗಳ = ಸುವಾಸನೆವುಳ್ಳ ಒಂದು ಮರದ ತೊಗಟೆ
ಗೊಂಗಡಿ = ಕಂಬಳಿ
ಗೋಲಾ = ಮುಂಗೋಸಿ
ಗೊಡ್ಡ = ಬಂಜರ, ಸಂತಾನ ಇಲ್ಲದ
ಗೋರಮಳಿಯ = ಘೋರಮಳಿ ಹೆಚ್ಚಿನ ಮಳೆ
ಚವರಾಡಿ = ಬೀಸಣಿಕೆ
ಚರಗಿ = ತಂಬಿಗೆ
ಚಾಡಿ = ಮಾಟವಿದ್ಯೆ
ಚಾಚೀಲಿ = ಹಲ್ಲುಪುಡಿ
ಚಾಲು = ಪ್ರಾರಂಭ; ಸುರುಮಾಡು
ಚೌಗಡ = ಕಂಬಳಿ ಮುಸುಕು; ಒಂದು ಚರ್ಮವಾದ್ಯ
ಚೌಗಡಗ = ದಿಮ್ಮಿ
ಛತುರ = ಕೊಡೆ
ಚಕ್ರಕೋಟೆ = ಪದ್ಮವ್ಯೂಹ
ಜಲ್ದಿ = ಅವಸರ
ಜಾತಂಬಿ ಹೂ = ಜಾಜಿಯ ಹೂವು
ಜಾಚೀಲಿ = ಹಲ್ಲು ಕಪ್ಪು ಪುಡಿ
ಜಾಲಹಾಕು = ಬಲಿಗೆ ಹಾಕು
ಜಿಂಜರಿ = ಕೂದಲು
ಜಿಡ್ಡಿ = ದಿಡ್ಡಿ
ಜಿಲ್ಲಿ = ತೂತು
ಟಕ್ಕೆ = ಸಣ್ಣ ಗುಂಡುಗಳುಳ್ಳ ಬಂಗಾರದ ಕೊರಳ ಆಭರಣ
ಟಿಳ್ಯಾ = ಟಿಕಳಿ
ಠಾಣ್ಯಾ = ಸೊಕ್ಕಿದ

ಠೊಣಪ = ಸೊಕ್ಕಿದ ಮನುಷ್ಯ

ತರಬ್ಯಾರ = ತಡೆಯುವುದು

ತಾರಿನ ಅಂಗಿ = ಬಿಳಿಯ ತಿಳು ಅಂಗಿ

ಥಡ = ತಡ; ವೇಳೆ ಮೀರಿ; ಕೊಟ್ಟ ವೇಳೆಗೆ ತಪ್ಪುವುದು

ದಕ್ಕು = ದೊರಕು; ಆಸ್ತಿ ಕೈವಶವಾಗು

ದವುಳಾಕಿ = ಶ್ರೀಮಂತಿ, ಶ್ರೀಮಂತನ ಹೆಂಗಸು ಸಾವಕಾರತಿ

ಧಡಶೀರಿ = ಧಡಿಸಿರೆ, ನಾಲ್ಕು ಅಂಗಲ

ಧಡಿ = ಅಂಚು

ಧರಣಿ = ಭೂಮಿ; ಭೂಮಿತಾಯಿ

ನಶೀಬ = ಹಣೆಬರಹ

ನಾಟಿಕಾರ = ತಳವಾರ

ನೆದರ = ದೃಷ್ಟಿ

ಪನಿವಾರ = ನೈವೇದ್ಯ, ಫಳಾರ

ಪಡಗ = ದೊಡ್ಡಗಡಿಗೆ

ಪರಿಪರಿ = ವಿವಿಧತೆ

ಪಾವುಂಟಿಗೆ = ಗುಡಿಯ ಹತ್ತವನೆಡೆ

ಪೋರ = ಹುಡುಗ

ಪುರಮಾಸಿ = ತೀಕ್ಷಣ

ಬಳ್ಳೂರ = ಗ್ರಾಮದ ಹೆಸರು

ಬಾಳಾ = ಬಾಲ

ಬಿಂಡಿ = ಗೊಂಚಲು

ಬೀಳ = ಬೆಳೆಯದ ಹೊಲ; ಬಂಜರ ಭೂಮಿ

ಬೆಚ್ಚರ ಹೊಡಿ = ಎಚ್ಚರಿಕೆ ಮೂಡಿಸು

ಬೂತಗ್ಯಾ = ತಿಂದು ತೇಗಿದವ, ಲಕ್ಷಣವಾಗಿವುಳ್ಳ

ಭಾಳ = ಬಹಳ; ಉತ್ತಮ; ಒಳ್ಳೆಯ

ಮಾಡಲಿ = ಮಾದುಲಿ, ಗೋದಿಯ ಸಿಹಿ ಪದಾರ್ಥ

ಮುಂಜಾನ = ಒಂದು ಬಗೆಯ ಚರ್ಮವಾದ್ಯ

ಮಾಪ = ಅಳತೆ, ಅಳತೆಗೋಲು

ಮಾಫಿ = ಕ್ಷಮಿಸು

ಮಾರಾಯ = ಮಹಾರಾಯ; ಒಡೆಯ

ಮುಕ್ಕ = ಊನವಾದ; ಒಡೆದ

ಮುಕರಿ = ಮುಕರು; ಸುತ್ತಗಟ್ಟು

ಮುಡಿ = ಮಡಿ; ಜರತಾರಿ ಅರಿವೆ

ಮೋಡಿ = ಮಾಟವಿದ್ಯೆ

ಯುಗತಿ = ಯುಕ್ತಿ, ಉಪಾಯ

ಯಾಸಿಗೈ = ಬಂಕಾದ ಕೈ

ಠೊಣಪಿ = ಸೊಕ್ಕಿದ ಹೆಂಗಸು

ತಾಡಪಿತ್ತೂರಿ = ತಾಡ ಎಲೆಗಳು

ತೆಪ್ಪ = ಹಲಗೆ ಆಕಾರದ ತಟ್ಟೆ ತೇಲುವ ತಟ್ಟೆ

ಥಂಡ = ನೂಕು; ಒತ್ತುವುದು

ದವುಳಂವ = ಶ್ರೀಮಂತ, ಸಾಹುಕಾರ

ಧಡಕಿ = ತೆರೆ, ಅಲೆ

ಅಂಚರ ಇರುವ ಕೆಂಪು ಬಣ್ಣದ ಸೀರೆ

ಧನಿಯಾ = ನಾದ

ನವಿ = ಸವಿ

ನಾಡ ಪರಿಗಂಡ = ದೇಶಾಂತರ

ನಿಂಬಿಗಗುಳ = ನಿಂಬಿಗಿಕುಳ, ವಿಶ್ವಾಸಿ

ನೆದರ ಹತ್ತು = ದೃಷ್ಟಿತಾಗು; ನಂಜಾಗು

ಪವಳ್ಯಾಗಿ = ಗುಡಿಯ ಸುತ್ತ ಮುತ್ತಿನ ಜಾಗ

ಪರಿ = ವಿವಿಧ

ಪರ್ಷಿ = ಪವಳಿ, ಗುಡಿಯ ಅಂಗಳ

ಪಾರ್ಯಾ = ಪಹರೆ, ಕಾವಲು

ಪೋರಿ = ಹುಡುಗಿ

ಪೋಲಕ = ಪೋಲಕಾರ, ಜಂಪರ, ಕುಬ್ಬಸ

ಬಾಜಾರ = ಸಂತೆ

ಬಾಳುವೆ = ಕುರಿಗಳು

ಬಿಂದಿಗಿ = ಸಣ್ಣ ಕೊಡ

ಬೆಚ್ಚರ = ಎಚ್ಚರ

ಬೈಲ ಬಾಗಕ = ಬಯಲು ಕಡೆ; ಬಹಿರ್ದೆಸೆಗೆ

ಭಾಗ್ಯ = ಕುರಿ, ಸಂಪತ್ತು

ಮಲಕು = ತಿರುವು

ಮಂಜನ = ಕಾಡು

ಮಡಗಲ್ಲು = ಮಾಳಿಗೆ ಏರಲು ಹಾಕಿದ ಕಲ್ಲು

ಮನಾರ = ಬಹಳ

ಮಾಮುರಿ = ಮರೆ

ಮಿಜಡ = ಮಿದುಳು

ಮುತಾಳ = ಬಿತ್ತುವ ಕೂರಿಗೆಯ ಮೂರು ತಾಳುಗಳು

ಮುಸಲತ್ತು = ಮಸಲತ್ತು; ಮೋಸ

ಮುಡಿ = ತಲೆಗೆ ಹಾಕಿಕೊಳ್ಳು

ಮೇವು = ಸಾಕು ದನಗಳ ಆಹಾರ; ಹುಲ್ಲು

ಯಾದಿ = ಪಟ್ಟಿಮಾಡು, ಕುದಿ; ಚಿಂತೆ

ಲತ್ತಿ = ಬಡೆತ ಹೊಡೆ

ರಂಪ = ಜಗಳ
ರಟ್ಟಿ = ತೋಳ; ಗಟ್ಟಿ
ರಾಯಮಾರ್ಗ = ರಾಯರ ಮಾರ್ಗ (ರಾಜಮಾರಗ)
ರೇವಗಿ = ಕಡಗೋಲು
ಲಗತ = ಹೊಂದಾಣಿಕೆ; ವಶವಾಗು
ಲಗ್ಗಿ = ಲಗ್ಗ್ಯಾ; ಲಗೋರಿ, ಚಂಡಿನಾಟ
ಲಾಬಾನ = ಊದು
ವರಗಿ = ವಾರಗಿ; ಸಮ ವಯಸ್ಸು
ವಜನ = ಭಾರ
ವಡಮುರಿ = ಗಟ್ಟಿಯಾದ ತಿರುವು
ವಾಜಮಿ = ಸರಿ
ವ್ಯಾಳೇಕ = ವೇಳೆಗೆ ಸರಿಯಾಗಿ
ವಾಲಗ = ಓಲಗ; ಗೊಟ್ಟಿ; ಗೋಷ್ಠಿ
ವಾಯಿ ಗಂಗಾಳ = ದೊಡ್ಡ ಗಂಗಾಳ
ವಾಯಿನ = ಹೆಸರುವಾಸಿ
ವಾರಿ = ಇಳಿಜಾರ ಹೊಲ
ವಾರಿಸಿದ್ದ = ವಾರಿಭಾಗದ ಸಿದ್ಧ
ವಾಸರ = ಆಸರ
ವೈತಾಳ = ಒಯ್ಯುತ್ತಾಳೆ
ವಟ್ಟತನ = ಹಟಮಾರಿ; ಒಟ್ಟತನ
ವಿಪರ್ಯಾಸ = ನಕಲಿ ಬಾಜಿ ಹೆಣ್ಣು
ಶರಮಂತ = ಸಿರಿಮಂತ, ಬುದ್ಧಿವಾನ
ಶಾವಂತ್ರಿ ಹೂವು = ಸೇವಂತಿಗೆ ಹೂವು
ಶಾಯ = ಸೇವೆ
ಸಕಣ = ಶಕುನ; ಭವಿಷ್ಯ
ಸದಿ = ಸೆದೆ; ಕಸ-ಕಡ್ಡಿ, ರವದಿ
ಸಮದೂತ = ಸಮಾಧಾನ
ಸದ್ಯಾಣಾಗು = ವಶವಾಗು
ಸದಮೂಲ = ನಿರ್ಮಲ
ಸನಮಂತ = ಶಾಂತಯುತವಾದ
ಸಬ್ಬನೆ = ಆರಾಮವಾಗಿ, ಶಾಂತಿಯಿಂದ
ಸೋಜಿಗ = ಆಶ್ಚರ್ಯ
ಸ್ವಾರುತ = ಸ್ವಾರ್ಥ
ಸೀತಾಳ = ನೀರು
ಸೀತಾಳ ಬಿಂದಿಗಿ = ನೀರು ತರುವ ಪಾತ್ರೆ
ಸುಳುವು = ಗುರುತು
ಸೂಳಿ = ವೇಶ್ಯೆ; ದೇವದಾಸಿ
ಸೈತಾನ = ರಾಕ್ಷಸ
ಸೈಯ್ಯ = ನಿಜ; ಸರಿ
ಸೋಲ = ಹಗ್ಗ
ಹಡಸಿ = ಹಾದರ
ಹರಳಿ = ಅಪವಾದ
ಹರೆಯಲೆದ್ದು = ಮುಂಜಾನೆ ಎದ್ದು
ಹಲಗ = ಹಲಗು; ಕತ್ತಿ
ಹವನ = ರೀತಿ; ಮಾಡುವ ಬಗೆ
ಹ್ಯಾವ = ಪಂಥ; ಹಟ
ಹ್ಯಾಂಗ = ಯಾವ ರೀತಿ
ಹಿಂಗ = ಇದೇ ರೀತಿ; ಸರಿ ರೀತಿ
ಹಂಗನೂಲು = ಕೊರಳಲ್ಲಿ ಹಾಕಿಕೊಳ್ಳುವ ನೂಲು; ನಾಯಿ ಕೊರಳಲ್ಲಿ ಕಟ್ಟುವ ಬೆಳ್ಳಿ ಗೆಜ್ಜೆ ಪಟ್ಟಿ
ಹಂತೇಲಿ = ಹತ್ತರ
ಹಿಪ್ಪರಗಿ = ಊರ ಹೆಸರು
ಹುಡದಿ = ಗದ್ದಲ
ಹುಡೇದ = ಕಾವಲಗಾರನ ಎತ್ತರ ಸ್ಥಳ
ಹುಲ್ಲುಗುಂಪಿ = ಹುಲ್ಲಿನ ಗುಂಪ, ಗುಡಿಸಲು
ಹೂಲ = ಹಕಾರಿ
ಹೂಳು = ತಗ್ಗಿನಲ್ಲಿ ಹಾಕಿ ಮಣ್ಣು ಮುಚ್ಚು
ಹೆಗರು = ಜಿಗಿ
ಹೊಂಡ = ದುಂಡಗಿನ ತಗ್ಗು ಭಾಗ
ಹೊಯಿಸು = ಹಾಕಿಸು
ಹೊಳ್ಳಿ = ತಿರುಗಿ
ಹೌವ್ವನಾರಿ = ಹೌಹಾರಿದ ನಾರಿ; ಗಾಬರಿಯಾದ ಸ್ತ್ರೀ
ಹೋಳಮಗ್ಗಲ = ಒಂದೇ ಮಗ್ಗಲು (ಮಲಗುವ ಕ್ರಿಯೆ)
ಹಿಂಚಾಳಿಸು = ಅನುಮಾನಿಸು
ಹೊರಿಯಾಕ = ಹೊರಗೆ
ಹೋಳು = ಭಾಗ; ಮಗ್ಗಲು
ಹೌರರು = ಸೇವಕರು
ಳತ್ತಿ = ಲತ್ತಿ ಬಡಿತ
ಕ್ಷೋಣಿಯೊಳಗೆ = ಜಗದೊಳಗೆ
ಕ್ಷೋಣಿಗ = ಜಗದೊಡೆಯ

ಆಕರಗಳು

| ಕ್ರ. ಸಂ. | ಕಥೆಯ ಗೀತೆಯ ಶೀರ್ಷಿಕೆ | ಸಂಪಾದಕರು | ಸಂಕಲನದ ಹೆಸರು | ಪ್ರಕಾಶಕರ ವಿವರ | ಪ್ರಕಟಗೊಂಡ ವರ್ಷ | ಪುಟಗಳು |
|---|---|---|---|---|---|---|
| ೧. | ಡೊಳ್ಳಿನ ಹಾಡು | ಸಂ\|\| ಎಂಎಸ್. ಸುಂಕಾಪುರ | ಜೀವನ ಜೋಕಾಲಿ ಭಾಗ-೬ | ಕನ್ನಡ ಅಧ್ಯಯನ ಪೀಠ, ಧಾರವಾಡ | ೧೯೭೩ | ೧ ರಿಂದ ೧೫೪ |
| ೨. | ಜನಪದ ಹಾಲುಮತ ಮಹಾಕಾವ್ಯ | ಡಾ. ವೀರಣ್ಣ ದಂಡೆ | ಡೊಳ್ಳಿನ ಹಾಡು | ಕನ್ನಡ ಪುಸ್ತಕ ಪ್ರಾಧಿಕಾರ | ಆವೃತ್ತಿ ೨೦೦೦ | ೧ ರಿಂದ ೪೮ ಮತ್ತು ೬೩೧ ರಿಂದ ೬೮೮ |
| ೩. | ಡೊಳ್ಳಿನ ಹಾಡು | ಡಾ. ಶಿವಾನಂದ ಗುಬ್ಬಣ್ಣವರ | ದೇವssರ್ ಬಂದಾವ್ ಬನ್ನೀssರೆ ೧-೨ | ವ್ಯಾಸಂಗ ವಿಸ್ತರಣ ಪ್ರಕಟನ ವಿಭಾಗ ಕರ್ನಾಟಕ ವಿ.ವಿ. ಧಾರವಾಡ | ೧೯೭೯ | ೧ ರಿಂದ ೧೯೮ |
| ೪. | ಡೊಳ್ಳಿನ ಹಾಡುಗಳು | ಸಂ\|\| ಬಸವನಗೌಡ ಪಾಟೀಲ | ತೂಕ ಮಾಡಿ ಹೇಳತೀನಿ ನ್ಯಾಯ | ಒಕ್ಕಲ ಮಕ್ಕಳ ಪ್ರಕಾಶನ, ಯಳವತ್ತಿ ರಾಯಚೂರು ಜಿಲ್ಲೆ. | ೧೯೮೦ | ೧ ರಿಂದ |
| ೫. | ಡೊಳ್ಳಿನ ಪದಗಳು | ಸಂ. ಜೆ.ಬಿ. ಖಾಡೆ | ಕಾಡು ಹೂವುಗಳು | ಮೈಸೂರು ವಿಶ್ವವಿದ್ಯಾಲಯ, ಕನ್ನಡ ಅಧ್ಯಯನ ಸಂಸ್ಥೆ | ೧೯೭೩ | ೮೩ ರಿಂದ ೧೯೮ |
| ೬. | ಬಳ್ಳಾರಿ ಜಿಲ್ಲೆಯ ಡೊಳ್ಳಿನ ಪದಗಳು | ೧.ಕೆ. ವಿರುಪಾಕ್ಷಗೌಡ ಮತ್ತು ೨. ಮೇಟಕೊಟ್ರಪ್ಪ | ನಡಿಯಪ್ಪ ನಮ್ಮ ನಾಡಿಗೆ | ಯುವಕ ಸಂಘ ರಾಮನಗರ, ಹಗರಿಬೊಮ್ಮನಹಳ್ಳಿ | ೧೯೮೧ | ೧ ರಿಂದ ೫೯ |
| ೭. | ಡೊಳ್ಳಿನ ಹಾಡುಗಳು | ಸಂ\|\| ನಿಂಗಣ್ಣ ಸಣ್ಣಕ್ಕಿ | ಗಂಡಸರ ಜನಪದ ಹಾಡುಗಳು | ಸಮಾಜ ಪುಸ್ತಕಾಲಯ ಧಾರವಾಡ | ೧೯೭೮ | ೯೫ ರಿಂದ ೧೦೯ |